REGD. NO. M. 3618 | LICENCE NO. 31 Licensed to Post without Prepayment.

ನವಯುಗ

ಸಂಪುಟ ೩೭ | 2—1—1958 | ಸಂಚಿಕೆ ೧೭

VOL. 37 | NO. 17

ನವವರ್ಷಕ್ಕೆ ಸುಸ್ವಾಗತ–

ಜನಮನವ ತಣಿಸಿ ಬಾ

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ನವವರ್ಷವೇ, ಸತ್ಯನುಡಿಯುವುದಾದರೆ, ನಿನಗೆ ಸ್ವಾಗತ ಬಯಸಲು ತುಂಬ ಸಂಕೋಚವಾಗುತ್ತ ಇದೆ. ನಿನ್ನ ಆಗಮನದ ಪ್ರತೀಕ್ಷೆಯಲ್ಲಿ ಅಕ್ಷತದ ಹರಿವಾಣವನ್ನು ಸಜ್ಜುಗೊಳಿಸಿ ಬಹಳ ಹೊತ್ತಿನಿಂದ ಕಾದು ನಿಂತಿದ್ದೇನೆ. ಆದರೆ, ಇಂದು ನಿನ್ನ ನೋಡಿ ನೀನು ೧೯೫೮ ಎಂಬ ಹೆಸರನ್ನಿಟ್ಟುಕೊಂಡು ಬಂದಿದ್ದರೂ ವಾಸ್ತವದಲ್ಲಿ ನೀನು ೧೯೫೭ರ ಪ್ರತಿಮೂರ್ತಿಯೇ ಆಗಿರುವಿ ಎಂದು ತಿಳಿಯುತ್ತೇನೆ. ೧೯೫೭ನೆ ವರ್ಷ ಸಹ ಇದೇ ರೀತಿಯ ಅಲಂಕಾರಗಳನ್ನು ಧರಿಸಿಕೊಂಡು ಬಂದಿತ್ತು. ನಿನ್ನಂತೆಯೇ ಅದು ಸಹ ಬಣ್ಣಬಣ್ಣದ ಬಟ್ಟೆಗಳನ್ನು ತೊಟ್ಟುಕೊಂಡು ಬಂದಿತ್ತು. ಉಷಃಕಾಲದ ಸೂರ್ಯನ ಕೋಟಿಕೋಟಿ ಕಿರಣಗಳ ಹೊಂಬಣ್ಣವು ಬೆಳದಿಂಗಳ ಹಿಂದೆ ನಗುನಗುತ್ತ ಬಂದಂತೆ, ಅದು ಸಹ ಮುಗುಳುನಗುತ್ತಾ ಬಂದಿತ್ತು. ಅದು ಸಹ ಹಸಿದು ಕಂಗಾಲಾಗಿದ್ದ ಕೋಟಿಗಟ್ಟಲೆಯ ಪೀಡಿತ ನರನಾರಿಯರ ಹೃದಯಗಳಲ್ಲಿ ಆಶೆ ಮತ್ತು ಉತ್ಸಾಹದ ಚಿಲುಮೆಯನ್ನು ಹುಟ್ಟಿಸುತ್ತ ಕಾಲಿಟ್ಟಿತ್ತು. ಆದರೆ, ಇಂದದು ಹೊರಟುಹೋಗುವಾಗ ಅಥವಾ ಹೊರಟು ಹೋಗಿರುವಾಗ– ತನ್ನ ಸೇಡನ್ನು ತೀರಿಸಿಕೊಳ್ಳಲು ಅದು ಪುನಃ ಬರುವುದಿಲ್ಲವೆಂಬ ಧೈರ್ಯದಿಂದ ಈ ಮಾತುಗಳನ್ನು ಹೇಳಬಯಸುತ್ತೇನೆ: ತಿರುಗಿ ಬರಬೇಡ, ೧೯೫೭, ಹೋಗು. ಮುಗಿದು ಹೋದ ಅಂಧಕಾರದ ಕತ್ತಲೆಯಲ್ಲಿ ಪುನಃ ನಿನ್ನ ಮುಖವನ್ನು ಕರಿದಾಗಿಸಬೇಡ; ಈಗ ಇನ್ನೊಮ್ಮೆ ಹಿಂದಿರುಗಿ ಬರಬೇಡ.

೧೯೫೭ ಹೋಯಿತು. ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದೆಂದು ವಿಶ್ವಾಸದಿಂದ ನಾವು ಅದರ ಸ್ವಾಗತವನ್ನು ಪೂರ್ಣ ಮನಸ್ಸಿನಿಂದ ಮಾಡಿದ್ದೆವು. ಆದರೆ, ಅಂಥ ಸಮಸ್ಯೆಗಳನ್ನು ಅದು ಮತ್ತಷ್ಟು ಒಗಟುಗಳನ್ನಾಗಿ ಮಾಡಿತು. ನಾವು ಯಾವ ಆಸೆಯನ್ನಿಟ್ಟುಕೊಂಡು ಅದನ್ನು ಸ್ವಾಗತಿಸಿದೆವೋ ಅಂತಹ ಆಶಾಂಕುರಗಳ ಮೇಲೆ ಭಾರಿ ಮಳೆನೀರು ಸುರಿದು ಪರಿಣಮಿಸಿದ ಜಲಪ್ರವಾಹದಲ್ಲಿ ಕೊಚ್ಚಿ ಹೋದವು. ಈಗ, ಭಗ್ನಾಶಯದ ಹೃದಯವಿರುವ ಈ ಶರೀರದ ಕೈಗಳು ಮುಗಿದುಕೊಂಡು ನಿನ್ನನ್ನು ಸ್ವಾಗತಿಸಲು ಸನ್ನದ್ಧವಾಗಿರುವ ಸಮಯದಲ್ಲಿ ಅದೇಕೆ ಕಂಪಿಸುತ್ತಿವೆಯೆಂಬುದರ ಅರಿವು ನಿನಗೆ ಆಗದಿರಲಾರದು.

ಎಲೆ ಪ್ರಿಯತಮವಾಗಲಿರುವ ನೂತನ ವರ್ಷವೇ, ನಿನ್ನ ಈ ಸುಂದರ ಬಣ್ಣಬಣ್ಣದ ಉಡುಗೆತೊಡುಗೆಗಳ ನೂರಾರು ಮಡಿಕೆಯ ನೆರಿಗಳೊಳಗೆ ಅಡಗಿಸಿಕೊಂಡಿರುವ ನಿನ್ನ ಕೈಗಳಲ್ಲಿ ಏನಿದೆ ಎಂಬುದನ್ನು ನೀನು ಮಾತ್ರ ಅರಿತಿರುವೆ. ಆದರೆ, ೧೯೫೭ ತನ್ನ ಕಿಸೆಗಳಿಂದ ಹೊರತೆಗೆದು ನಮಗೆ ಬಹುಮಾನವಾಗಿಕೊಟ್ಟ ಉಪಾಯನದ ಒಡವೆ ವಸ್ತುಗಳನ್ನು ನಾವು ಯಾವ ಕಾಲಕ್ಕಾದರೂ ಮರೆಯುವಂತಿರುವುದಿಲ್ಲ.

ನಾವು ನಮ್ಮ ದ್ವಿತೀಯ ಪಂಚವಾರ್ಷಿಕ ಯೋಜನೆಗಾಗಿ ಎಲ್ಲ ಆವರ್ತಗಳಲ್ಲಿಯೂ ಸುತ್ತುತಿದ್ದೇವೆ; ಮತ್ತು ಸುಂಕಗಳ ಆ ಮಹಾವಿಶಾಲೋನ್ನತವಾದ ಪರ್ವತಗಳನ್ನು ನಮ್ಮ ಒಡೆದು ಹೋದ ಸೊಂಟದಲ್ಲಿ ಎತ್ತಿ ಇಟ್ಟುಕೊಂಡಿದ್ದೇವೆ. ಆದರೆ ೧೯೫೭ರ ಯಾತ್ರೆಯ ಮೊದಲ ಘಟ್ಟದಲ್ಲಿಯೇ ನೆರೆ, ಒಣಕಲ್ಲು ಮತ್ತು ಬರಗಾಲದ ಪೆಟ್ಟುಗಳನ್ನು ಕೊಟ್ಟು ನಮ್ಮ ಕೈಕಾಲುಗಳನ್ನು ತಪ್ಪವಂತೆ ಮಾಡಿ ಬೀಳಿಸಿತು. ಈಗ ಎದ್ದು ನಿಲ್ಲುವ ಯಾವ ಆಧಾರವೂ ದೊರೆಯದಂತಾಗಿದೆ. ನೀನು ನಮ್ಮೆಲ್ಲರ ಸೊಂಟದ ಮುರಿದ ಕೀಲನ್ನು ಪುನಃ ಜೋಡಿಸಿ ಕೈಗೆ ಊರುಗೋಲಿತ್ತು, ಕಾಲಿನ್ನಾಯುಗಳಲ್ಲಿ ನವಚೈತನ್ಯವನ್ನೂ ಹೃದಯದಲ್ಲಿ ನವಸ್ಫೂರ್ತಿಯನ್ನೂ ತುಂಬಿಸಿ ಎದ್ದು ತಲೆಯೆತ್ತುವಂತೆ ಮಾಡಬಲ್ಲೆಯಾ?

ಕರಾಕರಣೆ ಮತ್ತು ತುಟ್ಟಿಯ ಚಕ್ರವ್ಯೂಹದಲ್ಲಿ ೧೯೫೭ ನಮ್ಮನ್ನು ಕೆಟ್ಟ ರೀತಿಯಲ್ಲಿ ಅಪಾಯಮಯ ಪರಿಸ್ಥಿತಿಯಲ್ಲಿ ಕೊಡಹಿತು. ಒಂದು ಕಡೆ ಅನ್ನ ಅನ್ನ ಎಂದು ಕೂಗುತ್ತಿರುವವರ ಸಮೂಹದ ಗಲಭೆ; ಹಸಿದು ಕಂಗಾಲಾಗಿರುವವರ ಜಂಗುಳಿಯ ಬೊಬ್ಬೆ, ಇನ್ನೊಂದೆಡೆ ಅಂಚೆ ತಂತಿ, ರೇಲ್ವೆ, ಸರಕಾರಿ ಸಚಿವಾಲಯ ಮತ್ತು ಎಲ್ಲ ವಿಭಾಗದ ಕೆಲಸಗಾರರೂ, ಅಧ್ಯಾಪಕರೂ, ಶ್ಯಾನುಭೋಗರೂ, ಜಾಡಮಾಲಿಗಳೂ ಎಲ್ಲರೂ ಹಸಿವೆ ಹಸಿವೆ ಎಂದು ಕೂಗಾಡುವ ಕಾಗಾಟ, ಪ್ರತಿ ಸ್ಥಳಗಳಲ್ಲಿಯೂ ಹರತಾಳದ ಗಲಭೆ ಹೀಗೆ ಕಿವಿ ಕಿವುಡಾಗುವಂತಹ ಅಲೆಗಳನ್ನು ಎತ್ತಿಕೊಂಡೇ ಆ ೧೯೫೭ ಕಾಲಿರಿಸಿತು. ನಿನ್ನೊಡನೆ ಈ ಬೆಲೆಯೇರಿಕೆ ಮತ್ತು ಹಸಿವೆಗೆ ತಕ್ಕ ಉಪಶಮನೋಪ ಸಾಧನಗಳಿರುವುವೆ?

ಹೊಸವರ್ಷವೇ, ಇತ್ತ ದೃಷ್ಟಿಸು. ಅದೆಷ್ಟು ನಿರಪರಾಧಿ ಜನರನ್ನ ನಾಗಾಜನರು ಕೊಂದುಹಾಕಿದರೆಂದು ಸರಿಯಾಗಿ ತಿಳಿಯುವುದಿಲ್ಲ. ಸೇನೆ ಮತ್ತು ರಕ್ಷಣಾದಳದವರು ಸಹ ಅಲ್ಲಿ ಸಂಪೂರ್ಣ ಶಾಂತಿಯನ್ನು ಸಂಸ್ಥಾಪಿಸಲು ಶಕ್ಯರಾಗಲಿಲ್ಲ. ಪ್ರತ್ಯೇಕ ನಾಗಾ ರಾಜ್ಯದ ಸ್ಥಾಪನೆಯಾದಮೇಲೆ ಸಹ, ಅಲ್ಲಿ ಆರಳಿದ್ದ ಬೆಂಕಿಯ ಹೊಗೆಯಾರಲಿಲ್ಲ. ನೀನು ಅದನ್ನು ನೊಂದಿಸಬಲ್ಲೆಯೇನು?

ದಕ್ಷಿಣದ ರಾಮನಾಥಪುರದಲ್ಲಿ ಲಜ್ಜಾಜನಕ ದಂಗೆಯನಂತರ, ನಾಯ್ಕರರ ಅನುಯಾಯಿಗಳು ವಿಶ್ವವಂದ್ಯರಾದ ಗಾಂಧೀಜೀಯವರ ಚಿತ್ರಗಳನ್ನು, ಭಾರತದ ಸಂವಿಧಾನಗಳ ಪ್ರತಿಗಳನ್ನು ಮತ್ತು ರಾಷ್ಟ್ರಧ್ವಜಗಳನ್ನು ಅಗ್ನಿಗಾಹುತಿಯಾಗಿಸುವ ಮಹಾಯಜ್ಞಕ್ಕೆ ತೊಡಗಿರುತ್ತಾರೆ. ಅವರ ಈ ಕಪ್ಪು ಕನ್ನಡಿಯೊಳಗಿಂದ ಹೊರಬರುವ ನೇತ್ರ ಕಿರಣಗಳಿಂದಾಗಿ, ಜಾತೀಯ ದ್ವೇಷದ ವಿಷತುಂಬಿಬಂದಿದೆ; ಈ ವಿಷಭಾಂಡವನ್ನು ನೀನು ದೂರಮಾಡಬಲ್ಲೆಯಾ?

ಅದೇ ದಕ್ಷಿಣ ಭಾರತದಲ್ಲಿ ಹೊಸ ಹೊಸ ದೇವಾಲಗಳೊಳಗಿಂದ ಹಿಂದೀ ವಿರೋಧೀ ಅಂದೋಲನದ ಪ್ರಸ್ತಾಪ ಪ್ರಚುರವಾಗುತ್ತ ಇದೆ. ಇಂಗ್ಲಿಷ್ ಭಾಷೆಯ ಮೋಹದಲ್ಲಿ ದಿಙ್ಮೂಢರಾಗಿರುವ ಕೆಲವು ವ್ಯಕ್ತಿಗಳಿಗೆ ಭಾರತೀಯ ಭಾಷೆಗಳ ಮೇಲೆ ಅದರ ಹೆಚ್ಚುವಂತಹ ಸುಮತಿಯನ್ನು ದಾನಮಾಡಿ ಭಾರತೀಯ ಭಾಷೆಗಳ ಗೌರವವನ್ನೂ ಸರಕಾರದಿಂದ ರಾಷ್ಟ್ರಭಾಷೆಯೆಂದು ಕರೆಯಲ್ಪಟ್ಟ ಹಿಂದಿಯ ಅಭಿವೃದ್ಧಿಯನ್ನೂ ರಕ್ಷಿಸಬಲ್ಲೆಯಾ?

ಕಾಶ್ಮೀರದ ಸಮಸ್ಯೆಯು ಜಟಿಲವಾಗುತ್ತ ಬರುತ್ತಿದೆ. ಪೋರ್ಚುಗಾಲ ಹೇಗಿನಿಂದ ಬೆಳೆಸಿಕೊಳ್ಳುತ್ತಾ ಬಂದು ಗೋವಾ ಪ್ರಶ್ನೆಯನ್ನು ೧೯೫೭ ಮತ್ತೂ ಮಗಿಳಗಿಸಿ ಜಟಿಲತೆ: ಅಲ್ಲಿರುವ ನಮ್ಮ ಸಹೋದರರ ಸುಖದುಃಖವನ್ನೇ ನಮ್ಮ ಸುಖದುಃಖವೆಂಬುದಾಗಿ ತಿಳಿಯು ಅವರ ಯೋಗಕ್ಷೇಮವನ್ನೇ ಚಿಂತಿಸುತ್ತಿರುವ ನಮಗೆ ಗೋವೆಯನ್ನು ಮೊಕಿಸಿಕೊಡುವ ಉಪಾಯವೇನಾದರೂ ನಿನ್ನ ಜೇಬಿನೊಳಗಿರುವುದೆ?

೧೯೫೭ರಲ್ಲಿ ದ್ವಿತೀಯ ಸಾರ್ವತ್ರಿಕ ಚುನಾವಣಾನಂತರ ನಮ್ಮ ಮೈಸೂರಲ್ಲಿ ಸ್ಥಾಪಿಸಿಕೊಂಡ ಕಾಂಗ್ರೆಸ್ ಸರಕಾರ, ವಿಭಿನ್ನ ಪ್ರದೇಶಗಳ ದಫ್ತರುಗಳನ್ನು ಶೀಘ್ರವಾಗಿ ಪರಿಶೀಲಿಸುವುದೆಂದು ೧೯೫೬ರಲ್ಲಿನ ಏಕೀಕರಣದ ವೇಳೆ ನಂಬಿದ್ದರೂ ನಮ್ಮ ದುರದೃಷ್ಟದಿಂದ ಹಾಗಾಗಲಿಲ್ಲ. ನಮ್ಮ ಮಂತ್ರಿಗಳಿಗೂ, ಸರಕಾರದ ಪ್ರತ್ಯೇಕ ಇಲಾಖೆಯ ಕರ್ಮಚಾರಿಗಳಲ್ಲಿಯೂ ಸರಕಾರದ ಕೆಲಸವನ್ನು ಬೇಗನೆ ಪೂರೈಸಿ ಜನಹಿತ ಸಾಧಿಸುವ ಹಂಬಲವನ್ನು ಹುಟ್ಟಿಸಬಲ್ಲ ಗುಳಿಗೆಗಳೇನಾದರೂ ನಿನ್ನ ಒಳಕಿಸೆಯೊಳಗಿರುವುದೆ?

(೯ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಹಾವಿನ ಹೆಡೆಯ ನೆರಳು

ಶ್ರೀ. ಕೆ. ತಿಮ್ಮಪ್ಪ ಗಟ್ಟಿ

ಸಂಜೆಗತ್ತಲು ಹರಡಿತ್ತು. ಎತ್ತಲೂ ಶಾಂತಿ ನೆಲಸಿತ್ತು. ತಂಪಾದ ಗಾಳಿ ಹೃದಯದಲ್ಲಿ ಉಲ್ಲಾಸಪೂರಿತ ಆನಂದದ ತೆರೆಗಳನ್ನೆಬ್ಬಿಸುತಿತ್ತು. ಹಕ್ಕಿಗಳ ಕೊರಳಿನುಲಿಯನ್ನು ಚಲೆಚಲೆಯಾಗಿ ಮಂದಮಾರುತ ಹೀಡಿ, ಕೇಳಿಸುತಿತ್ತು. ಸೃಷ್ಟಿಯ ಮಡಿಲಲ್ಲಿ ಮರಗಿಡಗಳು ಚಿಗುರಿನಿಂತಿದ್ದುವು, ಹೂಬಿಡುತ್ತಲಿದ್ದುವು.

ನಿರ್ಮಲವಾದ ನದಿಯೊಂದು ಹರಿಯುತ್ತಿತ್ತು. ಆ ಚಿಕ್ಕ ಹೊಳೆಯನ್ನು ದಾಟಲು ದೋಣಿಯ ಅಗತ್ಯವಿಲ್ಲವಾದರೂ, ಸಂಜೆಗತ್ತಲು ಹರಡಿ ನೀರಿನ ಆಳವನ್ನು ತಿಳಿಯುವಂತೆಯೂ ಇರಲಿಲ್ಲ. ದಡದಲ್ಲಿ ದೊಡ್ಡದೊಂದು ಅಶೋಕವೃಕ್ಷ ತುಂಬಿದ ಸೊಬಗಿನಿಂದ ಕಂಗೊಳಿಸುತಿತ್ತು. ಹೂಗಳರಳಿ ಶ್ವೇತಚ್ಛತ್ರವನ್ನು ನಿರ್ಮಿಸಿದ್ದುವು. ಮರದಡಿಯಲ್ಲೊಂದು ಹಾಸುಗಲ್ಲು.

ಆ ಹಾಸುಗಲ್ಲಿಗೆ ಬಾಯಿಯಿರುತ್ತಿದ್ದರೆ ಯಾವುದೂ ಗೋಪ್ಯವಾಗಿ ಉಳಿಯುತ್ತಿರಲಿಲ್ಲ. ತನ್ನನ್ನಿಲ್ಲಿ ಜನರ ಉಪಯೋಗಕ್ಕೆಂದು ತಂದಿರಿಸಿದ ಉದಾರಿ ಹಿರಿಯನಲ್ಲಿಂದ ಈ ವರೆಗಿನ ಕಥೆಯನ್ನು ಹೇಳಿಬಿಡುತಿತ್ತು. ಪ್ರೇಮಿಗಳ ಮಿಲನ, ಸರಸ ಸಲ್ಲಾಪ, ಭಾವಜೀವಿಗಳು ಸೃಷ್ಟಿ ಸೌಂದರ್ಯವನ್ನು ಸವಿದುದು, ವಿಧವಿಧ ಸಂಧಾನ, ನೊಂದವರಿಗೆ ಸಮಾಧಾನ ಯಾರದೋ ಮನೆ ಉರುಳಿಸಲು, ಏನೋ ದುಷ್ಕೃತ್ಯ ನಡೆಸಲು ಬೈಗು, ಇರುಳಿನಲ್ಲಿ ನಡೆದ ಪಿಸುಮಾತು ಎಲ್ಲವನ್ನೂ ಹೇಳಿಯೇ ಹೇಳುತ್ತಿತ್ತು. ಆದರೆ ಎಲ್ಲರಿಗೂ ಗೊತ್ತೇ ಇತ್ತು; ಆ ಹಾಸುಗಲ್ಲಿಗಾಗಲೀ ಆ ಅಶೋಕ ವೃಕ್ಷಕ್ಕಾಗಲೀ ಮಾತನಾಡುವ ಶಕ್ತಿಯಿರಲಿಲ್ಲವೆಂದು.

ಅಂದು ಸುಗ್ಗಿಯ ಕುಣಿತ. ಜನಮನವು ಸಂತಸದಿಂದ ತುಂಬಿತ್ತು. ಮುಗುದೆಯರ ಕೊರಳಿನ ಆನಂದದ ಹೊಸ ಕೇಕೆಗಳು, ಸುಗ್ಗಿಯ ಹಾಡಿನೊಡನೆ ಬೆರೆತಿದ್ದುವು. ಗೆಜ್ಜೆಯ ಸ್ವರ 'ಘಲ್ ಘಲ್' ಎನ್ನುತಿತ್ತು. ಮೆಚ್ಚುಗೆಯ ಉದ್ಗಾರಗಳು ಕೇಳಿಬರುತ್ತಿದ್ದುವು. ಎಲ್ಲೆಡೆಯಲ್ಲಿಯೂ ಹರ್ಷ ತುಂಬಿ ಹರಿಯುತಿತ್ತು. ಜನಮನದ ಮಂದಿರದಲ್ಲಿ ಆನಂದದ ಸುಗ್ಗಿ; ಹಬ್ಬದ ರಸದೂಟ; ಮಕ್ಕಳಿಂದ ಮುದುಕರ ವರೆಗೆ ನಾಲಗೆ ಚಪ್ಪರಿಸುತಿತ್ತು. ಸುಗ್ಗಿಯ ಆನಂದದ ಹೊಸ ಬೆಳಕು ಹರಡಿ ಬೆಳದಿಂಗಳ ರಾತ್ರಿ ಶಾಂತವಾದ ದೃಷ್ಟಿಯಲ್ಲಿ ವಿರಾಜಿಸುತಿತ್ತು. ಸುಗ್ಗಿಯ ಸುಲಲಿತ ಗಾನವೊಂದೇ ಕೇಳಿ ಬರುತಿತ್ತು. ಬಡವನ ಗುಡಿಸಲು ಅರಮನೆಯಾದಂತೆ ತೋರಿತು. ತಳಿರು ತೋರಣ ಗುಡಿ ಗೋಪುರಗಳು ಮೆರೆಯುತ್ತಿದ್ದುವು.

ಸುಗ್ಗಿಯ ಗಲಭೆ ಕೊನೆಗೊಂಡಿತು; ರಾತ್ರಿ ಕಳೆದು ಬೆಳಕು ಹರಿಯಿತು. ನವ ವರುಷದ ಸ್ಫೂರ್ತಿ ತಳೆದು ಕೋಳಿ ಹೊಸ ಕೂಗು ಹಾಕಿತು. ರವಿಯು ಹೊಂಬಣ್ಣದೆಸೆಯಿಂದ ಮೃದುವಾಗಿ ತಂಗಾಳಿ ಬೀಸಿತು. ಅಶಾಂತಿಯನ್ನು ದಿಗಂತದಾಚೆಗೆ ತೊಡೆದಟ್ಟಿ ಶಾಂತಿ ತಾನೇ ತಾನಾಗಿ ನೆಲಸಿತು. ಹಚ್ಚಹಸುರಾಗಿ ಕಂಗೊಳಿಸುವ ಭೂಮಾತೆಯ ಮಡಿಲಿಗೆ ಮೂಡಣ ಗಿರಿಯುತ್ತುಂಗದಿಂದ ಹೊಂಬೆಳಕು ಸುರಿಯುತ್ತಾ ಬಂತು.

ಬಾಲೆಯೊಬ್ಬಳು ಕೊಡವೆತ್ತಿಕೊಂಡು ನದಿಗೆ ಬಂದಳು. ಅಶೋಕ ವೃಕ್ಷದಡಿಯಲ್ಲಿಯೇ ಪಾವಟಿಗೆಗಳಿದ್ದುವು. ನೀರು ತೆಗೆಯಲು ಅಲ್ಲೇ ಇಳಿಯಬೇಕಾಗಿತ್ತು. ಹುಡುಗಿ ಏನೋ ಆಲೋಚನೆಯಲ್ಲಿ ಮುಳುಗಿದ್ದಳು. ಬಂದು ಹಾಸುಗಲ್ಲಿನ ಮೇಲೆ ಕುಳಿತಳು. ಸೃಷ್ಟಿಸೌಂದರ್ಯ ಅವಳನ್ನು ಮೋಹಿಸಿ ತನ್ನತ್ತ ಸೆಳೆಯಿತು. ವಿಚಾರದ ಗುಂಗಿನಲ್ಲಿಯೇ ಆ ಸೊಬಗನ್ನು ಸವಿಯುತ್ತಾ ಅಲ್ಲೇ ಕುಳಿತಳು. ಅಗಲವಾದ ಕಣ್ಣುಗಳು, ಮುಗ್ಧ ಮುಖ, ಶಾಂತ ಭಾವ, ಮೋಹಕ ರೂಪ, ಆಕರ್ಷಣೀಯ ನಿಲುವು. ಆ ಬಡತನದ ದೈನ್ಯಾವಸ್ಥೆಯಲ್ಲಿಯೂ ಹೊಳೆ ಹೊಳೆದು ತೋರುತ್ತಿದ್ದುವು. ಹೆಚ್ಚೆಂದರೆ ೧೪—೧೫ ವರ್ಷವೆನ್ನಬಹುದಾಗಿತ್ತು. ನೀಟಾದ ತೆಳ್ಳಗಿನ ಶರೀರದ ಈ ಬಾಲೆ, ಈ ದೊಡ್ಡ ಕೊಡವನ್ನು ಹೇಗೆ ಎತ್ತುವಳೋ ಎಂದು ಆಲೋಚಿಸುವುದು ಸಹಜವೇ ಆಗಿತ್ತು.

ಅವಳು ನದಿಗಿಳಿದು, ಕೊಡದಲ್ಲಿ ನೀರು ತುಂಬಿಸಿಕೊಂಡು, ಎತ್ತಿ ಪ್ರಯಾಸದಿಂದ ಮುನ್ನಡೆದಳು. ಒಂದು ಚಿಕ್ಕ ತೆಂಗಿನ ಮರದ ತೋಪನ್ನು ದಾಟಿ, ಮನೆಯ ಅಂಗಳಕ್ಕೆ ಬಂದಳು. ಮನೆಯೆದುರಿನ ಜಗಲಿಯಲ್ಲಿ ಯಾರೋ ಕುಳಿತಿದ್ದುದನ್ನು ಕಂಡು ಹಿಂಬಾಗಿಲಿನಿಂದ ಒಳಹೊಕ್ಕಳು.

ಹಳೆಯ ಕಾಲದ ಹುಲ್ಲು ಹೊದಿಸಿದ ಮನೆ. ಹಿರಿಯರ, 'ಕುಟುಂಬ ವಿಸ್ತಾರವಾಗುತ್ತ ಹೋಗುತ್ತದೆ'. ಎಂಬ ಯೋಚನೆಯಿಂದ ಕಟ್ಟಿದ ಸ್ವಲ್ಪ ದೊಡ್ಡ ತರಗತಿಯ ಮನೆಯೇ ಅದರೂ, ಮನೆಯ ಒಳಗೂ ಹೊರಗೂ ಬಡತನ ಕುಣಿದಾಡುತ್ತಿತ್ತು. ಇಷ್ಟು ದೊಡ್ಡ ಮನೆಗೆ ಹುಲ್ಲು ಹೊದಿಸುವುದೇ ದೊಡ್ಡ ಪ್ರಯಾಸವಾಗಿತ್ತು ಅವರ ಪಾಲಿಗೆ. ಆದರೆ ಇದ್ದರೀತಿಯಲ್ಲಿ ಎಲ್ಲಿಯೂ ನಿರ್ಮಲತೆ, ಅಚ್ಚುಕಟ್ಟುತನ ಎದ್ದು ತೋರುತ್ತಿದ್ದುವು. ಮನೆ ತುಂಬ ಜನರೂ ಇರಲಿಲ್ಲ. ಇಡೀ ಮನೆಯಲ್ಲಿ ಕುಟುಂಬವೆಂದು ಕರೆಯಿಸಿಕೊಳ್ಳುವ ಮೂರೇ ಮಂದಿಯಿದ್ದರಷ್ಟೆ.

ಚಿಕ್ಕ ಹುಡುಗ ಶ್ರೀಪತಿ ಶಾಲೆಗೆ ಹೋಗಿದ್ದ. ಸುಶೀಲಾ ಒಳಹೊಕ್ಕಾಗ ತಾಯಿ ಒಳಗೆ ನಿಂತು ಜಗಲಿಯಲ್ಲಿದ್ದ ವ್ಯಕ್ತಿಯೊಡನೆ ಮಾತನಾಡುತ್ತಿದ್ದರು. ಆತ ಯಾರೆಂದು ಸುಶೀಲೆಗೂ ತಿಳಿದಿತ್ತು. ಈ ಮೊದಲು ಹಲವುಬಾರಿ ಆತ ಬಂದಿದ್ದ. ಒಯ್ಯನವಾಗಿ ಸಿಂಗರಿಸಿಕೊಂಡು, ಶೃಂಗಾರ ರಾವಣನಾಗಿ, ಯಮನವತಾರದ ದೇಹವನ್ನು ಹೊತ್ತು ಬರುತ್ತಿದ್ದ. ಆದರೆ ಯಾರೂ ಅವನನ್ನು 'ಯಾಕೆ ಬರುತ್ತಿ?' ಎನ್ನುವಂತಿರಲಿಲ್ಲ. ಅಪಾರ ಶ್ರೀಮಂತ, ಗೌರವಸ್ಥ ಶ್ರೀಕಾಂತರಾಯ. ಈ ಮನೆಗೂ ಆತನೇ ಧನಿ. ಹಾಗೇ ಆತ ಒಕ್ಕಲಿಗರ ಸುಖ ದುಃಖಗಳನ್ನು ವಿಚಾರಿಸುತ್ತಾ ಬರುವುದೂ ಸಹಜವೇ.

ಅವನ ಚಂಚಲವಾದ ಕಣ್ಣುಗಳು ಸುತ್ತುತ್ತಲಿದ್ದುವು. ಮತ್ತೂ ಆತ ಏನೇನೋ ಮಾತನಾಡುತ್ತಲೇ ಇದ್ದ.

"ಕಳೆದ ಬಾರಿ ನೆಟ್ಟ, ಸೇವಂತಿಗೆ ಮತ್ತು ಮಲ್ಲಿಗೆ ಬಹಳ ಚಲೋದಾಗಿದೆ ಯಾರದಿದು, ಸುಶೀಲೆಯ ಕೆಲಸವೇನು?" ಎಂದ ಆತ ಅಂಗಳದೆದುರಿನ ಚಿಕ್ಕ ಹೂವಿನ ತೋಟದತ್ತ ನೋಡುತ್ತಾ.

"ಹೌದು, ಹೂವೆಂದರೆ ಅವಳಿಗೆ ಪ್ರಾಣ. ಯಾವಾಗಲೂ ಅದರದೇ ಯೋಚನೆ. ದೇವರಂತೆ ಪೂಜೆ ಮಾಡುತ್ತಿರುತ್ತಾಳೆ. ಅದನ್ನು" ಸುಶೀಲೆಯ ತಾಯಿ ಶಾರದಮ್ಮ ಹೇಳಿದರು.

"ಬೇರೆ ಹೊಸ ಹೊಸ ಹೂವಿನ ಗಿಡಗಳನ್ನು ತರಿಸಿದ್ದೇವೆ. ಬೇಕಿದ್ದರೆ ಸುಶೀಲೆ ಬಂದು ಕೊಂಡು ಹೋಗಲಿ, ಎಲ್ಲಿದ್ದಾಳೆ?" ಶ್ರೀಕಾಂತರಾಯ ಕತ್ತೆತ್ತಿ ಕೇಳಿದ.

'ಒಳಗಿರಬೇಕು; ಹೇಳುತ್ತೇನೆ" ಎಂದರು ಶಾರದಮ್ಮ. ಮತ್ತು ಸ್ವಲ್ಪ ಹೊತ್ತು ಮಾತನಾಡುತ್ತಿದ್ದ ಆತ ಹೊರಟು ಹೋದ.

ಮೊತ್ತ ಮೊದಲು ಬಂದಾಗ ಹೀಗಲ್ಲ ಮನೆ, ನಿತ್ಯ ಜೀವನದ ಕುರಿತು ಮಾತನಾಡುತ್ತಿದ್ದ. ಅವರ ಜೀವನದ ಕಷ್ಟ ಪರಂಪರೆಗಳನ್ನು ಕೇಳಿ ತಿಳಿದುಕೊಂಡ. ಬರಬರುತ್ತಾ ಶ್ರೀಕಾಂತರಾಯ ಬಹಳ ಹತ್ತಿರದವನಾದ. ಅವರ ಕಷ್ಟ ಜೀವನಕ್ಕೆ ಅನುಕಂಪ ತಾಳಿ ತಾನು ಸಹಾಯ ಮಾಡುವುದಾಗಿಯೂ ಹೇಳಿದ. "ಬೇಸರವಿಲ್ಲದೆ ಸುಖವಾಗಿರಿ; ನನಗೆ ಮಕ್ಕಳೂ ಇಲ್ಲ ಶ್ರೀಪತಿಯನ್ನು ಕಂಡರೆ ಬಹಳ ಅಕ್ಕರೆ ನನಗೆ" ಎಂದು ಆತ ಹೇಳಿದ. ಶ್ರೀಪತಿಯನ್ನು ಕರೆದು ಬಹಳ ಪ್ರೀತಿಯಿಂದ ಮಾತನಾಡುತ್ತಿದ್ದ. ಆದರೆ ಎಷ್ಟೇ ಕಷ್ಟಪಟ್ಟರೂ ಅವನಿಂದ ಸಹಾಯವನ್ನು ಪಡೆದುಕೊಳ್ಳಲು ಶಾರದಮ್ಮ ಸಿದ್ಧರಿರಲಿಲ್ಲ, 'ಕಷ್ಟವೇ ಬರಲಿ ಇಷ್ಟವೇ ಇರಲಿ ಅಂತಹ ಕೂಳು ಬೇಡ' ಎನ್ನುತ್ತಿದ್ದರವರು. ಶ್ರೀಕಾಂತರಾಯನ ಸಹಾನುಭೂತಿ, ಹಿತನುಡಿಗಳಿಗೆ ತಕ್ಕನುಡಿ ನುಡಿದು ಸುಮ್ಮನಿದ್ದುಬಿಡುತ್ತಿದ್ದರು. ಪ್ರಶ್ನೆಗೆ ತಕ್ಕ ಉತ್ತರ, ಹಿತನುಡಿಗೆ ಹಿತನುಡಿಯಾಡುತ್ತಿದ್ದರೇ ಹೊರತು. ತನ್ನ ಗೋಳನ್ನು ಹೇಳಿಕೊಳ್ಳುತ್ತಿರಲಿಲ್ಲ.

ಹಲವು ಬಾರಿ ಹೇಳಿದುದರಿಂದ ಸುಶೀಲೆ ಹೋಗಿ ಹೂಗಿಡಗಳನ್ನು ತಂದಳು. ಅವಳಿಗೂ ಅವನಲ್ಲಿ ಭಕ್ತಿ, ಪೂಜ್ಯಭಾವಗಳು ಹುಟ್ಟಿದುವು. ಅವನ ಮಮತೆಯ ಮಾತಿಗೆ, ಹೂಗಿಡಗಳನ್ನಿತ್ತುದಕ್ಕಾಗಿ 'ಧನಿಗಳು ಒಳ್ಳೆಯವರು' ಎಂದು ಭಾವಿಸುವಂತಾಯಿತು. ತನ್ನ ಪ್ರೀತಿಯ ವಸ್ತುವನ್ನು ಕೊಟ್ಟುದಕ್ಕಾಗಿ ಸಂತೋಷಪಟ್ಟಳು.

ಮನೆಗೆ ಹತ್ತಿರದವನಾಗಿಸಿಕೊಂಡು ಆಪ್ತನೆನಿಸಿಕೊಂಡ ಶ್ರೀಕಾಂತರಾಯನ ಸವಾರಿ ಆಗಾಗ ಬರುತ್ತಿತ್ತು. ಬಂದು ಎಂದಿನಂತೆ ಲೋಕಾಭಿರಾಮವಾಗಿ ನಾಲ್ಕು ಮಾತನ್ನಾಡಿ ಸುಖ ದುಃಖ ವಿಚಾರಿಸಿ, ಸುಶೀಲೆ, ಶ್ರೀಪತಿಯರೊಡನೆ ಸಲಿಗೆ,ಪ್ರೀತಿಯಿಂದ ಮಾತನಾಡಿ ಹೋಗುತ್ತಿದ್ದ. ಹದಿನಾಲ್ಕು ವರ್ಷದಲ್ಲೇ 'ದೊಡ್ಡವಳಾಗಿ' ಗಂಡಸಿಲ್ಲದ ಮನೆಯಲ್ಲಿ ತಾಯಿಗೊಂದು ಹೊರೆಯಾಗಿ ನಿಂತ ಸುಶೀಲೆಯ ಬಗೆಗೆ ಆತ ಕನಿಕರಿಸಿದ 'ಇಷ್ಟು ಬೇಗ ಹೀಗಾಗಬಾರದಾಗಿತ್ತು. ಆದರೂ ಅದರಲ್ಲಿ ನಮ್ಮದೇನಿದೆ? ಪರವಾಗಿಲ್ಲ, ತಕ್ಕ ಪ್ರಯತ್ನ ನಾನೂ ಮಾಡುತ್ತೇನೆ' ಎಂದು ಶ್ರೀಕಾಂತರಾಯನೆಂದಿದ್ದ. ಊರಿನ ಯಜಮಾನನಾದ 'ದೊಡ್ಡ ಮನುಷ್ಯ'ನಾದ ಅವನ ಮಾತು ಶಾರದಮ್ಮನಿಗೂ ಸ್ವಲ್ಪ ಧೈರ್ಯ ತಂದಿತ್ತು. ಅವನ ಬಗೆಗೆ ಅವರಿಗೂ ನಂಬಿಕೆ,ಪೂಜ್ಯಭಾವ ಮೊಳೆತಿತ್ತು.

ಸುಶೀಲೆ ಒಂದು ದಿನ ಶ್ರೀ ಕಾಂತರಾಯನ ಮನೆಗೆ ಹೋದಾಗ ಎಲ್ಲಿಗೋ ಹೊರಟಿದ್ದ ಶ್ರೀಕಾಂತರಾಯ ಬಾಗಿಲಲ್ಲೇ ಎದುರಾದ. "ಎಲ್ಲಿಗೆ ಹೊರಟೆ' ಎಂದ ಆತ ನಗುತ್ತಾ. "ಸ್ವಲ್ಪ ಹೂವು

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮಾ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಸ್ತ್ರೀಪುರುಷರು ಕಲೆಯಬಾರದೆ?

ಪಾತಿವ್ರತ್ಯವೆಂದರೇನು?

ಶ್ರೀ "ನವಗಿರಿನಂದ"

ಪರಪುರುಷನನ್ನು ಕಣ್ಣೆತ್ತಿ ನೋಡಬಾರದು, ಮಾತಾಡಬಾರದು, ನೆನೆಯಬಾರದು; ಅಂಥವಳೇ ನಿಜವಾದ ಪತಿವ್ರತೆ ಎಂದು ಮುಂತಾಗಿ ಪತಿವ್ರತೆಯ ಲಕ್ಷಣಗಳುಂಟು. ಇದಕ್ಕೆ ವ್ಯತಿರೇಕವಾಗಿ ನಡೆಯುವವಳ ಮೇಲೆ ನಾನಾವಿಧ ಅಪವಾದ ಬರುತ್ತಿರುವುದನ್ನು ನಾವು ಪ್ರತಿಕಡೆಯಲ್ಲಿಯೂ ಕಾಣುತ್ತಿದ್ದೇವೆ. ಹಾಗಾದರೆ ನೋಡುವುದು ಮಾತಾಡುವುದು ನೆನೆಯುವುದು ಈ ಮೂರೂ ಇಲ್ಲದೆ ಹೋದ ಹೆಂಗಸು—ನಿಜವಾದ ಪತಿವ್ರತೆ ಹಿಂದೆಯೂ ಇಂದೂ ಇರಲಿಕ್ಕಿಲ್ಲ. ಇದ್ದರೆ ಅಂಥವಳು ಕುರುಡಿಯೋ ಮೂಕಿಯೋ ಮೂಢೆಯೋ ಆಗಿದ್ದಳು.

ಸ್ತ್ರೀಗೆ ಪಾತಿವ್ರತ್ಯ ಲಕ್ಷಣವೆಂದು ಕಠೋರ ನಿರ್ಬಂಧ ಹಾಕಿ ಅವಳನ್ನು ಮೂಢ ಪಶುವನ್ನಾಗಿ ಮಾಡಿದವನು ಗಂಡುಮಾನವ. ಸ್ತ್ರೀ ಉಪಭೋಗ ವಸ್ತುವೆಂಬ ಭಾವವೇ ಇದಕ್ಕೆ ಪ್ರೇರೇಪಕವಾದುದು. ಈ ಸ್ವಾರ್ಥಭಾವದಿಂದಲೇ ಈ ಬಗೆಯ ಬಂದೋಬಸ್ತಿನ ಶಾಸ್ತ್ರ ಲಕ್ಷಣಗಳುಂಟಾದುವು. ಸ್ತ್ರೀಯ ಬಾಹ್ಯಶಕ್ತಿ ಪುರುಷನಿಗಿಂತ ಕಡಮೆಯಾದುದರಿಂದಲೇ ಅವಳು ಪುರುಷನ ವಶವಾಸಿನಿಯಾಗಬೇಕಾಯಿತು. ಇಲ್ಲದಿದ್ದರೆ ಅವಳಿಗೆ ಮಾತ್ರ ಅಷ್ಟೊಂದು ನಿರ್ಬಂಧಗಳೇಕೆ? ಈ ಕಾಲದಲ್ಲಿ ಈ ನಿರ್ಬಂಧಗಳನ್ನು ಪರಿಪಾಲಿಸಲು ಸಾಧ್ಯವೆ? ಪಾತಿವ್ರತ್ಯ ಲಕ್ಷಣಗಳು ಅತಿರೇಕತೆಯು, ತನ್ನ ತಾ ವಂಚಿಸಿಕೊಳ್ಳುವ ಮಾಯದ ಮಂತ್ರ ಬಂಧನದಂತಹುದು. ಅದರಲ್ಲಿ ಅತಿರೇಕತೆಯುಂಟು

ಸೌಂದರ್ಯವನ್ನು ನೋಡಿ ರಸಾನುಭವ ಮಾಡಿಕೊಳ್ಳಲಿಕ್ಕಾಗಿ ಕಣ್ಣುಗಳಿವೆ. ಸೌಂದರ್ಯ ದೃಶ್ಯಗಳಿವೆ. ಕಣ್ಣಿಗೂ ಸೌಂದರ್ಯಕ್ಕೂ ಪರಸ್ಪರ ಆಕರ್ಷಣೆ ತೀರ ಸಹಜ. ಇಂಥ ಸಹಜಾಕರ್ಷಣೆಯಿಂದ ಒಬ್ಬನನ್ನು ನೋಡುವುದೋ ಮಾತಾಡುವುದೋ ಮಮತೆ ತೋರುವುದೋ ಪಾತಿವ್ರತ್ಯಕ್ಕೆ ವಿರೋಧವಾದರೆ ಬಾಳುವುದು ಹೇಗೆ?

ಪತಿವ್ರತೆ ಅಂದರೆ ನಂಬುಗೆಯಿರುವ ಮಾರ್ಗದಲ್ಲಿ ಕರ್ತವ್ಯ ಜ್ಞಾನವುಳ್ಳ ಬಾಳುಗಾತಿ ಎಂದೇ ಅರ್ಥ. ಊರ್ವಶಿ ಮೇನಕಾದಿಗಳು ಅನುದಿನ ಪಾತಿವ್ರತ್ಯವನ್ನು ಪಾಲಿಸಿದವರಾಗಿದ್ದಾರೆ. ಪಿಂಗಳಾ ಎಂಬ ವಾರಾಂಗನೆ ಮೂರು ಮುಕ್ಕಾಲು ಗಳಿಗೆಯಲ್ಲಿ ಮೋಕ್ಷ ಪದಕ್ಕೆ ಅರ್ಹಳಾದ ಪುಣ್ಯವತಿಯಾಗಿದ್ದಾಳೆ. ಇದರಿಂದ ಪತಿಯ ಸುಖ ದುಃಖಗಳಲ್ಲಿ ಸಮಭಾಗಿನಿಯಾಗಿ ವಿಶ್ವಾಸದಿಂದ ಗೃಹ ನಿರ್ವಹಣೆ ಮಾಡುವವಳೇ ಪತಿವ್ರತೆ ಎಂದು ಅರ್ಥವಾಗುತ್ತದೆ. ಅಲ್ಲದೆ ಗಂಡನನ್ನು ದೇವರೆಂದು ಭಾವಿಸಿ ಪೂಜಿಸಿ ಪಾದ ತೀರ್ಥ ಕುಡಿದು ಕತ್ತಲು ಮೂಲೆಯಲ್ಲಿ ಬಿದ್ದುಕೊಂಡಿರುವವಳಲ್ಲ. ಅಂಥವಳು ಕೇವಲ ಮೂಢ ಪತಿವ್ರತೆ.

ಈಗಲಾದರೋ ಹೆಂಗಸರೂ ಗಂಡಸರೂ ಒಟ್ಟೊಟ್ಟಿಗೆ ಹೊಂದಿಕೊಂಡು ಹೋಗಬೇಕಾದ ಸಂದರ್ಭಗಳೇ ತುಂಬ. ಹೆಂಗಸೊಬ್ಬಳೇ ರೈಲು, ಕಾರು, ವಿಮಾನಗಳಲ್ಲಿ ಹೋಗಬೇಕಾಗುತ್ತದೆ; ಆಫೀಸು, ಅಂಗಡಿಗಳಲ್ಲಿ ಉದ್ಯೋಗ ಮಾಡಬೇಕಾಗುತ್ತದೆ. ವಿದ್ಯೆ ಕಲಿಯುವ ಬಾಲ್ಯಾವಸ್ಥೆಯಿಂದ, ಪ್ರೌಢಾವಸ್ಥೆಯ ವರೆಗೂ ಹೆಂಗಸರು ಗಂಡಸರೊಂದಿಗೆ ಕಲೆತು ಮೆಲೆತೇ ಸಾಗಬೇಕಾದ ಕಾಲವಿದು. ಮುದುಕಿಯಾದ ಮೇಲೇನೋ ಹೆಂಗಸು ಹೇಗೆ ಬೇಕಾದರೂ ಇರಬಹುದೆನ್ನುತ್ತಾರೆ. ಕಾರಣ ಆಗ ಅವಳು ಭೋಗವಸ್ತುವಲ್ಲವಷ್ಟೆ?

ವಸ್ತುಸ್ಥಿತಿ ಹೀಗಿರುವಾಗ, ಇನ್ನೊಬ್ಬಳನ್ನು ಕಂಡು ಹಾಗೆ ಹೀಗೆಂದು ಊಹಿಸಿಕೊಂಡು ಅಪಪ್ರಚಾರ ಮಾಡುವ ಚಟ ಅನೇಕ ಮಂದಿಗಿದೆ. ಅವರಿಗೊಂದು ತಮಾಷೆ. ನಮ್ಮ ಇದಿರುಮನೆಗೆ ಬಾಡಿಗೆಗೆ ಬಂದ ಒಬ್ಬಳು, ಹೊಸ ಫ್ಯಾಶನಿನಂತೆ ಸೀರೆ ಉಟ್ಟುಕೊಂಡು ವಾಡಿಕೆಗೆ ವಿರುದ್ಧವಾಗಿ ಕಾಣುತ್ತಿದ್ದಳು. ಅವಳು ಅಡ್ಡದಾರಿಗೆ ಬಿದ್ದವಳೆಂದು ನನ್ನ ಗೆಳೆಯನೊಬ್ಬ ಹೇಳಿದ. ನಾನೂ ಸಂದೇಹ ತಾಳಿದೆ. ಆದರೆ ಒಂದು ವರ್ಷದ ಬಳಿಕೆಯ ಮೇಲೆ ಅವಳು ಮನೆ, ಗಂಡ, ಮಕ್ಕಳನ್ನು ಅಕ್ಕರೆಯಿಂದ ನೋಡುವ ಉತ್ತಮ ಗೃಹಿಣಿಯೆನ್ನಲು ನನಗಾವ ಸಂದೇಹವೂ ಇರಲಿಲ್ಲ. ಅವಳಿಗೆ ಆ ಬಗೆಯ ಫ್ಯಾಶನ್ನಲ್ಲಿ ಮೋಹವಿದ್ದಿರಬಹುದು. ಅನೇಕ ಗಂಡಸರ ಪರಿಚಯವೂ ಅವಳಿಗಿರಬಹುದು. ಅದರಮಾತ್ರಕ್ಕೆ ಅವಳನ್ನೇಕೆ ಕೆಟ್ಟವಳೆನ್ನಬೇಕು?

ಆಫೀಸಿನಲ್ಲಿ ಉದ್ಯೋಗಮಾಡುವ ಸ್ತ್ರೀಯರಿಗೆ ಕೆಲವು ಗಂಡಸರು ಸ್ನೇಹಿತರಾಗಿರಬಹುದು. ದಿನಾ ಹೋಗಿಬರುವ ದಾರಿಯಲ್ಲಿ ಕೆಲವರು ಸ್ನೇಹಿತರಾಗಬಹುದು. ಇದರಿಂದೆಲ್ಲಾ ಅವಳ ಮೇಲೆ ಧುಡುಂ ದೋಷಾರೋಪಣೆ ಮಾಡಿಬಿಡುವುದು ನ್ಯಾಯವೆನಿಸೀತೆ? ಅವಳಿಗೂ ಬುದ್ಧಿಯಿದೆ, ನ್ಯಾಯಮಾರ್ಗದ ಅರಿವಿದೆ, ನೀತಿ ನಿಯಮಗಳ ಜ್ಞಾನವಿದೆ ಎಂಬುದನ್ನು ಕುರಿತು ಯೋಚಿಸಬೇಡವೆ?

ಹೌದು, ಸತಿಯು ಮುಂದೆ ನಡೆಯಬೇಕಾದ ನೀತಿಗೂ ಇತರರ ಮುಂದೆ ನಡೆಯಬೇಕಾದ ರೀತಿಗೂ ತಾರತಮ್ಯವಿದೆ. ಈ ತಾರತಮ್ಯ ಜ್ಞಾನವಿಲ್ಲದೆ ನಡೆಯುವವಳು ಪುರುಷರಿಂದ ಮೋಸಹೋಗುವ ಸಂಭವವುಂಟು. ಅಪವಾದಕ್ಕೆ ಗುರಿಯಾಗುವ ಭೀತಿಯುಂಟು. ಅಂತಹ ಜ್ಞಾನವನ್ನು ಅವಳು ಸರಿಯಾದ ವಿದ್ಯೆಯಿಂದ ಸಂಪಾದಿಸಿಕೊಂಡಿರಬೇಕು. ಇದು ಈ ಕಾಲದಲ್ಲಿ ತುಂಬಾ ಅಗತ್ಯ. ಹಿಂದೆ ನಾಗರಿಕತೆ ಇಷ್ಟು ಮುಂದುವರಿದಿದ್ದಿಲ್ಲ; ದೇವರುದಿಂಡರುಗಳ ಭಯವಾದರೂ ಹಿಂದೆ ಇತ್ತು. ಸ್ತ್ರೀಪುರುಷರೊಳಗೇ ಮೂಢಭಾವ ಮುಸುಗಿತ್ತು. ಈಗ ವಿಜ್ಞಾನವು ಮುಂದುವರಿದಿದೆ. ತರ್ಕಶಕ್ತಿ ಬೆಳೆದಿದೆ. ಸ್ತ್ರೀಪುರುಷರಿಬ್ಬರೂ ಎಚ್ಚೆತ್ತಿದ್ದಾರೆ. ಪುರುಷರು ಮಾಡುವ ನಾನಾ ಕಾರ್ಯಗಳಲ್ಲಿ ಸ್ತ್ರೀಯರೂ ತೊಡಗಿದ್ದಾರೆ. ಕಲಿಯದ ಮೂಢರಿಂದಾಗುವ ಅಪಾಯಗಳಿಗಿಂತಲೂ ಕಲಿತವರಿಂದಾಗುವ ಮೋಸವು ದೊಡ್ಡದೆಂಬುದನ್ನು ಈ ಸಮಯದಲ್ಲಿ ಮುಖ್ಯವಾಗಿ ತಿಳಿದಿರಬೇಕು.

ಸ್ತ್ರೀಯರಿಗೆ ಪುರುಷರಿಗಿಂತಲೂ ಹೆಚ್ಚು ಎಚ್ಚರಿಕೆ ಅಗತ್ಯ. ಮೂಲತಃ ಸ್ತ್ರೀಯರು ಪುರುಷರಿಗಿಂತಲೂ ಸರಳರು ಕೋಮಲೆಯರು, ಬಾಹ್ಯತಃ ಅಬಲೆಯರು. ಪ್ರತ್ಯೇಕವಾದ ಒಂದೆರಡು ನಿಸರ್ಗ ನಿಯಮಗಳೂ ಅವರಿಗುಂಟು. ಪುರುಷರು ಇವುಗಳಿಗೆ ವಿರುದ್ಧ. ಬೆಳೆಯೊಂದಿಗೇ ಬರುವ ಕಳೆಯಂತೆ, ವಿದ್ಯೆಯೊಂದಿಗೇ ಅನೇಕ ದುರ್ವಿದ್ಯೆಗಳೂ ಸೇರಿಕೊಳ್ಳುತ್ತವೆ. ಬಲೆ ಬೀಸುವುದರಲ್ಲಿ ಸಮರ್ಥರಾದ ಪುರುಷರಿಗೆ ಸ್ತ್ರೀಯರು ಸುಲಭವಾಗಿ ಮೋಸಹೋಗಿಬಿಡುತ್ತಾರೆ. ಕೆಟ್ಟುಹೋಗಬೇಕೆಂದು ಯಾವ ಸ್ತ್ರೀಯೂ ಬಯಸುವುದಿಲ್ಲ. ತಾನು ಸೂಳೆಯಾಗಿದ್ದರೂ ತನ್ನ ಮಗಳು ಗೃಹಿಣಿಯಾಗಬೇಕೆಂದೇ ಅವಳಿಗಿರುತ್ತದೆ. ಇದಕ್ಕೆ ವಿಪರೀತವಾಗುವುದೆಲ್ಲಾ ಪರಿಸ್ಥಿತಿಯ ಒತ್ತಡ. ಈ ಒತ್ತಡವನ್ನು ಪ್ರತಿಯೊಬ್ಬಳೂ ಅರಿತಿರಬೇಕು. ಕೆಡಿಸಬೇಕೆಂಬ ಬುದ್ಧಿ, ತಾಳ್ಮೆಗೇಡಿತನ ಇತ್ರ ಹೆಚ್ಚಾಗಿ ಪುರುಷರಲ್ಲೇ ಇರುವುದನ್ನು ಕಾಣಬಹುದು.

ಪಾತಿವ್ರತ್ಯದ ಮೂಢಾರ್ಥದ ಮುಸುಕಿನೊಳಗಿಂದ ಸ್ತ್ರೀ ಹೊರಗೆ ಬರಲಿ. ಅವಳಿಗಿರುವ ವೈಯಕ್ತಿಕ ಸ್ವಾತಂತ್ರ್ಯವನ್ನು ಪುರುಷರು ಅರ್ಥ ಮಾಡಿಕೊಳ್ಳಲಿ. ವೈಯಕ್ತಿಕ ಸ್ವಾತಂತ್ರ್ಯವೆಂದರೆ, ವೇಷ, ಭೂಷಣ, ರುಚಿ, ಭಾವನೆ, ಮೊದಲಾದುವುಗಳ ಸ್ವಾತಂತ್ರ್ಯವಾಗಿವೆ. ವೇಷ, ಭೂಷಣ, ರುಚಿಗಳು ಹೊರಕ್ಕೆ ಗೊತ್ತಾಗುವಂಥವು ಭಾವನೆ ಇತರರಿಗೆ ಕಾಣಿಸುವಂಥವಲ್ಲ. ಅವಳೊಬ್ಬ ಸುಂದರ ಯುವಕನನ್ನು ಕಂಡು ಆಕಾಂಕ್ಷಾ ಭಾವವನ್ನು ತಾಳದಂತೆ ತಡೆ ಹಾಕಲು ಯಾರಿಗಾದರೂ ಸಾಧ್ಯವುಂಟೆ? ಒಂದು ಸುಂದರ ಹೂವನ್ನು ಚಿತ್ರವನ್ನು ಸಿನಿಮಾ ನಾಯಕನನ್ನು ಕಂಡು ಪರವಶಳಾಗುವುದು ತಪ್ಪೆಂದು ತಡೆ ಹಾಕಲು ಯಾರಿಗೆ ತಾನೇ ಸ್ವಾತಂತ್ರ್ಯವುಂಟು? ಹಾಗೆ ತಡೆ ಹಾಕುವವರು ನಮ್ಮ ಪುರಾಣೇತಿಹಾಸಗಳ ಅಹಲ್ಯಾ ದ್ರೌಪದಿ ರೇಣುಕಾದಿ ನಾರೀ ರತ್ನಗಳ ಚರಿತ್ರೆಯನ್ನು ಅರಿತು ಪಾತಿವ್ರತ್ಯದ ಭ್ರಾಂತಾರ್ಥವನ್ನು ಕಳೆದುಕೊಳ್ಳಬೇಕು. ಸ್ತ್ರೀಯರಲ್ಲಿ ಒಳ್ಳೆಯತನಗಳನ್ನೇ ಕಾಣಲೆತ್ನಿಸಿದರೆ ಅವರೂ ಸುಗುಣಮಣಿಗಳಾಗಿ ಅಭ್ಯುದಯ ಹೊಂದಬಲ್ಲರು.



ರಾಜಕುಮಾರ ಫಿಲಿಪರು ತಾವು ಅಧ್ಯಕ್ಷರಾಗಿರುವ 'ರಾಯಲ್ ಸೊಸೈಟಿ ಆಫ್ ಆರ್ಟ್ಸ್'ನ ಲಂಡನಿನಲ್ಲಿನ ಪ್ರಧಾನ ಕಾರ್ಯಾಲಯಕ್ಕೆ ಒಂದು ಲೆಕ್ಚರ್ ಬೆಂಚನ್ನು ದಾನ ಮಾಡುತ್ತಿದ್ದಾರೆ. ಇದನ್ನು ಬ್ರೆಸಿಲಿನ "ರೋಸ್‌ವುಡ್" ಎಂಬುದರಿಂದ ತಯಾರಿಸಲಾಗಿದೆ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

The Canara Industrial & Banking Syndicate, Ltd.,

Head Office: UDIPI, S India. Estd: 1925.

CHANGE OF PREMISES.

We have the pleasure to inform all our patrons and friends that our BOMBAY OFFICE has now been shifted from "Rahimtoola House", Homji Street, to our OWN PREMISES "SYNDICATE BANK BUILDING" 26, Sir Phirozeshah Mehta Road, Fort, BOMBAY-1.

ಹಿಂಸಕ ಪ್ರಾಣಿಗಳ ವಿನಾಶಮಾಡಿದರೆ....?

ಭವಿಷ್ಯಜನಾಂಗದಿಂದ ಅವಹೇಳನ!

ಕಳೆದ ದಸಂಬರ ೪ನೆ ದಿನಾಂಕದಂದು ಡಾ. ಸಂಪೂರ್ಣಾನಂದರು ಚಂದ್ರಪ್ರಭಾರಣ್ಯಕ್ಕೆ ತೆರಳಿ ಸಿಂಹಗಳನ್ನು ಪಂಜರದಿಂದ ಮುಕ್ತವನ್ನಾಗಿಸಿ "ಸಂತೋಷ ಸಂಮೃದ್ಧಿಯಿಂದ ಬಾಳಿರಿ" ಎಂದು ಒಂದು ಸಂದೇಶವನ್ನೀಯಲು, "ಸಿಂಹಸದನವನ್ನು ಸಂಸ್ಥಾಪಿಸಿ, 'ಸಿಂಹ ಸಂಸ್ಕೃತಿ'ಯನ್ನು ರಕ್ಷಿಸಲು ತೆರಳುವಾಗ, ಇನ್ನೊಂದು ಕಡೆ, ಪ್ರಾಯ: ಅದೇ ದಿನಗಳಲ್ಲಿ ಉತ್ತರ ಪ್ರದೇಶದ ಒಂದು ದೈನಿಕ ಪತ್ರಿಕೆಯಲ್ಲಿ ಪ್ರಕಾಶಿತವಾದ ಸಮಾಚಾರದಂತೆ, ಪೀಲೀ ಭೀತದ ಕೆಲವು ಗ್ರಾಮಗಳಲ್ಲಿ ಒಂದು ಸಿಂಹವು ಉತ್ಪಾತವನ್ನೇ ಎಬ್ಬಿಸಿಬಿಟ್ಟಿತು. ಐದೆಷ್ಟೋ ಜನರನ್ನದು ಕೊಂದು ತಿಂದು ಮುಗಿಸಿದೆ. ಸರಕಾರವು ಅದನ್ನು ಕೊಂದುಹಾಕುವ ಸಲುವಾಗಿ ಒಂದು ಸಾವಿರ ರೂಪಾಯಿಗಳ ಬಹುಮಾನವನ್ನೂ ಘೋಷಿಸಿತ್ತು. ಆದರೆ, ಅದನ್ನಿದುವರೆಗೂ ಅಂತ್ಯಗೊಳಿಸುವುದು ಅಸಾಧ್ಯವಾಗಿ ಪರಿಣಮಿಸಿದೆ. ಈ ಕಾರಣದಿಂದಾಗಿಯೇ ಅದು ಮನುಷ್ಯರನ್ನು ಕೊಂದುತಿನ್ನುತ್ತಾ ಇದೆ. ಸಿಂಹವೇ ಮೊದಲಾದ ಹಿಂಸಕ ಪಶುಗಳು ಮಾನವರಿಗೆ ಹಾನಿಯನ್ನುಂಟುಮಾಡಲು ಮಾತ್ರ ಇರುತ್ತವೆಯೆಂದು ಈ ರೀತಿಯ ಸಂವಾದಗಳಿಂದ ತಿಳಿದು ಬರುವುದು.

ಆದರೆ, ಅಂತಹ ಕ್ರೂರ ಪ್ರಾಣಿಗಳ ಸಮೂಲ ನಾಶವು ಮಾನವ ಜನಾಂಗಕ್ಕೆ ಹಿತಕಾರಿಯಾಗುವುದೆ? ಎಂಬುದೊಂದು ಪ್ರಶ್ನೆಯು ಈಗ ಏಳುತ್ತದೆ. ಅರಣ್ಯವಾಸಿಗಳಾದ ಸಿಂಹ ಹುಲಿ ಮೊದಲಾದ ಪಶುಗಳನ್ನು ಹೆಕ್ಕಿಹೆಕ್ಕಿ ಮೃತ್ಯುಮುಖೇರುವನ್ನು ಏರಿಸಿ ಬಿಡುವುದು ಉಚಿತವಾಗುವುದೆ? ತಾನು ಅಪೇಕ್ಷಿಸಿದಾಗ ಸಿಂಹವಿಹೀನ ಮಹಿಯಲ್ಲಿ ಪ್ರಿಯವಾಗಿ ಬಾಳುವಂತಹ ಬುದ್ಧಿಯನ್ನು ಭಗವಂತನು ಕೊಟ್ಟಿರುತ್ತಾನೆ ಪ್ರಸಿದ್ಧ ಆಂಗ್ಲ ಶಿಕಾರಿಕಾರ ಜಿಮ್ ಕೋರ್‌ಬೆಟ್‌ನು "ಕುಮಾವಿನ ನರಭಕ್ಷಕ" ಎಂಬ ಪುಸ್ತಕವನ್ನು ಬರೆದಿದ್ದಾನೆ. ಅದರಲ್ಲಿ ಆತನು ಕುಮಾವಿನ ಗ್ರಾಮಗಳಲ್ಲಿ ಉತ್ಪಾತವೆಬ್ಬಿಸುತಿದ್ದ ಹುಲಿ ಮತ್ತು ಸಿಂಹಗಳನ್ನು ಬೇಟೆಯಾಡ ಅದೆಷ್ಟೋ ಘಟನೆಗಳನ್ನು ರೋಚಕ ವಿಧಾನದಲ್ಲಿ ವರ್ಣಿಸಿರುತ್ತಾನೆ. ಉತ್ತರ ಪ್ರದೇಶದ ಆ ಕಾಲದ ಗವರ್ನರ ಸರ್ ಮಾಲ್ಕಮ್ ಹೆಲೇಟನು ಈ ಪುಸ್ತಕದ ಆಮುಖ ಲೇಖಕನಾಗಿದ್ದಾನೆ ಮತ್ತು ಲಾರ್ಡ್ ಲಿನ್ಲಿತ್ಗೋರವರು ಪ್ರಸ್ತಾಪನೆಯನ್ನು ಬರೆದಿರುವರು. ಕೋರಿಬೇಟನ ಜೀವನವೇ ಸಿಂಹಗಳ ಬೇಟೆಯಲ್ಲಿ ಕಳೆದಿತ್ತು. ಪುಸ್ತಕದ ಭೂಮಿಕೆಯಲ್ಲಿ ಆತನು ಸಹ ಸಿಂಹ ಮತ್ತು ಹುಲಿ ಮೊದಲಾದುವು ವಾಸ್ತವವಾಗಿ ನರಭಕ್ಷಕಗಳಾಗಿರುವುದಿಲ್ಲ ಎಂದು ಒತ್ತಿ ಬರೆದಿರುವನು. ಕಾಡಿನಲ್ಲಿ ಅನ್ಯ ಪಶುಗಳು ದೊರೆಯದೆ ಹೋದರೆ ಅಥವಾ ಬಹಳ ಅಶಕ್ತನಾದುದರಿಂದ ಅನ್ಯ ಪಶುಗಳ ಬೇಟೆಯನ್ನು ಮಾಡಲಾರದೆ ಹೋದರೆ ಮಾತ್ರ ಮನುಷ್ಯನತ್ತ ಇರುತ್ತದೆ. ಸಿಂಹಗಳನ್ನು ಕೊಂದು ಹಾಕುವ ಅವರ ವಂಶವನ್ನೇ ಮುಂದಕ್ಕೆ ಸಮೂಲ ನಷ್ಟಮಾಡುತ್ತಿರುವ ಕುರಿತಾಗಿ ಈ ಬೇಟೆಗಾರನು ಹೇಳುತ್ತಾನೆ-"ಸಿಂಹಗಳು ಅತ್ಯಂತ ಉದಾರಹೃದಯದ ಮತ್ತು ಜೆಂಟಲ್‌ಮನ್ ಸ್ವಭಾವದವುಗಳಾಗಿವೆ. ಒಂದು ವೇಳೆ, ಅದರ ವಂಶವೇ ಸಂಪೂರ್ಣ ವಿನಾಶವಾಗಬೇಕಾದರೆ ಮತ್ತು ಅದರ ಪಕ್ಷದಲ್ಲಿ ಲೋಕಮತ ಸಂಗಠಿತ ಮಾಡದೆ ಹೋದರೆ, ಅದರ ಸಂಪೂರ್ಣ ವಿನಾಶವಾಗುವುದು. ಆದರೆ, ಭಾರತವು ತನ್ನ ಸರ್ವಶ್ರೇಷ್ಠ ಪಶುವನ್ನು ಕಳೆದುಕೊಂಡಲ್ಲಿ ತನ್ನ ಸಂಪತ್ತಿನಲ್ಲಿ ಒಂದಂಶವನ್ನು ಕಳೆದುಕೊಂಡಂತೆಯೇ ಸರಿ.

ಎಲ್ಲ ವೈದಿಕ ಸಾಹಿತ್ಯಗಳಲ್ಲಿ ಮತ್ತು ನಮ್ಮ ಧಾರ್ಮಿಕ ಗ್ರಂಥಗಳಲ್ಲಿ ಸಿಂಹವನ್ನು ಶಕ್ತಿ, ಶೌರ್ಯ, ಪರಾಕ್ರಮ ಮತ್ತು ಸಾಹಸದ ಪ್ರತೀಕವೆಂದು ತಿಳಿಯಲಾಗಿದೆ. ಸಿಂಹದ ಈ ಗುಣವು ಮನುಷ್ಯನಿಗೆ ಒಂದು ಸರ್ವೋಚ್ಚ ಆದರ್ಶದ ರೂಪದಲ್ಲಿವೆ. ಮುಂದೆ ಬರಲಿರುವ ತಲೆಮಾರುಗಳಿಗೆ ಸಿಂಹವು ಕೇವಲ ಒಂದು ಭೂತಕಾಲದ ಕಲ್ಪನೆಯ ಮತ್ತು ಅತೀತತೆಯ ಸ್ಮೃತಿಯಾಗಿಯೇ ಉಳಿಯುವಂತೆ ಮಾಡುವುದು ಮಹಾಪರಾಧವಾಗಿದೆ. ಆದುದರಿಂದ ಬೇಟೆಗಾರಕೋರ ಬೇಟನು ಇಂದಿನಿಂದ ಸುಮಾರು ೧೦ ವರ್ಷಗಳ ಪೂರ್ವದಲ್ಲಿಯೇ ಅರಣ್ಯಗಳಲ್ಲಿನ ಪಶುಗಳಲ್ಲಿನ ಈ ಸರ್ವೋತ್ತಮ ಪ್ರತಿನಿಧಿಯಾಗಿರುವ ಸಿಂಹದ ರಕ್ಷಣೆಗಾಗಿ ಕೊಟ್ಟ ಎಚ್ಚರಿಕೆ ಆಗ ಸಾಮಯಿಕವಾಗಿಯೇ ಇತ್ತೆನ್ನಬೇಕು.

ಸಿಂಹಗಳು ಮತ್ತು ಅನ್ಯ ಅದೆಷ್ಟು ಕಾಡುಪಶುಗಳಿಗೆ ಸಂಪೂರ್ಣ ವಿನಾಶಗೊಳ್ಳುವುದರಿಂದ, ರಕ್ಷಣೆಯನ್ನು ನೀಡಲು ಭಾರತ ಸರಕಾರವೂ ದೃಷ್ಟಿ ಹಾಯಿಸಿದೆ. ೧೯೫೨ರಲ್ಲಿ ಸರಕಾರವು ಭಾರತೀಯ ವನ್ಯಪಶು ರಕ್ಷಾ ಮಂಡಲದ ಸ್ಥಾಪನೆಯನ್ನು ಮಾಡಿತ್ತು. ಈ ಮಂಡಲವು "ಅರಣ್ಯ ಪಶುಗಳ ರಕ್ಷಣೆಯೇಕೆ?" ಎಂಬ ಹೆಸರಿನ ತನ್ನೊಂದು ಪ್ರಚಾರ ಪತ್ರಿಕೆಯಲ್ಲಿ ಕಳೆದ ೧೫ ಯಾ ೨೦ ಶತಾಬ್ದಿಗಳಲ್ಲಿ ಜಗತ್ತಿನ ಎಷ್ಟೋ ಪಶುಪಕ್ಷಿಗಳು ಸಂಪೂರ್ಣ ಸಮಾಪ್ತವಾಗಿಬಿಟ್ಟವೆ ಎಂದು ಹೇಳಿದೆ. ಕಳೆದ ೧೫೦ ವರ್ಷಗಳಿಂದ ವಿಭಿನ್ನಜಾತಿಯ ಪಶುಪಕ್ಷಿಗಳ ಸಮೂಲವಿನಾಶದವೇಗವು ಬಹಳ ವೇಗಪ್ರದವಾಗಿ ನಡೆಯುತ್ತಾ ಬರುತ್ತಿದೆ. ಭಾರತದಲ್ಲಿ ಹಿಂದಿನ ವರ್ಷಗಳಲ್ಲಿದ್ದ ಎರಡು ಕೊಂಬುಗಳುಳ್ಳ ಸೂಲಂಗಿಯು ನಾಶಗೊಂಡಿದೆ. ಜಗತ್ತಿನಲ್ಲಿ ಎಲ್ಲವುಗಳಿಗಿಂತ ವೇಗವಾಗಿ ಓಡಬಲ್ಲ ಪ್ರಾಣಿಯಾದ, ಮತ್ತು ಪ್ರಾಯಃ ಗಂಟೆಯೊಂದಕ್ಕೆ ಎಪ್ಪತ್ತು ಮೈಲುಗಳ ವೇಗದಲ್ಲಿ ಓಡಬಲ್ಲ ಚಿರುಟನ ವಂಶ ಪ್ರಾಯಃ ಈಗ ನಾಶವಾಗುತ್ತಾ ಇದೆ. ಏಶಿಯದ ಪ್ರಸಿದ್ಧ ಸಿಂಹ ಈಗ ಕೇವಲ ಸೌರಾಷ್ಟ್ರದಲ್ಲಿನ ಗಿರಿವನಗಳಲ್ಲಿ ಮಾತ್ರವಿರುತ್ತವೆ. ಪ್ರಾಯಃ ಈ ವಂಶದ ಸಿಂಹಗಳೂ ನಾಶಹೊಂದಬಹುದು. ಈ ಸಿಂಹವು ಭಾರತದ ಗೌರವವಾಗಿದೆ; ಮತ್ತು ಜಗತ್ತಿನ ವಾಸ್ತವಿಕ ರಾಜನಾಗಿದೆ. ಶೌರ್ಯ, ಪರಾಕ್ರಮ, ಮತ್ತು ಅಪ್ರತಿಮ ಸಾಹಸ ಮೊದಲಾದ ಯಾವ ಗುಣಗಳಗಾಗಿ ಸಿಂಹದ ಗುಣಗಾನವನ್ನು ಮಾಡಲಾಗುತ್ತದೆಯೋ ಅವೆಲ್ಲವೂ ಸೌರಾಷ್ಟ್ರದ ಈ ಸಿಂಹ ಜಾತಿಯಲ್ಲಿ ಕೂಡಿಕೊಂಡಿರತ್ತವೆ ಆದುದರಿಂದ, ಈ ವಂಶದ ಸಿಂಹಗಳನ್ನು ಜೀವಿಸುವಸಲುವಾಗಿ ಗಿರಿವನಗಳ ಅತಿರಿಕ್ತವಾಗಿ, ಉತ್ತರ ಪ್ರದೇಶದ ಚಂದ್ರ ಪ್ರಭಾರಣ್ಯವನ್ನು ಸಹ ಸುರಕ್ಷಿತವಾಗಿಡಲಾಗುವುದೆಂಬ ಮಾತು ಸಂತೋಷದ ಸಂಗತಿಯಾಗಿದೆ. ಸ್ವಯಂ ಮುಖ್ಯಮಂತ್ರಿಯವರೇ ಅದರ ಉದ್ಘಾಟನೆಯನ್ನು ಮಾಡಿ ಅಲ್ಲಿ ಸಿಂಹ ಮತ್ತು ಸಿಂಹಿಣಿಯರನ್ನು ಬಿಟ್ಟುಬಿಟ್ಟರಂತೆ. ಈ ರೀತಿಯ ಪ್ರಯತ್ನಗಳನ್ನು ವಹಿಸದೆ ಹೋದರೆ, ೨೧ನೆಯ ಶತಮಾನದ ನಂತರ ವಿಶ್ವದ ಎಲ್ಲವುಗಳಿಗಿಂತಲೂ ಅಧಿಕ ಶೂರ ವೀರ ಮತ್ತು ದುರ್ದಮನೀಯವೆನಿಸಿದ ಪಶುವು ಸಂಪೂರ್ಣ ಲೋಪವಾಗಿ ಹೋಗುತಿತ್ತು.

ನಮ್ಮ ಅನ್ಯ ಯೋಜನೆಗಳಂತೆಯೇ ವನ್ಯ ಪಶುಗಳ ಸಂರಕ್ಷಣೆಯು ಸಹ ಒಂದು ಮಹತ್ವಪೂರ್ಣ ಕಾರ್ಯವಾಗಿದೆ. ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಪಶುರಕ್ಷಣೆಯನ್ನು ಮರೆತು ಬಿಡದಿರುವುದು ಆನಂದದ ಸಂಗತಿ. ಆ ಯೋಜನದಲ್ಲಿ ಈ ಉದ್ದೇಶಕ್ಕಾಗಿ ಒಂದು ಕೋಟಿ ಮೂವತ್ತೈದು ಲಕ್ಷ ರೂಪಾಯಿಗಳನ್ನಿಡಲಾಗಿದೆ. ೧೯೫೭ರ ಅಕ್ಟೋಬರಿನ ಮೊದಲ ಸಪ್ತಾಹದಲ್ಲಿ ಪ್ರಥಮ ವನ್ಯ ಪಶುರಕ್ಷಣ ಸಪ್ತಾಹವನ್ನು ದೇಶದ ಅದ್ಯಂತ ಆಚರಿಸಲಾಯಿತು. ಇವೆಲ್ಲವುಗಳಿಂದ ಅರಣ್ಯಜೀವಿಗಳ ವಿಭಿನ್ನ ಜಾತಿಗಳ ನಷ್ಟವಾಗುವುದನ್ನು ತಡೆಹಿಡಿಯುವ ಆವಶ್ಯಕತೆಯ ಸಂಬಂಧದಲ್ಲಿ ಜನಸಾಮಾನ್ಯರನ್ನು ಎಚ್ಚರಗೊಳಿಸುವ ಸಮಯವೀಗ ಸನ್ನಿಹಿತವಾಗಿರುವುದೆಂಬುದು ಪ್ರಕಟವಾಗುವುದು. ಸಿಂಹವಾದರೋ ಪಶುಜಗತ್ತಿನ ಸರ್ವಶ್ರೇಷ್ಠ ಪ್ರತಿನಿಧಿಯಾಗಿರುವುದ; ಅದರ ರಕ್ಷಣೆಯೂ ಅತ್ಯಂತಾವಶ್ಯಕವಾಗಿರುವುದು. ಆದರೆ, ಸಾರಂಗ ಮತ್ತಿನ್ನಿತರ ಹಲವಾರು ಬಗೆಯ ಹರಿಣಗಳು, ಜಿಂಕೆಗಳು, ನೀಲಗೋವು. ಕಾಡುಕೋಣ, ಸೂಲಂಗಿ, ಆನೆ ಮತ್ತು ಅನೇಕ ಪ್ರಕಾರದ ಸುಂದರ ಪಕ್ಷಿಗಳು ಭಾರತದಲ್ಲಿರುತ್ತವೆ. ಇವುಗಳಲ್ಲಿ ಜಗತ್ತಿನ ಬೇರೆಡೆಯಲ್ಲಿಯೂ ದೊರೆಯಲಾರದ ಅನೇಕ ಜಾತಿಗಳಿರುತ್ತವೆ. ಸಾವಿರಾರು ವರ್ಷಗಳಿಂದ ಮಾನವನು ಪಶುಗಳನ್ನು ಕೊಂದು ನಷ್ಟಮಾಡುತ್ತ ಬಂದಿದ್ದಾನೆ. ಸಿಡಿಮದ್ದಿನ ಸಂಶೋಧನೆಯ ಅನಂತರ ಪಶುನಾಶವು ಮತ್ತೂ ತೀವ್ರಗತಿಯಿಂದ ಮುನ್ನಡೆಯಿತು. ಭಾರತದಲ್ಲಿ ವಿದೇಶೀಯರು ರಾಜ್ಯ ಸ್ಥಾಪಿಸಿದ ನಂತರ ಅವರು ಇಲ್ಲಿನ ಪಶುಗಳಿಗೆ ವಿನಾಶಪ್ರಾಯರಾದರು. ಇಂದಿಗೂ ದೊಡ್ಡ ದೊಡ್ಡ ಯಾತ್ರಿಕರಾಗಿ ಬಂದ ವಿದೇಶೀಯರು ಭಾರತದ ಒಂದಲ್ಲೊಂದು ಮೂಲೆಯಲ್ಲಿ ಸಿಂಹ ಅಥವಾ ಕಿರುಬಗಳನ್ನು ಬೇಟೆಯಾಗಿ ತಮ್ಮ ಬೇಟೆಯ ತೀಟೆಯನ್ನು ಪರಿಹರಿಸಿಕೊಳ್ಳಲು ಉತ್ಸುಕರಾಗಿರುತ್ತಾರೆ. ಮಹಾಮಹಾ ರಾಜಕೀಯ ಅತಿಥಿಗಳು ಈ ದೇಶಕ್ಕೆ ಬರುವಾಗ, ಅವರ ವಿನೋದಕ್ಕಾಗಿ ಸರಕಾರದ ಕಡೆಯಿಂದ ಶಿಕಾರಿಯ ವ್ಯವಸ್ಥೆಯು ನಡೆಯುತ್ತಿದೆ. ಇವೆಲ್ಲವೂ ಎಷ್ಟುಮಟ್ಟಿಗೆ ದೇಶ ಹಿತಕಾರಿಯಾಗಿದೆ ಎನ್ನುವುದು ಸಹ ವಿಚಾರಣೀಯವಾಗಿದೆ. ಮಾಂಸಾಭಿಲಾಷೆಯಿಂದ ಅಥವಾ ಶಿಕಾರಿಯ ಪಿಪಾಸೆಯನ್ನು ದೂರಮಾಡುವುದಕ್ಕಾಗಿ ನಾವು ನಮ್ಮ ವನ್ಯ ಪಶುಗಳನ್ನು ಕಣ್ಣುಮುಚ್ಚಿಕೊಂಡು ನಾಶಮಾಡುತ್ತೇವೆಯಾದರೆ, ಅಂತ್ಯದಲ್ಲಿ ನಮ್ಮ ದೇಶದ ಗೌರವಪೂರ್ಣವಾದ ಕೆಲವೇ ವಸ್ತುಗಳು ನಮ್ಮ ಪಾಲಿಗೆ ಸಂಪೂರ್ಣ ನಾಶವಾಗಿ ಹೋಗುತ್ತವೆ ಮತ್ತು ನಮ್ಮ ಈತರದ ಅಂಧತ್ವಕ್ಕೆ ನಮ್ಮ ಭವಿಷ್ಯ ಜನಾಂಗವು ನಮ್ಮನ್ನು ಧಿಕ್ಕಾರದ ಮಾತುಗಳಿಂದ ಅಪಮಾನಿಸುತ್ತದೆ.

ರಾಮತೀರ್ಥ ಬ್ರಾಹ್ಮೀ ತೈಲ

...ಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಶ್ರೀ ಶಿವರಾಮ ಕಾರಂತರ
ಅಪೂರ್ವ ಗ್ರಂಥ—

ಯಕ್ಷಗಾನ ಬಯಲಾಟ

ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. ೬/-
ವಿ. ಪಿ. ಕಳಿಸುವುದಿಲ್ಲ-
ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಕೇಂದ್ರ ಆರೋಗ್ಯ ಪರಿಷತ್ತು—

ಭಾರತದಲ್ಲಿ ಕ್ವಿನಿನ್ ಉತ್ಪಾದನೆ

ರಾಷ್ಟ್ರೀಯ ಮಲೇರಿಯಾ ಹತೋಟಿ ಕಾರ್ಯಕ್ರಮದ ಪರಿಣಾಮವಾಗಿ, ಕ್ವಿನೈನನ್ನು ಒಳಗೊಂಡು, ಮಲೇರಿಯಾ ವಿರುದ್ಧ ಔಷಧಿಗಳ ಬೇಡಿಕೆಯು ಕಡಿಮೆಯಾಗುವ ನಿರೀಕ್ಷೆಯಿರುವ ದೃಷ್ಟಿಯಿಂದ, ಭಾರತದಲ್ಲಿ ಕ್ವಿನೈನಿನ ಅತಿ ಉತ್ಪಾದನೆಯನ್ನು ತಡೆದು, ಸಿಂಕೋನಾದ ಉತ್ಪಾದನೆಯನ್ನು ನಿಯಂತ್ರಣಗೊಳಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಬೇಕೆಂಬ ವಿಷಯವನ್ನು ಕೇಂದ್ರ ಆರೋಗ್ಯ ಪರಿಷತ್ತು, ೧೯೫೮ರ ಜನವರಿ ೬ ಮತ್ತು ೭ ರಂದು ಬೆಂಗಳೂರಿನಲ್ಲಿ ನಡೆಸುವ ತನ್ನ ೬ನೆಯ ಸಭೆಯಲ್ಲಿ ಪರಿಶೀಲಿಸುವುದು. ಈ ಪ್ರಶ್ನೆಯು ಈಗ ಕೆಲವು ಕಾಲದಿಂದಲೂ ಭಾರತ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಪರಿಶೀಲನೆಯಲ್ಲಿರುವುದು.

ಮಲೇರಿಯಾ ಹತೋಟಿ ಕಾರ್ಯಕ್ರಮಗಳನ್ನು, ಇಷ್ಟರಲ್ಲಿಯೇ ಮಲೇರಿಯಾ ನಿರ್ಮೂಲನ ಕಾರ್ಯಕ್ರಮದ ಪ್ರಕಾರ ತೀವ್ರಗೊಳಿಸಲಾಗುವುದು. ಈ ಸಂದರ್ಭದಲ್ಲಿ, ಕ್ವಿನೈನ್ ಮತ್ತು ಮಲೇರಿಯಾ ವಿರುದ್ಧ ಔಷಧಿಗಳ ಬಳಕೆಯು ಕಡಿಮೆಯಾಗುವುದು. ಸಿಂಕೋನಾವನ್ನು ಬೆಳೆಯುವ ರಾಜ್ಯಗಳಾದ ಮದರಾಸು ಮತ್ತು ಪಶ್ಚಿಮ ಬಂಗಾಳ ರಾಜ್ಯಗಳು, ಸಿಂಕೋನಾ ಪ್ಲಾಂಟೇಷನ್‌ಗಳ ಬಗೆಗೆ ಇನ್ನುಮುಂದೆ ಉತ್ಪಾದನಾ ನಿಯಂತ್ರಣದಿಂದ ಆಗುವ ಪರಿಣಾಮ—ಇವುಗಳನ್ನು ಈ ಸಭೆಯಲ್ಲಿ ಪರಿಶೀಲಿಸಲಾಗುವುದು.

ಭಾರತದಲ್ಲಿ ಸಿಂಕೋನಾ ಪ್ಲಾಂಟೇಷನ್‌ಗಳ ಬಗೆಗೆ ಅನುಸರಿಸಬೇಕಾದ ಕಾರ್ಯನೀತಿಯನ್ನು ಪರಿಶೀಲಿಸಲು, ಉದಕಮಂಡಲದಲ್ಲಿ ೧೯೫೭ರ ಅಕ್ಟೋಬರ್‌ನಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳ ಸಭೆಯೊಂದು ನಡೆಯಿತು. ಈ ಸಭೆಯು ಈ ಸಮಸ್ಯೆಯ ಎಲ್ಲಾ ದೃಷ್ಟಿಕೋಣಗಳನ್ನೂ ಪರಿಶೀಲಿಸಿ, ಮಲೇರಿಯಾ ಹತೋಟಿ ದೇಶದಲ್ಲಿ ಸಿಂಕೋನಾದ ಉತ್ಪಾದನೆಯಲ್ಲಿ ಯಾವುದೇ ಗಮನಾರ್ಹ ಇಳುವಳಿಯನ್ನು ಮಾಡುವ ಬದಲು, ರಾಷ್ಟ್ರೀಯ ಮಲೇರಿಯಾ ಹತೋಟಿ ಕಾರ್ಯಕ್ರಮದ ಪ್ರತಿಕ್ರಿಯೆಯನ್ನು ಜಾಗರೂಕತೆಯಿಂದ ಅಧ್ಯಯನಮಾಡುವುದು ಅಗತ್ಯವೆಂಬ ನಿರ್ಣಯವನ್ನು ಕೈಗೊಂಡಿತು. ಇಂತಹ ಅಧ್ಯಯನವನ್ನು ಆರಂಭಿಸುವ ಅಗತ್ಯ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಭಾರತ ಸರ್ಕಾರವನ್ನು ವಿನಂತಿಮಾಡಿಕೊಳ್ಳಬೇಕೆಂದೂ ಈ ಸಭೆಯಲ್ಲಿ ಅಭಿಪ್ರಾಯಪಡಲಾಯಿತು. ಮಲೇರಿಯಾ ವಿರುದ್ಧ ಔಷಧಿಗಳನ್ನು ಹಂಚುವಕಡೆ ಸಾಧ್ಯವಿದ್ದಷ್ಟು ಅವು ಕ್ವಿನೈನ್ ರೂಪದಲ್ಲಿಯೇ ಇರಬೇಕೆಂದೂ ಈ ಸಭೆಯು ನಿರ್ಣಯ ಸ್ವೀಕರಿಸಿತು.

ಭಾರತದ ಮಲೇರಿಯಾ ಸಂಸ್ಥೆಯು ಅಗತ್ಯವಾದ ಅಧ್ಯಯನಗಳನ್ನು ನಡೆಸಿ ಮುಂದೆ ಸೂಚಿಸಿರುವ ಅಂತಿಮ ನಿರ್ಧಾರಗಳನ್ನೂ ಮಾಡಿತು:-

೧. ಮಲೇರಿಯಾ ರೋಗವ್ಯಾಪನೆಯು ಪ್ರಮಾಣವು ೧೯೫೨-೫೩ರಲ್ಲಿನ ಅಂಕೆಯೊಂದಿಗೆ ಹೋಲಿಸಿದ್ದಾದರೆ ೧೯೫೬-೫೭ರಲ್ಲಿ ಪ್ರತಿಶತ ೫೭ ಅಂಶವು ಕಡಿಮೆಯಾಯಿತು. ಈ ಅವಧಿಯಲ್ಲಿ ಮಲೇರಿಯಾ ರೋಗಪೀಡಿತರ ಸಂಖ್ಯೆಯು ೧೦೦೦ ವ್ಯಕ್ತಿಗಳಿಗೆ ೧೭.೩ರಿಂದ ೧೬.೭ಕ್ಕೆ ಇಳಿಯಿತು.

೨. ಜೊತೆಗೆ ಮಲೇರಿಯಾ ವಿರುದ್ಧ ಔಷಧಿಗಳ ಸೇವನೆಯು ಇದ್ದಕ್ಕಿದ್ದಂತೆಯೇ ಕಡಿಮೆಯಾಗಿದೆ. ೧೯೫೧-೫೨ರಲ್ಲಿ ಸೇವಿಸಿದ ಮಲೇರಿಯಾ ವಿರುದ್ಧ ಔಷಧಿಗಳ ಪ್ರಮಾಣದೊಂದಿಗೆ ಹೋಲಿಸಿದ್ದಾದರೆ ೧೯೫೬-೫೭ರಲ್ಲಿ ಪ್ರತಿಶತ ೬೭.೭ರಷ್ಟು ಇಳಿದಿದೆ.

೩. ೧೯೫೫-೫೬ರಲ್ಲಿದ್ದ ಕ್ವಿನೈನ್ ಹಾಗೂ ಇತರ ಸಿಂಕೋನ ಉತ್ಪನ್ನಗಳ ಸೇವನೆಯನ್ನು ೧೯೫೧-೫೨ರಲ್ಲಿನ ಸೇವನೆಯೊಂದಿಗೆ ಹೋಲಿಸಿದ್ದಾದರೆ ೧೯೫೬-೫೭ರಲ್ಲಿ ಈ ಔಷಧಿಗಳ ಸೇವನೆಯು ಪ್ರತಿಶತ ೮೦ರಷ್ಟು ಕಡಿಮೆಯಾಗಿದೆ.

೪. ೧೯೫೩-೫೪ರಲ್ಲಿ ಮಲೇರಿಯಾ ವಿರುದ್ಧದ ಸಂಯೋಜಿತ ಔಷಧಿಗಳ ಸೇವನೆಯು ೧೯೫೧-೫೨ಕ್ಕಿಂತಲೂ ಅತಿ ಹೆಚ್ಚಾಗಿದ್ದು, ೧೯೫೬-೫೭ರಲ್ಲಿ ಸೇವನೆಯು ಕಡಿಮೆಯಾಯಿತು. ೧೯೫೧—೫೨ರಲ್ಲಿ ಸೇವಿಸಿದ ಒಟ್ಟು ಪ್ರಮಾಣದಲ್ಲಿ ಕಾಲು ಭಾಗದಷ್ಟು ಔಷಧಿಗಳನ್ನು ೫೬-೫೭ರಲ್ಲಿ ಬಳಸಲಾಯಿತು.

೨೦೦ ಮಲೇರಿಯಾ ನಿಯಂತ್ರಣ ಕೇಂದ್ರಗಳು ಕಾರ್ಯಾಚರಣೆಗೆ ತೊಡಗಿದ ನಂತರ ಮಲೇರಿಯಾ ರೋಗವ್ಯಾಪನೆ ಹಾಗೂ ಮಲೇರಿಯಾ ವಿರುದ್ಧ ಔಷಧಿಗಳ ಸೇವನೆಯು ಮತ್ತಷ್ಟು ಇಳಿಯುವ ಸಂಭವವಿದೆಯೆಂದು ಭಾರತದ ಮಲೇರಿಯಾ ಸಂಸ್ಥೆಯು ಸೂಚಿಸಿದೆ.

ಮಲೇರಿಯಾ ಸಂಸ್ಥೆಯ ವರದಿಯನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳು ಹಾಗೂ ಭಾರತ ಸರ್ಕಾರದ ಕ್ವಿನೈನ್ ಸಂಬಂಧವಾದ ಮುಖ್ಯಾಧಿಕಾರಿಗಳು ಪರೀಕ್ಷಿಸಿದರು. ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ಪರಿಣಾಮ ಸ್ವರೂಪವಾಗಿ ಮಲೇರಿಯಾ ವಿರುದ್ಧ ಔಷಧಿಗಳ ಬಗ್ಗೆ ಬರುವ ಬೇಡಿಕೆ ಇಳಿದಿದೆ ಎಂಬ ವಿಚಾರದಲ್ಲಿ ಬಲವಾದ ಸಾಕ್ಷ್ಯವಿದ್ದಾಗ್ಯೂ; ರೋಗ ವ್ಯಾಪನೆಯ ಪ್ರಮಾಣದ ಬಗ್ಗೆ ಉಚಿತ ನಿರ್ಧಾರಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಕೆಲವು ಕಾಲದ ವರೆಗೂ ನಿಯಂತ್ರಣ ಕಾರ್ಯಕ್ರಮಗಳ ಫಲಿತಾಂಶವನ್ನೂ ಕಾದು ನೋಡುವುದು ಸೂಕ್ತವೆಂದು ರಾಜ್ಯ ಸರ್ಕಾರವೊಂದು ಅಭಿಪ್ರಾಯಪಟ್ಟಿದೆ. ದೇಶದಲ್ಲಿ ಬಳಸುವ ಮಲೇರಿಯಾ ವಿರುದ್ಧ ಔಷಧಿಗಳ ಒಟ್ಟು ಪ್ರಮಾಣದಲ್ಲಿ ಮೂರನೆಯ ಒಂದಂಶವನ್ನು ಮಾತ್ರ ಆಮದು ಮಾಡಿಕೊಳ್ಳುವ ಅಗತ್ಯತೆಯನ್ನು ಮತ್ತೊಂದು ರಾಜ್ಯಸರ್ಕಾರವು ಒತ್ತಿ ಸೂಚಿಸಿದೆ.



ಅಮೆರಿಕೆಯ ನೌಕಾದಳದ ಒಂದು ಹಡಗವು ಉತ್ತರ ಶಾಂತಸಾಗರದಲ್ಲಿ ನೀರಡಿಯಲ್ಲಿ ಸ್ಫೋಟಿಸಿದ ಅಣುವಿನ ಪರಿಣಾಮವಾಗಿ ಎದ್ದ ನೀರ ಬೊಬ್ಬುಳಿಯನ್ನು ಈ ಚಿತ್ರದಲ್ಲಿ ಕಾಣಬಹುದು. ಈ ಚಿತ್ರವು ೧೯೫೫ರಲ್ಲಿ ತೆಗೆಯಲ್ಪಟ್ಟಿದ್ದರೂ, ಈಗ ಕೆಲ ದಿನಗಳ ಹಿಂದೆ ಪ್ರಕಟವಾಗಿದೆ.

ಇನ್ನೊಂದು ಪ್ರಶ್ನೆಯು ಕ್ವಿನೈನ್ ಹಾಗೂ ಮಲೇರಿಯಾ ವಿರುದ್ಧ ಸಂಯೋಜಿತ ಔಷಧಿಗಳ ವಿಚಾರಕ್ಕೂ, ಭಾರತದಲ್ಲಿ ಸಿಂಕೋನದ ಪ್ಲಾಂಟೇಷನ್‌ಗಳ ಭವಿಷ್ಯದ ವಿಚಾರಕ್ಕೂ ಸಂಬಂಧಿಸಿದೆ. ಸಿಂಕೋನಾ ಉದ್ಯಮದ ಹಿತದೃಷ್ಟಿಯಿಂದ ವಿದೇಶೀ ವಿನಿಮಯ ಧನದಿಂದ ಪಡೆಯಬೇಕಾಗುವ ಮಲೇರಿಯಾ ವಿರುದ್ಧ ಸಂಯೋಜಿತ ಔಷಧಿಗಳನ್ನು ಆಮದುಮಾಡಿಕೊಳ್ಳುವುದನ್ನು ನಿಷೇಧಿಸಬೇಕೆಂದು ಸೂಚಿಸಲಾಗಿದೆ. ವಿಶೇಷ ಸಂದರ್ಭಗಳಲ್ಲಿ ಅತ್ಯಲ್ಪ ಪ್ರಮಾಣದ ಔಷಧಿಗಳನ್ನು ಮಾತ್ರ ಆಮದು ಮಾಡಿಕೊಳ್ಳಬಹುದೆಂದೂ ಸೂಚಿಸಲಾಗಿದೆ. ಜೊತೆಗೆ, ಸಂಯೋಜಿತ ಔಷಧಿಗಳನ್ನು ಈ ಕೂಡಲೆ ಡ್ರಗ್ಸ್ ಕಾನೂನಿನ ವ್ಯಾಪ್ತಿಗೆ ತಂದು ಅವುಗಳನ್ನು ವೈದ್ಯರ ಚೀಟಿಯಿಲ್ಲದೆ ಮಾರಾಟಮಾಡುವುದನ್ನು ತಕ್ಷಣವೇ ನಿಷೇಧಿಸಬೇಕು. ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದಲ್ಲಿ ಸಂಯೋಜಿತ ಔಷಧಿಗಳ ಪ್ರತಿಯಾಗಿ ಕ್ವಿನೈನನ್ನು ಬಳಸಬೇಕು.

ಭಾರತದಲ್ಲಿ ತಯಾರಿಸಲ್ಪಟ್ಟಿರುವ ಮಲೇರಿಯಾ ನಿವಾರಕ ಔಷಧಿಗಳನು ವಿದೇಶಿ ಮಾರುಕಟ್ಟೆಗಳಲ್ಲಿ ಸ್ಪರ್ಧಾತ್ಮಕ ಬೆಲೆಗಳಲ್ಲಿ ಮಾರಾಟ ಮಾಡದ ಹೊರತು ಅವುಗಳ ಬಗ್ಗೆ ಗಮನಾರ್ಹವಾದ ಪ್ರಮಾಣದ ಬೇಡಿಕೆಯೇನಾದರೂ ದೊರೆಯಬಹುದೇ ಎಂಬುದು ಸಂಶಯಾಸ್ಪದ ವಿಚಾರವಾಗಿದೆ. ಆದಾಗ್ಯೂ ಚೀಣಾದಲ್ಲಿ ಭಾರತೀಯ ಔಷಧ ವಸ್ತುಗಳಿಗೆ ಮಾರುಕಟ್ಟೆ ಕಲ್ಪಿಸುವ ಬಗ್ಗೆ ಪ್ರಯತ್ನಿಸಲಾಗುತ್ತಿದೆ.

ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತಿನವರು ಕ್ವಿನೈನಿನ ಬೇಡಿಕೆಯನ್ನು ಉತ್ತೇಜಿಸುವುದಕ್ಕಾಗಿ ಕ್ವಿನೈನಿನ ಪರ್ಯಾಯ ಬಳಕೆಗಳ ಸಾಧ್ಯತೆಯನ್ನು ಹುಡುಕುವ ಬಗ್ಗೆ ಕ್ರಮ ಕೈಗೊಂಡಿರುವರು. ಈಗ ಸಂಕಲನಗೊಳ್ಳುತ್ತಿರುವ ರಾಷ್ಟ್ರೀಯ ಸೂತ್ರ ಸಂಹಿತೆಯಲ್ಲಿ ಕ್ವಿನೈನಿನ ಅನೇಕ ತಯಾರಿಕೆಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಸಂಯೋಜಿತ ಔಷಧಿಗಳ ಆಮದಿನ ಮೇಲೆ ನಿಷೇಧ ವಿಧಿಸುವುದರಿಂದ ಈಗ ಅಷ್ಟಾಗಿ ಪ್ರಯೋಜನವಿಲ್ಲ. ಏಕೆಂದರೆ ರಾಷ್ಟ್ರೀಯ ಮಲೇರಿಯಾ ನಿಯಂತ್ರಣ ಕಾರ್ಯಕ್ರಮದ ಪರಿಣಾಮ ಸ್ವರೂಪವಾಗಿ ಕ್ವಿನೈನ್ ಒಳಗೊಂಡ ಮಲೇರಿಯಾ ವಿರುದ್ಧ ಔಷಧಿಗಳ ಬಗ್ಗೆ ಬರುವ ಬೇಡಿಕೆ ಮತ್ತಷ್ಟು ಕಡಿಮೆಯಾಗುವುದು.

ಕೇಂದ್ರ ಆರೋಗ್ಯ ಪರಿಷತ್ತು ಈ ಪ್ರಶ್ನೆಯ ವಿವಿಧ ಅಭಿಪ್ರಾಯಗಳನ್ನೂ ಜೊತೆಗೆ ಮುಂಬರುವ ವರ್ಷಗಳಲ್ಲಿ ಕ್ವಿನೈನಿನ ಬಗ್ಗೆ ಬರುವ ಬೇಡಿಕೆಯು ಇಳಿಯುವುದರಿಂದ ಉದ್ಭವಿಸಬಹುದಾದ ಪರಿಸ್ಥಿತಿಯನ್ನು ಎದುರಿಸುವ ಸಂಬಂಧವಾದ ಕ್ರಮಗಳನ್ನೂ ಕುರಿತು ಪರ್ಯಾಲೋಚನೆ ನಡೆಸುವುದು.

THE CANARA INDUSTRIAL & BANKING SYNDICATE LTD., UDIPI.

H. O: ಉಡುಪಿ ಸ್ಥಾಪನೆ: 1925

ಹೊಸ ವರ್ಷವು

ನಮ್ಮ ಎಲ್ಲಾ ಗ್ರಾಹಕರಿಗೂ ಹಿತಚಿಂತಕರಿಗೂ

ಶುಭದಾಯಕ

ವಾಗಲೆಂದು ಆಶಿಸುವೆವಲ್ಲದೆ

ಬರುವ ವರ್ಷದಲ್ಲಿ

ಇನ್ನೂ ತೃಪ್ತಿಕರವಾದ ಬೇಂಕಿಂಗ್ ಸೇವೆಯ

ಭರವಸೆಯನ್ನೀಯುವೆವು.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೭-೧-'೬೮	೧೯

ವಾದ ವಿವಾದವೇಕೆ?

ಪ್ರಚಲಿತ ಸಂದರ್ಭದಲ್ಲಿ ದೇಶದ ಮೂಲೆ ಮೂಲೆಯಲ್ಲಿಯೂ ಪ್ರತಿಧ್ವನಿಸಿಗುತ್ತಿರುವ ಕೆಲವೇ ವಿಶಿಷ್ಟತರದ ರಾಷ್ಟ್ರೀಯ ಸಮಸ್ಯೆಗಳಲ್ಲಿ ಭಾಷಾಸಮಸ್ಯೆಯೂ ಒಂದಾಗಿ ಪರಿಣಮಿಸಿರುವುದು ಖೇದನೀಯ. ರಾಜಕಾರಣಿಗೆ ಸಾಹಿತ್ಯ ಹಾಗೂ ಸಾಹಿತ್ಯದ ಮಾಧ್ಯಮವೆನಿಸಿದ ಭಾಷೆಯಲ್ಲಿ ಆಸಕ್ತಿಯಿರಬೇಕಾದರೂ, ಈ ಸಾಹಿತ್ಯ ಮತ್ತು ಭಾಷೆಗಳ ಪ್ರಶ್ನೆ ರಾಜಕಾರಣದ ಧುಂಧುಗಾವಾತದಿಂದ ಬವಣೆಗೊಳ್ಳುವಂತಾಗಬಾರದು; ಭಾಷೆಯ ಇರವನ್ನು ಅಧಿಕಾರಿಕವಾಗಿ ನುಡಿಯುವ ಜೀತನ ಆಯೂ ಭಾಷೆಯ ಅನುಭವಸ್ಥ ಲೇಖಕರ ಪಾಲಿಗೆ ಸೇರಿದೆ. ಮದ್ರಾಸಿನಲ್ಲಿ ದಕ್ಷಿಣ ಭಾಷಾ ಸಮ್ಮೇಳನವೊಂದನ್ನು ನಡೆಸಿ ರಾಷ್ಟ್ರಭಾಷೆಯಾಗಿ ಹಿಂದಿಯನ್ನು ಮಾಡದೆ ಇಂಗ್ಲಿಷ್ ಭಾಷೆಯನ್ನೇ ಮುಂದುವರಿಸಬೇಕು; ಹಿಂದಿಯು ರಾಷ್ಟ್ರಭಾಷೆಯ ಸ್ಥಾನವನ್ನು ಆಕ್ರಮಿಸುವಷ್ಟು ಬೆಳೆದಿಲ್ಲ; ದಕ್ಷಿಣ ಭಾರತದವರ ಮೇಲೆ ಪ್ರಭುತ್ವ ನಡೆಸಲು ಅನುಕೂಲವಾಗುವಂತೆ ಹಿಂದಿಯನ್ನು ಹೇರಬಾರದು ಎಂದು ನಿರ್ಣಯವನ್ನು ಮಾಡಲಾಯಿತು. ಭಾರತದ ಹಿರಿಯ ಅನುಭವಿಕ ರಾಜಕಾರಣಿಯೇ ಇದನ್ನು ಮುಂದೆತಂದ ಅಗ್ರೇಸರರು ಇದಕ್ಕೆ ಪ್ರತಿಯಾಗಿ ಮೊರಾರ್ಜೀ ದೇಸಾಯಿ, ಕಾಲೇಲಕರ ಮೊದಲಾದವರೂ, ಪಂಡಿತ ನೆಹರೂ ಸಹ ಹಿಂದಿಯೇ ರಾಷ್ಟ್ರಭಾಷೆಯಾಗಬೇಕೆಂದು ಅಭಿಪ್ರಾಯಪಟ್ಟಿದ್ದಾರೆ; ಪಡುತ್ತಿದ್ದಾರೆ. ಬಹುಸಂಖ್ಯಾಕ ಜನರು, ಆಡುವ ಭಾಷೆಯನ್ನೇ ರಾಷ್ಟ್ರಭಾಷೆಯನ್ನಾಗಿ ಸ್ವೀಕರಿಸುವುದು ವಿಹಿತವೆಂದೂ, ಕೆಲವೇ ಮಂದಿಯಾಡುವ ಇಂಗ್ಲಿಷ್‌ನ ಸರಕಾರೀ ಭಾಷಾಸ್ಥಾನವನ್ನೇರಲು ಹಿಂದಿಯೇ ಯೋಗ್ಯವೆಂಬೂ ಅವರ ಅಂಬೋಣ. ಹಿಂದಿಯನ್ನು ಒತ್ತಾಯದಿಂದ ಹೇರದೆ ದಾಕ್ಷಿಣಾತ್ಯರು ಸ್ವಸಂತೋಷದಿಂದಲೇ ಅದನ್ನು ಕಲಿಯಬೇಕು; ಸಾರ್ವಜನಿಕ ಪ್ರಚಾರವಾದನಂತರ, ಎಂದರೆ, ಅಧಿಕೃತ ಭಾಷಾ ಆಯೋಗದ ಅಭಿಪ್ರಾಯದಂತೆ ೧೯೬೫ರಲ್ಲಿಯಲ್ಲ, ಇನ್ನೂ ಕೆಲ ವರ್ಷಾನಂತರ, ಅದನ್ನು ರಾಷ್ಟ್ರಭಾಷೆಯನ್ನಾಗಿಸಬೇಕೆನ್ನುತ್ತಾರೆ. ಭಾರತೀಯರು ಕಡಿಮೆಪಕ್ಷ ನಾಲ್ಕು ಭಾಷೆಗಳನ್ನು ಕಲಿಯಬೇಕು; ಉತ್ತರಭಾರತದವರು ದಕ್ಷಿಣದ ಭಾಷೆಗಳಲ್ಲಿ ಒಂದನ್ನು ಕಲಿಯಬೇಕು ಹೀಗೆ ಮೈತ್ರಿ ಹೂಡಿಕಬಯಸುವವರೂ ನಮ್ಮಲ್ಲಿದ್ದಾರೆ. ಭಾರತದ ಎಲ್ಲ ಭಾಷೆಗಳಲ್ಲೂ ಗಣನೀಯ ಪ್ರಮಾಣದಲ್ಲಿ ಪರಿಣಾಮವಮಾಡಿದ ಹಿಂದೀ ಭಾಷೆಯ ಮಾತೃಭಾಷೆಯಾದ ಭಾರತದ ಪ್ರಾಚೀನ ಹಾಗೂ ಸಂಪೂರ್ಣ ಭಾಷೆಯೆನಿಸಿ ಒಂದುಕಾಲದಲ್ಲಿ ಮೆರೆದಾಡಿದ್ದ ಸಂಸ್ಕೃತವನ್ನೇಕೆ ರಾಷ್ಟ್ರಭಾಷೆಯ ಗದ್ದುಗೆಗೇರಿಸಬಾರದು ಎಂದು ಪ್ರಶ್ನಿಸುವವರೂ ಇಲ್ಲದ್ದಿಲ್ಲ. ಒಟ್ಟಿನಲ್ಲಿ ಈ ವಾದವಿವಾದಗಳನ್ನು ನೋಡುವಾಗ ಅಭಿಪ್ರಾಯ ಪ್ರಕಟಣಾ ಸ್ವಾತಂತ್ರ್ಯದ ದುರುಪಯೋಗವೆಂದಿಷ್ಟೇ ಹೇಳಬಹುದು. ಆದರೆ, ದಾಕ್ಷಿಣಾತ್ಯರು ಒಂದಾಗಿ ಹಿಂದಿಯ ಬಗ್ಗೆ ವಿರೋಧವನ್ನು ವ್ಯಕ್ತಪಡಿಸಿದರೆ, ಅದರಲ್ಲಿ ತುಂಬ ಅರ್ಥವಿರುವುದೆಂಬುದನ್ನು ಮರೆಯಬಾರದು. ಹಿಂದಿ ಭಾಷೆಯು ಪರಿಪೂರ್ಣ ಭಾಷೆಯಲ್ಲ; ಅದರಲ್ಲಿ ಅರಬ್ಬಿ, ಉರ್ದು, ಪಾರಸಿ, ಹೆಚ್ಚಾಗಿ ಸಂಸ್ಕೃತ ಭಾಷಾ ಶಬ್ದಗಳೇ ತುಂಬಿಗಿವೆ. ಅದರಲ್ಲೂ ಈಗಿನ ನವೀನ ಹಿಂದಿ ಎಂಬುದು ಇದಕ್ಕೆ ಮಾನಸ್ಥ ಹಿಂದಿ ಎಂದು ಸಾಹಿತ್ಯ ಪರಿಭಾಷೆಯಲ್ಲಿ ಹೇಳುತ್ತಾರೆ-ಸಂಸ್ಕೃತಮಯವೇ ಆಗಿದೆ. ಇಂತಹ ಅನ್ಯ ದೇಶ್ಯ ಅಥವಾ ಸಂಸ್ಕೃತ ಪದಗಳು ಭಾರತದ ಎಲ್ಲ ವ್ಯಾವಹಾರಿಕ ಭಾಷೆಗಳಲ್ಲಿಯೂ ಇವೆ. ಹಾಗಿರುವಾಗ, ಹಿಂದಿಯನ್ನೇ ಏಕೆ ರಾಷ್ಟ್ರಭಾಷೆಯನ್ನಾಗಿ ಮಾಡಬೇಕು?- ಇದರಿಂದ ಇಂಗ್ಲಿಷ್ ಆಗಬಹುದೆಂದರ್ಥ ಬರುವುದಿಲ್ಲ- ಭಾರತದ ಭಾಷೆಗಳಲ್ಲಿ ಇತರ ಭಾಷೆಗಳಿಗಿಂತ ಹೆಚ್ಚಿನವರು ಓದಲು ಬರೆಯಲು ಹಿಂದಿಯನ್ನು ಕಲಿತಿದ್ದಾರೆ, ಇನ್ನೂ ಕಲಿಯುತ್ತಿದ್ದಾರೆ. ಆದುದರಿಂದ ಸೌಲಭ್ಯಾಕಾಂಕ್ಷಿಯಾದವರು ಇತ್ತ ಹೊರಳಿರುವುದು ಅಚಾತುರ್ಯವೆನಿಸುವುದಿಲ್ಲ. ದಕ್ಷಿಣ—ಉತ್ತರ ಭಾರತದವರ ಹಿಂದೀ ವಿರೋಧ ಮತ್ತು ಪರ ವಾದವಿವಾದಗಳನ್ನು ಒರೆಗೆ ಹಚ್ಚುವುದು ಹುಚ್ಚುತನ- ಇಂಗ್ಲಿಷ್ ರಾಷ್ಟ್ರಭಾಷೆಯಾಗಿ ಉಳಿಯಬೇಕೇ ಬೇಡವೆ? ಎಂದಿಲ್ಲಿ ಉದ್ಭವಿಸುವ ಪ್ರಶ್ನೆ. ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್ ನಮಗೆ ಬೇಕು; ಆದರೆ ಅದು ಅನ್ಯ ಭಾಷೆಯಾದುದರಿಂದ, ರಾಷ್ಟ್ರಭಾಷೆಯ ಪಟ್ಟದಿಂದ ಇಳಿಯಬೇಕು; ಹಿಂದಿ ಆ ಸ್ಥಾನವನ್ನು ಕ್ರಮಿಸಬೇಕು. ಆದರೆ, ಹಿಂದಿಯ ಪಟ್ಟಾಭಿಷೇಕದಿಂದ ಪ್ರಾದೇಶಿಕ ಭಾಷೆಗಳ ಹಿತರಕ್ಷಣೆಗಳಿಗೆ ಅಭಿವೃದ್ಧಿಗೆ ಧಕ್ಕೆ ಬರಬಾರದು—ಇದು ನಮ್ಮ ಧುರೀಣರ ಆಕಾಂಕ್ಷೆ. "ಸೊಸೆ ಬರಬೇಕು; ಅತ್ತೆಯ ಪಟ್ಟ ಹೋಗಬಾರದು" ಎಂಬಂತೆ ಈ ಮಾತಿನ ಅರ್ಥವೆನ್ನಬೇಕೇ ತಿಳಿಯದು. ಮೂರು ಹೆಜ್ಜೆ ಬೇಡಿ ಬಂದ ವಾಮನ ಮೂರು ಲೋಕವನ್ನೂ ಆಕ್ರಮಿಸಿದನೆಂಬ, ಬೆರಳು ತೋರಿಸಿದರೆ ಕೈ ನುಂಗಿದನೆಂಬ ಮಾತುಗಳನ್ನು ಹೇಳುವ ಜನರು, ಹಿಂದಿಗೆ ಈ ಕೇವಲ ರಾಷ್ಟ್ರಭಾಷೆಯ ಗೌರವವನ್ನು ಕೊಟ್ಟಲ್ಲಿ ಅತಿಥಿಯೇ ಮನೆಯೊಡೆಯನಾದರೆ......? ಎಂದು ಶಂಕಿಸುವುದರಲ್ಲಿಯೂ ಅರ್ಥವಿಲ್ಲದೆ ಇಲ್ಲ. ಆಗ ಪ್ರಾದೇಶಿಕ ಭಾಷೆಗಳು ಹೇಗೆ ಬಾಳಿಯಾವು? ಇಂಗ್ಲಿಷ್ ಭಾಷೆಯ ಪ್ರಭಾವದಿಂದಾಗಿಯೇ ಮಾತೃಭಾಷೆಗಳು ಕಷ್ಟವನ್ನನುಭವಿಸುವಾಗ ಇನ್ನು ಈ ಸ್ಥಳಾಂತರದಿಂದ ಯಾವ ಅನಾಹುತಗಳು ಸಂಭವಿಸಬಹುದೆಂದು ಊಹಿಸುವುದು ಕಷ್ಟ. ಅಂತೂ, ರಾಷ್ಟ್ರಭಾಷೆಯು ಬೇಕಾದುದು ಮುಖ್ಯವಾಗಿ ರಾಜ್ಯ ಮತ್ತು ಕೇಂದ್ರ ಸರಕಾರಗಳ ನಡುವಿನ ವ್ಯವಹಾರ ಮಾಧ್ಯಮಕ್ಕಾಗಿ ಒಂದು ಪ್ರದೇಶದ ಜನತೆಗೆ ಆಯಾ ರಾಜ್ಯಸರಕಾರದೊಡನೆಯೇ ವ್ಯವಹಾರವಿರುವುದು ಹೆಚ್ಚು. ಆದುದರಿಂದ, ಮೊತ್ತಮೊದಲು, ಜನಸಾಮಾನ್ಯರ ಭಾಷೆಯಾದ ಪ್ರಾದೇಶಿಕ ಭಾಷೆ ರಾಜ್ಯಸರಕಾರಗಳ ಅಧಿಕೃತ ಭಾಷೆಯಾಗಿ, ಸರಕಾರಗಳ ವ್ಯವಹಾರಗಳು ಅದರ ಮೂಲಕ ನಡೆಯಲಿ. ಸ್ವಾತಂತ್ರ್ಯ ದೊರೆತು ಹತ್ತು ವರ್ಷಗಳು,-ಭಾಷಾನುಗುಣರಾಜ್ಯಗಳ ನಿರ್ಮಾಣವಾಗಿ ಒಂದು ವರ್ಷ ಸಂದರೂ ಇಂಗ್ಲಿಷ್‌ನ ವ್ಯಾಮೋಹವನ್ನು ಬಿಡಲೊಲ್ಲದ ರಾಜ್ಯ ಸರಕಾರಗಳು ಇರುವಾಗ ಹಿಂದಿಯ ಬಗ್ಗೆ ಗೌರವವನ್ನು ಪ್ರದರ್ಶಿಸುವ ಮಾತು ಸದ್ಯ ವಿಲ್ಲವೆಂಬುದು ಖಂಡಿತ. ಹಾವು ಸಾಯಬೇಕು; ಕೋಲು ಮುರಿಯಬಾರದು; ಅಂತೆಯೇ ಹಿಂದೀ ರಾಷ್ಟ್ರಭಾಷೆಯಾಗಬೇಕು. ಆದರೆ ಪ್ರಾದೇಶಿಕ ಭಾಷೆಗಳ ಮೇಲೆ ಅನರ್ಥ ಹೇರಬಾರದು.-ಇದಕ್ಕೆ ಹೊಂದಿಕೊಳ್ಳುವ ನ್ಯಾಯವಾದ ಮತ್ತು ನಿರ್ವಂಚನೆಯ ಕಾರ್ಯಕ್ರಮವನ್ನು ಯೋಜಿಸಿ ಆ ಮೇಲೆ ಅದನ್ನು ಕಾರ್ಯರೂಪದಲ್ಲಿ ತೊಡಗಿಸಿ, ಮುಂದಿನ ಚಿಂತನೆಯನ್ನು ಮಾಡುವುದು ಕ್ಷೇಮಕರವಲ್ಲದೆ ವಾದವಿವಾದ, ಮಂಡನೆ ಪ್ರತಿ ಮಂಡನೆಗಳಿಂದಲ್ಲವೆಂಬುದನ್ನು ವಿವೇಕಿಗಳಾದ ಜನರೂ, ಜನತಾ ಪ್ರತಿನಿಧಿಗಳೂ ತಿಳಿಯುವುದೊಳ್ಳಿತು.

ಎಕೆಡೆಮಿಯ ಸಾಹಸ

ಸಂಗೀತದ ಹೆಸರು ಕೇಳದವರಿಲ್ಲ; ಆದರೆ ಬಲ್ಲವರು ಮಾತ್ರ ಹೆಚ್ಚಿನವರಿಲ್ಲ. ಸಂಗೀತಕ್ಕೆ ಪಕ್ಕ ವಾದ್ಯಗಳೂ ಕೂಡಿಕೊಂಡರೆ, ಅದು ರಮಣೀಯವಾಗುವುದು. ಇಂದು ನಮ್ಮಲ್ಲಿ ಅನುಕರಣಾಪೂರ್ಣ ಸಂಗೀತಗಳೇ ಹೆಚ್ಚು; ಶಾಸ್ತ್ರೀಯ ಸಂಗೀತದ ಗಂಧಗಾಳಿಯೂ ಇಲ್ಲದ ಜನತೆಗೆ ಶಾಸ್ತ್ರೀಯ ಸಂಗೀತ ಹೇಗೆ ಹಿಡಿಸಬೇಕು? ಹಾಡಿ ಹಾಡಿ ನಾದ ಬ್ರಹ್ಮನನ್ನು ಒಲಿಸಿಕೊಂಡವರು ನಮ್ಮಲ್ಲಿದ್ದರು; ಒಬ್ಬಾತ ಕಿನ್ನರಿಯನ್ನು ಬಾರಿಸುತ್ತಿದ್ದಾಗ ವೃಕ್ಷಲತೆಗಳೂ ಮೃಗ ಪಕ್ಷಿಗಳೂ ದೇವದಾನವರೂ ಕೇಳಲು ನೆರೆಯುತ್ತಿದ್ದರಂತೆ!—ಇದು ಸತ್ಯವಿರಲಿ ಹೋಗಲಿ, ಸಂಗೀತವಂತೂ ಸರ್ವ ಜನಮನಹಾರಿಯೆಂಬುದು ನಿಶ್ಚಯ:— ಇಂತಹ ಶಾಸ್ತ್ರೀಯ ಸಂಗೀತವು ಜನರಲ್ಲಿ ಪ್ರಚುರವಾಗಿ ಜನತೆ ಅದರ ನಿಜರೂಪವನ್ನು ತಿಳಿಯಬೇಕೆಂಬ ಉದ್ದೇಶದಿಂದ, ಶಿಕ್ಷಣ ಕ್ಷೇತ್ರದಲ್ಲಿ ನವೀನ ಕ್ರಾಂತಿಯನ್ನೆಬ್ಬಿಸಿದ ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನ ಸಂಸ್ಥೆಯವರು ಉಡುಪಿಯ ಮಣಿಪಾಲ, ಕಲ್ಯಾಣಪುರ, ಮುಕುಂದನಿವಾಸ, ಅಂಬಲಪಾಡಿ ಮತ್ತು ಚಿಟ್ಪಾಡಿಗಳಲ್ಲಿ ಹಾರ್ಮನಿ, ವ್ಹಾಯಲಿನ್, ಕೊಳಲು, ನಾಗಸ್ವರ, ಸಿತಾರ; ದಕ್ಷಿಣೋತ್ತರ ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತ ತಬಲ ಮೃದಂಗಗಳನ್ನೂ ಜತೆಗೆ ಚಿತ್ರಣ ಮತ್ತು ಬಣ್ಣ ಬಳೆಯುವುದು, ಕಸೂತಿ ಮತ್ತು ಎಂಬ್ರೊಯ್ಡರಿ, ರಂಗವಲ್ಲಿ, ಹೋಳಿಗೆ, ನೃತ್ಯಗಳನ್ನೂ ಅಭ್ಯಾಸ ಮಾಡಲು ವ್ಯವಸ್ಥಿತ ತರಗತಿಗಳನ್ನು ನಡೆಯಿಸಲು ಮುಂದೆ ಬಂದಿದ್ದಾರೆ. ಇವರ ಉತ್ಸಾಹಕ್ಕೆ ಜನತೆಯ ಸಂಪೂರ್ಣ ಬೆಂಬಲ ಬೇಕು; ಪರಮಾತ್ಮನ ಅನುಗ್ರಹ ಬೇಕು. ಇವರ ಸಾಹಸ ಸಿದ್ಧಿಯಾಗಲಿಯೆಂದು ಪ್ರಾರ್ಥಿಸಿ, ಈ ದಿಟ್ಟ ಹೆಜ್ಜೆಯಿಟ್ಟ ಎಕಡೆಮಿಯವರನ್ನು ಅಭಿನಂದಿಸುತ್ತೇವೆ.

ಉಡುಪಿ

ಜಿಲ್ಲಾ ಸ್ಕೌಟ್ ಕೇಂಪ್ ರ‍್ಯಾಲಿ— ದ. ಕ. ಜಿಲ್ಲಾ ಸ್ಕೌಟ್ ಕ್ಯಾಂಪ್ ರ‍್ಯಾಲಿಯು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ವಲಯದಲ್ಲಿ ಮೈಸೂರು ಆರೋಗ್ಯ ಮಂತ್ರಿ ಶ್ರೀ ಆರ್. ಎಮ್. ಪಾಟೀಲರ ಅಧ್ಯಕ್ಷತೆಯಲ್ಲಿ ತಾ. 29ರಂದು ಸಂಜೆ ನಡೆಯಿತು. ಸ್ಕೌಟ್ ಮತ್ತು ರಾಷ್ಟ್ರ ಧ್ವಜಗಳಿಗೆ ವಂದನೆಗಳಾದ ಬಳಿಕ, ಶ್ರೀಮತಿ ಶಾಂತೇರಿ ಪ್ರಭುಗಳು ಅಧ್ಯಕ್ಷರ ಪರಿಚಯ ಮಾತುಗಳನ್ನಾಡಿದರು. ನಂತರ ಸ್ವಾಗತ ಸಮಿತಿ ಅಧ್ಯಕ್ಷ ಡಾ. ಟಿ. ಮಾಧವ ಪೈಗಳವರು ಸ್ವಾಗತ ಭಾಷಣ ಮಾಡಿ ಮಣಿಪಾಲದ ಮಹಾತ್ಮೆಯನ್ನು ಚಿತ್ರಿಸಿದರು. ಶ್ರೀ ಟಿ. ರಮೇಶ ಪೈಗಳು ಶುಭ ಸಂದೇಶಗಳನ್ನು ಓದಿದರು. ಡಿಸ್ಟ್ರಿಕ್ಟ್ ಸ್ಕೌಟು ಕೌನ್ಸಿಲಿನ ಕಾರ್ಯದರ್ಶಿ ಶ್ರೀ ಬಿ. ಡಿ. ಫಿಲಿಪ್ಸರವರು ವರದಿಯನ್ನೋದಿದರು.

ಮೈಸೂರಿನ ಮಾಜಿ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಸ್ಕೌಟ್ ವಸ್ತುಪ್ರದರ್ಶನವನ್ನೂ, ರ‍್ಯಾಲಿಯನ್ನೂ ಉದ್ಘಾಟಿಸುತ್ತಾ ಸ್ಕೌಟಿಂಗ್ ಚಳವಳಿಯ ಮುನ್ನಡೆಗೆ ಲೋಕಲ್ ಬೋರ್ಡುಗಳೂ ಸ್ಟೇಟ್ ಸರಕಾರಗಳೂ ಸರ್ವ ಸಹಾಯ ನೀಡಬೇಕಾಗಿದೆ ಎಂದರು. ಸ್ಕೌಟಿಂಗ್ ತರಬೇತಿಯು ಯೋಗ್ಯ ನಾಗರೀಕನನ್ನಾಗಿ ಮಾಡುವಂತಹದಾಗಬೇಕು. ಸ್ಕೌಟಿಂಗ್ ಚಳವಳಿಯು ಈಚೆಗೆ ಹಿಮ್ಮೆಟ್ಟಿದಂತೆ ಕಾಣುತ್ತದೆ. ಈ ಪರಿಸ್ಥಿತಿ ಹೋಗಲಾಡಿಸಲು ಯತ್ನಿಸಬೇಕು. ಸ್ಕೌಟ್ ಚಳವಳಿಯು ಚಿರಾಯುವಾಗಿ ಬೆಳೆದುಬರಲಿ ಎಂದು ಹಾರೈಸಿದರು.

ಅಧ್ಯಕ್ಷಸ್ಥಾನದಿಂದ ಆರೋಗ್ಯ ಸಚಿವರು ಮಾತನಾಡುತ್ತ ವಿದ್ಯಾ ಕ್ಷೇತ್ರದಲ್ಲಿ ಸ್ಕೌಟಿಂಗಿಗೆ ಸ್ಥಾನವು ಖಡ್ಡಾಯವಾಗಿ ಬರುವಂತೆ ಮಾಡಬೇಕಾದುದು ಸರಕಾರದ ಕರ್ತವ್ಯವಿದೆ, ಸಮಯ, ಸಂದರ್ಭ ದೊರೆತಾಗ ತಾನು ಆ ಧ್ಯೇಯ ಸಾಧಿಸಲು ಯತ್ನಿಸುವುದಾಗಿ ಹೇಳಿದರು. ಡಾ. ಟಿ. ಮಾಧವ ಪೈಗಳ ಕಾರ್ಯದಕ್ಷತೆಯನ್ನು ಪ್ರಶಂಸಿಸಿದರು. ನಂತರ ಪಾರಿತೋಷಕ ವಿತರಣೆ ಮಾಡಿದರು. ರಾತ್ರೆ ಭೋಜನ ಸಮಾರಂಭ ನಡೆಯಿತು.

ಸತ್ಕಾರಕೂಟ- ಸ್ಥಳೀಯ ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ವಿದೇಶ ಪ್ರವಾಸದಿಂದ ಹಿಂದಿರುಗಿದ ಶ್ರೀ ಟಿ. ಎ. ಪೈಗಳವರಿಗೆ ತಾ. 23ರಂದು ಸತ್ಕಾರಕೂಟವೀಯಲಾಯಿತು. ಶ್ರೀ ಎಚ್ ಗಣಪತಿ ಸೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಆನಂದರಾಮ ಭಟ್ಟರು ಧನ್ಯವಾದಗಳನ್ನಿತ್ತರು.

ಉಡುಪಿ ತಾಲೂಕು ಪ್ರಾಥಮಿಕ ಖಾಸಗಿ ಶಾಲಾ ಮೆನೇಜರರ ಸಂಘದ ಮಹಾ ಸಭೆಯು ತಾ. 26ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ವರದಿಯನ್ನೊಪ್ಪಿಸಿದರು. ಮದ್ರಾಸು ರಾಜ್ಯದಲ್ಲಿರುತ್ತಿದ್ದರೆ ನಮ್ಮ ಅಧ್ಯಾಪಕರಿಗೆ ದೊರೆಯಬಹುದಾಗಿದ್ದ ದರದಲ್ಲಿ ಸಂಬಳ ಮತ್ತು ತುಟ್ಟಿಭತ್ತೆಯನ್ನು ಕೊಡಬೇಕಾಗಿಯೂ, ಇಲ್ಲವೇ ಮೈಸೂರಿನಲ್ಲಿ ಈ ಪರಿಷ್ಕೃತ ಸಂಬಳ ಮತ್ತು ತುಟ್ಟಿ ಭತ್ತೆಯನ್ನು ಕೊಡಬೇಕಾಗಿಯೂ ಈ ಹೆಚ್ಚಳದ ಸಂಪೂರ್ಣದ ವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕಾಗಿಯೂ, ಈ ವಿಚಾರದಲ್ಲಿ ಜಿಲ್ಲೆಯ ಎಮ್ ಎಲ್. ಎ ಗಳು ಒಂದಾಗಿ ಈ ವಿಚಾರವನ್ನು ಸರಕಾರದ ಗಮನಕ್ಕೆ ತಂದು ಈ ಜನವರಿ 30ರೊಳಗೆ ಪರಿಹಾರ ತರಿಸಬೇಕಾಗಿಯೂ ನಿರ್ಧಾರವಾಯಿತು. ಸಂಘವನ್ನು ರಿಜಿಸ್ಟ್ರ ಮಾಡಬೇಕಾಗಿಯೂ ಗೊತ್ತು ಮಾಡಲಾಯಿತು.

ಸತ್ಕಾರ ಕೂಟ— ಮಹಾ ಸಭೆಯ ನಂತರ ಸಂಘದ ಕಡೆಯಿಂದ ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ವಿದೇಶ ಪ್ರವಾಸವನ್ನು ಮುಗಿಸಿ ಹಿಂತಿರುಗಿದ ಶ್ರೀ ಟಿ. ಎ. ಪೈಗಳಿಗೆ ಮಾನಪತ್ರವಿತ್ತು ಗೌರವಿಸಲಾಯಿತು. ಶ್ರೀ ಕುಕ್ಕಾರ್ಲು ಗಣಪಯ್ಯ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀ ಎಚ್. ರಾಮಚಂದ್ರ ಹೆಗ್ಡೆಯವರು ಮಾನಪತ್ರವನ್ನು ಓ

ಸಿದರು ಶ್ರೀ ಪೈಗಳು ತಮ್ಮ ಭಾಷಣದಲ್ಲಿ, ಶಾಲಾ ಮೆನೇಜರರು ಒಂದು ಸ್ಥಾಯಿ ಸಮಿತಿಯನ್ನು ಸಂಘದ ಪರಿಯಲ್ಲಿ ನಿರ್ಮಿಸಿ ಮೆನೇಜರ್ ಮತ್ತು ಅಧ್ಯಾಪಕರೊಳಗಿನ ವಿವಾದವನ್ನು ತೀರಿಸಬೇಕೆಂದೂ, ಶಾಲಾ ಆಡಳಿತೆಯು ನಿರ್ದಿಷ್ಟ ನ್ಯಾಯ ನೀತಿಯಲ್ಲಿ ನಡೆಯುವಂತೆ ನಿಯಮಾವಳಿಗಳನ್ನು ರಚಿಸಬೇಕೆಂದೂ, ಸರ್ಕಾರಿ ಆಡಳಿತೆಯಿಂದ ಯೋಗ್ಯ ಪ್ರಯೋಜನ ಪಡೆಯುವಲ್ಲಿ ಅವುಗಳನ್ನು ಉತ್ತೇಜಿಸಲು ಸರಕಾರ ಅನುಮಾನಿಸಕೂಡದೆಂದೂ ಸೂಚಿಸಿ, ಅಧ್ಯಾಪಕರಿಗೆ ಹೆಚ್ಚಿನ ಸಂಬಳ ಸಿಗುವಂತಾಗಬೇಕೆಂದೂ ಆಶಿಸಿದರು. ಕಾರ್ಯದರ್ಶಿ ಶ್ರೀ ಕಾರ್ಕಳ ಗಣಪಯ್ಯ ಶೆಟ್ಟರು ಧನ್ಯವಾದಗಳನ್ನಿತ್ತರು. ಲಘೂಪಹಾರ, ಗ್ರೂಪ್ ಫೋಟೋಗಳಾಗಿ ಕಾರ್ಯಕ್ರಮ ಕೊನೆಗೊಂಡಿತು.

ನಗರ ಸಭೆಯು—ತಾ 30ರಂದು ನಗರ ಸಭಾಪತಿ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಫಯರ್ ಸರ್ವಿಸ್ ಆಫೀಸು ಇದ್ದ ಸ್ಥಳದ ಟೆಕ್ಸ್ ವಸೂಲಿ ಬಗ್ಗೆ ಕಾನೂನು ಪ್ರಕಾರ ನೋಟೀಸು ಕೊಡಬೇಕೆಂದು ನಿರ್ಧಾರವಾಯಿತು. ನಗರಸಭೆಯ ಇಬ್ಬರು ಬಿಲ್ ಕಲೆಕ್ಟರರಿಗೆ ಸ್ಕೂಟರ್‌ಗಳನ್ನು ತೆಗೆದುಕೊಳ್ಳಲು ರೂಪಾಯಿ 300/ರಂತೆ ಅಡ್ವಾನ್ಸ್ ಹಣ ಕೊಡಬಹುದೆಂದಾಯಿತು.

ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರ ನಿಧನ— ದ ಕ ಜಿಲ್ಲೆಯ ಬಂಟ ಸಮಾಜದ ಮುಂದಾಳುಗಳಲ್ಲೊಬ್ಬರೂ ಕಾಂಗ್ರೆಸ್ ಭಕ್ತರೂ, ಅನುಭವಶಾಲಿಗಳೂ, ಸ್ಥಳೀಯ ಜನತಾ ಟ್ರಾನ್ಸ್‌ಪೋರ್ಟ್ ಕಂಪೆನಿ ಇತ್ಯಾದಿ ಸಂಸ್ಥೆಗಳ ಡೈರೆಕ್ಟರರೂ ಆಗಿದ್ದ ಶ್ರೀ ಬೇಳಂಜೆ ಕೃಷ್ಣಯ್ಯ ಹೆಗ್ಡೆಯವರು ತಾ 26ರಂದು ಸಂಜೆ ತಮ್ಮ ಸ್ವಂತ ನಿವಾಸದಲ್ಲಿ 89ನೆ ವಯಸ್ಸಿನಲ್ಲಿ ಪರಲೋಕವಾಸಿಗಳಾದರೆನ್ನಲು ವಿಷಾದಿಸುತ್ತೇವೆ. ದಿವಂಗತರು 1927, 1931, 1936 ಮತ್ತು 1939ರಲ್ಲು ಹೀಗೆ ನಾಲ್ಕು ಬಾರಿ ದ ಕ ಜಿಲ್ಲಾಬೋರ್ಡಿನ ಸದಸ್ಯರಾಗಿ ಬಹುಮತದಿಂದ ಉಡುಪಿ, ಬ್ರಹ್ಮಾವರ (ಎರಡುಬಾರಿ) ಮತ್ತು ಅಟಕಾರು ಸರ್ಕಲುಗಳಿಂದ ಆರಿಸಲ್ಪಟ್ಟು ಜನಸೇವೆ ಮಾಡಿದ್ದರು. ಶ್ರೀ ಹೆಗ್ಡೆಯವರ ನಿಧನದಿಂದುಂಟಾದ ಅವರ ದುಃಖಿ ಕುಟುಂಬದವರೊಡನೆ ಸಹಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಸತ್ಕಾರ—ಬೋರ್ಡ್ ಹ | ಎ | ಶಾಲಾ ಮೆನೇಜರ್ ಶ್ರೀ ಕೆ ಜಗನ್ನಾಥ ನಾಯ್ಕರು ಕಳೆದ ತಾ. 30ರಂದು, 60 ವರ್ಷಗಳ ಸಫಲ ಜೀವನ ಸಾಗಿಸಿದ ಡಾ| ಸುಂದರರಾವು ಪೈಗಳೂ ವಿದೇಶಪ್ರವಾಸ ಕೈಗೊಂಡಿದ್ದ ಶ್ರೀ ಟಿ ಎ ಪೈಗಳೂ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಇದೇ ಸಂದರ್ಭದಲ್ಲಿ ದಿ| ಕೆ ವೆಂಕಟ್ರಾಯ ನಾಯ್ಕರ ಚಿತ್ರದ ಅನಾವರಣವೂ ನಡೆಯಿತು.

ರಜತೋತ್ಸವ—1933ರಲ್ಲಿ ಡಾ ಟಿ ಎಂ ಎ ಪೈಗಳಿಂದ ಸ್ಥಾಪಿತವಾದ ಕೆನರಾ ಲೇಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡಿನ ರಜತೋತ್ಸವವು ತಾ.31ರಂದು ಡಾ| ಸುಂದರರಾವು ಪೈಗಳ ಅಧ್ಯಕ್ಷತೆಯಲ್ಲಿ ಮುಕುಂದ ನಿವಾಸದಲ್ಲಿ ನೆರವೇರಿತು. ಸಂಸ್ಥೆಯ ಚೆಯರ್‌ಮ್ಯಾನ್ ಶ್ರೀ ಕೆ ಅಚ್ಯುತ ಪದ್ಮನಾಭ ಪೈಗಳು ಸ್ವಾಗತ ಭಾಷಣ ಮಾಡುತ್ತ ಕಂಪೆನಿಯ ಕಾರ್ಯಕಲಾಪ, ಬೆಳವಣಿಗೆಯನ್ನು ವಿವರಿಸಿದರು. ಡಾ| ಟಿ ಮಾಧವ ಪೈ ಶ್ರೀ ಎ ಜಿ ಆಲ್ಸೆಯವರು ಶುಭ ಕಾಂಕ್ಷೆ ಮಾಡಿ ಭಾಷಣವಿತ್ತರು. ಅಧ್ಯಕ್ಷರ ಭಾಷಣಾನಂತರ ಶ್ರೀ ಟಿ ರಮೇಶ ಪೈಗಳು ಧನ್ಯವಾದಗಳನ್ನು ಅರ್ಪಿಸಿದರು. ಆರಂಭದಲ್ಲಿ ಉಪಾಹಾರ, ಸಂಗೀತ ವಿತ್ತು.

ಮಹತ್ವದ ಸುದ್ದಿಗಳು

ಮೈಸೂರಿನ ದ್ವಿತೀಯ ಯೋಜನೆ

ಮೈಸೂರು ರಾಜ್ಯದ ದ್ವಿತೀಯ ಪಂಚವಾರ್ಷಿಕ ಯೋಜನೆಯ ವೆಚ್ಚವು ೧೪೫ ಕೋಟಿರೂಪಾಯಿಗಳಿದ್ದು ಇದರಲ್ಲಿ ನೀರಾವರಿ ಮತ್ತು ವಿದ್ಯುತ್‌ಗಳಿಗೆ ಸೇಕಡಾ ೪೦, ಸಾಮಾಜಿಕ ಸೇವೆಗೆ ನೂರಕ್ಕೆ ೨೩, ಒಕ್ಕಲುತನ ಹಾಗೂ ಸಮಾಜ ವಿಕಾಸ ಯೋಜನೆಗೆ ಸೇಕಡಾ ೨೨ ಮತ್ತು ಸಾಗಾಟ ಮತ್ತು ಉದ್ದಿಮೆಗಳಿಗೆ ನೂರಕ್ಕೆ ೧೪ ರಷ್ಟು ವೆಚ್ಚವಾಗಲಿರುವುದು. ಈ ಯೋಜನೆಯ ೧೯೫೮ ೫೯ರ ಒಂದು ವರ್ಷದ ವೆಚ್ಚದ ಬಗ್ಗೆ ಮೈಸೂರು ರಾಜ್ಯದ ಹೆಚ್ಚಿನ ಮಂತ್ರಿಗಳೂ ಮುಖ್ಯ ಅಧಿಕಾರಿಗಳೂ ವಿಚಾರವಿನಿಮಯ ಮಾಡುವುದಕ್ಕೆ ನವದೆಹಲಿಗೆ ತೆರಳಿದ್ದಾರೆ. ಅಲ್ಲಿ ಯೋಜನಾ ಆಯೋಗ ಹಾಗೂ ಕೇಂದ್ರ ಸರಕಾರದೊಡನೆ ಪರಾಮರ್ಶೆ ನಡೆಸಿ, ಮುಂದಿನ ವರ್ಷದ ಯೋಜನೆಯ ಪೂರ್ಣರೂಪವನ್ನು ನಿಗದಿಮಾಡಲಾಗುವುದು.

ಗೋವಾ ಧೋರಣೆಗೆ ಬೆಂಬಲ

ಏಶಿಯಾ ಆಪ್ರಿಕಾ ಪರಿಷತ್ತಿನ ರಾಜಕೀಯ ಸಮಿತಿಯಲ್ಲಿ ಗೋವೆಯು ಭಾರತಕ್ಕೆ ಸೇರಬೇಕೆಂಬ ನಿಲುಮೆಗೆ ಪರವಾದ ಮತ್ತು ಪೋರ್ಚುಗೀಸರ ನಿಲುಮೆಯನ್ನು ವಿರೋಧಿಸುವ ಮಾತುಕತೆಗಳು ನಡೆದುವು. ಇಜಿಪ್ತದ ಪ್ರತಿನಿಧಿಯವರು ಮಾತನಾಡುತ್ತ ಗೋವೆಯನ್ನು ಳಿಸಿಕೊಳ್ಳಲು ಪೋರ್ಚುಗಾಲವು ನ್ಯಾಟೋ ರಾಷ್ಟ್ರಗಳ ಬೆಂಬಲ ಪಡೆಯಲೆತ್ನಿಸಿರುವುದನ್ನು ಟೀಕಿಸಿದರು. ರಶಿಯದ ಪ್ರತಿನಿಧಿಯು ಭಾಷಣಮಾಡುತ್ತ ಗೋವೆಯು ಭಾರತಕ್ಕೇನೇ ಸೇರಿರುವುದೆಂದೂ, ಈ ಸಂಬಂಧದ ಹೋರಾಟಕ್ಕೆ ರಶ್ಯವು ಸಂಪೂರ್ಣ ಬೆಂಬಲ ನೀಡುವುದೆಂದೂ ಆಶ್ವಾಸನೆಯಿತ್ತರು. ಆಫ್ರೇಸ್ಯಾ ಪರಿಷತ್ತು ಈ ಭೂ ಖಂಡಗಳ ರಾಷ್ಟ್ರಗಳ ನಡುವೆ ಸ್ನೇಹ ಬೆಳೆಸಲು ಕೈರೋದಲ್ಲಿ ಸುಮಾರು ಒಂದು ವಾರದಿಂದ ಸೇರುತ್ತಿದೆ.

ಪರೋಪದೇಶ ಪಾಂಡಿತ್ಯ

ಪಾಕಿಸ್ತಾನದ ಹೊಸ ಪ್ರಧಾನಿ ಶ್ರೀ ಫಿರೋಜಖಾನ ನೂನರು, ಭಾರತದ ಮೇಲೆ ಯುದ್ಧಸಾರುವ ಇಚ್ಛೆ ತಮ್ಮ ರಾಷ್ಟ್ರಕ್ಕಿಲ್ಲವೆಂದು ಸಾರಿ, ಇವೆರಡು ರಾಜ್ಯಗಳೂ ಶಾಂತಿಯುತವಾಗಿ ಹಾಗೂ ಸ್ನೇಹ ಸಹಕಾರಗಳೊಂದಿಗೆ ಬಾಳಬೇಕೆಂಬ ಆಶೆಯನ್ನು ಪ್ರಕಟಪಡಿಸಿದರು. ಏಶಿಯದ ಈ ಉಭಯ ರಾಷ್ಟ್ರಗಳು ಕಾದಾಡಿ ಬೇರೆಯವರು ಅದರ ಲಾಭ ಪಡೆಯುವಂತಾಗಬಾರದೆಂದೂ, ಪಾಕಿಸ್ತಾನದ ಧಾಳಿಯ ಭೀತಿಯನ್ನು ತೋರಿಸಿ ಭಾರತವು ಶಸ್ತ್ರಾಸ್ತ್ರಗಳಿಗೆ ವೆಚ್ಚಮಾಡುವ ಹಣವನ್ನು ಜನತೆಯ ಆರ್ಥಿಕ ಸ್ಥಿತಿ ಸುಧಾರಿಸಲು ವಿನಿಯೋಗಮಾಡಲಿ ಎಂದು ನೀತಿಬೋಧೆಗೈದಿದ್ದಾರೆ. ಕಳ್ಳನಿಂದಲೂ ನೀತಿ ಕೇಳಬೇಕಾಗಿ ಬಂದುದು ಭಾರತದ ಅದೃಷ್ಟ.

ಕೆಚ್ಚೆದೆಯ ವೀರ

ನಾಲ್ಕು ವರ್ಷಗಳ ಪೂರ್ವದಲ್ಲಿ ಜಗತ್ತಿನ ಅತ್ಯುನ್ನತ ಪರ್ವತ ಶಿಖರ ಗೌರೀಶಂಕರವನ್ನು ತೇನಸಿಂಗನೊಡನೆ ಏರಿದ್ದ ಸರ್ ಎಡ್ಮಂಡ ಹಿಲರಿಯು ದಕ್ಷಿಣ ಧ್ರುವವನ್ನು ಕಂಡುಹಿಡಿಯುವ ಇನ್ನೊಂದು ಮಹಾ ಸಾಹಸಕ್ಕೆ ಕೈಹಾಕಿದ್ದನೆ. ತವಸು ಹಾಗೂ ಅವನ ಸಂಶೋಧಕ ತಂಡವು ಪ್ಲೆಯಿಂಟ್ ಆಫ್ ನೋ ರಿಟರ್ನ (ಹಿಂದಿರುಗಿದರೆ ಬಂದ ದಾರಿಯು ಇಲ್ಲ ಎನ್ನುವ ಹಿಂದಿರುಗುವ ಆಶೆಯಿಲ್ಲ)ವನ್ನೂ ದಾಟಿ ಹೋಗಿ ಈಗ ಧ್ರುವ ಪ್ರದೇಶದಿಂದ ಸುಮಾರು ೨೮೦ ಮೈಲಿ ಗಳಷ್ಟು ದೂರದಲ್ಲಿದೆ ಎಂದು ವರದಿಯಾಗಿದೆ.

ಮಹಾಪೂರದ ಮಹಾನರ್ಥ

ಸಿಂಹಳದಲ್ಲಿ ಕಳೆದ ವಾರ ಮಹಾಪೂರದಿಂದಾಗಿ ಮಹಾ ಅನಾಹುತಗಳು ಸಂಭವಿಸಿವೆ. ಸಿಲೋನಿನ ಇತಿಹಾಸದಲ್ಲಿಯೇ ಇತ್ತೀಚಿಗೆ ಇಷ್ಟು ದೊಡ್ಡ ನೆರೆಯು ಬಂದಿಲ್ಲವೆಂದು ಹೇಳಲಾಗುತ್ತದೆ. ನೆರೆಯಲ್ಲಿ ಸುಮಾರು ೨೮೦ ಜನರು ಮರಣಗೊಂಡಿದ್ದು ಸಾವಿರಾರು ಮಂದಿ ನಿರ್ಗತಿಕರಾಗಿದ್ದಾರೆ. ವಾಯುಪ್ರದೇಶದಲ್ಲಿರ ನಗರಗಳ ತಿಳಿದು ಬಂದಿದ್ದು ನೆರೆಯುಪದ್ರವಕ್ಕೊಳಗಾದ ಜನರ ರಕ್ಷಣೆಗಾಗಿ ಹಾಗೂ ಜನರಿಗೆ ಅನ್ನಾಹಾರಾದಿಗಳನ್ನು ಪೂರೈಸುವ ಸಲುವಾಗಿ ಸಿಂಹಳದ ಪ್ರಧಾನಿಯವರ ವಿನಂತಿಯ ಮೇರೆಗೆ ಭಾರತದ ಹೆಲಿಕಾಪ್ಟರುಗಳು ಸಿಲೋನಿಗೆ ಧಾವಿಸಿ ಕೆಲಸದಲ್ಲಿ ತೊಡಗುತ್ತಿವೆ. ಸಿಂಹಳಕ್ಕೆ ಪ್ರವಾಸಕ್ಕಾಗಿ ಹೋಗಿದ್ದ ಕೆಲವು ಭಾರತೀಯ ವಿದ್ಯಾರ್ಥಿಗಳು ಅನುರಾಧಪುರದಲ್ಲಿ ನೀರಿನಿಂದ ಆವರಿಸಲ್ಪಟ್ಟಿದ್ದಾರೆ. ಇವರಿಗೆ ಹಾಗೂ ಕೆಲವು ವಿಶ್ರಾಂತಿಗಾಗಿ ಬಂದಿದ್ದ ರೈಲ್ವೆ ನೌಕರರಿಗೆ ತಕ್ಕ ಸಹಾಯ ನೀಡಲು ಪ್ರಯತ್ನಿಸಲಾಗುತ್ತಿದೆ. ಈ ಎಲ್ಲಾ ಅನಾಹುತಗಳಿಂದಾಗಿ ಲಕ್ಷಾಂತರ ರೂಪಾಯಿಗಳ ಹಾನಿಯು ಸಂಭವಿಸಿರುವುದು.

ಕೆಲಂಡರು ಸ್ವೀಕಾರ 1958ನೆ ಇಸವಿಯ ಈ ಕೆಳಗಿನವರ ಸುಂದರವಾದ ಕೆಲೆಂಡರುಗಳನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ 1 ಪ್ರಿಂಟ್ಸ್ ಇನ್‌ಪೋಮೆಶನ್ ಸರ್ವಿಸ್ ಮದ್ರಾಸು 2 ಎಸ್ ಆರ್ ಬೀಡಿ ವರ್ಕ್ಸ್ ಉಡುಪಿ 3 ಗೋಪಾಲ ಸ್ಟೋರ್ಸ್ ಎಂಡ್ ಪೇಪರ್, ಉಡುಪಿ 4 ಬಸರ್ಕರ್ (ಉಡುಪಿ ಏಜಂಟ್ಸ್ ಕರ್ನಾಟಕ ಸರ್ಕಾರದ)

ಪುಸ್ತಕಗಳು—ಎಸ್ ಆರ್ ಎಸ್, ಬಂಗಲೆ, ಪುತ್ತೂರು—ಇವರು ಪ್ರಕಟಿಸಿದ ಈ ಕೆಳಗಿನ ಪುಸ್ತಕಗಳನ್ನು ಸಂತೋಷದಿಂದ ಸ್ವೀಕರಿಸಿದ್ದೇವೆ 1 ಪ್ರೇಮದರ್ಶ 2 ರಘುನಂದನ ಸಾಹಸ 3 ಗ್ರೀಕರ ಕಥೆಗಳು 4 ಶಂಕರ ನ ಧನೆ ಮತ್ತು ಪವಿತ್ರ ಜೀವನ 5 ಕಲ್ಯಾಣ ಸುವರ್ಣ 6 ಸಮ್ಮಿಲನ 7 ಭಾರತದ ನಾಯಕರುಗಳು 8 ನಮ್ಮ ಪ್ರವಾಸ

ಬೆಳ್ಳಾರೆ ಸ್ಥಳೀಯ ಹೈಸ್ಕೂಲ್ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಡಾ ಕೆ ವಿ ಜಿ ಪೈಗಳು ತಮ್ಮ ಆಶ್ರಯದ ಬಿ ಜತ್ತನ್ನ ರೈಲ್ ಚರಸ್ಮರಣೆಗಾಗಿ ಸ್ಥಾಪಿಸಿದ ನಿಧಿ ಜತ್ತನ್ನರೈ ಸ್ಮಾರಕ ವಿದ್ಯಾರ್ಥಿ ಭವನಕ್ಕೆ ತಾ 30ರಂದು ಮೈಸೂರಿನ ಮಾಜಿ ಶಿಕ್ಷಣಮಂತ್ರಿ ಶ್ರೀ ಎ ಜಿ ನಸ್ಕಿರ ಶಿಲಾನ್ಯಾಸ ಮಾಡಿದರು

ಹೊಸ ವರ್ಷದ ಶುಭಾಶಯಗಳು

ನಮ್ಮ ಚಂದಾದಾರರು ಜಾಹೀರಾತುದಾರರು ಏಜಂಟರು ಹಾಗೂ ಹಿತಚಿಂತಕರೆಲ್ಲರಿಗೆ ಹೊಸ ವರ್ಷದ ಶುಭಾಶಯಗಳನ್ನು ಸಲ್ಲಿಸುತ್ತೇವೆ

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್ ಐ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ, ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಡುಹಗಲಿನ ಕಗ್ಗತ್ತಲೆ

೩೦೮ ಪುಟಗಳು . ಬೆಲೆ **2·50** ರೂಪಾಯಿ

- ಯುರೋಪಿನಲ್ಲಿ ಈಗ ಇಪ್ಪತ್ತು ವರ್ಷಗಳ ಹಿಂದೆ ನಡೆದ ಇಡೀ ಪ್ರಪಂಚವನ್ನೇ ತಲ್ಲಣಗೊಳಿಸುತ್ತಿರುವ ಒಂದು ರಾಜನೈತಿಕ ಪದ್ಧತಿಯಿಂದ ಮನುಷ್ಯನ ಆತ್ಮವು ಪತನವಾಗುತ್ತಿರುವ ವರಂತವ ಒಂದು ಮಾರ್ಮಿಕ ಕಾದಂಬರಿ
- ರಶಿಯದ ರಕ್ತಮಯ ಕ್ರಾಂತಿಯು ವ್ಯಕ್ತಿಯ ಜೀವ ಮತ್ತು ನೆತ್ತರನ್ನು ನಿರ್ದಾಕ್ಷಿಣ್ಯವಾಗಿ ಹೀರುವ ಭೀಕರ ಚಿತ್ರಣ
- ಇದರಲ್ಲಿ ಪ್ರಚಲಿತ ಪ್ರಪಂಚದ ರಾಜನೀತಿ, ಇತಿಹಾಸ, ಮತ್ತು ಅಂತಾರಾಷ್ಟ್ರೀಯ ರೀತಿ ನೀತಿಯ ಒಳನೋಟ ದೊರೆಯುತ್ತದೆ
- ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಜಗತ್ಪ್ರಸಿದ್ಧ ಕಾದಂಬರಿಯ ಮನೋಜ್ಞ ಕನ್ನಡವನ್ನು ಅನುವಾದಿಸಿದವರು

ಕು ಶಿ ಹರಿದಾಸ ಭಟ್ಟರು

ಪ್ರಕಾಶಕರು

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ.

ಮೂಲ್ಕಿ—ಮೂಲ್ಕಿಯ ರಾಷ್ಟ್ರೀಯ ವಿಸ್ತರಣಾ ಯೋಜನೆಯ ವತಿಯಿಂದ ಮೂಲ್ಕಿಯ ಒಳಿಯ ಕಾರ್ನಾಡಿನಲ್ಲಿ ಏರ್ಪಡಿಸಲಾದ ರೈತ ಮುಂದಾಳುಗಳ ಶಿಬಿರದ ಸಮಾರೋಪ ಭಾಷಣಮಾಡುತ್ತಾ, ಮೈಸೂರಿನ ಮಾಜಿ ಮಂತ್ರಿ ಶ್ರೀ ಎ ಬಿ ಸಟ್ಟರು, ದೇಶದ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಪ್ರತಿಯೊಬ್ಬ ರೈತನೂ ಪ್ರಮಾಣೀಕರಿಸಬೇಕು ರೈತರು ಸುಧಾರಿತ ಕ್ರಮಗಳನ್ನು ಅನುಸರಿಸಿ ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿಕೊಂಡು ಆ ಮೂಲಕ ದೇಶದ ಅಭಿವೃದ್ಧಿಯಲ್ಲಿ ಸಹಭಾಗಿಗಳಾಗಬೇಕೆಂದರು ಮೂಲ್ಕಿ ಪಂಚಾಯತ ಅಧ್ಯಕ್ಷ ಶ್ರೀ ಬಿ ಭೋಜರಾಯರು ಸ್ವಾಗತಿಸಿದರು. ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್ ಮುದ್ದಣ್ಣ ಸೆಟ್ಟಿ ಮತ್ತು ಸ್ವಾಗತಸಮಿತಿ ಅಧ್ಯಕ್ಷ ಡಾ. ರಾಮಣ್ಣ ಸೆಟ್ಟರು ಶಿಬಿರದ ಕಾರ್ಯಕಲಾಪಗಳನ್ನು ವಿವರಿಸಿದರು.

ಬೈಂದೂರು—ಬೈಂದೂರು ಸಮಾಜ ಶಿಕ್ಷಣ ಕೇಂದ್ರದಲ್ಲಿ ಗ್ರಾಮಸೇವಾ ಸಂಘದ ವಿಶೇಷ ಸಭೆಯು ತಾ ೨೯ರಂದು ಶ್ರೀ ವೈ ಮಂಜಯ್ಯ ಸೆಟ್ಟಿ, ಎಮ್. ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೈಂದೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಿ ಡಿ. ಬ್ಲೋಕಿನ ನೆರವಿನಿಂದ ರೂಪಾಯಿ 10,000/- ಅಂದಾಜು ಮೌಲ್ಯದ ಹೆರಿಗೆ ಮತ್ತು ಒಳರೋಗಿಗಳ ಚಿಕಿತ್ಸಾಲಯವನ್ನು ಕಟ್ಟಿಸುವುದೆಂದು ನಿರ್ಣಯ ಸಲಾಯಿತು.

ಕುಂದಾಪುರ—ಕುಂದಾಪುರ ತಾಲೂಕು ಹೆಲ್ತ್ ಕೋಪರೇಟಿವ್ ಸೊಸೈಟಿಯವತಿಯಿಂದ ಗ್ರಾಮಚಿಕಿತ್ಸಾಲಯವೊಂದು ಕುಂದಾಪುರ ತಾಲೂಕಿನ ಗುಡ್ಡೆಯಂಗಡಿಯಲ್ಲಿ ತಾ ೨೫ರಂದು ಸರಕಾರಿ ಆಸ್ಪತ್ರೆಯ ಅಸಿಸ್ಟಂಟ್ ಸರ್ಜನ್ ಡಾ| ವಿ ಎಸ್ ಭಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಬೈಂದೂರು ಬ್ಲೋಕ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಎಚ್. ಜಿ ಕೆದಿಲಾಯರು ಸಭಾಧ್ಯಕ್ಷತೆ ವಹಿಸಿದ್ದರು ಸಂಘದ ಅಧ್ಯಕ್ಷ ಶ್ರೀ ವೈ ಮಂಜಯ್ಯ ಸೆಟ್ಟಿ, ಎಮ್. ಎಲ್ ಎ ಅವರು ಸ್ವಾಗತಭಾಷಣ ಮಾಡಿದರು. ಜಿಲ್ಲಾ ಬೋರ್ಡ್ ಸದಸ್ಯ ಶ್ರೀ ಆರ್. ಕೆ ಸಂಜೀವರಾಯರು ಕಾಲೋಚಿತ ಮಾತುಗಳನ್ನಾಡಿದರು. ನಾಡ ಪಂಚಾಯತ ಅಧ್ಯಕ್ಷ ಶ್ರೀ ಕೆ ವೆಂಕಪ್ಪ ಸೆಟ್ಟರು ಈ ಚಿಕಿತ್ಸಾಲಯಕ್ಕೆ ಕಟ್ಟಡವನ್ನೂ, ನಾಡ. ಮುಳ್ಳಾಡಿ, ಹಡಾವು ಪಂಚಾಯತುಗಳು ವರ್ಷಕ್ಕೆ ರೂ. 150 ಕೊಡುವುದಾಗಿಯೂ ಆಶ್ವಾಸನೆ ದೊರೆತಿರುತ್ತದೆ.

ಕಾರ್ಕಳ—ಕಾರ್ಕಳ ವಲಯದ ಗ್ರಾಮನಾಯಕರ ಪರಿಷತ್ತು ಬೈಲೂರಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ದ ಕ. ಜಿಲ್ಲಾಧಿಕಾರಿ ಶ್ರೀ ವೈ. ಸಿ ಹೊಂಬಾಳಯ್ಯನವರು ಪರಿಷತ್ತನ್ನು ಉದ್ಘಾಟಿಸುತ್ತಾ, ದೇಶದ ಪ್ರಗತಿಗಾಗಿ ಶ್ರಮಿಸಿ, ಅಜ್ಞಾನ ಆಲಸ್ಯ ಇತ್ಯಾದಿಗಳಿಂದ ಬಡವಾಗಿರುವ ನವ ದೇಶ ಮುಂದೆ ಬರಲು ಪ್ರಯತ್ನಿಸಬೇಕೆಂದರು ಶ್ರೀ ಬಿ ಎಸ್ ಆಚಾರ್ಯರು ಸ್ವಾಗತ ಭಾಷಣ ಮಾಡಿದರು. ಶ್ರೀ ಜೆ ನಾರಾಯಣ ಹೆಗ್ಡೆಯವರು ಸಂದೇಶಗಳನ್ನೋದಿದರು ಬಿ ಡಿ ಒ ಶ್ರೀ ಪಿ. ರಮಣ್ಣನವರು ಸಮಾಜಶಿಕ್ಷಣ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ನೆರವಿನಿಂದ ಕಾರ್ಕಳ ವಲಯದಲ್ಲಿ ಕಳೆದ ಐದು ವರ್ಷಗಳಲ್ಲಿ ಆದ ಪ್ರಗತಿಯನ್ನು ವಿವರಿಸಿದರು. ಶ್ರೀ ಬಿ ಎಸ್ ಭಾಸ್ಕರ ರೈಗಳು ಪ್ರದರ್ಶನದ ಉದ್ಘಾಟನೆ ಮಾಡಿದರು ಡಾ. ಎ ಕೆ ಎಲ್. ರಾಯರು ಧನ್ಯವಾದಗಳನ್ನಿತ್ತರು.

ವೇಲಂಪಾಡಿ—ಇಲ್ಲಿಯ ವನಸುಮ ಪ್ರಕಾಶನದ ಮಟ್ಟು ಹಬ್ಬದ ಸಲುವಾಗಿ ಏರ್ಪಡಿಸಲಾದ ಸಾಹಿತ್ಯಸ್ಪರ್ಧೆಯ ಫಲಿತಾಂಶ ಹೀಗಿದೆ: ಕವಿತೆಯಲ್ಲಿ Iನೆ ಬಹುಮಾನ ಶ್ರೀ ಕೆ. ಎಮ್. ಮನಮೋಹನ, ಬೋರ್ಡ್ ಹೈಸ್ಕೂಲು, ಸುಳ್ಯ, ಅವರ 'ಸಂಜೆಗೆತ್ತಲು' ಕವಿತೆಗೂ IIನೆ ಬಹುಮಾನ ಶ್ರೀ ಎಮ್. ಕೆ ಗೋಪಾಲಕೃಷ್ಣ, ಮಹಾಜನ ಸಂಸ್ಕೃತ ಕಾಲೇಜು ಹೈಸ್ಕೂಲ್, ಪೆರ್ಲ ಅವರ 'ಕಬ್ಬದಂಗನೆ' ಕವಿತೆಗೂ ಕೊಡಲಾಗಿದೆ. ಕಥಾ ಸ್ಪರ್ಧೆಯಲ್ಲಿ IIನೆ ಬಹುಮಾನವು ಶ್ರೀ ಎ. ವಿಶ್ವನಾಥ ಉಡುಪ, ನೇಶನಲ್ ಹೈಸ್ಕೂಲ್, ಬಾರ್ಕೂರು ಅವರಿಗೆ ಕೊಡಲಾಗಿದೆ. ಬೆಳ್ಳಾರೆ ಹೈಸ್ಕೂಲಿನ ಶ್ರೀ ಕೆ. ಶಂಕರನಾರಾಯಣ ಭಟ್ಟರಿಗೆ ಅವರ ಕಥೆಯೊಂದರಲ್ಲಿ ಪ್ರೋತ್ಸಾಹಕ ರೀತಿಯ ಬಹುಮಾನವನ್ನೂ, ಗ್ರಾಮಸ್ಥರಲ್ಲಿ ಶ್ರೀ ಕೆ ನಾರಾಯಣ ಅವರಿಗೆ ಚಿತ್ರಕಲೆಯಲ್ಲಿ Iನೇ ಬಹುಮಾನವನ್ನೂ ಕೊಡಲಾಗಿದೆ.

ವನಸುಮ ಪ್ರಕಾಶನದವರಿಂದ ಪ್ರಕಟಿಸಲ್ಪಡುವ 'ವನಸುಮ' ಹಸ್ತ ಪತ್ರಿಕೆಯು ಜನವರಿ 26ರ ವಿಶೇಷಾಂಕಕ್ಕೆ ಲೇಖಕರ, ಚಿತ್ರಕಾರರ ಸಹಕಾರವನ್ನು ನಿರೀಕ್ಷಿಸಲಾಗಿದೆ. 'ವನಸುಮ ಪ್ರಕಾಶನ' ದೇಲಂಪಾಡಿ, ಕಾಸರಗೋಡು ತಾಲೂಕು-ಈ ವಿಳಾಸಕ್ಕೆ ಲೇಖನಾದಿಗಳನ್ನು ಕಳುಹಿಸಬಹುದು

ತಲ್ಲೂರು—ಸ್ಥಳೀಯ ಬೋರ್ಡ್ ಹಾ| ಪ್ರಾ| ಶಾಲೆಯ ವರ್ಷಾಂತ್ಯೋತ್ಸವವು ಜಿಲ್ಲಾ ಬೋರ್ಡ್ ಸದಸ್ಯ ಶ್ರೀ ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ 22ರಂದು ಜರಗಿತು ಮುಖ್ಯೋಪಾಧ್ಯಾಯ ಶ್ರೀ ಪಿ. ರಾಧಾಕೃಷ್ಣ ರಾಯರು ಶಾಲಾ ವರದಿಯನ್ನೋದಿದರು ಶ್ರೀ ಎಮ್. ರಘುನಂದನರಾಯರು ಸ್ವಸ್ತಿವಾಚನ ಮಾಡಿದರು ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣ, ನಾಟಕಾಭಿನಯ, ಧನ್ಯವಾದಾರ್ಪಣೆ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು.

ಮಂಗಳೂರು

ದ. ಕ. ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತುಗಳ—ಅಧಿಕಾರಾವಧಿಯನ್ನು ಇದೇ ಫೆಬ್ರವರಿ ತಾ. 28ರಿಂದ ಇನ್ನು ನಾಲ್ಕು ತಿಂಗಳ ಕಾಲ ಮುಂದರಿಸಲಾಗಿದೆಯೆಂದು ಮೈಸೂರು ಸರಕಾರದ ಆಜ್ಞೆ ಹೊರಟಿರುವುದು.

ಶ್ರೀ ಸಾವೂರು ಗುತ್ತು ಶಾಂತಪ್ಪ ನಾಯ್ಕರ ನಿಧನ—ಮಂಗಳೂರಿನ ಕೆನರಾ ಹಂಚು ಕಾರ್ಖಾನೆಯ ಮಾಲಕರೂ, ಬಂಟ ಸಮಾಜದ ಮುಂದಾಳುಗಳಲ್ಲೊಬ್ಬರೂ ಆದ ಶ್ರೀ ಸಾವೂರು ಗುತ್ತು ಶಾಂತಪ್ಪ ನಾಯ್ಕರು ತಾ. 26ರಂದು ತಮ್ಮ 82ನೆ ವರ್ಷ ವಯಸ್ಸಿನಲ್ಲಿ ಬೋಳಾರದಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರು

ಅಧಿಕಾರಿ ಮಂಡಲದ ಆಯ್ಕೆ—ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರಿ ಮಂಡಲ ಮತ್ತು ಕಾರ್ಯಕಾರೀ ಸಮಿತಿಗೆ ಈ ಕೆಳಗಿನವರು ನೇಮಕಗೊಂಡಿರುವರು ಶ್ರೀಗಳಾದ ಕೆ ಕೆ ಸೆಟ್ಟಿ, ಎಮ್ ಎಲ್. ಸಿ (ಅಧ್ಯಕ್ಷ), ಎಫ್. ಎಕ್ಸ್ ಡಿ. ಪಿಂಟೋ, ಎಮ್. ಎಲ್ ಎ. (ಉಪಾಧ್ಯಕ್ಷ); ಗಜಾನನ ರಾವ್ ಪಂಡಿತ್, ಎಮ್ ಎಲ್ ಎ. (ಕೋಶಾಧಿಕಾರಿ), ಪಿ ಮಾಧವ ಪಡಿಯಾರ್, ಬಿ. ಆರ್. ಕರ್ಕೇರ, ಎಮ್ ಎಲ್ ಎ, ಎಸ್ ವರ್ಣಪ್ಪಯ್ಯ, ಎಮ್. ಎಲ್ ಸಿ, ಟಿ ಎ ಪೈ, ಡಾ ಯು ಕೃಷ್ಣ, ಬಿ ವಿಠಲದಾಸ ಸೆಟ್ಟಿ, ಎ. ಶಂಕರ ಆಳ್ವ, ಡಾ. ಕೆ ನಾಗಪ್ಪ ಆಳ್ವ, ಎಮ್. ಎಲ್. ಎ, ಡಾ ಕೆ ಬಾಳಪ್ಪ ಸೆಟ್ಟಿ (ಇತರ ಕಾರ್ಯಕಾರೀ ಸದಸ್ಯರು)

ವೆನ್‌ಲೋಕ್ ಆಸ್ಪತ್ರೆಯಲ್ಲಿ 'ಡೀಪ್ ಎಕ್ಸ್‌ರೇ ಥೆರೂಪಿಕ್' ಪ್ಲಾಂಟನ್ನು ತಾ. 30ರಂದು ಮೈಸೂರಿನ ಆರೋಗ್ಯ ಮಂತ್ರಿ ಶ್ರೀ ಆರ್. ಎಮ್. ಪಾಟೀಲರು ಉದ್ಘಾಟಿಸುತ್ತಾ, ವಿದೇಶವಿನಿಮಯವಂತಹ ಸಂಕಷ್ಟಗಳಿಂದಾಗಿ ರಾಜ್ಯ ಆಸ್ಪತ್ರೆಗಳಿಗಾಗಿ ಬೇಕಾದ ಸೌಕರ್ಯಗಳನ್ನು ಒದಗಿಸುವುದು ಸರಕಾರಕ್ಕೆ ಕಷ್ಟವಾಗಿದೆ ಅದರಲ್ಲೂ ಕಲಿಯುವಿಕೆಗಾಗಿ ಉಪಯೋಗಿಸಲ್ಪಡುವ ಆಸ್ಪತ್ರೆಗಾಗಿ ಆಗತ್ಯವಾದ ಸಲಕರಣಗಳನ್ನು ನಾವು ವಿದೇಶಗಳಿಂದ ಪಡೆಯಬೇಕಾಗಿರುವುದರಿಂದ ಈ ಸಮಸ್ಯೆ ಮುಂದೆಬರುವುದು ಹೆಚ್ಚು. ಆದರೆ ಎಂತಹ ಸಂಕಷ್ಟಗಳಿದ್ದರೂ ಮಂಗಳೂರು ಆಸ್ಪತ್ರೆಗೆ ಬೇಕಾದ ಎಲ್ಲಾ ಸೌಲಭ್ಯ ಹಾಗೂ ಸಲಕರಣೆಗಳನ್ನು ಮೈಸೂರು ಸರಕಾರವು ಒದಗಿಸುವುದು ಎಂದು ಆಶ್ವಾಸನೆಯಿತ್ತರು.

ಸಮಾರಂಭದ ಅಧ್ಯಕ್ಷತೆವಹಿಸಿದ ಮೈಸೂರಿನ ಮಾಜಿ ಆರೋಗ್ಯ ಮಂತ್ರಿ ಶ್ರೀ ಎ. ಬಿ ಸಟ್ಟರು ತಮ್ಮ ಭಾಷಣದಲ್ಲಿ ಕೇನ್ಸರ್ ರೋಗದ ನಿವಾರಣೆಯಲ್ಲಿ ರೇಡಿಯಮು ಚಿಕಿತ್ಸೆಯ ಮಹತ್ವವನ್ನು ವಿವರಿಸಿ ಎಕ್ಸರೇ ವಿಭಾಗಕ್ಕೆ ಬೇಕಾದ ತರಬೇತಿಹೊಂದಿದ ಡಾಕ್ಟರರ ಅಭಾವದ ದೆಸೆಯಿಂದಾಗಿ ಈ ವಿಭಾಗಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ಸಾಧ್ಯವಿಲ್ಲ ಇದಕ್ಕಾಗಿ ರೇಡಿಯೋ ಗ್ರಾಫರ್ಸ್ ರೇಡಿಯೊಲಾಜಿಸ್ಟರನ್ನು ಹೆಚ್ಚಿನ ಪ್ರಮಾಣದಲ್ಲಿ ತರಬೇತಿಗೊಳಿಸಬೇಕಾಗಿದೆ ಎಂದು ಹೇಳಿದರು.

ಜಿಲ್ಲಾ ವೈದ್ಯಾಧಿಕಾರಿ ಡಾ| ಎ ತಿಮ್ಮಪ್ಪಯ್ಯನವರು ತಮ್ಮ ಸ್ವಾಗತ ಭಾಷಣದಲ್ಲಿ ಈ ಎಕ್ಸ್ ರೇ ಪ್ಲಾಂಟನ್ನು ಇಲ್ಲಿ ಸುಮಾರು ರೂಪಾಯಿ 1,12,200 ಖರ್ಚಿನಿಂದ ಸ್ಥಾಪಿಸಲಾಗಿದೆ ಎಂದು ತಿಳಿಸಿ ಇದರ ಅರ್ಧ ಖರ್ಚನ್ನು ಸ್ಥಳೀಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನವರೂ ವಹಿಸಿದ್ದಾರೆಂದು ಹೇಳಿದರು ಮದ್ರಾಸಿನ ಡೈರೆಕ್ಟರ್ ಆಫ ರೇಡಿಯೊಲಾಜಿ ಡಾ. ಕೆ. ಮಂಜುನಾಥ ರೈಗಳವರು ಮಾತನಾಡುತ್ತಾ, ರೇಡಿಯಮು ಚಿಕಿತ್ಸೆಯ ಮಹತ್ವವನ್ನು ವಿವರಿಸಿ ಈ ಪ್ಲಾಂಟಿನ ಸದುಪಯೋಗವನ್ನು ಪಡೆಯುವಂತೆ ಜನತೆಯನ್ನು ಕೇಳಿಕೊಂಡರು ರೇಡಿಯೊಲಾಜಿಸ್ಟ್ ಡಾ ಚಾವಡಯ್ಯನವರು ಧನ್ಯವಾದವಿತ್ತರು.

ದ ಕ ಜಿಲ್ಲಾ ಪ್ರಾಥಮಿಕ ಶಿಕ್ಷಕರ ಕ್ರಿಯಾ ಸಮಿತಿಯ ಸಭೆಯು—ತಾ 30ರಲ್ಲಿ ಮಂಗಳೂರಲ್ಲಿ ಜರಗಿ, ಪರಿಷ್ಕೃತ ವೇತನವು ಶೀಘ್ರನೇ ದೊರೆಯುವಂತೆ ನಮ್ಮ ಜನತಾ ಪ್ರತಿನಿಧಿಗಳ ಮತ್ತು ಮುಂದಾಳುಗಳ ಸಂಯುಕ್ತ ಸಹಕಾರ ಪಡೆಯಬೇಕಾಗಿಯೂ ಇದೇ ತಾ. 11ರಂದು ಇವರನ್ನು ಕೂಡಿಕೊಂಡು ಶಿಕ್ಷಕರ ತಾಲೂಕು ಯೂನಿಯನ್ ಪ್ರತಿನಿಧಿಗಳನ್ನೊಳಗೊಂಡ ಈ ಸಮಿತಿಯ ನಿಷ್ಠ ಮಂಡಲವು ಬೆಂಗಳೂರಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕಾಣಬೇಕೆಂದು ನಿರ್ಧರಿಸಲಾಯಿತು.

ಅನಾರೋಗ್ಯದಿಂದ ಗುಣಮುಖರಾದೊಡನೆ ಅಮೇರಿಕದ ಅಧ್ಯಕ್ಷ ಐಸನ್ ಹಾವರರು ತನ್ನ ಆರೋಗ್ಯಕ್ಕಾಗಿ ಚಿಂತಿಸಿದ ದೇಶೀಯ ಪ್ರಜೆಗಳು, ಮತ್ತು ವಿಶ್ವದ ಇತರ ಜನತೆಗೆ—ಕೃತಜ್ಞತೆಯನ್ನು ಸಮರ್ಪಿಸುತಿದ್ದಾರೆ

ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿ ನೇಮಕ—ಡಿಪ್ಯುಟಿ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿದ್ದ ಶ್ರೀ ಎಚ್. ನಾಗಪ್ಪ, ಅವರನ್ನು ದ. ಕ ಜಿಲ್ಲೆಯ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿ ನೇಮಿಸಲಾಗಿಯದೆ

(೯ನೇ ಪುಟ ನೋಡಿರಿ)

ಮದ್ರಾಸಿನಲ್ಲಿ ಕ್ಷಯರೋಗ ನಿವಾರಣಾ ಸಮಿತಿ ಕೆಲಸಗಾರರ ಪರಿಷತ್ತು

ಹಿಂದುಸ್ಥಾನದ ಕ್ಷಯರೋಗ ನಿವಾರಣಾ ಸಮಿತಿಯ ಕೆಲಸಗಾರರ 14ನೇ ಪರಿಷತ್ತು ಮದ್ರಾಸಿನಲ್ಲಿ ಇದೇ ತಾ. 29ರಿಂದ ನಾಲ್ಕು ದಿವಸಗಳ ತನಕ ನಡೆಯುವುದು. ವರ್ಷಂಪ್ರತಿಯೂ ಇಂತಹ ಪರಿಷತ್ತುಗಳನ್ನು ಜರುಗಿಸಿ ದೇಶದ ಬೇರೆ ಬೇರೆ ಭಾಗಗಳಲ್ಲಿಯ ಕೆಲಸಗಾರರನ್ನು ಕೂಡಿಸಿ ಅಲ್ಲಲ್ಲಿಯ ಸ್ಥಿತಿಗತಿಗನುಸಾರವಾಗಿ ಕ್ಷಯರೋಗ ನಿವಾರಣಾ ಕಾರ್ಯವನ್ನು ಹೇಗೆ ಮುಂದೊತ್ತುವುದೆಂದು ಚರ್ಚಿಸಲಾಗುತ್ತಿದೆ. ಇಂತಹ ಪರಿಷತ್ತು ಮದ್ರಾಸಿನಲ್ಲಿ ಜರಗುವುದು ಇದೀಗ ಎರಡನೆಯ ಸಲವಾಗಿದೆ ಅಖಿಲಭಾರತದಿಂದ ಸುಮಾರು 250 ಪ್ರತಿನಿಧಿಗಳು ಈ ಪರಿಷತ್ತಿಗೆ ಆಗಮಿಸಲಿದ್ದಾರೆ. ಮದ್ರಾಸ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ| ಕೆ ಎಸ್. ಸಂಜೀವಿ, ಅವರು ಪರಿಷತ್ತಿನ ಅಧ್ಯಕ್ಷರು. ಫೆಬ್ರವರಿ ತಾ. 1ರಲ್ಲಿ ರಾಜ್ಯಸಂಘಗಳ ಕಾರ್ಯದರ್ಶಿಗಳ ಅಧಿವೇಶನಕೂಡಾ ಜರಗುವುದು ಪರಿಷತ್ತಿಗೆ ಬಂದ ಪ್ರತಿನಿಧಿಗಳಿಗೆ ಶೈಕ್ಷಣಿಕ ಸ್ಥಳಗಳ ಪ್ರವಾಸದ ಕಾರ್ಯವನ್ನು ಇಟ್ಟುಕೊಳ್ಳಲಾಗಿದೆ ಮದ್ರಾಸ್ ಶಾಖೆಯ ಕಾರ್ಯದರ್ಶಿಗಳು ಪರಿಷತ್ತಿನ ವ್ಯವಸ್ಥೆಗಳೆಲ್ಲವನ್ನು ಮಾಡುತ್ತಿದ್ದಾರೆ.

ಸೂಚನೆ

"ನವಯುಗ' ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ಸ

ವಿಜಯರವರ ಮಾಯಾಬಜಾರ್

ಕನ್ನಡ ಚಿತ್ರದ ಪ್ರಥಮ ಪ್ರದರ್ಶನ

ವಿಜಯರವರ "ಮಾಯಾಬಜಾರ್" ಪೌರಾಣಿಕ ಕನ್ನಡ ಚಿತ್ರದ ಪ್ರಥಮ ಪ್ರದರ್ಶನ ಸಮಾರಂಭವು ಇದೇ ತಿಂಗಳು 20ರಂದು ಬೆಳಿಗ್ಗೆ 9 30 ಗಂಟೆಗೆ ಬೆಂಗಳೂರು ನಗರದ ಜೈ ಹಿಂದ್ ಟಾಕೀಸಿನಲ್ಲಿ ಏರ್ಪಟ್ಟಿದ್ದಿತು. ಮಾನ್ಯ ಸಚಿವರಾದ ಶ್ರೀ. ಹೆಚ್. ಕೆ. ವೀರಣ್ಣ ಗೌಡರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿತು

ಮೈಸೂರು ಸಂಸ್ಥಾನದಲ್ಲಿ ಈ ಚಿತ್ರದ ಹಂಚಿಕೆದಾರರಾದ ವಿಜಯ ಟಾಕೀ ಡಿಸ್ಟ್ರಿಬ್ಯೂಟರ್ಸ್ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಶ್ರೀ ಬಿ. ಎನ್. ಗುಪ್ತ, ವ್ಯವಸ್ಥಾಪಕರಿಂದ ಶ್ರೀ ನಾಯಕ್ ಮತ್ತು ಇತರ ಸಂಸ್ಥೆಯವರು ಅತಿಥಿಗಳನ್ನು ಆದರದಿಂದ ಸ್ವಾಗತಿಸಿದರು.

ಶ್ರೀಯುತ ಬಿ ಎನ್. ಗುಪ್ತರವರು ಸ್ವಾಗತ ಭಾಷಣಮಾಡುತ್ತಾ ಬಿಡುವಿಲ್ಲದ ಕಾರ್ಯಕ್ರಮದ ನಡುವೆ ಕರೆಯನ್ನು ಮನ್ನಿಸಿ ಬಂದ ಸಚಿವ ಶ್ರೀ. ಹೆಚ್. ಕೆ. ವೀರಣ್ಣ ಗೌಡರಿಗೆ ಕೃತಜ್ಞತೆಯನ್ನು ಸೂಚಿಸಿದರು ವಿಜಯ ಟಾಕೀ ಡಿಸ್ಟ್ರಿಬ್ಯೂಟರ್ಸ್ ಸಂಸ್ಥೆಯ ಬಗ್ಗೆ ಎರಡು ಮಾತನಾಡಿ ಮುಂದುವರಿದು "ಮಾಯಾಬಜಾರ್" ಚಿತ್ರವನ್ನು ವಿಜಯರವರು ಕನ್ನಡದಲ್ಲಿ ರೂಪಗೊಳಿಸಿ ತೆರೆಗಿತ್ತಿರುವುದು ಕೇವಲ ಒಂದು ಪ್ರಯೋಗ. ಬಹು ಭವ್ಯವಾಗಿ ತಯಾರಿಸಿದ ಈ ಚಿತ್ರ ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಅತ್ಯಂತ ಜನಪ್ರಿಯವಾಯಿತು. ಆ ವೈಭವದ ಈ ಚಿತ್ರವನ್ನು ಕನ್ನಡಿಗರು ಕನ್ನಡ ಭಾಷೆಯಲ್ಲಿಯೇ ನೋಡಿ ಆನಂದಿಸುವ ಅವಕಾಶವನ್ನು ವಿಜಯರವರು ಕಲ್ಪಿಸಿಕೊಟ್ಟಿದ್ದಾರೆ. ಕ್ರಮೇಣ ಇನ್ನೂ ಹೆಚ್ಚು ವೆಚ್ಚ ಮತ್ತು ಶ್ರಮದಿಂದ ಉತ್ತಮ ಚಿತ್ರಗಳನ್ನು ಕನ್ನಡ ಭಾಷೆಯಲ್ಲಿ ತಯಾರಿಸಲು ನಿರ್ಧರಿಸಿದ್ದಾರೆ ಸಕಲರೂ ಈ ರಸಭರಿತ ಪೌರಾಣಿಕ ಚಿತ್ರವನ್ನು ಸ್ವಾಗತಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತೇನೆ" ಎಂದರು

ಜನಮನವ ತಣಿಸೆ ಬಾ

(೧ನೇ ಪುಟದಿಂದ)

೧೯೫೭ನ್ನು ನಾವು ಸ್ವಾಗತಿಸಿದೊಡನೆ ನಮ್ಮ ರಾಜ್ಯ ಸರಕಾರದ ಕೆಲಸಗಾರರಿಗೆ ಹೊಸ ವೇತನದ ಮಟ್ಟವನ್ನು ವ್ಯವಹಾರದಲ್ಲಿ ಕಂಡಾಗ ನಾವೆಷ್ಟು ಸಂತೋಷಗೊಂಡಿದ್ದೆವು! ಆದರೆ, ಸ್ಥಳೀಯ ಸಂಸ್ಥೆಗಳ ಎಲ್ಲ ಕರ್ಮಚಾರಿಗಳಿಗೂ, ಸರಕಾರವೇ ವೇತನವೆಲ್ಲವನ್ನೂ ಸಹಾಯ ಧನವಾಗಿತ್ತು ಸಹಕರಿಸುವ ಖಾಸಗಿ ಶಾಲೆಗಳ ಅಧ್ಯಾಪಕರಿಗೂ ಈ ಉಡುಗೊರೆಯನ್ನೀಯಲು ೧೯೫೭ ಅದೇಕೋ ಈಗೀಗ ಸಂಪೂರ್ಣ ಅಸಫಲವಾಯಿತು ಎಲ್ಲೆ ೧೯೫೮, ನಿನ್ನ ಕೈ ಈ ವಿಷಯದಲ್ಲಿ ಪರರೆದುರು ಕೈಚಾಚುವಂತೆ ಮಾಡುವ ಬಾರಕೋಲನ್ನು ಅಡಗಿಸಿಕೊಂಡು ಹಿಡಿದಿಹುದೆ ಸಮಾನ ವೇತನವನ್ನೀಯುವೆಯ?

ನೂತನ ವರ್ಷವೇ, ನೀನೇಕೆ ಸುಮ್ಮನಿರುವೆ? ನಿನ್ನ ಈ ೩೬೫ ದಿನಗಳಲ್ಲಿ ಏನನ್ನು ತುಂಬಿಸಿಕೊಂಡಿರುವೆಯೆಂದು ತಿಳಿಯುವುದು ಅಸಂಭವವಾಗಿದೆ. ಆದರೆ, "ಆಶಾ ಬಲವತೀ" ಎಂಬುದನ್ನು ಆದರಿಸಿಕೊಂಡು, ನಿನ್ನ ಮುಗುಳ್ನಗೆಯಿಂದ ನೀನು ನಮ್ಮೆಲ್ಲರ ಪ್ರಶ್ನೆಗಳೆಲ್ಲವನ್ನೂ 'ಹೌದು" ಎಂದು ಉತ್ತರಿಸುತ್ತಿರುವಿ ಎಂಬ ದೃಢ ವಿಶ್ವಾಸದಿಂದಿದ್ದೇವೆ. ಮತ್ತು ಅದುದರಿಂದಲೇ ನಮ್ಮೆರಡು ಕೈಗಳನ್ನೂ ಎತ್ತಿ ಜೋಡಿಸಿ ನಿನ್ನನ್ನು ಸ್ವಾಗತಿಸುತ್ತೇವೆ ೧೯೫೭ರಂತೆ ನಮ್ಮ ಆಶೆಗಳನ್ನು ಮೆಟ್ಟಿ ತುಳಿದುಹೋಗಬೇಡ ನೋಡು ಪೂರ್ವದ ಕೆಂಬಣ್ಣದಿಂದ ಹಿಡಿದು, ಪಶ್ಚಿಮದ ಕ್ಷಿತಿಜದ ಈ ದಡದವರೆಗೆ ನಿನ್ನ ಮಾರ್ಗದ ಎರಡೂ ಕಡೆಗಳಲ್ಲಿ ತುಟ್ಟಿಯ ಹೊಡೆತಗಳಿಂದ, ವ್ಯಾಕುಲ ಮತ್ತು ಕರಗಳ ವರ್ಷಕಗಳ ಭಾರದಿಂದ ನಿಟ್ಟುಸಿರನ್ನು ಬಿಡುತ್ತ ಹಸಿದ ಸಂಸಾರಿಯು ನವ ಶಕ ನಿನ್ನ ಸ್ವಾಗತವನ್ನು ಬಯಸಲು, ಸಾಲುಗಟ್ಟಿ ನಿಂತಿವೆ.

ಸ್ವಾಗತವು, ಸ್ವಾಗತವು ನವ ವರ್ಷವೇ, ಇದೋ ನಿನಗೆ ಸ್ವಾಗತ.

ಮಂಗಳೂರು

ಹಿಂದೀ ಪ್ರಮಾಣಪತ್ರ ವಿತರಣೆ— ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ನೇತೃತ್ವದಲ್ಲಿ ತಾ 25ರಂದು ಹಿಂದೀ ಪರೀಕ್ಷೆಯಲ್ಲಿ ಜಯಶೀಲರಾದವರಿಗೆ ಪ್ರಮಾಣಪತ್ರ ವಿತರಣೆಮಾಡುವ ಸಮಾರಂಭವು ಕೆನರಾ ಹೈಸ್ಕೂಲಿನ ಭುವನೇಂದ್ರ ಸಭಾಸದನದಲ್ಲಿ ಜರಗಿತು. ಮಂಗಳೂರಿನ ಪ್ರಿನ್ಸಿಪಾಲ್ ಸಬೋರ್ಡಿನೇಟ್ ಜಡ್ಜರಾದ ಶ್ರೀ ಶ್ರೀನಿವಾಸಾಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು.

ಸಮಿತಿ ಅಧ್ಯಕ್ಷ ಶ್ರೀ ಯು ಕೇಶವರಾಯರು ಸ್ವಾಗತಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಧ್ಯಕ್ಷರ ಪರಿಚಯ ಮಾತುಗಳನ್ನಾಡಿದರು ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಶ್ರೀಕಂಠಮೂರ್ತಿಯವರು ಅಭಿನಂದನಾ ಭಾಷಣಮಾಡಿದರು ಅಧ್ಯಕ್ಷರ ಭಾಷಣಾನಂತರ ಶ್ರೀ ಪಿ. ಶಿವರಾಯರು ಧನ್ಯವಾದಗಳನ್ನಿತ್ತರು.

ಟಿ. ಎಸ್ ಎಲ್ ಸಿ ಪರೀಕ್ಷೆ— ಟಿ ಎಸ್ ಎಲ್. ಸಿ ಪರೀಕ್ಷೆಗೆ ಅರ್ಜಿಗಳನ್ನು ಸ್ವೀಕರಿಸುವ ಅವಧಿಯನ್ನು ಮೈಸೂರು ಸರಕಾರದ ಪರೀಕ್ಷಾಧಿಕಾರಿಗಳು ಜನವರಿ ತಾ 15ರ ವರೆಗೆ ಮುಂದುವರಿಸಲಾಗಿದೆ ಟಿ. ಎಸ್ ಎಲ್ ಸಿ. ಪರೀಕ್ಷೆಗೂ ಅರ್ಜಿಗಳನ್ನು ಸ್ವೀಕರಿಸುವ ಅವಧಿಯನ್ನು ಜನವರಿ ತಾ 15ರ ವರೆಗೆ ಮುಂದುವರಿಸಲಾಗಿದೆ

ವಾರ್ಷಿಕೋತ್ಸವ — ಮಂಗಳೂರು ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ವಾರ್ಷಿಕೋತ್ಸವವು ತಾ 26ರಂದು ಕೆನರಾ ಹೈಸ್ಕೂಲು ಮೈನ್ ಶಾಲೆಯಲ್ಲಿ ಮಂಗಳೂರು ಪ್ರಿನ್ಸಿಪಾಲ್ ಸಬೋರ್ಡಿನೇಟ್ ಜಡ್ಜರಾದ ಶ್ರೀ ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಸಮಿತಿ ಅಧ್ಯಕ್ಷ ಶ್ರೀ. ಯು. ಕೇಶವರಾಯರು ಸ್ವಾಗತಿಸಿದರು. ಸಂಚಾಲಕ ಶ್ರೀ. ಪಿ ಶಿವರಾಯರು ವರದಿಯನ್ನೋದಿದರು. ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಮಿತಿಯ ಕಾರ್ಯದರ್ಶಿ ಶ್ರೀ ಶ್ರೀಕಂಠಮೂರ್ತಿಗಳು ಸಂದರ್ಭೋಚಿತ ಮಾತುಗಳನ್ನಾಡಿದರು. ಹಿಂದೀ ಪ್ರಚಾರಕ ಸಮ್ಮೇಳನವು ಶ್ರೀ ಶ್ರೀಕಂಠಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಜಿಲ್ಲೆಯಿಂದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೆ— ಶ್ರೀಗಳಾದ ವೈ ಮಂಜಯ್ಯ ಸೆಟ್ಟಿ, ಎಮ್. ಎಲ್ ಎ. (ಬೈಂದೂರು), ಬಿ ಜಗಜ್ಜೀವನದಾಸ ಸೆಟ್ಟಿ, ಎಮ್. ಎಲ್ ಎ (ಬ್ರಹ್ಮಾವರ), ಟಿ. ಎ ಪೈ, (ಉಡುಪಿ), ಯು ಎಸ್ ಮಲ್ಯ, ಎಮ್ ಪಿ. (ಬೆಳ್ತಂಗಡಿ), ಬಿ. ರಾಜೀವ ಭಂಡಾರಿ (ಸುರತ್ಕಲ್), ಡಾ ಕೆ ನಾಗಪ್ಪ ಆಳ್ವ, ಎಮ್ ಎಲ್. ಎ, (ಪಾಣೆಮಂಗಳೂರು) ಎಸ್ ಡಿ. ಸಾಮ್ರಾಜ್ಯ (ಮೂಡಬಿದ್ರೆ), ಬಿ ಆನಂತ ಪೈ, (ಮಂಗಳೂರು) ಅವಿರೋಧವಾಗಿ ಆಯ್ಕೆ ಹೊಂದಿದ್ದಾರೆ.

ದ ಕ. ಜಿಲ್ಲಾ ಹಿಂದುಳಿದ ವರ್ಗಗಳ ಸಂಘದ ಮಹಾಸಭೆಯು— ಕಳದ ಅದಿಕ್ಯಾರ ಶ್ರೀ ಎ ಕೆ. ಮಂಜುನಾಥಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಬಿ ಕೆ ಕೊರಗಪ್ಪನವರು ಧ್ವಜಾರೋಹಣ ಮಾಡಿದರು

ಆಕ್ಷಿ ಸಮಿತಿಯ ವರದಿಯಲ್ಲಿ ನಮೂದಿಸಿದನ್ವಯ ಬೇಗನೆ ಭೂ ಶಾಸನವನ್ನು ತರಬೇಕೆಂದು ಸರಕಾರವನ್ನು ಕೇಳಿಕೊಳ್ಳುವ, ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಹೈಸ್ಕೂಲು ತನಕ ಧರ್ಮಾರ್ಥ ವಿದ್ಯಾಭ್ಯಾಸವನ್ನು, ಕಾಲೇಜು ಶಿಕ್ಷಣದಲ್ಲಿ ಅರ್ಧ ಸಂಬಳ ಸೌಲಭ್ಯವನ್ನೂ ಮಾಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು ಶ್ರೀಗಳಾದ ಎನ್ ಎಸ್. ಸುವರ್ಣ, ಎ ಕೆ ಸೇವಕ್, ಕೆ. ವಾಸುದೇವನ್ ಮೊದಲಾದವರ ಸಂದರ್ಭೋಚಿತ ಮಾತುಗಳಾದುವು ಬಳಿಕ ಹೊಸ ವರ್ಷದ ಕಾರ್ಯಕಾರೀ ಸಮಿತಿಯ ಸದಸ್ಯರ ಆಯ್ಕೆ ನಡೆಯಿತು.

ಅಧ್ಯಕ್ಷತೆ ವಹಿಸಿದ್ದ ಮಾನ್ಯ ಮಂತ್ರಿಗಳಾದ ಶ್ರೀ ಹೆಚ್. ಕೆ ವೀರಣ್ಣ ಗೌಡರು ಭಾಷಣಮಾಡುತ್ತಾ ಚಿತ್ರರಂಗದಲ್ಲಿ ತಮ್ಮ ಸ್ವಾರಸ್ಯ ಅನುಭವವನ್ನು ನೆನೆಸಿಕೊಂಡರು ಚಿತ್ರರಂಗದಲ್ಲಿ ಬಹು ಹಳಬರಾದ ಶ್ರೀಯುತ ಎಂ. ಭವನಾನಿ, ಡಾ ನಾರಾಯಣ ಶಾಸ್ತ್ರಿ, ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಪಣಿಕ್ಕರ್ ರಾಮರಾವ್, ದಿವಂಗತ ಕೈಲಾಸಂ ಮುಂತಾದವರೆಲ್ಲಾ ಸೇರಿ "ಮೃಚ್ಛಕಟಿಕ" ಚಿತ್ರ ತಯಾರಿಸಿದಾಗ ತಾವೂ ಒಂದು ಪಾತ್ರ ವಹಿಸಿದುದನ್ನು ಜ್ಞಾಪಕ ಮಾಡಿಕೊಂಡರು

ಮುಂದುವರಿದು "ಅಂದಿಗೂ ಇಂದಿಗೂ ಚಿತ್ರರಂಗ ಬೆಳೆದಿವೆ ಅನೇಕ ಬದಲಾವಣೆಗಳಾಗಿವೆ ವಿಜಯರವರು ಪೌರಾಣಿಕ "ಮಾಯಾ ಬಜಾರ್" ಚಿತ್ರವನ್ನು ಕನ್ನಡದಲ್ಲಿ ರೂಪಿಸಿದ್ದಾರೆ ಕೇವಲ ಹಣ ಸಂಪಾದನೆಯ ಗುರಿಯಿಂದ ಒಂದೇ ಜಾಡಿನ ಚಿತ್ರಗಳನ್ನು ತಯಾರಿಸುವುದು ಬಿಟ್ಟು, ನಮ್ಮ ಸಂಸ್ಕೃತಿಯ ಹೆಗ್ಗಳಿಕೆಯನ್ನು ನಿರೂಪಿಸುವ ಪೌರಾಣಿಕ ಚಿತ್ರವನ್ನು ವೈಭವದಿಂದ ಚಿತ್ರಿಸಿರುವುದು ಗಮನಾರ್ಹ ಜನತೆಯೂ ಇಂತಹ ಚಿತ್ರಗಳಿಗೆ ಪ್ರೋತ್ಸಾಹ ಕೊಡುವುದು ಅಗತ್ಯ ನಾನು ಈಗ "ಮಾಯಾ ಬಜಾರ್' (ಕನ್ನಡ) ಚಿತ್ರವನ್ನು ನೋಡಿ ಆನಂದಿಸಿದೆ ಕಥೆ, ಸಂಗೀತ ಮತ್ತು ಅಭಿನಯ ಎಲ್ಲವೂ ಚೆನ್ನಾಗಿದೆ. ಚಿತ್ರ ಉತ್ತಮವಾಗಿದೆ. ಈ ಚಿತ್ರವನ್ನು ಮತ್ತೊಮ್ಮೆ ಪೂರ್ಣವಾಗಿ ನೋಡುವ ಅವಕಾಶ ಮಾಡಿಕೊಳ್ಳುತ್ತೇನೆ—" ಎಂದರು

ಈ ಸಮಾರಂಭಕ್ಕೆ ಪತ್ರಿಕಾಕರ್ತರೂ ಪ್ರಮುಖ ಚಿತ್ರೋದ್ಯಮಿಗಳೂ ನಗರದ ಗಣ್ಯ ವ್ಯಕ್ತಿಗಳೂ ಅನೇಕ ಕವಿಗಳೂ ಸಾಹಿತಿಗಳೂ ಬಂದಿದ್ದರು, 'ಮಾಯಾ ಬಜಾರ್" (ಕನ್ನಡ) ಚಿತ್ರವನ್ನು ನೋಡಿ ಸಂತೋಷಪಟ್ಟರು

ರೋಟರಿ ಕ್ಲಬ್ಬಿನ ಸಭೆಯು - ತಾ 26ರಂದು ಶ್ರೀ ವಿ ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು ಕಾರ್ಯದರ್ಶಿ ಶ್ರೀ ಕೆ ಪಿ ಕಸ್ತೂರಿಯವರು ಗತ ಸಭೆಯ ವರದಿಯನ್ನೋದಿದರು. ಶ್ರೀ ಕೆ. ವಿಶ್ವನಾಥ ಕಾಮತರು 'ಸ್ಥಳೀಕಾಡಳಿತೆ' ವಿಷಯವನ್ನೆತ್ತಿ ಭಾಷಣ ಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಸ್ಥಳೀಕಾಡಳಿತೆಯಲ್ಲಿರುವ ಕುಂದುಕೊರತೆಗಳನ್ನು ಹೋಗಲಾಡಿಸಿ ಜನತೆಯ ಪ್ರಗತಿ ದೃಷ್ಟಿಯಿಂದ ಮುಂದುವರಿಯುವುದು ಅಗತ್ಯವೆಂದರು

ಇಂಡಿಯನ್ ಬೇಂಕಿನ ಸುವರ್ಣ ಮಹೋತ್ಸವವು ತಾ 27ರಂದು, ಸ್ಥಳೀಯ ಕೆಥೋಲಿಕ್ ಕ್ಲಬ್ಬಿನಲ್ಲಿ ನಿವೃತ್ತ ಡೈರೆಕ್ಟರ್ ಓಫ್ ಇಂಡಸ್ಟ್ರೀಸ್ ಶ್ರೀ ಎನ್ ಎಮ್. ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ ಎಸ್. ರಾಮಾಚಾರ್ಯರಿಂದ ಪ್ರಾರ್ಥನೆಯಾದ ಬಳಿಕ ಬೇಂಕಿನ ಮಂಗಳೂರು ಶಾಖೆಯ ಏಜಂಟ್ ಶ್ರೀ ಕೆ. ಆರ್. ರಾಮಾನುಜಂರವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈಗ ಹೆಚ್ಚಿನ ಬೇಂಕುಗಳು ತಮ್ಮ ವ್ಯವಹಾರವನ್ನು ನಗರ ಪ್ರದೇಶಗಳಲ್ಲಿಯೇ ನಡೆಸುತ್ತಿವೆ ಗ್ರಾಮೀಣ ಪ್ರದೇಶದ ಜನರಲ್ಲಿ ಉಳಿತಾಯ ಮನೋವೃತ್ತಿಯನ್ನು ಬೆಳೆಸಿ ಅವರಲ್ಲಿ ಬೇಂಕಿಂಗ್ ಅಭ್ಯಾಸವನ್ನು ಬೆಳೆಸುವುದಕ್ಕಾಗಿ ಬೇಂಕುಗಳು ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಶಾಖೆಗಳನ್ನು ತೆರೆಯಬೇಕು ಎಂದು ಮುಖ್ಯವಾಗಿ ಹೇಳಿದರು. ಶ್ರೀ ಜೆ ಡಿ. ನ್ಯಾಸರು ಧನ್ಯವಾದವಿತ್ತರು.

ಶ್ರೀರಾಮಕೃಷ್ಣ ಪರಮಹಂಸ ಜಯಂತಿಯು — ತಾ 28ರಂದು ಶ್ರೀರಾಮಕೃಷ್ಣಾಶ್ರಮದಲ್ಲಿ ಶ್ರೀ ಕೆ ಆರ್. ಅಚಾರ್ ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬೆಂಗಳೂರಿನ ಶ್ರೀ ಎಸ್. ಎಸ್. ಅನಂತರಂಗಾಚಾರ್ಯರು, ಡಾ. ಕೆ. ಎಮ್. ಕೃಷ್ಣರಾವ್, ಎಮ್. ಯಮುನಾಚಾರ್ಯ ಮೊದಲಾದವರ ಭಾಷಣಗಳಾದುವು ಶ್ರೀ ಬಿ ಎಸ್. ರಾಮಾಚಾರ್ಯರು ಕೆಲವು ಭಕ್ತಿಗೀತೆಗಳನ್ನು ಹಾಡಿದರು. ಕಲುಷಿತ ಜಗತ್ತಿಗೆ ಶಾಂತಿಯನ್ನು ನೀಡಬಲ್ಲ ಶಕ್ತಿಯು ಶ್ರೀಕೃಷ್ಣಪರಮಹಂಸರ ಉಪದೇಶವೆಂದು ಸಭಾಧ್ಯಕ್ಷರು ಹೇಳಿದರು

ಯುವಕ ಕಾಂಗ್ರೆಸ್ ಸಾಪ್ತಾಹಿಕ ಸಭೆಯು— ತಾ 27ರಂದು ಬೆಳಿಗ್ಗೆ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗಿತು ಶ್ರೀ ಬಿ ರಾಜೀವ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಕೆ ಕೆ. ಶೆಟ್ಟಿ, ಎಮ್. ಎಲ್ ಸಿ, ಮತ್ತು ಶ್ರೀ ಕೆ. ಎಸ್ ಎನ್ ಅಡಿಗರು ಮಾತನಾಡುತ್ತಾ, ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವಿಕೆಯ ಅವಶ್ಯಕತೆಯನ್ನು ಸೂಚಿಸಿದರು

NAVAYUGA WEEKLY

ADVERTISEMENT RATES

Display Advertisements: — Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements: — As. 8/- per line (minimum 8 lines).

For rates for advertising in colours and special positions, please write to

ADVERTISEMENT MANAGER,

'NAVAYUGA'

Post Box No 22, UDIPI, S. K.

ಕುಂದಾಪುರದ ಮು ಕೋರ್ಟಿನಲ್ಲಿ

S C 96/51

R E P 884/1957

ಅರ್ಜಿದಾರರು — 1 ವೈಷ್ಣವ ಮುಪ್ಪ್ರಾಣ, 2 ವೈನರ ಮುಷ್ಠರನ್ನು, 3 ವೈನರ ರನಂದ, 4 ಪದ್ಮಾವತಿ ಅಮ್ಮ.

ಎದುರು — 1 ದೇವರಾಯ ಕಾಮತ್ 2 ವೆಂಕಟೇಶ ಕಾಮತ್,

ಕುಂದಾಪುರ ತಾಲ್ಲೂ ಕೋಟೇಶ್ವರ ಗ್ರಾಮದಲ್ಲಿರುವ ಗಣಪಯ್ಯ ಕಮ್ತಿರ ಮಕ್ಕಳು ದೇವರಾಯ ಕಾಮತ್, ವೆಂಕಟೇಶ ಕಾಮತ್, ಕೊಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಸದ್ರಿ ವ್ಯವಹಾರದಲ್ಲಿ ಅನುಲಗ್ನಿಯಲ್ಲಿ ಕೇಳಿದ ಹಣ ಬರಮಾಡಿಕೊಳ್ಳುವರೆ ಅರ್ಜಿದಾರರು ಹಾಜರುಪಡಿಸಿದ ಮೇಲಿನ ಅರ್ಜಿಯು ತಾ. 6-1-1958ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಕೆಗೆ ಇರುತ್ತದೆ ಆ ಕುರಿತು ನಿಮಗೇನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಹಗಲು 11 ಗಂಟೆಗೆ ಹಾಜರಾಗಿ ಹ್ಯಾಹೀರುಮಾಡಿಕೊಳ್ಳತಕ್ಕದ್ದು, ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿಯದೆ.

N. S Parameshwariah.

Advocate for Petr

Date 27—12—57 Coondapoor.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ಬೆಳದಿಂಗಳ ರಾತ್ರಿ—(ಕಥಾ ಸಂಕಲನ) ಬರೆದವರು: ಶ್ರೀಮತಿ ರಾಜೇಶ್ವರಿ ನರಸಿಂಹಮೂರ್ತಿ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಪುಟಗಳು: xiv + ೨೦೦. ಬೆಲೆ: ರೂ. ೧.೫೦. (೨.೫೦, ೪.೦೦).

ಕಾದಂಬರಿಯ ತಂತ್ರಕ್ಕಿಂತ, ರಚನೆಗಿಂತ ಕಥೆಯದು ಕಷ್ಟ. ಆದುದರಿಂದಲೇ ಕನ್ನಡ ಸಾಹಿತ್ಯದಲ್ಲಿ ವಾರಪತ್ರಿಕೆಗಳಲ್ಲಿ ಬರುವ ಕಥೆಗಳನ್ನು ಬಿಟ್ಟರೆ, ಸಂಕಲನ ರೂಪದಲ್ಲಿ ಅವುಗಳು ಹೊರ ಬರುವುದಿಲ್ಲ; ಬಂದರೂ ಜನ ಮೆಚ್ಚುವುದಿಲ್ಲ. ಒಂದು ಕಾಲದಲ್ಲಿ ನೊಳೆತು, ಎಳೆಯರಳಿಸಿ ನಿಜವಾಗಿ ಬೆಳೆದ ಕಥಾ ಸಾಹಿತ್ಯದ ಕುಡಿ ಮತ್ತೂ ಬೆಳೆಯದೆ ಅಲ್ಲಿಯೇ ಮುರುಟಿ ಹೋಯಿತು. ಅಂತಹ ಗಿಡಕ್ಕೆ ಪುನಃ ನೀರೆರೆಯುವ ಪ್ರಯತ್ನ ಈಗಲೂ ಆಗಾಗ ನಡೆಯುತ್ತಿವೆ. ಶ್ರೀಮತಿ ರಾಜೇಶ್ವರಿಯವರ "ಬೆಳದಿಂಗಳ ರಾತ್ರಿ" ಈ ದಿಸೆಯಲ್ಲಿ ಮಾಡಿದ ಒಂದು ಪ್ರಯತ್ನ.

ಈ ಸಂಕಲನದಲ್ಲಿ ಲೆಕ್ಕಕ್ಕೆ ೧೯ ಕಥೆಗಳಿದ್ದರೂ ಇವುಗಳಲ್ಲಿ ಕೆಲವೇ ಕಥೆಗಳು ಒಳ್ಳೆಯವಿವೆ. "ಬೆಳದಿಂಗಳ ರಾತ್ರಿ"ಯು ಸಂಕಲನದಲ್ಲಿ ಎರಡನೆಯದಾದರೂ ಅತ್ಯುತ್ತಮವಾಗಿದೆ. ಇದಕ್ಕೆ ಸಂಬಂಧಿಸಿದ ಮುಖಚಿತ್ರವೂ ಸುಂದರವಿದೆ. 'ಸ್ಕೂಲ್ ಡೇ' ಎಂಬುದರಲ್ಲಿ ಸಹಜ ಚಿತ್ರಣ ಮೂಡಿದೆ. ಮಹಾಸತಿ, ಕ್ಲಬ್ ಡೇ, ಸಿನಿಮಾಕ್ಕೆ ಸೇರಿದವಳು, ಇವು ಉತ್ತಮವಿದ್ದರೂ, ಕೆಲವಲ್ಲಿ ವಾಚನೀಯತೆಯು ಗುಣವಾಗಲೀ ಕಲ್ಪನೆಯ ಸೊಗಸಾಗಲೀ ಇರುವುದಿಲ್ಲ. ಕಾಲಹರಣ, ಇದೇನು ಎಂಬಿವು ತೀರಾ ಸಾಮಾನ್ಯವಾಗಿವೆ. "ಹೇಸರಿನಲ್ಲಿ ಹೆಸರು"—ಎಂಬುದು ವಿವೇಕಿ ಅನುಭವಿ ಸತಿಪತಿಯರ ನಡವಳಿಕೆಗಿಂತ ಒಂದೆರಡನೆ ದರ್ಜೆಯ ಬಾಲರ ಮುಗ್ಧ ಮನಸ್ಸಿನ ನಡೆವಳಿಕೆಯಂತೆ ಕಂಡು ಬರುತ್ತದೆ. "ಅಯ್ಯೋ ಪಾಪ ಅಂದರೆ..." ಎಂಬುದರಲ್ಲಿ ಯಜಮಾನಿ ಲಕ್ಷ್ಮಮ್ಮ" ಸಧ್ಯಕ್ಕೆ ಇಷ್ಟಕ್ಕೇ ತೊಲಗಿತಲ್ಲ ಭೀಮೇಶನೇ ಕಾಪಾಡಿದ' ಎಂದು ಬಿಟ್ಟ ಸಮಾಧಾನದ ಉಸಿರು ಅತಿಮಾನವತೆಯನ್ನು ಪ್ರದರ್ಶಿಸುತ್ತದೆ.

ರೂಪದಲ್ಲಿ ಸಣ್ಣದಾದ ಮಾತ್ರಕ್ಕೆ ಅದು ಕಥೆಯಾಗಲಾರದು. ಅದಕ್ಕೆ ತಂತ್ರ, ಕೌಶಲ, ಭಾವ, ಮಾಧುರ್ಯ, ಅನುಭವಗಳ ಒಪ್ಪವೂ ಬೇಕು; ಕಲ್ಪನೆಯ ವಿಲಾಸವೂ ವರ್ಣನೆಯ ಬೆಡಗೂ, ಚಾತುರ್ಯದ ಸೊಗಸೂ ಸೇರಿಕೊಳ್ಳಬೇಕು. ಇದಿಲ್ಲದೆ ಹೋದರೆ, ಕಥೆಗಳು ನೀರಸವಾಗುವುವು; ವಾಚನೀಯತೆಯನ್ನೂ ಜನಪ್ರಿಯತೆಯನ್ನೂ ಕಳೆದುಕೊಳ್ಳುವುವು. ಪೀ. ಸೀ. ಯವರು ಈ ಸಂಕಲನಕ್ಕೆ ಬರೆದ ಮುನ್ನುಡಿಯು ಉತ್ತಮವಾಗಿದ್ದರೂ, ಅದರ ಉತ್ತಮಿಕೆಯನ್ನು ಒಳಗಿನ ಕತೆಗಳು ಚೆನ್ನಾಗಿ ಉಳಿಸಿಕೊಂಡಿಲ್ಲವೆಂದರೆ ತಪ್ಪಾಗಲಾರದು. ಕಥೆಗಳಲ್ಲಿಯಾಗಲಿ ಅವನ್ನು ಹೇಳುವ ವಿಧಾನದಲ್ಲಿಯಾಗಲಿ ಯಾವ ಹೊಸ ಮಾರ್ಗವನ್ನೂ ನಾನು ಅನುಸರಿಸಿಲ್ಲ...ಬರೆಯಲೋ ಬೇಡವೋ, ಬರೆದದ್ದನ್ನು ಪ್ರಕಟಿಸಲೋ ಬೇಡವೋ ಎಂದು ಅಳುಕುತ್ತ" ಇದ್ದೆನೆಂದು ಕತೆಗಾರ್ತಿಯರೇ ಹೇಳುವಾಗ, ಶ್ರೀನಿವಾಸರು (ಮಾಸ್ತಿ) ಹೇಳಿಯೂ ಹರಸಿದಂತೆ, "ನಾವು ಸಹ "ಇವರನ್ನೂ ಇವರ ಜೊತೆಯ ನಮ್ಮ ಲೇಖಕ ಸೋದರಿಯರನ್ನೂ ಈ ಸೇವೆಯಲ್ಲಿ ಹೆಚ್ಚು ಹೆಚ್ಚಾಗಿ ತೊಡಗುವಂತೆ" ಪ್ರೋತ್ಸಾಹಕರಾಗಿ ಹಾರೈಸುತ್ತೇವೆ. ಇದಕ್ಕಿಂತಲೂ ಉತ್ಕೃಷ್ಟವೆನಿಸಿದ ಕಥೆಗಳಿಂದ ಕಥಾ ಸಾಹಿತ್ಯ ತುಂಬಿ ಬರಲೆಂದು ಬಯಸುತ್ತೇವೆ.

ಜೇನ ಹನಿಗಳು—(ಜನಪದ ಪ್ರೇಮಗೀತೆಗಳು) ಆಯ್ದವರು: ಕ. ರಾ. ಕೃ. ಪ್ರಕಾಶಕರು: ಕಾವ್ಯೋದಯ ಪ್ರಕಾಶನ, ವಿದ್ಯಾಪ್ರವ, ಸರಸ್ವತೀಪುರಂ, ಮೈಸೂರು. ಪುಟಗಳು: ೩೦. ಬೆಲೆ: ೦-೮-೦.

ಪೇಟೆ ಪಟ್ಟಣಗಳ ಜನಜಂಗುಳಿಯಿಂದ ನಿಬಿಡವಾದ ಮಾರ್ಗಗಳನ್ನು ತ್ಯಜಿಸಿ, ಹಳ್ಳಿಗಾಡಿನಲ್ಲಿ ನಾವು ಸಂಚಾರ ಮಾಡುವಾಗ, ಸಂಧ್ಯಾ ಸಮಯದಲ್ಲಿ ಹಾಡಿನ ಕೋಡೆ ಅಲೆಗಳು ಕಿವಿದೆರೆಗೆ ಬಡಿಯುವುವು. ಗ್ರಾಮೀಣ ಜನರ ಬಾಯಿಂದ ಆ ಹಾಡುಗಳು ಹೊರ ಬರುವಾಗಿನ ಮಾಧುರ್ಯ ಬೇರೆಲ್ಲಿಯೂ ದೊರೆಯಲಾರದು. ಅದೆಷ್ಟೋ ಕಾಲದ ಹಿಂದೆ ಅದಾವುದೋ ಕಾರಣಗಳಿಂದ ಅದಾರಿಂದಲೋ ರಚಿಸಲ್ಪಟ್ಟು ಅಂದಿನಿಂದ ಇಂದಿನ ವರೆಗೂ ಜನಪದದ ಜನರ ನಾಲಗೆ ತುದಿಯಲ್ಲಿ ಕುಣಿದಾಡುತ್ತಿರುವ ಜನಪದ ಗೀತೆಗಳಲ್ಲಿ ಕೆಲವು ಉದ್ಬೋಧಕವಾಗಿರುವುವು. ಅವುಗಳಲ್ಲಿ ಪುರಾಣ, ಇತಿಹಾಸಗಳು ಸಮಾವೇಶವಾಗಿರುವುದೂ ಉಂಟು. ಈ ಕಾರಣದಿಂದ, ಜನಪದ ಸಾಹಿತ್ಯದ ಸಂಕಲನವಾಗಬೇಕು; ಆಗ ಬಹುಶಃ ಕನ್ನಡ ಸಾಹಿತ್ಯಕ್ಕೆ ಮತ್ತೂ ಶೋಭೆ ಬರುವುದು. ಆದರೆ, ಈ ದಿಸೆಯಲ್ಲಿ ಅಧಿಕಾರಿಕ ಪ್ರಯತ್ನ ನಡೆದಿಲ್ಲ: ಅದು ನಡೆಯಬೇಕು. ಅದನ್ನು ಹಳ್ಳಿ ಹಾಳು ಹಾಡೆಂದು ತಿರಸ್ಕರಿಸಬಾರದು.

ಜೇನ ಹನಿಗಳು ಇಂತಹ ಪ್ರೇಮಗೀತೆಗಳ ಸಂಕಲನ. ರಾಗಯುಕ್ತವಾಗಿ ಹಾಡುವವರಿದ್ದರೆ ಕೇಳೋಣ ಎನ್ನಿಸುತ್ತದೆ. 'ಕಳವಳಪಡಬೇಡ ಮಗಳೇ' 'ಹಾಸಿಗೆ ಹಾಸಿದ್ದಿ', 'ದೇವಗನ್ನೇರು ರಾಣಿಕೆ ನಡೆದಾರು' 'ಬಾಮುದ್ದು ಅರಗಿಣಿಯೆ', 'ಸುಜ್ಜಾಯ್ತು ನೀರ ಹೊಳೆಯಾಗ' ಈ ಹನಿಗಳು ರುಚಿಕರವಾಗಿವೆ. ಕೆಲವು ಪದಗಳು ನಾಲಿಗೆಗೆ ರುಚಿಯಾದರೂ, ಗ್ರಾಮ್ಯ ಶಬ್ದಗಳ ಪ್ರಭಾವದಿಂದಾಗಿ ಅರ್ಥೈಸಿಕೊಳ್ಳಲು ಕಷ್ಟವಾಗುತ್ತದೆ. 'ದೇವಗನ್ನೇರು ರಾಣಿಕೆ ನಡೆದಾರು' ಎಂಬಲ್ಲಿನ 'ರಾಣಿ' ಎಂಬುದಕ್ಕೆ 'ಸ್ನಾನ' ಎಂಬರ್ಥ ಕಲ್ಪಿಸುವುದು ಅಷ್ಟು ಸುಲಭವಲ್ಲ. ಆದರೆ, ಜೇನಹನಿಗಳನ್ನು ಸವಿದಷ್ಟು ಮಧುರವಾಗಿ ತಯಾರಿಸಲಾರೆವು. ಎಂತಲೇ ಸುಮ್ಮನೆ ಮಾಡಿ ನೋಡು ಎಂಬಂತೆ ಇಂತಹ ಗೀತೆಗಳನ್ನು ಅನಕ್ಷರಸ್ಥ ಗ್ರಾಮಸ್ಥರ ಬಾಯಿಂದ ಕೇಳಿ, ಬರೆದುಕೊಂಡು ಪ್ರಕಟಿಸುವುದು ಸುಲಭವೆಂದರೆ ದಾಷ್ಟ್ಯದ ಮಾತಾದೀತು. ಆದರೂ, ಸಂಪಾದಕ ಕ. ರಾ. ಕೃ. ರವರು ತಮ್ಮ ಮುಂದಿನ ಇಂತಹ ಪ್ರಕಟಣೆಗಳಲ್ಲಿ ತೀರಾ ಗ್ರಾಮ್ಯಪದಗಳ ಸರಳ ಕನ್ನಡ ಅರ್ಥವನ್ನು ಕೊಡಲು ಪ್ರಯತ್ನಿಸಿದರೆ, ಆಗ ಅವರು ಪಟ್ಟ ಶ್ರಮ ಸಾರ್ಥಕವಾಗುವುದೆಂದು ನಿಸ್ಸಂಕೋಚವಾಗಿ ಹೇಳಬಹುದು. ಶ್ರೀ ಎಚ್. ದೇವೀರಪ್ಪನವರ ಹರಕೆಯಂತೆ ಕ. ರಾ. ಕೃ. ರವರಿಂದ ನಾಡ ಹಾಡಿನ ಕಣಜ ತುಂಬಿ ತುಂಬಿ ಬರಲೆಂದು ಹಾರೈಕೆ.

The Second Five Year Plan—(Questions and Answers) Published by the Publication Division, Ministry of Information and Broadcasting, Govt of India Pages: 92. Price, Re 0-4-0.

ಭಾರತದಲ್ಲಿ ಈಗ ಕಾರ್ಯರೂಪಕ್ಕಿಳಿಸಲಾಗುವ ದ್ವಿತೀಯ ಪಂಚವಾರ್ಷಿಕ ಯೋಜನೆಯ ಗುರಿ, ಉದ್ದೇಶ, ಕಾರ್ಯಗತಗೊಳಿಸುವ ವಿಧಾನಗಳನ್ನು ಅದಕ್ಕೆ ಬೇಕಾದ ಧನಬಲದ ಮೂಲವನ್ನು ಇತರ ವಿಚಾರವನ್ನು ಪ್ರಶ್ನೋತ್ತರ ರೂಪದಲ್ಲಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ. ಇದರಲ್ಲಿ ಸಾಮಾನ್ಯ (ಯೋಜನೆಯ ರೂಪರೇಷೆ) ಬಂಡವಳ, ಕೃಷಿ ಮತ್ತು ಜಲಶಕ್ತಿ, ಭೂಮಿಯ ಧೋರಣೆ, ನೀರಾವರಿ ಮತ್ತು ವಿದ್ಯುಚ್ಛಕ್ತಿ, ಸಾಮಾಜಿಕ ಅಭಿವೃದ್ಧಿ, ಕೈಗಾರಿಕೆ, ಗುಡಿ ಮತ್ತು ಸಣ್ಣ ಕೈಗಾರಿಕೆಗಳು, ಸಾರಿಗೆ ಸಂಪರ್ಕ, ಶಿಕ್ಷಣ, ಆರೋಗ್ಯ, ಗೃಹ ಯೋಜನೆ, ಕಾರ್ಮಿಕ ವರ್ಗ, ಹಿಂದುಳಿದವರ ಅಭಿವೃದ್ಧಿ, ಸಾಮಾಜಿಕ ರಕ್ಷಣೆ ಮತ್ತು ಪುನರ್ನಿವೇಶನ ಎಂಬ ಹದಿನೈದು ವಿಭಾಗಗಳನ್ನು ಮಾಡಿ, ಸಂಬಂಧಪಟ್ಟ ವಿವರಗಳನ್ನು ಕೊಡಲಾಗಿದೆ. ದ್ವಿತೀಯ ಯೋಜನೆಯ ಅಭ್ಯಾಸ ದೃಷ್ಟಿಯಿಂದ ಮತ್ತು ನಮ್ಮ ಯೋಜನೆಯ ಉದ್ದೇಶಗಳಿಗನುಸಾರವಾಗಿ ರಾಷ್ಟ್ರದುದ್ಧಾರಕ್ಕೆ ಶ್ರಮಿಸುವ ಸಲುವಾಗಿ ಈ ಚಿಕ್ಕ ಪುಸ್ತಕವು ಪ್ರಕಾಶನ ಯೋಗ್ಯವಾಗಿದೆ.

— ಗೋರಾ.

ಪಾಕಿಸ್ತಾನದ ಕುರುಡು ರಾಜಕಾರಣ—

ಕಾಶ್ಮೀರಪರ ಅಚಲಧೋರಣೆ!

ಶ್ರೀ. ಎಂ. ರಘುನಂದನ ರಾವ್

"ಭಾರತದ ನೆರೆರಾಷ್ಟ್ರವಾದ ಪಾಕಿಸ್ತಾನಕ್ಕೆ ದಿನಕ್ಕೊಂದು ಸರಕಾರ"ವೆಂಬುದು ಜಗತ್ತಿಗೇ ಮನೆ ಮಾತಾಗಿ ಬಿಟ್ಟಿದೆ! ಸುಮಾರು ಎರಡು ತಿಂಗಳ ಕಾಲದೊಳಗಿನ ಅವಧಿಯಲ್ಲಿ ಅಲ್ಲಿ ಎರಡು ಸರಕಾರಗಳು ಉರುಳಿ ಹೋದುವು. ಪ್ರಾಯಶಃ ನೆರೆರಾಷ್ಟ್ರವು ಸರಕಾರಗಳನ್ನುರುಳಿಸುವುದರಲ್ಲಿ ಜಾಗತಿಕ ದಾಖಲೆಯನ್ನೂ ಮುರಿಯುವುದೇನೋ! ಭಾರತದ ವಿಭಜನೆಯಾದಂದಿನಿಂದ ಇಂದಿನ ತನಕ ಅಲ್ಲಿ ಆರು ಸರಕಾರಗಳ ಆಳ್ವಿಕೆ ನಡೆದು, ಇದೀಗ ಏಳನೆಯ ಮಂತ್ರಿ ಸಂಪುಟ ಅಧಿಕಾರಾರೂಢವಾಗಿದೆ. ಇದರ ಭವಿಷ್ಯವನ್ನೂ ಬಲ್ಲವರಿಲ್ಲ.

ಅಲ್ಲಿ ಪ್ರಜಾಪ್ರಭುತ್ವ ಘೋಷಣೆಯಾಗಿದ್ದರೂ, ಪ್ರಜಾಧಿಪತ್ಯದ ಕುರುಹೇ ಕಾಣಿಸದಿರುವುದು—ಅಲ್ಲಿ ಭದ್ರ ಸರಕಾರವೊಂದು ನೆಲೆಗೊಳ್ಳದಿರಲು ಮುಖ್ಯ ಕಾರಣ. ಯಾವುದೇ ಒಂದು ರಾಷ್ಟ್ರದಲ್ಲಿ ಪ್ರಜಾಧಿಪತ್ಯ ನೆಲೆಸಬೇಕಾಗಿದ್ದಲ್ಲಿ ಜನಮತದ ಪ್ರತೀಕರಾಗಿರುವ, ಜನರಿಂದಲೇ ಚುನಾಯಿತರಾದ ಪ್ರತಿನಿಧಿಗಳಿಂದೊಡಗೂಡಿದ ಸರಕಾರ ಅತ್ಯಗತ್ಯ. ಆದರೆ ನೆರೆರಾಷ್ಟ್ರವೆಂದು ಈ ಮಾತಿಗೆ ಅಪವಾದವಾಗಿದೆ. ಸ್ವಾತಂತ್ರ್ಯ ದೊರಕಿ ವರುಷ ಹತ್ತು ಉರುಳಿದರೂ, ಅಲ್ಲಿ ಒಂದು ಚುನಾವಣೆಯನ್ನು ಕೂಡ ನಡೆಸಲಾಗಲಿಲ್ಲ. ಅಲ್ಲಿನ ಪ್ರಜೆಗಳ ಅಧಿಕಾರಗಳೆಲ್ಲವೂ ಅಧ್ಯಕ್ಷನ ಕೈಗಳಲ್ಲೇ ಸುರಕ್ಷಿತವಾಗಿವೆ! ಅಧ್ಯಕ್ಷನು ಸರ್ವಾಧಿಕಾರಿಯೆಂದರೂ ಸರಿಯೇ! ಅಲ್ಲಿ ಅಸ್ತಿತ್ವಕ್ಕೆ ಬಂದ ಸರಕಾರಗಳೆಲ್ಲವೂ ನಡೆಸುವ ದಬ್ಬಾಳಿಕೆಯಿಂದ ಜನತೆಯ ಮನ ಬೆಂದು ಹೋಗಿದೆ. ಮುಹಮ್ಮದೀಯರನ್ನುಳಿದು ಇತರ 'ಅಲ್ಪ ಸಂಖ್ಯಾಕರೆ'ಲ್ಲರೂ ಎರಡನೇ ವರ್ಗದ ಪ್ರಜೆಗಳು, ಅಲ್ಲಿನ ಸರಕಾರದ ದೃಷ್ಟಿಯಲ್ಲಿ. ಅಲ್ಲದೇ ಅಲ್ಪ ಸಂಖ್ಯಾಕರಿಗೆ ಸ್ವಾತಂತ್ರ್ಯದ ಭದ್ರತೆ ಕೂಡಾ ಇಲ್ಲ, ಅಲ್ಲಿ. ಹೀಗಾಗಿ ಜಾತೀಯತೆಯು ಆಳಕ್ಕೆ ಬೇರಿಳಿದು, ಹೆಮ್ಮರವಾಗಿ ಬೆಳೆದು ಬಿಟ್ಟಿದೆ. ಮಾತ್ರವಲ್ಲ, ಪಾಕಿಸ್ತಾನ ಸರಕಾರೀ ನೇತೃಗಳ ದುರಾಚಾರಗಳ ಫಲರೂಪವೋ ಎಂಬಂತೆ ಆ ರಾಷ್ಟ್ರಕ್ಕೆ ಹಲವಾರು ಸಮಸ್ಯೆಗಳ ಕಾಟ ಬೇರೆ!

ಪಾಕಿಸ್ತಾನದಲ್ಲಿ ಯಾವ ಸರಕಾರವೇ ಬರಲಿ, ಅದರ ಮುಖ್ಯ ಧೋರಣೆ ಭಾರತದ ಮೇಲೆ ಸಂಚುಕಾರುವುದು, ಭಾರತದ ಅವನತಿಯತ್ತ ಆಶಾ ದೃಷ್ಟಿಯಿಂದ ನೋಡುತ್ತಿರುವುದು. ಅಲ್ಲಿನ ಯಾವುದೇ ನಾಯಕನ ಲಕ್ಷ್ಯ ದೇಶದ ಬಡಜನರೆಡೆಗೆ ಹರಿಯದು; ಅಧಿಕಾರದ ಮೇಲೆಯೇ ಅವರ ದೃಷ್ಟಿ. ಅಧಿಕಾರದಾಹದಿಂದಲೇ ಪರಿತಪಿಸುತ್ತಿದ್ದಾರೆ, ಅಲ್ಲಿನ ನಾಯಕರು. ಆದರೆ ರಾಜಕಾರ್ಯಭಾರ ವಹಿಸಿಕೊಂಡು ಸುಗಮವಾಗಿ ಮುಂದಡಿಯಿಡುವುದಕ್ಕೆ ಯಾವನೂ ಸಮರ್ಥನಾಗಿಲ್ಲ. ಒಬ್ಬನ ಮೊಗ ಮೂಡು ದಿಕ್ಕಿಗಾದರೆ, ಇನ್ನೊಬ್ಬನದು ತದ್ವಿರುದ್ಧ: ಒಬ್ಬೊಬ್ಬನದು ಒಂದೊಂದು ಧೋರಣೆ. ಆದರೆ ಭಾರತದ ಮೇಲೆ ದಳ್ಳುರಿ ಕಾರುವ ವಿಷಯದಲ್ಲಿ ಮಾತ್ರ ಒಬ್ಬನಿಗಿಂತ ಒಬ್ಬನು 'ಶೂರ'ನಾಗಿದ್ದಾನೆ!

ಈಗಿನ ಏಳನೇ ಸರಕಾರದ ಪ್ರಧಾನಿಯಾಗಿರುವ ಮಲಿಕ್ ಫಿರೋಜ್ ಖಾನ ನೂನರು ಜಗತ್ತಿನಾದ್ಯಂತ ಸುಪ್ರಸಿದ್ಧ(?)ರೇ ಆಗಿದ್ದಾರೆ! ಕಾಶ್ಮೀರದ ಕುರಿತಾದ ಪಾಕಿಸ್ತಾನದ (ಒರಟು!) ಧೋರಣೆಯನ್ನು ಅತಿ ಸಮರ್ಥವಾಗಿ (?) ಭದ್ರತಾ ಸಮಿತಿಯಲ್ಲಿ ವಾದಿಸಿದ 'ಪಾಕಿಸ್ತಾನದ ಕಾಶ್ಮೀರ ವೀರ' (?) ನೆನಿಸಿಕೊಂಡ ಮಹಾನುಭಾವರಿವರು. ಬಣ್ಣ ಬದಲಾಯಿಸುವ ಪಾಕ್ ಸರಕಾರಗಳಲ್ಲೊಂದರ ನಾಯಕ, ಮಾಜಿ ಪ್ರಧಾನಿ ಹಸನ್ ಸುಹ್ರವರ್ದಿ ಒಂದು ಕಾಲದಲ್ಲಿ ಐಗುಪ್ತಕ್ಕೆ ತನ್ನ ಸಹಾನುಭೂತಿ ಸೂಚಿಸುತಿದ್ದಾಗ, ಐಗುಪ್ತದ ವಿರೋಧಿಯೆನಿಸಿದ ಇಸ್ರೇಲು "ಜೀವಿಸಲು ಜಗತ್ತಿನಲ್ಲಿ ಅಸ್ತಿತ್ವಕ್ಕೆ ಬಂದಿವೆ" ಯೆಂದು ಪ್ರಲಾಪಿಸಿದ್ದರಿವರು. ಇವರಷ್ಟು ಕಾಲ ಅಧಿಕಾರದಲ್ಲಿದ್ದವರು ಭಾರತ, ಪಾಕಿಸ್ತಾನಗಳೆರಡರಲ್ಲೂ ಇಲ್ಲವಂತೆ! ಆದುದರಿಂದ ಅಧಿಕಾರದ ಸವಿಯನ್ನು ಇವರು ತಿಳಿದೇ ಇರುವರೆಂಬುದು ನಿರ್ವಿವಾದ. ಅಧಿಕಾರಕ್ಕೆ ಹೋರಾಡುವುದು ಇವರ ಸಹಜ ಸ್ವಭಾವವೆಂಬುದರಲ್ಲಿ ಆಶ್ಚರ್ಯವಿಲ್ಲ. ತನ್ನ ಕುಯುಕ್ತಿಗಳಿಂದ ಮಿತ್ರರನ್ನು ಬೇಟೆಯಾಡಿ, ತನ್ನ ಬಗಲಿಗೆಳೆದುಕೊಳ್ಳುವುದರಲ್ಲಿ ಇವರು ಅಪ್ರತಿಮರು. ಕಾಶ್ಮೀರ ವಿವಾದದಲ್ಲಿ ಇವರಿಗೆ ತುಂಬಾ ಗೆಲುವು ದೊರಕಿದುದೇ ಇವರ 'ಅದ್ವಿತೀಯ ಕಲೆ'ಗೊಂದು ಯೋಗ್ಯ ನಿದರ್ಶನ. ಕಾಶ್ಮೀರ ಧೋರಣೆಯ ಕುರಿತಾದ ಇವರ ವಾದವು ಭಾರತದ ಮೇಲೆ ಅಲ್ಲಸಲ್ಲದ ಅಪವಾದಗಳ ಹಸಿಹಸಿ ಸುಳ್ಳಿನ ಕಂತೆಯಾಗಿದ್ದರೂ, ತನ್ನ ವಾದವೇ ಸತ್ಯಯುತವೆಂದು ಪ್ರಲಾಪಿಸಿ, 'ತಾನೇರಿದ ಕುದುರೆಗೆ ಮೂರೇ ಕಾಲು" ದು ಸಾಧಿಸಲೆತ್ನಿಸಿದ ಮಹನೀಯರಿವರು. ಇವರ ಆಡಳಿತೆಯಲ್ಲಿ ಇನ್ನೇನೇನು ಆಗಲಿರುವುದೋ ಕಾದು ನೋಡಬೇಕಷ್ಟೆ.

(೧೨ನೇ ಪುಟ ನೋಡಿರಿ)



ಕುಮಾರಿ ಬಿಳಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಹಾವಿನ ಹೆಡೆಯ ನೆರಳು

(೨ನೇ ಪುಟದಿಂದ)

ಬೇಕಿತ್ತು ಹಾಗೆ ಬಂದೆ” ಸುಶೀಲೆ ಕಾಲಿನಿಂದ ನೆಲವನ್ನು ಗೀರುತ್ತಾ ಹೇಳಿದಳು. “[illegible]ಗೋ!” ಎಂದು ನಕ್ಕ ಶ್ರೀಕಾಂತ ರಾಯ. ನೆಲ ನೋಡುತ್ತಾ ನಿಂತ ಸುಶೀಲೆಯ ಕೈಹಿಡಿದು ಒಳಬರ ಸೆಳೆದಪ್ಪಿ ಮುದ್ದಿಟ್ಟ. ಸುಶೀಲೆ ಹೇಗೆ ಹೇಗೋ ತಪ್ಪಿಸಿಕೊಂಡು ಓಡಿಹೋದಳು. ಅವನ ಆ ಬಗೆ ಅವಳು ಹುಡುಗಿಯೆಂದೆಣಿಸಿಕೊಂಡು ಅವಳ ಮಕ್ಕಳಿದ್ದ ಇತರರ ಬಗೆಗೆ 'ಯುವತಿ'ಯಾದ ಹದಿನೈದು ವರ್ಷದ ಹುಡುಗಿಯಾಗಿದ್ದಳು. ಅಂದಿನಿಂದ ಶ್ರೀಕಾಂತರಾಯನೊಡನೆ ಮಾತನಾಡುವುದೆಂದರೆ ಅವಳು ತಪ್ಪಿಸಿಕೊಳ್ಳುತ್ತಿದ್ದಳು. ಅವನೆಂದರೆ ಅವಳಿಗೆ ಸ್ವಲ್ಪ ಅಸಹ್ಯವೂ ಹುಟ್ಟಿತ್ತು. ಅವನ ಮನೆಯ ಕಡೆ ಹೋಗುವುದನ್ನು ಕಡಿಮೆ ಮಾಡಿದ್ದಳು. ಅವನ ಮುಖ ನೋಡಲೂ ಏನೋ ಒಂದು ರೀತಿಯ ಅಳುಕು ಹುಟ್ಟುತ್ತಿತ್ತು. ಒಂದು ಬಗೆಯ ಹೆದರಿಕೆಯೂ ಹುಟ್ಟುತ್ತಿತ್ತು. ಆದರೆ ತಾಯಿಯೊಡನೇನನ್ನೂ ಅವಳು ಹೇಳಿರಲಿಲ್ಲ. ಅವನೇಕೆ ಹಾಗೆ ವರ್ತಿಸಿದ?” ಎಂದೂ ಅವಳಿಗೆ ನಿಚ್ಚಳವಾಗಿ ತಿಳಿದಿರಲಿಲ್ಲ. ಶ್ರೀಕಾಂತ ರಾಯನಿಗೆ ಮಾತ್ರ ಆನಂದವಾಗಿತ್ತೇನೋ? ಆದರೆ ಅವನ ಬಯಕೆಯು ಬೆಂಕಿಗೆ ತುಪ್ಪವೆರೆದಂತಾಗಿ ಅತ ಸುಳಿವುದು ಹೆಚ್ಚಾಯಿತು. ಒಂದರೆ ಬಹಳ ಹೊತ್ತಿನ ವರೆಗೂ ಹರಟೆ ಹೊಡೆಯು ಕುಳಿತುಕೊಳ್ಳುತ್ತಿದ್ದ. ಸುಶೀಲಾ ಒಳಗಿಂದ ಹೊರಗೆ ಬರುತ್ತಿರಲಿಲ್ಲ. ಶ್ರೀಕಾಂತ ರಾಯ ಆಗಾಗ ಒಳಗಿಣುಕುತ್ತಿದ್ದ. ಆದರೆ ಅವನಿಗೆ ನಿರಾಶೆಯೂ ಆಗುತ್ತಿತ್ತು.

ಕೆಲವು ದಿನಗಳನಂತರ ಒಂದೆರಡು ಬಾರಿ ಯಾವುದೋ ಕೆಲಸಗಳಿಗಾಗಿ ಸುಶೀಲೆ ಶ್ರೀಕಾಂತ ರಾಯನಲ್ಲಿಗೆ ಹೋಗಬೇಕಾಯಿತು. ಒಮ್ಮೊಮ್ಮೆ ಅತ ಮನೆಯಲ್ಲಿರುತ್ತಿರಲಿಲ್ಲ. ಕೆಲವು ಬಾರಿ ಅವನ ಮುದಿ ತಾಯಿಯಿರುತ್ತಿದ್ದರು. ಅವನೇನಾದರೂ ಮಾತನಾಡಿದರೆ ಏನೋ ಉತ್ತರವಿತ್ತು ಬೇಗನೆ ಅಲ್ಲಿಂದ ಜಾರುತ್ತಿದ್ದಳು.

ಒಂದು ದಿನ ಮಧ್ಯಾಹ್ನ ಯಾವುದೋ ಕೆಲಸಕ್ಕಾಗಿ ಶ್ರೀಕಾಂತರಾಯನ ತಾಯಿಯಲ್ಲಿಗೆ ಶಾರದಮ್ಮ ಮಗಳನ್ನು ಕಳುಹಿದರು. ಸುಶೀಲೆ ಬಂದು ಹಜಾರದ ಒಳಹೊಕ್ಕಾಗ ಒಳಗೆ ಯಾರೂ ಇದ್ದಂತೆ ತೋರಲಿಲ್ಲ. ಅಲ್ಲಿ ಇಲ್ಲಿ ಹುಡುಕಿದಳು. ಆದರೆ ಶ್ರೀಕಾಂತ ರಾಯನ ತಾಯಿ ಕಾಣ ಸಿಗಲಿಲ್ಲ. ಒಳಗಿಂದ ತಿರುಗಿ ಹಜಾರಕ್ಕೆ ಬರುತ್ತಿರುವಾಗ, ಬಾಗಿಲಲ್ಲಿ ಶ್ರೀಕಾಂತ ರಾಯ ನಗುತ್ತಾ ನಿಂತಿದ್ದ. ಸುಶೀಲೆಗೆ ಹೆದರಿಕೆ ಹುಟ್ಟಿತು. ಸರ್ವಾಂಗ ಬೆವರಿತು. ‘ಅಂದಿನಂತೆ ಏನಾದರೂ ಮಾಡುವನೋ’ ಎಂದು ಗಾಬರಿಗೊಂಡಳು. ನಲುವತ್ತು ದಾಟಿದ ಅತ, ಹದಿನೈದ ವರ್ಷದ ಮಂಗಳಾಂಗಿಯಂತಿರುವ ಹುಡುಗಿಯ ಮೈ ಮುಟ್ಟಲು ಹೇಸುವವನಾಗಿರಲಿಲ್ಲ. ಅದಕ್ಕಾಗಿಯೇ ಇದುವರೆಗೆ ನಾಟಕವಾಡಿದ್ದ. ಈಗ ಸುಸಂಧಿ ದೊರೆತಂತಾಯಿತು. ಅವನ ಬಾಹುಪಾಶದಲ್ಲಿ ಸುಶೀಲಾ ಹುಡಿ ಹುಡಿಯಾದಳು. ಹೂವನ್ನು ಹಿಚುಕಿದಾಗ ಬಾಡುವಂತಾದಳು. ಆದರೆ ಆ ಬಂಧನದಿಂದ ಬಿಡಿಸಿಕೊಳ್ಳುವಂತಿರಲಿಲ್ಲ. ಮನೆಯಲ್ಲಿ ಯಾರೂ ಇರಲಿಲ್ಲ. ಬೊಬ್ಬೆ ಹೊಡೆದರೆ ಇನ್ನೂ ಅ ಧರ್ಮವೇ ಸರಿ. “ಬಿಡಿ. ನಿಮ್ಮಮ್ಮನ ಕಾಣಬೇಕು” ಎಂದು ಕೂಗಿಕೊಂಡಳು. ‘ಅದೇನು ಅಷ್ಟು ಅವಸರ? ನನ್ನಮ್ಮ ಈಗ ಬರುತ್ತಾರೆ” ಎಂದು ಶ್ರೀಕಾಂತರಾಯ ಅವಳನ್ನು ಇನ್ನೂ ಬಲವಾಗಿ ಹಿಡಿದುಕೊಂಡ. ಸುಶೀಲೆಗೆ ಏನೋ ಸಂಕಟವಾಯಿತು. ಅವನ ಕೈಗಳು ಅವಳ ದೇಹದ ಮೇಲೆಲ್ಲಾ ಹರಿದಾಡಿದವು. ತನ್ನ ಜೀವನವೇ ಭಂಗವಾಗುವ ಕಾಲ ಸನ್ನಿಹಿತವಾಯಿತೆಂದು ಸುಶೀಲೆ ಎಣಿಸಿದಳು. ಕಣ್ಣೀರಿಟ್ಟಳು, ಬೇಡಿಕೊಂಡಳು, ಆದರೆ ಪಶು ಆತ ಬಿಡಲಿಲ್ಲ. ಹೊರಗಿಂದ ಯಾರೋ ಕೂಗಿದಂತಾಯಿತು. ಶ್ರೀಕಾಂತರಾಯ ಥಕ್ಕನೆ ಕೈಬಿಟ್ಟ. ಸುಶೀಲಾ ಸುಧಾರಿಸಿಕೊಂಡು ಓಡಿಹೋದಳು. ಶ್ರೀಕಾಂತರಾಯನ ತಾಯಿ ಅಂಗಳದಿಂದ ಜಗಲಿಗೆ ಬರುತ್ತಲಿದ್ದರು. ಸುಶೀಲೆಯನ್ನು ನೋಡಿ ‘ಏನಮ್ಮ” ಎಂದರು. ಸುಶೀಲೆ ಮಾತ್ರ ಉತ್ತರವೀಯದೆ ಒಂದೇ ಉಸಿರಿಗೆ ಮನೆಗೋಡಿದಳು. ಅಷ್ಟಾದರೂ ತನ್ನ ಶೀಲ ಕಾಪಾಡಿದ ದೇವರಿಗೆ ಮನದಲ್ಲೇ ಕಣ್ಣೀರಿಡುತ್ತಾ ವಂದಿಸಿದಳು. ತಂದೆಯಂತಿದ್ದ ಮನುಷ್ಯ ಹೀಗಿರುವನೆಂದು ಅವಳೆಂದೂ ಯೋಚಿಸಿರಲಿಲ್ಲ. ಮೊದಲ ಬಾರಿಯೂ ಅವಳಲ್ಲಿ ಇಂತಹ ದೃಢ ಭಾವನೆ ಹುಟ್ಟಿರಲಿಲ್ಲ.

ಕಣ್ಣೀರು ಸುರಿಯುತ್ತಲೇ ಇತ್ತು. ಮನೆಗೆ ಮುಟ್ಟುವಾಗ ತುಂಬಾ ಆಯಾಸವಾಗಿತ್ತು. ತಾಯಿ ‘ಏನ?” ಎಂದು ಗಾಬರಿಯಾಗಿ ಕೇಳಿದಾಗ ದುಃಖ ಮರುಕಳಿಸಿತು, ಬಿಕ್ಕಿ ಬಿಕ್ಕಿ ಅತ್ತಳು. ಹೇಳದೆ ಇರುವಂತಿಲ್ಲ. ವಿಷಯ ಕಣ್ಣೆದುರು ಕಟ್ಟಿತ್ತು. ಹೇಳಿದಳು. ಶಾರದಮ್ಮನಿಗೆ ಸಿಡಿಲು ಬಡಿದಂತಾಗಿತ್ತು. ಮಗಳನ್ನೇ ಅವರು ಸಂತೈಸಿದರು, ಪರಿತಪಿಸಿದರು. ವಿಸ್ಮಯದಲ್ಲಿ ಅವರಿಗೆ ಕಣ್ಣೇ ಕಾಣದಂತಾಗಿತ್ತು. ಅವರ ಮನ ನೊಂದಿತು; ನೊಂದು ಸಿಡಿಯಿತು. ಶ್ರೀಕಾಂತರಾಯನ ವರ್ತನೆಗೆ ಹೇಸಿತು, ಕ್ರೋಧಭಾವ ತಳೆಯಿತು. ‘ಹೊನ್ನಿನ ಸರಿಗೆಯುಳ್ಳ ಕೃಷ್ಣ ಸರ್ಪ’ವೆಂದು ಅವರಿಗೀಗ ತಾನೇ ತಿಳಿಯಿತು.

ಒಂದೆರಡು ದಿನ ಕಳೆದಬಳಿಕ ಶ್ರೀಕಾಂತರಾಯ ಪುನಃ ಬಂದ. ಶಾರದಮ್ಮನ ಹೃದಯ ಕುದಿಯಿತು. ಅವರು ನಿಷ್ಠುರವಾಗಿ ಮಾತನಾಡಿದರು. ಧನಿಯಾದರೇನು? ಮಗಳನ್ನು ಮಾರುವಂತಿರಲಿಲ್ಲ. ಅಂತಹ ಹಕ್ಕು ಅವನಿಗೂ ಇರಲಿಲ್ಲ. ಅವನಿಗೂ ಅರ್ಥವಾಯಿತು. ನಾಯಿಯಂತೆ ಆತ ಹಿಂದಿರುಗಿದ. ಆದರೆ ಅವನ ಬಯಕೆಯು ಗಿಡ ಮರವಾಗಿತ್ತು. ಕಪಟ ನಾಟಕದಿಂದ ಬಲೆಗೆ ಬೀಳುವಂತಿರಲಿಲ್ಲ. ಆ ಕುಟುಂಬದ ಪಾವಿತ್ರ್ಯವನ್ನು ಹಾಳುಗೆಡಹುವಂತೆಯೂ ಇರಲಿಲ್ಲ. ಆದರೇನು? ಆತ ಧನಿಕ! ಹಣಕ್ಕೆ, ಹಸ್ತಕರಿಗೆ ಕೊರತೆಯಿರಲಿಲ್ಲ ಅವನಲ್ಲಿ. ಏನನ್ನೂ ಸಾಧಿಸಬಲ್ಲನಲ್ಲವೇ ಆತ?

ಕೃಷ್ಣಪಕ್ಷ ಆರಂಭವಾಗಿತ್ತು. ನಿಶ್ಶಬ್ದ, ನೀರವ, ಕಾಳರಾತ್ರಿ ಯಾರೋ ಕೆಲವರು ನದೀ ದಡದ ಅಶೋಕ ವೃಕ್ಷದಡಿಯಲ್ಲಿ ನಿಂತು ಏನೇನೊ ಮಾತನಾಡಿಕೊಂಡರು. ಸ್ವಲ್ಪ ಹೊತ್ತಿನಲ್ಲಿ, ತೆಂಗಿನ ತೋಟವನ್ನು ದಾಟಿ ಒಳಹೊಕ್ಕರು. ಕತ್ತಲೆಯಲ್ಲಿ ನೆರಳಿನಂತೆ ಕೆಲವು ಛಾಯೆಗಳು ಶಾರದಮ್ಮನ ಒಡ ಗುಡಿಸಲಿನ ಒಳಹೊಕ್ಕವು. ಅರೆಗಳಿಗೆಯಲ್ಲಿ ಅ[illegible] ಔಷಧವು ಎಲ್ಲರನ್ನೂ ನಿಶ್ಚೇಷ್ಟಿತರನ್ನಾಗಿ ಮಾಡಿತು.

ಮೂರ್ಛಾವಸ್ಥೆಯಲ್ಲಿಯೇ ಶ್ರೀಕಾಂತ ರಾಯ ತನ್ನ ಇಚ್ಛೆ ಪೂರೈಸಿಕೊಂಡ. ಅಷ್ಟು ಉತ್ಕಂಠಿತ ಪಶು ಆತನಾಗಿದ್ದ. ಅವನ ತೀಟೆ ತೀರಿತ್ತು. ಮರದಿನ ಕಣ್ಣು ತೆರೆದಾಗ ಸುಶೀಲೆಯ [illegible] ಮಾತ್ರ ಚಿತ್ರಸಂದಿತ್ತು. ಶ್ರೀಕಾಂತರಾಯನಿಗೆ ಸ್ವಲ್ಪ ಗಾಬರಿಯಾಯಿತು. ಆದರೆ ಅವನು ಸಿರಿವಂತನಾಗಿದ್ದ. ದೊಡ್ಡ ಗಾಬರಿಯೇನೂ ಇರಲಿಲ್ಲ. ಶ್ರೀಕಾಂತರಾಯ ವಿ[illegible]ಟ ನಗೆನಕ್ಕ. ಹಸ್ತಕರಿಗೇನನ್ನೋ ಆಜ್ಞಾಪಿಸಿದ. ಕೆಲವರು ದೃಢಕಾಯ ವ್ಯಕ್ತಿಗಳು ಸೇರಿ, ಸುಶೀಲೆಯ ಮೃತದೇಹವನ್ನು ಹೊತ್ತರು. ಅಶೋಕ ವೃಕ್ಷದಡಿಗೆ ಬಂದು ನಿಂತು ಸುತ್ತಲೂ ನೋಡಿದರು. ಆ ಭಯಂಕರ ಕಾಳ ರಾತ್ರಿಯಲ್ಲಿ ಯಾವ ಸದ್ದೂ, ಯಾರ ಸುದ್ದಿಯೂ ಇರಲಿಲ್ಲ. ಆ ಅಶೋಕ ವೃಕ್ಷ ಮತ್ತು ಹಾವುಗಲ್ಲುಗಳು ಮಾತ್ರ ಸಾಕ್ಷೀಭೂತವಾಗಿ ನಿಂತಿದ್ದುವು. ಅವರೆಲ್ಲರೂ ಸೇರಿ ಆ ನಿರ್ಜೀವ ವಸ್ತುವನ್ನು ನದಿಗೆ ಹೊತ್ತು ಹಾಕಿದರು.

ಆದರೆ ಅದನ್ನು ಹೊತ್ತು ದೂರ ಸಾಗಿಸುವ ಶಕ್ತಿ ನದಿಗೂ ಇರಲಿಲ್ಲವೇನೋ? ಆ ಪವಿತ್ರ ವಸ್ತು ಎಲ್ಲೋ ಉಳಿದು ಕೊಂಡಿತು.

ಮರುದಿನ . .

“ಯಾಕೋ ಏನಾಗಿತೋ? ಸುಶೀಲಾ ಆತ್ಮಹತ್ಯೆ ಮಾಡಿಕೊಂಡಳಂತೆ. ಅಯ್ಯೋ, ಪಾಪ” ಎಂದು ಹಲವು ತರಗಳು ಉದ್ಗರಿಸಿದವು.

.. ಹಾವು ಗಲ್ಲಿಗ ಬಾಯಿ [illegible]ತ್ತಿದ್ದರೆ-

ಅಮೆರಿಕೆಯ ಅಧ್ಯಕ್ಷ ಐಸನ್ ಹಾವರರಿಂದ ವಿಜ್ಞಾನ ಮತ್ತು ತಾಂತ್ರಿಕ ವಿಭಾಗಗಳ ವಿಶೇಷ ಸಹಾಯಕರಾಗಿ ನಾಮಕರಣ ಮಾಡಲ್ಪಟ್ಟ ಡಾ ಜೇಮ್ಸ್ ಆರ್. ಕಿಲಿಯನ್

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

ನಿರಖು ಠೇವಣಾತಿ

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರಂಟ್ ಎಕೌಂಟು		½%

The Moolky Bank, Ltd.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ ಕೆ.ಎಲ್ ಐತಾಳ, ಎಂ ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್ ಎಲ್ ಬಿ)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ

ಪ್ರತಿಗಳು ಸಿಗುವ ಸ್ಥಳ

ನವಭಾರತ ಪುಸ್ತಕ ಭಂಡಾರ,

ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮ—

ಮಾತೃಭಾಷೆಯೊಂದಿಗೆ ರಾಷ್ಟ್ರಭಾಷಾಧ್ಯಯನ

ಈ ಮಾತು ಹಳೆಯದೇನಲ್ಲ. ಸನ್ ೧೯೫೨ನೆ ಇಸವಿಯ ಚುನಾವಣಾ ಕಾಲದ ಕಥೆ. ಉತ್ತರ ಪ್ರದೇಶದ ಒಂದು ಗ್ರಾಮೀಣ ವೃದ್ಧ ಮಹಶನು ಮತದಾನ ಮಾಡುವುದಕ್ಕಾಗಿ ಚುನಾವಣಾ ಸ್ಥಳಕ್ಕೆ ಬಂದುಮುಟ್ಟಿದ. ಅವನೊಬ್ಬ ಕಾಂಗ್ರೆಸ್ ಸದಸ್ಯನಿದ್ದಾನೆ, ಅಲ್ಲದೆ ತನ್ನ ಜೀವನಮಾನವನ್ನೇ ಗಾಂಧೀಜೀಯವರ ಆದರ್ಶಗಳಿಗಾಗಿ ಮೀಸಲಿಟ್ಟವನಿದ್ದಾನೆ.

ಮಹಶನು ಬೇರೆ ಬೇರೆ ಚುನಾವಣಾ ಪ್ರಾರ್ಥಿಗಳ ಪೆಟ್ಟಿಗೆಗಳನ್ನಿಟ್ಟಿದ್ದ ಸ್ಥಳಕ್ಕೆ ಬಂದಿದ್ದ. ತನ್ನ ಮತವನ್ನು ಯಾವುದಾದರೂ ಒಂದು ಪೆಟ್ಟಿಗೆಗೆ ಅಲ್ಲಿ ಹಾಕಬೇಕಾಗಿ ಬಂದಿತ್ತು. ಕಾಂಗ್ರೆಸ್‌ನ ಸದಸ್ಯನಾದುದರಿಂದ, ಅವನಿಗೆ ಕಾಂಗ್ರೆಸ್ಸಿಗೆ ಮತ ಕೊಡಬೇಕಾಗಿತ್ತು, ಆದರೆ ಪೆಟ್ಟಿಗೆಯ ಮೇಲೆ ದೃಷ್ಟಿ ಹಾಯಿಸುವಾಗ, ಅವನಿಗೆ ಒಂದರಮೇಲಿನ ಬಿಲ್ಲು ಬಾಣಗಳ ಚಿಹ್ನೆ ಕಣ್ಣಿಗೆ ತೋರಿತು.

ಮಹಶನಿಗೆ ರಾಮನ ಧನುಸ್ಸಿನ ಜ್ಞಾಪಕವಾಯಿತೊ ಏನೋ ಯಾರು ಬಲ್ಲರು? ಹಿಂದೊಮ್ಮೆ ರಾಮ ಲೀಲೋತ್ಸವದಲ್ಲಿ ಸಾಕಷ್ಟು ಕಷ್ಟಪೂರ್ಣವಾಗಿ ಅವನು ರಾಮದನುಸ್ಸಿನಿಂದ ಬಿಡಲ್ಪಟ್ಟ ಒಂದು ಬಾಣವನ್ನು ಪಡೆಯುವುದರಲ್ಲಿ ಸಫಲನಾಗಿದ್ದ. ಅವನು ಆ ಬಾಣವನ್ನು ಅತ್ಯಂತ ಜಾಗ್ರತೆಯಾಗಿ ತನ್ನ ಸ್ವಂತ ಕೋಣೆಯ ಗೋಡೆಯ ಮೇಲೆ ತೂಗು ಹಾಕಿದ್ದ; ಹೆಚ್ಚು ಆಲೋಚಿಸಲು ಸಮಯವಿಲ್ಲದುದರಿಂದ, ಅವನು ರಾಮನ ಸ್ಮರಣೆ ಬಂದು ಬಿಟ್ಟು, ಆ ಪೆಟ್ಟಿಗೆಯೊಳಗೆ ತನ್ನ ಮತ ಪತ್ರವನ್ನು ಹಾಕಿ ಹೊರ ಬಂದ.

ಈ ಘಟನೆಯೊಂದು ಕಾಲ್ಪನಿಕವಾದುದಲ್ಲ.

ಸನ್ ೫೨ ಮತ್ತು ೫೭ರ ಚುನಾವಣೆಗಳಲ್ಲಿ ಇಂತಹ ಘಟನೆಗಳಿಗೆ ಅಭಾವವಿಲ್ಲ. ಶಿಕ್ಷಣದ ಕೊರತೆಯೇ ಈ ಎಲ್ಲ ಪ್ರಸಂಗಗಳಿಗೆ ಕಾರಣವಾಗಿದೆ. ಜನರು ಅಶಿಕ್ಷಿತರಾಗಿರುತ್ತಾರೆ, ಬದಲಾಗುತ್ತಿರುವ ಜಗತ್ತನ್ನು ಅರ್ಥಮಾಡಿಕೊಳ್ಳಲು ಅವರಿಗೆ ಅಸಾಧ್ಯವಾಗಿ ಪರಿಣಮಿಸುತ್ತದೆ.

ಇಂದು ಜನರು ಕೋಟಿಗಟ್ಟಲೆಯಲ್ಲಿ ಅಶಿಕ್ಷಿತರಾಗಿರುತ್ತಾರೆ. ನಮ್ಮ ಶಿಕ್ಷಣ ಪೆಟ್ಟವು ಬಹಳ ತುಟ್ಟಿಯಾಗಿರುವುದೇ ಇದರ ಮೂಲ ಕಾರಣ. ಉಚ್ಚ ಶಿಕ್ಷಣದ ಮಾತಂತೂ ದೂರವಿರಲಿ. ಪ್ರಾಥಮಿಕ ಶಿಕ್ಷಣವು ಸಹ ಬಾಂಡದ ಮಕ್ಕಳಿಗೆ ದೊರೆಯುವುದು ಕಠಿನವಾಗಿರುತ್ತದೆ. ಯಾರು ಇದನ್ನು ಪಡೆಯುತ್ತಾರೋ ಅವರು ಸಾಕಷ್ಟು ಹಣಕೊಟ್ಟು ಅದನ್ನು ಪಡೆದುಕೊಳ್ಳಬೇಕಾಗಿದೆ.

ನ್ಯಾಯದೃಷ್ಟಿಯಿಂದ, ಒಂದು ಪ್ರಜಾರಾಜ್ಯದಲ್ಲಿ ಕಡ್ಡಾಯ ಮತ್ತು ನಿಶ್ಶುಲ್ಕ ಶಿಕ್ಷಣದ ಪ್ರಸಾರವು ಅವಶ್ಯಕ ಮತ್ತು ಹಿತಕಾರಿಯೆನಿಸಿದೆ. ಪ್ರಜಾತಂತ್ರಕ್ಕಾಗಿ ವ್ಯಕ್ತಿಯ ಸ್ವಾಧೀನತೆಯೊಂದಿಗೇನೇ ವ್ಯಕ್ತಿತ್ವದ ನಿರ್ಮಾಣವಾಗುವುದೂ ಅಗತ್ಯವಾಗಿದೆ. ವ್ಯಕ್ತಿತ್ವದ ನಿರ್ಮಾಣವು ಶಿಕ್ಷಣದ ಮಾಧ್ಯಮದಲ್ಲಿಯೇ ನಡೆಯಬಲ್ಲುದು. ಒಂದು ಪ್ರಜಾಪ್ರಭುತ್ವದಲ್ಲಿ ಜನರು ಅಶಿಕ್ಷಿತರಾಗಿದ್ದರೆ, ಮಕ್ಕಳಿಗೆ ಶಿಕ್ಷಣ ದೊರೆಯುವುದರಲ್ಲಿ ಅಡೆತಡೆಗಳಿದ್ದರೆ, ಆಗ, ಆ ದೇಶದಲ್ಲಿ ವ್ಯಕ್ತಿ ಸ್ವಾಧೀನತೆ, ಸಂಸತ್, ಪರಿಷತ್, ನಿರ್ಮಾಣಕಾರ್ಯ, ಅದರ ಕಾನೂನು ಕಾಯದೆ ಮೊದಲಾದುವೆಲ್ಲವೂ ವ್ಯರ್ಥ. ಅಂತಹ ಆಡಳಿತೆಯನ್ನು ನಾವು 'ಲೋಕತಂತ್ರ ಶಾಸನ'ವೆಂದು ಕರೆಯುವುದು ಅನ್ಯಾಯವಾಗುವುದು.

ನಮ್ಮ ದ್ವಿತೀಯ ಯೋಜನೆಯಲ್ಲಿ ಪ್ರಥಮ ಯೋಜನೆಯ ವೆಚ್ಚಕ್ಕಿಂತ ಸಾಮಾನ್ಯ ಇಮ್ಮಡಿಯಷ್ಟನ್ನು ಶಿಕ್ಷಣಕ್ಕಾಗಿ ಇಡಲಾಗಿದೆ. ಸಂವಿಧಾನಕ್ಕನುಸಾರವಾಗಿ ೧೯೬೦ರ ಅಂತ್ಯದಲ್ಲಿ ೧೪ ವರ್ಷದ ಪ್ರತಿಯೊಂದು ಮಗುವಿಗೂ ನಿಶ್ಶುಲ್ಕ ಮತ್ತು ಅನಿವಾರ್ಯ ಶಿಕ್ಷಣ ಕೊಡುವ ಗುರಿಯು ಭಾರತ ಸರಕಾರದ ಸಂಮುಖವಿದೆ. ಆದರೆ, ಈ ಉದ್ದೇಶವು ಪೂರ್ಣವಾಗುವುದಿಲ್ಲ. ೧೯೬೧ರ ಅಂತ್ಯದಲ್ಲಿ ೬ರಿಂದ ೧೧ ವರ್ಷದ ಪ್ರಾಯದ ಮಕ್ಕಳಲ್ಲಿ ಸೇಕಡಾ ೬೩ ಮತ್ತು ೧೧ರಿಂದ ೧೪ ವರ್ಷ ಪ್ರಾಯದ ಮಕ್ಕಳಲ್ಲಿ ಅದಕ್ಕಿಂತ ಕಡಿಮೆ ಶಿಕ್ಷಣವು ದೊರೆಯಬಹುದು. ಅಂತೂ ಈ ಅಂಕೆಗಳಿಗಿಂತ ಹೆಚ್ಚಿಗೆಂದೂ ಹೋಗಲಾರದು.

ಯದ್ಯಪಿ, ನಮಗೆ ಸರಕಾರದ ತಲೆಯ ಮೇಲೆ ಪ್ರಾಥಮಿಕ ಶಿಕ್ಷಣದ ಹೊರೆ ಮಾತ್ರವಿದೆಯೆಂದು ನಾವು ತಿಳಿಯಬಾರದು. ಸರಕಾರಕ್ಕೆ ಮಾಧ್ಯಮಿಕ ಶಿಕ್ಷಣ, ಕೃಷಿ ಶಿಕ್ಷಣ, ವಿಶ್ವವಿದ್ಯಾಲಯ ಶಿಕ್ಷಣ, ಪ್ರಾವಿಧಿಕ ಶಿಕ್ಷಣ, ಸಮಾಜ ಶಿಕ್ಷಣ ಮೊದಲಾದುವೆಲ್ಲಕ್ಕೂ ವ್ಯವಸ್ಥೆ ಮಾಡಬೇಕಾಗುತ್ತದೆ ಮತ್ತು ಸರಕಾರವು ಈಗ ಮಾಡುತ್ತಲೂ ಇದೆ.

ಸರಕಾರವು ಪ್ರಾಥಮಿಕ ಶಿಕ್ಷಣ ಪ್ರಸಾರದ ಸಮಸ್ತ ಭಾರವನ್ನು ಬೇರೆಬೇರೆ ರಾಜ್ಯಗಳ ಸರಕಾರಕ್ಕೆ ಬಿಟ್ಟುಕೊಡಬಾರದು. ಈ ದಿನಗಳಲ್ಲಿ ತಮ್ಮ ಆಯದಲ್ಲಿನ ಕೆಲವೇ ಪ್ರತಿ ಶತಗಳನ್ನು ಶಿಕ್ಷಣ ವಿಭಾಗದಲ್ಲಿ ವೆಚ್ಚ ಮಾಡುವ ರಾಜ್ಯ ಸರಕಾರಗಳಿರುತ್ತವೆ. ಶಿಕ್ಷಣ ಪ್ರಸಾರ ಕಾರ್ಯವನ್ನು ಹೆಚ್ಚಿಸುವುದಕ್ಕಾಗಿ ಅಧಿಕ ವ್ಯಯವಾಗುವುದರಿಂದ, ಈ ಖರ್ಚನ್ನು ಹೊಂದಿಸಿಕೊಳ್ಳಲು ರಾಜ್ಯಸರಕಾರಗಳು ಕರವನ್ನೇರಿಸಿದರೆ, ಅವುಗಳಿಂದ ಹಲವಾರು ಸಂಕಷ್ಟಗಳು ಒದಗಿ ಬರುವುವು. ಆರ್ಥಿಕ ದೃಷ್ಟಿಯಿಂದ ಹೆಚ್ಚಿನ ರಾಜ್ಯಗಳು ಇದು ತನಕವೂ ಹಿಂದುಳಿದಿರುವುವು.

ಒಂದುಕಡೆ ಪ್ರಾಥಮಿಕ ಶಿಕ್ಷಣ ಶಾಲೆಗಳಲ್ಲಿ ಶಿಕ್ಷಣ ಮಾಧ್ಯಮವೇನಾಗಿರಬೇಕೆಂಬುದೂ ಒಂದು ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಬಗೆಹರಿಸಲು, ಪ್ರಾಂತೀಯತೆಯ ಭಾವನೆಯನ್ನು ಬಿಟ್ಟುಕೊಟ್ಟು ವೈಜ್ಞಾನಿಕ ಮತ್ತು ನಿರಪೇಕ್ಷ ದೃಷ್ಟಿಕೋಣವನ್ನು ಸ್ವೀಕರಿಸಬೇಕೆನ್ನುವವರೂ ಇದ್ದಾರೆ. ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಆ ರಾಜ್ಯದ ಭಾಷೆ ಅಥವಾ ಮಾತೃಭಾಷೆಯ ಮೂಲಕವಾಗಿ ಈಗ ಶಿಕ್ಷಣವು ಕೊಡಲ್ಪಡುತ್ತಿದೆ.

ಹಿಂದಿಯ ಪ್ರಶ್ನೆಯಲ್ಲಿ ಮತಭೇದಗಳು ಬಂದುಬಿಟ್ಟಿವೆ. ಹಿಂದಿಯ ಸಾಹಿತ್ಯವು ಎಲ್ಲವುಗಳಿಗಿಂತ ಅಧಿಕ ಸಮೃದ್ಧವಾಗಿರುವುದರಿಂದ ಅದನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲಾಗಿದೆ. ಭಾರತದ ಅಧಿಕ ಜನರು ಅದನ್ನು ಆಡಲೂ ತಿಳಿಯಲೂ ಅರಿತಿರುವುದರಿಂದ ಅದು ಆ ಸ್ಥಾನಕ್ಕೇರಿರುತ್ತದೆ. ನಮಗೆ ವಿಭಿನ್ನ ಪ್ರಾಂತ್ಯಗಳ ಸಂಸ್ಕೃತಿ ಮತ್ತು ಅನ್ಯ ವಿಷಯಗಳಲ್ಲಿ ಸಂಯೋಗವನ್ನು ಸ್ಥಾಪಿಸಬಲ್ಲ ಒಂದು ಭಾಷೆಯನ್ನು ಅರಿಸುವುದು ಅಗತ್ಯವಿತ್ತು. ಪಾಶ್ಚಾತ್ಯ, ಪೌರ್ವಾತ್ಯ, ದಾಕ್ಷಿಣಾತ್ಯ, ಮತ್ತು ಔತ್ತರೇಯ ಪ್ರಾಂತ್ಯಗಳ ಜನರು ಒಟ್ಟಿಗೆ ಕಲೆತು ಒಬ್ಬರಿನ್ನೊಬ್ಬರನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ಒಂದು ರಾಷ್ಟ್ರಭಾಷೆಯು ಅಗತ್ಯವಾಗಿದೆ. ಹಿಂದಿಯು ಅಂತಹ ಒಂದು ಗುದ್ದುಗೆಗೆ ಏರಬಹುದು. ಹೀಗಾದ ಸಂದರ್ಭದಲ್ಲಿ ಪ್ರತಿ ಭಾರತೀಯ ಮಗುವಿಗೂ ಪ್ರಾರಂಭಿಕ ಶಿಕ್ಷಣವು ಮಾತೃ ಭಾಷೆಯಲ್ಲಿ ನಡೆಯುವಾಗ ಹಿಂದಿಯನ್ನೂ ಕಲಿಸಿದಲ್ಲಿ ದೇಶದಲ್ಲಿ ಏಕತೆ ಮತ್ತು ಸಾಂಸ್ಕೃತಿಕ ಮಿಲನಗಳಿಗೆ ಲಾಭದಾಯಕವಾಗುವುದು. ಅದುದರಿಂದ, ಭಾರತದ ರಾಷ್ಟ್ರ ಭಾಷೆ ಯಾವುದು ಎಂಬುದನ್ನು ನಿರ್ಧಾರಕ್ಕೆ ತಾರದ ಹೊರತು ಶಿಕ್ಷಣ ಕ್ಷೇತ್ರದಲ್ಲಿ ದೃಷ್ಟಿಕೋಣ ಬದಲಾಗುವಂತಿಲ್ಲ. ದೇಶದ ಒಕ್ಕಟ್ಟಿಗಾಗಿ ಒಂದು ಭಾಷೆಯನ್ನು ಎಲ್ಲರೂ ರಾಷ್ಟ್ರ ಭಾಷೆಯೆಂದು ಗೌರವಿಸಬೇಕು. ಅದಾವ ಭಾಷೆಯೆನ್ನೆಂದು ಜನತೆ ಹೇಳಬೇಕು.

ಕಾಶ್ಮೀರಪರ ಅಚಲ ಧೋರಣೆ

(೧ನೇ ಪುಟದಿಂದ)

ಸರ್ವಸಾಮಾನ್ಯವಾಗಿ ಪಾಕಿಸ್ತಾನದ ಸರಕಾರಗಳ ವೈಶಿಷ್ಟ್ಯವೆಂದರೆ— "ಭಾರತದೊಡನೆ ಸ್ನೇಹ ಬೆಳೆಸಲು ನಾವು ಆತುರಪಡುತ್ತಿದ್ದೇವೆ"ಂದು ಬಡಬಡಿಸಿ, ಭಾರತ ದೇಶದ ಮೇಲೆಯೇ ಧಾಳಿನಡೆಸಲೆತ್ನಿಸಿ, ಬೇರೊಂದನ್ನೇ ಕಾರ್ಯರೂಪಕ್ಕೆ ತರುವುದು' ಎಂತಹ ಅವಿವೇಕವಿದು! ಸ್ನೇಹ ಬಯಸುವವರಿಂದಾದರೂ ಮಿತ್ರರ ಆಕ್ರಮಣ ನಡೆಸುವರೇ? ಮೈತ್ರಿಯೆಂದರೆ ಆಕ್ರಮಣವೇ? ಆಕ್ರಮಣವೇ ಮೈತ್ರಿಯೆಂದೆಣಿಸಿದಂತಿದೆ, ಪಾಕಿಸ್ತಾನ! ಪಾಶ್ಚಾತ್ಯರೊಡನೆ ಸೇನಾ ಒಪ್ಪಂದಗಳನ್ನು ಮಾಡಿಕೊಂಡು, ಅವರ ತಾಳಕ್ಕೆ ಸರಿಯಾಗಿ ಲಾಗಹಾಕುವ ಕೀಲುಗೊಂಬೆಯಾಗಿದೆ ಪಾಕಿಸ್ತಾನ—ಭಾರತವನ್ನು ಸೇನಾಶಕ್ತಿಗಳಿಂದ ಮುತ್ತುವರಿಯಬೇಕೆಂಬುದು ಇವುಗಳ ಉದ್ದೇಶವಾದರೂ, ಸ್ವರಕ್ಷಣೆಯ ನೆಪವನ್ನೊಡ್ಡುತ್ತಿದ್ದಾರೆ, ಪಾಕ್ ನಾಯಕರು. ಇವರ ಇಂತಹ ಅರ್ಥಹೀನ ವರ್ತನೆಗಳಿಗೇನೆನ್ನಬೇಕೋ ಅರಿಯದಾಗಿದೆ.

ಇಂತಹ ವರ್ತನೆ ಹಾಗೂ ಆಚರಣೆಗಳು ಪಾಕಿಸ್ತಾನಕ್ಕೇ ಕ್ಷೇಮಕರವಾಗುವಂತಿಲ್ಲ; ಅವು ಅವರ ವಿನಾಶಕ್ಕೇ ಕಾರಣವಾಗುವವೇ ಹೊರತು, ಅನ್ಯರನ್ನೇನೂ ಪೀಡಿಸಲಾರವು. ಹಾಗೂ ಭಾರತದ ವಿಚಾರದಲ್ಲಿ ಇಂತಹ ಅಸಹನೆಯಿದ್ದಲ್ಲಿ ಭಾರತವೆಂದೂ ಅದನ್ನು ಗಣಿಸುವಂತಿಲ್ಲ, ಹಾಗೂ ಅನ್ಯರ ಬೆದರಿಕೆಗಳಿಗೆಂದೂ ಭಾರತೀಯರು ಮಣಿಯುವವರಲ್ಲ. ಆದರೆ, ಮಿಂಚಿಹೋದುದನ್ನು ಚಿಂತಿಸಿಕೊಂಡು, ತಮ್ಮ ಅಕೃತ್ಯಗಳಿಗೆ ಪಶ್ಚಾತ್ತಾಪಪಟ್ಟು, ಪಾಕಿಸ್ತಾನವು ಭಾರತದೊಡನೆ ನಿಜವಾದ ಸ್ನೇಹ ಬೆಳೆಸಲು ಮುಂದಾಗಲಿ! ಇಂದಿನ ಸರಕಾರವಾದರೂ ಭಾರತೀಯರ ಈ ಹಂಬಲವನ್ನೀಡೇರಿಸಿಕೊಡುವುದೇ?

ನವೀನ ಕಾದಂಬರಿ! ಇದೀಗ ಪ್ರಕಟವಾಗಿದೆ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ., ಎಲ್‌ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಾಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No 466 N/50 date 2-12-1950 of the Director of public Instruction Madras·

Edited, Printed & Published by K H. Shetty, at the Navayuga press, Udipi S. India

Licensed to Post without Prepayment.

ನವಯುಗ

ಸಂಪುಟ ೩೭ 9—1—1958 ಸಂಚಿಕೆ ೧೮

VOL. 37 NO. 18

ಶ್ರೀ ಕ್ಷೇತ್ರ ಪರಿಚಯ—

ಉಡುಪಿ ಹೇಗೆ ಬೆಳೆಯಿತು?

ಶ್ರೀ ಎಸ್. ಗೋಪೀಚಂದರಾವ್

ಉಡುಪಿ ಶ್ರೀಕೃಷ್ಣ

ಕೇವಲ ಕ್ಷುಲ್ಲಕವೆನಿಸಿದ ಸಂಗತಿಗಳೇ ಕಾಲವಶದಿಂದ ಘನವಾಗಿ ಪರಿಣಮಿಸುವುದುಂಟು, ಕಿಡಿ ಸಣ್ಣದಾದರೂ ವನವನ್ನು ಸುಡುವ ದಾವಾಗ್ನಿಯಾಗುವುದಿಲ್ಲ, ಹಾಗೆ ಒಂದು ಮಳೆಗಾಲದ ಸಮಯದಲ್ಲಿ ೧೩ನೆಯ ಶತಮಾನದ ದಿನ ಮಧ್ಯಮ ಪ್ರಾಯದ ಓರ್ವ ಪಂಡಿತ ಒಂದು ಕಾವಿ ವರ್ಣದ ಶಲ್ಲೆಯನ್ನು ಧರಿಸಿ ಅರಬಿ ಸಮುದ್ರದ ಕಿನಾರೆಯೊಂದೆಡೆಯಲ್ಲಿ ಸ್ನಾನಮಾಡುತ್ತ ಇದ್ದ. ನೀರಿನಲ್ಲಿ ಮುಳುಗು ಹಾಕಿ ಎದ್ದೊಡನೆಯೇ ಒಂದು ಸಣ್ಣ ದೋಣಿಯನ್ನೂ ಅದರ ನಾವಿಕನು ಮುನ್ನುಗ್ಗಿ ಮುಳುಗಿಸುತ್ತಿರುವ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಾಗಿ, ಅದರಿಂದ ಪಾರಾಗಲು ಅಶಕ್ತನಾಗಿ ಅಸಹಾಯಕ ಸ್ಥಿತಿಯಲ್ಲಿರುವುದನ್ನು ಅವನು ಕಂಡನು. ದಯಾವಂತನಾದ ಆ ಬ್ರಾಹ್ಮಣನಲ್ಲಿ ದೋಣಿಯ ನಾವಿಕನಿಗೆ ಸಹಾಯ ಮಾಡಬೇಕೆಂಬ ಇರಾದೆ ಉದ್ಭವಿಸಿತು. ತನ್ನ ಕಾವಿಬಟ್ಟೆಯನ್ನು ಕೈಯಲ್ಲಿ ಎತ್ತಿ ಅದನ್ನು ಹಿಂಡಿ, ಗಾಳಿಯಲ್ಲಿ ಆರಲು ಎತ್ತಿ ಹಿಡಿಯುವಂತೆ ಎತ್ತಿ ಬಿಡಿಸಿ ಹಾರಿಸಲು ಪ್ರಾರಂಭಿಸಿದನು. ಅದೇ ಸಮಯದಲ್ಲಿ ದೋಣಿಯೂ ಬಿರುಗಾಳಿಯಿಂದ ರಕ್ಷಿತವಾಯಿತು. ನಾವಿಕನು ದಡದತ್ತ ದೋಣಿಯನ್ನು ಬಿಟ್ಟನು. ಕಾವಿ ಬಟ್ಟೆಯನ್ನು ಹರಡಿಸಿ, ಬಲುಗಾಳಿಯಿಂದ ಪೀಡಿತವಾಗಿ ಮುಳುಗುತ್ತಿದ್ದ ಆ ದೋಣಿಯನ್ನು ಸುರಕ್ಷಿತವಾಗಿ ಸಮುದ್ರ ಕಿನಾರೆಗೆ ಬರುವಂತೆ ಮಾಡಿದ ಬ್ರಾಹ್ಮಣನೇ ದ್ವೈತ ತತ್ತ್ವ ಶಾಸ್ತ್ರದ ಪಂಡಿತರಾದ ಶ್ರೀ ಮಧ್ವಾಚಾರ್ಯರು.

ಕೃತಜ್ಞತಾ ಭಾವದಿಂದ ಪರಿಪೂರ್ಣನಾಗಿದ್ದ ನಾವಿಕನು ತನಗೆ ಮಾತ್ರವಲ್ಲ, ಜಗತ್ತಿಗೇ ತಿಳಿಯದೆಯಿಂತಹ್ಯ ವಿಧಾನಗಳಿಂದ, ತನ್ನ ದೋಣಿಯಿಂದ ಯಾವುದಾದರೂ ವಸ್ತುವನ್ನು ತನಗೆ ಮಾಡಿದ ಸಹಾಯದ ನೆನಪಿಗಾಗಿ ಸ್ವೀಕರಿಸಬೇಕೆಂಬುದಾಗಿ ಬಹುವಿಧವಾಗಿ ಪ್ರಾರ್ಥಿಸಿದನು. ಮಧ್ವಾಚಾರ್ಯರಂಥ ಪಂಡಿತರು ಎಂತಹ ವಸ್ತುವಿನಲ್ಲಿ ಆಸಕ್ತರಾಗಿದ್ದಾರು? ದೋಣಿಯಲ್ಲಿ ತುಂಬಿದ್ದ ವ್ಯಾಪಾರಕ್ಕಾಗಿ ತಂದ ಸಾವಿರಾರು ಒಡವೆ ವಸ್ತುಗಳಲ್ಲಿ ಮಧ್ವಾಚಾರ್ಯರಂತಹ ಮಹಾತ್ಮರು ಯಾವುದನ್ನು ಅಭಿರುಚಿಯಿಂದ ಆರಿಸಬೇಕು? ಮೊತ್ತಮೊದಲಿಗೆ ಅವನಿಂದ ಯಾವುದೇ ಸಾಮಾನನ್ನು ಪಡೆಯುವುದಕ್ಕೆ ನಿರಾಕರಿಸಿದರು. ನಾವಿಕರು ಆಚಾರ್ಯರನ್ನು ಒತ್ತಾಯಪಡಿಸಿದರು. ನಾವಿಕರ ಕೇಳಿಕೆಯು ಅಂತಃಕರಣಪೂರ್ಣವಾದುದೆಂದು ಖಚಿತಗೊಂಡ ನಂತರ ದೋಣಿಯಲ್ಲಿದ್ದ ಸಾವಿರಾರು ಸರಂಜಾಮುಗಳಲ್ಲಿ ತನಗೆ ಏನು ಬೇಕು ಎಂಬುದನ್ನು ಆರಿಸಿ, ಆರಿಸಿ ಕೊಟ್ಟಕೊನೆಗೆ ಗೋಪಿಚಂದನದ ಎರಡು ಮುದ್ದೆಗಳನ್ನು ದೃಷ್ಟಿಸಿದರು. ಈ ಗೋಪಿಯು ಬ್ರಾಹ್ಮಣರ ನಿತ್ಯಾಚರಣೆಯಲ್ಲಿ ಮೈಮೇಲೆ ನಾಮ ಎಳೆಯಲು ಉಪಯೋಗವಾಗುತ್ತದೆ. ಅವರ ಮನಸ್ಸು ಆ ಎರಡು ಮಣ್ಣು ಮುದ್ದೆಗಳಲ್ಲಿಯೇ ನೆಟ್ಟಿತು. ತನ್ನ ಅಭಿಲಾಷೆಯನ್ನು ನಾವಿಕರೊಡನೆ ತಿಳಿಸಿದರು.

ಈ ವರ್ಷ (ತಾ. 17 1-1958) ಪರ್ಯಾಯ ಪೀಠವನ್ನೇರಲಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಯವರು.

ನಾವಿಕರು ಈ ಬ್ರಾಹ್ಮಣರ ಅಪೇಕ್ಷೆಯನ್ನರಿತೊಡನೆಯೇ ಒಳಗೊಳಗೆ ಆಶ್ಚರ್ಯದಿಂದ ನಕ್ಕರೂ ಹೊರಗಡೆ ಕೃತಜ್ಞತೆಯ ನಟಿಕೆಯನ್ನು ಪ್ರದರ್ಶಿಸಿ ಅವನ್ನೀಯಲು ಒಪ್ಪಿದರು. ಮಧ್ವಾಚಾರ್ಯರು ಅವನ್ನು ಪಡೆದರು. ಅವನ್ನು ತನ್ನ ಪೂಜಾಸ್ಥಾನಕ್ಕೆ ತೆಗೆದುಕೊಂಡು ಹೊರಟರು. ದಾರಿಯಲ್ಲಿ ಅವುಗಳಲ್ಲಿ ಒಂದು ಸಣ್ಣ ಬಿರುಕಿನಿಂದಾಗಿ ಒಡೆದುಹೋಯಿತು. ಅದರೊಳಗಡೆ ನಗ್ನರೂಪದ ಕೃಷ್ಣನ ಅಣ್ಣ ಬಲರಾಮನು ತನ್ನ ಆಯುಧವಾದ ಹಲವನ್ನು ಹಿಡಿದುಕೊಂಡಿರುವ ಕೆತ್ತನೆಯ ಮೂರ್ತಿಯನ್ನು ಕಂಡು ಆಶ್ಚರ್ಯಚಕಿತರಾದರು. 'ನ್ಯಾಯ, ಈ ಸ್ಥಳದಲ್ಲಿಯೇ ಈ ವಿಗ್ರಹವನ್ನು ಸ್ಥಾಪಿಸಿ ಪೂಜಿಸಲ್ಪಡಬೇಕೆಂಬುದೇ ಭಗವಂತನ ಇಚ್ಛೆಯಾಗಿರಬೇಕು" ಎಂದುಕೊಂಡು, ಅದನ್ನು ಇನ್ನೂ ಮುಂದೆ ಕೊಂಡೊಯ್ಯಲು ಅಪೇಕ್ಷಿಸದೆ, ಅಲ್ಲಿಯೇ ಪ್ರತಿಷ್ಠಾಪಿಸಿದರು. ಮುಂದಕ್ಕೆ ಅದರ ಸುತ್ತಲೂ ಒಂದು ದೇವಾಲಯವು ಕಟ್ಟಲ್ಪಟ್ಟಿತು. ನಾವಿಂದು ಸಮುದ್ರತೀರದಿಂದ ಕೆಲವೇ ಗಜಗಳ ದೂರದಲ್ಲಿ ಆ ಬಲರಾಮ ದೇವಾಲಯವನ್ನು ಕಾಣಬಹುದು.

ಮಧ್ವಾಚಾರ್ಯರು ತನ್ನ ಆ ಪಾಠ

(೧೩ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಅದೇನು ಕನಸಾಗಿತ್ತೆ?

ಶ್ರೀ. ಉಡುಪಿ ನಾರಾಯಣ ಬಲ್ಲಾಳ

ನಾನು ಅವಳನ್ನು ತುಂಬಾ ಪ್ರೀತಿಸುತ್ತಿದ್ದೆ ಎಂದಷ್ಟೇ ಹೇಳಬಲ್ಲೆ. ನನ್ನ ಜೀವಮಾನದಲ್ಲಿ ನನಗಿದ್ದ ಆಶೆ ಒಂದೇ ಒಂದು. ಬಳುಕುತ್ತ ಹರಿಯುವ ತೊರೆಯಂತೆ ಬಂದು ನನ್ನ ತುಟಿಗಳಲ್ಲಿ ನಲಿಯುವವಳು; ಹೃದಯದಲ್ಲಿ ನರ್ತಿಸುವವಳು; ಮನಸ್ಸಿನಲ್ಲಿ ಆಗಾಗ್ಗೆ ಮೂಡಿ ಬರುವವಳು.

ಎಂದೋ ಒಮ್ಮೆ ನಾನು ಅವಳನ್ನೋ-- ಅವಳು ನನ್ನನ್ನೋ,-ಯಾರು ಯಾರನ್ನು ಸಂಧಿಸಿದೆವೋ ತಿಳಿಯದು. ಪ್ರಥಮ ಭೇಟಿಯಿಂದಲೇ ನಮ್ಮ ಪ್ರೀತಿ ಬೆಳೆಯಿತು. ಅಷ್ಟೇ ನಾವಿಬ್ಬರೂ ಒಂದಾದೆವು. ನನ್ನನ್ನು ಪ್ರೀತಿಯಿಂದ ಮಗುವಿನಂತೆ—ಮಗನಂತೆ—ಗಂಡನಂತೆ ಆರೈಕೆ ಮಾಡಿದಳು. ನನ್ನನ್ನು ಆಕೆ ಅತಿಯಾಗಿ ಪ್ರೀತಿಸುತ್ತಿದ್ದಳು ಎನ್ನುವುದಕ್ಕೆ ಬೇರೆ ನಿದರ್ಶನ ಬೇಡವಷ್ಟೇ?

ಕೊನೆಗೊಂದು ದಿನ ಆಕೆ ತೀರಿಕೊಂಡಳು. 'ಹೇಗೆ?' ಎಂದು ಕೇಳಬೇಡಿ. ನನಗೆ ತಿಳಿಯದು. ಒಂದು ದಿನ ಸಂಜೆ ಮಳೆಯಲ್ಲಿ ನೆನೆದುಕೊಂಡು ಬಂದವಳು ಮರುದಿನ ಕೆಮ್ಮಿ, ಮೂರನೇ ದಿನ ಹಾಸಿಗೆಯಲ್ಲಿ ಮಲಗಿದಳು. ಇದು ವರೆಗೆ ನನ್ನನ್ನು ಅಷ್ಟು ನೆಚ್ಚಿನಿಂದ ಪ್ರೀತಿಸಿದುದಕ್ಕಾಗಿ ನಾನು ಅವಳನ್ನು ಅದಕ್ಕಿಂತಲೂ ಹೆಚ್ಚಾಗಿ ಪ್ರೀತಿಸಿದೆ; ಆರೈಕೆ ಮಾಡಿದೆ. ಡಾಕ್ಟರರು ಬಂದರು; ಪರೀಕ್ಷಿಸಿದರು; ಹೋದರು. ಹಣವನ್ನೆಲ್ಲ ಮದ್ದನ್ನಾಗಿ ಮಾಡಿ ಕುಡಿಸಿದರೂ ಅವಳು ಗುಣಮುಖಳಾಗಲಿಲ್ಲ. ಕೈ ಬಿಸಿಯಾಗಿತ್ತು; ಹಣೆ ಸುಡುತ್ತಿತ್ತು; ಕಣ್ಣು ಕೆಂಪಾಗಿತ್ತು. ಏನೇನೋ ಮಾತನಾಡಿದಳು. ನನಗದು ಅರ್ಥವಾಗಲಿಲ್ಲ. ಒಂದು ದಿನ ಬೆಳಿಗ್ಗೆ ನಾನು ಆಕೆಯ ತಲೆಯ ಬದಿಯಲ್ಲಿ ಕುಳಿತುಕೊಂಡಿದ್ದೆ. ನನಗೆ ಜೊಂಪು ಹಿಡಿದಿತ್ತು. ನರ್ಸ್ 'ಹಾ' ಎಂದಾಗಲೇ ನನಗೆ ಎಚ್ಚರವಾದುದು. ಹೌದು! ಆ ವೇಳೆಗಾಗಲೇ ಗೂಡು ಬರಿದಾಗಿತ್ತು; ಹಕ್ಕಿ ಹಾರಿ ಹೋಗಿತ್ತು.

ನನಗೂ ಕೂಡಾ ಸಾಯಬೇಕೆಂದು ಆಸೆಯಾಯಿತು. ಸಾವು ಮುತ್ತಿಕಬಳಿಸದಷ್ಟು ನಾನು ಪಾಪಿಯೇ? ಅವಳನ್ನು ಪೆಟ್ಟಿಗೆಯಲ್ಲಿ ಹಾಕಿ, ಮುಚ್ಚಿ, ಮೊಳೆ ಹಡೆಯುತ್ತಿದ್ದಾಗ ನನ್ನ ಹೃದಯಕ್ಕು ಮೊಳೆಗಳಿಂದ ಸಾವಿರ ತೂತುಗಳನ್ನು ಮಾಡಿದ ವೇದನೆಯಾಯಿತು. ನಂತರ ನಡೆದ ಕಾರ್ಯವನ್ನು ನನ್ನಿಂದ ನೋಡಲಾಗಲಿಲ್ಲ. ಸಮಾಧಿ ಕಾರ್ಯದಲ್ಲಿ ಅನೇಕ ಹೆಂಗಸರೂ, ಗಂಡಸರೂ ಭಾಗ ವಹಿಸಿದ್ದರು. ನನ್ನ ಪ್ರೇಯಸಿಯ ಸಮಾಧಿ ಕಾರ್ಯದಲ್ಲಿ ಭಾಗ ವಹಿಸುವ ಭಾಗ್ಯವನ್ನು ನಾನು ಪಡೆದಿರಲಿಲ್ಲ.

ಮರುದಿನ ನಮ್ಮ ಧರ್ಮಗುರುಗಳೊಬ್ಬರು ನನ್ನನ್ನು ನಡುದಾರಿಯಲ್ಲಿ ಸಂಧಿಸಿದರು. "ನಿಮ್ಮ ಅವಳು..." ಮುಂದೇನೋ ಕೆಟ್ಟದ್ದಾಗಿ ನುಡಿಯಬೇಕೆಂದಿದ್ದರು. ಈ ಮಾತು ನನ್ನ ಪ್ರೇಯಸಿಗೆ ಅವಮಾನವೆಂದೆನಿಸಿತು. ಅಲ್ಲಿಯೇ ಗುರುಗಳ ಸಮ್ಮುಖದಲ್ಲಿ ಅವಳ ಆತ್ಮಕ್ಕೆ ಶಾಂತಿ ಕೋರಿ ಅಲ್ಲಿಂದಲೇ ಜಾರಿದೆ. ಸ್ವಲ್ಪ ದೂರದ ನಂತರ ನನ್ನ ಮಿತ್ರರೊಬ್ಬರು ನನ್ನ ಭೇಟಿಯಾದರು. ನನ್ನ ಪ್ರೇಯಸಿಯ ವಿಚಾರವಾಗಿ ಸಂತಾಪ ಸೂಚಿಸುತ್ತ ಬಹಳ ಆತ್ಮೀಯವಾಗಿ ಮಾತನಾಡಿದರು. ನನಗೆ ದುಃಖ ಬಂದು ಅತ್ತು ಬಿಟ್ಟೆ. ನಂತರ ನನಗೆ ಆ ಊರಲ್ಲಿ ನಿಲ್ಲಲಾಗಲಿಲ್ಲ. ಆ ಊರು ಬಿಟ್ಟು ಬೇರೆಲ್ಲಿಗೋ ಹೋದೆ. ಹೋಗುವ ಮೊದಲು ಎಲ್ಲಿಗೆಂದು ನನಗೇ ತಿಳಿದಿರಲಿಲ್ಲ.

ನಿನ್ನೆಯಷ್ಟೇ ನಾನು ಪ್ಯಾರಿಸಿನಿಂದ ಊರಿಗೆ ಮರಳಿದುದು. ನಾನು ಕೋಣೆಯ ಬಾಗಿಲನ್ನು ತೆರೆದು ಒಳಗೆ ಕಾಲಿಟ್ಟೊಡೆ ....ಕೋಣೆಯಲ್ಲಿದ್ದ ಪ್ರತಿಯೊಂದು ವಸ್ತುವಿನಲ್ಲಿಯೂ ನನ್ನ ಪ್ರೇಯಸಿಯ ಮುಗುಳು ನಗುವಿನ ಪ್ರತಿಬಿಂಬವು ಕಾಣಿಸಿತು. ನನ್ನಲ್ಲಿ ಅವಳ ಮೇಲಿದ್ದ ಪ್ರೇಮವು ಮರುಕಳಿಸಿ ಬಂತು. ಕೋಣೆಯ ಉದಗಲಕ್ಕೆ ಎತ್ತ ದೃಷ್ಟಿ ಹಾಯಿಸಿದರೂ ಅವಳ ಪ್ರತೀಕವಾಗಿರುವಂಥ ವಸ್ತುಗಳೇ ಕಾಣಿಸಿದುವು. ನನ್ನ ಜೀವಮಾನದಲ್ಲಿಯೇ ಉದ್ಭವಿಸದಿದ್ದ ದುಃಖ ಉತ್ಪತ್ತಿ ಬಂತು. ನನ್ನ ಮನಸ್ಸಿನಲ್ಲಿ ಉಂಟಾದ ಅಲ್ಲೋಲ-ಕಲ್ಲೋಲದಿಂದ ನನ್ನ ತಾಳ್ಮೆ ಗೆಟ್ಟಿತು. ನನ್ನ ಹ್ಯಾಟನ್ನು ಕೈಗೆತ್ತಿಕೊಂಡು ಹೊರಗೆ ಧಾವಿಸಿದಾಗ ನನ್ನೆದುರು ಇದ್ದ ಒಂದು ಪ್ರತಿಬಿಂಬವು ನನ್ನನ್ನು ಅಡಕಟ್ಟಿತು. ದಿಙ್ಮೂಢನಾಗಿ ನಿಂತೆ. ಆದರೆ ಅದು ಬರೇ ನಿಲುಗನ್ನಡಿಯಾಗಿತ್ತು. ದಿನಕ್ಕೆ ಹತ್ತು ಬಾರಿಯಾದರೂ ತನ್ನ ಶೃಂಗಾರವನ್ನು ಆ ಕನ್ನಡಿಯಲ್ಲಿ ಬಿಂಬಿಸಿ, ತನ್ನ ಶೃಂಗಾರ ಸೂಸುವ ದೇಹ ಸೌಷ್ಠವನ್ನು ನೋಡದಿದ್ದರೆ ನನ್ನ ಪ್ರೇಯಸಿಗೆ ತೃಪ್ತಿಯೇ ಇರುತ್ತಿರಲಿಲ್ಲ. ಅದೇ ಕನ್ನಡಿ ಇಂದು ನನ್ನ ಬಿಂಬವನ್ನು ಪ್ರತಿಫಲಿಸಿತು; ನನ್ನನು ಹಿಡಿದು ನಿಲ್ಲಿಸಿತು. ಓ! ಕನ್ನಡಿ ಪ್ರತಿಫಲಿಸುವುದು ನನ್ನ ಬಿಂಬವನ್ನಲ್ಲ. ಆ ಕನ್ನಡಿಯು ನನ್ನನ್ನು ಮೋಸಪಡಿಸಿತು.. ಮೇಲಿಂದ ಮೇಲೆ ಅವಳ ಬಿಂಬವು ಕನ್ನಡಿ ಮೇಲೆ ಬಿದ್ದುದರಿಂದ ಅಲ್ಲೇ ಅಚ್ಚಾಗಿ ಉಳಿದಿರಬಹುದು. ಆದರೆ ಒಂದು ವರ್ಷ ಕಳೆದರೂ ಆ ಅಚ್ಚು ಮಾಸದೆ ನನಗಾಗಿಯೇ ಕಾದು ಕುಳಿತುಕೊಂಡಿರಬಹುದೇ? ನನ್ನ ಕಲ್ಪನೆ ಕೆರಳಿತು. ಕನ್ನಡಿಯಲ್ಲಿ ನನ್ನ ಅರಸಿಯು ನನ್ನನ್ನು ಆಲಿಂಗಿಸಿದಂತೆ ಕಂಡೆನು. ಕನ್ನಡಿಯನ್ನು ಮುಟ್ಟಿದೆ. ಶೀತಲ. ನನ್ನ ಹಗಲು ಕನಸಿನ ಹುಚ್ಚು ಕಲ್ಪನೆಗೆ ನನಗೇ ನಾಚಿಕೆಯಾಯಿತು. ಹಿಂದೆ—ಮುಂದೆ ನೋಡಿದೆ. ಯಾರೂ ಇರಲಿಲ್ಲ. ಪುನಃ ನೋಡುವಾಗ ಕನ್ನಡಿಯಲ್ಲಿದ್ದುದು ನನ್ನದೇ ಬಿಂಬ. ಮರುಕ್ಷಣದಲ್ಲಿಯೇ ನನ್ನ ಮನಸ್ಸು ಕಳವಳಕ್ಕೊಳಗಾಯಿತು. ಮತ್ತೆ ಅಲ್ಲಿ ನಿಲ್ಲಲಾಗಲಿಲ್ಲ. ಹೊರಗೆ ಧಾವಿಸಿದೆ.

ಹತ್ತಿರದಲ್ಲಿಯೇ ಪಿತೃವನ ಕಾಣಿಸಿತು. ನನ್ನ ಮನಸ್ಸು ನನ್ನನ್ನು ಅಲ್ಲಿಗೆ ಎಳೆದುಕೊಂಡು ಹೋಗುವಂತೆ ಅಪ್ಪಣೆ ಮಾಡಿತು. ನಿರುಪಾಯನಾಗಿ ಅತ್ತ ತೆರಳಿದೆನು. ನನ್ನ ಮನಸ್ಸು ಕಣ್ಣಿನ ಮೂಲಕ ಪ್ರೇಯಸಿಯ ಗೋರಿಗಾಗಿ ತಡಕಿಸಿತು. ಅಬ್ಬಾ, ಎಷ್ಟೊಂದು ಗೋರಿಗಳು! ಕೇವಲ ಒಂದೇ ವರ್ಷದಲ್ಲಿ ಎಷ್ಟೊಂದು ಜನರು ಈ ವನಕ್ಕೆ ವಾಸಿಗಳು ಬಂದಿದ್ದಾರೆ! ಈ ಸ್ಥಳವೆಲ್ಲಾ ಗೋರಿಗಳಿಂದಲೇ ತುಂಬಿದೆಯಲ್ಲಾ! ನನ್ನ ಪ್ರೇಯಸಿಗಾದರೂ ಇಲ್ಲಿ ಸ್ಥಳವಿದ್ದಿತೋ? ಅಯ್ಯೋ, ಎಂಥಾ ದುಸ್ಥಿತಿ! ನಾನು ಕಂಬನಿ ಕರೆದಿದ್ದೆನು. ಕೊನೆಗೆ ಒಂದು ಮೂಲೆಯಲ್ಲಿ ನನ್ನ ರಾಣಿಯ ಅರಮನೆಯನ್ನು ಕಂಡೆನು. ಮಣ್ಣಿನ ರಾಶಿಯ ಚಿಟ್ಟೆಯ ಮೇಲೆ ಚಂದ್ರಕಾಂತ ಶಿಲೆಯಲ್ಲಿ ಬರೆದಿತ್ತು. "ಅವನು ಇವಳನ್ನು ಪ್ರೀತಿಸಿದನು; ಇವಳು ಅವನನ್ನು ಪ್ರೀತಿಸಿದಳು ಮತ್ತೂ ಪ್ರೀತಿಸಿದಳು. ಕೊನೆಗೆ ಸತ್ತಳು" ಅಯ್ಯೋ! ನನ್ನ ಪ್ರೇಯಸಿಯದು ಎಂಥಾ ದೌರ್ಭಾಗ್ಯ! ನನಗೆ ಹೀಗಾಗುವುದೆಂದು ತಿಳಿದಿದ್ದರೆ ಈ ಪಿತೃವನದ ಮಧ್ಯೆ ಇತರ ಗೋರಿಗಳನ್ನು ಕೆಡವಿ ನಿನಗಾಗಿ ಸುಂದರವಾದ ಚಿರವಾದ ಮಹಲನ್ನು ಕಟ್ಟಿಸುತ್ತಿದ್ದೆನಲ್ಲಾ? ಶಹಜಹಾನ್-ಮುಮತಾಜ್‌ರ ಅಮರ ಪ್ರೇಮವನ್ನು ಮೀರಿಸುತ್ತಿದ್ದೆನಲ್ಲಾ! ಒಂದು ವರ್ಷದ ಮೊದಲು ಈ ರಾಜ್ಯಕ್ಕೆ ನಿನಗಾಗಿ ಇತರರೊಡನೆ ಬಂದೆ. ನೀನಾಗ ಗಂಭೀರವಾದ ಧ್ಯಾನದಲ್ಲಿದ್ದೆ. ಚಿರವಾದ ಶಾಂತಿಯನ್ನು ಪಡೆದಿದ್ದೆ. ಇಂದು ನಾನು ಇಲ್ಲಿಗೆ ಒಂಟಿಯಾಗಿ ಬಂದಿದ್ದೇನೆ...ಏಕೆ ನನ್ನೊಡನೆ ಮಾತನಾಡುವುದಿಲ್ಲ...ನನ್ನ ಮೇಲೆ ನಿನಗೆ ಸಿಟ್ಟೇ? ಎಂದು ಹುಚ್ಚು-ಹುಚ್ಚಾಗಿ ಪ್ರಶ್ನಿಸಿದೆ. ಆದರೆ ಎಲ್ಲಿಂದಲೂ, ಯಾರಿಂದಲೂ ಉತ್ತರ ಬರಲಿಲ್ಲ. ಪ್ರೇಯಸಿಯ ಸಮಾಧಿಯ ಮೇಲೆ ಹಣೆ ಮುಟ್ಟಿಸಿ ಬಿಕ್ಕಿ-ಬಿಕ್ಕಿ ಅತ್ತೆ. ಎಷ್ಟು ಹೊತ್ತಿನ ತನಕ ಹಾಗೆ ಇದ್ದೆನೋ......ದೇವರೇ ಬಲ್ಲ!

ದಿಗಂತದಲ್ಲಿ ಕತ್ತಲೆ ವ್ಯಾಪಿಸಿತು. ರಾತ್ರಿಯಾದರೂ ಪ್ರೇಯಸಿಯ ಸಾನ್ನಿಧ್ಯವನ್ನು ಬಿಟ್ಟು ಹೋಗಲು ಮನಸ್ಸು ಬರಲಿಲ್ಲ. ಧೈರ್ಯದಿಂದ ಕತ್ತಲೆಯಲ್ಲಿಯೇ ಸ್ಮಶಾನದಲ್ಲಿ ತಿರುಗಾಡಿದೆ. ನಾವು ವಾಸಿಸುವ ರಾಜ್ಯ ಅದೆಷ್ಟು ದೊಡ್ಡದು! ಬದುಕಿರುವವರಿಗಿಂತ ಸತ್ತವರೆಷ್ಟು ಜನರಿಲ್ಲ! ಆದರೂ ಅವರ ರಾಜ್ಯ ಬರೇ ಆರು ಅಡಿ ಉದ್ದದ ನೆಲ. ನಾವು ಸುಖಕ್ಕಾಗಿ ಹಂಬಲಿಸುತ್ತೇವೆ. ಸಿಗುವ ಸುಖದ ಮೊತ್ತವೆಷ್ಟು? ನಮ್ಮ ಆಶೆಗೆ ಪಾರವಿಲ್ಲದಿದ್ದುದರಿಂದಲೇ ನಮಗೆ ಶಾಶ್ವತವಾದ ಸುಖ—ಶಾಂತಿಗಳಿಲ್ಲ. ಮೃತರು ಎಷ್ಟು ಸುಖಿಗಳು! ಯಾವೊಂದು 'ಬೇಕು ಬೇಡ'ಗಳಿಲ್ಲದೆ ಸರಳವಾದ ಜೀವನದಲ್ಲಿದ್ದಾರೆ.

ತಿರುಗಾಡಿದೆ; ಮತ್ತೂ ತಿರುಗಾಡಿದೆ, ಇನ್ನೂ ;ತಿರುಗಾಡಿದೆ.ಏನೇನೋ ಆಲೋಚನೆಗಳು ಮೂಡಿದುವು. ಒಂದಕ್ಕೂ ತುದಿ-ಮೊದಲಿರಲಿಲ್ಲ; ಪಾರವಿಲ್ಲ.

ನನ್ನ ಕಾಲಿನ ಇನ್ನೊಂದು ಬದಿಯಲ್ಲಿ ಹಳೆಯದಾದ ಸಮಾಧಿಯನ್ನು ಕಿತ್ತು ಹಾಕಿ, ಹೊಸ ಪ್ರೇತ ನಾಗರಿಕನಿಗೆ ಆಶ್ರಯ ಕಲ್ಪಿಸುವುದಕ್ಕಾಗಿ ಅವಕಾಶ ಮಾಡಿದ್ದರು. ಯಾವ ವಿಚಾರವೂ ಮನಸ್ಸಿಗೆ ಹಿಡಿಸಲಿಲ್ಲ. ಬೇಸರ! ಬೇಸರ!! ಬೇಸರ!!!

ಇದೇ ಪ್ರೇತವನದ ಗೋರಿಗಳ ಮಧ್ಯೆ ಜೀವಂತ ಮನುಷ್ಯ ನಾನೊಬ್ಬನೇ. ನಾನೇ ಒಂದು ಗೋರಿಯಾಗಿರುವೆನೋ... ಎಂಬ ಕಲ್ಪನೆ. ಬೆಳದಿಂಗಳಿಲ್ಲದ ಕತ್ತಲೆಯಲ್ಲಿ ತಿರುಗಾಡಿದೆ. ಎತ್ತ ತಿರುಗಿದರೂ ಸಮಾಧಿ ಕಾಲಿಗೆ ಎಡವುತ್ತಿತ್ತು. ಬಿದ್ದು, ಎದ್ದು ಆಯಾಸಗೊಂಡಿದ್ದೆ. ಅಲ್ಲೇ ದೊಡ್ಡದಾದ ಗೋರಿಯ ಮೇಲ್ಭಾಗದ ಸಮತಟ್ಟಾದ ಸ್ಥಳದಲ್ಲಿ ಕ್ಷಣಿಕ ಒರಗಿಕೊಂಡು ವಿರಾಮ ಪಡೆದೆನು. ನನ್ನ ಪ್ರೇಯಸಿಯ ಕಲ್ಪನೆಯ ಚಿತ್ರಗಳು; ಪ್ರೇಯಸಿಯ ವಿಚಾರಗಳು ಆ ಸ್ಮಶಾನ ರಾಜ್ಯದಲ್ಲಿ ನನ್ನನ್ನು ಆವರಿಸಿಬಿಟ್ಟವು. ಪ್ರೇಯಸಿಯೊಡನೆ ಕಲ್ಪನಾ ರಾಜ್ಯದಲ್ಲಿ ತಿರುಗಾಡುತ್ತಿದ್ದೆನೆಂದು ನನ್ನ ಭಾವನೆ ಆದರೆ ಪ್ರೇಯಸಿ ಮಾತ್ರ ಇದ್ದಿರಲಿಲ್ಲ. ಇದ್ದಳೆಂದೇ ನನ್ನ ಭಾವನೆ; ಸುಳ್ಳುಭಾವನೆ. ಕೇವಲ ಕಲ್ಪನೆಯ ರಾಜ್ಯ!

ಥಟ್ಟನೆ ಸಟೆದೆದ್ದು ನಿಂತೆ. ಯಾರೋ ಚಬುಕಿನಿಂದ ಹೊಡೆದಂತಾಯಿತು. ನನ್ನ ಪ್ರೇಯಸಿಯೆ ಹೊಡೆದು ನನ್ನನ್ನು ಕರೆದಂತಾಯಿತು.. ಅತೀ ಉತ್ಸಾಹದಿಂದ

(೧೧ನೇ ಪುಟ ನೋಡಿರಿ.)

ಪ್ರತಿಯೊಬ್ಬನಲ್ಲಿಯೂ ಬೇಂಕು ಮನೋಭಾವನೆಯನ್ನು ಬೆಳೆಸಿ, ತನ್ನ ಪ್ರತಿಯೊಂದು ಹಣದ ವ್ಯವಹಾರವನ್ನೂ ಆತನು ಬೇಂಕುಗಳ ಮೂಲಕ ನಡೆಸುವಂತಾಗಬೇಕೆಂಬೇ ನಮ್ಮ ಆಶಯ. ಎಂತಲೆ ನಾವು ಪ್ರತಿಯೊಬ್ಬನಿಗೂ ಅನುಕೂಲವಾಗುವಂತೆ ಹಲವಾರು ಉಳಿತಾಯ ಯೋಜನೆಗಳನ್ನು ಕೈಗೊಂಡಿದ್ದೇವೆ. ನಿಮಗೆ ಅನುಕೂಲವಿರುವ ಯೋಜನೆಯೊಂದನ್ನು ಇಂದೇ ಆರಿಸಿಕೊಳ್ಳಿರಿ!

ದಕ್ಷಿಣ ಭಾರತದ 5 ಸಂಸ್ಥಾನಗಳಲ್ಲಿ ಒಟ್ಟು 49 ಶಾಖೆಗಳು ಈ ಶೆಡ್ಯೂಲ್ಡ್ ಬೇಂಕಿಗಿದ್ದು, ಬೇಂಕು ಉದ್ಯಮಿಯಲ್ಲಿ ಇದಕ್ಕೆ 51 ವರುಷಗಳಿಗೂ ಮಿಗಿಲಾದ ಅನುಭವವಿದೆ!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಫೋನ್ ನಂಬ್ರ: 21-A

ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಉಷಾ

ಹೊಲಿಗೆ ಯಂತ್ರಗಳು



● ಗಟ್ಟಿ ಮುಟ್ಟಾಗಿದ್ದು ಸರ್ವರ ಅಭಿರುಚಿಗೂ ಒಪ್ಪುವಂತೆ ವಿವಿಧ ಮಾದರಿಯಲ್ಲಿ ತಯಾರಿಕೆ.

● ಕೊಂಡುಕೊಳ್ಳುವುದೊಂದೇ ಅಲ್ಲ—ಅದೊಂದು ಆದರ್ಶ ಜೀವನಾಡಿ.

— ಸೋಲ್ ಸೆಲ್ಲಿಂಗ್ ಏಜಂಟ್ಸ್ —

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್

ಪ್ರೈವೇಟ್ ಲಿಮಿಟೆಡ್,

ಮದ್ರಾಸು—1

ಜಿ ಲಸಿಕೆ ಚುಚ್ಚಿಸಿಕೊಂಡಿರುವಿರಾ?

ಯರೋಗಕ್ಕೆ ದಿವ್ಯೌಷಧ-ಬಿ ಸಿ ಜಿ.

ಯರೋಗವು ಪ್ರಪಂಚದಲ್ಲಿ ಸು ೩೫೦೦ ವರ್ಷಗಳಿಂದಲೂ ಇದು ಆದರೆ ಅದಕ್ಕೆ ಮುಖ್ಯ ಕಾರಣ ಕ್ಷಯರೋಗವನ್ನು (ಟ್ಯೂಬರ್ ಬ್ಯಾಸಿಲಸ್) ೧೯ನೆಯ ಶತಮಾನ ನೆಯ ವೇಳೆಗೆ ಕಂಡುಹಿಡಿಯ ತು.

ರಲ್ಲಿ ಫ್ರಾನ್ಸಿನ ಇಬ್ಬರು ವಿಜ್ಞಾ ದ ಡಾ| ಆಲ್ಬರ್ಟ್ ಕಾಮೆಟೆ ಮ ಡಾ| ಅಲ್ಫೋನ್ಸ್ ಗುರೀನ್‌ರವರು ನಲ್ಲಿರುವ ಲಿಲ್ಲೆತ್‌ನಲ್ಲಿ ಕ್ಷಯ ಣುವಿಗೆ ಸಂಬಂಧಪಟ್ಟಂತೆ ಅಧ್ಯ ವನ್ನು ನಡೆಸಿದರು. ಅವರು ೧೩ ಗಳ ವರೆವಿಗೆ ಸಂತತ ಪ್ರಯೋಗ ನಡೆಸಿದರು. ಕೊನೆಯಲ್ಲಿ ಕ್ಷಯ ಣುವಿನ 'ಅಭಿರಂಜಕ"(ಸ್ಟ್ರೇನ್) ರಿಸಿದರು. ಆ ಔಷಧಿಯನ್ನು ಪ್ರಾ ಮೇಲೆ ಪ್ರಯೋಗಿಸಿದರು.

ಅಭಿರಂಜಕ'ವು ಮುಂದೆ "ಬ್ಯಾ ಕಾಮೆಟೆ-ಗುರೀನ್" (ಬಿ ಸಿ. ಜಿ.) ಕರೆಯಲ್ಪಟ್ಟಿತು. ೧೯೨೧ರಲ್ಲಿ ಬಾರಿ ಈ ಅಭಿರಂಜಕವನ್ನು ರೋಗದಿಂದ ನರಳುತ್ತಿದ್ದ ತಾಯಿ ಮಗುವಿಗೆ ಪ್ರಯೋಗಿಸಲಾಯಿತು ಷರ ಜೊತ್ತಿಗೆ ಯೂರೋಪ್, ಟೀಣಾ ಚೀಣಾ ಮತ್ತು ಚಿಲಿ ಮಕ್ಕಳನ್ನು ಕ್ಷಯರೋಗದಿಂದ ವ ಬಗ್ಗೆ ಬಿ. ಸಿ. ಜಿ ಯನ್ನು ಪ್ರ ಕ್ಕೆ ತರಲಾಯಿತು.

ತೀಯ ಪ್ರಪಂಚ ಯುದ್ಧದ ಪೂ ಲ್ಲಿ ಅಮೇರಿಕಾದ ಸಂಯುಕ್ತ ಸಂ ಗಳು, ಕೆನಡಾ ಜರ್ಮನಿ, ಮತ್ತು ಡಿನೇವಿಯಾದ ರಾಷ್ಟ್ರಗಳಲ್ಲಿ ಬಿ. ಜಿ ಯನ್ನು ಉಪಯೋಗಿಸಲಾಯಿ ಭಿನ್ನ ಜಾತಿಯ ಜನರ ಮೇಲೆ ಪರಿಸ್ಥಿತಿಗಳಲ್ಲಿ ಬಿ. ಸಿ. ಜಿ. ದಾ ಹಾಕಲಾಯಿತು. ದಾಕು ಹಾಕು ವ ಏನೂ ಅಪಾಯ ಸಂಭವಿಸು ವೆಂದು ಅಧ್ಯಯನಗಳಿಂದ ವ್ಯಕ್ತ . ದಾಕನ್ನು ಹಾಕಿಸಿಕೊಂಡವರ ರಕ್ಕೆ ೮೦ ವ್ಯಕ್ತಿಗಳು ನಾಲ್ಕಾರು ಗಳ ವರೆಗೆ ಕ್ಷಯರೋಗದಿಂದ ಪಡೆದಿರುವರು. ದ್ವಿತೀಯ ಪ್ರಪಂ ದ್ಧವು ಪ್ರಾರಂಭವಾದ ಮೇಲೆ, ರೋಗವೂ ಕೂಡ ಹೆಚ್ಚು ಹೆ ಹರಡುತ್ತಾ ಬಂದಿತು. ಮತ್ತು ದ ಬಿ. ಸಿ. ಜಿ. ಯನ್ನು ಭಾರಿ ಣದಲ್ಲಿ ಉಪಯೋಗಿಸಬೇಕಾ .

೧೯೪೮ರಲ್ಲಿ ಅಂತರಾಷ್ಟ್ರೀಯ ಕ್ಷಯ ನಿರೋಧಕ ಚಳವಳಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಕ್ಷಯ ನಿರೋಧಕ ಕಾರ್ಯಕ್ಕಾಗಿ ಸಂಯುಕ್ತ ರಾಷ್ಟ್ರಗಳ ಸಂಘದ ಮಕ್ಕಳ ತುರ್ತಿನ ನಿಧಿ ಸಂಸ್ಥೆಯು (ಯೂನಿಸಿಫ್) ೫೦ ಲಕ್ಷ ಡಾಲರ್‌ಗಳ ಹಣವನ್ನು ಮತ್ತು ಪ್ರಪಂಚ ಆರೋಗ್ಯ ಸಂಸ್ಥೆಯು ತಾಂತ್ರಿಕ ಸಹಾಯವನ್ನೂ ನೀಡಿವೆ. ೧೯೫೧ರಲ್ಲಿ ಈ ಚಳವಳಿಯನ್ನು ಸಮಾಪ್ತಿಗೊಳಿಸಲಾಯಿತು. ಕ್ಷಯ ರೋಗ ನಿರೋಧ ಕಾರ್ಯವನ್ನು ಪ್ರಪಂಚ ಆರೋಗ್ಯ ಸಂಸ್ಥೆ ಮತ್ತು ಯೂನಿಸಿಫ್ ಸಂಸ್ಥೆಗಳು ವಹಿಸಿಕೊಂಡವು. ಇಲ್ಲಿಯ ವರೆವಿಗೂ ಪ್ರಪಂಚದಲ್ಲಿ ೧೮ ಕೋಟಿಗಳಿಗೂ ಹೆಚ್ಚಿನ ವ್ಯಕ್ತಿಗಳಿಗೆ ಬಿ. ಸಿ. ಜಿ. ದಾಕನ್ನು ಹಾಕಲಾಗಿದೆ. ತಜ್ಞರು ೨೦ ವರ್ಷಗಳ ವರೆವಿಗೆ ಬಿ. ಸಿ. ಜಿ. ದಾಕು ಮತ್ತು ಅದರ ಪ್ರಭಾವವನ್ನು ಅಧ್ಯಯನ ಮಾಡಿರುವರು.

ಕ್ಷಯ ರೋಗ ಹಾಗೂ ಆ ರೋಗದಿಂದ ಸಂಭವಿಸುವ ಮರಣಗಳ ಸಂಖ್ಯೆ ಅಧಿಕವಿರುವ ರಾಷ್ಟ್ರಗಳಲ್ಲಿ ಬಿ. ಸಿ. ಜಿ. ಕಾರ್ಯಕ್ರಮವನ್ನು ವ್ಯಾಪಕವಾಗಿ ಆಚರಣೆಗೆ ತರಬೇಕೆಂದು ಪ್ರಪಂಚ ಆರೋಗ್ಯ ಸಂಸ್ಥೆಯ ತಜ್ಞರ ಸಮಿತಿಯು ಶಿಫಾರಸು ಮಾಡಿದೆ

ಅಸ್ಲೊ ನಗರದ ಆಸ್ಪತ್ರೆಯೊಂದರಲ್ಲಿನ ಅನುಭವದಿಂದ ಬಿ ಸಿ. ಜಿ.ಯ ಮಹತ್ವ ವು ತಿಳಿದು ಬರುವುದು. ಕ್ಷಯ ರೋಗ ತಗುಲಿದ ನರ್ಸ್‌ಗಳಲ್ಲಿ ದಾಕು ಹಾಕಿಸಿಕೊಳ್ಳದೆನೇ ಇದ್ದ ನರ್ಸ್‌ಗಳು ಬಿ ಸಿ. ಜಿ ದಾಕು ಹಾಕಿಸಿಕೊಂಡ ನರ್ಸ್‌ಗಳಿಗಿಂತ ಹೆಚ್ಚು ಸಂಖ್ಯೆಯಲ್ಲಿ ಮರಣ ಹೊಂದಿರುವರು. ಸಿಡುಬು ಹಾಗೂ ಡಿಫ್ತೀರಿಯಾ ರೋಗಗಳ ವಿಚಾರದಲ್ಲಿ ಗಳಿಸಿದ ಉತ್ತಮ ಫಲಿತಾಂಶಗಳಂತೆ ಬಿ ಸಿ. ಜಿ.ಯನ್ನು ಬಳಸಿ ಕ್ಷಯ ರೋಗದ ವಿಚಾರದಲ್ಲಿ ಕೂಡ ಅತ್ಯುತ್ತಮ ಫಲಿತಾಂಶಗಳನ್ನು ಪಡೆಯಲು ಸಾಧ್ಯವಿದೆಯೆಂದು ಲಂಡನ್ನಿನಲ್ಲಿರುವ ರಾಷ್ಟ್ರೀಯ ಕ್ಷಯ ನಿರೋಧಕ ಸಂಸ್ಥೆಯು ತಿಳಿಸಿದೆ. ಇಂಗ್ಲೆಂಡಿನಲ್ಲಿ ಸ್ಥಳೀಯ ಆರೋಗ್ಯ ಅಧಿಕಾರಿ ವರ್ಗದವರು ೧೩ ವರ್ಷಗಳ ವಯಸ್ಸಿನ ಶಾಲಾ ಮಕ್ಕಳಿಗೆ ಬಿ ಸಿ. ಜಿ ದಾಕು ಹಾಕುವ ಸಂಬಂಧವಾದ ಯೋಜನೆಗೆ ಆರೋಗ್ಯ ಮಂತ್ರಿ ಶಾಖೆಯವರು ಸಮ್ಮತಿಸಿದರು. ಆಗಿನಿಂದ ೧೪೬ ಸ್ಥಳೀಯ ಆರೋಗ್ಯ ಅಧಿಕಾರ ವರ್ಗದವರ ಪೈಕಿ ೧೦೮ ಅಧಿಕಾರಿ ವರ್ಗದವರು ಈ ಯೋಜನೆಗಳನ್ನು ಅಂಗೀಕರಿಸಿ ಆಚರಣೆಗೆ ತಂದಿರುವರು. ಕ್ಷಯ ರೋಗದಿಂದ ರಕ್ಷಣೆ ಪಡೆಯಲು ಈಗಿರುವ ಏಕ ಮಾತ್ರ ಉಪಾಯವೆಂದರೆ ಬಿ. ಸಿ ಜಿ ಎಂದು ಲಂಡನ್ ಕೌಂಟಿ ಕೌನ್ಸಿಲಿನ ಸಾರ್ವಜನಿಕ ಆರೋಗ್ಯ ವಿಭಾಗವು ಸಾರಿದೆ.

೧೯೫೭ರ ಆದಿ ಭಾಗದಲ್ಲಿ ಭಾರತದಲ್ಲಿ ನಡೆದ ಅಂತರಾಷ್ಟ್ರೀಯ ಕ್ಷಯ ಸಮ್ಮೇಳನದಲ್ಲಿ ಭಾಗ ವಹಿಸಿದ ತಜ್ಞರು ಬಿ. ಸಿ. ಜಿ. ಕಾರ್ಯಕ್ರಮವು ಅತ್ಯಂತ ಉಪಯುಕ್ತವಾದುದೆಂದು ಅಭಿಪ್ರಾಯಪಟ್ಟಿರುವರು. ೧೯ ವರ್ಷಗಳ ಕಾಲ ಬಿ. ಸಿ. ಜಿ. ಯನ್ನು ಉಪಯೋಗಿಸಿರುವ ಚಿಕಾಗೋ ನಗರದ ಡಾ| ರೊಸೆನ್ ಥಾಲ್‌ರವರು ಪ್ರತಿಶತ ೮೦ರಷ್ಟು ವ್ಯಕ್ತಿಗಳು ಕ್ಷಯರೋಗದಿಂದ ಮುಕ್ತಿ ಪಡೆದಿರುವರೆಂದು ತಿಳಿಸಿರುವರು. ನ್ಯೂಯಾರ್ಕಿನ ರಾಷ್ಟ್ರೀಯ ಕ್ಷಯ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಡಾ| ಜೇಂಸ್ ಇ. ಪರ್ಕಿನ್ಸ್‌ರವರು ಬಿ.ಸಿ.ಜಿಯು ಎಲ್ಲ ಲಸಿಕೆ (ವ್ಯಾಕ್ಸೀನ್)ಗಳಿಗಿಂತಲೂ ಅತ್ಯಂತ ಸುರಕ್ಷಿತವಾದುದೆಂದು ಪರಿಗಣಿಸಿರುವರು.

ಕ್ಷಯರೋಗ ಹರಡುವ ಸಂಭವ ಅಧಿಕವಿರುವ ಸ್ಥಳಗಳಲ್ಲಿ ಬಿ. ಸಿ. ಜಿ ಯನ್ನು ಉಪಯುಕ್ತ ರೀತಿಯಲ್ಲಿ ಉಪಯೋಗಿಸಬಹುದೆಂದು ಡೆನ್ಮಾರ್ಕಿನ ಡಾ| ಜೋಸ್ ಗ್ರೇಶಸನ್ ಹೇಳುತ್ತಾರೆ. ಅಂತರಾಷ್ಟ್ರೀಯ ಕ್ಷಯರೋಗ ನಿರೋಧಕ ಸಂಘದ ಮಹಾ ಕಾರ್ಯದರ್ಶಿಗಳಾದ ಪ್ರೊ| ಎಟಿನ್ನೆ ಬರ್ನಾರ್ಡ್‌ರವರು ಬಹುಕಾಲದ ವರೆಗೆ ಬಿ ಸಿ. ಜಿ ಯು ಕ್ಷಯ ರೋಗವನ್ನು ತಡೆಗಟ್ಟಲು ಸುಲಭವಾದ ಪರಿಹಾರ ಮಾರ್ಗವಾಗಿರುವುದೆಂದು ನುಡಿದಿದ್ದಾರೆ ಬಿ. ಸಿ. ಜಿ. ದಾಕು ಹಾಕಿಕೊಂಡ ನ್ಯೂಗಿನಿ ದ್ವೀಪವಾಸಿಗಳಲ್ಲಿ ಯಾರಿಗೂ ಕ್ಷಯರೋಗ ತಗಲಲಿಲ್ಲವೆಂದು ಪಾಪುವ ಹಾಗೂ ನ್ಯೂಗಿನಿ ಕ್ಷೇತ್ರದ ಸಾರ್ವಜನಿಕ ಆರೋಗ್ಯ ಶಾಖೆಯ ಡಾ| ಆರ್. ಕೆ. ವಿಲ್ಸನ್ ಹೇಳುತ್ತಾರೆ.

ದಕ್ಷಿಣ ಅಮೇರಿಕಾ, ಏಷಿಯಾ, ಆಫ್ರಿಕಾ, ರಷ್ಯಾ ಮತ್ತು ಜಪಾನ್‌ಗಳಲ್ಲಿ ಭಾರಿ ಪ್ರಮಾಣದಲ್ಲಿ ಬಿ ಸಿ ಜಿ ದಾಕನ್ನು ಹಾಕಲಾಗುತ್ತಿದೆ. ಬ್ರೆಜಿಲ್, ಜೆಕೋಸ್ಲಾವೇಕಿಯಾ, ಫ್ರಾನ್ಸ್, ನಾರ್ವೆ ಮತ್ತು ಯುಗೋಸ್ಲಾವಿಯಾ ಗಳಂತಹ ಕೆಲವು ರಾಷ್ಟ್ರಗಳಲ್ಲಿ ಕೆಲವು ಜನ ವರ್ಗಗಳಿಗೆ ಕಡ್ಡಾಯವಾಗಿ ಬಿ ಸಿ ಜಿ ದಾಕು ಹಾಕುವ ಬಗ್ಗೆ ಶಾಸನ ಮಾಡಲಾಗಿದೆ.

ಸಾರ್ವತ್ರಿಕವಾಗಿ ಬಿ.ಸಿ.ಜಿ.ಚಳವಳಿಯನ್ನು ಕೈಗೊಂಡಿರುವ ರಾಷ್ಟ್ರಗಳಲ್ಲಿ ಕ್ಷಯರೋಗ ವ್ಯಾಪನೆ ಹಾಗೂ ಕ್ಷಯ ರೋಗದಿಂದ ಸಂಭವಿಸುವ ಮರಣದ ಪ್ರಮಾಣ ಮಹತ್ವಪೂರ್ಣ ರೀತಿಯಲ್ಲಿ ಇಳಿದಿದೆ ಜಪಾನಿನಲ್ಲಿ ಬಿ ಸಿ. ಜಿ. ಸಾರ್ವತ್ರಿಕ ಚಳವಳಿಯನ್ನು ಕೈಗೊಂಡ ಏಳು ವರ್ಷಗಳ ನಂತರ ಪ್ರತಿ ಒಂದು ಲಕ್ಷ ವ್ಯಕ್ತಿಗಳಿಗೆ ೨೮೦ ವ್ಯಕ್ತಿಗಳು ಕ್ಷಯ ರೋಗಕ್ಕೆ ಬಲಿಯಾಗುತ್ತಿದ್ದದ್ದು ಈ ಸಂಖ್ಯೆಯು ೮೨ ವ್ಯಕ್ತಿಗಳಿಗೆ ಇಳಿಯಿತು ರಷ್ಯದಲ್ಲಿ ಭಾರಿಪ್ರಮಾಣದಲ್ಲಿ ಬಿ ಸಿ ಜಿ ದಾಕುಹಾಕುವ ಕಾರ್ಯಕ್ರಮವನ್ನು ಕೈಗೊಂಡಿರುವ ಪರಿಣಾಮವಾಗಿ ಮಕ್ಕಳಲ್ಲಿ ಕ್ಷಯರೋಗದಿಂದ ಮರಣ ಹೊಂದುವವರ ಸಂಖ್ಯೆಯು ನೂರಕ್ಕೆ ೫೦ರಷ್ಟು ಇಳಿದಿದೆ.

ಭಾರತದಲ್ಲಿ ಕ್ಷಯರೋಗದ ಪ್ರಭಾವವು ಭೀತಿಯನ್ನು ಹುಟ್ಟಿಸುತ್ತದೆ. ಪ್ರತಿ ನಿಮಿಷವೂ ಒಬ್ಬ ವ್ಯಕ್ತಿಯು ಕ್ಷಯರೋಗಕ್ಕೆ ತುತ್ತಾಗುತ್ತಿರುವನು. ಪ್ರತಿ ೧೫೦ ವ್ಯಕ್ತಿಗಳಿಗೆ ಒಬ್ಬ ವ್ಯಕ್ತಿಯು ಕ್ಷಯರೋಗ ಪೀಡಿತನಾಗಿರುವನು. ಈ ರೋಗವನ್ನು ರಾಷ್ಟ್ರೀಯ ತುರ್ತಿನ ಮಟ್ಟದಲ್ಲಿ ನಿರ್ಮೂಲನ ಗೊಳಿಸುವುದು ಪ್ರಸ್ತುತ ಯೋಜನೆಗಳ ಉದ್ದೇಶವಾಗಿರುವುದು.

೧೯೪೮ರಲ್ಲಿ ಬಿ. ಸಿ. ಜಿ. ಕಾರ್ಯಕ್ರಮವನ್ನು ತರುವುದಕ್ಕೆ ಪೂರ್ವದಲ್ಲಿ ಭಾರತ ಸರ್ಕಾರದವರು ಅಂತರಾಷ್ಟ್ರೀಯ ಸಂಸ್ಥೆಗಳ ಹಾಗೂ ಖ್ಯಾತಿವೆತ್ತ ವೈದ್ಯರುಗಳ ಶಿಫಾರಸುಗಳನ್ನು ಪರಿಶೀಲಿಸಿ ಬಿ. ಸಿ. ಜಿ ಕಾರ್ಯಕ್ರಮದ ಬಗ್ಗೆ ದೊರೆತ ಎಲ್ಲ ವೈಜ್ಞಾನಿಕ ಸಾಹಿತ್ಯವನ್ನೂ ಅಧ್ಯಯನಮಾಡಿದರು. ೧೯೫೧ರಲ್ಲಿ ಈ ಕಾರ್ಯಕ್ರಮವನ್ನು ಸಾರ್ವತ್ರಿಕ ಪ್ರಮಾಣದ ಚಳವಳಿಯನ್ನಾಗಿ ಪರಿವರ್ತಿಸಲಾಯಿತು.

ಇಂದು ಭಾರತದಲ್ಲಿ ೧೩೪ ಬಿ ಸಿ. ಜಿ. ತಂಡಗಳು ಕಾರ್ಯನಿರತವಾಗಿವೆ. ೧೯೫೭ರ ಸೆಪ್ಟೆಂಬರ್ ೩೦ರ ವರೆಗೆ ಸುಮಾರು ೯೬೪ಲಕ್ಷ ವ್ಯಕ್ತಿಗಳನ್ನು ಟ್ಯೂಬರ್ ಕ್ಯೂಲಿನ್ ಪರೀಕ್ಷೆಗೆ ಒಳಪಡಿಸಲಾಗಿದೆ ಹಾಗೂ ಸುಮಾರು ೩೩೮ ಲಕ್ಷ ವ್ಯಕ್ತಿಗಳಿಗೆ ಬಿ. ಸಿ. ಜಿ. ದಾಕು ಹಾಕಲಾಗಿದೆ.

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಠೇವಣಾತಿ ವಿಧಾನ

ದಿನಕ್ಕೆ
4 ಆಣೆ
(25 ನಯಾ ಪೈಸೆ)
7 ವರುಷಗಳಲ್ಲಿ
ರೂ. 700

ಪಿಗ್ಮಿ

- ಚಿಕ್ಕ ಗಾತ್ರದ ಆಫ್ರಿಕದ, ಪಿಗ್ಮಿಯರೊಂದಾಗಿ ಬಹುದೊಡ್ಡ ಕಾಡಾನೆಯನ್ನು ಸಂಹರಿಸಬಲ್ಲರು.
- ದಿನಕ್ಕೆ 25 ನ. ಪೈಸೇಗಳಂತಹ ಪುಡಿ ಕಾಸುಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಷ್ಟಗಳನ್ನು ಪಾರು ಮಾಡಬಲ್ಲದು.

ಸಿಂಡಿಕೇಟಿನ 104 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

The Canara Industrial & Banking Syndicate Ltd., Udipi.

ವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ. ನ.

ಸಾರ್ವಜನಿಕ ಜೀವನದಲ್ಲಿ ಸಮಸ್ಯೆಯೇಕೆ?

ಆರ್ಥಿಕ ವರ್ಗಭೇದಗಳ ಅನಾಹುತ

ಶ್ರೀ ಮೋಹನ ಮುತಾಲಿಕ.

ಮನುಷ್ಯನ ಇಚ್ಛೆಗಳು ಎಂದಿಗೂ ಪರಿಪೂರ್ಣವಾಗಲಾರವು ಎಂಬುದು ಅರ್ಥಶಾಸ್ತ್ರದ ಆರಂಭದ ಸೂತ್ರವಾಗಿದೆ. ಇದರ ಮೇಲೆಯೇ ಸಾಮಾನ್ಯವಾಗಿ ಅರ್ಥಶಾಸ್ತ್ರದ ಇಂದಿನ ಬೃಹತ್ ಆಕಾರ ಕಾಣಿಸಿಕೊಳ್ಳುತ್ತಿದೆ. ಅದರಲ್ಲಿ ಎಷ್ಟೋ ವಿಷಯಗಳಡಕವಾಗಿ ಎಷ್ಟೋ ಸೂತ್ರಗಳೂ ಹುಟ್ಟಿವೆ. ಜೀವನದ ಹುಟ್ಟಿನಿಂದ ಮೊದಲುಗೊಂಡು ಮರಣ ಪರ್ಯಂತರವೂ ಅರ್ಥಶಾಸ್ತ್ರದ ಕ್ಷೇತ್ರದಲ್ಲಿ ಮನುಷ್ಯ ಒಳಪಡಬೇಕಾಗುವುದೆಂಬ ಮಹತ್ವದ ಸಂಗತಿಗೂ ಅದರ ವ್ಯಾಪ್ತಿ ದೊಡ್ಡದಾಗಿದೆ.

ಸುಖದಿಂದಿರಬೇಕೆಂಬುದೇ ಮನುಷ್ಯನ ಅವಿರತ ಚಟುವಟಿಕೆಯ ಮೂಲಗುರಿಯಾಗಿದೆ. ಅದಕ್ಕಾಗಿ ಆತ ಸರ್ವವಿಧದ ಪ್ರಯತ್ನಗಳನ್ನೂ ನಡೆಸಿ ಯಶಸ್ವಿಯಾಗುವ ಹಂಚಿಕೆ ನಡೆಸಿದ್ದಾನೆ. ಆದರೂ ಆತನಿಗೆ ಯಾವುದರಲ್ಲೂ ನಿಶ್ಚಿತವಾದ ಸಮಾಧಾನ, ಸುಖ—ಶಾಂತಿಗಳು ದೊರೆಯಲಾರದಾಗಿವೆ. ಈ ಮುಖ್ಯ ಕಾರಣವೇ ಆರ್ಥಿಕ ಕ್ಷೇತ್ರದ ಅಸಂಖ್ಯಾತ ಸಮಸ್ಯೆಗಳಿಗೆ ಕಾರಣವಾಗಿದೆ. ಇಂದಿನ ವರ್ತಮಾನಕಾಲದಲ್ಲಿ ಕೂಡ ಈ ಸಮಸ್ಯೆಗೆ ಪರಿಹಾರ ಹುಡುಕಲು ಒಬ್ಬ ವೈಯಕ್ತಿಕ ವ್ಯಕ್ತಿ ಮೊದಲುಗೊಂಡು ರಾಷ್ಟ್ರದ ಅತ್ಯುಚ್ಚ ಸಂಸ್ಥೆಯವರೆವಿಗೂ ಸತತ ಪ್ರಯತ್ನಗಳು ನಡೆಯುತ್ತಲಿವೆ. ಇದರಲ್ಲಿ ಯಾವ ದಾರಿ ಯೋಗ್ಯವೆಂಬುದೇ ಮೂಲ ಪ್ರಶ್ನೆಯಾಗಿದೆ. ಯಾವುದಾದರೂ ಒಂದು ದಾರಿಯುತ್ತ ಮುನ್ನಡೆದರೆ ಅದಕ್ಕೆ ಅಡೆತಡೆಗಳು ಇದ್ದೇ ಇವೆ.

ಅಮೇರಿಕದ ಬಂಡವಾಳಶಾಹಿಯೂ ಆರ್ಥಿಕ ಕ್ಷೇತ್ರದಲ್ಲಿ ಮನುಷ್ಯನ ಸುಖಶಾಂತಿಗಳಿಗೆ ಹೆಚ್ಚಿನ ನೆರವನ್ನು ನೀಡಬಲ್ಲುದೆಂದು ವಾದಿಸುವವರನೇಕರಿದ್ದಾರೆ. ಮನುಷ್ಯನ ಕೊಡತೆಗೆದುಕೊಳ್ಳುವ ವ್ಯವಹಾರದಲ್ಲಿ **ಅನುಕೂಲವಾದ ಹಣದ ಸಂಗ್ರಹವೇ** ಮನುಷ್ಯನ ಇಚ್ಛಾತೃಪ್ತಿಗಳಿಗೆ ನೆರವಾಗಬಲ್ಲುದೆಂದು ಅವರ ಅಭಿಪ್ರಾಯ. ಬಂಡವಾಳದಿಂದ ಮನುಷ್ಯ ತನ್ನಿಚ್ಛೆಯಂತೆ ನಡೆಯಬಹುದಾಗಿದ್ದರೂ ಎಲ್ಲರೂ ಸಿರಿವಂತರಲ್ಲವೆಂಬುದು ಜಗತ್ತೇ ಅರಿತ ಮಾತಾಗಿದೆ. ಬಡತನ ನಿವಾರಣೆಯ ಬಗ್ಗೆ ಕೆಲವೊಂದು ಸರಕಾರಗಳು ನಡೆಸಿರುವ ಪ್ರಯತ್ನ ಬಹಳಷ್ಟು ಮುಂದೊರೆದಿದೆ. ಆದರೂ ಬಡತನ ನಿವಾರಣೆಯಾಗುವದು ಸುಲಭಸಾಧ್ಯವಲ್ಲ. ಬಡತನವನ್ನು ಹೊಡೆದಟ್ಟುವುದು ಕಠಿಣವಲ್ಲದಿದ್ದರೂ, ನಿವಾರಿಸುವುದಕ್ಕೆ ಇದೇ ತರಹದ ಅವಿರತ ಪ್ರಯತ್ನ ನಡೆಸಿದ್ದಾದರೆ ಇನ್ನೂ ನೂರಾರು ವರ್ಷಗಳಲ್ಲಿ ನಮ್ಮ ಪರಿಸ್ಥಿತಿ ಕೆಲಮಟ್ಟಿಗಾದರೂ ಸುಧಾರಿಸಬಲ್ಲುದು. ಬಡತನ ನಿವಾರಿಸುವುದೆಂದರೆ ಕೈಯಲ್ಲಿ ಬೇಕಾದ ಹಾಗೆ, ಬೇಕಾದ ವೇಳೆಯಲ್ಲಿ ಹಣವನ್ನು ಓಡಿಯಾಡಿಸುವುದೆಂಬರ್ಥವಲ್ಲ. ಜೀವನಾವಶ್ಯಕ ವಸ್ತುಗಳೆಲ್ಲದರ ಪೂರೈಕೆಯನ್ನು ಅಗತ್ಯದ ವೇಳೆಯಲ್ಲಿ ಅನುಭೋಗಿಸುವುದೇ ಸುಖದ ಮಾರ್ಗ—ಸಿರಿತನದ ಮಾರ್ಗ. ಹೀಗಾಗಬೇಕಾದರೇನೇ ನಾವು ನೂರಾರು ವರ್ಷಗಳ ವರೆಗೆ ನಿರಂತರವಾಗಿ ಆ ದಿಶೆಯಲ್ಲಿ ದುಡಿಯಬೇಕು. ನಮ್ಮ ರಾಷ್ಟ್ರೀಯ ಆದಾಯಗಳೆಲ್ಲವನ್ನೂ ಹೆಚ್ಚಿಸಿ, ಜನನ ಪ್ರಮಾಣವನ್ನು ಆದಷ್ಟು ಪ್ರಮಾಣದಲ್ಲಿ ಕಡಿಮೆಯಾಗುವಂತೆ ಪ್ರಯತ್ನಿಸುವುದೂ, ಅನುಪಯೋಗೀ ವಸ್ತುಗಳೆಂದು ತಿಳಿದವುಗಳಿಗೆ ಅನುಭೋಗಿಸುವ ಶಕ್ತಿಯನ್ನು ತಂದುಕೊಡುವುದೂ, ಜನನ ಪ್ರಮಾಣದಂತೆ ನಮ್ಮ ಆಹಾರೋತ್ಪಾದನೆಗಳನ್ನು ಹೆಚ್ಚಿಸುವುದೂ ಇಲ್ಲವೇ ಅವುಗಳ ಮಿಶ್ರ ಉಪಯೋಗೀ ವಸ್ತುಗಳ ಉತ್ಪಾದನೆಗಳನ್ನು ಮಾಡುವುದೂ, ಬಡತನ ನಿವಾರಣೆಯ ಕೆಲಮಾರ್ಗಗಳಾಗಿವೆ.

ಭಾರತದಂತಹ ರಾಷ್ಟ್ರಗಳಲ್ಲಿ ವ್ಯಕ್ತಿಯ ಆದಾಯ ಕಡಿಮೆಯಿರುವುದರ ಕಾರಣ ಅವರ ಹೊಟ್ಟೆಗೆ ಸಾಕಾಗುವಷ್ಟು ಆಹಾರವಿಲ್ಲದಿರುವುದೇ ಬಡತನದ ನಿವಾಸಕ್ಕೆ ಕಾರಣವಾಗಿದೆ. 'ಬಡವರಿಗೆ ಮಕ್ಕಳು ಹೆಚ್ಚು' ಎಂದು ಶಾಸ್ತ್ರಜ್ಞರ ಅಭಿಪ್ರಾಯವಾಗಿದ್ದು, ಅದು ಭಾರತದಲ್ಲಿ ಎದ್ದು ಕಾಣಿಸುತ್ತದೆ. ಭಾರತದಂತಹ ಮಹಾರಾಷ್ಟ್ರದಲ್ಲಿ ಭಯಂಕರವಾಗಿ ಬೆಳೆದ ಈ ಬಡತನವನ್ನು ನಿವಾರಿಸುವ ಕ್ರಮಗಳನ್ನು ಈಗಾಗಲೇ ಕೈಕೊಳ್ಳಲಾಗಿದ್ದು, ಅದಕ್ಕೆ ಎಷ್ಟು ವರ್ಷಗಳು ಹಿಡಿಯಬಹುದೆಂದು ಸ್ಪಷ್ಟವಾಗಿ ಹೇಳಲಿಕ್ಕಾಗದು. ಈ ಬಡತನದ ಪ್ರಶ್ನೆಯಿಂದಲೇ ಎಷ್ಟೋ ವಿದ್ಯಾರ್ಥಿಗಳು ತಮ್ಮ ಶಿಕ್ಷಣವನ್ನು ಮುಂದೊರೆಸಲಿಕ್ಕಾಗದೆ ಉದ್ಯೋಗಕ್ಕಾಗಿ ಅಲೆದಾಡುತ್ತಾರೆ. ಈ ಕಾರಣದಿಂದಲೂ ಭಾರತದ ಇನ್ನೊಂದು ಮಹಾ ಸಮಸ್ಯೆಯಾದ 'ನಿರುದ್ಯೋಗ' ಬೆಳೆದು ರಾಕ್ಷಸ ಸ್ವರೂಪವನ್ನು ಹೊಂದುತ್ತಿದೆ.

ಆದಾಯ ಕಡಿಮೆಯಿದೆ ಎಂಬುದರಿಂದ ಭಾರತದಲ್ಲಿ ಬಡತನ ತಲೆಯೆತ್ತಿದ್ದರೆ, ಅಮೇರಿಕೆಯಂತಹ ಬಂಡವಾಳಶಾಹಿಯಲ್ಲಿ ಆದಾಯಮಟ್ಟ ಶಿಖರಕ್ಕೇರಿದೆಂದು ಭಾವಿಸಿದರೂ ಅಲ್ಲಿಯವರ ಬಡತನದ ರೀತಿಯೇ ಬೇರೆಯಾಗಿದೆ. ಅಲ್ಲಿಯ ಜನ ತಮ್ಮ ವರಮಾನಕ್ಕನುಗುಣವಾಗಿ ಒಂದು ದೊಡ್ಡ ಬಂಗಲೆ, ವಿಶಾಲವಾದ ಬೈಲು, ವಿದ್ಯುತ್ಸಲಕರಣೆ, ರೇಡಿಯೋ ಮೊದಲಾದ ಎಲ್ಲ ಆಧುನಿಕ ಸೌಕರ್ಯಗಳ ಅಗತ್ಯದ ಅವಶ್ಯಕತೆಗಳನ್ನು ಬಯಸುತ್ತಾರೆ; ವಿವಿಧ ಚಟಗಳು ಅವರ ಆದಾಯದ ಸಮಾನತೆಯಲ್ಲಿ ಸರಿದೂಗುತ್ತವೆ. ಭಾರತದ ವ್ಯಕ್ತಿಯು ಆದಾಯ ಕಡಿಮೆಯಾಗಿದ್ದರೂ, ಅವರ ದೈಹಿಕ ಶಕ್ತಿ, ಮಾನಸಿಕ ಪರಿಶುದ್ಧತೆ, ಪರೋಪಕಾರ, ದೈವಭಕ್ತಿ, ಜನಾದರಣೆಗಳು ಜಗತ್ತಿನ ಜನರನ್ನೇ ನಾಚಿಸುವಷ್ಟು ಉನ್ನತ ಶಿಖರದಲ್ಲಿವೆ. ಹಣದ ವಿಚಾರದಲ್ಲಿ ಎಷ್ಟು ಕೀಳು ಮಟ್ಟಕ್ಕೆ ಭಾರತೀಯ ನಾಗರಿಕರು ಇಳಿದುಹೋಗಿದ್ದಾರೋ, ಅಷ್ಟೇ ಸಿರಿವಂತಿಕೆಯ ಮೆಟ್ಟಿಲನ್ನೂ ಅವರು ಇತರ ವಿಷಯಗಳಲ್ಲಿ ದಾಟಿ ಮುನ್ನುಗ್ಗಿದ್ದಾರೆಂದು ಹೇಳಬಹುದು. ನೈತಿಕ ಮಟ್ಟವೇ, ಭಾರತೀಯರ ಜೀವನರಂಗದಲ್ಲಿಯ ಬಡತನವನ್ನು ಯಶಸ್ವಿಯಾಗಿ ಎದುರಿಸಿ, ಮುಂದೊರೆಯುತ್ತಿದೆ. ಆರ್ಥಿಕ ಕ್ಷೇತ್ರ ಕೇವಲ ಹಣಪ್ರಪಂಚದ್ದಾಗಿರದೆ, ಮನುಷ್ಯನ ಜೀವನದ ಯಶಾಪಯಶಗಳ ನಿರ್ಣಾಯಕ ರಂಗವಾಗಿದೆ. ಆ ದೃಷ್ಟಿಯಲ್ಲಿ ಪೌರ್ವಾತ್ಯ ಪಾಶ್ಚಾತ್ಯ ರಾಷ್ಟ್ರಗಳ ಮಹತ್ತರ ಅಂಶವನ್ನೂ ಕಂಡುಕೊಂಡು ಅರ್ಥಶಾಸ್ತ್ರದ ಅಭ್ಯಾಸವನ್ನು ಸಾಗಿಸಬೇಕಾಗಿದೆ.

ಸಮಾಜವಾದದ ಹೊಸ ಕೂಗೊಂದನ್ನೂ ನಾವು ಇಲ್ಲಿ ಅವಲೋಕಿಸಬೇಕಾದದ್ದವಶ್ಯವಿದೆ. ವ್ಯಕ್ತಿ ವ್ಯಕ್ತಿಗಳಿಗೆ ವಿಶೇಷವಾದ ಯಾವ ಆಸ್ತಿ, ಸೌಕರ್ಯಗಳಿರದೆ, ಎಲ್ಲವೂ ಎಲ್ಲರ ಸಮಾನ ಹಕ್ಕಿನದೆಂದು ಹೇಳುವುದೇ 'ಸಮಾಜವಾದ' ಎಂದು ಕೆಲವರೆನ್ನುತ್ತಾರೆ. ಸಿರಿವಂತರನ್ನು ಬಡವರನ್ನಾಗಿ ಮಾಡದೆ, ಅಥವಾ ಅವರಿಂದ ಅವರಲ್ಲಿರತಕ್ಕ ವಿಶೇಷವಾದ ಎಲ್ಲ ಆಸ್ತಿ ಸಂಗ್ರಹಗಳನ್ನು ಕಸಿದುಕೊಂಡು, ಇಲ್ಲದವರಿಗೆ ಹಂಚುವುದು ಸಮಾಜವಾದವೆಂದೆನ್ನುವವರೂ ಇದ್ದಾರೆ. ಸಿರಿವಂತರ ಹೆಸರನ್ನೇ ತೆಗೆಯದೆ, ಬಡವರ ಜೀವನದ ಏಳ್ಗೆಗಾಗಿ ಪರಿಶ್ರಮಿಸಿ, ಅವರನ್ನು ಸಿರಿವಂತರನ್ನಾಗಿ ಮಾಡಿ, ಸಮಾಜದ ವ್ಯಕ್ತಿಗಳೆಲ್ಲರನ್ನೂ ಒಂದೇ ತರಗತಿಯ ಮಟ್ಟಕ್ಕೆ ತರುವುದೇ ಸಮಾಜವಾದವೆಂದೆನ್ನುವವರೂ ಇದ್ದಾರೆ. ಒಟ್ಟಾರೆ ಈ ಸಮಾಜವಾದ ಅಖಿಲ ಮಾನವ ಜನಾಂಗದ ಸಿರಿವಂತಿಕೆ, ಬಡತನಗಳ ಮೇಲೆಯೇ ಕಣ್ಣಿಟ್ಟು ಮುನ್ನಡೆಯುತ್ತಿದ್ದುದು ಮಾತ್ರ ಸತ್ಯ!

ಹೀಗಾಗಿ ಅರ್ಥಶಾಸ್ತ್ರದ ಚಟುವಟಿಕೆಗಳು ಬಡತನ ಸಿರಿತನಗಳ ಮೇಲೆಯೇ-ಈಗ ವಿಶೇಷವಾಗಿ ಅವಲಂಬಿಸಿದೆಂದು ಹೇಳಬೇಕಾಗಿದೆ. ಮನುಷ್ಯ ಸಿರಿವಂತನೇ ಇರಲಿ, ಬಡವನೇ ಇರಲಿ ಅವನ ಇಚ್ಛೆಗಳು ಅರ್ಥಶಾಸ್ತ್ರದ ಸೂತ್ರದಂತೆ ಪೂರ್ಣವಾಗಲು ಸಾಧ್ಯವೇ ಇಲ್ಲ. ಆದರೆ ಮನುಷ್ಯನ ವರ್ಗಭೇದದ ಅವಶ್ಯಕ ಇಚ್ಛೆಗಳಿಗೂ ಸಾಮಾನ್ಯ ಇಚ್ಛೆಗಳಿಗೂ ಅಜಗಜಾಂತರವಾದ ಅಂತರವಿದೆ. ಎಲ್ಲ ವರ್ಗದವರೂ ಅನುಭೋಗಿಸುವ ವಸ್ತು ಪದಾರ್ಥಗಳಿಗೆ ಮುಕ್ತಾಯವೆಂಬುದೊಂದು ಇಲ್ಲದಿದ್ದರೂ, ಬಡವರು ಸಿರಿವಂತರಿಗೆ ಎಷ್ಟೋ ವೇಳೆಯಲ್ಲಿ ಆವಶ್ಯಕ ಪದಾರ್ಥಗಳೇ ದೊರೆಯುವುದಿಲ್ಲ. ಬಡವರಿಗೆ ತಮ್ಮ ಕುಟುಂಬದ ಅಸಾಮರ್ಥ್ಯದ ಮೂಲಕ ಎಷ್ಟೋ ಆವಶ್ಯಕ ವಸ್ತು ಪದಾರ್ಥಗಳು ದೊರಕದಾದರೆ ಸಿರಿವಂತರಿಗೆ ಅವು ಸಿಗಲಾರದ ಪ್ರಸಂಗಗಳಿಗೂ ಕಡಿಮೆಯೇನಿಲ್ಲ.

ಆದ್ದರಿಂದ ಅವಶ್ಯಕ ಪದಾರ್ಥಗಳು ವ್ಯಕ್ತಿಯ ಅಳವಿಗೆ ಸಿಲುಕದ ಪರಿಸ್ಥಿತಿಯಿಂದಾಗಿ ದೊರಕದಾಗಬಹುದಾಗಿದ್ದರೂ ದೊರಕಬಹುದಾದ ಸಾಮಾನ್ಯ ಪದಾರ್ಥಗಳಾದರೂ ವ್ಯಕ್ತಿಗೆ ಅನುಭೋಗಿಸುವಂತಹ ಪರಿಸ್ಥಿತಿಯು ನಿರ್ಮಾಣವಾಗಬೇಕಾಗಿದೆ.. ಇದರ ಮೂಲ ಸಾಧ್ಯಾಸಾಧ್ಯತೆಗಳು ಸಮಾಜ ಹಾಗೂ ಸರಕಾರಗಳ ನಿಕಟ ಸಂಪರ್ಕಗಳ ಮೇಲೆಯೇ ವಿಶೇಷವಾಗಿ ಅವಲಂಬಿಸಿದೆ. ಸಮಾಜವು ತನ್ನ ಬಿಗುವಿನ ಕಟ್ಟುನಿಟ್ಟುಗಳನ್ನು ಪರಿಸ್ಥಿತಿಗನುಗುಣವಾಗಿ ಬದಲಿಸುವುದೂ, ಸರಕಾರವು ಅವರಿಗೆ ನೆರವಾಗುವಂತಹ ಕೆಲವೊಂದು ಕಾಯದೆಗಳನ್ನು ಮಾಡುವುದೂ ಅತ್ಯವಶ್ಯವೆನಿಸುವುದು. ಮನುಷ್ಯನಲ್ಲಿ ಸಾವಿರಾರು ವರ್ಷಗಳಿಂದ ಬೆಳೆದುಬಂದಿರುವ ಸಿರಿವಂತಿಕೆ ಬಡತನಗಳ ನಿರ್ಮೂಲನ ಶಕ್ತಿ ಕೇವಲ ಸರಕಾರಗಳ ಕೈಗೊಂಬೆಗಳಾಗಿರದೆ, ಸಮಾಜದ ಚಿಕ್ಕ ಕಡ್ಡಿಗಳಾಗಿವೆ.

ವ್ಯಕ್ತಿಗಳ ಈ ವರ್ಗ ಬದಲಾವಣೆಯೇ ದೇಶದ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಕ್ಷೇತ್ರದ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿದೆ. ಆರ್ಥಿಕ ಚಟುವಟಿಕೆಯು ಹೊಸ ಹೊಸ ರೀತಿ ನಿಯಮಗಳನ್ನು ಪ್ರಕಟಿಸಿ ದೈನಂದಿನ ಜೀವನಮಟ್ಟವನ್ನು ಸುಧಾರಿಸುವ ಕಾರಣಗಳನ್ನೇ ರಾಜಕೀಯವಾಗಿ ಆಡಿಕೊಳ್ಳಲಾಗುತ್ತಿವೆ; ಬಹಿರಂಗವಾಗಿ ಘೋಷಿಸಲಾಗುತ್ತಿವೆ. ಈ ರೀತಿಯು ಸುಧಾರಣೆಯಾಗಬೇಕಾದರೆ, ವ್ಯಕ್ತಿ ವ್ಯಕ್ತಿಗಳಲ್ಲಿಯೂ ಸಮಾಜ ಸಮಾಜಗಳಲ್ಲಿಯೂ, ರಾಜ್ಯ ರಾಜ್ಯಗಳಲ್ಲಿಯೂ ಆರ್ಥಿಕ ವರ್ಗಭೇದವನ್ನು ಹೊಡೆದೋಡಿಸಬೇಕಾಗುವುದು. ಇದಕ್ಕೆ

(೯ನೇ ಪುಟ ನೋಡಿರಿ)



ಈ ವರ್ಷ (ತಾ. 17—1—58) ಪರ್ಯಾಯ ಪೀಠವನ್ನು ಬಿಟ್ಟುಕೊಡಲಿರುವ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು

ಭಾರತದ ಸರ್ವಾಂಗೀಣ ವಿಕಾಸಕಾರ್ಯ—

ಸೇವಾಸಂಸ್ಥೆಗಳ ಮಹತ್ವದ ಪಾತ್ರ

ಸ್ವತಂತ್ರ ಭಾರತದಲ್ಲಿ ಸಮಾಜಸೇವಾ ಕಾರ್ಯಕ್ರಮಗಳಲ್ಲಿ ಜನಾಭಿರುಚಿಯು ದಿನದಿನಕ್ಕೆ ಹೆಚ್ಚುತ್ತ ಇದೆಯೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಮುಖ್ಯವಾಗಿ, ರಾಜನೈತಿಕ ಕ್ರಾಂತಿಯಾದನಂತರ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿಯನ್ನು ಬಲಪಡಿಸುವುದು ಅತ್ಯಂತಾವಶ್ಯಕವಾಗಿದೆ. ಭಾರತ ಸರಕಾರ ಹಾಗೂ ಭಾರತೀಯ ಜನತೆಯು ದೇಶದಲ್ಲಿ ಸಾಮಾಜಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವುದರಲ್ಲಿ ಎಂದಿಗೂ ಹಿಂಜರಿಯಲಾರರೆಂದು ದೃಢ ವಿಶ್ವಾಸವಿದೆ. ಇದೀಗ ಹಿಂದಿನ ದಿನಗಳಿಗಿಂತ ಪ್ರಮಾಣದಲ್ಲಿ ಅಧಿಕವಾಗಿದ್ದರೂ ಪ್ರತ್ಯಕ್ಷರೂಪದಲ್ಲಿ ತೀರ ಕಡಿಮೆಯೆಂದು ಕಂಡುಬರುತ್ತಿದೆ. ಪರಂತು, ಮುಂದೆ ಮುಂದೆ ನಾವು ಸಮಾಜಸೇವಾ ಕಾರ್ಯಗಳ ಮುಖಾಂತರವಾಗಿ, ನಮ್ಮ ದೇಶ ಭಾರತದ ಶರೀರವನ್ನೇ ಪರಿವರ್ತಿಸಿಕೊಳ್ಳುವುದು ಸಾಧ್ಯವಿದೆ.

ಧಾರ್ಮಿಕ ಮತ್ತು ಸಾಂಸ್ಕೃತಿಕ ದೃಷ್ಟಿಗಳಿಂದ ಭಾರತದಲ್ಲಿ ಆರಂಭಕಾಲದಿಂದಲೂ ಸಮಾಜ ಕಲ್ಯಾಣದ ಕಾರ್ಯಗಳನ್ನು ಶ್ರೇಷ್ಠಕರ್ಮಗಳೆಂದು ತಿಳಿಯಲಾಗಿದೆಯಲ್ಲದೇ ಈ ಮೂಲಕಾರಣದಿಂದಾಗಿಯೇ ನಮ್ಮ ಭಾರತದಲ್ಲಿ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಸಂಸ್ಥೆಗಳು ಸ್ಥಾಪಿತವಾಗಿ ಕಾರ್ಯನಿಮಗ್ನವಾಗಿರುವುವು. ಬುದ್ಧನ ಕಾಲದಿಂದ ಹಿಡಿದು ಇಂದಿನ ೨೦ನೆಯ ಶತಮಾನದ ವರೆಗೂ ನಮ್ಮ ದೇಶದಲ್ಲಿ ತಮ್ಮ ಸಂಪೂರ್ಣ ಜೀವನವನ್ನು ಸಮಾಜ ಸೇವೆಗಾಗಿ ಮೀಸಲಿಟ್ಟ, ತಮ್ಮ ನಿಃಸ್ವಾರ್ಥಪರತೆಯಿಂದ ಸಮಾಜಸೇವಕರ ಸಂಖ್ಯೆಯನ್ನು ಹೆಚ್ಚಿಸಿದ ಹಾಗೂ ಜನತೆಯಿಂದ ಪೂಜನೀಯರೆನಿಸಲ್ಪಟ್ಟ ಅನೇಕ ವ್ಯಕ್ತಿಗಳು ಹುಟ್ಟಿಬಂದಿರುವರು.

ಆದರೆ, ಭಾರತದ ಪರಾಧೀನತೆಯು ಬಹಳ ವರ್ಷದ ವರೆಗೆ ಸಮಾಜಸೇವೆಯಲ್ಲಿ ಮುಂದುವರಿಯಲಿದ್ದ ಒಂದು ದೊಡ್ಡ ತೊಡಕಾಯಿತು. ಅದರ ಪ್ರಗತಿಯು ಸಂಪೂರ್ಣ ತಡೆಹಿಡಿಯಲ್ಪಟ್ಟ ಒಂದು ಸಮಯವೂ ಬಂದಿತ್ತು. ಭಾರತೀಯರಲ್ಲಿ ಪರಾಧೀನತೆಯ ಕಾರಣದಿಂದಾಗಿ ಉತ್ಪನ್ನವಾದ ಸಕಲ ದುಷ್ಪರಿಣಾಮಗಳು ಭಾರತೀಯರನ್ನು ಆಕ್ರಮಿಸಿಕೊಂಡಿರುವಾಗ, ಅಲ್ಪ ಪ್ರಮಾಣದಲ್ಲಿ ಸಮಾಜ ಸೇವೆಯು ಕ್ರೈಸ್ತ ಪ್ರಚಾರಕರಿಂದ ನಡೆಸಲ್ಪಡುತಿತ್ತು. ಬಂಗಾಳದಲ್ಲಿ ೧೮೦೦ರಲ್ಲಿ ಈ ಕಾರ್ಯವು ಆರಂಭವಾಗಿತ್ತು. ಅವರ ವಿಶೇಷ ಉದ್ದೇಶವಾದರೋ ಧರ್ಮಪರಿವರ್ತನವಾಗಿತ್ತು. ಕಿಂತು ಇದು ಅವರಿಗೆ ಕೊಂಚ ಮಟ್ಟಿನ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಂದ ಮಾತ್ರ ಸಾಧ್ಯವೆನಿಸುತಿತ್ತು. ಅವರು ಬಾಲ ವಿವಾಹ, ಬಾಲಹತ್ಯಾ, ಬಹುಪತಿ, ಬಹುಪತ್ನಿ ಮೊದಲಾದ ಪದ್ಧತಿಗಳನ್ನು ಸಮಾಜದಿಂದ ಹೊರದಬ್ಬುವ ಪ್ರಯತ್ನ ನಡೆಸಿದ್ದರು; ಅಸ್ಪೃಶ್ಯತೆಯನ್ನು ಸಹದೂರ ಮಾಡಿ ತಮ್ಮ ಧರ್ಮಪ್ರವರ್ತನಕ್ಕೆ ಪ್ರೋತ್ಸಾಹಿಸುತಿದ್ದರು. ಕ್ರೈಸ್ತ ಪ್ರಚಾರಕರ ಈ ರೀತಿಯ ಸಮಾಜೋಪಯೋಗಿ ಕೃತ್ಯಗಳಿಂದ ದೇಶದಲ್ಲಿ ಶಿಕ್ಷಣ, ವಿಚಾರ ಸ್ವಾತಂತ್ರ್ಯ ಮತ್ತು ಔದಾರ್ಯಗಳ ಭಾವನೆಯು ಬೆಳೆಯಿತು. ಇವರ ಪರಿಣಾಮ ಸ್ವರೂಪವಾಗಿ ಬಂಗಾಳದಲ್ಲಿ ಬ್ರಹ್ಮ ಸಮಾಜ ರಾಮಕೃಷ್ಣ ಮಿಶನ್ ಮೊದಲಾದ ಸಂಸ್ಥೆಗಳು ಜನ್ಮತಳೆದುವು; ಮತ್ತು ಬಹಳವೇಗವಾಗಿ ಕಾರ್ಯ ತತ್ಪರವಾದುವು. ಬಂಗಾಳದ ಪ್ರಸಿದ್ಧ ಶಿಕ್ಷಣ ವಿಶೇಷಜ್ಞನೂ ಲೇಖಕನೂ ಸಮಾಜ ಸುಧಾರಕನೂ ಆಗಿದ್ದ ರಾಜಾರಾಮ ಮೋಹನರಾಯನ ಹೆಸರನ್ನು ಉಲ್ಲೇಖಿಸುವುದು ಅಗತ್ಯ. ಇವನು ದೇಶದಲ್ಲಿ ಕ್ರೈಸ್ತಮತ ಪ್ರಚಾರ ಕಾರ್ಯವನ್ನು ತಡೆದು ಮಾತ್ರ ತೃಪ್ತಿಗೊಂಡಿರದೇ ಭಾರತದಲ್ಲಿ ಹೊಸ ಆರ್ಥಿಕ ಮತ್ತು ಸಾಮಾಜಿಕ ಅವಸ್ಥೆಗಳ ನಿರ್ಮಾಣಕಾರ್ಯಗಳಿಗೆ ಹೊಸ ಜೀವದುಂಬಿದನು. ಇಂತಹ ಕಾರ್ಯಗಳು ಮುಂದಕ್ಕೆ ದೇಶದ ಇತರ ಎಡೆಗಳಲ್ಲೂ ಎಂದರೆ, ಮಹಾರಾಷ್ಟ್ರ, ಉತ್ತರ ಪ್ರದೇಶ, ಪಂಜಾಬ ಹಾಗೂ ದಕ್ಷಿಣ ಭಾರತಗಳಲ್ಲಿ ತೊಡಗಿದುವು. ಮಹಾರಾಷ್ಟ್ರದಲ್ಲಿ ೧೮೪೯ರಲ್ಲಿ ಪರಮಹಂಸ ಸಭೆ ಸ್ಥಾಪಿತವಾಯಿತು; ಇದು ಜಾತಿಮತಗಳ ಭೇದ ನಿರ್ಮೂಲನಕ್ಕೆ ಒಲವಿತ್ತಿತು. ೧೮೬೧ರಲ್ಲಿ ನ್ಯಾಯಮೂರ್ತಿ ರಾನಡೆಯವರ ನೆರವಿನಿಂದ ವಿಧವಾವಿವಾಹ ಸಂಸ್ಥೆಯು ಪ್ರಾರಂಭವಾಯಿತು. ೧೮೭೦ರಲ್ಲಿ ಸಾರ್ವಜನಿಕ ಸಭೆ ಮತ್ತು ೧೮೮೨ರಲ್ಲಿ ಪಂಡಿತ ರಾಮಭಾಯಿಯವರು ಆರ್ಯ ಮಹಿಳಾ ಸಮಾಜಗಳಿಗೆ ಪಂಚಾಂಗ ಹಾಕಿದರು. ಇದೇ ರೀತಿಯಲ್ಲಿ ಅನ್ಯ ಪ್ರಾಂತಗಳಲ್ಲಿ ಸಹಸಮಾಜಸುಧಾರಣೆ ಮತ್ತು ಸಮಾಜ ಕಲ್ಯಾಣದ ಕಾರ್ಯವು ತೀವ್ರವಾಗಿ ಮುಂದುವರಿಯಿತು ಪಂಜಾಬನಲ್ಲಿ ಸ್ವಾಮಿ ದಯಾನಂದ ಮತ್ತು ದಕ್ಷಿಣದಲ್ಲಿ ಡಾಕ್ಟರ್ ಅನ್ನಿಬಿಸೆಂಟರು ಮೊದಲಾದ ಪ್ರಸಿದ್ಧ ವ್ಯಕ್ತಿಗಳ ಮೂಲಕ ದೇಶವು ಸುಧಾರಣೆಗೆ ಪಣತೊಟ್ಟಿತು.

ಈ ಎಲ್ಲಾ ಕೆಲಸಗಳನ್ನು ಹೆಚ್ಚಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕ ವಿಚಾರವಂತರೇ ಮಾಡಿದರು. ಮುಂದೆ, ಇತರರೂ ಈ ಕಾರ್ಯಗಳಲ್ಲಿ ಭಾಗವಹಿಸಿದರು. ಜನತೆಯಲ್ಲಿ ಅಜ್ಞಾನವು ಕಡಿಮೆಯಾಗಿ ಹೊಸ ಹೊಸ ವಿಚಾರ ಪ್ರಣಾಲಿಗಳು ಉದ್ಭವಿಸಿದುವು. ಪೂರ್ವ ಮತ್ತು ಪಶ್ಚಿಮ ದೇಶಗಳ ಸಮ್ಮಿಲನದಿಂದ ಉತ್ಪನ್ನವಾದ ನವೀನ ಸಂಸ್ಕೃತಿ ದೇಶದೆಲ್ಲಾ ಮೂಲೆಗಳಲ್ಲಿಯೂ ಹರಡಿತು. ದೇಶವಾಸಿಗಳಲ್ಲಿ ಸ್ವಾತಂತ್ರ್ಯತೃಷೆ ಬೆಳೆಯಿತು— ಗೋಖಲೆ ದಾದಾಭಾಯಿ ನವರೋಜಿ, ರವೀಂದ್ರನಾಥ ಟಾಗೋರ, ಬಾಲಗಂಗಾಧರ ತಿಲಕ, ಮದನಮೋಹನ ಮಾಲವೀಯ, ಲಾಲಾಲಜಪತರಾಯ್ ಮೊದಲಾದ ಅನೇಕ ನೇತಾರರು ಸ್ವಾತಂತ್ರ್ಯದ ಧ್ವನಿಯೆತ್ತಿದರು. ಸರ್ವೆಂಟ್ಸ್ ಆಫ್ ಇಂಡಿಯಾ, ಸರ್ವೆಂಟ್ಸ್ ಆಫ್ ಪೀಪಲ್ ಸೊಸಾಯಿಟಿ ಮೊದಲಾದ ಸಂಸ್ಥೆಗಳು ಆರಂಭವಾದುವು. ಇವುಗಳ ಮೂಲಕ ಅಧಿಕತರ ಸಂಖ್ಯೆಯಲ್ಲಿ ನವಯುವಕರು ನಿಸ್ವಾರ್ಥ ಸೇವೆಯನ್ನೇ ತಮ್ಮ ಜೀವನದ ಏಕ ಮಾತ್ರ ಗುರಿಯನ್ನಾಗಿಸಿದರು. ಬಡತನದ ಜೀವನವನ್ನು ಸ್ವೀಕರಿಸಿ, ದೇಶದ ಮೂಲೆ ಮೂಲೆಗಳಲ್ಲಿ ಸೇವಾ ಕಾರ್ಯವನ್ನು ಜತನದಿಂದ ಮತ್ತು ವಿಶ್ವಾಸದಿಂದ ಮಾಡಿದರು. ಇದೇ ಕಾಲದಲ್ಲಿ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಆಫ್ರಿಕದಿಂದ ಹಿಂದಿರುಗಿ ಭಾರತಕ್ಕೆ ಬಂದರು ಮತ್ತು ವಿದೇಶೀ ರಾಜ್ಯದ ಅನ್ಯಾಯ, ಜನತೆಯಲ್ಲಿ ಬೆಳೆದು ಬಂದ ಅಸಂತೋಷಗಳ ಅನುಭವ ಮಾಡಿಕೊಂಡರು.

ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಬಹಳ ಉಚ್ಚ ಮಟ್ಟದ ಸಮಾಜ ಸೇವಕರಾಗಿದ್ದರು. ಅವರು ಆಫ್ರಿಕದಲ್ಲಿ ಭಾರತೀಯರಿಗಾಗುತಿದ್ದ ಅನ್ಯಾಯವನ್ನು ಖಂಡತುಂಡವಾಗಿ ವಿರೋಧಿಸಿದ್ದರು ಸತ್ಯ ಮತ್ತು ಅಹಿಂಸೆಗಳಲ್ಲಿ ಅವರಿಗೆ ಅಚಲ ವಿಶ್ವಾಸವಿತ್ತು. ತಾವು ಸಮಾಜ ಸೇವಾ ಕಾರ್ಯಗಳಲ್ಲಿ ಮಾಡುತಿದ್ದ ಅವುಗಳ ಪ್ರಯೋಗವನ್ನು ಈಗ ರಾಜ ನೈತಿಕ ಕ್ಷೇತ್ರಗಳಲ್ಲೂ ಮಾಡ ಬಯಸಿದರು. ಆದುದರಿಂದ ಅವರು ಸ್ವಾತಂತ್ರ್ಯ ಸಂಗ್ರಾಮದ ನೇತೃತ್ವವನ್ನು ಸ್ವೀಕರಿಸಿದರು. ಇದರಿಂದ ದೇಶದಲ್ಲಿ ನವಜೀವನ, ನವಶಕ್ತಿ ಮತ್ತು ನವಕಾರ್ಯಗಳು ಮೊದಲಾದುವು. ಬಾಲೋನ್ನತಿ, ಸ್ತ್ರೀಪುನರುದ್ಧಾರ, ಹರಿಜನೋದ್ಧಾರ, ಶಿಕ್ಷಣ ಸುಧಾರಣೆ, ದೇಶೀ ಚಿಕಿತ್ಸೆ, ಆದಿ ವಾಸಿಗಳ ಅಭಿವೃದ್ಧಿ— ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಅವರು ಹೃದಯ ಸ್ಪರ್ಶಿಯಾಗಿ ಕಂಡು ಬಂದರು. ಇವೆಲ್ಲವನ್ನೂ ಅವರು ತಮ್ಮ ವ್ಯಕ್ತಿಗತ ಜೀವನದಲ್ಲಿ ಅಳವಡಿಸಿಕೊಂಡು ಪ್ರತ್ಯಕ್ಷೀಕರಿಸಿದರು. ದೇಶದಲ್ಲಿ ಅನೇಕ ಸೇವಾ ಕಾರ್ಯಗಳಾಗಲು ಪ್ರಾರಂಭವಾಯಿತು. ಸಮಾಜದಲ್ಲಿ ನವಚೇತನ ಮೂಡಿತು. ರಚನಾತ್ಮಕ ಕೆಲಸಗಳಲ್ಲಿ ಜನಾಭಿರುಚಿಯು ಇಮ್ಮಡಿ ನಾಲ್ಮಡಿಯಾಯಿತು. ಸಮಾಜ ಸೇವೆಯು ಅನೇಕ ಕಾರ್ಯಗಳು ರಾಜನೈತಿಕ ಸಂಸ್ಥೆಗಳ ಮೂಲಕವೂ ನಡೆಯತೊಡಗಿದುವು. ಈ ರೀತಿಯಲ್ಲಿ ಸಮಾಜ ಸೇವೆ ಮತ್ತು ರಾಜನೀತಿಗಳ ನಡುವೆ ಹೊಸ ತಾಳ ತಂತಿಗಳು ಕೂಡಿಬಂದುವು. ಮಹಾತ್ಮಾ ಗಾಂಧೀಯವರು ಅಖಂಡ ದೇಶದಲ್ಲಿ ಸಂಚರಿಸಿ ಜನತೆಯಲ್ಲಿ ಸೇವೆ, ತ್ಯಾಗಗಳ ಭಾವನೆಯನ್ನು ಜಾಗ್ರತಗೊಳಿಸಿದರು; ಅವನ್ನು ನಿರ್ಭೀಕ ಮತ್ತು ಶಕ್ತಿಶಾಲಿಗಳನ್ನಾಗಿ ಮಾಡಿದರು. ಪರಿಣಾಮವಾಗಿ ೧೯೪೭ರಲ್ಲಿ ದೇಶವು ಸ್ವತಂತ್ರವಾಯಿತು; ಮತ್ತು ಈಗ ನೇತಾರರಲ್ಲಿ ರಾಜನೈತಿಕ ಸ್ವಾತಂತ್ರ್ಯ ಪ್ರಾಪ್ತಿಯಾದ ಮೇಲೆ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹೊಂದಲು ಮುಂದಡಿಯಿಡುವುದು ಆವಶ್ಯಕವಾಗಿದೆ ಎಂಬ ಚಿಂತೆ ಅಂಟಿಕೊಂಡಿತು.

ಈ ಉದ್ದೇಶಗಳನ್ನಿಟ್ಟುಕೊಂಡು ನಮ್ಮ ಮುಂದಾಳುಗಳು ಪಂಚವಾರ್ಷಿಕ ಯೋಜನೆಗಳನ್ನಾರಂಭಿಸಿದರು. ನಮ್ಮ ಪ್ರಧಾನಿ ನೆಹರೂರವರ ಸಭಾಪತಿತ್ವದಲ್ಲಿ ಇದರ ರೂಪರೇಖೆಗಳು ಗುರುತಿಸಲಾದುವು. ಪ್ರಥಮ ಯೋಜನೆಯು ೧೯೫೧ರಲ್ಲಿ ಇಡಿ ದೇಶದಲ್ಲಿ ಮೊದಲಾಯಿತು ಈ ಯೋಜನೆಯಲ್ಲಿ ಭಾರತ ಸರಕಾರವು ೨೩೦೦ ಕೋಟಿಗಿಂತಲೂ ಹೆಚ್ಚು ರೂಪಾಯಿಗಳನ್ನು ವೆಚ್ಚ ಮಾಡಿತು. ಇದೀಗ ೧೯೫೬ರಿಂದ ಎರಡನೆಯ ಯೋಜನೆಯು ಪ್ರಾರಂಭವಾಗಿದ್ದು ಇದರಲ್ಲಿ ೪೮೦೦ ರಿಂದ ೫೩೦೦ ಕೋಟಿ ರೂಪಾಯಿಗಳು ವೆಚ್ಚವಾಗಲಿದ್ದು ಸಾಮಾಜಿಕ ಶಿಕ್ಷಣ, ಬಾಲಕಲ್ಯಾಣ, ಮಹಿಳೋದ್ಧಾರ, ಆರೋಗ್ಯ ಮೊದಲಾದ ಕಾರ್ಯಗಳಿಗೂ ಇದರಲ್ಲಿ ಅಲ್ಪ ಪಾಲು ದೊರೆಯುವುದು. ಇದಲ್ಲದೆ, ದೇಶದ ಸಾಂಬ ನೂರು ನೂರು ಗ್ರಾಮಗಳನ್ನು ಒಂದುಮಾಡಿ ಒಂದು ಕೇಂದ್ರದ ಅಧೀನದಲ್ಲಿತ್ತು ಗ್ರಾಮ ಸೇವಕರ ನೇಮಕವಾಗಿದೆ. ಗ್ರಾಮವಾಸಿಗಳಲ್ಲಿ ಜಾಗ್ರತಿಯುತ್ಪನ್ನ ಮಾಡುವುದು, ನವಭಾರತ ನಿರ್ಮಾಣದಲ್ಲಿ ಭಾಗವಹಿಸುವುದು ಮತ್ತು ಜನತೆಯಿಂದ ಸಹಾಯವನ್ನು ಕೊಡಿಸುವುದು, ಬಾಲ ಮಹಿಳೆಯರ ಆವಶ್ಯಕತೆಗಳನ್ನು ಲಕ್ಷಿಸುವುದು ಮತ್ತು ಅವರನ್ನು ಸಮಾಜಸೇವೆಯ ಕಾರ್ಯಗಳಲ್ಲಿ ತೊಡಗಿಸುವುದು, ಗ್ರಾಮದಲ್ಲಿ ಹೊಸಹೊಸ ಕಾರ್ಯಗಳನ್ನು ಆರಂಭಿಸುವುದು, ಶಾಲೆ ಮತ್ತು ಆಸ್ಪತ್ರೆಗಳನ್ನು ತೆರೆಯುವುದು, ಕೆರೆ, ರಸ್ತೆ ಸೇತುವೆಗಳನ್ನು ಕಟ್ಟಿಸುವುದು ಮೊದಲಾದುವೇ ಆತನ ಕರ್ತವ್ಯವಾಗಿರುವುದು.

(೮ನೇ ಪುಟ ನೋಡಿರಿ)

ನಾಡಿಕೆಯಂತೆ ನವಯುಗದ
ಪ್ರಜಾರಾಜ್ಯ ವಿಶೇಷ ಸಂಚಿಕೆ
(ರಿಪಬ್ಲಿಕ್ ಡೇ ಸ್ಪೆಶ್ಯಲ್)

ತಾ. **26-1-1958**ರಂದು ಪ್ರಕಟವಾಗುವುದು.

ಈ ಸಂಚಿಕೆಯಲ್ಲಿ ಡಾ| ಕೆ. ಕೃಷ್ಣಮೂರ್ತಿ, ಎಂ. ಎ., ಬಿ ಟಿ, ಪಿಎಚ್.ಡಿ.; ಶ್ರೀಗಳಾದ ಮಂಜೇಶ್ವರ ಗೋವಿಂದ ಪೈ, ಬಿ. ಎ.; "ಹೊಯಿಸಳ"; ಯು. ನಾ. ಉಡುಪ, ವಿದ್ವಾನ್; ಎ. ಎಸ್. ರಾಮಕೃಷ್ಣ; ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ; ಸಂಜೀವ ಲಕ್ಷ್ಮೀಶ್ವರ, ಬಿ. ಎ; ಎಸ್. ವೆಂಕಟರಾಜ; ಸೇವ ನಮಿರಾಜ ಮಲ್ಲ, ಎಂ ಎ., ಬಿ. ಎಲ್.; ಕು. ಶಿ. ಹರಿದಾಸ ಭಟ್ಟ, ಎಂ. ಎ; ಮೋಹನ ಮುತಾಲಿಕ, ಬೈಕಾಡಿ ವೆಂಕಟಕೃಷ್ಣರಾವ್ ಮೊದಲಾದವರ ಲೇಖನ ಕವನಗಳು ಬರಲಿರುವವು.

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ನವಯುಗ ವಾರಪತ್ರಿಕೆ, ಉಡುಪಿ.

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೯-೧-'೫೮	೧೭

ಸಾಹಸದ ಫಲಶ್ರುತಿ

ಹೊಸವರ್ಷದ ಮೊದಲ ದಿನಗಳಲ್ಲಿಯೇ ದಕ್ಷಿಣಧ್ರುವವನ್ನು ಮಾನವನು ಭೂಮಾರ್ಗವಾಗಿ ತಲುಪಿದ ಒಂದು ವಿಶೇಷ ವರ್ತಮಾನವು ಬಂದಿದ್ದು ಅದು ಮಾನವನ ಕಲ್ಯಾಣಕ್ಕಾಗಿ ಉಪಕೃತವಾಗುವುದೆಂದು ಆಶಿಸುತ್ತೇವೆ. ಗೋಲಾಕಾರವಾಗಿ ತನ್ನ ಅಕ್ಷದಲ್ಲಿ ಸುತ್ತುತ್ತಿರುವ ನಾವು ವಾಸವಾಗಿರುವ ಭೂಗೋಲದ ಕೆಳಕೆಳಗಿನ ತುದಿಯಾಗಿರುವ ಈ ಧ್ರುವಭಾಗವನ್ನು ಮಾನವನು ಮುಟ್ಟಲು ಅದೆಷ್ಟು ಧೈರ್ಯಸ್ಥೈರ್ಯವನ್ನವಲಂಬಿಸಿರಬೇಕು! ಅಮೆರಿಕನ್ ತಂಡದ ಸರ್ ಎಡ್ಮಂಡ್ ಹಿಲಾರಿಯವರು ಈ ಪ್ರಯಾಸದ ಕಾರ್ಯವನ್ನು ಕಾರ್ಯಗತಗೊಳಿಸಿದುದಕ್ಕಾಗಿ ಜಗತ್ತು ಅವರಿಗೆ ಕೃತಜ್ಞವಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ೧೯೫೩ರ ಮೇ ಮಾಸದಲ್ಲಿ ಶ್ರೀ ಹಿಲಾರಿಯವರು ಭಾರತೀಯ ಪರ್ವತಾರೋಹಿ ತೇನಸಿಂಗರೊಡನೆ ಜಗತ್ತಿನ ಅತ್ಯಂತ ಹಿರಿದಾದ ಗೌರೀಶಂಕರ ಶಿಖರದ ತುತ್ತತುದಿಯನ್ನು ಏರಿ ಕೀರ್ತಿವಂತರಾಗಿದ್ದು ಇದೀಗ ತಮ್ಮ ದ್ವಿತೀಯ ಸಾಹಸದಿಂದ ಕೀರ್ತಿ ಕಿರೀಟದಲ್ಲಿನ್ನೊಂದು ಗರಿಯನ್ನೇರಿಸಿಕೊಂಡಿರುವರು. ೧೯೧೧ರಲ್ಲಿ ನಾರ್ವೇಯ ರೋಲ್ಡ್ ಅಮುಂಡಸನ್‌ರವರ ತಂಡ ಮತ್ತು ಬ್ರಿಟಿಷರ ಕ್ಯಾಪ್ಟನ್ ಸ್ಕಾಟರು ಈ ಧ್ರುವ ಪ್ರದೇಶವನ್ನು ತಲಪಿದ್ದರೂ, ಆ ವೇಳೆ ಈ ಭಾಗವನ್ನು ಆಕಾಶ ಮಾರ್ಗವಾಗಿ ಸೇರಬಹುದಾಗಿದ್ದರೂ ನೆಲಮಾರ್ಗವಾಗಿ ಮುಟ್ಟಿದವರಲ್ಲಿ ಶ್ರೀ ಹಿಲಾರಿಯವರೇ ಪ್ರಪ್ರಥಮರು. ಇಂಗ್ಲೆಂಡ್, ರಶ್ಯ, ಆಸ್ಟ್ರೇಲಿಯಾ, ನ್ಯೂಜಿಲೇಂಡ್, ದಕ್ಷಿಣ ಆಫ್ರಿಕ, ಫ್ರಾನ್ಸ್, ನಾರ್ವೆ, ಅರ್ಜೆಂಟೀನ, ಚಿಲಿ, ಜಪಾನ್ ಮತ್ತು ಅಮೆರಿಕ ದೇಶಗಳ ತಂಡಗಳು ಈ ಭಾಗವನ್ನು ಮುಟ್ಟಲು ಪ್ರಯತ್ನಶೀಲರಾಗಿದ್ದು ಅವರಲ್ಲಿ ಅಮೆರಿಕವು ಮೊತ್ತಮೊದಲಿಗೆ ಜಯಶಾಲಿಯಾಗಿದೆ, ಉಳಿದವೂ ಸದ್ಯದಲ್ಲಿಯೇ ಧ್ರುವವನ್ನು ಮುಟ್ಟುವ ತಮ್ಮ ಸಾಹಸಪೂರ್ಣ ಉದ್ಯಮದಲ್ಲಿ ಯಶಸ್ವಿಯಾಗುವ ನಿರೀಕ್ಷೆಯಿದೆ.

ದಕ್ಷಿಣ ಧ್ರುವವನ್ನು ಸೇರುವುದು ಇದೇನೂ ಮೊದಲನೆಯ ಬಾರಿಯಲ್ಲವಾದುದರಿಂದ, ಹಿಲಾರಿಯವರ ಸಾಹಸವು ಮಹತ್ವಪೂರ್ಣವಾಗಿಲ್ಲವೆನ್ನುವುದು ಇಂದಿನ ವಿಜ್ಞಾನಯುಗದಲ್ಲಿ ಸಲ್ಲದ ಮಾತು. ಇತರ ಭೂಭಾಗದಿಂದ ಅತ್ಯಂತ ದೂರವಿರುವ ಈ ಧ್ರುವ ಪ್ರದೇಶವು ಉತ್ತರಧ್ರುವದಂತೆ ಹಿಮಗಡ್ಡೆಯಾಗಿರದೆ ಭೂಭಾಗವಾಗಿಯೇ ಇರುವುದೆಂದೂ, ಯುರೋಪ್ ಮತ್ತು ಉತ್ತರ ಅಮೆರಿಕ ಖಂಡಗಳ ಸಂಯುಕ್ತ ವಿಸ್ತೀರ್ಣದಷ್ಟು ವಿಶಾಲವಾಗಿರುವುದೆಂದೂ ನಾವು ತಿಳಿದುಕೊಂಡಿದ್ದೇವೆ. ಅಂತರಿಕ್ಷದಲ್ಲಿ ತೇಲಾಡುವ ಚಂದ್ರಲೋಕಕ್ಕೆ ಪ್ರಯಾಣ ಬೆಳೆಯಿಸುವ, ಅಲ್ಲಿ ವಾಸವಾಗಲು, ಉದ್ದಿಮೆಗಳನ್ನು ಸ್ಥಾಪಿಸಲು ಮುಂದೆಬರುವ ಉತ್ಸಾಹವನ್ನು ಪ್ರದರ್ಶಿಸುವ ನಮ್ಮ ಜನರನ್ನು ಕಂಡರೆ, ಅವರು ದಕ್ಷಿಣ ಧ್ರುವಖಂಡದಲ್ಲಿ ನೆಲೆಯಾಗಿರಲು ಒಲ್ಲದಿರಲಾರರು. ಕೆಲವರ ಅಭಿಪ್ರಾಯದಂತೆ, ಧ್ರುವಖಂಡದಲ್ಲಿ ಕಲ್ಲಿದ್ದಲು ಹಾಗೂ ಇತರ ಖನಿಜಗಳು ದೊರೆಯುವ ಆಶೆಯನ್ನು ಕಟ್ಟಿಕೊಂಡಿದೆ ಜನತೆ ಒಂದು ಕಾಲದಲ್ಲಿ ಆಸ್ಟ್ರೇಲಿಯದ ಲೋಹದ ಗನಿಗಳನ್ನು ಕಂಡು ಲಾಭ ಸಂಪಾದಿಸಲು ತೆರಳಿದ ಬ್ರಿಟಿಷ ಜನತೆಯಂತೆ, ಇನ್ನು ಈ ಧ್ರುವಭಾಗಕ್ಕೂ ಜನತೆ ಸರಿಯಲಾರದೆಂದರೆ, ಸುಳ್ಳು ಮಾತಾದೀತು; ಅದಕ್ಕಾಗಿಯೇ, ಬೇರೆ ಬೇರೆ ಜನಾಂಗಗಳಲ್ಲಿ ಪರಸ್ಪರ ಮೇಲಾಟಗಳು ನಡೆಯುತ್ತಿವೆ. ಆದರೆ, ಈಗ ಅಲ್ಲಿರುವ ಪ್ರಬಲವಾದ ತೊಡಕೆಂದರೆ— ಅಲ್ಲಿನ ಭೂಭಾಗದ ಮೇಲೆ ಸುಮಾರು ಎಂಟುನೂರು ಅಡಿಗಳಷ್ಟು ದಪ್ಪದಲ್ಲಿ ಹಿಮ ಮುಚ್ಚಿರುವುದು ಮಾತ್ರ. ಅಣು, ಜಲಜನಕ ಇತ್ಯಾದಿ ಉಷ್ಣದಾಯಕ ಬಾಂಬುಗಳ ಸ್ಫೋಟನದ ಮೂಲಕವಾಗಿ ಈ ಹಿಮವನ್ನು ಕರಗಿಸುವ ಕುರಿತಾದ ಸಮಾಲೋಚನೆಗಳು ಒಳಗೊಳಗೇ ನಡೆಯುತ್ತಿರುವುದಲ್ಲದೆ ಒಂದು ವೇಳೆ ಹಾಗೆ ಮಾಡಿದ ಪಕ್ಷದಲ್ಲಿ ಸಮುದ್ರದ ನೀರು ನೂರು ಅಡಿಗಳಷ್ಟು ಏರುವುದೆಂಬುದನ್ನು ಸಹ ಊಹಿಸಲಾಗಿರುವುದು ಪ್ರಕೃತ ಜನಸಂಮರ್ದನದಿಂದ ಅತಿದೂರವಿರುವ, ನಿರ್ಜನವಾದ ಈ ಭೂಭಾಗವು ಅಣ್ವಾದಿ ವೈಜ್ಞಾನಿಕ ವಿನಾಶಕಾರೀ ಅಸ್ತ್ರಗಳ ಪ್ರಯೋಗಕ್ಕೆ ಅತ್ಯಂತ ಯೋಗ್ಯವಾದ ಸ್ಥಳವಾಗಿದೆ ಈ ಎಲ್ಲ ಹಾಗೂ ಇನ್ನಿತರ ಕಾರಣಗಳಿಂದ, ದಕ್ಷಿಣ ಧ್ರುವಕ್ಕೆ ಬಹಳ ಸಲೀಸಾಗಿ ಜನಹೋಗಿ ಹಿಂದಿರುಗುವ ಕಾರ್ಯದಲ್ಲಿ ಯಶಸ್ವಿಯಾಗುತ್ತ ಬರುತ್ತಿರುವಾಗ, ಜಗತ್ತಿನ ಎಲ್ಲ ರಾಷ್ಟ್ರಗಳ ದೃಷ್ಟಿಯೂ ಇಲ್ಲಿ ಕೇಂದ್ರೀಕೃತವಾಗಿರುವುದೆಂದರೆ, ಅದರಲ್ಲಿ ಅತಿಶಯೋಕ್ತಿಯ ಮಾತಿಲ್ಲ.

ಒಂದುಕಡೆ ಅಂತರಿಕ್ಷ ಪ್ರವಾಸ, ಇನ್ನೊಂದು ಕಡೆ ಹಿಮಾಚ್ಛಾದಿತ ಭೂಭಾಗ ಪ್ರವಾಸ—ಇವು ಅಂತರಾಷ್ಟ್ರೀಯ ಭೌಗೋಳಿಕ ವರ್ಷದ ವಿಶೇಷರೂಪದ ನವನವ್ಯಯುಗಳು. ಇವುಗಳಲ್ಲಿ ಮೊದಲನೆಯದು ಪ್ರಯೋಗಾತ್ಮಕವಾಗಿದ್ದು, ಊಹಾಪೋಹಗಳ ಆಕಾಶಮಂದಿರವಾಗಿಯೇ ಉಳಿದಿದ್ದರೂ, ಎರಡನೆಯದು ಪೂರ್ಣ ಮೂರ್ತಸ್ವರೂಪಕ್ಕೆ ಬಂದಿದೆ. ವಿಜ್ಞಾನ ಯುಗದಲ್ಲಿ ಸಂಶೋಧಿತವಾದ ಪ್ರತಿಯೊಂದು ಒಡವೆಯಾದರೋ, ಮಾನವನ ಇಚ್ಛೆಯಂತೆ ಆತನ ಕಲ್ಯಾಣ ಅಥವಾ ವಿನಾಶದ ಕಾರ್ಯದಲ್ಲಿ ನೆರವಾಗುತ್ತದೆ. ಹಾಗೆಯೇ ಈ ದಕ್ಷಿಣ ಧ್ರುವದ ಪ್ರವೇಶವಾಗಿದೆ ಈ ಸಾಹಸದ ಪ್ರಯೋಗವು ಜಗತ್ತಿನ ಜನತೆಯ ಕಲ್ಯಾಣಕ್ಕಾಗಿ, ಮಾನವತೆಯ ಹಿತಕ್ಕಾಗಿ ಪ್ರಯೋಜನಕಾರಿಯಾದರೆ, ಅದರಿಂದ ಹಾನಿಯೇನಿಲ್ಲ, ಆದರೆ, ತದ್ವಿರುದ್ಧವಾಗಿ ಅದರ ಮಾರಣ ಹೋಮಕ್ಕೆ ನೆಯ್ಸುರಿದಂತಾದರೆ ಮಾತ್ರ ಅನಾಹುತವಾದಂತೆಯೇ ಸರಿ. ಭರಣಿ ಕೃತ್ತಿಕೆಯ ಮುಹೂರ್ತದಲ್ಲಿ ಪ್ರಾರಂಭವಾದ ಈ ೧೯೫೮ನೆ ವರ್ಷದಲ್ಲಿ ಅದೇನು ಸಂಭವಿಸಲಿದೆಯೋ ಇದೀಗ ಹೇಳಬರುವಂತಿಲ್ಲ. ಶ್ರೀ ಹಿಲಾರಿಯವರ ಈ ವಿಜಯ ಯಾತ್ರೆಯು ಮಾನವತೆಯ ವಿಜಯ ಯಾತ್ರೆಯಾಗಿ ಪರಿಣಮಿಸಲೆಂದು ನಾವು ಈ ಸಂದರ್ಭದಲ್ಲಿ ಹಾರೈಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ನೂತನ ಧರ್ಮಕ್ಕೆ ಬುನಾದಿ

ಮಾನವನನ್ನು ಮಾನವನನ್ನಾಗಿ ನೋಡುವಂತಹ ಒಂದು ಹೊಸ ಧರ್ಮವನ್ನು ಸ್ಥಾಪಿಸಲು ಸಮಾಜಸೇವೆಯೇ ತನ್ನ ಸ್ವಾರ್ಥವೆಂದು ತಿಳಿಯತಕ್ಕ ಪರಿವ್ರಾಜಕ ತಂಡವೊಂದು ಆಗತ್ಯ ತಯಾರಾಗಬೇಕು. ಸ್ವರಾಜ್ಯ ಪ್ರಾಪ್ತಿಯ ನಂತರದ ಪುನರ್ನಿರ್ಮಾಣ ಕಾರ್ಯಕ್ಕೆ ವೈರಾಗ್ಯ ಮತ್ತು ಶ್ರಮ ಅಗತ್ಯ. ಜನರು ತಮ್ಮ ಭೋಗದಲ್ಲಿಯೇ ಮಗ್ನರಾಗಿದ್ದಾರೆ, ತ್ಯಾಗವಿಲ್ಲದೆ ಭೋಗ ದೊರೆಯಲಾರದು. ಈ ತ್ಯಾಗದ ಅಮರ ಸಂದೇಶವನ್ನು ಜನರಲ್ಲಿ ಹಬ್ಬಿಸಲು ತಮ್ಮ ಜೀವನದಲ್ಲಿ ತ್ಯಾಗ ತುಂಬಿದವರು ಮುಂದೆ ಬಂದು, ತ್ಯಾಗದ ಭಾವನೆಯನ್ನು ಉದ್ರೇಕಿಸಿ, ಜನತೆಯ ಕಲ್ಯಾಣವನ್ನು ಸಾಧಿಸುವ ಮಾನವತಾ ಭಾವನೆಯನ್ನು ಬೆಳೆಯಿಸಬೇಕು. ಆಗ, ಇಂದಿನ ಜಗತ್ತಿಗೆ ಬೇಕಾಗುವ ಒಂದು ನೂತನ ಧರ್ಮವು ಸ್ಥಾಪನೆಗೊಳ್ಳುವುದೆಂದು ಶಿರಾಳಕೊಪ್ಪದ ತನ್ನ ಸಂಚಾರವೇಳೆಯಲ್ಲಿ ಆಚಾರ್ಯ ವಿನೋಬಾ ಜನತೆಗೆ ಕರೆಯಿತ್ತರು.

ಭಾರತದ ಔದ್ಯೋಗಿಕ ಸ್ವರೂಪ

ನಮ್ಮಲ್ಲಿ ವಿದೇಶಗಳ ಮಾದರಿಯನ್ನು ಅನುಕರಣೆ ಮಾಡಲಾಗುತ್ತಿದೆ. ದೊಡ್ಡ ದೊಡ್ಡ ಯಂತ್ರ ಸಾಮಗ್ರಿಗಳನ್ನೂ ಅವುಗಳನ್ನು ನಡೆಸುವ ತಜ್ಞರನ್ನೂ ವಿದೇಶಗಳಿಂದ ಪಡೆಯುತ್ತಿದ್ದೇವೆ ಭಾರತೀಯರ ಸಂಶೋಧನಾ ಬುದ್ಧಿಯಿಂದ ಕಂಡುಹಿಡಿದ ಯಂತ್ರ ಸಾಮಗ್ರಿಗಳನ್ನು ಉಪಯೋಗಿಸುವ ಉದ್ದಿಮೆಗಳು ಹೇಳಿಕೊಳ್ಳುವಂತಹ ಸಂಖ್ಯೆಯಲ್ಲಿಲ್ಲ ಹೂವಿನ ಸತ್ವವನ್ನು ಪಡೆದು ಜೇನು ನೊಣವು ತನ್ನದೇ ಆದ ರೀತಿಯಲ್ಲಿ ಅದಕ್ಕೆ ಜೇನು ತುಪ್ಪದ ರೂಪಕೊಟ್ಟು ಅದರ ಪ್ರಯೋಜನ ಪಡೆಯುವಂತೆ ನಮ್ಮ ದೇಶದ ಔದ್ಯೋಗಿಕ ಸ್ವರೂಪವು ನಮ್ಮದೇ ಆದ ವಿಶಿಷ್ಟ ಸ್ವರೂಪ ತಾಳಿ ಬೆಳೆಯುವಂತೆ ಭಾರತೀಯ ವಿಜ್ಞಾನಿಗಳು ಪ್ರಯತ್ನಿಸಬೇಕು ನಮ್ಮ ಸಾಧನ ಸಂಪತ್ತಿಗಳನ್ನು ಯೋಗ್ಯ ವಿಧಾನಗಳಲ್ಲಿ ಉಪಯೋಗಿಸಿ ನಮ್ಮದೇ ಆದ ಔದ್ಯೋಗಿಕ ಉತ್ಪಾದನ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕು. ಎಂದು ಪ್ರೊ ಎಂ ಎಸ್ ಥ್ಯಾಕರ್ ಇವರು ಭಾರತೀಯ ವೈಜ್ಞಾನಿಕ ಕಾಂಗ್ರೆಸ್ಸಿನ ೪೫ನೇ ಅಧಿವೇಶನದಲ್ಲಿ ನುಡಿದರು.

ಫ್ಲೂವಿನ ಹೆದರಿಕೆ ಬೇಡ

ಕಳೆದ ಜುಲೈ ಮಾಸದಲ್ಲಿ ಹರಡಿ ಭೀಕರ ಸ್ವರೂಪವನ್ನು ತಾಳಿದ್ದ ವಿಷಮಶೀತ ಜ್ವರವು ಎರಡನೆ ಬಾರಿಗೆ ಭಾರತದಲ್ಲಿ ಹರಡುವುದೆಂದು ಈ ಮೊದಲು ವಾರ್ತೆ ಹಬ್ಬಿತ್ತು. ಆದರೆ ಈ ಬಗ್ಗೆ ಸಾಕಷ್ಟು ಮುಂಜಾಗ್ರತೆಯನ್ನು ವಹಿಸಲಾದುದರಿಂದ ಎರಡನೆ ಸುತ್ತು ಹರಡುವುದೆಂಬ ಹೆದರಿಕೆಯಿಲ್ಲ. ವಿಮಾನಗಳು ಮತ್ತು ಹಡಗುಗಳ ಮೂಲಕ ಈ ಮಹಾಮಾರಿ ಭಾರತವನ್ನು ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆಯೆಂದು ತಿಳಿದು ಬರುತ್ತದೆ ಈ ಬಗ್ಗೆ ಪ್ರತಿಬಂಧಕ ಲಸಿಕೆಯು ಈಗಾಗಲೇ ಸಿದ್ಧವಾಗಿದ್ದರೂ ಅದನ್ನು ಎಲ್ಲರಿಗೂ ಚುಚ್ಚಿಸುವುದು ಅಸಾಧ್ಯವೆಂದೂ, ಅತ್ಯಂತಾವಶ್ಯಕ ಸಂದರ್ಭಗಳು ಒದಗಿ ಬಂದಾಗ ಮಾತ್ರ ಅವನ್ನು ಒದಗಿಸಬಹುದೆಂದೂ ತಿಳಿದು ಬಂದಿದೆ. ಕಳೆದ ಬಾರಿ ಈ ರೋಗವು ೪೦ ಲಕ್ಷ ಜನರಿಗೆ ತಗಲಿರುವುದೆಂದೂ ಅವರಲ್ಲಿ ಸುಮಾರು ೧೦೦೦ಕ್ಕೂ ಮಿಕ್ಕ ಜನರು ಮಡಿದಿರುವರೆಂದೂ ಹೇಳಲಾಗುತ್ತದೆ.

ಗೋವೆಯಿಂದ ಹೊರನಡೆಯಿರಿ

ಭಾರತದಲ್ಲಿ ಇಂದು ವಾಸಿಸುತ್ತಿರುವ ಕ್ರೈಸ್ತರ ಭವಿತವ್ಯವು ಗೋವೆಯಲ್ಲಿ ಪೋರ್ಚುಗೀಸರ ಆಳಿಕೆಯು ಮುಂದುವರಿಯುವುದನ್ನು ಅವಲಂಬಿಸಿದೆಯೆಂದು ಪೋರ್ಚುಗಾಲವು ವಾದಿಸುತ್ತ ಗೋವೆಯಲ್ಲಿ ತಾನು ಸ್ಥಿರವಾಗಿ ನೆಲೆಯೂರಲು ಹವಣಿಸುವುದನ್ನು ಭಾರತದ ೫೦ ಲಕ್ಷ ಕ್ರಿಶ್ಚಿಯನ್ನರ ಪ್ರಾತಿನಿಧಿಕ ಸಂಸ್ಥೆಯಾದ ಭಾರತದ ಕ್ಯಾಥೋಲಿಕ ಯೂನಿಯನ್ನಿನ ಕಾರ್ಯಕಾರೀ ಸಮಿತಿಯು ಅಲ್ಲಗಳೆದು, ಭಾರತದ ಕ್ರೈಸ್ತರಿಗೆ ಯಾವುದೇ ವಿದೇಶೀ ರಾಷ್ಟ್ರದ ಸಹಾಯದ ಅಗತ್ಯವಿಲ್ಲವೆಂದು ತಿಳಿಸಿದುದಲ್ಲದೇ ಗೋವೆಯ ಜನರಿಗೆ ತಮ್ಮ ಭವಿತವ್ಯದ ಕುರಿತು ನಿರ್ಣಯಕ್ಕೆ ಬರಲು ಸ್ವಯಂ ನಿರ್ಣಯಾಧಿಕಾರವನ್ನೀಯಬೇಕೆಂದೂ ಪ್ರತಿಪಾದಿಸಿತು ಗೋವೆಯಲ್ಲಿ ಅನ್ಯದೇಶೀಯರ ಆಳ್ವಿಕೆಯನ್ನು ಖಂಡ ತುಂಡವಾಗಿ ಈ ಸಮಿತಿಯು ವಿರೋಧಿಸಿರುತ್ತದೆ

ಗ್ರಹಾಮರಿಗೆ ಸ್ವಾಗತ

ಯುಕ್ತ ರಾಷ್ಟ್ರಸಂಘದ ಭದ್ರತಾ ಮಂಡಲವು ದಶಂಬರ ೨ನೇ ತಾರೀಕಿನಂದು ಸ್ವೀಕರಿಸಿದ ಗೊತ್ತುವಳಿಯನ್ವಯ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಕಾಶ್ಮೀರದ ಬಗ್ಗೆ ಎದ್ದಿರುವ ವಾದವಿವಾದಗಳನ್ನು ಪುನರ್ವಿಮರ್ಶಿಸಲು ಯುಕ್ತರಾಷ್ಟ್ರಸಂಘದ ಪ್ರತಿನಿಧಿಯಾದ ಡಾ ಫ್ರಾಂಕ ಗ್ರಹಾಮರು ಈ ತಿಂಗಳ ೧೨ನೆ ದಿನಾಂಕದಂದು ಹೊಸದಿಲ್ಲಿಗೆ ಬರುವರು. ಇವರೊಂದಿಗೆ ಸಲಹೆಗಾರ ಎಲ್ಮೋರ ಜಾಕ್ಸನ್ ಮತ್ತು ಕಾರ್ಯದರ್ಶಿ ಡಾ. ಜೆ ಎಫ್. ಎಂಜರರವರೂ ಭಾರತಕ್ಕಾಗಮಿಸುವರು ಇವರೊಂದಿಗೆ ನಡೆಯಲಿರುವ ಮಾತುಕತೆಗಳಲ್ಲಿ ಭಾರತವು ತನ್ನ ಮೂಲಭೂತವಾದ ವಾದಗಳನ್ನೇ ಅವಲಂಬಿಸುವುದೆಂದೂ ತಿಳಿದು ಬಂದಿದೆ.

ಚಂದಾದಾರರಲ್ಲಿ ವಿನಂತಿ

ವಿ. ಪಿ. ಮಾಡಿದರೆ ಹನ್ನೆರಡಾಣೆಯಷ್ಟು ಹೆಚ್ಚಿಗೆ ಬೀಳುವುದರಿಂದ ನಮ್ಮ ಚಂದಾದಾರರು ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಮನಿಯಾರ್ಡರು ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ ಬೇಗನೆ ಚಂದಾ ಕಳುಹಿಸಿ ಸಹಕರಿಸಬೇಕಾಗಿ ವಿನಂತಿ.

ಮೆನೇಜರ್.

ಸಹಾಯಕ್ಕೆ ಕೃತಜ್ಞತೆ

ಸಿಂಹಳದಲ್ಲಿ ಭೀಕರ ಬಿರುಗಾಳಿ ಮತ್ತು ಮಳೆಯ ಮಹಾಪೂರಗಳಲ್ಲಿ ನರಳುತ್ತಿದ್ದ ಜನತೆಯ ಸಹಾಯಕ್ಕೆ ಸಿಂಹಳೀಯ ಪ್ರಧಾನಿ ಭಂಡಾರನಾಯಿಕೆಯವರ ಕೇಳಿಕೆ ಮೇರೆಗೆ ಭಾರತವು ತನ್ನ ಹೆಲಿಕಾಪ್ಟರ್ ಹಾಗೂ ವಿಮಾನಗಳನ್ನು ಕಳುಹಿಸಿದ್ದು, ಆ ಬಗ್ಗೆ ಸಿಂಹಳವು ಭಾರತಕ್ಕೆ ಅಭಿನಂದನೆಗಳನ್ನು ಸಲ್ಲಿಸಿರುತ್ತದೆ. ಈ ಮಹಾಪೂರವು ಬಹುಜನರನ್ನು ಆಹುತಿ ತೆಗೆದುಕೊಂಡುದಲ್ಲದೇ ಸುಮಾರು ಮೂರು ಲಕ್ಷ ಜನರನ್ನು ನಿರಾಶ್ರಿತರನ್ನಾಗಿ ಮಾಡಿದೆ. ಭಾರತ ಸರಕಾರವು ಈಗಾಗಲೇ ಉದಾರ ಸಹಾಯ ಹಾಗೂ ತ್ವರಿತ ನೆರವು ನೀಡಿದೆ. ಭಾರತೀಯ ರೆಡ್‌ಕ್ರಾಸ್ ಸೊಸಾಯಿಟಿಯ ಅಧ್ಯಕ್ಷೆ ರಾಜಕುಮಾರಿ ಅಮೃತ ಕೌರರು ಒಂದು ಮನವಿಯನ್ನು ಹೊರಡಿಸಿ, ಸಿಂಹಳದ ಮಹಾಪೂರದ ದೆಸೆಯಿಂದ ಸಂತ್ರಸ್ತರಾದವರಿಗೆ ಪರಿಹಾರಕ್ಕಾಗಿ ಕೊಡುಗೆಯೀಯಬೇಕೆಂದು ಕರೆಯಿತ್ತಿದ್ದಾರೆ. ಅಹಮದಾಬಾದದ ಗಿರಣಿ ಮಾಲಿಕರ ಸಂಘವು ಐವತ್ತು ಬೇಲುಗಳಷ್ಟು ಬಟ್ಟೆಯನ್ನು ಸಿಂಹಳೀಯರಿಗೆ ನೀಡಲು ನಿರ್ಧರಿಸಿದೆ. ಬ್ರಿಟನ್ ಮತ್ತು ಅಮೇರಿಕೆಗಳ ವಿಮಾನಗಳು ಸಹ ಪರಿಹಾರ ಕಾರ್ಯದಲ್ಲಿ ನೆರವೀಯುತ್ತಿವೆ. ಮಹಾಪೂರದ ಅನಾಹುತದೊಡನೆ ಅತಿಸಾರ ಮತ್ತು ವಿಷಮ ಜ್ವರಗಳ ಪಿಡುಗು ಆಕ್ರಮಿಸಿದ್ದು ಕುರಿಯ ಮೇಲೆ ಬೊಕ್ಕೆ ಎದ್ದಂತಾಗಿದೆ—ಇಂದಿನ ಸಿಂಹಳದ ಆರೋಗ್ಯ!

ನಿಶ್ಶಸ್ತ್ರೀಕರಣಕ್ಕೆ ಕರೆ

ಬ್ರಿಟಿಷ ಪ್ರಧಾನಿ ಹೆರೊಲ್ಡ್ ಮೆಕಮಿಲನರು ನಿಶ್ಶಸ್ತ್ರೀಕರಣ ಒಪ್ಪಂದವೊಂದನ್ನು ಮಾಡಿಕೊಳ್ಳಲು ಸೋವಿಯೆಟ್ ರಶ್ಯಕ್ಕೆ ಕರೆಯಿತ್ತಿದ್ದಾರೆ. ಜಾಗತಿಕ ದ್ವೇಷ ನಿವಾರಣೆ ಹಾಗೂ ನಿಶ್ಶಸ್ತ್ರೀಕರಣದ ಪ್ರಥಮ ಹೆಜ್ಜೆ ಎಂದು ಉಭಯ ರಾಷ್ಟ್ರಗಳಲ್ಲಿ ಅನಾಕ್ರಮಣ ಒಪ್ಪಂದವಾಗಬೇಕು. ಅಣ್ವಸ್ತ್ರ ಪ್ರಯೋಗ ಹಾಗೂ ಅವುಗಳ ಉಪಯೋಗಗಳನ್ನು ಪ್ರತಿಬಂಧಿಸಬೇಕು ಮತ್ತು ಅವುಗಳ ನಿರ್ಮಾಣ ಮತ್ತು ಸಂಖ್ಯೆಗಳನ್ನು ನಿಯಂತ್ರಿಸಲೂ ಒಡಂಬಡಿಕೆ ಮಾಡಿಕೊಳ್ಳಬೇಕು. ಇಂತಹ ಒಂದು ಒಪ್ಪಂದದ ಪ್ರತ್ಯಕ್ಷ ಕಾರ್ಯಾಚರಣೆಯಲ್ಲಿ ಪ್ರತಿಯೊಂದಂಗವೂ ಸರಿಯಾಗಿ ನಡೆಯುವಂತೆ ಮೇಲ್ವಿಚಾರಕರನ್ನು ನೇಮಿಸಬೇಕು ಎಂದು ಮುಂತಾಗಿ ಅವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು. ಜಾಪಾನ್ ಈ ಕರೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿರುತ್ತದೆ.

ಮದ್ರಾಸದ ರಾಜ್ಯಪಾಲರು

ಶ್ರೀ ಎ. ಜೆ. ಜಾನರ ಅಕಾಲ ನಿಧನದಿಂದ ಕೆಲವು ತಿಂಗಳಿಂದ ತೆರವಾಗಿದ್ದ ಮದ್ರಾಸದ ರಾಜ್ಯಪಾಲರ ಸ್ಥಾನಕ್ಕೆ ಅಸ್ಸಾಮದ ಹಿಂದಿನ ಮುಖ್ಯಮಂತ್ರಿ ಶ್ರೀ ವಿಷ್ಣುರಾಮ ಮೇಧಿಯವರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿದ್ದಾರೆ. ಶ್ರೀ ಮೇಧಿಯವರು ತಮ್ಮ ಅಧಿಕಾರವನ್ನು ಕೆಲ ದಿನಗಳಲ್ಲಿಯೇ ವಹಿಸಲಿರುವರು.

ಉಡುಪಿ

ಹೊಸ ವರ್ಷಾರಂಭ—ಸ್ಥಳೀಯ ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೋಆಪರೇಶನ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಯವರು ಜನವರಿ ತಾ 1ರಂದು ವರ್ಷಾರಂಭ ಕ್ರಿಯೆಯೂ ಹಿರಿಯರೊಬ್ಬರನ್ನು ಗೌರವಿಸುವಂತೆ ಈ ಬಾರಿ ಮಂಗಳೂರಿನ ಡಾ ಯು ಪಿ ಮಲ್ಯರನ್ನು ಸತ್ಕರಿಸಿ ಗೌರವಿಸಿದರು ಮುಕುಂದ ನಿವಾಸದಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಟಿ ಎ. ಪೈಗಳು ವಹಿಸಿದ್ದರು ಕಂಪೆನಿಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ಟಿ ರಮೇಶ ಪೈಗಳು ಸ್ವಾಗತ ಭಾಷಣ ಮಾಡಿದರು ಡಾ ಟಿ ಎಮ್ ಎ ಪೈ, ಶ್ರೀಗಳಾದ ಕೊಬ್ಬರ್ಕಾರ್ ಪದ್ಮನಾಭ ಪೈ ಮತ್ತು ಕೆ ಆರ್ ಕೆ ಭಟ್ಟರು ಮುಖ್ಯ ಅತಿಥಿಗಳ ಗುಣಗಾನಮಾಡಿದರು ಡಾ ಮಲ್ಯರು ತನಗಿತ್ತ ಗೌರವಕ್ಕಾಗಿ ಕೃತಜ್ಞತೆ ಸಲ್ಲಿಸಿದರು ಸಭಾಧ್ಯಕ್ಷರೂ ಮುಖ್ಯ ಅತಿಥಿಗಳ ಸೇವಾ ತತ್ಪರತೆಯನ್ನು ಕೊಂಡಾಡಿ ಮಾತನಾಡಿದರು ಶ್ರೀ ಟಿ ರಮೇಶ ಪೈಗಳು ಧನ್ಯವಾದಗಳನ್ನಿತ್ತರು.

ಬೆಳ್ಳಿ ರಥ ಅರ್ಪಣೆ—ಶ್ರೀ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಪುತ್ತಿಗೆ ಮಠದ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ಸ್ಮಾರಕಾರ್ಥವಾಗಿ ಕಟ್ಟಿಸಲಾದ ಬೆಳ್ಳಿ ರಥವನ್ನು ಶ್ರೀ ಕೃಷ್ಣನಿಗೆ ಇದೇ ತಾ. 3ರಲ್ಲು ರಾತ್ರಿ ಅರ್ಪಿಸಲಾಯಿತು ಬಳಿಕ ಅದೇ ರಥದಲ್ಲಿ ಶ್ರೀ ಕೃಷ್ಣ ಮತ್ತು ಶ್ರೀ ಮುಖ್ಯಪ್ರಾಣ ದೇವರಿಗೆ ಉತ್ಸವವಾಯಿತು. ಆ ದಿನ ಬೆಳಿಗ್ಗೆ ರಾಮಾಯಣ ಮಹಾಭಾರತ ಪಾರಾಯಣ ವಾಚನಕ್ಕೆ ಮಂಗಳವಾಯಿತು ಸಂಜೆ ವಸಂತ ಮಂಟಪದಲ್ಲಿ ಸೇರಿದ ಮಹಾಜನ ಸಭೆಯಲ್ಲಿ ಶ್ರೀ ಕೆ ಸೀತಾರಾಮ ಸಿಹಿ ...ದರೆರ ಲೆಕ್ಕದಿಂದ ವೇದಪಾರಾಯಣ ಶುಕ್ಲರಿಗೆ ಒಂದು ಜತೆ ವಸ್ತ್ರ ಮತ್ತು ನಾಲ್ಕು ರೂಪಾಯಿಗಳಂತೆ ಬಹುಮಾನ ಕೊಡಲಾಯಿತು ಬೆಳ್ಳಿ ರಥದ ಶಿಲ್ಪಿ ಕೆಲಸಗಾರರಾದ ಶ್ರೀ ಶಾಸ್ತ್ರ ಸುಬ್ಬಯ್ಯಾಚಾರಿ ಮತ್ತು ಗಂಗಾಧರ ಆಚಾರಿಯವರಿಗೆ ಶಾಲು, ಚಿನ್ನದ ಪೈಸು ಬಹುಮಾನ ಕೊಡಲಾಯಿತು ಬೆಳ್ಳಿರಥ ನಿರ್ಮಾಣ ಕಾರ್ಯ ಸಮಿತಿಯವರ ವರದಿಯನ್ನು ಶ್ರೀ ಎಮ್ ಪಿ ಪೆಜತ್ತಾಯರು ಓದಿದರು ಬೆಳ್ಳಿರಥವು ಪೂರ್ಣವಾಗುವಾಗ ಅಂದಾಜು ಎರಡು ಲಕ್ಷ ರೂಪಾಯಿ ವೆಚ್ಚವಾಗಬಹುದು

ಶ್ರೀ ಕಲಾನಿಕೇತನದ ಉದ್ಘಾಟನೆ

ಉಡುಪಿಯ ಶ್ರೀ ಕಲಾನಿಕೇತನದ ಉದ್ಘಾಟನಾ ಸಮಾರಂಭವು ತಾ 5ರಂದು ರಥಬೀದಿಯಲ್ಲಿ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು ಪರ್ಯಾಯ ಪಟ್ಟದಿಂದ ಕೆಳಗಿಳಿಯಲಿರುವ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರಿಗೂ ಪರ್ಯಾಯ ಪಟ್ಟವನ್ನೇರಲಿರುವ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರಿಗೂ ಮಾನಪತ್ರ ಅರ್ಪಿಸಲಾಯಿತು ಶ್ರೀ ಕೆ ಕೆ ಪೈಗಳು ಮಾನಪತ್ರ ಅರ್ಪಿಸಿದರು ಇಬ್ಬರು ಸ್ವಾಮಿಗಳವರೂ ಜನತೆಯ ಸಹಕಾರ ಬೆಂಬಲ ಕುರಿತು ಮಾತನಾಡಿದರು. ಶ್ರೀ ಎ ಜಿ ಆಳ್ವರವರು ಧನ್ಯವಾದಗಳನ್ನಿತ್ತರು ರಾತ್ರಿ ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು

ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರ ಸಮಿತಿಯ ನೇತೃತ್ವದಲ್ಲಿ ನಡೆಯುತ್ತಿರುವ ಪ್ರಥಮಾ, ಪ್ರಾರಂಭಿಕ ಪ್ರವೇಶಿಕಾ, ಪರಿಚಯ ಮತ್ತು ವಿಶಾರದ ಪರೀಕ್ಷೆಗಳು ಮಾರ್ಚ ತಿಂಗಳ ಕೊನೆಯ ದಿನಗಳಲ್ಲಿ ನಡೆಯಲಿರುವವು ಆ ಬಗ್ಗೆ ಪರೀಕ್ಷೆಗಳಿಗೆ ಕೂರಬಯಸುವ ಉಡುಪಿ ಸಂಸ್ಕೃತದ ಉಮೇದ್ವಾರರು ತಮ್ಮ ಆವೇದನಾ ಪತ್ರಗಳನ್ನು ನಿರ್ದಿಷ್ಟ ಶುಲ್ಕದೊಡನೆ ಜನವರಿ ತಾ. ೧೫ರ ಒಳಗೆ ಕಾರ್ಯದರ್ಶಿ, ಗೀತಾ ಭವನಂ ಅಂಬಲಪಾಡಿ, ಉಡುಪಿ ಇವರಿಗೆ ಕಳುಹಿಸತಕ್ಕದ್ದು ಆವೇದನಾ ಪತ್ರ ಹಾಗೂ ಇನ್ನಿತರ ವಿಚಾರಗಳಿಗೆ ಅವರೊಡನೆ ವ್ಯವಹರಿಸಬಹುದು.

ವಕೀಲ್ ಶ್ರೀ ವಿಠಲನಾಯಕರ ಆಕಸ್ಮಿಕ ನಿಧನ—ಇದೇ ತಾ 7ನೇ ಬೆಳಿಗ್ಗೆ ಹೃದಯಾಘಾತ ... ಶ್ರೀ ಕೆ ವಿಠಲನಾಯಕರು ತನ್ನ 60ನೇ ವರ್ಷದಲ್ಲಿ ಪತ್ನಿಯೊಂದಿಗೆ ... ನಿಧನ ಹೊಂದಿದರೆನ್ನಲು ವಿಷಾದವಾಗುತ್ತದೆ ದಿವಂಗತರು ಸುಮಾರು 35 ವರ್ಷಗಳಿಂದ ವಕೀಲ ವೃತ್ತಿ ಮಾಡುತ್ತಿದ್ದು ಅನೇಕ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಿದ್ದರು ಹಿತಮಿತವಾದ ನಡೆನುಡಿಗಳಿಂದ ಜನಪ್ರಿಯರಾಗಿದ್ದರು

ನಾಟಕ ಪ್ರದರ್ಶನ—ಇದೇ ತಾ 4ನೇ ರಾತ್ರಿ ವರದೇಂದ್ರ ಕಲಾಮಂದಿರದಲ್ಲಿ ದೇವಾಡಿಗ ಸುಧಾರಕ ಸಂಘದ ಸಹಾಯಾರ್ಥವಾಗಿ ಶ್ರೀ ಕೆವತ್ತೂರು ದೊಡ್ಡಣ್ಣ ಸೆಟ್ಟರಿಂದ ರಚಿತವಾದ ತುಳು ನಾಟಕವೊಂದು ಶ್ರೀ ಎ ಜಿ ಆಳ್ವರವರ ಅಧ್ಯಕ್ಷತೆಯಲ್ಲಿ ಪ್ರದರ್ಶಿಸಲ್ಪಟ್ಟಿತು

ಪರ್ಯಾಯ ಸ್ವಾಮಿಗಳವರ ನಗರ ಪ್ರವೇಶ—ಇದೇ ತಾ 17ರಂದು ಪರ್ಯಾಯ ಪಟ್ಟವನ್ನೇರಲಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ಶ್ರೀ ಪಾದಂಗಳವರು ಪೂರ್ವ ಪದ್ಧತಿಯಂತೆ ಅನೇಕ ಯಾತ್ರಾ ಸ್ಥಳಗಳನ್ನು ಸಂದರ್ಶಿಸಿದ ಬಳಿಕ ಇದೇ ತಾ. 4ನೇ ಸಂಜೆ ನಗರ ಪ್ರವೇಶ ಮಾಡಿದರು. ಪುರಜನರು ಶ್ರೀ ಪಾದಂಗಳವರನ್ನು ಜೋಡು ಕಟ್ಟೆಯಲ್ಲಿ ಮೆರವಣಿಗೆಯಿಂದ ಸ್ವಾಗತಿಸಿದರು.

ಎಂ ಜಿ ಎಮ್ ಕಾಲೇಜ್—ಯೂನಿಯನಿನ ಆಶ್ರಯದಲ್ಲಿ ಇದೇ ತಾ 6ನೇ ಸಂಜೆ ಮೈಸೂರಿನ ಲಿಟರರಿ ಅಂಡ್ ಕಲ್ಚರಲ್ ಡೆವೆಲಪ್‌ಮೆಂಟಿನ ಡೈರೆಕ್ಟರರಾದ ಪ್ರೊ| ಎ ಎನ್. ಮೂರ್ತಿರಾಯರು ಭಾಷಣವಿತ್ತರು

ಪರ್ಕಳ—ಕಳೆದ ತಾ 27ರಿಂದ 29ರ ತನಕ ಹೆರ್ಗ ಗ್ರಾಮದ ಪರ್ಕಳದಲ್ಲಿ ಶ್ರೀ ಅಮೃತೇಶ್ವರಿ ಮೇಳದವರಿಂದ ಗಣನೀಯ ಪೌರಾಣಿಕ ಕಥಾಭಾಗದ ಯಕ್ಷಗಾನ ಬಯಲಾಟಗಳು ಜರಗಿದುವು

ಶಿರ್ವ—ತಾ 4—1—58ರಲ್ಲು ಶಿರ್ವ ಪಂಚಾಯತ್ ಬೋರ್ಡಿನ ಸಾಮಾನ್ಯ ಸಭೆಯು ಶ್ರೀ. ಯಸ್ ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸೇರಿ, ಶಿರ್ವ, ಕಾಪು ರಸ್ತೆಯ ಮುಲ್ಲಾರು ಸಂಕದ ಬಗ್ಗೆ ತುರ್ತಾಗಿ ಧನಸಹಾಯ ನೀಡುವ ಮತ್ತು ಶಿರ್ವಕ್ಕೆ ಟೆಲಿಫೋನು ಸಂಪರ್ಕವನ್ನು ನಿರ್ಮಿಸುವಂತೆ ಸರಕಾರವನ್ನು ವಿನಂತಿಸಿಕೊಳ್ಳುವ ಮೊದಲಾದ ನಿರ್ಣಯಗಳಾದವು

ಶ್ರೀ ಶ್ರೀರಾಮಾನಂದ ಸ್ವಾಮಿ ಕೃಪಾಪೋಷಿತ ಅಖಿಲಭಾರತ ವಿಶ್ವಬ್ರಾಹ್ಮಣ ಸಾಮ್ರಾಜ್ಯ ಸಂಸ್ಥೆಯ ಕಾರ್ಯಾಲಯದಲ್ಲಿ ತಾ 29ರಂದು ಶಿರ್ವ ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿಶೇಷ ಮಹಾಸಭೆ ಜರಗಿತು ಶಿಲ್ಪಕಲಾ ಸಹಕಾರ ಸಂಘ ಸ್ಥಾಪಿಸಬೇಕಾಗಿ ನಿರ್ಧಾರವಾಯಿತು ಆ ಬಗ್ಗೆ ಸಮಿತಿಯೊಂದು ರಚಿಸಲಾಯಿತು

ಪುತ್ತೂರು—ಮೈಸೂರಿನ ಕಂದಾಯ ಮಂತ್ರಿ ಶ್ರೀ ಎಮ್ ಟಿ ಪಾಟೀಲರು ತಾ. 3ರಂದು ಮಡಿಕೇರಿಯಿಂದ ಪುತ್ತೂರಿಗೆ ಆಗಮಿಸಿದರು ಶ್ರೀಗಳಾದ ಕೆ. ವೆಂಕಟ್ರಮಣ ಗೌಡ, ಎಮ್ ಎಲ್ ಎ, ಎಸ್ ಸುಬ್ಬಯ್ಯ ನಾಯ್ಕ, ಎಮ್ ಎಲ್ ಎ, ಪುತ್ತೂರು ಮಂಡಲ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎ ಭೀಮ ಭಟ್, ಜಿಲ್ಲಾ ಬೋರ್ಡು ಸದಸ್ಯೆ ಶ್ರೀಮತಿ ಬಿ ಕಮಲಾಬಾಯಿ, ಶ್ರೀಗಳಾದ ಕೆ. ಜತ್ತಪ್ಪ ರೈ ಎ. ಟಿ ಶ್ರೀನಿವಾಸ ರೈ, ನೈರನಾನಾಥ ಶೆಟ್ಟಿ, ಲೂವಿಸ್ ಮೆಂಡೋನ್ಸಾ ಮೊದಲಾದವರು ಸ್ವಾಗತಿಸಿದರು. ಮಂತ್ರಿಗಳು ತಾಲೂಕು ಕಚೇರಿಗೆ ಭೇಟಿಯಿತ್ತಾಗ ಅಸಿಸ್ಟೆಂಟ್ ಕಮಿಶನರ್ ಶ್ರೀ ಪಿ ಎಸ್. ತಿಮ್ಮಪ್ಪ ಸೆಟ್ಟಿ, ತಹಶೀಲ್ದಾರ್ ಶ್ರೀ ಕೆ. ವೆಂಕಪ್ಪ ಮೊದಲಾದವರು ಸ್ವಾಗತಿಸಿದರು ನಂತರ ಪ್ರವಾಸಿ ಮಂದಿರದಲ್ಲಿ ತಾಲೂಕು ಕಾರ್ಯಕರ್ತರೊಡನೆ ವಿವಿಧ ವಿಚಾರಗಳಲ್ಲಿ ವಿಚಾರವಿನಿಮಯ ಮಾಡಿದರು. ಪುತ್ತೂರು ತಾಲೂಕು ವರ್ತಕರ ಪರವಾಗಿ ಶ್ರೀ ಎ ಪಿ ಸುಬ್ಬಯ್ಯನವರಿಂದಲೂ, ಅಡಿಕೆ ಬೆಳೆಗಾರರ ಪರವಾಗಿ ಶ್ರೀ ಪಿ ಭೀಮ ಭಟ್ಟರಿಂದಲೂ ಮಂತ್ರಿಗಳಿಗೆ ಮನವಿಗಳು ಒಪ್ಪಿಸಲ್ಪಟ್ಟವು ಶ್ರೀಗಳಾದ ಕೆ ಆರ್ ಆಚಾರ್ ಎಮ್ ಪಿ, ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಮಂತ್ರಿಗಳನ್ನು ವಿಟ್ಲದ ಕೇಂದ್ರ ಅಡಿಕೆ ಪರಿಶೋಧನಾ ಕ್ಷೇತ್ರದಲ್ಲಿ ಸ್ವಾಗತಿಸಿದರು

ಬೆಳಪು—ಇಲ್ಲಿಯ ಶ್ರೀ ದುರ್ಗಾದೇವಿ ಯಕ್ಷಗಾನ ಕಲಾ ಮಂಡಳಿಯ ವಾರ್ಷಿಕೋತ್ಸವವು ತಾ 4ರಂದು ಎಮ್ಮಾರು ಬೀಡಿನ ಶ್ರೀ ವೈ ಶಾಂತಿರಾಜಯ್ಯ ಅರಸು ಮಾರಮ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾರ್ಥನೆಯಾದ ಬಳಿಕ ಶ್ರೀ ಕೆ. ಈಶ್ವರರಾಯರು ಸ್ವಾಗತ ಭಾಷಣ ಮಾಡಿದರು ಶ್ರೀ ಕೆ. ಸಿದ್ದಯ್ಯ ಹೆಗ್ಡೆಯವರು ಸಂದೇಶವಾಚನ ಮಾಡಿದರು ಶ್ರೀಗಳಾದ ಕೆ ವಿಶ್ವನಾಥ ರಾವ್, ಪೊಲ್ಯ ನೇಜಪ್ಪ ಸೆಟ್ಟಿ, ವೈ. ಲಕ್ಷ್ಮೀನಾರಾಯಣರಾವ್, ವಿದ್ವಾನ್ ರವರ ಸಮಯೋಚಿತ ಭಾಷಣಗಳಾದುವು ಶ್ರೀ ಕೆ ಸಿದ್ದಯ್ಯ ಹೆಗ್ಡೆಯವರು ಧನ್ಯವಾದವಿತ್ತರು ರಾತ್ರಿ ಮೀನಾಕ್ಷಿ ಕಲ್ಯಾಣವೆಂಬ ಯಕ್ಷಗಾನ ಬಯಲಾಟವನ್ನು ಸಂಘದ ಸದಸ್ಯರು ಪ್ರದರ್ಶಿಸಿದರು.

4ನೇ ವಾರ
ಕರ್ನಾಟಕದ
ಎಲ್ಲಾ ಪ್ರಮುಖ
ಕೇಂದ್ರಗಳಲ್ಲಿ ಅತ್ಯಂತ
ಜನಪ್ರಿಯವಾಗಿ
ಪ್ರದರ್ಶಿತವಾಗುತ್ತಿದೆ
★
ನಿಮ್ಮ ಊರಿನ
ಚಿತ್ರ ಮಂದಿರದಲ್ಲಿ
ನೋಡಿ ಆನಂದಿಸಿರಿ
ಮಾಯಾ ಬಜಾರ್
** ವಿಜಯ ಟಾಕೀ
ಹಂಚಿಕೆ
(ಕಟಕ)

ಸೇವಾಸಂಸ್ಥೆಗಳ ಮಹತ್ವದ ಪಾತ್ರ

(೫ನೇ ಪುಟದಿಂದ)

ಇದರೊಂದಿಗೆ ಸರಕಾರವೂ ಎರಡು ಬ್ರಹದ್ವ್ಯವಸ್ಥಾಣದ ಸಮಾಜಸೇವಾಕಾರ್ಯಗಳನ್ನು ಕೈಗೊಂಡಿದೆ. ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿ ಮತ್ತು ಭಾರತ ಸೇವಕಸಮಾಜ ಇದೀಗ ದೇಶವ್ಯಾಪಿಯಾಗಿ ಕಾರ್ಯಮಗ್ನವಾಗಿರುವುವು. ಇವಕ್ಕೆ ಸರಕಾರ ಮತ್ತು ಜನತೆಯ ಸಹಾಯ ದೊರೆಯುತ್ತಿದೆ ಭಾರತ ಸರಕಾರದ ಶಿಕ್ಷಣಾಮಂತ್ರಿ ಶಾಖೆಯ ಅಂಗವಾದ ಕೇಂದ್ರೀಯ ಸಮಾಜಕಲ್ಯಾಣ ಮಂಡಳಿವು ಪ್ರಥಮ ಯೋಜನೆಯಲ್ಲಿ ಸುಮಾರು ಐದು ಕೋಟಿ ರೂಪಾಯಿಗಳನ್ನು ಸಮಾಜ ಸೇವೆ ಮತ್ತು ಸಮಾಜ ಕಲ್ಯಾಣ ಕಾರ್ಯಗಳಲ್ಲಿ ಖರ್ಚು ಮಾಡಿದ್ದು ಇದರಲ್ಲಿ ಬಹುಭಾಗ ದೇಶದಲ್ಲಿನ ಸಮಾಜ ಸೇವಾ ಸಂಸ್ಥೆಗಳಿಗೆ ದಾನರೂಪವಾಗಿ ಹೋಗಿದೆ. ಇದರಿಂದ ಅಂತಹ ಸಂಸ್ಥೆಗಳು ತಮ್ಮ ಆರ್ಥಿಕ ಬಿಕ್ಕಟ್ಟಿನ ಪ್ರಸಂಗಗಳಿಂದ ತಪ್ಪಿಸಿಕೊಂಡು ಜನತೆಗೆ ಹೆಚ್ಚಿನ ಸೇವೆ ಸಲ್ಲಿಸಲು ಅನುಕೂಲವಾಗಿರುವುದು.

ಎರಡನೆಯ ಯೋಜನೆಯಲ್ಲಿ ಕೇಂದ್ರೀಯ ಸಮಾಜ ಕಲ್ಯಾಣ ಮಂಡಲದ ಮೂಲಕ ೧೯ ಕೋಟಿ ರೂಪಾಯಿ ಖರ್ಚಾಗುವುದು. ಇದರಿಂದ ಸೇವಾ ಸಂಸ್ಥೆಗಳಿಗೆ ಸಹಾಯ ಕೊಡುವುದಲ್ಲದೆ, ಬಾಲರ ಹಿತ ರಕ್ಷಣೆ, ನಿರಾಶ್ರಿತ ಮಹಿಳೆಯರ ಆಶ್ರಯ, ತ್ಯಜಿಸಲ್ಪಟ್ಟ ಅನಾಥ ಸ್ತ್ರೀಯರ ಉನ್ನತಿ ಮೊದಲಾದುವುಗಳನ್ನು ಸ್ವತಃ ಇಲ್ಲವೇ ಅದಕ್ಕಾಗಿ ನಿರ್ಮಿಸಲಾಗುವ ಸಂಘಗಳ ಮೂಲಕ ನೋಡಿಕೊಳ್ಳುವುದು. ಈ ರೀತಿಯಲ್ಲಿ ಸಮಾಜ ಸೇವೆಯು ಬೆಳೆಯುತ್ತ ಬರುತ್ತಿದೆ; ಮತ್ತು ಲಕ್ಷಾಂತರ ನರನಾರಿಯರು ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿದ ಛತ್ರಛಾಯೆಯಲ್ಲಿ ಸೇವಾಕಾರ್ಯ ಮಾಡುತಿದ್ದಾರೆ ಇಂತಹ ಕೆಲಸ ಮಾಡುವವರ ಸಂಖ್ಯೆಯನ್ನು ಬೆಳೆಸಲು ನವಯುವಕ ಮತ್ತು ನವಯುವತಿಗೆ ಸಮಾಜಸೇವಾ ಸಂಬಂಧಿ ವಿಶೇಷ ಶಿಕ್ಷಣವನ್ನು ಕೊಡಲಾಗುತ್ತದೆ.

ಭಾರತ ಸೇವಕ ಸಮಾಜವು ಸರಕಾರದ ಅಂಗವಾಗಿ ಸಮಾಜಸೇವೆಯ ಕಾರ್ಯಗಳ ಮೂಲಕ ಪಂಚವಾರ್ಷಿಕ ಯೋಜನೆಯ ಪ್ರಚಾರ ಮತ್ತು ಅದನ್ನು ಸಫಲವಾಗಿಸುವಲ್ಲಿ ಜನತೆಯ ಸಾಮೂಹಿಕ ಸಹಾಯ ದೊರಕಿಸುವ ಉದ್ದೇಶಗಳಿಂದ ೧೯೫೩ರಲ್ಲಿ ಸ್ಥಾಪಿಸಲಾಯಿತು. ತಮ್ಮ ಅಮೂಲ್ಯ ಸಮಯದಲ್ಲಿ ಅತ್ಯಲ್ಪಕಾಲವನ್ನು ಸಮಾಜಸೇವೆಗಾಗಿ ವಿನಿಯೋಗಿಸಿದಲ್ಲಿ ಇದರ ಸದಸ್ಯತ್ವವು ದೊರೆಯುವುದು. ಇದರಲ್ಲಿ ಸರಕಾರೀ-ಅಸರಕಾರಿ-ಯಾವ ಧರ್ಮ ಮತ್ತು ವಿಚಾರದ ವ್ಯಕ್ತಿಯೂ ಸೇರಿಕೊಳ್ಳಬಹುದು. ಭಾರತದ ಪ್ರಧಾನಿ ಜವಾಹರಲಾಲ ನೆಹರೂ ಅದರ ಅಧ್ಯಕ್ಷರಾಗಿದ್ದಾರೆ. ಆದರ ಶಾಖೆಗಳು ಪ್ರದೇಶ ಪ್ರದೇಶಗಳಲ್ಲೂ ನಗರ ನಗರಗಳಲ್ಲೂ ಸ್ಥಾಪಿತವಾಗಿದ್ದು ತಂತಮ್ಮ ಕ್ಷೇತ್ರಗಳಲ್ಲಿ ನಾನಾ ವಿಧದ ಸೇವೆ ಸಲ್ಲಿಸುತ್ತಿವೆ. ಇದರ ಕಾರ್ಯ ನಡೆಯದ ಭಾಗ ಪ್ರಾಯಃ ಭಾರತದಲ್ಲಿಲ್ಲ. ಲಕ್ಷಾಂತರ ನವಯುವಕರನ್ನು ಕೇಂದ್ರದಲ್ಲಿಟ್ಟುಕೊಂಡು ಶ್ರಮ ಪ್ರತಿಷ್ಠೆಯ ಪಾಠವನ್ನು ಕಲಿಸಲಾಗುತ್ತಿದೆ. ನವಕಾರ್ಯಕರ್ತರಿಗೆ ಸಮಾಜ ಸೇವೆಯ ವಿಶೇಷ ಶಿಕ್ಷಣವಿತ್ತು ಬೇರೆ ಬೇರೆಡೆಗೆ ಕಳಿಸಲಾಗುತ್ತದೆ. ಇದರ ಕಾರ್ಯವು ಸರ್ವಾಂಗೀಣವಾಗಿದ್ದರೂ ಸದ್ಯ ಈ ಐದು ವಿಷಯಗಳತ್ತ ವಿಶೇಷ ಗಮನವೀಯಲಾಗುತ್ತಿದೆ ಮತ್ತು ಇವುಗಳಿಂದ ದೇಶದಲ್ಲಿ ನವೋತ್ಸಾಹವನ್ನು ಹುಟ್ಟಿಸಿ ಸಮಾಜ ಕಲ್ಯಾಣದ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬಹುದೆಂದು ನಂಬಲಾಗಿದೆ—

(೧) ದೇಶವಾಸಿಗಳನ್ನು ಜನಜಾಗೃತಿ ಆಂದೋಲನದಲ್ಲಿ ಭಾಗವಹಿಸಲು ತರಬೇತಿ ಮಾಡುವುದು ಮತ್ತು ಜಾತಿ ಮತ, ಸ್ಪೃಶ್ಯಾಸ್ಪೃಶ್ಯತೆ, ಧರ್ಮಾಧರ್ಮ ಹಾಗೂ ವಿಭಿನ್ನ ವಿಚಾರಗಳಿಂದ ಹುಟ್ಟಿಬಂದ ದೋಷಗಳನ್ನು ನಿರ್ಮೂಲನ ಮಾಡಿ ಐಕ್ಯಗಾನವನ್ನು ಹಾಡಿಸುವುದು.

(೨) ಉತ್ಪಾದನೆಯಲ್ಲಿ ಹೆಚ್ಚಳವನ್ನು ಸಾಧಿಸುವುದು ಮತ್ತು ಅನಾವ್ಯಯವನ್ನು ತಡೆಗಟ್ಟುವುದು.

(೩) ಆಪತ್ತಿಕಾಲವನ್ನೆದುರಿಸಲು ಸಿದ್ಧರಾಗಿಸುವುದು.

(೪) ಆರೋಗ್ಯ ಮತ್ತು ಯೋಗಾಸನಗಳಲ್ಲಿ ಅಭಿರುಚಿ ಹುಟ್ಟಿಸುವುದು ಮತ್ತು

(೫) ಅನಾರೋಗ್ಯಕರ ಗುಡಿಸಲುಗಳ ಕ್ಲಿನ್ನ ಒಡವರ ಉದ್ಧಾರ ಕಾರ್ಯ.

ಈ ಐದು ಕಾರ್ಯಗಳನ್ನು ಸೇವಕ ಸಮಾಜವು ಮಾಡುತ್ತಿದ್ದು ಇದರಲ್ಲಿ ಅನೇಕ ಸ್ತ್ರೀಪುರುಷರು ತೊಡಗಿದ್ದಾರೆ. ಗಾಂಧೀ ನಿಧಿ, ಸರ್ವಸೇವಾ ಸಂಘ ಹರಿಜನ ಸೇವಕ ಸಂಘ, ಕಸ್ತೂರ್ಬಾ ಫಂಡ್ ಮೊದಲಾದ ಇತರ ಸೇವಾ ಸಂಸ್ಥೆಗಳೂ ಇದ್ದು ಅವುಗಳು ಗ್ರಾಮ ಹಾಗೂ ನಗರಗಳಲ್ಲಿ ದುಡಿಯುತ್ತಿವೆ. ಈ ರೀತಿಯಲ್ಲಿ ಪ್ರಚಲಿತ ಕಾಲದಲ್ಲಿ ದೇಶದಲ್ಲಿ ಸಾಮಾಜಿಕ ಕ್ರಾಂತಿಯು ಅನೇಕ ಪ್ರಯೋಗಗಳ ದ್ವಾರಾ ಜನಕಲ್ಯಾಣ ಮತ್ತು ಸಮಾಜಸೇವೆಗಳನ್ನು ಮಾಡುತ್ತಿದೆ. ಈ ಕೆಲಸಗಳಿಂದ ದೇಶವು ತೀವ್ರಗತಿಯಲ್ಲಿ ಪ್ರಗತಿಪಥದತ್ತ ಸಾಗಬಹುದೆಂಬ ದೃಢ ವಿಶ್ವಾಸವನ್ನು ಇಟ್ಟುಕೊಂಡ. ಭಾರತೀಯರು ಈ ಕಾರ್ಯಗಳಲ್ಲಿ ಗೌರವವನ್ನಿಟ್ಟು ಕಾರ್ಯ ತತ್ಪರರಾಗಬೇಕು; ಆಗ ಭಾರತದ ಸರ್ವಾಂಗೀಣ ವಿಕಾಸವಾಗುವುದರಲ್ಲಿ ಸಂದೇಹಕ್ಕೆ ಆಸ್ಪದವಿಲ್ಲ.

(ಮೂಲ: ರಾಧಾರಮಣ)

ಮಂಗಳೂರು

ಶಿಶು ಹಿತಚಿಂತನೆ—ತಾ. ೨ರಂದು ಜರಗಿದ ಮಂಗಳೂರು ರೋಟರಿ ಕ್ಲಬ್ಬಿನ ಸಭೆಯಲ್ಲಿ, ಶಿಶು ಹಿತಚಿಂತನಾ ಸ್ಪೆಷಲಿಸ್ಟರಾದ ಡಾ. ಬಿ ಕೆಡಿಯಿರೋಡವರು 'ಶಿಶು ಹಿತ ಚಿಂತನೆ' ಎಂಬ ವಿಷಯದ ಮೇಲೆ ಭಾಷಣ ವಿತ್ತರು. ಶ್ರೀ ಪಿ. ಎಸ್. ಕಂಸ್ವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಪಿ. ಕಸ್ತೂರಿಯವರು ಗತ ಸಭೆಯ ವರದಿಯನ್ನೋದಿದರು. ಶ್ರೀ ಎಚ್. ಆರ್. ಕಾಮತರು ಧನ್ಯವಾದಗಳನ್ನಿತ್ತರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಕಂದಾಯಮಂತ್ರಿಗಳು—ಮೈಸೂರಿನ ಕಂದಾಯಮಂತ್ರಿ ಶ್ರೀ ಎಮ್. ಪಿ. ಪಾಟೀಲರು ತಾ ೪ರಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣಮಾಡಿದರು. ದೇಶದ ಆಹಾರ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಸಣ್ಣ ನೀರಾವರಿ ಯೋಜನೆಗಳು ಬಹಳ ಪರಿಣಾಮಕಾರೀ ಹಾಗೂ ಮಹತ್ವದ ಯೋಜನೆಗಳಾಗಿವೆ. ಪ್ರಕೃತದ ಅಗತ್ಯವಾದ ಆಹಾರ ಸಮಸ್ಯೆಯನ್ನು ಹೋಗಲಾಡಿಸಲು ಸಣ್ಣ ಪ್ರಮಾಣದ ನೀರಾವರಿಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವುದು ಅಗತ್ಯ ಇದಕ್ಕಾಗಿ ಮೈಸೂರು ಸರಕಾರವು ಸಣ್ಣ ನೀರಾವರಿಗಳಿಗಾಗಿ ಪ್ರತಿವರ್ಷ ಒಂದು ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಲು ನಿರ್ಧರಿಸಿಯದೆ ಎಂದರು. ರಾಜಕೀಯ ಸಂತ್ರಸ್ತರಿಗೆ ಭೂಮಿವಿತರಣೆ, ಜತ್ತಿ ಸಮಿತಿ ವರದಿ ಕುರಿತು ಕೂಡಾ ಮಾತನಾಡಿದರು. ಮಂಗಳೂರು ವಿಭಾಗಕ್ಕೆ ಪ್ರತ್ಯೇಕ ರೆವಿನ್ಯೂ ಡಿವಿಜನ್ ಸ್ಥಾಪನೆಯ ಅಗತ್ಯ, ರಾಜ್ಯಸರಕಾರವು ಸ್ಥಳೀಕ ಸಂಸ್ಥೆಗಳಿಗೆ ಆರ್ಥಿಕ ಸಹಾಯ ನೀಡುವ ಜರೂರಾತಿ ಕುರಿತು ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಂತ್ರಿಗಳಿಗೆ ನಿವೇದನೆ ಮಾಡಿಕೊಂಡರು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಸರಕಾರದಿಂದ ಜಿಲ್ಲಾ ಬೋರ್ಡಿಗೆ ದೊರಕಬೇಕಾಗಿದ್ದ ರೋಡ್ ಸರ್ಚಾರ್ಜು ಇನ್ನೂ ಬಾಕಿ ಇದೆ ಎಂದು ತಿಳಿಸಿದರು.

ಶ್ರೀ ಕೆ ಕೆ ಸೆಟ್ಟಿ ಎಮ್ ಎಲ್. ಸಿ ಯವರು ಸಭಾರಂಭದಲ್ಲಿ ಮಂತ್ರಿಗಳನ್ನು ಸ್ವಾಗತಿಸಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಡಾ| ಕೆ. ಬಾಲಪ್ಪ ಸೆಟ್ಟರು ಧನ್ಯವಾದವಿತ್ತರು

ಶಾಲಾ ವಾರ್ಷಿಕೋತ್ಸವ—ಕೆನರಾ ಹೈಸ್ಕೂಲು ಉರ್ವದ ವಾರ್ಷಿಕೋತ್ಸವವು ತಾ ೬ರಂದು ಸಂಜೆ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಎಮ್. ಅಣ್ಣಪ್ಪ ಕಾಮತರು ಸ್ವಾಗತ ಭಾಷಣ ಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಜಿ. ಆರ್ ಶೆಣೈಯವರು ವರದಿಯನ್ನೋದಿದರು. ಶ್ರೀ ಎಸ್. ಚಂದ್ರಶೇಖರ ಭಂಡಾರಿಗಳು ಶಾಲಾ ಸ್ವಸ್ತಿವಾಚನ ಮಾಡಿದರು. ಸಭಾಧ್ಯಕ್ಷರು ಡಾ| ಪಿ. ರಾಮಕಾಮತ್ ಮತ್ತು ಶ್ರೀ ಯು. ಕೇಶವರಾಯರ ತೈಲಚಿತ್ರಗಳ ಅನಾವರಣ ಮಾಡಿದರು. ನಂತರ ಬಹುಮಾನವಿತರಣೆ ಮಾಡಿ ಶಾಲಾ ಪ್ರಗತಿ ಬಗ್ಗೆ ಸಂತೋಷ ವ್ಯಕ್ತಪಡಿಸಿದರು ಅಂದು ಬೆಳಿಗ್ಗೆ ಪಂದ್ಯಾಟಗಳಲ್ಲಿ ಗೆದ್ದವರಿಗೆ ಪಾರಿತೋಷ ವಿತರಣೆಯು ಶ್ರೀ ಯು. ಕೇಶವರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಮಹಾ ಸಭೆಯು—ಇದೇ ತಾ. ೧೨ರಂದು ಅಪರಾಹ್ನ ಬೆಂಗಳೂರಲ್ಲಿ ಜರಗಲಿರುವುದು. ಹೊಸ ಅಧಿಕಾರಿ ವರ್ಗ ಮತ್ತು ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆಯು ಈ ಸಭೆಯಲ್ಲಿ ನಡೆಯಲಿರುವುದು.

—

ಕುಂದಾಪುರ ಕಳೆದ ತಾ. ೩೦ರಂದು ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರ ಗೌರವಾರ್ಥವಾಗಿ ಸತ್ಕಾರಕೂಟವೊಂದು ಜರಗಿತು ಶ್ರೀ ಕೆ. ವೆಂಕಪ್ಪ ಶೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು. ಆವಷ್ಟು ತ್ವರ್ಯದಲ್ಲಿ ಸರಕಾರೀ ವೇತನ ಪ್ರಮಾಣವನ್ನು ಬೋರ್ಡಿನ ಉಪಾಧ್ಯಾಯರಿಗೆ ಅನ್ವಯಿಸುವಂತಾಗಬೇಕೆಂದು ಒಪ್ಪಿಸಿದ ಬಿನ್ನವತ್ತಳೆಗೆ ಬೋರ್ಡಿನ ಅಧ್ಯಕ್ಷರು ಉತ್ತರವೀಯುತ್ತ, ಇದನ್ನು ಅನ್ವಯಿಸುವದಕ್ಕಿರುವ ಕೆಲವು ವ್ಯಾವಹಾರಿಕ ಕಷ್ಟಗಳನ್ನು ವಿವರಿಸಿ, ಬೋರ್ಡು ದಿಸೆಯಲ್ಲಿ ತಕ್ಕ ಕ್ರಮಗಳನ್ನು ಕೈಕೊಳ್ಳುವೆದೆಂದು ಭರವಸೆಯಿತ್ತರು. ಈ ಬೋರ್ಡು ಇರುವಾಗಲೇ ಹೊಸ ವೇತನ ಪ್ರಮಾಣ ಬರುವಂತೆ ಬೋರ್ಡು ಮುತುವರ್ಜಿ ವಹಿಸಬೇಕೆಂದು ಅಧ್ಯಕ್ಷರು ಹೇಳಿದರು.

ಬೈಲೂರು—ಬೈಲೂರಿನ ಮೂರು ದಿನಗಳ ಗ್ರಾಮನಾಯಕ ಪರಿಷತ್ತಿನ ಸಮಾರೋಪವು ತಾ. ೨೯ರಂದು ಶ್ರೀ ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಭೋಜರಾಜ ಹೆಗ್ಗಡೆಯವರು ಪೂಮಾಲೆ ಅರ್ಪಿಸಿದರು. ಶ್ರೀ ಜೆ. ನಾರಾಯಣ ಹೆಗ್ಗಡೆಯವರು ಸ್ವಾಗತಿಸಿದರು ಶ್ರೀಗಳಾದ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ; ಎನ್. ಭುಜಬಲ ಆತಿಕಾರಿ, ಕೆ. ಎಸ್. ಎನ್. ಅಡಿಗ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಸಮಾರೋಪ ಮಾತುಗಳಾದ ನಂತರ ಜಿ. ಡಿ ಜಿ. ಹಾಜಿ ವಿ. ರಮುಲಾವರು ಧನ್ಯವಾದಗಳನ್ನಿತ್ತರು.

ಕುಂಬಕೋಣೆ—ಬೈಂದೂರು ಸಮಾಜಾಭಿವೃದ್ಧಿ ಯೋಜನೆಯ ವತಿಯಿಂದ ಕುಂಬದಕೋಣೆ ಮತ್ತು ನಾವುಂದ ಕೇಂದ್ರಗಳ ಗ್ರಾಮ ಪ್ರಮುಖರ ತರಬೇತಿ ಶಿಬಿರವು ಕಳೆದ ತಾ. ೨೭ರಿಂದ ೨೯ರ ತನಕ ನಡೆಯಿತು. ಪ್ರಾರಂಭದಿನ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ, ಅವರು ರಾಷ್ಟ್ರಧ್ವಜವನ್ನೇರಿಸಿ ಶಿಬಿರದ ಉದ್ಘಾಟನೆ ಮಾಡಿದರು. ಕುಂದಾಪುರ ಡಿವಿಜನಿನ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ಎಲ್. ಸೂರ್ಯನಾರಾಯಣ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಆರ್. ಕೆ ಸಂಜೀವರಾವ್, ಎಚ್. ಜಿ. ಕೆದಿಲಾಯ, ವೈ ಸದಾಶಿವ ಸೆಟ್ಟಿ ಮೊದಲಾದವರ ಭಾಷಣಗಳಾದುವು ಎರಡನೆ ದಿವಸ ಜಾನುವಾರು ಮತ್ತು ಕೋಳಿ ಪ್ರದರ್ಶನದ ಉದ್ಘಾಟನೆಯನ್ನು ಡಾ: ಕೆ. ಪ್ರಭಾಕರರಾಯರು ನೆರವೇರಿಸಿದರು. ಡಾ. ಸದಾಶಿವ ಭಟ್, ಶ್ರೀಗಳಾದ ಧರ್ಮರಾಜ ಎನ್. ಎಮ್. ಹೆಗ್ಡೆ ಮತ್ತು ಕುಮಾರಿ ವಿಶಾಲಾಕ್ಷಿಯವರು ಮಾತನಾಡಿದರು. ಕೊನೆಯ ದಿನ ಶ್ರೀ ವೈ. ಮಂಜಯ್ಯ ಸೆಟ್ಟಿ ಎಮ್ ಎಲ್. ಎ, ಅವರು ಸಭಾಧ್ಯಕ್ಷತೆ ವಹಿಸಿದ್ದು ಪ್ರಶಸ್ತಿಪತ್ರ ಮತ್ತು ಬಹುಮಾನ ವಿತರಣೆಗಳಾದುವು.

ಮದ್ರಾಸ್ ದಾಸ ಪ್ರಕಾಶದ

ತೃತೀಯ ವರ್ಧಂತಿ ಸಮಾರಂಭವು ಕಳೆದ ತಾ ೨೩ರಂದು ಲೋಕ ಸಭಾಧ್ಯಕ್ಷರಾದ ಲೋಕಸೇವಾ ಧುರೀಣ ಶ್ರೀ ಅನಂತಶಯನಂ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ವೈಭವದಿಂದ ಜರಗಿತು ಈ ಸಂದರ್ಭದಲ್ಲಿ ಶತಾಯುಗಳಾಗಿ ಕೀರ್ತಿಶೇಷರಾದ ಪುತ್ತಿಗೆ ಮಠದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರ ತೈಲಚಿತ್ರ ಅನಾವರಣವನ್ನು ಸಭಾಧ್ಯಕ್ಷರು ನೆರವೇರಿಸಿದರು. ಪ್ರಕಾಶ ಮಂಟಪದಲ್ಲಿ ಎಸೆಂಬ್ಲಿ ಸ್ಪೀಕರ್ ಡಾ| ಯು ಕೃಷ್ಣರಾವ್, ಡಾ| ಯು ಎಲ್. ನಾರಾಯಣರಾವ್, ಡಾ| ಎಂ. ಬಿ. ನಾರಾಯಣರಾವ್ ಮೊದಲಾದ ಆಪ್ತರು ನೆರೆದಿದ್ದರು. ಸಂಗೀತ ವಿದ್ವಾನ್ ಕೆ ವಾಸುದೇವಾಚಾರ್ಯರು ಶ್ರೀ ಪುತ್ತಿಗೆ ಸ್ವಾಮಿಗಳ ಕುರಿತು ರಚಿಸಿದ್ದ ಪ್ರಾರ್ಥನಾ ಶ್ಲೋಕಗಳನ್ನು ಹಾಡಿದರು. ಹದಿನಾಲ್ಕು ಮಠಾಧಿಪತಿಗಳಿಂದಲೂ, ಮೈಸೂರು ತಿರುವಾಂಕೂರು ಮಹಾರಾಜರುಗಳು, ಸರ್ ಸಿ. ಪಿ ರಾಮಸ್ವಾಮಿ, ಸರ್. ಎಮ್. ವಿಶ್ವೇಶ್ವರಯ್ಯ ಮತ್ತು ರಾಜ್ಯದ ಮಂತ್ರಿ ಸಂಪುಟದವರ ಶುಭಸಂದೇಶಗಳನ್ನು ಓದಲಾಯಿತು

ಶ್ರೀ ಸೀತಾರಾಮರಾಯರು ಸ್ವಾಗತ ಭಾಷಣ ಮಾಡಿದರು. ಸಭಾಧ್ಯಕ್ಷರು ಇಡೀ ಲೋಕದಲ್ಲೇ ಈ ದಾಸ ಪ್ರಕಾಶವು ಉತ್ತಮ ಸ್ಥಾನ ಪಡೆಯಲು ಅರ್ಹವಾಗಿದೆ ಎಂದು ಹೇಳಿ ಶ್ರೀ ಸೀತಾರಾಮರಾಯರನ್ನು ವಂದಿಸಿದರು ಶ್ರೀ ಪಿ ಅನಂತರಾಯರು ಧನ್ಯವಾದಗಳನ್ನಿತ್ತರು. ಬಳಿಕ ಶ್ರೀ ಸೀತಾರಾಮರಾಯರ ಮಕ್ಕಳು ದಾಸ ಕೀರ್ತನೆಗಳನ್ನು ಹಾಡಿದರು.

ಚಿತ್ರ ಭಾರತಿ ಮದ್ರಾಸು

ಚಿತ್ರ ಭಾರತಿಯವರ 'ಅಥರ್ವ ಭಾರತಿ'ಯ ಕಥೆ, ಸಂಭಾಷಣೆಗಳನ್ನು ಬರೆದು ಮುಗಿಸಿ ಅದರ ವಿಷಯ ವಿಮರ್ಶೆ ನಡೆಯುತ್ತಿದೆ ಸಕಾಲದಲ್ಲಿ ಕಚ್ಚಾ ಫಿಲಂ ದೊರೆತಲ್ಲಿ ಜನವರಿ ತಿಂಗಳ ಅಂತ್ಯದಲ್ಲಿ ಶೂಟಿಂಗ್ ಪ್ರಾರಂಭವಾಗಲಿರುವುದು.

ಸಂಭಾಷಣೆ ಹಾಡುಗಳು ಶ್ರೀ ಸೂರತ್ ಆಶ್ರರವರು. ಸಂಗೀತ ಶಾಮಣ್ಣನವರು ನಿರ್ದೇಶನ—ಶ್ರೀ ಸತ್ಯಮೂರ್ತಿ. ಪ್ರಧಾನ ತಾರಾಗಣದಲ್ಲಿ ಶ್ರೀ ಸಂಪತ್, ಉದಯಕುಮಾರ್, ಮಹಾಬಲ ರಾವ್, ಬಾಲಕೃಷ್ಣ, ವಾದಿರಾಜ್, ರೇವತಿ, ಜಯಶ್ರೀ, ಲಕ್ಷ್ಮೀದೇವಿ ಮತ್ತು ಹರಿಣಿ ಮೊದಲಾದವರಿರುವರು

ಆರ್ಥಿಕ ವರ್ಗಭೇದಗಳ ಅನಾಹುತ

(೪ನೇ ಪುಟದಿಂದ)

ಗಿಯೇ ಜಗತ್ತಿನ ಮಹಾರಾಷ್ಟ್ರಗಳಲ್ಲಿ ಅನೇಕ ತತ್ವಗಳನ್ನೊಳಗೊಂಡ ಹೊಸ ಹೊಸ ಅಭಿಪ್ರಾಯದ ಪಕ್ಷ ಪಂಗಡಗಳು ಹುಟ್ಟಿಕೊಂಡಿದ್ದು, ಅವುಗಳಲ್ಲಿ ಬಂಡವಾಳಶಾಹಿ, ಸಮಾಜವಾದಗಳು ಮಹತ್ವವಾದವುಗಳಾಗಿವೆ. ಬಂಡವಾಳಶಾಹಿಯ ಬಗ್ಗೆ ಈಗಾಗಲೇ ತಿಳಿದುಕೊಂಡಿದ್ದು, ಸಮಾಜವಾದದ ಬಗ್ಗೆಯೂ ನಾವು ವಿಶೇಷವಾಗಿ ಲಕ್ಷ್ಯ ಹಾಕಬೇಕಾಗಿದೆ.

ಸಮಾಜವಾದದಲ್ಲಿ ಸಮಾನತೆಯದೊಂದೇ ಮೂಲಭೂತ ಪ್ರಶ್ನೆ. ಆದರೆ ಸಮಾಜವಾದದ ಬಗ್ಗೆ ಅಭ್ಯಸಿಸಿದ ವಿಶೇಷ ತಜ್ಞರು ಸಮಾಜವಾದೀ ತತ್ವವು ಪ್ರಜೆಗಳ ವೈಯುಕ್ತಿಕ ಉತ್ಥಾನಕ್ಕೆ ಸ್ವಲ್ಪ ಅವಕಾಶ ಕಲ್ಪಿಸಿಕೊಡಲಾರದೆಂದು ಹೇಳುತ್ತಾರೆ. ಒಬ್ಬ ನುರಿತ, ಕುಶಲ ಬಡಗಿ ಇದ್ದಾನೆಂದು ಭಾವಿಸುವಾ. ಸಮಾಜವಾದದಲ್ಲಿ ಎಲ್ಲರಂತೆಯೇ ತಾನೂ ಒಬ್ಬ ವ್ಯಕ್ತಿಯಾಗಿ ಇದ್ದುದರಲ್ಲೇ ಇರಬೇಕಾಗುವುದಲ್ಲದೇ ತನ್ನ ಕುಶಲತೆಯನ್ನು ಗೌರವಿಸುವವರೇ ಇಲ್ಲದಂತಾಗುತ್ತದೆ. ಇದರಿಂದಾಗಿ ಬಡಗಿ ತನ್ನ ಕುಶಲತೆಯ ಮಹತ್ವವನ್ನೇ ಅರಿಯದವನಾಗಿ ನಿರುತ್ಸಾಹದಡೆಯಲ್ಲಿ ಸಾಗಬಹುದಾದ ಸಂದರ್ಭಗಳಿವೆ. ಈ ರೀತಿಯಿಂದ ವ್ಯಕ್ತಿಯ ವೈಯಕ್ತಿಕ ಧ್ಯೇಯ ಸಾಧನೆಯಾಗದ ಹೋಗಬಹುದು. ಈ ಕಾರಣದಿಂದಲೇ ಸಮಾಜವಾದದ ಅನುಕರಣೆ ಮಾನವೀಯ ದೃಷ್ಟಿಯಿಂದ ಯೋಗ್ಯವಲ್ಲವೆಂದು ಜನ ಭಾವಿಸುತ್ತಾರೆ

ಬಂಡವಾಳಶಾಹಿಯಲ್ಲಿ ಪ್ರಜೆಗಳ ವ್ಯಕ್ತಿಶಃ ಸ್ವಾತಂತ್ರ್ಯಕ್ಕೆ ವಿಶೇಷ ಆಸ್ಪದವಿದ್ದರೂ, ಅಷ್ಟೇ ಅನುಪಯೋಗಿ ಸಂದರ್ಭಗಳು ಒದಗಿ ಅನರ್ಥಕ್ಕೊಳಗಾದರೆ, ಸಮಾಜವಾದದಲ್ಲಿ ವ್ಯಕ್ತಿಗಳಿಗೆ ವಿಶೇಷ ಸ್ವಾತಂತ್ರ್ಯವಿಲ್ಲದಿರುವುದರಿಂದ ಅನರ್ಥವಾಗುವ ಸಾಧ್ಯತೆಗಳಿವೆ. ಹೊಸದಾಗಿ ಸ್ವಾತಂತ್ರ್ಯಗಳಿಸಿದಂತಹ ಭಾರತದಂತಹ ರಾಷ್ಟ್ರದಲ್ಲಿ ಇವೆರಡೂ ತರಹದ ಪ್ರಯೋಗಗಳು ಅಯಶಸ್ವಿಯೇ ಎಂದು ಹೇಳಬಹುದು. ಭಾರತದ ಆರ್ಥಿಕ ಪುನರುತ್ಥಾನವಾಗಬೇಕಾದರೆ, ವ್ಯಕ್ತಿಗಳ ವೈಯಕ್ತಿಕ ಬೆಳವಣಿಗೆ, ವರ್ಗಭೇದಗಳ ನಿವಾರಣೆಯಾಗುವುದವಶ್ಯವಿದೆ. ಇದು ಭಾರತದಷ್ಟೇ ಸಂಬಂಧಿಸಿದ ವಿಷಯವಾಗಿರದೆ, ಜಗತ್ತಿನ ಎಲ್ಲ ರಾಷ್ಟ್ರಗಳ ಬೆಳವಣಿಗೆಯ ದೃಷ್ಟಿಯಿಂದ ಹಿತಕರವಾದುದಾಗಿದೆ. ಆದರ ಆರ್ಥಿಕ ಬೆಳವಣಿಗೆಗೆ ಆರ್ಥಿಕ ಸಹಾಯವಿಲ್ಲದಿದ್ದರೆ ನಡೆಯದು. ಆರ್ಥಿಕ ನೆರವು ಇರದ್ದರಿಂದಲೇ ವರ್ಗಭೇದಗಳನ್ನು ನಾವು ಕಂಡುಕೊಳ್ಳುತ್ತಿದ್ದೇವೆ. ಇದಕ್ಕೊಂದು ಉಪಾಯವೆಂದರೆ ನಮ್ಮಲ್ಲಿಯ ಪ್ರತಿಯೊಂದು ಹುಟ್ಟುವಳಿಗೆ ಯೋಗ್ಯ ಬೆಲೆ ಬರಬೇಕು. ಹಾಗಾಗಬೇಕಾದರೆ ನಮ್ಮ ಉತ್ಪಾದನೆಗಳು ಉತ್ತಮ ಮಟ್ಟದವಾಗುವಂತೆ ಪ್ರಯತ್ನಿಸಬೇಕು. ಅಲ್ಲದೆ ಅವುಗಳಿಗೆ ಯೋಗ್ಯ ಪೇಟೆ ದೊರಕುವಂತೆ ಪ್ರಯತ್ನಿಸಬೇಕು. ಇವೆಲ್ಲವನ್ನೂ ಮಾಡಬೇಕಾದರೆ ಸಹಕಾರದಂತಹ ಸಂಸ್ಥೆಯ ಆವಶ್ಯಕತೆ ಎಲ್ಲೆಡೆಗೂ ಅತ್ಯವಶ್ಯಕ. ಭಾರತದಂತಹ ರಾಷ್ಟ್ರದಲ್ಲಿ ಸಹಕಾರವು ಸರಕಾರದ ಒಂದು ಕಾರ್ಯಾಂಗವಾಗಿ ಕೆಲಸಮಾಡುತ್ತಿದೆಯೇ ಹೊರತು ಅದರ ಉಪಯೋಗ ಸಾಕಷ್ಟು ಮಟ್ಟಿಗೆ ಆಗಿಲ್ಲವೆಂದೇ ಹೇಳಬೇಕು. ರಾಷ್ಟ್ರದ ರಾಜಕೀಯ ಪಕ್ಷಗಳು ಬಂಡವಾಳಶಾಹಿ, ಸಮಾಜವಾದವೆಂಬ ತತ್ವಗಳಿಗೆ ಯಾವ ರೀತಿಯ ಮಹತ್ವಕೊಟ್ಟು, ಕಾರ್ಯರೂಪಗೊಳಿಸುವುದರಲ್ಲಿ ನಿರತವಾಗಿರುವುವೋ ಅದೇ ತರದಂತೆ ವಿಶೇಷ ಮಹತ್ವದೊಂದಿಗೆ 'ಸಹಕಾರ'ವನ್ನಾಗಲೀ, ಅಥವಾ ಆ ಮಾದರಿಯ ರೀತಿಯಿಂದಾದ ವಿಶೇಷ ರೂಪರೇಖೆಗಳನ್ನಾಗಲೀ ಬೆಳೆಕೊಟ್ಟು ಮುಂದುವರಿಸುವುದವಶ್ಯವಿದೆ. ವೈಯಕ್ತಿಕ ವ್ಯಕ್ತಿಯ ಕಾರ್ಯಕ್ಕೆ ಯಶ ಗೌರವ ದೊರೆಯಬೇಕು; ಹಾಗಾದರೇನೇ ಅವರ ಉತ್ಸಾಹ ಇಮ್ಮಡಿಯಾಗಿ ಕಾರ್ಯತತ್ಪರರಾಗುವಂತಾಗಿ ಉತ್ಪಾದನೆಯಲ್ಲಿ ವಿಶಿಷ್ಟತೆ ಎದ್ದು ಕಾಣುವುದು. ಸಹಕಾರ ಇಲ್ಲವೇ ಆ ಮಾದರಿಯ ಹೊಸ ರೀತಿಯು ವ್ಯಕ್ತಿಯ ಕುಶಲತೆಗೆ ತಕ್ಕ ಧನವೂ ದೊರೆಯುವುದಲ್ಲದೆ, ಸಿರಿವಂತಿಕೆ–ಬಡತನಗಳ ಆರ್ಥಿಕ ವರ್ಗಭೇದಗಳೂ ದೂರಾಗಬಲ್ಲುವು. ಬಂಡವಾಳ ಶಾಹಿಯಲ್ಲಿಯಂತೆ ವ್ಯಕ್ತಿಗಳಿಂದ ಹಣದ ದುರುಪಯೋಗವಾಗಲಿ, ಸಮಾಜವಾದದಲ್ಲಿಯಂತೆ ವ್ಯಕ್ತಿಯ ವೈಯುಕ್ತಿಕ ಗುಣ-ಕುಶಲತೆಗಳಿಗೆ ದೊರಕಬಹುದಾದಂತಹ ಅಗೌರವವಾಗಲೀ ಈ ಹೊಸರೀತಿಯಲ್ಲಿ ಕಂಡುಬರುವದಿಲ್ಲ. ಈ ಹೊಸ ರೀತಿಯಲ್ಲಿ ವ್ಯಕ್ತಿಗೆ ಅವನ ಕಾರ್ಯಕ್ಕೆ ಗೌರವ ದೊರೆಯುತ್ತದೆ, ತನ್ನ ಕಾರ್ಯದ ಹೆಚ್ಚಳಕ್ಕೆ ಅನುವು ಸಿಗುತ್ತದೆ; ಆರ್ಥಿಕ ಅಭಿವೃದ್ಧಿಗೆ ಆಸ್ಪದವೀಯುತ್ತದೆ; ಕಾರ್ಯದಲ್ಲಿ ಮುನ್ನಡೆಯಿರುತ್ತದೆ; ವಿಶೇಷ ದುಷ್ಟಟಗಳಿಂದ ದೂರವಿರಬಹುದಾಗಿದೆ.

ಈ ಹೊಸರೀತಿಯು ಅಥವಾ ಸಹಕಾರವು ವಿಶೇಷವಾಗಿ ಪೌರ್ವಾತ್ಯ ರಾಷ್ಟ್ರಗಳ ಎಷ್ಟೋ ಕಾಲದ ಹಿಂದಿನ ತಾತ್ವಿಕ ತತ್ವಗಳ ಮೇಲೆ ಅವಲಂಬಿಸಿದ್ದು, ಇದರಿಂದಾಗಿ ಸಮಾಜದಲ್ಲಿ ಇಂದು ಕಂಡುಬರಬಹುದಾದ ಬಹುತರವಾಗಿ ಎಲ್ಲ ಆರ್ಥಿಕ ವರ್ಗಭೇದಗಳು ದೂರವಾಗಿ, ಪ್ರಜೆಗಳು ಎಷ್ಟೋಪಾಲು ಸುಖವಾಗಿರಬಲ್ಲರೆಂದು ಹೇಳಬಹುದು. ಈ ವಿಷಯವನ್ನು ಸರಕಾರವಷ್ಟೇ ಅಲ್ಲ ಸಮಾಜವೂ, ಸಮಾಜದ ಅಂಗವಾದ ಪ್ರತಿ ವ್ಯಕ್ತಿಯೂ ಗಮನಿಸಿ, ವಿಚಾರಮಾಡುವುದತ್ಯವಶ್ಯವೆಂದು ಸದ್ಯದ ಪರಿಸ್ಥಿತಿಯಲ್ಲಿ ಹೇಳಬೇಕಾಗಿದೆ.

ಹಾಗಾದರೆ ಸಹಕಾರವನ್ನೇ ಮುಂದೊರಿಸಿ, ಬಂಡವಾಳಶಾಹಿ—ಸಮಾಜವಾದಗಳಂತೆ ದೊಡ್ಡ ರೂಪದಿಂದ ರಾಷ್ಟ್ರೀಯ ಜೀವನದಲ್ಲಿ ಪ್ರವೇಶಿಸುವಂತೆ ಮಾಡಬೇಕೆನ್ನುವಿರಾ? ಎಂಬ ಪ್ರಶ್ನೆಯೂ ಈ ಸಮಯದಲ್ಲಿ ಎದ್ದುಬರುತ್ತದೆ. ಬಂಡವಾಳಶಾಹಿ, ಸಮಾಜವಾದಗಳ ಬೆಳವಣಿಗೆಗೂ ಸಹಕಾರದ ನೆರವಿಲ್ಲದಿದ್ದರೆ ಅವುಗಳೂ ಕೂಡ ಬೆಳೆದುಬರುತ್ತಿದ್ದಿಲ್ಲವೆಂಬುದನ್ನು ಗಮನದಲ್ಲಿ ತಂದುಕೊಂಡಾಗ, ಅದಕ್ಕೆ ಸರಿಸಮಾನ ಸ್ತರದಲ್ಲಿ ಯಾವ ರೀತಿಯನ್ನು ಆಚರಣೆಗೆ ತರಬೇಕು ಎಂದೂ ಕೇಳಬಹುದು. 'ಸಹಕಾರ' ಚಳವಳಿಯೇ ಆ ರೂಪ ತಾಳಿದರೆ ಯಾವ ಅಡ್ಡಿ ಆತಂಕಗಳೂ ಇಲ್ಲವಾದರೂ ರಾಷ್ಟ್ರೀಯ ವಿದೇಶೀಸ್ಪರ್ಧೆಯಲ್ಲಿ, ಅದರ ಸಂರಕ್ಷಣೆಯ ಗಂಭೀರ ಭಾವವನ್ನೂ ವಿಚಾರಿಸಬೇಕಾಗುವದು. ಬಂಡವಾಳಶಾಹಿಯಲ್ಲಾಗಲೀ, ಸಮಾಜವಾದದಲ್ಲಾಗಲೀ ಅವುಗಳ ಬಂಡವಾಳ ಇಲ್ಲವೇ ಸಮತಾವಾದ ತತ್ವಗಳ ಮೇಲೆ ಸಂರಕ್ಷಣೆಯ ಕ್ರಮಗಳನ್ನು ಕೂಡಲೇ ಕೈಕೊಳ್ಳಬಹುದು; ಬಂಡವಾಳದ ಜೋರು ಇಲ್ಲವೇ ಸಮತಾವಾದದ ಸಮಾನತೆಗಳು ಅಂತಹ ಪ್ರಸಂಗಗಳಲ್ಲಿ ವಿಶೇಷ ನೆರವನ್ನೀಯಬಲ್ಲವು. ಆದರೆ ಸಹಕಾರವು ರಾಷ್ಟ್ರದ ವಿದೇಶೀಯ ಸ್ಪರ್ಧೆ ಘೋರಣೆಯಲ್ಲೂ ಸಂರಕ್ಷಣಗಳಲ್ಲೂ ವಿಶೇಷ ಪಾತ್ರವನ್ನಾಡಲು ಅಸಮರ್ಥವಾಗಬಹುದಾಗಿದೆ. ನಾವು ಸಹಕಾರೀ ತತ್ವಗಳನ್ನೇ ಅವಲಂಬಿಸಿದಾಗ ಇನ್ನೊಂದು ರಾಷ್ಟ್ರವು ನಮ್ಮ ಮೇಲೆ ದಾಳಿಮಾಡಿತೆಂದು ಭಾವಿಸಿದರೆ ಆಗ ಸಹಕಾರದ ಯಾವ ನೀತಿ-ನಿಯಮಗಳೂ ಕಾರ್ಯಕ್ಕೆ ಬರಲಾರವು. ಅಲ್ಲದೆ ಇದರಿಂದ ವ್ಯಕ್ತಿಗಳ ಸುಧಾರಿತ ಆರ್ಥಿಕ ಪರಿಸ್ಥಿತಿಯ ಮೇಲೆ ಪರಿಣಾಮವಾಗಿ ಪುನಃ ಸಿರಿತನ ಬಡತನಗಳು ಇಲ್ಲವೇ ಇಂತಹ ವರ್ಗ ಭೇದಗಳ ಅನೇಕ ಪ್ರಸಂಗಗಳು ತಲೆದೋರಿ, ರಾಷ್ಟ್ರೀಯ ಆಂತರಿಕ ವ್ಯವಹಾರವೂ ಹದಗೆಡಬಹುದು; ನಮ್ಮ ಸೋಲನ್ನು ನಾವೇ ಕೂಡಲೇ ಒಪ್ಪಿಕೊಳ್ಳಬೇಕಾದ ಪ್ರಸಂಗ ಬರಬಹುದು.

ಈ ಕಾರಣದಿಂದಲೇ ಸಹಕಾರೀ ತತ್ವದ ಪೂರ್ಣ ಉಪಯೋಗವಾಗಲಿಕ್ಕಿಲ್ಲ; ಈ ದೃಷ್ಟಿಯಿಂದಲೋ ಏನೋ ಜಗತ್ತಿನ ಸರಕಾರಗಳು 'ಸಹಕಾರ'ದ ತತ್ವಗಳನ್ನು ತಮ್ಮ ಕಾರ್ಯಾಂಗದ ಒಂದು ಭಾಗವನ್ನಾಗಿ ಮಾಡಿಕೊಂಡಿವೆ. ಆದರೆ ಜಗತ್ತಿನ ಭಯಂಕರ ಮಹಾ ರೋಗವಾದ ವ್ಯಕ್ತಿಗಳ ಆರ್ಥಿಕ ವರ್ಗ ಭೇದಗಳನ್ನು ನಿವಾರಿಸುವ ಉತ್ತಮ ಉಪಾಯವಾದರೂ ಯಾವುದು? ಅದು ಬಂಡವಾಳಶಾಹಿಯಂತೆ ವ್ಯಕ್ತಿಗಳ ವೈಯಕ್ತಿಕ ಆರ್ಥಿಕ ಅಭಿವೃದ್ಧಿಗೆ ನೆರವು ನೀಡಿ, ಸ್ವತಂತ್ರ ಕಾರ್ಯಗಳನ್ನು ಕೈಕೊಳ್ಳಲು ಅನುವು ಮಾಡಿಕೊಡಬೇಕು; ಸಮಾಜವಾದದಲ್ಲಿಯಂತೇ ಎಲ್ಲ ವ್ಯಕ್ತಿಗಳಿಗೆ ಸಮಾನ ಗೌರವ ಆಸ್ಪದಗಳು ಸಮಾಜದಲ್ಲಿ ದೊರಕಬೇಕು—ವೈಯಕ್ತಿಕ ಉತ್ಥಾನಕ್ಕೆ ಆಸ್ಪದವಿರಬೇಕು, ದೇಶವಿದೇಶಗಳ ಸಂಪರ್ಕಗಳ ಹಾಗೂ ಬದಲಾವಣೆಗಳ ಪರಿಣಾಮವನ್ನು ಹೊಂದಿರಬೇಕು ಇಂತಹ ಹೊಸದಾದ ಒಂದು ಮಾರ್ಗವನ್ನು ಜನ ಆರಿಸಿಕೊಳ್ಳಬೇಕಾಗಿದೆ. ಈ ವಿಷಯ ಯಾವುದೇ ಒಂದು ಪಕ್ಷಪಂಗಡಗಳ ಧ್ಯೇಯಾತ್ಮಕ ಕ್ರಿಯೆಯಾಗಿರದೆ ರಾಷ್ಟ್ರದ ಸದಸ್ಯನ ವೈಯಕ್ತಿಕ ಜೀವನದ ಯಶಸ್ವೀ ಮುನ್ನಡೆಯ ಕುರುಹಾಗಿರಬೇಕು. ವಿಶೇಷವಾಗಿ ಸಹಕಾರದ ತತ್ವಗಳನ್ನವಲಂಬಿಸಿದ ಇದು ಕೆಲವೊಂದು ಅಂತಾರಾಷ್ಟ್ರೀಯ ಪರಿಸ್ಥಿತಿಗನುಗುಣವಾಗುವಂತಹ ಬದಲಾವಣೆಗಳನ್ನು ಮಾಡಬೇಕಾಗುವುದು.

ಈ ದಿಶೆಯಲ್ಲಿ ಮುನ್ನಡೆಯಬೇಕಾದರೆ ರಾಷ್ಟ್ರೀಯ ಸರಕಾರಗಳೂ, ಜನತೆಯೂ ಒಂದೇ ದಿಶೆಯಲ್ಲಿ ಮುನ್ನಡೆಯಬೇಕು. ಹೀಗಾದರೆ ಪ್ರಜೆಗಳ ಆರ್ಥಿಕ ವರ್ಗಭೇದಗಳು ನಿವಾರಣೆಯಾಗಬಹುದೇ? ಎಂದು ಕೊನೆಯದಾಗಿ ಪ್ರಶ್ನಿಸಿದರೆ 'ನೂರಕ್ಕೆ ನೂರರಷ್ಟು' ನಿವಾರಣೆಯಾಗುವ ಆತ್ಮವಿಶ್ವಾಸವಿದೆಯೆಂದು ಹೇಳಬಹುದು. ಜನತೆಗೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ಸ್ವಲ್ಪ ಶಿಕ್ಷಣಗಳು ದೊರೆತರೆ ಜೀವನ ಸಾರ್ಥಕ್ಯವಾದಂತಾಗುವುದು ಅದನ್ನು ಸಂಪೂರ್ಣವಾಗಿ ಬಿಡಿಸಬಲ್ಲ ಈ ಹೊಸ ರೀತಿಯೇ ಯೋಗ್ಯ ದಾರಿ. ವೈಯಕ್ತಿಕ ಉತ್ಥಾನಕ್ಕೆ ಆಸ್ಪದವಿರುವುದರಿಂದ ಶೈಕ್ಷಣಿಕ ರಂಗದಲ್ಲಿ ಆಸೆಯುಳ್ಳವರು ಹಿಂದುಳಿಯಲಾರರು; ಸಮಾಜದಲ್ಲಿ ಸಮಾನತೆಯಿರುವುದರಿಂದ ಯಾರಿಗೂ ಹೊಟ್ಟೆಬಟ್ಟೆಗಳಿಗೆ ಆತಂಕಗಳು ಬರಲಾರವು; ಎಲ್ಲ ವರ್ಗಗಳಿಗೂ ತಮ್ಮ ತಮ್ಮ ಇಚ್ಛೆಯಂತೆ ಯೋಗ್ಯ ಬದಲಾವಣೆಗಳನ್ನು ಮಾಡಿಕೊಳ್ಳಲು ಆಸ್ಪದವಿರುವುದರಿಂದಲೂ, ಎಲ್ಲರೂ ಅಷ್ಟೇ ಗೌರವ, ಮಾನ್ಯತೆಗಳಿಗೆ ಅರ್ಹತೆ ಪಡೆದಿರುವುದರಿಂದಲೂ, ಜೀವನರಂಗದ ಹೋರಾಟದಲ್ಲಿಯ ಸ್ಪರ್ಧೆ ಕಡಿಮೆಯಾಗಿ, ವೈಯಕ್ತಿಕ ದ್ವೇಷವು ನಾಶವಾಗುವುದು. ಇದರಿಂದಾಗಿ ಎಲ್ಲ ಭಿನ್ನಭಿನ್ನ ವರ್ಗಗಳೂ ನಿವಾರಣೆಯಾಗಿ 'ಮನುಷ್ಯ ವರ್ಗ'ವೆಂಬ ಒಂದೇ ಒಂದು ವರ್ಗವು ಇಂದಿಲ್ಲ–ನಾಳೆ ಯಾವಾಗಲೂ ವ್ಯವಸ್ಥಿತವಾಗಿ ರೂಪುಗೊಂಡು ಆರ್ಥಿಕ ಕ್ಷೇತ್ರದಲ್ಲಿ ಅನಾದೃಶ್ಯವಾದ ಒಂದು ಮೆಟ್ಟಿಲನ್ನು ನಾವು ಮುಟ್ಟಬಲ್ಲೆವು. ಇದರಿಂದ ರಾಷ್ಟ್ರೀಯ ಸಂರಕ್ಷಣಾ ಕ್ಷೇತ್ರಕ್ಕೂ ಎಲ್ಲರ ಸಮಾನಬೆಂಬಲದಿಂದ ಕಬ್ಬಿಣ ಪರದೆಯನ್ನು ಕಟ್ಟಬಲ್ಲೆವು. ನಮ್ಮಲ್ಲಿಯ ಆರ್ಥಿಕ ವರ್ಗಭೇದಗಳೇ ಎಲ್ಲ ರಂಗಗಳಲ್ಲಿಯ ಅವ್ಯವಸ್ಥೆಗೆ ಕಾರಣವಾಗಿದ್ದು, ಅದರ ನಿವಾರಣೆಯಾಗಿ ಸುವ್ಯವಸ್ಥಿತ ಮುನ್ನಡೆಗೆ ನಾಗರಿಕರ ಆಶೆ—ಆಕಾಂಕ್ಷೆಗಳೇ ಬೆಂಬಲ ನೀಡಬೇಕು; ಅಂದರೇನೇ ನಾವು ಆರ್ಥಿಕ ವರ್ಗಭೇದಗಳ ನಿವಾರಣೆಯ ಕಾರ್ಯದಲ್ಲಿ ಯಶಸ್ವಿಯಾಗುವೆವು; ಬಲಿಷ್ಠ ರಾಷ್ಟ್ರ ಕಟ್ಟುವೆವು.

[ಧಾರವಾಡ ಆಕಾಶವಾಣಿ ಕೃಪೆಯಿಂದ].



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಚಂದಾದಾರರಲ್ಲಿ ವಿನಂತಿ.

ಆಗೋಸ್ಟ್ ಅಂತ್ಯಕ್ಕೆ 'ನವಯುಗ'ದ 36 ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 37 ನೇ ವರ್ಷಾರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ, ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು— (ಮೊದಲ ಎಂಟು ಪುಟಗಳ ಕರಡು ಪ್ರತಿ) ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜ ಪೇಟೆ, ಬೆಂಗಳೂರು — ೨.

ಕನ್ನಡ ಸಾಹಿತ್ಯವು ಅಪಾರವಾಗಿದ್ದರೂ, ಕನ್ನಡಕ್ಕೆ ಪ್ರಾಚೀನ ಉಜ್ವಲ ಪರಂಪರಾಗತ ಶಾಸ್ತ್ರ ಸಾಂಪ್ರದಾಯವಿದ್ದರೂ, ನಿಘಂಟುಗಳ ಕೊರತೆ ಕೆಲಕಾಲದ ಹಿಂದಿನಿಂದಲೂ ಇದ್ದುದು ಎದ್ದು ತೋರುತ್ತದೆ. ರನ್ನಕಂದ (ರನ್ನ–೯೯೩); ಚತುರಾಸ್ಯ ನಿಘಂಟು (ಬೊಮ್ಮರಸ–೧೪೫೦); ಕರ್ಣಾಟಕ ಶಬ್ದಮಂಜರಿ (ವಿರಕ್ತ ತೋಂಟದಾರ್ಯ – ೧೫೬೦); ಕಬ್ಬಿಗರ ಕೈಪಿಡಿ (ಲಿಂಗಮಂತ್ರಿ – ೧೫೩೦); ಕವಿ ಕಂಠಹಾರ (ಸೂರ್ಯ–೧೬೪೦); ಕರ್ನಾಟಕ ಸಂಜೀವನ (ಶೃಂಗಾರ ಕವಿ–೧೬೦೦); ಶಬ್ದಸಾರ ಮೊದಲಾದ ಪ್ರಾಚೀನ ನಿಘಂಟುಗಳು ಹಳಗನ್ನಡ ಪದಗಳ ಅರ್ಥವನ್ನೂ ವಸ್ತುಕೋಶ (ನಾಗವರ್ಮ II – ೧೧೪೫), ಮಂಗಾಭಿದಾನ (ಮಂಗರಾಜ—೧೩೯೮), ನಾನಾರ್ಥ ರತ್ನಾಕರ (ದೇವೋತ್ತಮ–೧೬೨೦), ನಾನಾರ್ಥಕಂದ (ಚೆನ್ನಕವಿ–೧೬೦೦) ಮೊದಲಾದುವು ಸಂಸ್ಕೃತ ಪದಗಳಿಗೆ ಕನ್ನಡ ಪ್ರತಿಪದಗಳನ್ನೂ ಕೊಡುತ್ತವೆ. ಸಂಸ್ಕೃತದ ಅಮರ, ಹಲಾಯುಧ ಮೊದಲಾದ ಸಂಸ್ಕೃತ ಕೋಶಗಳ ವ್ಯಾಖ್ಯಾನರೂಪವೆನಿಸಿದ ಕನ್ನಡ ಗ್ರಂಥಗಳಲ್ಲಿ ಸಂಸ್ಕೃತ ಪದಗಳಿಗೆ ಕನ್ನಡ ಪದಗಳು ಕೊಡಲ್ಪಟ್ಟಿವೆ. ಆದರೆ, ಭಾಷೆಯು ಬೆಳೆಯುತಿದ್ದಂತೆ ಅದರಲ್ಲಿ ಅನ್ಯಭಾಷೆಯ ಶಬ್ದಗಳೂ ಹೊಸ ಶಬ್ದಗಳೂ ಬಂದು ಸೇರುವುದಲ್ಲದೆ, ಶಾಲಭ್ಯಾಕಾಂಕ್ಷೆಯಿಂದಾಗಿ, ಪದಗಳ ರೂಪವೂ ಬದಲಾಗುತ್ತ ಬರುವುದು. ಈ ದೃಷ್ಟಿಯಿಂದ, ಕನ್ನಡದಲ್ಲಿ ಬಳಕೆಯಾಗಿರುವ ಪದಗಳಿಗೆ ಅರ್ಥವನ್ನು ಹೇಳುವ ನಿಘಂಟು ಇಂದು ಬೇಕಾಗಿದೆ. ಇಂದಿನ ಕನ್ನಡ ಭಾಷೆಯಲ್ಲಿ ಪೂರ್ವದ ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಶಬ್ದಗಳ ಅರ್ಥವನ್ನು ನಿರ್ದಿಷ್ಟವಾಗಿ ಹೇಳುವ ಒಂದು ಅಧಿಕಾರಿಕ ನಿಘಂಟುವಿನ ಕೊರತೆ ಇದೆ. ಶ್ರೀಗಳಾದ ಶಿವರಾಮ ಕಾರಂತ, ಕಜಂಗೊಡ್ಲು, ಕುಲಕರ್ಣಿ ಮೊದಲಾದವರ ಕೃತಿಗಳು ಭಾಷೆಯ ಆಳವಾದ ಅಭ್ಯಾಸಕ್ಕೆ ಸಾಕಾಗಲಾರವು. ಅವುಗಳ ಗಾತ್ರವೂ ಪ್ರಮಾಣವೂ ಅಷ್ಟೆತ್ತರಕ್ಕೆ ಹೋಗಿಲ್ಲ. ಕನ್ನಡ ಸಾಹಿತ್ಯ ಪರಿಷತ್ತು ಒಂದು ಬೃಹದಾಕಾರದ ನಿಘಂಟನ್ನು ಪ್ರಕಾಶಪಡಿಸಲು ಪ್ರಯತ್ನಿಸಿ, ಆ ಬಗ್ಗೆ ಕೆಲಸವನ್ನು ಮುಂದುವರಿಸುತ್ತಾ ಇರುವುದು ಸಂತೋಷದ ಸಂಗತಿ.

ಈಗ ಕಳುಹಿಸಲಾದ ಮಾದರಿ ಪುಟಗಳು ಎರಡು ವರ್ಷಗಳ ಪೂರ್ವದಲ್ಲಿ ಕಳಿಸಿದ ಮಾದರಿ ಪುಟಗಳ ಬಗ್ಗೆ ಬಂದ ಸಲಹೆ ಸೂಚನೆಗಳನ್ನು ಅದಷ್ಟು ಮಟ್ಟಿಗೆ ಅನುಸರಿಸಿ ಸಿದ್ಧಪಡಿಸಿರುವುವುಗಳು. ಹಿಂದಿನದಕ್ಕಿಂತ ಇದರಲ್ಲಿ ಕೆಲವು ಆಧಾರ ಗ್ರಂಥಗಳನ್ನು ಬಿಟ್ಟು ಹೊಸವನ್ನು ಸೇರಿಸಲಾಗಿದೆ. ಇದೇ ರೀತಿಯಲ್ಲಿ ನಿಘಂಟುವಿನ ಕಾರ್ಯ ಮುಂದೆ ಸಾಗುವುದು ನಿಶ್ಚಿತ ಹಾಗೂ ಅಗತ್ಯ. ಕಿಟೆಲ್ ನಿಘಂಟುವಿನ ಪಡಿಯಚ್ಚಾಗಿ ಈ ಕೃತಿ ಹೊರಬರುವುದಿಲ್ಲವೆಂಬುದಾಗಿ ಪರಿಷತ್ತು ಭರವಸೆಯಿತ್ತಿದೆ; ಅದು ಯೋಗ್ಯವಾದುದಾಗಿದೆ. ಈ ಮಾದರಿ ಪುಟಗಳತ್ತ ದೃಷ್ಟಿಹಾಯಿಸಿದಾಗ ಕೆಲವೊಂದು ಸೂಚನೆಗಳನ್ನು ಕೊಡಬೇಕಾಗಿ ತೋರುತ್ತದೆ — ಸಾಮಾನ್ಯ ಓದುಗರು ಹಾಗೂ ವಿಮರ್ಶಕರ ದೃಷ್ಟಿಗೆ ಬರಬಹುದಾದ ಕೆಲವು ಕುಂದುಗಳನ್ನು ಎತ್ತಿತೋರಿಸಲೇ ಬೇಕಾಗುತ್ತದೆ.

ಸದ್ಯ ತಯಾರಾಗಲಿರುವುದು ಕನ್ನಡ ನಿಘಂಟು, ಆದುದರಿಂದ ಸಂಸ್ಕೃತಪದಗಳನ್ನು ಆದಷ್ಟು ಕಡಿಮೆಯಾಗಿಯೇ ಬಳಸಬೇಕು; ಸಂಸ್ಕೃತದ ಎಲ್ಲ ಪದಗಳೂ, ಇದ್ದಕ್ಕಿದ್ದಂತೆಯೇ ಇಲ್ಲವೇ ಸ್ವಲ್ಪರೂಪಾಂತರಗೊಂಡು ಕನ್ನಡದಲ್ಲಿ ಬರುವುವೆಂದು ಸಂಸ್ಕೃತ ಪದಗಳನ್ನೇ ಕನ್ನಡ ನಿಘಂಟುವಿನಲ್ಲಿ ತುರುಕಿದರೆ, ಅದರ ಆಕಾರವೂ ಪರಿಮಾಣವೂ ದೊಡ್ಡದಾಗುವುದಲ್ಲದೆ, ಇನ್ನೊಂದು ಸಂಸ್ಕೃತಕೋಶವೇ ಆದೀತು. ಉದಾಹರಣೆಗೆ ಅ16 (ಸಂ. ನಾ) ವಿಷ್ಣು ಅಕ3 (ಸಂ. ನಾ.) = ಅ+ಕ: ಸುಖವಲ್ಲದ್ದು; ದುಃಖ ಇತ್ಯಾದಿ ಕನ್ನಡದಲ್ಲಿ ಪ್ರಾಯಃ ನಿರ್ದಿಷ್ಟಾರ್ಥದಲ್ಲಿ ಎಲ್ಲಿಯೂ ಪ್ರಯೋಗಿಸದ ಪದಗಳು ಏಕೆ? ಅಜ ಎಂಬಲ್ಲಿ ಬೇಕಾದರೆ ಅ = ವಿಷ್ಣು, ಜ = ಜನಿಸಿದವ — ವಿಷ್ಣುವಿನಲ್ಲಿ ಜನಿಸಿದವ — ಬ್ರಹ್ಮ ಎಂದು ವಿವರಣೆಯನ್ನು ಕೊಡುವುದು ಸೂಕ್ತವೆಂದು ತೋರುವುದು. ಸಂಪಾದಕರೂ ಈ ಎರಡು ಪದಗಳ ಪ್ರಯೋಗಗಳನ್ನು ಕೊಡದಿರುವುದೂ ಈ ಸಂದರ್ಭದಲ್ಲಿ ಗಮನೀಯವಿವೆ. ಅ 15 – (ಸಂ. ಅ.) ನ(ಞ) ೧. ಇಲ್ಲದ; ೨. ಅಲ್ಲದ; ೩. ಅಲ್ಲದ, ಅದರಿಂದ ತದ್ವಿರುದ್ಧವಾದ ಎಂಬಿತ್ಯಾದಿಯಾಗಿ ಅರ್ಥವಿತ್ತ ಮೇಲೆ; ಅಕಚ, ಅಕಂಟಕ, ಅಕರ, ಅಕರಣ, ಅಕೃತ್ಯ ಇತ್ಯಾದಿ ಸಂಸ್ಕೃತ ನಞರ್ಥಕ ಶಬ್ದ ಸಮೂಹಗಳನ್ನು ಕೊಡುವುದು ಕೇವಲ ಪರಿಮಾಣ ಬೃಹದಾಗಬೇಕೆಂದೆ? ಅಥವಾ, ಸಂಸ್ಕೃತ ಪದಗಳೆಲ್ಲವುಗಳಿಗೂ ಕನ್ನಡದಲ್ಲಿ ಅರ್ಥ ಬರೆಯಬೇಕೆಂಬ ಇರಾದೆಯಿಂದಲೆ? ಅಕಲಙ್ಕ ಶಬ್ದಕ್ಕೆ ಅರ್ಥಕೊಟ್ಟು ಅಕಳಙ್ಕ ವೆಂಬಲ್ಲಿ ಅಕಲಙ್ಕ ಎಂದು ಪುನಃ ಅರ್ಥಹೇಳುವಂತೆ ಹೇಳುತ್ತಹೋದರೆ, ಅಕಲಂಕ, ಅಕಳಂಕಗಳಿಗೂ ಹೇಳಬೇಕಾದೀತು; ನಳಿನ, ನಲಿನ, ಜಲಜ, ಜಳಜ, ಜಡಜ–ಹೀಗೆ ಶ್ಲೇಷ ಅನುಸ್ವಾರಗಳಿಂದಾಗಿ ಶಬ್ದ ಭೇದವಾಗುವಾಗ ಅವನ್ನೂ ಸೇರಿಸಿದರೆ, ಶಬ್ದಸಂಖ್ಯೆ ಹೆಚ್ಚಬಹುದಾದೀತು; ಹೆಚ್ಚಿನ ಪ್ರಯೋಜನ ಮಾತ್ರ ದೊರೆಯಲಾರದು. ಅವನ್ನು ಸೇರಿಸುವಾಗ **ಅಕಲಙ್ಕ–ಅಕಳಙ್ಕ - ಅಕಲಂಕ – ಅಕಳಂಕ** ಎಂದು ನಾಲ್ಕು ರೂಪಭೇದಗಳನ್ನೂ ಒಂದೆಡೆ ಕೊಟ್ಟು ಅದರರ್ಥವನ್ನೂ ವಿವರಣೆಯನ್ನೂ ಕೊಡುವುದು ಸೂಕ್ತವೆಂದು ತೋರುವುದು. ಹಾಗೆಯೇ ಕೆಲವು ಶಬ್ದಗಳ ಪ್ರಯೋಗಕ್ಕೆ ನಾಲ್ಕಾರು ಪ್ರಯೋಗಗಳನ್ನು ಎತ್ತಿ ತೋರಿಸುವುದಕ್ಕಿಂತ ಒಂದು ಯಾ ಎರಡನ್ನು ಮಾತ್ರ ಕೊಟ್ಟ ಪಕ್ಷದಲ್ಲಿ ನಿಘಂಟುವಿನ ಪರಿಮಾಣ ಸುಮಾರು ಸಣ್ಣದಾದೀತು. ನಿಘಂಟು ಆದಷ್ಟು ಆಕಾರದಲ್ಲಿಯೂ ಬೌತಿಕ ಬೆಲೆಯಲ್ಲಿಯೂ ಸಣ್ಣದಾಗಿದ್ದು ಶಬ್ದಕೋಶವಾಗಿರಬೇಕು. ಆಗ ಜನರೆಲ್ಲರೂ ಅದನ್ನು ಮೆಚ್ಚುವುದು ಸಾಧ್ಯವಾಗಬಹುದು.

ಕನ್ನಡವ ಬರೆಯಹೋಗಿ ಸಕ್ಕದವನ್ನು ಬರೆಯುವ ಕೆಲಕವಿಗಳಂತೆ ಕನ್ನಡ ನಿಘಂಟನ್ನು ಬರೆಯಹೋಗಿ ಅದು ಸಂಸ್ಕೃತ ನಿಘಂಟಾಗದಂತೆ ಈಗಿಂದೀಗಲೇ ಎಚ್ಚರಿಕೆ ವಹಿಸುವುದು ಅಗತ್ಯ.

ಈ ಕೆಲಸದಲ್ಲಿ ಈಗಾಗಲೇ ವಿಲಂಬವಾಗಿದೆ. ಕೆಲವಾರು ವರ್ಷಗಳಿಂದ ಈ ನಿಘಂಟುವಿನ ಹೆಸರು ಕೇಳಿಬರುತಿದ್ದರೂ ಅದು ಜನರ ಕೈಸೇರಬಹುದಾದ ಶುಭ ಮುಹೂರ್ತ ಎಷ್ಟು ದೂರವಿದೆಯೋ ತಿಳಿಯಲಾರೆವು. ಅಲ್ಲದೆ ಹೊರಬರುವಾಗ, ಜನಸಾಮಾನ್ಯರ ಕೈಗೆ ಎಟಕುವಂತೆ ಬರುವುದು ಈಗಿನ ಮಟ್ಟವನ್ನು ನೋಡುವಾಗ ಅಸಾಧ್ಯವೆಂದೇ ಹೇಳಬೇಕಾಗುತ್ತದೆ. ಅಪಾರ ಧನವ್ಯಯದಿಂದ ನಿರ್ಮಾಣವಾಗಲಿರುವ ಈ ಕನ್ನಡ ನಿಘಂಟು ತನ್ನ ಕನ್ನಡತನವನ್ನು ದೂರಮಾಡದೆ, ಕನ್ನಡಿಗರ ಕೈಗಳಿಗೆ ಆದಷ್ಟು ಬೇಗನೇ ಬರಲೆಂದು ಬಯಸುತ್ತೇವೆ. ಮೇಲೆ ಹೇಳಿದ ಕೆಲವು ಸೂಚನೆಗಳತ್ತ ಸಂಪಾದಕ ಮಂಡಳಿಯವರು ಗಮನಹರಿಯುವರೆಂದು ಹಾರೈಸುತ್ತೇವೆ.

ಕನ್ನಡ ಕಾವ್ಯ ಸಂಗ್ರಹ— (ಹಳಗನ್ನಡ-ನಡುಗನ್ನಡ ಕುಸುಮಗಳು) ಸಂಪಾದಕರು: ಶ್ರೀ ಎಂ. ಮರಿಯಪ್ಪ ಭಟ್ಟ, ಎಂ. ಎ; ಎಲ್. ಟಿ., ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ಪುಟಗಳು: viii + ೧೯೮, ಬೆಲೆ: ರೂ. ೧ ೫೦

ಕನ್ನಡ ಸಾಹಿತ್ಯವು ಹಿಂದಿನ ಕಾಲದಿಂದಲೂ ವೈವಿಧ್ಯಪೂರ್ಣವಾಗಿ ಹುಲುಸಾಗಿ ಬೆಳೆದಿದೆ. "ಕವಿರಾಜ ಮಾರ್ಗ"ವೆಂಬ ಅಲಂಕಾರ ಗ್ರಂಥವೇ ನಮ್ಮ ಸಾಹಿತ್ಯದಲ್ಲಿ ಪ್ರಾಚೀನತಮವಾದ ಉಪಲಬ್ಧ ಗ್ರಂಥ. ಅದರ ನಿರ್ಮಾಣ ಕಾಲದನಂತರ ಕನ್ನಡದಲ್ಲಿ ವಿಶೇಷ ರೀತಿಯ ಚಂಪೂ ಕಾವ್ಯಗಳು, ಗದ್ಯ ಹಾಗೂ ಪದ್ಯ ಕಾವ್ಯಗಳು ರಚಿತವಾಗಿವೆ. ಕಾವ್ಯಗಳು ಮಾತ್ರವಲ್ಲದೆ ಶಾಸ್ತ್ರಗ್ರಂಥಗಳಿಗೂ ಕೊರತೆಯಿಲ್ಲ. ಆದರೆ ಅಂಥ ಪ್ರಾಚೀನ ಕಾವ್ಯಗಳಲ್ಲಿ ನವೀನಯುಗದ ನಮ್ಮ ಕೈಗೆ ದೊರೆಯುವ ಗ್ರಂಥಗಳು ಕೇವಲ ಕೆಲವು ಮಾತ್ರ. ಭಾಷಾದೃಷ್ಟಿಯಿಂದ ಕನ್ನಡವನ್ನು ನಾಲ್ಕು ಅವಸ್ಥಾ ಭೇದಗಳನ್ನೊಳಗೊಂಡ ಭಾಷೆಯೆಂದು ಅಭಿಪ್ರಾಯಪಡುತ್ತಾರೆ. ಅವುಗಳಲ್ಲಿ ಪೂರ್ವದ ಹಳಗನ್ನಡ (ಕ್ರಿ. ಶ. ೮ನೇ ಶತಮಾನದವರೆಗೆ)ದ ಕಾಲದಲ್ಲಿ ಬರೆದ ಬೃಹತ್ ಗ್ರಂಥಗಳು ದೊರೆತಿಲ್ಲ; ಅಲ್ಲಲ್ಲಿ ಶಾಸನಗಳು ಮಾತ್ರ ದೊರಕಿವೆ. ಹೊಸಗನ್ನಡದ ೧೯ನೇ ಶತಮಾನದ ನಂತರವೆಂದು ಹೇಳಬಹುದಾದರೂ ೨೦ನೆ ಶತಮಾನದ ಆರಂಭದಿಂದ ಎಂದು ಭಾವಿಸುವುದೇ ಉತ್ತಮ. ಈ ಕಾಲದ ಕವಿ ಕೃತಿಗಳು ನಮಗೆ ಬೇಕಾದಷ್ಟು ದೊರೆಯುತ್ತವೆ. ಹಾಗಿರುವಾಗ ಹಳಗನ್ನಡ ಮತ್ತು ನಡುಗನ್ನಡ ಗ್ರಂಥಗಳು ಮಾತ್ರ ಜನಸಾಮಾನ್ಯರಿಗೆ ಸಿಗುತ್ತಿಲ್ಲ. ಇಂತಹ ಸಮಯದಲ್ಲಿ ಹಳೆಯ ಹಾಗೂ ನಡುಗನ್ನಡ ಕಾಲದ (ಕ್ರಿ. ಶ. ೯೦೦ದ ೧೯ನೆಯ ಶತಮಾನದವರೆಗಿನ) ಕಾವ್ಯಶಾಸ್ತ್ರಕ್ಕನುಸಾರವಾಗಿ ಬರೆಯಲ್ಪಟ್ಟ ಕವಿಗಳ ಅಮರ ಕೃತಿಗಳಿಂದ ಕೆಲವೊಂದು ಭಾಗವನ್ನು ಆಯ್ದು ಜನತೆಯಲ್ಲಿ ಅವುಗಳ ಪರಿಚಯವನ್ನು ಓದುವ ಪ್ರವೃತ್ತಿಯನ್ನು ಬೆಳೆಯಿಸಲು ಸಹಾಯವಾಗುವಂತೆ ಪ್ರಕೃತದ ಈ ಸಂಗ್ರಹವು ಬೆಳಕು ಕಾಣುತ್ತಿರುವುದು ಸಂತೋಷದ ವಿಷಯವಾಗಿದೆ. ಈ ಸಂಗ್ರಹದಲ್ಲಿ ಕವಿರಾಜ ಮಾರ್ಗ (೮೫೦) ಪಂಪ ಭಾರತ (೯೪೧), ವಡ್ಡಾರಾಧನೆ (೯ನೆ ಶತಮಾನ) ಕರ್ನಾಟಕ ಕಾದಂಬರಿ (೯೯೦), ಗದಾಯುದ್ಧ (೯೯೩) ಪಂಪ ರಾಮಾಯಣ (೧೧೦೦) ಬಸವೇಶ್ವರನ ವಚನಗಳು (೧೧೬೦) ಹರಿಹರನ ಬಸವದೇವರರಗಳೆ ಮತ್ತು ಪಂಪಾಶತಕ (೧೧೬೫); ಅಕ್ಕಮಹಾದೇವಿಯ ವಚನಗಳು (೧೧೬೦) ಹರಿಶ್ಚಂದ್ರ ಕಾವ್ಯ (೧೧೬೫) ಜಗನ್ನಾಥ ವಿಜಯ (೧೧೮೫) ಗೊಮ್ಮಟಸ್ತುತಿ (೧೧೮೦) ಸೋಮೇಶ್ವರ ಶತಕ (೧೧೯೫) ಯಶೋಧರ ಚರಿತೆ (೧೨೨೫) ಕಬ್ಬಿಗರ ಕಾವ (೧೨೨೫) ಕುಮಾರವ್ಯಾಸ ಭಾರತ (೧೪೩೦) ಕುಮಾರ ರಾಮನ ಕಥೆ (೧೫೨೫) ಪುರಂದರದಾಸ (೧೫೪೦) ಕನಕದಾಸ (೧೫೫೦)ರ ಕೀರ್ತನೆಗಳು, ಭರತೇಶ ವೈಭವ (೧೫೫೭) ರಾಜಶೇಖರ ವಿಳಾಸ (೧೬೫೫) ಚಿಕ್ಕದೇವರಾಯ ಬಿನ್ನಪ (೧೬೭೫) ಹದಿಬದೆಯ ಧರ್ಮ (೧೬೭೫) ಸರ್ವಜ್ಞ ವಚನಗಳು (೧೭೦೦) ಜೈಮಿನಿಭಾರತದ (೧೭೦೦), ಮುದ್ರಾ ಮಂಜೂಷ (೧೮೬೦) ರಾಮಾಶ್ವಮೇಧ (೧೯೦೨) ಕಾವ್ಯಗಳ ಕೆಲವೊಂದು ಭಾಗಗಳು ಆರಿಸಲ್ಪಟ್ಟಿವೆ, ಸಾಮಾನ್ಯತಃ ಆಯಾ ಕಾವ್ಯಗಳ ಅತ್ಯುತ್ತಮ ಭಾಗಗಳೇ ಆರಿಸಲ್ಪಟ್ಟಿವೆ. ಎಂದು ಹೇಳಲಾಗದಿದ್ದರೂ, ಸಾಹಿತ್ಯ ಶಾಸ್ತ್ರಕ್ಕನುಸಾರವಾದ ನವರಸಗಳ ವರ್ಣನೆಯೂ ಭಾವಗುಣ ಪಾಕ ರೀತಿಗಳ ಪರಿಚಯವೂ ಸೂಕ್ಷ್ಮವಾಗಿ ವಾಚಕರಿಗೆ ಉಂಟಾಗುವ ರೀತಿಯಲ್ಲಿ ಉದ್ಧರಿಸಲಾಗಿದೆ. ಆದಿಯಲ್ಲಿ ಕವಿಚರಿತ್ರೆಯನ್ನೂ ಕಾವ್ಯ ವಿಮರ್ಶೆಯನ್ನೂ ಸಂಕ್ಷೇಪವಾಗಿ ಕೊಟ್ಟಿರುವುದು ಒಳ್ಳೆಯದಿದೆ. ಒಂದು ಕಾವ್ಯದಲ್ಲಿ-ಉದಾಹರಣೆಗಾಗಿ ಪಂಪಭಾರತ, ಜೈಮಿನಿ ಭಾರತ ಇತ್ಯಾದಿ-ಎಲ್ಲ ಭಾಗಗಳೂ ಮನೋಹರಗಳಾಗಿರುವಾಗ ಯಾವುದನ್ನು ಆರಿಸಬೇಕೆಂಬುದೇ ಒಂದು ಸಮಸ್ಯೆಯಾಗುವುದು. ಅಂತಹ ಇಕ್ಕಟ್ಟಿನ ಪ್ರಸಂಗಗಳನ್ನು ಸಂಗ್ರಾಹಕರು ಉತ್ತಮ ರೀತಿಯಲ್ಲೇ ತಪ್ಪಿಸಿಕೊಂಡು ವಾಚಕರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಪುಸ್ತಕದಲ್ಲಿ ಎದ್ದು ತೋರುವ ಒಂದು ಕೊರತೆಯೆಂದರೆ ಕ್ಲಿಷ್ಟ ಪದಗಳ ಅರ್ಥಸೂಚಿಯ ಅಭಾವ. ಸಂಪಾದಕರು ಈ ಸೂಚಿಯನ್ನೂ ಒದಗಿಸುತಿದ್ದ ಪಕ್ಷದಲ್ಲಿ, ಸಾಮಾನ್ಯರೂ ಓದಿ ಅರ್ಥಮಾಡಿ ಕಾವ್ಯಭಾಗದ ರಸಾಸ್ವಾದನೆಯನ್ನು ಮಾಡಬಹುದಾಗಿತ್ತು. ಇದರ ಕೊರತೆಯಿಂದಾಗಿ ಕಾವ್ಯದ ಮೂಲವನ್ನು ತಿಳಿದ ವಿದ್ವಾಂಸರಿಗೆ ಮಾತ್ರ ಅರ್ಥವಾಗಬಹುದಾದುದರಿಂದ ಪಠ್ಯಪುಸ್ತಕವನ್ನಾಗಿಸಲು ಸಂಗ್ರಹಿಸಿದ ಪುಸ್ತಕವೋ ಎಂಬ ಸಂದೇಹ ಬರುತ್ತದೆ. ಉಕ್ಕಿನ ಕಡಲೆಯನ್ನು ಜನತೆ ಹೇಗೆ ಜೀರ್ಣಿಸಿಕೊಳ್ಳಬಹುದು? ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ಸೌಜನ್ಯದಿಂದ ಈ ಪುಸ್ತಕ ಬೆಳಕು ಕಂಡಿರುವುದು ಆನಂದದ ಸಂಗತಿ. ಇಂತಹ ಹಲವಾರು ಗ್ರಂಥಗಳನ್ನು, ಸಾಧ್ಯವಾದರೆ, ಮೂಲ ಕಾವ್ಯಗಳನ್ನೇ ಪ್ರಕಾಶಕರು ಬೆಳಕಿಗೆ ತರುವಂತಾಗಲಿ ಎಂದು ಬಯಸುತ್ತೇವೆ.

ಕರ್ನಾಟಕ ವೈಭವ—(ಆಕಾಶವಾಣಿ ಭಾಷಣಗಳು ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ. ಪುಟಗಳು: ೪೮, ಬೆಲೆ, ರೂ. ೦.೫೦.)

ಕರ್ನಾಟಕವು ವೈಭವಯುಕ್ತವಾಗಿ ಬೆಳೆದು ಬಂದ ನಾಡು. ಅದರ ಕಲೆಗಳ ಹಿರಿಮೆಯನ್ನು ಶ್ರೀ ಆರ್. ಎಸ್. ಪಂಚಮುಖಿ; ರಾಜ್ಯಗಳ ಹಿರಿಮೆಯನ್ನು ಶ್ರೀ ಆಲೂರ ವೆಂಕಟರಾವ್, ಕಲೆ ಮತ್ತು ಸಾಹಿತ್ಯವನ್ನು ಶ್ರೀ ಕೆ. ಜಿ. ಕುಂದಣಗಾರ್, ಸಂಗೀತ ಸಂಪತ್ತನ್ನು ಶ್ರೀ ಮುಳುಗೂರು ಕೃಷ್ಣಾಚಾರ್, ರಂಗಭೂಮಿಯನ್ನು ಶ್ರೀ ಆದ್ಯರಂಗಾಚಾರ್ಯ, ಜಾನಪದ ಸಾಹಿತ್ಯವನ್ನು ಶ್ರೀ ತೀ. ನಂ. ಶ್ರೀಕಂಠಯ್ಯ, ಧರ್ಮ ಪಂಥ ವೈಚಿತ್ರ್ಯವನ್ನು ಶ್ರೀ ಎಸ್. ಎಸ್. ಬಸವನಾಳ, ಮತ್ತು ಪ್ರಜಾಪ್ರಭುತ್ವವನ್ನು ಕುರಿತು ಶ್ರೀ ಶಂ. ಬಾ. ಜೋಶಿಯವರು ಅಖಿಲಭಾರತ ಆಕಾಶವಾಣಿಯ ಧಾರವಾಡ ಕೇಂದ್ರದ ಮೂಲಕ ಪ್ರಸಾರಮಾಡಿದ ಭಾಷಣಗಳನ್ನು ಈ ಪುಸ್ತಕದಲ್ಲಿ ಸಂಗ್ರಹಿತವಾಗಿದೆ. ಇವುಗಳಲ್ಲಿ ಆಲೂರ ವೆಂಕಟರಾಯರ ಭಾಷಣದಲ್ಲಿ ಅವರ ಕರ್ನಾಟಕದ ಗತವೈಭವದಲ್ಲಿ ಕಂಡುಬರುವ ಹೃದಯಸ್ಪರ್ಶಿ ಶೈಲಿಯನ್ನು ಕಾಣಲಾರೆವು; ವಾಕ್ಯಗಳೂ ಕೆಲವೊಂದು ಅಪೂರ್ಣವಿವೆ. ಕಲಾಗಾರಿಕೆಯ ಸಂಬಂಧದ ೧೨ ಚಿತ್ರಗಳೂ ಈ ಸಂಕಲನದಲ್ಲಿ ಕೂಡಿಕೊಂಡಿದ್ದು ಕಳೆಯೇರಿಸಿರುವುದು. ಶ್ರೀಗಳಾದ ಜೋಶಿ, ಪಂಚಮುಖಿ, ರಂಗಾಚಾರ್ಯ, ಬಸವನಾಳರ ಕೃತಿಗಳು ಉತ್ತಮವಾಗಿವೆ. ಅಂತೂ 'ಕನ್ನಡ'ದ ಸಂಪೂರ್ಣ ಪರಿಚಯವನ್ನು ಸೂಕ್ಷ್ಮರೀತಿಯಲ್ಲಿ ಕೊಡುವ ಈ ಸಂಕಲನವನ್ನು ಸ್ವಾಗತಿಸುತ್ತೇವೆ.

—ಗೋರಾ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಅದೇನು ಕನಸಾಗಿತ್ತೆ?

(೨ನೇ ಪುಟದಿಂದ)

ಹುಡಲು ಹವಣಿಸಿದೆನು. ಆ ಕತ್ತಲೆಯಲ್ಲಿ ಅಸಂಖ್ಯಾತ ಸಮಾಧಿಗಳಲ್ಲಿ ನನ್ನ ಪ್ರೇಯಸಿಯ ಮನೆಯನ್ನು ಹುಡುಕಲು ಸುಲಭದಲ್ಲಿ ಆಗಲಿಲ್ಲ. ಆದರೂ ಕುರುಡನಂತೆ ನಡೆಯುತ್ತಾ, ಎಡವುತ್ತಾ, ಬೀಳುತ್ತಾ ಕಲ್ಲು ಚೆಗಳ ಬಲವಾದ ಪೆಟ್ಟು ತಿನ್ನುತ್ತಾ ನಡೆದೆ.

ಎಂಥ ಕರಾಳ ರಾತ್ರಿ! ನಾನು ಸಂಪೂರ್ಣವಾಗಿ ಹೆದರಿದೆ. ಎತ್ತ ತಿರುಗಿದರೂ ಸಮಾಧಿ ಸಿಗುತ್ತಿತ್ತು. ಆದರೆ.. ನನ್ನ ಪ್ರೇಯಸಿಯ ಸಮಾಧಿ ಸಿಗಲೇ ಇಲ್ಲ. ನನ್ನ ಪ್ರೇಯಸಿಯ ಸಮಾಧಿ ಕಣ್ಣಿಗೆ ಹೊಳೆಯುತ್ತಿತ್ತು. ಆದರೆ ಎಲ್ಲಿದೆಯೆಂದು ಕಂಡುಹಿಡಿಯಲು ಆಗಲೇ ಇಲ್ಲ. ಪೆಟ್ಟು ತಿಂದು ಮೈ, ಕೈ ನೋಯುತ್ತಿತ್ತು. ಯಾವುದೋ ಒಂದು ಗೋರಿಯ ಮೇಲೆ ಕೂತೆ. ನನ್ನ ಹೃದಯದ ಬಡಿತವು ಕಿವಿಗೆ ಚೆನ್ನಾಗಿ ಕೇಳಿಸುತ್ತಿತ್ತು.

ಆದರೆ ಬೇರೆ ಯಾವುದೋ ವಿಚಿತ್ರ ಶಬ್ದ ಕೇಳಿಸುತ್ತಿತ್ತು. ಭಯಂಕರ ರಾತ್ರಿಯಲ್ಲಿ—ಸ್ಮಶಾನದಲ್ಲಿ ಅದೆಂತಹ ಶಬ್ದವೆಂದು ನನಗರಿವಾಗಲಿಲ್ಲ. ಸುತ್ತಲೂ ನೃಷ್ಟಿ ಹಾಯಿಸಿದೆ. ಏನೂ ತಿಳಿಯಲಿಲ್ಲ. ಆದರೆ ಕ್ಷಣದಿಂದ ಕ್ಷಣಕ್ಕೆ ಭಯವು ಹೆಚ್ಚುತ್ತಿತ್ತು. ಹೆದರಿಕೆಯಿಂದ ನನ್ನ ಸೊಂಟದ ಕೆಳಗಿನ ಭಾಗ ಜೀವರಹಿತವಾಗಿದ್ದಿತು. ಏಳಲೂ ಆಗಲಿಲ್ಲ, ಕುಳಿತುಕೊಳ್ಳಲೂ ಆಗಲಿಲ್ಲ.

ಭೂಕಂಪವಾಗುತ್ತಿದ್ದಂತೆ ನನ್ನ ಮನಸ್ಸಿಗೆ ಹೊಳೆಯಿತು. ಮತ್ತೂ ಚೆನ್ನಾಗಿ ಪರೀಕ್ಷಿಸಿದಾಗ ನಾನು ಕೂತಿದ್ದ ಸಮಾಧಿ ಚಲಿಸುತ್ತಿದ್ದಿತು. ಕೂಡಲೇ ಅಲ್ಲಿಂದ ಕೆಳಗೆ ಹಾರಿ ನಿಂತು ನೋಡಿದೆನು. ನಿಜವಾಗಿಯೂ ಸಮಾಧಿಯ ಮೇಲೆ ಹಾಕಲ್ಪಟ್ಟ ಹಾಸುಗಲ್ಲು ಒಂದು ಬದಿಗೆ ಸರಿಯಿತು. ಸಮಾಧಿಯ ಒಳಗಿಂದ ಅಸ್ಥಿಪಂಜರವು ಎದ್ದು ಹೊರಗೆ ಬಂದಿತು.

"ಇದು ಸರ್ ಆರ್ಥರ್ ಸ್ಮಿತ್‌ನ ಸಮಾಧಿ. ತನ್ನ ೫೧ನೆ ವರ್ಷ ಪ್ರಾಯದಲ್ಲಿ ಸ್ವರ್ಗವಾಸಿಯಾದನು. ಇವನು ತನ್ನ ಸಂಸಾರವನ್ನು ಪ್ರೀತಿಸುತ್ತಿದ್ದನು. ದಯಾಮಯಿ ಮತ್ತು ಕರುಣಿ ದೇವರ ಇಚ್ಛೆ ಪ್ರಕಾರ ದೇವರಕ್ಷೆಗೆ ಹೊರಟು ಹೋದನು" ಎಂದು ಶಿಲೆಯಲ್ಲಿ ಬರೆದ ಅವನ ಪರಿಚಯವನ್ನು ಓದಿದನ. ಅಲ್ಲಿಯೇ ಹತ್ತಿರದಲ್ಲಿ ಬಿದ್ದಿದ್ದ ಒಂದು ತುಂಡು ಕಲ್ಲನ್ನು ತೆಗೆದುಕೊಂಡು, ಕಲ್ಲಿನ ಮೇಲೆ ಬರೆದಿದ್ದುದನ್ನು ಕೆರೆದು ತೆಗೆದನು. ತನ್ನ ಕಣ್ಣುಗಳಿಂದ ಅನೇಕ ಸ್ಥಳವನ್ನು ತೀಕ್ಷ್ಣವಾಗಿ ನೋಡುತ್ತಿದ್ದನು. ಸ್ವಲ್ಪ ಸಮಯದ ತರುವಾಯ ತನ್ನ ತೋರು ಬೆರಳಿನ ಎಲುಬು ತುಂಡಿನಿಂದ ಈ ಕೆಳಗಿನಂತೆ ಬರೆದನು.

"ಸರ್ ಆರ್ಥರ್ ಸ್ಮಿತ್‌ನು ಇಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾನೆ. ಅವನ ಕಾರುಬಾರುತನವೆಲ್ಲ ಅವನ ೫೧ನೇ ವರ್ಷದಲ್ಲಿ ದೇವರ ಇಚ್ಛೆಯಂತೆ ಕೊನೆಗೊಂಡಿತು. ತಂದೆಗೆ ವಿಪರೀತ ಕಷ್ಟಕೊಟ್ಟು ಮಾತಾಪಿತೃಗಳ ಮರಣಕ್ಕೆ ಕಾರಣನಾಗಿದ್ದಾನೆ. ಹೆಂಡತಿಗೆ ವಿಪರೀತ ಕಷ್ಟ ಕೊಟ್ಟಿದ್ದಾನೆ. ನೆರೆ ಕರೆಯವರನ್ನು ಮೋಸಗೊಳಿಸಿದ್ದಾನೆ. ಕಳ್ಳತನದಿಂದ ಅನೇಕ ಜನರಿಗೆ ಉಪದ್ರಕಾರಿಯಾಗಿದ್ದನು. ಮಾತ್ರವಲ್ಲದೆ ದುರ್ಮರಣದಿಂದ ನಾಶಹೊಂದಿದವನಾಗಿದ್ದಾನೆ." —ಬೆಳ್ಳಿ ನಕ್ಷತ್ರವು ಮಿನುಗುತ್ತಿರುವ ರೀತಿಯಲ್ಲಿ ಪ್ರತಿಯೊಂದು ಗೋರಿಯಲ್ಲಿ ಅಕ್ಷರಗಳ ಸಂಪು ಮಿನುಗುತ್ತಿದ್ದುವು. ಪ್ರತಿಯೊಂದು ಗೋರಿಯಿಂದಲೂ ಅಸ್ಥಿಪಂಜರದ ವ್ಯಕ್ತಿಗಳು ಹೊರಗೆ ಬಂದು ನಿಂತಿದ್ದರು. ಅವರವರ ಸಂಬಂಧಿಕರು ಬರೆದಿದ್ದ ಸುಳ್ಳು ವಿಚಾರಗಳನ್ನು ಸತ್ಯ ಮಾರ್ಗದಿಂದ ಸ್ವತಃ ಆ ವ್ಯಕ್ತಿಗಳೇ ಬರೆದಿದ್ದಾರೆ. ಅವರವರ ಆಂತರಿಕ ಶಕ್ತಿಯು ತಮ್ಮ ಸ್ಪಷ್ಟ ಅಭಿಪ್ರಾಯ ಹಾಗೂ ಧ್ಯೇಯಗಳನ್ನು ಕೃತಿ ರೂಪದಲ್ಲಿ ತೋರಿಸಿದ್ದಾರೆ. ಶುದ್ಧ, ಪವಿತ್ರ ಆತ್ಮಗಳನ್ನು ಪಡೆದಿರುವ ವ್ಯಕ್ತಿಗಳು ಮನಸ್ಸಿನ ದೌರ್ಬಲ್ಯದಿಂದ ಹೇಗೆ ಕೆಡುತ್ತಾರೆ ಎಂದು ಸೂಚಿಸಲ್ಪಟ್ಟಿತ್ತೆಂದು ನನಗೆ ಇಲ್ಲಿನ ವ್ಯಕ್ತಿಗಳ ಉದಾಹರಣೆಯಿಂದ ತಿಳಿಯಿತು. ಪ್ರತಿಯೊಂದು ಜೀವಿತ ಅಸ್ಥಿಪಂಜರವು ಬರೆದಿದ್ದ ವಿಚಾರವನ್ನು ಓದಿದೆ. ಇವರೆಲ್ಲ ಜೀವನದ ಧ್ಯೇಯವನ್ನು ದುರ್ಮಾರ್ಗದ ಕಡೆಗೆ ಸಾಗಿಸಿದವರಾಗಿದ್ದರು. ಜೀವಿತ ಕಾಲದಲ್ಲಿ ಇತರರಿಗೆ ಅಪಕಾರವನ್ನು ಮಾಡಿದವರು ಹೊಟ್ಟೆಕಿಚ್ಚಿನ ಕುತಂತ್ರಿಗಳು. ಇತರರಿಗೆ ಅವಮರ್ಯಾದೆಯನ್ನು ಮಾಡಿದವರು ಕಪಟಿಗಳು; ಸುಳ್ಳುಗಾರರು; ಮೋಸಗಾರರು, ಮತ್ಸರವುಳ್ಳವರು—ಹೀಗೆ ಅನೇಕ ವಿಧದಿಂದ ಅಧರ್ಮ ಪ್ರವರ್ತಕರಾಗಿದ್ದರು. ಸಮಾಜದಲ್ಲಿ ನಾವು ಯಾರನ್ನೆಲ್ಲ ಉತ್ತಮ ಮಕ್ಕಳ ಜನ್ಮದಾತರು ಯೋಗ್ಯ ಮರ್ಯಾದಸ್ಥ ತಂದೆತಾಯಿಗಳು, ನಂಬಿಗಸ್ಥರಾದ ಹೆಂಡತಿ ಮತ್ತು ಸೇವಕರು, ಮರ್ಯಾದಸ್ಥ ಪ್ರಖ್ಯಾತ ಜನಪ್ರಿಯ ವ್ಯಕ್ತಿಗಳು, ವ್ಯಾಪಾರಿಗಳು, ಮಕ್ಕಳು ಹಾಗೂ ನಿಷ್ಕಳಂಕರಾದ ದಂಪತಿಗಳು, ಮತ್ತು ಜನರೇ ತಮ್ಮ ಅನಂತವಾದ ಆತ್ಮಜ್ಯೋತಿಯ ಮೂಲಕ ತಮ್ಮ ಪರಿಚಯವನ್ನು ತಾವೇ ಜಗತ್ತಿಗೆ ಮಾಡಿಸಿದರು. ಆಯಾಯ ವ್ಯಕ್ತಿಗಳೇ ಅವರ ಗೋರಿಯ ಹೆಬ್ಬಾಗಿಲಲ್ಲಿ ಪವಿತ್ರವಾಗಿರುವಂತಹ ಸತ್ಯ— ಅವರ ಜೀವಮಾನದಲ್ಲಿ ಕೇಳದಷ್ಟು ತಿಳಿಯದಷ್ಟು ಭಯಂಕರವಾದ ಸತ್ಯವನ್ನು ಅವರೆಲ್ಲ ಏಕಕಾಲದಲ್ಲಿ ಬರೆಯುತ್ತಿದ್ದುದನ್ನು ನಾನು ಕಂಡೆನು. ಅವರ ಜೀವಿತದಲ್ಲಿ ಈ ಸತ್ಯ ವಿಚಾರಗಳ ಬಗ್ಗೆ ಸಂಪೂರ್ಣ ಅಜ್ಞಾನಿಗಳಾಗಿದ್ದರು. ಅಥವಾ ಅಜ್ಞಾನಿಗಳಾಗಿ ವರ್ತಿಸಿದ್ದರು.

ಇತರರ ವಿಚಾರದಲ್ಲಿಯೇ ಆಳವಾದ ವಿಮರ್ಶೆ ಮಾಡುತ್ತಿದ್ದಾಗ ನನ್ನ ಅರಗಿಣಿಯ ವಿಚಾರ ಮರೆತೇ ಹೋಗಿತ್ತು. ಅವಳು ತನ್ನ ಗೋರಿಯಿಂದ ಹೊರಗೆ ಬಂದಿದ್ದಾಳೆ. ಇದೇ ಸುಸಂದರ್ಭ. ಈಗಲೇ ಹೋಗಿ ಮಾತನಾಡಿಸುವೆನೆಂದೆಣಿಸಿ ಅವಳನ್ನರಸುತ್ತಾ ಹೋದೆ. ಅಲ್ಲಿಯೇ ಸಿಕ್ಕಿತು. ನನ್ನ ಕಣ್ಣಿಗೇನೋ ನನ್ನ ಅರ್ಧಾಂಗಿಯೇ ಜೀವಂತಳಾಗಿ ತನ್ನ ಅರಮನೆಯ ಸೌಧದಲ್ಲಿ ನಿಂತಿರುವಳೆಂದೇ ಕಲ್ಪನೆ.

"ಅಹಾ! ನಮ್ಮಿಬ್ಬರ ಅಮರ ಪ್ರೇಮವನ್ನು ಸುಂದರ ಅಕ್ಷರಗಳಲ್ಲಿ ಜೋಡಿಸಿದ್ದಾಳೆ. ಇದೇ ಒಂದು ಉದಾಹರಣೆಯಿಂದ ನಾವಿಬ್ಬರೂ ಜಗತ್ತಿಗೇನೇ ಆದರ್ಶರಾಗಿ ಇರುವೆವು ಎಂಬುದರಲ್ಲಿ ಸಂಶಯವಿಲ್ಲ."

ನನ್ನ ನಲ್ಲೆಯ ಪ್ರೇತ ರೂಪವು ನನ್ನನ್ನು ತಿರಸ್ಕರಿಸಿ ನಿಂತಿರುವಂತೆ ಭಾವಿಸಿದೆನು. ನಾನು ಅವಳನ್ನು ಮಾತನಾಡಿಸಲು ಮತ್ತು ನನ್ನ ಕಡೆಗೆ ನೋಡುವಂತೆ ಮಾಡಿದ ಪ್ರಯತ್ನ ವ್ಯರ್ಥವಾಯಿತು. ಅವಳು ಬರೆದಿದ್ದಳು

"ತನ್ನ ಇನಿಯನನ್ನು ವಂಚಿಸಬೇಕೆಂಬ ಉದ್ದೇಶದಿಂದ ಒಂದು ದಿನ ಮಳೆಯಲ್ಲಿ ನೆನೆಯುತ್ತಾ ತಿರುಗಾಡಿಕೊಂಡು ಒಂದುದರಿಂದ ಶೀತ, ಕೆಮ್ಮು, ಜ್ವರ ಪ್ರಾಪ್ತಿಯಾಗಿ ಕೊನೆಗೊಂದು ದಿನ ಪರಂಧಾಮವನ್ನೈದಿದಳು."

೦೦ ೦೦ ೦೦

ನಾನು ನನ್ನ ಪ್ರೇಯಸಿಯ ಸಮಾಧಿಯ ಮೇಲೆ ಅಸ್ವಸ್ಥನಾಗಿ ಬೋರಲಾಗಿದ್ದುದನ್ನು ಅನೇಕ ಜನರು ನೋಡಿದರು. ರಾತ್ರಿಯ ಹಿಮ ಬಿದ್ದುದರಿಂದ ಪ್ರೇಯಸಿ ಸಮಾಧಿಯ ಮೇಲೆ ನನ್ನ ಜೀವಂತ ಸಮಾಧಿಯಾಗಿತ್ತು. ನನ್ನ ಪ್ರೇಯಸಿಯ ಅಭಿಪ್ರಾಯವನ್ನು ತಿಳಿದುದರಿಂದಲೇ ನನ್ನ ಸಮಾಧಿಗೂ ಕಾರಣವಾಯಿತು. ಅದರ ಇಂದಿಗೂ ಆ ಗೋರಿಯ ಮೇಲಿರುವುದನ್ನು ನಾನು ಆ ಬಳಿಕ ಯಾವಾಗಲೂ ತಿರುಗಾಡಲು ಹೋದಾಗ ಓದುತ್ತೇನೆ.

"ಅವಳು ಅವನನ್ನು ಪ್ರೀತಿಸಿದಳು, ಅವನು ಅವಳನ್ನು ಪ್ರೀತಿಸಿದನು. ಕೊನೆಗೊಂದು ದಿನ ಆಕೆ ಸತ್ತಳು."

[ಗ್ಯಾದ್ ವಾ ಮೋಪಾಸನ "Was it a dream" ಎಂಬ ಆಂಗ್ಲ ಕತೆಯೊಂದರ ಅನುವಾದ]

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ ನೋಡಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ.

ಹೊಸ ಮುದ್ರಣ—ಸಾದಾ ಪ್ರತಿ 1·50. ಉತ್ತಮ ಪ್ರತಿ 2·00.

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ –

1) ಸ್ಕೂಲ್ ಬುಕ್ ಕಂಪೆನಿ, ರಥಬೀದಿ, ಮಂಗಳೂರ -1.
2) ಸ್ಟೂಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

'NAVAYUGA WEEKLY is in the list of periodicals and Newspapers approved for use in Secondary Schools as perproceedings Roc No 465 N/50 date 2-12-1950 of the Director of public Instruction Madras

ಉಡುಪಿ ಹೇಗೆ ಬೆಳೆಯಿತು?

(೧ನೇ ಪುಟದಿಂದ)

ಸ್ಥಾನವನ್ನು ತಲಪುವವರೆಗೆ ಈ ಮಣ್ಣ ಹೆಂಟೆ ಉಳಿಯಬಹುದೆಂದು ಯೋಚಿಸುತ್ತಾ ಇನ್ನೊಂದನ್ನು ಹೊತ್ತು ತಂದರು. ಆದರೆ, ಅದು ಸಹ ಸ್ವಲ್ಪ ದೂರದಲ್ಲಿಯೇ ಒಡೆದುಹೋಯಿತು. ಅವರಿಗೆ ತೀರದಿಂದ ಕೇವಲ ಒಂದೂವರೆ ಮೈಲಿನಷ್ಟು ದೂರ ನಡೆದಿದ್ದರಷ್ಟೆ! ಈ ಬಾರಿ ಆ ಹೆಂಟೆಯೊಳಗೆ ಅವರೊಂದು ಕರಿ ಶಿಲೆಯ ಶ್ರೀಕೃಷ್ಣನ ಮೂರ್ತಿಯನ್ನು ಕಂಡರು. ಆ ಸ್ಥಳದಲ್ಲಿಯೇ ಈ ವಿಗ್ರಹವನ್ನು ಸ್ಥಾಪಿಸಿದರು. ಅವರು ಅವಕ್ಕೆ ಪೂಜೆಯನ್ನು ಸಲ್ಲಿಸಿದರು. ಹೀಗೆ ಮೊದಲು ಸ್ಥಾಪಿತವಾದ ಸ್ಥಳವು ಆದಿಉಡುಪಿ ಎಂಬ ಹೆಸರು ಪಡೆಯಿತು. ಉಡುಪ ಎಂಬುದು ಈಶ್ವರನ ಮತ್ತೊಂದು ಹೆಸರು. ದೇವಸ್ಥಾನವೆಂತಹ ಒಂದು ಸಣ್ಣ ಜೋಪುಡಿಯನ್ನು ಇಂದು ನಾವಿಲ್ಲಿ ನೋಡಬಹುದು.

ಮಧ್ವಾಚಾರ್ಯರಿಗೆ ಪ್ರತಿಮೆಯ ಮೇಲೆ ಅಪಾರ ಪ್ರೀತಿಯಿತ್ತು ಎನ್ನುವುದು ಅಸಹಜವಲ್ಲ. ಆ ಮೂರ್ತಿಯ ಸೌಂದರ್ಯವು ತನ್ನ ಪೂಜಾಸ್ಥಾನಕ್ಕೆ ಅದನ್ನೊಯ್ಯುವಂತೆ ಮಧ್ವಾಚಾರ್ಯರನ್ನು ಪ್ರೇರೇಪಿಸಿತು. ಅದೀಗ ಇರುವ ಸ್ಥಳವೇ ಮಧ್ವಾಚಾರ್ಯರ ವಾಸಸ್ಥಾನವಾಗಿತ್ತು. ಪೂರ್ವ ದಿಕ್ಕಿಗೆ ಮುಖವಾಗಿ ಅದನ್ನು ಪ್ರತಿಷ್ಠಾಪಿಸಿ ಪೂಜಿಸಿದರು. ಮುಂದಿನ ದಿನಗಳಲ್ಲಿ ಅಲ್ಲೊಂದು ದೇವಾಲಯವನ್ನು ಕಟ್ಟುವಂತೆ ಜನರು ಅವರಿಗೆ ನೆರವಾದರು. ಉಡುಪಿ ನಗರದ ಬುನಾದಿಯಾಗಿ ಶ್ರೀ ಕೃಷ್ಣನ ವಿಗ್ರಹವು ಅಲ್ಲಿ ನೆಲೆಯೂರಿದ ಕಥೆ ಸಂಕ್ಷೇಪವಾಗಿ ಹೀಗಿರುವುದು. ತೀರ ಸಾಮಾನ್ಯ ಘಟನೆಗಳೇ ಇಂದು ಮತ್ತು ಮುಂದಿನ ಇತಿಹಾಸದ ನಾಂದಿಗಲ್ಲುಗಳಾಗುತ್ತವೆ.

ಮಾಧ್ವಸಿದ್ಧಾಂತ ಮತ್ತು ಮಾಧ್ವಸಮಾಜವು ಮಧ್ವಾಚಾರ್ಯರಿಂದ ಮೊದಲಾಯಿತು. ತನ್ನ ಇಹಲೋಕದ ಕಾರುಬಾರುಗಳನ್ನು ಮುಗಿಸುವ ಗಳಿಗೆ ಬಂದಿತೆಂದು ತಾನು ಕಂಡುಕೊಂಡಾಗ, ಅವರು ತನ್ನ ಶಿಷ್ಯರಲ್ಲಿ ಎಂಟು ಮಂದಿಯನ್ನು ಜತೆಜತೆಯಾಗಿ ಕರೆದು ಶ್ರೀ ಕೃಷ್ಣನ ಕಡೆಗೆ ಅವರು ಮಾಡಬೇಕಾದ ಕರ್ತವ್ಯಗಳನ್ನು ವಿವರಿಸಿದರು. ಇವರೆಲ್ಲರೂ ತಮ್ಮ ತಮ್ಮ ಸರದಿಯಂತೆ ಶ್ರೀ ಕೃಷ್ಣನ ಸೇವೆ ಮಾಡಬೇಕಾಗಿತ್ತು. ಮೆಲ್ಲ ಮೆಲ್ಲನೆ ದ್ವೈತಸಿದ್ಧಾಂತಾನುಯಾಯಿಗಳು ಈ ಶಿಷ್ಯರಲ್ಲಿ ಒಬ್ಬರಲ್ಲಿ ನೊಬ್ಬರೊಡನೆ ಹೊಂದಿಕೊಂಡು, ತಂತಮ್ಮ ಗುರುಗಳ ಸಂಪರ್ಕದಲ್ಲಿ ಅಭ್ಯಾಸ ಮಾಡಲಾರಂಭಿಸಿದರು. ಹಾಗೆಯೇ ಶ್ರೀ ಕೃಷ್ಣನ ಕಡೆಗಿರುವ ಕರ್ತವ್ಯಗಳಲ್ಲಿ ಸಹಕರಿಸತೊಡಗಿದರು. ಹೀಗೆ ಪ್ರತಿಯೊಂದು ಗುಂಪು ಬೇರೆ ಬೇರೆಯಾಗತೊಡಗಿತು. ಪ್ರತಿ ಗುಂಪಿಗೂ ಭೂಮಿ, ಧನ ಮತ್ತು ಗೃಹಗಳು ದೊರೆಯಲಾರಂಭಿಸಿದುವು. ಇವೇ ಮುಂದೆ ಮಠಗಳೆಂದು ಕರೆಯಲ್ಪಟ್ಟವು ಶ್ರೀ ಕೃಷ್ಣ ಮಠದ ಸಮೀಪದಲ್ಲಿಯೇ ಇಂದು ಹೀಗುಂಟಾದ ಎಂಟು ಮಠಗಳನ್ನು ನೋಡಬಹುದು. ವಿಶೇಷ ಸಮಾರಂಭಗಳಲ್ಲಿ ಶ್ರೀ ಕೃಷ್ಣನ ಪೂಜೆ ಮಾಡುವ ಸ್ವಾಮಿಯವರ ಅತಿಥಿಗಳಾಗಿ ಉಳಿದ ಏಳು ಸ್ವಾಮಿಯವರಿರುತ್ತಾರೆ.

ಎರಡು ವರ್ಷಗಳಿಗೊಮ್ಮೆ ಶ್ರೀಕೃಷ್ಣನ ಪೂಜೆ ಹಾಗೂ ಶ್ರೀಕೃಷ್ಣ ಮಠದ ಸಕಲ ಅಧಿಕಾರಗಳನ್ನೂ ಒಬ್ಬ ಸ್ವಾಮಿಯವರು ಇನ್ನೊಬ್ಬರಿಗೆ ಒಪ್ಪಿಸಿಕೊಡುವ ಸಮಾರಂಭವೇ ಪರ್ಯಾಯ. ಮಕರ ಮಾಸದಲ್ಲಿ ಬರುವ ಈ ಸಮಾರಂಭವು ಬಹಳ ವೈಭವಸಹಿತವಾದ ಉತ್ಸವವಾಗಿದೆ.

ಶ್ರೀಕೃಷ್ಣ ಮಠದ ಸಮೀಪದಲ್ಲಿಯೇ ಇನ್ನೆರಡು ದೇವಾಲಯಗಳಿವೆ. ಅನಂತೇಶ್ವರ ದೇವಸ್ಥಾನವು ಒಂದು ರಾತ್ರಿಯಲ್ಲಿ ಪಾಂಡವರಿಂದ ಕಟ್ಟಲ್ಪಟ್ಟಿತೆಂದು ತಿಳಿಯಲಾಗುತ್ತದೆ, ಇನ್ನು ಕೆಲವರು ಅದು ಜೈನರಿಂದ ನಿರ್ಮಿತವಾದುದೆಂದು ಅಭಿಪ್ರಾಯಪಡುತ್ತಾರೆ. ಶಿಲ್ಪಶೈಲಿಯೇ ಈ ಊಹನೆಗೆ ಕಾರಣವಾಗಿದೆ. ಗಾಳಿಯು ಆಲೆದಾಟಕ್ಕನುಕೂಲವಾದ ಕೆಲವು ಸಣ್ಣ ವಾತಾಯನಗಳನ್ನುಳಿದರೆ, ಈ ಗುಡಿಯು ಪೂರ್ಣ ಮುಚ್ಚಲ್ಪಟ್ಟಿದೆ. ಶಿಲೆ ಕಲ್ಲಿನಿಂದಲೇ ಕಟ್ಟಲ್ಪಟ್ಟ ಈ ಗುಡಿಯೊಳಗಡೆ ಏಳು ಆವರಣಗಳಿದ್ದು ಕೊನೆಯ ಆವರಣದೊಳಗಡೆ ಆದಿಶೇಷನ ಪ್ರತಿಮೆಯಿದೆ. ಜೈನ ಮೂಲದಿಂದ ಇಂತಹ ಶಿಲ್ಪಶೈಲಿಯು ಹುಟ್ಟಿರುತ್ತದೆ. ಪಾಂಡವ ಮೂಲವೆಂದು ವಾದಿಸುವವರು ದೇವಾಲಯದ ಮುಂದಿರುವ ಶಿಲಾಸ್ತಂಭವನ್ನು ಗುಂಡಿಡುತ್ತಾರೆ – ಅದರಲ್ಲಿ ಒಂದು ಕಲ್ಲ ಕೋಳಿಯೂ ಒಂದು ಬಾಣವೂ ಇಡಲ್ಪಟ್ಟಿದೆ.

ನೆಲಮಟ್ಟದಿಂದ ೧೦-೧೨ ಅಡಿಗಳಷ್ಟು ಕೆಳಗೆ ಇರುವ ಚಂದ್ರೇಶ್ವರನ ದೇವಾಲಯವು ಇನ್ನೊಂದಾಗಿದೆ. ಈ ಸ್ಥಳವು ಮೊದಲು ಸರೋವರವಾಗಿತ್ತು. ಒಂದು ಶುಭದಿನದಲ್ಲಿ ನೀರಿನ ಮಧ್ಯದಿಂದ ಒಂದು ಲಿಂಗವು ಉದ್ಭವಿಸಿತು. ಇಲ್ಲಿ ಮುಂದಕ್ಕೊಂದು ದೇವಾಲಯ ನಿರ್ಮಿತವಾಯಿತು. ಇಲ್ಲಿಯ ದೇವರು ಉಡುಪ– ಚಂದ್ರನನ್ನು ಧರಿಸಿದ ಈಶ್ವರ. ಇದು ಬಹಳ ಪ್ರಾಚೀನವಾದ ಗುಡಿಯಾಗಿದ್ದು, ಇದರಿಂದಾಗಿಯೇ ಉಡುಪಿಗೆ ಈ ಹೆಸರು ಬಂದಿತು.

ಉಡುಪಿಯಲ್ಲಿ ಸಾಮಾನ್ಯವಾಗಿ ಎಲ್ಲ ಹಿಂದುಹಬ್ಬಗಳೂ ವಿಶೇಷ ಪ್ರಾರ್ಥನೆ ಮತ್ತು ಸಮಾರಾಧನೆಗಳೊಡನೆ ಆಚರಿಸಲಾಗುತ್ತದೆ. ಶ್ರೀ ಕೃಷ್ಣ ಜನ್ಮಾಷ್ಟಮಿಯೊಂದು ವಿಶೇಷ ಹಬ್ಬ. ಛದ್ಮವೇಷಗಳಿಂದ ಕೂಡಿಕೊಂಡಿರುವ ಈ ಉತ್ಸವವು ಅತ್ಯಂತ ಹೃದಯಂಗಮವಾಗಿರುವುದು.

ಸಂಪ್ರದಾಯಗಳಲ್ಲಿ ರಥೋತ್ಸವವು ಒಂದು ಪ್ರಧಾನ ಅಂಗ. ಜನವರಿ ತಿಂಗಳಲ್ಲಿ ಸಪ್ತೋತ್ಸವವು ನಡೆಯುವುದು. ಮೊದಲಿನ ಆರು ದಿನಗಳ ಉತ್ಸವವು ರಾತ್ರಿ ಹೊತ್ತಿನಲ್ಲೂ ಕೊನೆಯದು ಹಗಲಿನಲ್ಲೂ ಆಚರಿಸಲ್ಪಡುವುದು. ಮಕರ ಸಂಕ್ರಮಣದ ಆರನೆಯ ದಿನದ ಉತ್ಸವವು ಬಹಳ ಹೆಸರುವಾಸಿಯೂ ನೋಡಲು ರಮಣೀಯವೂ ಆಗಿರುವುದು.

ಮಧ್ವಾಚಾರ್ಯರ ಜನ್ಮದಿನವು ವಿಜೃಂಭಣೆಯಿಂದ ಆಚರಿಸಲಾಗುವುದು. ವಿಶೇಷ ಪೂಜೆ ಸಮಾರಾಧನೆಗಳಲ್ಲದೆ, ರಥೋತ್ಸವವೂ ನಡೆಯುವುದು ವಸಂತ ದ್ವಾದಶಿ, ದೀಪಾವಳಿ, ಗಣೇಶ ಚತುರ್ಥಿ ಎಲ್ಲವೂ ಇಲ್ಲಿ ಆಚರಿಸಲ್ಪಡುವುದು. ಕಾರ್ತಿಕ ಮಾಸದ ಲಕ್ಷದೀಪೋತ್ಸವವು ತೇರುಬೀದಿಯ ಸುತ್ತಲೂ ಲಕ್ಷ ದೀಪಗಳನ್ನು ಹಚ್ಚಿಟ್ಟು ನಡೆಯುವ ಮೂರು ಯಾ ನಾಲ್ಕು ದಿನಗಳ ನಿರಂತರ ರಥೋತ್ಸವ.

ಇನ್ನೊಂದು ವಿಶೇಷ ಸಂಗತಿಯನ್ನಿಲ್ಲಿ ಉಲ್ಲೇಖಿಸಬೇಕು. ಒಂದು ದಿನ ಕನಕನೆಂಬ ಕುಲಹೀನನು ನಗರಕ್ಕೆ ಬಂದು, ತನ್ನ ಕೀರ್ತನೆಗಳ ಮೂಲಕ ಶ್ರೀ ಕೃಷ್ಣನನ್ನು ಪೂಜಿಸಲು ಆಶಿಸಿದನು. ಆದರೆ, ದೇವಾಲಯ ಪ್ರವೇಶವು ಅವನಿಗೆ ಅಶಕ್ಯವಾಯಿತು. ದೇವಾಲಯದ ಪಶ್ಚಿಮ ಭಾಗದಲ್ಲಿ ಬಂದು ಆತ ಪರಮಾತ್ಮನನ್ನು ಕೀರ್ತಿಸಿದ. ಈ ಕೀರ್ತನೆಗಳನ್ನು ಹೇಳುತ್ತಿದ್ದಂತೆಯೇ ಮೂಡುದಿಕ್ಕಿಗೆ ಮುಖಮಾಡಿ ನಿಂತಿದ್ದ ಕೃಷ್ಣ ಮೂರ್ತಿ ಪಡುಗಡೆಗೆ ತಿರುಗಿತು. ಭಾರತದ ಎಲ್ಲ ದೇವಾಲಯಗಳ ಮೂರ್ತಿಯು ಮೂಡುಗಡೆಗೆ ಮುಖ ಮಾಡಿದ್ದರೂ ಇದು ಅದಕ್ಕೊಂದು ಅಪವಾದ. ಈ ಘಟನೆಯ ಸ್ಮಾರಕಕ್ಕಾಗಿ ಕನಕನ ಗುಡಿಯು ಇಂದು ರಥಬೀದಿಯಲ್ಲಿದೆ.

ಉಡುಪಿಯಲ್ಲಿ ಮೂರು ಬೇರೆ ಬೇರೆ ಪ್ರಮಾಣದ ಮರದ ರಥಗಳಿದ್ದುವು. ಈ ವರ್ಷ ಶ್ರೀಕೃಷ್ಣನಿಗೆ ರಜತರಥವೊಂದನ್ನು ಹೊಸದಾಗಿ ಸಮರ್ಪಿಸಲಾಗಿದೆ. ಇದು ವೃಂದಾವನಸ್ಥ ಶ್ರೀ ಪುತ್ತಿಗೆ ಮಠಾಧೀಶ ಶ್ರೀ ಸುಧೀಂದ್ರತೀರ್ಥ ಸ್ವಾಮಿಯವರ ಸ್ಮಾರಕವಾಗಿರುವುದು. ನಿರ್ಮಾಣದಲ್ಲಿ ರಥವು ಅಸಂಪೂರ್ಣವಾಗಿದ್ದರೂ, ಅದು ಸದ್ಯದಲ್ಲಿಯೇ ಪೂರ್ಣವಾಗಲಿರುವುದು.

ಉಡುಪಿಯ ಇನ್ನೊಂದು ವೈಶಿಷ್ಟ್ಯವೆಂದರೆ, ಅನ್ನ ಸಂತರ್ಪಣೆ. ಪ್ರತಿದಿನ ಸಾವಿರಾರು ಜನರಿಗೆ, ವಿದ್ಯಾರ್ಥಿಗಳಿಗೆ ಸಂತರ್ಪಣೆಯು ನಡೆಯುವುದು ಇಷ್ಟೊಂದು ಪ್ರಮಾಣದಲ್ಲಿ ಭಾರತದ ಯಾವ ಮೂಲೆಯಲ್ಲಿಯೂ ಪ್ರತಿದಿನವೂ ದಾನವು ನಡೆಯುವುದಿಲ್ಲವೆಂದು ಹೇಳಲಾಗುತ್ತದೆ.

ಈ ಬಾರಿಯ ಪರ್ಯಾಯ ಸಮಾರಂಭವು ಈ ತಿಂಗಳ ೧೭ನೆ ದಿನಾಂಕದಂದು ನಡೆಯಲಿದೆ. ಕಳೆದೆರಡು ವರ್ಷ ಶ್ರೀ ಕೃಷ್ಣನ ಪೂಜಾದಿಗಳನ್ನು ಅವಿರತವಾಗಿ ಸಾಂಪ್ರದಾಯಕವಾಗಿ, ವೈಭವಯುಕ್ತವಾಗಿ ನಡೆಸಿ ಬಂದ ಶ್ರೀ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀ ಪಾದರವರಿಗೆ ಶ್ರೀ ಕೃಷ್ಣ ಸೇವೆ ಮತ್ತು ಶ್ರೀ ಕೃಷ್ಣ ಮಠದ ಸಂಪೂರ್ಣ ಅಧಿಕಾರವನ್ನು ಪದ್ಧತಿಗನುಗುಣವಾಗಿ ವಹಿಸಿಕೊಡಲಿದ್ದಾರೆ. ಹಿಂದಿನ ಕೆಲ ಪರ್ಯಾಯಗಳಂತೆಯೇ ಮುಂದಿನ ಪರ್ಯಾಯ ಸಮಯವು ಜನತೆಗೆ ಮಂಗಲದಾಯಕವಾಗಲಿ ಎಂದು ಶ್ರೀಕೃಷ್ಣ ಪರಮಾತ್ಮನಲ್ಲಿ ಪ್ರಾರ್ಥನೆ.

ಗಂಟೆಗಟ್ಟಲೆ
ಸಂತೋಷವನ್ನು
ಕೊಡುವ ತಾತಾರವರ
ಸುವಾಸನೆಯ ಸಾಬೂನು

ಜೈ ಸಾಬೂನಿನ ವೆಲ್ವೆಟ್‌ನಂತಹ ಮೃದುವಾದ ನೊರೆ ಮತ್ತು ಮೋಹಕ ಪರಿಮಳವು ನೀವು ಇಡೀದಿವಸ ಉತ್ಸಾಹವಂತರಾಗಿ ಸುವಾಸನೆಯನ್ನು ಬೀರುವಂತೆ ಮಾಡುತ್ತದೆ. ಜೈ, ಸಾಮಾನ್ಯಬೆಲೆಯ ಮೇಲ್ತರಗತಿಯ ಸಾಬೂನು. ಅದನ್ನು ಉಪಯೋಗಿಸಿ ನಿಮ್ಮ ಜೀವನವನ್ನು ಆನಂದಮಯಗೊಳಿಸಿರಿ

ಜೈ
ಟಾಯಿಲೆಟ್ ಸಾಬೂನು



ಇಂಡಿಯದ ಬಂಡವಾಳದಿಂದ,
ಇಂಡಿಯದ ಸಂಚಾಲಕತ್ವದಲ್ಲಿ,
ಇಂಡಿಯಾದಲ್ಲಿಯೇ ತಯಾರಾದುದು

ಟಾಟಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ನೋಟ್ಸ್ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕಾಪಿಪ್ಯಾಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ, ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

• ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

16—1—1958

ಸಂಚಿಕೆ ೧೯
NO. 19

ಪ್ರಾಚ್ಯವಿದ್ಯೆಗಳ ಅಭಿವೃದ್ಧಿ ಹೇಗೆ?

ಪೌರ್ವಾತ್ಯವೆಂದರೆ ಹಲ್ಲುಕಡಿಯಬೇಡಿ

ಶ್ರೀ ಎಸ್. ಗೋಪಿಚಂದರಾವ್ ವಿದ್ವಾನ್, ವಿಶಾರದ

ಪ್ರಾಚ್ಯವಿದ್ಯೆಯ ವಿಭಿನ್ನ ಅಂಗ—ಉಪಾಂಗಗಳ ಅನುಸಂಧಾತ್ಮಕ ಅಧ್ಯಯನ ಮಾಡುವ ವಿದ್ವಾಂಸರ ಸಂಮಿಲನ ದರೂಪದಲ್ಲಿ ಭಾರತೀಯ ಪ್ರಾಚ್ಯವಿದ್ಯಾ ಪರಿಷತ್ತು ಪ್ರಾಧಾನ್ಯವನ್ನು ಪಡೆದಿದೆ ಈ ಸಮ್ಮೇಲನವು ಸಾಮಾನ್ಯತಃ ಎರಡು ವರ್ಷಗಳಿಗೊಮ್ಮೆ ಸೇರುವುದು ಈ ಪರಿಷತ್ತಿನ ಬೇರೆ ಬೇರೆ ವಿಭಾಗಗಳತ್ತ ಸ್ವಲ್ಪ ದೃಷ್ಟಿ ಹಾಯಿಸಿದಾಗ ನಮಗೆ ಈ ಪರಿಷತ್ತಿನ ವ್ಯಾಪಕತೆಯ ಅರಿವು ಸಂಪೂರ್ಣವಾಗಿ ಸಿಗುವುದು.

ವೇದ, ಇರಾನೀ, ಇಸ್ಲಾಮಿ ಮತ್ತು ದ್ರಾವಿಡ ಸಂಸ್ಕೃತಿ, ಅರಬೀ ಪಾರಸೀ, ಸಂಸ್ಕೃತ ಮತ್ತು ಪಾಳಿ ಭಾಷಾ ಸಾಹಿತ್ಯ, ಬೌದ್ಧ ಮತ್ತು ಜೈನಧರ್ಮ, ಇತಿಹಾಸ, ದರ್ಶನ ಮತ್ತು ಪುರಾಣ ವಸ್ತು ಶಾಸ್ತ್ರ, ಭಾರತೀಯ ಭಾಷಾವಿಜ್ಞಾನ, ಧರ್ಮ ಮತ್ತು ಲಲಿತ ಕಲೆಗಳು ಮುಖ್ಯವಾಗಿ ಈ ಪರಿಷತ್ತಿನ ಕಕ್ಷೆಯಲ್ಲಿ ಸೇರುತ್ತವೆ ಇವುಗಳಲ್ಲದೇ ಪರಿಷತ್ತಿನ ಅಧಿವೇಶನ ನಡೆಯುವ ಪ್ರಾಂತ್ಯದ ಪ್ರಾಂತೀಯ ಭಾಷೆಯು ಸಹ ವಿಶೇಷರೂಪದಲ್ಲಿ ಸಂಮ್ಮೇಲನದ ಚರ್ಚಾ ವಿಷಯವಾಗಿ ಇಡಲ್ಪಡುತ್ತದೆ ಇದಕ್ಕನುಸಾರವಾಗಿ, ಕೆಲವು ವರ್ಷ ಪೂರ್ವದಲ್ಲಿ ಲಕನವಿನಲ್ಲಿ ಸೇರಿದ ಪ್ರಾಚ್ಯವಿದ್ಯಾ ಪರಿಷತ್ತಿನ ಅಧಿವೇಶನದಲ್ಲಿ ಹಿಂದೀ—ಉರ್ದುಗಳ ಮೇಲೆ ಚರ್ಚೆ ನಡೆದಿತ್ತು ಹಾಗೆಯೇ ಅಹಮ್ಮದಾಬಾದಿನಲ್ಲಿ ಗುಜರಾತ ವಿಶ್ವವಿದ್ಯಾಲಯ ಮತ್ತು ಗುಜರಾತ ವಿದ್ಯಾಸಭೆಗಳ ಆಶ್ರಯದಲ್ಲಿ ಸೇರಿದ ಅಧಿವೇಶನದಲ್ಲಿ ಸ್ವಾಭಾವಿಕ ರೂಪದಲ್ಲಿ ಗುಜರಾತಿಯನ್ನು ಸಂಮಾನಿಸಲಾಯಿತು ಈ ಪರಿಷತ್ತಿನೆದುರು ಬಹುಕಾಲದಿಂದಲೂ ಎರಡು ಮೂರು ವಿಶೇಷ ಸಮಸ್ಯೆಗಳು ಎದ್ದು ನಿಂತಿವೆ ಈ ಸಮಸ್ಯೆಗಳು ಇಂದಿಗೂ ಸಂಪೂರ್ಣ ದೂರವಾಗಿರುವುದಿಲ್ಲ

ಗುಜರಾತದ ಸುಪ್ರಸಿದ್ಧ ಪ್ರಾಚ್ಯ ವಿದ್ಯಾವಿಶಾರದರಾದ ಪ್ರಜ್ಞಾಚಕ್ಷು ಪಂಡಿತ ಸುಖಲಾಲಜಿಯವರು ಒಂದು ಬಾರಿ 'ಪ್ರಾಚ್ಯವಿದ್ಯೆಯ ವಿಭಿನ್ನ ಅಂಗಗಳ ಪಂಡಿತರಲ್ಲಿ ಸಾಮ್ಯವಿರುವುದಿಲ್ಲ" ಎಂದಿರುವರು ಭಾರತದಲ್ಲಿ ಮೆಕ್‌ಮಿಲನ್, ಗೋಲ್ಡನರ್ ಹಾಗೂ ಓಲೆಂಬರ್ಗರಂತಹ ಪ್ರಾಚ್ಯ ವಿದ್ಯಾವಿಶಾರದರು ಜನಿಸಿರುವುದನ್ನು ಒತ್ತಿ ಹೇಳುತ್ತ, ಅವರು, "ನಮ್ಮ ದೇಶದಲ್ಲಿ ಸಂಸ್ಕೃತದ ವಿದ್ವಾಂಸರು ಪ್ರಾಯಃ ಪ್ರಕೃತ ಸನ್ನಿವೇಶಗಳಲ್ಲಿ ಅನಭಿಜ್ಞರಾಗಿರುತ್ತಾರೆ, ವೇದಾಂತದ ಅಭ್ಯಾಸಿಗಳಿಗೆ ಬೌದ್ಧದರ್ಶನದಲ್ಲಿ ಅಭಿರುಚಿಯಿರುವುದಿಲ್ಲ ಈ ಅವಸ್ಥೆಯಲ್ಲಿ ಪ್ರಾಚ್ಯವಿದ್ಯಾಕ್ಷೇತ್ರದಲ್ಲಿ ಸಾಹಿತ್ಯವೇ ಮೊದಲಾದವುಗಳ ಮೂಲ್ಯಾಂಕನವು ಸಂಭವನೀಯವೆ?" ಎಂದು ಪ್ರಶ್ನಿಸಿರುವರು.

ಪರಿಷತ್ತಿನ ಕಾರ್ಯವಾಹೀ ಚರ್ಚೆಯ ಮಾಧ್ಯಮರೂಪವಾಗಿ ಹಿಂದಿಗೆ ಅಗ್ರಪಟ್ಟ ಯನ್ನೀಯುವ ಪ್ರಶ್ನೆಯೂ ಕಡಿಮೆ ಮಹತ್ವದ್ದಾಗಿರುವುದಿಲ್ಲ ಪ್ರಯಾಗದ ಶ್ರೀ ಬಾಬೂರಾಮ ಸಕ್ಸೇನಾರು ಪ್ರಾಯಃ ಈ ಪರಿಷತ್ತಿನ ಲಖನವಿನ ಅಧಿವೇಶನದಲ್ಲಿ ಈ ಪ್ರಶ್ನೆಯನ್ನು ಉಪಸ್ಥಿತಗೊಳಿಸಿದ್ದರು ಅಧಿವೇಶನದ ಆ ಸಮಯದ ಅಧ್ಯಕ್ಷ ಶ್ರೀ ನೀಲಕಂಠ ಶಾಸ್ತ್ರಿಯವರು ಈ ವಿಚಾರವನ್ನು ವಿರೋಧಿಸಿದ್ದರು." ಈ ಪ್ರಸ್ತಾಪವು ಪರಿಷತ್ತಿನ ಮೂಲ ಘಟನೆಯನ್ನೇ ಮುಟ್ಟುತ್ತದೆ ಆದುದರಿಂದ ಈ ರೀತಿಯ ಪ್ರಶ್ನೆಗಳನ್ನು ಅಧಿವೇಶನದಲ್ಲೆತ್ತುವುದಕ್ಕೆ ಒಂದು ತಿಂಗಳ 'ನೋಟೀಸ್' ಕೊಡುವುದು ಆವಶ್ಯಕ" ಎಂದು ಆ ಪ್ರಶ್ನೆಯನ್ನೇ ತಳ್ಳಿ ಹಾಕಿದರು ಈ ಸ್ಥಿತಿಯಲ್ಲಿ ನಮಗೆ ತಿಳಿದಿರುವಂತೆ ಇದು ವರೆಗೆ ಯಾವುದೇ ತರದ ಉಲ್ಲೇಖನೀಯ ಸುಧಾರಣೆಯು ನಡೆಯಲಿಲ್ಲ

ಈ ಪರಿಷತ್ತಿನ ಕಾರ್ಯಕಲಾಪಗಳಿಗೆ ಆರ್ಥಿಕ ದುಸ್ಥಿತಿಯು ಕೂಡ ಉಲ್ಬಣಾವಸ್ಥೆಯಲ್ಲಿರುವುದರಿಂದ ಎಡರು ತೊಡರುಗಳು ಎಡತಾಕುತ್ತವೆ ಲಖನವ್ ಅಧಿವೇಶನದಲ್ಲಿ ಜಲಂದರಿನ ಪ್ರಾಚ್ಯವಿದ್ಯಾಕಲಾಶಾಲೆ (ಓರಿಯಂಟಲ್ ಕಾಲೇಜ್)ಯ ಡಾ। ಸೂರ್ಯಕಾಂತರು ವೈದ್ಯಕ ವಿಭಾಗದ ಅಧ್ಯಕ್ಷಸ್ಥಾನದಿಂದ ಭಾಷಣ ಮಾಡುತ್ತ, ಕೇವಲ ವೈದ್ಯಕ ಅನುಸಂಧಾನದ ವಿಭಿನ್ನ ಯೋಜನೆಗಳಿಗೇನೇ ೫೦ ಲಕ್ಷ ರೂಪಾಯಿಗಳು ವ್ಯಯವಾಗುವ ಆವಶ್ಯಕತೆಯಿದೆ ಪರಿಷತ್ತಿನ ಅಂಗಗಳಲ್ಲಿ ಒಂದು ವಿಭಾಗಕ್ಕೇನೇ ಇಷ್ಟೊಂದು ಅಧಿಕ ವೆಚ್ಚವಾಗುವಾಗ, ವಿವಿದ ಅಂಗಾಂಗಗಳಿಂದ ಕೂಡಿರುವ ಪರಿಷತ್ತಿನ ಕಾರ್ಯಕ್ರಮಗಳಿಗೆ ಅದೆಷ್ಟು ವೆಚ್ಚವಾಗಿರಬಹುದು! ಎಂಬುದನ್ನು ಜನತೆಗೇನೇ ಕಲ್ಪಿಸಲು ಬಿಟ್ಟಿರುವರು

ನಿಜವಾಗಿಯೂ ಭಾರತೀಯ ಪ್ರಾಚ್ಯ ವಿದ್ಯಾ ಪರಿಷತ್ತಿನಂತಹ ಅಂತರಾಷ್ಟ್ರೀಯ ಖ್ಯಾತಿವೆತ್ತ ಸಂಸ್ಥೆಯ ಸರ್ವಾಂಗೀಣ ಉನ್ನತಿಗಾಗಿ ಆರ್ಥಬಲವನ್ನು ಒದಗಿಸುವುದು ಯಾವನೇ ಒಬ್ಬ ವ್ಯಕ್ತಿ ಅಥವಾ ಸಭೆ ಇಲ್ಲವೆ ಸಂಸ್ಥೆಯ ಶಕ್ತಿಗಿಂತ ಬಹಿರಂಗವಾಗಿರುವುದು ಇಂತಹ ಮಹಾ ಪ್ರಯಾಸತರ ಕಾರ್ಯವನ್ನು ರಾಷ್ಟ್ರೀಯ ಸರಕಾರ ಮಾತ್ರ ಮಾಡಬಲ್ಲದು "ಯುನೆಸ್ಕೋ"ದಂತಹ ಅಂತಾರಾಷ್ಟ್ರೀಯ ಸಂಸ್ಥೆಯನ್ನು ಸಹ ಇದಕ್ಕೋಸುಗ ಆವಾಹನ ಮಾಡಬೇಕು.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ಪಶ್ಚಿಮದ ಕೆಲವಾರು ದೇಶಗಳು ಪ್ರಾಚ್ಯ ವಿದ್ಯೆಯ ಅಧ್ಯಯನಕ್ಕೆ ವಿಶೇಷ ಮಹತ್ವ ನೀಡುತ್ತಿವೆ ರುಮೇನಿಯಾದ ಗಣತಂತ್ರೀಯ ರಾಜ್ಯದಲ್ಲಿ ಪ್ರಾಚ್ಯವಿದ್ಯೆಗಳ ಅಭ್ಯಾಸಕ್ಕೆ ದೊರೆಯುತ್ತಿರುವ ಪ್ರೋತ್ಸಾಹವನ್ನು ಕುರಿತು ರುಮೇನಿಯಾದ ಸಾಹಿತ್ಯಕಾರ ಪ್ರೊಫೆಸರ್ ಬ್ಲಾದ ಬಾನಾತಿಯಾನರು ಒಂದು ಸಂಕ್ಷಿಪ್ತ ಲೇಖನವನ್ನು ಬರೆದು ಆಕಡೆಗೆ ಪ್ರಕಾಶ ಚೆಲ್ಲಿದ್ದಾರೆ ಇವೇ ಆ ಬಗ್ಗೆ ಸಾಕ್ಷಿಯೂ ಆಗಿ ಸಾಕಾಗಿದೆ. ೧೯೫೭ರ ಡಶಂಬರ ೩೦ನೆ ದಿನಾಂಕದಲ್ಲಿ ಆಚರಿಸಲಾದ ರುಮೇನಿಯನ್ ಗಣತಂತ್ರದ ದಶವಾರ್ಷಿಕೋತ್ಸವವನ್ನು ಲಕ್ಷಿಸಿ ಈ ಲೇಖನವನ್ನು ಪ್ರಕಟಿಸಲಾಗಿತ್ತು

ರುಮೇನಿಯಾದಲ್ಲಿ ಪ್ರಾಚ್ಯವಿದ್ಯೆಗಳ ಅಧ್ಯಯನವು ಬಹಳ ಸಮಯದಿಂದ ನಡೆಯುತ್ತಿದೆ ಈ ದೇಶದಲ್ಲಿ ಟರ್ಕಿಶ್, ಹಿಬ್ರೂ, ಅರಬೀ ಮತ್ತು ಭಾರತೀಯ ಕೃತಿಗಳು ೧೯ನೆ ಶತಮಾನದ ಉತ್ತರಾರ್ಧದಲ್ಲಿಯೇ ಪ್ರಕಾಶಿತವಾಗಿದ್ದುವು ರುಮೇನಿಯಾದಲ್ಲಿ ಪ್ರಾಚೀನ ಲೇಖಗಳು ಮತ್ತು ಹಸ್ತ ಲಿಪಿಗಳು ಮೊದಲಾದುವುಗಳಿಂದ ವಿಸ್ತಾರವಾದ ಭಾಂಡಾಗಾರವು ಅತ್ಯಂತ ಪ್ರಖ್ಯಾತವಾಗಿದೆ ಈ ಭಂಡಾರದ ಕಾಗದ ಪತ್ರಗಳ ಒಟ್ಟು ಸಂಖ್ಯೆಯು ಎರಡು ಲಕ್ಷದ ಇಪ್ಪತ್ತೈದು ಸಾವಿರಕ್ಕೂ ಅಧಿಕವಾಗಿವೆ. ಇವುಗಳಲ್ಲಿ ಅನೇಕ ಪ್ರಾಚ್ಯ ಭಾಷೆಗಳ ಪ್ರಾಚೀನ ಹಸ್ತ ಲಿಪಿಗಳೂ ಸಂಮಿಲಿತವಾಗಿರುವುವು ರುಮೇನಿಯಾದ ಇತಿಹಾಸ ಹಾಗೂ ಭಾಷಾ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಚ್ಯ ವಿದ್ಯಾವಿಭಾಗವೆಂಬ ಪ್ರತ್ಯೇಕ ಕಕ್ಷೆಯು ಏರ್ಪಟ್ಟಿದೆ ಬುಖಾರೆಸ್ಟ್‌ನಲ್ಲಿರುವ ಭಾಷಾ ವಿಜ್ಞಾನ ವಿದ್ಯಾಲಯದಲ್ಲಿ ಸಹ ಪ್ರಾಚ್ಯ ಭಾಷೆಗಳ ಒಂದು ಸ್ವತಂತ್ರ ವಿಭಾಗವು ಸ್ಥಾಪಿತವಾಗಿದೆ

ಸಂಸ್ಕೃತ ವ್ಯಾಕರಣದ ಪ್ರಾರಂಭಿಕ ಸಿದ್ಧಾಂತ, ಚೀನೀ ಭಾಷಾ ವ್ಯಾಕರಣ, ಪ್ರಾಚೀನ ಅರಬೀ ಸಾಹಿತ್ಯ ಪ್ರಾಚೀನ ತುರ್ಕೀ ಸಾಹಿತ್ಯ ಹಾಗೂ ಚೀನೀ ಕವಿತೆಗಳ ಸಂಕಲನಗಳ ಪ್ರಕಾಶನ ಕಾರ್ಯವನ್ನು ರುಮೇನಿಯಾದ ಶೈಕ್ಷಣಿಕ ಪ್ರಕಾಶನ ಗೃಹವು ತನ್ನ ಹಸ್ತಗತ ಮಾಡಿಕೊಂಡಿದೆ ಪಾಣಿನಿ ಕಾಲಿದಾಸ ಮತ್ತು ರವೀಂದ್ರನಾಥರ ಕೃತಿಗಳನ್ನು ಸಹ ಈ ಸಂಸ್ಥೆಯು ರುಮೇನಿಯನ್ ಭಾಷೆಯಲ್ಲಿ ಪ್ರಕಾಶಿಸಿದೆ

ಈ ಸಂಬಂಧದಲ್ಲಿ ಪ್ರಾಚ್ಯ ವಿದ್ಯಾವಿಶಾರದರ ಅಂತರಾಷ್ಟ್ರೀಯ ಸಂಘ

(೧೩ನೇ ಪುಟ ನೋಡಿರಿ)

ವಾರದ ಸಣ್ಣ ಕಥೆ—

ಮರ್ಯಾದೆಯ ಜೀವನಕ್ಕಾಗಿ

ಶ್ರೀ. ನಾರಾಯಣ ಬಲ್ಲಾಳ.

ಕಳೆದ ಬೇಸಗೆಯ ಸಮಯದಲ್ಲಿ ನಾನು ಮದರಾಸಿನಲ್ಲಿದ್ದೆ. ನಮ್ಮ ಪತ್ರಿಕೆಯ ಪ್ರಚಾರಕ್ಕಾಗಿ ಸಂಚಾರವನ್ನು ಕೈಕೊಂಡಿದ್ದೆ. ಒಂದು ದಿನ ಸಾಯಂಕಾಲ ಕಾರ್ಯಾರ್ಥವಾಗಿ ನನ್ನ ಚೀಲ ಹಿಡಿದುಕೊಂಡು ಹೊರಟೆನು. (ಚೀಲದೊಳಗೆ ಹಣ, ರಶೀದಿ ಮತ್ತು ಪತ್ರಿಕೆಗಳಿದ್ದುವು.) ನನ್ನ ಕೆಲಸವನ್ನೆಲ್ಲಾ ತೀರಿಸಿ ಸಿನೆಮಾ ನೋಡಲು ಹೊರಟೆ. ರಾತ್ರಿ 10 ಗಂಟೆಯ ನಂತರ ಯಾವ ವಾಹನವೂ ನನಗೆ ಸಿಗಲಿಲ್ಲ. ಯಾವುದಾದರೊಂದು ವಾಹನವು ಕಣ್ಣಿಗೆ ಕಾಣಿಸುವುದೋ ಎಂದು ಸುತ್ತಲೂ ನೋಡಿದೆ. ಅಷ್ಟರಲ್ಲಿ ರಿಕ್ಷಾವಾಲನೊಬ್ಬ ರಿಕ್ಷಾ ಎಳೆಯುತ್ತ ನನ್ನೆಡೆಗೆ ಬಂದನು. "ಸಾರ್! ನಿಮಗೆ ಎಲ್ಲಿಗೆ ಹೋಗಬೇಕು?" ಎಂದನು. ಅವನಿಗೆ ಉತ್ತರ ಕೊಡದೆ ನಾನು ನಾನು ರಿಕ್ಷಾದಲ್ಲಿ ಕುಳಿತೆನು. ನನ್ನ ವರ್ತನೆಯನ್ನು ನೋಡಿ ಅವನು ತಪ್ಪು ತಿಳಿದುಕೊಂಡನು "ನಿಮಗೆ ಯಾವ ತರದ್ದು ಬೇಕು ಸಾರ್?" ಎಂದನು. ಅವನ ಮಾತುಗಳು ನನಗರ್ಥವಾಗಲಿಲ್ಲ.

"ನಾನು ತಿಮ್ಮನ್ನೇ ಕೇಳಿದ್ದು, ಸಾರ್! ನಿಮಗೆ ಈ ದೇಶದ್ದೋ ಅಥವಾ ಪರದೇಶದ್ದೋ?" ಎಂದನು. ನನಗವನ ಮಾತಿನ ಅರ್ಥ ಕೂಡಲೇ ಆಯಿತು.

"ಹೂ! ನನ್ನೊಡನೆ ನಿನ್ನ ಆ ವಿಚಾರವೆಲ್ಲ ಬೇಡ. ಇಷ್ಟವಿದ್ದರೆ ಪ್ರತಿಮಾ ಮಹಲಿಗೆ ಕರೆದುಕೊಂಡು ಹೋಗು" ಎಂದೆನು.

"ನೋಡಪ್ಪಾ, ರಿಕ್ಷಾವಾಲಾ! ನಿನಗೆ ಈ ರೀತಿ ದಲಾಲಿಯಾಗಿ ಜೀವನ ನಡೆಸುವುದು ಇಷ್ಟವೆ? ಬರೀ ರಿಕ್ಷಾ ಎಳೆದುದರಿಂದ ಸಿಕ್ಕುವ ಹಣ (ಕೂಲಿ) ಸಾಕಾಗದೆ ಇದ್ದರೆ, ಬೇರೇನಾದರೂ ಮರ್ಯಾದೆಯುಳ್ಳ ಜೀವನವನ್ನು ನೋಡಿಕೋಪ್ಪಾ! ನಿನಗೆ ಈ ದಲಾಲಿಯಿಂದ ಒಳ್ಳೇ ಫಾಯಿದೆಯಿದೆ ಎಂದು ನೀನು ತಿಳಿದಿರುವಿ. ಆದರೆ ಇದರಷ್ಟು ಪಾಪ ಹಾಗೂ ಹೊಲಸು ಜೀವನ ಇನ್ನೊಂದಿಲ್ಲ. ನಿನಗೆ ಇದು ಕಷ್ಟವಾದರೆ ನನ್ನೊಂದಿಗೆ ಬಾ. ನಮ್ಮ ಆಫೀಸಿನಲ್ಲಿ ನಿನಗೇನಾದರೂ ಕೆಲಸ ಕೊಡಿಸುವೆ" ಎಂದೆನು.

ರಿಕ್ಷಾವಾಲನು ನನ್ನ ಮಾತನ್ನು ಎದುರಿಸಿ ಆಡಲು ಶಕ್ತಿಯಿಲ್ಲದೆ ನೀರವನಾದ.

"ಸ್ವಾಮೀ! ನೀವೇನೂ ಹೇಳಬೇಕಾಗಿಲ್ಲ. ನನ್ನ ಹೊಟ್ಟೆಯ ಪಾಡಿಗಾಗಿ ನಾನು ಈ ವೇಷ ಕಟ್ಟಿದ್ದೇನೆ. ನನ್ನ ಚರಿತ್ರೆ ಕೇಳಿದರೆ ನೀವೆಂದೂ ನನ್ನನ್ನು ಬಯ್ಯಲಾರಿರಿ. ಆದರೂ ಚಿಂತಿಲ್ಲ. ನನ್ನನ್ನು ಸಂಪೂರ್ಣವಾಗಿ ಕ್ಷಮಿಸಿರಿ" ಎಂದನು.

"ನೋಡಪ್ಪಾ, ರಿಕ್ಷಾವಾಲಾ! ನೀನೇನೂ ತಿಳಿದುಕೊಳ್ಳದಿದ್ದರೆ ನಾನೊಂದು ವಿಚಾರ ನಿನ್ನೊಡನೆ ಕೇಳಬೇಕೆಂದಿದ್ದೇನೆ"

"ಹೂಂ".

"ನಾನು ನಿನ್ನ ದುರಂತ ಚರಿತ್ರೆಯನ್ನು ಕೇಳಬೇಕೆಂದಿದ್ದೇನೆ. ಅದರಿಂದ ನಿನಗೆಷ್ಟು ಕಷ್ಟವಾದರೂ ಚಿಂತೆಯಿಲ್ಲ. ನೀನು ನನಗೆ ಹೇಳಲೇಬೇಕು. ಏಕೆಂದರೆ ಮುಂದೆ ನಮ್ಮ ಪತ್ರಿಕೆಯಲ್ಲಿ ಅನುಕೂಲವಾದಾಗ ನಿನ್ನ ಚರಿತ್ರೆಯನ್ನು ಉಪಯೋಗಿಸಲೂ ಬರುತ್ತದೆ" ಎಂದೆ.

ಇಲ್ಲಾ ಸ್ವಾಮೀ! ದಯವಿಟ್ಟು...."

"ಅದು ಆಗೋದಿಲ್ಲ. ನೀನು ಹೇಳಲೇಬೇಕು, ಎಂದು ನಾನು ಸ್ವಲ್ಪ ಗದರಿಸಿದೆ.

○○ ○○ ○○

ರಿಕ್ಷಾಗಾಡಿ ನಿಧಾನವಾಗಿ ದಾರಿಯುದ್ದಕ್ಕೂ ಸಾಗುತ್ತಲೇ ಇತ್ತು. ಬಹಳ ಹೊತ್ತಿನ ನಂತರ ರಿಕ್ಷಾವಾಲ ತನ್ನ ಕತೆ ಹೇಳಲು ಪ್ರಾರಂಭಿಸಿದ.

'ನನಗಿನ್ನೂ ನನ್ನ ಜನ್ಮಸ್ಥಳ ಯಾವುದು, ನನ್ನ ತಂದೆ-ತಾಯಿಗಳು ಯಾರ ? ಎಂದು ತಿಳಿದಿಲ್ಲ. ಅವೆಲ್ಲ ತಿಳಿಯುವುದರೊಳಗೆ ನಾನು ಅನಾಥನಾದೆ. ಆಗಿನ ನನ್ನ ಜೀವನ ಹೇಗೆ ಸಾಗಿತೋ? ನನಗೇ ಆಶ್ಚರ್ಯವಾಗಿದೆ! ಯಾರಿಗೂ ಬೇಡವಾಗಿದ್ದೆ. ಯಾರೂ ನನ್ನ ಆರೈಕೆಯನ್ನು ತೆಗೆದುಕೊಳ್ಳಲಿಲ್ಲ. ನನ್ನ ಬಾಲ್ಯಾವಸ್ಥೆಯಲ್ಲಿ ನಾನೊಮ್ಮೆ ಆಹಾರ ಸಿಕ್ಕದೆ ಗೋಳಿ ಮರವೊಂದರ ಕೆಳಗೆ ಕಣ್ಣುಕತ್ತಲೆ ಬಂದು ಬಿದ್ದಿದ್ದೆ. ಆಗ ಯಾರೋ ಪುಣ್ಯಾತ್ಮರು ನನ್ನನ್ನು ಕರೆದುಕೊಂಡು ಹೋಗಿ ಮಗನಂತೆ ಉಪಚರಿಸಿ ಸಾಕಿದರು. ಅವರೇ ನನ್ನ ಪಾಲಿನ ಭಾಗ್ಯದ ದೇವರ—ಹನುಮಗೌಡರು. ಗೌಡರಾದರೇನು ಸ್ವಾಮಿ! ಮನುಷ್ಯ ಜನಾಂಗದಲ್ಲಿ ಅವರಂತಹ ವ್ಯಕ್ತಿಗಳು ಅಪೂರ್ವ. ಬಡವರಾಗಿದ್ದರೂ, ಶ್ರೀಮಂತರಿಗಿಂತಲೂ ಸುಖಿಯಾಗಿದ್ದರು. ಮಾನವ ಸುಖ ಜೀವನದ ನಿಯಮ, ಧರ್ಮ, ನೀತಿ—ಇವು ಅವರಿಂದ ಕಲಿಯಬೇಕು."

"ನಮ್ಮದು ದೈನಿಕ ಸಂಪಾದನೆ. ಹನುಮಪ್ಪನವರು ಒಂದು ರಿಕ್ಷಾ ಗಾಡಿಯನ್ನು ಬಾಡಿಗೆ ಪಡೆದಿದ್ದರು. ಬೆಳಿಗ್ಗೆ ಬೇಗನೇ ಎದ್ದು ಹೊರಟರೆ ಮಧ್ಯಾಹ್ನಕ್ಕೋ, ಕೆಲವೊಮ್ಮೆ ನಡುರಾತ್ರಿಗೋ ಬಂದು ಬಿಡುತ್ತಿದ್ದರು. ಅವರ ಸಂಪಾದನೆಯಲ್ಲಿ ರೂ. 1/- ರಿಕ್ಷಾ ಯಜಮಾನನಿಗೆ ಕೊಡಬೇಕು. ಎಂದಾದರೂ ಉಳಿದ ಹಣ, ಲಾಭವಾಗಿ ಹೆಚ್ಚಾಗಿದ್ದರೆ ನಮ್ಮ ಪಾಲಿನ ಭಾಗ್ಯ. ಯೌವನದಲ್ಲಿ ನನ್ನನ್ನೂ ಕೂಲಿ ಮಾಡಲು ಕಳುಹಿಸುತ್ತಿದ್ದರು. ಬಾಕಿ ಹೊತ್ತಿನಲ್ಲಿ ನೀರು ಕುಡಿದರೂ, ದಿನದ ಹೊತ್ತಿನಲ್ಲಿ 10-12 ಆಣೆಗಳಿಗಿಂತ ಒಂದು ಚಿಕ್ಕಾಸೂ ಹೆಚ್ಚು ಸಂಪಾದನೆಯಾಗುತ್ತಿರಲಿಲ್ಲ. ನನ್ನ ಇತರ ಸಹೋದ್ಯೋಗಿಗಳು ದಿನಕ್ಕೆ 5-6 ರೂ. ಸಂಪಾದಿಸುವುದು ನನಗೊಂದು ಸಮಸ್ಯೆಯಾಯಿತು."

"ಒಮ್ಮೆ ಹಠಾತ್ತಾನೆ ನಮ್ಮ ಕೆಲಸಗಾರರ ಕೇರಿಗೆ ಮಾರಿ ಬೇನೆ ತಗುಲಿತು. ಲೆಕ್ಕವಿಲ್ಲದಷ್ಟು ಜನರು ಸತ್ತರು. ನಮ್ಮನ್ನೆಲ್ಲಾ ಊರಿಗಿಂತ ದೂರವಾದ ಗುಡ್ಡೆಯೊಂದರಲ್ಲಿ ಇರಗೊಡಿಸಿದರು. ಈಗ ಅದು ಎಲ್ಲಿ ಇದೆಯೋ? ಏನಾಯ್ತೋ? ನನಗೆ ತಿಳಿಯದು. ಸ್ವಾಮೀ! ಎಲ್ಲಕ್ಕಿಂತ ಕಷ್ಟ—ನನ್ನ ಸರ್ವಸ್ವವೂ ಆದ ಹನುಮಗೌಡರ ಮೂರು ಮಕ್ಕಳು ಬೇನೆಯಿಂದ ಸತ್ತದ್ದು; ಹೆಂಡತಿ ಕಣ್ಣು ಕಳೆಕೊಂಡದ್ದು. ಅಂದಿನಿಂದ ಗೌಡರು ಸಂಪೂರ್ಣ ಹುಚ್ಚರಾದರು. ನನಗೂ ಕೂಡಾ ಮನಸ್ಸಿನಲ್ಲಿ ಏನೋ ಒಂದು ತರದ ಅಳುಕು; ಬೇಸರ."

"ಗೌಡರು ದುಃಖ, ಕಷ್ಟಗಳನ್ನು ಮರೆಯಲು ಕುಡಿಯುವುದನ್ನು, ಜುಗಾರಿ ಆಟವನ್ನು ಕಲಿತುಕೊಂಡರು. ಅನಂತರ ಸಂಪಾದನೆ ಅವರ ಸೇವೆಗೆ ಆಯಿತು. ಅವರ ಹೆಂಡತಿಗೆ ಒಂದು ಕಣ್ಣು ಇಲ್ಲದಿದ್ದರೂ, ತನ್ನ ತಾಳ್ಮೆಗಿಂತಲೂ ಹೆಚ್ಚಿನ ಪ್ರಯತ್ನದಿಂದ ತನ್ನ ಗಂಡನ ಸೇವೆ ನಡಿಸಿ, ಅವರನ್ನು ಅಭಿವೃದ್ಧಿಗೆ ತರಬೇಕೆಂದು ಯತ್ನಿಸಿದಳು. ಕೊನೆಗೊಂದು ದಿನ ಕೆಲಸಕ್ಕೂ ಹೋಗಲಿಲ್ಲ. ಗೌಡರು ಬೆಳಗಿನಿಂದ ರಾತ್ರೆಯವರೆಗೆ ಕುಡಿಯುತ್ತಾ ಇದ್ದರು. ಮರುದಿನಕ್ಕೆ ಕೂಡಾ ಅಮಲಿನಲ್ಲಿದ್ದರೆಂದೇ ನನ್ನ ಭಾವನೆ. ಏರಿದ ಅಮಲು ಇಳಿಯಲೇ ಇಲ್ಲ.

○○ ○○

"'ಕುರುಡಿ ಹೆಂಡತಿಯನ್ನೂ, ಮಗಳೊಬ್ಬಳನ್ನೂ ನಿನ್ನ ಅಧೀನಕ್ಕೊಪ್ಪಿಸುತ್ತೇನೆ. ಅವರಿಬ್ಬರನ್ನೂ ಕೈಬಿಡಬೇಡ. ನನ್ನ ಮೇಲೆ ನಿನಗೆ ವಿಶ್ವಾಸವಿದ್ದರೆ, ದಯವಿಟ್ಟು ಈ ನನ್ನ ಬಯಕೆಯನ್ನು ಈಡೇರಿಸಬೇಕು' ಎಂದು ಹನುಮಗೌಡರು ಕೊನೆಯಾಶೆಯಾಗಿ—ಕೊನೆಯ ಮಾತಾಗಿ ನನ್ನ ಕೂಡೆ ಹೇಳಿದ್ದಾರೆ. ಆದರೆ ಅನುಕೂಲವಾಗಿ ಅವರು ಬಿಟ್ಟುಹೋದ ಆಸ್ತಿ—ರಿಕ್ಷಾ, ನನ್ನ ಜೀವಾಳವಾಗಿದೆ! ಕೆಲವು ದಿನಗಳ ನಂತರ ಗೌಡರ ಹೆಂಡತಿ, ನನ್ನ ಅತ್ತೆ ದಿನದಿಂದ ದಿನಕ್ಕೆ ಕೃಶರಾಗುತ್ತಾ ಬಂದರು. ನನ್ನ ಸಂಪಾದನೆ ಇವರ ಕಾಯಿಲೆಗೆ ಮದ್ದು ತರಲು ಸಾಕಾಗುತ್ತಿದ್ದಿಲ್ಲ. ಅದರೂ ಗುಣವಾಗಿ ಕೆಲಸ ಆಗುತ್ತದೆಯೋ, ಸ್ವಾಮೀ! ಎಷ್ಟಾದರೂ ಅವರು ನನ್ನ ಹೆಂಡತಿಯ ತಾಯಲ್ಲವೇ? ಮದ್ದಿಗಾಗಿ ಸಂಪಾದನೆಯನ್ನು ಖರ್ಚು ಮಾಡಿದರೆ ಊಟ ಸೊನ್ನೆ ಅಂತೂ ಎರಡೂ ಖರ್ಚನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಲು ಆಗಲೇ ಇಲ್ಲ. ಸಾಲವಾದರೂ ಪಡೆಯೋಣವೆಂದರೆ, ನನ್ನನ್ನು ನೋಡಿ ಯಾರೂ ಸಾಲ ಕೊಡತ್ತಿದ್ದಿಲ್ಲ."

"ನಾನು ನನ್ನ ರಿಕ್ಷಾಗಾಡಿಯ ಯಜಮಾನರಾದ ಭೋಸರನ್ನು ಭೇಟಿಯಾಗಿ ಹಣದ ವಿಷಯ ಪ್ರಸ್ತಾಪಿಸಿದೆ. ಏನೋ! ದೇವರ ದಯೆಯಿಂದ ಸ್ವಲ್ಪ ಕೊಟ್ಟರು. ಆ ಹಣವೆಲ್ಲಾ ನನ್ನ ಅತ್ತೆಯವರ ಕಾಯಿಲೆಗೆ ಖರ್ಚಾಯಿತು. ನನಗೆ ಬೇಕಾಗಿತ್ತು ಹಣ. ಇನ್ನೂ ಬೇಕಾಗಿತ್ತು ಹಣ. ಮತ್ತೂ ಬೇಕಾಗಿತ್ತು ಹಣ. ಅವರೆ ಡಾಕ್ಟರರೋ ಅವರ ಶಂಖ ಊದಿಯೇ ಬಿಡುತ್ತಿದ್ದರು. ಆ ಮದ್ದು ತೆಗೋ; ಈ ಮದ್ದು ತಾ. ಆ ಇಂಜೆಕ್ಷನ್ ಆಗಬೇಕು; ಈ ಇಂಜೆಕ್ಷನ್ ಆಗಬೇಕಂತ- ನನಗೆ ಒಂದೇ ಯೋಚನೆ. ಹಣ ಎಲ್ಲಿಂದ ತರಲಿ??? ಅತ್ತೆಯ ಆರೈಕೆ ನನ್ನಾಕೆ ಸುಶೀಲಾ ನೋಡಿಕೊಳ್ಳುತ್ತಿದ್ದಳು. ದಿನ

(೧೧ನೇ ಪುಟ ನೋಡಿರಿ.)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮಸಿ, ಮಂಗಳೂರು.
3. ವಿ. ಪಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಉಷಾ

ಹೊಲಿಗೆ ಯಂತ್ರಗಳು



- ಗಟ್ಟಿ ಮುಟ್ಟಾಗಿದ್ದು ಸರ್ವರ ಅಭಿರುಚಿಗೂ ಒಪ್ಪುವಂತೆ ವಿವಿಧ ಮಾದರಿಯಲ್ಲಿ ತಯಾರಿಕೆ.
- ಕೊಂಡುಕೊಳ್ಳುವುದೊಂದೇ ಅಲ್ಲ— ಅದೊಂದು ಆದರ್ಶ ಜೀವನಾತಿ.

— ಸೋಲ್ ಸೆಲ್ಲಿಂಗ್ ಏಜಂಟ್ಸ್ —

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್ ಪ್ರೈವೇಟ್ ಲಿಮಿಟೆಡ್, ಮದ್ರಾಸು—1.

ದ್ವಿತೀಯ ಯೋಜನೆಯ ಮಹತ್ತಮ ಸಾಧನೆ—

ರೈಲು ಮಾರ್ಗಗಳ ವಿದ್ಯುತ್ಪೂರಣ

ಶ್ರೀ ಎಸ್. ಸಾರಂಗಪಾಣಿ. (ಪೂರ್ವ ರೈಲ್ವೆ)

ಭಾರತದ ರೈಲ್ವೆ ಸಾರಿಗೆಯ ಇತಿಹಾಸದಲ್ಲಿ ೧೯೫೭ರ ಡಿಸೆಂಬರ್ ೧೪ರ ಹೊಸ ಶಕೆಯನ್ನಾರಂಭಿಸಿದೆ ಅಂದು ನಮ್ಮ ನೆಚ್ಚಿನ ಪ್ರಧಾನಿಗಳಾದ ಶ್ರೀ. ಜವಾಹರಲಾಲ್ ನೆಹರೂರವರು ಪೂರ್ವ ರೈಲ್ವೆಯಲ್ಲಿ ವಿದ್ಯುತ್ ಚಾಲಿತ ರೈಲಿನ ಸಂಚಾರವನ್ನು ಉದ್ಘಾಟಿಸಿದರು.

ಡಿಸೆಂಬರ್ ೧೪ರಿಂದ ಪ್ರಥಮ ಬಾರಿ ಬಂಡೇಲ್ ಹಾಗೂ ಕಲ್ಕತ್ತಗಳ ನಡುವೆ ವಿದ್ಯುತ್ ಚಾಲಿತ ರೈಲುಗಳು ಓಡಾಡಲು ಪ್ರಾರಂಭಿಸಿವೆ ಬಂಡೇಲ್ ಕಲ್ಕತ್ತಾದಿಂದ ೨೪ ಮೈಲಿಗಳ ದೂರದಲ್ಲಿದೆ. ಹೌರಾ ಹಾಗೂ ಬದವಾನ್‌ಗಳ ನಡುವೆ ಇರುವ ರೈಲು ಮಾರ್ಗದಲ್ಲಿ ಬಂಡೇಲ್—ಕಲ್ಕತ್ತಾ ರೈಲು ಮಾರ್ಗವು ಎರಡೆರಡು ರೈಲು ಕಂಬಿಗಳ ಮಾರ್ಗಗಳಲ್ಲದೆ ಐದೈದು, ನಾಲ್ಕು ನಾಲ್ಕು ಮತ್ತು ಮೂರು ಮೂರು ರೈಲು ಕಂಬಿಗಳ ಮಾರ್ಗಗಳನ್ನು ಪಡೆದಿದೆ.

ಸುಮಾರು ೩೦ ವರ್ಷಗಳ ಹಿಂದೆ ಮುಂಬೈ ಹಾಗೂ ಮದರಾಸು ನಗರಗಳ ಉಪನಗರಗಳಿಗೆ ವಿದ್ಯುತ್ ರೈಲು ಮಾರ್ಗಗಳನ್ನು ಹಾಕಲಾಯಿತು ಉಪನಗರಗಳಲ್ಲಿ ವಾಸಿಸುವ ಜನರ ಅಗತ್ಯಗಳನ್ನು ಪೂರೈಸುವುದು ಹಾಗೂ ಉಪನಗರಗಳಲ್ಲಿ ಜನರು ನೆಲಸುವಂತೆ ಮಾಡುವುದು ರೈಲು ಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಮಾಡುವ ಉದ್ದೇಶವಾಗಿತ್ತು, ಹಿಂದಿನ ಜಿ. ಐ. ಪಿ. ರೈಲ್ವೆಯವರು ಇಗತ್‌ಪುರಿ ಹಾಗೂ ಪುಣೆ ನಗರಗಳ ವರೆಗೆ ವಿದ್ಯುತ್ ರೈಲು ಮಾರ್ಗಗಳನ್ನು ವಿಸ್ತರಿಸಿದರು. ಕಡಿದಾದ ಘಾಟ್ ವಿಭಾಗಗಳಲ್ಲಿ ಆವಿಚಾಲಿತ ರೈಲುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿರಲಿಲ್ಲವಾದ್ದರಿಂದ ರೈಲು ಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಮಾರ್ಪಡಿಸಬೇಕಾಯಿತು.

ಈ ಮಿತ ಪ್ರಮಾಣದ ಉದ್ದೇಶವು ಸಾಧನೆಗೊಂಡ ನಂತರ ಭಾರತೀಯ ರೈಲ್ವೆಗಳು ಪ್ರಗತಿಗಳಿಸಲಿಲ್ಲ. ದ್ವಿತೀಯ ಪ್ರಪಂಚ ಯುದ್ಧದ ನಂತರ ವಿದ್ಯುತ್ ರೈಲು ಮಾರ್ಗಗಳನ್ನು ಅಭಿವೃದ್ಧಿಪಡಿಸುವ ಕಲ್ಪನೆಯು ಒಂದು ರೂಪ ಪಡೆಯಲು ಪ್ರಾರಂಭಿಸಿತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ನಿರೂಪಿಸಿರುವ ಅಧಿಕ ಸಂಚಾರಕ್ಕೆ ಮುಖ್ಯ ರೈಲು ಮಾರ್ಗಗಳ ವಿದ್ಯುತ್ಪೂರಣವು ಅತ್ಯಗತ್ಯವೆಂದು ಭಾರತೀಯ ರೈಲ್ವೆಗಳು ಅಂತಿಮ ತೀರ್ಮಾನಕ್ಕೆ ಬಂದವು

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸುಮಾರು ೧೦೦ ಕೋಟಿ ರೂಪಾಯಿಗಳ ಅಂದಾಜಿನ ವೆಚ್ಚದಲ್ಲಿ ಕೆಲವು ವಿಭಾಗಗಳಲ್ಲಿ ರೈಲು ಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಮಾರ್ಪಡಿಸಲಾಗುವುದು. ಈ ವಿಭಾಗಗಳಲ್ಲಿ ಕಲ್ಕತ್ತ ನಗರದ ಉಪನಗರಗಳಿಗೆ ಸಂಬಂಧಿಸಿದ ಎಲ್ಲ ಭಾಗಗಳು, ಬರ್ದವಾನದಿಂದ ಮೊಗಲ್ ಸರಾಯ್ ವಿಭಾಗ, ಅಸನ್‌ಸಾಲ್‌ನಿಂದ ರೂರ್ಕೆಲಾ ವಿಭಾಗ, ಇಗತ್‌ಪುರಿಯಿಂದ ಭೂಸಾವಲ್ ಮತ್ತು ತಾಂಬರಂನಿಂದ ವಿಲ್ಲುಪುರಂ ವರೆಗಿನ ರೈಲುಮಾರ್ಗಗಳು ಈ ಯೋಜನೆಯಲ್ಲಿ ಅಡಕವಾಗಿವೆ.

ಅನಿರೀಕ್ಷಿತ ಘಟನೆಯಿಂದಾಗಿ ಭಾರತಖಂಡದ ಪ್ರಮುಖ ನಗರವಾದ ಕಲ್ಕತ್ತ ವಿದ್ಯುತ್ಪೂರಣದ ಸೌಲಭ್ಯಗಳನ್ನು ಪಡೆಯಲಿಲ್ಲವೆಂದಲ್ಲ. ೧೯೦೩ರಿಂದಲೂ ಅನೇಕ ಸಂದರ್ಭಗಳಲ್ಲಿ ಕಲ್ಕತ್ತಾದ ಉಪನಗರಗಳಿಗೆ ಹಾಕಿರುವ ರೈಲುಮಾರ್ಗಗಳನ್ನು ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾರ್ಪಡಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗಿತ್ತು.

ಕಲ್ಲಿದ್ದಲಿನ ಬೆಲೆ ಅತ್ಯಲ್ಪವಾಗಿರುವುದರಿಂದ, ಪ್ರಥಮ ಪ್ರಪಂಚ ಯುದ್ಧಾನಂತರ ಆಮದುಮಾಡಲ್ಪಟ್ಟ ಸರಕುಗಳ ಬೆಲೆಗಳಲ್ಲಿನ ಬದಲಾವಣೆ ಹಾಗೂ ಕಲ್ಕತ್ತಾದಲ್ಲಿನ ಸ್ಥಳೀಯ ಸ್ಥಿತಿಗತಿಗಳು ಇವು ರೈಲುಮಾರ್ಗಗಳ ವಿದ್ಯುತ್ಪೂರಣಕ್ಕೆ ಅನುಕೂಲ ಪ್ರದವಾಗಿರಲಿಲ್ಲವೆಂಬುದನ್ನು ೧೯೩೪ರ ಆಗಸ್ಟ್ ತಿಂಗಳಲ್ಲಿಯೇ ಸಿದ್ಧಗೊಳಿಸಲಾಗಿದ್ದ ವರದಿಯೊಂದರಿಂದ ವ್ಯಕ್ತಪಡುವುದು.

೧೯೪೭ರ ಡಿಸೆಂಬರ್ ತಿಂಗಳಲ್ಲಿ ಕೂಡ ನಡೆಸಿದ ಪರಿಶೀಲನೆಗಳಿಂದ ಹೌರಾದಿಂದ ಮೊಗಲಸರಾಯಿಗೆ ಇರುವ ರೈಲುಮಾರ್ಗವನ್ನು ವಿದ್ಯುತ್ ರೈಲುಮಾರ್ಗವನ್ನಾಗಿ ಮಾರ್ಪಡಿಸುವುದು ಹಣಕಾಸಿನ ದೃಷ್ಟಿಯಿಂದ ಸಾಧ್ಯವಿಲ್ಲವೆಂಬುದು ವ್ಯಕ್ತಪಟ್ಟಿತು.

೧೯೫೨ರಲ್ಲಿ ರೈಲ್ವೆ ಬೋರ್ಡಿನವರು ಈ ಸಂಬಂಧವಾದ ಪ್ರಶ್ನೆಯನ್ನು ಹೊಸದಾಗಿ ಅಧ್ಯಯನಮಾಡಬೇಕೆಂದು ಅಪೇಕ್ಷಿಸಿ ಅಧಿಕಾರಿಗಳ ತಂಡವೊಂದನ್ನು ನೇಮಿಸಿದರು. ಈ ಅಧಿಕಾರಿಗಳು ಸಲ್ಲಿಸಿದ ವರದಿಯಿಂದ ಮುಖ್ಯ ರೈಲುಮಾರ್ಗಗಳನ್ನು ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾರ್ಪಡಿಸುವುದು ಹಣಕಾಸಿನ ದೃಷ್ಟಿಯಿಂದ ಮಾತ್ರವಲ್ಲದೆ ಯೋಜನಾ ಸಂಬಂಧವಾದ ಸಂಚಾರ ಸಾರಿಗೆಯನ್ನು ನಿರ್ವಹಿಸುವ ಬಗ್ಗೆ ಭಾರತೀಯ ರೈಲ್ವೆಗಳ ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಕೂಡ ಸರ್ವಸಾಧ್ಯವೆಂಬುದು ತಿಳಿದುಬಂದಿತು. ದೇಶದ ವಿಭಜನಾನಂತರದ ಸ್ಥಿತಿಗತಿಗಳಲ್ಲಿ ಕಲ್ಕತ್ತ ಹಾಗೂ ಅದರ ಉಪನಗರಗಳಲ್ಲಿನ ರೈಲುಮಾರ್ಗಗಳನ್ನು ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾರ್ಪಡಿಸುವುದು ಆರ್ಥಿಕ ದೃಷ್ಟಿಯಿಂದ ಉಪಯುಕ್ತವೆಂಬುದನ್ನು ಈ ವರದಿಯು ತೋರಿಸಿದೆ.

ಕಲ್ಲಿದ್ದಲಿನ ಬಳಕೆಯ ವಿಚಾರದಲ್ಲಿ ವಿದ್ಯುತ್ ಚಾಲಿತ ರೈಲ್ವೆ ಎಂಜಿನ್ ಆವಿಶಕ್ತಿ ಚಾಲಿತ ರೈಲ್ವೆ ಎಂಜಿನ್‌ಗಿಂತ ನಾಲ್ಕುಪಟ್ಟು ಹೆಚ್ಚು ದಕ್ಷತೆಯಿಂದ ಕೂಡಿದೆ. ಆಧುನಿಕ ವಿದ್ಯುದಾಗಾರಗಳ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವುದರಿಂದ ಹಾಗೂ ಆಧುನಿಕ ತಂತ್ರ ವಿಧಾನಗಳನ್ನು ಅಭಿವೃದ್ಧಿಪಡಿಸುವುದರಿಂದ ಉಷ್ಣಜನಿತ ಶಕ್ತಿಯಲ್ಲಿನ ಕಾರ್ಯದಕ್ಷತೆಯ ವ್ಯತ್ಯಾಸವು ಗಮನಾರ್ಹವಾಗುವುದು.

ಆಧುನಿಕ ವಿದ್ಯುದಾಗಾರಗಳನ್ನು, ಕೀಳುದರ್ಜೆಯ ಕಲ್ಲಿದ್ದಲಿನಿಂದ ವಿದ್ಯುಚ್ಛಕ್ತಿಯನ್ನು ಪಡೆಯಲು ಸಾಧ್ಯವಾಗುವಂತೆ ರೂಪಿಸಲಾಗುತ್ತಿವೆ. ಇದೊಂದು ಮುಖ್ಯಾಂಶವಾಗಿದೆ ಆದರೆ, ಆವಿಶಕ್ತಿ ಚಾಲಿತ ರೈಲು ಎಂಜಿನ್‌ಗಳಿಗೆ ಉತ್ಕೃಷ್ಟ ದರ್ಜೆಯ ಕಲ್ಲಿದ್ದಲು ಅವಶ್ಯಕವಾಗುವುದು. ಆದ್ದರಿಂದ ಮಿತ ಪ್ರಮಾಣದ ಉತ್ಕೃಷ್ಟ ದರ್ಜೆಯ ಕಲ್ಲಿದ್ದಲನ್ನು ಪಡೆದಿರುವ ಭಾರತದಲ್ಲಿ ಆವಿಚಾಲಿತ ರೈಲುಗಳಿಂದ ವಿದ್ಯುತ್ ಚಾಲಿತ ರೈಲುಗಳಿಗೆ ಪರಿವರ್ತನಗೊಳ್ಳುವುದು ಅತ್ಯಗತ್ಯವಾದ ವಿಷಯವಾಗಿದೆ

ಭಾರತೀಯ ರೈಲ್ವೆಗಳಲ್ಲಿ ಸಮರಕಾಲದಲ್ಲಿ ಹಾಗೂ ಅನಂತರ ಸಂಚಾರ ಸಾಗಣೆ ಪ್ರಮಾಣವು ಗಮನಾರ್ಹವಾದ ರೀತಿಯಲ್ಲಿ ಹೆಚ್ಚಿವೆ. ದ್ವಿತೀಯ ಯೋಜನಾವಧಿಯಲ್ಲಿ ಇದು ಮತ್ತಷ್ಟು ಹೆಚ್ಚುವ ನಿರೀಕ್ಷೆಯಿದೆ. ಯೋಜನಾವಧಿಯ ಅಂತ್ಯದ ವೇಳೆಗೆ ಸಂಚಾರ ಸಾಗಣೆಯ ಪ್ರಮಾಣವು ಪರಮಾವಧಿ ಸಂಚಾರ ಸಾಗಣೆಗಿಂತ ಮಿತಿಮೀರುವುದರಿಂದ ವಿದ್ಯುತ್ ಚಾಲಿತ ರೈಲುಗಳಲ್ಲಿನ ಸಾಗಣೆ ಸಂಚಾರಗಳಿಗೆ ಅತ್ಯಲ್ಪ ವೆಚ್ಚವಾಗುವುದು.

ವಿದ್ಯುತ್ ಚಾಲಿತ ರೈಲುಗಳ ಓಡಾಟದಿಂದ ರೈಲು ಮಾರ್ಗಗಳ ಸಾಮರ್ಥ್ಯವು ಸುಧಾರಿಸುವುದೆಂಬುದು ಪ್ರಪಂಚದ ಎಲ್ಲ ಭಾಗಗಳಲ್ಲಿಯೂ ಸಿದ್ಧವಾಗಿದೆ. ನಮ್ಮ ಮುಖ್ಯ ರೈಲು ಮಾರ್ಗಗಳಲ್ಲಿ ಕೆಲವನ್ನು ವಿದ್ಯುತ್ ರೈಲು ಮಾರ್ಗಗಳನ್ನಾಗಿ ಪರಿವರ್ತಿಸುವುದರಿಂದ ಹೆಚ್ಚಿನ ಸಂಚಾರ ಸಾಗಣೆಯನ್ನು ಹೆಚ್ಚು ವೆಚ್ಚವಿಲ್ಲದೆ ನಿರ್ವಹಿಸಲು ಸಾಧ್ಯವೆಂಬುದು ಪರಿಶೀಲನೆಗಳಿಂದ ವ್ಯಕ್ತಪಟ್ಟಿದೆ. ಅಲ್ಲದೆ ವಿದ್ಯುತ್ಪೂರಣಕ್ಕಾಗಿ ತೊಡಗಿಸಬೇಕಾಗುವ ಬಂಡವಾಳದ ವೆಚ್ಚದ ಮೇಲೆ ಆಕರ್ಷಕವಾದ ಲಾಭಾಂಶ ದೊರೆಯುವುದು.

ರೈಲುಮಾರ್ಗಗಳನ್ನು ವಿದ್ಯುತ್ ರೈಲು ಮಾರ್ಗಗಳಾಗಿ ಪರಿವರ್ತಿಸುವುದರಿಂದ ಲಭ್ಯವಾಗುವ ಇತರ ಮುಖ್ಯವಾದ ಪ್ರಯೋಜನಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಉಲ್ಲೇಖಿಸಬಹುದು.

ರೈಲು ಮಾರ್ಗಗಳ ವಿದ್ಯುತ್ಪೂರಣದಿಂದ ಹೆಚ್ಚು ಸಂಖ್ಯೆಯ ಆವಿಚಾಲಿತ ರೈಲ್ವೆ ಎಂಜಿನ್‌ಗಳು ಸ್ಥಳಾಂತರಗೊಳ್ಳುವುವು. ನಾವೀಗ ಅಧಿಕ ಸಂಖ್ಯೆಯ ರೈಲ್ವೆ ಎಂಜಿನ್‌ಗಳನ್ನು ಪಡೆಯಬೇಕಾಗಿದೆ. ವಿದ್ಯುತ್‌ಚಾಲಿತ ರೈಲ್ವೆ ಎಂಜಿನ್‌ಗಳನ್ನು ಕೊಳ್ಳುವುದರಿಂದ ಆವಿಚಾಲಿತ ರೈಲ್ವೆ ಎಂಜಿನ್‌ಗಳನ್ನು ವಿನಿಯೋಗಿಸುವ (ತೊಲಗಿಸುವ) ಸಮಸ್ಯೆಯು ಉದ್ಭವಿಸುವುದಿಲ್ಲ.

ವಿದೇಶೀ ಧನ ವಿನಿಮಯ ಪರಿಸ್ಥಿತಿಯು ಉಗ್ರವಾಗಿರುವುದರಿಂದ, ದೀರ್ಘಕಾಲದಿಂದಲೂ ಕಾರ್ಯಾಚರಣೆಯಲ್ಲಿರುವ ಅಸಂಖ್ಯಾತ ರೈಲ್ವೆ ಎಂಜಿನ್‌ಗಳನ್ನು ಉಳಿಸಿಕೊಳ್ಳಬೇಕಾಗಿವೆ. ಮುಂದೆ ವಿದ್ಯುತ್ ಚಾಲಿತ

(೧೦ನೇ ಪುಟ ನೋಡಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಸಾವಿರಾರು ಜನರು
ಅನುಸರಿಸುತ್ತಿರುವ
ಸುಲಭ ಕೇವಣಾತಿ ವಿಧಾನ

ದಿನಕ್ಕೆ
4 ಆಣೆ
(25 ನಯಾ ಪೈಸೆ)
7 ವರುಷಗಳಲ್ಲಿ
ರೂ. 700

ಪಿಗ್ಮಿ

● ಚಿಕ್ಕ ಗಾತ್ರದ ಆಫ್ರಿಕದ ಪಿಗ್ಮಿಯರಂತಾಗಿ ಬಹುದೊಡ್ಡ ಕಾಡಾನೆಯನ್ನು ಸಂಹರಿಸಬಲ್ಲರು.
● ದಿನಕ್ಕೆ 25 ನ. ಪೈಸೆಗಳಂತಹ ಪುಡಿ ಕಾಸು ಗಳೊಟ್ಟಾಗಿ ಬೇಂಕಿನಲ್ಲಿ ಸಂಗ್ರಹವಾಗುವ ನಿಧಿಯು ಭವಿಷ್ಯದ ಸಂಕಲ್ಪಗಳನ್ನು ಪೂರು ಮಾಡಬಲ್ಲುದು.

ಸಿಂಡಿಕೇಟಿನ 104 ಶಾಖೆಗಳ ಯಾವುದೇ ಉದ್ಯೋಗಸ್ಥನೊಡನೆ ವಿಚಾರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

The Canara Industrial & Banking Syndicate Ltd., Udipi.

ಶ್ರೀ ಶಿವರಾಮ ಕಾರಂತರ
ಅತ್ಯಪೂರ್ವ ಗ್ರಂಥ—
ಯಕ್ಷಗಾನ
ಬಯಲಾಟ
ಇದೀಗ ಪ್ರಕಟವಾಗಿದೆ
ಬಣ್ಣಬಣ್ಣದ ಚಿತ್ರಗಳು!
ಬೆಲೆ ರೂ. 6/-
ವಿ. ಪಿ. ಕಳಿಸುವುದಿಲ್ಲ-
ರೂ 7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ನಮ್ಮಲ್ಲಿ ಸಿಗುವ ಇತರ ಪುಸ್ತಕಗಳ ಪಟ್ಟಿಗಾಗಿ ಬರೆಯಿರಿ.
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಆತ್ಮಪರೀಕ್ಷೆಯ ದಿವ್ಯ ಪ್ರತೀಕ–

ಭಗವಾನ್ ರಮಣ ಮಹರ್ಷಿ

ಶ್ರೀ. ಕೆ. ಶಂಕರ ಸೇರ್ವೆಗಾರ, ವಿಶಾರದ.

ರಮಣ ಮಹರ್ಷಿಗಳು ಇಂದು ನಮ್ಮ ಮಧ್ಯದಲ್ಲಿಲ್ಲ; ಆದರೂ ಆ ಮಹಾನ್ ವಿಭೂತಿ ಪುರುಷರನ್ನು ನಾವು ಎಂದೂ ಮರೆಯಲಾರೆವು. ಅವರು ಎಷ್ಟು ಉನ್ನತ, ಎಷ್ಟು ಪೂರ್ಣರಾಗಿದ್ದರು! ನಿಜವಾಗಿಯೂ ಅವರು ದೊಡ್ಡ ವಿದ್ವಾಂಸರಾಗಿರಲಿಲ್ಲ—ಅಥವಾ ಅವರಲ್ಲಿ ಪಾಂಡಿತ್ಯವಿರಲಿಲ್ಲ; ಆದರೆ ಅವರಲ್ಲಿ ಪರಮ ಜ್ಞಾನ ಅವಶ್ಯವಾಗಿತ್ತು. ಇದು ಚಿರಂತನ ಸತ್ಯದ ಪ್ರತ್ಯಕ್ಷ ಅನುಭೂತಿಯಿಂದ ಲಭ್ಯವಾಗಿರುವುದಾಗಿದೆ. ಮತ್ತು ಇದರ ಉಪಲಬ್ಧಿಯಿಂದ ಆಧ್ಯಾತ್ಮ, ಪ್ರೇಮ ಮತ್ತು ಶುದ್ಧತೆ, ಸಾಹಸ ಮತ್ತು ಸದ್ಭಾವನೆ ಪವಿತ್ರತೆಯ ಫಲದಿಂದ ಸ್ವಯಮೇವ ಪ್ರಾಪ್ತಿಸಿತ್ತು.

ಶ್ರೀ ರಮಣ ಮಹರ್ಷಿಗಳ ಜನ್ಮ ೧೮೭೯ನೇ ಇಸವಿ ಡಿಸೆಂಬರ ತಿಂಗಳ ೩೦ನೇ ತಾರೀಕಿನಲ್ಲಾಯಿತು. ಬಾಲ್ಯದಲ್ಲೇ ಅವರು 'ಪೆರಿಯ ಪುರಾಣಂ'ನಲ್ಲಿ ಭಕ್ತರ ನಿಸ್ವಾರ್ಥ ಭಕ್ತಿಯ ಕುರಿತು ಓದಿದ್ದರು, ಇದು ಅವರ ಧರ್ಮಪ್ರಿಯ ಸ್ವಭಾವದ ಮೇಲೆ ತುಂಬ ಪರಿಣಾಮ ಮಾಡಿತು. ಅವರು ಮುಂದೆ ತಮ್ಮ ಜೀವನ ಪ್ರವಾಹವನ್ನು ಆಧ್ಯಾತ್ಮ ಚಿಂತನೆಯ ಕಡೆಗೆ ಹೇಗೆ ತಿರುಗಿಸಿದರು ಎಂಬುದನ್ನು ಅವರ ಮಾತಿನಲ್ಲೇ ಕೇಳಿರಿ. "ಮಧುರೆಯನ್ನು ಬಿಡುವ ಆರು ವಾರ ಮೊದಲು ನನ್ನ ಜೀವನದಲ್ಲಿ ಮಹತ್ತ್ವದ ಪರಿವರ್ತನೆಯುಂಟಾಗಿದ್ದಿತು. ಒಂದು ದಿನ ನಾನು ನನ್ನ ಚಿಕ್ಕತಂದೆಯ ಮನೆಯ ಉಪ್ಪರಿಗೆಯಲ್ಲಿ ಏಕಾಂಗಿಯಾಗಿ ಕುಳಿತಿದ್ದೆ. ನನ್ನ ಸ್ವಾಸ್ಥ್ಯ ಆಗ ಚೆನ್ನಾಗಿತ್ತು; ಯಾಕೋ ಏನೋ ಅಕಸ್ಮಾತ್ ಮೃತ್ಯು ಭಯವು ನನ್ನನ್ನು ಆವರಿಸಿತು, ನಾನು ಶೀಘ್ರವೇ ಮರಣವನ್ನಪ್ಪಬೇಕಾಗುವುದು ಎಂದು ನಾನೆಣಿಸಿದೆ. ಹಾಗಾದರೆ ನಾನೀಗ ಮಾಡಬೇಕಾದುದೇನು? ನಾನು ಈ ಸಮಸ್ಯೆಯ ವಿಷಯದಲ್ಲಿ ಇನ್ನೊಬ್ಬರ ಅಭಿಪ್ರಾಯವನ್ನು ಕೇಳುವುದು ಅಗತ್ಯವೆಂದೆಣಿಸಲಿಲ್ಲ. ಇದಕ್ಕೆ ಸಮಾಧಾನವನ್ನು ನಾನು ನನ್ನಲ್ಲಿಯೇ ತಕ್ಷಣವೇ ಹುಡುಕಬೇಕೆಂದು ನಿಶ್ಚಯಿಸಿದೆ"

'ಮೃತ್ಯು ಭಯ ನನ್ನನ್ನು ಕೂಡಲೇ ಕಾರ್ಯ ಪ್ರವೃತ್ತನನ್ನಾಗಿ ಮಾಡಿತು. ನಾನು ಮನಸ್ಸಿನಲ್ಲೇ ಆಲೋಚಿಸತೊಡಗಿದೆ ಇದರ ಅರ್ಥವೇನು? ಇಂದು ಯಾರ ಮರಣವಾಗುತ್ತಿದೆ?..........ಈ ಶರೀರ ಸಾಯುತ್ತಿದೆ. ಅವಿಲಂಬವಾಗಿ ಕಾರ್ಯದಲ್ಲಿ ತೊಡಗಿದೆ ಶ್ವಾಸವನ್ನು ತಡೆದು ತುಟಿಗಳನ್ನು ಮುಚ್ಚಿಕೊಂಡೆ. ನನ್ನಲ್ಲೇ ಹೇಳಿಕೊಂಡೆ—ಸರಿ, ಈಗ ಈ ಶರೀರದ ಮೃತ್ಯುವಾಯಿತು; ಈಗ ಇದನ್ನು ಶ್ಮಶಾನಕ್ಕೆ ತೆಗೆದುಕೊಂಡು ಹೋಗಿ ಸುಟ್ಟು ಬಿಡಲಾಗುವುದು. ಆದರೆ ಶರೀರವನ್ನು ಸುಟ್ಟು ಬಿಡುವುದರಿಂದ ನಾನು ಸತ್ತು ಹೋಗುವೆನೆ? ಏನು ಈ ಶರೀರ ನಾನೆ? ಅಲ್ಲ. ಈ ಶರೀರವಾದರೆ ಶಾಂತವಾಗಿ ನಿಶ್ಚೇತವಾಗಿದೆ. ಆದರೆ 'ನಾನು' ನನ್ನಲ್ಲೇ ಇದ್ದೇನೆ."

ಇದರ ಅರ್ಥ 'ನಾನು' ಈ ಶರೀರದಲ್ಲಿ ತುಂಬಿ ಕೊಂಡಿದೆ. ಈ ಶರೀರ ಸತ್ತು ಹೋಗುತ್ತದೆ. ಆದರೆ 'ನಾನು' ಶರೀರಕ್ಕಿಂತ ಭಿನ್ನವಾಗಿರುವುದರಿಂದ ಅದು ಸಾಯುವುದಿಲ್ಲ. ಅಲ್ಲದೆ 'ನಾನು' ಎಂಬುದು ಆತ್ಮವಾಗಿದೆ. ಇದಕ್ಕೆ ಮರಣವಿಲ್ಲ ಆತ್ಮದ ಪ್ರತ್ಯೇಕ ಅಸ್ತಿತ್ವದ ತಿಳಿವಳಿಕೆಯುಂಟಾದಾಗ ನನಗೆ ಮೃತ್ಯುವಿನ ಭಯ ದೂರವಾಯಿತು.

ಆಧ್ಯಾತ್ಮಿಕ ವಿಚಾರಗಳಲ್ಲೇ ಲೀನರಾಗಿದ್ದುದರಿಂದ ಮಹರ್ಷಿಗಳಿಗೆ ಹೆಚ್ಚು ವಿದ್ಯೆ ಪಡೆಯುವುದಾಗಲಿಲ್ಲ. ಈ ಕಾರಣದಿಂದಾಗಿ ಅವರು ಬೈಗಳನ್ನು ಕೇಳಬೇಕಾಯಿತು. ಆದುದರಿಂದ ಅವರು ೨೯-೮-೧೮೯೬ರಂದು ಮನೆಯನ್ನು ಬಿಟ್ಟು ಹೊರಟರು. ಹೋಗುವ ಮೊದಲು ಅವರು ಒಂದು ಪತ್ರ ಬರೆದು 'ನಾನು ಪರಮಾತ್ಮನ ಹುಡುಕಾಟಕ್ಕೆ, ಅವನದೇ ಆಜ್ಞೆಯಿಂದ ಇಲ್ಲಿಂದ ಹೋಗುವವನಿದ್ದೇನೆ. ಆದುದರಿಂದ ನನಗೋಸ್ಕರ ದುಃಖಿಗಳಾಗುವ ಆವಶ್ಯಕತೆಯಿಲ್ಲ. ಹುಡುಕಾಡಿಸುವ ಅಗತ್ಯವೂ ಇಲ್ಲ!' ಎಂದು ತಿಳಿಸಿದರು. ಈ ಪ್ರಕಾರ ಒಂದು ದೈವೀ ಆದೇಶದ ಅನುಭವದಿಂದ ಮಧುರೆಯನ್ನು ಬಿಟ್ಟರು. ಕೆಲವು ಕಷ್ಟಗಳನ್ನು ಅನುಭವಿಸಿ ನವಂಬರ್ ೧ಕ್ಕೆ ತಿರುವಣ್ಣಮಲೈಯನ್ನು ಸೇರಿದರು. ಇದೇ ಸ್ಥಳದಲ್ಲಿ ಅವರು ನಿರ್ವಾಣ ಕಾಲದ ತನಕ ಇದ್ದರು.

ಅಲ್ಲಿ ಅವರು ಒಂದು ದೇವಸ್ಥಾನಕ್ಕೆ ಹೋದಾಗ ತನ್ನ ಪರಿವೆಯನ್ನೇ ಮರೆತು ಬಿಟ್ಟರು. ಇಂಥ ಪರಿಸ್ಥಿತಿಯಲ್ಲಿ ಬಹುಶಃ ಪರಮಸತ್ಯದೊಡನೆ ಪರಮಾತ್ಮನ ಒಡಗೂಡುವಿಕೆಯುಂಟಾಗುತ್ತದೆ. ಅಲ್ಲದೆ ರಮಣ ಮಹರ್ಷಿಗಳು ಸನ್ಯಾಸವನ್ನು ಸ್ವೀಕರಿಸಿ ಅವಧೂತರಾದರು. 'ಅವಧೂತ' ಶಬ್ದದ ನಾಲ್ಕು ಅಕ್ಷರಗಳು ಅ, ವ, ಧೂ, ತ— ವಿಶೇಷ ಅರ್ಥವುಳ್ಳವುಗಳಾಗಿವೆ. ಮೊದಲಿನ 'ಅ' ಅಕ್ಷರ ವಿನಾಶಹೀನತೆಯ ದ್ಯೋತಕವಾಗಿದೆ. ಎರಡನೆಯ 'ವ' ವರೇಣ್ಯತ್ವ ಅಥವಾ ಪರಮ ಶುದ್ಧತೆಯ ಪ್ರತೀಕವಾಗಿದೆ. ಮೂರನೆಯ ಅಕ್ಷರ 'ಧೂ' ಧೂತಸಂಸಾರ ಬಂಧನ ಅರ್ಥಾತ್ ಸಾಂಸಾರಿಕ ಬಂಧನಗಳನ್ನು ಮುರಿಯುವ ಪ್ರತಿನಿಧಿತ್ವವನ್ನು ವಹಿಸುತ್ತದೆ ನಾಲ್ಕನೆಯ 'ತ' ತ್ವಮಸಿ ಯಾ 'ನೀನೇ ಆಗಿರುವೆ' ಎಂಬುದರ ಪ್ರತೀಕವಾಗಿದೆ.

ಇಂಥ ಸ್ಥಿತಿಯ ಪ್ರಾಪ್ತಿ ಯಾವಾಗಲೂ ಧಾರ್ಮಿಕ ವ್ಯಕ್ತಿಗಳ ಲಕ್ಷ್ಯವಾಗಿತ್ತು. ನಾವು ನಮ್ಮ ಆಶೆ, ಆಕಾಂಕ್ಷೆ, ಉತ್ಕಂಠತೆ, ಭಯ ಮತ್ತು ಪ್ರಲೋಭನಗಳಲ್ಲಿಯೇ ಸಿಕ್ಕಿಕೊಂಡಿರುತ್ತೇವೆ. ಆದುದರಿಂದ ನಾವು ನಮ್ಮ ಆತ್ಮವನ್ನು ಕಳೆದು ಕೊಂಡು ಬಿಡುವೆವು. ವಸ್ತುತಃ ಬಾಹ್ಯದಿಂದ ಆಂತರಿಕ ಸಂದೇಹವೇ ಭಯಂಕರವಾಗಿದೆ. ನಿಜವಾದ ಕೆಡುಕು ದೇಹದ ಮೃತ್ಯುವಲ್ಲ. ಬದಲು ಪರಮಸತ್ಯದ ಕಡೆಗೆ ನಿಷ್ಠೆಯ ಮೃತ್ಯುವಾಗಿದೆ.

(೯ನೇ ಪುಟ ನೋಡಿರಿ)

ಕ್ಷಯರೋಗ ನಿವಾರಣೆಗೆ ಮನೆಮದ್ದಿನ ಹಂಚಿಕೆ ಅಗತ್ಯ.

ಕ್ಷಯರೋಗ ಪೀಡಿತರ ಎಂಜಲನ್ನು ಪ್ರತ್ಯೇಕವಾಗಿರಿಸಿ ಅವರ ಸಂಪರ್ಕ ಇತರರಿಗೆ ಆಗದಂತೆ ನೋಡಿಕೊಂಡು ಅವರವರ ಮನೆಯಲ್ಲಿಯೇ ಎಂಟೀಬಯೋಟಿಕ್ಸ್ ಚಿಕಿತ್ಸೆಯನ್ನು ನಿಯಮಬದ್ಧವಾಗಿ ಮಾಡುವ ಪದ್ಧತಿಯು ಹೆಚ್ಚಿನ ಪ್ರಯೋಜನಕಾರಿಯಾಗುವುದೆಂದು ಈಗ ಸ್ಪಷ್ಟವಾಗಿ ಕಂಡುಬಂದಿದೆ. ಆದುದರಿಂದ ಈ ಚಿಕಿತ್ಸಾಪದ್ಧತಿಯನ್ನು ಇನ್ನೂ ವೃದ್ಧಿಪಬೇಕಾದುದು ಆವಶ್ಯಕತೆಯಿರುವುದು. ಇದರ ಪೂರ್ತಿಕೆ ಬಗ್ಗೆ

1. ಕ್ಷಯರೋಗಕ್ಕೆ ತುತ್ತಾದ ಗರೀಬರಿಗೆ ಧರ್ಮಾರ್ಥವಾಗಿ ಎಂಟೀಬಯೋಟಿಕ್ಸ್ ಹಂಚುವುದು.
2. ರೋಗತಗಲುವಿಕೆ ಚಿಕ್ಕ ಪ್ರಮಾಣದಲ್ಲಿದ್ದಾಗ್ಗೂ ಔಷಧಿಯನ್ನು ಸೇವಿಸುವುದು.
3. ರೋಗಗ್ರಸ್ತರು ಪೂರ್ಣ ಗುಣಹೊಂದುವ ತನಕ ಅವರ ಕುಟುಂಬದವರಿಗೆ ಧನಸಹಾಯ ನೀಡುವುದು.

ಸರಕಾರಕ್ಕಾಗಲೀ ಅಥವಾ ಇನ್ನಾವ ಸಂಸ್ಥೆಗಳಿಗಾಗಲೀ ಮೇಲಿನ ಕಾರ್ಯ ಮುಂದೊತ್ತಲು ಹಣದ ಆವಶ್ಯಕತೆ ಇದೆ. ಟಿ. ಬಿ. ಮೊಹರು ಮಾರಾಟ ಚಳವಳಿಯು ಇದಕ್ಕೆ ಸಹಾಯ ನೀಡುವುದು. ಆದುದರಿಂದ ದಯಮಾಡಿ ಬಹುಸಂಖ್ಯೆಯಲ್ಲಿ ಈ ಮೊಹರುಗಳನ್ನು ಕೊಂಡುಕೊಂಡು ಸಹಕರಿಸಿರಿ.

ಮೊಹರುಗಳು ದೊರೆಯುವ ಸ್ಥಳಗಳು:—

1. ದಿ ಒನೆರರಿ ಸೆಕ್ರೆಟರಿ, ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಕೇರಳ, ಟಿ. ಬಿ. ಸೆಂಟರ್, ಟ್ರಿವೆಂಡ್ರಮ್–1.
2. ತ್ರಿವೆಂಡ್ರಮ್, ಕ್ವಿಲೋನ್, ಅಲಪ್ಪಿ, ಕೊಟ್ಟಾಯಮ್, ತ್ರಿಚೂರು, ಪಾಲ್ಘಾಟ್, ಕೋಝಿಕೋಡೆ ಮತ್ತು ಕಣ್ಣಾನೂರು ಜಿಲ್ಲಾ ಕಲೆಕ್ಟರರು ಮತ್ತು ಅವರ ಅಧೀನ ಕಚೇರಿಗಳು.
3. ಕೇರಳ ಸ್ಟೇಟಿನ ಎಲ್ಲಾ ಸರಕಾರಿ ಇಲಾಖೆಗಳು ಮತ್ತು ರಾಜ್ಯದ ಶಾಲಾ ಕಾಲೇಜುಗಳು.

ಒಂಭತ್ತನೆ ಮೊಹರು ಮಾರಾಟ ಚಳವಳಿಗೆ ಯೋಗ್ಯ ಮೊಹರುಗಳ ತಯಾರಿಕೆಯ ಮಾದರಿ ಬೇಕಾಗಿದೆ. ವಿವರಗಳಿಗೆ 'ದಿ ಸೆಕ್ರೆಟರಿ, ಟ್ಯೂಬರ್‌ಕ್ಯುಲೋಸಿಸ್ ಎಸೋಸಿಯೇಶನ್ ಆಫ್ ಇಂಡಿಯಾ, 3 ರೆಡ್ ಕ್ರಾಸ್ ರೋಡ್, ನ್ಯೂ ಡಿಲ್ಲಿ— ವಿಳಾಸಕ್ಕೆ ಬರೆಯಿರಿ.

ಇಂಡಿಯದ ಎಂಟನೆ ಟಿ. ಬಿ. ಮೊಹರು ಮಾರಾಟ ಚಳವಳಿ

ಈ ಸ್ಥಳ ದಾನಮಾಡಿದವರು:

ಸರಭಾಯಿ ಕೆಮಿಕಲ್ಸ್, ಬರೋಡ.

ಕರ್ನಾಟಕದ ಕಲಾವೈಭವ–

ಶಿಲ್ಪಕಲೆಯ ಅತ್ಯುತ್ತಮ ಮಾದರಿಗಳು

ಶ್ರೀ ಪಿ ಎನ್ ರಾಮಚಂದ್ರ ರಾವ್

ಮನುಷ್ಯ ಜೀವನವನ್ನು ವಿಂಗಡಿಸಿಕೊಳ್ಳುವಲ್ಲಿ, ಮನಸ್ಸಿಗೆ ಶಾಂತಿಯನ್ನೀಯುವಲ್ಲಿ ಸಾಹಿತ್ಯವು ಯಾವ ಪಾತ್ರವನ್ನು ವಹಿಸುವುದೋ ಅದೇ ಪಾತ್ರವನ್ನು ಲಲಿತ ಕಲೆಗಳೂ ವಹಿಸುತ್ತವೆ. 'ಸತ್ಯಂ ಶಿವಂ ಸುಂದರಂ' ಎಂಬುದು ಈ ಕಲೆಗಳಿಗೆಯೇ ಅನ್ವಯಿಸುತ್ತದೆ. 'ಪ್ರೇಮವೇ ದೇವರು ದೇವರೇ ಪ್ರೇಮ' ಎಂಬ ವಿಷಯವನ್ನು ಒಪ್ಪುವುದಾದರೆ ಪ್ರೇಮವನ್ನು ಹುಟ್ಟಿಸುವ, ವ್ಯಕ್ತಗೊಳಿಸುವ, ಉಕ್ಕೇರಿಸುವ ಈ ಲಲಿತ ಕಲೆಗಳಿಗೆ ದೇವತಾ ಸ್ವರೂಪವೇ ಬರುತ್ತದೆ.

ಭಾರತ ದೇಶದ ಸಂಸ್ಕೃತಿಯು ಬಹು ಪುರಾತನವಾದುದು. ಅದರ ಆರಂಭ ಎಂದು ಎಂಬ ವಿಷಯದಲ್ಲಿ ಭಿನ್ನಾಭಿಪ್ರಾಯವಿದ್ದರೂ ಅದು ಅತ್ಯಂತ ಪ್ರಾಚೀನವಾದುದೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಸಂಸ್ಕೃತಿಯ ಇತಿಹಾಸ ಎಷ್ಟು ಪುರಾತನವಾಗಿದೆಯೋ ಅಷ್ಟೇ ಪುರಾತನವಾಗಿದೆ ಭಾರತದ ಕಲೆ. "ಸತ್ಯಾನ್ವೇಷಕ ಕಾವ್ಯದಲ್ಲಿಯೂ ಬಾಳಿನಲ್ಲಿಯೂ ಅಮೃತತ್ವವನ್ನೇ ಹುಡುಕುತ್ತಾನೆ. ಇಂದ್ರಿಯ ಗೋಚರವಾದುದು ಮಾತ್ರ ಸತ್ಯವಲ್ಲ. ಇಂದ್ರಿಯ ಗೋಚರವಾಗದಿದ್ದರೂ ಹೃದಯದಲ್ಲಿದ್ದು ನಾನು ಇಲ್ಲಿರುವೆ ಎಂದು ಜ್ಞಾಪಕ ಕೊಡುವ ಅಂತರ್ ದೃಷ್ಟಿಯೊಂದಿದೆ. ಆ ಜ್ಞಾನ ಜ್ಯೋತಿಯೇ ಕಲಾಕೃತಿಯನ್ನು ಒಳಿಯ ಕಾಗದ ಅಥವಾ ಕಲ್ಲಿನ ಗೊಂಬೆಯಾಗಿ ಮಾಡದೆ ನಮ್ಮ ಹೃದಯದಲ್ಲಿ ಎಂದೆಂದೂ ನಿಲ್ಲುವ ಶಾಶ್ವತ ಪರಮ ಸತ್ಯ ಕಲಾಕೃತಿಯಾಗಿ ಮಾಡುವುದು. ಕಲೆಯ ಮೂಲಕ ಪರಮಾತ್ಮನ ದರ್ಶನ ಇದೇ ಭಾರತೀಯ ಕಲೆಯ ಲಕ್ಷಣ" ಎಂದು ಕಲೆಯ ಕುರಿತು ಗೊರೂರು ರಾಮಸ್ವಾಮಿಯವರು ವಿವೇಚಿಸಿರುವರು.

ಶಿಲ್ಪಶಾಸ್ತ್ರ ಉತ್ತಮ ಕಲೆಗಳ ಒಂದು ಅಂಶ. ಕವಿಯಾಗಲಿ ಕಲಾವಿದನಾಗಲಿ ಕಲ್ಪನಾ ಸೌಂದರ್ಯವನ್ನು ತಾನು ಸೃಷ್ಟಿಸುವ ವಸ್ತುಗಳಲ್ಲಿ ಮೂಡಿಸಲು ಪ್ರಯತ್ನಿಸುತ್ತಾನೆ. [illegible] ದೇವಿಯನ್ನು ಆರಾಧಿಸುತ್ತಾನೆ. ಈ ಆರಾಧನೆಯಿಂದ ಹೊರ ಪ್ರಪಂಚದ ಸ್ವರೂಪವೇ ಬದಲಾಗುತ್ತದೆ. ಈ ವಿಶ್ವದ ಸೃಷ್ಟಿಕರ್ತೃ ಒಂದು ಶಕ್ತಿ. ಆ ಶಕ್ತಿಗೆ ವಿವಿಧ ಸ್ವರೂಪಗಳನ್ನು ಕೊಟ್ಟು ನಮ್ಮ ಪೂರ್ವಿಕರು ಆರಾಧಿಸುತ್ತಿದ್ದರು. ಆ ಸ್ವರೂಪಗಳನ್ನೆ ನಾವು ಇಂದು ಅಜಂತ ಎಲ್ಲೋರಗಳಲ್ಲಿ ಕಾಣುತ್ತೇವೆ.

ಐರೋಪ್ಯ ಶಿಲ್ಪಕಲಾ ತಜ್ಞರಾದ ಫರ್ಗುಸನ್ ಭಾರತದ ಕಲೆಯ ಬಗ್ಗೆ ತನ್ನ ಮೆಚ್ಚುಗೆಯನ್ನೂ ವಿಶ್ವಾಸವನ್ನು ವ್ಯಕ್ತಪಡಿಸಿರುವರು. ಭಾರತದ ಕಲಾವಿದರು ಎಲ್ಲರಿಗಿಂತಲೂ ಉದ್ದಾಮ ಪಂಡಿತರೆಂಬುದು ನಿರ್ವಿವಾದವೆಂದು ಅವರ ಭಾವನೆ.

ಪೂರ್ವಕಾಲದ ತಪೋವನಗಳು, ಸಾಮಗಾನ ಬೌದ್ಧರ ಮತ್ತು ಜೈನರ ಗೀತಗಳು ಅಜಂತ, ಎಲ್ಲೋರ, ಜೈಸಲ್ಮೇರ್, ಕಾಶಿ, ಉದಯಪುರ, ಮಹಾಬಲಿಪುರ, ಮಧುರೆ, ಭುವನೇಶ್ವರ, ಮಧುರಾ ಬೃಂದಾವನ, ದ್ವಾರಕೆ, ಬೇಲೂರು ಹಳೇಬೀಡುಗಳಲ್ಲಿರುವ ದೇವಸ್ಥಾನಗಳು ಇವುಗಳೆಲ್ಲಾ ನಮ್ಮ ಪ್ರಾಚೀನ ಶಿಲ್ಪಕಲೆಯ ಪ್ರತೀಕಗಳಾಗಿವೆ.

ಮಹಮ್ಮದೀಯರ ಆಳ್ವಿಕೆಯಲ್ಲಿ ಕೂಡಾ ಶಿಲ್ಪಕಲೆಯು ಬೆಳೆದಿರುತ್ತದೆ. ಮಸೀದಿಗಳ ಮೇಲಿನ ಗೋಪುರಗಳು, ತಾಜ್‌ಮಹಲ್, ಜುಮ್ಮಾ ಮಸೀದಿ, ಬಿಜಾಪುರದಲ್ಲಿರುವ ಗೋಲ್‌ಗುಂಬಜ್ ಮತ್ತಿತರ ಕಲಾಪೂರ್ಣಕ ವಸ್ತುಗಳು ಹಿಂದೂ-ಮುಸಲ್ಮಾನರ ಕಾಲದ ಕಲಾ ಕೌಶಲ್ಯವನ್ನು ತೋರಿಸುತ್ತದೆ.

ಆದರೆ ಇಂದು ನಾವು ನೋಡುವುದು ಕಲೆಯ ಮೂಲ ಸ್ವರೂಪವಲ್ಲ. ಆ ಕಲೆಯ ಅವಶೇಷಗಳನ್ನು ಮಾತ್ರ. ಈ ಅವಶೇಷಗಳನ್ನು ನೋಡಲೆಂದೇ ಪಾಶ್ಚಾತ್ಯರು ಪ್ರತಿವರ್ಷವೂ ತಂಡತಂಡವಾಗಿ ಭಾರತಕ್ಕೆ ಬರುತ್ತಾರೆ. ಪುರಾತನ ಕಾಲದ ಮನೆಗಳು, ಚಿತ್ರಕೆಲಸ, ಶಿಲ್ಪಕಲೆ, ಮತ್ತು ಮನವನೆಚ್ಚುವಂತಹ ವಸ್ತುಗಳನ್ನು ನೋಡಲೆಂದು ಭಾರತಕ್ಕೆ ಬರುತ್ತಾರೆ.

ಪ್ರಖ್ಯಾತ ಜರ್ಮನ್ ಕಲಾವಿಮರ್ಶಕ ಲಿಯಾನ್ ವಿ ಹರ್ಷ ಇತ್ತೀಚೆಗೆ ಭಾರತದ ಪ್ರಾಚೀನ ಕಲೆಯ ನೆಲೆವೀಡುಗಳನ್ನು ಸಂದರ್ಶಿಸಿದರು. ಅವರು ನಮ್ಮ ಕರ್ನಾಟಕದ ಬಾದಾಮಿ, ಐಹೊಳೆ, ಪಟ್ಟದಕಲ್ಲು ಹಾಗೂ ಹಂಪೆಗಳಿಗೂ ಬಂದಿದ್ದರು. ಅವರ ಅಭಿಪ್ರಾಯದಂತೆ ಐಹೊಳೆ, ಬಾದಾಮಿ, ಪಟ್ಟದಕಲ್ಲುಗಳ ಮೂಲಕ ಹಂಪೆಯಿಂದ ಬಿಜಾಪುರಕ್ಕೆ ಹೋಗುವ ಪ್ರದೇಶದಷ್ಟು ಕಲೆಯ ಶ್ರೀಮಂತ ಸಂಪತ್ತು ಭಾರತದ ಇತರ ಯಾವ ಭಾಗದಲ್ಲಿಯೂ ಇಲ್ಲ ಎಂದಿರುವರು. ಆದರೆ ಪ್ರವಾಸಿಕರಿಗೆ ಅವುಗಳನ್ನು ನೋಡಲು ಅನಾನುಕೂಲತೆಗಳು ಇಲ್ಲಿ ಬಹಳಷ್ಟು ಇನ್ನೆಲ್ಲಿಯೂ ದೊರಕಲಾರದಂತೆ.

ಹಳೇಬೀಡು, ಬೇಲೂರು, ಐಹೊಳೆ, ಪಟ್ಟದಕಲ್ಲು, ಬಾದಾಮಿ, ವಿಜಯನಗರ, ಇಟಗಿ, ಲಕ್ಕುಂಡಿ, ಕನಕಗಿರಿ, ಬನವಾಸಿ, ಗದಗು, ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ಮೂಡಬಿದ್ರೆ, ಕಾರ್ಕಳ, ಇವೇ ಮುಂತಾದ ಶ್ರೇಷ್ಠ ಶಿಲ್ಪಕಲಾ ಕೇಂದ್ರಗಳು ಕರ್ನಾಟಕದಲ್ಲಿ ಇವೆ. "ಪ್ರಕೃತಿಯಲ್ಲೂ, ಮಾನವನಲ್ಲೂ ಜೀವಜಂತುಗಳಲ್ಲೂ ನೈಸರ್ಗಿಕವಾದ ವಿಶ್ವಾಸವನ್ನಿಟ್ಟು ಲೋಕದ ಸೌಂದರ್ಯವನ್ನೂ ಭಗವಂತನ ಔದಾರ್ಯವನ್ನೂ ಜನಸಾಮಾನ್ಯರ ಸುಖದುಃಖಗಳನ್ನೂ ತಮ್ಮ ಹೃದಯದಲ್ಲಿ ಅನುಭವಿಸಿ ಆ ಮನೋಭಾವಗಳನ್ನು ಕಲ್ಲಿನಲ್ಲಿ ಒಡಮೂಡಿಸಿ, ಜೀವಂತಗೊಳಿಸಿದ ಶ್ರೇಯಸ್ಸು ಭಾರತದ ಶಿಲ್ಪಿಗಳಿಗೆ ಅದರಲ್ಲೂ ಕರ್ನಾಟಕದ ಶಿಲ್ಪಿಗಳಿಗಿತ್ತು.

ಇಂಥ ಶಿಲ್ಪಕಲೆಯನ್ನು ಉಳಿಸಿಕೊಂಡು ಬರುವಲ್ಲಿ ಸರಕಾರ ಹಾಗೂ ಜನತೆ ಹೆಚ್ಚಿನ ಶ್ರಮವಹಿಸುವುದು ಅವಶ್ಯ. ಶಿಲ್ಪಕಲಾ ಕೇಂದ್ರಗಳಿಗೆ ಅನುಕೂಲವಾದ ರೀತಿಯಲ್ಲಿ ಸಾರಿಗೆ ವ್ಯವಸ್ಥೆ ಮಾಡಿ ಹೆಚ್ಚೆಚ್ಚು ಪ್ರವಾಸಿಕರು ಬರುವಂತೆ ಮಾಡಿದರೆ ಭಾರತದ ಶಿಲ್ಪಕಲೆಯ ಅರಿವು ಸರಿಯಾಗಿಯಾದೀತು.

ಅಮೇರಿಕೆಯ ಅಧ್ಯಕ್ಷ ಐಸನ್‌ಹಾವರ್ ಮತ್ತು ಉಪಾಧ್ಯಕ್ಷ ಆರ್. ಎಂ. ನಿಕ್ಸನರು ಹಂಗೇರಿಯ ಸಮಸ್ಯೆಯ ಕುರಿತಾಗಿ ಮಾತಾಡಿಕೊಳ್ಳುತ್ತಿದ್ದಾರೆ.

ಕಾಶ್ಮೀರ ಸಮಸ್ಯೆಗೆ

ಗೃಹಾಮರ ಆಗಮನವೇಕೆ?

ನವದೆಹಲಿಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಕಾಶ್ಮೀರ ಪ್ರಶ್ನೆಯ ಕುರಿತಾದ ಪರ್ಯಾಲೋಚನೆಗಾಗಿ ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಯಾಗಿ ಬರಲಿರುವ ಡಾ ಗೃಹಾಮರ ಆಗಮನದ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ಸ್ವೀಕರಿಸಿ ಅದರಲ್ಲಿ ಕಾಶ್ಮೀರದಲ್ಲಿ ಪಾಕಿಸ್ತಾನದ ಆಕ್ರಮಣವು ಸಂಪೂರ್ಣ ಸಮಾಪ್ತವಾಗಿ ಭಾರತ ಮತ್ತು ಕಾಶ್ಮೀರಗಳ ಏಕೀಕರಣವೇ ಅಂತಿಮ ನಿರ್ಣಯವಾಗುವ ವರೆಗೆ ಕಾಶ್ಮೀರ ಸಮಸ್ಯೆಯ ಪರಿಹಾರವ ಗಲಾರದೆಂದು ಹೇಳಲಾಗಿದೆ.

ದಿಲ್ಲಿಯ ಪ್ರಜಾ ಸಮಾಜವಾದೀ ದಳದ ಅಧ್ಯಕ್ಷ ಶ್ರೀ ಮೀರ ಮುಷ್ತಾಕ ಅಹಮದರು ಈ ಸಭೆಯ ಅಧ್ಯಕ್ಷರಾಗಿದ್ದರು. ಕಾಶ್ಮೀರ ಸಮಿತಿ ದಿಲ್ಲಿಯ ತತ್ವಾವಧಾನದಲ್ಲಿ ಮೇಲಿನ ಸಭೆಯು ಸಂಯೋಜಿತವಾಗಿತ್ತು. ಕಾಶ್ಮೀರ ಸಮಿತಿಯು ಸರ್ವಪಕ್ಷೀಯ ಸಂಘಟನೆಯಾಗಿದೆ. ಸಭೆಯಲ್ಲಿ ಸಂಸತ್ಸದಸ್ಯ ಮೌಲಾನಾ ಹಫೀಜ ರೃಹಮಾನ ಮತ್ತು ಬೊಂಬಾಯಿಯ ಮಾಜಿ ಮೇಯರರಾದ ಶ್ರೀ ಸಾಲೇಭಾಯಿ ಅಬ್ದುಲ್ ಖಾದರರು ಭಾಷಣವಿತ್ತರು.

(ಅನೇ ಪುಟ ನೋಡಿರಿ)

ವಾಡಿಕೆಯಂತೆ ನವಯುಗದ ಪ್ರಜಾರಾಜ್ಯ ವಿಶೇಷ ಸಂಚಿಕೆ

(ರಿಪಬ್ಲಿಕ್ ಡೇ ಸ್ಪೆಶ್ಯಲ್)

ಜನವರಿ ಕೊನೆಯ ವಾರದಲ್ಲಿ ಪ್ರಕಟವಾಗುವುದು.

ಈ ಸಂಚಿಕೆಯಲ್ಲಿ ಡಾ। ಕೆ ಕೃಷ್ಣಮೂರ್ತಿ, ಎಂ. ಎ., ಬಿ ಟಿ, ಪಿಎಚ್.ಡಿ ; ಶ್ರೀಗಳಾದ ಮಂಜೇಶ್ವರ ಗೋವಿಂದ ಪೈ, ಬಿ. ಎ ; "ಹೊಯಿಸಳ", ಯು ನಾ ಉಡುಪ, ವಿದ್ವಾನ್; ಎ. ಎಸ್. ರಾಮಕೃಷ್ಣ, ವಿದ್ವಾನ್ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ ; ಸಂಜೀವ ಲಕ್ಷ್ಮೇಶ್ವರ, ಬಿ. ಎ , ಎಸ್ ವೆಂಕಟರಾಜ, ಸೇವ ನಮಿರಾಜ ಮಲ್ಲ, ಎಂ. ಎ , ಬಿ. ಎಲ್., ಪ್ರೊ. ರಂ ಶ್ರೀ ಮುಗಳಿ, ಎಂ ಎ., ಬಿ. ಟಿ ಡಿ ಲಿಟ್, ವಿಘ್ನೇಶ್ವರ ಶರ್ಮ, ತದ್ವಲಸೆ; ಮಂಗಳೂರು ಜಾರಪ್ಪ; ಮೋಹನ ಮುತಾಲಿಕ, ಬೈಕಾಡಿ ವೆಂಕಟಕೃಷ್ಣರಾವ್ ಮೊದಲಾದವರ ಲೇಖನ ಕವನಗಳು ಬರಲಿರುವವು.

ಜಾಹೀರಾತುದಾರರು ತಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ನವಯುಗ ವಾರಪತ್ರಿಕೆ, ಉಡುಪಿ.

ಪ್ರತಿಯೊಬ್ಬನಲ್ಲಿಯೂ ಬೇಂಕು ಮನೋಭಾವನೆಯನ್ನು ಬೆಳೆಸಿ, ತನ್ನ ಪ್ರತಿಯೊಂದು ಹಣದ ವ್ಯವಹಾರವನ್ನೂ ಆತನು ಬೇಂಕುಗಳ ಮೂಲಕ ನಡೆಸುವಂತಾಗಬೇಕೆಂದೇ ನಮ್ಮ ಆಶಯ. ಅಂತೆಯೆ ನಾವು ಪ್ರತಿಯೊಬ್ಬನಿಗೂ ಅನುಕೂಲವಾಗುವಂತೆ ಹಲವಾರು ಉಳಿತಾಯ ಯೋಜನೆಗಳನ್ನು ಕೈಗೊಂಡಿದ್ದೇವೆ. ನಿಮಗೆ ಅನುಕೂಲವಿರುವ ಯೋಜನೆಯೊಂದನ್ನು ಇಂದೇ ಆರಿಸಿಕೊಳ್ಳಿರಿ!

ದಕ್ಷಿಣ ಭಾರತದ **5** ಸಂಸ್ಥಾನಗಳಲ್ಲಿ ಒಟ್ಟು **49** ಶಾಖೆಗಳು ಈ ಶೆಡ್ಯೂಲ್ಡ್ ಬೇಂಕಿಗಿದ್ದು, ಬೇಂಕು ಉದ್ದಿಮೆಯಲ್ಲಿ ಇದಕ್ಕೆ **51** ವರುಷಗಳಿಗೂ ಮೀರಿದ ಅನುಭವವಿದೆ!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಫೋನ ನಂಬ್ರ 21-A

ಪ್ರಧಾನ ಕಾರ್ಯಾಲಯ: ಉಡುಪಿ (ದ ಭಾರತ)

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೬-೧-'೫೭	೧೬

ಡೊಂಬರಾಟವೇಕೆ?

ಹಂಸಭಾವಿಯಲ್ಲಿ ಕಳೆದ ವಾರ ಸೇರಿದ ಅಖಿಲಭಾರತ ಮೂಲ ಶಿಕ್ಷಣ ಪರಿಷತ್ತಿನಲ್ಲಿ ಆಚಾರ್ಯ ವಿನೋಬಾ ಭಾವೆಯವರು ಮೂಲ ಶಿಕ್ಷಣದ ಕುರಿತಾಗಿ ಉದ್ಗರಿಸಿದ ಮಾತುಗಳು ಮನನೀಯವೂ ಅಮೂಲ್ಯವೂ ಆಗಿರುತ್ತವೆ. ಮೂಲ ಶಿಕ್ಷಣವೆನ್ನುವುದು ಇನ್ನೂ ಜನಾದರಣೆಗೆ ಪಾತ್ರವಾಗಿಲ್ಲವೆಂಬ ಮಾತು ನಿರ್ವಿವಾದ. ಭಾರತೀಯರ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರು ಸ್ವರಾಜ್ಯ ಪ್ರಾಪ್ತಿಗಾಗಿ ಕೈಗೊಂಡ ಅಹಿಂಸೆ ಮತ್ತು ಸತ್ಯಗಳ ಆಧಾರದ ಮೇಲೆ ಸ್ಥಿರವಾಗಿ ನಿಂತ ಸತ್ಯಾಗ್ರಹವೆಂಬ ರಕ್ತ ಸುರಿಸದ ಅಮೂಲ್ಯಾಸ್ತ್ರದ ಸಂಶೋಧನೆಯಂತೆಯೇ ಬ್ರಿಟಿಷ ಆಳರಸರ ಗುಲಾಮಗಿರಿಯಲ್ಲಿ ನವೆದು— ಅವರ ಗುಲಾಮಗಿರಿಯಲ್ಲಿ ಶಾಶ್ವತವಾಗಿ ಬಂಧಿಗಳಾಗುವಂತೆ ಸಂಯೋಜಿಸಲಾದ ವಿದ್ಯಾಪದ್ಧತಿಯ ಪ್ರತಿಯಾಗಿ ಭಾರತೀಯರ ನಿತ್ಯಾವಶ್ಯಕತೆ, ಸನ್ನಿವೇಶ ಹಾಗೂ ಅಭಿರುಚಿಗೆ ಒಗ್ಗಿಕೊಳ್ಳುವಂತಾದ ಶಿಕ್ಷಣದ ವಿಧಾನವನ್ನು ಪ್ರಚಾರಕ್ಕೆ ತಂದರು. ಪಾಶ್ಚಾತ್ಯರ ಅಂಧಾನುಕರಣೆಯನ್ನು ಮಾಡಿ, ಪಾಶ್ಚಾತ್ಯರನ್ನೇ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅನುಕರಿಸುವ ಕೆಲವರಿಗೆ ಈ ಶಿಕ್ಷಣ ಕ್ರಮವು ಒಗ್ಗದೆ ಹೋದರೂ, ಗಾಂಧೀಜಿ ವಾರ್ಧಾದಲ್ಲಿ ಇದರ ಪ್ರತ್ಯಕ್ಷ ಪಾಠವನ್ನು ನಡೆಸಿ ಅದು ಭಾರತಕ್ಕೆ ಯೋಗ್ಯವಾದ ಪದ್ಧತಿಯೆಂಬುದನ್ನು ಪ್ರಮಾಣೀಕರಿಸಿದರು. ಭಾರತವು ಸ್ವತಂತ್ರವಾದ ಮೇಲೆ, ಭಾರತೀಯ ನಾಯಕರ ಮನಸ್ಸು ಈ ಮೂಲ ಶಿಕ್ಷಣದತ್ತ ಸರಿಯಿತು; ಮತ್ತು ಅದಕ್ಕೆ ಸರಕಾರದ ಬೆಂಬಲವೂ ದೊರೆಯಿತು.

ಭಾರತದಂತಹ ದೇಶಕ್ಕೆ ನಿಜವಾಗಿಯೂ ಬೇಕಾದುದು ಶಿಕ್ಷಣದೊಂದಿಗೆ ತಂತಮ್ಮ ಜೀವನಕ್ಕೆ ಉಪಯೋಗಕರವಾದ, ಉತ್ಪಾದನೆಯನ್ನು ಕೊಡಬಹುದಾದ ವೃತ್ತಿಯ ಅಭ್ಯಾಸ. ಇಂದು ನಮ್ಮ ಕೆಲವೇ ಬುನಾದಿ ಶಾಲೆಗಳನ್ನುಳಿದ ಶಾಲೆಗಳಲ್ಲಿ ದೊರೆಯುವ ವಿದ್ಯೆ ವಿದ್ಯಾರ್ಥಿಗಳಿಗೆ ಕೇವಲ ಗಣಿತ, ಭಾಷೆ, ವಿಜ್ಞಾನ ಇತ್ಯಾದಿಗಳಲ್ಲಿ ಜ್ಞಾನವನ್ನು ಒದಗಿಸಿಕೊಡುತ್ತದೆ ಈ ವಿದ್ಯೆಯು ವಿದ್ಯಾರ್ಥಿಯು ಮುಂದಕ್ಕೆ ತನ್ನ ಜೀವನ ನಿರ್ವಾಹಕ್ಕಾಗಿ ಹೋರಾಡುವ ವೇಳೆಯಲ್ಲಿಯೂ ಪುದೇ ಉಪಯೋಗಕ್ಕೆ ಬರುವುದಿಲ್ಲ. ಅವರ ವಿದ್ಯೆ ನಿರುಪಯೋಗಿಯಾಗಿಯೇ ಪರಿಣಮಿಸುತ್ತದೆ. ತಾವು ಒಂದೊಂದು ಉದ್ಯೋಗವನ್ನು ಕಂಡುಕೊಂಡಾಗ, ಈ ಉದ್ಯೋಗದ ವಿಶೇಷ ಮಾಹಿತಿಯನ್ನು ಅವರು ಪಡೆದುಕೊಳ್ಳಬೇಕಾಗುವುದು; ಆಗ ಕಲಿತ ವಿದ್ಯೆಯಿಂದ ಏನು ಹೆಚ್ಚಿನ ಪ್ರಯೋಜನವಾದಂತಾಯಿತು? ಹೆಚ್ಚೆಂದರೆ, ಅದು ಅಸಂಸ್ಕೃತನಾದವನನ್ನು (ಸು) ಸಂಸ್ಕೃತನಾಗುವಷ್ಟು ಪರಿಣಾಮವನ್ನುಂಟು ಮಾಡೀತು; ಅಷ್ಟೆ. ಹಾಗಿರುವಾಗ, ನಮ್ಮವರ ಜೀವನಕ್ಕೆ ಉಪಯೋಗಿಯಾಗಬಹುದಾದ ವಿದ್ಯೆಯನ್ನೇ ನಾವು ನಮ್ಮ ಮುಂದಿನ ಜನಾಂಗಕ್ಕೆ ಇಂದು ನೀಡಬೇಡವೆ? ಈ ಕಾರ್ಯದಲ್ಲಿ ಬುನಾದಿ ಶಿಕ್ಷಣವು ನಮಗೆ ನೆರವಾಗಬಲ್ಲುದು.

"ಮಾನವನನ್ನು ಪ್ರಕೃತಿಯತ್ತ ತೀರ ಸಮೀಪಗತನನ್ನಾಗಿಸುವ, ಆತನನ್ನು ಸ್ವಾವಲಂಬಿಯನ್ನಾಗಿ ಮಾಡುವ ನಿರ್ಭೀತನನ್ನಾಗಿಸಿ ರಕ್ಷಣಾ ವೆಚ್ಚವನ್ನು ತಗ್ಗಿಸುವ ಮತ್ತು ಜ್ಞಾನಕ್ರಿಯೆಗಳಲ್ಲಿ ಸಮನ್ವಯವನ್ನು ಸಾಧಿಸುವ ಶಿಕ್ಷಣವೇ ಮೂಲ ಶಿಕ್ಷಣ"ವೆಂದು ಆಚಾರ್ಯ ವಿನೋಬಾ ಹೇಳಿದರು. ಈ ಮೂಲ ಶಿಕ್ಷಣಕ್ರಮವು ಭಾರತೀಯರಿಗೆ ಹೊಸತಲ್ಲ; ಪ್ರಾಚೀನ ಕಾಲದ್ದೇ ಆಗಿದೆ. ನಾವು ಪುರಾಣೇತಿಹಾಸಗಳಲ್ಲಿ ಗುರ್ವಾಶ್ರಮಗಳ ಕುರಿತು ಓದುತ್ತೇವೆ. ಅಲ್ಲಿ ವಿದ್ಯಾರ್ಥಿಗಳಿಗೆ ಗಣಿತ, ದರ್ಶನಾದಿಗಳ ಪಾಠ ಪ್ರವಚನಗಳು ನಡೆಯುತ್ತಿದ್ದುವಲ್ಲದೇ ಶಿಷ್ಯರ ಮುಂದಿನ ಜೀವನಕ್ಕೆ ಅತ್ಯಾವಶ್ಯಕವೆನಿಸಿದ ವ್ಯಾವಹಾರಿಕ ಶಿಕ್ಷಣವೂ ಕೊಡಲ್ಪಡುತ್ತಿದ್ದಿತಂತೆ. ಶಿಷ್ಯರೆಲ್ಲರೂ ಒಂದು ಸೇರಿ ಗುರುವಿನ ಹಾಗೂ ಆಶ್ರಮದ ಸಕಲ ಕಾರ್ಯಗಳನ್ನೂ ಮಾಡಬೇಕಾಗಿದ್ದಿತಂತೆ. ಜ್ಞಾನಾಂಗಗಳೊಳಗೆ ತಾಂತ್ರಿಕಾಂಗ ಹಾಗೂ ವ್ಯಾವಹಾರಿಕಾಂಗಗಳ ಬಗ್ಗೆಯೂ ಅವರವರ ವರ್ಣಾನುಗುಣವಾಗಿ ವಿದ್ಯೆಯು ಗುರುಗಳಿಂದ ಕೊಡಲ್ಪಡುತ್ತಿತ್ತಂತೆ. ಗುರು ಮನೆ—ಅರಮನೆಗಳು ದೂರ ದೂರದಲ್ಲಿದ್ದಿದ್ದರೂ, ಅರಸರು ಆಶ್ರಮಗಳಿಗೆ ದತ್ತಿದಾನಗಳನ್ನೂ ಸಹಾಯವನ್ನೂ ಕೊಡುತ್ತಿದ್ದರು. ಹಾಗಾಗಿ ಆಶ್ರಮಗಳ ಕಾರ್ಯಕಲಾಪಗಳು ನಿರ್ವಿಘ್ನವಾಗಿ ಸಮಂಜಸವಾಗಿ ನಡೆಯುತ್ತಿದ್ದುವು. ಅದನ್ನೇ ಜೀವನ ಶಿಕ್ಷಣವೆನ್ನುವುದು. ಅದೇ ಮಾನವನ ಸರ್ವಾವಶ್ಯಕತೆಗಳನ್ನು ಪೂರಯಿಸಿ ಆತನು ಮುಂದೆ ಜೀವನ ರಂಗದಲ್ಲಿ ಎದುರಿಸಬೇಕಾದ ಎಡರು ತೊಡರುಗಳನ್ನು ಧೈರ್ಯದಿಂದ ಭೇದಿಸಬಲ್ಲ ಸುಗಮವಾಗಿ ಜೀವನ ನಿರ್ವಾಹಣವನ್ನು ಮಾಡಬಲ್ಲ ಶಕ್ತಿಯನ್ನಾತನಿಗೆ ನೀಡುತ್ತಿತ್ತು.

ಆದರೆ, ಇದೀಗ ನಮ್ಮಲ್ಲಿ ಪ್ರಚಲಿತವಿರುವ ಬುನಾದಿ ಶಾಲೆಗಳಲ್ಲಿ ಕೊಡಲಾಗುತ್ತಿರುವ ವಿದ್ಯೆ ಮೂಲ ಶಿಕ್ಷಣವೆ? ಎಂದು ಪ್ರಶ್ನಿಸಬೇಕಾಗುತ್ತದೆ. ಯೋಗ್ಯ ಸಲಕರಣೆಗಳು, ಸಾಧನ ಸಾಮಗ್ರಿಗಳ ಅಭಾವದಿಂದ ಏನು ಮಾಡಲಾದೀತು? ನಮ್ಮ ಸರಕಾರ ಶಾಲೆಗಳನ್ನು ಮೂಲ ಶಿಕ್ಷಣ ಶಾಲೆಗಳನ್ನಾಗಿ ಮಾರ್ಪಡಿಸಲು ಉತ್ಸುಕತೆಯುಳ್ಳದ್ದಿರುವಂತೆಯೇ ಅದರ ಸಫಲತೆಗೆ ಬೇಕಾಗುವ ಸಲಕರಣೆಗಳನ್ನು ಒದಗಿಸುವಲ್ಲಿ ನಿರುತ್ಸಾಹಿಯಂತೆಯೇ ಕೆಲಸ ಮಾಡುತ್ತಿದೆ. ಹಾಗಾಗಿ, ಶ್ರೀ ದೇಶಮುಖರೊಮ್ಮೆ ಉದ್ಗರಿಸಿದಂತೆ, ರಾತ್ರೆ ಬೆಳಗಾಗುವುದರೊಳಗೆ ಸಾಮಾನ್ಯ ಶಾಲೆಗಳು ಬುನಾದಿ ಶಾಲೆಗಳಾಗುತ್ತವೆಯಷ್ಟೆ. ಆದರೆ ಅದರಿಂದ ಪ್ರಯೋಜನವಿಲ್ಲ, ನಮಗಿಂದು ಬುನಾದಿ ಶಾಲೆಗಳ ನಾಮಫಲಕ ಬೇಕಾದುದಲ್ಲ, ಶಾಲೆಯೊಳಗಣ ವಿದ್ಯೆ ಜೀವನೋಪಯೋಗಿಯಾಗಿರುವುದು ಮುಖ್ಯ. ಅದಕ್ಕಾಗಿ ಬೇಕಾದ ಸಲಕರಣೆಗಳನ್ನು, ಭೂಮಿಯನ್ನು ಒದಗಿಸುವತ್ತ ದೃಷ್ಟಿ ಹರಿಸಬೇಕು. ಅಂತಹುವನ್ನು ಒದಗಿಸಬಹುದಾದ ಸಾಧ್ಯತೆಯ ಪ್ರಮಾಣಕ್ಕನುಗುಣವಾದ ಸಂಖ್ಯೆಯಷ್ಟೇ ಶಾಲೆಗಳನ್ನು ಪ್ರಕೃತ ಪರಿವರ್ತನೆ ಮಾಡಿ ಜನತೆಯಲ್ಲಿ ಆ ಬಗ್ಗೆ ಉತ್ಸಾಹವೂ ಆಸಕ್ತಿಯೂ ಹುಟ್ಟುವಂತೆ ಮಾಡಬೇಕಲ್ಲವೆ; ಕೇವಲ ಪರಿವರ್ತನೆಯನ್ನೇ ನಮ್ಮ ಪ್ರಮುಖ ಉದ್ದೇಶವನ್ನಾಗಿರಿಸಬಾರದು. ಅದಾಗಲೇ ಯೋಗ್ಯವೂ ಜನಾದರಣೀಯವೂ; ಉಪಯುಕ್ತವೂ ಆದ ವಿದ್ಯೆಯಾದೀತು; ಅಧ್ಯಾಪಕರನ್ನು ಸಂಪೂರ್ಣವಾಗಿ ಇತ್ತ ಆಕರ್ಷಿಸಿ ಅತ್ಯುತ್ತಮ ಶಿಕ್ಷಣ ಮಟ್ಟವನ್ನೂ ಇರಿಸಿಕೊಳ್ಳಬಹುದು; ಹೊರತು ಈಗಿನಂತೆ ಸಲಕರಣಾಹೀನ ಬುನಾದಿ ಶಾಲೆಗಳೆಂದರೆ, ಡೊಂಬರಾಟದ ಬಯಲಾದೀತು ಅಷ್ಟೆ. ಈ ಡೊಂಬರಾಟದಿಂದ ಮಾನವನೇನು ಕಲಿತಂತಾಗಬಹುದು? ಜನತೆಯೂ, ಮುಖ್ಯವಾಗಿ ಸರಕಾರವೂ ವಿನೋಬಾರ ಮಾತುಗಳನ್ನು ಅರ್ಥಮಾಡಿಕೊಂಡು ಈ ದಿಸೆಯಲ್ಲಿ ತೀವ್ರ ಗಮನವನ್ನು ಹರಿಸಿ ನಮ್ಮ ಶಿಕ್ಷಣವನ್ನು ಜೀವನೋಪಯೋಗಿಯನ್ನಾಗಿಸುವಲ್ಲಿ ಹೆಣಗಬೇಕೆಂದು ಸೂಚಿಸಿದರೆ ಹೆಚ್ಚಾಗಲಾರದು.

ಪರ್ಯಾಯ ಮಹೋತ್ಸವ

ಪರ್ಯಾಯ ಒಂದು ಮಹತ್ವದ ವೈಭವಯುಕ್ತವಾದ ಉತ್ಸವ. ಉಡುಪಿ ನಗರದ ವೈಶಿಷ್ಟ್ಯಗಳಲ್ಲಿ ಈ ಪರ್ಯಾಯ ಸಮಾರಂಭವೂ ಒಂದು. ಉಡುಪಿಯ ಅಷ್ಟಮಠಗಳು ಎರಡೆರಡು ವರ್ಷಗಳಿಗೊಮ್ಮೆ ಶ್ರೀಕೃಷ್ಣನ ಪೂಜಾಭಾರವನ್ನು ಹೊರುತ್ತವೆ. ಕಳೆದ ಎರಡು ವರ್ಷಗಳ ಕಾಲ ಶ್ರೀಕೃಷ್ಣನ ಪೂಜಾರಾಧನೆಯಲ್ಲಿ ನಿರತರಾಗಿ ಅತ್ಯುತ್ತಮ ರೀತಿಯಲ್ಲಿ ತಮ್ಮ ಪರ್ಯಾಯವನ್ನು ಮುಗಿಸಿ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಶ್ರೀ ಪಾದಂಗಳವರು ಪರ್ಯಾಯಪೀಠದಿಂದ ಇಳಿದು ಶ್ರೀಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ಆ ಪೀಠವನ್ನು ಇದೇ ತಾ. ೧೭ರಂದು ಆರೋಹಣ ಮಾಡಲಿರುವರು. ಧರ್ಮಪ್ರಚಾರದಲ್ಲಿ ನಿರತರಾಗಿರುವುದಲ್ಲದೆ ಕಲೆ ಸಾಹಿತ್ಯಾದಿಗಳಿಗೂ ಈ ಮಠಗಳು ಪ್ರೋತ್ಸಾಹ ನೀಡುತ್ತಿರುವುವು. ಉಡುಪಿ ಕೀರ್ತಿಯು ಕಳೆದ ಪರ್ಯಾಯದಲ್ಲಿ ಮತ್ತಷ್ಟು ಹೆಚ್ಚಿತು ಈ ಕೀರ್ತಿಯು ಇನ್ನೂ ಮುಂದಿನ ಪರ್ಯಾಯಾವಧಿಯಲ್ಲಿ ಪ್ರವರ್ಧಿಸುವುದರಲ್ಲಿ ಸಂದೇಹವಿಲ್ಲ. ಜನಮನಗಳಿಗೆ ಈ ಪರ್ಯಾಯವು ತೃಪ್ತಿಯನ್ನೂ ಜನತೆಗೆ ಮಂಗಲವನ್ನೂ ಒದಗಿಸಲೆಂದೂ 'ಸತ್ಯಂ ಶಿವಂ, ಸುಂದರಂ' ಎನಿಸಿದ ಪರಮಾತ್ಮನು ಸರ್ವರಿಗೂ ಶ್ರೇಯಸ್ಸನ್ನುಂಟುಮಾಡಲಿ ಎಂದೂ ಪ್ರಾರ್ಥಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಮೂಲ ಶಿಕ್ಷಣಾಧಿವೇಶನ

ಜನವರಿ ೭ರಿಂದ ೯ರ ವರೆಗೆ ಮೈಸೂರಿನ ಹಂಸಭಾವಿಯಲ್ಲಿ ಮೂಲ ಶಿಕ್ಷಣವನ್ನು ಕುರಿತಾದ ವಿಚಾರ ಗೋಷ್ಠಿಯು ನಡೆಯಿತು. ಮೂಲ ಶಿಕ್ಷಣದ ಅಭಿವೃದ್ಧಿಯಲ್ಲಿ ಎದುರಿಸಬೇಕಾದ ವಿವಿಧ ಅಡಚಣೆ, ಹಣಕಾಸು ಮತ್ತಿತರ ತೊಂದರೆಗಳು, ಮೂಲ ಶಿಕ್ಷಣದ ತಂತ್ರಗಳು, ಮೂಲ ಶಿಕ್ಷಣದ ಅಭಿವೃದ್ಧಿ ಇವೇ ಮೊದಲಾದ ವಿಷಯಗಳನ್ನು ಈ ವಿಚಾರಗೋಷ್ಠಿಯಲ್ಲಿ ಸಮಾಲೋಚಿಸಲಾಯಿತು. ಆಚಾರ್ಯ ವಿನೋಬಾರವರು ಈ ಸಮ್ಮೇಳನದಲ್ಲಿ ಮಾತನಾಡುತ್ತ ನಿಸರ್ಗಕ್ಕೆ ಸಮೀಪಗತನನ್ನಾಗಿ ಮಾನವನನ್ನು ತರುವುದರಲ್ಲಿ ಈ ಮೂಲ ಶಿಕ್ಷಣವು ನೆರವಾಗುವುದೆಂದು ಅಭಿಪ್ರಾಯಪಟ್ಟರು. ನಿರ್ಭೀತನಾಗಿ ಸ್ವಾವಲಂಬಿಯಾಗಿ ಬಾಳಲು ಮೂಲ ಶಿಕ್ಷಣವೇ ತಾರಕವೆಂಬುದಾಗಿಯೂ ಅವರು ಹೇಳಿದರು.

ಸರ್ವೋದಯ ಸಮ್ಮೇಳನ

ಏಳನೆಯ ಅಖಿಲ ಭಾರತ ಸರ್ವೋದಯ ಸಮ್ಮೇಳನವನ್ನು ಎಪ್ರಿಲ ಕೊನೆಯ ವಾರದಲ್ಲಿ ಕೊಲ್ಲಾಪುರದಲ್ಲಿ ಸೇರಿಸಲಾಗುವುದೆಂದು ತಿಳಿದುಬಂದಿದೆ. ಆಚಾರ್ಯ ವಿನೋಬಾ ಭಾವೆಯವರ ಹಿರಿತನದಲ್ಲಿ ನಡೆಯಲಿರುವ ಈ ಸಮ್ಮೇಳನದಲ್ಲಿ ಭಾಗವಹಿಸಲು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ ಮತ್ತು ಪ್ರಧಾನಿ ಪಂ. ಜವಾಹರಲಾಲ ನೆಹರೂರವರನ್ನು ಆಮಂತ್ರಿಸಲಾಗಿರುವುದಾಗಿಯೂ ಗೊತ್ತಾಗಿದೆ. ಆಚಾರ್ಯ ಭಾವೆಯವರು ಫೆಬ್ರವರಿ ತಿಂಗಳಲ್ಲಿ ಮಹಾರಾಷ್ಟ್ರದಲ್ಲಿ ಭೂದಾನ ಪಾದಯಾತ್ರೆಯನ್ನಾರಂಭಿಸಲಿರುವರು.

ಕಾಂಗ್ರೆಸ್ ಅಧಿವೇಶನ

ಗೌಹಾತಿಯ ಪ್ರಾಗ್ಜ್ಯೋತಿಷಪುರದಲ್ಲಿ ದಿನಾಂಕ ೧೯ರಿಂದ ಅಖಿಲ ಭಾರತ ಕಾಂಗ್ರೆಸ್ಸಿನ ೬೨ನೆ ಅಧಿವೇಶನವು ಜರಗಲು ಪ್ರಾರಂಭವಾಗಿದೆ. ಇದು ೨೦ನೆ ತಾರೀಕಿನ ವರೆಗೆ ನಡೆಯಲಿದ್ದು ವಿವಿಧ ಕಾರ್ಯಕ್ರಮಗಳಿಂದ ಕೂಡಿರುತ್ತದೆ. ಅಧಿವೇಶನದ ಪ್ರಾರಂಭದಲ್ಲಿ ನಡೆಯಲಿರುವ ಅಧ್ಯಕ್ಷರ ಮೆರವಣಿಗೆಯಲ್ಲಿ ೬೨ನೆಯ ಅಧಿವೇಶನದ ಕುರುಹಾಗಿ ೬೨ ಆನೆಗಳನ್ನು ಹೊರಡಿಸಲಾಗಿತ್ತು.

ಮೈಸೂರಿನ ಪ್ರತಿನಿಧಿಗಳು

ಈ ಸಮ್ಮೇಳನದಲ್ಲಿ ಭಾಗ ವಹಿಸಲು ವಿವಿಧ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳಿಂದ ಆರಿಸಲಾದ ಎ. ಐ. ಸಿ.ಸಿ. ಸದಸ್ಯರಿಗೆ ಅಧಿಕಾರವಿರುತ್ತದೆ. ಆದರೆ, ಮೈಸೂ

ಚಂದಾದಾರರಲ್ಲಿ ವಿನಂತಿ

ವಿ. ಪಿ. ಮಾಡಿದರೆ ಹನ್ನೆರಡಾಣೆಯಷ್ಟು ಹೆಚ್ಚಿಗೆ ಬೀಳುವುದರಿಂದ ನಮ್ಮ ಚಂದಾದಾರರು ತಮ್ಮ ಬಾಕಿ ಚಂದಾ ಹಣವನ್ನು ದಯಮಾಡಿ ಮನಿಯಾರ್ಡರು ಮಾಡಬೇಕಾಗಿ ಕೇಳಿಕೊಳ್ಳುತ್ತೇವೆ ಬೇಗನೆ ಚಂದಾ ಕಳುಹಿಸಿ ಸಹಕರಿಸಬೇಕಾಗಿ ವಿನಂತಿ.

ಮೆನೇಜರ್.

ರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯು ಎ. ಐ. ಸಿ.ಸಿ. ಸದಸ್ಯರನ್ನು ಆರಿಸಲಿದ್ದ ದಿನಾಂಕ ೧೦ರಂದು ಅನ್ಯಕಾರಣಗಳಿಂದ ಸೇರಲಿಲ್ಲ. ಹೀಗಾಗಿ ಮೈಸೂರು ಈ ಅ. ಭಾ. ಕಾಂ. ಸಮ್ಮೇಳನದಲ್ಲಿ ಭಾಗ ವಹಿಸುವುದು ಅಸಾಧ್ಯವಾಗಿ ಪರಿಣಮಿಸಿತ್ತು. ಆದರೂ,ಈಗಿನ ಎ. ಐ. ಸಿ ಸಿ. ಸದಸ್ಯರೇ ಭಾಗ ವಹಿಸುವಂತೆ ಶಕ್ಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿರುವುದೆಂದು ಹೇಳಲಾಗಿದೆ.

ಹಿಂದಿ ಹೇರಬಾರದು

ಭಾರತದಲ್ಲಿ ಇಂಗ್ಲಿಷಿಗೆ ಬದಲಾಗಿ ಹಿಂದಿಯನ್ನು ಸರಕಾರೀ ಭಾಷೆಯನ್ನಾಗಿ ಮಾಡುವುದು ತೀರ ಅಕಾಲಿಕವಾಗಿರವುದಲ್ಲದೆ ಅದರಿಂದ ಬಹುಸಂಖ್ಯಾಕ ಜನರಿಗೆ ಅನ್ಯಾಯಮಾಡಿದಂತಾಗುವುದು ಎಂದು ಶ್ರೀ ರಾಜಾಜಿ ಒಕ್ಕೂಟ ಭಾಷಾ ಪರಿಷತ್ತಿನ ನೇತೃತ್ವದಲ್ಲಿ ಸೇರಿದ್ದ ಸಾರ್ವಜನಿಕ ಸಭೆಯಲ್ಲಿ ಸ್ಪಷ್ಟಪಡಿಸಿದರು: "ಕೇಂದ್ರದಲ್ಲಿರುವ ಸ್ಥಳೀಯರಾದ ಕೆಲವು ಗುಂಪುಗಳು ಹಿಂದಿ ಸರಕಾರಿ ಭಾಷೆಯಾಗಬೇಕೆನ್ನುತ್ತಿವೆ ಈ ಗುಂಪುಗಳು ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಆಗ್ರಾಗಳಲ್ಲಿ ಹುಟ್ಟಿದ್ದು ಭಾರತೀಯರಲ್ಲಿ ನೇಕಡಾ ೪೦ರಷ್ಟಿದೆ. ಈಗ ೯೬ರೊಳಗೆ ಹಿಂದಿಯನ್ನು ಸರಕಾರಿ ಭಾಷೆಯನ್ನಾಗಿ ಮಾಡುವುದು ಅವ್ಯವಹಾರ್ಯ ಮತ್ತು ಅಸಾಧ್ಯವೆಂದು ಒಪ್ಪಿಕೊಂಡಂತಾಗಿದೆ. ಆದರೂ ಅಲ್ಪ ಸಂಖ್ಯಾಕರ ಭಾಷೆಯನ್ನು ಬಹುಸಂಖ್ಯಾಕರ ಮೇಲೆ ಹೊರಿಸುವುದು ಯೋಗ್ಯವಲ್ಲ'' ಎಂದವರು ನುಡಿದಿದ್ದಾರೆ.

ಏಕಕಾಲಕ್ಕೆ ಬಹುಬೆಳೆ

ಏಕಕಾಲಕ್ಕೆ ಎರಡು ಮೂರು ಬೆಳೆಗಳನ್ನು ಬೆಳೆಯುವ ವಿಷಯದಲ್ಲಿ ಹೆಚ್ಚಿನ ಸಂಶೋಧನೆಯನ್ನು ನಡೆಸಲು ಮತ್ತು ಆ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಲು ಭಾರತ ಸರಕಾರವು ನಿರ್ಧರಿಸಿದೆ. ಕೃಷಿ ಸಂಶೋಧನಾ ಮಂಡಳವು ಈ ಕಾರ್ಯವನ್ನು ಪ್ರಾರಂಭಿಸಿದ್ದು ತನ್ನ ವರದಿಯನ್ನು ಶೀಘ್ರವಾಗಿ ಪ್ರಕಟಿಸಲಿದೆ. ಏಕಕಾಲಕ್ಕೆ ಎರಡು ಮೂರು ಬೆಳೆಗಳನ್ನು ಬೆಳೆಯುವ ಸರಿಯಾದ ರೀತಿ, ಯಾವ ಯಾವ ಬೆಳೆಗಳನ್ನು ಹೇಗೆ ಹೇಗೆ ಬೆಳೆಸಬೇಕು, ಮಣ್ಣಿನ ಸತ್ವವನ್ನು ಹೇಗೆ ರಕ್ಷಿಸಬೇಕು, ಅಧಿಕ ಬೆಳೆ ಬರುವ ರೀತಿ ಇತ್ಯಾದಿ ವಿಷಯಗಳ ಬಗ್ಗೆ ಅಭ್ಯಾಸವೂ ಸಂಶೋಧನೆಯೂ ನಡೆಯುವುದು.

ಸಸ್ಯಾಹಾರಿ ತತ್ತಿಗಳು

ಶಾಕಾಹಾರಿಗಳು ಸಮತೋಲ ಆಹಾರಕ್ಕಾಗಿ ಶಾಕಾಹಾರಿ ತತ್ತಿಗಳನ್ನು ಉಪಯೋಗಿಸಬೇಕೆಂದು ಶ್ರೀ ಎಂ ವಿ. ಕೃಷ್ಣಪ್ಪನವರು ಸಲಹೆಯಿತ್ತಿದ್ದಾರೆ. ತತ್ತಿಗಳಲ್ಲಿ ಶಾಕಾಹಾರಿ ತತ್ತಿಗಳೂ ಇವೆಯೆಂಬುದು ಬಹುಜನರಿಗೆ ಗೊತ್ತಿಲ್ಲ. ಅವು ನಿರ್ಜೀವವಾಗಿದ್ದು ಹುಂಜದ ಸಹಾಯವಿಲ್ಲದೆ ಉತ್ಪಾದನೆಯಾಗುತ್ತವೆ; ಅವನ್ನು ತಿನ್ನುವಾಗ ಹಿಂಸೆ ಮಾಡಬೇಕಾಗಿಲ್ಲ. ಈ ತತ್ತಿಯಲ್ಲಿ ಒಂದು ರಾತಲು ಹಾಲಿನಲ್ಲಿರುವಷ್ಟು ಸಸಾರಜನಕವಿರುವುದು.

ಶಿಕ್ಷಣ ಮಾಧ್ಯಮ

ಇಂಗ್ಲಿಷಿನ ಸ್ಥಳದಲ್ಲಿ ಬರಲು ಯಾವುದೇ ಪ್ರಾದೇಶಿಕ ಭಾಷೆ ಬೆಳೆದಿಲ್ಲವಾದುದರಿಂದ ಶಿಕ್ಷಣ ಮಾಧ್ಯಮಗಳನ್ನು ಪ್ರಾದೇಶಿಕ ಭಾಷೆಗಳಿಗೆ ಪರಿವರ್ತಿಸಲು ಅನವಶ್ಯ ಅವಸರ ಮಾಡಬಾರದು. ಆದರೂ ಇಂಗ್ಲಿಷ್ ಚಿರಕಾಲನಾಗಿ ನಮ್ಮ ಮಾಧ್ಯಮವಾಗಿರಲಾರದು; ಆದುದರಿಂದ ಪ್ರಾದೇಶಿಕ ಭಾಷೆಯನ್ನು ಅದರ ಸ್ಥಳದಲ್ಲಿ ತರಲು ಪ್ರಯತ್ನಿಸಬೇಕಲ್ಲದೆ, ಈಗಿಂದೀಗಲೇ ಮಾಡುತ್ತೇವೆಂಬುದು ಕಲ್ಪನೆಗೂ ದೂರವಾಗುತ್ತದೆ. ಒಂದು ವೇಳೆ ಶಿಕ್ಷಣ ಮಾಧ್ಯಮವನ್ನು ಪ್ರಾದೇಶಿಕ ಭಾಷೆಗಳಿಗೆ ಮುಂದಕ್ಕೆ ಪರಿವರ್ತಿಸಿದರೂ ಇಂಗ್ಲಿಷ್ ಐಚ್ಛಿಕ ವಿಷಯವಾಗಿ ಕಲಿಸುವ ಪ್ರೋತ್ಸಾಹ ಬೇಕು ಎಂದು ಶ್ರೀ ಸಿ. ಡಿ. ದೇಶಮುಖರು ಅಭಿಪ್ರಾಯಪಟ್ಟಿದ್ದಾರೆ.

ಜಪಾನಿನಿಂದ ಸಾಲ

ಭಾರತಕ್ಕೆ ಜಪಾನವು ಸಾಲವನ್ನು ಕೊಡಲು ಸಿದ್ಧವಿದ್ದು ಈ ಬಗ್ಗೆ ಜನವರಿ ೨೧ಕ್ಕೆ ಭಾರತದ ಶಿಷ್ಟ ಮಂಡಳ ಮತ್ತು ಜಪಾನ ಸರಕಾರೀ ಪ್ರತಿನಿಧಿಗಳು ಟೋಕಿಯೊದಲ್ಲಿ ಮಾತುಕತೆ ನಡೆಸವರು ಸಾಲವು ಜಾಪಾನೀ ಯೆನ್ ನಾಣ್ಯಗಳ ರೂಪದಲ್ಲಿ ದೊರೆಯುವ ಸಂಭವ್ನೆಯಿದೆ. ಈಗ ಮುಂದಿರುವ ಯೋಜನೆಗಳ ಪ್ರಕಿ ಭಾರತಕ್ಕೆ ೧,೮೦೦ ಕೋಟಿಯನ್ (ಅಂದರೆ ಅಮೆರಿಕೆಯ ೫ ಕೋಟಿ ಡಾಲರ್) ಸಾಲ ಕೊಡಲು ಜಪಾನವು ಸಿದ್ಧವಿದೆ ಈ ಸಾಲವನ್ನು ಜಪಾನಿನ ಚಲಾವಣೆ ರೂಪದಲ್ಲಿ ಹಿಂತಿರುಗಿಸುವುದು ಅಸಾಧ್ಯವಾದರೆ ಸ್ಟರ್ಲಿಂಗ್ (ಪೌಂಡು)ಗಳ ಮೂಲಕವೂ ಸಂದಳಿಸಬಹುದು. ಸಾಲದ ಮೇಲಿನ ಬಡ್ಡಿದರ ೫.೭ ಆಗಿರುವುದು.

ನಿಶ್ಶಸ್ತ್ರೀಕರಣ ಯೋಜನೆ

ನಿಶ್ಶಸ್ತ್ರೀಕರಣ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕೆ ನ್ಯಾಟೋ ಮತ್ತು ವಸಾರ್ ರಾಷ್ಟ್ರಗಳಲ್ಲದೆ ಭಾರತ, ಅಫಘಾನಿಸ್ತಾನ, ಈಜಿಪ್ತ, ಯುಗೊಸ್ಲಾವಿಯಾ, ಸ್ವೀಡನ್ ಮತ್ತು ಆಸ್ಟ್ರಿಯಾ ರಾಜ್ಯಗಳು ಭಾಗವಹಿಸುವ ಒಂದು ಸಭೆ ನಡೆಯಬೇಕೆಂದು ರಶ್ಯ ಕರೆಯಿತ್ತಿದೆ ಇದಕ್ಕಿಂತ ಕೆಲವೇ ಮಂದಿ ವರಿಷ್ಠರ ಸಭೆಯೇ ಉತ್ತಮವೆಂದು ಕ್ರೆಮ್ಲಿನಿನ ಶ್ರೀ ಮೆಕಮಿಲನರು ತಮ್ಮ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಅಂತೂ ಜಗತ್ತಿನಲ್ಲಿ ದಿನೇ ದಿನೇ ಶಿಥಿಲವಾಗುತ್ತಿರುವ ಶಾಂತಿಯನ್ನು ಪುನಃ ಸಂಸ್ಥಾಪಿಸುವಲ್ಲಿ ತಾವು ಸದಾಸಿದ್ಧ ಎಂದೆಲ್ಲರೂ ನುಡಿಯುತಿದ್ದು, ಕಾರ್ಯಕ್ರಮಗಳನ್ನು ಮಾತ್ರ ಹಿಂದೂಡುತ್ತಿದ್ದಾರೆ.

ತೃತೀಯ ಉಪಗ್ರಹವೆ?

ಕೆಲವು ರೋಡಿಯೋ ಕೇಂದ್ರಗಳು ಪುನಃ ಉಪಗ್ರಹದ ಸಂಕೇತವನ್ನು ಕೇಳಿದವೆಂದು ವರದಿಯಾಗಿದ್ದು ರಶ್ಯವು ಚಕಾರ ಶಬ್ದವೆತ್ತದೇನೇ ತನ್ನ ಮೂರನೇ ಉಪಗ್ರಹವನ್ನು ಹಾರಿಸಿತು ಎಂಬ ಮಾತು ಪ್ರಚಾರವಾಗುತ್ತಿದೆ ಆದರೆ ಇಂತಹ ಸಂಕೇತಗಳು ಎಲ್ಲಿಯೂ ಕೇಳಿ ಬಂದಿಲ್ಲ. ಈ ಉಪಗ್ರಹವು ಹಿಂದಿನವುಗಳಂತೆ ಪ್ರಪಂಚ ಪ್ರದಕ್ಷಿಣೆಯನ್ನು ಮಾಡುವ ಬದಲು ಅಂತರಿಕ್ಷದಲ್ಲಿ ಎತ್ತರಕ್ಕೆ ಓಡುತ್ತಿದೆ ಎಂದೂ ಕೆಲವರು ವಿಜ್ಞಾನಿಗಳನ್ನುತ್ತಿದ್ದಾರೆ! ಆದರೆ; ರಶ್ಯದಿಂದ ಯಾವ ಪುಷ್ಟಿಯೂ ಇದಕ್ಕೆ ದೊರೆಯಲಿಲ್ಲ.

ಉಡುಪಿ

ವಿಶೇಷಾಭ್ಯಾಸಕ್ಕೆ ವ್ಯಾಸಂಗವೇತನ—ಉಡುಪಿಯ ಶ್ರೀ ಕೆ. ಶಿವರಾಮ ಸೆಟ್ಟರು ಕಳೆದ ಮೇ ತಿಂಗಳಲ್ಲಿ ನಡೆದ ಲಂಡನಿನ ಎ. ಎಂ ಐ ಎಂ ಇ ಪರೀಕ್ಷೆಯಲ್ಲಿ ಉತ್ತೀರ್ಣರಾದ ಕಾಮನ್‌ವೆಲ್ತ್ ರಾಷ್ಟ್ರಗಳ ಏಳು ಜನ ಪ್ರಥಮ ದರ್ಜೆಯ ವಿದ್ಯಾರ್ಥಿಗಳಲ್ಲೊಬ್ಬರಾಗಿದ್ದು, ಅವರಿಗೆ ಲಂಡನ್ನಿನ ಇಂಪೀರಿಯಲ್ ಕಾಲೇಜ್ ಆಫ್ ಸಾಯನ್ಸ್ ಎಂಡ್ ಟೆಕ್ನೋಲಜಿಯಲ್ಲಿ ಎರಡು ವರ್ಷಗಳ ಅವಧಿಗೆ ವಿಮಾನದ ಪೆಟ್ರೋಲಿಯಂನ ಮೇಲೆ ವಿಶೇಷಾಭ್ಯಾಸ ನಡೆಸಲು ವ್ಯಾಸಂಗವೇತನ ಸಿಕ್ಕಿರುತ್ತದೆ.

ರೈತಸಭೆ—ಉಡುಪಿ ತಾಲೂಕು ರೈತರ ಮಹಾಸಭೆಯು ತಾ 7ರಂದು ತಾಲೂಕು ಕಚೇರಿಯಲ್ಲಿ ಕುಂದಾಪುರ ಡಿವಿಜನಿನ ಅಸಿಸ್ಟೆಂಟ್ ಕಮೀಶನರ್ ಶ್ರೀ ಕೆ ಎಲ್. ಸೂರ್ಯನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸ್ಥಳೀಯ ಕೃಷಿ ಇಲಾಖಾಧಿಕಾರಿಗಳಾದ ಶ್ರೀ ಎನ್. ಎಸ್. ಸಿ ರೆಬೆಲ್ಲೋರವರು ಬೆಳೆ, ಹಸುರೆಲೆ ಗೊಬ್ಬರ ತಯಾರಿಕೆಯಲ್ಲಿ ಬಹುಮಾನ ಪಡೆಯಲು ಯೋಗ್ಯರಾದವರ ಪಟ್ಟಿಯನ್ನೋದಿದರು. ತಾಲೂಕು ಮತ್ತು ಫಿರ್ಕಾದಲ್ಲಿ ಹೆಚ್ಚು ಬೆಳೆ ಬೆಳೆಸಿದ ಬಗ್ಗೆ ಶ್ರೀ ವಿ. ಗೋವಿಂದರಾಜ ಹೆಗ್ಡೆಯವರಿಗೆ ತಾಲೂಕು ಮತ್ತು ಫಿರ್ಕಾ ಬಹುಮಾನಗಳನ್ನು ಕೊಡಲಾಯಿತು. ರೈತರ ಹಾಲಾಪವಾದಿಗಳ ಕುರಿತು ನಡೆದ ಚರ್ಚೆಯಲ್ಲಿ ಶ್ರೀಗಳಾದ ಬಿ ವಾಸುದೇವ ರಾವ್, ಪಿ ಶೀನ ಸೆಟ್ಟಿ, ವಿ ನಾರಾಯಣ ಸೆಟ್ಟಿ, ಕೆ ದಯಾನಂದ ನಾಯಕ್ ಮೊದಲಾದವರು ಭಾಗವಹಿಸಿದ್ದರು ತಹಶಿಲ್ದಾರ್ ಶ್ರೀ ಕೆ ಮಧ್ವರ ಬ್ಯಾರಿಗಳು ಧನ್ಯವಾದವಿತ್ತರು ಶ್ರೀ ದೊಡ್ಡಣ್ಣ ಸೆಟ್ಟಿ ಕೂಟದವರಿಂದ ತುಳು ಪ್ರಹಸನಗಳಾದುವು.

ಶ್ರೀ ಕೃಷ್ಣಾಪುರ ಸ್ವಾಮಿಗಳವರಿಗೆ ಮಾನಪತ್ರ ಅರ್ಪಣೆ—ಶ್ರೀ ಕೃಷ್ಣಪುರದ ಪರ್ಯಾಯ ಪೀಠನ್ನೇರಲಿರುವ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರಿಗೆ ತಾ 11ರಂದು ಸಂಜೆ ಮುನಿಸಿಪಲ ಬೇಸಿಕ್ ಶಾಲೆಯಲ್ಲಿ ನಗರ ಸಭೆಯ ಪರವಾಗಿ ನಗರ ಸಭಾಧ್ಯಕ್ಷ ಶ್ರೀ ಕೆ ಕೆ ಪೈಗಳವರು ಮಾನಪತ್ರ ಅರ್ಪಿಸಿದರು. ನಗರ ಸಭೆಯ ಉಪಾಧ್ಯಕ್ಷ ಶ್ರೀ ಸಿ. ವಿ ಆಚಾರ್ಯರು ಧನ್ಯವಾದಗಳನ್ನಿತ್ತರು.

ಜಪಾನೀ ಶಿಷ್ಟಮಂಡಲ ಇಂಡಿಯಾದಿಂದ ಕಟ್ಟಿಣದ ಅದುರುಗಳನ್ನು ರಫ್ತು ಮಾಡಲು ಬಂದರಾನುಕೂಲತೆಯನ್ನು ಪರಿಶೀಲನೆಗೈಯಲು ಹಿಂದುಸ್ಥಾನಕ್ಕೆ ಬಂದಿರುವ ಜಪಾನೀ ಶಿಷ್ಟಮಂಡಲವು ತಾ 11ರಂದು ಮಲ್ಪೆಯನ್ನು ನೋಡಲು ಆಗಮಿಸಿದಾಗ ಶ್ರೀ ಟಿ ಎ ಪೈಗಳು ಮಂಡಲಿಯ ಸದಸ್ಯರಿಗೆ ತಕ್ಕ ಮಾಹಿತಿಯನ್ನು ಕೊಟ್ಟದಲ್ಲದೆ ಮಲ್ಪೆ ಬಂದರದ ಅಭಿವೃದ್ಧಿಯಿಂದಾಗುವ ಹಿತಗಳನ್ನು ವಿವರಿಸಿದರು ಮಂಡಲಿಯ ನಾಯಕ ಡಾ| ಹೀಡರ್ ಅವರು ತೃಪ್ತಿ ಸೂಚನೆ ಮಾಡಿದರು. ಈ ಶಿಷ್ಟಮಂಡಲಿಯೊಂದಿಗೆ ಕೇಂದ್ರದ ಸಾರಿಗೆ ಸಚಿವಾಲಯದ ಶ್ರೀ ಡಿ ಜಿ. ಚಾಕೋರವರೂ ಮೈಸೂರಿನ ಮುಖ್ಯ ಬಂದರಾಧಿಕಾರಿ ಶ್ರೀ ಎಂ. ಎಲ್ ಅಪ್ಪಾನಿಯವರೂ ಆಗಮಿಸಿದ್ದರು.

ಶ್ರೀ ಕೃಷ್ಣಮೂರ್ತಿ ರಾಯರ ಆಗಮನ ರಾಜ್ಯಸಭೆಯ ಉಪಾಧ್ಯಕ್ಷರಾದ ಶ್ರೀ ಎಸ್ ವಿ. ಕೃಷ್ಣಮೂರ್ತಿರಾಯರು ತಾ. 13ರಂದು ಇಲ್ಲಿಗೆ ಆಗಮಿಸಿ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳನ್ನು ಸಂದರ್ಶಿಸಿದರು ಎಂ ಜಿ. ಎಂ. ಕಾಲೇಜಿನಲ್ಲಿ ಉಪಾಹಾರ ಸತ್ಕಾರ ಪಡೆದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣವಿತ್ತರು ವೆಂಕಟ್ರಮಣ ದೇವಸ್ಥಾನ, ಉಡುಪಿ ಲಾ ಕಾಲೇಜನ್ನು ಸಂದರ್ಶಿಸಿದ ಮೇಲೆ ರಾತ್ರಿ ಸ್ಥಳೀಯ ಬ್ಯಾಂಕುಗಳವರು ಮುಕುಂದ ನಿವಾಸದಲ್ಲಿ ಏರ್ಪಡಿಸಿದ . ಭೋಜನ ಸಮಾರಂಭದಲ್ಲಿ ಭಾಗವಹಿಸಿದರು. ಡಾ| ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿ, ದಿಲ್ಲಿಯ ಕರ್ನಾಟಕ ಸಂಘದ ಆಶ್ರಯದಲ್ಲಿ ಸ್ಥಾಪನೆಯಾಗುವ ಕನ್ನಡ ಶಾಲೆಯ ಕಟ್ಟಡಕ್ಕಾಗಿ ಸಿಂಡಿಕೇಟ್ ಬ್ಯಾಂಕಿನಿಂದ ಎರಡೂವರೆ ಸಾವಿರ ರೂಪಾಯಿಯ ದೇಣಿಗೆಯನ್ನು ಸಾರಿದರು. ಅತಿಥಿಗಳೂ ಶ್ರೀ ಕೆ ಆರ್. ಆಚಾರ್ ಎಂ ಪಿ ಯವರೂ ಸಂದರ್ಭೋಚಿತ ಭಾಷಣವಿತ್ತರು.

ಮರುದಿನ ನಗರಾಧಿಪತಿಗಳನ್ನೂ ವಕೀಲ ಸಂಘದ ಸದಸ್ಯರನ್ನೂ ಭೇಟಿಯಾಗಿ ಮಲ್ಪೆಯನ್ನು ಸಂದರ್ಶಿಸಿದರು. ಸಂಜೆ ವಿಕ್ಟೋರಿಯಾ ಜುಬಿಲಿ ಕ್ಲಬ್‌ನಲ್ಲಿ ಶ್ರೀ ಕೆ. ಆರ್. ಆಚಾರ್ ಎಂ ಪಿ ಯವರ ಅಧ್ಯಕ್ಷತೆಯಲ್ಲಿ ಶ್ರೀ ಕೃಷ್ಣಮೂರ್ತಿರಾಯರು ಪಂಡಿತ ಜವಾಹರಲಾಲ ನೆಹರೂರವರ ತೈಲಚಿತ್ರದ ಅನಾವರಣ ಮಾಡಿದರು. ಡಾ| ಸುಂದರರಾಮ ಪೈಗಳು ಸ್ವಾಗತ ಭಾಷಣ ಮಾಡಿ ದಿಲ್ಲಿಯ ಕನ್ನಡ ಶಾಲೆಗಾಗಿ ಕ್ಲಬ್ಬಿನಿಂದ ನೂರು ರೂಪಾಯಿಗಳ ಸಹಾಯಧನವನ್ನಿತ್ತರು. ಶ್ರೀ ಕೃಷ್ಣಮೂರ್ತಿರಾಯರು ಜವಾಹರಲಾಲರ ತೈಲಚಿತ್ರವನ್ನು ಬರೆದ ಕಲಾವಿದ ಶ್ರೀ ಕೆ ವಾಸುದೇವ ನಾಯ್ಕರಿಗೆ ಪುಷ್ಪಹಾರ ಹಾಕಿ ಶುಭಕೋರಿ, ಪ್ರಧಾನಿಗಳ ಸ್ಥಾನಮಾನದ ಕುರಿತು ಭಾಷಣ ಮಾಡಿದರು ಅಧ್ಯಕ್ಷರ ಭಾಷಣಾನಂತರ ಶ್ರೀ ಎ. ಜೆ. ಆಳ್ವೆಯವರು ಧನ್ಯವಾದಗಳನ್ನಿತ್ತರು.

ಬ್ರಹ್ಮಾವರ— ಎಸ್. ಎಂ. ಎಸ್. ಹೈಸ್ಕೂಲಿನಲ್ಲಿ ತಾ. 11ರಂದು ಶ್ರೀ ಬಿ. ಅನಂತ ಕೃಷ್ಣ ಸಾಮಗರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಜರಗಿತು ಶ್ರೀ ಕೆ ಆರ್. ಹಂದೆಯವರು ಸ್ವಾಗತಭಾಷಣವಿತ್ತರು. ಶ್ರೀ ಪೈ ಕಾಡಿ ವೆಂಕಟಕೃಷ್ಣರಾಯರು ಪರಿಚಯ ಭಾಷಣ ಮಾಡಿ ಗ್ರಂಥ ಪ್ರದರ್ಶನದ ಹಿತವನ್ನು ವಿವರಿಸಿದರು ಶ್ರೀ ಎಸ್. ಕೆ. ಶ್ರೀಪತಿ ಆಚಾರ್ಯರು ಆಧುನಿಕ ಸಾಹಿತ್ಯ ಮತ್ತು ಸಾಹಿತಿಗಳ ಕುರಿತು ಉಪನ್ಯಾಸವಿತ್ತರು. ಶ್ರೀ ಬಿ ಮುಕ್ತಯ್ಯ ಹೆಗ್ಡೆಯವರು ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳನ್ನು ವಿತರಣೆ ಮಾಡಿದರು ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಕೆ. ಸಂಜೀವ ಸೆಟ್ಟರು ಧನ್ಯವಾದಗಳನ್ನಿತ್ತರು.

ಶಿರ್ವ—ಸೈಂಟ್ ಮೇರಿಸ್ ಹೈಸ್ಕೂಲಿನ ವಾರ್ಷಿಕೋತ್ಸವು ತಾ 12ರಂದು ಸೂರ್ಯನಾರಾಯಣ ಅಡಿಗ ಅಧ್ಯಕ್ಷತೆಯಲ್ಲಿಯೂ ತಾ 13ರಂದು ಶ್ರೀ ಎ ಜೆ ಆಳ್ವೆಯವರ ಅಧ್ಯಕ್ಷತೆಯಲ್ಲಿಯೂ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿದವು.

ಹಿರೇಬೆಟ್ಟು— ಪ, ಹಾ| ಪ| ಶಾಲೆಯ ವಾರ್ಷಿಕೋತ್ಸವು ತಾ. 12ರಂದು ಶ್ರೀ ಎ ಜೆ. ಆಳ್ವೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೆನೇಜರ್ ಶ್ರೀ ಎಚ್ ರಾಮಚಂದ್ರ ಹೆಗ್ಡೆಯವರು ಸ್ವಾಗತಿಸಿದರು ಮುಖ್ಯೋಪಾಧ್ಯಾಯ ಶ್ರೀ ಪಿ ಸೂರಣ್ಣ ಸೆಟ್ಟರು ವರದಿಯನ್ನೋದಿದರು. ಶ್ರೀ ಎಸ್. ಎಲ್. ನಾರಾಯಣ ಭಟ್ಟರು ಬಹುಮಾನ ಹಂಚಿದರು ಅಧ್ಯಕ್ಷರ ಭಾಷಣವಾದ ಮೇಲೆ ನಾಟಕಾದಿ ವಿವಿಧ ವಿನೋದಾವಳಿಗಳಾದುವು.

ದೇಲಂಪಾಡಿ—ಬನಾರಿ ಶ್ರೀ ಗೋಪಾಲ ಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ 11ರಂದು ಶ್ರೀ ಬಿ ಎಲ್ ಗೌಡರ ವ್ಯವಸ್ಥಾಪಕತ್ವದಲ್ಲಿ ಶ್ರೀ ಕೃಷ್ಣ ಪೂಜೆ, 'ಗದಾಪರ್ವ' ಎಂಬ ಪ್ರಸಂಗದ ಯಕ್ಷಗಾನಕೂಟವೂ ನಡೆಯಿತು. ಶ್ರೀ ಕೇ ವ ಕೇಶವ ಆವರ ಹಾಡುಗಾರಿಕೆ, ಶ್ರೀ ಕೆ. ಕೃಷ್ಣಭಟ್; ಪಿ. ರಾಮ ಅವರ ಮೃದಂಗವಾದನ, ಶ್ರೀಗಳಾದ ಟಿ. ಕೆ. ಪರಮೇಶ್ವರ; ಅಂತಪ್ಪ ಸೆಟ್ಟಿ; ಡಿ ಶಂಕರ್, ಬಿ ವಿ. ವಿನೋದ; ಬಿ. ಎ ಪಾರ್ವತಿ, ಯಂ ಯನ್. ರೈ; ಎಂ ಎಸ್ ಗೌಡ, ಬಿ ಪಿ. ಬಟ್; ಡಿ ಮಹಾಲಿಂಗ; ಲಕ್ಷ್ಮಣ ಗೌಡರೇ ಮೊದಲಾದವರು ಅರ್ಥವಿವರಣೆಯನ್ನು ಮಾಡಿದರು.

ಮೂಡಬಿದ್ರೆ—ಮೈಸೂರು ಸರಕಾರದ ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರಸಾರ ಶಾಖೆಯ ಡೈರೆಕ್ಟರ್ ಶ್ರೀ ಎ. ಎಸ್. ಮೂರ್ತಿರಾಯರು ತಾ. 7ರಂದು ಸ್ಥಳೀಯ ಜೈನ್ ಹೈಸ್ಕೂಲಿನ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡಿದರು ಮುಖ್ಯೋಪಾಧ್ಯಾಯ ಶ್ರೀ ಎ. ಸೋಮಪ್ಪ ಸೈಗಳು ಸ್ವಾಗತಿಸಿದರು. ಶ್ರೀ ಎ. ಬಿ ದಿರಾಜರು ಅತಿಥಿಗಳ ಪರಿಚಯ ಭಾಷಣ ಮಾಡಿದರು. ವಿದ್ಯಾರ್ಥಿ ಮುಂದಾಳು ಶ್ರೀ ವೀರಪ್ಪ ಮೊಯಿಲಿಗಳು ಧನ್ಯವಾದವಿತ್ತರು.

(೫ನೇ ಪುಟದಿಂದ)

ಸಂಯುಕ್ತ ರಾಷ್ಟ್ರ ಸಂಘವು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕಾಗಿ ಭಾರತ-ಪಾಕಿಸ್ತಾನಕ್ಕೆ ಕಳುಹಿಸಲಾದ ಡಾ ಫ್ರೆಂಕ ಗ್ರಹಾಮರ ಆಗಮನದಿಂದ ಯಾವ ಪ್ರಯೋಜನವೂ ಇರುವುದಿಲ್ಲ. ಭಾರತದೊಡನೆ ಕಾಶ್ಮೀರದ ಸೇರ್ಪಡೆಯನ್ನು ಮನ್ನಿಸಿದಂದೇ ಈ ಸಮಸ್ಯೆಯು ಪರಿಹಾರವಾಗುವುದು. ಈ ಏಕೀಕರಣದ ನಿರ್ಣಯವು ಅಪರಿವರ್ತನೀಯ ಮತ್ತು ಅಂತಿಮವಾಗಿರುತ್ತದೆ ಎಂದು ಈ ಸಾರ್ವಜನಿಕ ಸಭೆಯು ತಿಳಿಸಿದೆ. ಈ ಸಭೆಯು, ಪಾಕಿಸ್ತಾನವು ಕಾಶ್ಮೀರದಿಂದ ಹೊರಬರುವ ವಿಷಯದಲ್ಲಿ ಕಾರ್ಯವೆಸಗುವುದನ್ನು ಬಿಟ್ಟು ಡಾ. ಗ್ರಹಾಮರನ್ನಟ್ಟುವ ಭದ್ರತಾ ಮಂಡಳದ ಗೊತ್ತುವಳಿಯನ್ನು ವಿರೋಧಿಸುತ್ತದೆ; ಏಕೆಂದರೆ, ಕಾಶ್ಮೀರ ಬೌದ್ಧಿಕ ರಾಜನೈತಿಕ ಮತ್ತು ಆರ್ಥಿಕ ದೃಷ್ಟಿಯಿಂದ ಭಾರತದ ಒಂದು ಅಂಗವಾಗಿರುತ್ತದೆ ಎಂದು ಹೇಳಿದೆ. ಪಾಕಿಸ್ತಾನದಿಂದ ಆಕ್ರಮಿಸಲ್ಪಟ್ಟ ಕಾಶ್ಮೀರ ಭಾಗದ ಜನತೆಗೆ ಅಂತಿಮವಾಗಿ ಈ ಭಾಗವು ಸಕ ಸ್ವತಂತ್ರನಾಗುವುದು ಮತ್ತು ಅಲ್ಲಿಯೂ ಪ್ರಜಾಪ್ರಭುತ್ವ ಶಾಸನವು ಸ್ಥಾಪನೆಗೊಳ್ಳುವುದೆಂಬ ಆಶ್ವಾಸನೆಯನ್ನು ಈ ಸಾರ್ವಜನಿಕ ಸಭೆ ಕೊಟ್ಟಿತು.

ಶ್ರೀ ಅಬ್ದುಲ್ ಕಾದರರು "ಭಾರತ ಮತ್ತು ಕಾಶ್ಮೀರದ ಏಕೀಕರಣದ ನಿರ್ಣಯವು ಸುದೃಢ ಮತ್ತು ಅಂತಿಮವಾದುದು. ಪ್ರಪಂಚದ ಯಾವುದೇ ಶಕ್ತಿಯು ಭಾರತದಿಂದ ಈ ರಾಜ್ಯವನ್ನು ಪ್ರತ್ಯೇಕಿಸಲು ಅಸಮರ್ಥವಾಗಿದೆ. ಅಂತಹ ಪ್ರಯಾಸವನ್ನು ವಹಿಸಿದ ಪಕ್ಷದಲ್ಲಿ ಭಾರತದ ೩೬ ಕೋಟಿ ಪ್ರಜೆಗಳು ಕೊನೆಯುಸಿರಿನ ತನಕ ಅದರ ವಿರುದ್ಧವಾಗಿ ಹೋರಾಡುವರು" ಎಂದು ಹೇಳಿದರು.

ಕಾಶ್ಮೀರದ ಮಾಜಿ ಪ್ರಧಾನರಾಗಿರುವ ಶೇಕ್ ಅಬ್ದುಲ್ಲರವರ ಬಿಡುಗಡೆಯ ನಿರ್ಣಯವನ್ನು ಸಭೆಯು ಸ್ವಾಗತಿಸಿತು. ಶೇಕ ಅಬ್ದುಲ್ಲರು ಕಳೆದ ೪|| ವರ್ಷಗಳಿಂದ ಸ್ಥಾನಬದ್ಧತೆಯಲ್ಲಿದ್ದರು.

ಮಂಗಳೂರು

ಸರಕಾರಿ ಕಾಲೇಜಿನ ಇತಿಹಾಸ ಮತ್ತು ಅರ್ಥಶಾಸ್ತ್ರ ಸಂಘದ ಆಶ್ರಯದಲ್ಲಿ ತಾ. 7ರಂದು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪಾರ್ವತಿ ಎಮ್. ಪ್ರಭುಗಳ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿತು. ದ. ಕ. ಜಿಲ್ಲಾ ವ್ಯವಸಾಯಾಧಿಕಾರಿ ಶ್ರೀ ಕೆ ಸಂಜೀವ ಶೆಟ್ಟರು ಜಿಲ್ಲೆಯ ಕೃಷಿಕ್ಷೇತ್ರದಲ್ಲಾದ ಪ್ರಗತಿಯನ್ನು ವಿವರಿಸಿದರು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಯಶಸ್ಸು ದೇಶದ ಕೃಷಿ ಉತ್ಪಾದನೆಯ ಮೇಲೆ ಹೊಂದಿಕೊಂಡಿದೆ. ಆದುದರಿಂದ ಯೋಜನೆಯಲ್ಲಿ ನಮೂದಿಸಲ್ಪಟ್ಟಂತಹ ಕೃಷಿ ಉತ್ಪಾದನೆಯನ್ನು ಬೆಳೆಸುವ ಕಡೆಗೆ ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳು ಸಂಪೂರ್ಣ ಗಮನವೀಯುತ್ತಿವೆ ಸಮಾಜ ವಿಕಾಸ ಯೋಜನೆ, ಸಮಾಜಾಭಿವೃದ್ಧಿ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೂ ಕೂಡಾ ಕೃಷಿ ಉತ್ಪಾದನೆಯ ಕಡೆಗೆ ಹೆಚ್ಚಿನ ಗಮನವೀಯಬೇಕೆಂದು ನಿರ್ದೇಶಿಸಲಾಗಿದೆ ಎಂದು ಹೇಳಿದರು. ದ. ಕ. ಜಿಲ್ಲೆಯಲ್ಲಿ ಕೂಡಾ ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಸಾಧ್ಯವಿದೆ ಎಂದರು

ದ ಕ. ಜಿಲ್ಲಾ ಟೀಚರ್ಸ್ ಗಿಲ್ಡಿನ ಆಶ್ರಯದಲ್ಲಿ—ತಾ. 8ನಂದು ಬಿ. ಇ. ಎಮ್ ಶಾಲೆಯಲ್ಲಿ ಜರುಗಿದ ಸಭೆಯಲ್ಲಿ ಮೈಸೂರು ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಶಾಖೆಯ ಡೈರೆಕ್ಟರ್ ಶ್ರೀ ಎ. ಎನ್. ಮೂರ್ತಿರಾಯರು ಭಾಷಣ ಮಾಡುತ್ತಾ, ಮೈಸೂರು ಸರಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಶಾಖೆಯವರು ಯೋಜಿಸುತ್ತಿರುವ ಕನ್ನಡ ವಿಶ್ವಕೋಶ ರಚನೆಗೆ ಪ್ರತಿಯೊಬ್ಬರೂ ಸಹಕಾರ ನೀಡಬೇಕೆಂದು ಕೇಳಿಕೊಂಡರು ಗಿಲ್ಡಿನ ಅಧ್ಯಕ್ಷ ಶ್ರೀ ಎಸ್ ಮುಕುಂದರಾಯರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಪಿ. ಎಸ್ ವೆಂಕಟಕೃಷ್ಣರಾಯರು ಧನ್ಯವಾದಗಳನ್ನಿತ್ತರು ಶ್ರೀ ರಾಯರು ಸ್ಥಳೀಯ ಮಿಲಾಗ್ರಿಸ್ ಹ್ಯಾಸ್ಟೆಲಿನ ಬಳಿಯ ಸಮಾಜಿಕ ಅಧ್ಯಯನ ತಂಡದ ಸಭೆಯಲ್ಲೂ, ಕಾರ್ನಾಡ್ ಸದಾಶಿವ ರಾವ್ ಡಿಸ್ಟ್ರಿಕ್ಟ್ ಸೆಂಟ್ರಲ್ ಲೈಬ್ರೆರಿಯಲ್ಲೂ ಉಪನ್ಯಾಸ ಮಾಡಿದರು. ತಾ. 9ರಂದು ಮಂಗಳೂರು ಪತ್ರಿಕೋದ್ಯೋಗಿ ಸಂಘದಲ್ಲಿಯೂ ರೋಟರಿ ಕ್ಲಬ್ಬಿನಲ್ಲಿಯೂ ಸರಕಾರಿ ಕಾಲೇಜಿನಲ್ಲೂ ಭಾಷಣ ಮಾಡಿ ಜನಜಾಗೃತಿಯನ್ನುಂಟುಮಾಡಿದರು.

ಕಂಡಾಯ ಸಚಿವರಲ್ಲಿ ಜಿಲ್ಲಾ ಭೂಮಾಲಿಕರ ಸಂಘದ ಮನವಿ—ಮೈಸೂರು ರಾಜ್ಯದ ಕಂದಾಯ ಸಚಿವ ಶ್ರೀ ಎಸ್. ಪಿ. ಪಾಟೀಲರು ಮಂಗಳೂರಲ್ಲಿ ಮೊಕ್ಕಾಂ ಮಾಡಿದ ವೇಳೆ, ದ. ಕ. ಜಿಲ್ಲೆಯ ಭೂಮಾಲಿಕರ ಸಂಘದ ಕಡೆಯಿಂದ ಮನವಿಯೊಂದು ಕೊಡಲಾಗಿತ್ತು. ಮೈಸೂರು ರಾಜ್ಯದಲ್ಲಿ ಭೂಕಾರ್ನವನ್ನು ಕೈಗೊಳ್ಳುವರೆ ಜಕ್ತಿ ಸಮಿತಿಯವರು ಮಾಡಿದ ಶಿಫಾರಸುಗಳು ಅತ್ಯಂತ ಕ್ರಾಂತಿಕಾರೀ ಹಾಗೂ ಅನ್ಯಾಯದ್ದಿವೆ. ಭೂಮಾಲೀಕ ಮತ್ತು ಒಕ್ಕಲುಗಳೆಂಬ ಭೇದವನ್ನು ಹೋಗಲಾಡಿಸುವುದು ಮತ್ತು ಭೂರಹಿತರಿಗೆ ಭೂಮಿಯನ್ನು ಒದಗಿಸುವುದು ಎಂಬ ಉದ್ದೇಶವನ್ನಿಟ್ಟುಕೊಂಡು ಮಾಡಿದ ಜಕ್ತಿ ಸಮಿತಿ ವರದಿಯಲ್ಲಿನ ಶಿಫಾರಸುಗಳು ಈ ಸಮಸ್ಯೆಯನ್ನು ಬಗೆಹರಿಸಲು ಸರಿಯಾದ ಸಮಾಧಾನವನ್ನು ಸೂಚಿಸಿಲ್ಲ ಈ ವರದಿಯಲ್ಲಿ ಸೂಚಿಸಿದ್ದಂತೆ ಭೂಶಾಸನವಾದಲ್ಲಿ ಅದು ರಾಜ್ಯದ ಆಹಾರ ಸಮಸ್ಯೆಯನ್ನು ಬಗೆಹರಿಸುವ ಬದಲು ಅದನ್ನು ಇನ್ನಷ್ಟು ಜಟಿಲಗೊಳಿಸುವುದು ದ. ಕ ಜಿಲ್ಲೆಯ ಭೂಪದ್ಧತಿಗಳಲ್ಲಿರುವ ಕೆಲವು ವಿಶಿಷ್ಟ ಸ್ಥಿತಿಗತಿಗಳ ಕಡೆಗೆ ಜಕ್ತಿ ಸಮಿತಿ ಗಮನ ಕೊಟ್ಟಿಲ್ಲ. ದಕ್ಷಿಣದ ಮೂರು ದೊಡ್ಡ ರಾಜ್ಯಗಳಾದ ಆಂಧ್ರ, ಮದ್ರಾಸು ಮತ್ತು ಮೈಸೂರು ರಾಜ್ಯಗಳು ತಮ್ಮೊಳಗೆ ಪರಸ್ಪರ ವಿಚಾರವಿನಿಮಯ ನಡೆಸಿ ಒಂದು ಒಮ್ಮತದ ಭೂ ಶಾಸನವನ್ನು ಮುಂದೆ ತರುವ ತನಕ ಈಗ ಜ್ಯಾರಿಯಲ್ಲಿರುವ ಕಾನೂನನ್ನೇ ಮುಂದುವರಿಸಬೇಕು ಎಂದು ಮುಂತಾಗಿ ವರದಿಯಲ್ಲಿ ಸೂಚಿಸಲಾಗಿತ್ತು.

ಜಪಾನೀ ಶಿಷ್ಟಮಂಡಲ—ಭಾರತದ ಪ್ಚಿಮ ಕಬ್ಬಿಣದ ರಫ್ತು ಮತ್ತು ಅದಕ್ಕೆ ಅಗತ್ಯವಿರುವ ಬಂದರ ಸೌಕರ್ಯಗಳ ಕುರಿತು ಪರಿಶೀಲಿಸಲು ಆಗಮಿಸಿರುವ ಒಂಭತ್ತು ಮಂದಿಯ ಜಪಾನೀ ಶಿಷ್ಟಮಂಡಲವೊಂದು ತಾ. 9ರಂದು ಸ್ಪೆಶಲ್ ವಿಮಾನದಲ್ಲಿ ಮಂಗಳೂರಿಗೆ ಆಗಮಿಸಿತು ವಿಮಾನ ನಿಲ್ದಾಣದಲ್ಲಿ ಮಂಗಳೂರು ಪೋರ್ಟು ಟ್ರಸ್ಟಿನ ಚೇರ್‌ಮೆನ್ ಹಾಗೂ ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯ, ವೈಸ್ ಚೇರ್‌ಮೆನ್ ಶ್ರೀ ವಿ. ಎಸ್. ಕುಡ್ವಾ ಮತ್ತು ಸದಸ್ಯರು ಸ್ವಾಗತಿಸಿದರು ಜಪಾನಿಗೆ ಹಡಗು ಮೂಲಕ ಅದುರನ್ನು ರಫ್ತು ಮಾಡುವ ಸೌಕರ್ಯಗಳ ಕುರಿತು ಶಿಷ್ಟಮಂಡಳದವರು ಮಂಗಳೂರು ಬಂದರ ಪರಿಶೀಲನೆ ನಡೆಸಿದರ. ತಾ 10ರಂದು ಮಲ್ಪೆ ಬಂದರವನ್ನು ಸಂದರ್ಶಿಸಿದರು

ಈ ಶಿಷ್ಟಮಂಡಲವು ಡಾ. ಟಿ. ಹೀಡಾರವರ ನೇತೃತ್ವದಲ್ಲಿದ್ದು ಜಪಾನು ಸರಕಾರದ ಆರು ಇಂಜಿನಿಯರರೂ, ಮೂವರು ದುಭಾಷಿಗಳಾಗಿ ಕಾರ್ಯವೆಸಗುವವರಿಂದಲೂ ಕೂಡಿದೆ ಕೇಂದ್ರ ಸಾರಿಗೆ ಶಾಖೆಯ, ಸ್ಪೆಶಲ್ ಡ್ಯೂಟಿಯ ಮೇಲೆ ಇದ್ದಿರುವ ಶ್ರೀ ಐ. ಜಿ. ಚಾಕೋರವರು ಅವರೊಡನಿದ್ದರು ಮಂಗಳೂರು ಮತ್ತು ಮಲ್ಪೆ ಬಂದರುಗಳು ಬೆಳೆಯುವುದಕ್ಕೆ ತುಂಬಾ ಅವಕಾಶವಿದೆ ಆದರೆ ಈ ಅಭಿವೃದ್ಧಿಯು ಈ ಬಂದರುಗಳ ಹಿನ್ನಾಡು ಪ್ರದೇಶಗಳಲ್ಲಿನ ಕೈಗಾರಿಕೆ ಹಾಗೂ ಸಾರಿಗೆ ಸಂಪರ್ಕದ ಅಭಿವೃದ್ಧಿಯ ಮೇಲೆ ಹೊಂದಿಕೊಂಡಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಲಾಗಿದೆ.

ಮೈಸೂರ್ ಚೆಂಬರ್ ಆಫ್ ಕಾಮರ್ಸ್—ಇದರ ಆಡಳಿತಾ ಸಭೆಯು ಮಂಗಳೂರಿನ ಕೀರ್ತಿಮಹಲಿನಲ್ಲಿ ತಾ. 11ರಂದು ಅದರ ಅಧ್ಯಕ್ಷ ಶ್ರೀ ಕೆ ಎಮ್. ನಂಜಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಚೇಂಬರ್ ಅಫ್ ಕಾಮರ್ಸಿನಲ್ಲಿ ಕೆನರಾ ಚೇಂಬರಿನ ಸದಸ್ಯರಾದ ಶ್ರೀ ಎ ಎಸ್. ಕಾಮತರು ಕೆನರಾ ಚೇಂಬರಿನ ಪರವಾಗಿ ರಾತ್ರಿ ಭೋಜನ ಕೂಟವನ್ನೇರ್ಪಡಿಸಿದ್ದರು. ಚೇಂಬರಿನ ಕಾರ್ಯದರ್ಶಿ ಶ್ರೀ ವಿ. ನರಸಿಂಹರಾಯರು ಸ್ವಾಗತಿಸಿ ಮಂಗಳೂರು ಬಂದರದ ಅಭಿವೃದ್ಧಿ, ಜಿಲ್ಲೆಯ ಕೈಗಾರಿಕೆಗಳ ಪ್ರಗತಿ ಹಾಗೂ ಸಾರಿಗೆ ಸೌಕರ್ಯದ ಅಭಿವೃದ್ಧಿಗಾಗಿ ಮೈಸೂರು ಚೇಂಬರ್ ಆಫ್ ಕಾಮರ್ಸಿನವರು ಜಿಲ್ಲೆಯವರಿಗೆ ಸಹಕಾರ ನೀಡಬೇಕೆಂದು ಕೇಳಿಕೊಂಡರು, ಮೈಸೂರು ಚೇಂಬರಿನ ಉಪಾಧ್ಯಕ್ಷ ಶ್ರೀ ಎಸ್. ಮುದಲಿಯಾರರು ಈ ಸಂದರ್ಭದಲ್ಲಿ ಮಾತನಾಡುತ್ತಾ ದ. ಕ. ಜಿಲ್ಲೆಯು ಮೈಸೂರು ರಾಜ್ಯಕ್ಕೆ ಸೇರ್ಪಡೆಗೊಂಡುದರಿಂದ ರಾಜ್ಯಕ್ಕೆ ಬಹಳ ಉಪಯೋಗವಾಗಿದೆಯೆಂಬುದಾಗಿ ಹೇಳಿ ಸರಕಾರವು ವ್ಯಾಪಾರೋದ್ಯಮಿಗಳ ಸಂಕಷ್ಟಗಳ ಕಡೆಗೆ ಸಹಾನುಭೂತಿಪರವಾದ ದೃಷ್ಟಿಯನ್ನಿಟ್ಟಲ್ಲಿ ವ್ಯಾಪಾರೀ ವರ್ಗದ ಪ್ರಗತಿಯೊಂದಿಗೆ ಒಂದು ಸ್ವಾವಲಂಬಿ ರಾಷ್ಟ್ರವನ್ನು ಕಟ್ಟುವಲ್ಲಿ ಸಹಾಯಮಾಡಿದಂತಾಗುವುದು ಎಂದರು. ಶ್ರೀ ಐ. ವಿ. ರಾಯರು ಧನ್ಯವಾದವಿತ್ತರು.

ತ್ಯಾಗರಾಗ ಆರಾಧನಾ ಮಹೋತ್ಸವ—ಬೆಸೆಂಟ್ ಬಾಲಿಕಾ ಪಾಠಶಾಲೆಯ ಸಂಗೀತಕಲಾ ಸಂಘದ ಆಶ್ರಯದಲ್ಲಿ ತಾ. 9 ಮತ್ತು 10ರಂದು ತ್ಯಾಗರಾಗ ಆರಾಧನಾ ಮಹೋತ್ಸವವು ವೈಭವದಿಂದ ಜರಗಿತು. ಮೊದಲ ದಿನ ದ. ಕ. ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಎಸ್. ಕೃಷ್ಣಮೂರ್ತಿಯವರು ಭಾಷಣಮಾಡುತ್ತಾ ಕರ್ನಾಟಕ ಸಂಗೀತದ ವಿವಿಧ ಮಟ್ಟದ ವಿಶಾಲತೆಗೆ ತ್ಯಾಗರಾಜರು ಕಾರಣೀಭೂತರಾಗಿದ್ದಾರೆಂದು ಹೇಳಿದರು. ಎರಡನೆ ದಿವಸ ಸ್ಥಳೀಯ ರಾಮಕೃಷ್ಣಾಶ್ರಮದ ಅಧ್ಯಕ್ಷರಾದ ಸ್ವಾಮಿ ಆದಿದೇವಾನಂದರು ಭಾಷಣಮಾಡುತ್ತಾ, ಸಲ್ಲಕ್ಷಣ ಸಾಹಿತ್ಯದಿಂದೊಡಗೂಡಿದ ಸಂಗೀತವು ಮಾನವನಿಗೆ ಚಿತ್ತ ಶುದ್ಧಿಯನ್ನು ತನ್ಮಯತೆಯನ್ನು ಉಂಟುಮಾಡಿ ಪಾರಮಾರ್ಥಿಕ ಜ್ಞಾನಕ್ಕೆ ಅನುವುಗೊಡುತ್ತದೆ ಎಂದರು ಎರಡು ದಿವಸಗಳಲ್ಲೂ ಸಂಗೀತ ಕಾರ್ಯಕ್ರಮಗಳಾದುವು.

ಕುಂದಾಪುರ ಡಿ. ಮುನ್ಸಿಫ್ ಕೋರ್ಟಿನಲ್ಲಿ

S. C. No. 378/1946

S. E P No 855/1957.

S E A. No 291/1957.

ವಾದಿರು— 1 ಮಹಾಲಕ್ಷ್ಮಿ ಅಮ್ಮ 2 ಸುಬ್ಬಯ್ಯ ಮರಾಟಿಕ ವಾರಿಸ್ದಾರರು 1_3_4ನೇ ಅರ್ಜಿದಾರರು 3 ಶಿವರಾಮ ಮರಾಟಿಕ. 4 ಪರಮೇಶ್ವರ ಮರಾಟಿಕ

ಎದ್ರಿ—ಪುಟ್ಟಾಚಾರಿ-ನಾಗಪ್ಪ ಆಚಾರಿ ಮಗ ಕುಂದಾಪುರ ತಾಲ್ಲೂಕು ನಂಬ್ರ 1ನೆ ಶೀರೂರು ಗ್ರಾಮದಲ್ಲಿರುವ Post Shiroor

ಸದ್ರಿ ಪ್ರತಿವಾದಿ ಎದ್ರಿಗೆ ತಿಳಿಯಪಡಿಸುವ ದೇನಂದ್ರೆ ಮೇಲಿನ ಡಿಕ್ರಿ ಸಮಾಧಾನದ ಬಗ್ಗೆ ಸಲ್ಲಿಸಿದ ಮೇಲಿನ ಅರ್ಜಿಗಳು ಮೇಲ್ಕಂಡ ಕೋರ್ಟಿನಲ್ಲಿ ತಾರೀಕು 6_2-1959ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವ್ಸಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟ ಮಾಡಿ ನಿಮ್ಮ ಗೈರುಹಾಜ್ರಿಯಲ್ಲಿ ಸದ್ರಿ ಅರ್ಜಿಯನ್ನು ತೀರ್ಮಾನಿಸಲಾಗುವದೆಂತ ಈ ಮೂಲಕ ತಿಳಿಸಲಾಗುತ್ತದೆ.

M. M Hebbar,
Advocate for Petitioners.

ಮೊಕ್ಕಾಂ: ಕುಂದಾಪುರ.
ತಾರೀಕು 13-11-1958.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಟ್ಟಲ್ ಶ್ರೀನಿವಾಸರಾಯರಿಂದ ವಿರಚಿತವಾದ—



[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ.—

1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ಸ್ಕೂಲ್ ಬುಕ್ ಕಂಪೆನಿ, ರಥಬೀದಿ ಮಂಗಳೂರು.—1.
3) ಸ್ಟ್ಯೂಡೆಂಟ್ಸ್ ಬುಕ್ ಡಿಪ್ಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. S. 283/57

ವಾದಿ ರಾಮಕೃಷ್ಣ ಉಪಾಧ್ಯ

ಪ್ರತಿವಾದಿರು ಪರಶಿಂಪ ಅಡಿಗ ಕೂಡಾ

3ನೆ ಪ್ರತಿವಾದಿ ಸುಬ್ರಾಯಉಪಾಧ್ಯ ಪದ್ಮನಾಭಉಪಾಧ್ಯರ ಮಗ ಶಾಸ್ತ್ರ ಪಾಲಿಟಿನ್ ಕ್ಯಾಂಟಿನ್ ಡಬ್ಲಿರೋಡ್ ಮೈಸೂರು ಯಿವರಿಗೆ ತಿಳಿಯಪಡಿಸುವದೇನಂದ್ರೆ

ಮೇಲಿನ ದಾವೆಯು ವಾದಿಯು ನೀವು ವನ್ನೈರಿಗೆ ಮೇಲೆ ಗೇಣಿ ಬಾಕಿ ಬಗ್ಗೆ ಕುಂದಾಪುರ ಡಿ. ಮು. ಕೋರ್ಟಿನಲ್ಲಿ O. S 283/57ನೆ ದಾವೆ ಹೂಡಿ ಸದ್ರಿ ದಾವೆಯು ತಾ. 31—1—1959ಕ್ಕೆ ಯಿಟ್ಟಿದೆ ಸದ್ರಿ ದಿವ್ಸ 3ನೆ ಪ್ರತಿವಾದಿಯು ಆಕ್ಷೇಪಣೆಯಿದ್ರೆ ಆ ದಿವ್ಸ ಕೋರ್ಟುಮುಂದೆ ಹಾಜರಾಗಿ ಸದ್ರಿ ಆಕ್ಷೇಪಣೆಯನ್ನು ಹಾಜರುಮಾಡತಕ್ಕದ್ದು ತಪ್ಪಿದ್ರೆ ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು ಯೆಂಬ ಸಂಗ್ತಿ ತಿಳಿಸಲಾಗುತ್ತದೆ.

ಕೋರ್ಟು ಹುಕುಂ ಪ್ರಕಾರ

ವಾದಿಯ ಕಡೆ ಎಡ್ವೊಕೇಟ್, ಮ್ಯಾ. ತೇಜಪ್ಪ ಶೆಟ್ಟಿ, ಕುಂದಾಪುರ ಕಸಬಾ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಭಗವಾನ್ ರಮಣ ಮಹರ್ಷಿ

(೪ನೇ ಪುಟದಿಂದ)

ಶ್ರೀ ರಮಣ ಮಹರ್ಷಿಗಳು ಅದ್ವೈತ ವೇದಾಂತದ ಆಧ್ಯಾತ್ಮಿಕ ಸ್ಥಿತಿಯನ್ನು ಈ ರೂಪದಲ್ಲಿ ಸ್ವೀಕರಿಸುತ್ತಾರೆ, "ಆತ್ಮನಾಶ ನಾಗುವಂತಿಲ್ಲ, ಇಂದ್ರಿಯವೂ ಅಲ್ಲ, ಜೀವವೂ ಅಲ್ಲ, ಮನಸ್ಸೂ ಕೂಡಾ ಅಲ್ಲ, ನಾವು ಇದನ್ನು ಅಧ್ಯಾತ್ಮ ಚಿಂತನೆಯಿಂದಲ್ಲ ಬದಲು ಆಧ್ಯಾತ್ಮಿಕ ಆಚರಣೆಯಿಂದ ಅನುಭವ ಮಾಡಿಕೊಳ್ಳಬಲ್ಲೆವು. ಸತ್ಯವನ್ನು ಪಡೆಯುವದಕ್ಕೋಸ್ಕರ ನಮಗೆ ನಮ್ಮ ಇಚ್ಛೆಗಳ ದಮನ ಮತ್ತು ಪ್ರಕೃತಿಯನ್ನು ಶಾಂತಮಾಡಿಕೊಂಡು ನೈತಿಕ ಮಾರ್ಗದಲ್ಲಿ ನಡೆಯಬೇಕಾಗುವುದು. ಚೇತನದ ಸುದೃಢತೆಯು ಕೊರತು ಸತ್ಯಾನುಭೂತಿ ಅಸಂಭವವಾಗುವುದು. ಇದಕ್ಕೋಸ್ಕರ ನಾವು ಆಂತರಿಕ ರೂಪದಿಂದ ಸಂಪೂರ್ಣ ಮತ್ತು ಸ್ವತಂತ್ರರಾಗಿರುವುದು ಅನಿವಾರ್ಯವಾಗಿದೆ. ಈಶ್ವರನು ನಮ್ಮ ಹೃದಯದಲ್ಲೇ ಇರುವನು. ದೃಷ್ಟಿ ಬಾಹ್ಯದಿಂದ ಅಂತರ್ಯದ ಕಡೆಗೆ ಪ್ರವೃತ್ತವಾಗದಿರುವವರೆಗೆ ಅದನ್ನು ನಾವು ಪಡೆಯುವುದು ಅಸಂಭವವೇ ಸರಿ."

ಮನುಷ್ಯನು ತನ್ನ ಅಂತರ್ಯದಲ್ಲಿ ಬ್ರಹ್ಮದರ್ಶನವನ್ನು ಪಡೆದಾಗ ಸ್ವಯಂ ಹೊರಗಿನ ವಸ್ತುಗಳಲ್ಲಿ ಕೂಡ ಅವನಿಗೆ ಬ್ರಹ್ಮದರ್ಶನವಾಗುತ್ತದೆ. ಶ್ರೀ ರಮಣ ಮಹರ್ಷಿಗಳು ಇಂಥ ವ್ಯಕ್ತಿಗಳೇ ಆಗಿದ್ದರು. ಆದುದರಿಂದಲೇ ಸ್ವಾರ್ಥ ಪ್ರವೃತ್ತಿಗಳು ಅವರಿಂದ ದೂರ ಹೊರಟುಹೋದುವು. ಸರ್ವಕಲ್ಯಾಣ ಅವರ ಜೀವನದ ಆದರ್ಶವಾಗಿತ್ತು. ಮಾನಾಪಮಾನ, ಪ್ರಶಂಸೆ, ನಿಂದೆ ಮೊದಲಾದವುಗಳು ಅವರ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುತ್ತಿರಲಿಲ್ಲ ಹೀಗಿದ್ದುದರಿಂದಲೇ ಅವರು ಸ್ಥಿತಪ್ರಜ್ಞನ ಸ್ಥಾನಕ್ಕೇರಿದರು.

ರಮಣರು ಆಧ್ಯಾತ್ಮಿಕತೆಯನ್ನು ಋಷಿಮುನಿಗಳಿಗೇ ಬಿಟ್ಟುಕೊಡುವುದರ ಪಕ್ಷಪಾತಿಗಳಾಗಿರಲಿಲ್ಲ ಅವರು 'ಆಧ್ಯಾತ್ಮಿಕ ಪ್ರಾಣಿಗಳಿಗೆ ಸಾಂಸಾರಿಕತೆಯಿಂದ ಪ್ರತ್ಯೇಕ ಇರುವುದು ಅಗತ್ಯವಿಲ್ಲ ನಾನು ತಿಳಿದುಕೊಂಡ ಮಟ್ಟಿಗೆ ಇದರ ಬದಲು ಸಂಸಾರದಲ್ಲೇ ಇದ್ದುಕೊಂಡು ಬೇಕಾದಷ್ಟು ಅಧ್ಯಾತ್ಮದ ಚಿಂತನೆಯನ್ನು ಮಾಡಬಹುದು. ಇದು ಮಹತ್ವದ ವಿಷಯ ಕೂಡಾ ಆಗಿದೆ ಜೀವನ ಒಂದು ಆಟವಾಗಿದೆ—ಇದರಲ್ಲಿ ನಮ್ಮ ಪಾಲನ್ನು ನಿರ್ವಹಿಸುವುದು ಅಗತ್ಯ. ಬಹುಶಃ ನಾವು ಇದರಲ್ಲಿ ಅಪಜಯವನ್ನು ಹೊಂದಬಹುದು. ಆದರೆ ಇದರ ಕಡೆಗೆ ಗಮನವನ್ನೇ ಕೊಡದೆ ನಾವು ನಮ್ಮ ಕರ್ತವ್ಯವನ್ನು ಪೂರೈಸಲೇಬೇಕು. ವಸ್ತುತಃ ಮಹತ್ವ ಈ ಆಟದ್ದಾಗಿದೆ—ಇದರಲ್ಲಿ ದೊರೆಯುವ ಜಯಪರಾಜಯವುದ್ದಲ್ಲ". ಎಂದು ಹೇಳುತ್ತಿದ್ದರು

ಶ್ರೀ ರಮಣ ಮಹರ್ಷಿಗಳು ಹಿಂದಿನ ಸಾಂಪ್ರದಾಯವನ್ನೇ ಅನುಮೋದಿಸುತ್ತಿರಲಿಲ್ಲ, ಬದಲು ಅವರು ನೂತನ ಪುರಾತನಗಳ ಒಂದು ಕಲ್ಯಾಣಕಾರೀ ಸಮನ್ವಯವಾದಿಗಳಾಗಿದ್ದರು ಅವರು ಆತ್ಮಪರೀಕ್ಷೆಯ ಆವಶ್ಯಕತೆಯ ಕುರಿತು ಎಲ್ಲದಕ್ಕಿಂತಲೂ ಹೆಚ್ಚು ಒತ್ತಿ ಹೇಳುತ್ತಿದ್ದರು. ಮತ್ತು ವಾಸ್ತವದಲ್ಲಿ ಈ ಪ್ರಪಂಚದ ರಕ್ಷಣೆ ನಮ್ಮ ಅಭೀಷ್ಟವಾಗಿದ್ದರೆ ಇವರಲ್ಲಿ ಇನ್ನೊಂದು ಪ್ರಪಂಚ-ಆಧ್ಯಾತ್ಮಿಕತೆಯ ಪ್ರಾರ್ಥನೆಯ ಪ್ರಪಂಚದ—ಸಮಾವೇಶ ಮಾಡಲೇಬೇಕಾಗುವುದು ಮಾನವ ಸಮಾಜದ ವರ್ತಮಾನ ಕಾಲದ ದುರವಸ್ಥೆಯ ಮೂಲ ಕಾರಣ ಇದೇ ಆಧ್ಯಾತ್ಮಿಕ ಶಕ್ತಿಯ ಅಭಾವವೇ ಆಗಿದೆ. ಶ್ರೀ ರಮಣರಂಥವರು ಇತ್ತ ಸಂದೇಶ ಇದೇ ಸತ್ಯದ ಕಡೆಗೆ ಎಳೆಯುತ್ತದೆ. ನಾವು ಇದರ ಮರ್ಮವನ್ನು ಚೆನ್ನಾಗಿ ತಿಳಿದುಕೊಂಡರೆ ನಮ್ಮ ಕಲ್ಯಾಣವಾಗುವುದು.

(ಮೂಲ: ಡಾ. ರಾಧಾಕೃಷ್ಣನ್)

ಎಲ್ಲರ ದೃಷ್ಟಿ ಇಲ್ಲಿದೆ—

ಕಾಶ್ಮೀರದ ಶೇಕ ಅಬ್ದುಲ್ಲಾ

ಕಾಶ್ಮೀರದ ಶೇಕ ಅಬ್ದುಲ್ಲರವರು ಈ ಸಮಯದಲ್ಲಿ ಕುಡ್‌ನ ಜೈಲಿನಿಂದ ಬಿಡುಗಡೆ ಹೊಂದಿದ್ದಾರೆ. ಇಂದು ಅಖಂಡ ದೇಶವು ಅವರನ್ನು ಸಂದೇಹ ಪೂರ್ಣ ದೃಷ್ಟಿಯಿಂದ ನೋಡುತ್ತಿದೆ. ಒಂದು ಕಾಲದಲ್ಲಿ ಕಾಶ್ಮೀರದ ಹುಲಿಯೆಂದು ಕರೆಯಲಾದ ಶೇಕ ಅಬ್ದುಲ್ಲ ಏನೋ ಒಂದು ಸನ್ನಿವೇಶದಲ್ಲಿ ಕಾಶ್ಮೀರ ಮತ್ತು ಭಾರತದ ಜನತೆಯ ವಿಶ್ವಾಸವನ್ನು ಕಳೆದುಕೊಂಡರು. ಮತ್ತು ಈ ಸನ್ನಿವೇಶವು ವಿದೇಶೀಯರ ಸಂಕೇತದಲ್ಲಿ, ಕಾಶ್ಮೀರವನ್ನು ಭಾರತದಲ್ಲಿ ವಿಲೀನ ಹೊಂದಿಸುವುದಕ್ಕೆ ಬದಲಾಗಿ ಸ್ವತಂತ್ರವಾಗಿರಿಸುವ ಸ್ವಪ್ನದ ರೂಪದಲ್ಲಿ ಪ್ರಕಟಗೊಂಡಿತು.

ಶೇಕ ಅಬ್ದುಲ್ಲರ ಪ್ರಾರಂಭಿಕ ಜೀವನದ ಆದರ್ಶ, ಅವರ ರಾಷ್ಟ್ರವಾದೀ ವಿಚಾರ ಧಾರೆಗಳನ್ನು ನೋಡುವಾಗ, ಅವು ಅತ್ಯಂತ ಪ್ರಖ್ಯಾತರಾಗುವಂತೆ ಮಾಡಿದ ಕಾಶ್ಮೀರದ ಜನತೆ ಮತ್ತು ತನ್ನ ಸಹಯೋಗಿಗಳಿಗೆ ವಿಶ್ವಾಸ ಘಾತವನ್ನು ಮಾಡಿಯಾರೆಂಬುದನ್ನು ನಂಬುವುದೇ ಕಷ್ಟಸಾಧ್ಯವಾಗುತ್ತದೆ. ಕಾಶ್ಮೀರದ ಒಂದು ಸಾಮಾನ್ಯ ವ್ಯಾಪಾರಿಯ ಕುಲದಲ್ಲಿ ಜನ್ಮವೆತ್ತ ಶ್ರೀ ಶೇಕ ಅಬ್ದುಲ್ಲರು ಎಸ್. ಎಸ್ ಸಿ ವರೆಗೆ ವಿದ್ಯಾಭ್ಯಾಸ ಪಡೆದನಂತರ ಅಲ್ಲಿಯ ರಾಜ ತಂತ್ರಕ್ಕೆ ವಿರುದ್ಧವಾಗಿ ಯಾವ ಪ್ರಕಾರ ಸಂಘರ್ಷವೆಬ್ಬಿಸಿದರು, ಮುಸ್ಲಿಮ್ ಕಾನ್ಫರೆನ್ಸನ್ನು ಮುಸ್ಲಿಮ್ ನೇಶನಲ್ ಕಾನ್ಫರೆನ್ಸಿನಲ್ಲಿ ಬದಲಾಯಿಸಿ ತನ್ನ ಅಸಾಂಪ್ರದಾಯಿಕ ಮತ್ತು ರಾಷ್ಟ್ರೀಯ ಸ್ವಭತ್ತಿಯ ಪರಿಚಯವನ್ನು ಹೇಗೆ ಮಾಡಿಸಿದರು—ಎಂಬುದರಿಂದ ತಾತ್ಕಾಲೀನ ಬ್ರಿಟಿಷ ಸರಕಾರಕ್ಕುದುರಾಗಿದ್ದ ಸಂಘರ್ಷಶೀಲ ಭಾರತೀಯ ಮುಂದಾಳುಗಳ ದೃಷ್ಟಿಯಲ್ಲಿ ಉತ್ತಮರೆಂದು ಕರೆಸಿಕೊಳ್ಳುವದು ಸ್ವಾಭಾವಿಕವೇ ಆಗಿತ್ತು. ಭಾರತದ ಪ್ರಧಾನ ಮಂತ್ರಿ ಶ್ರೀ ನೆಹರೂ ಅವರೆಡೆಗೆ ವಿಶೇಷ ರೂಪದಲ್ಲಿ ಆಕೃಷ್ಟರಾಗಿದ್ದರು.

ಶೇಕ ಅಬ್ದುಲ್ಲರು ೧೯೪೬ರಲ್ಲಿ 'ಕಾಶ್ಮೀರ ತ್ಯಜಿಸಿರಿ' ಯ ಧ್ವನಿಯೆಬ್ಬಿಸಿದರು. ಮಹಾರಾಜರ ವಿರುದ್ಧ ಬಲಾತ್ಕಾರಾಂದೋಲನವನ್ನೆಬ್ಬಿಸಿದರು. ಈ ಸಂದರ್ಭದಲ್ಲವರಿಗೆ ಮೂರು ವರ್ಷಗಳ ಸಾದಾ ಶಿಕ್ಷೆಯಾಗಿತ್ತು; ಆದರೆ, ಒಂದು ವರ್ಷದ ನಂತರವೇ ಅವರ ಬಿಡುಗಡೆಯಾಯಿತು. ಈ ಸಂದರ್ಭದಲ್ಲಿ ಕಾಶ್ಮೀರದಲ್ಲಿ ಸಾಂಪ್ರದಾಯಿಕತೆಯ ವಿಷಗಾಳಿಯು ಹರಡಿತ್ತು. ಶ್ರೀ ಶೇಕರು ಇದಕ್ಕೆದುರಾಗಿ ಸಕ್ರಿಯಾತ್ಮಕವಾಗಿ ಹೋರಾಡಿದರು ಇದೇ ಸಮಯದಲ್ಲಿ ಪಾಕಿಸ್ತಾನದ ಕಡೆಯಿಂದ ಕಾಶ್ಮೀರಾಕ್ರಮಣ ನಡೆಯಿತು ಕಾಶ್ಮೀರದ ಮಹಾರಾಜರು ಭಾರತದ ಸಹಾಯವನ್ನು ಯಾಚಿಸಿದರು. ಶೇಕ ಅಬ್ದುಲ್ಲರ ಲೋಕಪ್ರಿಯತೆಯಲ್ಲಿ ವಿಶ್ವಾಸವಿಟ್ಟು ೧೭-೩-೪೮ರಲ್ಲಿ ಪ್ರಧಾನ ಮಂತ್ರಿಪದವು ಅವರಿಗೆ ಕೊಡಲ್ಪಟ್ಟಿತು. ಆ ಸಮಯದಲ್ಲಿ ಶೇಕ ಅಬ್ದುಲ್ಲರು ತಮ್ಮ ದೇಶಭಕ್ತಿ, ಕಾರ್ಯಕೌಶಲ ಮತ್ತು ಸಂಘಟನಾ ಶಕ್ತಿಯಿಂದಾಗಿ ಜನರ ಮನಸ್ಸಿನಲ್ಲಿ ಲೋಕಪ್ರಿಯತೆಯು ಸಾಕಾರ ಮೂರ್ತಿಯಾಗಿ ಪರಿಣಮಿಸಿದರು. ತಮ್ಮ ಭವಿಷ್ಯಭಾಗ್ಯ ಶೇಕರ ಹಸ್ತದಲ್ಲಿ ಸುರಕ್ಷಿತವಾಗಿದೆಯೆಂದು ಜನತೆಯು ಅಚಲ ವಿಶ್ವಾಸವಿತ್ತು.

ಅಂತ್ಯದಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಹಸ್ತಕ್ಷೇಪದಿಂದ ಕಾಶ್ಮೀರದಲ್ಲಿ ಯುದ್ಧವಿರಾಮ ಸಂಧಿಯಾಯಿತು ಶೇಕ ಅಬ್ದುಲ್ಲರು ತಮ್ಮ ಸರ್ವಶಕ್ತಿಯನ್ನೂ ಕಾಶ್ಮೀರೀ ಜನತೆಯ ಸ್ಥಿತಿಯ ಸುಧಾರಣೆಗಾಗಿ ವ್ಯಯಿಸಿದರು ಸ್ವಭಾವತಃ ಅವರಿಗೆ ಜನತೆಯ ಬೆಂಬಲ ದೊರೆಯಿತು, ಆದರೆ ಮುಂದೆ ಮುಂದೆ ಅವರ ಸಂಪರ್ಕ ಅಮೆರಿಕೆ ಮತ್ತು ಅನ್ಯ ವಿದೇಶೀ ರಾಷ್ಟ್ರಗಳೊಂದಿಗಾಯಿತು. ಸಂಭವತಃ ಯುಕ್ತರಾಷ್ಟ್ರ ಸಂಘದಲ್ಲಿ ಕಾಶ್ಮೀರ ಸಂಬಂಧಿ ವಾದವಿವಾದಗಳ ಕುರಿತಾದ ಅವರ ಅಮೆರಿಕೆಯ ಯಾತ್ರೆಯು ಅವರ ವಿಚಾರ ಮತ್ತು ದೃಷ್ಟಿಕೋನಗಳ ಮೇಲೆ ವಿಶೇಷ ಪ್ರಭಾವ ಬೀರಿತು. ಅವರು ಸ್ವತಂತ್ರ ಕಾಶ್ಮೀರದ ಸ್ವರ್ಣಮ ಸ್ವರೂಪವನ್ನು ತಮ್ಮ ಹೃದಯದಲ್ಲಿ ಭದ್ರಪಡಿಸಿಕೊಂಡರು. ಸ್ವದೇಶಕ್ಕೆ ಹಿಂತಿರುಗಿದ ಮೇಲೆ, ಕ್ರಮಕ್ರಮೇಣ ಅವರು ತಮ್ಮ ರೂಪಪರಿವರ್ತನಕ್ಕೆ ಆರಂಭಿಸಿದರು—ಸ್ವತಂತ್ರ ಕಾಶ್ಮೀರದ ತೆರೆದ ಬೇಡಿಕೆಯನ್ನು ಸಾರ್ವಜನಿಕ ಕ್ಷೇತ್ರದಲ್ಲಿ ಇಟ್ಟರು.

ತಮ್ಮ ನಿಸ್ವಾರ್ಥಸೇವೆ ಮತ್ತು ತ್ಯಾಗಗಳ ಪರಿಣಾಮವಾಗಿ ಜನತೆಯನ್ನು ತಮ್ಮ ಮುಷ್ಟಿಯೊಳಗಿಟ್ಟುಕೊಂಡಿರುವಾಗ, ಅವರೆಲ್ಲರೂ ತಮಗೆ ಹಾರ್ದಿಕ ಬೆಂಬಲ ನೀಡುವರೆಂಬ ಅಚಲ ವಿಶ್ವಾಸ ಶ್ರೀಮಾನ್ ಶೇಕರಲ್ಲಿತ್ತು. ಆದರೆ, ಅವರ ಈ ಕನಸು ಕೇವಲ ಹಗಲುಗನಸಿನಂತಾಯಿತಷ್ಟೆ: ಅವರು ಸೆರೆಮನೆಯ ಗಾಳಿಯನ್ನು ಉಸಿರಾಡಬೇಕಾಗಿ ಬಂತು. ಜನತೆಯು ಬಾಯಿಂದ ಛೀ ಕೇಳಬೇಕಾಯಿತು ಇದೀಗ ನಾಲ್ಕು ವರ್ಷ ಸೆರೆಮನೆಯಲ್ಲಿದ್ದ ಶೇಕರನ್ನು ಬಿಡುಗಡೆ ಮಾಡಲಾಗಿದೆ. ಅವರ ಭಾವೀ ಗತಿವಿಧಿಯೇನು ಎಂಬುದನ್ನು ಯಾರೂ ಹೇಳಬಲ್ಲವರಿಲ್ಲ. ಆದರೆ ಅವರಿಗೆ ಭಾರತೀಯ ರಾಜನೀತಿಯಲ್ಲಿ ಯಾವುದಾದರೂ ಒಂದು ಸ್ಥಾನ ಇನ್ನೂ ಇದೆ ಎನ್ನುವುದಂತೂ ಖಂಡಿತ ಸತ್ಯ, ಅದಾವ ಸ್ಥಾನವೆಂದು ಇನ್ನು ಕೆಲವೇ ದಿನಗಳಲ್ಲಿ ಕಾಣಬಹುದಷ್ಟೆ.

ಗೂಡಿನೊಳಗಣ ಸಿಂಹದ ಹಾಗಾಗಿರುವ ಇಷ್ಟವಿಲ್ಲದ ಶೇಕರ ಬೆಂಬಲಿಗರೂ ಅವರಿಗೆ ನೆರವು ನೀಡಿಯಾರು; ತಾವು ಕಾಶ್ಮೀರದ ಜನತೆಯ ಹೃದಯಕ್ಕೆ ವಿರೋಧವಾಗಿ ಗೈದ ಆಚರಣ ಕೃತ್ಯಕ್ಕಾಗಿ ಶ್ರೀ ಶೇಕರು ಪಶ್ಚಾತ್ತಾಪ ಪಡುತ್ತಿರುವರಂತೆ! ಪಶ್ಚಾತ್ತಾಪವೇ ಹೃದಯವನ್ನು ಪುನೀತಗೊಳಿಸುವುದೆಂದು ಹೇಳುತ್ತಾರೆ. ಅಂತೂ ಶೇಕರು ಕಾರಾಗೃಹದಿಂದ ಬಿಡುಗಡೆಯಾಗಿ ತಮ್ಮ ಜೀವನದಲ್ಲಿ ಹೊಸ ಘಟ್ಟವೊಂದನ್ನು ಪ್ರಾರಂಭಿಸುವರೇ ಅಥವಾ ಹಿಮ್ಮೆಟ್ಟುಳಿಯುವರೇ ಎಂದು ಕಾದು ನೋಡಬೇಕು

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟವೆ

ಬೆಲೆ ರೂ. ೩—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ರೈಲುಮಾರ್ಗಗಳ ವಿದ್ಯುತ್ಪೂರಣ

(೩ನೇ ಪುಟದಿಂದ)

ರೈಲ್ವೆ ಎಂಜಿನ್‌ಗಳನ್ನು ತರುವುದರ ಬದಲು ಈಗಲೇ ಅವುಗಳನ್ನು ಕಾರ್ಯಾಚರಣೆಗೆ ತರುವುದರಿಂದ ಅವಿಚಾಲಿತ ರೈಲ್ವೆ ಎಂಜಿನ್‌ಗಳಿಗಾಗಿ ವಿನಿಯೋಗಿಸಬೇಕಾಗುವ ಹಣವನ್ನು ಉಳಿಸಬಹುದಾಗಿದೆ.

ಈ ಸಮಯದಲ್ಲಿ ವಿದ್ಯುತ್ ಚಾಲಿತ ರೈಲ್ವೆ ಎಂಜಿನ್‌ಗಳನ್ನು ಕಾರ್ಯಾಚರಣೆಗೆ ತರುವುದರಿಂದ ಅವಿಚಾಲಿತ ರೈಲ್ವೆ ಎಂಜಿನ್‌ಗಳಿಗೆ ಅವಶ್ಯಕವಾಗುವ ಹೆಚ್ಚು ಪ್ರಮಾಣದ ಕಲ್ಲಿದ್ದಲನ್ನು ತಗ್ಗಿಸಿ ದ್ವಿತೀಯ ಯೋಜನೆಯ ಪ್ರಕಾರ ಅಭಿವೃದ್ಧಿಪಡಿಸಲಾಗುತ್ತಿರುವ ಕೈಗಾರಿಕೆಗಳಿಗೆ ಪೂರೈಸಬಹುದಾಗಿದೆ.

ರೈಲ್ವೆಗಳ ವಿದ್ಯುತ್ಪೂರಣ ಕಾರ್ಯ ವಿಸ್ತರಣೆಯಿಂದ ಎಲ್ಲರೀತಿಯ ವಿದ್ಯುಚ್ಛಕ್ತಿ ಉಪಕರಣಗಳು ಮತ್ತು ರೈಲ್ವೆ ಎಂಜಿನ್, ಗಾಡಿಗಳು ಮುಂತಾದುವನ್ನು ದೇಶದಲ್ಲಿಯೇ ತಯಾರಿಸುವ ಸಾಧ್ಯತೆಗೆ ಗಮನನೀಯಬೇಕಾಗುವುದು. ಅವಿಚಾಲಿತ ರೈಲ್ವೆ ಎಂಜಿನ್‌ಗಳಿಗಿಂತ ವಿದ್ಯುತ್ ಚಾಲಿತ ರೈಲ್ವೆ ಎಂಜಿನ್‌ಗಳ ಜೋಡಣೆ ಆವರಣವನ್ನು ನಿರ್ಮಿಸಲು ಸುಲಭ. ಚಿತ್ತರಂಜನ ರೈಲ್ವೆ ಎಂಜಿನ್ ಕಾರ್ಖಾನೆಯು ವಿದ್ಯುತ್ ಚಾಲಿತ ರೈಲ್ವೆ ಎಂಜಿನ್‌ಗಳ ನಿರ್ಮಾಣವನ್ನು ಸುಲಭವಾಗಿ ಕೈಗೊಳ್ಳಬಹುದಾಗಿದೆ.

ರೈಲ್ವೆಗಳ ವಿಸ್ತರಣ ಯೋಜನೆಗಳಿಗೆ ಸಂಬಂಧವಿಲ್ಲದಂತೆ ಜಲಜನಿತ ಹಾಗೂ ಉಷ್ಣ ಜನಿತ ವಿದ್ಯುಚ್ಛಕ್ತಿಯ ಉತ್ಪಾದನೆಯ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ರೈಲ್ವೆಗಳ ವಿದ್ಯುತ್ ಪೂರಣವು ಸುಲಭ ವೆಚ್ಚದ ವಿದ್ಯುಚ್ಛಕ್ತಿಯನ್ನು ಅವಲಂಬಿಸಿದೆ ಎಂಬುದು ಸ್ವತಸ್ಸಿದ್ಧವಾಗಿದೆ. ದಾಮೋದರ ಕಣಿವೆ ಯೋಜನೆಯಿಂದ ಕಲ್ಕತ್ತಾದ ವಿದ್ಯುತ್ ಪೂರಣ ಯೋಜನೆಗೆ ಸುಲಭ ದರದಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸಲಾಗುವುದು.

ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಸಂಬಂಧಪಟ್ಟ ಮಂತ್ರಿ ಶಾಖೆಯು ಆಗ್ನೇಯ ರೈಲ್ವೆ ವಿಭಾಗದಲ್ಲಿ ಖರಗಪುರ ಹಾಗೂ ವಾಲ್ಟೇರ್‌ಗಳ ನಡುವೆಯ ರೈಲುಮಾರ್ಗವನ್ನು ವಿದ್ಯುತ್ ರೈಲುಮಾರ್ಗವನ್ನಾಗಿ ಮಾರ್ಪಡಿಸುವ ಬಗ್ಗೆ ಯೋಜನೆಯನ್ನು ಸಿದ್ಧಗೊಳಿಸಬೇಕಾಗುವುದು.

ಅಪೂರ್ಣಾಭಿವೃದ್ಧಿ ಹೊಂದಿರುವ ರಾಷ್ಟ್ರವಾದ ಭಾರತದಲ್ಲಿ ಗ್ರಾಮಾಂತರ ವಿದ್ಯುತ್ಪೂರಣ ವಿಸ್ತರಣ ಕಾರ್ಯಕ್ಕೆ ನಮ್ಮ ಯೋಜನೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ನೀಡಬೇಕಾಗುವುದು. ರೈಲ್ವೆ ಟ್ರಾನ್ಸ್ ಮಿಷನ್ ಮಾರ್ಗಗಳಿಂದ ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸಬಹುದಾಗಿದೆ.

ನಮ್ಮ ದೇಶದಲ್ಲಿ ಡೀಸೆಲ್ ಚಾಲಿತ ರೈಲುಗಳನ್ನು ಅಧಿಕ ಪ್ರಮಾಣದಲ್ಲಿ ಕಾರ್ಯಾಚರಣೆಗೆ ತರಬಾರದೇಕೆಂದು ಕೇಳಬಹುದು. ನಾವು ಕ್ರೂಡ್ ಆಯಿಲನ್ನು ಹೆಚ್ಚಿನ ಪ್ರಮಾಣದಲ್ಲಿ ಆಮದುಮಾಡಿಕೊಳ್ಳುತ್ತಿದ್ದೇವೆ. ಅಸ್ಸಾಂನಲ್ಲಿ ಪೆಟ್ರೋಲಿಯಂಗಾಗಿ ಈಗ ಹೊಸದಾಗಿ ಬಾವಿಗಳನ್ನು ತೋಡಲಾಗುತ್ತಿದೆ, ಅಲ್ಲಿ ಎಣ್ಣೆ ದೊರೆಯುವುದೇ ಎಂಬುದನ್ನು ಈಗಲೇ ಹೇಳುವಂತಿಲ್ಲ. ಅಲ್ಲದೆ ಕೂಡಲೆ ಡೀಸಲ್ ಚಾಲಿತ ರೈಲುಗಳನ್ನು ಕಾರ್ಯಾಚರಣೆಗೆ ತರುವುದರಿಂದ ನಮಗೆ ಅಧಿಕ ವಿದೇಶೀ ವಿನಿಮಯ ಧನವು ಅಗತ್ಯವಾಗುವುದು. ಆದರೆ ಈಗ ನಮ್ಮಲ್ಲಿ ವಿದೇಶೀ ವಿನಿಮಯ ಧನದ ಅಭಾವವಿರುವುದು.

ಆರ್ಥಿಕ ದೃಷ್ಟಿಯಿಂದ ಒಂದು ಪರಿಮಿತಿಯವರೆಗೆ ಡೀಸಲ್ ಚಾಲಿತ ರೈಲುಗಳು ವಿದ್ಯುತ್ ಚಾಲಿತ ರೈಲುಗಳಿಗಿಂತ ಅಲ್ಪ ವೆಚ್ಚದ್ದಾಗಿರುವುವು. ಸಂಚಾರ ಸಾಗಣೆ ಅಧಿಕ ಪ್ರಮಾಣದ್ದಾದರೆ, ಡೀಸೆಲ್ ಚಾಲಿತ ರೈಲುಗಳು ಹೆಚ್ಚು ದುಬಾರಿಯಾಗುತ್ತವೆ.

ಆದಾಗ್ಯೂ ಡೀಸಲ್ ಚಾಲಿತ ರೈಲುಗಳು ಕೆಲವು ಅನುಕೂಲತೆಗಳನ್ನು ಹೊಂದಿವೆ. ಈ ಅನುಕೂಲತೆಗಳನ್ನು ಭಾರತೀಯ ರೈಲ್ವೆಗಳು ಮನಗಂಡು ಅಗತ್ಯವಿರುವ ಕಡೆಗಳಲ್ಲಿ ಆ ರೈಲುಗಳನ್ನು ಕಾರ್ಯಾಚರಣೆಗೆ ತರುತ್ತಿವೆ. ರೈಲುಮಾರ್ಗಗಳನ್ನು ಸಂಪೂರ್ಣವಾಗಿ ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾಡುವವರೆಗೆ ಡೀಸಲ್ ಚಾಲಿತ ರೈಲುಗಳನ್ನು ಬಳಸಬಹುದಾಗಿದೆ. ಭಾರತೀಯ ರೈಲ್ವೆಗಳು, ಅಸನ್‌ಸಾಲ್–ಮೊಗಲಸರಾಯ್ ಮತ್ತು ಅಸನ್‌ಸಾಲ್—ರೂರ್ಕೆಲಾ ರೈಲುಮಾರ್ಗಗಳಲ್ಲಿ ಭಾರಿ ಪ್ರಮಾಣದ ಸರಕುಗಳನ್ನು ಒಯ್ಯುವುದಕ್ಕಾಗಿ ೧೦೦ ಡೀಸಲ್ ರೈಲ್ವೆ ಎಂಜಿನ್‌ಗಳ ಬಗ್ಗೆ ಬೇಡಿಕೆಯಿತ್ತಿದೆ. ಈಗಾಗಲೆ ೨೦ ರೈಲ್ವೆ ಎಂಜಿನ್‌ಗಳು ಕಲ್ಕತ್ತಕ್ಕೆ ಆಗಮಿಸಿವೆ.

ವಿದೇಶಗಳು ಕೂಡ ರೈಲುಮಾರ್ಗಗಳನ್ನು ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾರ್ಪಡಿಸುವ ಪೂರ್ವದಲ್ಲಿ ಡೀಸಲ್ ಚಾಲಿತ ರೈಲುಗಳನ್ನು ಕಾರ್ಯಾಚರಣೆಗೆ ತರುತ್ತಿವೆ.

ಹೊಸದಾಗಿ ಅವಿಚಾಲಿತ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವುದನ್ನು ಎಲ್ಲ ಪ್ರಗತಿಪರ ರಾಷ್ಟ್ರಗಳಲ್ಲಿಯೂ ತ್ಯಜಿಸಲಾಗಿದೆ. ಭಾರತವು ಕೂಡ ಅನತಿ ಕಾಲದಲ್ಲಿಯೇ ಈ ಕ್ರಮ ಕೈಗೊಳ್ಳಬಹುದು

ಹೊಸದಾಗಿ ರೈಲುಮಾರ್ಗಗಳನ್ನು ವಿದ್ಯುತ್ ರೈಲುಮಾರ್ಗಗಳನ್ನಾಗಿ ಮಾರ್ಪಡಿಸುವಾಗ ೨೫,೦೦೦ ವೋಲ್ಟ್ಸ್ ೫೦ ಸೈಕಲ್‌ಗಳ ವಿದ್ಯುಚ್ಛಕ್ತಿಯನ್ನು ಬಳಸಬೇಕೆಂದು ರೈಲ್ವೆ ಬೋರ್ಡಿನವರು ನಿರ್ಧರಿಸಿರುವರು.

ಶ್ರೀಕೃಷ್ಣ ಸ್ತೋತ್ರ

("ಕರೆಯ ನೀರು ಕೆರೆಗೆ ಚೆಲ್ಲಿ"-ಎಂಬಂತೆ)

ರಜತ ಪೀಠದಿ ನೆಲೆಸಿ ಭಕ್ತ-
ವ್ರಜವ ಸಲಹುವ, ಹೇ ಜನಾರ್ದನ॥
ಭಜಕರಿಗೆ ನಿಜರೂಪದೋರುವ
ಗಜವರಪ್ರದ! ನೀಡುದಯವನು ॥ರಜತ॥

ವೇದ ಸಾರುವ ನೊರೆದ ದೇವನೆ
ಸುಜಲಪಾಲ ಮುಕುಂದ ಮಾಧವ
ಭಜಕರಿಗೆ ನಿಜರೂಪದೋರುವ
ಗಜವರಪ್ರದ! ನೀಡುದಯವನು ॥ರಜತ

—ಕೆ. ಎ. ದೇವದಾಸ್.

'NAVAYUGA' WEEKLY is in the list of periodicals and Newspapers approved or use in Secondary Schools as perproceedings Roc· No· 466 N/50 date 2-12-1950 of the Director of public Instruction Madras·

ದಿ. ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ನೋಟೀಸು

ಈ ಮೂಲಕ ತಿಳಿಯಪಡಿಸುವುದೇನಂದರೆ, ಈ ಕೆಳಗೆ ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣದ ಅಡವಿನಲ್ಲಿ ಸಾಲ ಪಡೆಕೊಂಡು ದೀರ್ಘಕಾಲದಿಂದ ಅಸಲು_ಬಡ್ಡಿಯನ್ನು ಬಾಕಿಮಾಡಿರುವುದರಿಂದ, ರಿಜಿಸ್ಟ್ರ ನೋಟೀಸು ಕೊಟ್ಟರೂ ಅಡವಿಟ್ಟ ನಗಗಳನ್ನು ಬಿಡಿಸಿಕೊಳ್ಳದಿರುವುದರಿಂದ, ಸದ್ರಿಯವರ ನಗಗಳನ್ನು ತಾ. 25-1-58 ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಯೂ ತದನಂತರ ಯುಕ್ತ ಕಂಡ ದಿನ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರಲಿ.

ಲೋನು ಸಂಬ್ರ	ಹೆಸರು ಮತ್ತು ವಿಳಾಸ	ತಾ. 31-12-1957ರ ವರೇಗೆ ಬಡ್ಡಿ ಸಮೇತ ಬಾಕಿ ರೂ.
1065/53	ಯಚ್. ಕೆ. ಶೇಕಬ್ಬ S/o ಮೊಯಿದಿನ್‌ಬ್ಯಾರಿ, ಹಳೆಯಂಗಡಿ.	60_71
1040/54	ಯಸ್. ಸುಲೈಮಾನ್, S/o ಹಸನ್‌ಬ್ಯಾರಿ, ಮೂಳೂರು. ಉಚ್ಚಿಲ.	170_03
313/55	ಪಿ. ಶಂಭು ಮುಲ್ಲಿ, ಪಂಜ, ಹಳೆಯಂಗಡಿ.	655_45
349/55	ಯಂ. ಶ್ರೀನಿವಾಸ ಭಟ್ಟ, S/o ರಾಘವೇಂದ್ರ ಭಟ್ಟ, ಮಾನಂಪಾಡಿ ಮುಲ್ಕಿ.	20_00
463/55	ಯಚ್. ರಾಮಚಂದ್ರ ಶೆಟ್ಟಿ, ಗರೋಡಿ ಮನೆ, ಹೆಜಮಾಡಿ.	56_77
674/55	ಗುಲಾಂ ಬ್ಯಾರಿ, S/o ಹಮದ್ ಬ್ಯಾರಿ, ಚರಂತಿ ಪೇಟೆ ಮುಲ್ಕಿ.	15·65
711/55	— do —	18_53
691/55	ಸಿದ್ದಯ ಪೂಲ್ಯ, S/o ಅಂಗರ ಪೂಲ್ಯ, ಬಳಪು, ಪಂಜಿನಡ್ಕ, ಮುಲ್ಕಿ	25 20
1015/55	ಕೆ ಬಾಸ್ಕರ ಶೆಟ್ಟಿ, S/o ರಾಮಯ ಶೆಟ್ಟಿ, ಕಣ್ಣಂಗಾರ್, ಹೆಜಮಾಡಿ.	238_30
1074/55	ಬೋಜ ಆಚಾರಿ, S/o ಜನ್ನ ಆಚಾರಿ, ಕೊಳಕಾಡಿ, ಪಂಜಿನಡ್ಕ, ಮೂಲ್ಕಿ.	10.59
1208/55	ಸೇಸಪ್ಪ ಸಾಲಿಯಾನ್, S/o ಮುತ್ತಯ, ಕೋಡಿ, ಹೆಜಮಾಡಿ	71 33
157/56	ಯಂ. ನರಸಿಂಹ ಭಟ್, ನ್ಯೂ ರೊಯಲ್ ಕೇಫ್, ಉಡ್ಪಿ.	216-99
292/56	— do ·	246_56
221/56	ಪಿ. ಯಂ ಅಬ್ದುಲ್ಲಾ, S/o ಮೊಯಿದಿನ್ ಬ್ಯಾರಿ, ಗುಡ್ಡೆ ಮಸೀದಿ ಬಳಿ, ಮೂಲ್ಕಿ.	115_46
355/56	ಎಲ್ಲು ಪೂಜಾರಿ, S/o ಕೊರಗ ಪೂಜಾರಿ, ಮಂದಾಡಿ, ಅತಿಕಾರಿಬೆಟ್ಟು.	40_85
376/56	ಬಾವು ಬ್ಯಾರಿ C/o ಯಂ. ಇಬ್ರಾಹಿಂ, ಮೂಳೂರು, ಉಚ್ಚಿಲ.	341_26

ಮುಲ್ಕಿ
9_1-1958.

ಯಂ. ಆರ್. ಯಚ್. ಪೂಂಜ,
ಮೆನೇಜರ್.

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು: ವೀರಪ್ಪ ಯುಗಟಿ, ಬಿ. ಎ., ಎಲ್‌ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸತ್ಯ ವರ್ತನೆಯಿಂದ ಪರಿಹಾರವಾಗುವವೆಂಬದು ಕಥಾರಹಸ್ಯದ ಮೂಲಕ ವ್ಯಕ್ತಪಡಿಸಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ. ಬೆಲೆ: ರೂ. 1—12—0 (1-75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ಮರ್ಯಾದೆಯ ಜೀವನಕ್ಕಾಗಿ

(೨ನೇ ಪುಟದಿಂದ)

ಏನೇ ನಾನು ಸಂಪಾದಿಸಲು ಹೋಗ ಬೇಕಾಗಿತ್ತು. ದಿನದಿಂದ ದಿನಕ್ಕೆ ಭೋಸ ರಲ್ಲಿ ಮಾಡಿದ ಸಾಲವು, ಬಡ್ಡಿಗಿಡ್ಡಿಯೆಂ ದು ಬೆಳಕಿನಂತೆ ಬೆಳೆಯುತ್ತಿತ್ತು. ಆ ಸ ಮಯದಲ್ಲಿ ಆಲೋಚನೆಯೊಂದೆ- ಏನು ಮಾಡುವುದು?' ಎಂದ."

"ಸಾಲ, ಬಡ್ಡಿಯ ಮೊತ್ತವನ್ನು ತೀರಿ ಸದಿದ್ದರೆ ಒಂದು ವಾರದೊಳಗೆ ನನ್ನ ಮೇಲೆ ತೀವ್ರ ಕ್ರಮ ಕೈಕೊಳ್ಳುತ್ತೇನೆಂ ದು ಭೋಸರು ಹೇಳಿದರು. ಅಂದಿನಿಂದ ನನಗೆ ತಲೆಯಲ್ಲಿ ಹೊಳೆಯುತ್ತಿದ್ದುದು ಒಂದೇ 'ಹಣ ಸಂಪಾದಿಸುವುದು ಹೇಗೆ? ಈ ಕಷ್ಟದಿಂದ ಪಾರಾಗುವುದು ಹೇಗೆ? ಬಡತನದಿಂದ ಪಾರಾಗುವುದು ಹೇಗೆ?' ..ಉತ್ತರವೇ ದೊರಕುತ್ತಿರಲಿಲ್ಲ. ಉಪ ಸಂಪಾದನೆ ಆಗುತ್ತಲೇ ಇದ್ದಿಲ್ಲ. ಉಪ ವ್ಯಾಪಾರ ಮಾಡುವಾ ಎಂದರೆ ಬಂಡವಾ ಳವಿಲ್ಲ. ಬೇರೆ ಎಲ್ಲಿಯಾದರೂ ಕೆಲಸ ಸಿ ಕ್ಕುವುದೋ ಎಂದು ಪ್ರಯತ್ನಿಸಿದೆ. 'ಬಿಗ್ಗಿ ದವನಿಗೆ ಒಂದು ಗುದ್ದು ಹೆಚ್ಚು' ಎಂಬಂ ತೆ ನನ್ನ ಭಾಗ್ಯಕ್ಕೆ ಎಲ್ಲಿ ಹೋದರೂ ದೌರ್ಭಾಗ್ಯವೇ ಗತಿ."

"ನನ್ನ ಸಹೋದ್ಯೋಗಿಗಳು ಸಂಪಾ ದಿಸುವುದನ್ನು ನೋಡಿದರೆ ನನಗೇ ಆಶ್ಚ ರ್ಯವಾಗುತ್ತದೆ. ಅವರೆ ಅವರಷ್ಟೇ ಕೆಲಸ ನಾನು ಮಾಡುತ್ತೇನೆ. ಅವರ ಹಾಲಂಶದಷ್ಟೂ ನನಗೆ ಸಂಪಾದನೆಯಿಲ್ಲ, ಸ್ವಾಮೀ! ನನಗೆ ಅವರು ಅಷ್ಟು ಬೆಟ್ಟಿಗೆ ಹೇಗೆ ಸಂಪಾದನೆ ಮಾಡುತ್ತಾರೆ ಎಂಬು ದೇ ಆಶ್ಚರ್ಯ. 'ಇಂದಿನ ಕಾಲದಲ್ಲಿ ಹಣ ಕ್ಕೆ ಬೆಲೆ! ಮರ್ಯಾದೆ! ಮರ್ಯಾದೆಯೆಂ ದ ಹಣ ಸಂಪಾದಿಸಿ ಶ್ರೀಮಂತರಾದವ ರಿಲ್ಲ! ಮಾನ-ಮರ್ಯಾದೆ; ನ್ಯಾಯ- ಅನ್ಯಾಯವೆಂದು ಹೆದರಿ ಕುಳಿತರೆ ನಮ್ಮ ಕಷ್ಟಗಳನ್ನು ಸಮಾಜ ಪರಿಹಾರ ಮಾಡು ವುದಿಲ್ಲ. ನನಗೆ ಹಣ ಸಿಗುವುದಿಲ್ಲ. ಹಣ ದಲ್ಲಿ ಶ್ರೀಮಂತನಾಗಿರುವವನಿಗೆ ಇಂದಿನ 'ಜನತೆ' ಬೆಲೆ ಕೊಡುತ್ತದೆ!"

'ನಾನು ಕೂಡಾ ಇತರರಂತೆ ಉಪ ಉದ್ಯೋಗವನ್ನು ಮಾಡಿದರೆ ಹೆಚ್ಚು ಸಂಪಾದನೆ ಏಕಾಗಬಾರದು? ನಮ್ಮ ಕ ಷ್ಟಗಳೆಲ್ಲಾ ಪರಿಹರಿಸುವಂತಾದರೆ ಹಣ ವನ್ನು ಆ ರೀತಿಯಿಂದ ಪಡೆಯುವುದರಲ್ಲಿ ತಪ್ಪೇನು? ಸ್ವಾಮೀ? ಹೈಯಷ್ಟು ಮಾನ -ಮರ್ಯಾದೆ ನಮ್ಮಲ್ಲಿಲ್ಲ. ಎಂತಂದೇ ಈ ರೀತಿಯಾಗಿ ಕಷ್ಟ ಕೆಲಸಮಾಡಿ ಹೊಟ್ಟೆ ಹೊರಿಸಬೇಕು. ಆದುದರಿಂದ ನಾನು ದ ಲಾಲಿ ವ್ಯಾಪಾರ ಮಾಡಿದರೆ ತಪ್ಪಿಲ್ಲವೆಂ ದು ನನ್ನ ಮನಸ್ಸಿಗೆ ಹೊಳೆಯಿತು."

"ನೋಡಿ, ಸ್ವಾಮೀ! ಬಡತನ, ಹಸಿವು—ಇವು ಒಬ್ಬ ಮನುಷ್ಯ ನನ್ನು ಏನು ಬೇಕಾದರೂ ಮಾಡಲಿಕ್ಕೆ ಪ್ರಚೋದಿಸುತ್ತವೆ. ಆದುದರಿಂದ ನಾನು ದಲಾಲಿ ವ್ಯಾಪಾರದ ಮೂಲಕ ಹೊಟ್ಟೆ ಹೊರೆದ ಕೊಳ್ಳುತ್ತೇನೆ. ಆದರೆ ಈ ವ್ಯಾ ಪಾರ—ಕೆಲವು, ಕೊಲೆಯಷ್ಟು ಪಾಪಕ ರವಲ್ಲ ಯ.. ಹಣದ ಅಭಾವದಿಂದ ನನ್ನ ಕಷ್ಟವನ್ನು ಅನುಭವಿಸಿದೆನೋ, ಇಂದು ಅದೇ ಹಣದಿಂದ ನಾನು ಮುಂ ಚೆಗಿಂತ ಸುಖಿಯಾಗಿದ್ದೇನೆ. ದೊಡ್ಡ- ದೊಡ್ಡ ಕಷ್ಟಗಳು ಈಗ ಬಹುವಂಶ ಮಾಯವಾಗಿವೆ.

ಕ್ಷಮಿಸಿ ಸಾರ್! ನಿಮ್ಮನ್ನು ಹಾಳು ಮಾಡಬೇಕೆಂದು ನಾನು ಆ ರೀತಿ ಕೇಳ ಲಿಲ್ಲ. ನನ್ನ ಎಂದಿನ ನಿಯಮದಂತೆ ಕೇಳಿದೆ ಅಷ್ಟೆ" ಎಂದನು.

"ಅಯ್ಯೋ, ಪಾಪ! ಎಂಥಾ ಜೀವನ! ತನ್ನ ಹೆಂಡತಿ-ಮಕ್ಕಳಿಗಾಗಿ ಏಕಮಾತ್ರ ಆತ್ಮೆಗಾಗಿ, ಸುಖ ಜೀವನದ ಸಲುವಾಗಿ ದಲಾಲಿ ಮೂಲಕ ಹಣವನ್ನು ಪಡೆಯು ವುದ ತಪ್ಪಾಗಲಿಕ್ಕಿಲ್ಲವೆಂದು ನನ್ನ ದೃಷ್ಟಿ ಯಲ್ಲಿಯೂ ಕಂಡಿತು.

ಹೋಟೆಲು ಸಮೀಪಿಸಿದುದರಿಂದ ನಾ ನು ರಿಕ್ಷಾದಿಂದ ಕೆಳಗಿಳಿದು, ರಿಕ್ಷಾವಾ ಲನ ಕೈಯಲ್ಲಿ ಐದ ರೂಪಾಯಿಯ ನೋಟೊಂದನ್ನಿತ್ತೆನು. ಇಷ್ಟು ಏಕೆ ಸ್ವಾ ಮೀ? ಎನ್ನುವಂತೆ ರಿಕ್ಷಾವಾಲ ನನ್ನನ್ನು ನೋಡಿದ

ಇರಲಿಯಪ್ಪ! ನಿನ್ನ ಜೀವನಕ್ಕೆ ನನ್ನ ದೊಂದು ಅಲ್ಪ ಸಹಾಯ. ದೇವರು ನಿನ ಗೆ ಒಳ್ಳೇದನ್ನು ಮಾಡಲಿ ಎಂದು ಹೇಳಿ ಹೋಟೆಲನ್ನು ಹೊಕ್ಕೆನು.

———

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ದೇಶವಿದೇಶಗಳ ಜನಪ್ರಿಯ ಕಥೆಗಳು—ಪ್ರಕಾಶಕರು: ಭಾರತ ಸರಕಾರ ದ ಸಮಾಚಾರ ಮತ್ತು ಪ್ರಸಾರ ಸಚಿವಾಲ ಯದ ಪ್ರಕಾಶನ ವಿಭಾಗ, ದೆಹಲಿ ೮. ಪುಟ ಗಳು: ೧೮೯. ಬೆಲೆ: ರೂ. ೧—೦೦

ಈ ಸಂಕಲನದಲ್ಲಿ ಬೇರೆ ಬೇರೆ ದೇಶದ ಹದಿನಾರು ಕಥೆಗಳಿವೆ. ಎಲ್ಲ ಕಥೆಗಳೂ ಕಥಾ ಪ್ರಿಯರಾಗಿರುವ ಮಕ್ಕಳ ಓದಿಗೂ ಅವರ ಬು ದ್ಧಿಯ ವಿಕಾಸಕ್ಕೂ ಹಿತಕಾರಿಯಾಗುತ್ತವೆ. ಮ ಕ್ಕಳ ಅಭಿರುಚಿಗೆ ತಕ್ಕುದಾದ ಪುಸ್ತಕಗಳೂ ಕಡಿಮೆಯಾಗಿರುವ ಸಂದರ್ಭದಲ್ಲಿ ಸರಕಾರೀ ವಿಭಾಗದಿಂದ ಈ ಕಾರ್ಯವು ಕೈಗೊಳ್ಳಲ್ಪ ಟ್ಟುದು ಅಭಿಮಾನದ ಸಂಗತಿಯೆನ್ನಬಹುದು. ನಮ್ಮ ದೇಶದ ಮಕ್ಕಳು ಕೇವಲ ನಮ್ಮ ದೇ ಶದ ಕಥೆಗಳನ್ನೇ ತಿಳಿದುಕೊಂಡರೆ ಸಾಲದು; ವಿದೇಶಗಳ ಬಗ್ಗೆಯೂ ತಿಳಿದುಕೊಳ್ಳುವ ಅಭಿ ರುಚಿ ಮಕ್ಕಳ ಚಿಕ್ಕ ಪ್ರಾಯದ ಚೊಕ್ಕ ಮನ ಸ್ಸಿನಲ್ಲಿಯೇ ಹುಟ್ಟುವಂತಾಗಬೇಕು—ಈ ದೃ ಷ್ಟಿಯಿಂದ ಪ್ರಕೃತದ ಪುಸ್ತಕವೊಂದು ಉಳಿ ದವರಿಗೆ ಮಾರ್ಗದರ್ಶನವಾಗಿದೆ.

ಈ ಸಂಕಲನದಲ್ಲಿ ತುರ್ಕಿದೇಶದ "ಚಿನ್ನ ದ ಮೇಕೆ", ರಶಿಯದ "ಬಂಗಾರದ ಮೀ ನು", "ಕೊರಿಯಾದ ಆಜ್ಞಾಕಾರೀ ಪುತ್ರ", ಜಪಾನಿನ "ಸಮುದ್ರದ ಉಪ್ಪುನೀರು", ಜ ರ್ಮನಿಯ "ಕೋಳಿಯ ಮೊಟ್ಟೆ", ಆಫ್ರಿಕದ "ಕಾಡಿನ ನ್ಯಾಯ", ಚೆಕೊಸ್ಲೊವಾಕಿಯದ "ಪೊಪೆಲಾ" ಟಿಬೇಟಿನ "ದುಷ್ಟಸೇವಕರು" ಗ್ರೀಸಿನ "ಶಿಲ್ಪಿಯ ಮಗ" ಮತ್ತು "ಹನ್ನೆರ ಡು ಸಹೋದರರು" ಪೂರ್ವ ಟಿಬೇಟಿನ "ಸ ರೋವರದ ನಾಯಿ", ಫ್ರಾನ್ಸಿನ "ಎಲ್ಲರ ದೇ ವರೂ ಒಬ್ಬನೇ", ನಾರ್ವೆಯ "ಮಹದೇವಾರಿ ಸರಿ", ಇಟೆಲಿಯ "ಚತುರನಾದ ರೈತ", ಕೆಂಪು ಭಾರತೀಯರ "ಸೂರ್ಯದೇವನನ್ನು ಹುಡುಕುತ್ತ", ಉತ್ತರ ರಶಿಯದ "ಸೋನಿ ಯಾ ಮತ್ತು ಹನ್ನೆರಡು ತಿಂಗಳುಗಳು", ಎಂ ಬ ಕಥೆಗಳಿವೆ. ಜನರ ಜೀವನವು ಸಾಮಾ ನ್ಯವಾಗಿ ಒಂದೇ ಉದ್ದೇಶಕ್ಕಾಗಿರುವುದರಿಂದ, ಮಾನವರ ಅಭಿಲಾಷೆಯು ಪ್ರಪಂಚದ ಎಲ್ಲೆ ಡೆಯಲ್ಲೂ ಏಕರೂಪವಾಗಿರುವುದರಿಂದ ಎಲ್ಲ ಕಥೆಗಳೂ ನಮ್ಮ ದೇಶದ ಕಥೆಗಳಂತೆ ಯೇ ಇವೆಯೆನ್ನಬಹುದು. ಆಯಾ ದೇಶಗಳ ಸನ್ನಿವೇಶಕ್ಕನುಗುಣವಾದ ವ್ಯ ತ್ಯಾಸಗಳಷ್ಟೇ ಇರಬಹುದು. ಹೊರತು ಮೂಲಭೂತವಾದ ಯಾವ ವ್ಯತ್ಯಾ ಸವೂ ಹೆಚ್ಚಾಗಿ ಕಂಡುಬರದು ಇಲ್ಲಿ ನಿರೂಪಿ ತವಾಗಿರುವಂತಹ ಹಲವಾರು ಕಥೆಗಳು ಬೇ

ದೇಶಗಳ ಪದ್ಧತಿಗನುಗುಣವಾಗಿ ಅವು ನಮ್ಮ ಕ ಥೆಗಳಿಗಿಂತ ಭಿನ್ನವಿರುತ್ತವೆ. ಮಕ್ಕಳ ಓದಿಗು ಪಯುಕ್ತವೆನಿಸಿದ ಈ ಹೊತ್ತಗೆಯು ಅಲ್ಲಲ್ಲಿ ಚಿತ್ರಗಳಿಂದಲೂ ಕಥಾರೇಖಕರ ಪರಿಚಯ ದಿಂದಲೂ ಕೂಡಿಕೊಂಡಿದು, ಆಕರ್ಷಣೀಯ ವಾಗಿದೆಯೆನ್ನಬಹುದು.

ಪ್ರವಾದಿಯ ತೋಟ—(ಕಹಲೀಲ್ ಗಿಬ್ರಾನನ ಉಕ್ತಿಸಂಗ್ರಹ) ಸಂಗ್ರಹಕಾರರು: ಶ್ರೀ ದೇಸಾಯಿ ದತ್ತಮೂರ್ತಿ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ ಪುಟ ಗಳು: X+೧೩೦. ಬೆಲೆ ರೂ. ೧ ೫೦.

ಲೆಬನಾನ್ ದೇಶದ ಪ್ರಸಿದ್ಧ ಸಾಹಿತಿಯೂ ದವನು ಕಹಲೀಲ ಜಿಬ್ರಾನ್. ಅವನ 'ಪ್ರ ವಾದಿ' ಮತ್ತು 'ಮಾನವ ಪುತ್ರ ಜೀಸಸ್' ಎಂಬೆರಡು ಗ್ರಂಥಗಳನ್ನು ಅನುವಾದಿಸಿ ಕನ್ನ ಡಿಗರಿಗೆ ಒದಗಿಸಿದ ಶ್ರೀ ದತ್ತಮೂರ್ತಿಯವ ರು ಇದೀಗ "ಪ್ರವಾದಿಯ ತೋಟ", "ಮ ಳಲು ಬುರುಗು" ಎಂಬೆರಡು ಪುಸ್ತಕಗಳ ಹಾಗೂ "ಕಹ್ಲಿಲ್ ಕವಿವಾಣಿ" ಎಂಬ "ಕಂಬನಿ-ನಗೆಹನಿ" ಎಂಬ ಪುಸ್ತಕದ ಒಂಭತ್ತು ಪದ್ಯಗಳ ಅನುವಾದವನ್ನು ಇತ್ತಿ ದ್ದಾರೆ.

ಮಹಾತ್ಮರಾದವರ ಪ್ರತಿಯೊಂದೂ ನುಡಿ ಗೂ ಮಹತ್ವವಿದೆ ಕೆಲವೊಮ್ಮೆ ನಮ್ಮ ಗಮ ನಕ್ಕೆ ಬಾರದಂತೆಯೇ ಕೆಲವೊಂದು ಮಾತು ಗಳು ಅವರ ಬಾಯಿಯಿಂದ ಹೊರಟು ಮನ ನೀಯ ನುಡಿಮುತ್ತುಗಳಾಗುತ್ತವೆ ಕಹಲೀಲ ಗಿಬ್ರಾನನ ಬಾಯಿಯಿಂದ ಹೊರಟಂಥ ನುಡಿ ಗಳನ್ನು ಶ್ರೀಮತಿ ಬರ್ಬರಾಯಂಗ್ ಸಂಗ್ರ ಹಿಸಿದ್ದಳು-ಇದೇ 'ಮಳಲು-ಬುರುಗು' ಎಂಬ ನುಡಿಮುತ್ತುಗಳ ಸಂಕಲನ. 'ಪ್ರವಾದಿಯ ತೋಟದಲ್ಲಿ ಆತ್ಮ ಹಾಗೂ ವಿಶ್ವಾತ್ಮನ ಸಂಬಂ ಧವನ್ನು ನಿರೂಪಿಸುತ್ತದೆ. ವ್ಯಕ್ತಿ ವ್ಯಕ್ತಿಗಳ ಸಂಬಂಧ ಪರಿಶೋಧನೆ ಮಾನವನ ನಡೆವಳಿ ಕೆ, ನಿಸರ್ಗದ ಬಗ್ಗೆ ಆತ ಪ್ರತಿಕ್ರಿಯೆಗಳ ನ್ನು ಗಿಬ್ರಾನನು ತನ್ನನ್ನು ಪ್ರವಾದಿಯ ಸ್ಥಾನ ದಲ್ಲಿರಿಸಿಕೊಂಡು ಜನತೆಯನ್ನು ಶಿಷ್ಯರನ್ನಾಗಿ ಮಾಡಿ ಉಪದೇಶಿಸುವ ವಿಧಾನದಿಂದ ವಿವರಿ ಸಿದ್ದಾನೆ. 'ಕಹ್ಲಿಲ್ ಕವಿವಾಣಿ' ಎಂಬುದರಲ್ಲಿ ಆತ್ಮ ಪರಮಾತ್ಮಗಳ ನಿರೂಪಣೆಯನ್ನೂ ಸ್ವಾ ರಸ್ಯಪೂರ್ಣವಾಗಿ ಮಾಡಿದ್ದಾನೆ ಸರ್ವಮಾನ್ಯ ವಾದ ತತ್ವಗಳನ್ನು ಗಿಬ್ರಾನನು ಎಲ್ಲರಿಗೂ ತಿಳಿ ಯುವಂತೆ ಉಪದೇಶಿಸಿದ್ದಾನೆ. ಆತನ ಪ್ರತಿ ಉಕ್ತಿಯೂ ಅರ್ಥಭರಿತವಾಗಿಯೂ ಮಾನವನ ನ್ನು ಉನ್ನತ ಗುರಿಯಾಗುವಂತೆಯೂ ಮಾಡು ವುದು. ಜನ ಬದುಕುವುದೇ ಅಸಾಧ್ಯವಾಗಿ ರುವ, ಪ್ರಪಂಚವು ಜೀವನಕ್ಕಿಂತ ವಿನಾಶದ ತ್ತ ಸರಿಯುತ್ತಿರುವ, ರಾಜಕೀಯ, ಧಾರ್ಮಿಕ ಮೊದಲಾದ ಎಲ್ಲ ಕ್ಷೇತ್ರಗಳಲ್ಲಿಯೂ ಹಾಹಾ ಕಾರದ ಕೋಲಾಹಲವೇಳುವ ಈ ಕಾಲದಲ್ಲಿ ಮಹಾತ್ಮರ ಉಪದೇಶಕ್ಕೆ ಬಹಳ ಮಹತ್ವದ ಸ್ಥಾನವಿದೆ ಅಂತೆಯೇ ಕಹಲೀಲ ಗಿಬ್ರಾನನ

ರಾಮತೀರ್ಥ ಬ್ರಾಹ್ಮಿ ತೈಲ



(ರಿಜಿಸ್ಟರ್ಡ್ ನಂ ೧) [ಮೆಡಿಕೇಟೆಡ್]

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚು ತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನು ಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 3—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಯೆಷ್ಟು! ಕಿರಿ ಸಣ್ಣದಾದರೂ ಕಾನನವನ್ನು ಸುಡುತ್ತದೆಯಷ್ಟೆ? ಇಂತಹ ಭಾವತುಂದಿಲವಾಗಿರುವ ಈ ಸಂಕಲನಗಳನ್ನು ಕನ್ನಡಿಗರಿಗೆ ಒದಗಿಸಿಕೊಟ್ಟ ಶ್ರೀ ದತ್ತಮೂರ್ತಿಯವರು ಅವರ ಹೃತ್ಪೂರ್ವಕ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಕನ್ನಡಿಗರೆಲ್ಲರೂ ಅವಶ್ಯ ಸಂಗ್ರಹಿಸಿ ವಿರಾಮದ ವೇಳೆಯಲ್ಲಿ ಓದಿ ವಿವೇಚಿಸಿ ಸತ್ಯವನ್ನು ಕಾಣಲು ಯೋಗ್ಯವಾದ ಗ್ರಂಥಗಳ ಅನುವಾದನ ಕಾರ್ಯ ಅತ್ಯುತ್ತಮವಿದೆ. ಲೇಖಕ ಪ್ರಕಾಶಕರ ಶ್ರಮಕ್ಕೆ ತಕ್ಕ ಪ್ರತಿಫಲ ಅಗತ್ಯ ದೊರೆಯಬೇಕು.

ದಕ್ಷಿಣ ಭಾರತದ ಇತಿಹಾಸ—

(ಪ್ರಾಚೀನ ಯುಗ) ಮೂಲ ರಚನೆ—ಡಾ| ಕೆ. ಕೆ. ಪಿಳ್ಳೈ, ಎಂ. ಎ. ಎಲ್. ಟಿ; ಡಿ. ಲಿಟ್; ಡಿ. ಫಿಲ್, ಕನ್ನಡ ಅನುವಾದ—ಶ್ರೀ ಜಿ. ಎಸ್. ಕೃಷ್ಣರಾವ್. ಪ್ರಕಾಶಕರು: ಪರಿಮಳ ಸಾಹಿತ್ಯ, ಬೆಂಗಳೂರು-೪. ಪುಟಗಳು: xii+೨೪೪ ಬೆಲೆ ರೂ. ೨—೨೫.

ಭಾರತದ ಈಗಿನ ಭೂಭಾಗದಲ್ಲಿ ಅತ್ಯಂತ ಪ್ರಾಚೀನವಾದ ದಕ್ಷಿಣ ಭಾರತದ ಅಸ್ತಿತ್ವವನ್ನು ಪ್ರತಿಪಾದಿಸಿ, ಅದರ ಇತಿಹಾಸವನ್ನು ಬರೆದವರು ವಿರಳ—ಇಲ್ಲವೇ ಇಲ್ಲವೆನ್ನಬಹುದು. ಶಾಲೆಗಳಲ್ಲಿ ಪಠ್ಯ ಪುಸ್ತಕಗಳಲ್ಲಿ ಸ್ಥೂಲವಾಗಿ ಕಲಿತ ವಿಚಾರಗಳಲ್ಲಿ ಜ್ಞಾಪಕವಿರುವಷ್ಟು ಮಾತ್ರವಲ್ಲದೆ ಅದಕ್ಕಿಂತ ಹೆಚ್ಚಿನ ವಿಷಯವೂ ಆ ಬಗ್ಗೆ ಅಭಿರುಚಿಯೂ ನಮ್ಮಲ್ಲಿಲ್ಲ; ಇದ್ದ ಒಂದೆರಡು ಪುಸ್ತಕಗಳನ್ನಾದರೂ ಓದುವಷ್ಟು ಓದಿ ತಿಳಿಯುವಷ್ಟು ತಾಳ್ಮೆ ನಮ್ಮ ಜನಕ್ಕಿಲ್ಲ. ಇಂತಹ ಅವಸರದಲ್ಲಿ ಈ ಇತಿಹಾಸ ಗ್ರಂಥವು ನಮ್ಮ ಜನರಿಗೆ ಇತಿಹಾಸ-ಚರಿತ್ರೆಗಳ ಬಗ್ಗೆ ಆಸಕ್ತಿ ಹುಟ್ಟಿಸಲಿ ಎಂದು ಮೊದಲಾಗಿ ಹಾರೈಕೆ.

ಇತಿಹಾಸ ಮತ್ತು ಚರಿತ್ರೆಗಳೊಳಗೆ ಅಂತರವಿದೆ. ಒಂದು ಕಾಲವಲ್ಲಿದ್ದ ಪರಿಸ್ಥಿತಿಯೆಲ್ಲವನ್ನೂ ಇತಿಹಾಸ (ಇತಿಹ ಆಸ) ತಿಳಿಸಬೇಕಲ್ಲದೆ ರಾಜ, ಅವನ ಕಾಲ, ಕುಲಗೋತ್ರ ದಿಗ್ವಿಜಯ, ಸೋಲು, ಬಿರುದು ಇತ್ಯಾದಿಗಳನ್ನು ಹೇಳಿಕೊಂಡು ಹೋದ ಮಾತ್ರಕ್ಕೆ ಅದು ರಾಜವಂಶಾವಳಿಯಾದೀತೇ ಹೊರತು ಇತಿಹಾಸವಾಗಲಾರದು. ಮದ್ರಾಸು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಪಿಳ್ಳೈಯವರು ಪರಿಶ್ರಮದಿಂದ ಇತಿಹಾಸದ ದಾಖಲೆಗಳನ್ನು ಅರಸಿ, ಸಂಶೋಧಿಸಿ ತಮ್ಮ ಈ ಅಪೂರ್ವ ಗ್ರಂಥವನ್ನು ಬರೆದಿದ್ದಾರೆ. ಕ್ರಿಸ್ತಜನ್ಮಕ್ಕಿಂತ ೩೫-೪೦ ಸಾವಿರ ವರ್ಷಗಳಷ್ಟು ಪೂರ್ವದಿಂದ ಹಿಡಿದು ಕ್ರಿ. ಶ. ೧೩೦೦ರ ವರೆಗಿನ ಇತಿಹಾಸವನ್ನು ಇಲ್ಲಿ ಕಲೆಹಾಕಲಾಗಿದೆ. ರಾಜ್ಯ ಸಾಮ್ರಾಜ್ಯಗಳ ಚರಿತ್ರೆ ಮಾತ್ರವಲ್ಲದೆ, ಆಯಾ ಕಾಲದ ಜನಜೀವನಕ್ರಮ, ಸಾಮಾಜಿಕ ವ್ಯವಸ್ಥೆ, ರಾಜ್ಯಧರ್ಮ ಪರಿಪಾಲನಾದಿಗಳನ್ನೂ ಇಲ್ಲಿ ವಿವೇಚಿಸಲಾಗಿದೆ. ಆದರೆ, ಚೋಳ, ಚೇರ ಪಾಂಡ್ಯರಬಗೆಗೆ ಲೇಖಕರು ಇಟ್ಟಷ್ಟು ಅಭಿಮಾನವನ್ನು ಹೊಯ್ಸಳ, ಯಾದವರ ಬಗೆಗೂ ರಾಷ್ಟ್ರಕೂಟರ ಕಡೆಗೂ ಈಯದಿರುವುದು ಶೋಚನೀಯವೇ ಸರಿ. ಕನ್ನಡನಾಡು ಕ್ರಿ. ಶ. ೧೨-೧೩ನೆ ಶತಮಾನಗಳಲ್ಲಿ ಮೆರೆದಾಡುವಂತೆ ಮಾಡಿದ ಹೊಯ್ಸಳರ ವಿವರಣೆಯಾಗಲೀ, ಅವರು ಕಟ್ಟಿಸಿದ ಚಿರಸ್ಮರಣೀಯವಾದ ಬೇಲೂರು, ಹಳೇಬೀಡುಗಳ ಕಲಾಪೂರ್ಣ ದೇವಾಲಯಗಳ ಉಲ್ಲೇಖವಾಗಲೀ ಈ ಇತಿಹಾಸದ ಪ್ರಥಮ ಭಾಗದಲ್ಲಿ ಬಾರದೆ ಇರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಪಡುಕರಾವಳಿಯ ಉತ್ತರಭಾಗವನ್ನು ಸುಮಾರು ಒಂದು ಸಾವಿರ ವರ್ಷಗಳ ಕಾಲ ಸ್ವತಂತ್ರವಾಗಿಯೋ ಆಳರಸರಾಗಿಯೋ ಆಳಿದ ಆಲೂಪರ ಹೆಸರು, ವೀರಶೈವ ಮತಪ್ರವರ್ತಕ ಬಸವೇಶ್ವರರ ಮತ್ತು ಶೈವ ಕೃತಿಗಳ ಉಲ್ಲೇಖ ಇವು ತೋರುವುದಿಲ್ಲ. ಹೀಗಾಗಿ ದಕ್ಷಿಣ ಭಾರತದ ಇತಿಹಾಸವೆಂಬ ಈ ಪುಸ್ತಕದಲ್ಲಿ ತಮಿಳುನಾಡಿನ ಇತಿಹಾಸಕ್ಕೆ ಉಳಿದುವುಗಳ ಚರಿತ್ರೆ ಪೂರಕವಾಗಿ ಬಂದಿವೆಯೋ ಎನ್ನುವ ಸಂದೇಹ ಬರುತ್ತದೆ. ಅಂತೂ, ಆ ದೃಷ್ಟಿಯಿಂದ ಈ ಹೊತ್ತಗೆಯು ಉತ್ಕೃಷ್ಟವೆನಿಸಿದೆ.

ಅನುವಾದದ ಸಾಮಾನ್ಯ ರೀತಿಯು ಉತ್ತಮವಾಗಿಯೇ ಇದೆ. ಆದರೆ ಹೆಸರುಗಳನ್ನು ಬರೆಯುವಾಗ ಹೆಚ್ಚಿನ ಜನರಿಂದ ಮಾನ್ಯವಾದ ರೂಪಗಳನ್ನೇ ಅನುಸರಿಸುತ್ತಿದ್ದರೆ ಒಳ್ಳೇದು. 'ಉದಾಹರಣೆಗಾಗಿ ಶಿಲಪ್ಪದಿಕಾರಂ ಕುಲೋತುಂಗ, ಬೂತುಗ, ಪರಾಂತಕ, ಪಟ್ಟದಕಲ್ಲು, ಐಹೊಳೆ, ಅಜಂತ, ರಜಪುತಾನಗಳನ್ನು ಕ್ರಮವಾಗಿ ಚಿಲಪ್ಪದಿಕಾರಂ, ಕೊಲುತ್ತುಂಗ, ಬುಟುಗ, ಪರಾಂಟಕ, ಪಟ್ಟಕ್ಕಲ್ ಐಹೋಲ್, ಅಜಂಟ, ರಾಜಪುಟಾನ ಎಂದು ಅನುವಾದ ಮಾಡುವುದರಲ್ಲಿ ಉದ್ದೇಶವೇನೆಂದು ಅರ್ಥವಾಗುವುದಿಲ್ಲ. ಪುನರ್ರಚನೆ, ಪ್ರಾಧಾನ್ಯತೆ ನೈಪುಣ್ಯತೆ, ಐಕ್ಯತೆ ಇಂತಹ ಅಶುದ್ಧ ಪ್ರಯೋಗಗಳನ್ನು ಮಾಡಬಾರದಿತ್ತು.

ಪಂಪನು ವಿಕ್ರಮಾರ್ಜುನ ವಿಜಯ ಎಂಬ ಮಹಾಭಾರತ ಇತಿಹಾಸದ ಒಂದು ಭಾಗವನ್ನು ಬರೆದನು; ಮಧ್ವಾಚಾರ್ಯರು ಉಡುಪಿ ತಾಲೂಕಿನ ಕಲ್ಯಾಣಪುರದಲ್ಲಿ ಜನಿಸಿದರು. ಎಂದು ಉಲ್ಲೇಖಿಸಿರುವುದು ಮೂಲ ಲೇಖಕರ ಜ್ಞಾನಾಭಾವವನ್ನು ತಿಳಿಸುತ್ತದೆ. ಪುಸ್ತಕದಲ್ಲಿ ಅಲ್ಲಲ್ಲಿ ಕೆಲವು ನಕ್ಷೆ, ಚಿತ್ರಗಳು ಕೂಡಿದ್ದು ಆಕರ್ಷಕವಾಗಿ ಅಚ್ಚಾಗಿದೆ. ಹೊಯ್ಸಳರ ಕಲಾರಾಧನೆಯು ಪುಸ್ತಕದೊಳಗಡೆ ಉಪೇಕ್ಷಿಸಲ್ಪಟ್ಟಿದ್ದರೂ ಪ್ರಕಾಶಕರು ಮುಖಪೃಷ್ಠದಲ್ಲಿ ಸಳನು ಹುಲಿಗೆ ಹೊಯ್ಯುವ ಚಿತ್ರವೊಂದನ್ನು ಕೊಟ್ಟು ಅದಕ್ಕೆ ಸ್ಥಾನ ಕಲ್ಪಿಸಿಕೊಟ್ಟಿದ್ದಾರೆ. ಆದರೆ, ದಕ್ಷಿಣ ಭಾಷಾ ಸಂಸ್ಥೆಯ ಸೌಜನ್ಯದಿಂದ ಪ್ರಕಟವಾದ ಈ ಹೊತ್ತಗೆಗೆ ಬೆಲೆ ಹೆಚ್ಚಾಗಲಿಲ್ಲವೆ?

ಕಂಪ—(ಕಂದ ಕಾವ್ಯಮಾಲೆ-೩೫) ಸಂಪಾದಿಕೆಯರು ಶ್ರೀಮತಿ ಸುಶೀಲಾ ಬಾಯಿ ನಾಗೇಶರಾವ್ ಪ್ರಕಾಶಕರು: ಶಿಶುಸಾಹಿತ್ಯ ಸಂಘ, ಜಯನಗರ, ಮೈಸೂರು. ಪುಟಗಳು ೨೦.

ಅಪಾಯ ನಿವಾರಣೆಯ ಉಪಾಯಗಳು ಎಂಬ ಈ ಪತ್ರಿಕೆಯ ೯ನೇ ವರ್ಷದ ೩ನೇ ಸಂಚಿಕೆಯನ್ನು ನಾವು ಸ್ವಾಗತಿಸುತ್ತೇವೆ. ಆಧುನಿಕ ಜನಜೀವನದಲ್ಲಿ ಮಾರ್ಗಗಳು ಬಹಳ ಪ್ರಧಾನಸ್ಥಾನಗಳಿಸಿವೆ. ರಸ್ತೆಯಿಲ್ಲದೆ ಹೋದರೆ ನಮ್ಮ ದೈನಂದಿನ ವ್ಯವಹಾರವು ನಡೆಯಲಾರದು. ಅಂತಹ ರಸ್ತೆಗಳಲ್ಲಿ ಜನರು ಮಾತ್ರವಲ್ಲದೆ ವಾಹನಗಳೂ ಸಂಚರಿಸುತ್ತವೆ. ಪ್ರತಿ ನೂರು ವಾಹನಗಳಿಗೆ ೨೩ ಅಪಘಾತವಾಗುವುದೆಂತೆ ಭಾರತದಲ್ಲಿ. ಇವನ್ನು ತಪ್ಪಿಸಲು ಮಾರ್ಗದಲ್ಲಿ ನಡೆಯುವ, ವಾಹನ ಚಾಲಿಸುವ ಕ್ರಮಗಳನ್ನು ಕಲಿತುಕೊಳ್ಳಬೇಕು; ಅದನ್ನು ಈ ಪುಸ್ತಕದಲ್ಲಿ ಸಚಿತ್ರವಾಗಿ ವಿವರಿಸಿದ್ದಾರೆ. ಪ್ರತಿಯೊಬ್ಬ ನಾಗರಿಕನೂ ಇದರ ಪ್ರಯೋಜನ ಹೊಂದಬೇಕು.

—ಗೋರಾ.

ಅಖಿಲ ಭಾರತ ಕೈಮಗ್ಗ ಮಂಡಳಿಯವರು ನವದೆಹಲಿಯಲ್ಲಿ ಇತ್ತೀಚೆಗೆ ಒಂದು ಫೇಷನ್ ಪರೇಡನ್ನು ಏರ್ಪಡಿಸಿ, ಅದರಲ್ಲಿ ಭಾರತೀಯ ಮತ್ತು ಯುರೋಪ್ಯ ನಮೂನೆಗಳನ್ನು ಪ್ರದರ್ಶಿಸಿದ್ದರು. ಚಿತ್ರದಲ್ಲಿ ಅಂತಹ ಒಂದು ಪ್ರದರ್ಶಿಕೆಯನ್ನು ಕಾಣಬಹುದು.

ಪೌರ್ವಾತ್ಯವೆಂದರೆ ಹಲ್ಲು ಕಡಿಯಬೇಡಿ

(೧ನೇ ಪುಟದಿಂದ)

ತ್ತಿನ ಅಧಿವೇಶನವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಸೇರಿಸಲು ೧೮೭೪ನೆ ವರ್ಷದಲ್ಲಿ ನಿಶ್ಚಯಿಸಲಾಯಿತು. ಈ ಪದ್ಧತಿಯು ಇಂದಿಗೂ ವ್ಯವಹಾರದಲ್ಲಿದೆ. ಕಳೆದ ವರ್ಷ ಜರ್ಮನಿಯ ಮ್ಯೂನಿಚ್ ನಗರದಲ್ಲಿ ಈ ತ್ರೈವಾರ್ಷಿಕ ಅಧಿವೇಶನದ ಆಯೋಜನವಾಗಿತ್ತು. ಇದರಲ್ಲಿ ವಿಶ್ವದ ೪೦ಕ್ಕಿಂತಲೂ ಹೆಚ್ಚು ದೇಶಗಳ ಸುಮಾರು ಒಂದೂವರೆ ಸಾವಿರ ಪಂಡಿತರು ಒಂದುಗೂಡಿದ್ದರು.

ಲೋಕಮಾನ್ಯ ತಿಲಕರು ತಮ್ಮ ಥಿಸಿಸ್ ಗ್ರಂಥವಾದ 'ಓರಾಯನ' ಪ್ರಬಂಧವನ್ನು ಅದು ಪ್ರಕಾಶಗೊಂಡ ಹತ್ತು ವರ್ಷಗಳ ಪೂರ್ವದಲ್ಲಿ, ಎಂದರೆ, ೧೮೯೨ನೆ ವರ್ಷದಲ್ಲಿ ಸೇರಿದ್ದ ಲಂಡನಿನ ಅಂತಾರಾಷ್ಟ್ರೀಯ ಪ್ರಾಚ್ಯ ವಿದ್ಯಾ ಪರಿಷತ್ತಿನ ಅಧಿವೇಶನದಲ್ಲಿ ಚರ್ಚೆಗಾಗಿ ಮುಂದಿಟ್ಟಿದ್ದರು.

ಅಂತಾರಾಷ್ಟ್ರೀಯ ಪ್ರಾಚ್ಯವಿದ್ಯಾ ಪರಿಷತ್ತಿನ ಕಳೆದ ಮ್ಯೂನಿಚ್ ಅಧಿವೇಶನದಲ್ಲಿ ಸಹ ವಿದೇಶೀ ವಿನಿಮಯಗಳ ದುಸ್ಥಿತಿಯ ಕಾರಣವನ್ನು ಹೇಳಿಕೊಂಡು ಭಾರತ ಸರಕಾರದ ವತಿಯಿಂದ ಕೇವಲ ಓರ್ವ ಪ್ರತಿನಿಧಿಯನ್ನು ಮಾತ್ರ ಕಳುಹಿಸಿದ್ದುದು ವಸ್ತುತಃ ಖೇದದಾಯಕ ಸಂಗತಿಯೆನಿಸಿದೆ. ಪರಿಷತ್ತಿನ ಪ್ರಗತಿ ಮಾರ್ಗದಲ್ಲಿ ಅದೆಷ್ಟು ಕಂಟಕಗಳಿವೆಯೆಂಬುದು ಮೇಲೆ ತಿಳಿಸಿದ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು

• ನಮ್ಮ ಪ್ರದೇಶದಲ್ಲಿ ಸರಕಾರೇತರ ಸಂಸ್ಥೆಗಳು ಸಂಪೂರ್ಣ ಪ್ರಯಾಸದಿಂದ ಪ್ರಾಚ್ಯ ವಿದ್ಯಾಕ್ಷೇತ್ರದಲ್ಲಿ ಉಪಯೋಗೀ ಅನುಸಂಧಾನಾತ್ಮಕ ಕಾರ್ಯವನ್ನು ಮಾಡುತ್ತ ಪ್ರಾಚ್ಯ ವಿದ್ಯಾಪರಿಷತ್ತಿನ ಕಾರ್ಯಗಳಿಗೆ ಪೂರ್ಣರೂಪವನ್ನು ಕೊಡುತ್ತಿವೆ. ಉದಾಹರಣೆಗಾಗಿ, ಕಾಶಿಯಲ್ಲಿ (ಬೆನಾರಸ್) ಕಾಶೀರಾಜ ಟ್ರಸ್ಟ್ ಎಂಬುದು ಕೆಲವು ವರ್ಷಗಳ ಹಿಂದೆ ಸ್ಥಾಪಿಸಲ್ಪಟ್ಟು ಪುರಾಣಗಳ ಹಿಂದೀ ಅನುವಾದಗಳನ್ನು ಪ್ರಕಾಶಪಡಿಸಿ ಪ್ರಾಚ್ಯ ವಿದ್ಯಾಕ್ಷೇತ್ರದಲ್ಲಿ ಮಹತ್ವಪೂರ್ಣ ಕಾರ್ಯವನ್ನು ಮಾಡುತ್ತಿದೆ. ಬರೋಡಾ ವಿಶ್ವವಿದ್ಯಾಲಯವು ವಾಲ್ಮೀಕಿ ರಾಮಾಯಣದ ಪ್ರಾಮಾಣಿಕ ಸಂಸ್ಕರಣವನ್ನು ಮತ್ತು ಪೂನಾದಲ್ಲಿನ ಭಂಡಾರಕರ ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬುದು ಮಹಾಭಾರತದ ಪ್ರಾಮಾಣಿಕ ಸಂಸ್ಕರಣದ ಪ್ರಕಾಶನದ ಭಾರವನ್ನು ಹೊತ್ತುಕೊಂಡು ಬಹುಮೂಲ್ಯ ರಾಷ್ಟ್ರೀಯ ಕಾರ್ಯಸಂಪನ್ನವಾಗಿಸುತ್ತಿದೆ ಎಂಬುದನ್ನು ಮರೆಯುವುದು ಸಾಧ್ಯವಿಲ್ಲ.

ಭಾರತದಲ್ಲಿ ಪ್ರಾಚ್ಯವಿದ್ಯೆಯ ಕಾರ್ಯವನ್ನು ಉನ್ನತವಾದ ಕೋಡುಗಲ್ಲಿನ ತುತ್ತತುದಿಯನ್ನೇರಿಸಲು ಕಾರಣವಾದ ಕೇಂದ್ರೀಯ ಪ್ರಾಚ್ಯ ವಿದ್ಯಾನುಸಂಧಾನ ಕೇಂದ್ರದ ಸ್ಥಾಪನೆಗಾಗಿ, ಕೆಲವು ವರ್ಷ ಪೂರ್ವದಲ್ಲಿ ಅಖಿಲಭಾರತ ಪ್ರಾಚ್ಯ ವಿದ್ಯಾಪರಿಷತ್ತಿನ ಮೂಲಕ ಕೊಡಲ್ಪಟ್ಟ ಸೂಚನೆಗಳನ್ನು ಯಥಾಶೀಘ್ರದಲ್ಲಿ ಕಾರ್ಯಾನ್ವಿತಗೊಳಿಸುವುದು ಅತ್ಯಾವಶ್ಯಕವೆನಿಸಿದೆ. ಆಗಲೇ ಈ ಕ್ಷೇತ್ರದಲ್ಲಿ ಭಾರತವು ಸ್ವಲ್ಪ ಉಲ್ಲೇಖನೀಯ ಕಾರ್ಯವನ್ನು ಕೈಗೊಳ್ಳಲು ಸಮರ್ಥವೆನಿಸುತ್ತದೆ.

ಪ್ರಾಚ್ಯವಿದ್ಯೆಗಳಲ್ಲಿನ ತಿರುಳನ್ನು ನಾವೆಲ್ಲರೂ ಅರಿತುಕೊಳ್ಳಬೇಕು; ಆ ಬಗ್ಗೆ ಪರದೇಶೀಯರು ತೋರಿಸಿಕೊಳ್ಳುವ ಆತುರದಲ್ಲಿ ಒಂದು ಪಾಲನ್ನಾದರೂ ನಾವು ವಹಿಸಿ, ನಮ್ಮ ಪೌರ್ವಾತ್ಯ ವಿದ್ಯೆ, ಕಲೆ, ಸಾಹಿತ್ಯ ಇತ್ಯಾದಿಗಳಿಗೆ ಪ್ರೋತ್ಸಾಹವನ್ನೀಯುವುದು ನಮ್ಮ ಕರ್ತವ್ಯವೆಂದು ತಿಳಿಯಬೇಕು. ಆಗ ಪ್ರಾಚ್ಯ ವಿದ್ಯಾಸಂಸ್ಥೆಯಂತಹ ಸಂಘಗಳು ಬೆಳೆದು ಉಲ್ಲೇಖನೀಯ ಪರಿಣಾಮಗಳನ್ನುಂಟುಮಾಡುವುದು ಸಾಧ್ಯವಾಗುತ್ತದೆ.

(ಸಾಧಾರ)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ 23—1—1958 ಸಂಚಿಕೆ ೨೦

VOL. 37 NO. 20

. ಭಾ. ಕಾಂಗ್ರೆಸ್‌ನ ಅಧಿವೇಶನ---

ಕಾಂಗ್ರೆಸ್ ಪಕ್ಷದ ನೀತಿ ವಿವರಣೆ.

ಅಖಿಲ ಭಾರತೀಯ ಕಾಂಗ್ರೆಸ್ಸಿನ ೬೩ ನೆಯ ಮಹಾಧಿವೇಶನವು ಗೌಹಾತಿಯ ಪ್ರಾಗ್ಜ್ಯೋತಿಷ್ಪುರದಲ್ಲಿ ಇದೇ ದಿನಾಂಕ ...ರಂದು ಆರಂಭವಾಯಿತು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಗೊಂಡ ಶ್ರೀ ಢೇಬರರು ಅಧ್ಯಕ್ಷ ಸ್ಥಾನದಲ್ಲಿದ್ದುಕೊಂಡು ಕಾಂಗ್ರೆಸ್ಸಿನ ನೀತಿಯನ್ನು ದೇಶದ ಪ್ರಜೆಗಳಿಗೆ ವಿವರಿಸಿ ಅದರ ಸಂಕ್ಷಿಪ್ತ ವಿವರಣೆಯನ್ನಿಲ್ಲಿ ಕೊಡಲು ಪ್ರಯತ್ನಿಸಲಾಗಿದೆ.

ಕಳೆದ ಎರಡು ಮಹಾಯುದ್ಧಗಳಿಂದ ಸೈನಿಕ ಯುದ್ಧಗಳಲ್ಲಿ ಪರಾಜಯ ಹೊಂದುವುದಲ್ಲದೆ ವಿಜಯ ಪ್ರಾಪ್ತಿಯಾದವರೆಂದೂ ಇಂದಿನ ಮಾನವ ಸಮಾಜ ವಿನಾಶದತ್ತ ಹರಿಯುತ್ತಿದೆ ಎಂದೂ ... ಒಂದಿದೆ ಕೆಲಕಾಲದ ವರೆಗೆ ...ತಿಯುಂದಿರುವ ಪ್ರಯತ್ನಗಳಿಂದ ಮಾನವ—ಕಷ್ಟಗಳು ನಿವಾರಣೆಗೊಳ್ಳುವುದು ತೀ ದರೆ, ಈ ಸತ್ಯಾಂಶವನ್ನು ನಾವು ಒಪ್ಪಿದಂತೆಯೇ ಸರಿ. ಆಧುನಿಕ ಅಣ್ವಸ್ತ್ರ ಪರೀಕ್ಷೆಗಳಿಂದ ವಾತಾವರಣವು ಕಲುಷಿತಗೊಂಡು ಇಂದಿನ ಪೀಳಿಗೆಗಳಿಗೆ ಮಾತ್ರವಲ್ಲ, ನಮ್ಮ ಮುಂದಿನ ತಲೆಮಾರಿಗೂ ಮಹಾ ಮಾರಿಯು ಒದಗಿಬರುತ್ತಿದೆ ...ಗಿದ್ದರೂ ಘಾತಕ ಶಸ್ತ್ರಗಳಿಂದ ನಾವು ಶಾಂತಿಯನ್ನು ಸ್ಥಾಪಿಸುತ್ತೇವೆಂದು ಹೇಳುತ್ತಾರೆ.

ಕಾಂಗ್ರೆಸ್ಸಿನ ಅಧ್ಯಕ್ಷ ಢೇಬರರು ತನ್ನ ಸಾವಿರ ಶಬ್ದಗಳ ಅಧ್ಯಕ್ಷೀಯ ಭಾಷಣದಲ್ಲಿ ಗತವರ್ಷದ ಮಹತ್ವಪೂರ್ಣ ಘಟನೆಗಳ ಸಿಂಹಾವಲೋಕನವನ್ನು ಮಾಡಿದರು. ಕಾಶ್ಮೀರ ಮತ್ತು ಗೋವೆಯ ಸಂಬಂಧದಲ್ಲಿ ಕಾಂಗ್ರೆಸ್ಸಿನ ದೃಷ್ಟಿಕೋಣದ ಪುನಃ ಪ್ರತಿಪಾದನೆಮಾಡಿದ ... ಮತ್ತು ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಫಲತೆಗಾಗಿ ಸಂಪೂರ್ಣ ಶಕ್ತಿಯನ್ನು ಒಂದು ಸೇರಿಸಿ ಪ್ರಯಾಸ ಪಡಿಸಲು ಜನತೆಯೊಡನೆ ವಿನಂತಿಸಿದರು. ...ಗೋತ್ಪಾದನೆಯನ್ನು ಹೆಚ್ಚಿಸುವ ಉದ್ದೇಶದತ್ತ ಪ್ರಯತ್ನಿಸಲು ಅವರು ... ಯಿಸಿದರು. ಕೇವಲ ವಿದೇಶೀ ವಿನಿಮಯ ನಾಣ್ಯಗಳ ವ್ಯಯವನ್ನು ಕಡಿಮೆ ಮಾಡುವುದಕ್ಕಾಗಿಯಲ್ಲ, ಜನರಲ್ಲಿ ಪರಾವಲಂಬನೆಯ ಮನೋವೃತ್ತಿಯನ್ನು ಬೆಳೆಯಗೊಡದಿರಲು ಸಹ ಈ ದೆಸೆಯತ್ತ ...ಲಿಸಬೇಕು ಎಂದವರು ಸ್ವಾವಲಂಬನದ ಆವಶ್ಯಕತೆಯನ್ನು ಒತ್ತಿ ...ಳಿದರ.

ತನ್ನ ನೀತಿಯನ್ನು ತನ್ನ ಇಚ್ಛಾನುಸಾರ ನಿರ್ಧರಿಸಿಕೊಳ್ಳುವ ಸ್ವಾತಂತ್ರ್ಯವೇ ಸ್ವತಂತ್ರ ರಾಷ್ಟ್ರದ ಮಾರ್ಗದರ್ಶಕ ಜ್ಯೋತಿಯಾಗಿದೆ. ಈ ಸ್ವಾತಂತ್ರ್ಯದ ಹೆಸರಿನಲ್ಲಿ ಒದಗುವ ಅಪಾಯಗಳನ್ನು ನಾವು ತಪ್ಪಿಸಿಕೊಳ್ಳಲು ಬಯಸುವುದಾದರೆ, ನಮ್ಮ ಆಂತರಿಕ ಸಾಧನ ಸಂಪತ್ತುಗಳನ್ನು ಪೂರ್ಣರೀತಿಯನ್ನು ಉಪಯೋಗಿಸಿಕೊಳ್ಳುವುದಲ್ಲದೆ ಅವನ್ನು ಅಧಿಕಾಧಿಕವಾಗಿ ಬೆಳೆಸಲು ಪ್ರಯತ್ನಮಾಡಬೇಕು ಎಂದವರು ಉಪದೇಶಿಸಿದರು.

ಕಾಶ್ಮೀರವು ಭಾರತದ ಅಂಗವಾಗಿದೆ. ಈ ಮಾತನ್ನು ನಾವು ಅನೇಕಬಾರಿ ಉಚ್ಚರಿಸಿರುತ್ತೇವೆ ಯಾವಾದೇ ವಿದೇಶೀ ಶಕ್ತಿ ಯಾ ಅಭಿಕರಣದ ಅನುರೋಧ, ಆ ದೇಶ ಅಥವಾ ಕಥನದ ಮೇಲೆ ಅದನ್ನು ಭಾರತದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ನಿರಂತರ ಆಕ್ರಮಣದ ಪ್ರಸಂಗಗಳಲ್ಲಿ 'ಅಸೈನಿಕೀಕರಣ ಮತ್ತು ಜನಮತ ಗಣನೆ'ಗಳ ಪ್ರಸ್ತಾಪಗಳು ಅಸಂಗತವಾಗಿವೆ ಎಂದವರು ಕಾಂಗ್ರೆಸ್ಸಿನ ಕಾಶ್ಮೀರ ನೀತಿಯನ್ನು ಸ್ಪಷ್ಟೀಕರಿಸಿದರು.

ಗೋವಾ ಸಮಸ್ಯೆಯನ್ನು ನಾವು ಸಮಾಧಾನದಿಂದ ನೋಡುತಿದ್ದೇವೆ ಸೈನಿಕ ಉಪಾಯಗಳಿಂದ ಅದನ್ನು ಬಿಡಿಸಲು ನಾವು ಇಚ್ಛಿಸುವುದಿಲ್ಲ. ಬೇರೆಯ ದೇಶಗಳು ಸಹ ಗೋವೆಯು ಭಾರತದ್ದೆಂದು ಹೇಳುತ್ತ ಇವೆ "ಸತ್ಯಮೇವಜಯತೇ" ಎಂಬ ನುಡಿಯಲ್ಲಿ ವಿಶ್ವಾಸವಿಡುವ ವ್ಯಕ್ತಿಯು ಗೋವೆಯು ನಮ್ಮ ಊಹೆಗಿಂತಲೂ ಮೊದಲೇ ಭಾರತದ ಅಂಗವಾಗಿ ಪರಿಣಮಿಸುವುದೆಂದು ದೃಢವಾಗಿ ನಂಬಬಹುದು. ವಿಶ್ವಮತವು ನಮ್ಮ ಪಕ್ಷದ ಔಚಿತ್ಯವನ್ನು ಮನ್ನಿಸುತ್ತ ಇದೆ—ಎಂದು ಶ್ರೀ ದೇಬಾರರು ಗೋವೆಯ ಕುರಿತು ಅಭಿಪ್ರಾಯಿಸಿದರು.

ಸರಕಾರೀ ಭಾಷೆಯ ಕುರಿತಾಗಿ ಶ್ರೀ ದೇಬರರು ಕೊರಳಿ ಯಾವುದೇ ಭಾಷೆಯನ್ನು ಒತ್ತಾಯದಿಂದ ಹೇರಬಾರದೆಂಬ ನಮ್ಮೆಲ್ಲರಲ್ಲಿ ಮತೈಕ್ಯವಿದೆ ಆಂಗ್ಲಭಾಷೆಯ ಸ್ಥಾನದಲ್ಲಿ ಪ್ರಾದೇಶಿಕ ಭಾಷೆ ಅಥವಾ ಭಾಷೆಗಳು ಪ್ರಚಲಿತವಾಗುವುವು ಮತ್ತು ಅದರೊಡನೆ ಭಾರತೀಯ ಭಾಷೆಗಳ ವಿಕಾಸದಿಂದ ಅವುಗಳನ್ನಾಡುವ ಜನರು ಇಂಗ್ಲಿಷಿನ ಬದಲು ಹಿಂದಿಯನ್ನು ಸರಳತಾಪೂರ್ವಕವಾಗಿ ಅಭ್ಯಸಿಸುವರೆಂಬುದಾಗಿ ವಿಶ್ವಾಸವಿದೆ. ಇಂತಹ ಕಾರ್ಯವು ಎಲ್ಲರ ಸಹಯೋಗದಿಂದ ಪೂರೈಸಲ್ಪಡಬೇಕೆಂದರು.

ಭಾರತದ ಏಕೀಕರಣವು ಇಂದಿಗೂ ಪ್ರಾರಂಭಿಕ ಪದದಲ್ಲಿದೆ ಅಖಂಡ ದೇಶವನ್ನು ಏಕೀಕರಣದ ಭಾವನೆಯನ್ನು ನಾಶಗೊಳ್ಳುವಂತೆ ಮಾಡುವ ಸಕ್ರಿಯ ಮನೋವೃತ್ತಿಗಳನ್ನು ತಡೆಹಿಡಿದು ಒಂದಾಗಿಡಲು ಹೆಣಗಬೇಕಾಗಿದೆ. ಉತ್ತರ ಭಾರತದ "ಹಿಂದೀ ರಕ್ಷಾ ಆಂದೋಲನ," ದಕ್ಷಿಣ ಭಾರತದ "ಬ್ರಾಹ್ಮಣರನ್ನು ಹಿಂಸಿಸಿರಿ" ಎಂಬ ಚಳವಳಿ ಮತ್ತು ರಾಮನಾಥಪುರದ ಉಪದ್ರವಗಳು ಮಾತ್ರ ಈ ತತ್ವಕ್ಕೆ ವಿರುದ್ಧವಾಗಿನೆ ಪ್ರತಿಕ್ರಿಯ ಅಥವಾ ಪ್ರತಿಕ್ರಾಂತಿಯ ಸಣ್ಣ ಸಣ್ಣ ಅಂಕುರಗಳಿವು. ನಾವಿವನ್ನು ಅವಶ್ಯ ತಡೆಗಟ್ಟಿ ಏಕೀಕರಣವನ್ನು ಸಾಧಿಸಬೇಕೆಂಬುದಾಗಿ ಭಾರತದ ಐಕ್ಯವನ್ನು ಅವರು ಪ್ರತಿಪಾದಿಸಿದರು.

ಕಾಂಗ್ರೆಸಿನ ಅಧ್ಯಕ್ಷರು ಪಂಚವಾರ್ಷಿಕ ಯೋಜನೆಯತ್ತ ಹೊರಳಿ, ನಾವು ಯೋಜನೆಯ ಮೂಲತತ್ವಗಳ ಮಹತ್ವವನ್ನು ತಿಳಿದು ಅದನ್ನು ಪೂರ್ಣಗೊಳಿಸಬಲ್ಲೆವು ವಿದೇಶೀ ಸಹಾಯವನ್ನೂ ನಾವು ಏಕೆ ಪಡೆಯಬಾರದು? ಅದರ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕ್ರಿಯಾನ್ವಿತ ಖಾದ್ಯ ಸಂಬಂಧದಲ್ಲಿ ಸ್ವಾವಲಂಬನೆ ಕೃಷಿ ಪದಾರ್ಥಗಳ ಬೆಳವಣಿಗೆಯಲ್ಲಿ ಅಭಿವೃದ್ಧಿಗಳೂ ಸಂಬದ್ಧವಾಗಿದೆ ಇವನ್ನೇ ಯೋಜನೆಯ ಮೂಲತತ್ವಗಳೆಂದು ತಿಳಿಯಬೇಕೆಂದರು

ನಿರುದ್ಯೋಗ ಸಮಸ್ಯೆಯನ್ನು ವಿವರಿಸುತ್ತ ಶ್ರೀ ದೇಬರರು ಯೋಜನೆಯ ಅಂತರ್ಗತವಾದ ಒಂದು ಕೋಟಿ ಉದ್ಯೋಗಗಳು ಭರ್ತಿಯಾದ ಮೇಲೆ ಇದರಲ್ಲಿ ಸಮಾಧಾನವು ಮೂಡಬಲ್ಲುದು. ಎಂದರು ಕೆಲವೊಂದು ಉದ್ದಿಮೆಗಳ ರಾಷ್ಟ್ರೀಕರಣವನ್ನು ಜನತೆಯು ಸಮರ್ಥಿಸುತ್ತದೆ. ರಾಷ್ಟ್ರೀಕೃತ ಉದ್ದಿಮೆಗಳಲ್ಲಿಸುಯೋಗ್ಯ ಹಾಗೂ ನಂಬಿಗಾರ್ಹ ವಿಧಾನಗಳಲ್ಲಿ ವ್ಯವಸ್ಥೆ ಮಾಡಲು ಸರಕಾರವು ರಾಷ್ಟ್ರೀಕರಣದ ನೀತಿಯ ಕಡೆಗಿರುವ ವಿಶ್ವಾಸವನ್ನು ದೃಢಪಡಿಸಬೇಕು ಎಂದು ಹೇಳಿದರು

ಚಿಕ್ಕ ಉಳಿತಾಯ ಯೋಜನೆಯ ಆಂದೋಲನದಲ್ಲಿ ತೀವ್ರತೆ ಹೆಚ್ಚಬೇಕು. ಉಳಿತಾಯದೊಡನೆ ಸರಕಾರೀ ವಿಭಾಗದಲ್ಲಿ ಕಠೋರ ಮಿತವ್ಯಯ ಹಾಗೂ ಸಂಯಮವೂ ಕಾರ್ಯರೂಪದಲ್ಲಿ ಬರಬೇಕು ಜಿಲ್ಲಾ ಆಡಳಿತೆಯ ವಾಸ್ತವಿಕ ಆಧಾರಗಳಾಗುವಂತೆ ಗ್ರಾಮ ಪಂಚಾಯತಗಳನ್ನು ಶಕ್ತಿಶಾಲಿಗಳನ್ನಾಗಿ ಮಾಡಲು ಪ್ರಯತ್ನಿಸಬೇಕೆಂದು ಶ್ರೀ ಡೇಬರರು ಕೆಲವೊಂದು ಸೂಚನೆಗಳನ್ನಿತ್ತರು.

ಕಾಂಗ್ರೆಸ್ಸಿನ ಕಳೆದ ಸಪ್ಟಂಬರದ ಅಧಿವೇಶನದಲ್ಲಿ ಭೂ ಸುಧಾರಣೆಯ ಪಂಚಸೂತ್ರೀಯ ಕಾರ್ಯಕ್ರಮವು ಮಾಡಲ್ಪಟ್ಟಿತ್ತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಮಾಪ್ತಿಯಾಗುವವರೆಗೆ ಈ ಸುಧಾರಣೆಗಳು ಪೂರ್ಣಗೊಂಡಪಕ್ಷದಲ್ಲಿ ಜನಮನದಲ್ಲಿ ಮಹಾಕ್ರಾಂತಿಯಾಗುವುದು ನಿಸ್ಸಂದೇಹ ಎಂದವರು ವಿಶೇಷರೂಪದಲ್ಲಿ ಹೇಳಿದರು.

—x—

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H. O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಹರಿದ ಮೂಗು ಸರಿಯಾದೀತೆ?

ಶ್ರೀ. ಯು. ಎಂ. ಆಚಾರ್.

"ವಿಶಾಲೂ...ವಿಶಾಲೂ..ಹಾಯ್... ವಿಶಾ....ಲೂ" ಕುಮಾರನ ಬಾಯಲ್ಲಿ ಕ್ಷೀಣವಾದ ಒಂದು ಸ್ವರ ಹೊರಟಿತು. ಬಾಯಿಯಲ್ಲಿ ದುರ್ವಾಸನೆಯು ಹೊರ ಹೊಮ್ಮುತಿತ್ತು! ಆ ನಿರ್ಜನವಾದ ಕಾಡಿನಲ್ಲಿ ಆತನ ಗೋಳನ್ನು ಕೇಳುವವರಾರು? ಈ ನೋಟವನ್ನು ಈ ಅಸಹ್ಯವಾದ ಬಾಳನ್ನು ಕಾಣಲಾರದೆ ಚಂದ್ರ ಕಂಪು ಮೋಡದ ಮರೆಯನ್ನೇ ಹೋಗುತಿದ್ದ. ಭಯಂಕರ ಸುದ್ದಿಯನ್ನು ತಿಳಿದಾಗ ಪ್ರತಿ ಜೀವಿಯೂ ಒಮ್ಮೆ ಮೌನವನ್ನು ತಾಳುತ್ತದೆ– ಅಂತೆಯೇ ಆ ವನವೆಲ್ಲವೂ ನಿಶ್ಶಬ್ದವೆನಿಸಿತ್ತು.

"ಅಯ್ಯೋ....ಹಾ...ವಿಶಾಲೂ, ಈ ಪಾಪಿಯ ಕೈಹಿಡಿದ. ಒಂದು ದಿನದ ಸುಖವನ್ನೂ ನೀನು ಅನುಭವಿಸಲಿಲ್ಲ..ಆ ದುಷ್ಟನ ಮಾತಿಗೆ ಬಲಿಬಿದ್ದು..ನಿನ್ನನ್ನು ಕಳೆದುಕೊಂಡೆ...ಹಾಯ್...." ಕುಮಾರನ ಪ್ರಾಣಪಕ್ಷಿ ಹಾರಿ ಹೋಗಲು ಹೃದಯದ ಬಾಗಿಲಲ್ಲಿ ನಿಂತಿತ್ತು.

೦೦ ೦೦ ೦೦

ಅಂದು ಒಂದು ದಿನ. ಆಫೀಸಿನಿಂದ ಕುಮಾರ ಬರುವಾಗ ಗೆಳೆಯ ಕೃಷ್ಣ ಅವನ ಹೆಗಲಲ್ಲಿ ಕೈಹಾಕಿಕೊಂಡು ಬರುತಿದ್ದ.

"ಬಾ, ಕೃಷ್ಣ, ಮನೆಯಲ್ಲ ಕಾಫಿ ತಯಾರಾಗಿರಬಹುದು, ಪೂರೈಸಿಕೊಂಡು ಪಾರ್ಕಿಗೆ ಹೋಗೋಣ" ಎಂದು ಕುಮಾರ ಮಿತ್ರನನ್ನು ಒತ್ತಾಯಿಸುವಾಗಲೇ ಅವರು ಮನೆಯ ಮೆಟ್ಟಲನ್ನು ಹತ್ತಿದ್ದರು. ಎರಡು ವರ್ಷದ ಗೆಳೆತನ ಕೃಷ್ಣನಿಗಿದ್ದರೂ ಕುಮಾರನ ಮನೆಗೆ ಆತ ಅದುವರೆಗೂ ಬಂದಿರಲಿಲ್ಲ. ಇಂದು ಕಾಲವು ಆತನನ್ನು ಅಲ್ಲಿವರೆಗೆ ಎಳೆದು ತಂದಿತ್ತು

ತನ್ನ ಪ್ರೇಮದ ಪುತ್ಥಳಿ ಪತಿಯ ಸ್ನೇಹಿತನಿಗಾಗಿ ಬಿಸಿ ಕಾಫಿ ಹಿಡಿದುಕೊಂಡು ವಿಶಾಲು ಮೆಲ್ಲಗೆ ಹೊರಚಾವಡಿಗೆ ಬಂದಳು. ಚಂದ್ರನಿಂದ ಹೊರಹೊಮ್ಮುತ್ತಿರುವ ಬಣ್ಣದೊಂದಿಗೆ ಆಕಾಶವು ಸರಸವಾಡುವಾಗ ಉಂಟಾಗುವ ಬಣ್ಣದ ಸೀರೆಯನ್ನು ಆಕೆ ಉಟ್ಟಿದ್ದಳು. ಹಚ್ಚ ಹಸುರಿನ ಮೇಲೆ ಬೆಳ್ದಿಂಗಳು ಬಿದ್ದಾಗ ಉಂಟಾಗುವ ಸೌಂದರ್ಯವು ಆ ಸೀರೆ ಅವಳ ಮೇಲೆ ತೋರಿಬರುತಿತ್ತು. ಅದೊಂದು ಚೆಲುವು ಆಕೆಯ ದೇಹದಿಂದ ಹೊರ ಹೊಮ್ಮುತಿತ್ತು. ರಸಿಕ ಕಲಾವಿದನು ರಸಿಕತೆಯಿಂದ ಕೆತ್ತಿದ ಗೊಂಬೆಗೆ ಜೀವಕಳೆ ತುಂಬಿಬಂದಾಗಿನ ಚೆಲುವು ಅವಳಲ್ಲಿತ್ತು.

ಕಾಲಸಪ್ಪಳವನ್ನು ಕೇಳಿ ಪತ್ರಿಕೆಯನ್ನೋದುತಿದ್ದ ಕೃಷ್ಣ ತಲೆ ಎತ್ತಿದ. ಒಂದು ಕ್ಷಣ ದಿಙ್ಮೂಢನಾದ. ಆತನ ಮನಸ್ಸು ಅವನ ತಲೆಯಿಂದ ಹೊರ ಬಂದು ಅದೆಲ್ಲಿಯೋ ವಿಹರಿಸುತ್ತ–ಕಲ್ಪನೆಯ ಸಾಮ್ರಾಜ್ಯವನ್ನು ಕಟ್ಟುತಿತ್ತು.

ಯಶೋದೆಯ ಮಗ ಕೃಷ್ಣ ವಿಶ್ವಾಕಾರವನ್ನು ತೋರಿದಂತೆ ಈ ಕೃಷ್ಣ ಕರಾಳ ಕೃಷ್ಣ ಸರ್ಪಾಕಾರವನ್ನು ತಾಳಿದ. ಈ ಅಂಧಕಾರದ ನಡುಬೆಳಕಿನಲ್ಲಿಯಾದರೂ ಆಕೆ ತನ್ನ ಸ್ನೇಹಿತನ ಧರ್ಮಪತ್ನಿ ಎಂಬುದಾತನಿಗೆ ಹೊಳೆಯಲಿಲ್ಲ. ಕಾಮುಕನಿಗೆ ಕಣ್ಣು ತೋರುವುದೆ?

ಎಂತಾದರೂ ಮಾಡಿ ಕುಮಾರನ ಕೈಯಿಂದ ಆಕೆಯನ್ನು ಹಾರಿಸಿಬಿಡಬೇಕು. ಎಂದಾತ ಬುಸುಸುಯ್ಯುತ್ತ ನಿರ್ಧರಿಸಿಕೊಂಡ.

ಕುಮಾರ—ಕೃಷ್ಣ ಹಿಂದಿನಂತೆಯೇ ಇದ್ದರು. ಅದಾವುದೋ ವಿಧಾನದಿಂದ ಕುಮಾರನಿಗೆ ಮದ್ಯಸೇವನೆಯ ಚಟ ಅಂಟಿಬಿಟ್ಟಿತು. ಕೃಷ್ಣನ ಒತ್ತಾಯವೋ ಪ್ರಕೃತಿಯ ಮಾಯೆಯೋ, ಕೃಷ್ಣನೇ ಕುಮಾರನ ಜೀವಂತ ದೈವವಾದ. ಪತಿ ಪತ್ನಿಯರ ನಡುವೆ ವಿರಸವನ್ನು ತಂದೊಡ್ಡಿ ತಾನು ಸರಸವಾಡಲೆಳಸುತ್ತಿದ್ದ ಕೃಷ್ಣ.

ಅಂದು ಅಮಾವಾಸ್ಯೆ. ಕಾಳರಾತ್ರಿ. ಕುಮಾರನಿಗೆ ಸರಿಯಾಗಿ ಕುಡಿಸಿ, ಆತನನ್ನು ಕೆಲವು ಆಳುಗಳ ಮೂಲಕ ದೂರ ಬಿಟ್ಟು ಬಂದು ವಿಶಾಲುವನ್ನು ಕಾಣ ಹೊರಟ. ರಾತ್ರಿ ಬಹು ಹೊತ್ತಾದರೂ ಬಾರದಿರುವ ಪತಿಯನ್ನು ಪತಿ ಭಕ್ತೆಯಾದ ವಿಶಾಲು ಕಾಯುತ್ತ ಇದ್ದಳು. ತನ್ನ ದುರದೃಷ್ಟವನ್ನು ಹಳಿಯುತ್ತಲಿರುವಾಗ ಅತ್ತ ಕುಮಾರ ಇಹಲೋಕವನ್ನೆ ಮರೆತಿದ್ದ. ಕೃಷ್ಣ ದಾರಿಗುಂಟ ವಿಶಾಲುವಿನ ಪ್ರೇಮದ ಯಾಚನೆಯನ್ನೆ ಬಯಸುತ್ತಿದ್ದ. ಪ್ರಕೃತಿ ಮಾತ್ರ ಕಪ್ಪಾಗಿತ್ತು –ಕರಾಳ ರಾತ್ರಿ ತಾಂಡವವಾಡುತಿತ್ತು!

ಅಗ್ನಿ ಸಾಕ್ಷಿಯಾಗಿ ಕೈಹಿಡಿದ ಪತಿಯ ಬಂಧನಕ್ಕೆ ಸಿಲುಕಿದ ವಿಶಾಲು ಆತನನ್ನು ಅರಸುತ್ತ ಹೊರಟಳು ಏಕಾಕಿನಿಯಾಗಿ! ಅದಾವುದೋ ಅವ್ಯಕ್ತ ಶಕ್ತಿ ಆಕೆಯಲ್ಲಿ ಸಂಚಾರ ಮಾಡುತಿತ್ತು! ಸತ್ಪ್ರೇರಣೆಯೀಯುತಿತ್ತು. ಮನೆಯತ್ತ ಗಮನವಿಡದೆ ಅಂಧಕಾರವನ್ನು ಭೇದಿಸುತ್ತ ವೀರನಾರಿಯಂತೆ ವಿಶಾಲು ನಡೆಯುತಿದ್ದಳು— ಮನೆಗೆ ಬಾರದ ಪತಿಯನ್ನರಸುವ ವೀರಯೋಧಿನಿಯಂತೆ!

ತೆರೆದ ಬಾಗಿಲಿಂದ ಒಳಪ್ರವೇಶಿಸಿ ಮೆಲ್ಲನೆ ಮೃದುವಾಗಿ ಕೂಗಿದ ಕೃಷ್ಣ— "ವಿಶಾಲೂ"

ಉತ್ತರ ಬಾರದಿರಲು ಪಾಪ, ಅಳುತ್ತಿರಬೇಕೆಂದು ಭಾವಿಸಿ ಆಕೆಯನ್ನು ಸಮಾಧಾನಮಾಡಿ ಹಕ್ಕಿಯಂತೆ ಬಗಲಿಗೆ ಸೇರಿಸಿಕೊಳ್ಳಬೇಕೆಂದು ಬಗೆದು ಮೆಲ್ಲ ಮೆಲ್ಲನೆ ಮನೆಯೊಳಕ್ಕೆ ಬಂದು ಕರೆದ "ಏ, ವಿಶಾಲೂ"

ನಿರುತ್ತರ. ಕೃಷ್ಣ ಒಂದು ಕ್ಷಣ ಅಪ್ರತಿಭನಾದ. ಕತ್ತಲೆಯೇ ಮೂರ್ತಿವೆತ್ತಂತಿದ್ದ ಆ ಮನೆಯಲ್ಲಿ ಏನೋ ಸಂಚಾರವಾದಂತಾಯಿತು! ತನ್ನ ಮೋಸ, ಬಯಲಿಗೆ ಬಂದೀತೆಂದಾತನಿಗೆ ತೋರಿರಬೇಕು! "ಕುಮಾರ," ಎಂದು ಕೂಗುತ್ತ ಆತ ಮನೆಯೊಳಗಿಂದ ಓಡಿಬಂದ. ಆದರೆ, ಕತ್ತಲೆಯ ಪ್ರಭಾವದಿಂದಾಗಿ ಹೊಸ್ತಿಲನ್ನೆ ಚವಿ ಮುಗ್ಗರಿಸಿ ಬಿದ್ದುಬಿಟ್ಟ— "ಅಯ್ಯೋ.... ಸತ್ತೆ...."

೦೦ ೦೦.

ಅತ್ತ ರಸ್ತೆಯ ಒಂದು ಮೂಲೆ. ಕುಮಾರನು ಕೂಗಿಕೊಳ್ಳುತಿದ್ದ..'ಹಾಯ್....ವಿಶಾಲೂ....ವಿಶಾಲೂ ...' ಆತನ ಪ್ರಾಣಪಕ್ಷಿ ಹಾರಿಹೋಗಲು ಸನ್ನದ್ಧವಾಗಿತ್ತು.

ಆಕಾಶದಲ್ಲಿ ಬೆಳ್ಳಿ ಮೂಡಿತ್ತು. ವಿಶಾಲು ಪತಿಯನ್ನರಸುತ್ತಲೇ ಇದ್ದಳು. ತನ್ನ ನಡತೆಯ ಬಗ್ಗೆ ಆಕೆಗೇ ಆಶ್ಚರ್ಯ ಹುಟ್ಟಿರಬೇಕು. ಅಂತೂ ಇಂತೂ ಕೆಲ ಹೊತ್ತಿನ ನಂತರ, ತನ್ನ ಹೆಸರೆತ್ತುವ ಕ್ಷೀಣ ಧ್ವನಿ ಆಕೆಯ ಕರ್ಣಪಟಲಕ್ಕೆ ಬಿತ್ತು. ಕುತೂಹಲ ಆಶ್ಚರ್ಯ ಭೇದಗಳ ಭಾವದಿಂದಾಕೆ ಅತ್ತ ಕಾಲಿಟ್ಟಳು–ಹೌದು ಅಲ್ಲಿ ಕುಮಾರನು ಬಿದ್ದು ಕಾಲು ಮುರಿದುಕೊಂಡು, ಹಣೆ ಹರಿದುಕೊಂಡು ಬಿಕ್ಕುತಿದ್ದ — ವಿಶಾಲೂ ..ಹಾಯ್....ವಿ .... ಶಾ ಲೂ".

ವಿಶಾಲುವಿನ ಕಂಠ ಬಿಗಿದುಬಂತು. ತಟ್ಟನೆ ಓಡಿಹೋಗಿ ಆತನನ್ನು ತಬ್ಬಿ ಮುದ್ದಿಟ್ಟಳು. ಇಬ್ಬರೂ ಮೌನ. ಆನಂದದಲ್ಲಿಯೇ ತಲ್ಲೀನರಾಗಿದ್ದರು.

೦೦ ೦೦

ಮುಂಜಾವದ ಕೋಳಿ ಕೂಗುತಿತ್ತು. ಅಗಲಿದ ದಂಪತಿಗಳು ಮರಳಿ ಬರುವಾಗ ಸ್ವಾಗತಗೀತೆ ಹಾಡುತ್ತಿತ್ತು. ತಂಗಾಳಿ ಬೀಸುತ್ತಿತ್ತು. ಕುಮಾರ ವಿಶಾಲು ತಮ್ಮ ಮನೆಯ ಹತ್ತಿರ ಬರುತ್ತಿದ್ದರು. ಆಗ ವಿಶಾಲುವಿಗೆ ತಾನು ಸರಪಳಿಯನ್ನೂ ಸಿಕ್ಕಿಸಿ ಬಾರದ ನೆನಪಾಯಿತು.

ಮುನ್ನೇಸರಿನ ಮಂದ ಪ್ರಭೆಯಲ್ಲಿ ಒಂದು ವ್ಯಕ್ತಿ ಹೊಸ್ತಿಲಲ್ಲ ಬಿದ್ದುಬಿಕ್ಕುತಿರುವುದು ಕಂಡಿತು. ಆಶ್ಚರ್ಯವೇ ಆಶ್ಚರ್ಯ. ಸಮೀಪ ಬಂದು ನೋಡುವಾಗ ಅರಿವಾಯಿತು— ಹಿತಶತ್ರು ಕೃಷ್ಣನೆಂದು!

"ವಿಶಾಲೂ, ನನ್ನ ಮತ್ತು ನಿನ್ನ ಅದೃಷ್ಟ ಉತ್ತಮವಿತ್ತು. ಹಾಗಿಲ್ಲದಿದ್ದರೆ ಈ ಸ್ಥಿತಿಯಲ್ಲೂ ನಾನು ಉಳಿದು ಬಂದ ಈ ನೀಚನು ನಮ್ಮ ಪ್ರೇಮಕ್ಷೀರಕ್ಕೆ ಹುಳಿಹಿಂಡಿ ಅದರ ಲಾಭ ಪಡೆಯಲು ಹವಣಿಸುತಿದ್ದ. ಈತನಿಗೆ ಇದೇ ಶಿಕ್ಷೆಯಾಗಬೇಕು." ಕುಮಾರ ಗುಡುಗಿದ

"ಆದರೆ, ಈತ ನಿಮ್ಮ ಆತ್ಮೀಯ ತಾನೆ? ದೈವದ ಸಹಾಯದಿಂದ ಆತನೂ ಉಳಿದುಕೊಂಡ. ನಮ್ಮನ್ನು ತೊರೆದು ಕೂಡಿಸಿದ ದೈವವೇ ಅವನಿಗೂ ಬುದ್ಧಿ ಕಲಿಸಿದೆ!" ಎಂದಳು.

ಕುಮಾರ ಕೃಷ್ಣನನ್ನೆತ್ತಿದ. ಉಸಿರು ಮಾತ್ರವುಳಿದಿತ್ತು. ಮೈಯೆಲ್ಲಾ ರಕ್ತದಿಂದ ತೋಯ್ದು ಹೋಗಿತ್ತು. ಆ ಭೀಕರ ಕರಾಳ ದರ್ಶನವು ಕುಮಾರನನ್ನು ತೃಪ್ತಿಪಡಿಸಿತೋ ಏನೋ ಮುಂದಿನ ಉಪಚಾರಕ್ಕೆ ಮೊದಲಾಯಿತು.

೦೦ ೦೦

"ವಿಶಾಲೂ, ಅಂದಿನ ದಿನವನ್ನು ನೆನಪಿಸಿದಾಗ ನನಗೆ ಮೈ ಜುಮ್ಮೆನ್ನುತ್ತಿದೆ" ಇಂದಿಗೂ ಆರು ತಿಂಗಳನಂತರ ಕುಮಾರ ಹೇಳಿದ.

"ಏಕೆ? ಆ ದಿನವು ನಿಜವಾಗಿಯೂ ನಮ್ಮ ಅದೃಷ್ಟದ ಪರೀಕ್ಷೆ ನಡೆಸಿತ್ತು. ಆದರೆ, ಅದರಲ್ಲಿ ನಾವು ಗೆದ್ದು ಬಂದೆವು" ವಿಶಾಲೂ ನಗು ನಗುತ್ತ ಉತ್ತರಿಸಿದಳು.

"ಹಾಗಲ್ಲ ಅತ್ತಿಗೆ, ಅಂದು ಕಾಮರೂಪಿ ಕೃಷ್ಣನ ಪುಣ್ಯದಿನ ಮತ್ತು ನಿಮ್ಮವರ ತಮ್ಮ ಕೃಷ್ಣನ ಜನ್ಮದಿನ" ಅಲ್ಲಿಯೇ ಕೂತಿದ್ದ ಕೃಷ್ಣ ಮುಗುಳ್ನಗುತ್ತಾ ತನ್ನ ಧ್ವನಿ ಸೇರಿಸಿದ.



ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಛೇರಿ: ಉಡುಪಿ. ಸ್ಥಾಪನೆ: 1925.

ಹಲ್ಲಿದ್ದಾಗಲೇ ಹುರಿಗಡಲೆ! ಹಣವಿದ್ದಾಗಲೇ ಉಳಿತಾಯ!

ನಮ್ಮ
ಲಕ್ಷ್ಮೀ ಕ್ಯಾಶ್ ಸರ್ಟಿಫಿಕೇಟುಗಳು

ನಿಮ್ಮ 8 ರೂ.ಗಳನ್ನು ಐದು ವರುಷಗಳಲ್ಲಿ ರೂ. ಹತ್ತಾಗಿ.
,, 80 ,, ,, ರೂ. ನೂರಾಗಿ.
,, 800 ,, ,, ರೂ. ಸಹಸ್ರವಾಗಿ.

ಅಭಿವೃದ್ಧಿಗೊಳಿಸುವುದು.

ಹೆಚ್ಚಿನ ಮಾಹಿತಿಗೆ ನಮ್ಮ ಯಾವದೇ **104** ಶಾಖೆಗಳಲ್ಲಿ ವಿಚಾರಿಸಿರಿ.

ಟಿ. ಎ. ಪೈ, ಬಿ ಕಾಂ.(ಬೊಂ.) ಎ. ಐ. ಐ. ಬಿ ಎಫ್.ಆರ್ ಇ.ಎಸ್. (ಲಂಡನ್) ಜನರಲ್ ಮೆನೇಜರ್.

ಡಾ। ಟಿ. ಮಾಧವ ಪೈ, ಎಂ.ಬಿ. & ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd.
UDIPI.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ನಮ್ಮ ಸುತ್ತಲಿನ ರಾಜಕಾರಣ—

ನೇಪಾಲದ ರಾಷ್ಟ್ರೀಯ ಸಮಸ್ಯೆಗಳು

ನೇಪಾಲವು ಐವತ್ತಾರು ಸಾವಿರ ವರ್ಗ ಮೈಲು ವಿಸ್ತಾರಕ್ಕೆ ಹರಡಿದ ಸುಮಾರು ೫೦೦ ಮೈಲ ಉದ್ದ ಮತ್ತು ೯೦ ಮೈಲಿಗಳಿಂದ ೧೫೦ ಮೈಲಿ ಅಗಲವಿರುವ ದೇಶವಾಗಿದೆ ಈ ಸಣ್ಣ ದೇಶದ ಜನಸಂಖ್ಯೆ ಸುಮಾರು ೮೫ ಲಕ್ಷವಿದೆ. ಇವರಲ್ಲಿ ೪೦ ಲಕ್ಷ ಜನರು ಸಮತಟ್ಟಾದ ಭೂಮಿಯಲ್ಲಿಯೂ ಉಳಿದವರು. ೪ ಸಾವಿರದಿಂದ ೨೦ ಸಾವಿರ ಅಡಿ ಎತ್ತರದ ತಪ್ಪಲು ಪ್ರದೇಶಗಳಲ್ಲಿಯೂ ವಾಸಿಸಿರುತ್ತಾರೆ. ನೇಪಾಲದ ರಾಜಧಾನಿ ಕಟಮಂಡುವಾಗಿ ಇದು ನಾಲ್ಕೂವರೆ ಸಾವಿರ ಅಡಿ ಎತ್ತರದ ಪರ್ವತದ ಮೇಲಿದೆ ಕಟಮಂಡುವಿನ ನಾಲ್ಕೂ ದಿಕ್ಕುಗಳಲ್ಲಿ ಆರೂವರೆ ಸಾವಿರದಿಂದ ಹಿಡಿದು ಒಂಭತ್ತು ಸಾವಿರ ಅಡಿ ಯೆತ್ತರದ ಚಿತ್ತಾಕರ್ಷಕ ಮತ್ತು ಸುವಾತಾವರಣ ಯುಕ್ತವಾದ ಪರ್ವತಗಳಿವೆ ಇದು ಭಾಗಮತೀ ಮತ್ತು ವಿಷ್ಣುಮತೀ ನದಿಗಳಿಂದಾವೃತವಾಗಿದೆ

ಕಟಮಂಡು ನಗರದ ಅಧಿಕತರ ಭಾಗವು ಸುಂದರವಾಗಿದೆ ಪ್ರಾಯಃ ಪ್ರತ್ಯೇಕ ಬೀದಿಯೂ ಮಂದಿರಗಳಿಂದ ತುಂಬಿದೆ ಕಟಮಂಡುವಿನ ಪೂರ್ವದಲ್ಲಿ ಭಾತಗಾಂ (ಭಕ್ತಪುರ) ಮತ್ತು ದಕ್ಷಿಣದಲ್ಲಿ ಲಲಿತಪುರ (ಪಾಟನ್)ಗಳಿವೆ ಇಲ್ಲಿನ ದೇವಾಲಯಗಳು ಹೆಚ್ಚಾಗಿ ಪೆಗೋಡಾ ಪದ್ಧತಿಯಂತೆ ರಚಿತವಾಗಿವೆ. ಪ್ರಸಿದ್ಧ ಪಶುಪತಿನಾಥನ ಮಂದಿರ, ಗುಹ್ಯೇಶ್ವರಿ, ಮಹಾಬುದ್ಧ ಮಂದಿರ (ಪಾಟನ್), ಸ್ವಯಂ ಭೂ(ಬೌದ್ಧ ಮಂದಿರ)ವು ಇಲ್ಲಿನ ಪ್ರಸಿದ್ಧ ಧಾರ್ಮಿಕ ಸ್ಥಳವಾಗಿದೆ ಮತ್ತು ದರ್ಶನೀಯ ಸ್ಥಾನಗಳಲ್ಲಿ ಇದೀಗ ಕೇಂದ್ರೀಯ ಸಚಿವಾಲಯವಿರುವ ಸಿಂಹ ದರಬಾರ ಮತ್ತು ಟುಂಡೀಖೇಲ (ಸೈನಿಕ ಪರೇಡ್-ಸ್ಥಳ)ಗಳಿವೆ

ನೇಪಾಲದಲ್ಲಿ ಕಟಮಂಡುವಿನ ಹೊರತಾಗಿ ಪರ್ವತಗಳಲ್ಲಿ ಒಂದು ಸರೋವರಗಳ ನಗರವಿದೆ ಇದು ಸಿಹಿ ಕಿತ್ತಲೆಗಳಿಗಾಗಿ ವಿಖ್ಯಾತವಾಗಿದೆ. ಸಮ ಭೂಮಿಯಲ್ಲಿ ವೀರಗಂಜ್, ವಿರಾಟ ನಗರ ಮೊದಲಾದ ಸಣ್ಣ ಸಣ್ಣ ನಗರಗಳಿದ್ದು ಇವುಗಳ ಜನಸಂಖ್ಯೆಯು ಕೇವಲ ಸಾವಿರದಲ್ಲೇ ಸೀಮಿತವಾಗಿರುವುದು ಈಗ ರಾಜ್ಯ ರೂಪದಲ್ಲಿ ಒಂದಾಗಿರುವ ನೇಪಾಲ ಮತ್ತದರ ಆಸುಪಾಸಿನ ಪರ್ವತಗಳಲ್ಲಿ ವಿಭಿನ್ನ ವಂಶ ಮತ್ತು ಜಾತಿ ಉಪಜಾತಿಗಳು ರಾಜ್ಯವಾಳುತಿದ್ದುವು. ಇಲ್ಲಿ ಕಿರಾತ, ಲಿಚ್ಛವಿ, ಠಕುರೀ, ಮತ್ತು ಅಂತ್ಯದಲ್ಲಿ ಗೂರ್ಖರ ಪ್ರಸಿದ್ಧ ಜಾತಿಗಳ ಸಂಪ್ರದಾಯಗಳಿದ್ದು ಅವು ಇಲ್ಲಿ ರಾಜ್ಯಭಾರ ಮಾಡಿದುವು. ಪ್ರಾಯಃ ಈ ಎಲ್ಲಾ ಜಾತಿ ಉಪಜಾತಿಗಳ ಶಾಸಕರು ಈ ಭೂಭಾಗವನ್ನು ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ದೆಸೆಗಳಲ್ಲಿ ತಮ್ಮ ತಮ್ಮ ದೃಷ್ಟಿಕೋಣಗಳಿಂದ ಉನ್ನತಗೊಸಿದರು.

ಇಂದಿನಿಂದ ಸುಮಾರು ಒಂದು ನೂರು ವರ್ಷ ಪೂರ್ವದಲ್ಲಿ ಜಂಗಬಹಾದುರ ರಾಣನು ತನ್ನ ಮಹತ್ವಾಕಾಂಕ್ಷೆಗನುರೂಪವಾಗಿ ಶಾಸನಸತ್ತೆಯ ಸಂಪೂರ್ಣ ಸೂತ್ರವನ್ನು ತನ್ನ ಕೈಯಲ್ಲಿ ಹಿಡಿದುಕೊಂಡನು. ಶಾಸನಾಧಿಕಾರದ ದೃಷ್ಟಿಯಿಂದ ಶಹಾವಂಶದ ಯಾವ ಪ್ರಭಾವವೂ ಬೀಳಲಾರದಂತೆ ಮಾಡಿದನು. ಭಾರತೀಯ ಜನಜಾಗೃತಿ, ಮತ್ತು ರಾಜ ನೈತಿಕ ಚೇತನದ ಪ್ರಥಮ ಸಶಕ್ತ ಕ್ರಾಂತಿಯ ೧೮೫೭ರಲ್ಲಿ ರಾಣಾ ಜಂಗ ಬಹಾದುರನು ಬ್ರಿಟಿಷರಿಗೆ ಸಂಪೂರ್ಣ ಸಹಾಯ ಮಾಡಿದನು. ರಾಣಾ ಶಾಹಿಯ ಪ್ರಾರಂಭವು ಈ ದುಃಖದ ಘಟನೆಯ ಫಲಸ್ವರೂಪವಾಯಿತು ಒಟ್ಟಿನಲ್ಲಿ ಇತಿಹಾಸದ ಉತ್ಕರ್ಷ–ಉತ್ಥಾನ ಸಂಬಂಧಿ ವಿವರಣೆಯು ಸಂಬಂಧಿತ ಜಾತಿ ಸಮಾಜಗಳಲ್ಲಿ ಕಡಿಮೆ ಪ್ರಭಾವ ಗರಿಮೆಗಳಿಂದ ತುಂಬಿತು. ಆದರೆ, ಅದರ ದುಃಖದ ದ್ವಂದ್ವಾತ್ಮಕ ಆಕಲನದ ಉಲ್ಲೇಖ ಮನಸ್ಸು ಪ್ರಾಣಗಳಲ್ಲಿ ಕರಿಛಾಯೆಯಂತೆ ನಾಟಿಕೊಂಡಿದೆ. ನಿಶ್ಚಿತರೂಪದಲ್ಲಿ ರಾಣಾ ಜಂಗ ಬಹಾದುರನು ಬಹಳ ಒಳ್ಳೆಯ ಶಾಸಕನೂ, ರಾಜ ನೀತಿಜ್ಞನೂ ಆಗಿದ್ದನು ಆದರೆ, ತನ್ನ ಸ್ವಾರ್ಥಲಿಪ್ಸೆ ಮತ್ತು ವಂಶಗತ ಶಕ್ತಿ ಸಮೃದ್ಧಿಯನ್ನು ಅಕ್ಷುಣ್ಣವಾಗಿಸುವುದಕ್ಕೆ ಈ ಹೆಜ್ಜೆಯು ರಾಣಾ ಶಾಸನ ಮತ್ತು ಭಾರತ ನೇಪಾಲದ ಸಾಂಸ್ಕೃತಿಕ ಧಾರ್ಮಿಕ ಏಕತೆಯ ಗಾಢತೆಗೆ ಮಾತ್ರ ಧಕ್ಕೆಯನ್ನು ತಂದ ಬಿಟ್ಟಿತು

ಸುಮಾರು ಎರಡು ನೂರು ವರ್ಷಗಳ ವರೆಗೆ ನಿರ್ಭಯದ ನಿರ್ವಿರೋಧ ಮತ್ತು ನಿಶ್ಶಂಕ ರೂಪದಲ್ಲಿ ನಡೆದು ಒಂದ ರಾಣಾ ಶಾಸನದ ಪತನವು ೧೯೫೦ರ ಅಂತ್ಯದಲ್ಲಾಯಿತು ಪ್ರತ್ಯಕ್ಷ ರೂಪದಲ್ಲಿಯಲ್ಲವಾದರೂ ಆಂತರಿಕ ರೂಪದಲ್ಲಿ ಈ ಶಾಸನದ ಅಂತ್ಯವು ಭಾರತೀಯ ಸ್ವಾಧೀನತೆಯ ಸ್ವಾಭಾವಿಕ ಪ್ರತಿಕ್ರಿಯಾ ಸ್ವರೂಪವಾಯಿತು ರಾಣಾ ಶಾಸನ ಕಾಲದಲ್ಲಿ ನೇಪಾಲದೊಳಗೆ ಯಾವುದೇ ರಾಜನೈತಿಕ ಸಾಂಸ್ಕೃತಿಕ ಏಕತೆಯನ್ನುಂಟು ಮಾಡುವುದು ಸಾಧ್ಯವಾಗಿರಲಿಲ್ಲ ೧೯೫೦ಕ್ಕೆ ಮೊದಲಿನ ನೇಪಾಲದ ಇತಿಹಾಸವು ವ್ಯಕ್ತಿಗತ ವಿರೋಧಗಳ ಚರಿತ್ರೆಯಾಗಿದೆ ಯಾವ ಮುಂದಾಳು ವ್ಯಕ್ತಿಗತ ವಿರೋಧವನ್ನು ಮಾಡಿದನೋ ಅಂತಹನನ್ನು ರಾಣಾ ಶಾಹಿಯು ಜೈಲಿನಲ್ಲಿಯೇ ಒದೆಮಾಡದು ಕೊಂದು ಹಾಕುತಿತ್ತು ಇಲ್ಲವೋ ಅತ್ಯಂತ ಬರ್ಬರ ವಿಧಾನದಲ್ಲಿ ಅವನಿಗೆ ಮರಣ ಶಿಕ್ಷೆ ವಿಧಿಸುತಿತ್ತು. ೧೯೪೬ರಲ್ಲಿ ನೇಪಾಲ ರಾಷ್ಟ್ರೀಯ ಕಾಂಗ್ರೆಸ್‌ನ ಗಠನೆಯಾಯಿತು. ೧೯೪೯ರಲ್ಲಿ ನೇಪಾಲೀ ಪ್ರಜಾತಾಂತ್ರಿಕ ಕಾಂಗ್ರೆಸ್ಸಿನೊಡನೆ ಅದರ ವಿಲಯನವಾಯಿತು ಎರಡೂ ಕಾಂಗ್ರೆಸ್‌ಗಳೊಂದ ಸೇರಿ ನೇಪಾಲೀ ಕಾಂಗ್ರೆಸ್ ಎಂಬ ಹೆಸರನ್ನು ಪಡೆಯಿತು ಈ ಪಕ್ಷವು ೧೯೫೦ರಲ್ಲಿ ಬೈರಗನಿಯಾ ಅಧಿವೇಶನದಲ್ಲಿ ರಾಣಾಶಾಹೀಗೆ ಆಹ್ವಾನವಿತ್ತಿತು, ಮತ್ತು ಸಶಕ್ತ ಕ್ರಾಂತಿಯ ಸಂಗರನೆ ಮಾಡಿತು ಸನ್ ೧೯೫೧ರ ಪ್ರಾರಂಭದಲ್ಲಿ ರಾಣಾ ಮೋಹನ ಶಮಶೇರನ ಪ್ರಧಾನ ಮಂತ್ರಿತ್ವದಲ್ಲಿ ಒಂದು ಮಂತ್ರಿಮಂಡಲದ ಸಂಗರನೆಯಾಯಿತು. ಆದರೆ ಅವರೊಳಗಿನ ಮತಭೇದಗಳ ಕಾರಣದಿಂದಾಗಿ ೧೯೫೧ರ ಅಂತ್ಯದಲ್ಲಿ ಶ್ರೀ ಮಾತೃಕಾಪ್ರಸಾದ ಕೋಯಿರಾಲಾನು ನೇಪಾಲೀ ಕಾಂಗ್ರೆಸ್‌ನ ಸರಕಾರ ರಚಿಸಿದನು. ಈ ಸರಕಾರವೂ ಕೇವಲ ಹತ್ತು ತಿಂಗಳಿಗೆ ಸಮನಾಯಿತು. ಇದರನಂತರ ಮಹಾರಾಜಾಧಿರಾಜ ತ್ರಿಭುವನರು ಕೇಶರ ಶಮಶೇರನ ಅಧ್ಯಕ್ಷತೆಯಲ್ಲಿ ಸಲಹೆಗಾರ ಸಮಿತಿಯನ್ನು ನಿರ್ಮಿಸಿದರು ಇದಾದ ನಾಲ್ಕು ತಿಂಗಳನಂತರ ಶ್ರೀ ಮಾತೃಕಾಪ್ರಸಾದ ಕೋಯಿರಾಲಾರು ಎರಡನೆ ಮಂತ್ರಿ ಸಂಘಟವನ್ನು ರಚಿಸಿದರ. ಈ ಸಂಘಟವನ್ನು ಸ್ಥಾಪಿಸಲು ಮಾತೃಕಾ ಬಾಬೂರವರು ನೇಪಾಲ ಪ್ರಜಾತಂತ್ರ ಪಕ್ಷದ ರಚನೆಮಾಡಿರು ಈ ಮಂಡಲವು ೧೯೫೫ರ ಅಂತ್ಯದವರೆಗೆ ನಡೆಯಿತು ಮಹಾರಾಜಾಧಿರಾಜ ತ್ರಿಭುವನರ ಸ್ವರ್ಗವಾಸವಾದಾಗ ಈ ಸರಕಾರದ ಪತನವೂ ಆಯಿತು ಪುನಃ ಒಂದು ಸಲಹೆಗಾರ ಸಮಿತಿಯು ಸರದಾರ ಗುಂಜಮಾನಸಿಂಹನ ನೇತೃತ್ವದಲ್ಲಿ ನಿರ್ಮಿತವಾಯಿತು

ಹೊಸ ಮಹಾರಾಜಾಧಿರಾಜ ಮಹೇಂದ್ರರು ಹೊಸ ಸರಕಾರದ ಸ್ಥಾಪನೆಗೆ ನೇಪಾಲದ ರಾಜನೈತಿಕ ಮತ್ತು ಸಾಮಾಜಿಕ ದಳಗಳ ಪ್ರತಿನಿಧಿಗಳನ್ನು ಶಿಖರ ಅಂತ್ಯದಲ್ಲಿ ಕರೆದರು ನೇಪಾಲದ ಇತಿಹಾಸದಲ್ಲಿ ಇದೊಂದು ಮಹತ್ವಪೂರ್ಣ ಮತ್ತು ಸ್ವಾಭಾವಿಕವಾದ ಘಟನೆಯಾಗಿದೆ, ಈ ಆಮಂತ್ರಣದಲ್ಲಿ ೧೦೦ ಪಕ್ಷಗಳ ಪ್ರತಿನಿಧಿಗಳು ಒಟ್ಟುಸೇರಿದ್ದರು ನಾವು ಇಂದು ಕಟಮಂಡುವಿಗೆ ಹೋಗಿ ಅಲ್ಲಿ ಮಾರ್ಗದಲ್ಲಿ ಸುತ್ತುತಿದ್ದರೆ, ಪ್ರತ್ಯೇಕ ಓಣಿಯಲ್ಲಿ ಒಂದಲ್ಲ ಒಂದು ಪಕ್ಷದ ನಾಮಫಲಕವು ತೂಗಹಾಕಿರುವುದನ್ನು ನೋಡಬಹುದು.

ಶ್ರೀ ಟಂಕಾ ಪ್ರಸಾದ ಆಚಾರ್ಯರು ೧೯೫೬ರ ಪ್ರಾರಂಭದಲ್ಲಿ ಒಂದು ಸಂಯುಕ್ತ ಸರಕಾರದ ಸ್ಥಾಪನೆಯನ್ನು ಮಾಡಿದರು ಇದು ೫೭ರ ಜುಲೈ ವರೆಗೆ ಉಳಿಯಿತು ಈ ಸರಕಾರದ ಸದಸ್ಯರಲ್ಲಿ ಪರಸ್ಪರ ವಿರ್ಮಷತೆ ಹೆಚ್ಚುತ್ತ ಬಂದುದರಿಂದ, ಮಂತ್ರಿ, ರಾಜ್ಯ ಮಂತ್ರಿ ಮತ್ತು ಉಪ ಮಂತ್ರಿಗಳ ಸಂಖ್ಯೆಯನ್ನು ಏರಿಸುತ್ತ ಬರಬೇಕಾಯಿತು. ಮಹಾರಾಜಾಧಿರಾಜರಲ್ಲಿ ಮತಭೇದ ಬಂದುದರಿಂದಾಗಿ ಈ ಸರಕಾರವು ರಾಜಿ ಕೊಡಬೇಕಾಗಿ ಬಂತು ಮತ್ತು ಜುಲೈ ೨೬ರಂದು ಕುಂವರ ಇಂದ್ರಜೀತ ಸಿಂಹರು ಕೆಲವು ಸ್ವತಂತ್ರ ವ್ಯಕ್ತಿಗಳೊಡನೆ ಕೂಡಿ ಸರಕಾರ ಸ್ಥಾಪಿಸಿದರು. ದುರ್ಭಾಗ್ಯ ವಶದಿಂದ ಈ ಸರಕಾರವೂ ನವಂಬರ ೧೪ರಂದು ಪದತ್ಯಾಗ ಮಾಡಿತು.

ಈಗಿನ ಸಮಯದಲ್ಲಿ ರಾಜ ಶಾಸನವನ್ನು ಮಹಾ ರಾಜಾಧಿರಾಜ ಮಹೇಂದ್ರರೇ ನಡೆಸುತಿದ್ದಾರೆ ರಾಜಕುಮಾರ ಹಿಮಾಲಯರ ಅಧ್ಯಕ್ಷತೆಯಲ್ಲಿ ಪಂಚವಾರ್ಷಿಕ ಯೋಜನಾ ಆಯೋಗವು ಸ್ಥಿರವಾಗಿದ್ದು ಎರಡನೆ ರಾಜಕುಮಾರ ವಸುಂಧರಾರ ನೇತೃತ್ವದಲ್ಲಿ ಮಹಾರಾಜಾಧಿರಾಜ ದ್ವಾರಾ ಶಾಸನ ವ್ಯವಸ್ಥೆಯಲ್ಲಿ ಸಲಹೆಗಾರ ಸಮಿತಿಯ ರೂಪದ ಒಂದು ಮಂಡಲಿಯನ್ನು ಸ್ಥಾಪಿಸಲಾಗಿದೆ.

೧೯೫೦ರ ನಂತರ ನೇಪಾಲದ ಆಡಳಿತವು ಬಹಳ ಅವ್ಯವಸ್ಥಿತ ರೂಪದಲ್ಲಿ ನಡೆದು ಬರುತಿದೆ ಜನತಾ ಪ್ರತಿನಿಧಿಗಳ ರೂಪದಲ್ಲಿ ನಮ್ಮೆದುರು ಮೂವರು ಪ್ರಧಾನ ಮಂತ್ರಿಗಳು ಬಂದಿದ್ದಾರೆ ವಿಶೇಷ ಸಹಾಯವೂ ತುಂಬಿಬರುವಷ್ಟು ದೊರೆಯುತ್ತಿದೆ ಆಚಾರ್ಯರ ಮಂತ್ರಿಮಂಡಲದ ಅಧಿಕಾರಾವಧಿಯಲ್ಲಿ ನೇಪಾಲವು ೩೩ ಲಕ್ಷದ ಒಂದು ಪಂಚವಾರ್ಷಿಕ ಯೋಜನೆಯನ್ನೂ ಮಾಡಿ ಮುಗಿಸಿತು ಹತ್ತು ಲಕ್ಷ, ಎಂಟುಲಕ್ಷ ಮತ್ತು ಆರುಲಕ್ಷದ ದಾನಗಳನ್ನು ಕ್ರಮವಾಗಿ ಭಾರತ, ಅಮೆರಿಕೆ ಮತ್ತು ಚೀನಗಳು ಕೊಡುವ ಭಾಷೆಯಿತ್ತವು ಚೀನದಿಂದ ಒಂದು ಲಕ್ಷದ

(ಆನೇ ಪುಟ ನೋಡಿರಿ)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ ನ

ಪ್ರತಿಯೊಬ್ಬನಲ್ಲಿಯೂ ಬೇಂಕು ಮನೋಭಾವನೆಯನ್ನು ಬೆಳೆಸಿ, ತನ್ನ ಪ್ರತಿಯೊಂದು ಹಣದ ವ್ಯವಹಾರವನ್ನೂ ಅತನು ಬೇಂಕುಗಳ ಮೂಲಕ ನಡೆಸುವಂತಾಗಬೇಕೆಂದೇ ನಮ್ಮ ಆಶಯ ಎಂತಲೆ ನಾವು ಪ್ರತಿಯೊಬ್ಬನಿಗೂ ಅನುಕೂಲವಾಗುವಂತೆ ಹಲವಾರು ಉಳಿತಾಯ ಯೋಜನೆಗಳನ್ನು ಕೈಗೊಂಡಿದ್ದೇವೆ. ನಿಮಗೆ ಅನುಕೂಲವಿರುವ ಯೋಜನೆಯೊಂದನ್ನು ಇಂದೇ ಆರಿಸಿಕೊಳ್ಳಿರಿ!

ದಕ್ಷಿಣ ಭಾರತದ **5** ಸಂಸ್ಥಾನಗಳಲ್ಲಿ ಒಟ್ಟು **49** ಶಾಖೆಗಳು ಈ ಶೆಡ್ಯೂಲ್ಡ್ ಬೇಂಕಿಗಿದ್ದು, ಬೇಂಕು ಉದ್ದಿಮೆಯಲ್ಲಿ ಇದಕ್ಕೆ **51** ವರುಷಗಳಿಗೂ ಮೀರಿದ ಅನುಭವವಿದೆ!!

ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಫೋನ್ ನಂಬ್ರ 21-A

ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ಉಷಾ

ಹೊಲಿಗೆ ಯಂತ್ರಗಳು



● ಗಟ್ಟಿ ಮುಟ್ಟಾಗಿದ್ದು ಸರ್ವರ ಅಭಿರುಚಿಗೂ ಒಪ್ಪುವಂತೆ ವಿವಿಧ ಮಾದರಿಯಲ್ಲಿ ತಯಾರಿಕೆ.

● ಕೊಂಡುಕೊಳ್ಳುವುದೊಂದೇ ಅಲ್ಲ— ಅದೊಂದು ಆದರ್ಶ ಲೇವಣಾತಿ.

— ಸೋಲ್ ಸೆಲ್ಲಿಂಗ್ ಏಜಂಟ್ಸ್ —

ಏಜಂಟ್ಸ್ & ಡಿಸ್ಟ್ರಿಬ್ಯೂಟರ್ಸ್

ಪ್ರೈವೇಟ್ ಲಿಮಿಟೆಡ್,

ಮದ್ರಾಸು—1

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೩-೧-'೫೮	೨೦

ಎರಡು ಸಮ್ಮೇಳನಗಳು

ಕಳೆದವಾರ ಎರಡು ಪ್ರಮುಖ ಅಧಿವೇಶನಗಳು ನಮ್ಮ ದೇಶದಲ್ಲಿ ನಡೆದುವು. ಒಂದು ನಮ್ಮ ನಾಡನುಡಿಯಾದ ಕನ್ನಡ ಸಾಹಿತ್ಯ ಸಮ್ಮೇಳನ ಹಾಗೂ ಇನ್ನೊಂದು ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನ. ಸರ್ವಸಾಮಾನ್ಯವಾಗಿ ಅಧಿವೇಶನಗಳು ಎಂದರೆ ಒಂದು ಸಂಪ್ರದಾಯಕ್ಕನುಸಾರವಾಗಿಯೇ ನಡೆಯುತ್ತವೆ. ಉದ್ಘಾಟಕರು, ಅಧ್ಯಕ್ಷರು, ಪ್ರತಿನಿಧಿಗಳು ಹಾಗೂ ಗೊತ್ತುವಳಿಗಳು—ಇವಿಷ್ಟರಲ್ಲಿಯೇ ನಮ್ಮ ಸಮ್ಮೇಳನಗಳು ಮುಕ್ತಾಯಗೊಳ್ಳುತ್ತವೆ. ಆದರೂ ಈ ವರ್ಷದ ಇಂತಹ ಒಂದೊಂದು ಸಮ್ಮೇಳನದಲ್ಲಿ ಒಂದೊಂದಾದರೂ ವೈಶಿಷ್ಟ್ಯವಿರುವುದು ಗಮನಾರ್ಹವಿದೆ; ಮತ್ತದು ತೀರ ಅವಶ್ಯಕವಾದುದೂ ಹೌದು.

ಬಳ್ಳಾರಿಯಲ್ಲಿ ಕನ್ನಡ ಸಾಹಿತ್ಯದ ನಲ್ವತ್ತನೆಯ ಸಮ್ಮೇಳನವು ನಡೆಯಿತು. ಇದು ಶುಂಬ ಆಶಾಜನಕವಾಗಿಯೇ ಮುಕ್ತಾಯಗೊಂಡಿತು ಎನ್ನಬೇಕು. ರಾಜ್ಯಪಾಲ ಶ್ರೀ ಜಯಚಾಮರಾಜ ಒಡೆಯರರು ಉದ್ಘಾಟನೆ ಮಾಡುತ್ತ 'ನಾನೃಷಿ ಕುರುತೇ ಕಾವ್ಯಂ' ಎಂಬ ನುಡಿಮುತ್ತಿನ ವ್ಯಾಖ್ಯಾನವನ್ನು ಮಾಡಿ ಸಾಹಿತಿಯು ಸಂಯಮಧನನಾಗಬೇಕು; ವ್ಯಾಸಂಗ ರೂಪವಾದ ತಪಸ್ಸಿನಲ್ಲಿ ಮಗ್ನನಾಗಬೇಕು; ಪ್ರೇಯಸ್ಸಿಗಿಂತ ಶ್ರೇಯಸ್ಸಿನೆಡೆಗೆ ಗಮನವೀಯಬೇಕು ಎಂದು ಮುಂತಾಗಿ ನುಡಿದು ತನ್ನ ಸಾತ್ವಿಕ ಜೀವನದಿಂದಲೂ ತಾನು ಬರೆಯುವ ಗ್ರಂಥಗಳಿಂದಲೂ ಸಮಾಜದ ಹಿತವನ್ನು ಸಾಧಿಸಬೇಕು ಎಂದು ಸಾಹಿತಿಗಳ ಆದ್ಯ ಕರ್ತವ್ಯವನ್ನು ಮನಸ್ಕ ಎತ್ತಿ ಉಲ್ಲೇಖಿಸಿದರು. ಅಧ್ಯಕ್ಷಸ್ಥಾನದಿಂದ ಶ್ರೀಮಾನ್ ವಿ. ಕೃ. ಗೋಕಾಕರು ನಮ್ಮ ಸಾಹಿತಿಗಳು ಕೇವಲ ನಮ್ಮನ್ನು ಮಾತ್ರ ಪರಿಗಣಿಸುವರಲ್ಲದೆ; ಬಾಹ್ಯ ಪ್ರದೇಶಗಳತ್ತ ದೃಷ್ಟಿಸುವುದಿಲ್ಲವೆಂದು ಕನ್ನಡ ಸಾಹಿತಿಗಳ, ಸಾಹಿತ್ಯದ ಅಮೂಲ್ಯವಾದ ಕೊರತೆಯೊಂದನ್ನು ನಿರೂಪಿಸಿ, ಕನ್ನಡತನ, ಭಾರತೀಯತನ ಹಾಗೂ ವಿಶ್ವಮಾನವತೆಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕಾದ ಆವಶ್ಯಕತೆಗಳನ್ನು ತಿಳಿಸಿದರು. ನಿರ್ವ್ಯಾಜತೆ, ಮನಃಶುದ್ಧಿ ವಾಕ್‌ಶುದ್ಧಿ ಮತ್ತು ಚಾರಿತ್ರ್ಯಶುದ್ಧಿಗಳಿಂದ ಸಿದ್ಧಜೀವನವನ್ನು ಬದುಕಿ ವಿಶ್ವಮಾನವನಾಗಲು ಪ್ರಯತ್ನಿಸಬೇಕು ಎಂಬುದಾಗಿ ಉಪದೇಶಿಸಿದರು ಮಾನ್ಯ ರಾಜ್ಯಪಾಲರಿಂದಂತೆ ನಮ್ಮ ಸಾಹಿತ್ಯವು ಪ್ರೇಯಸ್ಸಿನತ್ತ, ಅನನುಭವಪೂರ್ಣ ವಾಸ್ತುಚಿತ್ರ ವಿವರಣೆಯತ್ತ ಸಾಗಿರುವಷ್ಟು ವಾಸ್ತವಿಕ ಜೀವನದತ್ತ ಸಾಗಿಲ್ಲ; ಶ್ರೇಯಸ್ಸಿನೆಗಾಳಿಯನ್ನೂ ಮೂಸಿವೆಯೆಂದು ಧೈರ್ಯದಿಂದ ಹೇಳುವಂತಿಲ್ಲ. ಸಾಹಿತ್ಯವು ಜನಜೀವನದ ಪ್ರತಿಬಿಂಬ ಎಂಬುದಾಗಿ ಹೇಳುವರಾದರೂ ಅದರ ವಾಸ್ತವಿಕ ಚಿತ್ರಣವಲ್ಲ ಎಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಚಿತ್ರಗಾರನು ತಾನು ಕಂಡ ಚಿತ್ರವನ್ನು ಬರೆದು ಅದು ನೋಡುಗನಿಗೆ ಆಕರ್ಷಕವಾಗಿ ತೋರುವಂತೆ ಮಾಡಲು ತನ್ನ ಕಲಾಪರಿಣತಿಯಿಂದ ತಕ್ಕ ಮಾರ್ಪಾಟುಗಳನ್ನೂ ಬಣ್ಣ ಬಳಿಯುವಿಕೆಯಲ್ಲಿನ ಚಾತುರ್ಯವನ್ನೂ ಉಪಯೋಗಿಸುವಂತೆ ಹಾಗೂ 'ಆದರ್ಶದ' 'ಶ್ರೇಯಸ್ಸಿ'ನ ಗೋಪುರವನ್ನು ಕಟ್ಟಲು ಪ್ರಯತ್ನಿಸುವಂತೆ ಸಾಹಿತಿಯೂ ಸಮಾಜದ ಕುಂದುಕೊರತೆಗಳನ್ನು ಅಭ್ಯಾಸಮಾಡಿ ಅವನ್ನು ಸರಿಯಾಗಿಸಲು ಮಾರ್ಗದರ್ಶನ ಮಾಡಬಲ್ಲ ಅಮರ ಸಾಹಿತ್ಯವನ್ನು ನಿರ್ಮಿಸಬೇಕು; ಆಗ ಶ್ರೇಯಸ್ಸು ದೊರೆಯದೆ ಹೋಗಲಾರದು. ಇಂತಹ ಸಾಹಿತ್ಯ ಸ್ವತಂತ್ರರಾಷ್ಟ್ರದ ಒಂದಂಗದ ಭಾಷೆಯಾದ ಕನ್ನಡದಲ್ಲಿಯೂ ಹುಟ್ಟಬೇಕು. ಇದಕ್ಕಾಗಿ ಅಧ್ಯಕ್ಷ ಗೋಕಾಕರು ಹೇಳಿದಂತೆ ಸಾಹಿತಿ ಮೊತ್ತಮೊದಲು ತನ್ನ ಮನಸ್ಸು, ವಾಕ್ ಮತ್ತು ಚಾರಿತ್ರ್ಯಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕು; ಹೇಳುವುದು ಶಾಸ್ತ್ರ; ಇಕ್ಕುವುದು ಗಾಳ ಎಂಬಂತಾಗಬಾರದು; ತಾವು ಬೇರೆಯವರಿಗೆ ಯಾವ ಮಾರ್ಗದರ್ಶನವನ್ನು ನೀಡುತ್ತಾರೋ ಅದೇ ಮಾರ್ಗದಲ್ಲಿ ಸಾಹಿತಿಯೂ ನಡೆದುಕೊಳ್ಳಬೇಕು. ಹಾಗಾದಾಗ ಮಾತ್ರ ಅಂತಹನ ಕೃತಿಯು ಜನಮಾರ್ಗದರ್ಶಕವಾದೀತು. ಸಾಹಿತಿಯು ತನ್ನಲ್ಲಿಲ್ಲದುದನ್ನೇನನ್ನು ಪರರಿಗೆ ಕೊಟ್ಟಾನು? ಅದುದರಿಂದಲೇ ಆತ ಅನುಭವನಿಧಿಯಾಗಬೇಕು; ಪಾವಿತ್ರ್ಯದ ಕಾಸಾರವೆನಿಸಬೇಕು, ಪ್ರತಿಭಾವಂತನೂ, ಪಂಡಿತನೂ ಆಗಿರಬೇಕು. ಉತ್ತಮ ಅನುಭವದಿಂದ ಪ್ರತಿಭೆ, ಪಾವಿತ್ರ್ಯ ಹಾಗೂ ಪಾಂಡಿತ್ಯದ ಹೊಂದಾಣಿಕೆಯಿಂದ ಮಾತ್ರ ಚಿರಸ್ಮರಣೀಯವಾದ ಉತ್ತಮ ಸಾಹಿತ್ಯ ಹುಟ್ಟಬಲ್ಲುದ—ಇಲ್ಲವಾದರೆ, ಆ ಸಾಹಿತ್ಯ ಹೇಗೆ ಹಿತವಾದೀತು? ಹಿತವಾಗದೆ ಹೋದರೂ ಚಿಂತೆ ಇಲ್ಲ; ಅಹಿತವಾದರೇನು ಗೆಯ್ಯಬೇಕು? ಈ ಎಲ್ಲಾ ದೃಷ್ಟಿಯಿಂದ ಕನ್ನಡ ಸಾಹಿತ್ಯದ ಈ ೪೦ನೆಯ ಸಮ್ಮೇಳನ ನಲುವತ್ತು ವರ್ಷದ ಅನುಭವಗಳನ್ನೇ ಹೊರ ಚೆಲ್ಲಿದೆ. ಇತ್ತ ನಮ್ಮ ಬಾಂಧವರು ತಮ್ಮ ದೃಷ್ಟಿ ಹರಿಸುವುದು ಮಾತ್ರ ಆಗತ್ಯ. ಭಾರತದ ಹಾಗೂ ವಿಶ್ವದ ಮತ್ತು ನಮ್ಮ ನಾಡಿನ ಆವಶ್ಯಕತೆಗಳನ್ನು ಪೂರೈಸುವ ಸತ್ತ್ವಪೂರ್ಣ ಸಾಹಿತ್ಯ ಇಂದು ನಮಗೆ ಬೇಕಾಗಿದೆ ಹೊರತು ಕೇವಲ ಪ್ರಣಯಿನಿಗಳ ಸಾಂಪ್ರದಾಯಿಕ ಜೊಳ್ಳು ಕತೆಗಳಲ್ಲವೆಂಬುದನ್ನು ನಮ್ಮ ಸಾಹಿತಿಗಳು ಗಮನಿಸಬೇಕು. ಸಾಹಿತಿಯು ತಪಶ್ಚರ್ಯೆಯಲ್ಲಿ ನಿಮಗ್ನನಾಗಿದ್ದು, ಆರ್ಥಿಕ ಲಾಭವನ್ನು ಬದಿಗಿತ್ತಲ್ಲಿ ಮಾತ್ರ ಇಂತಹ ಸಾಹಿತ್ಯ ನಿರ್ಮಾಣವಾದೀತು; ಜನತೆಯೂ ಅದನ್ನು ಮೆಚ್ಚಿ ತಕ್ಕ ಪ್ರೋತ್ಸಾಹ ನೀಡೀತು. ಈ ದೃಷ್ಟಿಯಲ್ಲಿ ಈ ಸಮ್ಮೇಳನವು ಕನ್ನಡಿಗರಲ್ಲಿ ನವೋತ್ಸಾಹವನ್ನು ಹುಟ್ಟಿಸಿ, ಅವರ ಆಶೆ ಆಕಾಂಕ್ಷೆಗಳನ್ನು ಕೆರಳಿಸಿದೆಯೆನ್ನಬಹುದಲ್ಲವೆ?

ಗೌಹಾತಿಯಲ್ಲಿನ ಪ್ರಾಗ್ಜ್ಯೋತಿಷ ಪುರದಲ್ಲಿ ಸೇರಿದ ಅಖಿಲ ಭಾರತೀಯ ಕಾಂಗ್ರೆಸ್ಸಿನ ಅರುವತ್ತ ಮೂರನೆಯ ಸಮ್ಮೇಳನವು ಸಹ ತನ್ನ ಅರುವತ್ತೆರಡು ಅಂಗಳು ಮರುಳನ್ನು ಪ್ರದರ್ಶಿಸದೆ ಸಾಂಪ್ರದಾಯಿಕ ಪರಂಪರಾಪ್ರಾಪ್ತ ವಿಧಿನಿಯಮಗಳಿಗನುಸಾರವಾಗಿ ನಡೆಯಿತೆನ್ನದೆ ನಿರ್ವಾಹವಿಲ್ಲ. ಕಾಂಗ್ರೆಸ್ ಅಧ್ಯಕ್ಷರು ತನ್ನ ನಮ್ರವಾಣಿಯಲ್ಲಿ ದೇಶದ ಮುಂದಿರುವ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ, ಕಳೆದ ವರ್ಷದ ಘಟನೆಗಳನ್ನು ಪುನರವಲೋಕಿಸಿದರು. ವಾಡಿಕೆಯಂತೆ ಕೆಲವಾರು ವರ್ಷಗಳಿಂದ ಹೇಳಿಕೊಂಡು ಬಂದ ಗೋವಾ, ಕಾಶ್ಮೀರ ಸಮಸ್ಯೆಗಳು, ವಿಶ್ವಶಾಂತಿ, ದೇಶದ ಏಕತೆ, ಪಂಚವಾರ್ಷಿಕ ಯೋಜನೆ ಮೊದಲಾದ ವಿಷಯಗಳಲ್ಲದೇ ಭಾಷಾ ಪ್ರಶ್ನೆಯೊಂದು ಈ ಸಲದ ಉಲ್ಲೇಖನೀಯ ವಿಷಯವಾಗಿ ಪರಿಣಮಿಸಿದೆ. ಸರಕಾರೀ ಭಾಷೆಯನ್ನಾಗಿ ಇಂಗ್ಲಿಷಿನ ಬದಲು ಹಿಂದಿಯನ್ನು ಆರಿಸುವ, ಅದನ್ನು ಆದಷ್ಟು ಬೇಗನೇ ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುವ ಕುರಿತಾಗಿ ತೀವ್ರವಾದ ವಾದವಿವಾದಗಳು ನಡೆದುವೆಂದೂ ತಿಳಿದು ಬಂದಿದೆ. ಈ ಸಂದರ್ಭದಲ್ಲಿ ಭಾರತವನ್ನೂ ಪುನಃ ವಿಭಜಿಸುವ ಪ್ರಶ್ನೆಯೊಂದು, ವಿನೋದಕ್ಕಾಗಿರಬೇಕು—ಬಂದಿತು. ಆದರೂ, ಘಟನೆಯಲ್ಲಿ ಪ್ರಥಮತಃ ನಿರ್ಧರಿಸಿದಂತೆ ೧೯೬೫ರ ಒಳಗೆ ಹಿಂದಿಯನ್ನು ಸರಕಾರೀ ಭಾಷೆಯನ್ನಾಗಿ ಆರಿಸಲು ಅಸಾಧ್ಯವೆಂದು ಮನದಂದು ಈ ಸಮ್ಮೇಳನವು ಆ ಬಗ್ಗೆ ಒಂದು ನಿಶ್ಚಿತ ಧೋರಣಕ್ಕೆ ಬಂದು ಆ ಅವಧಿಯನ್ನು ಮುಂದುವರಿಸಲು ಸಿದ್ಧವಾಗಿ, ಇದೀಗ ದೇಶದಲ್ಲಿನ ಐಕ್ಯಕ್ಕೆ ವಿಘಾತುಕವೆನಿಸಿದ ಸಮಸ್ಯೆಯನ್ನು ಶಾಂತವಾಗಿಸಲು ಯತ್ನಿಸಿದೆ ಎನ್ನಬೇಕು. ದಕ್ಷಿಣ ಭಾರತೀಯರ ಅಂಜಿಕೆಗೆ, ವಿಪ್ಲವಕಾರೀ ಮನೋಭಾವನೆಗೆ ಮೂಲಕಾರಣವಾದ ಹಿಂದೀ ಭಾಷೆಯ ಪ್ರಶ್ನೆಯು ಉಗ್ರ ಸ್ವರೂಪವನ್ನು ಇನ್ನು ಹೊಂದಲಾರದೆಂದು ಆಶಿಸುತ್ತೇವೆ. ಇನ್ನುಳಿದಂತೆ ಸಂಧಾರಣೆಯ ಮಾರ್ಗದಲ್ಲಿ ಯಾವ ನಿರ್ದಿಷ್ಟವಾದ ಕಾರ್ಯಕ್ರಮವು ನಿಶ್ಚಯಿಸಲ್ಪಡದೆ ಹೋದರೂ ಕಾಂಗ್ರೆಸ್ ಅಧ್ಯಕ್ಷರು ದ್ವಿತೀಯ ಯೋಜನೆಯ ಅಂತ್ಯದೊಳಗೆ ಅದನ್ನು ಕಾರ್ಯಕಾರಿಗೊಳಿಸುವ ಆಶಯವನ್ನು ವ್ಯಕ್ತಪಡಿಸಿದ್ದು, ರಾಜ್ಯ ಸರಕಾರಗಳ ಗಮನವನ್ನು ಸೆಳೆದಿದೆ. ಇನ್ನು ಅಂತಾರಾಷ್ಟ್ರೀಯ ಪರಿಸ್ಥಿತಿ, ಆರ್ಥಿಕ ಸ್ಥಿತಿಗತಿ, ಶಿಕ್ಷಣ ಸಂಘಟನೆ, ಗೋವಾ ಸಮಸ್ಯೆಗಳಿಗೆ ಸಂಬಂಧಿಸಿದ ಗೊತ್ತುವಳಿಗಳಾದರೂ ಅಷ್ಟೇನೂ ಹೊಸತಾಗಿ ತೋರುವುದಿಲ್ಲ. ಹೀಗೆ ಈ ಅಧಿವೇಶನವು ತೀರಾ ಸಾಮಾನ್ಯವಾಗಿಯೇ ಮುಗಿಯುವ ವ್ಯವಸ್ಥೆಯಾಗಿದ್ದುದರಿಂದಲೇ ನಿಶ್ಚಿತ ದಿನಕ್ಕಿಂತ ಒಂದು ದಿನ ಮೊದಲೇ ಮುಗಿಯುವಂತಾಯಿತು. ಮಿತವ್ಯಯದ ಮಾದರಿಯನ್ನು ಉಪದೇಶಿಸುವ ಕಾಂಗ್ರೆಸ್ಸಿನ ಅಧಿವೇಶನವು ಮಾತ್ರ ೬೩ ಆನೆಗಳ ಮೆರವಣಿಗೆಯಿಂದಲೂ ವೈಭವಯುಕ್ತವಾದ ಮಂಟಪಾದಿಗಳಿಂದಲೂ ಕೂಡಿ ನಡೆದಿದೆ ಎನ್ನಬಹುದು. ಆದರೆ, ಇದು ಸಮಂಜಸವೆನಿಸಿದುದೆಂದು ಹೇಳಲಾಗದು.

ಅಂತೂ ಈ ಎರಡು ಸಮ್ಮೇಳನಗಳೂ ಪರಂಪರೆಗೆ ವಿರೋಧವಾಗದೆ, ಮುಂದಿನವುಗಳಿಗೆ ಹೊಸ ಮಾರ್ಗವನ್ನು ಉಪದೇಶಿಸಿ ಮುಗಿದುವು. ಈ ಉಪದೇಶದ ಸಾರವನ್ನು ಜನತೆ ಎಷ್ಟು ಅರ್ಥಮಾಡಿಕೊಂಡಿದೆ ಎಂಬುದು ಮುಂದೆ ಮಾತ್ರ ತಿಳಿದುಬರಬೇಕು. ಈ ಸಮ್ಮೇಳನಗಳ ಸಂದೇಶಸಾರವು ಜನತೆಯಲ್ಲಿ ಕ್ರಿಯಾಶಕ್ತಿಯನ್ನು ಹೆಚ್ಚಿಸಿ ತನ್ಮೂಲಕ ನಾಡಿನ ಅಭಿವೃದ್ಧಿಯಾಗಲೆಂದು ಹಾರೈಸುತ್ತೇವೆ.

ಮಹತ್ವದ ಸುದ್ದಿಗಳು

ಕೈಮಗ್ಗಗಳಿಗೆ ಪ್ರೋತ್ಸಾಹ

ವಿವಿಧ ರಾಜ್ಯಗಳ ಕೈಮಗ್ಗಗಳ ಅಭಿವೃದ್ಧಿ ಯೋಜನೆಗಳಿಗೆ ಕೇಂದ್ರ ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿ ಶಾಖೆಯು ಒಟ್ಟು ೨೭ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಈ ಹಣವನ್ನು ಬೇರೆ ಬೇರೆ ರಾಜ್ಯಗಳಲ್ಲಿ ಕೈಮಗ್ಗ ಬಟ್ಟೆಯ ನೇಕಾರರಿಗೆ ಸುಧಾರಿತ ಸಲಕರಣೆಗಳನ್ನೊದಗಿಸುವುದು, ನೇಕಾರ ಸಂಸ್ಥೆಗಳ ಕಾರ್ಯಾಚರಣೆಗೆ ಬಂಡವಾಳವನ್ನು ಒದಗಿಸುವುದು ಮತ್ತು ಕೈಮಗ್ಗ ಬಟ್ಟೆಯ ಮಾರಾಟ ಸೌಕರ್ಯಗಳನ್ನು ಹೆಚ್ಚಿಸುವುದು ಮೊದಲಾದ ಕಾರ್ಯಗಳಿಗೆ ಬಳಸಲಾಗುವುದೆಂದು ತಿಳಿದು ಬಂದಿದೆ. ಈ ಮೊತ್ತವನ್ನು ನಾಲರೂಪದ ಧನಸಹಾಯವೆಂದು ಕೊಡಮಾಡಲಾಗಿದ್ದು ಮದ್ರಾಸವು ೧೦ ಲಕ್ಷ ರೂಪಾಯಿಗಳನ್ನು ಪಡೆದು ಪ್ರಥಮ ಸ್ಥಾನವನ್ನು ಪಡೆದಿದೆ, ಆದರೆ ಮೈಸೂರಿನ ಪಾಲಿಗೆ ಬಂದುದು ೧ ಲಕ್ಷಕ್ಕಿಂತಲೂ ಕಡಿಮೆ!

ಹೊಸ ಕಾಗದದ ಕಾರಖಾನೆ

ದಿನವೊಂದಕ್ಕೆ ೬೦ ಟನ್ನು ಕಾಗದವನ್ನು ಉತ್ಪಾದಿಸುವ ಕಾರಖಾನೆಯೊಂದನ್ನು ಮಂಡ್ಯದಲ್ಲಿ ತೆರೆಯಲು ಮೈಸೂರು ಸರಕಾರವು ಖಾಸಗಿ ಉದ್ದಿಮೆದಾರರಿಗೆ ಅನುಮತಿಯಿತ್ತಿದೆಯೆಂದು ತಿಳಿದು ಬಂದಿದೆ. ಮಂಡ್ಯದ ಸಮೀಪದ ಮದ್ದೂರಿನಲ್ಲೊಂದು ಸಕ್ಕರೆಯ ಕಾರಖಾನೆ ಸ್ಥಾಪಿಸುವ ವಿಷಯದಲ್ಲಿಯೂ ವಿಚಾರ ನಡೆಸಲಾಗಿದೆ. ಕಾಗದದ ಕಾರಖಾನೆಗೆ ಬೇಕಾಗುವ ಕಬ್ಬಿನ ಸಿಪ್ಪೆಯು ಈ ಸಕ್ಕರೆ ಕಾರಖಾನೆಯಿಂದ ದೊರೆಯುವುದಕ್ಕೆ ಅನುಕೂಲತೆಗಳನ್ನು ಮಾಡಿಕೊಡುವ ಯೋಜನೆಯಿದ್ದಂತೆ ತಿಳಿಯುತ್ತದೆ. ಈ ಹೊಸ ಕಾಗದದ ಕಾರಖಾನೆಯ ಬಂಡವಳವು ಮೂರು ಕೋಟಿ ರೂಪಾಯಿಗಳಿದ್ದು ಅದರಲ್ಲಿ ಸೇಕಡಾ ೧೦ರಷ್ಟನ್ನು ಮೈಸೂರು ಸರಕಾರವು ಪಡೆಯುಕೊಳ್ಳುವುದು. ಇದರಿಂದ ಅದಕ್ಕೆ ಇಬ್ಬರು ಡೈರೆಕ್ಟರರನ್ನು ಆರಿಸುವ ಅಧಿಕಾರವು ಪ್ರಾಪ್ತಿಯಾಗುವುದೆಂದು ಉದ್ದಿಮೆ ಮಂತ್ರಿ ಶ್ರೀ ಪೂಣಚ್ಚರು ಹೇಳಿದ್ದಾರೆ.

ನಿರೀಕ್ಷಿಸಿರಿ—

ಬರುವ ವಾರ

ಪ್ರಜಾರಾಜ್ಯ ವಿಶೇಷ ಸಂಚಿಕೆ

ಪ್ರಕಟವಾಗುವುದು.

ನವಯುಗ ವಾರಪತ್ರಿಕೆಯ ಆಕಾರದಲ್ಲಿ 32 ಪುಟಗಳು.

ಬೆಲೆ: ಮೂರಾಣೆ.

ನೂತನ ಕಾರ್ಯಕಾರೀ ಸಮಿತಿ

ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಯ ಸದಸ್ಯರ ಹೆಸರನ್ನು ಅಧ್ಯಕ್ಷ ಢೇಬಾರರು ಪ್ರಕಟಿಸಿದರು. ಇದರಲ್ಲಿ ಶ್ರೀಗಳಾದ ನೆಹರು, ಅಜಾದ್, ಪಂತ, ಮುರಾರ್ಜಿ, ಕೃಷ್ಣಸಿಂಹ, ಜಗಜೀವನರಾಮ, ನಾಡಾರ, ಖಂಡೂಭಾಯಿ ದೇಸಾಯಿ, ಸೇರ ಗೋವಿಂದದಾಸ, ಚವಣ, ಶ್ರೀಮನ್ನಾರಾಯಣ, ಮಾಧವನ್ ನಾಯರ್, ಎಂ. ಎಂ ಚೌಧುರಿ, ಸತ್ಯನಾರಾಯಣ ರಾಜು ಮತ್ತು ಶ್ರೀಮತಿ ಇಂದಿರಾ ಗಾಂಧಿ ಇರುವರು. ಇವರಲ್ಲಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀಗಳಾದ ಶ್ರೀಮನ್ನಾರಾಯಣ ಮತ್ತು ಸತ್ಯನಾರಾಯಣ ರಾಜುರವರ ನಾಮವನ್ನು ಶ್ರೀ ಢೇಬಾರರು ಪ್ರಕಾಶಪಡಿಸಿದ್ದಾರೆ ಇವರಲ್ಲಿ ಸತ್ಯನಾರಾಯಣರು ಈಗ ಆಂಧ್ರ ಪ್ರದೇಶ ಕಾಂಗ್ರೆಸ್ಸ್ ಸಮಿತಿಯ ಅಧ್ಯಕ್ಷರಾಗಿದ್ದು ಅದಕ್ಕೆ ರಾಜೀನಾಮೆ ಈಯಬೇಕಾಗುವುದು. ಈ ನೂತನ ಕಾರ್ಯದರ್ಶಿಗಳು ಮುಂದಿನೆರಡು ವರ್ಷ ತಮ್ಮ ಅಧಿಕಾರದಲ್ಲಿರುವರು.

ಶಿಕ್ಷಣದಲ್ಲಿ ಸುಧಾರಣೆ

ಸಂಪೂರ್ಣ ಸುಶಿಕ್ಷಿತ, ಚೈತನ್ಯಪೂರ್ಣ ಹಾಗೂ ನ್ಯಾಯನಿಷ್ಠ ನವಭಾರತ ನಿರ್ಮಾತೃಗಳನ್ನು ಸೃಜಿಸಲು ಸಾಧ್ಯವಾಗುವಂತೆ ಭಾರತದ ಮಾಧ್ಯಮಿಕ ಶಾಲೆಗಳಲ್ಲಿ ವಿಶಾಲ ತಳಹದಿಯ ಶಿಕ್ಷಣ ಪದ್ಧತಿಯನ್ನು ರೂಪಿಸಬೇಕೆಂದು ಶ್ರೀ ಸಿ. ಡಿ. ದೇಶಮುಖರು ಅಭಿಪ್ರಾಯಪಟ್ಟಿದ್ದಾರೆ. ಭಾರತೀಯ ವಿದ್ಯಾರ್ಥಿಗಳು ಅಧಿಕ ವಿಷಯಗಳನ್ನು ಕಲಿಯಬೇಕಾಗುವುದರಿಂದ ಹಿಂದೆ ಬೀಳುತ್ತಾರೆಂಬ ವಾದವನ್ನವರು ಪ್ರಸ್ತಾಪಿಸುತ್ತ ಮಾಧ್ಯಮಿಕ ಶಿಕ್ಷಣದಲ್ಲಿ ಯಾವೊಂದು ಹಂತದಲ್ಲಿ ಉಚ್ಚ ಶಿಕ್ಷಣವನ್ನು ಬಯಸುವ ಹಾಗೂ ಮಾಧ್ಯಮಿಕ ಹಂತವನ್ನು ದಾಟಿದ ಬಳಿಕ ಉದ್ಯೋಗ ಹುಡುಕುವ ವಿದ್ಯಾರ್ಥಿಗಳನ್ನು ಪ್ರತಿ ಪ್ರತ್ಯೇಕವಾದ ವಿಭಾಗಗಳನ್ನು ಮಾಡಬೇಕು, ಬ್ರಿಟನ್ನಿನಲ್ಲಿ ಇಂತಹ ಕ್ರಮವಿದೆ. ಅದು ಯೋಗ್ಯ ಉಚ್ಚ ಹಾಗೂ ವಿಶೇಷ ಶಿಕ್ಷಣವನ್ನು ಪಡೆಯಲು ಸಹಾಯವಾಗುವುದೆಂದವರು ಮುಂದುವರಿಸಿ ನುಡಿದರು

ಮೂಲ ಶಿಕ್ಷಣ ಹೇಗಿರಬೇಕು?

ಮೂಲ ಶಿಕ್ಷಣ ಶಾಲೆಗಳ ಕಟ್ಟಡಗಳಿಗೆ ಅತಿ ಕಡಿಮೆ ವೆಚ್ಚ ಮಾಡಬೇಕು. ಶಾಂತಿನಿಕೇತನದಲ್ಲಿಯಂತೆ ಗಿಡಮರಗಳ ನೆರಳಿನಲ್ಲಿ ಮಕ್ಕಳಿಗೆ ಶಿಕ್ಷಣವಿತ್ತರೆ ಒಳ್ಳೆಯದು. ಮಳೆ ಬೀಳುವಾಗ ಎಲ್ಲ ಬದಿಗಳಲ್ಲೂ ತೆರವಿದ್ದ ಮರದ ಕೊಡೆಗಳಡಿಯಲ್ಲಿ ಕಲಿಯಬಹುದು ಇದಕ್ಕೆ ಎರಡು ಯಾ ಮೂರು ನೂರು ರೂಪಾಯಿಗಳಿಗಿಂತ ಹೆಚ್ಚಿನ ವೆಚ್ಚ ಬರುವುದಿಲ್ಲ. ಆದುದರಿಂದ ಶಾಲಾ ಕಟ್ಟಡಗಳಿಗೆ ವೆಚ್ಚವನ್ನು ಇಳಿಸಿ ಶಾಲಾ ಅಧ್ಯಾಪಕರ ಮಟ್ಟವನ್ನು ಎತ್ತುನರಿಸಲು ಆದಷ್ಟು ಹೆಚ್ಚು ಹಣವನ್ನು ಒದಗಿಸಬೇಕು. ಎಂದು ಪ್ರಧಾನಿ ನೆಹರೂರವರು ೬೩ನೆಯ ಕಾಂಗ್ರೆಸ್ ಸ

ನಮ್ಮ ವಾಚಕರಲ್ಲಿ—

ಪ್ರಜಾರಾಜ್ಯ ವಿಶೇಷ ಸಂಚಿಕೆಯ ಕೆಲಸದ ಪ್ರಯುಕ್ತ ಈ ವಾರ ಎಂಟು ಪುಟಗಳನ್ನು ಮಾತ್ರ ಕೊಡಲಾಗಿದೆ.

— ಮೆನೇಜರ್.

ಉಡುಪಿ

ಶ್ರೀ ಕೃಷ್ಣಾಪುರ ಸ್ವಾಮಿಗಳವರ ಪರ್ಯಾಯ ಮಹೋತ್ಸವ—ಉಡುಪಿಯ ಶ್ರೀಕೃಷ್ಣ ಪುರದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ತಾ 17ರಂದು ಬೆಳಿಗ್ಗೆ ಶ್ರೀಕೃಷ್ಣ ಮಠದ ಪರ್ಯಾಯ ಸಿಂಹಾಸನವನ್ನೇರಿದರು. ಅಂದು ನಸುಂಜಾನೆ ಶ್ರೀ ಶ್ರೀಗಳವರು ತಾಲೂಕು ಕಚೇರಿ ಬಳಿಯ ಜೋಡುಕಟ್ಟೆಯಿಂದ ಇತರ ಮಠಾಧಿಪತಿಗಳನ್ನು ಕೂಡಿಕೊಂಡು ವೈಭವದ ಮೆರವಣಿಗೆಯಿಂದ ತೇರುಬೀದಿಗೆ ಒಂದು ಧಾರ್ಮಿಕ ಸಂಪ್ರದಾಯಗಳನ್ನೂ ತೀರಿಸಿಕೊಂಡು ಶ್ರೀಕೃಷ್ಣ ಮಠಕ್ಕೆ ಬಂದು ಶ್ರೀ ಅಧಮಾರು ಸ್ವಾಮಿಗಳವ

ಮ್ಮೇಳನದ ಬಹಿರಂಗಾಧಿವೇಶನದಲ್ಲಿ ಮೂಲ ಶಿಕ್ಷಣ ಶಾಲೆಗಳ ಮತ್ತು ಅಧ್ಯಾಪಕರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಗ್ರಾಮದಾನ ಸಪ್ತಾಹ

ಜನವರಿ ೩೦ರಿಂದ ಫೆಬ್ರವರಿ ೧೨ರ ವರೆಗೆ ಭಾರತದಾದ್ಯಂತ ಗ್ರಾಮದಾನ ಸಪ್ತಾಹವನ್ನಾಚರಿಸಬೇಕು; ಎಂದು ನಿರ್ಧರಿಸಲಾಗಿದೆ. ದೇಶದ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಈ ಸಪ್ತಾಹದ ಆಚರಣೆಯಲ್ಲಿ ಸಂಪೂರ್ಣವಾಗಿ ಸಹಕರಿಸಬೇಕು ಎಂದು ಭೂ ಸುಧಾರಣೆಯ ಚರ್ಚಾವೇಳೆಯಲ್ಲಿ ರೇಲ್ವೆ ಮಂತ್ರಿ ಜಗಜೀವನರಾಮರು ಕಾಂಗ್ರೆಸ್ ಅಧಿವೇಶನದಲ್ಲಿ ಕೇಳಿಕೊಂಡಿದ್ದಾರೆ.

ಯೋಜನೆಗೆ ಸಹಾನುಭೂತಿ

ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಕಾರಿಗೊಳಿಸಲು ಭಾರತಕ್ಕೆ ಫ್ರಾನ್ಸ್ ಹಾಗೂ ಸ್ವಿಜರ್‌ಲೆಂಡುಗಳು ಭಾರತಕ್ಕೆ ಸಹಾಯ ನೀಡಲು ಸಿದ್ಧವಿವೆ. ಈ ಬಗೆಯ ಸಹಾಯಕ್ಕಾಗಿ ಫ್ರಾನ್ಸ್ ಹಾಗೂ ಭಾರತಗಳಲ್ಲಿ ಕಳೆದ ಕೆಲವು ದಿನಗಳಿಂದ ಮಾತುಕತೆಗಳು ಸಾಗಿದ್ದುವು ಮುಂದಿನ ವಾರ ಈ ಸಂಬಂಧವೆ ಒಡಂಬಡಿಕೆಗೆ ಅಂಕಿತ ಬೀಳಬಹುದಾಗಿರುವುದು. ಫ್ರಾನ್ಸದಿಂದ ಸುಮಾರು ೨೫ ಕೋಟಿ ರೂಪಾಯಿಗಳ ಸಹಾಯವು ದೊರೆಯುವ ನಿರೀಕ್ಷೆ ಇದೆ. ರೂರ್ಕೇಲಾ ಹಾಗೂ ಭಿಲಾಯಿ ಉಕ್ಕಿನ ಕಾರಖಾನೆಗಳಿಗೆ ಯಂತ್ರ ಪೂರೈಸಿದ ಬಗ್ಗೆ ಪಶ್ಚಿಮ ಜರ್ಮನಿ ಮತ್ತು ರಶ್ಯಗಳೊಳಗೆ ಕೊಡಬೇಕಾದ ಮೊತ್ತವನ್ನು ಕೊಡಲು ಹೆಚ್ಚಿನ ಅವಧಿಗಾಗಿ ಆಯಾ ಸರಕಾರಗಳೊಂದಿಗೆ ಭಾರತವು ಮಾತುಕತೆ ನಡೆಸಿದ್ದಿತು ಪಶ್ಚಿಮ ಜರ್ಮನಿಯು ಈ ಸಂಬಂಧದಲ್ಲಿ ಸುಮಾರು ೬೦ ಕೋಟಿ ರೂಪಾಯಿಗಳನ್ನು ಮೂರು ವರ್ಷಗಳ ನಂತರ ತೆಗೆದುಕೊಳ್ಳಲು ಒಪ್ಪಿರುವುದಾಗಿ ತಿಳಿದು ಬಂದಿದೆ. ರಶಿಯವು ಭಿಲಾಯಿ ಕಾರಖಾನೆಗೆ ಯಂತ್ರೋಪಕರಣ ಪೂರೈಸುವುದಲ್ಲದೇ ೧೧ ಕೋಟಿ ರೂಪಾಯಿಗಳ ಇನ್ನಿತರ ಉಪಕರಣಗಳನ್ನು ಒದಗಿಸಲು ಒಪ್ಪಿರುವುದಾಗಿಯೂ ತಿಳಿದು ಬಂದಿರುತ್ತದೆ.

ವಿನೋಬಾ ಸಂಚಾರ

ಆಚಾರ್ಯ ವಿನೋಬಾ ಭಾವೆಯವರು ತನ್ನ ಕರ್ನಾಟಕ ಸಂಚಾರಾವಧಿಯಲ್ಲೀಗ ಉತ್ತರ ಕನ್ನಡದಲ್ಲಿ ಪಾದಯಾತ್ರೆ ಮಾಡಲು ತೊಡಗಿದ್ದಾರೆ ದಿನಾಂಕ ೧೯ರಂದು ಅವರು ಈ ಜಿಲ್ಲೆಯನ್ನು ಪ್ರವೇಶಿಸಿದಾಗಲೇ ಅವರಿಗೆ ಹನುಮಂತಪುರ ಎಂಬ ಗ್ರಾಮವು ದಾನವಾಗಿ ದೊರೆಯಿತು.

ರಿಂದ ಪಾದಪೂಜಾದ್ಯುಪಚಾರಗಳನ್ನು ಸ್ವೀಕರಿಸಿ ಪರ್ಯಾಯ ಸಿಂಹಾಸನವನ್ನೇರಿದರು.

ನಂತರ ಸ್ವಾಮಿಗಳವರು ಇತರ ಶ್ರೀಪಾದಂಗಳವರನ್ನು ಕೂಡಿಕೊಂಡು ರಾಜಾಂಗಣದ ಪರ್ಯಾಯ ಮಹಾಸಭೆಗೆ ಚಿತ್ತೈಸಿದರು ಸಮಾರಂಭವು ಪ್ರೊಫೆಸರ್ ಎಚ್. ಕೆ ರಾಮಚಂದ್ರ ಮೂರ್ತಿಯವರ ಪ್ರಾರ್ಥನೆಯಿಂದ ಸುರುವಾಯಿತು ಬಳಿಕ ಪರ್ಯಾಯ ಶ್ರೀ ಕೃಷ್ಣಾಪುರ ಸ್ವಾಮಿಗಳವರು ಇತರ ಸ್ವಾಮಿಗಳೆಲ್ಲರಿಗೂ ಗಂಧ ಪುಷ್ಪಾದ್ಯುಪಚಾರಗಳನ್ನು ನೀಡಿದರು ಪರ್ಯಾಯ ಮಠದ ಪರವಾಗಿ ಶ್ರೀ ಎ ಜೆ ಅಡ್ಯಂತಾಯರು ಸ್ವಾಗತ ಭಾಷಣ ಮಾಡಿದರು ಪರ್ಯಾಯ ಸ್ವಾಮಿಗಳವರಿಗೆ ಪ್ರಿನ್ಸಿಪಾಲ್ ಕಾಲೇಜಿನ ಲೀಲಾಚಾರ್ಯರು ಕಾಲೇಜು ಪರವಾಗಿ ಮಾನಪತ್ರ ಅರ್ಪಿಸಿದರು ಕಲಾವೃಂದದ ಕಡೆಯಿಂದಲೂ ಮಾನಪತ್ರ ಅರ್ಪಿಸಲಾಯಿತು ಶ್ರೀಗಳಾದ ಬಿ. ಶ್ರೀನಿವಾಸ ಭಟ್ಟ ಮತ್ತು ಬನ್ನಂಜೆ ಗೋವಿಂದಾಚಾರ್ಯರು ರಚಿಸಿದ ಶುಭಾಶಂಸಾ ಕವಿತೆಗಳನ್ನು ಹಾಡಲಾಯಿತು ಬಳಿಕ ಅಖಿಲಭಾರತ ಮಾಧ್ವಮಂಡಲದ ಪರವಾಗಿ ಪ್ರಕಟಿಸಲಾದ 'ತತ್ವ ದೀಪಿಕಾ ಗ್ರಂಥ'ವನ್ನು ಪರ್ಯಾಯ ಸ್ವಾಮಿಗಳವರು ಉದ್ಘಾಟಿಸಿದರು ಶ್ರೀ ಪುತ್ತಿಗೆ ಮಠದ ವೃಂದಾವನಸ್ಥ ಶ್ರೀ ಸುಧೀಂದ್ರತೀರ್ಥ ಶ್ರೀಪಾದಂಗಳವರ ಶತಮಾನೋತ್ಸವದ ಸ್ಮಾರಕಾರ್ಥವಾಗಿ ಪ್ರಕಟಿಸಿದ ಈ ಗ್ರಂಥವನ್ನು ಉದ್ಘಾಟಿಸಲು ನಮಗೆ ಪರಮ ಸಂತೋಷವಾಗುತ್ತಿದೆ ಎಂದು ಹೇಳಿದರಲ್ಲದೆ ಜನತೆ ಈ ಗ್ರಂಥದ ಸದುಪಯೋಗ ಪಡೆಯುವಂತಾಗಲೆಂದು ಹಾರೈಸಿದರು.

ಡಾ। ಟಿ ಎಮ್. ಎ ಪೈ, ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್ ವಿ ಕೃಷ್ಣಮೂರ್ತಿರಾವ್, ಡಾ। ಪಿ ಜಿ ಆಚಾರ್, ಶ್ರೀ ಬಿ ವಿ ನಾಯಕ್ ಮತ್ತು ಶ್ರೀ ಅಧಮಾರು ಸ್ವಾಮಿಗಳವರು ಸ್ಥಳ ಮಹಾತ್ಮೆಯನ್ನು ಕೊಂಡಾಡಿ ಮಾತನಾಡಿದರು ಶ್ರೀ ಬನ್ನಂಜೆ ರಾಮಾಚಾರ್ಯರು ಹೊಸ ಅಧಿಕಾರಿ ವರ್ಗದ ಪಟ್ಟಿಯನ್ನೋದಿದರು.

ಭಾರತ ಸರಕಾರದ ಪರವಾಗಿ ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್ ವಿ ಕೃಷ್ಣಮೂರ್ತಿ ರಾಯರೂ, ರಾಜ್ಯ ಸರಕಾರದ ಪರವಾಗಿ ಕುಂದಾಪುರದ ಅಸಿಸ್ಟೆಂಟ್ ಕಮಿಶನರ್ ಶ್ರೀ ಸೂರ್ಯನಾರಾಯಣ ರಾಯರೂ ಪಟ್ಟಕಾಣಿಕೆ ಸಲ್ಲಿಸಿದರು ಭಕ್ತವೃಂದವೂ ತಂತಮ್ಮ ಕಾಣಿಕೆಯನ್ನು ಅರ್ಪಿಸಿತು

ಮಧ್ಯಾಹ್ನ ಮಹಾ ಸಂತರ್ಪಣೆ, ಬಡವರಿಗೆ ಅನ್ನದಾನ—ಊ ರಾತ್ರೆ ವೈಭವದ ಬ್ರಹ್ಮರಥೋತ್ಸವವೂ ಸಾಂಗವಾಯಿತು

ಪವನೀಧರ ಮತದ ರ ಯಾದಿಯಲ್ಲಿ—ಹೆಸರುಗಳನ್ನು ಸೇರಿಸಿಕೊಳ್ಳಲಪೇಕ್ಷಿಸುವ ಗ್ರಾಜ್ಯುಯೇಟರು ತಮ್ಮ ಅರ್ಹತೆ ಬಗ್ಗೆ ಪಡೆದ ಡಿಗ್ರಿ ಸರ್ಟಿಫಿಕೇಟಿನ ಯಥಾ ನಕಲು ಸರಕಾರಿ ರಿಜಿಸ್ಟಾರ್ ಅವರಲ್ಲಿ ದಾಖಲಾಗಿದೆ ಎಂಬ ಒಗ್ಗ ಪ್ರಿನ್ಸಿಪಾಲ್ ಯಾ ಪ್ರೊಫೆಸರರ ಸಾಕ್ಷಿಯುಳ್ಳ ಪ್ರಮಾಣಪತ್ರಿಕೆ ಇತ್ಯಾದಿ ದಾಖಲೆಗಳನ್ನು ಕೊಡತಕ್ಕದ್ದು ಬರೇ ಡಿಗ್ರಿ ಪರೀಕ್ಷೆಗೆ ಕುಳಿತು ಪಾಸಾದರೆ ಪ್ರಯೋಜನವಿಲ್ಲ ಪದವೀದಾನ ಸಮಾರಂಭದಲ್ಲಿ ಕೊಡಲಾಗುವ ಡಿಗ್ರಿ ಸರ್ಟಿಫಿಕೇಟುಗಳ ಅರ್ಹತೆಯೇ ಮತದಾರ ಪಟ್ಟಿಯಲ್ಲಿ ಸೇರಿಸಲು ಅರ್ಹತೆಯುಳ್ಳದ್ದಾಗಿದೆ ಎಂದು ಉಡುಪಿ ತಹಶೀಲ್ದಾರರ ಪ್ರಕಟಣೆ ತಿಳಿಸುತ್ತದೆ

ಶ್ರೀ ಪುರಂದರ ದಾಸರ ದಿನಾಚರಣೆಯು—ಕಲಾವೃಂದದ ಆಶ್ರಯದಲ್ಲಿ ತಾ. 19ರಂದು ಶ್ರೀ ಕೃಷ್ಣಮಠದ ವಸಂತ ಮಹಲಿನಲ್ಲಿ ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು ವೃಂದದ ಉಪಾಧ್ಯಕ್ಷ ಶ್ರೀ ಸುಬ್ರಹ್ಮಣ್ಯ ಉಪಾಧ್ಯಾಯರು ಸ್ವಾಗತಿಸಿದರು. ಶ್ರೀ ಹನುಮಂತರಾಯರು ಮಹಾಭಾರತದ ಕವಿತಾವಾಚನ ನೀಡಿದರು. ಅಧಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ಮತ್ತು ಶ್ರೀಗಳಾದ ಪಂಡಿತ ಶ್ರೀ ಪಾದದಾಸ, ವಿ ಬಿ ನಾಯಕ್, ಸ. ಭಾ. ಪುರೋಹಿತರು ಸಾಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷರು ಸಾಹಿತ್ಯ ಸಂಗೀತ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾ

ಡಿದರು. ಕಾರ್ಯದರ್ಶಿ ಶ್ರೀ ರಾಮಚಂದ್ರ ಭಟ್ಟರು ವಂದನೆಗಳನ್ನಿತ್ತರು ರಾತ್ರಿ ಶ್ರೀ ಹರಿಸರ್ವೋತ್ತಮ ದಾಸರಿಂದ ಹರಿಕಥಾ ಕಾಲಕ್ಷೇಪವಾಯಿತು.

ಪ್ರಾಥಮಿಕ ಶಾಲಾ ಅಧ್ಯಾಪಕರುಗಳ ಸೆಮಿನಾರ್ ಮತ್ತು ರಿಫ್ರೆಶರ್ ಕೋರ್ಸಿನ ಆರಂಭ—ಉಡುಪಿ ಉತ್ತರ ಶ್ರೇಣಿಯ ಪ್ರಾಥಮಿಕ ಶಾಲಾಧ್ಯಾಪಕರುಗಳ ಸೆಮಿನಾರ್ ಮತ್ತು ರಿಫ್ರೆಶರ್ ಕೋರ್ಸು ತಾ. ೨೦ ರಿಂದ ೩೧ರ ವರೆಗೆ ಕಡಿಯಾಳಿ ಹಾ. ಪ್ರಾ ಶಾಲೆಯಲ್ಲಿ ಜರಗುತ್ತಲಿದೆ ಪೂರ್ವಭಾವಿಯಾಗಿ ತಾ ೧೯ರಂದು ಎಲ್ಲಾ ಅಧ್ಯಾಪಕರುಗಳೂ ಕಡಿಯಾಳಿ ಹಾ. ಪ್ರಾ ಶಾಲೆಯಲ್ಲಿ ಸಂಜೆ ಸೇರಿದ್ದರು ರಾತ್ರಿ ಜರಗಿದ ಮೊದಲ ಸಭೆಯಲ್ಲಿ ಕಡಿಯಾಳಿ ಶಾಲಾ ವ್ಯವಸ್ಥಾಪಕ ಶ್ರೀ ನರ್ಸಪ್ಪಯ್ಯನವರು ಅತಿಥಿಗಳನ್ನು ಸ್ವಾಗತಿಸಿದರು ಶಾಲೆಗಳ ಹಿರಿಯ ಪರೀಕ್ಷಾಧಿಕಾರಿ ಶ್ರೀ ಎನ್. ವಿಶ್ವನಾಥ, ಬಿ ಎ, ಬಿ. ಟಿ ಇವರು ಪ್ರಾಸ್ತಾವಿಕ ಮಾತುಗಳನ್ನಾಡಿದರು ಆ ಬಳಿಕ ಮಂತ್ರಿಮಂಡಲದ ಚುನಾವಣೆ ನಡೆಯಿತು. ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಮುಖ್ಯಮಂತ್ರಿಗಳಾಗಿಯೂ, ಶ್ರೀ ಯಸ್ ಸದಾಶಿವರಾಯರು ಸಾಂಸ್ಕೃತಿಕ ಮಂತ್ರಿಗಳಾಗಿಯೂ, ಶ್ರೀ ರಾಜೀವ ಕೋಟಿಯಾನರು ಆರೋಗ್ಯ ಮಂತ್ರಿಗಳಾಗಿಯೂ, ಶ್ರೀ ಟಿ ಕೆ ಶ್ರೀನಿವಾಸರಾಯರು ಆಹಾರ ಮಂತ್ರಿಗಳಾಗಿಯೂ ಶ್ರೀ ಕೆ ಕೃಷ್ಣ ತಂತ್ರಿಯವರು ಬಿಲ್ಲಿ ಮಂತ್ರಿಗಳಾಗಿಯೂ ಆರಿಸಲ್ಪಟ್ಟರು ವಿವಿಧ ಪಾಠ ವಿಷಯಗಳ ಚರ್ಚಾಗೋಷ್ಠಿಗೆ ನಾಯಕರನ್ನು ಆರಿಸಲಾಯಿತು

ದ. ಕ. ಜಿಲ್ಲಾ ಬೋರ್ಡಿನ—ಅವಧಿಯನ್ನು ತಿರುಗಿ ಒಂಬತ್ತು ತಿಂಗಳ್ ಹೆಚ್ಚಿಸಲಾಗಿದೆ ಎಂದು ತಿಳಿದುಬರುತ್ತದೆ.

ಕರ್ನಾಟಕ ಬೇಂಕು—ಮಂಗಳೂರಿನ ಕರ್ನಾಟಕ ಬೇಂಕು ಶೆಡ್ಯೂಲ್ಡ್ ಬೇಂಕಾಯಿತೆಂದು ತಿಳಿದುಬರುತ್ತದೆ ನಮ್ಮ ಜಿಲ್ಲೆಯಲ್ಲಿ ಇದೀಗ ನಾಲ್ಕನೆ ಶೆಡ್ಯೂಲ್ಡ್ ಬೇಂಕು

In the Court of the District Munsif of Mangalore

O P No 1/1958.

Between—

IN THE MATTER OF THE ASSETS OF DECEASED H. MOIDIN BEARY.

1 Hathijamma
2 Beeoathumma.
3. Abbul Khader } Petitioners 3
4 Amina } to 5 are mi-
5 Ahmed }nors of No 1 by
their mother next friend
1st petitioner

—Petitioners

To,

All whomsoever it may concern.

Notice is hereby given that the petitioners have applied to this Court for the grant of a Succession Certificate in the name of the 1st petitioner to collect the assets of H Moidin Beary who died intestate on 28—8—1954 and the said application will come up for hearing on 8—2—1958 before the said Court Any person interested may appear before the said Court on the said day at 11 A.M. and oppose the grant thereof.

(By order of Court)

Sd/ B Gangadhar Das,
B A, B L,
Advocate for the Petitioners.

Mangalore, 15—1—1958

ಮಂಗಳೂರು

ಕೆನರಾ ಬೇಂಕ್ ಲಿಮಿಟೆಡ್ 1957ನೆ ವರ್ಷದ ತೃಪ್ತಿಕರ ಕಾರ್ಯ ಫಲಿತಾಂಶಗಳು

31–12–1957ಕ್ಕೆ ಅಂತ್ಯವಾದ ವರುಷದಲ್ಲಿ ಗತವರ್ಷದ 39 ಲಕ್ಷ ನೆರಿ ರೂಪಾಯಿ 15.32 ಲಕ್ಷ ಮುನಾಫೆಯನ್ನು ಕೆನರಾ ಬೇಂಕು ಪಡೆದಿದೆ. ಗತವರುಷದ ಅಂದರೆ 1956ನೆ ಇಸವಿಯಲ್ಲಿ ದೊರೆತ ಲಾಭವು ರೂ. 12.32 ಲಕ್ಷವಾಗಿತ್ತು. ಕಾಯಿದೆ ಪ್ರಕಾರದ ವಿನಿಯೋಗಗಳಿಗೆ ವಿಂಗಡಿಸಲ್ಪಟ್ಟ ನಂತರ ಉಳಿದ ರೂಪಾಯಿ 11.67 ಲಕ್ಷವನ್ನು ಈ ರೀತಿಯಾಗಿ ವಿಂಗಡಿಸಬಹುದೆಂದು ಡೈರೆಕ್ಟರರು ಶಿಫಾರಸು ಮಾಡಿರುವರು. ಇನ್ಕಮ್ ಟೇಕ್ಸ್ ವಿನಿಯೋಗಕ್ಕೆ ರೂ. 7.30ಲಕ್ಷ; ಶಿಬಂಧಿ ಬೋನಸ್ ರೂ. 1.90 ಲಕ್ಷ; ಪ್ರಿಫರೆನ್ಸ್ ಶೇರುಗಳಿಗೆ ನೇಕಡಾ 5ರಂತೆ ಕೊಡಲು ರೂ. 52,500; ಸಾಮಾನ್ಯ ಪಾಲುಗಾರರಿಗೆ ನೇಕಡಾ 10ರಂತೆ ಇನ್ಕಮ್ ಟೇಕ್ಸ್ ಫ್ರೀಯಾಗಿ ಡಿವಿಡೆಂಟ್ ಹಂಚಲು ರೂ. 50 ಲಕ್ಷ ನಂತರ ಉಳಿಯುವ ರೂ. 44,767 ಹೊಸ ವರುಷದ ಲೆಖ್ಖಕ್ಕೆ.

ವರದಿ ವರ್ಷದಲ್ಲಿ ರೇವಣಾತಿಗಳು ರೂ. 3.52 ಕೋಟಿಗಳಷ್ಟು ಜಾಸ್ತಿಯಾದುದರಿಂದ ಬೇಂಕಿನ ಡಿಪೊಸಿಟ್ ಐವಜು ರೂ. 17.64 ಕೋಟಿಗೆ ಏರಿದೆ. ಕ್ಷೇಮನಿಧಿಗೆ ಎಂಟು ಲಕ್ಷ ರೂಪಾಯಿಯನ್ನು ಕೂಡಿಸಿದುದರಿಂದ ಕ್ಷೇಮ ನಿಧಿಯು ಈಗ ರೂ. 40 ಲಕ್ಷವಾಗಿರುತ್ತದೆ. ವರದಿ ವರ್ಷದಲ್ಲಿ ಬೇಂಕಿನ ಅಧಿಕೃತ ಭಂಡವಲವನ್ನು ರೂ. 50 ಲಕ್ಷವನ್ನು 1ಕೋಟಿಗೆ ಏರಿಸಲಾಗಿದೆ; 1958ನೆ ಇಸವಿಯಲ್ಲಿ ರೂ. 50 ಬೆಲೆಯ 42,000 ಸಾಮಾನ್ಯ ಶೇರುಗಳನ್ನು ಶೇರಿಗೆ ರೂ. 15|-ರ ಪ್ರೀಮಿಯಮಿನಂತೆ ಕೊಡುವ ಏರ್ಪಾಡಾಗಿದೆ. ಇದರಿಂದಾಗಿ 21ಲಕ್ಷ ರೂಪಾಯಿಗಳನ್ನು ಜಮೆಯಾಗುವುದು. ಹೊಸ ಶೇರುಗಳು ಬೇಂಕಿನಲ್ಲಿ ಈಗಾಗಲೇ ಶೇರುದಾರರಾಗಿರುವವರಿಗೂ ಖಾಯಂ ಆದ ಬೇಂಕಿನ ನೌಕರರಿಗೂ ಕೊಡಲಾಗುವುದು. ಹೊಸ ಶೇರುಗಳನ್ನೂ ಕೊಡುವ ಕ್ರಮದ ಫಲವಾಗಿ 1958ನೆ ವರ್ಷಾಂತ್ಯದಲ್ಲಿ ರೂ. 50ಲಕ್ಷ ತೆತ್ತ ಪಾಲುಭಂಡವಳ ಬೇಂಕಿನ ದಾಖಲೆಗೆ ಬರುವುದು.

ಎಸ್. ಆರ್. ಎಸ್. ಹೋಮಿಯೋ ವಾರ್ಷಿಕೋತ್ಸವವು –ಉಡುಪಿ ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹಾಸ್ಟೆಲ್ ಸುಪರಿಂಟೆಂಡೆಂಟ್ ಡಾ. ಬಿ. ಆರ್. ಹೆಗ್ಡೆಯವರು ಸ್ವಾಗತವಾತುಗಳನ್ನಾಡಿದರು. ಹಾಸ್ಟೆಲ್ ಯೂನಿಯನ್ ಕಾರ್ಯದರ್ಶಿ ಶ್ರೀ ಕೆ. ಜಿ. ಗೌರೀಶಂಕರರೈಗಳು ವರದಿಯನ್ನೋದಿದರು. ಪಿ. ಡಬ್ಲ್ಯು. ಡಿ. ಆಸಿಸ್ಟಾಂಟ್ ಇಂಜಿನಿಯರ್ ಶ್ರೀ ಎಮ್. ಗೋವಿಂದ ಸೆಟ್ಟರು ಹಾಸ್ಟೆಲಿನ ಸ್ವಸ್ತಿವಾಚನ ಮಾಡಿದರು. ಶ್ರೀ ಎ. ಶಂಕರನಾರಾಯಣ ಪೂಂಜರು ಸ್ವಸ್ತಿವಾಚನಕ್ಕೆ ಉತ್ತರವಿತ್ತರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ, ವಂದನಾರ್ಪಣೆಗಳಾದ ಬಳಿಕ ಕನ್ನಡ, ತುಳು, ನಾಟಕಗಳು ಹಾಗೂ ಇತರ ವಿವಿಧ ವಿನೋದಾವಳಿಗಳಾದುವು.

ವೈದ್ಯಕೀಯ ಮತ್ತು ಆರೋಗ್ಯ ಪ್ರದರ್ಶನ –ಲ್ಯಾಟ್‌ಹಾಸ್ ಹಿಲ್ಲಿನಲ್ಲಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಠಾರದಲ್ಲಿ ಕಾಲೇಜಿನ ಆಶ್ರಯದಲ್ಲಿ ಗುರುಪುರ ಗ್ರಾಮ ಚಿಕಿತ್ಸಾಲಯದ ಸಹಾಯಾರ್ಥ ನಡೆಯುವ ವೈದ್ಯಕೀಯ ಮತ್ತು ಆರೋಗ್ಯ ಪ್ರದರ್ಶನವನ್ನು ತಾ. 18ರಂದು ಎಕೆಡಮಿ ಆಫ್ ಜನರಲ್ ಎಡ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಉದ್ಘಾಟಿಸುತ್ತಾ ವೈದ್ಯಕೀಯ ವಿಜ್ಞಾನವು ಬಹಳಷ್ಟು ಪ್ರಗತಿಯನ್ನು ಸಾಧಿಸಿದರೂ ಇನ್ನೂ ಹಲವು ರೋಗಗಳ ನಿವಾರಣೆಯಲ್ಲಿನ ಅದರ ಕಾರ್ಯ ಸಂಪೂರ್ಣವಾಗಿಲ್ಲ. ನಾವು ಇಷ್ಟರವರೆಗೆ ಸಾಧಿಸಿದ ಪ್ರಗತಿಯು ಇನ್ನೂ ಸಾಧಿಸಬೇಕಾಗಿರುವ ಪ್ರಗತಿಗಿಂತ ಬಹಳ ಅಲ್ಪ. ಇದಕ್ಕಾಗಿ ವೈದ್ಯಕೀಯ ವಿದ್ಯಾರ್ಥಿಗಳು ಹಾಗೂ ಡಾಕ್ಟರರು ವೈದ್ಯಕೀಯ ಸಂಶೋಧನೆಯ ಕಡೆಗೆ ಹೆಚ್ಚಿನ ಗಮನವನ್ನು ಕೊಡುವುದು ಅತೀ ಅಗತ್ಯವೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರಿನ ಮಾಜಿ ಮಂತ್ರಿ ಶ್ರೀ ಎ. ಬಿ. ಸೆಟ್ಟರು ತಮ್ಮ ಭಾಷಣದಲ್ಲಿ ಕಾಲೇಜಿನ ಉತ್ತಮ ಪ್ರಗತಿಯನ್ನು ಪ್ರಶಂಸಿಸಿ ಇಂತಹ ವೈದ್ಯಕೀಯ ಹಾಗೂ ಆರೋಗ್ಯ ಪ್ರದರ್ಶನಗಳು ಜನರಿಗೆ ರೋಗಗಳನ್ನು ತಡೆಗಟ್ಟುವ ವಿಧಾನ ಹಾಗೂ ರೋಗ ಬಂದಮೇಲೆ ಅದನ್ನು ನಿವಾರಿಸುವ ಬಗೆ ಇವುಗಳ ಕುರಿತು ತಿಳಿಯಪಡಿಸುವುದರಿಂದ ಇವುಗಳು ಹೆಚ್ಚಿನ ಶೈಕ್ಷಣಿಕ ಮೌಲ್ಯದಿಂದ ಕೂಡಿವೆ ಎಂಬುದಾಗಿ ಹೇಳಿದರು.

ಆರಂಭದಲ್ಲಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಸುಂದರ್ ಸಿಂಘಮರು ಸ್ವಾಗತಿಸಿದರು. ಶ್ರೀ ಬಿ. ಎಸ್. ರಾಮಾಚಾರ್ಯರು ಪ್ರದರ್ಶನದ ಕುರಿತಾದ ಪದ್ಯವೊಂದನ್ನು ಹಾಡಿದರು. ಕಾಲೇಜ್ ಪ್ರಿನ್ಸಿಪಾಲ್ ಡಾ| ಜಿ ಡಿ. ವೇಲಿಯತರು ಅತಿಥಿಗಳ ಪರಿಚಯ ಮಾಡಿದರು. ವೈಸ್ ಪ್ರಿನ್ಸಿಪಾಲ್ ಡಾ| ಎನ್. ಎಲ್. ಕಲ್ಲೆಯವರು ಪ್ರದರ್ಶನದ ವಿವರಗಳನ್ನಿತ್ತರು ಶ್ರೀ ಸಿ. ಎಲ್. ಜೋಸ್‌ರವರು ಸಂದೇಶ ವಾಚನ ಮಾಡಿದರು. ಶ್ರೀ ಥೋಮಸ್ ಅಬ್ರಾಹಂರು ಧನ್ಯವಾದಗಳನ್ನಿತ್ತರು. ಪ್ರದರ್ಶನವು ಪ್ರೇಕ್ಷಣೀಯವಾಗಿದೆ.

ದ. ಕ. ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು–ಇದೇ ತಾ. 25ನೆ ಶನಿವಾರ ಅಪರಾಹ್ನ 2 ಗಂಟೆಗೆ ಬೋರ್ಡಿನ ಸಭಾ ಸದನದಲ್ಲಿ ಜರಗಲಿರುವುದು. ಈ ಸಭೆಯಲ್ಲಿ 1957-58ರ ರಿವ್ಯಾಸ್ಡ್ ಮತ್ತು 1958-59ರ ಅಂದಾಜು ಬಜೇಟುಗಳ ಪರಿಶೀಲನೆ ನಡೆಯಲಿರುವುದು ಎಂದು ಬೋರ್ಡಿನ ಅಧ್ಯಕ್ಷರು ತಿಳಿಸುತ್ತಾರೆ.

ರಿಪಬ್ಲಿಕ್ ಡೇ ದಿನಾಚರಣೆ— ನಿಮಿತ್ತ ತಾ. 26ರಂದು ಬೆಳಿಗ್ಗೆ 8 ಗಂಟೆಗೆ ಸೆಂಟ್ರಲ್ ಮೈದಾನಿನಲ್ಲಿ ಡಿಸ್ಟ್ರಿಕ್ಟ ಕಮಿಶನರರು ಧ್ವಜಾರೋಹಣ ಮಾಡುವರು. ತಾಲೂಕು ಕಚೇರಿಯಲ್ಲಿ ಮಕ್ಕಳಿಗೆ ಸಿಹಿತಿಂಡಿ ಹಂಚಲಾಗುವುದು. ಸಂಜೆ 6 ಗಂಟೆಗೆ ಗವರ್ನಮೆಂಟ್ ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರಗುವುದು.

ಕದ್ರಿ ಜಾತ್ರೆಯಲ್ಲಿ ಸಾಂಸ್ಕೃತಿಕ ಉತ್ಸವವು—ತಾ. 14ರಿಂದ 21ರ ತನಕ ನಡೆಯಿತು. ಈ ಉತ್ಸವವನ್ನು ಶ್ರೀ ವಿ. ಎಸ್. ಕುಡ್ವರು ಉದ್ಘಾಟಿಸಿದರು. ಶ್ರೀ ಜಿ. ಸೋಮಶೇಖರ ರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಎರಡನೆ ದಿವಸದ ಸಭಾಧ್ಯಕ್ಷತೆಯನ್ನು ಶ್ರೀ ಕೆ. ಆರ್. ಆಚಾರ್, ಎಮ್ ಸಿ. ಅವರು ವಹಿಸಿದ್ದರು. ಶ್ರೀ ಸೇವ ನವಿುರಾಜ ಮಲ್ಲರು ಪ್ರಮುಖ ಭಾಷಣಗಾರರಿದ್ದರು.

ರಾಜ್ಯಸಭೆಯ ಉಪಾಧ್ಯಕ್ಷ--ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ತಾ. 16 ರಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತಾ, ದೇಶದಲ್ಲಿರುವ ಬಡತನ, ಅಜ್ಞಾನ, ನಿರಕ್ಷರತೆಯನ್ನು ಹೋಗಲಾಡಿಸಿ ಜನರ ಜೀವನ ಮಟ್ಟವನ್ನು ಏರಿಸುವುದಕ್ಕಾಗಿ ದೇಶದ ಪ್ರತಿಯೊಬ್ಬ ಪ್ರಜೆಯೂ ಹೆಣಗಬೇಕಾಗಿದೆ. ಇದಕ್ಕಾಗಿ ಹಳ್ಳಿಯಲ್ಲಿರುವ ಜನರ ಸಂಕಷ್ಟವನ್ನರಿತು ಅದಕ್ಕೆ ತಕ್ಕ ಪರಿಹಾರವನ್ನು ಸೂಚಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯಕರ್ತರು ಹಳ್ಳಿ ಹಳ್ಳಿಗಳಿಗೆ ಕಾಂಗ್ರೆಸ್ ಸಂದೇಶವನ್ನು ಕೊಂಡೊಯ್ಯಬೇಕೆಂದು ಮುಂತಾಗಿ ಹೇಳಿದರು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಕೆ. ಸೆಟ್ಟರು ಸ್ವಾಗತಿಸಿದರು. ಶ್ರೀ ಕೆ. ಆರ್. ಆಚಾರ್ ಎಮ್. ಪಿ. ಯವರು ಅತಿಥಿಗಳ ಪರಿಚಯ ಮಾಡಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಡಾ| ಕೆ. ಬಾಲಪ್ಪ ಸೆಟ್ಟರು ಧನ್ಯವಾದವಿತ್ತರು ಶ್ರೀ ರಾಯರು ಗವರ್ನಮೆಂಟ್ ಆರ್ಟ್ಸ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ ವಿದ್ಯಾರ್ಥಿಗಳು ಶಿಸ್ತನ್ನು ಬೆಳೆಸಿಕೊಂಡು ಬರಬೇಕು ಎಂದು ಕರೆಕೊಟ್ಟರು. ಶ್ರೀ ರಾಯರು ಕಸ್ತೂರ್ಬಾ ಮೆಡಿಕಲ್ ಕಾಲೇಜು, ವೆನ್‌ಲೋಕ್ ಆಸ್ಪತ್ರೆ, ಕೆನರಾ ವರ್ಕ್ ಶೋಪ್ಸ್ ಮೊದಲಾದುವುಗಳನ್ನು ಸಂದರ್ಶಿಸಿದರು. (೪ನೇ ಕಲಂ ನೋಡಿರಿ)

ಮೂಡಬಿದ್ರೆ—ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ತಾ. 15ರಂದು ಸ್ಥಳೀಯ ಸಮಾಜ ಮಂದಿರದಲ್ಲಿ ಸೇರಿದ ಸಭೆಯಲ್ಲಿ ಮಾತನಾಡುತ್ತಾ, ಭಾರತೀಯ ಸಂಸ್ಕೃತಿ ಕಲೆ ಹಾಗೂ ಜನತೆ ಇರುವುದು ಅದರ ಹಳ್ಳಿಗಳಲ್ಲಿ. ಭಾರತದ ಹಳ್ಳಿಗಳು ಉದ್ಧಾರವಾಗಿ ಅಲ್ಲಿನ ಜನತೆಯು ಸಂಪದ್ ಸಮೃದ್ಧಿಯಾಗಿ ಮುಂದೆ ಬಂದಲ್ಲಿ ಅದರಿಂದಲೇ ದೇಶದ ಪ್ರಗತಿ ಸಾಧ್ಯ. ಇದೇ ದೃಷ್ಟಿಯಿಂದ ದೇಶದ ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ಹಳ್ಳಿಗಳ ಪ್ರಗತಿಯ ಕಡೆಗೆ ಹೆಚ್ಚಿನ ಗಮನವನ್ನೀಯಲಾಗಿತ್ತು, ಎಂದು ಹೇಳಿದರು.

ಈ ಸಂದರ್ಭದಲ್ಲಿಯೇ ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಮೂಲ ಸಂಸ್ಥಾಪಕರಲ್ಲೊಬ್ಬರಾದ ದಿ| ಟಿ. ಉಪೇಂದ್ರ ಪೈಗಳ ತೈಲಚಿತ್ರವನ್ನು ಅನಾವರಣ ಮಾಡಿದರು. ದ. ಕ. ಜಿಲ್ಲೆಯ ಶೈಕ್ಷಣಿಕ ಹಾಗೂ ಬೇಂಕಿಂಗ್ ಕ್ಷೇತ್ರದಲ್ಲಿ ಪ್ರಗತಿಗಾಗಿ ಡಾ. ಟಿ. ಎಮ್. ಎ. ಪೈಗಳು ಮಾಡಿದ ಕಾರ್ಯವನ್ನು ಶ್ಲಾಘಿಸಿದರು. ಶ್ರೀ ಎಸ್. ಎನ್. ಮೂಡಬಿದ್ರೆ ಮತ್ತು ಶ್ರೀ ಅಣ್ಣಪ್ಪಯ್ಯನವರು ಸಮಾಜ ಮಂದಿರಕ್ಕೆ ದಾನವಾಗಿತ್ತ ರೇಡಿಯೋ ಸೆಟ್ಟಿನ ಉದ್ಘಾಟನೆಯೂ ನಡೆಯಿತು.

ಶ್ರೀ ಟಿ. ಎ. ಪೈಗಳು ತಮ್ಮ ವಿದೇಶ ಪ್ರವಾಸಾನುಭವಗಳನ್ನೆತ್ತಿ ಮಾತನಾಡಿದರು. ಸಭಾಧ್ಯಕ್ಷತೆ ವಹಿಸಿದ್ದ ಡಾ. ಟಿ. ಎಮ್. ಎ ಪೈಗಳು ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸಬೇಕೆಂದರು. ಆರಂಭದಲ್ಲಿ ಶ್ರೀ ಜಿ. ವಾಸುದೇವ ಪೈಗಳು ಸ್ವಾಗತಮಾತುಗಳನ್ನಾಡಿದರು. ಶ್ರೀ ಕೆ. ಕಾಂತ ರೈಗಳು ಧನ್ಯವಾದವಿತ್ತರು.

ಧರ್ಮಸ್ಥಳ—ಜೈನಮುನಿಗಳಾದ ಶ್ರೀ ಶ್ರೀ ಆಚಾರ್ಯ ಧರ್ಮಸಾಗರ ಮುನಿಗಳು ತಾ. 10ರಂದು ತಮ್ಮ ಶಿಷ್ಯ ವೃಂದದೊಡನೆ ಧರ್ಮಸ್ಥಳಕ್ಕೆ ಆಗಮಿಸಿದಾಗ ಶ್ರೀ ರತ್ನವರ್ಮ ಹೆಗ್ಗಡೆಯವರು ಸುಸ್ವಾಗತವಿತ್ತು ಶ್ರೀ ಚಂದ್ರನಾಥ ಸ್ವಾಮಿ ಬಸದಿಗೆ ಕರೆದೊಯ್ದರು. ಪೂನಾದ ಶ್ರೀಗಳಾದ ಸೇಟ್ ಜೀವಂಜಜೀ, ಶಾಂತಿಲಾಲ್‌ಜೀ, ನೇಮಿ ಚಂದ್ರಜೀ, ಕೂಡಾ ಸುಮಾರು 40ಮಂದಿ ಶಿಷ್ಯರು ಶ್ರೀ ಸ್ವಾಮಿಗಳೊಡನೆ ಬಂದಿದ್ದರು. ಎರಡು ದಿವಸದ ನಂತರ ವೇಣೂರಿಗಾಗಿ ಮೂಡಬಿದಿರೆಗೆ ಪ್ರಯಾಣಬೆಳೆಸಿದರು.

ಗುರುಪುರ—ಇಲ್ಲಿಯ ಪದವಿನ ವೈದ್ಯಾಶ್ರಮ ರಸ್ತೆಯಲ್ಲಿರುವ ಡಾ| ಬಿ. ಬಿ. ಅತ್ತಾವರ್, ಅವರ ಶ್ರೀ ಪರಮೇಶ್ವರೀ ಧರ್ಮ ವೈದ್ಯಾಶ್ರಮದ ಹತ್ತೊಂಭತ್ತನೆಯ ವಾರ್ಷಿಕ ವರ್ಧಂತಿಯು ತಾ. 5ರಂದು ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಧ್ವಜಾರೋಹಣವಾದ ಬಳಿಕ ಕುಮಾರಿ ಜಲಜಾಕ್ಷಿ ದೇವಿಯವರು ಸ್ವಾಗತ ಭಾಷಣ ಮಾಡಿದರು. ಡಾ' ಬಿ ಬಿ. ಅತ್ತಾವರ್, ಅವರು ವರದಿ ಹಾಗೂ ಸಂದೇಶಗಳನ್ನೋದಿದರು. ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ, ಡಾ| ಕೆ. ನಾಗಪ್ಪ ಆಳ್ವ, ಎಮ್. ಎಲ್. ಎ; ಎಚ್. ಆನಂದ ರಾವ್, ಪಿ. ಶೀತಾರಾಮಾಚಾರ್ಯ, ಕೆ. ಎಸ್. ಪದ್ಮನಾಭಾಚಾರ್ಯ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ವಾರ್ಷಿಕೋತ್ಸವದ ಅಂಗವಾಗಿ ಅಲ್ಲಿಯೇ ಸ್ಥಾಪಿಸಿದ ಸಂಗೀತ ಸಾಹಿತ್ಯ ಕಲಾನಿಲಯದ ಉದ್ಘಾಟನೆಯನ್ನು ಡಾ. ನಾಗಪ್ಪ ಆಳ್ವರು ಉದ್ಘಾಟಿಸಿದರು. ಕುಮಾರಿಯರಾದ ಜಲಜಾಕ್ಷಿ, ಪದ್ಮಾವತಿ, ಇಂದಿರಾ, ಸವಿತಾ ದೇವಿ, ಜೀನನಲತಾ, ಶ್ರೀಮತಿ ರಮಾದೇವಿ, ಪಿ. ಆಚಾರ್ಯ ಮೊದಲಾದವರ ಕೂಡುವಿಕೆಯಿಂದ ಸಂಗೀತಾದಿ ಕಾರ್ಯಕ್ರಮಗಳಾದುವು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ ವೈದ್ಯಾಶ್ರಮವನ್ನು ಸಂಗೀತ ಸಾಹಿತ್ಯಕಲಾ ನಿಲಯಕ್ಕೆ ಶುಭವನ್ನು ಕೋರಿ ಆಶೀರ್ವದಿಸಿದರು.

ಕಾರ್ಕಳ—ರಾಜ್ಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ತಾ. 15ರಂದು ಡಾ. ಟಿ. ಎಮ್. ಎ. ಪೈ, ಶ್ರೀಗಳಾದ ಕೆ. ಆರ್. ಆಚಾರ್, ಎಮ್. ಪಿ. ಮತ್ತು ಕೆ. ನರಹರಿ ಕಾಮತರೊಡನೆ ಕಾರ್ಕಳ ಮತ್ತು ಬೈಲೂರು ಕೇಂದ್ರಗಳನ್ನು ಸಂದರ್ಶಿಸಿದರು. ಕಾರ್ಕಳದಲ್ಲಿ ಜರಗಿದ ಸಭೆಯಲ್ಲಿ ಶ್ರೀ ಎಸ್. ಆರ್. ಆಚಾರ್ಯರೂ, ಬೈಲೂರಿನ ಸಭೆಯಲ್ಲಿ ಶ್ರೀ ಬಿ. ಎನ್. ಆಚಾರ್ಯರೂ ಶ್ರೀ ರಾಯರನ್ನು ಸ್ವಾಗತಿಸಿದರು. ಡಾ. ಮಾಧವ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಕಾರ್ಕಳದಲ್ಲಿಯ ವಕೀಲ ಸಂಘಕ್ಕೆ ಭೇಟಿಯಿತ್ತಾಗ ಶ್ರೀ ಬಿ. ನಾರಾಯಣ ನಾಯ್ಕರು ಸ್ವಾಗತವಿತ್ತರು. ಕಾರ್ಕಳದ ಹರಿಜನ ವಸತಿ, ಮಲೆಕುಡಿಯರ ಶಾಲೆ, ಮಿಾನುಗಾರಿಕೆಯ ಕೇಂದ್ರ, ತಳ್ಳಾರು ಸೇತುವೆ, ಸರಕಾರಿ ಆಸ್ಪತ್ರೆ ಮೊದಲಾದುವನ್ನು ಸಂದರ್ಶಿಸಿದರು.

ಕಾಸರಗೋಡು–ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳವರಿಗೆ ತಾ. 13ರಂದು ಸ್ಥಳೀಯ ಸಹಕಾರಿ ಟೌನ್ ಬೇಂಕಿನಲ್ಲಿ ಸತ್ಕಾರಕೂಟವಾಯಿತು. ಶ್ರೀ ಕೆ. ಚಂದ್ರಶೇಖರನ್, ಎಮ್. ಎಲ್. ಎ; ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಪಿ. ಮಾಧವರಾಯರು ಸ್ವಾಗತಿಸಿದರು. ಡಾ| ಪಿ. ಎಸ್. ಭಟ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಮುಖ್ಯ ಅತಿಥಿಗಳು ತಮ್ಮ ವಿದೇಶ ಪ್ರವಾಸಾನುಭವವನ್ನು ವಿವರಿಸಿ ಭಾಷಣಮಾಡಿದರು.

ಅಂದು ರಾತ್ರಿ ಅಲ್ಲಿಯ ಗೌಡಸಾರಸ್ವತ ಬ್ರಾಹ್ಮಣ ಸಮಾಜದವರು ಶ್ರೀ ಟಿ. ಎ. ಪೈಗಳಿಗೆ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಮಾನಪತ್ರವಿತ್ತು ಗೌರವಿಸಿದರು ಶ್ರೀ ಕೆ. ಪಿ. ಅನಂತರಾಯರು ಸ್ವಾಗತಿಸಿದರು. ಶ್ರೀಗಳಾದ ಕೆ. ವಾಮನ ಶೆಣೈ ಮತ್ತು ಎಮ್. ವೆಂಕಟೇಶ ಶ್ಯಾನುಭಾಗರು ಸಂದರ್ಭೋಚಿತ ಮಾತುಗಳನ್ನಾಡಿದರು. ನಂತರ ಶ್ರೀ ಪೈಗಳು ಪ್ರಸಾದ ಸ್ವೀಕರಿಸಿ ಸಮಾಜೋನ್ನತಿ ಇತ್ಯಾದಿ ವಿಷಯಗಳನ್ನೆತ್ತಿ ಮಾತನಾಡಿದರು.

(೨ನೇ ಕಲಂನಿಂದ)

ಅಧ್ಯಾಪಕರ ಮತದಾರಪಟ್ಟಿ— ರಾಜ್ಯದ ವಿಧಾನ ಪರಿಷತ್ತಿಗೆ ಆರು ಮಂದಿ ಸದಸ್ಯರನ್ನು ಆರಿಸುವ ಹಕ್ಕು ಕಾಲೇಜುಗಳ ಮತ್ತು ಸೆಕೆಂಡರಿ ಶಾಲಾಧ್ಯಾಪಕರಂತೆಯೇ ದ. ಕ. ಜಿಲ್ಲೆಯ ಹಾ. ಎ. ಶಾಲೆಗಳ ಅಧ್ಯಾಪಕರಿಗೂ ಇರಬೇಕೆಂಬ ಜಿಲ್ಲಾ ಗಿಲ್ಡಿನ ಕೇಳಿಕೆಯನ್ನು ಸರಕಾರವು ಮಂಜೂರು ಮಾಡಿದೆ.

ಅಧ್ಯಾಪಕರ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವ ಅವಧಿ ದಾಟಿದೆಯಾದರೂ ಅತಿ ಜರೂರಾಗಿ ಈ ಶಾಲೆಗಳ ಮುಖ್ಯೋಪಾಧ್ಯಾಯರು ಇನ್ನೊಂದು ಪಟ್ಟಿಯನ್ನು ಸಂಬಂಧಪಟ್ಟ ರೀಜಿನ ಡಿಸ್ಟ್ರಿಕ್ಟ ಇನ್ಸ್‌ಪೆಕ್ಟರರಿಗೂ ಅದರ ಪ್ರತಿಯನ್ನು ಗಿಲ್ಡಿನ ಅಧ್ಯಕ್ಷರ ಬೆಂಗಳೂರು ವಿಳಾಸ (C/o ನವಭಾರತ, 369 ಸುಬೇದಾರ್ ಛತ್ರಂ ರೋಡು, ಬೆಂಗಳೂರು. 2)ಕ್ಕೂ ಕಳುಹಿಸಿದರೆ ತುಂಬಾ ಅನುಕೂಲವಾಗುವುದು. ಮತದಾರ ಪಟ್ಟಿಯಲ್ಲಿ ಹೆಸರು, ವಿಳಾಸ, ಪ್ರಾಯ ವಿದ್ಯಾಯೋಗ್ಯತೆ, ಕೆಲಸಕ್ಕೆ ಸೇರಿದ ತಾರೀಕು ಮತ್ತು ದಸ್ಕತು ಇರತಕ್ಕದ್ದು. ಅಲ್ಲದೆ ಈ ವಿವರಗಳು ಶಾಲಾ ರಿಜಿಸ್ತ್ರಗೆ ಅನುಗುಣವಾಗಿವೆಯೆಂದು ಮುಖ್ಯೋಪಾಧ್ಯಾಯರು ಸಹಿಮಾಡಿ ಶಾಲಾ ಮೊಹರು ಹೊಂದಿರಬೇಕು.

ಯುವಕ ಕಾಂಗ್ರೆಸ್ಸಿನ ಸಭೆಯು- ತಾ. 12ರಂದು ದೇರೆಬೈಲಲ್ಲಿ ಶ್ರೀ ಸುಬ್ರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಎ. ಕಾದರರು ಯುವಕ ಕಾಂಗ್ರೆಸ್ಸಿನ ಸಂಘಟನೆಯ ಕುರಿತು ಮಾತನಾಡಿದರು. ನಂತರ ದೇರೆಬೈಲು ವಾರ್ಡಿಗೆ ಯುವಕ ಕಾಂಗ್ರೆಸಿನ ಶಾಖೆಯನ್ನು ಸ್ಥಾಪಿಸಿ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು.

ವೆನ್‌ಲೋಕ್ ಆಸ್ಪತ್ರೆಯ ವಿಸ್ತರಣೆ–ಸ್ಥಳೀಯ ವೆನ್‌ಲೋಕ್ ಆಸ್ಪತ್ರೆಯ ಬಡಾವಣೆಗಾಗಿ ಸ್ಥಳಪಡೆಕೊಳ್ಳಲು ಮೈಸೂರಿನ ರಾಜ್ಯಪಾಲರು ಮಂಗಳೂರಿನ ಸ್ಪೆಶಲ್ ತಹಶಿಲ್ದಾರರಿಗೆ ಅಧಿಕಾರವಿತ್ತಿರುವರು. ಈ ಸಂಬಂಧದಲ್ಲಿ ಸರಕಾರವು ಹೇಳಿಕೆಯೊಂದನ್ನು ಹೊರಡಿಸಿ, ದ. ಕ. ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟಾಂಟರ ಸ್ಥಾನದಲ್ಲಿ ಈ ಕಾರ್ಯವಹಿಸಲು 1894ರ ಭೂ ಕಾಯಿದೆಯ ನಿಯಮ 4ರ ಉಪನಿಯಮ 3ರನ್ವಯ ಮಂಗಳೂರಿನ ಸ್ಪೆಶಲ್ ತಹಶಿಲ್ದಾರರಿಗೆ ಹಾಗೂ ಅವರ ಸಹಾಯಕರಿಗೆ ಈ ಅಧಿಕಾರ ವಹಿಸಿ ಕೊಡಲಾಗಿದೆಯೆಂದು ತಿಳಿಸಿದೆ.

ಆರುನೂರು ವರ್ಷಗಳ ಪರಂಪರೆ—

ಝೆಕ್-ಭಾರತ ಸ್ನೇಹ ಸಂಬಂಧ

೧೪ನೆಯ ಶತಮಾನದ ಕೊನೆಯಲ್ಲಿ ಝೆಕೋಸ್ಲೋವಾಕಿಯಾದ ಮತಸುಧಾರಕರಾಗಿದ್ದ ಥೋಮಸ್‌ನ ಸ್ಟಿಟ್ನಿ ಎಂಬವರು, ಬುದ್ಧನ ಜೀವನವನ್ನು ಅವಲಂಬಿಸಿ 'ಬಾರಲಾಂ ಆಂಡ್ ಜೊಸಾಫೆಟ್' ಎಂಬ ಕಾದಂಬರಿಯನ್ನು ಬರೆದರು. ಭಾರತ ಮತ್ತು ಝೆಕೋಸ್ಲವಾಕಿಯದ ಸಾಂಸ್ಕೃತಿಕ ಸಂಬಂಧ ಆರಂಭವಾದುದು ಆ ಕಾಲದಿಂದ. ಅನಂತರದಲ್ಲಿ ಪರಸ್ಪರ ಸಂಪರ್ಕಗಳ ಪರಿಣಾಮವಾಗಿ ಈ ಸಂಬಂಧವು ಮತ್ತಷ್ಟು ಬಲವಾಗಿದೆ.

೧೯ನೆಯ ಶತಮಾನದ ಮಧ್ಯಭಾಗದಲ್ಲಿ ಕಾರೆಲ್ ಪ್ರಿಕ್ರೈಲ್ ಎಂಬ ಝೆಕೋಸ್ಲವಾಕಿಯದ ಇಗರ್ಜಿಗ ಸೇರಿದವರು ಭಾರತಕ್ಕೆ ಬಂದಿದ್ದರು. ಅವರು ಕೆಲವು ವರ್ಷಗಳ ನಂತರ ಝೆಕೋಸ್ಲವಾಕಿಯಕ್ಕೆ ಹಿಂದಿರುಗಿದಾಗ ಸಂಸ್ಕೃತ ವ್ಯಾಕರಣ ಜ್ಞಾನವನ್ನು ಪಾಶ್ಚಾತ್ಯರಿಗೆ ನೀಡಿದರು. ಇದಾದ ಕೂಡಲೇ ಭಾಷಾಶಾಸ್ತ್ರಜ್ಞರು ಯುರೋಪಿನ ಭಾಷೆಗಳಿಗೂ ಸಂಸ್ಕೃತಕ್ಕೂ ಇರುವ ಸಾಮ್ಯವನ್ನು ಕಂಡುಹಿಡಿದರು.

ಆರಂಭದಿಂದಲೂ ಝೆಕ್ ದೇಶದ ಇತಿಹಾಸಜ್ಞರು ಭಾರತ—ಝೆಕೋಸ್ಲವಾಕಿಯಾ ದೇಶಗಳ ಪರಸ್ಪರ ತಿಳುವಳಿಕೆಯನ್ನು ಬಲಪಡಿಸಲು ಅಮೂಲ್ಯವಾದ ನೆರವು ನೀಡಿರುವರು. ಕಳೆದ ಶತಮಾನದಲ್ಲಿ ಪ್ರೇಗ್‌ನ ಚಾರ್ಲ್ಸ್ ವಿಶ್ವವಿದ್ಯಾನಿಲಯದಲ್ಲಿ ಭಾರತ ಶಾಸ್ತ್ರದ ಪ್ರಾಧ್ಯಾಪಕರಾದ ಜೋಸೆಫ್ ಝುಬಾಟಿಯವರು ಸಂಸ್ಕೃತ ಹಾಗೂ ಇತರ ಭಾಷೆಗಳಿಗೆ ಗಮನಾರ್ಹವಾದ ಪ್ರಾಧಾನ್ಯವನ್ನಿತ್ತಿರುವರು. ಕಾಳಿದಾಸನ 'ಮೇಘದೂತ', 'ಮಾಲವಿಕಾಗ್ನಿಮಿತ್ರ' ಇವುಗಳನ್ನು ಝೆಕ್ ಭಾಷೆಗೆ ಪರಿವರ್ತನೆ ಮಾಡಿದುದಲ್ಲದೆ ವೈದಿಕ ಸಾಹಿತ್ಯ ಮತ್ತು ಸಂಸ್ಕೃತ ನಾಟಕಗಳ ಬಗೆಗೆ ಅನೇಕ ಲೇಖನಗಳನ್ನು ಬರೆದಿರುವರು.

ಅನಂತರ ಝುಬಾಟಿಯವರ ಶಿಷ್ಯರಾದ ವಿನ್‌ಸೆಂಕ್ ಲೆಸ್ನಿಯವರು ತಮ್ಮ ಗುರುಗಳ ಕೆಲಸವನ್ನೇ ಮುಂದುವರಿಸಿ ಪ್ರಾಚ್ಯ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಅವರು ಬೌದ್ಧ ಸಿದ್ಧಾಂತವನ್ನು ವಿವರವಾಗಿ ಅಧ್ಯಯನ ಮಾಡಿದರು. ಕಾಳಿದಾಸನ ತಾತ್ವಿಕ ಅಧ್ಯಯನವನ್ನು ಕುರಿತು ಲೇಖನಗಳನ್ನು ಬರೆದರು. ಅವರು ಬಂಗಾಳಿಯನ್ನೂ ಕಲಿತರು. ರವೀಂದ್ರನಾಥ ಟಾಗೋರರಿಗೆ ಸ್ನೇಹಿತರಾಗಿದ್ದರು. ಟಾಗೋರರ ಕೆಲವು ಕೃತಿಗಳನ್ನು ಝೆಕ್ ಭಾಷೆಗೆ ಭಾಷಾಂತರಿಸಿದರು. ಭಾರತದ ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಿತರಾಗಿರುವ ಭಾರತ ಸಾಹಿತ್ಯೇತಿಹಾಸದ ಲೇಖಕರು ಎಂ. ವಿಂಟರ್‌ನಿಟ್ಜ್ ಎಂಬುವರು.

ಲೆಸ್ನಿಯವರು ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳನ್ನು ಬೋಧಿಸಿ ಪ್ರಮುಖ ಕಾಣಿಕೆಯನ್ನಿತ್ತರೆನ್ನಬಹುದು. ಪ್ರೇಗ್‌ನ ಭಾಷಾ ಸಂಸ್ಥೆಯಲ್ಲಿ ಹಿಂದಿ, ಉರ್ದು, ತಮಿಳು—ಈ ಭಾಷೆಗಳನ್ನು ಇಂದು ಸಂಸ್ಕೃತದೊಂದಿಗೆ ಕಲಿಸಿಕೊಡಲಾಗುತ್ತದೆ.

ಕಾಳಿದಾಸ ಮತ್ತು ರವೀಂದ್ರನಾಥ ಟಾಗೂರರ ಹೆಚ್ಚು ಕೃತಿಗಳನ್ನು ಝೆಕೋಸ್ಲವಿಯಾದಲ್ಲಿ ಭಾಷಾಂತರಿಸಲಾಗಿದೆ. ೧೯೫೧ರಲ್ಲಿ ಟಾಗೋರರವರ ಸಂಕಲನ ಗ್ರಂಥವೊಂದನ್ನು ಪ್ರಕಟಿಸಲಾಗಿತ್ತು. ಈ ಪುಸ್ತಕವು ಪ್ರಕಟವಾದ ಮೂರನೆಯ ದಿನವೇ ಪೂರ್ತಿಯಾಗಿ ಮಾರಾಟವಾಯಿತು. ಬಂಗಾಳಿ ಕಾವ್ಯಗಳು ಮತ್ತು ತಮಿಳು ಪದ್ಯಗಳು ಝೆಕ್ ಜನರಿಗೆ ಪರಿಚಯವಾಗಿದೆ.

ಇತ್ತೀಚೆಗಿನ ವರ್ಷಗಳಲ್ಲಿ ಈ ಎರಡು ರಾಷ್ಟ್ರಗಳು ಸಾಂಸ್ಕೃತಿಕ ನಿಯೋಗಗಳನ್ನು ವಿನಿಮಯ ಮಾಡಿಕೊಂಡು ಎರಡು ರಾಷ್ಟ್ರಗಳ ಸಾಂಸ್ಕೃತಿಕ ಸೌಹಾರ್ದಗಳನ್ನು ಬಲಪಡಿಸಲಾಯಿತು. ಇತ್ತೀಚೆಗೆ ಲಲಿತಕಲಾ ಅಕಾಡೆಮಿಯವರು ಪ್ರೇಗ್‌ನಲ್ಲಿ ಭಾರತೀಯ ಕಲಾ ಮತ್ತು ವಾಸ್ತುಶಿಲ್ಪಗಳ ಪ್ರದರ್ಶನವೊಂದನ್ನು ಏರ್ಪಡಿಸಿದ್ದರು.

೧೯೫೫ರಲ್ಲಿ ಭಾರತದಲ್ಲಿ ಪ್ರಧಾನಮಂತ್ರಿ ಶ್ರೀ ನೆಹರೂರವರು ಝೆಕೋಸ್ಲವಾಕಿಯಕ್ಕೆ ಭೇಟಿಕೊಟ್ಟಿದ್ದರು. ೧೯೫೬ರಲ್ಲಿ ಭಾರತದ ಉಪರಾಷ್ಟ್ರಾಧ್ಯಕ್ಷರಾದ ಡಾ. ರಾಧಾಕೃಷ್ಣನರವರು ಝೆಕೋಸ್ಲವಾಕಿಯಾಕ್ಕೆ ಭೇಟಿಕೊಟ್ಟಿದ್ದರು.

ಇದೇ ತಿಂಗಳ ಮೊದಲನೆಯೆರಡು ವಾರಗಳ ಮಧ್ಯೆ ಝೆಕ್ ಪ್ರಧಾನಿಗಳು ಸಹ ಭಾರತದ ಸಂದರ್ಶನವನ್ನು ಪೂರೈಸಿ, ಭಾರತದ ಅಭಿವೃದ್ಧಿಯನ್ನು ಕಣ್ಣಾರೆ ಕಂಡು ಪ್ರಶಂಸಿಸಿ ಸ್ವದೇಶಕ್ಕೆ ಹಿಂತಿರುಗಿದರು.

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O S 378/1957

ಮಾರ್ಕ ಡಿ। ಸೋಜಾ—ವಾದಿ

ಅಲೆಕ್ಸ ಡಿ। ಸೋಜಾ ಕೂಡಾ—ಪ್ರತಿವಾದಿರು

೪ನೇ ಪ್ರತಿವಾದಿ

ಬಾಪ್ತಿಸ್ಟ್ ಡಿ| ಸೋಜಾ, ಸಬೆಸ್ಟಿನ್ ಡಿ। ಸೋಜರ ಮಗ, ಮಂಗ್ಳೂರು ತಾಲೂಕು ವೇರೆಬೈಲು ಗ್ರಾಮದ ಕಾಪಿಕಾಡು ಮನೆ ಇವರೀಗೆ.

ವಾದಿಯು ತಾರೀಕು 14-1-1949ಲ್ಲಿ ಫೆಲಿ ಡಿ। ಸೋಜಾ ಬ್ಯಾ ಎಂಬವರಿಂದ ಬರೆಸಿಕೊಂಡ ಕ್ರಯಚೀಟು ಪ್ರಕಾರ ವಾದಿ 5ನೇ ಅಂಶದ ಹಿಸೆ ವಗೈರೆ ಕೇಳಿ ನಿಮ್ಮನ್ನು ಮಿಕ್ಕ ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಹಾಜ್ರಾತಿ ಬಗ್ಗೆ ತಾರೀಕು 7-2-'58ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಇದ್ದರೆ ತಾ 7-2-1958ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ 10ಘಂಟೆಗೆ ನೀವು ಖುದ್ದಾಗಲಿ ವಕೀಲರ ಮೂಲಕವಾಗಲೀ ಹಾಜ್ರಾಗಿ ಉಡಾಯಿಸತಕ್ಕದ್ದು. ತಪ್ಪಿದ್ದಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

ಕೋರ್ಟು ಹುಕುಂ ಪ್ರಕಾರ ಈ ನೋಟೀಸು ಪ್ರಕಟಿಸಿಯದೆ.

D. Venkatesh Bhat

ವಾದಿಕಡೆ ವಕೀಲ್

ಕಾರ್ಕಳ, ತಾರೀಕು 15-1-'58

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ಕನ್ನಡ ಸಾಹಿತ್ಯ ಚಿತ್ರಗಳು—

(ಮೂರನೆಯ ಸಾಲು: ಭಾರತದ ನಾಯಕಮಣಿಗಳು), ಲೇಖಕ ಮತ್ತು ಪ್ರಕಾಶಕ: ಶ್ರೀ ಎಲ್ ಗುಂಡಪ್ಪ, ಎಂ ಎ, ೭೬ ಆನೆಯ ಬೀದಿ, ನರಸಿಂಹರಾಜ ಕಾಲೋನಿ, ಬೆಂಗಳೂರು-೪. ಪುಟಗಳು ೧೫೭ ಬೆಲೆ ರೂ. ೧—೮—೦

ಪಂಚಮ ವೇದವೆಂದು, ಆದ್ಯೇತಿಹಾಸವೆಂದು ಹೆಸರಾದ ಸಂಸ್ಕೃತ ಮಹಾಭಾರತವು ದ್ವಾಪರಯುಗದ ಯದುಕುರು ವಂಶಗಳ ಇತಿಹಾಸವಾಗಿದೆ. ಈ ಚರಿತ್ರೆಯು ನಮ್ಮ ಕಾಲಕ್ಕೆ ಅತ್ಯಂತ ನಿಕಟವಾಗಿದ್ದು ಕನ್ನಡ ಸಾಹಿತ್ಯದ ರಚನೆಯೂ ಇದರಿಂದಲೇ ಪ್ರಾರಂಭವಾಯಿತೆನ್ನಬಹುದು. ಆದಿ ಕವಿಯೆಂಬ ಬಿರುದಿಗೆ ಪಾತ್ರನಾದ ಪಂಪ ಮಹಾಕವಿ ಕ್ರಿ. ಶ. ೯೪೧ರಲ್ಲಿಯೇ ಸಮಸ್ತ ಭಾರತವನ್ನೂ ರತ್ನತ್ರಯರಲ್ಲೊಬ್ಬನಾದ ರನ್ನನು ೯೯೩ರಲ್ಲಿಯೇ ಸಾಹಸಭೀಮ ವಿಜಯವನ್ನೂ ೧೪೩೦ರಲ್ಲಿ ಕುಮಾರವ್ಯಾಸ ಲಕ್ಷ್ಮೀನಾರಾಯಣಪ್ಪನ ಕರ್ಣಾಟಕ ಭಾರತವನ್ನೂ ೧೬೦೦ರಲ್ಲಿ ತಿಮ್ಮನು ತಿಮ್ಮ ಭಾರತ (ಲಕ್ಷ್ಮೀಶ) ಬರೆದಿದ್ದಾರೆ. ಕವಿಗಳ ಮೂಲೋದ್ದೇಶ, ಕಲ್ಪನೆ, ಭಾವನೆಗಳಿಗನುಸಾರವಾಗಿ ಒಂದೊಂದೂ ಆಯಾ ದೃಷ್ಟಿಕೋನಗಳಲ್ಲಿ ರಮಣೀಯವೇ ಆಗಿವೆ. ಅಂತಹ ಅಮೂಲ್ಯವಾದ ಗ್ರಂಥರತ್ನ ಭಾರತದ ನಾಯಕ ಮಣಿಗಳಾದ ಭೀಷ್ಮ, ಕರ್ಣ ಧರ್ಮರಾಯ, ಭೀಮ, ಅರ್ಜುನ ಮತ್ತು ದುರ್ಯೋಧನರ ಚರಿತ್ರೆಯು ಒಂದೊಂದು ಗ್ರಂಥದಲ್ಲಿ ಒಂದೊಂದು ವಿಧವಾಗಿದೆ. ಅವುಗಳಲ್ಲಿ ಕರ್ಣನಿಂದಾಗಿಯೇ ಕರ್ಣರಸಾಯನವೆನಿಸಿದ ಭಾರತವೆಂದು ಘಂಟಾ ಘೋಷವಾಗಿ ಸಾರಿದ ಪಾವನ ಭಾರತದಲ್ಲಿರುವ ಕರ್ಣ ಮತ್ತು ಭೀಷ್ಮರ, ರನ್ನನ ನೆಲಗಿರಿಯದೆ ಜಲಕಿರಿವೆಂ ಎಂದು ತನ್ನ ಛಲತಾಗಿಯೇ ಗತಪ್ರಾಣನಾದ ದುರ್ಯೋಧನನ ಹಾಗೂ ಅವನಿಗೆ ಪ್ರತಿನಿಂತ ಸಾಹಸಭೀಮನ, ಕುಮಾರವ್ಯಾಸರ ಇಂದ್ರಕೀಲಕ ಪ್ರಕರಣದಲ್ಲಿ ಹರನನ್ನು ಗಂಟಲನೊತ್ತಿ ಪಟ್ಟಿ ಇಕ್ಕಿ ಅತನಿಂದ ಪಾಶುಪತಾಸ್ತ್ರವನ್ನು ಪಡೆದ ಅರ್ಜುನನ ಮತ್ತು ತಿಮ್ಮಣ್ಣ ಕವಿಯ ಮಹಾ ಪ್ರಸ್ಥಾನದಲ್ಲಿನ ಧರ್ಮರಾಯನ ಚರಿತ್ರೆಗಳನ್ನು ಈ ಸಂಗ್ರಹದಲ್ಲಿ ಸಂಗ್ರಹಿಸಲಾಗಿದೆ. ಆಯಾ ವ್ಯಕ್ತಿಗಳ ಕಥೆಗೆ ಸಂಬಂಧಿಸಿದ ಪದ್ಯಗಳನ್ನು ಮೂಲ ಗ್ರಂಥದಿಂದಾಯ್ದು ಅದರ ಸರಳಾನುವಾದವನ್ನೋ ಸಾರಾಂಶವನ್ನೋ ಬರೆಯುತ್ತಾ ಹೋಗಿದ್ದಾರೆ ಲೇಖಕರು. ಇದಕ್ಕೆ ಅಪವಾದವಾಗಿ ಭೀಮ-ದುರ್ಯೋಧನರ ಕಥೆ ಒಂದ ಕ್ಕೊಂದು ಹೊಂದಿಕೊಂಡೇ ಬರುವುದರಿಂದ ಎದ್ದು ತೋರುತ್ತದೆ. 'ಗದಾಯುದ್ಧ' ಕಾವ್ಯದ ಸಾರಾಂಶವೆಲ್ಲವನ್ನೂ ಆಯಾ ಪಾತ್ರಗಳ ಸಂಪೂರ್ಣ ಚಿತ್ರವನ್ನು ಕೊಟ್ಟಿದ್ದಾರೆ. ಕರ್ಣ ಭೀಮ-ದುರ್ಯೋಧನ ಮತ್ತು ಅರ್ಜುನರ ಪ್ರಬಂಧಗಳು ಅತ್ಯುತ್ಕೃಷ್ಟವಾಗಿವೆ.

ಹಳೆ ಕಾವ್ಯಗಳೆಂದರೆ ದೂರ ಸರಿಯುವ ಜನರಿಗೆ ಅವುಗಳಲ್ಲಿ ಅಲ್ಪಸ್ವಲ್ಪವಾದರೂ ಆಸಕ್ತಿ ಹುಟ್ಟುವಂತೆಯೂ ಹುಟ್ಟಿದ ಆಸಕ್ತಿಯನ್ನು ಕೆರಳಿಸುವಂತೆಯೂ ಇಂತಹ ಹಳೆಗನ್ನಡ ಕಾವ್ಯಗಳ ಕಥೆಯನ್ನು ಪುನಾರಚಿಸಿ ಬರೆವುದರಿಂದ ನೆರೆಯಬಲ್ಲುದು. ಅಂತಹ ಮಹತ್ಕಾರ್ಯವನ್ನು ಸಾಧಿಸಿದ ಶ್ರೀ ಗುಂಡಪ್ಪನವರು ಅಭಿನಂದನೀಯರು. ಆದರೆ, ಈ ಅನುವಾದ ಸಂಗ್ರಹದ ಭಾಗದಲ್ಲಿ ಮೂಲ ಗ್ರಂಥದ ತೀರ ಹಳಗನ್ನಡ ಪದಗಳೂ ಸಾಕಷ್ಟು ಹುದುಗಿದ್ದು ಸಾಮಾನ್ಯ ಓದುಗರಿಗೆ ಅವು ಅರ್ಥವಾಗಬಲ್ಲುದೆ ಎಂಬುದು ಸಂದೇಹಾಸ್ಪದ. ಇಂತಹ ಪದಗಳು ಕಥಾ ವೇಗಕ್ಕೆ ಲಗಾಮು ಹಾಕಿ, ರಸಾಸ್ವಾದನೆಗೆ ತಡೆ ಹಾಕುವುವು. ಹೀಗಿದ್ದರೂ ಅಂತಹ ಪದಗಳ ಅರ್ಥಕೋಶವೊಂದನ್ನು ಕೊನೆಯಲ್ಲಿ ಇಲ್ಲವೇ ಆಯಾ ಪುಟದಡಿಯಲ್ಲೇ ಕೊಟ್ಟಿದ್ದರೆ ಬಹಳ ಉಪಕಾರವಾಗುತಿತ್ತು. ಒಟ್ಟಿನಲ್ಲಿ ಕನ್ನಡಿಗರಲ್ಲಿ ತಮ್ಮ ಸಾಹಿತ್ಯದ ಬಗ್ಗೆ ತಮ್ಮವರ ಪಾಂಡಿತ್ಯದ ಬಗ್ಗೆ ಅಭಿಮಾನವನ್ನು ಮೂಡಿಸಬಲ್ಲ ಈ ಕೃತಿ ಸ್ವಾಗತಾರ್ಹವಾಗಿದೆ.

ರಘುನಾಥನ ಸಾಹಸ—ಬರೆದವರು. ಸಿ ಕೆ ವೆಂಕಟರಾಮಯ್ಯ, ಪ್ರಕಾಶಕರು. ಎಸ್ ಎಸ್. ಎನ್ ಬುಕ್ ಡಿಪೋ, ಬೆಂಗಳೂರು ೨. ಪುಟಗಳು: ೧೩೩ ಬೆಲೆ: ರೂ ೧ ೪-೦.

ಐತಿಹಾಸಿಕ ಕಾದಂಬರಿಗಳಲ್ಲಿ ಉತ್ತಮವೆನಿಸಿದವುಗಳ ಸಂಖ್ಯೆ ಕೆಲವೇ. ಪ್ರತಿದೇಶದ ಚರಿತ್ರೆಯಲ್ಲೂ ಅನೇಕ ಆದರ್ಶ ವ್ಯಕ್ತಿಗಳು ಬರುತ್ತಾರೆ. ಅವರ ಚರಿತ್ರೆಯನ್ನು ಬರೆಯಲು ಆಧಾರಗಳು ಕಡಿಮೆಯಾದರೂ ಸಂಗ್ರಹಣ ಹಾಗೂ ಕಲ್ಪನೆಗಳ ಸಹಾಯದಿಂದ ಒಂದು ಸುಂದರವಾದ ಜೀವನ ಚಿತ್ರವನ್ನು ಬರೆದರೆ ಸಮಾಜೋಪಯೋಗಿಯಾಗಬಹುದೆಂಬುದಕ್ಕೆ ಈ ಕಾದಂಬರಿಯೊಂದು ಸಾಕ್ಷಿ.

ಮರಾಟ ರಾಜನಾದ ಶಿವಾಜಿಯ ಒಬ್ಬ ನಿಷ್ಠಾವಂತ ಸೈನಿಕ ರಘುನಾಥ. ಆತನಿಗೆ ಒಂದು ಬಾರಿ ಸ್ವಾಮಿಕಾರ್ಯಕ್ಕೆ ತೆರಳುವಾಗ ತೋರಣ ದುರ್ಗದಲ್ಲಿ ಆರ್ಜಕ ಜನಾರ್ಧನನ ಸಾಕು ಮಗಳು ಸರೆಯೂ ಬಾಲೆಯ ಪರಿಚಯವಾಗಿ ವಿವಾಹವಾಗುವ ಆಸೆ ಹುಟ್ಟುತ್ತದೆ. ತಂದೆಯ ಒಪ್ಪಿಗೆಯನ್ನೂ ಕುವರಿ ಪಡೆಯುತ್ತಾಳೆ. ಆದರೆ, ದಿನ ದೂಡಲ್ಪಟ್ಟಿತು. ಮೊಗಲ್ ಸಮ್ರಾಟ ಔರಂಗಜೇಬನು ಈ ಮರಾಟರನ್ನು ಸದೆಬಡಿಯಲು ಇಚ್ಛಿಸಿ ರುದ್ರ ಮಂಡಲಕ್ಕೆ ದಾಳಿಮಾಡಿಸಿದಾಗ, ಮತ್ತು ಅಲ್ಲಿ ಮರಾಟರು ಸೋತಾಗ, ರಘುನಾಥನೇ ಶತ್ರುಗಳಿಗೆ ಕೈಯೊಡೆಯುತ್ತನೆಂಬ ಅಪವಾದವನ್ನು ಹೊರಿಸಿ ಆತನನ್ನು ಸೈನಿಕ ಪದವಿಯಿಂದ ರಜಾಮಾಡಲಾಯಿತು. ಅಪಮಾನದಿಂದ ಭಿಕಾರಿಯಂತೆ ತಿರುಗುತಿದ್ದ ರಘುನಾಥ ತಾನು ನಿರಪರಾಧಿಯಾಗಿಯೂ ಶಿಕ್ಷಿಸಲ್ಪಟ್ಟುದಕ್ಕೆ ಮರುಗುತಿದ್ದಾಗ, ತನ್ನ ತಂಗಿಯ ಅನಿರೀಕ್ಷಿತ ಹಿತೋಪದೇಶದಿಂದ ತಲೆತೋರಿಸಿಕೊಳ್ಳುವುದಕ್ಕೆ ಯತ್ನಿಸಿ, ಶಿವಾಜಿಯನ್ನು ಔರಂಗಜೇಬನು ದೆಹಲಿಯಲ್ಲಿ ಸೆರೆಯಿಟ್ಟಾಗ, ಅಲ್ಲಿಂದ ತನ್ನ ಬುದ್ಧಿಮತ್ತೆಯಿಂದ ತಪ್ಪಿಸಿ ತಂದನು— ಆಗ ಅದಕ್ಕೂ ಮೊದಲು ರಘುನಾಥನು ಹಲ ಸಾರಿ ತನ್ನ ಪ್ರಾಣಕ್ಕೆ ಎರವಾಗ ಬೇಕಾಗಿ ಬಂತು. ಶಿವಾಜಿಗೂ ರಘುನಾಥನು ನಿರಪರಾಧಿ ಎಂಬುದು ಆಗಾಗಲೇ ತಿಳಿದು ಬಂದಿದ್ದು ತಾನಾತನನ್ನು ಹೊರದೂಡಿದುದಕ್ಕಾಗಿ ಮರುಗುತಿದ್ದು, ಸತ್ಯ ಸಂಗತಿ ತಿಳಿದಾಗ ಹಿಗ್ಗಿ ನಲಿದನು—ಸರೆಯೂ-ರಘುನಾಥರ ವಿವಾಹ ನಡೆಯಿತು.

ಇದು ಕಾದಂಬರಿಯುದ್ದಕ್ಕೆ ಬರುವ ಕಥೆ. ಕಥೆ ನಿರೂಪಣೆಯು ಓದುಗರ ಮನಸ್ಸನ್ನು ಆಕರ್ಷಿಸಿ ನೀತಿನಿಂದ ನಾತಿನೆ ಆಧ್ಯಾಯದಿಂದ ಅಧ್ಯಾಯಕ್ಕೆ ಎಳೆದೊಯ್ಯುತ್ತದೆ. ಸುಂದರವಾದ ಸರಳ ಆದರೆ ಗಂಭೀರವಾದ ವಾಕ್ಯಗಳು ತುಂಬಿಬಂದಿದ್ದು ಕಾವ್ಯಾನಂದದ ಭಾಸವನ್ನು ಪಾಠಕನಿಗೆ ದನಿಸುವುದು. ಕಥೆಯ ಓಟಕ್ಕನುಗುಣವಾಗಿ ಸನ್ನಿವೇಶಗಳ ಜೋಡಣೆಯು ಹೊಂದಿಕೊಂಡಿದೆ. ರಘುನಾಥನ ಜೀವನದ ಆರಂಭದಿಂದ ಕಥಾನಕದ ಅಂತ್ಯದವರೆಗೆ ಬರುವ ಘಟನೆಗಳು ಸ್ವಾಭಾವಿಕವೂ ಸರಳವೂ ಕುತೂಹಲಪೂರ್ಣವೂ ಆಗಿವೆ— ಶಿವಾಜಿ ರಘುನಾಥರ ವಿಪ್ರಲಂಬ ಅವರ ಮುಂದಿನ ಬೆಸುಗೆಗೆ ಕಾರಣವಾಗಿವೆ. ಇಂತಹ ಉತ್ತಮ ಐತಿಹಾಸಿಕ ಕಾದಂಬರಿಯನ್ನು ಬರೆದ ಲೇಖಕರೂ ಪ್ರಕಟಿಸಿದ ಪ್ರಕಾಶಕರೂ ಕೃತಜ್ಞತೆಗೆ ಪಾತ್ರರೆಂದು ಬೇರೆ ಹೇಳಬೇಕಾಗಿಲ್ಲ.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ

ಅತ್ಯುತ್ತಮ ಔಷಧಿ ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-

(ವಿ ಪಿ ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40

ಸ್ಟಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ನವೀನ ಶಿಕ್ಷಕ— (ವಿದ್ಯಾಭಿವೃದ್ಧಿಗೆ ಪೋಷಕವಾದ ಸರಕಾರೀ ಮಾಸ ಪತ್ರಿಕೆಯ ನವಂಬರ ೫೭ರ ಸಂಚಿಕೆ) ಸಂಪಾದಕರು– ಶ್ರೀ ಎಸ್. ಎಸ್. ಕೃಷ್ಣರಾವ್, ಪ್ರಿನ್ಸಿಪಲ್ ಬೇಸಿಕ್ ಟ್ರೈನಿಂಗ್ ಕಾಲೇಜ್, ಕೂಡಿಗೆ (ಕೊಡಗು) ಪುಟಗಳು: ೩೦.

ಭಾರತದಲ್ಲಿ ಮೂಲ ಶಿಕ್ಷಣದಿಂದಲೇ ದೇಶದ ಪ್ರಗತಿಯನ್ನು ಸಾಧಿಸಿಕೊಳ್ಳುವುದು ಸಾಧ್ಯವೆಂಬುದು ಸಿದ್ಧವಾಗಿರುವಾಗ, ಅಂತಹ ಶಿಕ್ಷಣವನ್ನು ಹೇಗೆ ಕೊಡಬೇಕೆಂಬುದೇ ಮಹಾ ಪ್ರಶ್ನೆಯಾಗಿ ನಮ್ಮೆದುರು ಬರುತ್ತದೆ. ಟ್ರೈನಿಂಗ್ ಶಾಲೆ ಕಾಲೇಜುಗಳು ಅಧ್ಯಾಪಕರ ಲೇಖನಗಳಿಂದ ಕೂಡಿಕೊಂಡಿರುವ ಈ ಪತ್ರಿಕೆಯು ನಿಜವಾಗಿಯೂ ಶಾಲೆಯಲ್ಲಿ ಮೂಲಶಿಕ್ಷಣದ ಆವಶ್ಯಕತೆ ಹಾಗೂ ಅದನ್ನು ಸಫಲ ವಿಧಾನದಲ್ಲಿ ಕಾರ್ಯಗತವಾಡುವ ಮಾರ್ಗವನ್ನು ವಿವರಿಸುವ ಲೇಖನಗಳಿಂದ ಕೂಡಿದೆ. ಬುನಾದಿ ತರಬೇತಾದವರಿಗೆ ತಮ್ಮ ಅನುಭವ ವ್ಯಾಪಕತೆಗೂ ಉಳಿದವರಿಗೆ ಅನುಭವ ಸಂಗ್ರಹಣಕ್ಕೂ ಈ ಪತ್ರಿಕೆಯು ನೆರವಾಗುವುದೆಂಬುದು ನಿಸ್ಸಂದೇಹ. ಆದರ್ಶ ಸಮುದಾಯ ಪಾಠವು ಉಳಿದ ಅಧ್ಯಾಪಕರಿಗೆ ಮಾರ್ಗದರ್ಶನವಾಗಿದೆ ಎಂದು ಧೈರ್ಯದಿಂದ ಹೇಳಬಹುದು.

ವಾಣಿ (ಹಸ್ತಲಿಖಿತ ಪತ್ರಿಕೆ) ಸಂಪಾದಕರು: ಬಿ. ಎಸ್. ಆಚಾರ್ ಮುಕ್ತಿತರರು, ಬೋರ್ಡ್ ಹೈಸ್ಕೂಲ್, ಬೈಲೂರು.

ಬೈಲೂರು ಬೋರ್ಡ್ ಹೈಸ್ಕೂಲಿನ ೧೯೫೭–೫೮ನೆ ಶಾಲಾ ವರ್ಷದ ತೃತೀಯ ಸಂಚಿಕೆಯನ್ನು ಸಾದರಪೂರ್ವಕವಾಗಿ ಅವಲೋಕಿಸಿದ್ದೇವೆ. ಶಾಲಾ ಎಳೆಯ ಬಾಲಕರ ಪ್ರಯತ್ನವು ಈ ಹಸ್ತಲಿಖಿತ ಪತ್ರಿಕೆಯಿಂದ ಸ್ಪಷ್ಟವಾಗಿ ಕಾಣುತ್ತದೆ. ಕನ್ನಡ, ಹಿಂದಿ ಮತ್ತು ಆಂಗ್ಲ ಭಾಷೆಗಳಲ್ಲಿ ಕಥೆ, ಕವಿತೆ ಹಾಗೂ ಲೇಖನಗಳು ಮತ್ತು ಚಿತ್ರಗಳು ಈ ಕಿರಿಯರ ಭವಿಷ್ಯವನ್ನು ಸಾರಿಹೇಳುತ್ತವೆ. 'ರೈತ ರಾಜಪ್ಪ' ಎಂಬ ಕಥೆಯ ಮೂಲವು 'ಯೋಜನಾ' ಪಾಕ್ಷಿಕ ಪತ್ರಿಕೆಯನ್ನು ಹೊಂದಿಕೊಂಡಂತೆ ತೋರುತ್ತದೆ. ಇದೇ ಕಥೆಯ ಅನುವಾದವು 'ಕನ್ನಡ ನವಯುಗ' ದಲ್ಲಿಯೇ ಬಂದಿದೆ. ಅಂತಹ ಕೆಲವೊಂದು ಕುಂದುಗಳನ್ನೂ ಚಿತ್ರಕಲೆಯ ಕಲಾತ್ಮಕ ವಿಜ್ಞಾನವನ್ನೂ ಒಬ್ಬರೇ ಲೇಖಕರ ಹಲವಾರು ಕೃತಿಗಳ ಪ್ರಕಾಶನವನ್ನೂ ಉಳಿದರೆ, ಪತ್ರಿಕೆಯು ಅಚ್ಚುಕಟ್ಟಾಗಿಯೇ ಇದೆಯೆನ್ನಬಹುದು. ಇದ್ದುದರಲ್ಲಿ ಮುಖಚಿತ್ರವೂ ಹೊದಿಕೆಯ ಕೊನೆಯ ಚಿತ್ರವೂ ಸುಂದರವಿದೆ. ಎಳೆಯರ ಸಾಹಸಕ್ಕೆ ಕೃತಜ್ಞತೆ ಸೂಚಿಸುವುದಲ್ಲದೆ, ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ತಮ್ಮ ಮುಂದಿನ ಸಂಚಿಕೆಗಳನ್ನು ಹೊರಡಿಸುವಂತೆ ಪ್ರಯತ್ನಶೀಲರಾಗಲೆಂದೂ, ಕಿರಿಯರ ಭವಿಷ್ಯವು ಉಜ್ವಲವಾಗಲೆಂದೂ ಹಾರೈಸುತ್ತೇವೆ.

—ಗೋರಾ

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನೇಪಾಲದ ರಾಷ್ಟ್ರೀಯ ಸಮಸ್ಯೆಗಳು

(೩ನೇ ಪುಟದಿಂದ)

ದಾನವು ನಿಶ್ಚಯವೂ ಆಯಿತು. ಭಾರತ ಮತ್ತು ಅಮೇರಿಕೆಗಳು ನೇಪಾಲದ ವಿಕಾಸಯೋಜನೆಗಳಲ್ಲಿ ಬಹಳ ಹಣವನ್ನು ವೆಚ್ಚಮಾಡುತ್ತಿವೆ. ಆದರೆ, ನೇಪಾಲದಲ್ಲಿ ಲೋಕಪ್ರಿಯ ಹಾಗೂ ಶಾಶ್ವತ ಮಂತ್ರಿಮಂಡಲವು ಸ್ಥಾಪನೆಯಾಗುವವರೆಗೆ, ಈ ವಿಕಾಸಯೋಜನೆಗಳಲ್ಲಿ ಅಡೆತಡೆಗಳು ಉತ್ಪನ್ನವಾಗುವುವು.

ಜನಪ್ರಿಯ ಮಂತ್ರಿ ಸಂಪುಟವು ಸ್ಥಾಪನೆಯಾಗದಿದ್ದರೆ ನೇಪಾಲದಲ್ಲಿ ವಿಭಿನ್ನ ಪ್ರಕಾರದ ಸಂಕಟಗಳೂ ಉಳಿದುಬಿಡುತ್ತವೆ. ಇವುಗಳಿಂದಾಗಿ ನೇಪಾಲಕ್ಕೆ ಎಲ್ಲ ದೃಷ್ಟಿಯಿಂದಲೂ ಹಾನಿ ಸಂಭವಿಸುವುದು. ನೇಪಾಲ ಸರಕಾರದ ಆಯವು ಬಹಳ ಕಡಿಮೆಯಾಗಿದೆ. ೧೯೫೧ರ ನಂತರ ೧೯೫೭ರಲ್ಲಿ ಆಚಾರ್ಯ ಮಂತ್ರಿಮಂಡಲವು ಮುಂದೆತಂದ ಮೂರನೆಯ ಮುಂಗಡ ಪತ್ರದಲ್ಲಿ ೩೮ ಲಕ್ಷಕ್ಕಿಂತ ಹೆಚ್ಚಾದ ಕೊರತೆಯಿತ್ತು. ಈ ಕೊರತೆಯು ಮುಖ್ಯವಾಗಿ ನೇಪಾಲ ನಾಣ್ಯ ಮತ್ತು ಭಾರತೀಯ ನಾಣ್ಯಗಳ ಅದಲು ಬದಲಿನ ಕಾರಣದಿಂದಾಗಿ ತೋರಿಬಂದಿತ್ತು. ಆಚಾರ್ಯ ಸರಕಾರವು ಒಂದು ನೂರು ಭಾರತೀಯ ರೂಪಾಯಿಗಳ ಮೌಲ್ಯವು ೧೬೦ ಪಾಲೀ ನಾಣ್ಯಗಳೆಂದು ನಿಶ್ಚಯಿಸಿದರು. ನೇಪಾಲೀ ನಾಣ್ಯಗಳ ಮೂಲ್ಯವನ್ನು ೧೦೦:೧೬೦ರಿಂದ ಕಡಿಮೆ ಮಾಡಿ ೧೦೦:೧೩೨ರ ವರೆಗೆ ಮಾಡಿದರೂ ನೇಪಾಲಿ ನಾಣ್ಯಗಳಿಂದ ಭಾರತದ ನಾಣ್ಯದ ವಿನಿಮಯದ ಮೇಲೆ ಹತೋಟಿಯಿಡುವುದು ಅಸಾಧ್ಯವಾಯಿತು ಫಲಸ್ವರೂಪವಾಗಿ ಪುನಃ ನೇಪಾಲೀ ನಾಣ್ಯಗಳ ಮೌಲ್ಯ ವಿಚ್ಛೇದನವಾಯಿತು. ಕೆ. ಐ. ಸಿಂಹರು ಸರಕಾರೀ ವಿನಿಮಯದ ವ್ಯವಸ್ಥೆಯನ್ನು ಮುರಿದರು. ಏಕೆಂದರೆ, ನಿಶ್ಚಯವಾಗಿಯೂ ಸರಕಾರ ಆಯಾತಕ್ಕಾಗಿ ವಿನಿಮಯ ಮಾಡುತಿತ್ತು. ಭಾರತೀಯ ನಾಣ್ಯಗಳ ಉಪಯೋಗವು ಅಧಿಕವಾಗಿ ಕಠಮಂಡು ಮತ್ತು ಆಸುಪಾಸಿನ ಕ್ಷೇತ್ರಗಳಲ್ಲಿ ವಿನಿಮಯಕ್ಕಾಗಿ ಆಗ್ಯತಿತ್ತು.

೧೯೫೭ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯುವುವೆಂದು ಸ್ವರ್ಗೀಯ ತ್ರಿಭುವನರು ಘೋಷಿಸಿದ್ದರು. ಮಹಾರಾಜಾಧಿರಾಜ ಮಹೇಂದ್ರರು ಆಚಾರ್ಯ ಮಂತ್ರಿಮಂಡಳವು ೮ನೆ ಆಕ್ಟೋಬರದೊಳಗೆ ನಡೆಸಬೇಕೆಂದು ಹೇಳಿದ್ದರು. ಆದರೂ ರಾಷ್ಟ್ರೀಯ ಐಕ್ಯ ಮತ್ತು ಪ್ರಭುತ್ವ ಸತ್ತೆಯನ್ನು ಸ್ಥಿರವಾಗಿರಿಸಲು ಹಾಗೂ ಸಾರ್ವತ್ರಿಕ ಮರಣವನ್ನು ಬೇಗನೆ ಮಾಡಿಸಲು ಡಾ. ಕೆ. ಐ. ಸಿಂಹರ ಸಂಯುಕ್ತ ಸರಕಾರದ ರಚನೆಯಾಯಿತು. ಆದರೆ, ಈ ಸರಕಾರವೂ ಉರುಳಿಬಿತ್ತು.

ಈಗ ಎಲ್ಲ ರಾಜಕೀಯ ಪಕ್ಷಗಳು, ಮುಖ್ಯವಾಗಿ ನೇಪಾಲೀ ಕಾಂಗ್ರೆಸ್, ನೇಪಾಲೀ ರಾಷ್ಟ್ರೀಯ ಕಾಂಗ್ರೆಸ್ ಮತ್ತು ನೇಪಾಲ ಪ್ರಜಾಪರಿಷತ್‌ಗಳು ದಶಂಬರ ೮ನೆ ದಿನಾಂಕದೊಳಗೆ ಚುನಾವಣೆಯ ದಿನವನ್ನು ಘೋಷಿಸದೆ ಹೋದರೆ ತಾವು ಮೂರು ಪಕ್ಷಗಳೂ ಒಂದಾಗಿ ಭದ್ರ ಅವಜ್ಞಾಂದೋಲನವನ್ನು ಪ್ರಾರಂಭಿಸುವೆವೆಂದು ಹೇಳಿದ್ದರು.

ಮಹಾರಾಜಾಧಿರಾಜರು ನೇಪಾಲದ ಪ್ರಮುಖ ರಾಜನೈತಿಕ ದಳಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಸಂಯುಕ್ತ ಸರಕಾರವನ್ನು ರಚಿಸಬೇಕೇ ಅಥವಾ ಸ್ವತಂತ್ರರೂಪದಿಂದೊಂದು ಸಲಹೆಗಾರ ಮಂತ್ರಿ ಮಂಡಲವನ್ನು ನಿರ್ಮಿಸಿಯೇ ಸಾರ್ವತ್ರಿಕ ಚುನಾವಣೆಗಳು ಬೇಗನೇ ಮುಗಿಯುವಂತೆ ಮಾಡಬೇಕೇ ಎಂಬುದೊಂದು ಸಮಸ್ಯೆ. ಭಾರತದಲ್ಲಿ ಸ್ವಾತಂತ್ರ್ಯ ದೊರೆತ ಕೆಲವೇ ವರ್ಷಗಳಲ್ಲಿ ಮಹಾ ಚುನಾವಣೆಗಳು ನಡೆದುವು. ಆದರೆ ನೇಪಾಲದಲ್ಲೂ ಹಾಗಾಗುವುದೆ?

೧೯೫೧ರಲ್ಲಿ ನೇಪಾಲದ ಅಕ್ಷರಸ್ಥರ ಸಂಖ್ಯೆ ಸೇಕಡಾ ೧. ಈಗ ಅದು ೩ ಇರಬಹುದು. ಯಾತಾಯಾತವು ಈಗ ಸಹ ಸಾಕಷ್ಟಿಲ್ಲ. ನೇಪಾಲದ ಕಠಮಂಡುವಿನಲ್ಲಿ ಮಾತ್ರ ಸಮಾಚಾರ ಪತ್ರವಿದೆ. ಅದರ ಓದು ಪರ್ವತ ಪ್ರದೇಶದ ವರೆಗಿನ ವರಿಗೆ ಮಾತ್ರ ದೊರೆಯುತ್ತದೆ. ಇಂತಹ ದೇಶದಲ್ಲಿ ಹೆಲಿಕಾಪ್ಟರದಲ್ಲಿ ಮತದಾನದ ಪೆಟ್ಟಿಗೆಗಳನ್ನೂ ಮತಪತ್ರಗಳನ್ನೂ ವಿತರಿಸಿದರೂ ಚುನಾವಣೆಯನ್ನು ಯಶಸ್ವಿಯಾಗಿ ಮುಗಿಸುವಲ್ಲಿ ಅಪಾಯವಿದೆ. "ಭಾರತದಂತಹ ವ್ಯವಸ್ಥೆ ಮತ್ತು ಅನುಕೂಲತೆಗಳು ನೇಪಾಳದಲ್ಲಿಲ್ಲದಿರುವುದರಿಂದ ಅಲ್ಲಿ ಪ್ರಾಯಸ್ಥರ ಮತಾಧಿಕಾರದ ಆಧಾರದಲ್ಲಿ ಮೊದಲು ಸ್ಥಾನೀಯ ಸಂಘಗಳ ಚುನಾವಣೆಯಾಗಬೇಕು, ಅದರ ನಂತರ ಇದಕ್ಕೆ ಆರಿಸಲ್ಪಟ್ಟ ಸದಸ್ಯರು ಕೇಂದ್ರೀಯ ಲೋಕ ಸಭೆಯ ಸದಸ್ಯರನ್ನು ಆರಿಸಬೇಕು. ಈ ಮರಣವು ಒಂದು ರೀತಿಯಿಂದ ಪ್ರಜಾತಂತ್ರಾತ್ಮಕ ಪದ್ಧತಿಯಲ್ಲಿಯೇ ನಡೆಯುತ್ತದೆ; ಆದರೆ, ಪ್ರತ್ಯೇಕ ಪ್ರಾಯಸ್ಥನಿಗೆ ಕೇಂದ್ರೀಯ ಲೋಕಸಭೆ ಅಥವಾ ವಿಧಾನ ಸಭೆಯ ಸದಸ್ಯನ ಆರಿಸುವಿಕೆಯಲ್ಲಿ ಅಧಿಕಾರ ದೊರೆಯಲಿಲ್ಲ. ೧೯೫೧ರಿಂದ ಇಲ್ಲಿನ ಸ್ಥಿತಿಗತಿಗಳನ್ನು ಅವಲೋಕಿಸಿದರೆ, ಈ ರೀತಿಯೇ ಉತ್ತಮವೆಂದು ತೋರುವುದು. ಒಟ್ಟಿನಲ್ಲಿ ನೇಪಾಳದ ಜನತೆಯು ರಾಣಾಶಾಹಿಯಿಂದ ಬಿಡುಗಡೆ ಹೊಂದಿ ಪೂರ್ಣ ಪ್ರಜಾತಂತ್ರ ಸ್ಥಾಪನೆಯನ್ನು ಹೇಗೆ ಮಾಡಬೇಕೆಂಬ ಜಂಜಾಟದಲ್ಲಿ ಬಿದ್ದುಬಿಟ್ಟಿದೆ. ಸಾರ್ವಜನಿಕ ಚುನಾವಣೆಯಾಗದವರೆಗೆ, ಜನತಾ ಸರಕಾರ ಸ್ಥಾಪನೆಯಾಗದವರೆಗೆ ನೇಪಾಲದ ಆಡಳಿತ ವ್ಯವಸ್ಥೆಯು ಉತ್ತಮವಾಗುವ ಭರವಸೆಯಿಲ್ಲ.

ನಾವು ನೇಪಾಲದ ಕಳೆದ ಏಳು ವರ್ಷಗಳ ಇತಿಹಾಸದತ್ತ ದೃಷ್ಟಿ ಹರಿಸಿದರೆ, ಕಠಮಂಡುವಿನಲ್ಲಿ ಸರಕಾರ ಸ್ಥಾಪನೆಗೊಂಡರೂ ನೇಪಾಲದ ವಿಭಿನ್ನ ಪ್ರದೇಶಗಳಲ್ಲಿ ಬೇರೆಯೇ ಸಣ್ಣ ಪುಟ್ಟ ಸರಕಾರಗಳು ಹುಟ್ಟಿಕೊಂಡು, ಕೆಲವು ವಾರ—ಮಾಸಗಳವರೆಗೆ ಆಡಳಿತವನ್ನು ನಿರ್ವಹಿಸಿ ಕಠಮಂಡುವಿನ ಸರಕಾರವನ್ನು ಅಹ್ವಾನಿಸುವುದನ್ನು ಕೇಳುತ್ತೇವೆ. ೧೯೫೭ರ ಪ್ರಾರಂಭದಲ್ಲಿ ಜನಜಾಗೃತಿ ಕೃಷಿಕ ಪಕ್ಷವು ಬಿ. ಬಿ. ರಾಯರ ನೇತೃತ್ವದಲ್ಲಿ ಶಾಸನ ವ್ಯವಸ್ಥೆಯನ್ನು ಉರುಳಿಸುವ ಹಂಚಿಕೆಯನ್ನು ಮಾಡಿತು. ೧೯೫೭ರ ಮೇಯಲ್ಲಿ ದಕ್ಷಿಣ ನೇಪಾಲದ ಕಾತಹಟ ಜಿಲ್ಲೆಯಲ್ಲಿ ತಿಂಗಳುಗಳವರೆಗೆ ಒಂದು ಸರಕಾರವು ನಡೆಯುತಿತ್ತು. ಡಾ. ಕೆ. ಐ. ಸಿಂಹರು ಸಿಂಹ ದರಬಾರದಲ್ಲಿ ಕೆಲವು ಘಂಟೆಗಳ ವರೆಗೆ ಆಡಳಿತವನ್ನು ವಶಪಡಿಸಿಕೊಂಡಿದ್ದರು.

ಈ ರೀತಿಯಲ್ಲಿ ಜನತೆಯ ಪ್ರತಿನಿಧಿ ಸರಕಾರದಲ್ಲಿಲ್ಲದೆ ಇರುವುದರಿಂದ ಮತ್ತು ಆಮದು ರಫ್ತುಗಳ ಘೋರ ಅವ್ಯವಸ್ಥೆಯಿಂದಾಗಿ ಯಾವುದೇ ಸರಕಾರವಾದರೂ ಸಂಪೂರ್ಣ ನೇಪಾಲದ ವಿಶ್ವಾಸಕ್ಕೆ ಪಾತ್ರವಾಗಲಾರದು. ಇತ್ತಿದರಿಂದಾಗಿ ಮಹಾರಾಜಾಧಿರಾಜ ಮಹೇಂದ್ರರ ಸತ್ಪ್ರಯಾಸಗಳನ್ನು ಸಹ ಶಂಕಾದೃಷ್ಟಿಯಿಂದ ನೋಡಬೇಕಾಗುವುದು

ಜನಮತ ಸಂಗ್ರಹದ ಆಧಾರದಲ್ಲಿ ಸರಕಾರವು ಸ್ಥಾಪಿತಗೊಳ್ಳದ ವಿನಃ ನೇಪಾಲದ ವಿಕಾಸಯೋಜನೆಗಳೂ ಸಂಪೂರ್ಣ ರೂಪದಲ್ಲಿ ಕಾರ್ಯಾನ್ವಿತವಾಗಲಾರವೆಂಬುದು ನಿಶ್ಚಯ. ಕಳೆದ ನವಂಬರದಲ್ಲಿ ಗಂಡಕೀ ಯೋಜನಾ ಸಂಬಂಧದಲ್ಲಿ ಭಾರತ—ನೇಪಾಲ ಸರಕಾರಗಳೊಳಗೆ ಒಪ್ಪಂದವಾಗಲಿತ್ತು; ಆದರೆ ಅಷ್ಟರಲ್ಲಿ ಸಿಂಹರ ಸರಕಾರ ರಾಜಿಯಿತ್ತಿತು. ಇದರಿಂದಾಗಿ ಎಲ್ಲ ಕಾರ್ಯಕ್ರಮವೂ ಹಿಂದೆ ಬಿದ್ದುವು.

ನೇಪಾಲದ ಈಗಿನ ಪರಿಸ್ಥಿತಿ ಬಹಳ ಸಂಕಟಪೂರ್ಣವಾಗಿದೆ. ಇಂತಹಸ್ಥಿತಿಯಲ್ಲಿ ಮಹಾರಾಜಾಧಿರಾಜ ಮಹೇಂದ್ರರಿಂದ ಇಡಲ್ಪಡುವ ಹೆಜ್ಜೆಗಳ ಉತ್ತಮಪ್ರತಿಕ್ರಿಯೆಯು, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ನೇಪಾಲದ ರಾಜನೀತಿಕ ಸಾಮಾಜಿಕ ದಳಗಳಲ್ಲಿ ಮತ್ತು ಸಮಸ್ತ ನೇಪಾಲದ ಜನರಲ್ಲಿ ಒಂದು ರಾಷ್ಟ್ರೀಯ ಭಾವನೆಯನ್ನುಂಟು ಮಾಡುವುದರಲ್ಲಿ ಆಗಿಯೇ ಆಗುವುದೆಂದು ಹೇಳಬಹುದು.

(ಮೂಲ: ನವಭಾರತ ಟಾಯಿಮ್ಸ್)

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 128/1955
R. I. A. No 41/1958

ಸೀತಮ್ಮ ಕೂಡಾ ಆರು ಜನರು— ಅರ್ಜಿದಾರರು.

ಈ ಮೂಲಕ ಕೋರ್ಟು ಹುಕುಂ ಮೇರೆಗೆ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ O. P. 128/1955ರಲ್ಲಿ ಅರ್ಜಿದಾರರಿಗೆ ಕೊಡಲಾದ ಸಕ್ಸೆಶ್ಯನ್ ಸರ್ಟಿಫಿಕೇಟನ್ನು ಮೃತ ಬಿ. ಶ್ರೀನಿವಾಸರಾಯರ ಬಾಬ್ತು R. I. A. 41/1958ರಲ್ಲಿ ನಮೂದಿಸಿದ ಸೊತ್ತುಗಳಿಗೆ ಸಹ extend ಮಾಡಬೇಕೆಂತ ಅರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಅರ್ಜಿಯು 13-2-'58ಕ್ಕೆ ಇಡಲಾಗಿಯದೆ. ಆ ಕುರಿತು ಯಾರಿಗಾದರೂ ಆಕ್ಷೇಪಣೆ ಇದ್ದರೆ ಸದ್ರಿ ತನಖಿ ದಿವಸ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. Varadaraya Pai.
Advocate for Petitioners.

ಉಡುಪಿ, ತಾ. 17–1–1958.

ಶಸ್ತ್ರಕ್ರಿಯೆಯ ಆವಶ್ಯಕತೆಯಿಲ್ಲ!

ಮೂಗಿನಲ್ಲಿ ಮಾಂಸ ಬೆಳೆದಿದ್ದರೆ, ಉಸಿರಾಟಕ್ಕೆ ಅಡ್ಡಿ ಬಂದಿದ್ದರೆ, ಕೆಮ್ಮಲು, ಕೆಟ್ಟ ವಾಸನೆಯಿದ್ದರೆ, ಅಂಚೆ ಚೀಟಿಯಿಟ್ಟು ಬರೆಯಿರಿ.
ಆರೋಗ್ಯ ಮಂದಿರ, ಸಾಂಗಲಿ

Edited, Printed & Published by K. H. Shetty, at the Navayuga press, Udipi S. India



ಪ್ರಜಾರಾಜ್ಯ ವಿಶೇಷಾಂಕ ೧೯೫೮ ಬೆಲೆ: ಮೂರಾಣೆ



ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟಿನ

ಪ್ರಜಾರಾಜ್ಯ ದಿನಾಚರಣೆಯ ಶುಭಾಶಯಗಳು

ಪ್ರಜಾರಾಜ್ಯದ ಸಾಫಲ್ಯವಾಗಬೇಕಾದರೆ—
ಅದು ಜನತೆಯ ರಾಜ್ಯ, ಜನತೆಗಾಗಿ, ಜನತೆಯಿಂದ—
ಎಂಬ ತತ್ವಕ್ಕೆ ಹೊಂದಿಕೊಂಡಿರಬೇಕು.

ಸಿಂಡಿಕೇಟ್ ಬೇಂಕು—

ಜನತೆಯ ಸಂಸ್ಥೆ, ಜನತೆಯ ಸೌಕರ್ಯಕ್ಕಾಗಿ,
ಜನತೆಯ ಸಹಕಾರದಿಂದಲೇ
ಅಭಿವೃದ್ಧಿಯನ್ನು ಪಡೆದಿದೆ—

ರೂ. 10 ಕೋಟಿಗೂ ಮಿಕ್ಕಿದ ಠೇವಣಾತಿ,
ರೂ. 12 ಕೋಟಿಗೂ ಮಿಕ್ಕಿದ ಚಲಾವಣಾನಿಧಿ,
104 ಶಾಖೆಗಳು-- ಇದಕ್ಕೆ ನಿದರ್ಶನ.

ಟಿ., ಎ. ಪೈ, ಬಿ. ಕಾಂ. (ಬೊಂ)
ಎ. ಐ. ಐ. ಬಿ. ಯಫ್. ಆರ್. ಇ. ಯಸ್. (ಲಂಡನ್)
ಜನರಲ್ ಮೇನೇಜರ್.

ಡಾ। ಟಿ. ಯಂ. ಎ. ಪೈ,
ಯಂ. ಬಿ., ಬಿ. ಯಸ್.
ಮೆನೇಜಿಂಗ್ ಡೈರೆಕ್ಟರ್.

THE CANARA INDUSTRIAL & BANKING SYNDICATE LTD.

H.O. UDIPI ESTD: 1925

ಜಗತ್ತಿನ ಬೇಂಕಿಂಗ್ ವ್ಯವಹಾರಕ್ಕೆ

ಕೆನರಾ ಬೇಂಕ್ ಲಿಮಿಟೆಡ್

ಸ್ಥಾಪನೆ: 1906

ಪ್ರಾಮುಖ್ಯ ವ್ಯಾಪಾರೀ ಕೇಂದ್ರಗಳಲ್ಲಿ **61** ಶಾಖೆಗಳು	ಜಗತ್ತಿನ ಎಲ್ಲೆಡೆಯಲ್ಲೂ ಪ್ರತಿನಿಧಿಗಳು.

ತ್ರಿಫ್ಟ್, ಸೇವಿಂಗ್ಸ್ ಬೇಂಕ್, ನಿರಖು ಮತ್ತು ಚಿಕ್ಕ ವ್ಯಾದೆಯ ಠೇವಣಾತಿಗಳಿಗೆ ಆಕರ್ಷಕ ಬಡ್ಡಿ.

ದೇಶವಿದೇಶಗಳಲ್ಲಿ ಎಲ್ಲಾ ತರದ ಬೇಂಕಿಂಗ್ ವ್ಯವಹಾರ ನಡೆಸಲಾಗುತ್ತದೆ.

ಹೆಚ್ಚಿನ ವಿವರಗಳನ್ನು ನಿಮ್ಮೂರ ಸಮೀಪದ ಶಾಖಾಕಚೇರಿಯ ಮೆನೇಜರರಿಂದ ದಯಮಾಡಿ ಪಡೆಯಿರಿ.

* * *

ಮುಖ್ಯ ಕಚೇರಿ: ಮಂಗಳೂರು.

ಆಡಳಿತ ಕಚೇರಿ: ಬೆಂಗಳೂರು.

ವಿದೇಶ ಶಾಖೆಗಳು:

ಬೊಂಬಾಯಿ ಮತ್ತು ಮದ್ರಾಸು.

INDIA'S MOST DURABLE & ECONOMICAL DIESEL TRUCK & BUS CHASSIS....

TATA LOCOMOTIVE & ENGINEERING CO. LTD.

TATA-MERCEDES-BENZ

DIESEL TRUCKS & BUS CHASSIS

The Arvind Motors (Private) Ltd.,

BALMATTA ROAD : : MANGALORE.

Vol. 37 30-1-1958 ಸಂಪುಟ ೩೭
No 21 ಸಂಚಿಕೆ ೨೧

ನವಯುಗ

ಪ್ರಜಾರಾಜ್ಯ ವಿಶೇಷಾಂಕ ೧೯೫೮

NAVAYUGA REPUBLIC DAY SPECIAL 1958

* * * * * * * * * *

ಸಿಂಹಾವಲೋಕನ

ಪ್ರಜಾರಾಜ್ಯದ ಅಷ್ಟಮ ವರ್ಷದಲ್ಲಿ ಪ್ರವೇಶಿಸುವ ಈ ಸುಮುಹೂರ್ತದಲ್ಲಿ ನಾವು ಮಾಡಿಕೊಂಡ ಮಾಡಬಯಸುವ ಪ್ರಗತಿ ಕಾರ್ಯಗಳತ್ತ ಅಲ್ಪಮಟ್ಟಿನ ದೃಷ್ಟಿಯನ್ನು ಬೀರುವುದು ಅಗತ್ಯ. ಕಳೆದ ವರ್ಷ ಎರಡನೆಯ ಬಾರಿಗೆ ಸಾರ್ವತ್ರಿಕ ಚುನಾವಣೆಯು ನಡೆದು ಕೇರಳವನ್ನುಳಿದ ರಾಜ್ಯಗಳಲ್ಲಿಯೂ ಕೇಂದ್ರದಲ್ಲಿಯೂ ಭಾರತೀಯ ಕಾಂಗ್ರೆಸ್ ಸಂಪೂರ್ಣ ಬಹುಮತವನ್ನು ಪಡೆದು ರಾಜ್ಯಭಾರದ ಚುಕ್ಕಾಣಿಯನ್ನು ಹಿಡಿಯಿತು ಆದೇಕೋ ಕೇರಳದಲ್ಲಿ ಮಾತ್ರ ಕಾಂಗ್ರೆಸ್ ಕೆಲ ಸ್ಥಾನಗಳ ಕೊರತೆಯಿಂದಾಗಿ ಬಹುಮತವನ್ನು ಪಡೆಯದೆ ಕಮ್ಯೂನಿಸ್ಟರು ಪ್ರಪ್ರಥಮ ಬಾರಿಗೆ ಭಾರತದಲ್ಲಿ ಸರಕಾರವನ್ನು ಸ್ಥಾಪಿಸುವಲ್ಲಿ ಮುಂದಾದರು. ಕೇವಲ ಭಾರತದಲ್ಲಿ ಮಾತ್ರವಲ್ಲ, ಅಖಂಡ ಪ್ರಪಂಚದ ಜನರ ದೃಷ್ಟಿಯು ಈ ಕಡೆಗೆ ಹರಿದು ಕೇರಳದ ಕಮ್ಯೂನಿಸ್ಟ್ ರಾಜ್ಯಭಾರವನ್ನು ಕುತೂಹಲದೃಷ್ಟಿಯಿಂದ ನೋಡುವಂತಾಗಿದೆ. ಸಂವಿಧಾನದಲ್ಲಿ ನಮೂದಿಸಿದಂತೆ ಬಹುಮತಗಳಿಸಿದ ವಿರೋಧಿ ಪಕ್ಷಕ್ಕಾದರೂ ಭಾರತದ ಒಂದು ರಾಜ್ಯದಲ್ಲಿ ಸರಕಾರ ಸ್ಥಾಪಿಸಲು ಕೇಂದ್ರವು ಅನುಮತಿಯಿತ್ತಂತಾಗಿದೆ

ಬೊಂಬಾಯಿ ದ್ವಿಭಾಷಾ ರಾಜ್ಯದ ಪ್ರಶ್ನೆಯು ಕಳೆದ ವರ್ಷ ಸಮಾಧಾನಕ್ಕೆ ಬಂದು ಮಹಾರಾಷ್ಟ್ರ ಹಾಗೂ ಗುಜರಾತಗಳೆಂಬ ಪ್ರತಿ ಪ್ರತ್ಯೇಕ ರಾಜ್ಯಗಳಾಗುವಲ್ಲಿ ಉಭಯ ಪಕ್ಷಗಳು ಒಮ್ಮತದ ನಿರ್ಧಾರಕ್ಕೆ ಬರುವಂತಾದುದು ಸಂತೋಷದ ಸಂಗತಿಯೇ. ಯಾವ ಬೊಂಬಾಯಿ ನಗರಕ್ಕಾಗಿ ಅವರಿಬ್ಬರು ಹೊಡೆದಾಡಿದ್ದರೋ ಅಂತಹುದರ ಬಗ್ಗೆ ಈಗ ಯಾವ ಆಗ್ರಹವೂ ತೋರುತ್ತಿಲ್ಲ ಇದೂ ಒಂದು ಸೋಜಿಗದ ಸಂಗತಿಯಾಗಿದೆ.



ಭಾರತದ ಆಂತರಿಕ ಪ್ರಶ್ನೆಗಳನ್ನು ಉತ್ತರಿಸುವುದಾದರೆ, ಅದು ದ್ವಿತೀಯ ಯೋಜನೆಯನ್ನು ತೀವ್ರ ಪ್ರಯಾಸದಿಂದ ಕಾರ್ಯಾಚರಣೆಗೆ ತರುತ್ತಿದೆಯೆನ್ನಬಹುದು ಆಂತರಿಕ ಉತ್ಪನ್ನಗಳನ್ನು ಹೆಚ್ಚಿಸುವುದಲ್ಲದೆ ವಿದೇಶೀಯ ಸಹಾಯ, ಸಾಲ ಹಾಗೂ ವಿನಿಮಯ ನಾಣ್ಯಗಳ ಉಳಿತಾಯ ಹೀಗೆ ಹಲವಾರು ವೇಷಗಳನ್ನು ಕಟ್ಟಿಕೊಂಡು ನಮ್ಮ ಯೋಜನೆ ಮುಂದುವರಿಯುತ್ತ ಇದೆ ಈ ಯೋಜನೆಯಲ್ಲಿ ಹೇಳುವಷ್ಟು ಕೆಲಸಗಳಾದುವೆಂದು ನುಡಿಯಬಾರದಿದ್ದರೂ ನಾವು ಪಡೆದ ಪ್ರಗತಿಯು ನಿರ್ಲಕ್ಷ್ಯದಾಯಕವಾಗಿಲ್ಲವೆಂದು ಮಾತ್ರ ಹೇಳಬಹುದು ವಿದೇಶೀಯ ಪ್ರತಿನಿಧಿಗಳು ಇಲ್ಲಿ ಬಂದು ಇಲ್ಲಿನ ಅಭಿವೃದ್ಧಿಯನ್ನು ಕಂಡು ತೃಪ್ತಿ ವ್ಯಕ್ತಪಡಿಸಿರುವುದೇ ಇದಕ್ಕೆ ಸಾಕ್ಷಿ. ಆದರೂ ಹಿಂದುಳಿದ ರಾಷ್ಟ್ರವೆನಿಸಿರುವ ನಮ್ಮ ದೇಶದಲ್ಲಿ ಅದೆಷ್ಟು ಪ್ರಗತಿಯಾದರೂ ಸಾಲದೆಂಬಂತೆ ನಮಗೆ ಕಂಡರೆ, ಅದೂ ಸೋಜಿಗವಲ್ಲ. ದೇಶದಲ್ಲಿ ಇನ್ನೂ ಆಗಬೇಕಾದ ಕೆಲಸಗಳು ಲಕ್ಷಾಂತರವಿದ್ದರೂ ಅವುಗಳನ್ನು ಗಮನಿಸದಿರುವುದು ಸರಿಯಲ್ಲ ನಾವು ಅಡೆತಡೆಗಳನ್ನೆದುರಿಸಿ, ವಿದೇಶೀ ವಿನಿಮಯ ನಾಣ್ಯಗಳ ಕೊರತೆಯನ್ನು ಸಹ ತಡೆದುಕೊಂಡು ಸಾಧ್ಯವಾದಷ್ಟು ಓಡುತ್ತಿದ್ದೇವೆ ಆದರೆ, ಬಡತನದ, ಅಜ್ಞಾನದ ಅವಿದ್ಯೆಯು ದೇಶದಲ್ಲಿ ಎಷ್ಟು ಓಡಿದರೂ ಅದು ಕಡಿಮೆಯೇ ನಮ್ಮ ಗುರಿ ಮತ್ತೂ ದೂರವಿರುತ್ತದೆ ಆದರೂ ನಾವು ನಮ್ಮ ವೈಭವದ ನಾಡನ್ನು ಪುನಃ ಕಟ್ಟಿಯೇವು, ಪುನಃ ನಾವು ವಿಶ್ವದಲ್ಲಿ ತಲೆಯೆತ್ತಿ ನಿಂತೇವು ಎಂಬುದೊಂದು ಧೈರ್ಯ, ಆತ್ಮವಿಶ್ವಾಸ ನಮ್ಮಲ್ಲಿದ್ದರೆ ನಿಜವಾಗಿಯೂ ನಾವು ಜಯಪ್ರದರಾದೇವು

ಕಾಶ್ಮೀರ ಗೋವಾಗಳ ಪ್ರಶ್ನೆಯೊಂದು ಮಾತ್ರ ಯಾವ ಮಾರ್ಪಾಟೂ ಇಲ್ಲದೆ ಇದ್ದಂತೆಯೇ ಇದೆ. ಪರದೇಶಗಳಿಗೆ ಶಾಂತ್ಯುಪದೇಶ ಮಾಡುವ ಭಾರತ ತನ್ನ ಈ ಸಮಸ್ಯಾ ಪ್ರಶ್ನೆಗಳಿಗೆ ಸಹ ಶಾಂತಿ—ಸಮಾಧಾನಗಳ ಬೆಂಬಲದಿಂದಲೇ ಉತ್ತರ ಹುಡುಕುವ ದೃಢ ಮನಸ್ಸು ಗೈದಿದೆ ಮತ್ತು ಅದು ಇದರಿಂದಲೇ ಇವು ಶೀಘ್ರದಲ್ಲಿ ಪರಿಹಾರವಾಗುವುವೆಂದು ನಂಬಲಾಗಿದೆ

ಆಟಂ ಹೈಡ್ರೋಜನ್ ಬಾಂಬುಗಳ ಕಾಲವನ್ನು ದಾಟಿ ಇಂದಿನ ವಿಶ್ವವು ಉಪಗ್ರಹಗಳ ಯುಗಕ್ಕೆ ಬಂದು ಮುಟ್ಟಿದೆ ಆಧುನಿಕ ಯುಗದಲ್ಲಿ ಪ್ರಪ್ರಥಮವಾಗಿ ರಷ್ಯವು ಎರಡು ಉಪಗ್ರಹಗಳನ್ನು ಆಕಾಶದಲ್ಲಿ ತೇಲಬಿಟ್ಟಿದ್ದು ಎಲ್ಲ ರಾಷ್ಟ್ರಗಳ ಆಶ್ಚರ್ಯಕ್ಕೂ ಕಳವಳಕ್ಕೂ ಕಾರಣವಾಗಿದ ವಿಜ್ಞಾನದಿಂದ ಒಳ್ಳೆಯದಿದೆ, ಅದನ್ನು ಮಾನವನ ಹಿತ ಸಾಧನೆಗೆ ಬಳಸಿದರೆ ಮಾತ್ರ, ಅಂತಹ ಅಪಾರ ವಸ್ತುವಿನ ಪ್ರಯೋಜನವಾದೀತು, ಅದು ಹೊರತು ಸ್ವಾರ್ಥ ಪಿಪಾಸೆಯಿಂದ ನಲುತ್ತಿರುವವರ ಅವಿವೇಕತನದಿಂದ ಅನರ್ಥ ಸಂಭವಿಸುವುದೇ ನಿಶ್ಚಯ ಕಳ್ಳು ಕುಡಿದ ಮಂಗನಂತಿರುವ ಈ ದೊಡ್ಡ ರಾಷ್ಟ್ರಗಳ ಮಹತ್ವಾಕಾಂಕ್ಷೆಯು ವಿಶ್ವಶಾಂತಿಗೆ ಭಂಗವನ್ನು ತಂದೊಡ್ಡುತ್ತಿದೆ. ಹೇಗಿದ್ದರೂ ಇನ್ನು ಮುಂದಾದರೂ ಅವು ತಮ್ಮ ತಪ್ಪನ್ನು ತಿದ್ದಿಕೊಂಡು ಸೋದರತೆಯನ್ನು ಮನದಂದು ಎಲ್ಲರೂ ಸುಖಬಾಳನ್ನು ಬದುಕಲು ನೆರವಾಗುವರೆಂದು ಭಾರತವು ಬಯಸುತ್ತದೆ, ಮತ್ತು ಆ ಬಗ್ಗೆ ಇದುವರೆಗಿನಂತೆ ಇನ್ನು ಮುಂದಕ್ಕೂ ವಿಶ್ವಸ್ನೇಹಕ್ಕಾಗಿ ಪರಿಶ್ರಮಿಸುತ್ತದೆ

ಭಾರತದ ಹೊರಗಡೆ ವಿಜ್ಞಾನವು ತನ್ನ ವಿಕರಾಳ ವಿಶ್ವರೂಪವನ್ನು ಪ್ರದರ್ಶಿಸುತ್ತಿದ್ದರೆ, ಒಳಗಡೆ ಭಾರತದ ಐಕ್ಯಕ್ಕೆ ಕೊರತೆಯೊದಗಿಸುವ ಮಾತುಕತೆಗಳು ನಡೆಯುತ್ತಿವೆ ಸರಕಾರೀ ಭಾಷಾ ಪ್ರಶ್ನೆಯೊಂದು ಉಲ್ಬಣ ರೂಪವನ್ನು ಧಾರಣೆ ಮಾಡಿ ಮತ್ತೆಲ್ಲವನ್ನೂ ಅತಿ ಮಾಡಿದೆ. ಬ್ರಾಹ್ಮಣ ವಿರೋಧಿ ಚಳುವಳಿಯೂ ಬೆಳೆಯುತ್ತಿದೆ. ಆದರೆ, ಇವೆಲ್ಲ ಶಾಂತಿಯನ್ನು ಕದಡಬಲ್ಲವೇ ಹೊರತು ಕೊಡುವಲ್ಲ ಅಸಮರ್ಥವಾದಾವು ಹಿಂದಿಯನ್ನು ಸರಕಾರೀ ಭಾಷೆಯನ್ನಾಗಿಸುವಲ್ಲಿ ಆತಂಕವೆದ್ದಿದೆ ಈ ಜಿದ್ದಿ ತಪ್ಪೆನ್ನ ಬರುವುದಿಲ್ಲವಾದರೂ ಸಂಪೂರ್ಣ ಒಪ್ಪುವುದು ಸಹ ಸಾಧ್ಯವಿಲ್ಲ ಈ ಬಗ್ಗೆ ನಿಶ್ಚಿತ ಕಾಲಾವಧಿಯನ್ನು ಅನಿಯಮಿತವಾಗಿ ದೂರ ಮಾಡಿದ್ದು ಸಾಮಾನ್ಯ ಮಟ್ಟಿಗೆ ಏಕತೆಗೆ ಕೊರತೆಯಾಗದಂತೆ ನೋಡಿಕೊಳ್ಳಲು ಪ್ರಯತ್ನಿಸಲಾಗಿದೆ ಈ ನಮ್ಮ ನಾಯಕರ ಪ್ರಯತ್ನವು ಫಲಕಾರಿಯಾಗಬೇಕು

ಭಾರತದ ಈ ಶುಭ ಸಮಯದಲ್ಲಿ ನವ್ಯ ಪ್ರಗತಿಗಾಗಿ ನಾವು ಹೆಮ್ಮೆಪಡುವುದಲ್ಲದೇ ನಮ್ಮ ಐಕ್ಯತೆ ಚಿರಸ್ಥಾಯಿಯಾಗುಳಿದು ಪ್ರಜಾಪ್ರಭುತ್ವದ ಹಿರಿಯ ಶಕ್ತಿಯನ್ನು ವಿಶ್ವಕ್ಕೆ ತೋರಿಸಿಕೊಡುವಂತಾಗಲಿ ಎಂದು ಹಾರೈಸುತ್ತೇವೆ.

ವಿಶೇಷ ಸಂಚಿಕೆ

ನಾವು ವಾಡಿಕೆಯಂತೆ ಹೊರಡಿಸುತ್ತಿರುವ ಈ ವಿಶೇಷ ಸಂಚಿಕೆಯನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ, ಲೇಖನಗಳ ವೈವಿಧ್ಯವೂ, ಮಟ್ಟವೂ ತಿಳಿದು ಬಾರದಿರದು ಇಷ್ಟೊಂದು ಲೇಖನಗಳನ್ನು ಸಂಗ್ರಹಿಸುವಲ್ಲಿ ನಮಗೆ ನೆರವಾದ ಲೇಖಕ ಬಂಧುಭಗಿನಿಯರಿಗೆ ನಮ್ಮ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ ಕೆಲವೊಂದು ಸುಪ್ರಸಿದ್ಧ ಲೇಖಕರ ಲೇಖನಗಳು ಸಾಕಷ್ಟು ಪೂರ್ವಭಾವಿಯಾಗಿ ಬಾರದ ಇದ್ದುದರಿಂದ ಪ್ರಕಟಿಸಲಾಗದಿದ್ದುದಕ್ಕಾಗಿ ಅವರೊಡನೆ ಕ್ಷಮಾಯಾಚನೆ ಮಾಡಬೇಕಾಗಿ ಬಂದುದಕ್ಕೆ ವಿಷಾದಿಸುತ್ತೇವೆ ಈ ದೊಡ್ಡ ಸಂಚಿಕೆಯನ್ನು ಹೊರಡಿಸುವಲ್ಲಿ ಬರಹಗಾರರ ಬಂಧುಗಳಂತೆಯೇ ಜಾಹೀರಾತುದಾರರ ಬೆಂಬಲವೂ ಚಿರಸ್ಮರಣೀಯವಾದ ಮುದ್ರಣಾಲಯದ ಕೆಲಸಗಾರರಿಗೂ ಲೇಖಕ ಜಾಹೀರಾತುದಾರ, ಚಂದಾದಾರ ಮತ್ತು ಓದುಗರೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸೂಚಿಸಿ ನಮ್ಮ ಪ್ರಜಾರಾಜ್ಯ ಭಾರತದ ಎಂಟನೆಯ ವರ್ಷವು ಮಾನವತೆಯ ದರ್ಶನವನ್ನು ಮಾಡಿಕೊಡಲಿ ಎಂದು ಪ್ರಾರ್ಥಿಸುತ್ತೇವೆ.

ಕುಟುಂಬಯೋಜನಾ ಕಾರ್ಯಕ್ರಮಗಳು

ಭಾರತದ ದೊಡ್ಡ ಸಮಸ್ಯೆಗಳಲ್ಲಿ ಜನಸಂಖ್ಯೆಯ ಹೆಚ್ಚಳವೂ ಒಂದು. ಶಿಶು ಜನನವನ್ನು ತಡೆಗಟ್ಟುವುದು ನಮ್ಮ ದೇಶದಲ್ಲಿ ಅಸಭ್ಯವರ್ತನೆ ಎಂದು ತಿಳಿಯಲಾಗುತ್ತದೆ. ಆದರೂ, ಜನತೆಯ ಅನ್ನವಸ್ತ್ರ ವಿದ್ಯೆಗಳ ಕೊರತೆಯನ್ನು ನೀಗಿಸಬೇಕಾದರೆ ಕುಟುಂಬಯೋಜನೆಯೊಂದೇ ಸರಿಯಾದ ಮಾರ್ಗ. ಆ ಬಗ್ಗೆ ನಮ್ಮ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವೊಂದು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಅವುಗಳನ್ನು ನಾವು ಸ್ಥೂಲವಾಗಿಯಾದರೂ ತಿಳಿಯುವುದು ಜಾಣತನ.

ಬರೆದವರು: ಶ್ರೀ ವಿ. ಕೆ. ಬಿ. ಪಿಳ್ಳೈ, ಐ. ಸಿ. ಎಸ್.

ಜನಸಂಖ್ಯಾ ನಿಯಂತ್ರಣ ಸಂಬಂಧದಲ್ಲಿ ಭಾರತ ಸರ್ಕಾರದವರು ಕೈಗೊಂಡ ಕಾರ್ಯನೀತಿಯ ಅಂಗವಾಗಿ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಪ್ರಥಮ ಪಂಚವಾರ್ಷಿಕ ಯೋಜನಾವಧಿಯ ಕೊನೆಯ ಭಾಗದಲ್ಲಿ ಅಧಿಕೃತ ಕಾರ್ಯಕ್ರಮವನ್ನಾಗಿ ಪ್ರಾರಂಭಿಸಲಾಯಿತು. ಈ ಕಾರ್ಯಕ್ರಮವು ಕ್ರಮೇಣ ಪ್ರಾಮುಖ್ಯಗಳಿಸುತ್ತಿದೆ.

ದ್ವಿತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ, ಈ ಕಾರ್ಯಕ್ರಮವನ್ನು ವಿವಿಧ ದಿಕ್ಕುಗಳಲ್ಲಿ ತೀವ್ರಗೊಳಿಸಲಾಗುತ್ತಿದೆ. ಮೊದಲನೆಯದಾಗಿ, ಗ್ರಾಮಾಂತರ ಹಾಗೂ ನಗರ ಕ್ಷೇತ್ರಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದು. ಚಿಕಿತ್ಸಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಹಾಗೂ ಕುಟುಂಬ ಯೋಜನಾ ಕೇಂದ್ರಗಳನ್ನು ನಡೆಸುವುದಕ್ಕಾಗಿ ರಾಜ್ಯ ಸರ್ಕಾರಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳಿಗೆ ಹಣಕಾಸಿನ ನೆರವು. ಎರಡನೆಯದಾಗಿ, ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ವಿವಿಧ ದರ್ಜೆಯ ಸಿಬ್ಬಂದಿಯವರಿಗಾಗಿರುವ ತರಬೇತಿ ಕಾರ್ಯಕ್ರಮವನ್ನು ವಿಸ್ತರಿಸುವುದು. ಜೊತೆಗೆ ಈ ದೇಶದ ಸ್ಥಿತಿಗತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಜನಾಂಗ ಸ್ಥಿತಿ ವಿತರಣೆ ಹಾಗೂ ಜನಸಂಖ್ಯಾ ಸಮಸ್ಯೆಗಳ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳುವ ಸಂಬಂಧವಾದ ಯೋಜನೆಯನ್ನು ಕೂಡ ತೆಗೆದುಕೊಳ್ಳಲಾಗಿದೆ. ಕುಟುಂಬ ಯೋಜನಾ ವಿಧಾನಗಳಲ್ಲಿ ಮಹಾ ಜನರಿಗೆ ತಿಳುವಳಿಕೆ ನೀಡುವ ಬಗ್ಗೆ ಹೆಚ್ಚಿನ ಹಾಗೂ ಸುವ್ಯವಸ್ಥಿತ ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ಕುಟುಂಬ ಯೋಜನಾ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರುವ ಬಗ್ಗೆ ವ್ಯವಸ್ಥಾ ವಿಭಾಗವಿರುವುದು. ಕೇಂದ್ರ ಆರೋಗ್ಯ ಶಾಖೆಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೇಂದ್ರ ಕುಟುಂಬ ಯೋಜನಾ ಮಂಡಲಿ ಇರುವುದು. ಜೊತೆಗೆ ಸ್ಥಾಯೀ ಸಮಿತಿಯೊಂದಿರುವುದು. ರಾಜ್ಯ ಮಟ್ಟದಲ್ಲಿ ವಿವಿಧ ರಾಜ್ಯಗಳಲ್ಲಿ ಅಂತಹದೇ ಆದ ಮಂಡಲಿಗಳಿರುವುವು. ಕುಟುಂಬ ಯೋಜನೆಯ ಸಂದೇಶವನ್ನು ಜನಪ್ರಿಯಗೊಳಿಸುವ ವಿಚಾರದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಕಾರ ಮತ್ತು ನೆರವನ್ನು ಹೆಚ್ಚು ಹೆಚ್ಚಾಗಿ ಪಡೆಯಲಾಗುತ್ತಿದೆ. ಅದೇ ರೀತಿಯಲ್ಲಿ ಈ ಸಂಸ್ಥೆಗಳಿಗೆ ಸಹಕಾರ ಮತ್ತು ನೆರವನ್ನು ಹೆಚ್ಚು ಹೆಚ್ಚಾಗಿ ನೀಡಲಾಗುತ್ತಿದೆ, ಈ ನೆರವಿನಿಂದ ನಿರ್ದಿಷ್ಟ ಧ್ಯೇಯಗಳನ್ನು ಸಾಧಿಸಲಾಗುತ್ತದೆ.

ಕುಟುಂಬಗಳನ್ನು ಮಿತಗೊಳಿಸುವ ಅಗತ್ಯದ ವಿಚಾರದಲ್ಲಿ ಕಾರ್ಯಕ್ರಮದ ತೊಡಕುಗಳನ್ನು ಜನರಿಗೆ ಪರಿಚಯ ಮಾಡಿಸಿಕೊಡುವುದೇ ಇಂತಹ ಧ್ಯೇಯ ಸಾಧನೆಯಾಗಿರುವುದು. ರಾಷ್ಟ್ರದ ಆರ್ಥಿಕಾಭಿವೃದ್ಧಿ, ಸಾಮಾಜಿಕ ಪ್ರಗತಿ, ಜನರ ಸಾಮಾನ್ಯ ಆರೋಗ್ಯ ಪಾಲನೆ ಹಾಗೂ ಸಧಾರಣೆ ಮತ್ತು ಜನಜೀವನ ಮಟ್ಟದ ಪ್ರಗತಿ ಇವುಗಳ ದೃಷ್ಟಿಯಿಂದ ಕುಟುಂಬಗಳನ್ನು ಮಿತಗೊಳಿಸುವ ಮಹತ್ವದ ವಿಚಾರದಲ್ಲಿ ಕುಟುಂಬ ಯೋಜನಾ ಕಾರ್ಯಕ್ರಮದ ತೊಡಕುಗಳನ್ನು ಎಲ್ಲರಿಗೂ ಮುಖ್ಯವಾಗಿ ಗ್ರಾಮವಾಸಿಗಳಿಗೆ ಅರ್ಥವಾಗುವಂತೆ ಪರಿಚಯ ಮಾಡಿಕೊಡಬೇಕಾಗಿರುವುದು.

ಭಾರತದಲ್ಲಿ ಜನಸಂಖ್ಯೆ ವರ್ಷಕ್ಕೆ ಸರಾಸರಿ ೫೦ ಲಕ್ಷದಂತೆ ವರ್ಧಿಸುತ್ತಿದೆ. ಈ ದರದಲ್ಲಿ ಜನಸಂಖ್ಯೆ ವರ್ಧಿಸಿದರೆ, ಯೋಜನೆಯು ಬಹಳ ಕಷ್ಟತರವಾಗಿ ಪರಿಣಮಿಸುವುದಲ್ಲದೇ ಮಿತಿಮೀರಿದ ಪ್ರಮಾಣದಲ್ಲಿ ಜನಸಂಖ್ಯೆಯು ಬೆಳೆದರೆ, ಅಷ್ಟು ಜನರಿಗೆ ಅನ್ನ, ವಸ್ತ್ರ, ವಸತಿಗಳನ್ನು ಒದಗಿಸುವುದನ್ನು ಯೋಜನಾ ನಿರ್ಮಾಣ ಕಾಲದಲ್ಲಿ ಅಂದಾಜು ಮಾಡುವುದು ಸಹ ಸಾಧ್ಯವಾಗುವುದಿಲ್ಲ.

ಕುಟುಂಬ ಯೋಜನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವುದೇ ಈಗ ನಮ್ಮ ಮುಂದಿರುವ ಕಾರ್ಯವಾಗಿರುವುದು. ಗರ್ಭ ಧಾರಣೆಯನ್ನು ನಿಯಂತ್ರಿಸುವ ಹಾಗೂ ಪ್ರಸವವನ್ನು ಮಿತಗೊಳಿಸುವ ವಿಧಾನಗಳನ್ನು ಜನರಿಗೆ ತಿಳಿಸಿ ಅವುಗಳನ್ನು ಬಳಕೆಗೆ ತರುವಂತೆ ಮಾಡುವುದು ಮುಖ್ಯ ಕಾರ್ಯವಾಗಿದೆ. ಈ ಕಾರ್ಯವನ್ನು ಸರ್ಕಾರಿ ಹಾಗೂ ಸರ್ಕಾರೇತರ ಮಟ್ಟಗಳಲ್ಲಿ ಕೈಗೊಳ್ಳಬೇಕಾಗುವುದು. ಈ ಉದ್ದೇಶಕ್ಕಾಗಿ ವಿಶೇಷವಾಗಿ ತರಬೇತಿ ಪಡೆದ ವ್ಯಕ್ತಿಗಳಿಂದ ಈ ಕಾರ್ಯವನ್ನು ಪರಿಣಾಮಕಾರಿಯಾಗಿಯೂ ಉಪಯುಕ್ತ ರೀತಿಯಲ್ಲಿಯೂ ಕೈಗೊಳ್ಳಬಹುದಾಗಿದೆ. ಮಹಾಜನರಲ್ಲಿ ಅಗತ್ಯವಾದ ವಿಶ್ವಾಸವನ್ನು ತುಂಬಬಲ್ಲ ಸ್ವಯಂ ಸೇವಾ ಹಿತರಕ್ಷಣಾ ಕಾರ್ಯಕರ್ತರು ಈ ಕಾರ್ಯದಲ್ಲಿ ನೆರವಾಗಬೇಕಾಗುವುದು.

ಕುಟುಂಬ ಯೋಜನಾ ಕಾರ್ಯಕ್ರಮದ ಮೊದಲನೆಯ ಅಂಶವಾಗಿ, ಕುಟುಂಬ ಯೋಜನಾ ವಿಧಾನಗಳನ್ನು ಜನಪ್ರಿಯಗೊಳಿಸುವಂತಹ ಕುಟುಂಬ ಯೋಜನಾ ಚಿಕಿತ್ಸಾಲಯಗಳನ್ನು ಮತ್ತು ಕೇಂದ್ರಗಳನ್ನು ಅಧಿಕ ಸಂಖ್ಯೆಯಲ್ಲಿ ಪ್ರಾರಂಭಿಸಬೇಕಾಗುವುದು. ನಮ್ಮ ಯೋಜನೆಯಲ್ಲಿ ಕುಟುಂಬ ಯೋಜನಾ ಚಿಕಿತ್ಸಾಲಯಗಳ ಸ್ಥಾಪನೆಗೆ ಅಗ್ರ ಪ್ರಾಧಾನ್ಯವೀಯಲಾಗಿದೆ. ಅನಂತರ ವೈದ್ಯರು ಆರೋಗ್ಯ ವೀಕ್ಷಕರು, ಸಮಾಜ ಕಾರ್ಯಕರ್ತರು ಮತ್ತು ಚಿಕಿತ್ಸಾಲಯಗಳ ಆಚೆ ಕೆಲಸಮಾಡುವ ಕಾರ್ಯಕರ್ತರಿಗೆ ತರಬೇತಿ ನೀಡುವ ವಿಚಾರಕ್ಕೆ ಪ್ರಾಶಸ್ತ್ಯವೀಯಲಾಗಿದೆ. ಸುಶಿಕ್ಷಿತ ಕಾರ್ಯಕರ್ತರು ಚಿಕಿತ್ಸಾಲಯಗಳ ಮೇಲ್ವಿಚಾರಕರಾಗಿರುವರಲ್ಲದೆ ಅವರು ಸಮೀಕ್ಷೆಗಳನ್ನು ನಡೆಸಿ, ಚಿಕಿತ್ಸಾಲಯಗಳಿಗೆ ಬರುವ ವ್ಯಕ್ತಿಗಳಿಗೆ ಸಲಹೆ ಹಾಗೂ ನೆರವನ್ನು ನೀಡುವರು. ಇವಕ್ಕೆ ಬೇಕಾದ ನುರಿತ ಸಿಬ್ಬಂದಿಗಳನ್ನು ತಯಾರಿಸಲಾಗುತ್ತಿದೆ.

ಜನಸಂಖ್ಯೆಯ ಅಭಿವೃದ್ಧಿಯ ಬಗ್ಗೆ ಮತ್ತೂ ಸೂಕ್ಷ್ಮ ಅಧ್ಯಯನ ಹಾಗೂ ದೇಶದ ವಿವಿಧ ವರ್ಗಗಳು ಮತ್ತು ಆದಾಯ ವರ್ಗಗಳ ಸೂಕ್ತವಾದ, ಉತ್ತಮ ರೀತಿಯ ಮತ್ತು ಕಾರ್ಯಸಾಧಕವಾದ ಗರ್ಭ ನಿರೋಧಕ ಉಪಕರಣಗಳ ಬಗ್ಗೆ ಸಂಶೋಧನಾ ಕಾರ್ಯ ಇವುಗಳನ್ನು ಕೈಗೊಳ್ಳುವುದೂ ಸಿಬ್ಬಂದಿಯಷ್ಟೇ ಅಗತ್ಯವಾಗಿದೆ. ಜನಾಂಗ ಸ್ಥಿತಿ ವಿವರಣೆ ಅಧ್ಯಯನ ಕಾರ್ಯಕ್ರಮವು ಗರ್ಭಧಾರಣ ಶಕ್ತಿ ಮತ್ತು ಮರಣದ ಪ್ರಮಾಣಗಳ ಬಗ್ಗೆ ನಿಖರವಾದ ಅಂದಾಜುಗಳನ್ನು ಮಾಡುವುದಲ್ಲದೆ ಜನಸಂಖ್ಯೆಯ ಗಣನೆ ಮೇಲೆ ಕುಟುಂಬ ಯೋಜನೆಯ ದೀರ್ಘ ವ್ಯಾಪ್ತಿಯ ಪರಿಣಾಮಗಳನ್ನು ಕೂಡ ಅಧ್ಯಯನ ಮಾಡುತ್ತದೆ.

ಕುಟುಂಬಯೋಜನಾ ಕಾರ್ಯಕ್ರಮವು ಸಮೀಕೃತ ಕಾರ್ಯಕ್ರಮವಾಗಿರುವುದು. ಇದನ್ನು ನಿಯೋಜಿತ ಹಾಗೂ ವ್ಯವಸ್ಥಿತ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ರಾಷ್ಟ್ರದ ಅಭಿವೃದ್ಧಿ ಹಾಗೂ ದೇಶದ ಆರ್ಥಿಕಾಭಿವೃದ್ಧಿಯ ಸಂಬಂಧದಲ್ಲಿ ಕುಟುಂಬಯೋಜನಾ ಕಾರ್ಯಕ್ರಮವು ಅತ್ಯಾವಶ್ಯಕವಾಗಿರುವುದು. ಜನಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಉನ್ನತಿಯನ್ನು ಉತ್ತೇಜಿಸುವಂತಹ ಹಾಗೂ ಇಡೀ ದೇಶದಲ್ಲಿ ಸಾರ್ವಜನಿಕ ಆರೋಗ್ಯದ ಮಟ್ಟಗಳನ್ನು ಸುಧಾರಿಸುವಂತಹ ಕಾರ್ಯಕ್ರಮಗಳ ಆಧಾರದ ಮೇಲೆ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ದೃಷ್ಟಿಯಿಂದ ನೋಡಿದರೆ ಈ ಕಾರ್ಯಕ್ರಮವು ಮಹತ್ವಪೂರಿತವಾಗಿರುವುದು. ಆಗ ಕುಟುಂಬಯೋಜನಾ ಕಾರ್ಯಕ್ರಮವು ಜನಪದ ಹಿತರಕ್ಷಣೆಯ ಮುಖ್ಯಾಂಶವಾಗಿರುವುದು. ಗ್ರಾಮಾಂತರ ಕ್ಷೇತ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಾರ್ಯಗಳಲ್ಲಿ ಕುಟುಂಬ ಯೋಜನಾ ಕಾರ್ಯವು ಅಭಿನ್ನ ಅಂಗವಾಗುವುದು. ಈ ರೀತಿಯಾಗಿ ಕುಟುಂಬ ಯೋಜನಾ ಕಾರ್ಯಕ್ರಮವು ಜನಜೀವನ ಮಟ್ಟವನ್ನು ಸುಧಾರಿಸುವುದು ಹಾಗೂ ದೇಶದ ಆರ್ಥಿಕಾಭಿವೃದ್ಧಿಯ ಯೋಜನೆಯ ಒಂದು ಭಾಗವಾಗುವುದು.

ಸುಂದರ ಕ್ಲೋತ್ ಸ್ಟೋರ್ಸ್

ಕೆಥೋಲಿಕ್ ಬ್ಯಾಂಕಿನ ಎದುರು, ಉಡುಪಿ.

ಯಾವತ್ತೂ ತರದ ಕೈಮಗ್ಗ ಮತ್ತು ಗಿರಣಿ ಬಟ್ಟೆಗಳು, ಸಿಲ್ಕ್ ಬಟ್ಟೆಗಳು ಸದಾ ಸಿದ್ಧವಿವೆ.

ನ್ಯಾಯವಾದ ಬೆಲೆಯಲ್ಲಿ ಸುಂದರವಾದ ಬಟ್ಟೆಗಳಿಗೆ ಜನಪ್ರಿಯ ಗಳಿಸಿದೆ — ಸುಂದರ ಕ್ಲೋತ್ ಸ್ಟೋರ್ಸ್.

SUNDARA CLOTH STORES

Opp: Catholic Bank, UDIPI (S. K.)

ಕಲ್ಮಂಜೆ ವ್ಯಾಸಾಚಾರ್ಯರ ಪಾತ್ರೆ ಭಂಡಾರ

ರಥಬೀದಿ, ಉಡುಪಿ, ದ. ಕ.

ದೇವಪೂಜಾ ಸಾಮಗ್ರಿಗಳಿಗೆ, ತಾಮ್ರ, ಹಿತ್ತಾಳಿ, ಕಂಚು, ಬೆಳ್ಳಿ ಮತ್ತು ಸ್ಟೆಯಿನ್‌ಲೆಸ್ ಸ್ಟೀಲು ಪಾತ್ರೆ ಮೊದಲಾದುವುಗಳಿಗೆ ನಮ್ಮನ್ನು ಸಂದರ್ಶಿಸಿರಿ.

1919ರಲ್ಲಿ ಸ್ಥಾಪನೆಯಾದ ಉಡುಪಿಯ ಪ್ರಪ್ರಥಮ ಪಾತ್ರೆಭಂಡಾರ

KALMANJE VYASACHARYA'S METALWARE EMPORIUM

CAR STREET. UDIPI, S. K.

ಉತ್ತಮ ಸಾಹಿತ್ಯದ ಅಪಾರ ಶಕ್ತಿ

ಮಾನವನ ಮೇಲೆ ತುಂಬು ಪ್ರಭಾವವನ್ನು ಬೀರುವ ಸಾಧನವೆಂದರೆ ಸಾಹಿತ್ಯ. ಭಾರತೀಯರಿಗೆ ಇಂತಹ ಸಾಹಿತ್ಯ ಮಾಡಿದ ಮಾರ್ಗದರ್ಶನ ಇನ್ನೂ ಸಾಲದು. ನಮ್ಮ ವಿದ್ಯಾರ್ಥಿಗಳು ಈಗಿಂದೀಗಲೇ ಪ್ರಾದೇಶಿಕ ಭಾಷೆ ಕನ್ನಡ, ರಾಷ್ಟ್ರಭಾಷೆ ಹಿಂದಿ, ಅಂತಾರಾಷ್ಟ್ರೀಯ ಭಾಷೆ ಇಂಗ್ಲಿಷ್ ಮತ್ತು ಪ್ರಭಾವೀ ದೇವಭಾಷೆ ಸಂಸ್ಕೃತ— ಈ ನಾಲ್ಕು ಭಾಷೆಗಳ ಅಭ್ಯಾಸವನ್ನು ಅವಶ್ಯ ಮಾಡಬೇಕು. ಹೀಗಾದಲ್ಲಿ ಮಾತ್ರ ನಮ್ಮ ಮುಂದಿನ ಜನಾಂಗದಲ್ಲಾದರೂ ಮಾನವತೆಯ ದರ್ಶನವಾಗಬಹುದು, ನಮ್ಮಲ್ಲಿನ ಕೊರತೆಯನ್ನು ಅಳಿಯಬಹುದು

ಬರೆದವರು: ಶ್ರೀಮತಿ ಆಶಾ ಕೆ. ಆರ್. ಕೆ ಭಟ್

ಸಾಹಿತ್ಯವು ಜನಜೀವನದ ಪ್ರತಿಬಿಂಬ; ಒಂದು ದೇಶದ ಜನತೆಯ ಸಂಸ್ಕೃತಿ, ಹಾಗೂ ವಿಚಾರಗಳ ಮಟ್ಟವನ್ನು ಆ ಜನತೆಯು ಸೃಷ್ಟಿಸಿದ ಸಾಹಿತ್ಯದಿಂದ ಕಂಡುಕೊಳ್ಳಬಹುದು. ಖಡ್ಗದ ಶಕ್ತಿಗಿಂತ ಲೇಖನಿಯ ಶಕ್ತಿ ಹಿರಿದು ಎಂಬುದನ್ನು ಅನೇಕ ಕವಿಗಳು, ಹಾಗೂ ಸಾಹಿತಿಗಳು ಎತ್ತಿ ತೋರಿಸಿರುತ್ತಾರೆ. ಇಂತಹವರಲ್ಲಿ 'ವಾಲ್ಟೇರ್' ಕವಿ ಮತ್ತು ಸಾಹಿತಿಯೊಬ್ಬನು ಸಾಹಿತ್ಯವು ವಿಚಾರ ಪ್ರಚೋದನೆ, ಹಾಗೂ ಜಾಗೃತಿಯನ್ನುಂಟು ಮಾಡುತ್ತದೆ, ಕ್ರಿಯಾ ಶಕ್ತಿಯನ್ನು ಪ್ರೇರಿಸುತ್ತದೆ. ಎಲ್ಲಾ ದೇಶಗಳಲ್ಲಿಯೂ ಸಾಹಿತ್ಯವು ಅದ್ಭುತವಾಗಿ ಕೆಲಸ ಮಾಡಿದೆ. 'ವಾಲ್ಟೇರ್' ಕಾಲದ ಮತ್ತು ನಮ್ಮ ಈ ಕಾಲದ ಅಂದರೆ, ೨೦ನೇ ಶತಮಾನದ ಎಲ್ಲಾ ಜನರು ಲೇಖನಿಯ ಶಕ್ತಿಯನ್ನು ಒಪ್ಪಿಕೊಂಡಿದ್ದಾರೆ. 'ಶೇಕ್ಸ್‌ಪಿಯರ್' 'ಕಾಳಿದಾಸ', ಮೊದಲಾದ ಶ್ರೇಷ್ಠ ಕವಿಗಳು ಹಾಗೂ ಸಾಹಿತಿಗಳು ಒಂದು ರಾಷ್ಟ್ರಕ್ಕೇ ಸಂಬಂಧಿಸಿದ ವ್ಯಕ್ತಿಗಳೆಂದು ಯಾರೂ ತಿಳಿಯುವುದಿಲ್ಲ, ಬದಲಾಗಿ, 'ಶೇಕ್ಸ್‌ಪಿಯರ್'ನ ಸಾಹಿತ್ಯದ ಅಭ್ಯಾಸ, ಆರಾಧನೆಗಳನ್ನು ಪ್ರಪಂಚದ ಎಲ್ಲಾ ಜನರೂ ಏಕ ರೀತಿಯಲ್ಲಿ ಮಾಡುತ್ತಿದ್ದಾರೆ. 'ಕಾಳಿದಾಸನ ಶಾಕುಂತಲಾ ನಾಟಕವು, ಭಾರತೀಯ ಜನರ ಮನಸ್ಸನ್ನೇ ಸೂರೆಗೊಂಡುದಲ್ಲದೆ, ಅವರು ಆ ಮಹಾ ಕಾವ್ಯ ನಾಟಕವನ್ನು ತಮ್ಮ ರಂಗ ಭೂಮಿಯಲ್ಲಿ ಆಡಿದರು. ಇಷ್ಟೇ ಅಲ್ಲದೆ, ಕಾಳಿದಾಸನು ತಮ್ಮ 'ಸಾಹಿತಿ'ಯೆಂದೂ ತಿಳಿದರು. ಇದರಿಂದ ಸಾಹಿತ್ಯವು ಸರ್ವವ್ಯಾಪಕ ಶಕ್ತಿಯನ್ನು ಹೇಗೆ ಎತ್ತಿ ತೋರಿಸಿದೆಯೆಂದು ನಮಗೆ ಭಾಸವಾಗುತ್ತದೆ

ಶಕ್ತಿ, ಜೀವನವನ್ನು ಶುದ್ಧಗೊಳಿಸುವುದು, ಹಾಗೆಯೇ ಸೌಂದರ್ಯವು ಜೀವನವನ್ನು ಆನಂದಗೊಳಿಸುವುದು. ಜೀವನದ ಅಂತಿಮ ಗುರಿಯೇ ಸುಖಾನಂದ. ಕ್ಷಣಿಕವಾಗಿ ಲಭಿಸುವ ಸುಖವನ್ನು ಶಾಶ್ವತವಾಗಿ ಮಾಡಬಲ್ಲ ಯೋಗ್ಯತೆ, ಶಕ್ತಿ ಸೌಂದರ್ಯಗಳಿಂದ ಕೂಡಿದ ಸಾಹಿತ್ಯಕ್ಕಿದೆ. ಕಾಳಿದಾಸನ 'ಶಾಕುಂತಲಾ' ಮಹಾಕಾವ್ಯ ನಾಟಕದಲ್ಲಿ ಇಂತಹ ಶಕ್ತಿ, ಸೌಂದರ್ಯಗಳ ಲಹರಿಯು ಪ್ರವಾಹದಂತೆ ಎದ್ದು ಕಾಣುತ್ತದೆ. ಈ ಪ್ರಚಂಡ ಪ್ರವಾಹವೇ ವಿಶ್ವದ ಜನತೆಯನ್ನೇ ಮರುಳು ಮಾಡಿ, ಶಾಶ್ವತಾನಂದವನ್ನು ಪಡೆಯುವಂತೆ ಮಾಡಿರುತ್ತದೆ

ಸಾಹಿತ್ಯ ಜಡವಲ್ಲ, ಅದು ಸಚೇತನವಾದ ಪ್ರವಾಹ; ಕಾಲ, ಸಂಸ್ಕೃತಿ ಮತ್ತು ಮಾನವನ ಒಲುಮೆ ಹೇಗೋ ಹಾಗೆಯೇ, ಸಾಹಿತ್ಯದ ಮಾರ್ಗ ಹಾಗೂ ಪ್ರಕೃತಿ ಬದಲಾವಣೆ ಹೊಂದುತ್ತಿದೆ. ದೀರ್ಘ ಕಾವ್ಯ, ಉಪಮೆ, ಪಾಂಡಿತ್ಯ ಪೂರ್ಣ ವೈಖರಿಯನ್ನು ಆರಾಧಿಸುವ ಕಾಲವೊಂದಿತ್ತು. ಈ ಕಾಲದಲ್ಲಿ ಸಾಹಿತ್ಯವನ್ನು ಎಲ್ಲಾ ಭಾಷೆಗಳಲ್ಲೂ ನಮಗೆ ಬೇಕಾಗುವಂತೆ ಪರಿವರ್ತಿಸಿಕೊಳ್ಳಬೇಕಾಗಿದೆ. ವಿಚಾರ ಶಕ್ತಿಯ ವೇಗ, ಪ್ರಪಂಚದ ವೇಗದೊಡನೆ ಮುಂದರಿದಾಗ, ನಾವು ಕಾವ್ಯಗಳನ್ನು ರಚಿಸುತ್ತ, ಓದುತ್ತ ಕುಳಿತುಕೊಳ್ಳಲು ಸಾಧ್ಯವಿಲ್ಲ. ಆದಕ್ಕಾಗಿ ವೇಗಕ್ಕೆ ಹೊಂದಿಕೊಳ್ಳುವಂತಹ, ಸಣ್ಣ ಕಥೆ ಕಾದಂಬರಿ, ಕವಿತೆ ಪ್ರಬಂಧಗಳನ್ನು ಸೃಷ್ಟಿಸಿಕೊಂಡಿದ್ದೇವೆ. ನಮ್ಮ ಇತ್ತೀಚಿನ ಕಾವ್ಯ, ಹಾಡುಗಳು ಸಹ ಇಂತಹ ಉತ್ತಮ ಅಭಿರುಚಿ, ಮತ್ತು ವೇಗವನ್ನು ತೋರಿಸುತ್ತವೆ.

'ಸಾಹಿತಿ' ಕ್ರಾಂತಿಕಾರನಾಗಬಹುದು, 'ವಾಲ್ಟೇರ್' ಮತ್ತು 'ಬರ್ನಾರ್ಡ್ ಶಾ'ರವರ ಸಾಹಿತ್ಯ ಓದುಗರಲ್ಲಿ ಕ್ರಾಂತಿಯನ್ನುಂಟು ಮಾಡಬಹುದು. 'ಸಾಹಿತಿ' ಶಿಕ್ಷಕನಾಗಬಹುದು. ಟಾಲ್‌ಸ್ಟಾಯ್, ಈಸೋಪ ಇವರನ್ನು ಈ ವರ್ಗಕ್ಕೆ ಸೇರಿಸಬಹುದು. 'ಸಾಹಿತಿ'ಯು ಕಾಳಿದಾಸ, ವರ್ಡ್ಸ್‌ವರ್ತ್‌ರಂತೆ ಸೌಂದರ್ಯದ ಆರಾಧಕನಾಗಬಹುದು. ಶರಚ್ಚಂದ್ರ, ಟಾಗೋರ, ವೆಲ್ಸ್‌ರಂತೆ ವೈಜ್ಞಾನಿಕ ಮನೋವೃತ್ತಿಯಿರುವವನಾಗಲೂಬಹುದು. ಇವರಿಗೆ ಮಾನಸಿಕ ವಿಶ್ಲೇಷಣೆಯೇನೂ ಹೊಸತಲ್ಲ. ಅಥವಾ ಇವೆಲ್ಲವುಗಳ ಸಮ್ಮೇಳನವೂ ಆಗಿರಬಹುದು. ಕೆ ವಿ ಅಯ್ಯರರ, 'ರೂಪದರ್ಶಿ' ಮತ್ತು 'ಶಾಂತಲಾ' ಎಂಬೆರಡು ಅದ್ಭುತ ಮನೋವೈಜ್ಞಾನಿಕ ಕಾದಂಬರಿಗಳನ್ನು ಓದಿದರೆ, ಅವರ ಮಾನಸಿಕ ವಿಶ್ಲೇಷಣೆಯ ಮಟ್ಟವು ನಮಗೆ ಮನದಟ್ಟಾಗುವುದು. ಆದ್ದರಿಂದ 'ಸಾಹಿತಿ ಮತ್ತು ಸಾಹಿತ್ಯ' ಜನಜೀವನದ ಒರೆಕೋರೆಗಳನ್ನು ಸರಿಪಡಿಸುವ 'ಶಿಲ್ಪಿ ಮತ್ತು ಶಿಲ್ಪ', ವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು

ಪ್ರೌಢ ಸಾಹಿತ್ಯ, ಉದ್ಗ್ರಂಥಗಳು ವಿಚಾರ ಶಕ್ತಿಯನ್ನು ಪ್ರಚೋದಿಸುತ್ತವೆ. ಕಥೆ ಕಾದಂಬರಿ ಹರಟೆಗಳು ಮನಸ್ಸಿಗೆ ಉಲ್ಲಾಸಕರವಾದ ವಾತಾವರಣವನ್ನು ಸೃಷ್ಟಿಸಿಕೊಡುತ್ತವೆ. ಕವಿತೆ ಕಾವ್ಯಗಳು ಭಾವನೆಯ ಮಟ್ಟವನ್ನು ಮೇಲೆತ್ತಿ ಹಿಡಿಯುತ್ತವೆ. ಸಾಹಿತ್ಯ' ಈ ಕೆಳಗಿನ ಚಿಕ್ಕ 'ಕವನ'ದಿಂದ ಮಾನವನಿಗೆ ಯಾವ ರೀತಿಯಲ್ಲಿ ಸಹಾಯವಾಗುತ್ತದೆಂದು ತಿಳಿಯಬಹುದು -

"ಸಾಹಿತ್ಯವಾಚನ ಯುವ್ವನಕೆ ಸಹಕಾರಿ,
ವೃದ್ಧಾಪ್ಯದಲಿ ಮನೋಲ್ಲಾಸಕಾರಿ,
ಸಿರಿತನದಲಿ, ಉನ್ನತಿಗೆ ಕಾರಣಕಾರಿ,
ಬಡತನದಲಿ, ಶಾಂತಿದೋರುವ ದಾರಿ'

ನಮಗೆ, ಕನ್ನಡಿಗರಿಗೆ ಎಲ್ಲಾ ಬಗೆಯ ಸಾಹಿತ್ಯವು, ಅವಶ್ಯವೂ, ಆಗತ್ಯವೂ ಆಗಿದೆ. ಇಂದು ನಾವೆಲ್ಲರೂ ಲಲಿತ ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕಾಗಿದೆ. ವಿದ್ಯೆ ಹಾಗೂ ಸಾಮಾನ್ಯ ತಿಳುವಳಿಕೆಯ ಮಟ್ಟದಲ್ಲಿ ಮುಂದುವರಿಯದ ರಾಷ್ಟ್ರ ಸ್ವಯಂಪೂರ್ಣತೆಯನ್ನು ಸಾಧಿಸುವುದು ಕಷ್ಟ. ನಾವು ಜ್ಞಾನ ಅಥವಾ ತಿಳುವಳಿಕೆಯನ್ನು ಎಲ್ಲಾ ವಿಚಾರಗಳಲ್ಲಿಯೂ ಪಡೆಯಬೇಕಾಗಿದೆ. ಇಂದಿನ ಪರಿಸ್ಥಿತಿ ಹೀಗಿರುವುದರಿಂದ, ನಾವು ಒಂದೇ ಬಗೆಯ ಸಾಹಿತ್ಯದಲ್ಲಿ ಅಭಿರುಚಿ ತೋರಿಸುತ್ತ ಕುಳಿತರೆ ನಾಲದು

'ಇಂಗ್ಲಿಷ್' ಸಾಹಿತ್ಯವು ಇಂದಿನ ಯಾಂತ್ರಿಕ ಹಾಗೂ ಔದ್ಯೋಗಿಕ, ವೈಜ್ಞಾನಿಕ ಯುಗದಲ್ಲಿ ಬಹಳ ಸಹಕಾರಿಯಾಗಿದೆ. ಇಂಗ್ಲಿಷ್ ಸಾಹಿತ್ಯದಲ್ಲಿದ್ದಷ್ಟು ಗ್ರಂಥಗಳು, ಕಾವ್ಯಗಳು, ಪದ್ಯ ಗದ್ಯಗಳು, ಶಬ್ದಕೋಶಗಳು, ವಿಶ್ವಕೋಶಗಳು ಇತರ ಸಾಹಿತ್ಯದಲ್ಲಿ ದೊರಕುವುದು ದುರ್ಲಭ. ಕೆಲವು ವರ್ಷಗಳ ನಂತರ ನಮ್ಮ ಜನತೆಯೂ, ಈ ದಿಸೆಯಲ್ಲಿ ಮುಂದುವರಿಯಲು ಸಾಧ್ಯವಿದೆ. ಆದರೆ, ಅಂದಿನವರೆಗೆ ಸುಮ್ಮನೆ ಕುಳಿತಲ್ಲಿ ಲಾಭವಿಲ್ಲ. ಬದಲಾಗಿ ವಿಚಾರಶಕ್ತಿಯ ವೇಗ, ಪ್ರಪಂಚದ ವೇಗಗಳೊಡನೆ ನಾವು ನಮ್ಮ ಓಟವನ್ನು ಅವಕ್ಕೆ ಸರಿಹೊಂದಿಸಿಕೊಳ್ಳಬೇಕಾಗಿದೆ. ಇಂತಹ 'ಹೊಂದಾಣಿಕೆ'ಯನ್ನು ಮಾಡಿಕೊಳ್ಳಲು, ಯೋಗ್ಯ ತಿಳುವಳಿಕೆಯನ್ನು ಇಂಗ್ಲಿಷ್ ಸಾಹಿತ್ಯದಿಂದ ದೊರಕಿಸಿಕೊಳ್ಳಬಹುದು. ಯೋಗ್ಯವಾದ ಇಂಗ್ಲಿಷ್ ಸಾಹಿತ್ಯದ ತಿಳುವಳಿಕೆಯಿಂದ, ಅದನ್ನು ಕನ್ನಡಕ್ಕೆ ಭಾಷಾಂತರಿಸಿಕೊಳ್ಳಲು ಸುಲಭವಾಗುವುದು. ಇದಕ್ಕಾಗಿಯೇ ನಮ್ಮಲ್ಲಿ ಸಾಹಿತ್ಯದ 'ಬಹುಮುಖ' ಅಭಿರುಚಿಯು ಮುಖ್ಯವಾಗಿ ಬೇಕಾಗಿದೆ. 'ಬಹುಮುಖ' ಅಭಿರುಚಿಯನ್ನು ಬಾಲಕರಾಗಿರುವಾಗಲೇ ಬೆಳೆಯಿಸಿಕೊಳ್ಳಬೇಕಾಗಿದೆ. 'ಓದುಗಾರಿಕೆ'ಯನ್ನು ವರ್ಧಿಸುತ್ತ ಬಂದಲ್ಲಿ, ನಮ್ಮ ಬುದ್ಧಿ ಸೀಮೆಯನ್ನು ವಿಸ್ತರಿಸಲು ಅನುಕೂಲವಾಗುತ್ತದೆ. ವಿಶ್ವದ ಮೂಲೆ ಮೂಲೆಯ ಆಗುಹೋಗುಗಳ ಪರಿಸ್ಥಿತಿಯನ್ನು ತಿಳಿಯಬೇಕಾದರೆ ಬೇರೆ ಬೇರೆ ಭಾಷೆಗಳ ಜ್ಞಾನವು ವಿಶಾಲವಾಗಿ ನಮ್ಮಲ್ಲಿ ಬೆಳೆಯಬೇಕು

ಭಾರತವು ಸ್ವತಂತ್ರವಾದ ವೇಳೆ, ನಮ್ಮ ಮುಂದಾಳುಗಳು 'ಹಿಂದಿ ಭಾಷೆ'ಯನ್ನು ಇಂಗ್ಲಿಷಿನ ಸ್ಥಾನಕ್ಕೇರಿಸಬೇಕೆಂದು, ಅಂದರೆ ಸರಕಾರೀ ಭಾಷೆಯಾಗಿಸಬೇಕೆಂದು ಪ್ರಯತ್ನ ನಡೆಸುತ್ತಿದ್ದಾರೆ. ಆದರೆ, ಇದಕ್ಕೆ ಅನೇಕ ಅಡ್ಡಿ, ಆತಂಕಗಳು ಕೇಳಿಬರುತ್ತಿವೆ. ಹೇಗಿದ್ದರೂ, 'ಹಿಂದಿ'ಯನ್ನು ರಾಷ್ಟ್ರಭಾಷೆಯೆಂದಾಗಲೀ, ಸರಕಾರಿ ಭಾಷೆಯೆಂದಾಗಲೀ, ಅಥವಾ ಕೇವಲ 'ಸಾಹಿತ್ಯ' ಅಭಿರುಚಿಯ ದೃಷ್ಟಿಯಿಂದಾಗಲೀ ಅದರ ಅಭ್ಯಾಸವನ್ನು ನಮ್ಮ ಪ್ರಾಥಮಿಕ ಶಾಲೆಗಳಲ್ಲೇ ಕಡ್ಡಾಯಗೊಳಿಸುವುದು ಉತ್ತಮ. ಯಾಕೆಂದರೆ, 'ಹಿಂದಿ'ಯು ಇಡೀ ಭಾರತದ ಜನತೆಯನ್ನು, "ಏಕತಾ"ಕಿ ಡೋರಿಮೆ ಬಾಂಧ್ ಸಕ್ತೀಹೈ" ಎಂದು ಅನೇಕರು ತಿಳಿದಿದ್ದಾರೆ. ಅಂದರೆ, ಭಾರತೀಯರು ಬೇರೆ ಬೇರೆ ರಾಜಕೀಯ ಸೀಮೆಗಳವರಾಗಿ, ತಮ್ಮಲ್ಲಿರಬಹುದಾದ, ತಾರತಮ್ಯ ಭೇದಭಾವಗಳಿದ್ದರೂ 'ಒಗ್ಗಟ್ಟಿನ' ಕಟ್ಟಿನಿಂದ ಎಲ್ಲರನ್ನೂ ಬಿಗಿಯುತ್ತದೆಂದು ತಿಳಿದಿದ್ದಾರೆ

'ಹಿಂದಿ'ಯು ಅಭ್ಯಾಸಕ್ಕೆ ಸರಳವೂ, ಶ್ರವಣಕ್ಕೆ ಲಲಿತವೂ, ಮನೋಹರವೂ ಆದ ಭಾಷೆ. ಭಾಷಾಂತರಕ್ಕೆ ಸುಲಭಸಾಧ್ಯವಾಗಿದೆ. ನಮ್ಮ ಶಾಲಾ ಮಕ್ಕಳಿಗೆ, ಕನ್ನಡ, ಇಂಗ್ಲಿಷ್, ಹಿಂದಿ ಈ ಮೂರು ಭಾಷಾ ಸಾಹಿತ್ಯಗಳನ್ನು ತ್ರಿಮೂರ್ತಿಗಳೋಪಾದಿಯಲ್ಲಿ, ಭಕ್ತಿ, ಆಸಕ್ತಿಯಿಂದ ಅಭ್ಯಸಿಸುತ್ತಾ ಬರುವಂತೆ ಮಾಡಿದರೆ ನಮ್ಮ ಮುಂದಿನ ಜನಾಂಗವಾದ ಮಕ್ಕಳು, 'ಪೂರ್ಣ ಮಾನವತೆ'ಯನ್ನು ಪಡೆದು ಸ್ವಾವಲಂಬಿಗಳಾಗಿ, ಇಂದಿನ ಕನಸಿನ ರಾಮರಾಜ್ಯವನ್ನು ಮುಂದಿನ ನನಸಾಗಿ ಪಡೆಯುವುದರಲ್ಲಿ ಸಂಶಯವಿಲ್ಲ

'ಸಾಹಿತ್ಯ ವಿಚಾರದಲ್ಲಿ ಇನ್ನೂ ಹೇಳುವುದಾದರೆ, ಸಂಸ್ಕೃತವನ್ನು ಮರೆತರೆ, ನಾವು ದೇವರನ್ನು ಮರೆತಂತೆಯೇ, ಅದು ಎಲ್ಲ ಭಾರತೀಯ ಭಾಷೆಗಳ ಮೇಲೂ ಸ್ಥಿರಪ್ರಭಾವವನ್ನು ಬೀರಿದೆ. ನಮ್ಮ ಪ್ರಾಚೀನ ಭಾರತೀಯರ ಸಂಸ್ಕೃತಿಯ 'ದ್ಯೋತಕ' ವೆಂದು ಪರಿಗಣಿಸಲ್ಪಟ್ಟ 'ಸಂಸ್ಕೃತ' ಸಾಹಿತ್ಯವು ಬಹಳ ಉನ್ನತ ಮಟ್ಟದ ಸಾಹಿತ್ಯವಾಗಿದ್ದು ಪವಿತ್ರ ಗ್ರಂಥಗಳಾದ ವೇದೋಪನಿಷತ್ತುಗಳ ಮೂಲ ಭಾಷಾ ಸಾಹಿತ್ಯವಾಗಿದೆ. ಆದ್ದರಿಂದ ಬಹಳ ಪೂಜನೀಯವೂ ಆಹುದು. ಆದ್ದರಿಂದ ಸಂಸ್ಕೃತವನ್ನೂ, ನಮ್ಮ ಜನತೆಯು ತಿಳಿದಿರಬೇಕು. ಅವಶ್ಯವಾಗಿದೆ ಒಪ್ಪಿನಲ್ಲ ಹೇಳುವುದಾದರೆ, ಕನ್ನಡವನ್ನು

(೨೬ನೇ ಪುಟ ನೋಡಿರಿ)

ಮೆಲೋಡಿ ಹೌಸ್
ಚರ್ಚ್ ರೋಡ್, ಉಡುಪಿ, ದ. ಕ.

ನಮ್ಮಲ್ಲಿ ಎಲ್ಲಾ ತರದ ರೇಡಿಯೋಗಳನ್ನು, ಸಿನೆಮಾ ಎಂಪ್ಲಿಫಯರ್ ಮತ್ತು 16 ಎಮ್ ಎಮ್. ಪ್ರೊಜೆಕ್ಟರ್ ಮತ್ತು ಎಂಪ್ಲಿಫಯರುಗಳನ್ನು ಸಕಾಲದಲ್ಲಿ ಗ್ಯಾರಂಟಿಯಾಗಿ ರಿಪೇರಿಮಾಡಿ ಕೊಡಲಾಗುತ್ತದೆ

ನಾವು ಫಿಲಿಪ್ಸ್, ಮರ್ಫಿ ಮತ್ತು ನ್ಯಾಶನಲ್ ಎಕ್ಕೋ ರೇಡಿಯೋಗಳನ್ನು ಸಹಾ ತರಿಸಿಕೊಡುತ್ತೇವೆ.

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ:
ಅಧಿಕೃತ ಮಾರಾಟಗಾರರು
MELODY HOUSE
CHURCH ROAD, UDIPI (S. K.)

ನಮ್ಮ ಪ್ರಜಾಪ್ರಭುತ್ವ

ಪ್ರಜಾರಾಜ್ಯ ಕೈಸೇರಿ ಹಲವು ವರ್ಷ ನಡೆಯಿತು. ಆದರೆ ಆದರ ಸವಿಯನ್ನು ಎಲ್ಲರೂ ಉಣ್ಣುವಂತಾಗಲಿಲ್ಲ. ಇದಕ್ಕೆ ಸರಕಾರ–ಪ್ರಜೆ ಇಬ್ಬರೂ ಹೊಣೆಯಲ್ಲವೆ ಮೂರನೆಯವನಲ್ಲ. ಪ್ರಜೆ ಹಾಗೂ ಸರಕಾರಗಳು ಭಿನ್ನಾಭಿಪ್ರಾಯ ಸಸನೆ, ಆತ್ಮರ್ಥಕವಾದ ಹಾಗೂ ನಿರಸಾಹಸ ನಿರೋಧ, ಸಾರ್ವಜನಿಕ ದೃಷ್ಟಿ ಮತ್ತು ಪ್ರಕೃತ ತತ್ಪರವಾದ ಬುದ್ಧಿ ಈ ಅಂಗಚತುಷ್ಟಯವನ್ನು ಅನುಸರಿಸಿದಲ್ಲಿ ನಮ್ಮ ಪ್ರಜಾಪ್ರಭುತ್ವ ಆದರ್ಶವಾದೀತು. ನಾವು ಹಾಗಾಗ ಬಯಸಬೇಡವೆ?

ಬರೆದವರು **ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯ**

ಲೇಖಕರು.

* *

ಭಾರತಕ್ಕೆ ಸ್ವಾತಂತ್ರ್ಯವು ಬಂದು ಹತ್ತು ವರ್ಷವಾಯಿತು. ನಮ್ಮ ರಾಷ್ಟ್ರ ನಿರ್ಮಾಣ ಕಾರ್ಯದ ಮಹತ್ವಿಕೆಯನ್ನು ನಾವು ಅರಿತಿದ್ದೇವೆಯಲ್ಲದೆ, ಆಧುನಿಕ ಸಂಪ್ರದಾಯಕ್ಕನುಗುಣವಾದ ಪ್ರಜಾಪ್ರಭುತ್ವ ನೀತಿಯನ್ನು ಅಂಗೀಕರಿಸಿದ ರಾಜ್ಯದ ಸಂವಿಧಾನವನ್ನು ನಾವು ನಿರ್ಮಿಸಿಕೊಂಡಿದ್ದೇವೆ.

ಎಷ್ಟು ಚೆನ್ನಾಗಿದ್ದರೂ ರಾಮರಾಜ್ಯ ಬೇಕೇ ಹೊರತು ರಾಮನು ರಾಜನಾಗಿರುವುದು ಬೇಡ ಎಂಬುದು ನಮ್ಮ ಇಂದಿನ ಧರ್ಮ. ಪುರಾಣ ಪ್ರಸಿದ್ಧರಾದ ರಾಜರುಗಳೂ ರಾಜ್ಯಗಳನ್ನು ಸ್ವಂತಸುಖಕ್ಕಾಗಿ ಉಪಯೋಗಿಸಿಕೊಂಡರಲ್ಲದೆ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆಕೊಡದೆ ಹೋದರು. ಈ ಅಪವಾದಕ್ಕೆ ಯುಧಿಷ್ಠಿರ, ದಶರಥಾದಿಗಳೂ ಗುರಿಯಾದರು. ರಾಮನಿಗೆ ಪಟ್ಟಾಭಿಷೇಕ ಮಾಡಬೇಕು ಎಂಬುದು ಅಯೋಧ್ಯೆಯ ಪ್ರಜೆಗಳ ಅಭಿಪ್ರಾಯವಾಗಿದ್ದರೂ ಮಡದಿಗೆ ಕೊಟ್ಟ ಮಾತನ್ನು ಸಲ್ಲಿಸಲು ದಶರಥ ಪ್ರಜಾಭಿಪ್ರಾಯಕ್ಕೆ ವಿರೋಧವಾಗಿ ರಾಮನನ್ನು ಕಾಡಿಗಟ್ಟಿದ. ದಾಯಾದಿಯೊಡನೆ ಜೂಜಿನಲ್ಲಿ ಸೋತ ಯುಧಿಷ್ಠಿರ ಮಹಾರಾಜ ಪ್ರಜೆಗಳ ಸ್ವಾತಂತ್ರ್ಯವನ್ನು ಕಡೆಗಣಿಸಿ ರಾಜ್ಯವನ್ನೊತ್ತೆಯಿಟ್ಟ.

ರಾಜ ಪದವಿಯು ವಿಶೇಷವಾಗಿ ಬೆಳೆದು ನಿರಂಕುಶಾಧಿಕಾರವನ್ನು ತಾಳಿತಾಗ ಎಂತಲೇ ಅದನ್ನು ತೊಡೆದು ಹಾಕಿ ಪ್ರಜಾರಾಜ್ಯದ ಕಾಲ ಅವತರಿಸಿತು. ಪುರಾತನ ಭಾರತದಲ್ಲೂ ಪ್ರಜಾರಾಜ್ಯ ಪದ್ಧತಿ ಆಚರಣೆಯಲ್ಲಿತ್ತೆಂಬುದು ಆಧಾರಗಳಿಂದ ತಿಳಿಯುವುದಾದರೂ ಪ್ರಜಾಪ್ರಭುತ್ವ ಪದ್ಧತಿ ವಿಶೇಷವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೇ ಬೆಳೆದು ಬಂದಿತ್ತು. ಅದರಲ್ಲಿಯೂ ಹೆಚ್ಚಾಗಿ ಬೆಳೆದದ್ದು ಇಂಗ್ಲೆಂಡಿನಲ್ಲಿ. ಆದುದರಿಂದಲೇ ಇಂದು ನಾವು ನಮ್ಮ ದೇಶದಲ್ಲಿ, ನಮ್ಮ ಮನೆಯಲ್ಲಿಯೇ ಇದ್ದೇವೆ. ಯಾವರೂ ನಾವು ಅಂಗೀಕರಿಸಿರುವ ರಾಜ್ಯಾಂಗವು ನಮ್ಮ ನೇಕಕ್ಕೆ ತೀರಾ ಹೊಸತು ಎಂಬುದು ಅನುಭವದಿಂದ ತಿಳಿದು ಬರುತ್ತದೆ. ನಮ್ಮ ಸಂವಿಧಾನ ನಮ್ಮ ಅನುಭವದ ಫಲವಾಗಿ ಹುಟ್ಟಿ ಬಂದದ್ದಲ್ಲ. ಆದುದರಿಂದಲೇ ಏನೋ ಅದರ ಕಾರ್ಯಾಚರಣೆಯಲ್ಲಿಯೂ ಜನರ ಆಸಕ್ತಿ ಸಾಕಷ್ಟು ತೋರಿ ಬರುತ್ತಿಲ್ಲ.

ನಮ್ಮಲ್ಲಿ ನಮ್ಮ ಪ್ರಜಾ ಸರಕಾರದ ಏರ್ಪಾಡಿನಂತೆ ಶಾಸನ ಕರ್ತರಿದ್ದಾರೆ. ಮಂತ್ರಿಗಳಿದ್ದಾರೆ, ಆಡಳಿತದಾರರಿದ್ದಾರೆ. ಆಳಿಸಿ ಕೊಳ್ಳಿಸಿಕೊಳ್ಳುವವರಂತೂ ಇರಲೇ ಬೇಕಷ್ಟೆ? ಇನ್ನು ಶಾಸನಗಳಿಗೆ ಅರ್ಥಗಳನ್ನು ಕಲ್ಪಿಸುವ— ಜನಸಾಮಾನ್ಯರು, ನ್ಯಾಯಗಳನ್ನು ನೀಡುವ ನ್ಯಾಯಾಲಯಗಳಿವೆ. ಲೋಕಸಭೆ ಇದೆ, ರಾಜ್ಯಸಭೆ ಇದೆ, ವಿಧಾನಸಭೆ ವಿಧಾನ ಪರಿಷತ್ತುಗಳಿವೆ. ಆಡಳಿತ ಕೇಂದ್ರೀಕೃತವಾಗಿಯೂ ಇದೆ; ವಿಕೇಂದ್ರೀಕೃತವಾಗಿಯೂ ಇದೆ. ಜಿಲ್ಲಾ ಬೋರ್ಡು, ಪಂಚಾಯತ ಬೋರ್ಡುಗಳಂತಹ ಸ್ವರಾಜ್ಯ ಸಂಸ್ಥೆಗಳೂ ಇವೆ. ಅಲ್ಲದೆ, ಸಮಾಜವಾದ ಕಲ್ಯಾಣ ರಾಷ್ಟ್ರದ ನಿರ್ಮಾಣಕ್ಕಾಗಿ ಸಮಾಜಾಭಿವೃದ್ಧಿ ಇಲಾಖೆಗಳೂ, ರಾಷ್ಟ್ರೀಯ ವಿಸ್ತರಣ ಯೋಜನಾ ಇಲಾಖೆಗಳೂ ಸಮಾಜ ವಿಕಾಸನ ಕೇಂದ್ರಗಳೂ ಭಾರತ ಸೇವಕ ಸಮಾಜ ಸಂಸ್ಥೆ ಹೀಗೆ ಹಲವು ಸಂಸ್ಥೆಗಳು ಇಲಾಖೆಗಳೂ ಇವೆ. ಈ ಹತ್ತು ವರ್ಷಗಳೂ ಎರಡು ಪಂಚವಾರ್ಷಿಕ ಯೋಜನೆಗಳೂ ಕ್ರಿಯಾರೂಪಕ್ಕೆ ಬಂದಿವೆ, ಬರುತ್ತಲಿವೆ.

ಮಹಾ ಚುನಾವಣೆಗಳು ಎರಡು ನಡೆದೇ ಹೋದುವು—ನಮ್ಮ ಸಂವಿಧಾನಕ್ಕನುಗುಣವಾದಂತೆ ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ನಮ್ಮಲ್ಲಿ ಆಚರಣೆಯಲ್ಲಿದ್ದು ಅದಕ್ಕನುಸಾರವಾಗಿ ಆಡಳಿತ ಪಕ್ಷವಿದೆ ವಿರೋಧ ಪಕ್ಷಗಳೂ ಇವೆ. ಪ್ರತಿಯೊಬ್ಬ ವಯಸ್ಕನಿಗೂ ಮತದಾನದ ಹಕ್ಕು ಇದೆ. ಭಾರತವು ಜಾತ್ಯತೀತ ರಾಷ್ಟ್ರ ಎಂದು ಘೋಷಿಸಲ್ಪಟ್ಟಿದೆ. ಯಾದರೂ ಯಾವುದೇ ಮತಧರ್ಮಗಳ ರಚನಾತ್ಮಕ ಕಾರ್ಯಭಾರಗಳಿಗೆ ಅಡ್ಡಿಯಿಲ್ಲ.

ಇಷ್ಟೆಲ್ಲ ಒಳ್ಳೆಯದಿದ್ದರೂ ಒಳ್ಳೆಯದಾಗಿ ಕಂಡು ಬಂದರೂ ಅದರ ನಿಜವಾದ ಪರೀಕ್ಷೆ ಜನಸಾಮಾನ್ಯರ ಅನುಭವದಿಂದ ತಿಳಿಯಬೇಕು. ನಮ್ಮ ರಾಜ್ಯಾಂಗದಲ್ಲಿ ಅಡಕವಾಗಿರುವ ಸದುದ್ದೇಶಗಳನ್ನು ಪ್ರತ್ಯಕ್ಷ ಪಡಿಸಬೇಕಾದವರು ಸರಕಾರಿ ಅಧಿಕಾರಿಗಳು, ಸರಕಾರಿ ಅಧಿಕಾರಿಗಳು ಮಾತ್ರವಲ್ಲ, ನಮ್ಮ ಚುನಾಯಿತ ಪ್ರತಿನಿಧಿಗಳು ಜಿಲ್ಲಾ ಬೋರ್ಡುಗಳು, ಪಂಚಾಯಿತ ಬೋರ್ಡುಗಳು, ಮಂತ್ರಿಗಳು, ಮುಂತಾಗಿ ಪ್ರಜಾರಾಜ್ಯ ಎಂಬ ಯಂತ್ರದ ಚಿಕ್ಕ ಮೊಳೆಯಿಂದ ಆರಂಭಿಸಿ ಕೊನೆಯ ಸ್ಟಿಯರಿಂಗ್ ವರೆಗಿನ ಎಲ್ಲರೂ ಆಗುತ್ತಾರೆ. ಈ ಯಂತ್ರಚಾಲನೆಯಲ್ಲಿ ಎಲ್ಲಿ ಯಾವ ಮೊಳೆ ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸದಿದ್ದರೂ ಇಡಿಯ ಯಂತ್ರದ ಕಾರ್ಯ ಕೆಡುತ್ತದೆ. ಅಥವಾ ಯಂತ್ರವೇ ನಿಂತು ಹೋಗುತ್ತದೆ, ಪರಿಣಾಮವಾಗಿ ರಾಷ್ಟ್ರದ ಉಸಿರೇ ನಿಂತಂತಾಗುತ್ತದೆ. ಹೀಗೆ ನಮ್ಮ ಆಡಳಿತದಲ್ಲಿ ಸೊಗಸು ಇಲ್ಲವಾದಲ್ಲಿ ಆಗ ನಮ್ಮ ರಾಜ್ಯಾಂಗ ಸೌಂದರ್ಯ ಸೌಗಂಧ ಇವೆರಡನ್ನು ಕಳೆಕೊಂಡ ಕಾಗದದ ಹೂವಿನಂತಾಗುತ್ತದೆ.

ನಮ್ಮ ದಿನನಿತ್ಯದ ಅನುಭವಗಳನ್ನೇ ನಾವು ನೋಡೋಣ. ಪ್ರಜೆಗಳಾದ ನಮ್ಮ ಮೊದಲ ಕರ್ತವ್ಯ ನಮ್ಮ ಸರಕಾರಕ್ಕೆ ನಾವು ತೆರಬೇಕಾದ ತೆರಿಗೆಗಳನ್ನು ವಂಚನೆಯಿಲ್ಲದೆ ತೆರುವುದು. ಅದನ್ನೇ ನಾವು ಯಥೇಷ್ಟವಾಗಿ ತೆರುತ್ತಿದ್ದೇವೆ. ಈಗ ಕೊಂಚ ಹೆಚ್ಚಾಗಿಯೇ ತೆರುತ್ತಿದ್ದೇವೆ. ಮಾತ್ರವಲ್ಲ ಸರಕಾರಕ್ಕೆ ಕೊಂಚ ಸಾಲವನ್ನೂ ಒದಗಿಸುತ್ತಿದ್ದೇವೆ—ಕೊಂಚದ ನಷ್ಟವೂ ಸಲ್ಲುತ್ತಿದೆ ಎಂದರೆ ತಪ್ಪಾಗದು. ಆತ್ಮ ಪ್ರೇರಣೆಯೋ ಬಲಾತ್ಕಾರವೋ— ಈ ಟೀಕೆ ಮಾತು ಬೇಡ—ಸಲ್ಲುವಂತೂ ಕ್ರಮವಾಗಿ ಸಲ್ಲುತ್ತಿದೆ—ಸಲ್ಲಬೇಕು. ತೆರಿಗೆಯನ್ನು ತೆರುವುದು ಮಾತ್ರ ಪ್ರಜೆ ತನ್ನ ಕರ್ತವ್ಯವನ್ನು ಮರೆಯಬಾರದು, ಸರಕಾರವನ್ನು ವಂಚಿಸಲೂ ಬಾರದು. ಸರಿ. ತಾನು ತೆತ್ತ ತೆರಿಗೆಯಿಂದ ಈ ನಾಗರಿಕ ಪ್ರಜೆ ತನ್ನ ಜೀವನಕ್ಕೆ ಅವಶ್ಯವಾದ ಕೆಲವು ಅತಿ ಕನಿಷ್ಠ ಸೌಲಭ್ಯ—ಸೌಕರ್ಯಗಳನ್ನು ನಿರೀಕ್ಷಿಸುತ್ತಾನೆ. ಅವು ಆವನಿಗೆ ನ್ಯಾಯವಾಗಿ ದೊರೆಯದೆ ಹೋದಲ್ಲಿ ಆ ಸರಕಾರದಲ್ಲಾಗಲೀ ಅದರ ರಾಜ್ಯ ಪದ್ಧತಿಯಲ್ಲಾಗಲೀ ಅಲ್ಲಿನ ಆಡಳಿತಗಾರರಲ್ಲಾಗಲೀ ಅವನು ಎಷ್ಟೇ ಒಳ್ಳೆಯವರಾಗಿದ್ದರೂ ಅದರಲ್ಲಿ ಆ ಪ್ರಜೆಗೆ ಏನೂ ವಿಶ್ವಾಸವಿರುವುದಿಲ್ಲ ಮಾತ್ರವಲ್ಲ ಅಂತಹ ಒಂದು ಸರಕಾರವನ್ನು ಪ್ರತಿ ಸಂದೇಹ ದೃಷ್ಟಿಯಿಂದ ನೋಡುತ್ತಾನೆ.

ಆದರೆ, ನಮ್ಮ ನ್ಯಾಯವಾದ ತೆರಿಗೆಯನ್ನು ತೆತ್ತ ಪ್ರಜೆಗೆ ಸ್ವರಾಜ್ಯದ ಸಂಕ್ರಮಣ ಕಾಲದಲ್ಲಿ ಸಂಬರಾಜು ಮಾಡಬೇಕಾದವರು ನಮ್ಮೊಡನೆ ಪ್ರಜಾಪ್ರಭುತ್ವದ ಗಾಲಿ ವ್ಯಾಪಾರ ಪದ್ಧತಿಯಲ್ಲಿ ಒಪ್ಪಂದ ಮಾಡಿಕೊಂಡ ಪ್ರಜಾಪ್ರತಿನಿಧಿಗಳ— ಪ್ರಜಾಪ್ರತಿನಿಧಿಗಳೆಂದರೆ ಶಾಸನ ಸಭೆಯವರೋ ಲೋಕ ಸಭೆಯವರೋ ಮಾತ್ರವೆಂದಲ್ಲ, ನಮ್ಮಲ್ಲಿಯ ಪಂಚಾಯತ ಬೋರ್ಡು ಮತ್ತು ಜಿಲ್ಲಾ ಬೋರ್ಡುಗಳ ಪ್ರತಿನಿಧಿಗಳೂ ಈ ಸಾಲಿನಲ್ಲಿ ಬರುತ್ತಾರೆ—

ನಮ್ಮಲ್ಲಿರುವ ಹಳ್ಳಿಗಳನ್ನು ಉದಾಹರಣೆಗಾಗಿ ತೆಗೆದುಕೊಳ್ಳೋಣ. ಪ್ರತಿಯೊಂದು ಗ್ರಾಮಕ್ಕೆ ಅಥವಾ ಎರಡು ಮೂರು ಗ್ರಾಮಗಳಿಗೆ ಒಂದರಂತಾದರೂ ಪಂಚಾಯತ ಬೋರ್ಡುಗಳ ವ್ಯವಸ್ಥೆ ಇದೆಯಷ್ಟೆ. ಇಲ್ಲಿನ ಚುನಾವಣೆಗಳೂ ಪ್ರಜಾರಾಜ್ಯಾಂಗಕ್ಕನುಸಾರವಾಗಿಯೇ ನಡೆಯುತ್ತಲಿವೆಯಷ್ಟೆ. ಇಲ್ಲೂ ಚುನಾವಣೆಗಳಲ್ಲಿ ಪಕ್ಷ ಪ್ರತಿಪಕ್ಷಗಳು ಹೋರಾಟ ನಡೆಸುತ್ತವೆ. ಗಾಂಧಿ, ನೆಹರು, ಕಾಶ್ಮೀರ ಸಮಸ್ಯೆ, ಅಂತರ್ರಾಷ್ಟ್ರೀಯ ರಾಜಕಾರಣ ಇವೆಲ್ಲ ನಮ್ಮ ಪಂಚಾಯತ ಮತ್ತು ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಪ್ರಚಾರವಸ್ತುಗಳಾಗುತ್ತವೆ. ಕೊನೆಗೆ ದಿಲ್ಲಿಯಲ್ಲೋ ಬೆಂಗಳೂರಲ್ಲೋ ಆಡಳಿತದಲ್ಲಿರುವ ಪಕ್ಷವೇ ಬಹುಮತದಿಂದ ಅಧಿಕಾರಕ್ಕೆ ಬರುತ್ತದೆ— ಆದರೆ ಪರಿಣಾಮ ಹೇಗೆ? ಊರಿನ ಎಲ್ಲ ತೋಡುಗಳಿಗೆ ಸಂಕಗಳಿವೆಯೇ? ದಿನಕ್ಕೆ ಸರಾಸರಿ ನೂರು ಮಂದಿ ತಿರುಗುವ ಕಡೆಗಳಲ್ಲಿ ರಸ್ತೆಗಳಾಗಲೀ ಕಾಲು ಮಾರ್ಗಗಳ ವ್ಯವಸ್ಥೆಯಾದರೂ ಇದೆಯೇ? ಇಂತಹ ಕಡೆಗಳಲ್ಲಿ ರಾತ್ರಿಕಾಲದಲ್ಲಿ ಜನ ಸಂಚಾರಕ್ಕೆ ಯೋಗ್ಯವಾದ ದೀಪಗಳಿವೆಯೆ? ಊರಲ್ಲಿ ಶಾಲೆಗಳಿರುವ ದಿಕ್ಕಿಗೆ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಬರಲು ಮಾರ್ಗಗಳ ಅನು

(....... ನೋಡಿರಿ)

ಅರ್ಥವಾಗದ ನಮ್ಮ ರಾಜಕೀಯ

ನಮ್ಮ ಜನರಲ್ಲಿ ಪ್ರಜಾಪ್ರಭುತ್ವ ಭಾವನೆ ಮೊಳೆತಿಲ್ಲ ಅಧಿಕಾರಿಗಳು, ಜನತಾ ಪ್ರತಿನಿಧಿಗಳು ಜನತೆಯಿಂದ ದೂರ ದೂರವಾಗುತ್ತಿರುವರು ಹಾಗಿರುವಾಗ ನಮ್ಮ ಈ ಭಾರತ ಗಣತಂತ್ರದ ರಾಜಕೀಯವೆಂಬುವೇ ಒಂದು ಒಗಟು ಇದನ್ನು ನೀವು ಬಿಡಿಸಬಲ್ಲಿರಾದರೆ, ಒಮ್ಮೆ ಪ್ರಯತ್ನಿಸಿನೋಡಿ

ಬರೆದವರು ಶ್ರೀ ವಿಶ್ವೇಶ್ವರಶರ್ಮಾ ತದ್ದಲಸೆ

ಅನ್ನದಿಂದ ನಮ್ಮ ಶರೀರ ಹೇಗೆ ಬದುಕುತ್ತದೆಯೋ, ಬೆಳೆಯುತ್ತದೆಯೋ, ಹಾಗೆಯೇ ಇಂದು ನಮ್ಮ ಜೀವನವೂ ಸುಖಮಯವಾಗಿ ಬೆಳೆಯಬೇಕಾದರೆ ರಾಜಕೀಯದ ತಿಳುವಳಿಕೆ ಅತ್ಯವಶ್ಯವೆಂಬುದನ್ನು ಪ್ರಜಾಪ್ರಭುತ್ವದ ಪ್ರತಿಯೊಬ್ಬ ಪ್ರಜೆಯೂ ತಿಳಿದ ಸಂಗತಿಯೇ ಆಗಿದೆ. ಅನ್ನವನ್ನು ಹೆಚ್ಚೆಚ್ಚು ಅರಗಿಸಿಕೊಂಡಂತೆ ಶರೀರಕ್ಕೂ ಹೆಚ್ಚೆಚ್ಚು ಸಮೃದ್ಧಿಯುಂಟಾಗುವಂತೆಯೇ ರಾಜಕೀಯವನ್ನೂ ನಾವು ಜೀರ್ಣಿಸಿಕೊಂಡಂತೆಲ್ಲ ನಮ್ಮ ಬಾಳು ಭವ್ಯವಾಗುವುದರಲ್ಲಿ ಸಂದೇಹವಿಲ್ಲ

ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು ಪ್ರಜಾವರ್ಗದಲ್ಲಿ ಏನೇ ಉಂಟಾದರೂ ಅದಕ್ಕೆ ಹೊಣೆಗಾರ ಪ್ರಜೆಯೇ, ಸುಖಬರಲೀ, ದುಃಖಬರಲೀ, ಬಯ್ಯಲಿ ಹೊಗಳಲಿ ಅದಕ್ಕೆಲ್ಲ ಸಂಬಂಧಿಸಿದವರು ಪ್ರಜೆಗಳೇ, ಆಡಳಿತದಲ್ಲಿ ತೊಡಕುಬರಲಿ, ಶ್ರೇಯಸ್ಸುಬರಲಿ, ಅವೆಲ್ಲವೂ ನಮ್ಮದೇ.

ಹೀಗೆ ಪ್ರತಿಯೊಂದಕ್ಕೂ ಪ್ರಜೆಯೇ ಕಾರಣನಾಗಿರುವಾಗ ರಾಜಕೀಯದಲ್ಲಿ ನಾವಷ್ಟು ಅಭ್ಯಾಸಮಾಡಬೇಕೆಂಬುದು ಸ್ಪಷ್ಟವಾಗುತ್ತದೆ ಅದು ನಮಗೆ ರುಚಿಸಲಿ, ರುಚಿಸದೇ ಇರಲೀ, ಅಂತೂ ಬದುಕಲು ಅನ್ನ ಬೇಕಾದಂತೆ, ಬಾಳಲು ರಾಜಕೀಯಬೇಕು.

ಐದು ವರ್ಷಗಳಿಗೊಮ್ಮೆ ರಾಜಕೀಯದಲ್ಲಿ ನಮ್ಮ ಅಭ್ಯಾಸ ಎಷ್ಟೆಂಬುದರ ಸತ್ವಪರೀಕ್ಷೆ ನಡೆಯುತ್ತದೆ ಆಗ ನಮ್ಮಲ್ಲಿರುವ ಪ್ರಭುಶಕ್ತಿಯನ್ನು ಕೇಂದ್ರೀಕರಿಸಬೇಕಾಗುತ್ತದೆ ನಮ್ಮ ಮೇಲೆ ಶಾಸನಮಾಡುವವರನ್ನು ನಾವು ಆರಿಸಬೇಕ ಪ್ರಜಾಪ್ರಭುತ್ವದಲ್ಲಿ ಅದು ಮಹಾಪರ್ವಕಾಲ ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಕಾಲ

ಈ ಕಾಲದಲ್ಲಿ ರಾಜಕೀಯದ ಬಗ್ಗೆ ನಾವು ಸಾಕಷ್ಟು ವಿಚಾರಿಸದಿದ್ದರೆ ನಮ್ಮ ಮೇಲೆಯೇ ಅದರ ಪ್ರತಿಕ್ರಿಯೆ ನಡೆಯುತ್ತದೆ ಅರ್ಹತೆ ಇಲ್ಲದಿದ್ದ ಅನೇಕ ಧೂರ್ತರೆಷ್ಟೋ ಶಾಸಕರಾಗಿ ಅವರ ಅನನುಭವದ ಅಪಕ್ವ ಧೋರಣೆಯಿಂದಾಗಿ ನಮ್ಮ ಮೇಲೆಯೂ ನಮ್ಮ ರಾಜ್ಯದ ಮೇಲೆಯೂ ತೀರಾ ದುಷ್ಪರಿಣಾಮವಾಗುವ ಸಂಭವವಿರುತ್ತದೆ. ಚುನಾವಣೆಯ ಸಂದರ್ಭ ಅನೇಕರು ಸ್ವಾರ್ಥಕ್ಕಾಗಿಯೂ, ಅಧಿಕಾರ ಲಾಲಸೆಗಾಗಿಯೂ ನಿಂತುಕೊಳ್ಳುತ್ತಾರೆ. ಆಗ ಓಟುಕೊಡುವವನು ವಿಚಾರಿಸದೇ ಓಟುಹಾಕಿದರೆ, ಅದರ ಕಾಟ ಬಹು ದೊಡ್ಡದಾಗಬಹುದು ನಮ್ಮ ಪ್ರತಿನಿಧಿಗಳೆಂದು ಹೇಳುವರು ಆಗ ಹೇರಳವಾಗಿ ದೊರಕುತ್ತಾರೆ. "ಭೂಮಿಗೆ ಸ್ವರ್ಗವನ್ನೇ ಇಳಿಸಬಲ್ಲೆ" ಎಂದು ಹೇಳುತ್ತಾರೆ. ಆದರೆ ಚುನಾವಣೆಯನಂತರ ನಮ್ಮ ಪ್ರತಿನಿಧಿಗಳಿಂದ ನಮಗೆ ದೊರಕುವುದು ಅವರ ಆಶ್ವಾಸನದ "ಪ್ರತಿ" ಮಾತ್ರ, ನಿಧಿ ಅವರಿಗೆ!

ಹಾಗಾಗಿ ರಾಜಕೀಯದ ಬಗ್ಗೆ ನಾವು ಅಭ್ಯಾಸಮಾಡಬೇಕೆಂದು ಹೇಳಿದರೂ ಸಾಕಷ್ಟು ಶಿಕ್ಷಣದಿಂದ ಮುಂದರಿಯದಿದ್ದ ನಮ್ಮ ಜನಕ್ಕೆ ಇದೆಲ್ಲಿ ಸಾಧ್ಯ ಎಂದೆನಿಸುತ್ತದೆ ತಮ್ಮ ಜೀವನದ ಬಗ್ಗೆಯೇ ಸುಧಾರಣೆ ಮಾಡಿಕೊಳ್ಳುವಷ್ಟು ನಾಗರೀಕತೆ ಅವರಲ್ಲಿ ಬೆಳೆಯದಿದ್ದಾಗ ರಾಜಕೀಯದ ಪಕ್ಷ ಪಂಗಡಗಳ ತತ್ವ, ಧ್ಯೇಯಗಳೆಲ್ಲ ಹೇಗೆ ತಿಳಿಯಬೇಕು? ಅದರಲ್ಲೂ ಇಂದಿನ ರಾಜಕೀಯ ಸಾಮಾನ್ಯ ಜನಕ್ಕೆ ಅರ್ಥವೇ ಆಗುತ್ತಿಲ್ಲ

ನಮ್ಮ ರಾಜ್ಯದಲ್ಲಿ ಉಂಟಾಗುತ್ತಿರುವ ಅನೇಕ ಪರಿಸ್ಥಿತಿಗಳನ್ನು ಗಮನಿಸಿದಾಗ ಇದು ಪ್ರಜಾಪ್ರಭುತ್ವವೋ, ಅಥವಾ ಅದರ ಹೆಸರಿನಲ್ಲಿ ನಡೆಯುತ್ತಿರುವ ಸರ್ವಾಧಿಕಾರತ್ವವೋ ಎಂದು ಆಲೋಚಿಸಬೇಕಾಗುತ್ತದೆ ಚುನಾವಣೆಯ ಸಂದರ್ಭ ಮಾತ್ರ ಪ್ರಜಾಪ್ರಭುತ್ವದ ಹೆಸರನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆಯೇ ಹೊರತು—ಉಳಿದ ವ್ಯವಹಾರದಲ್ಲಿ, ಚುನಾವಣೆ ಮುಗಿದನಂತರ ಅದು ಹೆಸರಿನಲ್ಲಿಯೇ ಉಳಿಯಬೇಕು ಇನ್ನು ಎಲ್ಲಿಯಾದರೂ ಜನವರಿ ೨೬ ಅಥವಾ ಆಗಸ್ಟ ೧೫ರ ದಿನ ಮುಖಂಡರ ಬಾಯಲ್ಲಿ ಭಾಷಣಮಾಡುವಾಗ ಎಲ್ಲಿಯಾದರೂ ಪ್ರಜಾಪ್ರಭುತ್ವದ ಹೆಸರು ಬರುವುದುಂಟು! ಹೆಚ್ಚಾಗಿ ಜನಸಾಮಾನ್ಯರಿಗೂ ಈ ಬಗ್ಗೆ ಕುತೂಹಲವಾಗಲೀ, ಆಕರ್ಷಣೆಯಾಗಲೀ ಇರುವುದೂ ಇಲ್ಲ ಯಾಕಂದರೆ ಈ ರಾಜಕೀಯ ಕ್ಷೇತ್ರ ಕೆಲವರಿಗೇ ಮೀಸಲಾಗಿರುತ್ತದೆ ಪ್ರತಿವರ್ಷವೂ ಅವರೇ ಅಲ್ಲಿಯ ಸ್ಥಾನ, ಅಧಿಕಾರಗಳನ್ನೆಲ್ಲ ಗುತ್ತಿಗೆ ಪಡೆಯುತ್ತಾರೆ. ಇಡೀ ಜಿಲ್ಲೆಯಲ್ಲಿ ಒಬ್ಬೊಬ್ಬರಿಗೆ ಎಲ್ಲಿಯಾದರೂ ಹೊಸಬರಿಗೆ ಏನಾದರೂ ಸಣ್ಣಪುಟ್ಟ ಸ್ಥಾನ ದೊರಕಿದರೆ ಅದು ಅವರ ಪುಣ್ಯವೆಂದೇ ತಿಳಿಯಬೇಕು ಸಂಸ್ಥೆಯ ಸದಸ್ಯರನ್ನು ಮಾಡುವಾಗಲೂ ಸದಸ್ಯರಿಗೆ ಪಕ್ಷದ ತತ್ವ, ವಿಚಾರ ತಿಳಿಯಬೇಕೆಂಬ ಉದ್ದೇಶವಿರುವದಿಲ್ಲ ತಾನು ಹೆಚ್ಚು ಸದಸ್ಯರನ್ನು ಮಾಡಿ ಅಧಿಕಾರಪಡೆಯಬೇಕೆಂಬುದೇ ವಿಚಾರ ನಡೆಯುತ್ತದೆ ಅದರಲ್ಲಿಯೂ ರಾಜಕೀಯದಲ್ಲಿ ಬಗೆಹರಿಸಲಾಗದ ದುರ್ಬಲ ವ್ಯಕ್ತಿಗಳನ್ನೇ ಸದಸ್ಯರನ್ನಾಗಿ ಮಾಡುವ (ಕು+) ತಂತ್ರವೂ ಇದೆ ಎಂದಮೇಲೆ ರಾಜಕೀಯದ ತಿಳುವಳಿಕೆ ಜನಕ್ಕೆ ಹೇಗೆ ಬರಬೇಕು- ಹೇಗೆ ಬೆಳೆಯಬೇಕು?

ಇನ್ನು ಮಂತ್ರಿ, ಮುಖಂಡರ, ಅಧಿಕಾರಿಗಳ ವ್ಯವಹಾರ ನಡತೆಯೂ ಕಾರ್ಯಕಲಾಪಗಳೂ ಪ್ರಜಾಪ್ರಭುತ್ವದ ಯಾವ ನಿಲುವೆಯನ್ನೂ ತೋರಿಸುವ ರೀತಿಯಲ್ಲಿರುವುದಿಲ್ಲ ಒಬ್ಬ ಮಂತ್ರಿಗಳು ಬರುತ್ತಾರೆಂದರೆ ಆ ಪೋಲೀಸ ಬಂದೋಬಸ್ತು, ಅವರ ಬೆನ್ನಹಿಂದೆ ತಿರುಗುವ ಸರ್ಕಾರೀ ಜನ, ಇವೆಲ್ಲ ಪ್ರಜಾಪ್ರತಿನಿಧಿಗಳಾದ ಅವರಿಗೆ ಯಾಕೆ ಎಂದೆನಿಸುತ್ತದೆ, ಅಧಿಕಾರಿಗಳಾದ ನಂತರ ಪ್ರಜೆಗಳ ಸಂಪರ್ಕವೇ ಅವರಿಗೆ ತಪ್ಪಿ ಹೋಗುತ್ತದೆ ಎಲ್ಲಿ ಯಾವರೂ ಬಂಗಲೆಯಲ್ಲಿ ಉಳಿದು, ಕೆಲವು ಸರ್ಕಾರೀ ಅಧಿಕಾರಿಗಳನ್ನು ಕಂಡು ಪಕ್ಷದ ಮುಖಂಡರೊಡನೆ ಸಂಭಾಷಣೆ ನಡೆಸಿದರೆ ಮಂತ್ರಿಗಳ ಪ್ರವಾಸ ಭರ್ಜರೀ ನಡೆದಂತೆ! ಅಲ್ಲಲ್ಲಿಯ ರೈತರ ಪರಿಸ್ಥಿತಿಯೇನು? ಪರಿಹಾರವೇನು? ಜನಸಾಮಾನ್ಯರ ಜೀವನದ ಮಟ್ಟ ಹೇಗಿದೆ? ಇತ್ಯಾದಿ ಪ್ರಜೆಗಳಿಗೆ ಸಂಬಂಧಿಸಿದ ಹೆಚ್ಚಿನ ವಿಷಯಕ್ಕೇ ಮಹತ್ವ ಕೊಡದೆ, ಪ್ರಜೆಗಳ ಹೇಳಿಕೆ, ಕೇಳಿಕೆಯನ್ನು ಅಲಕ್ಷಿಸುವದನ್ನು ಕಂಡರೆ ಪ್ರಜಾಪ್ರಭುತ್ವದ ಅರ್ಥವನ್ನು ನಾವು ಹೇಗೆ ಮಾಡಬೇಕೋ ತಿಳಿಯದಾಗಿದೆ. ಸರ್ಕಾರೀ ಅಧಿಕಾರಿಗಳಲ್ಲಂತೂ ತಾವು ಜನತೆಯ ಸೇವಕರೆಂಬ ಭಾವನೆಯ ಬದಲಾಗಿ ಜನತೆಯನ್ನು ಆಳುವ, ಅವರ ಮೇಲೆ ಅಧಿಕಾರ ನಡೆಸುವ ಅಧಿಕಾರಿಗಳೆಂಬ ಭಾವನೆಯೇ ಬೆಳೆದು ಬಿಟ್ಟಿದೆ. ಅಂದ ಮೇಲೆ ನಮ್ಮ ರಾಜಕೀಯದ ಅರ್ಥವನ್ನು ಜನ ಹೇಗೆ ತಿಳಿಯಬೇಕ?

ನಮ್ಮ ಪ್ರತಿನಿಧಿಗಳು ಆರಿಸಿ ಹೋದ ನಂತರ ಜನಸಂಪರ್ಕ ಪಡೆಯುವದೆಂದರೆ ಮತ್ತೊಂದು ಚುನಾವಣೆಯೇ ಬರಬೇಕು. ಅಷ್ಟರ ಒಳಗಾಗಿ ಜನರನ್ನು ಕಾಣುವದು ಅವರಿಗೇನೂ ಅವಶ್ಯವಿರುವುದಿಲ್ಲ. ಸಭೆ, ಸಮ್ಮೇಲನಗಳಲ್ಲಿ ತಮ್ಮನ್ನ ಪ್ರದರ್ಶಿಸಿ ಕೊಳ್ಳುವ ಕೆಲವು ರಾಜಕೀಯ ಮುಖಂಡರಿದ್ದಾರೆ ಆಗ ಜನರನ್ನು ಸಂತೈಸುವದಕ್ಕಾಗಿ ಏನಾದರೂ ಹೇಳುವುದಿದೆ ಆದರೆ ಆ ಹೇಳಿಕೆ ಹೇಳಿಕೆಯಲ್ಲೇ ಉಳಿಯುವದೂ ಇದೆ.

ಇನ್ನೂ ಅನೇಕ ರೀತಿಯಿಂದ ನಮ್ಮ ರಾಜಕೀಯದ ಬಗೆಗೆ ನಿಶ್ಚಿತ ಸ್ವರೂಪವೂ ಪ್ರಜಾಪ್ರಭುತ್ವದ ರೀತಿಯೂ ಇಲ್ಲದೇ ಇದ್ದುದರಿಂದ "ಈ ಅರ್ಥವಾಗದ ರಾಜಕೀಯ ನಮಗೇಕೆ"? ಎಂದು ಜನ ಆ ಬಗ್ಗೆ ಅಲಕ್ಷ ಮಾಡುವದು ಸ್ವಾಭಾವಿಕವೇ? ಪಕ್ಷಕ್ಕಿಂತಲೂ ವ್ಯಕ್ತಿಯೇ ಪ್ರಧಾನವಾಗಿ ವ್ಯವಹರಿಸಿದರ ಪಕ್ಷದ ಧ್ಯೇಯ ಧೋರಣೆಗಳು ಹೇಗೆ ಉಳಿದು ಕೊಂಡಾವು?

ಅನೇಕ ಸಾರೆ ರಾಜಕೀಯದ ಗತ್ತುಗಾರಿಕೆಯಾಗಲೀ, ಅರ್ಥಗಾರಿಕೆ ಯಾಗಲೀ ನಮಗೆ ತಿಳಿಯದೇ ತಲೆ ಬೇಸರ ತರಬಹುದು ಹಾಗಿದ್ದರೂ ನಾವಿಂದು ಅದರ ಬಗ್ಗ ಸಾಕಷ್ಟು ಅಭ್ಯಾಸ ಮಾಡಲೇಬೇಕು. ಪ್ರಜಾಪ್ರಭುತ್ವದ ರಾಜ್ಯದಲ್ಲಿ ಸುಖಸಮೃದ್ಧಿಯಿಂದ ಮುಂದರಿಯಬೇಕಾದರೆ ಸರಿಯಾದ ರಾಜಕೀಯವಿನಾ ಅನ್ಯಥಾ ಮಾರ್ಗವಿಲ್ಲ ಪ್ರತಿಯೊಬ್ಬ ಪ್ರಬುದ್ಧ ಪ್ರಜೆಯೂ ಪ್ರಜಾಪ್ರಭುತ್ವದ ಅರ್ಥವನ್ನು ತಿಳಿದರೇನೇ ಅದಕ್ಕೆ ಸಾರ್ಥಕ

ಉಷಾ
ಹೊಲಿಗೆ ಯಂತ್ರಗಳು



ಗಟ್ಟಿಮುಟ್ಟಾದ ರಚನೆ! ಸರ್ವರ ಅಭಿರುಚಿ ಗೊಪ್ಪುವ ವಿವಿಧ ಮಾದರಿಯ ತಯಾರಿಕೆ.

ತಾ. 1-1-1958ರಿಂದ ದರದಲ್ಲಿ ರೂ. 15/- ಇಳಿಸಲ್ಪಟ್ಟಿದೆ.

ನಮ್ಮ ಶೋ ರೂಮನ್ನು ಸಂದರ್ಶಿಸಿ ಯಂತ್ರಗಳನ್ನು ಪರಿಶೀಲಿಸಿರಿ!

ಇಂಡಿಯನ್ ಓಟೋಮೊಬೈಲ್ಸ್

ಕಾರ್ನಾಡ್‌ಕರ್ ಬಿಲ್ಡಿಂಗ್ಸ್, ಉಡುಪಿ.

ಫೋನ್. 65 ತಂತಿ. ಕಾರ್ನಾಡ್

'ನವಯುಗ' ವಾರಪತ್ರಿಕೆ
ಉಡುಪಿ

ವಾರ್ಷಿಕ ಚಂದಾ—
ರೂ 5-12-0 (5=75)
6 ತಿಂಗಳಿಗೆ— ರೂ 3-0-0
ಮುಂಗಡವಾಗಿ ಕಳಿಸಬೇಕು.

ಗಣರಾಜ್ಯ ಗುಣ ರಾಜ್ಯವಾಗಲಿ

ಭಾರತದಲ್ಲಿ ಆರ್ಥಿಕ ಪುನರುತ್ಥಾನವಾಗುತ್ತಿದೆಯಾದರೂ ನೈತಿಕ ಬಲವು ಉಪ್ಪರಿಗೆಯಿಂದ ತಿಪ್ಪೆಗೆ ಕುಸಿಯುತ್ತಿದೆ. ಕೊಲೆ, ಕಳವು, ಮೋಸ, ವಂಚನೆಗಳು ಪ್ರತಿದಿನದ ಸೊಲ್ಲಾಗಿವೆ. ನಮ್ಮ ಗಣರಾಜ್ಯ ದೇಶಪ್ರಜೆಗಳ ಬಾಹ್ಯ ಪರಿಸ್ಥಿತಿಗಳನ್ನು ಸುಧಾರಿಸಿದರೆ ಸಾಲದು; ಬಾಹ್ಯ ಸ್ಥಿತಿಗತಿಗಳಿಗೂ ಮುನ್ನಡೆಯೊಯಬೇಕು; ಜನತೆ ತಮ್ಮ ರಾಷ್ಟ್ರದ ಸ್ವಾತಂತ್ರ್ಯವನ್ನುಳಿಸಲು ಸರ್ವಗುಣಭರಿತರಾಗಿ ಅಂತರಂಗ ಮತ್ತು ಬಾಹ್ಯ ಶುದ್ಧಿಯನ್ನು ರಕ್ಷಿಸಲು ಪಣಗಿದೆಂದು ಭಾರತ ಗುಣರಾಜ್ಯವಾದೀತು—ಅದೇ ನಿಜವಾದ ಗಣರಾಜ್ಯ.

ಬರೆದವರು: ಶ್ರೀ ಸಂಜೀವ ಲಕ್ಷ್ಮೇಶ್ವರ, ಬಿ. ಎ.

ಇಂದಿಗೆ ಭಾರತವು ಗಣರಾಜ್ಯವಾಗಿ ೮ ವರ್ಷಗಳಾದವು. ಭಾರತಕ್ಕೆ ಸ್ವಾತಂತ್ರ್ಯ ದೊರೆತು ೧೦ ವರ್ಷಗಳಾದವು. ಸ್ವಾತಂತ್ರ್ಯೋತ್ತರದ ಈ—೧೦ ವರ್ಷಗಳಲ್ಲಿ ನಾವು ಸಾಧಿಸಿದ್ದೇನು? ನಮ್ಮ ಪ್ರಗತಿ ಎಷ್ಟಾಗಿದೆ ಎಂಬುದನ್ನು ವಿವೇಚಿಸಬೇಕಾಗಿದೆ.

ಇಂದು ಜಗತ್ತಿನಲ್ಲಿ ಪ್ರಜಾಪ್ರಭುತ್ವವುಳ್ಳ ರಾಷ್ಟ್ರಗಳಲ್ಲಿ ಭಾರತವು ಒಂದು. ಆದುದರಿಂದ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳ ಪ್ರಗತಿಯೊಂದಿಗೆ ನಮ್ಮ ದೇಶದ ಪ್ರಗತಿಯನ್ನು ಹೋಲಿಸಿ ನೋಡಿ ನಮ್ಮ ಪ್ರಗತಿಯನ್ನು ಅಳೆಯಬೇಕಾಗಿದೆ. ಪ್ರಗತಿ ಎಂದೊಡನೆ ಕೇವಲ ಆರ್ಥಿಕ ಪ್ರಗತಿ ಅಲ್ಲ. ಅದಕ್ಕೂ ಹೆಚ್ಚಿನ ಮಹತ್ತರವಾದ ಪ್ರಗತಿ ಎಂದರೆ ನೈತಿಕ ಹಾಗು ಸಾಮಾಜಿಕ ಪ್ರಗತಿ. ಈ ಪ್ರಗತಿಯನ್ನು ದೇಶದ ಆರ್ಥಿಕ ಸ್ವಾವಲಂಬನೆ ಅಥವಾ ಪರಾವಲಂಬನದಿಂದ ನಿರ್ಧರಿಸಬಾರದು ಏಕೆಂದರೆ ಆರ್ಥಿಕ ಸ್ವಾವಲಂಬನವು ದೇಶದ ಪ್ರಗತಿಯ ಒಂದು ಅಂಶ ಮಾತ್ರ ಆದರೆ ಅದೇ ಮುಖ್ಯ ಅಂಶವಲ್ಲ.

ದೇಶದ ನೈತಿಕ ಹಾಗು ಸಾಮಾಜಿಕ ಪ್ರಗತಿಯೇ ನಿಜವಾದ ಪ್ರಗತಿ ಎನಿಸುವದು. ಯಾವದೇ ದೇಶದ ಕೀರ್ತಿ-ಅಪಕೀರ್ತಿಗಳು ಆ ದೇಶದ ಜನತೆಯ ನೈತಿಕ ಜೀವನದ ಮಟ್ಟದ ಮೇಲೆ ಅವಲಂಬಿಸಿರುವದು. ದೇಶದ ಜನತೆ ಬಡವರಾಗಿರಬಹುದು ಅಥವಾ ಆ ದೇಶವು ಆರ್ಥಿಕ ಹಾಗು ಔದ್ಯೋಗಿಕ ದೃಷ್ಟಿಯಿಂದ ಹಿಂದುಳಿದಿರಬಹುದು. ಹೀಗಿದ್ದಾಗ್ಯೂ ದೇಶದ ಜನಾಂಗದ ನೈತಿಕ ಮಟ್ಟವು ಉಚ್ಚವಿದ್ದಲ್ಲಿ ಆ ದೇಶವು ಮುಂದುವರೆದ ದೇಶವೆಂದೇ ಹೇಳಬೇಕು. ಈ ದೃಷ್ಟಿಯಿಂದ ನಮ್ಮ ದೇಶದ ಸ್ವಾತಂತ್ರ್ಯೋತ್ತರ ಹತ್ತು ವರ್ಷಗಳ ವಿವೇಚನೆ ಮಾಡುವದೇ ಈ ಲೇಖನದ ಉದ್ದೇಶ.

ದೇಶವನ್ನು ಸ್ವತಂತ್ರಗೊಳಿಸಲು ಎಷ್ಟು ಪರಿಶ್ರಮ ಅಗತ್ಯವೋ ಅಷ್ಟೇ ಪರಿಶ್ರಮ ದೊರೆತ ಆ ಸ್ವಾತಂತ್ರ್ಯವನ್ನು ಉಳಿಸಿಕೊಂಡು ದೇಶದ ಸಾರ್ವತ್ರಿಕ ಪ್ರಗತಿಯನ್ನು ಪಡೆಯಲು ಅವಶ್ಯ. ದೇಶ ಸ್ವತಂತ್ರವಾದ ಕೂಡಲೇ ಮಾಡಬೇಕಾದ ಕೆಲಸ ಮುಗಿಯಿತು ಎಂದು ಸಾಮಾನ್ಯರ ಅಭಿಪ್ರಾಯ ಆದರೆ ಮಾಡಬೇಕಾದ ನಿಜವಾದ ಕೆಲಸ ಸ್ವಾತಂತ್ರ್ಯ ದೊರೆತ ನಂತರ. ಈ ದೃಷ್ಟಿಯಿಂದ ವಿಚಾರ ಮಾಡಲಾಗಿ ಭಾರತೀಯರಾದ ನಮ್ಮ ಕರ್ತವ್ಯ ಇನ್ನೂ ಬಹಳವಿದೆ ಇಷ್ಟೇ ಅಲ್ಲ ಹೆಚ್ಚು ಜವಾಬ-ದಾರಿಯುದಿದೆ ಎಂಬುದನ್ನು ಮರೆಯಕೂಡದು.

ಇಂದು ನಮ್ಮ ದೇಶವನ್ನು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯನ್ನಾಗಿ ಮಾಡಲು ವಿಶ್ವ ಪ್ರಯತ್ನಗಳು ನಡೆದಿವೆ. ಇಂದಿಲ್ಲ ನಾಳೆಯಾದರೂ ನಮ್ಮ ದೇಶವು ಆರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗುವದರಲ್ಲಿ ಸಂಶಯವಿಲ್ಲ. ಆದರೆ ನಮ್ಮ ನೈತಿಕ ಮಟ್ಟ ಆರ್ಥಿಕ ಪ್ರಗತಿಯ ವಿರುದ್ಧ ದೆಸೆಯಲ್ಲಿ ಕೆಳಗೆ ಇಳಿಯುತ್ತಿದೆ. ಇಂದು ಮೋಸ, ಕೊಲೆ, ಸುಲಿಗೆ, ಅಸತ್ಯ ಹಾಗು ಅಪ್ರಾಮಾಣಿಕತೆ ಇವು ದಿನದ ಮಾತಾಗಿವೆ. ಎಲ್ಲಿಯವರೆಗೆ ಜನತೆ ಇದು ತನ್ನ ದೇಶವೆಂದು ತಿಳಿದು ತನ್ನ ದೇಶಕ್ಕಾಗಿ ಮಾಡಬೇಕಾದ ಕರ್ತವ್ಯಗಳನ್ನು ಮನಃಪೂರ್ವಕವಾಗಿ ಮಾಡಲಾರದೋ ಅಲ್ಲಿಯವರೆಗೆ ನಮ್ಮ ನೈತಿಕ ಮಟ್ಟವು ಸುಧಾರಿಸಲಾರದು.

ಸತ್ಯ ಹಾಗು ಪ್ರಾಮಾಣಿಕತೆಗಳು ನಮ್ಮಲ್ಲಿ ಕೇವಲ ಶಾಬ್ದಿಕ ಅರ್ಥದಲ್ಲಿವೆ ವಿನಃ ಕಾರ್ಯರೂಪದಲ್ಲಿಳಿದಿಲ್ಲ ಪ್ರಾಮಾಣಿಕತನದ ಬಗ್ಗೆ ಒಂದು ಉದಾಹರಣೆಕೊಡುವದಾದರೆ, ಅಮೇರಿಕೆಯಲ್ಲಿ ದಿನದ ಪತ್ರಿಕೆಗಳನ್ನು ರಸ್ತೆಯ ಕೋಪಿನಲ್ಲಿ ಇಟ್ಟು ಅದರ ಹತ್ತಿರವೇ ಹಣ ಹಾಕಲು ಒಂದು ಪೆಟ್ಟಿಗೆ ಇಟ್ಟು ಹೋಗುವರಂತೆ ಅಲ್ಲಿಯ ಜನತೆ ಆ ಪತ್ರಿಕೆಯನ್ನು ಆದರ ಬೆಲೆ ಆ ಪೆಟ್ಟಿಗೆಯಲ್ಲಿ ಹಾಕಿ ಒಯ್ಯುವರಂತೆ. ಸಂಜೆಗೆ ಬಂದು ನೋಡಿದರೆ ಪತ್ರಿಕೆಯ ಪ್ರತಿಗಳು ಖರ್ಚಾದಷ್ಟು ಸರಿಯಾದ ಹಣವು ಆ ಪೆಟ್ಟಿಗೆಯಲ್ಲಿ ಇರುವದಂತೆ ಒಂದು ಪೈ ಕೂಡ ಕಡಿಮೆ ಇರುವದಿಲ್ಲ. ಇದು ನಿಜವಾದ ಪ್ರಾಮಾಣಿಕತೆ. ಇದೇ ತರಹದ ಪದ್ಧತಿಯನ್ನು ನಮ್ಮಲ್ಲಿ ಯಾವದಾದರೂ ಪತ್ರಿಕೆ ರೂಢಿಯಲ್ಲಿ ತಂದರೆ, ಆ ಪತ್ರಿಕೆ ಕೆಲವೇ ದಿನಗಳಲ್ಲಿ ದಿವಾಳಿ ತೆಗೆಯುವದರಲ್ಲಿ ಸಂಶಯವಿಲ್ಲ. ಏಕೆಂದರೆ ನಮ್ಮ ಜನತೆಯಲ್ಲಿ ಇನ್ನೂ ಈ ತರಹದ ಪ್ರಾಮಾಣಿಕತೆ ಬಂದಿಲ್ಲವೆಂಬುದನ್ನು ಮಾತ್ರ ನಾವು ಒಪ್ಪಲೇಬೇಕು.

ಇಂದು ನಮ್ಮಲ್ಲಿ ಸರಕಾರಕ್ಕೆ ಸಲ್ಲಬೇಕಾದ ಕರಗಳನ್ನು (Taxes) ಎಷ್ಟು ಜನರು ಸರಿಯಾಗಿ ಪ್ರಾಮಾಣಿಕತನದಿಂದ ಕೊಡುವವರಿದ್ದಾರೆ. ತಾವು ಕೊಡುವ ಹಣ ತಮ್ಮ ಸರಕಾರಕ್ಕೆ ತಲಪುವದು, ಅದರ ಲಾಭ ತಮ್ಮ ದೇಶದ ಜನತೆಗೆ ದೊರೆಯುವದು ಎಂಬ ವಿಚಾರ ಎಷ್ಟು ಜನರಿಗಿದೆ. ಖೊಟ್ಟಿ ಲೆಕ್ಕ ಕೊಟ್ಟು ಸರಕಾರಕ್ಕೆ ಮೋಸ ಮಾಡುವದು ಒಂದು ಕಲೆಯಾಗಿದೆ ಇದಕ್ಕೂ ಶೋಚನೀಯವಾದ ಸಂಗತಿ ಎಂದರೆ ಅಪ್ರಾಮಾಣಿಕತೆ, ಅಸತ್ಯವನ್ನು ನುಡಿಯುವದು ಹಾಗು ಮೋಸ ಮಾಡುವದು ಮುಂತಾದವುಗಳು ಸುಶಿಕ್ಷಿತರಿಂದ

(೨೩ನೇ ಪುಟ ನೋಡಿರಿ)

ನಿಮ್ಮ ಮನಸ್ಸಿನಿಂದ ಒಂದು ದೊಡ್ಡ ಹೊರೆ ಇಳಿಯಿತು.

ಪಶ್ಚಿಮ ಕರಾವಳಿಯಲ್ಲಿ ಮೋಟಾರು ಸಾರಿಗೆಯ ಮೂಲ ಸಂಸ್ಥೆಯಾದ ದಿ. ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್‌ನವರು ದಕ್ಷಿಣ ಕನ್ನಡದ ಎಲ್ಲಾ ಪ್ರದೇಶಗಳಿಗೆ ಮತ್ತು ಅದರಾಚೆಗೆ ಕೊಡಗು, ಬೆಂಗಳೂರು-ಮೈಸೂರು, ಮಲಬಾರು ಮತ್ತು ಮುಂಬಯಿಗಳಿಗೆ ಸರಕುಗಳನ್ನೊಯ್ಯುವ ಒಂದು ದೊಡ್ಡ ಪ್ರಮಾಣದ ಲೋರಿಗಳ ಸಮೂಹವನ್ನು ಹೊಂದಿದ್ದಾರೆ. ಅವರು ಕ್ಲುಪ್ತ ಸಮಯದಲ್ಲಿ, ಕ್ಷಿಪ್ರ ಮತ್ತು ಸುರಕ್ಷಿತವಾಗಿ ಸರಕುಗಳನ್ನೊಯ್ದು ಮುಟ್ಟಿಸಿ, ನಿಮ್ಮ ಮನಸ್ಸಿನ ಒಂದು ದೊಡ್ಡ ಹೊರೆಯನ್ನೇ ಹೋಗಲಾಡಿಸುತ್ತಾರೆ.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿ ಲಿಮಿಟೆಡ್, ಮಂಗಳೂರು-3.

ಮೋಟಾರು ಸಾರಿಗೆಯಲ್ಲಿ ಒಂದು ವಿಶ್ವಾಸದ ಹೆಸರು ಗಳಿಸಿದೆ.

ಹರ್ಷನ ಕಾಲದ ಭಾರತ

"ಯಾವ ಜನಾಂಗದ ಸಂಸ್ಕೃತಿಯೂ ಜಗತ್ತಿನ ಇತಿಹಾಸದಲ್ಲಿ ಪರಿಪೂರ್ಣತೆಯನ್ನು ಪಡೆದಿದೆ ಎನ್ನುವುದು ಸಾಧ್ಯವಿಲ್ಲ. ಆದರೆ, ಕ್ರಿ. ಶ. ಏಳನೆಯ ಶತಮಾನದ ಭಾರತೀಯ ಸಂಸ್ಕೃತಿಯನ್ನು ಸಂಸ್ಕೃತಿಯ ಮಾನದಂಡದಿಂದ ಅಳೆಯುವಾಗ ಇಂದಿನ ಮತ್ತು ಹಿಂದಿನ ಯಾವ ಸಂಸ್ಕೃತಿಯಲ್ಲೂ ಕಾಣದ ಔನ್ನತ್ಯವನ್ನು ಕಾಣಬಹುದು" ಎಂದು ಇ. ಬಿ. ಹ್ಯಾವೆಲ್‌ರವರು ಆರ್ಯನ್ ರೂಲ್ ಇನ್ ಇಂಡಿಯಾವೆಂಬ ಪುಸ್ತಕದಲ್ಲಿ ಹೇಳಿದ್ದಾರೆ. ಅಂತಹ ಸುಸಂಸ್ಕೃತನಾಡು ಹೇಗಿದ್ದಿರಬಹುದು?

ಶ್ರೀ ಯು ನಾ ಉಡುಪ. ವಿದ್ವಾನ್

ಭಗವಾನ್ ಸೂರ್ಯದೇವನ ಅನುಗ್ರಹದಿಂದ ಜನ್ಮವೆತ್ತಿದ ಶ್ರೀಹರ್ಷನು ಭಾರತಭೂಮಿಗೆ ಮೂರು ದಶಕಕ್ಕಿಂತಲೂ ಹೆಚ್ಚುಕಾಲ ಹರ್ಷದಾಯಕನಾಗಿದ್ದನು. ಇವನ ಆಡಳಿತದ ಹೋಲಿಕೆಗೆ ಇತಿಹಾಸದಿಂದ ಮಹಾ ವ್ಯಕ್ತಿಗಳ ಹೆಸರನ್ನೆತ್ತಿ ಕೇಳುವುದಾದರೆ ಸಮ್ರಾಟ್ ಅಶೋಕ, ಸಮುದ್ರಗುಪ್ತ, ಎರಡನೆಯ ಪುಲಿಕೇಶಿ, ಚಾಲುಕ್ಯ ವಿಕ್ರಮ, ಶ್ರೀಕೃಷ್ಣದೇವರಾಯ ಮೊದಲಾದ ಪ್ರಾತಃಸ್ಮರಣೀಯ ವ್ಯಕ್ತಿಗಳ ಹೆಸರನ್ನು ಬಿಟ್ಟರೆ ಬೇರೆ ಗತಿಯಿಲ್ಲ. ಅಂದಿನ ಆ ಮಹಾ ವ್ಯಕ್ತಿಗಳ ಕಾಲದ ವಿದ್ಯಾಭ್ಯಾಸ, ಶಿಲ್ಪಾದಿ ಕಲೆಗಳಿಗಿದ್ದ ಪ್ರೋತ್ಸಾಹ, ಸಾಮಾಜಿಕ ಜೀವನದ ನೆಮ್ಮದಿ, ಕೃಷಿ ಕೈಗಾರಿಕೆಗಳ ಉನ್ನತಿ—ಇವು ಯಾವ ಕಾಲದಲ್ಲೂ ಮರೆಯತಕ್ಕನಲ್ಲ. ಅಂದು ಜ್ಞಾನವೇ ಜನರ ಜೀವಾಳವಾಗಿತ್ತು, 'ಧಿಯೋ ಯೋನಃ ಪ್ರಚೋದಯಾತ್' ಎಂಬುದೇ ಅಂದಿನ ಭಾರತೀಯರ ಪರಮ ಮಂತ್ರವಾಗಿತ್ತು. ಇಂದು ಜನತೆಗೆ ಜ್ಞಾನಕ್ಕಿಂತಲೂ ವಿಜ್ಞಾನವು ರಮಣೀಯವಾಗಿದೆ, ಚಿತ್ತಾಕರ್ಷಕವಾಗಿದೆ. ಜ್ಞಾನವು ಮನುಷ್ಯನಿಗೆ ದೇವತ್ವಕ್ಕೆ ಹತ್ತಿಸನವಿತ್ತು ಶಾಂತಿಯನ್ನು ಕೊಡಬಲ್ಲುದಾದರೆ, ವಿಜ್ಞಾನವು ಜೀವನದಲ್ಲಿ ದಂಗೆಗಳಿಗಾಮಂತ್ರಣವಿತ್ತು ಅಶಾಂತಿಯನ್ನೂ ಅತೃಪ್ತಿಯನ್ನೂ ಕೊಡಬಲ್ಲುದು. ಇದಕ್ಕೆ ಇಂದಿನ ಜಗತ್ತೇ ಸಾಕ್ಷಿ. ಜ್ಞಾನವು ಪವಿತ್ರವಾದ ಕ್ಷೀರ, ವಿಜ್ಞಾನವು ಅಮಲೇರಿಸುವ ಸುರೆ. ಅನಾದಿಕಾಲದಿಂದಲೂ ಭಾರತಕ್ಕೆ ಜ್ಞಾನವೇ ಹೆಗ್ಗುರಿ. ಜ್ಞಾನಜ್ಯೋತಿಯೇ ಭಾರತಕ್ಕೆ ಅನೇಕಾವೃತ್ತಿ ರಾಮರಾಜ್ಯವನ್ನು ತಂದಿತ್ತು. ವಿಜ್ಞಾನವು ಹಲವು ದಶಕಗಳಿಂದ ಭಾರತೀಯರ ಹೃದಯವನ್ನಾಕ್ರಮಿಸಿದ್ದರೂ ರಾಮರಾಜ್ಯವನ್ನು ಹೆಗಲಾಡಿಸಲು ಶಕ್ತವಾಗಿಲ್ಲ. ಅದರ ಬದಲು ಸೈತಾನನ ವಿಕಟಾಟ್ಟಹಾಸವು ಜನತೆಯಲ್ಲಿ ವಿವಿಧ ಮುಖದಿಂದ ತೋರುತ್ತಿದೆ! ಇದಕ್ಕಾಗಿ ಪ್ರಾಚೀನ ಭಾರತೇತಿಹಾಸದ ಎಷ್ಟೋ ಸುವರ್ಣ ಪುಟಗಳು ಇಂದು ನಮಗೆ ಆದರ್ಶವಾಗಬೇಕಾಗಿವೆ. ಎಷ್ಟೋ ಚಕ್ರವರ್ತಿಗಳ ಆಡಳಿತೆಯ ಕ್ರಮವನ್ನು ನಾವು ನಕಲೆತ್ತಬೇಕಾಗಿದೆ. ಈ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲೂ ನಕಲೆತ್ತುವುದು, ಪೂರ್ವಿಕರ ಹೆಜ್ಜೆಯನ್ನು ತುಳಿಯುವುದು ಅಪಮಾನ ಮತ್ತು ಅಸೌಭಾಗ್ಯಕರವಲ್ಲವೇ—ಎನ್ನಬಹುದು. ನಮಗೆ ನರನು ವಾನರನಾಗುತ್ತಿರುವುದು ಉತ್ತಮ ಭೂಷಣವೇ? ಹೇಗಾದರೂ ಜನರಲ್ಲಿ ಪ್ರಾಮಾಣಿಕತೆ ಬರಬೇಕು; ಜನರು ಉತ್ತಮ ಶೀಲವುಳ್ಳವರಾಗಬೇಕು; ಚಿರತೃಪ್ತಿ ಶಾಂತಿಗಳು ಜೀವನವನ್ನು ತುಂಬಬೇಕು. ಮಣ್ಣಿನ ಬೆಕ್ಕಾದರೇನು? ಇಲಿ ಹಿಡಿದರೆ ಸಾಕಲ್ಲವೆ?

ವಿದ್ಯೆಯೊಡನೆ ಧರ್ಮವನ್ನು ಚೆನ್ನಾಗಿ ಕಲಸಿ ಹಂಚುವುದೇ ಜ್ಞಾನಕ್ಕೆ ಮುಖ್ಯ ಸಾಧನ. ಇದು ಶ್ರೀಹರ್ಷನ ಕಾಲದಲ್ಲಿ ಪ್ರತಿಯೊಂದು ವಿದ್ಯಾಮಂದಿರ ಮತ್ತು ಸಭೆ ಪರಿಷತ್ತುಗಳ ಮೂಲಕ ಆಸಕ್ತಿಯಿಂದ ಪ್ರಸಾರವಾಗುತ್ತಿತ್ತು. 'ಯಥಾ ರಾಜಾ ತಥಾ ಪ್ರಜಾ' ಇದು ಅಂದಿನ ರಾಜರಿಗೆ ಚೆನ್ನಾಗಿ ಮನವರಿಕೆಯಾಗಿತ್ತು. ಜನರು ಯಾವಾಗಲೂ ಮೇಲು ಪಂಕ್ತಿಯನ್ನು ನೋಡಿಕೊಂಡು ಕೀಳು ಪಂಕ್ತಿಯಲ್ಲಿ ಅಕ್ಷರಗಳನ್ನು ತುಂಬುವವರು!

ಪುಣ್ಯ ಪುರುಷನಾದ ಹರ್ಷನ ಕಾಲಕ್ಕಿಂತ ಎರಡು ಶತಮಾನಗಳ ಮೊದಲೇ ಭಾರತದಲ್ಲಿ ವಿದ್ಯಾಭ್ಯಾಸವು ಅಭಿವೃದ್ಧಿ ದಶೆಯಲ್ಲಿತ್ತು. ಆಗ ಗುರುಕುಲ ಪದ್ಧತಿಯೂ, ಬೌದ್ಧ ವಿಹಾರಗಳ ಶಿಕ್ಷಣ ಕ್ರಮವೂ ರೂಢಿಯಲ್ಲಿತ್ತು. ಆಗ ಅನೇಕ ಸುಪ್ರಸಿದ್ಧ ವಿಶ್ವವಿದ್ಯಾಲಯಗಳು ಜ್ಞಾನದಾನ ಮಾಡುತ್ತಿದ್ದುವು. ಇಲ್ಲಿಯ ಶಿಕ್ಷಣದ ಯಶಸ್ಸನ್ನು ಕೇಳಿದ ದೂರ ದೇಶಗಳಿಂದ ಚೀನ, ಜಪಾನ, ಅರೇಬಿಯಾಗಳಿಂದಲೂ ನೂರಾರು ಮಂದಿ ವಿದ್ಯಾರ್ಥಿಗಳು ಈ ದೇಶಕ್ಕೆ ಬರುತ್ತಿದ್ದರು. ಆಗ ಭಾರತವು ಜಗತ್ತಿಗೆ ಜ್ಞಾನದಾನ ಮಾಡುವ ಹಿರಿಯ ಕ್ಷೇತ್ರವಾಗಿತ್ತು. ಹರ್ಷನ ಕಾಲದಲ್ಲಿ ನಾಲಂದವು ಬೌದ್ಧ ಮತೀಯರ ಪ್ರಬಲ ವಿದ್ಯಾಸಂಸ್ಥೆಯಾಗಿತ್ತು. ಕಾಶಿಯಲ್ಲಿ ಬ್ರಾಹ್ಮಣ ಪಂಡಿತರವರ ವಿದ್ಯಾಪೀಠವಿತ್ತು. ತಕ್ಷಶಿಲೆ ಮತ್ತು ವಿಕ್ರಮಶಿಲೆ ವಿದ್ಯಾಲಯಗಳೂ ಆಗ ಯಶಸ್ಸನ್ನು ಪಡೆದಿದ್ದುವು. ಅಂದು ಬೌದ್ಧ ಮತ್ತು ಬ್ರಾಹ್ಮಣ ಪಂಡಿತರಲ್ಲಿ ಪರಸ್ಪರ ಸ್ನೇಹ ಸೌಹಾರ್ದಗಳಿದ್ದರೂ, ಪೂರ್ವ ಪಕ್ಷಮಾಡಿ ಒಬ್ಬರನ್ನೊಬ್ಬರು ಪಾಂಡಿತ್ಯದ ಬಲದಿಂದ ಬಾಗಿಸುವುದೂ, ರಾಜಸನ್ಮಾನ ಗೌರವ ಮರ್ಯಾದೆ ಪಡೆಯುವುದೂ ಸಾಮಾನ್ಯ ವಿಚಾರವಾಗಿತ್ತು. ಆದರ್ಶರೂಪವಾಗಿ ಆಗ ಬೌದ್ಧ ಭಿಕ್ಷುಗಳ ನೈತಿಕ ಮಟ್ಟವು ಕೆಳಗಿಳಿಯುವುದಿತ್ತು. ಆಗ ಜನರು ಅವರ ತಲೆಗೆ ಜೇಡಿ ಮಣ್ಣುಗಳನ್ನು ಮೆತ್ತಿ, ಹಸೆಗೆ ಕಮ್ಮಣ್ಣಿನ ಒಟ್ಟಿಗಳನ್ನೆಳದು ವಿಹಾರಗಳಿಂದ ಓಡಿಸುತ್ತಿದ್ದರು. ಆ ಕಾಲದಲ್ಲಿ ಈ ಕೆಲವು ದೊಡ್ಡ ವಿದ್ಯಾಸಂಸ್ಥೆಗಳಲ್ಲದೆ ಪ್ರತಿಯೊಂದು ಪಟ್ಟಣದಲ್ಲೂ ಬೌದ್ಧರು ಸಂಘಾರಾಮಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಿದ್ದರು. ಆಗ ವಿಂಧ್ಯಾರಣ್ಯ ಮಧ್ಯದಲ್ಲಿ ದಿವಾಕರ ಮಿತ್ರನೆಂಬ ವಿದ್ವಾಂಸನು ಒಂದು ದೊಡ್ಡ ವಿದ್ಯಾಮಂದಿರವನ್ನು ತೆರೆದು ನಾನಾ ಪಂಗಡಗಳಿಗೆ ಅನ್ನ ಮತ್ತು ವಿದ್ಯಾದಾನವೆರಡನ್ನೂ ಮಾಡುತ್ತಿದ್ದನು. ಹರ್ಷವರ್ಧನನ ರಾಜಧಾನಿಯಾದ ಕನೂಜಿನಲ್ಲೇ ಶಿಕ್ಷಣವೀಯುವ ನೂರು ಸಂಘಾರಾಮಗಳಿದ್ದುವು. ಮಥುರೆಯೆಂಬ ಒಂದು ನಗರದಲ್ಲೇ ಬೌದ್ಧ ಭಿಕ್ಷುಗಳೇ ಎರಡು ಸಾವಿರ ಮಂದಿ ವ್ಯಾಸಂಗ ಮಾಡುತ್ತಿದ್ದರು.

ಆಗ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದಾರಕಾಚಾರ್ಯರೆನ್ನುತ್ತಿದ್ದರು. ಅಂದು ಮೊದಲನೆಯ ಪುಸ್ತಕಕ್ಕೆ ಸಿದ್ಧವಸ್ತುವೆಂದು ಹೆಸರಿತ್ತು. ಇದರಲ್ಲಿ ಹನ್ನೆರಡು ಪಾಠಗಳಿದ್ದುವು. ಮುಂದೆ ವ್ಯಾಕರಣ, ಧನಾರ್ಜನೆಗೆ ಬೇಕಾದ ಕುಶಲವಿದ್ಯೆ, ವೈದ್ಯಶಾಸ್ತ್ರ, ತರ್ಕಶಾಸ್ತ್ರ ಮತ್ತು ಆಧ್ಯಾತ್ಮವಿದ್ಯೆ-ಇವುಗಳ ಸ್ಥೂಲಭಾಗಗಳ ಪಾಠ ನಡೆಯುತ್ತಿತ್ತು. ಇದನ್ನೇ ಆಗ ಪಂಚವಿದ್ಯೆ ಎನ್ನುತ್ತಿದ್ದರು. ಈ ಪ್ರಾಥಮಿಕ ಶಿಕ್ಷಣ ಮುಗಿದ ಮೇಲೆ ಪ್ರೌಢ ವಿದ್ಯಾಭ್ಯಾಸಕ್ಕಾಗಿ ನಾಲಂದಾ, ಮಿಥಿಲಾ ಮೊದಲಾದ ಊರುಗಳಲ್ಲಿದ್ದ ವಿದ್ಯಾಲಯಗಳನ್ನು ಸೇರುತ್ತಿದ್ದರು. ಪಂಚವಿದ್ಯೆಗಳ ವ್ಯಾಸಂಗವು ಆಗ ಸಮಸ್ತ ಜಾತಿಯವರಿಗೂ ಕೊಡಲ್ಪಡುತ್ತಿತ್ತು. ಹುಯನತ್ಸಾಂಗನು (ಚೀನಾ ದೇಶದ ಪ್ರವಾಸಿ) ಅಂದು ನೋಡಿದ ಪ್ರೌಢಶಿಕ್ಷಣ ಮಂದಿರಗಳೇ ೫೦೦೦ವಾಗಿದ್ದುವು. ಇವುಗಳಲ್ಲಿ ವಿದ್ಯಾರ್ಥಿಗಳು ೨,೨೨,೩೦೦ ಮಂದಿ ಇದ್ದರು. ನಾಲಂದ ವಿಶ್ವವಿದ್ಯಾಲಯ ಒಂದಕ್ಕೇ ಪ್ರತಿ ವರ್ಷ ೧೦ ಸಾವಿರ ಮಂದಿ ವಿದ್ಯಾರ್ಥಿಗಳು ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬರುತ್ತಿದ್ದರು. ಆ ಕಾಲದಲ್ಲಿ ಈ ಶಾಲೆಗಳಿಂದಲ್ಲದೆ ಎಷ್ಟೋ ಮಂದಿ ಸನ್ಯಾಸಿಗಳೂ, ಭಿಕ್ಷುಗಳೂ ಊರಿಂದೂರಿಗೆ ಸುತ್ತುತ್ತ ವಿದ್ಯಾದಾನ ಮಾಡುತ್ತಿದ್ದರು. ಇಂತಹ ಅಂದಿನ ಸಂಚಾರೀ ಶಾಲೆಗಳು. ಇವರನ್ನು ಕುರಿತು ಹುಯನತ್ಸಾಂಗನು—'ಈ ಬೋಧಕರಿಗೆ ಹಣ ಮತ್ತು ಸುಖದಲ್ಲಿ ಆಶೆ ಇರಲಿಲ್ಲ. ಇವರು ರಾಜಮರ್ಯಾದೆಯನ್ನೂ ಲಕ್ಷ್ಯಮಾಡುವವರಲ್ಲ. ಈ ಶಿಕ್ಷಕರ ನೈತಿಕ ಮಟ್ಟ ಮತ್ತು ಸ್ವಾರ್ಥತ್ಯಾಗಕ್ಕೆ ಎಲ್ಲಾ ರಾಜರೂ ಮುಗ್ಧರಾಗುತ್ತಿದ್ದರು' ಎಂದು ಬರೆದಿಟ್ಟಿದ್ದಾನೆ.

ಹರ್ಷನು ನಾಲಂದ ವಿದ್ಯಾಲಯಕ್ಕೆ ಹಲವು ಅಂತಸ್ತುಗಳಿದ್ದ ನೂರು ಅಡಿ ಎತ್ತರವುಳ್ಳ ಹಿತ್ತಾಳೆಯ ವಿಹಾರವೊಂದನ್ನು ಕಟ್ಟಿಸಿಕೊಟ್ಟಿದ್ದನು. ಇದನ್ನು ಕಟ್ಟಿಸಲು ತಗಲಿದ ವೆಚ್ಚವನ್ನು ಊಹಿಸಿದರೂ ಆಶ್ಚರ್ಯವಾಗುತ್ತದೆ! ಈ ನಾಲಂದ ವಿದ್ಯಾಲಯವು ಹರ್ಷನ ಕಾಲಕ್ಕಿಂತ ಎರಡು ಶತಮಾನಗಳ ಮೊದಲು ಸ್ಥಾಪಿತವಾಗಿ, ಕ್ರಿ. ಶ. ಆರನೆಯ ಶತಮಾನದಲ್ಲಿ ಹೂಣರ ಮುತ್ತಿಗೆಯಿಂದ ಬಹಳ ಕಷ್ಟನಷ್ಟಗಳನ್ನು ಹೊಂದಿದರೂ ಕ್ರಿ. ಶ. ಏಳನೆಯ ಶತಮಾನದಲ್ಲಿ ಹರ್ಷವರ್ಧನ ಚಕ್ರವರ್ತಿ ಮತ್ತು ಇತರ ರಾಜರುಗಳ ಸಹಾಯದಿಂದ ಅದು ಪರಮೋಚ್ಚ ಶಿಖರಕ್ಕೇರಿತು. ಈ ವಿದ್ಯಾಲಯದಲ್ಲಿ ಮಹಾಯಾನ ಶಾಖೆಗೆ ಪ್ರಾಶಸ್ತ್ಯವಿತ್ತು. ಆಗ ವಲ್ಲಭಿ ವಿಶ್ವವಿದ್ಯಾಲಯವು ಹೀನಯಾನ ಶಾಖೆಗೆ ಪ್ರಾಶಸ್ತ್ಯಕೊಟ್ಟಿತ್ತು. ಆಗ ನಾಲಂದ ವಿದ್ಯಾಲಯದಲ್ಲಿ ಹತ್ತು ಸಾವಿರ ಮಂದಿ ಅಧ್ಯಯನಮಾಡುತ್ತಿದ್ದರು. ವಲ್ಲಭಿ ವಿದ್ಯಾಲಯದಲ್ಲಿ ಆರು ಸಾವಿರ ಮಂದಿ ವಿದ್ಯಾರ್ಥಿಗಳು ವ್ಯಾಸಂಗಮಾಡುತ್ತಿದ್ದರು!

ನಾಲಂದವು ಪಾಟಲಿಪುತ್ರ ನಗರಕ್ಕೆ ನಲವತ್ತು ಮೈಲು ದೂರದಲ್ಲಿದ್ದ ಒಂದು ಹಳ್ಳಿ. ಇಲ್ಲಿ ಬುದ್ಧದೇವನು ತನ್ನ ಶಿಷ್ಯರೊಡನೆ ಹಲವು ವೇಳೆ ಉಳಿದುಕೊಂಡಿದ್ದನು. ಕ್ರಿ. ಶ. ೪೧೦ರಲ್ಲಿ ಫಾಹಿಯಾನನು ಇಲ್ಲಿದ್ದ ಸಾರಿಪುತ್ರನ ಸ್ತೂಪವನ್ನು ನೋಡಲು ಬಂದಾಗ ಇದೊಂದು ಸಾಮಾನ್ಯ ಹಳ್ಳಿಯಾಗಿತ್ತು. ಮುಂದೆ ಗುಪ್ತ ಚಕ್ರವರ್ತಿಗಳ ವಂಶದವನಾದ ಕುಮಾರ ಗುಪ್ತನು ಈ ವಿದ್ಯಾಲಯವನ್ನು ಪ್ರಥಮ ಕಟ್ಟಿಸಿದನು. ಇವನ ನಲವತ್ತು ವರ್ಷಗಳ ಆಡಳಿತದಲ್ಲಿ ಈ ವಿದ್ಯಾಲಯವು ಬಹಳ ಅಭಿವೃದ್ಧಿಯನ್ನು ಹೊಂದಿತು. ಆಗಿನ ಪ್ರಪಂಚದಲ್ಲಿ ಈ ವಿದ್ಯಾಲಯದಿಂದ ಹೊರಬಂದ ವಿದ್ಯಾರ್ಥಿಗಳಿಗೆ ತುಂಬಾ ಗೌರವವಿತ್ತು. ಮಂಗೋಲಿಯಾ ಮೊದಲಾದ ಕಡೆಗಳಿಂದಲೂ ಇಲ್ಲಿಗೆ ವಿದ್ಯಾರ್ಥಿಗಳು ಅಭ್ಯಾಸಕ್ಕಾಗಿ ಬಂದು ಹಿಂದಿರುಗುವಾಗ ತಾವು ಧನ್ಯರಾದೆವೆಂದು ಆನಂದಾಶ್ರುವನ್ನು ಸುರಿಸುತ್ತಿದ್ದರು.

ಈ ವಿದ್ಯಾಲಯದಲ್ಲಿ ಕಲಿಯುತ್ತಿದ್ದ ಹತ್ತುಸಾವಿರ ಮಂದಿ ವಿದ್ಯಾರ್ಥಿಗಳಿಗೂ ಊಟ ಮತ್ತು ವಸತಿಗೆ ಆ ವಿದ್ಯಾಲಯದಲ್ಲೇ ಸೌಕರ್ಯವಿತ್ತು. ಇಲ್ಲಿ ಬೌದ್ಧ ಮತದ ಮಹಾಯಾನ ಶಾಖೆಯು ಪ್ರಬಲವಾಗಿದ್ದರೂ, ವೇದ, ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸ ಮತ್ತು ಉತ್ತರ ಮೀಮಾಂಸಗಳೆಂಬ ಷಡ್ದರ್ಶನಗಳ ಶಿಕ್ಷಣವೂ ಕೊಡಲ್ಪಡುತ್ತಿತ್ತು. ಇವಲ್ಲದೆ ಜೈನದರ್ಶನ, ಜ್ಯೋತಿಷ, ವೈದ್ಯ, ವ್ಯಾಕರಣ, ಗಣಿತ ಮೊದಲಾದುವುಗಳಲ್ಲೂ ಪ್ರೌಢ ಶಿಕ್ಷಣವು ಕೊಡಲ್ಪಡುತ್ತಿತ್ತು. ಆ ವಿದ್ಯಾಲಯದಲ್ಲಿ ಉಪಾಧ್ಯಾಯರು ಸು ಸಾವಿರದ ಐನೂರು ಮಂದಿ ಇದ್ದರು. ಇದರಿಂದ ಉಪಾಧ್ಯಾಯರಿಗೆ ಶಿಷ್ಯರ ಮಾನಸಿಕ ಮಟ್ಟವನ್ನರಿತು ವಿದ್ಯಾದಾನ ಮಾಡಲು ಅನುಕೂಲವಾಗುತ್ತಿತ್ತು. ವಿದ್ಯಾರ್ಥಿಗಳಿಗೆ ಪಾಠ ಹೇಳಲು ಅಲ್ಲಿ ಮುನ್ನೂರು ಕೊಟಡಿಗಳಿದ್ದುವು!

ನಾಲಂದ ವಿದ್ಯಾಲಯದ ಪುಸ್ತಕ ಭಂಡಾರವು ಹಲವು ಉಪ್ಪರಿಗೆಗಳುಳ್ಳ ಮೂರು ಕಟ್ಟಡಗಳಲ್ಲಿದ್ದು, ಒಂದಕ್ಕೆ ರತ್ನರಂಜಕವೆಂದೂ, ಇನ್ನೊಂದಕ್ಕೆ ರತ್ನೋದಧಿ ಎಂದೂ, ಮತ್ತೊಂದು ಕಟ್ಟಡಕ್ಕೆ ರತ್ನಸಾಗರವೆಂದೂ ಹೆಸರಿಟ್ಟಿದ್ದರು. ಆ ಭಂಡಾರದ ಪುಸ್ತಕಗಳೆಲ್ಲಾ ಅಷ್ಟು ಅಮೂಲ್ಯವಾಗಿದ್ದುದರಿಂದ ಆ ಹೆಸರುಗಳೆಲ್ಲಾ ಅನ್ವರ್ಥವೇ.

ಅಂದಿನ ಭಾರತದಲ್ಲಿ ಇಪ್ಪತ್ತು ವರ್ಷಗಳವರೆಗೆ ಅಭ್ಯಾಸಮಾಡಿ ಹೆಸರುಗಳಿಸಿದ್ದ ಒಬ್ಬ ಘನ ವಿದ್ವಾಂಸನು ಹ್ಯುವನತ್ಸಾಂಗನೊಡನೆ ವಾದಮಾಡಿ ಸೋತನಂತೆ! ಇಂತಹ ಪಂಡಿತ ಹ್ಯುವನತ್ಸಾಂಗನು ನಾಲಂದಕ್ಕೆ ಹೋದಾಗ ಅಲ್ಲಿನ ತೀರಾ ಕೆಳತರಗತಿಗೆ ಆತನು ಸೇರಬೇಕಾಯಿತಂತೆ! ಅಲ್ಲಿ ಈ ಚೀನಿ ವಿದ್ವಾಂಸನು ಐದು ವರ್ಷ ಅಭ್ಯಾಸಮಾಡಿದನು. ಹೀಗಿದ್ದ ಮೇಲೆ ಅಲ್ಲಿದ್ದ ಉಪಾಧ್ಯಾಯರ ಯೋಗ್ಯತೆಯ ಕುರಿತು ಬೇರೆ ಹೇಳಬೇಕೆ? ಹರ್ಷನ ಕಾಲದ ನಾಲಂದ ವಿದ್ಯಾಲಯದ ವೇದವನ್ನು ಕಲಿಸುತ್ತಿದ್ದ ಒಬ್ಬ ಅಧ್ಯಾಪಕನಿಗೆ ನಾಲ್ಕು

(೨೨ನೇ ಪುಟ ನೋಡಿರಿ)

ನಾವು ಕಲಿಯಬೇಕಾದ ಒಂದು ಭಾಷೆ-???

ನಾವೆಷ್ಟು ಭಾಷೆ ಕಲಿಯಬೇಕು ಎಂಬ ಮಹಾ ಸಮಸ್ಯೆಗೆ ಪರಿಹಾರ ಸೂಚಕವಾಗಿ ಬೇರೆ ಬೇರೆ ಮಂಡೆಗಳಿಂದ ಒಂದೊಂದು ಸೂಚನೆ ಸಲಹೆ ಬಂತು; ಅವೆಲ್ಲವನ್ನೂ ಬಿಟ್ಟು ಗೋಪಣ್ಣ ಆರೇಳು ಭಾಷೆಯನ್ನಲ್ಲ, ಒಂದೇ ಭಾಷೆಯನ್ನು ಕಲಿತರೆ ಸಾಕು ಎಂದು ಅದನ್ನು ಸಮರ್ಥಿಸಿದ—ಅದಾವ ಪರಮ ಪುನೀತವಾದ ವರಭಾಷೆ?

ಬರೆದವರು: ಶ್ರೀ ಎ. ಎಸ್. ರಾಮಕೃಷ್ಣ.

ಈ ಲೇಖನದ 'ಹಣೇ ಬರಹ'ವನ್ನು ಓದುತ್ತಿದ್ದಂತೆಯೇ ಯಾರಾದರೂ ರೇಗಿ ಬಿಟ್ಟು ಬರೆದವನ ಮೇಲೆ ಎಸೆಯಲು ಕಲ್ಲು ಹುಡುಕುತ್ತಿದ್ದರೆ ಆಶ್ಚರ್ಯವಿಲ್ಲ. ಆ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು, ಈ ಭಾಷೆಯನ್ನು ಕಡ್ಡಾಯವಾಗಿ ಕಲಿಯಬೇಕು. ಇನ್ನೊಂದು ಭಾಷೆ, ಮತ್ತೊಂದು, ಮಗದೊಂದು, ಎರಡು, ಮೂರು, ನಾಲ್ಕು, ಐದು, ಐವತ್ತಾರು ಭಾಷೆಗಳನ್ನು ಕಲಿಯದಿದ್ದರೆ ಯಾರೂ ಪ್ರಬುದ್ಧ ಭಾರತೀಯನೆನಿಸಲಾರ ಎಂದು ದೊಡ್ಡ ಚಿಕ್ಕ ವ್ಯಕ್ತಿಗಳೆಲ್ಲ ಸಾರುತ್ತಿರುವ ಕಾಲವಿದು. ಇದನ್ನು ಕೇಳಿ ಕೇಳಿ ರೋಸಿ ಹೋದವರ ಮುಂದೆ "ನಾವು ಕಲಿಯಲೇ ಬೇಕಾದ ಇನ್ನೊಂದು ಭಾಷೆ" ಎಂದು ಪ್ರಾರಂಭಿಸಿದರೆ "ಹಾಳಾದ್ದು ಯಾವುದದು ಬೊಗಳು" ಎಂದು ಯಾರಾದರೂ ಹಡೆಯೆತ್ತಿದಲ್ಲಿ ಆಶ್ಚರ್ಯಪಡಬೇಕೆ?

ಮೊನ್ನೆ ಹಾಗಾಯಿತು. ಸ್ನೇಹಿತರೆಲ್ಲರ ಒಂದು 'ಹರಟೆ ಗೋಷ್ಠಿ' ಸೇರಿದ್ದಾಗ ಮಾತು ಭಾಷಾ ಸಮಸ್ಯೆಯ ಕಡೆಗೆ ತಿರುಗಿತು. ಆ ದಿನದ ಪತ್ರಿಕೆಗಳಲ್ಲಿ ಅದೇ ಪ್ರಧಾನ ವಿಷಯ. ಹೇಳಿ ಕೇಳಿ ಸ್ವತಂತ್ರ ಭಾರತದ ಪ್ರಜೆಗಳು. ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಅಡ್ಡಿತಡೆಯಿಲ್ಲ. ಸರಿ. ಒಬ್ಬೊಬ್ಬರು ಒಬ್ಬೊಬ್ಬ ನೇತಾರನ ನುಡಿಯನ್ನು ಆಧರಿಸಿಕೊಂಡು ಒಂದೊಂದು ಅಭಿಪ್ರಾಯ ಕೊಡತೊಡಗಿದರು. ಸದ್ಯ ನಮ್ಮ ರಾಷ್ಟ್ರದ ಮುಖ್ಯ ವ್ಯಕ್ತಿಗಳು ಹಲವಾರು ವಿಷಯಗಳ ಕುರಿತು ಯೋಚಿಸಿಯೋ ಯೋಚಿಸದೆಯೋ ತಂತಮ್ಮ ಅಭಿಪ್ರಾಯ ಪಲುಕುಗಳನ್ನು ದಿನ ದಿನವೂ ಪ್ರಕಟಗೊಳಿಸುವುದರಿಂದ ಭಾರತದ ಜನಕೋಟಿಗೆ ಏನಿಲ್ಲದಿದ್ದರೂ ಒಂದು ತೊಂದರೆ ತಪ್ಪಿದೆ. ಆಳವಾಗಿ ಯಾವುದಾದರೂ ಸಮಸ್ಯೆಯ ಕುರಿತು ಯೋಚಿಸಿ ತಲೆ ಬಿಸಿಮಾಡಿಕೊಳ್ಳಬೇಕಾದ ಅವಶ್ಯಕತೆ ನನ್ನಂಥ ಸಾಮಾನ್ಯರಿಗಂತೂ ಇಲ್ಲ. ಅದೊಂದು ದೇವರ ದಯೆ. ಅಂತೂ ಆ ದಿನ ನಾವು ನೆಹರೂ ಸಿ. ಆರ್., ಸಿ., ಸಿ. ಮುನಷಿ, ದೇಶ್ ಮುಖ್ ಮುಂತಾದವರ ಅಸಲ್ ಅಭಿಪ್ರಾಯಗಳನ್ನು ನಮ್ಮದನ್ನಾಗಿ ಮಾಡಿಕೊಂಡು ಚರ್ಚಿಸಿದ್ದೇ ಚರ್ಚಿಸಿದ್ದು. ಮುಂದಿಟ್ಟುಕೊಂಡಿದ್ದ ಹುರಿಗಾಳನ್ನು ಧ್ವಂಸಮಾಡಿದ್ದೇ ಮಾಡಿದ್ದು.

"ಸಂಸ್ಕೃತವನ್ನು ಉಪೇಕ್ಷಿಸಿದ್ದೇ ನಮ್ಮ ಪತನಕ್ಕೆ ಕಾರಣವಾಯಿತು. ಸಂಸ್ಕೃತವನ್ನು ರಾಷ್ಟ್ರಭಾಷೆಯಾಗಿ ಮಾಡಿ ಶಾಲೆಗಳಲ್ಲಿ ಅದನ್ನು ಕಡ್ಡಾಯವಾಗಿ ಕಲಿಸುವಂತೆ ಮಾಡಿದರೇನೇ ಈ ದೇಶ ಮುಂದಕ್ಕೆ ಬಂದೀತು" ಎಂದು ಒಬ್ಬರ ವಾದ. ಅದನ್ನು ಪುಷ್ಟೀಕರಿಸಲು ಅವರು ಮುನಷಿ ಮುಕ್ತಣ್ಣ ಶಾಸ್ತ್ರಿ, ಮಾಧೋ ಪಂತಜೀ—ಹೀಗೆ ಯಾರಯಾರೋ ಹೇಳಿದ್ದನ್ನೆಲ್ಲ ಉದ್ಧರಿಸಿದರು.

"ಹೌದು, ಸೊಗಸಾಗಿ, ಸುಸಂಸ್ಕೃತವಾಗಿ ಬೈಗಳ ಸುರಿಮಳೆ ಸುರಿಸುವುದಕ್ಕೆ ಆ ಭಾಷೆ ಇತರ ಭಾಷೆಗಳಿಗಿಂತ ಹೆಚ್ಚು ಸಹಕಾರಿ. ಸಂಸ್ಕೃತದಲ್ಲಿ ಬೈದರೂ ಮಧುರವಾಗಿರುತ್ತದೆ" ಎಂದು ಸೋದಾಹರಣವಾಗಿ ವಿವರಿಸಿದ ಇನ್ನೊಬ್ಬರು ಕಡೆಗೆ ಇಂಗ್ಲಿಷು ಬಿಟ್ಟರೆ ನಮಗೆ ಈ ಪ್ರಪಂಚದಲ್ಲಿ ಸ್ಥಾನವೇ ಇಲ್ಲ ಎಂಬಲ್ಲಿಗೆ ಬಂದು ತಲುಪಿದರು ಆಗ ಹದಿನಾರು ಸಂಸ್ಥೆಗಳು ನಡೆಸುವ ಎಲ್ಲ ಹಿಂದೀ ಪರೀಕ್ಷೆಗಳಿಗೆ ಕೊಟ್ಟು ಸನ್ನದು ಪಡೆದಿದ್ದ ಹಿಂದೀ ಪ್ರೇಮಿಗಳೊಬ್ಬರು ಬಲು ರೇಗಿ ಇಂಗ್ಲೀಷ್ ಭಕ್ತರನ್ನು ದೇಶ ದ್ರೋಹಿಗಳೆಂದೂ, ಅಭಿಮಾನ ಶೂನ್ಯರೆಂದೂ, ಮೆಕಾಲೆ ಸಾಹೇಬರ ಮೊಮ್ಮಕ್ಕಳೆಂದೂ ವಿಧವಿಧವಾಗಿ ಖಂಡಿಸಿ ಇಂಗ್ಲೀಷ್ ಉಳಿದರೆ ನಮ್ಮ ಪತನ ಖಂಡಿತ; ಹಿಂದಿಯೇ ಮುಂದಿನ ಮೋಕ್ಷಕ್ಕೆ ದಾರಿ ಎಂಬ ತಮ್ಮ ಸಿದ್ಧಾಂತವನ್ನು ಮಂಡಿಸಿದರು. ಮಾತ್ರವಲ್ಲದೆ ಅವರು ತಮ್ಮ ವಾದಕ್ಕೆ ಬಿಸಿ ಕೂಡಿ ಬರಲು ಅಲ್ಲಲ್ಲಿ ಇಂಗ್ಲೀಷ್ ಶಬ್ದಗಳನ್ನೇ ಉಪಯೋಗಿಸಿ ಅವುಗಳನ್ನು ತಮ್ಮ 'ಹುಚ್ಚಾರಣೆ'ಯಿಂದ ಕೆಡಿಸಿ ಸೇಡು ತೀರಿಸಿಕೊಂಡರು. ಆಗ ನಮ್ಮ ಅಯ್ಯರ್ ಸುಮ್ಮನಿರುತ್ತಾರೆಯೇ?

"ನೀವು ದಕ್ಷಿಣದವರಿಗೆ ಹಿಂದೀ ಕಲಿಯಬೇಕೆನ್ನುತ್ತೀರಿ. ಅಂದುಕೊಳ್ಳಿ ಆದರೆ ಉತ್ತರದವರೆಲ್ಲ ದಕ್ಷಿಣದ ನಮ್ಮ ತಮಿಳು ಕಲಿಯುವುದಾದರೆ ಮಾತ್ರ ನಿಮ್ಮ ಹಿಂದೀ ಪ್ರಚಾರವನ್ನು ದಕ್ಷಿಣದಲ್ಲಿ ಮುಂದುವರಿಸಬಹುದು. ಹಾಗಂತ ನನ್ನ ಮಟ್ಟಿಗೆ ಹಿಂದೀಇಲ್ಲದೆ ಬದುಕ ಒಲ್ಲೆ'.

'ಹಾ, ಹಾಗಂದರೇನು. ಉತ್ತರದವರು ನಿಮ್ಮ ತಮಿಳು ಮಾತ್ರ ಕಲಿತರೆ ಸಾಕೆ? ದಕ್ಷಿಣದ ಬೇರೆ ಭಾಷೆಗಳಿಲ್ಲವೆ? ಮಲೆಯಾಳ ಕೂಡ ಉತ್ತರದವರಿಗೆ ಗೊತ್ತಿರಬೇಕು"-ಎಂದು ಮಲೆಯಾಳದ ಮರಿಯರ್ ಮಹಾಶಯರು ಗಾರಿಗಿಳಿದರು. ಅಷ್ಟರಲ್ಲೆ ವಾತಾವರಣದಲ್ಲಿ ಬಿಸಿಯೇರಿತ್ತಾದ್ದರಿಂದ ಬಡ ಕನ್ನಡದ ಕುರಿತು ವಾದಿಸಲು ಯಾರಿಗೂ ನೆನಪೇ ಬರಲಿಲ್ಲ.

ಅಂತೂ ವಾದ ಮುಂದುವರಿದು ಕಟ್ಟಕಡೆಗೆ ಬಹುಭಾಷಾ ಪ್ರವೀಣರಾಗುವುದೇ ಭಾಷಾ ಸಮಸ್ಯೆ ಬಗೆಹರಿಯುವ ಮಾರ್ಗ ಎಂಬ ಸಿದ್ಧಾಂತಕ್ಕೆ ಬಂದು ಮುಟ್ಟಲಾಯಿತು. ಕೊನೆಯ ಪಕ್ಷ ಪ್ರತಿಯೊಬ್ಬರಿಗೂ ಆರೇಳು ಭಾಷೆಗಳು ಗೊತ್ತಿರಲೇಬೇಕು ಎಂಬುದು ಸಮಂಜಸವಾಗಿ ಕಂಡಿತು. ನಮ್ಮ ಸಂಸ್ಕೃತಿಯ ಭಾಷೆ ಸಂಸ್ಕೃತ, ಬಹುಸಂಖ್ಯಾಕರ ಭಾಷೆ ಹಿಂದಿ, ಅಂತಾರಾಷ್ಟ್ರೀಯ ಭಾಷೆ ಇಂಗ್ಲೀಷ್, ಎರಡೋ ಮೂರೋ ನೆರೆ ಹೊರೆಯ ರಾಜ್ಯಗಳ ಭಾಷೆಗಳು ಮತ್ತು ಮಾತೃಭಾಷೆ ಇವಿಷ್ಟು ತಿಳಿಯದವರಿಗೆ ಡಿಗ್ರಿ ಕೊಡಬಾರದು ಎಂಬ ಸಲಹೆ ಬಂತು.

'ಸರಿ ಸರಿ. ಅಂದಮೇಲೆ ನಮ್ಮ ವಿಶ್ವವಿದ್ಯಾಲಯಗಳಲ್ಲಿ ವಿಜ್ಞಾನ, ಇತಿಹಾಸ ಇತ್ಯಾದಿಗಳನ್ನು ಕಲಿಸಿ ಸಮಯ ವ್ಯರ್ಥ ಮಾಡುವುದರ ಬದಲಿಗೆ ಆರೇಳು ಭಾಷೆಗಳಲ್ಲಿ ವಿದ್ಯಾರ್ಥಿಗಳನ್ನು ಪರಿಣತರನ್ನಾಗಿ ಮಾಡುವುದೇ ಒಳ್ಳೆಯದು. ಪ್ರಯೋಗಶಾಲೆ ಇತ್ಯಾದಿಗಳಿಗೆ ವೆಚ್ಚವಾಗುವ ಹಣವೂ ಉಳಿಯುತ್ತವೆ. ಪಂಚವಾರ್ಷಿಕ ಯೋಜನೆಗಳಿಗೆ ಅದೊಂದು ಉಳಿತಾಯವೂ ಹೌದು. ವಿಜ್ಞಾನ ಗಿಜ್ಞಾನಗಳನ್ನು ಬೇಕಾದರೆ ಬೇರೆ ರಾಷ್ಟ್ರಗಳವರು ಕಲಿಯಲಿ. ಸ್ಪುಟ್ನಿಕ್‌ಗಳನ್ನಲ್ಲ ಅವುಗಳ ಅಪ್ಪನನ್ನು ಬೇಕಾದರೆ ಹಾರಿಸಲಿ. ಚಂದ್ರಲೋಕಕ್ಕಲ್ಲ ಯಾವ ಸುವರ್ಲೋಕಕ್ಕಾದರೂ ಪ್ರಯಾಣ ಬೆಳೆಸಲಿ ಬೇಕು ಬೇಕಾದ ಯಂತ್ರಗಳನ್ನು ತಯಾರಿಸಿ ಅಭಿವೃದ್ಧಿಹೊಂದಲಿ. ನಮಗದೊಂದೂ ಬೇಡ. ಒಂದೊಂದು ಡಜನ್ ಭಾಷೆಗಳನ್ನು ಕಲಿತು ಒಂದೇ ಸವನೆ ಭಾಷಣ ಬೀರುವ ನಮ್ಮನ್ನು ಕಂಡು ಅವರೆಲ್ಲರೂ ಮುಗ್ಧರಾಗದಿರುವುದು ಸಾಧ್ಯವಿಲ್ಲ. ಹಾಗೆ ಮುಗ್ಧರಾಗಿ ನಮ್ಮ ಯೋಜನೆಗಳಿಗೆ ಬೇಕಾದ ಡಾಲರೋ, ರೂಬಲೋ, ಯೆನ್ನೋ, ಮಣ್ಣೋ ಸುರಿದೇ ಸುರಿಯುತ್ತಾರೆ ನಾವು ಬದುಕಿಕೊಳ್ಳಬಹುದು. ಅಲ್ಲವೇ?"—ಎಂದು ಒಂದೇ ಸವನೆ ಯಾರೋ ಒದರಿ ಬಿಟ್ಟು ಕಿಟಕಿಯಾಚೆ 'ಥೂ' ಎಂದು ಉಗುಳಿದರು. ಯಾರೆಂದು ನೋಡಿದರೆ ನಮ್ಮ ಗೋಪಣ್ಣ. ಅಯ್ಯೋ ಈತನ ಬಾಯಲ್ಲಿ ಸಿಕ್ಕಿ ಬೀಳುತ್ತೇವಲ್ಲ ಎಂದು ಎಲ್ಲರೂ ನಡುಗಿದೆವು. ಆತ ಬಿಡುತ್ತಾನೆಯೇ. ಒಳಗೆ ನುಗ್ಗಿ ಹುರಿಗಾಳಿನ ತಟ್ಟೆಯ ಮುಂದೆ ಪ್ರತಿಷ್ಠಾಪಿತನಾಗಿ ಮುಂದುವರಿಸಿದ.

"ನೀವು ಅನ್ನೋದೆಲ್ಲ ಸರಿ. ನೀವುಗಳೆಲ್ಲ ಹೇಳುವಂತೆ ನಾಲ್ಕಾರು ಭಾಷೆಗಳನ್ನು ನಾವು ಕಲಿತಿರಬೇಕು. ಆದರೆ ನಾವು ಕಲಿಯಲೇ ಬೇಕಾದ ಇನ್ನೊಂದು ಭಾಷೆ ಇದೆ"

"ಯಾವುದದು ಹೇಳು" ಎಂದು ಆತುರಪಟ್ಟು ಕೇಳಿದೆವು.

"ಆದರೆ ಭಾಷೆಗೆ ಲಿಪಿಯೇ ಇಲ್ಲ. ಗ್ರಾಮರಿನ ಗೋಳೂ ಇಲ್ಲ" ಎಂದು ಗುಂಭವಾಗಿ ನುಡಿದ ಗೋಪಣ್ಣ.

"ಯಾವುದದು ಬೇಗ ಬೊಗಳು" ಎಂದು ನಾವೆಲ್ಲ ರೇಗಿದ್ದು ಆಗಲೇ.

ಆತ ಹೇಳಿದ—"ಹಾಗಾದರೆ ಕೇಳಿ ಅದು ಮೌನ ಭಾಷೆ ಅಂತ ಒಂದು ಭಾಷೆ ಸ್ಮಶಾನದ ಮೌನವಲ್ಲ, ಋಷ್ಯಾಶ್ರಮದ ಮೌನ. ಮಾದಳಿಗೆ ತಂಪನ್ನೂ ಕೆಲಸವನ್ನೂ ಕೊಟ್ಟು ಹೃದಯವನ್ನು ಕೂಡ ಹದಗೊಳಿಸುವ ಭಾಷೆ. ನಾವು ಎಷ್ಟೇ ಭಾಷೆಗಳನ್ನು ಕಲಿತರೂ ಈ ಭಾಷೆಗೆ ದಿನದ ಸ್ವಲ್ಪ ಭಾಗದಲ್ಲಾದರೂ ಎಡೆಕೊಡಲೇಬೇಕು. ಆದ್ದರಿಂದ ಅದನ್ನು ಶಾಲೆಗಳಲ್ಲಿ ಕಡ್ಡಾಯವಾಗಿ ಕಲಿಸಿ ವಿಶ್ವವಿದ್ಯಾಲಯಗಳಲ್ಲಿ ಡಿಗ್ರಿ ಕೊಡಬೇಕು. ಹಾಗಾದ್ದರೆ ಮಾತ್ರ ನಮ್ಮ ದೇಶ ಸುಧಾರಿಸೀತು. ಈ ಭಾಷೆ ಯಾವ ಭಾಷೆಗೂ ಕಡಿಮೆಯಾದುದ್ದಲ್ಲ. ಆದರೆ ಯಾವ ಭಾಷೆಗೂ ಪ್ರತಿಸ್ಪರ್ಧಿಯಲ್ಲ.

ಗೋಪಣ್ಣ ಉದ್ದಕ್ಕೂ ಹೀಗೆ ಉಪನ್ಯಾಸ ಮುಂದುವರಿಸಿದಾಗ ಮೊದಮೊದಲು ನಮಗೆ ನಗು ಬಂತು. ಕ್ರಮೇಣ ಅದು ಕ್ಷೀಣಿಸಿತು. ಅನಂತರ ಹೆಚ್ಚು ಸದ್ದಿಲ್ಲದೆ ನಾವು ಒಬ್ಬೊಬ್ಬರಾಗಿ ಜಾರಿದೆವು.

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶ್ಯಲ್ ನಂ. ೧ (ರಿಜಿಸ್ಟರ್ಡ)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ.

ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು ಎಲ್ಲಾ ಋತುಗಳಲ್ಲಿ ಅನುಕೂಲವಿದೆ. ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ ಇದೇ ಎಣ್ಣೆಯನ್ನೇ ಕೇಳಿರಿ.

ತೈಲದ ಕ್ರಯ ದೊಡ್ಡ ಬಾಟ್ಲಿ ರೂ. ೪-೦-೦ ಸಣ್ಣ ಬಾಟ್ಲಿ ರೂ. ೨-೦-೦.

ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫-೧೪-೦. ಸಣ್ಣ ಬಾಟ್ಲಿಗೆ ರೂ. ೩-೧೪-೦ (ಪೇಕಿಂಗ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ ರೇಲ್ವೆ) ಮುಂಬಯಿ, ೧೪.

Tel. 62899. ಟೆಲಿಗ್ರಾಮ: PRANAYAMA.

...ಅಡ್ಡಿ ತಡೆಯಿಲ್ಲದಿದ್ದರೆ ಪ್ರಕೃತಿಯು ಭೂಮಿಯ ಉಡಿ ಮಡಿಲನ್ನು ತುಂಬಿಸಿ ಬಿಡುತ್ತಾಳೆ...

ಪ್ರಕೃತಿಯ ಪ್ರಯೋಗಾಲಯ.

ವಿಜ್ಞಾನಯುಗದಲ್ಲಿ ದಿನ ದೂಡುತ್ತಿರುವ ನಾವು ನಮ್ಮ ಪ್ರಯೋಗಶಾಲೆಗಳೇ ಪರಿಮಾಣದಲ್ಲಿಯೂ ಪರಿಣಾಮದಲ್ಲಿಯೂ ಹಿರಿಯವೆಂದು ಅಂದುಕೊಳ್ಳುತ್ತಿದ್ದೇವೆ. ಆದರೆ, ಸೃಷ್ಟಿಯ ವೈಚಿತ್ರ್ಯದತ್ತ ಒಮ್ಮೆ ನಾವು ದೃಷ್ಟಿಹರಿಸಿದರೆ, ಆಗ ನಮ್ಮ ಕಲ್ಪನೆ ಅಮೂಲವಾಗಿ ಉರುಳಿಬೀಳುವುದರಲ್ಲಿ ಸಂದೇಹವೇನು?

ಬರೆದವರು: ಶ್ರೀ ಹೊಯಿಸಳ

ಹಿಮಾಲಯದ ಅಂತರಾಳ. ಅಲ್ಲಿ ಹರಿಯುವ ಕುರುಪಿನ ಗಿರಿ ಝರಿ ಪ್ರವಾಹದ ಉತ್ಸಾಹದಲ್ಲಿ ಅದು ಅಡ್ಡಬಂದ ಸಣ್ಣ ದೊಡ್ಡ ಬಂಡೆಗಳನ್ನೆಲ್ಲ ಉರುಳಿಸಿ ಹೊರಳಿಸಿ ಹೊತ್ತುಕೊಂಡೇ ಹರಿಯುತ್ತಿತ್ತು. ಅದರ ಉನ್ನತ ದಡದ ಪಾದಗಳು ಪದೇ ಪದೇ ನೀರಿನ, ರಾಡಿಯ ಮತ್ತು ಕಲ್ಲುಗಳ ಒತ್ತಡವನ್ನು ತಡೆಯಲಾರದೆ ನಿಲ್ಲಲಾರದಿದ್ದವು. ಮೊದಲು ಸಣ್ಣ ಅಣೆಕಲ್ಲೊಂದು ಮಣ್ಣಿನ ಬಿಗಿತದಿಂದ ಬಿಡುಗಡೆಹೊಂದಿ ನುಣುಚಿಕೊಂಡು ನೀರಿನ ಸಂಗಡ ಹೊರಟಿತು. ಇನ್ನೊಂದೂ, ಮತ್ತೊಂದೂ ಹಾಗೇ ನುಣುಚಿಕೊಂಡು ಪ್ರವಾಹದಲ್ಲಿ ಬೆರೆತವು ಅನಂತರ ಬೇರಿನ ನಾರುಗಳಂಟಿಕೊಂಡಿದ್ದ ಮಣ್ಣಿನ ಹೆಂಟೆಯೊಂದು ನೀರಿಗೆ ಜಾರಿ ಬಿದ್ದಿತು. ಅದು ಬಿದ್ದಲ್ಲಿ ಅಲೆಗಳು ಉಂಗುರುಂಗುರವಾಗಿ ಹರಡಲು ಮುನ್ನವೇ ಗಿರಿ ಝರಿಯು ಅದನ್ನು ಅರಗಿಸಿ ಹೆಂಟೆಯನ್ನು ಮುಂದೆ ಮುಂದೆ ಕೊಡೆದುಕೊಂಡು ಹೋಯಿತು. ಹೀಗೆ ಜಾರಿಕೊಂಡ ಹೆಂಟೆಗಳ ಹಾಗು ನಾರು ಬೇರುಗಳ ಗುರುತೇ ಆ ದಡದಲ್ಲಿ ಕಾಣಿಸಲಿಲ್ಲ. ಉನ್ನತವಾಗಿದ್ದ ಆ ದಡದ ಮೇಲಿರುವ ಭತ್ತದ ಗದ್ದೆಯ ತಾಕೊಂದು ನಾಳೆ ಅಥವಾ ನಾಡಿದ್ದು ಬುಡಕೊರೆದು ಉರುಳಿ ಬಿದ್ದು ಹೇಳ ಹೆಸರಿಲ್ಲದೆ ನಾಶವಾದೀತು.

ಹೀಗೆ ಗಿರಿ ಝರಿಯೊಂದು ನುಗ್ಗಿ ಹೋಗುತ್ತಿದ್ದ ದೃಶ್ಯವನ್ನು ನೋಡಿ ವಿಸ್ಮಯ ಪಡುತ್ತಿದ್ದ ನನ್ನ ತೋಳನ್ನು ಯಾರೋ ಮುಟ್ಟಿದರು. ಧ್ವನಿಯೊಂದು ಹೀಗೆಂದಿತು— "ಬಾ ನನ್ನೊಡನೆ! ಪ್ರಕೃತಿಯ ಕಾರ್ಯಾಲಯವನ್ನು ನೋಡುವಿಯಂತೆ!"

ಆತನೊಬ್ಬ ಕುಳ್ಳನೆ ದಪ್ಪನೆ ವ್ಯಕ್ತಿ ಆತನ ತಲೆಯ ಹಿಂಭಾಗ ನುಣ್ಣಗೆ ಥಳಥಳನೆ ಹೊಳೆಯುತ್ತಿತ್ತು ಆತನ ಕಣ್ಣಿನಿಂದಲೇ ನಗು ಮಿನುಗುತ್ತಿತ್ತು.

"ಪ್ರಕೃತಿಯ ಆ ಕಾರ್ಯಾಲಯ ಇದೇ ತಾನೆ?" ಎನ್ನುತ್ತಾ ಕೆಳಗೆ ಹರಿಯುತ್ತಿದ್ದ ಝರಿಯನ್ನು ತೋರಿಸುತ್ತಾ ಹೀಗೆ ವಿಸ್ಮಯಪಟ್ಟೆ - 'ಬಹಳ ಹೊತ್ತಿನಿಂದ ಅದರತ್ತ ನೋಡುತ್ತಲೇ ಇದ್ದೇನೆ. ಇದು ತುಂಬಾ ಭಯಂಕರ". ಆಗಂತುಕ ವ್ಯಕ್ತಿ ಹೀಗೆಂದರು ಹಾಗಲ್ಲ! ಈ ಪ್ರಲಯಕ್ಕೆಲ್ಲ ಮಾನವನ ದೋಷವೇ ಕಾರಣ. ಈ ವಿನಾಶವೆಲ್ಲ ಅಲಕ್ಷ್ಯ ದೇವತೆಯ ಮಹಾಪ್ರಸಾದ. ಇಲ್ಲಿ ಬೇಡ-ಅಲ್ಲಿಗೆ ಬನ್ನಿ ನನ್ನ ಸಂಗಡ. ದಯಾಮಯಿ ಪ್ರಕೃತಿಯ ಉದಾರತೆಯನ್ನು ಅಲ್ಲಿ ನೋಡುವಿರಂತೆ. ಅಡ್ಡಿ ತಡೆಯಿಲ್ಲದಂತೆ ಅವಳ ಪಾಡಿಗವಳನ್ನು ಬಿಟ್ಟರೆ ಪ್ರಕೃತಿಯು ಭೂಮಿಯ ಉಡಿಮಡಿಲನ್ನು ತುಂಬಿಸಬಲ್ಲಳು."

ಅಲ್ಲಿಂದತ್ತ ಐವತ್ತು ಗಜದಾಚೆ ಒಂದು ಮುಳ್ಳು ತಂತಿಯ ಬೇಲಿಯ ಬಳಿಗೆ ಹೋದೆವು ಕೊಂಚ ಕಷ್ಟಪಟ್ಟು ಆ ಬೇಲಿಯನ್ನು ದಾಟಿ ದೇವದಾರು ವನದೊಳಗೆ ಹೋದೆವು ಅಲ್ಲಿ ಎಲ್ಲಾ ವಯಸ್ಸಿನ ಮತ್ತು ಎಲ್ಲಾ ಗಾತ್ರದ ಮರಗಳೂ ಇದ್ದವು. ಅವು ತಮ್ಮ ಕೊಂಬೆ ರೆಂಬೆಗಳನ್ನು ತಲೆಯಮೇಲೆ ಹರಡಿ ಹಚ್ಚಿಯ ಚಾವಣಿಯನ್ನೇ ನಿರ್ಮಿಸಿದ್ದವು. ನಮ್ಮ ಕಾಲಡಿಯಲ್ಲಿ ಉದುರಿದ ಕಂದು ಬಣ್ಣದ ಮುಳ್ಳುಗಳಿದ್ದವು. ಆ ಮುಳ್ಳು ಲೇಪಿಸ ಮಧ್ಯೆ ಅಲ್ಲಲ್ಲಿ ಅಂಕುಡೊಂಕಾಗಿ ಹಸಿರು ಗರುಕೆಯ ಸಾಲುಗಳು ಹಬ್ಬಿ ಬಿಸಿಲು ಕಾಣದ ಹೆಗಾಳಿಯನ್ನೇ ಕಾಡಿಯಲೋ ಎನ್ನುವಂತೆ ಎಡೆಗಾರಿಕೆಯಿಂದ ಎದ್ದು ನಿಂತಿದ್ದವು.

ನನ್ನ ಹಿಂಬಾಲಕನೆಂದ—ಇಲ್ಲಿ ಮರಗಳು ಬಲು ದಟ್ಟವಾಗಿವೆ. ಇನ್ನು ಕೊಂಚ ಮುಂದೆ ಹೋಗೋಣ. ನನ್ನ ಹೆಸರು ಕೌಶಿಕ್. ನಾನು ಅರಣ್ಯ ಇಲಾಖೆಗೆ ಸೇರಿದವನು. ಬೀಸುವ ಗಾಳಿ, ಹರಿಯುವ ನೀರು ಮುಂತಾದವುಗಳಿಂದ ನೆಲ ಸವೆದು ಕರಗಿ ನಾಶವಾಗದಂತೆ ಏರ್ಪಾಡು ಮಾಡಲಾಗಿ ನನ್ನನ್ನು ನೇಮಿಸಿದ್ದಾರೆ.

ಅಲ್ಲಿಂದ ಮುಂದೆ ನಾವಿಬ್ಬರೂ ಸುಮಾರು ಇಪ್ಪತ್ತು ಗಜ ನಡೆದಿರಬಹುದು ಅಲ್ಲಿ ಮರಗಳನ್ನು ಕಡಿದು ತೆರವು ಮಾಡಿದ ಹಾಗೆ ಕಂಡಿತು ಕಂದು ಬಣ್ಣದ ಮೋಟು ದಿಂಡಗಳು ದೇವದಾರು ಮತ್ತು ಸ್ಪ್ರೂಸು ಮರಗಳ ನಡುನಡುವೆ ನಿಂತಿದ್ದವು.

ದೇವದಾರು ಕಾಯಿಗಳು ಒಲಿತು ನೆಲಕ್ಕೆ ಬಿದ್ದ ಮೇಲೆ ಬಿಂದು ಬಾಯ್ ತೆರೆಯುತ್ತವೆ. ಬೀಜಗಳು ಹೊರಗೆ ಹಾರಿ ಮೊಳೆತು ಬೇರುಬಿಟ್ಟುಕೊಂಡ ಮೇಲೆ ಸಸಿಗಳು ಕಾಣಿಸಿಕೊಳ್ಳುತ್ತವೆ.

ದೇವದಾರು ತುಂಬಾ ಮಿತವ್ಯಯಿ ವರ್ಷಂಪ್ರತಿ ಬೀಜ ಕೊಡುವುದಿಲ್ಲ ಎಷ್ಟೋ ವೇಳೆ ಫಲವೇ ಇಲ್ಲ ಒಮ್ಮೊಮ್ಮೆ ಫಲಿಸಿದರೂ ಬೀಜಗಳೇ ಇರುವುದಿಲ್ಲ. ಸಾಧಾರಣವಾಗಿ ಒಂದೊಂದು ಕಾಯಿಯಲ್ಲೂ 20ರಿಂದ 30ರ ತನಕ ಬೀಜಗಳಿರುತ್ತವೆ ಇಂಥಾ ಮಿತ ಸಂತಾನ ವಾತಾವರಣದಲ್ಲೂ ಹೊಸ ಜೀವ ಸಸಿಗಳ ಬೆಳವಣಿಗೆಗೆ ಅನೇಕಾನೇಕ ಅನುಕೂಲಗಳಿರುವುದರಿಂದ ದೇವದಾರು ಸಸಿಗಳು ನಾಯಿಕೊಡೆಗಳಂತೆ ಕಾಣಿಸಿಕೊಳ್ಳುತ್ತವೆ ಅವುಗಳ ನಡುವೆ ಎರಡು ಮೂರಡಿ ಎತ್ತರದ ಸಸಿಗಳೂ ಇರುತ್ತವೆ ಇಡೀ ಈ ಜಾಗವು ಆಟದ ಕ್ರಿಸ್‌ಮಸ್ ಮರಗಳ ಕಾಡಿನಂತೆ ಇರುತ್ತದೆ.

ಹೀಗೆ ಕೌಶಿಕರು ವಿವರಿಸುತ್ತಾ ಹೋದರು...

ಮೊದಲು ವರ್ಷದ ಗಿಡಗಳು ಕೆಲವೇ ಅಂಗುಲ ಎತ್ತರವಾಗಿರುತ್ತವೆ ಎರಡನೆ ವರ್ಷ ಒಂದಡಿಯಷ್ಟು ಮೂರನೆ ವರ್ಷ ಎರಡಡಿಯಷ್ಟು ಎತ್ತರವಾಗಿ ಬೆಳೆದು, ಐದನೆಯ ವರ್ಷ 1½ ಅಂಗುಲದಷ್ಟು ದಪ್ಪವಾಗಿದ್ದು ತಾಯಿಯ ಮೋರೆ ನೋಡುವ ಶಿಶುವಿನಂತೆ ಮೇಲೇರುತ್ತಿರುತ್ತವೆ. ಅದರ ಮೈಮೇಲಿನ ಮುಳ್ಳೆಲ್ಲ ಮೆತ್ತಗೆ ಮೃದುವಾಗಿರುತ್ತವೆ. ಕೈಯಾಡಿಸಿದರೂ ಅವು ಚುಚ್ಚುವುದಿಲ್ಲ ಹೀಗೆಂದಾಗ ನಾನು ಸಣ್ಣದೊಂದು ಕೊಂಬೆಯ ಮೇಲೆ ಕೈಯ್ಯಾಡಿಸಿ ನೋಡಿದೆ. ಹಸಿರು ಮುಳ್ಳುಗಳೆಲ್ಲ ಕೂದಲಂತೆ ಮೆತ್ತಾಗಿದ್ದವು.

ಐದು ವರ್ಷ ತುಂಬಿದಾಗ ದುರ್ಬಲವಾದ ಗಿಡಗಳನ್ನು ತೆಗೆದನಂತರ ದಷ್ಟಪುಷ್ಟವಾದ ಗಿಡಗಳು ಹೆಚ್ಚು ಪೋಷಣೆ ಪಡೆದು ಚನ್ನಾಗಿ ಬೆಳೆಯುತ್ತವೆ. ಮೂವತ್ತು ವರ್ಷ ಕಳೆದ ಮೇಲೆ ಇನ್ನಷ್ಟು ಮರಗಳನ್ನು ಕತ್ತರಿಸಿ ತೆಗೆಯುತ್ತಾರೆ ಆಗ ತೆಗೆದ ಮರಗಳೆಲ್ಲ ಮನೆಯ ಮೇಲ್ ಛಾವಣಿಗೆ ಉಪಯೋಗವಾಗುತ್ತವೆ.

ಇದು ಸುರಕ್ಷಿತವಾದ ವನ ಪ್ರದೇಶ ನದಿಯ ತನಕ ಹರಡಿ ಎತ್ತರವಾದ ದಡವನ್ನು ಒಳಗೊಂಡಿರುತ್ತೆ ಅಲ್ಲಿ ಪೊದೆಗಳ ನಡುವೆ ಚಿಕ್ಕ ದೇವದಾರು ಗಿಡಗಳಿರುತ್ತವೆ. ನದಿ ದಡವು ಕಡಿದಾಗಿದ್ದರೂ ಆಡು ಕುರಿಗಳು ಹತ್ತಿ ಹೋಗಿ ಹುಲ್ಲು ಸೊಪ್ಪು ಮೇಯುವುದಕ್ಕೆ ಅನುಕೂಲವಾಗಿರುತ್ತದೆ. ನದಿಯ ದಡಕ್ಕೆ ಅಡ್ಡಿಯಾಗಿ ಬೇಲಿಯಿಲ್ಲದಿದ್ದರೆ ಜಾನುವಾರುಗಳು ನುಗ್ಗಿ ದಡದ ಮೇಲಿನ ಹಸುರನ್ನೆಲ್ಲ ಮೇದುಬಿಡುತ್ತವೆ. ಸೂರ್ಯನಿಂದ ಆಹಾರವನ್ನು ಜೀವಶಕ್ತಿ ಸಂಗ್ರಹಿಸುವ ಎಲೆಗಳೇ ಇಲ್ಲವಾದ ಮೇಲೆ ಪೊದೆಗಳೂ ಗಿಡಗಳೂ ಬಾಡಿಹೋಗುವುದರಲ್ಲಿ ಆಶ್ಚರ್ಯವೇನು? ಬೇರುಗಳಲ್ಲಿ ತ್ರಾಣವಿಲ್ಲದೆ, ಮಣ್ಣಿನಲ್ಲಿ ಬಿಗಿತವು ತಪ್ಪಿಹೋಗುತ್ತದೆ. ಹವೆಯ ಬದಲಾವಣೆಯಿಂದ ನೆಲ ಬಿರಿದು ದಡದ ಶಕ್ತಿ ಉಡುಗಿಹೋಗಿ ಹೆಂಟೆ ಹೆಂಟೆಯಾಗಿ ದಡವೆಲ್ಲ ಕಳಚಿಬಿದ್ದು ನೀರಿನ ಪಾಲಾಗುತ್ತವೆ. ನೀರು ಸತತ ಹೀಗೆ ಕೆಚ್ಚುತ್ತಾ ಬಂದ ದಡದ ಮೇಲಿನ ಗದ್ದೆಯ ತಾಕುಗಳೇ ಮಾಯವಾಗುತ್ತವೆ.

ಅಲ್ಲಿ ದೂರದಲ್ಲಿರುವ ಹಳ್ಳಿಯ ನೆಲಕ್ಕೂ ಇದೇ ಸವೆತದ ಭಯ ಹೀಗೇ ಇದ್ದರೆ ಕೇವಲ ಕಾಲಾವಕಾಶವಷ್ಟೇ ಸರಿ. ಅದೂ ಬಲು ದಿನದ ಮಾತಲ್ಲ. ಹಳ್ಳಿಯಂತೂ ಮೊದಲು ಕಡಿದಾದ ಎತ್ತರವಾದ ದಡವನ್ನೇರಿರುತ್ತೆ ಆದರೆ ಅದರ ಕೆಳಗಡೆ ಭಯಂಕರ ನೀರಿನ ಸೆಳೆತದ ಗಿರಿ ಝರಿಯಿರುತ್ತದೆಯಲ್ಲವೆ? ಕ್ರಮ ಕ್ರಮವಾಗಿ ಆ ನೀರಿನ ಕೊರೆತದಿಂದ ಭತ್ತದ ಗದ್ದೆಯ ತಾಕು ನೀರಿನೊಳಕ್ಕೆ ಬಿದ್ದು ಕರಗಿದ ಮೇಲೆ ಹಳ್ಳಿಯ ಗತಿಯೂ ಅಷ್ಟೇ! ಅನಂತರ ಹಳ್ಳಿಗರ ಮನೆಗಳಲ್ಲ ಚಟ್ಟದ ಬೆನ್ನೇರುತ್ತವೆ. ಆ ಕಲ್ಲುನೆಲದಲ್ಲಿ ಭತ್ತ ಬೆಳೆಯುವುದಿಲ್ಲ. ಜನಗಳಿಗೆ ಆಹಾರ ಕಡಿಮೆಯಾಗುವುದಂತೂ ಖಂಡಿತ.

ನದಿಯ ದಡವನ್ನೂ ಅದರ ಮೇಲಿನ ನೆಲವನ್ನೂ ಬೇಲಿ ಹಾಕಿ ಜಾನುವಾರು

(೨೦ನೇ ಪುಟ ನೋಡಿರಿ)

37 ವರುಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.
ಸ್ಥಾಪನೆ: 1920
ದಿ ಹಾಂಗಾಳ ನಾಯಕ್ ಬೇಂಕ್ ಲಿ.
ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.
ಸೇವಿಂಗ್ಸ್ ಬೇಂಕ್ ಖಾತೆಗಳು ರೂ. 5/ ರಿಂದ ತೆರೆಯಲ್ಪಡುವುವು. ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ ಮೂಲಕ ವಾಪಾಸು ಪಡೆಯುವ ಸೌಲಭ್ಯ. ಬಡ್ಡಿ ಸೇಕಡಾ 2½ಯಂತೆ.
ಚಿಕ್ಕ ಮ್ಯಾದೆ ಮತ್ತು ನಿರಖು ಠೇವಣಾತಿಗಳು ಸ್ವೀಕರಿಸಲ್ಪಡುವುವು. ಬಡ್ಡಿ ಸೇಕಡಾ 4½ ವರೆಗೆ.
ದೊಡ್ಡ ಠೇವಣಿಗಳ ಮೇಲೆ ಹೆಚ್ಚಿನ ಬಡ್ಡಿ.
ಶಾಖೆಗಳು:
ಮಂಗಳೂರು-ಬಂದರ, ಮಂಗಳೂರು-ಹಂಪನಕಟ್ಟೆ, ಉಡುಪಿ, ಕಟಪಾಡಿ, ಶಂಕರಪುರ, ಮುದರಂಗಡಿ, ಕಿನ್ನಿಗೋಳಿ, ಹಳೆಯಂಗಡಿ, ಸುರತ್ಕಲ್, ಕಾಸರಗೋಡು, ಕಾಞಂಗಾಡು ಮತ್ತು ನೀಲೇಶ್ವರ.

ವ್ಯಕ್ತಿ ಹಾಗೂ ಯೋಜನೆ.

'ತಾನೊಳ್ಳೆಯವನಾದರೆ ಲೋಕವೊಳ್ಳೆಯದು' ಎನ್ನುವ ಗಾದೆಮಾತು ದೊಡ್ಡ ದೊಡ್ಡ ರಾಷ್ಟ್ರಗಳಿಗೂ ಅನ್ವಯಿಸುತ್ತದೆ ರಾಷ್ಟ್ರೀಯ ಸರ್ವತೋಮುಖ ಅಭಿವೃದ್ಧಿಗೆ ವಿವಿಧ ಮುಖಗಳ ಯೋಜನೆಯು ಮುಖ್ಯವಾದರೆ, ವ್ಯಕ್ತಿಯ ಆರ್ಥಿಕ ಮಟ್ಟದ ಉನ್ನತಿಗೆ ದುಡಿತವೇ ಮಹಾ ಸಾಧನ. ದುಡಿಮೆಯೇ ದೇವರು, ಕಾಯಕವೇ ಕೈಲಾಸ ವೆಂಬ ನುಡಿಮುತ್ತುಗಳು ಎಂದಾದರೂ ಸುಳ್ಳೆನಿಸಿಯಾವೆ? ನೀಳದ ವ್ಯಕ್ತಿಯಲ್ಲಿ ಹಣವಿದ್ದರೆ, ಅದು ದೇಶದ ಅಭಿವೃದ್ಧಿ ಯೋಜನೆಗೆ ದೊರೆಯದೆ ಹೋಗುವುದೆ?

ಬರೆದವರು: ಶ್ರೀ ಮೋಹನ ಮುತಾಲಿಕ.

ಭಾರತೀಯರ ಅವ್ಯಾಹತವಾದ ಹಾಗೂ ನಿರಂತರವಾದ ಧ್ಯೇಯಾತ್ಮಕ ಆತ್ಮವಿಶ್ವಾಸದ ಫಲದ ಪ್ರತಿರೂಪವಾಗಿ ಸ್ವತಂತ್ರ ಭಾರತ ನಿರ್ಮಾಣಗೊಂಡದ್ದಾಯಿತು; ಪ್ರಜಾಪ್ರಭುತ್ವವೂ ಅಸ್ತಿತ್ವದಲ್ಲಿ ಬಂದಿತು. ಅದರ ನಿರಂತರವಾದ ಹಾಗೂ ಪ್ರತಿಫಲದ ಆಶೆಯಿಲ್ಲದ ಈ ಹೋರಾಟದಲ್ಲಿ ವಿಜಯಿಗಳಾದ ಭಾರತೀಯರ ಭವಿಷ್ಯತ್ ಜೀವನದ ಬಗ್ಗೆ ಆಲೋಚಿಸಬೇಕಾದ ಪ್ರಸಂಗವಿಂದು ಎದುರು ನಿಂತಿದೆ. ಕತ್ತಲೆಯಲ್ಲಿ ದೀಪವನ್ನು ಹಚ್ಚಿದ್ದಾಯಿತು, ಆದರೆ ಎಲ್ಲೆಡೆಗೂ ಅದರ ಬೆಳಕನ್ನು ಬೀರುವುದೇ ನಮ್ಮ ಸಾಹಸದ [illegible] ಮಾತಾಗಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ದಿನಗಳು ಮುಗಿದು ಹೋದುವು; ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲುದಿನಗಳು ಸಂದುವು; ಇಂದು ರಾಷ್ಟ್ರದ ಆರ್ಥಿಕ ಪುನರುತ್ಥಾಪನೆಯಲ್ಲಿ ಎಲ್ಲರ ಲಕ್ಷ್ಯವೂ ಕೇಂದ್ರೀಕೃತವಾಗಿದೆ. ಬೃಹತ್ ಯೋಜನೆಗಳ ಮೂಲಕ ರಾಷ್ಟ್ರದ ಬೇಡಿಕೆಗಳೆಲ್ಲವನ್ನೂ ಪೂರೈಸಿ, ಸ್ವಾವಲಂಬಿಯಾಗುವ ಹಂಚಿಕೆಯನ್ನು ಮಾಡಲಾಗುತ್ತಿದೆ.

ಆದರೆ ಇಷ್ಟೆಲ್ಲವನ್ನೂ ಮಾಡುವ ಮೊದಲು ನಾವು ನಮ್ಮ ವೈಯಕ್ತಿಕ ಶಕ್ತಿಯಲ್ಲಿ ವಿಶೇಷ ಬದಲಾವಣೆಗನ್ನು ಮಾಡಿಕೊಳ್ಳಬೇಕಾಗುವುದೆಂಬುದನ್ನು ಮರೆಯಲಾಗದು. ಬೃಹತ್ ಯೋಜನೆಗಳು ರಾಷ್ಟ್ರದ ಆರ್ಥಿಕ ಶಕ್ತಿಗೆ ಅಡಿಪಾಯವಾಗುವುದೆಂಬುದನ್ನು ನಾವು ಒಪ್ಪಿಕೊಳ್ಳಬಹುದಾದರೂ ಆ ಅಡಿಪಾಯದ ಗಟ್ಟಿತನಕ್ಕೆ ವೈಯಕ್ತಿಕ ಬಲದ ಜಿಗುಟುತನ ಅತ್ಯಾವಶ್ಯವೆಂಬುದನ್ನು ಮರೆಯಲಾಗದು.

ಭಾರತವನ್ನು ಇಂದು ಬಡರಾಷ್ಟ್ರವೆಂಬ ದೃಷ್ಟಿಯಲ್ಲಿ ಜಗತ್ತಿನ ಇತರ ರಾಷ್ಟ್ರಗಳು ನೋಡುತ್ತಿರುವುದನ್ನು ನಾವು ಗಮನಕ್ಕೆ ತಂದುಕೊಂಡಾಗ ಇದಕ್ಕೆ ಕಾರಣವೇನೆಂಬುದನ್ನೂ ತಿಳಿದುಕೊಳ್ಳಬೇಕಾದದ್ದವಶ್ಯವಿದೆ. ಬಡರಾಷ್ಟ್ರವೆಂದರೆ ಕೇವಲ ಹಣದ ಬಡತನವೆಂದೆನ್ನಲಾಗದು; ನಮ್ಮಲ್ಲಿರುವ ಜನಸಂಖ್ಯೆಗೆ ಅವರ ಪರಿಮಾಣದಲ್ಲಿ ಸಾಕಷ್ಟು ಆವಶ್ಯಕ ಪದಾರ್ಥಗಳು ದೊರೆಯುವವೋ ಇಲ್ಲವೋ ಎಂಬುದೂ ಬಡತನದ ವಿಚಾರದಲ್ಲಿಯ ಪ್ರಮುಖ ಅಂಶವಾಗಿದೆ ರಾಷ್ಟ್ರದ ವಿಸ್ತಾರ, ಜನಸಂಖ್ಯೆ, ಹುಟ್ಟುವಳಿ, ಪ್ರಾಣಿ ಸಂಪತ್ತು, ಸಾಗಾಟ, ವಿನಿಮಯ, ಸೇವನೆ ಮೊದಲಾದುವುಗಳು ರಾಷ್ಟ್ರದ ಸಿರಿತನ ಬಡತನಗಳನ್ನು ಅಳೆಯುತ್ತವೆ. ಇವುಗಳೆಲ್ಲವನ್ನೂ ಅವಲೋಕಿಸಿದಾಗ ಭಾರತದ ಬಡತನವನ್ನು ಉಳಿದ ರಾಷ್ಟ್ರಗಳು ಯಾವ ದೃಷ್ಟಿಯಲ್ಲಿ ಅಳೆಯುವವೆಂಬುದರ ಕಲ್ಪನೆ ನಮಗೆ ಸಹಜವಾಗಿ ಬರಬಹುದಾಗಿದೆ.

ಭಾರತದಲ್ಲಿ ಸರ್ವತೋಮುಖ ಬೆಳವಣಿಗೆಯಾಗಬೇಕಾದದ್ದವಶ್ಯವಿದೆಯಾದರೂ ಜನತೆಯ ವೈಯಕ್ತಿಕ ಉತ್ಥಾನವಿಲ್ಲದೆ ಅವುಗಳು ಅಸಾಧ್ಯವೆಂದು ನಿರುಪಾಯವಾಗಿ ಹೇಳಬೇಕಾಗಿದೆ. ಅನೇಕ ಅರ್ಥಶಾಸ್ತ್ರಜ್ಞರು ವೈಯಕ್ತಿಕ ಉತ್ಥಾನವಾಗಬೇಕಾದರೆ ನಾವು ಎಲ್ಲ ದಿಶೆಗಳಲ್ಲೂ ಪ್ರಗತಿ ಸ್ಥಾಪಿಸಬೇಕೆಂದೂ, ಅದಕ್ಕಾಗಿ ಬೃಹತ್ ಯೋಜನೆಗಳ ಆವಶ್ಯಕತೆಯಿದೆಯೆಂದೂ, ಅದಕ್ಕಾಗಿ ಅತ್ತ ಕಡೆಗೆ ಗಮನವನ್ನಿತ್ತರೆ ನಮ್ಮ ಕಲ್ಯಾಣವಾಗುವುದೆಂದೂ ಹೇಳುತ್ತಿದ್ದಾರೆ. ಜೀವನದಲ್ಲಿಯ ಸುಖ—ಶಾಂತಿಗಳಿಗಾಗಿ ಮನುಷ್ಯ ಅವಿರತವಾದ ಹೋರಾಟದ ಮೂಲಕ ರಾಷ್ಟ್ರಪ್ರಗತಿಯಲ್ಲಿಯ ವಿವಿಧ ಕ್ಷೇತ್ರದ ಉಪಯೋಗವನ್ನು ಮಾಡಿಕೊಳ್ಳಬಹುದೇ ಹೊರತು, ವಿವಿಧ ಕ್ಷೇತ್ರಗಳ ಪ್ರಗತಿಯೇ ಶ್ರೇಷ್ಠವೆಂದು ಜೀವನವನ್ನು ಕಷ್ಟಸಾಧ್ಯವಾಗಿ ಸವೆಸಲಾರ. ಹಾಗೆ ಮಾಡುವುದಾದರೆ ಜೀವನದ ಉಪಯೋಗವೇನು? ರಾಷ್ಟ್ರದ ಆವಶ್ಯಕತೆಯೇನು? ಎಂಬ ವಿಚಾರ ಅವನಲ್ಲಿ ಬರುವುದು ಸಹಜವಾಗಿದೆ.

ಸರಕಾರವೆಂದರೆ ಜನತೆಯು ತಮ್ಮ ಸ್ವನಿಯಂತ್ರಣಕ್ಕಾಗಿ ಕೆಲವೊಂದು ಕರಾರುಗಳನ್ನು ಹಾಕಿ ಸಿದ್ಧಪಡಿಸಿದ ಪ್ರತಿನಿಧಿ. ಜನತೆ ತನ್ನ ಸುಖ-ಸಂತೋಷಗಳಿಗಾಗಿ ಸರಕಾರವನ್ನು ನಿಯುತಪಡಿಸಿರುತ್ತದೆ ಯೆಂಬುದಾಗಿಯೇ ಹೇಳಿದರೆ ತಪ್ಪಾಗಲಾರದು. ರಾಜರು ಸರ್ವ ಪ್ರಭುತ್ವವುಳ್ಳವರಾಗಿರಬಹುದಾದರೂ ಜನತೆಯ ಇಚ್ಛೆಗೆ ಒಂದಿಲ್ಲ ಒಂದು ದಿನವಾದರೂ ಮಣಿಯಲೇಬೇಕಾಗುವದು ಜನತೆಯ ಇಚ್ಛೆಯೇ ಸರಕಾರವೆಂಬ ಆಡಳಿತಯಂತ್ರ ಈ ಆಡಳಿತಯಂತ್ರ ಜನತೆಯ ಸುಖ-ಸಮಾಧಾನಗಳಿಗಾಗಿಯೇ ದುಡಿಯಬೇಕು, ರಾಷ್ಟ್ರೋದ್ಧಾರ ಮಾಡಬೇಕು, ರಾಷ್ಟ್ರಹಿತದೆಡೆಗೆ ಲಕ್ಷ್ಯವಿಡಬೇಕು—ಎಂದು ಮೊದಲಾಗಿ ಹೇಳುವುದರ ಉದ್ದೇಶವೇನು? ತಾನೂ ಸುಖಿಯಾಗಿರಬೇಕು, ತನ್ನಂತೆ ಇತರರೂ ಸುಖಿಯಾಗಿರಬೇಕು-ಎಂಬುದೇ ರಾಷ್ಟ್ರಹಿತದ ಚಿಕ್ಕ ವ್ಯಾಖ್ಯೆಯೆಂದು ಹೇಳಬಹುದು. ಇನ್ನೊಬ್ಬನಿಲ್ಲದೆ ಒಬ್ಬಾತ ಬಾಳಲಾರ. ಒಬ್ಬರನ್ನು ಮತ್ತೊಬ್ಬರು ಅವಲಂಬಿಸಲೇ ಬೇಕು ಅವಲಂಬನ ವೃತ್ತಿ ಸಹಕಾರದ ಕೈಗನ್ನಡಿ ಸಹಕಾರವೇ ಸರಕಾರದ ನಿರ್ಮಿತಿಗೆ ಕಾರಣ. ಹೀಗಾಗಿ ವೈಯಕ್ತಿಕವಾಗಿ ಬೆಳೆದ ಸಂಘಟನೆಯೇ ಸರಕಾರವೆಂಬ ಒಂದು ಗುಂಪನ್ನು ನಿರ್ಮಿಸಲು ಸಮರ್ಥವಾಗುತ್ತದೆ ಆದುದರಿಂದಲೇ ವ್ಯಕ್ತಿಗಳ ಮಹತ್ವವನ್ನು ನಾವು ತಿಳಿದು ನಮ್ಮ ರಾಷ್ಟ್ರದ ಬೆಳವಣಿಗೆಯ ಮುಂದಾಲೋಚನೆಯನ್ನು ಅವಲೋಕಿಸಬೇಕಾಗುವದು.

ಪುರಾತನ ಕಾಲದಲ್ಲಿಯ ರಾಜರಾಗಲೀ, ಸರಕಾರಗಳಾಗಲೀ ಜನರಿಂದ ಕಂದಾಯವನ್ನು ಪಡೆದು ಅದಕ್ಕೆ ಪ್ರತಿಯಾಗಿ ಅವರ ಸಂರಕ್ಷಣೆಯ ಭಾರವನ್ನು ಹೊರುವ ಕೆಲಸವನ್ನು ಮಾಡುತ್ತಿದ್ದರು. ಇದರಿಂದ ವ್ಯಕ್ತಿಗಳಿಗೂ, ಅಧಿಕಾರಿ ವರ್ಗಕ್ಕೂ ವಿಶೇಷ ಸಂಬಂಧವೇ ಬರುತ್ತಿರಲಿಲ್ಲ. ಕಂದಾಯ ಸಲ್ಲಿಸಿದರೆ ತಮ್ಮ ಕರ್ತವ್ಯವಾಯಿತೆಂದು ಜನ ಭಾವಿಸುತ್ತಿದ್ದರು. ಅಧಿಕಾರ ವರ್ಗಗಳು ಜನತೆಯ ಹಿತದ ಕಡೆಗಾಗಲೀ ಸಂಸ್ಕೃತಿ, ಜನಾಂಗ ಭಾಷೆಗಳ ಬಗೆಗಾಗಲೀ ಆಲೋಚಿಸುತ್ತಿದ್ದುದು ಕಡಿಮೆಯೆಂದೇ ಹೇಳಬೇಕು. ಆದರೆ ದಿನಗಳು ಬದಲಾಗಿ ಗುಲಾಮಗಿರಿಯು ಧ್ವಂಸವಾಗಿ, ಸ್ವತಂತ್ರಗೊಳ್ಳುತ್ತಿರುವ ಹಾಗೂ ವೈಜ್ಞಾನಿಕ ಕ್ಷೇತ್ರದ ವಿಶಾಲ ದೃಷ್ಟಿಯಿರುವ-ಇಂದಿನ ಜಗತ್ತಿನಲ್ಲಿ ಜನತೆ ಹಾಗೂ ರಾಜ್ಯಸರಕಾರಗಳಲ್ಲಿ ಪರಸ್ಪರ ತಿಳುವಳಿಕೆ, ಅವಲಂಬನ ಹೆಚ್ಚಾಗತೊಡಗಿದೆ. ಕೇವಲ ಸಂರಕ್ಷಣೆಯ ಭಾರವನ್ನಷ್ಟೇ ಹೊರದೆ ಇಂದಿನ ಸರಕಾರಗಳು ಜನತೆಯ ಶಿಕ್ಷಣ, ಸಂಸ್ಕೃತಿ, ಇತಿಹಾಸ, ಇರುವಿಕೆ, ಧರ್ಮ, ನೀತಿ ಮೊದಲಾದ ಜೀವನದ ಎಲ್ಲ ಕ್ಷೇತ್ರಗಳಲ್ಲೂ ಭಾಗವಹಿಸಲಾರಂಭಿಸಿವೆ. ಇವೆಲ್ಲವುಗಳ ಕಾರಣವೆಂದರೆ ವ್ಯಕ್ತಿಗಳ ಉಚ್ಚತಮ ವಿಚಾರಗಳೂ, ಇಚ್ಛೆಗಳೂ ಕಾರಣವೆಂದು ಹೇಳಬಹುದು ಜನತೆಯ ಇಚ್ಛೆಯಾರದಿದ್ದರೆ ಸರಕಾರ ಇವೆಲ್ಲ ವಿಷಯಗಳಲ್ಲಿ ಕೈಹಾಕುತ್ತಿರಲೇ ಇಲ್ಲ. ಈ ಕಾರಣಗಳಿಂದ ಇಂದಿನ ಸರಕಾರಗಳ ಆಡಳಿತ ವರ್ಗದ ಕ್ಷೇತ್ರ ತೀರ ವಿಶಾಲವಾಗಿದೆ. ಜೀವನದ ಎಲ್ಲ ದಿಶೆಗಳಲ್ಲೂ ಎಲ್ಲ ವಿಷಯಗಳಲ್ಲೂ ಇಂದು ಸರಕಾರದ ಅಧಿಕಾರದ ನೆರಳು ಬೀಳುತ್ತಿದೆ

ಈ ವಿಚಾರದಿಂದ ಲಾಭವಿಲ್ಲವೆಂದೆನ್ನಲಾಗದು ಸರಕಾರದ ಈ ವಿಶಾಲಕ್ಷೇತ್ರವೇ ವೈಜ್ಞಾನಿಕ ಪ್ರಗತಿಗೆ ಸಾಧಕವಾಗಿದೆ, ದಿನ ದಿನವೂ ಬೆಳೆಯುತ್ತಿರುವ ಜನಸಂಖ್ಯೆಗೆ ಕೆಲಸಕೊಟ್ಟಿದೆ; ಹೊಸಹೊಸ ವಿಚಾರಗಳಿಗೆ ಸ್ವಾಗತ ದೊರೆಯುತ್ತಿದೆ, ಜ್ಞಾನಭಂಡಾರ ಬೆಳೆಯುತ್ತಿದೆ. ಆದರೆ ಇದಕ್ಕೆ ಪ್ರತಿಯಾಗಿ ಹಾನಿಗಳೂ ಇಲ್ಲವೆಂದೆನ್ನಲಾಗದು. ಅರ್ಥ ಶಾಸ್ತ್ರದ ಆರಂಭದ ಸೂತ್ರವೆನಿಸಿದ ಮನುಷ್ಯನ ತೃಪ್ತಿಗೆ ಮುಕ್ತಾಯವಿಲ್ಲ ಎಂಬುದಕ್ಕೆ ಇದು ಪೋಷಕವಾಗಿ ಹಾನಿಗೆ ಕಾರಣವಾಗುವ ಸಂಭವವಿದೆ. ಹೊಸ ಹೊಸ ಪದಾರ್ಥಗಳ ಸಂಶೋಧನೆಗಳಿಂದ ಮನುಷ್ಯನ ತೃಪ್ತಿಗೆ ಪೋಷಕವಾಗಲು ಹೊಸ ಸರಕು-ಪದಾರ್ಥಗಳು ಬಂದು ಹೆಚ್ಚಿನ ವೆಚ್ಚಕ್ಕೆ ಕಾರಣವಾಗಿವೆ ಜೀವನವು ಒಂದು ಯಂತ್ರವಾಗಿ ಪರಿಣಮಿಸಿದೆ. ಆರ್ಥಿಕ ವರ್ಗಭೇದಗಳನ್ನು ಬೆಳೆಸಲು ಪೋಷಕವಾಗಿದೆ, ಪ್ರತಿಯೊಂದಕ್ಕೂ ನಿಯಮಿತತೆಯನ್ನು ಪ್ರಯೋಗಿಸಬೇಕಾಗುತ್ತದೆ.

ಏನೇ ಆದರೂ ವರ್ತಮಾನ ಕಾಲವು ಸರಕಾರ ಮತ್ತು ಜನತೆಯಲ್ಲಿ ತೀರ ನಿಕಟ ಸಂಬಂಧವನ್ನು ಹಚ್ಚಿದೆ. ಜನತೆಯ ಇಚ್ಛೆಯ ವಿರುದ್ಧ ಸರಕಾರ ಮಾತನಾಡಲಾರದು. ಆದರೆ ಇದರ ಪರಿಣಾಮವಾಗಿ ನಾವು ಭವಿಷ್ಯತ್ತಿನಲ್ಲಿ ತೊಂದರೆಗಳನ್ನೇನಾದರೂ ಅನುಭವಿಸಬೇಕಾಗುವುದೋ ಎಂಬುದನ್ನು ಆಲೋಚಿಸಬೇಕಾಗಿದೆ. ಮನುಷ್ಯ ಆಶಾವಾದಿ; ಇಚ್ಛಾವಾದಿ ತನ್ನಲ್ಲಿ ಶಕ್ತಿಯಿರಲಿ, ಬಿಡಲಿ-ದೊಡ್ಡ ದೊಡ್ಡ ಆಶಾಗೋಪುರಗಳನ್ನು ಕಟ್ಟುತ್ತಾನೆ ಅದರ ಬುಡ ಗಟ್ಟಿಯಿರದಿದ್ದರೆ ಕಟ್ಟಡ ಬಹಳ ದಿನ ಬಾಳುವುದು ಕಷ್ಟವೆಂಬುದನ್ನು ನಾವು ತಿಳಿಯಲೇಬೇಕು. ಇಂದಿನ ಪ್ರಯತ್ನದ ದ್ಯೋತಕವೇ ಭಾವೀಜೀವನದ ಸೌಖ್ಯದ ಅಡಿಗಲ್ಲಾಗಬೇಕು. ಅಂದರೆ ರಾಷ್ಟ್ರನಿರ್ಮಾಣದ ಬೃಹತ್ ಯೋ-

(೨೦ನೇ ಪುಟ ನೋಡಿರಿ)

'ಎಲವೊ ಜೀವವೆ, ಅರಿಯೆನಕಟ ನೀನಾರೆಂದು'

'ಎಲವೊ ಜೀವವೆ, ಅರಿಯೆನಕಟ ನೀನಾರೆಂದು,
ನಾನು ನೀನಿನ್ನಗಲಬೇಕೆಂದು ಅರಿವೆ;
ಎತ್ತಣಿಂ ಬಂದಿ ನೀನೆಂತು ನನ್ನೊಡನೆಂದು[1]?
ಎಂತೆನ್ನನುಳಿದೆಲ್ಲಿ ನೀನೆಂದು[2] ಸರಿವೆ?
ನಾವೆನಿತೊ ಸುಖದುಃಖ ಜತೆಯೊಳುಂಬುವೆವಲ್ಲ?
[3]ಕೆಳೆ ಎನಿತೊ ಬೆಳೆದಿಲ್ಲ ನಮ್ಮೊಳೀ ನಡುವೆ?
ತೊಲಗುವಂದೆನ್ನಂತೆ [4]ಕಣ್ಣು ತುಂಬುವಿಯಲ್ಲಿ?
ಅಥವ, [5]ಹಿಂಗಣಿಸನಲೆ [6]ಬೀಳ್ಕೊಳದೆ ನಡೆವೆ?'
'ಹೂವಿನಲಿ [7]ಕಂಪು ಏರಿವರೆ?, ಮರುಳ, ಹೂವಲ್ಲಿ
ನೀನು, ಹೂವೊಡಲು[8], ನೀನಾನದರ ಗಂಧ;
ನಾವೆರಡೆ? ಹೂವಿಗಲ್ಲದೆ ನಮಗೆ ಸಾವಿಲ್ಲ,
ಹೂ ಉದುರುವನಕ ನಮಗದರ ಸಂಬಂಧ.
ಹೂವರಳೆ, ನೀನೆಮ್ಮನನ್ಯತೆಯ[9] ಮರೆವೆ,
ಹೂ ಸುರುಳ್ಕೆ[10] ನಮ್ಮನನ್ಯತೆಯ ನೀನರಿವೆ'

— ಗೋವಿಂದ ಪೈ.

೧ ಎಂದು? = ಯಾವಾಗ? ೨ ಸರಿ = ತೆರಳು, ಬಿಟ್ಟು ಹೋಗು. ೩ ಕೆಳೆ = ಗೆಳೆತನ, ಸ್ನೇಹ. ೪ ಕಣ್ಣು ತುಂಬು = ಕಣ್ಣೀರು ಸುರಿ. ೫ ಹಿಂಗಣಿಸು = ಹಿಂದಕ್ಕೆ ನೋಡು. ೬ ಬೀಳ್ಕೊಳು = ಹೊರಟು ಹೋಗಲಿಕ್ಕೆ ಅನುಜ್ಞೆಯನ್ನು ಪಡೆಕೊಳ್ಳು. ೭ ಕಂಪು = ಪರಿಮಳ ೮ ಒಡಲು = ದೇಹ. ೯ ಅನನ್ಯತೆ = ಬೇರೆ ಬೇರೆಯಾಗಿ ಇರದಾಗಿರದೆ ಒಂದೇ ಆಗಿರುವಿಕೆ. ೧೦ ಸುರುಳು = ಸಂಕೋಚಿಸು, ಮುದುರು, ಬಾಡು.

ಭಾರತ ಹುಣ್ಣಿವೆ

ಹುಣ್ಣಿಮೆಗಳು ಹತ್ತು ಹಲವಾರು. ಪ್ರಕೃತಿಯು ಸುಂದರವಾಗಿ ಕಂಡು ನಮ್ಮ ಮನಸ್ಸನ್ನಾಕರ್ಷಿಸಿ ತನ್ಮಯರಾಗುವಂತೆ ಮಾಡುವುದು ಭಾರತ ಹುಣ್ಣಿಮೆಯ ವೈಶಿಷ್ಟ್ಯ. ಅಚ್ಚಬೆಳದಿಂಗಳಿನ ತಂಪುಗಾಳಿಯ ತವರಾದ ಆ ಭಾರತ ಹುಣ್ಣಿಮೆಯ ಸೌಂದರ್ಯವನ್ನು ಸವಿದು ನೋಡಬೇಕಾದರೂ ಇಲ್ಲಿ ಅದನ್ನು ಕಾವ್ಯದಲ್ಲಿ ಮೂಡಿಸಿದ್ದುದನ್ನಾದರೂ ಓದಿ ತಣಿಯಬಾರದೆ?

ಬರೆದವರು ಪ್ರೊ. ರಂ. ಶ್ರೀ. ಮುಗಳಿ, ಎಂ. ಎ. ಬಿ. ಟಿ., ಡಿ. ಲಿಟ್.

ಎಲ್ಲ ಹುಣ್ಣಿಮೆಗಳಲ್ಲಿ ನನಗೆ ಹೆಚ್ಚು ಪ್ರಿಯವಾದದ್ದು ಭಾರತ ಹುಣ್ಣಿಮೆ. ಪ್ರಕೃತಿಯ ಮೋಹಮಾಯೆ ಈ ಹುಣ್ಣಿಮೆಯ ರೂಪತಾಳಿ ನನ್ನ ಹೃದಯವನ್ನು ಅರಳಿಸಿದೆ, ಕಲ್ಪನೆಯನ್ನು ಕುದುರಿಸಿದೆ, ಕವಿತೆಯ ಮಾಯೆಯಾಗಿ ಹೊರ ಬಂದಿದೆ. ಭಾರತ ಹುಣ್ಣಿಮೆ ಎಂಬ ಹೆಸರು ಹೇಗೆ ಬಂದಿತೋ ಇಂದಿಗೂ ನನಗೆ ಗೊತ್ತಿಲ್ಲ. ಈ ವಿಷಯದಲ್ಲಿ ನಾನು ಮುಗ್ಧ ಶಿಶುವೆಂದು ಅಂದರೂ ತಪ್ಪಿಲ್ಲ. ಆದರೆ ಆ ಹೆಸರಿನ ಹಿಂದೆ ಇರುವ ಅನಂತ ಅರ್ಥವು ನನ್ನ ಹುಚ್ಚು ಹಿಡಿಸಿದೆ, ಭಾರತ ಹುಣ್ಣಿಮೆ! ಭಾರತಕ್ಕೆ ವಿಶಿಷ್ಟವಾದ ಅಚ್ಚ ಬೆಳುದಿಂಗಳಿನ ತಂಪು ಗಾಳಿಯ ತವರಾದ ಹುಣ್ಣಿಮೆ! ಭಾರತದ ಸಂಸ್ಕೃತಿಯ ಪರಿಪೂರ್ಣತೆಯನ್ನು ಸಾರುವ ಹುಣ್ಣಿಮೆ! ಭಾರತವು ದಾಸ್ಯಭಾವದಿಂದ ನರಳುತ್ತಿರುವಾಗ, ಬಿಡುಗಡೆ ಅಸಾಧ್ಯವೆಂದು ತೋರಿದಾಗ, 'ಭಾರತವೇ ನಿನ್ನ ಭಾರವನ್ನು ಇಳುಹುವ ಹುಣ್ಣಿಮೆ ಬರುವುದು' ಎಂದು ನೂರು ಸಲ ಸಾರಿ ಹೇಳಿದ ಹುಣ್ಣಿಮೆ!

'ಭಾರತದ ಹಿರಿ ಹುಣ್ಣಿಮೆ' ಎಂಬ ಈ ಕವಿತೆ ಭಾರತ ಹುಣ್ಣಿಮೆಯ ಚೆಲುವನ್ನು ವಿವರ–ವಿವರವಾಗಿ ಕುಸುರು ಕುಸುರಾಗಿ ಬಣ್ಣಿಸಿರುತ್ತದೆ. ಮೊದಲಿನ ನುಡಿಯಲ್ಲಿ 'ಆನಂದಾತ್ ಖಲು ಇಮಾನಿ ಭೂತಾನಿ ಜಾತಾನಿ, ತೇನ ಜಾತಾನಿ ಜೀವಂತಿ, ತಸ್ಮಿನ್ ಪ್ರಯಂತಿ ಅಭಿಸಂವಿಶಂತಿ' ಎಂಬ ಉಪನಿಷತ್ತಿನಲ್ಲಿಯ ಆನಂದ ದರ್ಶನವನ್ನು ಕನ್ನಡಿಸಲಾಗಿದೆ. 'ಆನಂದದಿಂದ ಎಲ್ಲ ಸಂಸಾರ ಹುಟ್ಟಿ, ಆನಂದದಿಂದಲೇ ಬದುಕಿ ಬೆಳೆದು, ಆನಂದದಲ್ಲಿಯೇ ಸೇರಿ ಒಂದಾಗುವುದು, ಆನಂದವೇ ಬ್ರಹ್ಮವೆಂದು ತಿಳಿಯುವುದು' ಎರಡನೆಯ ನುಡಿಯಲ್ಲಿ ಆನಂದ ದರ್ಶನಕ್ಕೆ ಅನುಗುಣವಾದ ಪೂರ್ಣ ಜೀವನ ದರ್ಶನವು ಸಾರರೂಪವಾಗಿ ಬಂದಿದೆ. ಸಚ್ಚಿದಾನಂದ ಘನನೂ ಸತ್ಯ ಶಿವ ಸುಂದರನೂ ಆದ ಪರಮಾತ್ಮನ ವಿಶ್ವಲೀಲೆಯ ಭವ್ಯವಾದ ನಾಟ್ಯದಲ್ಲಿ ಆನಂದಮಯರಾಗಿ ಬೆರೆತು ಹೆಜ್ಜೆಯನ್ನಿಟ್ಟು ಬಾಳುವುದೇ ಯುಕ್ತಿ, ಅದೇ ಇಲ್ಲಿ ಮುಕ್ತಿ. ಹುಣ್ಣಿಮೆಯ ಬಣ್ಣನೆಯ ಮೊದಲಿಗೇ ಈ ತತ್ತ್ವಜ್ಞಾನವೇಕೆ ಬಂತೆಂದು ಅನ್ನುವಿರಾ? ಭಾರತ ಹುಣ್ಣಿಮೆಯಲ್ಲಿ ಪ್ರಕೃತಿ ತನ್ನ ಸೌಂದರ್ಯ ತತ್ತ್ವವನ್ನೂ, ಆನಂದ ತತ್ತ್ವವನ್ನೂ ಎತ್ತಿಹಿಡಿದಿರುವಂತೆಯೂ ಸಮಗ್ರಜೀವನ ದರ್ಶನವೊಂದನ್ನು ಸಾರುವಂತೆಯೂ ಕವಿ ಜೀವಕ್ಕೆ ತೋರಿತು. ಆನಂದವೇ ವಿಶ್ವದ ಮೂಲ ತತ್ತ್ವ, ಅದರಿಂದಲೇ ಹುಟ್ಟು ಬೆಳವಣಿಗೆ, ಅದರಲ್ಲಿಯೇ ಎಲ್ಲದರ ವಿಲಯ. ಸೌಂದರ್ಯಕ್ಕೆ ಮೂಲ ಆನಂದ, ಸೌಂದರ್ಯದ ಪರಿಣತಿ ಆನಂದ. ಆನಂದವನ್ನು ಅರಿತುಕೊಂಡರೆ ಬದುಕಿನ ರಹಸ್ಯದ ಅರಿವಾಗುತ್ತದೆ, ಬಾಳಿನ ಯುಕ್ತಿ ಹೊಳೆಯುತ್ತದೆ. ಸಚ್ಚಿದಾನಂದಘನವೂ ಸತ್ಯ ಶಿವ ಸುಂದರವೂ ಆದ ಮಹಾಶಕ್ತಿ ವಿಶ್ವದಲ್ಲಿ ತನ್ನ ಆಟವನ್ನು ಆಡುತ್ತಿದೆ. ಅದರ ಆಟವನ್ನು ನಾವು ಅರಿಯಲಾರೆವು, ಅಳಿಸಲಾರೆವು. ಹಾಗಾದರೆ ನಾವೇನು ಮಾಡಬಲ್ಲೆವು? ಅದರ ವಿಶ್ವಲೀಲೆಯಲ್ಲಿ ಆನಂದಮಯರಾಗಿ ಬೆರೆತು ಹೆಜ್ಜೆಗೆ ಹೆಜ್ಜೆಯಿಕ್ಕಿ ನವರಸವಾಗಬೇಕು. ಇದೇ ಹಿರಿದಾದ ಹಂಚಿಕೆ, ಜೀವನ—ಯುಕ್ತಿ, ಮುಕ್ತಿ ಎರಡೂ ಇದರಲ್ಲಿದೆ.

ಇನ್ನು ಮುಂದಿನ ನುಡಿಗಳಲ್ಲಿ ಭಾರತ ಹುಣ್ಣಿಮೆಯಂದು ಕಾಣುವ ಸೃಷ್ಟಿ ಸೌಂದರ್ಯವನ್ನು ಬಣ್ಣಿಸಲಾಗಿದೆ. ಮಾಘ ಮಾಸದ ಭೋಗ ಮಾಗಿ ಬಂದಹಾಗೆ ಭಾರತದ ಹಿರಿಹುಣ್ಣಿಮೆ ಬಂದಿರುತ್ತದೆ. ಮಾಸಮಾಸದ ಬೆಳುದಿಂಗಳ ದಿನಗಳೆಂದರೆ ಸುಖದ ಸುಗ್ಗಿಯನ್ನು ತರುತ್ತವೆ. ಹೊಲದಲ್ಲಿ ಬೆಳೆಯ ಸುಗ್ಗಿ, ಹೃದಯದಲ್ಲಿ ಸುಖದ ಸುಗ್ಗಿ, ಚಳಿ ಬರಬರುತ್ತ ಕಡಿಮೆಯಾಗುತ್ತದೆ, ಬೆಳುದಿಂಗಳ ತಿಳಿ ಹೆಚ್ಚುತ್ತದೆ. ಬಿದಿಗೆಯಿಂದ ಚಂದ್ರನ ಕಲೆ ಹೆಚ್ಚುತ್ತ ಹೋದಂತೆ ಭೋಗ ಇಲ್ಲವೇ ಸೌಖ್ಯವೂ ಹೆಚ್ಚುತ್ತದೆ. ಹುಣ್ಣಿಮೆಯ ರಾತ್ರಿ ಚಂದ್ರ ಪೂರ್ಣನಾಗುತ್ತಾನೆ, ಅಂದು ಭೋಗವು ಸಹ ಮಾಗಿದಂತೆ ಅಂದರೆ ಪರಿಪೂರ್ಣವಾದಂತೆ ತೋರುತ್ತದೆ. ಹಿಂದೆ ಪುರಾಣಕಥೆಯ ಪ್ರಕಾರ ಭಸ್ಮಾಸುರನನ್ನು ಮೋಹಿಸಲು ಒಬ್ಬ ಮೋಹಿನಿ ಬಂದಳಂತೆ. ಇಂದು ಬೆಳ್ಳ ಬೆಳುದಿಂಗಳಿನ ಹೊಸ ಒಬ್ಬ ಮೋಹಿನಿ ಚೆಲುವೆಯೂ ವಿಶ್ವರೂಪಿಣಿ ಆಗಿ ಬಂದು ನೆಲ ಮುಗಿಲುಗಳನ್ನು ಅಪ್ಪಿರುವಳು. ಸೌಂದರ್ಯ ದೇವತೆಯಿಂದ ರಸಜ್ಞತೆಯ ಶಕ್ತಿಯನ್ನು ಪಡೆದ ಕೆಲವು ಜೀವರು ಭಸ್ಮಾಸುರನಂತೆ ಅದರ ದುರುಪಯೋಗವನ್ನು ಮಾಡಲು ಸಿದ್ಧರಾಗುವರು. ಆಗ ಅವರನ್ನು ತನ್ನ ಮೋಹಪಾಶದಲ್ಲಿ ತೆಗೆದುಕೊಂಡು, ತಾನು ಹೇಳಿದಂತೆ ಕುಣಿಯುವಂತೆ ಮಾಡಿ, ಸರಿಯಾದ ಹಾದಿಗೆ ತರುವವಳು ಈ ಭಾರತ ಹುಣ್ಣಿಮೆಯ ನವಮೋಹಿನಿ! ಗಗನದ ಪುಷ್ಪ ಅಂದರೆ ಆಕಾಶದಲ್ಲಿಯ ಹೂವು ನಿಜದ ನಾಡಿನಲ್ಲಿ ಇಳಿಸಿತೋ ಏನೋ ಅನ್ನುವಂತೆ ಬಿದಿಗೆ ತದಿಗೆಯ ಮೊಗ್ಗೆ ಅರಳಿದಂತೆ ಪೂರ್ಣ ಚಂದ್ರನು ಪೂರ್ಣತೆಯ ಸಂಕೇತನಾಗಿ ಮೆರೆಯುತ್ತಿದ್ದಾನೆ. ಅದನ್ನು ನೋಡುವವರ ಕಣ್ಣುಗಳ ಸಮುದ್ರ ಉಕ್ಕುವಂತೆ ಆಗುತ್ತದೆ. ಆಕಾಶದಲ್ಲಿಯ ಹೂವೆಂದರೆ ಇಲ್ಲದ ವಸ್ತು ಗಗನಪುಷ್ಪ, ಗಾಳಿಗೋಪುರ, ಮೊಲದ

(೧೮ನೇ ಪುಟ ನೋಡಿರಿ)

The discerning printer

takes great care in selecting the meterials for his work-- fine paper, good ink, clear type

He uses GANGES INKS

because he knows he can rely on them for

QUALITY

ECONOMY

FREEDOM FROM TROUBLE

Factories at: HOWRAH, BOMBAY, MADRAS

ಪ್ರಜಾಸತ್ತೆಯ ಪರಿಹಾರ ವಿಧಾನ

ಪ್ರಜಾಪ್ರಭುತ್ವವೆಂದಾಕ್ಷಣ ಅದರ ಶಾಸನಗಳು, ಆಡಳಿತೆ ನ್ಯಾಯೋಚಿತ ಜನಮನಕ್ಕೆ ಸರಿಯಾಗಿರಬೇಕಾಗಿಲ್ಲ; ಕೆಲವೊಮ್ಮೆ ಅದು ಕೆಲವು ಪ್ರಜೆಗಳ ಮೇಲೆ ನಿರಂಕುಶ ಪ್ರಭುತ್ವವನ್ನೇ ಮಾಡುವಂತೆ ತೋರುತ್ತದೆ—ಏಕೆಂದರೆ ಪ್ರಜಾಸತ್ತೆಯಲ್ಲಿಯೂ ದೋಷಗಳಿವೆ. ಭಾರತದ ಮಟ್ಟಿಗೆ ಅನೈಕ್ಯವನ್ನುಂಟುಮಾಡುವ ವಿರೋಧಿಗಳನ್ನು ಹತ್ತಿಕ್ಕುವ ಎಂತಹ ಆದರ್ಶವಾದರೂ ಅರಾಜಕತೆಯಲ್ಲಿ ಅಂತ್ಯವಾಗುವುದರಲ್ಲಿ ಸಂದೇಹವಿಲ್ಲ. ಅಧಿಕಾರಾರೂಢರು ಇದನ್ನು ತಿಳಿದು ಕಾರ್ಯಪ್ರವೃತ್ತರಾಗಬೇಕು.

ಬರೆದವರು: **ಶ್ರೀ ಸೇವನೆಮಿರಾಜ ಮಲ್ಲ.**

ಪ್ರಜಾರಾಜ್ಯದ ಈ ಯುಗದಲ್ಲಿ ಎಲ್ಲವೂ ಪ್ರಜಾಸತ್ತಾತ್ಮಕ ದೃಷ್ಟಿಯಿಂದಲೇ ಪರಿಗಣಿಸಲ್ಪಡುತ್ತಿವೆ: ಆರ್ಥಿಕ ಸಮಸ್ಯೆ, ಭಾಷಾಸಮಸ್ಯೆ, ಸಮಾಜೋದ್ಧಾರ ಸಮಸ್ಯೆ ಇವುಗಳನ್ನೆಲ್ಲ ಸಾಕಷ್ಟು ಸುಸೂತ್ರವಾಗಿ ಪರಿಹರಿಸುವ ಕೋಣೆಗಾಂಕಿ ಇಂದು ಎಲ್ಲರ ಮೇಲೂ ಇದೆ ಎಂಬ ನೀತಿಸೂತ್ರವನ್ನು ನಾವು ಮನಗಂಡಂತೆ ತೋರುವುದು. ಆದ್ದರಿಂದಲೇ ಭಾಷಾವಾರ ಪ್ರಾಂತ್ಯದ ರಚನೆಯ ವಿಷಯದಲ್ಲೂ, ಭೂಸುಧಾರಣೆಯ ವಿಷಯದಲ್ಲೂ, ರಾಷ್ಟ್ರಭಾಷೆಯ ವಿಷಯದಲ್ಲೂ ಪ್ರಜಾಸತ್ತಾತ್ಮಕ ಪರಿಹಾರದ ದಾರಿಗಾಗಿ ಆಗ್ರಹಪಟ್ಟವರು, ಆಗ್ರಹಪಡುವವರು ತುಂಬಾ ಮಂದಿ ಇದ್ದಾರೆ. ಅವರ ಬಳಗ ದಿನೇದಿನೇ ಹೆಚ್ಚುತ್ತಿದೆ.

ಆದರೆ ಭಾರತದಂಥ ವಿಶಾಲ ದೇಶದಲ್ಲಿ ಈ ಪ್ರಜಾಸತ್ತಾತ್ಮಕ ಪರಿಹಾರಕ್ಕೆ ಅನೇಕ ನೆಲೆಗಳಿರುವುದು ಸ್ವಾಭಾವಿಕವೆಂದು ಇತ್ತೀಚೆಗೆ ಶತಸ್ಸಿದ್ಧವಾಗುತ್ತಿದೆ. ರಾಷ್ಟ್ರೀಯ ನೆಲೆ, ರಾಷ್ಟ್ರದ ಐಕ್ಯದ ನೆಲೆ ಎಂಬ ಸ್ವಾತಂತ್ರ್ಯಪೂರ್ವದ ಆದರ್ಶ ದೃಷ್ಟಿ ಹಲವು ವಿಧದಲ್ಲಿ ನಮ್ಮ ಕೈಬಿಟ್ಟು ಹೋಗಿದೆ ಎಂಬುದು ಈಗೀಗ ನಡೆಯುವ ವಿಚಾರಮಥನಗಳಲ್ಲಿ ಎದ್ದು ತೋರುತ್ತಿದೆ. ಪ್ರತಿಯೊಂದು ಸಮಸ್ಯೆಗೂ ಸ್ಥಳೀಕ, ಪ್ರಾದೇಶಿಕ, ಸಾಮಾಜಿಕ ಇತ್ಯಾದಿ ಪ್ರಾಮುಖ್ಯ ನೆಲೆಗಳನೆಯೆಂದೂ ಅವುಗಳು ಸದಾ ರಾಷ್ಟ್ರೀಯ ನೆಲೆಗೆ ಅನ್ವಯವಾಗುವುದರ ಬದಲು ಹಲವು ಪ್ರಸಂಗಗಳಲ್ಲಿ ಅದಕ್ಕೆ ಪ್ರತಿರುದ್ಧವಾಗುವುವೆಂಬುದೂ ಸ್ಪಷ್ಟವಾಗಿ ತೋರಹತ್ತಿದೆ.

ಭಾಷಾವಾರು ರಾಜ್ಯ ರಚನೆಯ ಆದ್ಯಂತ್ಯಗಳನ್ನು ನಾವು ವಿಶ್ಲೇಷಿಸುವಾಗಲೂ ಇಂಥ ನೆಲೆಗಳು ತೋರಿ ಬರುತ್ತವೆ. ರಾಷ್ಟ್ರೀಯ ದೃಷ್ಟಿಯಿಂದ ಈಗ ಆವಿರ್ಭವಿಸಿರುವ ರಾಜ್ಯ ಪುನಾರಚನೆಯು ಕಾಯಿದೆ ಬದ್ಧವಾದುದು, ಪ್ರಜಾತಂತ್ರ ಸೂತ್ರಕ್ಕೆ ಅನುಗುಣವಾದುದು. ನಮ್ಮ ರಾಜ್ಯಾಂಗ ಘಟನೆಯು ಆ ರೀತಿ ಬದಲಾವಣೆಯನ್ನು ಹೊಂದಿಯೂ ಹೊಂದಿದೆ. ಪ್ರಜಾಸತ್ತಾತ್ಮಕ ದೃಷ್ಟಿಯಿಂದ ನಾವು ಬಹುಮತದ ಆದೇಶವನ್ನು ಶಿರಸಾವಹಿಸಲೇ ಬೇಕು. ಈ ಪುನಾರಚನೆಯಾಗಿ ವರ್ಷ ಒಂದು ಕಳೆದರೂ, ಅದು ಉಂಟು ಮಾಡಿರುವ ಸ್ಥಳೀಕ ಹಾಗೂ ಪ್ರಾದೇಶಿಕ ಅತೃಪ್ತಿ ಕೊನೆಗಾಣಿಸುವ ಶುಭ ಚಿಹ್ನೆಗಳು ತೋರುವುದಿಲ್ಲ. ಮುಂಬಯಿಯಲ್ಲಿ ಮಹಾರಾಷ್ಟ್ರ ಗುಜರಾತು ಭಾಷಾವಾರು ರಾಜ್ಯ ರಚನೆಯ ಚಳವಳಿ ಪ್ರಜ್ವಲಿಸುತ್ತಲೇ ಇದೆ. ಕೇಂದ್ರ ಸರಕಾರದ ನಿರ್ಣಯವನ್ನು ಬಹಿರಂಗವಾಗಿ, ಸಕ್ರಿಯವಾಗಿ ಇಂದು ಕೂಡಾ ಕೋಣೆಗಾರ ನಾಯಕರು ಖಂಡಿಸುತ್ತಿದ್ದಾರೆ. ಮತಗಟ್ಟೆಗಳಲ್ಲಿ ಅವರಿಗೆ, ದಿಗ್ಭ್ರಮೆಗೊಳಿಸುವಂಥ ವಿಜಯವೂ ದೊರತಿದೆ. ಮುಂಬಯಿಯಲ್ಲಿ ಇಷ್ಟು ವಿಶೇಷವಾಗಿ ಈ ಚಳವಳ ನಡೆದು, ಅಲ್ಲಿಯ ಪುರಸಭೆಯು ಮಹಾರಾಷ್ಟ್ರ ಸಮಿತಿಯ ಪರವಾಗಿ, ಇದೊಂದು ಹೊಸ ರಾಜಕೀಯ ಗುಂಪನ್ನೇ ನಿರ್ಮಿಸಿದ್ದರೂ ಕೇಂದ್ರ ಸರಕಾರವು ಎದೆಗುಂದದೆ ಯಥಾಸ್ಥಿತಿಯನ್ನೇ ಊರ್ಜಿತಗೊಳಿಸಲು ಪಣತೊಟ್ಟಿದೆ.

ರಾಜ್ಯ ಪುನಾರಚನೆಯ ನೋಲಿನ ಅಸಮಾಧಾನ ಕೇವಲ ಮುಂಬಯಿಯ ಜನರಿಗೆ ಮಾತ್ರವಲ್ಲ, ಕನ್ನಡಿಗರಾದ ನಮಗೂ ಇದೆ. ಮುಖ್ಯವಾಗಿ, ಕೇರಳದ ಪಾಲಾಗಿ ಹೋಗಿರುವ ಕಾಸರಗೋಡು ತಾಲೂಕಿನ ಕನ್ನಡ ಅಂಶವನ್ನು ಹೇಗಾದರೂ ಹಿಂಪೆ ಪಡೆಯಬೇಕೆಂದು ಸರ್ವಸಾಮಾನ್ಯ ಎಲ್ಲ ಪಕ್ಷಕ್ಕೆ ಸೇರಿದವರೂ ಅಭಿಪ್ರಾಯಪಡುತ್ತಾರೆ. ಇನ್ನು ಮುಂದಾದರೂ ಯಾವುದಾದರೊಂದು ರೀತಿಯಲ್ಲಿ ಈ ತಪ್ಪು ಸರಿಪಡಿಸಲ್ಪಡಬಹುದೆಂದು ಆಶಿಸುತ್ತಾರೆ. ಆದರೆ ಸದ್ಯಕ್ಕೆ ಇದರ ಪರಿಹಾರದ ದಾರಿ ತೋರುವುದಿಲ್ಲ. ಮತ್ತೆ ಕಾಯಿದೆ ಬದ್ಧವಾಗಿ ಇದನ್ನು ಸರಿಪಡಿಸಲು ಕೇಂದ್ರ ಪಾರ್ಲಿಮೆಂಟಿನ ಬಹುಮತ ಸದಸ್ಯರನ್ನು ಇದಕ್ಕೆ ಅನುಕೂಲವಾಗಿ ಪರಿವರ್ತಿಸದಿದ್ದರೆ ಸಾಧ್ಯವಿಲ್ಲ; ಅಂಥ ಪರಿವರ್ತನೆ ಮಾತ್ರ ಸಾಧ್ಯವಿಲ್ಲವೆಂಬುದನ್ನು ಎಲ್ಲರೂ ಒಪ್ಪಬಹುದು.

ಈಗ ಯೋಜನೆಯ ಅರ್ಥಶಾಸ್ತ್ರವನ್ನು ನಾವು ಪರಿಶೀಲಿಸಿದರೂ, ಅದು ಎಷ್ಟರ ಮಟ್ಟಿಗೆ ಪ್ರಜಾಸತ್ತಾತ್ಮಕವಾಗಿದೆ ಎನ್ನಲು ಬಾರದು. ಪ್ರಜೆಗಳು ಆರಿಸಿದ ಸರ್ಕಾರವು ಒಂದು ಯೋಜನೆಯನ್ನು ತಯಾರಿಸಿದೆ. ಆದರೆ ಅದರ ಸ್ವಭಾವವೆಂತಿರಬೇಕೆಂಬುವದರ ಬಗ್ಗೆ ಪ್ರಜೆಗಳಿಗೆ ಸ್ವತಃ ತಮ್ಮ ಅಭಿಪ್ರಾಯವನ್ನು ಅಭಿವ್ಯಕ್ತಪಡಿಸುವ ಅವಕಾಶ ಕಡಿಮೆ. ಯೋಜನೆಯ ಯಶಸ್ಸು—ಅಪಯಶಸ್ಸು, ವಿಧಾನ, ತತ್ವ ಮುಂತಾದವುಗಳ ಕುರಿತು ಅರ್ಥಶಾಸ್ತ್ರ ವಿದ್ವಾಂಸರಾದ ಮಹನೋಬಲಿಸ್, ರಾವ್ ಮತ್ತು ಬಿ. ಆರ್. ಶೆಣೈ ಇವರೊಳಗೇ ಏಕಮತ್ಯವಿಲ್ಲವೆಂದರೆ ಉಳಿದವರ ಪಾಡೇನು? ಶ್ರೀ ಟಿ. ಟಿ ಕೃಷ್ಣಮಾಚಾರ್ಯರು ಕೆಲ ಸಮಯದ ಹಿಂದೆ ನಮ್ಮ ಕರ್ನಾಟಕದಲ್ಲಿ ಕಬ್ಬಿಣದ ಕಾರ್ಖಾನೆಯನ್ನು ಸ್ಥಾಪಿಸಲು ಯೋಗ್ಯವಾದ ಜಾಗವಿಲ್ಲವೆಂದು ಬಿಟ್ಟರು! ಪ್ರಜಾರಾಜ್ಯದ ಮಂತ್ರಿಯಾದ ಅವರದೂ ಪ್ರಜಾಸತ್ತಾತ್ಮಕ ಅಭಿಪ್ರಾಯವಿದು. ಇದೇ ರೀತಿ ಖಾಸಗಿ ಉದ್ದಿಮೆ, ರಾಷ್ಟ್ರೀಕೃತ ಉದ್ದಿಮೆ, ಅಮೇರಿಕದಿಂದ ಸಾಲ, ರಷ್ಯಾದಿಂದ ಸಾಲ, ಇತ್ಯಾದಿ ಉಗ್ರ ಸಮಸ್ಯೆಗಳಿಗೂ ಪ್ರಜಾಸತ್ತಾತ್ಮಕ ಪರಿಹಾರವೆಂದರೆ ಸರಕಾರದ ಮುಖವನ್ನು ನೋಡಿ 'ಅಸ್ತು' ಎನ್ನುವುದಾಗಿದೆ.

ಈ ಯೋಜನಾ ಸಮಿತಿಯ ಯೋಜನೆಯಿಂದ ಕನ್ನಡಿಗರಾದ ನಮಗೂ ಸ್ವಲ್ಪ ಪರಿಣಾಮವಾಗಿದೆಯೆನ್ನಬಹುದು. ಭೂಹಿಡುವಳಿಯ ಕುರಿತು ಇತ್ತೀಚೆಗೆ ಪ್ರಕಟವಾದ ಜತ್ತಿ ಸಮಿತಿಯ ವರದಿಯು ಕೇಂದ್ರ ಸರಕಾರದ ಯೋಜನೆಗೆ ಅನುಗುಣವಾಗಿದೆ. ಆದರೆ ಮತದಾನ ಮಾಡಲು ತುಂಬಾ ಹುರುಪಿರುವವರಲ್ಲಿ ಕೂಡಾ ಈ ವರದಿಗೆ ಎಷ್ಟರ ಮಟ್ಟಿಗೆ ಬೆಂಬಲ ದೊರಕೀತೆಂದು ಹೇಳಲಾಗದು. ಆದರೆ ಇದು ಕೂಡಾ ಅನೇಕರಿಗೆ ಬೇಡವೆನಿಸಿದರೂ ಪ್ರಜಾಸತ್ತಾತ್ಮಕವಾಗಿ ಸದ್ಯದಲ್ಲೇ ಶಾಸನವಾಗಿ ರೂಪುಗೊಳ್ಳುವುದರಲ್ಲಿ ಸಂಶಯವಿಲ್ಲ.

ಆದರೆ ಪ್ರಸ್ತುತವಾಗಿ ಅನೇಕ ಪ್ರಜಾಸತ್ತಾತ್ಮಕ ವಾದಿಗಳನ್ನು ಹೊಡೆದೆಬ್ಬಿಸಿರುವ ಸಮಸ್ಯೆಯೆಂದರೆ ರಾಷ್ಟ್ರಭಾಷೆಯ ಧಾಂದಲೆ.

ಹಿಂದಿಯು ರಾಷ್ಟ್ರಭಾಷೆಯಾಗಬೇಕೆಂಬ ಅಭಿಮತವನ್ನು ಸ್ವಾತಂತ್ರ್ಯಪೂರ್ವದಲ್ಲಿ ಗಾಂಧಿಜೀ ವ್ಯಕ್ತಪಡಿಸಿ, ಹಿಂದಿ ಪ್ರಚಾರ ಚಳವಳವನ್ನು ಭಾರತಾದ್ಯಂತ ನಡೆಸಿದ್ದರು. ಅವರ ಪ್ರಯತ್ನದಿಂದ ಆಯಾಯಾ ರಾಜ್ಯಗಳಲ್ಲೆಲ್ಲ ಹಿಂದಿ ಪ್ರಚಾರ ಸಂಸ್ಥೆಗಳು ಸ್ಥಾಪನೆಯಾದವು. ಆ ಮೇಲೆ ಉರ್ದು ಬಲ್ಲವರಿಗೆ ಅದರಿಂದ ಹಾನಿಯಾಗಬಾರದೆಂದು ಹಿಂದುಸ್ತಾನಿ ಭಾಷೆಯ ಪ್ರಚಾರ ಮಾಡಿದರು. ಸ್ವಾತಂತ್ರ್ಯೋತ್ತರ ಕಾಲದಲ್ಲಿ ನಮ್ಮ ರಾಜ್ಯಾಂಗ ಘಟನೆಯಲ್ಲೂ ಹಿಂದಿಯು ರಾಷ್ಟ್ರಭಾಷೆಯಾಗಬೇಕೆಂಬ ವಿಧಿಯು ಸ್ವೀಕರಿಸಲ್ಪಟ್ಟಿತು. ಹಿಂದಿ ರಾಷ್ಟ್ರಭಾಷೆಯಾಗಬಾರದೆಂದು ಮೊದಲು ಚಳವಳ ಹೂಡಿದವರು ದಕ್ಷಿಣದಲ್ಲಿ ತಮಿಳುನಾಡಿನ ದ್ರಾವಿಡ ಕಳಗದವರು. ಅದು ಆರ್ಯರ ಭಾಷೆ, ಸಂಸ್ಕೃತವೂ ಆರ್ಯರ ಭಾಷೆ. ಆರ್ಯರ ಸ್ವಾಮಿತ್ವದಿಂದ ದಕ್ಷಿಣ ಭಾರತವನ್ನು ತಪ್ಪಿಸಬೇಕೆಂದು ಈ ಸಂಸ್ಥೆ ಆಗ ಸಾರಿತ್ತು; ಈಗಲೂ ಅದು ಅದೇ ಉದ್ದೇಶವನ್ನಿಟ್ಟುಕೊಂಡಿದೆ. ಅದರೊಡನೆ ಹಿಂದಿನ ಜಸ್ಟಿಸ್ ಪಾರ್ಟಿಯವರೂ ಹಿಂದಿಯನ್ನು ವಿರೋಧಿಸುತ್ತಿದ್ದರು.

ಆದರೆ ಈಗ ಒಮ್ಮಿಂದೊಮ್ಮೆಲೆ ಹಿಂದೀ ವಿರೋಧಿ ಚಳವಳಿವು ದಕ್ಷಿಣ ಭಾರತದ ಮದ್ರಾಸು ರಾಜ್ಯದಲ್ಲಿ ಪ್ರಬಲವಾಗಿದೆ. ಕೇರಳ, ಆಂಧ್ರ ಮತ್ತು ಮೈಸೂರು ಸರ್ಕಾರಗಳೂ, ಅಲ್ಲಿನ ಜನರೂ ಈ ಬಗ್ಗೆ ಸ್ವಚ್ಛ ಕ್ಷೋಭೆಗೊಳ್ಳದಿದ್ದರೂ, ಮದ್ರಾಸಿನ ತಮಿಳರು ತಮ್ಮ ರಾಜಕೀಯ ಪಕ್ಷಗಳ ಎಲ್ಲೆಯಿಂದ ಸೀಮೋಲ್ಲಂಘನ ಮಾಡಿ ಹಿಂದಿಯನ್ನು ದೂರೀಕರಿಸುವ ಚಳವಳವನ್ನಾರಂಭಿಸಿದ್ದಾರೆ. ಹಿಂದಿಯು ರಾಷ್ಟ್ರಭಾಷೆಯಾಗುವುದು ಘಟನಾಬದ್ಧವಾದುದು, ಗಾಂಧೀಜಿಯಿಂದ ಪುರಸ್ಕೃತವಾದುದು ಎಂಬ ದೃಷ್ಟಿಯನ್ನು ಕಡೆಗಣಿಸಿದವರಲ್ಲಿ ಭಾರತದ ನಿವೃತ್ತ ಗವರ್ನರ್ ಜನರಲರೂ, ಗಾಂಧೀಜಿಯ ಬೀಗರೂ, ಹಿರಿಯ ಕಾಂಗ್ರೆಸ್ ಮುತ್ಸದ್ದಿಯೂ ಆಗಿರುವ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಅಗ್ರಗಣ್ಯರು. ಅವರೊಡನೆ ಎಂ. ರತ್ನಸ್ವಾಮಿ, ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್ ಮುಂತಾದ ಮೇಧಾವಿಗಳ ತಂಡವೂ ಸೇರಿದೆ. ಹಿಂದಿಯನ್ನು ದಾಕ್ಷಿಣಾತ್ಯರ ಮೇಲೆ ಹೇರುವುದು ಧೂರ್ತತನದ ಲಕ್ಷಣವೆಂದು ಉಗ್ರವಾಗಿ ಆಪೇಕ್ಷಿಸಿದ್ದಾರೆ. ಹೀಗಾಗಿ ತಮಿಳುನಾಡಿನಲ್ಲಿ ಹಿಂದೀ ಭಾಷೆಯ ವಿರೋಧವು ಸರ್ವಸಾಮಾನ್ಯವಾಗಿ ಪಕ್ಷದ ಮತ್ತು ಜಾತಿಗಳ ಮಿತಿಗಳನ್ನು ಮೀರಿದೆಯೆನ್ನಬಹುದು. ಇದರೊಡನೆ ಅಲ್ಲಿನ "ಹಿಂದೂ" ಮುಂತಾದ ಉಜ್ವಲ ರಾಷ್ಟ್ರಭಕ್ತಿಯ ಕೀರ್ತಿ ಪಡೆದಿರುವ ಪ್ರಭಾವಶಾಲಿ ಪತ್ರಿಕೆಗಳೂ ಒಕ್ಕೊರಲಿನಿಂದ ಹಿಂದಿಯು ರಾಷ್ಟ್ರಭಾಷೆಯಾಗುವುದನ್ನು ವಿರೋಧಿಸಿವೆ. ಈ ವಿರೋಧವು ದಕ್ಷಿಣದ ಇತರ ರಾಜ್ಯಗಳಿಗೂ, ಬಂಗಾಳ, ಒರಿಸ್ಸಗಳಿಗೂ ಬೇಗನೆ ಹಬ್ಬಬಹುದೆಂಬುದರಲ್ಲಿ ಸಂಶಯವಿಲ್ಲ.

ಆದರೆ ಒಕ್ಕೂಟ ಸರ್ಕಾರ ಈ ವಿರೋಧವನ್ನು ಪರಿಗಣಿಸುವಂತೆ ತೋರುವುದಿಲ್ಲ. ಪ್ರಧಾನಿ ನೆಹ್ರೂರವರಂತೂ ತಮ್ಮ ಸಹನೆಯನ್ನು ಕಳೆದುಕೊಂಡು ರಾಷ್ಟ್ರದ ಐಕ್ಯದ ಹೆಸರಿನಲ್ಲಿ ಈ ಮುತ್ಸದ್ದಿಗಳನ್ನೆಲ್ಲ ಗದರಿಸಿ ಬಾಯಿ ಮುಚ್ಚಿಸಲು ಯತ್ನಿಸಿದ್ದಾರೆ. ("ಇದು ಗಳಗನೇ ಸೆಕ್ಷನಿನ ಧಾಟಿಯಲ್ಲಿದೆ" ಎಂದಿರುವರು ರಾಜಗೋಪಾಲಾಚಾರಿ). ಉತ್ತರ ಭಾರತದ ನೇಕಡಾ ೪೨ ಅಂಶ ಜನರ ಮನೆಮಾತು ಹಿಂದಿಯೆಂದು ಅದನ್ನು ಇಡೀ ರಾಷ್ಟ್ರದ ಮೇಲೆ, ರಾಜಕೀಯ ಬಹುಮತದ ಬಲದಿಂದ ಹೇರಿಸಿದರೆ, ರಾಷ್ಟ್ರಭಾಷೆಯ ಉದ್ದೇಶವಾದರೂ ಸಾರ್ಥಕವಾದೀತೆ ಎಂಬುದನ್ನು ಒಕ್ಕೂಟ ಸರ್ಕಾರವು ಯೋಚಿಸುವ ಸಂಧಿಕಾಲ ಹೀಗೆ ಮೂಡಿಬಂದಿದೆ.

ಇಂಥ ಕ್ಲಿಷ್ಟ ಸಮಸ್ಯೆಗಳು ನಮ್ಮ ವಿಶಾಲವಾದ ಪ್ರಜಾರಾಜ್ಯದಲ್ಲಿ ಇನ್ನು ಮುಂದೆಯೂ ಹಲವು ರೀತಿಯಿಂದ, ಹಲವು ರೂಪದಿಂದ ತೋರಿಬಾರದಿರಲಿಕ್ಕಿಲ್ಲ. ಅವುಗಳನ್ನು ಪಕ್ಷದ ಶಿಸ್ತಿನ ಬಲದಿಂದಲೋ ಗದರಿಸುವಿಕೆಯ ಮೂಲಕವೋ ಬಲವಂತವಾಗಿ ಪರಿಹರಿಸುವ ಹವ್ಯಾಸವು ಅಪಾಯಕರವಾದುದು. ವರ್ಣಗಳೊಳಗೆ, ಜಾತಿಗಳೊಳಗೆ, ವಂಶಗಳೊಳಗೆ, ಸಂಸ್ಕೃತಿಗಳೊಳಗೆ ಸಾಮರಸ್ಯವು ತನ್ನಿಂದ ತಾನೇ ಆಂತರಿಕವಾಗಿ ಉಂಟಾಗಬೇಕಲ್ಲದೆ, ಬಾಹ್ಯ ಪೀಡೆಯ ಮೂಲಕವಲ್ಲ. ಹಿಂದೆ ಅಶೋಕ, ಅಕ್ಬರನಂಥವರು ದಂಡಪ್ರಯೋಗದ ಮೂಲಕ ಕೂಡಾ ದೇಶದ ಐಕ್ಯತೆಯನ್ನು ಚಿರಕಾಲ ಸ್ಥಾಪಿಸಲು ಶಕ್ಯರಾಗಲಿಲ್ಲವೆಂಬುದನ್ನು ಈ ಸಂದರ್ಭದಲ್ಲಿ ನೆನೆಸಬಹುದಾಗಿದೆ. ಸ್ಥಿರವಾದ ಐತಿಹ್ಯವುಳ್ಳ ರಾಷ್ಟ್ರೀಯ ಚಾರಿತ್ರ್ಯವೇ ನಮ್ಮ ಪ್ರಜಾಸತ್ತೆಯ ವಾತಾವರಣಕ್ಕೆ ಹೊಸದಾಗಿರುವ ಈ ಕಾಲದಲ್ಲಿ ಅನೈಕ್ಯವನ್ನುಂಟುಮಾಡುವ ಮತ್ತು ವಿರೋಧಿಗಳನ್ನು ಹತ್ತಿಕ್ಕುವ ಎಂಥ ಆದರ್ಶದ ಸುಧಾರಣೆಯ ಕಾರ್ಯಕ್ರಮವೂ ಅರಾಜಕತೆಯಲ್ಲಿ ಅಂತ್ಯವಾಗುವುದು ನಿಶ್ಚಯವೆಂಬುದನ್ನು ಅಧಿಕಾರದಲ್ಲಿರುವವರು ಮತ್ತು ಅಧಿಕಾರೇಚ್ಛುಗಳು ಚಿರಂತರವಾಗಿ ಚಿಂತಿಸುತ್ತಿರುವುದು ಅನಿವಾರ್ಯವಾಗಿದೆ.

ಬುನಾದಿ ಶಿಕ್ಷಣದ ಸಾಫಲ್ಯ

ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಶೈಕ್ಷಣಿಕ ಕ್ಷೇತ್ರದಲ್ಲಿ ನಗಿದ ಮಹಾಕ್ರಾಂತಿ—ಬುನಾದಿ ಶಿಕ್ಷಣದ ಪ್ರಚಾರ. ಆದರೆ, ಇಂದು ನಮ್ಮ ದೇಶದಲ್ಲಿ 'ಬುನಾದಿ ಶಾಲೆ' ಯೆಂಬ ನಾಮಫಲಕಗಳನ್ನು ತೂಗಹಾಕಿದ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆಯಲ್ಲದೆ, ಗಾಂಧೀಜೀ ಹೇಳಿದಂತಹ ಬುನಾದಿಶಾಲೆಗಳಲ್ಲ. ಇದಕ್ಕೆ ಹೊಣೆಗಾರರಾದವರು ಇನ್ನಾದರೂ ಕೇಳಗಿವಿಗೇಳಬಾರದು; ಕಣ್ಣುರುಡರಾಗಬಾರದು; ಕಾಲ್ಕುಂಟರೆನಿಸಬಾರದು.

ಬರೆದವರು: **ಶ್ರೀ ಎಸ್. ಸದಾಶಿವರಾವ್.**

ಇಂದು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆಯ ಆವಶ್ಯಕತೆಯು ಈಗು ದಿನದಿಂದ ದಿನಕ್ಕೆ ಹೆಚ್ಚುತ್ತಾ ಇದೆ. ನಮ್ಮ ದೇಶದಲ್ಲಿ ಕೊಡಲ್ಪಡುತ್ತಿರುವ ಶಿಕ್ಷಣವು ನಮ್ಮ ಇಂದಿನ ಪರಿಸ್ಥಿಗೆ ತಕ್ಕುದಾಗಿಲ್ಲ. ಭಾರತದ ವಾತಾವರಣ, ಭಾರತದ ಜನಜೀವನ, ಭಾರತದ ವೈಶಿಷ್ಟ್ಯಕ್ಕೊಪ್ಪುವ ಒಂದು ಶಿಕ್ಷಣ ವಿಧಾನದ ಆವಶ್ಯಕತೆ ಕಂಡಾ ಇತ್ತು. ಭಾರತದ ಸ್ವಾತಂತ್ರ್ಯ ಹೋರಾಟದ ಕಾಲವಂತೂ ಈ ರೀತಿಯ ಭಾವನೆಯು ವಿಶೇಷತಃ ಬೆಳೆಯುತ್ತಾ ಬಂತು. ಸ್ವಾತಂತ್ರ್ಯ ಹೋರಾಟದ ಧುರೀಣ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ದೃಷ್ಟಿಯು ಇತ್ತ ಹರಿದು ಅವರು ಬುನಾದಿ ಶಿಕ್ಷಣ ಅಥವಾ 'ವಾರ್ಧಾ ಶಿಕ್ಷಣ' ಎನ್ನುವ ಹೊಸತೊಂದು ಶಿಕ್ಷಣ ಕ್ರಮವನ್ನು ಬಳಕೆಗೆ ತಂದರು. ತನ್ನ ಆಶ್ರಮಗಳಲ್ಲಿ ಇಂತಹ ಶಿಕ್ಷಣ ಕ್ರಮವನ್ನು ಬಳಕೆಗೆ ತಂದು ಅದರ ಸಫಲತೆಯನ್ನು ಅವರು ಕಂಡುಕೊಂಡರು.

ಭಾರತೀಯ ವಾತಾವರಣಕ್ಕೆ ಒಪ್ಪುವ ಶಿಕ್ಷಣ ವಿಧಾನವಿದು ಎಂಬುದು ಸರ್ವರ ಅಭಿಪ್ರಾಯ. ಈ ಕ್ಷೇತ್ರದ ವಿಸ್ತರಣೆಯು ದಿನದಿಂದ ದಿನಕ್ಕೆ ಆಗಿ, ದೇಶದ ಎಲ್ಲಾ ಶಾಲೆಗಳೂ ಬುನಾದಿ ಶಾಲೆಗಳಾಗಿ ಮಾರ್ಪಾಟು ಹೊಂದಬೇಕೆಂದು ಹೆಚ್ಚಿನವರ ಅಂಬೋಣ. ಮೊನ್ನೆ ತಾನೇ ಬ್ಯಾಡಗಿಯಲ್ಲಿ ಸೇರಿದ ಅಖಿಲ ಭಾರತ ಮೂಲ ಶಿಕ್ಷಣ ಪರಿಷತ್ತು ಸಹಾ ಇದೇ ವಿಚಾರವನ್ನು ಕುರಿತು ಒತ್ತಿ ಹೇಳಿದೆ. ಬುನಾದಿ ಶಾಲೆಗಳಾಗಿ ಎಲ್ಲಾ ಶಾಲೆಗಳನ್ನು ಪರಿವರ್ತಿಸುವಲ್ಲಿ ಯಾರ ಆಕ್ಷೇಪವೂ ಇರಲಾರದು. ಸರಕಾರದ ಸಹಾಯ ಪಡೆಯುವ ಅಥವಾ ಸರಕಾರದಿಂದ ನಡೆಸಲ್ಪಡುವ ಶಾಲೆಗಳು ಸರಕಾರದ ಆಜ್ಞೆಯನ್ನು ಪರಿಪಾಲಿಸಲೇ ಬೇಕು. ಸಹಜ. ಆದರೆ, ಎಲ್ಲಾ ಶಾಲೆಗಳನ್ನು ಬುನಾದಿ ಶಾಲೆಗಳನ್ನಾಗಿ ಮಾರ್ಪಾಟುಗೊಳಿಸುವುದೇ ಸರಕಾರದ ಧ್ಯೇಯ ಎನಿಸುವುದಾದರೆ ಇಲ್ಲಿ ತುಸು ವಿಚಾರ ಮಾಡಬೇಕಾಗುವುದು. ಶಾಲೆಗಳನ್ನು ಬುನಾದಿ ಶಾಲೆಗಳನ್ನಾಗಿ ಮಾರ್ಪಾಟುಗೊಳಿಸುವುದೇನೂ ಸರಕಾರಕ್ಕೆ ದೊಡ್ಡ ಕೆಲಸವಾಗಲಾರದು. ಒಂದೇ ಒಂದು ಆಜ್ಞೆಯೊಳಗೆ ಎಲ್ಲಾ ಶಾಲೆಗಳನ್ನು ಬುನಾದಿ ಶಾಲೆಗಳಾಗಿ ಮಾರ್ಪಾಟುಗೊಳಿಸಬೇಕೆಂದರೆ ಅದು ಸರಕಾರದ ಸಾಹಸದ ಕಾರ್ಯವೇನಲ್ಲ. ಹಾಗಾದರೆ, ಸರಕಾರಕ್ಕೆ ಇಂದು ಬೇಕಾಗಿರುವುದು ನಾಮ ಮಾತ್ರದ ಬುನಾದಿ ಶಾಲೆಗಳೇ? ಅಥವಾ ಕ್ರಮಬದ್ಧವಾದ ಬುನಾದಿ ಶಾಲೆಗಳೇ? ಇದು ಇಂದು ಕೇಳಬೇಕಾದ ಪ್ರಶ್ನೆ.

ಬುನಾದಿ ಶಿಕ್ಷಣ ಕ್ಷೇತ್ರದ ವಿಸ್ತರಣೆಯ ದೃಷ್ಟಿಯಿಂದ, ಜನಪ್ರಿಯಗೊಳಿಸುವ ದೃಷ್ಟಿಯಿಂದ ಶಾಲೆಗಳನ್ನು ಬುನಾದಿ ಶಿಕ್ಷಣ ಶಾಲೆಗಳಾಗಿ ಪರಿವರ್ತಿಸುವುದು ಸೂಕ್ತ. ಆದರೆ, ಈ ರೀತಿ ಶಾಲೆಗಳನ್ನು ಮಾರ್ಪಾಟುಗೊಳಿಸುವಾಗ, ಸರಕಾರವು ಆ ಶಾಲೆಯ ವಾತಾವರಣ, ಸ್ಥಿತಿಗತಿಗಳನ್ನು ನೋಡಿ ಅನಂತರ ಆ ಶಾಲೆಯನ್ನು ಪರಿವರ್ತಿಸುವುದು ಉಚಿತವಾದ ಮಾರ್ಗ. ಹೊರತು ಏಕಾ ಏಕಿ ಶಾಲೆಗಳನ್ನು ಒತ್ತಾಯಪೂರ್ವಕ ಬುನಾದಿ ಶಾಲೆಗಳಾಗಿ ಮಾರ್ಪಾಟುಗೊಳಿಸಿದರೆ ಏನು ಪ್ರಯೋಜನ? ಇಂದು ಕೆಲವು ಬುನಾದಿ ಶಾಲೆಗಳನ್ನು ನೋಡಿದರೆ, ನಿಜಕ್ಕೂ ಇದೂ ಬುನಾದಿ ಶಾಲೆಯೇ? ಎನಿಸುವುದು. ಮಕ್ಕಳಿಗೆ ಆಟವಾಡಲು ಒಂದು ಗೇಣು ಸ್ಥಳವಿಲ್ಲದ ಶಾಲೆ ಬುನಾದಿ ಶಾಲೆ. ಉಪ್ಪರಿಗೆಯ ಮೇಲೆ ಕಾರ್ಯ ನಡೆಸುವ ರಸ್ತೆಯ ಬದಿಯ ಶಾಲೆಗಳೂ ಬುನಾದಿ ಶಾಲೆಗಳು. ಒಬ್ಬನೇ ಒಬ್ಬ ಬುನಾದಿ ತರಬೇತಾದ ಅಧ್ಯಾಪಕನು ಇಲ್ಲದ ಶಾಲೆಗಳೂ ಬುನಾದಿ ಶಾಲೆಗಳು. ಈ ರೀತಿ ಶಾಲೆಗಳನ್ನು ಬುನಾದಿ ಶಾಲೆಗಳಾಗಿ ಮಾರ್ಪಾಟುಗೊಳಿಸಿದರೆ ಏನು ಬಂದಂತಾಯಿತು?

ಈ ಸಂದರ್ಭ ಕಳೆದ ದಶಂಬರದಲ್ಲಿ ಜರಗಿದ ೩೨ನೇ ಅ. ಭಾರತ ಶಿಕ್ಷಣ ಸಮ್ಮೇಳನದಲ್ಲಿ ವಿಶ್ವವಿದ್ಯಾಲಯ ಸಹಾಯ ಧನ ಆಯೋಗದ ಅಧ್ಯಕ್ಷ ಡಾ| ಸಿ. ಡಿ. ದೇಶಮುಖರು ಆಡಿದ ಮಾತುಗಳನ್ನು ಉಲ್ಲೇಖಿಸುವುದು ಅವಶ್ಯ. "ಬುನಾದಿ ಶಿಕ್ಷಣದ ವಿಚಾರದಲ್ಲಿ ನಮ್ಮ ದೇಶದಲ್ಲಿ ಒಂದು ರೀತಿಯ ವಿಶೇಷ ಪವಿತ್ರಭಾವನೆ ಕಂಡುಬರುತ್ತಿದೆ. ಬುನಾದಿ ಶಿಕ್ಷಣವನ್ನು ಪ್ರತಿಪಾದಿಸುತ್ತಿರುವ ಕೇಂದ್ರ ಸರಕಾರದಿಂದ ಧನಸಹಾಯವನ್ನು ಆಕರ್ಷಿಸುವುದಕ್ಕಾಗಿ, ದಿನ ಬೆಳಗಾಗುವುದರೊಳಗೆ ಶಾಲೆಗಳನ್ನು ಬುನಾದಿ ಶಾಲೆಗಳಾಗಿ ಪರಿವರ್ತಿಸಿದ ಘಟನೆಗಳೆಷ್ಟೋ ಇವೆ. ಹೀಗೆ ಪರಿವರ್ತನೆ ಮಾಡುವಾಗ, ಹೊಸ ಶಿಕ್ಷಣ ವಿಧಾನವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವರೆ ಅನುಕೂಲತೆ ಹಾಗೂ ಸರಿಯಾದ ತರಬೇತಿ ಪಡೆದ ಅಧ್ಯಾಪಕರು ಇರಬೇಕೆಂಬುದನ್ನು ಮರೆಯಲಾಗದು". ಈ ಮಾತುಗಳನ್ನು ನಮ್ಮ ಶಿಕ್ಷಣ ಕ್ಷೇತ್ರದ ಅಧಿಕಾರಿಗಳೂ ಮನವರಿಕೆ ಮಾಡಿಕೊಳ್ಳುವುದು ಒಳಿತು. "ಶಿಕ್ಷಣ ಕ್ಷೇತ್ರದ ವಿಸ್ತರಣೆಗಿಂತ ಶಿಕ್ಷಣ ಯೋಗ್ಯತಾಭಿವೃದ್ಧಿ ಮುಖ್ಯ" ಇದನ್ನು ನಮ್ಮ ಸರಕಾರ, ತಿಳಿಯ ಬೇಡವೇ. ಬುನಾದಿ ಶಾಲೆಗಳಾಗಿ ಪರಿವರ್ತಿಸಿದ ಶಾಲೆಗಳೇ ಇಂದು ನಾಮ ಮಾತ್ರ ಉಳಿದಿರುವಾಗ ಪುನಃ ಪರಿವರ್ತನೆಗೊಂಡ ಶಾಲೆಗಳ ಗತಿಯೇನು? ಇದನ್ನು ತುಸು ಯೋಚಿಸಬಾರದೆ?

(೧೩ನೇ ಪುಟ ನೋಡಿರಿ)

SRI RAMAKRISHNA THEATRE, LIMITED,
UDIPI.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲ್ಯಾಯ್ಡ್ ಮತ್ತು
ಪತ್ರಿಕಾ ಜಾಹೀರಾತಿನ ನಿದರ್ಶನ!!

- "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—
- ಮೋಟಾರು, ರೇಡಿಯೋ ಬ್ಯಾಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—
- ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—
- ಮದುವೆ, ಮುಂಜಿಗಳಿಗಾಗಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?
ಇಲ್ಲಿಯೇ—
ಶ್ರೀರಾಮಕೃಷ್ಣ ಥಿಯೇಟರ್, ಲಿಮಿಟೆಡ್,
ಉಡುಪಿ.

ಉಡುಪಿಯು ಭಾರತದಲ್ಲಿ ಸುಪ್ರಸಿದ್ಧ ಕ್ಷೇತ್ರ, ಅಂಥಾ ಧರ್ಮಕ್ಷೇತ್ರದಲ್ಲಿ
ಐರೋಡಿ ರಾಧಾಕೃಷ್ಣ ಪೈಯವರ
ಪಾತ್ರೆ ಅಂಗಡಿಯು ಪ್ರಸಿದ್ಧ ಯಾಕೆ?
ಕ್ರಯದಲ್ಲಿ ಕಡಿಮೆ ಮಟ್ಟದಲ್ಲಿದ್ದು ಸೌಂದರ್ಯದಲ್ಲಿ ಮೇಲ್ಮಟ್ಟದ್ದಾಗಿರುವ ಮನೆ, ಮಠ, ದೇವಾಲಯಗಳಿಗೆ ಬೇಕಾಗುವ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು, ಶುದ್ಧ ಕಂಚು, ಸ್ಟೀಲು, ಎಲ್ಯುಮಿನಿಯಂ ಪಾತ್ರೆಗಳು ರಖಂ ಆಗಿಯೂ ಚಿಲ್ಲರೆಯಾಗಿಯೂ ಸಿಗುವ ಒಂದೇ ಅಂಗಡಿ
ಐರೋಡಿ ರಾಧಾಕೃಷ್ಣ ಪೈ, ಪಾತ್ರೆ ವ್ಯಾಪಾರಿ,
ಅನಂತೇಶ್ವರ ಸನ್ನಿಧಿ, ರಥಬೀದಿ, ಉಡುಪಿ.
ವಿಶೇಷ ಸೂಚನೆ— ದೇವತಾರ್ಚನೆ ಪಾತ್ರೆಗಳ ಸಚಿತ್ರ ಕ್ಯಾಟಲಾಗಿಗೆ ಬರೆದರೆ ಉಚಿತವಾಗಿ ಕಳುಹಿಸಲಾಗುವುದು.

ಮೈಸೂರು ಟ್ಯಾಪ್ ಫೌಂಡ್ರಿ,
ಬೆಂಗಳೂರು—2.
ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ "ಮೈಸೂರು ಟ್ಯಾಪ್ ಫೌಂಡ್ರಿ"ಯಲ್ಲಿ ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್ ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.
ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.
ಇಂದೇ ವಿವರಗಳಿಗೆ ಬರೆಯಿರಿ:—
THE MYSORE TYPE FOUNDRY
Subedar Chatram Road, **BANGALORE-2.**



ಗತವರ್ಷದ

ಭಾರತವು ತನ್ನ ಇನ್ನೂ
ಕೊಂಡು ೧೯೪೭ರ ಆಗೋಸ್ಟ್
ವರ್ಷಗಳ ನಂತರ ಅದು ತನ್ನ
ತ್ವ ತತ್ವದ ಮೇಲೆ ಶಾಸನವನ್ನು
ನಮ್ಮ ದೇಶದಲ್ಲಿ ಅನೇಕಾನೇಕ
ಘಟಿಸಿವೆ. ಅನ್ಯದೇಶೀಯರ ಪ್ರ
ಚದ ಇತರ ರಾಷ್ಟ್ರಗಳ ಸಂ
ಧೈರ್ಯದಿಂದ ಹೇಳಬಹುದು.

ಜನವರಿ ೨೬ರಂದು ದೇಶದ ಎಲ್ಲ ಭಾಗಗಳಲ್ಲಿಯೂ ಪ್ರಜಾರಾಜ್ಯ ದಿನವನ್ನು ಉತ್ಸವದ ರೂಪದಲ್ಲಿ ಆಚರಿಸಲಾಗುವುದು. ಆ ದಿನದಂದು ಭಾರತವು ಸರ್ವಸ್ವತಂತ್ರ ಪ್ರಜಾರಾಜ್ಯವಾಗಿ ಘೋಷಿಸಲ್ಪಟ್ಟ ಎಂಟನೆಯ ವಾರ್ಷಿಕೋತ್ಸವವನ್ನು ವೈಭವಯುತವಾಗಿ ಆಚರಿಸಲಾಗುವುದು.

೧೯೫೭ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವದ ವರ್ಷವಾಗಿದೆ. ಈ ಮಹತ್ವಪೂರ್ಣ ಘಟನೆಯ ಸ್ಮರಣಾರ್ಥವಾಗಿ ರಾಷ್ಟ್ರಾದ್ಯಂತವೂ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವವನ್ನು ವೈಭವಯುತವಾಗಿ ಆಚರಿಸಲಾಯಿತು. ರಾಜಕೀಯ ಸ್ವಾತಂತ್ರ್ಯದಿಂದ ಲಕ್ಷಾಂತರ ಜನರಿಗೆ ಸಂಪದಭ್ಯುದಯದ ಜೀವನವನ್ನು ದೊರಕಿಸಿಕೊಡುವ ಜನತೆಯ ದೃಢ ಸಂಕಲ್ಪಕ್ಕೆ ಈ ಸ್ವಾತಂತ್ರ್ಯ ಸಂಗ್ರಾಮ ಶತಮಾನೋತ್ಸವದ ಸಮಾರಂಭಗಳಿಂದ ಬೆಂಬಲ ದೊರೆತಂತಾಯಿತು.

ಎರಡು ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗೊಂಡಿರುವ ಆರ್ಥಿಕ ಪುನಾರಚನೆಯ ಕಾರ್ಯ ವಿಧಾನವು ತೀವ್ರಗತಿ ಪಡೆಯಿತು. ಈಗ ನಿಧಾನವಾಗಿ ನಿರ್ಮಾಣಗೊಳ್ಳುತ್ತಿರುವ ಪುರೀ ರಾಜ್ಯದ ಭವ್ಯ ಮಂದಿರಕ್ಕೆ ಅನೇಕ ಭವನಗಳು ಸೇರಲ್ಪಟ್ಟಿವೆ.

ಒರಿಸ್ಸಾ ರಾಜ್ಯದಲ್ಲಿ ನಿರ್ಮಾಣಗೊಳ್ಳುತ್ತಿರುವ ಬೃಹತ್ ಪ್ರಮಾಣದ ಹಿರಾಕುಡ್ ಅಣೆಕಟ್ಟಿನ ಮೊದಲನೆಯ ಹಾಗೂ ಮುಖ್ಯವಾದ ಘಟ್ಟವನ್ನು ಮುಗಿಸಲಾಗಿದೆ. ಭಿಲೈ, ದುರ್ಗಾಪುರ ಮತ್ತು ರೂರ್ಕೆಲಾಗಳಲ್ಲಿ ಮೂರು ಹೊಸ ಉಕ್ಕಿನ ಕಾರ್ಖಾನೆಗಳ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲಾಯಿತು. ದಕ್ಷಿಣ ಭಾರತದ ನೇವೆಲಿಯಲ್ಲಿ ಗಮನಾರ್ಹವಾದ ಪ್ರಮಾಣದ ಕಂದು ಬಣ್ಣದ ಕಲ್ಲಿದ್ದಲನ್ನು ಗಣಿಗಳಿಂದ ಹೊರ ತೆಗೆಯಲಾಯಿತು. ಭಾರತ ನೇಪಾಳಗಳ ನಡುವೆ ಸಂಬಂಧ ಕಲ್ಪಿಸುವ ತ್ರಿಭುವನ ರಾಜಪಥ ಸಂಚಾರ ಮಾರ್ಗವನ್ನು ಭಾರತೀಯ ಸೇನಾ ಎಂಜಿನಿಯರ್‌ಗಳು ನಿರ್ಮಿಸಿ ನೇಪಾಳ ಸರ್ಕಾರದವರಿಗೆ ಉಡುಗೊರೆ ರೂಪದಲ್ಲಿ ನೀಡಿದರು.

೧೯೫೭ರಲ್ಲಿ ರಾಷ್ಟ್ರದ ಸಾಂಸ್ಕೃತಿಕ ಜೀವನವು ಮತ್ತಷ್ಟು ವಿಕಾಸಗೊಂಡಿತು. ಶಿಕ್ಷಣ ಮಂತ್ರಿ ಶಾಖೆಯವರು ಪ್ರತಿ ವರ್ಷವೂ ವ್ಯವಸ್ಥೆಗೊಳಿಸುತ್ತಿರುವ ಯುವಜನೋತ್ಸವದಲ್ಲಿ ಸಂಗೀತ, ನಾಟಕ ನೃತ್ಯ ವಿಭಾಗಗಳಲ್ಲಿ ಪ್ರತಿಭಾಶಾಲಿಗಳಾದ ತರುಣ ತರುಣಿಯರಿಗೆ ಉತ್ತೇಜನವೀಯಲಾಯಿತು. ಆಕಾಶವಾಣಿಯು ವ್ಯವಸ್ಥೆಗೊಳಿಸಿದ್ದ ಸಾಹಿತ್ಯ ಸಮ್ಮೇಳನ ಮತ್ತು ರಾಷ್ಟ್ರೀಯ ಕವಿಗೋಷ್ಠಿ—ಇವುಗಳಲ್ಲಿ ವಿವಿಧ ಪ್ರದೇಶಗಳ ಮತ್ತು ಭಾಷೆಗಳ ಲೇಖಕರು ಸಮಾವೇಶಗೊಂಡು ಸಾಮಾನ್ಯಾಸಕ್ತಿಯ ಸಮಸ್ಯೆಗಳನ್ನು ಕುರಿತು ಸಮಾಲೋಚಿಸಿದರು.

ಸ್ಪೂಟ್ನಿಕ್ ಮತ್ತು ನಿರ್ದೇಶಿತ ಕ್ಷಿಪಣಿಗಳ ವರ್ಷದಲ್ಲಿ, ಪ್ರಪಂಚದ ಮಹಾ ರಾಷ್ಟ್ರಗಳು ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳ್ಳುವುದನ್ನು ನಿಲ್ಲಿಸಬೇಕೆಂದು, ವಿಜ್ಞಾನ ಕ್ಷೇತ್ರದಲ್ಲಿ ಗಳಿಸಲಾಗಿರುವ ಪ್ರಗತಿಯನ್ನು ಶಾಂತಿಯುತ ಉದ್ದೇಶಗಳಿಗಾಗಿ ಬಳಸಬೇಕೆಂದು ಭಾರತವು ಏಕಪ್ರಕಾರವಾಗಿ ಒತ್ತಾಯ ಮಾಡಿತು. ಪ್ರಧಾನ ಮಂತ್ರಿಗಳು ಈ ವರ್ಷ ಸಿಲೋನ್, ಜಪಾನ್, ಸ್ವೀಡನ್ ಮತ್ತು ಡೆನ್ಮಾರ್ಕ್ ರಾಷ್ಟ್ರಗಳಿಗೆ ಸದ್ಭಾವನಾ ಪ್ರವಾಸ ಕೈಗೊಂಡ ಫಲವಾಗಿ ಪ್ರಪಂಚದ ಉಳಿದ ಭಾಗಗಳೊಂದಿಗೆ ಭಾರತದ ಸಂಬಂಧವು ಮತ್ತಷ್ಟು ಬಲಗೊಂಡಿತು. ಉಪರಾಷ್ಟ್ರಾಧ್ಯಕ್ಷರಾದ ಡಾ|| ರಾಧಾಕೃಷ್ಣನ್‌ರವರು ಅಕ್ಟೋಬರ್ ತಿಂಗಳಲ್ಲಿ ಆಗ್ನೇಯ ಏಷಿಯಾ ರಾಷ್ಟ್ರಗಳಲ್ಲಿ ಯಶಸ್ವಿಯಾಗಿ ಪ್ರವಾಸ ಕೈಗೊಂಡರು.

೧೯೫೭ರಲ್ಲಿ ಪ್ರಪಂಚದ ನಾನಾ ರಾಷ್ಟ್ರ

ಗಳಿಗೆ ಸೇರಿದ ಗಣ್ಯ ವ್ಯಕ್ತಿಗಳು ಭಾ
ವನ್ನು ಸಂದರ್ಶಿಸಿದರು. ಈ ವರ್ಷದ
ದಿಭಾಗದಲ್ಲಿ ಚೀನಾದ ಪ್ರಧಾನ ಮಂ
ಗಳಾದ ಚೌ. ಎನ್. ಲಾಯ್
ತಮ್ಮ ಉಪಪ್ರಧಾನಿಗಳೊಡಗೂಡಿ
ತವನ್ನು ಸಂದರ್ಶಿಸಿದರು. ಇ
ಡೆನ್ಮಾರ್ಕ್, ಸ್ವೀಡನ್, ಯುಗೋ
ವಿಯಾ ಮತ್ತು ಮಲಯಾಗಳಿಂ
ತ್ರಿಗಳು ಭಾರತಕ್ಕೆ ಭೇಟಿಯಿತ್ತ
ಗ್ರೇಟ್ ಬ್ರಿಟನ್ನಿನ ಪ್ರಧಾನಿ
ಹೆರೋಲ್ಡ್ ಮ್ಯಾಕಮಿಲನರು ಸಹ
ತಕ್ಕೆ ಸಂದರ್ಶನವಿತ್ತರು.

೧೯೫೭ರಲ್ಲಿ ಭಾರತದಲ್ಲಿ ಅನೇಕ
ತಾರಾಷ್ಟ್ರೀಯ ಸಮ್ಮೇಳನಗಳು



...ಾವಲೋಕನ

...ಾಸ್ಯ ಸ್ವಂತಿಕೆಯನ್ನು ಕಡಿದು
...ತಂತ್ರವಾಯಿತು ಮುಂದರಡು
...ದಟಿಸಿಕೊಂಡು ಪ್ರಜಾಪ್ರಭು
... ಅಂದಿನಿಂದ ಇಂದಿನವರೆಗೆ
...ನಡೆದಿವೆ ವಿವಿಧ ಘಟನೆಗಳು
... ಬಂದಿವೆ ಹೀಗೆ ಪ್ರಸಂ
...ತ್ತಿ ಎಲ್ಲಿನಂತಾಗಿದೆ ಎಂದು



...೧೯೫೭ರ ಜನವರಿಯಲ್ಲಿ ನಡೆದ ...ನೆಯ ಅಂತರರಾಷ್ಟ್ರೀಯ ...ಕ್ಷಯ ...ಸಮ್ಮೇಳನ ಎಪ್ರಿಲ್ ತಿಂಗಳಲ್ಲಿ ...ದ ಏಶಿಯಾದ ಕಾನೂನು ಸಲಹಾ ...ಯ ಸಭೆ ಮತ್ತು ಡಿಸೆಂಬರ್‌ನಲ್ಲಿ ...ಕಾಮನ್‌ವೆಲ್ತ್ ಪಾರ್ಲಿಮೆಂಟರಿ ...ಮ್ಮೇಳನಗಳು ನವದೆಹಲಿಯಲ್ಲಿಯೇ ...ನವು ಈ ಸಂಬಂಧದ ಕೆಲವೊಂದು ...ಶ್ಯಗಳನ್ನು ಇಲ್ಲಿ ನೋಡಬಹುದು

...ಎಡಗಡೆಯ ಮೇಲಿನ ಚಿತ್ರ—

...೧— ತ್ರಿಭುವನ ರಾಜ್ಯಪಥದ ನಿ...ಣ ಕಾರ್ಯವು ನಡೆಯುತ್ತಿದೆ ಭಾ...ಯ ಸೇನಾ ಇಂಜನಿಯರರು ನಿರ್ಮಿ... ಈ ಸಂಚಾರ ಮಾರ್ಗವು ಭಾರತ-ನೇಪಾಲಗಳಿಗೆ ಸಂಬಂಧ ಕಲ್ಪಿಸುವುದು.

ದೃಶ್ಯ ೨— ಪ್ರಧಾನ ಮಂತ್ರಿ ನೆಹರೂರವರು ಹಿರಕುಡ್ ಅಣೆಕಟ್ಟನ್ನು ಉದ್ಘಾಟಿಸುತಿದ್ದಾರೆ

ದೃಶ್ಯ ೩— ಸ್ವಾತಂತ್ರ್ಯ ಪ್ರಾಪ್ತ್ಯ ನಂತರದಲ್ಲಿ ಕಾಂಡ್ಲದಲ್ಲಿ ನಿರ್ಮಿಸಲಾದ ಪ್ರಥಮ ದೊಡ್ಡ ಬಂದರಿನಲ್ಲಿ ಹಡಗಿನಿಂದ ಸರಕುಗಳನ್ನು ಇಳಿಸುವುದಕ್ಕಾಗಿ ಕಟ್ಟಿರುವ ಹೊಸ ಕಟ್ಟೆಗಳನ್ನು ರೈಲ್ವೆ ಮತ್ತು ಸಾರಿಗೆ ಮಂತ್ರಿ ಶ್ರೀ ಜಗಜೀವನ ರಾಮರು ಉದ್ಘಾಟಿಸುತ್ತಿದ್ದಾರೆ.

ದೃಶ್ಯ ೪— ಮುಂಬಯಿಯಲ್ಲಿ ೧೯೫೭ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ಒಂದು ನೋಟ ಮತದಾರರು ಮತ ಕಟ್ಟೆಯಲ್ಲಿ ಮತಪತ್ರಗಳನ್ನು ಪಡೆದುಕೊಳ್ಳುತಿದ್ದಾರೆ

ಬಲಗಡೆಯ ಮೇಲಿನ ಚಿತ್ರ—
ದೃಶ್ಯ ೧— ರಾಷ್ಟ್ರೀಯ ಗ್ರಂಥ ವಿಶ್ವಸ್ಥ ಮಂಡಳಿಯನ್ನು ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್ನರು ಉದ್ಘಾಟಿಸುತಿದ್ದಾರೆ

ದೃಶ್ಯ ೨— ಪ್ರಧಾನ ಮಂತ್ರಿ ಜವಾಹರಲಾಲರ ಜನ್ಮ ದಿನೋತ್ಸವದಂದು ಬೀಳುವ ಅಂತರರಾಷ್ಟ್ರೀಯ ಮಕ್ಕಳ ದಿನಾಚರಣೆಯ ಸಂದರ್ಭದಲ್ಲಿ ಭಾರತದ ಅಂಚೆ ಮತ್ತು ತಂತಿ ಶಾಖೆಯವರು ವಿಶೇಷ ಅಂಚೆ ಚೀಟಿಯನ್ನು ಹೊರಡಿಸಿದರು. ಅದರ ಒಂದು ಚೀಟಿಯ ಚಿತ್ರವಿದು.

ದೃಶ್ಯ ೩— ಅಂತರರಾಷ್ಟ್ರೀಯ ಭೂಭೌತಿಕ ವರ್ಷದ ಸಂಬಂಧದಲ್ಲಿ ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಕೈಗೊಳ್ಳುತ್ತಿರುವ ಪರಿಶೀಲನೆಗಳಿಗೆ ಭಾರತವೂ ನೆರವಾಗಿದೆ ವಾಯುಮಂಡಳದಲ್ಲಿನ ಕಣ್ಣೀಭೆಯನ್ನು ಪತ್ತೆ ಹಚ್ಚುವುದಕ್ಕಾಗಿ ವೀಕ್ಷಣಾಲಯವೊಂದರಲ್ಲಿ ಸ್ಥಾಪಿಸಲಾದ ರೇಡಾರ್ ಉಪಕರಣದ ಸಮೀಪದ ದೃಶ್ಯವಿದು

ದೃಶ್ಯ ೪ – ೧೮೫೭ರ ಶತಮಾನೋತ್ಸವ ಸಮಾರಂಭಗಳ ಅಂಗವಾಗಿ ವಾರ್ತೆ ಹಾಗೂ ಪ್ರಸಾರ ಮಂತ್ರಿ ಶ್ರೀ ... ಯವರು ಏರ್ಪಡಿಸಿದ್ದ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಲಾದ ಕೆಲವು ಐತಿಹಾಸಿಕ ಆಸಕ್ತಿಯ ಚಿತ್ರಗಳನ್ನು ಇಲ್ಲಿ ಕಾಣಬಹುದು ಶತಮಾನೋತ್ಸವದ ಸಮಾರಂಭಗಳಲ್ಲಿ ಸಂಗೀತ ಹಾಗೂ ನಾಟ್ಯೋತ್ಸವಗಳನ್ನೂ ಸೇರಿಸಲಾಗಿತ್ತು

ಎಡಗಡೆಯ ಕೆಳಗಿನ ಚಿತ್ರ —
ವೇಲ್ಬಾಗ- ಭಾರತದ ೩೮ ವಿಶ್ವವಿದ್ಯಾಲಯಗಳ ೧,೬೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅಂತರ್ವಿಶ್ವ ವಿದ್ಯಾಲಯ ಯುವಜನೋತ್ಸವವು ನವದೆಹಲಿಯಲ್ಲಿ ಸಮಾವೇಶಗೊಂಡಾಗ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಉತ್ಸವದ ಉದ್ಘಾಟನೆಯನ್ನು ಮಾಡುತ್ತಲಿದ್ದಾರೆ.

ಕೆಳಭಾಗದ ಎಡ ಚಿತ್ರ—ಈ ಸಂದರ್ಭದಲ್ಲಿ ಏರ್ಪಡಿಸಲಾಗಿದ್ದ ನೃತ್ಯ ಕೂಟವೊಂದು ತಾಲಕೋಟ್ರಾ ತೋಟಗಳಲ್ಲಿ ನಡೆದಾಗ ವಿದ್ಯಾರ್ಥಿಗಳು ಸಾಮೂಹಿಕ ನೃತ್ಯದ ಅಭ್ಯಾಸವನ್ನು ಮಾಡುತ್ತಿರುವರು.

ಕೆಳ ಭಾಗದ ಬಲ ಚಿತ್ರ—ನವದೆಹಲಿಯ ಯುವಜನೋತ್ಸವದಲ್ಲಿ ಭಾಗವಹಿಸುವ ಉದ್ದೇಶದಿಂದ ಬಂದಿದ್ದ ಪೂನಾ ಮತ್ತು ಬರೋಡಾ ವಿಶ್ವವಿದ್ಯಾನಿಲಯದ ಪ್ರತಿನಿಧಿ ವಿದ್ಯಾರ್ಥಿಗಳೊಂದಿಗೆ ಪ್ರಧಾನಿ ನೆಹರೂರವರು ಮಾತನಾಡುತಿದ್ದಾರೆ

ಬಲಗಡೆಯ ಕೆಳಗಿನ ಚಿತ್ರ—
ಭಾರತವನ್ನು ಹಲವು ವರ್ಷ ಆಳಿದ ಬ್ರಿಟಿಷ ಪ್ರಧಾನ ಮಂತ್ರಿ ಶ್ರೀ ಹೆರೋಲ್ಡ ಮ್ಯಾಕಮಿಲನರು ಭಾರತಕ್ಕೆ ಸೌಹಾರ್ದದ ಭೇಟಿಯಿತ್ತರು ಅವರು ನವದೆಹಲಿಯ ವಿಜಯ ಚೌಕದಲ್ಲಿ ಭಾರತೀಯ ಪ್ರಧಾನಿ ಪಂಡಿತ ನೆಹರೂರವರೊಡನೆ ತೆರೆದ ಕಾರಿನಲ್ಲಿ ಬರುತ್ತಿರುವಾಗ ಜನರ ಜಂಗುಳಿಯು ಅವರನ್ನು ಉತ್ಸಾಹದಿಂದ ಸ್ವಾಗತಿಸುತಿದ್ದಾರೆ





ಬುನಾದಿ ಶಿಕ್ಷಣದ ಸಾಫಲ್ಯ

(೧೩ನೇ ಪುಟದಿಂದ)

ಬುನಾದಿ ಶಿಕ್ಷಣ ನಿಯಮಗಳ ಪ್ರಕಾರ ಒಬ್ಬ ಉಪಾಧ್ಯಾಯನಿಗೆ ರೂ. ೩೦೦/-ರ ಸಲಕರಣೆಗಳ ಸರಬರಾಯಿ ಆಗಬೇಕೆಂದಿದೆ. ಆದರೆ ಪುಣ್ಯಕ್ಕೆ ಹಲವು ಶಾಲೆಗಳು ಬುನಾದಿ ಶಿಕ್ಷಣ ಶಾಲೆಗಳಾಗಿ ವರ್ಷ ಎರಡು ಕಳೆದರೂ, ಇನ್ನೂ ಶಾಲೆಗೆ ರೂ. ೩೦೦/-ರ ಸಲಕರಣೆ ಬಂದಿಲ್ಲ. ಈ ರೀತಿ ನೈಜ ಪರಿಸ್ಥಿತಿ ಇರುವಾಗ ಮತ್ತೂ ಮತ್ತೂ ಈ ಕ್ಷೇತ್ರದ ವಿಸ್ತರಣೆ ಮಾಡುವುದರಿಂದ ಪ್ರಯೋಜನವೇನು? ತರಬೇತಾದ ಅಧ್ಯಾಪಕರ ಅಭಾವ ಇರುವಾಗ, ಶಾಲಾ ವಾತಾವರಣ ಅನಾನುಕೂಲವಾಗಿರುವಾಗ ಅಂತಹ ಶಾಲೆಗಳನ್ನು ಬುನಾದಿ ಶಿಕ್ಷಣ ಶಾಲೆಗಳನ್ನಾಗಿಸುವುದರಿಂದ ಫಲವೇನು?

ನಮ್ಮಲ್ಲಿ ಇಂದು ದಾಖಲೆಗಳೇ ಬಲವಾಗಿ ಹೋಗಿವೆ. ರಿಕಾರ್ಡಿನಲ್ಲಿ ಕಾಣುವ, ವರದಿಗಳಲ್ಲಿ ನಮೂದಿಸಲ್ಪಡುವ ಸಂಗತಿಗಳು ಸತ್ಯವೆಂದು ನಂಬುವವರು ಹೆಚ್ಚು. ಆದರೆ ಸತ್ಯ ಸ್ಥಿತಿಯು ಅದಕ್ಕೆ ವ್ಯತಿರಿಕ್ತವಾಗಿರುತ್ತದೆ. ನಮ್ಮ ಯೋಜನೆಗಳಲ್ಲಿ ಹೆಚ್ಚಿನವುಗಳು ಇಂದು ಕಾಗದದಲ್ಲೇ ಉಳಿದಿವೆ. ಅದಕ್ಕೆ ಕಾರಣ ಈ ರೀತಿಯ ತೋರ್ಪಡಿಕೆಯ ಸೋಗು. ಇದರಿಂದ ಅಂಕೆ ಸಂಖ್ಯೆಯ ಅಭಿವೃದ್ಧಿಯಾದಂತಾಯಿತಲ್ಲದೆ ಶಿಕ್ಷಣದ ಅಭಿವೃದ್ಧಿಯಾದಂತಾಗಲಿಲ್ಲ.

ಬುನಾದಿ ಶಿಕ್ಷಣದ ಸಫಲತೆಗೆ ತಕ್ಕ ಮಾರ್ಗಗಳನ್ನು ಸರಕಾರ ಕಂಡುಕೊಳ್ಳಬೇಕು. ಒತ್ತಾಯದ ಮೂಲಕ ಈ ಪದ್ಧತಿಯನ್ನು ಹೇರುವ ಬದಲು ಉಮೇದ್ವಾರಿಗಳನ್ನಾರಿಸಬೇಕು. ಅಂತಹ ಉಮೇದ್ವಾರಿಗಳಿಗೆ ತಕ್ಕ ಸಲಕರಣೆ, ಸೌಲಭ್ಯಗಳನ್ನೊದಗಿಸಬೇಕು. ಶಾಲೆಗಳನ್ನು ಕೇಂದ್ರಗಳಾಗಿ ಹಂಚಿ, ಆಕೆ ಅಂತಹ ಕೇಂದ್ರಕ್ಕೊಂದು "ಮಾದರಿ ಶಾಲೆ"ಯನ್ನು ಮಾಡಬೇಕು ಆ ಮಾದರಿ ಶಾಲೆಯ ಪ್ರಗತಿ, ಅಲ್ಲಿಯ ಶಿಕ್ಷಣ ಕ್ರಮ, ಅಭಿವೃದ್ಧಿ, ಸಾಧನೆಗಳಿಂದ ಇತರ ಶಾಲೆಗಳು ಸ್ಫೂರ್ತಿ ಪಡೆಯುವಂತಾಗಬೇಕು ಈ ಮಾದರಿ ಶಾಲೆಯು ಇತರ ಶಾಲೆಗಳನ್ನು ಆಕರ್ಷಿಸುವಂತಹುದಾಗಿರಬೇಕು. ಹೀಗೆ ಬುನಾದಿ ಶಿಕ್ಷಣವು ಆಕರ್ಷಕವಾಗುವಂತಹ ಯತ್ನಗಳನ್ನು ಕೈಕೊಳ್ಳಬೇಕು. ಆಗ ಸ್ವಯಂ ಪ್ರೇರಿತವಾಗಿ ಶಾಲೆಗಳು ಬುನಾದಿ ಶಾಲೆಗಳಾಗಿ ತಾವಾಗಿಯೇ ಪರಿವರ್ತನೆಗೊಳ್ಳುತ್ತವೆ.

ಪರಿವರ್ತನೆಗೊಂಡ ಶಾಲೆಗಳಲ್ಲಿ ತರಬೇತಾದ ಸುಶಿಕ್ಷಿತ ಅಧ್ಯಾಪಕರಿರುವುದು ಅಗತ್ಯ. ತರಬೇತಾಗದವರಿಗೆ ಮರು ತರಬೇತಿಯ ವ್ಯವಸ್ಥೆ ಮಾಡುವುದು ಅಗತ್ಯ. ಎಲ್ಲಾ ಅಧ್ಯಾಪಕರು ತರಬೇತಾದ ಬಳಿಕವೇ ಆ ಶಾಲೆಯನ್ನು ಬುನಾದಿ ಶಾಲೆಯಾಗಿ ಮಾರ್ಪಾಟುಗೊಳಿಸಬೇಕು. ಮರು ತರಬೇತಿಯ ಬಗ್ಗೆ ವ್ಯವಸ್ಥೆ ಈಗ ನಿಂತು ಹೋಗಿರುವುದನ್ನು ಪುನಃ ಆರಂಭಿಸಬೇಕು. ನಮ್ಮ ಬುನಾದಿ ತರಬೇತಿ ಶಾಲೆಗಳಲ್ಲಿ ಇಂದು ಹಲವು ನಾಮ ಮಾತ್ರವಾಗಿವೆ. ಈ ದಿಸೆಯಲ್ಲಿ ಸರಕಾರದವರು ತೀವ್ರ ಗಮನ ಹರಿಸಬೇಕಾದುದು ಅಗತ್ಯ. ತರಬೇತಿ ಶಾಲೆಗಳ ಅಭಿವೃದ್ಧಿಯಾಗದೆ ಇತರ ಶಾಲೆಗಳ ಅಭಿವೃದ್ಧಿಯಾಗುವುದೆಂತು? ಕ್ರಮಬದ್ಧವಾದ ಬುನಾದಿ ಶಿಕ್ಷಣವು ಈ ತರಬೇತಿ ಶಾಲೆಗಳಲ್ಲಿ ದೊರೆಯುವಂತೆ ಮಾಡಬೇಕಾದುದು ಅಗತ್ಯ.

ಬುನಾದಿ ಶಿಕ್ಷಣವು ಇಂದು ಜನಪ್ರಿಯವಾಗಿಲ್ಲ. ಇದಕ್ಕೆ ಕಾರಣ 'ಪ್ರಚಾರದ ಅಭಾವ'ವಾಗಿದೆ. ಬುನಾದಿ ಶಿಕ್ಷಣದ ಕುರಿತು ಇಂದು ನಮ್ಮ ಜನರು ತಿಳಿದಿಲ್ಲ. ಅದರ ಕ್ರಮಗಳ ಕುರಿತು ಜನರು ಇಂದು ವಿಪರೀತ ಭಾವನೆ ತಾಳುವಂತಾಗಿದೆ. ಅವರು ಇದನ್ನು ಅಪಾರ್ಥವನ್ನಾಗಿಸಿ ಕೊಳ್ಳುತ್ತಾರೆ. ಆದುದರಿಂದ ಈ ದಿಸೆಯಲ್ಲಿ ಸಾಕಷ್ಟು ಪ್ರಚಾರ ಕಾರ್ಯ ಅಗತ್ಯ. ಸರಕಾರದ ಪ್ರಚಾರ ಶಾಖೆಯಿಂದ ಸಹಕಾರ ಪಡೆದು ಸರಕಾರ ಈ ಶಿಕ್ಷಣಕ್ರಮದ ಕುರಿತು ಸಾಕಷ್ಟು ಪ್ರಚಾರಕಾರ್ಯಕೈಗೊಳ್ಳಬೇಕು. ಜನರಲ್ಲಿ ಈ ಶಿಕ್ಷಣ ಕ್ರಮದತ್ತ ಆದರ ಹುಟ್ಟುವಂತೆ ಮಾಡಬೇಕಾದುದು ಅಗತ್ಯ. ಈ ದಿಸೆಯಲ್ಲಿ ಅಧ್ಯಾಪಕರ ಸಹಕಾರ, ಸಹಾಯ, ಕರ್ತವ್ಯ ಅಗತ್ಯ. ಆದರೆ?......

ಅಧ್ಯಾಪಕರು ಈ ಶಿಕ್ಷಣ ಕ್ರಮದಲ್ಲಿ ಆಸಕ್ತರಾಗಿ ಪ್ರಚಾರ ಕಾರ್ಯ ಕೈಕೊಳ್ಳುವ ಮೊದಲು ಅವರು ಅವರ ಕಾರ್ಯದಲ್ಲಿ ಉದ್ಯೋಗದಲ್ಲಿ ಇಂದು ಆಸಕ್ತರಾಗಿರುವರೇ? ಎಂಬ ದನ್ನು ತಿಳಿಯಬೇಕಾದುದು ಅಗತ್ಯ. ಬುನಾದಿ ಶಿಕ್ಷಣ ಮರು ತರಬೇತಿ ಪಡೆದ ಅಧ್ಯಾಪಕರು ಇದರಿಂದ ಲಾಭದ ಬದಲು ಸಾಕಷ್ಟು ನಷ್ಟವನ್ನೇ ಹೊಂದಿದರು. ಅಧ್ಯಾಪಕರ ಸ್ಥಿತಿಗತಿಯ ಕುರಿತು ಬರೆಯುವುದೇ ಬೇಡ. ಅದು ಸರ್ವವಿದಿತವಾದುದು. ಸಹಾನುಭೂತಿಗೆ ಅರ್ಹವಾದುದು. ಡಾ|| ದೇಶಮುಖರು ಈ ಕುರಿತು ಕೊಟ್ಟ ಅಭಿಪ್ರಾಯದತ್ತ ಸರಕಾರ ತೀವ್ರ ಗಮನಹರಿಯಿಸಬೇಕು." ಲಭ್ಯವಿರುವ ಎಲ್ಲಾ ಹಣವನ್ನೂ ಅತ್ಯಂತ ಕಡಿಮೆ ಸಂಬಳ ಪಡೆಯುತ್ತಿರುವ ಅಧ್ಯಾಪಕರ ಸಂಬಳವನ್ನು ಸಾಧ್ಯವಾದಷ್ಟರಮಟ್ಟಿಗೆ ಹೆಚ್ಚಿಸುವುದಕ್ಕಾಗಿ ಉಪಯೋಗಿಸಬೇಕು. ಅಧ್ಯಾಪಕರ ಸ್ಥಿತಿಗತಿ ಸುಧಾರಣೆಯಾಗದೆ ಶಿಕ್ಷಣ ಕ್ಷೇತ್ರದ ಸುಧಾರಣೆಯಾಗುವಂತಿಲ್ಲ. ಶಿಕ್ಷಣದ ಯೋಜನೆಗಳನ್ನು ಕಾರ್ಯರೂಪಕ್ಕಿಳಿಸುವವರು ಶಿಕ್ಷಕರಾದುದರಿಂದ ಅವರ ಜೀವನದ ಮಟ್ಟವನ್ನು ಎತ್ತರಿಸುವ ಗುರುತರ ಹೊಣೆ ಸರಕಾರದ್ದಿದೆ.

ಹಳ್ಳಿಯ ವಾತಾವರಣದಲ್ಲಿ ಜನಪ್ರಿಯವಾಗಿ ಬೆಳೆದು ಬರಬಲ್ಲ ಈ ಬುನಾದಿ ಶಿಕ್ಷಣವನ್ನು ಪೇಟೆಗಳಲ್ಲಿ ತುರುಕಿಸುವ ಬದಲು ಹಳ್ಳಿಗಳತ್ತ ಪ್ರಚಾರಗೊಳಿಸುವುದರಿಂದ, ಎಲ್ಲಾ ವಿಧದ ಸೌಕರ್ಯ ಅನುಕೂಲತೆಗಳು ದೊರಕಿದಂತಾಗುವುದು. ಸರಕಾರವು ಶಿಕ್ಷಣ ಕ್ಷೇತ್ರದ ವಿಸ್ತರಣೆಯತ್ತ ತ್ವರಿತ ಗತಿಯಿಂದ ಮುನ್ನುಗ್ಗುವ ಬದಲು, ಇದ್ದ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯತ್ತ ಲಕ್ಷ್ಯ ಪೂರೈಸುವುದು ಇಂದಿನ ಪರಿಸ್ಥಿತಿಯಲ್ಲಿ ಆವಶ್ಯಕವೆನಿಸಿದೆ.

ಕೇಂದ್ರ ಸರಕಾರದಿಂದ ಪುರಸ್ಕೃತವಾದ ಬುನಾದಿ ಶಿಕ್ಷಣದ ಸಫಲತೆಯ ಕಡೆಗೆ ಉದ್ದೇಶಪೂರ್ವಕ ಗಮನವನ್ನು ಸರಕಾರ ಹರಿಯಿಸಬೇಕು. ಇಲ್ಲದಿದ್ದರೆ ನಮ್ಮ ಶಿಕ್ಷಣ ಕ್ಷೇತ್ರದ ಪ್ರಗತಿಯು ಕಾಗದದ ಯೋಜನೆಯಾಗಿ ಉಳಿದೀತಲ್ಲದೆ ಇದರಿಂದ ಪ್ರಯೋಜನ ಎಳ್ಳಷ್ಟು ದೊರೆಯಲಾರದು. ಶಿಕ್ಷಣ ಕ್ಷೇತ್ರದ ಸುಧಾರಣೆಗಳೆಲ್ಲಾ ನೈಜರೂಪವಾಗಿ ಕಾರ್ಯರೂಪಕ್ಕೆ ಬರಲಿ ಎಂದು ಹಾರೈಸುವುದು ಈ ಸಂದರ್ಭದಲ್ಲಿ ಅನುಚಿತವಾಗಲಾರದು.

ಯಂ. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು.

ಧಾತುಪುಷ್ಟಿ ಲೇಹ

(ಸುವರ್ಣ, ಸಾಲಾಮಿಶ್ರಿ ಕಲ್ಕದ ಮಿಶ್ರಿತ)

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ. ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ವೀರ್ಯವೃದ್ಧಿ ಉಂಟು ಮಾಡುವುದು.

ಡಬ್ಬಿ 1ರ ರೂ. 3—8—0.

ಚ್ಯವನಪ್ರಾಶ ಲೇಹ

(ಬಂಗಾರ ಮಿಶ್ರಿತ

ಅತ್ಯಂತ ಶಕ್ತಿವರ್ಧಕ. ಕೆಮ್ಮು, ಉಬ್ಬಸ ಇವುಗಳ ಮೇಲೆ ದಿವ್ಯ ಔಷಧಿ.

ರಾ. 1ರ ರೂ. 5—8—0;

ರಾ ½ ರೂ. 3—0—0

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗರ್ಭಶಕ್ತಿಯನ್ನು ಪುನರುದ್ದೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ, ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು.

ಕ್ರಯ 24 ಔನ್ಸ ರೂ. 5—0—0

12 ಔನ್ಸು ರೂ. 2-12—0.

ಅಶೋಕಾರಿಷ್ಟ ಮತ್ತು ಮಾತ್ರೆ

ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿ ಸೆರಗು, ಸಂತಾನಹೀನತೆ, ರಕ್ತಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು.

ಬಾಟ್ಲಿ 1ರ ರೂ. 3—8—0

ಔಷಧಿಗಳು ಸಿಗುವ ಸ್ಥಳ: 1) ನ್ಯೂ ಬ್ಯಾಕುಲ್ಲಾ ಸ್ಟೋರ್ಸ್, 648 A, ಡಿಲ್ಯಾಲ್ ರೋಡ್, ಬ್ಯಾಕುಲ್ಲಾ ರೈಲ್ವೆ ಸ್ಟೇಶನ್ ಎದುರು, ಬ್ಯಾಕುಲ್ಲಾ, ಬೊಂಬಾಯಿ. 2) ಪ್ರಭು ಫಾರ್ಮಸಿ, ಕಾರ್ಕಳ. 3) ಶ್ರೀಧರ ಭಟ್ ಬ್ರದರ್ಸ್. ಪುತ್ತೂರು. 4) ಪೈ ಸ್ಟೋರ್ಸ್, ಪುತ್ತೂರು. 5) P. ಕೃಷ್ಣ ಪೈ & ಸನ್ಸ್, ಪಾಣೆಮಂಗಳೂರು. 6) ಕಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ. 7) ವೆಂಕಟೇಶ ನ್ಯಾಕ್, ಗುರುವಾಯನಕೆರೆ. 8) ಬಿ. ಗೋಪಾಲ ಶೆಣೈ, ಬೆಳ್ಳಾರೆ. 9) H ಗಣಪಯ್ಯ ನರಸಿಂಹ ಕಾಮತ್, ಕುಂದಾಪುರ. 10) ಜಯಾ ಫಾರ್ಮಸಿ, ಕುಂದಾಪುರ. 11) T. ಗೋಪಾಲಕೃಷ್ಣ ಪೈ, ಬ್ರಹ್ಮಾವರ. 12) ಡಾಕ್ಟರ್ K. ನಾರಾಯಣ ಪೈ, ಬ್ರಹ್ಮಾವರ. 13) ಪ್ರೈವೇಟ ಸ್ಟೋರ್ಸ್, ಸುಳ್ಯ. 14) ಎಚ್. ನರಸಿಂಹ ನ್ಯಾಕ್, ಮರ್ಚೆಂಟ್, ಶಂಕರನಾರಾಯಣ.

OUR CODE OF CONDUCT

Personal and prompt attention

Speedy and Friendly service

Care and Safety of the Moneys

Quick and high returns for Deposits.

TRY US ONCE

THE VIJAYA BANK, LTD.

H. O. **MANGALORE.** Estd: **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ಪೇಟೆಯ ಬೀಸು ದಾರಿಯನ್ನು ಬಿಟ್ಟು ಸಪೂಖದ ಕಾಲುದಾರಿಯಲ್ಲಿ ಅವರಿಬ್ಬರೂ ನಡೆದು ಹೋಗುತ್ತಿದ್ದರು. ತುಷಾರ ಮತ್ತು ಕಮಲಕಾಂತ ಇಬ್ಬರೂ ಗೆಳೆಯರು, ಕಲೋಪಾಸಕರು. ಅವರ ಹೆಗುರವಾದ ನಡೆಯು ಅವನನ್ನೇ ಕಾಣಬಯಸುವ ಒಳನೋಟವನ್ನು ಸಾರುತ್ತಿತ್ತು. ಹೂಬಳ್ಳಿಗಳಿಂದ ಪಕ್ಷಿ ಸಂಕುಲದಿಂದ ಅಲಂಕೃತವಾದ ಕಂಬಗಳ ಕೆತ್ತನೆಯ ಕಸ್ತೂರಿ ಕೆಲಸಗಳನ್ನು ಕಂಡಬಳಿಕ ತುಷಾರನಿಗೆ ಅದನ್ನು ಕೊರೆದ ಶಿಲ್ಪಿಯನ್ನು ಕಾಣಬೇಕೆಂಬ ಬಯಕೆಯಾಯಿತು. ಈ ಉದ್ದೇಶದಿಂದಲೇ ಅವರು ಈ ಯಾತ್ರೆಯನ್ನು ಕೈಕೊಂಡುದು.

ಆ ದೇವ ಮಂದಿರದ ಶಿಖರದಲ್ಲಿ ಚಿನ್ನದ ಕಲಶಗಳು ಸಾಲಾಗಿ ಮೆರೆದಿದ್ದವು. ಗರ್ಭಗೃಹದ ಮುಂದಣ ರಂಗಮಂಟಪದಲ್ಲಿ ಮೂರ್ತಿ ಶಿಲ್ಪದ ಕೃತಿಗಳನೇಕ ಒನಪಿನಿಂದ ಮೆರೆದಿದ್ದರೂ, ದೇವಸ್ಥಾನದಲ್ಲಿ ಚಿನ್ನ ಬೆಳ್ಳಿಗಳ ಮೆರೆದಾಟಕ್ಕೆ ಕೊರತೆಯಿದ್ದಿಲ್ಲ. ಕಾಣಿಕೆ ಸಲ್ಲಿಸುವ ಕುರುಡು ಜನಗಳನ್ನು ಓಗೊಟ್ಟು ಕರೆಯುವ ದೊಡ್ಡ ಘಂಟೆ ಜಾಗಟೆಗಳು ಪ್ರಹರ ಪ್ರಹರಕ್ಕೆ ಢಣ ಢಣ ಎಂದು ನಿನದಿಸುತ್ತಲೇ ಇದ್ದುವು. ಒಳಗು ಬೆಳಗಿದಲ್ಲಿ ಹೊರಗೆ ಮರೆಯಬಾರದೆ? ಅಂತಿತ್ತು ದೇವಾಲಯದ ವಸ್ತುಸ್ಥಿತಿ. ಅಲ್ಲಿಯ ಕಲೆಯನ್ನು ಪರಿಶೀಲಿಸುತ್ತ ತುಷಾರನು ಅಂದುಕೊಂಡನು. "ಇದನ್ನು ಕೆತ್ತಿದವನು ಜಕ್ಕಣನ ವರ ಪಡಕೊಂಡು ಹುಟ್ಟಿದ್ದಾನೆ".

ಕಲೆಗೆ ಹೊರವೈಯ ಬೆಡಗು ಮಾತ್ರವಲ್ಲ; ಒಳವೈಯ ಕಣ್ಣು ಸಿದ್ಧಿಸಿದೆ, ಬೇಲೂರು ಹಳೆಬೀಡಿನ ಕಲಾಜಾಲಕ್ಕೆ ಮೈಸೋತ ಈ ತರುಣರಿಗೆ ಅದೇ ಸಿದ್ಧಿಯ ಕುರುಹು ಇಲ್ಲಿಯೂ ಎಚ್ಚಿತ್ತು. ಕಾಣಿಸುತ್ತಿದೆ ಆ ಬಿಂಬಗಳ ನಿಲುವು ಭಂಗಿಗಳು ಒಂದೊಂದು ತರದ ಕುತೂಹಲವನ್ನು ಕೆರಳಿಸುತ್ತಿದ್ದವು. ಸ್ವಾಭಾವಿಕ ವನ್ಯದೃಶ್ಯಗಳು; ಹಲಕೆಲವು ವಿಲಾಸಿನಿಯರ ಬೆಡಗಿನ ನರ್ತನ, ನೋಟದ ಸ್ನೇಹ ಅಲಂಕರಿಸಿಕೊಳ್ಳುವ ಬಿನ್ನಾಣ ಇನ್ನೂ ಎಷ್ಟೋ ಚಿತ್ರಗಳು. ಒಂದೆಡೆ ಭಾವ ಸಮಾಧಿಯಲ್ಲಿ ಋಷಿವೃಂದವು ಬೇರೆ ಬೇರೆ ಯೋಗಾಸನದಲ್ಲಿ ಕುಳಿತಿದ್ದುದು ಕಂಡು ಬಂತು. ಚತುರಂಗ ಸೇನೆಯ ಉತ್ತುಂಗ ಘೋಷ ಮತ್ತೊಂದೆಡೆ; ಜಟ್ಟಿ ಕಾಳಗವು ಬೇರೆ ಬೇರೆ ನಿಲುವುಗಳಲ್ಲಿ ಚಿತ್ರಿತವಾಗಿತ್ತು. ಗೋಡೆಗಳಲ್ಲಿ ಕಂಬಗಳಲ್ಲಿ ಪುರಾಣ ಕತೆಗಳು ರೂಪಿಸಲ್ಪಟ್ಟಿದ್ದುವು. ದೃಶ್ಯದಿಂದ ಅದೃಶ್ಯ ಪ್ರಪಂಚದೆಡೆಗೆ ಸಾಧನೆಯಿಂದ ಸಿದ್ಧಿಯ ಕಡೆಗೆ—ವಸ್ತುಸ್ಥಿತಿಯಿಂದ ಆದರ್ಶದೆಡೆಗೆ ಕರೆದೊಯ್ಯುವ ಅನಂತ ಚಿತ್ರಗಳು ಅಲ್ಲಿದ್ದುವು ಸಂಜೆ ಕಿರಣಗಳು ಮಂದಿರದ ಸುತ್ತಲಿನ ಹಸಿರು ಹಾಸಿಗೆಯ ಮೇಲೆ ಬಳುಕಿದಾಗ ಅಪೂರ್ವ ಶೋಭೆ ಕಂಡು ಬಂತು. ಗರ್ಭಗುಡಿಯ ಬಾಗಿಲು ಮುಚ್ಚಿತ್ತು. ದೇವರ ಕದ ತೆರೆಯುವ ಮೊದಲೇ ಅವರಿಬ್ಬರೂ ಮರಳಿದ್ದರು.

"ದೇವರನ್ನು ಕಂಡು ಕೈಮುಗಿದು ಕಲೆಯನ್ನು ಕಡೆಗಣಿಸುವ ಜನಕೋಟಿಯಂತೆ ನಾವು ಕಲೆಗೊಲಿದು ದೇವನ್ನು ಮರೆತೆವು" ದಾರಿ ನಡೆಯುತ್ತ ತುಷಾರನು

ಇಂಗಿತಜ್ಞ ವರಶಿಲ್ಪಿ

ಕಲಾಪ್ರೇಮಿಯ ಮನೋಗತ ಕಲಾವಿದನಿಗೆ ಅರಿವಾಗುತ್ತದೆ... ತುಷಾರನು ತನಗೊಂದು ಪರಮಶಿವನ ವಿಗ್ರಹ ಮಾಡಿಕೊಡುವಂತೆ ಕೇಳಿದ. ಉಡುಗಿದ ದನಿಯಿಂದ "ಅದಕ್ಕೇನು ಬೆಲೆ?" ಎಂದು ಕೇಳಿದ. "ಇನ್ನು ಹದಿನೈದು ದಿನಗಳ ನಂತರ ಬನ್ನಿರಿ. ಆಗ ಪ್ರತಿಮೆಯನ್ನು ಮೇಣದಲ್ಲಿ ಸಿದ್ಧಗೊಳಿಸಿಡುವೆನು" ಎಂದಿಷ್ಟೇ ಹೇಳಿ ಶಿಲ್ಪಿಯು ಮಾತು ಮುಗಿಸಿದ—ಕಲಾವಿದನ ಮನೋಗತ ಕಲಾಪ್ರೇಮಿಗೆ ಅರಿವಾಗುತ್ತದೆಯೆ?

ಬರೆದವರು: ಶ್ರೀ ಕೆ. ಎಲ್ ಎನ್ ಉಪಾಧ್ಯಾಯ
ಶಿರೋಮಣಿ, ವಿದ್ವಾನ್.

ಕಮಲಕಾಂತನೊಡನೆ ಮೃದುವಾಗಿ ನಕ್ಕನು.

ಶಿಲ್ಪಿಯ ಮನೆ ಹತ್ತಿರವಾದಂತೆ ಚೇಣಿನ ಕಟಕಟ ಸದ್ದು ಕೇಳಿಸಿತು ಮನೆಯ ಜಗುಲಿಯ ಬೆಳಕಿನಲ್ಲಿ ಶಿಲ್ಪಿಯು ಕುಳಿತಿದ್ದನು ಎಂದಿನಂತೆಲ್ಲವೇನು ಇವತ್ತು? ಇಂದು ವಿಶೇಷವೇನೂ ಇಲ್ಲವೆಂಬಂತೆ ಶಿಲ್ಪಿಯ ಪ್ರಸನ್ನ ಮುಖ ಮುದ್ರೆ ಮೆರೆದಿತ್ತು. ಅವುದೋ ಒಂದು ಪ್ರತಿಮೆಯ ಕೆತ್ತನೆಯ ಕೆಲಸ ನಡೆದಿತ್ತು. ಕೆತ್ತುತ್ತಿದ್ದ ಪ್ರತಿಮೆಯಲ್ಲಿ ಛಾಯೆ ಮೂಡಿದೆ. ಸ್ಪಷ್ಟತೆ ನಿಚ್ಚಳತೆ ಮಾತ್ರ ಕಾಣಿಸುತ್ತಿರಲಿಲ್ಲ. ರೇಖೆಗಳು ಮೂಡಬೇಕು ಸಾನ್ನಿಧ್ಯ ಬರಬೇಕು. ತಾಯಿ ಹಸುಗೂಸಿನಲ್ಲಿ ಮಮತೆಯ ಮನವನ್ನೆರಕಹೊಯ್ದು ಪ್ರಾಣಪ್ರತಿಷ್ಠೆಗೈಯುವಂತಿತ್ತು ಚೇಣಿನ ಮೃದು ಸ್ಪರ್ಶ.

ಶಿಲ್ಪಿಯ ಮನೆಯನ್ನು ಮನೆಯೆಂದು ಕರೆದರೆ ಶ್ರೀಮಂತರ ಮನೆಮಾರುಗಳಿಗೆ ಅವಮಾನವೆಂದು ತುಷಾರನ ಅಂಬೋಣ. ಹಲವು ತಲೆಮಾರುಗಳಿಂದ ಶಿಲ್ಪಿಯು ಅದೇ ಮನೆಯಲ್ಲಿದ್ದನೆಂಬುದಕ್ಕೆ ಸಾಕ್ಷಿಯಾಗಿ ಅನೇಕ ಹಳೆಯ ಕುರುಹುಗಳು ಅಲ್ಲಿದ್ದವು ಓರ್ವ ಶಿಲ್ಪಿಯ ಮನೆಯಲ್ಲಿ ಅವಶ್ಯ ಇರಬಹುದಾದ ಸಾಮಗ್ರಿಗಳು ಅಲ್ಲಿ ನಲಿದಾಡುತ್ತಿದ್ದವು. ಸುತ್ತ ಕಣ್ಣು ಹಾಯಿಸಿದರೆ ಗಟ್ಟಿಗಿಂತ ಒಳ್ಳೇ ತುಂಬ ಅಲ್ಲಲ್ಲಿ ಬಿದಿರಿನ ಸಲಾಕೆಗಳಿಂದಾದ ತಟ್ಟಿಗಳು; ಗೋಡೆಗೆ ಜೋಂತುಬಿದ್ದ ಮುಳಿಮಾಡು ಅವುಗಳಲ್ಲಿ ಅನುಕೂಲಕ್ಕಾಗಿ ಬೇಕಾದಂತೆ ಹೊಂದಿಸಿಕೊಂಡುವು ವೈಭವದಿಂದ ಮೆರೆಯುವ ಸ್ಥಪತ್ಯ ಯಾವುದೂ ಇಲ್ಲ.

ಎರಡು ಕುರ್ಚಿಗಳಲ್ಲಿ ಆಗಂತುಕರು ಕುಳಿತರು. ಶಿಲ್ಪಿಯು ಮೊಗವೆತ್ತಿ ಅವರನ್ನು ದಿಟ್ಟಿಸಿ ಮೌನವಾಗಿ ಸ್ವಾಗತಿಸಿದನು ಮತ್ತು ಲಕ್ಷ್ಯಪೂರ್ವಕವಾಗಿ ತನ್ನ ಕೆಲಸದಲ್ಲಿ ತೊಡಗಿದನು. ಇಂಥ ಹಲವು ಕಲಾಪ್ರೇಮಿಗಳನ್ನು ಸ್ವಾಗತಿಸಿ ತಣಿಸಿದ ಮಂಜುಳ ಸ್ಪರ್ಶ ಆ ಕಡೆಗಣ್ಣೋಟದಲ್ಲಿ; ಅವರಿಬ್ಬರೂ ಮನದಲ್ಲಿಯೇ, "ವರಶಿಲ್ಪಿಗೆ ನಮೋ ನಮೋ" ಎಂದರು.

ಮಧ್ಯಾಹ್ನದ ಊಟ ಹೊತ್ತು. ಪಕ್ಷಿಗಳ ಉಲಿವಿಲ್ಲ ಅಂಗಡಿ ಮಳಿಗೆಗಳಲ್ಲಿ ವ್ಯಾಪಾರಿ ಜನಗಳು ಆಕಳಿಸುತ್ತ ಕುಳಿತಿರುವ ಉದಾಸೀನ ಸಮಯವು. ಕೆಲಸ ಮಾಡುತ್ತಿದ್ದ ಶಿಲ್ಪಿಯ ಹತ್ತಿರ ಕೆಲ ವೃದ್ಧರು ಆಕಳಿಸುತ್ತ ಕುಳಿತಿದ್ದರು. ಅವರಲ್ಲಿ ಕೆಲವರ ಪರಿಚಯ ಆ ತರುಣರಿಗಿತ್ತು. ಪುರಾಣ ಓದುವದರಲ್ಲಿ ಹೆಸರುಹೋದ ವೈಕುಂಠ ಬಾಬು ಅವರಲ್ಲೊಬ್ಬನು. ಆಗಂತುಕರು ಅಲ್ಲಿ ಹೋದಾಗ ಎಲ್ಲವರ ಮಾತುಕತೆ ಮುಗಿದಿತ್ತು.

ಸ್ಥಿತಪ್ರಜ್ಞಾವಸ್ಥೆಯಲ್ಲಿ ಅವರು ಇದ್ದಂತೆ ತೋರುತ್ತಿತ್ತು. ಅವರು ಹಾಗೆ ಬಂದು ಹೋಗುತ್ತಿರುವದರಿಂದ ಶಿಲ್ಪಿಗೆ ಯಾವ ತೊಂದರೆಯೂ ಇಲ್ಲ. ಅವರ ಪಳ್ಳು ಮಾತುಗಳಿಗೆ ಶಿಲ್ಪಿಯು ಸಾವಧಾನ ಉತ್ತರ ಕೊಡುತ್ತಿದ್ದನು ಶಿಲ್ಪಿಯು ಕೊರೆಯುವದರಲ್ಲಿ ಮಾತ್ರ ಜಾಣನಲ್ಲ; ಮಾತಿನಲ್ಲೂ ಸರಸಿ.

ಶಿಲ್ಪಿಯ ಕೈಕೆಳಗೆ ಅನೇಕ ಮಂದಿ ಕೆಲಸ ಮಾಡುತ್ತಿದ್ದರು. ಅವರೆಲ್ಲರಿಗೂ ಶಿಲ್ಪಿಯು ಮಾರ್ಗದರ್ಶಿ. ಅವನು ಹೇಳಿದುದನ್ನು ಅವರು ಮಾಡುತ್ತಿದ್ದರು. ಅವನು ಗೆರೆಹಾಕಿ ಭಾಗಿಸಿಕೊಟ್ಟುದನ್ನು ಕರ್ಮಚಾರಿಗಳು ಮೊನಚಾದ ಚೇಣಿನಿಂದ ಕೊರೆಯುತ್ತಿದ್ದರು ಮೂರ್ತಿಯ ಪ್ರಾಣಪ್ರತಿಷ್ಠೆ ಮಾತ್ರ ಶಿಲ್ಪಿಯಿಂದಲೇ ನಡೆಯುತ್ತಿದ್ದಿತು. ಪ್ರೀತಿಯ ನಡತೆಯೆಂದು ನಸ್ಯದ ಡಬ್ಬಿಯನ್ನು ಮೃದು ಹಸ್ತದಿಂದ ಶಿಲ್ಪಿಯು ಅಭ್ಯಾಗತರಿಗೊಪ್ಪಿಸಿದನು. ಅದು ಅವನ ದಿವ್ಯಸ್ಫೂರ್ತಿಯ ನಿಕ್ಷೇಪ. ಅದನ್ನು ತುಸು ಕೈಗೆ ಎರೆಚಿ ಚಿಟಿಕೆಯಲ್ಲಿ ಹಿಡಿದು ಅವರೀರ್ವರೂ ಕುಳಿತರು. ನಸ್ಯದ ಅಭ್ಯಾಸವು ಅವರಿಗಿರಲಿಲ್ಲ.

ಕಲಾಪ್ರೇಮಿಯ ಮನೋಗತ ಕಲಾವಿದನಿಗೆ ಅರಿವಾಗುತ್ತದೆ. ಆ ತರುಣರು ತನ್ನ ಗುಡಿಸಲಿನ ಬಾಗಿಲಿಗೆ ಏಕೆ ಬಂದರೆಂದು, ಶಿಲ್ಪಿಗೆ ತಿಳಿಯಿತು. ಹೂವಿನ ಬಳಿ ತುಂಬಿಯು ಜೇನನ್ನು ಸವಿಯಲ್ಲದೆ ಇನ್ನೇಕೆ ಸುಳಿಯುತ್ತದೆ? ಶಿಲ್ಪಿಯು ಮೆಲ್ಲನೆದ್ದು ಒಳಗೆ ನಡೆದನು ಸಣ್ಣ ಬೀರಿನ ಕದ ತೆರೆದ. ಅತಿಸೂಕ್ಷ್ಮ ರೀತಿಯಲ್ಲಿ ಕೆತ್ತಿದ ಒಂದು, ಎತ್ತರದ ನೆಲ್ಲಿಕಾಯಿ ಶಿಲೆಯ ಕಂಭವೊಂದನ್ನು ಹೊರಗೆ ತಂದು ಸಂದರ್ಶಕರ ಕೈಯಲ್ಲಿಟ್ಟನು. ಮಾನಸ್ತಂಭದ ಭವ್ಯ ಕೆತ್ತನೆಯ ಕುಸುರು ಕೆಲಸ ನೋಡಿ ಅವರಿಗೆ ಆಶ್ಚರ್ಯವಾಯಿತು. ಹಲವು ಚಿತ್ರಗಳ ರೂಪರೇಖೆಗಳು ಬಹು ಸೂಕ್ಷ್ಮ, ಕಣ್ಣು ಕಣ್ಣಿಟ್ಟು ನೋಡಬೇಕು. "ಸೂಕ್ಷ್ಮದರ್ಶಕವಿದ್ದರೆ ನೋಡಲು ಅನುಕೂಲವಾಗುತ್ತಿತ್ತೆ"ಂದು ತುಷಾರನು ಹೇಳಿದನು. ಶಿಲ್ಪಿಯು ಒಂದೊಂದಾಗಿ ತೋರಿಸಿದ ಹಲವು ಮಹಾಕೃತಿಗಳನ್ನು ಕಂಡು ಅವರು ಬೆಕ್ಕಸ ಬೆರಗುಗೊಂಡರ ನೋಡಿ ನೋಡಿ ದಣಿದರು. ತುಷಾರ ಕಮಲಕಾಂತರಿಗೆ ಸ್ವಪ್ನ ಸೃಷ್ಟಿಯಂತೆ ಭಾಸವಾಯಿತು ಅಲ್ಲಿ ಒಳತೊಟ್ಟಿಯಲ್ಲಿ ಇನ್ನೂ ಅಪೂರ್ಣವಿದ್ದ ಕೃಷ್ಣವಿಗ್ರಹದ ಮೇಲೆ ತುಷಾರನ ದೃಷ್ಟಿ ಹರಿಯಿತು. ಅವನು ಶಿಲ್ಪಿಯನ್ನು ವಿಚಾರಿಸಿದನು.

"ಅದಾವ ವಿಗ್ರಹ!"

"ಶ್ರೀ ಕೃಷ್ಣನದು."

"ಕೆಲಸವು ಪೂರ್ತಿಸಿದೆಯೆ?"

'ಇನ್ನೂ ಕೆಲಸ ಪೂರೈಸಿಲ್ಲ. ಹೊರದೃಷ್ಟಿಗೆ ಕೆಲಸ ಬಾಕಿಯಿರುವಂತೆ ಕಾಣುವದಿಲ್ಲ. ಆದರೆ ನನ್ನ ಕಣ್ಣಿಗೆ ಬಿಂಬದಲ್ಲಿ ಮಾನವತೆಯ ಛಾಯೆ ಕಂಡು ಬರುತ್ತದೆ. ಮಾನವತೆಯನ್ನು ಮೀರಿ ದಿವ್ಯತೆ ಮೊಗಸಿರಿಯಲ್ಲಿ ನಲಿಯ ಬೇಕು. ಅಂತಾಗಿ ಕೆಲಸ ಬಾಕಿ ಇದೆ.'

'ಕೈಗೆ ಕಾಲಿಗೆ ವಸ್ತ್ರ ಸುತ್ತಿದುದೇಕೆ?"

ಶಿಲ್ಪಿಯು ನಮಗೆ ಕಾಣಿಸಲೆಂದು ಭುಜದ ವಸ್ತ್ರ ಬಿಚ್ಚಿದನು. ಕುಂದಣದ ಕಡಗದಂತೆ ಕೈಯ ಆಭರಣಗಳು ಮಿರುಗುತ್ತಿದ್ದವು ಒಡೆದರೆ ಕಂಚಿನ ದನಿ ಉಂಟಾಗುತ್ತಲಿತ್ತು. ಕಾಲಿನಲ್ಲಿ ಅಂದುಗೆ ಗೆಜ್ಜೆ ಗಲ ಗಲ ಅನ್ನುತ್ತಿತ್ತು. ತುಷಾರನು ಆನಂದಪರವಶನಾಗಿ ಕಣ್ಣೀರು ತುಂಬಿ ಶಿಲ್ಪಿಯನ್ನು ಕೇಳಿದನು. "ಅಂಗರ್ಪಿತವೇ ಕೃತಿರತ್ನ?" "ಇದು ನನ್ನ ಗುರುದೇವನಿಗರ್ಪಿತವೆ"ಂದು ಶಿಲ್ಪಿ ಉತ್ತರವಿತ್ತನು.

"ಓ ವರಶಿಲ್ಪಿ! ನನಗೆ ನಿನ್ನ ನೆನಪು ಅಮರವಾಗಿ ಉಳಿಯಲೆಂದು ನಿನ್ನ ಒಂದು ಕೃತಿಯನ್ನು ಜಿಪುಣನಂತೆ ಕೇಳುವೆನು. ಕೊಡುವಿಯಾ?"

ತುಷಾರನು ಹೀಗೆ ಪ್ರಶ್ನಿಸಿದಾಗ ಶಿಲ್ಪಿಯು ತನ್ನ ಕೆಲಸವನ್ನು ತುಸು ಬದಿಗಿಟ್ಟು ತುಷಾರನನ್ನು ಒಂದು ಕ್ಷಣ ಎವೆಯಿಕ್ಕದೆ ನೋಡಿದನು ಅದೇ ಮಂದಹಾಸ! ಅದೇ ಪ್ರಸನ್ನತೆ!!

"ಹಾಂ! ಯಾವ ಪ್ರತಿಮೆಯಾಗಬಹುದು!"

— "ಪರಮ ಶಿವನಾಗಬಹುದು!!"

'ಶಿಲೆಯೋ ಪಂಚಲೋಹವೋ?"

"ಪಂಚಲೋಹ!"

"ಯಾವ ವೃತ್ತಿ?"

"ಧ್ಯಾನ ಮುದ್ರೆ. ಒಂದು ಕೈಯಲ್ಲಿ ಪಿನಾಕ"

"ತಲೆಯಲ್ಲಿ ಚಂದ್ರಕಲೆ?"

"ಬೇಕು"

"ಉರಗಮಾಲೆ?"

"ಬೇಕು. ಆದರೆ ಅದು ಭೂಷಣವಾಗಿರಬೇಕು. ಭೀಷಣವಾಗಬಾರದು".

ಶಿಲ್ಪಿಯು ಸಹಜವಾಗಿ ನಕ್ಕುಬಿಟ್ಟನ. ಅದು ಅಂಗೀಕಾರ ಸೂಚಕ ನಗೆಯಾಗಿದ್ದಿತು.

"ಯಾವ ಆಸನ?"

"ಸಿದ್ಧಾಸನ."

"ಮೊಗವೆಂತಿರಬೇಕು?"

"ಭಕ್ತಿರಸವು ಚಿಮ್ಮಿ ನಮ್ಮಲ್ಲಿ ಧ್ಯಾನ ಪ್ರವೇಶವಾಗಬೇಕು"

ತುಷಾರನ ಮನೋಗತ ಶಿಲ್ಪಿಗೆ ಅರಿವಾಯಿತು. ಅವನು ತನ್ನ ಕೆಲಸಕ್ಕೆ ಕೈ ಹಚ್ಚಿದನು.

ಉಡುಗಿದ ದನಿಯಿಂದ ತುಷಾರನು ಅದಕ್ಕೇನು ಬೆಲೆಯೆಂದು ಕೇಳಿದನು. ಹಾಗೆ ಕೇಳುವಾಗ ಅವನ ಮುಖ ಕೆಂಪೇರಿತ್ತು. ದನಿ ಕಂಪಿಸುತ್ತಿತ್ತು.

"ಇನ್ನು ಹದಿನೈದು ದಿನಗಳ ನಂತರ ಬನ್ನಿರಿ: ಆಗ ಪ್ರತಿಮೆಯನ್ನು ಮೇಣದಲ್ಲಿ ಸಿದ್ಧಗೊಳಿಸಿಡುವೆನು". ಎಂದಿಷ್ಟೇ ಹೇಳಿ ಶಿಲ್ಪಿಯು ಮಾತು ಮುಗಿಸಿದನು.

ಹಿಂದೆ ಮರಳುವಾಗ ತುಷಾರನೂ ಕಮಲಕಾಂತನೂ ಮೌನವಾಗಿ ದಾರಿ ತುಳಿಯುತ್ತಿದ್ದರು.

ಭಾರತ ಹುಣ್ಣಿಮೆ

(೧೧ನೇ ಪುಟದಿಂದ)

ಕೋಡು ಇವೆಲ್ಲಾ ಇರುವುದು ಅಸಂಭವ, ಆದರೆ ಇಲ್ಲದ್ದು ಒಮ್ಮೊಮ್ಮೆ ಇದ್ದಂತೆ ಭಾಸವಾಗುತ್ತದೆ. ಆಕಾಶದಲ್ಲಿಯ ಹೂವು ಎಂಬುದು ಇಲ್ಲದ್ದಾದರೂ ಸತ್ಯ ಸೃಷ್ಟಿಯಲ್ಲಿ ಬಂದಿತೇನೋ ಅನ್ನುವಂತೆ ಹುಣ್ಣಿಮೆಯ ಚಂದಿರ ಕಾಣುತ್ತಾನೆ. ಮೊದಲು ಚಿಕ್ಕವನಾಗಿದ್ದವನು ದೊಡ್ಡವನಾಗುತ್ತ, ಮೈತುಂಬಿಕೊಂಡು ದುಂಡಗಾಗುತ್ತಾನೆ. ಬಿದಿಗೆ ತದಿಗೆಯ ರಾತ್ರಿಗಳಲ್ಲಿ ಮೊಗ್ಗೆಯಂತೆ ಇದ್ದವನು ಹುಣ್ಣಿಮೆಯ ರಾತ್ರಿ ಅರಳಿದ ಹೂವಿನಂತೆ ಆಗುತ್ತಾನೆ. ಅವನನ್ನು ನೋಡುವವರ ಕಣ್ಣುಗಳಲ್ಲಿಯ ಆನಂದವು ಸಮುದ್ರದಂತೆ ಉಕ್ಕೇರುತ್ತದೆ. ಹುಣ್ಣಿಮೆಯ ರಾತ್ರಿಯ ಚಂದ್ರನನ್ನು ನೋಡಿ ಸಮುದ್ರ ಉಕ್ಕೇರುವುದಂತೆ. ಹಾಗೆ ಕಣ್ಣುಗಳ ಕಡಲು ಉಕ್ಕೇರುತ್ತದೆ. ನೀಲ ನಭದ ಮಂಟಪದಲ್ಲಿ ಪೂರ್ವ ದಿಕ್ಕಿನಿಂದ ಏರಿ ಚಂದ್ರನು ತನ್ನ ಕಿರಣಗಳ ಮಾಯೆ, ಅಥವಾ ಜಾದುವನ್ನು ಬೀರುತ್ತಿರಲು, ಹಲವಾರು ಚಿಕ್ಕೆಗಳು ಆವನ ಬೆಳಕಿನ ಅಮೃತದಲ್ಲಿ ಜಳಕ ಮಾಡಿ ತಾವು ಯಾರೆಂಬ ಅರಿವನ್ನು ಮರೆತು ಒಮ್ಮೆಲೆ ಮರೆಯಾಗಿ ಬಿಟ್ಟಿರುವವು. ಅಮಾವಾಸ್ಯೆಯ ರಾತ್ರಿ ಆಕಾಶದಲ್ಲಿ ಕಿಕ್ಕಿರಿದು ತುಂಬಿದ ಚಿಕ್ಕೆಗಳೆಲ್ಲ ಹುಣ್ಣಿಮೆಯ ರಾತ್ರಿ ಕಣ್ಮರೆಯಾಗಿ ಬಿಟ್ಟಿವೆ. ಅಲ್ಲೊಂದು ಇಲ್ಲೊಂದು ಬಿಟ್ಟರೆ ಯಾಕೆಂದರೆ ಬೆಳದಿಂಗಳಿನ ಅಮೃತ ಪ್ರವಾಹದಲ್ಲಿ ಮಿಂದು ತಮ್ಮರಿವನ್ನು ಮರೆತಂತೆ ಅವು ಮುಳುಗಿ ಹೋಗಿರುತ್ತವೆ!

ಭಾರತ ಹುಣ್ಣಿಮೆಯ ರಾತ್ರಿಯಲ್ಲಿ ಆಕಾಶವೆಷ್ಟು ನೀಲ, ನಿರ್ಮಲ, ನಿರಭ್ರ! ಬಿಳಿ ನೀಲವಾದ ತಿಳಿಯಾದ ಆಕಾಶದ ಅಂಗಣದ ವಿಸ್ತಾರದಲ್ಲಿ ಒಂದು ಸಣ್ಣ ಮೋಡವೂ ಕಾಣದಂಥ ಹಸನು ಅದೇನು! ಅದನ್ನು ನೋಡುತ್ತ ನಿಂತಿರುವಾಗ ಈ ಜೀವಕ್ಕೆ ರೆಕ್ಕೆಗಳು ಬಾರವೇ, ನಾ ಅಲ್ಲಿ ಹಾರುವೆನು ಎಂದು ಅನ್ನುವಂಥ ಕನಸು ಅದೇನು! ಕವಿಹೃದಯ ಅಲ್ಪವನ್ನು ಕಳಚಿ ಘನದ ಕನಸನ್ನು ಕಾಣತೊಡಗುತ್ತದೆ. ಅಲ್ಲಲ್ಲಿ ಮಂದವಾಗಿ ಮಿನುಗುವ ಕೆಲವು ಚಿಕ್ಕೆಗಳು ಮಾತ್ರ ಕಾಣುತ್ತವೆಯಲ್ಲ, ಈ ನೋಟವನ್ನು ನೋಡಿ ಕವಿಕಲ್ಪನೆ ಮುಗಿಲಿಗೆ ನೆಗೆಯುತ್ತದೆ. ಅಂತರಿಕ್ಷದ ಆಚೆ ಇರುವ ಅನಂತ ಜ್ಯೋತಿಯನ್ನು ಮರೆಮಾಡಿರುವ ಬೆಳದಿಂಗಳಿನ ಒಟ್ಟೆಯ ಮೇಲೆ ಹಣೆದ ಹೊಸಿಗೆಯಂತೆ ಆ ಚಿಕ್ಕೆ ಚಿಲುಚಿಕ್ಕೆ ಸಾಲು ಕಾಣುತ್ತದೆ! ಅತ್ಯಂತ ನಿಶ್ಶಬ್ದವಾದ ಹುಣ್ಣಿಮೆಯ ರಾತ್ರಿಯಲ್ಲಿ ತಂಗಾಳಿಯ ಸುಖವನ್ನು ನೆನಸಿದರೆ ಸಹ ಜೀವ ತಂಪಾಗುತ್ತದೆ. ಸಮುದ್ರದ ಸರಿರಾತ್ರಿ ಏರುತ್ತಿರುವ ನೆಲದಲ್ಲಿ ಬೆಳದಿಂಗಳ ಹಡದಿಯನ್ನು ಹಾಸಿರುವುದು, ಆದರ ಮೇಲೆ ನೈದಿಲೆಯನ್ನು ಬಿಟ್ಟು ಸವಿಯಾದ ತಂಪನ್ನೂ, ಹೂವಿನ ಕಂಪನ್ನೂ ಹೊತ್ತು ಗಾಳಿಯ ಕನ್ನೆ ಸುಳಿದು ಸುಳಿದು ಬರುತ್ತಿರುವಳು ಎಂಬ ಉತ್ಪ್ರೇಕ್ಷೆ ತಲೆದೋರಿತು. ಭಾರತ ಹುಣ್ಣಿಮೆಯ ಸಮಯಕ್ಕೆ ಚಳಿಯು ಜೋರು ಹೋಗಿ ಗಾಳಿಯಲ್ಲಿ ಸವಿಯಾದ ತಂಪು ಬೆರೆತಿರುತ್ತದೆ. ಅಂತೇ ನೈದಿಲೆಯ ತೊರೆದು ಸವಿತಂಪು ಹೊಗಂಪು ಹೇರಿ ಗಾಳಿಗನ್ನೆಯು ಬರುವಳೆಂದು ಬಣ್ಣಿಸಲಾಗಿದೆ.

ಬೆಳುದಿಂಗಳಿನಲ್ಲಿ ಏನೋ ಒಂದು ಹುಚ್ಚು ಹಿಡಿಸುವ ಮೋಡಿಯಿದೆ. ಅಂತೇ 'ಬೆಲಗಸೆ ದೀವಿಕೊಂಡು ಕುಡಿಯಲ್, ಮೊಗೆಯಲ್ ಕೊಡಗೊಂಡು, ತಿದ್ದಿ ಬಚ್ಚಲನೆಳದೋಂಟದೊಳ್ ಪರಿಯಿಸಲ್ ಸರಿಗೋಲ್ಗಳ ನಿಕ್ಕಿವಾಯಿಸಲ್, ನೆಲೆಯಿನಿಸೆಂದು ನೋಡಲೊಳಪೊಕ್ಕು ದುಡುಂಮಿರಿದಾಡಲ್ ಈಸಲ್ ಅಗ್ಗಲಿಸಿದ ಅಲಂಪಿನಿಂ ಬಗೆದುದಂತು ಜನಂ ಘನ ಚಂದ್ರಿಕಾಂಬುವಂ ಎಂದು ರನ್ನನು ಬೆಳದಿಂಗಳ ಭ್ರಾಂತಿಯನ್ನು ಬಣ್ಣಿಸಿರುವನು. ಬೆಳದಿಂಗಳ ನೀರನ್ನು ಬೊಗಸೆ ತುಂಬಿ ಕುಡಿಯಬೇಕೆಂದೂ ಕೊಡದಿಂದ ತುಂಬಬೇಕೆಂದೂ ಬಚ್ಚಲವನ್ನು ತಿದ್ದಿ ಎಳೆ ತೋಟದಲ್ಲಿ ಹರಿಯಿಸಬೇಕೆಂದೂ ಹರಿಗೋಲುಗಳನ್ನು ಹಾಕಿ ದಾಟಿಸಬೇಕೆಂದೂ ನೀರಿನ ನೆಲೆ ಎಷ್ಟು ಎಂದು ನೋಡಲು ಒಳ ಹೊಕ್ಕು ದುಡುಮ್ಮನೆ ಧುಮುಕಿ ಈಸಲೆಂದೂ ಜನವು ಬಗೆಯಿತಂತೆ, ಇಲ್ಲಿ ಭ್ರಾಂತಿ ಸಹಜವಾಗುತ್ತದೆ, ಅಲಂಕಾರ ಮಾತ್ರವಲ್ಲ ನನ್ನ ಈ ಕವಿತೆಯಲ್ಲಿಯೂ ಅದೇ ಬಗೆಯ ಭಾವ ಒಂದಿದೆ. ಬೆಳುದಿಂಗಳಿನ ಪ್ರವಾಹ ಎಂಬುದು ಕಲ್ಪನೆಯ ಕುಡಿಯಲ್ಲ, ಕಲ್ಪಲತೆ ಇತ್ತಿರುವ ನಿಜವಾದ ಸ್ವರ್ಗ ಎಂದು ಹುಚ್ಚೆದ್ದ ಕವಿಜೀವವು ಬಾಯ್ತೆರೆದು ಕುಡಿಯುವುದು, ಮೈ ಚಾಚಿ ಈಸುವುದು.

ಬೆಳದಿಂಗಳಿನ ಅಚ್ಚ ಹೊಳಪಿನ ಸಮಯದಲ್ಲಿ ಆಲ, ಬಸರಿ, ಮಾವು ಈ ಮರಗಳನ್ನು ನೋಡಬೇಕು. ಮರದ ತುಂಬ ಬೆಳಕಿನ ಕೊಡಗಳು ಕಾಣುತ್ತವೆ. ಇವೆಲ್ಲಿಂದ ಬಂದವೆಂದು ಮನಸ್ಸು ದಿಗ್ಭ್ರಮೆಗೊಳ್ಳುತ್ತದೆ, ಆದರೆ ಹೃದಯ ನಲಿದು ಕುಣಿಯುತ್ತದೆ. ಕಲ್ಪನೆ ತನ್ನ ಚಿತ್ರವನ್ನು ಬರೆದೇ ಬಿಡುತ್ತದೆ. ಮರಮರದ ಮೇಲ್ತುದಿಗಳು ಆ ಬೆಳ್ದಿಂಗಳಿನ ಹೊಗರನ್ನು ಉಂಡುಂಡು ಎಲೆ ಎಲೆಯ ಪ್ರಣತಿಯಲ್ಲಿ ಬೆಳಕು ಕುಡಿಯ ರತ್ನ ಸಂಜನನ್ನು ತೋರಿ ಸೌಂದರ್ಯದೇವನಿಗೆ ಆರದ ಆರತಿಯ ಸಿರಿಯನ್ನು ಬೆಳಗುತ್ತವೆ!

ಬೆಳದಿಂಗಳು ಏರುತ್ತಿರಲು ಗಿಡಮರದ ತಳದಲ್ಲಿ ಕರಿನೆರಳು ದಟ್ಟವಾಗಿ ಕಾಣುವುದು. ತನ್ನನ್ನು ಹಿಂದೆ ಮುತ್ತಿದ ಹಿರಿಯ ಕತ್ತಲೆಯ ಕಾವಳವನ್ನು ಬೆಳಕು ತನ್ನ ಕಾಲಲ್ಲಿ ಈಗ ತುಳಿದಂತೆ ಅದು ಇರುವುದು! ಬೆಳುದಿಂಗಳಲ್ಲಿ ಇದೊಂದು ವಿಶೇಷ. ಬೆಳುದಿಂಗಳ ಹೊಗರು ಹೆಚ್ಚಿದಂತೆ ಗಿಡಮರಗಳ ಕರಿನೆರಳು ಹೆಚ್ಚುತ್ತದೆ. ಆದರೆ ಬೆಳುದಿಂಗಳ ವಿಶಾಲ ಪ್ರಭಾವದ ಮುಂದೆ ಅನು ಹತಪ್ರಭವಾಗಿ ಬಿದ್ದಿರುವಂತೆ ತೋರುವುದು. ತನ್ನನ್ನು ಮುತ್ತಿದ ಕತ್ತಲೆಯನ್ನು ಬೆಳಕು ತನ್ನ ಕಾಲಲ್ಲಿ ತುಳಿದಂತೆ ಇರುವುದೆಂಬ ಈ ಕಲ್ಪನೆ ರೂಪ ತಾಳಿದಾಗ ನನ್ನ ಮೈಯಲ್ಲಿ ಮಿಂಚಿನ ಸಂಚಾರವಾಯಿತು ಜೀವನದ ದರ್ಶನವೊಂದು ಝಗ್ಗನೆ ಹೊಳೆಯಿತು. ಕತ್ತಲೆ ಮುಸುಕಿದಾಗ ಜೀವ ತತ್ತರಿಸುತ್ತದೆ. ಇದಕ್ಕೆ ಕೊನೆಯೆಂಬುವಿಲ್ಲವೇ ಎಂದು ಕೂಗಿಕೊಳ್ಳುತ್ತದೆ ಆದರೆ ಆ ಕತ್ತಲೆಯನ್ನು ಸೋಲಿಸಿ ಒಮ್ಮೆಲ್ಲೊಮ್ಮೆ ಬೆಳಕು ನುಗ್ಗಲೇ ಬೇಕು. ಆಗ ಮಹಿಷಾಸುರ ಮರ್ದಿನಿಯಾದ ಲೋಕಮಾತೆಯಂತೆ ಬೆಳಕು ತನ್ನ ಶೂಲದಿಂದ ಕತ್ತಲೆಯನ್ನು ತಿವಿದು ತನ್ನ ಕಾಲಕೆಳಗೆ ತುಳಿಯುತ್ತದೆ. ಜೀವಜೀವದ ಚರಿತ್ರೆಯಲ್ಲಿ ಇದು ನಡೆಯಲೇ ಬೇಕಾದ ಘಟನೆ. ಆದರೆ ಈ ಜೀವನ ದರ್ಶನದಿಂದ ಮತ್ತು ಶ್ರದ್ಧೆಯಿಂದ ಕೂಡಿದವರಾಗಿ ಮುಂದೆ ಸಾಗಬೇಕು. ಈ ಸಾರಿ ಸುಲಭವಲ್ಲ, ಸಿದ್ಧಿಯೂ ಸುಲಭವಲ್ಲ ಆದರೆ ಇದೇ ಸಾರಿ, 'ನಾನ್ಯಃ ಪಂಥಾಃ ವಿದ್ಯತೇ ಅಯನಾಯ'. ಹೀಗೆ ಭಾರತ ಹುಣ್ಣಿಮೆಯ ಸೌಂದರ್ಯ ದರ್ಶನವು ಆನಂದ ದರ್ಶನವನ್ನೂ ಜೀವನ ದರ್ಶನವನ್ನೂ ನನಗೆ ನೀಡಿತು. ಅನಂತದ ಅಪಾರ ವಿಸ್ತಾರದಲ್ಲಿ ಸಮರಸವಾಗಿ ನಿರಿಚ್ಛವಾಗಿ ಇರುವುದರಲ್ಲಿಯೆ ಬಾಳಿನ ಎಲ್ಲ ಸುಖವಿದೆ ಎಂದು ತೋರಿತು. ತುದಿಮೊದಲನ್ನು ಅರಿಯದ ಬೆಳ್ಳಿ ಕಡಲಿನ ನಡುವೆ ಬೆಳಕನ್ನು ಉಂಡು ಬೊಂಬೆಯಂತೆ ಬೆರಗುಹೊಂದಿ ಇನ್ನೇನು ಬೇಡದಲೆ ಬಯಸದಲೆ ಮೈಮರೆತು ನನ್ನತನವೆಲ್ಲವೂ ನಂದಿ ನಾಸಿಂತೆ ಎಂದು ಕೊನೆಯ ನುಡಿಯಲ್ಲಿ ಹೇಳಿದ್ದು ಅದಕ್ಕಾಗಿಯೆ.

(ಧಾರವಾಡ ಆಕಾಶವಾಣಿಯ ಕೃಪೆಯಿಂದ)

ನಾಯ ನರಕ



ಕವಿ: ಶ್ರೀ ಯಸ್. ವೆಂಕಟರಾಜ.

* * *

ನಾಯಿಯೊಂದು ನರಕದಿಂದ
ಬಂದು ಸ್ವರ್ಗವಿಣಿಕಿತು
ಬಾಯತೆರೆದು ಜೊಲ್ಲು ಸುರಿಸಿ
ಕಣ್ಣು ಕಣ್ಣು ಬಿಟ್ಟಿತು!

೦೦ ೦೦

೧. ಏನು ಸೊಗಸು ಕಣ್ಣು ಕುಕ್ಕಿ
ಪಜ್ವಳಿಸುವ ವೈಭವ
ದೀನ ದುಃಖವಿರದ ನಿತ್ಯ
ಸುಖದ ಧರ್ಮ ಸಂಭವ
ಬೊಜ್ಜು ಬೆಳೆದ ಸುರೆಯ ಗುಂಗಿ
ನೆನಿತೊ ದೇವ ದೇವರು
ಲಜ್ಜೆಯುಳಿದ ಸೂಳೆಯರು ಸ
ಮೃದ್ಧ ಸುಖವನೀವರು!
ಏಳಲಾರದೊಬ್ಬ ಭೂಪ
ನವನೇ ದೇವೇಂದ್ರನು
ತೋಳಹಿಡಿದು ಹೆಣ್ಗಳೊಡನೆ
ಹರಟುವ ಪ್ರಚಂಡನು!
ನೂರು ಕುದುರೆ ಕೊಂದು ಸಗ್ಗ
ವೇರಿ ಕುಳಿತ ರಾಜರು
ಯಾರ ಮನೆಯ ಸೇನೊ ಸುಟ್ಟು
ಶೂರರೆನಿಸಿದೋಜರು!

೨. ದಾನವಿತ್ತು ಭದ್ರಸೀಠ
ಪಡೆದ ಮುಡಿ ಮಹಂತರು
ತಾವು ಮಾಡದಿತರರಿಂದ
ಲೆರವುಗೊಂಡ ಸಂತರು
ಯಾರ ಬದುಕನೆಲ್ಲ ಸೂರೆ
ಗೊಟ್ಟ ಧರ್ಮರಾಯರು
ಊರ ಮಾರಿಯಂತೆ ಬೆಳೆದು
ಬಂದ ಭೀಮಸೇನರು
ವೀರನೆಂಬಹಂಕಾರದ
ಬಿಲ್ಲು ಹೂಡಿದರ್ಜುನ
ನೀರ ಕೊಟ್ಟು ವೈದ್ಯನಾದ
ನಕುಲನೆಂಬ ದುರ್ಜನ
ಸುಳ್ಳು ಸೇವೆ ಸಲಿಸಿ ಮೆರೆದ
ಸಹದೇವನ ದುರ್ಬುದ್ಧಿ
ಅಕ್ಷಿಯಲ್ಲಿ ಪಂಚವಿಧ ಪ್ರ
ಪಂಚಗಂಡ ದ್ರೌಪದಿ!

೩. ಏನೊ ಹೊಗಳಿ ಧನ್ಯರಾದ
ಕುದುರೆ ಮುಖದ ಕವಿಗಳು
ಆ ಪುರಾಣ ಕೇಳಿ ಕೇಳಿ
ಕಿವುಡಾದವು ಕಿವಿಗಳು!
ಹೆರರ ಹೆಂಡಿರೊಡನೆ ಧರ್ಮ
ವರಿತ ಪುಣ್ಯಚರಿತರು
ಅರರೆ! ಇದೇನಗ್ಗ ವಾಯ್ತು!
ಸಗ್ಗಗೊಂಡರಿಬ್ಬರು!
ಇವರೆ ಸಾವನವರರಾಗಿ
ವಂಚಿಸಿರುವ ದೇವರು
ಇವರೆ ವಂಚನೆಯಲಿ ಬದುಕಿ
ಸಾಯದ ಸ್ವಭಾವರು
ಇದ್ದರೇನು ಸತ್ತರೇನು?
ಇದೇ ಕೊಳೆತ ಕುಂಬಳ
ಇದ್ದ ಜೀವ ಸಾಯದಿರಲು
ನಾಳೆಗದೇ ತಂಗಳ!

೦೦ ೦೦

ನಾಯಿಯೊಂದು ನರಕದಿಂದ
ಬಂದು ಮೆಲ್ಲನಿಣಿಕಿತು
ಸಾಯಲಿ ನನಗದೇ ಸಾಕು–
ಎಂದು ಹಿಂದಕೋಡಿತು!

ಗೀತೆಯ ಕೈಗನ್ನಡಿ

ಹೊಸಕೆರೆ
ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೊಕೆಟ್ ಎಡಿಷನ್.
ಸುಮಾರು 450 ಪುಟಗಳು.
ಕ್ರಯ 0—12—0

ಗೋವಿಜಯ

(ಗೋಪನ ಕಥೆ)

ಶ್ರೀ ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ ಸಂಭಾಷಣೆ, ವಿಷಯ ಜ್ಞಾನ, ಹಾಗು ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—8—0

ನವಯುಗ ಪ್ರೆಸ್, ಉಡುಪಿ.

ನವಭಾರತದಲ್ಲಿ ಪಂಚಾಯತುಗಳ ಸ್ಥಾನ.

ಪ್ರಜಾಪ್ರಭುತ್ವರಾಷ್ಟ್ರದಲ್ಲಿ ಜನತೆಯ ಮನೀಷೆಯಂತೆ ಶಾಸನವು ನಡೆಯುತ್ತದೆ. ಗ್ರಾಮರಾಜ್ಯದ ಕನಸನ್ನು ಕಾಣುತ್ತಿರುವ ವಿನೋಬಾಜೀ ರಾಮರಾಜ್ಯದ ಅಡಿಗಲ್ಲನ್ನಿಟ್ಟ ... ನಿರ್ಮಿಸಿದ್ದ ಗಾಂಧೀಜೀ—ಅದಕ್ಕಾಗಿ ಹೋರಾಡುತ್ತಿರುವ ನಮ್ಮ ಮುಂದಾಳುಗಳು ದೇಶದ ಆಧಾರಭೂತವಾದ ಗ್ರಾಮಪಂಚಾಯತುಗಳಿಗೆ ವಿಶೇಷಾಧಿಕಾರವನ್ನು ಕೊಡಲು ಹವಣಿಸುತ್ತಿದ್ದಾರೆ. ಪಂಚಾಯತುಗಳ ಪುನಾರಚನೆಯಿಂದಲೇ ಈ ನಮ್ಮ ಗುರಿಯು ಈಡೇರಲಾರದೆ?

ಬರೆದವರು: ಡಾ| ಕೆ. ಕೃಷ್ಣಮೂರ್ತಿ, ಎಂ. ಎ, ಬಿ. ಟಿ; ಪಿ. ಎಚ್. ಡಿ.

ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯ ಪಾಕ್ಷಿಕ ಪತ್ರಿಕೆಯಾದ "ಆರ್ಥಿಕ ಸಮೀಕ್ಷೆ"ಯ ಇದೇ ಡಿಸೆಂಬರ್ ಸಂಚಿಕೆಯಲ್ಲಿ ಅಧ್ಯಕ್ಷ ಧೇಬರ್ ಅವರು ನವಭಾರತದಲ್ಲಿ ಪಂಚಾಯಿತಿಗಳ ಭವಿತವ್ಯವನ್ನು ಕುರಿತು ತಮ್ಮ ಮನನೀಯವಾದ ವಿಚಾರಗಳನ್ನು ವ್ಯಕ್ತಮಾಡಿದ್ದಾರೆ. ಅವುಗಳ ಸಾರಾಂಶವನ್ನಿಲ್ಲಿ ಸಂಗ್ರಹಿಸಲುದ್ದೇಶಿಸಿದೆ.

ನಮ್ಮ ರಾಜ್ಯಾಂಗ ಘಟನೆಯ ನಲವತ್ತನೇ ವಾಕ್ಯವು ಸ್ಪಷ್ಟಾಕ್ಷರಗಳಿಂದ ಮಾಡಿರುವ ಘೋಷಣೆಯೆಂದರೆ ಇದು:—

"ಗ್ರಾಮ ಪಂಚಾಯತಿಗಳನ್ನು ಪುನರ್ಘಟಿಸಿ ಅವು ಪ್ರಜಾಪ್ರಭುತ್ವದ ಅಂಗಗಳಾಗಿ ಕೆಲಸ ಮಾಡುವಂತೆ ಅಗತ್ಯವಿರುವ ಅಧಿಕಾರಗಳನ್ನು ಅವಕ್ಕೆ ವಹಿಸಿಕೊಡಲು ಸರಕಾರವು ಕ್ರಮಗಳನ್ನು ಕೈಗೊಳ್ಳುವದು."

ಸರಕಾರದ ಆಡಳಿತ ಸೌಧಕ್ಕೆ ಗ್ರಾಮ ಪಂಚಾಯತಿಯೇ ಅಡಿಪಾಯವೆಂದು ಕೆಲವರು ಭಾವಿಸಿದರೆ, ಅದು ಆಡಳಿತ ಕೇಂದ್ರವಲ್ಲದಿದ್ದರೂ ಆಡಳಿತ ಯಂತ್ರದ ಒಂದು ಮುಖ್ಯ ಕೊಂಡಿಯೆಂದು ಇತರರು ತಿಳಿಯುತ್ತಾರೆ. ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಅದೊಂದು ಹೊರವಲಯ ಮಾತ್ರವೆನ್ನುವವರೂ ಇದ್ದಾರೆ. ಅನೇಕ ಸುಶಿಕ್ಷಿತರಲ್ಲಿ ಈ ಮೂರನೆಯ ಅಭಿಪ್ರಾಯವೇ ಮನೆ ಮಾಡಿಕೊಂಡಿರುವುದಕ್ಕೆ ಇಂಗ್ಲೆಂಡಿನ ಸ್ಥಾನಿಕ ಸ್ವರಾಜ್ಯಗಳ ಸಾರೂಪ್ಯವೇ ಕಾರಣ. ಇಂಗ್ಲೆಂಡಿನಲ್ಲಿ ಅವಕ್ಕಿರುವ ಅಧಿಕಾರ ಅತ್ಯಲ್ಪ; ಕಾರ್ಯಕ್ಷೇತ್ರವೂ ಸಂಕುಚಿತ. ಗ್ರಾಮನೈರ್ಮಲ್ಯ, ಇತ್ಯಾದಿ ಸಾಮಾನ್ಯ ಪ್ರಶ್ನೆಗಳು ಮಾತ್ರ ಅವರ ಕಾರ್ಯಕ್ಷೇತ್ರದಲ್ಲಿ ಬರುತ್ತವೆ. ಎಂದರೆ, ಆಡಳಿತಯಂತ್ರದ ಮುಖ್ಯ ಹಂತಗಳಲ್ಲೆಲ್ಲಿಯೂ ಅಳವಡಿಸಿಕೊಳ್ಳಲಾಗದ ವಿಷಯಗಳಿಗೆ ಮಾತ್ರ ಯಥಾಶಕ್ತಿ ಗಮನವೀಯಲು ಗ್ರಾಮಾಂತರದ ಸಂಸ್ಥೆಗಳು ನಿಯೋಜಿಸಲಾಗಿರುತ್ತವೆ. ಈ ಪರಿಸ್ಥಿತಿ ತಪ್ಪಿ ಜನಜೀವನದ ಮುಖ್ಯ ಅಂಗಗಳಾಗುವಂತೆ ಅವುಗಳ ಸುಧಾರಣೆ ಅಗತ್ಯವೆಂಬ ಮಾತನ್ನು ಪ್ರೊ| ಜಿ. ಡಿ. ಎಚ್. ಕೋಲ್ ಮುಂತಾದ ಇಂಗ್ಲಿಷ್ ತಜ್ಞರೇ ಇಂದು ಆಡುತ್ತಿದ್ದಾರೆ.

ಬ್ರಿಟಿಷ್ ಆಡಳಿತ ಯಂತ್ರದ ಮಾದರಿಯಲ್ಲಿಯೇ ರೂಪಿತವಾದ ಭಾರತದ ಆಡಳಿತ ಪ್ರತಿರೂಪಕ್ಕೂ ಈ ಮಾತು ಮತ್ತೂ ಹೆಚ್ಚಾಗಿ ಅನ್ವಯಿಸುತ್ತದೆ. ಬ್ರಿಟಿಷರ ಆಗಮನಕ್ಕೆ ಮುಂಚೆ ಭಾರತದಲ್ಲಿ ಗ್ರಾಮಪಂಚಾಯತಿಗಳು ಜನರ ಆರ್ಥಿಕ ಹಾಗು ಸಾಮಾಜಿಕ ಜೀವನದ ಸತ್ವಪೂರ್ಣ ಕೇಂದ್ರಗಳಾಗಿದ್ದುವು. ಡಾ. ರಾಧಾಕೃಷ್ಣನ್ ಅವರು ಹೇಳುವಂತೆ ಅವು ಇಡಿಯ ರಾಷ್ಟ್ರಕ್ಕೇ "ಒಂದು ಧ್ಯೇಯ, ಒಂದು ಅರ್ಥ, ಒಂದು ವಿಶ್ವಾಸ"ವನ್ನು ಒದಗಿಸುತ್ತಿದ್ದುವು. ಅರಸೊತ್ತಿಗೆಗಳು ಬದಲಾದರೂ, ಅಧಿಕಾರಸ್ಥಾನಗಳು ಪಲ್ಲಟಿಸಿದರೂ, ಗ್ರಾಮಸಂಸ್ಥೆಗಳು ಮಾತ್ರ ಅಚಲವಾಗಿ; ಸತ್ವಪೂರ್ಣವಾಗಿ, ಉಳಿದಿರುತ್ತಿದ್ದುವು. ಕೇಂದ್ರದ ಅಧಿಕಾರಕ್ಕೆ ಪರತಂತ್ರವಾಗದೆ, ತಮ್ಮ ಪರಿಧಿಯಲ್ಲಿ ಸಂಪೂರ್ಣ ಆಡಳಿತಾಧಿಕಾರವನ್ನು ನಿರ್ವಹಿಸುತ್ತಿದ್ದುವು. ಪ್ರತ್ಯಕ್ಷವಾಗಿ ರಾಷ್ಟ್ರದ ಅಭ್ಯುದಯಕ್ಕೆ ನಿಮಿತ್ತವಾಗಿದ್ದುವು. ಆದರೆ ಬ್ರಿಟಿಷರು ಬಂದು ಅವುಗಳ ಆಡಳಿತ ಮತ್ತು ನ್ಯಾಯದಾನ ಅಧಿಕಾರಗಳೆಲ್ಲವನ್ನೂ ಕಿತ್ತುಹಾಕಿ ಮೇಲಿನ ಅಧಿಕಾರಿಗಳಿಗೆ ಹಂಚಿಹಾಕಿದ ಪರಿಣಾಮವಾಗಿ ಅವುಗಳು ಶಕ್ತಿಹೀನವಾಗಿಯೂ ನಿಷ್ಪ್ರಯೋಜಕವಾಗಿಯೂ ನಿಂತಿವೆ. ಆದುದರಿಂದ ಇಂದು ಅವುಗಳನ್ನು ಮತ್ತೆ ರೂಪಿಸುವುದು ರಾಷ್ಟ್ರದ ಆದ್ಯ ಕರ್ತವ್ಯವಾಗಿದೆ.

ಇಂದಿನ ವೈಜ್ಞಾನಿಕ ಹಾಗು ತಾಂತ್ರಿಕ ಯುಗದಲ್ಲಿ ಕೇಂದ್ರಾಧಿಕಾರವು ಅನಿವಾರ್ಯವೆಂಬುದನ್ನು ಮರೆಯುವಂತಿಲ್ಲ. ದೇಶದ ಉದ್ಯೋಗೀಕರಣ, ಆರ್ಥಿಕ ಸಮಸ್ಯೆ, ರಕ್ಷಣೆಯ ಪ್ರಶ್ನೆ, ಎಲ್ಲವೂ ಕೇಂದ್ರೀಕೃತ ಅಧಿಕಾರವನ್ನೇ ಅವಲಂಬಿಸಿವೆ. ಆದರೆ ಕೇಂದ್ರೀಕೃತ ಆಡಳಿತ ಯಂತ್ರದ ಕಕ್ಷೆಯಲ್ಲಿ ತಾನಾಗಿ ಒಳಪಡದ ಅಂಶಗಳನ್ನು ಮಾತ್ರ ಗ್ರಾಮ ಪಂಚಾಯಿತಿಗಳ ಕಾರ್ಯವೆನ್ನುವುದು ಸಾಧುವಲ್ಲ. ಆಡಳಿತದ ಧೋರಣೆಗಳ ನಿರ್ಣಯಾಧಿಕಾರವು ಮೇಲಿನವರಿಗೆ ಮಾತ್ರ ಇರತಕ್ಕದ್ದೆಂಬ ಅಭಿಪ್ರಾಯ ನಮ್ಮಲ್ಲಿ ರೂಢಮೂಲವಾಗಿರುವುದರಿಂದ ಈ ಪರಿಸ್ಥಿತಿಯೊದಗಿದೆ. ಆದರೆ ಈ ವಿಚಾರಸರಣಿಯು ನಿರಂಕುಶ ಪ್ರಭುತ್ವದ ದ್ಯೋತಕವೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ದೇಶದ ಶಾಂತಿ, ರಕ್ಷಣೆ ಮುಂತಾದ ಸಮಸ್ಯೆಗಳು ಎಷ್ಟು ಮುಖ್ಯವೋ ಅಷ್ಟೇ ಬಹುಜನರ ನಿತ್ಯಜೀವನ ಸಮಸ್ಯೆಯೂ ಎಂಬುದನ್ನು ನಾವು ಮನಗಾಣಬೇಕು. ರಾಷ್ಟ್ರಾಭ್ಯುದಯವೆಂಬುದು ಸಾಮಾಜಿಕ ಉನ್ನತಿಯಿಲ್ಲದೆ ಅಸಾಧ್ಯ. ಭಾರತದಲ್ಲಿ ಹಳ್ಳಿಗಳ ಸಮಾಜಕ್ಕೆ ಪ್ರಥಮ ಸ್ಥಾನ ಸಲ್ಲಲೇಬೇಕು. ಪ್ರತಿಯೊಂದು ಗ್ರಾಮದಲ್ಲೂ ಪಂಚಾಯತಿಗಳು ಸಾಮಾಜಿಕ ಅಭ್ಯುದಯ ಕಾರ್ಯಗಳ ಕೇಂದ್ರವೆನಿಸಬೇಕು. ಹಾಗೆ ಕೇಂದ್ರವೆನಿಸಲು ಅವಕ್ಕೆ ಈಗ ಇಲ್ಲದಿರುವ ಆಡಳಿತಾಧಿಕಾರಗಳೂ ದೊರೆಯಬೇಕು. ರಾಷ್ಟ್ರದ ಧ್ಯೇಯಗಳಲ್ಲಿ ಜನರೆಲ್ಲರೂ ಭಾಗಿಗಳಾಗಲು ಗತ್ಯಂತರವಿಲ್ಲ.

ಇಪ್ಪತ್ತು ವರ್ಷಗಳ ಹಿಂದೆಯೇ ಗಾಂಧೀಜಿಯವರು ಬರೆದಿದ್ದಾರೆ—"ಅಸ್ಪೃಶ್ಯತೆ ಉಳಿದರೆ, ಹಿಂದೂ ಧರ್ಮ ಅಳಿದಂತೆ. ಹಾಗೆಯೇ ಹಳ್ಳಿ ಹಾಳಾದರೆ, ಭಾರತವೇ ನಾಶವಾದಂತೆ. ಉಳಿಯುವುದು ಭಾರತವಲ್ಲ. ಪ್ರಪಂಚದಲ್ಲಿ ಭಾರತದ ವೈಶಿಷ್ಟ್ಯ ನಿರ್ನಾಮವಾದಂತೆ." ಈ ಮಾತಿನ ಸತ್ಯತೆ ನಮ್ಮ ಅರಿವಿಗೆ ಈಗ ಬರಬೇಕಾಗಿದೆ.

ಗ್ರಾಮಜೀವನದ ಮೇಲ್ಮೆಯನ್ನು ಮನಗಾಣದೆ ಪಂಚಾಯತಿಗಳ ಪುನರುಜ್ಜೀವನದಲ್ಲಿ ಅರ್ಥವಿಲ್ಲ. ನಗರ ಪಾಲಿಕೆಗಳ ಪ್ರತಿರೂಪಗಳಂತೆ ಪಂಚಾಯತಿಗಳು ನಗರಜೀವನವನ್ನು ಆದರ್ಶವೆಂಬ ಭಾವನೆಯಿಂದ ಕೆಲಸಮಾಡಿದರೆ ತೀರಲಿಲ್ಲ. ಭಾರತದ ಜನತೆಯೇ ಭಾರತ ರಾಷ್ಟ್ರ. ಆ ಜನತೆಯ ಜೀವನ ಪರಂಪರೆ ಮಾನ್ಯವೆಂಬ ನೂತನ ದೃಷ್ಟಿಕೋನವೇ ಮೂಡಿ ಬರಬೇಕಾಗಿದೆ. ಭಾರತವು ಇತರ ದೇಶಗಳಿಗೆ ಸಾರಿ ಹೇಳುತ್ತಿರುವ ಪಂಚಶೀಲಗಳು ಗ್ರಾಮಜೀವನದ ಸಾರಸರ್ವಸ್ವವಾಗಬೇಕಾಗಿದೆ. ಮೇಲಿನ ಅಧಿಕಾರಿಗಳ ಭೀತಿಯಿಲ್ಲದೆ ಸ್ವಕ್ಷೇತ್ರದಲ್ಲಿ ಸಜೀವನ ನಡೆಸುವ ಚೈತನ್ಯ ಜನತೆಗೆ ಬರಬೇಕಾದರೆ, ಹಳ್ಳಿಯ ಜನಕ್ಕೆ ಆಡಳಿತವನ್ನು ತನ್ನ ಮಟ್ಟಿಗೆ ನಿರ್ವಹಿಸಿಕೊಳ್ಳುವ ಯೋಗ್ಯತೆಯೂ ಉಂಟೆಂಬುದನ್ನು ಮೊದಲು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

'ಹೀಗೆ ಹೊಸ ಆಡಳಿತಾಧಿಕಾರವೂ ಗ್ರಾಮಸಂಸ್ಥೆಗಳಿಗೆ ಪ್ರಾಪ್ತವಾದರೆ ಜೀವನವೆಂಬುದು ವಿಶಾಲವಾದ ಅಡಿಪಾಯವುಳ್ಳ, ಆದರೆ ತುದಿಯಲ್ಲಿ ಬಹಳ ಸಣ್ಣದಾದ" ಪಿರಮಿಡ್ಡಿನಂತೇನೂ ಆಗುವುದೆಂಬ ಭೀತಿಗೆ ಕಾರಣವಿಲ್ಲ. ಗಾಂಧೀಜಿಯವರು ಹೇಳುವಂತೆ "ಮಹಾಸಾಗರದಲ್ಲಿ ತಳದಿಂದಲೂ ಏಳುವ ಮಹಾತರಂಗವಲಯಗಳಂತೆ, ಪರಸ್ಪರ ಸಂಪರ್ಕವನ್ನು ಸರ್ವದಾ ಪಡೆವೇ ಇರುತ್ತವೆ— ರಾಷ್ಟ್ರದ ವಿವಿಧ ಸಮಾಜಗಳೆಲ್ಲವೂ ಎಲ್ಲಕ್ಕಿಂತ ಹೊರಗಿನ ತರಂಗವಲಯವು ಕೇಂದ್ರತರಂಗವನ್ನು ಹೊಡೆದು ಹಾಕುವುದಿಲ್ಲ. ಸುಂದರ ಸಮನ್ವಯವನ್ನೇ ಸಾಧಿಸಿಕೊಳ್ಳುತ್ತದೆ, ತನ್ನ ಶಕ್ತಿಯನ್ನು ಆ ಸಮನ್ವಯದಿಂದಲೇ ಹೆಚ್ಚಿಸಿಕೊಳ್ಳುತ್ತದೆ."

ಈ ಧ್ಯೇಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಭೂದಾನ, ಗ್ರಾಮದಾನ ಕ್ರಮಗಳಲ್ಲಿ ವಿಸ್ತರಣೆ, ಉತ್ಪಾದನೆಯ ಸಂವರ್ಧನೆ, ಸಹಜೀವನ ಸಹಕಾರಗಳ ಪೋಷಣೆ, ಗ್ರಾಮೋದ್ಯೋಗಗಳ ಸಂಚಾಲನೆ, ರಾಷ್ಟ್ರೀಯ ಯೋಜನೆಗಳಲ್ಲಿ ಉತ್ಸಾಹಪೂರ್ವಕ ಪ್ರವೃತ್ತಿ ಮುಂತಾದುವನ್ನು ಸಮರ್ಪಕವಾಗಿ ಸಾಧಿಸಲು ಯೋಜನಾ ಆಯೋಗದವರು ಗ್ರಾಮ ಪಂಚಾಯತಿಗಳ ಸಹಕಾರವನ್ನು ಅಗತ್ಯವೆಂದು ಭಾವಿಸಿರುವುದು ಪ್ರಗತಿಪರವಾದ ಸಾಧನೆಯೆಂದು ಹೇಳಲಡ್ಡಿಯಿಲ್ಲ. ಅಧಿಕಾರಿ ವರ್ಗದವರಿಗೂ ಸರಪಂಚರಿಗೂ ಘರ್ಷಣೆಗಳಾಗುವ ಬದಲು ಪರಸ್ಪರ ಸಹಕಾರ ಹೆಚ್ಚುವಂತೆ ಹೊಸ ವ್ಯವಸ್ಥೆಯನ್ನು ರೂಪಿಸುವುದೇ ನವಭಾರತದ ಮೂಲ ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಅಂಗವಾಗಿ ಶಾಲೆಗಳ ಶಿಕ್ಷಣಕ್ರಮದಲ್ಲೇ ಆಡಳಿತ ಕ್ರಮಗಳ ಮೂಲಪಾಠಗಳನ್ನೂ ಕಲಿಸುವ ವ್ಯವಸ್ಥೆ ಕೂಡ ಅಗತ್ಯ.

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ—ಶೋಧದ ಕಾದಂಬರಿ

ಬರೆದವರು. ವೀರಪ್ಪ ಯಂಗಟಿ, ಬಿ ಎ, ಎಲ್ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಾಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಪಡಿಸಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ನಿವರಿಸಲ್ಪಟ್ಟಿವೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ **ಬೆಲೆ: ರೂ 1—12—0 (1·75)**

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಪ್ರಕೃತಿಯ ಪ್ರಯೋಗಾಲಯ

(೯ನೇ ಪುಟದಿಂದ)

ಗಳ ದಾಳಿಗಳು ಆಗದಂತೆ ಕಾಪಾಡಿಕೊಂಡರೆ ಪ್ರಕೃತಿದೇವಿ ಅಭಿವೃದ್ಧಿಗೊಳ್ಳುವಳು. ನಮ್ಮ ಭವಿಷ್ಯ ಹರ್ಷಪೂರಿತವಾಗುತ್ತದೆ.

ಅಗೋ ಅಲ್ಲಿ ನಿಂತಿರುವ ಪೋಪ್ಲಾರ್ ಮರವನ್ನು ಮನುಷ್ಯರಾರೂ ತಂದು ನೆಡಲಿಲ್ಲ. ಪ್ರಕೃತಿಯ ಪ್ರಯೋಗಶಾಲೆಯಲ್ಲಿ ಅದು ಬೆಳೆದು ನಿಂತಿದೆ. ಇಲ್ಲಿ ಯಾವುದನ್ನೂ ಯಾರೂ ನೆಟ್ಟು ಬೆಳೆಸಲಿಲ್ಲ. ಕಣಿವೆಯ ಮೇಲು ಭಾಗದಲ್ಲಿರುವ ಪೋಪ್ಲಾರ್ ವೃಕ್ಷಗಳ ಬೀಜಗಳು ನದಿಯ ತನಕ ಜಾರಿಕೊಂಡು ಬರುತ್ತವೆ. ಅಲ್ಲಿಂದ ಮುಂದಕ್ಕೆ ಪ್ರವಾಹವೋ ಅಥವ ಗಾಳಿಯೋ ಮೇಲಕ್ಕೆ ಹಾರಿಸಿಕೊಂಡು ಹೋಗಬಹುದು. ಅಂತು ಹೊಸ ಬೀಜ ಆಶ್ರಯಪಡೆದು ಮೊಳೆತು ಸಸಿಯಾಗಬಲ್ಲದು. ಅದು ಖಚಿತ.

ಸಂರಕ್ಷಿತ ಪ್ರದೇಶದಾಚೆಗೆ ಭತ್ತದ ಗದ್ದೆಗಳ ಬಳಿ ಹಿಮಾಲಯ ಜಾತಿಯ ಓಕ್ ಮರಗಳನ್ನು ಕಾಣಬಹುದು. ಎಲೆಗಳ ಅಂಚಿನಲ್ಲಿ ಹರಿತವಾದ ಸಣ್ಣ ಸಣ್ಣ ಹಲ್ಲುಗಳಿರುವುದರಿಂದ ಹಾಲಿ ಮರಕ್ಕೂ ಓಕ್ ಮರಕ್ಕೂ ವ್ಯತ್ಯಾಸ ಕಾಣುತ್ತದೆ. ರೈತಾಪಿ ಜನರು ಗಿಡಮರಗಳ ಎಲೆಗಳನ್ನೆಲ್ಲ ತರಿದು ದನಗಳಿಗೂ ಎತ್ತುಗಳಿಗೂ ಮೇಯಿಸುತ್ತಾರೆ. ಕಾರಣ ಅವು ಪುಷ್ಟಿಕರವಾದ ಎಲೆಗಳು ಎಳೆಯ ಮರಗಳಿಗಂತೂ ರೈತರ ಕೀಟಲೆ ಕೋಟಲೆಗಳು ತಪ್ಪುವುದಿಲ್ಲ. ಹೀಗಾಗಿ ಕಣಿವೆಯ ಕೆಳಭಾಗದಲ್ಲಿರುವ ಓಕ್ ಮರಗಳಿಗೆಲ್ಲ ಏನೋ ಚರ್ಮವ್ಯಾಧಿ. ಅವೆಲ್ಲ ಬರಡು ಬರಡು ಮರಗಳು. ಬೇಲಿಯ ಒಳಗಿನ ಖಾಸಗಿ ಜಾಗದ ಎತ್ತರ ಇಳುಕಲಿನ ಓಕ್ ಮರಗಳೆಲ್ಲ ಹಚ್ಚ ಹಸುರಾಗಿರುತ್ತವೆ.

ವ್ಯಾಕುಲತೆಯ ಉಗ್ರ ಕೋಪದ ವಾಹಿನಿಯಲ್ಲಿ ಕೌಶಿಕರು ಮುಂದುವರಿಸಿದರು. ಹೀಗೆ: "ಮಾನವನ ಅಡ್ಡಿ ತಡೆ, ತಂಟೆ ತಗಾದೆಗಳಿಲ್ಲದಿದ್ದರೆ ಪ್ರಕೃತಿ ಮಾತೆಯ ಧಾರಾಳತ್ವವು ರೂಪುಗೊಳ್ಳುತ್ತದೆ. ಆಕೆಯ ವರಪ್ರಸಾದಗಳಿಂದ ಭೂಮಿಯ ಉಡಿಮಡಿಲೆಲ್ಲ ತುಂಬಿ ಚೆಲ್ಲಾಡುತ್ತದೆ."

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಠಿರಖು ಠೇವಣಾತಿ.

3		ತಿಂಗಳಿಗೆ	3%
4 ರಿಂದ	6	,,	3½%
7 ,,	12	,,	4%
13 ,,	24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%

ಕರೆಂಟ್ ಎಕೌಂಟು ½%

The Moolky Bank, Ltd.

ವ್ಯಕ್ತಿ ಹಾಗೂ ಯೋಜನೆ

(೧೦ನೇ ಪುಟದಿಂದ)

ಜನೆಯ ಯಶಸ್ವೀ ಕಾರ್ಯಾಚರಣೆಯಾಗಬೇಕಾದರೆ ವ್ಯಕ್ತಿಗಳ ಬಲ ಗಟ್ಟಿಯಾಗಬೇಕು. ಧನ, ಕನಕ, ಶಕ್ತಿ, ಜ್ಞಾನ, ಧೈರ್ಯ, ಹುಮ್ಮಸ್ಸು, ಆಶೆಗಳಿಂದಲೇ ಇದು ಸಾಧ್ಯವಾಗಬಲ್ಲುದು. ಇದೆಲ್ಲ ಸಾಧ್ಯವಾಗಬೇಕಾದರೆ ವ್ಯಕ್ತಿಗಳ ವೈಯಕ್ತಿಕ ಜೀವನ ಮಟ್ಟ ಸುಲಭವಾಗಬೇಕು. ಇದೇ ಇಂದಿನ ಮಹಾಪ್ರಶ್ನೆ.

ವ್ಯಕ್ತಿಗಳ ಜೀವನ ಮಟ್ಟ ಸುಲಭವಾಗಬೇಕೆಂಬ ಕಾರಣದಿಂದಲೇ ರಾಷ್ಟ್ರೀಯ ಬೃಹತ್ ಯೋಜನೆಗಳನ್ನು ಕೈಕೊಳ್ಳಲಾಗಿದೆಯೆಂದು ಹೇಳಲಾಗುತ್ತಿದ್ದರೂ ಅದು ಸಫಲವಾಗಬೇಕಾದರೆ ಜನತೆಯ ಮನಸ್ಥಿತಿಯನ್ನು ನಾವು ಅವಲೋಕಿಸಬೇಕು. ಜನತೆಯ ಹತ್ತಿರ ಹೆಚ್ಚಿನ ಶಿಕ್ಷಣಕ್ಕೆ ಆಸ್ಪದವಿಲ್ಲ; ಹೊಟ್ಟೆಗೆ ಸರಿಯಾಗಿ ಕೂಳಿಲ್ಲ ಇಂತಹ ಪ್ರಸಂಗದಲ್ಲಿ ಕೇವಲ ದೊಡ್ಡ ಯೋಜನೆಗಳ ಬಗ್ಗೆ ಹೇಳಿ ಅನೇಕ ವಸ್ತು ವಡವೆಗಳ ಮೇಲೆಯಾಗಲೀ, ಜನತೆಯ ಮಹತ್ವದ ಅವಶ್ಯಕತೆಗಳ ಮೇಲೆಯಾಗಲೀ ಹೆಚ್ಚಿನ ಕರ ಬೀಳುವಂತೆ

"ಕರಗುತ್ತಿರುವ ನದಿಯ ದಡ, ಬೋಳಾದ ಗುಡ್ಡದ ಇಳುಕಲು, ಕುಗ್ಗುತ್ತಿರುವ ಭತ್ತದ ಗದ್ದೆ ಮುಂತಾದುವೆಲ್ಲ ಮಾನವನ ದುರ್ನಡತೆಯ ಫಲ".

'ಪ್ರಕೃತಿಯ ಪ್ರಯೋಗ ಶಾಲೆ'ಯ ಗುಟ್ಟುಗಳನ್ನು ಈಗ ನಾವು ಅರಿತುಕೊಳ್ಳುತ್ತಿದ್ದೇವೆ. ಮುಳ್ಳು ತಂತಿಯ ಬೇಲಿಯಷ್ಟು ರಕ್ಷಣೆ ಸಾಕು. ಆಗ ಪ್ರಕೃತಿಯ ಕಾರ್ಯಕಲಾಪಗಳನ್ನು ನೀವೇ ನಿಬ್ಬೆರಗಾಗಿ ನೋಡುವಿರಿ.

ನಮ್ಮ ನಾಡಿನ ರೈತರೆಲ್ಲ ಎಚ್ಚೆತ್ತುಕೊಂಡು ಪ್ರಕೃತಿ ದೇವಿಗೆ ಸಹಾಯಕರಾಗಬೇಕು. ಅವರು ವಿದ್ಯಾವಂತರಾಗಿ ಕುಶಲ ಕಾರ್ಯದಕ್ಷರಾಗಬೇಕು. ಪರಸ್ಪರ ಸಹಾಯ ಶಕ್ತಿಯಲ್ಲಿ ನಂಬಿಕೆ ಹೆಚ್ಚಬೇಕು. ಪಂಚವಾರ್ಷಿಕ ಯೋಜನೆಯು ರೂಪುಗೊಳ್ಳಬೇಕು.

ಆಗ ನೆಲದ ಅಂತಃಸಾರ ಸತ್ವವು ವ್ಯವಸಾಯದ ಫಸಲಿಗೆ ತೇಜಸ್ಸನ್ನು ಹೆಚ್ಚಿಸುತ್ತದೆ. ಇಟ್ಟು ವ್ಯವಸಾಯಕ್ಕೆ ಗಮನ ಹೆಚ್ಚಾಗುತ್ತದೆ ಪ್ರಕೃತಿಯ ಕಾರ್ಯಾಲಯದಲ್ಲಿ ಅಡ್ಡಿತಡೆಯಿಲ್ಲದೆ ಕೆಲಸ ಜರುಗುತ್ತವೆ. ಆಗ ಪ್ರಕೃತಿಯ ಪ್ರಯೋಗ ಶಾಲೆಯ ಮಹತ್ವವು ಖಚಿತವಾಗಿ ಕಂಡು ಬರುತ್ತದೆ. ಭೂಮಿಯ ಮಡಿಲು ಪ್ರಕೃತಿಯ ವರ ಪ್ರಸಾದಗಳಿಂದ ತುಂಬಿ ಚೆಲ್ಲಾಡುತ್ತದೆ.

(ಮೂಲ: ಇಂಗ್ಲಿಷ್ ಯೋಜನಾ)

ಮಾಡಿದರೆ ಜನ ನಿರಾಶರಾಗುವರಲ್ಲದೆ ವಿಶ್ವಾಸವಿಟ್ಟ ಸರಕಾರದ ಮೇಲೆ ಸಿಡಿದೇಳುವರು. ನಮ್ಮ ಕಷ್ಟವನ್ನು ನೋಡದ ಈ ಯೋಜನೆಗಳನ್ನು ತೆಗೆದುಕೊಂಡು ಮಾಡುವುದೇನು? ಎಂದು ನಿರುತ್ಸಾಹಿಗಳಾಗುವರು. ಸರಕಾರದ ಕಾರ್ಯಗಳಲ್ಲಿ ಸಹಕರಿಸಲು ಹಿಂಜರಿಯುವರು ರಾಷ್ಟ್ರೀಯ ಅಭಿಮಾನ ಅಳಿಯಬಹುದು. ಪಕ್ಷ ಪಂಗಡಗಳು ಹೆಚ್ಚಾಗಿ ವಾದವಿವಾದ, ಬಡಿದಾಟಗಳಿಗೆ ಆಸ್ಪದವಾಗಿ ರಾಷ್ಟ್ರ ವಿಭಜನೆಗೂ ಕಾರಣವಾಗಬಹುದು. ಅಂದರೆ ಯೋಜನೆಗಳ ಅವಶ್ಯಕತೆಯಿಲ್ಲವೆಂದಲ್ಲ; ಅದು ರಾಷ್ಟ್ರದ ಅಹಿತವನ್ನು ಬಯಸುತ್ತದೆಂಬ ಅರ್ಥವೂ ಅಲ್ಲ. ಆದರೆ ಹಾಸಿಗೆಯಿದ್ದಷ್ಟು ಕಾಲು ಚಾಚಬೇಕಾಗುವುದೆಂಬುದನ್ನು ಅರಿತುಕೊಳ್ಳಬೇಕಾದುದೇ ಮಹತ್ವವಾಗಿದೆ. ಅರ್ಥಾತ್, ಪ್ರಥಮತಃ ರಾಷ್ಟ್ರದ ಅಡಿಪಾಯವಾಗಿರುವ ವ್ಯಕ್ತಿಗಳ ಜೀವನಮಟ್ಟ ಸುಧಾರಿಸಬೇಕು. ಜೀವನಮಟ್ಟ ಸುಧಾರಿಸಬೇಕಾದರೆ ಸದ್ಯದ ಪರಿಸ್ಥಿತಿಯಲ್ಲಿ ಆರ್ಥಿಕ ನೆರವು ಬೇಕು. ವೈಯಕ್ತಿಕ ಆರ್ಥಿಕ ಉತ್ಥಾನತೆಯೇ ವ್ಯಕ್ತಿಗಳ ಯಶಸ್ವೀ ಜೀವನದ ರಹಸ್ಯವಾಗಿದೆ.

ವೈಯಕ್ತಿಕ ಆರ್ಥಿಕ ಉತ್ಥಾನವಾದರೆ ರಾಷ್ಟ್ರೀಯ ಯೋಜನೆಗಳ ಅವಶ್ಯಕತೆಯಾದರೂ ಏನು? ಎಂದೂ ಕೇಳಬಹುದು. ಆರ್ಥಿಕ ಉತ್ಥಾನವೆಂದರೆ ಜೀವನದ ಉತ್ಥಾನವಲ್ಲವೆಂಬುದನ್ನು ನಾವು ಲಕ್ಷ್ಯದಲ್ಲಿಡಬೇಕು. ಆರ್ಥಿಕ ಸಹಾಯ ಜೀವನದ ಕೆಲವಂಶಗಳಲ್ಲಿ ಮಾತ್ರ ಸಹಕರಿಸಬಲ್ಲುದು. ಆದರೆ ಜೀವನದ ಸರ್ವತೋಮುಖ ಬೆಳವಣಿಗೆ, ಸುಖ-ಶಾಂತಿಗಳಿಗಾಗಿ ಯೋಜನೆಗಳೇ ಅತ್ಯವಶ್ಯಕವಾದುವುಗಳು. ಹಿಂದಿನ ಕಾಲದಲ್ಲಿಯ ಜನರ ಆರ್ಥಿಕ ಪರಿಸ್ಥಿತಿ ಅತ್ಯುತ್ತಮವಾಗಿದ್ದುದರಿಂದಲೇ ಅವರು ಇಂದಿನ ವೈಜ್ಞಾನಿಕ ಕ್ಷೇತ್ರದ ವಿಶಾಲ ದೃಷ್ಟಿಯಲ್ಲಿ ಮುಂಬರಲನುಕೂಲವಾಯಿತು. ಈ ಕಾರಣದಿಂದಲೇ ಇಂದಿನ ಜನ ಹೊಸ ಹೊಸ ರುಚಿಗಳಿಗಂಟಿಕೊಂಡು ಹೊಸ ಹೊಸ ಮೋಜು, ಮನರಂಜನೆಗಳನ್ನು ಮಾಡುತ್ತಿದ್ದಾರೆ. ಜೀವನಕ್ಕೆ ಹೊಸಕಳೆಯನ್ನುಂಟು ಮಾಡಿಕೊಟ್ಟಿದ್ದಾರೆ. ಮನುಷ್ಯನ ಆಶೆಗಳಿಗೆ ಸಮಾಪ್ತಿಯೇ ಇಲ್ಲ. ಬರುವ ನವೀನ ಸರಕು-ಪದಾರ್ಥಗಳು ಮನುಷ್ಯನ ಆಶೆಗೆ ಹೆಚ್ಚಿನ ಪುಟಕೊಡುತ್ತವೆ. ಆರ್ಥಿಕ ಪರಿಸ್ಥಿತಿ ಅನುಕೂಲವಿದ್ದಾತನಿಗೆ ಈ ಹೊಸ ರುಚಿಗಳ ಸೇವನೆಯನ್ನು ಅನುಭೋಗಿಸಲು ಶಕ್ಯವಾಗುತ್ತದೆ. ಇದರಿಂದ ಹೊಸ ಪದಾರ್ಥಗಳಿಗೂ ಬೇಡಿಕೆ ಹೆಚ್ಚುವುದಲ್ಲದೆ ಹೊಸ ಸಂಶೋಧನೆಗಳಿಗೆ ಪುಟ ದೊರಕುತ್ತದೆ. ಅಲ್ಲದೆ ಸಾವಕಾಶವಾದರೂ ಸಫಲತೆಯ ಯಶಸ್ಸು ಜನರ ಬಿಚ್ಚುಮನಸ್ಸಿನ ಹಾರ್ದಿಕ ಸ್ವಾಗತವನ್ನು ಗಳಿಸುತ್ತದೆ. ಅನಂತರವೇ ರಾಷ್ಟ್ರೀಯ ಬೃಹತ್ ಯೋಜನೆಗಳು ಯಾರ ಕೃಪಾಕಟಾಕ್ಷದ ಕಟುವಿಮರ್ಶೆಗೂ ಒಳಗಾಗದೆ ಯಶಸ್ವಿಯಾಗುತ್ತವೆ. ಬೃಹತ್ ಯೋಜನೆಗಳ ಮಹತ್ವವೂ ಹೆಚ್ಚುತ್ತದೆ. ನಿಕಟ ಸಂಬಂಧವನ್ನು ಸದ್ಯದ ಸಮಯದಲ್ಲಿ ಗಳಿಸಿದ ಸರಕಾರ ಹಾಗೂ ಜನತೆಯಲ್ಲಿ ಸುಖ, ಶಾಂತಿ, ನೆಮ್ಮದಿಗಳಿರಬೇಕಾದರೆ ಈ ಬೃಹತ್ ಯೋಜನೆಗಳ ಅವಶ್ಯಕತೆ ಇದೆ. ಆದರೆ ಬೃಹತ್ ಯೋಜನೆಗಳ ತಯಾರಿಕೆಗೆ ಮೊದಲು ವ್ಯಕ್ತಿಗಳ ಆರ್ಥಿಕ ಮಟ್ಟ ಸುಧಾರಿಸಬೇಕು. ಇದರಿಂದ ಯೋಜನೆಗಳಿಗೂ ನೆರವು ಸಿಗುವುದು ಶಕ್ಯವಿದೆ.

ವೈಯಕ್ತಿಕ ಆರ್ಥಿಕ ಪರಿಸ್ಥಿತಿ ಸುಧಾರಿಸಲ್ಪಟ್ಟರೆ ಯೋಜನೆಗಳಿಗೆ ನೆರವು ಸಿಗುವ ವಿಷಯದಲ್ಲಿ ಸಂಶಯ ಬರಬಹುದು. ಆದರೆ ಜನತೆಗೆ ಆರ್ಥಿಕ ವಿಷಯದಲ್ಲಿ ತೊಂದರೆಯಿಲ್ಲದಿರುವ ಕಾರಣದಿಂದ ಅವರು ಕೆಲವೊಂದು ವಿಷಯಗಳಲ್ಲಿ ಸ್ವಲತ್ತನ್ನು ತೋರಿ ಸರಕಾರೀ ಯೋಜನೆಗಳಲ್ಲಿ ಸಹಕರಿಸಬಲ್ಲರು. ಆರ್ಥಿಕ ಪರಿಸ್ಥಿತಿಯು ಜೀವನದ ಕೆಲವೊಂದು ಅವಶ್ಯಕ ಪದಾರ್ಥಗಳಿಗಾಗಿ ಮಾತ್ರ ನೆರವಾಗುತ್ತದೆ. ಆದರೆ ರಾಷ್ಟ್ರೀಯ ಯೋಜನೆಗಳು ಜೀವನದ ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿ ಸುಖ, ಶಾಂತಿ, ನೆಮ್ಮದಿಗಳಿಗೆ ನೆರವನ್ನೀಡುತ್ತದೆ. ಮನುಷ್ಯ ಬಾಳಬೇಕು, ಬಾಳಲಿಕ್ಕೆ ದುಡಿಯಬೇಕು, ದುಡಿತದ ಫಲವನ್ನು ಅನುಭೋಗಿಸಬೇಕು. ಈ ತತ್ವವೇ ರಾಷ್ಟ್ರೀಯ ಕ್ಷೇತ್ರದ ಹೆಸರಿನಲ್ಲಿ ಮುಂದೊರೆಯಬಲ್ಲುದೇ ಹೊರತು, ಮೊದಲು ದುಡಿತದ ಫಲವನ್ನು ಅನುಭೋಗಿಸುವ ಸಾಧ್ಯತೆ ಇರುವುದಿಲ್ಲ. ಇವುಗಳನ್ನೆಲ್ಲ ಅರಿತು, ಮೊದಲು ನಮ್ಮ ಆರ್ಥಿಕ ಸ್ಥಿತಿಯತ್ತ ಗಮನವಿತ್ತು ದುಡಿಯಲಾರಂಭಿಸಿದರೆ ನಮ್ಮ ಅವಶ್ಯಕತೆಗಳೂ ದೊರೆಯುವುದಲ್ಲದೆ ನಮ್ಮ ರಾಷ್ಟ್ರೀಯ ಯೋಜನೆಗಳೂ ಕೆಲದಿನಗಳಲ್ಲೇ ಮೂರ್ತಸ್ವರೂಪ ಹೊಂದಿ, ಭಾವೀ ಜೀವನವನ್ನು ಪ್ರಕಾಶಮಾನವಾಗಿ ಬೆಳಗುವ ಬಾಳದೀವಿಗೆಯನ್ನಾಗಿ ಮಾಡಲು ಶಕ್ಯವಾಗಬಲ್ಲುದೆಂದು ವಿಶ್ವಾಸದಿಂದ ನುಡಿಯಬಹುದು.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ......ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಶಿವರಾಮ ಕಾರಂತರ

ಅತ್ಯಪೂರ್ವ ಗ್ರಂಥ—

ಯಕ್ಷಗಾನ ಬಯಲಾಟ

ಇದೀಗ ಪ್ರಕಟವಾಗಿದೆ

ಬಣ್ಣಬಣ್ಣದ ಚಿತ್ರಗಳು!

ಬೆಲೆ ರೂ. 6/-

ವಿ. ಪಿ. ಕಳಿಸುವುದಿಲ್ಲ-

ರೂ.7/- ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು

ನಮ್ಮಲ್ಲಿ ಸಿಗುವ ಇತರ ಪುಸ್ತಕಗಳ ಕೆಟಲಾಗಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಏಳಿರೆಚ್ಚರಗೊಳಿರಿ ×

(ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ, ಎಂ. ಎ.)

[ಬ್ರಾಹ್ಮಣಸ್ತ್ರೀ ತತ್ವಶಾಸ್ತ್ರ ಜಿಜ್ಞಾಸುಗಳಿಗೆ ನಚಿಕೇತೋಪಾಖ್ಯಾನವು ಅತೀವ ಮಾರ್ಗದರ್ಶಕವಾಗಿದೆ. ತಂದೆಯ ಆದೇಶದಂತೆ ಯಮಲೋಕಕ್ಕೆ ಹೋದ ನಚಿಕೇತನು ಯಮನಿಂದ ಮೂರು ವರಗಳನ್ನು ಪೊಂದಿ, ಅದರಂತೆ, ತಂದೆಯ ಮನಃ ಪ್ರಸನ್ನತೆಯನ್ನು ಮೊದಲನೆಯವರದಲ್ಲೂ, ಅಗ್ನಿ ವಿದ್ಯೆಯನ್ನು ಎರಡನೆಯವರದಲ್ಲೂ ಪಡೆದು, ಮೂರನೆಯವರದಲ್ಲಿ 'ಮರಣದಿಂ ಮುಂದೇನು?' ಎಂಬ ಪ್ರಶ್ನೆ ಕೇಳಲು, ಯಮಧರ್ಮನು ಆತನನ್ನು ಸಾಕಷ್ಟು ಪರೀಕ್ಷಿಸಿದನಂತರ ಆತ್ಮತತ್ವಜ್ಞಾನವನ್ನು ಉಪದೇಶಿಸುವನು. ಶರೀರವೇ ರಥ, ಆತ್ಮನೇ ರಥದ ಒಡೆಯ, ಬುದ್ಧಿಯೇ ಸಾರಥಿ, ಮನಸ್ಸೇ ಕಡಿವಾಣ, ಇಂದ್ರಿಯಗಳೇ ಕುದುರೆಗಳು ಎಂಬ ರೂಪಕರೂಪದಲ್ಲಿ ಮನುಷ್ಯನು ವಿವೇಕದಿಂದ ಪರಮಪದವನ್ನು ಪಡೆಯುವುದಾಗಿ ಈ ಕೆಳಗಿನ ಮಾತುಗಳಲ್ಲಿ ಯಮನು ಬೋಧಿಸುವನು.]

"ಸುಕೃತ ಫಲವನ್ನುಂಡು, ಹೃದಯದಾಕಾಶವನು
ಬುದ್ಧಿಯನು ಹೊಕ್ಕವರು ಯಿರ್ವರಿಲ್ಲಿ;
೧— ನೆಳಲು ಬೆಳಕುಗಳೆಂದವರ ಬ್ರಹ್ಮವಿದರು ಪಂ
ಚಾಗ್ನಿಗಳು ನಾಚಿಕೇತರ್ಪೇಳ್ವರಂತೆ.
"ಅವುದಾಗಿಹುದೊ ಸೇತುವೆಯು ಯಾಜ್ಞಿಕರಿಂಗೆ
ಆನಾಚಿಕೇತಯಜ್ಞಕೆ ಶಕ್ತರಾವು;
೨— ಭಯರಹಿತಪಾರವಾವುದೊ ತಿ ತೀರ್ಷುಗಳಿಂಗೆ
ಅಕ್ಷರ ಪರಬ್ರಹ್ಮವದ ತಿಳಿವೆವು.
"ಆತ್ಮನಂ ರಥಿಕನೆಂದರಿವುದು, ಶರೀರವನು
ರಥವೆಂದು ನಚಿಕೇತ ನೀನೆಣಿಸುದು;
೩— ಬುದ್ಧಿಯಂ ವಿದ್ಧಿ ಸಾರಥಿಯೆಂದು ಮನವನ್ನು
ಕಡಿವಾಣವೆಂದರಿತು ಕೊಂಡಿರುವುದು.
ಇಂದ್ರಿಯಗಳಂ ಹಯಗಳೆನ್ನುವರು ತಿಳಿದವರು,
ಗೋಚರಗಳವುಗಳಿಗೆ ವಿಷಯಂಗಳು;
೪— ದೇಹವಿಂದ್ರಿಯ ಮನಸ್ಸುಗಳಿಂದ ಕೂಡಿರುವ
ಆತ್ಮನಂ-ಭೋಕ್ತೃವೆಂದೆನ್ನುತಿಹರು.
"ಅವನೆಂದೆಂದಿಗುಂ ತಡೆ ಹಿಡಿಯದಿಹ ಮನದಿ,
ತಿಳಿಗೇಡಿಯೆಂದೆನಿಸಿ ಕೊಂಡಿರ್ಪನು;
೫— ಇಂದ್ರಿಯಗಳಾತಂಗೆ ವಶ್ಯವೆನಿಸವು ನಿಜದಿ
ದುಷ್ಟಾಶ್ವವೆಂತು ಸಾರಥಿಗಂತೆ ಹದನು
"ಅವನೆಂದೆಂದಿಗುಂ ತಡೆ ಹಿಡಿದಿರುವ ಮನದಿ,
ತಿಳುವಳಿಕೆಯವನೆನೆ ಪೆಸರ್ವಡೆದನು;
೬— ಇಂದ್ರಿಯಂಗಳವಂಗೆ ವಶ್ಯವೆನಿಸವು ನಿಜದಿ,
ಉತ್ತಮಾಶ್ವಗಳ ಸಾರಥಿ ಹೊಡೆವನು.
"ತಿಳುವಳಿಕೆಯಿಲ್ಲದೆಯು, ಸುವಿಚಾರವಿಲ್ಲದೆಯು,
ಶುಚಿಯಿಲ್ಲದೆಯು ಸದಾ ಯಾವನಿರುವಂ;
೭— ಆ ನೆಲೆಯನವ ಹೊಂದಲಾರ ನದುಮಲ್ಲದೆಯು
ಹುಟ್ಟುಸಾವಿನ ಸುಳಿಗೆ ಸಿಲುಕುತಿರುವಂ.
"ತಿಳುವಳಿಕೆಯುಳ್ಳವನು, ಸುವಿಚಾರವುಳ್ಳವನು,
ಶುಚಿಯುಳ್ಳವನು ಸದಾ ಯಾವನಿರುವಂ;
೮— ಆ ನೆಲೆಯನವ ಹೊಂದ ಬಲ್ಲನದು ಮಲ್ಲದೆಯು
ಹುಟ್ಟು ಸಾವಿನ ಸುಳಿಗೆ ಸಿಲುಕದಿರುವಂ.
"ಮತಿಯ ಸಾರಥಿಮಾಡಿ, ಮನವ ಹಗ್ಗವ ಮಾಡಿ,
ಆವನರ ನಡೆಸುವನು—ಮುನ್ನಡೆವನ ;
೯— ಅವನು ಯಾತ್ರೆಯ ಪಾರಗಾಣುವನು —ಕೃಪೆಗೂಡಿ
ವಿಷ್ಣುವಿನ ಪರಮಪದವಂ ಪಡೆವನು.
"ಪಂಚಭೂತಗಳು ಪಂಚೇಂದ್ರಿಯಗಳಿಂ ಶ್ರೇಷ್ಠ
ಮನವು ಶ್ರೇಷ್ಠವು ಪಂಚಭೂತಂಗಳಿಂ;
೧೦— ಮನಸಿನಿಂದಲು ಮತ್ತೆ ಬುದ್ಧಿಯೆನಿತೋ ಶ್ರೇಷ್ಠ,
ಬುದ್ಧಿಯಿಂ ಶ್ರೇಷ್ಠ ಮಹದಾತ್ಮ ನಿಜದಿಂ.
"ಮಹದಾತ್ಮಗಿಂತಲವ್ಯಕ್ತವದು ಶ್ರೇಷ್ಠವೆನೆ
ಶ್ರೇಷ್ಠನವ್ಯಕ್ತದಿಂ ಪರಮ ಪುರುಷಂ;
೧೧— ಪರಮ ಪುರುಷನಿಗಿಂತ ಮಿಗಿಲೆಂಬುದಿಲ್ಲ, ನೆನೆ
ಅದೆ ಕೊನೆಯು ಮೇಣ್ ಪರಾಗತಿನಿಶ್ಚಯಂ.
"ಸರ್ವ ಭೂತಗಳಲ್ಲಿ ಗೂಢನಾಗಿರುತಿರುವ
ಆತ್ಮನೀತಂ ಬೆಳಗುವಾತನಲ್ಲ;
೧೨— ಸೂಕ್ಷ್ಮದರ್ಶಿಗಳಿಂಗೆ ಯೋಗಾಗ್ರವಾಗಿರುವ
ಸೂಕ್ಷ್ಮಬುದ್ಧಿಯ ಬಲದಿ ಕಾಣದಿಲ್ಲ.
"ಪ್ರಾಜ್ಞನೆನಿಸಿರ್ಪವಂ ಮಾತನ್ನು ಮನದಲ್ಲಿ
ಮನವನ್ನು ಜ್ಞಾನದಲಿ, ಮೇಣ್ ಜ್ಞಾನವಂ—
೧೩— ಮಹದಾತ್ಮನಲ್ಲಿ, ಮಹದಾತ್ಮನಂ ಶಾಂತಾತ್ಮ
ನಲ್ಲಿ ಸೇರಿಸಿ ಸಂಯಮವ ಸಾಧಿಪಂ.
"ಏಳಿರೆಚ್ಚರಗೊಳಿರಿ: ಶ್ರೇಷ್ಠರಂ ಸೇರುತಲಿ
ತಿಳಿದುಕೊಳ್ಳಿರಿ ನೆಲೆಯನಾತ್ಮನಿರವಂ;
೧೪— ಹರಿತಕತ್ತಿಯ ಧಾರೆಯಂತೆ, ತುಳಿಯುವ ದಾರಿ
ಕಷ್ಟವೆಂಬರು ಬಲ್ಲವರು, ಗಮ್ಯವಂ.
"ಕೇಳದಿಹ, ಕಾಣದಿಹ, ಮುಟ್ಟದಿಹ, ಮೂಸದಿಹ,
ಸವಿಯದಿಹ, ಸವೆಯದಿಹ, ತುದಿ ಮೊದಲಿರದಿಹ,
೧೫— ಹಿರಿದರಿಂದಾಚೆಗಿಹ, ಚಲಿಸದಿಹ ಬ್ರಹ್ಮನನು
ತಿಳಿದವನು—ಮೃತ್ಯುಮುಖದಿಂ ಮುಕ್ತನು.
"ಧರ್ಮನಿಂದಿಂತು ಬೋಧಿತವಿದು ಸನಾತನಂ
೧೬— ನಾಚಿಕೇತಾಖ್ಯಾನಮಂ ಪೇಳ್ವವಂ
ಕೇಳ್ವವಂ ಕೂಡ-ಮೇಧಾವಿಯಾಗುವನವಂ
ಬ್ರಹ್ಮಲೋಕದಿ ಮಹಿಮೆಯಂ ತಾಳುವಂ.
"ಆವನೀ ಪರಮ ಗೂಢವ ಶುದ್ಧ ಭಾವದಲಿ
ಕೇಳಿಪನೊ, ಬ್ರಹ್ಮವಿದ್ಸಭೆಯಲ್ಲಿ ಮೇಣು
೧೭— ಶ್ರಾದ್ಧಕಾಲದಲಿ; ಆತಗನಂತ ಫಲವಹುದು
ಆತಂಗನಂತ ಫಲವಹುದು—ತಾನು."

× ಕಠೋಪನಿಷತ್ ಮೂರನೆಯವಲ್ಲಿ.

ಊರ್ಧ್ವ ಯತ್ನ

ಇತ್ತುದಿಲ್ಲ ಇಲ್ಲದುಂಟು ಎತ್ತಲೆಂತೊ ನಡೆಯುವೆ
ಹೆತ್ತದೊರೆಯ ಲೀಲೆ ಜಗವ ಕುಣಿತವೆಂದು ಹಾಡುವೆ.....ಧೃಪದ.

ಹೊತ್ತಿಗೊಂದು ಕುತ್ತು ಬಂದು ತೊಡರಿನಲ್ಲಿ ಮಿಡುಕುವೆ
ಸುತ್ತಿ ಬಂದ ಜಾಲದಲ್ಲಿ ಎಣಿಸಿ ತಿಣಿಕಿ ನೆನೆಸುವೆ
ಹೊತ್ತುಕೊಂಡ ಮೊದಲಕೆಲಸ ನೆನೆಸಿ ಗತಿಯನೆಣಿಸುವೆ
ಕತ್ತಲಲ್ಲಿ ದಾರಿ ಬಿಡದೆ ಬೆಳಕನರಸಿ ಹೆಣಗುವೆ.......

ಇತ್ತ ಹೃದಯ-ದಗ್ಧ-ಭಾವ ಮಾತೆಯಡಿಯೊಳೆರಗುವೆ
ಮತ್ತೆ ಅಡಿಯನಿರಿಸಿ ಮುಂದೆ ಪ್ರಭುವಿನಲ್ಲಿ ಬೇಡುವೆ
ಎತ್ತಲೆತ್ತಲಿರಲಿ ನನ್ನ ರೀತಿ-ನೀತಿ ಬಾಳುವೆ
ಮತ್ತೆ ಕುಲಸೇವೆ ಸಲಿಸಿ ಅಂತೊ ಇಂತೊ ಚಲಿಸುವೆ......

ಮೆತ್ತಗಿರಲಿ ಜಗದವೊಡಲು ಸೊಗದಿ ನಗಲಿ ಬಾಳುವೆ
ಕುತ್ತನುಣಲು, ಹೊತ್ತು ಕೊಳಲು, ಸತ್ತೆ ಸಿರಿಗೆ ಜಗಳವೆ...?
ಹತ್ತಿ ಜಗಳ ಕಮರದಿರಲಿ ನನ್ನ ಭಾವ-ಜೀವವೆ...!
ಸೊತ್ತು—ಯತ್ನ! ಜಗಳ ಮೆಟ್ಟಿ, ಕುಶ ದಯದಿ ನಡೆಯುವೆ.......

—ವಸಂತರಾವ ರಂಗರಾವ ಕುಲಕರ್ಣಿ.


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!
P. DEVEE & CO. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಹರ್ಷನ ಕಾಲದ ಭಾರತ

(೭ನೇ ಪುಟದಿಂದ)

ವೇದಗಳೂ, ಷಡ್ದರ್ಶನಗಳೂ, ವ್ಯಾಕರಣಾದಿ ಶಾಸ್ತ್ರ ಗ್ರಂಥಗಳೂ ಕಂಠ ಪಾಠವಾಗಿದ್ದುವಂತೆ! ಈ ವಿದ್ಯಾಲಯದ ಅಧ್ಯಕ್ಷನಾದ ಶೀಲಭದ್ರನು ಯೋಗ ಶಾಸ್ತ್ರದಲ್ಲೇ ಭರತ ಖಂಡದಲ್ಲೆಲ್ಲಾ ಅದ್ವಿತೀಯನಾಗಿದ್ದನು. ಇವನ ಮುಂದುಗಡೆ ಉತ್ತರ ಭಾರತದ ಚಕ್ರವರ್ತಿ ಶ್ರೀ ಹರ್ಷನೂ ಪಾದಚಾರಿಯಾಗಿ ನಡೆದುಬರುತ್ತಿದ್ದನು. ಅಂದಿನ ಸರಕಾರಕ್ಕೆ ವಿದ್ಯೆಯ ಮತ್ತು ಅಧ್ಯಾಪಕರ ಮೇಲಿದ್ದ ಗೌರವವನ್ನು ಇಂದಿನ ದಿನದ ಉಪಾಧ್ಯಾಯರ ದುರ್ದೆಶೆಗಳೊಡನೆ ಹೋಲಿಸಿನೋಡಿ. ಹ್ಯುವನತ್ಸಾಂಗ ಈ ಶೀಲಭದ್ರನ ಶಿಷ್ಯನಾಗಿ, ಇವನ ಪದತಲದಲ್ಲಿ ಕುಳಿತು ಮಹಾಯಾನ ಶಾಖೆಯ ಸಿದ್ಧಾಂತಗಳನ್ನೂ, ಯೋಗ ಶಾಸ್ತ್ರವನ್ನೂ ಚೆನ್ನಾಗಿ ಅಭ್ಯಸಮಾಡಿದನು.

ಶೀಲಭದ್ರನು ಮೊದಲು ಜಾತಿಯಲ್ಲಿ ಬ್ರಾಹ್ಮಣನಾಗಿದ್ದು, ಈ ವಿದ್ಯಾಲಯದ ಮೊದಲನೆಯ ಅಧ್ಯಕ್ಷನಾಗಿದ್ದ ಧರ್ಮಪಾಲನಲ್ಲಿ ಶಿಕ್ಷಣಹೊಂದಿದ ಮೇಲೆ ಬೌದ್ಧಮತವನ್ನು ಸೇರಿದನು. ಈ ಶೀಲಭದ್ರನನ್ನು ಆ ಕಾಲದಲ್ಲೂ ವಾದದಲ್ಲಿ ಗೆದ್ದವರೇ ಇರಲಿಲ್ಲವಂತೆ! ಇವನೊಮ್ಮೆ ಉದ್ದಾಮ ಪಂಡಿತನನ್ನು ವಾದದಲ್ಲಿ ಗೆಲ್ಲಲು, ಮಗಧ ರಾಜನು ಒಂದು ಗ್ರಾಮವನ್ನೇ ಶೀಲಭದ್ರನಿಗೆ ಕೊಡುವೆನೆಂದನು. ಶೀಲಭದ್ರನು ರಾಜನ ಒತ್ತಾಯವನ್ನು ಮೀರಲಾರದೆ ಆ ಬಹುಮಾನವನ್ನು ಸ್ವೀಕರಿಸಿ ಅದನ್ನು ಧರ್ಮಕಾರ್ಯಕ್ಕಾಗಿ ಮೀಸಲು ತೆಗೆದಿಟ್ಟನಂತೆ! ಇದು ಅಂದಿನ ಉಪಾಧ್ಯಾಯರಲ್ಲಿದ್ದ ನಿಸ್ವಾರ್ಥ ಬುದ್ಧಿ! ಪರರ ಸುಖಕ್ಕಾಗಿ ಕೊರಗುವ ದಿವ್ಯ ಸ್ವಭಾವ! ಇದು ಅಂದಿನ ಶಾಲೆಗಳಲ್ಲಿ ದೊರೆತ ನೈತಿಕ ಶಿಕ್ಷಣದ ಪ್ರಭಾವ. ಇಂದಿನ ಶಾಲೆಗಳಲ್ಲಿ ನೈತಿಕ ಪಾಠವನ್ನು ಮಾಡುವಷ್ಟು ಹುರುಳೂ ತಿರುಳೂ ಉಪಾಧ್ಯಾಯರಲ್ಲಿಲ್ಲದೆ ಆ ಪಾಠದ ಬದಲಿಗೆ ವಿಶೇಷವಾಗಿ ಇಂಗ್ಲಿಷು ಪಾಠವನ್ನೇ ಮಾಡುತ್ತಿದ್ದಾರೆ. ಇದರಿಂದ ಇಂದಿನ ವಿದ್ಯಾರ್ಥಿಗಳ ಉದ್ಧಾರವಾಗುವುದು ಹೇಗೆ?

ಹರ್ಷದೇವನ ದಿನಗಳಲ್ಲಿ ಪಂಡಿತನೆನ್ನುವುದು ನಾಲಂದ ವಿದ್ಯಾಲಯದ ಅಧ್ಯಕ್ಷನಿಗೆ ಮಾತ್ರವಾಗಿತ್ತು. ಅಂದು ಆ ವಿದ್ಯಾಲಯಗಳಲ್ಲಿ ಶಿಷ್ಯರು ಪ್ರಶ್ನೆಕೇಳುವುದು ಮತ್ತು ಉಪಾಧ್ಯಾಯರು ಅದಕ್ಕೆ ಉತ್ತರ ಹೇಳುವುದು—ಇದೇ ಅಂದಿನ ಶಿಕ್ಷಣಕ್ರಮವಾಗಿತ್ತು. ಆಗ ಬೆಳಗಿನಿಂದ ರಾತ್ರಿಯವರೆಗೆ ಶಾಲಾ ಸಮಯವಾಗಿತ್ತು. ಆಗಿನ ಉಪಾಧ್ಯಾಯರು ಶಿಷ್ಯರನ್ನು ಶೀಲವಂತರನ್ನಾಗಿ ಮಾಡಲು ತುಂಬಾ ಪ್ರಯತ್ನಪಡುತ್ತಿದ್ದರು. ವಿದ್ಯಾರ್ಥಿಗಳೂ ಉಪಾಧ್ಯಾಯರೂ ಶಿಸ್ತನ್ನು ಪಾಲಿಸಬೇಕಿತ್ತು. ಅಧ್ಯಾಪಕರೇ ಶಾಲೆಯ ಶಿಸ್ತನ್ನು ಮೀರಬೇಕಾಗಿ ಬಂದಲ್ಲಿ ಅಧ್ಯಾಪಕ ವೃತ್ತಿಯನ್ನೇ ತ್ಯಜಿಸಿ ಆ ವಿದ್ಯಾಲಯದಿಂದ ಹೊರಟುಹೋಗುತ್ತಿದ್ದರು.

ನಾಲಂದ ವಿದ್ಯಾಲಯಕ್ಕೆ ಹರ್ಷನ ಕಾಲದಲ್ಲೇ ಇನ್ನೂರು ಗ್ರಾಮಗಳು ಸೇರಿದ್ದು ಅದರ ಉತ್ಪತ್ತಿಯೆಲ್ಲಾ ವಿದ್ಯಾಲಯದ ವಿನಿಯೋಗಕ್ಕಾಗಿಯೇ ವೆಚ್ಚವಾಗುತ್ತಿತ್ತು. ಈ ವಿದ್ಯಾಲಯದ ಸುತ್ತಲೂ ಸುಂದರ ಉದ್ಯಾನಗಳಿದ್ದು, ಅದರಲ್ಲಿ ಕಮಲ, ಕಲ್ಹಾರ, ನೈದಿಲೆಗಳು ಅರಳಿ ಗಂಧವಾಹನ ಮೂಲಕ ಭ್ರಮರಗಳಿಗೆ ಆಮಂತ್ರಣವೀಯುವ, ಬಂದ ಭ್ರಮರಗಳನ್ನು ಸ್ವಾಗತಿಸುವ ಮನೋಹರವಾದ ದೃಶ್ಯವು ಅವರ್ಣನೀಯವಾದುದಾಗಿತ್ತು.

ಪ್ರತಿವರ್ಷವೂ ಹರ್ಷನು ಕವಿಗಳಿಗೆ ಮತ್ತು ಕಲಾವಿದರಿಗೆ ಸಂಭಾವನೆಯನ್ನು ಕೊಡಲು ತನ್ನ ವರಮಾನದಿಂದ ಕಾಲಂಶವನ್ನು ತೆಗೆದಿಡುತ್ತಿದ್ದನು. ಒಮ್ಮೆ ಶ್ರೀ ಹರ್ಷನು ಒರಿಸ್ಸಾದ ಜಯಸೇನನೆಂಬ ವಿದ್ವಾಂಸನ ವಿದ್ವತ್ತಿಗೆ ಬೆರಗಾಗಿ ಅವನಿಗೆ ಎಂಬತ್ತು ಗ್ರಾಮಗಳನ್ನು ಬಹುಮಾನವಾಗಿ ಇತ್ತನಂತೆ! ಆ ಸರಳ ಜೀವನದ ನಿಸ್ವಾರ್ಥಿಯಾದ ವಿದ್ವಚ್ಛಿರೋಮಣಿಯು ಐಹಿಕ ಜೀವನದ ಆಶೆಯನ್ನು ಹೆಚ್ಚಿಸುವ ಇವನ್ನೆಲ್ಲಾ ಕಾಲು ಕಸದಂತೆ ಕಂಡನು. ಅಂದಮೇಲೆ ಅಂದಿನ ವಿದ್ಯಾವಂತರು ಲಂಚಕ್ಕೆ ಕೈನೀಡುತ್ತಿರಲಿಲ್ಲವೆಂದು ಪ್ರತ್ಯೇಕ ಹೇಳಬೇಕೆ?

ಹರ್ಷನ ಆಸ್ಥಾನದಲ್ಲಿ ಬಾಣ, ಧಾವಕರೆಂಬ ಮಹಾ ಕವಿಗಳಿದ್ದಿದ್ದರು. ಅಲ್ಲದೆ ಆ ಕಾಲದಲ್ಲೇ ಬಾಣನ ಮೈದುನನಾದ ಮಯೂರ ಕವಿಯೂ, ವರ್ಣನೆಯಲ್ಲಿ ಸಮರ್ಥನಾದ ವೇಣೀ ಭಾರತನೂ, ಕಿರಾತಾರ್ಜುನೀಯ ಕಾವ್ಯವನ್ನು ಬರೆದ ಭಾರವಿಯೂ, ಶತಕತ್ರಯಗಳನ್ನು ಬರೆದ ಭರ್ತೃಹರಿಯೂ ಬಾಳಿದ್ದು ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರಾಗಿದ್ದರು. ಇನ್ನು ಶಿಶುಪಾಲವಧ ಕಾವ್ಯವನ್ನು ಬರೆದ ಮಾಘನೂ, ಜಾನಕೀಹರಣ ನಾಟಕವನ್ನು ಬರೆದ ಕುಮಾರದಾಸನೂ ಇದೇ ಕಾಲದವರೆಂದೇ ಹೇಳುತ್ತಾರೆ. ಶ್ರೀ ಹರ್ಷನೇ ಸ್ವತಃ ಪ್ರಸಿದ್ಧ ವಿದ್ವಾಂಸನೂ ಕವಿಯೂ ಆಗಿದ್ದನು. ಇವನಿಂದ ರತ್ನಾವಳೀ, ಪ್ರಿಯದರ್ಶಿಕಾ, ನಾಗಾನಂದವೆಂಬ ಮೂರು ನಾಟಕಗಳು ಬರೆಯಲ್ಪಟ್ಟುವು. ಇವುಗಳನ್ನು ಇವನ ಆಸ್ಥಾನಕವಿಯಾದ ಧಾವಕನು ಬರೆದನೆಂದೂ ಹೇಳುವವರಿದ್ದಾರೆ. ಅಂತೂ ಹರ್ಷನು ಕವಿತಾಮಾಧುರಿಯ ಹರ್ಷನಾಗಿದ್ದನೆನ್ನುವುದರಲ್ಲಿ ಸಂದೇಹವಿಲ್ಲ.

ಹರ್ಷನ ಕಾಲದಲ್ಲಿ ಭಾರತದಲ್ಲಿ ವರ್ಣಾಶ್ರಮ ವ್ಯವಸ್ಥೆಗಳು ಚೆನ್ನಾಗಿದ್ದುವು. ಚೀನಾ ಯಾತ್ರಿಕನಾದ ಹ್ಯುವನತ್ಸಾಂಗನು ಭಾರತದಲ್ಲಿ ಸಂಚಾರಮಾಡಿದ ತನ್ನ ಅನುಭವಗಳ ವಿವರಣೆಯಲ್ಲಿ—'ಭಾರತದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರಿದ್ದಾರೆ. ಇವರಲ್ಲಿ ಬ್ರಾಹ್ಮಣರು ತಮ್ಮ ಸಿದ್ಧಾಂತಗಳನ್ನು ಆಚರಣೆಗೆತಂದು ಸಂಯಮಿಗಳಾಗಿದ್ದಾರೆ. ಕ್ಷತ್ರಿಯರು ಪ್ರಜೆಗಳಿಗೆ ಉಪಕಾರ ಮಾಡುವ ಮತ್ತು ದಯೆದೋರುವ ಉದ್ದೇಶದಿಂದಲೇ ರಾಜ್ಯಭಾರ ಮಾಡುತ್ತಿದ್ದಾರೆ. ವೈಶ್ಯರು ವ್ಯಾಪಾರಿಗಳು, ಶೂದ್ರರು ಕೃಷಿಕರು" (ವಾಟರ್ಸ್ ಆನ್ ಯುವನ್ ಚ್ವಾಂಗ್ ಪುಸ್ತಕ-೧-೧೬೮) ಆ ಕಾಲದಲ್ಲಿ ಕೃಷಿಯಲ್ಲದೆ ಕೈಗಾರಿಕೆಯೂ ಶೂದ್ರರ ಕೈಯಲ್ಲೇ ಇದ್ದಂತೆ ತೋರುತ್ತದೆ. ಬಹುಶಃ ಬೌದ್ಧ ಮತ್ತು ಜೈನರ ಅಹಿಂಸಾವಾದವೇ ಕೃಷಿ ಕೈಗಾರಿಕೆಗಳನ್ನು ಶೂದ್ರರ ಮಡಿಲಿಗೆ ಹಾಕಿರಬಹುದೆಂದು ತೋರುತ್ತದೆ. ಆಗ ಉತ್ತರಭಾರತದಲ್ಲಿ ಬೌದ್ಧರ ಪ್ರಾಬಲ್ಯವೂ, ದಕ್ಷಿಣ ಮತ್ತು ಪಶ್ಚಿಮದಲ್ಲಿ ಜೈನರ ಪ್ರಾಬಲ್ಯವೂ ಹೆಚ್ಚಿತ್ತು.

ಆಗ ನಾಲ್ಕು ವರ್ಣಗಳಲ್ಲಿ ಉಪಜಾತಿಗಳಿದ್ದಂತೆ ಕಾಣಿಸುವುದಿಲ್ಲ. ನಾಲ್ಕು ವರ್ಣಗಳಲ್ಲೂ ಸ್ನೇಹ ಸೌಹಾರ್ದಗಳು ಚೆನ್ನಾಗಿದ್ದುವು. ಈ ನಾಲ್ಕು ವರ್ಣಗಳಲ್ಲದೆ ಆಗ ಅಂತ್ಯಜರೆಂಬ ಐದನೆಯ ಒಂದು ವರ್ಣವೂ ಇತ್ತು. ಸವರ್ಣ ವಿವಾಹವು ಆ ಕಾಲದಲ್ಲಿ ಶ್ರೇಷ್ಠವಾಗಿದ್ದರೂ, ನೀಚ ವರ್ಣದ ಕನ್ಯೆಯೊಡನೆ ವಿವಾಹವಾಗುವ ಕ್ರಮವೂ ಅಪರೂಪವಾಗಿತ್ತು. ಮಹಾಕವಿ ಬಾಣನು ಬ್ರಾಹ್ಮಣನಿಂದ ಶೂದ್ರಸ್ತ್ರೀಯಲ್ಲಿ ಹುಟ್ಟಿದ ಪಾರಶರ ಪುತ್ರನ ಉಲ್ಲೇಖನ ಮಾಡಿರುವನು. ಅಂದು ಕ್ಷೌರಿಕ, ಕೃಷಿಕ, ಆಗಸ, ಗೌಳಿಗ ಮೊದಲಾದವರು ಕೈಯಿಂದ ಕೊಟ್ಟ ಆಹಾರವನ್ನು ಉಂಡಲ್ಲಿ ದೋಷವಿಲ್ಲವೆಂದು ಆ ಕಾಲದಲ್ಲೇ ರಚಿತವಾದ ವ್ಯಾಸಸ್ಮೃತಿಯಲ್ಲಿ ಹೇಳಿದೆ. ಆಗ ಅಸ್ಪೃಶ್ಯರು ಊರ ಹೊರಗೇ ಇದ್ದು, ಊರೊಳಗೆ ಬರುವಾಗ ಮಾರ್ಗದಿಂದ ಸ್ವಲ್ಪದೂರ ನಡೆಯುತ್ತಿದ್ದರು. (ವಾಟರ್ಸ್ ಆನ್ ಯುವನಚ್ವಾಂಗ್ ಪುಸ್ತಕ ೧-೧೪೭).

ಆಗಿನ ಜನರು ಶಿವ, ವಿಷ್ಣು, ಬ್ರಹ್ಮ, ಸೂರ್ಯ, ಚಂದ್ರ ಮತ್ತು ಗಣಪತಿಯ ಆರಾಧನೆ ಮಾಡುತ್ತಿದ್ದುದಲ್ಲದೆ, ಭೂತ, ಭೇತಾಳಗಳ ಸ್ವಾಧೀನಕ್ಕಾಗಿ ಪ್ರಯತ್ನಪಡುತ್ತಿದ್ದರು. ಸಿದ್ಧಿಗಳ ಸಂಪಾದನೆಗಾಗಿ ಪಶುಬಲಿ, ನರಬಲಿಯೂ ರೂಢಿಯಲ್ಲಿತ್ತು. ಬಾಣನಿಂದ ರಚಿತವಾದ ಹರ್ಷಚರಿತೆಯಲ್ಲಿ ಮತ್ತು ಶ್ರೀ ಹರ್ಷನಿರ್ಮಿತವಾದ ಮಾಲತೀ ಮಾಧವದಲ್ಲಿ ಕಾಪಾಲಿಕರ ಉಲ್ಲೇಖ ಮತ್ತು ನರಬಲಿಯ ಸೂಚನೆಗಳಿವೆ. ಆ ಕಾಲದಲ್ಲಿ ಒಂದೇ ಕುಟುಂಬಕ್ಕೆ ಸೇರಿದ್ದ ಒಬ್ಬ ಬೌದ್ಧ ಮತ್ತೊಬ್ಬ ಜೈನ ಇನ್ನೊಬ್ಬನು ಹಿಂದುವಾಗಿರುತ್ತಿದ್ದನು.

ಆ ದಿನಗಳಲ್ಲಿ ಜನರಿಗೆ ಮಂತ್ರವಾದದಲ್ಲಿ ವಿಶ್ವಾಸವಿತ್ತು. ಕೃಷಿ, ಶಿಲ್ಪ, ವಾಣಿಜ್ಯಗಳು ಅಭಿವೃದ್ಧಿಯಲ್ಲಿದ್ದು ಜನರ ಆರ್ಥಿಕ ಸ್ಥಿತಿಯು ಚೆನ್ನಾಗಿತ್ತು. ಶ್ರೀಮಂತರು ವೇಶ್ಯೆಯರನ್ನಿಟ್ಟುಕೊಳ್ಳುವುದು ನಿಷೇಧವಾಗಿರಲಿಲ್ಲ. ಜೂಜು ರೂಢಿಯಲ್ಲಿತ್ತು. ದೊಡ್ಡ ದೊಡ್ಡ ಹಡಗುಗಳಿಂದ ದೂರ ದೂರ ಸಮುದ್ರ ಪ್ರಯಾಣಮಾಡುತ್ತಿದ್ದರು. ಪಶುಪಕ್ಷಿಗಳ ಜೂಜು ಜನರಿಗೆ ಪ್ರಿಯವಾಗಿತ್ತು. ಆಗಾಗ ಜಾತ್ರೆಗಳು ಜರಗುತ್ತಿದ್ದುವು. ಆಗ ಭಾಸ, ಕಾಳಿದಾಸರ ನಾಟಕಗಳು ಪ್ರಚಾರದಲ್ಲಿದ್ದುವು. ಜನರ ಮನಸ್ಸಂತೋಷಕ್ಕಾಗಿ ಸಂಗೀತ ಶಾಲೆ, ನಾಟಕ ಶಾಲೆ ಮತ್ತು ಚಿತ್ರಶಾಲೆಗಳಿದ್ದುವು. ಜನರು ಹಲವು ಅಂತಸ್ತುಗಳುಳ್ಳ ಮನೆಗಳಲ್ಲಿ ವಾಸಿಸುತ್ತಿದ್ದರು.

ಹ್ಯುವನತ್ಸಾಂಗನು ಆ ಕಾಲದ ಜನರು ಹತ್ತಿ, ರೇಶ್ಮೆ ಮತ್ತು ಉಣ್ಣೆಬಟ್ಟೆಗಳನ್ನು ಉಪಯೋಗಿಸುತ್ತಿದ್ದರೆನ್ನುವನು. ಬಾಣನು ಹರ್ಷ ಚರಿತದಲ್ಲಿ 'ನಿಶ್ವಾಸ ಹಾರ್ಯೈಃ,' 'ಸ್ಪರ್ಶಾನುಮೇಯೈಃ,' 'ನಿರ್ಮೋಕನಿಭೈಃ' ಎಂದು ಬಟ್ಟೆಗಳನ್ನು ವರ್ಣನೆ ಮಾಡಿರುವುದರಿಂದ ಉತ್ತಮವಾದ ಬಟ್ಟೆಗಳು ನಿರ್ಮಾಣವಾಗುತ್ತಿದ್ದುವೆನ್ನಲು ಸಂದೇಹವಿಲ್ಲ. ಆಗ ಉತ್ತಮವಾದ ರೇಶ್ಮೆ ಬಟ್ಟೆಗಳನ್ನೂ, ಹತ್ತಿಯ ನೂಲು ಮತ್ತು ರೇಶ್ಮೆಯ ನೂಲುಗಳಿಂದ ರಚಿತವಾದ ಕೌಶೇಯಕಗಳೆಂಬ ಬಟ್ಟೆಗಳನ್ನೂ, ನಾರಿನ ನೂಲುಗಳಿಂದ ರಚಿತವಾದ ಕ್ಷೌಮಗಳೆಂಬ ಬಟ್ಟೆಗಳನ್ನೂ, ಕಂಬಳಿಗಳನ್ನೂ ಹೊರದೇಶಗಳಿಗೆ ರಫ್ತು ಮಾಡುತ್ತಿದ್ದರು. ಆಗ ಪುರುಷರೂ ಆಭರಣಗಳನ್ನು ಧರಿಸುತ್ತಿದ್ದರು. (ವಾ. ಆ. ಯುವನ್‌ಚ್ವಾಂಗ್ ಪು. ೧—೫೧).

ಭಾರತೀಯರು ನೈರ್ಮಲ್ಯಪ್ರಿಯರು. ಊಟದ ಮೊದಲು ಸ್ನಾನ ಮಾಡುತ್ತಾರೆ. ಎಂಜಲನ್ನವನ್ನು ಯಾರಿಗೂ ಕೊಡರು. ಮಣ್ಣು ಮತ್ತು ಮರದ ಪಾತ್ರೆಗಳನ್ನು ಒಂದೇ ಬಾರಿಗೆ ಉಪಯೋಗಿಸುವರು. ತಾಮ್ರ ಮತ್ತು ಚಿನ್ನದ ಪಾತ್ರೆಗಳನ್ನು ತೊಳೆದು ಪುನಃ ಪುನಃ ಉಪಯೋಗಿಸುವರು (ವಾ. ಆ. ಯುವನಚ್ವಾಂಗ್ ಪು. ೧-೧೫೨) ಎಂದು ಹ್ಯುವೆನತ್ಸಾಂಗನು ಹೇಳುತ್ತಾನೆ.

ಆಗ ಮಾಂಸ ಭಕ್ಷಣೆಯು ಅಪರೂಪವಾಗಿತ್ತು. ಇದಕ್ಕೆ ಬೌದ್ಧ ಜೈನ ಮತಗಳ ಪ್ರಾಬಲ್ಯವೇ ಕಾರಣವೆನ್ನಬಹುದು. ಆಗ ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ಮಾಂಸಾಹಾರ ಕಡಿಮೆಯಾಗಿತ್ತು. ಅಂದು ಕ್ಷತ್ರಿಯರಲ್ಲದೆ ಬ್ರಾಹ್ಮಣರಲ್ಲಿ ಮದ್ಯಪಾನವಿರಲಿಲ್ಲ.

ಹರ್ಷದೇವನ ದಿನಗಳಲ್ಲಿ ಮನುವು ಹೇಳಿದ ಎಂಟು ವಿಧದ ವಿವಾಹಗಳಲ್ಲಿ ಬ್ರಾಹ್ಮ, ದೈವ, ಆರ್ಷ, ಪ್ರಾಜಾ

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪತ್ನ್ಯ ವಿವಾಹಗಳು ಮಾತ್ರ ಪ್ರಚಾರದಲ್ಲಿದ್ದವು. ಬಾಲ್ಯ ವಿವಾಹವು ಇನ್ನೂ ರೂಢಿಗೆ ಬಂದಿರಲಿಲ್ಲ. ಹರ್ಷನ ಸಹೋದರಿ ರಾಜ್ಯಶ್ರೀಯ ವಿವಾಹವು ತಾರುಣ್ಯದಲ್ಲಾಗಿತ್ತು. ಯಾಜ್ಞವಲ್ಕ್ಯಸ್ಮೃತಿ ಮತ್ತು ಪರಾಶರ ಸ್ಮೃತಿಯಲ್ಲಿ ವಿಧವಾ ವಿವಾಹದ ವಿಚಾರವು ಇರುವುದರಿಂದ ಆಗ ಅಪರೂಪವಾಗಿ ವಿಧವಾ ವಿವಾಹ ವಿದ್ಧಿಗಲೂಬಹುದು ಆದರೆ ಹ್ಯುವನತ್ಸಾಂಗನು ಮಾತ್ರ "ವಿಧವಾ ಸ್ತ್ರೀಯು ಇನ್ನೊಂದು ವಿವಾಹ ಮಾಡಿಕೊಳ್ಳುತ್ತಿದ್ದಿಲ್ಲ" ಎಂದಿರುವನು.

ಸ್ತ್ರೀಯರು ಆಗ ವಿದ್ಯಾಭ್ಯಾಸ ಮಾಡುತ್ತಿದ್ದರು. ಹರ್ಷನ ತಂಗಿ ರಾಜ್ಯಶ್ರೀಗೆ ದಿವಾಕರ ಮಿತ್ರನೆಂಬ ವಿದ್ವಾಂಸನು ಗುರುವಾಗಿ ಬೌದ್ಧ ಸಿದ್ಧಾಂತಗಳ ಶಿಕ್ಷಣ ಕೊಟ್ಟಿದ್ದನು. ಹಲವು ಸ್ತ್ರೀಯರು ಆ ಕಾಲದಲ್ಲಿ ಬೌದ್ಧ ಸಿದ್ಧಾಂತದ ಜ್ಞಾನಮಾಡಿಕೊಂಡು ಬೌದ್ಧ ಭಿಕ್ಷುಕಿಯರಾಗಿದ್ದರು. ಇವರೆಲ್ಲಾ ವಿದ್ಯಾವತಿಯರಾಗಿದ್ದರು. ಆಗಿನ ಕಾಲದ ನಾಟಕಗಳಲ್ಲಿನ ಸ್ತ್ರೀ ಪಾತ್ರಗಳು ಪ್ರಾಕೃತ್ಯದಲ್ಲಿ ಮಾತಾಡುತ್ತಿದುದರಿಂದ, ಆಗ ಸ್ತ್ರೀಯರಿಗೆ ಸಂಸ್ಕೃತವನ್ನು ಬಹುಶಃ ಕಲಿಸುತ್ತಿರಲಿಲ್ಲವೆಂದು ಊಹಿಸಲು ಸಾಧ್ಯವಿದೆ.

ಅಂದು ಪ್ರಜೆಗಳ ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವ್ಯವಹಾರಗಳೆಲ್ಲಾ ಗ್ರಾಮ ಪಂಚಾಯತುಗಳ ಮೂಲಕವೇ ಪರಿಹರಿಸಲ್ಪಡುತ್ತಿತ್ತು. ಅಂದು ಉಚ್ಚ ನಾಗರಿಕತೆಯು ಪ್ರಜೆಗಳಲ್ಲಿ ಕಾಣಿಸುತ್ತಿದ್ದರೂ, ಅಲ್ಲಲ್ಲಿ ಗುಲಾಮ ಪದ್ಧತಿಯೂ ಇದ್ದಂತೆ ತೋರುತ್ತದೆ. ಸು. ಆರನೆಯ ಶತಮಾನದ ಸ್ವಲ್ಪ ಹಿಂದು ಮುಂದೆ ರಚಿತವಾದ ಮನುಸ್ಮೃತಿ ಮತ್ತು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಈ ದಾಸ ಪದ್ಧತಿಯ ಕುರಿತು ಹೇಳಿದೆ. ಆದರೆ ಯುರೋಪು ದೇಶೀಯರು ಗುಲಾಮರ ಮೇಲೆ ನಡೆಸುತ್ತಿದ್ದ ಅತ್ಯಾಚಾರಗಳನ್ನು ಹರ್ಷನ ಕಾಲದಲ್ಲಿ ನಡೆಸದೆ, ಅವರನ್ನು ಸಭ್ಯರಂತೆ ಪರಿಗಣಿಸುತ್ತಿದ್ದುದರಿಂದ ಹ್ಯುವನತ್ಸಾಂಗ ಮೊದಲಾದ ಪ್ರವಾಸಿಕರು ಈ ಕುರಿತು ಎತ್ತಿ ಬರೆಯಲಿಲ್ಲ. ಈ ಇಪ್ಪತ್ತನೆಯ ಶತಮಾನದ ಉತ್ತರಾರ್ಧದಲ್ಲೂ ಮೂಡು ಪ್ರಾಂತದ ನಾಡವರ ಮತ್ತು ಅವರ ಒಕ್ಕಲ ಸಂಬಂಧವು ಪೂರ್ವದ ಗುಲಾಮಜೀವನವನ್ನು ಈಗಲೂ ನೆನಪಿಗೆ ತರುತ್ತಿವೆ!

ಆರು ಏಳನೆಯ ಶತಮಾನಗಳಲ್ಲಿ ಭಾರತದಲ್ಲಿ ೧೭-೧೮ನೆಯ ಶತಮಾನದಂತೆ ಭಯಂಕರ ರೂಪದಲ್ಲಿ ಸಹಗಮನವು ಪ್ರಚಾರದಲ್ಲಿಲ್ಲದಿದ್ದರೂ ಅಪರೂಪವಾಗಿ ಸ್ತ್ರೀಯರು ಸ್ವಂತ ಇಚ್ಛೆಯಿಂದ ಸಹಗಮನವಾಗುತ್ತಿದ್ದರು. ಹರ್ಷನ ತಾಯಿ ಯಶೋಮತಿಯೂ, ನೇಪಾಳ ರಾಜನಾದ ಧರ್ಮದೇವನ ಪತ್ನಿ ರಾಜ್ಯವತಿಯೂ ಸಹಗಮನವಾಗಿದ್ದರು. ರಾಜ್ಯಶ್ರೀಯು ಅದಕ್ಕಾಗಿ ಸಿದ್ಧಳಾಗಿದ್ದಳು ಮಾತ್ರ.

ಶ್ರೀ ಹರ್ಷನು ಚಕ್ರವರ್ತಿಯಾಗಿ ಆಳಿದರೂ ಅವನದು ನಿರಂಕುಶ ಪ್ರಭುತ್ವವಲ್ಲ. ಸಚಿವರ ಸಭೆಯ ಸೂಚನೆಯಂತೆಯೇ ರಾಜ್ಯಭಾರ ಮಾಡುತ್ತಿದ್ದನು. ಈ ಸಭೆಯನ್ನು ಮಂತ್ರಿ ಪರಿಷತ್ತೆನ್ನುತ್ತಿದ್ದರು. ಸಂಧಿ ವಿಗ್ರಹಗಳೂ ಈ ಪರಿಷತ್ತಿನ ಅಧೀನದಲ್ಲಿದ್ದವು. ಹರ್ಷನ ಅಣ್ಣ ರಾಜ್ಯವರ್ಧನನು ಈ ಮಂತ್ರಿ ಪರಿಷತ್ತಿನ ತಿಳಿಗೇಡಿತನದ ಸೂಚನೆಯಿಂದಲೇ ಮೃತಪಟ್ಟನು. ಈ ಪರಿಷತ್ತಿಗೆ ರಾಜನನ್ನು ಆರಿಸುವ ಅಧಿಕಾರವೂ ಇತ್ತು. ಶ್ರೀ ಹರ್ಷನಿಗೆ ಪಟ್ಟ ಕಟ್ಟುವ ಸೂಚನೆಯಿತ್ತವನು ಮುಖ್ಯಾಮಾತ್ಯನಾದ 'ಭಂಡಿ' ರಾಜಕುಮಾರನೆಂದು ಹ್ಯುವನತ್ಸಾಂಗನು ಹೇಳುತ್ತಾನೆ. ಆಗ ಯುದ್ಧವೂ ಶಾಂತಿಯೂ ಅವಂತಿಯೆಂಬ ಮಹಾ ಸಂಧಿ ವಿಗ್ರಹಾಧಿಕಾರಿಯ ಅಭಿಪ್ರಾಯದಂತೆ ನಡೆಯುತ್ತಿತ್ತು. ಪ್ರಭಾಕರವರ್ಧನನ ಕಾಲದಿಂದಲೂ ಹೆಸರುಪಡೆದಿದ್ದ ಸಿಂಹನಾದನೆಂಬ ಮಹಾವೀರನು ಹರ್ಷನ ಮುಖ್ಯ ಸೇನಾಪತಿಯಾಗಿದ್ದನು ಇವನೇ ಆ ಕಾಲದ ಉತ್ತರ ಭಾರತದ ಪ್ರಧಾನ ಸೇನಾಪತಿ. ಹರ್ಷನು ವಿಜಯ ಯಾತ್ರೆಯ ಮೊದಲು ಸಿಂಹನಾದನ ಪಾದಧೂಳಿಯನ್ನು ಮುಟ್ಟಿ ಪ್ರತಿಜ್ಞೆ ಮಾಡುತ್ತಿದ್ದನಂತೆ!

ಆ ಕಾಲದಲ್ಲಿ ದೇಶವನ್ನು ಭುಕ್ತಿಗಳಾಗಿಯೂ ಅವನ್ನು ವಿಷಯಗಳಾಗಿಯೂ ವಿಭಾಗಿಸುತ್ತಿದ್ದರು. ಹಲವು ಗ್ರಾಮಗಳು ಸೇರಿದರೆ ಒಂದು ವಿಷಯವಾಗುತ್ತಿತ್ತು. ಆಗ ಭುಕ್ತಿಯನ್ನು ಆಳುವವರಿಗೆ ದೇಶದ ಒಂದೊಂದು ಕಡೆಯಲ್ಲಿ ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದರು. ಇವರಿಗೆ ಭೋಗಿಕ, ರಾಷ್ಟ್ರೀಯ ರಾಜಸ್ಥಾನೀಯ, ಭೋಗಪತಿ, ರಾಷ್ಟ್ರಪತಿ ಮೊದಲಾದ ಹೆಸರುಗಳಿದ್ದರೂ ಹರ್ಷವರ್ಧನನ ರಾಜ್ಯದಲ್ಲಿ ಭುಕ್ತಿಯ ಒಡೆಯನಿಗೆ ಭೋಗಪತಿ, ಯೆನ್ನುತಿದ್ದರು. ಇದನ್ನು ಉಪರಿಕ ಮಹಾರಾಜಪದವಿಯೆನ್ನುವುದೂ ಇತ್ತು. ಈ ಭೋಗಪತಿ ಅಥವಾ ಉಪರಿಕ ಮಹಾರಾಜನ ಮೇಲೆ ಅಧಿಕಾರ ನಡೆಸುವುದು ಮಂತ್ರಿ ಪರಿಷತ್ತು ಮತ್ತು ಚಕ್ರವರ್ತಿ ಮಾತ್ರವಾಗಿದ್ದರು—

ಈಗಿನ ಗ್ರಾಮದ ಶ್ಯಾನುಭೋಗರಿಗೆ ಅಂದು ಸೀಮಾಪ್ರದಾಕರೆಂದೂ, ಪುಸ್ತಕಕೃತ್ತೆಂದೂ ಹೆಸರಿತ್ತು. ಭೂಮಿಯ ಅಳತೆ ಮುಂತಾದುವುಗಳ ಲೆಕ್ಕವನ್ನಿಟ್ಟುಕೊಳ್ಳುವವರೇ ಪುಸ್ತಕ ಕೃತ್ತರಾಗುತ್ತಿದ್ದರ. ಇನ್ನು ಇದೇ ರೀತಿ ಇಲಾಖೆಯಲ್ಲೇ ಸರ್ವಾಧ್ಯಕ್ಷರೆಂಬ ದೊಡ್ಡ ಅಧಿಕಾರಿಗಳೂ ಇದ್ದರು. ಪ್ರಜೆಗಳ ನೆಮ್ಮದಿಗೆ ಭಂಗ ತರುವ ಕಳ್ಳರು ಮೊದಲಾದವರನ್ನು ಹಿಡಿಯಲು ದಂಡಪಾಶಿಕರು, ದಂಡಕರು ಅಥವಾ ಚೌರೋದ್ಧರಣಿಕರೆಂಬ ಅಧಿಕಾರಿಗಳಿದ್ದರು, ರಾತ್ರಿಯ ಕಾವಲಿಗೆ ಗಂಡಸರಲ್ಲದೆ, ಯಾಮಚೇಟಿಯರೆಂಬ ಸ್ತ್ರೀ ಅಧಿಕಾರಿಗಳೂ ಇದ್ದರು.

ಆಗ ರಾಜದ್ರೋಹ ಮೊದಲಾದ ಮಹಾಪರಾಧಗಳಿಗೂ ಮರಣ ದಂಡನೆ ಇರಲಿಲ್ಲ. ದ್ರವ್ಯದಂಡ, ಕಾರಾಗೃಹವಾಸ, ದೇಶದ ಗಡಿಯಿಂದ ಹೊರ ಹಾಕುವುದೇ ಅಂದಿನ ಮಹಾ ಶಿಕ್ಷೆಗಳಾಗಿದ್ದುವು ಆಗ ಅಪರೂಪವಾಗಿ ಕಳ್ಳರ ಹಾವಳಿಯು ಇರುವುದಿತ್ತು. ಹ್ಯುವನತ್ಸಾಂಗನು ಸಿಂಧುನದೀ ತೀರದಲ್ಲಿ ಸಂಚರಿಸುತ್ತಿದ್ದಾಗ ಐವತ್ತು ಮಂದಿ ಕಳ್ಳರು ಅವನನ್ನು ಮುತ್ತಿ ಹಿಂಸೆಪಡಿಸಿದರಂತೆ!

ಹರ್ಷವರ್ಧನನು ಬೌದ್ಧ ಮತದಲ್ಲಿ ಮಹಾಯಾನ ಶಾಖೆಯ ಪಕ್ಷಪಾತಿಯಾಗಿದ್ದರೂ, ಉಳಿದ ಮತೀಯರನ್ನು ಪೀಡಿಸುತ್ತಿರಲಿಲ್ಲ. ಇವನಿಗೆ ಹ್ಯುವನತ್ಸಾಂಗನಲ್ಲಿ ಎಷ್ಟು ಗೌರವವಿತ್ತೆಂದರೆ—ಅವನ ಉಪದೇಶದ ಮೇಲೆ ಪೂರ್ವಪಕ್ಷ ಮಾಡುವ ಜನರ ನಾಲಗೆಯನ್ನು ಕತ್ತರಿಸಿ ಹಾಕುವೆನೆಂದು ನಿರೂಪ ಹೊರಡಿಸಿದ್ದನಂತೆ! ಐದು ವರ್ಷಕ್ಕೊಮ್ಮೆ ಹರ್ಷಚಕ್ರವರ್ತಿಯು ಗಂಗಾ ಯಮುನೆಗಳ ಸಂಗಮಸ್ಥಾನದಲ್ಲಿ—ಈಗ ಕುಂಭಮೇಳ ಜಾತ್ರೆಯಾಗುವಲ್ಲಿ—ಮೋಕ್ಷ ಪರಿಷತ್ತನ್ನು ಜರುಗಿಸಿ ಜನರ ದಾರಿದ್ರ್ಯವನ್ನು ಹೋಗಲಾಡಿಸಿ ಅವರ ನೈತಿಕ ಮಟ್ಟವನ್ನು ಮೇಲೆತ್ತಲು ಯತ್ನಿಸುತ್ತಿದ್ದನು ದಾರಿದ್ರ್ಯ ಮತ್ತು ಅನೀತಿಯೇ ದೇಶದಲ್ಲಿ ಅಶಾಂತಿ ಕಲಹಗಳಿಗೆ ಮುಖ್ಯ ಕಾರಣ ಆಗ ಪ್ರತಿ ಐದು ವರ್ಷಗಳಿಗೊಮ್ಮೆ ಶ್ರೀಹರ್ಷನು ದೇಶದ ಸಂದುಗೊಂದುಗಳಲ್ಲಿದ್ದ ಈ ಕಸವನ್ನು ಗುಡಿಸಿ ತೆಗೆಯುತ್ತಿದ್ದುದರಿಂದ ಆಗ ದೇಶದಲ್ಲಿ ನೆಮ್ಮದಿ, ಶಾಂತಿಗಳು ನೆಲಸಿದ್ದವು. ಜನಜೀವನವೂ ಸುಖಮಯವಾಗಿತ್ತು. ಆಗ ದಕ್ಷಿಣ ಭಾರತದಲ್ಲಿದ್ದ ಪುಲಿಕೇಶಿಯ ಸಾಮ್ರಾಜ್ಯವೂ ಪ್ರಜೆಗಳ ಶಾಂತಿ ಮತ್ತು ಸುಖ ಜೀವನದಲ್ಲಿ ಉತ್ತರ ಭಾರತದೊಂದಿಗೆ ಸ್ಪರ್ಧೆಗೆ ನಿಂತು ವಿಜಯಿಯಾಗಿತ್ತೆಂದ ಮೇಲೆ ಅಂದಿನ ಸಮಗ್ರ ಭಾರತದ ಜನಜೀವನದ ಕುರಿತು ಪುನಃ ಪುನಃ ಹೇಳುವುದು ಸುವರ್ಣದ ಯೋಗ್ಯತೆಯನ್ನು ಬಹುಮುಖವಾಗಿ ಹೊಗಳಿದಂತೆಯಲ್ಲವೆ? ಅಂದಿನ ಸುವರ್ಣ ಭಾರತದ ಸುವರ್ಣಾಕ್ಷರಗಳಿಂದ ಬರೆದಿಟ್ಟ ಸುವರ್ಣೇತಿಹಾಸವು ಇಂದೂ ಜನಜೀವನವನ್ನು ಸ್ವರ್ಣರಂಜಿತವಾಗುವಂತೆ ಮಾಡಲಾರದೆ?

ಮಹಿಳಾ ಸಾಹಿತ್ಯ! ನವೀನ ಪುಸ್ತಕ

ಕುಮಾರಿ ಪಿ. ಯಶೋದಾ ಅವರು ಬರೆದ

ಬಾಳಿನ ಬೆಳಕು

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ಬೆಳಕುಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)

ನವಯುಗ ಪ್ರೆಸ್, ಉಡುಪಿ.

ಗಣರಾಜ್ಯ ಗುಣರಾಜ್ಯವಾಗಲಿ

(೬ನೇ ಪುಟದಿಂದ)

ನಡೆಯುತ್ತಿವೆ ಎಂಬುದು. ಶಿಕ್ಷಣದ ಪರಿಣಾಮ ವಿರುದ್ಧ ರೀತಿಯಲ್ಲಿ ಆಗಿವೆ. ಸುಶಿಕ್ಷಿತರೆನಿಸಿಕೊಳ್ಳುವವರು ತಮ್ಮ ಶಿಕ್ಷಣದ ಫಾಯದೆಯನ್ನು ಈ ರೀತಿಯಿಂದ ದುರುಪಯೋಗಿಸಿಕೊಳ್ಳುತ್ತಿದ್ದಾರೆ. ಸೂಟು, ಬೂಟು ಹಾಕಿದಲ್ಲಿ ಯಾವದೇ ಅಪರಾಧವನ್ನು ದಕ್ಕಿಸಬಹುದು ಎಂಬ ಆತ್ಮ ವಿಶ್ವಾಸ ಅವರಿಗಾಗಿದೆ.

ಇಂದು ರೇಲ್ವೆಗಳಲ್ಲಿ ಟಿಕೀಟ ಇಲ್ಲದೇ ಪ್ರವಾಸ ಮಾಡುವವರಲ್ಲಿ ವಿದ್ಯಾವಂತರೇ ಹೆಚ್ಚು. ತಾವು ಮಾಡುವ ಮೋಸವು ಕೇವಲ ರೇಲ್ವೆ ಕಂಪನಿಗಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೆ, ರಾಷ್ಟ್ರದ ಜನತೆಗೆ ಎಂಬ ಕಲ್ಪನೆ ಅವರಿಗಿಲ್ಲ. ತಾವು ವಿದ್ಯಾವಂತರೆಂದು ತಮ್ಮ ಅಪರಾಧ ಬೆಳಕಿಗೆ ಬರಲಾರದು ಎಂಬ ಆತ್ಮ ವಿಶ್ವಾಸದಿಂದ ಅವರು ಈ ಅಪರಾಧಗಳನ್ನು ನಿರ್ಭಯದಿಂದ ಮಾಡುತ್ತಿರುವರು. ಆದರೆ ಈ ಮನೋವೃತ್ತಿ ದೇಶಕ್ಕೆ ಗಂಡಾಂತರ ಪ್ರಾಯವಾದದ್ದು ಹಾಗು ದೇಶದ ಜನತೆಗೆ ಕಲಂಕ ತರುವಂಥದು ಎಂಬುವದರಲ್ಲಿ ಸಂಶಯವಿಲ್ಲ.

ಇದರಂತೆಯೇ ಕಾಯದೆ ಭಂಗಮಾಡುವದರಲ್ಲಿಯೂ ಕಲಿತವರೇ ಮುಂದುವರೆದಿದ್ದಾರೆ. ಇಂಗ್ಲಿಷದಲ್ಲಿ ಒಂದು ಗಾದೆ ಮಾತಿದೆ. Law breaker runs behind the law maker. ಯಾವದೇ ಹೊಸ ಕಾಯ್ದೆ ಆದೊಡನೆ ಅದನ್ನು ಭಂಗಿಸಲು ಯಾವ ಉಪಾಯ ಹೂಡಬೇಕು ಅಥವಾ ಆ ಕಾಯ್ದೆಗೆ ಬೇರೆ ಯಾವ ಅರ್ಥಕೊಡಬಹುದು ಹಾಗು ಈ ಹೊಸ ಅರ್ಥದಿಂದ ಕಾಯ್ದೆಯನ್ನು ಸುಲಭರೀತಿಯಿಂದ ಭಂಗಮಾಡಲು ಸಾಧ್ಯವಾಗಬಹುದು ಎಂದು ಮುಂತಾಗಿ ವಿಚಾರಿಸುವದರಲ್ಲಿ ಕಲಿತವರದೇ ಹೆಚ್ಚಿನ ಪಾತ್ರ. ಅಜ್ಞಾನದಿಂದ ಕಾಯ್ದೆ ಭಂಗಮಾಡುವಕ್ಕೂ, ಉದ್ದೇಶ ಪೂರ್ವಕವಾಗಿ ಕಾಯ್ದೆ ಭಂಗಮಾಡುವದಕ್ಕೂ ಅಜಗಜಾಂತರವಿದೆ. ಮೊದಲನೆಯದು ದೇಶದ್ರೋಹವೆನಿಸದು ಆದರೆ ಎರಡನೆಯದು ದೇಶ ಘಾತಕವಾದದ್ದು. ಮೊದಲನೆಯದು ಕ್ಷಮ್ಯ ಆದರೆ ಎರಡನೆಯದು ಅಕ್ಷಮ್ಯವಷ್ಟೇ ಅಲ್ಲ, ಶಿಕ್ಷಾರ್ಹವಾದದ್ದು.

ಕಳ್ಳ ಪೇಟೆಯ ಮೂಲಕ ಜನತೆಯನ್ನು ಮೋಸಗೊಳಿಸಿ ಹಣಗಳಿಸುವದು ಹಾಗು ಜನತೆಯ ಅಜ್ಞಾನದ ಲಾಭಪಡೆದು ಒಂದಕ್ಕೆ ನಾಲ್ಕರಂತೆ ಹಣ ಸೆಳೆಯುವದು ಇವು ಸಾಮಾನ್ಯ ಸಂಗತಿಗಳಾಗಿವೆ. ದ್ವೇಷ ಅಸೂಯೆಗಳು ಮನೆಮಾತಾಗಿವೆ. ಕೊಲೆ ಸುಲಿಗೆಗೆ ಮಹತ್ವವೇ ಇಲ್ಲದಂತಾಗಿದೆ. ಇವೆಲ್ಲವುಗಳನ್ನು ಒಳಗೆ ಹುದುಗಿಸಿಕೊಂಡು ನಾವು ಆಚರಿಸುವ ಸ್ವಾತಂತ್ರ್ಯೋತ್ಸವಕ್ಕೆ ಯಾವ ಬೆಲೆ ಇದೆ?

ಆದುದರಿಂದ ಇಂದಿನ ಶುಭ ಪ್ರಸಂಗದಲ್ಲಿ ಈ ಎಲ್ಲ ನಮ್ಮ ದೋಷಗಳನ್ನು ಸುಧಾರಿಸಿ ನಮ್ಮ ಗಣರಾಜ್ಯವನ್ನು ಗುಣರಾಜ್ಯವನ್ನಾಗಿ ಮಾಡಲು ನಾವೆಲ್ಲರೂ ನಿರ್ಧರಿಸೋಣ. ಅದೇ ನಿಜವಾದ ನಿಜವಾದ ಸ್ವಾತಂತ್ರ್ಯೋತ್ಸವ.

ಭಾರತದ ಸ್ವಾತಂತ್ರ್ಯ ಸಂಗ್ರಾಮ

'ನಾವು ಯಾರೊಂದಿಗೂ ಇಲ್ಲ; ಯಾರೂ ನಮ್ಮ ವಿರೋಧಿಗಳಲ್ಲ; ನಾವು ಸ್ವತಂತ್ರರಾಗಿರುತ್ತೇವೆ'—ಇದು ಭಾರತದ ವಿದೇಶೀಯ ನೀತಿಯ ಬುನಾದಿ. ಆದರೆ, ಇದರಂತೆ ನಡೆಯುವುದು ತುಸು ಕಷ್ಟ. ಅಮೇರಿಕ, ಬ್ರಿಟನ್ ಮತ್ತು ರಶ್ಯಗಳ ಕಾಲಕೂಟತ್ರಯದಿಂದ ಸ್ವತಂತ್ರವಾಗಿರಲು ಹೆಣಗುವುದು ಭಾರತೀಯರ ಕರ್ತವ್ಯ—ಇದಕ್ಕೆ ಭಾರತದ ಸ್ವಾತಂತ್ರ್ಯ ಸಂಗ್ರಾಮವೆನ್ನಬಹುದಲ್ಲವೆ?

ಬರೆದವರು: **ಶ್ರೀ ಮಂಗಳೂರು ಜಾರಪ್ಪ.**

"ಭಾರತದ ಸ್ವಾತಂತ್ರ್ಯ ಸಂಗ್ರಾಮ" ಎಂದೊಡನೆ ನಾವು ಭಾರತದ ಹಿಂದಣ ಇತಿಹಾಸ, ಅಥವಾ ಭಾರತವು ಬ್ರಿಟಿಷರೊಡನೆ ಹೂಡಿದ ಹೋರಾಟದ ಸ್ಮರಣೆಯನ್ನು ಒಡನೆ ಮಾಡುತ್ತೇವೆ. ನಾವು ಇಲ್ಲಿ ಬರೆಯುವುದು "ಭಾರತದ ಇಂದಿನ ಮತ್ತು ಮುಂದಿನ ಸ್ವಾತಂತ್ರ್ಯ ಸಂಗ್ರಾಮದ ಕುರಿತು. ಭಾರತವು ಗಲನೇ ಶತಮಾನದಲ್ಲಿ ಹೂಡಿರುವ ಸ್ವಾತಂತ್ರ್ಯ ಸಂಗ್ರಾಮವು ಇಂದಿಗೂ ಮುಗಿದಿಲ್ಲ, ಮುಂದಕ್ಕೂ ಮುಗಿಯುವಂತಿಲ್ಲ. ಬ್ರಿಟಿಷರಿಂದ ನಮ್ಮ ದೇಶದ ಆಡಳಿತೆಯ ಸ್ವಾತಂತ್ರ್ಯವನ್ನು ಪಡೆದಿರುವೆವಾದರೂ ಜಗತ್ತಿನ ಹಲವಾರು ಸಣ್ಣ ದೊಡ್ಡ ರಾಷ್ಟ್ರಗಳ ಕೈಚಳಕದಿಂದ ತಪ್ಪಿಸಿಕೊಳ್ಳುವ ಸ್ವಾತಂತ್ರ್ಯವು ನಮಗೆ ಇನ್ನೂ ಸಿಕ್ಕಿಲ್ಲ. ಭಾರತ ಸರಕಾರದ (non—alignment) "ಪಕ್ಷ ಹಿಡಿಯದಿರುವ ಧೋರಣೆಯು ಸದ್ಯದ ಮಟ್ಟಿಗೆ ಜಯಪ್ರದವಾಗುತ್ತಿರುವುದಾದರೂ ದೊಡ್ಡ ರಾಷ್ಟ್ರಗಳ ವರ್ಚಸ್ಸಿನಿಂದ ದೂರವಾಗುವಷ್ಟು ಸ್ವಾತಂತ್ರ್ಯವು ನಮ್ಮ ಕೈಗೆ ಬಂದಿಲ್ಲ. "India is not aligned with any group nor is she aligned against any group" "ಭಾರತವು ಯಾವ ಸಂಗಡದ ಪರವಾಗಿಯೂ ಅಥವಾ ಯಾವ ಸಂಗಡದ ವಿರೋಧವಾಗಿಯೂ ಇಲ್ಲ." ಎಂದು ಡಾ। ಎಸ್. ರಾಧಾಕೃಷ್ಣನರುವೊನ್ನೆ ಕಾಮನ್‌ವೆಲ್ತ್ ಪಾರ್ಲಿಮೆಂಟರಿ ಪರಿಷತ್ತಿನಲ್ಲಿ ಹೇಳಿದುದರ ಅರ್ಥವು ತುಂಬಾ ಇದೆ. ಅವರು ಹೇಳಿದುದು ನಿಜವಾಗಿದೆಯಾದರೂ ನಮ್ಮ ಈ ಸ್ವತಂತ್ರ ಮನೋವೃತ್ತಿಯನ್ನು ನುಚ್ಚುನೂರುಮಾಡುವ ಹಲವು ಶಕ್ತಿಗಳು ಹೊರಗಿನಿಂದಲೂ ಒಳಗಿನಿಂದಲೂ ತಾಂಡವವಾಡುತ್ತಿವೆಯೆಂಬುದು ಸ್ವಯಂವಿದಿತ.

ಭಾರತ ಸರಕಾರವು ಸ್ವತಂತ್ರವಾಗಿದೆಯೆನ್ನೋ ನಿಜ. ಆದರೆ ಆ ಸ್ವಾತಂತ್ರ್ಯವನ್ನು ಜಗತ್ತಿನ ಇತರ ರಾಷ್ಟ್ರಗಳಿಗೂ ತೆಗೆಸಿಕೊಡಬೇಕೆಂದು ರಾಷ್ಟ್ರ ಸಂಘದಲ್ಲಿ ಹೋರಾಡುತ್ತಿರುವುದನ್ನು ನೋಡುವಾಗ ನಮ್ಮ ಸರಕಾರವು ಎಷ್ಟು ಜಯಪ್ರದವಾಗುವುದೆಂದು ಹೇಳ ಬರುವದಿಲ್ಲ.

ಒಂದು ಕಡೆಯಿಂದ ಅಮೇರಿಕವು ಭಾರತದ ಸ್ವತಂತ್ರ ಬುದ್ಧಿಯನ್ನು ಕೆಡಿಸ ಪ್ರಯತ್ನಿಸುತ್ತಿದೆ. ಮತ್ತೊಂದು ಕಡೆಯಿಂದ ರಶ್ಯವು ನಮ್ಮ ಸ್ವತಂತ್ರ ನೀತಿಯನ್ನು ಬದಲಿಸಲು ಪ್ರಯತ್ನಿಸುತ್ತಿದೆ. ಒಬ್ಬ ಸುಂದರಿಯನ್ನು ಇಬ್ಬರು ವಿವಾಹವಾಗಬೇಕೆಂದು ಟೊಂಕ ಕಟ್ಟಿ ನಿಂತಿರುವ ವ್ಯಂಗ್ಯ ಚಿತ್ರವನ್ನು ನಾವು ನೆನಸಿದರೆ ಭಾರತದ ಇಂದಿನ ಪರಿಸ್ಥಿಯ ಅರ್ಥವು ನಮಗಾಗುತ್ತದೆ.

"ನಾವು ಯಾರೊಡನೆಯೂ ಇಲ್ಲ; ಯಾರಿಗೂ ವಿರೋಧವಿಲ್ಲ." ಎಂದು ನಮ್ಮ ಧೋರಣೆಯನ್ನು ಘೋಷಿಸುವುದು ಸುಲಭ. ಹಾಗೆ ಹೇಳಿದೊಡನೆ ನಮಗೆ ಮುಂದಕ್ಕೆ "ಸಂಗ್ರಾಮ"ವಿಲ್ಲವೆಂದು ಹೇಳಲಾಗುವುದಿಲ್ಲ.

ಗೋವೆ ಅಥವಾ ಕಾಶ್ಮೀರಗಳ ಸಮಸ್ಯೆಗಳು ಪರಿಹಾರವಾಗುವ ವರೆಗೆ ನಮ್ಮ ಸ್ವಾತಂತ್ರ್ಯ ಸಂಗ್ರಾಮವು ಕೊನೆಗಾಣಲು ಕಷ್ಟ. ಈ ಸಮಸ್ಯೆಗಳನ್ನು ಬಗೆ ಹರಿಸುವ ಮನಸ್ಸು ಇಂಗ್ಲೆಂಡು ಅಮೇರಿಕಾಗಳಿಗೆ ಇಲ್ಲವೇ ಇಲ್ಲ. ನೆಹರುಗಳ ಆಯುಷ್ಕಾಲದ ವರೆಗೆ ಈ ಎರಡು ಸಮಸ್ಯೆಗಳನ್ನು ಮುಂದೂಡುತ್ತಾ ಹೋಗಿ ಅವರ ಕಾಲದ ನಂತರ ಈ ಎರಡು ರಾಷ್ಟ್ರಗಳೂ ಒಟ್ಟುಗೂಡಿ ಏನೆಲ್ಲ ಅನಾಹುತಗಳನ್ನುಂಟುಮಾಡುವುವೋ ತಿಳಿಯದು.

ಕಾಶ್ಮೀರದಿಂದ ಪಾಕಿಸ್ತಾನಗಳನ್ನುಹಿಂದಕ್ಕೆದೂಡುವುದು ನ್ಯಾಯವಾಗಿದೆ ಎಂದು ಅಮೇರಿಕಾ ಇಂಗ್ಲೆಂಡುಗಳ ಸಣ್ಣ ಮಕ್ಕಳಿಗೂ ತಿಳಿದಿದೆ. ಪಾಕಿಸ್ತಾನದ ಆಕ್ರಮಣವು ಅಸಿಂಧುವೆಂದು ಜಗತ್ತೇ ತಿಳಿದಿದೆ. ಯಾವದೂ ರಾಷ್ಟ್ರಸಂಘದಲ್ಲಿ ಈ ಸಮಸ್ಯೆಯನ್ನು ತೀರ್ಮಾನಿಸಲು ಆ ರಾಷ್ಟ್ರಗಳು ಸಿದ್ಧವಿಲ್ಲ. ಇದರಿಂದ ಆ ರಾಷ್ಟ್ರಗಳ ಮುತ್ಸದ್ದಿಗಳ ಮನಸ್ಸಿನಲ್ಲಿ ಏನಿದೆಯೆಂದು ಎಲ್ಲರೂ ತಿಳಿದುಕೊಳ್ಳಬಹುದು.

ಪ್ರಪಂಚದ ಮೇಧಾವಿಗಳಲ್ಲಿ ಅಗ್ರಗಣ್ಯರೆಂದೆನಿಸಿದ ಚರ್ಚಿಲ್ಲರು ಇಂಗ್ಲೆಂಡಿನ ಪ್ರಧಾನ ಮಂತ್ರಿ ಪಟ್ಟದಿಂದ ಕೆಳಗಿಳಿದು ಹೋಗಿರುವರಾದರೂ ಅವರ ಮತವನ್ನು ಇಂಗ್ಲೆಂಡು ಅಮೇರಿಕಾದವರು ಆಗಾಗ್ಗೆ ಪಡೆಯುತ್ತಿರುವರು. ಚರ್ಚಿಲ್ಲರು ತನ್ನ ಸಲಹೆಗಳನ್ನು ನೀಡುವಾಗ ಭಾರತದ ಸ್ವಾತಂತ್ರ್ಯವನ್ನು ಮಣ್ಣುಗೂಡಿಸಿ ಇಂಗ್ಲೆಂಡಿನ ವರ್ಚಸ್ಸನ್ನು ಪುನಃ ಪ್ರಪಂಚದಲ್ಲಿ ಸಾರಲು ಹವಣಿಸುತ್ತಿರುವರು. ಇಂಗ್ಲೆಂಡು ಈಜಿಪ್ತಿನ ಮೇಲೆ ಇತ್ತೀಚೆಗೆ ಈಡನ್ ಸರಕಾರವು ಹಾರಿಬೀಳಲು ಚರ್ಚಿಲ್ಲರ ಉಪದೇಶವೇ ಕಾರಣವೆಂದು ಜಗತ್ತಿನ ಹಲವಾರು ಪತ್ರಿಕೆಗಳು ಸಾರಿವೆ. ಭಾರತದಲ್ಲಿ ನೆಹರುಗಳು "ನನ್ನ ದೇಶ, ನನ್ನ ದೇಶ"ವೆಂದು ಕನವರಿಸುವಂತೆಯೇ ಒಂದು ಕಡೆಯಿಂದ ಅಮೇರಿಕದಲ್ಲಿ ಡಲ್ಲೆಸರೂ ಮತ್ತೊಂದು ಕಡೆಯಿಂದ ಚರ್ಚಿಲ್ಲರೂ 'ನನ್ನ ದೇಶ, ನನ್ನ ದೇಶ'' ಎಂದು ಕನಸು ಕಾಣುತ್ತಿರುವರು. ಅಂತಹ ಮಹಾನ್ ಶಕ್ತಿಗಳ ಕೈಚಳಕದಿಂದ ಭಾರತವು ತಪ್ಪಿಸಿಕೊಂಡು 'ಜಗತ್ತಿನಲ್ಲಿ ನಾವು ಸ್ವತಂತ್ರರಾಗಿ ನಿಲ್ಲುತ್ತೇವೆ." ಎಂಬ ಧ್ಯೇಯವನ್ನು ಯಶಸ್ವಿಯಾಗಿ ಈಡೇರಿಸಲು ಎಷ್ಟು ಕಷ್ಟವಿದೆಯೋ ಯಾರು ಬಲ್ಲರು? ಒಂದು ಕಾಲದಲ್ಲಿ ಭಾರತದಲ್ಲಿ ತಾವು ನಡೆಸಿದ ಅಧಿಕಾರ ದಿನಗಳ ನೆನಪು ಇಂಗ್ಲಿಷರಿಗೆ ಎಂದಿಗೂ ಮರೆತು ಹೋಗದು. ಒಂದು ಕಾಲದಲ್ಲಿ ಭಾರತದಲ್ಲಿ ತಾವು ನಡೆಸಿದ ವ್ಯಾಪಾರ ವಹಿವಾಟುಗಳ ನೆನಪು ಅಮೇರಿಕನರಿಗೆ ಎಂದಿಗೂ ಮರೆತು ಹೋಗದು. ಹಾಗಿರುವಾಗ ಈ ಎರಡು ರಾಷ್ಟ್ರಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ದಿನೇ ದಿನೇ ಮುಂದೂಡುವುವು.

ಈ ಎರಡು ರಾಷ್ಟ್ರಗಳ ಬಗಲೊಳಗೆ ಭಾರತವು ಬೀಳದಂತೆ ರಶ್ಯವು ಯಾವಾಗಲೂ ಎಚ್ಚರವಿರುವುದು. ಅದಕ್ಕಾಗಿಯೇ ಶಾಂತಿ ನೀತಿಯನ್ನು ಬೋಧಿಸುತ್ತಿದೆ. ಭಾರತದ ನೆಲದಲ್ಲಿ ನಿಲ್ಲಬೇಕಾದರೆ ಅದರ ಶಾಂತಿ ನೀತಿಯನ್ನು ಅಗತ್ಯವಾಗಿ ಪರಿಪಾಲಿಸಬೇಕೆಂದು ರಶ್ಯವೂ ಚೀನವೂ ತೀರ್ಮಾನಿಸಿಕೊಂಡಿವೆ. ಶಾಂತಿಯಿಂದಲೂ ರಾಷ್ಟ್ರಗಳನ್ನು ಸೋಲಿಸಬಹುದೆಂದು ಕಮ್ಯುನಿಸ್ಟ್ ತತ್ವಜ್ಞಾನಿಗಳಿಗೆ ಇತ್ತೀಚೆಗೆ ಅರ್ಥವಾಗಿದೆ. ಮದ್ದುಗುಂಡುಗಳಿಗಿಂತಲೂ ಹೆಚ್ಚಿನ ಶಕ್ತಿಯು ಪ್ರೇಮ—ಶಾಂತಿ ತತ್ವಗಳಿಗಿದೆಯೆಂದು ಅವರು ಈಗ ಮನಗಂಡಿರುವರು. ಆ ತತ್ವಗಳನ್ನು ಅವರು ಪಾಲಿಸುವುದು ಕೇವಲ ಒಂದು ಧೋರಣೆಯ ದೃಷ್ಟಿಯಿಂದ – ಒಂದು ಪರ್ವ ಪರಿಪಾಲನೆಯ ದೃಷ್ಟಿಯಿಂದಲ್ಲ. ಭಾರತದಲ್ಲಿ ಕಮ್ಯುನಿಸ್ಟ್ ತತ್ವವು ಮೆಲ್ಲಮೆಲ್ಲನೆ ಬೆಳೆಯುತ್ತಿರುವ ಲಕ್ಷಣಗಳಿಂದ ಅವರು ಸಮಾಧಾನಗೊಂಡಿರುವರು—ಭಾರತದ ಸ್ವಾತಂತ್ರ್ಯ ಸಂಗ್ರಾಮವು ಕೊನೆಗೊಂಡಿಲ್ಲ—ಅದು ರಶ್ಯದೊಡನೆಯೂ ಶಾಂತಿ ಸಂಗ್ರಾಮವನ್ನು ನಡೆಯಿಸುತ್ತಲೇ ಹೋಗಬೇಕಾಗಿದೆ.

ಮುಂದಕ್ಕೆ ಭಾರತದ ಸ್ವತಂತ್ರ ನೀತಿಯು ಹೇಗೆ ನಿಂತೀತೆಂದು ಹೇಳ ಬರುವುದಿಲ್ಲ. ಭಾರತವು ಕೋಮನ್‌ವೆಲ್ತ್‌ನಲ್ಲಿ ಸದಸ್ಯಸ್ಥಾನದಲ್ಲಿ ನಿಂತಿರುವುದಾದರೂ ಕೋಮನ್‌ವೆಲ್ತ್ ರಾಷ್ಟ್ರಗಳ ನೀತಿಯನ್ನು ತಾನು ಶಿರಸಾವಹಿಸುವುದಿಲ್ಲವೆಂದು ಹೇಳುತ್ತಿದೆ. ಒಂದು ಸಂಘದ ಸದಸ್ಯನಾಗಿದ್ದುಕೊಂಡು ಅದರ ತತ್ವಗಳನ್ನು ಪರಿಪಾಲಿಸಲಾರೆ ಎಂದು ಹೇಳುವುದರಿಂದ ಭಾರತವು ಸ್ವತಂತ್ರವಾಗಿದೆ ಎಂದು ಧೈರ್ಯವಾಗಿ ಹೇಳಬರುವುದಿಲ್ಲ. ಒಂದಲ್ಲ ಒಂದು ದಿನ ಭಾರತವು ಕಾಮನ್‌ವೆಲ್ತ್ ಸಂಘದಿಂದ ಹೊರಬರಲೇ ಬೇಕಾಗಿದೆ. ಬಂದರೂ ಭಾರತವು ಇತರ ರಾಷ್ಟ್ರಗಳೊಡನೆ ಸೇರಿಕೊಂಡಿದೆ—ಅಥವಾ ಇತರ ರಾಷ್ಟ್ರಗಳಿಗೆ ವಿರೋಧವಾಗಿದೆ ಎಂದು ಹೇಳಿದಂತಾಗುವುದಿಲ್ಲ.

ಇಷ್ಟರತನಕ ಭಾರತವು ಸ್ವತಂತ್ರವಾಗಿ ನಿಂತು ಜಗತ್ತಿಗೆ ಮಾದರಿಯನ್ನು ತೋರಿಸಿದುದಕ್ಕಾಗಿ ನಾವು—ನೆಹರು ಯುಗದವರು–ಶ್ರೀ ನೆಹರುಗಳಿಗೆ ವಂದನೆಗಳನ್ನು ಅರ್ಪಿಸಬೇಕಾಗಿದೆ.

ದೈನಂದಿನ ಉಪಯೋಗದ ಅತ್ಯುತ್ತಮ ತಯಾರಿಕೆಗಳು

ಬಟ್ಟೆಗಳ ಸ್ವಚ್ಛತೆಗೂ ಬಾಳ್ವಿಕೆಗೂ

ಶೋಭಾ

ಬಾರ್ ಸೋಪ್

ನಿತ್ಯೋಪಯೋಗಕ್ಕೆ ಅತ್ಯುತ್ತಮ.

ತಯಾರಕರು :

ಮನಸ್ಸಿನ ಉಲ್ಲಾಸಕ್ಕೆ ಸುಪ್ರಸಿದ್ಧ

ಕೇಲ್‌ಗೂರ್ ಚಾ

ಉತ್ತಮ ಪಾನೀಯ

ಸಾವಿರಾರು ಜನರು ಉಪಯೋಗಿಸುತ್ತಾ ತೃಪ್ತಿ ಹೊಂದುತಿದ್ದಾರೆ.

ವಿತರಣೆಗಾರರು:

ಜೈ ಭಾರತ್ ಮಿಲ್ಸ್ ಪ್ರೈವೇಟ್ ಲಿಮಿಟೆಡ್, ಉಡುಪಿ.

ನಮ್ಮ ಪ್ರಜಾಪ್ರಭುತ್ವ

(೪ನೇ ಪುಟದಿಂದ)

ಕ್ಕಾಲ ಇದೆಯೇ? ಜನರ ಆರೋಗ್ಯ ಪರಿಸ್ಥಿತಿ ಹೇಗಿದೆ? ಕಾಹಿಲೆಗಳು ಬಂದಾಗ ಮನೆಮಾರು ಅಡವು ಇಟ್ಟು ಖಾಸಗಿ ವೈದ್ಯರ ನೆರವನ್ನೇ ಪಡೆಯಬೇಕೆ? ಅಥವಾ ಹತ್ತಾರು ಮೈಲು ದೂರದಲ್ಲಿರುವ ಆಸ್ಪತ್ರೆಗಳ ನೆರವನ್ನು ಕಾಯಬೇಕೆ? ಗ್ರಾಮ ಪಂಚಾಯತಗಳು, ಜಿಲ್ಲಾ ಬೋರ್ಡುಗಳು ಮೂರು ನಾಲ್ಕು ಗ್ರಾಮಗಳಿಗೊಂದಾದರೂ ಆರೋಗ್ಯ ಕೇಂದ್ರವನ್ನು ಒದಗಿಸಲಾರವೆ? ಇಂತಹ ಹಲವು ಪ್ರಶ್ನೆಗಳಿಗೆ ಸಾಮಾನ್ಯ ಪ್ರಜೆ ಸಮರ್ಪಕವಾದ ಉತ್ತರ ಪಡೆಯುವ ನಿರೀಕ್ಷೆಯಲ್ಲಿರುತ್ತಾನೆ.

ಇಪ್ಪತ್ತು ಸಹಸ್ರಕ್ಕೂ ಮಿಕ್ಕಿದ ಹಣವುಳ್ಳ ಒಂದು ಪಂಚಾಯತ ಬೋರ್ಡಿನ ಕ್ಷೇತ್ರವಿದೆ ಎಂದೂಹಿಸಿಕೊಳ್ಳಿ. ಪ್ರತಿ ದಿನವೂ ಸರಾಸರಿ ನೂರು ಮಂದಿ ತಿರುಗುವ ದಾರಿಯಲ್ಲಿರುವ ಎರಡು ಮೂರು ಭಾರೀ ತೋಡುಗಳಿಗೆ ಅಲ್ಲಿನ ಪಂಚಾಯತ ಬೋರ್ಡು ಸಂಕವನ್ನು ಹಾಕಲಿಲ್ಲ ರಸ್ತೆಯಿಲ್ಲ. ಪ್ರಾಥಮಿಕ ಶಾಲಾ ಮಕ್ಕಳ ಸಹಿತವಾಗಿ ಎಲ್ಲರೂ ಭೀಕರ ಮಳೆಯ ದಿನಗಳಲ್ಲಿ ತೋಡನ್ನು ಇಳಿದೇ ಹೋಗಬೇಕು—ಕಾಲು ಜಾರಿದರೆ ಉರುಳಬೇಕು. ಅದೇ ಪಂಚಾಯತ ಬೋರ್ಡು ಸ್ವಾರ್ಥದ ಹಿತದ ಒಂದೆಡೆಯಲ್ಲಿ ಅರ್ಧ ಫರ್ಲಾಂಗಿಗೆ ಎರಡು ಸಂಕಗಳನ್ನು ಕಟ್ಟಿಸಿದ ಉದಾಹರಣೆಯೂ ಇದೆ. ಇಪ್ಪತ್ತು ಸಾವಿರ ರೂಪಾಯಿ ಸಂಪತ್ತಿರುವ ಇಲ್ಲಿ ಜನರಿಗೆ ರೋಗ ಬಂದರೆ ತಾಳ್ಮೆ ಉಳಿದರೆ ದೂರದ ಆಸ್ಪತ್ರೆಗೆ ಹೋಗಬೇಕು. ಇನ್ನೂ ಎಷ್ಟೋ ಅಪಳಿತ (?) ರೂಪಗಳಿವೆ. ಇಂತಹ ಪಂಚಾಯತ ಬೋರ್ಡುಗಳಿಗೆ ತೆರಿಗೆ ತೆರುವವ—ಸಂಕಕ್ಕೆ ತೆರಿಗೆ ತೆರುವ ಆಡಳಿತ ಪಕ್ಷಕ್ಕೂ ಆಡಳಿತ ಸರಕಾರಕ್ಕೂ ನಿತ್ಯ ಪೋಷಿಸುವ ಕೆಲಸ ಮಾಡದೆ ಇನ್ನೇನು ಮಾಡಿಯಾನು? ಅದೇ ಪಂಚಾಯತ ಬೋರ್ಡಿಗೆ ಐದು ವರುಷ ಜೀವಾವಧಿ ದೊರಕುತ್ತದೆ ಚುನಾವಣೆ ನಡೆದರೂ ಫಲವಿಲ್ಲ. ಕಾರಣ ಅದು ನಡೆವ ಕ್ರಮದಲ್ಲಿ ಈಗ ಅಧಿಕಾರದಲ್ಲಿರುವ ನಾಯಕರಾರೂ ಕುರ್ಚಿಯಿಂದಿಳಿಯುವ ಸಂಭವ ಕಮ್ಮಿ. ಇಲ್ಲಿ ಸಾಮಾನ್ಯ ಪ್ರಜೆ ಅಸಹಾಯಕನಾಗಿದ್ದಾನೆ. ಇಂತಹರ ಕೈಯಲ್ಲಿ ಇನ್ನೂ ಹೆಚ್ಚಿನ ಅಧಿಕಾರ ಸಿಕ್ಕರೆ! ಪಂಚಾಯತ ರಾಜ್ಯವೇ ಸ್ಥಾಪನೆಯಾದರೆ? ಪ್ರಜೆಯ ಗತಿ ಏನು? ಹಳ್ಳಿಯ ಪ್ರಜಾಪ್ರಭುತ್ವ ಜೀವನ ಈ ಸ್ಥಿತಿಯಲ್ಲಿದ್ದರೆ ಡಿಲ್ಲಿಯ ನೆಹರು ದೇಭರರು ಇವರನ್ನು ಹೇಗೆ ಕಾಪಾಡಿಯಾರು? ಅವರನ್ನಾದರೂ ದೂರಿ ಫಲವೇನು?

ಇನ್ನು ಜಿಲ್ಲಾ ಬೋರ್ಡಿನ ಸ್ಥಿತಿಯೂ ಇದಕ್ಕಿಂತ ಉತ್ತಮವಾಗಿಲ್ಲ. ಆ ಕ್ಷೇತ್ರ ವಾಸಿಗಳಲ್ಲದವರು ರಾಜಕೀಯ ಪಕ್ಷದ ಪ್ರಭಾವದಿಂದ ಯಾವುದೇ ಒಂದು ಕ್ಷೇತ್ರದಿಂದ ಬೋರ್ಡಿಗೆ ಚುನಾಯಿತರಾಗಿ ಹೋದ ನಿದರ್ಶನಗಳು ನಮ್ಮಲ್ಲಿವೆ. ಅಂತಹರಿಂದ ಆ ಕ್ಷೇತ್ರದ ಮಾಹಿತಿಯನ್ನು ಪಡೆವುದಾದರೂ ಹೇಗೆ? ಅವರು ಕ್ಷೇತ್ರಕ್ಕೆ ಉಪಕಾರವಾದರೂ ಏನು ಮಾಡಿಯಾರು? ಒಟ್ಟಿನಿಂದ ಚುನಾವಣೆ ನಡೆಯುವುದು ಮಾತ್ರ ಪ್ರಜೆಗೆ ಅರಿವಾದೀತು ಕೊನೆತನಕ ಅದರ ಫಲದ ಸವಿ ದೊರೆಯದು.

ಆಗ ಬಡ ಜೋರ್ರೇಗೌಡ, ಸ್ವಾತಂತ್ರ್ಯದಲ್ಲಿ ಬಲವಾದ ಆಶೆ ಇಟ್ಟುಕೊಂಡಿದ್ದನು. ತನ್ನ ಸರಕಾರಕ್ಕೆ ಪ್ರಾಮಾಣಿಕನಾಗಿ ತೆರಿಗೆ ತೆತ್ತನು—ಅದರ ಸವಿಯನ್ನು ಅನುಭವಿಸಬಾರದವನಾದಾಗ ಅದರ ಕಡೆ ವಿಕಟ ಹಾಸ್ಯದಿಂದ ಒಂದು ಬಾರಿ ನಕ್ಕನು.

ಇಂದಿನ ಆಡಳಿತಕ್ಕಿಂತ ಬ್ರಿಟಿಷರ ಬೇಜವಾಬ್ದಾರೀ ಸರಕಾರವೇ ಚೆನ್ನಾಗಿತ್ತು ಎಂಬ ಮಾತುಗಳನ್ನೂ ಕೇಳುತ್ತೇವೆ, ಇಂತಹ ಮಾತೂ ಅಷ್ಟೇ ಬೇಜವಾಬ್ದಾರಿಯವರು ಆಡಿದ್ದು ಅನ್ನೋಣ. ಆದರೆ, ಅದರಲ್ಲಿ ಸತ್ಯಾಂಶವೇನಾದರೂ ಇದೆಯೇ ಎಂದು ನೋಡಬೇಕು. ಆಡಳಿತದಲ್ಲಿ ಕೇಂದ್ರೀಕರಣ ಹೆಚ್ಚಾಯಿತು. ಕೈಗಾರಿಕೆಯ ಅಭಿವೃದ್ಧಿಯಲ್ಲಿ ಯಾಂತ್ರೀಕರಣ ಹೆಚ್ಚಾಯಿತು. ನಿಜವಾದ ಅಭಿವೃದ್ಧಿ ಕಾರ್ಯಕ್ಕಿಂತ ಪ್ರಚಾರಕ್ಕೆ ಹಣ ಹೆಚ್ಚು ಖರ್ಚಾಗುತ್ತದೆ. ಪ್ರಾಂತಗಳಲ್ಲಿ ಒಂದೇ ಶಾಸನಸಭೆ ಸಾಕಿತ್ತು-ಗವರ್ನರರ ಹುದ್ದೆ ಬೇಡವಿತ್ತು-ಗವರ್ನರರು ಪಕ್ಷಾತೀತರಾಗಿರಬೇಕಿತ್ತು-ನ್ಯಾಯಾನ್ಯಾಯಗಳಲ್ಲಿ ರಾಜಕಾರಣ ಪ್ರವೇಶಿಸಬಾರದು ಬೇಕಾದ್ದಕ್ಕಿಂತ ಹೆಚ್ಚು ಬಾರಿ ನಮ್ಮ ಸಂವಿಧಾನಕ್ಕೆ ತಿದ್ದುಪಡಿ ಸೂಚನೆ ಬಂತು-ಜನರ ಇಚ್ಛೆಗೆ ವಿರುದ್ಧವಾಗಿ ಹಿಂದೂ ವಿವಾಹ ಶಾಸನ, ಮಗಳಿಗೆ ಪಿತೃಸ್ವ ಆಸ್ತಿಯ ಹಕ್ಕು ಕೊಡುವ ಶಾಸನಗಳು ಜ್ಯಾರಿಗೆ ಬಂದುವು—ವಿರೋಧ ಪಕ್ಷಕ್ಕೆ ಸ್ಥಾನವಿಲ್ಲ—ಅಧಿಕಾರಿಗಳ ಸಂಖ್ಯೆ ಮಿತಿಮೀರುತ್ತಿದೆ-ಅಷ್ಟೇ ಲಂಚವೂ ಹೆಚ್ಚಿ ಅಧಿಕಾರಿಗಳಲ್ಲಿರಬೇಕಾದ ಕಾರ್ಯದ ಯೋಗ್ಯತೆಯೂ ಕಮ್ಮಿಯಾಗಿ ಆಡಳಿತ ಶಿಥಿಲಗೊಳ್ಳುತ್ತಿದೆ. ದೇಶದಭಿವೃದ್ಧಿಯ ಆತುರದಲ್ಲಿ ಒಂದೇ ಕೆಲಸಕ್ಕೆ ಹಲವು ಇಲಾಖೆಗಳು, ಸಂಸ್ಥೆಗಳು ಸ್ಥಾಪನೆಯಾಗಿವೆ—ಹೀಗೆ ಇಂದಿನ ಪ್ರಜಾಪ್ರಭುತ್ವದ ಆಚರಣೆಯಲ್ಲಿ ಕಂಡ ಲೋಪಗಳನ್ನು ದೇಶದ ಹಿತೈಷಿಗಳು ಹಿರಿಯ ರಾಜಕಾರಣಿಗಳು, ಯೋಗ್ಯ ವಿಮರ್ಶಕರು ಲೇಖನಗಳ ಮೂಲಕ, ಭಾಷಣಗಳ ಮೂಲಕ, ಗ್ರಂಥಗಳ ಮೂಲಕ ಆಗಾಗ ಈ ಹತ್ತು ವರ್ಷಗಳಲ್ಲಿ ಹೇಳಿದ್ದಾರೆ. ಇವೆಲ್ಲ ಅಲ್ಲಗಳೆಯತಕ್ಕವು ಎಂದು ಹೇಳಬಹುದಾದರೂ ಹೊಗೆಯಾಡಬೇಕಾದರೆ ಬೆಂಕಿಯಿದ್ದಿರಬೇಕಷ್ಟೆ? ಆ ಮೂಲದ ಶೋಧನೆಯ ಕಾರ್ಯ ಇಂದು ತೀರ ಅವಶ್ಯ.

ನಮ್ಮ ಕರ್ನಾಟಕ ರಾಜ್ಯದಂತಹ ಪ್ರತ್ಯಿಯನ್ನೇ ನೋಡೋಣ. ನಮಗೆ ಹಿಂದಿನ ಮದ್ರಾಸ ರಾಜ್ಯದ ಆಡಳಿತವೇ ಚೆನ್ನಾಗಿತ್ತು, ಅಲ್ಲಿ ಗೌರವವಾಗಿದ್ದೆವು. ಸರಕಾರ ಬಹಳ ಶಿಸ್ತಿನಿಂದಿತ್ತು. ನಮ್ಮ ಸ್ಥಾನಮಾನಕ್ಕೆ ಚ್ಯುತಿ ಬಂದಿರಲಿಲ್ಲ——ಈ ಮೈಸೂರಿನವರ ಸಹವಾಸ ಸಾಕು——ಇದಕ್ಕೆಲ್ಲ ನಮ್ಮ ಅಧಿಕ ಪ್ರಸಂಗವೇ ಕಾರಣ—ಎಂದು ಅಧಿಕಾರಿಗಳು, ಅಧ್ಯಾಪಕರು ರಾಜಕಾರಣಿಗಳು, ಸಮಗ್ರ ಪ್ರಜೆಗಳು ಎಲ್ಲರೂ ಇಂದು ಏಕೀಕರಣವಾದಿಗಳನ್ನ ಮನಸಾರೆ ಹಳಿಯತೊಡಗಿದ್ದಾರೆ. ವಸ್ತುಸ್ಥಿತಿ ಹೀಗಿಲ್ಲದಿರಬಹುದು—ಅಥವಾ ಸರಕಾರ—ಪ್ರಜೆ—ಇವರಿಬ್ಬರಲ್ಲಿ ಪ್ರಜೆ ನಿರ್ಲಿಪ್ತನಾಗಿ ಕೇವಲ ಟೀಕಾಕಾರನಾಗಿ ಉಳಿದು ಸರಕಾರ ನಿಸ್ಸಹಾಯಕ ಸ್ಥಿತಿಯಲ್ಲಿರಬಹುದು. ಏನೇ ಇರಲಿ, ಈ ದುರ್ಗಂಧಕ್ಕೊಂದು ಮೂಲ ಇಲ್ಲದೆ ಇಲ್ಲ. ಅದರ ಅನ್ವೇಷಣೆ ಮತ್ತು ಅದಕ್ಕೆ ಪರಿಹಾರ ಇವೆರಡೂ ಯೋಗ್ಯ ಪ್ರಜಾಪಾಲನೆಯ ದೃಷ್ಟಿಯಿಂದ ಅವಶ್ಯವಷ್ಟೆ.

ನಮ್ಮಲ್ಲಿ ಪ್ರಜಾರಾಜ್ಯವು ಇನ್ನೂ ಹೊಸತು. ಅಲ್ಲಿ ಇಂತಹ ಲಕ್ಷಣಗಳು ತೀರ ಸ್ವಾಭಾವಿಕ ಎನ್ನುವ ಕಾಲ ಈಗ ಮೀರಿದೆ. ಇನ್ನು ಪ್ರಯೋಗದ ಕಾಲವಲ್ಲ, ಪ್ರಜಾರಾಜ್ಯಕ್ಕಿರುವ ಅಪಾಯಗಳಾದ ಲಂಚಕೋರತನ, (Corrunption) ಅಯೋಗ್ಯತನ (Inefficiency) ಸ್ವಜನಾರ್ಥಿಕತೆ (Nepotism) ಇವುಗಳನ್ನ ನಿವಾರಿಸುವ ಉಪಾಯಗಳನ್ನು ಕಂಡು ಹಿಡಿಯಬೇಕಾಗಿದೆ. ಸರಕಾರದ ಜವಾಬ್ದಾರಿಯ ಸ್ಥಾನಗಳಿಗೆ "ಜಾತೀಯ ಅಥವಾ ಗುಂಪಿನವರನ್ನು" ನೇಮಿಸುವ ಬದಲು ಯೋಗ್ಯರನ್ನು, ದಕ್ಷರನ್ನು, ಪ್ರಾಮಾಣಿಕರನ್ನು ನೇಮಿಸಬೇಕು. ನಾವು ಧರ್ಮಕ್ಕೆ ಅಗ್ರಸ್ಥಾನವನ್ನು ನಾವು ಕೊಡದೆ ಹೋದಲ್ಲಿ ಸರಕಾರ ಮತ್ತು ದೇಶ ಅಯೋಗ್ಯರ ಕೈಯಲ್ಲಿ ಉಳಿದ, ದೇಶ ವಿಪತ್ತಿಗೀಡಾಗುವ ಕಾಲ ಬಂದೀತು. 'ಹಿಂದುಳಿದವರನ್ನು" ಮುಂದು ತರುವ ಈ ಉತ್ಸಾಹದಲ್ಲಿ ಯೋಗ್ಯತೆಯನ್ನು ನಿರಾಕರಿಸಬಾರದು ಎಂಬ ಎಚ್ಚರಿಕೆ ಇಂದು ತೀರ ಅವಶ್ಯ. ನಮ್ಮ ಕಚೇರಿಗಳಲ್ಲಿನ ಕಾಗದ ಪತ್ರಗಳ ಇಂದಿನ ಆಮೆಯ ನಡಿಗೆಗೆ ಇದೇ ಬಹುಮಟ್ಟಿಗೆ ಕಾರಣ.

ನಮ್ಮ ಪ್ರಜಾರಾಜ್ಯಕ್ಕೆ ಇಂದು ಅಂಟಿಕೊಂಡಿರುವ ಇನ್ನೊಂದು ಅಪಾಯವೆಂದರೆ ಆಡಳಿತ ಪಕ್ಷವು ವಿಶೇಷ ಬಲವುಳ್ಳದ್ದಾಗಿ ಸುವ್ಯವಸ್ಥಿತವಾದ ಮತ್ತು ಸಮಬಲವಾದ ಎದುರು ಪಕ್ಷವು ಅಥವಾ ಪ್ರತಿಸರಕಾರ ಪಕ್ಷ ಒಂದು ಇಲ್ಲದಿರುವುದು. ಕಾಂಗ್ರೆಸ್ಸು ಗಾಂಧೀಜಿಯವರ ಕೃಪಾಶ್ರಯದಿಂದ ಬೆಳೆದು ಬಂತು, ದೇಶ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಲವು ಹಿರಿಯರು ಇಂದಿಗೂ ಅದರ ಸಾರಥಿಗಳಾಗಿ ಉಳಿದ ಅಂತರಾಷ್ಟ್ರೀಯ ಖ್ಯಾತಿವೆತ್ತ ನೆಹರುಗಳೇ ಅದರ ಜೀವನಾಡಿಯಾಗಿದ್ದಾರೆ. ನಿಜವಾದ ಪ್ರಜಾಪ್ರಭುತ್ವಕ್ಕೆ ನೆಹರುಗಳೇ ಅಡ್ಡಿಯಾಗಿದ್ದಾರೆ—ಕಾಂಗ್ರೆಸ್ಸೇ ಅಡ್ಡಿಯಾಗಿ ನಿಂತಿದೆ—ನಮ್ಮಲ್ಲಿ ವ್ಯಕ್ತಿಪೂಜೆಯೇ ಹೆಚ್ಚು ಬೆಳೆದು ಬಂದಿದೆಯೆಂದು ಜಯಪ್ರಕಾಶ ನಾರಾಯಣರು, ರಾಜಾಜಿ ಮುಂತಾದವರೂ ಹೇಳತೊಡಗಿದ್ದಾರೆ. ಇನ್ನು ನಮ್ಮ ಆಡಳಿತ ಪಕ್ಷವಾದ ಕಾಂಗ್ರೆಸ್ಸಿನಲ್ಲೋ ಸಾಕಷ್ಟು ಒಳಜಗಳಗಳಿದ್ದು ಇದರಿಂದ ದೇಶಕ್ಕೆ ಅಪಾಯ ಹೆಚ್ಚಾಗಿದೆ. ಕೆಲಸ ಹೆಚ್ಚಲಿ, ಹೆಚ್ಚದಿರಲಿ, ಜನ ಬಯಸಲಿ, ಬಯಸದಿರಲಿ, ಪಕ್ಷದ ಕೆಲವರ ತೃಪ್ತಿಗಾದರೂ ಮಂತ್ರಿಗಳ ಸಂಪುಟವನ್ನು ಆಗಿಂದಾಗ ವಿಸ್ತರಿಸಬೇಕಾಗುತ್ತದೆ. ಅಧಿಕಾರ ಸ್ಥಾನಗಳನ್ನು ಹೆಚ್ಚಿಸಬೇಕಾಗುತ್ತದೆ. ಐದು ವರ್ಷಗಳ ಅವಧಿಯಲ್ಲಿ ಎರಡು ಮೂರು ಬಾರಿ ಮಂತ್ರಿಮಂಡಳದ ಬದಲಾವಣೆಗಳಾದ ನಿದರ್ಶನಗಳು ಇವೆ. ಇವೆಲ್ಲದರಿಂದ ಸರಕಾರದ ದಿನನಿತ್ಯದ ಕೆಲಸಕ್ಕೆ ಅಡ್ಡಿ ಎಷ್ಟು ಎಂಬುದು ಅನುಭವದ ಸಂಗತಿ.

ಈ ಲೇಖನವನ್ನು ಮುಕ್ತಾಯಗೊಳಿಸುತ್ತಾ ಸ್ವತಂತ್ರ ಭಾರತದ ಪ್ರಜೆಯಾದ ನಮಗ ರಾಜ್ಯಶಾಸ್ತ್ರದ ಸಾಮಾನ್ಯ ಪರಿಚಯ ಇರಬೇಕಾದುದು ತೀರ ಅವಶ್ಯ. ಅಂತಹ ಪರಿಚಯವನ್ನು ಮಾಡಿಕೊಳ್ಳಲು ಹೊರಟ ನಾನು ಓದಿದ ಕೆಲವೇ ಗ್ರಂಥಗಳಲ್ಲಿ ಕನ್ನಡದ ಶ್ರೀ ಡಿ. ವಿ. ಜಿ. ಯವರು ಬರೆದ 'ರಾಜ್ಯಶಾಸ್ತ್ರ" ಒಂದು ಅತ್ಯುತ್ತಮ ಗ್ರಂಥ, ಪ್ರತಿಯೊಬ್ಬನೂ ಓದಲೇ ಬೇಕಾದ ಗ್ರಂಥವೊಂದಿಷ್ಟೇ ಹೇಳಿ ಪ್ರಜಾರಾಜ್ಯಕ್ಕಿರುವ ಅಪಾಯಗಳ ಕುರಿತು ಆ ಗ್ರಂಥದಲ್ಲಿ ಅವರು ಹೇಳಿದ ಮಾತಿನಲ್ಲಿ ಈ ಕೆಳಗಿನ ಭಾಗವನ್ನು ಆರಿಸಿಕೊಂಡು ಓದುಗರ ಅವಗಾಹನೆಗಾಗಿ ಇಲ್ಲಿ ಉದ್ಧರಿಸುತ್ತೇನೆ—

"ಪ್ರಜಾರಾಜ್ಯ ಪದ್ಧತಿ ಮಿಕ್ಕೆಲ್ಲ ರಾಜ್ಯಪದ್ಧತಿಗಳಿಗಿಂತಲೂ ಕಷ್ಟವಾದದ್ದು" ಅದನ್ನ ಚೆನ್ನಾಗಿ ನಿರ್ವಹಿಸಲು ಜನಕ್ಕೆ ಒಂದು ವಿಶೇಷವಾದ ನೀತಿ ಸಂಸ್ಕಾರವೂ ಬುದ್ಧಿ ಸಂಸ್ಕಾರವೂ ಅವಶ್ಯ. ಪ್ರಜಾರಾಜ್ಯ ಪದ್ಧತಿ ಕಷ್ಟದ ಪದ್ಧತಿಯಾಗಿರುವುದು ಇದಕ್ಕೆ ಹೊಸಬರಾದ ನಮಗೆ ಮಾತ್ರವೇ ಅಲ್ಲ, ಪ್ರಪಂಚದಲ್ಲಿ ಎಲ್ಲೆಲ್ಲಿಯೂ ಅದು ಕಷ್ಟವಾದದ್ದೇ. ಇಂಗ್ಲೆಂಡನ್ನು ಬಿಟ್ಟರೆ ಯೂರೋಪ್ ಖಂಡದಲ್ಲಿ ಎಲ್ಲಿಯೂ ಅದು ಹೆಚ್ಚು ಯಶಸ್ವಿಯಾಗಿಲ್ಲ. ಅದು ಯಶಸ್ವಿಯಾಗಬೇಕಾದರೆ ಇಂಗ್ಲಿಷ್ ಜನದ ಕೆಲವು ದೊಡ್ಡ ಗುಣಗಳನ್ನು ನಾವು ಅನುಸಂಧಾನ ಮಾಡಬೇಕು. ಅವುಗಳಲ್ಲಿ ಮುಖ್ಯವಾದುವು ಇವು:—

೧) ಸಾರ್ವಜನಿಕ ದೃಷ್ಟಿ. ೨) ಭಿನ್ನಾಭಿಪ್ರಾಯ ಸಹನೆ, ೩) ಯಾವುದರಲ್ಲೂ ಅತ್ಯರ್ಥವಾದಕ್ಕೂ ವೀರ ಸಾಹಸಕ್ಕೂ ಹೋಗದೆ ಕೂಡಿದ ಮಟ್ಟಿಗೂ ಮಧ್ಯಮಾರ್ಗದಲ್ಲಿರುವುದು, ೪) ಪ್ರಕೃತ ತತ್ಪರವಾದ ಬುದ್ಧಿ. ಈ ನಾಲ್ಕರಲ್ಲಿ ಯಾವ ಒಂದು ಕುಂದಿದರೂ ಪ್ರಜಾರಾಜ್ಯದ ಹದ ಕೆಟ್ಟುಹೋದೀತು."

ಖರೀದಿಸುವುದು ಮುಖ್ಯವಲ್ಲ,
ಆಯ್ಕೆಯಲ್ಲಿದೆ ಜಾಣ್ಮೆ!

ಸಾಮಾನುಗಳನ್ನು ಖರೀದಿಸುವಾಗ ಉತ್ತಮವಾದುದನ್ನೇ ನೀವು ಆರಿಸುದಿಲ್ಲವೆ?

ಅಂತೆಯೆ ಹಂಚುಗಳು ಬೇಕಾದಾಗ ತಾಳಿಕೆ ಬಾಳಿಕೆಯಲ್ಲಿ ನಾಜೂಕಿನಲ್ಲಿ ಉತ್ತಮವಾದುದೆಂದು ಸರ್ವತ್ರ ಪ್ರಸಿದ್ಧವಾಗಿ ಪ್ರಚಾರದಲ್ಲಿರುವ ಕೋಮನ್ ವೆಲ್ತಿನವರ

ಬಾಸೆಲ್ ಮಿಶನ್ ಹಂಚುಗಳನ್ನೆ

ಆರಿಸಿಕೊಳ್ಳಿರಿ.

ಬಾಸೆಲ್ ಮಿಶ್ಯನಿನ ಹಂಚು, ಧಂಬೆ ಇತ್ಯಾದಿಗಳಿಗೆ ನನ್ನೊಡನೆ ವಿಚಾರಿಸಿರಿ

ಕಾನಾರ್ಡು ಪಾಂಡುರಂಗ ರಾವ್,

ಕಮಿಶನ್ ಏಜಂಟ್, ಸರ್ವಿಸ್ ಬಸ್ ಸ್ಟಾಂಡಿನ ಬಳಿ, ಉಡುಪಿ.

ಸಮಾಜದ ಎಲ್ಲ ಸದಸ್ಯರಿಗೂ ಕೆಲವೊಂದು ಅಧಿಕಾರವಿರುತ್ತವೆ. ಇವುಗಳಲ್ಲಿ ಮಾನವನು ತನ್ನ ಬುದ್ಧಿಯ ಹಾಗೂ ವ್ಯಕ್ತಿತ್ವದ ವಿಕಾಸನವನ್ನು ಮಾಡುತ್ತ ತನ್ನಿಂದ ಸಾಧ್ಯವಾದಷ್ಟು ಮುಂದುವರಿಯುವುದಕ್ಕೆ ಸಾಧಕಗಳಾದ ಕೆಲವು ಅಧಿಕಾರಗಳಿಗೆ ಮೂಲಭೂತ ಹಕ್ಕುಗಳೆಂದು ಹೆಸರು. ಈ ಮೂಲಭೂತ ಹಕ್ಕುಗಳನ್ನು ಭಾರತೀಯ ಸಂವಿಧಾನವು ರಕ್ಷಿಸಿ ಕೊಡುತ್ತದೆ. ನಾಗರಿಕನೊಬ್ಬನಿಗೆ ಅತ್ಯಗತ್ಯವಾದ ಸ್ವಾತಂತ್ರ್ಯ ಇಲ್ಲವೇ ಮೂಲಭೂತ ಹಕ್ಕುಗಳನ್ನೀಯದ ಹೊರತು ರಾಜ್ಯಗಳು ಆತನ ವಿಕಾಸವನ್ನು ಸಾಧಿಸಲಾರವು. ಅಧಿಕಾರದಲ್ಲಿರುವ ಬಹುಸಂಖ್ಯಾಕರ ನಡುವೆ ಜೀವಿಸಬೇಕಾಗುವ ಅಲ್ಪ ಸಂಖ್ಯಾಕರ ಹಿತರಕ್ಷಣೆಗಳನ್ನು ಮಾಡಲೇ ಬೇಕಾಗುವುದು. ಮಾನವನ ವ್ಯಕ್ತಿತ್ವಕ್ಕೆ ಬೆಲೆಕಟ್ಟುವಲ್ಲಿ ಅದಕ್ಕೆ ತುಂಬಾ ಗೌರವವನ್ನು ಕೊಡುವುದು ಸಹ ಆವಶ್ಯಕವಾಗಿದೆ. ಇವುಗಳಿಂದಲೇ—ಈ ಬಗೆಯ ಸ್ವಾತಂತ್ರ್ಯದಿಂದಲೇ ಒಂದು ರಾಷ್ಟ್ರದ ವಿವೇಕ, ಬುದ್ಧಿ ಮತ್ತೆ ಗುಣನಡತೆಗಳು ಬೆಳೆದು ಬಂದು ವ್ಯಕ್ತಿಯಲ್ಲಿ ರಾಷ್ಟ್ರದ ಕಡೆಗೆ ಅಭಿಮಾನವು ತುಂಬುವುದು. ಈ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಭಾರತೀಯ ನಾಗರಿಕರು ಸುಪ್ರೀಮ್ ಕೋರ್ಟಿನವರೆಗೆ ಸಹ ವಿನಂತಿ ಮಾಡುವ ಅಧಿಕಾರವು ಅವರಿಗಿದೆ. ಭಾರತೀಯ ಸಂವಿಧಾನದಲ್ಲಿ ಸಹ ಭಾರತೀಯರಿಗೆ ಕೆಲವೊಂದು ಮೂಲಭೂತ ಹಕ್ಕುಗಳನ್ನು ಕೊಡಲಾಗಿದೆ ಇವುಗಳನ್ನು ನಾವು ಸರಿಯಾಗಿ ತಿಳಿದುಕೊಂಡು, ಅವುಗಳ ಸದ್ವಿನಿಯೋಗವನ್ನು ಮಾಡಿಕೊಂಡು ನಮ್ಮ, ತನ್ಮೂಲಕ ದೇಶದ ಹಿತವನ್ನು ಬಯಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ.

ಸಮಾನತಾಧಿಕಾರ—'ನ್ಯಾಯ ಶಾಸ್ತ್ರ'ದ ದೃಷ್ಟಿಯಿಂದ ಮತ, ಜಾತಿಗಳ ಭೇದ, ಬಣ್ಣ ಲಿಂಗಗಳ ಅಂತರವನ್ನು ಗಮನಿಸದೆ ಎಲ್ಲರೂ ಸಮಾನರಾಗಿದ್ದಾರೆ. ಅಸ್ಪೃಶ್ಯತೆಯೆನ್ನುವುದಿಲ್ಲ ಮತ್ತು ಸೈನಿಕ ಹಾಗೂ ವಿದ್ಯಾ ಸಂಬಂಧದಲ್ಲಿಯಲ್ಲದೆ ಉಳಿದ ಕ್ಷೇತ್ರಗಳಲ್ಲಿ ಯಾವ ಹೆಗ್ಗಳಿಕೆಗೂ ಅವಕಾಶವಿರುವುದಿಲ್ಲ. ಅಂಗಡಿ, ಸಾರ್ವಜನಿಕ ಸ್ಥಳ, ಬಾವಿ, ರೈಲ್ವೆ, ಮಾರ್ಗ ಮೊದಲಾದುವುಗಳಿಗೆ ಹೋಗುವಲ್ಲಿ ಯಾವ ನಾಗರಿಕನಾದರೂ ಧಾರ್ಮಿಕ ಮತ್ತು ಲಿಂಗ, ಜನನ ಹಾಗೂ ವಾಸಸ್ಥಾನಗಳ ನೆಪದಿಂದಾಗಿ ಅಸಾಧ್ಯನೆನಿಸುವುದಿಲ್ಲ; ಇಲ್ಲವೇ ಅವನಿಗೆ ಯಾವ ನಿರ್ಬಂಧನವಾದರೂ ಇರುವುದಿಲ್ಲ.

ಸ್ವಾತಂತ್ರ್ಯಾಧಿಕಾರ— ಭಾರತೀಯ ಸಂವಿಧಾನವು ತನ್ನ ನಾಗರಿಕರೆಲ್ಲರಿಗೂ ಈ ಅಧಿಕಾರಗಳನ್ನಿತ್ತಿದೆ –

ಸಂವಿಧಾನದ ಸದುಪಯೋಗ

ಭಾರತವು ಪ್ರಜಾಪ್ರಭುತ್ವವನ್ನಂಗೀಕರಿಸಿ ವರ್ಷಗಳು ಉರುಳುತ್ತಿರುವವು. ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯಬಾರದ ಅತ್ಯಾಚಾರಗಳು ಆಗಿಹೋಗುತ್ತಿರುವುವು. ಇದರ ಮೂಲಕಾರಣವನ್ನು ವಿಮರ್ಶಿಸಿದರೆ, ನಮ್ಮ ಸಂವಿಧಾನದಲ್ಲಿ ನಮಗಿತ್ತ ಅಧಿಕಾರಗಳ ಅರಿವ ನಮಗಿಲ್ಲದಿರುವುದೇ ಪ್ರಬಲ ಹೇತುವೆಂದು ಗೋಚರವಾಗದಿರದು. ಆದುದರಿಂದ ನಮ್ಮ ರಾಜ್ಯಘಟನೆಯಲ್ಲಿ ನಮಗಾವ ಹಕ್ಕುಗಳನ್ನು ಕೊಡಲಾಗಿದೆ ಎಂಬುದನ್ನು ಮನಃಪೂರ್ವಕವಾಗಿ ತಿಳಿದುಕೊಂಡು, ಅವುಗಳನ್ನು ಕಾರ್ಯತಃ ಸದುಪಯೋಗಿಸಿಕೊಳ್ಳಲು ಪ್ರಯತ್ನಿಸಬೇಕಲ್ಲವೆ?

ಬರೆದವರು: ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧) ವಾಕ್ ಮತ್ತು ಅಭಿಪ್ರಾಯ ಸ್ವಾತಂತ್ರ್ಯ.

(೨) ನಿರಾಯುಧರಾಗಿ ಶಾಂತವಾಗಿ ಸಭೆ ಸೇರುವ ಸ್ವಾತಂತ್ರ್ಯ.

(೩) ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡಿರುವ ಸ್ವಾತಂತ್ರ್ಯ.

(೪) ಭಾರತದ ಒಂದು ಮೂಲೆಯಿಂದ ಯಾವ ಮೂಲೆಗಾದರೂ ಸಂಚಾರ ಮಾಡುವ ಸ್ವಾತಂತ್ರ್ಯ.

(೫) ಭಾರತದ ಯಾವುದೇ ಕಡೆಯಲ್ಲಿ ಇರುವ ಮತ್ತು ಸ್ಥಿರವಾಗಿ ನೆಲೆ ನಿಲ್ಲುವ ಸ್ವಾತಂತ್ರ್ಯ.

(೬) ಯಾವುದೇ ಉದ್ಯೋಗವನ್ನವಲಂಬಿಸುವ ಅಥವಾ ಯಾವುದೇ ವ್ಯಾಪಾರ ವಹಿವಾಟನ್ನು ನಡೆಯಿಸುವ ಸ್ವಾತಂತ್ರ್ಯ.

(೭) ಆಸ್ತಿಪಾಸ್ತಿಗಳನ್ನು ಕೊಂಡುಕೊಳ್ಳುವ, ಅಥವಾ ಮಾರುವ ಸ್ವಾತಂತ್ರ್ಯ ಮತ್ತು

(೮) ಯಾವನಾದರೂ ಆತಂಕದ ಬಾನಾದಿಯಲ್ಲಿ ಪೂರ್ವಸೂಚನೆ ಯೊಯ್ಯಲ್ಪಡದೆ ಎಂದಿಗೂ ಸೆರೆಹಿಡಿಯಲ್ಪಟ್ಟವನು ಸ್ಥಾನಬದ್ಧತೆಯಲ್ಲಿಡಲ್ಪಡುವುದಿಲ್ಲ. ಆಂತಕನು ೨೪ ತಾಸುಗಳೊಳಗೆ ನ್ಯಾಯಾಧೀಶರ ಸಂಮುಖಕ್ಕೆ ತರಲ್ಪಡಬೇಕು ಹಾಗೆಯೇ ಕೈದಿಯಾದವನು ವಕೀಲರ ನೆರವನ್ನೂ ಪಡೆಯಬಹುದು. ಆದರೂ ರಾಜ್ಯದ ಭದ್ರತೆಯನ್ನು ಕೆಡಿಸಬಹುದಾದ ನಾಗರಿಕನ ಪಾಲಿಗೆ ಆತನ ಆತಂಕದ ಸ್ವಾತಂತ್ರ್ಯವನ್ನು ತಡೆಹಿಡಿಯುವ ಅಧಿಕಾರವನ್ನು ರಾಜ್ಯಸರಕಾರಕ್ಕೆ ಈ ಸಂವಿಧಾನವು ಕೊಟ್ಟಿದೆ.

ಧರ್ಮ ಸ್ವಾತಂತ್ರ್ಯ— ಧರ್ಮವು ರಾಜಕಾರಣದಿಂದ ದೂರವುಳಿಯುವಸಮಯದಲ್ಲಿ ಮಾತ್ರ ಆಗಬಲ್ಲ ಜಾತ್ಯತೀತ ಸರಕಾರವೆಂದು ಭಾರತವು ತನ್ನ ಸರಕಾರವನ್ನು ಹೆಸರಿಸಿದೆ. ವಿಶ್ವಾಸ ಮತ್ತು ಆರಾಧನೆಯಲ್ಲಿ ಸ್ವಾತಂತ್ರ್ಯದ ಭಾವನೆಯಿಲ್ಲವಾದರೆ, ಜೀವನವು ಸಾರಹೀನವಾದೀತು. ಆದುದರಿಂದಲೇ ನಮ್ಮ ಸಂವಿಧಾನವು ನಮಗೆಲ್ಲರಿಗೂ ಧಾರ್ಮಿಕ ಸ್ವಾತಂತ್ರ್ಯದ ಭರವಸೆಯನ್ನಿತ್ತಿದೆ.

ಸಾಂಸ್ಕೃತಿಕ ಹಾಗೂ ವಿದ್ಯಾಧಿಕಾರ—ಅಲ್ಪ ಸಂಖ್ಯಾಕರ ಮತಗಳಿಗೆ ಬೆಳೆಯಲು ಮತ್ತು ಉಳಿಯಲು ಅನುಕೂಲವಾಗುವಂತೆ ಭಾರತೀಯ ಸಂವಿಧಾನವು ಪ್ರಜೆಗಳಿಗೆ ತಮ್ಮ ಧರ್ಮ, ಸಂಸ್ಕೃತಿ, ಭಾಷೆ ಮತ್ತು ಧರ್ಮಗ್ರಂಥಗಳನ್ನು ಉಳಿಸಿಕೊಂಡು ಅವುಗಳಿಗನುಸಾರವಾಗಿ ನಡೆದು ಬರುವ, ಬದುಕುವ ಸ್ವಾತಂತ್ರ್ಯವನ್ನು ಕೊಟ್ಟಿದೆ. ವಿದ್ಯಾಸಂಸ್ಥೆಗಳಿಗೆ ಧರ್ಮ, ಕುಲ, ಜಾತಿ, ಭಾಷೆಗಳಲ್ಲಿರಬಹುದಾದ ವೈವಿಧ್ಯತೆಗಳ ಆಧಾರದ ಮೇಲೆ ಪ್ರವೇಶವೀಯುವುದನ್ನು ನಮ್ಮ ಸಂವಿಧಾನವು ನಿರ್ಬಂಧಿಸಿ ಎಲ್ಲ ನಾಗರಿಕರಿಗೂ ಸಮಾನಾವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಅಲ್ಪಸಂಖ್ಯಾಕರು ತಮ್ಮ ಭಾಷೆ ಮತ್ತು ಸಂಸ್ಕೃತಿಯ ಬೆಳವಣಿಗೆಗೆ ಹಾಗೂ ಪ್ರೋತ್ಸಾಹನಕ್ಕಾಗಿ ತಮ್ಮದೇ ಆದ ಸಂಸ್ಥೆಗಳನ್ನು ಕಟ್ಟಲು, ನಡೆಸಲು ಸಂಪೂರ್ಣ ಸ್ವತಂತ್ರರಿರುತ್ತಾರೆ.

ಆಸ್ತಿಪಾಸ್ತಿಗಳ ಅಧಿಕಾರ-- ನ್ಯಾಯರಕ್ಷಿತವಾದ ಯಾವುದೇ ಆಸ್ತಿಪಾಸ್ತಿಗಳನ್ನು ಯಾರೊಬ್ಬನಿಂದಲೂ ಅಗಲಿಸಬಾರದೆಂದು ಭಾರತೀಯ ಘಟನೆಯು ಉಲ್ಲೇಖಿಸುತ್ತದೆ. ಸಾರ್ವಜನಿಕೋಪಯೋಗಕ್ಕೋಸ್ಕರ ಬಳಸಲು ಅಗತ್ಯಬೀಳುವ ಖಡ್ಡಾಯವಾಗಿವಶಪಡಿಸಿಕೊಳ್ಳುವ ವಡವೆಗಳಿಗೆ ರಾಜ್ಯಸರಕಾರವು ನ್ಯಾಯವಾದ ಪರಿಹಾರವನ್ನು ಕೊಡತಕ್ಕದ್ದು. ಪ್ರತಿಯೊಬ್ಬನಿಗೂ ತನ್ನ ಒಡವೆಯ ಮೇಲೆ ಅವನ್ನು ಹೊಂದುವ ಪಡೆಯುವ ಹಾಗೂ ಮಾರುವ ಅಧಿಕಾರವಿದೆ. ರಾಷ್ಟ್ರಾಧ್ಯಕ್ಷರ ಅನುಮತಿಯಿಲ್ಲದೆ ಯಾವ ರಾಜ್ಯ ಸರಕಾರವಾದರೂ ಖಡ್ಡಾಯವಾಗಿ ಯಾವ ಒಡವೆಯನ್ನೂ ನಾಗರಿಕರಿಂದ ತಮ್ಮ ವಶಪಡಿಸಿಕೊಳ್ಳಲಾರದು.

ಸೇವೆಯಲ್ಲಿ ನಿರ್ಬಂಧ—ಮಾನವನನ್ನುಪಯೋಗಿಸುವ ವಾಹನಗಳು, ಮತ್ತು ಯಾವುದೇ ಒತ್ತಾಯದ ಜುಲುಮೆಯಿಂದ ಸೇವೆಯನ್ನು ಮಾಡಿಸಿಕೊಳ್ಳುವುದು ಸಂವಿಧಾನದ ಮೇರೆಗೆ ವಿರುದ್ಧವಾಗಿವೆ. ೧೪ ವರ್ಷಕ್ಕಿಂತ ಎಳೆ ಪ್ರಾಯದ ಯಾವ ಮಗುವನ್ನು ಯಾವುದೇ ಕಾರಖಾನೆ, ಗಣಿ ಅಥವಾ ಇನ್ನಿತರ ಕಠಿನ ಕೆಲಸಗಳಲ್ಲಿ ಸೇವೆಗಾಗಿ ನೇಮಕ ಮಾಡಿಕೊಳ್ಳುವುದನ್ನು ಘಟನೆಯು ನಿರ್ಬಂಧಿಸುತ್ತದೆ.

ಘಟನಾತ್ಮಕ ಅಧಿಕಾರಗಳು — ತನ್ನ ಮೂಲಭೂತ ಅಧಿಕಾರವನ್ನು ಹೊಂದುವುದಕ್ಕಾಗಿ ಭಾರತೀಯನು ಸುಪ್ರೀಂ ಕೋರ್ಟಿನ ವರೆಗೂ ನ್ಯಾಯಾಲಯದ ಮುಂದೆ ಹೋಗಬಹುದು. ಈ ಅಧಿಕಾರವಿಲ್ಲದೆ ಹೋದರೆ ಉಳಿದೆಲ್ಲವುಗಳೂ ಅರ್ಥಹೀನವಾಗಿ ಪರಿಣಮಿಸುತ್ತವೆ.

ಇಷ್ಟೊಂದು ಅಧಿಕಾರವು ಪ್ರತಿಯೊಬ್ಬ ನಾಗರಿಕನಿಗೂ ಇದೆ ಇದನ್ನು ಕಾರ್ಯಾಚರಣೆಯಲ್ಲಿ ಮಾತ್ರ ನಾವು ಹಿಂದು ಮುಂದು ನೋಡಿ, ತರಬೇಕಾಗುತ್ತದೆ. ದೇಶದ ಎಲ್ಲ ನಾಗರಿಕರಿಗೂ ನಮ್ಮ ಹಾಗೆಯೇ ಸ್ವಾತಂತ್ರ್ಯವಿರುವುದರಿಂದ, ನಾವು ನಮಗೊದಗಿದ ಅಧಿಕಾರಗಳನ್ನು ಪರರ ಹಕ್ಕು ಬಾಧ್ಯತೆಗಳಿಗೆ ವಿರುದ್ಧವಾಗಿ ಚಲಾಯಿಸದೆ ನಮ್ಮ ಉತ್ತಮಿಕೆಗಾಗಿ ಮಾತ್ರ ಬಳಸಿಕೊಂಡರೆ, ನಮ್ಮ ಹಾಗೂ ತನ್ಮೂಲಕ ದೇಶದ ಪ್ರಗತಿಯೂ ಆಗುವುದು; ನಮ್ಮ ಸಂವಿಧಾನವೂ ಗೌರವಿಸಲ್ಪಟ್ಟಂತಾಗುವುದು. ಹಾಗಾಗಲು ನಾವೆಲ್ಲರೂ ಪ್ರಯತ್ನಮಗ್ನರಾಗುವುದು ನಮೆಲ್ಲರ ಕರ್ತವ್ಯವಲ್ಲವೆ?

ಉತ್ತಮ ಸಾಹಿತ್ಯದ ಅಪಾರ ಶಕ್ತಿ

(೩ನೇ ಪುಟದಿಂದ)

ಪ್ರಾದೇಶಿಕ ಭಾಷಾ ಸಾಹಿತ್ಯವೆಂದೂ, ಹಿಂದಿಯನ್ನು ರಾಷ್ಟ್ರಭಾಷೆಯೆಂದೂ, ಇಂಗ್ಲಿಷನ್ನು ಅಂತರಾಷ್ಟ್ರೀಯ ಸಂಪರ್ಕದ ಭಾಷೆಯೆಂದೂ, ಸಂಸ್ಕೃತವನ್ನು ಪವಿತ್ರ ಗ್ರಂಥಗಳ ಭಾಷೆಯಾದ್ದರಿಂದ ಪೂಜನೀಯವೆಂದೂ ನಮ್ಮೆಲ್ಲ ಭಾಷೆಗಳ ಮೇಲೆ ಪ್ರಭುತ್ವವನ್ನು ಸಂಸ್ಥಾಪಿಸಿದ ಭಾಷೆಯೆಂದೂ ಮನ್ನಿಸಿ, ಸರ್ವತೋಮುಖವಾದ ಜ್ಞಾನಕ್ಕೆ, ಈ ನಾಲ್ಕು ಪ್ರಮುಖ ಭಾಷೆಗಳ ಅಭ್ಯಾಸ ನಮಗೆ ಅವಶ್ಯವಾಗಿ ಬೇಕಾಗುತ್ತದೆ ... ರೆ ಒಳ್ಳೆಯದು.

ಬಹುಮುಖ ಸಾಹಿತ್ಯಾಭಿರುಚಿಯಿಂದ ಆತ್ಮವಿಕಾಸ, ಮತ್ತು ಪೂರ್ಣ ಮಾನವತೆ ನಮ್ಮಲ್ಲಿ ಸಾಧ್ಯವಿದೆ. ಆದರೆ ಸಾಹಿತ್ಯವನ್ನು ಆರಿಸುವಾಗ, ಸದ್ಭಾವನೆಗಳಿಂದ ಕೂಡಿದ ಸಾಹಿತ್ಯವನ್ನೇ ಅಭ್ಯಾಸ ಮಾಡಬೇಕು. ಈ ಕೆಲವು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಸಾಹಿತ್ಯದ ಅಭ್ಯಾಸಿಗಳಾಗಲು ಯತ್ನಿಸೋಣ.

ಗೋವೆಯು ಭಾರತದ ಒಂದು ಭಾಗವಾಗಿದೆ; ಅಂತೆಯೇ 'ಗೋವಾ ಸ್ಟೋರ್ಸ್' ಸಕಲ ಜೀವನಾವಶ್ಯಕ ಸಾಮಗ್ರಿಗಳ ಒಂದು ಸ್ಟೋರ್ಸ್ ಆಗಿದೆ.

ದಕ್ಷ ಕೆಲಸಗಾರರಿಂದ ತಯಾರಿಸಲ್ಪಟ್ಟ ವಿವಿಧ ಬಿಸ್ಕಿಟು, ಕೇಕ್, ಟೋಸ್ಟ್, ಬ್ರೆಡ್‌ಗಳೂ ನಿತ್ಯೋಪಯೋಗಿ ಕಟ್ಲೇರಿ ಸಾಹಿತ್ಯಗಳೂ ಸದಾ ದೊರೆಯುತ್ತವೆ.

ಗೋವಾ ಸ್ಟೋರ್ಸ್ ಮತ್ತು ಬೇಕರಿ ಕೆಥೊಲಿಕ್ ಬ್ಯಾಂಕಿನ ಎದುರು ಉಡುಪಿ.

ಮ್ಯಾನೇಜರ್– ಎಲ್. ಡಿ. ಸಲ್ಡಾನ.

ಜನವರಿ ೩೦

ಸತ್ತ ವೀರರ ಆತ್ಮಗಳವೊ
ಗೋರಿ-ಗೋರಿಗಳಿಂದೆ
ಕೇಳಿದ್ದು ಬರುತಲಿವೆ ವರುಷ-ವರುಷಕೂ
ನಮ್ಮೆಡೆಗಿಯೆ ...!
ಒಕ್ಕೊರಲಿನಿಂದಲವೊ ಸಾರಿ—
ಹೇಳುತಿವೆ:—
"ನಾಡ ವೀರರು ನಾವು
ಮಡಿದವರು,
ನಾಡ—ನುಡಿಗಳಿಗಾಗಿ ಮಾನ—
ರಕ್ಷಣೆಗಾಗಿ,
ನಮ್ಮವರಿಗಳ ರಕ್ತಸುರಿದಿಹೆವೊ ನಾವೆಲ್ಲ
ಭಾರತಿ—
ಯು, ಬಿಡುಗಡೆಗಾಗಿ!
ನಾವೆಲ್ಲ ಬಿದ್ದಿಹೆವು ತಾಯಡಿಗೆ ಹೂವಾಗಿ!
ನಾವೆಲ್ಲರೂ ಅಕ್ಷಯ ರು ಅಮರ ಜೀವಿಗಳು
ವೀರ-ಯೋಧರುಗಳು,
ಸತ್ಯ—ಅಹಿಂಸೆ-ಶಾಂತಿ ದೂತರನು
ಭಾವಿಗಳು!
ಇಲ್ಲಿಹರು, ಅಲ್ಲಿಹರು, ಎಲ್ಲೆಲ್ಲೂ ಇಹರು
ಬುದ್ಧ—ಬಸವ—ಏಸು-ಗಾಂಧಿಗಳು,
ಹಿಂದಾಗಿ ಹೋಗಿರುವ, ಮುಂದಿನ್ನು
ಬರಲಿರುವ
ಕಾರಣಿಕ ಪುರುಷರು..!
ನಾವೆಲ್ಲರೂ ಅಕ್ಷಯ-ಅಮರ ಜೀವಿಗಳು!

—ಬಿ ಬಿ ಹಿಂಗಮಿರೆ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	6
20	ನೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
29	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಾನ್ವಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿ.

ಆಹ್ವಾನ

ಕವಿ: ಶ್ರೀ ಕೆ ವಾಸುದೇವಾಚಾರ್ಯ

ಅಹಿಂಸೆ ಹಾಡನು ಹಾಡುತ ಹಿಂಸೆ
ವ್ಯಾಪ್ರದ ಹಸಿವಿನ ಶಾಂತಿಯ ತೋರಿ
ನಡೆದಿದೆ ಕೀರ್ತನವು! ಕಾಳೋರಗ—
ದಾ ಮಂಗಳ ನರ್ತನವು! ಬಾರಿ ಬಾರಿ
ಶಾಂತಿ, ನಿನ್ನಯ ಕರಿ ನಾಲಗೆ ತಿರಿದು
ಶನಿ ದ ಮುಖವಾಡವ ಧರಿಸಿ,
ಆಹ್ವಾನಿಸುವೆನು ಸ್ವಾಗತ ಬಯಸಿ,
ನಿನ್ನಯ ತುಂಬಿದೆ ಜಗದಲಿ ಹರಡು!
ಸಿಡಿ ಬಾಂಬಿನ ಕಿಡಿ ವಿಶ್ವವು ಬರಡು!
ಅಲ್ಲೀ ಶಾಂತಿಯ ಶಾಂತಿಯ ಕದಡು!
ನಿನ್ನನು ಕಾಂಬುವ ಆಸೆಯು ಹಿಂದು;
ಬಾನಲಿ ಹಾರುವ ಹಕ್ಕಿಯ ಜರಿದು,
ಹಾರಿದೆ ಬಿನ್ನಣ ಮುಗಿಲನು ಕೆರೆದು,
ಡೋಲಾಯಮಾನ ಮನ
ಸ್ವರ್ಗದ ಸುರಿಸುವ !
ಘರ್ಷಣೆ ತಿಕ್ಕಾಟ! ಉಮ್ಮಳಿಕೆ—
ಗಿಸ ಕಿಡಿ ಕಾಟ! ಆಗೋ ಅಲ್ಲಿಯು
ಶಾಂತಿಯ ಸಂಸಾರ! ಆ
ನಿನ್ನಯ ಗರ್ಜನ್ಯ ಮುಗಿಲಿನ
ಘರ್ಷಣೆಯೂ ಜನ್ಯ!
ಮೈದೋರಿರುವ ಶಾಂತಿ!
ಗಾಢಾಮಿಸಿ ಶಾಂತಿ!
ಸಾಗರ ಹಾಸಿನ ಮಾಲೆಯಲಿ,
ಮಿಂಚಿನ ಕಂಚಿನ ತೊಡುಗೆಯಲಿ,
ಜೋಗಿನ ಜಲಜಲ ಧಾರೆಯಲಿ,
ವಿದ್ಯುಚ್ಛಂದ್ರನು ತಲೆಯಲ್ಲಿ,
ಲಾಸ್ಯದ ಹಿನ್ನೆಲೆಯಿಂದಿಲ್ಲಿ
ತಾಂಡವನಾಡೇ ಬರದಲ್ಲಿ
ಬಾಂಬಿನ ಢಂ ಡಂ ಡಮರು ನಿನಾದ
ಸಂಗೀತಾಮೃತ ನಾದ ಸುಭೋಧ!
ಮಸಗ ವ ಹುಂಕಾರದ ಭೇರಿ
ಅರುಣೋದಯದುಜ್ಜ್ವಲ ಸುಭೇರಿ!
ನಿನ್ನಯ ಮುಖದಿಂದ ಹೊಮ್ಮುವ ಬೆಳಗು!
ಕಣ್ಣುಗಳೆಡೆಯಿಂ ಸೂಸುವ ಬೆಳಗು!
ಎಲ್ಲೆಲ್ಲೂ ಬೆಳಗುವಾಯು! ಉರಿಯುಮಯ!
ಕಡೆಗೆಲ್ಲ ಎಲ್ಲೂ ಶಾಂತಿಮಯ!
ಓ ಶಾಂತಿ ಮೈದೋರು!
ಕೂಗುವ ಬದರುವ ಎದೆಗಲ್ಲ
ವಿಶ್ವರೂಪದಲಿ ತಲೆದೋರು
ಸಿಡಿಲೊಡಲಿಂದಲಿ ಎಚ್ಚೆತ್ತು
ಭೂಗರ್ಭದ ಕಿಡಿಯಿಂ ಸಿಡಿದೆದ್ದು!
ತುಡುಕಿದ ಹೆಡೆಯಿಂ ಮಿಡಿದೆದ್ದು
ಅಣು ಪರಮಾಣುವನು ಕಡಿದೆದ್ದು
ಕ್ರಾಂತಿಯ ಬಸಿರಿಂ ಬಿರಿದೆದ್ದು
ಆಹಾ ಶಾಂತಿಯ ಬರಬರೆಯು!
ನಿನ್ನಯ ಆ ದಾರುಣ ಶಾಂತಿ!
ಅದುವೇ ಕಾರುಣ್ಯದ ಶಾಂತಿ!

ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ ಮೈಸೂರು ಸರ್ಕಾರದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕವಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆಯು ಉಪಯುಕ್ತವಾಗುತ್ತದೆ.

ಮೈಸೂರು ಶ್ರೀಗಂಧದ ತೈಲ

ಗವರ್ನಮೆಂಟ್ ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ

ಮೈಸೂರು.

ಕರ್ನಾಟಕದ ಜಾನಪದ ಕಲೆ

ಅನೇಕರ ಸಾನ್ನಿಧ್ಯದಿಂದ ದೂರವುಳಿದಿರುವ ಯಕ್ಷಗಾನವು ನಮ್ಮ ಜಾನಪದ ಕಲೆಯಾಗಿದೆ. ಅತ್ತ ನಮ್ಮವರ, ನಮ್ಮ ರಾಜ್ಯಸರಕಾರದ ದೃಷ್ಟಿ ಹರಿಯುತ್ತಿಲ್ಲ; ನಮ್ಮವರೇ ನಮ್ಮ ಕಲೆಗೆ ದ್ರೋಹ ಬಗೆಯುವುದೆಂದರೆ, ನಮ್ಮ ಮನೆಯನ್ನು ನಾವೇ ಸುಟ್ಟುಕೊಂಡಂತೆಯಲ್ಲವೆ?

ಬರೆದವರು: ಶ್ರೀ. ವಿ. ಬಿ. ಹೊಸಮನಿ.

ಕರಾವಳಿಯ ಕನ್ನಡಿಗರು ಅಭಿಮಾನದಿಂದ ಹೇಳಿಕೊಳ್ಳುವ ಒಂದು ಕಲೆ-ಯಕ್ಷಗಾನ ಬಯಲಾಟ. ಇದು ಕನ್ನಡ ವಾಙ್ಮಯದಲ್ಲಿ ಗಣ್ಯಸ್ಥಾನವನ್ನು ಪಡೆದಿದೆಯೆಂಬುದು ಸಿದ್ಧ. ಕೇಂದ್ರ ಸರಕಾರದ ವಿವಿಧ ಸಾಂಸ್ಕೃತಿಕ ಸಂಶೋಧನಾ ವಿದ್ಯಾರ್ಥಿ ವೇತನಗಳಲ್ಲಿ ಯಕ್ಷಗಾನ ಕಲಾ ಸಂಶೋಧನೆಗೂ ಒಂದು ಸ್ಥಾನ ದೊರೆತಿದೆ. ಆದರೂ ಈ ಕಲೆಯ ಅಭಿವೃದ್ಧಿಯ ಬಗ್ಗೆ ಸಾರ್ವಜನಿಕರ ಬೆಂಬಲವಿರಬೇಕಾದುದು ಅವಶ್ಯ. ಯಕ್ಷಗಾನ ಕಲೆಗೆ ಆಗುತ್ತಿರುವ ಅನ್ಯಾಯಗಳನ್ನು ಪ್ರತಿಭಟಿಸಲೇಬೇಕು.

ಯಾವುದಾದರೊಂದು ಕೃತಿ ಚೌರ್ಯ ನಡೆದರೆ ಯಾವುದಾದರೊಂದು ಮೂಲೆಯಲ್ಲಿದ್ದ ಲೇಖಕರು ತಮ್ಮ ಲೇಖನಿಯ ಮೂಲಕ ಕೃತಿ ಚೋರನ ಮೇಲೆ ವಾಗ್ಬಾಣಗಳನ್ನು ಬಿಡುತ್ತಾರೆ. ವಸ್ತುತಃ ಅದು ಸಹಜವಾದ ಕಾರ್ಯ. ಒಂದು ಕೃತಿಯಂತೆ ಇನ್ನೊಂದು ಸೃಷ್ಟಿಯಾದುದೂ ಇರಬಾರದೆಂದೇನೂ ಇಲ್ಲ. ಕೃತಿ ಗೋಪನ ಮಾತ್ರ ಅದಕ್ಕಿಂತ ದೊಡ್ಡ ಅಪರಾಧವಲ್ಲವೆ?

ಕಳೆದ ೧೯೫೬ರ ನವಂಬರ ತಿಂಗಳ ಆದಿಯಲ್ಲಿ ಕರ್ನಾಟಕ ರಾಜ್ಯೋದಯದ ಸುದಿನದಂದು, ಮೈಸೂರು ಸರಕಾರವು ತನ್ನ ಹೆಸರನ್ನು ಶಾಶ್ವತಗೊಳಿಸಲೊ ಎಂಬಂತೆ "ಮೈಸೂರು ರಾಜ್ಯ" ವೆಂಬ ಬೃಹದ್ಗ್ರಂಥವನ್ನು ಪ್ರಕಟಿಸಿದೆ. ಅದೊಂದು ಅಪೂರ್ವ ಸಂಗ್ರಹವೇ ಎನ್ನಬಹುದು. ಆದರೆ ಇಷ್ಟು ಪ್ರಸಿದ್ಧಿ ಪಡೆದಿರುವ ಯಕ್ಷಗಾನ ಬಯಲಾಟದ ಕಲೆಯ ಉಲ್ಲೇಖವು ಅದರಲ್ಲಿಲ್ಲದಿರುವುದೊಂದು ದೊಡ್ಡ ಕೊರತೆ. ಮೈಸೂರು ರಾಜ್ಯದ, ಸರಕಾರದ ಪ್ರಚಾರ-ವಾರ್ತಾ ಶಾಖೆಯವರಿಗೆ ಯಕ್ಷಗಾನಕ್ಕೆ "ದೊಂಬಿದಾಸರ ಕೂಟ"ವೆಂಬ ನಾಮಾಂತರವಾದರೂ(ಟೀಕೆ) ತಿಳಿದಿದೆಯಲ್ಲವೆ? ಹಾಗಿದ್ದರೆ ಅದೊಂದು ಕೂಟ; ಆ ಕೂಟದಲ್ಲಿ ಮೈಸೂರಿನ ಪ್ರಾತಿನಿಧ್ಯವಲ್ಲದೆ ಕರ್ನಾಟಕದಾದ್ಯಂತ ಪ್ರಾತಿನಿಧ್ಯವಿಲ್ಲವೆಂದಂತಾಗಲಿಲ್ಲವೆ? ದಕ್ಷಿಣ-ಉತ್ತರ ಕನ್ನಡಗಳಲ್ಲಿ ಮಾತ್ರವಲ್ಲದೆ ಮಲೆನಾಡು ಪ್ರದೇಶದಲ್ಲಿಯೂ ಮೈಸೂರಿನ ಬಯಲು ಪ್ರದೇಶದಲ್ಲಿಯೂ ಯಕ್ಷಗಾನ ಕಲೆಯ ಪ್ರಚಾರವಿದ್ದಿತೆಂಬುದಕ್ಕೆ ಪ್ರಸಿದ್ಧ ಕಲಾವಿದರಾದ ದಿವಂಗತ ಬಿಡಾರಂ ಕೃಷ್ಣಪ್ಪನವರಂತಹರು ಯಕ್ಷಗಾನ ಮೇಳವನ್ನು ಮೈಸೂರು ಸೀಮೆಗೆ ಕಟ್ಟಿಕೊಂಡು ಹೋಗಿ ಮೈಸೂರಿನ ರಾಜಮನೆತನದವರಿಂದಲೂ ಗೌರವ ಪಡೆದಿದ್ದರೆಂಬುದಕ್ಕಿಂತ ಹೆಚ್ಚಿನ ಸಾಕ್ಷಿ ಬೇಕೆ? ಧಾರವಾಡ ಕಡೆಯಲ್ಲಿಯೂ ಯಕ್ಷಗಾನವನ್ನು "ದೊಡ್ಡಾಟ"ವೆಂದು ಕರೆಯುತ್ತಾರೆ. ಅಲ್ಲಿಯೂ ಅದರ ಪ್ರಚಾರವಿದೆಯೆಂಬುದನ್ನು ಇದರಿಂದ ನಿರ್ಣಯಿಸಬಹುದು. ಹೀಗಿದ್ದರೂ ಅದರ ಕಡೆಗೆ ನಮ್ಮ ಸಂಸ್ಕೃತಿ ಪ್ರಚಾರಕರ ಗಮನವೇಕೆ ಹರಿದಿಲ್ಲವೊ—ತಿಳಿಯದು.

ವಿವಿಧ ಕಲೆಗಳಿಗೆ ಕೊಡುತ್ತಿರುವಂತೆಯೆ ಜಾನಪದ ಕಲೆಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಆದರೆ ಜಾನಪದದಲ್ಲಿಯೂ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿದ ಯಕ್ಷಗಾನ ಕಲೆಯ ಕಡೆಗೆ ಮಲತಾಯಿ ನ ಗುವಿನ ಮಮತೆಯನ್ನು ತೋರಿಸುತ್ತಿರುವುದು ಕಾಣುತ್ತಿದೆ. ಇದಕ್ಕೆ ನಮ್ಮ ಸರಕಾರವನ್ನು ದೂರುವುದರೊಂದಿಗೆ ನಮ್ಮವರೇ ಕೆಲವರು ಗುಂಪು ಕಟ್ಟಿಕೊಂಡು ನಮ್ಮ ಕಲೆಗೆ ಕೇಡನ್ನು ಬಗೆದರೆಂದರೆ ಸಹಿಸಲಾಗಲಾರದು.

ಆಕಾಶವಾಣಿ ಕೇಂದ್ರದವರು ಆಗಾಗ ಯಕ್ಷಗಾನ ಗೋಷ್ಠಿಯನ್ನೇರ್ಪಡಿಸುವುದಿದೆ, ಆದರೆ ಆ ಗೋಷ್ಠಿಯನ್ನು ಗ್ರಾಮಸ್ಥರ ಕಾರ್ಯಕ್ರಮದ ಪಟ್ಟಿಯಲ್ಲಿ ಅಥವಾ ಇನ್ನಾವುದಾದರೂ ಅಗ್ಗದ ಪ್ರಚಾರ ವಿಭಾಗದೊಂದಿಗೆ ಸೇರಿಸಿಬಿಡುತ್ತಾರೆ. ಪ್ರತ್ಯೇಕ ಸ್ಥಾನವೆಂದು ದೊರೆಯಬೇಕಾದರೆ ಬಹಳ ಪ್ರಯಾಸವೇ ಸರಿ. ಈ ವರೆಗೆ ದೊರೆತೂ ಇಲ್ಲ.

ನಮ್ಮಲ್ಲಿ ಸಾಹಿತಿಗಳಿಗೂ ಸಾಹಿತ್ಯಗಳಿಗೂ ಹೆಚ್ಚು ಕೊರತೆ ತೋರಲಾರದು. ಆದರೆ ಅವರ ಸ್ವಾರ್ಥವನ್ನುಮಾತ್ರ ಅವರು ಸಾಧಿಸಿಕೊಳ್ಳದೆ ಬಿಡಲಿಲ್ಲ. ಕಾಲಗರ್ಭದಲ್ಲಿ ವಿಲೀನಗೊಂಡ ಒಬ್ಬ ಕವಿಯು ತನ್ನ ನಾಡಿನವನೆಂದೋ ಇನ್ನಿತರ ಸ್ವಾರ್ಥಗಳಿಂದಲೋ ಅವನ ವಿಚಾರವಾಗಿ, ಏನಾದರೂ ಸಾಧಿಸಲು ಮುಂದಾಗುತ್ತಾರೆ. ಸಮಗ್ರ ದೇಶದ ದೃಷ್ಟಿಯಿಂದ ಹಿತವನ್ನವರು ಎಂದಿಗೂ ಬಯಸುವುದಿಲ್ಲ. ಈ ರೀತಿಯಿಂದ, ಅನೈಕ್ಯತಾ ಭಾವನೆಗಳುಂಟಾಗಿ ಸರಕಾರಕ್ಕೂ ಇದನ್ನೆ ಹೊಂದಿಕೊಂಡಿರುವ ಕಲಾವಿದರಿಗೂ ಹೆಚ್ಚಿನ ತೊಂದರೆಯುಂಟಾಗುವುದೆಂಬುದನ್ನು ಗಮನಿಸಬೇಕು.

ಕಲೆಯ ಬಗ್ಗೆ ಯಾವುದೇ ರೀತಿಯ ಸಂಘಟನವಾಗಲಿ ಮನವಿ ಪತ್ರಗಳಾಗಲಿ ಸರಕಾರಕ್ಕೆ ಬೇಕಾಗಿಲ್ಲ. ಅದು ಪರಸ್ಪರ ದೇಶದ ಹೃದಯಾಂತರಾಳದಲ್ಲಿದ್ದು ಅದರ ಹಿತಚಿಂತನೆಯಾಗಬೇಕಾಗಿದೆ. ಎಲ್ಲದಕ್ಕಿಂತಲೂ ಮಿಗಿಲಾಗಿ ಕಲಾವಿದರಲ್ಲಿ ಸೌಹಾರ್ದತಾ ಭಾವನೆ ಮುಖ್ಯ. ಅದಕ್ಕಾಗಿ ಕಲಾವಿದರು ಒಂದು ಕಡೆಯಿಂದ ಇನ್ನೊಂದೆಡೆಗೆ ಹೋಗಿ ಅಲ್ಲಿ ತಮ್ಮ ಕಲಾ ಚಾತುರ್ಯವನ್ನು ಪ್ರದರ್ಶಿಸುತ್ತಿರಬೇಕು. ಅದು ಜನರ ಜೀವನದ ಮೇಲೆ ಪ್ರತಿಬಿಂಬಿಸಬೇಕು. ಆದರೆ ಮಾತ್ರ ಆ ಕಲೆಯ ರಾಯಭಾರವು ಯಶಸ್ವಿಯಾದೀತು.

ಯಕ್ಷಗಾನದ ವಿಚಾರದಲ್ಲಿ ಹಲವಾರು ಚರ್ಚಾಸ್ಪದ ವಿಚಾರಗಳಿವೆ. ಅಂಥವುಗಳು ಬಯಲಿಗೆ ಬಂದು ಜನರ ಚರ್ಚಾರಂಗಕ್ಕಿಳಿಯಬೇಕು. ಅವು ಕೊನೆಗೆ ಪರಿಶುದ್ಧಗೊಳ್ಳುವಂತಾಗಬೇಕು. ಅದಕ್ಕೆ ತಕ್ಕುದಾದ ಸಲಹೆ—ಸೂಚನೆಗಳನ್ನೀಯುತ್ತಿರಬೇಕು. ವ್ಯರ್ಥ ಒಬ್ಬರ ವಾದವನ್ನು ಖಂಡಿಸಿ—ಮಂಡಿಸಿ ಕಾಲಹರಣ ಮಾಡುವುದರಿಂದ ಕೀಳು ದರ್ಜೆಯ ಅಭಿರುಚಿಗೇ ಪ್ರಾಧಾನ್ಯವಿತ್ತಂತಾಗುತ್ತದೆ. ಈ ಭಾಗದಲ್ಲಿ ಉತ್ತಮ ಹಾಗೂ ವಿಚಾರ ಪೂರ್ಣ ಲೇಖನಗಳು ಜನರ ಮನಸ್ಸನ್ನು ಪರಿಪಕ್ವಗೊಳಿಸಲೆಂದೂ ಹಾರೈಕೆ.

ಕುಂದಾಪುರ ಡಿ. ಮು ಕೋರ್ಟಿನಲ್ಲಿ

S C, No 752/1957.

B. V. ಮಾಧವರಾವ್ —ವಾದಿ

ವೆಂಕಟ್ರಾಯ ಮೇಸ್ತ. ಬುಡ್ಡು ಮೇಸ್ತನ ಮಗ, ಕುಂದಾಪುರ ಕಸಬಾ ಗ್ರಾಮದಲ್ಲಿರುವವ Coondapur—ಪ್ರತಿವಾದಿ

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:–

ವಾದಿಗೆ ನಿಮ್ಮಿಂದ ಬರಬೇಕಾದ ಹಣಗಳನ್ನು ಬರಮಾಡಿಕೊಳ್ಳುವರೇ ಜರಗಿಸಿದ ಮೇಲಣ ದಾವೆಯನ್ನು ನಿಮ್ಮ ಹಾಜರಿ ಬಗ್ಗೆ ತಾ. 14-2-58 ಕ್ಕೆ ಇಟ್ಟಿರುತ್ತಾರೆ. ಆ ಕುರಿತು ನಿಮ್ಮದೇನಾದರೂ ಉಜ್ರು ಇದ್ದಲ್ಲಿ ಆ ದಿವಸ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿಯನ್ನು ಈ ಮೂಲಕ ತಿಳಿಸಲಾಗಿಯದೆ.

(By order of the court)

(Sd) A. N Rao.
Advocate for Plff.

Coondapoor 21—1—58.

NOTICE

In the court of the District Munsif of Udipi.

O. P. No. 3 of 1958

K. Leela Bai —Petitioner

Is hereby given that the Petitioner abovenamed has filed theabove petition under section 372 of the Indian succession Act 39/1925, for the grant of a Certificate authorising her to collect the debts mentioned in the above petition, due to her late husband Dr. K. Shiva Rao who died intestate on 11—12—1957 in his residence in Udipi Town. If any person objects for allowing the above petition, he may file his written objections on 18—2—1958 at 11 A. M. in the above Court.

P. R. Shenoy.
Advocate for Petitioner.

Udipi 24—1—1958.

ಮಾನವ ಸ್ಥೈರಿಸು!

೧

ಏಕೆ ತಲ್ಲಣಿಸುತಿಹೆ? ಮಾನವ ಸ್ಥೈರಿಸು ನಿನ್ನ,–
ಸಾಕೆ ಸಲಹುವ ದೊರೆಯು ಬೇರೆ ಇರಲು?
ಮನದ ಬಯಕೆಯು ಬಲಿತು ಒಳಗೊಳಗೆ
ತುಯ್ಯುತಿನೆ
ದೊರೆತಷ್ಟರೊಳೆ ತೃಪ್ತನಾಗದಿರಲು!

೨

ಆಸೆಗಳ ಬಿರುಗಾಳಿಯಲಿ ಮನವು ಸುತ್ತಾಡಿ,
ಕಲ್ಪನೆಯ ಕೈಲಾಸವೇರಲೇಂ—ಸೊಗವು?
ತಂಮದೇನಿದೆ ಜನನದಲಿ ಭಾಗ್ಯ? ಬತ್ತಲೆಯು
ಬರುದೇನು ಜೊತೆಗೆ ಗಳಿಸಿದಾ ಸಿರಿಯು!

೩

ಅವರಿವರ ಹೆಚ್ಚು ತನವನು ಕಂಡು ಕಾತರಿಸೆ,
ಅಂಟುವುದು ರೋಗ,–ಕಾಂಚನದ ಮೋಹ
ಮನದೊಳಗೆ ಹುದುಗಿರುವ ಕ್ರೋಧ, ಮದ,
ಮತ್ಸರವು—
ಬಾಳಿಗಿವೆ ಬಗೆಯುತಿವೆ—ದುಷ್ಟ ದ್ರೋಹ!

೪

ಬಯಕೆ ಬಲಿಯಿತು ಹೆಮ್ಮರದಂತೆ ಸ್ವಾರ್ಥದಾ
ಬಳ್ಳಿ ಬೆಳೆಯಿತು ಬಳಿಯ ಸತ್ವ ಹೀರಿ!
ಪರರ ವಂಚಿಸಿ ಸಿರಿಯ ಸಂಚಿಪುದೆ ನಮ್ಮ ಗುರಿಯಾದೊಡೇಂ? ಬೆಂಬಿಡದು ಪಾಪ–ಮಾರಿ!

೫

"ಪಾಪಕದೊಳಿಡ ಮರೆದ ದಾಳಿಮೆಣಸು
ಸವಿಯಂತೆ'
ಬಾಳಿನಲಿ ಸುಖ ದುಃಖ ಸಮವು—ಕಾಣು
ನಾಳೆಗೇನೆಂದು ಹಲುಬಿದೊಡೆಲ್ಲ ಗೊಂದಲವು
ತುಷ್ಟಿಯಲೆ ಸುಖವೆಂದು ತಿಳಿದೊಡೇನು?

೬

ಲೋಕ ನೀತಿಗೆ ಬೆದರಿ ಪೆತ್ತರ್ಭಕನ ಕುಂತಿ,
'ಪೊರೆ ದೇವ' ಎಂದಲ್ಲಿ ಬಿಟ್ಟಳಂತೆ!
ತಾಯ್ತನದ ರಕ್ಷೆ ಇರದಾ ಕರ್ಣ ಬದುಕಿದನೆ?
ತಿಳಿವೊಡದೆ ಸಾಕಿನ್ನೇಕುಳಿದ ಚಿಂತೆ?

—ಕಡಂದಲೆ ಜಯರಾಮ ಸೆಟ್ಟಿ.

ಅತ್ಯಾಧುನಿಕ ಸೌಕರ್ಯಗಳಿಂದೊಡಗೂಡಿರುವ ವಸತಿಗೃಹ—

ರೋಯಲ್ ಮಹಾಲ್

ಉಡುಪಿ.

ಉಡುಪಿ ನಗರದ ಕೇಂದ್ರ ಸ್ಥಾನದಲ್ಲಿ ಪ್ರಶಾಂತ ಪ್ರದೇಶದಲ್ಲಿ ಪೇಟೆಯ ಮುಖ್ಯ ಸ್ಥಳಗಳಿಗೆ ಅತೀ ಸಮೀಪದಲ್ಲಿ ಇದ್ದುಕೊಂಡು ಜನಾಕರ್ಷಣೆಯನ್ನೂ ಜನಾನುರಾಗವನ್ನೂ ಗಳಿಸಿಕೊಂಡಿದೆ.

ಕೆ. ವೆಂಕಟ್ರಮಣ ಭಟ್,
ವ್ಯಾಪಾರಕ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
**ನವಭಾರತ ಪುಸ್ತಕ ಭಂಡಾರ,
ಉಡುಪಿ.**



BISON BRAND

QUALITY PAPERS

Manufacturers

THE MYSORE PAPER MILLS LTD.,

BHADRAVATI.

Distributors

SCHOOL BOOK COMPANY

CAR STREET

Telephone 229 Telegrams SCHOOL BOOK

MANGALORE.

Branch at

Vishwa Bhavan, Hampankatta, MAGALORE

ದಿ ಕರ್ಣಾಟಕ ಬೇಂಕ್ ಲಿಮಿಟೆಡ್

(ಸ್ಥಾಪನೆ: 1924)

ಪ್ರಧಾನ ಕಚೇರಿ: ಮಂಗಳೂರು (ದ ಭಾರತ)

ಸೌಲಭ್ಯಪೂರ್ಣವಾದ ಬೇಂಕಿಂಗ್ ಸೌಕರ್ಯಗಳನ್ನು ಜನತೆಗೆ ಒದಗಿಸಿಕೊಟ್ಟು ತನ್ಮೂಲಕ ರಾಷ್ಟ್ರದ ಪ್ರಗತಿಗೆ ನೆರವಾಗುವುದೇ ನಮ ಉದ್ದೇಶವಾಗಿದೆ.

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳನ್ನು ನಡೆಸಲಾಗುವುದು.

ಹೆಚ್ಚಿನ ಮಾಹಿತಿಯನ್ನು ಸ್ಥಳೀಯ ಶಾಖೆಗಳಿಂದ ಪಡೆಯಬಹುದು

THE KARNATAKA BANK LIMITED

H. O. MANGALORE.

OURSELVES IN AND OUT OF SEASON

IN PLENTY & SCARCITY

Whatever be the market conditions regarding availability of stocks of Papers - fall or rise in costs—we continue to serve our customers with the same sincerity & integrity

SRINIVAS BROTHERS

P. B. NO. 130 CAR STREET,

MANGALORE-1.

Phone: 449 Grams ACTIVE

ಫೋನ್. 19 ಮೆನೇಜಿಂಗ್ ಡೈರೆಕ್ಟರ್. ತಂತಿ. "HANUMANCO"
19A ವರ್ಕ್ಸ್ ಮೆನೇಜರ್. ಪೋ. ಬಾ. ನಂಬ್ರ 27

ಸ್ಥಾಪನೆ 1930

ದಿ. ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ ಪ್ರೈವೇಟ್ ಲಿಮಿಟೆಡ್,

ಉಡುಪಿ (ಮೈಸೂರು ಪ್ರಾಂತ್ಯ)

ಉಡುಪಿ ಕ್ಷೇತ್ರದಿಂದ <——> ಕೊಲ್ಲೂರು ಕ್ಷೇತ್ರ

ಪ್ರತಿ ನಿತ್ಯವೂ ಉಡುಪಿಯ ಶ್ರೀ ಕೃಷ್ಣನನ್ನು ಸಂದರ್ಶಿಸಲು ಯಾತ್ರಾರ್ಥಿಗಳು ಬರುವಂತೆ ಶ್ರೀಕ್ಷೇತ್ರ ಕೊಲ್ಲೂರಿಗೆ ಪ್ರತಿದಿನವೂ ನೂರಾರು ಯಾತ್ರಾರ್ಥಿಗಳು ದೇಶದ ನಾನಾ ಮೂಲೆಗಳಿಂದ ಬರುತ್ತಿರುವರು. ಅರಣ್ಯ ಮಧ್ಯದ ಪ್ರಕೃತಿ ಸೌಂದರ್ಯದ ನೆಲೆವೀಡಿನಲ್ಲಿ ಭಕ್ತಾದಿಗಳನ್ನು ಆಕರ್ಷಿಸುತ್ತಿರುವ ಈ ಪುರಾತನ ಪುಣ್ಯಕ್ಷೇತ್ರಕ್ಕೆ ಪ್ರತಿಯೊಬ್ಬನೂ ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ಸಂದರ್ಶನ ನೀಡಲೇಬೇಕು

ನಮ್ಮ ಬಸ್ಸುಗಳು ನಿಮ್ಮ ಸೇವೆಗೆ ಸದಾ ಸಿದ್ಧವಾಗಿರುತ್ತವೆ.

ಹೆಚ್ಚಿನ ಮಾಹಿತಿಗೆ.

THE HANUMAN TRANSPORT CO., PRIVATE LTD., UDIPI

ಏಜನ್ಸ್

THE COMBINED BOOKING AGENCY, UDIPI. (S. KANARA)

NAVAYUGA 30–1–1958

Regd. No. M 3618
LICENCE NO. 31
Licensed to Post without Prepayment

ಬೇಂಕುಗಳ ಪ್ರಾಮುಖ್ಯ ಕೆಲಸವೇನು?

ಸುಪ್ತಾವಸ್ಥೆಯಲ್ಲಿ–– ಅಂದರೆ, ನಿರರ್ಥಕ ಹಾಗೂ ನಿಷ್ಪ್ರಯೋಜಕ ಸ್ಥಿತಿಯಲ್ಲಿ–
ಮೂಲೆಪಾಲಾಗಿದ್ದ ರಾಷ್ಟ್ರದ ಮೂಲಸಂಪತ್ತನ್ನು ಕ್ರೋಢೀಕರಿಸಿ,
ವ್ಯಾಪಾರೋದ್ಯಮಗಳಲ್ಲಿ ಹರಿಯಗೊಡಿಸುವುದೇ
ಬೇಂಕುಗಳ ಪ್ರಾಮುಖ್ಯ ಕೆಲಸ!

ಈ ಪವಿತ್ರ ಕೆಲಸವನ್ನು ಇಂದಿಗೆ ಸುಮಾರು **52** ವರುಷಗಳಿಂದಲೂ ಬಹು ಪ್ರಾಮಾಣಿಕತೆ ಹಾಗೂ ರಾಷ್ಟ್ರಸೇವಾನಿಷ್ಠೆಯಿಂದ "ಕಾರ್ಪೊರೇಶನ್" ಬೇಂಕು ನಡೆಸುತ್ತಾ ಬಂದಿದೆ! ಮುಂದಕ್ಕೂ ತನ್ನ ವ್ಯವಹಾರರಂಗವನ್ನು ಆದಷ್ಟು ವಿಸ್ತರಿಸುತ್ತಾ, ಜನತೆಯಲ್ಲಿ ರಾಷ್ಟ್ರ ಜಾಗೃತಿಯನ್ನು ಹೆಚ್ಚೆಚ್ಚಾಗಿ ಬೆಳೆಸಿ, ರಾಷ್ಟ್ರದ ವ್ಯಾಪಾರೋದ್ಯಮ ಹಾಗೂ ರಾಷ್ಟ್ರ ಸರಕಾರದ ಮಹಾನ್ ಯೋಜನೆಗಳಿಗೆ ಇನ್ನೂ ವಿಶೇಷ ಪ್ರಮಾಣದಲ್ಲಿ ನೆರವು ನೀಡುವ ಆಶ್ವಾಸನೆಯನ್ನು

[illegible]

[illegible]!!

ನಮ್ಮ ಈ ಆಶ್ವಾಸನೆಯು ಫಲಕಾರಿಯಾಗಲು– ಬಡವಬಲ್ಲಿದರೆಂಬ ಯಾವ ಭೇದವೂ ಇಲ್ಲದೆ– ನಿಮ್ಮಲ್ಲಿ ಪ್ರತಿಯೊಬ್ಬನ ಸ್ನೇಹ–ಸಹಕಾರಗಳನ್ನು, ಹಿಂದಿಗಿಂತಲೂ ಹೆಚ್ಚಾಗಿ, ಇದು ಅಪೇಕ್ಷಿಸುತ್ತಿದೆ!! ದಯವಿಟ್ಟು ಇಂದಿನಿಂದಲೇ ಈ ಶೆಡ್ಯೂಲ್ಡ್ ಬೇಂಕನ್ನು ಪ್ರೋತ್ಸಾಹಿಸಲಾರಂಭಿಸಿರಿ!!!

- ನಯ-ವಿನಯಗಳಿಂದ ಕೂಡಿದ ಶೀಘ್ರ ಸೇವೆ
- ಠೇವಣಾತಿಗಳ ಮೇಲೆ ಅತ್ಯಾಕರ್ಷಕ ದರಗಳಲ್ಲಿ ಬಡ್ಡಿ
- ಭದ್ರತೆಗಳ ಮೇಲೆ ಸಾಲ
- ಮಂಗಳೂರು-ಮಡಿಕೇರಿಗಳಲ್ಲಿ 'ಸೇಫ್ ಡಿಪೋಸಿಟ್ ವಾಲ್ಟ್' ಸೌಕರ್ಯಗಳು

ಇವೇ ಅಲ್ಲದೆ, ಇನ್ನೂ ಹಲವಾರು ಅತ್ಯಾಧುನಿಕ ಬೇಂಕು ವ್ಯವಹಾರಗಳನ್ನು ಈ ಬೇಂಕು–ದಕ್ಷಿಣ ಭಾರತದ 5 ಸಂಸ್ಥಾನಗಳಲ್ಲಿ ಹರಡಿರುವ ತನ್ನ 49 ಶಾಖೆಗಳ ಮತ್ತು ರಾಷ್ಟ್ರಾದ್ಯಂತ ಏಜನ್ಸಿ ಏರ್ಪಾಡುಗಳ ಮೂಲಕ–ನಡೆಸುತ್ತಾ, ಸಮಗ್ರ ಕರ್ನಾಟಕದಲ್ಲಿ ಮುಖ್ಯ ಕಾರ್ಯಾಲಯಗಳನ್ನಿಟ್ಟುಕೊಂಡಿರುವ ಶೆಡ್ಯೂಲ್ಡ್ ಬೇಂಕುಗಳಲ್ಲೆಲ್ಲಾ ಅತಿ ಹಿರಿಯದಾಗಿದೆ''

ಶೀಘ್ರದಲ್ಲಿಯೇ ತೆರೆಯಲಾಗುವ ಈ ಬೇಂಕಿನ ಶಾಖೆಗಳು:

ಕಲ್ಕತ್ತ (ಪಶ್ಚಿಮ ಬಂಗಾಳ); ಮೈಲಾಪುರ (ಮದ್ರಾಸು); ಪ್ರೊದ್ದತ್ತೂರು (ಆಂಧ್ರ ಪ್ರದೇಶ); ಮತ್ತು ದೊಡ್ಡಬಳ್ಳಾಪುರ (ಮೈಸೂರು).

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ 1906)

ಪ್ರಧಾನ ಕಾರ್ಯಾಲಯ : ಉಡುಪಿ (ದ. ಭಾರತ)

Edited, Printed & Published by K. H. Shetty at the Navayuga Press, Udupi ... [illegible]

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

6—2—1958

ಸಂಚಿಕೆ ೨೨
NO. 22

ಕನ್ನಡದಲ್ಲಿ ದೇಶವಿದೇಶೀಯ ಸಾಹಿತ್ಯ–

ಸಾಹಿತ್ಯಮಂಡಲದ ಮಹಾಸಾಹಸ

ಭಾರತೀಯ ಸಾಹಿತ್ಯವನ್ನು ಉತ್ಕರ್ಷಗೊಳಿಸುವ ಸಲುವಾಗಿ ಭಾರತ ಸರಕಾರವು ಸಾಹಿತ್ಯಮಂಡಳವೊಂದನ್ನು ಸ್ಥಾಪಿಸಿ ಭಾರತೀಯ ಮಾನ್ಯ ಭಾಷೆಗಳಲ್ಲಿ ಸಾಹಿತ್ಯಿಕ ಚಟುವಟಿಕೆಗಳನ್ನು ಸಮವಾಯಗೊಳಿಸುವಂತಹ ಆಕರ್ಷಕವಾದ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಈ ಮಂಡಳವು ಸಾಹಿತ್ಯದ ಮೂಲಕ ಭಾರತದ ಸಾಂಸ್ಕೃತಿಕ ಐಕ್ಯವನ್ನುಳಿಸುವ ಪ್ರಮುಖ ಕರ್ತವ್ಯವನ್ನು ಪೂರೈಸಲು ಸನ್ನದ್ಧವಾಗಿದೆ.

ಈ ಕಾರ್ಯಕ್ರಮದನ್ವಯ ಕನ್ನಡದಲ್ಲಿಯೂ ಕಳೆದವರ್ಷ 'ಭಗವಾನ್ ಬುದ್ಧ' ಮತ್ತು 'ಬಾಣಭಟ್ಟನ ಆತ್ಮಕತೆ' ಎನ್ನುವ ಎರಡು ಹೊತ್ತಿಗೆಗಳು ಅನುವಾದಿತವಾಗಿವೆ. ಈ ಎರಡು ಪುಸ್ತಕಗಳನ್ನು ಪ್ರಕಾಶಪಡಿಸಿದ ಮಾತ್ರಕ್ಕೆ ಸಾಧಿಸಬೇಕಾದ ಪುರುಷಾರ್ಥ ಮುಗಿಯಲಿಲ್ಲವಾದರೂ ಪ್ರಾರಂಭಿಕ ಹೆಜ್ಜೆ ಎಂದಿದನ್ನು ಗಮನಿಸಬೇಕು. ಹಾಗೂ ಮುಂದಿನ ಕಾರ್ಯಕ್ರಮದ ಏಳಿಯು ಸರಿ ಎಂದು ತಿಳಿಯಬೇಕು. ಭಾರತೀಯ ಹಾಗೂ ವಿದೇಶೀ ಭಾಷೆಗಳಲ್ಲಿ ಬರೆಯಲಾದ ಪುಸ್ತಕಗಳು, ಸಣ್ಣಕಥೆ ಹಾಗೂ ಪ್ರಬಂಧಗಳ ಸಂಕಲನಗಳು ಮೊದಲಾದುವುಗಳ ಉತ್ತಮ ಭಾಗಗಳನ್ನು ಆರಿಸಿ, ಸಂಗ್ರಹಿಸಿ ಪ್ರಕಾಶಪಡಿಸುವ ಯೋಜನೆ ಈ ಮಂಡಳಕ್ಕಿದೆ

ಈ ಯೋಜನಾನುಸಾರವಾಗಿ ರಾಜೇಂದ್ರ ಪ್ರಸಾದರ 'ಆತ್ಮಕಥೆ', ರಾಮವೃಕ್ಷ ಬೆನಿಪುರಿಯವರ 'ಮಾಟಿ ಕಿ ಮೂರತ್' ಎಂಬಿವು ಈಗಾಗಲೇ ಮುದ್ರಣಕ್ಕೆ ಹೋಗಲಿವೆ. ಕಾಳಿಂದಿ ಚರಣ ಪಾಣಿಗ್ರಾಹಿಯವರ ಓರಿಯಾ ಕಾದಂಬರಿ 'ಮಾಟಿರ್ ಮಾನಿಷ್', ಕೆ. ಎಂ. ಪಣಿಕ್ಕರರ 'ಕೇರಳ ಸಿಂಹ', ಶಿವಶಂಕರ ಪಿಳ್ಳೆಯವರ 'ರಸ್ತಿ ತಂಗಷಿ', ಎಚ್. ಎನ್. ಆಪ್ಟೆಯವರ ಮರಾಠಿ ಕಾದಂಬರಿ 'ಪಣ್ ಲಕ್ಷಾತ್ ಕೋಣ್ ಘೇತೋ' ಮತ್ತು ರವೀಂದ್ರರ ಸಣ್ಣ ಕಥೆಗಳು ಭಾಷಾಂತರಹೊಂದಲಿವೆ. ಇವುಗಳ ಭಾಷಾಂತರ ಕಾರ್ಯಕ್ಕೆ ಆಯಾ ಮೂಲಭಾಷೆಯಲ್ಲಿ ನುರಿತವರನ್ನೇ ಹೆಚ್ಚಾಗಿ ಆರಿಸಲಾಗಿದೆ.

ಕಬೀರರ ಕೀರ್ತನಗಳಲ್ಲಿ ಕೆಲವನ್ನು ಕವಿವರ ಬೇಂದ್ರೆಯವರೂ ಶ್ರೀ ಎಲ್. ಗುಂಡಪ್ಪನವರು ತಮಿಳಿನಿಂದ 'ಭಾರತಿ'ಯವರ ಗೀತೆಗಳನ್ನೂ ಕನ್ನಡಕ್ಕೆ ಅನುವಾದಮಾಡುತ್ತಿರುವರು.

ಕೇವಲ ಭಾರತೀಯ ಗ್ರಂಥಗಳನ್ನಷ್ಟೇ ಒದಗಿಸುವುದು ಮಂಡಳದ ಗುರಿಯಲ್ಲ, ವಿದೇಶಗಳ ಅತ್ಯುಪಯುಕ್ತ ಪುಸ್ತಕಗಳ ಅನುವಾದನ ಕಾರ್ಯವನ್ನೂ ಮಾಡುವುದೆಂದು ಈಗಾಗಲೇ ಹೇಳಿದ್ದೇವೆ. ಇದರಂತೆ ಮ್ಯಾಕಿಯಾವೆಲ್ಲಿಯ 'ದಿಪ್ರಿನ್ಸ್' 'ಒನ್ ಥೌಸಂಡ್ ಅಂಡ್ ಒನ್ ನೈಟ್ಸ್' ಗಳು ಈಗಾಗಲೇ ಅನುವಾದಗೊಂಡಿದ್ದು ಅಚ್ಚಿನಮನೆಗೆ ಪ್ರವೇಶಿಸಲಿರುವುವು. ಶೇಕ್ಸ್‌ಪಿಯರನ 'ಹ್ಯಾಮ್ಲೆಟ್', 'ಒಥೆಲೋ' ಮತ್ತು 'ಕಿಂಗ್ ಲಿಯರ್'ಗಳೂ ಥೋರೋರವರ 'ವಾಲ್ಡನ್' ವಾಲ್ಟ್‌ವಿಟ್‌ಮನರವರ 'ಲೀವ್ಸ್ ಆಫ್ ಗ್ರಾಸ್' ಎಂಬಿವು ಕನ್ನಡಕ್ಕೆ ಅನುವಾದಗೊಳ್ಳುತ್ತಿರುವುವು.

ಕೇವಲ ಅನುವಾದಗಳನ್ನು ಪ್ರಕಟಿಸಿದಲ್ಲಿಗೆ ಈ ಮಂಡಳದ ಕರ್ತವ್ಯವು ಮುಗಿಯಲಿಲ್ಲ. ಆಯಾ ಭಾಷೆಗಳಲ್ಲಿಯೂ ಉತ್ತಮ ಗ್ರಂಥಗಳನ್ನು ಪ್ರಕಟಿಸುವ ಇರಾದೆಯೂ ಇದಕ್ಕಿದೆ. ಅದರಿಂದಾಗಿ ಶ್ರೀ ಆದ್ಯರಂಗಾಚಾರ್ಯರ ಸಂಪಾದಕತ್ವದಲ್ಲಿ ಏಕಾಂಕಗಳ, ಡಾ. ರಂ. ಶ್ರೀ. ಮುಗಳಿಯವರ ಸಂಪಾದಕತ್ವದಲ್ಲಿ ಒಂದು ಕವನಗಳ, ಶ್ರೀ ಗೊರೂರು ರಾಮಸ್ವಾಮಿ ಐಯಂಗಾರರ ಸಂಪಾದಕತ್ವದಲ್ಲಿ ಒಂದು ಪ್ರಬಂಧಗಳ ಮತ್ತು ಶ್ರೀ ಎಲ್. ಎಸ್. ಶೇಷಗಿರಿರಾಯರ ನೇತೃತ್ವದಲ್ಲಿ ಒಂದು ಸಣ್ಣ ಕಥೆಗಳ ಸಂಕಲನಗಳು ಸಿದ್ಧವಾಗುತ್ತಿವೆ. ಇವನ್ನು ಮೊದಲು ಕನ್ನಡದಲ್ಲಿ ಪ್ರಕಟಿಸಿದ ಮೇಲೆ ಉಳಿದ ಭಾರತೀಯ ಭಾಷೆಗಳಿಗೂ ಅನುವಾದಮಾಡುವ ಯೋಚನೆ ಸದ್ಯ ಇದೆ.

ವಿವಿಧ ಭಾಷೆಗಳ ಸಾಹಿತ್ಯ ಚರಿತ್ರೆಯನ್ನು ಪ್ರಕಟಗೊಳಿಸುವ ಯೋಜನೆಯಂತೆ ಈಗಾಗಲೇ ಡಾಕ್ಟರೇಟ್ ಪದವಿಯನ್ನು ತಂದುಕೊಂಡ ಕನ್ನಡ ಸಾಹಿತ್ಯ ಚರಿತೆಯ ರಚಯಿತ ಶ್ರೀ ರಂ. ಶ್ರೀ. ಮುಗಳಿಯವರು ಪುನಃ 'ಸಂಕ್ಷಿಪ್ತ ಸಾಹಿತ್ಯ ಚರಿತ್ರೆ'ಯೊಂದನ್ನು ಬರೆಯುತ್ತಿದ್ದಾರೆ.

ಪುರಂದರದಾಸರ ಕೀರ್ತನಗಳನು ಶ್ರೀ ಸಿ. ಕೆ. ವೆಂಕಟರಾಮಯ್ಯನವರೂ ಬಸವಣ್ಣನವರ ವಚನಗಳನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರೂ ಭರತೇಶವೈಭವವನ್ನು ದ. ರಾ. ಬೇಂದ್ರೆಯವರೂ ಈಗ ಸಂಗ್ರಹಿಸುತ್ತಿದ್ದು ಅವನ್ನು ಈ ಮಂಡಳದ ಮೂಲಕವಾಗಿ ಪ್ರಕಾಶಿಸುವ ಏರ್ಪಾಡು ಮಾಡಲಾಗುತ್ತಿದೆ.

ತರೀಖ್ ಅಲ್-ಹಿಂದ್ ಎಂಬ ಭಾರತೀಯ ಇತಿಹಾಸದ ಅರೇಬಿಕ ವಿಷಯಕಥನವನ್ನು ಶ್ರೀ ವಿ. ಎಂ. ಇನಾಮದಾರರು ಕನ್ನಡಕ್ಕೆ ಅನುವಾದ ಮಾಡುತ್ತಿರುವರು. ಶ್ರೀ ಎ. ಎನ್. ಮೂರ್ತಿರಾಯರು ಮೋಲಿಯರ್‌ನ ತುರ್ತುಫೆ ಮತ್ತು ಬೂರ್ ಷ್ವಾ ಜಂಟಲ್‌ಮೆನ್ ಎಂಬ ಎರಡು ಸುಖಾಂತ ನಾಟಕಗಳನ್ನು ಭಾಷಾಂತರ ಮಾಡಲಿರುವರು

ಸಾಹಿತ್ಯ ಮಂಡಳದವರು ಪ್ರತಿವರ್ಷವೂ ಭಾರತೀಯ ಭಾಷೆಗಳ ಅತ್ಯುತ್ತಮ ಕವನಗಳನ್ನು 'ಭಾರತೀಯ ಕವಿತಾ' ಎಂಬ ಹೆಸರಿನಿಂದ ಪ್ರಕಟಿಸುತ್ತಾರೆ. ಈ ಸಂಗ್ರಹಕ್ಕಾಗಿ ಎಂ. ಎನ್. ಮೂರ್ತಿರಾಯರು ೧೯೫೩ರಲ್ಲಿ ಬರೆಯಲ್ಪಟ್ಟಿರುವ ೧೦ ಕವನಗಳನ್ನು ಆರಿಸಿದವರು. ಇಂತಹ ೫೪-೫೫—೫೬ರ ಸಂಕಲನಗಳಿಗೂ ಕನ್ನಡ ಕವನಗಳ ಆಯ್ಕೆಯು ಶ್ರೇಷ್ಠ ಸಾಹಿತಿಗಳಿಂದ ನಡೆಯುತ್ತಿದೆ.

ಭಾರತದ ಭಾಷೆಗಳಲ್ಲಿ ಇಂದಿನ ಲೇಖನಗಳ ಬಗ್ಗೆ 'ಸಮಕಾಲೀನ ಭಾರತೀಯ ಸಾಹಿತ್ಯ'ವೆಂಬ ಲೇಖನ ಮಾಲೆಯನ್ನು ಸಹ ಈ ಮಂಡಳವು ಪ್ರಕಟಿಸುವುದು. ಇದರಲ್ಲಿಯೂ ಹಾಗೂ 'ಭಾರತೀಯ ಸಾಹಿತ್ಯ'ವೆಂಬ ತ್ರೈಮಾಸಿಕ ಪತ್ರಿಕೆಯಲ್ಲಿಯೂ ಕನ್ನಡ ಸಾಹಿತ್ಯದ ಮತ್ತು ಇತರ ಸಾಹಿತ್ಯಿಕ ಚಟುವಟಿಕೆಗಳ ವಿವರಗಳನ್ನು ಪ್ರಕಟಿಸಲಾಗಿದೆ

ಸಾಹಿತ್ಯ ಮಂಡಳದವರು ಕನ್ನಡ ಸಾಹಿತ್ಯ ಸಂಪತ್ತನ್ನು ಅಂಗೀಕರಿಸಿ ಹಿಂದಿನ ವರ್ಷಗಳಲ್ಲಿ ಶ್ರೀ ಕು. ವೆಂ.

(೧೨ನೆ ಪುಟ ನೋಡಿರಿ)

ಕಳೆದ ಡಿಸೆಂಬರ ೨೫ರೆಂದು ೨೧ನೇ ವಯಸ್ಸಿನಲ್ಲಿ ಕಾಲಿಟ್ಟ ರಾಜಕುಮಾರಿ ಅಲೆಕ್ಸಾಂಡ್ರ ಈಕೆಯ ಜನ್ಮದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK, LTD.

H O MANGALORE. Estd 1931.
BRANCHES
Bombay, Bangalore, Mysore, Mercara, Kanhangad,
Kasaragod and throughout the District of
South Kanara

ನಾರದ ಸಣ್ಣ ಕಥೆ

ಲೋಕವು ಳಿಯಬೇಕಾದರೆ . . .

ಶ್ರೀ ಕಿ. ವೆ. ಕೇಶವ

ನೇರವಾದ ರಸ್ತೆಯಲ್ಲಿ ಇನ್ನೂ ಜೋರಾಗಿ ಹೋಗುತ್ತಿದೆ ಆ ಹಸುರು ಬಣ್ಣದ ಕಾರು! ಮನೆ, ಮರ, ಪುರಗಿಡಗಳನ್ನೆಲ್ಲಾ ಹಿಂದಕ್ಕೆ ಹಾಕಿ ಮತ್ತೂ ವೇಗವಾಗಿ ಮುಂದುವರಿಯುತ್ತಿತ್ತು-ಅದು; ಇಂಗ್ಲಿಷರ ಕಾಲದ ಹಳತಾದ ಸಂಕವೊಂದರ ಬಳಿ ತನ್ನ ವೇಗವನ್ನು ತುಸು ಕಡಮೆ ಮಾಡಿ ಮತ್ತೆ ರಭಸದಿಂದ ಓಡುತ್ತಿದೆಯದು!

ಓಡುತ್ತಿದೆ...!

ಹೌದು; ಡ್ರೈವರ್ ಅನಂತರಾಮನು ಕಾರನ್ನು ವೇಗದಿಂದ ಓಡಿಸುತಿದ್ದನು. ಓಡಿಸದೆ ಅವನೇನು ಮಾಡಿಯಾನು? ಇನ್ನು ಅರ್ಧ ತಾಸಿನೊಳಗೆ ಅವನು ಕಾರನ್ನು ಇನ್ನೂ-ಇಪ್ಪತ್ತು ಮೈಲು ದೂರದ ಮಂಗಳೂರು ರೈಲ್ವೆ ನಿಲ್ದಾಣಕ್ಕೆ ತಲಪಿಸಬೇಕು. ಅದು ಕಾರಿನ ಯಜಮಾನ ಸುಂದರ ರಾಯರ ಆಜ್ಞೆ.

ಆಜ್ಞೆ?

ನಿಜ; ಆಜ್ಞೆಯೇ ಕೊಟ್ಟಿದ್ದರು ಅಂದೇ ಸಂಜೆಯ ರೈಲಿಗೆ ಅವರ ದೂರ ದೇಶಕ್ಕೆ ಪ್ರಯಾಣ ಮಾಡಿದ ಅಳಿಯ, ಮಗಳು—ಬರುವವರಿದ್ದರು ಹಾಗೆಂದೇ - ಇಂದು ಅನಂತರಾಮನು ನಾಕಷ್ಟು ದಣಿದಿದ್ದರು ಕೂಡಾ—ಆದೇಶವಿತ್ತಿದ್ದರು—ನಾಲ್ಕೂವರೆಗೆ ಸ್ಟೇಷನು ತಲಪುವಂತೆ ಬರಬೇಕೆಂದು.

ಈ ಗಡಿಬಿಡಿಯೊಂದೂ ಇರಲಿಲ್ಲ ರಾಯರು ಮೂರು ಗಂಟೆಗೇ ಹೊರಡುವ ಆಲೋಚನೆಯಲ್ಲಿದ್ದರು. ಹಾಗೇ ಎರಡು ಗಂಟೆಗೆ ಡ್ರೆಸ್ ಮಾಡತೊಡಗಿದ್ದರು ಅಷ್ಟರಲ್ಲಿ ಮನೆಯೊಳಕ್ಕೆ ಯಾರೋ ಆಗ ಮಿಸಿದರು. ಪರಿಚಯ ಮಾಡಲೆಂದು ಮುಖ ತಿರುಗಿಸುತ್ತಾರೆ—ಪ್ರಾಣ ಸ್ನೇಹಿತ ಶ್ರೀ ವಲ್ಲಭ ರಾಯರು!

"ಬನ್ನಿ, ಬನ್ನಿ; ಕುಳಿತುಕೊಳ್ಳಿ"— ಸುಂದರರಾಯರು ಮಂದಹಾಸದಿಂದ ನುಡಿದರು.

"ಇರಲಿ, ಈಗ ನಿಮ್ಮಿಂದ ಒಂದು ಕೆಲಸವಾಗಬೇಕಿತ್ತಲ್ಲ...." ಬೆವರನ್ನೊರಸುತ್ತಾ ಅವರು ಹೇಳಿದರು.

"ಛೇ; ಹಾಗೂ ಉಂಟೆ! ನನ್ನಿಂದಾಗುವುದಾದರೆ ಮತ್ತೆ ಮಾತೇ ಇಲ್ಲ"

"ಆಗದಿರುವುದನ್ನು ಹೇಳಲಾರೆ. ಆದರೂ....ನಿಮ್ಮ ಕಾರನ್ನು ನನಗೆ ಬೇಕಿತ್ತು. ಪುಳ್ಯದವರೆಗೆ ಹೋಗಿಬರಬೇಕಿತ್ತು ಅರ್ಜೆಂಟಾದ ಕೆಲಸದ ನಿಮಿತ್ತವಾಗಿ."

"ಓ....ಮೋಸವಾಯಿತು; ನನಗೆ ಮೂರು ಗಂಟೆಗೆ ಪ್ರಯಾಣವಿದೆಯಲ್ಲ! ಅಳಿಯಂದಿರು ಇಂದೇ ಬರುವರೆಂದು ತಾರು ಬಂದಿದೆ. ಹಾಗೆ ಸ್ಟೇಷನಿನವರೆಗೆ ಹೋಗಬೇಕು ಎಂತಲೇ ಹೊರಡುವ ಆಲೋಚನೆಯಲ್ಲಿದ್ದೇನೆ ನೋಡಿ. ಅಲ್ಲ, ಏನು ವಿಷಯ ಹೇಳಿ—ತಲೆಗೂದಲನ್ನೊಮ್ಮೆ ಸವರಿ ಹೇಳಿದರು ಸುಂದರರಾಯರು.

"ಹೌದೇನು!.... ನಿಮಗೆ ನಾಲ್ಕೂವರೆಗೆ ಮಂಗಳೂರಿಗೆ ತಲಪಿದರೆ ಸಾಕು ತಾನೇ; ಮೂರುವರೆಗೆ ಹೊರಟರೆ ಸಾಕಾಳ ಮುಟ್ಟಬಹುದು. ಅಷ್ಟರಲ್ಲಿ ಕಾರು ವಾಪಾಸು ಬರುತ್ತದೆ. ಈಗ ಎರಡೂ ಐದಾಯಿತು-ಅಷ್ಟೆ; ಮತ್ತೇನಿಲ್ಲ—ನಾನು ಯಾಕೆ ಇಷ್ಟು ಹೇಳುತ್ತೇನೆಂದರೆ, ಈಗ ನೋಡಿ ತಾರು ಬಂದಿದೆ. ನನ್ನ ಹೆಂಡತಿಗೆ ತವರು ಮನೆಗೆ ಹೆರಿಗೆಗೆ ಹೋದವಳಿಗೆ-ಸ್ವಲ್ಪ ಸೀರಿಯಸ್ ಉಂಟೆಂತೆ. ಹಾಗಾಗಿ-ನಿರುಪಾಯನಾಗಿದ್ದೇನೆ ಏನಾದರೂ ಮಾಡಿ ಹೋಗದೆ ಉಪಾಯವಿಲ್ಲ. ನಿಮ್ಮ ಕಾರನ್ನು ನಂಬಿಯೇ ಬಂದಿದ್ದೇನೆ. ಸ್ವಲ್ಪ ಡ್ರೈವರನಿಗೆ ಹೇಳಿದರೆ ಬೇಗ ಪುನಃ ಬರುತ್ತಾನೆ. ಸ್ವಲ್ಪ ದೊಡ್ಡ ಮನಸ್ಸು ಮಾಡಿ...." ಶ್ರೀ ವಲ್ಲಭರಾಯರು ಅರಿಕೆ ಮಾಡಿಕೊಳ್ಳುವ ರೀತಿಯಲ್ಲಿ ವಿಷಯವನ್ನು ವಿವರಿಸಿದರು.

"ಬಿಡಿ ರಾವ್; ನೀವು ಇಷ್ಟೆಲ್ಲಾ ಹೇಳಬೇಕೇ! ಸೀರಿಯಸ್' ಎಂದಾಗ ನಾನು ಇಲ್ಲವೆನ್ನಲು ಮನುಷ್ಯನಲ್ಲವೇ? ಏ, ಅಂತೋನಿ .. ನೀನೊಮ್ಮೆ ಪುಳ್ಯದವರೆಗೆ ಹೋಗಿ ಬರಬೇಕೀಗ. ಹೇಗೆ ಹೋಗಬೇಕು ಗೊತ್ತಾ; ಮೂರೂವರೆಯೊಳಗೆ ನೀನು ಇಲ್ಲಿರಬೇಕು"— ಅಂದರು ಸುಂದರರಾಯರು ಅನಂತರಾಮ ನನ್ನ ಕರೆದು. ಅವನು ತಲೆಯಾಡಿಸಿದ.

"ತುಂಬಾ ಉಪಕಾರ ಮಾಡಿದಿರಿ; ಬರುತ್ತೇನೆ ಹಾಗಾದರೆ ನಮಸ್ತೆ'—ಶ್ರೀ ವಲ್ಲಭರಾಯರು ಕಾರಿನತ್ತ ಹೋಗುತ್ತಲೇ ಹೇಳಿದರು. ಸುಂದರ ರಾಯರು ಸರಿಸರಿ ಎಂದು ವಲ್ಲಭರಾಯರನ್ನು ಬೀಳ್ಕೊಟ್ಟರು.

ಡಾಮರು ಹಾಕಿದ ಮಾರ್ಗವಾದ್ದರಿಂದ ಹೋಗುವಾಗ ಕಾರು ಸರಾಗವಾಗಿ ಹೋಯಿತಾದರೂ, ಬರುವಾಗ ಚಕ್ರವೊಂದಕ್ಕೆ ಗಾಳಿ ತುಂಬಿಸಬೇಕಾಗಿ ಬಂದುದರಿಂದ ಸಮಯ ಸ್ವಲ್ಪ ಹೆಚ್ಚು ತಗಲಿತು.

ಶೃಂಗಾರ ರಾವಣನಂತೆ ವೇಷಭೂಷಣಗಳನ್ನು ಧರಿಸಿ ಕುಳಿತು ಕ್ಲೋಕನ್ನು ಸರಿಮಾಡುತಿದ್ದ ರಾಯರ ದೃಷ್ಟಿ ಗಡಿಯಾರದತ್ತ ಹರಿಯಿತು.

ಗಂಟೆ ಮೂರು ಐವತ್ತು!!

ದೃಷ್ಟಿಯೊಮ್ಮೆ ಮಾರ್ಗದ ಉದ್ದ ಅಗಲದತ್ತ ಹರಿದು ನಿರಾಶೆಯನ್ನುಂಟುಮಾಡಿತು.

ನಾಲ್ಕು ಹೊಡೆಯುವುದಕ್ಕೂ ಕಾರು ಗೇಟು ತಲಪುವುದಕ್ಕೂ ಸರಿಹೋಯಿತು

'ಹುಂ; ಉಪಕಾರಕ್ಕೆ ಹೋದ ಫಲ ಇದು' ಅಂದುಕೊಂಡು ತಮ್ಮ ಚಿತ್ತ ತಿರುಗಿಸುತ್ತಾ ಕಾರಿನತ್ತ ತೆರಳಿದರು. ಡ್ರೈವರ್ ಬೆವರನ್ನೊರಸುತ್ತಾ ವಿಷಯವನ್ನು ನಿವೇದಿಸಿದ

"ಆಗಲಿ; ಹೇಗೂ ಆಯಿತಲ್ಲ. ಇನ್ನು ನೋಡು ರೈಲು ತಲಪುವಾಗ ನಾವು ಸ್ಟೇಷನಿನಲ್ಲಿರಬೇಕು; ತಿಳಿಯಿತಲ್ಲ! ಎಷ್ಟೆಂದರೂ ಅವರನ್ನು ಇದಿರುಗೊಳ್ಳಬೇಡನೇ! ಒಂದು ವರ್ಷವಾಯಿತು ಇತ್ತ ಕಾಲಿಡದೆ; ಹುಂ; ನಿನ್ನ ಸಾಮರ್ಥ್ಯವೆಷ್ಟೆಂದು ನೋಡೋಣ"—ಹಿಂದಿನ ಸೀಟಿನಲ್ಲಿ ತನ್ನ ದೇಹವನ್ನು ಚಾಚುತ್ತಾ ರಾಮುನಲ್ಲಿ ನುಡಿದರು.

"ನನ್ನಿಂದಾದಷ್ಟು ಬೇಗ ಕೊಂಡು ಹೋಗುತ್ತೇನೆ" ಅಂದವನೇ ಸ್ಟೇರಿಂಗಿಗೆ ಕೈ ಹಾಕಿದ. ಅಂತೆಯೇ ಕಾರು ಓಡತೊಡಗಿತು.

ಎಲ್ಲಿಯೂ ನಿಲ್ಲದೆ ಓಡುತಿತ್ತು ಆ ಯಂತ್ರ ರಾಕ್ಷಸ! ರಾಯರ ಕೈಗಡಿಯಾರ ನಾಲ್ಕೂವರೆ ಎಂದು ಸೂಚಿಸಿತ.

ಇನ್ನೂ ನಾಲ್ಕು ಮೈಲುಗಳಿವೆ!!....

ಇನ್ನೇನು ಎರಡು ಮೈಲು ಮಾತ್ರ!

ಆ ಇಳಿಜಾರಿನಲ್ಲಿ ಇನ್ನೂ ವೇಗವಾಗಿ ಕಾರು ಓಡುತಿತ್ತು. ರಸ್ತೆಯಲ್ಲಿ ಜನಸಂಖ್ಯೆಯೂ ಸ್ವಲ್ಪ ದಟ್ಟವಾಗಿ ಕಂಡು ಬರುತ್ತಿತ್ತು.

ಅಷ್ಟರಲ್ಲಿ ಸುಂದರರಾಯರ ಬಾಯಿ "ಅದೋ ಒಂದು ಮಗು..." ಎಂದು ಕೂಗಿತು.

ಅನಂತರಾಮನ ಕಾಲು ಬ್ರೇಕನ್ನೊತ್ತಿತ್ತು. ಕೈ ಸ್ಟೇರಿಂಗನ್ನು ಎಡಕ್ಕ ಬಲವಾಗಿ ತಿರುಗಿಸಿತು' ವೇಗವನ್ನು ಕಡಿಮೆ ಮಾಡಿ ಪಕ್ಕದ ಮರವೊಂದಕ್ಕೆ ಡಿಕ್ಕಿ ಹೊಡೆದು ನಿಂತಿತು.

ಕಿರ್ರನೆ ಚೀರಿ ಮಗು ಬಲಬದಿಯಲ್ಲಿ ಬಿದ್ದುಬಿಟ್ಟಿತು; ಮಗುವಿನ ತಂದೆ ತಾಯಂದಿರು ಬೊಬ್ಬಿಡತೊಡಗಿದರು. ಏನಾಯಿತು; ಏನು ಮಾಡಬೇಕೀಗ ಎಂಬುದರ ಸರಿಯಾದ ಜ್ಞಾನ ಉಂಟಾಗಿ ರಾಯರು ಕಣ್ಣು ಬಿಡುವಾಗ ಸುತ್ತಲೂ ಜನಜಾಗುಳಿ ಸೇರಿಹೋಗಿತ್ತು. ತನ್ನ ಅಳಿಯ ಹಾಗೂ ಮಗಳು ಅಲ್ಲಿಯೇ ಇದ್ದರು. ಮಗುವಿನ ತಲೆಗೆ ತುಸು ಪೆಟ್ಟಾಗಿ ರಕ್ತ ಸುರಿಯುತ್ತಿತ್ತು; ಢಿಕ್ಕಿಹೊಡೆದ ರಭಸಕ್ಕೆ ಸ್ಟೇರಿಂಗ್‌ನ ಎಡೆಯಲ್ಲಿ ಸಿಕ್ಕಿಕೊಂಡಿದ್ದ ಡ್ರೈವರನ್ನು ಅಲ್ಲಿಂದ ಕಳಗಿಳಿಸಲಾಗಿತ್ತು 'ಜೀವ ಮಾತ್ರ ಉಳಿದಿತ್ತು. ಕಾಲೊಂದು ಮುರಿದಿತ್ತು!! ಪ್ರಜ್ಞೆ ತಪ್ಪಿತ್ತು!!

"ಯಾರ ಮಗುವದು? ಅದಕ್ಕೇನೂ ಆಗಿಲ್ಲತಾನೇ?"—ರಾಯರು ನಡನಡುಗುವ ಧ್ವನಿಯಿಂದ ಕೇಳಿದರು.

"ನಮ್ಮದೇ ಮಾವ, ರೈಲು ಇಂದು ಸ್ವಲ್ಪ ಬೇಗನೇ ಬಂತು. ಹಾಗೆ ನಾವು ನಿಮ್ಮನ್ನು ಕಾಣದೆ, ನಡೆದು ಬರುತ್ತಿದ್ದೆವು ನಿಮ್ಮನ್ನು ಕಂಡರೆ ನಿಲ್ಲಿಸಿಕೊಳ್ಳಬಹುದೆಂದು ಏನು ತಿಳಿದೆಯೋ—ನಮ್ಮ ಕುಮಾರ ಆಳ ಕೈಯಿಂದ ಬಿಡಿಸಿಕೊಂಡು ಒಂದು ನೆಗೆತ ಹಾರಿಬಿಟ್ಟ ನಿಮ್ಮ ಡ್ರೈವರ್, ಕಾರು ತಿರುಗಿಸದಿದ್ದರೆ ಅವನ ಜೀವವುಳಿಯುತ್ತಿರಲಿಲ್ಲ, ಡ್ರೈವರನ ಪ್ರಯತ್ನ ಶ್ಲಾಘನೀಯ; ಆದರೆ ಮಾವ, ಅವನ ಕಾಲು ಮುರಿದಂತಿದೆ ಅವನಿಗೆ ಬೇಕಾದ ಎಲ್ಲಾ ವ್ಯವಸ್ಥೆ ನೀವು ಮಾಡಬೇಕು ಇರಲಿ; ಆಸ್ಪತ್ರೆಗೆ ಹೋಗೋಣ ಅಂದರು ಅಳಿಯ ಶ್ರೀನಿವಾಸ ರಾಯರು.

ಸುಂದರರಾಯರ ತಲೆಗೆ ತುಸು ಪೆಟ್ಟಾಗಿತ್ತು. ಮಗುವಿಗೆ ಬಿದ್ದ ರಭಸಕ್ಕೆ ಸ್ವಲ್ಪ ಗಾಯವಾಗಿತ್ತು.

ಡ್ರೈವರನಿಗೆ ಜ್ಞಾನ ಉಂಟಾಗುವಾಗ ಮರುದಿನ ಬೆಳಗಾಗಿತ್ತು. ಮಾವ ಅಳಿಯಂದಿರೆಲ್ಲರೂ ಆಸ್ಪತ್ರೆಯಲ್ಲೇ ಇದ್ದರು. ಮಗುವನ್ನುಳಿಸಿದ ಅವನಿಗ ತಕ್ಕ ವ್ಯವಸ್ಥೆ ಮಾಡದೆ—ಅವನಲ್ಲಿ ಮಾತನಾಡದೆ ಅವರಿಗೆ ಹೋಗಲು ಮನಸ್ಸು ಬರಲಿಲ್ಲ.

ವಿಷಯ ತಿಳಿದಾಗ ಆ ನೋವಿನ ಎಡೆಯಲ್ಲೂ ಅನಂತ ರಾಮನಿಗಾದ ಆನಂದ ಅಷ್ಟಿಷ್ಟಲ್ಲ!—

"ಅಂತೂ, ಬದುಕಿಸಿದೆ ನಮ್ಮ ಎಳೆ ಕಂದನನ್ನು" ತಂದೆ, ಮಗಳು, ಅಳಿಯ ಮೂವರೂ ಕೃತಜ್ಞತೆಯನ್ನ ಸೂಚಿಸುತ್ತಾ ಹೇಳಿದರು—ಅನಂತರಾಮನ ಬೆನ್ನಿನ ಮೇಲೆ ಕೈಯಾಡಿಸುತ್ತಾ.

"ನಾನೇನು ಮಾಡಿದೆ? ದೇವರು ನನಗೆ ಆ ರೀತಿ ಬುದ್ಧಿಕೊಟ್ಟ. ಎಲ್ಲಾ ಅವನ ಕೃಪೆ"—ಪೆಟ್ಟಿನ ನೋವು ಅಧಿಕವಿತ್ತಾದರೂ, ನಗುಮುಖದಿಂದ ನನ್ನಾಗಿ ಹೇಳಿದ.

ರಾಯರು ಅನಂತರಾಮನ ಚಿಕಿತ್ಸೆಯ ಎಲ್ಲಾ ಖರ್ಚನ್ನೂ ಹೊತ್ತರು. ಅವನ ಕಾಲು ಸ್ವಲ್ಪ ಮಟ್ಟಿಗೆ ಸರಿಯಾಯಿತಾದರೂ ಡ್ರೈವರ್ ಕೆಲಸ ಮಾಡುವಂತಿರಲಿಲ್ಲ!

ರಾಯರು ಅವನಿಗೆ ಮೊದಲಿನಂತೆಯೇ ಸಂಬಳ ಕೊಡುವುದಾಗಿ ಮಾತುಕೊಟ್ಟರು.

ರಾಯರಿಗೆ—ಯಾವ ರೀತಿಯ ಕೃತಜ್ಞತೆಯನ್ನ ಸೂಚಿಸಬೇಕೆಂದು ಅವರಿಗೆ ಹೊಳೆಯಲಿಲ್ಲ!! ಧನಿಗಳೆಲ್ಲರೂ ಇದೇ ರೀತಿಯಿದ್ದರೆ ಲೋಕ ಶಾಂತಿಯುತವಾಗಿ ನಡೆಯಲಾರದೆ ಎಂದವರು ಯೋಚಿಸತೊಡಗಿದಾಗ ಅವರ ಮುಖದಲ್ಲೊಂದು ಕಿರುನಗು ಕಾಣಿಸುತ್ತಿತ್ತು.

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದ ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ½ ರಾತಲಿಗೆ ರೂ. 2/0
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾಮ್ಸ್ ಫಾರ್ಮಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ಭಾರತದಲ್ಲಿ ವಿಜ್ಞಾನದ ಮುನ್ನಡೆ–

ರಾಷ್ಟ್ರೀಯ ಪ್ರಯೋಗ ಶಾಲೆಗಳು

ಪ್ರೊ ಎಂ. ಎಸ್ ಠಾಕರ್

ಭಾರತದಲ್ಲಿ ವಿಜ್ಞಾನದ ಬಗ್ಗೆ ಜನರಲ್ಲಿ ಅಭಿರುಚಿ ಹೆಚ್ಚುತ್ತಿದೆ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕಾಭಿವೃದ್ಧಿಯ ಬಗ್ಗೆ ಹೆಚ್ಚು ಮಹತ್ವವೀಯಲಾಗಿದೆ ಕೈಗಾರಿಕಾಭಿವೃದ್ಧಿಗೆ ವೈಜ್ಞಾನಿಕ ಸಂಶೋಧನೆಗಳು ಅಗತ್ಯವೆಂಬುದು ಅನುಭವವೇದ್ಯವಾಗಿರುವುದರಿಂದ ವೈಜ್ಞಾನಿಕ ಸಂಶೋಧನೆ ಮಹತ್ವಪಡೆದಿದೆ

ರಾಷ್ಟ್ರೀಯ ಪ್ರಯೋಗಶಾಲೆಗಳಲ್ಲಿ ಅತಿ ಹಳೆಯದನ್ನು ಹತ್ತು ವರ್ಷಗಳ ಹಿಂದೆ ಸ್ಥಾಪಿಸಲಾಯಿತು. ಈ ಪ್ರಯೋಗಶಾಲೆಗಳಿಗೆ ಆಗತ್ಯವಾದ ಯಂತ್ರೋಪಕರಣಗಳು, ಸಿಬ್ಬಂದಿ, ಕಟ್ಟಡಗಳು ಮುಂತಾದವನ್ನು ಒದಗಿಸಿ ಅವನ್ನು ಸುಸಜ್ಜಿತಗೊಳಿಸಲಾಗಿವೆ ಈ ಪ್ರಯೋಗಶಾಲೆಗಳು ಈಗ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಸಂಶೋಧನಾ ಯೋಜನೆಗಳ ಕಡೆ ಲಕ್ಷ್ಯವಹಿಸಿವೆ ಈ ಪ್ರಯೋಗಶಾಲೆಗಳಿಗೆ ಸೇರಿದ ನಿರ್ದೇಶಕರುಗಳು ಮತ್ತು ಹಿರಿಯ ಅಧಿಕಾರಿಗಳು ಯೋಜನಾ ಕಮಿಷನ್ ಮತ್ತು ಅಭಿವೃದ್ಧಿ ಪರಿಷತ್ತುಗಳ ವಿವಿಧ ತಾಂತ್ರಿಕ ಸಮಿತಿಗಳೊಂದಿಗೆ ನಿಕಟ ಸಂಬಂಧ ಪಡೆದಿರುವರು

ಸಂಶೋಧನೆಯ ಫಲಿತಾಂಶಗಳನ್ನು ಕಾರ್ಖಾನೆಗಳಿಗೆ ತಿಳಿಸುವುದರ ಜೊತೆಗೆ ಪ್ರಯೋಗಶಾಲೆಗಳು ಉದ್ಯಮಗಳಿಗಾಗಿ ಯೋಜನೆಗಳನ್ನು ಸಿದ್ಧಗೊಳಿಸುತ್ತವೆ ಪಶ್ಚಿಮ ಬಂಗಾಳ ರಾಜ್ಯದಲ್ಲಿರುವ ದುರ್ಗಾಪುರ ಉಕ್ಕಿನ ಕಾರ್ಖಾನೆ ನಿರ್ಮಾಣ ಸಂಬಂಧವಾದ ಯೋಜನೆಗೆ ಆಗತ್ಯವಾದ ನೀಲನಕ್ಷೆಗಳನ್ನು ಸಿದ್ಧಗೊಳಿಸುವುದು ದಕ್ಷಿಣ ಆರ್ಕಟಿನ ಲಿಗ್ನೈಟ್ ಯೋಜನೆಗೆ ಆಗತ್ಯವಾದ ಅಂಕಿ ಅಂಶಗಳನ್ನು ಒದಗಿಸುವುದು–ಈ ಮುಂತಾದ ಕಾರ್ಯಗಳಲ್ಲಿ ಪ್ರಯೋಗಶಾಲೆಗಳು ನೆರವಾಗಿವೆ

ಪ್ರಯೋಗಶಾಲೆಗಳಲ್ಲಿ ಕೈಗೊಂಡ ಸಂಶೋಧನೆ ಮತ್ತು ಆವಿಷ್ಕಾರಗಳ ಫಲಿತಾಂಶಗಳನ್ನು ಉದ್ಯಮಗಳಿಗೆ ತಿಳಿಸಿ ಉದ್ಯಮಗಳ ಕಾರ್ಯವಿಧಾನಗಳ ಮತ್ತು ಉತ್ಪನ್ನಗಳ ಸುಧಾರಣೆಗೆ ನೆರವೀಯಲಾಗಿವೆ ಅಷ್ಟೇ ಅಲ್ಲದೆ ಈಗಿರುವ ಉದ್ಯಮಗಳ ವಿಸ್ತರಣೆ ಹಾಗೂ ಸುಧಾರಣೆಗಾಗಿ ಪ್ರಯೋಗಶಾಲೆಗಳು ವೈಜ್ಞಾನಿಕ ಸಲಹೆಯನ್ನೀಯುತ್ತಿವೆ. ಈ ದೃಷ್ಟಿಯಿಂದ ಪ್ರಯೋಗಶಾಲೆಗಳು ಅತ್ಯಮೂಲ್ಯ ಕಾರ್ಯವೆಸಗಿವೆ

ದೇಶದ ಕಲ್ಲಿದ್ದಲಿನ ಸಂಪತ್ತಿನ ಬಗ್ಗೆ ವ್ಯಾಪಕವಾಗಿ ಹಾಗೂ ಸುವ್ಯವಸ್ಥಿತ ರೀತಿಯಲ್ಲಿ ಸಮೀಕ್ಷೆ ಕೈಗೊಂಡ ಫಲವಾಗಿ ಕಲ್ಲಿದ್ದಲಿನ ಉತ್ಪಾದನಾ ಹಾಗೂ ಗ್ರಾಹಕ ಕೈಗಾರಿಕೆಗಳಿಗೆ ಪ್ರಯೋಜನ ಲಭಿಸಿದೆ ಕಲ್ಲಿದ್ದಲಿನ ಕಿಟ್ಟದ (ಕೋಕ್) ತಯಾರಿಕೆಗಾಗಿ ಮತ್ತು ಮಿಶ್ರಣಕ್ಕಾಗಿ ಬೇಕಾದ ಕಲ್ಲಿದ್ದಲಿನ ನಿಕ್ಷೇಪಗಳು ದೊರೆತಿವೆ ಉದಾಹರಣೆಗೆ ಝರಿಯಾ ಕಲ್ಲಿದ್ದಲು ಕ್ಷೇತ್ರದ ನಂ 1 ಪದರಿನಲ್ಲಿ ೪೦ ಕೋಟಿ ಟನ್ನುಗಳಷ್ಟು ಕಲ್ಲಿದ್ದಲು ಕಿಟ್ಟವಿರುವುದಾಗಿ ಕಂಡುಬಂದಿದೆ. ಮಧ್ಯಪ್ರದೇಶದ ಝಿಲಿಮಿಲಿ ಕಲ್ಲಿದ್ದಲು ಕ್ಷೇತ್ರದಲ್ಲಿ ಮಿಶ್ರಣಕ್ಕೆ ಆಗತ್ಯವಾಗುವ ಕಲ್ಲಿದ್ದಲು ದೊರೆಯುವುದಾಗಿ ಕಂಡುಬಂದಿದೆ ಲೋಹ ಶೋಧನಾ ಕಾರ್ಯಕ್ಕೆ ಆಗತ್ಯವಾಗುವ ಕಲ್ಲಿದ್ದಲನ್ನು ತಯಾರಿಸುವುದಕ್ಕೆ ಸೂಕ್ತವಾಗಿಲ್ಲವೆಂದು ಪರಿಗಣಿಸಲಾಗಿದ್ದ ಕಲ್ಲಿದ್ದಲಿನಿಂದ ಉತ್ತಮ ದರ್ಜೆಯ ಕಲ್ಲಿದ್ದಲನ್ನು ತಯಾರಿಸಬಹುದೆಂಬುದು ಸಮೀಕ್ಷೆಯಿಂದ ವ್ಯಕ್ತಪಟ್ಟಿದೆ ಉದಾಹರಣೆಗೆ ರಾಣಿಗಂಜ್ ಕಲ್ಲಿದ್ದಲು ಕ್ಷೇತ್ರದಲ್ಲಿ ದೊರೆಯುವ ಕಲ್ಲಿದ್ದಲು ಮೊದಲು ಕಲ್ಲಿದ್ದಲು ಕಿಟ್ಟದ ತಯಾರಿಕೆಗೆ ಅನರ್ಹವೆಂದು ಪರಿಗಣಿಸಲ್ಪಟ್ಟಿತ್ತು. ಈ ಸಂಶೋಧನೆಗಳು ಮಹತ್ವಪೂರ್ಣವಾಗಿವೆ. ಏಕೆಂದರೆ ಅನೇಕ ವರ್ಷಗಳ ವರೆಗೆ ಉಕ್ಕಿನ ತಯಾರಿಕೆಗೆ ಅಧಿಕ ಪ್ರಮಾಣದ ಕಲ್ಲಿದ್ದಲಿನ ಕಿಟ್ಟವು ಆಗತ್ಯವಾಗಿರುವುದು

ಗಾಜಿನ ತಯಾರಿಕೆಗೆ ಆಗತ್ಯವಾದ ಮರಳು ಕುಂಭಕಲಾ ವಸ್ತುಗಳಿಗೆ ಆಗತ್ಯವಾಗುವ ಜೇಡಿ ಮಣ್ಣು ಮುಂತಾದ ಕಚ್ಚಾ ಪದಾರ್ಥಗಳು ಜಮ್ಮು ಮತ್ತು ಕಾಶ್ಮೀರದ ಸಗಂಧ ಸಸಗಳು ಮತ್ತು ಗುಲಾಬಿ ಹೂಗಳನ್ನು ಬೆಳೆಯುವ ಕ್ಷೇತ್ರಗಳ—ಈ ಬಗ್ಗೆ ನಡೆಸಿದ ಸಮೀಕ್ಷೆಗಳು ಕೈಗಾರಿಕಾಭಿವೃದ್ಧಿಗೆ ಉಪಯುಕ್ತ ಅಂಕಿ ಅಂಶಗಳನ್ನು ಒದಗಿಸಿವೆ

ಇಂದು ಭಾರತದಲ್ಲಿ ಕಬ್ಬಿಣ ಮತ್ತು ಉಕ್ಕಿನ ಉದ್ಯಮವು ಅತ್ಯಂತ ಮಹತ್ವಪೂರ್ಣ ಉದ್ಯಮವಾಗಿರುವುದು ದೇಶದಲ್ಲಿರುವ ಕಲ್ಲಿದ್ದಲು ನಿಕ್ಷೇಪಗಳಲ್ಲಿ ಕೇವಲ ಅಲ್ಪ ಪ್ರಮಾಣದ ನಿಕ್ಷೇಪಗಳು ಕಲ್ಲಿದ್ದಲು ಕಿಟ್ಟದ ತಯಾರಿಕೆಗೆ ಉಪಯುಕ್ತವಾಗಿರುವುದು ಕಲ್ಲಿದ್ದಲ ಕಿಟ್ಟಕ್ಕೆ ಆಗತ್ಯವಾಗುವ ಕಲ್ಲಿದ್ದಲು ಕ್ಷೇತ್ರಗಳು ಬಿಹಾರದಲ್ಲಿಯೇ ಕೇಂದ್ರೀಕೃತಗೊಂಡಿವೆ ಉಳಿದ ಕಚ್ಚಾ ಪದಾರ್ಥಗಳಾದ ಕಬ್ಬಿಣದ ಅದಿರು, ಸುಣ್ಣಕಲ್ಲು ಮುಂತಾದ ಅನ್ಯಕ್ಷೇತ್ರಗಳಲ್ಲಿ ಕೂಡ ದೊರೆಯುವುವು

ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತಿನ ಆಶ್ರಯದಲ್ಲಿ ನಡೆಸಿದ ಪರಿಶೀಲನೆಗಳಿಂದ ಕಲ್ಲಿದ್ದಲು ಕಿಟ್ಟವನ್ನು ದೂರದ ಪ್ರದೇಶಗಳಲ್ಲಿ ಕೂಡ ಪಡೆಯುವ ಸಾಧ್ಯತೆಯಿರುವುದಾಗಿ ವ್ಯಕ್ತಪಟ್ಟಿದೆ ಕಲ್ಲಿದ್ದಲು ಕಿಟ್ಟದ ತಯಾರಿಕೆಗೆ ಪ್ರಶಸ್ತವಾದ ಕಲ್ಲಿದ್ದಲನ್ನು ಕೀಳು ದರ್ಜೆಯ ಕಲ್ಲಿದ್ದಲಿನೊಂದಿಗೆ ಸೂಕ್ತ ಪ್ರಮಾಣದಲ್ಲಿ ಬೆರೆಸುವುದರಿಂದ ಕಲ್ಲಿದ್ದಲು ಕಿಟ್ಟವನ್ನು ಪಡೆಯುವ ಸಾಧ್ಯತೆಯಿರುವುದು' ಕಲ್ಲಿದ್ದಲನ್ನು ಶುದ್ಧೀಕರಿಸುವುದರಿಂದ ಉತ್ತಮ ಗುಣಾಂಶದ ಕಲ್ಲಿದ್ದಲನ್ನು ಪಡೆಯಬಹುದಾಗಿದೆ ಅಷ್ಟೇ ಅಲ್ಲದೆ ಹೀಗೆ ಶುದ್ಧೀಕರಿಸಲ್ಪಟ್ಟ ಕಲ್ಲಿದ್ದಲನ್ನು ವಿದ್ಯುಚ್ಛಕ್ತಿಯ ಉತ್ಪಾದನೆ ಕೃತಕ ಗೊಬ್ಬರಗಳು ಮತ್ತು ರಾಸಾಯನಿಕ ವಸ್ತುಗಳ ತಯಾರಿಕೆಗಾಗಿ ಬಳಸುವ ಸಾಧ್ಯತೆ ಇರುವುದು.

ಪರಿಷತ್ತಿನ ಸಂಶೋಧನೆಗಳ ಫಲಸ್ವರೂಪವಾಗಿ ಮೂರು ಭಾರಿ ಕಲ್ಲಿದ್ದಲು ಶುದ್ಧೀಕರಣ ಕಾರ್ಖಾನೆಗಳನ್ನು ಕಾರ್ಯಾಚರಣೆಗೆ ತರಲಾಗಿದೆ ಮತ್ತೆರಡು ಕಾರ್ಖಾನೆಗಳನ್ನು ನಿರ್ಮಿಸಲಾಗುತ್ತಿದೆ.

ರಾಷ್ಟ್ರೀಯ ಪ್ರಯೋಗ ಶಾಲೆಗಳು ಉಕ್ಕಿನ ತಯಾರಿಕೆಗಾಗಿ ಒಂದು ಸರಳ ವಿಧಾನವನ್ನು ರೂಪಿಸಿವೆ. ಭಾರತೀಯ ಬೇಡು ಕಬ್ಬಿಣವು ಕೊಂಚ ಪ್ರಮಾಣದ ರಂಜಕವನ್ನು ಪಡೆದಿರುತ್ತದೆ ಈ ಕಬ್ಬಿಣವನ್ನು ಉಕ್ಕನ್ನಾಗಿ ಪರಿವರ್ತಿಸುವ ಬಗ್ಗೆ ಹಲವಾರು ಘಟ್ಟಗಳಿರುವುವು ಆದರೆ ಒಂದೇ ಘಟ್ಟದಲ್ಲಿ ಉಕ್ಕನ್ನು ಪಡೆಯಬಹುದೆಂಬುದನ್ನು ರಾಷ್ಟ್ರೀಯ ಪ್ರಯೋಗ ಶಾಲೆಗಳು ತೋರಿಸಿಕೊಟ್ಟಿವೆ ಜಂಶೆಡ್‌ಪುರದಲ್ಲಿರುವ ರಾಷ್ಟ್ರೀಯ ಲೋಹ ಶೋಧನಾ ಪ್ರಯೋಗ ಶಾಲೆಯಲ್ಲಿ ಉಪಯುಕ್ತ ಅಧ್ಯಯನಗಳನ್ನು ನಡೆಸಲಾಗಿವೆ

ಜಂಶೆಡ್‌ಪುರದಲ್ಲಿರುವ ಪ್ರಯೋಗಶಾಲೆಯು ಸ್ಟೈನ್‌ಲೆಸ್ ಸ್ಟೀಲ್ ತಯಾರಿಕೆಯಲ್ಲಿ ನಿಕ್ಕಲ್ ಲೋಹಕ್ಕೆ ಬದಲಾಗಿ ಮ್ಯಾಂಗನೀಸ್ ಲೋಹವನ್ನು ಬಳಸಬಹುದೆಂಬುದನ್ನು ತೋರಿಸಿಕೊಟ್ಟಿದೆ. ಇದೊಂದು ಗಮನಾರ್ಹವಾದ ಅಧ್ಯಯನವಾಗಿರುವುದು

ಭಾರತದಲ್ಲಿ ಹೇರಳವಾಗಿ ದೊರೆಯುವ ಫಾಸ್ಟರೈಟ್ ಮತ್ತು ಸಿಲ್ಲಿಮನೈಟ್‌ಗಳಿಂದ ರಿಫ್ರಾಕ್ಟರಿ (ಶಾಖಕೊಟ್ಟು ಲೋಹ ಕರಗಿಸಲು ಬಳಸುವ ಪದಾರ್ಥ) ವಸ್ತುಗಳನ್ನು ತಯಾರಿಸಬಹುದೆಂದು ಅಧ್ಯಯನಗಳಿಂದ ಕಂಡುಬಂದಿದೆ ಭಾರತದಲ್ಲಿ ದೊರೆಯುವ ಗ್ರಾಫೈಟ್‌ನಿಂದ ಉತ್ತಮ ದರ್ಜೆಯ ಗ್ರಾಫೈಟ್ ಮೂಸೆಗಳನ್ನು ತಯಾರಿಸಬಹುದಾಗಿದೆ. ಈ ಮೂಸೆಗಳು ಕುಲುಮೆ ಕಾರ್ಖಾನೆಗಳ ಮತ್ತಿತರ ಉದ್ಯಮಗಳಲ್ಲಿ ಬಳಸಬಹುದೆಂಬುದಾಗಿ ಕಂಡುಬಂದಿದೆ.

ಕೀಳು ದರ್ಜೆಯ ಕಲ್ಲಿದ್ದಲನ್ನು ಬಳಸಿ ಲಂಬಾಕೃತಿಯ ಬಾಯ್ಲರ್‌ಗಳನ್ನು ಕಾರ್ಯಾಚರಣೆಗೆ ತೊಡಗಿಸಲು ಸಾಧ್ಯವಾಗುವಂತೆ 'ಡಿಸೈನ್'ಗಳಲ್ಲಿ ಮಾರ್ಪಾಡುಗಳನ್ನು ಸೂಚಿಸಿವೆ.

ರಾಷ್ಟ್ರೀಯ ಲೋಹ ಶೋಧನಾ ಪ್ರಯೋಗ ಶಾಲೆಯಲ್ಲಿ ಮ್ಯಾಂಗನೀಸ್ ಅದಿರು, ಕ್ರೋಮೈಟ್, ವುಲ್ಫ್ರಾಂ, ಪೈರೈಟ್ಸ್ ಮುಂತಾದ ಖನಿಜಗಳನ್ನು ಶೋಧಿಸುವ ಪ್ರಯತ್ನ ನಡೆಸಲಾಗುತ್ತಿದೆ. ಕೀಳು ದರ್ಜೆಯ ಖನಿಜಗಳಿಂದ ಉತ್ತಮ ದರ್ಜೆಯ ಗ್ರಾಫೈಟನ್ನು ಪಡೆಯುವುದಕ್ಕಾಗಿ ಒರಿಸ್ಸಾದ ತಿತಲಿಘರದಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗಿದೆ ಯುರೇನಿಯಂ ಯುಕ್ತ ಖನಿಜ ಪದಾರ್ಥಗಳ ಬಗ್ಗೆ ನಡೆಸಿದ ಶೋಧನೆಗಳ ಫಲದಿಂದ ಬಿಹಾರ್ ರಾಜ್ಯದ ಘಾಟಶಿಲಾದಲ್ಲಿ ಯಂತ್ರಾಗಾರವೊಂದನ್ನು ಸ್ಥಾಪಿಸಲಾಗಿದೆ ಜಂಶೆಡ್‌ಪುರದಲ್ಲಿರುವ ಪ್ರಯೋಗಶಾಲೆಯಲ್ಲಿ ಪ್ರಾಯೋಗಿಕ ಯಂತ್ರಾಗಾರವೊಂದನ್ನು ಸ್ಥಾಪಿಸಲಾಗಿದೆ ವಿದ್ಯುಚ್ಛಕ್ತಿಯ ಪ್ರಕ್ರಿಯೆಯಿಂದ ಈ ಯಂತ್ರಾಗಾರದಲ್ಲಿ ದಿನವೂ ೩೦ ಪೌಂಡುಗಳ ಪರಿಶುದ್ಧವಾದ ಮ್ಯಾಂಗನೀಸ್ ಲೋಹವನ್ನು ಪಡೆಯಲಾಗುತ್ತಿದೆ.

ರಾಸಾಯನಿಕ ವಸ್ತುಗಳನ್ನು ತಯಾರಿಸುವ ಬಗ್ಗೆ ಈ ರಾಷ್ಟ್ರೀಯ ಪ್ರಯೋಗಶಾಲೆಗಳಲ್ಲಿ ಅನೇಕ ಹೊಸ ವಿಧಾನಗಳನ್ನು ಅಭಿವೃದ್ಧಿಪಡಿಸಲಾಗಿದೆ. ಕೇಂದ್ರ ಇಂಧನ ಸಂಶೋಧನಾ ಸಂಸ್ಥೆಯು ನೀರನ್ನು ಮೃದುಗೊಳಿಸುವ 'ಕಾರ್ಬಿಯಾನ್' ಎಂಬ ಹೊಸ ಪದಾರ್ಥವನ್ನು ಅಭಿವೃದ್ಧಿಪಡಿಸಿದೆ 'ಕಾರ್ಬಿಯಾನ್' ಈಗ ಭಾರತ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಮಾರಾಟವಾಗುತ್ತಿದೆ.

ವರ್ಣವಸ್ತುಗಳ ತಯಾರಿಕೆಯಲ್ಲಿ ಬಳಸಲಾಗುವ ಅಮೂಲ್ಯ ವಸ್ತುವೆಂದರೆ ಥಾಲಿಕ್ ಅನ್‌ಹೈಡ್ರೈಡ್ ಕೇಂದ್ರ ಇಂಧನ ಸಂಶೋಧನಾ ಸಂಸ್ಥೆಯಲ್ಲಿ ಈ ಅ

(೧೧ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.
ಪ್ರಧಾನ ಕಛೇರಿ ಉಡುಪಿ ಸ್ಥಾಪನೆ ೧೯೨೫

ಸಂತೋಷದ ಸುದ್ದಿ

ಪ್ರಗತಿಪಥದಲ್ಲಿ ಸಿಂಡಿಕೇಟು — ಗುಜರಾಥದಲ್ಲಿ ಪ್ರಥಮ ಶಾಖೆ

ನಮ್ಮ ಬೇಂಕಿನ
'ಬರೋಡಾ' ಶಾಖೆಯು
ಶ್ರೀಮಾನ್ ಮಗನ್ ಭಾ ಶಂಕರ್ ಭಾ ಪಟೇಲ್
(ಅಧ್ಯಕ್ಷ ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿ)
ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ
ತಾ 9-2-'58 ರಂದು ತೆರೆಯಲ್ಪಡುವುದು

ನಮ್ಮ 105 ನೇ ಹೊಸ ಶಾಖೆಯ ವಿಳಾಸ:–
KAMAL KUNJ
VITTAL TEMPLE ROAD
POST BOX No 8
MANDVI,
BARODA—1.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ನೀವು ಮತ್ತು ನಿಮ್ಮ ತೋಟ—

ಕಲ್ಪವೃಕ್ಷವನ್ನು ಕಡೆಗಣಿಸಬಾರದು

ತೆಂಗಿನ ಮರಕ್ಕೆ ಕಲ್ಪವೃಕ್ಷವೆಂಬುದೊಂದು ಉಪನಾಮಧೇಯ. ಕಲ್ಪವೃಕ್ಷ ಸಮುದ್ರಮಥನಕಾಲದಲ್ಲಿ ಹುಟ್ಟಿದ್ದು ಅದನ್ನು ದೇವಪತಿಯಾದ ಇಂದ್ರನು ತನ್ನೊಡನಿಟ್ಟುಕೊಂಡಿದ್ದಾನೆ. ಕಾಮಧೇನುವಿನಂತೆಯೇ ಈ ಕಲ್ಪವೃಕ್ಷವು ಸಹ ಬೇಡಿದ್ದನ್ನೀಯುವುದಂತೆ. ಆದುದರಿಂದಲೇ ಅದಕ್ಕೆ ಅಷ್ಟು ಮನ್ನಣೆ, ಪುರಸ್ಕಾರ. ತೆಂಗಿನಮರದ ಸರ್ವ ಭಾಗವೂ ಮಾನವನ ಉಪಯೋಗಕ್ಕೆ ಬೀಳುತ್ತದೆ. ಎಳ್ಳಿನ ಏಳು ಭಾಗದಷ್ಟಾದರೂ ಎಸೆಯಬೇಕಾದ ಅಂಶ ಅದರಲ್ಲಿಲ್ಲ; ನಿಜವಾಗಿಯೂ ಭೂಲೋಕದ ಕಲ್ಪವೃಕ್ಷವೆಂದರೆ ತೆಂಗು!

ವಿಶ್ವದಲ್ಲಿ ತೆಂಗಿನ ಉತ್ಪಾದನೆ ಮತ್ತು ಅದನ್ನು ಬೆಳೆಸುವ ಭೂಭಾಗಗಳ ವಿಸ್ತೀರ್ಣದಲ್ಲಿ ಮೊದಲನೆಯ ಸ್ಥಾನವನ್ನು ಶಾಂತಸಾಗರದ ದ್ವೀಪಪುಂಜಗಳಾದ ಫಿಲಿಪ್ಪಯಿನ್ಸ್‌ಗಳು ಗಳಿಸಿರುವುದಾದರೂ ನಮ್ಮ ನಿಮ್ಮ ಭಾರತಕ್ಕೆ ದ್ವಿತೀಯ ಸ್ಥಾನವಂತೂ ಸಲ್ಲಲೇಬೇಕಾಗಿದೆ. ನಮ್ಮ ದೇಶದಲ್ಲಿ ಕರಾವಳಿ ರಾಜ್ಯಗಳಾದ ಮೈಸೂರು, ಕೇರಳ, ಮದರಾಸು ಮತ್ತು ಆಂಧ್ರ ಪ್ರದೇಶಗಳಲ್ಲಿ ಸುಮಾರು ೧೬ ಲಕ್ಷ ಎಕರೆಗಳ ವಿಶಾಲ ಪ್ರದೇಶದಲ್ಲಿ ವಿಪುಲವಾಗಿ ತೆಂಗು ಬೆಳೆಯುತ್ತಿರುವುದನ್ನು ನಾವು ಕಣ್ಣಾರೆ ಕಾಣಬಹುದು. ಇಷ್ಟೊಂದು ತೆಂಗುಗಳಿಂದ ನಮಗೆ ಸಾಮಾನ್ಯವಾಗಿ ೪೦ ಸಾವಿರ ಲಕ್ಷಗಳಿಗೂ ಮಿಕ್ಕಿದ ತೆಂಗಿನ ಕಾಯಿಗಳು ದೊರೆಯುತ್ತವೆ.

ನಾವು ಬೆಳೆಯುವುದು ಕಡಿಮೆಯಾದರೂ ಉಪಯೋಗಿಸುವತ್ತ ನಮ್ಮ ಭಾರೀ ಮನೋವೃತ್ತಿಯು ವ್ಯಕ್ತಪಟ್ಟಿದೆ. ಎಂತಲೇ ನಮ್ಮ ತೆಂಗಿನ ಉತ್ಪತ್ತಿ ನಮ್ಮ ಹೊಟ್ಟೆಗೆ ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎನಿಸಿದಂತಾಗಿದೆ. ಕೇವಲ ಸ್ವಾದಿಷ್ಟ ಪಲ್ಯಗಳನ್ನೂ ಎಣ್ಣೆಯನ್ನೂ ಸಿದ್ಧಗೊಳಿಸಲು ಅಲ್ಲದೆ ಈಗೀಗ ಬಟ್ಟೆ ಮೈ ತೊಳೆಯುವ ಸಾಬೂನುಗಳ ತಯಾರಿಗಾಗಿಯೂ ಈ ತೆಂಗು ಬಳಸಲಾಗುತಿದ್ದು ದೇಶದಲ್ಲಿ ತೆಂಗಿನ ಘಟಕಗಳಿಗೆ ಬೇಡಿಕೆ ದಿನೇದಿನೇ ಹೆಚ್ಚುತ್ತಾ ಇದೆ. ಇದಕ್ಕೆ ಪ್ರವರ್ಧಮಾನಸ್ಥಿತಿಯಲ್ಲಿ ಅಧಿಕಗೊಳ್ಳುತ್ತಿರುವ ನಮ್ಮ ಜನಸಂಖ್ಯೆಯೂ, ಸಸ್ಯಾಹಾರೀ ಮನೋವೃತ್ತಿಯೂ ಒತ್ತಾಸೆಯೊಯುತ್ತವೆ. ಇವೆಲ್ಲವುಗಳಿಂದಾಗಿ ನಮಗೆ ಈಗಿನ ಸಮಯದಲ್ಲಿ ಸರ್ವಸಾಮಾನ್ಯ ೪೦ ಸಾವಿರ ಟನ್ನುಗಳಷ್ಟು ಕೊರತೆಯು ಕಂಡುಬರುತ್ತದೆ. ಎಂದರೆ, ನಾವು ಕೇವಲ ಅಲ್ಪ ಪ್ರಮಾಣದ ತೆಂಗನ್ನೇ ಉತ್ಪಾದಿಸುತ್ತೇವೆ ಎಂದಂತಾಯಿತು.

ನಮ್ಮ ತೋಟದ ತೆಂಗಿನ ಮರಗಳ ಕಾಯಿಗಳ ಉತ್ಪಾದನೆಯನ್ನು ಗಣಿಸಿದರೆ ಸರ್ವಸಾಮಾನ್ಯವಾಗಿ ಸರಾಸರಿ ಮರವೊಂದರಿಂದ ೩೦ ಕಾಯಿಗಳನ್ನು ಮಾತ್ರ ಪಡೆಯುತ್ತೇವೆ. ಇದು ನಮಗೆ ಹೆಚ್ಚೆಂದು ಕಂಡುಬಂದರೂ ನಿಜವಾಗಿಯೂ ಅತ್ಯಲ್ಪವಾಗಿದೆ. ಬೇರೆ ದೇಶಗಳೊಡನೆ ಈ ಬೆಳೆಯನ್ನು ಹೋಲಿಸುವುದಾದರೆ, ನಮ್ಮ ತಿಳುವಳಿಕೆ ತಪ್ಪೆಂದು ಸ್ವಯಂಸಿದ್ಧವಾಗುವುದು. ಇದರ ಕಾರಣವನ್ನು ಅರಸುವುದಾದರೆ, ಈವರೆಗೆ ಕೈಗೊಳ್ಳಲಾದ ಸಮೀಕ್ಷೆಗಳನ್ವಯವಾಗಿ ನಮ್ಮ ತೋಟಗಳಲ್ಲಿ ಮರಗಳು ನಿಬಿಡವಾಗಿರುವುದು ಮತ್ತು ಅವುಗಳಿಗೆ ಉತ್ತಮವಾದ ಗೊಬ್ಬರಗಳ ಪೂರೈಕೆಯಾಗದಿರುವುದು— ಗೋಚರವಾಗುತ್ತದೆ. ಹಾಗೆಯೇ ಒಂದು ತೆಂಗಿನ ಮರವು ಸುಮಾರು ೮೦ ವರ್ಷಗಳಷ್ಟು ಬದುಕುವುದರಿಂದ ಮುದಿಯಾದಂತೆ ಮರದ ಉತ್ಪಾದನಾ ಶಕ್ತಿ ಕುಂಠಿತವಾಗುವುದರಿಂದ ಅದಕ್ಕೆ ಮೊದಲೇ ನಾವು ಅನ್ಯವೃಕ್ಷಗಳನ್ನು ನೆಡದಿರುವುದೂ ಇಂತಹ ಅರಕೆಗಳಿಗೆ ಕಾರಣವೆನಿಸಿದೆ.

ತೆಂಗಿನ ಕೃಷಿಯ ಬಗೆಗೆ ನಮ್ಮ ಜನರಲ್ಲಿ ಅಜ್ಞಾನ ತುಂಬಿರುವುದರಿಂದಲೇ ಅದು ಲಾಭದಾಯಕವಾಗಿ ಕಂಡುಬರುವುದಿಲ್ಲ; ಅಲ್ಲದೇ ನಮ್ಮ ಬೇಡಿಕೆಗಳನ್ನು ಪೂರೈಸುವಷ್ಟು ಬೆಳೆದುಬಂದಿಲ್ಲ. ಆದುದರಿಂದಲೇ ಭಾರತ ಸರಕಾರದವರು ಈ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿ ದ್ವಿತೀಯ ಯೋಜನಾಂತ್ಯದಲ್ಲಿ ಫಲವಾರು ಜಯಗಳಿಸಲು ನಿರ್ಧರಿಸಿರುವರು. ನಮ್ಮ ದೇಶದಲ್ಲಿ ಈ ಬಗ್ಗೆ ಸಾಕಷ್ಟು ಅವಕಾಶವಿದ್ದರೂ ಇವು ಸದುಪಯೋಗವಾಗುತ್ತಿಲ್ಲವೆನ್ನುವುದು ಖೇದನೀಯ ಸಂಗತಿ. ತೆಂಗಿನ ತೋಟಗಾರರ ತೋಟಗಳಲ್ಲಿ ಪ್ರಾಯೋಗಿಕ ಪ್ರದರ್ಶನಗಳನ್ನು ಏರ್ಪಡಿಸಿ, ಮತ್ತು ಗೊಬ್ಬರ ಹಾಕುವ ವಿಧಾನವನ್ನು ಜನಪ್ರಿಯಗೊಳಿಸಿ ಈ ಕಡೆಗೆ ತೋಟಿಗರ ಗಮನಸೆಳೆಯುವ ಕಾರ್ಯಕ್ರಮಗಳು ಈಗಾಗಲೇ ಸಾಕಷ್ಟು ನಡೆಯುತ್ತಿವೆ. ರಾಸಾಯನಿಕ ಗೊಬ್ಬರಗಳನ್ನು ಕಡಿಮೆದರದಲ್ಲಿ ತೋಟಗಾರರಿಗೆ ಒದಗಿಸಲಾಗುತ್ತಿದೆ. ತೆಂಗಿನ ತೋಟಗಳಿಗೆ ಕಾಲಾಂತರಗಳಿಂದ ಅಂಟಿಕೊಳ್ಳಬಹುದಾದ ರೋಗಗಳ ಕ್ರಿಮಿವಿನಾಶನಕ್ಕಾಗಿ ಅವಿರತ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ತೆಂಗನ್ನು ಲಾಭದಾಯಕವಾಗಿ ಬೆಳೆಸಲು, ಹೆಚ್ಚು ವಿಸ್ತೀರ್ಣದ ಪ್ರದೇಶವನ್ನು ಬಳಸುವಂತೆ ಪ್ರೋತ್ಸಾಹಿಸಲು ಕೇಂದ್ರ ತೆಂಗಿನ ಸಮಿತಿಯು ಕೆಲಸಮಾಡುತ್ತಿದೆ. ಈ ಸಮಿತಿಯು ತೆಂಗಿನ ತೋಟಗಳನ್ನು ಬೆಳೆಸಬಯಸುವವರಿಗೆ ಅತ್ಯುತ್ತಮ ಬೀಜಗಳನ್ನೂ ಸಸಿಗಳನ್ನೂ ತಕ್ಕ ಮಾಹಿತಿಯನ್ನೂ ಕೊಡುವ ಬಗ್ಗೆ ದೇಶದ ಬೇರೆ ಬೇರೆ ಸ್ಥಳಗಳಲ್ಲಿರುವ ನರ್ಸರಿಗಳ ಸಂರಕ್ಷಣೆಗೆ ಹಣ ಒದಗಿಸುತ್ತದೆ. ಈ ನಿಧಿಗೆ ರಾಜ್ಯ ಸರಕಾರಗಳೂ ನೆರವೀಯುತ್ತವೆ. ಕೇರಳ, ಮದರಾಸು, ಆಂಧ್ರ ಮತ್ತು ಒರಿಸ್ಸಾ ರಾಜ್ಯಗಳ ಮರಳಿನಂತಿರುವ ಮಣ್ಣಿನ ಕಡಲತೀರದ ಕ್ಷೇತ್ರಗಳಲ್ಲಿ ನೀರಾವರಿಗಾಗಿ ಕೇಂದ್ರ ಸರಕಾರವು ಆರ್ಥಿಕ ಸಹಾಯವನ್ನು ಕೊಡುತ್ತಿದೆ. ಹೀಗೆ ಸರಕಾರವು ಇದೊಂದು ಅತ್ಯಂತಾವಶ್ಯಕ ವ್ಯವಸಾಯ ವಿಭಾಗವೆಂಬುದನ್ನು ಮನಗಂಡು ಆ ಬಗ್ಗೆ ಸಹಾಯವೀಯುತ್ತಿದೆ.

ತೆಂಗಿನ ಕೃಷಿಯ ಬಗ್ಗೆ ನಾವು ವಹಿಸುತ್ತಿರುವ ಆಸ್ಥೆಯೇನೂ ಸಾಲದು. ನಾವು ತಿಳಿದುಗೊಂಡಿರುವ ವಿಷಯಗಳೂ ಸಾಲವು. ಈ ಬಗ್ಗೆ ಇನ್ನೂ ಸಂಶೋಧನೆಗಳಾಗಬೇಕು. ಸುಧಾರಣೆಯಾಗಬೇಕು. ಇದಕ್ಕಾಗಿ ಕೇರಳದ ಕಾಸರಗೋಡು ಮತ್ತು ಕಾಯಂಕುಲಗಳಲ್ಲಿರುವ ತೆಂಗು ಪರಿಶೋಧನಾ ಕೇಂದ್ರಗಳನ್ನು ವಿಸ್ತರಿಸಲಾಗುತ್ತದೆ. ತೆಂಗಿನ ಕೃಷಿ ಮತ್ತು ತೆಂಗಿಗೆ ಹಾಕಬೇಕಾದ ಗೊಬ್ಬರಗಳ ಕುರಿತಾಗಿ ಪ್ರಯೋಗಗಳನ್ನು ನಡೆಸಲು ಪ್ರಾದೇಶಿಕ ಸಂಶೋಧನಾ ಕೇಂದ್ರಗಳನ್ನು ವ್ಯವಸ್ಥೆಗೊಳಿಸಲಾಗುತ್ತಿದೆ ಅಲ್ಲದೆ ಉತ್ತಮ ಸಸಿಗಳನ್ನೇ ನೆಟ್ಟು ಅವುಗಳನ್ನು ಉತ್ತಮ ಆಹಾರಗಳಿಂದಲೇ ಬೆಳೆಸಿ ಅಧಿಕ ಹುಟ್ಟುವಳಿಯನ್ನು ತೆಗೆಯಲು, ತೆಂಗಿನ ಬೆಳೆಗೆ ಈಗ ಉಪಯೋಗಿಸುತ್ತಿರುವ ವಿಸ್ತೀರ್ಣವನ್ನು ಹೆಚ್ಚಿಸಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ.

ತೆಂಗಿನ ಬಗ್ಗೆ ಇಷ್ಟೊಂದು ಆಸಕ್ತಿಯೇಕೆ? ಅದು ನಿಮಗೂ ತಿಳಿದಿದೆ. ಮೊದಲೇ ಹೇಳಿದಂತೆ ತೆಂಗಿನ ಸರ್ವಸ್ವವೂ ಮಾನವನಿಗೆ ಉಪಕಾರಿಯೇ ಆಗಿದೆ. ನಾವು ಹಾಕಿದ ಸಿಹಿ ಕಹಿ ಉಪ್ಪು ಹುಳಿ ನೀರು ಮತ್ತು ಕೊಳಕು ಗೊಬ್ಬರಗಳನ್ನೆಲ್ಲಾ ಜೀರ್ಣಿಸಿಕೊಂಡು ನಮಗದು ಸಿಹಿನೀರನ್ನಾಗಿ ಮಾರ್ಪಡಿಸಿಕೊಡುತ್ತದೆ! ನಮ್ಮ ಅತ್ಯಾಧುನಿಕ ಪ್ರಯೋಗಶಾಲೆಗಳಲ್ಲಿಯೂ ಅಸಾಧ್ಯವೆನಿಸಿದ ಪ್ರಯೋಗವನ್ನು ಒಂದು ಮರ ಹುಟ್ಟಿದಂದಿನಿಂದಲೇ ಮಾಡಿಬಿಡುತ್ತದೆ! ಆ ನೀರಿನ ಬೆಲೆ ದಣಿವಾದಾಗ ಮಾತ್ರ ತಿಳಿದೀತು! ಒಂದು ಬೊಂಡ ಕುಡಿದುಬಿಟ್ಟರೆ ಬಿಸಿಲಿನಿಂದ ಒಣಗಿ ಬೆವರಿದ ಮಾನವ ಶರೀರ ಒಮ್ಮೆ ಬದುಕಿದೆಯೆನ್ನುವುದನ್ನು ಯಾರು ಅನುಭವಿಸಿಲ್ಲ? ಬೆಳೆದುಬಂದ ಮೇಲೆ ತೆಂಗಿನ ತಿರುಳು ಅಡುಗೆ ತಯಾರಿಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ದಿನಕ್ಕೊಂದಾದರೂ ಸರಿಯೇ, ತೆಂಗಿನಕಾಯಿ ಹಾಕದ ಪಲ್ಯ ಯಾವ ರುಚಿ ಎನ್ನುತ್ತಾರೆ ಪಶ್ಚಿಮಕರಾವಳಿಯ ಜನರು! ಇನ್ನು ಅದನ್ನು ಒಣಗಿಸಿ ಕೊಬ್ಬರಿಯನ್ನಾಗಿ ಮಾಡಿ ಗಾಣಕ್ಕೆ ಕೊಟ್ಟು ಎಣ್ಣೆ ತೆಗೆದು ಉಳಿದ ಹಿಂಡಿ ದನಕರುಗಳಿಗೆ ಹಾಕಿದರೆ ಅವು ಪುಷ್ಟಿಯಾಗಿ ಬೆಳೆದು ಹಾಲು ಹೆಚ್ಚು ಕೊಡುವುದಲ್ಲದೆ ಬೆಣ್ಣೆ ತುಪ್ಪಗಳೂ ಅಧಿಕವಾಗುವುದನ್ನು ಯಾರು ಕಂಡಿಲ್ಲ? ಎಣ್ಣೆಯ ಉಪಯೋಗವಂತೂ ತಿಳಿದೇ ಇದೆಯಲ್ಲ? ಇನ್ನು ತೆಂಗಿನ ಗರಿಗಳನ್ನು ಹೆಣೆದು ಮಾಡಿದ ಚಾಪೆಗಳನ್ನು ಬಡವರ ಮನೆಗಳ ಛಾವಣಿಗೆ, ಗೋಡೆ ಮರೆಗಳನ್ನಾಗಿಯೂ ಉಪಯೋಗಿಸುತ್ತೇವೆ. ಬಲಿತ ತೆಂಗಿನ ಚಿಪ್ಪುಗಳಿಂದ ಅಲಂಕರಣದ ಒಡವೆ ವಸ್ತುಗಳು ಬೇಕಾದಷ್ಟು ನಿರ್ಮಾಣವಾಗುತ್ತಲಿವೆ. ಹುಕ್ಕಾಗಳ ತಯಾರಿಯಲ್ಲಿ ಈ ಗೆರಟೆಗಳು ವಹಿಸುವ ಮಹತ್ವದ ಪಾತ್ರಕ್ಕಿಂತಲೂ ದೇಶಾಟನೆ ಮಾಡುವವರ ಭಿಕ್ಷಾಪಾತ್ರೆಗಳಾಗಿ ಇವು ಕೆಲಸಮಾಡುತ್ತಿರುವುದನ್ನು ಎಂದಾದರೂ ಮರೆಯಲಾದೀತೆ?

ಇನ್ನೂ ಮುಗಿಯಲಿಲ್ಲ ಈ ತೆಂಗಿನ ಕಥೆ. ಗೆರಟೆ ಮೇಲ್ಭಾಗದಲ್ಲಿರುವ ಜುಟ್ಟು ಅಥವಾ ಕಾಯಿಕತ್ತ! ಇದನ್ನು ನಾರುಗಳನ್ನಾಗಿ ಮಾಡಿ ಹಗ್ಗಗಳನ್ನು ತಯಾರಿಸುತ್ತೇವೆ. ಇದಿಲ್ಲವಾದರೆ ನಮ್ಮ ದೈನಂದಿನ ಕಾರ್ಯಕ್ರಮ ಹೇಗೆ ನಡೆಯಬೇಕು? ತೆಂಗಿನನಾರನ್ನು ಕೇವಲ ಹಗ್ಗದಲ್ಲಿ ಮಾತ್ರವಲ್ಲ, ದಿಂಬುಗಳೊಳಗೆ ಹತ್ತಿಯ ಬದಲು ಸಹ ಉಪಯೋಗಿಸುತ್ತಾರೆ. ಈ ನಾರಿನ ಉದ್ಯಮವು ಭಾರತದಲ್ಲಿ ಯಶಸ್ವಿಯಾಗುತ್ತ ಇದೆ. ಕಸಗುಡಿಸುವ ಹಿಡಿಸೂಡಿಯಿಂದ ಹಿಡಿದು ದೇವರ ನೈವೇದ್ಯಕ್ಕೆ ಉಪಯುಕ್ತವಾಗುವ ಈ ತೆಂಗನ್ನು ನಾವಲ್ಲ, ನಮ್ಮ ಪೂರ್ವಜರು ಕಲ್ಪವೃಕ್ಷವೆಂದು ಕರೆದರೆ, ನಾವದನ್ನು ದೂರಬೇಕಾಗಿಲ್ಲ. ಇನ್ನು ಯಾವುದಕ್ಕೂ ಬೇಡವಾದ ಭಾಗವೇನಾದರೂ ಇದ್ದರೆ, ಮನೆಯಲ್ಲಿ ಬೆಂಕಿಯುರಿಸಲು ಅಗತ್ಯ ಬೇಕೇಬೇಕು. ಹೀಗಿದೆ ನಾವು ನಿತ್ಯ ನೋಡುವ ತೆಂಗಿನ ಮರದ ಉಪಯೋಗ!

ತೆಂಗಿನ ಮರ ಮಾನವನಿಗಿಂತ ಅದೆಷ್ಟು ಎತ್ತರ ಬೆಳೆವಿದೆಯೋ ಅಷ್ಟೇ ಎತ್ತರಕ್ಕೆ ಅದರ ಕೀರ್ತಿಯೂ ಉಪಯೋಗಿತೆಯೂ ಬೆಳೆದಿದೆ. ಈ ವಿಶೇಷತೆಯನ್ನು ನಾವರಿತ ತೆಂಗನ್ನು ಉತ್ತಮವಾಗಿ ಬೆಳೆಯಿಸಿ ಅದರಿಂದ ಸಂಪೂರ್ಣ ಲಾಭವನ್ನೇಕೆ ಮಾಡಿಕೊಳ್ಳಬಾರದು? ನಾವಿತ್ತ ಆಸ್ಥೆಯನ್ನೇಕೆ ವಹಿಸಬಾರದು? ತನ್ಮೂಲಕ ದೇಶದ ವಿದೇಶ ವಿನಿಮಯದ ಕೊರತೆಯನ್ನೇಕೆ ಉಳಿಸಬಾರದು?



ಬೇಂಕು ವ್ಯವಹಾರಗಳಲ್ಲಿ
ನೀವು ಬಯಸುವ
ಅತ್ಯಾಧುನಿಕ, ಅತ್ಯುತ್ತಮ ಮತ್ತು ಶೀಘ್ರ ಸೇವೆಗಳಿಗಾಗಿ
"ಕೊರ್ಪೊರೇಶನ್"
ಬೇಂಕನ್ನು ನಿಮ್ಮದಾಗಿಯೇ ಭಾವಿಸಿ, ನೀವು ಯಾವಾಗಲೂ ಆಶ್ರಯಿಸಬಹುದು.
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕು)
ಸ್ಥಾಪನೆ: 1906 [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ನೋಟ್ಸ್ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ.
ನವಯುಗ ಪ್ರೆಸ್. ಉಡುಪಿ.

ಗದ್ದೆಗಳಿಗೆ ರಾಸಾಯನಿಕ ಗೊಬ್ಬರ ಹಾಕಬೇಡಿ:-

ಹಲವು ಅನಾಹುತಗಳ ತವರುಮನೆ!

ಈಗೀಗ ನಮ್ಮಲ್ಲಿ ರಾಸಾಯನಿಕ ಗೊಬ್ಬರಗಳ ಉಪಯೋಗವು ಬೆಳೆಯುತ್ತ ಬರುತ್ತಿದೆ. ಹಾಗಿರುವಾಗ ರಿಚಾರ್ಡ್ ಬಿ ಗ್ರೆಗ್ ಎಂಬ ಮಹಾ ವಿದ್ವಾಂಸರೊಬ್ಬರೊಂದು ಲೇಖನವನ್ನು ಬರೆದು ಈ ಗೊಬ್ಬರದ ಗುಣದೋಷಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ರಾಸಾಯನಿಕ ಗೊಬ್ಬರಗಳಿಂದ ಬೆಳೆಸಿದ ಗಿಡಗಳಲ್ಲಿ ಪೌಷ್ಟಿಕಾಂಶವು ಕಡಿಮೆಯಾಗುವುದು, ಭೂಮಿಯ ಸಾರವೂ ಇಳುವರಿಯೂ ಆಗುವುದೆಂದವರು ಹೇಳುತ್ತಾರೆ. ಆದುದರಿಂದಲೇ ಈ ಶ್ರೀ ಗ್ರೆಗರು ಒಣ ಎಲೆಗಳಿಂದ ಮತ್ತು ವಾನಸ್ಪತಿಕ ವಸ್ತುಗಳಿಂದಲೇ ಗೊಬ್ಬರವನ್ನು ತಯಾರಿಸಬೇಕೆಂದೂ, ಇದರಿಂದ ಆಹಾರ ಧಾನ್ಯಗಳು ಅಧಿಕೋತ್ಪತ್ತಿಯಾಗುವುದು ಸಾಧ್ಯವೆಂದೂ ಈ ಧಾನ್ಯಗಳು ಪೌಷ್ಟಿಕವೂ ಆಗಿರುವುದೆಂದೂ ಅಭಿಪ್ರಾಯಪಡುತ್ತಾರೆ.

ಗದ್ದೆಗಳಲ್ಲಿ ಉತ್ಪಾದನೆಯನ್ನು ಶೀಘ್ರವಾಗಿ ಹೆಚ್ಚಿಸುವ ಉದ್ದೇಶವನ್ನಿಟ್ಟುಕೊಂಡು ಭಾರತ ಸರಕಾರವು ರಾಸಾಯನಿಕ ಗೊಬ್ಬರಗಳನ್ನು ಅಧಿಕಾಧಿಕವಾಗಿ ಬಳಸುವಂತೆ ಉಪದೇಶಿಸಲು ಪ್ರಾರಂಭಿಸಿದೆ. ಮುಖ್ಯವಾಗಿ ಹೀಗೆ ಉಪಯೋಗಿಸಲಾಗುವ ಪದಾರ್ಥಗಳೆಂದರೆ, ಅಮೋನಿಯಂ ಸಲ್ಫೇಟ್, ಗ್ರೌಂಡ್ ಫಾಸ್ಫೇಟ್‌ರಾಕ್ ಅಥವಾ ಪೊಟೇಶಿಯಂ ಕ್ಲೋರೈಡ್ ಮತ್ತು ಗ್ರೌಂಡ್ ಲಯಿಮ್‌ಸ್ಟೋನ್ ಅಥವಾ ಸ್ಲೇಕ್ಡ್ ಲೈಮ್‌ಗಳು. ಇವುಗಳಿಂದ ನೈಟ್ರೋಜನ್, ಫಾಸ್ಫೋರಸ್, ಪೊಟೇಶಿಯಂ ಮತ್ತು ಕೇಲ್ಸಿಯಂಗಳು ಗಿಡಗಳಿಗೆ ದೊರೆಯುತ್ತವೆ.

ಈ ರಾಸಾಯನಿಕ ಗೊಬ್ಬರಗಳನ್ನು ಮಣ್ಣಿನ ವಿಶ್ಲೇಷಣೆ ಮಾಡುವುದಕ್ಕೆ ಮೊದಲೇ ಉಪಯೋಗಿಸಿದ ಪಕ್ಷದಲ್ಲಿ ಅವು ಉತ್ಪತ್ತಿಯನ್ನು ಕೆಲವು ವರ್ಷಗಳ ಮಟ್ಟಿಗೆ ಬೆಳೆಸುವುವು. ಹೀಗಿದ್ದರೂ ರಾಸಾಯನಿಕ ಪದಾರ್ಥಗಳೊಡನೆ ಅನ್ಯ ವಾನಸ್ಪತಿಕ ಪದಾರ್ಥಗಳನ್ನು ಸಹ ಸೇರಿಸುವುದು ಅಗತ್ಯವಾಗಿದೆ. ಈ ರಾಸಾಯನಿಕ ಪದಾರ್ಥಗಳನ್ನು ಪ್ರತಿವರ್ಷವೂ ಹೆಚ್ಚೆಚ್ಚಾಗಿ ಹಾಕಬೇಕಾಗುವುದು; ಏಕೆಂದರೆ ಹೀಗೆ ಮಾಡದೆ ಹೋದರೆ ಹಿಂದಿನ ವರ್ಷದಷ್ಟು ಫಲ ಪ್ರಚಲಿತ ವರ್ಷದಲ್ಲಿ ಕೊಡಲಾರದು. ರಾಸಾಯನಿಕ ಗೊಬ್ಬರಗಳೊಡನೆ ಸಸ್ಯಜನ್ಯ ಪದಾರ್ಥಗಳನ್ನು ಮಿಶ್ರಿಸದೆ ಹೋದರೆ, ಧಾನ್ಯೋತ್ಪತ್ತಿಗೆ ಅತ್ಯಾವಶ್ಯವಾದ ಭೂಮಿಕೀಟಾಣುಗಳ ಉತ್ಪತ್ತಿಯು ಕಡಿಮೆಯಾಗುತ್ತದೆ. ಈ ಭೂಮಿಕೀಟಾಣುಗಳು ಮಾತ್ರ ಕಡಿಮೆಯಾಗುವುದಲ್ಲದೆ ಧಾನ್ಯೋತ್ಪತ್ತಿಯ ಶಕ್ತಿಯು ಸಹ ಭೂಮಿಯಲ್ಲಿ ನಾಶಹೊಂದುತ್ತದೆ.

ರಾಸಾಯನಿಕ ಗೊಬ್ಬರಗಳ ಉಪಯೋಗದಿಂದ ಧಾನ್ಯೋತ್ಪತ್ತಿಯು ಹೆಚ್ಚುತ್ತದೆ, ಆದರೆ, ಹೀಗೆ ಉತ್ಪಾದಿತವಾದ ವಸ್ತುಗಳ ಗುಣ ಕಡಿಮೆಯಾಗುತ್ತದೆ. ರಾಸಾಯನಿಕ ಗೊಬ್ಬರಗಳಿಂದ ಬೆಳೆದು ಬಂದ ಧಾನ್ಯಗಳು, ಹಣ್ಣುಗಳು ಮತ್ತು ಕಾಯಿಪಲ್ಲೆಗಳು ರುಚಿಕರವಾಗಿರುವುದಿಲ್ಲ ಮತ್ತು ಅದನ್ನು ಉಪಯೋಗಿಸುವ ಜನರಿಗೆ ಸಂಪೂರ್ಣ ಖಾದ್ಯ ಮೂಲಗಳನ್ನು ಕೊಡುವುದಿಲ್ಲ. ಈ ಗೊಬ್ಬರಗಳ ಉಪಯೋಗದಿಂದ ಬೆಳೆದು ಬಂದ ಮರಗಿಡಗಳಿಗೆ ರೋಗಗಳು ಅಂಟಿಕೊಳ್ಳುವ ಭಯವು ಸದಾ ಕಾಲವೂ ಇರುತ್ತದೆ.

ಇಂತಹ ಗೊಬ್ಬರಗಳಲ್ಲಿರುವ ಅತಿರಿಕ್ತ ಪೊಟೇಶ್ ಮತ್ತು ನೈಟ್ರೋಜನು ಗಿಡಗಳಲ್ಲಿ ಕಾರ್ಬೋಹೈಡ್ರೇಟ್ ಮತ್ತು ಪ್ರೋಟೀನ್‌ಗಳ ಸಂತುಲನವನ್ನು ಒಡೆದು ಬಿಡುತ್ತದೆ. ಅತಿರಿಕ್ತ ಕಾರ್ಬೋಹೈಡ್ರೇಟ್ ಕೀಟಾಣುಗಳನ್ನು ಆಕರ್ಷಿಸುತ್ತದೆ. ಇದರೊಡನೆಯೇ ಈ ವಿಧಾನಗಳಿಂದ ಬೆಳೆಸಿದ ಉತ್ಪಾದನೆಗಳ ಮೇಲೆ ಜೀವನ ನಿರ್ವಹಿಸುವ ಮನುಷ್ಯ ಮತ್ತು ಪಶುಗಳಲ್ಲಿ ಕ್ರಮೇಣ ಪ್ರಾಕೃತಿಕ ಉತ್ಸಾಹ, ಶಕ್ತಿ ಮತ್ತು ರೋಗಗಳೊಂದಿಗೆ ಹೋರಾಡುವ ಶಕ್ತಿಗಳು ಕಡಿಮೆಯಾಗತೊಡಗುವುವು.

ಕ್ರಮೇಣ ಗದ್ದೆಗಳಲ್ಲಿ ಕೃಷಿಮಾಡಲು ಖರ್ಚು ಹೆಚ್ಚುವುದು. ರೈತರಿಗೆ ಪ್ರತಿವರ್ಷವೂ ಬೆಳೆಯನ್ನು ಏರುಮಟ್ಟದಲ್ಲಿರಿಸಲು ಅಧಿಕ ಗೊಬ್ಬರಗಳನ್ನು ಕೊಂಡುಕೊಳ್ಳಬೇಕಾಗುವುದು. ಇದರೊಂದಿಗೆ ಬೆಳೆಗೆ ಅಂಟಿಕೊಂಡ ರೋಗಗಳನ್ನು ತಡೆಗಟ್ಟಲಿಕ್ಕೂ ಖರ್ಚು ಮಾಡಬೇಕಾಗುವುದು. ಈ ಬೆಳೆಗಳಲ್ಲಿನ ರೋಗಾಣುಗಳನ್ನು ನಾಶಗೊಳಿಸಲು ಆಗಾಗ ವಿಷ ದ್ರವವನ್ನೇ ಚಿಮುಕಿಸುವುದರಿಂದ ಕ್ಷೇತ್ರಗಳಲ್ಲಿರುವ ಬೆಳೆ ಬೆಳೆಸುವ ಕೀಟಾಣುಗಳು ಕ್ರಮೇಣ ನಾಶವಾಗುತ್ತವೆ. ಇವೆಲ್ಲವೂ ಕೃಷಿ ವಿಭಾಗದಲ್ಲಿ ಹೆಚ್ಚಿನ ಖರ್ಚನ್ನು ಒದಗಿಸುತ್ತವೆ. ಇಂತಹ ಸಂದರ್ಭಗಳು ರಾಸಾಯನಿಕ ಗೊಬ್ಬರಗಳನ್ನು ವಿಪುಲವಾಗಿ ಬಳಸುವ ಯುರೋಪಿನ ದೇಶಗಳಲ್ಲಿ ಕಂಡು ಬಂದಿವೆ.

ಅಮೋನಿಯಂ ಸಲ್ಫೇಟ್‌ನಲ್ಲಿರುವ ನೈಟ್ರೋಜನಿನಿಂದ ಗಿಡಗಳು ತಮ್ಮ ಧಾನ್ಯಗಳು ಪಕ್ವವಾಗುವುದಕ್ಕೆ ಮೊದಲೇ ಮುದಿಯಾಗುತ್ತವೆ. ಮಣ್ಣಿನಲ್ಲಿ ಅತ್ಯಧಿಕ ಪರಿಮಾಣದಲ್ಲಿ ಪೊಟೇಶ್ ಗಿಡಗಳ ಮೂಲಕವಾದ ಉತ್ಪಾದನೆಯ ಉಪಯೋಗದಿಂದ ಮನುಷ್ಯ ಮತ್ತು ಜಾನುವಾರುಗಳ ಪರಿಗೆ 'ಥ್ರೋಂಬೋಸಿಸ್'ನ ಭಯ ಹುಟ್ಟುತ್ತದೆ.

ಆದುದರಿಂದ ಭೂಮಿಯಲ್ಲಿ ರಾಸಾಯನಿಕ ಗೊಬ್ಬರವನ್ನು ಕಡಿಮೆ ಪ್ರಮಾಣದಲ್ಲಿ ಸಾವಧಾನದಿಂದ ಉಪಯೋಗಿಸಬೇಕು. ಇದರ ಉಪಯೋಗದಿಂದಾಗಿ ಪ್ರಥಮ ಪರಿಣಾಮದಿಂದ ಅವರು ಅತ್ಯಂತ ಸಂತೋಷಯುಕ್ತರಾಗುವರೆಂದು ಹೇಳಬಹುದು. ಹೀಗಿದ್ದರೂ ಕ್ರಮೇಣ ಇದರುಪಯೋಗವು ಹಾನಿಕರವೆಂದು ತಿಳಿಯಬಹುದು. ಈ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಬೇಕೆನ್ನುವ ಪ್ರಚಾರಕರು ಈ ಮೇಲೆ ವರ್ಣಿಸಲಾದ ಅಪಾಯಗಳನ್ನು ತಿಳಿದಿರುವರೋ ಇಲ್ಲವೇ ತಿಳಿಯದು. ಅಥವಾ ತಿಳಿದಿದ್ದರೂ ಅಧಿಕೋತ್ಪಾದನೆಯ ಉದ್ದೇಶವೊಂದನ್ನೇ ಇಟ್ಟು ಅಪಾಯಗಳನ್ನು ಕಡೆಗಣಿಸಿರಲೂ ಬಹುದು. ಆದರೆ, ಭಾರತದಲ್ಲಿ ಭವಿಷ್ಯಕಾಲದಲ್ಲಿ ಜನಸಂಖ್ಯೆಯು ಬೆಳೆಯುತ್ತ ಬರುವಾಗ, ಈ ರಾಸಾಯನಿಕ ಗೊಬ್ಬರಗಳ ಬಳಸುವಿಕೆಯಿಂದ ಉತ್ಪಾದನೆಯು ಗುಣ ಮತ್ತು ಪರಿಮಾಣಗಳಲ್ಲಿ ಕಡಿಮೆಯಾಗುವುದು ಒಳ್ಳೆಯದೆಂದು ಹೇಳಬಾರದು.

ರಾಸಾಯನಿಕ ಪದಾರ್ಥಗಳು ಬೆಳೆಯನ್ನು ಹೆಚ್ಚಿಸುವುದಿಲ್ಲವಾದರೆ, ಅಧಿಕೋತ್ಪತ್ತಿಗೆ ಅನ್ಯ ಮಾರ್ಗವೇನು? ಇಲ್ಲಿ ಧನವ್ಯಯವಾಗದ, ಒಂದು ಉಪಾಯವನ್ನು ಸೂಚಿಸಬಹುದು. ಆದರೆ ಇದಕ್ಕೆ ಸಮಯ ಮತ್ತು ಸಮಾಧಾನಗಳ ಆವಶ್ಯಕತೆ ಇದೆ. ಅಲ್ಲದೆ ಇದನ್ನೆಲ್ಲ ರೈತರೂ ಮಾಡುತ್ತಿರುತ್ತಾರೆ.

ಒಣತರಗೆ, ಸೆಗಣಿ ಮತ್ತು ಅನ್ಯ ವಾನಸ್ಪತಿಕ ವಸ್ತುಗಳ ಮಿಶ್ರಣದಿಂದ ಗೊಬ್ಬರಗಳನ್ನು ತಯಾರಿಸಬಹುದು. ಹೀಗೆ ಸಿದ್ಧಗೊಂಡ [illegible] ಪರ್ಯಾಪ್ತ ಪ್ರಮಾಣದಲ್ಲಿ ನೈಟ್ರೋಜನ್, ಮಣ್ಣಿನ ಕ್ರಿಮಿಗಳು ಮತ್ತು ಅವುಗಳ ಮೊಟ್ಟೆಗಳು ಹಾಗೂ ಉತ್ಪಾದನೆಗಾಗಿ ಆವಶ್ಯಕ ಅನ್ಯ ಕೀಟಾಣುಗಳು ಬೇಕಷ್ಟಿರುತ್ತವೆ.

ಈ ಗೊಬ್ಬರ ಮಣ್ಣಿನಲ್ಲಿ ಸೇರಿಸಲ್ಪಡುವಾಗ ಮತ್ತು ನೇಗಿಲಿನಿಂದ ಉಳುವಾಗ ಇದರ ಸಾರ ಹೆಚ್ಚಿಸುವ ಶಕ್ತಿ ಗದ್ದೆಯ ಕಣಕಣದಲ್ಲಿ ಉಂಟಾಗುತ್ತದೆ, ಕೇವಲ ವರ್ತಮಾನ ಬೆಳೆಯಲ್ಲಿ ಮಾತ್ರವಲ್ಲ ಭವಿಷ್ಯ ಫಸಲಿನಲ್ಲಿ ಸಹ ಬೆಳವಣಿಗೆಗೆ ಸಹಾಯಕವಾಗುವುದು. ಈ ಗೊಬ್ಬರದ ಜೀವಾಣುಗಳಿಂದ ನೈಟ್ರೋಜನನ್ನು ಪಡೆದು ಗಿಡಗಳಿಗೆ ಮುಟ್ಟಿಸುತ್ತದೆ.

ಈ ರೀತಿಯಲ್ಲಿ ತಯಾರಿಸಿದ ಗದ್ದೆಯ ಮಣ್ಣಿನಲ್ಲಿ ಸಾರವಿರುತ್ತದೆ. ಅಲ್ಲದೆ ಗದ್ದೆ ಸಂಪೂರ್ಣ ನಿಸ್ಸಾರವಾಗಿರುವುದಿಲ್ಲ.

ಈ ರೀತಿಯ ಸಸ್ಯಜನ್ಯ ಗೊಬ್ಬರದ ಉಪಯೋಗವನ್ನು ಪ್ರಚುರಮಾಡಿದರೆ ಬೆಳೆ ಹೆಚ್ಚು ಬೆಳೆಯುವುದು. ಗಿಡಗಳಿಗೆ ರೋಗ ಅಂಟುವುದಿಲ್ಲ. ಈ ವಿಧಾನದಲ್ಲಿ ಉತ್ಪಾದಿತವಾದ ಧಾನ್ಯಸೇವನೆಯಿಂದ ಮನುಷ್ಯ ಪಶುಗಳಿಗೆ ಆರೋಗ್ಯವೂ ಶಕ್ತಿಯೂ ವರ್ಧಿಸುವುದು.

ಪ್ರತಿಯೊಂದು ಎಕರೆ ಭೂಮಿಯನ್ನು ಸಾರವತ್ತಾಗಿ ಮಾಡಲು ನಾಲ್ಕು ಟನ್ ಗೊಬ್ಬರವನ್ನು ನಾಲ್ಕು ವರ್ಷಗಳವರೆಗೆ ಬಳಸಬೇಕು. ಅಲ್ಲದೆ, ಪ್ರಥಮ ವರ್ಷವೇ ಉತ್ಪಾದನೆಯಲ್ಲಿ ಹೆಚ್ಚಳವು ದೃಗ್ಗೋಚರವಾಗುವುದು. ನಾಲ್ಕು ವರ್ಷಗಳಲ್ಲಿ ಭಾರತದ ಜನಸಂಖ್ಯೆಯೂ ಉತ್ಪಾದನೆಯೂ ಏಕಕಾಲದಲ್ಲಿ ಬೆಳೆಯುತ್ತದೆ.

ರಾಸಾಯನಿಕ ಗೊಬ್ಬರಗಳ ಉಪಯೋಗವನ್ನು ಮಾಡಲೇ ಬಾರದೆಂದಿದರ ಅರ್ಥವಲ್ಲ. ಅತ್ಯಂತ ಅಲ್ಪ ಪ್ರಮಾಣದ ಸಾರವಿರುವ, ಉತ್ಪಾದನೆಯನ್ನು ಪ್ರಾರಂಭಗೊಳಿಸುವ ಭೂಮಿಗಳಲ್ಲಿ ಮಾತ್ರ ಮಿತ ಪ್ರಮಾಣದಲ್ಲಿ ಉಪಯೋಗಿಸಬಹುದು.

ಗೊಬ್ಬರವು ಅನ್ಯ ಉಪಯೋಗಕ್ಕೆ ಬಾರದಿರುವ ಪದಾರ್ಥಗಳಿಂದ ತಯಾರಿಸಲ್ಪಡುತ್ತದೆ. ಇಂತಹ ವಸ್ತುಗಳಿಂದ ಗೊಬ್ಬರ ತಯಾರಿಸುವುದು ಬೇಂಕಿನಲ್ಲಿ ಹಣ ಜಮೆಯಿಟ್ಟಂತೆ. ಈ ಗೊಬ್ಬರದಲ್ಲಿ ಕೆಲವೊಂದು ಅಂಶಗಳನ್ನು ಮಣ್ಣನ್ನು ಚೆಲ್ಲಿದರೆ, ಆಗ, ನೈಟ್ರೋಜನ್ ಹೆಚ್ಚಾಗಿ ಉತ್ಪಾದಿಸಲ್ಪಡುವುದು. ಗೊಬ್ಬರವನ್ನು ಗದ್ದೆಗೆ ಹಾಕಿದನಂತರ ಬಹುದಿನಗಳವರೆಗೆ ಬಿಸಿಲಿನಲ್ಲಿ ಬಿಡಬಾರದು. ಕೇವಲ ಅರ್ಧ ದಿನದೊಳಗೇನೇ ಉಳಲು ಪ್ರಾರಂಭಿಸಬೇಕು.

ರಾಸಾಯನಿಕ ಗೊಬ್ಬರಗಳೊಂದಿಗೆ ಪ್ರಾಕೃತಿಕ ಗೊಬ್ಬರವನ್ನು ತುಲನೆಮಾಡಿದರೆ, ಬೇರೆ ಲಾಭಗಳೂ ಇದರಿಂದ ದೊರೆಯುತ್ತವೆ. ರಾಸಾಯನಿಕ ಗೊಬ್ಬರಗಳನ್ನು ನಿರ್ಮಿಸುವಾಗ ಖರ್ಚು ತುಂಬ ಬೀಳುತ್ತದೆ. ಈ ಗೊಬ್ಬರಗಳ ಸಾಗಾಟಕ್ಕಾಗಿ ಹಲವಾರು ತೊಂದರೆಗಳನ್ನು ಪಡಬೇಕಾಗುತ್ತದೆ. ಹಳ್ಳಿಗಳಿಗೆ ಇಂತಹ ಗೊಬ್ಬರಗಳನ್ನು ತಲಪಿಸುವುದೇ ಅತ್ಯಂತ ದುಷ್ಕರವಾದ ಕಾರ್ಯ. ಆದರೆ, ವನಸ್ಪತಿ ಗೊಬ್ಬರದ ನಿರ್ಮಾಣದಲ್ಲಾಗಲೀ ಸಾಗಾಟದಲ್ಲಾಗಲೀ ಲಭ್ಯದಲ್ಲಾಗಲೀ ಯಾವ ತೊಂದರೆಗಳೂ ಇರುವುದಿಲ್ಲ.

ರಾಸಾಯನಿಕ ಗೊಬ್ಬರ ಮತ್ತು ಪ್ರಾಕೃತಿಕ ಗೊಬ್ಬರಗಳ ಉಪಯೋಗವನ್ನು ಪ್ರಚಾರಮಾಡುವಾಗ ಸಹ ಜಾಗ್ರತೆವಹಿಸಬೇಕಾಗುತ್ತದೆ ಹಾಗೂ ಪರಿಶ್ರಮಪಡಬೇಕಾಗುತ್ತದೆ. ಆದರೆ, ನಮ್ಮ ರೈತರು ವಾನಸ್ಪತಿಕ ಗೊಬ್ಬರಗಳ ಬಗೆಗೆ ಈಗಾಗಲೇ ತಿಳಿದಿರುವುದರಿಂದ ಈ ವಿಷಯದ ಪ್ರಚಾರದಲ್ಲಿ ವಿಶೇಷ ಶ್ರಮದ ಅಗತ್ಯ ಬೀಳಲಾರದು. ಆದುದರಿಂದ ನಮ್ಮ ಸರಕಾರ ಮತ್ತು ಮುಂದಾಳುಗಳು ಇನ್ನು ಮುಂದೆ ರಾಸಾಯನಿಕ ಗೊಬ್ಬರಗಳಿಗೆ ಪ್ರೋತ್ಸಾಹ ನೀಡುವ ಬದಲು ಪ್ರಾಕೃತಿಕ ಗೊಬ್ಬರಗಳನ್ನೇ ಉತ್ತೇಜಿಸುವ ಕಾರ್ಯವನ್ನು ಮಾಡಿದರೆ ಎಲ್ಲರಿಗೂ ಕ್ಷೇಮ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟ ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೬-೨-'೫೮	೨೨

ಸ್ವಾಗತಾರ್ಹ ಪದನ್ಯಾಸ

ಆಸ್ತಿಗಳು ಪಾಲುಗೊಳ್ಳುವತ್ತಲೇ ಅವುಗಳ ವಾರಿಸುದಾರರು ಒಲಿದಿರುವಾಗ ಭಿನ್ನವಾಗಿರುವ ಪಾಲುಗಳು ಏಕಘಟಕವಾಗುವ ಅಭಿಲಾಷೆಯನ್ನು ವ್ಯಕ್ತಪಡಿಸಿದ ಸಂಗತಿಯು ಆಶ್ಚರ್ಯಕರವೂ ಕುತೂಹಲಪೂರ್ಣವೂ ಆಗಿರುವುದು ಸಹಜ. ಅಂತೆಯೇ ಮಧ್ಯಪೂರ್ವದ ಎರಡು ಭಿನ್ನ ರಾಷ್ಟ್ರಗಳು ಇದೀಗ ಒಂದಾಗಿ ಪರಿಣಾಮಗೊಳ್ಳಲಿರುವ ಹೇಳಿಕೆಗಳು ಸಹ ಆಶಾರ ಹುಟ್ಟಿಸುವಂತಹದ್ದಿದೆ. ಬ್ರಿಟಿಷರು ಹೂಡಿದ ಕುಯುಕ್ತಿಯನ್ನು ಧೈರ್ಯದಿಂದ ಎದುರಿಸಿ, ಸುಯೇಜ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸಿ ತನ್ಮೂಲಕ ಪಾಶ್ಚಾತ್ಯರ ಧೈರ್ಯಸಾಹಸಗಳನ್ನೇ ಆಹ್ವಾನಿಸಿದ ಈಜಿಪ್ಟು ಮತ್ತು ಭೂಮಧ್ಯ ಸಮುದ್ರ ಕಿನಾರೆಯ ಸಿರಿಯಾಗಳು ಎರಡೂ ಅರಬ ರಾಷ್ಟ್ರಗಳಾಗಿದ್ದು ಅವು ಈ ತಿಂಗಳ ಮೊದಲನೆಯ ದಿನಾಂಕ ಏಕರಾಜ್ಯವಾಗಿರಲು ಒಪ್ಪಿ ಸಂಬಂಧಿಸಿದ ಘೋಷಣೆಯನ್ನು ಮಾಡಿವೆ. ವಾಸ್ತವಿಕವಾಗಿ ಒಡೆದು ಆಳುವ, ತಮ್ಮ ಪ್ರಭುತ್ವವನ್ನು ಒಂದಲ್ಲ ಒಂದು ವಿಧದಲ್ಲಿ ಸಂಸ್ಥಾಪಿಸಲು ಹವಣಿಸುವ ಪಾಶ್ಚಾತ್ಯರಿಗೆ ಇದೊಂದು ಶಿರೋವೇದನೆ ಯಾದರೂ ಈ ಅರಬ ರಾಷ್ಟ್ರಗಳು ಮಾಡಿದ ನಿರ್ಣಯ ಸ್ವೀಕಾರಾರ್ಹ ಮತ್ತು ಅನುಕರಣೀಯವಾಗಿದೆ; ಅಲ್ಲದೇ, ಇತಿಹಾಸದಲ್ಲಿಯೇ ಬಂಗಾರದ ಅಕ್ಷರಗಳಲ್ಲಿ ಬರೆದಿಡಬಹುದಾದ ಘಟನೆಯಾಗಿದೆ.

ಸಾಮಾನ್ಯವಾಗಿ ಅರಬ ರಾಷ್ಟ್ರಗಳೆಂದರೆ ನೀತಿರಹಿತವಾದುವು; ಪರಸ್ಪರ ಕಾದಾಡಿಕೊಳ್ಳುವಂತಹವುಗಳು; ಪಾಶ್ಚಾತ್ಯರ ಅರ್ಥಾತ್ ಶ್ರೀಮಂತ ರಾಷ್ಟ್ರಗಳ ಗೆಳೆತನದಲ್ಲಿದ್ದುಕೊಂಡು ತಮ್ಮವರಿಗೇನೇ ದ್ರೋಹ ಬಗೆದು ಸ್ವಾರ್ಥಸಾಧಿಸಿಕೊಳ್ಳುವ ಆಕಾಂಕ್ಷೆಯಿಂದ ಕೂಡಿದುವುಗಳು. ಇವುಗಳಿಗೆ ಒಂದು ಸ್ವತಂತ್ರವಾದ ಧೋರಣೆಯೇ ಇಲ್ಲ; ಬಂಡವಳಶಾಹಿ ರಾಷ್ಟ್ರಗಳು ಸೂತ್ರಧಾರಿಗಳಾಗಿ ಇವುಗಳನ್ನು ಕುಣಿಸುತ್ತಿರುತ್ತಾರೆ. ಇಂತಹ ಅಸಂದಿಗ್ಧ ವಾತಾವರಣದಲ್ಲಿ ಈಜಿಪ್ಟ್ ಮತ್ತು ಸಿರಿಯಾಗಳ ವಿಲೀನೀಕರಣವು ಉಳಿದ ಅರಬರಿಗೆ ಸಹ ಮಾರ್ಗದರ್ಶನವಾಗಿದೆ; ಸ್ವತಂತ್ರ ರಾಷ್ಟ್ರಗಳ ಕೈದೀವಿಗೆಯಾಗಿವೆ. ಹೀಗಿದ್ದರೂ ಈ ಹೊಸ ಘಟಕವು ಹಲವಾರು ಅಡೆತಡೆಗಳನ್ನೂ ಅಪಾಯಗಳನ್ನೂ ಎದುರಿಸಬೇಕಾಗಿ ಬರಬಹುದು. ಅರಬರಾಷ್ಟ್ರಗಳ ಮೇಲೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಅಮೆರಿಕ ಹಾಗೂ ಬ್ರಿಟನುಗಳು ಸೈನಿಕ ಒಡಂಬಡಿಕೆಗಳನ್ನು ಮಾಡಿಕೊಂಡು ಮುಖ್ಯವಾಗಿ ಭೂಮಧ್ಯ ಸಮುದ್ರವನ್ನು ತಮ್ಮ ಅಂಕಿತದಲ್ಲಿಡಲು ಹವಣಿಸಿವೆ. ಎಣ್ಣೆ ಬಾವಿಗಳ ತವರುಮನೆಯಾದ ಅರಬರಾಷ್ಟ್ರಗಳೊಡನೆ ನಿಷ್ಠೂರವನ್ನು ಕಟ್ಟಿಕೊಂಡರೆ ಪಾಶ್ಚಾತ್ಯರಿಗೆ ದಿನಹೋಗಲಾರದೆಂಬುದನ್ನು ಮರೆಯಬಾರದು ಎಂತಲೇ ಅವರು ಆಕರ್ಷಕವಾಗಿ ಬೆನ್ನು ತಟ್ಟುತ್ತಾ ಈ ರಾಷ್ಟ್ರಗಳ ಕೊರಳಿಗೆ ಉರುಳು ಸಿಕ್ಕಿಸಲು ಪ್ರಯತ್ನಿಸಿದರು. ಆದರೆ, ಬ್ರಿಟಿಷರ ಆಳಿಕೆಯಿಂದ, ಅವರ ಸಾಮ್ರಾಜ್ಯದಿಂದ, ಅವರ ದಾಸ್ಯದಿಂದ ಎಚ್ಚೆತ್ತ ಇಜಿಪ್ಟ್ ಧೈರ್ಯದಿಂದ ಅವೆಲ್ಲವನ್ನೂ ಎದುರಿಸಿ, ತನ್ನ ಸ್ವತಂತ್ರ ನಿಲುವೆಯನ್ನು ಜಗತ್ತಿಗೆ ತೋರಿಸಿ ಕೊಟ್ಟಿತು. ಅಲ್ಲದೆ ರಶ್ಯದ ಕೈವಾಡವಿದ್ದ ಸಿರಿಯವೂ ಪಾಶ್ಚಾತ್ಯರ ಮಂತ್ರಜಾಲದಲ್ಲಿ ಸಿಕ್ಕಿಬೀಳಲಿಲ್ಲ. ಈ ಎರಡು ರಾಷ್ಟ್ರಗಳು ಸ್ವರಕ್ಷಣೆಗಾಗಿ ರಶ್ಯದಿಂದ ಸಹಾಯ ಪಡೆಯತೊಡಗಿದುವು. ಇದರಿಂದಾಗಿ ಬಗದಾದ ಒಪ್ಪಂದದಲ್ಲಿ ಸೇರಿಕೊಂಡಿದ್ದ ಅರಬ ರಾಷ್ಟ್ರಗಳ ಕೆಂಗಣ್ಣು ನೋಟವನ್ನು ಸಿರಿಯಾ ಎದುರಿಸಬೇಕಾಗಿ ಬಂತು. ತುರ್ಕಿಯು ಸಿರಿಯಾದ ಗಡಿಯಲ್ಲಿ ಸೈನ್ಯ ನಿಲಿಸತೊಡಗಿತು; ಇದರಿಂದಾಗಿ ಸಿರಿಯಕ್ಕೆ ಆತ್ಮರಕ್ಷಣೆಗಾಗಿ ಈಜಿಪ್ಟ ಸಹಾಯ ಮಾಡಿತು; ಹೀಗೆ ಸಾಮ್ರಾಜ್ಯವಾದದಿಂದ ಬಂಡವಳಶಾಹಿಯಿಂದ ಈಜಿಪ್ಟದ ಅಧ್ಯಕ್ಷ ನಸ್ಸೇರರು ಪ್ರಜಾಪ್ರಭುತ್ವದ ಮಾರ್ಗದಲ್ಲಿ ವಿಶ್ವಾಸವಿಟ್ಟು ತಮ್ಮ ರಾಷ್ಟ್ರವನ್ನು ಈ ದಿಸೆಯಲ್ಲಿ ಮುಂದೊತ್ತುತ್ತಿರುವುದು ಸಿರಿಯಾದ ಅಧ್ಯಕ್ಷ ಕುವಾಟ್ಲಿಯವರಿಗೆ ಪ್ರಿಯವಾಗಿ ಈ ವಿಲೀನೀಕರಣಕ್ಕೆ ಕಾರಣವಾಯಿತು.

ಅಂತೂ ಈಜಿಪ್ಟ್—ಸಿರಿಯಾ ಒಂದಾದಂತಾಯಿತು. ಇದರಿಂದ ಕಂಪಿತಗೊಂಡ ಜೋರ್ಡನ, ಇರಾಕ ಮತ್ತು ಸೌದಿ ಅರೇಬಿಯಾಗಳು ತಮ್ಮದೊಂದು ಸಂಯುಕ್ತ ಮಂಡಲವನ್ನು ನಿರ್ಮಿಸುತ್ತವೆಯೆಂಬ ಸುದ್ದಿ ಮೊದಲಿತ್ತು; ಹೀಗಾದಲ್ಲಿ ಇದರ ಪರಿಣಾಮವು ಈಜಿಪ್ಟ ಸಿರಿಯಾಗಳ ಮೇಲೆ ಖಂಡಿತ ಬೀಳುವುದು. ಅಲ್ಲದೆ ಪಾಶ್ಚಾತ್ಯರನ್ನೇ ಮೆಚ್ಚುತ್ತಿರುವ ಅರಬರ ಕುಯುಕ್ತಿಗಳನ್ನು ಸಹ ಸಹಿಸಬೇಕಾಗಬಹುದು. ಈಜಿಪ್ಟ ಮತ್ತು ಸಿರಿಯಾಗಳ ನಡುವಿರುವ ಜೋರ್ಡಾನಕ್ಕೆ ಈ ವಿಲೀನೀಕರಣದಿಂದ ಸಂಪೂರ್ಣ ಸಂತೋಷವಾಗಿಲ್ಲ; ಅದೀಗ ಈಜಿಪ್ಟಕ್ಕೆ ಶರಣಾಗಿದ್ದರೂ ಅದನ್ನು ಸಂಪೂರ್ಣ ನಂಬುವುದು ಕಷ್ಟ. ಹಾಗಾಗಿ ಪರಸ್ಪರ ಸಂಪರ್ಕವು ಬಹಳ ಕಷ್ಟದ್ದಾಗುವುದು, ಭೂಮಧ್ಯಸಮುದ್ರದ ಮೂಲಕವಾಗಿಯೇ ವ್ಯವಹಾರಗಳು ನಡೆಯಬೇಕಾಗುವುವು. ಆದುದರಿಂದಲೇ ಈ ನೂತನ ಒಕ್ಕೂಟದ ಭವಿಷ್ಯದ ಬಗ್ಗೆ ಸಂದೇಹಪಡಲು ಸಾಕಷ್ಟು ಸಂದರ್ಭಗಳಿವೆ. ಆದರೂ ಸಮರ್ಥ ಮುಂದಾಳುಗಳು ಅಷ್ಟು ದೂರಾಲೋಚನೆಯಿಲ್ಲದೆ ಇಂತಹ ಇತಿಹಾಸದಲ್ಲೇ ಉಲ್ಲೇಖನೀಯವಾದ ವಿಲೀನೀಕರಣವನ್ನು ಸಾಧಿಸಿರಲಾರರು. ಪಾಶ್ಚಾತ್ಯರನ್ನು ದಂಗುಬಡಿಸುವ ಒಂದು ಮಹಾ ಕಾರ್ಯವನ್ನು ಮಧ್ಯಪೂರ್ವವು ಮಾಡಿ ತೋರಿಸಿ, ಎಲ್ಲರ ದೃಷ್ಟಿಯನ್ನೂ ತನ್ನತ್ತ ಸೆಳೆದುಕೊಂಡಿತ್ತು; ಇದೀಗ ಅಂತಹ ಇನ್ನೊಂದು ಸಾಹಸವನ್ನು ಮಾಡಿ ವಿಶ್ವದ ಜನತೆಯ ದೃಷ್ಟಿಯನ್ನು ಆಕರ್ಷಿಸಿದೆ.

ನೂತನವಾಗಿ ರೂಪಗೊಳ್ಳುತ್ತಿರುವ ಈಜಿಪ್ಟ್ ಮತ್ತು ಸಿರಿಯಾಗಳ ಒಕ್ಕೂಟವು ಕೇವಲ ಅರಬರಿಗಲ್ಲ ಜಗತ್ತಿನ ಎಲ್ಲ ರಾಷ್ಟ್ರಗಳವರಿಗೂ ಮಾರ್ಗದರ್ಶನ ಮಾಡಿ ಭಿನ್ನತೆಯಲ್ಲಿ ಏಕತೆಯನ್ನು ಪ್ರದರ್ಶಿಸಿ ತನ್ಮೂಲಕ ವಿಶ್ವದ್ವೇಷ ನಿವಾರಣೆಯಾಗಲೆಂದು ಹಾರೈಸಿ ಹೊಸ ರಾಷ್ಟ್ರವನ್ನು ಸ್ವಾಗತಿಸುತ್ತೇವೆ. ಮತ್ತು ದರಿಂದ ಸಿರಿಯಾ—ಈಜಿಪ್ಟ್‌ಗಳಿಗೆ ತಮ್ಮ ರಾಜಕೀಯ ಐಕ್ಯದ ಬೆಂಬಲದಿಂದ ಮುಂಬರಲಿರುವ ಬಿರುಗಾಳಿಗಳನ್ನು ಎದೆಗೊಟ್ಟು ಎದುರಿಸುವ ಶಕ್ತಿ ಬರಲಿ ಎಂದು ಪ್ರಾರ್ಥಿಸುತ್ತೇವೆ. ಅಲ್ಲದೇ ಹೀಗೆಯೇ ಎಲ್ಲ ಅರಬ ರಾಷ್ಟ್ರಗಳೂ ಒಂದುಗೂಡಿ ತಮ್ಮ ಅಭಿವೃದ್ಧಿಯನ್ನು ಮಾಡಿಕೊಳ್ಳುವತ್ತ ಮನವಿಡಲೆಂದು ಆಶಿಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಮೃತ್ಪರೀಕ್ಷಾ ಸೇವೆ

ಭಾರತ ಸರಕಾರದವರು ಬೇಸಾಯಗಾರರಿಗೆ ಸಹಾಯ ನೀಡುವ ಸಲುವಾಗಿ ಮಣ್ಣಿನ ಪರೀಕ್ಷಾ ಸೇವೆಯನ್ನು ಒದಗಿಸಲು ನಿರ್ಧರಿಸಿರುವರು. ಇದರಿಂದ ಗೊಬ್ಬರ ಮತ್ತು ಕೃತಕ ಗೊಬ್ಬರಗಳನ್ನು ಯೋಗ್ಯರೀತಿಯಲ್ಲಿ ಬಳಸಿ ಬೇಸಾಯದ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯವಾಗುತ್ತದೆ. ಇದಕ್ಕಾಗಿ ದೇಶದಲ್ಲಿ ಸುಮಾರು ೧೨೫ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಕೇಂದ್ರಗಳಲ್ಲಿ ಬೇಸಾಯಗಾರರು ಕಳುಹಿಸುವ ಮಣ್ಣಿನ ಮಾದರಿಗಳನ್ನು ಪರಿಶೀಲಿಸಿ ಅವರು ಉಪಯೋಗಿಸಬೇಕಾದ ಗೊಬ್ಬರ ಹಾಗೂ ಕೃತಕ ಗೊಬ್ಬರಗಳ ಬಗ್ಗೆ ಸಲಹೆ ನೀಡಲಾಗುವುದು. ಇದರೊಂದಿಗೆ ತಾಂತ್ರಿಕ ಸಹಕಾರ ನಿಯೋಗದವರು ಸಂಚಾರೀ ಪ್ರಯೋಗ ಶಾಲೆಯೊಂದನ್ನು ಏರ್ಪಡಿಸುವರು. ಇಂತಹ ಪ್ರಯೋಗ ಶಾಲೆಗಳಲ್ಲಿ ಒಂದು ಮೈಸೂರು ರಾಜ್ಯದ ಬೆಂಗಳೂರಲ್ಲಿ ಸ್ಥಾಪಿಸಲ್ಪಟ್ಟಿದೆ. ಇನ್ನೂ ಹೆಚ್ಚಿಗೆ ಪ್ರಯೋಗಶಾಲೆಗಳನ್ನು ಸ್ಥಾಪಿಸುವ ಉದ್ದೇಶವಿದ್ದು, ಅವುಗಳಲ್ಲಿ ಒಂದು ಮೈಸೂರಿನ ಬಾಳೆಹೊನ್ನೂರಿನಲ್ಲಿರುವುದೆಂದು ತಿಳಿಯುತ್ತದೆ.

ನಮ್ಮ ಭಾಷೆ ಬೇಕು

ಒಂದು ದೇಶಕ್ಕೆ ತನ್ನದೇ ಆದ ಭಾಷೆ ಬೇಡವೆಂದು ಯಾರೂ ಹೇಳಲಾರರು. ಹಾಗಿದ್ದರೂ ಈಗ ಹಿಂದಿಯು ಅಭಿವೃದ್ಧಿ ಹೊಂದಿ ಇಂಗ್ಲಿಷಿನ ಸ್ಥಾನದಲ್ಲಿ ಪರಿಣಾಮಕಾರಿಯಾಗಿ ಕಾರ್ಯಮಾಡಲು ಅಸಮರ್ಥವಾಗಿರುವುದರಿಂದ ಸದ್ಯದ ಪರಿಸ್ಥಿತಿಯಲ್ಲಿ ಇಂಗ್ಲಿಷನ್ನೇ ಸರಕಾರಿ ಭಾಷೆಯನ್ನಾಗಿ ಮುಂದುವರಿಸಬೇಕೆಂದೂ ಹಿಂದಿಯನ್ನು ಅಭಿವೃದ್ಧಿಪಡಿಸಲು ಸರ್ವರೀತಿಯಿಂದಲೂ ಪ್ರಯತ್ನಿಸಬೇಕೆಂದೂ ಶ್ರೀ ಕೆಂಗಲ್ ಹನುಮಂತಯ್ಯನವರು ಹೇಳಿದ್ದಾರೆ.

ಅಮೆರಿಕಕ್ಕೆ ಬಾಂಬು ಬಿದ್ದರೆ....?

ಅಮೆರಿಕದ ಮೇಲೆ ಸಾರ್ವತ್ರಿಕ ಹೈಡ್ರೋಜನ್ ಬಾಂಬು ಧಾಳಿ ನಡೆದಲ್ಲಿ ೧೦೦ ಮಿಲಿಯ ಜನತೆಯ ನಿರ್ನಾಮವಾಗುವುದೆಂದು ಚಿಕಾಗೋದ ಪ್ರಮುಖ ವಿಜ್ಞಾನಿಗಳಿಬ್ಬರು ಉದ್ಗರಿಸಿದ್ದಾರೆ. ಇಂತಹ ದಾಳಿಯ ಸಂಕರ ಪರಿಣಾಮವು ಜಗತ್ತಿನ ಒಟ್ಟು ಜನಸಂಖ್ಯೆಯ ಮೂರರಲ್ಲಿ ಒಂದಂಶದಷ್ಟು ಜನರ ಮೇಲಾಗುವುದೆಂದೂ ಅಮೆರಿಕದ ಮೇಲಾಗುವ ದಾಳಿಯಲ್ಲಿ ಆರಂಭಿಕ ಸ್ಫೋಟನದಲ್ಲಿಯೇ ೫೦ ಮಿಲಿಯ ಜನರು ಮೃತರಾಗಿ ಉಳಿದವರಲ್ಲಿ ಅಧಿಕಾಂಶ ಜನರು ಅಣುವಿಕೀರ್ಣಶಕ್ತಿಯಿಂದ ಒಂದು ವರ್ಷಾವಧಿಯೊಳಗೆ ಮೃತರಾಗುವರೆಂದು ಈ ತಜ್ಞವಿಜ್ಞಾನಿಗಳು ತಮ್ಮ ಅಭಿಪ್ರಾಯವನ್ನು ಬಹಿರಂಗಪಡಿಸಿದ್ದಾರೆ. ಈ ವಿಜ್ಞಾನಿಗಳೇ ಡಾ. ಡಬ್ಲ್ಯೂ. ಡಬ್ಲ್ಯೂ. ಕೆಲ್ಲೋಗ್ ಮತ್ತು ಡಾ. ಬಾಲ್ಟರ್ ಶೆಫರ್‌ರವರು.

ಅರಬರ ಸಾಹಸ

ಫೆಬ್ರವರಿ ಒಂದಕ್ಕೆ ಅಸ್ತಿತ್ವದಲ್ಲಿ ಬಂದ ಈಜಿಪ್ಟ ಸಿರಿಯಾಗಳನ್ನೊಳಗೊಂಡ ಅರಬ ಒಕ್ಕೂಟವನ್ನು ಕೆಂಪು ಸಮುದ್ರದ ದಂಡೆಯ ಅರಬ ರಾಜ್ಯವಾದ ಯೆಮನವು ಸಹ ಸೇರುವುದೆಂದು ತಿಳಿದುಬಂದಿದೆ. ಈ ಸೇರ್ಪಡೆಯ ಬಗ್ಗೆ ಮಾತುಕತೆ ನಡೆಸಲು ಯೆಮನದ ಯುವರಾಜ ಮುಹಮ್ಮದ ಅಹಮದ ಎಲ್. ಬದರರು ಕೈರೋಗೆ ಆಗಮಿಸಿದ್ದಾರೆ. ಈಜಿಪ್ಟ ಮತ್ತು ಸಿರಿಯಾಗಳ ರಾಷ್ಟ್ರೀಯವಾದಿ ಮತ್ತು ತಾಟಸ್ಥ್ಯ ನೀತಿಯನ್ನು ಯೆಮೆನವು ಬಹಿರಂಗವಾಗಿ ಬೆಂಬಲಿಸುತ್ತ ಬಂದಿದ್ದುದರಿಂದ ಅದು ಈ ಒಕ್ಕೂಟವನ್ನು ಸೇರುವ ಸಾಧ್ಯತೆ ಇದೆ. ಹಾಗೆಯೇ ಸಿರಿಯಾದ ಅಧ್ಯಕ್ಷ ಶ್ರೀ ಕುವಾಟ್ಲಿಯವರು ಸೌದಿ ಅರೇಬಿಯಾದ ಈಜಿಪ್ತ ಪ್ರತಿನಿಧಿಯೊಡನೆ ಅದು ಸಹ ಒಕ್ಕೂಟವನ್ನು ಸೇರುವ ಸಾಧ್ಯತೆಯ ಕುರಿತು ಮಾತಾಡಿರುವರೆಂದು ತಿಳಿದುಬಂದಿದೆ.

ಅನ್ನವಿಲ್ಲದೆ ಸಾಯಬಾರದು

ಭಾರತದ ಯಾವ ಪ್ರಜೆಯೂ ಉಪವಾಸ ಸಾಯಲು ಅವಕಾಶ ಕೊಡಬಾರದೆಂದು ಸರಕಾರ ನಿರ್ಧರಿಸಿದೆ. ಈ ನಿರ್ಣಯವನ್ನು ಕಾರ್ಯಕಾರಿ ಗೊಳಿಸುವಲ್ಲಿ ಉತ್ಪಾದನಾ ರಂಗದ ವಿವಿಧ ಕ್ಷೇತ್ರಗಳಲ್ಲಿ ತೊಡಗಿದ ಜನತೆ ತಮ್ಮ ಶಕ್ತಿ ಸರ್ವಸ್ವವನ್ನು ವಿನಿಯೋಗಿಸಿ ಹೆಚ್ಚು ಉತ್ಪಾದನೆಯನ್ನು ಪಡೆಯಬೇಕು. ಜನತೆಯು ಕಷ್ಟವನ್ನು ಧೈರ್ಯದಿಂದ ಸಾಮೂಹಿಕವಾಗಿ ಎದುರಿಸಬೇಕು. ರೈತರು ಇಂತಹ

ದಕ್ಷಿಣ ಸಂಸ್ಥಾನಗಳ ಕೃಷಿಕರ ಮಹಾ ಸಮ್ಮೇಳನವು—ಬೆಂಗಳೂರಲ್ಲಿ ಇದೇ ತಾ. 14 ಮತ್ತು 15ರಂದು ಪ್ಲಾನಿಂಗ್ ಕಮಿಶನ್ ಸದಸ್ಯರಾದ ಶ್ರೀ ಸರ್ದಾರ್‌ಲಾಲ್ ಸಿಂಘರ ಅಧ್ಯಕ್ಷತೆಯಲ್ಲಿ ಜರಗುವುದು. ಆಂಧ್ರ, ಕೇರಳ, ಮದ್ರಾಸ್ ಮತ್ತು ಮೈಸೂರು ಸ್ಟೇಟುಗಳ ಹಲವಾರು ಸಂಘಗಳು ಹಾಗು ಮುಂದಾಳುಗಳು ಮಹಾ ಸಮ್ಮೇಳನಕ್ಕೆ ಸಹಕಾರ ನೀಡಲು ಆಶ್ವಾಸನೆ ಕೊಟ್ಟಿರುವರು. ಸರ್ದಾರ್‌ಲಾಲ್ ಸಿಂಘರು ಅಲ್ ಇಂಡಿಯಾ ಕೃಷಿಕರ ಸಂಘ ಸ್ಥಾಪನೆ ಅವಶ್ಯಕತೆಯನ್ನು ಸೂಚಿಸಿರುವರು. ಕೃಷಿಕ ವರ್ಗದ ಸಂಕಷ್ಟಗಳೇನು, ಅವುಗಳನ್ನು ಬಗೆಹರಿಸುವ ರೀತಿಗಳಾವುವು, ಸೆಂಟ್ರಲ್ ಮತ್ತು ಸ್ಟೇಟ್ ಸರಕಾರಗಳು ಯಾವ ರೀತಿಯಲ್ಲಿ ಕೃಷಿಕರ ಸಹಾಯಕ್ಕೆ ಬರಬಹುದು ಎಂಬ ಬಗ್ಗೆ ಸಲಹೆಗಳನ್ನು ಕೊಡುವುದು ಮುಂತಾದ ವಿಷಯಗಳ ಕುರಿತು ವಿಚಾರವಿನಿಮಯ ನಡೆದು ಒಮ್ಮತದ ತೀರ್ಮಾನಕ್ಕೆ ಬರುವುದೇ ಮಹಾ ಸಮ್ಮೇಳನದ ಮುಖ್ಯ ಗುರಿಯಾಗಿರುತ್ತದೆ. ಆಹಾರ ಉತ್ಪಾದನೆಯನ್ನು ಅಧಿಕ ಮಾಡುವ ವಿಚಾರದಲ್ಲಿ ಧನಿ ಮತ್ತು ಒಕ್ಕಲುಗಳೊಳಗೆ ಇರತಕ್ಕ ಬಾಂಧವ್ಯದ ವಿಚಾರವೂ ಚರ್ಚಿಸಲ್ಪಡುವುದು.

ಸಮಯದಲ್ಲಿ ಬಿಡಿ ಬೆಳೆಗಳನ್ನು ಬೆಳೆಸಬೇಕು. ಸರಕಾರವು ಕೈಗೊಳ್ಳುತ್ತಿರುವ ಅಭಿವೃದ್ಧಿ ಮತ್ತು ಪರಿಹಾರ ಕಾರ್ಯಗಳಿಂದ ಬರಗಾಲ ಪ್ರದೇಶಗಳ ಜನರಿಗೆ ಯೋಗ್ಯ ರಕ್ಷಣೆ ನೀಡಲಾಗುವುದೆಂದು ರಾಷ್ಟ್ರಾಧ್ಯಕ್ಷ ಶ್ರೀ ರಾಜೇಂದ್ರ ಪ್ರಸಾದರು ಗಯೆಯಲ್ಲಿ ಜನರನ್ನುದ್ದೇಶಿಸುತ್ತ ನುಡಿದು, ಬರಗಾಲ ಪೀಡಿತರಿಗೆ ತಮ್ಮ ಸಹಾನುತಾಪವನ್ನು ಪ್ರದರ್ಶಿಸಿದ್ದಾರೆ.

ಪಾಕಿಸ್ತಾನ ಕಾಲ್ತೆಗೆಯಲಿ!

ಕಾಶ್ಮೀರವು ಭಾರತದ ಒಂದು ಅಂಗವಾಗಿರುವುದರಿಂದ ನಾವು ಅದರ ಗಡಿಯನ್ನು ಇತರರು ಉಲ್ಲಂಘಿಸುವುದಕ್ಕೆ ಅವಕಾಶ ಕೊಡಲಾರೆವು. ಇಂದು ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಒಂದೇ ಮಾರ್ಗವಿರುತ್ತದೆ. ಪಾಕಿಸ್ತಾನವು ತಾನು ಆಕ್ರಮಿಸಿದ ಪ್ರದೇಶಗಳನ್ನು ಬಿಟ್ಟುಕೊಡುವುದೇ ಈ ಮಾರ್ಗ. ಕಾಶ್ಮೀರದಲ್ಲಿರಲು ಅಧಿಕಾರವಿಲ್ಲದವರೆಲ್ಲ ಅಲ್ಲಿಂದ ಕಾಲ್ತೆಗೆಯಬೇಕು. ಕಾಶ್ಮೀರ ಪ್ರಶ್ನೆಯು ಅತ್ಯಂತ ಸರಳವಾಗಿದೆ. ಅದನ್ನು ಇತರ ಜನರು ಕೆಡಗೆಡಿಸಿರುವರು. ನಾವು ಈ ವಿಷಯದಲ್ಲಿ ನಮ್ಮ ಸಾರ್ವಭೌಮತ್ವವನ್ನು ಬಿಟ್ಟುಕೊಡಲು ಸಿದ್ಧರಿಲ್ಲ ಮತ್ತು ಆ ರೀತಿ ಮಾಡುವುದೂ ಸರಿಯಲ್ಲ, ಎಂದು ಭಾರತದ ಸಂರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ನರು ಹೈದರಾಬಾದದ ಒಂದು ಸಭೆಯಲ್ಲಿ ಮಾತಾಡುತ್ತ ನುಡಿದರು.

ಅಮೆರಿಕೆಗೂ ಉಪಗ್ರಹ

ಅಮೆರಿಕವು ತನ್ನ ಪ್ರಥಮ ಉಪಗ್ರಹವನ್ನು ಫೆಬ್ರವರಿ ೧ರಂದು ಎಂದರೆ ರಶ್ಯವು ಹಾರಿಸಿದ ೧೭ ವಾರಗಳ ನಂತರ ಹಾರಿಸಿತು. ಈ ಉಪಗ್ರಹವು ೩೦ ರಾತಲು ಭಾರವಿದ್ದು ತಾಸಿಗೆ ೧೯,೪೦೦ ಮೈಲು ವೇಗದಿಂದ ರಾಗ ತಪ್ಪಿದ ಪಿಯಾನೋದ ಸ್ವರದಂತೆ ಸಂಕೇತಗಳನ್ನು ಮಾಡುತ್ತ ರಶಿಯದ ಎರಡನೆ ಉಪಗ್ರಹದೊಡನೆ ಸುತ್ತು ಬರುತ್ತಿದೆ. ಇದರ ಹೆಸರು ೧೯೫೮—ಅಲ್ಫಾ ಎಂದು.

ಅರ್ಥ ಮಂತ್ರಿಯವರ ಪೇಚಾಟ

ಜೀವವಿಮಾ ಕಾರ್ಪೊರೇಶನು ಮುಂಧ್ರಾ ಕಂಪೆನಿಗಳಲ್ಲಿ ಕೊಂಡುಕೊಂಡ ಪಾಲು ಬಂಡವಳಗಳ ಕುರಿತು ವಿಚಾರಣೆ ನಡೆಸುತ್ತಿರುವ ನ್ಯಾಯಮೂರ್ತಿ ಛಗಲಾರವರ ವಿಚಾರಣೆ ಮುಗಿಯುತ್ತ ಬಂದಿದೆ. ಈ ಮಧ್ಯೆ ಭಾರತದ ಹಣಕಾಸಿನ ಮಂತ್ರಿ ಶ್ರೀ. ಟಿ. ಟಿ. ಕೃಷ್ಣಮಾಚಾರಿಯವರು ತಮ್ಮ ಮಂತ್ರಿಪದಕ್ಕೆ ರಾಜೀನಾಮೆಯಿತ್ತಿರುವರೆಂದೂ ತಿಳಿದುಬಂದಿದೆ. ಛಗಲಾರವರ ವರದಿಯು ಪ್ರಧಾನಿಯವರ ಕೈಸೇರಿದ ನಂತರ ಅದನ್ನು ಪರಿಶೀಲಿಸಿದ ಮೇಲೆ ಶ್ರೀ ಟಿ. ಟಿ. ಕೃಷ್ಣಮಾಚಾರ್ಯರ ರಾಜೀನಾಮೆಯ ಕುರಿತಾದ ಅಂತಿಮ ನಿರ್ಣಯ ಕೈಗೊಳ್ಳಲಾಗುವುದೆಂದೂ ವರದಿಯಾಗಿದೆ. ನ್ಯಾಯಮೂರ್ತಿ ಛಗಲಾರವರ ವರದಿಯು ಈ ತಿಂಗಳ ೧೧ನೆ ದಿನಾಂಕದೊಳಗೆ ಕೈಸೇರುವ ನಿರೀಕ್ಷೆಯಿದೆ.

ವಿಶಾಖಪಟ್ಟಣದ ಅಭಿವೃದ್ಧಿ

ದೀಪಸ್ತಂಭಗಳ ಸಂಬಂಧವಾದ ಕೇಂದ್ರ ಸಲಹಾ ಸಮಿತಿಯು ನವದೆಹಲಿಯಲ್ಲಿ ಸಭೆಸೇರಿ ವಿಶಾಖಪಟ್ಟಣ ಬಂದರಿನಲ್ಲಿ ಹಡಗು ಸಂಚಾರಕ್ಕೆ ಅನುಕೂಲವಾಗುವಂತಹ ಅಭಿವೃದ್ಧಿ ಯೋಜನೆಗೆ ತನ್ನ ಅನುಮತಿಯಿತ್ತಿತು. ಈ ಬಂದರಿಗೆ ರಾತ್ರಿ ಕಾಲದಲ್ಲಿ ಹಡಗು ಸಂಚಾರಕ್ಕೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಿಕೊಡುವುದೇ ಈ ಯೋಜನೆಯ ಮುಖ್ಯೋದ್ದೇಶವಾಗಿದೆ. ಸ್ಯಾಂಡ್ ಹಿಲ್ಸ್ ಮತ್ತು ವಾಲ್ಟೇರಗಳಲ್ಲಿ ಎರಡು ಹೊಸ ದೀಪಸ್ತಂಭಗಳನ್ನು ಸ್ಥಾಪಿಸುವ ಕಾರ್ಯಕ್ರಮವನ್ನು ಸಹ ಈ ಸ್ವೀಕೃತ ಯೋಜನೆಯಲ್ಲಿ ಸೇರಿಸಲಾಗಿದೆ.

ಭಾರತ ಫ್ರಾನ್ಸ್ ಒಪ್ಪಂದ

ಭಾರತ ಮತ್ತು ಫ್ರಾನ್ಸ್‌ಗಳ ನಡುವೆ ನಿಕಟವಾದ ಆರ್ಥಿಕ ಮತ್ತು ತಾಂತ್ರಿಕ ಸಹಕಾರವನ್ನು ಸ್ಥಾಪಿಸುವ ದೃಷ್ಟಿಯಿಂದ ಉಭಯ ರಾಷ್ಟ್ರಗಳು ಒಪ್ಪಂದವೊಂದನ್ನು ಮಾಡಿಕೊಂಡುವು. ಹಣಕಾಸು ಮತ್ತು ಆರ್ಥಿಕ ವಿಷಯಗಳಲ್ಲಿ ಈ ಎರಡು ರಾಷ್ಟ್ರಗಳ ನಡುವೆ ಆಗುತ್ತಿರುವ ಒಪ್ಪಂದಗಳಲ್ಲಿ ಇದೇ ಮೊದಲನೆಯದಾಗಿದೆ. ಈ ಒಪ್ಪಂದದನ್ವಯ ಫ್ರೆಂಚ್ ಸರಕಾರವು ಬಂಡವಳ ಸ್ವರೂಪದ ವಸ್ತುಗಳನ್ನು ಫ್ರೆಂಚ ಪೂರೈಕೆದಾರರಿಂದ ಪೂರೈಸಲು ಮುಂದಿನ ಹನ್ನೆರಡು ತಿಂಗಳ ಅವಧಿಯಲ್ಲಿ ಸುಮಾರು ೬೮ ಕೋಟಿ ರೂಪಾಯಿಗಳನ್ನು ಒದಗಿಸುವುದು. ಈ ಸಂಬಂಧದ ಪ್ರತಿಯೊಂದು ವ್ಯವಹಾರಕ್ಕೂ ಪೂರೈಸುವವರು ಮತ್ತು ಕೊಳ್ಳುವವರ ನಡುವೆ ಪ್ರತ್ಯೇಕ ಒಪ್ಪಂದವೇರ್ಪಡುವುದು ಹಾಗೂ ಉಭಯ ರಾಷ್ಟ್ರ ಸರಕಾರಗಳ ನಡುವೆ ಯಾವ ನೇರವಾದ ಸಾಲ ಸೌಲಭ್ಯಗಳೇ ಏರ್ಪಡುವುದಿಲ್ಲ. ಈ ಒಪ್ಪಂದ ಪ್ರಕಾರ ಫ್ರೆಂಚ ಸರಕಾರವು ತಾಂತ್ರಿಕ ಪರಿಣತರನ್ನು ಭಾರತಕ್ಕೆ ಕಳುಹಿಸುವದರ ಜೊತೆಗೆ ಭಾರತೀಯ ವಿದ್ಯಾರ್ಥಿಗಳಿಗೆ ಫ್ರಾನ್ಸಿನಲ್ಲಿ ಹೆಚ್ಚಿನ ಶಿಕ್ಷಣ ಮತ್ತು ತರಬೇತಿಯನ್ನು ಪಡೆಯಲು ವ್ಯಾಸಂಗ ವೇತನಗಳನ್ನೂ ನೀಡುವುದು.

ಉಡುಪಿ

ಮಂತ್ರಿ ಶ್ರೀ ವೀರಣ್ಣ ಗೌಡರು- ಮೈಸೂರು ಸರಕಾರದ ಕಾಮಗಾರಿ ಮಂತ್ರಿ ಶ್ರೀ ಎಚ್. ಕೆ. ವೀರಣ್ಣಗೌಡರು ಕಳೆದ ತಾ ೨೩ರಂದು ಕರಾವಳಿ ರಸ್ತೆಯಲ್ಲಾಗುತ್ತಿರುವ ಸಂಕಗಳ ಕಾರ್ಯವನ್ನು ಪರಿಶೀಲಿಸಿ ಉಡುಪಿಗೆ ಬಂದು ನಗರಸಭೆಯವರಿತ್ತ ಚಹಾ ಸತ್ಕಾರವನ್ನು ಸ್ವೀಕರಿಸಿದರು. ಮಂತ್ರಿಗಳ ಜತೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ, ಮೊದಲಾದವರಿದ್ದರು. ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳವರು ಮಂತ್ರಿಗಳಿಗೆ ಮನವಿಯೊಂದನ್ನರ್ಪಿಸಿದರು. ಮಂತ್ರಿಗಳು ತಮ್ಮ ಇಲಾಖೆಗೆ ಸಂಬಂಧವಿಲ್ಲದ ಬೇಡಿಕೆಗಳನ್ನು ಆಯಾಯಾ ಸಚಿವರ ಗಮನಕ್ಕೆ ತರುವೆನೆಂದರು. ನೀರು ಸರಬರಾಯಿ ಮತ್ತು ಚರಂಡಿ ಯೋಜನೆಗಳನ್ನು ಸ್ಥಳೀಯ ಸಂಸ್ಥೆಗಳು ಸರಕಾರದ ಸಹಾಯ ಮತ್ತು ಸಾಲ ಪಡೆದು ಮಾಡುವುದಕ್ಕಿಂತ ಸರಕಾರವೇ ಅವನ್ನು ಪೂರೈಸಿ ಸ್ಥಳೀಯ ಸಂಸ್ಥೆಗಳಿಗೆ ಬಿಟ್ಟುಕೊಡುವುದು ಒಳ್ಳೆಯದೆಂದು ತೋರುತ್ತದೆ. ಈ ನಗರಸಭೆಯು ಯೋಜನೆಯ ಕುರಿತು ವರದಿ ಬಂದೊಡನೆ ಅನುಮತಿ ಕೊಡುವೆನು. ವಿದ್ಯುತ್ ದರ ಕಡಿಮೆ ಮಾಡಲು ಶಕ್ಯವಿಲ್ಲ. ಈಗ ಕೊಡುವುದಕ್ಕಿಂತ ಜಾಸ್ತಿ ದರದಲ್ಲಿ ಕೊಡಬೇಕಾಗಬಹುದು. ಇಡೀ ರಾಜ್ಯಕ್ಕೆ ಒಂದೇ ದರವು ಅನ್ವಯಿಸಲಾಗುವುದು ಎಂತಾಗಿ ಹೇಳಿದರು. ಡಾ. ಪಿ. ಜಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಪ್ರಜಾಪ್ರಭುತ್ವ ದಿನಾಚರಣೆ— ತಾ. ೨೬ರಂದು ಪ್ರಜಾಪ್ರಭುತ್ವ ದಿನಾಚರಣೆಯು ಉಡುಪಿ ಸಂಘ ಸಂಸ್ಥೆ, ಶಿಕ್ಷಣ ಮಂದಿರಗಳಲ್ಲಿ ಸಾಂಗವಾಯಿತು. ಅಂದು ಬೆಳಿಗ್ಗೆ ಅಜ್ಜರಕಾಡು ಮೈದಾನಿನಲ್ಲಿ ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಧ್ವಜಾರೋಹಣ ನಡೆಸಿದರು. ನಂತರ ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು. ಸಂಜೆ ಕ್ರಿಶ್ಚಿಯನ್ ಹೈಸ್ಕೂಲ್, ಕಾನ್ವೆಂಟ್ ಹೈಸ್ಕೂಲ್ ಮತ್ತು ಎಮ್. ಜಿ. ಎಮ್. ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರ ಮಾರ್ಚ್ ಫಾಸ್ಟ್ ನಡೆಯಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ವಂದನೆ ಸ್ವೀಕರಿಸಿದರು. ನಂತರ ಸಾರ್ವಜನಿಕ ಸಭೆಯು ಶ್ರೀ ಕೆ. ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಆಶಾ ಕೆ. ಆರ್. ಕೆ. ಭಟ್ಟರು ಪಾರಿತೋಷಕ ವಿತರಣೆ ಮಾಡಿದರು. ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ವಂದನೆಗಳನ್ನಿತ್ತರು.

ಯಕ್ಷಗಾನ ಕಲಾಮಂಡಲದ- ಬಡಗುಪೇಟೆಯ ಕಾರ್ಯಾಲಯದಲ್ಲಿ ಶ್ರೀ ಮಧ್ವನವಮಿ ಮಹೋತ್ಸವದ ಅಂಗವಾಗಿ ತಾ. ೨೩ ರಂದು ಶ್ರೀಕೃಷ್ಣ ಪರಮಾತ್ಮನ ವಿರಾಟ ಸ್ವರೂಪದರ್ಶನವೆಂಬ ಯಕ್ಷಗಾನ ಕಥಾಭಾಗವು ಶ್ರೀ ಕೆ. ನಾರಾಯಣ ಶೆಟ್ಟಿ ಮೊದಲಾದ ನುರಿತ ಅರ್ಥಧಾರಿಗಳ ಕೂಡುವಿಕೆಯಿಂದ ಸಾಂಗವಾಯಿತು.

ಮೂಲಶಿಕ್ಷಣ ಸಪ್ತಾಹ- ಸ್ಥಳೀಯ ಸರಕಾರಿ ಮೂಲಶಿಕ್ಷಣ ತರಬೇತಿ ಶಾಲೆಯಲ್ಲಿ ಮೂಲ ಶಿಕ್ಷಣ ಸಪ್ತಾಹವು ತಾ. 20 ರಿಂದ 25ರ ತನಕ ಪ್ರಭಾತಫೇರಿ, ಸೂತ್ರಯಜ್ಞ, ಮೂಲ ಶಿಕ್ಷಣ ವಿಚಾರಗೋಷ್ಠಿಗಳು ಹಾಗೂ ಮನರಂಜನ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಎ. ಜೆ. ಆಳ್ವ, ಬೆಂಗಳೂರಿನ ಸಿ. ಕೆ. ನಾಗರಾಜರಾವ್, ಶಾಲಾ ಮುಖ್ಯೋಪಾಧ್ಯಾಯ ಬಿ. ಎಸ್. ಆಚಾರ್, ಟಿ. ಶೀನಪ್ಪ ಹೆಗ್ಡೆ, ಎಮ್. ಕೇಶವ ರಾವ್ ಎಡ್ವೊಕೇಟ್, ಬಿ. ವಾಸುದೇವ ರಾವ್, ನಗರ ಸಭಾಧ್ಯಕ್ಷ ಕೆ. ಕೆ. ಪೈ, ವಿ. ತಿಮ್ಮಪ್ಪ ಶೆಟ್ಟಿ, ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಪಿಸ್ತನಾದ್, ಡಾ. ಪಿ. ಜಿ. ಆಚಾರ್ ಮೊದಲಾದ ಮಹನೀಯರು ವಿವಿಧ ಕಾರ್ಯಕ್ರಮಗಳ ಅಧ್ಯಕ್ಷತೆ ವಹಿಸಿದ್ದರು.

ದಿ| ಉಪೇಂದ್ರ ಪೈಗಳ ಭಾವಚಿತ್ರ ಅನಾವರಣ— ಸ್ಥಳೀಯ ಶ್ರೀ ರಾಮಕೃಷ್ಣ ಥಿಯೇಟರಿನ ಸ್ಥಾಪಕರಾದ ದಿ| ಟಿ. ಉಪೇಂದ್ರ ಅನಂತ ಪೈಗಳ ಭಾವಚಿತ್ರ ಅನಾವರಣವನ್ನು ಕಳೆದ ತಾ. 30ನೇ ಸಂಜೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಮೈಸೂರು ಕಾರ್ಮಿಕ ಸಚಿವ ಶ್ರೀ ಬಿ. ವೈಕುಂಠ ಬಾಳಿಗರು ನೆರವೇರಿಸಿದರು. ಮಂಗಳೂರಿನ ಶ್ರೀ ವಿ. ಎಸ್. ಕುಡ್ವರು ಅಧ್ಯಕ್ಷತೆ ವಹಿಸಿದ್ದರು.

ಥಿಯೇಟರಿನ ಡೈರೆಕ್ಟರರಲ್ಲೊಬ್ಬರಾದ ಡಾ. ಕೆ. ಎಲ್. ಪತಾಳರು ಮುಖ್ಯ ಅತಿಥಿಗಳು ಆಸನ ಸ್ವೀಕರಿಸಲು ಕೇಳಿಕೊಂಡರು. ಥಿಯೇಟರಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಎ. ಜೆ. ಆಳ್ವೆಯವರು ಸ್ವಾಗತ ಭಾಷಣ ಮಾಡಿ, ಸಮಾರಂಭಕ್ಕೆ ಶುಭವನ್ನು ಕೋರಿ ಪರ್ಯಾಯ ಶ್ರೀ ಕೃಷ್ಣಾಪುರ ಮತ್ತು ಸೋದೆ ಮಠದ ಸ್ವಾಮಿಗಳಿಂದ ಬಂದ ಸಂದೇಶಗಳನ್ನೋದಿದರು.

ಸಚಿವ ಶ್ರೀ ಬಾಳಿಗರು ಭಾವಚಿತ್ರ ಅನಾವರಣ ಮಾಡುತ್ತ ದಿವಂಗತ ಶ್ರೀ ಪೈಗಳ ಜೀವನ, ಅವರು ಸ್ಥಾಪಿಸಿದ ಸಂಘ ಸಂಸ್ಥೆ ಸಲ್ಲಿಸಿದ ಜನತಾ ಸೇವೆ ಮೊದಲಾದುವನ್ನು ವಿವರಿಸಿ ಗುಣಗಾನ ಮಾಡಿದರು. ಸಭಾಧ್ಯಕ್ಷ ಶ್ರೀ ಕುಡ್ವರೂ ದಿವಂಗತರ ಜೀವನ ಹಾಗೂ ಕಾರ್ಯದಕ್ಷತೆಯನ್ನು ವಿವರಿಸಿದರು. ಥಿಯೇಟರಿನ ಮೆನೇಜರ್ ಶ್ರೀ ಪಿ. ಶೀನ ಶೆಟ್ಟರು ಧನ್ಯವಾದಗಳನ್ನಿತ್ತರು. ಆರಂಭದಲ್ಲಿ ಡೈರೆಕ್ಟರರಲ್ಲೊಬ್ಬರಾದ ಶ್ರೀ ಪದ್ಮನಾಭ ಶೆಣೈ ವಾಯುಕರರು ಪ್ರಾರ್ಥನಾ ಗೀತೆಯನ್ನು ಹಾಡಿದರು.

ಸಂಗೀತ ಮತ್ತು ಕಲಾಶಾಲೆಯ ಉದ್ಘಾಟನೆ— ಎಕೆಡಮಿ ಆಫ್ ಜನರಲ್ ಎಡ್ಯುಕೇಶನ್, ಮಣಿಪಾಲ, ಇದರ ನೇತೃತ್ವದಲ್ಲಿ ಆರಂಭಿಸಲಾದ ಸಂಗೀತ ಮತ್ತು ಕಲಾಶಾಲೆಯನ್ನು ಕಳೆದ ತಾ. 30ರಂದು ರಾತ್ರಿ ಮೈಸೂರು ಸರಕಾರದ ಕಾನೂನು ಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗರು ಮಣಿಪಾಲದಲ್ಲಿ ಉದ್ಘಾಟಿಸಿದರು. ಶ್ರೀ ವಿ. ಎಸ್. ಕುಡ್ವರು ಸಭಾಧ್ಯಕ್ಷತೆ ವಹಿಸಿದ್ದರು. ಎಕೆಡೆಮಿ ರಿಜಿಸ್ಟ್ರಾರ್ ಡಾ. ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡಿ ಎಕೆಡೆಮಿಯ ಚಟುವಟಿಕೆಗಳನ್ನು ವಿವರಿಸಿದರು. ಸಚಿವರೂ ಮತ್ತು ಸಭಾಧ್ಯಕ್ಷರು ಸಂಗೀತ ಕಲಾಭಿವೃದ್ಧಿಗೆ ಜನತೆ ಮತ್ತು ಸರಕಾರ ಹೆಚ್ಚು ಪ್ರೋತ್ಸಾಹ ನೀಡಬೇಕಾಗಿದೆ ಎಂದರು. ಬಳಿಕ ಸಂಗೀತ ಕಾರ್ಯಕ್ರಮಗಳಾದುವು.

ಪಂದ್ಯಾಟ ಸ್ಪರ್ಧೆ ಬಹುಮಾನ ವಿತರಣೆ— ಸ್ಥಳೀಯ ಎಮ್. ಜಿ. ಎಮ್. ಕಾಲೇಜಿನ ವರ್ಷಾವಧಿ ಪಂದ್ಯಾಟ ಹಾಗೂ ಬಹುಮಾನ ವಿತರಣೆಯು ತಾ. 2ರಂದು ಸಂಜೆ ಜಿಲ್ಲಾ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ಸ್ವಾಗತಿಸಿದರು. ಶ್ರೀ ಲಕ್ಷ್ಮೀನಾರಾಯಣ ಹೆಗ್ಡೆಯವರು ಸಂದೇಶವಾಚನ ಮಾಡಿದರು. ಫಿಜಿಕಲ್ ಡೈರೆಕ್ಟರ್ ಶ್ರೀ ಡಿ. ಎನ್. ಸೋಮಸುಂದರಮ್ ಅವರು ವರದಿವಾಚನ ಮಾಡಿದರು. ಸಭಾಧ್ಯಕ್ಷರು ಬಹುಮಾನ ವಿತರಣೆ ಮಾಡಿದ ಬಳಿಕ ಶ್ರೀ ರಾಮಮೋಹನ ಬಾಳಿಗರು ಧನ್ಯವಾದಗಳನ್ನಿತ್ತರು.

ಶ್ರೀ ಮಧ್ವನವಮಿ— ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರು ತಾ. 29ರಂದು ಶ್ರೀಕೃಷ್ಣ ಮಠದಲ್ಲಿ ಶ್ರೀ ಮಧ್ವನವಮಿ ಮಹೋತ್ಸವವನ್ನು ವೈಭವದಿಂದ ನೆರವೇರಿಸಿದರು. ಮಧ್ಯಾಹ್ನ ಅನ್ನಸಂತರ್ಪಣೆ, ಸಂಜೆ ವಸಂತ ಮಹಲಿನಲ್ಲಿ ಸುಜ್ಞಾನ ಸಭೆ, ರಾತ್ರಿ ಬ್ರಹ್ಮೋತ್ಸವಾದಿಗಳು ಸಾಂಗವಾದುವು.

ವಿಕ್ಟೋರಿಯಾ ಜುಬಿಲಿ ಕ್ಲಬ್ಬಿನಲ್ಲಿ— ಕಳೆದ ತಾ. 26ರಂದು ರಾತ್ರಿ ಭಾರತದ ಆಕಾಶವಾಣಿ ಕೇಂದ್ರದ ಸಂಗೀತ ವಿದ್ವಾಂಸರಾದ ಶ್ರೀ ಚಕ್ರಕೋಟಿಯವರ ಸಂಗೀತ ಕಚೇರಿಯು, ಭಾರತ ಸರಕಾರದ ಸುದ್ದಿ ಇಲಾಖಾ ಸಂಗೀತದ ಅಸಿಸ್ಟಂಟ್ ಡೈರೆಕ್ಟರ್ ಶ್ರೀ ಎಲ್. ಆರ್. ಭಟ್ ಮತ್ತು ಶ್ರೀ ಸುಂದರಾಚಾರ್ಯರ ಕೂಡುವಿಕೆಯಿಂದ ನಡೆಯಿತು. ಆರಂಭದಲ್ಲಿ ಶ್ರೀ ಎ. ಜೆ. ಆಳ್ವೆಯವರು ಸ್ವಾಗತಿಸಿದರು. ಜೀವವಿಮಾ ಸಂಸ್ಥೆಯ ಉಡುಪಿ ವಿಭಾಗದ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರು ಸಂಗೀತಜ್ಞರಿಗೆ ಪುಷ್ಪಮಾಲಿಕೆಗಳನ್ನಿತ್ತು ಗೌರವಿಸಿದರು. ಡಾ. ಕೆ. ಎಲ್. ಪತಾಳರು ಧನ್ಯವಾದಗಳನ್ನಿತ್ತರು.

ಅಂದೇ ಉಡುಪಿಯ ಪ್ರಸಿದ್ಧ ಕಲಾವಿದರಾದ ಶ್ರೀ ಕೆ. ವಾಸುದೇವ ನಾಯ್ಕರು ತಯಾರಿಸಿದ ಡಾ. ರಾಜೇಂದ್ರ ಪ್ರಸಾದರ ತೈಲಚಿತ್ರ ಅನಾವರಣವು ಕ್ಲಬ್ಬಿನಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶತೀರ್ಥ ಸ್ವಾಮಿಗಳವರಿಂದ ನೆರವೇರಿಸಲ್ಪಟ್ಟಿತು.

ಸಿಂಡಿಕೇಟ್ ಬ್ಯಾಂಕಿನ ಹೊನ್ನಾವರ ಶಾಖೆಯ ರಜತೋತ್ಸವವು — ಹೊನ್ನಾವರದ ನ್ಯೂ ಇಂಗ್ಲಿಷ್ ಶಾಲಾ ಪಟಾಂಗಣದಲ್ಲಿ ಕಳೆದ ತಾ. 27ರಲ್ಲು ವಕೀಲ್ ಶ್ರೀ. ಆರ್. ಎನ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಲ್. ಎಚ್. ಪ್ರಭುಗಳು ಸಂದೇಶಗಳನ್ನೋದಿದರು. ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಡಾ| ಟಿ. ಮಾಧವ ಪೈಗಳು ಸ್ವಾಗತ ಭಾಷಣ ಮಾಡುತ್ತಾ, ದೇಶದಲ್ಲಿ ಜನತೆಯು ಉಳಿತಾಯ ಮಾಡುವ ಕ್ರಮವನ್ನು ಅಭ್ಯಾಸ ಮಾಡಿ ಆ ಉಳಿತಾಯವನ್ನು ಬ್ಯಾಂಕುಗಳಲ್ಲಿ ಠೇವಣಾತಿಯಾಗಿಟ್ಟು ದೇಶದ ಅಭಿವೃದ್ಧಿಗೆ ನೆರವಾಗಬೇಕೆಂದರು. ಸಭಾಧ್ಯಕ್ಷರು ಡಾ| ಪೈಗಳ ಕಾರ್ಯದಕ್ಷತೆಯನ್ನು ಕೊಂಡಾಡಿ ಅವರು ದೇಶಕ್ಕೆ ಸಲ್ಲಿಸುತ್ತಿರುವ ಸೇವೆ ಅಪಾರವಾದುದೆಂದರು. ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈಗಳವರು ತಮ್ಮ ಇತ್ತೀಚಿನ ವಿದೇಶ ಪ್ರವಾಸಾನುಭವವನ್ನೂ ನಮ್ಮ ನಾಡಿನ ಪರಿಸ್ಥಿತಿಯನ್ನು ವಿವರಿಸಿ ಧನ್ಯವಾದಗಳನ್ನಿತ್ತರು.

ದಯವಿಟ್ಟು ನಿಮ್ಮ ಬಾಕಿ ಚಂದಾಹಣವನ್ನು ಮನಿಯಾರ್ಡರು ಮಾಡಿರಿ.

ನಂದಳಿಕೆ—ಕನ್ನಡದ ನವೋದಯ ಕವಿಗಳೊಬ್ಬರಾದ ನಂದಳಿಕೆ ಲಕ್ಷ್ಮೀನಾರಣಪ್ಪ—ಮುದ್ದಣನ ಜಯಂತ್ಯುತ್ಸವವು ಮತ್ತು 'ಮುದ್ದಣ ಸ್ಮಾರಕ' ಮಂದಿರದ ಶಂಕು ಸ್ಥಾಪನೆಯು ಕಳೆದ 24ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರುಗಿತು. ಶ್ರೀ ಎಸ್. ಸುಂದರರಾಮ್ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಟಿ. ರಘುಚಂದ್ರ ಸೆಟ್ಟಿ ಮತ್ತು ಬನ್ನಂಜೆ ಗೋವಿಂದಾಚಾರ್ಯರ ಭಾಷಣಗಳಾದುವು. ಶ್ರೀ ಕೆ. ವಾಮನ ಬಲಿದಾಸರು ಕಾವ್ಯ ವಾಚನ ಮಾಡಿದರು ಶ್ರೀ ಎಸ್. ರಾಮರಾಯರು ಸಂದೇಶಗಳನ್ನೋದಿದರು. ಅಧ್ಯಕ್ಷ ಭಾಷಣಾನಂತರ ಮನರಂಜನ ಕಾರ್ಯಕ್ರಮಗಳಾದುವು.

ಬೈಲೂರು—ಸ್ಥಳೀಯ ಬೋರ್ಡ್ ಹೈಸ್ಕೂಲಿನ ಪಂಪ್ವಾಟಗಳ ದಿನಾಚರಣೆಯು ಕಳೆದ ತಾ. 25ರಂದು ಜರಗಿತು. ಆ ದಿನ ಬೆಳಿಗ್ಗೆ ಶಾಲಾ ಹೆಡ್ಮಾಸ್ತರ್ ಶ್ರೀ ಬಿ. ಎಸ್. ಆಚಾರ್ಯರು ಧ್ವಜಾರೋಹಣ ಮಾಡಿದರು. ಮಧ್ಯಾಹ್ನ ಉಡುಪಿ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ಎಲ್ ಎಸ್. ರೈಗಳ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣ ಸಮಾರಂಭ ನಡೆಯಿತು. ಡಾ| ಎ ಕೆ. ಎಲ್ ರಾಯರು ಶಾಲೆಯ ಏಳಿಗೆಯನ್ನು ಬಯಸಿ ಮಾತನಾಡಿದರು ಶ್ರೀ ಬಿ ಆರ್ ನಾಯ್ಕರು ಧನ್ಯವಾದವಿತ್ತರು ತಾ 26ರಂದು ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ನಡೆದ ಬಳಿಕ ಬಹಿರಂಗ ಸಭೆಯು ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಎಮ್. ಜಿ ಎಮ್. ಕಾಲೇಜಿನ ಪ್ರಾಧ್ಯಾಪಕ ಶ್ರೀ ರಾಮಚಂದ್ರ ಮೂರ್ತಿಯವರು ಕಾವ್ಯವಾಚನ ಮಾಡಿದರು. ನಂತರ ಹಲವರ ಕಾಲೋಚಿತ ಭಾಷಣಗಳಾದುವು. ಅಧ್ಯಕ್ಷರ ಮನನೀಯ ಭಾಷಣವಾದ ಬಳಿಕ ಶ್ರೀ ಬಿ. ಜಿ ಪೂಜಾರಿಯವರು ಧನ್ಯವಾದಗಳನ್ನಿತ್ತರು.

ದೇವಿಪುರ—ಆ. ಭಾ ಮಾಧ್ವ ಮಹಾಮಂಡಲದ ಕಣ್ವತೀರ್ಥ ಶಾಖೆಯ ಆಶ್ರಯದಲ್ಲಿ ತಾ. 29ರಂದು ಕೋಟೆಕಾರ್ ಹಾ| ಎ| ಶಾಲೆಯಲ್ಲಿ ಡಾ. ಪಿ ಆನಂದ ರಾಯರ ಅಧ್ಯಕ್ಷತೆಯಲ್ಲಿ ಶ್ರೀ ಮಧ್ವನವಮಿ ಉತ್ಸವವು ಗೀತಾಸ್ಪರ್ಧೆ, ಸಭೆ, ಭಾಷಣ, ಪಾರಿತೋಷಕ ವಿತರಣ ಮೊದಲಾದ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ನೆರವೇರಿತು.

ಸಂಗಾರಕಟ್ಟೆ—ಸ್ಥಳೀಯ ಬೋರ್ಡ್ ಹಾ| ಎ| ಶಾಲೆಯ ವರ್ಧಂತ್ಯುತ್ಸವವು ಕಳೆದ ತಾ. 24ರಂದು ಜಿಲ್ಲಾ ಡಿಸ್ಟ್ರಿಕ್ಟ ಕಮಿಶನರ್ ಶ್ರೀ ವೈ. ಸಿ. ಹೊಂಬಾಳಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಹೆಡ್ಮಾಸ್ತರರು ವರದಿವಾಚನ ಮಾಡಿದರು ಶ್ರೀ ಎ. ಬಿ ಅಳ್ವೆಯವರು ಸ್ವಸ್ತಿವಾಚನ ಮಾಡಿದರು, ಕುಂದಾಪುರ ಎಡ್ವಕೇಟ್ ಶ್ರೀ ಎಮ್. ಎಮ್ ಹೆಗ್ಡೆ ಮೊದಲಾದವರ ಭಾಷಣಗಳಾದುವು. ತಾ. 26 ರಂದು ಶ್ರೀ ಜಗಜ್ಜೀವನದಾಸ ಸೆಟ್ಟಿ ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಪ್ರಜಾರಾಜ್ಯ ದಿನಾಚರಣೆ ನಡೆಯಿತು. ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಕಾಲೋಚಿತವಾದ ಮಾತುಗಳನ್ನಾಡಿದರು. ತಾ 27ರಂದು ಹಳೆವಿದ್ಯಾರ್ಥಿ ದಿನಾಚರಣೆಯು ಉಡುಪಿ ಬೋರ್ಡ್ ಹೈಸ್ಕೂಲ್ ಹೆಡ್ಮಾಸ್ತರ್ ಶ್ರೀ ಅನಂತಕೃಷ್ಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಮೂರು ದಿನಗಳಲ್ಲೂ ಮನರಂಜನ ಕಾರ್ಯಕ್ರಮಗಳಿದ್ದುವು.

ಜಿಲ್ಲೆಯಲ್ಲಿ ಪ್ರಜಾರಾಜ್ಯ ದಿನಾಚರಣೆಯು ತಾ 26ರಂದು ವಿವಿಧ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು ಸುರತ್ಕಲ್ ವಿದ್ಯಾದಾಯಿನಿ ಶಾಲೆಯಲ್ಲಿ ಡಾ. ಕೆ. ಸತ್ಯಶಂಕರನವರ ಅಧ್ಯಕ್ಷತೆಯಲ್ಲಿ, ಮುಲ್ಕಿ—ಮಿತ್ರಪಟ್ಟಣ ಗಂಗಯ್ಯಸ್ಮಾರಕ ಶಾಲೆ ಮತ್ತು ಅಗ್ಗದ ಕರಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ನೇತೃತ್ವದಲ್ಲಿ, ವಿಟ್ಲ—ವೀರಕಂಭ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಪಿ. ದೇಜು ಸಾಲಿಯಾನರ ಅಧ್ಯಕ್ಷತೆಯಲ್ಲಿ, ನಾರಾ—ಗ್ರಾಮದ ಗುಡ್ಡೆಯಂಗಡಿಯಲ್ಲಿ ಡಾ. ಕೆ. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ, ಕವಣೂರು ಪುಡ್ಡೊಟ್ಟು—ವಿವಿಧೋದ್ದೇಶ ಕಲಾ ಸೇವಾ ಸಂಘದಲ್ಲಿ ಪುತ್ತೂರು ಜ್ಯೋನಿಯರ್ ಡೆವಲಪ್ಮೆಂಟ್ ಆಫೀಸರ್ ಶ್ರೀ ಪಿ. ಶೇಷಣ್ಣನವರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಸಾರ್ವಜನಿಕ ಸಭೆ, ಭಾಷಣ, ಮಕ್ಕಳಿಗೆ ಸಿಹಿತಿಂಡಿ ಹಂಚುವಿಕೆ ಮೊದಲಾದ ಕಾರ್ಯಕ್ರಮಗಳಾದುವು.

ಜಿಲ್ಲಾ ಪ್ರಾಥಮಿಕ ಶಿಕ್ಷಕರ ಕ್ರಿಯಾ ಸಮಿತಿಯ ಸಭೆ— ದ ಕ. ಜಿಲ್ಲಾ ಪ್ರಾ. ಶಿಕ್ಷಕರ ಕ್ರಿಯಾ ಸಮಿತಿಯ ಸಭೆಯು ಮಂಗಳೂರು ಸಹೋದರ ರಾತ್ರಿ ಶಾಲೆಯಲ್ಲಿ ತಾ 1ರಂದು ಶ್ರೀ ಕೆ. ವಾಸಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕನ್ವೀನರ್ ಶ್ರೀ ಯಫ್. ವಾಂಶಿಯವರು, ಬೆಂಗಳೂರಿನಲ್ಲಿ ಶಿಕ್ಷಕ ಪ್ರತಿನಿಧಿಗಳಿಗೆ ಆಶ್ವಾಸನೆಯಿತ್ತಂತೆ ಅಧಿಕಾರಿಗಳು ವಿವರಣಾ ಪರಿಪತ್ರವನ್ನು ಶೀಘ್ರವೇ ಕಳುಹಿಸುವರೆ ಪ್ರತಿ ತಾಲೂಕು ಯೂನಿಯನುಗಳು ತಾ 3-2-58ರಂದು ತಂತಿ ಮೂಲಕ ವಿನಂತಿಸಿಕೊಳ್ಳಬೇಕೆಂದೂ ತಾ. 15—2 58ರಂದು ಈ ಜಿಲ್ಲೆಯ ಪ್ರತಿ ರಕ್ಷಕರು ಒಂದೇ ವಾಕ್ಯವುಳ್ಳ "ಮೈಸೂರು ಸರಕಾರವು ಇತ್ತೀಚೆಗೆ ಪ್ರಕಟಿಸಿದ ಪರಿಷ್ಕೃತ ವೇತನದ ಸರಕಾರೀ ಆಜ್ಞೆಯ ವಿವರಣೆಯನ್ನು ಶೀಘ್ರವೇ ಕಳುಹಿಸುವುದರ ಮೂಲಕ ಸರಿ ವೇತನವು ದ. ಕ ಜಿಲ್ಲಾ ಎಲ್ಲಾ ಶಿಕ್ಷಕರಿಗೆ ಬೇಗನೆ ಸಿಗುವಂತೆ ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿ ವಿನಂತಿ ಎಂಬ 'ಪೋಸ್ಟ್ ಕಾರ್ಡ್' ವಿನಂತಿಯನ್ನು ಮುಖ್ಯಮಂತ್ರಿಗಳಿಗೆ ಕಳುಹಿಸಬೇಕೆಂದೂ ಆ ಕುರಿತು ಪ್ರತಿ ತಾಲೂಕು ಯೂನಿಯನುಗಳು ಆಸಕ್ತಿ ವಹಿಸಬೇಕೆಂದೂ ಸೂಚಿಸಿದ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು. ದ. ಕ ಗಿಲ್ಡಿನ ತಿದ್ದಿದ ಘಟನೆಯನ್ನು ತಾಲೂಕು ಯೂನಿಯನುಗಳ ಮಹಾಸಭೆಯ ಮುಂದಿಟ್ಟು ಒಪ್ಪಿಗೆ ಪಡೆಯಲು ಅನುಕೂಲವಾಗುವಂತೆ ಮಾರ್ಚ್ ಅಂತ್ಯದವರೆಗೆ ಗಿಲ್ಡಿನ ತಿದ್ದುಪಡಿ ಸ್ವೀಕಾರದ ಮಹಾಸಭೆಯನ್ನು ಮುಂದುವರಿಸಬೇಕೆಂದೂ ಕರಡು ಘಟನೆಯನ್ನು ಕನ್ನಡದಲ್ಲಿಯೂ ಅಚ್ಚುಹಾಕಿಸಿ ಹಂಚಬೇಕೆಂದೂ ವಿನಂತಿಸುವರೆ ನಿರ್ಧರಿಸಲ್ಪಟ್ಟಿತು ಪರಿಷ್ಕೃತ ವೇತನವು ಆದಷ್ಟು ಬೇಗನೆ ಶಿಕ್ಷಕರ ಕೈಗೆ ದೊರಕುವಂತೆ ಸಹಕಾರವನ್ನು ಕೊಡಬೇಕೆಂದು ಸಂಬಂಧಪಟ್ಟವರನ್ನು ವಿನಂತಿಸಿಕೊಳ್ಳಲು ನಿರ್ಣಯಿಸಲಾಯಿತು.

ಮಂಗಳೂರು ಮತ್ತು ಮಲ್ಪೆ ಬಂದರಿನ ಅಭಿವೃದ್ಧಿ—ದೇಶದ ಸಾರಿಗೆ ಪದ್ಧತಿಯಲ್ಲಿ ಒಳಪ್ರದೇಶ ಜಲಯಾನವು ಯಾವ ರೀತಿಯ ಪಾತ್ರವಹಿಸಬಹುದು ಎಂಬ ಕುರಿತು ಕೇಂದ್ರ ಸರಕಾರಕ್ಕೆ ಸಲಹೆನೀಡಲು ಕೇಂದ್ರ ಸಾರಿಗೆ ಇಲಾಖೆಯ ಆಶ್ರಯದಲ್ಲಿ ರಚಿತವಾದ ಸಮಿತಿಯ ಸದಸ್ಯ ಶ್ರೀ ಎಮ್. ಪಿ. ಮತ್ತಾನಿಯವರು ತಾ. 31ರಂದು ಮಂಗಳೂರು ಪೋರ್ಟ್ ಟ್ರಸ್ಟಿನ ಸದಸ್ಯರು ಮತ್ತು ಮಂಗಳೂರಿನ ವ್ಯಾಪಾರಿ ವರ್ಗವನ್ನು ಭೇಟಿಯಾಗಿ ಮಂಗಳೂರು ಮತ್ತು ಮಲ್ಪೆ ಬಂದರಿನ ಅಭಿವೃದ್ಧಿ ಕುರಿತು ಚರ್ಚೆ ನಡೆಸಿದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಜಿಲ್ಲೆಯ ಈ ಎರಡು ಬಂದರಗಳ ಪೈಕಿ ಒಂದನ್ನು ಮಾತ್ರ ಅಭಿವೃದ್ಧಿ ಪಡಿಸಬಹುದಾಗಿದೆ ಎಂಬುದನ್ನು ಒಪ್ಪಿಗೊಳಿಸಿ ಮಂಗಳೂರು ಬಂದರವನ್ನು ಮೂವತ್ತು ಅಡಿ ಆಳದ ಬಂದರಾಗಿ ಅಭಿವೃದ್ಧಿಗೊಳಿಸುವುದು ಸಾಧ್ಯವಿದೆ ಎಂದರು.

ಸಮಿತಿ ಸದಸ್ಯರಾದ ಶ್ರೀಗಳಾದ ಡಿ. ಮೆಹತಾ, ಡಿ. ವಿ. ಜೋಗ್ಲೆಕರ್, ಎಸ್ ಕೆ. ಮುಖರ್ಜೀ ಮತ್ತು ಸಮಿತಿಯ ಕಾರ್ಯದರ್ಶಿ ಶ್ರೀ ಎಸ್. ಪಿ. ಸಾಂಧಿಯವರು ಕೆನರಾ ಚೇಂಬರ್ ಆಫ್ ಕಾಮರ್ಸಿನ ಸದಸ್ಯರನ್ನು ಭೇಟಿಯಾಗಿ ದ. ಕ. ಜಿಲ್ಲೆಯಲ್ಲಿ ಒಳಪ್ರದೇಶದ ಜಲಯಾನವನ್ನು ಯಾವ ರೀತಿಯಲ್ಲಿ ಅಭಿವೃದ್ಧಿಗೊಳಿಸಬಹುದೆಂದು ಚರ್ಚಿಸಿದರು. ಮಂಗಳೂರು-ಕುಂದಾಪುರ ಕಾಲುವೆ ದಾರಿಯ ನಿರ್ಮಾಣದ ಕಡೆಗೂ, ಕುಂದಾಪುರ ಮತ್ತು ಮಂಗಳೂರಿನ ಬಳಿಯ ನದಿಗಳನ್ನು ಪ್ರಯಾಣಾನುಕೂಲವಾಗಿ ಮಾಡುವ ಕಡೆಗೂ ಗಮನ ಕೊಡಲಾಗುವುದೆಂದು ಸಮಿತಿ ಅಭಿಪ್ರಾಯ ಪಟ್ಟಿತು.

ಸೊಸೆ ಬಂದಲ್ಲಿ ಮನೆಯೊಡತಿಯಾಗುವಳು!

ಶ್ರೀ ರಾಜಾಜಿಯವರ ನಿಲುಮೆ

ಕೇಂದ್ರೀಯ ಭಾಷಾ ಸಮ್ಮೇಳನದ ಆಶ್ರಯದಲ್ಲಿ ಮದರಾಸಿನಲ್ಲಿ ಸೇರಿದ ಒಂದು ಸಾರ್ವಜನಿಕ ಸಭೆಯಲ್ಲಿ ಶ್ರೀ. ರಾಜಗೋಪಾಲಾಚಾರಿಯವರು ಹಿಂದಿ ಭಾಷೆಯ ವಿರುದ್ಧ ಮಾತನಾಡಿದರು. ಮತ್ತು ದಕ್ಷಿಣ ಭಾರತದ ನಿವಾಸಿಗಳೆಲ್ಲರೂ ಪಕ್ಷ ಪಂಗಡಗಳನ್ನು ತೊರೆದು ಹಿಂದಿಯನ್ನು ಹೇರುವುದನ್ನು ವಿರೋಧಿಸುವಂತೆ ವಿನಂತಿಸಿದರು. ದಕ್ಷಿಣದ ಜನತೆಗೆ ಈಗ ಹಿಂದಿಯಿಂದಾಗಿ ಒಂದು ದೊಡ್ಡ ಗಂಡಾಂತರ ಬಂದಿದೆ. ಕಾಂಗ್ರೆಸ್ಸಿನ ಗೌಹಾತಿ ಗೊತ್ತುವಳಿಯನುಸಾರವಾಗಿ ಹಿಂದಿಯನ್ನು ನಾವು ಒಂದು ಬಾರಿ ಸ್ವೀಕರಿಸಿದೆವೆಂದರೆ ಮತ್ತೆ ಅದನ್ನು ವಿರೋಧಿಸುವುದು ಕಠಿನವೆಂಬುದಾಗಿ ಅವರು ಅಭಿಪ್ರಾಯಪಟ್ಟರು.

ದ್ರಾವಿಡ ಮುನ್ನೇತ್ರ ಕಳಗಂ ಮೊದಲಾದ ಪಕ್ಷಗಳ ಮುಂದಾಳುಗಳೊಡನೆ ತನ್ನ ನಿರ್ಣಯದ ಕುರಿತಾದ ಮಾತುಕತೆಗಳನ್ನು ಉಲ್ಲೇಖಿಸುತ್ತ ಅನ್ಯ ಪ್ರಶ್ನೆಗಳಲ್ಲಿ ಅವರ ವಿಚಾರಗಳೊಂದಿಗೆ ಭಿನ್ನಾಭಿಪ್ರಾಯವಿದ್ದರೂ ಈ ಭಾಷಾ ಸಮಸ್ಯಾ ಸಂಬಂಧದಲ್ಲಿ ನನ್ನೊಡನೆ ಅವರು ಏಕಮತದವರಾಗಿರುವಾಗ ನಾನೇಕೆ ಅವರ ಸಹಕಾರ ಪಡೆಯಬಾರದು? ಇದನ್ನು ಹೊರತಾಗಿ ದಕ್ಷಿಣದಲ್ಲಿ ಹಿಂದಿಗೆ ಲೋಕಮತವಿಲ್ಲ ಮತ್ತು ಇಲ್ಲಿನ ಜನರು ಆಂಗ್ಲ ಭಾಷೆಯನ್ನೇ ವ್ಯವಹಾರದಲ್ಲಿರಿಸಬಯಸುತ್ತಾರೆಂದು ನಾನು ಶ್ರೀ ನೆಹರೂರವರಿಗೆ ಹೇಗೆ ತಿಳಿಸಲಿ? ಎಂದು ಶ್ರೀ ರಾಜಾಜಿ ಪ್ರಶ್ನಿಸಿದರು.

ಮದ್ರಾಸ ಸರಕಾರದ ಮೂಲಕ ಹೊರಡಿಸಲಾದ ಸಮಾಧಾನ ಸೂತ್ರಗಳನ್ನು ಎತ್ತಿಕೊಂಡು ಅದು ಅಸ್ಪಷ್ಟವಾಗಿದೆ ಎಂದು ದೂರಿದರು. ಈ ವಿಷಯದಲ್ಲಿ ಆಂಗ್ಲ ಭಾಷೆಯನ್ನು ಸರಕಾರೀ ಭಾಷೆಯಾಗಿ ಬಯಸುವ ರಾಜ್ಯದಲ್ಲಿ ಅದನ್ನೇ ಉಳಿಸಲು ಅನುಮತಿ ಕೊಡಬೇಕು ಮತ್ತು ಹಿಂದಿ ಬಯಸುವವರು ಹಿಂದಿಯನ್ನು ಇಟ್ಟುಕೊಳ್ಳುವಂತೆ ಮಾಡಬೇಕು. ಕೇಂದ್ರ ಸರಕಾರ ಸಹ ಆಂಗ್ಲ ಭಾಷಾ ಸಮರ್ಥಕ ರಾಜ್ಯಗಳೊಡನೆ ಆ ಭಾಷೆಯಿಂದಲೇ ವ್ಯವಹಾರ ನಡೆಸಬೇಕು—ಎಂಬೀ ವ್ಯವಸ್ಥೆಯನ್ನು ಮಾಡಿದರೆ ಮಾತ್ರ ಸಮಾಧಾನವಾದೀತು ಎಂದು ಶ್ರೀ ರಾಜಾಜಿ ಉದ್ಗರಿಸಿದರು.

ಉತ್ತರ ಭಾರತೀಯರು ದಕ್ಷಿಣ ಭಾರತೀಯರು ಹಿಂದಿಯನ್ನು ಅಭ್ಯಸಿಸಲು ಇನ್ನೂ ಹೆಚ್ಚು ಸಮಯವನ್ನು ನೀಡುತ್ತಿದ್ದಾರೆಂದು ತಿಳಿದರೆ ಅದು ನೂರು ಪೈಸೆಯಷ್ಟು ತಪ್ಪು ತಿಳುವಳಿಕೆಯಾಗಿದೆ. ಏಕೆಂದರೆ ಇಲ್ಲಿನ "ಮುದುಕರು ಎಷ್ಟು ಮಾತ್ರಕ್ಕೂ ಹಿಂದಿಯನ್ನು ಕಲಿಯುವಲ್ಲಿ ಉತ್ಸಾಹಿತರಾಗಲಾರರು ಎಂದವರು ಉತ್ತರ ಭಾರತೀಯರನ್ನು ಎಚ್ಚರಿಸಿದರು.

ಹಿಂದಿಯನ್ನು ಸಮಸ್ತ ಭಾರತದ ರಾಜಭಾಷೆಯನ್ನಾಗಿ ಮಾಡಬೇಕು ಎಂಬ ನಮ್ಮ ಸಂವಿಧಾನದ ೧೭ನೆಯ ಪರಿಚ್ಛೇದವನ್ನು ತೆಗೆದು ಹಾಕಬೇಕು ಎಂದವರು ಕೇಂದ್ರೀಯ ಸರಕಾರಕ್ಕೆ ವಿನಂತಿಸಿದರು.

ದಕ್ಷಿಣ ಸಂಸ್ಥಾನಗಳ ಕೃಷಿಕರ ಮಹಾಸಮ್ಮೇಳನ, ಬೆಂಗಳೂರು.

ಸ್ಥಳ— ವುಡ್‌ಲಾಂಡ್ಸ್—ಬೆಂಗ್ಳೂರು.

ಕಳೆದ ದಶಂಬರ 30 ಮತ್ತು 31ರಲ್ಲು ಶಿವಮೊಗ್ಗೆಯಲ್ಲಿ ಕರ್ನಾಟಕದ ಭೂಮಾಲಿಕ ಕೃಷಿಕರ ಸಂಘಸಂಸ್ಥೆಗಳ ಪ್ರತಿನಿಧಿಗಳು ಸೇರಿ ನಿಶ್ಚಯಿಸಿದ ಪ್ರಕಾರ ಇದೇ ಬರುವ ಫೆಬ್ರವರಿ ತಾ. 14 ಪ್ರಾತಃಕಾಲ 9 ಗಂಟೆ ಮತ್ತು 15ರಂದು ದಕ್ಷಿಣ ಪ್ರಾಂತಗಳ (ಮೈಸೂರು, ಆಂಧ್ರ, ಕೇರಳ, ಮದ್ರಾಸು) ಭೂಮಾಲಿಕ ಕೃಷಿಕರ ಮಹಾಸಮ್ಮೇಳನವೊಂದನ್ನು ಜರಗಿಸುವುದಾಗಿ ನಿಶ್ಚೈಸಿರುವುದರಿಂದ ಈ ಸಮ್ಮೇಳನಕ್ಕೆ ದಯಮಾಡಿಸಿ ಈ ಕಾರ್ಯವನ್ನು ಯಶಸ್ವಿಗೊಳಿಸಿ ತನ್ಮೂಲಕ ಭೂಮಾಲಿಕ ಕೃಷಿಕರ ಹಾಗೂ ದೇಶದ ಹಿತರಕ್ಷಣೆ ಮಾಡುವುದರಲ್ಲಿ ನೆರವಾಗಬೇಕಾಗಿ ನಮ್ರತೆಯಿಂದ ವಿನಂತಿಸುತ್ತೇವೆ.

ಸರ್ದಾರ್ ಲಾಲ್‌ಸಿಂಗ್ Ex M. P. ಪ್ಲಾನಿಂಗ್ ಕಮಿಶನಿನ ಸದಸ್ಯರು, ಹಿಂದೆ ಪಂಜಾಬು, ಹಿಂದುಸ್ಥಾನ ಸರಕಾರಗಳ ಕೃಷಿ ಡೈರೆಕ್ಟರ್— ಇವರು ಸಮ್ಮೇಳನದ ಅಧ್ಯಕ್ಷತೆ ವಹಿಸುವರು. ಬಿ. ರಾಮಚಂದ್ರ ರೆಡ್ಡಿ Ex M. P. (ಆಂಧ್ರ) ಮತ್ತು ಮಾಜಿ ಮದ್ರಾಸ್ ಕೌನ್ಸಿಲು ಅಧ್ಯಕ್ಷರು, ಇವರು ಸಮ್ಮೇಳನವನ್ನು ಉದ್ಘಾಟಿಸುವರು.

ಜಿ. ಕೆ ಗೋವಿಂದ ಭಟ್, ಬೆಂಗ್ಳೂರು
R. ಕೃಷ್ಣಮೂರ್ತಿ, ಮದ್ರಾಸ್
ವಿ. ರಾಜ ರೆಡ್ಡಿ, ಆಂಧ್ರ
ಕೆ. ಸಿ. ಕೋರಮಸ್, ಕೇರಳ
ಪಿ. ನಾರಾಯಣ ನಂಬೂದ್ರಿಪಾಡ್, ಕೇರಳ
ಕನ್‌ವೀನರ್ಸ್.

ಕೆ. ಬಿ ಜಿನರಾಜ ಹೆಗ್ಡೆ,
ಸಮ್ಮೇಳನದ ಆರ್ಗನೈಸರ್.

ಪುತ್ತೂರು—ಭಾರತದ ಮಾಜಿ ಮಹಾದಂಡ ನಾಯಕ ಜನರಲ್ ಕೆ. ಎಮ್. ಕಾರ್ಯಪ್ಪನವರಿಗೆ ತಾ. 1ರಂದು ಪುತ್ತೂರು ಪಂಚಾಯತ ಬೋರ್ಡಿನ ಪರವಾಗಿ ಅದರ ಅಧ್ಯಕ್ಷ ಶ್ರೀ ಪಿ. ಜಿವಾನಂದರಾಯರು ಮಾನಪತ್ರವಿತ್ತು ಗೌರವಿಸಿದರು. ಜನರಲ್ ಕಾರ್ಯಪ್ಪನವರು ಉತ್ತರಿಸುತ್ತಾ ಭಾರತೀಯ ಸೇನೆಯು ಶಿಸ್ತು, ಚಾತುರ್ಯ, ಕಾರ್ಯದಕ್ಷತೆಯಲ್ಲಿ ಇತರರಿಗೆ ಮಾದರಿಯಾಗಿದೆ ಎಂದರು. ಕರ್ನಾಟಕ ಜನತೆಯು ಕರ್ನಾಟಕ ರಾಜ್ಯವನ್ನು ಭಾರತದ ರತ್ನವಾಗಿ ಮಾಡಲು, ಭಾರತವನ್ನು ಜಗತ್ತಿನ ರತ್ನವನ್ನಾಗಿ ಮಾಡಲು ಶ್ರಮಿಸಬೇಕೆಂದರು. ಪಂಚಾಯತ ಸದಸ್ಯ ಶ್ರೀ ಕೆ. ರಾಮ ಕುದ್ವರು ಉಪಾಹಾರ ವ್ಯವಸ್ಥೆ ಮಾಡಿದ್ದರು.

ಮಂಗಳೂರು

ಜಿಲ್ಲೆಯ ಸಮಸ್ಯೆಗಳ ಕುರಿತು ವಿಚಾರವಿನಿಮಯ—ಮೈಸೂರು ರಾಜ್ಯದ ಸಾರ್ವಜನಿಕ ಕಾಮಗಾರೀ ಶಾಖೆಯ ಸಚಿವ ಶ್ರೀ ಎಚ್. ಕೆ. ವೀರಣ್ಣ ಗೌಡರು ತಾ. 27ರಂದು ಸಂಜೆ ಕದ್ರಿ ಪ್ರವಾಸೀ ಬಂಗ್ಲೆಯಲ್ಲಿ ಜಿಲ್ಲೆಯ ಮುಂದಾಳುಗಳೊಡನೆ ದ. ಕ. ಜಿಲ್ಲೆಯ ಸಮಸ್ಯೆಗಳ ಕುರಿತು ವಿಚಾರವಿನಿಮಯ ನಡೆಸಿದರು. ಈ ಸಭೆಯಲ್ಲಿ ರಾಜ್ಯದ ಕಾರ್ಮಿಕ ಮಂತ್ರಿ ಶ್ರೀ ಬಿ ವಿ. ಬಾಳಿಗಾ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ, ಶ್ರೀ ಎಸ್. ಸರ್ಪಪ್ಪಯ್ಯ, ಎಮ್. ಎಲ್ ಸಿ, ಶ್ರೀ ಕೆ. ಆರ್. ಆಚಾರ್, ಎಮ್. ಸಿ, ಡಾ. ಕೆ. ನಾಗಪ್ಪ ಆಳ್ವ ಮತ್ತು ರತ್ನವರ್ಮ ಹೆಗ್ಡೆ, ಎಮ್. ಎಲ್. ಎ, ಗಳವರು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಡಾ. ಕೆ. ಬಿ. ಶೆಟ್ಟಿ, ಶ್ರೀಗಳಾದ ಎಮ್. ರಘುನಾಥ, ಎಚ್. ಕೆ. ತಿಂಗಳಾಯ ಮೊದಲಾದವರು ಭಾಗವಹಿಸಿ ಸಲಹೆಗಳನ್ನಿತ್ತರು.

ಹಾಸನ-ಮಂಗಳೂರು ರೈಲ್ವೆ ಲೈನನ್ನು ರಚಿಸುವ ಆವಶ್ಯಕತೆ, ಮಂಗಳೂರಿನಲ್ಲೊಂದು ಇಂಜಿನಿಯರಿಂಗ್ ಕಾಲೇಜು ಸ್ಥಾಪನೆ, ಸುಲ್ತಾನ ಬತ್ತೇರಿ ಬಳಿಯಲ್ಲಿ ಸಂಕಪ್ರೋದನ್ನು ರಚಿಸುವಿಕೆ, ಲೇಡಿಗೋಷನ್ ಆಸ್ಪತ್ರೆಯ ಬಡಾವಣೆ, ಮಂಗಳೂರಲ್ಲಿ ಟೌನ್‌ಹಾಲ್ ರಚಿಸಲು ಸರಕಾರದ ಸಹಾಯ, ಜಿಲ್ಲಾ ಬೋರ್ಡು ರಸ್ತೆಗಳ ಅಭಿವೃದ್ಧಿ ಕಾರ್ಯಕ್ಕೆ ತೀವ್ರಗಮನ ಕೋರುವಿಕೆ ಇತ್ಯಾದಿ ಕುರಿತು ಸಚಿವರ ಸಹಾಯ ಬೆಂಬಲ ಅಪೇಕ್ಷಿಸಲಾಯಿತು

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ—ಶ್ರೀ ಎಚ್. ಕೆ ವೀರಣ್ಣ ಗೌಡರು ತಾ. 28ರಂದು ಬೆಳಿಗ್ಗೆ ಭಾಷಣವೀಯುತ್ತಾ, ಕಾಂಗ್ರೆಸಿಗರು ತಮ್ಮಲ್ಲಿರುವ ವೈಯಕ್ತಿಕ ಭಿನ್ನಾಭಿಪ್ರಾಯಗಳನ್ನು 'ದೂರವಿರಿಸಿ ಮಹಾತ್ಮಾಗಾಂಧಿಯವರ ಕಾಲದಲ್ಲಿ ತಮ್ಮಲ್ಲಿದ್ದಂತಹ ರೀತಿಯ ಐಕ್ಯತೆಯನ್ನು ಬೆಳೆಸಿಕೊಳ್ಳಬೇಕೆಂದು ಕರೆಯಿತ್ತರು.

ಪ್ರತಿಯೊಂದು ಜಿಲ್ಲಾ ಬೋರ್ಡಿನಿಂದ ಕಡಿಮೆ ಪಕ್ಷ ನೂರು ಮೈಲುಗಳಷ್ಟು ರಸ್ತೆಯನ್ನು ಸರಕಾರವು ಪಡೆಕೊಂಡು ಅವರ ಅಭಿವೃದ್ಧಿ ಸಾಧಿಸಬೇಕೆಂಬುದಾಗಿ ಹೇಳಿ ಗ್ರಾಮದೇಶದ ಜನರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸಲು ಅನುಕೂಲವಾಗುವಂತೆ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ತಾಲೂಕು ಬೋರ್ಡುಗಳನ್ನು ರಚಿಸುವ ಕುರಿತು ಮೈಸೂರು ಸರಕಾರವು ಬೇಗನೆ ನಿಶ್ಚಯಿಸಲಿದೆ ಎಂದು ಹೇಳಿದರು. ಆರಂಭದಲ್ಲಿ ಶ್ರೀ ಕೆ. ಕೆ. ಶೆಟ್ಟಿ, ಎಮ್. ಎಲ್. ಸಿ. ಯವರು ಸ್ವಾಗತಿಸಿದರು. ಡಾ. ಕೆ. ಬಾಲಪ್ಪ ಶೆಟ್ಟರು ಪುಷ್ಪಹಾರವನ್ನಿತ್ತರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಜಿಲ್ಲಾ ಬೋರ್ಡಿನ ರಸ್ತೆಗಳಿಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುವಂತೆ ಜಿಲ್ಲಾ ಬೋರ್ಡಿಗೆ ಪ್ರತ್ಯೇಕ ಇಂಜಿನಿಯರಿಂಗ್ ವಿಭಾಗವು ಅವಶ್ಯವೆಂದರು. ಶ್ರೀ ಎಸ್ ಬಿ ಸಾಮ್ರಾಜ್ಯರು ಮಲೆನಾಡು ರಸ್ತೆಗಳ ಕಡೆಗೆ ಹೆಚ್ಚಿನ ಗಮನಕೊಡಬೇಕೆಂದರು. ಮೈಸೂರು ಕಾರ್ಮಿಕ ಸಚಿವ ಶ್ರೀ ಬಿ. ವೈಕುಂಠ ಬಾಳಿಗರು ಸಭೆಯಲ್ಲಿ ಹಾಜರಿದ್ದರು.

ಬಂದರುಗಳ ಅಭಿವೃದ್ಧಿ ಪರಿಶೀಲನೆಗಾಗಿ ಆರು ಮಂದಿ ಸಚಿವರ ಆಗಮನ—ಪ್ಲಾನಿಂಗ್ ಕಮಿಶನ್ ಅರ್ಥಿಕ ಸಲಹೆಗಾರ ಶ್ರೀ ಎಸ್. ವಿ. ರಾಮಮೂರ್ತಿ, ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ, ಕಾರ್ಮಿಕ ಹಾಗೂ ಬಂದರ ಅಭಿವೃದ್ಧಿ ಶಾಖಾಮಂತ್ರಿ ಶ್ರೀ ಬಿ. ವೈಕುಂಠ ಬಾಳಿಗ, ಗೃಹಶಾಖೆಯ ಮಂತ್ರಿ ಶ್ರೀ ಸಿ. ಎಮ್. ಪೂಣಚ್ಚ, ಎಕ್ಸೈಸ್ ಮತ್ತು ಗ್ರಾಮ ಕೈಗಾರಿಕಾ ಮಂತ್ರಿ ಶ್ರೀ ಮಹಮ್ಮದಾಲಿ, ಆರೋಗ್ಯ ಮಂತ್ರಿ ಶ್ರೀ ಆರ್. ಎಮ್. ಪಾಟೀಲ್, ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಚ್. ಕೆ. ವೀರಣ್ಣ ಗೌಡ, ಮೈಸೂರು ಸರಕಾರದ ಮುಖ್ಯ ಕಾರ್ಯದರ್ಶಿ ಶ್ರೀ ಕೆ. ಪಿ. ರಘುನಾಥಯ್ಯ, ಸಾರ್ವಜನಿಕ ಕಾರ್ಯಕಾರೀ ಶಾಖಾ ಕಾರ್ಯದರ್ಶಿ ಶ್ರೀ ಬಿ. ಕೆ. ಶ್ರೀನಿವಾಸಾಚಾರ್, ಸ್ಥಳೀಯಾಡಳಿತ ಮತ್ತು ಆರೋಗ್ಯ ಖಾತೆಯ ಕಾರ್ಯದರ್ಶಿ ಶ್ರೀ ಎಮ್. ವಾಸುದೇವ ರಾವ್, ಚೀಫ್ ಇಂಜಿನಿಯರು ಶ್ರೀ ಜಿ. ಎಸ್. ಗಣಪತಿ, ಹಿಂದುಸ್ಥಾನ್ ಏರ್‌ಕ್ರಾಫ್ಟ್ ಕಂಪೆನಿ ಮೆನೇಜಿಂಗ್ ಡ್ಯಾರೆಕ್ಟರ್ ಶ್ರೀ ಜೆ. ಎಮ್. ಶ್ರೀನಾಗೇಶ, ಡ್ಯಾರೆಕ್ಟರ್ ಆಫ್ ಫಿಶರೀಸ್ ಶ್ರೀ ವಿ ಪಿ. ಕಲ್ಯಾಣ ಮೊದಲಾದವರ ಪಂಗಡ ಫೊಂದು ತಾ 27ರಂದು ಸ್ಪೆಶಲ್ ವಿಮಾನ ಮೂಲಕ ಮಂಗಳೂರಿಗೆ ಬಂದಿತು. ಮೈಸೂರು ರಾಜ್ಯದ ಕರಾವಳೀ ಪ್ರದೇಶದಲ್ಲಿರುವ ಬಂದರಗಳ ಅಭಿವೃದ್ಧಿ, ಕರಾವಳಿ ಪ್ರದೇಶದಲ್ಲಿನ ಗಣಿ ಸಂಪತ್ತನ್ನು ಸದುಪಯೋಗಗೊಳಿಸುವುದು, ಕರಾವಳಿಯ ವಿಮಾನುಗಾರಿಕೆಯ ಅಭಿವೃದ್ಧಿ, ಹಾಸನ—ಮಂಗಳೂರು ರೈಲು ರಚನೆ ಈ ಕುರಿತು ವಿಮಾನಮೂಲಕ ಪರಿಶೀಲನೆ ನಡೆಸಲು ಈ ಪಂಗಡದವರು ಬಂದುದಾಗಿದೆ. ಈ ಪಂಗಡದವರು ಜಿಲ್ಲೆಯಲ್ಲಿ ಕಡಲಗಡ್ಡೆ, ಹತ್ತಿಯನ್ನು ಬೆಳೆಸುವ ಸಾಧ್ಯತೆಯನ್ನು ಪರಿಶೀಲಿಸಿದರು. ಮಂಗಳೂರು ಬಂದರವನ್ನು ಪರಿಶೀಲಿಸಿ, ಹೊಯ್ಗೆ ಬಜಾರಿನಲ್ಲಿಯ ಕೋಲ್ಡ್ ಸ್ಟೋರೆಜ್ ಪ್ಲಾಂಟನ್ನು ಸಂದರ್ಶಿಸಿದರು ಮಂಗಳೂರು ಪೋರ್ಟ್ ಟ್ರಸ್ಟಿನ ಆಫೀಸಿನಲ್ಲಿ ಸ್ಟೇಟ್ ಪೋರ್ಟ್ ಆಫೀಸರ್ ಶ್ರೀ. ಎಮ್. ಎಲ್ ಅದ್ವಾನಿ, ಪೋರ್ಟ್ ಟ್ರಸ್ಟಿನ ಅಧ್ಯಕ್ಷ ಶ್ರೀ. ವೈ ಹೊಂಬಾಳಯ್ಯ, ಉಪಾಧ್ಯಕ್ಷ ಶ್ರೀ. ವಿ. ಎಸ್. ಕುಡ್ವ ಮೊದಲಾದವರೊಡನೆ ವಿಚಾರ ವಿನಿಮಯ ನಡೆಸಿದರು.

ಜಿಲ್ಲಾ ಬೋರ್ಡಿನ ಸಭೆಯು ತಾ 25ರಂದು ಬೋರ್ಡಿನ ಅಧ್ಯಕ್ಷ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಎ ನಾಗರಾಜ ಹೆಗ್ಡೆ ಮತ್ತು ಎನ್. ಎಮ್. ಬಾಲಕೃಷ್ಣ ಇವರುಗಳ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು ಸ್ಥಳೀಯ ಜನರು ಮುಂದೆ ಬಂದು ಶಾಲೆಗೆ ಬೇಕಾದ ಸಲಕರಣೆಗಳು ಹಾಗೂ ಕಟ್ಟಡಗಳನ್ನು ಒದಗಿಸಿಕೊಟ್ಟಲ್ಲಿ ಕನ್ಯಾಣ, ಪಣಂಬೂರು, ಪಂಜ, ಫಲಿಮಾರು, ಗುರುಪುರ ಮತ್ತು ಕುಂದಾಪುರ ಈ ಕೇಂದ್ರಗಳಲ್ಲಿ ಹೈಸ್ಕೂಲುಗಳನ್ನು ತೆರೆಯುವುದೆಂದು ನಿರ್ಣಯಿಸಲಾಯಿತು.

ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ಅವುಗಳ ಸ್ಥಳದಲ್ಲಿ ತಾಲೂಕು ಬೋರ್ಡುಗಳನ್ನು ರಚಿಸುವ ಮೈಸೂರು ಸರಕಾರದ ನಿರ್ಧಾರದ ಕುರಿತು ಪರ್ಯಾಲೋಚಿಸಿ ಬೋರ್ಡಿಗೆ ವರದಿಮಾಡಲು ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಬಿ ಎಸ್. ಭಾಸ್ಕರ ರೈ ಮತ್ತು ಕೆ ಕೆ ಶೆಟ್ಟಿ ಇವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು ದ್ವಿತೀಯ ಪಂಚವಾರ್ಷಿಕ ಯೋಜನೆಯನ್ವಯ ಶಾಲೆಗಳಲ್ಲಿ ತರುವ ಹೊಸ ವಿದ್ಯಾಯೋಜನೆಗಳಿಗಾಗಿ ಮತ್ತು ಕೆಲವು ಹೈಸ್ಕೂಲುಗಳನ್ನು ಹಾಯರ್ ಸೆಕೆಂಡರಿ ಶಾಲೆಗಳಾಗಿ ಮಾರ್ಪಡಿಸುವರೆ ಸರಕಾರಕ್ಕೆ ತಗಲುವ ಅಧಿಕ ಖರ್ಚಿನ ಸೇಕಡಾ 25 ಆದ ರೂಪಾಯಿ 138,751ನ್ನು ವಹಿಸಿಕೊಳ್ಳಲು ಬೋರ್ಡು ಒಪ್ಪಿಗೆ ಕೊಟ್ಟಿತು. 1958—59ನೆ ವರ್ಷದ ಜಿಲ್ಲಾ ಬೋರ್ಡಿನ ಪ್ರಾಥಮಿಕ ಶಿಕ್ಷಣ ಹಾಗೂ ಸಾಮಾನ್ಯ ಬಜೆಟ್ ಮತ್ತು ಅಂದಾಜು ವೆಚ್ಚಗಳ ಪಟ್ಟಿಯನ್ನು ಮಂಜೂರುಮಾಡಲಾಯಿತು.

ಪ್ರಜಾರಾಜ್ಯ ದಿನಾಚರಣೆ—ನಿಮಿತ್ತ ತಾ. 26ರಂದು ಸಂಜೆ ಕೇಂದ್ರ ಮೈದಾನಿನಲ್ಲಿ ಮೈಸೂರಿನ ಪಜಾಜಿ ಮಂತ್ರಿ ಶ್ರೀ ಎ ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಕೆ. ಕೆ. ಶೆಟ್ಟರು ಸ್ವಾಗತಿಸಿದರು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಭಾಷಣಮಾಡಿದರು. ಅಂದು ಬೆಳಿಗ್ಗೆ ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರು ಧ್ವಜಾರೋಹಣ ಮಾಡಿದರು.

ಸರಕಾರಿ ಸ್ತ್ರೀಯರ ತರಬೇತಿ ಮತ್ತು ಸೆಕೆಂಡರಿ ಶಾಲಾ ವಾರ್ಷಿಕೋತ್ಸವ. ಸಮಾರಂಭದ ಅಧ್ಯಕ್ಷತೆಯನ್ನು ತಾ. 29ರಂದು ಶ್ರೀ ಬಾಳಿಗರು ವಹಿಸಿ, ಸರಕಾರಿ ಶಾಲೆ ಹಾಗೂ ವಿದ್ಯಾಸಂಸ್ಥೆಗಳು ಇತರ ವಿದ್ಯಾಸಂಸ್ಥೆಗಳಿಗೆ ಸರ್ವ ರೀತಿಯಲ್ಲಿಯೂ ಮಾರ್ಗದರ್ಶನ ಮಾಡುವಂತಹ ಸಂಸ್ಥೆಗಳಾಗಿದ್ದು ಇತರರಿಗೆ ಮಾದರಿಯಾಗಬೇಕು ಸರಕಾರದ ನೇರ ಆಡಳಿತದಲ್ಲಿರುವಂತಹ ಈ ಶಾಲೆಗಳಿಂದ ಸಾರ್ವಜನಿಕರು ಬಹಳ ಮಾರ್ಗದರ್ಶನವನ್ನು ಅಪೇಕ್ಷಿಸುತ್ತಾರೆ ಎಂದು ಮುಂತಾಗಿ ಹೇಳಿದರು.

ಆರಂಭದಲ್ಲಿ ಶಾಲಾ ಮುಖ್ಯೋಪಾಧ್ಯಾಯಿನಿ ಕುಮಾರಿ ಇ. ಬ್ರಿಟೊರವರು ಸ್ವಾಗತಿಸಿ ವರದಿಯನ್ನೋದಿದರು ಶ್ರೀಮತಿ ಸರಸ್ವತಿ ನಾರಾಯಣ ಮೂರ್ತಿಯವರು ಧನ್ಯವಾದವಿತ್ತರು. ಮೈಸೂರಿನ ಡಿಪ್ಯುಟಿ ಡ್ಯಾರೆಕ್ಟರ್ ಆಫ್ ಇನ್‌ಸ್ಪೆಕ್ಷನ್ ಶ್ರೀ ವಾಸುದೇವಯ್ಯನವರು ಸಭೆಯಲ್ಲಿ ಹಾಜರಿದ್ದರು ಕೊನೆಗೆ ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿಗಳಾದುವು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ನಿರ್ಣಯ— ಖಾಸಗಿ ಆಡಳಿತೆಯಲ್ಲಿರುವ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಅಧೀನವಿರುವ ಶಾಲೆಗಳ ಅಧ್ಯಾಪಕರಿಗೆ ಆಸಳಿತೆಯವರು ಹೊಸ ವೇತನ ಮಟ್ಟ ಹಾಗೂ ತುಟ್ಟಿ ಭತ್ತೆಯನ್ನು ಕೊಡಲು ಸಾಧ್ಯವಾಗುವಂತೆ ಸರಕಾರವು ಅವರಿಗೆ ಕೊಡುವ ಧನಸಹಾಯವನ್ನು ಬೇಗನೆ ತಿಳಿಸಬೇಕೆಂಬುದಾಗಿ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಕೆ. ಶೆಟ್ಟಿ, ಎಮ್ ಎಲ್ ಸಿ. ಯವರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಪಾಸಾಯಿತು.

ಉದ್ಯಾನ ಸ್ಪರ್ಧೆಯ ಬಹುಮಾನ ವಿತರಣೆ-ದ. ಕ ಜಿಲ್ಲಾ ಎಡ್ವಾನ್ಸ್‌ಮೆಂಟ್ ಎಸೋಸಿಯೇಶನಿನ ಆಶ್ರಯದಲ್ಲಿ ತಾ. 27ರಂದು ಮಹಿಳಾ ಸಭೆಯ ವಠಾರದಲ್ಲಿ ಜರುಗಿದ ಉದ್ಯಾನ ಸ್ಪರ್ಧೆಯ ಬಹುಮಾನ ವಿತರಣೆ ಸಮಾರಂಭದ ಅಧ್ಯಕ್ಷ ಸ್ಥಾನವಹಿಸಿದ ಮೈಸೂರಿನ ಪಜಾಜಿಮಂತ್ರಿ ಶ್ರೀ ಎ. ಬಿ. ಶೆಟ್ಟರು ಅಧ್ಯಕ್ಷ ಭಾಷಣಮಾಡುತ್ತಾ, ಉದ್ಯಾನಗಳ ಸ್ಪರ್ಧೆ, ತರಕಾರಿ ಮತ್ತು ಹೂಗಳ ಪ್ರದರ್ಶನಗಳು ಜನರಿಗೆ ಸೌಂದರ್ಯ ಹಾಗೂ ನೈರ್ಮಲ್ಯದ ಅರಿವನ್ನುಂಟುಮಾಡಿಕೊಟ್ಟು ಅವರ ಸುಖ ಜೀವನದಲ್ಲಿ ಸಹಕಾರಿಯಾಗುತ್ತದೆ. ನಮ್ಮ ಜಿಲ್ಲೆಯಲ್ಲಿ ಅಧಿಕವಾಗಿರುವ ದೇವಸ್ಥಾನಗಳಲ್ಲಿ ಹೆಚ್ಚಿನವುಗಳು ನೈರ್ಮಲ್ಯರಹಿತವಾಗಿವೆ ಪೂಜಾ ಕೇಂದ್ರಗಳಾದ ದೇವಸ್ಥಾನಗಳು ಜನರಿಗೆ ಶುಚಿತ್ವವನ್ನು ಕಲಿಸುವ ಕೇಂದ್ರಗಳಾಗಿರಬೇಕು. ಇದಕ್ಕಾಗಿ ಈ ದೇವಸ್ಥಾನಗಳು ಉದ್ಯಾನ ಸ್ಪರ್ಧೆ, ಹೂಗಳ ಪ್ರದರ್ಶನ ಇದಕ್ಕೆ ಸಹಕಾರ ನೀಡಬೇಕೆಂದು ಹೇಳಿದರು.

ಆರಂಭದಲ್ಲಿ ಎಸೋಸಿಯೇಶನಿನ ಅಧ್ಯಕ್ಷರೂ, ಜಿಲ್ಲಾಧಿಕಾರಿಗಳೂ ಆದ ಶ್ರೀ ವೈ. ಸಿ. ಹೊಂಬಾಳಯ್ಯನವರು ಸ್ವಾಗತ ಭಾಷಣ ಮಾಡಿದರು. ದಿ| ರಂಗನಾಥ ಪುಂಜರ ಗೌರವಾರ್ಥವಾಗಿ ಎರಡು ನಿಮಿಷ ಮೌನ ಪ್ರಾರ್ಥನೆಯಾಯಿತು. ಅಂತ್ಯದಲ್ಲಿ ಶ್ರೀ ಕೆ. ಕೆ. ಹೆಗ್ಡೆಯವರು ಧನ್ಯವಾದಗಳನ್ನಿತ್ತರು.

ದ. ಕ. ಜಿಲ್ಲಾ ಹೈಸ್ಕೂಲ್ ಹೆಡ್ಮಾಸ್ತರರ ವಿಚಾರ ಗೋಷ್ಠಿಯು ತಾ. 30ರಂದು ಕೆನರಾ ಹೈಸ್ಕೂಲ್ ಉರ್ವದ ಶಾಖೆಯಲ್ಲಿ ಮೈಸೂರು ಸರಕಾರದ ಡಿಪ್ಯುಟಿ ಡ್ಯಾರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಶ್ರೀ ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಪಜಾಜಿ ಮಂತ್ರಿ ಶ್ರೀ. ಎ. ಬಿ. ಶೆಟ್ಟರು ವಿಚಾರ ಗೋಷ್ಠಿಯನ್ನು ಉದ್ಘಾಟಿಸುತ್ತಾ, ವಿದ್ಯಾ ಕ್ಷೇತ್ರದಲ್ಲಿ ಸರಕಾರವು ಮುಂದೆ ತರುವಂತಹ ಯಾವುದೇ ಸುಧಾರಣೆಗಳು ಅಥವಾ ಯೋಜನೆಗಳ ಯಶಸ್ಸು, ಶಾಲೆಗಳಲ್ಲಿ ವಿದ್ಯಾಭ್ಯಾಸವನ್ನು ಕೊಡುವಂತಹ ಅಧ್ಯಾಪಕರನ್ನು ಹೊಂದಿಕೊಂಡಿದೆ. ಆದುದರಿಂದ ಸರಕಾರವು ಯಾವುದೇ ಯೋಜನೆಯನ್ನು ಮುಂದೆ ತರುವ ಮೊದಲು ಅಧ್ಯಾಪಕರ ಪರಿಸ್ಥಿತಿ ಕಡೆಗೆ ಪ್ರಥಮ ಗಮನಕೊಡಬೇಕಾದುದು ಅಗತ್ಯವೆಂದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಮ್. ಕುಡುಬಿಯವರು ಸ್ವಾಗತಿಸಿದರು.

ಒಳಪ್ರದೇಶ ಜಲಯಾನದ ಅಭಿವೃದ್ಧಿ ಸಾಧ್ಯತೆ ಪರಿಶೀಲನೆ—ದೇಶದ ಸಾರಿಗೆ ಪದ್ಧತಿಯಲ್ಲಿ ಒಳಪ್ರದೇಶ ಜಲಯಾನವು ಯಾವ ಪಾತ್ರವನ್ನು ವಹಿಸಬಹುದು, ಅದರ ಅಭಿವೃದ್ಧಿಯನ್ನು ಯಾವ ರೀತಿಯಲ್ಲಿ ಸಾಧಿಸಬಹುದು ಎಂಬುದರ ಕುರಿತು, ಕೇಂದ್ರ ಸರಕಾರಕ್ಕೆ ಸಲಹೆ ನೀಡಲು ಶ್ರೀ ಬಿ. ಕೆ. ಗೋಖ್ಲೆಯವರ ನೇತೃತ್ವದಲ್ಲಿ ರಚಿಸಲ್ಪಟ್ಟ ಸಮಿತಿಯ ಮೂವರು ಸದಸ್ಯರು ತಾ 31ರಂದು ಮಂಗಳೂರಿಗೆ ಆಗಮಿಸಿ ಮೈಸೂರು ಸರಕಾರದ ಮಜೂರಿ ಮಂತ್ರಿ ಶ್ರೀ ಬಿ. ವಿ ಬಾಳಿಗ, ಜಿಲ್ಲಾಧಿಕಾರಿ ಶ್ರೀ ವೈ. ಸಿ ಹೊಂಬಾಳಯ್ಯ, ಸ್ಟೇಟ್ ಪೋರ್ಟ್ ಆಫೀಸರ್ ಶ್ರೀ ಎಮ್. ಎಲ್ ಅದ್ವಾನಿ ಮತ್ತು ಜಿಲ್ಲೆಯ ಶಾಸನ ಸಭಾಸದಸ್ಯರು ಇವರೊಡನೆ ಮೈಸೂರು ರಾಜ್ಯದಲ್ಲಿ ಒಳಪ್ರದೇಶ ಜಲಯಾನವನ್ನು ಅಭಿವೃದ್ಧಿ ಪಡಿಸುವ ಕುರಿತು ವಿಚಾರವಿನಿಮಯ ನಡೆಸಿದರು ಕೇಂದ್ರ ಸಾರಿಗೆ ಇಲಾಖೆಯ ಅಭಿವೃದ್ಧಿ ಸಲಹೆಗಾರರಾದ ಶ್ರೀ. ಎಮ್. ಸಿ. ಮತ್ರಾನಿ, ಬೊಂಬಾಯಿಯ ಚೀಫ್ ಇಂಜಿನಿಯರರಾದ ಶ್ರೀ. ಯು. ಎಸ್. ಮಹೀದಾ ಮತ್ತು ಪೂನಾದ ಜಲ ಮತ್ತು ಶಕ್ತಿ ಸಂಶೋಧನಾ ಕೇಂದ್ರದ ಡ್ಯಾರೆಕ್ಟರ್ ಶ್ರೀ. ಡಿ ವಿ. ಜೋಗ್ಲೇಕರ್ ಇವರಿಂದೊಡಗೂಡಿದ ಈ ಸಮಿತಿಯವರನ್ನು ಪೋರ್ಟ್ ಟ್ರಸ್ಟಿನ ಉಪಾಧ್ಯಕ್ಷ ಶ್ರೀ. ವಿ. ಎಸ್. ಕುಡ್ವ ಮೊದಲಾದವರು ಸ್ವಾಗತಿಸಿದರು.

ಫೆಬ್ರವರಿಯ ನೋವು

ಓರಿಯಣ್ಣ ಜನವರಿಯೆ!
ಮನೆಯಲೆಂತೈನಿನ್ನ?
ಬರಿಸಿಕೊಂಡ್ಯೆ ತನನ ಮೂವತ್ತು ದಿವಸ!
ಉರುಳಿಸ್ಯೆ ನೀನವನಕೆಡೆನು ಮರುದಿವಸ!
ಎನ್ನ ಪಾಲಿಗೆ ಕೊಟ್ಟೆ
ಫನ್ನನ ಸಮಾಧಿಯನ!
ಹೆಣ್ಣಾದ ಎನ್ನೆಡಲ ನೋಡೊ ಓ ತಣ್ಣಾ!
ಎನ್ನೊಡಲ ಈ ಗಾಯ
ಮಾಯುವುದಲ್ಲಣ್ಣಾ!
ಅಬಲನಾದೆನ್ನಲೇ
ಸಬಲ ಭಾರವನೂಕಿ
ನಭದೆ ಏನೆ ಮನಿಟ್ಟು ಸುಣ್ಣಾನೆನಗೊ?
ಶುಭಕಾರಿ ಎಂಬೊಂದು ಕೀರ್ತಿ ನಿನಗೊ?
ಕೊರತೆ ಬುವನೆನಗೆ ಈ
ಕೊರತೆಯೂ ಬರಬೇಕೆ?
ಕುರುವಿನೆಡೆಗೇ ತುಂಗ್ಸುದೇನು ನ್ಯಾಯ!
ನೊರೆಯಿಡುವ ನನ್ನೋರ್ವ ಗಾಯ
ಕಾಯ!

ನಿಜವೆನ್ನ ಈರೈದ
ನುಜರೊಳಗೆ ನಾ ಹಿರಿಯ;
ನಿಜನೋಡೆ ಎಲ್ಲರಿಗು ನಾನೆ ಕಿರಿಯ!
ಭುಜದಲ್ಲಿ ಹೊತ್ತೆನಾ ಜಗದ ದೊರೆಯ!
ಸತ್ಯ ಶಾಂತಿ ಅಹಿಂಸೆ
ಉತ್ತಮತೆ ತೋರಿ, ಅವ
ನಿತ್ತ ಸಂದಾರಿಯಲಿ ಸಾಗುತಿಹುದೇ,
ಉತ್ತಮೌಷಧಿ ಹೊರತು ಬೇರೆ ಇಹುದೆ?
—"ನವಗಿರಿನಂದ"


ಕುಮಾರಿ ಬಿಲ್ಲೆಗಳು
Govt. Regd.
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!
P. DEVEE & Co. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ರಾಷ್ಟ್ರೀಯ ಪ್ರಯೋಗ ಶಾಲೆಗಳು

(೩ನೇ ಪುಟದಿಂದ)

ಮೌಲ್ಯ ವಸ್ತುವನ್ನು ತಯಾರಿಸುವ ಬಗ್ಗೆ ಹೊಸದೊಂದು ಕಾರ್ಯವಿಧಾನವನ್ನು ಅಭಿವೃದ್ಧಿಪಡಿಸಲಾಗಿದೆ. ಈ ತಯಾರಿಕೆಯಲ್ಲಿ ಬಳಸಲಾಗುವ ಕಚ್ಚಾ ಪದಾರ್ಥವೆಂದರೆ ಕೋಲ್‌ಟಾರ್. ಈ ವಿಧಾನದಿಂದ ಥಾಲಿಕ್ ಆನ್ ಹೈಡ್ರೈಡ್ ವಸ್ತುವನ್ನು ಅಲ್ಪವೆಚ್ಚದಲ್ಲಿ ತಯಾರಿಸಬಹುದಾಗಿದೆ.

ದೇಶದಲ್ಲಿ ಬಹುಕಾಲದಿಂದಲೂ ಧೂಮ್ರರಹಿತದ ಇಂಧನದ ಅಗತ್ಯತೆಯು ಕಂಡುಬಂದಿರುವುದು. ಹೈದರಾಬಾದು ಮತ್ತು ಜೀಲಗೋರಗಳಲ್ಲಿ ವಿವಿಧ ದರ್ಜೆ ಕಲ್ಲಿದ್ದಲುಗಳ ಬಗ್ಗೆ ಪ್ರಯೋಗ ಪರೀಕ್ಷೆಗಳನ್ನು ನಡೆಸಲಾಗಿವೆ. ಗೃಹಗಳಲ್ಲಿ ಬಳಸುವ ಧೂಮ್ರರಹಿತದ ಇಂಧನವನ್ನು ಹೆಚ್ಚು ವೆಚ್ಚವಿಲ್ಲದೆ ತಯಾರಿಸಲು ಸಾಧ್ಯವೆಂಬುದನ್ನು ಪ್ರಯೋಗ ಪರೀಕ್ಷೆಗಳು ತೋರಿಸಿಕೊಟ್ಟಿವೆ.

ಕೈಗಾರಿಕೆಗಳಲ್ಲಿ ಕೆಲಸ ನಡೆಯುವಾಗ ಉತ್ಪತ್ತಿಯಾಗುವ ಅನಿಲಗಳಿಂದ ಗಂಧಕವನ್ನು ಬೇರ್ಪಡಿಸಿ ಪಡೆದುಕೊಳ್ಳುವ ಬಗ್ಗೆ ಉಪಯುಕ್ತ ಪದಾರ್ಥಗಳನ್ನು ಅಭಿವೃದ್ಧಿಪಡಿಸಲಾಗಿವೆ. ಲಿಗ್ನೈಟ್ ಮತ್ತು ಕಲ್ಲಿದ್ದಲಿನಿಂದ ವನಸ್ಪತಿ ತೈಲಗಳು ಮತ್ತು ಕಬ್ಬಿನ ರಸ ಇವುಗಳ ಬಣ್ಣ ಕಳೆಯುವ ಪದಾರ್ಥಗಳನ್ನು ಅಭಿವೃದ್ಧಿಪಡಿಸಲಾಗಿದೆ.

ಅನ್ಯ ವಿನ್ಯಾಸ್ ರಾಸಾಯನಿಕ ಪದಾರ್ಥಗಳಲ್ಲಿ ಮ್ಯಾಂಗನೀಸ್ ಸಲ್ಫೇಟ್ ಮತ್ತು ಕುಪ್ರಸ್ ಆಕ್ಸೈಡ್‌ಗಳೂ ಸೇರಿವೆ. ಈ ಪದಾರ್ಥಗಳನ್ನು ಹಡಗುಗಳ ತಳಭಾಗದಲ್ಲಿ ಬಳಿಯಲಾಗಿರುವ ಬಣ್ಣವು ಕೆಡದಂತೆ ಮಾಡಲು ಉಪಯೋಗಿಸಬಹುದಾಗಿದೆ.

ಪೂನದಲ್ಲಿರುವ ರಾಷ್ಟ್ರೀಯ ರಾಸಾಯನಿಕ ಪ್ರಯೋಗಶಾಲೆಯಲ್ಲಿ ನಿಕೊಟಿನ್ ಸಲ್ಫೇಟನ್ನು ತಯಾರಿಸುವ ಕಾರ್ಯವಿಧಾನವೊಂದನ್ನು ಅಭಿವೃದ್ಧಿಪಡಿಸಲಾಗಿದೆ. ಹೊಲ ಗದ್ದೆಗಳಲ್ಲಿ ಕೀಟಗಳನ್ನು ನಾಶಪಡಿಸುವ ಬಗ್ಗೆ ಉಪಯೋಗಿಸುವ ಕೀಟನಾಶಕಗಳಲ್ಲಿ ನಿಕೊಟಿನ್ ಸಲ್ಫೇಟ್ ಪರಿಣಾಮಕಾರಿಯಾದ ವಸ್ತುವಾಗಿರವುದು. ದೇಶದಲ್ಲಿ ವರ್ಷಕ್ಕೆ ಸುಮಾರು ೨೮೦ ಲಕ್ಷ ಪೌಂಡುಗಳಷ್ಟು ವ್ಯರ್ಥವಾದ ತಂಬಾಕು (ಚೂರುಪಾರುಗಳ ರೂಪದಲ್ಲಿ) ದೊರೆಯುತ್ತಿದೆ. ಈ ವ್ಯರ್ಥವಾದ ತಂಬಾಕಿನಿಂದ ನಿಕೊಟಿನ್ ಸಲ್ಫೇಟನ್ನು ಪಡೆಯಬಹುದಾಗಿದೆ. ಈ ಕೀಟನಾಶಕವನ್ನು ತಯಾರಿಸುವ ಬಗ್ಗೆ ಆಂಧ್ರ ರಾಜ್ಯದ ಗುಂಟೂರಿನಲ್ಲಿ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುತ್ತಿದೆ.

ಮದರಾಸಿನ ಕೇಂದ್ರ ಚರ್ಮ ಸಂಶೋಧನಾ ಸಂಸ್ಥೆಯಲ್ಲಿ ಚರ್ಮದ ಉದ್ಯಮಕ್ಕೆ ಸಂಬಂಧಿಸಿದಂತೆ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಸಲ್ಪಟ್ಟಿವೆ. ಇವುಗಳಲ್ಲಿ ಕಚ್ಚಾ ತೊಗಲನ್ನು ಉತ್ತಮಪಡಿಸುವುದು, ಚರ್ಮವನ್ನು ಹದಗೊಳಿಸುವ ಬಗ್ಗೆ ದೇಶೀಯ ವಸ್ತುಗಳನ್ನು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವುದು, ಹದಗೊಳಿಸುವ ತಂತ್ರ ವಿಧಾನಗಳ ಸುಧಾರಣೆ ಮುಂತಾದವು ಸೇರಿವೆ. ಚರ್ಮವನ್ನು ಹದಗೊಳಿಸುವುದಕ್ಕಾಗಿ ಬಳಸುವ ಜಾಲಿ ಮರದ ತೊಗಟೆಯನ್ನು ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶದಿಂದ ಹೊರಗೆ ಪ್ರತಿವರ್ಷವೂ ೧೭ ಲಕ್ಷ ರೂ.ಗಳ ವೆಚ್ಚವಾಗುತ್ತಿದೆ. ದೇಶದಲ್ಲಿಯೇ ದೊರೆಯುವ ತೊಗಟೆಗಳಿಂದ ಹದಗೊಳಿಸುವುದಕ್ಕಾಗಿ ಉಪಯೋಗಿಸುವ ವಸ್ತುಗಳನ್ನು ತಯಾರಿಸುವ ಬಗ್ಗೆ ಪ್ರಾಯೋಗಿಕ ಯಂತ್ರಾಗಾರವೊಂದನ್ನು ಸ್ಥಾಪಿಸಲಾಗುತ್ತಿದೆ.

ಅಲ್ಪ ಪ್ರಮಾಣದ ಎಂಜಿನಿಯರಿಂಗ್ ಉದ್ಯಮ ಕ್ಷೇತ್ರದಲ್ಲಿ ರಾಷ್ಟ್ರೀಯ ಪ್ರಯೋಗ ಶಾಲೆಗಳು ಉಪಯುಕ್ತ ರೀತಿಯಲ್ಲಿ ನೆರವಾಗಿವೆ. ಕಲಾಯಿ ಮಾಡಲ್ಪಟ್ಟ ಅಭ್ರಕದ ಕೆಪಾಸಿಟರ್‌ಗಳನ್ನು ತಯಾರಿಸುವ ಹೊಸ ವಿಧಾನವನ್ನು ನವದೆಹಲಿಯಲ್ಲಿರುವ ರಾಷ್ಟ್ರೀಯ ಭೌತ ಪ್ರಯೋಗ ಶಾಲೆಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಸಂಬಂಧದಲ್ಲಿ ಪ್ರಾಯೋಗಿಕ ಯಂತ್ರಾಗಾರವೊಂದು ಕಾರ್ಯಾಚರಣೆಗೆ ತೊಡಗಿದೆ.

ಕರೀ ಮಣ್ಣಿನಿಂದ ಉತ್ತಮ ದರ್ಜೆಯ ಇಟ್ಟಿಗೆಗಳನ್ನು ತಯಾರಿಸಲು ಸಾಧ್ಯವಿದೆಯೆಂಬುದನ್ನು ರೂರ್ಕಿಯಲ್ಲಿರುವ ಕೇಂದ್ರ ಕಟ್ಟಡ ಸಂಶೋಧನಾ ಸಂಸ್ಥೆ ತೋರಿಸಿಕೊಟ್ಟಿದೆ. ದಿನಕ್ಕೆ ೨,೦೦೦ ಇಟ್ಟಿಗೆಗಳನ್ನು ತಯಾರಿಸುವ ಸಾಮರ್ಥ್ಯ ಪಡೆದಿರುವ ಹಸ್ತಚಾಲಿತ ಯಂತ್ರವೊಂದನ್ನು ಈ ಸಂಸ್ಥೆಯು ಸಿದ್ಧಪಡಿಸಿದೆ. ಸಿಮೆಂಟ್ ಕಾಂಕ್ರೀಟಿನ ತಯಾರಿಕೆಯಲ್ಲಿ ಬಳಸುವ ಪದಾರ್ಥವೊಂದನ್ನು ಈ ಸಂಸ್ಥೆಯು ಅಭಿವೃದ್ಧಿಪಡಿಸಿದೆ. ಈ ಪದಾರ್ಥದ ಬಳಕೆಯಿಂದ ಸಿಮೆಂಟಿನ ಮಿತವ್ಯಯ ಸಾಧ್ಯವಾಗಿದೆ.

ಕಲ್ಕತ್ತದಲ್ಲಿರುವ ಕೇಂದ್ರ ಗಾಜು ಮತ್ತು ಕುಂಭಕಲಾ ಸಂಶೋಧನಾ ಸಂಸ್ಥೆಯಲ್ಲಿ ದೇಶದಲ್ಲಿ ದೊರೆಯುವ ಕಚ್ಚಾ ಪದಾರ್ಥಗಳಿಂದ ಮೊದಲನೆಯ ಸಲ 'ಫೋಂ' ಗಾಜನ್ನು ತಯಾರಿಸಲಾಗಿದೆ. ಈ ಗಾಜು ಲಘು ತೂಕದ್ದಾಗಿದ್ದು ಶಾಖ ನಿರೋಧ ಗುಣಾಂಶವನ್ನು ಪಡೆದಿರುವುದು. ಈ ಸಂಸ್ಥೆಯಲ್ಲಿ ಸೆಲೆನಿಯಂ ರಹಿತದ ಗಾಜನ್ನು ತಯಾರಿಸಲಾಗಿದೆ. ಸೆಲೆನಿಯಂ ರಹಿತದ ಗಾಜಿನಿಂದ ಕೆಂಪು ಬಣ್ಣದ ಬಳೆಗಳನ್ನು ತಯಾರಿಸಬಹುದಾಗಿದೆ. ಭಾರತದಲ್ಲಿ ವರ್ಷಕ್ಕೆ ಎರಡು ಕೋಟಿ ರೂಪಾಯಿಗಳ ಬೆಲೆ ಬಾಳುವ ಕೆಂಪು ಬಣ್ಣದ ಬಳೆಗಳನ್ನು ತಯಾರಿಸಲಾಗುತ್ತಿವೆ. ಈ ಬಳೆಗಳನ್ನು ತಯಾರಿಸುವ ಉದ್ಯಮವು ವರ್ಷಕ್ಕೆ ೧೫ ಲಕ್ಷ ರೂಪಾಯಿಗಳ ಬೆಲೆ ಬಾಳುವ ಸೆಲೆನಿಯಂ ವಸ್ತುವನ್ನು ಆಮದು ಮಾಡಿಕೊಳ್ಳುತ್ತಿದೆ.

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಅಭಿವೃದ್ಧಿಪಡಿಸಲಾಗಿದೆ. ಟಪಿಯೋಕದಿಂದ ಟೊಳ್ಳು ಶಾವಿಗೆಯನ್ನು ಉತ್ಪಾದಿಸಲಾಗಿದೆ. ಈ ಟೊಳ್ಳು ಶಾವಿಗೆಯು ಅಕ್ಕಿಗಿಂತಲೂ ಹೆಚ್ಚು ಪೌಷ್ಟಿಕಾಂಶವನ್ನು ಪಡೆದಿರುವುದು. ಇದಕ್ಕಾಗಿ ಅಗತ್ಯವಾದ ಯಂತ್ರೋಪಕರಣಗಳನ್ನು ಈ ಸಂಸ್ಥೆಯಲ್ಲಿ ಏರ್ಪಡಿಸಲಾಯಿತು. ಪ್ರೋಟೀನ್‌ನಿಂದ ಕೂಡಿದ ವಿವಿಧೋದ್ದೇಶದ ಆಹಾರ'ವನ್ನು ಈ ಸಂಸ್ಥೆಯಲ್ಲಿ ತಯಾರಿಸಲಾಗಿದೆ. ಪ್ರೋಟೀನ್‌ಗಳು, ಕ್ಯಾಲ್ಸಿಯಂ ಮುಂತಾದ ಖನಿಜ ವಸ್ತುಗಳು, ವಿಟಮಿನ್‌ಗಳು, ಸಾಲದಿದ್ದಾಗ, ಈ ವಿವಿಧೋದ್ದೇಶದ ಆಹಾರ"ವನ್ನು ಬಳಸಬಹುದಾಗಿದೆ. ಈ ಆಹಾರವನ್ನು ಕಡಲೆಕಾಯಿಯ ಹಿಟ್ಟು ಮತ್ತು ದ್ವಿದಳ ಧಾನ್ಯಗಳಿಂದ ತಯಾರಿಸಬಹುದಾಗಿದೆ.

ಎಳೆ ಅವರೆ ಬೀಜಗಳು ಮತ್ತು ಉದ್ದಿನಿಂದ ಪಡೆಯಲಾದ ಪ್ರೋಟೀನ್‌ಗಳು ಮಧು ಮೇಹ ರೋಗದ ಚಿಕಿತ್ಸೆಯಲ್ಲಿ ಕಾರ್ಯ ಸಾಧಕವಾಗಿದೆಯೆಂದು ಕಂಡುಬಂದಿದೆ. ಈ ಬಗ್ಗೆ ಅಧ್ಯಯನಗಳು ನಡೆಯುತ್ತಿವೆ. ಸಾಸುವೆ ಮತ್ತು ಎಳ್ಳೆಣ್ಣೆ ಹಿಂಡಿಗಳಿಂದ ತಯಾರಿಸಿದ ಪ್ರೋಟೀನ್‌ಗಳು ರೋಗ ಚಿಕಿತ್ಸಾ ಕಾರ್ಯಗಳಲ್ಲಿ ಉಪಯೋಗಾರ್ಹವಾಗಿವೆ. ಈ ಬಗ್ಗೆ ಲಖನೌದಲ್ಲಿರುವ ಕೇಂದ್ರ ಔಷಧ ವಸ್ತು ಸಂಶೋಧನಾ ಸಂಸ್ಥೆಯಲ್ಲಿ ಕೆಲಸ ನಡೆಯುತ್ತಿದೆ.

ಈ ಲೇಖನದಲ್ಲಿ ರಾಷ್ಟ್ರೀಯ ಪ್ರಯೋಗ ಶಾಲೆಗಳ ಇಚಿನ ಕೆಲವು ಸಂಶೋಧನಾ ಕಾರ್ಯಗಳ ಸಮೀಕ್ಷೆಯನ್ನು ಕೊಡಲಾಗಿದೆ. ಉದ್ಯಮದಲ್ಲಿ ಆಚರಣೆಗೆ ತರಲಾಗಿರುವ ಕೆಲವು ಫಲಿತಾಂಶಗಳು ಮಾತ್ರ ಈ ಲೇಖನದಲ್ಲಿ ಉಲ್ಲೇಖಿಸಲ್ಪಟ್ಟಿವೆ. ಪ್ರಯೋಗ ಶಾಲೆಗಳ ಸಂಶೋಧನಾ ಕಾರ್ಯ ಚಟುವಟಿಕೆಗಳಲ್ಲಿ ಉದ್ಯಮಗಳು ಆಸಕ್ತಿ ವಹಿಸಿರುವುದು ಆಶಾದಾಯಕವಾಗಿದೆ. ವೈಜ್ಞಾನಿಕ ಸಂಶೋಧನೆಗಳು ಕೇವಲ ಗ್ರಂಥಗಳಿಗೆ ಮಾತ್ರ ಸಂಬಂಧಪಡುವುದಿಲ್ಲ. ಅವುಗಳನ್ನು ವ್ಯವಹಾರದಲ್ಲಿ ಬಳಕೆಗೆ ತರುವುದು ಮುಖ್ಯವಾಗಿದೆ. ವಿಜ್ಞಾನಿಗಳು, ಎಂಜನಿಯರುಗಳು ಮತ್ತು ವ್ಯಾವಹಾರಿಕ ವ್ಯಕ್ತಿಗಳ ಸಹಕಾರದಿಂದ ದೇಶದಲ್ಲಿ ವೈಜ್ಞಾನಿಕ ಸಂಶೋಧನಾ ಕಾರ್ಯವು ಬೆಳೆಗುತ್ತಿದೆ. ಮುಂಬರಲಿರುವ ವರ್ಷಗಳಲ್ಲಿ ಈ ರಾಷ್ಟ್ರೀಯ ಪ್ರಯೋಗ ಶಾಲೆಗಳಿಂದ ನಮಗೆ ಅತ್ಯುತ್ತಮ ಫಲ ದೊರಕುವುದೆಂದು ಆಶಿಸಬಹುದಾಗಿದೆ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತವೆ, ಬುಕ್ಕೆ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕಿಮ್ಮತ್: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸಿದ್ಧಾರ್ಥ—(ಪರಿಶೋಧನಾತ್ಮಕ ಕಾದಂಬರಿ) ಮೂಲ ಜರ್ಮನ್ ಹೆಸ್, ಆಂಗ್ಲಾನುವಾದ ಹಿಲ್ಡಾ ರೋಸ್ನರ್, ಕನ್ನಡ ಅನುವಾದ ಶ್ರೀ ಬಿ ಎಸ್ ರಾಮಸ್ವಾಮಿ ಅಯ್ಯಂಗಾರ್, ಬಿ ಎ ಪ್ರಕಾಶಕರು, ನವಜೀವನ ಪ್ರಕಟಣಾಲಯ, ನಂ. ೪೨, ಎರಡನೆಯ ರಸ್ತೆ, ಬಸವನಗುಡಿ, ಬೆಂಗಳೂರು-೪ ಪುಟಗಳು xxiv+೨೨೨. ಬೆಲೆ ರೂ ೨-೦೦.

ಪ್ರಣಯ ಕಥೆಗಳನ್ನು ಆಧರಿಸಿ ಬರೆಯಲ್ಪಡುವ ಕಾದಂಬರಿಗಳ ಸುರಿಮಳೆಯ ಎಡೆಯಲ್ಲಿ ಆಧ್ಯಾತ್ಮಿಕವೆನಿಸಿದ ಕಥಾವಸ್ತುವನ್ನು ಹಿನ್ನೆಲೆಯಾಗಿ ಬಳಸಿ ಬರೆಯಲಾದ ಸುಂದರ ವೆನಿಸಿದ ಕಾದಂಬರಿಯಿದು ನೋಬೆಲ್ ಬಹುಮಾನಿತ ಜರ್ಮನಿಯ ಹೆರ್ಮನ್ ಹೆಸ್ಸರು ಬರೆದಿರುವ 'ಸಿದ್ಧಾರ್ಥ' ಎಂಬ ಕಥೆಯೇ ಈಗ ಕನ್ನಡದಲ್ಲಿ ಅನುವಾದರೂಪದಲ್ಲಿ ಬಂದಿದೆ ಈ ಕಾದಂಬರಿಯು ಅನುವಾದವೆನಿಸಿದರೂ ಸ್ವತಂತ್ರವಾಗಿರುವಂತೆಯೇ ಕಥೆ ಸನ್ನಿವೇಶಗಳ ಓಟವೂ ಭಾಷೆಯ ಶೈಲಿಯೂ ಗೋಚರವಾಗುತ್ತದೆ ಹಾಗಾಗಿ ಅನುವಾದದ ಕಾರ್ಯವು ಅತ್ಯುತ್ತಮವಿದೆ ಎಂದು ಬೇರೆ ಹೇಳಬೇಕಾಗಿಲ್ಲ ಆಧ್ಯಾತ್ಮಿಕ ವಿಚಾರಗಳನ್ನು ವಿವರಿಸಲು ವಿಮರ್ಶಿಸಲು ಸ್ವಲ್ಪ ಪ್ರೌಢವಾದ ಶೈಲಿಯೇ ಅಗತ್ಯವಾಗಿದೆ. ತೀರ ಸರಳವಾಗಿ ಭಾಷೆಯನ್ನು ಬಳಸಿದಲ್ಲಿ ವಸ್ತುವಿನ ಗೌರವವು ಕುಂದುತ್ತದೆ, ತತ್ಕಾರಣವಾಗಿ ಸ್ಪಷ್ಟವಾಗಿಯೂ ಚಿಕ್ಕದಾಗಿಯೂ ಆಧ್ಯಾತ್ಮಿಕ ಗ್ರಂಥಗಳು ಪರಿಣಾಮ ಹೊಂದುತ್ತವೆ ಈ ಕೊರತೆಯು ಈ ಅನುವಾದದಲ್ಲಿ ಎಲ್ಲಿಯೂ ತಲೆದೋರದಿರುವುದು ಅನುವಾದಕರಿಗೆ ಅಭಿಮಾನದ ಸಂಗತಿಯಾಗಿದೆ

ಸಿದ್ಧಾರ್ಥನೆಂದೊಡನೆ ಕಪಿಲವಸ್ತುವಿನ ರಾಜಕುಮಾರನಾದ ಗೌತಮ ಬುದ್ಧನ ನೆನಪಾಗುತ್ತದೆ ಆದರೆ, ಕಥಾನಾಯಕ ಅವನಲ್ಲ ಅವನ ಸಮಕಾಲೀನ ಮಾತ್ರ. ಬಾಲ್ಯದಲ್ಲಿ ಜ್ಞಾನದಾಹವನ್ನು ಪೂರೈಸಲು ಸಮಾನರೊಡನೆ ಕೆಲಸಮಯವಿದ್ದನು ಆದರೆ ಅಲ್ಲಿ ತೃಪ್ತಿಹೊಂದದೆ ಬುದ್ಧನ ಉಪದೇಶದಿಂದಲೂ ಆತನ ಸಂದೇಹ ನಿವಾರಣೆಯಾಗದೆ ಹೋಯಿತು. ಶೂನ್ಯಸ್ಥಿತಿಯನ್ನು ಮುಟ್ಟಲು, ಸುಖದುಃಖಗಳಿಂದ ಬಿಡುಗಡೆ ಹೊಂದಲು, ಮೋಹಕಾಮಾದಿಗಳಿಂದ ಆಲಿಪ್ತನಾಗಲು ಮತ್ತು ತನ್ನತನದ ಅವಸಾನವಾಗಲು ಆತನು ನಿರಂತರ ಬಯಸುತ್ತಿದ್ದನು. ಪ್ರಪಂಚವೆಲ್ಲ ಒಂದೇ ಮತ್ತದು ಚಿರಸತ್ಯವೆನ್ನುವ ಬುದ್ಧ, ಈ ಪ್ರಪಂಚವನ್ನು ತೊರೆದು ಮೋಕ್ಷಪಡೆಯಲು ಉಪದೇಶಿಸುತಿದ್ದಾನೆಂದು ಅವನು ಆಕ್ಷೇಪವೆತ್ತಿದಾಗ, ಬುದ್ಧ ತನ್ನ ಸೋಲನ್ನೊಪ್ಪಿ 'ಜ್ಞಾನದಾಹವುಳ್ಳವರಿಗೆ ಈ ಪ್ರಪಂಚವನ್ನು ವಿವರಿಸುವುದು ಗೌತಮನ ಗುರಿಯಲ್ಲ, ದುಃಖದಿಂದ ಜನರನ್ನು ಬಿಡುಗಡೆ ಮಾಡುವುದು ಮಾತ್ರ ಬುದ್ಧನ ಉದ್ದೇಶ'ವೆನ್ನಬೇಕಾಯಿತು ಅಲ್ಲಿಂದ ಹೊಂಟು ತನ್ನನ್ನೇ ತಾನು ಕಂಡುಕೊಂಡಾಗ, ಸಿದ್ಧಾರ್ಥನಿಗೆ ತನ್ನೊಳಗಿರುವ ಆತ್ಮ, ಚೈತನ್ಯ, ದೈವತ್ವ, ಸಂಪೂರ್ಣತ್ವಗಳನ್ನು ಅರಸು ನೆನಪಿಂದ ತನ್ನನ್ನು ಸ್ವತಃ ನಾಶಮಾಡುತಿದ್ದೇನೆಂಬ ಅರಿವು ಆತನಿಗಾಗಿ ಈ ದೃಶ್ಯ ಪ್ರಪಂಚ ಮಾಯೆಯಲ್ಲವೆಂದವನಿಗನಿಸುತ್ತದೆ ಅವನು ಸೌಂದರ್ಯಾಪೇಕ್ಷಿಯಾಗಿ, ಸಾಮಾನ್ಯ ಮಾನವನಂತೆ ಶ್ರೀಮಂತನಂತೆ, ಸಭಿಕನಂತೆ, ದೊಂಬುಗಾರನಂತೆ, ಕೃಪಣನಂತೆ—ಜೀವಿಸುತ್ತ ಕಮಲಾ ಎಂಬ ಗಣಿಕಾ ಸ್ತ್ರೀಯ ಸಹವಾಸ ಮಾಡಿ, ಆಕೆಯಲ್ಲಿ ಒಬ್ಬ ಕುವರನನ್ನು ಪಡೆಯುತ್ತಾನೆ ಅಷ್ಟರಲ್ಲಿ ತನ್ನ ಪೂರ್ವವಾಸನೆಯ ಪ್ರಭಾವದಿಂದಾಗಿ ಅವನು ಈ ಬಂಧನದಿಂದ ಪಲಾಯನ ಮಾಡಿ, ವಾಸುದೇವನೆಂಬ ದೋಣಿಗನೊಡನೆ ದೋಣಿ ನಡೆಸುತ್ತ ಇರತೊಡಗಿದನು ಅಲ್ಲಿ ಅವನ ಸಂಗದಿಂದ ಸಿದ್ಧಾರ್ಥನ ಮನಸ್ಸು ಪಕ್ವವಾಗುತ್ತವೆ ಲೋಕಾನುಭವವಾಗುತ್ತದೆ, ಆತ್ಮ ಜ್ಞಾನವಾಗುತ್ತದೆ. ಆಕಸ್ಮಾತ್ತಾಗಿ ತನ್ನ ಮಗ ಹಾಗೂ ಕಮಲೆಯರ ಭೇಟಿಯಾಗುತ್ತದೆ ಕಮಲ ತೀರಿ ಹೋಗಿ, ಮಗ ಪಲಾಯನವಾಡುತ್ತಾನೆ—ಇದರಿಂದ, ನದಿಯ ಪಾಠದಿಂದ, ವಾಸುದೇವನ ಸಂಸರ್ಗದಿಂದ ಸಿದ್ಧಾರ್ಥನ ಆತ್ಮಜ್ಞಾನ ಬಲಿದು, ಪ್ರಣವ ದರ್ಶನವಾಗುತ್ತದೆ. ಆತನ ಆಕಾಂಕ್ಷೆ ಈಡೇರುತ್ತದೆ

ಪ್ರಪಂಚದ ಸುಖದುಃಖಗಳನ್ನು ದೂರ ಮಾಡುವುದಕ್ಕಾಗಿ 'ಲೋಕವನ್ನೇ' ತಿರಸ್ಕರಿಸಬೇಕೆಂದು ಗೌತಮ ಬುದ್ಧನು ಹೇಳುತ್ತಿರುವಾಗ, ಆತನ ಸಮಕಾಲೀನನಾದ ಸಿದ್ಧಾರ್ಥನು ಅದನ್ನು ಪ್ರೀತಿಸಿಯೇ ಮೋಕ್ಷವನ್ನು ಪಡೆಯಬಹುದೆಂದು ತೋರಿಸಿ ನಿಜವಾಗಿಯೂ ಸಿದ್ಧಾರ್ಥನಾಗುತ್ತಾನೆ. ಈ ತತ್ತ್ವ ಉಪದೇಶ, ಇದ್ದು ಜೈಸಬೇಕು ಎಂಬ ದಾಸರ ಮಾತಿಗೆ ಸಮರ್ಥನೆ ಕೊಡುತ್ತದೆ ಆಗ ಪರಿಂದಲೇ ತಂದೆ ತಾಯಿಯರನ್ನು ತೊರೆದುಬಂದ ಸಿದ್ಧಾರ್ಥ ತಾನೇ ತಂದೆಯಾದ, ಮಗನ ಅಗಲಿಕೆಯನ್ನು ಸಹಿಸಿದ; ಸಾಂಸಾರಿಕ ಹಾಗೂ ಜೀವನದ ಏರುಪೇರುಗಳನ್ನು ಸ್ವತಃ ಅನುಭವಿಸಿದ - ಇವರಿಂದಾಗಿಯೇ ಆತನ ಇಂಗಿತ ಪೂರ್ಣ ಫಲಕಾರಿಯಾಯಿತು

ಈ ಸುಂದರವಾದ ಕಥೆಯು ಆಧ್ಯಾತ್ಮಿಕತೆಯಿಂದ ಕೂಡಿಕೊಂಡಿದ್ದು ೪೦ ವರ್ಷದ ನಂತರದವರಿಗೆ ಮಾತ್ರ ಯೋಗ್ಯವೆಂದು ವಿಮರ್ಶಕರು ಅಭಿಪ್ರಾಯಪಡಬಹುದೆಂದು ಮುನ್ನುಡಿಕಾರ ಶ್ರೀ ಕೆ ಸ್ವಾಮಿನಾಥನರು ಹೇಳಿದ್ದಾರೆ ಇದು ಸರಿಯಾದರೂ ಉಳಿದವರಿಗೂ ಇದು ಪ್ರೇರಣೀಯ ಕಾದಂಬರಿಯಾಗಿದೆ ಎಂದು ಹೇಳಬಹುದು. "ವಸಿಷ್ಠ ಹಂಪೆ" ಎಂಬ ಹೆಸರಿನಿಂದ ಇದೇ ಕಾದಂಬರಿಯನ್ನು ದಿ. ಎಂ ಗ್ ಎಂ ಹರಿದಾಸರಾಯರು ಕನ್ನಡದಲ್ಲಿ ಬರೆದಿದ್ದರು ಆದರೆ, ಅದು ಮೂಲದ ಆಧಾರದಿಂದ ಬರೆದುದು ಮಾತ್ರವಲ್ಲದೆ ಸಂಪೂರ್ಣಾನುವಾದವಲ್ಲ ಆದುದರಿಂದ, ಈ ಪುಸ್ತಕದ ಅನುವಾದಕರೂ ಪ್ರಕಾಶಕರೂ, ಪ್ರಕಟಣೆಗೆ ನೆರವಾದ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರೂ ಕನ್ನಡಿಗರು ಋಣಿಗಳಾಗಿದ್ದಾರೆ ಈ ಪ್ರಕಟಣೆಗೆ ಎಲ್ಲರ ಸಹಾಯ ಸಹಾನುಭೂತಿ ಅವಶ್ಯಬೇಕು

ಚೈತ್ಯಾಲಯ – (ಕವನ ಸಂಕಲನ) ಕವಿ ಅಂಬಿಕಾತನಯದತ್ತ, ಪ್ರಕಾಶಕರು ಸಮಾಜ ಪುಸ್ತಕಾಲಯ, ಧಾರವಾಡ ಪುಟಗಳು ೬+೭೪ ಬೆಲೆ ರೂ. ೧-೨೫

ಕವಿವರ ಬೇಂದ್ರೆಯವರು ಸ್ವತಂತ್ರ ಕವನಗಳನ್ನು ಬರೆಯುವುದರಲ್ಲಿ ಮಾತ್ರ ನಿಷ್ಣಾತರಲ್ಲ, ಅನುವಾದ ಕಾರ್ಯವನ್ನೂ ಅತ್ಯುತ್ತಮವಾಗಿ ಮಾಡಬಲ್ಲರೆಂದು ಅವರ ಇತ್ತೀಚೆಗಿನ ಕೃತಿಗಳು ಸೂಚಿಸುತ್ತವೆ. ಹೃದಯಸಮುದ್ರ ಮತ್ತು ಮುಕ್ತಕಂಠಗಳ ನಂತರ ಈ ಚೈತ್ಯಾಲಯವೆಂಬ ೫೪ ಕವನಗಳ ಸಂಕಲನ ಹೊರಬಂದಿದೆ. ಇವು ಶ್ರೀ ಅರವಿಂದರ ಕೃತಿಗಳ ಭಾವಾನುವಾದಗಳಾದರೂ ಪದಗಳ ಸ್ವಾತಂತ್ರ್ಯಕ್ಕೆ ಕುಂದು ಬಂದಿಲ್ಲ "ಜನ್ಮಮರಣದ ಜ್ಞಾನಬಂಧ ಬೆಳಕಾಗಿ ಬಿಡಿಸಿಕೊಂಡು ಮುಕ್ತಮನವು ಈಸಾಡುತಿತ್ತು ಹಿರಿಬೆಳಕು ಕಡಲಕಂಡು" ಎಂದೋಡುವ ಸಾಲ್ಗುರಿ ಇದಕ್ಕೊಂದು ಮಾದರಿಯಾದೆ ಎಂಬ ಕಲ್ಪನೆಯನ್ನು ದೃಢೀಕರಿಸುತ್ತದೆ. ಕೃತಿಯು ರಸವತ್ತಾಗಬೇಕಾದರೆ ಭಾಷಾಂತರಕ್ಕಿಂತ ಭಾವಾನುವಾದವೇ ಲೇಸು, ಪ್ರೇರಣೆಯಿಂದುಂಟಾಗುವ ಪ್ರಾತಿಭ ಪುನಸ್ಸೃಷ್ಟಿಯೇ ಒಳ್ಳೆಯದೆಂದ ಶ್ರೀ ಅರವಿಂದರ ನುಡಿಯನ್ನು ಶಿರಸಾವಹಿಸಿ, ಸ್ವಾನುಭೂತಿಯನ್ನು ದೂರನಿರಿಸಿ ಸಾತ್ವಿಕದ ಉದ್ದೀಪನದಿಂದ ಬಂದ ಸಹಾನುಭೂತಿಯ ಪರಿಣಾಮವಾಗಿ ಒಂದ ಕಲ್ಪನೆಗಳನ್ನು ಕವಿತೆಗಳಲ್ಲಿ ಅರಗಿಸಿದ್ದಾರೆ ಶ್ರೀ ಬೇಂದ್ರೆಯವರು ಶ್ರೀ ಮಾತೆಯವರ ಉಕ್ತಿಗಳು ಅಲ್ಪ ಸಂಖ್ಯೆಯಲ್ಲಿ ಬಂದಿವೆ ಸ್ವರ ವಿಸ್ತಾರ ಮಾಡಿಕೊಂಡು ಹಾಡಲಾಗುವಂತೆ ಉಪಯೋಗಿಸಿದ ಈ ಕವನಗಳ ಬಂಧವು ವಾಚನ ಹಾಗೂ ಗಾಯನ ಕಾರ್ಯಗಳಿಗೆ ಕೈಯಿಡೆಯುತ್ತಿದೆ ವಿಷಯಗಳ ಜಟಿಲತೆಯೂ ವಿಷಯ ಗೌರವಕ್ಕೆ ತಕ್ಕ ಕ್ಲಿಷ್ಟ ಗೌರವ ಪೂರ್ಣ ಪದಜಾಲವೂ ಈ ಕವನಗಳು ಸಾಮಾನ್ಯರಿಗೆ ಹೇಳಿಸಿದುದಲ್ಲವೆಂಬುದನ್ನು ಎತ್ತಿ ಹೇಳುತ್ತವೆ ಕೆಲವೊಂದು ಕಠಿನ ಶಬ್ದಗಳ ಅರ್ಥವನ್ನು ಸಂಗ್ರಹಕ್ಕೆ ಸೇರಿಸಲಾಗಿದ್ದರೂ ಅದು ಸಾಲದು, ಆದುದರಿಂದಲೇ ಇಲ್ಲಿನ ಕವನಗಳ ಸಾರವನ್ನು ಸವಿಯಲು ಬೇಂದ್ರೆಯವರಲ್ಲಿದ್ದಂತೆ ದರ್ಶನ ಪ್ರೇಮ ಬೆಳೆಯಬೇಕು; ಆಧ್ಯಾತ್ಮಿಕ ಮಹತ್ವಿಕೆ ಅನುಭವ ಸ್ವಯಂ ವೇದ್ಯವಾಗಬೇಕು ಆಗ ಮಾತ್ರ ಈ ಸಂಕಲನದ ಸಂಪೂರ್ಣ ಉಪಯೋಗವನ್ನು ನಾವು ಪಡೆದುಕೊಳ್ಳಬಹುದು, ಇಲ್ಲವಾದರೆ, ಗಿಳಿಯೋದಿದಂತೆ ವೇದಪ್ರೋದುವ ವಟುವಿನಂತೆ ನಮ್ಮ ಪಾಡಾದೀತು ಈ ಕೃತಿಯನ್ನು ಕನ್ನಡಿಗರ ಪ್ರಯೋಜನಕ್ಕೆ ಒಪ್ಪಿಸಿದ ಕವಿವರರನ್ನೂ ಪ್ರಕಾಶಕರನ್ನೂ ಮನಸಾರೆ ಅಭಿನಂದಿಸಿ ಈ ಕೃತಿಯನ್ನು ಕನ್ನಡಿಗರು ಅವಶ್ಯ ಸಂಗ್ರಹಿಸಿ, ಅಭ್ಯಸಿಸಬೇಕೆಂದು ಬಯಸುತ್ತೇವೆ

ಉಡುಪಿ ಶ್ರೀಕೃಷ್ಣ—(ವರ್ಣಚಿತ್ರ) ಚಿತ್ರಕಾರರು ಶ್ರೀ ಬಿ ಪಿ ಬಾಯರಿ ಉದ್ದಗಲ: ೧೨ ಇಂಚು × ೧೦ ಇಂಚು ಬೆಲೆ ರೂ ೧.

ಭಾರತದ ಸುಪ್ರಸಿದ್ಧ ಯಾತ್ರಾಸ್ಥಳಗಳಲ್ಲಿ ಒಂದಾದ ಉಡುಪಿಯಲ್ಲಿ ಸ್ಥಾಪಿತವಾಗಿರುವ ಶ್ರೀಕೃಷ್ಣ ಪರಮಾತ್ಮನ ಚಿತ್ರವು ವೈಜ್ಞಾನಿಕವಲ್ಲಿ ಕಲಾಪೂರ್ಣವಾಗಿ ಹೊರಬರುವ ಆವಶ್ಯಕತೆಯೇ ಇದಿತ್ತು ದಿನಂಪ್ರತಿ ಸಹಸ್ರಾರು ಭಕ್ತರನ್ನು ತನ್ನೆಡೆಗೆ ಆಕರ್ಷಿಸುತ್ತಿರುವ ಕೃಷ್ಣನು ಕಲಾಪ್ರಿಯನಾಗಿದ್ದರೂ ಆತನ ಇಂತಹ ಒಂದು ಚಿತ್ರವು ಈ ಹಿಂದೆ ಪ್ರಕಟವಾಗಿಲ್ಲ ಹಿಂದೆ ಪ್ರಚಾರದಲ್ಲಿರುವ ಕೃಷ್ಣನ ಚಿತ್ರದಲ್ಲಿ ದೇವತ್ವದ ಪ್ರಮಾಣವು ಕಡಿಮೆಯಾಗಿತ್ತು; ಅಲ್ಲದೆ ವಾಸ್ತವಿಕತೆಗಿಂತಲೂ ಸ್ವಲ್ಪ ದೂರವಾಗಿತ್ತೆಂದು ಹೇಳಬಹುದು ದಿನಗಳೆದಂತೆ ಜನತೆಯಲ್ಲಿ, ಭಕ್ತಜನರಲ್ಲಿ ಭಗವದ್ಭಕ್ತಿಯೊಡನೆ ಕಲಾಪ್ರಿಯತೆಯೂ ಹೆಚ್ಚುತ್ತಿರುವುದು ಕಂಡುಬರುತ್ತಿದೆ ಇಂತಹ ಸಮಯದಲ್ಲಿ ಕಲಾಕಾರ ಶ್ರೀ ಬಾಯರಿಯವರು ಅವಿರತ ಶ್ರಮವನ್ನು ನೆಚ್ಚುಗಳನ್ನು ವಹಿಸಿ ಕಲಾರಾಧಕ ಭಕ್ತರ ಕೃತಜ್ಞತೆಗೆ ಪಾತ್ರರಾಗಿದ್ದಾರೆ ಈ ಚಿತ್ರವು ಶ್ರೀಕೃಷ್ಣನ ನಿತ್ಯಾಲಂಕಾರದ ಉಡುಗೆ ತೊಡುಗೆಗಳಿಂದ ಕೂಡಿದ್ದಾಗಿದ್ದು ಆಕರ್ಷಕವಾಗಿ ಅಚ್ಚಾಗಿದೆ ಜನತೆಯಲ್ಲಿಯೇ

(ಮುಂದಿನ ಪುಟ ನೋಡಿರಿ)

ಓದಲೇ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನು ವಿಜ್ಞಾನವನ್ನೂ ಸಮರಸವಾಗಿ ಬೆಳೆಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ ಬರೆದವರು, ಡಾಕ್ಟರ ಜೇಮ್ಸ್ ಬಿ ಕೊನೇಂಟ್ ಅನುವಾದಕ ಯು ಲಕ್ಷ್ಮೀನಾರಾಯಣಾಚಾರ್ಯ ಪುಟ: ೧೪೦ ಬೆಲೆ ರೂ ೧-೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ ಮಾಡಿರದ ಅಪರಾಧಗಳಿಗಾಗಿ ನಿಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಾತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ನಾಯಕನು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಭೀಕರ ಚಿತ್ರಣ ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು ಶಿ, ಹರಿದಾಸ ಭಟ್ಟರು ಪುಟ ೩೦೬ ಬೆಲೆ ರೂ. ೩-೫೦.

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಶ್ರೇಷ್ಠ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು, ಕೆ ಬಿ ರಾಮಕೃಷ್ಣರಾವ ಮತ್ತು ಯು ಲಕ್ಷ್ಮೀನಾರಾಯಣಾಚಾರ್ಯ ಪುಟ ೨೩೦ ಬೆಲೆ ರೂ ೩-೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ವಿಮರ್ಶಿಸುವ ಅಪೂರ್ವ ಗ್ರಂಥ ಅನುವಾದಕ ಕು ಶಿ ಹರಿದಾಸ ಭಟ್ಟ ಪುಟ ೨೦೦ ಬೆಲೆ ರೂ ೨,

ಹಿರೋಶಿಮಾದಿಂದ ಜಿನೇವಾ

ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಬತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಅಧಿಕೃತವಾಗಿ ವರ್ಣಿಸಲಾಗಿದೆ ಬರೆದವರು ಯು ರಾಘವೇಂದ್ರಾಚಾರ್ಯ ಪುಟ ೯೦. ಬೆಲೆ. ರೂ. ೧-೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ ಒಂದು ಸ್ವತಂತ್ರ ರಚನೆ. ಬರೆದವರು ಕು ಶಿ ಹರಿದಾಸ ಭಟ್ಟ ವಿ ಸೀತಾರಾಮಯ್ಯನವರ ಮುನ್ನುಡಿ ಇದೆ ಪುಟ ೧೫೦. ಬೆಲೆ ರೂ. ೨.

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫ್ಯಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸೋಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿ ನಿಂತ ಹೃದಯಂಗಮ ಕಥೆ. ಅನುವಾದಕರು: ಕು ಶಿ ಹರಿದಾಸ ಭಟ್ಟ ಪುಟ: ೨೦೦ ಬೆಲೆ ರೂ ೨.

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು
ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ವಾರದ ಮಹಾನುಭಾವ-

ಕರ್ನೇಲ್ ಗಮಾಲ್ ಅಬ್ದುಲ್ ನಸ್ಸೇರ

ಶ್ರೀ ಎಸ್. ಗೋಪೀಚಂದ ರಾವ್

ಈಜಿಪ್ಟಿನ ರಾಷ್ಟ್ರಾಧ್ಯಕ್ಷರಾಗಿರುವ ಕರ್ನೇಲ್ ಗಮಾಲ್ ಅಬ್ದುಲ್ ನಸ್ಸೇರರು ಇಂದು ಪ್ರಮುಖ ಪಾಶ್ಚಾತ್ಯ ಶಕ್ತಿಗಳಿಗೆ ಶಿರೋವೇದನೆಯನ್ನೊದಗಿಸುವ ವ್ಯಕ್ತಿಯಾಗಿದ್ದಾರೆಂದು ಬೇರೆ ಹೇಳಬೇಕಾಗಿಲ್ಲ. ಅವರು ತಮ್ಮ ಸ್ಪಷ್ಟ ವಚನಗಳಿಂದ ಹಲವಾರು ಬಾರಿ ತಮ್ಮ ರಾಷ್ಟ್ರೀಯ ಹಾಗೂ ವಿದೇಶೀಯ ನೀತಿಯನ್ನು ಜಗತ್ತಿನೆದುರು ಇಟ್ಟು ತಮ್ಮ ತಾಟಸ್ಥ್ಯ ಮತ್ತು ನಿಷ್ಪಕ್ಷ್ಯ ಧೋರಣೆಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ಅಂತಾರಾಷ್ಟ್ರೀಯ ಒಳ ಪಕ್ಷಗಳು ಮತ್ತು ಬ್ರಿಟಿಷ ಸಾಮ್ರಾಜ್ಯವಾದೀ ಸ್ವಾರ್ಥಿಗಳು ತಮ್ಮ ರಾಷ್ಟ್ರವನ್ನು ರಕ್ಷಿಸಿಕೊಳ್ಳಲು ಈಗ ತಮ್ಮ ತಮ್ಮ ಕೈನೀಡಬೇಕಾಗಿ ಅವರು ಜ್ಞಾಪಿಸಿದರು.

ಬಾಡುಂಗ ಸಮ್ಮೇಳನ ಮತ್ತು ಭಾರತ ಯಾತ್ರಾನಂತರ ಅವರು ಪದೇಪದೇ ಪಂಚಶೀಲಗಳ ಸಿದ್ಧಾಂತಗಳಲ್ಲಿ ತಮ್ಮ ವಿಶ್ವಾಸವನ್ನು ಪ್ರಕಟಗೊಳಿಸಿದರು. ಶುದ್ಧವಾದ ಮಾತುಗಳಿಂದ ಈಜಿಪ್ಟ ಅಂತಾರಾಷ್ಟ್ರೀಯ ಒಳಪಕ್ಷಗಳಲ್ಲಿ ಯಾವುದೊಂದರ ಕಡೆಗೂ ಒಲವಿಲ್ಲವೆಂದೂ ಅದನ್ನು ಸ್ವತಂತ್ರತಾ ಪೂರ್ವಕವಾಗಿರಲು ಬಿಟ್ಟಲ್ಲಿ ತಾನು ಯಾವ ದೇಶದೊಡನೆಯೂ ಶಸ್ತ್ರಾಸ್ತ್ರವನ್ನು ಯಾಚಿಸಲು ಮುಂದಡಿಯಿಡಲು ಮನಸ್ಸುಮಾಡುವುದಿಲ್ಲವೆಂದೂ ಹೇಳಿದ್ದಾರೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ವಿಶೇಷವಾಗಿ ಅಮೆರಿಕಾ ಮತ್ತು ಬ್ರಿಟನ್‌ಗಳಿಗೆ ಈಜಿಪ್ಟದ ಈ ನೀತಿಯು ಸಮಂಜಸವಾಗಿ ಕಾಣಲಿಲ್ಲ. ಅವರು ಯಾವುದಾದರೊಂದು ವಿಧಾನದಿಂದ ಅದನ್ನು ಆಹತಗೊಳಿಸಿ, ತಮ್ಮ ಕಪಿಮುಷ್ಟಿಯೊಳಗಡೆ ಇರಿಸಲು ಪ್ರಯತ್ನ ನಡೆಸುತಿದ್ದಾರೆ. ಕರ್ನಲ್ ನಸ್ಸೇರರಲ್ಲಿ ಇದುವರೆಗೂ ಅವರ ಬೇಳೆ ಬೇಯಲಿಲ್ಲ. ಇಸ್ರಾಯೇಲನ್ನು ಆಕ್ರಮಿಸಿ ಬ್ರಿಟನ್ನು ವಿಶ್ವದ ದೃಷ್ಟಿಯಿಂದ ಅಪಮಾನಿತವಾಗಿದೆ. ಇದರಿಂದಾಗಿ ಕರ್ನೆಲ್ ನಸ್ಸೇರರ ಮತ್ತು ಈಜಿಪ್ಟಿನ ಮರ್ಯಾದೆಯು ಹೆಚ್ಚಿತು. ಬ್ರಿಟಿಷ ಆಕ್ರಮಣದಿಂದಾಗಿ ಬಿತ್ತಲ್ಪಟ್ಟ ವಿರೋಧೀ ಬೀಜವು ದಿನದಿನಕ್ಕೂ ವೃದ್ಧಿಯಾಗುತ್ತ ಸಾಮ್ರಾಜ್ಯವಾದವನ್ನು ಹರಡುವ ಬ್ರಿಟಿಷರ ಗುರಿಯು ಸಂಪೂರ್ಣ ನಿಫಲವಾಯಿತು. ಇವೆಲ್ಲವುಗಳ ಪರಿಣಾಮವಾಗಿ ಕರ್ನೆಲ್ ನಸ್ಸೇರರು ಅಗ್ನಿ ಪರೀಕ್ಷೆಯಲ್ಲಿ ಸಿಕ್ಕಿಬಿದ್ದು ಚಿನ್ನದಂತೆ ಅಪ್ಪಟೆಯಾಗಿ ಹೊರ ಬಿದ್ದರು.

ಇಂದಿನ ಅಂತಾರಾಷ್ಟ್ರೀಯ ಪಕ್ಷ ಜಾಲದಿಂದ ತನ್ನ ನೈಪುಣ್ಯ ಮತ್ತು ಬುದ್ಧಿಮತ್ತೆಯ ಶಕ್ತಿಯಿಂದ ತಪ್ಪಿಸಿಕೊಂಡಿದ್ದು ಎಲ್ಲರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಸಿರಿಯಾದೊಡನೆ ಸಂಘಟನೆ ನಡೆಸುವುದೊಂದು ನವೀನ ರಾಜನೈತಿಕ ನಿರ್ಣಯವಾಗಿದೆ. ಈ ನಿರ್ಧಾರದಿಂದ ಪಾಶ್ಚಾತ್ಯ ರಾಷ್ಟ್ರಗಳು ವಿಚಲಿತವಾಗಿ ಹೋಗಿವೆ. ಇಷ್ಟೇ ಅಲ್ಲ, ಇದರ ಪರಿಣಾಮವು ಅಂತಾರಾಷ್ಟ್ರೀಯ ರಾಜನೀತಿಯ ಮೇಲೆ ಗಂಭೀರವಾಗಿ ಬಿದ್ದು ವಿಶ್ವಶಾಂತಿಗಾಗಿ ಒಂದು ನೂತನಾದರ್ಶವನ್ನು ತೋರಿಸುತ್ತದೆ.

ಈಜಿಪ್ಟಿನ ಮಾಜಿ ರಾಷ್ಟ್ರಾಧ್ಯಕ್ಷ ಜನರಲ್ ನಜೀಬರ ಸ್ಥಾನವನ್ನೇರಿದ ನಂತರ ಕರ್ನೇಲ ನಸ್ಸೇರರು ಅದರ ರಾಜ್ಯಸೂತ್ರಗಳನ್ನು ನಡೆಯಿಸಿಕೊಂಡು ಬಂದ ಕ್ರಮವು ಪ್ರಶಂಸನೀಯವೆನಿಸಿದೆ. ಪಶ್ಚಿಮ ಆಸ್ಯಾದ ಅನ್ಯ ರಾಷ್ಟ್ರಗಳಂತೆಯೇ ಇಲ್ಲಿಯೂ ಗೃಹ ಕಲಹ, ಸೈನಿಕ ವಿದ್ರೋಹಗಳ ಆಶಂಕೆಗಳು ಹುಟ್ಟಿಕೊಂಡಿದ್ದುವು. ಸೈನಿಕ ಜೀವನವನ್ನು ನಡೆಸುತ್ತಿದ್ದ ಒಬ್ಬ ಯುವಕ ಸೇನಾಪತಿ ಪ್ರಜಾಪ್ರಭುತ್ವ ಜೀವನದತ್ತ ಒಲಿದಾನೆಂದೂ, ಆತನು ತನ್ನ ರಾಜನೈತಿಕತೆಯ ಮತ್ತು ಕುಶಲ ನೇತೃತ್ವದ ಪರಿಚಯವನ್ನು ಜಗತ್ತಿಗೆ ಮಾಡಿಕೊಟ್ಟಾನು ಎಂದು ಯಾರೂ ನಂಬಿರಲಿಲ್ಲ. ಕರ್ನೇಲ್ ನಸ್ಸೇರರು ತಾನು ರಾಜ್ಯಸೂತ್ರ ಗ್ರಹಣ ಮಾಡಿದಂದಿನಿಂದ ಪ್ರಜಾಪ್ರಭುತ್ವ ವಿಧಾನದಲ್ಲಿ ರಾಷ್ಟ್ರೀಯ ಪ್ರಗತಿಗಾಗಿ ಸುವ್ಯವಸ್ಥಿತ ಕ್ರಮಗಳನ್ನು ಕೈಗೊಂಡರಲ್ಲದೇ ಅಂತಾರಾಷ್ಟ್ರೀಯ ಜಗತ್ತಿನಲ್ಲಿ ವಿಶ್ವದ ತಟಸ್ಥ ಮತ್ತು ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳೊಡನೆ ಕೂಡಿಕೊಂಡಿರುವರು. ತನ್ನ ಧೋರಣೆಗಳಿಂದ ಅವರು ವಿಶ್ವದ ರಾಜಕೀಯ ಕ್ಷೇತ್ರದಲ್ಲಿ ಸಂಪಾದಿಸಿಕೊಂಡ ಮಹತ್ವದ ಸ್ಥಾನವು ಎಲ್ಲ ಪ್ರಧಾನಾಧಿಕಾರಿಗಳಿಗೂ ಪ್ರಾಪ್ತವಾಗಲಾರದು.

ಪಶ್ಚಿಮ ಏಶಿಯಾದ ಅತ್ಯಂತ ಕಿರಿದಾದ ರಾಷ್ಟ್ರ ಸಿರಿಯಾ ಪಾಶ್ಚಾತ್ಯರ ಕೀಟಲೆಯಿಂದ ಇನ್ನೂ ಬದುಕಿರುವುದಾದರೆ, ಅದಕ್ಕೆ ಅಲ್ಲಿನ ಅಧ್ಯಕ್ಷ ಶ್ರೀ ಕುವಾಟ್ಲಿಯವರೇ ಕಾರಣರು. ಇದೀಗ ಸಿರಿಯಾವನ್ನು ಈಜಿಪ್ಟಿನೊಡನೆ ವಿಲೀನಹೊಂದುವ ಮಾತುಕತೆಗಳು ಸಂಪೂರ್ಣಗೊಂಡದ್ದು ಉಭಯ ರಾಷ್ಟ್ರಕರಲ್ಲಿಯೂ ಏಕಮತಾಭಿಪ್ರಾಯವು ಕಾಣಿಸಿಕೊಂಡದ್ದು ಬಂಡವಳಶಾಹಿ ರಾಷ್ಟ್ರಗಳಿಗೆ ತಲೆಶೂಲೆಯಾದರೂ ಲೋಕತಂತ್ರ ಪ್ರಿಯರಿಗೆ ಹೆಮ್ಮೆಯ ಹಾಗೂ ಅನುಕರಣೀಯ ವರ್ತನವಾಗಿದೆ. ಇದೇ ಫೆಬ್ರುವರಿ ಪ್ರಥಮದಿನದಂದು ಈಜಿಪ್ಟ್ ಮತ್ತು ಸಿರಿಯಾಗಳು ಒಂದು ಅರಬ ರಾಷ್ಟ್ರವಾಗಿ ಪರಿಣಮಿಸಿವೆ. ಇದು ಆಧುನಿಕ ಅರಬ ಇತಿಹಾಸದಲ್ಲಿಯೇ ಒಂದು ಮಹತ್ವಪೂರ್ಣ ಪರಿವರ್ತನೆಯಾಗಿದೆ.

ಈ ಸಂಯುಕ್ತ ಅರಬ ರಾಷ್ಟ್ರವಾಗುವಂತೆ ಭಿನ್ನತೆಯನ್ನು ದೂರೀಕರಿಸಿ ಏಕತೆಯನ್ನು ಸ್ಥಾಪಿಸಿ ಜಗತ್ತಿಗೆ ನೂತನ ಮಾರ್ಗದರ್ಶನವನ್ನು ಮಾಡಿದ ಸಿರಿಯಾದ ಅಧ್ಯಕ್ಷ ಶ್ರೀ ಶುಕ್ರಿ ಅಲ್ ಕುವಾಟ್ಲಿಯವರಿಗೂ ಸಂಯುಕ್ತವಾದ ಹೊಸ ರಾಷ್ಟ್ರಾಧ್ಯಕ್ಷರಾಗಿ ಉಳಿದ ಈಜಿಪ್ತದಧ್ಯಕ್ಷ ಶ್ರೀ ಕರ್ನೆಲ್ ನಸ್ಸೇರರಿಗೂ ಶಾಂತಿಪ್ರಿಯ ರಾಷ್ಟ್ರಗಳು ಕೃತಜ್ಞತೆಯನ್ನು ಅರ್ಪಿಸುತ್ತವೆ. ಆದರೆ, ಇವರು ತೋರಿಸಿದ ದಾರಿಯನ್ನು ಉಳಿದವರು ತುಳಿಯುವರೆ ಎಂದು ಮುಂದೆ ನೋಡಬೇಕು.

(ಹಿಂದಿನ ಪುಟದಿಂದ)

ಉಡುಪಿಯ ಅಷ್ಟಮಠಗಳ ಪಟ್ಟದ ದೇವರುಗಳ ಮೂರ್ತಿಚಿತ್ರವೂ ಇರುವುದು. ಈ ಚಿತ್ರವನ್ನು ನಾವು ನೋಡುವಾಗ ನಿಜವಾಗಿಯೂ ಉಡುಪಿ ಕೃಷ್ಣನನ್ನೇ ಕಾಣುತ್ತೇವೆಂದು ಭಾಸವಾಗುತ್ತದೆ. ಗುಡಿಯೊಳಗಿಂದ ಶ್ರೀಕೃಷ್ಣನ ಮೂರ್ತಿ, ಪಟ್ಟದ ದೇವರ ಮೂರ್ತಿ, ಸರಳ ಮಂಟಪ ಮತ್ತು ಕಾಲುದೀಪ ಇವೆಲ್ಲವೂ ವಾಸ್ತವಿಕವಾಗಿಯೂ ಕಲಾಪೂರ್ಣವಾಗಿಯೂ ಆಕರ್ಷಕವಾಗಿಯೂ ಚಿತ್ರಿಸಲ್ಪಟ್ಟಿರುವುದು ಶ್ಲಾಘನೀಯ. ಈಗಾಗಲೇ ಹಲವಾರು ವರ್ಣಚಿತ್ರಗಳನ್ನು ಬರೆದ ಉತ್ತಮ ವರ್ಣಚಿತ್ರ ಕುಶಲಕಲಾ ಪರಿಣತರಾದ ಶ್ರೀ ಬಾಯರಿಯವರ ಈ ಅತ್ಯುತ್ತಮ ವರ್ಣಚಿತ್ರವನ್ನು ಹೃತ್ಪೂರ್ವಕವಾಗಿ ಸ್ವೀಕರಿಸುವುದಲ್ಲದೆ, ಜನತೆ ಅವರ ಈ ಶ್ರಮದ ಸಾರ್ಥಕ್ಯವನ್ನು ಮಾಡಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ.

ಬಿಲ್ಲವರ ಎಸೋಸಿಯೇಶನ್ ರಜತ ಮಹೋತ್ಸವ ಸ್ಮಾರಕ ಪತ್ರಿಕೆ, ೧೯೫೭—ಪ್ರಕಾಶಕರು: ರಜತೋತ್ಸವ ಸಮಿತಿ, ಬಿಲ್ಲವರ ಎಸೋಸಿಯೇಶನ್, ೧೭, ರಘುನಾಥ ದಾದಾಜಿ ರಸ್ತೆ, ಬೊಂಬಾಯಿ ೧.

ಬೊಂಬಾಯಿಗೆ ಕಾರಣಾಂತರದಿಂದ ತೆರಳಿ ಅಲ್ಲಿಯೇ ಸ್ಥಿರವಾಗಿ ನಿಂತ ಬಿಲ್ಲವ ಸಹೋದರರು ಒಂದು ಸಂಘವನ್ನು ಕಟ್ಟಿಕೊಂಡು ತನ್ಮೂಲಕ ತಮ್ಮ ಅಭಿವೃದ್ಧಿಯನ್ನು ಪಡೆದುಕೊಳ್ಳತೊಡಗಿದರು. ಇಂತಹ ಸಂಘದ ರಜತ ಮಹೋತ್ಸವವು ೧೯೫೭ರ ಅಂತ್ಯದಲ್ಲಿ ವಿಜೃಂಭಣೆಯಿಂದ ನೆರವೇರಿತು. ಅದರ ಸ್ಮಾರಕವಾಗಿ ಪ್ರಕಾಶಪಡಿಸಿದ ಈ ಸಂಚಿಕೆಯನ್ನು ನಾವು ಪುನಃ ಪೂರ್ವಕವಾಗಿ ಸ್ವಾಗತಿಸುತ್ತೇವೆ. ಈ ಸಂಚಿಕೆಯಲ್ಲಿ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಸಂಘದ ಸಂಕ್ಷಿಪ್ತ ಚರಿತ್ರೆಯೂ ಇನ್ನಿತರ ಕೆಲವು ಲೇಖನಗಳೂ ಇರುತ್ತವೆ. ಆಜೀವ ಸದಸ್ಯರ ಹಾಗೂ ಹಿತಚಿಂತಕರ ಮತ್ತಿತರ ಕೆಲವು ಚಿತ್ರಗಳಿಂದಲೂ ಕೂಡಿದೆ. ಒಟ್ಟಿನಲ್ಲಿ ಈ ಸಂಚಿಕೆಯ ಒಳಗಡೆ ಇರುವ ಲೇಖನ ಮತ್ತು ಚಿತ್ರಗಳು ಬೊಂಬಯಿಯಲ್ಲಿನ ನಮ್ಮವರ ಚಟುವಟಿಕೆಗಳನ್ನು ತೋರಿಸುತ್ತದೆ. ಮೈಸೂರು ರಾಜ್ಯಪಾಲರು ಹಾಗೂ ನಾರಾಯಣ ಗುರು ಸ್ವಾಮಿಯವರ ಮತ್ತು ಶ್ರೀ ಕಾಂಚನರು ಬಿಡಿಸಿದ ಮುಖ ಚಿತ್ರಗಳು ಉತ್ತಮವಿದೆ. ಬಿಲ್ಲವರ ಎಸೋಸಿಯೇಶನ್ ದಿನೇ ದಿನೇ ಪ್ರವರ್ಧಮಾನವಾಗಿ ಚಿರಕಾಲ ಬೆಳಗಲೆಂದು ಹಾರೈಸುತ್ತೇವೆ.

ಓದಿ ನಗಬಹುದು!

ಮೂವರು ಮೂರ್ಖರು ಆಡಿಕೊಳ್ಳುತ್ತಿದ್ದರು.

ಮೊದಲನೆಯವ—ನೋಡಿ, ಒಂದು ವೇಳೆ ಆಕಾಶವು ಕಳಚಿ ಬಿದ್ದರೆ, ನಾವೇನು ಮಾಡಬಹುದು?

ಎರಡನೆಯವ—ಆಕಾಶವು ಭೂಮಿಗೆ ಬೀಳುವುದೇ ಇಲ್ಲ. ಆದರೂ ಈ ಪೃಥ್ವಿಯೇ ಮೇಲ್ಗಡೆಗೆ ಹಾರಿ ಹೋಗುವುದು.

ಮೂರನೆಯವ—ಆಕಾಶವು ಕೆಳಬರುವುದಿಲ್ಲ; ಭೂಮಿ ಮೇಲೆ ಹೋಗುವುದೂ ಇಲ್ಲ. ನಾವೇ ಆಕಾಶವೆತ್ತರಕ್ಕೆ ಹಾರಿ ಹೋಗಬಹುದು!

೦೦ ೦೦

ತಂದೆ—ಮಗು, ನಿನ್ನ ತರಗತಿಯಲ್ಲಿ ಎಲ್ಲರಿಗಿಂತ ಬಹಳ ದೊಡ್ಡನಾರು?

ಮಗ—ದೊಡ್ಡನೆಂದರೆ?

ತಂದೆ—ಎಲ್ಲ ಹುಡುಗರೂ ಓದುತ್ತಿರುವಾಗ, ಲೆಕ್ಕ ಮಾಡುತ್ತಿರುವಾಗ ಯಾರು ಸುಮ್ಮನೆ ಕೂತು ಮುಖ ಮುಖ ನೋಡುತ್ತಿರುತ್ತಾರೆ?

ಮಗ—ಅಪ್ಪಾ,....ಉಪಾಧ್ಯಾಯರ!

(೧ನೇ ಪುಟದಿಂದ)

ಪುಟ್ಟಪ್ಪನವರ 'ಶ್ರೀ ರಾಮಾಯಣ ದರ್ಶನಂ' ಮತ್ತು ಶ್ರೀ ರಂ. ಶ್ರೀ ಮುಗುಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಗಳಿಗೆ ಬಹುಮಾನವನ್ನು ನೀಡಿತ್ತೆಂಬುದನ್ನು ಮರೆಯಬಾರದು. ಅಲ್ಲದೇ ಕನ್ನಡದಿಂದ ಉಳಿದ ಭಾರತೀಯ ಭಾಷೆಗಳಿಗೆ ಅನುವಾದಮಾಡುವ ಕಾರ್ಯದಲ್ಲಿ ದಿವಂಗತ ಬಿ. ಎಂ. ಶ್ರೀ ಕಂಠಯ್ಯನವರ 'ಗದಾಯುದ್ಧ'; ಶ್ರೀ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ', ಶ್ರೀ ಮಾಸ್ತಿ. ವೆಂಕಟೇಶ ಅಯ್ಯಂಗಾರರ 'ಚಿನ್ನಬಸವ ನಾಯಕ' ಮತ್ತು ಶ್ರೀ ಕೆ. ವಿ. ಅಯ್ಯರರ 'ಶಾಂತಲಾ' ಎಂಬ ನಾಲ್ಕು ಕೃತಿಗಳನ್ನು ಆರಿಸಲಾಗಿದೆ.

ಈ ರೀತಿ ಹತ್ತು ಹಲವು ಯೋಜನೆಗಳನ್ನಿಟ್ಟುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ಮಾಡುತ್ತಿರುವ ಮಹಾ ಕ್ರಾಂತಿಯು ಉತ್ತರೋತ್ತರಾಭಿವೃದ್ಧಿಯಾಗಲೆಂದು ಹಾರೈಸುವುದು ಸಾಹಿತ್ಯ ಪ್ರೇಮಿಗಳೆಲ್ಲರ ಕರ್ತವ್ಯ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

13—2—1958

ಸಂಚಿಕೆ ೨೩
NO. 23

ಅಂತಾರಾಷ್ಟ್ರೀಯ ರಾಜಕಾರಣ—

ಸಿರಿಯಾ--ಈಜಿಪ್ಟ್ ಏಕೀಕರಣ

ಶ್ರೀ. ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ.

ಸಿರಿಯಾ ಮತ್ತು ಈಜಿಪ್ಟಗಳ ಏಕೀಕರಣದ ಮಾತು ಕಳೆದ ಒಂದು ವರ್ಷದಿಂದ ಕೇಳಬರುತಿತ್ತು. ಸಿರಿಯಾದ ರಾಷ್ಟ್ರಪತಿ ಶ್ರೀ ಕುವಾಟ್ಲಿಯವರು ಒಮ್ಮೆ ತಮ್ಮ ಸಂಸತ್ತಿನಲ್ಲಿ ಮಾತಾಡುತ್ತ "ಸಿರಿಯಾ ಮತ್ತು ಈಜಿಪ್ಟಗಳ ಏಕೀಕರಣದ ಚರ್ಚೆ ನಡೆಯುತ್ತಾ ಇದೆ. ಕೆಲವೇ ಸಮಯದಲ್ಲಿ ಈ ಏಕೀಕರಣವಾಗುವ ನಂಬುಗೆ ಇದೆ' ಎಂದು ಹೇಳಿದ್ದರು.

ಅರಬ ದೇಶಗಳ ಕೃತಕ ಏಕೀಕರಣವು ಒಟ್ಟೊಮನ ಸಾಮ್ರಾಜ್ಯದ ಸಮಯದಲ್ಲಿ ಆಗಿತ್ತು. ಆದರೆ ಆ ಏಕೀಕರಣದಲ್ಲಿ ಸಾಮ್ರಾಜ್ಯವಾದಿ ಮತ್ತು ಶೋಷಣಾ ಪ್ರವೃತ್ತಿಗಳು ಮಾತ್ರವಲ್ಲದೆ ಆಳುವವರು, ಆಳಿಸಿಕೊಳ್ಳುವವರು ಎಂಬ ಭಾವನೆಯು ಇತ್ತು. ಈಜಿಪ್ಟಿನಲ್ಲಿ ೧೮—೧೯—ರಲ್ಲಿ ಬ್ರಿಟನ್ನು ಆಡಳಿತೆ ವಹಿಸಿತು. ಅದಕ್ಕೆ ಮೊದಲೇ ಅಂತಃ ಕಲಹಗಳಿಂದಾ ಬಾಧಪಡೆದು ಕೆಲವು ವರ್ಷ ಪೂರ್ವದಲ್ಲಿಯೇ ಬ್ರಿಟನ್ನು ನೈಲ್ ನದೀ ಮುಖಜ ಭೂಮಿಯಲ್ಲಿ ಅಧಿಕಾರವಹಿಸಿತ್ತು. ರಾಜಕೀಯ ಪರಿಸ್ಥಿತಿಗಳಿಂದಾಗಿ ೧೯೩೬ರ ಏಪ್ರಿಲ್ ತಿಂಗಳಲ್ಲಿ ಫರೂಕರನ್ನು ಸಿಂಹಾಸನದಲ್ಲಿ ಕೂರಿಸಿ ಈಜಿಪ್ಟವನ್ನು ಬ್ರಿಟನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿತು. ಎರಡನೆ ಮಹಾಯುದ್ಧದ ಕಾಲದಲ್ಲಿ ಬ್ರಿಟಿಷ ಸೇನೆಗಳು ಈಜಿಪ್ಟಿನ ಭೂಮಿಯನ್ನು ಮರ್ದಿಸಿದರು. ಇದರ ವರ್ಣನೆಯನ್ನು ಜನರಲ್ ನಜೀಬರು ಮಾಡುತ್ತ "ನಾವು ಬ್ರಿಟನಿಂದ ಅಪಾರ ಅಪಮಾನವನ್ನು ಸಹಿಸಿದೆವು. ಅವರು ನಮ್ಮ ರಾಷ್ಟ್ರೀಯ ದೃಷ್ಟಿಕೋಣವು, ಅವರಿಗಿಂತ ಹಿರಿಯದಾಗಿದೆ ಎಂದು ತಿಳಿಯಲಿಲ್ಲ, ಮತ್ತು ಎಂದಾದರೂ ಅವು ಒಂದಾಗಲಾರೆವೆಂದವರಿಗೆ ಹೊಳೆಯಲಿಲ್ಲ" ಎಂದು ಬರೆದಿರುವರು. ಎರಡನೆಯ ಮಹಾಯುದ್ಧ ಕಾಲದಲ್ಲಿ ಈಜಿಪ್ಟದ ವಾಫಿದಸ್ಟ್ ಪಕ್ಷವು ಬಹಳ ಲೋಕಪ್ರಿಯವಾಯಿತು. ಜನರಲ್ ನಜೀಬರ ಅಭಿಪ್ರಾಯದಂತೆ ಮೊದಲನೆಯ ಮತ್ತು ಎರಡನೆಯ ಮಹಾ ಲೋಕ ಯುದ್ಧಗಳ ನಡುವಣ ಸಮಯದಲ್ಲಿ ಪೀಡಿತಮರ್ದಿತ ಅರಬರ ರಾಷ್ಟ್ರೀಯತೆಯು ಪ್ರಾರಂಭವಾಗುತ್ತದೆ.

ಮಹಮ್ಮದ ನಜೀಬರು ೧೮-೬-೫೩ರಂದು ತಮ್ಮನ್ನು ರಾಷ್ಟ್ರಪತಿ ಮತ್ತು ಪ್ರಧಾನ ಮಂತ್ರಿ ಹಾಗೂ ಮಿಲಿಟರಿ ಗವರ್ನರ್ ಎಂಬುದಾಗಿ ಘೋಷಿಸಿಕೊಂಡರು. ಇದರಿಂದಾಗಿ ಈಜಿಪ್ಟಿನ ರಾಜಪರಂಪರೆಯನ್ನು ಅಂತ್ಯಗೊಳಿಸಿದರು. ೧೮-೪-೫೪ರಂದು ಜನರಲ್ ನಜೀಬರು ತಮ್ಮ ಸಮರ್ಥಕರ ಒತ್ತಾಯದಿಂದಾಗಿ ತನ್ನ ಪ್ರಧಾನ ಮಂತ್ರಿ ಮತ್ತು ಮಿಲಿಟರಿ ಗವರ್ನರರ ಹುದ್ದೆಗಳಿಗೆ ತ್ಯಾಗಪತ್ರವಿತ್ತರು. ನವಂಬರ ೧೪ರಂದು ಜನರಲ್ ನಜೀಬರು ರಾಷ್ಟ್ರಪತಿ ಸ್ಥಾನವನ್ನೂ ಕಳೆದುಕೊಳ್ಳಬೇಕಾಯಿತು. ೫೬ರ ಜೂನ್ ೨೪ರಂದು ಕರ್ನಲ್ ನಸ್ಸೇರರು ರಾಷ್ಟ್ರಪತಿಗಳಾಗಿ ಆಯ್ಕೆಗೊಂಡರು. ೧೬—೧ ೫೬ರಂದು ಸಂವಿಧಾನವು ಪ್ರಕಟಿತವಾಯಿತು. ಇದರಲ್ಲಿ ಈಜಿಪ್ಟವನ್ನು ಅರಬ ರಾಷ್ಟ್ರವೆಂದು ಮನ್ನಿಸಲಾಗಿತ್ತು. ಇಸ್ಲಾಮನ್ನು ರಾಷ್ಟ್ರಧರ್ಮವೆಂದೂ ಅರಬಿಯನ್ನು ರಾಷ್ಟ್ರಭಾಷೆ ಎಂದೂ ಒಪ್ಪಿಕೊಳ್ಳಲಾಗಿತ್ತು. ೧೯೫೬ರ ಮಧ್ಯಾವಧಿಯಲ್ಲಿ ಸುಯೇಜ ಕಾಲುವೆಯನ್ನ ರಾಷ್ಟ್ರೀಕರಣ ಮಾಡಲಾಯಿತು. ಫಲಸ್ವರೂಪವಾಗಿ ಯುದ್ಧ ನಡೆಯಿತು, ರಾಷ್ಟ್ರಸಂಘವು ನಡುವೆ ಬರಬೇಕಾಯಿತು ಮತ್ತು ಯುದ್ಧಸ್ತಗನದ ಘೋಷಣೆ ನಡೆಯಿತ. ಆದರೆ ನಂತರ ಸಣ್ಣ ದೊಡ್ಡ ಜಗಳಗಳು ನಡೆಯುತ್ತ ಬಂದಿದ್ದು ಅವು ಇಂದಿಗೂ ಮುಂದುವರಿಯುತ್ತಿವೆ.

ಸಿರಿಯಾವು ಪ್ರಥಮ ಮಹಾಯುದ್ಧಾನಂತರ ಫ್ರಾನ್ಸಿನ ಪ್ರಭಾವಕ್ಷೇತ್ರದಲ್ಲಿ ಉಳಿಯಿತು. ಪ್ರಥಮ ಯುದ್ಧದಂತ್ಯದಿಂದ ಹಿಡಿದು ದ್ವಿತೀಯ ಮಹಾಯುದ್ಧದವರೆಗೆ ರಾಷ್ಟ್ರೀಯತೆಯ ಅಲೆಗಳು ಏಳತೊಡಗಿದುವು. ಫ್ರಾನ್ಸು ತನ್ನ ಸ್ವಾರ್ಥಾಭಿಲಾಷೆಯಿಂದ ಸಿರಿಯಾದ ಜನತೆಯನ್ನು ದಮನಿಸಿತು. ೧೯೪೬ರ ಜನವರಿ ೧ರಂದು ಫ್ರಾನ್ಸು ರಾಜಾಧಿಕಾರವನ್ನು ಒಪ್ಪಿಸಿತು. ೪೯ರಲ್ಲಿ ಮೂರು ಬಾರಿ ದೇಶವ್ಯಾಪೀ ಕಲಹವಾದನಂತರ ನವಂಬರ ೪೯ರಲ್ಲಿ ವಿಧಾನ ಪರಿಷತ್ತಿನ ಚುನಾವಣೆ ನಡೆಯಿತು. ಆದರೆ, ಈ ಸಂಸತ್ತು ವಿಸರ್ಜಿಸಲ್ಪಟ್ಟಿತು. ಜುಲಾಯಿ ೫೩ರಲ್ಲಿ ಜನರಲ್ ಶಿಶಕ್ಲೀಯವರು ರಾಷ್ಟ್ರಪತಿಗಳಾದರು. ಆ ಮೇಲೆ ಒಂದು ನೂತನ ವಿಧಾನಕ್ಕನುಸಾರವಾಗಿ ಆಡಳಿತ ವ್ಯವಸ್ಥೆಯು ಛಿನ್ನವಾಯಿತ. ಮುಂದೆ ೧೯೫೪ರ ಫೆಬ್ರವರಿಯಲ್ಲಿ ಪುನ ಮಾಜಿ ರಾಷ್ಟ್ರಪತಿಯವರು ಆಡಳಿತೆಯನ್ನು ವಹಿಸಿದರು, ಆಗ ಪುನ ಹಳೆಯ ಪದ್ಧತಿಯೇ ಮೊದಲಾಯಿತು. ಹೀಗಿದ್ದರೂ ಚುನಾವಣೆಯ ಫಲವಾಗಿ ಯಾವುದೇ ಪಕ್ಷಕ್ಕೆ ಸಂಪೂರ್ಣ ಬಹುಮತ ದೊರೆಯಲಿಲ್ಲ. ಸೈಯುದ್ ಸುಕರೀ ಕುವಾಟ್ಲಿಯವರು ೧೯೫೫ ಆಗಸ್ಟ್ ೧೮ರಂದು ರಾಷ್ಟ್ರಪತಿಗಳಾಗಿ ಆಯ್ಕೆಗೊಂಡಿದ್ದರು.

ಈ ನಡುವೆ ಸಿರಿಯಾವನ್ನು ಆಕ್ರಮಿಸಿ ಹಲವಾರು ಉತ್ಪಾತಗಳಾದುವು. ಅಮೆರಿಕೆಯ ನೀತಿಯು ಅರಬ ರಾಷ್ಟ್ರೀಯತೆಯನ್ನು ಆಗಾಗ ಉತ್ತೇಜಿಸ ತೊಡಗಿತು. ಸಿರಿಯಾದೊಡನೆ ಇಟಲಿಯ ವ್ಯಾಪಾರಿಕ ಸಂಬಂಧಗಳನ್ನು ಕಡಿಯಲು ಅಮೆರಿಕೆಯು ಆಹಾರ ಧಾನ್ಯಗಳನ್ನು ಅಲ್ಲಿಗೆ ಕಳಿಸಿತು. ಈ ಸಂದರ್ಭದಲ್ಲಿ ಒಂದು ದೊಡ್ಡ ಯುದ್ಧವೇ ಸಂಭವನೀಯವಿತ್ತು. ರಶ್ಯವು ಈ ಸಮಯದಲ್ಲಿ ಎಚ್ಚರಿಕೆಯನ್ನಿತ್ತುದರಿಂದ ಅದು ನಿಂತಿತು. ಅಮೆರಿಕೆಯು ಆರ್ಥಿಕ ದೃಷ್ಟಿಯಿಂದ ಸಿರಿಯಾವನ್ನು ಬಗ್ಗಬಡೆಯಲು ಹವಣಿಸಿತು. ಏಕೆಂದರೆ, ಅದು ಬಗದಾದ ಒಪ್ಪಂದ ಮತ್ತು ಐಸನ್ ಹಾವರ ನೀತಿಗಳಿಗೆ ತಲೆ ತಗ್ಗಿಸಿರಲಿಲ್ಲ.

ಹೀಗೆ ಈಜಿಪ್ಟ ಮತ್ತು ಸಿರಿಯಾಗಳು ರಾಷ್ಟ್ರೀಯ ಭಾವನೆಯ ದೃಷ್ಟಿಯಿಂದ ಅಮೆರಿಕಾ ನೀತಿಯನ್ನು ವಿರೋಧಿಸುತ್ತಿದ್ದವು. ಅಮೆರಿಕೆಯು ಇವನ್ನು ತಮ್ಮ ಪ್ರಭಾವಕ್ಕೆ ತರಲು ಆರ್ಥಿಕ ಸಹಾಯವನ್ನು ಕೊಡಮಾಡಿದಾಗ, ಈ ರಾಷ್ಟ್ರಗಳು ಅದನ್ನು ನಿರಾಕರಿಸಿದುವು. ಇದರಿಂದಾಗಿ ಇವೆರಡೂ ಅಮೆರಿಕೆಯ ಹಗೆಯನ್ನ ತಡೆದುಕೊಳ್ಳಬೇಕಾಯಿತು.

ಸಿರಿಯಾ ಮತ್ತು ಈಜಿಪ್ಟದ ಒಟ್ಟು ಜನಸಂಖ್ಯೆ ಸಾಮಾನ್ಯ ಮೂರು ಕೋಟಿಗಳು. ಯಮನ್ ಸಹ ಈ ರಾಷ್ಟ್ರಗಳೊಡನೆ ಸೇರಿಕೊಳ್ಳುವ ಮಾತು ಬಂದಿದೆ. ಅನ್ಯ ಅರಬ ರಾಷ್ಟ್ರಗಳೂ ತಮ್ಮ ಏಕೀಕರಣವನ್ನು ಸಾಧಿಸಬಯಸುತ್ತಿವೆ.

ಈಜಿಪ್ಟ ಮತ್ತು ಸಿರಿಯಾ ಎರಡೂ ಮುಸ್ಲಿಮ್ ಪ್ರಧಾನ ದೇಶವಾಗಿವೆ. ಇಲ್ಲಿಯ ಜನಸಂಖ್ಯೆಯಲ್ಲಿ ಸೇಕಡಾ ೯೦ಕ್ಕೂ ಹೆಚ್ಚಿನವರು ಮುಸ್ಲಿಮರು. ಎರಡೂ ರಾಷ್ಟ್ರಗಳ ಧ್ವಜಗಳು ಮೂರು ನಕ್ಷತ್ರಗಳ ವ್ಯಾಜದಿಂದ ಒಂದನ್ನೊಂದು ಹೋಲುತ್ತವೆ. ಸಿರಿಯಾದಲ್ಲಿ ಆಹಾರಧಾನ್ಯ ಹೇರಳವಿವೆ, ಈಜಿಪ್ಟಿನಲ್ಲಿ ಇವಲ್ಲದೆ ಎಣ್ಣೆಯ ಉದ್ಯೋಗವಿದೆ. ಉಪಯೋಗಕ್ಕೆ ಬರುವ ಬೇರೆ ವಸ್ತುಗಳಿಗಾಗಿ ವಿಶೇಷ ರೂಪದಿಂದ ನಿರ್ಯಾತದ ಮೇಲೆ ಸಂಪೂರ್ಣ ತಡೆ ಹಾಕುವುದೂ ಸಾಧ್ಯವಿದೆ. ಸಿರಿಯಾದ ಆರ್ಥಿಕ ಪರಿಸ್ಥಿತಿಯು, ಈಜಿಪ್ಟಿನ ಸಮಸ್ಯೆಯನ್ನು ಬಿಡಿಸು ಪಶ್ಚಿಮದ ರಾಷ್ಟ್ರಗಳೊಡನೆ ಕರೆತರ ವ್ಯವಹಾರಗಳನ್ನು ಮಾಡಿದುದರಿಂದ ಕಳೆದ ವರ್ಷ ಕೆಟ್ಟಿತ್ತು. ಹಾಗೆಯೇ ಈಜಿಪ್ಟ ಮತ್ತು ಸಿರಿಯಾಗಳು ಯಾವಾಗಲೂ ತಮ್ಮ ನೀತಿಗಳಲ್ಲಿ ನಿರಪೇಕ್ಷವಾಗಿದ್ದವು. ಇದರಿಂದಾಗಿ ಪಶ್ಚಿಮದ ಪಂಗಡಗಳ ಬಗಲಿಗೆ ಬೀಳಲೇ ಇಲ್ಲ

(೧೩ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK, LTD.

H. O. MANGALORE. Estd 1931.

BRANCHES

Bombay, Bangalore, Mysore, Mercara, Kanhangad
Kasaragod and throughout the District of
South Kanara.

ವಾರದ ಸಣ್ಣ ಕಥೆ—

ಕಂಡೆಕ್ಟರನ ಖಿಲಾಡಿತನ

ಶ್ರೀ "ನವಗಿರಿನಂದ"

ಗೋಪಾಲ ಹೇಳುವುದು

ನಾನು ಮದರಾಸಿಗೆ ಬಂದು ಹತ್ತು ಹನ್ನೆರಡು ದಿವಸಗಳಾಗಿದ್ದುವಷ್ಟೇ. ಇನ್ನೂ ಮದರಾಸು ಪಟ್ಟಣದ ಪೂರ್ಣ ಪರಿಚಯಮಾಡಿಕೊಂಡಿರಲಿಲ್ಲ. ನಾನು ಕೆಲಸಕ್ಕೆ ಸೇರಿದ ಆಫೀಸು ತಂಬುಚೆಟ್ಟಿ ಬೀದಿಯಲ್ಲಿತ್ತು. ಆಫೀಸಿನ ಸಮೀಪದಲ್ಲಿದ್ದೊಂದು ಹೋಟೆಲ್ಲಿನಲ್ಲಿ ತಂಗಿದ್ದೆ. ಹೌದು, ಆಗಿನ್ನೂ ಮದುವೆಯಾಗದ ಒಂಟಿ ಬ್ರಹ್ಮನಾನು.

ನಮ್ಮವರಾರೂ ಮದರಾಸಿನಲ್ಲಿಲ್ಲವೆ ಇರಲಿಲ್ಲ. ನನ್ನ ದೂರದ ಸಂಬಂಧಿಕರೊಬ್ಬರು ಪರಶುವಾಕಂ ಎಂಬಲ್ಲಿ ಬಹಳ ವರ್ಷದಿಂದ ಇದ್ದಾರಂತೆ. ಅವರ ವಿಳಾಸವನ್ನು ನನ್ನ ಡೈರಿಯಲ್ಲಿ ಗುರುತಮಾಡಿಕೊಂಡಿದ್ದೆನಾದರೂ, ವಸತಿ ಭದ್ರಮಾಡಿಕೊಳ್ಳದೆ ಅವರನ್ನು ನೋಡಲು ನನಗಿಷ್ಟವಿರಲಿಲ್ಲ. ಇಲ್ಲೇ ಇರೆಂದು ಅವರು ಒತ್ತಾಯಿಸುವುದು, ನಾನು ಬೇಡವೆನ್ನುವುದು. ಕಡೆಗೆ ದಾಕ್ಷಿಣ್ಯಕ್ಕೆ ಬೀಳುವುದು ಇದೆಲ್ಲಾ ವನಗೆ ಸೇರದು. ಹುಂ, ನಾನು ಯಾರ ಹಂಗಿಗೂ ಒಳಗಾಗದವನೆಂದೇ ಅನ್ನಿ.

ನಾನು ಮದರಾಸಿಗೆ ಹೊರಡುವಾಗ, ನನ್ನ ತಾಯಿ ಅವರಿಗೊಂದು ಕಾಗದ ಕೂಡ ಬರೆದಿದ್ದಾಳೆ. ಅಲ್ಲಿಗೆ ಹೋಗಿ ಅವರನ್ನೊಮ್ಮೆ ನೋಡುವಂತೆ ನನಗೂ ಹೇಳಿದ್ದಾಳೆ. ನಾನೇ ಭೇಟಿಮಾಡಿಕೊಂಡು ಹೋದರಾಯಿತೆಂದಿದ್ದು ಬಿಟ್ಟೆ. ಮೊನ್ನೆ ತಾಯಿಯ ಕಾಗದ ನನಗೆ ಬಂದಿತ್ತು. 'ಪರಶುವಾಕಂ ದಲ್ಲಿರುವ ಪಾರ್ವತಮ್ಮ ಚೆನ್ನಾಗಿದ್ದಾರೆಯೆ? ಅವರ ಮಗ ವೆಂಕಟ್ರಾಮನಿಗೆ ಎಲ್ಲಿಯಂತೆ ಕೆಲಸ?...' ಮುಂತಾಗಿ ಕೆಲವು ಪ್ರಶ್ನೆ ನನಗೆ ಕೇಳಿದ್ದಳು. ಸರಿ, ನೋಡಿಯೇ ಬರೋಣವೆಂದು ಮರು ಆದಿತ್ಯವಾರ ಪರಶುವಾಕಂ ಬಸ್ಸು ಹತ್ತಿದೆ. ಬಸ್ಸಿಗೆ ತುಂಬಾ ಹೊತ್ತು ಕಾಯಬೇಕಾಯಿತು.

ಕಂಡೆಕ್ಟರ ಟಿಕೆಟ್ಟಿಗಾಗಿ ನನ್ನ ಮುಂದೆ ಬೆರಳಾಡಿಸಿದ. ನಾನು ನಾಲ್ಕಾಣೆ ಅವನ ಕೈಗೆ ಹಾಕಿ 'ರಾಕ್ಸೀ' ಎಂದೆ. ಆತ ೧೩ ನಯಾಪೈಸಾ ಟಿಕೆಟ್ ಹರಿದುಕೊಟ್ಟು, ತನ್ನ ಮಹಾ ಮನೀ ಪರ್ಸನ್ನು ಗಲಗಲ ತೊಳಸಾಡಿಸಿ ಎರಡೆರಡರದು ಎಂಟು ನಯಾಪೈಸಾ ನನಗೆ ಕೊಟ್ಟು, ಇನ್ನೊಂದು ನಯಾಪೈಸಾ ಮತ್ತೆ ಕೊಡುತ್ತೇನೆಂದ. ಹೇಳಿ ಆಚೆಗೆ ಹೋದ. ಮತ್ತೆ ಕೆಲವರಿಗೂ ಆತ ಟಿಕೆಟ್ ಕೊಡುತಾ, "ನಯಾಪೈಸಾ ಕೊಡುತ್ತೇನೆ ಮತ್ತೆ" ಎಂದು ಮುಂದುವರಿಸಿಕೊಂಡೇ ಹೋದುದನ್ನೂ ನಾನೂ ನೋಡಿದೆ.

ಬಸ್ಸು ಹೋಗುತ್ತಾ ಇತ್ತು. ಕೆಲವರು ಕಂಡಕ್ಟರೊಡನೆ ತಮ್ಮ ಬಾಕಿ ಪೈಸಾ ಕೇಳಿ ತೆಗೆದುಕೊಂಡೇ ಇಳಿದರು. ಮತ್ತೆ ಕೆಲವರು ಅದರ ಗೊಡವೆಯೇ ಬಿಟ್ಟು ಇಳಿದುದನ್ನೂ ನೋಡಿದೆ. ನನಗಾದರೋ ಬಿಡಲು ಇಷ್ಟವಿಲ್ಲ; ಕೇಳಲು ಬಾಯಿಯಿಲ್ಲ. ನಿಜಕ್ಕೂ ದುಡ್ಡಿನ ವಿಷಯದಲ್ಲಿ ನಾನು ಬಹಳ ಲೆಕ್ಕಗಾರ. ಚಿಕ್ಕ ಕಾಸಾದರೂ ಅಲಕ್ಷ್ಯವಾಗಿ ಕಾಣುವವನಲ್ಲ; ಹಾಗೆ ಕಾಣುವುದೂ ಸರಿಯಲ್ಲ ನೋಡಿ. ಹಾಗಂತ ಅಷ್ಟು ಜನರಿದಿರಿನಲ್ಲಿ, ಸೂಟು ಬೂಟು ಹಾಕಿಕೊಂಡು ದೊಡ್ಡ ಮನುಷ್ಯನ ಹಾಗಿದ್ದ ನಾನು ಕಂಡೆಕ್ಟರನನು ಕರೆದು ಒಂದು ನಯಾ ಪೈಸಾ ಕೇಳುವುದು ಹೇಗೆ? ನಾಚಿಗೆ! ಅವನು ಸಮೀಪವೇ ಇದ್ದರೆ ಕೇಳಬಹುದಿತ್ತು. ಗ್ರಹಚಾರಕ್ಕೆ ನಾನು ಕುಳಿತದ್ದು ಮುಂದಿನ ಸೀಟು. ಹುಂ, ಅವನಾಗಿ ಕೊಟ್ಟರೆ ಉಂಟು, ಇಲ್ಲದಿದ್ದರಿಲ್ಲ, ಎಂದುಕೊಂಡು ನಾನು ಅದರ ಚಿಂತೆಯೇ ಬಿಟ್ಟೆ.

ಬಸ್ಸು ರಾಕ್ಸೀ ಹತ್ತಿರ ನಿಂತಿತು. ಹತ್ತುವವರು ಬಹಳ ಮಂದಿ ಇದ್ದರು. ಕಂಡೆಕ್ಟರ್ ಬಸ್ಸಿನಿಂದ ಕೆಳಗಿಳಿದು ಮುಂದಿನ ಸೀಟಿನ ಕಡೆಗೆ ಬಂದ. ಆಗ ನಾನು ಇಳಿವಾಗಿತ್ತು. ನನ್ನ ಹಿಂದಿನಿಂದಲೇ ಇಳಿದ ತರುಣಿಯೊಬ್ಬಳು, ಅಲ್ಲಿಗೇ ಬಂದು ಬಸ್ಸು ಹತ್ತುತಿದ್ದ ಕಂಡೆಕ್ಟರನ್ನು ಕುರಿತು "ನನಗೊಂದು ನಯಾ ಪೈಸಾ ಬಾಕಿ ಕಂಡೆಕ್ಟರ್" ಅಂದಳು. ಕೂಡಲೇ ಕಂಡೆಕ್ಟರ ತನ್ನ ಮಹಾ ಮನೀಪರ್ಸನ್ನು ತೊಳಸಿದ. ಆಗ ಚಟಕ್ಕನೆ ನನಗೂ ಧೈರ್ಯಬಂದು— "ನನಗೂ ಒಂದು ಪೈಸಾ ಬಾಕಿ" ಎಂದೆ.

"ಓ ಹೌದು" ಎಂದು ಕಂಡೆಕ್ಟರ್ ಎರಡು ನಯಾ ಪೈಸೇ ಚಿಕ್ಕ ನಾಣ್ಯವೊಂದನ್ನು ಮುಂದೆ ನಿಂತಿದ್ದ ಆ ಹುಡುಗಿಯ ಕೈಗೆ ಹಾಕಿ, "ಒಂದು ನಯಾ ಪೈಸ ಅವರಿಗೆ ಕೊಟ್ಟುಬಿಡಿ ಅಮ್ಮಾ" ಎಂದು ಹೇಳಿ ಬಿಗಿಲು ಹಾಕಿದ. ಬಸ್ಸು ಬುರ್ರನೆ ಮುಂದೆ ಹೊರಟಿತು.

ಅವಳು ಆ ಎರಡು ನಯಾ ಪೈಸೆಯನ್ನು ಹಿಡಿದುಕೊಂಡು ಓಡುವ ಬಸ್ಸನ್ನು ದುರುದುರು ನೋಡಿದಳು. ಅನಂತರ ನನ್ನನ್ನು ನೋಡಿದಳು.

ಮತ್ತೆ ಅವಳು ತನ್ನ ಬಣ್ಣದ ಮನೀ ಪರ್ಸನ್ನು ತೆಗೆದು ನೋಡಿದಳು. ನಾನು ಈ ಎಲ್ಲಾ ಚೆಂದಗಳನ್ನು ನೋಡುತ್ತ ನಿಂತೆ. ನನಗೆ ತಿಳಿಯದಂತೆಯೇ ಏನೋ ಒಂದು ಬಗೆಯ ಸ್ವಾರಸ್ಯ ಒಸರಲಾರಂಭಿಸಿತ್ತು.

ಮದರಾಸಿಗೆ ಬಂದು ಇಷ್ಟು ದಿನಗಳಲ್ಲಿ ನಾನು ಅನೇಕ ತರುಣಿಯರನ್ನು ಕಂಡಿದ್ದೇನೆ. ಇವಳಿಗಿಂತಲೂ ಉಜ್ವಲ, ಥಳಥಳಾಯ ಮಾನಿನಿಯನ್ನು ಕಂಡು ಬೆರಗಾಗಿದ್ದೇನೆ. ಆ ಕೂಡಲೇ ಮರೆತೂ ಬಿಟ್ಟಿದ್ದೇನೆ. ಮದರಾಸಿನಲ್ಲಿ ಸ್ತ್ರೀಯೊಬ್ಬಳನ್ನು ಕಾರ್ಯಾರ್ಥವಾಗಿ ನೋಡುವ ಸಂದರ್ಭ, ಮಾತಾಡುವ ಸಂದರ್ಭ ಇದೇ ಮೊದಲನೇದಾಗಿತ್ತು.

ಇವಳೋ ತರುಣಿ, ನಾಗರಿಕತೆಯ ಅಚ್ಚುಕಟ್ಟಿನಿಂದ ಕೂಡಿದವಳು. ಅರಳು ಮೊಗ; ಸರಳ ರೂಪ. ಅದೇ ಒಬ್ಬ ಗಂಡಾಗಿರುತ್ತಿದ್ದರೆ ಆ ನಯಾ ಪೈಸಾದ ಗೊಡವೇನೇ ಬಿಟ್ಟು ಸೀದಾ ಹೋಗಿಬಿಡುತ್ತಿದ್ದೆ. ಈಗ ನಯಾ ಪೈಸಾ ಬೇಡೆಂಬುದನ್ನು ಒಂದೇ ಮಾತಿನಿಂದ ಹೇಳದೆ, ಏನಾದರೂ ನಾಲ್ಕಾರು ಮಾತುಗಳಿಂದ ಹೇಳಬೇಕೆಂದೇ ಹಾಗೇ ನಿಂತುಬಿಟ್ಟೆ. ಆ ನಿಮಿಷದಲ್ಲಿ ನಾನು ಅಲ್ಲಿಗೆ ಏಕೆ ಬಂದೆನೆಂಬುವನ್ನು ಕೂಡ ಮರೆತುಬಿಟ್ಟೆ ಬಿಡಿ.

"ನಯಾ ಪೈಸಾ ಇಲ್ಲವಲ್ಲಾ!" ಎಂದಳು ತನ್ನ ಪರ್ಸನ್ನು ನೋಡಿ.

"ಆ! ಅದಕ್ಕೇನೀಗ ಬಿಡೀ" ಎಂದೆ ನಾನು.

"ಅಲ್ಲ ನೀವು ನಿಂತಿದ್ದೀರಲ್ಲಾ; ಎಲ್ಲೆಲ್ಲಾದರೂ ಅಂಗಡೀಲಿ ಕೇಳಿ—"

"ಬೇಡ ಬೇಡ ಪರವಾಗಿಲ್ಲ" ಎಂದೆ.

"ಹಾಳು ಅಂಗಡಿಯವ ಇದ್ದರೂ ಕೊಡಲಿಕ್ಕಿಲ್ಲ" ಅಂದಳು.

"ಹೌದುಹೌದು ಯಾಕೆಕೊಟ್ಟಾನು?"

"ಮತ್ತೆ ನೀವು......ಸರಿ. ಇದನ್ನೇ ತೆಕೊಳ್ಳಿ. ಆ ಕಂಡೆಕ್ಟರ ಯಾಕೆ ತಿನ್ನಬೇಕು ಅಂತ ನಾಕೇಳಿದ"

"ನಾನೂ ಅಷ್ಟೇ ಬಿಡಿ. ನಿಮ್ಮಲ್ಲೇ ಇರಲಿ"

"ಅಲ್ಲ ಮತ್ತೆ ನೀವು ಕೆಲಸಬಿಟ್ಟು ನಿಂತಿದ್ದೀರಿ?"

ನಾನು ತುಸು ಅಪ್ರತಿಭನಾದೆ ಒಂದು ದೇಶಾವರಿ ನಗೆನಗುತ್ತ— "ನಾನಿಲ್ಲೇ ಇತ್ತಬಂದೆ ಹೀಗೆ ಅಂಥ ಕೆಲಸವೇನಿಲ್ಲ" ಎಂದೆ.

"ಓ! ಬಹಳ ಕೆಟ್ಟ ಕಂಡೆಕ್ಟರ್. ನಾನಂತೂ ಒಬ್ಬರ ಸಾಲ ಇಟ್ಟುಕೊಳ್ಳಲಾರೆ. ಮನೇಲಿ ಬೇಕಾದಷ್ಟು ನಯಾ ಪೈಸಾ ಇತ್ತು. ಬಿಟ್ಟುಬಂದದ್ದೇ ತಪ್ಪಾಯಿತು" ಎಂದಳು ಚಡಪಡಿಸುತ್ತ.

"ಅದರ ವಿಷಯ ಬಿಡೀ ಎಂದೆನಲ್ಲಮ್ಮಾ, ನಿಮ್ಮ ಮನೆ ಬಹಳ ದೂರವಿಯೇ?" ಎಂದೆ.

"ಇಲ್ಲೇ ಆಚೆ ಬೀದಿಯಲ್ಲೇ"

"ಸರಿ ನಡಿರಿ. ಇರಲಿ ನಯಾ ಪೈಸಾ"

ಅವಳೇನೋ ಗುಣಗುಣನೆ ಹೇಳಿಕೊಳ್ಳುತ್ತ ಮುಂದೆ ನಡೆದಳು. ಅದರಲ್ಲಿ ನನಗೊಂದು ಥ್ಯಾಂಕ್ಸ್ ಹೇಳಿದ ಹಾಗೂ ತೋರಿತು. ಕಂಡೆಕ್ಟರನನ್ನು ಬೈದುಕೊಂಡ ಹಾಗೂ ತೋರಿತು.

ರಾತ್ರಿಯ ಹೊತ್ತು. ಆ ತರುಣಿ ಒಬ್ಬಳೇ ಹೋಗುವುದನ್ನು ನೋಡಿ ನನಗೇನೋ ಕೆಟ್ಟಯೋಚನೆ ಬಂತು. ಮದರಾಸು ಪಟ್ಟಣದಲ್ಲಿ, ರಾತ್ರಿಯ ಹೊತ್ತಿನಲ್ಲಿ ನಡೆಯುವ ಪೋಕರಿತನಗಳನ್ನು ಆಗಾಗ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಇದರ ನೆನಪಿನಿಂದ ಅವಳ ಹಿಂದೆಯೇ ನಾನೂ ನಡೆದೆ. ಅದೇನೋ ಅವಳ ಮೇಲೆ ನನಗೊಂದು ಬಗೆಯ ಮಮಕಾರ. ಅವಳು ಕ್ಷೇಮವಾಗಿ ಮನೆ ಸೇರಿದ್ದನ್ನು ಕಂಡರಷ್ಟೇ ನನಗೆ ನೆಮ್ಮದಿಯುಂಟಾಗುವ ಹಾಗಿತ್ತು.

ನಾನು ನಿಧಾನವಾಗಿಯೇ ಅವಳ ಹಿಂದೆ ಹೊರಟಿದ್ದೆ. ಅವಳು ವೇಗವಾಗಿ ನಡೆದಳು. ಒಂದೆರಡು ಬಾರಿ ಮುಖದಿರುಗಿಸಿ ನೋಡಿದ ಹಾಗೂ ತೋರಿತು. ನಾನು ದಾರೀ ಹೋಕನ ಹಾಗೆಯೇ ನಡೆಯುತ್ತಿದ್ದೆ.

ಕುಮುದಾ ಹೇಳುವುದು

ಆತ ಒಂದು ನಯಾ ಪೈಸೆಗಾಗಿ ನನ್ನ ಹಿಂದೆಯೇ ಮನೆಯವರೆಗೂ ಬಂದಾನೆಂದು ನಾನು ಭಾವಿಸಲೇ ಇಲ್ಲ. ನನ್ನ ಹಾಗೆಯೇ ಆತನೂ ಕಾಸುಬಿಡದ ಪ್ರಾಣಿಯಾಗಿರಬೇಕೆಂದು ಭಾವಿಸಿದೆ. ಆದರೆ ನನಗೊಂದು ಬಗೆಯ ಭೀತಿಯುಂಟಾಯಿತು. ಆತ ಮನೆಗೆ ಬರುವುದನ್ನು ನನ್ನ ಮನಸ್ಸೇನೂ ಬೇಡವೆಂದು ಹೇಳಲಿಲ್ಲ ಆದರೆ ನನ್ನ ಅಣ್ಣ ಏನು ನೆನೆದುಕೊಂಡಾನು? ಒಂದು ನಯಾ ಪೈಸಾ ಸಾಲ ವಸೂಲಿಗಾಗಿ ಹೀಗೆ ಬಂದರೆಂದು ಹೇಳಿದರೆ ಆ ದೊರೆಗೆ ಅಪಮಾನ ಮಾಡಿದಂತಾಗುತ್ತೆ. ಇದೂ ಕಷ್ಟ. ಈ ಪರಿಸ್ಥಿತಿಯಲ್ಲಿ ನನ್ನ ಕಾಲು ಪರಪರನೆ ನಡೆಯಿತು.

ಬೀದಿ ಬದಿಯಲ್ಲೇ ಮನೆ. ನಾನು ಮೆಟ್ಟಲು ಹತ್ತಿ ಒಳಗೆ ಕಾಲಿಡುತ್ತಲೇ ಎಂದಿನಂತಿಲ್ಲದ ನನ್ನ ಪರಿಸ್ಥಿತಿಯನ್ನು ಅಣ್ಣಾ ಕಂಡು ಹಿಡಿದೇ ಬಿಟ್ಟ. "ಏನು ಕುಮುದಾ, ಒಂದುರೀತಿಯಾಗಿದ್ದೀಯಲ್ಲಾ? ಇಷ್ಟು ಹೊತ್ತೇನು? ಕ್ಲಾಸಿನಲ್ಲಿ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.



ವಾಸದ ಮನೆ ಮತ್ತು ಮಕ್ಕಳ ವಿದ್ಯಾಭ್ಯಾಸ—

ಹೆತ್ತವರ ಮಹತ್ವದ ಪಾತ್ರ

ಶ್ರೀ. ಕೆ. ಜೆ. ಶೆಟ್ಟಿ.

ಹೆತ್ತವರಿಗೆ ತಮ್ಮ ಹೊಣೆ ಮಹತ್ತರವಾದುದೆಂಬುದು ತಿಳಿದ ವಿಷಯವೇ ಆಗಿದೆ ಅವರಿಗೆ ಬುದ್ಧಿಯನ್ನೋ ಬೋಧನೆಯನ್ನೋ ಹೇಳುವುದು ಈ ಲೇಖನದ ಉದ್ದೇಶವೂ ಅಲ್ಲ ಮುಖ್ಯತಃ ಹಳ್ಳಿ ಶಾಲೆಗಳಿಗೆ ಹೋಗುತ್ತಿರುವ ಮಕ್ಕಳ ಬಗ್ಗೆ ಹೆತ್ತವರು ವಹಿಸಬೇಕಾದ ಜವಾಬ್ದಾರಿ ಏನು? ಅದರಲ್ಲೂ ಪ್ರಾಥಮಿಕ ಶಾಲೆಗಳಿಗೆ ಹೋಗುವ ಬಾಲ ಪ್ರಾಯದ ಮಕ್ಕಳ ಮೇಲ್ವಿಚಾರಣೆಯನ್ನು ಅವರು ಹೇಗೆ ನೋಡುತ್ತಿರಬೇಕು?—ಎಂಬಿತ್ಯಾದಿ ವಿಚಾರದ ಕುರಿತು ಒಂದಿಷ್ಟು ವಿವೇಚಿಸುವುದು ಸರಿಯೆನಿಸಿತೆಂದು, ಅದರಿಂದ ಏನಾದರೂ ಪ್ರಯೋಜನ ದೊರೆತರೂ ದೊರೆಯಬಹುದೆಂದೂ ಬರೆಯುತ್ತಿದ್ದೇನೆ.

ತಮ್ಮ ಮಕ್ಕಳ ಮುಂದಿನ ಜೀವನವು ಸುಗಮವಾಗಿ, ಸುಧಾರಿತವಾಗಿ, ಸುವ್ಯವಸ್ಥಿತವಾಗಿ ರೂಪುಗೊಳ್ಳುವಂತೆ ತಕ್ಕ ವಿದ್ಯಾಭ್ಯಾಸವನ್ನಿತ್ತು ಪೋಷಿಸುವ ಭಾರ ಹೆತ್ತವರ ಪಾಲಿಗಿದೆ ಎಂಬುದು ಸರ್ವರೂ ಒಪ್ಪಿಕೊಂಡ ವಿಷಯ. ಆದರೆ ಹಳ್ಳಿಗಳಲ್ಲಿ ವಾಸಮಾಡುವ ಜನರು ಬಹುಸಂಖ್ಯೆಯಲ್ಲಿ ವಿದ್ಯೆಯ ಗಾಳಿಯೂ ಸೋಂಕದವರಿರುತ್ತಾರೆ ಇದರಿಂದ ಅವರು ವಿದ್ಯೆಯ ಮಹತ್ವವನ್ನು, ಅದರಿಂದ ಸಿಗುವ ಪ್ರಯೋಜನವನ್ನೂ ಅರಿತಿರುವುದಿಲ್ಲ ಹಳ್ಳಿಯ ಬಡ ಜೀವಿಗಳು ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸುವಲ್ಲಿ ಬಹುವಾಗಿ ಹಿಂದುಳಿಯುವರಲ್ಲದೆ ಬಹು ಸುಲಭದಲ್ಲಿ ಸಿಗುವುದಾದರೂ ಈ ವಿದ್ಯಾ ಸಂಪತ್ತನ್ನು ಸಂಪಾದಿಸುವಲ್ಲಿ ಅವರಿಗೆ ಏನೊಂದೂ ಉತ್ಸಾಹ ಇರುವುದೇ ಇಲ್ಲ. ಪ್ರಜಾಪ್ರಭುತ್ವವಾದಿ ರಾಷ್ಟ್ರದಲ್ಲಿರುವ ಪ್ರತಿಯೋರ್ವ ಪ್ರಜೆಯೂ ಸುಶಿಕ್ಷಿತನಾದಾಗಲೇ ಆ ರಾಷ್ಟ್ರವು ಸರ್ವತೋಮುಖವಾಗಿ ಪ್ರಗತಿಹೊಂದೀತಲ್ಲದೆ ಅಲ್ಲಿಯ ಜನತೆ ಸುಖಸಂತುಷ್ಟರಾಗಿ ಬಾಳಿ ದೇಶದ ಹಿತರಕ್ಷಣೆಯಲ್ಲಿ ತಾವೂ ಭಾಗಿಗಳಾಗಲು ಮುಂದಾಗುವರೆಂಬುದರಲ್ಲಿ ಸಂದೇಹವಿಲ್ಲ. ಈ ವಿಚಾರವನ್ನು ತಿಳಿದೇ ಸ್ವತಂತ್ರವಾದ ಪ್ರತಿಯೊಂದು ರಾಷ್ಟ್ರವೂ ವಿದ್ಯೆಗೆ ಬಹು ಪ್ರಧಾನತೆಯನ್ನು ಕೊಡುತ್ತವೆ ಆಳುವ ಸರಕಾರವು ಜನತೆಯ ಹಾಗೂ ದೇಶದ ಹಿತದೃಷ್ಟಿಯಿಂದ ವಿದ್ಯಾಭ್ಯಾಸಕ್ಕಾಗಿ ಎಷ್ಟೋ ಕೋಟಿಗಟ್ಟಲೆ ಹಣವನ್ನು ವ್ಯಯಮಾಡುತ್ತದೆ ಈ ವಿಚಾರದಲ್ಲಿ ಸ್ವತಂತ್ರ ಭಾರತವನ್ನಾಳುವ ನಮ್ಮ ಸರಕಾರವೂ ಹಿಂದುಳಿದುದಿಲ್ಲವೆಂಬುದು ಹೆಮ್ಮೆಯ ಸಂಗತಿ. ಆದರೂ ನಮ್ಮ ಜನತೆ, ದರ್ಮಾರ್ಥವಾಗಿ ದೊರೆಯುವ ಈ ಸೌಲಭ್ಯದ ಪ್ರಯೋಜನವನ್ನು ಪಡೆಯಲು ಹಿಂದುಳಿಯುವರೆಂದರೆ ತುಂಬಾ ವಿಷಾದವೆನಿಸುತ್ತದೆ ನಾವೇಕೆ ಹಾಗೆ ಅಡ್ಡಿಯಿಂದಿರುತ್ತೇವೆ ಎಂಬುದು ಗಮನಾರ್ಹವಾದುದು.

ಈ ಸಮಸ್ಯೆಯನ್ನು ಬಗೆಹರಿಸುವುದು ಬಹಳ ಕಷ್ಟಸಾಧ್ಯವೆನಿಸುವುದಾದರೂ ಹೆತ್ತವರು ತಮ್ಮ ಕರ್ತವ್ಯವನ್ನರಿತುಕೊಂಡು ವಿವೇಚಿಸಿ ತಾವು ಕರ್ತವ್ಯಶೀಲರಾದರೆ ಇದು ಅಷ್ಟೇ ಸುಲಭ ಸಾಧ್ಯವೆಂಬಲ್ಲಿ ಸಂಶಯವಿಲ್ಲ ಸ್ವಾತಂತ್ರ್ಯಾನಂತರ ನಮ್ಮ ದೇಶವು ತುಂಬ ಸುಧಾರಣೆ ಹೊಂದಿರುವುದಾದರೂ ಅದರ ಹೆಚ್ಚಿನ ಪ್ರಯೋಜನವನ್ನು ಪೇಟೆ ಪಟ್ಟಣಗಳ ಜನರೇ ಪಡೆದಿರುವರೆಂದರೆ ತಪ್ಪೇನಿಲ್ಲ. ಹೇಗೆಂದರೆ ಪಟ್ಟಣ ವಾಸಿಗಳು ಬಹ್ವಂಶದಲ್ಲಿ ಸುಶಿಕ್ಷಿತರಾಗಿ ತಮ್ಮ ಬುದ್ಧಿಬಲ ಪ್ರಯೋಗದಿಂದ ಸರಕಾರವು ಕೊಡುವ ಸಕಲ ಸೌಲಭ್ಯಗಳನ್ನು ತಮ್ಮ ಅನುಕೂಲಕ್ಕಾಗಿ ಉಪಯೋಗಿಸಿಕೊಳ್ಳಲು ಸಮರ್ಥರಾಗಿರುತ್ತಾರೆ ಸರಕಾರವು ಜನತೆಗಾಗಿ ವೆಚ್ಚ ಮಾಡುವ ಹಣದ ಪೂರ್ಣ ಪ್ರಯೋಜನವನ್ನು ಹೊಂದಿ ಸುಖ ಸಂತೃಪ್ತರಾಗಿ ಬಾಳುತ್ತಾರೆ. ಹೀಗಿರುತ್ತಾ ಹಳ್ಳಿ ಮೂಲೆಗಳಲ್ಲಿ ವಾಸಮಾಡುವ ಹೆಚ್ಚಿನ ಜನರು ಇಂದಿಗೂ ತಾವೂ ಸ್ವತಂತ್ರ ಭಾರತೀಯರೆಂಬುದನ್ನು ಅರಿತಿರುವುದಿಲ್ಲ. ಸರಕಾರದ ಯಾವುದೊಂದು ಧ್ಯೇಯ ಧೋರಣೆಯೂ ಅವರಿಗೆ ಅರ್ಥವಾಗುವುದಿಲ್ಲ ಇದಕ್ಕೆ ಮೂಲ ಕಾರಣವೇ ನಿರಕ್ಷರತೆ

“ವಿದ್ಯಾವಿಹೀನ, ಪಶುಸಮಾನ” ವೆಂಬ ಗಾದೆಯ ಮಾತಿನಂತೆ ಅವಿದ್ಯಾವಂತರಾದ ಹಿರಿಯರು ತಮ್ಮ ಮಕ್ಕಳಿಗೂ ವಿದ್ಯೆಯನ್ನು ಕಲಿಸಲು ಮನಃಪೂರ್ವಕವಾಗಿ ಶ್ರಮಿಸುವುದಿಲ್ಲ ವಯಸ್ಕರಿಗೆ ವಿದ್ಯಾಭ್ಯಾಸವನ್ನೀಯುವ ಸೌಕರ್ಯವನ್ನೊದಗಿಸಲು ಕಷ್ಟಸಾಧ್ಯವಾದರೂ ಅವರ ಮಕ್ಕಳ ಪ್ರತಿಯೊಬ್ಬರೂ ಶಾಲೆಗೆ ಹೋಗಿ ಓದು ಬರಹವನ್ನು ಕಲಿಯುವಂತೆ ಸರಕಾರವು ಗಮನಿಸಬೇಕಾದುದು ಅತ್ಯಗತ್ಯ. ಹಳ್ಳಿಗಳಲ್ಲಿ ವಾಸಮಾಡುವ ಇತರ ವಿದ್ಯಾವಂತರೂ ಈ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಿಕೊಂಡು ಅವಿದ್ಯಾವಂತರಾದ ಬಡವರ ಮಕ್ಕಳನ್ನು ತಪ್ಪದೆ ಶಾಲೆಗೆ ಕಳುಹಿಸುವಂತೆ ಪ್ರೋತ್ಸಾಹಿಸಬೇಕು ವಿದ್ಯೆಯನ್ನು ಪಡೆಯಬೇಕಾದ ಆವಶ್ಯಕತೆಯನ್ನೂ ಅದರ ಮಹತ್ವಿಕೆಯನ್ನೂ ಮಕ್ಕಳ ಹೆತ್ತವರಿಗೆ ತಿಳಿಸಬೇಕಾದುದು ಅತಿ ಅವಶ್ಯವೆನಿಸುವುದು. ಅವಿದ್ಯಾವಂತರಿಗೆ, ಅದರಲ್ಲೂ ಹಳ್ಳಿಗರಿಗೆ ವಿದ್ಯೆಯ ಮೇಲೆ ಸ್ವಾಭಾವಿಕವಾಗಿಯೇ ಅಭಿಮಾನವಿರುವುದಿಲ್ಲ

ದರ್ಮಾರ್ಥವಾಗಿ ದೊರೆತರೂ ಅದನ್ನು ತಮ್ಮ ಮಕ್ಕಳು ಪಡೆಯಬೇಕೆಂಬ ಆಶೆಯೂ ಅವರಿಗಿರುವುದಿಲ್ಲ ‘ನಮಗಿಲ್ಲದುದು ನಮ್ಮ ಮಕ್ಕಳಿಗೇಕೆಂಬ’ ಅವಿವೇಕದ ಮಾತನ್ನ ಅವರಿಂದ ನಿತ್ಯವೂ ನಾವು ಕೇಳಬಹುದು ವಿದ್ಯೆಯ ವಿಷಯವನ್ನೆತ್ತಿ ಅವರ ಮುಂದೆ ನಾವು ಸ್ವಲ್ಪ ಚರ್ಚಿಸಿದರೆ,—“ನಾವೇನು ವಿದ್ಯೆ ಕಲಿಯದೆ ಬದುಕಿಲ್ಲವೇ? ಇನ್ನು ನಮ್ಮ ಮಕ್ಕಳು ಕಲಿತು ಮಾಡಲಿರುವ ಮಹತ್ಕಾರ್ಯವೇನು?” ಎಂದು ಮುಂತಾಗಿ ಹಲವಾರು ಸಲ್ಲದ ಅಡ್ಡ ಸವಾಲನ್ನು ಹಾಕಿಯೇ ಹಾಕುತ್ತಾರೆ ಈ ಬಗೆಯ ಬುದ್ಧಿ ಶೂನ್ಯತೆಯಿಂದಾಗಿ ಮನೆಯಂಗಳದಲ್ಲೇ ಶಾಲೆಯ ಹೊಸ್ತಿಲು ಇದ್ದರೂ ಹಳ್ಳಿವಾಸಿಗಳಾದ ಹೆತ್ತವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವ ಉಮೇದುವಾರರಾಗಿರುವುದಿಲ್ಲ. ಸರಕಾರವು ಮೈಲಿಗೊಂದರಂತೆ ಶಾಲೆಗಳನ್ನು ತೆರೆದರೂ ಹಳ್ಳಿಗಳಲ್ಲಿ ಇದರ ಪ್ರಯೋಜನವನ್ನ ಹೊಂದುವ ಜನ ತುಂಬಾ ಕಡಿಮೆ.

ಒಂದೊಮ್ಮೆ ಯಾರೊಬ್ಬರ ಒತ್ತಾಯಕ್ಕೋ, ಉಪಾಯವಿಲ್ಲದ ಕರ್ಮಕ್ಕೋ ಒಂದು ಬಾರಿ ಶಾಲೆಯ ನಾಲ್ಕು ಗೋಡೆ, ಮಾಡುಗಳನ್ನು ನೋಡಿ ಬರುವುದಕ್ಕಾಗಿ ಮಕ್ಕಳನ್ನು ಕಳುಹಿಸಿದರೆ ಮತ್ತೆ ವರ್ಷಾಂತ್ಯದ ವರೆಗೆ ಅವರ ಮನೆಯಲ್ಲೇ ಹೊರಳಾಡಿಕೊಂಡಿದ್ದರೂ ಹೆತ್ತವರು ಅದನ್ನ ಗಮನಿಸುವುದೇ ಇಲ್ಲ ಅಧ್ಯಾಪಕರ ಒತ್ತಾಯಕ್ಕಾಗಿಯೋ ಉಪಕಾರಕ್ಕಾಗಿಯೋ ತಮ್ಮ ಮಕ್ಕಳು ಶಾಲೆಗೆ ಹೋಗುವುದೆಂಬ ಭಾವನೆ ಹಳ್ಳಿಯ ಜನರಲ್ಲಿ ಇಂದಿಗೂ ಇದೆ ಶಾಲಾ ಪ್ರಾಯದ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಅಧ್ಯಾಪಕನು ಹೆತ್ತವರೊಡನೆ ಕೇಳಿಕೊಂಡಾಗ, ‘ತನ್ನ ಮಗು ಶಾಲೆಗೆ ಹೋಗುವುದರಿಂದ ಮಾಸ್ಟ್ರಿಗೆ ಏನೋ ಪ್ರಯೋಜನವಿದೆ’ ಎಂದೇ ಅವರು ಹಿಂದಿನಿಂದಾಡುವ ಒಳದ ಮಾತು! ಇದನ್ನು ಅಧ್ಯಾಪಕರ ಸಮ್ಮುಖದಲ್ಲೇ ಹೇಳುವವರೂ ಇದ್ದಾರೆ ಇವೆಲ್ಲ ವಿಚಾರಗಳ ಅನುಭವ ಹಳ್ಳಿ ಶಾಲೆಗಳಲ್ಲಿ ದುಡಿಯುತ್ತಿರುವ ಶಿಕ್ಷಕರಿಗಿರುವಷ್ಟು ಮಂತ್ರಿಗಳಿಗೂ ಇರಲಾರದು. ಹಳ್ಳಿ ಶಾಲೆಗಳಲ್ಲಿರುವ ಅಧ್ಯಾಪಕರಿಗೆ ಇದೊಂದು ತಲೆತಿನ್ನುವ ಮಹತ್ತರವಾದ ಸಮಸ್ಯೆಯೇ ಆಗಿ ಉಳಿದಿದೆ.

ಯಾವುದೇ ಒಂದು ಸಣ್ಣ ಕಾರಣಕ್ಕಾದರೂ ಮಕ್ಕಳನ್ನು ಮನೆಯಲ್ಲಿ ನಿಲ್ಲಿಸಲು ಹೆತ್ತವರಿಗೆ ತುಂಬಾ ಸಂತೋಷ ಅವರಿಗೇನೋ ಸಂತೋಷವಾದರೂ ಅಧ್ಯಾಪಕರನ್ನು ಸಂದಿಗ್ಧ ಸಂಕಟದಲ್ಲಿ ಹಾಕುವ ವಿಚಾರವಿದು ಶಾಲೆಗೆ ಸರಿಯಾಗಿ ಬಾರದ ಮಕ್ಕಳ ಅಭ್ಯಾಸದ ಮುನ್ನಡೆಗೆ ತುಂಬಾ ತೊಡಕುಂಟಾಗುವುದೆಂಬುದನ್ನೂ ಹೆತ್ತವರು ಚೆನ್ನಾಗಿ ಗಮನಿಸುವುದು ಅಗತ್ಯ ಎಷ್ಟೋ ಒಡ್ಡತಲೆಯ ದಡ್ಡ ಮಕ್ಕಳೂ ತಪ್ಪದೆ ಶಾಲೆಗೆ ಬರುವುದಾದರೆ ಅವರು ಶಾಲೆಯಲ್ಲಿ ಹೇಳಿಕೊಡುವ ಪಾಠ ಪ್ರವಚನದಲ್ಲಿ ಎಂದೂ ಹಿಂದುಳಿಯಲಾರರು! ಎಷ್ಟೋ ಚುರುಕು ಬುದ್ಧಿಯ ಮಕ್ಕಳೂ ದೀರ್ಘಕಾಲ ಗೈರುಹಾಜರಿಯಲ್ಲಿ ಸ್ವಾಭಾವಿಕವಾಗಿಯೇ ಕಲಿಯುವಿಕೆಯಲ್ಲಿ ಹಿಂದಾಗುತ್ತಾರೆ ಈ ಎಲ್ಲಾ ಸಂಗತಿಗಳನ್ನು ವಿಚಾರಾತ್ಮಕವಾಗಿ ವಿವೇಚಿಸಿಕೊಂಡು ಹೆತ್ತವರು, ಶಾಲಾಮಕ್ಕಳ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿಕೊಳ್ಳಬೇಕು. ಎಂದಾದರೊಮ್ಮೆ ಮಕ್ಕಳನ್ನು ಶಾಲೆಗೆ ಕಳುಹಿಸಿ ಪರೀಕ್ಷಾಕಾಲದಲ್ಲಿ ತಮ್ಮ ಮಕ್ಕಳು ಪರಾಜಯ ಹೊಂದಿದಾಗ, ಅಧ್ಯಾಪಕರನ್ನಾಗಲೀ, ಇದು ನಮ್ಮ ಹಣೆಬರಹವೆಂದಾಗಲೀ ದೂರಿಕೊಳ್ಳುವುದು ಎಂದಿಗೂ ಫಲಕಾರಿಯಾಗದ ಮಾತು ಹಳ್ಳಿಗಳಲ್ಲಿ ಹೆತ್ತವರಿಂದ ಈ ಬಗೆಯ ದೂರುಗಳು ಬರುವುದು ವಾಡಿಕೆಯಾಗಿದೆ. ಮಕ್ಕಳ ಹೆಚ್ಚಿನ ಸಂಪರ್ಕವುಳ್ಳ ಹೆತ್ತವರು ಅವರನ್ನ ಮುಂದಿನ ನಾಗರಿಕ ಜನಾಂಗವನ್ನಾಗಿ ರೂಪಿಸಿ ತಮಗೂ ತಮ್ಮ ದೇಶಕ್ಕೂ ಅವರಿಂದ ಬಹುಮುಖವಾದ ಪ್ರಯೋಜನವು ಸಿಗುವಂತೆ ಮಾಡಲು ವಿದ್ಯಾಭ್ಯಾಸದ ವಿಚಾರದಲ್ಲಿ ತಮ್ಮ ಮಕ್ಕಳ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ತಾವು ಯಾವುದೇ ಕಷ್ಟದಲ್ಲಿದ್ದರೂ ಮಕ್ಕಳಿಗೆ ತಮ್ಮ ಕೈಲಾದಷ್ಟು ವಿದ್ಯಾಭ್ಯಾಸವನ್ನು ಕೊಡುವುದರಲ್ಲಿ ಎಂದೂ ಕರ್ತವ್ಯಚ್ಯುತರಾಗಬಾರದು

“ತಂದೆ ಮಕ್ಕಳಿಗೆ ಬಾಲ್ಯದೊಳ್ ಅಕ್ಕರವಿದ್ಯೆಯನರುಹದಿರೆ ಕೇಡೆಂದಂ” ಎಂದು ಬಲ್ಲವರು ಅಭಿಪ್ರಾಯ ಪಡುತ್ತಾರೆ ಈ ಮಾತೇ ಸಾಕು ಹೆತ್ತವರ ಕರ್ತವ್ಯದ ಮಹತ್ವಿಕೆಯನ್ನು ಎತ್ತಿತೋರುವುದಕ್ಕೆ. ಯಾವನೊಬ್ಬ ಜೀವಿಯೂ ನಿಜ ಮನುಜನಾಗಿ ಬಾಳಬೇಕೆಂದಿರುವಲ್ಲಿ ಅವನಿಗೆ ವಿದ್ಯೆಯ ಆವಶ್ಯಕತೆಯಿದೆ. ವಿದ್ಯೆಯಿಂದಲೇ ವಿವೇಕೋದಯ, ವಿವೇಕಶೂನ್ಯನಾದ ಮಾನವ ಯಾವನೋರ್ವ ಎರಡು ಕಾಲಿನ ಪಶುವೆಂದರೂ ಒಪ್ಪಲೇಬೇಕು. ಹೆತ್ತವರ ಈ ವಿಚಾರವನ್ನು ಸ್ವಲ್ಪ ವಿವೇಚಿಸುವರಾಗಿ ನಂಬಬಹುದು ತಾನೆ!

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್
ಸಿಂಡಿಕೇಟ್ ಲಿಮಿಟೆಡ್, ಉಡುಪಿ.
H O. ಉಡುಪಿ ಸ್ಥಾಪನೆ. 1925

ಮತ್ತೂ ಹತ್ತು ಹೊಸ ಶಾಖೆಗಳು

1) ಬೆಂಗಳೂರು (ಶೇಷಾದ್ರಿಪುರಂ) 6) ಬೊಂಬಾಯಿ (ಮಾಂಡ್ವಿ)
2) ಬೆಂಗಳೂರು (ಚಿಕ್ಕಪೇಟೆ) 7) ಹುನಗುಂದ (ಬಿಜಾಪುರ ಜಿಲ್ಲೆ)
3) ಬೆಂಗಳೂರು (ಕೆಂಟೋನ್‌ಮೆಂಟ್) 8) ಕೊಪ್ಪ (ಚಿಕ್ಕಮಗಳೂರು ಜಿಲ್ಲೆ)
4) ಬೆಳಗಾವ್ (ಶಾಪುರ) 9) ಮಂಗಳೂರು (ಬಂದರ)
5) ಬೆಳಗಾವ್ (ಕೇಂಪ್) 10) ತಿಪ್ಟೂರು (ತುಮ್ಕೂರು ಜಿಲ್ಲೆ)

ಶೀಘ್ರದಲ್ಲಿಯೇ ತೆರೆಯಲ್ಪಡುವುವು

ಬರೋಡ ಶಾಖೆಯು ತಾ 9-2-58ರಂದು ತೆರೆಯಲ್ಪಟ್ಟಿತು.

ಟಿ ಎ ಪೈ, ಬಿ ಕಾಂ.(ಬೊಂ) ಎ ಐ ಐ ಬಿ ಯಫ್ ಆರ್ ಇ ಯಸ್ (ಲಂಡನ್) ಜನರಲ್ ಮೆನೇಜರ್
ಡಾ। ಟಿ ಮಾಧವ ಪೈ, ಎಂ ಬಿ & ಬಿ ಎಸ್ ಮೆನೇಜಿಂಗ್ ಡೈರೆಕ್ಟರ್

THE CANARA INDUSTRIAL &
BANKING SYNDICATE LTD., UDIPI.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಭಾರತ ಕಲಾನಿಧಿ—

ತಿರುವಾಂಕೂರಿನ ವಸ್ತುಸಂಗ್ರಹಾಲಯ

ತಿರುವನಂತಪುರದ ಸರಕಾರೀ ವಸ್ತು ಸಂಗ್ರಹಾಲಯವು ಕಳೆದ ತಿಂಗಳ ೨೨ನೆ ದಿನಾಂಕ ತನ್ನ ಶತಮಾನೋತ್ಸವವನ್ನು ಆಚರಿಸಿತು ಈ ಸಂಗ್ರಹಾಲಯವು ವಿವಿಧ ರೀತಿಯ ಕಲಾಕೃತಿಗಳಿಂದ ಕೂಡಿದ್ದು ಒಂದು ಉತ್ತಮವಾದ ಸಂಗ್ರಹಾಲಯವೆಂಬ ಹೆಸರನ್ನು ಪಡೆದಿದೆ. ಈ ಸಂಗ್ರಹಾಲಯದಲ್ಲಿ ಪ್ರದರ್ಶಿಸಲ್ಪಟ್ಟಿರುವ ವಸ್ತುಗಳಲ್ಲಿ ಕೆತ್ತನೆಯ ಕೆಲಸ ಮಾಡಿದ ಮರದ ವಸ್ತುಗಳು ವಿಶೇಷತಃ ಉಲ್ಲೇಖನೀಯವಾಗಿವೆ. ಕೇರಳ ರಾಜ್ಯವು ನಾನಾ ಜಾತಿಯ ವೃಕ್ಷಗಳ ಸಂಪತ್ತಿಗೆ ನಾಮಾಂಕಿತವಾಗಿದೆ. ಈ ಪ್ರದೇಶದಲ್ಲಿ ಮರದ ಕೆತ್ತನೆಯ ಕೆಲಸವು ಅತ್ಯಂತ ಪುರಾತನವಾದುದಾಗಿದೆ. ಈ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗುತ್ತಿರುವ ಮರದ ಒಡವೆಗಳು ಹೆಚ್ಚೆಂದರೆ ೪೦೦ ವರ್ಷಗಳಷ್ಟು ಪುರಾತನವಾಗಿರಬಹುದು.

ಈ ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದ ಸಮೀಪದಲ್ಲಿ ಮರದ ಮಂಟಪವೊಂದನ್ನು ಇಡಲಾಗಿದೆ. ಕೇರಳ ರಾಜ್ಯದ ಒಂದು ಪುರಾತನ ಹಾಳುಬಿದ್ದ ದೇವಾಲಯದಲ್ಲಿ ಸಿಕ್ಕಿದ ಚೂರುಪಾರುಗಳಿಂದ ಈ ಮಂಟಪವನ್ನು ನಿರ್ಮಿಸಲಾಗಿದೆ. ಈ ಮಂಟಪವು ಮರದ ಕೆತ್ತನೆಯಲ್ಲಿ ಕೇರಳದ ಕಲಾವಿದರ ಕೌಶಲದ ಉತ್ಕೃಷ್ಟ ಮಾದರಿಯಾಗಿದೆ. ಅತಿ ಸುಂದರವಾಗಿ ಕೆತ್ತಲ್ಪಟ್ಟಿರುವ ಕಂಬಗಳು, ಮಂಟಪದ ಒಳಮಾಳಿಗೆಯಲ್ಲಿ ಅತ್ಯಂತ ಜಾಗ್ರತೆಯಿಂದ ಕೆತ್ತಲಾಗಿರುವ ಕಮಲದ ಮೊಗ್ಗಿನ ಅಂತರ್ಭಾಗ, ಮಂಟಪದ ಮೇಲ್ಭಾಗದಲ್ಲಿ ಕೆತ್ತಿರುವ ಗೋಪುರಗಳನ್ನು ನಾವು ಕಾಣಬಹುದು. ಈ ಸುಂದರವಾದ ಮಂಟಪದ ಮೇಲೆ ತಾಂಡವನೃತ್ಯದ ಭಂಗಿಯಲ್ಲಿರುವ ನಟರಾಜನ ಅತ್ಯಂತ ಸುಂದರವಾದ ಮೂರ್ತಿಯೊಂದು ರಾರಾಜಿಸುತ್ತಿದೆ. ಈ ಸುಂದರ ಮೂರ್ತಿಯು ಕಂಚಿನಿಂದ ತಯಾರಿಸಲ್ಪಟ್ಟಿದೆ. ಈ ಕಾಂಸ್ಯ ವಿಗ್ರಹದ ಮುಂಭಾಗದಲ್ಲಿ ದೀಪವೊಂದನ್ನು ಸಹ ಇಡಲಾಗಿದೆ.

ಇಲ್ಲಿ ನೋಡಲು ಯೋಗ್ಯವಾದ ಕಲಾತ್ಮಕ ವಸ್ತುವೆಂದರೆ ಮರದಲ್ಲಿ ಕೆತ್ತಲಾಗಿರುವ 'ಕೂಥ ಪಲಂ' ನಾಟ್ಯ ಶಾಲೆಯ ಮಾದರಿ ಕೇರಳದಲ್ಲಿ ಕೂಥು ನೃತ್ಯವು ಅತ್ಯಂತ ಪ್ರಾಚೀನವಾದುದಾಗಿದೆ. ಈ ನೃತ್ಯದಲ್ಲಿ ಚಕ್ಯಾರ್ ನಟನೊಬ್ಬನು ಪುರಾಣಗಳು ಮತ್ತು ಕಾವ್ಯಗಳಿಗೆ ಸಂಬಂಧಿಸಿದ ಪ್ರಸಂಗಗಳನ್ನು ವಿವರಿಸುವನು ಈ ಪ್ರಸಂಗಗಳು ಕೇರಳ ರಾಜ್ಯದಲ್ಲಿ ಸಂಭವಿಸಿದುವೋ ಎಂಬಂತೆ ವಿವರಿಸುವನು.

ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶನಕ್ಕಿಡಲಾದ ಈ ನಾಟ್ಯ ಶಾಲೆಯ ಮಾದರಿಯು ನಾಟ್ಯ ಕಲಾಭಿಮಾನಿಗಳ ಮೆಚ್ಚುಗೆಗೆ ಪಾತ್ರವಾಗಿದೆ ಸಭಾಂಗಣದ ಯಾವ ಭಾಗದಿಂದಾಗಲಿ ರಂಗಭೂಮಿಯ ಮೇಲಿನ ನಾಟ್ಯಾಭಿನಯವನ್ನು ನೋಡಬಹುದಾಗಿದೆ. ನಾಟ್ಯ ಶಾಲೆಯಲ್ಲಿರುವ ಕಂಬಗಳು ಯಾವ ರೀತಿಯಲ್ಲೂ ಇದಕ್ಕೆ ಅಡ್ಡಿಬರುವುದಿಲ್ಲ.

ಈ ಸಂಗ್ರಹಾಲಯದಲ್ಲಿರುವ ಮತ್ತೊಂದು ಆಕರ್ಷಕ ವಸ್ತುವೆಂದರೆ ಪದ್ಮನಾಭಪುರ ದೇವಸ್ಥಾನದ ರಥದ ಮಾದರಿ. ಇದು ೩೦೦ ವರ್ಷಗಳ ಹಿಂದಿನದು. ಈ ರಥವು ಮೂರು ಅಂತಸ್ತುಗಳಿಂದ ಕೂಡಿದ್ದು ೯ ಅಡಿಗಳ ಎತ್ತರವಿದೆ. ಕೆಳಭಾಗದಲ್ಲಿ ೩ ಅಡಿಗಳ ಉದ್ದವೂ ೯ ಅಡಿಗಳ ಅಗಲವೂ ಇರುವುದು. ಈಗ ಕೂಡ ರಥೋತ್ಸವ ಸಮಯದಲ್ಲಿ ಈ ಮಾದರಿಯ ರಥಗಳನ್ನೇ ಉಪಯೋಗಿಸಲಾಗುವುದು. ಈ ಅದ್ವಿತೀಯ ಕಲಾಕೃತಿಯ ಮೇಲೆ ದೇವದೇವತೆಗಳ ಪ್ರತಿಮೆಗಳನ್ನು ಪಶು ಪ್ರಾಣಿಗಳನ್ನು ಮತ್ತು ಪುಷ್ಪಗಳನ್ನು ಅತಿ ಸುಂದರವಾಗಿ ಕೆತ್ತಲಾಗಿದೆ.

ಕೇರಳದ ವಾಸ್ತವಿಕ ಕಲೆಯನ್ನು ಪುಷ್ಪಕ ವಿಮಾನಗಳಲ್ಲಿ ನಾವು ಕಾಣಬಹುದು. ಈ ವಿಮಾನಗಳ ಮೇಲೆ ದೇವಲೋಕದ ಚಿತ್ರಗಳನ್ನು ಚಿತ್ರಿಸಲಾಗಿದೆ. ಕೂಮಾರ್ಗಸನದ ಮೇಲೆ ಇಡಿ ದೇವಲೋಕವಿರುವಂತೆ ಪುಷ್ಪಕ ವಿಮಾನವನ್ನು ನಿರ್ಮಿಸಲಾಗಿದೆ. ಈ ವಿಮಾನದ ಮೇಲೆ ಪಶು ಪ್ರಾಣಿಗಳು, ಹಾವುಗಳು, ಕಮಲದ ಹೂವುಗಳಿಂದ ಅಲಂಕೃತಗೊಂಡ ಕಂಬಗಳಿರುವುವು. ಮೇಲ್ಭಾಗದಲ್ಲಿ ಅತ್ಯಂತ ಸೂಕ್ಷ್ಮವಾಗಿ ಕೆತ್ತಲ್ಪಟ್ಟಿರುವ ಗೋಳಾಕೃತಿಯ ಗೋಪುರವಿರುವುದು. ಒಳಮಾಳಿಗೆಯನ್ನು ಒಂಭತ್ತು ವರ್ತುಲಾಕಾರದ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿ ವಿಭಾಗದಲ್ಲಿಯೂ ಕಮಲದ ಹೂವಿನ ಆಕೃತಿಯನ್ನು ಸುಂದರವಾಗಿ ಕೆತ್ತಲಾಗಿದೆ. ಪ್ರತಿ ಕಮಲದ ಹೂವಿನಲ್ಲಿಯೂ ದೇವತೆಗಳ ಪ್ರತಿಮೆಗಳನ್ನು ಮಧ್ಯದಲ್ಲಿ ಬ್ರಹ್ಮನ ಪ್ರತಿಮೆಯನ್ನೂ ಕೆತ್ತಲಾಗಿದೆ.

ಸಂಗ್ರಹಾಲಯದಲ್ಲಿರುವ ಕಂಚಿನ ಪ್ರತಿಮೆಗಳಲ್ಲಿ ಉತ್ತರ ತಿರುವಾಂಕೂರಿನಲ್ಲಿ ಸಿಕ್ಕಿದ ವಿಷ್ಣುವಿನ ಪ್ರತಿಮೆಯು ವಿಶೇಷತಃ ಉಲ್ಲೇಖನೀಯವಾಗಿದೆ ಈ ಪ್ರತಿಮೆಯ ಮೇಲೆ ಅಲಂಕಾರಗಳಾವುವೂ ಇಲ್ಲ. ಒಂದು ಸಹಸ್ರ ವರ್ಷಗಳ ಹಿಂದಿನ ಈ ಪ್ರತಿಮೆಯು ಸರ್ವೋತ್ಕೃಷ್ಟ ನಮೂನೆಯಾಗಿದೆ. ಈ ಸಂಗ್ರಹಾಲಯದಲ್ಲಿರುವ ವಿಷ್ಣುವಿನ ಇನ್ನೊಂದು ಪ್ರತಿಮೆಯು ಅತ್ಯಧಿಕ ರೀತಿಯಲ್ಲಿ ಅಲಂಕೃತಗೊಂಡಿದೆ. ಇದರಿಂದ ಕಲಾಭಿರುಚಿಯು ಅಧೋಗತಿಗಿಳಿದಿರುವುದು ವ್ಯಕ್ತವಾಗುವುದು.

ಸಂಗ್ರಹಾಲಯದಲ್ಲಿ ಶಿವ ಹಾಗೂ ಸತಿಯ ಒಂದು ಆಕರ್ಷಕ ಪ್ರತಿಮೆ ಇರುವುದು. ಶಿವನ ಭುಜದ ಮೇಲೆ ಸತಿಯ ಮೃತದೇಹವಿರುವಂತೆ ಹಾಗೂ ದೈತ್ಯನೊಬ್ಬನು ಉದ್ದನೆಯ ಎರಡು ತುತ್ತೂರಿಗಳನ್ನೂದುತ್ತಾ ಸತಿಯ ಮೃತ್ಯುವನ್ನು ಘೋಷಿಸುತ್ತಿರುವಂತೆ ಈ ಪ್ರತಿಮೆಯನ್ನು ಚಿತ್ರಿಸಲಾಗಿದೆ.

ಸಂಗ್ರಹಾಲಯದಲ್ಲಿ ಪ್ರಭಾಮಂಡಲಯುಕ್ತ ನಟರಾಜನ ಮೂರು ಪ್ರತಿಮೆಗಳೂ ಪ್ರಭಾಮಂಡಲರಹಿತದ ಎರಡು ಪ್ರತಿಮೆಗಳೂ ಇರುವುವು.

ತಿರುವನಂತಪುರ ವಸ್ತು ಸಂಗ್ರಹಾಲಯದಲ್ಲಿರುವ ಗಮನಾರ್ಹವಾದ ಪ್ರತಿಮೆಯೆಂದರೆ ಗಜತಾಂಡವ. ನಟರಾಜನು ಒಂದು ಕಾಲನ್ನು ರಾಕ್ಷಸನ ಶಿರಸ್ಸಿನ ಮೇಲೆ ಇಡದೆ ಆನೆಯ ಶಿರಸ್ಸಿನ ಮೇಲಿಟ್ಟಿರುವುದೇ ಈ ಪ್ರತಿಮೆಯ ವೈಶಿಷ್ಟ್ಯವಾಗಿದೆ.

ತಿರುವನಂತಪುರದ (ತಿವಿಕ್ರಮಂಗಲಂ) ಸಮೀಪದಲ್ಲಿರುವ ಪುರಾತನವಾದ ಹಾಗೂ ಪಾಳುಬಿದ್ದಿರುವ ದೇವಾಲಯವೊಂದರಿಂದ ನೃತ್ಯ ಭಂಗಿಯ ಪ್ಲಾಸ್ಟರ್ ಪ್ರತಿಯನ್ನು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಇದು ೧೧ನೆಯ ಶತಮಾನಕ್ಕೆ ಸಂಬಂಧಿಸಿದ್ದಾಗಿದೆ. ವಸ್ತು ಸಂಗ್ರಹಾಲಯದ ಪ್ರವೇಶ ದ್ವಾರದ ಸಮೀಪದಲ್ಲಿ ಪ್ರದರ್ಶಿಸಲಾಗಿರುವ ಈ ಪ್ಲಾಸ್ಟರ್ ಪ್ರತಿಯಲ್ಲಿ ನರ್ತಕರ ನಾನಾ ಭಂಗಿಗಳನ್ನು ಕಾಣಬಹುದಾಗಿದೆ. ಈ ನೃತ್ಯ ದೃಶ್ಯದ ಮಧ್ಯ ಭಾಗದಲ್ಲಿ ಮೂರು ನರ್ತಕಿಯರನ್ನೂ ಅಕ್ಕಪಕ್ಕಗಳಲ್ಲಿ ಮೃದಂಗ ಖಂಜರಿಯನ್ನು ಬಡಿಯುತ್ತಿರುವ ಇಬ್ಬರು ಸತಿಯರನ್ನೂ ಕಾಣಬಹುದು. ಕೇರಳ ರಾಜ್ಯದ ಅನ್ಯ ದೇವಸ್ಥಾನಗಳ ಪ್ಲಾಸ್ಟರ್ ಪ್ರತಿಗಳನ್ನು ಕೂಡ ಈ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿವೆ.

ಕೇರಳದ ವಿಖ್ಯಾದ ನಾಟ್ಯಕಲೆಯಾದ ಕಥಕ್ಕಳಿಯ ಆರು ಸೂಕ್ಷ್ಮ ಮೂರ್ತಿಗಳನ್ನು ವಸ್ತು ಸಂಗ್ರಹಾಲಯದ ಮಹಾದ್ವಾರದ ಸಮೀಪದಲ್ಲಿ ಇಡಲಾಗಿವೆ. ಪಾತ್ರಗಳ ಹಾಗೂ ಪಾತ್ರಗಳ ಭಾವಭಂಗಿಗಳ ಚಿತ್ರಣವು ಮತ್ತು ವರ್ಣವು ಬಹು ಸುಂದರವಾಗಿವೆ. ಪಚ್ಚೆ, ಕಾವಿ, ಕೆಂಪು ಮುಂತಾದ ಬಣ್ಣಗಳನ್ನು ಪಾತ್ರಗಳಿಗೆ ತಕ್ಕಂತೆ ಈ ಮೂರ್ತಿಗಳಿಗೆ ಲೇಪಿಸಲಾಗಿದೆ.

ಈ ವಸ್ತು ಸಂಗ್ರಹಾಲಯದಲ್ಲಿ ಮೂರು ಶತಮಾನಗಳ ಹಿಂದಿನ ಕಂಚಿನ ದೀಪಗಳ ಸ್ತಂಭಗಳು, ಕೊರಳು, ಕಿವಿಗಳು, ಮೂಗು, ಕೈಗಳಿಗೆ ಹಾಕಿಕೊಳ್ಳುವ ಆಭರಣಗಳನ್ನು ಪ್ರದರ್ಶಿಸಲಾಗಿವೆ. ಹೀಗೆ ಪ್ರದರ್ಶಿಸಲ್ಪಟ್ಟಿರುವ ಕಂಚಿನ ದೀಪದ ಸ್ತಂಭಗಳಲ್ಲಿ ತಿರುವಾಂಕೂರಿನ ದೀವಟಿಗೆಯೊಂದು ಅತಿ ಸುಂದರವಾಗಿದೆ. ಈ ದೀವಟಿಗೆಯು ಪಕ್ಷಿಯ ಆಕಾರದಲ್ಲಿದೆ. ಪಕ್ಷಿಯ ಶಿರಸ್ಸು ಟೊಳ್ಳಾಗಿದ್ದು ಅದರಲ್ಲಿ ಎಣ್ಣೆ ಮತ್ತು ಬತ್ತಿಯನ್ನು ಹಾಕಬಹುದಾಗಿದೆ. ಪಕ್ಷಿಯ ಬಾಲವನ್ನು ದೀವಟಿಗೆಯನ್ನು ಹಿಡಿದುಕೊಳ್ಳುವ ಹಿಡಿಯನ್ನಾಗಿ ಬಳಸಬಹುದಾಗಿದೆ. ಹಿಂದಿನ ಅರಸರು ಉತ್ಸವಗಳ ಸಮಯದಲ್ಲಿ ಬೆಳಕಿಲ್ಲದೆ ಅಂಧಕಾರದಲ್ಲಿರುವ ದೇವಾಲಯಗಳ ಒಳಭಾಗದಲ್ಲಿ ಪ್ರವೇಶಿಸುವಾಗ ಈ ದೀವಟಿಗೆಯನ್ನು ಉಪಯೋಗಿಸುತ್ತಿದ್ದರು.

ಕೇರಳದ ಆಭರಣಗಳು ಧಾರ್ಮಿಕ ಮಹತ್ವ ಪಡೆದಿರುತ್ತವೆ. ಭಗವತಿ ದೇವಿಯು ಮಲಯಾಳಿಗಳ ಆರಾಧ್ಯ ದೇವತೆಯಾಗಿರುವಳು. ಈ ಆರಾಧ್ಯ ದೇವತೆಗೆ ಪಾಲ ವೃಕ್ಷವು ಪ್ರಿಯವಾದುದೆಂದು ಭಾವಿಸಲಾಗಿದೆ. ಈ ಪಾಲವೃಕ್ಷದ ಬೀಜಗಳಿಂದ ಮಾಡಲ್ಪಟ್ಟ ಉಂಗುರವನ್ನು ಧರಿಸಿದ್ದಾದರೆ ಭಗವತಿಯ ಕೃಪಾಕಟಾಕ್ಷ ದೊರೆಯುವುದೆಂಬ ದೃಢ ನಂಬಿಕೆ ಮಲಯಾಳಿ ಜನರಲ್ಲಿದೆ. ಹುಲಿಯುಗುರುಗಳಿಂದ ಮಾಡಲ್ಪಟ್ಟ ಆಭರಣಗಳನ್ನು ಧರಿಸಿದರೆ ಕೆಟ್ಟ ಕನಸುಗಳು ಬೀಳುವುದಿಲ್ಲವೆಂಬ ನಂಬಿಕೆಯ ಮೇಲೆ ಈ ಆಭರಣಗಳನ್ನು ಜನರು ಧರಿಸುವರು.

ಸಂಗ್ರಹಾಲಯದ ಸಂಗೀತ ವಾದ್ಯಗಳ ವಿಭಾಗದಲ್ಲಿ ವಿವಿಧ ವಾದ್ಯಗಳನ್ನು ಇಡಲಾಗಿವೆ. ಈ ಸಂಗೀತ ವಾದ್ಯಗಳಲ್ಲಿ ತಂಬೂರಿಯೊಂದನ್ನು ಕಾಣಬಹುದಾಗಿದೆ. ಈ ತಂಬೂರಿಯು ಜೇಡಿ ಮಣ್ಣಿನಿಂದ ಮಾಡಲ್ಪಟ್ಟದ್ದಾಗಿದೆ.

ಈ ವಿಭಾಗದಲ್ಲಿ ಪ್ರದರ್ಶಿಸಲಾಗಿರುವ ಪಂಚವಾದ್ಯವೂ ಉಲ್ಲೇಖನೀಯವಾದುದ್ದಾಗಿದೆ

ವಸ್ತು ಸಂಗ್ರಹಾಲಯದಲ್ಲಿ ಜಾವಾ ಹಾಗು ಬಾಲಿ ದ್ವೀಪಗಳಿಗೆ ಸಂಬಂಧಿಸಿದ ಧಾರ್ಮಿಕ ನೃತ್ಯಗಳನ್ನು ಸೂಚಿಸುವ ವಿವಿಧ ವಸ್ತುಗಳು ಇಡಲ್ಪಟ್ಟಿವೆ. ಇಲ್ಲಿ ಬಾಲೀ ದ್ವೀಪದ ಹಿಂದೂ ಪೂಜಾರಿಯೊಬ್ಬನು ಧರಿಸುವ ಪೋಷಾಕುಗಳನ್ನೂ ಕಾಣಬಹುದಾಗಿದೆ. ಜಾವಾದ್ವೀಪದ ಛಾಯಾ ನಾಟಕ (ವಾಯಂಗ್ ಯಾಂಗ್) ದಲ್ಲಿ ಬಳಸಲಾಗುವ ಪ್ರತಿಮೆಗಳನ್ನು ಕೂಡ ಈ ವಿಭಾಗದಲ್ಲಿ ನೋಡಬಹುದಾಗಿದೆ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 3 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದವೆಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ.........ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೈಸೂರಿನ ಬೃಹದ್ಯೋಜನೆ—

ಶರಾವತಿ ಕಣಿವೆಯಭಿವೃದ್ಧಿ

ಶ್ರೀ ಡಿ ಕೆ ಶ್ರೀನಿವಾಸಾಚಾರ್

ಮೈಸೂರು ರಾಜ್ಯವು ಪಶ್ಚಿಮ ದಿಕ್ಕಿನಲ್ಲಿ ಹರಿಯುವ ಸಣ್ಣ ಪುಟ್ಟ ಹಾಗೂ ದೊಡ್ಡ ನದಿಗಳನ್ನು ಪಡೆದಿರುವುದು. ಈ ನದಿಗಳನ್ನು ಉಪಯೋಗಿಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದೆ. ಈ ನದಿಗಳಲ್ಲಿ ಹೆಚ್ಚಿನ ಸಂಖ್ಯೆಯವು ಮಳೆ ಹೆಚ್ಚಾಗಿ ಬೀಳುವ ಗುಡ್ಡಗಾಡಿನ ಪ್ರದೇಶಗಳಲ್ಲಿ ಹರಿದು ಅರಬ್ಬಿ ಸಮುದ್ರವನ್ನು ಸೇರುವವು. ಸಮುದ್ರವನ್ನು ಸೇರುವ ಮುನ್ನ ಈ ನದಿಗಳು ಕೊಂಚ ಭಾಗ ಮಾತ್ರ ಹಳ್ಳತಿಟ್ಟೆಗಳಿಲ್ಲದ ಸಮುದ್ರ ತೀರದ ಪ್ರದೇಶದಲ್ಲಿ ಹರಿಯುವುವು. ಈ ಕಾರಣದಿಂದಾಗಿ ಈ ನದಿಗಳನ್ನು ನೀರಾವರಿ ಕಾರ್ಯಗಳಿಗಾಗಿ ಬಳಸಿಕೊಳ್ಳುವಂತಿಲ್ಲ. ಈ ನದಿಗಳು ವಿದ್ಯುಚ್ಛಕ್ತಿ ಉತ್ಪಾದನೆಗೆ ಅತ್ಯುತ್ತಮವಾಗಿವೆ. ಈ ಎಲ್ಲ ನದಿಗಳ ಆದಲ್ಲಿಯೂ ವಿಶೇಷತಃ ಕಾಳಿನದಿ, ಶರಾವತಿ, ವರಾಹಿ ಮತ್ತು ಬಾರಪೊಳೆ ನದಿಗಳ ವಿದ್ಯುಚ್ಛಕ್ತಿ ಸ್ಥಾನಶಕ್ತಿಯು ಒಟ್ಟು ೩೦ ಲಕ್ಷ ಕಿಲೋವಾಟ್ಟುಗಳೆಂದು ಅಂದಾಜು ಮಾಡಲಾಗಿದೆ. ಈ ನದಿಗಳಲ್ಲಿ ಶರಾವತಿ ನದಿಯು ವಿದ್ಯುಚ್ಛಕ್ತಿ ಉತ್ಪಾದನೆಯ ವಿಚಾರದಲ್ಲಿ ಅಸಾಧಾರಣವಾಗಿದೆ. ಉಳಿದ ನದಿಗಳಂತೆ ಶರಾವತಿ ನದಿಯ ಉಗಮ ಸ್ಥಾನವು ಪಶ್ಚಿಮ ಘಟ್ಟಗಳ ಅಂಬತೀರ್ಥದಲ್ಲಿರುವುದು. ಉಗಮ ಸ್ಥಾನದಿಂದ ಹೊರಟು ನದಿಯು ೬೪ ಮೈಲಿಗೂ ದೂರ ಹರಿದು ಬಂದು ಜಗದ್ವಿಖ್ಯಾತ ನೈಸರ್ಗಿಕ ಸೌಂದರ್ಯದ ನೆಲೆವೀಡಾಗಿರುವ ಜೋಗದಲ್ಲಿರುವ ೯೦೦ ಅಡಿಗಳ ಪ್ರಪಾತದಲ್ಲಿ ಧುಮುಕುವುದು. ಸುಮಾರು ಹತ್ತು ವರ್ಷಗಳಿಂದಲೂ ಈ ನದಿಯ ನೀರಿನಿಂದ ಕೊಂಚ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತಿದೆ. ಜೋಗದಲ್ಲಿರುವ ಮಹಾತ್ಮ ಗಾಂಧಿ ಜಲಜನಿತ ವಿದ್ಯುದಾಗಾರವು ೧,೨೦,೦೦೦ ಕಿಲೋವಾಟುಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತಿದೆ. ಈ ವಿದ್ಯುದಾಗಾರವು ಪೂರ್ಣ ಸಾಮರ್ಥ್ಯದ ಮೇಲೆ ಕೆಲಸ ಮಾಡುತ್ತಿದೆ. ಈಗ ಕಾರ್ಯರೂಪಕ್ಕೆ ತರಲಾಗುತ್ತಿರುವ ಕಾರ್ಯಯೋಜನೆಯನ್ನು ಗ್ರಾಹ್ಯವಾಗಿ ಶರಾವತಿ ಕಣಿವೆ ಯೋಜನೆಯೆಂದು ಕರೆಯಬಹುದಾಗಿದೆ. ಶರಾವತಿ ಕಣಿವೆಯ ಜಲಶಕ್ತಿಯನ್ನು ಸಂಪೂರ್ಣವಾಗಿ ಬಳಸಿಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದೇ ಈ ಕಾರ್ಯ ಯೋಜನೆಯ ಗುರಿಯಾಗಿರುವುದು.

ಯೋಜನೆಯ ಕಟ್ಟಡ ನಿರ್ಮಾಣ ಸಂಬಂಧವಾದ ಕಾರ್ಯಗಳ ಮುಖ್ಯಾಂಶಗಳಾವುವೆಂದರೆ ಲಿಂಗನಮಕ್ಕಿಯಲ್ಲಿ ಸುಮಾರು ೬೦೯೦ ಅಡಿಗಳ ಉದ್ದ ಹಾಗೂ ಸುಮಾರು ೨೦೫ ಅಡಿಗಳ ಎತ್ತರದ ಕಲ್ಲಿನ ಕೆಲಸದ ಅಣೆಕಟ್ಟೆ ಮತ್ತು ೧೫೮೦ ೦೦೦ ಲಕ್ಷ ಘನ ಅಡಿಗಳ ನೀರನ್ನು ಸಂಗ್ರಹಿಸುವ ಜಲಾಶಯವೊಂದನ್ನು ನಿರ್ಮಿಸುವುದು. ತಲಕಳಲೆಯಲ್ಲಿ ಚಿಕ್ಕದೊಂದು ಜಲಾಶಯವನ್ನು ನಿರ್ಮಿಸುವುದು. ಈ ಜಲಾಶಯವು ತಲಕಳಲೆ ಹೊಳೆಯ ನೀರನ್ನು ಬಳಸಲು ಹಾಗೂ ಸಮತೂಕವನ್ನು ಕಲ್ಪಿಸಲು ಸಹಾಯಕವಾಗುವುದು. ಮತ್ತು ೧೪,೧೯೦ ಅಡಿಗಳ ನಾಲೆ ಹಾಗೂ ೨,೦೦೦ ಅಡಿಗಳ ಮತ್ತು ೩,೯೧೦ ಅಡಿಗಳ ಎರಡು ಸುರಂಗಗಳನ್ನೊಳಗೊಂಡ ನೀರುಮಾರ್ಗವನ್ನು ನಿರ್ಮಿಸುವುದು. ತಲಕಳಲೆ ಜಲಾಶಯದವರೆಗೆ ಒಂದನೆಯ ಸುರಂಗದಲ್ಲಿ ಪ್ರತಿ ಸೆಕೆಂಡಿಗೂ ೬,೨೦೦ ಘನ ಅಡಿಗಳ ನೀರು ಹರಿಯುವಂತೆ ಮತ್ತು ಎರಡನೆಯ ಸುರಂಗದಲ್ಲಿ ಪ್ರತಿ ಸೆಕೆಂಡಿಗೂ ೮,೬೭೦ ಘನ ಅಡಿಗಳ ನೀರು ಹರಿಯುವಂತೆ ಸುರಂಗಗಳ ವಿನ್ಯಾಸಗಳನ್ನು ಸಿದ್ಧಪಡಿಸಲಾಗಿದೆ. ಪ್ರತಿಯೊಂದೂ ೬,೫೦೦ ಅಡಿಗಳ ಉದ್ದವಿರುವ ಹತ್ತು ತೂಬು ಕೊಳಾಯಿಗಳ ಮೂಲಕ ನೀರನ್ನು ಹರಿಯುವಂತೆ ಮಾಡಲಾಗುವುದು. ತಳಭಾಗದಲ್ಲಿ ಒಂದೊಂದೂ ೮೯,೧೦೦ ಕಿಲೋವಾಟ್‌ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆದಿರುವ ೧೦ ವಿದ್ಯುಚ್ಛಕ್ತಿ ಉತ್ಪಾದಕ ಯಂತ್ರಗಳನ್ನು ಸ್ಥಾಪಿಸಲಾಗುವುದು. ಅಣೆಕಟ್ಟೆಯಿರುವ ಸ್ಥಳದಲ್ಲಿ ೪೦,೮೦೦ ಕಿ. ವಾ ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದೆ. ಈಗ ಜೋಗದಲ್ಲಿ ೭,೩೨,೦೦೦ ಕಿ ವಾ ಗಳ ವಿದ್ಯುಚ್ಛಕ್ತಿ ಸಂಚಯ ಸಾಮರ್ಥ್ಯವಿದೆ. ಇವೂ ಸೇರಿ ಈ ಯೋಜನೆಯು ಒಟ್ಟು ೧೦ ಲಕ್ಷಕ್ಕಿಂತಲೂ ಹೆಚ್ಚಿನ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾಮರ್ಥ್ಯ ಪಡೆಯುವುದು. ಈ ಯೋಜನೆಯು ಭಾರತದಲ್ಲಿನ ಬೃಹತ್ ಪ್ರಮಾಣದ ಜಲಜನಿತ ವಿದ್ಯುಚ್ಛಕ್ತಿ ಉತ್ಪಾದನಾ ಯೋಜನೆಗಳಲ್ಲಿ ಒಂದಾಗುವುದು. ಈಗಿನ ಅಂದಾಜುಗಳ ಪ್ರಕಾರ ಈ ಯೋಜನೆಗೆ ಸರಿಸುಮಾರು ೩೧ ಕೋಟಿ ರೂಗಳ ಹಣ ವೆಚ್ಚವಾಗುವುದು. ಪ್ರತಿ ಕಿಲೋವಾಟ್ ವಿದ್ಯುಚ್ಛಕ್ತಿಯ ಉತ್ಪಾದನೆಗೆ ೫೦೦ ರಿಂದ ೬೦೦ ರೂಗಳ ಹಣ ವೆಚ್ಚವಾಗುವುದು. ಆದ್ದರಿಂದ ಈ ಯೋಜನೆಯು ಭಾರತದಲ್ಲಿ ವಿದ್ಯುಚ್ಛಕ್ತಿಯನ್ನು ಅತ್ಯಲ್ಪ ವೆಚ್ಚದಲ್ಲಿ ಉತ್ಪಾದಿಸುವ ಯೋಜನೆಗಳಲ್ಲಿ ಒಂದಾಗುವುದು.

ಈ ಪರಿಮಾಣದ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಅನೇಕ ಆಡಳಿತ ಹಾಗೂ ಮಾನವ ಸಂಬಂಧವಾದ ಸಮಸ್ಯೆಗಳು ಉದ್ಭವಿಸುವುವು. ಯೋಜನೆಯನ್ನು ಕಾರ್ಯಗತಮಾಡುವ ಸಂಬಂಧವಾದ ರಚನೆ ಹಾಗೂ ಸಂಘಟನೆ, ನುರಿತ ಸಿಬಂದಿ ಮತ್ತು ಕಾರ್ಮಿಕರು, ಯಂತ್ರಗಳು ಮುಂತಾದವು ಆಡಳಿತ ಸಮಸ್ಯೆಗಳಿಗೆ ಸಂಬಂಧಿಸುವುವು. ಅಣೆಕಟ್ಟೆ ಸುರಂಗಗಳು ಮುಂತಾದ ಯೋಜನೆಯ 'ಸಿವಿಲ್ ಕಾರ್ಯ'ಗಳನ್ನು ಕಾರ್ಯಗತ ಮಾಡುವುದಕ್ಕಾಗಿ 'ಸಿವಿಲ್ ಸರ್ಕಲ್' ಮತ್ತು ಯೋಜನೆಯ ವಿದ್ಯುಚ್ಛಕ್ತಿ ವಿಭಾಗಕ್ಕಾಗಿ ಎಲೆಕ್ಟ್ರಿಕಲ್ ಸರ್ಕಲ್'ಗಳನ್ನು ರಚಿಸಲಾಗಿದೆ. ಪ್ರತಿ ಸರ್ಕಲ್'ಗೂ ಪ್ರತ್ಯೇಕ ಮುಖ್ಯ ಎಂಜಿನಿಯರಿರುವರು. ಜೋಗದಲ್ಲಿರುವ ಮಹಾತ್ಮ ಗಾಂಧಿ ಜಲಜನಿತ ವಿದ್ಯುದಾಗಾರದಂತೆ ಶರಾವತಿ ವಿದ್ಯುದಾಗಾರವನ್ನು ಮೈಸೂರಿನ ಎಂಜಿನಿಯರುಗಳು ವಿದೇಶೀ ಯಂತ್ರ ಸಾಮಗ್ರಿಗಳ ನೆರವಿನಿಂದ ನಿರ್ಮಿಸುವರು. ಈ ನಿರ್ಮಾಣ ಕಾರ್ಯಕ್ಕೆ ಅಗತ್ಯವಾಗುವ ಶ್ರಮವನ್ನು ಪಡೆಯಲಾಗುವುದು. ಭಾಕ್ರಾ ನಾಂಗಲ್, ಹಿರಾಕುಡ್, ನಾಗಾರ್ಜುನ ಸಾಗರ ಮತ್ತು ಕೋಯ್ನಾಗಳಲ್ಲಿನಂತೆ ಇಲ್ಲಿ ಯಂತ್ರಗಳ ಉಪಯೋಗ ಅಲ್ಪ, ನಿರ್ಮಾಣ ಕಾರ್ಯಗಳಿಗೆ ಮಂಜೂರಾತಿಗಳನ್ನು ನೀಡುವುದಕ್ಕಾಗಿ ಹಾಗೂ ಆಗಿಂದಾಗ್ಗೆ ನಿರ್ಮಾಣ ಕಾರ್ಯದ ಪ್ರಗತಿಯನ್ನು ವಿಮರ್ಶಿಸುವುದಕ್ಕಾಗಿ ಉನ್ನತ ಶಕ್ತಿಯ ಮಂಡಲಿಯೊಂದನ್ನು ರಚಿಸಲಾಗಿದೆ. ಈ ಮಂಡಲಿಗೆ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳೇ ಅಧ್ಯಕ್ಷರಾಗಿರುವರು. ರಾಜ್ಯದ ಒಳಗಿನ ಹಾಗೂ ಹೊರಗಿನ ಖ್ಯಾತಿವೆತ್ತ ಎಂಜಿನಿಯರುಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಈ ಮಂಡಲಿಯಲ್ಲಿರುವರು. ಪ್ರಧಾನ ಅಕೌಂಟ್ಸ್ ಅಧಿಕಾರಿಯೊಬ್ಬರ ಅಧೀನದಲ್ಲಿ ಅಕೌಂಟ್ಸ್ ವಿಭಾಗವೊಂದು ಸ್ಥಳದಲ್ಲಿರುವುದು.

ಕಳೆದ ಒಂದು ವರ್ಷದಲ್ಲಿ ಯಥೇಚ್ಛವಾದ ಪೂರ್ವ ಭಾವಿಕಾರ್ಯ ನಡೆದಿದೆ. ಯೋಜನಾ ನಿರ್ಮಾಣ ಸ್ಥಳಗಳಿಗೆ ಸಂಚಾರ ಮಾರ್ಗವನ್ನು ಕಲ್ಪಿಸಲಾಗಿದೆ. ಸಿಬ್ಬಂದಿಯವರಿಗಾಗಿ ವಸತಿಗಳು ನಿರ್ಮಿಸಲ್ಪಟ್ಟಿವೆ. ಕಾರ್ಮಿಕರಿಗಾಗಿ ಕಾಲೋನಿಗಳ ಸ್ಥಾಪನೆಯಾಗಿದೆ. ಈ ಕಾಲೋನಿಗಳಿಗೆ ದೀಪ ಹಾಗೂ ಕುಡಿಯುವ ನೀರು ಮತ್ತು ಔಷಧೋಪಚಾರ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಅಣೆಕಟ್ಟು, ನಾಲೆಗಳು ಮುಂತಾದ ಸಿವಿಲ್ ಕಾರ್ಯಗಳ ಬಗ್ಗೆ ಅಡಿಪಾಯಗಳನ್ನು ತೋಡುವ ಕಾರ್ಯವನ್ನಾರಂಭಿಸಲಾಗಿದೆ. ವಿದ್ಯುಚ್ಛಕ್ತಿ ವಿಭಾಗದಲ್ಲಿ, ತಪಶೀಲುಗಳು ಮತ್ತು ನಕ್ಷೆಗಳನ್ನು ರಚಿಸಲಾಗಿದೆ. ಸಾಮಾನು ಸರಂಜಾಮುಗಳ ಬಗ್ಗೆ 'ಟೆಂಡರ್'ಗಳು ಮತ್ತು 'ಕೊಟೇಷನ್'ಗಳನ್ನು ಕರೆಯಲಾಗಿವೆ. ಪ್ರಸ್ತುತ ಕಾರ್ಯಕ್ರಮದ ಪ್ರಕಾರ ಮೊದಲನೆಯ ಘಟ್ಟದಲ್ಲಿ ೧೯೬೧—೬೨ರ ವೇಳೆಗೆ ಪ್ರತಿಯೊಂದೂ ೮೯,೧೦೦ ಕಿ. ವಾ. ಗಳ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಎರಡು ವಿದ್ಯುಚ್ಛಕ್ತಿ ಉತ್ಪಾದಕ ಯಂತ್ರಗಳನ್ನು ಪ್ರತಿಷ್ಠಾಪಿಸುವ ಕಾರ್ಯವನ್ನು ಪೂರ್ಣಗೊಳಿಸಲಾಗುವುದು.

ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಉದ್ಭವಿಸುವ ಮಾನವ ಸಂಬಂಧವಾದ ಸಮಸ್ಯೆಗಳಲ್ಲಿ ಸಿಬ್ಬಂದಿ ಮತ್ತು ಕಾರ್ಮಿಕರಿಗೆ ಸೌಕರ್ಯಗಳ ಕಲ್ಪನೆ, ವಿದ್ಯುದಾಗಾರದ ಕಾಲೋನಿಯ ಕಾರ್ಯನಿರ್ವಹಣೆ, ಜಲಾಶಯದ ನಿರ್ಮಾಣದ ಫಲಸ್ವರೂಪವಾಗಿ ಮುಳುಗಡೆಯಾಗುವ ಗ್ರಾಮಗಳು ಮತ್ತು ಜಮೀನುಗಳ ಜನರ ಪುನರ್ವಸತಿ ಸಂಬಂಧವಾದ ಸಮಸ್ಯೆಗಳೂ ಸೇರಿವೆ. ಲಿಂಗನಮಕ್ಕಿ ಅಣೆಕಟ್ಟೆಯ ನಿರ್ಮಾಣದಿಂದ ೬೦ ಚದುರ ಮೈಲಿಗಳಷ್ಟು ಅಥವಾ ೩೭,೬೦೦ ಎಕರೆಗಳಷ್ಟು ವಿಸ್ತೀರ್ಣವು ನೀರಿನಲ್ಲಿ ಮುಳುಗುವುದು. ಹೀಗೆ ಮುಳುಗಡೆಯಾಗುವ ಭೂಮಿಯಲ್ಲಿ ಹೆಚ್ಚಿನ ಭೂಮಿಯಲ್ಲಿ ಮಾನವಸ್ಪರ್ಶವಿಲ್ಲದ ಅರಣ್ಯಗಳೇ ಇರುವುವು. ಸುಮಾರು ೧೯,೦೦೦ ಎಕರೆಗಳ ತರೀ ಜಮೀನು, ಸುಮಾರ ೬೫೦೦ ಎಕರೆಗಳಷ್ಟು ಖುಷ್ಕಿ ಜಮೀನು ಮತ್ತು ಸುಮಾರು ೨,೦೦೦ ಎಕರೆಗಳಷ್ಟು ಬಾಗಾಯತು ಜಮೀನುಗಳಿಗೆ ಈ ಯೋಜನೆಯಿಂದ ಧಕ್ಕೆ ತಗಲುವುದು. ೧೫೪ ಗ್ರಾಮಗಳಲ್ಲಿ ವಾಸಿಸುತ್ತಿರುವ ೧೨-೧೩ ಸಹಸ್ರ ಗ್ರಾಮವಾಸಿಗಳು ಸ್ಥಾನ ಪಲ್ಲಟಗೊಳ್ಳುವರು. ಅವರಿಗೆ ಪುನರ್ವಸತಿ ಸೌಲಭ್ಯಗಳನ್ನು ಕಲ್ಪಿಸಬೇಕಾಗುವುದು. ಈ ಪ್ರದೇಶದಲ್ಲಿ ಜನಸಂಖ್ಯೆ ವಿರಳವಾದಾಗ್ಯೂ ಇಲ್ಲಿನ ಗ್ರಾಮವಾಸಿಗಳ ಪುನರ್ವಸತಿ ಪ್ರಶ್ನೆಯು ವಿಶೇಷಾಂಶಗಳನ್ನು ಒಡ್ಡುವುದು. ಈ ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ರಾಜ್ಯ ಸರ್ಕಾರದವರು ಸ್ಥಾನಪಲ್ಲಟಗೊಳ್ಳುವ ಈ ಪ್ರದೇಶದ ಗ್ರಾಮವಾಸಿಗಳಿಗಾಗಿ ಹಲವಾರು ಸೂಕ್ತ ರೀತಿಯ ಕ್ರಮಗಳನ್ನು ಕೈಗೊಂಡಿರುವರು.

(೮ನೇ ಪುಟ ನೋಡಿರಿ)

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಬರೆದವರು- ಎಮ್ ರಘುನಂದನ ರಾವ್, ತಲ್ಲೂರು)
ನೀತಿಯು ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,
ಬೆಲೆ- ಐದಾಣೆ ಮಾತ್ರ ಟ. ಖ. ಪ್ರತ್ಯೇಕ.
ನವಯುಗ ಪ್ರೆಸ್, ಉಡುಪಿ

ಮಹಿಳಾ ಸಾಹಿತ್ಯ! **ನವೀನ ಪುಸ್ತಕ**
ಕುಮಾರಿ ಪಿ. ಯಶೋದಾ ಅವರು ಬರೆದ
ಬಾಳಿನ ಬೆಳೆ
ಬಾಳಿನ ಸೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು
ನೂತನ ಕತೆಗಳ ಸಂಗ್ರಹ ಸ್ತ್ರೀ ಪುರುಷರೆಲ್ಲರೂ
ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!
ಬೆಲೆ ೧—12—0 (0—14—0 ಕಳಿಸಿದರೆ ಒಂದು ಪ್ರತಿಯನ್ನು
ಬುಕ್ ಪೋಸ್ಟು ಮಾಡಬಹುದು)
ನವಯುಗ ಪ್ರೆಸ್, ಉಡುಪಿ

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೫-೨-'೫೮	೨೫

ಶರಾವತಿಯ ಯೋಜನೆ

ಕಳೆದವಾರ, ಮೈಸೂರು ರಾಜ್ಯದಲ್ಲಿ ಏಕೆ, ಅಖಿಲಭಾರತದಲ್ಲಿಯೇ ಒಂದು ಬೃಹತ್ ವಿದ್ಯುದ್ಯೋಜನೆಯ ನಿರ್ಮಾಣ ಕಾರ್ಯದ ಅಡಿಗಲ್ಲನ್ನಿಡಲಾಯಿತು. ೫ನೆಯ ದಿನಾಂಕ ಕೇಂದ್ರದ ನೀರಾವರೀ ಮತ್ತು ವಿದ್ಯುತ್‌ಶಾಖೆಯ ಮಂತ್ರಿಗಳಾದ ಶ್ರೀ ಎಸ್. ಕೆ. ಪಾಟೀಲರು ಈ ಘನಕಾರ್ಯವನ್ನು ಪ್ರಾರಂಭಿಸಿದರು. ಮೈಸೂರಿನ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರೂ ಉಪಸ್ಥಿತರಿದ್ದು ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಈ ಯೋಜನೆಯು ಪೂರ್ತಿಯಾಯಿತೆಂದರೆ ಅದೊಂದು ಭಾರತದ ದೊಡ್ಡ ಆಸ್ತಿಯಾಗುವುದು. ೧೦ ಲಕ್ಷ ಕಿಲೋವಾಟಗಳಷ್ಟು ವಿದ್ಯುತ್ತನ್ನು ಒದಗಿಸುವುದು. ಇದರಿಂದ ಮೈಸೂರು ರಾಜ್ಯದಲ್ಲಿ ಹಾಗೂ ಅದರ ಆಸುಪಾಸಿನ ರಾಜ್ಯಗಳಲ್ಲಿ ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಕೈಗೊಳ್ಳಲು ಅನುಕೂಲವಾಗುತ್ತದೆ—ಇಂತಹ ಅತಿ ಪ್ರಮುಖವಾದ ಯೋಜನೆಯೇ ಶರಾವತಿಯ ಲಿಂಗನಮಕ್ಕಿ ಯೋಜನೆ.

ಲಿಂಗನಮಕ್ಕಿಯಲ್ಲಿ ಇಂತಹ ಯೋಜನೆಯನ್ನು ಪ್ರಾರಂಭಿಸುವ ಸೂಚನೆಗಳು ಬ್ರಿಟಿಷ ಸತ್ತೆಯ ಕಾಲದಿಂದಲೂ ಇದ್ದುವು. ಆದರೆ, ಅದು ಕಾರ್ಯರೂಪಕ್ಕೆ ಬರಬೇಕಾದರೆ ಮಾತ್ರ ಇಷ್ಟು ಸಮಯ ಬೇಕಾಯಿತು. ತಡವಾದರೂ ಚಿಂತೆಯಿಲ್ಲ. ಈ ಯೋಜನೆಯು ಜನೋಪಕಾರಿಯಾದರೆ ಸಾಕು. ಇದರ ಸಂಪೂರ್ಣ ವಿಚಾರವು ಇದೇ ಸಂಚಿಕೆಯ ಒಂದು ಲೇಖದಲ್ಲಿ ಪ್ರಕಟವಾಗಿದೆ. ಆದುದರಿಂದ ಹೆಚ್ಚು ಹೇಳಬಯಸುವುದಿಲ್ಲ. ಆಧುನಿಕ ಜಗತ್ತಿನಲ್ಲಿ ವಿದ್ಯುತ್ ಇಲ್ಲದೆ ದಿನಗಳೆಯುವುದೇ ಅಸಾಧ್ಯವೆಂಬಂತಿದೆ. ನಮ್ಮೆಲ್ಲ ಉದ್ಯೋಗ ಕೆಲಸಗಳಿಗೂ ಈಗೀಗ ವಿದ್ಯುತ್ತಿನ ಬಳಕೆಯು ಹೆಚ್ಚಾಗುತ್ತ ಬರುತ್ತಿದೆ. ಇದೀಗ ಔದ್ಯೋಗೀಕರಣದತ್ತ ಸಾಗುತ್ತಿರುವ ಭಾರತದಲ್ಲಿ ಕೈಗಾರಿಕೆಗಳಿಗೆ ಮನ್ನಣೆಕೊಡಲಾಗುತ್ತದೆ ಹಾಗೆಯೇ ಆಹಾರದ ಅಭಾವವನ್ನು ಹೋಗಲಾಡಿಸಲು ಹೆಚ್ಚು ಬೆಳೆ ಬೆಳೆಯುವತ್ತ ದೃಢಸಂಕಲ್ಪ ಮಾಡಲಾಗಿದೆ. ಈ ಎರಡು ಆವಶ್ಯಕತೆಗಳಿಗೂ ಪ್ರಮುಖ ಸಾಧನ ವಿದ್ಯುತ್. ಗ್ರಾಮಾಂತರ ಪ್ರದೇಶಗಳಲ್ಲಿ ಗದ್ದೆ ತೋಟಗಳಿಗೆ ನೀರು ಹಾಯಿಸಲು, ಪೇಟೆಪಟ್ಟಣಗಳಲ್ಲಿ ಕಾರಖಾನೆಗಳನ್ನು ನಡೆಸಲು ಈ ವಿದ್ಯುತ್ತು ಬೇಕೇ ಬೇಕು. ವಿದ್ಯುತ್ತಿನ ಸಾರ್ವದೇಶಿಕ ಉಪಯುಕ್ತತೆಯ ಅರಿವು ಜನತೆಯಲ್ಲಿ ಹೆಚ್ಚುತ್ತಾ ಬಂದಂತೆ ವಿದ್ಯುತ್ತಿನ ಬೇಡಿಕೆಯೂ ಅಧಿಕವಾಗುತ್ತ ಬಂತು. ನಮ್ಮ ರಾಜ್ಯದಲ್ಲಿಯೇ ಆಗಲಿ, ಸಾಕಷ್ಟು ವಿದ್ಯುತ್ ಶಕ್ತಿಯ ಉತ್ಪಾದನೆಯಾಗುವುದಿಲ್ಲ.

ಜಲವಿದ್ಯುತ್ತನ್ನು ವಿದ್ಯುಜ್ಜನಕಗಳ ಮೂಲಕ ತಯಾರಿಸುವುದು ಆರ್ಥಿಕ ದೃಷ್ಟಿಯಿಂದ ಲಾಭಕರವಾದುದರಿಂದ ಜನತೆಗೆ ಅದು ಅಗ್ಗದದರದಲ್ಲಿ ದೊರೆಯುವುದು. ಈ ಜಲಶಕ್ತಿ ಯಾವ ಕಾಲಕ್ಕೂ ಕುಗ್ಗಬಾರದೆಂತಲೇ ಈಗೀಗ ಈಕಡೆಗೆ ವಿಶೇಷ ಗಮನವೀಯಲಾಗುತ್ತದೆ. ಮಲೆನಾಡಿನಲ್ಲಿರುವ ಒಕ್ಕಲತನ ಹಾಗೂ ಖನಿಜಗಳ ಅಭಿವೃದ್ಧಿಗೆ ಈ ಶರಾವತೀ ಯೋಜನೆಯು ಹೇರುವಾಗ ಇರದು ಸೌಲಭ್ಯ, ಅನುಕೂಲಗಳನೊದಗಿಸಿದರೆ, ನಮ್ಮ ರಾಜ್ಯವು ಪ್ರಗತಿಹೊಂದುವುದು ನಿಶ್ಚಯ. ಹಿಂದುಳಿದ ಮಲೆನಾಡಿಗೆ ಈ ಯೋಜನೆಯು ವಿದ್ಯುತ್ತನ್ನೊದಗಿಸಿದರೆ, ಅಲ್ಲಿ ಅನೇಕಾನೇಕ ಇತರ ಯೋಜನೆಗಳು ಹುಟ್ಟಿಕೊಳ್ಳಬಹುದು. ಈಗ ಜೋಗಿನಲ್ಲಿ ದೊರೆಯುತ್ತಿರುವ ವಿದ್ಯುತ್ತಿನ ಶಕ್ತಿ ಕೇವಲ ೧೮೦ ಸಾವಿರ ಕಿಲೋವಾಟುಗಳು ಆದರೆ, ಈಗಾಗಲೇ ಇರುವ ಬೇಡಿಕೆಯು ಇದಕ್ಕಿಂತ ಅಧಿಕವಿದೆ.

ಶರಾವತಿ ಯೋಜನೆಯು ಭಾರತದಲ್ಲಿಯೇ ಅತ್ಯಂತ ಹಿರಿದಾದ ಏಕಮಾತ್ರ ವಿದ್ಯುದ್ಯೋಜನೆಯಾಗಿದೆ. ಮೈಸೂರು ರಾಜ್ಯದಲ್ಲಿ ಗಟ್ಟಗಳಿಂದ ಸಮುದ್ರದ ಕಡೆಗೆ ಹರಿಯುವ ಹಲವಾರು ನದಿಗಳಲ್ಲಿನ ಜಲಪಾತಗಳನ್ನು ಬಳಸಿಕೊಂಡು ಒಟ್ಟು ೫೦ ಲಕ್ಷ ಕಿಲೋವಾಟುಗಳಷ್ಟು ಈ ಮಿಂಚಿನ ಬಲವನ್ನು ಪಡೆಯಬಹುದಂತೆ. ಹಿಮಾಲಯ ಪರ್ವತದಲ್ಲಿರುವ ಜಲಪಾತಗಳಿಂದ ವಿದ್ಯುತ್ತು ತಯಾರಿಸಿದರೆ, ಅದು ಜಗತ್ತಿಗೇನೇ ಸಾಕಾಗುವುದೆಂದೊಬ್ಬ ಪಾಶ್ಚಾತ್ಯ ಹೇಳಿದ್ದಾನೆ. ಆದರೆ, ಎಲ್ಲವನ್ನೂ ಮಾನವನು ತನ್ನ ಅಂಕೆಯಲ್ಲಿಟ್ಟುಕೊಳ್ಳುವುದು ಸಾಧ್ಯವಿಲ್ಲ. ನಮ್ಮ ರಾಜ್ಯದಲ್ಲಿ ಈಗಾಗಲೇ ಕಾಳಿನದಿ, ಕೃಷ್ಣಾ, ಬಾರಪೊಳೆ ಮತ್ತು ವರಾಹಿನದಿಗಳಿಂದ ಜಲಜನಿತ ವಿದ್ಯುಚ್ಛಕ್ತಿಯನ್ನು ಪಡೆಯುವ ಕುರಿತಾಗಿ ಪೂರ್ವಭಾವೀ ಸಮೀಕ್ಷೆಗಳು ನಡೆಯುತ್ತಿವೆ.

ಇನ್ನೊಂದು ಬಗೆಯಿಂದಲೂ ಶರಾವತಿಯ ಯೋಜನೆಯು ಲಾಭಪ್ರದವಾಗಿದೆ. ಭಾರತದಲ್ಲಿ ಈಗಾಗಲೇ ಒಂದಲ್ಲ ಅನೇಕ ಯೋಜನೆಗಳು ಕಾರ್ಯರೂಪದಲ್ಲಿ ಬರುತ್ತಿವೆ. ಆದರೆ, ಅವೆಲ್ಲವುಗಳಿಗಿಂತ ಶರಾವತಿಯ ಯೋಜನೆಯು ಅತ್ಯಂತ ಕಡಿಮೆ ವೆಚ್ಚದಲ್ಲಿ ನಿರ್ಮಾಣವಾಗುವ ಅತ್ಯಂತ ಹಿರಿಯದಾದ ಯೋಜನೆಯಾಗಿದೆ. ಇದರ ವೆಚ್ಚವು ಅತ್ಯಂತ ಕಡಿಮೆಯಿದ್ದು ಉತ್ಪಾದನಾ ವೆಚ್ಚವು ಕಿಲೋವಾಟ್ ಒಂದಕ್ಕೆ ರೂ. ೫೫೦ ಆಗುವದೆಂದು ಹೇಳಲಾಗುತ್ತದೆ. ಹಾಗಿರುವಾಗ, ಇಲ್ಲಿನ ವಿದ್ಯುತ್ತು ಅಗ್ಗದ ದರದಲ್ಲಿಯೇ ದೊರೆಯುತ್ತದೆ ಎನ್ನಬಹುದು. ಅಣೆಕಟ್ಟು ಕಟ್ಟುವುದರಿಂದ ನೀರು ತುಂಬುವ ಪ್ರದೇಶಗಳ ಜನರಿಗೆ ರಾಜ್ಯಸರಕಾರವು ತಕ್ಕ ವ್ಯವಸ್ಥೆ ಮಾಡಿರುವುದು. ಆದುದರಿಂದ, ಈ ಯೋಜನೆಯು ಬೇಗನೇ ಭರದಿಂದ ಕಾಲದಸಲ್ಲಿ ಮುಗ್ನವಾಗುವದೆಂದು ಆಶಿಸುತ್ತೇವೆ. ಕರ್ನಾಟಕದ ನಿಸರ್ಗ ಸಂಪತ್ತು ಅಪಾರವಾಗಿದ್ದರೂ, ಅದು ಪಡೆಯಬೇಕಾದ ಸ್ಥಾನವನ್ನು ಇನ್ನೂ ಪಡೆದಿಲ್ಲ. ಇನ್ನು ಮುಂದಕ್ಕೆ ಈ ಶರಾವತಿಯ ಯೋಜನೆಯಿಂದ ಅಗ್ಗ ದರದ ವಿದ್ಯುತ್ತು ಬಂದ ಮೇಲಾದರೂ ಅದು ತನ್ನ ಸ್ಥಾನವನ್ನೇರಬಹುದು. ಉದ್ದಿಮೆಗಳಲ್ಲಿ ಹಣ ತೊಡಗಿಸುವ ಉದ್ದಿಮೆಗಾರರೂ ಇತ್ತ ಗಮನವನ್ನು ಹರಿಸಿದರೆ, ರಾಜ್ಯದ ಕಲ್ಯಾಣವಾಗುವುದೆಂದು ಹೇಳಬಯಸುತ್ತೇವೆ.

ರಾಜ್ಯದ ಎಲ್ಲೆಡೆಗಳಿಗೂ ವಿದ್ಯುತ್ತನ್ನು ಒದಗಿಸುವರೆ ತಕ್ಕ ಕಾರ್ಯಕ್ರಮಗಳನ್ನು ಎಂದರೆ ತಂತಿ ಎಳೆಯುವ ಕೆಲಸವನ್ನು ರಾಜ್ಯಸರಕಾರವು ಇದರ ಬೆನ್ನಲ್ಲಿಯೇ ಮಾಡತೊಡಗಬೇಕು. ಯೋಜನೆಯು ಒದಗಿಸುವ ಪ್ರತಿಯೊಂದು ಲಾಭಾಂಶವನ್ನೂ ಜನತೆಗೆ ನ್ಯಾಯವಾದ ಏಕರೀತಿಯ ಬೆಲೆಯಲ್ಲಿ ದೊರೆಯುವಂತೆ ಮಾಡಬೇಕು. ವಿದ್ಯುತ್ತು ರಾಜ್ಯದ ಸರ್ವಕೋನೆಗಳಿಗೂ ಹರಡಿ, ಜನತೆಯ ಆರ್ಥಿಕ ಪ್ರಗತಿಯಲ್ಲಿ ನಾಮಾಂಕಿತ ಕಾರ್ಯ ಮಾಡುವಂತಾಗಲೆಂದು ಹಾರೈಸಿ, ಈ ಯೋಜನೆಯನ್ನು ಕಾರ್ಯಾಚರಣೆಗೆ ತರುವಲ್ಲಿ ಕಾರಣರಾದ ರಾಜ್ಯ ಹಾಗೂ ಕೇಂದ್ರ ಸರಕಾರಗಳಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

ಮಹತ್ವದ ಸುದ್ದಿಗಳು

ನೂತನ ವಿದ್ಯುದ್ಯೋಜನೆ

ಜಗತ್ಪ್ರಸಿದ್ಧ ಜೋಗದಿಂದ ಆರು ಮೈಲಿಗಳಷ್ಟು ದೂರದಲ್ಲಿರುವ ಲಿಂಗನಮಕ್ಕಿಯಲ್ಲಿ ಶರಾವತೀ ವಿದ್ಯುದ್ಯೋಜನೆಯ ನಿರ್ಮಾಣದ ಪ್ರಾರಂಭೋತ್ಸವವು ದಿನಾಂಕ ೫ರಂದು ನಡೆಯಿತು. ಕೇಂದ್ರ ನೀರಾವರೀ ಮತ್ತು ವಿದ್ಯುತ್ ಮಂತ್ರಿಗಳಾದ ಶ್ರೀ ಎಸ್. ಕೆ ಪಾಟೀಲರು ಇದನ್ನು ಉದ್ಘಾಟಿಸಿದರು. ರಾಜ್ಯದ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ಎಸ್. ಕೆ. ಪಾಟೀಲರು ಮಾತಾಡುತ್ತ ಶರಾವತೀ ಯೋಜನೆಯ ಪ್ರಾಮುಖ್ಯ ಮತ್ತು ಅದರಿಂದ ದೊರೆಯಬಹುದಾದ ಪ್ರಯೋಜನಗಳನ್ನು ವಿವರಿಸಿದರು: ಭಾರತದಲ್ಲಿ ಜಲಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಪಡೆಯಲು ಮೈಸೂರು ಮಾರ್ಗದರ್ಶನಮಾಡಿದೆ. ಮಾತ್ರೀಗ ಅದು ಭಾರತದಲ್ಲಿಯೇ ಹಿರಿದೆನಿಸಿದ ಜಲಜನಿತ ವಿದ್ಯುದಾಗರವನ್ನು ಪಡೆದಿದೆ. ಇನ್ನು ಐದು ಅಥವಾ ಹತ್ತು ವರ್ಷಗಳ ನಂತರ ಬಾಕ್ರ—ನಂಗಲ್ ಇತ್ಯಾದಿ ಭಾರತದ ಬೃಹತ್ ಯೋಜನೆಗಳಂತೆ ಲಿಂಗನಮಕ್ಕಿಯ ಈ ಯೋಜನೆಯೂ ಚಿರಪರಿಚಿತವಾಗುವುದು. ಶರಾವತೀ ನದಿಯಿಂದ ಜಲಜನಿತ ವಿದ್ಯುತ್ ಶಕ್ತಿಯನ್ನು ಉದ್ಪಾದಿಸುವ ಸಾಧ್ಯತೆಗಳನ್ನು ಗಮನಿಸಿ ಭಾರತ ಸರಕಾರದವರು ಲೋಪ್ ಸೆಂಟರಿಗೆ ಅನತಿದೂರದಲ್ಲಿರುವ ಹಾಗೂ ಮೈಸೂರು ರಾಜ್ಯಕ್ಕೆ ಕ್ರಮೇಣ ನೆರೆಹೊರೆಯ ರಾಜ್ಯಗಳಿಗೆ ಸೌಲಭ್ಯಗಳನ್ನು ನೀಡಬಹುದಾದ ಈ ಯೋಜನೆಗೆ ಅಗ್ರ ಪ್ರಾಧಾನ್ಯವನ್ನಿತ್ತಿರುವರು." ಎಂದು ಮುಂತಾಗಿ ನುಡಿದರು.

ಸಭಾಧ್ಯಕ್ಷ ಸ್ಥಾನದಿಂದ ಶ್ರೀ ನಿಜಲಿಂಗಪ್ಪನವರು ಮಾತಾಡುತ್ತ ರಾಜ್ಯದಲ್ಲಿ ಕೈಗಾರಿಕೆ ಹಾಗೂ ಬೇಸಾಯದ ಅಭಿವೃದ್ಧಿಗಾಗಿ ವಿದ್ಯುತ್ತಿನ ಅಭಾವವಿರುವುದನ್ನು ಪ್ರಸ್ತಾಪಿಸಿದರು. ಮಲೆನಾಡು ಪ್ರದೇಶವು ಖನಿಜಗಳು ಹಾಗೂ ಕಾಫಿ, ಶ್ರೀಗಂಧದ ಮರ, ಏಲಕ್ಕಿ ಮೊದಲಾದ ಬೇಸಾಯ ವಸ್ತುಗಳನ್ನೊಳಗೊಂಡ ಕಚ್ಚಾ ವಸ್ತುಗಳ ಕಣಜವೆಂದವರು ಹೇಳಿ, ಇವುಗಳ ಅಭಿವೃದ್ಧಿಗೆ ವಿದ್ಯುತ್ತು ಉಪಯೋಗಕರವಾಗಬೇಕು ಎಂದರು.

ವಿಧಾನ ಸಭಾಧಿವೇಶನ

ಮೈಸೂರಿನ ವಿಧಾನ ಸಭೆಯ ಮುಂಗಡ ಪತ್ರದ ಅಧಿವೇಶನವು ಫೆಬ್ರವರಿ ೨೫ಕ್ಕೆ ಸೇರಲಿರುವುದು. ಇದರಲ್ಲಿ ಮುಂಗಡ ಪತ್ರದ ಜೊತೆಗೆ ಬೇರೆ ಕೆಲವು ಮಸೂದೆಗಳನ್ನೂ ಇಡಲಾಗುವದೆಂದು ತಿಳಿಯುತ್ತದೆ. ಮುಖ್ಯವಾಗಿ, ಆರ್ಥದಲ್ಲಿ ನಿಂತ ಜತ್ತಿ ಸಮಿತಿಯ ವರದಿಯ ಚರ್ಚೆಯನ್ನು ಮುಗಿಸಿ, ಭೂಸುಧಾರಣಾ ವಿಧೇಯಕವನ್ನು ಮುಂದೆ ತರಲಾಗುವುದು. ಹಣಕಾಸಿನ ಮಂತ್ರಿಗಳಾದ ಶ್ರೀ ಟಿ. ಮರಿಯಪ್ಪನವರು ಅಸ್ವಸ್ಥರಿರುವುದರಿಂದ ಅವರಾಗಲೀ ಬೇರೆಯಾರಾದರಾಗಲೀ ಮುಂಗಡ ಪತ್ರವನ್ನು ಮುಂದೆ ತರುವರು.

ಲೋಕಸಭೆ—ರಾಜ್ಯಸಭೆಗಳು

ಭಾರತದ ಸಂಸತ್ತಿನ ಎರಡೂ ಸಭೆಗಳು ದಿನಾಂಕ ೧೦ರಂದು ಪ್ರಾರಂಭವಾದುವು. ಮುಂಬರುವ ಮುಂಗಡ ಪತ್ರ, ಛಗಲಾ ಸಮಿತಿಯ ವರದಿ, ಅರ್ಥಸಚಿವರ ರಾಜೀನಾಮೆಯ ಪ್ರಶ್ನೆ, ವಿದೇಶೀ ವಿನಿಮಯದ ಪರಿಸ್ಥಿತಿ ಮತ್ತು ಕೆಲವೊಂದು ಸ್ವಾಯತ್ತ ಕಾರ್ಪೋರೇಶನುಗಳ ಕಾರ್ಯ ಪದ್ಧತಿಗಳ ನಿರೀಕ್ಷಣೆಯು ಈ ಅಧಿವೇಶನದ ಪ್ರಾರಂಭದಲ್ಲಿಯೇ ಕಂಡುಬಂದಿವೆ. ಮುಂದೆ ಮಂಡಿಸಲಿರುವ ಮುಂಗಡಪತ್ರದಲ್ಲಿ ನೂತನ ಕರಗಳನ್ನು ಹೇರುವ ಸೂಚನೆಗಳಿಲ್ಲವೆಂದೂ ಹೆಚ್ಚೆಂದರೆ ಕೊಡಗೆ ಕರವನ್ನು ಮಾತ್ರ ಒಳಗೊಂಡಿರಬಹುದೆಂದೂ ಹೇಳಲಾಗುತ್ತದೆ. ಅಲ್ಲದೆ ವಿದೇಶ ವಿನಿಮಯದಲ್ಲಿ ಒದಗಿಬಂದಿರುವ ಗಂಭೀರಸ್ಥಿತಿಯು ಹಲವಾರು ಸದಸ್ಯರ ಪರ್ಯಾಲೋಚನೆಗೆ ಬಂದಿದೆ ಎಂದೂ ತಿಳಿಸಬರುತ್ತದೆ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚೆಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

ಫೋರ್ಡ್ ಫೌಂಡೇಶನ್ನಿನ ಸಹಾಯ

ಭಾರತದಲ್ಲಿ ಚಿಕ್ಕ ಉದ್ಯೋಗಗಳ ಅಭಿವೃದ್ಧಿಗಾಗಿ ಸರಕಾರಕ್ಕೆ ಅಮೇರಿಕೆಯ ಫೋರ್ಡ್ ಫೌಂಡೇಶನ್ ಸಂಸ್ಥೆ ೩೩ ಲಕ್ಷ ಡಾಲರುಗಳಷ್ಟು ಸಹಾಯವನ್ನು ನೀಡಲು ಒಪ್ಪಿದೆ. ಭಾರತೀಯ ದ್ವಿತೀಯ ಪಂಚವಾರ್ಷಿಕ ಯೋಜನೆಗಳಲ್ಲಿ ಚಿಕ್ಕ ಕೈಗಾರಿಕೆಗಳಿಗೂ ವಿಶೇಷ ಪ್ರಾಧಾನ್ಯವಿದ್ದು ಅದಕ್ಕಾಗಿ ಈ ಹಣವನ್ನು ಎರಡು ಕಂತುಗಳಲ್ಲಿ ಅದು ಕೊಡಲಿದೆ. ಮೊದಲನೆಯ ಕಂತು ೨,೧೬೩ ಸಾವಿರ ದಷ್ಟಿದ್ದು ಇದು ಕೈಗಾರಿಕೆಯ ಪ್ರತ್ಯಕ್ಷಾಭಿವೃದ್ಧಿಗಾಗಿದೆ. ಎರಡನೆಯ ಮೊತ್ತವು ೬೦ ಸಾವಿರ ಡಾಲರಿದ್ದು ಅದನ್ನು ಭಾರತದ ಹಸ್ತಕೌಶಲ ಉದ್ಯೋಗಗಳ ಅಭ್ಯಾಸಕ್ಕಾಗಿ ವ್ಯಯ ಮಾಡಲಾಗುವುದು. ಇದಕ್ಕಾಗಿ ಒಂದು ತಜ್ಞರ ತಂಡವು ಭಾರತಕ್ಕೆ ಬರುವುದು. ೧೯೫೩ರಲ್ಲಿ ಫೋರ್ಡ್ ಫೌಂಡೇಶನ್ನು ಭಾರತಕ್ಕೆ ಮೊದಲನೆಯ ಬಾರಿಗೆ ಸಹಾಯವಿತ್ತಿತು. ಅನಂತರ ಅಖಿಲ ಪ್ರಾದೇಶಿಕ ಸಂಸ್ಥೆಗಳನ್ನು ಸ್ಥಾಪಿಸಲು ಸಹಾಯ ಮಾಡಿತಲ್ಲದೆ ಕೆಲಸಗಾರರ ತರಬೇತಿಗಾಗಿಯೂ ಒಂದು ಕೇಂದ್ರವನ್ನು ಪ್ರಾರಂಭಿಸಿತು. ಈ ಹೊಸತಾದ ಕೊಡುಗೆಯಿಂದ ಅದು ಭಾರತಕ್ಕಿತ್ತ ಒಟ್ಟು ಸಹಾಯವು ರೂ. ೪೩ ಲಕ್ಷ ಡಾಲರುಗಳಾಗುವುದು.

ಛಗಲಾ ಸಮಿತಿಯ ವರದಿ

ಮುಂಧ್ರಾ ಉದ್ದಿಮೆ ಕಂಪೆನಿಗಳಲ್ಲಿ ಭಾರತೀಯ ಜೀವವಿಮಾ ಮಂಡಳವು ತೊಡಗಿಸಿದ್ದ ಹಣದ ಕುರಿತಾಗಿ ಕಲೆಯೆತ್ತಿದ್ದ ಪ್ರಕರಣದಲ್ಲಿ ವಿಚಾರಣೆ ನಡೆಸಿದ ಛಗಲಾ ಆಯೋಗದ ವರದಿಯು ಈಗಾಗಲೇ ಭಾರತ ಸರಕಾರಕ್ಕೆ ಒಪ್ಪಿಸಲಾಗುವುದು. ಈ ವರದಿಯು ಗಂಭೀರ ಸ್ವರೂಪದಿದ್ದರೂ ಅದನ್ನು ಸಂಸತ್ ಸದಸ್ಯರು ಚರ್ಚಿಸಬಹುದೆಂದೂ ಅವರಿಂದ ಅದನ್ನು ಮರೆಯಾಗಿಡುವ ಬಯಕೆಯು ಭಾರತ ಸರಕಾರಕ್ಕಿಲ್ಲವೆಂದೂ ಪ್ರಧಾನಿ ಶ್ರೀ ನಹರೂರವರು ನುಡಿದಿರುವರು. ದೇಶದ ಎಲ್ಲ ಮೂಲೆಗಳಲ್ಲಿಯೂ ಕುತೂಹಲವನ್ನು ಕೆರಳಿಸಿದ್ದ ಈ ಪ್ರಕರಣದ ವರದಿ ಮಾತ್ರ ಯಾವ ರೀತಿಯಿಂಬಹುದೆಂದು ಯಾರೂ ಊಹಿಸಲಾರರು.

ಹಾರಡೀಕರರ ಅಸಮಾಧಾನ

ಕಾಂಗ್ರೆಸ್ ಸೇವಾದಳದ ಸಂಸ್ಥಾಪಕರೂ ಕರ್ನಾಟಕದ ಕಾಂಗ್ರೆಸ್‌ನ ಮುಂಡರೂ ಆದಡಾ. ಎನ್. ಎಸ್. ಹಡೀಕರರಿಗೆ ರಾಷ್ಟ್ರಾಧ್ಯಕ್ಷರು "ಪದ್ಮ ವಿಭೂಷಣ" ಪದವಿಯನ್ನು ಕಳೆದ ಪ್ರಜಾರಾಜ್ಯದಿನದಂದು ದಯಪಾಲಿಸಿದ್ದರು. ಆದರೆ ಶ್ರೀ ಹರ್ಡೀಕರರು "ಇಂತಹ ಪದವಿಗೆ ಅರ್ಹತೆಯನ್ನು ಪಡೆಯುವಂತಹ ಯಾವ ಕೆಲಸವನ್ನೂ ನಾನು ಮಾಡಿಲ್ಲವಾದುದರಿಂದ ದಿಲ್ಲಿಗೆ ಹೋದ ಬಳಿಕ ವಂದನಾಪೂರ್ವಕವಾಗಿ ಆ ಪದವಿಯನ್ನು ರಾಷ್ಟ್ರಪತಿಗಳಿಗೆ ಹಿಂದಕ್ಕೊಪ್ಪಿಸುವೆನು. ಇದುವರೆಗೆ ನಾನು ಮಾಡಿದ ಕೆಲಸದ ಬಗ್ಗೆ ನನಗೇನೂ ಸಮಾಧಾನವಾಗಲಿಲ್ಲ" ಎಂದವರು ತಮ್ಮ ನಿರಹಂಕಾರದ ಭಾವನೆಯನ್ನು ಪ್ರದರ್ಶಿಸಿದ್ದಾರೆ.

ದಕ್ಷಿಣಕ್ಕೆ ಒಂದೇ ಪೋಲೀಸು ಪಡೆ

ಮದ್ರಾಸ, ಕೇರಳ, ಮೈಸೂರು ಮತ್ತು ಆಂಧ್ರ ರಾಜ್ಯಗಳಿಗೆ ಸಾಮಾನ್ಯವಾದ ಒಂದೇ ಕಾದಿಟ್ಟ ಪೋಲೀಸ ಪಡೆಯನ್ನು ನಿರ್ಮಿಸಬೇಕೆಂದು ಈ ರಾಜ್ಯಗಳ ಪೋಲೀಸು ಇನ್ಸ್‌ಪೆಕ್ಟರ ಜನರಲ್ಲರು ಅನುಕೂಲಾಭಿಪ್ರಾಯಪಟ್ಟಿದ್ದಾರೆ. ಈ ಬಗ್ಗೆ ಸೂಕ್ತ ಸೂಚನೆಗಳನ್ನು ದಕ್ಷಿಣ ಪ್ರದೇಶ ಮಂಡಳದ ಮುಂದಿನ ಸಭೆಯಲ್ಲಿರಿಸಿ ಅನಂತರ ಅದರ ಆದೇಶದಂತೆ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

ಸಂಯುಕ್ತ ಅರಬಕ್ಕೆ ಮನ್ನಣೆ

ಇಜಿಪ್ಟ ಮತ್ತು ಸಿರಿಯಾಗಳ ಸಂಯುಕ್ತ ಅರಬ ರಾಷ್ಟ್ರವಾಗಿದ್ದು ಈ ಪ್ರಜಾರಾಜ್ಯಕ್ಕೆ ಮನ್ನಣೆ ದೊರಕಿಸುವ ಸಲುವಾಗಿ ಮತ್ತು ಈ ಸಂಯುಕ್ತ ಅರಬ ರಾಜ್ಯದ ಅಧ್ಯಕ್ಷರಾಗಿ ಇಜಿಪ್ಟದ ನಸ್ಸೇರರನ್ನು ಆರಿಸುವ ಸಲುವಾಗಿ ಫೆಬ್ರುವರಿ ೨೧ರಂದು ಸಾರ್ವತ್ರಿಕ ಚುನಾವಣೆಯು ನಡೆಯಲಿದ್ದು ಎಲ್ಲ ನಾಗರಿಕರೂ ಇದರಲ್ಲಿ ಭಾಗವಹಿಸಬೇಕೆಂದು ವಿನಂತಿಸಲಾಗಿದೆ. ಈ ಮತಗಣನೆಯ ಪರಿಣಾಮವು ೨೨ನೆ ತಾರೀಕಿಗೆ ಜಾಹೀರಾಗುವುವು. ಆ ಮೇಲೆ ಸಂಯುಕ್ತ ಅರಬ ಪ್ರಜಾರಾಜ್ಯವು ಸ್ಥಾಪಿತವಾದುದನ್ನು ಜಗತ್ತಿಗೆ ಸಾರಲಾಗುವುದು.

ಸಂಸ್ಕೃತದಲ್ಲಿ ಗೀತಾ ಪ್ರವಚನ

ಆಚಾರ್ಯ ವಿನೋಬಾರವರು ಭಗವದ್ಗೀತೆಯ ಮೇಲೆ ಬರೆದಿರುವ ಭಾಷ್ಯ "ಗೀತಾ ಪ್ರವಚನ"ವನ್ನು ಸಂಸ್ಕೃತಕ್ಕೆ ಅನುವಾದಮಾಡಲು ಪ್ರಯತ್ನ ನಡೆಯುತ್ತಿದೆ. ಮೂಲ ಮರಾಠಿಯಲ್ಲಿರುವ ಈ ಗ್ರಂಥವನ್ನು ೧೮ ಭಾಷೆಗಳಿಗೆ ಈಗಾಗಲೇ ಅನುವಾದಿಸಲಾಗಿದೆ. ಈ ಅಪೂರ್ವ ಗ್ರಂಥದ ಪ್ರತಿಗಳು ಲಕ್ಷಾವಧಿ ಸಂಖ್ಯೆಯಲ್ಲಿ ಖರ್ಚಾಗಿವೆ. ಭಾರತದಲ್ಲಿ ಅಧಿಕ ಪ್ರತಿಗಳು ಮಾರಿಹೋದ ಪುಸ್ತಕಗಳಲ್ಲಿ ಮೊದಲ ಸ್ಥಾನ ಮೂಲ ಭಗವದ್ಗೀತೆಗೂ ದ್ವಿತೀಯ ಸ್ಥಾನ ಈ ಗೀತಾ ಪ್ರವಚನಕ್ಕೂ ದೊರೆಯುತ್ತದೆ.

ಬ್ರಿಟನಿನ ಸ್ನೇಹಹಸ್ತ

ಭಾರತಕ್ಕೆ ವಿದೇಶ ವಿನಿಮಯದ ಅಗತ್ಯತೆ ಇರುವುದನ್ನು ಗಮನಿಸಿ ಇಂಗ್ಲೆಂಡವು ಇದೇ ಎಪ್ರಿಲಿಗೆ ಕೊಡಬೇಕಾಗಿದ್ದ ೪೦ ಲಕ್ಷ ಸ್ಟರ್ಲಿಂಗ್ ವಸ್ತು ಮೂರು ಕಂತುಗಳನ್ನು ಎಂದರೆ ಒಟ್ಟು ೧೨೦ ಲಕ್ಷ ಸ್ಟರ್ಲಿಂಗಗಳನ್ನು ಮುಂಗಡವಾಗಿ ಕೊಡಲು ಒಪ್ಪಿದೆ. ಅಲ್ಲದೆ ಬ್ರಿಟನು ಕೊಡಲಿರುವ ಈ ಸಂಗಡವನ್ನು ಭಾರತ ಸರಕಾರವೂ ಪಡೆದುಕೊಳ್ಳಲು ಸಿದ್ಧವಿದೆಯೆಂದೂ ತಿಳಿಯುತ್ತದೆ.

ಹಿಂದುಳಿದವರಿಗೆ ನೌಕರಿ ಸ್ಥಾನಗಳು

ಸರಕಾರೀ ಸೇವೆಗಳಲ್ಲಿ ಹಿಂದುಳಿದ ವರ್ಗಗಳ ಉಮೇದುವಾರರಿಗಾಗಿ ನೌಕರಿಗಳನ್ನು ಕಾಯ್ದಿಡುವ ವಿಷಯದಲ್ಲಿ ಮೈಸೂರು ಸರಕಾರವು ತನ್ನ ಹೊಸ ಧೋರಣೆಯನ್ನು ಪ್ರಕಟಿಸಿದೆ. ನವಮೈಸೂರು ರಾಜ್ಯದ ಜನಸಂಖ್ಯೆಯ ನಿಶ್ಚಿತ ಅಂಕೆಸಂಖ್ಯೆಗಳು ಸಂಗ್ರಹವಾಗುವವರೆಗೆ ಸದ್ಯಕ್ಕೆ ಈ ಧೋರಣೆಯನ್ನು ತಾತ್ಪೂರ್ತಿಕವಾಗಿ ಅನುಸರಿಸುವುದೆಂದು ತಿಳಿದುಬಂದಿದೆ. ಈ ನೂತನ ಧೋರಣೆಯನ್ವಯ ಹಿಂದುಳಿದ ಜಾತಿ ಹಾಗೂ ವರ್ಗಗಳಿಗೆ ಅನುಕ್ರಮವಾಗಿ ೧೦೦ಂಕ್ಕೆ ೧೫ ಹಾಗೂ ಇಪ್ಪತ್ತನ್ನೂ ಹಿಂದುಳಿದ ಜಾತಿಯವರಿಗೆ ಸೇಕಡಾ ೫೭ ರಷ್ಟನ್ನೂ ಕಾಯ್ದಿಡಲಾಗುವುದು. ಉಳಿದ ೧೦೦ಂಕ್ಕೆ ೨೫ರಷ್ಟು ಸ್ಥಳಗಳನ್ನು ಜಾತಿಭೇದವಿಲ್ಲದೆ ಗುಣ ಶ್ರೇಷ್ಠತೆಯ ಮೇರೆಗೆ ತುಂಬಲಾಗುವುದೆಂದೂ ಹೇಳಲಾಗುತ್ತದೆ.

ಆಧುನಿಕ ನರಭಕ್ಷಕಿ

೧೬ ವರ್ಷದ ಬಾಲಿಕೆಯೊಬ್ಬಳನ್ನು ತಾನು ಕೊಂದು ಅವಳ ಮೂತ್ರಪಿಂಡ ಹಾಗೂ ಕರುಳನ್ನು ತಾನು ತಿಂದಿರುವುದು ನಿಜವೆಂದು ಒಪ್ಪಿಕೊಂಡ ಒಬ್ಬಾಕೆ ನರಭಕ್ಷಕಿಯು ಈ ಕಾಲದಲ್ಲಿಯೂ ಇದ್ದಾಳೆ. ಘಟಮುಂಡುವಿನಲ್ಲಿ ಇದು ತಿಳಿದುಬಂದು, ಆಕೆಯನ್ನು ಬಂಧಿಸಲಾಗಿದೆ. ಈ ನರಭಕ್ಷಕಿಯು ೪೦ ವರ್ಷ ಪ್ರಾಯದವಳಿದ್ದು ರೈತ ಜನಾಂಗಕ್ಕೆ ಸೇರಿದವಳಾಗಿದ್ದಾಳೆ.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಸಭೆಯು— ತಾ 10ರಲ್ಲು ಸಂಜೆ ಚೇರ್‌ಮೆನ್ ಶ್ರೀ ಕೆ. ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಶಾಲೆಗಳ ಸ್ಥಿತಿಗತಿಗಳ ಕುರಿತು ಜಿಲ್ಲಾ ಎಜ್ಯುಕೇಶನಲ್ ಆಫೀಸರರು ಮಾಡಿದ ವರದಿಯನ್ನು ಮುಂದಿನ ಬಜೆಟ್ ಸಮಯ ಆಲೋಚಿಸಲು ಬಾಕಿಯಿಡಲಾಯಿತು. ಮುನಿಸಿಪಲ್ ಶಾಲೆಯ ಓರ್ವ ಉಪಾಧ್ಯಾಯ ಮತ್ತು ಓರ್ವ ಅಧ್ಯಾಪಕಿಗೆ ಇನ್ಕ್ರಿಮೆಂಟ್ ಕೊಡಲು ಕೌನ್ಸಿಲಿನ ಒಪ್ಪಿಗೆ ಪಡೆಯುವ ವಿಷಯ ಮನ್ನಿಸಲ್ಪಡುವ ಮೊದಲು ಮುನಿಸಿಪಲ್ ಆಡಳಿತದ ಆಗುಹೋಗುಗಳ ಬಗ್ಗೆ ನಿರ್ಣಯವನ್ನು ಡಾ. ಪಿ. ಜಿ ಆಚಾರ್ಯರು ತಂದರು. ಕೊನೆಗೆ ಕೆಲಹೊತ್ತು ಚರ್ಚೆ ನಡೆದ ಬಳಿಕ ಡಾ. ಆಚಾರ್ಯರು ತಮ್ಮ ನಿರ್ಣಯವನ್ನು ಹಿಂತೆಗೆದುಕೊಂಡರು. ಡಾ. ಪಿ. ವಿ. ಸ್ವಾಮಿರಾಯರು ಜಿಲ್ಲಾ ಎಮ್. ಎಲ್. ಎ ಸಮಿತಿಗೆ ಸರ್ವಾನುಮತದಿಂದ ಆರಿಸಲ್ಪಟ್ಟರು. ಉಡುಪಿ ತಾಲೂಕು ಕಚೇರಿ ಕಟ್ಟಡದ ಪ್ರೊಪರ್ಟಿ ಟೇಕ್ಸ್ ತಾ. 1-4-48 ರಿಂದ 31-3-57ರ ತನಕ ಬಾಕಿಯಿರುವುದನ್ನು ವಸೂಲಿ ಬಗ್ಗೆ ರಿಜಿಸ್ಟರ್ಡ್ ನೋಟೀಸು ಕೊಡಬೇಕೆಂದು ನಿರ್ಣಯವಾಯಿತು.

ಶಾಲಾ ವರ್ಧಂತಿ— ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲಿನ ವರ್ಧಂತಿಯುತ್ಸವವು ತಾ ೬ರಲ್ಲಿ ಮಂಗಳೂರು ಟೀಚರ್ಸ್ ಟ್ರೈನಿಂಗ್ ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಜೋಶ್ವರು ವರದಿಯನ್ನೋದಿದರು. ಶ್ರೀ ಎ ಕೃಷ್ಣರಾಯರು ಸ್ವಸ್ತಿವಾಚನ ಮಾಡಿದರು. ಬಹುಮಾನ ವಿತರಣೆ, ಅಧ್ಯಕ್ಷ ಭಾಷಣ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಾಗಿ ಸಮಾರಂಭ ಕೊನೆಗೊಂಡಿತು.

ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ— ವರ್ಧಂತಿಯು ತಾ. 7ರಲ್ಲಿ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು. ಮಿಸೆಸ್ ಕೊಚ್ಚಿಕಾರ್ ಜನಾರ್ದನ ಪೈಗಳು ವರದಿಯನ್ನೋದಿದರು. ಮಿಸೆಸ್ ಡಾ। ಪೈಗಳು ಬಹುಮಾನ ವಿತರಣೆ ಮಾಡಿದರು.

ದ. ಕ. ಜಿಲ್ಲೆಯಿಂದ ಬೆಂಗಳೂರಿಗೆ ಪ್ರತಿನಿಧಿಗಳು— ಇದೇ ತಾ 14 ಮತ್ತು 15ರಲ್ಲಿ ಬೆಂಗಳೂರಲ್ಲಿ ಜರಗಲಿರುವ ದಕ್ಷಿಣ ಹಿಂದೂಸ್ಥಾನ ಭೂಮಾಲಕರ ಕೃಷಿಕರ ಸಮ್ಮೇಳನಕ್ಕೆ ದ. ಕ. ಜಿಲ್ಲಾ ಭೂಮಾಲಕ ಕೃಷಿಕರ ಸಂಘ ಮತ್ತು ಉಡುಪಿ ಭೂಮಾಲಿಕ ಕೃಷಿಕರ ಸಂಘಗಳ ನೇತೃತ್ವದಲ್ಲಿ ಸುಮಾರು 800 ಮಂದಿ ಪ್ರತಿನಿಧಿಗಳು ಹೋಗಲಿರುವರೆಂದೂ ಆ ಪೈಕಿ ಅಂದಾಜು 400 ಮಂದಿ ಉಡುಪಿಯಿಂದಲೇ ಹೋಗುವರೆಂದೂ ಶ್ರೀ ಪಿ. ಸದಾಶಿವಕುಂದ ಹೆಗ್ಡೇರವರು ತಿಳಿಸುತ್ತಾರೆ.

ವಿಚಿತ್ರ ಕಾಯಿಲೆ- ಉಡುಪಿಯ ಆಸುಪಾಸಿನಲ್ಲಿ ವಿಶೇಷವಾಗಿ ಕರಾವಳಿ ಪ್ರದೇಶದಲ್ಲಿ ವಿಚಿತ್ರ ಅಂಟುರೋಗವೊಂದು ಹರಡಿರುವುದೆಂದು ತಿಳಿದುಬರುತ್ತದೆ. ಪ್ರಾರಂಭದಲ್ಲಿ ಮೂರು ನಾಲ್ಕು ದಿವಸ ಜ್ವರ ಬಂದು ಅನಂತರ ಆರಸಿನಕುತ್ತ ಕಾಣಿಸಿಕೊಳ್ಳುತ್ತಿದೆಯೆಂದು ತಿಳಿದುಬರುತ್ತದೆ.

ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ— ಹಿಂದೀ ಪರೀಕ್ಷೆಗಳು ಇದೇ ತಿಂಗಳ ೨೨ ಮತ್ತು ೨೩ನೆ ದಿನಾಂಕಗಳಲ್ಲಿ (ಶನಿವಾರ, ಆದಿತ್ಯವಾರ) ಉಡುಪಿ ಕೇಂದ್ರದಲ್ಲಿ ನಡೆಯಲಿರುವುವು. ಈ ಪರೀಕ್ಷೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು ತಂತಮ್ಮ ಪ್ರವೇಶ ಪತ್ರಗಳನ್ನು ಗೀತಾ ಭವನಂ, ಅಂಬಲಪಾಡಿ, ಉಡುಪಿ ಇದರ ಕಾರ್ಯದರ್ಶಿಯವರಿಂದ ದಿನಾಂಕ ೨೦ರ ವೊಳಗೆ ಪಡೆದುಕೊಳ್ಳಬೇಕು. ಕಾಲನಿಯಮಕ ಪಟ್ಟಿ ಹಾಗೂ ಪರೀಕ್ಷಾ ಭವನಗಳ ಕುರಿತಾದ ವಿಶೇಷ ಮಾಹಿತಿಗಳನ್ನು ಅವರಿಂದಲೇ ತಿಳಿದುಕೊಳ್ಳಬಹುದು. ಪ್ರವೇಶಪತ್ರಗಳಿಲ್ಲದೆ ಪರೀಕ್ಷೆಗಳಿಗೆ ಎಂದಿಗೂ ಪ್ರವೇಶ ದೊರೆಯುವುದಿಲ್ಲವೆಂದು ಪರೀಕ್ಷಾರ್ಥಿಗಳು ತಿಳಿದಿರಬೇಕು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕೈಮಗ್ಗ ಸಪ್ತಾಹದ- ಉದ್ಘಾಟನೆಯು ಉಡುಪಿ ನೇಕಾರರ ಸಹಾಯಕ ಸಂಘದಲ್ಲಿ ತಾ. 8ರಂದು ಶ್ರೀ ರೋಕ್ಕಿ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಶ್ರೀ ಎ. ಕೃಷ್ಣರಾಯರಿಂದ ನೆರವೇರಿಸಲ್ಪಟ್ಟಿತು.

ಸಂಗೀತ ಹಾಗೂ ಕಲಾಶಾಲೆಯ ಉದ್ಘಾಟನಾ ಸಮಾರಂಭವು— ತಾ. 11ರಂದು ಸ್ಥಳೀಯ ನೋರ್ಡನ್ ಹಾಲಿನಲ್ಲಿ ಶ್ರೀ ರೋಕ್ಕಿ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ನೆರವೇರಿತು. ಏಕೆಡಮಿ ಆಫ್ ಜನರಲ್ ಎಜ್ಯುಕೇಶನಿನ ನೇತೃತ್ವದಲ್ಲಿ ಆರಂಭಿಸಲಾದ ಈ ಸಂಗೀತ ಮತ್ತು ಕಲಾಶಾಲೆಯ ಕುರಿತಾದ ಮಾಹಿತಿಯನ್ನಿತ್ತು ಡಾ. ಟಿ. ಎಂ. ಎ. ಪೈಗಳು ಸ್ವಾಗತ ಭಾಷಣಮಾಡಿದರು. ಅನಂತರ ಅಧ್ಯಕ್ಷರು ಕಲಾಶಾಲೆಯನ್ನು ಉದ್ಘಾಟಿಸಿ ಭಾಷಣವಿತ್ತರು.

ಜಿಲ್ಲಾ ಫಿಶರೀಸ್ ಅಧ್ಯಾಪಕರ ಯೂನಿಯನಿನ ಮಹಾ ಸಭೆಯು ತಾ 9ರಂದು ಮಲ್ಪೆಯಲ್ಲಿ ಶ್ರೀಮತಿ ಸಾರಾ ಎಸ್. ಆನಿಯನ್, ಬಿ. ಎ ಬಿ. ಟಿ ಅವರ ಅಧ್ಯಕ್ಷತೆಯಲ್ಲಿ ಜರಗಿ, ಕಾರ್ಯದರ್ಶಿ ಶ್ರೀ ಎ. ಸುಬ್ರಾಯ ಅಳ್ವೆಯವರಿಂದ ಸ್ವಾಗತವಾದ ಮೇಲೆ ಮೈಸೂರು ಸರಕಾರದ ಹೊಸ ವೇತನದ ಸ್ಕೇಲನ್ನು ಅವರಿಗೂ ಅನ್ವಯವಾಗಗೊಳಿಸಬೇಕೆನ್ನುವ, ಹೈಸ್ಕೂಲು ಭಾಷಾ ಪಂಡಿತರಿಗೂ ಒಂದನೆ ದರದ ವೇತನ ಕೊಡಬೇಕೆನ್ನುವ, ಮುಖ್ಯೋಪಾಧ್ಯಾಯರಿಗೆ ವಿಶೇಷ ದರದ ಬತ್ತೆ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಬಳಿಕ ಹೊಸವರ್ಷದ ಕಾರ್ಯಕಾರಿ ಮಂಡಳಿ ರಚಿಸಲ್ಪಟ್ಟಿತು.

ಬ್ರಹ್ಮಾವರ — ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 9ರಲ್ಲಿ ಶ್ರೀ ಪಿ. ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕವಿಜಯಂತಿಯು ಆಚರಿಸಲ್ಪಟ್ಟಿತು. ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಸ್ವಾಗತ ಭಾಷಣಮಾಡಿದರು. ಶ್ರೀ ಎಸ್ ಕೆ. ಶ್ರೀಪತಿ ಆಚಾರ್ಯರು ಕನ್ನಡ ಸಾಹಿತ್ಯಕ್ಕೆ ದಾಸರ ಕಾಣಿಕೆ ಎಂಬ ಕುರಿತು ಉಪನ್ಯಾಸವಿತ್ತರು. ಶ್ರೀ ಬಿ. ಸದಾಶಿವರಾಯರು ದೇವರ ನಾಮಗಳನ್ನು ಹಾಡಿದರು.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಶರಾವತಿ ಕಣಿವೆಯಭಿವೃದ್ಧಿ

(೫ನೇ ಪುಟದಿಂದ)

ಸೂಕ್ತವಾದ ಸ್ಥಳಗಳಲ್ಲಿ ಅವರಿಗಾಗಿ ಪುನರ್ವಸತಿ ಕಾಲೋನಿಗಳನ್ನು ಸ್ಥಾಪಿಸಲಾಗುವುದು. ನಾರಿಗೆ ಸೌಲಭ್ಯ, ಬೇಸಾಯಕ್ಕಾಗಿ ಜಮೀನುಗಳು ಮುಂತಾದ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಉದ್ದೇಶಿಸಲಾಗಿದೆ. ವಿದ್ಯುಚ್ಛಕ್ತಿ ಖಾತೆಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿಯೊಂದನ್ನು ರಚಿಸಲಾಗಿದೆ. ಈ ಸಮಿತಿಯಲ್ಲಿ ಆ ಪ್ರದೇಶದ ಜನರ ಪ್ರತಿನಿಧಿಗಳಿರುವರು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟಿರುವ ಸ್ಥಳೀಯ ಸಲಹಾ ಸಮಿತಿಯು ಈ ಉನ್ನತ ಮಟ್ಟದ ಸಮಿತಿಗೆ ಸಲಹೆ ನೀಡುವುದು. ಸ್ಥಾನ ಪಲ್ಲಟಗೊಳ್ಳುವ ಕುಟುಂಬಗಳಿಗೆ ಸಂಭವಿಸಬಹುದಾದ ತೊಂದರೆಗಳನ್ನು ಸರ್ವಸಾಧ್ಯವಾದಷ್ಟು ಕನಿಷ್ಠಗೊಳಿಸುವ ಬಗ್ಗೆ ಪ್ರಯತ್ನಿಸಲಾಗುತ್ತಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ರಾಜ್ಯದಲ್ಲಿ ಕೈಗೊಳ್ಳಲಾಗಿರುವ ಯೋಜನೆಗಳಲ್ಲೆಲ್ಲಾ ಶರಾವತಿ ಯೋಜನೆಯೇ ಸರ್ವೋತ್ತಮವಾದುದ್ದೆಂದೂ ಪರಿಗಣಿಸಲಾಗಿದೆ. ನಮ್ಮ ನೆಚ್ಚಿನ ಪ್ರಧಾನ ಮಂತ್ರಿಗಳು ಕೆಲವು ಯೋಜನೆಗಳ ವಿಚಾರದಲ್ಲಿ ಉಪಯೋಗಿಸಿರುವ ಸ್ಮರಣೀಯ ಪದಗಳನ್ನು ಇಲ್ಲಿ ಬಳಸುವುದಾದರೆ, ಶರಾವತಿ ಯೋಜನೆಯು ಸ್ವತಂತ್ರ ಭಾರತವು ನಿರ್ಮಿಸುತ್ತಿರುವ ಇಪ್ಪತ್ತನೆಯ ಶತಮಾನದ ಭವ್ಯ ಮಂದಿರಗಳಲ್ಲಿ ಒಂದಾಗಿದೆ. ರಾಜ್ಯದ ಹಾಗೂ ರಾಷ್ಟ್ರದ ಸಂಪದಭ್ಯುದಯವನ್ನು ವೃದ್ಧಿಸುವುದೆಂಬ ದೃಷ್ಟಿಯಿಂದ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತಿಲ್ಲ. ಆದರೆ ಇದನ್ನು ಕಾರ್ಯರೂಪಕ್ಕೆ ತರದೆ ಗತ್ಯಂತರವಿಲ್ಲ. ಮೈಸೂರಿನಲ್ಲಿ ಅಷ್ಟೇ ಏಕೆ, ದೇಶದ ಎಲ್ಲ ಭಾಗಗಳಲ್ಲಿ ವಿದ್ಯುಚ್ಛಕ್ತಿಯ ಕೊರತೆಯು ಹಿಸಲು ಸಿರುವುದರಿಂದ ಈ ರೀತಿಯ ಬೃಹತ್ ಪ್ರಮಾಣದ ಯೋಜನೆಗಳಿಂದ ಈ ಉತ್ಕಟಾಭಾವದ ಸಮಸ್ಯೆಯನ್ನು ಬಗೆಹರಿಸಬಹುದಾಗಿದೆ. ಹಿಂದೆ ವಿದ್ಯುಚ್ಛಕ್ತಿಯ ಅಗತ್ಯಗಳ ಬಗ್ಗೆ ಮಾಡಲಾಗುತ್ತಿದ್ದ ಅಂದಾಜುಗಳು ಸರಿಯಾಗುತ್ತಿರಲಿಲ್ಲವೆಂಬುದು ಅನುಭವವೇದ್ಯವಾಗಿದೆ. ಇದಕ್ಕಾಗಿ ಯಾರನ್ನೂ ಅವಹೇಳನ ಮಾಡುವ ಅಗತ್ಯವಿಲ್ಲ ಏಕೆಂದರೆ ಅನೇಕ ಪ್ರಸಂಗಗಳಲ್ಲಿ ಬೇಡಿಕೆಯು ಪೂರೈಕೆಗಿಂತ ಮಿತಿ ಮೀರಿದೆ.

ಇಂದು ವಿದ್ಯುಚ್ಛಕ್ತಿಯು ಪ್ರಗತಿಯ ಸಂಕೇತವಾಗಿದೆ. ಜಮೀನುಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಉತ್ಪಾದನೆಯನ್ನು ಹೆಚ್ಚಿಸಬಹುದಾಗಿದೆ. ಕಾರ್ಖಾನೆಗಳಲ್ಲಿ ವಿದ್ಯುಚ್ಛಕ್ತಿಯ ಸಹಾಯದಿಂದ ಜೀವನದ ಅತ್ಯಗತ್ಯ ವಸ್ತುಗಳ ಮತ್ತು ಗ್ರಾಹಕ ವಸ್ತುಗಳ ಉತ್ಪಾದನೆಯನ್ನು ಹೆಚ್ಚಿಸಿ ಪೂರೈಸಲು ಸಾಧ್ಯವಾಗುವುದು. ಕುಟುಂಬಗಳು ವಿದ್ಯುಚ್ಛಕ್ತಿಯ ಸಹಾಯದಿಂದ ಗೃಹ ಹಾಗೂ ಗ್ರಾಮಾಂತರ ಕೈಗಾರಿಕೆಗಳ ಮೂಲಕ ಪರ್ಯಾಯ ಉದ್ಯೋಗಾವಕಾಶವನ್ನು ಪಡೆಯಬಹುದಾಗಿದೆ. ಅಣುಶಕ್ತಿಯಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಂಭವ ವಿದ್ಯಾಗ್ಯು, ಜಲಜನಿತ ವಿದ್ಯುದ್ದಾರಗಳು ಬಹುಕಾಲದ ವರೆಗೆ ಭಾರಿ ಪ್ರಮಾಣದ ವಿದ್ಯುಚ್ಛಕ್ತಿಯ ಉಗಮಸ್ಥಾನಗಳಾಗಿರುವುವು. ಈ ಯೋಜನೆಯನ್ನು ಆದಷ್ಟು ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದರಿಂದ ನಾವು ನಮ್ಮ ಯೋಜನೆಯಲ್ಲಿ ಹೊಂದಿರುವ ಎಲ್ಲ ಗುರಿಗಳನ್ನು ಅಂದರೆ ಸಮೃದ್ಧಶಾಲಿಯಾದ ಕೃಷಿಕ್ಷೇತ್ರಗಳು, ಕಾರ್ಯೋದ್ಯುಕ್ತವಾದ ಕಾರ್ಖಾನೆಗಳು ಮತ್ತು ಸಂತುಷ್ಟ ಮನೆಗಳು— ಇವನ್ನು ಕೈಗೂಡಿಸಲು ಸಾಧ್ಯವಾಗುವುದು.

ಶಿಕ್ಷಕರ ಪರಿಷ್ಕೃತ ವೇತನ

ಪೋಸ್ಟ್ ಕಾರ್ಡ್ ವಿನಂತಿಯ ಕುರಿತು ಸೂಚನೆಗಳು

ಮೈಸೂರು ಸರಕಾರದ G. O. No. F. L. (B.) 14034-14139. Bud-119-56-3. ತಾ. 25-1-1957 ಮತ್ತು G. O. No E. D. 507. P. M S 57 ಬೆಂಗಳೂರು ತಾ. 21-12-57ರಂತೆ ಸರಕಾರವು ಪ್ರಕಟಿಸಿದ ಶಿಕ್ಷಕರ ಪರಿಷ್ಕೃತ ವೇತನವು ಈ ಜಿಲ್ಲೆಯಲ್ಲಿ ಇನ್ನೂ ಬಳಕೆಗೆ ಬಂದಿರುವುದಿಲ್ಲ ಈ ಜಿಲ್ಲೆಯ 5590 ಪ್ರಾಥಮಿಕ ಶಿಕ್ಷಕರಲ್ಲಿ 5310 ಮಂದಿ ಸ್ಥಾನಿಕ ಮತ್ತು ಖಾಸಗಿ ಆಡಳಿತೆಯೊಳಗಿದ್ದಾರೆ. ಜಿಲ್ಲೆಯ 71 ಹೈಸ್ಕೂಲು 3 ಮಿಡ್ಲ್ ಸ್ಕೂಲ್‌ಗಳಲ್ಲಿ 67 ಹೈಸ್ಕೂಲು ಮತ್ತು 2 ಮಿಡ್ಲ್ ಸ್ಕೂಲುಗಳು ಸಹಾ ಸರಕಾರೇತರ ಸಂಸ್ಥೆಗಳಾಗಿವೆ. ಹೀಗೆ ಒಟ್ಟು ಶಿಕ್ಷಕರ ಶೇಕಡಾ 95ಕ್ಕೂ ಹೆಚ್ಚಿನ ಅಧ್ಯಾಪಕರಿಗೆ ಪರಿಷ್ಕೃತ ವೇತನ ಸವಲತ್ತು ಈ ವರೆಗೆ ಅನ್ವಯಿಸುವುದಿಲ್ಲ.

ಮೇಲೆ ಸೂಚಿಸಿದ ಸರಕಾರಿ ಆಜ್ಞೆಗೆ ವಿವರಣಾ ಪರಿಪತ್ರವನ್ನು ಹೊರಡಿಸಿ ಪರಿಷ್ಕೃತ ವೇತನವನ್ನು ಶೀಘ್ರವೇ ಜಾರಿಗೊಳಿಸಬೇಕೆಂದು, ಶಿಕ್ಷಕರ ನಿಷ್ಠಮಂಡಳಿಯು ಬೆಂಗಳೂರಿನ ವರಿಷ್ಠ ಅಧಿಕಾರಿಗಳನ್ನೂ ಮಾನ್ಯ ಮಂತ್ರಿಗಳನ್ನೂ ಕೆಲವು ಜನ ಪ್ರತಿನಿಧಿಗಳನ್ನು ಕೂಡಿಕೊಂಡು ವಿನಂತಿಸಿದಾಗ ಒಂದು ವಾರದೊಳಗೆ ಪರಿಪತ್ರವು ಹೊರಡುವುದೆಂದು ನಿರೀಕ್ಷಿಸಲಾಗಿತ್ತು ಇನ್ನೂ ಸಹಾ ಈ ಕುರಿತು ಸಾಕಷ್ಟು ಪ್ರಗತಿಯಾಗದಿರುವುದರಿಂದ ತಾ. 3-2-1958ರಂದು ಪ್ರತಿ ತಾಲೂಕು ಯೂನಿಗಳು ಸಂಬಂಧಪಟ್ಟವರಿಗೆ ತಂತಿ ಮೂಲಕ ವಿನಂತಿ ಮಾಡಿಕೊಂಡಿವೆ.

ಸಾಧ್ಯವಿದ್ದಷ್ಟು ಮಟ್ಟಿಗೆ, ಮನವಿ, ಕೇಳಿಕೆ, ವಿನಂತಿಗಳಿಂದಲೇ ಶಾಂತಯುತವಾಗಿ ಸರಕಾರವು ಕೊಡುವುದಾಗಿ ತಿಳಿಸಿದ ವೇತನವನ್ನು ಬೇಗನೆ ಕೊಡಬೇಕೆಂದಿಷ್ಟೇ ಶಿಕ್ಷಕರು ಕೇಳುತ್ತಿದ್ದಾರೆ ಈ ಕೇಳಿಕೆಯು ಸಾಮೂಹಿಕ ಮತ್ತು ತೀವ್ರತರವಾದ ಕೇಳಿಕೆಯೆಂದು ಪುನರಾವರ್ತಿಸಲು ತಾ 15-2-1958ರಂದು ಪ್ರತಿಯೊಬ್ಬ ಶಿಕ್ಷಕರು ಒಂದೇ ವಾಚಕವುಳ್ಳ ಪೋಸ್ಟ್ ಕಾರ್ಡ್ ವಿನಂತಿಯನ್ನು ಮಾನ್ಯ ಮೈಸೂರು ಮುಖ್ಯಮಂತ್ರಿಗಳಿಗೆ ಕಳುಹಿಸಿಕೊಡಬೇಕೆಂದು ಜಿಲ್ಲಾ ಶಿಕ್ಷಕರ ಕ್ರಿಯಾಸಮಿತಿಯು ತಾ 1-2-1958ರ ಸಭೆಯಲ್ಲಿ ಸರ್ವಾನುಮತದಿಂದ ನಿಶ್ಚೈಸಿದೆ

ಮುದ್ರಿತ ಕಾರ್ಡುಗಳನ್ನು ಪ್ರತಿ ತಾಲೂಕು ಯೂನಿಯನುಗಳು ಶಿಕ್ಷಕರಿಗೆ ಒದಗಿಸಿಕೊಡಲು ಯತ್ನಿಸುತ್ತಿವೆ. ಶಿಕ್ಷಕರು ಮುದ್ರಿತ ಕಾರ್ಡಿಗೆ ಸಹಿ ವಗೈರೆ ಮಾಡಿ 5ನ. ಪೈಸೆಯ ಅಂಚೆ ಚೀಟು ಹಚ್ಚಿ ತಾ. 15-2-1958 ರಂದೇ ತಪ್ಪದೆ ಪೋಸ್ಟ್ ಮಾಡಬೇಕಾಗಿ ವಿನಂತಿಯಿದೆ. ಮುದ್ರಿತ ಕಾರ್ಡು ಯಾವುದೇ ಕಾರಣದಿಂದಾಗಿ ಸಿಗದಿರುವಲ್ಲಿ ಸಾಮಾನ್ಯ ಪೋಸ್ಟು ಕಾರ್ಡಿನಲ್ಲಿ ಈ ಕೆಳಗಿನ ಒಕ್ಕಣೆ ಬರೆದು ಪೋಸ್ಟ್ ಮಾಡಬೇಕೆಂಬುದನ್ನು ಮರೆಯಲಾಗದು ಯಾವುದೇ ಕಾರಣಕ್ಕಾಗಿ ಈ ಪೋಸ್ಟ್ ಕಾರ್ಡ್ ವಿನಂತಿಯನ್ನು ನಿಲ್ಲಿಸಲಾಗದು.

ಪರಿಷ್ಕೃತ ವೇತನವು ಕೈಗೆ ಸಿಕ್ಕದ ವಿನಹ ಈ ಪೋಸ್ಟ್ ಕಾರ್ಡು ವಿನಂತಿಯನ್ನು ತಡೆಹಿಡಿಯಲಾಗದು ಈ ಪೋಸ್ಟು ಕಾರ್ಡು ವಿನಂತಿಯು ಶಿಕ್ಷಕರ ಒಕ್ಕಟ್ಟಿನ ಸೂಚನೆ ಎಂಬುದನ್ನು ಶಿಕ್ಷಕರೆಲ್ಲರೂ ನೆನಪಿನಲ್ಲಿಟ್ಟು ತಪ್ಪದೆ ಈ ಕಾರ್ಡು ವಿನಂತಿಯನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕಳುಹಿಸಬೇಕಲ್ಲದೆ, ಪ್ರತೀ ಶಾಲೆಯಿಂದ ಎಷ್ಟು ಕಾರ್ಡುಗಳು ಕಳುಹಿಸಲ್ಪಟ್ಟಿವೆ ಎಂಬುದನ್ನು ಶಿಕ್ಷಕರ ಹೆಸರು ಸೂಚಿಸಿ ಆಯಾ ಶಾಲೆಯ ಮುಖ್ಯೋಪಾಧ್ಯಾಯರು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ ಎಷ್ಟು ಕಾರ್ಡುಗಳು ಕಳುಹಿಸಲ್ಪಟ್ಟಿವೆ ಎಂಬ ದಾಖಲೆಯನ್ನಿಡಲು ಸಹಕರಿಸಬೇಕಾಗಿಯೂ ವಿನಂತಿ.

ಪೋಸ್ಟ್ ಕಾರ್ಡ್ ವಿನಂತಿ.

ಮಾನ್ಯ ಮುಖ್ಯ ಮಂತ್ರಿಗಳೇ,

ಮೈಸೂರು ಸರಕಾರವು ಇತ್ತೀಚೆಗೆ ಪ್ರಕಟಿಸಿದ ಪರಿಷ್ಕೃತ ವೇತನದ ಸರಕಾರಿ ಅಜ್ಞೆಯ ವಿವರಣೆಯನ್ನು ಶೀಘ್ರವೇ ಕಳುಹಿಸುವುದರ ಮೂಲಕ ಸದರೀ ವೇತನವು ಬೇಗನೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಅಧ್ಯಾಪಕರಿಗೂ ಸಿಗುವಂತೆ ಅವಶ್ಯ ಕಂಡ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿ ವಿನಂತಿ.

ದಸ್ಕತು,

ಅಧ್ಯಾಪಕನ ಹೆಸರು
ಶಾಲೆ
ತಾರೀಕು
ತಾಲೂಕು

ಈ ಪತ್ರಿಕಾ ಪ್ರಕಟನೆಯನ್ನು ಎಲ್ಲಾ ಶಿಕ್ಷಕರ ಅವಗಾಹನೆಗೆ ತರಬೇಕೆಂದು ವಿನಂತಿಸುವ,

ಯಂ. ದಾಂತಿ,
ಕನ್ವೀನರ್.
ಜಿಲ್ಲಾ ಪ್ರಾಥಮಿಕ ಶಿಕ್ಷಕರ ಕ್ರಿಯಾ ಸಮಿತಿ
ಪೋಸ್ಟ್ ಅಲೆವೂರು.
ಉಡುಪಿ.

ಅಂಬರನಾಥ ಕನ್ನಡ ಸಂಘದವರು ಕಳೆದ ತಾ. 30ರಲ್ಲು ಅಂಬರನಾಥ ವಿಮ್ಕೋ ವಠಾರದಲ್ಲಿ, ದ. ಕ. ಕನ್ನಡ ಸಂಘ ಮತ್ತು ಆಂಧ್ರ ಸಭಾ ಪರವಾಗಿ ಶ್ರೀ ಮತ್ತು ಶ್ರೀಮತಿ ಸಿ. ಡಿ. ದೇಶಮುಖರನ್ನು ಗೌರವಿಸುವ ಸಮಾರಂಭವನ್ನೇರ್ಪಡಿಸಿದ್ದರು ಆರಂಭದಲ್ಲಿ ಬಾಪೂಜಿ ಮತ್ತಿತರ ನಾಯಕರು ದೇಶಕ್ಕೆ ಸಲ್ಲಿಸಿದ ಸೇವೆಗಾಗಿ ಮೌನ ಪ್ರಾರ್ಥನೆಯಾಯಿತು. ಸಂಘದ ಅಧ್ಯಕ್ಷ ಶ್ರೀ ಪುತ್ರನ್ನಾಯಕರು ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು ಜನರಲ್ ಸೆಕ್ರಿಟರಿ ಶ್ರೀ ಎಸ್. ಆರ್. ಕೃಷ್ಣಮೂರ್ತಿಯವರು ಶ್ರೀ ದೇಶಮುಖರಿಗೆ ಮನವಿಯೊಂದನ್ನು ಒಪ್ಪಿಸುತ್ತಾ, ಈ ಅಂಬರನಾಥ ಟೌನಿನಲ್ಲಿ ಸಾಧಾರಣ 13,000 ಮಂದಿ ಕನ್ನಡಿಗ ಹಾಗೂ ಆಂಧ್ರರಿರುವರೆಂದರು. ಇಷ್ಟು ಮಂದಿಯ ಮಕ್ಕಳಿಗೆ ವಿದ್ಯೆ, ವಸತಿ ಇತ್ಯಾದಿ ಕೊರತೆ ಇರುವುದನ್ನು ನೀಗಿಸಲು ಶ್ರೀ ಮತ್ತು ಶ್ರೀಮತಿಯವರು ಸಹಾಯ ನೀಡಬೇಕೆಂದರು. ಶ್ರೀ ಮತ್ತು ಶ್ರೀಮತಿಯವರು ಸಂದರ್ಭೋಚಿತ ಮಾತುಗಳನ್ನಾಡಿ ತಮ್ಮಿಂದಾಗುವ ಸಹಾಯ ಮಾಡುವುದಾಗಿ ತಿಳಿಸಿದರು

ಸಮಾಜಸೇವಾ ಸಂಘದ ದಿನಾಚರಣೆ—ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಸಮಾಜ ಸೇವಾ ಸಂಘದ ದಿನಾಚರಣೆಯು ತಾ. 6ರಲ್ಲು ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಯವರ ಆತಿಥ್ಯದಲ್ಲಿ ನಡೆಯಿತು. ಪ್ರಿನ್ಸಿಪಾಲ್ ಶ್ರೀ ಬಿ. ಎಸ್. ಅಂಚನರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಎಮ್. ಚಕ್ರಪಾಣಿ ಉಡುಪರು ಸ್ವಾಗತ ಭಾಷಣಮಾಡಿದರು. ಕಾರ್ಯದರ್ಶಿ ಶ್ರೀ ಎಮ್. ಜಿ. ಶಂಕರನಾರಾಯಣನವರು ವರದಿಯನ್ನೋದಿದರು. ಅತಿಥಿಗಳು ಪಾರಿತೋಷ ವಿತರಣೆಮಾಡಿದರು.

ಕಾರ್ಕಳ—ಮೂಲ್ಕಿ ವಲಯದ ಅಂತರ್ ಶಾಲಾ ಸಂಘಟನೆಗಳು ಮತ್ತು ಹೆಜಮಾಡಿಯಲ್ಲಿ ಜರಗಿದ ಕ್ರೀಡಾ ಕೂಟದಲ್ಲಿ ಸ್ಥಳೀಯ ಬೋರ್ಡ್‌ಹೈಸ್ಕೂಲಿನ ಮಕ್ಕಳು ಮತ್ತು ಅಧ್ಯಾಪಿಕೆಯರು ಸಹ ಗೆದ್ದು ಪಡೆದ ಪ್ರಶಸ್ತಿ ಪತ್ರಗಳ ವಿತರಣ ಸಮಾರಂಭವು ತಾ. 4ರಲ್ಲು ಶಾಲಾ ವಠಾರದಲ್ಲಿ ಡಾ. ಎಮ್ ಎಸ್. ಸಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಗೆ ಕ್ರಮವಾಗಿ ಇದೇ ಮೂರನೆ ಬಾರಿಗೆ ಗಂಡು ಮಕ್ಕಳ ಆಲ್ ರೌಂಡ್ ಚಾಂಪಿಯನ್ ಶಿಪ್ ಶೀಲ್ಡ್ ಮಾತ್ರವಲ್ಲದೆ ಇತರ ಎರಡು ಶಾಲೆಗಳೊಂದಿಗೆ ಹೆಣ್ಣುಮಕ್ಕಳ ಆಲ್‌ರೌಂಡ್ ಚಾಂಪಿಯನ್‌ಶಿಪ್ ಕಪ್, ಮೂರನೆಬಾರಿಗೆ ವಾಲಿಬಾಲ್ ಕಪ್ ಹಾಗೂ ಇಂಟರ್‌ಮೀಡಿಯೆಟ್ ಬೇಸ್‌ಬಾಲ್ ಜೂನಿಯರ್ ಕ್ರಿಕೆಟ್ ಮತ್ತು ಖೊ—ಖೊ ಹಾಗೂ ಅಧ್ಯಾಪಿಕೆಯರಿಗಾಗಿ ಇಟ್ಟ ಟೆನ್ನಿಕೋಟ್ ಕಪ್ಪುಗಳು ಸಹ ಪಾರಿತೋಷಕವಾಗಿ ದೊರೆತಿವೆ.

ಮಂದಾರ್ತಿ— ಸ್ಥಳೀಯ ಶ್ರೀ ದುರ್ಗಾಪರಮೇಶ್ವರೀ ದೇವಿ ಸನ್ನಿಧಿಯಲ್ಲಿ ತಾ 13ರಂದು ಶ್ರೀಮನ್ಮಹಾರಥೋತ್ಸವ ಜರಗಿ ಮರುದಿವಸ ಕವಾಟ ವಿಸರ್ಜನ ತುಲಾರೋಹಣಾದಿ ಸೇವೆಗಳು ನಡೆಯುವವು. ತಾ 15ರಂದು ಸಂಪ್ರೋಕ್ಷಣೆಯಾಗುವುದು.

ಕಾಂತಾವರ ಬೇಲಾಡಿ ಪ್ರೌಢ ಪ್ರಾಥಮಿಕ ಶಾಲಾ ವರ್ಧಂತಿ ಸಮಾರಂಭವು ಕಳೆದ ತಾ. 18ರಂದು ಅಸಿಸ್ಟೆಂಟ್ ಕಮೀಶನರ್ ಶ್ರೀ ಕೆ. ಎಲ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಶಾಲಾ ವ್ಯವಸ್ಥಾಪಕ ಶ್ರೀ ಕೆ. ಮಾರಣ್ಣ ಮಾಡರು ಸ್ವಾಗತ ಭಾಷಣ ಮಾಡಿದರು. ಕಾರ್ಕಳ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಶ್ಯಾಮ ಭಟ್ಟರು ಸ್ವಾಮಿ ವಿವೇಕಾನಂದರ ಭಾವ ಚಿತ್ರ ಅನಾವರಣ ಮಾಡಿದರು. ಹೆಡ್ಮಾಸ್ಟರ್ ಶ್ರೀ ಕೆ. ಪ್ರಸಾದರು ಶಾಲಾ ವರದಿಯನ್ನೋದಿದರು. ಶ್ರೀ ಜಿ. ಶ್ರೀಧರ ಪೂಜಾರಿಯವರು ಸ್ವಸ್ತಿ ವಾಚನ ಮಾಡಿದರು. ಶ್ರೀಗಳಾದ ಕೆ. ಶ್ಯಾಮ ಭಟ್ ಮತ್ತು ಕಾರ್ಕಳದ ಬಿ. ಡಿ. ಒ ವಿ ರಮಣರವರು ಸಮಯೋಚಿತ ಮಾತುಗಳನ್ನಾಡಿದರು. ಶ್ರೀ ಎಮ್ ವಿಠಲ ಸೆಟ್ಟರು ವಂದನೆಗಳನ್ನಿತ್ತರು.

ಮರುದಿವಸ ರಾತ್ರಿ ಹೆತ್ತವರ ದಿನಾಚರಣೆಯು ಶ್ರೀ ಎ ಜೆ. ಆಳ್ವಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ಸಂಜೀವ ರಾವ್, ಬನ್ನಂಜೆ ರಾಮಾಚಾರ್ಯ, ಪಿ. ಶೀನ ಸೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ ಹಾಗೂ ವಂದನಾರ್ಪಣೆಗಳಾದ ಬಳಿಕ ಮಕ್ಕಳಿಂದ ವಿವಿಧ ವಿನೋದಾವಳಿಗಳಾದುವು. ಪತ್ಕಜ್ಜ ಜಯಭಾರತ ಯಕ್ಷಗಾನ ನಾಟಕ ಸಂಘದವರು 'ವೀರ ರಮಣಿ' ಯಕ್ಷಗಾನ ನಾಟಕವನ್ನು ಅಭಿನಯಿಸಿದರು ಶ್ರೀ ಕೆ. ಮಾರಣ್ಣ ಮಾಡರು ಸಂಘಕ್ಕೆ ಉಡುಗೊರೆ ಕೊಟ್ಟರು.

ಉಡುಪಿ ಡಿ. ಮು ಕೋರ್ಟಿನಲ್ಲಿ

O. S. No. 428/1957.

K ರಾಮಚಂದ್ರ ನಾಯ್ಕ — ವಾದಿ

ಮತ್ತು

1 ಪಾವ್ಲು ಫೆರ್ನಾಂಡಿಸ್ 2 K. ಗೋಪಾಲಕೃಷ್ಣ ನಾಯ್ಕ — ಪ್ರತಿವಾದಿರು

2ನೇ ಪ್ರತಿವಾದಿ K. ಗೋಪಾಲಕೃಷ್ಣ ನಾಯ್ಕ-K. ರಾಮಚಂದ್ರ ನಾಯ್ಕರ ಮಗ. ಉಡುಪಿ ತಾಲೂಕು ಮರ್ಣೆ ಗ್ರಾಮ.

1ನೇ ಪ್ರತಿವಾದಿಯು 2ನೇ ಪ್ರತಿವಾದಿಯ ಮೇಲೆ ಪಡೆದ S. C. 594/56 ನೇ ಡಿಕ್ರಿಯ ಮೇಲೆ ನಡಿಸಿದ R. E. P. No 783/56ರಲ್ಲಿ ವಾದಿಯು ದಾಖಲುಮಾಡಿದ R. E. A. No 647/56ರಲ್ಲಾದ ಒರ್ಡರ್ ರದ್ದತಿ ಕೇಳಿ ದಾಖಲು ಮಾಡಿದ ಮೇಲಿನ ವ್ಯಾಜ್ಯವು 2ನೇ ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 22—2—58ಕ್ಕೆ ಇಟ್ಟದೆ. 2ನೇ ಪ್ರತಿವಾದಿಯು ಸದ್ರಿ ದಿವಸ ಪೂರ್ವಾಹ್ನ ಘಂಟೆ 10ಕ್ಕೆ ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಲಿಕ್ಕೆ ತಪ್ಪಿದರೆ ಅತನ ಗೈರು ಹಾಜ್ರಿಯಿಂದ ಸದ್ರಿ ವ್ಯಾಜ್ಯವನ್ನು ತೀರ್ಮಾನಿಸಲ್ಪಡುವದು.

G C Rego.
Vakil for Plaintiff.

ಉಡುಪಿ, ತಾರೀಕು 3—2—1958.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಮಂಗಳೂರು

ಸೈಂಟ್ ಎಲೋಸಿಯಸ್ ಕಾಲೇಜ್ ಯೂನಿಯನ್ ವಾರ್ಷಿಕೋತ್ಸವವು ತಾ. ೫ರಲ್ಲು ಮಾಜಿ ಮಂತ್ರಿ ಶ್ರೀ ಎ ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಯೂನಿಯನ್ ಅಧ್ಯಕ್ಷ ಶ್ರೀ ಎಮ್ ಸತೀಶಚಂದ್ರರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಎಮ್ ರಮಾನಂದರಾಯರು ವರದಿಯನ್ನೋದಿದರು. ಡಾ ಎಲ್. ಸೆರಿಯವರು ಯೂನಿಯನ್ನಿನ ಸ್ವಸ್ತಿವಾಚನ ಮಾಡಿದರು. ಶ್ರೀ ಇ. ಕೆ ವಿಜಯಕೇಶವನ್‌ರವರು ಉತ್ತರವಿತ್ತರು. ಕಾಲೇಜಿನ ಸ್ವಸ್ತಿವಾಚನವನ್ನು ಶ್ರೀ ಪ್ಯಾಟ್ರಿಕ್ ಜಿ ವಾಸರು ಮಾಡಿದರು. ಪ್ರಿನ್ಸಿಪಾಲ್ ರೆ| ಫಾ ಎ. ಬಿ ಸಾಲ್ಡಾನ್ಹಾ ಎಸ್. ಜೆ.ಯವರು ಉತ್ತರಿಸಿದರು ಹೊರ ಹೋಗುವ ವಿದ್ಯಾರ್ಥಿಗಳ ಸ್ವಸ್ತಿವಾಚನವನ್ನು ಶ್ರೀ ಎ ಪಿ ಮೋಹನ ಕುಮಾರರು ಮಾಡಿದುದಕ್ಕೆ ಶ್ರೀ ವಿವೇಕಾನಂದ ಬೆಳ್ತಂಗಡಿಯವರು ಉತ್ತರವಿತ್ತರು ಅಧ್ಯಕ್ಷರು ಜೆಸುಯಿಸ್ಟ್ ಪಾದ್ರಿಗಳ ಸೇವೆಯನ್ನು ಪ್ರಶಂಸಿಸಿದರು, ತರಗತಿಗಳೊಳಗಿನ ಪಾಠಗಳು ಮಾತ್ರ ಶಿಕ್ಷಣದ ಅಂಗಗಳಲ್ಲ ಪಾಠೇತರ ಚಟುವಟಿಕೆಗಳಾದ ಶಾರೀರಿಕ ಶಿಕ್ಷಣವೂ ವಿದ್ಯಾಭ್ಯಾಸದ ಒಂದು ಪ್ರಮುಖವೆಂದು ಹೇಳಿದರು ವಿವಿಧ ವಿನೋದಾವಳಿಗಳಾದ ಬಳಿಕ ಕಾರ್ಯದರ್ಶಿಯರು ವಂದನೆಗಳನ್ನಿತ್ತರು.

ಶಾಲಾ ವರ್ಧಂತಿ— ಸ್ಥಳೀಯ ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯ ವರ್ಧಂತ್ಯುತ್ಸವವು ತಾ 1ರಲ್ಲು ಡಾ. ಕೆ. ನಾಗಪ್ಪ ಆಳ್ವ, ಎಮ್ ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬೇಜು ಉಚ್ಚಿಲ, ಅವರು ವರದಿಯನ್ನೋದಿದರು ಶ್ರೀ ವೈ ಸುಬ್ರಾಯ ಭಟ್ಟರು ಶಾಲಾ ಸ್ವಸ್ತಿವಾಚನ ಮಾಡಿದರು ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು. ವಿವಿಧ ವಿನೋದಾವಳಿಗಳಾದ ಬಳಿಕ ಶ್ರೀ ಕೆ. ಜನಾರ್ದನರವರು ಧನ್ಯವಾದವಿತ್ತರು

ವಾರ್ಷಿಕೋತ್ಸವ ಸೈಂಟ್ ಮೇರೀಸ್ ಹ್ಯಾಸ್ಕ್ಯೂಲ್ ಮಾರ್ಜಿಲ್ ಮಂಗಳೂರು.-ಇದರ ವಾರ್ಷಿಕೋತ್ಸವವು ತಾ ೯ರಲ್ಲು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್ ಎಸ್ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಕುಮಾರಿ ಲೀನಾ ಪಿರೇರರು ಮದರ್ ಸುಪೀರಿಯರ್ ಎಮ್. ಒಟ್ಟಿಲಿಯಾ ಎ ಸಿ. ಅವರ ಪರವಾಗಿ ಶಾಲಾ ವರದಿಯನ್ನೋದಿದರು ಶ್ರೀಮತಿ ಕೃಷ್ಣಮೂರ್ತಿಯವರು ಬಹುಮಾನ ವಿತರಣೆ ಮಾಡಿದರು

ಸಮಾಜಸೇವಾ ಸಂಘದ ದಿನಾಚರಣೆ— ಸ್ಥಳೀಯ ಸರಕಾರಿ ತರಬೇತಿ ಕಾಲೇಜಿನ ಆಶ್ರಯದಲ್ಲಿ ಸಮಾಜಸೇವಾ ಸಂಘದ ದಿನಾಚರಣೆಯು ತಾ. ೯ರಲ್ಲು ಶ್ರೀ ಎಸ್. ನರಸಪ್ಪಯ್ಯ ಎಮ್ ಎಲ್ ಸಿ ಯವರ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷ ಶ್ರೀ ಎಮ್. ಚಕ್ರಪಾಣಿ ಉಡುಪರು ಸ್ವಾಗತಿಸಿದರು ಕಾರ್ಯದರ್ಶಿ ಶ್ರೀ ಎಮ್ ಜಿ ಶಂಕರನಾರಾಯಣ ರಾಯರು ವರದಿ ಓದಿದರು ಶ್ರೀ ಟಿ ಎ ಜೆವಿಯರ್‌ರವರು ಧನ್ಯವಾದವಿತ್ತರು. ಬಳಿಕ ವಿನೋದಾವಳಿ ಕಾರ್ಯಕ್ರಮವಾಯಿತು

ಗವರ್ನ್‌ಮೆಂಟ್ ಕಾಲೇಜ್ ವಾರ್ಷಿಕ ಸಮಾರಂಭವು— ತಾ ೮ರಲ್ಲಿ ಮಾಜಿಮಂತ್ರಿ ಶ್ರೀ ಎ. ಬಿ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ಗಣೇಶ ಕಾಮತರು ಅಧ್ಯಕ್ಷರಿಗೆ ಹಾರ ಅರ್ಪಿಸಿದ ಬಳಿಕ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸಿ. ವಿ. ಲೋಬೋರವರು ವರದಿ ಓದಿದರು ಮಂಗಳೂರು ನಗರ ಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರು ಕಾಲೇಜಿನ ಸ್ವಸ್ತಿವಾಚನ ಮಾಡಿದರು. ಕಾಲೇಜು ಅಧ್ಯಕ್ಷ ಕುಮಾರಿ ಎಸ್ ಸುಮನಾರವರು ಉತ್ತರಿಸಿದರು. ಅಧ್ಯಕ್ಷರು ಪಾರಿತೋಷಿಕ ವಿತರಣೆ ಮಾಡಿದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ, ಪ್ರಕೃತ ವಿದ್ಯಾಭ್ಯಾಸ ಕ್ರಮದಲ್ಲಿ ಬದಲಾವಣೆ ಅಗತ್ಯ ಉಚ್ಚ ಶಿಕ್ಷಣದಲ್ಲಿ ಅಭಿರುಚಿ ಇಲ್ಲದಿರುವವರು ಕೂಡ ಇಂದು ಉಚ್ಚ ಶಿಕ್ಷಣಕ್ಕಾಗಿ ವಿದ್ಯಾಲಯಗಳನ್ನು ಸೇರುತ್ತಿದ್ದಾರೆ. ಇದರಿಂದಾಗಿಯೇ ದೇಶದಲ್ಲಿಂದು ವಿದ್ಯಾವಂತರಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿವೆ ಎಂದರು. ಸಹ ಶಿಕ್ಷಣವು ವಿದ್ಯಾರ್ಥಿಗಳ ಮನೋಭಾವನೆಯನ್ನು ಉತ್ತಮಗೊಳಿಸುವುದು, ಶಿಕ್ಷಣ ಕ್ಷೇತ್ರದಲ್ಲಿ ಉಲ್ಲಾಸವನ್ನುಂಟು ಮಾಡುವುದು. ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರೊಳಗೆ ಸುಗಮ ಸ್ಪರ್ಧೆಯನ್ನು ಏರ್ಪಡಿಸಿ ಉಭಯತರಿಗೂ ಪ್ರಗತಿಯಲ್ಲೂ ಸಹಾಯಕವಾಗುವುದೆಂದು ಹೇಳಿದರು ಶ್ರೀ ಚಂದ್ರಕಾಂತರಾಯರು ಧನ್ಯವಾದಗಳನ್ನಿತ್ತರು. ಬಳಿಕ ವಿವಿಧ ವಿನೋದಾವಳಿಗಳಾದುವು.

ಕೈಮಗ್ಗ ಸಪ್ತಾಹವನ್ನು- ತಾ ೮ರಲ್ಲು ಬೆಳಿಗ್ಗೆ ಶ್ರೀ ಕೆ ಕೆ. ಸೆಟ್ಟಿ, ಎಮ್ ಎಲ್ ಸಿ. ಯವರು ಸೆಂಟ್ರಲ್ ಕೋಪರೇಟಿವ್ ಬೇಂಕಿನ ಸಭಾಭವನದಲ್ಲಿ ಉದ್ಘಾಟಿಸುತ್ತಾ, ಸಮಾಜವಾದೀ ಮಾದರಿಯ ಸಮಾಜ ರಚನೆಗೆ ವಿಕೇಂದ್ರೀಕೃತ ಆರ್ಥಿಕತೆ ಆವಶ್ಯ. ಇದಕ್ಕಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆಗಳನ್ನು ಸ್ಥಾಪಿಸಿ ದೇಶದ ಸಂಪತ್ತು ಒಂದೇ ಕಡೆಯಲ್ಲಿ ಕೇಂದ್ರೀಕೃತಗೊಳ್ಳದಂತೆ ನೋಡುವುದು ಅಗತ್ಯ. ಮಿಲಿಯಾಂತರ ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟು ಹಳ್ಳಿಯ ಜನರ ಜೀವನ ಮಟ್ಟವನ್ನು ಏರಿಸಿ ಈ ಗುಡಿ ಕೈಗಾರಿಕೆಗಳು ದೇಶವು ಆರ್ಥಿಕ ಪ್ರಗತಿಯ ಪಥದಲ್ಲಿ ಮುನ್ನಡೆಯುವಂತೆ ಮಾಡುತ್ತವೆ ಎಂದು ಹೇಳಿದರು ನಂತರ ಕೈಮಗ್ಗ ಬಟ್ಟೆಗಳ ಪ್ರದರ್ಶನವನ್ನು ಉದ್ಘಾಟಿಸಿದರು.

ಸಪ್ತಾಹ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಿವೃತ್ತ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎಮ್. ಆರ್. ಚಂದರ್‌ರವರು ಭಾರತದಲ್ಲಿನ ಕೈಮಗ್ಗಗಳ ಪುರಾತನ ಇತಿಹಾಸವನ್ನು ವಿವರಿಸಿ ಕೈಮಗ್ಗ ಬಟ್ಟೆಗಳನ್ನು ಹೆಚ್ಚಿನ ಜನರು ಕೊಂಡುಕೊಳ್ಳಲು ಸಾಧ್ಯವಾಗುವಂತೆ ಅದು ಬದಲಾದ ಪರಿಸ್ಥಿತಿಗೆ ಸರಿಯಾಗಿದ್ದು, ಅದಕ್ಕೆ ತಕ್ಕ ಪ್ರಚಾರ ಕಾರ್ಯ ಅಗತ್ಯವೆಂದರು, ಶ್ರೀಗಳಾದ ಎಮ್ ರಾಜೀವ, ಬಿ. ಎಮ್. ಇದಿನಬ್ಬ, ಜೆ ಬಿ ಡಿ ಸೋಜ ಮೊದಲಾದವರು ಸಾಂದರ್ಭೋಚಿತ ಮಾತುಗಳನ್ನಾಡಿದರು. ಸಭಾರಂಭದಲ್ಲಿ ಮಂಗಳೂರು ನೋರ್ತ್ ಸರ್ಕಲಿನ ಸಹಕಾರಿ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಕೆ ಕಾಳಪ್ಪ ಸೆಟ್ಟರು ಸ್ವಾಗತ ಭಾಷಣ ಮಾಡುತ್ತಾ, ಕೈಮಗ್ಗ ಕೈಗಾರಿಕೆಯಲ್ಲಿ ದ ಕ. ಜಿಲ್ಲೆಯಲ್ಲಾದ ಪ್ರಗತಿಯನ್ನು ವಿವರಿಸಿದರು.

ಲೇಖಾಂಕ—೧

ಸ್ವಾಮಿ ಶಿವಾನಂದರ ವಾಣಿ

ಅನುವಾದಕರು:—
ಶ್ರೀ ಭದ್ರಗಿರಿ ಕೇಶವ ಪೈ, B A
ಹರಿದಾಸರು ಉಡುಪಿ.

1. ಕಾಮ-ಕ್ರೋಧಗಳನ್ನು ವರ್ಜಿಸಿದ ಸಂತನಿಗಿಂತ ಹೆಚ್ಚು ಸಂತುಷ್ಟರು ತ್ರಿಭುವನಗಳಲ್ಲಿ ಯಾರೂ ಇಲ್ಲ.

2. ಸಂತರು ಸ್ಫೂರ್ತಿದಾಯಕರು ಮತ್ತು ಸಹಾಯಕರು. ಅವರು ಜೀವನದ ಮೇಲೆ ಬೆಳಕು ಚೆಲ್ಲುವವರು.

3 ಸಾಧುವು ಸಾವು—ನೋವುಗಳನ್ನು ದಾಟುವವನು, ಅವನು ಅಮರನಾಗುವನು

4 ಯೋಗಿಯು ನಿಜವಾದ ಧೀರನು; ಜಿತೇಂದ್ರಿಯನು; ಇಂದ್ರಿಯ ಮತ್ತು ಮನಸ್ಸಿನ ಮೇಲೆ ಒಡೆತನ ಉಳ್ಳವನು. ಜೀವನದ ಎಲ್ಲಾ ಸ್ಥಿತಿ—ಗತಿಗಳಲ್ಲಿ ಆತನು ಅಚಲಿತನು.

5. ದೇವನೊಡನೆ ತಾನು ಒಂದಾಗಿರುವೆನೆಂಬ ಆನಂದದ ಭಾವನೆಯು ಸಾಧು—ಯಾ-ಸಂತನ ಒಂದು ನೇರವಾದ ಅನುಭವ ಯಾ-ಅಧ್ಯಾತ್ಮಿಕ ಅನುಭವ.

6. ಸಾಧುವಿಗೆ ದಿವ್ಯಜ್ಞಾನವಿದೆ. ಅವನು ದಾರಿದ್ರ್ಯದಲ್ಲಿ ಸಿರಿವಂತ; ಬಂಧನದಲ್ಲಿ ಮುಕ್ತ, ತೊಡಕುಗಳಲ್ಲಿ, ದುಃಖದಲ್ಲಿ, ಅಸ್ವಸ್ಥತೆಯಲ್ಲಿ ಮತ್ತು ಸಾವಿನಲ್ಲಿ ಕೂಡಾ ಸುಖಿ.

7. ರಾಜನು ತನ್ನ ಸ್ಥಳದಲ್ಲಿ ಮಾತ್ರ ಗೌರವಿಸಲ್ಪಡುತ್ತಾನೆ; ಸಾಧುವಾದರೊ ಎಲ್ಲೆಲ್ಲೂ ಗೌರವಿಸಲ್ಪಡುತ್ತಾನೆ.

8. ಸಾಧುವು ನಿಜವಾಗಿಯೂ ಶ್ರೀಮಂತನು, ಅಧ್ಯಾತ್ಮಿಕ ಸಂಪತ್ತಿರುವುದರಿಂದ ನಿಜವಾದ ಧನಿಕನೂ ಆಗಿದ್ದಾನೆ.

9 ಸಹಸ್ರಾರು ಅಸಂತುಷ್ಟರ ಜೀವನದಲ್ಲಿ ಬೇಕುಬೇಕಿರುವ ಅಪರೂಪ ಸೌಭಾಗ್ಯ ನಿಜವಾಗಿ ಕೆಲವರಿಗೆ ಮಾತ್ರವಿದೆ.

10. ಇತರರಿಗೆ ಸತತ ಆನಂದವೀಯುವವನೇ ನಿಜವಾದ ಸಾಧು-ಯಾ—ಸಂತನು.

(ಮುಂದಿನ ವಾರ.- ಯಾರು ನಿಜವಾದ ಸಾಧುವೆನ್ನಿಸುವನು?)

ಮಂಗಳೂರು ಪತ್ರಿಕೋದ್ಯೋಗಿ ಸಂಘದ ವಾರ್ಷಿಕೋತ್ಸವವು ತಾ. 1ರಲ್ಲು ಸಂಜೆ ಸ್ಥಳೀಯ ಗಣಪತಿ ಹ್ಯಾಸ್ಕೂಲಿನ ಶಾರದಾ ಸದನದಲ್ಲಿ ಶ್ರೀ ಬಿ ಎಸ್ ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಅಜರ್, ಎಮ್ ಓ, ಅವರು ಸ್ವಾಗತಭಾಷಣಮಾಡಿದರು ಕಾರ್ಯದರ್ಶಿ ಶ್ರೀ ಶ್ರೀನಿವಾಸ ಉಪಾಧ್ಯರು ವರದಿಯನ್ನು ಓದಿದರು ಮುಖ್ಯ ಅತಿಥಿಗಳಾದ ಶ್ರೀ ಕಡೇಗೋಡ್ಲು ಶಂಕರ ಭಟ್ಟರು ಮಾತನಾಡುತ್ತಾ, ಪತ್ರಿಕೆಗಳು ವೈಯಕ್ತಿಕವಾಗಿ ಬಿನ್ನಾಭಿಪ್ರಾಯವುಳ್ಳವಾದರೂ ಐಕ್ಯತೆಯಿಂದಿರಬೇಕೆಂದರು. ದೊಡ್ಡ ಪತ್ರಿಕೆಗಳಿಗಿಂತಲೂ ಸಣ್ಣ ಪತ್ರಿಕೆಗಳು ಹೆಚ್ಚಿನ ಸೇವೆ ಸಲ್ಲಿಸಬಹುದಾಗಿದೆ ಎಂದರು ಪತ್ರಿಕೆಗಳ ಹಕ್ಕು ಬಾಧ್ಯತೆಗಳಿಗಾಗಿ ಒಗ್ಗಟ್ಟಿನಿಂದ ಕೆಲಸಮಾಡಬೇಕೆಂದೂ ಸರಕಾರದ ಸಹಕಾರದಲ್ಲಿಂತೂ ಈ ಒಗ್ಗಟ್ಟು ಅಗತ್ಯವೆಂದರು ಅಧ್ಯಕ್ಷರು ಮಾತನಾಡುತ್ತಾ, ಇಂದಿನ ತಳ ಕಾಗದದ ಬೆಲೆಯೇರಿರುವ ಕಾಲದಲ್ಲಿ ಸಣ್ಣ ಪತ್ರಿಕೆಗಳು ಉಳಿಯುವುದೇ ಕಷ್ಟವಾದರೂ ಪತ್ರಿಕೆಗಳು ಉತ್ತಮ ಮಟ್ಟದ ಪ್ರಾಮಾಣಿಕತನದಿಂದ ನಡೆಬೇಕೆಂದರು

ಮಕ್ಕಳ ಮಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ 1ಕ್ಕೆ 0 1 0
ನವಯುಗ ಪ್ರೆಸ್, ಉಡುಪಿ.

"ಇಂಗ್ಲಿಷ್ ಕಲಿಯಲಿಲ್ಲವಲ್ಲಾ" ಎಂದು ಚಿಂತಿಸಬೇಡಿರಿ.

ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಇಲ್ಲಿದೆ. ನೋಡಿರಿ!

ಸುಲಭವಾಗಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ಬೇಡಿಕೆ ಹೆಚ್ಚಾಗಿರುವುದೇ ಇದರ ಜನಪ್ರಿಯತೆಯನ್ನು ಸೂಚಿಸುತ್ತದೆ

ಹೊಸ ಮುದ್ರಣ—ಸಾದಾ ಪ್ರತಿ 1·50. ಉತ್ತಮ ಪ್ರತಿ 2·00

ಪುಸ್ತಕದ ಬೆಲೆಯೊಂದಿಗೆ ನಾಲ್ಕಾಣೆ ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ನಮ್ಮ ಪುಸ್ತಕಗಳು ಈ ಕೆಳಗಿನವರಲ್ಲಿಯೂ ದೊರೆಯುತ್ತವೆ.—

1) ಸ್ಕೂಲ್ ಬುಕ್ ಕಂಪೆನಿ, ರಥಬೀದಿ, ಮಂಗಳೂರು-1.

2) ಸ್ಟುಡೆಂಟ್ಸ್ ಬುಕ್ ಡಿಪೊ, 6 E, ಸೀತಾ ಸ್ಟ್ರೀಟ್, ಫೋರ್ಟ್, ಬೊಂಬಾಯಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಪ್ರೇಮದರ್ಶಿ—ಗ್ರಂಥಕರ್ತ ಮತ್ತು ಪ್ರಕಾಶಕ: ಶ್ರೀ ವಿ. ಎನ್. ರಾಜಾರಾವ್, ಬಿ. ಎ., ೧೭೩, ನಾಲ್ಕನೇ ಕ್ರಾಸ್, ಐದನೆಯ ಮೆಯಿನ್ ರೋಡ್, ಚಾಮರಾಜ ಪೇಟೆ, ಬೆಂಗಳೂರು ಸಿಟಿ. ಪುಟಗಳು: ೧೨೭. ಬೆಲೆ: ರೂ. 1.25.

ಶೈಲೇಶನು ಸಮಾಜದಲ್ಲಿಯೂ ದೇವರಲ್ಲಿಯೂ ಅತ್ಯಧಿಕ ಪ್ರೇಮವನ್ನಿಟ್ಟಿದ್ದನು. ಅವನ ಜೀವನದಲ್ಲಿ ಮೃತ್ಯುಶಯ್ಯೆಯಲ್ಲಿ ಮಲಗಿದ್ದ ಸಮಾಜದ ನಾಯಕನನ್ನು ಒಮ್ಮೆ ನೋಡಿಕೊಳ್ಳುವ ಸಂದರ್ಭ ಬಂತು. ಈ ನಾಯಕನೊಡನೆ ಅಪಾರ ಹಣವಿತ್ತೆಂದು ತಿಳಿದಿತ್ತು. ಆದರೆ ಇನ್ನೊಬ್ಬ ಸಮಾಜದ ಸದಸ್ಯನು ಆತನನ್ನು ಕೊಂದು ಹಣದೊಡನೆ ಪಲಾಯನ ಮಾಡಿದನು. ನಾಯಕನನ್ನು ಕೊಂದ ಅಪರಾಧ ಶೈಲೇಶನ ಮೇಲೆ ಬಿದ್ದು ಆತನ ಅಪಮಾನವಾಯಿತು. ನಿರಪರಾಧಿಯಾದ ತನ್ನ ಮೇಲೆ ಹೊರಿಸಲ್ಪಟ್ಟ ಅಪವಾದ ಪವಿತ್ರಾತ್ಮನೆದುರಲ್ಲಿಯೂ ಚೀಟಿಯೆತ್ತುವ ಮೂಲಕ ಸಿದ್ಧವಾಗಲು ಶೈಲೇಶನಿಗೆ ಸಮಾಜ ಹಾಗೂ ದೇವರ ಮೇಲಿದ್ದ ಪ್ರೀತಿವಿಶ್ವಾಸಗಳು ನಾಶವಾದುವು. ಆತನೊಬ್ಬ ವಿಚಿತ್ರ ವ್ಯಕ್ತಿಯಾಗಿ ಆ ಊರನ್ನು ಬಿಟ್ಟು ಸಮೀಪದ ಮತ್ತೊಂದೂರಿಗೆ ಹೋದನು. ಜಗತ್ತನ್ನು ರಕ್ಷಿಸುವ ದೇವನು ನ್ಯಾಯಪರನಲ್ಲ; ನಿರಪರಾಧಿಗಳಿಗೆ ವಿರುದ್ಧ ಸಾಕ್ಷಿ ನುಡಿಯುವವನೆಂದೇ ಆತನ ನಿರ್ಧಾರವಾಯಿತು. ಹೊಸ ಊರಲ್ಲಿ ಬಟ್ಟೆ ನೇಯುತ್ತ ಹಣ ಸಂಪಾದಿಸಿದನು. ಈ ಹಣವೇ ಆತನ ಸರ್ವಸ್ವವಾಯಿತು. ಅದರಿಂದ ಜನರೊಡನೆ ಬೆರೆಯದೆ ದೂರವಾಗಿಯೇ ಉಳಿದಿದ್ದನು. ಊರ ಶ್ರೀಮಂತನ ಮಗ ಗಣೇಶನ ತಮ್ಮ ದಿನೇಶನಿಗೆ ದುಂದು ವೆಚ್ಚದಿಂದಾಗಿ ಹಣ ಸಾಕಾಗದಾಗಲು ಆತ ಸಂದರ್ಭ ಸಾಧಿಸಿ ಶೈಲೇಶನ ಹಣ ಕದ್ದ. ಶೈಲೇಶನ ಮೇಲೆ ಆಕಾಶವೇ ಕಳಚಿಬಿತ್ತು. ಜೀವನದಲ್ಲಿ ಪೂರ್ಣ ನಿರಾಸೆ ಮೂಡಿತು. ಅಷ್ಟರಲ್ಲಿಯೇ ಗಣೇಶನ ಉಪಪತ್ನಿ ಮಲ್ಲಮ್ಮನ ಮಗ ಬಾಲೆ ಪರಿದಾಡಿ ಶೈಲೇಶನ ಮನೆ ಸೇರಿದಳು. ಮಲ್ಲಮ್ಮ ಸತ್ತುಹೋಗಿದ್ದಳು. ಅಂದಿನಿಂದ ಶೈಲೇಶ ಮಗುವನ್ನು ಪ್ರೀತಿಸತೊಡಗಿದ; ನೆರೆಮನೆಯ ನೆಂಕಮ್ಮನಿಂದ ಜೀವನದಲ್ಲಿ ನಂಬುಗೆ, ದೇವರಲ್ಲಿ ಪ್ರೀತಿ ಬೆಳೆಯಿತು. ಅತ್ತ ಹಣಕದ್ದ ದಿನೇಶ ಕೆರೆಯಲ್ಲಿ ಬಿದ್ದು ಸತ್ತುಹೋಗಿದ್ದ. ಹಣವು ಸಹ ಅಲ್ಲಿಯೇ ಬಿದ್ದು ಹೂತುಹೋಗಿತ್ತು. ಕ್ರಮೇಣ ಬಾಲೆಯನ್ನು ತನ್ನಲ್ಲಿಗೆ ಕರೆಯಲು ಗಣೇಶನೂ ಆತನ ಹೆಂಡತಿಯೂ ತೀರ್ಮಾನಿಸಿ ಕರೆಯ ಬಂದರೆ ಶೈಲೇಶ ಒಪ್ಪಲಿಲ್ಲ. ಕೊನೆಗೆ ಕದ್ದ ಹಣದ ಪತ್ತೆಯಾಯಿತು. ಗುಟ್ಟು ಬಯಲಾಯಿತು! ಶೈಲೇಶನಿಗೆ ದೇವರಲ್ಲಿ ಕಳೆದುಕೊಂಡ ವಿಶ್ವಾಸ ಪುನಃ ಮೂಡಿತು. ತನ್ನ ಮೊದಲೂರಿಗೆ ಬಂದಾಗ, ಅಲ್ಲಿಯ ಜನರೂ ಆತನನ್ನು ನಿರಪರಾಧಿ ಎಂದೊಪ್ಪಿದರು. ಶೈಲೇಶನು ಆಗ ಉಚ್ಚರಿಸಿದ–ಜಗದ್ರಕ್ಷಕನಾದ ದೇವರು ದಯಾಮಯನು, ನ್ಯಾಯಪರನು.

ಇದು ಈ ಕಾದಂಬರಿಯ ಕಥೆ. ಇದು ಜಾರ್ಜ್ ಈಲಿಯಟ್ ಬರೆದಿರುವ ಸಿಲಾಸ್ ಮಾರ್ನರ್ ಎಂಬ ಆಂಗ್ಲ ಕಾದಂಬರಿಯ ಕಥಾನುವಾದ ನಮ್ಮ ಸಮಾಜಕ್ಕೆ ಹಾಗೂ ಸನ್ನಿವೇಶಕ್ಕೆ ಒಪ್ಪುವಂತಹ ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಸನ್ನಿವೇಶಗಳಲ್ಲಿ ಮಾನವನಲ್ಲಿ ಉಂಟಾಗುವ ಮನೋವಿಕಾರಗಳನ್ನು ಮೂಲದಂತೆಯೇ ಕನ್ನಡಿಸಿದ್ದಾರೆ. ಕಾದಂಬರಿಯು ಹೃದಯಂಗಮವಾಗಿಯೂ ಹೃದಯಸ್ಪರ್ಶಿಯಾಗಿಯೂ ಇದ್ದು ಪ್ರತಿ ಘಟನೆಯೂ ಕುತೂಹಲವನ್ನು ಹುಟ್ಟಿಸಬಲ್ಲುದು. ದಿನೇಶ-ಗಣೇಶರ ಸಂಬಂಧದ ಕಥೆ ಮಾತ್ರ ಹರಟೆಯಂತೆ ಕಂಡುಬರುತ್ತದಾದರೂ ಅದು ಮೂಲ ಲೇಖಕರ ಸಮಾಜಕ್ಕೆ ಸಂಬಂಧಿಸಿದ ಘಟನೆಯೂದುದರಿಂದ ಹಾಗಾಯಿತೆನ್ನಬಹುದು. ಜನತೆಯಲ್ಲಿ ದೈವ ಭಕ್ತಿಯನ್ನು ಹುಟ್ಟಿಸುವಲ್ಲಿ ಈ ಕಾದಂಬರಿಯು ಕೆಲಸಮಾಡೀತು. ಶೈಲಿಯು ಸರಳವಾಗಿದ್ದರೂ ಸುಂದರವಾಗಿದ್ದು ಓದುಗರಿಗೆ ಕಥಾ ಭಾಗದಲ್ಲಿ ಉತ್ಸಾಹವನ್ನು ಹುಟ್ಟಿಸುತ್ತದೆ ಎನ್ನಬಹುದು.

ನಮ್ಮ ಪ್ರವಾಸ—(ಭಾಗ–೧) ಗ್ರಂಥಕರ್ತರು ಮತ್ತು ಪ್ರಕಾಶಕರು: ಶ್ರೀ. ಮ. ನ. ಮೂರ್ತಿ, ೨೫೭, ಗವೀಪುರ ಗುಟ್ಟಹಳ್ಳಿ, ಬೆಂಗಳೂರು-೪. ಪುಟಗಳು ೧೭೨. ಬೆಲೆ ರೂ. ೧-೬೦.

ಹೆಸರೇ ಸೂಚಿಸುವಂತೆ ಇದೊಂದು ಪ್ರವಾಸದ ಕಥನ ಮೈಸೂರು, ಶ್ರೀರಂಗ ಪಟ್ಟಣ, ನಂಜನಗೂಡು ಬೈಲೂರು ಮತ್ತು ಉಡುಪಿಗಳ ಪ್ರವಾಸದ ಕಥನವು ಇಲ್ಲಿ ಬಂದಿದೆ. ಉಪರೋಕ್ತ ಸ್ಥಳಗಳ ಹಾಗೂ ದಾರಿಯಲ್ಲಿ ಸಿಗುವ ಇತರ ಹತ್ತು ಹಲವಾರು ಸ್ಥಳಗಳ ಇತಿಹಾಸ, ಅಲ್ಲಿ ಪ್ರವಾಸಮಾಡುವವರು ಕಾಣಬೇಕಾದ ಪ್ರೇಕ್ಷಣೀಯ ಸ್ಥಳಗಳು, ಅರಮನೆ ಕೋಟೆಕೊತ್ತಳಗಳ ಚರಿತ್ರೆ, ಅಲ್ಲಿನ ರಾಜ ಮಹಾರಾಜರ ಇತಿಹಾಸ, ಎಲ್ಲವೂ ಈ ಪ್ರವಾಸ ಲೇಖನದಲ್ಲಿ ಸಂಗ್ರಹಿಸಲಾಗಿದೆ. ಆಯಾ ಸ್ಥಳ ಯಾತ್ರೆಯಲ್ಲಿ ಯಾತ್ರಾರ್ಥಿಗಳು ಅನುಭವಿಸಬೇಕಾದ ಕಷ್ಟಗಳನ್ನೂ ಅನುಭವಗಳನ್ನೂ ಈ ಪುಸ್ತಕದಲ್ಲಿ ಒಂದು ಕಥೆಯ ರೂಪದಲ್ಲಿ ಜನತೆಯ ಮುಂದೆ ಲೇಖಕರು ಇಟ್ಟಿದ್ದಾರೆ. ಸಾಮಾನ್ಯವಾಗಿ ಇದು ಈ ಯಾತ್ರಾಸ್ಥಳಗಳ ಕೈಪಿಡಿಯಂತಿದೆಯೆನ್ನಬಹುದು. ಕರ್ನಾಟಕದ ಪ್ರಸಿದ್ಧ ಸ್ಥಳಗಳಾದ ಇವುಗಳನ್ನು ಸಂದರ್ಶಿಸುವವರು ಈ ಪುಸ್ತಕವನ್ನು ತಮ್ಮೊಡನಿಟ್ಟುಕೊಂಡಲ್ಲಿ ಅದರಿಂದ ಅವರಿಗೆ ತುಂಬ ಪ್ರಯೋಜನ ದೊರೆಯುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಲೇಖಕರು ಈ ವಿಷಯದಲ್ಲಿ ಇತಿಹಾಸ ಗ್ರಂಥಗಳ ಅಧ್ಯಯನವನ್ನು ಬಹಳ ಪರಿಶ್ರಮ ಪೂರ್ವಕವಾಗಿ ಮಾಡಿ ಜನತೆಗೆ ಉಪಕಾರ ಮಾಡಿದ್ದಾರೆ. ಕನ್ನಡಿಗ ಯಾತ್ರಾರ್ಥಿಗಳು ಲೇಖಕರಿಗೆ ಅತ್ಯಂತ ಕೃತಜ್ಞರಾಗಿರದಿರಲಾರರು.

ಚಂದಲೋಕಕ್ಕೆ ಪಯಣ—ಬರೆದವರು: ಶ್ರೀ ಯು. ರಾಘವೇಂದ್ರ ಆಚಾರ್ಯ; ಎಂ. ಎ. ಪ್ರಕಾಶಕರು: ಉಡುಪಿಯ ಕರ್ನಾಟಕ ಸಂಘ. ಪುಟಗಳು ೭೭, ಬೆಲೆ: ರೂ. ೧.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಅಭಾವವಿರುವುದಕ್ಕೆ ಅನುಭವಿಕ ವಿಜ್ಞಾನ ಶಾಸ್ತ್ರಜ್ಞರ ಕೊರತೆಯೇ ಕಾರಣವೆಂದು ತೋರುತ್ತದೆ. ಇಂದಿನ ಯುಗದಲ್ಲಿ ವಿಜ್ಞಾನವು ಮಾನವನ ದೈನಂದಿನ ಮಾತುಕತೆಯ ವಸ್ತುವಾಗಿರುವಾಗ ಈ ವಿಷಯದ ಮೇಲೆ ಅಧಿಕೃತಗ್ರಂಥಗಳು ಎಷ್ಟಿದ್ದರೂ ಸಾಲದು. ದಿನೇ ದಿನೇ ಪ್ರವರ್ಧಮಾನಗೊಳ್ಳುತ್ತಿರುವ ವಿಜ್ಞಾನದ ಮಹತ್ವವು ಈ ಕೆಲವು ತಿಂಗಳುಗಳಲ್ಲಿ ಅತ್ಯಂತ ಹೆಚ್ಚಿದೆ. ಮಾನವನು ತನ್ನ ಬುದ್ಧಿಮತ್ತೆಯ ಶಕ್ತಿಯಿಂದ ಭೂಮಿಯ ಸುತ್ತು ಕೃತಕ ಉಪಗ್ರಹಗಳನ್ನು ಸಂಚರಿಸುವಂತೆ ಮಾಡಿ ಚಂದ್ರಲೋಕಕ್ಕೆ ಪ್ರಯಾಣ ಮಾಡುವ ಮಹಾ ಸಾಹಸದಲ್ಲಿ ತಲ್ಲೀನನಾಗಿದ್ದಾನೆ. ಈಗಾಗಲೇ ರಶ್ಯಾವು ಎರಡು ಮತ್ತು ಅಮೇರಿಕೆಯು ಒಂದು ಉಪಗ್ರಹವನ್ನು ಹಾರಿಸಿದೆ. ಭೂಭೌತ ವರ್ಷದಲ್ಲಿ ಇನ್ನೇನು ಆಗಲಿದೆಯೋ ತಿಳಿಯಬಾರದು. ಇಂತಹ ಸಂದರ್ಭದಲ್ಲಿ ಚಂದ್ರಲೋಕಕ್ಕೆ ಪ್ರಯಾಣಿಸುವ ಕುರಿತಾದ ಗ್ರಂಥವೊಂದನ್ನು ಪ್ರಸಿದ್ಧ ವಿಜ್ಞಾನ ಲೇಖಕರಾದ ಶ್ರೀ ರಾಘವೇಂದ್ರ ಆಚಾರ್ಯರು ಇತ್ತಿದ್ದಾರೆ. ಈಗಾಗಲೇ ಎಕ್ಸ್–ರೇ, ಹಿರೋಶಿಮಾದಿಂದ ಜಿನೇವ ಮತ್ತು ಜನತಾ ವಿಜ್ಞಾನವೆಂಬ ವೈಜ್ಞಾನಿಕ ಪುಸ್ತಕಗಳನ್ನು ಕನ್ನಡಿಗರಿಗಿತ್ತ ಆಚಾರ್ಯರು ಇದೀಗ ಇನ್ನೊಂದು ಉಪಯುಕ್ತವಾದ ಹೊತ್ತಗೆಯನ್ನು ಅರ್ಪಿಸಿದ್ದಾರೆ.

ಈ ಪುಸ್ತಕದಲ್ಲಿ ಚಂದಲೋಕಕ್ಕೆ ಹೋಗುವ ಬಯಕೆ ಏಕೆಂಬುದನ್ನು ವಿವರಿಸಿ, ಅದಕ್ಕೆ ಉಪಾಯವೇನೆಂಬುದನ್ನು ತಿಳಿಸಿದ್ದಾರೆ, ಈ ಉಪಾಯವನ್ನು ತಿಳಿದ ಮೇಲೆ ಪ್ರಯಾಣಕ್ಕೆ ಅನುಕೂಲವಾದ ಸಾಧನೋಪಕರಣಗಳ ವಿವರಣೆಯನ್ನೂ ಇದುವರೆಗೆ ಈ ವಿಷಯದಲ್ಲಾದ ಪ್ರಯತ್ನಗಳು ಹಾಗೂ ಗಗನಸಂಚಾರ ಮತ್ತು ಚಂದ್ರನಲ್ಲಿ ತಲಪುವ ಸಂದರ್ಭದಲ್ಲಿ ಒದಗಿಬರಬಹುದಾದ ಸಂಕಟ ಮತ್ತದರ ಪರಿಹಾರೋಪಾಯಗಳನ್ನು ಸರಿಯಾಗಿ ವಿವರಿಸಿದ್ದಾರೆ. ಅಲ್ಲದೇ ಅಸಾಧ್ಯವೆಂದು ಕಲ್ಪನಾತೀತವೆಂದು ಒಂದು ಕಾಲದಲ್ಲಿ ತಿಳಿಯಲಾಗಿದ್ದ ಈ ಚಂದ್ರಲೋಕವನ್ನು ಸೇರುವುದರಿಂದ ಮಾನವನಿಗೇನು ಲಾಭ ಅಥವಾ ಫಲವೆಂಬುದನ್ನು ಸಹ ತಿಳಿಸಿದ್ದಾರೆ.

ಈ ಎಲ್ಲ ಗಹನ ಗಂಭೀರವಾದ ವಿವರಣೆಗಳು ಆಚಾರ್ಯರ ಅನುಭವೀ ಲೇಖನಿಯಿಂದ ತಿಳಿಯಬಹುದ ಸರಳ ಶೈಲಿಯಲ್ಲಿ ಮಾತಾಡುವ ಹಾಗೇನೇ ಪುಸ್ತಕ ರೂಪದಲ್ಲಿ ಇಳಿದಿರುವುದರಿಂದ ವಿಜ್ಞಾನದ ಬಗ್ಗೆ ಅಭಿರುಚಿ, ಆಸಕ್ತಿ ಮತ್ತು ಸಾಮಾನ್ಯ ಪರಿಜ್ಞಾನವಿರುವ ಪ್ರತಿಯೊಬ್ಬ ವ್ಯಕ್ತಿಯೂ ಈ ಪುಸ್ತಕವನ್ನು ಅರ್ಥಮಾಡಿಕೊಳ್ಳಬಹುದು. ಇಂತಹ ಅತ್ಯಮೂಲ್ಯವಾದ ಸಂಗ್ರಾಹ್ಯವಾದ ಪುಸ್ತಕವನ್ನು ಸಂದರ್ಭೋಚಿತ ಚಿತ್ರಗಳೊಡನೆ ಕನ್ನಡಿಗರಿಗೆ ಒದಗಿಸಿಕೊಟ್ಟ ಲೇಖಕರೂ ಪ್ರಕಾಶಕರೂ ಅಭಿನಂದನೀಯರು.

ಈ ಸಂದರ್ಭದಲ್ಲಿ ಪ್ರಕಾಶಕರ ಕುರಿತು ಒಂದು ಮಾತು ಬರೆಯಬಹುದು. ಉಡುಪಿಯ ಕರ್ನಾಟಕ ಸಂಘದವರು ತಮ್ಮ ಮುಂದಿನ ಕಾಲಾವಧಿಯಲ್ಲಿ ವೈಜ್ಞಾನಿಕ ಮತ್ತು ದಾರ್ಶನಿಕ ಮೂಲತತ್ವಗಳ ಕುರಿತು ಮತ್ತು ಕಡಿಮೆ ಪ್ರಸಿದ್ಧಿಯ ಸಾಹಿತ್ಯ ಪ್ರಕಾರಗಳ ಪ್ರಚಾರಕಾರ್ಯವನ್ನು ಮಾಡಲು ನಿಶ್ಚಯಿಸಿ ಈ ಧ್ಯೇಯವನ್ನು ಧೈರ್ಯದಿಂದ ಸಫಲವಾಗಿಸಲು ಪ್ರಯತ್ನಿಸಿರುವುದು ಉಳಿದ ಸಂಘಗಳಿಗೊಂದು ಮಾರ್ಗದರ್ಶನವಾಗಿದೆ. ಕನ್ನಡಿಗರು ಇಂತಹ ಸಂಸ್ಥೆಗಳಿಗೆ ಹೃತ್ಪೂರ್ವಕ ಸಹಕಾರವನ್ನೀಯುವರೆಂದು ಹಾರೈಸುತ್ತೇವೆ.

'ಸರಸ್ವತಿ'—(ಕನ್ನಡ ಮಾಸ ಪತ್ರಿಕೆ) ಸಂಪಾದಕಿ–ಆರ್. ಕಲ್ಯಾಣಮ್ಮ. ಪ್ರಕಾಶಕಿ–ಜಿ. ಆರ್. ಲಲಿತ. ಬಿ. ಚಂದಾ ರೂ. ೪-೦೦.

ಕಳೆದ ೩೭ ವರ್ಷಗಳಿಂದ ಪ್ರಕಾಶಗೊಂಡು ಬರುತ್ತಿರುವ ಸರಸ್ವತಿಯ ೩೮ನೆ ವರ್ಷದ ಮೊದಲನೆಯ ಹಾಗೂ ಗಣರಾಜ್ಯ ಸಂಚಿಕೆಯನ್ನು ಹೃತ್ಪೂರ್ವಕ ಸ್ವಾಗತಿಸುತ್ತೇವೆ. ಇದರಲ್ಲಿನ ಕಥೆ, ಕವನ, ಲೇಖನಗಳು ವಾಚನೀಯವಿವೆ. ಶ್ರೀ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಜೀವನ ಚರಿತ್ರೆಯೂ ಅವರ ಗ್ರಂಥ ವೈಶಿಷ್ಟ್ಯಗಳ ನಿರೂಪಣಾ ಲೇಖನವು ಉತ್ತಮವಾಗಿದೆ.

— ಗೋರಾ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಜೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಬೇಧ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯಗಟಿ, ಬಿ. ಎ., ಎಲ್ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತವಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ನಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ.
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಕಂಡೆಕ್ಟರನ ಖಿಲಾಡಿತನ

(೨ನೇ ಪುಟದಿಂದ)

ಟೀಚರ್ ಇರಲಿಲ್ಲವೇ" ಎಂದು ಕೇಳಿದ.

"ಅದೆಲ್ಲಾ ಒಂದೂ ಇಲ್ಲಣ್ಣಾ, ಬಸ್ಸಿನಲ್ಲಿ ಸ್ವಲ್ಪ ತಡವಾಯಿತು." ಎನ್ನುತ್ತಾ ನಾನು ಬೀದಿಯ ಕಡೆ ಕಣ್ಣು ಹಾಕಿದೆ ಆಗಲೇ ಅಪರಿಚಿತನೂ ಅಲ್ಲಿಗೇ ಬಂದು ಕ್ಷಣ ನಿಂತು ನನ್ನನ್ನ ನೋಡಿದ 'ಓ' ಇದಾ ಮನೆ!' ಎಂಬ ಮಾತೂ, ಚಿಕ್ಕ ನಗೆಯೂ ಆತನ ಬಾಯಿಂದ ಬಂತು.

"ಯಾರು ಕುಮುದಾ?'—ಅಣ್ಣನೂ ಆತನನ್ನು ನೋಡಿದ.

"ಯಾರೋ ಗೊತ್ತಿಲ್ಲಣ್ಣಾ, ನಾನು ಬಂದ ಬಸ್ಸಿನಲ್ಲೇ ಬಂದಿದ್ದ .." ಎಂದು ಹೇಳಿ ನಾನು ಒಳಕ್ಕೆ ಹೋಗಿಬಿಟ್ಟೆ ನನಗೇನೋ ಶಂಕೆ—ಆತಂಕ– ನಾಚಿಕೆಗಳು ಮುತ್ತಿಕೊಂಡುಬಿಟ್ಟುವು

ಗೋಪಾಲ ಹೇಳುವುದು

ಅಯ್ಯೋ—ಹಾಗೆ ಅವಳು ಒಳಗೆ ಓಡಿದ ಕೂಡಲೇ ನನ್ನ ಅವಸ್ಥೆ ಗಾಳಿಗೆಬಿಟ್ಟ ನೂಲಿನ ಹಾಗಾಗಿಹೋಯಿತು. ಅವಳು ಬೀದಿಯ ಕಡೆಗೆ ನೋಡದೆಯೇ ಇರುತ್ತಿದ್ದರೆ ನನ್ನ ಪಾಡಿಗೆ ನಾನು ಹೋಗಿಬಿಡುತ್ತಿದ್ದೆ ಈಗ ಒಮ್ಮೆಗೇ ಆ ಮನೆಯಾತನಿಗೆ ಉತ್ತರ ಕೊಡಬೇಕಾದ ಭಾರ ನನ್ನ ಮೇಲೆ ಜರಿದುಕೊಂಡಿತು. ಏನೂ ಹೇಳದೆ ಓಡಿಹೋಗುವೆನೆಂದರೆ, ಸಂದೇಹವೇ ಇಲ್ಲ, ನಾನೊಬ್ಬ ಕಳ್ಳನೆಂದೇ ಆಯಿತು

"ಏನಯ್ಯ, ಯಾರು ಏಕೆ? ಆಂ?" ಮತ್ತೆ ನನ್ನ ನೇರಾಗಿ ನೋಡಿಯೇ ಕೇಳಿದ ಮನೆಯಾತ.

ನಾನು ಒಂದು ಕಾಲು ಮೆಟ್ಟಿಲ ಮೇಲಿಟ್ಟು "ಏನಿಲ್ಲ. ನಾನು-ಹೀಗೇ-" ನಾನು ನಾಲಗೆ ತಡವರಿಸಿಕೊಂಡೆ.

"ಯಾರೇ ಈತ ಕುಮುದಾ? ನಿನ್ನ ಹಿಂದೆಯೇ ಬಂದಿದ್ದಾನೆ! ಆಂ!" ಎಂದ ಸಿಟ್ಟಿನಿಂದ

"ನನಗೇನು ಗೊತ್ತಣ್ಣ ಯಾರಂತ!" ಒಳಗಿನಿಂದ ಅವಳ ಧ್ವನಿ

"ಏಯ್! ಯಾರಯ್ಯ ನೀನು? ನೋಡಿದರೆ ಬಹಳ ದೊಡ್ಡ ಮನುಷ್ಯನಾಗಿ ಕಾಣಿಸುತ್ತಿ. ಏನು ಬೇಕು? ಸ್ತ್ರೀಯರ ಹಿಂದಿನಿಂದಲೇ ತಿರುಗುವುದೇ ಕೆಲಸವೋ?" ಎಂದು ಅಭಟಿಸಿದ.

"ಹಾಗೆಲ್ಲಾ ಭಾವಿಸಿಬಿಡಬೇಡಿ. ನಾನು ಇದೇ ದಾರಿಯಾಗಿ ಹೋಗುತ್ತಿದ್ದೇನೆ. ನಮ್ಮೊಬ್ಬರ ಮನೆಗೆ"

'ಅದು ಸರಿಯಯ್ಯಾ ಇಲ್ಲೇಕೆಬಂದಿ? ನನ್ನ ತಂಗೀನ ನೋಡಿ ಹಲ್ಲುಬಿಟ್ಟಿಯೇಕೋ?"

ನನಗೆ ಮಹಾ ಸಂಕಟವೇ ಪ್ರಾಪ್ತವಾಯಿತು ಕೈಕಾಲು ನಡುಗತೊಡಗಿತು ಯಾರಾದರೂ ರಕ್ಷಣ್ಯ ಮಾಡದಿದ್ದರೆ ಬಿದ್ದೇ ಹೋಗುತ್ತಿದ್ದೆ ಪುಣ್ಯಕ್ಕೆ ಅವಳೇ ಹೊರಗೆ ಬಂದಳು.

ಕುಮುದಾ ಹೇಳುವುದು

ಹೌದು ಅಣ್ಣನಿಗೆ ಬಂದ ಸಿಟ್ಟನ್ನು ನೋಡಿ ನನಗೆ ಭಯವಾಯಿತು ಎಲ್ಲಿ ಅವನ ಹಲ್ಲುಗಿಲ್ಲು ಉದುರಿಹೋಗುತ್ತೋ ಅಂದುಕೊಂಡೆ. ನೋಡಲಿಕ್ಕೆ ದೊಡ್ಡ ಮನುಷ್ಯನ ಹಾಗಿರುವವನನ್ನು ಉಳಿಸಲು, ನಯಾ ಪೈಸಾದ ಸತ್ಯ ಕಾರಣವನ್ನು ಹೇಳುವುದರ ಹೊರತು ಬೇರೆ ಗತಿಯಿರಲಿಲ್ಲ. ಸಣ್ಣ ಅವಮಾನದಿಂದ ದೊಡ್ಡ ಅಪವಾದವು ತಪ್ಪಲೆಂದುಕೊಂಡು ನಾನು 'ತಡೆ ಅಣ್ಣಾ ಸುಮ್ಮನಿರು ನಾನು ಹೇಳುತ್ತೇನೆ" ಎಂದು ಕೂಗಿದೆ.

ಕೂಡಲೇ ಒಂದು ನಯಾ ಪೈಸಾ ತಕ್ಕೊಂಡು ಆತನ ಮುಂದೆ ನೀಡಿ–"ಇದೋ ತಕೊಳ್ಳಿ. ಬಸ್ಸಿನ ಸಂಬಂಧದ ಬಾಕಿ" ಎಂದೆ

"ಎಂಥದೇ ಇದೂ?" ಅಂದ ಅಣ್ಣ.

"ಎಲ್ಲಾ ಆ ಕಂಡೆಕ್ಟರ ಆಟ ಅಣ್ಣಾ ನನಗೂ ಇವರಿಗೂ ಆತ ಒಂದೊಂದು ನಯಾ ಪೈಸಾ ಕೊಡಲಿಕ್ಕಿದ್ದರೆ, ಎರಡನ್ನೂ ಸೇರಿ ನನ್ನ ಕೈಗೆ ಹಾಕಿಬಿಟ್ಟು ನನ್ನನ್ನೇ ಇವರಿಗೆ ಕೊಡಲಿಕ್ಕೆ ಹೇಳಿಬಿಟ್ಟು ಹೋದಣ್ಣ" ಅಂದೆ.

"ಇಂಥದೇ ಬುದ್ಧಿಯಿಲ್ಲದೆ ಬೊಗಳೋದು?" ಅಂದ ಅಣ್ಣ ನನ್ನನ್ನು ಒಂದು ಥರಾ ನೋಡುತ್ತ

ಕೂಡಲೇ ನಾನು ಹೇಳಿದ ಮಾತಿನ ವ್ಯಂಗ್ಯಾರ್ಥ ನನ್ನನ್ನೇ ತಿನ್ನತೊಡಗಿತು ನಯಾ ಪೈಸಾ ಅಣ್ಣನ ಕೈಗೆ ಹಾಕಿಬಿಟ್ಟು ಓಡಿದೆ ಒಳಗೆ.

ಗೋಪಾಲ ಹೇಳುವುದು

ಹುಂ ಅಂತೂ ನನಗೊಂದು ನಿಟ್ಟುಸಿರು ಬರುವ ಹಾಗೆ ಮಾಡಿ ಓಡಿಬಿಟ್ಟಳು

'ಓಹೋ ಇದೋ ಸಂಗತಿ? ಈ ನಯಾ ಪೈಸಾಕ್ಕಾಗಿ ಬಂದೇಂತ ಆಗಲೇ ಹೇಳಬಹುದಿತ್ತಲ್ಲ! ಪಜೀತಿ! ಹುಂ ತಕೊಳ್ಳಯ್ಯ" ಎಂದನಾತ ತಾನೇ ಆ ನಯಾ ಪೈಸಾ ತೆಗೆದುಕೊಂಡೆನೋ ಆತನೇ ನನ್ನ ಕೈಗೆ ತಣಿಕಿದನೋ ಗೊತ್ತಾಗಲಿಲ್ಲ

"ಉಂ. ಇದಕ್ಕಾಗಿಯೇ ಬಂದೆಯೋ, ಮತ್ತೇನೂ ನಿನ್ನ ಮನಸ್ಸಿನಲ್ಲಿತ್ತೋ-ಸರಿ. ಬದುಕಿದಿ ಹೋಗು" ಎಂದು ಹೇಳಿ ಆತ ಒಳಗೆ ತಿರುಗಿದ

ಬಹು ದೊಡ್ಡ ಗಂಡಾಂತರದಿಂದ ಪಾರಾದವನ ಹಾಗೆ ನಾನು ಆ ಬೀದಿಯುದ್ದಕ್ಕೆ ನಡೆದೆ ಆ ಬೀದಿಯನ್ನು ಕಳೆದು, ಹೈರೋಡಿನಲ್ಲಿ ಸ್ವಲ್ಪ ದೂರ ನಡೆದಾಗಲೇ ನಾನು ಏತಕ್ಕಾಗಿ ಅಲ್ಲಿಗೆ ಬಂದೆನೆಂಬ ವಿಷಯ ನೆನಪಿಗೆ ಬಂತು ಇನ್ನು ಆ ಸಂಬಂಧಿಕರ ಮನೆ ಹುಡುಕಲೇ ಬೇಡವೇ ಎಂದು ಯೋಚಿಸುತ್ತಾ ಸಾಗುವಾಗ, ಒಂದು ಬೀದಿಯ 'ರಘುನಾಥ ಕರ್ ಸ್ಟ್ರೀಟ್' ಎಂಬ ಹೆಸರು ಹಲಗೆ ಕಾಣಿಸಿತು. ಅದೇ ಬೀದಿಯಲ್ಲಿ ೨೮ನೆಯ ನಂಬರಿನ ಮನೆಯೇ ನನ್ನ ಗುರಿಯಮನೆ.

ಕೂಡಲೇ ಆ ಬೀದಿಯನ್ನು ಹೊಕ್ಕು ೨೮ನೇ ನಂಬರಿನ ಮನೆಯನ್ನು ಕಂಡುಹಿಡಿದು ಬಾಗಿಲು ತಟ್ಟಿದೆ "ಯಾರು?" ಎನ್ನುತ್ತಾ ಆ ಕುಮುದಾಳ ಅಣ್ಣನೇ ಬಾಗಿಲು ತೆಗೆದು ಪ್ರತ್ಯಕ್ಷನಾದ!

ನಾವಿಬ್ಬರೂ ಅವಾಕ್

"ಮತ್ತೇನಯ್ಯಾ?" ಕೇಳಿದ ಆತ

"ಇಲ್ಲಿ ವೆಂಕಟ್ರಾಮು ಅಂದರೆ ಯಾರು?"

"ನಾನೇ ಏಕೆ?"

"ನಾನೇ ಗೋಪಾಲ ನಿಮ್ಮ ತಾಯಿಯವರ ತಮ್ಮನಿಗೆ ನನ್ನ ತಾಯಿ ಕಾಗದ ಬರೆದಿದ್ದಳಲ್ಲವೆ?"

ಓ! ಓ! ಹೌದು ಹೌದು!"

"ಆ ಗೋಪಾಲನೇ ನಾನು"

ಮತ್ತೆ ಯಾಕೆ ಕೇಳುವಿರಿ? ಉಂ. ನೀನೇ ಹೇಳಿ ಮುಗಿಸಿಬಿಡು ಕುಮುದಾ.

ಕುಮುದಾ

'ಊಹುಂ, ನೀವೇ ಹೇಳಿ ತೀರಿಸಿಬಿಡಿ"

ಗೋಪಾಲ — ಇಲ್ಲ ನೀನೇ —

ಸರಿ, ಬೇಡ ನಿಮ್ಮ ಜಗಳ ನಾವೇ ಹೇಳಿಬಿಡುತ್ತೇವೆ ಮತ್ತೆ ನೀವಿಬ್ಬರೂ ಪತಿಪತ್ನಿ–ಪತಿಸತಿಗಳಾಗಿ ದಂಪತಿಗಳಾಗಿ ಬಿಟ್ಟಿದ್ದೀರಿ ವಂಗಿಯ ಕಷ್ಟ ನಿಮ್ಮ ವಿವಾದ

ಲೈಬ್ರರಿಗಳಿಗೆ ಬೇಕಾದ ಕೆಲವು ಪ್ರಕಟಣೆಗಳು

ಇಂದಿನ ವಿಜ್ಞಾನ ಮತ್ತು ಇಂದಿನ ಮಾನವ

ಮಾನವನ ಮೇಲೆ ಇಂದಿನ ವಿಜ್ಞಾನವು ಬೀರಿದ ಪ್ರಭಾವವನ್ನು ಕೂಲಂಕಷವಾಗಿ ವಿಮರ್ಶಿಸಿ ಮಾನವನನ್ನೂ ವಿಜ್ಞಾನವನ್ನೂ ಸಮರಸವಾಗಿ ಬೆಳಯಿಸುವ ಮಾರ್ಗವನ್ನು ಸೂಚಿಸುವ ವಿಚಾರಪೂರ್ಣ ಉದ್ಗ್ರಂಥ ಬರೆದವರು ಡಾಕ್ಟರ ಜೇಮ್ಸ್ ಬಿ ಕೊನೇಂಟ್ ಅನುವಾದಕ ಯು ಲಕ್ಷ್ಮೀನಾರಾಯಣಾಚಾರ್ಯ. ಪುಟ ೧೮೦ ಬೆಲೆ ರೂ ೧ ೫೦

ನಡುಹಗಲಿನ ಕಗ್ಗತ್ತಲೆ

ಇದೊಂದು ರಸಪೂರ್ಣ ರೋಮಾಂಚಕ ಕಾದಂಬರಿ ಮಾಡಿರದ ಅಪರಾಧಗಳಿಗಾಗಿ ಏಕಾಂತವಾಸಕ್ಕೆ ಗುರಿಯಾಗಿ ಅತ್ಯಾಧುನಿಕ ಚಿತ್ರಹಿಂಸೆಯ ನರಕಯಂತನೆಯಿಂದಾಗಿ ಅಪರಾಧ ಸ್ವೀಕಾರ ಮಾಡಿದ ಒಬ್ಬ ಸೆರೆಯಾಳು ಹಂತಕರು ಕರೆದೊಯ್ಯುವವರೆಗೆ ಸೆರೆಮನೆಯ ತನ್ನ ಕೋಣೆಯಲ್ಲಿ ಅನುಭವಿಸುವ ಮಾನಸಿಕ ಯಾತನೆಯ ಜೀವಂತ ಚಿತ್ರಣ ಪ್ರಖ್ಯಾತ ಲೇಖಕ ಆರ್ಥರ್ ಕೊಸ್ಲರ್ ಅವರ ಮನೋಜ್ಞ ಜರ್ಮನ್ ಕಾದಂಬರಿಯ ಕನ್ನಡವನ್ನು ಅನುವಾದಿಸಿದವರು ಕು ಶಿ ಹರಿದಾಸ ಭಟ್ಟರು ಪುಟ ೪೦೮ ಬೆಲೆ ರೂ ೨ ೫೦

ಶಿಕ್ಷಣದ ಧ್ಯೇಯಗಳು

ಪ್ರಪಂಚದ ಅತ್ಯಂತ ಮೇಧಾವಿ ತತ್ತ್ವಜ್ಞಾನಿ ಆಲ್ಫ್ರೆಡ್ ನಾರ್ಥ್ ವೈಟ್‌ಹೆಡ್ ಅವರ ಮಹತ್ತ್ವಪೂರ್ಣ ಶೈಕ್ಷಣಿಕ ವಿಚಾರಗಳ ಸಂಕಲನ ಅನುವಾದಕರು ಕೆ ಬಿ ರಾಮಕೃಷ್ಣರಾಯ ಮತ್ತು ಯು ಲಕ್ಷ್ಮೀನಾರಾಯಣಾಚಾರ್ಯ ಪುಟ ೨೫೦ ಬೆಲೆ ರೂ ೩ ೨೫

ಸ್ವಾತಂತ್ರ್ಯ ಮತ್ತು ಸಂಸ್ಕೃತಿ

ಅಮೇರಿಕದ ಹಿರಿಯ ದಾರ್ಶನಿಕ ಜಾನ್ ಡ್ಯೂಯಿಯವರ ವಿಚಾರ ಪ್ರಚೋದಕ ಪ್ರಬಂಧ ಪ್ರಜಾತಂತ್ರಾತ್ಮಕ ಸರ್ಕಾರ ಪದ್ಧತಿಯಲ್ಲಿ ಸ್ವಾತಂತ್ರ್ಯ ಮತ್ತು ಸಂಸ್ಕೃತಿಯ ವಿಕಾಸವು ಹೇಗೆಂಬುದನ್ನು ನಿರೂಪಿಸುವ ಅಪೂರ್ವ ಗ್ರಂಥ ಅನುವಾದಕ ಕು ಶಿ ಹರಿದಾಸ ಭಟ್ಟ ಪುಟ ೬೫೦ ಬೆಲೆ ರೂ ೨,

ಹಿರೋಶಿಮಾದಿಂದ ಜಿನೇವಾ

'ಅಣುಶಕ್ತಿಯ ಕಲ್ಪನೆಯಿಂದ ಹಿಡಿದು ಅದನ್ನು ಪಳಗಿಸುವ ದಿಶೆಯಲ್ಲಿ ನಡೆದ ಎಲ್ಲ ಸಾಧನೆಗಳನ್ನೂ ಸಿದ್ಧಿಗಳನ್ನೂ ಈ ತೊಂಬತ್ತು ಪುಟದ ಪುಸ್ತಕದಲ್ಲಿ ಬಹು ವಿವರವಾಗಿ, ಮನೋಜ್ಞವಾಗಿ, ವಿಜ್ಞಾನಿಯಲ್ಲದವನಿಗೂ ತಿಳಿಯುವಂತೆ, ಸಮರ್ಥವಾಗಿ, ಆಧಾರಯುತವಾಗಿ ವರ್ಣಿಸಲಾಗಿದೆ ಬರೆದವರು ಯು ರಾಘವೇಂದ್ರಾಚಾರ್ಯ ಪುಟ ೯೦ ಬೆಲೆ ರೂ ೧ ೫೦

ಏಶಿಯದ ಸಂಪತ್ತು

ಏಶಿಯದ ಆರ್ಥಿಕ ಪರಿಸ್ಥಿತಿ ಮತ್ತು ಭವಿಷ್ಯದ ಸರ್ವತೋಮುಖ ವಿವೇಚನೆ ಒಂದು ಸ್ವತಂತ್ರ ರಚನೆ, ಬರೆದವರು ಕು ಶಿ ಹರಿದಾಸ ಭಟ್ಟ ವಿ ಸೀತಾರಾಮಯ್ಯನವರ ಮುನ್ನುಡಿ ಇದೆ ಪುಟ ೧೫೦ ಬೆಲೆ ರೂ ೨

ಫಂಟಮಾರಾ

ಇಗ್ನೇಜಿಯೋ ಸಿಲೋನೆ ಬರೆದ ಇಟಾಲಿಯನ್ ಕಾದಂಬರಿಯ ಅನುವಾದ ಫಾಸಿಸ್ಟ್ ಪದ್ಧತಿಯನ್ನು ಇಟಲಿಯ ಜನತೆಯ ಮೇಲೆ ಮುಸಲಿನಿ ಹೊರಿಸಿದಾಗ ಅಲ್ಲಿನ ಗ್ರಾಮಾಂತರದ ರೈತರು ಅದನ್ನು ವಿರೋಧಿಸಿದ ಹೃದಯಂಗಮ ಕಥೆ ಅನುವಾದಕರು: ಕು ಶಿ ಹರಿದಾಸ ಭಟ್ಟ ಪುಟ: ೨೦೦ ಬೆಲೆ ರೂ ೨

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ
ಅಥವಾ ನವಭಾರತ ಪುಸ್ತಕ ಭಂಡಾರ, ಉಡುಪಿ

LEGAL

ಪಂಚಾಯತ ಕೋರ್ಟ, ಕೋಟ.

ಸಿವಿಲ್ ವ್ಯಾಜ್ಯ ನಂಬ್ರ 43/57

ಶೀನಪ್ಪ ಹೆಗ್ಗಡೆ, ಶಾನಾದಿ
ಸುಬ್ಬಯ್ಯ ಹೆಗ್ಡೇರ ಅಳಿಯ
ಗಿಳಿಯಾರು ಗ್ರಾಮದ ಮೊ
ನಾದಿಮನೆ —ವಾದಿ

ನರಸಿಂಹ ಮರಕಾಲ, ತಂದೆ
ಜೊಂಗಸಿನ ಮಗ ಗಿಳಿಯಾರು
ಗ್ರಾಮ —ಪ್ರತಿವಾದಿ

ಮೇಲ್ಕಂಡ ಕಾಣಿಸಿದ ವಾದಿಯು ನಿಮ್ಮ ಮೇಲೆ ಕೋಟ ಪಂಚಾಯತ ಕೋರ್ಟಿನಲ್ಲಿ ದಾಖಲು ಮಾಡಿದ ವ್ಯಾಜ್ಯವು ಅಖೈರು ತೀರ್ಮಾನಕ್ಕೆ ತಾ 1–3–58ಕ್ಕೆ ಇಡಲಾಗಿದೆ ಆ ದಿನ ಹಗಲು ಗಂಟೆ 4ಕ್ಕೆ ನೀವು ಕೋರ್ಟಿನ ಮುಂದೆ ಹಾಜರಾಗಿ ನ್ಯಾಯವಾದ ಉದಾಹರಣೆ ಕೊಡಬೇಕು ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲಾಗುವುದು

(Sd) Nagappa Holla
President
Panchayat Court, Kota, S K

5 2 1958 ಪಂಚಾಯತ ಕೋರ್ಟ ಕೋಟ

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಯೋಗ ಪುಸ್ತಕಗಳು, ಸೊಸೈಟಿ ರಶೀದಿ ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ತರದ ಫಾರ್ಮುಗಳು, ಕಾಪಿಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ –ಸಂ ನ

ವಾರದ ಮಹಾನುಭಾವ-

ಶ್ರೀ. ಎಮ್. ಸಿ. ಸೆಟಲ್ವಾಡ

ಜೀವವಿಮಾ ಕಾರ್ಪೊರೇಶನ್ನಿನ ಬಂಡವಾಳವನ್ನು ತೊಡಗಿಸಿದ ಸಂಬಂಧದಲ್ಲಿ ಅನೇಕ ಮಹಾ ವ್ಯಕ್ತಿಗಳು ಪ್ರಕಾಶಕ್ಕೆ ಬಂದಿದ್ದಾರೆ ಇವರೆಲ್ಲರನ್ನೂ ಬೆಳಕಿಗೆ ತಂದ ಗೌರವ ಭಾರತದ ಅಟರ್ನಿ ಜನರಲ್ ಶ್ರೀ ಎಂ ಸಿ ಸೆಟಲ್ವಾಡರಿಗೆ ಸೇರಿದೆಯೆನ್ನಬಹುದು. ಶ್ರೀ ಸೆಟಲ್ವಾಡರು ಸರಕಾರೀ ಪಕ್ಷದ ವಕೀಲರಂತೆ ಛಗಲಾ ವಿಚಾರಣಾ ಆಯೋಗದೆದುರು ನಿಂತಿದ್ದರು. ಶ್ರೀ ಛಗಲಾರವರು ಶ್ರೀ ಸೆಟಲ್ವಾಡರ ವಿಷಯದಲ್ಲಿ ಕೊನೆಗೆ ಮಾತಾಡುತ್ತ 'ಇವರ ಸಹಯೋಗ ನನಗೆ ದೊರೆಯದಿರುತ್ತಿದ್ದರೆ, ನನಗೆ ಸತ್ಯವನ್ನು ಸಮೀಪಿಸಲು ಕಠಿನವಾಗುತ್ತಿತ್ತು' ಎಂದಿದ್ದಾರೆ. ಈ ಮಾತುಗಳಿಂದ ಶ್ರೀ ಸೆಟಲ್ವಾಡರು ಈ ಪ್ರಕರಣದಲ್ಲಿ ತೋರಿದ ಕೈವಾಡವು ಸಂಪೂರ್ಣವಾಗಿ ಮನದಟ್ಟಾಗುವುದು.

ಶ್ರೀ ಸೆಟಲ್ವಾಡರು ಭಾರತದಲ್ಲಿ ಪ್ರಸಿದ್ಧರಾಗಿದ್ದ ದಿವಂಗತ ವಕೀಲ ಚಿಮನಲಾಲ ಸೆಟಲ್ವಾಡರ ಹಿರಿಯ ಪುತ್ರರಾಗಿದ್ದಾರೆ. ಅವರು ಬೊಂಬಾಯಿಯ ಎಲ ಫಿನ್ಸ್ಟನ್ ಕಾಲೇಜಿನಲ್ಲಿ ೧೯೦೬ರಲ್ಲಿ ಪದವೀಧರರಾದರು. ಐದು ವರ್ಷಗಳಲ್ಲಿಯೇ ಅವರು ಎಡ್ವೊಕೇಟರಾದರು. ಕೆಲವೇ ದಿನಗಳಲ್ಲಿ ಅವರಲ್ಲಿ ಆನುವಂಶಿಕ ಸಂಸ್ಕಾರವು ಪ್ರಕಾಶಿಸತೊಡಗಿತು. ಅವರು ತಮ್ಮ ತಂದೆಯಂತೆಯೇ ಒಬ್ಬ ಪ್ರತಿಭಾಶಾಲಿ ವಕೀಲರೆಂದು ಗಣಿಸಲ್ಪಟ್ಟರು. ೧೯೩೭ರ ನಂತರ ಅವರಿಗೆ ನ್ಯಾಯಾಧೀಶರಾಗಲು ಅನೇಕ ಬಾರಿ ಕರೆಬಂದಿತ್ತು. ಆದರೆ ಅವರಿಗೆ ಅಂದಿನ ಪರಿಸ್ಥಿತಿಯಲ್ಲಿ ದೇಶಸೇವೆಯನ್ನು ಮಾಡಲು ಮನಸ್ಸಿದ್ದುದರಿಂದ ಅವರು ಈ ಆಮಂತ್ರಣವನ್ನು ಸ್ವೀಕರಿಸಲು ನಿರಾಕರಿಸಿದರು. ಆ ಮೇಲೆ ಅವರು ತಮ್ಮ ತಂದೆಯಂತೆಯೇ ಬೊಂಬಾಯಿ ಸರಕಾರದ ಎಡ್ವೊಕೇಟ್ ಜನರಲರಾದರು. ಅವರು ತಮ್ಮ ಹುದ್ದೆಯಲ್ಲಿ ೧೧-೧೨-೩೭ರಿಂದ ೧೯೪೨ರವರೆಗಿದ್ದರು. ೧೯೪೨ರಲ್ಲಿ ಅವರು ಈ ಹುದ್ದೆಗೆ ರಾಜಿನಾಮೆಯಿತ್ತರು. ಆ ಸಮಯದಲ್ಲಿ ಬೊಂಬಾಯಿಯ ವಕೀಲ ಮಂಡಲಕ್ಕೆ ಈ ಸಮಾಚಾರವು ಬಹಳ ದುಃಖದಿಂದ ತಿಳಿದುಬಂದಿತ್ತು. ೧೯೪೨ರಲ್ಲಿ ಭಾರತದಾದ್ಯಂತ ನಡೆದಿದ್ದ ಸ್ವಾತಂತ್ರ್ಯಾಂದೋಲನವೇ ಅವರನ್ನು ಈ ಗೌರವಪೂರ್ಣ ಹುದ್ದೆಗೆ ರಾಜೀನಾಮೆಯನ್ನೀಯುವಂತೆ ಪ್ರೇರೇಪಿಸಿತ್ತು. ಆ ಮೇಲೆ ಸಹ ಬ್ರಿಟಿಷ ಶಾಸನಾವಧಿಯಲ್ಲಿ ಅದೆಷ್ಟೋ ನ್ಯಾಯಾಧೀಶ ಪದವಿಗಳನ್ನು ಸ್ವೀಕರಿಸಬೇಕೆಂದು ಅವರಿಗೆ ಆಮಂತ್ರಣ ಬಂದಿತ್ತು; ಆದರೆ ಶ್ರೀ ಸೆಟಲ್ವಾಡರು ತಮ್ಮ ರಾಷ್ಟ್ರೀಯ ವಿಚಾರಧಾರೆಯ ಗುಂಗಿನಲ್ಲಿ ಸಿಕ್ಕಿಬಿದ್ದುದರಿಂದ ಮತ್ತು ಈ ವಿಚಾರಧಾರೆಯನ್ನು ಪರಿವರ್ತಿಸಲು ಅವರ ಮನಸ್ಸು ಒಪ್ಪದಿದ್ದುದರಿಂದ, ಈ ಎಲ್ಲ ಆಮಂತ್ರಣಗಳನ್ನೂ ಪೂರ್ಣಮನಸ್ಸಿನಿಂದ ತಿರಸ್ಕರಿಸಿದರು.

ಶ್ರೀ ಸೆಟಲ್ವಾಡರು ಈಗಿನ ಈ ಅಟರ್ನಿ ಜನರಲ್ ಪದವಿಯನ್ನು ಸ್ವೀಕರಿಸಿ ಸಾಮಾನ್ಯತಃ ೭-೮ ವರ್ಷಗಳು ಕಳೆದುವು. ಈ ಸಮಯದಲ್ಲಿ ಅವರ ಕಾಶ್ಮೀರ ಪ್ರಶ್ನೆಯ ಮೇಲೆ ಭದ್ರತಾಮಂಡಲದಲ್ಲಿಯೂ ವಾದಿಸಿದ್ದಾರೆ ಸಂಯುಕ್ತ ರಾಷ್ಟ್ರಸಂಘದ ಅಂತರಾಷ್ಟ್ರೀಯ ನ್ಯಾಯಾಲಯದಲ್ಲಿ ಭಾರತ ಸರಕಾರದ ಪರವಾಗಿ ಗೋವಾ ಪ್ರಶ್ನೆಯಲ್ಲಿ ವಕಾಲತನ್ನು ನಡೆಸಿದ್ದಾರೆ. ಇವುಗಳನಂತರ ಅವರು ದಿಲ್ಲಿಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪತ್ರಿಕಾಕರ್ತರ ಸಂಬಂಧದಲ್ಲಿ ಸರಕಾರೀ ಪಕ್ಷವನ್ನು ಉಳಿಸಿದ್ದರು.

ಶ್ರೀ ಸೆಟಲ್ವಾಡರು ಈಗಿನ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸಂಪೂರ್ಣ ಭರವಸೆಯನ್ನಿಡುತ್ತಾರೆ ವಿಶ್ವದ ರಾಷ್ಟ್ರಗಳ ಸಂಘಟನೆಯಾದ ಈ ಸಂಘಕ್ಕೆ ಸಂಬಂಧಿಸಿರುವ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಂಸ್ಥೆಗಳು ಮಾಡುವ ಕಾರ್ಯಗಳು ವಿಶ್ವದ ಸಮಸ್ತ ರಾಷ್ಟ್ರಗಳನ್ನೂ ಒಂದು ವಿಚಾರಧಾರೆಯಲ್ಲಿ ತರಲು ಸಹಾಯ ಮಾಡುತ್ತಿವೆ ಎಂದವರು ನಂಬುತ್ತಾರೆ.

ಸಾಮಾನ್ಯ ಜನತೆಯ ಕಡೆಗೆ ಈ ನ್ಯಾಯವಾದಿಯೆನಿಸಿದ ವ್ಯಕ್ತಿಯ ಹೃದಯದಲ್ಲಿ ಅದೆಷ್ಟು ಸದ್ಭಾವನೆಗಳಿವೆ ಎಂದು ಹೇಳುವುದ ಅಶಕ್ಯ. ವಕೀಲಿಯ ಶುಷ್ಕ ವ್ಯವಸಾಯದಲ್ಲಿದ್ದುಕೊಂಡೇ ಜನತಾ ಸೇವೆಯ ಸಂದರ್ಭವನ್ನೇ ಹುಡುಕುತಿದ್ದ ಪ್ರೌಢ ವಕೀಲರೊಬ್ಬರ ಮಗನಾದ ಇವರು ಸಹ ಜನತಾ ಸೇವೆಯೇ ಜನಾರ್ಧನ ಸೇವೆ ಎಂದು ನಂಬಿಕೊಂಡಿದ್ದಾರೆ.

ಶ್ರೀ ಸೆಟಲ್ವಾಡರು ಇದೀಗ ಮುಂಧ್ರಾ ಕಂಪೆನಿಯ ಪಾಲು ಬಂಡವಾಳವನ್ನು ಕೊಂಡ ಜೀವವಿಮಾ ಕಾರ್ಪೊರೇಶನಿನ ವಿಚಾರಣಾ ಸಂದರ್ಭದಲ್ಲಿಯೂ ತಮ್ಮ ಆ ಜನಸೇವೆ, ನಿಷ್ಪಕ್ಷಪಾತತನದ ಮುತ್ಸದ್ದಿತನವನ್ನು ಪ್ರದರ್ಶಿಸದಿದ್ದಾರೆಯೆ?

ಸಿರಿಯಾ ಈಜಿಪ್ಟ್ ಏಕೀಕರಣ

(೧ನೇ ಪುಟದಿಂದ)

ಆಂಗ್ಲೊ-ಅಮೆರಿಕಗಳ ಕೈಗೊಂಬೆಯಂತೆ ಅರಬ ರಾಷ್ಟ್ರಗಳಿವೆ ಎಂಬುದು ವ್ಯಕ್ತವಾಗುತ್ತದ. ಅನೇಕ ವರ್ಷಗಳಿಂದ ಅವರ ಪೀಡೆಗೆ ತುತ್ತಾದುದರಿಂದಾಗ ಈಜಿಪ್ಟ ಮತ್ತು ಸಿರಿಯಾಗಳು ಅವರನ್ನು ಸದಾಕಾಲ ಶಂಕಾಪೂರ್ಣ ದೃಷ್ಟಿಯಿಂದ ನೋಡುತ್ತವೆ. ಸಿರಿಯಾದ ಪ್ರಧಾನ ಮಂತ್ರಿಯವರು ಕಳೆದ ವರ್ಷ ತಮ್ಮ ಪಾಕಿಸ್ಥಾನ ಸಂದರ್ಶನದ ವೇಳೆ ಹೇಳಿದ್ದರು. ಪಾಕಿಸ್ತಾನವು ಆಂಗ್ಲೋ-ಅಮೆರಿಕದವರ ಸಂಗಡದೊಡನೆ ಹೆಜ್ಜೆ ಹೆಜ್ಜೆಗೂ ಮುನ್ನಡೆಯ ಬಯಸುತ್ತದೆ, ಪಾಕಿಸ್ತಾನದ ನೀತಿಗಳಲ್ಲಿ ಇಸ್ಲಾಮಿನ ಸಮಸ್ಯೆಯಿರುವುದಿಲ್ಲ ಆದುದರಿಂದ ಒಂದೇ ಧರ್ಮವಿದ್ದರೂ ಪಾಕಿಸ್ತಾನದ ನೀತಿಗಳಿಂದ ಈ ಅರಬ ದೇಶಗಳ ಮೇಳವು ಎಂದಿಗೂ ಆಗಲಾರದು.''

ಜೋರ್ಡನ್, ಇರಾಕ್, ಮೊರಕ್ಕೋ, ಅಲ್ಜೀರಿಯಾ, ಲಿಬನಾನ, ಸೌದಿ ಅರೇಬಿಯಾ, ಯೆಮನ್ ಲಿಬಿಯಾ, ಸೂಡಾನ್, ಟ್ಯೂನೀಸಿಯಾ ಮೊದಲಾದುವು ಏಕೀಕರಣದ ಕ್ರಮವನ್ನು ಕೈಗೊಳ್ಳುವ ಸಂಭವವಿಂದಿದೆ. ಇವುಗಳಲ್ಲಿ ಜೋರ್ಡನ್, ಸೌದೀ ಅರೇಬಿಯಾ ಮತ್ತು ಇರಾಕಗಳ ನಡುವೆ ಮಾತುಕತೆ ಪ್ರಾರಂಭವಾಗಿದೆ. ಯೆಮನ್ ಎರಡು ಕಡೆಗೆ ಒಲಿದಿರುವಂತೆ ತೋರಿಸಿಕೊಳ್ಳುತ್ತಿದೆ

ಸಾಮಾನ್ಯವಾಗಿ ಎಲ್ಲ ಅರಬ ರಾಷ್ಟ್ರಗಳೂ ಅನಿಶ್ಚಿತ ಪರಿಸ್ಥಿತಿಯಲ್ಲಿಯೇ ಮುಂದುವರಿಯುತ್ತಿವೆ. ಅಲ್ಲಿ ಆಗಾಗ ತಮ್ಮ ತಮ್ಮೊಳಗಿನ ಮತಭೇದಗಳಿಂದಾಗಿ ಒಬ್ಬ ಪ್ರಭಾವಶಾಲೀ ವ್ಯಕ್ತಿಯನ್ನು ಇನ್ನೊಬ್ಬನು ಅಂತ್ಯಗೊಳಿಸುತ್ತಾನೆ. ಸಿರಿಯಾ ಮತ್ತು ಈಜಿಪ್ಟಗಳ ಇತಿಹಾಸವೂ ಇದಕ್ಕೆ ಅಪವಾದವಲ್ಲ. ಹಾಗಿದ್ದರೂ ವ್ಯಕ್ತಿಗತಸ್ವಾರ್ಥ ಅಥವಾ ಮಹತ್ವಾಕಾಂಕ್ಷೆಯ ಸ್ಪರ್ಧೆಯನ್ನು ಕೊನೆಗೊಳಿಸುವುದು ಲೋಕಪ್ರಿಯ ಆಡಳಿತೆ ಮತ್ತು ಶಾಂತಿಗಾಗಿ ಅತ್ಯಂತಾವಶ್ಯಕವೆಂಬುದನ್ನು ಶ್ರೀ ನಸ್ಸೇರರು ತಿಳಿದಿದ್ದಾರೆಂದು ನಂಬಬಹುದು.

ಭೌಗೋಲಿಕ ದೃಷ್ಟಿಯಿಂದ ಈಜಿಪ್ಟ ಮತ್ತು ಸಿರಿಯಾಗಳನಡುವೆ ಜೋರ್ಡಾನ ಮತ್ತು ಇಸ್ರಾಯೇಲಗಳಿವೆ ಆದರ, ಸಾಮುದ್ರಿಕ ಮತ್ತು ಆಕಾಶಮಾರ್ಗಗಳು ಅವನ್ನು ಸುಲಭದಲ್ಲಿ ಸೇರಿಸುತ್ತವೆ ಒಟ್ಟಿನಲ್ಲಿ ಈ ಜನರು ಇತರ ಸ್ವಾರ್ಥ ಸಾಧನಗಳಿಗೆ ತಿಲಾಂಜಲಿಯನ್ನಿತ್ತು ಉತ್ತಮ ರಾಷ್ಟ್ರೀಯತೆಯ ಪರಿಚಯವನ್ನು ಏಕೀಕರಣದ ಘೋಷಣೆಯ ಮೂಲಕ ಮಾಡಿದ್ದಾರೆನ್ನಬಹುದು. ಈಜಿಪ್ಟ ಮತ್ತು ಸಿರಿಯಾಗಳ ಜನತೆಯು ತಂತಮ್ಮ ರಾಷ್ಟ್ರಪತಿಗಳ ನೀತಿಗಳನ್ನು ಮನ್ನಿಸಿದಾವು. ಈ ಏಕೀಕರಣವು ವಿಶ್ವದ ಇತಿಹಾಸದ ಅಸದೃಶವಾದ ಒಂದು ಏಕೀಕರಣವಾಗಿದೆ ಮತ್ತು ಈ ತೆರನಾದುವುಗಳಲ್ಲಿ ಪ್ರಾಯಃ ಮೊತ್ತಮೊದಲಿನದ್ದಾಗಿದೆ.

ರಾಷ್ಟ್ರಗಳ ಹಂಚಿಕೆಗಳು ಸಾವಿರಾರು ಆಗಿಹೋಗಿವೆ ಅದರಿಂದ ಇಂದು ಅಖಿಲ ಜಗತ್ತಿನಲ್ಲಿ ಶಾಂತಿಸ್ಥಾಪನೆಯಾಗುವಂತಹ ಮತ್ತು ಎಲ್ಲ ಜನರ ಜೀವನ ಮಟ್ಟವು ಉನ್ನತಗೊಳ್ಳುವಂತಹ ರೀತಿಯಲ್ಲಿ ಹೇಗೆ ಹರಿಹಂಚಾಗಿ ಹೋದ ರಾಷ್ಟ್ರಗಳ ಏಕೀಕರಣವಾಗಬೇಕಾಗಿದೆ ಇಂತಹ ಒಂದು ಮಹಾಸಾಧನೆಯನ್ನು ಈಜಿಪ್ಟ ಮತ್ತು ಸಿರಿಯಾಗಳು ಕಾರ್ಯರೂಪದಲ್ಲಿ ಮಾಡಿ ತೋರಿಸಿ ಜಗತ್ತಿಗೆ ಮಾರ್ಗದರ್ಶನ ಮಾಡಿವೆ

(ಆಧಾರ: ಶಂಕರಲಾಲ ಮಸ್ಕರಾ)

ಮಲಯಾ ಕೊಲಂಬೋ ಯೋಜನೆಯನ್ವಯ ಲಂಡನ್ನಿನ ವಾಹನ ತರಬೇತಿ ಶಾಲೆಯಲ್ಲಿ ದೂರವ್ಯವಹಾರ ಸಂಬಂಧದ ಅಭ್ಯಾಸವನ್ನು ಸಂಬಂಧಪಟ್ಟ ರಾಷ್ಟ್ರಗಳ ಅಭ್ಯಾಸೇಚ್ಛುಗಳು ಮಾಡುತಿದ್ದಾರೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨-೦-೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K H. Shetty, at the Navayuga press, Udipi S. India

REGD. NO. M. 3618

Licensed to Post without Prepayment

ನವಯುಗ

ಸಂಪುಟ ೩೭
VOL. 37

20-2-1958

ಸಂಚಿಕೆ ೨೪
NO. 24

ಬೆಂಗಳೂರಿನ ಕೃಷಿಕ ಮಹಾಸಮ್ಮೇಳನ—

ಭೂಸುಧಾರಣೆಯ ಸೂಚಿತಾರ್ಥಗಳು

ಭೂಸುಧಾರಣೆಯ ವಿಷಯವನ್ನು ಆದ್ಯಂತವಾಗಿ ವಿವರಿಸಿ ಮುಗಿಸುವುದು ನನ್ನ ಈ ಅಧ್ಯಕ್ಷ ಭಾಷಣದಲ್ಲಿ ಸಾಧ್ಯವಿಲ್ಲ. ಬಹಳವಾಗಿ ಪ್ರಶಸ್ತಿ ಹೇಳಿಕೊಳ್ಳಲಾಗಿದ್ದ ನಮ್ಮ ಆಹಾರ ಸ್ವಾವಲಂಬನೆ ಪ್ರಥಮ ಪಂಚವಾರ್ಷಿಕ ಯೋಜನೆಯ ಅಧಿಕಾಂಶ ವೆಚ್ಚವನ್ನೂ ಕೃಷಿಗಾಗಿ ಮಾಡಿದುದರ ಪರಿಣಾಮ, ಹೇಗೆ ಮಾಯವಾಗಿದೆ, ಹೇಗೆ ನಮ್ಮನ್ನು ಸಂತೃಪ್ತಿ ಸ್ವಪ್ರಸನ್ನತೆಯ ಕಡೆಗೆ ಕರೆದೊಯ್ಯಲಾಗಿದೆ ಎಂಬುದನ್ನು ನಾವರಿತು ನಿರಾಶೆ ಹೊಂದಿರುವ ಈ ಸಂದರ್ಭದಲ್ಲಿ ನಾನು ಸಹಜವಾಗಿಯೂ ಭೂಸುಧಾರಣೆಯ ಪರಿಣಾಮವಾಗಿ ಆಹಾರೋತ್ಪಾದನೆ ಅಧಿಕವಾಗಬೇಕಾದುದರ ಕಡೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬಯಸುತ್ತೇನೆ. ಇತ್ತೀಚಿಗೆ ಕಾಂಗ್ರೆಸ್ ಅಧಿವೇಶನದಲ್ಲಿಯೂ ನಾವು ಮುಂದಿನ ಪಂಚವರ್ಷಗಳಲ್ಲಿ ಕಡಿಮೆ ಎಂದರೆ ಐನೂರು ಕೋಟಿ ರುಪಾಯಿ ಖರ್ಚಿನಿಂದ ೧೦ರಿಂದ ೧೨ ಮಿಲಿಯ ಟನ್ನುಗಳಷ್ಟು ಅಥವಾ ಒಂದು ಕೋಟಿ ಟನ್ನುಗಳಿಗಿಂತಲೂ ಮಿಕ್ಕಿ ಆಹಾರ ಧಾನ್ಯಗಳನ್ನು ಆಮದು ಮಾಡಬೇಕಾಗುವುದೆಂದು ಕಾಂಗ್ರೆಸ್ ಅಧ್ಯಕ್ಷರು ಒಪ್ಪಿಕೊಳ್ಳಬೇಕಾಯಿತು. ಅದೇ ರೀತಿ ಅಧಿಕ ಆಹಾರೋತ್ಪಾದನೆಯು ದ್ವಿತೀಯ ಪಂಚವಾರ್ಷಿಕ ಯೋಜನೆಯ ತಿರುಳು ಮಾತ್ರವೇ ಅಲ್ಲ. ಅದು ಅದರ ಸಂಪೂರ್ಣ ಯಶಸ್ಸಿನ ಮೂಲವಾಗಿದೆ ಎಂಬುದಾಗಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರೂ ಹೇಳಿದ್ದಾರೆ.

ಸಾಮೂಹಿಕ ಕೃಷಿಯ ಕುರಿತು ಇತರ ದೇಶಗಳ ವಿಚಾರ ವಿವರಿಸಲು ಸ್ಥಳಾವಕಾಶವಿಲ್ಲ. ಆದರೆ, ಭಾರತದಲ್ಲಿ ಕೂಡ ಐ. ಸಿ. ಎ. ಆರ್. ಅಥವಾ ಸರಕಾರದವರು ಅಥವಾ ಖಾಸಗಿ ಪಕ್ಷಗಳು ಭಾರತೀಯ ಭಂಡವಾಳದ ಸಹಾಯದಿಂದ ಅಥವಾ ಸಾಮೂಹಿಕ ಕೃಷಿಯ ವಿಚಾರದಲ್ಲಿ ಮಾಡಿದ ಸಾಹಸಗಳೆಲ್ಲವೂ ನಿಷ್ಫಲಗೊಂಡಿವೆ. ಒಂದು ಸಂದರ್ಭದಲ್ಲಿ (ಸಹಕಾರೀ ಸಂಘ ವಿಹಾರು, ಯು. ಪಿ.) ೩೧೭೧ ಎಕ್ರೆಗಳಷ್ಟು ಕಾಡು ಭೂಮಿಗಳನ್ನು ಧರ್ಮಾರ್ಥವಾಗಿಯೂ ಕೀರ್ವೆ ಹಾಗೂ ಇತರ ನೀರಾವರಿ ದರಗಳಿಲ್ಲದೆಯೂ ಕೊಟ್ಟು ೩೫ ಲಕ್ಷ ರೂಪಾಯಿಗಳಿಗೆ ಕಡಿಮೆಯಾಗದಷ್ಟು ಸಾಲವನ್ನೂ ಸಹಾಯ ಧನವನ್ನೂ ತೆತ್ತರೂ ಅದು ಸ್ಪಷ್ಟವಾದ ಸೋಲಿನಲ್ಲಿ ಕೊನೆಗೊಂಡಿತು. [illegible]ರಲ್ಲಿ ೪೫ ಮಂದಿ ಸದಸ್ಯರು ಮಾಯವಾದರು. ಮತ್ತು ತೆತ್ತ ಹಣವನ್ನು ಕಳೆದು ಹೋದ ಸಾಲ ಎಂಬುದಾಗಿ ಗಣಿಸಬೇಕಾಯಿತು. ಹೆಚ್ಚು ಕಡಿಮೆ ಇತರ ಸಂಸ್ಥೆಗಳು ಇದೇ ಭವಿಷ್ಯವನ್ನು ಅನುಭವಿಸಿವೆ.

ಭೂಸುಧಾರಣೆಯ ಸಂಪೂರ್ಣ ಪರಿಣಾಮವನ್ನು ಅರಿತುಕೊಳ್ಳಲು ಭಾರತದ ಕೃಷಿಯ ಪ್ರಾಚೀನ ಸ್ವರೂಪ ಮತ್ತು ಅದರ ಕಾರಣಗಳೇನ ಎಂಬುದರ ಅರಿವಿರುವುದವಶ್ಯ. ಆ ಮೇಲೆ ಸೂಚಿಸಲ್ಪಟ್ಟ ಭೂಸುಧಾರಣೆಗಳು ನಮ್ಮ ಕೃಷಿಯ ಅಭಿವೃದ್ಧಿಗೆ ಅಥವಾ ಉತ್ಪಾದನಕ್ಕೆ ಸಹಕಾರಿಯಾಗುವುದೇ ಎಂದು ತಿಳಿದುಕೊಳ್ಳಬೇಕು. ಅಧ್ಯಕ್ಷ ಐಸೆನ್ ಹಾವರರು ಕಳೆದ ಜನವರಿ ೧೭ರ ತಮ್ಮ ಕೃಷಿ ಸಂದೇಶದಲ್ಲಿ ಕಾಂಗ್ರೆಸ್ಸಿಗೆ ಹೀಗೆಂದಿದ್ದಾರೆ "ಸರಕಾರದ ವಶದಲ್ಲಿರುವ ಕೃಷಿಯಿಂದ ಒದಗಿದ ಅಧಿಕೋತ್ಪಾದನೆಯು ಅದರ ತುತ್ತತುದಿಯನ್ನು ಮುಟ್ಟುವಂತೆ ಗೋಚರಿಸುತ್ತದೆ, ಉತ್ಪಾದನೆಯಲ್ಲಿ ಯಥಾರ್ಥವಾದ ಒಂದು ಕ್ರಾಂತಿಯು ಮೂಲಕ ಕೃಷಿ ಸಾಗುತ್ತಿದೆ; ಒಬ್ಬನ ಒಂದು ಗಂಟೆಯ ಕೆಲಸದಿಂದ ಕೃಷಿ ಕ್ಷೇತ್ರದ ಉತ್ಪಾದನೆಯು ೧೯೪೦ರಿಂದ ದ್ವಿಗುಣಿತವಾಗಿದೆ. ಕಳೆದ ಎರಡು ಸಾವಿರ ವರ್ಷಗಳಿಂದ ಕೃಷಿಯಲ್ಲಾಗದ ಹೆಚ್ಚಿನ ಬದಲಾವಣೆಗಳು ಇಂದಿನ ಮನುಷ್ಯನ ಜೀವಮಾನದಲ್ಲೇ ಆಗಿದೆ. ಕೃಷಿಯಲ್ಲಿನ ವೈಜ್ಞಾನಿಕ ಕ್ರಾಂತಿಯು ಹಿಂತಿರುಗಿಸಲಾಗದ್ದು ಮತ್ತು ಅದು ಇನ್ನೂ ಮುಂದುವರಿಯುತ್ತಿದೆ; ಅದನ್ನು ಬಿಡಲಾಗುವದಿಲ್ಲ ಮತ್ತದಕ್ಕಾಗಿ ಹೆದರಬೇಕಾಗಿಲ್ಲ" ಆಹಾ, ಭಾರತದ ವಿಚಾರವಾಗಿ ಇಂತಹದನ್ನೇ ನಾವು ಹೇಳಬಲ್ಲೆವೆ? ಎಂತಹ ಅಜಗಜಾಂತರ!

ಕೃಷಿಯು ಬಹಳ ಲಾಭದಾಯಕವಾದ ಉದ್ಯೋಗವೆಂದು ಜನರು ಅನಾದಿಯಿಂದಲೂ ಭೂಮಿಯನ್ನು ಪಡೆದುಕೊಂಡದ್ದಲ್ಲ ಮತ್ತೆ ಏಕೆಂದರೆ ಅದಕ್ಕೆ ಹಣ ಹಾಕಿದರೆ ಅದು ಭದ್ರವಾಗಿ ಉಳಿಯುತ್ತದೆ, ಅಲ್ಲದೆ ಭೂಮಿಯಿದ್ದ ಕುಟುಂಬಕ್ಕೊಂದು ಗೌರವವೂ ಇದೆ. ಇನ್ನೊಂದು ವಿಚಾರವೇನೆಂದರೆ, ಗೇಣಿಗೊಂದು ಹತೋಟಿಯಿಲ್ಲದಿರುವಾದ ಭೂಮಾಲಿಕನು ಎಷ್ಟು ಗೇಣಿಯನ್ನೂ ನಿರ್ಧರಿಸಬಹುದು. ಕೃಷಿಯ ವಿಚಾರದಲ್ಲಿ ಚೆನ್ನಾಗಿ ನುರಿತವರಿಗೆ, ಸ್ವಂತ ಸಾಗುವಳಿಗಿಂತ ಗೇಣಿದಾರಿ ಸಾಗುವಳಿಯು ಹೆಚ್ಚು ಲಾಭಕರವೆಂದು ಗೊತ್ತು. ಸಂಸಾರಿಗಿಂತ ಹೆಚ್ಚಿನ ಮಟ್ಟದಲ್ಲಿ ಕೃಷಿ ಮಾಡಿದರೆ ಮಾತ್ರ ಸ್ವಂತ ಸಾಗುವಳಿಯೂ (ಕೂಲಿಗಾರರ ಮಜೂರಿ ಕೊಟ್ಟು ಮಾಡಿಸುವ ಸಾಗುವಳಿ) ಲಾಭದಾಯಕವಾದ ಸಂಗತಿಯೇ ಆಗಿದೆ. ಇದಕ್ಕನುಸಾರವಾಗಿ ನಮ್ಮ ಭೂಸುಧಾರಕರು ೧. ಭಾರತದ ಕೃಷಿಯ ಆರ್ಥಿಕ ಪರಿಸ್ಥಿತಿಯನ್ನು ಚೆನ್ನಾಗಿ ಅರಿತರೆ ಮತ್ತು ೨. 'ಸ್ವಂತ ಸಾಗುವಳಿ' ಮತ್ತು ಭೂಸ್ವಾಮಿತ್ವವನ್ನು ಹೊಂದಿರುವುದರಿಂದ ದೊರಕುವ 'ನಗದು ಗೇಣಿ ಮತ್ತು ಬೆಳೆ ಪಾಲು' ಇವುಗಳಲ್ಲಿ ಯಾವುದು ಲಾಭಕರವೆಂದು ಭೇದಿಸಲು ಅರಿತರೆ ಭೂಸುಧಾರಣೆ ಎಂಬ ಸಮಸ್ಯೆಯ ಪರಿಹಾರಕ್ಕೆ ಸುಲಭವಾಗುವುದು. ಇದರಲ್ಲಿ ಮಾಡಬೇಕಾದದ್ದೇನೆಂದರೆ, ಭೂಮಾಲಿಕರನ್ನು ಒಂದೋ ಸ್ವಂತ ಸಾಗುವಳಿ ಮಾಡುವಂತೆ ನಿರ್ಬಂಧಿಸುವುದು; ಇಲ್ಲವಾದರೆ ಕೆಲವು ನಿರ್ದಿಷ್ಟ ಶರ್ತಗಳ ಪ್ರಕಾರ ಭೂಮಿಯನ್ನು ಗೇಣಿದಾರರಿಗೆ ಕೊಡುವಂತೆ ಮಾಡುವುದು. ಸರಕಾರವು ಭೂಮಿಗೆ ನ್ಯಾಯವಾದ ಗೇಣಿಯನ್ನು ನಿರ್ಧರಿಸಬೇಕು ಮತ್ತದನ್ನು ಆಗ್ರಹಪೂರ್ವಕವಾಗಿ ಜಾರಿಗೆ ತರಬೇಕು. ಆ ಮೇಲೆ ಅದರಲ್ಲೇನೂ ಕಪಟ ನಡೆಯುವಂತೆ ಭದ್ರತೆಯಿರಬೇಕು. ಸ್ವಂತವಾಗಿ ಸಾಗುವಳಿ ಮಾಡುವವರು ಮತ್ತು ಕೆಲಸಗಾರರಿಂದ ಮಜೂರಿ ಕೊಟ್ಟು ಕೃಷಿ ಮಾಡಿಸುವವರು ಈ ಕೆಳಗಿನ ಸಂಗತಿಗಳನ್ನು ತಿಳಿಯಲು ಹೆಚ್ಚು ಕಾಲ ಬೇಕಾಗಿಲ್ಲ. ಒಂದೋ ಅವರು ಬಹಳ ಉನ್ನತ ಮಟ್ಟದ ಕೃಷಿಯನ್ನು ಮಾಡಬೇಕು (ಅವರು ಹಾಗೆ ಮಾಡಿದರೆ ಅದು ದೇಶಕ್ಕೆ ಬಹಳ ಒಳ್ಳೆಯದಾಗುತ್ತದೆ), ಇಲ್ಲವೇ ಕೆಳಗಿನ ಮಟ್ಟಕ್ಕಿಳಿದರೆ ಅನಿವಾರ್ಯವಾಗಿ ಅವರು ನಷ್ಟಪಡಬೇಕಾಗುತ್ತದೆ, ಮತ್ತು ನಷ್ಟವನ್ನು ಹೆಚ್ಚು ಕಾಲ ಯಾರಿಂದಲೂ ನಿರ್ವಹಿಸಲಾಗುವುದಿಲ್ಲ. ಆದದರಿಂದ ಅವರು ತನ್ನಿಂದ ತಾನೆ ಭೂಮಿಯನ್ನು ಸರಕಾರದ ಶರ್ತಗಳಿಗನುಸಾರವಾಗಿ ಗೇಣಿಗೆ ಕೊಡುವಂತೆ ಆಗುತ್ತದೆ, ಇಲ್ಲವೇ ತಮ್ಮ ಭೂಮಿಯನ್ನು ಮಾರುವಂತಾಗುತ್ತದೆ. ಈ ಇಚ್ಛೆಯೇನೆಂದರೆ ಪರಾವಲಂಬಿ ರೀತಿಯ ಭೂಮಾಲಿಕರನ್ನು ತೊಡೆದು ಹಾಕುವುದು ಮತ್ತು ಭೂಮಿಯನ್ನು ಗೇಣಿದಾರರಿಗೆ ಸಿಕ್ಕುವಂತೆ ಮಾಡುವುದು. ಅದು ಕೂಡಾ ಹಳ್ಳಿಯಲ್ಲಿ ಏನೊಂದೂ ವೈಷಮ್ಯವಿಲ್ಲದಂತೆ ವರ್ಗ ಕಲಹವಿಲ್ಲದಂತೆ ಇತ್ಯರ್ಥವಾಗುತ್ತದೆ. ಹಳ್ಳಿಯ ಮತ್ತು ಪೇಟೆಯ ಜನಗಳ ನಡುವೆ ಒಂದು ಮಾತ್ಸರ್ಯಜನಕ ಅಂತರವನ್ನು ಉಂಟುಮಾಡುವ ಭಾವನೆಯೂ ಇದರಿಂದಾಗಿ ಬರುವುದಿಲ್ಲ.

ಸಮತಾವಾದ ಅಥವಾ ಸ್ವಂತ ಆಸ್ತಿಯ ಅಪಹರಣವು ಎಂದಿನವರೆಗೆ ನಮ್ಮ ಸಮಾಜದ ಕ್ರಮವಾಗಿರುವುದಿಲ್ಲವೋ ಮತ್ತು ಎಂದಿನವರೆಗೆ ಭಾರತದ ಘಟನೆಯಲ್ಲಿ ಸ್ವಂತ ಆಸ್ತಿಯ ಅಸ್ತಿತ್ವಕ್ಕೆ ಭದ್ರತೆ ಇದೆಯೋ ಅಂದಿನವರೆಗೆ ಮೇಲೆ ಹೇಳಿದಂತಹ ಸಲಹೆಗಳು ಮಾತ್ರ ಹಳ್ಳಿ ಪ್ರದೇಶಗಳಲ್ಲಿ ಏನೊಂದು ಅವ್ಯವಸ್ಥೆಯನ್ನುಂಟುಮಾಡದೆ ಭೂಸುಧಾರಣೆಯ ಗು

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK, LTD.

H O MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ--

ತಂತಿ ಕಡಿದ ವೀಣೆ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ

ವಸಂತ ಮಾಸ ಬಂತೆಂದು ಮಂದ ಮಾರುತ ವಸಂತನ ದೂತನಾಗಿ ಕೇಲಿ ಬಂತು. ವಸಂತನಿಗೆ ಸ್ವಾಗತವನ್ನು ನೀಡ ಲೆಂದು ಕಡಲಿನ ತೆರೆಗಳು ಓಡೋಡಿ ಬಂದುವು.

ಬೆಳಗಾಯಿತು. ಕಮಲಗಳು ಅರಳಿ ದುವು. ಮರಗಿಡಗಳು ಮೈ ಗೊಡವಿ ನಿಮಿರಿ ನಿಂತುವು. ಸುಮಗಳೊಂದೊಂದಾಗಿ ಎಳೆ ಮಕ್ಕಳು ನಿದ್ದೆಯಿಂದೆಚ್ಚೆತ್ತಂತೆ ಕಣ್ತೆರೆದುವು. ದುಂಬಿ ಹಾರಿತು ಹೂಗಳು ನಲಿದುವು. ಸರೋವರದ ನೀರು ಕಳಕಳಿಸಿತು. ತಾವರೆಯೆಲೆಗಳು ಓಲಾಡಿದುವು. ತರುಲತೆಗಳು ಹಿಮದ ಗಡಿಯಲ್ಲಿ ಸರಸ ಸಲ್ಲಾಪ ಗೈಯಲಾರಂಭಿಸಿದುವು. ಕೋಗಿಲೆ ಕಾಜಾಣಗಳು ತಮ್ಮ ಇನಿದಾದ ಕೊರಳಿನಿಂದ ಇಂಪಾಗಿ ಹಾಡ ತೊಡಗಿದುವು. ತನ್ನ ನಿಯುಸುದಯಿಸಿ ಬರುತ್ತಿದ್ದುದನ್ನು ನೋಡಿ ಕಮಲದ ಮುಖ ಕೆಂಪೇರಿ ಅರಳಿತು. ತಾಯಿಯನ್ನು ನೆನೆದು, ಕರು ಬಾಲವನ್ನೆತ್ತಿ 'ಅಂಬಾ' ಎಂದಿತು. ಹೊಸ ಉತ್ಸಾಹ ತುಂಬಿ, ಹೂಬಿಸಿಲು ಹೊಂಬಿಸಿಲಾಗಿ ಗಿಡ ಮರ ಬಳ್ಳಿಗಳೆಡೆಯಲ್ಲಿ ಹೊನ್ನಿನ ಸರಿಗೆಗಳಂತೆ ಹೊಕ್ಕಿತು. ಮೂಡಣ ಬಾನಿನಂಚಿನಿಂದ ಹಕ್ಕಿಗಳ ಹಿಂಡು ದಿನೇಶನ ರಶ್ಮಿದ ಮಾಲೆಗಳಂತೆ ಕಂಗೊಳಿಸಿ ದಿಕ್ಕುದಿಕ್ಕಿಗೆ ಚದರಲಾರಂಭಿಸಿದುವು.

ಜನರೆಚ್ಚೆತ್ತು ನಿತ್ಯಜೀವನದ ನಿತ್ಯ ಕಾರ್ಯಕ್ಕಾಗಿ ಹೊರಟರೊಬ್ಬೊಬ್ಬರಾಗಿ ಕಡೆಗೋಲಿನ ಶಬ್ದದೊಂದಿಗೆ ಒಲನೆಯರು ತಮ್ಮ ಸುಸ್ವರವನ್ನು ಸೇರಿಸಿ ಉದಯ ರಾಗ ಹರಿಸಲಾರಂಭಿಸಿದರು. ಎತ್ತೆತ್ತಲೂ ಹರ್ಷ ತುಂಬಿ ನಲಿಯಿತು ವಸಂತ ಮಾಸದ ಹೊಸಗಾನ ತೇಲಿಬಂತು. ನಿರ್ಮಲ ತೊರೆಗಳು ಕುಣಿಕುಣಿದು ಬಂಡೆಗಳನ್ನಪ್ಪಳಿಸಿ ಕುಲುಕುಲು ನಕ್ಕು ಕಳಕಳಿಸಿ ಮುಂದರಿದುವು. ತಂಗಾಳಿ ಮೃದುವಾಗಿ ತೀಡಿ ಜನರೆದೆಯಲ್ಲಿ ಹರ್ಷದ ಪೊಂಪುಳಿಯೇಳಿಸಿತು. ರೋಮಾಂಚಿಸಿ, ಭಾವಜೀವಿಗಳ ಹೃದಯದಲ್ಲಿ ಹೊಸ ಭಾವನೆಗಳು ಹುಟ್ಟಿ ಉಕ್ಕಿ ಹರಿಯಲಾರಂಭಿಸಿದುವು. ಗದ್ದೆಯ ಹೊಂಗದಿರು ತೂಗಾಡಿತು. ತೆಂಗಿನ ಓಲೆ ದಾಡಿತು. ನವಿಲು ಗರಿಗೆದರಿ ಕೇಗಿತು. ತೆಂಗು ಕೌಂಗುಗಳು ಗರಿಬೀಸಣಿಗೆಯೆತ್ತಿ ವಸಂತನಿಗೆ ಗಾಳಿಹಾಕಲಾರಂಭಿಸಿದುವು. ದೇವಾಲಯಗಳಲ್ಲಿ ಗಂಟೆಗಳು ಕಿಂಕಿಣಿ ನಾದದಿಂದ ನುಂಜುಳವಾಗಿ ಬಾಜಿಸಿದುವು.

ಮುತ್ತಿನ ಮಣಿಗಳಂತೆ ಎಲೆಗಳ ಮೇಲೆ ನೀರ್ಹನಿ ಮಿನುಗಿತು. ಹಸುರುಟ್ಟ ಭೂದೇವಿ ಭುವನ ಮೋಹನೆಯಾಗಿ ಕಂಗೊಳಿಸಿದಳು. ಶುಭ್ರ ಸಲಿಲದಲ್ಲಿ ಪದ್ಮ ಪತ್ರಗಳ ಮೇಲೆ, ಪದ್ಮ ಕುಟ್ಮಲ ಮಲಗಿತ್ತು; ಪಿಯುತ್ತಿತ್ತು; ಮುಗುಳ್ನಗುತ್ತಿತ್ತು. ವೃಂದಾವನ ಸೌಂದರ್ಯದ ಹೊಳೆ ಹರಿಯಿಸಿತು. ಹೂಗಳು ಹೂಗಿಡಗಳು ತಂತಮ್ಮೊಳು ವಸಂತನನ್ನು ನುತಿಸಿ ಮಾತುಕತೆಗಾರಂಭಿಸಿದುವು; ತರತರ ಬಣ್ಣಗಳಿಂದ ಚಂಚರೀಕಗಳನ್ನಾಕರ್ಷಿಸಲಾರಂಭಿಸಿದುವು. ತರುಪಲ್ಲವವನ್ನು ತಂಗಾಳಿ ಚುಂಬಿಸಿತು. ಆಕಾಶಪಡೆಯಿಂದ, ಸಪ್ತ ವರ್ಣದ ಮೇಘಗಳೆಡೆಯಿಂದ ಸುಲಲಿತ ಓಂಕಾರ ಕೇಳಿ ಬರುತ್ತಿರುವಂತೆ ಭಾಸವಾಯಿತು. ಎಲ್ಲೆಲ್ಲೂ ನವ ಸ್ಫೂರ್ತಿ ಚಿಮ್ಮಿತು. ಸಂತಸದ ಹೊನಲು ಕ್ಕಿ ಹರಿಯಿತು.

ಉದಯನ ಕಣ್ಣಲ್ಲಿ ಕಣ್ಣೀರು ಚಿಳ್ಳೆಂದು ಚಿಮ್ಮಿತು. "ಜೀವನವೇ ಒಂದು ದೇವನು ರಚಿಸಿದ ಪರೀಕ್ಷೆ; ಆದರೆ......." ತಂಪಿಲರು ವ ನೆಯೊದರಿನ ಬಸಿರಿ ಮರವನ್ನುರುಗಿಸಿ ಮೃದುವಾಗಿ ಕಿಟಕಿಯೆಡೆಯಿಂದ ಉದಯನ ಮುಖವನ್ನು ನೋಂಕಿತು. "ಹೌದು! ವಸಂತ ಮಾಸ ಆರಂಭವಾಗಿದೆ ಎಲ್ಲೆಲ್ಲೂ ಹರ್ಷದ ಹೊಳೆ ಹರಿಯುತ್ತಿದೆ. ಜನವ ನಕ್ಕ ಸುಗ್ಗಿಯ ಕಾಲ. ಪಶುಪಕ್ಷಿ ಕ್ರಿಮಿಕೀಟಗಳು ತಮ್ಮ ಪಾಡಿಗೆ ತಾವು, ತಮ್ಮ ಕ್ಷೇತ್ರದಲ್ಲಿ, ಸಂತಸದಿಂದ ನಲಿಯುತ್ತಿವೆ. ಆದರೂ ಸುಖವೆಲ್ಲಿ?"

ಉದಯನ ಕಣ್ಣಿನಲ್ಲಿ ಕಣ್ಣೀರು ಮಿನುಗುತ್ತಿತ್ತು. "ತನೊಬ್ಬನೇ ದುಃಖಿಯೇ ಅಲ್ಲ, ಇನ್ನೆಷ್ಟೋ ಮಾನವ ಜೀವಿಗಳಿರಬಹುದು. ಆದರೆ ನನ್ನೆದೆಯು ಕಳವಳವೇ ನನಗೆ ಹಿರಿದಾಗಿದೆ. ಅದನ್ನಿಡಲು ಸ್ಥಳವೆಲ್ಲಿ? ಅದಕ್ಕೆ ಪರಿಹಾರವೆಲ್ಲಿ?" ತಾಯಿಯ ಮೊಲೆ ಹಾಲನ್ನು ಕುಡಿದು ಕರು ಬಾಲವನ್ನೆತ್ತಿ ಕುಣಿದು ಕುಪ್ಪಳಿಸಿ ಹೊರಬಂತು.

"ಛೆ! ಆ ಪುಟ್ಟ ಕರುವಿಗೂ ಎಷ್ಟು ಉತ್ಸಾಹ? ಮನುಷ್ಯ ನಂತಹ ಬುದ್ಧಿ ಪ್ರೌಢಿಮೆ ಅದಕ್ಕಿಲ್ಲ. ಆವನ ಯೋಜನೆ, ಚಿಂತೆ, ವಿಚಿತ್ರ ವಿಧವಿಧದ ಕಷ್ಟ ಸುಖಗಳ ಪರಿವೆಯೂ ಅದಕ್ಕಿಲ್ಲ. ಅತಿ ಬುದ್ಧಿವಂತಿಕೆಯು ತನ್ನಲ್ಲಿ ತಾನೇ ವಿಶ್ವಾಸವಿಡದ, ತನ್ನ ಮನಸ್ಸನ್ನೇ ತಾನರಿಯದ ನರಕ ಕುಂಡದ ಹಂಸತೂಲಿಕಾ ತಲ್ಪದಂತಹ ಈ ಮಾನವ ಬಾಳ್ವೆಗಿಂತಲೂ ಈಎಳೆ ಗರುವಿನ ಜನ್ಮವೆಷ್ಟೋ ...."

"ಉದಯ!" ತಾಯಿ ಕೂಗಿದರು. ಉದಯ ತಿರುಗಿ ನೋಡಿದ ತಾಯಿಗರಿಯದಂತೆಯೇ ಪಕ್ಕನೆ ಕಣ್ಣೀರೊರಸಿಕೊಂಡ. ತಾಯಿಯೆಂದರು.

"ಇನ್ನೂ ಪೂರ್ಣ ಹುಷಾರಾಗಿಲ್ಲ ಇಷ್ಟು, ಬೇಗನೆ ಎದ್ದೆಯೇಕೆ? ಆ ಗಾಳಿಗೆ ಕಿಟಕಿಯ ಹತ್ತಿರ ಕುಳಿತುಕೊಳ್ಳ ಬೇಡ. ಹುಂ, ಹೇಗೂ ಬೆಳಗಾಯಿತು. ನೀರು ಕಾದಿದೆ ನೋಡು, ಸ್ನಾನಕ್ಕೇಳು"

ಉದಯ ಮಹಡಿಯಿಂದ ಕೆಳಗಿಳಿದು ಬಂದ. ಹಲವು ದಿನಗಳಿಂದ ಅಸೌಖ್ಯವಿದ್ದುದರಿಂದ ನಿಃಶಕ್ತಿ ಪೂರ್ಣ ನಿವಾರಣೆಯಾಗಿರಲಿಲ್ಲ ಮಂದವಾದ ತಂಪಾದ ಗಾಳಿ ಮೈ ಸೋಂಕುವಾಗ ಎದೆಯಲ್ಲೇನೋ ವಿಚಿತ್ರ ತೃಪ್ತ ಅನುಭವವಾಗುವಂತಿತ್ತು.

ಬಿಸಿನೀರು ಕಾದಿತ್ತು. ಉದಯನ ಸ್ನಾನ ಮುಗಿಸಿದ, ಹಾಲು ಹಣ್ಣಿನ ಲಘು ಉಪಾಹಾರವೂ ಮುಗಿಯಿತು. ಶಾರದಮ್ಮ ಮಗನನ್ನೇ ಕಣ್ತುಂಬಾ ನೋಡುತ್ತಿದ್ದರು. ಅಪಾರವಾದ ಮಾತೃವಾತ್ಸಲ್ಯವೂ ಅವರ ಕಣ್ಣಲ್ಲಿ ತುಂಬಿತ್ತು, ಅವಳತ್ತ ಹಾಲು ಅಮೃತವೇ ಆಗಿತ್ತು.

"ಹೊರಗೆಲ್ಲ ತಿರುಗಾಡಲು ಹೋಗಬೇಡ, ಉದಯ. ಜ್ವರ ಮರುಕಳಿಸಬಹುದು ಅಲ್ಲದೆ ಈ ಬಿಸಿಲೂ ಬೇರೆ ಸುಡುತ್ತಿದೆ. ಹೋಗುವುದಿದ್ದರೂ ಸಂಜೆ ಹೋಗುವಿಯಂತೆ. ತಂದೆಯೂ ಸ್ವಲ್ಪ ಹೊತ್ತಿನಲ್ಲಿ ಬಂದಾರು. ಅವರು ಬಂದಾಗ ನೀನಿಲ್ಲದಿರಬೇಡ" ಉದಯ ಕೈತೊಳೆದು ಕೊಳ್ಳುತ್ತಿರುವಾಗ ತಾಯಿ ಹೇಳಿದರು. ಅವಳಿಗೆ ಅಪಾರ ಮಮತೆಯಿತ್ತು ಮಗನ ಮೇಲೆ. ಅವನೆಂದೂ ನೋಯದಂತಿರಬೇಕೆಂದು ಅವಳು ಬಯಸುತ್ತಿದ್ದಳು.

ಎರಡಂತಸ್ತಿನ ಭವ್ಯ ಕಟ್ಟಡ ರಾರಾಜಿಸುತ್ತಿತ್ತು. ಮನೆಯೆದುರು ಸುಂದರವಾದ ಹೂವಿನ ತೋಟ. ವಸಂತ ಮಾಸದ ಹೊಸ ಕಳೆಗೂಡಿ ಇದ್ದ ಸೊಬಗನ್ನು ಇನ್ನಷ್ಟು ಹೆಚ್ಚಿಸಿತ್ತು. ಸಿರಿವಂತ ಚಂದ್ರಶೇಖರ ರಾಯರ ಮಗ ಉದಯ. ಅವನಿಗೇನೂ ಕೊರತೆಯಿರಲಿಲ್ಲ. ಅಪಾರವಾದ ಆಸ್ತಿ, ತುಂಬಿದ ಸುಖ ಅವನ ಪಾಲಿಗಿದೆ. ಅವನಿಗೇನು ಚಿಂತೆ? ಏನು ಅಭಾವ? ಭವ್ಯ ಮಹಲಿನ ಮಹಡಿಯಲ್ಲಿ ಸುಖಾಸೀನನಾಗಿ ರೇಡಿಯೋದ ಕಿವಿ ಹಿಂಡುತ್ತಾ ಇರಬಹುದು. ನಿರತ ಸುಖಜೀವಿಯಾಗಿ ಬಾಳಬಹುದು. ತಂದೆಯ ನಂತರ ಒಬ್ಬನೇ ಮಗ ಉದಯನೇ ಸರ್ವಾಧಿಕಾರಿ. ಧನ, ಕನಕ, ಆಸ್ತಿಗಳಿಗೆಲ್ಲಾ ಅವನೇ ಒಡೆಯ. ಈಗಲೂ ಏನೂ ಅವನಿಗೆ ಕೊರತೆಯಿರಲಿಲ್ಲ; ಏನು ಬೇಕೋ ಅದು ನಿಮಿಷದಲ್ಲಿ ಸಿಗುವಂತಿದೆ ಅಲ್ಲದೆ ನವಯುವಕ ರೂಪ, ಗುಣ, ಧನ—ವಿದ್ಯೆಗಳು ತುಂಬಿವೆ. ದಿನ ದಿನ ಚಂದ್ರಶೇಖರರಾಯರನ್ನು ಕನ್ಯಾರ್ಥಿಗಳನ್ನಾಗಿ ಮಾಡಲು ಹಲವರು ಗೇಟಿನ ಒಳಗೆ ಹೋಗುತ್ತಲೂ ಹೊರ ಬರುತ್ತಲೂ ಇದ್ದಾರೆ. ಸೂಳೆಯರ ತಲೆಹಿಡುಕರಂತೆ ಕೆಲವು ವ್ಯರ್ಥ ಯತ್ನದ 'ನವ ಪುರೋಹಿತ'ರು, ಸಭ್ಯ ದಳ್ಳಾಳಿಗಳು ತಮ್ಮ ಬೇಳೆಯೂ ಬೇಯುವುದೇನೋ ಎಂದು ಉದ್ದವಾದ ಕಚ್ಚೆಯನ್ನು ಇನ್ನಷ್ಟು ಬಿಗಿಯಾಗಿ ಎಳೆದುಕಟ್ಟಿ ಗೇಟಿನೊಳಗೆ ನುಸುಳುತ್ತಿದ್ದಾರೆ. ಈ ಮಹನೀಯರೆಲ್ಲರ ಕನ್ಯೆಯರನ್ನು ಒಮ್ಮೆಲೇ ಒಂದೇ ಚಪ್ಪರದಲ್ಲಿ ಮದುವೆಯಾಗುವ ಸಾಮರ್ಥ್ಯ ಇವರಿಗೂ ಇದೆ. ಆದರೂ ಏನಿದು? ಏನೋ ಒಗಟಿನಂತಿದೆಯಲ್ಲಾ?" ಎಂದು ಕಣ್ಣೆತ್ತಿ ನಿರೀಕ್ಷಿಸುತ್ತಲೇ ಇದ್ದ 'ಚತುರ ಮಾತುಗಾರರು' ಹರಟುತ್ತಲೇ ಇದ್ದರು.

— ೨ —

ಶ್ರೀ ಕಾಂತರಾಯರು ಹರಿಪುರದಲ್ಲಿ ಗಣ್ಯ ವಕೀಲರು ಸಾಕಷ್ಟು ಪ್ರಸಿದ್ಧಿಯನ್ನವರು ಹೊಂದಿದ್ದರಿಂದ ಕಕ್ಷಿಗಾರರಿಗೇನೂ ಕೊರತೆಯಿರಲಿಲ್ಲ. ಆದರೆ ಅದರಿಂದಾಗಿಯೇ ಅವರ ಜೀವನ ಸಾಗಬೇಕಾಗಿಯೂ ಇರಲಿಲ್ಲ ಅವರ ಸಂಪತ್ತೂ ಹಿರಿದಾಗಿಯೇ ಇತ್ತು. ಅವರ ಉದಾರ ಹೃದಯ, ನಿಷ್ಕಲ್ಮಶ ಮನಸ್ಸು, ವಿರೋಧಿಯನ್ನೂ ಹಳಿಯದ ಸ್ವಭಾವ, ಎಲ್ಲರಿಗೂ ಅವರ ಬಗೆಗೆ ಆದರ, ಪೂಜ್ಯಭಾವಗಳನ್ನುಂಟುಮಾಡಿತ್ತು ಪತ್ನಿಯೂ ಪತಿಯ ಗುಣಕ್ಕೆ ತಕ್ಕವರೇ ಆಗಿದ್ದರು. ಪಟ್ಟಣದಲ್ಲಿ ವಾಸವಾಗಿದ್ದರೂ ವಿಶೇಷವಾದ ನಡೆಯನ್ನು ಹಿಡಿಯುವ ತಮ್ಮ ಹಳ್ಳಿಯ ನಡೆನುಡಿಯೊಂದಿಗೆ ಪಟ್ಟಣದ ವಾತಾವರಣಕ್ಕೆ ಅನುಗುಣವಾಗಿ, ತುಂಬು ತೃಪ್ತಿಯ ಬಾಳನ್ನು ಸಾಗಿಸುತ್ತಿದ್ದರು. ಶ್ರೀಕಾಂತರಾಯರ ಪತ್ನಿ ಹತ್ತು ಹನ್ನೆರಡು ಹೆತ್ತರೂ ಮಕ್ಕಳೊಂದೂ ಉಳಿಯಲಿಲ್ಲ. ಇದ್ದ ದೇವರಿಗೆಲ್ಲಾ ಹರಕೆ ಹೊತ್ತು ಗೋಗರೆದು ಬೇಡಿದರು. ಆದೇಕೋ ಹುಟ್ಟಿದ ಮಕ್ಕಳೊಂದೂ ಉಳಿಯಲಿಲ್ಲ. ಗರ್ಭಸ್ರಾವ ಅಕಾಲ ಜನನ, ಕಡೆಗೆ ಮರಣ ಹೀಗೆಲ್ಲಾ ನಡೆಯಿತು. ಕಡೆಗೆ ದೇವರಿಗೂ ದಯೆ ಬಂದಿರಬೇಕು. ಯೋಗ್ಯ ರೀತಿಯಲ್ಲಿಯೇ ಹೆಣ್ಣು ಮಗುವೊಂದನ್ನು ಅವರು ಹೆತ್ತರು. ಅವಳೇ ಮಾಲತಿ.

ಶ್ರೀಕಾಂತರಾಯರಿಗೂ ಚಂದ್ರಶೇಖರ ರಾಯರಿಗೂ ಬಹಳ ಹತ್ತಿರದ ಸಂಬಂಧ

(೧೧ನೇ ಪುಟ ನೋಡಿರಿ)

ಝುಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ¼ ರಾತಲಿಗೆ ರೂ. 2/0

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮಸಿ, ಮಂಗಳೂರು.
3. ಪಿ. ಪಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಔದ್ಯೋಗೀಕರಣಪಥದಲ್ಲಿ ಭಾರತ—

ಮೂರು ನೂತನ ಕಾರಖಾನೆಗಳು

ಭಾರತವನ್ನು ಔದ್ಯೋಗೀಕರಣದತ್ತ ನಾವು ಕೊಂಡೊಯ್ಯದೇ ಹೋದ ಪಕ್ಷದಲ್ಲಿ ನಾವೆಲ್ಲರೂ ನಾಮಾವಶೇಷರಾಗುವುದರಲ್ಲಿ ಸಂದೇಹವಿಲ್ಲ. ಆರ್ಥಿಕ ದೃಷ್ಟಿಯಿಂದ ಹಿಂದುಳಿದಿರುವ ನಮ್ಮ ದೇಶದ ಕೈಗಾರಿಕೆಗಳಿಗೆ ಪ್ರಾಧಾನ್ಯವನ್ನೀಯುವುದೇ ನಮ್ಮ ಪತ್ರಿಕೆಗೆ ಕಾರಣವಾಗಬಲ್ಲದು. ಸಂತೋಷಚಿತ್ತ ಮತ್ತು ಪ್ರಗತಿಶೀಲ ರಾಷ್ಟ್ರಗಳು ಈ ಕೈಗಾರಿಕೆಯ ಮಹತ್ವವನ್ನು ತಿಳಿಯಬಲ್ಲವು. ಕೈಗಾರಿಕೆಯು ಒಂದು ರಾಷ್ಟ್ರದ ಕಲ್ಯಾಣ ಕಾರ್ಯದಲ್ಲಿ ಬಹುಮುಖ್ಯವೆನಿಸಿದ ಪಾತ್ರವನ್ನು ವಹಿಸುತ್ತದೆ. ಭಾರತೀಯರು ಯಾವ ಕೈಗಾರಿಕೆಯ ಕಡೆಗೆ ವಿಶೇಷ ಗಮನವೀಯಬೇಕು ಎಂಬುದಾಗಿ ಯಾರಾದರೂ ಪ್ರಶ್ನಿಸಿದರೆ ಅದಕ್ಕೊಂದೇ ಉತ್ತರ—ಉಕ್ಕು!

ಕೃಷಿಯಿರಲಿ, ಅಣೆಕಟ್ಟೆ ಇರಲಿ, ಕಾರಖಾನೆಗಳಿರಲಿ, ವಿದ್ಯುತ್ತಿರಲಿ ಎಲ್ಲ ವಿಭಾಗಗಳಿಗೂ ಅತ್ಯಂತ ಆವಶ್ಯಕವೆನಿಸಿದ ವಸ್ತು ಉಕ್ಕು! ಉತ್ಪಾದನೆಯ ಯಾವುದೇ ಕಾರ್ಯವು ಸಣ್ಣದಿರಲಿ ಇಲ್ಲವೇ ದೊಡ್ಡದಿರಲಿ ಅಲ್ಲಿ ಉಕ್ಕಿನ ಕೈಸುಳಿಯದ ಯಾವುವೂ ಫಲಸ್ವರೂಪಿಯಾಗಲಾರವು. ಹೆಚ್ಚು ಉಕ್ಕನ್ನು ಸಿದ್ಧಪಡಿಸುವ ಕಾರ್ಯದ ಸಾಫಲ್ಯವನ್ನವಲಂಬಿಸಿಯೇ ನಮ್ಮ ಸ್ವಾತಂತ್ರ್ಯ ನೆಲೆನಿಂತಿದೆ ಎಂದರೂ ಅತಿಶಯೋಕ್ತಿಯಾಗಲಾರದು.

ಭಾರತೀಯರೇ ಜಗತ್ತಿನಲ್ಲೆಲ್ಲ ಪ್ರಪ್ರಥಮವಾಗಿ ಉಕ್ಕನ್ನು ತಯಾರಿಸಿದರೆಂದು ಪ್ರಾಯಃ ಹೆಚ್ಚಿನ ಭಾರತೀಯರು ತಿಳಿದಿರಲಾರರು. ಕುತುಬಮಿನಾರ ಮತ್ತು ದಿಲ್ಲಿಯ ಕಬ್ಬಿಣದ ಕಂಬಗಳು ಸುಮಾರು ಐದನೆಯ ಶತಮಾನದಲ್ಲಿ ಕಟ್ಟಲ್ಪಟ್ಟುವು. ಇದನ್ನು ನೋಡುವಾಗ ಭಾರತವು ಆ ಕಾಲದಲ್ಲಿಯೇ ಅದೆಷ್ಟು ಉಕ್ಕನ್ನು ಸಿದ್ಧಪಡಿಸುತ್ತಿತ್ತು ಎಂಬುದು ತಿಳಿಯುವುದು. ನಮ್ಮ ಪೂರ್ವಜರ ಈ ಶೋಧನಾ ಸಾಫಲ್ಯವು ನಮಗೆ ಸಹ ಇಂದು ಈ ಕಾರ್ಯದ ಮುಂದುವರಿಯಲು ಪ್ರೇರೇಪಿಸುತ್ತದೆ.

ನಮ್ಮ ದೇಶದಲ್ಲಿ ಕಬ್ಬಿಣವು ಅಧಿಕ ಪ್ರಮಾಣದಲ್ಲಿರುತ್ತದೆ. ಕಬ್ಬಿಣದ ಗಣಿಗಳಿಂದ ಅತ್ಯಲ್ಪ ದೂರದಲ್ಲಿಯೇ ಕಲ್ಲಿದ್ದಲು, ಸುಣ್ಣವನ್ನು ಮೆಂಗನೀಸುಗಳ ಅದುರುಗಳು ದೊರೆಯುತ್ತವೆ. ಈ ಮೂಲ ಅದುರುಗಳು ಕಬ್ಬಿಣದಿಂದ ಉಕ್ಕನ್ನು ತಯಾರಿಸಲು ಅತ್ಯಗತ್ಯವಿವೆ. ನಾವು ಇವೆಲ್ಲ ನಮ್ಮ ಸಾಧನ ಸಾಮಗ್ರಿಗಳನ್ನು ಯೋಗ್ಯ ರೀತಿಯಲ್ಲಿ ದೃಢ ಮನಸ್ಸಿನಿಂದ ಸದುಪಯೋಗಪಡಿಸಿಕೊಂಡರೆ, ವಿದೇಶೀಯರನ್ನೇ ಈ ಬಗ್ಗೆ ಹೊಂದಿಕೊಂಡಿರಬೇಕಾದ ಅವಶ್ಯಕತೆಯಿಲ್ಲ.

ಆಧುನಿಕ ಭಾರತದಲ್ಲಿ ಕೈಗಾರಿಕೆಯ ಚರಿತ್ರೆಯು ೫೦ ವರ್ಷಗಳ ಹಿಂದಿನಿಂದ ಪ್ರಾರಂಭವಾಗುತ್ತದೆ. ೧೯೦೭ರಲ್ಲಿ ಪ್ರಖ್ಯಾತ ಕೈಗಾರಿಕೋದ್ಯಮಿ ಶ್ರೀ ಜಮಶೇಟ್‌ಜಿ ಟಾಟಾರವರು ಜಮಶೆದಪುರ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕಂಪೆನಿಯ ಕಾರ್ಖಾನೆಗಳನ್ನು ಕಟ್ಟಿದರು. ಕೆಲ ವರ್ಷಾನಂತರ ಮೈಸೂರಿನ ಭದ್ರಾವತಿಯೂ ಇದೇ ರೀತಿಯ ಆದರೆ, ಅದರಂತ ಬಹಳ ಸಣ್ಣದಾದ ಕಂಪೆನಿಯು ತೆರೆಯಲ್ಪಟ್ಟಿತು. ನಂತರ ಅಸನ್ಸೋಲ್‌ನ ಸಮೀಪದಲ್ಲಿ ಬರ್ನಪುರದಲ್ಲಿ ಒಂದು ಕಂಪೆನಿಯು ಪ್ರಾರಂಭವಾಯಿತು. ಆದರೆ ಇವೆಲ್ಲವೂ ಒಟ್ಟಿಗೆ ಅದೆಷ್ಟು ಪ್ರಮಾಣದ ಉಕ್ಕನ್ನು ಉತ್ಪಾದಿಸಿಯಾವು? ಸಾಮಾನ್ಯವಾಗಿ ಸುಮಾರು ೧೪ ಲಕ್ಷ ಟನ್ ಉಕ್ಕನ್ನು ಇವು ಒದಗಿಸಿದರೆ ನಮಗಿಂದು ಬೇಕಾಗಿವೆ ೩೦ ಲಕ್ಷ ಟನ್ನುಗಳಷ್ಟು!

ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಆಹಾರಧಾನ್ಯಗಳ ಉತ್ಪಾದನೆಯನ್ನು ಬೆಳೆಯಿಸಲು ಪ್ರಾಧಾನ್ಯವೀಯಲಾಯಿತು. ಎರಡನೆಯ ಪಂಚವಾರ್ಷಿಕ ಯೋಜನೆಯು ಸ್ವಲ್ಪ ಅಧಿಕ ಮಹತ್ವಾಕಾಂಕ್ಷಿಯಾಗಿರುತ್ತದೆ. ಇದು ಮುಗಿಯುತ್ತ ಬಂದಂತೆ ಉಕ್ಕಿನ ವಿಷಯದಲ್ಲಿ ಸ್ವಾವಲಂಬನವನ್ನು ಸಾಧಿಸ ಬಯಸುತ್ತೇವೆ. ಈಗ ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಮೂರು ಹೊಸ ಕಾರಖಾನೆಗಳನ್ನು ತೆರೆಯಲಾಗುತ್ತಿವೆ. ಇಷ್ಟಲ್ಲದೇ ಈಗ ಇರುವ ಕಾರಖಾನೆಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ಹೀಗೆ ಹೊಸತಾಗಿ ಪ್ರಾರಂಭವಾಗಲಿರುವ ಪ್ರತಿ ಕಾರಖಾನೆಯಲ್ಲಿ ೧೦ ಲಕ್ಷ ಟನ್ನಿನಂತೆ ಒಟ್ಟು ೧೯೬೦ರ ಹೊತ್ತಿಗೆ ೬೦ ಲಕ್ಷ ಟನ್ನುಗಳು ಉತ್ಪಾದನೆಯಾಗುವುದು.

ಉಕ್ಕಿನ ಕಾರಖಾನೆಗಳನ್ನು ಸ್ಥಾಪಿಸುವುದು ಹುಡುಗಾಟವಲ್ಲ. ಉಚ್ಚ ಶಿಕ್ಷಣ ಮತ್ತು ಆವಶ್ಯಕ ಯಂತ್ರ ಸಾಮಗ್ರಿಗಳಿಲ್ಲದೆ ಇವನ್ನು ಸ್ಥಾಪಿಸುವುದು ಅಸಾಧ್ಯ. ೧೯೫೩ರಲ್ಲಿ ಹಿಂದುಸ್ಥಾನ್ ಸ್ಟೀಲ್ ಕಂಪೆನಿಯನ್ನು ರೂರ್ಕೇಲಾದಲ್ಲಿ ಕಾರಖಾನೆ ತೆರೆಯಲು ಸ್ಥಾಪಿಸಲಾಯಿತು. ಜರ್ಮನಿಯ ಕ್ರುಪ ಮತ್ತು ಡೀಮಾಗ ಕಂಪನಿಗಳಿಗೆ ತಾಂತ್ರಿಕ ಸಲಹೆ ಮತ್ತು ಯಂತ್ರ ಸಾಮಗ್ರಿಗಳನ್ನು ಒದಗಿಸುವ ಮತ್ತು ಕಾರಖಾನೆಯ ಕಟ್ಟಿಸುವ ಕೆಲಸವನ್ನು ಒಪ್ಪಿಸಲಾಯಿತು. ಇಲ್ಲಿಯ ಕಾರಖಾನೆಯು ೧೯೫೯ರ ಸುಮಾರಿಗೆ ಸಂಪೂರ್ಣವಾಗುವುದು. ಮೊದಮೊದಲು ಇಲ್ಲಿ ಪ್ರತಿವರ್ಷ ೧೦ ಲಕ್ಷ ಟನ್ನುಗಳಷ್ಟು ಉಕ್ಕನ್ನು ತಯಾರಿಸಲಾಗುವುದು. ಉಕ್ಕಿನ ಉತ್ಪಾದನೆಯನ್ನು ಹೆಚ್ಚಿಸುತ್ತ ಇದನ್ನು ಶೇಕಡ ೭೫ರಷ್ಟು ಅಧಿಕಗೊಳಿಸಬಹುದೆಂಬ ಆಶೆಯಿದೆ.

೧೯೬೦ರ ಸುಮಾರಿಗೆ ೬೦ ಲಕ್ಷ ಟನ್ ಉಕ್ಕನ್ನು ನಿರ್ಮಿಸುವುದು, ಎರಡನೆ ಯೋಜನೆಯ ಗುರಿಯಾಗಿದೆ. ಸೋವಿಯಟ್ ರಶ್ಯದ ಸರಕಾರವು ನಮಗೆ ಸಹಾಯ ಮಾಡಿತು. ಒಂದು ಒಪ್ಪಂದದ ಮೂಲಕ ಪ್ರಾರಂಭದಲ್ಲಿ ೧೦ ಲಕ್ಷ ಟನ್ ಉಕ್ಕನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸಲು ಯೋಜಿಸಲಾಗಿದೆ. ಮಧ್ಯಪ್ರದೇಶದ ಭಿಲಾಯಿಯಲ್ಲಿ ತ್ವರಿತಗತಿಯಿಂದ ಕಾರ್ಯ ಸಾಗುತ್ತಿದೆ. ಇದಕ್ಕೆ ಬೇಕಾದ ಸಾಮಗ್ರಿಗಳನ್ನು ರಶ್ಯ ಕೊಡುತ್ತಿದೆ. ಈ ಕಾರಖಾನೆಯ ವೆಚ್ಚವನ್ನು ಭಾರತ ಸರಕಾರವು ಹನ್ನೆರಡು ವಾರ್ಷಿಕ ಕಂತುಗಳಲ್ಲಿ ಹಿಂದಿರುಗಿಸುವುದು. ಬಡ್ಡಿಯ ದರವೂ ತೀರ ಕಡಿಮೆಯಾಗಿದೆ. ಅಲ್ಲದೆ ಈ ಎಲ್ಲ ನೆರವುಗಳೂ ಭಾರತೀಯ ರೂಪಾಯಿಗಳಲ್ಲಿಯೇ ಮರಳಿ ಕೊಡಲಿರುವುದರಿಂದ ವಿದೇಶೀ ವಿನಿಮಯದ ಝಂಜಾಟವೂ ಕಾಣಿಸುವುದಿಲ್ಲ. ಕೆಲವು ಭಾರತೀಯ ತಂತ್ರಜ್ಞರಿಗೆ ರಶ್ಯದಲ್ಲಿ ವಿಶೇಷ ಶಿಕ್ಷಣವನ್ನೂ ಕೊಡಲಾಗುತ್ತದೆ. ಕಳೆದ ವರ್ಷದ ಅಂದಾಜಿನಂತೆ ಈ ಕಾರಖಾನೆಗೆ ೧೧೫ ಕೋಟಿ ರೂಪಾಯಿಗಳು ವೆಚ್ಚವಾಗುವುವು. ಇದು ಸಹ ೧೯೫೯ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ದುರ್ಗಾಪುರದ ಕಬ್ಬಿಣ ಕಾರಖಾನೆಯು ಸಹ ಈ ಯೋಜನಾಂತ್ಯದಲ್ಲಿ ಪೂರ್ಣವಾಗಿ ಇದರಿಂದಲೂ ಪ್ರತಿವರ್ಷ ೧೦ ಲಕ್ಷ ಟನ್ ಉಕ್ಕು ಸಿದ್ಧವಾಗುವ ಅಪೇಕ್ಷೆಯಿದೆ. ಈ ಕಾರಖಾನೆಯು ಭಾರತ ಮತ್ತು ಬ್ರಿಟನ್‌ಗಳ ಸಹಯೋಗದ ಫಲರೂಪವಾಗಿದೆ. ಪಶ್ಚಿಮ ಬಂಗಾಲದಲ್ಲಿರುವ ಈ ಕಾರಖಾನೆಗೆ ೩೨ ಕೋಟಿ ರೂಪಾಯಿಗಳು ವೆಚ್ಚವಾಗಲಿರುವುವು.

ಉಕ್ಕನ್ನು ತಯಾರಿಸಲು ಇದ್ದಲಿನ ಆವಶ್ಯಕತೆಯಿದೆ. ೧೯೬೦ರ ವರೆಗೆ ನಮಗೆ ಒಂದು ಕೋಟಿ ಟನ್ ಇದ್ದಲು ಬೇಕಾಗುವುದು. ಈಗ ನಾವು ಕೇವಲ ೬೦ ಲಕ್ಷ ಟನ್‌ಗಳನ್ನು ಮಾತ್ರ ವರ್ಷಂಪ್ರತಿ

(೧೦ನೇ ಪುಟ ನೋಡಿರಿ)

ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿವೆ. ಮೈಸೂರು ಸರ್ಕಾರದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳಪೂರ್ಣ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆ ಉಪಯುಕ್ತವಾಗುತ್ತದೆ.

ಮೈಸೂರು ಶ್ರೀಗಂಧದ ತೈಲ

ಗೌರ್ನಮೆಂಟ್ ಸ್ಯಾಂಡಲ್‌ವುಡ್ ಆಯಿಲ್ ಫ್ಯಾಕ್ಟರಿ, ಮೈಸೂರು.

ಜನಕಲ್ಯಾಣಕಾರ್ಯಕ್ಕೆ ಜನಮನ್ನಣೆ—

ಶಿವಪೂಜೆಯ ವ್ಯಾಪಕತೆ

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಸೃಷ್ಟಿ, ಪಾಲನೆ ಮತ್ತು ಸಂಹಾರವು ಜೀವನದ ಆಧಾರಭೂತ ತತ್ವಗಳಾಗಿವೆ. ಹಿಂದೂಧರ್ಮದಲ್ಲಿರುವ ತ್ರಿಮೂರ್ತಿ ಕಲ್ಪನೆಯು ಈ ತತ್ವಗಳಲ್ಲಿ ಅಧಾರಿತವಾಗಿವೆ. ಸೃಷ್ಟಿಸಲು ಬ್ರಹ್ಮ, ವಿಷ್ಣು ಪಾಲನೆಗೆ ಮತ್ತು ಈಶ್ವರನು ಸಂಹಾರಕ್ಕೆ ಅಧಿದೇವತೆಗಳಾಗಿದ್ದಾರೆ. ಆದರೂ, ಮಹೇಂದ್ರನು ಇದರೊಂದಿಗೆ ಲೋಕಮಂಗಲ ಮತ್ತು ಕಲ್ಯಾಣಕಾರೀ ಶಕ್ತಿಯ ಪ್ರತೀಕವೆಂದೂ ತಿಳಿಯಲ್ಪಟ್ಟಿದ್ದಾನೆ. ಆದುದರಿಂದಲೇ ಅವನಿಗೆ "ಶಿವ" ಎಂಬ ಹೆಸರು. ಈಶ್ವರನು ಸಮುದ್ರಮಥನಕಾಲದಲ್ಲಿ ಉದ್ಭವಿಸಿದ ಹಾಲಾಹಲ ವಿಷವನ್ನು ಕುಡಿದಂದೇ ಜಗತ್ತು ಆತನ ಲೋಕಕಲ್ಯಾಣಕಾರೀ ರೂಪವನ್ನು ಕಂಡಿತು.

ಶಿವನ ಲೋಕಕಲ್ಯಾಣಕಾರೀ ರೂಪವು ಸರ್ವವಿದಿತವಿದೆ. ಅವನು ತನ್ನ ಶ್ರೇಷ್ಠತೆ, ಮಹಾತ್ಮ್ಯ ಮತ್ತು ಅಸೀಮ ಜನಪ್ರಿಯತೆಗಳ ಬಲದಿಂದ ನಮ್ಮ ದೇಶದ ಏಕತೆಯ ಪ್ರತೀಕವಾಗಿದ್ದಾನೆ. ಹಿಮಾಲಯದಿಂದ ಹಿಂದೂ ಮಹಾಸಾಗರದ ವರೆಗೆ ಹರಡಿದ ವಿಶಾಲ ಭೂಮಿಯಲ್ಲಿ ಅವನ ಪೂಜೆಯು ನಡೆಯುತ್ತಿದೆ. ದೇಶದ ಪ್ರತಿ ಗ್ರಾಮದಲ್ಲಿಯೂ ಒಂದಾದರೂ ಶಿವದೇವಾಲಯವಿರುವುದು. ಹಿಂದೆ, ಸಂಚಾರ ವ್ಯವಸ್ಥೆಗಳು ಅಪರೂಪವಿರುವಾಗಲೂ ಉತ್ತರದ ಗಂಗೋತ್ರಿಯ ಪವಿತ್ರ ಜಲವನ್ನು ದಕ್ಷಿಣದ ರಾಮೇಶ್ವರದ ಶಿವಮಂದಿರದಲ್ಲಿ ಹೊಯ್ಯುವುದು ದೊಡ್ಡ ಹರಕೆಯ ಕಾರ್ಯಕ್ರಮವಾಗಿತ್ತು. ಇಂದು ಭಾಷೆ, ಜಾತಿ ಮತ್ತು ಸಂಪ್ರದಾಯ ಭೇದದ ಕಾರಣದಿಂದ ಉತ್ತರ—ದಕ್ಷಿಣ ಭಾರತಗಳ ನಡುವೆ ವೈಮನಸ್ಸು ಬೆಳೆದು ಬರುತ್ತಿದ್ದರೂ ಶಿವಪೂಜೆಯ ಮಾಧ್ಯಮದಿಂದ ಐಕ್ಯವನ್ನು ಳಿಸುವ ಪ್ರಾಚೀನ ಪರಂಪರೆಯು ಹಿಂದಿನಂತೆಯೇ ಇರುವುದು. ರಾಮೇಶ್ವರದ ಬಗ್ಗೆ ಉತ್ತರ ಭಾರತೀಯರಲ್ಲಿ ಅಭಿಮಾನವಿರುವಂತೆಯೇ ದಕ್ಷಿಣ ಭಾರತೀಯರಲ್ಲಿ ಕಾಶಿಯ ಬಗ್ಗೆ ಗೌರವವಿದೆ. ಅವರ ಹೃದಯಗಳಲ್ಲಿ ಮತಭೇದ, ಕಟುತೆಗಳನ್ನು ತ್ಯಜಿಸಿ ತಮ್ಮ ಬಂಧುಗಳನ್ನು ಆಲಂಗಿಸುವ ಮನೋವೃತ್ತಿಯಿರುತ್ತದೆ.

ಶಿವನು ತನ್ನ ಈ ವಿಶಿಷ್ಟಗುಣಗಳಿಂದಲೇ ದೇವಾಧಿದೇವನೆಂದು ಕರೆಯಲ್ಪಟ್ಟಿದ್ದಾನೆ. ನಮ್ಮ ಧಾರ್ಮಿಕ ಗ್ರಂಥಗಳಲ್ಲಿ ಅವನ ಮಹಿಮೆಯು ಮುಕ್ತ ಕಂಠದಿಂದ ಹಾಡಲ್ಪಟ್ಟಿದೆ.

ಶಿವೋ ಗುರುಃ ಶಿವೋ ದೇವಃ ।
ಶಿವೋ ಬಂಧುಃ ಶರೀರಿಣಾಮ್
ಶಿವಾತ್ಮಾ ಶಿವೋ ಜೀವಃ ।
ಶಿವಾದನ್ಯನ್ನ ಕಿಂಚನ ॥

ಎಂದರೆ, ಶಿವನೇ ಗುರು, ಇಷ್ಟ ದೇವತೆ, ಸಕಲ ಪ್ರಾಣಿಗಳ ಬಂಧು ಮತ್ತು ಆತ್ಮವಾಗಿದ್ದಾನೆ. ಅವನಿಗಿಂತ ಈ ಜಗತ್ತಿನಲ್ಲಿ ಉತ್ತಮವಾದುದಾವುದೂ ಇರುವುದಿಲ್ಲ.

ಶಿವ ಪೂಜೆಯು ಕೇವಲ ನಮ್ಮ ದೇಶದಲ್ಲಿ ಸೀಮಿತವಾಗಿರದೆ, ವಿದೇಶಗಳಲ್ಲಿಯೂ ಹರಡಿದೆ ಎಂಬುದರಿಂದ, ನಮಗೆ ದೇವಾಧಿದೇವ ಮಹಾದೇವನ ವ್ಯಕ್ತಿತ್ವದ ವ್ಯಾಪಕತೆಯೂ ಅವನ ಜನಪ್ರಿಯತೆಯೂ ವ್ಯಕ್ತವಾಗುತ್ತದೆ. ಬೇರೆ ಬೇರೆ ದೇಶಗಳಲ್ಲಿ ದೊರೆಯುವ ಶಿವಮೂರ್ತಿ, ಶಿವಲಿಂಗ ಮೊದಲಾದ ಭಾರತೀಯ ಸಂಸ್ಕೃತಿಯ ಅವಶೇಷಗಳನ್ನು ನೋಡುವಾಗ ಆ ದೇಶಗಳಲ್ಲಿಯೂ ಶಿವಪೂಜೆಯು ಪ್ರಚಾರದಲ್ಲಿತ್ತೆಂದು ತಿಳಿಯುವುದು. ಅಲ್ಲಿ ಶಿವಪೂಜೆಯು ಹೇಗೆ ಆರಂಭವಾಯಿತೆಂಬ ವಿಚಾರದಲ್ಲಿ ಬೇರೆ ಬೇರೆ ಕಥೆಗಳಿದ್ದರೂ ಒಟ್ಟಿನಲ್ಲಿ ಅವು ಆಗಾಗ ಅಲ್ಲಿಗೆ ಧರ್ಮಪ್ರಚಾರ, ಉಪನಿವೇಶ, ವಸಾಹತು ಸ್ಥಾಪನೆ ಮತ್ತು ಅಧ್ಯಯನ ಅಭ್ಯಾಸನಗಳ ಸಂಬಂಧದಲ್ಲಿ ಅಲ್ಲಿಗೆ ಹೋದ ಭಾರತೀಯ ಪ್ರತಿನಿಧಿಗಳಿಂದ ಮೊದಲಾಯಿತೆಂದು ಸಾರುತ್ತವೆ.

ಹೀಗೆ ಶಿವಪೂಜೆಯು ವಿಶ್ವದ ಎಲ್ಲ ದೇಶಗಳಲ್ಲಿ ಪ್ರಸಾರವಾಗಿತ್ತು. ಆದರೂ ಭಾರತದ ನೆರೆಯ ಏಶಿಯಾದ ದೇಶಗಳಲ್ಲಿ ಇದು ವಿಶೇಷ ರೂಪದಿಂದ ಪ್ರಚಾರವಾಯಿತು. ಭಾರತದ ಆಗ್ನೇಯದಲ್ಲಿರುವ ಹಿಂದೇಶಿಯಾ ದ್ವೀಪಸ್ತೋಮವು ಹೆಚ್ಚಾಗಿ ಭಾರತದ ಅಂಗವಾಗಿಯೇ ಇರುತಿತ್ತು. ಆದ್ದರಿಂದ ಅಲ್ಲಿ ಶಿವಪೂಜೆಯು ಪ್ರಚಲಿತವಿತ್ತು. ಇಲ್ಲಿನ ಬಾಲೀ ದ್ವೀಪದಲ್ಲಿ ಭಾರತೀಯ ಜೀವನವನ್ನು ನೋಡುವಲ್ಲಿ ಶಿವಪೂಜೆಯನ್ನೂ ನಾವು ಕಾಣಬಹುದು. ಹಿಂದೇಶಿಯಾದಲ್ಲಿ ದೊರೆತ ಭಾರತೀಯ ಸಂಸ್ಕೃತಿಯ ಅವಶೇಷಗಳಲ್ಲಿ ಅನೇಕ ಶಿವಮೂರ್ತಿ ಹಾಗೂ ಅಂಗಗಳು ದೊರೆತಿವೆ ಕ್ರಿ. ಶ. ೧೮೫೧ರಲ್ಲಿ ಸುಮಾತ್ರಾ ದ್ವೀಪದ ಪಾತಿಕಾಂಗಹಾ ನದಿಯ ದಡದಲ್ಲಿ ಒಂದು ನಂದಿಯ ದೊಡ್ಡ ವಿಗ್ರಹವು ದೊರೆತಿದೆ. ಇದರಿಂದ ಇಲ್ಲಿ ಶಿವಪೂಜೆಯು ನಡೆಯುತಿತ್ತೆಂದೂ ಹೇಳಬಹುದು. ಅಲ್ಲದೆ ಇಲ್ಲಿನ ಲೇಮುತಾಂಗ ನದಿಯ ದಂಡೆಯಲ್ಲಿಯೂ ಒಂದು ಶಿವಮೂರ್ತಿ ಸಿಕ್ಕಿರುತ್ತದೆ.

ಭಗವಂತ ಶಿವನ ಪೂಜೆಯು ಚಂಪಾದ ಪ್ರಾಚೀನ ಧಾರ್ಮಿಕ ಜೀವನದ ಒಂದು ಪ್ರಮುಖ ಅಂಗವಾಗಿತ್ತು. ಇಲ್ಲಿನ ಅರಸರು ಅನೇಕಾನೇಕ ಶಿವಮಂದಿರಗಳನ್ನು ರಚಿಸಿದ್ದರು. ಐದನೆ ಶತಮಾನದಲ್ಲಿ ಇಲ್ಲಿಯ ಭದ್ರವರ್ಮನ್ ಎಂಬ ರಾಜನು ಮಾಯಿಸೌನದಲ್ಲಿ ಇತಿಹಾಸ ಪ್ರಸಿದ್ಧವಾದ ಶಿವಮಂದಿರವೊಂದನ್ನು ಕಟ್ಟಿಸಿದ್ದನು. ಶಿವಮಂದಿರದಲ್ಲಿಯೇ ಬುದ್ಧನ ವಿಗ್ರಹವನ್ನೂ ಕೆಲ ಅರಸರು ಸ್ಥಾಪಿಸಿರುವುದು ಈ ಜನಾಂಗದ ವಿಚಿತ್ರ ಪರಂಪರೆಯನ್ನು ಸೂಚಿಸುತ್ತದೆ. ಇದನ್ನು ಆ ಕಾಲದಲ್ಲಿದ್ದ ಬೇರೆ ಬೇರೆ ಧರ್ಮಗಳ ಸಮನ್ವಯಾತ್ಮಕ ಭಾವನೆಯ ದ್ಯೋತಕವೆನ್ನಬೇಕು. ಮಾಯಿಸೌನದಲ್ಲಿಯ ಒಂದೆಡೆಯಲ್ಲಿ ಅತಿ ಸುಂದರವಾದ ಹಾಗೂ ಕಲಾತ್ಮಕವಾದ ಶಿವನ ತಾಂಡವ ನೃತ್ಯದ ಮೂರ್ತಿಯು ಇರುವುದು. ಶಿವನ ಚರಣಭಾಗದಲ್ಲಿ ನಂದಿಯ ಚಿತ್ರವೂ ಅಕ್ಕ ಪಕ್ಕದಲ್ಲಿ ಸಣ್ಣ ಸಣ್ಣ ಮೂರ್ತಿಗಳೂ ಇವೆ. ಮೇಲ್ಗಡೆ ಯಾವುದೋ ಅಪ್ಸರೆಯ ಅಥವಾ ಗಾಂಧರ್ವೆಯ ಚಿತ್ರವಿದೆ. ಕಂಬೋಡಿಯಾದಲ್ಲಿ ಭದ್ರೇಶ್ವರನೆಂಬ ಹೆಸರಿನ ಶಿವ ದೇವಾಲಯವಿದ್ದು ಇದರ ಸಂಬಂಧವು ಅಗಸ್ತ್ಯಮುನಿಯೊಡನೆಹೊಂದಿಕೊಂಡಿದೆಯೆನ್ನುತ್ತಾರೆ. ಮುನಿದೇವನು ಈ ದೇವನ ಆರಾಧನೆಯನ್ನು ಮಾಡಿಯೇ ಪರಮಗತಿಯನ್ನು ಹೊಂದಿದನೆಂದು ಹೇಳುತ್ತಾರೆ.

ಅಫಘಾನಿಸ್ಥಾನದಲ್ಲಿ ಹಿಂದೂ ರಾಜ್ಯವು ಸ್ಥಾಪಿಸಲ್ಪಟ್ಟಿತ್ತೆಂದು ಹೇಳುವುದು ಐತಿಹಾಸಿಕ ಸತ್ಯವಾಗಿದೆ. ಗಾಂಧಾರ ಅಥವಾ ಕಾಂದಾಹಾರವು ಭಾರತದ ೧೬ ಜನಪದಗಳಲ್ಲಿ ಒಂದಾಗಿತ್ತೆಂಬುದೂ ಚಿರಸತ್ಯವಾಗಿದೆ. ಹಾಗಿರುವಾಗ ಇಲ್ಲಿಯೂ ಶಿವಪೂಜೆಯು ಹರಡಿದ್ದರೆ ಅದರಲ್ಲಿ ಆಶ್ಚರ್ಯದ ಸಂಗತಿಯೇನಿಲ್ಲ. ಅಫಘಾನಿಸ್ಥಾನದಿಂದ ಯಾತ್ರೆ ಮುಗಿಸಿ ಬಂದಿರುವ ಒಬ್ಬ ಭಾರತೀಯನು ಬರೆದಿದ್ದಾನೆ: "ಕಾಬೂಲಿನಲ್ಲಿ ಉಳಿದುಕೊಂಡು ಹನುಮಾನ್‌ಗಡೀಯನ್ನು ನೋಡಹೋದೆವು. ಕಾಂದಾಹಾರಕ್ಕೆ ತೆರಳಿ ಅಲ್ಲಿ ಶಿವರಾತ್ರಿಯನ್ನು ನೋಡಿದೆವು. ಇಂತಹ ಶಿವರಾತ್ರಿಯನ್ನು ನಾವು ಕಾಶಿಯಲ್ಲೂ ನೋಡಿಲ್ಲ. ಆಫಘಾನೀ ಹಿಂದೂಜನರು ಅಂದು ಘೋಷಿಯನ್ನಿಟ್ಟಿದ್ದರು. ರಾತ್ರಿ ಇಡಿ ಅವರೆಲ್ಲರೂ ಶಿವಲಿಂಗದ ಸುತ್ತಲೂ ಕುಳಿತು ಜಾಗರಣೆ ಮಾಡುತಿದ್ದರು". ಈ ಉಲ್ಲೇಖದಿಂದ ಅಲ್ಲಿ ಇಂದಿಗೂ ಶಿವಪೂಜೆ ನಡೆಯುತ್ತದೆ ಎಂದು ತಿಳಿಯಬಹುದು.

ಪ್ರಾಚೀನ ಈಜಿಪ್ಟ ಧರ್ಮ ಮತ್ತು ಹಿಂದೂ ಧರ್ಮಗಳಲ್ಲಿರುವ ಅದ್ಭುತ ಸಾಮ್ಯವು ಈ ಎರಡು ದೇಶಗಳ ನಡುವೆ ಪ್ರಾಚೀನ ಕಾಲದಿಂದಲೂ ನಿಕಟ ಸಂಪರ್ಕವಿದ್ದುದನ್ನು ಸಾರುತ್ತವೆ. ಐಗುಪ್ತ ಧರ್ಮಕಥೆಗಳಿಂದ ಅಲ್ಲಿ ಶಿವ ಮತ್ತು ಗಣಪತಿ ಪೂಜೆಗಳು ಪ್ರಚಾರದಲ್ಲಿದ್ದುವೆಂದು ತಿಳಿಯುತ್ತದೆ. ಇಲ್ಲಿನ ಒಂದು ಧಾರ್ಮಿಕ ಕಥೆಯು ಶಿವನಿಂದ ಗಣಪತಿಯ ತಲೆಯು ಕಡಿಯಲ್ಪಟ್ಟು ಮುಂದೆ ಆನೆಯ ಮುಖವನ್ನು ಜೋಡಿಸಿದ ಭಾರತೀಯ ಕಥೆಯನ್ನು ಸಂಪೂರ್ಣ ಹೋಲುತ್ತದೆ. ಶಕ್ತಿಯು ೫೧ ಪೀಠವನ್ನು ನಿರ್ಮಿಸಿದ ಒಂದು ಕಥೆಯನ್ನು ಅಕ್ಷಯ ಮತ್ತೊಂದು ಕಥೆ ಅನುಸರಿಸಿದೆ. ಅಲ್ಲದೇ ಐಗುಪ್ತ ಸಾಹಿತ್ಯದಲ್ಲಿಯೂ ಶಿವಲಿಂಗ ಮಹಿಮೆಯ ಉಲ್ಲೇಖಗಳಿವೆ. ಇರಾನದಲ್ಲಿ ಇಂದಿಗೂ ಒಂದು ಶಿವಮಂದಿರವಿದ್ದು ಅದು ಅಲ್ಲಿಯೂ ಶಿವಪೂಜೆ ನಡೆಯುತಿದ್ದುದನ್ನು ಉದ್ಘೋಷಿಸುತ್ತದೆ.

ಅಮೇರಿಕೆಯ ಸಂಬಂಧದಲ್ಲಿ ಈ ದೇಶದ ಶೋಧನೆಯು ಹದಿನೈದನೆಯ ಶತಮಾನದಲ್ಲಿ ನಡೆದಿದ್ದು ಅದು ಕೇವಲ ೪-೫ ನೂರು ವರ್ಷಗಳ ಇತಿಹಾಸವನ್ನು ಮಾತ್ರ ಹೊಂದಿದೆಯೆಂದು ತಿಳಿಯುವುದು ಸೇಕಡಾ ನೂರರಷ್ಟು ತಪ್ಪು. ವಸ್ತುತಃ ಅಮೇರಿಕೆಯ ಇತಿಹಾಸ ಪ್ರಾಗೈತಿಹಾಸಿಕ ಕಾಲೀನವಾಗಿದೆ. ಇದರ ಕುರುಹಾಗಿ ಅಲ್ಲಿ ಪ್ರಾಚೀನ ಭಾರತೀಯ ಸಂಸ್ಕೃತಿಯನ್ನು ಹೋಲುವ ಆಶ್ಚರ್ಯಜನಕ ಅವಶೇಷಗಳು ದೊರೆಯುತ್ತವೆ. ಹಾಗಿರುವಾಗ ಇಲ್ಲಿಯೂ ಮಹಾದೇವಾಧಿದೇವ ಶಿವನ ಆರಾಧನೆ ನಡೆದಿದ್ದರೆ ವಿಸ್ಮಯವೇಕೆ? ಈ ಸಂಬಂಧದಲ್ಲಿ ಶ್ರೀ ಚಮನಲಾಲರು ತನ್ನ "ಹಿಂದೂ ಅಮೇರಿಕಾ" ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:" ಹಿಂದೂ ದೇವತೆಗಳಾದ ಶಿವ, ಇಂದ್ರ, ಗಣೇಶ, ಯಮ ಮತ್ತು ನಾಗರು (ಅಮೇರಿಕದ) ಸಂಪೂರ್ಣ ಮಹಾ ದ್ವೀಪದಲ್ಲಿ ಆರಾಧಿಸಲ್ಪಡುತಿದ್ದರು. (ಕೆಲವು ಸ್ಥಳಗಳಲ್ಲಿ ಇಂದಿಗೂ ಪೂಜಿಸಲ್ಪಡುತ್ತಾರೆ.) ಮೆಕ್ಸಿಕೋವಿನ ಕೋಪನ ಮಂದಿರದಲ್ಲಿ ಒಂದು ಗಣಪತಿಯ ಮೂರ್ತಿಯಿತ್ತು. ವಿಶೇಷವಾಗಿ ಮೂಲತಃ ಭಾರತೀಯ ನಿವಾಸಿಗಳೆಂದು ಹೇಳಲ್ಪಡುವ 'ಮಾಯಾ' ಜನಾಂಗದವರು ಅನ್ಯ ಭಾರತೀಯ ದೇವತೆಗಳೊಡನೆ ಶಿವ ಮತ್ತು ಗಣೇಶರ ಪೂಜೆಯನ್ನು ಮಾಡುತ್ತಿದ್ದರು." ಇದಕ್ಕಿಂತ ಹೆಚ್ಚಿನ ಪ್ರಮಾಣ ಬೇರೇನು ಬೇಕು? (ಈ ಸಂಬಂಧದ ಹೆಚ್ಚಿನ ವಿವರಗಳನ್ನು ನವಯುಗದ ೧೨-೯-೫೭ ಸಂಚಿಕೆಯಲ್ಲಿ ಪ್ರಕಟವಾದ "ಕೊಲಂಬಸನು ಅಮೇರಿಕವನ್ನು ಶೋಧಿಸಲಿಲ್ಲ!"ವೆಂಬ ಲೇಖನದಲ್ಲಿ ತಿಳಿಯಬಹುದು—ಸಂ. ನ.)

ಈ ರೀತಿಯಲ್ಲಿ ನಾವು ಮಹಾದೇವನೆಂದು ಪೂಜಿಸುವ ಶಿವನನ್ನು ಕೇವಲ ನಾವು ಮಾತ್ರ ಆರಾಧಿಸುವುದಲ್ಲ, ಜಗತ್ತಿನ ಮೂಲೆಮೂಲೆಗಳಲ್ಲಿಯೂ ಜನರು

ಸಿಂಡಿಕೇಟ್ ಬೇಂಕಿನ
ಗ್ರಾಹಕರ ಅನುಕೂಲತೆಯ ಅಭಿವೃದ್ಧಿಗಾಗಿ
ಮಂಗಳೂರು ಬಂದರದಲ್ಲಿ
ಹೊಸ ಶಾಖೆಯು
ಇಂದು ತೆರೆಯಲ್ಪಡುವುದು.

ಶೀಘ್ರದಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು

1) **ಬೆಂಗಳೂರು** (ಶೇಷಾದ್ರಿಪುರಂ) 5) **ಬೆಳಗಾವ್** (ಕೇಂಪ್)
2) **ಬೆಂಗಳೂರು** (ಚಿಕ್ಕಪೇಟೆ) 6) **ಕೊಪ್ಪ** (ಚಿಕ್ಕಮಗಳೂರು ಜಿಲ್ಲೆ)
3) **ಬೆಂಗಳೂರು**(ಕೆಂಟೋನ್‌ಮೆಂಟ್) 7) **ಹುನಗುಂದ** (ಬಿಜಾಪುರ ಜಿಲ್ಲೆ)
4) **ಬೆಳಗಾವ್** (ಶಾಪುರ) 8) **ತಿಪ್ಟೂರು** (ತುಮ್ಕೂರು ಜಿಲ್ಲೆ)
9) **ಬೊಂಬಾಯಿ** (ಮಾಂಡ್ವಿ)

ನಮ್ಮ 105ನೇ ಬರೋಡ ಶಾಖೆಯು ತಾ. 9-2-58ರಂದು ತೆರೆಯಲ್ಪಟ್ಟಿತು.

ಟಿ. ಎ. ಪೈ, ಬಿ ಕಾಂ.(ಬೊಂ.) ಎ. ಐ. ಐ. ಬಿ. ಯಫ್. ಆರ್ ಇ. ಯಸ್. (ಲಂಡನ್) ಜನರಲ್ ಮೆನೇಜರ್.
ಡಾ। ಟಿ. ಮಾಧವ ಪೈ, ಎಂ. ಬಿ. & ಬಿ ಎಸ್. ಮೆನೇಜಿಂಗ್ ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಉಡುಪಿ.
The Canara Industrial & Banking Syndicate Ltd., Udipi.

ಅಮೆರಿಕೆಯವರು ಭಾರತವನ್ನು ಹೇಗೆ ನೋಡುತ್ತಾರೆ?

ಭಾರತದಲ್ಲಿ ವಿಜ್ಞಾನಕ್ಕೆ ಸ್ಥಾನವಿದೆ

ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದಲ್ಲಿ ಎರಡು ವರ್ಷಗಳ ಕಾಲ ಇದ್ದ ಅಮೆರಿಕದ ರಾಸಾಯನಿಕ ಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ ರಾಬರ್ಟ್ ಡಿ ವೋಲ್ಡ್ ಮತ್ತು ರಾಸಾಯನಿಕ ಶಾಸ್ತ್ರದ ಉಪನ್ಯಾಸಿಕೆಯರಾದ ಅವರ ಪತ್ನಿ ಡಾ ಮಾರ್ಜೋರಿನ್ ವೋಲ್ಡ್ ಇವರಿಬ್ಬರೂ ಅಮೆರಿಕದ ತಾಂತ್ರಿಕ ಸಹಕಾರೀ ನಿಯೋಗದ ಕಾರ್ಯಕ್ರಮದ ಮೇರೆಗೆ ಬೆಂಗಳೂರಿನಲ್ಲಿ ದುಡಿದ ನಂತರ ಈಗ ಲಾಸ್ ಎಂಜಲೀಸಿನಲ್ಲಿರುವ ದಕ್ಷಿಣ ಕೆಲಿಫೋರ್ನಿಯಾ ವಿಶ್ವವಿದ್ಯಾಲಯದ ಫ್ಯಾಕಲ್ಟಿಯಲ್ಲಿನ ತಮ್ಮ ಸ್ಥಾಯಿ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ ಭಾರತೀಯ ವಿಜ್ಞಾನ ಮಂದಿರದಲ್ಲಿ ಮೂಲ ರಾಸಾಯನಿಕ ಶಾಸ್ತ್ರಕ್ಕೆ ಸಂಬಂಧಿಸಿದ ಹೊಸ ಪಾಠ್ಯಕ್ರಮವನ್ನು ಸಿದ್ಧಗೊಳಿಸುವಲ್ಲಿ ಈ ದಂಪತಿಗಳು ನೆರವಿತ್ತರು ಇವರು ಭಾರತ, ವಿಜ್ಞಾನ ಹಾಗೂ ವಿಜ್ಞಾನಿಗಳಿಗೆ ಎತ್ತರದ ಅಂಕವನ್ನು ಕೊಟ್ಟಿವೆ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ

ಭಾರತೀಯ ನಾಯಕರ ಆಶೆ, ಭರವಸೆಗಳೆಲ್ಲ ಭಾರತೀಯ ವಿಜ್ಞಾನಿಗಳ ಸಾಮರ್ಥ್ಯದ ಮೇಲೂ ಜನತೆಯ ಜೀವನವನ್ನು ಉತ್ತಮೀಕರಿಸುವಸಲುವಾಗಿ ವಿಜ್ಞಾನಿಗಳು ಆಧುನಿಕ ವಿಜ್ಞಾನದ ವಿಧಾನಗಳನ್ನು ಭಾರತೀಯ ಕೈಗಾರಿಕೆಗಳೊಡನೆ ಮತ್ತು ವ್ಯವಸಾಯ ಕ್ಷೇತ್ರದೊಡನೆ ಸಮಾವಾಯಗೊಳಿಸುವುದರ ಮೇಲೂ ಬಲವಾಗಿ ಆಧಾರಿತವಾಗಿವೆ ಎಂದೀ ದಂಪತಿಗಳು ನುಡಿದಿದ್ದಾರೆ.

ಭಾರತದ ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರೂರವರನ್ನು ಡಾ ವೋಲ್ಡರವರು ಜನಮನವನ್ನು ಒಲಿಸಿಕೊಳ್ಳುವುದರಲ್ಲಿ ಇವರು ಸಿದ್ಧಹಸ್ತರು ಎಂಬುದಾಗಿ ವಿವರಿಸಿದ್ದಾರೆ ತಮ್ಮ ವಾದಾಂಶಗಳನ್ನು ಅಂಗೀಕರಿಸುವಂತೆ ಮಾಡಲು ಭಾರತೀಯ ಮುಂದಾಳುಗಳು ಭಾವನಾತ್ಮಕ ಪ್ರೇರೇಪಣೆಯ ವಿಧಾನವನ್ನು ಬಳಸುತ್ತಾರೆ, ತಮ್ಮ ರಾಷ್ಟ್ರವನ್ನು ಸರಿಯಾದ ಮಾರ್ಗದಲ್ಲಿ ನಡೆಸುತಿದ್ದಾರೆ ಎಂದವರು ಉದ್ಗರಿಸಿದರು.

ತಾವು ನೀಡಿದ ನೆರವು ಮತ್ತು ತಾವು ಮಾಡಿದ ಪ್ರಯತ್ನಗಳ ಫಲರೂಪವಾಗಿ ಬೆಂಗಳೂರಿನ ವಿಜ್ಞಾನ ಮಂದಿರದವರು ಪುಸ್ತಕಜ್ಞಾನ ಸಂಗ್ರಹದ ಬದಲು ಸಮಸ್ಯಾಪೂರಣದ ಕಾರ್ಯನೀತಿಯನ್ನು ಅನುಸರಿಸುವ ಮನೋಧಾರಣೆಯನ್ನು ಬೆಳೆಸಿಕೊಂಡಿದ್ದಾರೆಂದೂ ಇದರಿಂದ ತಮಗೆ ತೃಪ್ತಿಯೊದಗಿತೆಂದೂ ಈ ಪ್ರಾಧ್ಯಾಪಕರು ನುಡಿದರು.

ತಾವು ಭಾರತೀಯ ಮಾದ ಈ ಸಂಸ್ಥೆಗೆ ನೀಡಿದ ನೆರವು ಸ್ವತಂತ್ರವಾದುದು, ಸಂಸ್ಥೆಯವರೂ ಅದನ್ನು ಅದೇ ರೀತಿಯಲ್ಲಿ ಸ್ವೀಕರಿಸಿದ್ದಾರೆ. ಪ್ರತಿಯಾಗಿ ತಮಗೆ ಭಾರತೀಯ ಕಾರ್ಯಕರ್ತರ ಕಾರ್ಯಪ್ರವೃತ್ತಿ ಮತ್ತು ವಿದ್ಯಾರ್ಥಿಗಳ ಸ್ನೇಹ, ಪರಸ್ಪರ ಅರಿವು ಲಭ್ಯವಾಯಿತು ಇದು ತಮಗೆ ಅತ್ಯಮೌಲ್ಯವಾಗಿವೆ ಎಂದವರು ವ್ಯಕ್ತಪಡಿಸಿದರು

ಪರಸ್ಪರ ತಿಳುವಳಿಕೆಯನ್ನು ಹೆಚ್ಚಿಸಲು ಮತ್ತು ವಿಶ್ವದ ಬಿಕ್ಕಟ್ಟಿನ ನಿವಾರಣೆಗೆ ಜನಮಟ್ಟದ ಪರಸ್ಪರ ಅರಿವು ಮುಖ್ಯವೆಂದು ಈ ಅಮೇರಿಕೆಯ ಪ್ರಾಧ್ಯಾಪಕರು ನಂಬುತ್ತಾರೆ ಈ ಸಂದರ್ಭದಲ್ಲಿ ತಮ್ಮೊಂದಿಗೆ ಸಹಾಯಕ ಕಾರ್ಯಕರ್ತರಾಗಿದ್ದ ಭಾರತೀಯರೊಬ್ಬರ ಹೇಳಿಕೆಗೆ ಪ್ರಾಧಾನ್ಯವಿತ್ತಿದ್ದಾರೆ "ನಾವು ಈಗ ಮಾಡಿದಂತೆ ಇನ್ನೂ ಹೆಚ್ಚು ಮಂದಿ ಅಮೆರಿಕನ್ನರು ಮತ್ತು ಭಾರತೀಯರು ಕಾರ್ಯದಲ್ಲೂ ಕ್ರೀಡೆಯಲ್ಲೂ ಒಟ್ಟಾಗಿ ಸೇರಿದರೆ ನಮ್ಮ ನಡುವೆ ಈಗಿರುವ ಘರ್ಷಣೆಯ ಕಾರಣದ ಬಹುಭಾಗವನ್ನು ನಿವಾರಿಸಬಹುದೆಂದು ನಾನು ದೃಢವಾಗಿ ನಂಬಿದ್ದೇನೆ" ಎಂದು ಈ ಭಾರತೀಯ ವಿಜ್ಞಾನಿಯ ಹೇಳಿಕೆಯಿದೆ

ಶೀಘ್ರಗತಿಯಿಂದ ಬದಲಾವಣೆಗಳನ್ನು ಮಾಡುವ ಕ್ರಮದಲ್ಲಿ ಭಾರತ ವಿದ್ಯುಕ್ತವಾಗಿದೆ ರಾಷ್ಟ್ರದಾದ್ಯಂತ ಮೊದಲ ಪ್ರಯೋಗದ ದಿನಗಳ ಉತ್ಸಾಹ ವ್ಯಕ್ತವಾಗುತ್ತಿದೆ—ಎಂದು ಈ ದಂಪತಿಗಳು ಅಭಿಪ್ರಾಯಪಟ್ಟಿದ್ದಾರೆ ಚಿಂದಿಯ ಬಟ್ಟೆಗಳ, ಹಸಿದ ಹೊಟ್ಟೆಯ, ಕಾಯಿಲೆ ಕಸಾರಿಯ ಕೆಲವೊಮ್ಮೆ ಅಂಗವಿಕಲರಾದ ಮಕ್ಕಳು ಹಾದಿ ಬೀದಿಗಳಲ್ಲಿ ಬೇಡುವ ದೃಶ್ಯವನ್ನು ಸಹಿಸುವುದು ತಮ್ಮಿಂದ ಅಸಾಧ್ಯವಾಯಿತೆಂದು ಅವರು ಭಾರತೀಯ ದರಿದ್ರತೆಯ ಬಗ್ಗೆ ದುಃಖಿಸಿದರು.

ಈ ದಂಪತಿಗಳು ಬೆಂಗಳೂರಿನಲ್ಲಿ ಎರಡು ವರ್ಷಗಳ ಕಾಲವಿದ್ದಾಗ ಅವರ ಮೂರು ಮಕ್ಕಳು ಬೆಂಗಳೂರಿನ ಶಾಲೆಗಳಲ್ಲಿ ಓದಿದರು ತಮ್ಮ ತಂದೆ ತಾಯಿಗಳಂತೆಯೇ ಅವರೂ ಸಮಾಜ ಜೀವನದಲ್ಲಿ ಭಾಗವಹಿಸಿದರು ಭಾರತದಲ್ಲಿರುವವರೆಗೆ ಶ್ರೀಮತಿ ವೋಲ್ಡರು ಸೀರೆಯುಟ್ಟಿದ್ದರು. ಭಾರತೀಯ ವಿಜ್ಞಾನ ಮಂದಿರದ ಎಲ್ಲ ಕಾರ್ಯಕಲಾಪಗಳಲ್ಲೂ ಭಾಗವಹಿಸಿದ್ದರು ಅಚರಣೆಯಲ್ಲಿಯೂ ವೋಲ್ಡ್ ಕುಟುಂಬ ಭಾರತದಲ್ಲಿ ಅಮೆರಿಕೆಯ ಆದರ್ಶ ಕುಟುಂಬವಾಗಿ ಬೆಳೆಯಿತು

ಅವನ ಶ್ರೇಷ್ಠತೆ ಮತ್ತು ಮಹತ್ವಿಕೆಯನ್ನು ಒಪ್ಪಿಕೊಂಡು ಅವನಿಗೆ ತಮ್ಮ ಧಾರ್ಮಿಕ ಜೀವನದಲ್ಲಿ ಮಹತ್ವಪೂರ್ಣ ಸ್ಥಾನವನ್ನು ಕಲ್ಪಿಸಿಕೊಟ್ಟಿದ್ದಾರೆ ಎಂಬುದು ನಿಶ್ಚಿತ ಅದುದರಿಂದ "ಸತ್ಯಂ ಶಿವಂ ಸುಂದರಂ" ಆದ ಮಹಾದೇವನು ಜನತೆಯ ನರನಾಡಿಯಲ್ಲಿ ಉತ್ಸಾಹವನ್ನೂ ಶಕ್ತಿಯನ್ನೂ ಮಾನವತೆಯನ್ನೂ ಚಿಮ್ಮಿಹೆಂಸಲಿ.

(ಆಧಾರ: ನವಭಾರತ ಟಾಯಮ್ಸ್)

ಸ್ವಾಮಿ ಶಿವಾನಂದರ ವಾಣಿ

ಯಾರು ಸಾಧುವೆನ್ನಿಸುವನು?

ಅನು ಭದ್ರಗಿರಿ ಕೇಶವ ಪೈ, B.A.

(1) ಫಲಾಪೇಕ್ಷೆಯ ಪ್ರಾಪಂಚಿಕ ಕರ್ಮಗಳನ್ನು ತ್ಯಜಿಸಿದವನೂ, ತಾನು ಬ್ರಹ್ಮನೆಂಬ ಹಾಗೂ ಪ್ರಪಂಚವು ನಿಜವಾದುದಲ್ಲವೆಂಬ ನಿಶ್ಚಯಜ್ಞಾನ ಉಳ್ಳವನೇ ಸಾಧು

(2) ಯಾರಲ್ಲಿ ಸತ್ಯ, ಕ್ಷಮೆ, ಉತ್ತಮ ನಡತೆ, ಅಹಿಂಸೆ, ಕರುಣೆ, ಪ್ರೇಮ, ನಿರಹಂಕಾರ, ವ್ಯಾಮೋಹರಹಿತತೆ, ಆನಂದ ಮತ್ತು ಶಾಂತಿಗಳಿರುವುವೋ ಆತನೋರ್ವನೇ ಸಂತನೆನ್ನಿಸುವನು.

(3) ನಿರ್ಭಯ, ತಾಳ್ಮೆ, ವಿನಯ ಮತ್ತಿತರ ಗುಣಗಳು ತನ್ನುಚ್ಛಸ್ಥಿತಿಯಲ್ಲಿ ಯಾವುದೇ ಸ್ವಪ್ರಯತ್ನಗಳಿಲ್ಲದೆ ಓರ್ವ ಸಾಧುವಿನಲ್ಲಿ ಇತ್ತವೆ ಇವುಗಳನ್ನಾತನು ನಿಯಮವೆಂಬುದಾಗಿ ಸಾಧಿಸಬೇಕಾದ್ದಿಲ್ಲ

(4) ಸಂತನ ಸ್ಥಿತಿಯು ಆಳತೆಯನ್ನು ಮೀರಿದುದು ನಿನ್ನ ಬಲಿಯದ ಸಾಮಾನ್ಯ ಬುದ್ಧಿಯಿಂದ ಆತನನ್ನು ಪರೀಕ್ಷಿಸದಿರು ನಿನ್ನ ಅಜ್ಞಾನದ ಅನರ್ಥವಾದ [illegible] ಆತನ [illegible]ನ್ನಳೆಯದಿರು

(5) ಯೋಗಿಯು ಸಾಮಾನ್ಯವಾಗಿ ನಿರ್ಭಯನೂ, ತೃಪ್ತನೂ, ಆಶಾರಹಿತನೂ, ನಿರಹಂಕಾರಿಯೂ, ದುರ್ಗುಣಗಳಿಲ್ಲದವನೂ ಆಗಿರುತ್ತಾನೆ

(6) ಸಂತ-ಯಾ-ಸಾಧುವಿಗೆ ದಿವ್ಯ ಜ್ಞಾನವೂ ನೇರ-ಅಧವಾ-ತೀವ್ರ ದೈವ ಸಾಕ್ಷಾತ್ಕಾರವೂ, ಈ ತನಕ ತಾನು ಕಾಣದ, ಕೇಳದವುಗಳ ಜ್ಞಾನವೂ ಇರುತ್ತದೆ

(7) ಸಾಧುವು ಉಚ್ಚ ಅರ್ಥದಲ್ಲಿ ಧಾರ್ಮಿಕನೂ, ನಿಷ್ಕಳಂಕನೂ ಆಗಿರುತ್ತಾನೆ

(8) ಸಂತನು-ಯಾ-ಸಾಧುವು ಸಾವಿನಿಂದ ಬಿಡುಗಡೆಗೊಂಡವನು. ಅವಿನಾಶಿಯೊಂದಿಗೆ ಆತನ ಐಕ್ಯವಾದವನು

(9) ಗರ್ವ ಮತ್ತು ಮೋಹದಿಂದ ಸಾಧುವು ಮುಕ್ತನಾಗಿರುತ್ತಾನೆ

(10) ಮಂತ್ರ ದೃಷ್ಟಾರನು ಯಾ-ಯೋಗಿಯು ಶಾಂತಿಮೂರ್ತಿಯವನು ಆತನು ಗೌರವಾನ್ವಿತನಾಗಿ ಬಾಳುವವನು

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಬರೆದವರು- ಎಮ್ ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತವೆ ಕಾಶ್ಮೀರ.
ನೀತಿಯ ಅವಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.
ಬೆಲೆ- ಎಂಟಾಣೆ ಮಾತ್ರ. ಟ. ಪ. ಪ್ರತ್ಯೇಕ.
ನವಯುಗ ಪ್ರೆಸ್ ಉಡುಪಿ

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೦-೨-'೫೮	೨೪

ಕೆಟ್ಟ ಮೇಲೆ ಬುದ್ಧಿ

ಕಳೆದ ವಾರ ಭಾರತದ ಕೋಟಿಗಟ್ಟಲೆಯ ಜನರು ಮೈಯೆಲ್ಲಾ ಕಿವಿಯಾಗಿ ಆಲಿಸುತ್ತಿದ್ದ ಮುಂಧ್ರಾ ಪ್ರಕರಣವು ಕೊನೆಗೊಂಡಿತು. ಭಾರತೀಯ ಜೀವವಿಮಾ ಮಂಡಳದ ಬಂಡವಾಳವನ್ನು ಅಸ್ಥಿರಸ್ಥಿತಿಯಲ್ಲಿದ್ದ ಮುಂಧ್ರಾ ಕಂಪೆನಿಗಳ ಪಾಲು ಬಂಡವಾಳದಲ್ಲಿ ವಿನಿಯೋಗಿಸಿದ ಬಗ್ಗೆ ಭಾರತ ಸರಕಾರವು ವಿಚಾರಣೆ ನಡೆಸಲು ನ್ಯಾಯಮೂರ್ತಿ ಛಗಲಾರವರನ್ನು ನೇಮಿಸಿತ್ತು. ಈ ಸಮಿತಿಯು ಹಲವಾರು ಸಾಕ್ಷ್ಯಗಳನ್ನು ಸ್ವೀಕರಿಸಿ ತನ್ನ ವರದಿಯನ್ನು ಬಹಳ ಪ್ರಯಾಸದಿಂದಲೇ ಎನ್ನುವಂತೆ ಒಪ್ಪಿಸಿದೆ. ಇದರ ಪರಿಣಾಮರೂಪದಲ್ಲಿ ಈ ಮಹಾಪರಾಧಕ್ಕೆ ಘಟನಾತ್ಮಕವಾಗಿ ಅರ್ಥಮಂತ್ರಿ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರೇ ಹೊಣೆ ಎಂದು ನಿರ್ಧಾರವಾಗಿ ಅವರು ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕಾಗಿ ಬಂತು. ಅಲ್ಲದೇ ಅವರ ತ್ಯಾಗಪತ್ರವನ್ನು ಸ್ವೀಕರಿಸಿ ಅವರನ್ನು ಮುಕ್ತರನ್ನಾಗಿಯೂ ಮಾಡಲಾಗಿದೆ.

ಈ ಪ್ರಕರಣದಲ್ಲಿ ಎದ್ದು ತೋರುತ್ತಿರುವ ದೋಷವೆಂದರೆ, ಅಸ್ಥಿರ ಬುದ್ಧಿಯ ಸಂಸ್ಥೆಗಳಲ್ಲಿ ಹಿಂದೆ ಮುಂದೆ ನೋಡದೆ ಪಾಲಿಸಿದಾರರ ಹಣವನ್ನು ಅಷ್ಟೊಂದು ಹೆಚ್ಚಾಗಿ ತೊಡಗಿಸಿದುದು. ಭಾರತ ಸರಕಾರವು ರಾಷ್ಟ್ರದಲ್ಲಿರುವ ವಿಮಾ ಕಂಪೆನಿಗಳು ತಮ್ಮ ಬಂಡವಾಳವನ್ನು ನಿರುಪಯೋಗಿ ಮತ್ತು ನಷ್ಟದಾಯಕವಾದ ಕಂಪೆನಿಗಳ ಪಾಲು ಬಂಡವಾಳದಲ್ಲಿ ತೊಡಗಿಸಿ, ಲಾಭಾಂಶದಲ್ಲಿ ನಿಜವಾಗಿ ಭಾಗಿಗಳಾಗಬೇಕಾದ ಪಾಲಿಸಿದಾರರಿಗೆ ವಿವಂಚನೆಯನ್ನೂ ನಷ್ಟವನ್ನೂ ಹುಟ್ಟಿಸುವುವೆಂದು ಅವೆಲ್ಲವನ್ನೂ ರಾಷ್ಟ್ರೀಕರಿಸಿದೆ—ಆದೂ ಯಾರಿಗೂ ಗುಟ್ಟು ತಿಳಿಯದಂತೆ! ಹಾಗಿರುವಾಗ, ಪಾಲಿಸಿದಾರರ ಹಿತರಕ್ಷಣೆಯನ್ನು ಮಾಡುವ ಸ್ವಾಯತ್ತ ಸಂಸ್ಥೆಯಾದ ಈ ಜೀವವಿಮಾ ಕಾರ್ಪೊರೇಶನಿನ ವ್ಯವಹಾರದಲ್ಲಿ ಭಾರತೀಯ ಅರ್ಥಮಂತ್ರಿಗಳು ನಗ್ನ ದೇಶದಲ್ಲಿ ದುರ್ಬಲವೆಂದು ಬಲವಾಗಿ ನಂಬಲಾದ ಕಂಪೆನಿಗಳಲ್ಲಿ ಹಣ ತೊಡಗಿಸುವಲ್ಲಿ ಆಸಕ್ತಿಯನ್ನು ತೋರಿ ಅಂತೆ ನಡೆಯಲು ಅನುಮತಿ (ಮೌನ!) ಯನ್ನಿತ್ತುದನ್ನು ನೋಡುವಾಗ, ಅದರೊಳಗಿನ ಗುಟ್ಟು ಬೇರೆಯೇ ಇರಬೇಕೆಂದು ಜನತೆ ತಿಳಿಯಬಹುದು. ಆದರೆ, ಅದು ಇದುವರೆಗೂ ವ್ಯಕ್ತವಾಗಿಲ್ಲವಷ್ಟೆ.

ಶ್ರೀ ಟಿ. ಟಿ. ಕೆ. ಯವರು ತಮ್ಮ ಸಮರ್ಥನೆಗಾಗಿ ಹೇಳಿದ ಮಾತೆಂದರೆ, ಶೇರ ಮಾರುಕಟ್ಟೆಯಲ್ಲಿ ಸ್ಥಿಮಿತವನ್ನುಂಟು ಮಾಡಲು ಈ ರೀತಿ ಮಾಡುವ ಕಾರ್ಯವನ್ನು ಪರ್ಯಾಲೋಚಿಸಲಾಯಿತೆಂದು. ಆದರೆ, ವಿಚಾರಣೆ ನಡೆಸಿದ ಛಗಲಾ ತಮ್ಮ ವರದಿಯಲ್ಲಿ ಆ ಸಮಯದಲ್ಲಿ ಅಷ್ಟೊಂದು ವಿವಂಚನೆಯು ಮಾರುಕಟ್ಟೆಯಲ್ಲಿದ್ದಿಲ್ಲವೆಂದು ಹೇಳಿದ್ದಾರೆ! ಹಾಗಿರುವಾಗ, ಅರ್ಥ ಮಂತ್ರಿ—ನ್ಯಾಯ ಮೂರ್ತಿಯವರ ಅಭಿಪ್ರಾಯಗಳು ಅಜಗಜಾಂತರವಿದೆ! ಶ್ರೀ ಟಿ. ಟಿ. ಕೆ. ಯವರೂ ತಮ್ಮ ವಿಚಾರಣೆಯ ವೇಳೆ ಸಮರ್ಪಕವಾದ ಉತ್ತರವನ್ನು ಕೊಡದಿರುವುದನ್ನು ನೋಡುವಾಗ, ಈ ಸಮಯದಲ್ಲಿಯೇ ತಮ್ಮ ನಡತೆಯ ಬಗ್ಗೆ ಅವರಲ್ಲಿ ಸಂದೇಹ ಹುಟ್ಟಿರಬಹುದೆಂದೂಹಿಸಬಹುದು. ಅಂತೂ ಅದರ ಪರಿಣಾಮ ನೇರವಾಗಿ ಆಗಬೇಕಾದಂತೆಯೇ ಆಯಿತು.

ಶ್ರೀ ಕೃಷ್ಣಮಾಚಾರಿಯವರು ಭಾರತದ ಗಂಡಾಂತರ ಪರಿಸ್ಥಿತಿಯಲ್ಲಿ ಜಾಣತನದಿಂದ ವರ್ತಿಸಿದ್ದಾರೆನ್ನುವುದು ನಿಜವಾದುದೇ. ಆದರೆ, ಪ್ರಜಾಪ್ರಭುತ್ವದ ರಾಷ್ಟ್ರದಲ್ಲಿ ಘನಪದವಿಯಲ್ಲಿ ಉಳಿದುಕೊಂಡು ಒಂದು ಕಾರ್ಯವನ್ನು ಮಾಡುವಾಗ ಅದೆಷ್ಟೋ ದೂರಾಲೋಚನೆಯನ್ನೂ ಮಾಡಬೇಕಾಗುತ್ತದೆ. ಹಾಗೆಂದ ಮಾತ್ರಕ್ಕೆ ಶ್ರೀ ಟಿ.ಟಿ.ಕೆ ದೂರದರ್ಶಿಗಳಲ್ಲವೆಂದು ನಾವು ಹೇಳಲಾರೆವು. ಆದರೂ ಅವರು ಈ ಮುಂಧ್ರಾ ಪ್ರಕರಣದಲ್ಲಿ ಪರಿಣಾಮವನ್ನು ಅಲಕ್ಷಿಸಿ, ಸಾಕಷ್ಟು ದೂರ ತನ್ನ ಗಮನವನ್ನು ಹರಿಸಿಲ್ಲವೆಂಬುದಂತೂ ಚಿರಸತ್ಯ. ರಾಷ್ಟ್ರವು ವಿದೇಶವಿನಿಮಯಗಳು-ಪಂಚವಾರ್ಷಿಕ ಯೋಜನೆಗಳಿಂದು ಆವಶ್ಯಕವಾಗಿ ಬೇಕಾದ ಯೋಜನೆಗಳನ್ನು ರೂಪಿಸಲು ಕಣಗುತ್ತಿರುವಾಗ ಮಾನ್ಯ ಅರ್ಥ ಮಂತ್ರಿಗಳು ಜಾಣತನದಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ದೇಶದ ಜನತೆ ಹಾಗೂ ಪ್ರಧಾನಿ ನೆಹರೂಗಳ ಮನಸ್ಸಿನಲ್ಲಿ ದೃಢವಿಶ್ವಾಸವನ್ನು ಗಳಿಸಿದ್ದರು. ಆದರೆ, ಒಮ್ಮೆ ವಿಶ್ವಾಸಕ್ಕೆ ಪಾತ್ರನಾದವನು ಮುಂದೆಂದಿಗೂ ವಿಶ್ವಾಸಘಾತುಕತನವನ್ನು ತೋರಿಸಲಾರನೆಂಬುದೂ, ಒಮ್ಮೆ ವಿಶ್ವಾಸಘಾತ ಮಾಡಿದವನು ಮುಂದೆ ನಂಬಿಗರ್ಹ ವ್ಯಕ್ತಿಯಾಗಲಾರನೆಂಬುದೂ ಸತ್ಯವಲ್ಲ. ಹೀಗಿದ್ದು ಪ್ರಜಾಪ್ರಭುತ್ವದ ಸಾರ್ಥಕ್ಯಕ್ಕಾಗಿ ಯಾರು ಏನೇ ಹೇಳಲಿ, ಕೃಷ್ಣಮಾಚಾರಿಯವರ ತಪ್ಪು ಬಹಿರಂಗವಾಯಿತು; ಅವರ ಪದವೂ ಕೈತಪ್ಪಿ ಹೋಯಿತು.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಬಹುದು. ಹಿಂದೊಮ್ಮೆ ರೇಲ್ವೇ ಮಂತ್ರಿಯಾಗಿದ್ದ ಲಾಲಬಹದೂರ ಶಾಸ್ತ್ರಿಯವರು ಒಂದು ಅಪಘಾತದ ಹೊಣೆಯನ್ನು ತನ್ನ ಮೇಲೆ ಹಾಕಿಕೊಂಡು ರಾಜೀನಾಮೆಯಿತ್ತು ಹೊರನಡೆದಿದ್ದರು. ಅಂತೆಯೇ ಲೋಕಸಭೆಯಲ್ಲಿ ಈ ಕಡೆಗೆ ಬೆಳಕು ಬೀರಲು ತೊಡಗಿದೊಡನೆಯೇ ಶ್ರೀ ಟಿ. ಟಿ. ಕೆ. ತನ್ನ ಅಪರಾಧವನ್ನು ಒಪ್ಪಿಕೊಂಡು ರಾಜೀನಾಮೆಯಿತ್ತಿದ್ದರೆ, ಆದರಿಂದ ಅವರಿಗೆ ಮುಂದಾದರೂ ರಾಜಕಾರಣದಲ್ಲಿ ಸ್ಥಾನವಿರುತಿತ್ತು. ಆದರೆ, ಟಿ. ಟಿ. ಕೆ. ಯವರಿಗೆ ತಮ್ಮ ಬಗ್ಗೆ—ತಾನು ನೆಹರೂರವರ ವಿಶ್ವಾಸಗಳಿಸಿದ ಬಗ್ಗೆ—ದೃಢ ವಿಶ್ವಾಸವಿದ್ದುದರಿಂದ ಅವರು ಹಾಗೆ ಮಾಡಲಿಲ್ಲವೆಂದು ತಿಳಿಯಬಹುದು. ಆದರೆ, ಅವರ ಈ ಆಚರಣೆಯಿಂದ ಅವರ ಮೇಲೆ ಹೊರಿಸಿದ್ದ ಆಪವಾದವಾದರೂ ಬೃಹದ್ರೂಪವನ್ನು ಧರಿಸಿತು. ಮತ್ತು ರಾಜಕಾರಣಪಟುಗಳೂ ತಮ್ಮ ಈ ಕ್ಷೇತ್ರವನ್ನು ಬಿಟ್ಟುಬಿಡಬೇಕಾಯಿತು; ಜನರ ಸಿಂದೆಗೂ, ಅಪನಂಬಿಕೆಗೂ ಕಾರಣರಾಗಬೇಕಾಯಿತು.

ಅಂತೂ ಭಾರತದ ರಾಜಕೀಯ ಕ್ಷೇತ್ರದಿಂದ ಒಬ್ಬ ನುರಿತ ಅನುಭವಿಕ ಶ್ರೇಷ್ಠ ರಾಜಕಾರಣಿಯ ಅಸ್ತಮಯವಾಯಿತು. ಇನ್ನು ಈ ಮಹಾವ್ಯಕ್ತಿಯು ರಾಜಕಾರಣವನ್ನು ಪ್ರವೇಶಿಸುವುದೂ ಸೂಕ್ತವಲ್ಲವೆನ್ನಬಹುದು. ಅವರೂ ಇನ್ನು ತಿಳಿದೋ ಏನೋ ಆಜೀವ ರಾಜಕಾರಣದಿಂದ ನಿರ್ಲಿಪ್ತನಾಗಿರಲು ನಿರ್ಧರಿಸಿದ್ದಾರೆ. ಶ್ರೀ ಟಿ. ಟಿ. ಕೆ. ತಾವು ತಮ್ಮ ಮುಖಕ್ಕೆ ಕಪ್ಪು ಬಳಿದುಕೊಂಡು ಹೋದರು. ಆದರೆ, ಇದರ ಪರಿಣಾಮ ಪ್ರಜಾಸತ್ತೆಗೊಂದು ಮಹಾಘಾತವನ್ನು ಕಲಿಸಿತೆಂಬುದು ಸರ್ವವಿದಿತ. ಈ ಪ್ರಕರಣದಲ್ಲಿ ಜೀವವಿಮಾ ಕಾರ್ಪೊರೇಶನಿನ ಅಧ್ಯಕ್ಷ ಶ್ರೀ ಕಾಮತ್, ಮೆನೇಜಿಂಗ್ ಡೈರೆಕ್ಟರ್ ಶ್ರೀ ವೈದ್ಯನಾಥನ್ ಮತ್ತು ಅರ್ಥಶಾಖೆಯ ಕಾರ್ಯದರ್ಶಿ ಶ್ರೀ ಎಚ್. ಎಂ. ಪಟೇಲರು ತಪ್ಪುಗಾರರಾದರೂ ಉನ್ನತ ಪದವಿಯ ಮಂತ್ರಿಯೇ ಅವರು ಮಾಡಿದ ತಪ್ಪಿಗೆ ಘಟನಾತ್ಮಕವಾಗಿ ಹೊಣೆಗಾರರೆಂದು ಸರ್ವಶ್ರುತವಾಗಿ ತಿಳಿದು ಬಂತು. ಸರಕಾರವು ಇನ್ನು ಮುಂದಾದರೂ ಇಂತಹ ತಪ್ಪುಗಳು ನಡೆಯದಂತೆ ಬಹಳ ಮುಂಜಾಗ್ರತೆಯನ್ನು ವಹಿಸಬೇಕಾದುದಗತ್ಯವೆಂದೂ ಈ ಪ್ರಕರಣವು ತೋರಿಸಿಕೊಟ್ಟಿದೆ. ಪ್ರಜಾಪ್ರಭುತ್ವದಲ್ಲಿ ಜನರ ಕೇಳಿಕೆಗಳಿಗೆ ಮನ್ನಣೆ ದೊರೆಯುವುದೆಂದೂ ಈ ಪ್ರಕರಣ ಕಲಿಸಿದೆ.

ಸಂಕ್ಷಿಪ್ತ ಸುದ್ದಿಗಳು

ಅರ್ಥಮಂತ್ರಿಯೂ ನೆಹರೂ

ಛಗಲಾ ಸಮಿತಿಯ ವರದಿಯ ಪರಿಣಾಮವಾಗಿ ತನ್ನ ಅರ್ಥಮಂತ್ರಿ ಸ್ಥಾನಕ್ಕೆ ಶ್ರೀ ಟಿ. ಟಿ. ಕೆ. ಯವರು ರಾಜೀನಾಮೆಯನ್ನು ಕೊಟ್ಟಿದ್ದು ಅದನ್ನು ರಾಷ್ಟ್ರಾಧ್ಯಕ್ಷರು ಸ್ವೀಕರಿಸಿದ್ದಾರೆ. ಸದ್ಯ ಪ್ರಧಾನ ಮಂತ್ರಿ ಶ್ರೀ ನೆಹರೂರವರೇ ಶ್ರೀ ಟಿ. ಟಿ. ಕೆ. ಯವರಿಂದ ಈ ಖಾತೆಯನ್ನು ವಹಿಸಿಕೊಂಡರು. ಪ್ರಧಾನ ಮಂತ್ರಿಗಳು ಶ್ರೀ ಟಿ. ಟಿ. ಕೆ. ಯವರೊಡನೆ ಮಾತಾಡುತ್ತ ತಾವು ಎಂತಹ ಪರಿಸ್ಥಿತಿಯಲ್ಲಿ ಈ ಶಾಖೆಯನು ವಹಿಸಿಕೊಳ್ಳುತ್ತಿರುವರೆಂದು ವಿವರಿಸಿದರು. ಅಲ್ಲದೇ ಆಡಳಿತೆಗೆ ಸಂಬಂಧಿಸಿದ ಕೆಲ ವಿಷಯಗಳನ್ನೂ ಚರ್ಚಿಸಿದರು.

ಮರಿಯಪ್ಪನವರು ಅಸ್ವಸ್ಥರಿದ್ದಾರೆ

ಮೈಸೂರಿನ ಅರ್ಥಮಂತ್ರಿ ಯವರಾದ ಶ್ರೀ ಟಿ. ಮರಿಯಪ್ಪನವರು ಅಸ್ವಸ್ಥರಿರುವುದರಿಂದ ಇವರು ಗುಣಮುಖರಾಗುವವರೆಗೆ ಈಗ ಕಾಯಿದೆ-ಕಲಾಪ ಇಲಾಖೆಯ ಮಂತ್ರಿಗಳಾಗಿರುವ ಶ್ರೀ ಬಿ. ವೈಕುಂಠ ಬಾಳಿಗಾರವರೇ ಈ ಅರ್ಥಮಂತ್ರಿ ಶಾಖೆಯನ್ನು ವಹಿಸಿಕೊಂಡಿರುವರು. ಮುಂಗಡ ಪತ್ರವನ್ನು ಬೇಗನೇ ಮಂಡಿಸುವುದು ಸಾಧ್ಯವಿಲ್ಲವಾದುದರಿಂದ ಸದ್ಯ ಮೂರು ತಿಂಗಳ ಅವಧಿಯ ಮಟ್ಟಿಗಿನ ವೆಚ್ಚದ ಬಗ್ಗೆ ಒಪ್ಪಿಗೆ ಪಡೆಯಲು ಸರಕಾರವು ನಿರ್ಧರಿಸಿದ್ದು ಈ ಸೂಚನೆಯು ಮಾರ್ಚಿ ತಾರೀಕರಂದು ವಿಧಾನ ಸಭೆಯ ಮುಂದೆ ಬರಲಿರುವುದು.

ವಿಚಾರಣೆಗೆ ಉಪಸಮಿತಿ

ಛಗಲಾ ವಿಚಾರಣೆಯಲ್ಲಿ ಸಂಪೂರ್ಣ ಸತ್ಯಾಂಶವು ಬಯಲಿಗೆ ಬಂದಿಲ್ಲವೆಂದು ಪಂ. ನೆಹರೂ ಪಂತ, ಶ್ರೀ ಟಿ. ಟಿ. ಕೆ. ಮತ್ತು ನ್ಯಾಯ ಮೂರ್ತಿ ಛಗಲಾ ಶ್ರೀ ಎಂ. ಸಿ. ಸೆಟಲ್ವಾಡ, ಎಚ್. ಎಂ. ಪಾಟೀಲ ಮುಂತಾದವರಿಗೆ ಬಲವಾದ ಭಾವನೆಯುಂಟಾಗಿರುವುದರಿಂದ ಈ ವಿಷಯದಲ್ಲಿ ಛಗಲಾ ವರದಿಯ ಹಿನ್ನೆಲೆಯಲ್ಲಿ ಇನ್ನಷ್ಟು ವಿಚಾರಣೆಯನ್ನು ನಡೆಸಲು ಕೇಂದ್ರ ಮಂತ್ರಿ ಮಂಡಳವು ಒಂದು ಉಪಸಮಿತಿಯನ್ನು ನೇಮಿಸಲಿದೆ ಎಂದು ತಿಳಿಯುತ್ತದೆ. ಈ ಉಪಸಮಿತಿಯಲ್ಲಿ ಪಂ. ಪಂತ, ಶ್ರೀ ಮುರಾರಜಿ, ಸರದಾರ ಸ್ವರ್ಣಸಿಂಗ ಮತ್ತು ಶ್ರೀ ಅಶೋಕ ಸೇನ ಇವರಿದ್ದಾರೆ.

ಹಿಂದಿ ಸದ್ಯ ಬೇಡ

ಭಾರತ ಸರಕಾರದೊಡನೆ ಪತ್ರ ವ್ಯವಹಾರವು ಇಂಗ್ಲಿಷಿನಲ್ಲಿಯೇ ನಡೆಯಬಹುದಾಗಿರುವ ಕಾರಣ ರಾಜ್ಯ ಸರಕಾರದ ಅಧಿಕಾರಿಗಳಾದರೂ ಹಿಂದಿಯನ್ನು ಕಲಿಯಬೇಕೆಂದ ಆವಶ್ಯಕತೆಯಿಲ್ಲವೆಂದು ಮದ್ರಾಸದ ಶಿಕ್ಷಣ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಅವರು ವಿಧಾನ ಸಭೆಯಲ್ಲಿ ಶ್ರೀ ವೇದರತ್ನಂರವರ ಸಭೆಯಲ್ಲಿ ಶ್ರೀ ವೇದ ರತ್ನಂರವರ ಪ್ರಶ್ನೆಗೆ ಉತ್ತರವಿತ್ತರು. ಹಿಂದೀ ಬಲ್ಲವರು ಮತ್ತು ಇತರರು ಎಂದು ಭೇದಭಾವ ಮಾಡುವ ಪರಿಸ್ಥಿತಿಯು ಉಂಟಾಗುವುದಿಲ್ಲ ಎಂದೂ ಶ್ರೀ ಸುಬ್ರಹ್ಮಣ್ಯರು ಹೇಳಿದರು.

ಭಾರತ ಇಟೆಲಿ ಸಂಪರ್ಕ

ಭಾರತ-ಇಟೆಲಿ ರೇಡಿಯೋ ಟೆಲಿಗ್ರಾಫ್ ಮತ್ತು ಟೆಲಿಫೋನ್ ಸೇವೆಯನ್ನು ಕೇಂದ್ರ ಸರಕಾರದ ಸಾರಿಗೆ ಮತ್ತು ಸಂಪರ್ಕ ಶಾಖೆಯ ಮಂತ್ರಿಗಳಾದ ಶ್ರೀ ಲಾಲಬಹದ್ದೂರ ಶಾಸ್ತ್ರಿಯವರು ಉದ್ಘಾಟಿಸಿದರು. ಭಾರತದಿಂದ ಇಟೆಲಿಗೆ ಟೆಲಿಗ್ರಾಫ್ ದರವು ಪ್ರತಿ ಸಾಧಾರಣ ಶಬ್ದಕ್ಕೆ ೧.೦೪ ರೂಪಾಯಿಗಳು, ಪತ್ರಿಕಾ ವಾರ್ತೆಗಳ ಪ್ರತಿ ಶಬ್ದಕ್ಕೆ ೩೩ ನಯೆ ಪೈಸೆಗಳು. ರೇಡಿಯೊ ಟೆಲಿಫೋನ್‌ಗೆ ಮೂರು ನಿಮಿಷದ ಕರೆಯೊಂದಕ್ಕೆ ೫೦ ರೂ.ಗಳು ಮತ್ತು ಹೆಚ್ಚಿನ ಪ್ರತಿ ನಿಮಿಷಕ್ಕೆ ೧೬ ರೂ.ಗಳು ಸರಿಯಾಗಿ ಶುಲ್ಕ ೫೦ ರೂ. ಗಳವೆ.

ಚಂದ್ರಗಮನದ ಮೊದಲ ಹಂತ

ಚಂದ್ರಲೋಕಕ್ಕೆ ಪ್ರಯಾಣ ಬೆಳೆಸುವುದಾದಲ್ಲಿ ಆ ಪ್ರಯಾಣದ ಮಾನವನ ದೈಹಿಕ ಮಾನಸಿಕ ಸ್ಥಿತಿಗಳು ಏನಾಗಬಹುದೆಂಬ ಬಗ್ಗೆ ಪರೀಕ್ಷೆಗೆ ಗುರಿಪಡಿಸಲ್ಪಟ್ಟ ಡೊನಾಲ್ಡ್ ಫ್ಯಾರೆಲ್ ಎಂಬ ೨೩ ವರ್ಷದ ಯುವಕನು ಒಂದುವಾರದ ನಂತರ ಭೂಮಿಗೆ ಹಿಂದಿರುಗಿರುವನು. ಮೂರಡಿ ಅಗಲ ಮತ್ತು ಐದಡಿ ಎತ್ತರದ ಪೆಟ್ಟಿಗೆಯೊಳಗಿದ್ದ ಈತನು ಆ ಪೆಟ್ಟಿಗೆಯಿಂದಿಳಿದೊಡನೆಯೇ ಹಸನ್ಮುಖನಾಗಿಯೇ ಹೊರಬಂದನು. ತನಗೆ ಅಲ್ಲಿ ಕೆಲವು ಯಂತ್ರಗಳ ಹೊರತು ಬೇರೇನೂ ಕಾಣುತ್ತಿರಲಿಲ್ಲ. ಮತ್ತು ತನ್ನ ಧ್ವನಿಯು ಹೊರತಾಗಿ ಬೇರೇನೂ ಕೇಳುತ್ತಿರಲಿಲ್ಲ ಎಂದು ಆತನು ಉದ್ಗರಿಸಿದನು.

ಭಾರತಕ್ಕೆ ರುಮೇನಿಯಾ ಪ್ರಧಾನಿ

ರುಮೇನಿಯಾದ ಪ್ರಧಾನಮಂತ್ರಿ ಶ್ರೀ ಕಿವುಸ್ಟೊಯಿಕಾರವರು ಮುಂದಿನ ತಿಂಗ

...ಳ ಪ್ರಾರಂಭದಲ್ಲಿ ಭಾರತಕ್ಕೆ ಸಂದರ್ಶನ ನೀಯಲಿರುವರೆಂದು ತಿಳಿದುಬಂದಿದೆ. ಅವರು ಭಾರತವನ್ನಲ್ಲದೇ ಇತರ ಕೆಲವು ಏಶಿಯಾ ದೇಶಗಳನ್ನೂ ಸಂಚರಿಸಬಹುದೆಂದೂ ಹೊಸತಾಗಿ ರುಮೇನಿಯಾದಲ್ಲಿ ಭಾರತದ ರಾಯಭಾರಿಗಳಾಗಿರುವ ಶ್ರೀ ಜೆ ಎನ್. ಖೋಸಲಾರ ಸಲಹೊಯೊಂದಿಗೆ ಪ್ರಧಾನಿಯವರ ಭಾರತ ಸಂಚಾರದ ಕಾರ್ಯಕ್ರಮವು ಸಿದ್ಧಗೊಳ್ಳುತ್ತಿರುವುದೆಂದೂ ನಿರೀಕ್ಷಿಸಲಾಗುತ್ತಿದೆ.

ರೂಪಾಯಿ ಮೌಲ್ಯಚ್ಛೇದ ಬೇಡ

ರೂಪಾಯಿಯ ಮೌಲ್ಯವಿಚ್ಛೇದನ ಮಾಡುವುದು ಭಾರತದ ಸದ್ಯದ ವಿದೇಶ ವಿನಿಮಯ ಸಮಸ್ಯೆಯನ್ನು ಬಗೆಹರಿಸುವ ಸೂಕ್ತ ಮಾರ್ಗವಲ್ಲ ಮೌಲ್ಯಚ್ಛೇದವು ಒಮ್ಮೆ ಪ್ರಾರಂಭವಾದರೆ, ಅದಕ್ಕೆ ಮಿತಿಯಿಲ್ಲದಾಗುವುದು ಇದರಿಂದ ಜನತೆಯೂ ನಾಣ್ಯದಲ್ಲಿ ವಿಶ್ವಾಸವನ್ನು ಕಳೆದುಕೊಳ್ಳುವುದು ಅದಕ್ಕೆ ಅವಕಾಶ ಕೊಡುವುದೆಂದೂ ಒಳ್ಳೆಯದಲ್ಲವೆಂದು ಅಂತಾರಾಷ್ಟ್ರೀಯ ಹಣಕಾಸಿನ ನಿಧಿಯ ಮೆನೇಜಿಂಗ ಡೈರೆಕ್ಟರರಾದ ಸರ್ ಜಾಕೊಬಸನ್ನರು ಅಭಿಪ್ರಾಯಪಟ್ಟಿದ್ದಾರೆ. ಇವರು ಭಾರತದ ಸಂಚಾರವನ್ನು ಕೈಗೊಂಡಿರುವರು

ಭಾರತ-ಜಾಪಾನ್ ಯೋಜನೆ

ಪೂರ್ವ ಭಾರತದಲ್ಲಿ ವಿಪುಲವಾಗಿ ದೊರೆಯುತ್ತಿರುವ ಕಬ್ಬಿಣದ ಅದುರುಗಳ ಅಭಿವೃದ್ಧಿಗಾಗಿ ತಮ್ಮ ಸಂಯುಕ್ತ ಯೋಜನೆಗೆ ಹಣದ ಸಹಾಯವೀಯಬೇಕೆಂದು ಭಾರತ ಮತ್ತು ಜಪಾನಗಳು ಅಮೇರಿಕೆಯೊಡನೆ ಕೇಳಲಿರುವುವೆಂದು ಗೊತ್ತಾಗಿದೆ ಈ ಸಂಯುಕ್ತಯೋಜನೆಯಲ್ಲಿ ಪೂರ್ವಭಾರತದ ರೂರ್ಕೆಲಾ ಕಬ್ಬಿಣ ಕಾರಖಾನೆ ಮತ್ತು ರೂರ್ಕೆಲಾದಿಂದ ವಿಶಾಖಪಟ್ಟಣದ ಬಂದರಿನ ವರೆಗಿನ ರೈಲ್ವೆ ದಾರಿಗೆಯ ಸುಧಾರಣೆ ಮತ್ತು ವಿಶಾಖಪಟ್ಟಣದ ಅಭಿವೃದ್ಧಿ ಬೆಳವಣಿಗೆ— ಇವುಗಳಿಗೆ ತಕ್ಕ ಏರ್ಪಾಡುಗಳನ್ನು ಮಾಡಲಾಗಿದೆ

ಟ್ಯೂನಿಸಿಯಾದ ಕರೆಗೆ ಮನ್ನಣೆ

ಫ್ರೆಂಚ್ ಸೈನಿಕರು ಇತ್ತೀಚೆಗೆ ಟ್ಯುನಿಸಿಯಾದ ಸೇಕಿಯೆತ್-ಸಿದಿ-ಯುಸುಫ್ ಎಂಬ ಹಳ್ಳಿಯೊಂದರ ಮೇಲೆ ಬಾಂಬು ದಾಳಿ ನಡೆಯಿಸಿದುದರ ವಿರುದ್ಧ ಟ್ಯುನಿಸಿಯಾವು ಕೊಟ್ಟಿರುವ ದೂರನ್ನು ಭದ್ರತಾ ಸಮಿತಿಯು ಚರ್ಚಿಸಲು ನಿರ್ಧರಿಸಿದೆ. ಟ್ಯುನಿಸಿಯಾವು ತಾನಿತ್ತ ದೂರಿನಲ್ಲಿ ಫ್ರೆಂಚರು ನಡೆಸಿದ ಆಕ್ರಮಣವು ತನ್ನ ಭದ್ರತೆಗೆ ಬೆದರಿಕೆ ಹಾಕಿರುವುದಲ್ಲದೆ ಅಂತಾರಾಷ್ಟ್ರೀಯ ಶಾಂತಿ ಹಾಗೂ ಉತ್ತರ ಆಫ್ರಿಕದ ಭದ್ರತೆಗೆ ಅಪಾಯವನ್ನೊಡ್ಡಿದೆ ಎಂಬುದಾಗಿ ಉಲ್ಲೇಖಿಸಿದೆ.

ಗುಲ್ಬರ್ಗದ ಅಭಿವೃದ್ಧಿ

ಗುಲ್ಬರ್ಗದ ನಾಗರಿಕರು ವಂತಿಗೆಗಳ ಮೂಲಕ ಐದು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದಲ್ಲಿ ಅದಕ್ಕೆ ಮಾತ್ರ ೨೭ ಲಕ್ಷ ರೂಪಾಯಿಗಳನ್ನು ಸೇರಿಸಿ ರಾಜ್ಯಸರಕಾರವು ಅಲ್ಲಿ ಒಂದು ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸುವುದೆಂದು ಮುಖ್ಯಮಂತ್ರಿ ನಿಜಲಿಂಗಪ್ಪನವರೆಂದಿದ್ದಾರೆ. ರಾಜ್ಯಸರಕಾರವು ಗುಲ್ಬರ್ಗದಲ್ಲಿಯೇ ಇನ್ನೊಂದು ಸಿಮೆಂಟ ಕಾರಖಾನೆಯನ್ನು ಸದ್ಯದಲ್ಲಿ ಆರಂಭಿಸುವುದೆಂದೂ ಅವರು ನುಡಿದರು.

ಉಡುಪಿ

ವಿವಾಹ ಸಮಾರಂಭ— ಕೆನರಾ ಬೇಂಕಿಂಗ್ ಕೋರ್ಪರೇಶನಿನ ಡೆಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ. ಶಂಕರ ಶೆಣೈಯವರ ಪುತ್ರಿ ಚಿ. ಸೌ ವಸಂತಿ ಮತ್ತು ಶ್ರೀ ಎಚ್. ಮಂಜುನಾಥಲಕ್ಷ್ಮಣ ನಾಯ್ಕರ ಪುತ್ರ ಶ್ರೀ ನಾರಾಯಣ ನಾಯಕ್, ಇವರ ವಿವಾಹವು ತಾ 13ರಲ್ಲು ಸಂಜೆ ಕೋಟೇಶ್ವರದಲ್ಲಿರುವ ವಧುವಿನ ಮನೆಯಲ್ಲಿ ವಿಜೃಂಭಣೆಯಿಂದ ಜರಗಿತು ಮರುದಿವಸ ವಧುವಿನ ಮನೆಯಲ್ಲಿ ಉಪಾಹಾರ ಸತ್ಕಾರವು ನಡೆಯಿತು.

ಭೂಸುಧಾರಣಾ ವಿಧೇಯಕ

ಜಂಟಿ ಸಮಿತಿಯು ವರದಿಯನ್ನು ಆದರಿಸಿದ ಭೂಸುಧಾರಣಾ ವಿಧೇಯಕವನ್ನು ಈ ಬಾರಿಯ ವಿಧಾನಸಭಾಧಿವೇಶನದಲ್ಲಿಯೇ ಮಂಡಿಸಲು ಸರಕಾರವು ನಿರ್ಧರಿಸಿದ್ದು ಇದರಿಂದ ಕಾಂಗ್ರೆಸ್ ಪಕ್ಷಕ್ಕೆ ಧಕ್ಕೆ ತಟ್ಟಿದರೂ ಚಿಂತೆಯಿಲ್ಲ, ರಾಷ್ಟ್ರದ ಹಿತದ ದೃಷ್ಟಿಯಿಂದ ಬಡವನ ಹಿತದ ದೃಷ್ಟಿಯಿಂದ ತಾವು ತಮ್ಮ ಕರ್ತವ್ಯವನ್ನು ಮಾಡಬೇಕೆಂಬುದಾಗಿ ಮೈಸೂರ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಸುದ್ದಿಗಾರರ ಸಭೆಯಲ್ಲಿ ವ್ಯಕ್ತಪಡಿಸಿದರು.

ರೇಲ್ವೇ ಮುಂಗಡ ಪತ್ರ

ಕೇಂದ್ರ ರೇಲ್ವೆ ಮಂತ್ರಿ ಶ್ರೀ ಜಗಜೀವನರಾಮರು ಲೋಕಸಭೆಯಲ್ಲಿ ೧೯೫೮-೫೯ರ ರೇಲ್ವೆ ಮುಂಗಡ ಪತ್ರವನ್ನು ಮಂಡಿಸಿದ್ದು ಇದರಂತೆ ರೈಲ್ವೆ ಪ್ರವಾಸದ ದರಗಳಲ್ಲಾಗಲೀ ಸಾಗಣೆ ದರಗಳಲ್ಲಾಗಲೀ ಯಾವುದೇ ವ್ಯತ್ಯಾಸವಾಗ ಲಿಲ್ಲ. ಈ ಮುಂಗಡ ಪತ್ರವು ೨೦.೬೭ ಕೋಟಿ ಉಳಿಕೆಯಿಂದ ಆರಂಭವಾಗಿ ೨೭ ಲಕ್ಷ ಕೋಟಿ ಉಳಿತಾಯದಲ್ಲಿಯೇ ಕೊನೆಗೊಳ್ಳುವುದು ಈಗ ೫೦೦ ಮೈಲುಗಳಷ್ಟು ಹೊಸ ರೇಲ್ವೆ ಮಾರ್ಗವನ್ನು ರಚಿಸುವ ಕಾರ್ಯ ಮತ್ತು ೮೦೦ ಮೈಲುಗಳಷ್ಟು ರೇಲ್ವೆ ಮಾರ್ಗದಲ್ಲಿ ಜೋಡುಪಟ್ಟಿ ಮಾರ್ಗಗಳನ್ನು ನಿರ್ಮಿಸುವ ಕೆಲಸವೂ ಭರದಿಂದ ಸಾಗುತ್ತಿದೆ.

ಪಿ ಎಂಡ್ ಟಿ ರಿಕ್ರಿಯೇಶನ್

ಕ್ಲಬ್—ಉಡುಪಿ ಹೆಡ್ ಪೋಸ್ಟಾಫೀಸಿನ ಪಿ ಎಂಡ್ ಟಿ ನೌಕರರ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕ ಪಂದ್ಯಾಟ ಮತ್ತು ಕುಶಲ ಚಟುವಟಿಕೆಗಳ ಸಮಾರಂಭವನ್ನು ತಾ 16 ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಜಿಲ್ಲಾ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎಮ್ ಕೆ ಅಪ್ಪಾದುರೈ, ಅವರು ಉದ್ಘಾಟಿಸಿದರು ಸ್ಥಳೀಯ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ ಎಲ್. ಎನ್ ರೈಗಳು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದ ಬಳಿಕ ಕಾರ್ಯದರ್ಶಿ ಶ್ರೀ ವಿ. ಶಿವಾನಂದ ಹೊಳ್ಳರು ಸ್ವಾಗತಿಸಿ ವರದಿಯನ್ನೋದಿದರು ಅಧ್ಯಕ್ಷರು ಪಂದ್ಯಾಟಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆ ಮಾಡಿ, ರಿಕ್ರಿಯೇಶನ್ ಕ್ಲಬ್ಬುಗಳು ಟಪ್ಪಾಲು ನೌಕರರಿಗೂ ಅಗತ್ಯವೆಂದರು ನಂತರ ನಾಟಕಾದಿ ಕ್ರಮಗಳಾದುವು

ಎಮ್ ಜಿ ಎಮ್. ಕಾಲೇಜ್ ಯೂನಿಯನ್ ದಿನಾಚರಣೆಯು— ತಾ 15ರಲ್ಲಿ ಸಂಜೆ ನಡೆಯಿತು ಪ್ರಾರ್ಥನೆಯಾದ ಬಳಿಕ ಯೂನಿಯನ್ ಅಧ್ಯಕ್ಷ ಶ್ರೀ ವಿನೋದಕುಮಾರ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು ಕಾಲೇಜ್ ಯೂನಿಯನ್ ಮತ್ತು ಇತರ ಎಸೋಸಿಯೇಶನುಗಳ ವರದಿಗಳು ಓದಲ್ಪಟ್ಟ ನಂತರ ಶ್ರೀ ವಿಷ್ಣು ಆಚಾರ್ಯರು ಸ್ವಸ್ತಿವಾಚನ ಮಾಡಿದರು ಶ್ರೀ ಕೆ ಬಿ ಮಧುಸೂದನರು ಉತ್ತರವಿತ್ತರು. ಮುಖ್ಯ ಅತಿಥಿಗಳಾಗಿ ಬಂದ ಶಿವಮೊಗ್ಗಾ ಫಸ್ಟ್ ಗ್ರೇಡ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಮ್ ಆ ಭರತರಾಜ ಸಿಂಘರು ಮಾತನಾಡಿ ಕಾಲೇಜಿನ ಪ್ರಗತಿಯನ್ನು ಕೊಂಡಾಡಿದರು ನಮ್ಮ ಜನರಿಗೆ ಎಂಥಹ ಉಚ್ಚ ಶಿಕ್ಷಣ ದೊರೆಯಬೇಕೆಂಬುದನ್ನು ವಿವರಿಸಿದರು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ಶ್ರೀ ಸಿಂಘರ ಮಾತುಗಳನ್ನು ಅನುಮೋದಿಸಿ ಮಾತನಾಡಿದರು ವಂದನಾರ್ಪಣೆಯಾಗಿ ಸಂಗೀತಾದಿ ಮನರಂಜನ ಕ್ರಮಗಳಾದುವು.

ಕಾಲೇಜು ದಿನಾಚರಣೆಯು— ಮಾರದಿವಸ ತಾ. 16ರಲ್ಲು ಸಂಜೆ, ಕಸ್ತೂರ್ಬಾ ಮೆಡಿಕಲ್ ಕಾಲೇಜ, ಮಂಗಳೂರು ಇದರ ಪ್ರೊಫೆಸರ್ ಡಾ ಎಮ್ ವಿ ಚಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆಯಾದ ಬಳಿಕ ಕಾಲೇಜು ಕರೆಸ್ಪೋಂಡೆಂಟ್ ಶ್ರೀ ಟಿ ಎ ಪೈಗಳು ಸ್ವಾಗತ ಭಾಷಣ ಮಾಡಿದರು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರು ಕಾಲೇಜು ವರದಿಯನ್ನೋದಿದರು ಶ್ರೀ ಕೆ ಎಸ್. ಪಡಿಯಾರರು ಕಾಲೇಜಿನ ಸ್ವಸ್ತಿವಾಚನ ಮಾಡಿದರು ಶ್ರೀ ಟಿ ಕೃಷ್ಣರಾಯರು ಅದಕ್ಕೆ ಉತ್ತರವಿತ್ತರು ಅಧ್ಯಕ್ಷರು ಬಹುಮಾನ ವಿತರಣೆ ಮಾಡಿದರು ಯೂನಿಯನ್ ಅಧ್ಯಕ್ಷ ಶ್ರೀ ಕೆ ವಿನೋದಕುಮಾರ ಸೆಟ್ಟರು ಧನ್ಯವಾದಗಳನ್ನಿತ್ತರು ಕನ್ನಡ ನಾಟಕಾದಿ ಕಾರ್ಯಕ್ರಮಗಳೊಂದಿಗೆ ಕಾಲೇಜು ದಿನಾಚರಣೆ ಮುಗಿಯಿತು.

ವರ್ಷಾವಧಿ ಪಂದ್ಯಾಟ ಸ್ಪರ್ಧೆಗಳು

ಉಡುಪಿ ಡಿವಿಜನಿನ ಅಂತರ ಶಾಲಾ ಎಥ್ಲೆಟಿಕ್ ಪಂದ್ಯಾಟ ಸ್ಪರ್ಧೆಗಳನ್ನು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ಮೈದಾನಿನಲ್ಲಿ ಡಾ. ಟಿ. ಮಾಧವ ಪೈಗಳು ಉದ್ಘಾಟಿಸಿದರು. ಮೆಡಿಕಲ್ ಕಾಲೇಜ್ ಡೀನ್ ಡಾ ಕೊಪ್ಪಿಕರರು ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನ ವಿತರಣೆ ಮಾಡಿದರು ಹ್ಯಾಸ್ಕೂಲುಗಳ ಮತ್ತು ವೈಯಕ್ತಿಕ ಚಾಂಪಿಯನ್ ಶಿಪ್ ಶೀಲ್ಡುಗಳು ಮತ್ತು ಬಹುಮಾನಗಳು ಮಲ್ಪೆ ಫಿಶರೀಸ್ ಹ್ಯಾಸ್ಕೂಲಿಗೆ ದೊರೆತವು

ಶಿಕ್ಷಕರ ಪರಿಷ್ಕೃತ ವೇತನದ ಸರಕಾರೀ ಆಜ್ಞೆಗೆ— ವಿಜಯವಾಣಿದ್ದ ತಾ 6 2 58ರ ಪತ್ರಿಕಾ ವರದಿ ಪತ್ರವನ್ನು ಜಿಲ್ಲಾ ತಾಲೂಕು ಯೂನಿಯನುಗಳಿಗೆ ಮಾನ್ಯ ಸಚಿವ ಶ್ರೀ ಶಂಕರ ಆಳ್ವರು ಕಳುಹಿಸಿರುತ್ತಾರಾಗಿ ತಿಳಿದು ಬಂದಿದೆ

ಆಯಾ ಕ್ಷೇತ್ರದಲ್ಲಿ ಚಾಲ್ತಿಯಲ್ಲಿರುವ ಕ್ರಮಬಂಧನೆಗಳನ್ನನುಸರಿಸಿಯೇ ಈ ಪರಿಷ್ಕೃತ ವೇತನದ ಸರಕಾರೀ ಪಾಲನ್ನು ತೆರಲಾಗುವುದೆಂದೂ ಮದ್ರಾಸು, ಕರ್ನಾಟಕ ವಲಯದಲ್ಲಿ ಈ ಹಿಂದೆ ಎಲ್ಲಾ ವೆಚ್ಚವನ್ನು ಸರಕಾರವೇ ವಹಿಸುತ್ತಿದ್ದರೆ, ಮುಂದೆ, ಪರಿಷ್ಕೃತ ವೇತನದ ವಿಷಯದಲ್ಲಿ ಹಾಗೆಯೇ ಮಾಡಿ ಎಲ್ಲಾ ವೆಚ್ಚವನ್ನು ಸರಕಾರವೇ ವಹಿಸಿಕೊಳ್ಳುವುದೆಂದೂ ಪತ್ರಿಕಾ ವರದಿ ಅರ್ಥವಿಸುತ್ತದೆ

ಪತ್ರಿಕಾ ವರದಿ ಪತ್ರದಲ್ಲಿ ಪರಿಷ್ಕೃತ ವೇತನ ಮಾತ್ರವಲ್ಲ ಹಳೇ ಮೈಸೂರು ವಲಯದ ಮಧ್ಯಾಹ್ನದ ಊಟದ ಪರಿಹಾರವನ್ನೂ ಸ್ಪಷ್ಟಾರ್ಥ ಕೊಡಲಾಗಿದೆ

ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರ ಸಮಿತಿಯ ಉಡುಪಿ ಕೇಂದ್ರದ ಪರೀಕ್ಷೆಗಳು ಮಾರ್ಚ ಒಂದು ಮತ್ತು ೨ನೆ ದಿನಾಂಕಗಳಲ್ಲಿ ಅಂಬಲಪಾಡಿಯ ಗೀತಾ ಭವನದಲ್ಲಿ ನಡೆಯಲಿರುವುದು ಈ ಪರೀಕ್ಷೆಗಳಲ್ಲಿ ಭಾಗವಹಿಸುವ ಪರೀಕ್ಷಾರ್ಥಿಗಳು ದಿನಾಂಕ ೨೮ರ ಪೂರ್ವ ತಮ್ಮ ಪ್ರವೇಶ ಪತ್ರಗಳನ್ನು ಗೀತಾ ಭವನದ ಕಾರ್ಯದರ್ಶಿಯವರಿಂದ ಪಡೆದುಕೊಳ್ಳಬಹುದು. ಕಾಲನಿರ್ಣಯ ಪಟ್ಟಿ ಈ ರೀತಿ ಇದೆ ೧-೩-೫೮ ಪೂರ್ವಾಹ್ನ ವಿಶಾರದ ೧ನೆ ಪತ್ರ ಅಪರಾಹ್ನ ವಿಶಾರದ ೨ನೆ ಮತ್ತು ಪರಿಚಯ ೧ನೆ ಪತ್ರಗಳು, ೨ ೩ ೫೮ ಪೂರ್ವಾಹ್ನ ವಿಶಾರದ ೩ನೆ ಪತ್ರ, ಪರಿಚಯ ೨ನೆ ಪತ್ರ, ಪ್ರವೇಶಿಕಾ ೧ನೆ ಪತ್ರ, ಪ್ರಾರಂಭಿಣೀ ಮತ್ತು ಪ್ರಥಮಾ. ಅಪರಾಹ್ನ ವಿಶಾರದ ೪ನೆ ಪತ್ರ, ಪರಿಚಯ ೩ನೆ ಪತ್ರ ಮತ್ತು ಪ್ರವೇಶಿಕಾ ೨ನೆ ಪತ್ರ ಸಮಯ ಪೂರ್ವಾಹ್ನ ೧೦-೩೦ರಿಂದ ೧-೩೦ ಅಪರಾಹ್ನ ೨-೩೦ರಿಂದ ೫-೩೦ ಎಂದು ಗೀತಾ ಭವನದ ಕಾರ್ಯದರ್ಶಿಯವರು ತಿಳಿಸುತ್ತಾರೆ

ವಾದಿರಾಜ ವಿದ್ಯಾರ್ಥಿ ಭವನ— ಎಂ ಜಿ ಎಂ ಕಾಲೇಜಿನ ಶ್ರೀ ವಾದಿರಾಜ ವಿದ್ಯಾರ್ಥಿ ಭವನದ ದಿನಾಚರಣೆಯು ತಾ 17ರಂದು ಶ್ರೀ ಸೋದಾ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಎಚ್ ಸುಂದರರಾಯರು ಸ್ವಾಗತಿಸಿದ ಮೇಲೆ ಶ್ರೀ ಕೆ ಆರ್ ಕೆ ಭಟ್, ಡಾ. ಟಿ ಎಂ ಎ. ಪೈ, ಮತ್ತು ಅಧ್ಯಕ್ಷರು ಸಂದರ್ಭೋಚಿತ ಭಾಷಣವಿತ್ತರು ಭವನದ ವಿದ್ಯಾರ್ಥಿಗಳಲ್ಲಿ ಉತ್ತಮ ನಡತೆಯ ಬಗ್ಗೆ ಶ್ರೀ ಟಿ ಎ ಪೈಗಳಿತ್ತ ರೂ 25/-ರ ನಗದಿ ಬಹುಮಾನವು ಶ್ರೀ ಕೇಶವ ಭಟ್ಟರಿಗೆ ದೊರೆತಿರುವುದಾಗಿ ಘೋಷಿಸಲಾಯಿತು ಕಾರ್ಯದರ್ಶಿ ಶ್ರೀ ಸುಂದರರಾಯರು ಹೆಗ್ಡೇರು ಧನ್ಯವಾದಗಳನ್ನಿತ್ತರು

ಬ್ರಹ್ಮಾವರ ಎಸ ಎಂ. ಎಸ್. ಹೈಸ್ಕೂಲಿನ ವಾರ್ಷಿಕೋತ್ಸವವು ತಾ 14ರಂದು ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ರೇ ಫಾ ಕೆ. ಕುರಿಯ ಕೋಶಿಸರು ಸ್ವಾಗತಿಸಿದರು ಶ್ರೀ ಕೆ ಆರ್ ಸಂಜೀವರವರು ವರದಿಯನ್ನೋದಿದರು. ಶ್ರೀ ಬಿ. ಜಗಜ್ಜೀವನದ ಶೆಟ್ಟರು ಮಹಾತ್ಮ ಗಾಂಧಿಯವರ ಭಾವಚಿತ್ರ ಅನಾವರಣಗೈದರು ಅಧ್ಯಕ್ಷರ ವಿಚಾರಪೂರ್ಣ ಭಾಷಣವಾದ ಮೇಲೆ ವಿವಿಧ ವಿನೋದಾವಳಿಗಳಾದುವು

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ ಎಲ್‌ಎಲ್. ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ನ್ಯಾಯಾನ್ಯಾಯ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸತ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತವಾಗಲ್ಪಟ್ಟಿವೆ ಮನುಷ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ **ಬೆಲೆ: ರೂ. 1—12—0 (1·75)**

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಪುತ್ತೂರು—ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ವರ್ಷೋತ್ಸವವು ತಾ. 8ರಲ್ಲು ಡಾ. ಟಿ ಎಮ್, ಎ ಪೈಗಳ ಅಧ್ಯಕ್ಷತೆಯುಲ್ಲಿ ಜರಗಿತು. ಬೆಳಿಗ್ಗೆ ಸೈಂಟ್ ಫಿಲೋಮಿನ್ ಹ್ಯಾಸ್ಕೂಲಿನ ಹೆಡ್ಮಾಸ್ತರ್ ಶ್ರೀ ಡೆನಿಸ್ ಡಿ. ಸೋಜರು ಧ್ವಜಾರೋಹಣ ಮಾಡಿದರು. ಕುಮಾರಿ ಲೋಹಿಣಿ ಮುಚ್ಚಿನುರೆಯವರು ವಿಜ್ಞಾನ ಮತ್ತು ಕಲಾಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಪಿ. ಮಾರಪ್ಪ ಸೆಟ್ಟರು ಶಾಲಾ ವರದಿಯನ್ನೋದಿದರು. ಮದ್ರಾಸು ವಿಶ್ವವಿದ್ಯಾಲಯದ ಕನ್ನಡ ಪ್ರೊಫೆಸರ್ ಶ್ರೀ ಎಮ್. ಮರಿಯಪ್ಪ ಭಟ್ಟರು ಸ್ವಸ್ತಿವಾಚನ ಮಾಡಿದರು. ಮರುದಿವಸ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಡಾ ಬಿ. ಕೃಷ್ಣ ಭಟ್ಟರ ಅಧ್ಯಕ್ಷತೆಯುಲ್ಲಿ ಜರಗಿತು. ತಾ. 9ನೇ ರಾತ್ರಿ ಡಾ ಟಿ. ಎಂ. ಎ. ಪೈಗಳಿಗೆ ಊರ ಪ್ರಮುಖರು ಭೋಜನ ಸತ್ಕಾರವಿತ್ತು ಗೌರವಿಸಿದರು.

ಬೈಲೂರು- ಸ್ಥಳೀಯ ಬೋರ್ಡು ಹ್ಯಾಸ್ಕೂಲಿನಲ್ಲಿಹಿಂದೀ ಪರೀಕ್ಷೆಗಳ ಪ್ರಮಾಣಪತ್ರ ವಿತರಣೋತ್ಸವವು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ ಮಂಜುನಾಥ ಕುಡುಬಿಯವರಿಂದ ತಾ. 11ರಂದು ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ. ಯಸ್. ಆಚಾರ್ಯರು ಅಧ್ಯಕ್ಷತೆವಹಿಸಿದ್ದರು ಶಾಲಾ ವಿದ್ಯಾರ್ಥಿ ನಾಯಕ ಶ್ರೀ ಶೇಖರ ಸೆಟ್ಟರು ಸ್ವಾಗತಿಸಿದರು. ಶಾಲಾ ಹಿಂದೀ ಅಧ್ಯಾಪಕ ಶ್ರೀ ಎಸ್. ಎಸ್. ಎನ್. ಉಪಾಧ್ಯಾಯರು ವರದಿವಾಚನ ಮಾಡಿದರು. ಅಧ್ಯಕ್ಷರ ಭಾಷಣಾನಂತರ ಶಾಲಾಧ್ಯಾಪಕ ಶ್ರೀ ಬಿ. ಯನ್. ನಾಯಕರು ಧನ್ಯವಾದವಿತ್ತರು.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರರುಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜವಾನ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.
ಇಲ್ಲವೆ ನಮಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಗುರುಪುರ— ಸ್ಥಳೀಯ ಹ್ಯಾಸ್ಕೂಲು ಸಮಿತಿಯ ಸಭೆಯು ತಾ. 10ರಂದು ಸಮಿತಿ ಅಧ್ಯಕ್ಷ ಡಾ. ಕೆ ನಾಗಪ್ಪ ಆಳ್ವ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಕೆ. ಎಸ್. ಪದ್ಮನಾಭ ಆಚಾರ್ಯರು ಸಭೆ ಕರೆದ ಉದ್ದೇಶವನ್ನು ತಿಳಿಸಿದರು. ಶಾಲೆಯ ಕಟ್ಟಡವನ್ನು ಗುರುಪುರ ಬಂಗ್ಲೆಯ ಬಳಿಯ ವಿಶಾಲ ಮೈದಾನದಲ್ಲಿ ರಚಿಸಬಹುದೆಂದು ಸಭೆಯ ಅಭಿಪ್ರಾಯವಾಯಿತು ಶ್ರೀ ಲಿಂಗು ಶಾವರು, ಆ ಸ್ಥಳದಲ್ಲಿರುವ ತನ್ನ ಪಾಲಿನ ಸ್ಥಳವನ್ನು ದಾನವಾಗಿ ಕೊಡುವ ಆಶ್ವಾಸನೆಯಿತ್ತರು ಶ್ರೀಗಳಾದ ಬಿ. ಎಸ್ ಭಾಸ್ಕರ ರೈ ಮತ್ತು ಎನ್. ಶ್ರೀನಿವಾಸರಾಯರು ಕಾರ್ಯೋಚಿತ ಮಾತುಗಳನ್ನಾಡಿದರು.

ಸವಣೂರು—ಸ್ಥಳೀಯ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜಾತ್ರೋತ್ಸವವು ತಾ. 6ರಲ್ಲು ಪ್ರಾರಂಭವಾಯಿತು. ದೇವಸ್ಥಾನದ ಜೀರ್ಣೋದ್ಧಾರ ಮೊದಲಾದ ಕಾರ್ಯಗಳಿಗೆ ಸ್ವಯಾರ್ಜಿತ ಆಸ್ತಿ ದಾನ ಮಾಡಿದ ಶ್ರೀ ಸವಣೂರು ಗುತ್ತು ಮಾಯಿಲಪ್ಪ ರೈಗಳ ಭಾವಚಿತ್ರ ಅನಾವರಣವು ಅಂದು ಶ್ರೀ ಕೆ. ಕೆ. ಸೆಟ್ಟಿ, ಎಮ್. ಎಲ್. ಸಿ.ಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಪೋಲೀಸ್ ಡಿಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಶ್ರೀ ಎ ನಾರಾಯಣ ರೈಗಳು ಭಾವ ಚಿತ್ರವನ್ನು ಅನಾವರಣ ಮಾಡಿದರು. ಶ್ರೀಗಳಾದ ಕೆ ವೆಂಕಟ್ರಮಣ ಗೌಡ, ಎಮ್. ಎಲ್. ಎ, ಸುಬ್ಬಯ್ಯ ನಾಯಕ ಎಮ್. ಎಲ್ ಎ, ಡಾ. ಕೆ. ಬಾಳಪ್ಪ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ತಾ. 7 ಮತ್ತು 8ರಂದು ದೇವಸ್ಥಾನದ ಈಗಿನ ಆಡಳ್ತೆದಾರರಾದ ಶ್ರೀ ಸವಣೂರು ಗುತ್ತು ವೆಂಕಪ್ಪ ರೈಗಳ ನೇತೃತ್ವದಲ್ಲಿ ಉತ್ಸವ ಸಾಂಗವಾಗಿ ನಡೆಯಿತು.

ಕಟಪಾಡಿ—ಅಂಚೆ ಮತ್ತು ತಂತಿ ಇಲಾಖೆಯು 1956—57ನೆ ವರ್ಷದ ಪಟ್ಟಿಯಾದ ಆಫೀಸು ಸ್ಪರ್ಧೆಯಲ್ಲಿ ಕಟಪಾಡಿ ಪೋಸ್ಟಾಫೀಸಿಗೆ ದಕ್ಷಿಣ ಕನ್ನಡ ಡಿವಿಜನಿನಲ್ಲಿ ಪ್ರಥಮ ಬಹುಮಾನ ಸಿಕ್ಕಿದೆ ಎಂದು ತಿಳಿದುಬಂತ್ತದೆ

ಹೆಬ್ರಿ ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ಮೂಡಬಿದ್ರೆ ಜೈನ ಹ್ಯಾಸ್ಕೂಲಿನ ಕನ್ನಡ ಅಧ್ಯಾಪಕ ಶ್ರೀ ಕೆ. ಕೆ ರೈಗಳು "ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ" ಎಂಬ ವಿಷಯದ ಮೇಲೆ ಭಾಷಣವಿತ್ತರು ಹ್ಯಾಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಯು ಎಸ್ ಆಚಾರ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶಾಲಾ ಕನ್ನಡ ಪಂಡಿತ ಶ್ರೀ ವೈ. ಕೃಷ್ಣ ಸೆಟ್ಟರು ಅತಿಥಿಗಳ ಪರಿಚಯಮಾಡಿದರು.

ಹಿರಿಯಡಕ—ಸ್ಥಳೀಯ ಬೋರ್ಡ್ ಹ್ಯಾಸ್ಕೂಲಿನ ಕ್ರೀಡೋತ್ಸವ, ವರ್ಷೋತ್ಸವ ಮತ್ತು ಹಳೆ ವಿದ್ಯಾರ್ಥಿ ದಿನಾಚರಣೆಗಳು ತಾ. 6, 7 ಮತ್ತು 8ರಂದು ಅನುಕ್ರಮವಾಗಿ ಡಾ ಬಿ ಚಂದಯ್ಯ ಹೆಗ್ಡೆ, ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾವ್ ಮತ್ತು ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಗಳಲ್ಲಿ ಜರಗಿದವು ಶ್ರೀ ಗಜಾನನರಾಯರು ರಾಷ್ಟ್ರಧ್ವಜವನ್ನು ಅರಳಿಸಿದರು. ವರ್ಷೋತ್ಸವ ಸಮಿತಿ ಅಧ್ಯಕ್ಷ ಶ್ರೀ ಟಿ. ರಮಾನಾಥ ಪೈಗಳು ಸ್ವಾಗತಿಸಿದರು. ಮುಖ್ಯೋಪಾಧ್ಯಾಯ ಶ್ರೀ ಎಮ್ ಅಣ್ಣಪ್ಪನವರು ವರದಿಯನ್ನೋದಿದರು ಶ್ರೀ ಬಿ ಲಕ್ಷ್ಮೀನಾರಾಯಣ ಹೆಗ್ಡೆಯವರು ಸ್ವಸ್ತಿವಾಚನಮಾಡಿದರು. ಶ್ರೀ ಎಮ್. ಕೇಶವ ಭಟ್ಟರು ಸಂದೇಶಗಳನ್ನು ಓದಿದರು ವಿದ್ಯಾರ್ಥಿ ನಾಯಕ ಶ್ರೀ ಕೆ. ಎಮ್. ಶಶಿಧರ ಹೆಗ್ಡೆಯವರು ಧನ್ಯವಾದವಿತ್ತರು

ಶಿರ್ವ- ಶಿರ್ವ ಹಿಂದೂ ಹ್ಯಾಸ್ಕೂಲಿನ ವಾರ್ಷಿಕೋತ್ಸವವು ತಾ.8ರಂದು ಶ್ರೀ ಕೆ.ಕೆ. ಸೆಟ್ಟಿ, ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು ಶಾಲಾ ಕರೆಸ್ಪೊಂಡೆಂಟ್ ಶ್ರೀ ಎಸ್ ಅಣ್ಣಯ್ಯ ಹೆಗ್ಡೆಯವರು ಸ್ವಾಗತ ಭಾಷಣಮಾಡಿದರು. ಶಾಲಾ ಹೆಡ್ಮಾಸ್ತರ್ ಶ್ರೀ ಬಿ ಜಯರಾಮ ಸೆಟ್ಟರು ಶಾಲಾ ವರದಿಯನ್ನೋದಿದರು. ಶ್ರೀ ವರದರಾಯ ಸೆಟ್ಟಿಗಾರರು ಸ್ವಸ್ತಿವಾಚನ ಮಾಡಿದರು. ಶ್ರೀ ಕೆ. ಶೇಖರ ಪೂಜಾರಿಯವರು ಉತ್ತರವಿತ್ತರು. ಡಾ. ಕೆ. ನಾಗಪ್ಪ ಆಳ್ವ, ಎಮ್ ಎಲ್.ಎ, ಅವರು ಬಹುಮಾನ ವಿತರಣೆಮಾಡಿದರು. ತಾ 9ರಂದು ವಿದ್ಯಾರ್ಥಿ ಬಾಲಕರ ಬಳಗದ ಸಭೆಯು ಡಾ ಕೆ. ವೆಂಕಟಕೃಷ್ಣನ, ಅವರ ಅಧ್ಯಕ್ಷತೆಯಲ್ಲಿ ಜರಗಿತು

ಸುರತ್ಕಲ್— ಮಂಗಳೂರು ಸೆಂಟ್ರಲ್ ರೇಂಜಿನ ಪ್ರಾಥಮಿಕ ಶಾಲಾ ಅಧ್ಯಾಪಕರ ನಿಟಾರಗೋಷ್ಠಿಯು ತಾ 15ರಲ್ಲು ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ, ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಮ್. ಜಿ. ನಟರಾಜರವರಿಂದ ಉದ್ಘಾಟಿಸಲ್ಪಟ್ಟಿತು. ವಿದ್ಯಾದಾಯಿನಿ ಹಾಸ್ಕೂಲ್ ಹೆಡ್ಮಾಸ್ತರ್ ಶ್ರೀಯುತ ನಾ ಸುಬ್ರಾಯರವರು ಸ್ವಾಗತಭಾಷಣ ಮಾಡಿದರು. ಶ್ರೀಗಳಾದ ಬಿ. ವಿ. ರಮಣ, ಎಸ್. ಸಿ. ಸುಬ್ಬಯ್ಯ ಪೈ, ಗೋಪಾಲ್, ಎಸ್. ಎ ಸಯ್ಯದ್ ಯುಸುಫ್ ಮೊದಲಾದವರು ವಿವಿಧ ವಿಷಯಗಳಲ್ಲಿ ಭಾಷಣ ಮಾಡಿದರು ಮರುದಿವಸದ ಗೋಷ್ಠಿಯಲ್ಲಿ ಶ್ರೀಗಳಾದ ಪಿ ನಾರಾಯಣಾಚಾರ್, ಕೆ ವಾಸುದೇವ ಕಿಣಿ, ಬಿ ಎಮ್. ಕುಡುಬಿ ಮೊದಲಾದವರು ಪ್ರಮುಖ ಭಾಗವಹಿಸಿದ್ದರು.

ಸಚಿವ ಶ್ರೀ ಮಹಮ್ಮದಾಲಿಯವರು ಜಿಲ್ಲಾ ಅಧಿಕಾರಿ ಮತ್ತು ಶಾಸನ ಸಭಾ ಸದಸ್ಯರ ಸಭೆಯಲ್ಲಿ—ಮೈಸೂರು ಸರಕಾರದ ಅಬಕಾರಿ ಮತ್ತು ಗ್ರಾಮ ಕೈಗಾರಿಕಾ ಸಚಿವ ಶ್ರೀ ಎಂ ಮಹಮ್ಮದಾಲಿಯವರು ತಾ 17ರಂದು ಮಾತನಾಡುತ್ತಾ, ಸರಕಾರವು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ನೀಡುತ್ತಿರುವ ಹಲವು ರೀತಿಯ ಸಹಾಯದ ಸದುಪಯೋಗವನ್ನು ಪಡೆಯಲು ಜನರು ಹೆಚ್ಚೆಚ್ಚು ಸಹಕಾರ ಸಂಘಗಳನ್ನು ಸ್ಥಾಪಿಸಿ ಮುಂದೆ ಬರಬೇಕೆಂದರು. ದ ಕ. ಜಿಲ್ಲೆಗೆ ಒಂದು ಮಾದರಿ ಕಬ್ಬಿಣದ ಕೆಲಸದ ಕೇಂದ್ರವು ಮಂಜೂರಾಗಿದೆ ಮತ್ತು ಇದಕ್ಕಾಗಿ ರೂಪಾಯಿ 75,000 ಮಂಜೂರುಮಾಡಲಾಗಿದೆ. ಈ ಜಿಲ್ಲೆಗೆ ಒಂದು ಮಾದರಿ ಕುಮ್ಮಾರಿ ಕೆಲಸದ ಕೇಂದ್ರವೂ ಮಂಜೂರಾಗಿದ್ದು ಅದನ್ನು ಕಾರ್ಕಳದಲ್ಲಿ ಸ್ಥಾಪಿಸುವ ಯೋಜನೆಯಿದೆ ಎಂಬುದಾಗಿ ತಿಳಿಸಿದರು. ಮಂಗಳೂರಿಗೊಂದು ಕೈಗಾರಿಕಾ ವಲಯವು ಮಂಜೂರಾಗಿದ್ದು ಅದಕ್ಕಾಗಿ ಈ ವರ್ಷಕ್ಕೆ ರೂ. 1,35,000 ವನ್ನು ಖರ್ಚುಮಾಡಲಾಗುವುದೆಂದೂ ಅದಕ್ಕೆ ಬೇಕಾದ ಸ್ಥಳ ನಿರ್ಣಯ ಮುಂತಾದ ಕಾರ್ಯಗಳು ಈಗಾಗಲೇ ಮುಗಿದಿವೆಯೆಂದೂ ಹೇಳಿದರು. ದ. ಕ. ಜಿಲ್ಲೆಯ ತೆಂಗಿನನಾರು ಕೈಗಾರಿಕೆಯ ಅಭಿವೃದ್ಧಿಗಾಗಿ ಮೈಸೂರು ಸರಕಾರವು ರೂ. 80,000ವನ್ನು ಮಂಜೂರುಮಾಡಿದೆಯೆಂದೂ ಹೇಳಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಸಚಿವ ಶ್ರೀ ಮಹಮ್ಮದಾಲಿಯವರು ತಾ. 17ರಂದು ಮಾತನಾಡುತ್ತಾ, ಕಾಂಗ್ರೆಸ್ ಸಂಸ್ಥೆ ಹಾಗೂ ದೇಶದ ಏಳಿಗೆಯ ಹಿತದೃಷ್ಟಿಯಿಂದ ಕಾಂಗ್ರೆಸಿಗರು, ಕಾರ್ಮಿಕರು, ಮಧ್ಯಮ ವರ್ಗದ ಜನರು ಇವರ ಸಂಘಟನೆಯ ಕಡೆಗೆ ಹೆಚ್ಚಿನ ಗಮನವನ್ನು ಕೊಡುವುದು ಅಗತ್ಯವಿದೆ ಎಂದರು.

ಮದ್ಯಪಾನ ನಿಷೇಧ ಶಾಸನವು ಸರಿಯಾದ ರೀತಿಯಲ್ಲಿ ಕಾರ್ಯಾಚರಣೆಗೊಳ್ಳಲು ಸಾಧ್ಯವಾಗುವಂತೆ ಜನರಲ್ಲಿ ಮನೋಪರಿವರ್ತನೆಯನ್ನು ಉಂಟು ಮಾಡುವ ಮಹತ್ ಜವಾಬ್ದಾರಿ ಕಾಂಗ್ರೆಸಿಗರದ್ದಾಗಿದೆ ಎಂದು ಹೇಳಿದರು. ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಡಾ ಕೆ ಬಾಲಪ್ಪ ಸೆಟ್ಟರು ಮಂತ್ರಿಗಳಿಗೆ ಹಾರ ಅರ್ಪಿಸಿದ ಬಳಿಕ ಉಪಾಧ್ಯಕ್ಷ ಶ್ರೀ ಎಫ್. ಎಕ್ಸ್ ಡಿ. ಪಿಂಟೋರವರು ಸ್ವಾಗತಿಸಿದರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ. ಕೆ. ಕೆ ಸೆಟ್ಟಿ, ಎಮ್. ಎಲ್. ಸಿ ಯವರು ಧನ್ಯವಾದವಿತ್ತರು. ಮಂತ್ರಿಗಳು ಪಂಚ್ಯಗೇರುಬೀಜ ಮತ್ತು ಸ್ಪಿಂಗ್ ಕಾರ್ಖಾನೆಗಳಿಗೂ ಕರ್ನಾಟಕ ಪೊಲಿಟೆಕ್ನಿಕ್‌ಗಳಿಗೂ ಭೇಟಿಯಿತ್ತರು.

ಆಫೀಸ್ ಆಫ್ ದಿ ಡ್ಯಾರೆಕ್ಟರ್ ಆಫ್ ಎನಿಮಲ್ ಹಸ್ಬೆಂಡ್ರಿ ಎಂಡ್ ವೆಟರಿನರಿ ಸರ್ವಿಸಸ್ ಇನ್ ಮೈಸೂರು

"ಅಟಾರಾ ಕಚೇರಿ" ಬೆಂಗಳೂರು-1

ನಂಬ್ರ A 7. 417/57 58

ತಾ 10-2-1958.

ಎಚ್ ಸ್ಟ್ರಿಕ್ಟ್ ಟೆಂಡರ್ ನೋಟೀಸು

ದ. ಕ. ಜಿಲ್ಲೆಯ ಕೋಳಿಸಾಕಣೆಯ ಉದ್ದಿಮೆಯಲ್ಲಿರುವ ಡಿಸ್ಟ್ರಿಕ್ಟ್ ಲೈವ್ ಸ್ಟಾಕ್ ಫಾರ್ಮಿನಲ್ಲಿಯ ಎಮ್ಮೆ ಮತ್ತು ದನದ ಹಾಲನ್ನು ಪಡಕೊಳ್ಳಲು 1958-59ನೆ ವರ್ಷದ ಬಗ್ಗೆ ಸೀಲ್ ಮಾಡಿದ ಟೆಂಡರುಗಳನ್ನು ಸ್ವೀಕರಿಸಲಾಗುವದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ ಟೆಂಡರುಗಳನ್ನು ಕೋಳಿ ಫಾರ್ಮಿನ ಸುಪರಿಂಟೆಂಡೆಂಟರಿಗೆ ಅವರ ಆಫೀಸಿನಲ್ಲಿ ತಾ. 1-3-1958ರ ವರೆಗೆ ಅಪರಾಹ್ನ 3 ಗಂಟೆಯವರೆಗೆ ಸ್ವೀಕರಿಸಲಾಗುವುದು ಹಾಲು ಸರಬರಾಯಿಯು ತಾ. 1-4-1958ರಿಂದ ಪ್ರಾರಂಭವಾಗುವುದು.

ಶರತ್ತು ವಗೈರೆ ಹೆಚ್ಚಿನ ವಿವರಗಳನ್ನು ಕೋಳಿ ಫಾರ್ಮಿನ ಸುಪರಿಂಟೆಂಡೆಂಟರಿಂದಾಗಲಿ ಇಲ್ಲವೆ ತಾ 6-2-1958ರ ಮೈಸೂರು ಗಜೆಟಿನ ಭಾಗVI-ಪುಟ 363ನ್ನು ನೋಡಿಯೂ ಪಡೆಯಬಹುದು.

(ಸಹಿ) ಡ್ಯಾರೆಕ್ಟರ್.

ಸೂಚನೆ

"ನವಯುಗ" ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ನಾರದ ಮಹಾನುಭಾವ—

ಶ್ರೀ ಮಹಮ್ಮದ ಕರೀಮ ಛಗಲಾ

ಜೀವವಿಮಾ ಕಾರ್ಪೋರೇಶನಿನ ಬಂಡವಾಳದ ವಿನಿಯೋಗದ ಕುರಿತಾಗಿ ಸರಕಾರಕ್ಕೊಪ್ಪಿಸಿದ ಛಗಲಾ ಸಮಿತಿಯ ವರದಿ ಮತ್ತು ಅದರ ಪರಿಣಾಮವಾಗಿ ರಾಜೀನಾಮೆಯಿತ್ತ ಶ್ರೀ ಟಿ ಟಿ ಕೃಷ್ಣಮಾಚಾರಿಯವರಂತೆಯೇ ಶ್ರೀ ಛಗಲರ ಹೆಸರೂ ಪ್ರಸಿದ್ಧವಾಗಿದೆ. ಶ್ರೀ ಮಹಮ್ಮದ ಕರೀಮ ಛಗಲಾರವರೀಗ ಬೊಂಬಾಯಿಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದಾರೆ. ಅವರಿನ್ನು ಮುಂದೆ ಭಾರತದ ಸರ್ವೋಚ್ಚ ನ್ಯಾಯಾಲಯದ ಹೊಸ್ತಿಲು ಮೆಟ್ಟುವುದೂ ನಿಶ್ಚಯ.

ನ್ಯಾಯಾಲಯದ ಗೋಡೆಗಳಲ್ಲಿ ತೂಗಹಾಕಿದ ಹಿಂದಿನ ನ್ಯಾಯಾಧೀಶರಂತೆಯೇ ಇರುವ ವ್ಯಕ್ತಿತ್ವ ಶ್ರೀ ಛಗಲರದು. ಸ್ವಭಾವ ಹಾಗೂ ಚಾತುರ್ಯಗಳೂ ಅವರಂತೆಯೇ ಇವೆ. ಕೆಲವು ತಿಂಗಳುಗಳ ಹಿಂದೊಬ್ಬ ಉನ್ಮಾದಿತ ವ್ಯಕ್ತಿಯು ಇವರನ್ನು ಹತ್ಯಮಾಡಲು ಬಂದಿದ್ದ. ಆದರೆ ದೇವರ ಕೃಪೆಯಿಂದ ಅವರು ಬದುಕಿ ಉಳಿದರು.

ಶ್ರೀ ಛಗಲಾರವರು ದಿವಂಗತ ಜಿನ್ನಾರೊಡನೆ ವಕಾಲತನ್ನು ಆರಂಭಿಸಿದ್ದರು; ಆದರೆ ಮುಂದೆ ಇವರಿಬ್ಬರ ನಡುವೆ ಪಾಕಿಸ್ಥಾನದ ಬೇಡಿಕೆಯ ಪ್ರಶ್ನೆಯಲ್ಲಿ ಭಿನ್ನಾಭಿಪ್ರಾಯವೆದ್ದುದರಿಂದ ಛಗಾಲರು ಜಿನ್ನರ ಸಂಗವನ್ನೇ ಬಿಟ್ಟರು ಅವರಿಂದ್ದೂ ಈ ತನ್ನ ನಡವಳಿಕೆಯನ್ನು ಸಮರ್ಥಿಸುಕೊಳ್ಳುತ್ತಿರೆ ದಕ್ಷಿಣ ಆಫ್ರಿಕಾದ ಸಂಬಂಧದ್ದ ಇವರು ಸಂಯುಕ್ತ ರಾಷ್ಟ್ರಸಂಘದಲ್ಲಿ ನಡೆಸಿದ ವಕಾಲತಿನಿಂದ ಇವರಲ್ಲಿ ಮನೆಮಾಡಿರುವ ಸ್ವಾಭಿಮಾನ ಮತ್ತು ರಾಷ್ಟ್ರೀಯತೆಯ ಮನೋವೃತ್ತಿ ವ್ಯಕ್ತವಾಗುವುದು. ಅಲ್ಲಿಂದ ಬಂದವರೇ "ನ್ಯಾಯಾಧೀಶರನ್ನು ರಾಜಕಾರಣದಿಂದ ಮೇಲಿಡಬೇಕು, ನಿರ್ವಿವಾದಿ ರಾಜಕಾರಣ ಸಂಬಂಧದಲ್ಲಿ ದೇಶಕ್ಕೆ ನನ್ನ ಸೇವೆಯ ಆವಶ್ಯಕತೆಯಿರುವುದಾದರೆ, ನಾನು ಅದಕ್ಕೆ ಸಿದ್ಧನಿದ್ದೇನೆ" ಎಂದಿರುವರು.

ಅವರ ವ್ಯಾಪಕ ದೃಷ್ಟಿಕೋಣ ಮತ್ತು ಶಿಕ್ಷಣ ಪ್ರೇಮವು ಅವರನ್ನು ಬೊಂಬಯಿ ವಿಶ್ವವಿದ್ಯಾನಿಲಯದ ಉಪಕುಲಪತಿಯ ಸ್ಥಾನಕ್ಕೆ ಏರಿಸಿತು. ಇದಕ್ಕೆ ಪೂರ್ವದಲ್ಲಿವರು ಬಾಲವೀರ ದಳಗಳಲ್ಲೂ ಭಾಗವಹಿಸಿದ್ದರು. ವಿದ್ಯೆಯು ಅವರ ಅಚ್ಚುಮೆಚ್ಚಿನ ವಿಷಯವಾಗಿತ್ತು.

ಶ್ರೀ ಛಗಲಾ ೫೮ ವರ್ಷಗಳಿಗೆ ಹಿಂದೆ, ೩೦ನೆ ಸಪ್ಟಂಬರ ೧೯೦೦ರಲ್ಲಿ ಜನಿಸಿದ್ದರು. ಬೊಂಬಯಿಯ ಸ್ಯೆಂಟ್ ಕ್ಸೇವಿಯರ್ ಕಾಲೇಜಿನಲ್ಲಿ ಶಿಕ್ಷಣ ಪಡೆದ ನಂತರ ಆಕ್ಸ್‌ಫರ್ಡಿನಲ್ಲಿ ಅಭ್ಯಸಿಸಿ ೧೯೨೨ರಲ್ಲಿ ವಕೀಲರಾದರು. ಆಕ್ಸ್‌ಫರ್ಡಿನಲ್ಲಿ ಬ್ರಿಟನಿನ ಮಾಜೀ ಪ್ರಧಾನಿ ಶ್ರೀ ಆಂಥೋನಿ ಈಡನ್ನರು ಇವರ ಸಹಪಾಠಿಗಳಾಗಿದ್ದರು. ಆ ಸಮಯದಲ್ಲಿ ಶ್ರೀ ಈಡನ್ನರು ಆಕ್ಸ್‌ಫರ್ಡ ಏಶಿಯಾಟಿಕ್ ಸೊಸಾಯಿಟಿಯ ಅಧ್ಯಕ್ಷರಾಗಿದ್ದರು. ಅವರು ಆ ಸಮಯದಲ್ಲಿ ಶ್ರೀ ಛಗಲಾರವರನ್ನು ಸೊಸಾಯಿಟಿಯ ವಿಶೇಷ ಸದಸ್ಯರೆಂದು ಕರೆಯುತಿದ್ದರು. ಶ್ರೀ ಛಗಲಾರವರೀ ಆಕ್ಸ್‌ಫರ್ಡದ ಭಾರತೀಯ ಮಜಲಿಸ್‌ನ ಅಧ್ಯಕ್ಷರಾಗಿದ್ದರು

ಅಲ್ಲಿಂದ ಹಿಂದಿರುಗಿದನಂತರ ಶ್ರೀ ಛಗಲಾ ಕೆಲಸಮಯದವರೆಗೆ ಜಿನ್ನರೊಡನೆ ವಕಾಲತು ನಡೆಸಿದರು. ಮಹತ್ವಪೂರ್ಣ ವಿಷಯಗಳಲ್ಲಿ ಅವರಿಗೆ ಜಿನ್ನಾರಿಗೆ ಸಹಾಯಮಾಡುವ ಸಂದರ್ಭ ಬರುತಿತ್ತು. ಹಲವಾರು ವರ್ಷ ಅವರು ಬೊಂಬಯಿ ಬಾರ್ ಕೌನ್ಸಿಲಿನ ಮಂತ್ರಿಯಾಗಿದ್ದರು. ೧೯೪೧ರ ಜುಲಾಯಿಯಲ್ಲಿ ತನ್ನ ೪೧ನೆ ವರ್ಷದಲ್ಲಿಯೇ ಬೊಂಬಾಯಿಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದರು. ೧೯೪೭ರಲ್ಲಿ ಅವರು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ಆರಿಸಲ್ಪಟ್ಟರು ೧೯೪೮ರಲ್ಲಿ ಅವರು ತಮ್ಮ ಈ ಪದವಿಯಲ್ಲಿಯೇ ಸ್ಥಾಯಿಯಾದರು

ಕೆಲಸಮಯದವರೆಗೆ ಶ್ರೀ ಛಗಲಾರವರು ಮುಸ್ಲಿಂಲೀಗಿನ ಸದಸ್ಯರಾಗಿಯೂ ಇದ್ದರು. ಆದರೆ ಮತಭೇದಗಳ ಸಂಬಂಧದಲ್ಲಿ ಅವರು ಈ ಸಾಂಪ್ರದಾಯಿಕ ಸಂಸ್ಥೆಯಿಂದ [illegible]ರಲ್ಲಿ ರಾಜೀನಾಮೆಯಿತ್ತು ಹೊರಬಂದರು ಹಾಗಿದ್ದರೂ ಅವರು ಮುಂದೆಯೂ ರಾಷ್ಟ್ರವಾದೀ ಮುಸಲ್ಮಾನರೊಡನೆ ಕೂಡಿಯೇ ಇದ್ದರು. ಬೊಂಬಾಯಿಯ ಮುಸ್ಲಿಮ ವಿದ್ಯಾರ್ಥಿ ಸಂಘಕ್ಕೂ ಇವರ ಸೇವೆ ಸಂದಿರುತ್ತದೆ. ಸದಾಕಾಲವೂ ಏನಾದರೂ ಓದುತ್ತಿರುವುದೂ ಅವರ ವೈಶಿಷ್ಟ್ಯಗಳಲ್ಲೊಂದು. ಶ್ರೀ ಛಗಲಾ ಯಾವಾಗಲೂ ತಮ್ಮ ವ್ಯಗ್ರತೆಯನ್ನು ತಮ್ಮ ಮುಖದಲ್ಲಿ ಪ್ರದರ್ಶಿಸುವುದಿಲ್ಲ ಸಮುದ್ರದಂತೆ ಗಂಭೀರರಾಗಿರುವುದೂ ಇವರ ವಿಶೇಷತೆಯಾಗಿದೆ.

ಶ್ರೀ ಛಗಾಲಾರವರು ಒಪ್ಪಿಸಿದ ವರದಿಯನ್ನು ದೂರುವವನು ಅಲ್ಪ. ಅವರು ತಮಗೆ ಸರಕಾರವು ಒಪ್ಪಿಸಿದ ಈ 'ಮಹಾಪ್ರಕರಣ'ವನ್ನು ಕೂಲಂಕಷವಾಗಿ ಮಥಿಸಿ ಸತ್ಯವನ್ನು ಹೊರಗೆಡಹಲು ಯತ್ನಿಸಿದ್ದಾರೆ. ಅಲ್ಲದೇ ನ್ಯಾಯ ನಿಷ್ಠವೆನಿಸಿದ ರೀತಿಯಲ್ಲಿಯೇ ನಡೆದುಕೊಂಡಿದ್ದಾರೆ ಈ ವರದಿಯ ಪರಿಣಾಮವಾಗಿ ಭಾರತೀಯ ಶ್ರೇಷ್ಠ ರಾಜಕಾರಣಿಗಳೊಬ್ಬರು ರಾಜಕಾರಣದಿಂದ ದೂರವುಳಿಯಬೇಕಾಗಿಬಂದರೂ, ಈ ಘಟನೆ ಕೇವಲ ಭಾರತಕ್ಕೆ ಮಾತ್ರವಲ್ಲ ಜಗತ್ತಿಗೇನೇ ಒಂದು ಎಚ್ಚರಿಕೆಯನ್ನಿತ್ತಿದೆ, ಪ್ರಜಾಪ್ರಭುತ್ವದ ತತ್ವವನ್ನು ವಿಶ್ವಕ್ಕೆ ತೋರಿಸಿಕೊಟ್ಟಿದೆ ಎಂಬ ವಿಷಯಗಳು ಗಮನೀಯವಿವೆ

ಬೇಂಕು ವ್ಯವಹಾರಗಳಲ್ಲಿ
ನೀವು ಬಯಸುವ
ಅತ್ಯಾಧುನಿಕ, ಅತ್ಯುತ್ತಮ ಮತ್ತು ಶೀಘ್ರ ಸೇವೆಗಳಿಗಾಗಿ
"ಕೋರ್ಪೊರೇಶನ್"
ಬೇಂಕನ್ನು ನಿಮ್ಮದಾಗಿಯೇ ಭಾವಿಸಿ, ನೀವು ಯಾವಾಗಲೂ ಆಶ್ರಯಿಸಬಹುದು
ದಿ. ಕೆನರಾ ಬೇಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕು)
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ಮಂಗಳೂರು

ಸರ್ವೋದಯ ಮೇಳವು- ತಾ 12ರಲ್ಲಿ ಸೆಂಟ್ರಲ್ ಕೋ-ಆಪರೇಟಿವ್ ಬೇಂಕಿನ ಮಹಡಿಯಲ್ಲಿ ಸಾಮಾಜಿಕ ಅಧ್ಯಯನ ತಂಡದ ಡೈರೆಕ್ಟರ್ ರೆ| ಫಾ| ಎಂಜೆಲಿಟ್ಟೋರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಸ್ ಯು ರಾಮಚಂದ್ರರಾಯರು ಸ್ವಾಗತ ಭಾಷಣಮಾಡಿದರು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಡಾ ಪಿ ಜಿ ಗೊಲ್ಲರಕೇರಿಯವರು ಕಾಲೋಚಿತ ಭಾಷಣಮಾಡಿದರು ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮನುಷ್ಯನು ಮೊದಲು ಮನುಷ್ಯತ್ವ ನಿಯಮಗಳನ್ನು ಪರಿಪಾಲಿಸಲು ಪ್ರಯತ್ನಪಡಬೇಕೆಂಬುದಾಗಿ ತಿಳಿಸಿದರು

ಸತ್ಕಾರ ಕೂಟ ಮೈಸೂರು ವಿಧಾನ ಪರಿಷತ್ತಿಗೆ ಕಲೆ ಮತ್ತು ಸಂಸ್ಕೃತಿಗಳ ಪ್ರತಿನಿಧಿಯಾಗಿ ಸದಸ್ಯ ಸ್ಥಾನಕ್ಕೆ ನೇಮಿಸಲ್ಪಟ್ಟ ಕಲಾನಿಕೇತನ, ಮಂಗಳೂರು ಮತ್ತು ಶರವು ಯಕ್ಷಗಾನ ಸಂಘ, ಇದರ ಅಧ್ಯಕ್ಷರಾದ ಶ್ರೀ ಕೆ ಬಾಲಕೃಷ್ಣರಾವ್, ಎಡ್ವೊಕೇಟ್ ಇವರನ್ನು ಕಲಾನಿಕೇತನದ ಆಧಿಕಾರಿ ವರ್ಗದವರು ತಾ 12ರಂದು ಸಂಜೆ ಮೋಹಿನಿವಿಲಾಸದಲ್ಲಿ ಚಹಾ ಸತ್ಕಾರವಿತ್ತು ಗೌರವಿಸಿದರು. ಸಂಘದ ಉಪಾಧ್ಯಕ್ಷ ಡಾ ಎಮ್ ಎಸ್ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು ಡಾ ಕೆ ಶಂಕರ್, ಶ್ರೀ ಶ್ರೀನಿವಾಸ ಉಡುಪ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಕಾರ್ಯದರ್ಶಿ ಶ್ರೀ ಯು ನರಸಿಂಹರಾಯರು ವಂದಿಸಿದರು

ಗೈಡ್ ಕೇಪ್ಟನ್ ತರಬೇತಿ ಶಿಬಿರ– ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಸಂಸ್ಥೆ, ಮಂಗಳೂರು ಇವರ ಆಶ್ರಯದಲ್ಲಿ ಮಹಿಳಾ ಗೈಡ್ ಕೇಪ್ಟನರ ತರಬೇತಿ ಶಿಬಿರವೊಂದನ್ನು ಇದೇ ತಾ 26ರಿಂದ 10 ದಿನಗಳವರೆಗೆ ಮಂಗಳೂರು ಮಡಿಕೇರಿ ರಸ್ತೆಯ 23ನೇ ಮೈಲಿನಲ್ಲಿರುವ ಕಬಕಾ ಗ್ರಾಮದಲ್ಲಿ ಜರಗಿಸಲಾಗುವುದು. ಉಮೇದ್ವಾರರು ತಮ್ಮ ಅರ್ಜಿಗಳನ್ನು ಇದೇ ತಾ 20ರೊಳಗೆ ಜಿಲ್ಲಾ ಗೈಡ್ ಕಮಿಶನರ್ ಶ್ರೀಮತಿ ಕಲ್ಯಾಣಿ ಡಿ ಶೆಟ್ಟಿ, ಕೊಡಿಯಾಲಗುತ್ತು, [illegible] 3 ಇವರಿಗೆ ಕಳುಹಿಸುವುದು

ನಗರಸಭೆಯ ಸಾಮಾನ್ಯ ಸಭೆಯು ತಾ 14ರಲ್ಲು ನಗರಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು ಮಂಗಳೂರು ನಗರಸಭೆಗೆ ಈಗ ದೊರೆಕುವ ಮೋಟಾರುವಾಹನ ತೆರಿಗೆಯಲ್ಲಿ ಹೆಚ್ಚಿನ ಪರಿಹಾರ ಸಿಗುವಂತೆ, ಮೋಟಾರು ವಾಹನ ತೆರಿಗೆಯ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಯನ್ನು ತರಬೇಕೆಂದು ಸರಕಾರವನ್ನು ವಿನಂತಿಸಲಾಯಿತು ವೆಲ್‌ಫ್ಯಾರ್ ಮಾರ್ಕೆಟಿನ ಪುನರ್ರಚನೆಗಾಗಿ ನಗರಸಭೆಯು ಎತ್ತಲಿರುವ ಎಂಟು ಲಕ್ಷ ರೂಪಾಯಿ ಸಾಲವನ್ನು ಸ್ಥಳೀಯ ಕೆನರಾ ಬೇಂಕಿನಿಂದ ಪಡೆಯಲ್ಪುವುದಕ್ಕೆ ಅನುಮತಿಯೀಯಬೇಕೆಂದೂ ಅದಕ್ಕೆ ತಕ್ಕ ಭದ್ರತೆಯನ್ನು ಸರಕಾರವು ಕೊಡಬೇಕೆಂದೂ ಸರಕಾರವನ್ನು ನಗರಸಭೆಯು ವಿನಂತಿಸಿಕೊಂಡಿತು ನಗರಸಭೆಯ ಚಿಕಿತ್ಸಾಲಯಕ್ಕೆ ಈ ವರ್ಷಕ್ಕೆ ಬೇಕಾದ ಮದ್ದುಗಳಿಗೆ ರೂಪಾಯಿ 9270 ಮಂಜೂರುಮಾಡಲಾಯಿತು ಮಂಗಳೂರು ಕೇಂದ್ರ ಮೈದಾನದ ಬದಿಯಲ್ಲಿ ಸುಮಾರು ಎರಡು ಲಕ್ಷ ರೂಪಾಯಿ ವೆಚ್ಚದಿಂದ ಕಟ್ಟಿಸಲಿರುವ ಪುರಭವನಕ್ಕೆ ಸರಕಾರವು ಸೂಕ್ತ ಸಹಾಯಧನವೀಯಬೇಕೆಂದು ಸರಕಾರವನ್ನು ವಿನಂತಿಸಲಾಯಿತು

ಭಿಕ್ಷುಕರ ಮಾಹಿತಿ ಸಂಗ್ರಹ— ಮಂಗಳೂರು ನಗರದಲ್ಲಿ ಭಿಕ್ಷುಕ ಗೃಹವೊಂದನ್ನು ರಚಿಸುವ ಬಗ್ಗೆ ಬೇಕಾದ ಅಂಕೆ ಸಂಖ್ಯೆಗಳನ್ನು ಮೈಸೂರು ಸರಕಾರ ಕೇಳಿದ್ದು, ಮಂಗಳೂರು ನಗರದ ಭಿಕ್ಷುಕರ ಸಂಖ್ಯೆ ಮಾಹಿತಿಗಳನ್ನು ಸ್ವಯಂ ಸೇವಕರ ಮೂಲಕ ಸಂಗ್ರಹಿಸಲು ಸ್ಯೆಂಟ್ ಎಲೋಸಿಯಸ್ ಕಾಲೇಜಿನ ರೆಕ್ಟರ್ ಹಾಗೂ ಕಾಲೇಜಿನ ಸಮಾಜ ಸೇವಾ ಸಂಘದ ಉಪಾಧ್ಯಕ್ಷ ಶ್ರೀ ಬಿ ವಿ ಕದಿಲಾಯರು ಒಪ್ಪಿರುವರು

ಸಚಿವ ಶ್ರೀ ಮಹಮ್ಮದಾಲಿಯವರು— ಮೈಸೂರಿನ ಅಬಕಾರಿ ಮತ್ತು ಗ್ರಾಮ ಕೈಗಾರಿಕಾ ಸಚಿವ ಶ್ರೀ ಎಮ್ ಮಹಮ್ಮದಾಲಿಯವರ ಅಧ್ಯಕ್ಷತೆಯಲ್ಲಿ ತಾ 16ರಂದು ಸಂಜೆ ನವಭಾರತ ರಾತ್ರಿ ಶಾಲೆಯ ವಾರ್ಷಿಕೋತ್ಸವವು ಜರಗಿತು ನವಭಾರತ ವಿದ್ಯಾಸಂಘದ ಅಧ್ಯಕ್ಷ ಡಾ ಕೆ ನಾಗಪ್ಪ ಆಳ್ವರು ಸ್ವಾಗತಿಸಿದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಖಲೀಲ್ ಮಹಮ್ಮದರು ಶಾಲಾ ವರದಿಯನ್ನು ಓದಿದರು ಅಧ್ಯಕ್ಷ ಸಚಿವರು ಮಾತನಾಡುತ್ತಾ, ಪ್ರಜಾಪ್ರಭುತ್ವವು ದೇಶದಲ್ಲಿ ಯಶಸ್ವಿಯಾಗಿ ಕಾರ್ಯಾಚರಣೆಗೊಳ್ಳಲು ಸಾಧ್ಯವಾಗುವಂತೆ ವಿದ್ಯಾರ್ಥಿಗಳು ತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುವಂತೆ ಅವರಿಗೆ ಉತ್ತಮ ಶಿಕ್ಷಣವನ್ನು ಒದಗಿಸುವುದು ಅತ್ಯಗತ್ಯ ಎಂದರು. ಅಂದು ಬೆಳಿಗ್ಗೆ ಸಾರ್ವಜನಿಕ ಕೂಟವೊಂದು ಜರಗಿತು. ಶ್ರೀಗಳಾದ ಬೇಲದ್ದ ಅಪ್ಪಯ್ಯ, ಎಚ್ ಮನಮೋಹನ ಕಾಮತ್, ಪಿ ಎನ್ ವೆಂಕಟಕೃಷ್ಣರಾವ್, ಶಿವಲಿಂಗಪ್ಪ ಶೆಟ್ಟಿ, ಕಲ್ಯಾಣಿ ಡಿ. ಶೆಟ್ಟಿ ಮೊದಲಾದವರು ಶಾಲೆಗೆ ಶುಭವನ್ನು ಬಯಸಿ ಮಾತನಾಡಿದರು. ಶ್ರೀ ಪುಂಡಲೀಕ ಮಲ್ಯರು ಧನ್ಯವಾದವಿತ್ತರು.

ಶೃಂಗೇರಿ— ಇದೇ ತಾ 12ನೆ ರಾತ್ರಿ ಶೃಂಗೇರಿಯ ಬಳಿಯ ಹಂದಿಗೋಡು ಎಂಬಲ್ಲಿ ಶ್ರೀ ಮರಿಯಪ್ಪ, ಆತನ ಪತ್ನಿ ಮತ್ತು 2 ಹೆಣ್ಣು ಮತ್ತು 4 ಗಂಡುಮಕ್ಕಳ ಸಮೇತ ಆರು ಮಕ್ಕಳನ್ನು [illegible] ಕೊಲೆಮಾಡಲಾಗಿದೆ ಎಂದು ಹೇಳಲಾಗಿದೆ. ಏಳುತಿಂಗಳ ಮಗುವನ್ನು ಕಡಿದು ಕೊಲ್ಲಲಾಗಿದೆ ಎನ್ನಲಾಗಿದೆ ಈ ಘಟನೆಯ ಕುರಿತು ಪೋಲೀಸರು ಭರದಿಂದ ತನಿಖೆ ನಡೆಸುತ್ತಿದ್ದಾರೆ ಶ್ರೀ ಮರಿಯಪ್ಪನ ಶ್ರೀಮಂತನಿದ್ದ ಆತನ ಮನೆಯಲ್ಲಿದ್ದ ಚಿನ್ನಾಭರಣ ಇತ್ಯಾದಿ ಕಾಣೆಯಾಗಿರುವುದಾಗಿ ಹೇಳಲಾಗುತ್ತಿದೆ

ಬೊಂಬಾಯಿ— ಇಲ್ಲಿಯ ರೂಪರೇಲ್ ಕಾಲೇಜಿನ ಕನ್ನಡ ಸಂಘದ ವಾರ್ಷಿಕೋತ್ಸವವು ತಾ 8ರಂದು ಪ್ರೊಫೆಸರ್ ಯಸ್ ಟಿ ಮುದ್ಗಲ್‌ರವರ ಅಧ್ಯಕ್ಷತೆಯಲ್ಲಿ ಜರಗಿತು ನ್ಯಾಯಮೂರ್ತಿ ಶ್ರೀ ಕೆ. ಜಿ ದಾತಾರ್ ಮತ್ತು ಶ್ರೀಮತಿ ದಾತಾರರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು ಕಾರ್ಯಾಧ್ಯಕ್ಷ ಪ್ರೊಫೆಸರ್ ಚಿದಂಬರ ದೀಕ್ಷಿತರು ಮುಖ್ಯ ಅತಿಥಿಗಳ ಪರಿಚಯಮಾಡಿದ ಮೇಲೆ ಕಾರ್ಯದರ್ಶಿ ಶ್ರೀ ರಘುನಾಥ ಪಕ್ಕಳರು ವರದಿಯನ್ನೋದಿದರು ಮುಖ್ಯ ಅತಿಥಿಗಳ ಹಿತೋಪದೇಶಪರ ಭಾಷಣವಾದ ಬಳಿಕ ಅಧ್ಯಕ್ಷರು ವಿದ್ಯಾರ್ಥಿಗಳಿಗೆ ಬಹುಮಾನ ಹಂಚಿದರು ನಂತರ ಜನಮನರಂಜನ ಕಾರ್ಯಕ್ರಮಗಳಾದುವು

ವಿಶಾಲ ಪ್ರಸಾರವುಳ್ಳ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಕಲಾ ಸಾರ್ವಭೌಮ-ಲೇಖಕ: ಶ್ರೀ ಸಿ. ಆರ್. ವೆಂಕಟೇಶ ಐರಲ್. ಪ್ರಕಾಶಕರು: ಎಸ್. ಎಸ್. ಎನ್. ಬುಕ್ ಡಿಪೋ, ಶ್ರೀ ಕೃಷ್ಣರಾಜೇಂದ್ರ ಮಾರ್ಕೆಟ್, ಬೆಂಗಳೂರು-೨. ಪುಟಗಳು: ४+೧೦೭ ಬೆಲೆ: ರೂ. ೧-४-೦.

ಈಶ್ವರರಾಯರ ಪ್ರಥಮ ಪುತ್ರ ವಿಶ್ವೇಶ್ವರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಅಧ್ಯಾಪಕ. ಎರಡನೆಯ ಮಗ ಬಲದೇವ ಇನ್ನೂ ಓದುತ್ತಿದ್ದ. ಈಶ್ವರರಾಯರು ಜಮೀನುದಾರರಾದರೂ ಬಲದೇವನ ಮನಸ್ಸು ವಿದ್ಯೆಗಿಂತ ನಾಟ್ಯದತ್ತ ಸರಿಯಿತು. ಸೆಂಟ್ರಲ್ ಕಾಲೇಜಿನ ರಾಮಚಂದ್ರಯ್ಯನವರ ಭಾವ ವೈದ್ಯನಾಥನ್‌ರು ಕರ್ನಾಟಕ ಕಲಾಮಂಡಳಿಯನ್ನು ಮೈಸೂರಲ್ಲಿ ತೆರೆದರು. ಅಲ್ಲಿ ತಮ್ಮ ಸೊಸೆ ಶಾರದೆಯನ್ನೂ ಕರೆತಂದು ನೃತ್ಯಾಭ್ಯಾಸವನ್ನು ಮಾಡಿಸಿದರು. ಇತ್ತ ಬಲದೇವನ ಮನಸ್ಸು ನಾಟ್ಯದತ್ತ ಹೊರಳಿ ಬಲವಾಗಿ ಸೆಳೆಯುತ್ತಿರಲು ತಂದೆಗೆ ತಿಳಿಯದಂತೆಯೇ ಆತ ವೈದ್ಯನಾಥನ್‌ರಲ್ಲಿ ವಿದ್ಯೆ ಕಲಿತು, ಪ್ರವೀಣನಾದ. ಶಾಲಾ ಪರೀಕ್ಷೆಯಲ್ಲಿ ನಾಪಾಸಾದ. ಮುಂದೆ, ವಿಶ್ವೇಶ್ವರನ ಮೂಲಕ ಶಾರದೆಯನ್ನು ಬಲದೇವನಿಗೆ ವಿವಾಹ ಮಾಡಿಸುವ ಯೋಜನೆ ನಡೆದು ವಧೂವರರ ಪರೀಕ್ಷಾ ವೇಳೆಯಲ್ಲಿ ಗೆಜ್ಜೆ ಕಟ್ಟುವ ಶಾರದೆಯನ್ನು ಸೊಸೆಯಾಗಿ ತರಲು ಈಶ್ವರರಾಯರು ನಿರಾಕರಿಸಿದರು. ಇದರಿಂದಾಗಿ ಬಲದೇವನ ಗುಟ್ಟು ಬಯಲಾಯಿತು. ಆತ ಮನೆ ಬಿಡಬೇಕಾಯಿತು. ಊರು ಪರವೂರುಗಳಲ್ಲಿ ತಿರುಗಿ ಅಂತರಾಷ್ಟ್ರೀಯ ನರ್ತಕನಾಗಿ ಕೀರ್ತಿಶಾಲಿಯಾದ ನಂತರ ತಾರಾ ಎಂಬ ತನ್ನ ನೃತ್ಯ ಸಂಗಾತಿಯೊಡನೆ ಮೈಸೂರಿಗೆ ಹಿಂದಿರುಗಿದ. ಅಲ್ಲಿ ನಡೆದ ಪ್ರದರ್ಶನದಲ್ಲಿ ತಮ್ಮ ಮಗನ ಕೀರ್ತಿಯನ್ನು ಕೇಳಿ ಈಶ್ವರರಾಯರು ನೊಚ್ಚಿಬಿಟ್ಟರು. ಬಲದೇವನು ಶಾರದೆಯಲ್ಲಿ ಅನುರಕ್ತನಾಗಿರುವುದನ್ನು ತಿಳಿದ ತಾರೆ ಕೊರಗಿ ಕೊರಗಿ ನುಡಿವಳು. ಆಷ್ಟರಲ್ಲಿ ಕೇಂದ್ರ ಸರಕಾರಕ್ಕೆ ಒಂದು ಕಲಾಸಂಘ ಸ್ಥಾಪಿಸಲು ಕಳುಹಿಸಿದ ಸಹಾಯಧನವೂ ಆತನ ಕೈಸೇರುವುದು. ಇದರಿಂದ ತಾರಾ ಕಲಾಮಂದಿರವು ಬೆಂಗಳೂರಲ್ಲಿ ರೂಪುಗೊಳ್ಳುವುದು.

ಕಾದಂಬರಿಯ ಮುಖ್ಯೋದ್ದೇಶವು "ಚಿಕ್ಕಂದಿನಲ್ಲಿ ಮಕ್ಕಳಿಗ ಯಾವ ವಿದ್ಯೆಯಲ್ಲಿ ಅಭಿರುಚಿ ಇದೆ ಎಂಬುದನ್ನು ಅರಿತು ಆ ವಿದ್ಯೆಯನ್ನು ಕಲಿಸಿದರೆ ಮಕ್ಕಳು ಮುಂದಕ್ಕೆ ಬರುವುದಲ್ಲದೆ ಅವರುಗಳು ಪ್ರಪಂಚಕ್ಕೆ ಒಂದು ದೊಡ್ಡ ಆಸ್ತಿಯಾಗುತ್ತಿರುವರು" ಎಂಬ ಸಿದ್ಧಾಂತವನ್ನು ಹೊರಹೊಮ್ಮಿಸುವುದೆಂದು ಲೇಖಕರು ತನ್ನ ನಾಲ್ಕು ಮಾತುಗಳಲ್ಲಿ ಹೇಳಿದ್ದಾರೆ. ಈ ಮಾತನ್ನು ಸತ್ಯವನ್ನಾಗಿಸಲು ಅವರು ಬಲದೇವನಿಗೆ ಬಾಲ್ಯದಲ್ಲಿದ್ದ ನೃತ್ಯದ ಹುಚ್ಚನ್ನು ಕೊನೆಗೆ ನೆಚ್ಚಿನನ್ನಾಗಿ ಮಾಡಿದ್ದಾರೆ ಆದರೆ ಇಂತಹ ಸಂದರ್ಭ ಎಷ್ಟು ಎಂಬುದು ಹೇಳಬರುವುದಿಲ್ಲ. ಸಾಮಾನ್ಯವಾಗಿ ೧೪-೧೬ ವರ್ಷ ಪ್ರಾಯದ ಮಕ್ಕಳಲ್ಲಿ ನೂರಾರು ಆಲೋಚನೆ ಯೋಜನೆಗಳಿರುವಾಗ ಅವುಗಳ ಮನಸ್ಸಿನಂತೆ ನಡೆಯಗೊಟ್ಟರೆ, ಹೆತ್ತವರ ಕರ್ತವ್ಯ ಮುಗಿಯಿತೆಂದು ಕೈಕಟ್ಟಿ ಕೂರುವುದು ಸಮಂಜಸವೆಂದು ಯಾರೂ ಹೇಳಲಾರರು. ಚಂದ್ರನ ಕಥೆಯನ್ನು ಆಸಕ್ತಿಯಿಂದ ಕೇಳಿದ ಮಗುವೊಂದು ತಾನು ಚಂದ್ರಲೋಕಕ್ಕೆ ಹೋಗುತ್ತೇನೆಂದು ಹಟ ಹಿಡಿದರೆ, ಹೆತ್ತವರು ಹೇಗೆ ಸಮಾಧಾನ ಮಾಡಬೇಕು? ಅಲ್ಲದೆ, ಇಂತಹ ಕಲ್ಪನೆಯು ಹಗಲುಗನಸಾಗುತ್ತದೆ ಮಾತ್ರ. ಆದರೆ, ಬಲದೇವನಿಗೆ ತಂದೆ ಶ್ರೀಮಂತರಾದುದರಿಂದ ಕಿಸೆಹಣ (Pocket Money) ಈಯುತ್ತಿದ್ದರು; ಆದರಿಂದ ಗುರು ಸಂಭಾವನೆಯನ್ನು ಕೊಡುವುದು ಸಾಧ್ಯವಾಯಿತು ಆದರೆ, ಎಲ್ಲ ಮಕ್ಕಳಿಗೂ ಇದೇ ರೀತಿ ಸಂದರ್ಭ ಸನ್ನಿವೇಶ ಬರುತ್ತವೆಯೆ? ಎಂಬುದು ಸಂದೇಹಾಸ್ಪದ. ಬಲದೇವನ ಸನ್ನಿವೇಶ, ವಾತಾವರಣ ಆತನಿಗೆ ಅನುಕೂಲವಾಯಿತು, ಆದರೆ ಎಲ್ಲರ ಪಾಲಿಗೂ ಇಂತಹ ಬಯಕೆಯ ಕೊನೆ ಸುಖಾಂತವಾಗುತ್ತದೆಂದು ಹೇಳಬಾರದು.

ಕಾದಂಬರಿಯ ಶೈಲಿ ತೀರಾ ಸಾಮಾನ್ಯವಾಗಿದೆ ಶಬ್ದಗಳ ಓಡುನಂತೆ ಕಾಲು ಹೋಗುವುದಿಲ್ಲವೆಂದು ಕೆಲವೊಮ್ಮೆ ಲೇಖಕರು ಮರೆತುಬಿಟ್ಟಂತಿದೆ. ಬಹಳ ವರ್ಷಗಳ ಹಿಂದೆ ಬರೆದುದೆಂದು ಹೇಳಲಾದ ಈ ಕಾದಂಬರಿಯ ಕಥೆ ಪಾತ್ರರಚನೆ, ಶೈಲಿ, ಸನ್ನಿವೇಶವೆಲ್ಲವೂ ಆ ವರ್ಷಕ್ಕೆ ಒಳ್ಳೆಯದಾಗಿದ್ದಿರಬಹುದಾದರೂ ಈ ಕಾಲಕ್ಕೆ ಅಷ್ಟೇನೂ ರುಚಿಸುವುದಿಲ್ಲವೆನ್ನಬೇಕಾಗಿದೆ. ಅಂತೂ ಈ ಕಾಲದ ತೀರಾ ಸಾಮಾನ್ಯವೆನಿಸಿದ ಈ ಕಾದಂಬರಿಯನ್ನು ಸ್ವಲ್ಪ ತಿದ್ದಿ ಪ್ರಕಟಿಸಬಹುದಾಗಿತ್ತು. ೧೦೭ ಪುಟಗಳ ಕರಡು ಕಾಗದದ ಈ ಪುಸ್ತಕದ ಬೆಲೆ ತುಸು ಏರಿಕೆಯಲ್ಲಿಯೇ ಇದೆ.

ಶಿಲಾಮುಖ ಬರೆದವರು: ಗೋವಿಂದ ಮೂರ್ತಿ ದೇಸಾಯಿ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ ಪುಟಗಳು viii+೧೧೬. ಬೆಲೆ. ರೂ. ೧ ೪ಆ.

ಕರ್ನಾಟಕದಲ್ಲಿ ಹಳ್ಳಿ ಹಳ್ಳಿ ಸಾವಿರ ಪಿಶೇಷತೆಗಳಿವೆ. ಇಲ್ಲಿನ ಪ್ರತಿಯೊಂದು ಊರಿಗೂ ತನ್ನದೇ ಆದ ಸ್ಥಳಪುರಾಣವಿದೆ; ಪ್ರತ್ಯೇಕ ಕಲ್ಲಿಗೂ ತನ್ನದೇ ಕಥೆಯಿದೆ, ಇಂತಹ ಕಥೆಗಳಲ್ಲಿ ಹಲವಾರನ್ನು ನಾವು ಆಯಾ ಊರವರ ಬಾಯಿಂದ ಕೇಳಬಹುದು. ಅವರೂ ನಮ್ಮಂತೆಯೇ ತಮ್ಮ ಹಿರಿಯರ ಮುಖದಿಂದ ತಿಳಿದುಕೊಂಡ ಕಥೆಗಳಿವು. ಆದುದರಿಂದ ಅವುಗಳಲ್ಲಿ ನೆಲ್ಲೂ ಜಳ್ಳೂ ತುಂಬಿರಬಹುದು. ಇಂಥಹ ಕಥೆಗಳಲ್ಲಿ ವಾಸ್ತವಿಕಾಂಶ ಕಡಿಮೆಯಿರಬಹುದಾದರೂ, ಕಾಲ್ಪನಿಕಾಂಶವೇ ಪ್ರಾಧ್ಯಾನ್ಯವನ್ನು ಪಡೆದಿರಬಹುದಾದರೂ ಅವು ಕೇಳಲು ಸುಂದರವೂ ಮನನೋಹರವೂ ಆಗಿರುವುದಲ್ಲದೆ ಕೇಳಿದ ಮೇಲೆ ಇದ್ದರೂ ಇರಬಹುದು ಎಂದು ಅನ್ನಿಸುತ್ತದೆ. ಶಿಲಾಮುಖ ಎನ್ನುವುದು ಈ ಮಾದರಿಯ ೧೦ ಕಥೆಗಳ ಸಂಕಲನ.

ಇಲ್ಲಿ ಕಾಣಬರುವ ಎಲ್ಲ ಕಥೆಗಳಲ್ಲಿಯೂ ಮುಖ್ಯ ಪಾತ್ರ ವಹಿಸುವವರು ದೇವರ ಕೃಪೆ. ಆವ ಕೃಪೆಗಳನ್ನು ಪಡೆಯುತ್ತಾರೆ ಕೆಲವರು ದೈವವನ್ನೇ ತಮ್ಮ ಅಂಕಿತದಲ್ಲಿಟ್ಟುಕೊಂಡವರಂತೆ ಕಂಡರೂ ಇನ್ನು ಕೆಲವರು ದೈವ ದ್ರೋಹವನ್ನೂ ಮಾಡುವುದುಂಟು. ಅನಾಚಾರಾಸಕ್ತರಾದಾಗ ಅಂತವರಿಗೆ ಈ ದೈವ ತಮ್ಮ ತಪ್ಪನ್ನು ಮನವರಿಕೆಮಾಡಿಕೊಡುವುದು. ಅಂತೂ ಕಥೆಗಳು ಓದುವಾಗ ಕುತೂಹಲ ಕೆರಳುತ್ತದೆ. ಅಯ್ಯೋ ಹೀಗಾಗಬಾರದಿತ್ತು ಎನಿಸುತ್ತದೆ.

ಶಿಲಾಮುಖ ಈ ಸಂಕಲನದ ಮೊದಲ ಕಥೆ ಮತ್ತು ಹೃದಯಂಗಮವಾದ ಕಥೆ ಜೊತೆಗೆ ಸ್ವರ್ಗಸುಖ. ಸಾವಿರಗತ್ತಿಯ ತೋಟ, ಹೊಲತಿ ಕೋಟೆ ಜೋಡು ಗೋರಿಗಳು ಉತ್ತಮವಾಗಿವೆ ಇನ್ನು ಕಲ್ಲುಗೋರಿ ಎನ್ನುವುದು ಪ್ರಣಯಕಥೆ; ಹಾಗೆಯೇ ಶಿವಪಾರ್ವತಿಯೂ ಎಲ್ಲ ಕಥೆಗಳೂ ಓದುವಾಗ ಮನಸ್ಸಿಗೆ ಸಂತೋಷವಾಗುತ್ತದೆ ಕಾವ್ಯಾನಂದವನ್ನು ತಂದೊಪ್ಪಿಸುತ್ತದೆ. ಸಾಮಾನ್ಯವಾಗಿ ಎಲ್ಲ ಕಥೆಗಳೂ ಮನಂತವಾಗಿಯೇ ಇನೆಯಾದುದರಿಂದ ಆಯಾ ಪಾತ್ರಗಳ ರಚನೆ, ಚಿತ್ರಣಗಳು ನಮ್ಮ ಕಣ್ಣುಗಳಲ್ಲಿ ನೀರು ಸುರಿಸುತ್ತವೆ. ಕನಿಕರದ ಕೂಗು ನಮ್ಮ ಹೃದಯಾಂತರಾಳದಿಂದ ಎದ್ದು ಬರುತ್ತದೆ ಸಂಶೋಧಕನಿಗೆ ಇದ್ದರೂ ಇರಬಹುದೆಂಬ ಸಂಭಾವನೆ ಮೂಡುತ್ತದೆ. ಲೇಖಕರು ಈ ಕಥೆಗಳನ್ನು ಕೇಳಿಯಾಗಲಿ ಓದಿಯಾಗಲೀ ಸಂಗ್ರಹಿಸಲಿಲ್ಲ; ಆಯಾ ಊರುಗಳ ದೇವಾಲಯಗಳ ಹೆಸರುಗಳನ್ನ ಎತ್ತಿಕೊಂಡು ಆ ಹೆಸರು ಆ ಸನ್ನಿವೇಶ ಒದಗಿಬರುವರೆ ಇರಬಹುದಾದ ಕಾರಣಗಳನ್ನ ಊಹಿಸಿಯೇ ಅವುಗಳ ಹಿಂದೆ ಈ ಕಥೆಗಳನ್ನು ಹೆಣೆದು ಬರೆದಿದ್ದಾರೆ. ಈ ಕಥೆಗಳಲ್ಲಿ ವರ್ಣಿತವಾದ ವಿಷಯಗಳನ್ನು ಪುಸ್ತಕ ಓದುವಾಗ ಒಪ್ಪಿಬಿಡೋಣ ಎನ್ನಿಸುತ್ತದೆ ಆದರೆ ಸಂಶೋಧಕರೆಂಬ ಪಟ್ಟ ಹಚ್ಚಿಕೊಂಡವರೇನೆನ್ನುವರೋ ಎಂಬ ಸಂದೇಹದಿಂದ ಕಾವ್ಯರಸಾಸ್ವಾದನೆಯನ್ನು ಮಾತ್ರ ಮಾಡಿ ಸುಮ್ಮನಿರಬೇಕಾಗಿದೆ. ಶ್ರೀ ಗೋವಿಂದ ಮೂರ್ತಿಯವರ ಕುಂಚದಂತಹ ಲೇಖನಿಯಿಂದ ಇನ್ನೂ ಇಂತಹ ಕೃತಿ ಚಿತ್ರಣಗಳನ್ನು ಅಪೇಕ್ಷಿಸಿದರೆ ಅವರ ಭಂಡಾರದಲ್ಲಿ ಸಗ್ರಹವಿರಬಹುದು ಅವೂ ಬೇಗನೇ ಕನ್ನಡಿಗರಿಗೆ ದೊರೆಯುವಂತಾಗಲಿ ಎಂದು ಹಾರೈಸುತ್ತೇವೆ.

ಭಾರತದ ಅಂಗ ಕಾಶ್ಮೀರ-ಬರೆದವರು: ಶ್ರೀ ಎಂ. ರಘುನಂದನರಾವ್ ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ ಪುಟಗಳು. ೩೧ ಬೆಲೆ: ರೂ ರೂ. 0-6-0.

ಭಾರತದಲ್ಲಿ ಸೇರ್ಪಡೆ ಹೊಂದಿರುವ ಕಾಶ್ಮೀರದ ಬಗ್ಗೆ ವಾದವಿವಾದಗಳು ಎದ್ದು ಈ ಸಮಸ್ಯೆ ಮತ್ತೂ ಮತ್ತೂ ಜಟಿಲಗೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ ನಮ್ಮದೆಂದು ಹೇಳುವ ಕಾಶ್ಮೀರದ ಬಗ್ಗೆ — ಆ ಸಮಸ್ಯೆ ಹೇಗೆ ಹುಟ್ಟಿಕೊಂಡಿತು. ಹೇಗೆ ಬೆಳೆಯಿತು ಮತ್ತು ಏಕೆ ಸ್ಥಗಿತವಾಗಿದೆ. ಇಂತು ತೀರ್ಮಾನಕ್ಕೇಕೆ ವಿಲಂಬವಾಗುತ್ತಿದೆ ಎಂಬಿತ್ಯಾದಿ ವಿವರಗಳನ್ನು ನಾವೇ ತಿಳಿದುಕೊಳ್ಳದಿದ್ದರೆ, ಅದು ನಮ್ಮ ತಿಳಿಗೇಡಿತನವಾಗುತ್ತದೆ ಭಾರತದ ಅಂಗ-ಕಾಶ್ಮೀರ ಎಂಬ ಈ ಪುಸ್ತಕ ಪರಿಮಾಣದಲ್ಲಿ ಸಣ್ಣದೆನಿಸಬಹುದಾದರೂ ಪರಿಣಾಮವು ಹಿರಿದು ಕಾಶ್ಮೀರಸಂಬಂಧದ ಸ್ಪರ್ಧೆ ಹುಟ್ಟಿನಂದಿನಿಂದ ಇಂದು ವರೆಗಿನ ಘಟನೆಗಳನ್ನು ಸಂಕ್ಷೇಪವಾಗಿಯೂ ಸ್ಪಷ್ಟವಾಗಿಯೂ ಇಲ್ಲಿ ವಿವರಿಸಲಾಗಿದೆ

ಕನ್ನಡದಲ್ಲಿ ತರುಣ ಬರಹಗಾರರಾದ ರಘುನಂದನರಾಯರು ಕಾಶ್ಮೀರದ ಬಗ್ಗೆ ವಿಶೇಷ ಕಣ್ಣಿಟ್ಟು ಕೊಂಡಿದ್ದುದು ಈ ಅವರ ಕೃತಿಯಿಂದ ವ್ಯಕ್ತವಾಗುತ್ತದೆ. ಪಾಕಿಸ್ತಾನವು ಕುಹಕದಲ್ಲಿ ತಾನು ಗಂಟಿರಿಸುತ್ತಿದ್ದೇನೆಂದು ತಿಳಿದು ಮತ್ತೂ ಅದೇ ದಾರಿಯಲ್ಲಿ ಗಮಿಸುವುದು ಸರ್ವಥಾ ವಿವೇಕವಲ್ಲ ಈ ಸಣ್ಣ ಪುಸ್ತಕದಲ್ಲಿ ಇಂತಹ ಗಹನ ಗಂಭೀರವಾದ ರಾಜಕೀಯ ವಿಷಯವು ಸಾಮಾನ್ಯ ಜನತೆಗೂ ಅರ್ಥವಾಗುವಂತೆ ಅತನಿಗೆ ಸತ್ಯ ಸಂಗತಿ ತಿಳಿಯುವಂತೆ ವಿವರಿಸಲಾಗಿದೆ. ಹಾಗಾಗಿ ಇದು ಪ್ರತಿಯೊಬ್ಬ ಭಾರತೀಯನೂ ಅವಶ್ಯ ತಿಳಿದುಕೊಳ್ಳಲೇ ಬೇಕಾದ ಸಂಗತಿಗಳನ್ನೊಳಗೊಂಡಿರುವುದರಿಂದ ಕನ್ನಡಿಗರೆಲ್ಲರೂ ಹೃತ್ಪೂರ್ವಕ ಸ್ವಾಗತಿಸಬೇಕಾದ ಕಿರುಹೊತ್ತಗೆಯೆಂದು ಇದನ್ನು ನಾವು ಪ್ರತ್ಯುಪಕಾರವಾಗಿ ಸ್ವೀಕರಿಸುತ್ತೇವೆ. ಹಾಗೆಯೇ ಕನ್ನಡ ಜನತೆ ಲೇಖಕ ಪ್ರಕಾಶಕರಿಗೆ ತಕ್ಕ ಪ್ರೋತ್ಸಾಹವೀಯಬೇಕೆಂದು ಬಯಸುತ್ತೇವೆ.

—ಗೋರಾ.

ಮೂರು ನೂತನ ಕಾರಖಾನೆಗಳು

(೩ನೇ ಪುಟದಿಂದ)

ಉತ್ಪಾದಿಸುತ್ತೇವೆ. ಆದುದರಿಂದ ಇದ್ದುದನ್ನು ಶುದ್ಧೀಕರಿಸುವ ಎರಡು ಕಾರಖಾನೆಗಳ ನಿರ್ಮಾಣವಾಗಲಿರುವುವು. ಆದರೆ, ಇವು ರಾಜ್ಯಸರಕಾರಗಳ ಅಡಿಯಲ್ಲಿದ್ದು ಅವುಗಳಿಗಾಗಿ ಐದುಕೋಟಿ ರೂಪಾಯಿಗಳು ವ್ಯಯವಾಗುವುವು.

ಭಾರತದ ಔದ್ಯೋಗಿಕ ಪ್ರಗತಿಯು ಉಕ್ಕಿನ ಮೇಲೆ ನಿರ್ಭರವಾಗಿದೆ. ಆದುದರಿಂದ ಭಾರತ ಸರಕಾರವು ಉಕ್ಕಿನ ಕಾರಖಾನೆಗಳಿಗೆ ತನ್ನ ಈ ಬಾರಿಯ ಯೋಜನೆಯು ಪ್ರಾಧಾನ್ಯವಿತ್ತಿದೆ.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/ ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚೆಲುವಾಗಿ ಮುದ್ರಿಸಿ ಕೊಡಲಾಗುವುದು.

NAVAYUGA PRESS, UDIPI.

ತಂತಿ ಕಡಿದ ವೀಣೆ

(೬ನೇ ಪುಟದಿಂದ)

ಶ್ರೀಕಂಠರಾಯರಿಗೆ ಚಂದ್ರಶೇಖರರಾಯರ ಮೇಲೆ ಒಳ್ಳೆಯ ಅಭಿಮಾನ ನಂಟತನದ ಪ್ರೀತಿಯಿತ್ತು. ಆದರೆ ಎರಡು ಕುಟುಂಬಗಳ ಹಿರಿಯರಿಗೇನೋ ಒಂದೆ ಪ್ರಬಲವಾದ ವಿರೋಧವಿತ್ತಂತೆ, ಆದುದರಿಂದ ವಿಚಿತ್ರ ಭಾವನೆಯ ಚಂದ್ರಶೇಖರರಾಯರು ಪಾರಂಪರ್ಯವಾಗಿ ವಿರೋಧವನ್ನು ಮನದೊಳಗಿಟ್ಟು ಪಾಲಿಸಿಕೊಂಡು ಬಂದಿದ್ದರು. 'ಶ್ರೀಕಾಂತ'ನೆಂಬ ಹೆಸರೇ ಅವರಿಗೆ ಸೇರುತ್ತಿರಲಿಲ್ಲ. ಅವನಿಗೂ ಬದ್ಧ ವೈರವೆಂದವರು ಮನದಲ್ಲಿಯೇ ದೃಢಪಡಿಸಿಕೊಂಡಿದ್ದರು. ಅವರೊಡನೆ ಸ್ನೇಹ ಬೆಳೆಸಬೇಕು ಅವರ ಸೌಹಾರ್ದ್ಯ ಸಿಗಬೇಕೆಂದು ಶ್ರೀಕಾಂತರಾಯರಿಗೆ ಬಲವಾದ ಇಚ್ಛೆಯಿದ್ದರೂ ಚಂದ್ರಶೇಖರರಾಯರ ಸಿಡುಕಿನ ರೀತಿಗೆ ಅಂಜಿ ಸುಮ್ಮನವರ ಪಾಡಿಗಿದ್ದರು; ಆದರೆ ಅವರಲ್ಲಿ ಒಂದು ನೋವು ಇದ್ದೇ ಇತ್ತು.

ಒಂದೇ ಪಟ್ಟಣದಲ್ಲಿ ಇಬ್ಬರೂ ವಾಸವಾಗಿದ್ದರು. ಉದಯ ಆಗಾಗ ಶ್ರೀಕಂಠರಾಯರಲ್ಲಿಗೆ ಬರುತ್ತಿದ್ದ. ಮಾವ ಅತ್ತೆಯರು ಪ್ರೀತಿಯಿಂದ ಕಾಣುತ್ತಿದ್ದರು. ಗುಣದಲ್ಲಿ ತನ್ನ ತಾಯಿಯ ಪಡಿನೆಳಲಿನಂತಿದ್ದ ಅತ್ತೆಯನ್ನು ಕಂಡಾಗ, ತನ್ನ ಮೇಲಿರುವ ಮಮತೆಯನ್ನು ಕಂಡಾಗ ಅವನಿಗೆ ಆನಂದವಾಗುತ್ತಿತ್ತು. ಹೆತ್ತ ತಾಯಿಯಂತೆ ತಾಯಿಯಾಗುವವರೂ ಇರುವರೆಂದು ಅವನು ಭಾವಿಸಿದನು. ಉದಯ ಫಸ್ಟ್ ಫಾರ್ಮಿನಲ್ಲಿ ಓದುತ್ತಿರುವಾಗ ಮಾಲತಿ ಮೂರನೇ ತರಗತಿಯಲ್ಲಿದ್ದಳು. ಇಬ್ಬರೂ ಜತೆಯಾಗಿಯೇ ಶಾಲೆಗೆ ಹೋಗುವರು. ಸಂಜೆ ಇಬ್ಬರೂ ಶಾಲೆಯಿಂದ ಹೊರಟು ಮಾಲತಿಯ ಮನೆ ಮುಟ್ಟಿದೊಡನೆ ಉದಯ ತನ್ನ ಮನೆಗೆ ಹೋಗುವನು. ಮಕ್ಕಳೊಳಗಿನ ಪ್ರೀತಿಯನ್ನು ಕಂಡು ಮಾಲತಿಯ ತಂದೆ ತಾಯಿಗಳಿಗೆ ಸಂತಸವಾಗುತ್ತಿದ್ದರೂ ಏನೋ ಒಂದು ದುಃಖ ಅದರೆಡೆಯಲ್ಲಿ ಇಣಿಕಿ ಹಾಕುತ್ತಿತ್ತು.

ಉದಯ ಆಗಾಗ ಶ್ರೀಕಾಂತರಾಯರಲ್ಲಿಗೆ ಹೋಗಿಬರುತ್ತಿರುವುದ ಚಂದ್ರಶೇಖರರಾಯರಿಗೆ ಇಚ್ಛೆಯಿರಲಿಲ್ಲ. ಅವರು ಅಸಮಾಧಾನದಿಂದ ಮನದಲ್ಲೇ ಸಿಡಿಮಿಡಿಗುಟ್ಟುತ್ತಿದ್ದರೂ ಶಾರದಮ್ಮ ಮಗನ ಮೇಲೆ ಬೇಸರಿಸದ ಸಂತೋಷಪಡುತ್ತಿದ್ದರು. ಹೇಗಾದರೂ ಇಬ್ಬರ ಮನಸ್ಸು ಒಂದುಗೂಡಲೆಂದು ಬಯಸುತ್ತಿದ್ದರು.

ಆಟಪಾಟಗಳಲ್ಲಿ ಉದಯ ಮಾಲತಿಯರು ಒಟ್ಟಾಗಿಯೇ ಇರುತ್ತಿದ್ದರು. ರಜಾದಿನಗಳು ಕೆಲವೊಮ್ಮೆ ಉದಯನಿಗೆ ಮಾವನ ಮನೆಯಲ್ಲಿಯೇ ಕಳೆದು ಹೋಗುತ್ತಿತ್ತು. ಹೀಗಯೇ, ಅವರವರ ಕ್ಷೇತ್ರದಲ್ಲಿ, ಅವರವರ ರೀತಿಯಲ್ಲಿ ಸಾಗಿ ದಿನಗಳು ವರ್ಷಗಳಾಗಿ ಸಾಗಿ ಹೋದುವು. ಉದಯ ಹೈಸ್ಕೂಲಿನ SSLC ಯ ಗೋಡೆ ದಾಟಿ ಕಾಲೇಜಿನ ಮೆಟ್ಟಲು ಹತ್ತಿದ. ಮಾಲತಿ ನಾಲ್ಕನೇ ಫಾರ್ಮಿನಲ್ಲಿದ್ದಳು.

ಉದಯ ಮಾಲತಿಯರನ್ನು ಕಂಡಾಗ ಶ್ರೀಕಾಂತರಾಯ ದಂಪತಿಗಳಿಗೆ ಏನೋ ಒಂದು ಹೊಸ ಆಸೆ ಅಂಕುರಿಸುತ್ತಿತ್ತು. ಅವರ ಮನಸ್ಸಿನಂತೆ ಗೆ ಸ್ನೇಹದ ಬೆಸುಗೆ ಬಲವಾಗಿ ಮಕ್ಕಳಿಬ್ಬರ ಜೀವನ ನಂದನವಾಗಲೆಂದು ಆಶಿಸುತ್ತಿದ್ದರು. ಆದರೆ ಹೇಗೆ? ಈ ಯೋಚನೆಗಳಿಂದಾಗಿ ದೂರದ ಬಯಕೆಯಿಂದಾಗಿ ಯೌವನದಲ್ಲಿ ಕಾಲಿಡುತ್ತಿರುವ ಮಗಳ ವರಾನ್ವೇಷಣಾ ಕಾರ್ಯಕ್ಕೂ ಮನಸ್ಸು ತಡೆಪಂತಾಗಿ ಸ್ವಲ್ಪ ಸಾವಧಾನದಿಂದಿದ್ದರು. ಉದಯ-ಮಾಲತಿಯರು ಚಿಕ್ಕ ಮಕ್ಕಳಾಗಿದ್ದಾಗ ಹೇಗಿದ್ದರೋ ಅದಕ್ಕಿಂತಲೂ ಹೆಚ್ಚಿನ ಪ್ರೀತಿಯಿಂದ, ಅದೇ ಪ್ರೇಮದಿಂದ ವಿದ್ಯಾಭ್ಯಾಸ ಜೀವನದಲ್ಲಿ ನಲಿಯುತ್ತಾ ಸಾಗುತ್ತಿದ್ದರು.

ಆದರೆ ಅವರ ಈ ಆನಂದ ಹೆಚ್ಚುಕಾಲ ಉಳಿಯುವಂತಿರಲಿಲ್ಲ. ಉದಯ ಕನಸಿನ ಗಂಟೆಂದು ತಿಳಿದ ಮಾಲತಿಯ ತಂದೆ ಮಗಳ ವರಾನ್ವೇಷಣೆಗಾರಂಭಿಸಿದರು. ಇಷ್ಟರ ಕಿವಿಗೂ ಸದ್ದಿಯ ಗಾಳಿ ಬೀಸಿತು. ಇಬ್ಬರ ಮನವು ನೊಂದಿತು. ಏನಾಗುವುದೋ? ಆಂತೂ ತುಂಬಿದ ಸರೋವರದೊಳಗೆ ಹೊಸ ನಿರ್ಮಲ ಜಲ ಬಂದು ಸೇರುವಂತೆ ತೋರಲಿಲ್ಲ.

— ೩ —

"ಯೇಗೆ, ತಂದೆ ಎನ್ನಿಸಿಕೊಂಡವನ ಮಾತು ಕೇಳುತ್ತೀಯೋ, ಇಲ್ಲ ಮೂರ್ಖನ ದಾರಿಯಲ್ಲಿಯೇ ಹೋಗುತ್ತೀಯೋ?" ಚಂದ್ರಶೇಖರ ರಾಯರು ಕೇಳಿದರು.

ಏನೆನ್ನಬೇಕು ಇದಕ್ಕೆ? ಇಷ್ಟು ಸುಂದರಿ, ಶಾಂತ ಮೂರ್ತಿ ಮಾಲತಿಯ ಮಧುರಾಕೃತಿ ಕಣ್ಣೆದುರು ಹಾದು ಹೋಯಿತು. ಆ ದೀನಭಾವದ ಮೊಗ ಕಣ್ಣೀರ್ಗರೆದು ತಲೆ ತಗ್ಗಿಸಿದಂತೆ ಕಂಡಿತು ಉದಯನಿಗೆ. ತನ್ನ ಬಾಳು ಸುಗಮವಾಗಲೆಂದು ತಂದೆ ವಧುವಿನ ಶೋಧಕ್ಕೆ ತೊಡಗಿದ್ದಾರೆ. ಅಪ್ಪ ಲ್ಲೇನು ಹೇಳಲೆಂದ ಉದಯನಿಗೆ ತೋರಲಿಲ್ಲ. ಕಟ್ಟ ಕಡೆಗೆ, ಇದೇ ಕಡೆಯ ಉಪಾಯವೆಂದ.

'ಇದೊಂದೇ ವರ್ಷ ಕಳೆ. ಎಲ್ಲಿ ಅಪ್ಪಾ ಮತ್ತೆ ನಿಮ್ಮ ಇಚ್ಛೆಗೆ ನಾನೆಂದೂ ಅಡ್ಡಿ ಬರುವುದಿಲ್ಲ. ತಾಯಿಯೂ ಅಷ್ಟರ ವರೆಗೆ ತಾಳಿಕೊಳ್ಳುವಂತೆ ನಾನು ಹೇಳುತ್ತೇನೆ" ಉದಯ ಹೇಳಿದ ಅಸಮಾಧಾನದ ಬಿಟ್ಟುಸಿರಿನೊಂದಿಗೆ ಚಂದ್ರಶೇಖರ ರಾಯರು ಸುಮ್ಮನಾದರು. ನಾಲ್ಕು ದಿನ ಬಿಸಿಯಾದ ಮಾತು, ನಾಲ್ಕು ದಿನ ಮದುವೆಯ ಭಗ್ನದ ಸುದ್ದಿ ಬಳಿಕ ಎಲ್ಲರ ಹೃದಯವೂ ಸಮಾಧಾನದ ಕಡೆಗೆ ಬಿಸಿ ನೀರು ತಣಿಯುವಂತೆ ಆಗಿತ್ತು. ಉದಯನ ವಿವಾಹದ ಕಾರ್ಯ ಕಡೆಗೆ ಅವನಿಚ್ಛೆಯಂತಾಯಿತು. ಕೊರಳ ವರೆಗೆ ಬಂದ ಹಾವು ಸುತ್ತಿಕೊಳ್ಳದೆ ಹೊರಟು ಹೋಗಿತ್ತು. ಆದರೆ?

ಶ್ರೀಕಂಠರಾಯರ ಮನೆಗೆ ಹೋದ ಉದಯನಿಗೆ ಅಲ್ಲೇನೋ ವ್ಯತ್ಯಾಸವಾದಂತೆ ಕಂಡಿತು. ಹಿಂದಿನ ಪ್ರೀತಿಯು ಹೊಳೆವ ಮಮತೆಯು ಕಳೆ ಅಂತೆಯೇ ಇದ್ದಂತಿರಲಿಲ್ಲ. ಅತ್ತೆ ಮಾವಂದಿರು ಸರಿಯಾಗಿ ಮುಖ ತೋರಿಸುತ್ತಿರಲಿಲ್ಲ. ಅವರ ಮೊಗದಲ್ಲಿ ಚಿಂತೆಯೂ ನೆಲಸಿತ್ತು. ಮನೆಯೊಳಗೇನೂ ಉತ್ಸಾಹವಿಲ್ಲ. ಯಾರಿಗೂ ಮಾಲತಿಯೊಡನೆ ಮಾತನಾಡುವಾಗ ತಲೆ ತಗ್ಗಿಸುತ್ತಿದ್ದಳು. ಮುಖ ನೋಡುತ್ತಿರಲಿಲ್ಲ. ಈ ಮಧ್ಯೆ SSLC ಪರೀಕ್ಷೆಯೂ ಕಳೆದು ಮುಂದೆ ಗೃಹಿಣಿಯಾಗಬೇಕೆಂದು ಬಯಸುವ ತಂದೆ ತಾಯಿಗಳು ಅವಳನ್ನು ಮುಂದೆ ಓದಿಸುವ ಇಚ್ಛೆಯಿಂದಿರಲಿಲ್ಲ. ಅವರ ಮನದ ದೂರದ ಆಸೆ ಸಲಿಸಿ, ಅದರ ನಿರ್ಧಾರವಾಗುತ್ತಿದ್ದರೆ ಆ ವಿದ್ಯಾಭ್ಯಾಸದ ಭಾಗ್ಯ ಮಾಲತಿಗಿರುತ್ತಿತ್ತು. ಆದರೆ ಇಂದೀಗ ನಿರ್ಧಾರವಲ್ಲದ ಕಾರ್ಯವನ್ನು ನಿರ್ಧಾರದ ಮೆಟ್ಟಲಿಗೆ ತರುವುದು ಸ್ವಾಭಾವಿಕವೇ ಆಗಿತ್ತು. ಮಾಲತಿ ತುಂಬಾ ಕೃಶಳಾಗಿದ್ದಳು. ಶಾಂತತೆಯೇ ಮೂರ್ತಿಭವಿಸಿ ಒಂದಂತಿದ್ದಳು. ಇಂದು ಉದಯನೊಡನೆ ಮಾತನಾಡಬೇಕೆಂಬ ಉತ್ಕಟೇಚ್ಛೆಯಿದ್ದರೂ ಸಂದರ್ಭ ಬಂದಾಗ ಮೂಕಿಯಾಗಿ ಹೋಗುತ್ತಿತ್ತು. ಅವಳೂ ತಲೆ ತಗ್ಗಿಸಿ ಕುಳಿತರೆ ಏನು ಮಾಡಲೆಂದು ಉದಯನಿಗೂ ತೋರುತ್ತಿರಲಿಲ್ಲ. ಅಪೂರ್ವ ಸುಂದರಿಯಾಗಿದ್ದರೂ ಕೃತಕತೆಯಿಲ್ಲದೆ ಸಹಜ ಸುಂದರಿಯಾಗಿ, ಸರಳ ಜೀವಿಯಾಗಿದ್ದ ಮುಗ್ಧೆ ಮಾಲತಿಯು ನಿರ್ಮಲವಾಗಿದ್ದ ಬಾಡಿದ ಮುಖ, ಕಾಂತಿ ಸೂಸುತ್ತಲಿದ್ದು ಬಾಡಿದ ದೇಹ, ಆ ಸರಳ ಉಡುಗೆಯಲ್ಲಿ ಉದಯನ ಬಾಲ್ಯದ ಗೆಳತಿ ಜೀವನದ ಪಡಿನೆಳಲಾಗಿದ್ದ ಮಾಲತಿ ಈಗ ಅವನ ಹೃದಯಕ್ಕೆ ವೇದನೆಯನ್ನು ನೀಡುವವಳಾಗಿದ್ದಳು.

ಹೀಗೆಯೇ ದಿನಗಳುರುಳಿದುವು! ನೆರೆಮನೆಯ ತೋಟದಲ್ಲಿ ಅರಳಿದ ಹೂವನ್ನು ಕಂಡು ತೃಪ್ತಿಪಡುತ್ತಿದ್ದ, ದಿನಗಳೆದಂತೆ "ಅತ್ತ ಇಣಿಕಿಯೇನು? ಫಲವಾರದು" ಎಂದು ಮನಸ್ಸು ಬೇಸರಗೊಂಡಾಗ, "ಆಗಾಗ ನೋಡುತ್ತಿದ್ದರೆ, ಉಳಿದವರು ಕಂಡು ಏನಾದರೂ ಅನ್ನಬಹುದ ಎಷ್ಟೆಂದರೂ ತನ್ನದಲ್ಲ" ಎಂದು ತೋರಿದಾಗ, ಹೃದಯದಲ್ಲಿ ವೇದನೆ ತುಂಬಿದ್ದರೂ ಸಮ್ಮತಿಯ ನಡೆಬರುವುದು ಸಹಜ. ಅವರ ನಿರಪೇಕ್ಷಾ ಭಾವದಿಂದಲ್ಲ! ಅಂತೆಯೇ ಉದಯನೂ ಅತ್ತ ಸುಳಿಯುವುದೂ ಕಡಿಮೆಯಾಯಿತು. ಅವರಾದರೂ ಯಾವ ಮುಖದಿಂದ, ಯಾವುದಕ್ಕಾಗಿ ಕರೆಯಬೇಕು? ಮಾಲತಿಗಷ್ಟು ಶಕ್ತಿಯಿರಲಿಲ್ಲ. ಹೆಣ್ಣು ಅಬಲೆಯಲ್ಲವೆ?

ಚಿಂತೆಯೊದಗಿದ ಕಾಲಕ್ಕೆ ಸರಿಯಾಗಿ ಉದಯನಿಗೆ ಟೈಫಾಯಿಡ್ ಬಂದು ಅಂಟಿಕೊಂಡಿತು. ಆಸ್ಪತ್ರೆಗೆ ಸಾಗಬೇಕಾಯಿತು. ಆದರೆ ಜನಜೀವನ ನಿಲ್ಲುವುದೆ? ಅಲ್ಲಿ ಏನು ನಡೆಯಬೇಕಿತ್ತೋ ಅದು ನಡೆಯುತ್ತಿತ್ತು. ನಡೆದಾಗಬೇಕಾದುದು ನಡೆದು ಹೋಯಿತು.

— ೪ —

ಪಡು ದಿಗಂತ. ನಿರ್ಮಲಾಕಾಶ. ಭೋರೆಂದು ಗರ್ಜಿಸುವ ಕಡಲಿನ ಅಲೆಗಳು! ಮರುಕಳಿಸುವ ನೆನಪು! ವಿಚಿತ್ರ ರೀತಿಯಲ್ಲಿ ಹೃದಯವನ್ನು ಉಯ್ಯಾಲೆಯಾಡಿಸುವ ಪರಿಸರ. ಉದಯನು ಮರಳಮೇಲೆ ಗಾಳಿಸೇವನೆಗೆಂದು ಏಕೋ ನಿರ್ವಿಣ್ಣನಾಗಿ ಕುಳಿತಿದ್ದ.

"ಕಲ್ಲಿನ ಬೊಂಬೆ, ಮರದ ಕೊರಡು ಬೇಕಾದರೂ ತಂದು ನಿಲ್ಲಿಸಿ ಮದುವೆಯಾಗೆಂದರೆ ಆಗುತ್ತೇನಪ್ಪಾ. ಕುಂಟಿಯೋ ಕುರುಡಿಯೋ ಅದೂ ಪರವಾಗಿಲ್ಲ. ಸಂತೋಷದಿಂದ ನಿನಗಾಗಿ ಮದುವೆಯಾಗುತ್ತೇನೆ" ಅವನ ಹೃದಯದ ಅಳಲೆಲ್ಲಾ ಅಂದವೊಂದೇ ಮಾತಿನಲ್ಲಿ ತುಂಬಿ ಚಿಮ್ಮಿತ್ತು. ಅವನೂ ತಾಯಿ "—ಹೀಗೆಂದರೆ ಹೇಗಪ್ಪಾ? ಹುಡುಗಿಯನ್ನಾದರೂ ನೋಡಬೇಕೋ ಬೇಡವೊ?" ಎಂದಿದ್ದರು.

"ಎಲ್ಲಾ ನೀವೇ ತೀರಿಸಿ. ಕೈ ತೋರಿಸಿದವಳಿಗೆ ತಾಳಿ ಕಟ್ಟಿಬಿಡುತ್ತೇನೆ" ಎಂ

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು

ನಿರಖು ಠೇವಣಾತಿ

	3	ತಿಂಗಳಿಗೆ	3%
4 ರಿಂದ	6	,,	3½%
7 ,,	12	,,	4%
13 ,,	24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%

ಕರೆಂಟ್ ಎಕೌಂಟು ½%

The Moolky Bank, Ltd.

ಎಸ್. ಆರ್. ಬೀಡಿಗಳನ್ನು

ಕೊಂಡುಕೊಳ್ಳುವ ಮೊದಲು ರಿಜಿಸ್ಟರ್ಡ್ ಟ್ರೇಡ್ ಮಾರ್ಕನ್ನು ಪರೀಕ್ಷಿಸಿ ಕೊಂಡುಕೊಳ್ಳಲು ಮರೆಯದಿರಿ.

SR REGD.

REGD. NO 149136.

S.R. BEEDI WORKS, UDIPI, S.K.

ದು ಹೇಳಿದ ಉದಯನ ಮಾತು ಎಲ್ಲರಿಗೂ ಸಿಡಿಲಾಗಿ ಬಡಿಯಿತು. ಉದಯನನ್ನು ಕೇಳುವ ಅವಾಂತರವಲ್ಲಿಗೆ ಅಂತ್ಯವಾಯಿತು ಕೇಳಿದರೇನು? ಒಪ್ಪಿದರೇನು? ಎಂದುಕೊಂಡು ಎಲ್ಲರೂ ಸಿದ್ಧತೆಗಳನ್ನಾರಂಭಿಸಿಬಿಟ್ಟರು. ಲಗ್ನಪತ್ರಿಕೆ ಇತ್ಯಾದಿ ಗದ್ದಲಗಳು ಆರಂಭವಾದುವು: ಅಂತೂ ಉದಯನ ವಿವಾಹದ ಸಿದ್ಧತೆ ನಡೆಯುತ್ತಿತ್ತು. ಉದಯನ ತಾಯಿಮಾತ್ರ ಮಗನ ಮದುವೆಯೆಂದು ನೆನೆದುಕೊಂಡರೂ ಏನೋ ದೂರದ ಭಗ್ನವಾದ ನೆನಪನ್ನು ತಂದುಕೊಂಡು ಕಂಬನಿಗರೆಯುತ್ತಿದ್ದರು. ಉದಯನೆಲ್ಲೋ ನಿರ್ವಿಕಲ್ಪ ಸಮಾಧಿಯಲ್ಲಿದ್ದಂತಿದ್ದ.

ತಾನು ಮತ್ತು ಮಾಲತಿ ಒಂದುಗೂಡಿ ಹಾಡಿ, ಆಡಿ ನಲಿದ ದಿನಗಳು ಕಣ್ಣಮುಂದೆ ಹಾದುಹೋದುವು. ತನಗಾಗಿ ಜೀವಿಸುತ್ತಿದ್ದ ಪುಟ್ಟ ಮಾಲತಿ, ತಾನೂ ಮಾಲತಿಯೂ ದೇಹವೆರಡಾದರೂ ಜೀವವೊಂದು ಎಂದು ಬಾಳಿದ ಹಿಂದಿನ ನೆನಪು. ತಾವಾಡಿದ ಸರಸಸಲ್ಲಾಪಗಳು, ರಸಮಯ ಪ್ರೇಮಜೀವನ ಬಾಲ್ಯದ ಸ್ಮರಣೆಗಳು ಕಣ್ಣೆದುರು ಸುಳಿದುವು. ಆಕಾಶದಲ್ಲಿ ಮೆಲ್ಲಮೆಲ್ಲನೆ ಗುಡುಗುತ್ತಿದ್ದ ಸಿಡಿಲು ಒಡನೆ ಗುಡಿಸಿದ ರೀತಿ, ಒಂದಾದ ಹೃದಯ ಹಾಗೆಯೇ ಇದ್ದರೂ ಇಂದೀ ರೀತಿಯಾಗಬೇಕಾಗಿ ಬಂದುದು. ಕಡೆಗೊಂದು ದಿನ— ತಾನು ಅಸೌಖ್ಯದಲ್ಲಿದ್ದಾಗ—ತಾನು ಅದಕ್ಕಾಗಿ ದುಃಖಿಸಲು ಬಾರದೆಂದು....

ಮಾಲತಿಯ ವಿವಾಹ ನಡೆದು ಹೋಯಿತು! ಮುಂದೆ....ಹೂವಿಲ್ಲದ ಗಿಡದತ್ತ ಯಾರು ನೋಡುವರು? ಒಲವೆಲ್ಲಿಂದ ಬರಬೇಕು? ಎಂದಿಗೆ ಮಾಲತಿಯ ಕೊರಳಿನಲ್ಲಿ ಮಂಗಲಸೂತ್ರ ಬಿತ್ತೋ ಬಳಿಕ ಅವಳ ಸ್ಮರಣೆ ಕೂಡ ಮಾಡಬಾರದು. ಅವಳ ಕುರಿತು ಏನನ್ನೂ ಯೋಚಿಸಬಾರದು' ಎಂದು ಮನಸ್ಸನ್ನು ಬಲಾತ್ಕರಿಸಿದ ಉದಯ. ಮರಣ ಕೊಂಡನ್ನು ಮದುವೆಯಾಗುವೆನೆಂದುದನ್ನಿನ್ನೊಮ್ಮೆ ಸ್ಮರಿಸಿಕೊಂಡ. ತನ್ನ ಬಾಲಗೆಳತಿಯು ಹೋದ ಬಳಿಕ ಬರುವ ಆ ಅಪರಿಚಿತಳ ಮುಖವನ್ನು ನೋಡಲು ಆತನಿಗೆ ಇಚ್ಛೆಯಿಲ್ಲ. "ಮಾಲತಿ ಇಂದೆನಗೆ ಪರಕೀಯಳು. ಅವಳನ್ನಿನ್ನು ಮರೆಯಲೇಬೇಕು. ಇದ್ದರೂ ಇನ್ನವಳೆನ್ನ ಸಹೋದರಿ.... ತನಗೇನು? ಮದುವೆ? ಹುಂ ಆಗಲಿ. ಏನೋ ಒಂದು ಆಗಬೇಕಾಗಿದೆ. ಹಾಗೆಯೇ ಆಗಲಿ" ಎಂದಿತು ಹೃದಯ! 'ಬಾಳನ್ನಿಡೀ ಇದೇ ರೀತಿ ಇದೇ ಕೊರಗಿನಲ್ಲಿ ಕಳೆಯಬೇಕೆ? ಬಯಸಿದ ಹೃದಯ ನೊಂದು ನೊಂದು ಬಡವಾಗಿ ಬಲಾತ್ಕಾರಕ್ಕೊಳಗಾಗಬೇಕೆ? ಇನ್ನೇನುಳಿಯಿತು? ... ಆದರೆ ಮುಂದೆ ನನ್ನ ಬಾಳಿನ ಗುರಿಯೇನು?...." ಉದಯನ ಸಮಸ್ಯೆಗೆ ದೊರೆಯಲಿಲ್ಲ. ನಿತ್ಯ ನಿರ್ಮಲ ಸಾಗರ ಮಾತ್ರ ಕಣ್ಣೆದುರು ಕಂಗೊಳಿಸುತ್ತಿತ್ತು.

ನೀರಿನ ಹನಿಗಳಿಂದ ಕೂಡಿದ ತಂಗಾಳಿ 'ಸೂಂಯ್' ಎಂದು ಬೀಸಿತು. ಕಡಲ ತೆರೆಗಳು ಬಂದಪ್ಪಳಿಸಿದುವು; ದುಃಖದಲೆಗಳು ಬಂದು ಹೃದಯದಲ್ಲಪ್ಪಳಿಸುವಂತೆ! ಪಡುಬಾನು ಬೈಗಿನ ಹಳದಿಯಿಂದ ಕೆಂಪಡರಿತು. ದಿನಕರ ಹೊಂಬಣ್ಣದಿಂದ, ಹೊನ್ನಿನ ಬಟ್ಟಲಂತೆ ಹೊಳೆಯಲಾರಂಭಿಸಿದನು; ನಂದುವ ದೀಪವೊಮ್ಮೆ ದೇದೀಪ್ಯಮಾನವಾಗಿ ಉರಿಯುವಂತೆ! ಹೊಟ್ಟೆ ಹೊರೆಯಲೆಂದು ಮುಂಜಾನೆಯಲ್ಲಿ ಎತ್ತೆತ್ತ ಹಾರಿಹೋದ ಹಕ್ಕಿಗಳು ತಮ್ಮ ನಿವಾಸಕ್ಕೆ ಸಂತಸದ ಕೂಗು ಹಾಕುತ್ತಾ ಗುಂಪು ಗುಂಪಾಗಿ ತೇಲಿ ಬರುತ್ತಿದ್ದುವು. ಮೂಡಣ ಗಿರಿಯುತ್ತುಂಗದಿಂದ ಚಂದ್ರಮನ ಉದಯವಾಗಿರಲಿಲ್ಲ. ಆದರೂ ಏನೋ ಹೊಂಬೆಳಕು ಕಳೆಯೇರಿ, ಮಿಂಚುತ್ತಿತ್ತು ಆನಂದದ ಅರೆಜೋಂಪಿನಲ್ಲಿ ಉಯ್ಯಾಲೆಯಾಡಿದ ಮಂದಮಾರುತ ಇನ್ನೊಮ್ಮೆ ಬೀಸಿತು ಆದರೂ ಉದಯನ ಮನಸ್ಸು ತಿಳಿಯಾಗಿರಲಿಲ್ಲ. ಇದಾವ ಪರಿವೆಯೂ ಇಲ್ಲದೆ ಕಣ್ಣೆದುರು ಕಡಲು ಭೋರ್ಗರೆಯುತಿತ್ತು.

ಅದೊ! ಉದಯ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ ನೋವಿನ ಹೃದಯವನ್ನು ಇನ್ನೊಂದೆಡೆಗೆ ತಿರುಗಿಸಿ ಮನದಲ್ಲೇ ಸರಸ್ವತಿಯ ಕೈಯಿಂದ ಸಾಹಿತ್ಯದೀಕ್ಷೆಯನ್ನು ಪಡೆದ. ಅವಿರತವಾಗಿ ಸಾಹಿತ್ಯ ಭೂಮಿಯಲ್ಲಿ ದುಡಿದು ಬೆಳಗಿದ ಚಿಂತೆ, ಭಗ್ನಾಶಯಗಳ ದಾಹವನ್ನು ಜ್ಞಾನ ದಾಹವನ್ನಾಗಿಸಿದ ಉದಯ ಕಾವ್ಯ ಸಾಗರದಲ್ಲಿ ದುಮ್ಮಿಕ್ಕಿದ.

(ಶಶಿಬಿಂಬ ಸಾಹಿತ್ಯ ಸ್ಪರ್ಧೆಯಲ್ಲಿ ವಿಶೇಷ ಬಹುಮಾನ ಪಡೆದ ಕತೆ)

ಭೂಸುಧಾರಣೆಯ ಸೂಚಿತಾರ್ಥಗಳು

(೧ನೇ ಪುಟದಿಂದ)

ರಿಯನ್ನು ಮುಟ್ಟುವಂತೆ ಮಾಡುತ್ತವೆ ಎಂದು ನಾನು ಇನ್ನೊಮ್ಮೆ ಹೇಳುತ್ತೇನೆ.

ದ. ಭಾರತದ ಪ್ರಾಂತ್ಯ ಸರಕಾರಗಳು ಹಣ್ಣಿನ ತೋಟ, ಕಾಫಿ, ಚಾ ತೋಟಗಳು ಮತ್ತು ಸಕ್ಕರೆ ಕಾರ್ಖಾನೆಗಳು, ಕಬ್ಬಿನ ಬೆಳೆಯ ಕ್ಷೇತ್ರಗಳನ್ನು ಕೂಡಾ ಹಿಡುವಳಿ ಕಾನೂನಿನಿಂದ ಹೊರತುಪಡಿಸುವುದಾಗಿ ಸೂಚಿಸಿವೆ ಎಂದು ನನಗೆ ತಿಳಿದು ಬಂದಿದೆ. ಮತ್ತಿದು ಅಡಿಕೆ ತೋಟಗಳಿಗೆ ಮಾತ್ರ ಅನ್ವಯಿಸುವುದಿಲ್ಲ ಅಡಿಕೆ ತೋಟಗಳನ್ನು ಸ್ಥಾಪಿಸುವುದಕ್ಕೆ ಮತ್ತದನ್ನು ಫಲ ಬರುವವರೆಗೆ ಪಾಲಿಸಲು ಒಟ್ಟಾಗಿ ಎಕ್ರೆಗೆ ಸುಮಾರು ಕೆಲವು ಸಾವಿರ ರೂಪಾಯಿಗಳು ಬೇಕಾಗಿದ್ದರೂ ಅನ್ವಯಿಸುವುದಿಲ್ಲ. ಸದ್ಯದ ಧಾರಣೆಗನುಸಾರವಾಗಿ ಅಡಿಕೆಗೆ ಪರಿಹಾರ ಯಥೇಷ್ಟವಾಗುತ್ತದೆ. ಎಲ್ಲಿ ಸಾದಾ ಪರಿಹಾರ ಕೊಟ್ಟು ಪಡೆದುಕೊಂಡರೆ, ಅನನುಭವಿ ಭೂಹೀನ ಕೆಲಸಗಾರರ ಕೈಯಲ್ಲಿದು ಉಳಿಯಬಹುದೆ? ಅಭಿವೃದ್ಧಿಯ ಮಾತಂತೂ ಇನ್ನೂ ಕಡಿಮೆ. ಅಡಿಕೆ ತೋಟಗಳ ಮಧ್ಯದಲ್ಲಿ ಅಲ್ಲಲ್ಲಿ ಹರಡಿಕೊಂಡಿರುವ ಸಣ್ಣ ಸಣ್ಣ ತುಂಡು ಭೂಮಿಯನ್ನು ಭೂಹೀನರ ವಶಕ್ಕೆ ಕೊಡಲಾಗುವುದೆಂದು ಇನ್ನೊಂದು ಸುದ್ದಿ ನನಗೆ ಗೊತ್ತಿದೆ. ಪುನಃ ಇದೊಂದು ದೊಡ್ಡ ಅನ್ಯಾಯದಂತೆ ಕಾಣುತ್ತದೆ ಹೀಗಾದಲ್ಲಿ ತೋಟಗಳಿಗೆ ರಕ್ಷಣೆ ಒದಗಿಸುವುದಾದರೂ ಹೇಗೆ? ಮತ್ತು ಗಿಡಗಳಿಗೆ ಹಾವಳಿಯಾಗುವುದನ್ನು ಮತ್ತು ಫಲಗಳು ಕಳ್ಳತನವಾಗುವುದನ್ನು ರಕ್ಷಿಸುವುದಾದರೂ ಹೇಗೆ? ಇವೆಲ್ಲವುಗಳು ಇಲ್ಲದಿದ್ದರೆ ತೋಟಗಳ ಮೌಲ್ಯ ಮತ್ತು ಉತ್ಪಾದನಾ ಶಕ್ತಿಯು ಕುಸಿದು ಬೀಳಬಹುದು ಈ ಸಣ್ಣ ಸಣ್ಣ ತುಂಡುಗಳನ್ನು ಭೂಹೀನರಿಗೆ ಒದಗಿಸಿ ಕೊಟ್ಟರೆ ಅದು ಪೋರ್ಚುಗೀಸ್ ಸರಕಾರವು ವಿಸತ್ತು ಗೋವಾಗಳನ್ನು ನಿರ್ಮಿಸಿದಂತಾಗುತ್ತದೆಂಬುದು ಸರಿಯಾದ ಮಾತು. 'ಭೂಹೀನರಿಗೆ ಭೂಮಿ' ಎಂಬ ಅಗ್ಗದ ಘೋಷಣೆಗಳಿಂದ ಸರಕಾರ ಮಾರ್ಗದರ್ಶನ ಪಡೆಯುವ ಬದಲು ಈ ವಿಚಾರವಾಗಿ ಅದು ನ್ಯಾಯ ಸಮ್ಮತವಾದ ದಾರಿಯನ್ನು ಪಡೆದುಕೊಳ್ಳಬೇಕೆಂದು ನಿರೀಕ್ಷಿಸಲಾಗಿದೆ.

ನನಗೆ ಸಮತಾವಾದದ ಮೇಲೆ ದ್ವೇಷವಿದೆಯೆಂದು ಆರೋಪಿಸಬಾರದೆಂದು ಮೊದಲಾಗಿ ನಾನೀ ಮಾತುಗಳನ್ನು ಹೇಳುವವನಿದ್ದೇನೆ. ರಶ್ಯವು ಮೂಲಭೂತ ವಿಜ್ಞಾನ ಸೈನ್ಯ, ವಿಮಾನ, ಮದ್ದು ಮೊದಲಾದುವುಗಳಲ್ಲಿ ಮಾತ್ರವಲ್ಲ ಕೃಷಿಯಲ್ಲಿ ಕೂಡಾ ಅಪಾರ ಪ್ರಗತಿಯನ್ನು ಸಾಧಿಸಿದೆ ಇವೆಲ್ಲವುಗಳನ್ನು ಅಮೇರಿಕಾ ಮತ್ತು ಬೇರೆ ಪ್ರಗತಿಶೀಲ ರಾಷ್ಟ್ರಗಳು ಸ್ವಂತ ಬಂಡವಾಳದಿಂದ ಸಾಧಿಸಿದ್ದರೆ ರಶ್ಯವು ಸಮತಾ ಭಾವದ ಮೂಲಕ ಸಾಧಿಸಿದೆ ರಶ್ಯಾ ಮತ್ತು ಚೀನಾಗಳಲ್ಲಿ ಆದ ಕೃಷಿಯ ಪ್ರಗತಿಯು ಸಮತಾವಾದದ ಮಾದರಿಯ ಭೂಸುಧಾರಣೆಯಿಂದ ಹೆಚ್ಚಾದುದಿಲ್ಲ.

ನಮ್ಮ ಆಳುವ ಪಕ್ಷವು ತಮ್ಮ ಅತಿಮಗರಿಯಾಗಿ ಸಮತಾವಾದಕ್ಕೆ ಹೊಂದಿಕೊಂಡಿರದಿದ್ದರೆ ಅದು ಸ್ವತಂತ್ರ ಉದ್ಯಮವನ್ನು ಪ್ರೋತ್ಸಾಹಿಸಲಿ, ... ಕೃಷಿಯನ್ನು ಬೇರೆ ಕೈಗಾರಿಕೆಗಳಿಗೆ ಸಮಾನವಾಗಿ ನೋಡಿಕೊಳ್ಳಲಿ. ಭೂಮಿಯನ್ನು ಸ್ವಂತ ಸಾಗುವಳಿ ಮಾಡುವುದರ ... ಡಾ ಕೃತಕ ಮತ್ತು ಹಾಸ್ಯಾಸ್ಪದ ವಿ... ನಿರ್ಧರಿಸಲ್ಪಡದಿರಲಿ. ಭಾರತದ ಆರ್ಥಿಕತೆಯು ಬೇರೆಬೇರೆ ವಿಭಾಗಗಳಲ್ಲಿ ... ದಂತೆ, ನ್ಯಾಯವಾದ ಗೇಣಿ ನಿರ್ಧಾ... ಮತ್ತು ರೈತರ ನ್ಯಾಯವಾದ ಹಕ್ಕನ್ನು ರಕ್ಷಿಸುವುದರಲ್ಲಿ ಮಾತ್ರ ತನ್ನ ಗಮನವನ್ನು ಹರಿಸಲಿ. ಭಾರತದ ಕೃಷಿಯ ಆರ್ಥಿಕ ಪರಿಸ್ಥಿತಿಯೇ ಪ್ರತಿಯೊಬ್ಬರನ್ನೂ ... ನ್ನಿಂದ ಸಮರ್ಪಕವಾಗಿ ಮತ್ತು ಮಿತವ್ಯಯದಿಂದ ಏನನ್ನು ಮಾಡಲು ಸಾಧ್ಯವೋ ಅಷ್ಟೇ ಕೃಷಿಯನ್ನು ಮಾಡಲು ನಿರ್ಬಂ...ಸುತ್ತದೆ. ನಮ್ಮ ಸರಕಾರವು ಈ ವಿಚಾರದಲ್ಲಿ, ಸರ್ವ ವಿಧದಿಂದಲೂ ಆ ವಿಷಯವನ್ನು ಅರಿಯಲು ಸಾಧ್ಯವಿದ್ದವರ ಅಭಿಪ್ರಾಯವನ್ನು ತೆಗೆದುಕೊಳ್ಳಲಿ. ಭಾರತದ ಹಿಂದಿನ ಶ್ರೇಷ್ಠ ನ್ಯಾಯಾಧೀಶರಾದ, ಮಹಾಮೇಧಾವಿ ಡಾ| ಮೆಹರ್‌ಚಂದ ಮಹಾಜನರವರು ಸರಿಯಾಗಿ ಮತ್ತು ... ಕಾರವಾಣಿಯಿಂದ ಹೇಳಿದಂತೆ, ಕೃಷಿಯನ್ನು ರಾಜಕಾರಣಿ ಮತ್ತು ವೇದಾಂ...ಗಳ ಆಟದ ವಸ್ತುವನ್ನಾಗಿ ಮಾಡ ... ಬೇಡ. ಬಹು ದೊಡ್ಡ ವಾಸ್ತವವಾದಿ...ಲ್ಲೊಬ್ಬರಾದ, ಪ್ರಸಿದ್ಧರಾದ ಮತ್ತು ಅತ್ಯಂತ ಬುದ್ಧಿವಂತ ರಾಜಕಾರಣಿ...ದ ಶ್ರೀ ರಾಜಗೋಪಾಲಾಚಾರಿ ... ಕೆಲವು ಸಮಯಗಳ ಹಿಂದೆ 'ಹಿಂದುಸ್ಥಾನ್ ಟೈಮ್ಸ್'ನಲ್ಲಿ ಬರೆದ ತಮ್ಮ ಒಂದು ಲೇಖನದಲ್ಲಿ ನಿಜವಾದ ಕೃಷಿಕನನ್ನು ಭೂಮಿಯಿಂದ ಎಬ್ಬಿಸುವ ... ಕೋನವನ್ನು ನ್ಯಾಯವಾಗಿಯೇ ...ಧಿಸಿದ್ದಾರೆ. ಮತ್ತು ಅನುಭವ ಆದ... ಬಂಡವಾಳ ಇಲ್ಲದವರನ್ನು ಭೂಮಿಯ ಮೇಲೆ ನೆಲೆಗೊಳಿಸುವುದನ್ನೂ ...ದ್ದಾರೆ. ಅದು ಕೂಡ ಇದೆಲ್ಲವೂ ಭೂಸುಧಾರಣೆಗಳ ಹೆಸರಿನಿಂದ ನಡೆ...ದೆಂದು ಅವರ ಟೀಕೆಯಾಗಿದೆ. ...ತಮಾಷೆ!

ಭೂಸುಧಾರಣೆ ಮತ್ತು ಕೃಷಿಯ ... ವೃದ್ಧಿಯಂತಹ ವಿಚಾರಗಳನ್ನು ರಾಜಕಾರಣಿಗಳ ವಶ ಬಿಡುವುದರ ಬದಲು ... ಪ್ರಧಾನ ಮಂತ್ರಿಗಳು ಕೃಷಿ ಇಲಾಖೆ ... ಡೈರೆಕ್ಟರರು, ಕೃಷಿ ತಜ್ಞರು, ಭೂ ...ಯ ಅಧಿಕಾರಿಗಳು ಮತ್ತು ಕೃಷಿ ...ಸ್ಯೆಗಳಲ್ಲಿ ತುಂಬ ಅನುಭವ ಪಡೆದ... ಒಂದು ಸಮ್ಮೇಳನವನ್ನು ಕರೆ... ಇವರು, ಬರಲಿರುವ ಭೂಸುಧಾರಣೆ ... ಕೃಷಿಯನ್ನು ಉದ್ಧಾರಮಾಡುವುದೇ ... ನಾ ಅವನತಿಗಿಳಿಸುವುದೇ ಎಂದು ... ಪ್ರಾಮಾಣಿಕವಾದ ಮತ್ತು ಸ್ಪಷ್ಟ ... ಅಭಿವೃದ್ಧಿಯನ್ನು ಕೊಡಲಿ. ಈ ವಿಚಾರದಲ್ಲಿ ಅವರು ವೈಯಕ್ತಿಕ ಗಮನ ... ಬೇಕೆಂದು ನಾನು ಅವರನ್ನು ... ಸುತ್ತೇನೆ. ಕಳೆದ ಹತ್ತು ... ಗಳಲ್ಲಿ ಸಂಭವಿಸಿದ ಸಂಗತಿಗಳೇ ... ಎಚ್ಚರಿಕೆಯನ್ನು ಕೊಡಬೇಕಾಗಿತ್ತು.

(ದಕ್ಷಿಣ ರಾಜ್ಯಗಳ ಕೃಷಿಕ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಶ್ರೀ ಸ... ಲಾಲಸಿಂಗ, ಮಾಜಿ ಎಂ. ಪಿ. ಇವರು ಮಾಡಿದ ಭಾಷಣದಿಂದ ಸಂಗ್ರಹಿತ.)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

27—2—1958

ಸಂಚಿಕೆ ೨೫
NO. 25

ಭಾರತದಲ್ಲಿ ಸಂಸ್ಕೃತದ ಸ್ಥಾನಮಾನ—

ಸಂಸ್ಕೃತಾಭ್ಯಾಸವು ಕಡ್ಡಾಯವಿರಬೇಕು

ಭಾರತದಲ್ಲಿ ಸಂಸ್ಕೃತ ಭಾಷಾಭ್ಯಾಸದ ಸಾಧ್ಯಾಸಾಧ್ಯತೆಗಳನ್ನು ಕುರಿತು ಅಭ್ಯಸಿಸಿ ವರದಿ ಒಪ್ಪಿಸಲು ನೇಮಿಸಿದ ಸಮಿತಿಯು ಕೇಂದ್ರ ಸರಕಾರಕ್ಕೆ ಆಗಲೇ ತನ್ನ ವರದಿಯನ್ನು ಒಪ್ಪಿಸಿದ್ದು ಅದರ ವಿವರಗಳ ಸಾರಾಂಶವು ಈಗ ಲೋಕಸಭೆಯ ಮುಂದೆ ಬಹಿರಂಗಗೊಳಿಸಲ್ಪಟ್ಟಿತು.

ಸಂಸ್ಕೃತ ಆಯೋಗವು ಎಲ್ಲ ಪ್ರೌಢ ಶಾಲೆಗಳಲ್ಲಿಯೂ ಅಲ್ಲಿರುವ ಸಂಸ್ಕೃತವನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯನ್ನಾಗಲೀ ವಾದ ವಿವಾದಗಳನ್ನಾಗಲೀ ಗಮನಿಸದೆ ಕಡ್ಡಾಯವಾಗಿ ಸಂಸ್ಕೃತವನ್ನು ಕಲಿಸಬೇಕು, ಮತ್ತು ಇದನ್ನು ಗಮನದಲ್ಲಿಟ್ಟುಕೊಂಡು ತನ್ನ ತ್ರಿಭಾಷಾ ಸೂತ್ರಕ್ಕೆ ಸರಕಾರವು ತಿದ್ದುಪಡಿಯನ್ನು ಮಾಡಬೇಕೆಂದು ಈ ಆಯೋಗವು ಅಭಿಪ್ರಾಯಪಟ್ಟಿದೆ.

ಎಲ್ಲ ಪ್ರೌಢ ಶಾಲೆಗಳಲ್ಲಿಯೂ ಭಾರತೀಯ ವಿದ್ಯಾರ್ಥಿಗಳಿಗೆ (೧) ಮಾತೃಭಾಷೆ (ಅಥವಾ ಪ್ರಾದೇಶಿಕಭಾಷೆ) (೨) ಇಂಗ್ಲಿಷ್ ಮತ್ತು (೩) ಸಂಸ್ಕೃತ (ಅಥವಾ ವಿಶೇಷ ಸಂದರ್ಭಗಳಲ್ಲಿ ಸಂಸ್ಕೃತದಂತೆಯೇ ಇರುವ ಅರೇಬಿಕ್, ಪರ್ಶಿಯನ್, ಪ್ರಾಚೀನ ತಮಿಳು ಇತ್ಯಾದಿಗಳಲ್ಲಿ ಯಾವುದಾದರೂ ಒಂದು) ಈ ಮೂರು ಭಾಷೆಗಳನ್ನು ಕಲಿಸಲೇಬೇಕೆಂದು ಈ ಆಯೋಗವು ಅಭಿಪ್ರಾಯಪಟ್ಟಿದೆ.

ಅಖಿಲ ಭಾರತ ನೌಕರಿಯನ್ನು ಬಯಸುವ ವಿದ್ಯಾರ್ಥಿಗಳಿಗೆ ಮಾತ್ರ ಕಾಲೇಜ ಮಟ್ಟದಲ್ಲಿ ಹಿಂದಿಯನ್ನು ಕಲಿಸಬೇಕು, ಒಂದು ವೇಳೆ ಈ ಹಿಂದಿಯನು ಶಾಲಾ ಮಟ್ಟದಲ್ಲಿಯೇ ಕಲಿಸ ಬೇಕಾದರೆ, ತ್ರಿಭಾಷಾ ಸೂತ್ರವನ್ನು ತಿದ್ದುಪಡಿಮಾಡಿ ಅದನ್ನು ಇಂಗ್ಲಿಷಿನ ಸ್ಥಾನದಲ್ಲಿ ಸೇರಿಸಬೇಕು. ಆಗ ಹಿಂದೀ ಮಾತಾಡುವ ವಿದ್ಯಾರ್ಥಿಗಳಿಗೆ ಅನ್ಯ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು (ಅದು ದಕ್ಷಿಣ ಭಾರತೀಯ ಭಾಷೆಯಾಗಿದ್ದರೆ ಉತ್ತಮ) ಕಲಿಸಲ್ಪಡಬೇಕೆಂದು ಈ ಆಯೋಗದ ಸಿಫಾರಸಿದೆ. ಇಂತಹ ಹಿಂದಿಗೆ ಅವಕಾಶವನ್ನು ಕಲ್ಪಿಸಿಕೊಡುವಲ್ಲಿ ಮಾಡಬೇಕಾದ ಹೊಂದಾಣಿಕೆಯಲ್ಲಿ ಸಂಸ್ಕೃತಕ್ಕೆ ಬದಲಾಗಿ ಹಿಂದಿಯನ್ನು ಸೇರಿಸಿಕೊಳ್ಳುವುದನ್ನು ಈ ಆಯೋಗವು ತೀವ್ರವಾಗಿ ವಿರೋಧಿಸುತ್ತಿದೆ. ಶಾಲೆಗಳಲ್ಲಿ ಭಾಷಾಧ್ಯಯನವು ಈ ರೀತಿಯಾಗಿರಬೇಕೆಂದು ಸಂಸ್ಕೃತಾಯೋಗವು ಹೇಳುತ್ತದೆ.

೧) ತರಗತಿ ೧-೫ ಕೇವಲ ಮಾತೃಭಾಷೆ; ಅಭಿಲಾಷೆಯುಳ್ಳವರಿಗೆ ಮಾತ್ರ ಕೆಲವು ಸಂಸ್ಕೃತ ಸುಭಾಷಿತಗಳನ್ನು ಕಲಿಸಬಹುದು

೨) ತರಗತಿ ೬— ಮಾತೃಭಾಷೆ ಮತ್ತು ಇಂಗ್ಲಿಷ್ ಐಚ್ಛಿಕ ಸಂಸ್ಕೃತ ಸುಭಾಷಿತಗಳನ್ನು ಮುಂದುವರಿಸಬಹುದು.

೩) ತರಗತಿ ೭-೧೧ ಮಾತೃಭಾಷೆ (ಪ್ರಮಾಣ ಕಡಿಮೆ ಮಾಡಬಹುದು), ಇಂಗ್ಲಿಷ್ ಮತ್ತು ಸಂಸ್ಕೃತ

ಈ ಸಂದರ್ಭದಲ್ಲಿ ನಾಲ್ಕನೆಯದಾಗಿ ಹಿಂದಿಯ ಭಾರವನ್ನು ಹೇರುವುದು ಸಮಂಜಸವೆಂದು ಆಯೋಗವು ತಿಳಿಯುದಿಲ್ಲ ಇವರ ಅಭಿಮತದಂತೆ ಹಿಂದಿಯನ್ನು ಕಾಲೇಜು ಮಟ್ಟದಲ್ಲಿ ಮಾತೃಭಾಷೆ ಮತ್ತು ಸಂಸ್ಕೃತಗಳ ಅಭ್ಯಾಸದ ಬಲದ ಮೇಲೆ ಅಭ್ಯಾಸದ ವಿಷಯವನ್ನಾಗಿ ಮಾಡುವುದರಿಂದ ಪ್ರಯೋಜನ ಹೆಚ್ಚು ಪ್ರಮು

ಮಾತೃ ಭಾಷೆ, ಇಂಗ್ಲಿಷ್ ಮತ್ತು ಸಂಸ್ಕೃತ (ಅಥವಾ ಮಾತೃ ಭಾಷೆ, ಹಿಂದಿ ಅಥವಾ ಅನ್ಯ ಭಾರತೀಯ ಆಧುನಿಕ ಭಾಷೆ ಮತ್ತು ಸಂಸ್ಕೃತ) ಎಂದು ಸಿಫಾರಸು ಮಾಡಿದ ಆಯೋಗದ ಪ್ರಥಮ ಆಯ್ಕೆಯು ದೇಶದ ಕೆಲವು ಭಾಗಗಳಲ್ಲಿ ಅನುಕೂಲವಾಗುವುದಿಲ್ಲವಾದರೆ, ಆಗ ಎರಡನೆ ಪ್ರಾಶಸ್ತ್ಯವಿರುವ ಮಾತೃ ಭಾಷೆ ಇಂಗ್ಲಿಷ್ ಮತ್ತು ಹಿಂದಿ (ಅಥವಾ ಹಿಂದಿ ಮಾತಾಡುವ ವಿದ್ಯಾರ್ಥಿಗಳಿಗೆ ಬೇರೆ ಭಾರತೀಯ ಭಾಷೆ)ಗಳನ್ನು ಸಂಸ್ಕೃತದೊಡನೆ ಕಲಿಸುವ ಚತುರ್ಭಾಷಾ ಸೂತ್ರವನ್ನು ಒಪ್ಪಿಕೊಳ್ಳಬೇಕು.

ಮೂರನೆಯದಾಗಿ, ಮಾತೃ ಭಾಷೆ, ಇಂಗ್ಲಿಷ್ ಹಿಂದಿ ಮತ್ತು ಸಂಸ್ಕೃತಗಳ ಅಭ್ಯಾಸವನ್ನು ಮಾತೃಭಾಷೆ ಅಥವಾ ಹಿಂದಿ ಅಥವಾ ಎರಡರ ವಿಭಾಜಿತಾವಧಿಯ ರೀತಿಯಲ್ಲಿ ಮಾಡಲು ಅನುಕೂಲಾಭಿಪ್ರಾಯವಿತ್ತಿದೆ (೧) ಕೆಲವು ಮಟ್ಟದಲ್ಲಿ ಮಾತೃಭಾಷೆಯ ಬದಲಿಗೆ ವಿಭಜಿತಾವಧಿಯನ್ನು ಕಡ್ಡಾಯವಾಗಿ ಮಾಡಬೇಕು (೨) ಈ ಅವಧಿಯು ಐದು ವರ್ಷಗಳಿಗೆ ಕಡಿಮೆಯಿರಬಾರದು (೩) ಉಭಯ ಭಾಷೆಗಳ ಮೇಲೆ ಸಮಾನ ಪ್ರಭಾವವನ್ನು ಬೀರುವಂತೆಯೂ ಮೇಲಿನ ತರಗತಿಗಳಲ್ಲಿ ಸಂಸ್ಕೃತದ ಮೇಲಿನ ಪ್ರಭಾವವು ಹೆಚ್ಚುವಂತೆಯೂ ಅವಧಿಯು ಪ್ರಾರಂಭವಾಗಬೇಕು, ಮತ್ತು ಪ್ರತಿಭಾಷೆಯಲ್ಲಿಯೂ ವಿಭಾಜಿತಾವಧಿಯಲ್ಲಿ ತೇರ್ಗಡೆಯಾಗಲೇ ಬೇಕೆಂಬುದಕ್ಕೆ ವ್ಯತ್ಯಯ ಬರಬಾರದು.

ಮಾತೃಭಾಷೆಯು ಸುದೀರ್ಘವಾದ ಅವಧಿಯನ್ನು ಅಲ್ಪಮಟ್ಟಿಗೆ ಮಿತಗೊಳಿಸಿದರೆ ಎರಡು ಭಾಷೆಗಳನ್ನು ಏಕಕಾಲದಲ್ಲಿಯೇ ಕಲಿಸಲು ಪ್ರಾರಂಭಿಸುವುದನ್ನು ನಿಲ್ಲಿಸಿದರೆ ಮತ್ತು ಇಂಗ್ಲಿಷ್ ಹಾಗೂ ಹಿಂದಿಗಳನ್ನು ತೃಪ್ತ ವಿಷಯಗಳೆಂದು ತಿಳಿಯದೆ ಕುಶಲ ವಿಷಯಗಳೆಂದು ಕಂಡರೆ, ನಾಲ್ಕೂ ಭಾಷೆಗಳನ್ನು ವಿದ್ಯಾರ್ಥಿಗಳಿಗೆ ಹೆಚ್ಚು ತ್ರಾಸವಿಲ್ಲದ ರೀತಿಯಲ್ಲಿ ಕಲಿಸುವುದು ಸಾಧ್ಯವಿದೆ

ಸಂಸ್ಕೃತ ಪಾಠಶಾಲೆ ಮತ್ತು ಉಚ್ಚ ಶಿಕ್ಷಣದ ಬಗ್ಗೆ ಪರಂಪರಾಗತವಾಗಿ ಬಂದಿರುವ ಶಿಕ್ಷಣಕ್ರಮವನ್ನು ಮುಂದುವರಿಸಬೇಕು ವತ್ತಿವನ್ನು ಶಾಲೆ ಮತ್ತು ಕಾಲೇಜು ವಿಕ್ಕೆಯ ರೂಪದಲ್ಲಿಯೇ ಮನ್ನಿಸಬೇಕು. ಅದೂ ಪಾಠಶಾಲೆ ಮತ್ತು ವಿಶ್ವವಿದ್ಯಾನಿಲಯದ ಪದ್ಧತಿಗಳನ್ನು ಬಲಾತ್ಕಾರದಿಂದ ಸಮೀಕರಣಗೊಳಿಸುವುದು ಈಗ ಶ್ರೇಯಸ್ಕರವಲ್ಲವೆಂದು ಈ ಆಯೋಗದ ಅಭಿಪ್ರಾಯವಿದೆ.

ಸಂಸ್ಕೃತ ವಿದ್ಯಾಭ್ಯಾಸದಲ್ಲಿ ನಡೆದು ಬಂದ ಪರಂಪರಾಗತ ಪದ್ಧತಿಯನ್ನು ಬೆಳೆಸುವ ಸಲುವಾಗಿ ಅಲ್ಲಲ್ಲಿ ಸಂಸ್ಕೃತ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕು. ಆದರೆ ಇವು ಈಗಿರುವ ವಿಶ್ವವಿದ್ಯಾಲಯಗಳ ಮತ್ತವುಗಳ ಸಂಸ್ಕೃತ ವ್ಯಾಸಂಗದ ವಿಭಾಗಗಳಲ್ಲಿ ಮಾತ್ರ ಕೈಹಾಕಬಾರದು ಎಂದು ಉಲ್ಲೇಖಿಸಿದೆ

ಈ ಆಯೋಗವು ಸಂಸ್ಕೃತ ಭಾಷೆಯನ್ನು ಸರಕಾರೀ ಭಾಷೆಯನ್ನಾಗಿ ಘೋಷಿಸಿ, ಹಿಂದಿ ಮತ್ತು ಇಂಗ್ಲಿಷ್‌ಗಳ ಮಧ್ಯಸ್ಥ ವ್ಯವೆನಿಸಿದ ಸಾರ್ವಜನಿಕ ಉದ್ದೇಶಗಳಿಗಾಗಿ ಅದನ್ನು ಬಳಸಬೇಕು ಎಂದು ಸಿಫಾರಸು ಮಾಡಿದೆ ಸಂಸ್ಕೃತವು ನೂರಾರು ವರ್ಷಗಳಿಂದ ದೇಶದ ಒಕ್ಕೂಟವನ್ನು ಸಾಧಿಸಿ ದಂಡವಾಗಿದೆ ಮತ್ತು ಇದರ ಬೆಳವಣಿಗೆಯಿಂದ ದೇಶದಲ್ಲಿ ಈಗ ಎದ್ದಿರುವ ಏಕತಾಭಂಗ ಮತ್ತು ಭಾಷಾಭೇದಗಳನ್ನು ನಿವಾರಿಸಲು ಇದರ ಉನ್ನತೀಕರಣವು ಸಹಾಯವಾಗುವುದೆಂದು ಸಂಸ್ಕೃತಾಯೋಗದ ದೃಢವಾದ ವಿರುತ್ತದೆ

ಪ್ರತಿಜ್ಞಾ ಸ್ವೀಕಾರ, ಶಾಸನ ಲೋಕಸಭೆ ಮೊದಲಾದುವುಗಳ ಪ್ರಾರಂಭ ಮತ್ತು ಅಂತ್ಯಗೊಳ್ಳುವ ವೇಳೆಯಲ್ಲಿ ಸರಕಾರೀ ಮಟ್ಟದಲ್ಲಿ ನಡೆಯುವ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಪರಿಷತ್ತುಗಳು, ಚರ್ಚಾಗೋಷ್ಠಿಗಳು, ಅಧಿಕಾರ ಪತ್ರಗಳ ಅರ್ಪಣೆ, ರಾಷ್ಟ್ರೀಯ ಗೌರವಾರ್ಪಣೆ ಇತ್ಯಾದಿ ಸಮಾರಂಭಗಳಲ್ಲಿಯೂ ಸಂಸ್ಕೃತ ಭಾಷೆಯನ್ನು ಸಾಧ್ಯವಿದ್ದ ಹಾಗೆ ಉಪಯೋಗಿಸಲು ಈ ಆಯೋಗವು ಉದ್ದೇಶಿಸಿದೆ

ಈ ವರದಿಯ ಸಾರಾಂಶವು ಉಪವಿದ್ಯಾ ಮಂತ್ರಿ ಡಾ ಶ್ರೀಮಾಲಿಯವರಿಂದ ಶ್ರೀ ಅಶೋಕ ಮುಚ್ಚುದರು ರಾಜ್ಯ ಸಭೆಯಲ್ಲಿ ಕೇಳಿದ ಪ್ರಶ್ನೆಯೊಂದನ್ನುತ್ತರಿಸಿ ಹಾಗ ಬಹಿರಂಗವಾಯಿತಲ್ಲದೆ, ಸರಕಾರದ ಪರಿಶೀಲನೆಯಲ್ಲೀ ವರದಿಯಿದೆ ಎಂದೂ ತಿಳಿದು ಬಂದಿದೆ.

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.
TRY US ONCE

THE VIJAYA BANK, LTD.

H O. MANGALORE. Estd. 1931.
BRANCHES
Bombay, Bangalore, Mysore, Mercara, Kanhangad, Kasaragod and throughout the District of South Kanara.

ನಾರದ ಸಣ್ಣ ಕಥೆ—

ಬೆಳದಿಂಗಳ ರಾತ್ರಿ

ಶ್ರೀ. ಕೆ. ತಿಮ್ಮಪ್ಪ ಗಟ್ಟಿ

ದೋಣಿ ಮುಂದೆ ಮುಂದೆ ಹೋಗುತ್ತಿತ್ತು. ಬೆಳದಿಂಗಳಿನ ಪಡಿನೆಳಲಿನಂತೆ ಹೊಳೆಯ ನೀರಿನಲ್ಲಿ ಚಂದಿರನ ತಿಳಿಬೆಳಕು ಥಳ ಥಳಿಸುತಿತ್ತು. ದೋಣಿಯು ಸಾಗುತ್ತಿರುವಾಗ ಪುಟ್ಟ ಪುಟ್ಟ ಅಲೆಗಳೆದ್ದು ಕಲ ಕಲ ಶಬ್ದವನ್ನು ಮಾಡುತಿತ್ತು. ನೀಲಾಕಾಶದಲ್ಲಿ ಶಶಿ ಬಿಂಬ ಹೊಳೆಯುತ್ತಿರುವಾಗ, ಹಾಲಿನಂತೆ ಸುರಿದ ಜೊನ್ನವು ಭೂಮಿಯನ್ನು ಬೆಳಗುತ್ತಿರುವಾಗ ಚೆಲುವಿಗೇನು ಕಡಿಮೆ? ಪ್ರಶಾಂತ ಬೆಳ್ನಿಂಗಳಿನಲ್ಲಿ ತಂಪಿನಾಗರವಾದ ನದಿಯ ಶುಭ್ರ ಸಲಿಲದ ಮೇಲೆ ದೋಣಿಯೋಡುತ್ತಿರುವಾಗ ಅದರ ಮೇಲೆ ಕುಳಿತ ಭಾವಜೀವಿಯಾದ ಪಯಣಿಗನ ಭಾವ ಹೇಗಿರಬಹುದೆಂದು ಬೇರೆ ಅಳೆಯಬೇಕೆ?

ಚೆಲುವಿಗೆ ಮಾರು ಹೋಗದವನಾರು? ಹಾಗೆಯೇ ಅಂಬಿಗನೂ ನಿಧಾನವಾಗಿಯೇ ಹುಟ್ಟು ಹಾಕುತ್ತಲಿದ್ದ. ದೋಣಿಯಲ್ಲಿ ಕುಳಿತ ಪಯಣಿಗನಿಗೂ 'ಹೀಗೆಯೇ ಸಾಗಲಿ' ಅನಿಸಬೇಕು! ದೋಣಿಯು ಮುಂದೆ ಮುಂದೆ ಹೋಗುತ್ತಿದ್ದುದಲ್ಲ ಹತ್ತಿಯ ರಾಶಿಯಂತಿರುವ ಮೋಡದ ಮೇಲೆ ತೇಲು ಚಂದ್ರನಂತೆ ನೀರಿನ ಮೇಲೆ ದೋಣಿ ಮೃದುವಾಗಿ ಜಾರುತ್ತಾ ಮುಂದೆ ಮುಂದೆ ತೇಲುತ್ತಿತ್ತು.

ಇಕ್ಕಡೆಯ ತರುಲತಾ ಪುಂಜಗಳೆಡೆಯಿಂದ ಹಕ್ಕಿಗಳು ಉಲಿಯುತ್ತಿದ್ದುವು. ತಂಪಾಗಿ ತೀಡುತ್ತಿದ್ದ ತಂಬೆಲರಿನೊಂದಿಗೆ ಈರವನ್ನು ತಂಪಿನೊವನೆ ಇಂಪಾಗಿ ಕೇಳಿಸುತಿತ್ತು. ಅಂತೂ ಹೇಗೂ ಇರಲಿ, ರಮಣೀಯ ದೃಶ್ಯ! ಅಲ್ಲಿ ಹೊಳೆ, ಹೊಳೆಯ ಮೇಲೆ ತೇಲು ದೋಣಿ. ದೋಣಿಯಲ್ಲಿ ಅಂಬಿಗ; ಹೊಳೆ ದಾಟಲಿರುವ ಪಯಣಿಗ!

ಮಹತ್ವದ ರಾಜ ಕಾರ್ಯಕ್ಕಾಗಿ ರಾಜಧಾನಿಗೆ ಹೋಗಿದ್ದ ವೀರಸಿಂಹ ತನ್ನ ಮನೆಗೆ ಹೊರಟಿದ್ದ. ಭೀಮಸಿಂಹನು ತನ್ನ ಪ್ರೀತಿಯ ಬಾಲ್ಯ ಮಿತ್ರನನ್ನು ಬೀಳ್ಕೊಡುತ್ತಾ "ವೀರಸಿಂಹಾ, ಎಂದಿಗೆ ಅಲ್ಲಾವುದ್ದೀನನು ಹದ್ದಿನಂತೆ ನಮ್ಮನ್ನು ಮುತ್ತುವನೋ ಹೇಳಬರುವಂತಿಲ್ಲ. ನೀಚ ಆಕಾಂಕ್ಷೆಯ. ಆ ಕ್ರೂರ ಕರ್ಮಿ ಏನು ಮಾಡಲೂ ಹೇಸುವವನಲ್ಲ. ಗೆಳೆಯಾ, ನಮ್ಮ ಚಿತ್ತೂರಿಗೆ ವಿಪತ್ತು ಕಾದಿದೆ. ಆದರೆ ನೀನು ಬಲ್ಲೆ; ನಾವು ರಜಪೂತರು! ನಿಮ್ಮೂರಾದ ಹಳ್ಳಿನಾಡಿನಿಂದ ನಮ್ಮೆಡೆಗೆ ಆ ಪ್ರತಿಗಾಮಿ ಬರಬಹುದು. ಆ ಕಡೆ ಬಿಗಿ ಪಹರೆ ಒಲವಾಗಿರಲಿ" ಎಂದು ಎಚ್ಚರಿಸಿದ್ದ.

ನದೀ ತೀರದ ಹಳ್ಳಿಯೇ ವೀರಸಿಂಹನ ನೆಲೆವೀಡು. ವೀರಸಿಂಹ ಶೂರ ಸರದಾರ. ಆದರೆ ಅವನು ಮೃದು ಹೃದಯಿಯೂ, ಭಾವ ಜೀವಿಯೂ ಹೌದು. ಅವನ ಮನೆಯೊಂದು ಶಾಂತಿಯ ಧಾಮದಂತೆ. ಸುತ್ತು ಮುತ್ತಲು ಸೊಂಪಾಗಿ ಬೆಳೆದ ಗಿಡ, ಮರ ಬಳ್ಳಿಗಳಿಂದ, ಪುಟ್ಟ ಪುಟ್ಟ ಹಚ್ಚ ಹಸುರಾದ ಹೊಲಗಳಿಂದ, ಕೊಳ, ತೋಟಗಳಿಂದ ಆವರಿಸಲ್ಪಟ್ಟಿತ್ತು. ಆ ಸಿರಿವಂತ ಕುಟೀರ. ಅಲ್ಲಿ ಜೀವಿಸುವ ವೀರಸಿಂಹನ ಹೃದಯದಲ್ಲಿ ಕೆಚ್ಚು ಇದೆ. ಶಾಂತಿಯ ಮೆಚ್ಚು ಇದೆ. ಕವಿ ಹೃದಯದಂತೆ ಅವನ ಹೃದಯ. ಹಳ್ಳಿ ಮನೆಯನ್ನು ಹೊಕ್ಕರೆ ಸೃಷ್ಟಿಯ ಆರಾಧಕನ ದ ಶಾಂತಿ, ಕಲಾ ಪ್ರೇಮಿ. ರಣರಂಗವನ್ನು ಹೊಕ್ಕರೆ ರಣದೇವತೆಯ ವರ ಭಕ್ತ ವೀರಸಿಂಹ!

ತಾಯಿಯ ಗುಣಗಳೇ ಮಗನಲ್ಲಿ ಆವಿರ್ಭೂತವಾಗಿದ್ದುವು. ಮಮತೆಯ ಮೂರ್ತಿ, ಸದ್ವರ್ತನೆ, ಸದಾಚಾರಗಳ ಪ್ರತೀಕ ವೀರಸಿಂಹನ ತಾಯಿ. ರಜಪೂತ ಮಹಿಳೆಗಿರಬೇಕಾದ ಕೆಚ್ಚಿದ್ದರೂ ಶಾಂತಿಯ ಕ್ಷಣದಲ್ಲಿ ಅದರ ಉಪಯೋಗವೇಕೆ? ಆ ಕೆಚ್ಚು ಪ್ರೇಮವಾಗಿ ಮಗನ ಮೇಲೆ ಮೂಡಿ ನಿಂತಿದೆ. ಹತ್ತಿರದ ಅಸಹಾಯಕ ಮಾನವ ಬಂಧುಗಳ ಮೇಲೆ ಹರಿದು ಹೋಗುತ್ತಿರುತ್ತದೆ.

ರಜಪೂತ ರಮಣಿ ಅವನ ಪತ್ನಿ. ಪತ್ನಿಯೆಂಬ ಭಾರವಾದ ಶಬ್ದವಲ್ಲ ಪ್ರೇಯಸಿಯೆಂಬ ಪ್ರೇಮದ ಹೆಸರು! ಕಾರಣ, ಇತ್ತೀ ವಿವಾಹಿತರಾದ ನವ ವಧೂವರರು ವೀರಸಿಂಹ ಮತ್ತು ವತ್ಸಲಾ. ರಾಜನೂ, ಮಿತ್ರನೂ ಆದ ಭೀಮಸಿಂಹನ ಕರೆ ಬಂದಾಗ ಗೃಹ ಪ್ರವೇಶ ಸಮಾರಂಭ ಕೊನೆಗೊಂಡಿತ್ತಷ್ಟೇ. ಎಳೆ ಗಂಗಳ, ಬಳ್ಳಿ ದೇಹದ, ಚಿಗುರು ತುಟಿಗಳ ಎಳವನ್ನೆ ಒನಪ್ಪು ಹಾಲುಗಲ್ಲದ ಮೋಹಕ ಮೂರ್ತಿ ತನ್ನ ಪ್ರಿಯ ಪತ್ನಿಯಾಗಿಯೂ ಇನ್ನೊಮ್ಮೆ ವೀರ ರಜಪೂತರವಣಿ ತನ್ನ ಬೆಂಬಲಿಗಳಾಗಿಯೂ ವೀರಸಿಂಹನ ಭಾವ ಪಟಲದಲ್ಲಿ ಹಾದು ಹೋಗುತ್ತಿದ್ದಳು. ಅವಳ ದರ್ಶನಕ್ಕಾಗಿ ಅವನ ಮನಸ್ಸು ತವಕಿಸುತ್ತಿತ್ತು. ನಿಶಿಯ ಸೃಷ್ಟಿ ಸೌಂದರ್ಯದ ಮಧ್ಯದಲ್ಲಿ ಭಾವಲೋಕದಲ್ಲಿ ಜೀವನ ಚಿತ್ರವನ್ನು ಕಾಣುತ್ತಿದ್ದ ವೀರಸಿಂಹನ ದೋಣಿ ಮುಂದೆ ಮುಂದೆ ಹೋಗುತಿತ್ತು.

'ಢುಂ' ಎಂದು ಪ್ರಶಾಂತ ಮೌನವನ್ನು ಬೇಧಿಸಿಕೊಂಡು ದೂರದ, ನದೀ ತಟದ ಹೆಮ್ಮರದ ಮರೆಯಿಂದ ಭಾರವಾದ ವಸ್ತುವೊಂದು ಹಾರಿಬಂದು ನದಿಯ ನೀರಿಗೆ ಬಿದ್ದು 'ಗುಳುಂ' ಎಂಬ ಶಬ್ದದೊಡನೆ ಶಟ್ಟದ್ದವಾಯಿತು. ಅಂಬಿಗನೊಮ್ಮೆ ತತ್ತರಿಸಿ ಬೆಪ್ಪಳಿಸಿದ. ದೋಣಿ ಬಲವಾಗಿ ತೂಗಾಡಿತು. ದೋಣಿಯ ಮೇಲಿದ್ದ ಪಯಣಿಗ ವೀರಸಿಂಹನಿಗೆ ಒಮ್ಮೆಲೇ ಭಾವಸಮಾಧಿಯಿಂದ ಬಾಹ್ಯ ಪ್ರಪಂಚಕ್ಕೆ ನೆಗೆದಂತಾಯಿತು ಯಾವುದೋ ತೀವ್ರ, ನಿಗೂಢ ಶಬ್ದ ಅವನನ್ನು ಹೊಡೆದೆಬ್ಬಿಸಿದಂತಾಯಿತು.

ಆ ಮಹಾ ಧ್ವನಿಯನ್ನು ಕೇಳಿ ತನ್ನ ಹಳ್ಳಿಯತ್ತ ಏನೋ ಅನಾಹುತ ನಡೆದಿರಬಹುದೆಂದು ವೀರಸಿಂಹ ಭಾವಿಸಿದ. ಪ್ರಶ್ನಾರ್ಥಕ ದೃಷ್ಟಿಯಿಂದ ನೋಡಿದ ಅಂಬಿಗನಿಗೆ ನದೀಕಿನಾರೆಗೆ ದೋಣಿಯನ್ನು ಒತ್ತರದಿಂದ ಒಯ್ಯುವಂತೆ ಸೂಚಿಸಿದ. ದೋಣಿ ವೇಗವಾಗಿ ಸಾಗಿ ಬಂದು ನದೀ ತೀರದಲ್ಲಿ ನಿಂತಿತು.

ಹತ್ತಿರವೇ ವೀರಸಿಂಹನ ನೆಲೆಯಾದ ಹಳ್ಳಿ. ಅಲ್ಲಿ ನಿಂತು ನೋಡಿದ ವೀರಸಿಂಹ ಮತ್ತು ಅಂಬಿಗರಿಗೆ ತಮ್ಮ ಹಳ್ಳಿಯ ಮೇಲೆ ಒಂದು ಪ್ರಭೆಯು ಆವರಿಸಿದಂತೆ ಕಂಡಿತು. ಸೃಷ್ಟಿ ಸೌಂದರ್ಯಾಸ್ವಾದನೆಯಲ್ಲಿ ಮುಳುಗಿದ್ದ ಅವರಿಗದು ಈ ಮೊದಲು ಕಂಡಿರಲಿಲ್ಲ. ಆ ದೊಡ್ಡ ಸಪ್ಪಳವೇನೆಂದು ಅವರ ತಲೆಗೆ ಹೋಗಲಿಲ್ಲ. ತಂಪಾದ ಗಾಳಿಯೂ ಬಿಸಿಯಾಗಿದ್ದಂತೆ ತೋರಿತು. ಅಂಬಿಗನನ್ನು ಅಲ್ಲೇ ನಿಲ್ಲಿಸಿ ತನ್ನ ಹಳ್ಳಿ ಮನೆಯತ್ತ ವೇಗವಾಗಿ ನಡೆದ ವೀರಸಿಂಹ.

ಹಳ್ಳಿಗೆ ಹಳ್ಳಿಯೇ ಪ್ರಜ್ವಲಿಸಿ ಉರಿಯುತಿತ್ತು! ಬೆಂಕಿಯ ನಾಲಿಗೆಗಳು ಗಗನದೆತ್ತರ ಹಾರುತ್ತಿದ್ದುವು. ದನಕರುಗಳ ಕೂಗು ಕೇಳಬರುತ್ತಿತ್ತು. ಬೆಂಕಿಯ "ಪುಯ್ ಪುಯ್" ಭಗ್ಗೆಂಬ ಧ್ವನಿಯೊಂದಿಗೆ ಜನರ ಬೊಬ್ಬೆ, ಕೋಲಾಹಲ ಮುಗಿಲು ಮುಟ್ಟಿತ್ತು. ನಾಯಿಗಳು ಬೊಗಳುತ್ತಲೂ, ನರಿಗಳಂತೆ ಊಳಿಡುತ್ತಲೂ ಓಡಿಹೋಗುತ್ತಲಿದ್ದುವು. ಮಕ್ಕಳು ಮರಿಗಳ ಆಕ್ರಂದನ ಕಿವಿ ಕಿವುಡಾಗಿಸುವಂತಿತ್ತು. ಸಿಕ್ಕಿದ ಗಂಟನ್ನೂ, ಮಕ್ಕಳು ಮರಿಗಳನ್ನೂ ಹೊತ್ತುಕೊಂಡು ಕೆಲವರು ಓಡಿ ಹೋಗುತ್ತಲಿದ್ದರು. ಬೆಂಕಿಯ ಮಧ್ಯದಲ್ಲಿ ಹಟ್ಟಿಯೊಳಗಿನ ದನಕರುಗಳು ಚಡಪಡಿಸಿ 'ಅಂಬಾ' ಎಂದು ಅರಚುತ್ತಾ ಬೇಯುತ್ತಿದ್ದುವು. ಅವರ ಹೆಚ್ಚಿನ ಮನೆಗಳು ಉರಿಯುತ್ತಿರವಂತೆಯೇ ಅದರೊಳಗಿಂದ ಹೃದಯ ವಿದ್ರಾವಕ ಚೀತ್ಕಾರಗಳು ಕೇಳಿಬರುತ್ತಿದ್ದುವು. ಆ ಮನೆಗಳ ಬಾಗಿಲನ್ನು ಭದ್ರಪಡಿಸಿ ಹೊರಗಿಂದ ಬೀಗ ಜಡಿದಿತ್ತು!

ಆದರೆ ಇವರೆಡೆಯಲ್ಲಿ ಎಲ್ಲೋ ದೂರದಲ್ಲಿ ವಾದ್ಯ ಧ್ವನಿಯೂ, ಗೆಜ್ಜೆಯ ಶಬ್ದವೂ ಹರ್ಷೋದ್ಗಾರಗಳೂ ವೀರಸಿಂಹನಿಗೆ ಕೇಳಿಸಿದುವು. ಸರಿ, ಉನ್ಮತ್ತ, ಅಮಾನುಷ, ಸುಲ್ತಾನನ ಸೈನಿಕರ ಕಾರ್ಯವಿದೆಂದು ವೀರಸಿಂಹ ಖಚಿತ ಮಾಡಿಕೊಂಡನು. ಎಂತಹ ರಾಕ್ಷಸೀ ಕೃತ್ಯ! ಅವರೆಡೆಯಲ್ಲಿ ವಿನೋದ ನೃತ್ಯ!

ವೀರಸಿಂಹ ತನ್ನ ಮನೆಯ ಹತ್ತಿರ ಬಂದು ನೋಡಿದಾಗ ಯಾವುದು ತನ್ನ ಮನೆಯೆಂದು ಅವನಿಗೇ ಅರೆನಿಮಿಷ ತೋರದಂತಾಯಿತು. ಅವನ ಶಾಂತಿಯ ಕುಟೀರ ಅಗ್ನಿಯ ಕುಂಡವಾಗಿತು!

ಹಿಂದೇನು, ಮುಂದೇನೆಂದು ಅವನಿಗರಿವಾಗಲಿಲ್ಲ. ತನ್ನರಿವೇ ವೀರಸಿಂಹನಿಗಿಲ್ಲದಂತಾಯಿತು. ಓಡಿ ಹೋಗಿ ಬಾಗಿಲನ್ನು ಮೆಟ್ಟಿ, ಮುರಿದೊಳನುಗ್ಗಿದ. ಭೀಕರ ದೃಶ್ಯ! ಮಾಡಿನ ತೊಲೆಗಳು ಉರಿದು ಕೆಳಬೀಳುತ್ತಿದ್ದುವು. ಬಿದಿರು ಗಂಟುಗಳು ಒಡೆಯುತ್ತಿದ್ದುವು. ಸುಡುವ ಬಟ್ಟೆಯ ವಾಸನೆ! ಹುಲ್ಲಿನ ಮಾಡು ಗಾಳಿಯೇ ಉರಿಯುತ್ತಿರುವಂತೆ ಉರಿಯುತ್ತಿತ್ತು.

ಒಳನುಗ್ಗಿದ ವೀರಸಿಂಹನಿಗೆ ಅರೆ ಬೆಂದ ಮಾನವ ಶರೀರವೊಂದು ಗೋಚರಿಸಿತು. ಮೈಮೇಲಿನ ಚರ್ಮ ಸಹಿತ ಮಾಂಸವು ಬೆಂದು ಸುಲಿದು ಹೋಗಿತ್ತು. ಬೆಂಕಿಯ ಮಧ್ಯದಲ್ಲಿ ವಿಲಿವಿಲಿ ಒದ್ದಾಡಿ ತಟಸ್ಥವಾಗಿತ್ತು. ಅದು ತನ್ನ ತಾಯಿಯ ದೇಹವೆಂದು ವೀರಸಿಂಹ ಖಚಿತಪಡಿಸಿಕೊಂಡನು. ಸುಡುವ ಬೆಂಕಿಯ ಮಧ್ಯದಲ್ಲಿ ಅವನ ಕಣ್ಣಿನಿಂದ ಎರಡು ಹನಿಗಳು

(೧೧ನೇ ಪುಟ ನೋಡಿರಿ)

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣಕ್ಕೆ ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ ಚೆಲೋದಾಗಿ ಮುದ್ರಿಸಿ ಕೊಡಲಾಗುವುದು.

NAVAYUGA PRESS, UDIPI.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ಮಹಾತ್ಮರ ಅಮರ ಸಂದೇಶ–

ಸಂಪತ್ತಿನ ಹಾದಿ

ಶ್ರೀ ಹೊಯಿಸಳ

ಮಹಾತ್ಮರು ಶಾಶ್ವತ ಸಂಪತ್ತಿನ ಹಾದಿ ಯಾವುದೆಂದು ವಿವರಿಸುತ್ತಾರೆ—ಕೇಳಿರಿ.

"ಸಂಪತ್ತಿನ ಹಾದಿ"(ನಾವು ಮುಂದುವರಿಯುವುದು ಯಾವಾಗ?) ಜಗತ್ತಿನ ಸಂಪತ್ತು ನಾಡಿನ ಮುನ್ನಡೆಗೆ ಅಡ್ಡಿಯಾದೀತೆ? ಪ್ರಪಂಚದ ಭೋಗ್ಯ ವಸ್ತುಗಳೆಲ್ಲ, ನಮ್ಮ ಕೈಲಿದ್ದರೆ ನಾವು ಮುಂದುವರೆಯುವ ಜನಾಂಗವೆನ್ನಿಸಿಕೊಳ್ಳುತ್ತೇವೆಯೆ? ಇಲ್ಲ, ಮುನ್ನಡೆಯುಳ್ಳ ಜನಾಂಗವು ನೀತಿಪರವಾಗಿರಬೇಕು ಆ ಜನಾಂಗದ ಶಾಶ್ವತ ಧರ್ಮಗುಣವು ಅಭಿವೃದ್ಧಿ ಹೊಂದಬೇಕು ಸಂಪತ್ತಿನ ಸಂಗಡ ಶಾಶ್ವತ ಧರ್ಮಗುಣವು ಅಭಿವೃದ್ಧಿ ಹೊಂದಬೇಕು. ಇದೇ ನಿಜವಾದ ಸಂಪತ್ತು.

ಕೆಲವು ಯುರೋಪಿನ ಮಹನೀಯರಿಗೆ ಭಾರತದ ಮೂವತ್ತು ಕೋಟಿ ಜನರು ಅರೆಹೊಟ್ಟೆಯಲ್ಲಿದ್ದಾರೆಂಬ ಭೀತಿಯು ಬೆನ್ನು ಹತ್ತಿ ಬಿಟ್ಟಿದೆ ಮೊದಲು ಭಾರತೀಯರಿಗೆ ಅನ್ನ ವಸ್ತ್ರ ಸಂಪತ್ತು ಬಂದರೆ, ಅದರ ಸಂಗಡಲೇ ನೀತಿನಯ ಮುಂತಾದ ದೈವೀ ಸಂಪತ್ತು ಬರುತ್ತದೆ, ಎನ್ನುತ್ತಾರೆ. ಮೂವತ್ತು ಕೋಟಿಗೆ ಆದದ್ದೇ, ಇನ್ನೂರು ಕೋಟಿಗೂ ಒಪ್ಪುತ್ತದೆ ಆದ್ದರಿಂದ, ಜಗತ್ತಿನ ಆರ್ಥಿಕ ಸಂಪತ್ತು ಮೊದಲು ಕೂಡಿ ಬಂದರೆ ನೀತಿ ಸಂಪತ್ತು ಅನಂತರ, ಅದರ ನೆರಳಾಗಿ ಬಂದೇ ಬರುತ್ತದೆ—ಎನ್ನುತ್ತಾರೆ. ಅದೆಲ್ಲ ನಿಜವಲ್ಲದಿದ್ದರೂ, ಇದಂತೂ ನಿಶ್ಚಯ—ಅತಿ ದುಃಖಕಾರಕವಾದ ನಿರ್ಗತಿಕತನವು ಅನೀತಿಯ ಮೂಲವೆಂದೇ ಹೇಳಬಹುದು ಮನುಷ್ಯನಾದವನಿಗೆ ಮೈ ಮುಚ್ಚುವ ಬಟ್ಟೆ ಹಸಿವು ಹಿಂಗಿಸುವ ಅನ್ನ, ನೆರಳು ಕೊಡುವ ಮನೆ, ಮುಂತಾದುವುಗಳನ್ನು ಪಡೆಯುವ ಹಕ್ಕಿದೆ. ಆ ಹಕ್ಕನ್ನು ಸ್ಥಾಪಿಸಲು, ಯಾವ ರಾಜಕಾರಣಿಯೂ, ಜ್ಞಾನಿಯೂ ಬೇಕಾಗಿಲ್ಲ

ಎಲ್ಲಾ ಮತಗಳ, "ನಾಳಿನ ಕಾಳಜಿ ನಿನಗೆ ಬೇಡವೆಂದು ಹೇಳುತ್ತವೆ."—ಸುವ್ಯವಸ್ಥಿತ ಸಮಾಜಗಳಲ್ಲಿ, ನಿತ್ಯ ಬಳಕೆಯ ಪದಾರ್ಥಗಳಿಗೆ, ಕೊರತೆಯಿರಲಾರದು, ಲಕ್ಷಾಧಿಪತಿಗಳು, ಹೆಚ್ಚಾಗಿರುವ ಸಮಾಜವು ಸುವ್ಯವಸ್ಥಿತ ಸಮಾಜವಲ್ಲ, ಅರೆಹೊಟ್ಟೆಯವರಿಲ್ಲದ, ಸಮಾಜವೇ ಸುವ್ಯವಸ್ಥಿತ ಸಮಾಜ! ಸಂಪತ್ತಿನ ಅಭಿವೃದ್ಧಿಯ ಸಂಗಡ ನೀತಿಯ ಮುನ್ನಡೆಯೂ ಸಾಗಲಿ, ಇಲ್ಲದಿದ್ದರೆ ಅಂಥಾ ಜನಾಂಗದ ವಿನಾಶ ಖಂಡಿತ.

ರೋಮನ್ನರು, ಗ್ರೀಕರು, ಈಜಿಪ್ತಿಯನ್ನರೂ, ಅತ್ಯುನ್ನತ ಸಂಪತ್ ಶಿಖರದಲ್ಲಿದ್ದಾಗಲೇ ನಾಶಹೊಂದಿದರು, ಶ್ರೀ ಕೃಷ್ಣನ ಯಾದವಸಂತಾನದ ಗತಿಯೂ ಹಾಗೇ ಆಯಿತು! ಕೋಟ್ಯಾಧೀಶರಾದ ರಾಕ್‌ಫೆಲ್ಲರ್, ಕಾರ್ನೆಗೀ ಮುಂತಾದವರ ನೀತಿಯೇನೋ ಸರಿಯಾಗಿದ್ದಿರಬಹುದಾದರೂ, ಇನ್ನಿತರ ಕೋಟ್ಯಾಧೀಶ್ವರರೆಲ್ಲ ಸಂಪತ್ತಿನ ಸಂಗಡ ನೀತಿಪರತೆಯನ್ನು ಬೆಳಸಿಕೊಂಡು, ಬಂದಿರುವರೆಂದು ಹೇಳಲಾಗುವುದಿಲ್ಲ.

ದಕ್ಷಿಣ ಆಫ್ರಿಕಾದಲ್ಲಿ ನಾನಿದ್ದಾಗ್ಗೆ ನೋಡಿದ್ದೇನೆ, ಅಲ್ಲಿದ್ದ ಭಾರತೀಯರು, ಸಂಪತ್ತಿನ ಸಂಗಡ ನೀತಿಯನ್ನು ಬೆಳಸಿಕೊಂಡಿರಲಿಲ್ಲ, ಹಾಗೂ, ಸತ್ಯಾಗ್ರಹ ಸಮಯದಲ್ಲಿ, ಬಡವರು ನನ್ನ ಜನಕ್ಕೆ ನೆರವಾದಂತೆ, ಶ್ರೀಮಂತರಾಗಲಿಲ್ಲ ಬಡವರ ಹೃದಯ ನೊಂದಂತೆ, ಅನುಕೂಲಸ್ಥರ ಎದೆ ಕರಗಲಿಲ್ಲ – ಭಾರತೀಯರಿಗಾದ, ಅಪಮಾನವನ್ನು ಕಂಡಾಗಲೂ ನನ್ನ ಪುತ್ರಮಿತ್ರ ನೋಡಿದಾಗಲೂ, ಇದೇ ನಿಶ್ಚಯವೆನಿಸುತ್ತದೆ. ಸಂಪತ್ತಿನ ಅಭಿವೃದ್ಧಿ ನೀತಿಯ ಮುನ್ನಡೆಗೆ ನೆರವಾಗುವುದಿಲ್ಲ ಈಗಿನ ಅರ್ಥಶಾಸ್ತ್ರ ಪುಸ್ತಕಗಳಿಗಿಂತ ಹಿಂದಿನ ಮತ ಧರ್ಮ ಗ್ರಂಥಗಳು, ಹೆಚ್ಚಿನ ನಿಶ್ಚಿತ ನಿಯಮಗಳನ್ನು ಸಂಪತ್ತು ಸಾಧನೆಗೆ ಸಾರುತ್ತವೆ

ಸಂಪತ್ ಸಾಧನೆಯ ಪ್ರಶ್ನೆ ಬಹಳ ಹಿಂದಿನದು ಬುದ್ಧನ ಕಾಲದಲ್ಲೂ ಈ ಪ್ರಶ್ನೆ ಎದ್ದಿತ್ತು. ಇಹಲೋಕದ ಸಂಪತ್ತನ್ನು ತೊರೆದ ಹೊರತು ಧರ್ಮನೀತಿಯ ಸಂಪತ್ತು, ದೊರಕುವುದಿಲ್ಲ ಜಗತ್ತಿನ ಐಶ್ವರ್ಯದಲ್ಲಿ ದುರಭಿಮಾನವಿರಬಾರದು ಸಮಾಜವೇ ದೇವರೆಂದು, ಅದಕ್ಕೆ ಎಲ್ಲವನ್ನು ಒಪ್ಪಿಸಿದರೆ, ನಮ್ಮ ಉನ್ನತಿ ನಿಶ್ಚಿತ. ಜೀಸಸ್, ಮಹಮದ್ ಬುದ್ಧ, ನಾನಕ್ ಕಬೀರ್, ಚೈತನ್ಯ, ಶಂಕರ, ದಯಾನಂದ, ರಾಮಕೃಷ್ಣ ಪರಮಹಂಸರೆಲ್ಲ, ಹೀಗೇ ಹೇಳಿದ್ದಾರೆ. ಅವರೆಲ್ಲ, ಪ್ರಪಂಚದ ಐಶ್ವರ್ಯವನ್ನು ತೊರೆದವರು ವ್ಯಕ್ತಿಯ ವಿಚಾರ ಹೇಗೋ ಹಾಗೇ ಜನಾಂಗದ ವಿಚಾರವೂ ಸರಿಯೆ. ಒಂದು ಜನಾಂಗದ ಸಂಪತ್ತನ್ನೇ ಹಿಂಬಾಲಿಸುವ ಜನ ಇರಬಹುದು ಆದರೆ ಅಂಥವರಿಗೆ ಹೆಚ್ಚಿಗೆ ವಿಶ್ವಾಸ ಇರಬಾರದು. ದೇವರನ್ನು, ಧನಪಿಶಾಚಿಯನ್ನು ಒಂದೇ ಕಾಲದಲ್ಲಿ, ಒಬ್ಬನೇ ಮನುಷ್ಯ ಆರಾಧಿಸಲಾರ ಈ ಒಳ್ಳೆಯ ಭಾವನೆಯು ನಮ್ಮಲ್ಲಿ ಹಲವರಿಗೆ, ಈಗೀಗ ಅಂಟಿಕೊಂಡಿರುವುದೂ ಒಂದು ಶುಭಲಕ್ಷಣ.

ಪಾಶ್ಚಾತ್ಯ ಜನಾಂಗಗಳಿಗೆ ಪೌಂಡ ಶಿಲಿಂಗ್ ಪೆನ್ನಿಗಳೇ ಒರೆಗಲ್ಲು, ಆರ್ಥಿಕ ಭೂತದ ಕಾಲ ಕೆಳಗೆ ಸಿಕ್ಕಿ ಅವರ ನೀತಿ ನರಳುತ್ತಿದೆ ನಮ್ಮ ನಾಡಿನವರನೇಕರು, ಅಮೇರಿಕದ ಸಂಪತ್ತನ್ನು ಗಳಿಸಿಯೂ, ಧಾರ್ಮಿಕ ನೀತಿಯನ್ನು ಅನುಸರಿಸುತ್ತೇವೆ, ಎನ್ನುವರು! ಅದು ಸಾಧ್ಯವಿಲ್ಲ, ಒಂದೇ ಕಾಲದಲ್ಲಿ, ಒಬ್ಬ ಮನುಷ್ಯನು, ಜ್ಞಾನಿಯಾಗಿ, ಸಮಾಧಾನಿಯಾಗಿದ್ದು ರೇಗಿ, ಸಿಟ್ಟಿಗೇಳಲಾರ. ಆದ್ದರಿಂದ, ನಮ್ಮ ನಾಡಿನ ನಾಯಕರಲ್ಲಿ ನನ ಪ್ರಾರ್ಥನೆಯೇನೆಂದರೆ—'ನಮ್ಮನ್ನೆಲ್ಲ, ನೀತಿಯ ನೆಲೆಗೆ ಕರೆದೊಯ್ಯಿರಿ' ಅಷ್ಟು ಸಾಕು

ನಮ್ಮ ಭರತ ಭೂಮಿಯಲ್ಲಿ ಹಿಂದೆ ದೇವಾನ್ ದೇವತೆಗಳಿದ್ದರಂತೆ, ಅದರೆ ಈಗ ಅವರು, ನಮ್ಮೊಡನೆ ಇರಲಾರರು, ಕಾರ್ಖಾನೆಗಳ ಹೊಗೆ, ಕೆಲಸಗಾರರ ಗದ್ದಲ ಕಿರಿಚಾಡುವ ಯಂತ್ರಗಳು, ಜನಭರಿತವಾದ ಬಸ್ಸು ಲಾರಿಗಳು ಮತ್ತು ಒಬ್ಬರನ್ನೊಬ್ಬರು ಓಡಿಸಿ ಅವರ ಸ್ಥಾನ ಆಕ್ರಮಣಮಾಡುವ ಕುಹಕ ನಡತೆ, ಇಂಥಾ ವಾತಾವರಣದಲ್ಲಿ ದೇವತೆಗಳು ವಾಸಿಸಲಾರರು.

ಇವನ್ನೆಲ್ಲ ನಾನು ವಿವರಿಸುವುದೇಕೆಂದರೆ, ಅವೇ ನಮ್ಮ ಸಂಪತ್ತಿನ ಮೂಲವೆಂದು ಹಲವರ ಭಾವನೆ. ಪಾಶ್ಚಾತ್ಯ ವೇದಾಂತಿಯೊಬ್ಬನು ಹೀಗೆ ಹೇಳುತ್ತಾನೆ—"ಒಮ್ಮೆ ನಮ್ಮಲ್ಲಿ ನೀತಿ ನೆಲಸಿತ್ತು ಆದರೆ ಶೀಘ್ರವಾಗಿ ಬೆಳೆದ ಬಂದ ಸುಖಸಂಪತ್ ಸಾಧನೆಗಳಿಂದ ನೀತಿಯು ನೆಲೆಗೆಟ್ಟು ನಾಶವಾಯಿತು. ಕಾರ್ಖಾನೆಗಳೆಲ್ಲ, ಅಲ್ಲಿ ಕೆಲಸಮಾಡುವ ಕೂಲಿಗಳ ಸಾವು ನೋವಿನ ಬಡಾವಣೆಗಳು! ಈಗಿನ ಕಾರ್ಖಾನೆಗಳಂತೂ, ಅನಾರೋಗ್ಯ, ಬಡತನ ನೋವು, ಅವಗುಣ, ಲಂಚ, ಸಾವು, ಜೂಜುಗಳ ತವರ್ಮನೆ, ಐಶ್ವರ್ಯದ ಸಂಗಡ ಪಾಶ್ಚಾತ್ಯ ಜನಾಂಗಗಳಲ್ಲಿ ವಿರಾಮ, ವಿಷಮತೆ, ಅನೀತಿ, ಕುಡಿತ, ದ್ವೇಷ, ಬೇನೆ, ಕಾಳಗ-ಮುಂತಾದವೆಲ್ಲ ನಾಗರಿಕತೆಯ ಶೋಭಾಶಾಖೆಗಳಾಗಿ ಹಬ್ಬಿಕೊಂಡಿವೆ, ಪ್ರಜೆಗಳಿಗಿಂತ, ಆಡಳಿತಗಾರರಲ್ಲಿ, ಇವು ಇನ್ನೂ ಹೆಚ್ಚಾಗಿದೆ.

ನಾವು! ಭಾರತೀಯರಾದ ನಾವು! ಉನ್ನತ ಮಾದರಿಗಳನ್ನು ಕಂಡು ಬೆದರಬೇಕಾಗಿಲ್ಲ ನಮ್ಮದು ಧರ್ಮಸಾಮ್ರಾಜ್ಯ. ಧರ್ಮಚಕ್ರ ನಮ್ಮ ಕಾವಲಿಗಿದೆ ಸತ್ಯವನ್ನೇ ಎತ್ತಿ ಹಿಡಿಯೋಣ ಜ್ಞಾನ ಮುಂದಿರಲಿ, ನೀತಿ ಮುಂದಿರಲಿ ಶಕ್ತಿಯ ಭ್ರಮೆ ಹಿಂದಿರಲಿ, ಧೈರ್ಯದ ಹೆಮ್ಮೆ ಮುಂದಿರಲಿ.

ನಮ್ಮ ಮನೆಗಳಲ್ಲೂ, ಗುಡಿಗಳಲ್ಲೂ ಅರಮನೆಗಳಲ್ಲೂ, ಆಡಳಿತ ಗೃಹಗಳಲ್ಲೂ ಶ್ರೀಮಂತಿಕೆಯ ಸೊಗಡು ಇಲ್ಲದಿರಲಿ ನೀತಿಯ ಪುಷ್ಪಲತೆಗಳು ಅಲ್ಲೆಲ್ಲ ಅರಳುತ್ತಿರಲಿ ಆಗ ನಾವು ವಿನಾಶಕಾರಿ ಸೈನ್ಯಗಳೇ ಇಲ್ಲದೆ ಮಹಾ ಶತ್ರುಗಳ ಸಂಗಡಲೂ ಕಾದಾಡಬಹುದು.

ಕೇವಲ ಆರ್ಥಿಕ ಸಂಪತ್ತಿನ ಮಾರ್ಗವನ್ನು ತೊರೆಯೋಣ ಧಾರ್ಮಿಕ ಸಂಪತ್ತಿನ ಮಾರ್ಗದಲ್ಲಿ, ನಡೆಯೋಣ ನಮ್ಮ ನಿತ್ಯ ನಿಯಮದಲ್ಲೂ, ನಾಡಿನ ಜೀವನದಲ್ಲೂ ದೇವರ ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಪಡೋಣ—ಅದೇ ನಿಜವಾದ ಸಂಪತ್ತಿನ ಹಾದಿ" ಹೀಗೆಂದವರು ಮಹಾತ್ಮಜೀಯವರು.

ಸ್ವಾಮಿ ಶಿವಾನಂದರ ವಾಣಿ

III

ಶ್ರೇಷ್ಠ ದೇವ-ಮಾನವರು

ಅನು: ಭದ್ರಗಿರಿ ಕೇಶವ ಪೈ, B A

1 . "ವಿಶ್ವವು ತಾನೇ ಮತ್ತು ತನ್ನಲ್ಲೇ ವಿಶ್ವವುಂಟು ಎಂದು ತಿಳಿದವನೇ ಪೂರ್ಣನು", ಎಂಬುದಾಗಿ ಉಪನಿಷತ್ತುಗಳು ಪದೇ ಪದೇ ಸಾರುತ್ತವೆ.

12. ಯೋಗಿ-ಯಾ-ಪೂರ್ಣನು ದೇವರಲ್ಲಿ ತನ್ನ ಐಕ್ಯದ ಅವಶ್ಯಕತೆಯನ್ನು ಪೂರ್ಣವಾಗಿ ತಿಳಿದವನು.

13. ಸಾಗರದಂತೆ ಆತನು ಗಂಭೀರನಿದ್ದು ಅಳೆಯಲು ಅಸಾಧ್ಯನಾದವನು. ಅವನು ಯಾವಾಗಲೂ ಶಾಂತನು.

14. ಯೋಗಿಯು ಸರ್ವಸ್ವವೂ ತಾನೇ ಆಗುವನು.

15 ಯೋಗಿಯು ಎಲ್ಲದರೊಳಗೆ ಪ್ರವೇಶಿಸಿ, ಎಲ್ಲವುಗಳ ಸತ್ವ-ಯಾ-ಆತ್ಮನಾಗುವನು

16 ಪುರುಷರನ್ನೂ, ಸ್ತ್ರೀಯರನ್ನೂ ಬ್ರಹ್ಮ ಸ್ವರೂಪಿಗಳೆಂದು ಯಾವಾತನು ಕಾಣಬಲ್ಲನೋ ಆತನೋರ್ವನೇ ಯೋಗಿ-ಯಾ ಮಂತ್ರದ್ರಷ್ಟಾರ.

17 ಜಗತ್ತಿನ ಸೇವೆ ಮಾಡಬೇಕೆಂಬ ಸಾಧುವಿನ ಬಯಕೆಯು ಪ್ರಾಪಂಚಿಕವೂ ಗರ್ವಯುಕ್ತವೂ ಆದುದಲ್ಲ ಅದು ಸಾತ್ವಿಕ ಅಥವಾ ಪರಿಶುದ್ಧವಾದ ಬಯಕೆ

18. ಮೋಡಗಳ ಬಿರುಕಿನೆಡೆ ಪ್ರವೇಶಿಸುವ ರವಿಯಂತೆ ಯೋಗಿ-ಯಾ-ಸಾಧುವು ಸಮಾಜದೊಳಗೆ ಪ್ರವೇಶಿಸುವನು

19 ಸಮಸ್ತ ಬಂಧನ ಮತ್ತು ಸೀಮೆಗಳಿಂದ ಆತನು ಮುಕ್ತನು

2 ತನ್ನ ಸ್ವತಃ ಅನಂತ ಆನಂದಮಯ ಸ್ವರೂಪದಲ್ಲೇ ಆತನು ಸತತ ತನ್ಮಯನಾಗಿರುತ್ತಾನೆ

21 ದೇವ-ಮಾನವನು ತನ್ನ ಅಂತರಂಗದಲ್ಲಿ ಶಾಂತಿಯನ್ನು ಆನಂದವನ್ನು ಅನುಭವಿಸುವವನಾಗಿ, ತನ್ನ ಅಂತರಂಗವು ಆನಂದಭರಿತವಾಗಿರುವುದು ಆತನಿಗೆ ಭಾಸವಾಗುತ್ತದೆ.

22. ಋಷಿಯು ಧರ್ಮದ ಸೇತುವೆ. ಆತನು ಸತ್ಯದಲ್ಲಿ ಬೇರುಬಿಟ್ಟವನು.

23 ದೇವ ಮಾನವನು-ಯಾ-ಜೀವನ್ಮುಕ್ತನು ಯಾರಿಗೂ ಭಯಪಡುವುದಿಲ್ಲ, ಯಾರನ್ನೂ ದ್ವೇಷಿಸುವುದಿಲ್ಲ.

(ಮುಂದಿನವಾರ–"ಮುಕ್ತನ್ಯಾರು?")

NAVAYUGA WEEKLY

ADVERTISEMENT RATES

Display Advertisements— Rs. 2-8/ per column inch for contracts of 50" or more and Rs. 3/ per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to

ADVERTISEMENT MANAGER,

'NAVAYUGA'

Post Box No 22, UDIPI, S. K.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು, ತಕ್ಕ ಪ್ರತಿಫಲ ಪಡೆಯಿರಿ

ಭಾರತದಲ್ಲಿ ಆರೋಗ್ಯ ಸುಧಾರಣೆ—

ರಾಷ್ಟ್ರೀಯ ಪ್ರಯೋಗಶಾಲೆ

ಈಚಿನ ವರ್ಷಗಳಲ್ಲಿ ಜನರ ಆರೋಗ್ಯ ಮತ್ತು ಆಹಾರ ಸಂಬಂಧವಾದ ಸಮಸ್ಯೆಯು ಬೃಹದಾಕಾರ ತಾಳಿದೆ. ಈ ದೃಷ್ಟಿಯಿಂದ ಯಾವ ರಾಷ್ಟ್ರಕ್ಕೇ ಆಗಲಿ ಜೀವರಸಾಯನ ವಿಜ್ಞಾನಗಳಲ್ಲಿ ಮೂಲ ಹಾಗೂ ವ್ಯಾವಹಾರಿಕ ಸಂಶೋಧನೆ ಮತ್ತು ದೇಶದ ವಿಶಿಷ್ಟ ಆರೋಗ್ಯ ಸಮಸ್ಯೆಗಳ ಪರಿಶೀಲನೆ ಅತಿ ಮುಖ್ಯವಾದುದ್ದಾಗಿವೆ. ಈ ಸಮಸ್ಯೆಗಳನ್ನು ಪರಿಶೀಲಿಸಿ ನಿವಾರಣೋಪಾಯಗಳನ್ನು ಸೂಚಿಸಲು ಸಾಧ್ಯವಾಗುವಂತೆ ಕಲ್ಕತ್ತಾದಲ್ಲಿರುವ ಭಾರತೀಯ ಜೀವರಸಾಯನ ಹಾಗೂ ಪ್ರಾಯೋಗಿಕ ಔಷಧಿ ಶಾಲೆಯ ಕಾರ್ಯ ಚಟುವಟಿಕೆಗಳನ್ನು ನಿಯೋಜಿಸಲಾಗಿದೆ

ಕಲ್ಕತ್ತಾ ನಗರದಲ್ಲಿ ವೈಜ್ಞಾನಿಕ ಕಾರ್ಯಕರ್ತರ ತಂಡವೊಂದು ೧೯೩೫ರ ಜನವರಿ ೧ರಂದು ಭಾರತೀಯ ಚಿಕಿತ್ಸಾ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಿತು. ೧೯೫೬ರ ಏಪ್ರಿಲ್ ತಿಂಗಳಲ್ಲಿ ಈ ಸಂಶೋಧನಾ ಸಂಸ್ಥೆಯನ್ನು ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತಿನವರು ತಮ್ಮ ವಶಕ್ಕೆ ತೆಗೆದುಕೊಂಡು ಭಾರತೀಯ ಜೀವ ರಸಾಯನ ಹಾಗೂ ಪ್ರಾಯೋಗಿಕ ಔಷಧಿ ಶಾಲೆ ಎಂಬ ಹೆಸರನ್ನಿಟ್ಟರು ಈ ಸಂಸ್ಥೆಯು ಇಂದು ಜೀವ ರಸಾಯನ ವಿಜ್ಞಾನ ಮತ್ತು ಔಷಧಿಗಳ ವಿಚಾರದಲ್ಲಿ ಮೂಲಭೂತವಾದ ಹಾಗೂ ಪ್ರಾಯೋಗಿಕ ಅಧ್ಯಯನಗಳನ್ನು ನಡಸುತ್ತಿದೆ

ಭಾರತದಲ್ಲಿ ಸಾಕಷ್ಟು ಪೌಷ್ಟಿಕ ಆಹಾರ ದೊರೆಯದೆ ಜನರು ಅಶಕ್ತರಾಗುತ್ತಿರುವುದು ಮುಖ್ಯ ಸಮಸ್ಯೆಯಾಗಿ ಪರಿಣಮಿಸಿದೆ ಜೀವ ರಸಾಯನ ಹಾಗೂ ಪ್ರಾಯೋಗಿಕ ಔಷಧಿ ಶಾಲೆಯ ಸ್ಥಾಪನೆಯ ಮೊದಲು ಪೌಷ್ಟಿಕ ಆಹಾರದ ಬಗ್ಗೆ ಅತ್ಯಮೂಲ್ಯವಾದ ಸಂಶೋಧನೆಗಳನ್ನು ನಡೆಸಲಾಗುತ್ತಿದೆ ದೇಶದಲ್ಲಿ ಪ್ರಥಮ ಸಲ ದೇಶೀಯ ಆಹಾರ ಪದಾರ್ಥಗಳ ಬಗ್ಗೆ ಸುವ್ಯವಸ್ಥಿತ ರೀತಿಯ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಈ ಆಹಾರ ಪದಾರ್ಥಗಳಲ್ಲಿರುವ ಪ್ರೋಟೀನ್, ಖನಿಜ ವಸ್ತುಗಳು ಮತ್ತು ವಿಟಮಿನ್ ಅಂಶಗಳ ಬಗ್ಗೆ ಉಪಯುಕ್ತ ಫಲಿತಾಂಶಗಳನ್ನು ಈ ಸಮೀಕ್ಷೆಯಿಂದ ಪಡೆಯಲಾಯಿತು ರೋಹಿತ, ನೇತಕಿ ಮತ್ತು ಮೃಗಾಲ ಜಾತಿಯ ಮೀನುಗಳಿಂದ ತೆಗೆಯಲ್ಪಟ್ಟ ಎಣ್ಣೆಯಲ್ಲಿನ ಜೀವಾತು 'ಎ' ಅಂಶವು ಕಾಡ್ ಮೀನೆಣ್ಣೆಯಲ್ಲಿನ ಜೀವಾತು 'ಎ' ಅಂಶಕ್ಕಿಂತಲೂ ಉತ್ತಮ ಗುಣಾಂಶದಿಂದ ಕೂಡಿದೆ ಎಂಬುದಾಗಿ ತಿಳಿದುಬಂದಿದೆ. ಮಾವು, ಲೀಚಿ, ಸೀಬೆ, ಕಲ್ ಮುಂತಾದ ಹಣ್ಣುಗಳಲ್ಲಿ ಜೀವಾತು 'ಸಿ' ಅಂಶವು ಅತ್ಯಧಿಕವಾಗಿರುವುದೆಂಬುದು ಪರಿಶೀಲನೆಗಳಿಂದ ವ್ಯಕ್ತಪಟ್ಟಿದೆ. ಮಹಿಳೆಯರು ತಮ್ಮ ಆಹಾರದಲ್ಲಿ ಜೀವಾತು 'ಸಿ'ಯನ್ನು ಸೇವಿಸಿದ್ದಾದರೆ ಅವರ ಹಾಲಿನಲ್ಲಿ ಕೂಡ ಜೀವಾತು 'ಸಿ' ಅಂಶವು ವೃದ್ಧಿಸುವುದೆಂದು ಈ ಸಂಸ್ಥೆಯು ಸಂಶೋಧನೆ ನಡೆಸಿದೆ.

ಮಲೇರಿಯಾ ರೋಗದ ಸೋಂಕು ರಕ್ಷಣಾ ಶಾಸ್ತ್ರದ ಇಮ್ಯುನಾಲಜಿ ಬಗ್ಗೆ ಶಾಸ್ತ್ರೀಯವಾಗಿ ಅಧ್ಯಯನ ನಡೆಸುವುದನ್ನು ಎರಡು ದಶಕಗಳ ಹಿಂದೆ ಪ್ರಾರಂಭಿಸಲಾಯಿತು. ಈ ಸಂಸ್ಥೆಯಲ್ಲಿ ಪ್ರಥಮತಃ ಈ ವಿಷಯದ ಬಗ್ಗೆ ಪರಿಶೀಲನೆಗಳನ್ನು ಕೈಗೊಳ್ಳಲಾಯಿತು. ಈ ಸಂಸ್ಥೆಯಲ್ಲಿ ಮಲೇರಿಯಾದ ಬಗ್ಗೆ ವೇಕ್ಸೀನನ್ನು ತಯಾರಿಸಲಾಗಿದೆ ಈ ಔಷಧಿಯನ್ನು ಪ್ರಯೋಗಾರ್ಥವಾಗಿ ಬಳಕೆಗೆ ತರಲಾಗಿದೆ

ಸಂಸ್ಥೆಯಲ್ಲಿ ಜೀವಾಣುಗಳಿಂದ ವೇಕ್ಸೀನ್ ಒಂದನ್ನು ತಯಾರಿಸಿ ಅದರಿಂದ ವ್ರಣವೊಂದನ್ನು ವಾಸಿಪಡಿಸಲಾಯಿತು ಈ ಸಂಸ್ಥೆಯು ಕಲಾಜಾರ್ ಮತ್ತು ಅಮೀಬಾಸಿಸ್ ರೋಗಗಳ ರೋಗ ನಿದಾನಕ್ಕಾಗಿ ಪರೀಕ್ಷಾ ವಿಧಾನವೊಂದನ್ನು ಕಂಡುಹಿಡಿದಿದೆ

ಪೌಷ್ಟಿಕ ಆಹಾರದ ಅವಶ್ಯಕತೆಗಳು ಹಾಗೂ ಪರೋಪಜೀವಿ ಜೀವಾಣುಗಳ ವೃದ್ಧಿಯ ಕಾರಣ ಈ ಬಗ್ಗೆ ಈ ಸಂಸ್ಥೆಯಲ್ಲಿ ಅಧ್ಯಯನಗಳನ್ನು ನಡೆಸಲಾಗುತ್ತಿದೆ ಈ ಜೀವಾಣುಗಳ ಬಗ್ಗೆ ಈಗ ದೊರೆತಿರುವ ಅಂಶಗಳು ಅತೃಪ್ತಿ ಕ್ಷಯ ರೋಗ ತಗುಲಿದ ಪ್ರಾರಂಭದಲ್ಲಿಯೇ ರೋಗದ ಲಕ್ಷಣಗಳನ್ನು ಅರಿತುಕೊಳ್ಳುವ ಮೂಲ ವಿಧಾನವೊಂದನ್ನು ಕಲ್ಕತ್ತದ ಸಂಸ್ಥೆಯಲ್ಲಿ ಕಂಡುಹಿಡಿಯಲಾಗಿದೆ

ಕುಷ್ಠರೋಗದ ಲಕ್ಷಣಗಳನ್ನು ಅರಿತುಕೊಳ್ಳುವುದಕ್ಕೆ ಸಹಾಯವಾಗುವಂತಹ ರಕ್ತ ಪರೀಕ್ಷೆಯ ಹೊಸ ವಿಧಾನವೊಂದನ್ನು ಈ ಸಂಸ್ಥೆಯಲ್ಲಿ ಕಂಡುಹಿಡಿಯಲಾಗಿದೆ. ಭಾರತದಲ್ಲಿ ಸುಮಾರು ೧೦ ಲಕ್ಷ ಜನರು ಕುಷ್ಠರೋಗದಿಂದ ನರಳುತ್ತಿರುವರೆಂದೂ, ಪ್ರತಿ ಮೂರು, ನಾಲ್ಕು ರೋಗಿಗಳಲ್ಲಿ ಒಬ್ಬ ರೋಗಿಯೂ ಈ ರೋಗವನ್ನು ಹರಡಬಲ್ಲನು ಈ ಸಂಸ್ಥೆಯು ಈ ರೋಗದ ವ್ಯಾಪನೆಯ ಬಗ್ಗೆ ನಮೂನಾ ಸಮೀಕ್ಷೆಯೊಂದನ್ನು ಕೈಗೊಳ್ಳಲು ಉದ್ದೇಶಿಸಿದೆ ರಕ್ತ ಒತ್ತಡ, ಅಸ್ತಮಾ ಮುಂತಾದ ರೋಗಗಳ ಬಗ್ಗೆ ಕೂಡ ಈ ಸಂಸ್ಥೆಯಲ್ಲಿ ಪರಿಶೀಲನೆ ನಡೆಸಲಾಗುತ್ತಿದೆ.

ಪ್ರೋಟೀನುಗಳ ರಚನೆ ಹಾಗೂ ಎನ್‌ಜೈಂಗಳನ್ನು ಶುದ್ಧಗೊಳಿಸುವ ಬಗ್ಗೆ ಈ

(೯ನೇ ಪುಟ ನೋಡಿರಿ)



ಭಾರತ ಸರಕಾರವು ಸಣ್ಣ ಪುಟ್ಟ ಕೈಗಾರಿಕೆಗಳ ಬೆಳವಣಿಗೆಗಾಗಿ ನೀಡುತ್ತಿರುವ ಧಾರಾಳವಾದ ಆರ್ಥಿಕ, ತಾಂತ್ರಿಕ ಮತ್ತು ವ್ಯವಸ್ಥಾಪಕ ಸಹಾಯಗಳಿಂದ ಸಣ್ಣ ಪ್ರಮಾಣದ ಕೈಗಾರಿಕೆಗಳು ಭದ್ರವಾದ ಆರ್ಥಿಕ ತಳಹದಿಯ ಮೇಲೆ ನಿಂತು ಅಭಿವೃದ್ಧಿ ಹೊಂದಲು ಅನುಕೂಲವಾಗಿದೆ ಮೊದಲನೆಯ ಚಿತ್ರದಲ್ಲಿ ಚಲಿಸುವ ಕರ್ಮಶಾಲೆಯೊಂದನ್ನು ಕಾಣಬಹುದು ಅದು ದೆಹಲಿಯ ಸುತ್ತುಮುತ್ತ ಇರುವ ಕೈಗಾರಿಕಾ ಪ್ರದೇಶಗಳಿಗೆ ಭೇಟಿಯನ್ನು ಕೊಡುತ್ತಿರುತ್ತದೆ ಎರಡನೆಯ ಚಿತ್ರದಲ್ಲಿ ಶಿವಮೊಗ್ಗದ ಸಮುದಾಯ ಅಭಿವೃದ್ಧಿ ಕೇಂದ್ರದ ಒಂದು ಕೈಕೆಲಸದ ಕೇಂದ್ರವನ್ನು ಕಾಣಬಹುದು ಸಮುದಾಯ ಯೋಜನೆಯ ಆಶ್ರಯದಲ್ಲಿ ಗೃಹ ವಸ್ತು ಇತರ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಆರಂಭಿಸುವುದೂ ಒಂದು ಕಾರ್ಯಕ್ರಮವಾಗಿದೆ ಹೀಗೆ ಸರಕಾರದ ಬಹುಮುಖವಾದ ನೆರವಿನಿಂದಾಗಿ ಭಾರತದಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳು ಬೆಳೆದುಬರುತ್ತಿವೆ.

ನೀವರಿಯದ ಉತ್ತಮ ಔಷಧ—

ಸಂಗೀತದ ಅದ್ಭುತ ಪರಿಣಾಮಗಳು

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಸಂಗೀತದಿಂದ ನಿಮ್ಮ ಆರೋಗ್ಯವು ಸುಧಾರಣೆಗೊಳ್ಳುವುದೆಂದು ಎಂದಾದರೂ ತಿಳಿದುಕೊಂಡಿರುವಿರಾ? ಈಗೀಗಿನ ಚಿಕಿತ್ಸಕರು ಹಾಗೂ ಮನೋವೈಜ್ಞಾನಿಕರು ಹಲವಾರು ವಿಧದ ರೋಗಗಳನ್ನು ಸಂಗೀತದ ಸಹಾಯದಿಂದ ಗುಣಪಡಿಸಿದಾವರೆಂದರೆ ಆಶ್ಚರ್ಯಪಡಬಹುದು. ಸಂಗೀತದ ಬಹಳ ಉತ್ತಮವೆನಿಸಿದ ರೋಗ ನಿವಾರಕ ಶಕ್ತಿಯಿದೆ ಎಂಬುದನ್ನು ಮನೋವೈಜ್ಞಾನಿಕರು ಒಪ್ಪುತ್ತಾರೆ. ಅಮೆರಿಕೆಯಲ್ಲಿ ಒಟ್ಟು ೫೦೦ರಷ್ಟು ಮಿಕ್ಕಿದ ವೈದ್ಯರು ಈ ಸಂಗೀತದ ಸಹಾಯದಿಂದಲೇ ತಮ್ಮಲ್ಲಿಗೆ ಬಂದ ರೋಗಿಗಳನ್ನು ಚಿಕಿತ್ಸೆ ನಡೆಸಿ ಗುಣಮುಖರನ್ನಾಗಿ ಮಾಡುವರೆಂದು ತಿಳಿದುಬಂದಿದೆ. ಅವರು ತಮ್ಮ ಈ ಸಾಹಸದಲ್ಲಿ ವಿಶೇಷ ಸಫಲತೆಯನ್ನೂ ಪಡೆದಿರುವರಂತೆ! ಉತ್ತಮರೀತಿಯ ಲಯ ಧ್ವನಿ ಹಾಗೂ ವಾದ್ಯ ಯಂತ್ರಗಳು ರೋಗ ನಿಯಂತ್ರಣದಲ್ಲಿ ಸಹಾಯಕವಾಗುತ್ತವೆ ಎಂದು ಅವರು ಶೋಧಿಸಿದ್ದಾರೆ. ಉದಾಹರಣೆಗಾಗಿ ವಾಯಲಿನನ್ನು ತೆಗೆದುಕೊಳ್ಳಿರಿ. ಅದರ ಮಧುರ ಧ್ವನಿಯಿಂದ ಶಿರೋವೇದನೆಯು ದೂರವಾಗುತ್ತದೆ. ಹಾರ್ಪಿನಿಂದ ಹಿಸ್ಟೀರಿಯಾ ರೋಗವು ನಾಶವಾಗಿ ಹೋಗುತ್ತದೆ.

ನಾನಾವಿಧದ ವಿರೋಧೀ ಭಾವನೆಗಳು ನಮ್ಮ ಮೆದುಳಲ್ಲಿ ಎದ್ದುದರಿಂದ ಶರೀರದೊಳಗೆ ಅವ್ಯವಸ್ಥೆಯಾದ ಪಕ್ಷದಲ್ಲಿ ಅದಕ್ಕೆ ಸಂಗೀತವು ರಾಮಬಾಣದಂತಹ ಕೆಲಸವನ್ನು ಮಾಡುತ್ತದೆ. ಹೃದಯ ದುರ್ಬಲತೆ ಅಥವಾ ಹೃದ್ರೋಗಗಳಿಂದ ಪೀಡಿತರಾಗಿರುವ ವ್ಯಕ್ತಿಗಳಿಗೆ ಸಂಗೀತವು ಸರ್ವೋತ್ತಮವಾದ ಔಷಧವೆನಿಸಿದೆ. ಪ್ರೇಮಮಯ ಮಧುರ ಗೀತೆಗಳನ್ನು ಕೇಳಿದೊಡನೆಯೇ ಬಹುಕಾಲದಿಂದ ಅಂಟಿಕೊಂಡಿರುವ ರೋಗವು ದೂರವಾಗಿಬಿಡುತ್ತದೆ. ಇಟಲಿಯ ಒಬ್ಬ ಮನೋವೈಜ್ಞಾನಿಕನು ಇದೇ ಅವಸ್ಥೆಯಲ್ಲಿ ಒಂದು ಆಶ್ಚರ್ಯಜನಕ ಮತ್ತು ರಹಸ್ಯಪೂರ್ಣ ಘಟನೆಯನ್ನು ಪ್ರಾರಂಭಿಸಿದನು. ಈತನ ಹೇಳಿಕೆ ಈ ರೀತಿಯಿದೆ: ಅವನಲ್ಲಿಗೆ ಬಂದಿದ್ದ ಒಬ್ಬ ರೋಗಿಯು ಬುದ್ಧಿಹೀನನಾಗಿದ್ದ; ಅರೆಹುಚ್ಚನಾಗಿದ್ದ. ಶಾಸ್ತ್ರೀಯ ಸಂಗೀತವು ಈ ರೋಗದ ಮೇಲೆ ಇಂದ್ರಜಾಲವನ್ನೇ ಮಾಡಿಬಿಟ್ಟಿತು. ಮಧುರಗೀತವನ್ನು ಕೇಳುವಾಗ ಆತನ ಬುದ್ಧಿಯು ಕೊರತೆ ಮತ್ತು ಹುಚ್ಚುತನಗಳು ಮಾಯವಾದುವಲ್ಲದೇ ಅವನ ಮೆದುಳು ವಿಕಸಿತವಾಯಿತು ಮತ್ತು ಬುದ್ಧಿಯೂ ಬಹಳ ಶೀಘ್ರವಾಗಿ ಪರಿಣಮಿಸಿತು.

ಅಮೆರಿಕೆಯ ಒಂದು ಚಿಕಿತ್ಸಾಲಯದಲ್ಲಿ ಒಬ್ಬ ಮಾಜಿ ಸೈನಿಕನು ಸೇರಿಕೊಂಡನು. ಅವನಲ್ಲಿ ವಾಕ್ಶಕ್ತಿಯು ಕಡಿಮೆಯಿತ್ತು. ಈ ರೋಗಿಗೆ ನಿತ್ಯವೂ ಒಂದು ಲೋಕಪ್ರಿಯ ಅಮೆರಿಕನ್ ಗೀತೆಯನ್ನು ಗೊಣಗುವಂತೆ ಹಲಹೆಯೊಯಲಾಯಿತು. ಕೆಲವು ತಿಂಗಳುಗಳ ಪ್ರಯೋಗಾನಂತರ ಆತನಲ್ಲಿ ಮಾತಾಡುವ ಶಕ್ತಿಯು ಮರಳಿ ಬಂತು.

ಒಬ್ಬ ರಶ್ಯನ್ ವೈಜ್ಞಾನಿಕನೊಂದು ಆಶ್ಚರ್ಯಜನಕ ಪ್ರಯೋಗವನ್ನು ಮಾಡಿ ತೋರಿಸಿದನು. ಸರ್ವಸಾಮಾನ್ಯತಃ ಅಂಧನಾಗಿದ್ದ ಒಬ್ಬ ರೋಗಿಯ ಕಣ್ಣುಗಳಲ್ಲಿ ಸಂಗೀತ ಮತ್ತು ವಾದ್ಯಗಳ ಮಾಧುರ್ಯದಿಂದ ದೃಷ್ಟಿಶಕ್ತಿಯನ್ನು ತರಿಸಿ ಕೊಟ್ಟಿದ್ದಾನೆ. ಈ ಪ್ರಯೋಗವು ಯಶಸ್ವಿಯಾದ ಮೇಲೆಯೇ ಈ ವಿಜ್ಞಾನಿಯು ಮಧುರ ಸಂಗೀತದಿಂದ ಕಣ್ಣುಗಳಲ್ಲಿರುವ ಜ್ಯೋತಿಯು ಬೆಳೆಯುವುದೆಂದು ಘೋಷಿಸಿದನು.

ಜಾನುವಾರುಗಳ ಮೇಲೆಯೂ ಸಂಗೀತದ ಪ್ರಭಾವವು ಬೀಳುವುದೆಂದು ಸಂಶೋಧನೆಗಳು ತಿಳಿಸಿವೆ. ಕೃಷ್ಣನ ಮುರಲೀನಾದದ ಮಧುರಧ್ವನಿಯಿಂದ ಗೋಕುಲದ ಗೊಲ್ಲ ಗೊಲ್ಲತಿಯರು ಮುಗ್ಧರಾಗಿ ಹೋದುದು ಮಾತ್ರವಲ್ಲ ದನಗಳೂ ರೋಮಾಂಚನಗೊಳ್ಳುತಿದ್ದುವು; ಮತ್ತು ಗಾಯನವನ್ನು ಕೇಳಲು ಅವನ ಸುತ್ತ ಬಂದು ಸೇರುತಿದ್ದುವು. ಕಾಡಿನ ಜಿಂಕೆಗಳು ಸುಶ್ರಾವ್ಯ ಸಂಗೀತದಿಂದ ಆಕರ್ಷಿತವಾಗುತಿದ್ದುದನ್ನು ನೋಡಿದ್ದೇವೆ. ಹಾವಾಡಿಗನು ತನ್ನ ತಂಬೂರಿಯ ನಾದದಿಂದ ಸರ್ಪದ ತಲೆ ತೂಗಿಸುವುದನ್ನ ನಿತ್ಯ ನೋಡುತ್ತೇವೆ. ಕುದುರೆ, ಎತ್ತು, ಕೋಣ ಮತ್ತು ಕತ್ತೆಗಳೆದುರು ಸಂಗೀತವನ್ನು ಹಾಡುವುದರಿಂದ ಅವುಗಳಿಂದ ಅಧಿಕ ಕೆಲಸ ಮಾಡಿಸಬಹುದೆಂದು ಪಶು ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ.

ಫ್ರಾನ್ಸ್ ದೇಶದ ಒಬ್ಬ ಪಶು ವೈದ್ಯನು ಸಂಗೀತ ಮತ್ತು ವಾದ್ಯಗಳ ಮೂಲಕ ಪಶುಗಳನ್ನು ನಿರೋಗಿಗಳನ್ನಾಗಿಸುವ ಪ್ರಯೋಗವನ್ನ ಮಾಡಿದ್ದಾನೆ. ಅಮೆರಿಕೆಯ ಒಬ್ಬಾಕೆ ಒಂದು ಪತ್ರದಲ್ಲಿ ತನ್ನ ಅನುಭವವನ್ನ ವ್ಯಕ್ತಪಡಿಸುತ್ತ ತಾನು ವಾಯಲಿನನ್ನು ನುಡಿಸುತ್ತಿರುವಾಗ ಒಂದು ಜೇಡವು ತನ್ನ ಬಲೆಯ ಹೊರಗೆ ಬಂದು, ವಾದನವು ಮುಗಿದ ಕೂಡಲೆ ಜಾಲದತ್ತ ಹೋಗುತ್ತಿತ್ತೆಂದು ಹೇಳಿದ್ದಾಳೆ.

ಇವರೊಂದಿಗೆ ಆಶುದ್ಧ ರಾಗದಿಂದ ಸಂಗೀತವನ್ನ ಹಾಡುವುದರಿಂದ ರೋಗವು ಬೆಳೆಯುತ್ತದೆ ಎಂಬುದೂ ಸುಳ್ಳಲ್ಲ. ಆದುದರಿಂದ ಸಂಗೀತವು ಪ್ರಾಣಿಯ ಜೀವನದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ ಎಂಬುದು ಚಿರಸತ್ಯ.

(ಮೂಲ: ಸರಲಾ ಜೈನ್)



ಅಮೆರಿಕೆಯು ತನ್ನ ಮೊತ್ತಮೊದಲ ಉಪಗ್ರಹ ಅಲ್ಫಾವನ್ನು ಹಾರಿಸಿತಷ್ಟೆ? ಇದು ೮೦ ಅಂಗುಲ ಉದ್ದ ೬ ಅಂಗುಲ ವ್ಯಾಸವುಳ್ಳದ್ದು ಮತ್ತು ೩೦·೮ ರಾತಲುಗಳಷ್ಟು ಭಾರವಿದೆ. ಚಿತ್ರದಲ್ಲಿ ಈ ಅಲ್ಫಾ ೧೯೫೮ನ್ನು ರಾಕೇಟಿನ ಮೂಲಕ ಹಾರಿಸುತ್ತಿರುವುದನ್ನು ಕಾಣಬಹುದು.

ಆಫೀಸ್ ಒಫ್ ದಿ ಡ್ಯಾರೆಕ್ಟರ್ ಒಫ್ ಎನಿಮಲ್ ಹಸ್ಬೆಂಡ್ರಿ ಎಂಡ್ ವೆಟರ್ನರಿ ಸರ್ವಿಸೆಸ್ ಇನ್ ಮೈಸೂರು

"ಅಟಾರಾ ಕಚೇರಿ" ಬೆಂಗಳೂರು-1

ಸಂಖ್ಯೆ A 7. 417/57-58

ತಾ. 10-2-1958.

ಎಟ್ ಸ್ಟ್ರಾಕ್ಸ್ ಟೆಂಡರ್ ನೋಟೀಸು

ದ. ಕ. ಜಿಲ್ಲೆಯ ಕ್ಕೊಲಾದಲ್ಲಿರುವ ದಿ ಸ್ಟ್ರಿಕ್ಸ್ ಲ್ಯಾವ್ ಸ್ಟಾಕ್ ಫಾರ್ಮಿನಲ್ಲಿಯ ಎಮ್ಮೆ ಮತ್ತು ದನದ ಹಾಲನ್ನು ಪಡೆಕೊಳ್ಳಲು 1958-59ನೆ ವರ್ಷದ ಬಗ್ಗೆ ಸೀಲು ಮಾಡಿದ ಟೆಂಡರುಗಳನ್ನು ಸ್ವೀಕರಿಸಲಾಗುವುದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗಿದೆ. ಟೆಂಡರುಗಳನ್ನು ಕ್ಕೊಲಾ ಫಾರ್ಮಿನ ಸುಪರಿಂಟೆಂಡೆಂಟರಿಗೆ ಅವರ ಆಫೀಸಿನಲ್ಲಿ ತಾ. 1-3-1958ರ ವರೆಗೆ ಅಪರಾಹ್ನ 3 ಗಂಟೆಯ ತನಕ ಸ್ವೀಕರಿಸಲಾಗುವುದು. ಹಾಲು ಸರಬರಾಯಿಯು ತಾ. 1-4-1958ರಿಂದ ಪ್ರಾರಂಭವಾಗುವುದು.

ಶರ್ತ ವಗೈರೆ ಹೆಚ್ಚಿನ ವಿವರಗಳನ್ನು ಕ್ಕೊಲಾ ಫಾರ್ಮಿನ ಸುಪರಿಂಟೆಂಡೆಂಟರಿಂದಾಗಲೀ ಇಲ್ಲವೆ ತಾ. 6-2-1958ರ ಮೈಸೂರು ಗಜೇಟಿನ ಭಾಗVI-ಪುಟ 363ನ್ನು ನೋಡಿಯೂ ಪಡೆಯಬಹುದು.

(ಸಹಿ) ಡೈರೆಕ್ಟರ್.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ.,

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ನಮ್ಮ ಬರೋಡ ಶಾಖೆಯು ತಾ. 9-2-58ರಲ್ಲೂ
ಮಂಗಳೂರು (ಬಂದರ) ಶಾಖೆಯು 20-2-58ರಲ್ಲೂ
ತೆರೆಯಲ್ಪಟ್ಟವು.

ಶೀಘ್ರದಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು

1) **ಬೆಂಗಳೂರು** (ಶೇಷಾದ್ರಿಪುರಂ)
2) **ಬೆಂಗಳೂರು** (ಚಿಕ್ಕಪೇಟೆ)
3) **ಬೆಂಗಳೂರು**(ಕೆಂಟೋನ್‌ಮೆಂಟ್)
4) **ಬೆಳಗಾವ್** (ಶಾಪುರ)
5) **ಬೆಳಗಾವ್** (ಕೇಂಪ್)
6) **ಕೊಪ್ಪ** (ಚಿಕ್ಕಮಗಳೂರು ಜಿಲ್ಲೆ)
7) **ಹುನಗುಂದ** (ಬಿಜಾಪುರ ಜಿಲ್ಲೆ)
8) **ತಿಪ್ಟೂರು** (ತುಮ್ಕೂರು ಜಿಲ್ಲೆ)
9) **ಬೊಂಬಾಯಿ** (ಮಾಂಡ್ವಿ)

ಟಿ. ಎ. ಪೈ, ಬಿ.ಕಾಂ.,(ಹೊಂ.,) ಎ.ಐ.ಐ.ಬಿ.,ಯಫ್.,ಆರ್.,ಇ.,ಯಸ್.,(ಲಂಡನ್) **ಜನರಲ್ ಮೆನೇಜರ್.**

ಡಾ। ಟಿ. ಮಾಧವ ಪೈ, ಎಂ.ಬಿ. & ಬಿ.ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ,ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ,ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:
ನವಭಾರತ ಪುಸ್ತಕ ಭಂಡಾರ, ಉಡುಪಿ.

'ನವಯುಗ' ವಾರಪತ್ರಿಕೆ
ಉಡುಪಿ.

ವಾರ್ಷಿಕ ಚಂದಾ—
ರೂ. 5-12-0 (5=75)
6 ತಿಂಗಳಿಗೆ— ರೂ. 3-0-0
ಮುಂಗಡವಾಗಿ ಕಳಿಸಬೇಕು.

NAVAYUGA

Popular Kannada Weekly

Founder:—

A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೭-೨-'೫೮	೨೯

ಸಮರ್ಥ ನಾಯಕರು

ಭಾರತದ ಇತಿಹಾಸದಲ್ಲಿ ಇತ್ತೀಚೆಗೆ ನಡೆದ ಘಟನೆಗಳು ಸರ್ವೇದಾಶ್ಚರ್ಯವನ್ನುಂಟುಮಾಡುತ್ತಿವೆ. ಒಂದು ವಾರದ ಮೊದಲು ಭಾರತ ಸರಕಾರದ ಸುಪ್ರಸಿದ್ಧ ಅರ್ಥ ಮಂತ್ರಿಗಳಾಗಿದ್ದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಘಟನಾತ್ಮಕ ವಿಧಾನಗಳಿಂದಾಗಿ ರಾಜೀನಾಮೆಯಿತ್ತು ಮಂತ್ರಿಮಂಡಳಿಯಿಂದ ಹೊರಬಿದ್ದರು. ಇವರನ್ನಗಲಿದುದರಿಂದಲೇ ಭಾರತೀಯ ಮಂತ್ರಿಸಂಪುಟವು ದುಃಖಿಸುತ್ತಿರುವಾಗ ಶ್ರೇಷ್ಠ ಮುಖಂಡರೂ, ರಾಷ್ಟ್ರೀಯ ವಾದಿಗಳೂ ಸ್ವಾತಂತ್ರ್ಯಸಮರದ ಪ್ರಮುಖ ನೇತಾರರೂ ವಿದ್ಯಾಮಂತ್ರಿಗಳೂ ಆಗಿದ್ದ ಶ್ರೀ ಮೌಲಾನಾ ಅಬುಲ್ ಕಲಂ ಅಜಾದರು ಇಹವನ್ನು ತೊರೆದು ನಮ್ಮನ್ನಗಲಿಯೇ ಹೋದರು. ಮೊದಲನೆಯದು ಮಾನವಕೃತವಾದರೆ, ಎರಡನೆಯದು ದೈವಕೃತವೆಂದು ಹೇಳಬಹುದು. ಒಂದು ಸರಕಾರದಲ್ಲಿ ಹಾಗೂ ಸಂಸ್ಥೆಯಲ್ಲಿ ಅರ್ಥವಿಭಾಗದ ನೇತಾರನನ್ನು ಆರಿಸುವುದು ಸುಲಭಸಾಧ್ಯವಾದ ಕೆಲಸವಲ್ಲ. ಅದರಲ್ಲೂ ಭಾರತದಂತಹ ರಾಷ್ಟ್ರದಲ್ಲಿ ಈಗಿನ ಮುಗ್ಗಟ್ಟಿನ ಸಮಯದಲ್ಲಿ, ವಿದೇಶೀ ವಿನಿಮಯಗಳ ಕೊರತೆ, ಸ್ವದೇಶೀ ಯೋಜನೆಯ ಪ್ರಗತಿಗಳಿಗೆ ಹೊಂದಾಣಿಕೆಯು ತಪ್ಪಿಹೋಗುತ್ತಿರುವ ಸಂದಿಗ್ಧ ಸಮಯದಲ್ಲಿಯೇ ಇಂತಹ ಒಂದು ಗಂಡಾಂತರವು ಬರಬಹುದೆಂದು ಯಾರೂ ಯೋಚಿಸಿರಲಾರರು. ಸಮರ್ಥ ಮಂತ್ರಿಗಳಾಗಿ ಹೋಗಿದ್ದ ಶ್ರೀ ಸಿ. ಡಿ. ದೇಶಮುಖರು ರಾಜೀನಾಮೆಯಿತ್ತಾಗ, ಆ ಸ್ಥಾನಕ್ಕೆ ಇನ್ನಾರು ಎಂಬ ಚಿಂತೆ ತಲೆದೋರಿತ್ತು; ಕೆಲಸಮಯದಲ್ಲಿಯೇ ಶ್ರೀ ಟಿ. ಟಿ. ಕೆ ಯವರ ನಾಮಕರಣವಾಯಿತು. ಆದರೆ, ಇದೀಗ ಅವರೂ ಬಿಟ್ಟುಹೋದಾಗ ಪುನಃ ಎದ್ದಿರುವ ಪ್ರಶ್ನೆ-ಅರ್ಥಮಂತ್ರಿಗಳಾದವರು ಆ ಸ್ಥಾನದಲ್ಲಿ ಒಂದೈದು ವರ್ಷವಾದರೂ ಏಕೆ ಉಳಿಯುವುದಿಲ್ಲ ಎಂದು. ಆದರೂ ದೇಶದ ಹಲವಾರು ಪ್ರಜೆಗಳಲ್ಲಿ ಯಾರಲ್ಲಿ ಯೋಗ್ಯತೆ ಅರ್ಹತೆ ಇದೆ ಎಂದು ತಿಳಿಯುವುದು ಕಷ್ಟಸಾಧ್ಯ. ಇಂತಹ ಸಂದರ್ಭದಲ್ಲಿ ಚಕ್ರ ತಪ್ಪಿದ ಭಾರತೀಯ ಅರ್ಥ ಶಕಟದ ರಥಕ್ಕೆ ಆ ಚಕ್ರವನ್ನು ಪುನಃ ಜೋಡಿಸಿ ಮುನ್ನಡೆಯಿಸುವ ಹೊಣೆಗಾರ ವ್ಯಕ್ತಿ ಯಾರಿರಬಹುದೆಂಬುದೇ ಮುಂದಿನ ಪ್ರಶ್ನೆ. ಈ ವ್ಯಕ್ತಿ ಎಷ್ಟು ಸಮಯ ನಿಂತಾನು; ಆತನ ಕಾಲದಲ್ಲಿ ಏನೇನು, ಯಾವ ಯಾವ ಕಂಗಳು ಆಕರಿಸಲ್ಪಡುವುವು ಎಂದು ಹೇಳುವುದು ಈಗ ಸಾಧ್ಯವಿಲ್ಲ. ಅಂತೂ ಈ ಹದಗೆಟ್ಟ ಪರಿಸ್ಥಿತಿಯನ್ನು ಸುಧಾರಿಸುವ ವ್ಯಕ್ತಿಯೊಬ್ಬನು ದೊರೆಯದಿರಲಾರನೆಂದೇ ವಿಶ್ವಾಸ.

ಕುರುವಿನ ಮೇಲೆ ಬೊಕ್ಕೆ ಎದ್ದಂತೆ ಪ್ರಧಾನಿ ನೆಹರೂ ಒಂದು ರಾಜೀನಾಮೆಯ ಕಾರಣದಿಂದಲೇ ಕಳವಳಗೊಂಡಿರುವಾಗ, ಅಜಾದರು ಈ ಲೋಕಕ್ಕೇ ರಾಜಿ ಇತ್ತರು. ಪ್ರಧಾನಿಗಳಿಗೆ ಸದಾ ಕಾಲವೂ ಪರಿಪಕ್ವವಾದ, ಸಮರ್ಪಕವಾದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಅತ್ಯಂತ ಯೋಗ್ಯವಾದ ಸಲಹೆಗಳನ್ನು ಈಯುತಿದ್ದ ಮೌಲಾನಾರ ಸ್ವರ್ಗಾರೋಹಣದಿಂದ ಕೇವಲ ಪ್ರಧಾನಿಯವರಿಗೆ ಮಾತ್ರವಲ್ಲ, ಪ್ರತಿಯೊಬ್ಬ ರಾಷ್ಟ್ರಪ್ರೇಮಿಗೂ ಕಣ್ಣು ತೋರದಂತಾಗಿದೆ. ರಾಷ್ಟ್ರೀಯತೆಯನ್ನು, ದೇಶದುನ್ನತಿಯನ್ನು ಪ್ರತಿಕ್ಷಣವೂ ಪ್ರತಿಬಿಂಬಿಸಿ, ಭಾರತಮಾತೆಯ ಸುಪುತ್ರರಲ್ಲಿ ಒಬ್ಬನಾಗಿ ಮೆರೆದು ದೈವಪಾದದೆಡೆಗೆ ತೆರಳಿದ ಈ ಮಹಾನ್ ವ್ಯಕ್ತಿ ಪ್ರಧಾನಿ ನೆಹರೂರವರ ಬಲಗೈಯಂತಿದ್ದರು. ಈಗ ಅವರ ಈ ಸಹಾಯಕ ಶಕ್ತಿ ಮಾಯವಾಯಿತು; ಇನ್ನು ಮುಂದೆ ಅಂತಹ ಪ್ರಭಾವೀ ನಾಯಕನ ಅಭಾವವು ಎಂದು ಮುಗಿಯುವುದೆಂದು ಹೇಳಬರುವುದಿಲ್ಲ

ಪರಮಾತ್ಮನು ಕೊಡುವಾಗ ಕೈಯೆತ್ತಿ ಕೊಡುವನಂತೆ; ಹಾಗೆಯೇ ಇದೀಗ ಭಾರತದ ಗ್ರಹಸ್ಥಿತಿ ನೆಟ್ಟಗಿರುವಂತೆ ತೋರುತ್ತಿಲ್ಲ. ಪ್ರಧಾನಿಯವರ ಎರಡು ಕೈಗಳೂ ಮುರಿದುಹೋದಂತೆ ಆಗಿದೆ. ಅಹೋ ರಾತ್ರಿ ದೇಶೋನ್ನತಿಯನ್ನೇ ಬಯಸಿ ತನ್ನ ದೇಹಸ್ಥಿತಿಯನ್ನೂ ಗಮನಿಸದೆ ದುಡಿಯುತ್ತಿರುವ ಪ್ರಧಾನಿಗಳು ಅಂಗವಿಕಲರಂತೆ ಕಳವಳಪಡುವಂತೆ ಆಯಿತೆನ್ನಬಹುದು. ವ್ಯಕ್ತಿಯೊಬ್ಬ ಹೋದರೆ, ಹೋದನೆನ್ನಬಹುದು; ಯಾರಿಂದಲೂ ಆಗಬಹುದಾದುದನ್ನು ತಡೆಯಲು ಸಾಧ್ಯವಿಲ್ಲ. ಆದರೂ ಮಾನವನು ರಾತ್ರಿ ಕಂಡ ಬಾವಿಗೆ ಹಗಲು ಬೀಳುವುದು ಮಾತ್ರ ವಿವೇಕತನವಲ್ಲ. ಈ ಮಂತ್ರಿದ್ವಯರ ಅಗಲಿಕೆಯಿಂದಾಗಿ ಕೇಂದ್ರದ ಮಂತ್ರಿಮಂಡಳಿಯೇ ಪುನಾರಚನೆಗೊಳ್ಳುವುದೆಂದು ಕೇಳುತ್ತೇವೆ. ಸರಕಾರದ ಕಾರ್ಯಗಳನ್ನು ಇನ್ನು ನಡೆಸಲು ಒಬ್ಬರಲ್ಲ ಒಬ್ಬ ವ್ಯಕ್ತಿ ಬಂದೇ ಬರುತ್ತಾನೆ. ಆದರೆ, ಆತನಲ್ಲಿ ಆ ಸ್ಥಾನದಲ್ಲಿದ್ದ ಹಿಂದಿನ ವ್ಯಕ್ತಿಗಳ ಗುಣಗಳೂ ಅರ್ಹತೆಯೂ, ಜನಪ್ರಿಯತೆಯೂ ಇರುವುದೆ? ಎಂಬುದು ಮುಖ್ಯ.

ನಮ್ಮ ದೇಶದ ಉದ್ಧಾರಕ್ಕಾಗಿ ದುಡಿದವರು ಈಗ ಪ್ರಾಯಸ್ಥರಾಗಿ ಹೋಗಿದ್ದಾರೆ. ಈಗೇನೋ ನಮ್ಮಲ್ಲಿ ಕೆಲವಾರು ಸಮರ್ಥ ರಾಜಕಾರಣಿಗಳಿದ್ದಾರೆ—ಸರಕಾರ ಚಾಲನೆಯು ನಡೆಯುತ್ತಿದೆ ಆದರೆ, ಹೀಗೆ ಎಷ್ಟು ದಿನ ಹೋಗಬಹುದು? ನಮ್ಮ ಮುಂದಾಳುಗಳು ತಮ್ಮ ಬಳಿಕ ತಮ್ಮ ಧ್ಯೇಯ ಧೋರಣೆ, ರಾಷ್ಟ್ರಹಿತ ಹಾಗೂ ಸಮಾಜ ಸೇವೆಯಲ್ಲಿ ಹರೆಯದ ನಾಯಕರನ್ನು ತರಬೇತಿ ಮಾಡುವುದು ಅಗತ್ಯವಿದೆ. ಮಹಾತ್ಮಾ ಗಾಂಧೀಯವರು ತಮ್ಮ ಜೀವಿತಾವಧಿಯಲ್ಲಿ ಪಂಡಿತ ನೆಹರೂರವರನ್ನು ರಾಜಕೀಯ ಉತ್ತರಾಧಿಕಾರಿಯನ್ನಾಗಿಯೂ ವಿನೋಬಾ ಭಾವೆಯವರನ್ನು ಸೇವಾ ಧುರೀಣರನ್ನಾಗಿಯೂ ಸಿದ್ಧಪಡಿಸಿದುದರಿಂದಾಗಿಯೇ ಇಂದಿಗೂ ಗಾಂಧೀವಾದವು ಪ್ರಚಾರಗೊಳ್ಳುತ್ತಿದೆ; ಭಾರತ ಗಾಂಧೀ ವಾದದ ಶೀತಲ ಛಾಯೆಯಡಿಯಲ್ಲಿ ಪ್ರಶಾಂತವಾಗಿ ಮುಂದಡಿಯಿಡುತ್ತಿದೆ. ಅಂತೆಯೇ ಸಮರ್ಥ ಮುಂದಾಳುಗಳು ಒಬ್ಬೊಬ್ಬರಾಗಿ ನಮ್ಮನ್ನಗಲತೊಡಗಿದರೆ ಮುಂದೇನು ಎಂದು ಯೋಚಿಸುವುದು ಅಪ್ರಾಸಂಗಿಕವಾದರೂ, ತೀರಾ ಉಪೇಕ್ಷಿಸುವಷ್ಟು ಕ್ಷುಲ್ಲಕವಾದುದಲ್ಲ. ಆದುದರಿಂದಲೇ ದೇಶದ ಪ್ರಜೆಗಳೆಲ್ಲರೂ ತಮ್ಮಲ್ಲಿ ರಾಷ್ಟ್ರೀಯತೆಯ ಬೀಜವನ್ನು ಬಿತ್ತಿ ಮೊಳೆವಡೆಯುವಂತೆ ಪ್ರಯತ್ನಿಸಬೇಕು. ತಮ್ಮ ವೈಯಕ್ತಿಕ ಸ್ವಾರ್ಥವನ್ನು ಸ್ವಲ್ಪ ಅಲಕ್ಷಿಸಿ ದೇಶೋನ್ನತಿಯ ಕಾರ್ಯದತ್ತ ರಾಷ್ಟ್ರೀಯ ಭಾವನೆಯನ್ನು ಬೆಳೆಯಿಸಿಕೊಳ್ಳುವತ್ತ ಹರಿಸಬೇಕು; ಇದಕ್ಕೆ ಬೇಕಾದ ವಾತಾವರಣವನ್ನು ನಮ್ಮ ಮುಂದಾಳುಗಳು ಈಗಿಂದೀಗಲೇ ಕಲ್ಪಿಸಿಕೊಡಲು ಪ್ರಯತ್ನಿಸಬೇಕು. ನಮ್ಮಲ್ಲಿ ಸಮರ್ಥ ನಾಯಕರ ಅಭಾವವು ಎಂದಿಗೂ ಉಂಟಾಗಬಾರದು.

ಅಂತಾರಾಷ್ಟ್ರೀಯ ಭೂಭೌತ ವರ್ಷ— ಕೆಲವು ಮಹತ್ವದ ಸಂಶೋಧನೆಗಳು

ಅಂತಾರಾಷ್ಟ್ರೀಯ ಭೂಭೌತ ವರ್ಷದ ಮೊದಲ ಐದು ತಿಂಗಳುಗಳಲ್ಲಿ ಅಮೆರಿಕೆ ತನ್ನ ಕಾರ್ಯಕ್ರಮದಿಂದ ನಾನಾ ವಿಧವಾದ ವೈಜ್ಞಾನಿಕ ಫಲಿತಾಂಶಗಳನ್ನು ಪಡೆದಿದೆ. ಈ ಫಲಿತಾಂಶಗಳು ನೂರಾರು ವೈಜ್ಞಾನಿಕ ಸಂಸ್ಥೆಗಳ ದುಡಿಮೆಯ ಫಲವೆಂದು ಹೇಳಬಹುದು. ಭೂಮಿ ಮತ್ತದರ ವಾತಾವರಣವನ್ನು ಕುರಿತು ಕೈಗೊಳ್ಳಲಿರುವ ೧೮ ತಿಂಗಳ ಅಂತಾರಾಷ್ಟ್ರೀಯ ಸಂಶೋಧನಾತ್ಮಕ ಕಾರ್ಯಕ್ರಮದಲ್ಲಿ ೧೯೫೭ನೆಯ ನವಂಬರ ತಿಂಗಳವರೆಗೆ ತಿಳಿದುಬಂದಿರುವ ಸಂಗತಿಗಳೀಗ ತಿಳಿದುಬಂದಿವೆ. ಈ ಸಂಶೋಧನಾಂಶಗಳು ಸಮುದ್ರದ ಆಳದಿಂದ, ಗ್ರೀನ್‌ಲೇಂಡಿ ಹಿಮ ಶಿಖರದಿಂದ ದೂರ ಆಕಾಶದಿಂದ ಅಂಡೀಸ್ ಪರ್ವತಸ್ತೋಮದ ಹೃದಯದಿಂದ ಬಂದಿರುವುವು.

ಹಿಮ ಶಿಖರದಲ್ಲಿನ [illegible],೦೦೦ ಅಡಿಗಳ ಆಳದ ಬಾವಿಯಲ್ಲಿ ವರ್ಷವರ್ಷವೂ ಬೀಳುವ ಹಿಮದ ಪದರುಗಳು ಅಚಲವಾಗಿ ಕಂಡುಬಂದಿವೆ. ಎರಡು ವರ್ಷಗಳ ಭೂಹವಾಮಾನದ ದಾಖಲೆಯಿದಾಗಿದೆ.

ಭೂಮಿಯ ಎರಡು ಮೂರು ಪಟ್ಟು ಮೇಲಿನ ದೂರ ಆಕಾಶದಿಂದ ಪ್ರತಿಬಿಂಬಿತವಾದ ರೇಡಿಯೋ ಸೂಚನೆಗಳು ಭೂಮಿ ಮತ್ತು ಸೂರ್ಯನ ನಡುವೆ ಇರುವ ಅವಕಾಶವನ್ನು ತುಂಬಿರುವ ಮಾಧ್ಯಮವನ್ನು ಪರೀಕ್ಷೆಗೆ ಒದಗಿಸಿದುವು.

ಮೇಲಿನ ವಾತಾವರಣವನ್ನು ಹೊಕ್ಕ ರಾಕೆಟ್‌ಗಳು ರೇಡಿಯೋ ಬ್ಲಾಕ್ ಔಟ್‌ಗಳ ಕಾರಣಗಳನ್ನು ವಿವರಿಸಿವೆ. ಐಯನೋ ವಲಯದ ಅತಿ ಕೆಳಮಟ್ಟದಿಂದ ಕೆಳಗೆ ೧೦ರಿಂದ [illegible] ಮೈಲುಗಳ ವಿಶೇಷ ಆಯೋನೈಜ್ಡ್ ಕಣಗಳ ಪದರೊಂದನ್ನು ಸೂರ್ಯನ ಜ್ವಾಲೆಗಳು ಸೃಷ್ಟಿಸುವ ಸಂಗತಿ ತಿಳಿದುಬಂದಿತು.

ಈ ಅವಧಿಯಲ್ಲಿ ಒಟ್ಟು ೮೧ ರಾಕೆಟುಗಳನ್ನು ಹಾರಿಸಲಾಗಿದೆ. ಊರ್ಧ್ವ ವಾತಾವರಣದ ಒತ್ತಡ, ಶಾಖ ಮತ್ತು ಸಾಂದ್ರತೆಗಳಿಗೆ ಸಂಬಂಧಿಸಿದಂತೆ ಈ ರಾಕೆಟುಗಳು ಸಾಕಷ್ಟು ಗಣನಾರ್ಹವಾದ ಅಂಶಗಳನ್ನು ಒದಗಿಸಿವೆ. ಈ ಸಂದರ್ಭದಲ್ಲಿ ಸೋವಿಯೆಟ್ ಉಪಗ್ರಹಗಳಿಂದ ಲಭ್ಯವಾದ ಅಂಶಗಳನ್ನೂ ಅಮೇರಿಕೆಯು ಗಮನಿಸಿದೆ.

ವಾತಾವರಣದಲ್ಲಿ ಬಹುಮೇಲೆ ಭೂಮಿಯ ಸುತ್ತು ತಿರುಗುವ ಕಿರಿದಾದ ವಿಷುವತ್ತೀಯ ವಿದ್ಯುತ್ ಪ್ರವಾಹವೊಂದು ಇದೆ ಎಂಬ ನಂಬುಗೆಯನ್ನು ಸಮರ್ಥಿಸುವ ಸಾಕ್ಷಿ ಶಾಂತಸಾಗರದ ದ್ವೀಪಗಳ ವೀಕ್ಷಣಾಲಯಗಳಿಂದ ದೊರಕಿವೆ. ಇತರ ಪ್ರವಾಹಗಳು ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಸುತ್ತಿವೆ. ಅನೇಕ ಸಹಸ್ರ ಆಂಪಿಯರ್ ಶಕ್ತಿ ಇವುಗಳಿಗಿದೆ ಎಂದು ಲೆಕ್ಕಿಸಲಾಗಿದೆ.

ಆಟಲ್ ಅಮೆರಿಕ ಕೇಂದ್ರದಲ್ಲಿ ನಡೆಸಿದ ದಕ್ಷಿಣ ಧ್ರುವದ ಹವಾಮಾನ ಕೇಂದ್ರದಿಂದ ದಕ್ಷಿಣ ವಲಯ ದಕ್ಷಿನ ಹವಾಮಾನದಲ್ಲಿನ ಭವಿಷ್ಯ ಪ್ರವಚನಕ್ಕೆ ಲಾಭವಾಗಿದೆ. ಇತಿಹಾಸದಲ್ಲೇ ಮೊದಲ ಬಾರಿಗೆ ದಕ್ಷಿಣ ವಲಯದ ಹವಾಮಾನದ ನಕ್ಷೆಯನ್ನು ದಿನಕ್ಕೆರಡಾವರ್ತಿಯಂತೆ ತಯಾರಿಸಲಾಗಿದೆ.

ಭೂಮಿಯ ಮೇಲ್ಪದರಿನ ಒಳಗಿನ ಪದರದಲ್ಲಿನ ಸೈಸ್ಮಿಕ್ ವಿಧಾನಗಳನ್ನು ಈಚೆಗೆ ಗುರುತಿಸಿರುವುದರಿಂದ ಭೂಮಿಯ ಒಳಭಾಗದಲ್ಲಿರುವ ವಸ್ತುಗಳ ಹಂಚಿಕೆಗಳ ಬಗ್ಗೆ ಹೆಚ್ಚಿನ ಅಂಶಗಳು ದೊರಕಲಿವೆ.

ಉತ್ತರದ ಮತ್ತು ದಕ್ಷಿಣದ ಧ್ರುವ ಬೆಳಕುಗಳು, ಅಖಾತ ಪ್ರವಾಹದ ೧೦ ೦೦೦ ಅಡಿಗಳ ಕೆಳಗೆ ಇರುವ ಸಾಗರ ಪ್ರವಾಹಗಳೂ ‘ವಿಶ್ವಕಿರಣ ವಿಮುಖ ಪ್ರೇಖೆ”, ದಕ್ಷಿಣ ಸಾಗರದ ತೀವ್ರ ಶಾಖಗಳು, ದಕ್ಷಿಣ ಧ್ರುವದ ಕೆಳಗಿನ ಹಿಮಪದರ, ಅಂಡಿಸ್ ಪರ್ವತಸ್ತೋಮದ ರಚನೆ, ನೈರೃತಸಾಗರದಲ್ಲಿನ ಗುರುತ್ವ ಶಕ್ತಿಯ ಮೇಲ್ಮೈ ಅಳತೆ ಇವುಗಳಿಗೆ ಸಂಬಂಧಪಟ್ಟ ಅಂಶಗಳು ಪರಿಗಣಿತವಾಗಿರುವ ಇತರ ಕೆಲವು ಶೋಧನಗಳಾಗಿವೆ.

ಜಗತ್ತಿನ ಮೂರು ಭೂಭೌತ ದಾಖಲೆಗಳ ಸಂಗ್ರಹಾಲಯಗಳಿಗೆ ಹರಿದು ಬರುತ್ತಿರುವ ಭೂಭೌತ ದಾಖಲೆಗಳ ಮಟ್ಟ ಈ ವರ್ಷದಲ್ಲಿ ಗರಿಷ್ಠ ಮಟ್ಟಕ್ಕೇರಬಹುದು ಎಂಬುದಾಗಿ ತಿಳಿದುಬಂದಿದೆ.

ಹೀಗೆ ಜಗತ್ತಿನಲ್ಲಿ ಭೂಭೌತ ವರ್ಷ ಎನ್ನುವುದು ಒಂದಲ್ಲ, ಅನೇಕ ನೂತನ ಸಂಶೋಧನೆಗಳಿಗೂ ಸಾಹಸಕೃತ್ಯಗಳಿಗೂ ನಾಮಾಂಕಿತವಾಗಿದೆ ಎಂದರೇನೂ ಅತಿಶಯೋಕ್ತಿಯಾಗಲಾರದು.

The Moolky Bank Limited, Mulki.

NOTICE

It is reported that Shares numbering 523 and 524 standing in the name of Sri K. Shridhar Sheshagiri Kamath S/o Sheshagiri Kamath, Katpadi, in the Books of the Bank, are reported to be lost and his son sri K. Nagesh S. Kamath, has applied for the issue of Duplicate Share Certificates

Duplicate Share Certificates will be issued, unless objection, if any, is filed by 5—4—1958

(Sd) M. R. H. Punja.
Manager.

ಮಹತ್ವದ ಸುದ್ದಿಗಳು

ಅಜಾದರ ಅಂತ್ಯಸಂಸ್ಕಾರ

ಮೌಲಾನ ಅಬುಲ್‌ಕಲಂ ಅಜಾದರ ಅಂತ್ಯಸಂಸ್ಕಾರವು ಜುಮ್ಮಾ ಮಸೀದಿಯ ಬಳಿ ನೆರವೇರಿತು. ದಿವಂಗತರ ಅಂತಿಮ ದರ್ಶನವನ್ನು ಮಾಡಿಕೊಳ್ಳಲು ಲಕ್ಷೋಪಲಕ್ಷ ಜನರು ಅವರ ನಿವಾಸಸ್ಥಾನಕ್ಕೂ ಸ್ಮಶಾನಯಾತ್ರೆಗೂ ತೆರಳಿ ರಾಷ್ಟ್ರದ ಹಿರಿಯ ಧುರೀಣನಿಗೆ ತಮ್ಮ ತುಂಬು ಗೌರವವನ್ನು ಅರ್ಪಿಸಿದರು. ಪ್ರತಿಯೊಬ್ಬ ರಾಷ್ಟ್ರೀಯವಾದಿಯ ಕಣ್ಣುಗಳಲ್ಲೂ ನೀರೂರಿತ್ತು. ಜಾತಿಮತ ಭೇದವಿಲ್ಲದೆ ಎಲ್ಲ ಮತೀಯರೂ ಭಾರತದ ಹಿರಿಯ ರಾಜಕಾರಣಿಯ ಗುಣಗಳನ್ನು ನೆನೆದು ಆತನ ಅಗಲಿಕೆಯ ಬಗ್ಗೆ ಶೋಕವನ್ನು ವ್ಯಕ್ತಪಡಿಸಿದರು. ರಾಷ್ಟ್ರದ ಎಲ್ಲೆಡೆಯಲ್ಲೂ ಈ ಉನ್ನತ ದೇಶಪುತ್ರನ ಬಗ್ಗೆ ಶ್ರದ್ಧಾಂಜಲಿಯು ಅರ್ಪಿಸಲ್ಪಟ್ಟಿತು.

ಅರಬ ರಾಜ್ಯೋದಯ

ಈಜಿಪ್ಟ ಮತ್ತು ಸಿರಿಯಾ ರಾಜ್ಯಗಳು ಒಂದು ಅರಬ ರಾಷ್ಟ್ರವಾಗುವುದನ್ನು ಒಪ್ಪುವ ಬಗ್ಗೆ ಜನಮತಗಣನೆಯು ನಡೆದಿದ್ದು ಈ ಹೊಸ ಪ್ರಜಾರಾಜ್ಯಕ್ಕೆ ಅನುಕೂಲವಾಗಿ ಬಹುಮತವು ದೊರೆತಿರುತ್ತದೆ. ಹಾಗೆಯೇ ಶ್ರೀ ಕರ್ನಲ್ ನಸ್ಸೇರರನ್ನೇ ಈ ಸಂಯುಕ್ತ ರಾಷ್ಟ್ರದ ಅಧ್ಯಕ್ಷಸ್ಥಾನಕ್ಕೆ ಆರಿಸಲಾಗಿದೆ. ಜಗತ್ತಿನಲ್ಲಿಯೇ ಐತಿಹಾಸಿಕ ದಾಖಲೆಯೊಂದನ್ನು ನಿರ್ಮಿಸಿದ ಈ ಉಭಯ ದೇಶಗಳ ಜನತೆ ಈ ಚುನಾವಣೆಯ ಫಲಿತಾಂಶವನ್ನು ಕೇಳಿ ಕುಣಿದು, ಹಾಡಿ ನಸ್ಸೇರರು ಚಿರಾಯುವಾಗಲಿ, ಅರಬ ಪ್ರಜಾರಾಜ್ಯ ಚಿರಾಯುವಾಗಲಿ, ಅಮೆರಿಕನ ಮತ್ತು ಫ್ರೆಂಚ ಸಾಮ್ರಾಜ್ಯವಾದಗಳು ಹಾಳಾಗಿ ಹೋಗಲಿ ಎಂದು ಘೋಷಣೆಗಳನ್ನೆಬ್ಬಿಸುತ್ತ ತಂತಮ್ಮ ಅಂಗಡಿ ಮನೆಗಳನ್ನು ಅಲಂಕರಿಸಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಪಾರ್ಲಿಮೆಂಟರೀ ಬೋರ್ಡ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಕೇಂದ್ರ ಪಾರ್ಲಿಮೆಂಟರೀ ಬೋರ್ಡನ್ನು ರಚಿಸಿ ಅದರ ಸದಸ್ಯರ ಹೆಸರುಗಳನ್ನು ಪ್ರಕಟಿಸಿದೆ. ಈ ಬೋರ್ಡಿನಲ್ಲಿ ಶ್ರೀಗಳಾದ ಢೇಬರ (ಅಧ್ಯಕ್ಷ), ಮುರಾರ್ಜಿ ದೇಸಾಯಿ, ಜಗಜೀವನರಾಮ ಮತ್ತು ಪಂಡಿತ ಗೋವಿಂದ ವಲ್ಲಭ ಪಂತರಿದ್ದಾರೆ. ಅಲ್ಲದೇ ಶ್ರೀಮತಿ ಇಂದಿರಾ ಗಾಂಧಿ ಅವರನ್ನು ಹೊಸತಾಗಿ ಸೇರಿಸಿಕೊಳ್ಳಲಾಗಿದೆ. ಮೌಲಾನಾರ ನಿಧನದಿಂದ ತೆರವಾದ ಸ್ಥಾನಕ್ಕೆ ಮುಂದೊಬ್ಬರನ್ನು ಆರಿಸಲಾಗುವುದು. ಈ ಬಾರಿಯ ಹೊಸ ಬೋರ್ಡಿನಲ್ಲಿ ಕಳೆದ ಏಳು ವರ್ಷಗಳಲ್ಲಿ ಸದಸ್ಯರಾಗಿದ್ದ ಪ್ರಧಾನಿ ನೆಹರೂರವರ ಹೆಸರು ಮಾತ್ರ ಕಾಣುವುದಿಲ್ಲ. ಇತರ ಅಪೇಕ್ಷೆಯ ಮೇರೆಗೆ ಇವರನ್ನು ತೆಗೆದು ಕೊಂಡಿಲ್ಲವಾದರೂ, ಈ ಹಿಂದಿನಂತೆಯೇ ತನ್ನ ಸಲಹೆ ಸಹಕಾರಗಳನ್ನು ಅವರು ಮುಂದುವರಿಸುವ ಎಂದೂ ತಿಳಿದು ಬಂದಿದೆ.

ರೈತ ಜನರಿಗೆ ನೆರವು

ಮೈಸೂರು ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ ಟ್ರಾಕ್ಟರ ಮತ್ತು ಬುಲ್‌ಡೋಜರಗಳನ್ನು ಇರಿಸಿರುವ ಸ್ಥಳಗಳಿಂದ ಅವುಗಳ ಉಪಯೋಗವನ್ನು ಪಡೆಯ ಬಯಸುವವರು ತಮ್ಮ ಸಮೀಪದ ಒಕ್ಕಲುತನ ಖಾತೆಯ ಅಧಿಕಾರಿಗಳನ್ನು ಕೂಡಲೇ ಕಂಡು ವಿವರಗಳನ್ನು ಪಡೆಯಬೇಕೆಂದೂ ಸಾರಿದ್ದಾರೆ. ಇವುಗಳನ್ನು ಬೇಗನೇ ಬೇರೆಡೆಗೆ ಒಯ್ಯಲಿರುವುದರಿಂದ ಅಪೇಕ್ಷಿತರು ತ್ವರೆಮಾಡಬೇಕೆಂದೂ ಕೇಳಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ, ಮತ್ತು ಮಂಗಳೂರುಗಳಲ್ಲಿ ಈ ಎರಡೂ ಸದ್ಯ ಇರುವುವು.

ಭಾರತದಿಂದ ಮನ್ನಣೆ

ಸಂಯುಕ್ತ ಅರಬ ಪ್ರಜಾರಾಜ್ಯಕ್ಕೆ ಪ್ರಪ್ರಥಮವಾಗಿ ಮನ್ನಣೆಯಿತ್ತ ಒಂಭತ್ತು ರಾಷ್ಟ್ರಗಳಲ್ಲಿ ಭಾರತ ಮತ್ತು ರಶ್ಯಗಳು ಸೇರಿವೆ. ಇವುಗಳೊಡನೆ ಜಪಾನ, ಸ್ವಿಜರ್ಲೆಂಡು, ಡೆನ್ಮಾರ್ಕ, ಬಲ್ಗೇರಿಯಾ, ಜಕೋಸ್ಲೋವ ಕಿಯಾ ಹಂಗೇರಿ ಮತ್ತು ಸ್ವೀಡನಗಳೂ ಮನ್ನಣೆಯಿತ್ತಿವೆ. ಭಾರತದ ಪರವಾಗಿ ರಾಷ್ಟ್ರಾಧ್ಯಕ್ಷರು ತಮ್ಮ ಸರಕಾರವು ಈ ನೂತನ ಪ್ರಜಾರಾಜ್ಯವನ್ನು ಮನ್ನಿಸುವುದಾಗಿ ಒಂದು ಪತ್ರವನ್ನು ಬರೆದಿದ್ದಾರೆ. ಆದರೆ ಪಾಕಿಸ್ತಾನವು ತನ್ನಿತರ ಅನುಯಾಯಿಗಳ ಬಾಲಹಿಡಿಯುವ ಮನೋವೃತ್ತಿಯನ್ನು ತೋರುತ್ತಿರುವಂತೆ ಕಾಣುತ್ತದೆ. ಆದರೂ ಮನ್ನಣೆಯೀಯಲು [illegible] ಗೊತ್ತಾಗಿದೆ.

ರಾಜ್ಯಪಾಲರ ಭಾಷಣ

ಮೈಸೂರಿನ ಶಾಸನ ಸಭೆ ಮತ್ತು ಪರಿಷತ್ತುಗಳು ದಿನಾಂಕ ೨೦ರಂದು ಸೇರುವುದಿದ್ದರೂ ಕೇಂದ್ರ ಶಿಕ್ಷಣ ಮಂತ್ರಿಯವರ ನಿಧನದಿಂದಾಗಿ ಅದನ್ನು ೨೧ಕ್ಕೆ ಮುಂದೂಡಲಾಗಿತ್ತು. ಈ ಮುಂಗಡ ಪತ್ರದ ಅಧಿವೇಶನವನ್ನು ಉದ್ಘಾಟಿಸುತ್ತ ರಾಜ್ಯಪಾಲರು ಮೈಸೂರು ರಾಜ್ಯದಲ್ಲಿ ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಗತಿ ಸಾಧನೆಗೆ ಅಗತ್ಯವಿರುವ ಐಕ್ಯ ಭಾವನೆಯು ಬೆಳೆದು ಬಂದಿದೆ ಎಂದು ನುಡಿದರು. ಸರಕಾರದ ಧೋರಣೆಯ ಕುರಿತಾಗಿ ಮಾತಾಡುತ್ತ ಸಣ್ಣ ಉಳಿತಾಯದ ಯೋಜನೆಯನ್ನು ಜನಪ್ರಿಯಗೊಳಿಸಬೇಕು ಎಂದು ವಿನಂತಿಸಿದರಲ್ಲದೇ ಪ್ರತ್ಯಕ್ಷ ಸಾಗುವಳಿ ಮಾಡುವವರ ಕೈಯಲ್ಲೇ ಭೂಮಿ ಇರಬೇಕೆಂಬುದನ್ನು ಸರಕಾರವು ಒಪ್ಪಿಕೊಂಡಿದ್ದು, ಆ ಬಗ್ಗೆ ಜತ್ತಿ ಸಮಿತಿಯ ವರದಿಯನ್ನಾಧರಿಸಿ ತಯಾರಿಸಿದ ಮಸೂದೆಯು ಈ ಅಧಿವೇಶನದಲ್ಲಿ ಮುಂದೆ ಬರಬಹುದೆಂದು ತಿಳಿಸಿದರು. ರಾಜ್ಯದ ಯೋಜನೆ ಆಹಾರದ ಸ್ಥಿತಿಗಳನ್ನು ಪರಾಮರ್ಶಿಸಿ ಪ್ರಗತಿಯ ಕಾರ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

The Moolky Bank Limited,
Mulki

NOTICE

The 28th Ordinary Annual General Body Meeting of the Bank will be held at the Registered Office of the Bank on Saturday the 22nd March, 1958 at 11 A. M.

The Register of Members & Transfer Books of the Bank will be closed from 10—3—1958 to 24—3—1958.

(both days inclusive)

(Sd) M. R. H. Punja,
Manager

ಉಡುಪಿ

ನಗರಸಭೆ— ಉಡುಪಿ ನಗರ ಸಭೆಯು ತಾ. 24ರಂದು ಸಂಜೆ ನಗರಸಭಾಪತಿ ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಕೇಂದ್ರ ಸರಕಾರದ ವಿದ್ಯಾಮಂತ್ರಿ ಮೌಲಾನಾ ಅಬುಲ ಕಲಂ ಅಜಾದರ ನಿಧನದ ಬಗ್ಗೆ ಸಂತಾಪ ವ್ಯಕ್ತಪಡಿಸಲಾಯಿತು. ಮುನಿಸಿಪಲ್ ನೌಕರರ ಕೇಳಿಕೆಗಳನ್ನು ಪೂರೈಸಲು ಸರಕಾರದ ಧನ ಸಹಾಯವನ್ನು ಅಪೇಕ್ಷಿಸಿ ಸಹಾಯ ನೀಡಲು ಸರಕಾರಕ್ಕೆ ವಿನಂತಿಸಲಾಯಿತು. ಮುನಿಸಿಪಲ್ ರಸ್ತೆಗಳ ಬಗ್ಗೆ ಸರಕಾರವು ಮಂಜೂರು ಮಾಡಿದ ರೂಪಾಯಿ 8000/ ವನ್ನು ವಿನಿಯೋಗಿಸುವ ಕುರಿತು ಸುದೀರ್ಘ ಚರ್ಚೆ ನಡೆಯಿತು. ಕೊನೆಗೆ ಕೆಲವೊಂದು ರಸ್ತೆಗಳನ್ನು [illegible] ಕೆಲವೊಂದು ಹೊಸ ರಸ್ತೆಗಳನ್ನು ಸೇರಿಸಿ ಆ ರಸ್ತೆಗಳಿಗೆ ಹಂಚಿಹಾಕಲಾಯಿತು.

ಶಿಕ್ಷಕರ ಪರಿಷ್ಕೃತ ವೇತನ—ಬಿಲ್ ಮಾಡುವ ಫಾರ್ಮುಗಳು ಕಳುಹಿಸಲ್ಪಡುವುವು— ಹೊಸ ದರದಲ್ಲಾಗುವ ಶಿಕ್ಷಕರ ಸಂಬಳದ ಹೆಚ್ಚಿನ ಮೊತ್ತಕ್ಕೆ ತಾ 1—4 1957 ರಿಂದ ಬಿಲ್ ಮಾಡುವರೆ ನಿರ್ದೇಶನವನ್ನೀಯುವ ಫಾರ್ಮುಗಳನ್ನು ಆಡಳಿತೆಯವರಿಗೆ ಬೇಗನೆ ಕಳುಹಿಸಿಕೊಡಲಾಗುವುದೆಂದೂ ಆ ಫಾರ್ಮುಗಳ ಪ್ರತಿಯನ್ನು ಭರ್ತಿಮಾಡಿ ಕಳುಹಿಸಬೇಕೆಂದೂ ಬೆಂಗಳೂರಿಗೆ ಶಿಕ್ಷಕರ ಪರವಾಗಿ ತೆರಳಿದ್ದ ನಮ್ಮ ಪ್ರತಿನಿಧಿಗಳೊಡನೆ ಡೈರೆಕ್ಟರರು ತಿಳುಹಿಸಿರುವರು. ಆಯಾ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಕ್ರಮಗಳನ್ವಯವೇ ಪರಿಷ್ಕೃತ ವೇತನವನ್ನು ಲೆಕ್ಕಿಸಲಾಗುವುದು. ಎಲ್ಲಾ ವೆಚ್ಚವನ್ನು ಈಗ ಸರಕಾರವೇ ತೆರುತ್ತಿರುವ ಪ್ರಾಥಮಿಕ ಶಾಲೆಗಳ ಮಟ್ಟಿಗೆ ಪರಿಷ್ಕೃತ ವೇತನಕ್ರಮ ಎಲ್ಲಾ ಸಂಬಳ ಮತ್ತು ತುಟ್ಟಿಭತ್ತೆಯನ್ನು ಸರಕಾರವೇ ಕೊಡುವುದು ಎಂದು ಡೈರೆಕ್ಟರರು ತಿಳುಹಿಸಿರುವುದಾಗಿ ಜಿಲ್ಲಾ ಶಿಕ್ಷಕರ ಕ್ರಿಯಾ ಸಮಿತಿಯ ಕನ್ವೀನರರು ತಿಳಿಸುತ್ತಾರೆ.

ಯಕ್ಷಗಾನ— ತಾ 22ರಂದು ರಾತ್ರೆ ಉಡುಪಿ ಜನಸಂಘದ ಮಂಡಲ ಅಧಿವೇಶನದಲ್ಲಿ ಜರಗಿದ ಉಡುಪಿ ಯಕ್ಷಗಾನ ಕಲಾಮಂಡಲದವರಿಂದ ಶಲ್ಯಸಾರಥ್ಯ ಎಂಬ ಯಕ್ಷಗಾನ ಭಾಗದಲ್ಲಿ ಶ್ರೀಗಳಾದ ಕೆ ನಾರಾಯಣ ಸೆಟ್ಟಿ, ಎಮ್ ಗೋವರ್ಧನರಾವ್, ಎಮ್ ಸುಬ್ಬರಾವ್, ಪೊಲ್ಯ ದೇಜಪ್ಪ ಸೆಟ್ಟಿ, ಕೋಟಿ ಸುಬ್ಬರಾವ್, ಸಿ ಶೀನ ಸೆಟ್ಟಿ, ಕೆ ಸದಾಶಿವ ಸೆಟ್ಟಿ, ಗೋಪಾ ಸೆಟ್ಟಿ ಮೊದಲಾದ ಅರ್ಥದಾರಿಗಳ ಕೂಡುವಿಕೆಯಿಂದ ಸಾಂಗವಾಯಿತು. ಮಂಡಲದ ಅಧ್ಯಕ್ಷ ಶ್ರೀ ಅನಂತಕೃಷ್ಣ ಶರ್ಮರು ಧನ್ಯವಾದಗಳನ್ನಿತ್ತರು.

ಡಾ। ಟಿ. ಮಾಧವ ಪೈಗಳ ಷಷ್ಟ್ಯಬ್ಧಿಪೂರ್ತಿ ಸಮಾರಂಭ ಇದೇ ಬರುವ ಎಪ್ರಿಲ್ 30ಕ್ಕೆ 60 ವರ್ಷವಾಗುವ ಎಕೆಡಮಿ ಆಫ್ ಜನರಲ್ ಎಜ್ಯುಕೇಶನಿನ ರಜಿಸ್ಟ್ರಾರೂ ಬೇಂಕಿಂಗ್, ವಿಮಾ ವಿಶೇಷವಾಗಿ ಶಿಕ್ಷಣ ಕ್ಷೇತ್ರದಲ್ಲಿ ಅಭೂತಪೂರ್ವ ಕಾರ್ಯ ನಿರ್ವಹಿಸಿದವರೂ ಆದ ಡಾ ಟಿ ಎಂ ಎ ಪೈಗಳ ಷಷ್ಟ್ಯಬ್ಧಿಪೂರ್ತಿ ಸಮಾರಂಭವನ್ನು ಚಿರಸ್ಥಾಯಿ ರೂಪದಲ್ಲಿ ಹೇಗೆ ಆಚರಿಸಬಹುದೆಂಬುದನ್ನು ಪರ್ಯಾಲೋಚಿಸಲು ತಾ 20 2 58ರಲ್ಲಿ ಶ್ರೀ ಸೋದೆ ಮಠದಲ್ಲಿ ಡಾ। ಎಸ್ ಆರ್ ಪೈಗಳ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿತು. ಕನ್ವೀನರಾದ ಶ್ರೀ ಪಿ ಶ್ರೀಪತಿ ಆಚಾರ್ಯರು ಸ್ವಾಗತಿಸಿ, ಸಭೆಯ ಉದ್ದೇಶವನ್ನು ವಿವರಿಸಿ, ತನ್ನ ಸೂಚನೆಗಳನ್ನಿತ್ತು ಸಭಿಕರ ಸಲಹೆಗಳನ್ನು ಕೋರಿದರು. ಸಭಿಕರು ಅಭಿಪ್ರಾಯಗಳನ್ನಿತ್ತ ಮೇಲೆ ಯುಕ್ತ ಕಾರ್ಯಕ್ರಮ ಕೈಗೊಳ್ಳಲು ಡಾ ಎಸ್ ಆರ್ ಪೈ, ಅಧ್ಯಕ್ಷ, ಡಾ ಕೆ ಎಲ್ ಪಡಾಳ, ಶ್ರೀ ಪಿ. ಎಸ್ ಆಚಾರ್, ಮತ್ತು ಶ್ರೀ ಲೋಕಿ ಫೆರ್ನಾಂಡಿಸ್ ಉಪಾಧ್ಯಕ್ಷರು, ಡಾ ಪಿ. ರಾಘವೇಂದ್ರ ನಾಯಕ್ ಕೋಶಾಧಿಕಾರಿ, ಶ್ರೀಗಳಾದ ಎನ ವಿ ಕಾಮತ್, ಮತ್ತು ಎ ಜೆ ಅಳ್ವೆಯವರು ಕಾರ್ಯದರ್ಶಿಗಳಾಗಿ ಇರುವ ಸಮಿತಿಯೊಂದು ರಚಿಸಲ್ಪಟ್ಟಿತು.

ತಾ. 23ರಲ್ಲಿ ಸಮಿತಿಯ ಸಭೆಯು ಶ್ರೀ ಲೋಕಿ ಫೆರ್ನಾಂಡಿಸರ ಅಧ್ಯಕ್ಷತೆಯಲ್ಲಿ ಜರಗಿದಾಗ ಶ್ರೀ ಶ್ರೀ. ಸೋದೆ ಸ್ವಾಮಿಗಳು **ಟಿಕ್ಕೆಟ್ಸ್ ಸಮಿತಿಯ ಕಾರ್ಯವನ್ನು ಪ್ರಶಂ**ಸಿ, ಆಶೀರ್ವದಿಸಿದರು. ಮಠದ ಕಡೆಯಿಂದ ರೂ ಎರಡುಸಾವಿರ ಕೊಡುವುದಾಗಿ ವ್ಯಕ್ತಪಡಿಸಲಾಯಿತು. ಒಂದು ಲಕ್ಷ ರೂಪಾಯಿಯ ನಿಧಿ ಸಂಗ್ರಹಿಸಿ, ಎಕೆಡೆಮಿಯ ಕಾಲೇಜಿಗೆ ಡಾ. ಪೈಗಳ ಹೆಸರಲ್ಲಿ ಒಂದು ಕಟ್ಟಡ ನಿರ್ಮಿಸುವ ಕುರಿತು ಕಾರ್ಯಕ್ರಮ ಕೈಕೊಳ್ಳಬೇಕೆಂದಾಯಿತು. ಕಮಿಟಿಗೆ ಮತ್ತೂ ಕೆಲವರನ್ನು ಆರಿಸಲಾಯಿತು.

ಮೂಡಬಿದ್ರೆ— ದ ಕ ಜಿಲ್ಲೆಯಿಂದ ಮೈಸೂರು ವಿಧಾನ ಪರಿಷತ್ತಿಗೆ ಸದಸ್ಯರಾಗಿ ಆರಿಸಲ್ಪಟ್ಟ ಶ್ರೀ ಕೆ ಬಾಲಕೃಷ್ಣರಾಯರ ಗೌರವಾರ್ಥ ತಾ 15ರಂದು ಅಭಿನಂದನಾ ಸಭೆಯೊಂದು ಜಿಲ್ಲಾ ಬೋರ್ಡ ಅಧ್ಯಕ್ಷ ಶ್ರೀ ಬಿ ಮಂಜಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ ಕೆ ರೈಗಳು ಸ್ವಾಗತಿಸಿದರು. ಸಂಘದ ಅಧ್ಯಕ್ಷ ಶ್ರೀ ಜಿ. ವಾಸುದೇವ ಪೈಗಳು ಮುಖ್ಯ ಅತಿಥಿಗಳನ್ನು ಅಭಿನಂದಿಸಿ ಮಾನಪತ್ರವನ್ನಿತ್ತರು. ಅಧ್ಯಕ್ಷರು ಸಮಯೋಚಿತ ಮಾತುಗಳನ್ನಾಡಿ, ಜನತಾ ಸೇವೆ ಮಾಡುವವರನ್ನು ಅಭಿನಂದಿಸುವುದು ಸಾಂಸ್ಕೃತಿಕ ಕಾರ್ಯವೆಂದರು. ಶ್ರೀ ಟಿ. ರಘುಚಂದ್ರ ಸೆಟ್ಟರು ಧನ್ಯವಾದಗಳನ್ನಿತ್ತರು. ಯಕ್ಷಗಾನಕೂಟವೂ ನಂತರ ನಡೆಯಿತು.

ಪಡುಮಾರ್ನಾಡು— ಶ್ರೀ ಮಹಾವೀರ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ತಾ 16ರಂದು ಜೈನ ಹ್ಯಾಸ್ಕೂಲಿನ ಅಧ್ಯಾಪಕ ಶ್ರೀ ಕೆ ಕಾಂತ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಬೆಳ್ವಾರೆ ಸ್ಥಳೀಯ ಬೋರ್ಡ ಹ್ಯಾಸ್ಕೂಲಿನ ವರ್ಧಂತ್ಯುತ್ಸವವು ಮತ್ತು ಹಳೆ ವಿದ್ಯಾರ್ಥಿ ದಿನಾಚರಣೆಯು ತಾ 15ರಂದು ಮಂಗಳೂರು ನಗರಸಭಾಪತಿ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ನಾರಾಯಣರಾಯರು ಶಾಲಾ ಧ್ವಜವನ್ನು ಅರಳಿಸಿದರು. ವರ್ಧಂತ್ಯುತ್ಸವದ ಅಧ್ಯಕ್ಷ ಶ್ರೀ ಬಿ ನಾರಾಯಣ ಶೇಕರು ಸ್ವಾಗತ ಮಾತುಗಳನ್ನಾಡಿದರು. ವರದಿವಾಚನವಾದ ಬಳಿಕ ಕುಮಾರಿ ಕೆ ಜಯಲಕ್ಷ್ಮಿಯವರು ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರ ಭಾಷಣವಾದನಂತರ ಮನೋರಂಜನ ಕಾರ್ಯಕ್ರಮಗಳಾದುವು.

ಕಾರ್ಕಳ— ಮೈಸೂರು ರಾಜ್ಯ ಸರಕಾರದ ಅಬಕಾರಿ ಮತ್ತು ಗ್ರಾಮ ಕೈಗಾರಿಕಾ ಸಚಿವ ಶ್ರೀ ಮಹಮ್ಮದಾಲಿಯವರು ಡಾ ನಾಗಪ್ಪ ಆಳ್ವ ಎಮ್ ಎಲ್ ಎ ಅವರೊಂದಿಗೆ ತಾ 18ರಂದು ಸಂಜೆ ಕಾರ್ಕಳಕ್ಕೆ ಬಂದು ಪ್ರವಾಸಿಕರ ಬಂಗ್ಲೆಯಲ್ಲಿ ಮಂಡಲ ಕಾಂಗ್ರೆಸ್ ಮತ್ತು ಊರ ಇತರ ಪ್ರಮುಖರೊಂದಿಗೆ ಪ್ರಚಲಿತ ಹಲವಾರು ಸಮಸ್ಯೆಗಳನ್ನು ಚರ್ಚಿಸಿದರು. ಮದ್ಯಪಾನ ನಿಷೇಧ ಕಾನೂನಿನಲ್ಲಿ ಕೆಲವೊಂದು ಸುಧಾರಣೆಗಳನ್ನು ಬೇಗನೆ ಮಾಡಿ ಮದ್ಯನಿಷೇಧ ಕಾನೂನನ್ನು ಪರಿಣಾಮಕಾರಿಯಾಗಿ ಮಾಡಲಾಗುವುದೆಂದು ಸಚಿವರು ತಿಳಿಸಿದರು.

ದೇಲಂಪಾಡಿ ಬನಾರಿ— ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 15ರಂದು ದ ಕ ಜಿಲ್ಲೆಯಿಂದ ಮೈಸೂರು ವಿಧಾನ ಸಭೆ ಸದಸ್ಯರಾಗಿ ಆರಿಸಲ್ಪಟ್ಟ ಶ್ರೀ ಕೆ ಬಾಲಕೃಷ್ಣರಾಯರನ್ನು ಅಭಿನಂದಿಸುವ ಸಭೆಯು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಂತಾವರ— ಕಾಂತಾವರ ಗ್ರಾಮ ರೈತರ ಪರಿಷತ್ತು ತಾ 23ರಲ್ಲಿ ಕಾಂತಾವರ ಬೀದಿ ಶಾಲಾ ಮಠದಲ್ಲಿ ಬೆಳ್ಮಣ್ಣು ಡಾ ಕೊರಡ್ಕಲ್ ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಶಿವರಾಯರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಶ್ರೀನಿವಾಸ ಶರ್ಮ, ಕೊರಗ ಭಂಡಾರಿಗಳವರು ಸರಕಾರದ ಸವಲತ್ತುಗಳನ್ನು ವಿವರಿಸಿ ಮಾತನಾಡಿದರು. ಶ್ರೀಗಳಾದ ಎಲ್ ನರಸಪ್ಪಯ್ಯ, ಸ್ವಾಮ್ ಎಲ್ ಸಿ, ಹಾ ಎ ಕೆ ಲಕ್ಷ್ಮೀನಾರಾಯಣರಾವ್ ಮೊದಲಾದವರು ಆಹಾರೋತ್ಪಾದನೆಯನ್ನು ಹೆಚ್ಚಿಸುವ ಕುರಿತು ಭಾಷಣವಿತ್ತರು. ಅಧ್ಯಕ್ಷರು ಮಾತನಾಡುತ್ತಾ, ಪರಿಷತ್ತಿನಲ್ಲಿ ಪಡೆದ ಅನುಭವವನ್ನು ಕಾರ್ಯರೂಪಕ್ಕೆ ತರುವಂತೆ ರೈತರಿಗೆ ವಿನಂತಿಸಿದರು. ಶ್ರೀ ಕೆ ಶ್ಯಾಮ ಭಟ್ಟರು ಧನ್ಯವಾದಗಳನ್ನಿತ್ತರು.

ಮಂಗಳೂರು

ರಾಷ್ಟ್ರೀಯ ಉಳಿತಾಯ ಸಪ್ತಾಹದ ಉದ್ಘಾಟನೆಯನ್ನು ತಾ. 18ರಂದು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಎಸ್ ಕೃಷ್ಣ ಮೂರ್ತಿಯವರು ನೆರವೇರಿಸುತ್ತಾ, ದ್ವಿತೀಯ ಯೋಜನೆಯ ಯಶಸ್ಸಿಗೆ ಅಗತ್ಯವಾಗಿರುವ ಹಣವನ್ನು ಪೂರೈಸುವುದಕ್ಕಾಗಿ ಜನರು ಸಣ್ಣ ಪ್ರಮಾಣದ ಉಳಿತಾಯಗಳನ್ನು ಮಾಡಿ ರಾಷ್ಟ್ರೀಯ ಅಭಿವೃದ್ಧಿ ಕಾರ್ಯದಲ್ಲಿ ಸಹಕಾರಿಯಾಗಬೇಕೆಂದರು.

ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿ ಶ್ರೀ ವ್ಯಾ. ಸಿ. ಹೊಂಬಾಳಯ್ಯನವರು ವಹಿಸಿದ್ದರು. ಮಂಗಳೂರು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗ, ಶ್ರೀಮತಿಯರಾದ ಶಾಂತೇರಿ ಜೆ ಪ್ರಭು, ಇಂದಿರಾರಾವ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಜಿಲ್ಲಾ ರಾಷ್ಟ್ರೀಯ ಉಳಿತಾಯ ಉಪಯೋಜನಾಧಿಕಾರಿ ಶ್ರೀ ಜಿ. ಎಸ್. ಪೋಲ್, ಅವರು ಧನ್ಯವಾದಗಳನ್ನಿತ್ತರು

ಸಣ್ಣ ಕೈಗಾರಿಕೆಗಳ ಸಂಘದ ಉದ್ಘಾಟನೆ—ತಾ 19ರಂದು ಸಿ. ಪಿ. ಸಿ. ಭವನದಲ್ಲಿ ದ. ಕ. ಜಿಲ್ಲಾ ಸಣ್ಣ ಕೈಗಾರಿಕೆಗಳ ಸಂಘವನ್ನು ಮೈಸೂರಿನ ಗ್ರಾಮ ಕೈಗಾರಿಕಾ ಮಂತ್ರಿ ಶ್ರೀ ಎಮ್. ಮಹಮ್ಮದಾಲಿಯವರು ಉದ್ಘಾಟಿಸುತ್ತಾ, ದ ಕ. ಜಿಲ್ಲೆಯಲ್ಲಿ ಬಹಳ ಪ್ರಸಿದ್ಧವಾಗಿರುವ ಪ್ರತಿಮೆ ತಯಾರಿ, ಕಂಚು ಕೈಗಾರಿಕೆ, ಕೈಮಗ್ಗ ಮತ್ತು ಚಿತ್ರದ ಕೈಗಾರಿಕೆಗಳಂತಹ ಸಣ್ಣ ಕೈಗಾರಿಕೆಗಳು ಉತ್ತಮವಾಗಿ ಕಾರ್ಯವೆಸಗುತ್ತಿವೆ ಇದು ಜಿಲ್ಲೆಯ ಜನರಲ್ಲಿರುವ ಪ್ರತಿಭಾನ್ವಿತ ಕರ್ತೃತ್ವ ಶಕ್ತಿಯನ್ನು ತೋರಿಸುತ್ತದೆ. ಜನರ ಈ ಪ್ರತಿಭೆಯ ಸದುಪಯೋಗವನ್ನು ಪಡೆಯಲು ಆ ಕೈಗಾರಿಕೆಗಳಲ್ಲಿರುವವರ ಸಮಸ್ಯೆಗಳ ಪರಿಹಾರದ ಕಡೆಗೆ ಗಮನ ಕೊಡುವುದು ಅಗತ್ಯವೆಂದರು. ಆರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ವಿ. ಎಸ್. ಕುಡ್ವರು ಸ್ವಾಗತ ಭಾಷಣಮಾಡಿದರು. ಕೊನೆಯಲ್ಲಿ ಸಂಘದ ಕೋಶಾಧಿಕಾರಿ ಶ್ರೀ ಬಿ. ಬಿ ಸೆಟ್ಟರು ಧನ್ಯವಾದವಿತ್ತರು.

ಗೋಕರ್ಣನಾಥ ದೇವಸ್ಥಾನದಲ್ಲಿ ತಾ. 19ರಂದು ಸಚಿವರಿಗೆ ದ. ಕ. ಜಿಲ್ಲಾ ಬಿಲ್ಲವರ ಯೂನಿಯನಿನ ಅಧ್ಯಕ್ಷ ಶ್ರೀ ಬಿ. ಆರ್. ಕರ್ಕೇರ; ಎಮ್. ಎಲ್. ಎ. ಅವರು ಅರ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ, ಮೂರ್ತೆದಾರರು ತಮ್ಮ ಈ ನಿರುದ್ಯೋಗವನ್ನು ಹೋಗಲಾಡಿಸಲು ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಬೇಕೆಂದು ಸಚಿವರು ಕೇಳಿಕೊಂಡರು.

ಸಿಂಡಿಕೇಟ್ ಬೇಂಕಿನ ಹೊಸ ಶಾಖೆ ಆರಂಭ—ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಇದರ ಮಂಗಳೂರು—ಒಂದರ ಶಾಖೆಯು ತಾ 20ರಂದು ತೆರೆಯಲ್ಪಟ್ಟಿತು. ಉದ್ಘಾಟನಾ ಸಮಾರಂಭದ ವೇಳೆ ನಗರದ ಪ್ರತಿಷ್ಠಿತ ಮಹನೀಯರನೇಕರು ಆಗಮಿಸಿ ಸಮಾರಂಭದಲ್ಲಿ ಭಾಗವಹಿಸಿದ್ದರು.

ದ. ಕ. ಜಿಲ್ಲಾ ಮಜೂರರ ಸಮ್ಮೇಳನವು—ಮಾರ್ಚ ತಿಂಗಳ ತಾ 16, 17, 18ರಲ್ಲು ಮಂಗಳೂರಲ್ಲಿ ಜರಗಿಸುವುದೆಂದು ಸಮ್ಮೇಳನ ಸ್ವಾಗತ ಸಮಿತಿಯು ತಾ. 16ರಂದು ಮಾಡಿದ ಸಭೆಯಲ್ಲಿ ನಿಶ್ಚಯಿಸಿತು. ಶ್ರೀ ಎ. ಶಾಂತಾರಾಮ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಪೂರ್ವಸಿದ್ಧತೆಗಳನ್ನು ನಡೆಸಲು ವಿವಿಧ ಕಮಿಟಿಗಳು ರಚಿಸಲ್ಪಟ್ಟುವು ಸಮ್ಮೇಳನಕ್ಕೆ ಶ್ರೀಗಳಾದ ಎಸ್. ಎಸ್. ಮಿರಾಜ್‌ಕರ್, ಬಿ. ಟಿ ರಣದಿವೆ, ರಾಜ್ ಬಹದ್ದೂರ್‌ಗೌಡ ಮತ್ತು ಎಮ್. ಎನ್. ಗೋವಿಂದ ನಾಯರ್ ಇವರಲ್ಲೊಬ್ಬರನ್ನು ಆಮಂತ್ರಿಸಬೇಕೆಂದು ನಿಶ್ಚಯಿಸಲಾಯಿತು

ದ. ಕ. ಜಿಲ್ಲೆಯ ಶ್ಯಾನುಭೋಗರ ಪರೀಕ್ಷೆಗಳು—ಕುಂದಾಪುರ ಮತ್ತು ಪುತ್ತೂರು ಅಸಿಸ್ಟೆಂಟ್ ಕಮೀಶನರವರಿಂದ ಅವರವರ ಕಚೇರಿಯಲ್ಲಿ ತಾ. 4—3—58 ಮತ್ತು 4—3—58ರಂದು ಜರಗಿಸಲ್ಪಡುವುವಾಗಿ ಜಿಲ್ಲಾ ಡಿಪ್ಯುಟಿ ಕಮೀಶನರರು ತಿಳಿಸುತ್ತಾರೆ. ಮೊದಲ ದಿನ ಬೆಳಿಗ್ಗೆ 10 ಗಂಟೆಯಿಂದ 1 ಗಂಟೆ ತನಕ ಗ್ರಾಮಲೆಖ್ಖಗಳು, ಮಧ್ಯಾಹ್ನ 2—30ರಿಂದ 5 30ರ ತನಕ ಅಧಿಕಾರ ಮತ್ತು ಕರ್ತವ್ಯಗಳು, ಎರಡನೆ ದಿನ ಬೆಳಿಗ್ಗೆ 10ರಿಂದ 1ರ ತನಕ ಅಧಿಕಾರ ಮತ್ತು ಕರ್ತವ್ಯಗಳು, ಮಧ್ಯಾಹ್ನ 3ರಿಂದ 5ರ ತನಕ ಗ್ರಾಮ ಆರೋಗ್ಯ ರಕ್ಷಣೆಯ ಕುರಿತೂ ಪರೀಕ್ಷೆಗಳು ಜರಗುವುವು.



ಸಿಲೋನಿನಲ್ಲಿ ನೆರೆಹಾವಳಿಯಾದಾಗ ಬ್ರಿಟಿಷ ರಾಯಲ್ ಏರ್ ಫೋರ್ಸಿನವರು ಅಲ್ಲಿಗೆ ಧಾವಿಸಿ ಸಹಕಾರನೀಡಲುದ್ಯುಕ್ತರಾದರು. ಇವರೊಂದಿಗೆ ರೆಡ್‌ಕ್ರಾಸ್ ಸ್ವಯಂಸೇವಕರೂ ಸೇರಿಕೊಂಡಿದ್ದರು. ಬ್ರಿಟಿಷ ನೌಕಾದಳದವರೂ ಸಣ್ಣ ಸಣ್ಣ ದೋಣಿಗಳ ಮುಖಾಂತರವಾಗಿ ವೈದ್ಯಕೀಯ ಸಹಾಯವನ್ನೀಯಲು ನೆರವಾದರು. ಈ ಚಿತ್ರದಲ್ಲಿ ಇಂತಹ ಒಂದು ದೃಶ್ಯವನ್ನು ಕಾಣಬಹುದು.

ಶೈಕ್ಷಣಿಕ ಪ್ರದರ್ಶನ—ಮಂಗಳೂರಿನ ಸರಕಾರಿ ತರಬೇತಿ ಕಾಲೇಜಿನ ಶೈಕ್ಷಣಿಕ ಪ್ರದರ್ಶನವು ತಾ. 22, 23ರಲ್ಲು ಜರಗಿತು. ಮಿಲಾಗ್ರಿಸ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ರೆ. ಫಾ. ಆರನ್ಹಾರವರು ಪ್ರದರ್ಶನವನ್ನು ಉದ್ಘಾಟಿಸಿದರು ಪ್ರಿನ್ಸಿಪಾಲ್ ಶ್ರೀ ಓ. ಎಸ್ ಅಂಚನರು ಸ್ವಾಗತಿಸಿದರು. ಮಾಜಿಮಂತ್ರಿ ಶ್ರೀ ಎ ಬಿ ಸೆಟ್ಟಿರು ಪ್ರದರ್ಶನವನ್ನು ಮನಸಾರೆ ಹೊಗಳಿದರು

ಸಂತಾಪಸೂಚಕ ಸಭೆ-ಭಾರತ ಸರಕಾರದ ವಿದ್ಯಾಸಚಿವರಾದ ಮೌಲಾನಾ ಅಬುಲ್ ಕಲಮ್ ಅಜಾದರ ನಿಧನದ ಬಗ್ಗೆ ಸಂತಾಪಸೂಚಿಸಲು ಕೇಂದ್ರ ಮೈದಾನಿನಲ್ಲಿ ತಾ 22ರಂದು ಶ್ರೀ ಎ ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಡಾ ಕೆ ಬಾಲಪ್ಪ ಸೆಟ್ಟರು ಸ್ವಾಗತಿಸಿದರು. ಶ್ರೀಗಳಾದ ಎಸ್. ತಿರುಮಲೇಶ್ವರ ಭಟ್ ಮತ್ತು ಬಿ ಎಮ್. ಇದಿನಬ್ಬರವರು ಕಾಲೋಚಿತ ಮಾತುಗಳನ್ನಾಡಿದರು

ಮದ್ರಾಸಿನಲ್ಲಿ ವಿವಾಹ ಸಮಾರಂಭ—ಮದ್ರಾಸಿನ ಹೊಟೇಲ್ ದಾಸಪ್ರಕಾಶದ ಮಾಲೀಕರಾದ ಶ್ರೀ ಕೆ ಸೀತಾರಾಮ, ರಾಯರ ದ್ವಿತೀಯ ಪುತ್ರ ಚಿ. ಬಾಲಕೃಷ್ಣ ಮತ್ತು ಡಾ ಕೆ. ಯು ರಾಮಕೃಷ್ಣ ರಾಯರ ಸೊಸೆ ಸೌ. ವೀರಾ ಇವರ ವಿವಾಹ ಸಮಾರಂಭವು ಇದೇ ತಾ. 10ರಂದು ಅತ್ಯಂತ ವಿಜೃಂಭಣೆಯಿಂದ ಜರಗಿತು. ವಿವಾಹ ಮುಹೂರ್ತಕ್ಕೂ ಸತ್ಕಾರ ಕೂಟಕ್ಕೂ ನಗರದ ಅನೇಕರು ಬಂದಿದ್ದರು. ಶ್ರೀ ಸೀತಾರಾಮರಾಯರು ಈ ಶುಭ ಸಮಾರಂಭದ ನಿಮಿತ್ತ, ತಮ್ಮ ಸಂಸ್ಥೆಗಳ ನೌಕರರಿಗೆ ಬೋನಸ್ ಕೊಡುವುದಾಗಿ ಹೇಳಿ, ಒಂದು ವಾರದ ಸಂಬಳವನ್ನು ಬಹುಮಾನವಾಗಿ ಕೊಟ್ಟರು.

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯುಗಟಿ, ಬಿ. ಎ., ಎಲ್‌ಎಲ್ ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಮಾಡಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇಧ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು.

ಬಿಳಿ ಕಾಗದ. ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಕಲ್ಯಾಣಪುರ-ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ 1933ರಲ್ಲು ಸ್ಥಾಪಿಸಲ್ಪಟ್ಟ ಶ್ರೀರಾಮ ಭಜನಾ ಮಂದಿರದ ರಜತ ಮಹೋತ್ಸವ ಸಮಾರಂಭವು ಇದೇ ತಾ. 16ನೇ ಪ್ರಾತಃಕಾಲ ವಿಶಾಲ ಭಜನೆಯೊಂದಿಗೆ ಆರಂಭವಾಗಿ ಮರುದಿನ ಮಂಗಲದೊಂದಿಗೆ ಮುಕ್ತಾಯವಾಯಿತು. ಮಂಗಲಪೂರ್ವದಲ್ಲಿ ಈ ಸಮಾರಂಭಕ್ಕಾಗಿ ಸಕಲ ವಿಧಗಳಿಂದ ಸಹಾಯವಿತ್ತು ಸಹಕರಿಸಿದ ಜನರಿಗೆ ಶ್ರೀರಾಮಚಂದ್ರನು ಆಯುರಾರೋಗ್ಯ ಸಂಪತ್ತುಗಳನ್ನಿತ್ತು ಅನುಗ್ರಹಿಸಲಿ ಎಂದು ಪ್ರಾರ್ಥಿಸಲಾಯಿತು. ಸಂತರ್ಪಣೆಯಾಗಿ ಸವಿಸ್ತರ ಮಹಾಸಭೆಯೂ ಜರಗಿತು

ಬಂಟ್ವಾಳ—ತಾ. 17ರಂದು ಶ್ರೀ ಟಿ. ಎ ಪೈಗಳಿಗೆ ಎಸ್. ವಿ. ಎಸ್. ಹೈಸ್ಕೂಲಿನಲ್ಲಿ ಶ್ರೀ ವಿ ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಬಿ ಅನಂತ ಪೈ ಮತ್ತು ಬಿ ಎಂ ಪ್ರಭುಗಳು ಸತ್ಕಾರಕೂಟವನ್ನೇರ್ಪಡಿಸಿದ್ದರು. ಶ್ರೀ ಪೈಗಳು ಗೃಹಕೈಗಾರಿಕೆಗಳ ಹಾಗೂ ತನ್ನ ವಿದೇಶ ಪ್ರವಾಸದ ಅನುಭವದ ಕುರಿತು ಭಾಷಣವಿತ್ತರು.

ಶಿರ್ವ—ತಾ. 18ರಲ್ಲು ಮೈಸೂರು ಅಬಕಾರಿ ಸಚಿವ ಶ್ರೀ ಮಹಮ್ಮದಾಲಿಯವರು ಸಂದರ್ಶನವಿತ್ತರು. ಶ್ರೀ ಕೆ. ಕೆ. ಸೆಟ್ಟಿ ಎಮ್. ಎಲ್. ಸಿ. ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು. ಪಂಚಾಯತ ಬೋರ್ಡ ಅಧ್ಯಕ್ಷ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರು ಶಿರ್ವ ಮತ್ತು ಆಸುಪಾಸಿನ ಜನಪರವಾಗಿ ಸ್ವಾಗತಿಸಿ ಮನವಿಯನ್ನು ಅರ್ಪಿಸಿದರು ಮಂತ್ರಿಗಳು ಉತ್ತರವಿತ್ತು ಗ್ರಾಮ ಕೈಗಾರಿಕೆಗಳ ಕುರಿತು ಪರಿಶೀಲಿಸುವುದಾಗಿ ಹೇಳಿದರು ಮಂತ್ರಿಗಳೊಂದಿಗೆ ಡಾ. ನಾಗಪ್ಪ ಆಳ್ವ, ಎಮ್. ಎಲ್ ಎ, ಎಫ್. ಎಕ್ಸ್. ಡಿ ಪಿಂಟೊ, ಎಮ್. ಎಲ್ ಎ, ಮೊದಲಾದವರಿದ್ದರು. ಶ್ರೀ ಅಣ್ಣಯ್ಯ ಹೆಗ್ಡೆಯವರು ಭೋಜನ ಸತ್ಕಾರ ಕೂಟವೇರ್ಪಡಿಸಿದ್ದರು

ವಾರದ ಮಹಾನುಭಾವ—

ಮೌಲಾನಾ ಅಬುಲ್‌ಕಲಂ ಅಜಾದ

ಭಾರತ ಮಾತೆಯ ಸುಪುತ್ರ ಮೌಲಾನಾ ಅಬುಲ್‌ಕಲಂ ಅಜಾದರು ಭಗವಂತನ ಸನ್ನಿಧಾನಕ್ಕೆ ಹೋದರು. ಅವರಲ್ಲಿಗೆ ತೆರಳಿದುದರಿಂದ ಒಬ್ಬ ದೊಡ್ಡ ರಾಷ್ಟ್ರಭಕ್ತ, ರಾಜಕೀಯ ಮುಖಂಡ, ದಾರ್ಶನಿಕ, ವಿದ್ವಾಂಸ, ವಕ್ತಾರ, ಅಲ್ಲದೆ ಇನ್ನೂ ಏನೇನೋ ಆಗಿದ್ದ ಒಂದು ವ್ಯಕ್ತಿಯನ್ನು ನಾವು ಕಳೆದುಕೊಂಡೆವು, ಕಳೆದ ಐವತ್ತು ವರ್ಷಗಳಿಗೂ ಹೆಚ್ಚುಕಾಲದಿಂದ ಅವರು ಭಾರತೀಯ ರಾಜಕಾರಣದಲ್ಲಿ ಶಿರೋಮಣಿಗಳಾಗಿದ್ದರು. ಗಾಂಧೀಜೀಯವರ ನಿಕಟಾನುವರ್ತಿ, ಶ್ರೀ ಜವಾಹರಲಾಲ ನೆಹರೂರವರ ಪರಮ ಪ್ರಾಮಾಣಿಕ ಮಿತ್ರ ಮತ್ತು ಸಹಯೋಗಿ, ಕಾಂಗ್ರೆಸ್ಸಿನ ಹಿರಿಯ ಮುಖಂಡ, ಭಾರತ ಸರಕಾರದ ಜ್ಯೇಷ್ಠಮಂತ್ರಿ ಮತ್ತು ಭಾರತೀಯ ಸಂಸ್ಕೃತಿಯ ಉನ್ನಾಯಕ ಶ್ರೀ ಮೌಲಾನಾ ಅಜಾದರು ಧರ್ಮ ಸಹಿಷ್ಣುತೆ ಮತ್ತು ಧರ್ಮನಿರಪೇಕ್ಷತೆಯ ಸಜೀವ ಮೂರ್ತಿಯಾಗಿದ್ದರು. ಅವರೆದುರು ರಾಷ್ಟ್ರಹಿತವು ಉಳಿದೆಲ್ಲ ಕರ್ಮಗಳಿಗಿಂತಲೂ ಮೇಲಿನ ಸ್ಥಾನದಲ್ಲಿತ್ತು. ದೇಶವನ್ನು ವಿಶ್ವದ ದೃಷ್ಟಿಯಲ್ಲಿ ಗೌರವಾನ್ವಿತವನ್ನಾಗಿಸುವಲ್ಲಿಯೇ ಅವರ ಕೈ ಅತ್ತಿತ್ತ ಚಲಿಸುತ್ತಿತ್ತು.

ಅವರು ಅರಬೀ ಮತ್ತು ಫಾರಸೀ ಕ್ಷೇತ್ರಗಳಲ್ಲಿಯೂ ಅದ್ವಿತೀಯವಾಗಿ ಹೊಳೆಯುವ ಧ್ರುವತಾರೆಯಾಗಿದ್ದರು. ಅವರ ವಕ್ತೃತ್ವ ಮತ್ತು ಗ್ರಂಥಗಳಿಂದ ಆ ಭಾಷೆಯ ಸಾಹಿತ್ಯವೂ ಬೆಳೆದುಬಂದಿತು. ಕುರಾನಿನ ಮೇಲೆ ಅವರು ಬರೆದಿದ್ದ ಒಂದು ಕೃತಿಯು ಅವೆಲ್ಲವುಗಳಲ್ಲಿಯೂ ಅಗ್ರಸ್ಥಾನವನ್ನಲಂಕರಿಸಿದೆ. ಅವರ ಉಳಿದ ಕೃತಿಗಳೂ ಕೇವಲ ಭಾರತದಲ್ಲಿ ಮಾತ್ರವಲ್ಲ, ವಿಶ್ವದೆಲ್ಲೆಡೆಯಲ್ಲಿಯೂ ಆಕಾಂಕ್ಷಾ ಸಹಿತರಾಗಿ ಓದಲ್ಪಡುತ್ತವೆ.

ಅವರು ಮಂತ್ರಿಗಳಾಗಿರುವ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಬುನಾದಿ ಶಿಕ್ಷಣದಿಂದ ಹಿಡಿದು ಸ್ನಾತಕೋತ್ತರ ಶಿಕ್ಷಣವೂ ಲಾಭವನ್ನು ಹೊಂದಿದವು. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಇವರ ಸತ್ಪ್ರೇರಣೆಯಿಂದ ಸಾಹಿತ್ಯ, ಸಂಗೀತ, ನಾಟಕ ಮತ್ತು ಲಲಿತಕಲೆಗಳು ಭರದಿಂದ ಬೆಳೆದು ಬಂದುವು. ಮತ್ತಿದರಿಂದಾಗಿ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅವರು ಸಂಯುಕ್ತ ರಾಷ್ಟ್ರಸಂಘದ ಸಭಾಪತಿ ಸ್ಥಾನವನ್ನೂ ಅಲಂಕರಿಸಿದ್ದರು.

ಮೌಲಾನಾ ಅಜಾದರ ನಿಧನದಿಂದ ನಮ್ಮ ರಾಷ್ಟ್ರೀಯತೆಯ ಆಕಾಶದಲ್ಲಿ ಒಂದು ಅತ್ಯಂತ ಉಜ್ವಲ ತಾರೆಯು ಅಸ್ತಮಾನಗೊಂಡಂತಾಯಿತು. ಅವರು ತಮ್ಮ ಬೆನ್ನಹಿಂದೆ ಜಾತಿ ಮೊದಲಾದ ಧರ್ಮ ಭೇದಭಾವ ವಿವರ್ಜಿತವಾಗಿಯೇ ನಮ್ಮ ದೇಶವು ಮುಂದಿನ ಹತ್ತು ಕಲಿಮಾರುಗಳು ಅನ್ಯೋನ್ಯತೆಯಿಂದ ಬಾಳುವಂತೆ ಮಾಡುವ ತಮ್ಮ ತೇಜೋಮಯ ದೀವಟಿಗೆಯಿಂದ ಪ್ರಕಾಶವನ್ನು ಉರಿಗೊಳಿಸಿ ಹೋಗಿದ್ದಾರೆ. ಇದರಿಂದ ನಮ್ಮ ರಾಷ್ಟ್ರಕ್ಕೆ ಬೆಳಕನ್ನು ತೋರಿದ್ದಾರೆ.

ಇಂತಹ ಮಹಾನ್ ವ್ಯಕ್ತಿಯ ಕುರಿತಾಗಿ ಹೆಚ್ಚು ನುಡಿಯುವುದಾಗಲೀ ಬರೆಯುವುದಾಗಲೀ ಈಗ ಸಾಧ್ಯವಿಲ್ಲ. ಮೌಲಾನಾರ ನಿಧನದಿಂದ ರಾಷ್ಟ್ರಕ್ಕೆ ರಾಷ್ಟ್ರವೇ ದುಃಖ ಸಾಗರದಲ್ಲಿ ಮುಳುಗಿದೆ. ಅವರ ಗುಣವನ್ನು ಭಾವಿಸಿ ಕರಗಿಕೊಂಡರೆ ಪ್ರಯೋಜನವಿಲ್ಲ; ಅವರು ನಮಗೆ ತೋರಿದ ದಾರಿದೀಪವಡಿಯಲ್ಲಿ ಅವರಂತೆಯೇ ಬಾಳುವಂತೆ ನಾವು ಪ್ರಯತ್ನಶೀಲರಾಗಬೇಕು.

ಇಂತಹ ಸರ್ವಕ್ಷೇತ್ರ ಪಾಂಡಿತ್ಯಪೂರ್ಣ ಮಾಡಿದ ಸರ್ವ ಹಿತಸಾಧಕನಾದ ಸರ್ವಶ್ರೇಷ್ಠಸ್ಥಾನ ನಿವ. ಸಿತನಂದ ಭಾರತದ ರಾಷ್ಟ್ರೀಯರ ಉನ್ನೇತ್ರನಾದ ಭಾರತ ಮಾತೆಯ ಸುಪುತ್ರ ವರ ಮಹಾನುಭಾವರಿಗೆ ನಮ್ಮ ಶ್ರದ್ಧಾಂಜಲಿಯನ್ನು ಸಮರ್ಪಿಸುತ್ತೇವೆ. ಇವರನ್ನೇ ಈ ವಾರದ ಮಹಾನುಭಾವರಾಗಿ ಪರಿಗಣಿಸುತ್ತೇವೆ.

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾವರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	6
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.
ಇಲ್ಲವೆ ನಮಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಅಮೇರಿಕೆಯಲ್ಲಿ ಘಾನದ ಪ್ರಪ್ರಥಮ ರಾಯಭಾರಿಯಾದ ಶ್ರೀ ಡೇನಿಯಲ್ ಅಮುಲಿಂಗ ಚಾಪ್ಮನರು ಶ್ವೇತಭವನದಲ್ಲಿ ಅಧ್ಯಕ್ಷ ಐಸನ್‌ಹಾವರರೊಡನೆ ಭೇಟಿಯಾಗುತಿದ್ದಾರೆ. ಈ ರೀತಿಯ ಪಾರಸ್ಪರಿಕ ತಿಳುವಳಿಕೆ ಮತ್ತು ವಿಶ್ವಾಸ ಬೆಳೆಯುವ ಆಕಾಂಕ್ಷೆಯನ್ನು ಶ್ರೀ ಐಕರು ವ್ಯಕ್ತಪಡಿಸಿ ಅವರನ್ನು ಸ್ವಾಗತಿಸಿದರು.

ರಾಷ್ಟ್ರೀಯ ಪ್ರಯೋಗ ಶಾಲೆ

(ಹಿಂದಿನ ಪುಟದಿಂದ)

ಸಂಸ್ಥೆಯಲ್ಲಿ ಅತ್ಯಮೂಲ್ಯವಾದ ಅಧ್ಯಯನಗಳನ್ನು ನಡೆಸಲಾಗಿದೆ.

ಸಿಡುಬು, ಇನ್‌ಫ್ಲುಯೆಂಜಾ, ಮಕ್ಕಳಿಗೆ ತಗಲು ಪಾರ್ಶ್ವ ವಾಯು (ಪೋಲಿಯೋ ಮೈಲಿಟಿಸ್) ಮತ್ತು ಇತರ ರೋಗಗಳನ್ನು ಪತ್ತೆಹಚ್ಚುವ ಬಗ್ಗೆ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಪ್ರಯತ್ನ ನಡೆಸಲಾಗುತ್ತಿದೆ. ಈ ರೋಗಗಳು ಕಾಣಿಸಿಕೊಳ್ಳುವ ಪೂರ್ವದಲ್ಲಿ ಹೊಸ ವಿಧಾನದ 'ನ್ಯೂಕ್ಲಿಯೋ ಪ್ರೋಟೀನು'ಗಳು ಶರೀರದಲ್ಲಿ ರೂಪತಾಳುವುದೆಂಬುದು ಪರಿಶೀಲನೆಗಳಿಂದ ವ್ಯಕ್ತಪಟ್ಟಿದೆ.

ಚಿಕಿತ್ಸೆಗಾಗಿ ಬಳಸುವ ವಿಶೇಷ ಹಾರ್ಮೋನ್ ಒಂದನ್ನು (ಕೋರಿಯೋನಿಕ್ ಗೋನಾಡೋಟ್ರಾಫಿಕ್ ಹಾರ್ಮೋನ್) ಈ ಸಂಸ್ಥೆಯಲ್ಲಿ ತಯಾರಿಸಲಾಗಿದೆ. ಈ ವಿಶೇಷ ಹಾರ್ಮೋನನ್ನು ಜಾನುವಾರುಗಳಿಗೂ ಕೊಡಬಹುದಾಗಿದೆ. ಈಗ ಈ ಹಾರ್ಮೋನನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಅತಿ ಶೀಘ್ರದಲ್ಲಿಯೇ ಈ ಸಂಸ್ಥೆಯು ದೇಶಕ್ಕೆ ಅಗತ್ಯವಾಗುವಷ್ಟು ಪ್ರಮಾಣದ ಹಾರ್ಮೋನನ್ನು ತಯಾರಿಸುವ ನಿರೀಕ್ಷೆಯಿದೆ.

ಪೆನಿಸಿಲಿನ್ ಔಷಧಿಯ ತಯಾರಿಕೆಯ ವೆಚ್ಚವನ್ನು ತಗ್ಗಿಸುವ ಸಂಬಂಧವಾದ ಸಾಧನೋಪಾಯಗಳನ್ನು ಹಾಗೂ ಅಧಿಕ ಜೀವಾಣುನಾಶಕ ಸತ್ವವುಳ್ಳ ಪೆನಿಸಿಲಿನನ್ನು ತಯಾರಿಸುವ ಹೊಸ ವಿಧಾನಗಳನ್ನು ಕಲ್ಕತ್ತೆಯ ಈ ಔಷಧಿ ಶಾಲೆಯಲ್ಲಿ ಸಿದ್ಧಪಡಿಸಲಾಗುತ್ತಿದೆ. ಪ್ರಸ್ತುತ ಸಮಯದಲ್ಲಿ ಮೆದುಳಿನ ಜೀವ ರಾಸಾಯನಿಕ ಕ್ರಿಯೆಯ ಬಗ್ಗೆ ಅಧ್ಯಯನ ನಡೆಸಲಾಗುತ್ತಿದೆ.

ಕಲ್ಕತ್ತದ ಜೀವರಸಾಯನ ಹಾಗೂ ಪ್ರಾಯೋಗಿಕ ಔಷಧಿ ಶಾಲೆಯು ಜೀವರಸಾಯನ ಹಾಗೂ ಪ್ರಾಯೋಗಿಕ ಔಷಧಿ ಸಂಬಂಧವಾದ ಪತ್ರಿಕೆಯೊಂದನ್ನು (ಅನಲ್ಸ್, ಆಫ್ ಬಯೋಕೆಮಿಸ್ಟ್ರಿ, ಎಂಡ್ ಎಕ್ಸ್‌ಪೆರಿಮೆಂಟಲ್ ಮೆಡಿಸಿನ್) ಪ್ರಕಟಿಸುತ್ತಿದೆ. ಈ ಪತ್ರಿಕೆಯು ಜಗತ್ತಿನ ಎಲ್ಲ ಭಾಗಗಳಲ್ಲಿಯೂ ವಿಜ್ಞಾನಿಗಳು ಹಾಗೂ ವೈದ್ಯರುಗಳಿಂದ ಮಾನ್ಯತೆಪಡೆದಿದೆ. ಭಾರತದಲ್ಲಿನ ಸುಮಾರು ೫೦ ಪ್ರಖ್ಯಾತ ಸಂಶೋಧನಾ ಸಂಸ್ಥೆಗಳು ಈ ಪತ್ರಿಕೆಯಲ್ಲಿ ಪ್ರಕಟಣೆಗಾಗಿ ಮೂಲ ಲೇಖನಗಳನ್ನು ಕಳುಹಿಸುವೆ.

ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಪರಿಷತ್ತು ಈ ಸಂಸ್ಥೆಯನ್ನು ತನ್ನ ಅಧೀನಕ್ಕೆ ತೆಗೆದು ಕೊಂಡಾಗಿನಿಂದಲೂ ಈ ಸಂಸ್ಥೆಯಲ್ಲಿ ನಡೆಸಲಾದ ಮೂಲ ಪರಿಶೀಲನೆಗಳ ಫಲಿತಾಂಶಗಳನ್ನೊಳಗೊಂಡ ಸುಮಾರು ೫೦ ಲೇಖನಗಳನ್ನು ಪ್ರಕಟಿಸಲಾಗಿದೆ. ಮತ್ತು ಅಷ್ಟೇ ಸಂಖ್ಯೆಯ ಲೇಖನಗಳನ್ನು ಪ್ರಕಟಣೆಗಾಗಿ ಕಳುಹಿಸಲಾಗಿದೆ.

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಬರೆದವರು- ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.
ಬೆಲೆ. ಐವಾಣೆ ಮಾತ್ರ ಟ. ಖ. ಪ್ರತ್ಯೇಕ.
ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಭಾರತೀಯರ ಹಬ್ಬಗಳು-ಲೇಖಕರು: ಪಂಡಿತ ಚೆ. ಎ. ಕವಲಿ. ಪ್ರಕಾಶಕರು: ರಾಷ್ಟ್ರೀಯ ಬುಕ್ ಡಿಪೋ, ಸುಭಾಸರೋಡ, ಧಾರವಾಡ. ಪುಟಗಳು: ೨೧೧. ಬೆಲೆ: ರೂ. ೧.೭೫.

ಹಬ್ಬ ಹರಿದಿನಗಳೆಂದರೆ ಆನಂದದಿಂದ ನಲಿದಾಡುವ ದಿನಗಳು. ಇವಕ್ಕೆ ಪ್ರಾಪಂಚಿಕ ಮತ್ತು ಪಾರಮಾರ್ಥಿಕವೆಂಬೆರಡು ಮುಖಗಳಿವೆ. ಕೇವಲ ತಿಂದುಂಡು ಕುಣಿದಾಡುವುದೇ ಇವುಗಳ ಫಲವಲ್ಲ ನಾವು ಆಚರಿಸುವ ಪ್ರತಿಯೊಂದು ಪರ್ವದಿನವೂ ತನ್ನದೇ ಆದ ವಿಶಿಷ್ಟ ಕಾರಣದಿಂದ ತೊಡಗಿ ಇಂದಿನವರೆಗೂ ಅನಾಚೂನವಾಗಿ ಸಾಂಪ್ರದಾಯಕವಾಗಿ ನಡೆದು ಬಂದಿವೆ. ಬಂಧು ಬಾಂಧವರು ಇಷ್ಟಮಿತ್ರರು ಎಲ್ಲರೂ ಒಂದು ಸೇರಿ ಸಂಪರ್ಕ ಗಟ್ಟಿಮಾಡುವ ಐಹಿಕ ಸಾಧನೆಯೊಡನೆ ಸಂಸ್ಕೃತಿಯ ಬೆಳವಣಿಗೆಯೂ ಇಂತಹ ದಿನಾಚರಣೆಯಿಂದಾಗಬಲ್ಲುದು. ಧಾರ್ಮಿಕ ಕಾರಣಗಳಿಂದ ಮೊದಲಾದ ಈ ಹರಿದಿನಗಳನ್ನು ನಾವು ಅಂಧಾನುಕರಣೆಯಂತೆ ಆಚರಿಸದೆ, ಆಯಾಯಾ ವಿಶೇಷ ದಿನಗಳ ಮಹತ್ವವನ್ನು ಮತ್ತು ಆಯಾ ದಿನವನ್ನೇಕೆ ಆಚರಿಸುತ್ತ ಬಂದಿದ್ದಾರೆ ಎಂಬುದನ್ನು ಅರಿತುಕೊಂಡರೆ, ಲೌಕಿಕ ಮತ್ತು ಧಾರ್ಮಿಕ ಪ್ರಯೋಜನಗಳು ದೊರಕುವುದಲ್ಲದೇ ಸಂಸ್ಕೃತಿ ಸಂವರ್ಧನೆಯೂ ನಮ್ಮ ಜ್ಞಾನಪ್ರಕಾಶದಿಂದಾಗುವುದು

ಭಾರತೀಯರಿಗೆ ಹಬ್ಬಗಳು ಅತಿರೇಕ; ಒಂದು ರೀತಿಯಿಂದ ನೋಡಿದರೆ, ಹಬ್ಬವಿಲ್ಲದ ದಿನಗಳೇ ಇಲ್ಲವೆನ್ನಬಹುದು. ಭಾರತೀಯರೆಂದರೆ ವಿಶಾಲಾರ್ಥವನ್ನಿಟ್ಟುಕೊಂಡು ಭಾರತದಲ್ಲಿ ನೆಲಸಿರುವವರೆಲ್ಲರೂ ಎಂದು ಬಗೆದು ಶ್ರೀ ಚೆ. ಎ. ಕವಲಿಯವರು ಈ ಹಬ್ಬಗಳ ವಿವರಣೆಗಳುಳ್ಳ ಒಂದು ಗ್ರಂಥವನ್ನು ಹೆಣೆದಿರುವರು. ಕನ್ನಡ ಭಾಷೆಯಲ್ಲಿದ್ದ ಇಂತಹ ಗ್ರಂಥಗಳ ಅಪಾರ ಕೊರತೆಯನ್ನು ಪ್ರಕೃತ ಲೇಖಕರು ನೀಗಿಸಿದ್ದಾರೆಂದು ಹೇಳುವುದು ಅಸಾಧ್ಯವಾದರೂ ಮುಂದಿನವರಿಗೆ ಮಾರ್ಗದರ್ಶನಕ್ಕಾಗಿ ಈ ಹೊತ್ತಗೆಯು ನೆರವಾಗುವುದೆಂದು ನಿಸ್ಸಂದಿಗ್ಧವಾಗಿ ಹೇಳಬಹುದು. ಭಾರತದಲ್ಲಿಯೇ ಹುಟ್ಟಿ ಬೆಳೆದ ಹಿಂದೂ, ಜೈನ ಮತ್ತು ಬೌದ್ಧ ಧರ್ಮಾವಲಂಬಿಗಳ ಹಾಗೂ ಕಾರಣಾಂತರದಿಂದ ಭಾರತಕ್ಕೆ ಬಂದು ಇಲ್ಲಿನ ಜನತೆಯೊಡನೆಯೇ ಸೇರಿಹೋದ ಪಾರ್ಸಿ, ಮುಸಲ್ಮಾನ ಮತ್ತು ಕ್ರೈಸ್ತ ಬಂಧುಗಳ ಹಬ್ಬಗಳ ವಿವರಣೆಯೂ ಇಲ್ಲಿ ಉಪಯುಕ್ತ ರೀತಿಯಲ್ಲಿ ಕೊಡಲ್ಪಟ್ಟಿರುವುದು ಸಂತೋಷದ ಸಂಗತಿ. ಈ ಪುಸ್ತಕವು ಕೇವಲ ಹಬ್ಬದ ವಿವರಣೆಗಳಲ್ಲಿಯೇ ಕೊನೆಯಾಗದೆ, ಆಯಾ ಹಬ್ಬವನ್ನು ಏಕೆ ಆಚರಿಸಬೇಕು, ಆಯಾ ಹಬ್ಬ ದಿನದ ವೈಶಿಷ್ಟ್ಯವೇನು ಎಂಬಿತ್ಯಾದಿಗಳನ್ನು ಸಾಮಾನ್ಯವಾಗಿ ನಿರೂಪಿಸುತ್ತದೆ. ವಿಶ್ವದ ಉತ್ಪತ್ತಿ, ಯುಗ ವಿಚಾರ, ಪಂಚಾಂಗ ಪರಿಚಯ, ವ್ರತ ವಿಚಾರಾದಿಗಳನ್ನೂ ಈ ಹೊತ್ತಗೆಯಲ್ಲಿ ಸೇರಿಸಲಾಗಿದ್ದು ಆ ದೃಷ್ಟಿಯಿಂದಲೂ ಇದು ಉತ್ತಮವಿದೆ. ಆದರೂ ಕ್ರೈಸ್ತ, ಇಸ್ಲಾಂ ಮತ್ತು ಪಾರ್ಸಿ ಸಹೋದರರಿಗೆ ಭಾರತೀಯತ್ವವನ್ನು ಕೊಡಮಾಡಿ ಗೌರವಿಸಿದ ಲೇಖಕರು ಅವರ ಧರ್ಮಗ್ರಂಥಗಳಿಗನುಸಾರವಾದ ಪಿತೃೋತ್ಪತ್ತಿ ಮೊದಲಾದ ವಿಷಯಗಳನ್ನೂ ನಿರೂಪಿಸುತಿದ್ದರೆ, ಈ ಹೊತ್ತಗೆಯ ಉಪಯುಕ್ತತೆ ಹೆಚ್ಚುತಿತ್ತು. ರಾಷ್ಟ್ರೀಯ ಹಬ್ಬಗಳನ್ನೂ (ಗಾಂಧೀ ಜಯಂತಿ ಇತ್ಯಾದಿ) ಹಿಂದೂ ಹಬ್ಬಗಳೆಂದು ಪರಿಗಣಿಸಿರುವುದಕ್ಕಿಂತ ಬೇರೆಯೇ ವಿಭಾಗ ಮಾಡದಿರುವುದರ ಕಾರಣ ತಿಳಿಯುವುದಿಲ್ಲ.

ಈ ಪುಸ್ತಕವು ಸಚಿತ್ರವಾಗಿರುವುದು ಪ್ರಶಂಸಾರ್ಹವೇ. ಆದರೂ ಕೆಲವೊಂದು ಚಿತ್ರಗಳು ಕಲಾದೃಷ್ಟಿಯಿಂದ ಉನ್ನತಮಟ್ಟದವು ಎಂದು ಹೇಳುವುದು ಸಾಧ್ಯವಿಲ್ಲ. ಮುಖಚಿತ್ರವು ತೃಪ್ತಿಕರವಾಗಿಯೇ ಇದೆ. ಅಂತೂ ಈ ಪುಸ್ತಕವು ಕನ್ನಡದಲ್ಲಿ ಹೊಸಬಗೆಯದಾದುದರಿಂದ ಕೆಲವೊಂದು ಕುಂದುಕೊರತೆಗಳಿರುವುದು ಸ್ವಾಭಾವಿಕವೇ. ಆದರೂ, ಮುಂದಿನವರ ಮಾರ್ಗದಲ್ಲಿ ಬೆಳಕುನೀಡುವ ಜ್ಯೋತಿಯೊಂದನ್ನ ಹೊತ್ತಿಸಿದೆ ಎಂದು ಧೈರ್ಯದಿಂದ ಹೇಳಬಹುದು; ಮತ್ತು ಈ ಕಾರಣದಿಂದಲೂ ಇದೊಂದು ಸಂಗ್ರಾಹ್ಯ ಪುಸ್ತಕವೆಂದು ಹೇಳಬಹುದು.

ಗ್ರೀಕರ ಕಥೆಗಳು-ಲೇಖಕ ಮತ್ತು ಪ್ರಕಾಶಕ: ಡಾ. ಬಿ. ವಿ. ವೆಂಕಟೇಶಯ್ಯ, ಬಿ. ಎ; ಎಂ. ಬಿ. ಬಿ. ಎಸ್; ೧೫೯, ಮಾಗೋಡಿ ರಸ್ತೆ, ಮಲ್ಲೇಶ್ವರ, ಬೆಂಗಳೂರು-೩ ಪುಟಗಳು: ೧೩೫ ಬೆಲೆ: ರೂ. ೧.೨೫.

ಭಾರತದ ರಾಮಾಯಣ, ಮಹಾಭಾರತಗಳಂತಹ ಪುರಾಣ ಕಥೆಗಳು ಜನತೆಗೆ ಪ್ರಿಯವಾಗಿರುವಂತೆಯೇ ಗ್ರೀಸ್ ದೇಶದಲ್ಲಿಯೂ ಅಲ್ಲಿನ ವೀರ ಶೂರ ಧೈರ್ಯಶಾಲಿಯೆನಿಸಿದ ಜನರ ಚರಿತ್ರೆಯನ್ನು ತಿಳಿಸುವ ಸಾಹಸದ ಕಥೆಗಳು ಲೋಕಪ್ರಿಯವಾಗಿರುತ್ತವೆ. ಒಂದು ದ್ವೀಪಗುಚ್ಛದಲ್ಲಿ ಜೀವಿಸುತ್ತಿದ್ದ, ನಾಗರಿಕ ಜನಾಂಗ ಗ್ರೀಕರದು. ಸ್ವಾಭಾವಿಕವಾಗಿಯೇ ಅವರಲ್ಲಿ ಸಮುದ್ರ ಪ್ರಯಾಣದ ಹೆಸರು ಹೆಚ್ಚು ಎಂತಲೇ ಅಲ್ಲಿನ ಪ್ರಾಚೀನ ಕಥೆಗಳಲ್ಲಿ ಇಂತಹ ಯಾನದ ಪ್ರಸಂಗ ಬಂದೇ ಬರುತ್ತದ

ಗ್ರೀಕರ ಕಥೆಗಳು ಹಲವಾರಿದ್ದರೂ, ಈ ಗ್ರಂಥದಲ್ಲಿ ಚಾರ್ಲ್ಸ ಕಿಂಗ್ಸ್ಲಿಯು ಬರೆದ ದಿ ಹೀರೋಸ್ ಎಂಬ ಪುಸ್ತಕವನ್ನು ಆಧಾರವಾಗಿಟ್ಟು ಬರೆದ ಪರಸ್ಯೂಸ್ ಮತ್ತು ಅಗೋನಾಟ್ಸ್ ಎಂಬೆರಡು ಕಥೆಗಳು ಇರುತ್ತವೆ. ವೀರನಾದ ಪರ್ಸ್ಯೂಸನು ಸೈತಾನೆಯಾಗಿದ್ದ ಗಾರ್ಗಳನ್ನು ಕೊಂದು ಕ್ಷೇಮವಾಗಿ ಮರಳಿ ರಾಜ್ಯಸೂತ್ರ ಸಂಚಾಲಿಸಿದ ಕಥೆ ಮೊದಲನೆಯದು ಜೇಸನ್ನನು ಬಂಗಾರದ ತುಪ್ಪಳವನ್ನು ತರಹೋಗಿ ಅನೇಕಾನೇಕ ಕಷ್ಟಕಾರ್ಪಣ್ಯಗಳಿಗೆ ತುತ್ತಾಗಿ ಕೊನೆಗೂ ಬದುಕಿ ಬಂದ ಸಾಹಸಪೂರ್ಣ ಕಥೆಯು ಎರಡನೆಯದು. ಈ ಎರಡು ಕಥೆಗಳೂ ಲಂಗುಲಗಾಮಿಲ್ಲದೆ ಆಶ್ಚರ್ಯಕರವೆನಿಸಿದ ರೀತಿಯಲ್ಲಿ ಮುಂದುವರಿಯುತ್ತವೆ. ಕಣ್ಣಿಂದ ಕಾಣಲಾಗದ ಶಿಖಿಯಿಂದ ಕೇಳದ ಅದ್ಭುತಗಳಿಗೆ ಇವರು ಎಡತಾಕುತ್ತಾರೆ; ಕಷ್ಟದಿಂದಲಾದರೂ ಅದನ್ನೆಲ್ಲ ಎದುರಿಸಿ, ಜಯಶೀಲರಾಗಿಯೇ ಮುಂದೆ ಸಂತೋಷದಿಂದಿರುತ್ತಾರೆ. ಆದರೂ ಎರಡನೆಯದು ದುರಂತವಾಗಿ ಸರ್ವನಾಶದಲ್ಲಿ ಕೊನೆಗೊಳ್ಳುತ್ತದೆ, ಮಾಯಾವಿನಿಯ ಮಾಯಾಜಾಲದಿಂದ

ಈ ಅನುವಾದನ ಕಾರ್ಯವು ಸಾಮಾನ್ಯವಾಗಿದೆ; ಆದರೆ, ಅಸ್ಪಷ್ಟತೆಯ ದೋಷಗಳು ಅಲ್ಲಲ್ಲಿ ಉಳಿದಿವೆ. ಹೀಗಿದ್ದರೂ ಸಾಹಸದ ಕಥಾಪ್ರಿಯರಿಗೆ ಇವು ಮೆಚ್ಚುಗೆಯಾಗುತ್ತವೆ. ಲೇಖಕರು ಇನ್ನೂ ಇಂತಹ ಸಾಹಿತ್ಯ ಕೃತಿಗಳಿಂದ ಕನ್ನಡದ ಸಾಹಿತ್ಯವನ್ನು ಬೆಳೆಸುವರೆಂದು ಹಾರೈಸುತ್ತೇವೆ.

ಸಾಮಾನ್ಯ ರೋಗಗಳು-ಬರೆದವರು ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್., ಪ್ರಕಾಶಕರು: ಕರ್ನಾಟಕ ಸಂಘ, ಉಡುಪಿ. ಪುಟಗಳು ೭೮. ಬೆಲೆ: ರೂ. ೧

ಮಾನವನ ಶರೀರದಷ್ಟು ದುರ್ಬಲವಾದುದು ಪ್ರಾಯಃ ಬೇರಾವ ಪ್ರಾಣಿಯದ್ದೂ ಇರಲಾರದು. ಎಂತಲೇ ಒಂದಲ್ಲ ಹಲವು ಕಾರಣಗಳಿಂದ ಆತನ ದೇಹ ರೋಗಕ್ಕೆ ತುತ್ತಾಗುತ್ತದೆ ಆರೋಗ್ಯವೇ ಭಾಗ್ಯವೆಂದು ತಿಳಿದುಕೊಂಡ ನಮ್ಮ ಪೂರ್ವಜರು ವೈದ್ಯಶಾಸ್ತ್ರವನ್ನು ಪೋಷಿಸುತ್ತ ಬಂದರು. ಈಗೀಗ ನವೀನರೀತ್ಯಾ ಚಿಕಿತ್ಸೆಗಳು ನಡೆಯುತ್ತ ಬಂದಿವೆ. ರೋಗವು ಬರುವುದಕ್ಕಿಂತ ಬಾರದಂತೆ ತಡೆಹಿಡಿಯುವುದೇ ಶ್ರೇಯಸ್ಕರವಾದರೂ, ಬಂದ ಮೇಲೆ ಅದನ್ನು ನಿರ್ಲಕ್ಷಿಸುವುದು ಬುದ್ಧಿ ಅವಿವೇಕದ ಮಾತಾಗುವುದು ಹೀಗೆ ನಮಗೆ ಬರುವ ರೋಗಗಳ ಮೂಲವನ್ನೂ ಅವರ ಲಕ್ಷಣಗಳನ್ನೂ ಪರಿಹಾರೋಪಾಯವನ್ನೂ ಕುರಿತಾದ ತಿಳುವಳಿಕೆಯಿರುವುದು ಅವಶ್ಯವೆನ್ನಬಹುದು. ಉಡುಪಿಯ ಅನುಭವಿಕ ಹಾಗೂ ಸುಪ್ರಸಿದ್ಧ ವೈದ್ಯರಾದ ಡಾ. ಐತಾಳರು ತಾವು ಪಡೆದ ಅನುಭವದಿಂದ ೧೪ ರೋಗಗಳ ಕುರಿತಾದ ಮಾಹಿತಿಗಳನ್ನು ಈ ಸಂಗ್ರಹದಲ್ಲಿ ಒದಗಿಸಿದ್ದಾರೆ. ಇದಕ್ಕಾಗಿ ಕನ್ನಡಿಗರು ಅವರಿಗೆ ಕೃತಜ್ಞರಾಗಿದ್ದಾರೆ.

ಕೊಕ್ಕೆಹುಳ, ಜಂತುಕ್ರಿಮಿಗಳಿಂದ ಹಿಡಿದು ಪೈಲಿಗೆ, ವಿಷಮಜ್ವರ, ಮಲೇರಿಯಾ, ಫೈಲೇರಿಯಾಗಳವರೆಗೂ ಸಾಗಿದೆ ಈ ಪುಸ್ತಕದ ಓಟ. ಪ್ರತಿ ಸಂದರ್ಭದಲ್ಲಿಯೂ ಆರೈಕೆಯೇ ಪ್ರಧಾನವೆಂದೂ, ನುರಿತ ವೈದ್ಯರ ಸಹಾಯಕ್ಕನುಸಾರವಾಗಿಯೇ ನಡೆಯಬೇಕೆಂದೂ ಹೇಳಿರುವರು. ಅಲ್ಲದೆ ಪ್ರತಿ ರೋಗವು ಹೇಗೆ ಉತ್ಪತ್ತಿಯಾಗುತ್ತದೆ? ಹೇಗೆ ಹರಡುತ್ತದೆ ಮತ್ತು ಹೇಗೆ ತೋರಿಕೆಗೆ ಕಂಡುಬರುತ್ತದೆ ಎಂಬುದನ್ನು ಸೂಕ್ತವಾಗಿ ಯಾದವೂ ಅರ್ಥವಾಗುವಂತೆ ಶುದ್ಧವಾದ ಭಾಷೆಯಲ್ಲಿ ವಿವರಿಸಿದ್ದಾರೆ. ಇದರಿಂದ ನಾವು ನಮ್ಮ ಆರೋಗ್ಯ ಭಾಗ್ಯವನ್ನುಳಿಸಿಕೊಳ್ಳಲು ಮಾಡಬೇಕಾದ ಕರ್ತವ್ಯಗಳ ಅರಿವು ನಮಗಾಗುವುದು ಮಾತ್ರವಲ್ಲ, ಚಿಕಿತ್ಸೆಯ ವಿಧಾನವನ್ನೂ ಹೇಳಿದ್ದಾರೆ. ಹೀಗೆ "ಸಾಮಾನ್ಯ ರೋಗಗಳು" ಎಂಬ ಹೆಸರಿನ ಪುಸ್ತಕವು ಸಾಮಾನ್ಯವಾಗಿರದೆ ಬಹಳ ಮೌಲ್ಯಯುಕ್ತವಾಗಿದೆ. ಕರ್ನಾಟಕದ ಪ್ರತಿ ಮನೆಯಲ್ಲಿಯೂ ಇರಬೇಕಾದ ಹೊತ್ತಗೆಯಿದು.

ಈ ಪುಸ್ತಕದ ನಿರೂಪಣಾಕ್ರಮ ... ಗಳು ಡಾ. ಐತಾಳರು ಕೇವಲ ಔಷಧಿ... ಕೊಡುವುದರಲ್ಲಿಯಲ್ಲ, ಸಾಹಿತ್ಯ ಕ್ಷೇತ್ರದಲ್ಲಿಯೂ ನುರಿತವರೆಂದು ಸಾರಿ ಹೇಳುತ್ತವೆ. ... ರ ಪರಿಚಯಾತ್ಮಕ ವಾಕ್ಯಗಳಿಂದ ... ಪುಟವೇರುತ್ತದೆ. ಸದ್ಯ ಪುಸ್ತಕದಲ್ಲಿ ... ನಿಗಳ ಪಡಿಯಚ್ಚು ಇರುವುದಾದರೂ ಗ್ರಂಥ ನಿರೂಪಿಸಿದ ವಿಷಯಕ್ಕೂ ಈ ಚಿತ್ರಗಳಿಗೂ ಸಂಬಂಧ ಕಡಿಮೆ ಎಂದೇ ಹೇಳಬೇಕು. ... ಪ್ರಕಾಶಕರ ಸಮಾಜೋಪಯೋಗಿ ಕಾರ್ಯವನ್ನು ಹೃತ್ಪೂರ್ವಕವಾಗಿ ಕೊಂಡಾಡುವುದಲ್ಲದೇ ಇಂತಹ ಬೆಲೆಬಾಳುವ ಹತ್ತು ಹಲವು ಹೊತ್ತಗೆಗಳನ್ನು ಕನ್ನಡಿಗರಿಗೆ ಅರ್ಪಿಸುವಲ್ಲಿ ಇವರು ಕೃತಕಾರ್ಯರಾಗಲಿ ಎಂದು ಹಾರೈಸುತ್ತೇವೆ.

ಶ್ರೀ ಭುವನೇಶ್ವರೀ ಪಂಚಾಂಗ-(ವರ್ಷ ಭವಿಷ್ಯ ಸಹಿತ) ಪಂಚಾಂಗ ಕರ್ತೃ: ಜ್ಯೋತಿರ್ವಿದ್ವಾನ್ ಶ್ರೀ ಶೇಷ ... ಹೆಬ್ಬಾಳ, ಸುರಪುರ. ಪ್ರಕಾಶಕರು, ... ವೈಶ್ಯ ಸಂಘ, ರಂಗಂಪೇಟೆ (ಸುರಪುರ) ಪುಟಗಳು ೯೦, ಬೆಲೆ: ರೂ. ೦.೭೫

ಶಾಲಿವಾಹನ ಶಕ ೧೮೮೦ರ ವಿಲಂಬನಾಮ ಸಂವತ್ಸರದ ಈ ಪಂಚಾಂಗವನ್ನು ಸಾದರಪೂರ್ವಕವಾಗಿ ಸ್ವೀಕರಿಸುತ್ತೇವೆ. ಇದರಲ್ಲಿ ಕೇವಲ ವರ್ಷದ ದಿನಗಳ ಪಂಚಾಂಗಗಳು ಮಾತ್ರವಲ್ಲದೇ ಇತರ ಜ್ಯೋತಿಷ ಶಾಸ್ತ್ರ ಸಂಬಂಧಿಸಿದ ವಿಷಯಗಳು ವಿವರವಾಗಿ ಕೊಡಲಾಗಿದೆ. ಶಕುನ ಫಲ, ಸ್ವಪ್ನ ಫಲ, ರಾಶಿ ಭವಿಷ್ಯ, ವರ್ಷ ಫಲ, ಒಳ್ಳೆಯ ಕಾರ್ಯಗಳಿಗೆ ದಿನ ನೋಡುವುದು ಇತ್ಯಾದಿ ೬೩ ವಿಷಯಗಳು ಈ ಪಂಚಾಂಗದಲ್ಲಿ ಬಂದಿರುವುದು ವಿಶೇಷವಿದೆ. ಭಾರತದ (ಗೋವಾ ... ಗಳ ಸಹಿತ) ಪಾಕಿಸ್ತಾನ, ಹಾಗೂ ಪ್ರಮುಖ ಪರದೇಶಗಳ ಭವಿಷ್ಯವನ್ನೂ ನಾವಿಲ್ಲಿ ಕಾಣಬಹುದು. ಹೀಗಾಗಿ ಸವಿವರವಾಗಿ ಪರಿಪೂರ್ಣ ರೀತಿಯಲ್ಲಿ ಪ್ರಕಾಶಗೊಳಿಸಲಾದ ಈ ಪಂಚಾಂಗವು ಉತ್ತರ ಕರ್ನಾಟಕದ ಜನತೆಗೆ ತುಂಬ ಪ್ರಯೋಜನಕ್ಕೆ ಬೀಳಬಹುದು; ಆದರೆ, ದಾಕ್ಷಿಣಾತ್ಯ ಕನ್ನಡಿಗರಿಗೆ ಮಾತ್ರ ಪಂಚಾಂಗದ ಭಾಗ ಸ್ವಲ್ಪ ವ್ಯತ್ಯಾಸವಾಗಿ ಕಾಣಿಸಬಹುದು.

ರಾಯಭಾರಿ-- (ಪರ್ಯಾಯ ವಿಶೇಷಾಂಕ) ಪ್ರಧಾನ ಸಂಪಾದಕರು: ಬಿ. ರವೀಂದ್ರ ನಾಯಕ್, ಸಂಪಾದಕರು. ಎಸ್. ಎಲ್. ನಾರಾಯಣ ಭಟ್ಟ. ಪುಟಗಳು: ೧೧೨ ಬೆಲೆ: ರೂ. ೦ ೫೦

ಉಡುಪಿಯ ಸಾಪ್ತಾಹಿಕ ರಾಯಭಾರಿಯು ಉಡುಪಿಯ ಪರ್ಯಾಯ ಸಮಾರಂಭ (೧೮-೧-೫೮) ದಂದು ಪ್ರಕಟಿಸಿದ ಈ ವಿಶೇಷ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ಕರ್ನಾಟಕದ ಸುಪ್ರಸಿದ್ಧ ಬರಹಗಾರರ ಲೇಖನಗಳೂ ಕವನಗಳೂ ಕಥೆಗಳೂ ಈ ವಿಶೇಷ ಸಂಚಿಕೆಯಲ್ಲಿ ಅಡಕವಾಗಿವೆ. ಅಲ್ಲದೆ ನಾಚಿಸೀಯವಾಗಿಯೂ ಇವೆ. ಜಾಹಿರಾತುಗಳ ಹೊರೆತದಿಂದಾಗಿ ಲೇಖನಗಳು ಓದುಗರ ಗಮನ ಸೆಳೆಯಲು ತಡವಾಗುತ್ತದೆ ಸಂಪಾದಕರು ಇನ್ನೂ ಉತ್ತಮವಾದ ಸಂಚಿಕೆಗಳನ್ನು ಕನ್ನಡಿಗರಿಗೆ ಈಯುವಂತಾಗಬೇಕೆಂದು ಬಯಸಿ, ಶುಭಕೋರುತ್ತೇವೆ.

—ಗೋರಾ



ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಉಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟರ್ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರಂಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವೆಲ್ಲ ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ
ನವಯುಗ ಪ್ರೆಸ್, ಉಡುಪಿ

ಬೆಳದಿಂಗಳ ರಾತ್ರಿ

(೨ನೇ ಪುಟದಿಂದ)

ದುರಿದುವು ಎಲ್ಲೋ ಇದ್ದ ಆವನ ತಾಯಿಯ ದೇಹವು ಎಲ್ಲಿಗೋ ಮುಟ್ಟಿತ್ತು. ಬೆಂಕಿಯ ಜಳದಿಂದ, ಮರಣವೇದನೆಯಿಂದ ಭೀತ್ಕಾರ ಒಳಮನೆಯಲ್ಲಿ ಮಲಗಿದ್ದ ಜೀವ ನರಳ ಹೊರಟ ಬಂದು ಚಾವಡಿಯಲ್ಲಿ ಬಿದ್ದಿತ್ತು. ಬೆಂಕಿಯೆಡೆ ಎಲ್ಲಿ ಬೇಯುತ್ತ ನುಸುಳ ಆರಿಸಿದ ವೀರಸಿಂಹನಿಗೆ ತನ್ನ ಮಾತೆಯ ಅಂತ್ಯದರ್ಶನವಾಯಿತೇ ಹೊರತು ತನ್ನ ಪ್ರಿಯ ಪತ್ನಿ ಕಾಣಬರಲಿಲ್ಲ!

ಥಟ್ಟನೆ ಹೊಳೆದಾಟುತ್ತಿರುವಾಗ ನದೀ ದಡದ ಮಾವಿನ ತೋಪಿನಿಂದ ಕೇಳಿದ ಪದ್ದಿನ ನೆನಪಾಯಿತು ಆ ಸಿಂಹನಿಗೆ ಸುಲ್ತಾನ ಪಿಶಾಚಿಗಳು ನೃತ್ಯವಾಡ್ಯದಲ್ಲಿ ಮುಳುಗಿರುವಾಗ ಈ ಧ್ವನಿಯೆಲ್ಲಿಂದ?

ವೀರಸಿಂಹ ಹಿಂದೆ ಓಡಿದ ಮಹಾ ಸೈನ್ಯವೆಲ್ಲವೂ ಬೆಂದಿತ್ತು, ಅಸಹನೀಯವಾಗಿ ಉರಿಯುತಿತ್ತು. ಓಡಿ ಬಂದು ನೋಡಿದಾಗ ದೋಣಿಯ ಬಳಿ ಅಂಬಿಗ ನಿರಲಿಲ್ಲ ಹತ್ತಿರದ ಅದೇ ವಾ ಮರದ ಕೋಸಿನಿಂದ ಭೀತ್ಕಾರವೊಂದು ಕೇಳಿಸಿತು ಮರಣವೇದನೆಯಿಂದ ಅರಚಿತ ಸ್ತ್ರೀ ಧ್ವನಿಯಂತಿತ್ತದು ಕೆಂಡವಾಗಿ ಉರಿಯುತ್ತಿದ್ದ ವೀರಸಿಂಹನ ಮಸ್ತಕವೂ ಕೆಂಡವಾಯಿತು ಒಂದೇ ಉಸುರಿಗೆ ಮಾವಿನ ತೋಪಿಗೆ ಹಾರಿದ ತಾಯಿ ಅತ್ತ ವನೆಯ ಚಿತೆಯಲ್ಲಿ ಭಸ್ಮವಾಗಿ ಹೋಗಿದ್ದಳೆ!

ಇಬ್ಬರು ಸುಲ್ತಾನೀ ಪಿಶಾಚರಾದ ಸೈನಿಕರೊಡನೆ ವೀರ ಅಂಬಿಗ ಹೋರಾಡುತಿದ್ದ ಒರ್ವ ಸೈನಿಕ ಹೆಣವಾಗಿ ಉರಳಿದ್ದ ಹತ್ತಿರದ ಮಾವಿನ ಬುಡದಲ್ಲಿ ಹೆಣ್ಣು ದೇಹವೊಂದು ರಕ್ತರಂಜಿತವಾಗಿ ಅರೆಮುದುರಿ ಬಿದಿತ್ತು. ಅಂಬಿಗನ ಸಾಹಸಕ್ಕೆ ವೀರಸಿಂಹ ಮೆಚ್ಚಿದ ವೀಸಿ ಹನಿಗ ಎಲ್ಲವೂ ಮರೆತು, ರಜಪೂತನ ಕೆಚ್ಚು ಕೆಂಳಿತು ಅಂಬಿಗನ ಕೈಯಿಂದ ಖಡ್ಗವನ್ನು ಸೆಳೆದು ಆ ಪಿಶಾಚಿ ಸೈನಿಕನಿಗೆದರಾದ ಒಂದೇ ಏಟಿಗೆ ಓರ್ವನ ರುಂಡ ಮುಂಡಗಳು ಬೇರೆಯಾಗಿದ್ದುವು ಪ್ರಾಣವೇದನೆಯಿಂದ ಅವನಿರಿದ ಖಡ್ಗ ಮಾತ್ರ ಹಿಂದೆ ನಿಂತ ಅಂಬಿಗನೆದೆಯನ್ನು ತೂರಿತು "ಭುವನೇಶ್ವರಿ!" ಎಂದವನೇ ಅಂಬಿಗ ನೆಲಕ್ಕೊರಗಿದ ಉಳಿದ ಸೈನಿಕರ ಇಹಶ್ರೀಯನ್ನು ನೋಡಿ ಹಿಂತಿರುಗಿನೋಡಿದ ವೀರಸಿಂಹ ಅಂಬಿಗನ ವೇಗವೆತ್ತಿ ನೋಡಿದ ಅಂಬಿಗನೊಮ್ಮೆ ತುಂಬುಗಣ್ಣನ್ನು ತೊರಳಿಸಿ "ಸ್ವಾಮಿ" ಎಂದು ಕಣ್ಮುಚ್ಚಿದ ಅಂಬಿಗನಲ್ಲ! ನ್ಯಾಯನಿಷ್ಠ ಶೂರ!

ಒಂದೇ ಉಸಿರಿಗೆ ವೀರಸಿಂಹ ಮಾವಿನ ಬುಡಕ್ಕೆ ಓಡಿದ ಅದು ಆವನ ಪ್ರೇಯಸಿ ವತ್ಸಲೆಯೇ ಆಗಿದ್ದಳು! ಮೂವರು ದುರಾತ್ಮರೂ ಸೇರಿ ತನ್ನಿನಿಯಳ ಮಾನ ಭಂಗಕ್ಕೆತ್ನಿಸಿರಬೇಕೆಂದು ವಿರಸಿ ಹತ್ತಿರಕ್ಕೆ ಹತ್ತಿರ ಹೋಗಿ ನೋಡಿದಾಗ ಉಸಿರಾಡುತಿತ್ತು, ಪ್ರಜ್ಞೆಯಿರಲಿಲ್ಲ ಹತ್ತಿರದ ಕೊಳದಿಂದ ಸ್ವಲ್ಪ ನೀರನ್ನು ತೆಗೆದು ವತ್ಸಲೆಯ ದೇಹಕ್ಕೆ ಚಿಮುಕಿಸಿದ ಮೂರ್ಛೆ ನಿತು ಸಿಂಪಡಿಸಿದ ವತ್ಸಲೆಯ ದೇಹ ಮೆಲ್ಲನೆ ಸರಿಯಿತು ಅವಳ ತಲೆಯನ್ನೆತ್ತಿ ತನ್ನ ಮಡಿಲಲ್ಲಿರಿಸಿ ಮೆಲ್ಲನೆ 'ವತ್ಸಲಾ' ಎಂದ ವೀರಸಿಂಹ ವತ್ಸಲೆ ಮೆಲ್ಲನೆ ಕಣ್ತೆರೆದಳು ತನ್ನ ಪತಿಯನ್ನೊಮ್ಮೆ ಕಣ್ಣಾರೆ ನೋಡಿ 'ಸ್ವಾಮಿ, ಬಂದಿರಾ' ಎಂಬ ಮಾತುಗಳು ಅವಳ ನಾಲಗೆಯಿಂದುರುಳಿ ಹೊರ ಬಂದುವು ವೀರಸಿಂಹನ ಕಣ್ಣಿನಿಂದ ಕಂಬನಿಗಳುದುರಿ ವತ್ಸಲೆಯ ಹಣೆಗೆ ಬಿದ್ದುವು. 'ಸ್ವಾಮಿ, ದುಃಖಿಸಬೇಡಿ .. ನಾನು ಅಪವಿತ್ರಳಾಗಿಲ್ಲ ..ಆಯ್ಯೋ ನಾನ ಬದುಕುವಂತಿಲ್ಲ ನಿಮ್ಮನ್ನು ಕಾಣುವ ಭಾಗ್ಯವನ್ನು ನನಗಿತ್ತ ದೇವರು ಕರುಣಾಮಯನು! ಸ್ವಾಮಿ ' ವತ್ಸಲೆಯ ಕೊರಳಿನಿಂದ ನೆತ್ತರು ದೇಹ ತಟಸ್ಥವಾಯಿತು ಸುಲ್ತಾನೀ ದುರಾತ್ಮರ ಹೋರಾಟದ ಮಧ್ಯೆ ಕರುಳಿಯಿಂದ ತನ್ನನ್ನಿರಿದು ಕೊಂಡಿದ್ದಳು ರಜಪುತ ರಮಣಿ ವತ್ಸಲೆ ಮಾನಕ್ಕಾಗಿ!

ವೀರಸಿಂಹ ತನ್ನನ್ನೊಮ್ಮೆ ನೋಡಿಕೊಂಡು ಕಣ್ಣುಗಳು ಸರಿಯಾಗಿ ಕಾಣಿಸುತ್ತಿರಲಿಲ್ಲ ಮೈಯೆಲ್ಲವೂ ಬೆಂದ ಹೋಗಿತ್ತು ಕತ್ತಿಯ ಗಾಯಗಳಿಂದ ರಕ್ತ ಹರಿಯುತಿತು. ಹುದುಹೆಂಚಿ ಹೋಗಿತ್ತು ಅವನ ದೇಹ ಇನ್ನು ಒಂದು ಕ್ಷಣ ಮಿತ್ರ ಭೀಮಸಿಂಹನಿಗೆ ಈ ದುಃಖವನ್ನು ಹೇಗೆ ತೋರಿಸಲಿ? ರಣರಂಗದಲ್ಲಿ ಕಾದುವ ದೇಹ ಇನ್ನಿಲ್ಲ ಬದುಕಿ ಪುರುಷಾರ್ಥವಿಲ್ಲ. ಬಾಳಿ ಸಾಧನೆಯಿಲ್ಲ" ಎಂದುಕೊಂಡ ವೀರಸಿಂಹ ತನ್ನ ಪ್ರಿಯ ಪತ್ನಿ ವತ್ಸಲೆಯ ಕಡೆಗೊಮ್ಮೆ ಕಣ್ಣು ಹೊರಳಿಸಿದ ತಾಯಿಯನ್ನು ನೆನೆದ

"ನನ್ನ ಪ್ರೇಮದ ಮೂರ್ತಿಗಳಾದ ತಾಯಿಯ ಮತ್ತು ಪತ್ನಿಯ ಅಂತ್ಯದರ್ಶನವನ್ನಾದರೂ ಮಾಡಿಸಿದೆಯಲ್ಲಾ" ಎಂದು ದೇವರಿಗೆ ವಂದಿಸಿದ ವತ್ಸಲೆಯ ಹೃದಯದಿಂದ ಕಠಾರಿಯನ್ನು ಸೆಳೆದು ತನ್ನ ಎದೆಯಲ್ಲಿ ನೆಟ್ಟ

ಇದು ನಿಮಗೆ ತಿಳಿದಿರಬೇಕು—

ಯೋಗ ಮತ್ತು ಪ್ರಯೋಗಗಳ ಅಂತರ

ಶ್ರೀ ಸಿ ನಾರಾಯಣ ಬಲ್ಲಾಳ

ಮನುಷ್ಯನ ಸುಖ-ದುಃಖ ಹಾಗೂ ಅವನ ಭಾವನೆಗಳನ್ನು ನಾವು ತಿಳಿಯಬಲ್ಲೆವು. ಆದುದರಿಂದ ಅವನೊಡನೆ ನಮಗೆ ಆತ್ಮೀಯ ತೆಯುಂಟಾಗುತ್ತದೆ ನಾವು ಮನುಷ್ಯನನ್ನು ಬದ್ಧಿವಂತ, ಭಾವನಾಶೀಲ ಹಾಗೂ ಆತ್ಮವಾನ್ ಎಂದು ಹೇಳುತ್ತೇವೆ

ಪಶುಗಳ ಸುಖ-ದುಃಖ, ಹಸಿವೆ-ನಿದ್ರೆ, ಆರೋಗ್ಯ ಹಾಗೂ ಬಳಲಿಕೆ ಇವನ್ನು ನಾವು ತಿಳಿಯಬಲ್ಲೆವು ಆದುದರಿಂದ ನಾವು ಅವುಗಳನ್ನು ಚೇತನಾಯುಕ್ತ ಪ್ರಾಣಿಗಳೆಂದು ಒಪ್ಪುತ್ತೇವೆ ನಾವು ಅವುಗಳ ಪ್ರತಿ ಸ್ವಲ್ಪ ಅನುಭವವಿದ್ದಂತೆ ಮಾಡುತ್ತೇವೆ ಪಶುವಿನ ಯೋಗ್ಯತೆ ಮನುಷ್ಯನ ಯೋಗ್ಯತೆಗಿಂತ ಕಮ್ಮಿ ಎಂದು ನಾವು ನಿಶ್ಚಯ ಮಾಡಿದ್ದೇವೆ ನಮ್ಮ ಇದಕ್ಕಾಗಿ ಯಾವ ಪ್ರಮಾಣವೂ ಇಲ್ಲ ನಮ್ಮ ಅಜ್ಞಾನ ಹಾಗೂ ಅಪರಿಚಯ ಪ್ರಮಾಣವಾಗಿರುವುವು

ವನಸ್ಪತಿಯಲ್ಲಿ ನಾವು ಜೀವನ-ಮರಣದ ಪ್ರಕ್ರಿಯೆ ನೋಡಬಲ್ಲೆವು. ಯೌವ್ವನ ಹಾಗೂ ವೃದ್ಧಾಪ್ಯವನ್ನೂ ನೋಡುತ್ತೇವೆ. ಆದರೆ ಅವುಗಳ ಸುಖ-ದುಃಖದ ಸಾಕ್ಷಾತ್ಕಾರ ನಮಗಾಗುವುದಿಲ್ಲ ನನ್ನ ಪ್ರನೀತಿಗಳ ಹೇಳಿಕೆ ಏನೆಂದರೆ— ವನಸ್ಪತಿಯಲ್ಲಿ ಸುಖದುಃಖದ ಸಂಜ್ಞೆಯಿದೆ ಆದರೆ ಅವು ಹೊರಗೆ ಪ್ರಕಟವಾಗುವುದಿಲ್ಲ 'ಅಂತಃ ಸಂಜ್ಞಾ ಭವಂತ್ಯೇತೇ' ಅವುಗಳ ಸುಖ ದುಃಖ ನಮ್ಮಲ್ಲಿ ಪ್ರಕಟವಾಗುವುದಿಲ್ಲ ಇದು ಅವುಗಳದ್ದೇ ದೋಷವೆಂದು ನಾವು ತರ್ಕಿಸುತ್ತೇವೆ ಅವುಗಳ ಪೀಡೆ ಮಾಡಲು, ಅವುಗಳನ್ನು ಕೊಲ್ಲಲು ನಾವು ಸ್ವಲ್ಪವೂ ಕೂಡಾ ಸಂಕೋಚಪಡುವುದಿಲ್ಲ

ಮನುಷ್ಯ, ಪಶು ಮತ್ತು ಸ್ವೇದಜ ಜಲಚರ ಹಾಗೂ ವನಸ್ಪತಿ — ಈ ಎಲ್ಲ ಯೋನಿಗಳನ್ನು ನಾವು ಸಜೀವವೆಂದು ಹೇಳುತ್ತೇವೆ ಆದರೆ ಕಲು, ಮಣ್ಣು, ನೀರು — ಮೊದಲಾದ ಪಾರ್ಥಿವ ಪದಾರ್ಥಗಳೂ ಕೂಡಾ ಸಜೀವವಾಗಿವೆ ಅವುಗಳ ಜೀವವು ನಮಗೆ ಜ್ಞಾನವಾಗುವುದಿಲ್ಲ ಇವುಗಳು ಕೂಡಾ ಅಂತಃ ಸಂಜ್ಞೆಗಳೇ ಆಗಿವೆ

ನಮ್ಮ ಈ ಪೂರ್ವಜರು ಸಂಶೋಧನ ಉಪಾಸನ ಮಾಡುತ್ತ ಒದರ ಸುಕ್ಷ್ಮಾ ಕಿರಗುತ್ತದೆ ಚರಾಚರ ಜೀವ ಸೃಷ್ಟಿಗಳ ಈ ಭೂಮಿ ಸ್ವಯಂ ಸಿರ್ಣೀವವಾಗಲಾರದು ಕ್ಷಮಾಶೀಲವಾಗಿರುವುದರಿಂದ ಅದರ ಚೇತನ, ಅದರ ಸುಖ ದುಃಖ, ಚಿಂತೆ-ವ್ಯಥೆ ಹಾಗೂ ಶಾಪ ಭಾಂದಗಳನ್ನು ನಾವು ತಿಳಿಯಲಾರೆವು ಆದ್ದರಿಂದ ನಾವು ಅದನ್ನು 'ಪಾದಸ್ಪರ್ಶ ಕ್ಷಮಸ್ವವೇ' ಎಂದು ಹೇಳುತ್ತೇವೋ, ಆಗ ಅದು ಇತರ ಕ್ಷಮಾಯಾಚನೆಯನ್ನು ಸ್ವೀಕಾರ ಕೂಡಾ ಮಾಡುತ್ತದೆ ಪಂಚ ಮಹಾಭೂತಗಳು—ಪೃಥ್ವಿ, ಜಲ, ತೇಜ, ವಾಯು ಹಾಗೂ ಆಕಾಶ – ಇವೆಲ್ಲವೂ ಚೈತನ್ಯಯುಕ್ತಗಳಾಗಿವೆ ಈಗ ಸಾಕಾಗದೆ ಇರುವುದು ನಮ್ಮ ಬುದ್ಧಿ ಶಕ್ತಿ ಮಾತ್ರ

ಈಗ ಒಂದು ವಿಷಯವನ್ನು ಯೋಚಿಸಬೇಕಾಗಿದೆ ಈಗ ಒಬ್ಬ ಮನುಷ್ಯನ ಶರೀರದ ಅಧಿಕಾಂಶ ಚರ್ಮವನ್ನು ತೆಗೆದರೆ ಆ ಮನುಷ್ಯ ಬದುಕಲಾರ ಪಶು, ಪಕ್ಷಿ, ಸರೀಸೃಪ ಹಾಗೂ ಜಲಚರ ಇವೆಲ್ಲವೂ ಚರ್ಮದ ವಿನಹ ಬದುಕಲಾರವು ಅದರೆ ವೃಕ್ಷಗಳ ಸ್ವಲ್ಪ ತೊಗಟೆಯನ್ನು ತೆಗೆದರೆ ಅವು ಅದನ್ನು ಸಹಿಸಬಲ್ಲವು ಅದರೆ ಬಹಳ ಹೆಚ್ಚು ತೊಗಟೆಯನ್ನು ತೆಗೆದರೆ ವೃಕ್ಷಗಳು ಸಾಯುತ್ತವೆ.

ಇದೇ ರೀತಿ ಹುಲ್ಲು ಮತ್ತು ವನಸ್ಪತಿ ಹುಲ್ಲುಗಾವಲು ಮತ್ತು ಕಾಡು—ಇವು ನಮ್ಮ ಭೂಮಿಯ ತ್ವಚೆಗಳಾಗಿವೆ ಅವುಗಳನ್ನು ನಾಶ ಮಾಡಿದ ಭೂಮಿಯು ಗತಪ್ರಾಣವಾದೀತು. ಕಾಡುಗಳನ್ನು ನಾಶ ಮಾಡುವುದರಿಂದ ಮಳೆ ಕಡಿಮೆಯಾಗುತ್ತದೆಂಬ ವಿಷಯವನ್ನು ಇಂದಿನ ಜನರು ಅನುಭವದಿಂದ ತಿಳಿದಿದ್ದಾರೆ ಕರುಪತ್ರರೆ ದನ ಹಾಲನ್ನು ಬಹಳ ಕಡಿಮೆ ಕೊಡುತ್ತದೆ ಅದೇ ರೀತಿ ನಮ್ಮ ಭೂಮಿಯು ವಿಷಯ ಕೂಡಾ.

ವೈಜ್ಞಾನಿಕ ಹಾಗೂ ರಾಸಾಯನಿಕ ಪ್ರಯೋಗಗಳನ್ನು ಮಾಡಿದಾಗ ನಮಗೆ ಯಾವ ತಿಳುವಳಿಕೆ ಉಂಟಾಯಿತೋ, ಅದು ನಿಜವಾದ ಜ್ಞಾನವಲ್ಲ ಪೋಲೀಸರು ಯಾವ ರೀತಿ ಅಪರಾಧಿಯನ್ನು ಹೊಡೆದು ಅದರಾ ಅನ್ನಾಹಾರಗಳಿಲ್ಲದೆ ವಂಚಿಸಿ ಅವನಿಂದ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೋ ಅದರಾ ರಹಸ್ಯವನ್ನು ತಿಳಿಯುತ್ತಾರೋ ಅದೇ ರೀತಿಯು ಜ್ಞಾನವನ್ನು ಪದಾರ್ಥಗಳನ್ನು ಒಡೆದು, ತೂಗಿ ಸುಟ್ಟು ವಿಜ್ಞಾನಿಗಳ ಪಡೆಯುತ್ತಾರೆ ಈ ಪದ್ಧತಿಯನ್ನು ಪ್ರಯೋಗ ಪದ್ಧತಿ ಎಂದು ಹೇಳುತ್ತಾರೆ.

ಯೋಗ ಪದ್ಧತಿಯು ಇದರೋ ಇದಕ್ಕಿಂತ ಭಿನ್ನವಾದುದು ಯಾವುದಾದರೊಂದು ವಸ್ತುವನ್ನು ತಿಳಿಯುವುದರಿಂದ, ಅದರೊಡನೆ ತನ್ಮಯ ಮಾಡುವುದರಿಂದ, ಪ್ರೇಮದಿಂದ ಅದರೊಡನೆ ಆತ್ಮೀಯತೆ ಬೆಳೆಸುವುದರಿಂದ ಉಂಟಾಗುವ ತಿಳುವಳಿಕೆಯೋ ತಿಳಿಯುವ ರಹಸ್ಯವು—ಇದು ನಿಜವಾದ ಜ್ಞಾನವಾಗಿದೆ ಈ ಜ್ಞಾನದ ಮೂಲಕ ನಾವು ಚರಾಚರ ಸೃಷ್ಟಿಯ ಚೈತನ್ಯ ಸುಖ ದುಃಖ ಭಾವನೆ ಹಾಗೂ ವಿಚಾರಗಳನ್ನು ತಿಳಿಯಬಲ್ಲೆವು ಅಲ್ಲದೆ ಈ ರೀತಿಯಿಂದ ವಿಶ್ವಾತ್ಮೈಕ್ಯ ಅನುಭವವನ್ನು ಪಡೆಯಬಲ್ಲೆವು

(ಸಂಗ್ರಹ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್ ಎ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨–೦–೦ (ಟಪಾಲ್ ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಮಹಾಭಾರತದ ಜನಪ್ರಿಯತೆ—

ರಶ್ಯನ್ ಭಾಷೆಗೆ ಅನುವಾದ

ಜಗತ್ತಿನ ಸುಪ್ರಸಿದ್ಧ ಕಾವ್ಯಗಳಲ್ಲಿ ಭಾರತದ ಮಹಾಭಾರತವೂ ಒಂದು. ಇದು ಪ್ರಪಂಚದ ಬೇರೆ ಬೇರೆ ಭಾಷೆಗಳಿಗೆ ಆಗಾಗಲೇ ಅನುವಾದಗೊಂಡಿದೆ. ಅಂತೆಯೇ ರಶ್ಯನ್ ಭಾಷೆಯಲ್ಲೂ ಈ ಬೃಹತ್ ಗ್ರಂಥದ ಅನುವಾದದ ಕಾರ್ಯವು ನಡೆದಿದೆ.

ಸುಮಾರು ೧೭೦ ವರ್ಷಗಳಿಗೆ ಹಿಂದೆ ಎಂದರೆ ಸಾಮಾನ್ಯ ೧೮ನೆ ಶತಮಾನಾಂತ್ಯದಲ್ಲಿ ಮಹಾಭಾರತವು ರಶ್ಯನ್ ಓದುಗರ ಗಮನಕ್ಕೆ ಬಂದಿತು. ಆಗಿನ ಕಾಲದ ಗಣ್ಯ ವಿದ್ವಾಂಸರೂ ಲೇಖಕರೂ ಪತ್ರಿಕೋದ್ಯಮಿಗಳೂ ಆಗಿದ್ದ ಶ್ರೀ ಎನ್. ನೋವಿಕೋವರು ೧೭೮೫ರಲ್ಲಿ ವಿಲ್ಕಿನ್ಸರು ಬರೆದ ಇಂಗ್ಲಿಷ್ ರೂಪಾಂತರವನ್ನನುಸರಿಸಿ, ಭಗವದ್ಗೀತೆಯ ಒಂದು ಭಾಷಾಂತರವನ್ನು ಪ್ರಕಟಿಸಿದ್ದರು. ರಶಿಯನ್ನರಿಗೆ ಹೊಸತಾದ, ಉಲ್ಲೇಖನೀಯವಾದ ಸುಂದರ ರೂಪದಲ್ಲಿ ವ್ಯಕ್ತವಾಗಿದ್ದ ಭಗವದ್ಗೀತೆಯ ವಿಚಾರಧಾರೆಗಳು ರಶ್ಯನ್ನರ ಗಮನವನ್ನು ತನ್ನೆಡೆಗೆ ಆಕರ್ಷಿಸಿಕೊಂಡಿತು.

೧೯ನೆಯ ಶತಮಾನದಲ್ಲಿ ಮಹಾಭಾರತದ ಕಾವ್ಯಭಾಗಗಳು ನೇರವಾಗಿ ಸಂಸ್ಕೃತದಿಂದ ರಶ್ಯನ್ ಭಾಷೆಗೆ ಪರಿವರ್ತನ ಹೊಂದಿದುವು. ನಳ ಚರಿತ್ರೆ, ದ್ರೌಪದೀ ವಸ್ತ್ರಾಪಹರಣ, ಸುಂದೋಪಸುಂದರ ಕಥೆ, ನಳದಮಯಂತಿ ಮೊದಲಾದ ಕಥಾಭಾಗಗಳು ಸುಪ್ರಸಿದ್ಧ ಸಂಸ್ಕೃತ-ರಶ್ಯನ್-ಉಭಯ ಭಾಷಾವಿಶಾರದರಿಂದ ಭಾಷಾಂತರವಾದುವು. "ನಳದಮಯಂತಿ"ಯ ಪುರಾಣ ಕಥೆಯು ಕಾವ್ಯ ವೈಶಿಷ್ಟ್ಯಗಳಿಂದ ಕೂಡಿದ್ದು ಸುಂದರ ವರ್ಣನಾಸಹಿತವಾಗಿದೆ. ಈ ಕಥೆಯ ಅನುವಾದವು "ಅತ್ಯುತ್ಕೃಷ್ಟ ಕಲಾಕೃತಿ" ಎಂಬ ಹೆಸರನ್ನು ಪಡೆದು, ರಶಿಯನ್ ನಾಗರಿಕರಿಂದ ಬಹು ಪ್ರಶಂಸೆಯನ್ನು ಪಡೆಯಿತು. ಇದರಿಂದಾಗಿ ರಶಿಯನ್ ವಿದ್ವಾಂಸರಲ್ಲಿ ಮಹಾಭಾರತದ ಬಗ್ಗೆ ಆಸಕ್ತಿಯು ಕೆರಳಿ ತತ್ಪರಿಣಾಮವಾಗಿ ಶ್ರೀಗಳಾದ ಪಿ. ಕೊಸ್ಸೋವಿಚ್, ಐ. ಮಿನಾಯೇವ್, ಎಸ್. ಓಲ್ಡೆನ್‌ಬರ್ಗ ಮತ್ತಿತರರು ಮಹಾಭಾರತದ ಅಭ್ಯಾಸವನ್ನು ಆಳವಾಗಿ ಮಾಡತೊಡಗಿದರು.

"ಅಕ್ಟೋಬರ ವಿಪ್ಲವ"ದ ಕಾಲಾನಂತರ ಮಹತ್ತರ ಭಾರತೀಯ ಜನಾಂಗದ ಬಗ್ಗೆ, ಭಾರತೀಯ ಇತಿಹಾಸ—ಸಂಸ್ಕೃತಿಗಳ ಬಗ್ಗೆ ಮತ್ತು ತನ್ನ ಸ್ವಾತಂತ್ರ್ಯದ ಸಲುವಾಗಿ ಭಾರತವು ನಡೆಸಿದ ಹೋರಾಟದ ಪರವಾಗಿ ರಶ್ಯನ್ ಜನತೆಯಲ್ಲಿದ್ದ ಆಸಕ್ತಿಯೂ ಸಹಾನುಭೂತಿಯೂ ಅತ್ಯಂತ ವೃದ್ಧಿಯಾದುವು. ಸೋವಿಯೆಟ್ ರಾಜ್ಯವು ಭಾರತದ ಬಗ್ಗೆ ಅಭ್ಯಾಸ ಮಾಡಲು ಅವಕಾಶಗಳನ್ನು ಕಲ್ಪಿಸಿಕೊಟ್ಟಿತು. ಇದರಿಂದಾಗಿ ಭಾರತದ ಬಗ್ಗೆ ವಿಶೇಷ ಸಂಗತಿಗಳನ್ನೂ ಸಾಹಿತ್ಯಗಳನ್ನೂ ತಿಳಿದುಕೊಳ್ಳುವುದು ಸಾಧ್ಯವಾಯಿತು. ಭಾರತದ ಪ್ರಾಚೀನ ಇತಿಹಾಸಗಳನ್ನು ತಿಳಿದುಕೊಳ್ಳದೇ ಹೋದರೆ, ಆದರಿಂದ ಭಾರತದ ಬಗ್ಗೆ ವಿಚಾರಗಳನ್ನು ಅಭ್ಯಾಸ ಮಾಡುವುದು ದುಷ್ಕರವಾಗಿ ಪರಿಣಮಿಸುತ್ತಿತ್ತು.

ಭಾರತದ ಸುಪ್ರಸಿದ್ಧ ಇತಿಹಾಸ-ಪುರಾಣವೆಂದು ಕರೆಯಲ್ಪಡುವ ಜನಪ್ರಿಯ ಮಹಾ ಭಾರತವನ್ನು ರಶ್ಯನ್ ಭಾಷೆಗೆ ಅನುವಾದ ಮಾಡುವುದರಿಂದ ತಮ್ಮ ದೇಶದ ಜನತೆಗೆ ಭಾರತದ ಬಗ್ಗೆ ವಿಶೇಷ ಪರಿಚಯವೂ ತನ್ಮೂಲಕ ಸಂಪರ್ಕವೂ ಬೆಳೆಯುವುದೆಂದೂ ತತ್ಕಾರಣ ಅದನ್ನು ಭಾಷಾಂತರಿಸಬೇಕೆಂದೂ ೧೯೩೯ರಲ್ಲಿ ಎ. ಬರಾನಿಕೋವರು ಸೂಚಿಸಿದರು. ಆ ಕಾಲದಲ್ಲಿ ಮಹಾ ಭಾರತದಲ್ಲಿ ಅಡಕವಾಗಿದ್ದ ಕೆಲವೊಂದು ಕಥೆಗಳೂ ಆಖ್ಯಾಯಿಕೆಗಳೂ ರಶಿಯನ್ ಭಾಷೆಗೆ ಪರಿವರ್ತಿತವಾಗಿದ್ದುವಲ್ಲದೇ ಅನೂಲ ಭಾರತವಲ್ಲ. ಇದರಿಂದಾಗಿ ಶ್ರೀಯುತರು ಇತಹ ಅಭಿಪ್ರಾಯ ಪಟ್ಟಿರಬಹುದು ಸಲಹೆಯನ್ನಿತ್ತರು.

ಭಾರತೀಯ ತತ್ವಶಾಸ್ತ್ರ ಮತ್ತು ಬೌದ್ಧ ಸಂಸ್ಕೃತಿಯ ಪಂಡಿತರಾಗಿದ್ದ ಶ್ರೀ ಶ್ಚೆರ್ಬಾತ್ಸ್ಕಿಯವರ ಶಿಷ್ಯ ಶ್ರೀ ವ್ಲಾದಿಮೀರ ಕಲ್ಯಾನೋವರು ಈ ಕಾರ್ಯವನ್ನು ಆತ್ಯಾಸಕ್ತಿಯಿಂದ ಕೈಗೊಂಡರು. ಅನೇಕ ವರ್ಷಗಳ ವರೆಗೆ ಅವರು ಸಂಸ್ಕೃತ ಭಾಷೆಯ ವ್ಯಾಕರಣಾಭ್ಯಾಸದಲ್ಲಿಯೇ ತಲ್ಲೀನರಾಗಿದ್ದರು. ಪ್ರಾಚೀನ ಸಂಸ್ಕೃತ ಸಾಹಿತ್ಯದ ಜಟಿಲ ಶಬ್ದಗಳ ವರ್ಗೀಕರಣವನ್ನು ಕುರಿತಾದ ಒಂದು ಪ್ರಬಂಧವನ್ನು ಶ್ರೀ ಕಲ್ಯಾನೋವರು ಬರೆದರು. ಈ ಯುವಕ ವಿದ್ವಾಂಸರು ಸಂಸ್ಕೃತ ಭಾಷೆಯ ರೂಪನಿಷ್ಪತ್ತಿ—ಸಮೃದ್ಧತೆಯಲ್ಲಿಯೂ ಅದರ ಅಸಾಧಾರಣ ಶಬ್ದರೂಪ ರಚನಾ ಸಂಬಂಧಿ ಪರಿಶುದ್ಧತೆಯಲ್ಲಿಯೂ ಆಸಕ್ತರಾಗಿರಲಿಲ್ಲ, ಏಕೆಂದರೆ, ಈ ವಿಷಯದಲ್ಲಿ ಸಂಸ್ಕೃತ ಮತ್ತು ರಶ್ಯನ್ ಭಾಷೆಗಳ ನಡುವೆ ವಿಶೇಷ ಸಾಮ್ಯವಿದೆ. ವಿಶ್ವಸಾಹಿತ್ಯದ ಸರ್ವೋತ್ಕೃಷ್ಟ ಕೃತಿಗಳ ಶ್ರೇಣಿಯಲ್ಲಿರುವ ಭವ್ಯ ಸಾಹಿತ್ಯ ಕೃತಿಗಳಿಗೆ ಜನ್ಮವಿತ್ತ ದಿವ್ಯಭಾಷೆ ಸಂಸ್ಕೃತದ ಅಭ್ಯಾಸದಲ್ಲಿಯೂ ಅವರು ನಿಷ್ಠೆವಹಿಸುತ್ತಿದ್ದರು.

ಬೃಹನ್ಮಹಾಭಾರತದ ಅನುವಾದದ ಕಾರ್ಯಕ್ಕೆ ಆರಂಭವೂ ಸಮಯವೂ ಹಿಡಿಯಿತು. ನಾಝಿ ಜರ್ಮನರು ಪ್ರಾರಂಭಿಸಿದ ಯುದ್ಧದ ದೆಸೆಯಿಂದ ಕಲ್ಯಾನೋವರು ಆಗ್ರಸಮರರಂಗಕ್ಕೆ ಸ್ವಯಂಸೇವಕರಾಗಿ ಹೋದುದರಿಂದ ಈ ಅನುವಾದದ ಕಾರ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು. ೧೯೪೩ರಲ್ಲಿ ಎಪ್ರಿಲ್ ತಿಂಗಳಲ್ಲಿ ಅವರನ್ನು ತಮ್ಮ ಕೆಲಸವನ್ನು ಮುಂದುವರಿಸಲು ಬಿಡುವ ಸಲುವಾಗಿ ಸೇನೆಯಿಂದ ಬಿಡುಗಡೆಗೊಳಿಸಿದರು. ಆ ಕಾಲದಲ್ಲಿ ಮುತ್ತಿಗೆಗೀಡಾಗಿದ್ದ ಲೆನಿನ್‌ಗ್ರೇಡ ನಗರದಲ್ಲಿ ಇವರು ತಮ್ಮ ಮಹಾಭಾರತದ ಅನುವಾದಕಾರ್ಯವನ್ನು ಮುಂದುವರಿಸಿದರು. ಆ ವೇಳೆ ತಾಸ್ಕೆಂಟಿಗೆ ಪ್ರಾಚ್ಯ ವಿದ್ಯಾಧ್ಯಯನ ಶಾಖೆಯನ್ನು ಸ್ಥಾನಾಂತರಗೊಳಿಸಿದನಂತರ ಅವರು ಅಲ್ಲಿ ತಮ್ಮ ಕರ್ಮವನ್ನು ಮುನ್ನಡೆಸಿದರು.

ಭಾರತದಲ್ಲಿರುವ ವಿದ್ವಾಂಸರ ಸಂಪರ್ಕವನ್ನು ಶ್ರೀ ಕಲ್ಯಾನೋವರು ಬೆಳೆಸಿಕೊಂಡರು. ಅವರಿಂದ ಮಹಾಭಾರತದ ಬಗ್ಗೆ ವಿಶ್ಲೇಷಣಾತ್ಮಕ ಪ್ರಬಂಧ ಬೇಕೆಂದು ಕೋರಿದರು. ಕೂಡಲೇ ಅವರು ಬಯಸಿದ್ದ ವಿಷಯಗಳು ಅವರಿಗೆ ದೊರೆತುವು. ಪುಣೆಯಲ್ಲಿರುವ ಭಂಡಾರಕರ ಪ್ರಾಚ್ಯ ಸಂಶೋಧನ ವಿದ್ಯಾಲಯದವರು ಮಹಾ ಭಾರತ ಗ್ರಂಥದ ಸಮೀಕ್ಷೆಯ ಮೊದಲ ಸಂಪುಟವನ್ನು ಕಳುಹಿಸಿಕೊಟ್ಟರು. ಇದರಿಂದಾಗಿ ಈ ಸಂಸ್ಥೆಯ ಗೌ|| ಕಾರ್ಯದರ್ಶಿ ಶ್ರೀ ಆರ್. ದಂಡೇಕರರೊಡನೆ ಈ ಸೋವಿಯುಟ್ ವಿದ್ವಾಂಸರ ಮೈತ್ರೀಯುತ ಪತ್ರ ವ್ಯವಹಾರವು ಪ್ರಾರಂಭವಾಯಿತು. ಭಾರತದಿಂದ ಈ ಪುಸ್ತಕ ಬಂದ ಮೇಲೆ ಅನುವಾದದ ಕಾರ್ಯದಲ್ಲಿ ತೀವ್ರ ಪ್ರಗತಿಯಾಯಿತು. ಈ ಪುಸ್ತಕಕ್ಕನುಸಾರವಾಗಿ ಆ ಹಿಂದಿನ ಅನುವಾದದ ಕಾರ್ಯವನ್ನೂ ಪರಿಷ್ಕರಿಸಲಾಯಿತು. ಹೀಗೆ ಶ್ರೀ ಎ. ಬರಾನ್ನಿಕೋವರ ಸಂಪಾದಕತನದಲ್ಲಿ ಮಹಾ ಭಾರತದ ಅನುವಾದದ ಕಾರ್ಯವು ಪೂರ್ಣವಾಗುತ್ತ ಬಂತು. ಮಹಾ ಭಾರತದ ಪ್ರಥಮ ಭಾಗವಾದ ಆದಿಪರ್ವದ ರೂಪಾಂತರವು ೧೯೪೭ರಲ್ಲಿ ಲೆನಿನ್‌ಗ್ರಾಡಿನಲ್ಲಿ ಪೂರ್ಣಗೊಂಡು ೧೯೫೦ರಲ್ಲಿ ಮುದ್ರಿತವಾಯಿತು.

ಈ ಅನುವಾದವು ಗದ್ಯ ರೂಪದಲ್ಲಿದೆ. ಇದರೊಂದಿಗೆ ಟಿಪ್ಪಣಿಗಳನ್ನೂ ಕೊಡಲಾಗಿವೆ. ಈ ಭವ್ಯದಿವ್ಯ ಪ್ರಾಚೀನ ಭಾರತೀಯ ಮಹಾಕಾವ್ಯವನ್ನು ಭಾರತೀಯರ ಅತ್ಯುತ್ಕೃಷ್ಟ ರಚನೆಯನ್ನು ಚೆನ್ನಾಗಿ ಮನನಮಾಡಲು ಸೋವಿಯುಟ್ ಜನತೆಗೆ ಈ ಟಿಪ್ಪಣಿಗಳೂ ಗ್ರಂಥಕ್ಕೆ ಬರೆದ ಮುನ್ನುಡಿಯೂ ಅತ್ಯಂತ ಸಹಾಯವನ್ನೊದಗಿಸುತ್ತಿವೆ.

ಪುರಾತನ ಭಾರತೀಯ ಸಂಸ್ಕೃತಿಯ ಬಗ್ಗೆ ಸೋವಿಯುಟ್ ಒಕ್ಕೂಟದಲ್ಲಿನ ಜನತೆಯು ಪ್ರದರ್ಶಿಸಿದ ಆಸಕ್ತಿಗಾಗಿ ಶ್ರೀ ಜವಾಹರಲಾಲ ನೆಹರೂರವರು ತಮ್ಮ ಭಾರತ ದರ್ಶನದಲ್ಲಿ ವಿಶೇಷ ಪ್ರಶಂಸೆಯನ್ನು ವ್ಯಕ್ತಪಡಿಸಿದ್ದಾರೆ. ಯುದ್ಧದ ಕಾರ್ಮೋಡಗಳು ರಕ್ತಪ್ರವಾಹವನ್ನು ವರ್ಷಿಸುತ್ತಿರುವಾಗ ನಿರ್ಮಾಣಗೊಂಡ ಈ ಕೃತಿಯು ಅತ್ಯುತ್ತಮವಿದೆ.

ಈಗ ಶ್ರೀ ಕಲ್ಯಾನೋವರು ಮಹಾಭಾರತದ ದ್ವಿತೀಯ ಭಾಗವಾದ ಸಭಾಪರ್ವದ ಅನುವಾದ ಕಾರ್ಯದಲ್ಲಿ ತಲ್ಲೀನರಾಗಿದ್ದಾರೆ. ಹೀಗೆ ಪ್ರಾಚೀನ ಭಾರತೀಯ ಗ್ರಂಥಗಳ ಅನುವಾದವು ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ನಡೆಯುವುದರಿಂದ ಆ ದೇಶದ ಮತ್ತು ಭಾರತಗಳ ನಡುವೆ ಸಂಪರ್ಕವು ನಿಕಟವಾಗುತ್ತದೆ. ಮತ್ತಿದರಿಂದ ಪರಸ್ಪರ ಭೇದಭಾವನೆಗಳು ನಾಮಾವಶೇಷವಾಗುತ್ತವೆ. ಉಭಯ ರಾಷ್ಟ್ರಗಳ ಜನತೆಯು ಹೆಚ್ಚು ಹೆಚ್ಚು ಸನ್ನಿಹಿತಗೊಳಿಸುವುದಕ್ಕೆ ಪರಸ್ಪರ ತಿಳುವಳಿಕೆಗೆ ತುಂಬ ನೆರವಾಗುತ್ತದೆ.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N./50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತು ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಓದಿ ನಗಬಹುದು

ಡಾಕ್ಟರ್—ಏನು ಪಂಡಿತರೇ, ಪ್ರಾಚೀನ ಕಾಲದಲ್ಲಿ ಜನರು ನೂರಾರು ವರ್ಷ ಬದುಕುತಿದ್ದರು. ಆದರೆ ಇಂದು ಕೇವಲ ಎಳೆ ಪ್ರಾಯದಲ್ಲಿಯೇ ಸತ್ತು ಹೋಗುವರಲ್ಲಾ? ಇದೇಕೆ ಹೀಗೆ?

ಪಂಡಿತ—ಮಹಾ ಸ್ವಾಮಿ, ಪ್ರಾಚೀನ ಕಾಲದಲ್ಲಿ ಇಷ್ಟೊಂದು ಅಧಿಕ ಸಂಖ್ಯೆಯಲ್ಲಿ ಡಾಕ್ಟರರು ಜೀವಿಸಿರಲಿಲ್ಲ!

೦ ೦ ೦

ನೌಕರ—ಅಮ್ಮಾ, ತಾವು ನನ್ನನ್ನು ನಿಮ್ಮಲ್ಲಿ ಕೆಲಸಗಾರನನ್ನಾಗಿಟ್ಟುಕೊಂಡು ಉಪಕಾರ ಮಾಡಿರಿ.

ಅಮ್ಮ—ಆಗ ಬಹುದು; ಆದರೆ ಕೇವಲ ಒಂದೆರಡು ದಿನ ಕೆಲಸ ಮಾಡಿ ಮತ್ತೆ ನೀನು ಓಡಿ ಹೋಗಬಾರದು.

ನೌಕರ—ಇಲ್ಲ ಅಮ್ಮಾ, ನನಗೆ ಆ ಅಭ್ಯಾಸವಿಲ್ಲ. ನನಗೆ ಒಂದೇ ಸ್ಥಳದಲ್ಲಿಯೇ ನಿಲ್ಲುವ ಅಭ್ಯಾಸವಿದೆ. ಕಳೆದ ನೂರು ವರ್ಷಗಳಿಂದಲೂ ನಾನು ಒಂದೇ ಕಡೆಯಲ್ಲಿದ್ದೆ.

ಅಮ್ಮ—ಮತ್ತೇಕೆ ಬಂದೆ?

ನೌಕರ—ಅವರು ಹೋಗು ಎಂದರು; ಬಂದೆ.

ಅಮ್ಮ—ಸ್ಥಾಯಿಯಾಗಿ ನಿಲ್ಲುವವರು ಯಾರೂ ದೊರೆಯದಿರುವಾಗ ಅವರೇಕೆ ನಿನ್ನನ್ನು ಹೋಗು ಎಂದರು? ಅದಾರಪ್ಪಾ ಅಷ್ಟು ನಿಷ್ಕರುಣಿಗಳು?

ನೌಕರ—ಮತ್ತಾರಮ್ಮಾ ಸೆರೆಮನೆಯ ಅಧಿಕಾರಿಗಳು!

೦ ೦ ೦

ಯಜಮಾನ—ಶಂಕರ, ನನ್ನನ್ನು ಸರಿಯಾಗಿ ನಾಲ್ಕು ಗಂಟೆಗೆ ಎಬ್ಬಿಸಿ ಬಿಡಬೇಕು.

ಶಂಕರ—ನಾಲ್ಕು ಗಂಟೆ ಈಗಾಗಲೇ ಹೊಡೆದಾಯಿತು ಸ್ವಾಮಿ.

ಯಜಮಾನ—ಆ, ಏನೆಂದೆ? ಹಾಗಾದರೆ ನನ್ನನ್ನೇಕೆ ಎಚ್ಚರಿಸಲಿಲ್ಲ?

೦ ೦ ೦

ಯಜಮಾನ—ಅರೇ, ಒಂದು ರೂಪಾಯಿಯ ಬರ್ಫವನ್ನು ತಾರೆಂದು ಹೇಳಿದರೆ, ನೀನೇನು ಇಷ್ಟು ಸಣ್ಣ ತುಂಡನ್ನು ತಂದಿರುವೆ?

ನೌಕರ—ಸ್ವಾಮಿ ಸೆಖೆ ಬಹಳ ಹೆಚ್ಚಾಗಿದೆ. ಇಲ್ಲಿಂದ ಅಂಗಡಿಗೆ ಹೋಗುವಷ್ಟರಲ್ಲಿಯೇ ರೂಪಾಯಿ ಕರಗಿ ಹದಿನೆಂಟಾಣೆಯಾಯಿತು. ಬರ್ಫ ತರುವಾಗ ಅದೂ ಕರಗತೊಡಗಿ ಈಗ ಇಷ್ಟು ಮಾತ್ರ ಉಳಿದಿದೆ! ಏನು ವಿಪರೀತ ಸೆಖೆ!

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ · VOL. 37 · 6—3—1958 · ಸಂಚಿಕೆ ೨೬ · NO. 26

ನೀವು ಮತ್ತು ನಿಮ್ಮ ಮಕ್ಕಳು—

ಮಗುವಿಗೆ ಸಂಪೂರ್ಣ ಸ್ವಾತಂತ್ರ್ಯವಿರಲಿ

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ

ಮಕ್ಕಳ ಬೆಳವಣಿಗೆ ಮತ್ತು ಅಭಿವೃದ್ಧಿಯು ಬಾಲ್ಯದ ಪ್ರಾರಂಭದ ದಿನಗಳಲ್ಲಿ ಅವುಗಳ ಮೇಲಾದ ಪ್ರಭಾವವನ್ನು ಅವಲಂಬಿಸಿಕೊಂಡಿರುತ್ತದೆ. ಮಗುವಿನ ಪ್ರಥಮ ವರ್ಷ ಪ್ರಾಯದಲ್ಲಿನ ಅನುಭವಗಳಿಂದ ಅದರ ಅಭ್ಯಾಸ, ಗುಣ ಮತ್ತು ಚಟುವಟಿಕೆಗಳು, ಒಟ್ಟಿನಲ್ಲಿ ಅದರ ವ್ಯಕ್ತಿತ್ವವೂ ನಿರ್ಮಾಣವಾಗಲಿದೆ. ಮಗುವಿನ ವ್ಯಕ್ತಿತ್ವವು ಹುಟ್ಟಿಕೊಳ್ಳುವ ಬಹಳ ಮುಖ್ಯವಾದ ಸ್ಥಾನವೆಂದರೆ, "ಮನೆ"—

ಮನೆ ಎಂದರೇನು? ಮನೆಯೆಂದರೆ ಕೇವಲ ಗೋಡೆಗಳಲ್ಲ, ಕೋಣೆಗಳಲ್ಲ ಅಥವಾ ಮನೆಯ ಮಾಡಲ್ಲ, ಹಲವಾರು ಘಟಕಗಳ ಸಂಯುಕ್ತ ವಸ್ತು ಮತ್ತು ವ್ಯಕ್ತಿಗಳ ನಡತೆ, ಚಟುವಟಿಕೆ, ತಿಳುವಳಿಕೆ, ನಂಬುಗೆ, ಭಾವನೆ ಮತ್ತು ಕೃತಜ್ಞತೆಗಳ ಸಮೂಹವೇ ಮನೆಯೆನಿಸುತ್ತದೆ. ಕುಟುಂಬ—ತಂದೆತಾಯಿಗಳು, ಅಣ್ಣತಮ್ಮಂದಿರ, ಅಕ್ಕತಂಗಿಯರು, ಸಂಬಂಧಿಕರು ಮತ್ತು ಗೆಳೆಯರು— 'ಮನೆ'ಯಲ್ಲಿ ಕೂಡಿಕೊಳ್ಳುವ ಪ್ರಧಾನವೆನಿಸಿದ ಜನರಾಗಿದ್ದಾರೆ. ಮಾನವನ ಜೀವನದಲ್ಲಿ ಬಾಳಲು ಬೇಕಾದ ಕೃತಜ್ಞತೆ, ಸಹಕಾರ, ಹಕ್ಕು, ಕೊಡುಕೊಳ್ಳಾಟ, ಸತ್ಯ ಮತ್ತು ಹೊಂದಿಕೊಳ್ಳುವಿಕೆ ಮೊದಲಾದ ಉತ್ತಮ ಗುಣಗಳನ್ನು ಮಗುವು ಪ್ರಪ್ರಥಮವಾಗಿ ತನ್ನ ಮನೆಯಲ್ಲಿಯೇ ಕಲಿತುಕೊಳ್ಳುವುದು.

ಮಗುವು ಈ ಭೂಮಿಗೆ ಸಾಮಾನ್ಯತಃ ನಿಶ್ಚೇಷ್ಟಿತವಾಗಿ ಯಾವ ಶಕ್ತಿಯೂ ಇಲ್ಲದೆ, ಒಂದು ಮಾಂಸದ ಮುದ್ದೆಯಂತೆ ತೋರಬೀಳುತ್ತದೆ. ಕ್ರಮವಾಗಿ, ಅದು ಬೇರೆ ಬೇರೆ ಸಂಗತಿಗಳನ್ನು ಕಂಡುಕೊಂಡು ತಿಳಿದುಕೊಳ್ಳುತ್ತದೆ. ಅದು ಅಳುತ್ತದೆ, ನಗುತ್ತದೆ, ವಸ್ತುಗಳನ್ನು ಮುಟ್ಟುತ್ತದೆ, ಕೂಗುತ್ತದೆ, ಕೂರುತ್ತದೆ, ವಸ್ತುಗಳನ್ನು ತಟ್ಟುತ್ತದೆ ಅಥವಾ ದೂರ ನಡೆಯಲು ಪ್ರಯತ್ನಿಸುತ್ತದೆ. ಅದು ನಿಧಾನವಾಗಿ ಮನುಷ್ಯರನ್ನು ದೃಷ್ಟಿಸುತ್ತಾ ಕ್ರಮೇಣ ತನ್ನದೇ ಆದ ಒಂದು ಶಕ್ತಿಯನ್ನು ಪಡೆಯುತ್ತದೆ. ಅದು ತನ್ನ ಭಾವನೆಗಳಿಗನುಸಾರವಾಗಿ ಅಳುತ್ತ ಕೂರುತ್ತದೆ. 'ನನ್ನ' ಮತ್ತು 'ನಿನ್ನ' ಹಾಗೂ 'ಹೌದು' ಮತ್ತು 'ಅಲ್ಲ'ಗಳ ನಡುವಿನ ವ್ಯತ್ಯಾಸವನ್ನು ಮೊತ್ತಮೊದಲಿಗೆ ಕಂಡುಕೊಳ್ಳುತ್ತದೆ. ಅದು ಮೂರು ವರ್ಷ ಪ್ರಾಯಕ್ಕೆ ಮುಟ್ಟುವಷ್ಟರಲ್ಲಿ ಅದರ ಬುದ್ಧಿಯು ತನ್ನ ಭಾವವನ್ನು ವ್ಯಕ್ತಪಡಿಸಲು ತನ್ನದೇ ಆದ ವ್ಯಕ್ತಿತ್ವವನ್ನು ಪ್ರದರ್ಶಿಸಲು ಬಯಸುತ್ತದೆ.

ಮಕ್ಕಳ ಅಭಿವೃದ್ಧಿಯ ಬೇರೆ ಬೇರೆ ಹಂತಗಳನ್ನು ತಿಳಿದುಕೊಂಡು ಭದ್ರತೆ, ಮತ್ತು ಪ್ರೀತಿ, ಆಹಾರ, ಬಟ್ಟೆಬರೆ, ಆಶ್ರಯ ಮತ್ತು ವಿದ್ಯೆಗಳ ಮೂಲಕ ಅವರ ಬೆಳವಣಿಗೆಗೆ ಅತ್ಯಧಿಕ ಅವಕಾಶಗಳನ್ನು ಕಲ್ಪಿಸಿಕೊಡುವುದು ಮಕ್ಕಳನ್ನು ದೊಡ್ಡವರನ್ನಾಗಿ ಮಾಡುವಲ್ಲಿನ ಪ್ರಮುಖ ಕರ್ತವ್ಯವಾಗಿದೆ. ಮಕ್ಕಳಲ್ಲಿ ವಿಶ್ವಾಸ ಮತ್ತು ಗುಣನಡತೆಗಳನ್ನು ರೂಪಿಸುವಲ್ಲಿ ಕೀಳು ಮಟ್ಟದ ಆರ್ಥಿಕಾನುಕೂಲತೆಗಳು ತಡೆಗಳಾಗಬಾರದು. ತಮ್ಮ ಮನೆಯಲ್ಲಿಯೇ ತಿಳುವಳಿಕೆಯ ಅಭಾವದಿಂದ ಮತ್ತು ಏಕಮುಖದ ಕೊರತೆಯ ಪರಿಣಾಮವಾಗಿ ಅತ್ಯುತ್ತಮವೆನಿಸಿದ ಕುಟುಂಬಗಳಲ್ಲಿ ಬೆಳೆದು ಬಂದ ಮಕ್ಕಳೇ ಛಿನ್ನವಿಚ್ಛಿನ್ನವಾಗಿಹೋದ ಉದಾಹರಣೆಗಳಿವೆ. ಇದೇ ವೇಳೆಯಲ್ಲಿ ಬಡ ಕುಟುಂಬಗಳಿಂದ ಜನಿಸಿಬಂದ ಕೆಲವು ಮಕ್ಕಳು ವಿಕಾಸ ಹೊಂದಿದ ವ್ಯಕ್ತಿತ್ವವುಳ್ಳವುಗಳಾಗಿ ಅರಳಿನಿಂತ ಸಂದರ್ಭಗಳೂ ಇರುತ್ತವೆ. ಈ ರೀತಿಯ ವ್ಯತ್ಯಾಸವುಂಟಾಗುವುದಕ್ಕೆ ಕಾರಣವನ್ನು ಹುಡುಕುವುದಾದರೆ, ಅವುಗಳಿಗೆ ದೊರೆತ ವಾಸ್ತವಿಕ ಕೊರತೆಯು ಕಾರಣವಾಗಿರದೆ, ತಮ್ಮ ಬಾಲ್ಯದಲ್ಲಿ ಪಡೆದು ಬಂದ ಪ್ರೀತಿ ಮತ್ತು ಕರುಣೆಗಳ ಪರಿಮಾಣದಲ್ಲಿರುವ ಅಂತರವೇ ಈ ರೀತಿಯ ಭೇದವನ್ನುಂಟುಮಾಡಿವೆಯೆಂದು ತಿಳಿದು ಬರುವುದು. ಆದುದರಿಂದ ಮಕ್ಕಳ ತಂದೆತಾಯಿಗಳು ಹಾಗೂ ಅವರ ಸಂಬಂಧಿಕರು ಮಕ್ಕಳನ್ನು ಯಾವ ಕುಂದುಕೊರತೆಗಳಿಲ್ಲದಂತೆ ಸಂತೋಷಮಯ ವಾತಾವರಣದಲ್ಲಿಯೇ ಬೆಳೆಸಿಕೊಂಡು ಬರಬೇಕು.

ಮಕ್ಕಳ ವಿಕಾಸದ ಹಂತಗಳು ತಿಳಿದುಬರುವಂತೆಯೂ ದೃಷ್ಟಿಗೋಚರವಾಗುವಂತೆಯೂ ಇರಬೇಕು. ಇದರಿಂದಾಗಿ, ಮಕ್ಕಳನ್ನು ಬೆಳೆದು ಬರುವ 'ಮಕ್ಕಳೆ'ಂದು ತಿಳಿಯದೆ" ವಿಕಾಸ ಹೊಂದುವ ವ್ಯಕ್ತಿತ್ವ'ಗಳೆಂದು ಸಂಭಾವಿಸಬೇಕು [ಅವರು ಪ್ರತಿಕ್ಷಣವೂ ಬೆಳೆಯುವರು.] ಅವರಲ್ಲಿ ತಮ್ಮದೇ ಆದ ಬೇಕುಗಳೂ ವ್ಯಕ್ತಿತ್ವಗಳೂ ಇರುತ್ತವೆ. ಬೌದ್ಧಿಕ ವಿಕಾಸದ ಬೇಡಿಕೆಗಳು ಬಾಹ್ಯ ವಲಯದ, ಆಹಾರದ, ಉಡುಗೆ ತೊಡುಗೆ ಮೊದಲಾದುವುಗಳ ಯೋಗ್ಯವಾದ ಸಂಯೋಜನೆಗಳಿಂದ ಪೂರೈಸಲ್ಪಡಬೇಕು. ಅತ್ಯುತ್ತಮ ಆರೋಗ್ಯ, ಪ್ರೀತಿ, ಭದ್ರತೆ ಮತ್ತು ತಿಳುವಳಿಕೆಗಳ ನಡುವೆ ಮಕ್ಕಳ ವ್ಯಕ್ತಿತ್ವವು ಯುವಾವಸ್ಥೆಯಾಗಿ ಅರಳುತ್ತವೆ.

ಮಕ್ಕಳು ಬೆಳೆಯುವಂತೆ ಸಹಕರಿಸುವಲ್ಲಿ ಸಣ್ಣ ಮಕ್ಕಳ ಭಾವನಾತ್ಮಕ ಆವಶ್ಯಕತೆಗಳ ಪೂರೈಕೆಯಾಗುವತ್ತ ವಿಶೇಷ ಗಮನವೀಯಬೇಕು. ಮಗುವು ಏನು ನುಡಿಯುತ್ತದೋ ಅಥವಾ ಮಾಡುತ್ತದೋ, ಅವೆಲ್ಲವಕ್ಕೂ ಅರ್ಥವಿದೆ. ಅವನ ವ್ಯಕ್ತಿತ್ವವು ಅವುಗಳ ಮೂಲಕ ಚಿತ್ರಿಸಲ್ಪಡುತ್ತದೆ. ಅವನ ಹೋರಾಟ, ಆವಶ್ಯಕತೆ, ಕಷ್ಟಕಾರ್ಪಣ್ಯ ಮತ್ತು ಫಲಿಸಲಾಗದ ಅಪೇಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಹೆತ್ತವರು ಅದನ್ನು ಚೆನ್ನಾಗಿ ಅರ್ಥವಿಸಿಕೊಂಡು ಅವನಿಗೆ ಅವು ಬೆಳೆಯಲು ಸಹಾಯವಾಗುವಂತೆ ಮಾಡಬೇಕು. ಮನೆಗಳಲ್ಲಿ ಮಕ್ಕಳು ತಮ್ಮ ಬೌದ್ಧಿಕ ಬೆಳವಣಿಗೆಯ ಸಲುವಾಗಿ ಸಾಕಷ್ಟು ಅನ್ನ, ಬಟ್ಟೆ, ರಕ್ಷಣೆ, ಆಟದ ಸಾಮಾನುಗಳು ಮತ್ತಿತರ ಅಗತ್ಯತೆಗಳನ್ನು ಪಡೆಯಬೇಕು. ಸಾಧನೆಯ ಕಡೆಗೆ ಪ್ರೀತಿ, ಕರುಣೆ, ವಿವೇಚನೆ ಮತ್ತು ಭಾವನೆ ಹಾಗೂ ರಕ್ಷಣೆಗಳು ಭಾವನಾತ್ಮಕ ಆರೋಗ್ಯಕ್ಕೆ ಅಗತ್ಯವಾಗಿರುವುವು. ತಮ್ಮ ಸಂತೋಷಮಯ ಜೀವನದಿಂದ ಮಕ್ಕಳಿಗಾಗಿ ಆನಂದಪೂರ್ಣ ಅವಕಾಶವನ್ನು ಹೆತ್ತವರು ಒದಗಿಸಬೇಕು. ನಿಶ್ಚಿತ ಗುರಿ, ತಿಳುವಳಿಕೆ, ಮಾರ್ಗದರ್ಶನ ಮತ್ತು ಅಚಲತೆಗಳ ಮೂಲಕ ಅವರು ಅತ್ಯುತ್ತಮವಾದ ಸಾಂಸ್ಕೃತಿಕ, ನೈತಿಕ ಮತ್ತು ಧಾರ್ಮಿಕ ತರಬೇತಿಯನ್ನು ತುಂಬಬೇಕು.

ಗೃಹ ತರಬೇತಿಯಲ್ಲಿ ಸ್ವಾತಂತ್ರ್ಯವು ಅತ್ಯಂತಾವಶ್ಯಕವಾದುದು. ಮಗುವಿಗೆ ಅನ್ವೇಷಿಸಲು ಮತ್ತು ಪ್ರಕಾಶಪಡಿಸಲು ಸಂಪೂರ್ಣ ಸ್ವಾತಂತ್ರ್ಯವನ್ನೀಯಿರಿ. ಅವನು ಮುಟ್ಟುವ, ರಾಶಿ ಮಾಡುವ ಒಡೆದು ಹಾಕುವ ಎಲ್ಲ ವಸ್ತುಗಳನ್ನು ಕೊಡಿರಿ. ಊಟದ ವೇಳೆಯಲ್ಲಿ ಸ್ವತಃ ಊಟ ಮಾಡಲು ಬಿಡಿರಿ. ಅವನು ಬಯಸಿದಂತೆ ಆಡಲು ನಡೆಯಲು ತಡೆಹಾಕಬೇಡಿರಿ. ಮಕ್ಕಳ ಎಲ್ಲ ಆವಶ್ಯಕತೆಗಳೂ ಆ ಕ್ಷಣದಲ್ಲಿ ಮಾತ್ರವಿರುವುದರಿಂದ, ಆ ಕೂಡಲೇ ಅವನ್ನು ಪೂರೈಸಬೇಕು. ಮಕ್ಕಳು ಎಂದೂ ಕಾಯಲಾರವು. ಅವರ ಅಪೇಕ್ಷೆಗಳು ಹಿಂದಿಡಲ್ಪಡಲಾರವು. ಗೃಹ ತರಬೇತಿಯ ಎರಡನೆ ಗುರಿಯು ಭದ್ರತೆ. ಭದ್ರತೆಯು ಫಲ ಮತ್ತು ವಿಕಾಸದತ್ತ ಮುನ್ನಡೆಸುತ್ತದೆ. ಪ್ರೀತಿ, ದೃಷ್ಟಿ, ಅಭಿರುಚಿ, ಪ್ರಶಂಸೆ ಮತ್ತು ನಂಬುಗೆಗಳು ಭದ್ರತೆಯನ್ನು ತುಂಬಿಸುತ್ತವೆ. ತನ್ನ ಹೆತ್ತವರ ಹೊಗಳಿಕೆಯು ಮಕ್ಕಳಿಗೆ ಖಂಡಿತವಾಗಿ ದೊರೆಯುವಂತಿರಬೇಕು. ಅವನು ತನ್ನ ತಾಯ್ತಂದೆಯರಿಂದ ಕೆಟ್ಟ ಮಾತುಗಳು ಬರುವುವೆಂದು ಹೆದರಿದನೆಂದಾದರೆ, ಹೆತ್ತವರ ಪ್ರೀತಿಯನ್ನು ತಾನು ಕಳೆದುಕೊಂಡೆನೆಂದು ಆತನು ಭಾವಿಸುತ್ತಾನೆ; ಮತ್ತಾತನು ಈ ರೀತಿ ತಿಳಿದುಕೊಂಡನೆಂದ ಮಾತ್ರಕ್ಕೆ ಒಳ್ಳೆಯದಾಗುವ ಉತ್ತೇಜನವೆಲ್ಲವೂ ಮಾಯವಾಯಿತೆಂಬರ್ಥ.

ಶಿಸ್ತು ಮನೆ ತರಬೇತಿಯ ಇನ್ನೊಂದಂಶವಾಗಿರುವುದು. ಗೆಳತನ ಮತ್ತು

(೧೦ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ನಾರದ ಸಣ್ಣ ಕಥೆ—

ಸಮಾಜದ ಕ್ರೂರ ಸರ್ಪ

ಶ್ರೀಮತಿ ಆಶಾ ಕೆ. ಆರ್. ಕೆ. ಭಟ್.

ನಿರ್ಮಲೆಯು ಜೀವನ ರಾಯರ ಏಕಮಾತ್ರ ಪುತ್ರಿ. ಜೀವನರಾಯರು ಮುಂಬಯಿ ನಗರಕ್ಕೆ ಬಂದು ೨೦ ವರ್ಷಗಳಾದುವು. ಬಂದ ಎರಡು ವರ್ಷಗಳಲ್ಲೇ ನಿರ್ಮಲೆಯು ಜನಿಸಿದಳು. ನಿರ್ಮಲೆಯ ತಾಯಿ ಲಲಿತಮ್ಮನವರಿಗೆ ಮಗಳು ಹುಟ್ಟಿದ ೧೦ನೇ ವರ್ಷದಿಂದಲೇ ಅವಳ ಮದುವೆಯ ಆಶೆ. ಜೀವನರಾಯರು ಪೂರ್ವಾಚಾರ ಪದ್ಧತಿಯವರಾದರೂ, ಮಗಳ ಕಾಲೇಜು ವಿದ್ಯಾಭ್ಯಾಸ ಮುಗಿಯದೆ, ಮದುವೆ ಮಾಡಲು ಒಪ್ಪರು. ಅಂತೂ ಬರುವ ೩೦೦ ರೂ. ಸಂಬಳದಲ್ಲಿ ಮಗಳಿಗೆ ಬೇಕಾದ ಒಡವೆಗಳನ್ನು ಸಂಗ್ರಹಿಸಿಟ್ಟಿದ್ದರು.

ನಿರ್ಮಲೆಯು ಕಾಲೇಜು ಹುಡುಗಿಯಾದರೂ, ಮಾತಾಪಿತೃಗಳ ಮಾತನ್ನು ದೇವವಾಕ್ಯವೆಂದು ತಿಳಿಯುತ್ತಿದ್ದಳು. ಜೀವನರಾಯರು ತನಗೆ ಗಂಡುಮಕ್ಕಳಿಲ್ಲದ ಕಾರಣ, ತಮ್ಮನ ಮಗನನ್ನು ವಿದ್ಯಾಭ್ಯಾಸಕ್ಕಾಗಿ ತಮ್ಮ ಮನೆಯಲ್ಲೇ ಇರಿಸಿಕೊಂಡಿದ್ದರು. ಒಂದೇ ಕಾಲೇಜಿಗೆ ಹೋಗುತ್ತಿದ್ದುದರಿಂದ, ನಿರ್ಮಲೆಯೂ ಆನಂದನೂ ಜೊತೆಯಲ್ಲಿಯೇ ಹೋಗಿ ಬರುತ್ತಿದ್ದರು.

ನಿರ್ಮಲೆಯು ಹೆಸರಿಗೆ ತಕ್ಕಂತೆ, ತನ್ನ ಅಂತಃಕರಣವನ್ನು ನಿರ್ಮಲವಾಗಿಯೇ ಬೆಳೆಯಿಸಿಕೊಂಡು ಬಂದಿದ್ದಳು. ಅವಳು ಬಹು ವಿನಯಶೀಲೆ, ರೂಪಸಂಪನ್ನೆ, ಅವಳಲ್ಲಿ ಸ್ವಾರ್ಥವಾಗಲೀ ಅಸೂಯೆಯಾಗಲೀ ತಿಲಾಂಶವೂ ಕಂಡುಬರುತ್ತಿದ್ದಿಲ್ಲ. ವಿದ್ಯಾಭ್ಯಾಸದಲ್ಲಿ ಸಹಪಾಠಿಗಳಿಗೆಲ್ಲಾ ಆದರ್ಶಳಾಗಿದ್ದಳು. ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೂ, ಪಂಡಿತರಿಗೂ ನಿರ್ಮಲೆಯಲ್ಲಿ ಬಹಳ ವಿಶ್ವಾಸ. ಹೀಗಿದ್ದುದರಿಂದ ನಿರ್ಮಲೆಗೆ ತನ್ನ ಕಾಲೇಜು ದಿನಗಳು ಮುಗಿಯುತ್ತ ಬಂದುದರ ಅರಿವು ಕೂಡ ಆಗಲಿಲ್ಲ.

ನಿರ್ಮಲೆಗೀಗ ೧೮ ವರ್ಷ ತುಂಬಿದುವು. ಲಲಿತಮ್ಮನ ಕಾಟ ತಡೆಯಲಾರದೆ, ಒಂದು ವರ್ಷದಿಂದಲೂ ಜೀವನರಾಯರು ವರನನ್ನು ಹುಡುಕುತ್ತಲೇ ಇದ್ದರು. ಜಾತಿ, ಮತಸಂಪ್ರದಾಯ ರೀತಿಗನುಸಾರವಾಗಿ, ತಮ್ಮ ಜಾತಿಕೂಟದಲ್ಲೇ ವರನನ್ನು ಹುಡುಕಬೇಕಾಗಿತ್ತು. ಅವರ ಜನ್ಮಸ್ಥಾನ ರತ್ನಾಗಿರಿ ಪ್ರಾಂತದ ಒಂದು ಹಳ್ಳಿ. ಅಲ್ಲಿ ವಿದ್ಯಾವಂತ ಹುಡುಗರು ಬಹು ವಿರಳ. ಬೇರೆ ಕೂಟದವರಿಗೆ ಕೊಟ್ಟು ವಿವಾಹ ಮಾಡುವುದು ಮತಸಂಪ್ರದಾಯ ವಿರುದ್ಧ. ಮತಸಂಪ್ರದಾಯವನ್ನು ಬಿಟ್ಟುಕೊಡಲು ಲಲಿತಮ್ಮ, ಜೀವನ ರಾಯರಿಗೆ ಇಷ್ಟವಿಲ್ಲ. ಆದುದರಿಂದ ಅವರು ಬಹು ದುಃಖಕ್ಕೀಡಾದರು. ಗಳಿಸಿಟ್ಟ ಹಣವೆಲ್ಲ ಮಗಳ ಮತ್ತು ತಮ್ಮನ ಮಗನ ವಿದ್ಯಾಭ್ಯಾಸಕ್ಕೆ ಖರ್ಚಾಯಿತು. ಸರಿಯಾದ ವರನು ದೊರೆಯಲಿಲ್ಲ. ಯುದ್ಧ ಪ್ರಾರಂಭವಾಗಿತ್ತು. ಅವರು ನೌಕರಿಗಿದ್ದ ಜರ್ಮನ್ ಕಂಪೆನಿಯು ಇವರನ್ನು ಕೆಲಸದಿಂದ ನಿವೃತ್ತಮಾಡಿತು. ಸಂಪಾದನೆಯಿಲ್ಲದೆ ಸಂಸಾರ ನೌಕೆಯು ಮುಂದೆ ಸಾಗದು; ಮಗಳಿಗೆ ತಕ್ಕ ವರನೂ ದೊರಕನು. ಹೀಗೆ ಧರ್ಮಸಂಕಟದಲ್ಲಿ ನರಳುತ್ತಿದ್ದ ಜೀವನರಾಯರು, ಬಂಧುಜನರಿದಿರಿಗೆ ನಗೆಗೀಡಾಗಬೇಕಾಯಿತು. ಅಂತೂ ಭಗೀರಥ ಪ್ರಯತ್ನದಿಂದ ಉದರ ನಿರ್ವಹಣೆಗಾಗಿ ೧೦೦ ರೂಪಾಯಿ ಸಂಬಳದಲ್ಲಿ ಒಂದು ಗುಜರಾಥಿ ಪೇಢಿಯಲ್ಲಿ ಕಾರಕೂನನಾಗಿ ಸೇರಿದರು. ಹಿಂದಿನಂತೆ ಈಗ ಖರ್ಚ ನಡೆಯುವ ಹಾಗಿಲ್ಲ. ಬಿಡಾರ ಬದಲಾಯಿಸಿ ಕೇಧವಾಡಿ ೧೨ನೇ ಗಲ್ಲಿಯ ಗೋವರ್ಧನ ಬಿಲ್ಡಿಂಗಿನಲ್ಲಿ ೩೦ ರೂಪಾಯಿಗೆ ಒಂದು ಕೋರಡಿ ಮಾಡಿಕೊಂಡು ಜೀವಿಸತೊಡಗಿದರು.

ಕ್ರಿಸ್‌ಮಸ್ ರಜಾದಲ್ಲಿ ಜೀವನ ರಾಯರು ಪುನಃ ತಮ್ಮ ಊರಿಗೆ ಹೋಗಿ ಸಾಧಾರಣ ವಿದ್ಯಾವಂತನಾಗಿಯೂ, ಸ್ವಲ್ಪ ಜಮೀನು ಉಳ್ಳವನಾಗಿಯೂ ಇದ್ದ ನಾರಾಯಣ ರಾಯನನ್ನು ಅಳಿಯನನ್ನಾಗಿ ಮಾಡಿಕೊಳ್ಳುವುದೆಂದು ನಿಶ್ಚಯಿಸಿದರು. ನಾರಾಯಣ ರಾಯನು ಶಾನುಭೋಗ ಶೇಷಗಿರಿರಾಯರ ಮಗ. ಮಗನು ವಯಸ್ಸಿಗೆ ಬಂದಿದ್ದರೂ, ತಂದೆಯ ಅಪ್ಪಣೆಯಿಲ್ಲದೆ ಯಾವ ಕಾರ್ಯದಲ್ಲೂ ಮುಂದಾಳಾಗನು. ಇದನ್ನು ಜೀವನ ರಾಯರು ಬಲ್ಲರು. ಆದುದರಿಂದ ಅವರು ಮೊದಲು ಶ್ಯಾನುಭೋಗ ಶೇಷಗಿರಿ ರಾಯರನ್ನು ಕಂಡು, ಲಗ್ನದ ವಿಷಯ ಮಾತುಕತೆಯನ್ನು ನಡೆಸಿದರು. ಶೇಷಗಿರಿ ರಾಯರು ಒಪ್ಪಿದ ನಂತರ, ನಾರಾಯಣ ರಾಯನನ್ನು ವಧುವನ್ನು ನೋಡುವುದಕ್ಕಾಗಿ, ಕಳುಹಿಸಿಕೊಡಬೇಕೆಂದರು. ಅಂತೆಯೇ ನಾರಾಯಣನು ತಂದೆಯ ಅಪ್ಪಣೆಯನ್ನು ಪಡೆದು ಜೀವನ ರಾಯರ ಜೊತೆಯಲ್ಲಿ ಮುಂಬಯಿಗೆ ಬಂದನು.

ವರನು ವಧುವನ್ನೂ, ವಧುವು ವರನನ್ನೂ ನೋಡಿದ್ದಾಯಿತು. ಸ್ಫುರದ್ರೂಪಿ ನಿರ್ಮಲೆಯನ್ನು ನೋಡಿ ಯಾವ ವರನು ಮೆಚ್ಚನು! ನಾರಾಯಣನ ಆನಂದಕ್ಕೆ ಮೇರೆಯೇ ಇಲ್ಲದಂತಾಯಿತು. ತನ್ನ ಭಾವೀ ಸಂಸಾರದ ಗಾಳಿಗೋಪುರವನ್ನು ಕಟ್ಟತೊಡಗಿದನು. ನಾರಾಯಣನು ನೋಡಲು ಅಷ್ಟೊಂದು ಸುಂದರನಲ್ಲ. ವಿದ್ಯೆಯೂ ಹೆಚ್ಚಿರಲಿಲ್ಲ. ಆದರೆ ಸ್ವಲ್ಪ ಜಮೀನು ಇದ್ದುದರಿಂದ ಸ್ವತಂತ್ರನಾಗಿ ಜೀವನ ನಡೆಸಬಲ್ಲನು; ನಿರ್ಮಲೆಯು ಮಾತಾಪಿತೃಗಳು ತನಗಾಗಿ ಕಷ್ಟಪಡುವುದನ್ನು ನೋಡಲಾರದೆ, ಕೇವಲ ಹಿರಿಯರ ವಚನಪಾಲನೆಗಾಗಿ ಒಪ್ಪಿಕೊಂಡಳು. ನಾರಾಯಣನು, ವಿವಾಹ ನಿಶ್ಚಯಕ್ಕೆ ತಂದೆತಾಯಿಗಳನ್ನು ಶೀಘ್ರದಲ್ಲಿ ಕಳುಹಿಸುವುದಾಗಿ ಹೇಳಿ ಊರಿಗೆ ಮರಳಿದನು.

ಜೀವನರಾಯರ ಪಕ್ಕದ ಕೊಠಡಿಯಲ್ಲಿ ಸಾಣೆಯವರ ಸಂಸಾರ. ಸಾಣೆಯವರ ಹೆಂಡತಿ "ಕಾಳಿಯಮ್ಮ"ನೆಂದರೆ, ಆ ಬಿಲ್ಡಿಂಗಿನಲ್ಲಿ ವಾಸವಾಗಿರುವ ಮಕ್ಕಳಾದಿಯಾಗಿ ಎಲ್ಲರಿಗೂ ಗೊತ್ತು. ಹೆಸರಿಗೆ ತಕ್ಕಂತೆ, ಭದ್ರಕಾಳಿಯಂತೆ ರೂಪ. ನಾಲ್ಕು ಮಕ್ಕಳ ತಾಯಿಯಾದರೂ, ಮಮತೆಯಿಲ್ಲದ ಮಾತು. "ವಿನಯಾ" ಎಂಬ ಮಗಳು ತನಗಿದ್ದರೂ, ವಿನಯವೇನೆಂದು ತಿಳಿಯಲೊಲ್ಲದ ಮನಸ್ಸು ಕಾಳಿಯಮ್ಮನದು. ಬಲ್ಲವರು ಅವಳನ್ನು "ಅಧಿಕ ಪ್ರಸಂಗಿ"ಯೆಂತಲೂ, ಚಿಕ್ಕವರು "ಗಯ್ಯಾಳಿ"ಯೆಂತಲೂ ಉಪನಾಮಗಳನ್ನು ಕೊಟ್ಟಿದ್ದರು.

ಜೀವನರಾಯರ ಪತ್ನಿ ಲಲಿತಮ್ಮನವರು ಒಮ್ಮೊಮ್ಮೆ ಪಕ್ಕದ ಗಲ್ಲಿಯಲ್ಲಿ ನಡೆಯುತ್ತಿದ್ದ 'ಹರಿಕಥಾ'ಶ್ರವಣಕ್ಕೆ ಹೋಗುವ ಪದ್ಧತಿಯಿತ್ತು. ಇಂದು ೩ ಗಂಟೆ ಹೊತ್ತಿಗೆ ಲಲಿತಮ್ಮನವರು ಕೊಠಡಿಗೆ ಬೀಗ ಹಾಕಿಕೊಂಡು, ಹರಿಕಥಾಶ್ರವಣಕ್ಕೆ ಹೋಗಿದ್ದರು. ಇತ್ತ ಶ್ಯಾನುಭೋಗ ಶೇಷಗಿರಿರಾಯರು ಪತ್ನಿ ಸಮೇತ ಮಗನ ಮದುವೆ ನಿಶ್ಚಯಕ್ಕಾಗಿ ಹೊರಟು ಬಂದರು. ಕೊಠಡಿಗೆ ಬೀಗ ಹಾಕಿದ್ದುದರಿಂದ ಕಾಳಿಯಮ್ಮನ ಕೊಠಡಿಗೆ ಹೋದರು. ಇಷ್ಟರಲ್ಲಿ ನಿರ್ಮಲೆಯೂ ಆನಂದನೂ ಕಾಲೇಜಿನಿಂದ ಬಂದು, ಕೊಠಡಿಯ ಬೀಗ ತೆಗೆದು ಒಳಗೆ ಪ್ರವೇಶಿಸಿದರು. ಇದನ್ನು ನೋಡುತ್ತಿದ್ದ ಶೇಷಗಿರಿರಾಯರು "ಈ ತರುಣ ತರುಣಿ ಯಾರೆಂದು ಕೇಳಲಾಗಿ, ಅಧಿಕ ಪ್ರಸಂಗಿ ಕಾಳಿಯಮ್ಮನು ಈ ಬೊಂಬಾಯಿ ಪಟ್ಟಣದಲ್ಲಿ ತರುಣ ತರುಣಿಯರ ಸಂಬಂಧ ಕೇಳುವುದು ಅಸಹ್ಯವೆಂತಲೂ, ತರುಣಿಯು ಜೀವನ ರಾಯರ ಪುತ್ರಿಯೆಂತಲೂ" ಹೇಳಿದಳು. ಕಾಳಿಯಮ್ಮನ ಮಾತನ್ನು ಕೇಳಿದ ಶ್ಯಾನುಭೋಗರು, ಮರುಮಾತನಾಡದೆ, ಪತ್ನಿಯ ಸಮೇತ, ಬಂದ ದಾರಿ ಹಿಡಿದು ಊರಿಗೆ ಹಿಂತಿರುಗಿದರು.

ಇತ್ತ ಜೀವನರಾಯರು, ಶೇಷಗಿರಿ ರಾಯರ ಬರೋಣವನ್ನೇ, ನಿರೀಕ್ಷಿಸುತ್ತಾ, ಬೇಸತ್ತು, ಮತ್ತೊಮ್ಮೆ ಊರಿಗೆ ಪ್ರಯಾಣ ಬೆಳೆಸಿದರು. ಊರಲ್ಲೆಲ್ಲಾ ಜೀವನರಾಯರ ಪುತ್ರಿ ದಾರಿತಪ್ಪಿರುವಳೆಂದು ವದಂತಿ ಹಬ್ಬಿತ್ತು. ಈ ಆರೋಪವನ್ನು ಬೊಂಬಾಯಿಯಲ್ಲಿ ೨೦ ವರ್ಷಗಳಿಂದ ದುಡಿದು, ಜೀರ್ಣವಾಗಿರುವ ಜೀವನರಾಯರ ದೇಹವು ತಡೆಯಲಾರದೆ ತತ್ತರಿಸಿ ಹೋಯಿತು. ಅತಿ ಕಷ್ಟದಿಂದ ಮನೆ ಸೇರಿದರು. ಆಶಾದೀಪವು ನಂದಿ ಹೋಯಿತು. ಜೀವನದ ಅಂಧಃಕಾರದಲ್ಲಿ ಹೆಣಗಾಡುವುದು ದುಃಸಾಧ್ಯವಾಯಿತು. ಹೃದಯವನ್ನು ಕತ್ತರಿಸುವಂತಹ ಅಪವಾದವು, ತಮ್ಮ ಪ್ರಿಯ ಕುಮಾರಿಯ ಮೇಲೆ ಬಂದಿರುವುದೆಂದು, ನಡೆದ ವಿಚಾರವನ್ನೆಲ್ಲ ಪತ್ನಿಯೊಡನೆ ಹೇಳುತ್ತಿದ್ದರು. ಇಷ್ಟೊತ್ತಿಗೆ ಸುಮಾರು ನಡುರಾತ್ರಿಯಾಗಿದ್ದಿತು. ಆದರೂ ನಿರ್ಮಲೆಗೆ ನಿದ್ದೆ ಹತ್ತಿರಲಿಲ್ಲ. ಅವಳು, ತನ್ನ ಪ್ರಿಯಪಿತನನ್ನು ಬಂದೊಡನೆಯೇ ನೋಡಿದ್ದಳು. ಅವರ ದುಃಖ ಸೂಚಕ ಮುಖಮುದ್ರೆಯಿಂದಲೇ, ಏನೋ ಪ್ರಮಾದವಾಗಿರಬೇಕೆಂದು ಅವಳು ತಿಳಿದಿದ್ದಳು. ಅವಳ ಎಣಿಕೆಯಂತೆಯೇ ಜನಕನ ಬಾಯಿಂದ ನಿಜವನ್ನರಿತುಕೊಂಡಳು. ದುಃಖವೆಂಬ ದಾವಾಗ್ನಿಯಿಂದ, ಬೆಂದು ಬೆಂಡಾಗಿದ್ದ, ಅವಳ ಹೃದಯವು ಒಡೆದು ಹೋಳು ಹೋಳಾಯಿತು. ಮುಂದಿನ ಆಶೆಗಳೆಲ್ಲವೂ ಭಗ್ನವಾದುವು. ತನ್ನ ಬಾಳಿನಿಂದ ಯಾರಿಗೂ ಸುಖವಿಲ್ಲವೆಂದು ನಿಶ್ಚಯಿಸಿಕೊಂಡಳು.

ಮರುದಿನ ಬೆಳಿಗ್ಗೆ ನಿರ್ಮಲೆಯ ಮೃತದೇಹವನ್ನು, ಚೌಪಾಟಿ ಸಮುದ್ರತೀರದಿಂದ ಕೋರ್ಟಿಗೆ ತಂದರು. ನ್ಯಾಯಾಧೀಶರು, 'ಆತ್ಮಹತ್ಯೆ'ಯೆಂದು ತೀರ್ಪ ಕೊಟ್ಟರು. ಜೀವನರಾಯರು ತಮ್ಮ ಕರ್ತವ್ಯ ತೀರಿತೆಂದು ಕೋರ್ಟಿನಲ್ಲೇ, ಮಗಳ ಪಕ್ಕದಲ್ಲಿ ಮಲಗಿದವರು ಪುನಃ ಏಳಲಿಲ್ಲ. "ಹೃದ್ರೋಗದಿಂದ ಮರಣವೆಂದು ನ್ಯಾಯಾಧೀಶರು ತೀರ್ಪುಕೊಟ್ಟರು. ಲಲಿತಮ್ಮನು ನಿರ್ಗತಿಕರಾಗಿ ತಮ್ಮನನ್ನು ಸೇರಿದ್ದ ಆನಂದನ ಆಶ್ರಯಹೊಂದಬೇಕಾಯಿತು.

ನ್ಯಾಯಾಸ್ಥಾನದಲ್ಲಿ ನಿರ್ಮಲೆಯ ಮರಣವು 'ಆತ್ಮಹತ್ಯೆ' ಯೆಂದಾದರೂ, ದೇವರೆದುರಲ್ಲಿ, ಸಮಾಜದ್ರೋಹಿ ಕಾಳಿಯಮ್ಮನೇ ಕೊಲೆಪಾತಕಿ ಅಲ್ಲವೆ?

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ 1 ರಾತಲಿಗೆ ರೂ 7/8; $\frac{1}{4}$ ರಾತಲಿಗೆ ರೂ. 2/0

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಜಾಗತಿಕ ಶಾಂತಿಗೆ ನೆರವು–

ವಿದ್ಯಾಭ್ಯಾಸದಲ್ಲಿ ಅಂತಾರಾಷ್ಟ್ರೀಯತೆ

ಶ್ರೀ ಎಚ್. ಗಣೇಶ, ಎಮ್ ಇಡಿ

'ಪ್ರಪಂಚವೇ ನನ್ನ ಊರು, ಸದ್ವರ್ತನೆಯೇ ನನ್ನ ಮತ" ಎಂದು ನುಡಿದಾಗ ರಾಜಕೀಯ ಮತ್ತು ಧಾರ್ಮಿಕ ದೂಷಣೆಗಳಿಗೆ ಥಾಮಸ್ ಪೈನ್' ಗುರಿಯಾಗಬೇಕಾಯಿತು. ಆತನು ನಾಸ್ತಿಕವಾದಿಯೆಂದೂ, ರಾಷ್ಟ್ರೀಯತೆಯ ನೀತಿ ಸೂತ್ರಗಳಿಗೆ ವಿರೋಧಿಯೆಂದೂ ನಿರಾತಂಕವಾಗಿ ಟೀಕಿಸಲ್ಪಟ್ಟನು ಆದರೆ ಅವನ ಮಾತಿನ ಗೂಢಾರ್ಥವು ಈಗ ಸುಲಭವಾಗಿ ತಿಳಿಯುತ್ತದೆ. ಇಂದು, ಜಗತ್ತಿನ ವಿವಿಧ ರಾಜ್ಯಗಳು ಸ್ವಾಭಾವಿಕ ಪರಿಸ್ಥಿತಿಗಳಿಂದ ವಿಭಿನ್ನವಾಗಿವೆಯಾದರೂ, ಮಾನವ ಜನಾಂಗದ ಐಕ್ಯದ ಮಹಾದೃಷ್ಟಿಯಿಂದ ವಿವೇಚಿಸಿದರೆ, ಇವುಗಳೊಳಗೆ ಕಂಡುಬರುವ ಭಿನ್ನತೆಗಿಂತ, ಸಾಮರಸ್ಯವೇ ಒಡೆದು ಕಾಣುತ್ತಿದೆ. ಚರಿತ್ರೆಯ ಕಾಲದಲ್ಲಿ ಪರಸ್ಪರ ವೈಷಮ್ಯಗಳನ್ನು ಪ್ರದರ್ಶಿಸುತ್ತಿದ್ದ ಜನಾಂಗಗಳು ಈಗ ಸ್ಪರ್ಧೆ ಮತ್ತು ರಾಷ್ಟ್ರೀಯತೆಯ ಮಿತಿಗಳನ್ನು ಉಲ್ಲಂಘಿಸಿ, ಮಾನವ ಜನಾಂಗದ ವೈಶಾಲ್ಯದಲ್ಲಿ ಸೌಹಾರ್ದತೆಯ ಸಹ-ಜೀವನಕ್ಕಾಗಿ ಯತ್ನಿಸುತ್ತಿವೆ ಒಂದು ಕಾಲದಲ್ಲಿ ರಾಜಕೀಯ ಗಡಿಗಳು ಪ್ರಪಂಚದ ಜನತೆಯನ್ನು ರಾಜಕೀಯ ಅಥವಾ ಸಾಮಾಜಿಕ ವಲಯಗಳಾಗಿ ವಿಭಾಗಿಸಿದ್ದುವು. ಇವುಗಳೊಂದಿಗೆ, ಜಾತೀಯತೆ, ಧಾರ್ಮಿಕ ನೀತಿ, ವರ್ಣಧೋರಣೆ ಮತ್ತು ನಾಗರಿಕತೆಯ ಲಕ್ಷಣ-ಭೇದಗಳು, ಈ ವಲಯಗಳೊಳಗಿನ ಅಂತರವನ್ನು ಮತ್ತಷ್ಟು ವಿಸ್ತರಿಸುವ ಸಾಧನಗಳಾಗಿದ್ದುವು. ಪ್ರತಿ ರಾಜ್ಯದೊಳಗೂ, ರಾಜಕೀಯ-ಸಾಮಾಜಿಕ-ಧಾರ್ಮಿಕ ಘರ್ಷಣೆಗಳ ಪರಿಣಾಮವಾಗಿ, ಪ್ರತಿಕ್ಷಣವೂ ಮಾನವ ಜನಾಂಗದ ವಿಶ್ಲೇಷಣೆ ನಡೆಯುತ್ತಿತ್ತು. ಆದರೆ, ಇಂದು ಈ ಪರಿಸ್ಥಿತಿಯು ತುಂಬಾ ಸುಧಾರಿಸಿದೆ. ಮನುಷ್ಯನು ತನ್ನ ಸ್ವಾರ್ಥ ಸಾಧನೆಯ ಪರಿಮಿತಿಗಳನ್ನು ದಾಟಿ, ಮಾನವತೆಯ ವಿಸ್ತೃತಿಯಲ್ಲಿ ತನ್ನ ಪಾತ್ರವನ್ನು ನಿಷ್ಪಕ್ಷಪಾತವಾಗಿ ವಹಿಸುವ ಪ್ರಯತ್ನ ನಡೆಸುತ್ತಿದ್ದಾನೆ.

ಈ ನೂತನ ಮನೋಭಾವನೆಯು ಒಮ್ಮೆಲೇ ೨೦ನೆಯ ಶತಮಾನದಲ್ಲಿ ಉಂಟಾದುದಲ್ಲ. ಇದಕ್ಕಾಗಿ ಪ್ರಯತ್ನಗಳು ಈ ಮೊದಲೇ ನಡೆದಿದ್ದುವು. ಧಾರ್ಮಿಕ ವೈಷಮ್ಯಗಳನ್ನು ಹೋಗಲಾಡಿಸುವ ಯೋಜನೆಗಳೇ ಅಕ್ಬರ ಮಹಾಶಯನ ರಾಜ್ಯನೀತಿಯ ಮುಖ್ಯಾಧಾರಕಗಳಾಗಿದ್ದುವು. ರಾಷ್ಟ್ರೀಯತೆಯ ಸಂಕುಚಿತ ನೀತಿಯನ್ನು ವಿರೋಧಿಸಿ, ಅಂತಾರಾಷ್ಟ್ರೀಯ ಭಾವನೆಗಳ ಪ್ರಸಾರಕ್ಕಾಗಿ ಯುರೋಪಿನ ರಾಜಕೀಯ ವಲಯಗಳಲ್ಲಿ ಪ್ರಯತ್ನಗಳು ಒಮ್ಮೆ ಸಮಗ್ರರೀತಿಯಲ್ಲಿ ನಡೆದಿದ್ದುವು ನೆಪೋಲಿಯನನ ಯುದ್ಧಗಳ ನಂತರ ೧೮೨೦ರಲ್ಲಿ ಅಂತಾರಾಷ್ಟ್ರೀಯ ಸಂಘಟನೆಗಾಗಿ ಒಂದು ಚಳವಳವು ನಡೆದಿತ್ತು. ನೆದರ್‌ಲೇಂಡ್ಸಿನ ದಿ ಹೇಗ್ ನಗರದಲ್ಲಿ ಈ ಪ್ರಸ್ತಾಪವು ಒಮ್ಮೆ ಬಂದಿತ್ತು. ೧೯೨೦ರಲ್ಲಿ ಸ್ಥಾಪಿಸಲ್ಪಟ್ಟ ಜನಾಂಗ ಸಂಘವು ಈ ಅಂತಾರಾಷ್ಟ್ರೀಯತೆಯ ತಾತ್ವಿಕ ಪ್ರಚೋದನೆಯನ್ನು ವಾಸ್ತವ್ಯಕ್ಕೆ ತರುವ ರಂಗವನ್ನು ಒಮ್ಮೆ ತಂದಿತ್ತು. ೧೯೪೫ರಲ್ಲಿ ಜನ್ಮ ತಾಳಿದ ಸಂಯುಕ್ತ ರಾಷ್ಟ್ರ ಸಂಸ್ಥೆಯು ಈ ಪ್ರಯತ್ನವನ್ನು ಅತಿ ಪೂರ್ಣತೆಯಿಂದ ಈಗ ಮುಂದುವರಿಸುತ್ತಿದೆ.

ಅಂತಾರಾಷ್ಟ್ರೀಯತೆಗೆ ವಿರೋಧವಾಗಿರುವ ಕೆಲವು ರಾಷ್ಟ್ರೀಯ ಧೋರಣೆಗಳು ಚರಿತ್ರೆಯಲ್ಲಿ ಉಲ್ಲೇಖನೀಯವಾಗಿವೆ. ಅರ್ಧ ಶತಮಾನದ ಹಿಂದೆ ಸಾಮಾನ್ಯವಾಗಿ ಎಲ್ಲಾ ರಾಷ್ಟ್ರಗಳಲ್ಲಿ ರಾಜಕೀಯ "ಪರಮಾಣುವಾದ" (Atomistic Theory)ವು ಪ್ರಚಲಿತವಾಗಿತ್ತು ಇದರ ಪರಿಣಾಮವಾಗಿ ಪ್ರತಿ ರಾಷ್ಟ್ರೀಯ ಜನಾಂಗವು ಇನ್ನೊಂದರಿಂದ ತನ್ನ ಪ್ರತ್ಯೇಕತೆಗಾಗಿ ಸಾಧಿಸುತ್ತಿತ್ತು. ಜಪಾನ್–ಚೀನಾ ದೇಶಗಳು ಹಲವು ಶತಮಾನಗಳ ಕಾಲ ಬಿಳಿ ಜನಾಂಗಗಳಿಂದ ದೂರವಾಗಿಯೇ ಉಳಿದಿದ್ದುವು ಆದರೆ, ಮುಂದೆ 'ಮೆಯಿಜಿ' ಕಾಲದಲ್ಲಿ ಜಪಾನ್ ದೇಶವು ಜಾಗತಿಕ ಸಂಪರ್ಕಕ್ಕಾಗಿ ಕ್ರಾಂತಿಯನ್ನು ಹೂಡಿತ್ತು ಅಲ್ಲಿ ಕ್ರಮೇಣ ಅಂತಾರಾಷ್ಟ್ರೀಯತೆಯ ಜ್ಞಾನೋದಯವಾಯಿತು ಫೇಸಿಸ್ಟ್ ಇಟೆಲಿ, ನಾಝೀ ಜರ್ಮನಿ ಮತ್ತು ಲೆನಿನ್-ಸ್ಟೇಲಿನ್‌ರ ಕಾಲದ ರಶ್ಯವು ಇಂತಹವೇ ಸಂಕುಚಿತ ಧೋರಣೆಗಳಿಂದ ರಾಷ್ಟ್ರೀಯತೆಯ ಪ್ರಚೋದನೆಗಾಗಿ ಯತ್ನಿಸುತ್ತಿದ್ದುವು. ಹಲವಾರು ದಶಕಗಳ ಕಾಲ ರಶ್ಯವು 'ಕಬ್ಬಿಣದ ಪರದೆ'ಯ ಹಿಂದೆ ಉಳಿದುಕೊಂಡಿತ್ತು ಹೀಗಾಗಿ, ತೀವ್ರ ರೂಪದ ರಾಷ್ಟ್ರೀಯತೆಗಳ ಬೆಳವಣಿಗೆಯಿಂದ ಎರಡು ಜಾಗತಿಕ ಯುದ್ಧಗಳು ನಡೆದು, ಮಾನವ ಚರಿತ್ರೆಯ ಅನುಭವಗಳ ಹೊತ್ತಗೆಯಲ್ಲಿ ಎರಡು ಕರಿ ಹಾಳೆಗಳು ಸೇರಿಸಲ್ಪಟ್ಟುವು ಈ ಎರಡು ಯುದ್ಧಗಳು ಮಾನವತೆಯ ತಾಂಡವ ರೂಪದ ದೃಶ್ಯವನ್ನು ಬಯಲಿಗೆಳೆದುವು ಮಾತ್ರವಲ್ಲದೆ, ರಾಷ್ಟ್ರೀಯ ಸಂಕುಚಿತ ಮನೋವೃತ್ತಿಯ ಅಂತಿಮ ಫಲಿತಾಂಶಗಳ ಜೀವಂತ ದರ್ಶನದ ಪರಿಚಯ ಮಾಡಿಕೊಟ್ಟುವು

ಇಂದು ಅಂತಾರಾಷ್ಟ್ರೀಯ ತಿಳುವಳಿಕೆಗಾಗಿ, ಪ್ರತಿಯೊಂದು ಶಾಂತಿ ಪ್ರಿಯ ರಾಜ್ಯವೂ ತನ್ನಿಂದ ಸಾಧ್ಯವಾದಷ್ಟು ಪ್ರಯತ್ನಿಸುತ್ತಿವೆ. ಸಂಯುಕ್ತ ರಾಷ್ಟ್ರ ಸಂಸ್ಥೆಯು ರಾಜಕೀಯ ನೀತಿಗಳ ಸಮನ್ವಯಕ್ಕಾಗಿಯೂ, ಜಾಗತಿಕ ಸೌಹಾರ್ದಕ್ಕಾಗಿಯೂ ಹೆಣಗಾಡುತ್ತಿದೆ. ಇದರ ಮುಖ್ಯಾಂಗಗಳಲ್ಲೊಂದಾಗಿರುವ ಶೈಕ್ಷಣಿಕ—ವೈಜ್ಞಾನಿಕ—ಸಾಂಸ್ಕೃತಿಕ ಸಂಸ್ಥೆಯು (UNESCO) ಶಿಕ್ಷಣ ಕ್ಷೇತ್ರಗಳ ಮೂಲಕ ಅಂತಾರಾಷ್ಟ್ರೀಯ ಜ್ಞಾನವನ್ನು ಪಸರಿಸುತ್ತಿದೆ ಯುದ್ಧಗಳು ಯುದ್ಧಭೂಮಿಯಲ್ಲಿ ನಡೆಯುವ ಮೊದಲು, ರಾಜಕಾರಣಿಗಳ ಹೃದಯಗಳಲ್ಲಿ ರೂಪಗೊಳ್ಳುವುದರಿಂದ ಯುದ್ಧಗಳನ್ನು ತಡೆಗಟ್ಟುವ ಸಾಧನಗಳು ಮೊದಲಾಗಿ ಆ ಹೃದಯಗಳಲ್ಲೇ ಪ್ರಯೋಗಿಸಲ್ಪಡಬೇಕಾಗಿದೆ ಈ ಉದಾತ್ತ ನೀತಿಯನ್ನನುಸರಿಸುವ ಈ ಸಂಸ್ಥೆಯು ತನ್ನ ಧ್ಯೇಯ ಸಾಧನೆಗಾಗಿ ಹಲವಾರು ಕಾರ್ಯಕ್ರಮಗಳನ್ನಿರಿಸಿಕೊಂಡಿದೆ. ಅವುಗಳಲ್ಲಿ ಮುಖ್ಯವಾದುವುಗಳೆಂದರೆ (೧) ಜ್ಞಾನ ಪ್ರಸಾರ, (೨) ಅಂತಾರಾಷ್ಟ್ರೀಯ ಚಿತ್ತವೃತ್ತಿಗಳ ವಿನಿಮಯ, (೩) ಹಿಂದುಳಿದ ಜನಾಂಗಗಳ ಉದ್ಧಾರ, (೪) ಶೈಕ್ಷಣಿಕ ಮಟ್ಟದ ಉನ್ನತಿ, (೫) ಉಗ್ರ ರಾಷ್ಟ್ರೀಯ ಭಾವನೆಗಳ ನಿಗ್ರಹ ಈ ವಿವಿಧ ಕಾರ್ಯಕ್ರಮಗಳ ಅಂತಿಮ ಉದ್ದೇಶವೇನೆಂದರೆ ಅಂತಾರಾಷ್ಟ್ರೀಯ ಸೌಹಾರ್ದವಲ್ಲದೆ ಬೇರೇನೂ ಅಲ್ಲ ಎಂದು ನಿರ್ದಿಷ್ಟವಾಗಿ ಹೇಳಬಹುದು

ಅಂತಾರಾಷ್ಟ್ರೀಯ ಜ್ಞಾನವು ವಿದ್ಯಾಭ್ಯಾಸದ ಮುಖ್ಯಾಂಶವಾಗಿರಬೇಕೆಂದು ಪ್ರತಿಪಾದಿಸಲಾಗುವ ತತ್ವವು ಶಿಕ್ಷಣದ ಚರಿತ್ರೆಯಲ್ಲಿ ಅಷ್ಟೇನೂ ಹೊಸತಲ್ಲ. ಕೊಮಿನಿಯಸ್ (೧೫೯೨-೧೬೭೦) ಈ ತತ್ವದ ಮೂಲ ಪ್ರಚೋದಕನಾಗಿದ್ದನು ವಿಶ್ವಶಾಂತಿ ಮತ್ತು ಸಾಮರಸ್ಯಗಳಿಗೆ ರಾಷ್ಟ್ರೀಯ ಮಿತಿಗಳು ಇರಬಾರದೆಂದೂ, ರಾಷ್ಟ್ರೀಯತೆಯ ಸೀಮೆಯನ್ನು ದಾಟಿ ವಿಶ್ವವ್ಯಾಪಿಯಾಗಿ ಹರಡುವ ಜ್ಞಾನವು ಶಿಕ್ಷಣದ ಮುಖ್ಯ ಭಾಗವಾಗಿರಬೇಕೆಂದೂ ಕೊಮಿನಿಯಸ್ ಬಗೆದಿದ್ದನು. ಪ್ರತಿವ್ಯಕ್ತಿಗೆ ಪ್ರತಿ ಒಂದು ಜ್ಞಾನವನ್ನೂ ಕಲಿಸಬೇಕೆನ್ನುವ "pan-sophism" ಎಂಬ ತತ್ವವು ಯುರೋಪಿನಲ್ಲಿ ಒಮ್ಮೆ ಪ್ರಚಲಿತವಾಗಿತ್ತು ಆದರೆ ವಿದ್ಯಾಭ್ಯಾಸವು ಸಂಪೂರ್ಣವಾಗಿ ರಾಷ್ಟ್ರೀಕೃತ ವಿಷಯವಾಗಿದ್ದ ಕೆಲವು ರಾಜ್ಯಗಳಲ್ಲಿ, ವಿದ್ಯಾಕ್ಷೇತ್ರಗಳು ಉಗ್ರ ರಾಜ್ಯನೀತಿಗಳಲ್ಲಿ ಸಿಲುಕಿ, ತನ್ನ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಗಳನ್ನು ಕಳೆದುಕೊಂಡುವು ಸರ್ವಾಧಿಕಾರಿಗಳ ಆಶ್ರಯದಲ್ಲಿ ಬೆಳೆದುಬಂದ ರಾಜ್ಯನೀತಿಯು ವಿದ್ಯಾಭ್ಯಾಸವನ್ನು ಸ್ವಾರ್ಥಸಾಧನೆಗಾಗಿ ಬಳಸಿಕೊಳ್ಳುತ್ತಿತ್ತು, ಅಲ್ಲದೆ, ಅದರ ಮೂಲಕ ರಾಜಕೀಯ ನೀತಿಗಳನ್ನು ಒತ್ತಾಯಪೂರ್ವಕವಾಗಿ ಹರಡಿಸುತ್ತಿತ್ತು; ಇದರಿಂದ ಅಂತರ್ಜನಾಂಗ ದ್ವೇಷಗಳನ್ನು ಹರಡಿಸುವುದೂ ಸಾಧ್ಯವಾಗಿತ್ತು. ಆದರೆ, ಆಧುನಿಕ ವಿದ್ಯಾಭ್ಯಾಸವು ರಾಷ್ಟ್ರ ಅಥವಾ ವ್ಯಕ್ತಿಯ ಸ್ವಾರ್ಥಸಾಧನೆಗೆ ಮೀಸಲಾಗಿರಿಸುವ ಸಾಧನವಾಗಿಲ್ಲ, ಅದು ಸಮಾಜಕ್ಕೆ ಉಪಯುಕ್ತವಾಗುವ ಒಂದು ಸಾಧನ, ರಾಷ್ಟ್ರಕಲ್ಯಾಣವು ಮಾತ್ರ ಅದರ ಗುರಿಯಲ್ಲ, ಅಂತಾರಾಷ್ಟ್ರೀಯ ಜ್ಞಾನ ಪ್ರಸಾರವೂ ಅದರ ಧ್ಯೇಯವಾಗಿದೆ, ಕೇವಲ ರಾಷ್ಟ್ರೀಯ ಹಿತಚಿಂತನೆಯು ಅದರ ಉದ್ದೇಶ್ಯವಲ್ಲ, ಮಾನವ ಜನಾಂಗದ ಅಭ್ಯುದಯವೇ ಅಂತಹ ವಿದ್ಯಾಭ್ಯಾಸದ ಅಂತಿಮ ಸಿದ್ಧಿಯಾಗಿದೆ. ಕಾರ್ಡಿನಲ್ ನ್ಯೂಮೇನ್ ಅವರು ತಮ್ಮ 'Idea of a University' ಎಂಬ ಪುಸ್ತಕದಲ್ಲಿ ವಿದ್ಯಾ ವಲಯಗಳ ಸ್ವಾತಂತ್ರ್ಯದ ಕುರಿತು ರಸವತ್ತಾಗಿ ವಿಮರ್ಶೆ ಮಾಡಿದ್ದಾರೆ ವಿದ್ಯಾ ಸಂಸ್ಥೆಗಳು ತಮ್ಮ ಕ್ರಿಯಾ ಶಕ್ತಿ ಮತ್ತು ಪ್ರೇರಕ ಶಕ್ತಿಗಳನ್ನು ರಾಷ್ಟ್ರೀಯ ಧೋರಣೆಗಳ ಸಂಕುಚಿತ ಕ್ಷೇತ್ರಗಳಲ್ಲಿ ಮೀಸಲಾಗಿರಿಸದೆ, ಇಡೀ ಮಾನವ ಜನಾಂಗಕ್ಕೆ ಅನ್ವಯಿಸುವ ಜಾಗತಿಕ ವೈಶಾಲ್ಯದಲ್ಲ' ಪ್ರಯೋ

(೧೦ನೇ ಪುಟ ನೋಡಿರಿ)

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.,
ಪ್ರಧಾನ ಕಚೇರಿ ಉಡುಪಿ — ಸ್ಥಾಪನೆ 1925

ನಮ್ಮ ಬರೋಡ ಶಾಖೆಯು ತಾ 9-2-58ರಲ್ಲೂ
ಮಂಗಳೂರು (ಬಂದರ) ಶಾಖೆಯು 20-2-58ರಲ್ಲೂ
ತೆರೆಯಲ್ಪಟ್ಟವು

ಶೀಘ್ರದಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು

1) ಬೆಂಗಳೂರು (ಶೇಷಾದ್ರಿಪುರಂ) 5) ಬೆಳಗಾವ್ (ಕೇಂಪ್)
2) ಬೆಂಗಳೂರು (ಚಿಕ್ಕಪೇಟೆ) 6) ಕೊಪ್ಪ (ಚಿಕ್ಕಮಗಳೂರು ಜಿಲ್ಲೆ)
3) ಬೆಂಗಳೂರು (ಕೆಂಟೋನ್‌ಮೆಂಟ್) 7) ಹುನಗುಂದ (ಬಿಜಾಪುರ ಜಿಲ್ಲೆ)
4) ಬೆಳಗಾವ್ (ಶಾಪುರ) 8) ತಿಪ್ಟೂರು (ತುಮ್ಕೂರು ಜಿಲ್ಲೆ)
9) ಬೊಂಬಾಯಿ (ಮಾಂಡ್ವಿ)

ಟಿ ಎ ಪೈ, ಬಿ ಕಾಂ. (ಬೊಂ)
ಎ ಐ ಬಿ (ಇನ್‌ಸ್ಟಿಟ್ಯೂಟ್ ಆಫ್ ಬೇಂಕರ್ಸ್, ಲಂಡನ್)
ಜನರಲ್ ಮೆನೇಜರ್.

ಡಾ। ಟಿ ಮಾಧವ ಪೈ,
ಎಂ ಬಿ. ಬಿ ಎಸ್.
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ಬಿಳೀತೊನ್ನು ಮತ್ತು ಕುಷ್ಟರೋಗ

ಈ ಔಷಧವನ್ನು ಕೆಲವು ದಿನಗಳು ಉಪಯೋಗಿಸುವುದರಿಂದ ಬಿಳೀತೊನ್ನು ಮತ್ತು ಕುಷ್ಟರೋಗ ಶೀಘ್ರದಲ್ಲಿಯೇ ಗುಣವಾಗುವುದು ನೀವು ಅನೇಕ ಡಾಕ್ಟರುಗಳು, ಹಕೀಮರು, ಕವಿರಾಜರು ಮತ್ತು ಜಾಹೀರಾತುಗಳಿಂದ ನಿರಾಶರಾಗಿದ್ದರೆ, ಇದನ್ನು ಉಪಯೋಗಿಸಿ ಈ ಭಯಂಕರ ರೋಗವನ್ನು ನಿವಾರಿಸುತ್ತದೆ, ಬೆಲೆ ರೂ ೩ ೦-೦. ಇಂಟರ್ನಲ್ ಮೆಡಿಸಿನ್ ರೂ. ೬ ೦-೦

S. S. GUPTA & Co,
N R P O. KATRI SARAI (GAYA)

ಭಾರತ ಕಲಾನಿಧಿ–
ಕೋಟಾದ ವಸ್ತುಸಂಗ್ರಹಾಲಯ

ಕೋಟಾ (ರಾಜಾಸ್ಥಾನದ) ವಸ್ತು ಸಂಗ್ರಹಾಲಯವು ಮುಖ್ಯವಾಗಿ ಆ ಪ್ರದೇಶದ ಸಂಸ್ಕೃತಿಯನ್ನು ಪ್ರತಿಪಾದಿಸುತ್ತದೆ. ಹಾಡೋತಿ ಸಂಸ್ಕೃತಿಯಲ್ಲಿ ಆಸಕ್ತಿಯುಳ್ಳವರು, ಆ ಸಂಸ್ಕೃತಿಯನ್ನು ಸಮೃದ್ಧ ರೂಪದಲ್ಲಿ ಆ ವಸ್ತು ಸಂಗ್ರಹಾಲಯದಲ್ಲಿ ಕಾಣಬಹುದು.

ಈ ವಸ್ತು ಸಂಗ್ರಹಾಲಯವು ಮೊದಲು ಬ್ರಿಜವಿಲಾಸ ಗಾರ್ಡನ್ಸ್‌ನಲ್ಲಿತ್ತು. ಅದನ್ನು ಈಗಿರುವ ಹವಾಮಹಲ್‌ಗೆ ೧೯೫೧ರಲ್ಲಿ ತರಲಾಯಿತು. ಆರಂಭದಲ್ಲಿ ಈ ವಸ್ತು ಸಂಗ್ರಹಾಲಯದಲ್ಲಿ ಪ್ರತಿಮೆಗಳು ಮಾತ್ರವಿದ್ದವು ಇತ್ತೀಚೆಗೆ ಈ ವಸ್ತು ಸಂಗ್ರಹಾಲಯದಲ್ಲಿ ಹಸ್ತಪ್ರತಿಗಳು, ಪ್ರಾಚೀನ ಶಸ್ತ್ರಾಸ್ತ್ರಗಳು, ಪೋಷಾಕುಗಳು ಮತ್ತು ಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಸಂಗ್ರಹಾಲಯವನ್ನು ಈಗ ಹಲವು ಭಾಗಗಳನ್ನಾಗಿ ವಿಂಗಡಿಸಲಾಗಿದೆ ಪ್ರಾಚ್ಯ ವಸ್ತುಗಳು, ಪ್ರತಿಮೆಗಳ, ಪುರಾತನ ನಾಣ್ಯಗಳು, ಶಿಲಾ ಶಾಸನಗಳು ಮೊದಲನೆಯ ಭಾಗದಲ್ಲಿವೆ ಸಚಿತ್ರ ಹಾಗೂ ಇತರ ಹಸ್ತ ಪ್ರತಿಗಳು ಇನ್ನೊಂದು ಭಾಗದಲ್ಲಿವೆ ಹಾಡೋತಿ ವರ್ಣ ಚಿತ್ರಗಳು, ರಾಜಾಸ್ಥಾನಿ ಶೈಲಿಯಲ್ಲಿ ಉಪಶೈಲಿಗಳೆನಿಸಿದ ಜಯಪುರ ಮತ್ತು ಉದಯಪುರ ಶೈಲಿಯ ಚಿತ್ರಗಳು ಮೂರನೆಯ ಭಾಗದಲ್ಲಿರುವುವು ಕೋಟಾದ ಹಿಂದಿನ ರಾಜರುಗಳು ಉಪಯೋಗಿಸುತ್ತಿದ್ದ ಪುರಾತನ ಶಸ್ತ್ರಾಸ್ತ್ರಗಳು ಮತ್ತು ಪೋಷಾಕುಗಳು ಹಾಗೂ ಮುದ್ರೆಗಳು ಮುಂತಾದ ಇತರ ವಸ್ತುಗಳನ್ನು ಇನ್ನುಳಿದ ಎರಡು ಭಾಗಗಳಲ್ಲಿಡಲಾಗಿವೆ

ಈ ಕಟ್ಟಡದ ಮೊದಲಂತಸ್ತನ್ನು ಪ್ರಾಚ್ಯ ವಸ್ತುಗಳನ್ನು ಅದರಲ್ಲೂ ಮುಖ್ಯವಾಗಿ ಪ್ರತಿಮೆಗಳನ್ನು ಇಡುವುದಕ್ಕೆ ಉಪಯೋಗಿಸಿಕೊಳ್ಳಲಾಗಿದೆ ಇವುಗಳನ್ನು ಒಂದು ಕೋಣೆ ಮತ್ತು ಎರಡು ವರಾಂಡಗಳಲ್ಲಿ ಓರಣವಾಗಿ ಇಡಲಾಗಿದೆ ಪಕ್ಕದ ಕೋಣೆಯಲ್ಲಿ ನಾಣ್ಯಗಳು ಮತ್ತು ಶಾಸನಗಳು ಇರುವುವು ದೊಡ್ಡ ಹಾಲಿನಲ್ಲಿ ಚಿತ್ರಗಳು ಪೋಷಾಕುಗಳು, ಶಸ್ತ್ರಾಸ್ತ್ರಗಳು ಮತ್ತು ಇತರ ವಸ್ತುಗಳನ್ನು ಇಡಲಾಗಿದೆ.

ಎರಡನೆಯ ಅಂತಸ್ತನ್ನು ಹಸ್ತಪ್ರತಿಗಳನ್ನು ಇಡುವುದಕ್ಕೆ ಬಳಸಿಕೊಳ್ಳಲಾಗಿದೆ ಹಸ್ತಪ್ರತಿಗಳನ್ನು ಕ್ರಿಮಿಕೀಟಗಳಿಂದ ಸಂರಕ್ಷಿಸುವ ರೀತಿ, ವಿಧಾನಗಳನ್ನು ಸೂಚಿಸುವ ನಕ್ಷೆಗಳನ್ನು ಆ ವಿಭಾಗದಲ್ಲಿ ಇಡಲಾಗಿದ ಹಸ್ತಪ್ರತಿಗಳಿಗೆ ಗದ್ದಲು ಮುಂತಾದವು ಬರದಂತೆ ನಿರೋಧಿಸುವ ಕಾರ್ಯವನ್ನು ನಡೆಸುವಂತಹ ಒಂದು ವಿಭಾಗವೂ ಅಲ್ಲಿರುವುದು.

ಆ ಸಂಗ್ರಹಾಲಯದ ಪ್ರಾಚ್ಯ ವಸ್ತು ವಿಭಾಗದಲ್ಲಿ ಬಡೋಲಿಯ ಶೇಷಶಾಯಿ ವಿಷ್ಣು, ಬಡ್ವಾದ ನಾಲ್ಕು ಯಜ್ಞ ಸ್ತಂಭಗಳು, ಸೂರ್ಯ, ವಿಷ್ಣು ಮತ್ತಿತರ ದೇವತೆಗಳ ಪ್ರತಿಮೆಗಳು ಮುಂತಾದವೆಲ್ಲ ಇರುವುವು ಈ ಸಂಗ್ರಹಾಲಯದಲ್ಲಿರುವ ಅನೇಕ ಶಿಲ್ಪಕಲಾ ಕೃತಿಗಳು ಕ್ರಿ ಶ ಎಂಟನೆಯ ಶತಮಾನದಿಂದ ೧೫ನೆಯ ಶತಮಾನದವರೆಗಿನವು.

ಶಾಸನ ವಿಭಾಗದಲ್ಲಿ ಯಾವ ಶಿಲಾ ಶಾಸನಗಳು ಇಲ್ಲದಿದ್ದರೂ, ಮುಖ್ಯ ಶಾಸನಗಳ ಛಾಯಾಂತರಗಳ ಸಂಗ್ರಹವನ್ನು ಇಡಲಾಗಿದೆ ನಾಣ್ಯಗಳ ವಿಭಾಗದಲ್ಲಿ ಮೊಘಲರ ಕಾಲದ ನಾಣ್ಯಗಳನ್ನು ಇಡಲಾಗಿದೆ ಹಿಂದಿನ ರಾಜಾಸ್ಥಾನ ಮತ್ತು ಅದರ ಸುತ್ತು ಮುತ್ತಿನ ರಾಜ್ಯಗಳ ಕೆಲವು ನಾಣ್ಯಗಳನ್ನು ಸಹ ಇಲ್ಲಿ ಸಂಗ್ರಹಿಸಿಡಲಾಗಿದೆ

ಚಿತ್ರಕಲಾ ಕೃತಿಗಳ ಕೋಣೆಯಲ್ಲಿ ಉದಯಪುರ ಮತ್ತು ಹಾಡೋತಿ ಶೈಲಿಯ ಅಪೂರ್ವ ಕಲಾಕೃತಿಗಳನ್ನು ಇಡಲಾಗಿದೆ ಹಾಡೋತಿ ಶೈಲಿಯ ಚಿತ್ರಗಳು, ಹಸ್ತ ಪ್ರತಿಗಳು ಮತ್ತು ಶಿಲ್ಪಕಲಾ ಕೃತಿಗಳು ಈ ವಸ್ತು ಸಂಗ್ರಹಾಲಯದಲ್ಲಿ ಹೇರಳವಾಗಿರುವುವು ಭಾಗವತ ದೃಶ್ಯಗಳನ್ನು ನಿರೂಪಿಸುವ ಚಿತ್ರಗಳು, ಮೊಘಲರ ಕಾಲದ ಆರಂಭದವು, ಅಥವಾ ಕಲಾ ಪರಿಭಾಷೆಯಲ್ಲಿ ಹೇಳುವುದಾದರೆ, ಜಹಾಂಗೀರನ ಕಾಲದವು, ಕೋಟಾ ಮತ್ತು ಜಯಪುರದ ಶೈಲಿಯ ಅನೇಕ ಚಿತ್ರಗಳನ್ನು ಈ ವಿಭಾಗದಲ್ಲಿ ಓರಣವಾಗಿಡಲಾಗಿದೆ ಈ ಚಿತ್ರಗಳಲ್ಲದೆ ಕೋಟಾ ರಾಜಮನೆತನದವರು ಉಪಯೋಗಿಸುತ್ತಿದ್ದ ಪರಂಪರೆಯ ನಮೂನೆಗಳನ್ನು ಸೂಚಿಸುವ ಪೋಷಾಕುಗಳನ್ನು ಆಗಿನ ಕಾಲದ ಸ್ತ್ರೀ ಪುರುಷರು ಉಪಯೋಗಿಸುತ್ತಿದ್ದ ಉಡುಪುಗಳನ್ನೂ ಅಲ್ಲಿಡಲಾಗಿದೆ.

ಈ ವಸ್ತು ಸಂಗ್ರಹಾಲಯದ ಶಸ್ತ್ರಾಸ್ತ್ರ ವಿಭಾಗದಲ್ಲಿ ಮಧ್ಯಕಾಲೀನ ಸೈನಿಕರು ಉಪಯೋಗಿಸುತ್ತಿದ್ದ ಕತ್ತಿಗಳು ವಿಚಿತ್ರರೀತಿಯ ಬಂದೂಕಗಳು ಇರುವುವು

ಕೋಟಾ ವಸ್ತು ಸಂಗ್ರಹಾಲಯದಲ್ಲಿ ಅನೇಕ ಅಪೂರ್ವ ಹಸ್ತಪ್ರತಿಗಳನ್ನು ಇಡಲಾಗಿದೆ ಅತಿ ಸಣ್ಣ ಅಕ್ಷರಗಳಲ್ಲಿ ಬರೆದ ಹಸ್ತಪ್ರತಿಗಳೂ, ಅತ್ಯಂತ ಸುಂದರವಾಗಿ ಚಿತ್ರಿಸಿರುವ ಹಸ್ತಪ್ರತಿಗಳೂ ಇಲ್ಲಿರುವುವು ಈ ಹಸ್ತಪ್ರತಿಗಳು ಹಿಂದಿ ಮತ್ತು ಸಂಸ್ಕೃತ ಲಿಪಿಗಳೆರಡರಲ್ಲಿಯೂ ಇರುವುವು. ಈ ಹಸ್ತಪ್ರತಿಗಳು ಮತೀಯ ವಿಚಾರಗಳಿಂದ ಹಿಡಿದು ಸಂಗೀತ ಶಾಸ್ತ್ರದವರೆಗೆ ಸಂಬಂಧಪಟ್ಟವೆ. ಶ್ರೀಮದ್ ಭಾಗವತದ ಎರಡು ಅಪೂರ್ವ ಸಂಪುಟಗಳು ಇಲ್ಲಿವೆ. ಅವುಗಳಲ್ಲಿ ಒಂದರಲ್ಲಿ ಅದರ ಪ್ರತಿಯೊಂದು ಪುಟದಲ್ಲಿಯೂ ವರ್ಣರಂಜಿತ ಚಿತ್ರಗಳು ಇರುವುವು. ಇನ್ನೊಂದು ಸಂಪುಟದಲ್ಲಿ ಚಿನ್ನದ ಕೆಲಸ ಮಾಡಲಾಗಿದೆ ಅದನ್ನು ಅತ್ಯಂತ ಸಣ್ಣ ಲಿಪಿಯಲ್ಲಿ ಬರೆಯಲಾಗಿದೆ

ವಾರದ ಸುಹಾನುಭಾವ–
ಶ್ರೀ. ಎಲ್ಸಬರ್ಥ ಬಂಕರ

ಶ್ರೀ ಎಲ್ಸಬರ್ಥ ಬಂಕರರು ಭಾರತದಲ್ಲಿರುವ ಅಮೆರಿಕೆಯ ರಾಯಭಾರಿಗಳಾಗಿ ದ್ದಾರೆ ಪ್ರತಿಯೊಬ್ಬ ರಾಜದೂತನೂ ತನ್ನ ದೇಶದ ಪ್ರತಿನಿಧಿತ್ವಾವಧಿಯಲ್ಲಿಯೂ ಉಭಯದೇಶಗಳ ಮಧ್ಯೆ ಅಧಿಕಾಧಿಕ ಸಮಾತನೆಯ ವಾತಾವರಣವನ್ನು ನಿರ್ಮಿಸುವುದು ತನ್ನ ಕರ್ತವ್ಯವೆಂದು ತಿಳಿಯಬೇಕು. ಶ್ರೀ ಬಂಕರರು ತಮ್ಮ ನೂತನ ಪದವನ್ನೇರುವ ಮೊದಲು ಸ್ವದೇಶದಲ್ಲಿನ ಮಹಾನ್ ಔದ್ಯೋಗಿಕ ವ್ಯಕ್ತಿಯಾಗಿದ್ದರು ಮತ್ತು ರೆಡ್‌ಕ್ರಾಸಿನ ಗಣನೀಯ ಪ್ರವರ್ತಕರಾಗಿದ್ದರು ಈ ಎರಡು ಕರ್ತವ್ಯಗಳೂ ಮಾನವನನ್ನು ವಿನಮ್ರನನ್ನಾಗಿ ಮಾರ್ಪಡಿಸುವ ಶಕ್ತಿಯುಕ್ತವಾಗಿರುವುವು. ಇದರಿಂದಾಗಿಯೇ ಶ್ರೀ ಬಂಕರರು ತಮ್ಮ ದೇಶದ ನೀತಿಯನ್ನೂ 'ಅಮೆರಿಕೆಯ ನೀತಿ ಕಠೋರವಾಗಿಲ್ಲ'ವೆಂಬುದನ್ನು ಜನತೆ ತಿಳಿಯುವಂತೆ 'ವಿನಮ್ರ'ವಾಗಿಸಿದ್ದಾರೆ.

ಶ್ರೀ ಬಂಕರರು ಅಮೆರಿಕನ್ ರಾಷ್ಟ್ರಾಧ್ಯಕ್ಷ ಶ್ರೀ ಐಸನ್ ಹಾವರರಿಂದ ೧೯೫೭ನೆ ನವಂಬರ ೨೮ರಂದು ಭಾರತದಲ್ಲಿ ಅಮೆರಿಕೆಯ ರಾಜದೂತನಾಗಿ ನಿಯುಕ್ತರಾಗಿದ್ದರು ಭಾರತದಲ್ಲಿ ಹಾಗೂ ಇನ್ನಿತರ ವಿದೇಶಗಳಲ್ಲಿ ಈ ಮಧುರ ವ್ಯಕ್ತಿತ್ವವಿರುವ ವ್ಯಕ್ತಿಯನ್ನು ನಿಯೋಜಿಸಿರುವುದು ಸಂತೋಷದಿಂದ ಸ್ವಾಗತಿಸಲ್ಪಟ್ಟಿತ್ತು "ವಿಶ್ವವು ತನ್ನ ನೇತೃತ್ವಕ್ಕಾಗಿ ಅಮೆರಿಕೆ ಮತ್ತು ಭಾರತಗಳತ್ತ ದೃಷ್ಟಿಸುತ್ತಿದೆ" ಎಂದವರು ಭಾರತಕ್ಕೆ ಆಗಮಿಸುವ ಮೊದಲು ನ್ಯೂಯಾರ್ಕಿನಲ್ಲಿ ನುಡಿದಿದ್ದರು. ಅಮೆರಿಕೆಯು ಭೌತಿಕ ದೃಷ್ಟಿಯಿಂದ ವಿಶ್ವನಾಯಕತನವನ್ನು ಸಂಪಾದಿಸಿಕೊಂಡರೆ, ಆಧ್ಯಾತ್ಮಿಕ ದೃಷ್ಟಿಯಿಂದ ಭಾರತವು ಆಸ್ಥಾನವನ್ನು ಹೊಂದಲು ಯೋಗ್ಯವಾಗಿದೆ ಎಂದೇ ಶ್ರೀ ಬಂಕರರ ಅಭಿಪ್ರಾಯವಿರಬಹುದು ಇವರು ಕಳೆದ ವರ್ಷ ಫೆಬ್ರವರಿ ತಿಂಗಳ ೧೬ನೆ ದಿನಾಂಕ ಭಾರತದಲ್ಲಿ ಪಾದಾರ್ಪಣೆ ಮಾಡಿದರು

ನಮ್ಮ ಹಿಂದಿನ ಅರ್ಥ ಮಂತ್ರಿ ಶ್ರೀ ಟಿ. ಟಿ ಕೃಷ್ಣಮಾಚಾರಿಯವರು ಅಮೆರಿಕೆಯನ್ನು ಸಂದರ್ಶಿಸಿದ ನಂತರ ಆ ದೇಶವು ಕೊಡಮಾಡಿದ ನಮ್ಮ ಪಂಚವಾರ್ಷಿಕ ಯೋಜನೆಗೆ ಸಹಾಯವಾಗಿ ಸಾಲದ ಮೊತ್ತವನ್ನು ಸಂಪಾದಿಸಿಕೊಳ್ಳುವಲ್ಲಿ ಶ್ರೀ ಬಂಕರರ ಪ್ರಯಾಸವೂ ಕಡಿಮೆಯದ್ದಿಲ್ಲವೆಂದು ಕೆಲವರೆನ್ನುತ್ತಾರೆ

ಅಮೆರಿಕೆಯ ಶಾಸ್ತ್ರ-ನೀತಿಯ ಸಂಬಂಧದಲ್ಲಿ ಭಾರತ ಸರಕಾರಕ್ಕೆ ಸ್ಪಷ್ಟೀಕರಣದ ಆವಶ್ಯಕತೆ ಬಿದ್ದಾಗ ಶ್ರೀ ಬಂಕರರು ತಮ್ಮ ದೇಶಕ್ಕೋಸ್ಕರ ಮುಂದುವರಿದು ಪಾಕಿಸ್ತಾನವು ಅಮೆರಿಕೆಯ ಶಸ್ತ್ರಾಸ್ತ್ರಗಳ ಉಪಯೋಗವನ್ನು ಭಾರತದ ವಿರುದ್ಧವಾಗಿ ಮಾಡಲಾರದು ಮತ್ತು ಪಾಕಿಸ್ತಾನಕ್ಕಾದರೂ ಅಮೆರಿಕೆಯು ಒಂದು ಮಿತ ಪ್ರಮಾಣದಲ್ಲಿಯೇ ಶಸ್ತ್ರಾಸ್ತ್ರಗಳ ಪೂರೈಸುತ್ತವೆ ಎಂದು ಸ್ಪಷ್ಟೀಕರಿಸಿದರು.

ಕಳೆದ ವರ್ಷ ಎಪ್ರಿಲ್ ತಿಂಗಳ ೨೧ನೆ ದಿನಾಂಕ ರಾಜಧಾನಿಯಲ್ಲಿ ಸೇರಿದ ವ್ಯಾಪಾರಿ ಮತ್ತು ಔದ್ಯೋಗಿಕೋದ್ಯಮಿಗಳ ಸಭೆಯಲ್ಲಿಯೂ ಭಾಷಣ ಮಾಡಿದ್ದರು ಭಾರತ-ಅಮೆರಿಕೆಗಳ ನಡುವೆ ಬೆಳೆದಿರುವ ಮತ ಭೇದಗಳನ್ನು ದೂರಮಾಡುವ ಯಾವ ನು ಅವಸರವನ್ನೂ ಶ್ರೀ ಬಂಕರರು ಕಳೆದ ಕೊಂಡಿಲ್ಲ ಮತ್ತಿವರಿಂದಾಗಿ ಎರಡೂ ದೇಶಗಳನ್ನು ಸ್ನೇಹಬಂಧದಿಂದ ಕಟ್ಟುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ

ಶ್ರೀ ಬಂಕರರಂತಹ ರಾಯಭಾರಿಗಳು ಎಲ್ಲ ದೇಶಗಳಿಂದಲೂ ಬರಬೇಕು, ಮತ್ತು ಪರಸ್ಪರ ಸೌಹಾರ್ದಮಯ ಸನ್ನಿವೇಶಗಳನ್ನು ನಿರ್ಮಿಸಲು ಯತ್ನಿಸಬೇಕು ಹಾಗಾದಲ್ಲಿ ವಿಶ್ವಸ್ನೇಹ ತನ್ಮೂಲಕ ವಿಶ್ವಶಾಂತಿಯು ಶೀಘ್ರವಾಗಿ ಸಾಧಿಸಲ್ಪಡುತ್ತದೆಂದು ಧೈರ್ಯದಿಂದ ಹೇಳಬಹುದು.

ಬೇಂಕು ವ್ಯವಹಾರಗಳಲ್ಲಿ
ನೀವು ಬಯಸುವ
ಅತ್ಯಾಧುನಿಕ, ಅತ್ಯುತ್ತಮ ಮತ್ತು ಶೀಘ್ರ ಸೇವೆಗಳಿಗಾಗಿ
"ಕೊರ್ಪೊರೇಶನ್"
ಬೇಂಕನ್ನು ನಿಮ್ಮದಾಗಿಯೇ ಭಾವಿಸಿ, ನೀವು ಯಾವಾಗಲೂ ಆಶ್ರಯಿಸಬಹುದು
ದಿ. ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ಶೆಡ್ಯೂಲ್ಡ್ ಬೇಂಕು)
ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ ಭಾರತ)

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. S 1/1959

ರಾಮಕೃಷ್ಣ ಅತಾಳ — ವಾದಿ

ಸಂತಾನ ಡಿ'ಶಿಲ್ವ — ಪ್ರತಿವಾದಿ

ಕುಂದಾಪುರ ತಾಲೂಕು ಉಪ್ಪಿನಕುದ್ರು ಗ್ರಾಮದಲ್ಲಿರುವ ಪಾಸ್ಕಲ ಡಿ'ಶಿಲ್ವರ ಮಗ ಸಂತಾನ ಡಿ'ಶಿಲ್ವರಿಗೆ ಈ ಮೂಲಕ ತಿಳಿಸಪಡಿಸುವುದೇನೆಂದರೆ

ಪ್ರತಿವಾದಿಯು ವಾದಿಗೆ ಬರೆದುಕೊಟ್ಟ ಮೂಲಗೇಣಿ ಎಗ್ರಿಮೆಂಟು ಶರ್ತು ಪ್ರಕಾರ ಕಳೆದ ಮನ್ಮಥ, ದುರ್ಮುಖಿ ಸಂವತ್ಸರಗಳ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬರತಕ್ಕ ಗೇಣಿಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ವಾಕ್ಲು ಮಾಡಿದ ಮೇಲಿನ ದಾವೆಯು ತಾ 15–3 58ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿನ್ನ ಮೇಲಿನ ಕೋರ್ಟಿನ ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ಈ ಮೂಲಕ ತಿಳಿಯಪಡಿಸಿರುತ್ತದೆ.

G V Aithal,
Advocate for Plff

Date 1—3—1958 Coondapoor

ಸಾಹಿತಿಯು ಲೇಖನಿಯಲ್ಲಿ ಅಜಾದ-

ಉರ್ದು ಸಾಹಿತ್ಯದ ಒರತೆಗೆ ಕೊರತೆ

ಜಗತ್ತಿನ ಇತಿಹಾಸದಲ್ಲಿ ಸುಪ್ರಸಿದ್ಧ ದಿನವೆನಿಸಿದ ೯ನೆ ಆಗೋಸ್ತು ೧೯೪೨ರ ಮರುದಿನ ಮೌಲಾನಾ ಅಜಾದರು ತಮ್ಮೊಬ್ಬ ಮಿತ್ರನಿಗೆ ಕಾಗದ ಬರೆಯುತ್ತ," ಒಂಬತ್ತು ತಿಂಗಳುಗಳ ಪೂರ್ವದಲ್ಲಿ ನೈನೀ ಸೆಂಟ್ರಲ್ ಜೇಲಿನ ಬಾಗಿಲು ನನಗೆ ತೆರೆದಿತ್ತು. ನಿನ್ನೆಯದಿನ ಎರಡೂವರೆ ಗಂಟೆಗೆ ಅಹಮ್ಮದನಗರ ಕೋಟೆಯ ಹಳೆಯ ಪದ್ದಾರಿಯು ನನಗಾಗಿ ನಿರ್ಬಂಧಿತವಾಗಿದೆ. ಪ್ರಪಂಚದ ಸಹಸ್ರವರ್ಣದ ಕಾರಖಾನೆಗಳಲ್ಲಿ ಅದೆಷ್ಟೋ ದ್ವಾರಗಳು ಮುಕ್ತವಾಗುತ್ತವೆ; ಹಾಗೆಯೇ ಎಷ್ಟೋ ದ್ವಾರಗಳು ಮುಚ್ಚಲ್ಪಡುತ್ತವೆ; ಆದರೆ ಮುಂದಕ್ಕೆ ತೆರೆಯಲ್ಪಡುತ್ತವೆ" ಎಂದಿದ್ದರು.

ಕಳೆದ ಫೆಬ್ರುವರಿ ೨೨ನೆಯ ದಿನಾಂಕ ಮೌಲಾನಾ ಸಾಹೇಬರಿಗೆ ಅಂತಹ ಒಂದು ಲೋಕದ ಬಾಗಿಲು ತೆರೆದು ಪುನಃ ಮುಚ್ಚಿತು. ಆದರೆ, ಹೀಗೆ ಮುಚ್ಚಿದ ಬಾಗಿಲು ಮುಂದೆಂದಿಗೂ ಮತ್ತೆ ತೆರೆಯಲಾರದು. ಮೌಲಾನಾರು ಮೃತ್ಯುವಶರಾದ್ದರಿಂದ ಕೊರತೆಯಾದ ಪ್ರತಿಭಾಶಾಲೀ ಸಾಹಿತ್ಯಕಾರನ ಸ್ಥಾನವು ಪೂರ್ತಿಯಾಗುವುದು ತೀರ ಕಠಿನವಾಗಿದೆ.

ಸೂಕ್ಷ್ಮ ವಿವೇಚನೆ ಮಾಡುವುದಾದರೆ, ಮೌಲಾನಾ ಅಜಾದರ ಮನಸ್ಸು ರಾಜನೀತಿಗಿಂತಲೂ ಅಧಿಕವಾಗಿ ಸಾಹಿತ್ಯದತ್ತ ಒಲಿದಿತ್ತೆನ್ನಬಹುದು. ಉತ್ತಮ ಗ್ರಂಥ ಮತ್ತು ಲಲಿತ ಕಲೆಗಳ ಸಹವಾಸದಲ್ಲಿ ಅವರು ರೂಕ್ಷ ರಾಜನೀತಿಯಿಂದ ದೂರವಿರಲು ಬಯಸುತಿದ್ದರು. ರಾಜನೀತಿಯ ಕೋಲಾಹಲಪೂರ್ಣ ವಾತಾವರಣದಲ್ಲಿ ಅವರು ಕೇವಲ ಕರ್ತವ್ಯಭಾವನೆಯಿಂದ ದುಡಿಯುತಿದ್ದರು. ತಮ್ಮ ಸ್ವಂತ ಪುಸ್ತಕ ಭಂಡಾರದಲ್ಲಿಯೇ ಅವರು ಶಾಂತಿ ಹೊಂದುತಿದ್ದರು. ಮಹಾತ್ಮಾ ಗಾಂಧಿ ಮತ್ತು ಶ್ರೀ ನೆಹರೂರವರ ಮೈತ್ರಿಯೇ ಅವರನ್ನು ರಾಜನೀತಿಯಲ್ಲಿ ತಲೆಹಾಕುವಂತೆ ಪ್ರೇರೇಪಿಸಿತು.

ಚಿತ್ತರಂಜನ ದಾಸರು ಮೃತ್ಯುವನ್ನಪ್ಪಿದ ಬಳಿಕ ಬಂಗಾಲದ ಜನತೆ ತಮ್ಮನ್ನು ಅನಾಯಕರೆಂದು ತಿಳಿದುಕೊಂಡಿದ್ದ ಸಮಯದಲ್ಲಿ ಮೌಲಾನಾರು ರಾಜಕಾರಣಕ್ಕಿಂತ ಸಾಹಿತ್ಯದತ್ತ ಆಸಕ್ತರಾಗಿದ್ದರೆಂಬುದು ಮೊತ್ತಮೊದಲಿಗೆ ಪ್ರಕಟವಾಯಿತು. ಆ ಸಮಯದಲ್ಲಿ ತೆರವಾದ ಜನನಾಯಕ ಸ್ಥಾನವನ್ನು ವಹಿಸಲು ಮೌಲಾನಾರಿಗಿಂತ ಹೆಚ್ಚಿನ ಜನಪ್ರಿಯ ಸಮರ್ಥ ವ್ಯಕ್ತಿ ಬೇರೆ ಇರಲಿಲ್ಲ. ಆದರೆ, ಮೌಲಾನರು ಅದಕ್ಕೆ ಸಿದ್ಧರಿರಲಿಲ್ಲ. ಆದುದರಿಂದ ಅವರನ್ನು ಸಮಾಧಾನ ಪಡಿಸಲು ಗಾಂಧೀಜೀಯವರು ದೀರ್ಘವಾದ ಮತ್ತು ಕಷ್ಟದಾಯಕವಾದ ಪ್ರಯಾಣವನ್ನು ಮಾಡಬೇಕಾಯಿತು. ಕಲಕತ್ತೆಯ ನಗರ ಸಭೆಯ ಸಭಾಪತಿ ಸ್ಥಾನ, ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಸ್ಥಾನ, ಮತ್ತು ಬಂಗಾಲದ ಧಾರಾಸಭೆಯಲ್ಲಿ ಸ್ವರಾಜ್ಯ ಪಕ್ಷದ ನೇತೃತ್ವಗಳನ್ನು ಮೌಲಾನಾರೇ ವಹಿಸಬೇಕೆಂಬ ಕೇಳಿಕೆಯು ಮಂಡಿಸಲ್ಪಟ್ಟಿತು. ಆದರೆ, ಮೌಲಾನಾರು ಈ ಅಪೂರ್ವ ಸಮ್ಮಾನವನ್ನು ತಿರಸ್ಕರಿಸಿದರು; ಮತ್ತು ಯಾವುದೇ ಕಾರಣದಿಂದ ತಮ್ಮ ಸಾಹಿತ್ಯ ಸೇವೆಯನ್ನು ನಿಲ್ಲಿಸುವುದು ಅವರಿಗೆ ಸರಿಬರಲಿಲ್ಲ. ಅವರು ತಮ್ಮ ಸಂಪೂರ್ಣ ಸಮಯವನ್ನು ಪವಿತ್ರ ಕುರಾನಿನ ಭಾಷ್ಯ ಬರೆಯುವುದರಲ್ಲಿ ಕಳೆದರು. ಅದು ಪ್ರಕಾಶಗೊಂಡಾಗ ಸಂಪೂರ್ಣ ಮುಸ್ಲಿಂ ಜನತೆ ಆದರದ ಸ್ವಾಗತ ನೀಡಿದರು. ಹಿಂದೂ ಸಮಾಜದಲ್ಲಿ ಲೋಕಮಾನ್ಯ ತಿಲಕರ ಗೀತಾ ರಹಸ್ಯದಂತೆಯೇ ಮುಸ್ಲಿಂ ಸಮಾಜದಲ್ಲಿ ಮೌಲಾನಾರು ಬರೆದ ಭಾಷ್ಯವು ಜನಪ್ರಿಯವೆನಿಸಿದೆ.

ತಮ್ಮ ಸ್ವಭಾವದ ವಿಶೇಷ ಪ್ರವೃತ್ತಿಗಳಿಂದಾಗಿ ಏಕರೂಪವಾಗಿ ಮೌಲಾನಾರು ಇರುವುದಿಲ್ಲವೆಂದು ಹಲವರೆನ್ನುತ್ತಾರೆ. ರಾಜಕೀಯ ಜಂಜಾಟಗಳಿಂದ ಅಲಿಪ್ತರಾಗಿದ್ದರೂ ಇವರಲ್ಲಿ ಉಕ್ಕಿ ಬರುತಿದ ರಾಷ್ಟ್ರೀಯತೆಯ ಹೊನಲಿಗೆ ಕೊರತೆಯಿರಲಿಲ್ಲ. ೧೯೨೦ರಲ್ಲಿ ಗಾಂಧೀಜೀಯವರು ಬ್ರಿಟಿಷ ಸರಕಾರದ ಸೈನ್ಯಕ್ಕೆ ಸೇರುವಂತೆ ಜನರನ್ನು ಕೇಳಿಕೊಂಡು ಅಂಶಿಕವಾಗಿ ಸರಕಾರದೊಡನೆ ಸಹಯೋಗದಿಂದಿರುವ ವೇಳೆಯಲ್ಲಿ ಮೌಲಾನಾರ ಸಂಪಾದಕತನದಲ್ಲಿ ಪ್ರಸಿದ್ಧಿಪಡಿಸಲ್ಪಡುತಿದ್ದ 'ಅಲ್ ಹಿಲಾಲ್' ಎಂಬ ಪತ್ರಿಕೆಯು ಅದಕ್ಕೆದುರಾಗಿ ಟೀಕೆ ಮಾಡಿತ್ತು. ಪರಿಣಾಮವಾಗಿ ಈ ಪತ್ರಿಕೆಯ ಕಾರ್ಯಾಲಯವನ್ನು ಜಪ್ತು ಮಾಡಿದರು. ಮತ್ತಿದರಿಂದಾಗಿ ಪತ್ರಿಕಾ ಪ್ರಕಟಣೆ ನಿಂತು ಹೋಯಿತು.

ಕಾಹಿರಾದ ಅತಿಪ್ರಾಚೀನ ಅಲ್ ಅಜಹರ್ ವಿಶ್ವವಿದ್ಯಾನಿಲಯದಲ್ಲಿ ಉಚ್ಚಶಿಕ್ಷಣವನ್ನು ಪಡೆದಿದ್ದ ಮೌಲಾನಾರು ತಮ್ಮ ೧೪ನೆ ವರ್ಷದಲ್ಲಿಯೇ ಪಾರಸಿ ಮತ್ತು ಅರಬೀ ಭಾಷೆಗಳಲ್ಲಿ ಪ್ರಭುತ್ವ ಸಂಪಾದಿಸಿದ್ದರು. ಈ ಎಳೆಯ ಪ್ರಾಯದಲ್ಲಿಯೇ ಅವರು ಧರ್ಮಶಾಸ್ತ್ರ ಮತ್ತು ದರ್ಶನ ಶಾಸ್ತ್ರಗಳ ಮಾನ್ಯ ಪಂಡಿತರಾಗಿ ಹೋಗಿದ್ದರು.

ಆಂಗ್ಲ ಕವಿ ಜಾರ್ಜ ಇಲಿಯೆಟನು ಧರ್ಮ ಮತ್ತು ರಾಜಕಾರಣ—ಇವೆರಡೇ ವಿದ್ವಾಂಸ ವ್ಯಕ್ತಿಗಳನ್ನು ತಮ್ಮೆಡೆಗೆ ಆಕರ್ಷಿಸುತ್ತವೆ ಎಂದು ಪದೇ ಪದೇ ಹೇಳಿದ್ದಾನೆ. ಮೌಲಾನಾ ಅಜಾದರು ಈ ಎರಡು ಕ್ಷೇತ್ರಗಳಲ್ಲಿಯೂ ಒಂದೇ ಬಾರಿ ಪ್ರಭುತ್ವ ಸ್ಥಾಪಿಸಿದ್ದರೆಂದರೆ, ಆಶ್ಚರ್ಯದ ಮಾತಾಗಬಹುದು. ಅಲ್ಲದೇ ಅವರ ಸಾಹಿತ್ಯ ಕೃತಿಗಳು, ಕಷ್ಟವಾಗಲಿಕ್ಕೆ ಅವರ ವಾಣಿಯಲ್ಲಿ ಹಿಂದಿನವೇ ರುಚಿಯಿತ್ತು—ಅವರ ಲೇಖನಿಯು ಸತತ, ಪ್ರೋತವಾಗಿ ಓಡುತಿತ್ತು.



ಅರಳಿದ ಪುಷ್ಪದಂತೆ
ತಾಜಾ ಮತ್ತು ಕಾಂತಿಯುಕ್ತರಾಗಿ ಇರಿ...
ಹಮಾಮ್‌ನ ಪರಿಮಳದಿಂದ ಕೂಡಿದೆ ಮತ್ತು ದೀರ್ಘಕಾಲ ಒದಗುತ್ತದೆ!
ಹಮಾಮ್ ಮೈ ಸಾಬೂನನ್ನು ಬಳಸಿ
ದಿ ಟಾಟಾ ಆಯಿಲ್ ಮಿಲ್ಸ್ ಕಂಪನಿ ಲಿಮಿಟೆಡ್
ಟಾಟಾ ತಯಾರಿಕೆ

೧೯೪೨—೪೩ರಲ್ಲಿ ಅಹಮದ ನಗರದ ಜೇಲಿನಿಂದ ಬರೆದ ಪತ್ರಗಳು ಸಂಗ್ರಹರೂಪದಲ್ಲಿ ಅಚ್ಚಾಗಿವೆ. 'ಗುಬಾರೇ ಖಾತಿರ್" ಎಂದಿದರ ಹೆಸರು. ಈ ಸಂಗ್ರಹವು ಪತ್ರ ಸಾಹಿತ್ಯದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಸಂಪಾದಿಸಿದೆ. ಸೆರೆಮನೆಯಿಂದ ಹೊರ ಬರುವ ಮೌಲಾನಾರ ಪತ್ರಗಳಲ್ಲಿ ವಿವಿಧ ವಿಷಯಗಳ ಉಲ್ಲೇಖವಿರುತ್ತದೆ. ಇವುಗಳಲ್ಲಿ ಬಿಳಿಯರ ಬಗೆಗೆ ಬರೆದ ವಿಷಯ ರಸವತ್ತಾಗಿದೆ.

"ನನ್ನ ಜೀವಮಾನದಲ್ಲಿ ನಾನು ಹಲವಾರು ಕಥೆಗಳನ್ನು ಬರೆದಿದ್ದೇನೆ. ಪ್ರಾಯಃ ನನ್ನ ಜೀವನವೇ ಒಂದು ಕಥೆಯಾಗಿ ಪರಿಣಮಿಸಬಹುದು. ಆದರೆ, ಇಂದು ನಾನು ನಿಮಗೆ ಬಿಳಿಯರ ಒಂದು ನೂತನ ಹಾಗೂ ವಿಸ್ಮಯಕಾರಕ ಕಥೆಯನ್ನು ಹೇಳುವೆ. ಈ ಅಹಮದ ನಗರದಲ್ಲಿ ನಮ್ಮನ್ನು ಸೆರೆಯಾಗಿಟ್ಟ ಜೇಲಿನ ಕೋಣೆಗಳು ೧೯ನೆ ಶತಮಾನದ ಕೋಣೆಗಳನ್ನೂ ಗೇಲಿಮಾಡುತ್ತವೆ. ಇಲ್ಲಿನ ಕೋಣೆಗಳಲ್ಲಿ ಹುಲ್ಲಿನ ಮಾಡುಗಳಿದ್ದು ಮರದ ಪಕ್ಕಾಸಿದೆ. ಈ ಪಕ್ಕಾಸುಗಳೆಡೆಯಲ್ಲಿ ಅಲ್ಲಲ್ಲಿ ಬಿಳಿಯರ ವಾಸಕ್ಕಾಗಿ ಗೂಡುಗಳನ್ನು ಕಟ್ಟಿದ್ದಾರೆ. ಈ ಬಿಳಿಯರನ್ನು ನೋಡಿ ನನಗೆ ನನ್ನ ಬಾಲೀಗಂಜಿನ ಮನೆಯ ನೆನಪಾಗುತ್ತದೆ . . "

ಹೀಗೆಯೇ ಮುಂದೆ ಒಂದು ದೀರ್ಘ ವಾಕ್ಯವಿಕ್ಕಿದ ಪಂಕ್ತಿಗಳಲ್ಲಿ ಈ ಬಿಳಿಯರ ಗತಿ ವಿಧಿಗಳನ್ನು ಸಂಪೂರ್ಣವಾಗಿ ಬರೆದಿದ್ದಾರೆ. ಇದರೊಂದಿಗೆ ಆಸ್ಕರ್ ಟೋಲರ್, ಸ್ಟೀಫನ್ ಜೋರಾಂ, ತಿಲಕ ಮತ್ತು ನೆಹರೂರವರ ಜೇಲು ಜೀವನದ ಅನುಭವಗಳನ್ನೂ ಹೋಲಿಸಬಹುದು. ಈ ಪತ್ರದ ಅಂತ್ಯದಲ್ಲಿ ಮೌಲಾನಾ ಹೀಗೆ ಬರೆದಿದ್ದಾರೆ:

"ನನಗೆ ಆಗಾಗ ಜಾನುವಾರುಗಳ ಜೀವನವನ್ನು ಕಂಡು ಅಸೂಯೆಯಾಗುತ್ತದೆ, ತಾಯಿ ಪಕ್ಷಿಯು ಮಗುವಿಗೆ ಆವಶ್ಯಕ ಪದಾರ್ಥಗಳನ್ನೀಯುತ್ತದೆ. ತಾಯಿಯು ಅವಕ್ಕೆ ಕೆಲವೊಂದನ್ನು ಕಲಿಸಿತ್ತು. ಆದರೆ ತನ್ನ ಜೀವನವು ಹಾರಾಟದಲ್ಲಿಯೇ ಕಳೆಯಬೇಕೆಂದು ತಿಳಿದುಬರುವವರೆಗೆ ಅದು ಹಾರಲಿಲ್ಲ. ಹಾಗೆಯೇ ಒಬ್ಬ ಮಾನವನು ತನ್ನ ತಾ ತಿಳಿಯುವವರೆಗೆ ಯಾವ ಕಾರ್ಯವನ್ನೇ ಆಗಲಿ ಮಾಡಬಾರದು."

ಮೇಲಿನ ಪತ್ರಾಂಶಗಳಿಂದ ಮೌಲಾನಾರ ಗದ್ಯ ಕಾವ್ಯಗಳ ಕುರಿತಾದ ಅಂಶಗಳು ತಿಳಿಯುತ್ತವೆ. ಹಾಗೆಯೇ ಪದ್ಯದತ್ತ ಗಮನಿಸಿದರೆ, ಆಗ, ಅವರು ಕಾವ್ಯ ಪರ್ವವನ್ನೂ ಸುರಿಸಿಲ್ಲವೆಂಬುದು ಸ್ವಯಂ ವೇದ್ಯವಾಗುದು. ಅವರ ಪದಗಳು ಅರ್ಥಯುಕ್ತವಾಗಿ ಸಾಮಾನ್ಯ ಜನರಿಗೆ ಇದರಲ್ಲಿ ಅಡಗಿರುವ ತಿಳಿ ಹಾಸ್ಯದ ಪರಿಚಯವೇ ಆಗುವುದಿಲ್ಲ ಎಂದರೆ, ಆಶ್ಚರ್ಯಪಡಬೇಕಾಗಿಲ್ಲ.

ಹೀಗೆ ಮೌಲಾನಾ ಅಜಾದರು ರಾಜಕಾರಣಕ್ಕಿಂತಲೂ ಕವಿಯಾಗಿಯೇ ದಿನದೂಡಿದರು. ಇವರಲ್ಲಿ ರಾಜಕಾರಣಿಯಲ್ಲಿರಬೇಕಾದ ಕೆಚ್ಚಿತ್ತು: ಸ್ವಾತಂತ್ರ್ಯಪೂರ್ಣ ಬದುಕನ್ನು ಬಾಳುವ ವಿಶ್ವಾಸವಿತ್ತು, ಆದರೊಂದಿಗೇನೇ ಕವಿಯಲ್ಲಿ ಸಹಜವಾಗಿರಬೇಕಾದ ಪರಾವರ್ತನ ಬುದ್ಧಿ,

(೮ನೇ ಪುಟ ನೋಡಿರಿ)

NAVAYUGA

Popular Kannada Weekly

Founder:—

A. B. SHETTY,

Former Minister for Public Health
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೬-೩-'೫೮	೨೬

ಕೇಂದ್ರದ ಮುಂಗಡಪತ್ರ

ನೂತನ ಆರ್ಥಿಕ ವರ್ಷವು ಪ್ರಾರಂಭಿಸಲಿರುವ ಅರುಣೋದಯ ಸಮಯದಲ್ಲಿ ಕೇಂದ್ರದ ಮುಂದಿನ ವರ್ಷದ ಮುಂಗಡ ಪತ್ರವು ಲೋಕಸಭೆಯಲ್ಲಿ ಮಂಡಿಸಲ್ಪಟ್ಟಿದೆ. ಈ ಮುಂಗಡಪತ್ರವನ್ನು ಒಂದೇ ಮಾತಿನಲ್ಲಿ ವಿಮರ್ಶಿಸುವುದಾದರೆ, "ತೀರ ಸಾಮಾನ್ಯ"ವೆಂದು ಹೇಳಿಬಿಡಬಹುದು. ಭಾರತಕ್ಕೆ ಸ್ವಾತಂತ್ರ್ಯಪ್ರಾಪ್ತಿಯಾದ ನಂತರದ ಕಳೆದ ಹತ್ತು ವರ್ಷಗಳಲ್ಲಿಯೂ ಇಷ್ಟೊಂದು ಸಪ್ಪೆಯಾದ ಮುಂಗಡಪತ್ರವು ಮುಂಚೆ ಬಂದಿಲ್ಲ. ಆದರೆ ಸಪ್ಪೆ ಎಂದ ಮಾತ್ರಕ್ಕೆ ಏನೂ ವಿಶೇಷವಿಲ್ಲ ಎಂದರ್ಥವಲ್ಲ. ಈ ಮೊದಲಿನ ಮುಂಗಡಪತ್ರಗಳಲ್ಲಿಯೇ ಸಾಕಷ್ಟು ವಿಶೇಷಗಳು ಕಾಣಿಸಿಕೊಂಡಿದ್ದು, ಅಂತಹ "ವಿಶೇಷ"ಗಳು ಇಂದು ತೀರ ಸಾಮಾನ್ಯವಾಗಿ ಪರಿಣಮಿಸಿರುವುದೇ ಇಂತಹ ಮುಂಗಡಪತ್ರವು ಮುಂದೆ ಬರಲು ಕಾರಣವಾಯಿತು. ಭಾರತೀಯ ಅರ್ಥಮಂತ್ರಿಯವರಾಗಿದ್ದ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ರಾಜಿನಾಮೆಯಿತ್ತಾಗ ಪ್ರಧಾನಿ ನೆಹರೂರವರೇ ಈ ಮುಂಗಡ ಪತ್ರವನ್ನು ಮಂಡಿಸುವ ಅರ್ಥ ಮಂತ್ರಿ ಸ್ಥಾನವನ್ನು ಹೊತ್ತಿರುವುದು ಹಾಗೂ ಆ ಬಗ್ಗೆ ಪರಿಶ್ರಮಪಟ್ಟುದೊಂದೇ ಉಲ್ಲೇಖನೀಯ. ಶ್ರೀ ನೆಹರೂ ವ್ಯಕ್ತಪಡಿಸಿದಂತೆ ಈ ಬಾರಿಯ ಮುಂಗಡ ಪತ್ರವು ಹಿಂದಿನ ಮಾದರಿಯಲ್ಲಿಯೇ ಮುಂದುವರಿದಿದೆ. ಆದರೆ, ಈ ಮೊದಲೇ ನಿರೀಕ್ಷಿಸಿದ್ದಂತೆ ದಾನಕರ ಹಾಗೂ ಭೂಮಿಯ ಕರಾಕರಣದಲ್ಲಿ ಪರಿಮಾಣ ಮಿತಿಯಲ್ಲಿನ ಇಳುವರಿಯೂ ತೋರಿ ಬರುತ್ತದೆ. ಆದರೆ, ಬೇರಾವ ನೂತನ ಕರವೂ ಆಕರಿಸಲ್ಪಟ್ಟಿಲ್ಲ. ಈಗಿರುವ ಕರಗಳೇ ಅತ್ಯುನ್ನತವಾಗಿವೆಯೆಂದೂ ಅದನ್ನೇ ತೆರುವುದು ಅಸಾಧ್ಯವೆಂದೂ ಜನತೆ ದೃಢಾಭಿಪ್ರಾಯ ಪಡುವಾಗ ಇನ್ನೂ ಹೊಸತಾಗಿ ಕರವನ್ನು ಹೇರುವುದೆಂದರೆ, ಅದು ತೀರ ಅಸಂಬದ್ಧವಾದೀತು. ಅಲ್ಲದೇ ಇನ್ನೂ ಅಧಿಕ ಆಯತರೂಪ ಕರ ಹೇರದ ವಿಭಾಗವಾದರೂ ಯಾವುದೂ ತೋರುವುದಿಲ್ಲ—ತಲೆ ತೆರಿಗೆಯ ಹೊರತಾಗಿ! ಹಿಂದಿನ ಅರ್ಥ ಮಂತ್ರಿಗಳೆಲ್ಲರೂ ಕೊರತೆಯನ್ನು ತುಂಬಿಕೊಳ್ಳಲು ಪ್ರತಿ ಬಾರಿಯೂ ಒಂದಷ್ಟು ಕೋಟಿ ಆದಾಯದ ಕರವನ್ನು ಹೇರಿ ಹೇರಿ ಇನ್ನೂ ಹೇರುತ್ತ ಹೋದರೆ, ಅದನ್ನು ತೆರುವುದೂ ಅಸಾಧ್ಯ. ಈ ದೃಷ್ಟಿಯಿಂದ ಈ ಬಾರಿಯ ಮುಂಗಡ ಪತ್ರವನ್ನು ಅಭಿನಂದಿಸಬೇಕಾಗಿದೆ.

ಮುಂಗಡ ಪತ್ರದಲ್ಲಿ ನಮೂದಿಸಿದಂತೆ ೩೩ ಕೋಟಿ ರೂಪಾಯಿಗಳ ಕೊರತೆಯು ಇದ್ದು, ಅದರಲ್ಲಿ ಆರು ಕೋಟಿ ರೂಪಾಯಿಗಳನ್ನು ನೂತನ ಕರದಿಂದ ತುಂಬಿಸಿಕೊಳ್ಳಲಾಗಿದೆ. ಹೀಗಿದ್ದೂ ಯಾವ ರೀತಿಯಿಂದಲೂ ಬಾಯಿಗೂಡಿಸದೆ, ಉಳಿದ ರೂ. ೨೭ ಕೋಟಿಯಷ್ಟರ ಕೊರತೆಯು ಹಾಗೆಯೇ ಉಳಿದಿದೆ. ಆದರೆ, ೭೪೩ ಕೋಟಿ ರೂಪಾಯಿಗಳ ರೆವಿನ್ಯೂ ಆದಾಯವನ್ನು ಕಾಣಿಸಿರುವ ಈ ಮುಂಗಡ ಪತ್ರದಲ್ಲಿ ಕಾಣಿಸಲಾದಷ್ಟು ಕೊರತೆಯ ಪ್ರಮಾಣವು ಏರಬಾರದಾಗಿತ್ತು. ಆದರೂ ರಾಜ್ಯಸರಕಾರಗಳಿಗೆ ಕೊಡಬೇಕಾದ ಸಹಾಯಧನದ ಮೊತ್ತ, ದೇಶದಲ್ಲಿನ ದೊಡ್ಡ ದೊಡ್ಡ ಯೋಜನೆಗಳು ಇವುಗಳಿಂದಾಗಿ ಈ ಕೊರತೆಯೂ ಅನಿವಾರ್ಯವಾಗಿದೆಯೆಂದರೆ, ಅತಿಶಯೋಕ್ತಿಯಾಗಲಾರದು. ನೂತನ ಕರಗಳಲ್ಲಿ ಕೊಡುಗೆಯ ಮೇಲಿನ ಕರವು ನಿರೀಕ್ಷಿತವಿದೆ; ಮತ್ತು ಅದರಲ್ಲಿ ಕೆಲವೊಂದು ವಿನಾಯತಿಯೂ ಕಂಡು ಬರುವುದರಿಂದ ಅದರಿಂದೇನೂ ವಿಶೇಷ ಅಭ್ಯಂತರವಿರುವುದಿಲ್ಲ. ಧರ್ಮಾರ್ಥ ಸಂಸ್ಥೆಗಳಿಗೆ ಕೊಡುವ ದಾನಗಳು, ಹಾಗೂ ರೂ. ೧೦,೦೦೦ಕ್ಕೆ ಕಡಿಮೆಯ ದೇಣಿಗೆಗಳಿಗೆ ವಿನಾಯತಿಯಿರುವುದು. ಆದರೆ, ಕರಮುಕ್ತ ಆಸ್ತಿಯ ಪ್ರಮಾಣವು ರೂ. ಒಂದುಲಕ್ಷದಿಂದ ಐವತ್ತು ಸಾವಿರಕ್ಕೆ ಇಳಿಸಿರುವುದು ಮಾತ್ರ ಅಷ್ಟು ಸಮಂಜಸವೆನ್ನಬರುವುದಿಲ್ಲ. ಈ ಮೊದಲೇ ಆಗಾಗ ಮುಂಗಡ ಪತ್ರಗಳನ್ನು ಮಂಡಿಸಿದ್ದ ಮಂತ್ರಿಗಳೆಲ್ಲರೂ ತಮಗೆ ಶಕ್ಯವೆನಿಸಿದಷ್ಟು ಕರಗಳನ್ನು ಹೇರಿಸಿಯೇ ಬಿಟ್ಟಿರುವರು. ಹಾಗಿರುವಾಗ ಈ ಆಸ್ತಿ ಪರಿಮಾಣವನ್ನು ಇಳಿಸಿರುವುದು ಯೋಗ್ಯವೆಂದು ಹೇಳಬರುವುದಿಲ್ಲ. ಅಂತೂ ಇದರಿಂದ ಕೆಲವೊಂದು ಮಧ್ಯಮವರ್ಗದ ಜನರಿಗೆ ಸ್ವಲ್ಪ ತೊಂದರೆಯಾಗುವುದೆಂಬುದು ನಿರ್ವಿವಾದ.

ಇನ್ನು ಹಿಂದೆ ಹೇರಿದ ಎಲ್ಲ ಕರಗಳೂ ಅದೇ ಪ್ರಮಾಣದಲ್ಲಿವೆ. ಕೆಲವೊಂದು ವಸ್ತುಗಳ ಮೇಲಿನದು ಮಾತ್ರ ಸ್ವಲ್ಪ ಪ್ರಮಾಣದಲ್ಲಿ ಏರುತ್ತದೆ. ಆದರೂ ಇವೆಲ್ಲವನ್ನೂ ಪುನರ್ವಿಮರ್ಶಿಸಿ, ಆದಾಯದಲ್ಲಿ ಯಾವ ಕೊರತೆಯೂ ಉಂಟಾಗದಂತೆ ಮಾಡಿಕೊಳ್ಳಬಹುದಾಗಿದ್ದಿತು. ಆದರೆ, ಇದಾವ ಗೋಜಿಗೂ ನಮ್ಮ ಪ್ರಧಾನಿ ಹಾಗೂ ಅರ್ಥಮಂತ್ರಿಯವರು ಹೋಗದೆ, ಹಿಂದೆ ನಡೆದ ದಾರಿಯಲ್ಲಿಯೇ ನಡೆದು, ಶ್ರೀ ಟಿ. ಟಿ. ಕೆ. ಯವರಲ್ಲಿ ವಿಶ್ವಾಸವನ್ನು ಪ್ರದರ್ಶಿಸಿದ್ದಾರೆ. ವಿದೇಶ ವಿನಿಮಯಗಳ ಕೊರತೆಯಿದ್ದ ಕಾಲವೀಗ ದೂರವಾಗಿ, ವಿದೇಶೀಯ ನೆರವು ಸಾಕಷ್ಟು ಪ್ರಮಾಣದಲ್ಲಿ ಮುಂದಿನ ವರ್ಷ ದೊರೆಯುವ ನಿರೀಕ್ಷೆಯಿದೆ. ಆ ಬಗ್ಗೆ ಬೇರೆ ಬೇರೆ ದೇಶಗಳಿಂದ ಭರವಸೆಗಳೂ ಬಂದಿವೆ. ದೇಶದಲ್ಲಿ ಸಾರ್ವಜನಿಕ ಸಾಲ ವೆತ್ತುವುದು ಮತ್ತು ಚಿಕ್ಕ ಉಳಿತಾಯ ಯೋಜನೆಗಳು ಮುಂದೊತ್ತುತ್ತಿವೆ. ಆದರೂ ಆರ್ಥಿಕ ಪರಿಸ್ಥಿತಿ ಈಗ ಹಿಂದಿಗಿಂತ ಉತ್ತಮವಾಗಿದೆ ಎಂದು ಮಾತ್ರ ಹೇಳಬಹುದಲ್ಲದೇ ಸಂಪೂರ್ಣ ತೃಪ್ತಿಕರವಿದೆ ಎಂದು ಹೇಳ ಬರುವಂತಿಲ್ಲ. ಈ ಎಲ್ಲವುಗಳಿಂದ ಭರ್ತಿ ಹೊಂದಿದ ಮುಂಗಡ ಪತ್ರದಲ್ಲಿ ೨೦೫ ಕೋಟಿ ರೂಪಾಯಿಗಳಷ್ಟು ಕೊರತೆಯ ಧನದ ವಿನಿಯೋಗ ಮಾಡುವುದು ಅಗತ್ಯವಾಗಿ ಪರಿಣಮಿಸಿದೆ. ಈ ಮುಂಗಡ ಪತ್ರದ ಒಟ್ಟು ವ್ಯಯ ರೂ. ೭೯೬ ಕೋಟಿಗಳಾಗಿದ್ದು ಇದರಲ್ಲಿ ರೂ. ೨೭೮ ಕೋಟಿಗಳಿಗೂ ಮಿಕ್ಕಿದ ರಕ್ಷಣಾವೆಚ್ಚವಿದ್ದು, ರಾಷ್ಟ್ರಾಭಿವೃದ್ಧಿ ಯೋಜನೆಯಲ್ಲಿ ರೂ. ೧೦೭೬ ಕೋಟಿ ರೂಪಾಯಿಗಳನ್ನು ತೊಡಗಿಸಲಿದ್ದು ಇದರಲ್ಲಿ ಕೇಂದ್ರದ ಪಾಲು ರೂ. ೭೪೩ ಕೋಟಿ ರೂಪಾಯಿಗಳಿರುತ್ತವೆ. ಹೀಗೆಯೇ ಉಳಿದ ವೆಚ್ಚಗಳೂ ಅಧಿಕವಾಗಿಯೇ ಇವೆ.

ಈ ಮುಂಗಡಪತ್ರದಲ್ಲಿ ಇನ್ನೂ ಕೆಲವೊಂದು ಬದಲಾವಣೆಗಳನ್ನು ಮಾಡಿ, ಜನಸಾಮಾನ್ಯರಿಗೆ ಅನುಕೂಲವೊದಗಿಸಬಹುದಾಗಿದ್ದರೂ, ಹೊಸತಾಗಿ ಕರ ಹೊರುವ ಪ್ರಸಂಗ ಬಾರದೆ ಇದ್ದುದರಿಂದ ಅಸಂತೋಷಕ್ಕೆ ಕಾರಣವಿಲ್ಲ. ಪ್ರಧಾನಿಯವರೂ ಶ್ರೀ ಟಿ. ಟಿ. ಕೆ. ನಡೆದುಬಂದ ದಾರಿಯಲ್ಲಿಯೇ ಮುಂದೊತ್ತುವ ನಿರ್ಧಾರ ಮಾಡಿದ್ದಾರೆ. ಹಾಗಾಗಿ ಯೋಜನೆಯ ಕಾರ್ಯ ಭರದಿಂದ ಮುನ್ನಡೆಯುವ ವಿಶ್ವಾಸವು ಬೆಳೆಯುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ.

ಸಿಂಡಿಕೇಟಿನ ಪ್ರಗತಿ

ದಕ್ಷಿಣ ಕನ್ನಡ ಜಿಲ್ಲೆಯ ಶೆಡ್ಯೂಲ್ಡ್ ಬೇಂಕುಗಳಲ್ಲಿ ಒಂದಾದ ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್—ಇದರ ೧೯೫೭ನೆ ವರ್ಷಕ್ಕೆ ಅನ್ವಯಿಸುವ ಆಯವ್ಯಯ ಪತ್ರವನ್ನು ಪರಿಶೀಲಿಸಲು ತುಂಬ ಸಂತೋಷವೆನಿಸುತ್ತದೆ. ಬೇಂಕು ಪ್ರಾರಂಭದಿಂದಲೂ ಅಭಿವೃದ್ಧಿ ಹೊಂದುತ್ತ ಬಂದಿದ್ದು ವರದಿ ವರ್ಷದಲ್ಲಿ ತಾನು ಗಳಿಸಿದ ಸ್ಥಾನವನ್ನು ಮತ್ತೂ ಉನ್ನತಗೊಳಿಸಿ, ತನ್ನ ಠೇವಣಾತಿದಾರರಿಗೆ ಹಾಗೂ ಪಾಲುಗಾರರಿಗೆ ದೃಢವಿಶ್ವಾಸವನ್ನು ಹುಟ್ಟಿಸಿದೆ ಎಂದರೆ ಅದೆಂದಿಗೂ ಕೇವಲ ಸ್ತುತಿಯೆನಿಸದು. ೧೯೫೭ನೆ ವರ್ಷಾಂತ್ಯದಲ್ಲಿ ಮೂಲಧನವು ೧೨ ಕೋಟಿ ರೂಪಾಯಿಗಳಿಗೂ ಹೆಚ್ಚಿದೆ. ತೆತ್ತುಬಂದ ಬಂಡವಾಳವು ರೂ. ೩೮,೪೭,೦೭೧ ರೂಪಾಯಿಗಳಾಗಿದ್ದರೆ, ಕಾದಿಟ್ಟ ನಿಧಿಯು ೨೩ ಲಕ್ಷವಿದೆ. ಇದು ಬೇಂಕಿನ ಭದ್ರತೆಯನ್ನು ಎತ್ತಿ ತೋರಿಸುತ್ತದೆ. ಠೇವಣಾತಿಯ ಲೆಕ್ಕಗಳನ್ನು ತೊಡಗಿದವರ ಸಂಖ್ಯೆಯು ಗಣನೀಯವಾಗಿ ಹೆಚ್ಚಿರುವುದನ್ನು ಕಂಡರೆ, ಜನತೆಯಲ್ಲಿ ಉಳಿತಾಯದ ಯೋಜನೆಯನ್ನು ಹಂಚಿಸುವುದರಲ್ಲಿ ಬೇಂಕು ಎಷ್ಟು ಆಸಕ್ತವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಬೇಂಕು ಸಾಲವಾಗಿ ಕೊಟ್ಟ ಆರೂವರೆ ಕೋಟಿ ರೂಪಾಯಿಗಳೆಲ್ಲವೂ ಉತ್ತಮ ಭದ್ರತೆಗಳ ಮೇಲೆಯೇ ಇರುವುದು ಆಡಳಿತೆದಾರರ ಜಾಗ್ರತೆ ಎನ್ನಬಹುದು. ದೇಶದಲ್ಲಿ ಉಳಿತಾಯ ಯೋಜನೆಯನ್ನು ಜನಪ್ರಿಯಗೊಳಿಸುವುದಕ್ಕಾಗಿ, ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕಿಂಗ್ ಸೌಕರ್ಯಗಳನ್ನು ಕಲ್ಪಿಸಿ ಕೊಡುವುದಕ್ಕಾಗಿ ಸರಕಾರವು ಒಂದು ಕಡೆ ಪ್ರಯತ್ನಿಸುತ್ತಿರುವಂತೆಯೇ ಈ ಸಿಂಡಿಕೇಟು ಬೇಂಕೂ ಅನೇಕ ವರ್ಷಗಳಿಗೆ ಹಿಂದೆಯೇ ತೊಡಗಿದ ತನ್ನ ಇಂತಹ ಕಾರ್ಯಕ್ರಮದ ಅಂಗವಾಗಿಯೇ ಹಲವಾರು ಚಿಕ್ಕ ಪಟ್ಟಣ ಹಳ್ಳಿಗಳಲ್ಲಿಯೂ ತನ್ನ ಶಾಖೆಗಳನ್ನು ಸ್ಥಾಪಿಸಿದೆ. ಕಳೆದ ವರ್ಷ ೯೬ ಶಾಖೆಗಳಿಂದ ಕೂಡಿದ್ದ ಈ ಬೇಂಕು ವರದಿ ವರ್ಷದಲ್ಲಿ ೧೦೪ ಶಾಖಾಸಹಿತವಾಗಿದೆ. ಹಾಗೆಯೇ ೧೯೫೮ರಲ್ಲಿ ಈ ಶಾಖಾಸಂಖ್ಯೆಯನ್ನು ೧೧೫ಕ್ಕೆ ಹೆಚ್ಚಿಸುವ ನಿಶ್ಚಯವನ್ನು ಮಾಡಿದೆ. ಹೀಗೆ ಜನತೆಗೆ ಕೈಗಾರಿಕೋದ್ಯಮ, ವ್ಯವಸಾಯೋದ್ಯಮ ಹಾಗೂ ಇನ್ನಿತರ ಮಾಮೂಲಿಗಳಿಗೆ ಯೋಗ್ಯ ದರದಲ್ಲಿ ತನ್ನ ಬಹು ಶಾಖಾಕಛೇರಿಗಳ ಮೂಲಕ ಹಣವನ್ನೊದಗಿಸಿಯೂ, ಜನತೆಯ ಪ್ರೀತ್ಯಾದರಗಳನ್ನು ಸಂಪಾದಿಸಿ, ತನ್ನ ಠೇವಣಾತಿಯ ಮೊಬಲಗನ್ನು ಹಿಂದಿನ ವರ್ಷಕ್ಕಿಂತ ೨ ಕೋಟಿಯನ್ನು ಏರಿಸಿಯೂ ಬೇಂಕು ಈ ವರ್ಷದಲ್ಲಿ ೧೦,೬೨,೦೦೦ ರೂಪಾಯಿಗಳಷ್ಟು ಲಾಭವನ್ನು ಸಂಪಾದಿಸಿದೆ. ಈ ಲಾಭಾಂಶದಲ್ಲಿ ಪಾಲುಗಾರರಿಗೆ ಲಾಭಾಂಶ, ನೌಕರರಿಗೆ ಬೋನಸ್ಸುಗಳನ್ನು ಹಂಚಲು ತೆಗೆದಿರಿಸಿದ ಮೊತ್ತವೂ ಉತ್ತಮ ಮಟ್ಟದಲ್ಲಿಯೇ ಇದೆ. ಹೀಗೆ ಬೇಂಕಿನ ಪ್ರಗತಿಯನ್ನವಲೋಕಿಸುವಾಗ, ಭಾರತದ ಅವಶ್ಯಕತೆಗಳನ್ನು ಮಾರ್ಕೈಸುತ್ತ, ರಾಷ್ಟ್ರೋನ್ನತಿಯನ್ನು ಸಾಧಿಸುವಲ್ಲಿ ನೆರವಾಗುತ್ತಿರುವ ಈ ಬೇಂಕು ದಿನೇ ದಿನೇ ಪ್ರವರ್ಧಮಾನವಾಗುತ್ತ ಜನಪ್ರಿಯವಾಗುತ್ತ ಬರುತ್ತಿವೆ ಎಂಬುದಕ್ಕೆ ಯಾವ ಸಂದೇಹವೂ ಇಲ್ಲ. ಇಂತಹ ಆದರ್ಶ ಬೇಂಕನ್ನು ಕೀರ್ತಿ ಶಿಖರಕ್ಕೇರಿಸಲು ನೆರವಾಗುತ್ತಿರುವ ಬೇಂಕಿನ ಮೆನೇಜಿಂಗ್ ಡೈರೆಕ್ಟರ್ ಡಾಕ್ಟರ್ ಮಾಧವ ಪೈ ಹಾಗೂ ಜನರಲ್ ಮೆನೇಜರ್ ಶ್ರೀ ಟಿ. ಎ. ಪೈ ಇವರನ್ನೂ ಉಳಿದ ಅಧಿಕಾರಿಗಳನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುವುದಲ್ಲದೆ, ತಮ್ಮ ಮಾರ್ಗದರ್ಶನದಿಂದ ಮತ್ತಷ್ಟು ಸಾರ್ವಜನಿಕ ಸೇವೆಯನ್ನೂ ತನ್ಮೂಲಕ ದೇಶಸೇವೆಯನ್ನೂ ಈ ಬೇಂಕು ಮಾಡುವಂತಾಗಲಿ ಎಂದು ಮನಸಾರೆ ಹಾರೈಸುತ್ತೇವೆ. ಬೇಂಕಿನ ಪ್ರಗತಿಗಾಗಿ ಹಾಗೂ ಭದ್ರತೆಗಾಗಿ ಹೆಮ್ಮೆಪಡುತ್ತೇವೆ.

ಮಣಿಪಾಲ— ಸ್ಥಳೀಯ ಪ್ರೌಢಶಾಲೆಯ ವರ್ಷಾಂತ್ಯೋತ್ಸವವು ಇದೇ ತಾ. ೧ರಂದು ಲೈಫ್ ಇನ್ಶೂರೆನ್ಸ್ ಕೊರ್ಪೊರೇಶನ್ ಓಫ್ ಇಂಡಿಯಾದ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣಮಾಡಿದರು. ಮುಖ್ಯೋಪಾಧ್ಯಾಯ ಶ್ರೀ ಬಿ. ಶ್ಯಾಮರಾಯ ಶೆಟ್ಟರು ವರದಿಯನ್ನೋದಿದರು. ಶ್ರೀ ಯು. ವಿ. ಆಚಾರ್ಯರು ಸಂದೇಶವಾಚನಮಾಡಿದರು. ಶ್ರೀ ಬಿ. ಉಪೇಂದ್ರ ನಾಯ್ಕರು ಶಾಲಾ ಸ್ವಸ್ತಿವಾಚನಮಾಡಿದರು. ಅಧ್ಯಕ್ಷ ಭಾಷಣ, ಬಹುಮಾನ ವಿತರಣೆ, ವಂದನಾರ್ಪಣೆ, ವಿವಿಧ ವಿನೋದಾವಳಿಗಳಿಂದ ಸಮಾರಂಭ ಕೊನೆಗೊಂಡಿತು.

ಅಂದು ಪೂರ್ವಾಹ್ನ ದಿವಂಗತ ಶ್ರೀ ಉಪೇಂದ್ರ ಅನಂತ ಪೈಗಳ ಭಾವಚಿತ್ರವನ್ನು ಡಾ. ಯು. ಸುಂದರರಾಮ ಪೈಗಳೂ, ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಯು. ಪುಂಡಲೀಕ ಶೆಣೈಯವರ ಭಾವಚಿತ್ರವನ್ನು ಉಡುಪಿ ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳೂ, ಶಾಲಾ ಸ್ಥಾಪಕ ಮತ್ತು ಆಡಳಿತೆದಾರ ಡಾ. ಟಿ. ಎಂ. ಎ. ಪೈಗಳ ಭಾವಚಿತ್ರವನ್ನು ಉಡುಪಿ ಎಮ್. ಜಿ. ಎಮ್. ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರೂ ಅನಾವರಣ ಮಾಡಿದರು.

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಸಂಕ್ಷಿಪ್ತ ಸುದ್ದಿಗಳು

ಸಾಲದ ಮರುಪಾವತಿ

೧೯೫೮-೬೦ರ ಪ್ರತಿಶತ ೪ ೩|೪ರ ಬಡ್ಡಿಯ ಸ್ಟರ್ಲಿಂಗ್ ಸಾಲದ ಪ್ರತಿರೂಪವಾಗಿ ಹೊರಡಿಸಿದ್ದ ೧೯೫೮-೬೦ರ ಪ್ರತಿಶತ ೪ ೩|೪ರ ಬಡ್ಡಿಯ ಸಾಲವನ್ನು ೧೯೫೮ನೆ ಜೂನ್ ತಿಂಗಳ ಮೊದಲನೆಯ ದಿನಾಂಕದಂದು ಆ ವರೆಗಿನ ಬಡ್ಡಿ ಸಮೇತ ಮರುಪಾವತಿ ಮಾಡಲಾಗುವುದೆಂಬ ಸೂಚನೆಯನ್ನೊಳಗೊಂಡ ಪ್ರಕಟಣೆಯನ್ನು ಭಾರತ ಸರಕಾರವು ಹೊರಡಿಸಿದೆ. ೧೯೫೮ನೆ ಜೂನ್ ೧ನೆ ದಿನಾಂಕದಿಂದ ಈ ಸಾಲದ ಮೇಲೆ ಬಡ್ಡಿಯು ದೊರೆಯಲಾರದು. ಸ್ಟರ್ಲಿಂಗ್ ಸಾಲದ ಉಳಿದ ಹಣದ ವಿಚಾರದಲ್ಲಿ ಲಂಡನಿನಲ್ಲಿಯೂ ಇದೇ ರೀತಿಯ ಪ್ರಕಟಣೆಯೊಂದನ್ನು ಹೊರಡಿಸಲಾಗಿದೆ.

ಭಾರತೀಯ ಪರ್ವತಾರೋಹಿಗಳು

ಹಿಮಾಲಯಪರ್ವತದ ಅತ್ಯುನ್ನತಶಿಖರವಾದ ಗೌರೀಶಂಕರದಿಂದ ಸುಮಾರು ೨೦ ಮೈಲಿಗಳಷ್ಟು ಈಶಾನ್ಯದಲ್ಲಿರುವ ೨೬,೭೫೦ ಅಡಿಗಳಷ್ಟು ಉನ್ನತವಿರುವ ಚೊ ಓಯು ಶಿಖರವನ್ನೇರಲು ಭಾರತೀಯ ಪರ್ವತಾರೋಹಿಗಳ ತಂಡವೊಂದು ನಿಶ್ಚಯಿಸಿದೆ. ಮತ್ತಿದನ್ನು ನೇಪಾಲ ಸರಕಾರವೂ ಅನುಮತಿಸಿರುತ್ತದೆ ಬೊಂಬಾಯಿಯ ಸುಪ್ರಸಿದ್ಧ ಅಡ್ವೊಕೇಟರಾದ ಶ್ರೀ ಕೆ. ಎಫ್. ಬುನಶಹರು ಈ ತಂಡದ ನಾಯಕರಿದ್ದು, ಇವರು ಮಾರ್ಚ ಹದಿನೈದನೆಯ ದಿನಾಂಕದಂದು ತಮ್ಮ ಆರೋಹಣ ಕಾರ್ಯವನ್ನು ಪ್ರಾರಂಭಿಸಲಿರುವರು.

ಯೋಜನೆಯ ಕಾರ್ಯಾಚರಣೆ

ದ್ವಿತೀಯ ಪಂಚವಾರ್ಷಿಕ ಯೋಜನೆಯ ತಿರುಳಿನಲ್ಲಿ ಸೇರ್ಪಡೆಗೊಂಡಿದ್ದ ಎಲ್ಲ ಯೋಜನೆಗಳನ್ನೂ ಕಾರ್ಯರೂಪದಲ್ಲಿ ತರುವುದಕ್ಕೆ ವಿದೇಶೀ ವಿನಿಮಯ ಹಣವನ್ನು ಒದಗಿಸಲಾಗುವುದೆಂದು ಅರ್ಥ ಶಾಖೋಪಮಂತ್ರಿ ಶ್ರೀ ಭಗತರು ಲೋಕಸಭೆಯಲ್ಲಿ ಘೋಷಿಸಿದರು ಈ ಯೋಜನೆಯ ತಿರುಳೆಂದು ಕರೆಯಲಾದ ಹಂಚಿಕೆಗಳಲ್ಲಿ ಸರಕಾರಿ ವಿಭಾಗದ ನಾಲ್ಕು ಉಕ್ಕಿನ ಕಾರಖಾನೆಗಳು, ರೇಲ್ವೆ ಅಭಿವೃದ್ಧಿಯ ಕಾರ್ಯಕ್ರಮ, ಮುಂಬಯಿ, ಕಲಕತ್ತೆ, ಮದ್ರಾಸ ಮತ್ತು ವಿಶಾಖಪಟ್ಣಣಗಳ ಬಂದರುಗಳ ಸುಧಾರಣೆ, ರಾಷ್ಟ್ರೀಯ ಅಭಿವೃದ್ಧಿ ಕಾರ್ಪೋರೇಶನ್ ಶಿಫಾರಸು ಮಾಡಿದ ಗನಿಯೋಜನೆಗಳು, ನೇವೇಲಿ ಲಿಗ್ನಾಯಿಟ್ ಯೋಜನೆಯ ಗನಿವಿಭಾಗ ಮತ್ತು ೧೨ ವಿದ್ಯುದ್ಯೋಜನೆಗಳು ಹಾಗೂ ಇನ್ನಿತರ ಕೆಲವೂ ಸೇರಿಕೊಂಡಿರುವವೆಂದೂ ಈ ಯೋಜನೆಗೆ ಒಟ್ಟು ೯೬೩ ಕೋಟಿ ರೂಪಾಯಿಗಳ ವಿದೇಶೀ ವಿನಿಮಯ ಹಣ ಬೇಕಾಗುವುದೆಂದೂ ಶ್ರೀ ಭಗತರು ಪ್ರಶ್ನೆಯೊಂದನ್ನುತ್ತರಿಸುತ್ತ ಲೋಕಸಭೆಯಲ್ಲಿ ಹೇಳಿದರು.

ಮುಕ್ತ ಮನಸ್ಸು

ಮೈಸೂರು ವಿಧಾನ ಪರಿಷತ್ತಿನಲ್ಲಿ ಚರ್ಚಿಸಲ್ಪಡುತ್ತಿರುವ ಜತ್ತಿ ಭೂಸುಧಾರಣಾ ಸಲಹಾ ಸಮಿತಿಯ ವರದಿಯನ್ನು ಕುರಿತು ಕಂದಾಯ ಮಂತ್ರಿ ಶ್ರೀ ಪಾಟೀಲರು ಈ ವರದಿಯ ಶಿಫಾರಸುಗಳನ್ನು ಸರಕಾರವು ಪರಿಶೀಲಿಸಿ ಯಾವುದೇ ಅಭಿಪ್ರಾಯಕ್ಕೆ ಬಂದಿಲ್ಲವೆಂದೂ, ಅದು ಮಾಡಿದ ಶಿಫಾರಸುಗಳಿಗೆ ಸರಕಾರವು ಬದ್ಧವಲ್ಲವೆಂದೂ ಈ ವಿಷಯದಲ್ಲಿ ಸರಕಾರವು ಮುಕ್ತ ಮನಸ್ಸಿನಿಂದ ಕೂಡಿದ್ದು ವಿಧಾನ ಪರಿಷತ್ತು ಮತ್ತು ಸಭೆಗಳಲ್ಲಿ ವ್ಯಕ್ತವಾಗಲಿರುವ ಅಭಿಪ್ರಾಯಗಳನ್ನು ಮಾರ್ಗದರ್ಶನವೆಂದು ಗ್ರಹಿಸಿ, ಮುಂದೆ ಒಂದು ವಿಧೇಯಕವನ್ನು ರಚಿಸಿ ಅದನ್ನು ಸಭೆಗಳಲ್ಲಿ ಮಂಡಿಸಲಾಗುವುದೆಂದೂ ಕಂದಾಯ ಮಂತ್ರಿ ಶ್ರೀ ಎಂ ಪಿ. ಪಾಟೀಲರು ಆಶ್ವಾಸನವಿತ್ತರು.

ಮಧ್ಯಪೂರ್ವದಲ್ಲಿ ಬಿರುಕು

ಈಜಿಪ್ಟ್-ಸಿರಿಯಾಗಳು ಸಂಯುಕ್ತ ಅರಬ ರಾಷ್ಟ್ರವಾಗಿರುವಾಗ ಇದಕ್ಕೆ ಯೆಮೆನವೂ ಸೇರುವುದೆಂದು ಅಲ್ಲಿನ ರಾಜಕುಮಾರರು ಘೋಷಿಸಿದ್ದಾರಲ್ಲದೆ ಈ ಬಗ್ಗೆ ನಿಶ್ಚಯವೂ ಆಗಿದೆ. ಲಿಬನಾನಿನಲ್ಲಿ ಈ ಕಡೆ ಸೇರಬೇಕೆಂಬ ಆಂದೋಲನವಾಗುತ್ತಿದೆ. ಅತ್ತ ಇರಾಕ ಮತ್ತು ಜೋರ್ಡಾನಗಳೂ ವಿಲಯನದಿಂದ ರಚಿತವಾದ ಫೆಡರೇಶನ್ ಹಾಗೂ ಸಂಯುಕ್ತ ಅರಬ ಪ್ರಜಾರಾಜ್ಯಗಳ ನಡುವೆ ತೀವ್ರವಾದ ಸ್ಪರ್ಧೆಯು ನಡೆಯುತ್ತಿರುವಂತೆ ವ್ಯಕ್ತವಾಗುತ್ತದೆ. ಪರಸ್ಪರ ಮಂಡನೆ ಖಂಡನೆಗಳು ಕೇಳುತ್ತಿವೆ ಇರಾಕ ಜೋರ್ಡಾನ ವಿಲಯನದ ಫೆಡರೇಶನ್ ಪಾಶ್ಚಾತ್ಯರ ಕೈಗೊಂಬೆಯಾಗಿ ಹುಟ್ಟಿತೆಂದು ದೂರು ಕೇಳಿಬರುತ್ತಿದ್ದು, ಅರಬ ರಾಷ್ಟ್ರಗಳಲ್ಲಿ ಹೆಚ್ಚಿನವು ಸಂಯುಕ್ತ ಪ್ರಜಾರಾಜ್ಯಕ್ಕೆ ಬೆಂಬಲವಿರುವಂತೆ ತೋರುತ್ತದೆ.

ಅಮೆರಿಕೆಯ ಆಶಯ

ಅಮೆರಿಕೆಯು ಭಾರತಕ್ಕೆ ಅದರ ನಿರ್ಮಾಣ ಕಾರ್ಯದಲ್ಲಿ ಎಲ್ಲ ಬಗೆಯ ಆರ್ಥಿಕ ಸಹಾಯವನ್ನು ನೀಡುವುದೆಂದು ರಾಯಭಾರಿ ಶ್ರೀ ಎಲ್ಸ್ ವರ್ಥ ಬಂಕರರು ಮೈಸೂರಿನ ಕೇಂದ್ರ ಆಹಾರ ಸಂಶೋಧನೆಯ ವಿಜ್ಞಾನಿಗಳೊಂದಿಗೆ ಮಾತಾಡುತ್ತ ನುಡಿದಿದ್ದಾರೆ ಭಾರತವು ತನ್ನ ಅಭಿವೃದ್ಧಿ ಕಾರ್ಯದಲ್ಲಿ ಯಶಸ್ವಿಯಾಗಿ ಭದ್ರವಾದ ಪ್ರಜಾಪ್ರಭುತ್ವ ದೇಶವೆಂದು ಮುಂದ ಬರುವುದು ನಿಶ್ಚಯವೆಂದೂ ಇಲ್ಲಿ ನಡೆದ ಕೆಲಸಗಳನ್ನು ನೋಡಿ ತನ್ನ ಮನಸ್ಸಿನ ಮೇಲೆ ತುಂಬ ಪರಿಣಾಮವಾಯಿತೆಂದೂ ತಮ್ಮ ಸಮಸ್ಯೆಗಳನ್ನು ಬಿಡಿಸುವಲ್ಲಿ ಭಾರತದ ಜನತೆ ಹಾಗೂ ಸರಕಾರವು ತೋರಿದ ಧೈರ್ಯ ಹಾಗೂ ದೃಢ ನಿರ್ಧಾರಗಳನ್ನು ತಾನು ಮೆಚ್ಚುವುದಾಗಿಯೂ ಅವರು ಹೇಳಿ,ಸರ್ವವಿಧದಿಂದಲೂ ಭಾರತವು ಅಭಿವೃದ್ಧಿ ಹೊಂದಬೇಕೆಂಬುದೇ ಅಮೆರಿಕೆಯ ಆಶಯವೆಂಬುದನ್ನು ತಿಳಿಸಿದರು.

ಹೋಮಿಯೋಪೆಥಿಗೆ ಮನ್ನಣೆ

ಹೋಮಿಯೋಪೆಥಿ ವೈದ್ಯರೂ ಸರಕಾರದ ಮನ್ನಣೆಗೆ ಅರ್ಹರಾಗುವಂತೆ ಅವರಿಗಾಗಿ ವ್ಯಾಪಕ ಶಿಕ್ಷಣ ಕ್ರಮವೊಂದನ್ನು ಬೆಂಗಳೂರಿನ ಹಾನ್ಮೆಮನ್ ಹೋಮಿಯೋಪೆಥಿ ಕಾಲೇಜಿನಲ್ಲಿ ಈ ತಿಂಗಳ ಮಧ್ಯದಿಂದ ಪ್ರಾರಂಭವಾಗಲಿದೆ. ಸಂಯುಕ್ತ ಕರ್ನಾಟಕ ಹೋಮಿಯೋಪೆಥಿ ಮೆಡಿಕಲ್ ಅಸೋಸಿಯೇಶನ್ ಮತ್ತು ಈ ಕಾಲೇಜಿನ ಸಂಯುಕ್ತ ನೇತೃತ್ವದಲ್ಲಿ ಈ ವ್ಯಾಪಕ ಶಿಕ್ಷಣ ಕ್ರಮವನ್ನು ಪ್ರಾರಂಭಿಸಬೇಕೆಂದು ಕಾಲೇಜಿನಲ್ಲಿ ಇತ್ತೀಚೆಗೆ ಸೇರಿದ್ದ ಇವರ ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಉಡುಪಿ

ಮೈಸೂರು ಮಹಾರಾಣಿ - ಶ್ರೀ ತ್ರಿಪುರ ಸುಂದರಮ್ಮಣ್ಣಿ ಅವರು ತಾ. 4ರಂದು ಉಡುಪಿಗೆ ಆಗಮಿಸಿ ಸ್ಥಳೀಯ ಮಹಿಳಾ ಸಮಾಜದ ಹೊಸ ಕಟ್ಟಡವನ್ನು ಉದ್ಘಾಟಿಸುತ್ತ, ಮಹಿಳೆಯರ ಆರ್ಥಿಕ ಉಳಿತಾಯ ಯೋಜನೆಯನ್ನು ವಿವರಿಸಿ, ಹಣವನ್ನು ಉಳಿಸಿ, ರಾಷ್ಟ್ರಾಭಿವೃದ್ಧಿ ಕಾರ್ಯಗಳ ಸಫಲತೆಗೆ ಮಹಿಳೆಯರೂ ಶಕ್ತಿಮೀರಿ ದುಡಿಯಬೇಕಾಗಿದೆ ಎಂದರು

ಆರಂಭದಲ್ಲಿ ಶ್ರೀಮತಿ ಪ್ರೇಮಾ ಎ. ಪೈಗಳು ಸ್ವಾಗತಿಸಿ ಇಲ್ಲಿಯ ಮಹಿಳೆಯರ ಚಟುವಟಿಕೆಗಳನ್ನು ವಿವರಿಸಿದರು. ಶ್ರೀಮತಿ ಕಾತ್ಯಾಯನಿ ಕೃಷ್ಣಮೂರ್ತಿಯವರು ಪ್ರಾರ್ಥನೆ ಮಾಡಿದರು ಶ್ರೀಮತಿ ಲಂಕಪ್ಪನವರು ಮಾತನಾಡಿ ಮಹಿಳೆಯರ ಜವಾಬ್ದಾರಿ ಏನಿದೆ ಎಂಬುದನ್ನು ಚುಟುಕಾಗಿ ತಿಳಿಸಿದರು. ಶ್ರೀಮತಿ ಆಶಾ ಭಟ್ಟರು ಸರ್ವರಿಗೂ ಧನ್ಯವಾದಗಳನ್ನಿತ್ತರು.

ಬಳಿಕ ಮಹಾರಾಣಿಯವರು ಶ್ರೀ ಕೃಷ್ಣ ಮಠಕ್ಕೆ ಬಂದು ಶ್ರೀ ಕೃಷ್ಣನ ಪೂಜಾದಿಗಳನ್ನು ನೋಡಿದರು ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರಿಗೆ ಬರಿಫಲ ಇತ್ಯಾದಿ ಕಾಣಿಕೆಯಿತ್ತು ಸನ್ನಿಧಾನ ಫಲಮಂತ್ರಾಕ್ಷತೆ ಸ್ವೀಕರಿಸಿದರು

ಸಂತಾಪಸೂಚಕಸಭೆ ಉಡುಪಿ ಮಂಡಲ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ಕಳೆದ ತಾ 28ರಂದು ಸಂಜೆ ರಥಬೀದಿಯಲ್ಲಿ ಶ್ರೀ ಟಿ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿದ ಮಹಾಜನ ಸಭೆಯಲ್ಲಿ ಕೇಂದ್ರ ಸರಕಾರದ ಶಿಕ್ಷಣ ಸಚಿವ ಮೌಲಾನಾ ಆಜಾದರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು ಶ್ರೀಗಳಾದ ಎ ಜಿ ಆಳ್ವ, ಪಿ ಶೀನ ಶೆಟ್ಟಿ, ಪ್ರಿನ್ಸಿಪಾಲ್ ಕಾಲಿಗಿ ಶೇಷಾಚಾರ್ಯರು ಸಂದರ್ಭೋಚಿತ ಭಾಷಣಗಳನ್ನಾಡಿದರು.

ಸಂಗೀತ- ಶ್ರೀಮತಿ ಎಮ್. ಎಲ್ ವಸಂತ ಕುಮಾರಿಯವರ ಸಂಗೀತ ಕಚೇರಿಯೊಂದು ತಾ. 3ರಂದು ಶ್ರೀ ಕೃಷ್ಣಕಲಾ ಸಂಘದ ವತಿಯಿಂದ ಸಂಸ್ಕೃತ ಕಾಲೇಜಿನಲ್ಲಿ ಜರಗಿತು ಪುತ್ತಿಗೆ ಕಿರಿಯ ಶ್ರೀ ಪಾದಂಗಳವರು ಅಭಿನಂದಿಸಿ ಆಶೀರ್ವದಿಸಿ ಮೇಲೆ ಕಲಾ ಸಂಘದ ಅಧ್ಯಕ್ಷ ಡಾ ಪಿ. ಜಿ ಆಚಾರ್ಯರು ಧನ್ಯವಾದಗಳನ್ನಿತ್ತರು

ನಗರಸಭೆ— ಕಳೆದ ತಾ 28ರಲ್ಲಿ ಉಡುಪಿ ನಗರ ಸಭೆಯ ವಿಶೇಷ ಸಭೆಯು ಶ್ರೀ ಕೆ ಕೆ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭೆಯು ಉಪಾಧ್ಯಾಯರಿಗೆ ಪರಿಷ್ಕೃತ ವೇತನವನ್ನು ಕೊಡಲು ನಗರಸಭೆ ಒಪ್ಪಿಗೆ ಕೊಟ್ಟಿತು ಆದರೆ ಈಗಿನ ಸಂಬಳಕ್ಕೂ ಹೊಸ ಮಟ್ಟದ ಸಂಬಳಕ್ಕೂ ಇರುವ ವ್ಯತ್ಯಾಸ ಹಣವನ್ನು ನಗರ ಸಭೆಗೆ ಸರಕಾರವು ಕೊಡಬೇಕೆಂದು ಕೇಳಿಕೊಳ್ಳಲಾಯಿತು

ಶ್ರೀ ಟಿ ಎ ಪೈಗಳ ಆಯ್ಕೆ — ಮೈಸೂರು ವಿಧಾನ ಸಭೆಯಿಂದ ಭಾರತ ರಾಜ್ಯ ಸಭೆಗೆ ಆರಿಸಲ್ಪಡತಕ್ಕವ ನಾಲ್ಕು ಸ್ಥಾನಗಳಿಗೆ ಅಖಿಲಭಾರತ ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ನಾಲ್ಕು ಮಂದಿಯನ್ನು ಆರಿಸಿದ್ದು, ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಜನರಲ್ ಮೆನೇಜರ್ ಶ್ರೀ ಟಿ. ಎ ಪೈಗಳು ಆ ಪರಲ್ಲೊಬ್ಬರಿರುವರು ಚುನಾವಣೆಯು ಇದೇ ತಾ 22ಕ್ಕೆ ನಡೆಯಲಿದೆ.

ತಾಲೂಕು ಗ್ರಾಮೀಣ ಸಹಕಾರಿ ಸಂಘಾದ— ಮಹಾಸಭೆಯು ಕಳೆದ ತಾ. 28 ರಂದು ಶ್ರೀ ಯು. ಎಸ್ ನಾಯಕ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು ಎಸ್. ನಾಯಕ್, ಎಮ್ ಎಲ್. ಎ, ಅವರು ಅಧ್ಯಕ್ಷರಾಗಿಯೂ ಡಾ ಕೆ ಎಲ್. ಐತಾಳರು ಉಪಾಧ್ಯಕ್ಷರಾಗಿಯೂ ಶ್ರೀ ಎಮ್ ವಾಮನ ಭಟ್ಟರು ಕಾರ್ಯದರ್ಶಿಗಳಾಗಿಯೂ ಶ್ರೀ ರಂಗನಾಥ ಹೆಗ್ಡೆಯವರು ಖಜಾನ್ಚಿಯರಾಗಿಯೂ ಆರಿಸಲ್ಪಟ್ಟರು ಕಾರ್ಯನಿರ್ವಾಹಕಸಮಿತಿಗೆ ಶ್ರೀಗಳಾದ ಎ. ಜೆ. ಆಳ್ವ, ರಾಮಬಾಬ ಕಾಮತ್ ಮತ್ತು ಬಿ. ಸಂಜೀವ ಹೆಗ್ಡೆಯವರು ಆರಿಸಲ್ಪಟ್ಟರು.

ಅರಸಿನ ಮುಂಡಿಗೆ ರೋಗಕ್ಕೆ ಪ್ರತಿ ಬಂಧಕೋಪಾಯ— ಇತ್ತೀಚೆಗೆ ದ. ಕ. ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಅರಸಿನ ಮುಂಡಿಗೆ ರೋಗ ಹರಡಿದೆ ಎಂಬುದಾಗಿ ಬಂದಿರುವ ದೂರುಗಳನ್ನನುಲಕ್ಷಿಸಿ, ಜಿಲ್ಲಾ ಮೆಡಿಕಲ್ ಆಫೀಸರ್ ಮತ್ತು ಜಿಲ್ಲಾ ಹೆಲ್ತ್ ಆಫೀಸರರು, ಉಡುಪಿಯ ಆಸುಪಾಸಿನ ಕರಾವಳಿ ಪ್ರದೇಶಗಳಲ್ಲಿ ಪರಿಶೀಲನಾ ಪ್ರವಾಸ ನಡೆಸಿದರು ಈ ರೋಗವು ಹೆಚ್ಚಾಗಿ ಮಾಂಸಾಹಾರಿ ಜನರಲ್ಲಿ ಹರಡಿದೆ ಎನ್ನುವುದೂ ಪರಿಶೀಲನೆಯಲ್ಲಿ ಕಂಡುಬಂದಿದೆ ಇದಕ್ಕೆ ಈ ಕರಾವಳಿಪ್ರದೇಶದಲ್ಲಿ ಈ ವರ್ಷ ಮೀನುಹೆಚ್ಚಿಗೆ ಬಿದ್ದಿರುವುದುಕಾರಣವೆಂದು ಹೇಳಲಾಗಿದೆ.

ಅರಸಿನ ಮುಂಡಿಗೆ ರೋಗ ತಗಲಿದವರಲ್ಲಿ ಹೆಚ್ಚಾಗಿ ಗರ್ಭಿಣಿಹೆಂಗಸರು ಹೆಚ್ಚಾಗಿ ಅದಕ್ಕೆ ಬಲಿಯಾಗುತ್ತಾರೆ ಆದ್ದರಿಂದ ಈ ರೋಗದ ಪ್ರತಿಬಂಧಕೋಪಾಯವಾಗಿ ಮೂಲ್ಕಿ, ಕಾಪು, ಉಡುಪಿ ಮತ್ತು ಬೆಳಪಿನ ಆಸ್ಪತ್ರೆಗಳಲ್ಲಿ 'ಗ್ಲಾಮ ಗೋಬ್ಲಿನ್' ಎಂಬ ದಾಕು ಹಾಕುವ ಕೇಂದ್ರಗಳನ್ನು ತೆರೆಯಲಾಗುವುದು.

ಬೆಂಗಳೂರಿನ ಪೋಕ್ಸಿನ್ ಇನ್ಸ್ಟಿಟ್ಯೂಟಿನ ಮುಖ್ಯಾಧಿಕಾರಿ ಡಾ ಪೈ ಎನ್ ಕೃಷ್ಣಮೂರ್ತಿಯವರು ಈ ಕ್ಷೇತ್ರಗಳನ್ನು ಸಂಚರಿಸಿ, ಅರಸಿನ ಮುಂಡಿಗೆ ರೋಗದ ಪ್ರತಿಬಂಧಕೋಪಾಯಗಳ ಪರಿಶೀಲನೆ ನಡೆಸಲಿರುವರು

ಕಾಸರಗೋಡು ಡಿ ಮು. ಕೋರ್ಟಿನಲ್ಲಿ

O S No 350/1956

M ತಿರುಮಲೇಶ್ವರ ಭಟ್ಟ — ವಾದಿ

ಮತ್ತು

ನಾರಾಯಣ ಭಟ್ಟ ಕೂಡ - ಪ್ರತಿವಾದಿರು

ಸಪ್ಲಿಮೆಂಟ್ ೬ನೇ ಪ್ರತಿವಾದಿ ಬಾಳಿಕೆ ಶಂಕರನಾರಾಯಣ ದೇವರು ಬಗ್ಗೆ ಇವರ ಟ್ರಸ್ಟಿ ಬಿ ಗೋವಿಂದ ಭಟ್ಟ, ಬಿ ನಾರಾಯಣ ಬಟ್ಟರ ಮಗ, ಮಂಗ್ಲೂರು ತ್ಯಪರ ಎಂಣ್ಣಗುಡ್ಡೆಯಲ್ಲಿರುವವರು.

ಮೇಲ್ಕಂಡ ವ್ಯಾಜ್ಯದಲ್ಲಿ 4ನೇ ಪ್ರತಿವಾದಿಯ ಹಾಜರಾತಿ ಬಗ್ಗೆ ತಾ 17-3-1958ರಲ್ಲಿ ತನ್ಗೆ ಇಟ್ಟಿದೆ ಸದರೀ ಪ್ರತಿವಾದಿರು ಆಕ್ಷೇಪವಿದ್ದಲ್ಲಿ ಆ ದಿನ ಹಾಜರಾಗಿ ದಾಖಲು ಮಾಡಬಹುದೆಂಬ ಸಂಗತಿ ಈ ಮೂಲಕ ತಿಳಿಸುವದಾಗಿಯದೆ.

K Ganesh Rao,
ವಾದಿ ಕಡೆ ವಕೀಲ್

Kasargod 3—3—58

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ|| A R ಅಯ್ಯರ್

ಸಂತಾನ ಸಿಂದೂರ | **ಮದನ ವಿಲಾಸ**

(ಸ್ತ್ರೀಯರಿಗೆ, ಪ್ಯಾಕೆಟ್) | (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಟೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ ರೂ 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I)

ಶಿಕ್ಷಣ ಮತದಾನದ ಕರಡು ಯಾದಿಯ ಪ್ರಕಟಣೆ — ಶಿಕ್ಷಕರ ಮತದಾನ ಪಟ್ಟಿಯಲ್ಲಿ ತಿದ್ದುಪಡಿಗಳನ್ನು ಸೂಚಿಸಲು ಕರಡು ಮತದಾನ ಪಟ್ಟಿಯನ್ನು ಜಿಲ್ಲಾ ವಿದ್ಯಾಧಿಕಾರಿಗಳ ಆಫೀಸಿನಲ್ಲಿ ಮಾತ್ರವಲ್ಲದೆ ಪ್ರತಿ ರೇಂಜಿನ ಇನ್ಸ್‌ಪೆಕ್ಟರರ ಆಫೀಸಿನಲ್ಲಿಯೂ ಒದಗಿಸಬೇಕೆಂಬ ಕೇಳಿಕೆಯನ್ನು ಅಧಿಕಾರಿಗಳು ಮನ್ನಿಸಿರುತ್ತಾರೆ.

ಮೂರು ವರ್ಷ ಸರ್ವಿಸಿರುವ ಹಾ. ಎ. ಶಾಲಾ ಶಿಕ್ಷಕರೆಲ್ಲರಿಗೂ ಮತದಾನದ ಹಕ್ಕನ್ನು ಒದಗಿಸಿರಲಾಗುವುದು. ತಿದ್ದುಪಡಿಗಳನ್ನು ನಿಯಮಿತ ಫಾರಮಿನಲ್ಲಿ ಶೀಘ್ರವೇ ಸಂಬಂಧಪಟ್ಟವರಿಗೆ ಕಳುಹಿಸಿಕೊಡಬೇಕೆಂದು, ದ. ಕ. ಜಿಲ್ಲಾ ಕ್ರಿಯಾಸಮಿತಿಯ ಕನ್ವೀನರರು ತಿಳಿಸುತ್ತಾರೆ.

(೫ನೇ ಪುಟದಿಂದ)

ಭಾವುಕತನ, ಪಾಂಡಿತ್ಯ ಮತ್ತು ರಸಾಸ್ವಾದನ ಬುದ್ಧಿಗಳಿದ್ದುವು. ಹೀಗೆ ಉತ್ತಮ ಸಾಹಿತ್ಯ ನಿರ್ಮಾತರಾದ ಇವರು ರಾಜಕಾರಣವನ್ನೂ ಮುಟ್ಟಿದ್ದರೆಂದರೆ ಆಶ್ಚರ್ಯವಿಲ್ಲ.

ಮೌಲಾನಾ ಆಜಾದರು ದಿವಂಗತರಾದುದರಿಂದ ರಾಜಕಾರಣ ಕ್ಷೇತ್ರದಲ್ಲಿ ಹಾಗೆಯೇ ಸಾಹಿತ್ಯ ಕ್ಷೇತ್ರದಲ್ಲಿನ ಕೆಲವಾರು ಪ್ರಕಾಶ ಬೀರುವ ತಾರೆಗಳಲ್ಲಿ ಒಂದೊಂದು ಏಕ ಕಾಲದಲ್ಲಿಯೇ ಉದುರಿಬಿತ್ತೆಂಬುದು ನಿರ್ವಿವಾದ. ಅಂತಹ ಉಭಯ ಪಂಡಿತರು ವಿಶ್ವಕ್ಕೇನೇ ವಂದನಾರ್ಹರೆಂದು ಹೇಳಬಹುದು. ಮೌಲಾನಾ ಆಜಾದರ ಮರಣದಿಂದ ಕೇವಲ ರಾಜಕೀಯ ವಾತಾವರಣಕ್ಕೆ ನಷ್ಟವಾದುದಲ್ಲ, ಸಾಹಿತ್ಯ ಕ್ಷೇತ್ರದಲ್ಲಿ ದುಡಿಯುವವರಿಗೂ ಸಮಾನ ವ್ಯಸನವೊದಗಿದೆ. ಸಾಹಿತ್ಯ ಪ್ರೇಮಿಗಳೆಲ್ಲರೂ ಮೌಲಾನಾರ ನಿಧನಕ್ಕಾಗಿ ವ್ಯಥಿಸುವ ರಾಜಕಾರಣಿಗಳೊಂದಿಗೆ ಸಹಯೋಗಿಗಳಾಗಿದ್ದಾರೆ.

(ಆಧಾರ: ನವಭಾರತ ಟೈಮ್ಸ್)

ಜಿಲ್ಲಾ ಪ್ರಾಥಮಿಕ ಶಿಕ್ಷಕರ ಕ್ರಿಯಾ ಸಮಿತಿ ಸಭೆಯು ಕಾರ್ಕಳದಲ್ಲಿ ತಾ. 2ರಂದು ಯುಶ್. ವಿ. ಟಿ. ಹಾ. ಎ. ಶಾಲೆಯಲ್ಲಿ ಶ್ರೀ ಸಿ. ಮಾಧವ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಅಬುಲ್ ಕಲಂ ಆಜಾದರ ನಿಧನಕ್ಕಾಗಿ ದುಃಖ ಸೂಚನೆಯ ನಂತರ ಪರಿಷ್ಕೃತ ವೇತನ ಕುರಿತು ಮಂತ್ರಿಗಳಿಂದಲೂ ಅಧಿಕಾರಿಗಳಿಂದಲೂ ಬಂದ ಪತ್ರ ವ್ಯವಹಾರಗಳನ್ನು ಕನ್ವೀನರ್ ದಾಂತಿಯವರು ವಿವರಿಸಿದರು. ಖಾಸಗಿ ಶಾಲೆಗಳಂತೆ ಸ್ಥಳೀಕ ಆಡಳಿತೆಯ ಸಂಸ್ಥೆಗಳೂ ಈ ವೇತನವನ್ನು ರೂಢಿಗೆ ತರುವಂತೆ ವಿನಂತಿಸುವ, ಜಿಲ್ಲಾ ಬೋರ್ಡ್ ಅಧ್ಯಕ್ಷರನ್ನು ಇತರರನ್ನೂ ಶಿಷ್ಟ ಮಂಡಳವು ಭೇಟಿಯಾಗಬೇಕೆನ್ನುವ, ಆದಷ್ಟು ಬೇಗನೆ ಬಿಲ್ ಮಾಡುವಂತೆ ಸಂಬಂಧಪಟ್ಟವರನ್ನು ವಿನಂತಿಸುವ, ಬೆಂಗಳೂರಿಗೆ ತೆರಳಿದ ಶಿಷ್ಟ ಮಂಡಳಕ್ಕೆ ಕೊಟ್ಟ ಆಶ್ವಾಸನೆಯಂತೆ ಕಾರ್ಯವನ್ನು ರೂಪಿಸಿದ ಡಿ. ಪಿ. ಐ ರವರನ್ನು ಶಿಷ್ಟ ಮಂಡಳಕ್ಕೆ ಸಹಕಾರವಿತ್ತ ಮಹನೀಯರನ್ನೂ ಅಧಿಕಾರಿಗಳನ್ನೂ ಮಾನ್ಯ ಮಂತ್ರಿಗಳನ್ನೂ ಅಭಿನಂದಿಸುವ, ಯುನಿವರ್ಸಿಟಿ ಪರೀಕ್ಷೆಗೆ ಶಿಕ್ಷಕರಿಗೆ ಹಾಜರಾಗಲು ಅನುಮತಿ ಕೇಳುವ, ಗ್ರಾಂಟ್-ಇನ್-ಏಡ್ ಕಮಿಟಿಯ ವರದಿಯನ್ನು ಅಭಿಪ್ರಾಯ ಸೂಚಿಸಲು ಕಳುಹಿಸಬೇಕೆನ್ನುವ, ಹೊಸ ಸಿಲೆಬಸ್ಸನ್ನು 1959ನೇ ಜೂನಿನ ನಂತರ ಬಳಕೆಗೆ ತರಬೇಕೆನ್ನುವ, 8ನೇ ತರಗತಿಯನ್ನು ಇರಗೊಡಿಸಬೇಕೆನ್ನುವ, ಇತ್ಯಾದಿ ನಿರ್ಣಯಗಳು ಸ್ವೀಕೃತವಾದವು. ಲೆಕ್ಕ ಪರಿಶೀಲನೆ—ಮಂಜೂರಾತಿ, ಧನ್ಯವಾದಗಳೊಂದಿಗೆ ಸಭೆಯು ಅಂತ್ಯವಾಯಿತು.

ಪುತ್ತೂರು—ಮೈಸೂರು ಮಹಾರಾಣಿಯವರೊ, ಮಹಿಳಾ ಉಳಿತಾಯ ಚಳವಳದ ಮೈಸೂರುರಾಜ್ಯ ಸಲಹಾ ಸಮಿತಿಯ ಅಧ್ಯಕ್ಷೆಯೂ ಆದ ಶ್ರೀ ತ್ರಿಪುರಸುಂದರಮ್ಮಣ್ಣಿಯವರು ತಾ 1ರಂದು ಸಾಜೆ ಪುತ್ತೂರು ಕೋರ್ಟು ಮೈದಾನಿನಲ್ಲಿ ಜರಗಿದ ಸಭೆಯಲ್ಲಿ ಸಣ್ಣ ಉಳಿತಾಯ ಪಕ್ಷವನ್ನು ಉದ್ಘಾಟಿಸುತ್ತಾ, ಭಾರತವನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡುವುದಕ್ಕಾಗಿ ದೇಶದ ಹಲವು ಜನರು ಬಹಳ ಶ್ರಮಿಸಿದ್ದಾರೆ. ಅವರ ಶ್ರಮದ ಫಲವಾಗಿ ನಾವೆಂದು ಸ್ವತಂತ್ರ ರಾಷ್ಟ್ರದ ಪ್ರಜೆಗಳಾಗಿದ್ದೇವೆ. ಆದರೆ ನಾವಿಂದು ಆರ್ಥಿಕ ಸ್ವಾತಂತ್ರ್ಯರಹಿತವಾದ ರಾಜಕೀಯ ಸ್ವಾತಂತ್ರ್ಯ ಅಷ್ಟೇನೂ ವರಪ್ರದವಲ್ಲವೆಂಬುದನ್ನೂ ಮನಗಾಣಿಸುತ್ತಿದ್ದೇವೆ. ಈ ಆರ್ಥಿಕ ಸ್ವಾತಂತ್ರ್ಯವನ್ನು ಪೊಂದುವುದಕ್ಕಾಗಿ ದೇಶದಲ್ಲಿ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ. ಈ ಯೋಜನೆಗಳ ಯಶಸ್ವೀ ಕಾರ್ಯಾಚರಣೆಗೆ ಬೇಕಾದ ಹಣವನ್ನು ಒದಗಿಸಿಕೊಡುವಲ್ಲಿ ಸಣ್ಣ ಉಳಿತಾಯ ಯೋಜನೆಯು ಬಹಳ ಮಹತ್ತರವಾದ ಪಾತ್ರವನ್ನು ವಹಿಸುತ್ತದೆ. ಇದಕ್ಕಾಗಿ ದೇಶದ ಪ್ರತಿಯೋರ್ವ ಪ್ರಜೆಯೂ ತನ್ನಿಂದಾದಷ್ಟು ಉಳಿತಾಯವನ್ನು ಮಾಡಿ ರಾಷ್ಟ್ರೀಯ ಉಳಿತಾಯ ಯೋಜನೆಗೆ ನೆರವು ನೀಡಬೇಕು ಎಂದು ಮುಂತಾಗಿ ಹೇಳಿದರು.

ಮಹಾರಾಣಿಯವರು ಸ್ಥಳೀಯ ಸೈಂಟ್ ಫಿಲೋಮಿನಾಸ್ ಗರ್ಲ್ಸ್ ಹೈಸ್ಕೂಲಿನ ವಾರ್ಷಿಕ ಬಹುಮಾನ ವಿತರಣಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ವಿದ್ಯಾರ್ಥಿನಿಯರಿಗೆ ಉಪದೇಶಪರ ಮಾತುಗಳನ್ನಾಡಿದರು. ರೆ| ಫಾ| ಪತ್ರಾವೊರವರು ಶಾಲಾವರದಿಯನ್ನೋದಿದರು. ವಿದ್ಯಾರ್ಥಿನಿಯರಿಂದ ವಿವಿಧ ವಿನೋದಾವಳಿ ಕಾರ್ಯಕ್ರಮವೂ ಇತ್ತು.

ಪಡುಬಿದ್ರೆ— ಸ್ಥಳೀಯ ಕಾಡಿಪಟ್ಣ ಮೊಗವೀರ ಸಮಾಜಯುವಕ ಮತ್ತು ಭಗಿನಿ ಸಮಾಜದ ಆಶ್ರಯದಲ್ಲಿ ಕಳೆದ ತಾ 23, 24 ರಂದು ಶ್ರೀ ಬೆಂಗರೆ ನಾರಾಯಣ ಹರಿದಾಸರಿಂದ ಭಜನಾ ಕೀರ್ತನೆಗಳಾದುವು. ಹರಿದಾಸರಿಗೆ ರಜತಪದಕವಿತ್ತು ಗೌರವಿಸಲಾಯಿತು.

ಸುರತ್ಕಲ್—ಇಲ್ಲಿಯ ಅಗ್ರಹಾರ ಹಾ| ಎ| ಶಾಲೆಯಲ್ಲಿ ಕಳೆದ ತಾ 30 ರಂದು ಸಂಜೆ, ವಿಶಾಲ ಮೈಸೂರಿನ ತತ್ವ ಪ್ರಚಾರಕ ಪೇಜಾವರ ಶ್ರೀ ಹರಿದಾಸ್ ಟಿ. ಎಲ್ ವಾಸುದೇವರಾಯರು «ವಿದ್ಯಾರ್ಥಿಯ ಮುನ್ನಡೆ ಮತ್ತು ಶಾರದಾ ಸಾರೂಪ್ಯ" ಎಂಬ ವಿಷಯಗಳ ಮೇಲೆ ಭಾಷಣಮಾಡಿದರು.

ದೇಲಂಪಾಡಿ—ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ಕಳೆದ ತಾ 22ರಂದು ರಾತ್ರಿ «ಶ್ರೀಕೃಷ್ಣ ವಿಜಯ" ಎಂಬ ನಾಟಕವು ಶ್ರೀಗಳಾದ ಕೆ. ಈಶ್ವರ, ಪಿ. ರಾಘವ ಪುಣಿಂಚಿತ್ತಾಯ, ಎಮ್ ಕೃಷ್ಣ ಭಟ್, ಕೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್, ಕೆ. ಪಕೀರ ಆಳ್ವ, ಟಿ. ಕೆ ಪರಮೇಶ್ವರ, ಅಣ್ಣಯ್ಯ ಭಂಡಾರಿ, ಕೀ. ವ ಕೇಶವ ಪೊವಲಾವರ ಕೂಡುವಿಕೆಯಿಂದ ಜರಗಿತು

ಮೂಡಬಿದ್ರೆ— ಜೈನ ಹೈಸ್ಕೂಲಿನ ಕರ್ನಾಟಕ ಸಂಘದ ವಾರ್ಷಿಕ ಸಭೆಯು ಕಳೆದ ತಾ. 27ರಂದು ಶ್ರೀ ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಎ. ಸೋಮಪ್ಪ ರೈಗಳು ಸ್ವಾಗತ ಭಾಷಣ ಮಾಡಿದರು. ಶಿಕ್ಷಣ ಸಚಿವ ಮೌಲಾನಾ ಆಜಾದರ ನಿಧನದ ಬಗ್ಗೆ ಸಂತಾಪ ಸೂಚಿಸಿ ಅವರ ಆತ್ಮ ಶಾಂತಿಗಾಗಿ ಎರಡು ನಿಮಿಷ ಮೌನ ಪ್ರಾರ್ಥನೆಯಾಯಿತು. ಶ್ರೀ ಕೆ. ಶಾಂತರೈಗಳು ಪತ್ರಿಕಾ ವ್ಯವಸಾಯದ ಮಹತ್ವವನ್ನು ವಿವರಿಸಿದರು. ಶ್ರೀ ಟಿ. ರಘುಚಂದ್ರ ಸೆಟ್ಟರು ಧನ್ಯವಾದಗಳನ್ನಿತ್ತರು.

ಬೆಳ್ವೆ - ಸ್ಥಳೀಯ ಹಾ. ಎ. ಶಾಲಾ ಸಹಾಯಕ ಅಧ್ಯಾಪಕ ಶ್ರೀ ಬಿ. ಬಾಲಯ್ಯನ್ಯಾಕರಿಗೆ ಕಂಬದ ಕೋಣೆ ಹಾ. ಎ. ಶಾಲೆಗೆ ವರ್ಗವಾದ ನಿಮಿತ್ತ ಅವರನ್ನು ಬೀಳ್ಕೊಡುವ ಸಮಾರಂಭವು ಕಳೆದ ತಾ. 25ರಲ್ಲಿ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎನ್ ರಘುರಾಮ ಭಂಡಾರರ ಅಧ್ಯಕ್ಷತೆಯಲ್ಲಿ ಜರಗಿತು. ಯುವಕ ಸಂಘದ ಆಶ್ರಯದಲ್ಲೂ ಡಾ. ಎನ್ ಎನ್ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ನ್ಯಾಕರಿಗೆ ಉಪಾಹಾರ ಸತ್ಕಾರವಾಯಿತು.

ಕಟಪಾಡಿ—ಉಡುಪಿ ದಕ್ಷಿಣ ಶ್ರೇಣಿ ಶಾಲೆಗಳ ಪ್ರಾಥಮಿಕ ಅಧ್ಯಾಪಕರ ವಿಚಾರಗೋಷ್ಠಿ ಮತ್ತು ತರಬೇತಿ ಶಿಬಿರವು ಸ್ಥಳೀಯ ಎಸ್. ವಿ. ಎಸ್. ಹಾ| ಎ| ಶಾಲಾ ಸಭಾಂಗಣದಲ್ಲಿ ಕಳೆದ ತಾ 24ರಂದು ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಸ್ಮೈಲ್, ಅವರ ಸಂಚಾಲಕತ್ವದಲ್ಲಿ ಪ್ರಾರಂಭವಾಯಿತು. ಕಟಪಾಡಿ ಎಸ್. ವಿ. ಎಸ್. ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಪಿ. ರಾಮದಾಸ ನಾಯ್ಕರು ಧ್ವಜಾರೋಹಣ ಮಾಡಿದರು. ಕೇಂದ್ರ ಸರಕಾರದ ವಿದ್ಯಾಮಂತ್ರಿ ಮೌಲಾನಾ ಆಜಾದರ ನಿಧನದ ಸಂಕೇತವಾಗಿ ಧ್ವಜವನ್ನು ಅರ್ಧದಲ್ಲಿ ಹಾರಿಸಲಾಗಿತ್ತು.

ವಿಚಾರಗೋಷ್ಠಿಯನ್ನು ಉಡುಪಿ ಮುನಿಸಿಪಲ್ ಚೇರ್‌ಮನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಮೂಲ್ಕಿ ಸರಕಾರಿ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಕೆ. ವಿಠಲ ಶೆಣೈಯವರು ಉದ್ಘಾಟಿಸಿದರು. ಶ್ರೀಗಳಾದ ಯು ಕೃಷ್ಣರಾವ್, ಯು. ಪುಂಡಲೀಕ ಶೆಣೈ ಮೊದಲಾದವರು ವಿವಿಧ ವಿಷಯಗಳನ್ನೆತ್ತಿ ಮಾತನಾಡಿದರು. ಶ್ರೀ ಎಮ್. ಎಮ್ ಪ್ರಭುಗಳು ಧನ್ಯವಾದಗಳನ್ನಿತ್ತರು. ಅಧ್ಯಾಪಕ ವೃಂದದವರಿಂದ «ಸ್ವರ್ಣಮೂರ್ತಿ' ನಾಟಕ ಅಭಿನಯಿಸಲ್ಪಟ್ಟಿತು. ತಾ. 25ರಂದು ಕೂಡಾ ವಿಚಾರ ಗೋಷ್ಠಿ ನಡೆಯಿತು.

ಅಧ್ಯಾಪಕರ ವಿಚಾರಗೋಷ್ಠಿ ಮತ್ತು ತರಬೇತಿ ಶಿಬಿರದ ಸಮಾರೋಪ ಸಮಾರಂಭವು ಕಳೆದ ತಾ 27ರಂದು ಶ್ರೀ ಟಿ. ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಿಬಿರದ ಸಂಚಾಲಕ ಶ್ರೀ ಎಚ್. ಮೈಕಾರವರು ವರದಿವಾಚನ ಮಾಡಿದರು. ಶ್ರೀಗಳಾದ ಬಿ. ಎಮ್. ಕುಡ್ವ, ಬಿ, ಸೋಮಸುಂದರಮ್, ಬಿ. ಎಸ್. ಆಚಾರ್, ಡಾ. ಕೆ ಜಿ. ಕಿಣಿ ಮೊದಲಾದವರು ಭಾಗವಹಿಸಿದ್ದರು.

ಸ್ಥಳೀಯ ಎಸ್. ವಿ. ಎಸ್. ಹಾಸ್ಕೂಲಿನ ವಾರ್ಷಿಕೋತ್ಸವವು ಕಳೆದ ತಾ. 20ರಂದು ಶ್ರೀ ಪಿ. ಜಿ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಪಿ. ರಾಮದಾಸ ನಾಯ್ಕರು ಶಾಲಾ ವರದಿಯನ್ನೋದಿದರು. ಶ್ರೀ ಪಿ. ಬಾಲಕೃಷ್ಣ ನಾಯ್ಕರು ಸಂದೇಶವಾಚನ ಮಾಡಿದರು. ಶ್ರೀ ಯು. ವಿಷ್ಣುಮೂರ್ತಿ ಆಚಾರ್ಯರು ಶಾಲಾ ಸ್ವಸ್ತಿವಾಚನ ಮಾಡಿದರು. ಅಧ್ಯಕ್ಷರು ಪಾರಿತೋಷಕ ವಿತರಣೆ ಮಾಡಿ ಶಾಲಾಭಿವೃದ್ಧಿ ಬಗ್ಗೆ ಸಂತೋಷವ್ಯಕ್ತಪಡಿಸಿದರು. ಶ್ರೀ ಕೆ. ಆರ್. ಶೆಟ್ಟಿಯವರು ಧನ್ಯವಾದಗಳನ್ನಿತ್ತರು. ಶಾಲಾ ಮಕ್ಕಳ ವಿನೋದಾವಳಿ ಕಾರ್ಯಕ್ರಮಗಳಿಂದ ಸಮಾರಂಭ ಕೊನೆಗೊಂಡಿತು

ಪೆರ್ಡೂರು— ಸ್ಥಳೀಯ ಶ್ರೀ ಅನಂತಪದ್ಮನಾಭ ಸ್ವಾಮಿಯ ಸನ್ನಿಧಿಯಲ್ಲಿ ವಾರ್ಷಿಕವಾಗಿ ನಡೆಯುವ ಕಾಲಾವಧಿ ರಥೋತ್ಸವವು ಇದೇ ತಾ. 12ರಂದು ರಾತ್ರಿ ಭೇರಿತಾಡನ, ಮೃತ್ತಿಕಾ ಸಂಗ್ರಹ, ಅಂಕುರಾರೋಪಣದಿಂದ ಪ್ರಾರಂಭವಾಗಿ ತಾ. 19ರಂದು ಬ್ರಹ್ಮಕುಂಭಾಭಿಷೇಕದೊಡನೆ ಕೊನೆಗೊಳ್ಳಲಿರುವುದು. ಶ್ರೀ ಮನ್ಮಹಾ ರಥೋತ್ಸವವು ತಾ. 16ರಂದು ಜರಗಲಿರುವುದು

ತೆಂತ್ರಾಡಿ- ಸ್ಥಳೀಯ ಗ್ರಾಮಸ್ಥರ ಸಭೆಯು ತಾ. 2ರಂದು ಕಾಡೂರು ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ಕೆ. ಕೃಷ್ಣಯ್ಯ ಸೆಟ್ಟಿರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ವರ್ಷ ಜಿಲ್ಲಾ ಬೋರ್ಡಿನಿಂದ ತೆರೆದ ಏಕೋಪಾಧ್ಯಾಯ ಶಾಲಾಡಳಿತದ ಬಗ್ಗೆ ಐದುಜನರಿರುವ ಕಾರ್ಯಕಾರೀ ಸಮಿತಿ ರಚಿಸಲಾಯಿತು.

ದಿ ವಿಜಯಾ ಬೇಂಕು ಲಿ., ಕಾಪು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ, ನಗದ ಕಡಿನ ಸೋಲೆ ಸಾಲ ಪಡಕೊಂಡು ಕ್ಲಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿಮಾಡಿರುವದ್ರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ, ಅವರಿಗೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಸದ್ರಿಯವು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 20_3_1958ನೇ ಗುರುವಾರ ಮಧ್ಯಾಹ್ನ ಘಂಟೆ 3ಕ್ಕೆ ಸರಿಯಾಗಿ, ಅಥವಾ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಲೋ. ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು 31 12.57ವರೆಗಿನ ಬಡ್ಡಿ ಕೂಡಾ
848/54	ತಿಮ್ಮ ಪೂಜಾರಿ, ಕೊರ್ರ ಪೂಜಾರಿಯವರ ಮಗ, ಶ್ರೀಧರ ಪರೀಲರ ಒಕ್ಕಲು, ಪಡುಗ್ರಾಮ. ಪೋಸ್ಟು ಕಾಪು.	37 88
616/56	ಕೊರಗ ಪೂಜಾರಿ, ಗುಡ್ಡೆ ಪೂಜಾರಿಯವರ ಮಗ, ಪಡುಗ್ರಾಮ ಪೋಸ್ಟು ಕಾಪು.	33 62
167/57	—Do—	21.00
737/56	ದೊಡ್ಡಣ್ಣ ಸೆಟ್ಟಿ, ಸಿದ್ದು ಸೆಟ್ರ ಅಳಿಯ ಮೂಳೂರು ಮುಕ್ಕಾಲ್ತಿ ಮನೆ, ಪೋಸ್ಟು ಉಚ್ಚಿಲ.	12 12
955/56	—Do—	40.63
146/57	ಜಾಕು ಪೂಜಾರ್ತಿ, ಕೊರಪಲು ಪೂಜಾರ್ತಿಯ ಮಗಳು, ಮೂಳೂರು ಗ್ರಾಮ, ಪೋಸ್ಟು ಉಚ್ಚಿಲ.	17 75
882/57	ತಂಜೆ ಪೂಜಾರ್ತಿ- ಪರೇಶ್ರಿ ಪೂಜಾರ್ತಿಯ ಮಗಳು, ತ್ರಿತೋಟ ಪಡುಗ್ರಾಮ, ಪೋಸ್ಟು ಕಾಪು.	53.37
502/56	ಎಡ್ವರ್ಡ್ ಸದನಂದ ಅಮಣ್ಣ, ಅದ್ದೀಯಲ್ ಅಮಣ್ಣರ ಮಗ, ಉಳಿಯಾರಗೋಳಿಗ್ರಾಮ, ಪೋಸ್ಟು ಉಳಿಯಾರಗೋಳಿ.	110.06

The Vijaya Bank Ltd ,
Office Kaup
Date 3-3-58.

K. Sitarama Shetty,
Agent.



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತವಿಶವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA -40

ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಮಂಗಳೂರು

ಮಂಗಳೂರು ನಗರಕ್ಕೆ ನಳ್ಳಿ ನೀರನ್ನು ಒದಗಿಸುವ ಯೋಜನೆಯು ಇದೇ ತಿಂಗಳ ತಾ. 21ರಂದು ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಂದ ಉದ್ಘಾಟಿಸಲ್ಪಡುವುದೆಂದು ನಿರೀಕ್ಷಿಸಲಾಗಿದೆ

ಬೀಳ್ಕೊಡುವ ಸಮಾರಂಭ ಸ್ಥಳೀಯ ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಹಿರಿಯ ವಿದ್ಯಾರ್ಥಿಗಳನ್ನು ಬೀಳ್ಕೊಡುವ ಸಮಾರಂಭವು ಕಳೆದ ತಾ. 25ರಂದು ಸಂಜೆ ಕಾಲೇಜ್ ಯೂನಿಯನ್ ಆಶ್ರಯದಲ್ಲಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎನ್. ಎಸ್. ಕೃಷ್ಣಮೂರ್ತಿ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸಿ. ವಿ. ಲೋಬೋರವರು ಸ್ವಾಗತ ಭಾಷಣ ಮಾಡಿದರು. ಯೂನಿಯನ್ ಕಾರ್ಯದರ್ಶಿ ಶ್ರೀ ಸೇವಗೂರ್ ಗಣೇಶ ಕಾಮತರು ವರದಿಯನ್ನೋದಿದರು. ಅಧ್ಯಕ್ಷರು ಸಮಯೋಚಿತ ಭಾಷಣ ಮಾಡಿ ಮದ್ರಾಸಿನಲ್ಲಿ ಯು. ಎಸ್. ಐ. ಎಸ್. ಆಶ್ರಯದಲ್ಲಿ ಜರಗಿದ ಅಬ್ರಹಾಂ ಲಿಂಕನ್ ಭಾಷಣ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನವಿತ್ತ ಕುಮಾರಿ ವಿ. ಪ್ರಭಾ ಕಾಮತರಿಗೆ ಬಹುಮಾನ ವಿತರಣೆ ಮಾಡಿದರು. ಯೂನಿಯನ್ ಅಧ್ಯಕ್ಷೆ ಕುಮಾರಿ ಎಸ್. ಸುಮನಾ ಕಾಮತರು ಧನ್ಯವಾದವಿತ್ತರು

ನಗರಸಭೆ ಮುಂದುವರಿಯಿತು— ಭಾರತದ ಮಾಜಿ ವಿದ್ಯಾಮಂತ್ರಿ ದಿ| ಮೌಲಾನಾ ಅಬುಲ್‌ಕಲಂ ಆಜಾದರ ಗೌರವಾರ್ಥವಾಗಿ ಕಳೆದ ತಾ. 27ರಂದು ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸೇರಿದ ಮಂಗಳೂರು ನಗರಸಭೆಯು ಮುಂದುವರಿಯಿತು. ಸಭಾಧ್ಯಕ್ಷರು ದಿವಂಗತರ ಗುಣಗಾನ ಮಾಡಿದ ಬಳಿಕ ಒಂದು ನಿಮಿಷ ಮೌನಾಚರಣೆ ನಡೆಯಿತು.

ನಗರದಲ್ಲಿ ಡಯಾಲ್ ಡ್ರೀನ್ ಚಿಮುಕಿಸುವಿಕೆ— ಅನೇಕಾಲು ರೋಗ ನಿವಾರಣಾರ್ಥವಾಗಿ ಸೊಳ್ಳೆ ಕಾಟವನ್ನು ತಡೆಗಟ್ಟಲು ಮೈಸೂರು ಸರಕಾರದ ಸಾರ್ವಜನಿಕ ಆರೋಗ್ಯ ಇಲಾಖೆಯವರು ಇದೇ ತಾ. 9ರಿಂದ 13ರ ತನಕ ಬೇರೆ ಬೇರೆ ವಾರ್ಡುಗಳಲ್ಲಿ ಉಚಿತವಾಗಿ ಡಯಾಲ್ ಡ್ರೀನ್ ಚಿಮುಕಿಸುವ ಕಾರ್ಯವನ್ನು ಕೈಕೊಳ್ಳುವರು

ಕದ್ರಿವಾರ್ಡ್ ಕಾಂಗ್ರೆಸ್ ಸಮಿತಿ- ವಿಶೇಷ ಮಹಾಸಭೆಯು ಕಳೆದ ತಾ. 23ರಂದು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿ ಹೊಸ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು

ವಾರ್ಷಿಕೋತ್ಸವ- ರೋಟರಿ ಕ್ಲಬ್ಬಿನ 53ನೇ ವಾರ್ಷಿಕೋತ್ಸವವು ಕಳೆದ ತಾ. 27ರಂದು ಸಿ. ಪಿ. ಸಿ. ಸಭಾಭವನದಲ್ಲಿ ರೋಟರಿ ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ಪಿ. ಕಸ್ತೂರಿಯವರು ಗತ ಸಭೆಯ ವರದಿಯೋದಿದರು. ಶ್ರೀ ಕುಡ್ವರು ರೋಟರಿ ಇಂಟರ್‌ನೇಶನಲ್ ಇದರ ಧ್ಯೇಯಗಳನ್ನು ವಿವರಿಸಿ ಭಾಷಣವಿತ್ತರು

ಬಡ ವಿದ್ಯಾರ್ಥಿಗಳಿಗೆ ಧರ್ಮಾರ್ಥ ಭೋಜನ- ಸೈಂಟ್ ಎಲೋಸಿಯಸ್ ಕಾಲೇಜ್ ಮಿಡ್ಲ್ ಸ್ಕೂಲಿನ ಸಮಾಜಸೇವಾ ಸಂಘದ ವಿದ್ಯಾರ್ಥಿಗಳು ಕಳೆದ 27ರಂದು ನೆರೆಕರೆಯ ಶಾಲೆಗಳ ಸುಮಾರು 150 ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಡಾಯಿ ಅನ್ನ ಭೋಜನವಿತ್ತರು. ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಶ್ರೀ ಬಿ. ಮಂಜಯ್ಯ ಹೆಗ್ಗಡೆಯವರು ಈ ಸಮಾರಂಭವನ್ನು ಉದ್ಘಾಟಿಸಿದರು. ಶಾಲಾಧ್ಯಾಪಕ ಶ್ರೀ ಬಿ. ವಾಸ್ ಅವರು ಸಂದರ್ಭೋಚಿತ ಮಾತುಗಳನ್ನಾಡಿದರು. ಕಾಲೇಜಿನ ರೆಕ್ಟರ್ ರೆ| ಫಾ| ಎ. ಜೆ. ಸಲ್ಡಾನರು ಉಪಸ್ಥಿತರಿದ್ದರು.

ಮೈಸೂರು ಮಹಾರಾಣಿ ಶ್ರೀ ತ್ರಿಪುರ ಸುಂದರಮ್ಮಣ್ಣಿಯವರು ತಾ. 1ರಂದು ರಾತ್ರಿ ಮಂಗಳೂರಿಗೆ ಆಗಮಿಸಿದರು. ಇವರ ಜತೆಯಲ್ಲಿ ಮೈಸೂರು ಕಲಹಾ ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ಲೀಲಾವತಿ ಅಂಜಾನಪ್ಪ, ಸದಸ್ಯರುಗಳಾದ ಶ್ರೀಮತಿ ಲಂಕಪ್ಪ ಮತ್ತು ಶ್ರೀಮತಿ ಮಲ್ಲಿಕಾ ಘೋಷ್, ಮಹಿಳಾ ಸಂಘಟನಾಧಿಕಾರಿ ಕುಮಾರಿ ಎಮ್. ಸಿ. ರುಕ್ಮಿಣಿ, ಸಂಘಟಕ ಎನ್. ಎಸ್. ಮೈಲ್ ಬಂದಿದ್ದರು. ಕದ್ರಿ ಪ್ರವಾಸಿ ಬಂಗ್ಲೆಯಲ್ಲಿ ಅವರನ್ನು ಜಿಲ್ಲಾಧಿಕಾರಿ ಶ್ರೀ ಹೊಂಬಾಳಯ್ಯ, ಡಿ. ಎಸ್. ಪಿ., ಶ್ರೀ ಸಿ. ಇ. ಜೆ. ಎಲಿಶಾ, ಡಿ. ಪೈ. ಎಸ್. ಓ., ಶ್ರೀ ಕೆ. ಬಾಲಕೃಷ್ಣ, ಮೈಸೂರು ಕಲಹಾ ಸಮಿತಿ ಸದಸ್ಯೆ ಶ್ರೀಮತಿ ಶಾಂತೇರಿ ಪ್ರಭು, ಶ್ರೀಮತಿಯರಾದ ಕಮಲಾ, ಎಸ್. ಆಳ್ವ, ಹೀರಾ ಸೆಟ್ಟಿ, ಎಮ್. ಸಿ. ಶಾಸ್ತ್ರಿ ಮತ್ತಿತರ ಮಹಿಳಾ ಸಂಸ್ಥೆಗಳ ಪ್ರತಿನಿಧಿಗಳು ಸ್ವಾಗತಿಸಿದರು

ತಾ. 2ರಂದು ಬೆಳಿಗ್ಗೆ ಮಹಾರಾಣಿಯವರು ಸ್ವಾಮಿ ಶಿವಾನಂದ ಸೇವಾಶ್ರಮ, ಶ್ರೀ ರಾಮಕೃಷ್ಣ ಮಿಶನ್ ಚಿಕಿತ್ಸಾಲಯ ಮತ್ತು ವಿದ್ಯಾರ್ಥಿ ನಿಲಯ, ಗಿಲ್ಡ್ ಆಫ್ ಸರ್ವಿಸ್, ಮಹಿಳಾ ಸಮಾಜಗಳಿಗೆ ಭೇಟಿಯಿತ್ತರು.

ಸಂಜೆ ಮಹಿಳಾ ಉಳಿತಾಯ ಸಪ್ತಾಹವನ್ನು ಮಹಾರಾಣಿಯವರು ಉದ್ಘಾಟಿಸುತ್ತಾ, ದೇಶದಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ವಸ್ತುಗಳ ಬೆಲೆಯನ್ನು, ಜೀವನಮಟ್ಟದ ಹೆಚ್ಚಳವನ್ನು ನಾವಿಂದು ಕಾಣುತ್ತಿದ್ದೇವೆ. ಸಂಬಳಕ್ಕಿಂತ ಖರ್ಚು ಹೆಚ್ಚುಗುತ್ತಿರುವ ಈ ಕಾಲದಲ್ಲಿ ಜೀವನವೆಂಬುದು ಆರ್ಥಿಕ ಒತ್ತಡಕ್ಕೊಳಗಾಗಿದೆ. ಈ ಆರ್ಥಿಕ ಒತ್ತಡವನ್ನು ಪರಿಹರಿಸುವ ವಿಧಾನವು ಯಾವುದು? ಮಹಿಳಾ ಉಳಿತಾಯ ಚಳವಳಿಯವರು ಈ ದುರ್ದೆಶೆಯಿಂದ ಜನರನ್ನು ರಕ್ಷಿಸಲು ಉತ್ತಮ ವಿಧಾನವನ್ನು ಕೈಗೊಂಡಿದ್ದಾರೆ. ಹಣದ ದುವ್ಯಯವನ್ನು ಕಡಿಮೆಮಾಡಿ ಉಳಿತಾಯವನ್ನು ಹೆಚ್ಚಿಸಿದರೇನೇ ಈ ಬೆಲೆ ಏರಿಕೆಯನ್ನು ತಡೆಗಟ್ಟಬಹುದು ಎಂದು ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಮಂತ್ರಿ ಶ್ರೀ ಎ. ಬಿ. ಶೆಟ್ಟರು ತಮ್ಮ ಭಾಷಣದಲ್ಲಿ ಗೃಹದ ಆರ್ಥಿಕ ನಿರ್ವಹಣ ಕಾರ್ಯದಲ್ಲಿ ಮಹಿಳೆಯರ ಜವಾಬ್ದಾರಿ ಬಹಳವಿದೆ. ಮಹಿಳೆಯರು ಹೆಚ್ಚಿನ ಉಳಿತಾಯವನ್ನೂ ಮಾಡಿ ಇತರರಿಗೆ ಮಾದರಿಯಾಗಿರಬೇಕೆಂದು ಕೇಳಿಕೊಂಡರು. ಶ್ರೀಮತಿ ಲೀಲಾವತಿ ಅಂಜಾನಪ್ಪ, ಶ್ರೀಗಳಾದ ನಯಂಪಳ್ಳಿ ರಾಮರಾವ್, ಶ್ರೀನಿವಾಸ್ ಗಿರಿಧರಲಾಲ್ ಚಂದ್ರಾ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಆರಂಭದಲ್ಲಿ ಶ್ರೀಮತಿ ಶಾಂತೇರಿ ಜೆ. ಪ್ರಭುಗಳು ಸ್ವಾಗತ ಮಾತುಗಳನ್ನಾಡಿದರು, ಕೊನೆಯಲ್ಲಿ ಶ್ರೀಮತಿ ಕಲ್ಯಾಣಿ ಬಿ. ಶೆಟ್ಟರು ಧನ್ಯವಾದವಿತ್ತರು.

ಎಯಿಡೆಡ್ ಶಾಲೆಗಳ ಉಪಾಧ್ಯಾಯರಿಗೆ ಪರಿಷ್ಕೃತವೇತನ- ಎಯಿಡೆಡ್ ಶಾಲೆಗಳ ಆಡಳಿತದವರನ್ನುದ್ದೇಶಿಸಿ ಶ್ರೀ ಎಮ್. ಪಿ. ಎಲ್. ಶಾಸ್ತ್ರಿ, ಎಮ್. ಎಲ್. ಸಿ., ಅವರು ವಿಜ್ಞಪ್ತಿಯೊಂದನ್ನು ಹೊರಡಿಸಿ ಖಾಸಗಿ ಶಾಲೆಗಳಲ್ಲಿಯ ಉಪಾಧ್ಯಾಯರಿಗೆ ಪರಿಷ್ಕೃತ ವೇತನವನ್ನು ಕೊಡುವುದರಲ್ಲಿ ಸರಕಾರವು ರೂಪಾಯಿ 100 ರಲ್ಲಿ 87½ ಕೊಡಲು ಮುಂದೆ ಬಂದಿರುವುದು. ಈ ಸೌಕರ್ಯವನ್ನು ಖಾಸಗಿ ಶಾಲಾಡಳಿತದವರು ಉಪಯೋಗಿಸಿಕೊಂಡು ತಂತಮ್ಮ ಶಾಲೆಗಳ ಉಪಾಧ್ಯಾಯರಿಗೆ ಪರಿಷ್ಕೃತ ಸಂಬಳ ಮತ್ತು ತುಟ್ಟಿಭತ್ತೆಯನ್ನು 1957ನೆ ಎಪ್ರಿಲ್ ತಿಂಗಳಿನಿಂದ ಕೊಟ್ಟು ಅಧ್ಯಾಪಕವರ್ಗದಲ್ಲಿರುವ ಅಶಾಂತಿಯನ್ನು ನೀಗಲು ಸಂದರ್ಭವೊದಗಿದೆ. ಸರಕಾರದ ಈ ಸೌಕರ್ಯವನ್ನು ಇದೇ ಮಾರ್ಚಿ ತಿಂಗಳೊಳಗೆ ಉಪಯೋಗಿಸದಿದ್ದಲ್ಲಿ ಸರಕಾರೀ ಗ್ರಾಂಟು ಅವಧಿ ಬಾಧಕಕ್ಕೊಳಗಾಗುವುದು. ಖಾಸಗಿ ಮೆನೇಜ್‌ಮೆಂಟಿನವರು ತಮ್ಮ ಜಾಣತನವನ್ನು ಪ್ರದರ್ಶಿಸುವ ಸಮಯವೀಗ ಒದಗಿದೆ ಎಂದಿದ್ದಾರೆ

ರಾಜಕೀಯ ಸಂತ್ರಸ್ತರಿಗೆ ಭೂಮಿಯ ಕೊಡುಗೆಗಳು

ಹಳೆಯ ಮೈಸೂರು ರಾಜ್ಯದ ಒಂಬತ್ತು ಜಿಲ್ಲೆಗಳಿಗೆ ಅನ್ವಯವಾಗುವ ಜನವರಿ ೨೦, ೧೯೫೮ನೆಯ ದಿನಾಂಕ ಹೊರಡಿಸಿದ ಪರಿಷ್ಕೃತ ಭೂ ಕೊಡುಗೆ ನಿಯಮಗಳ ಪ್ರಕಾರ, ಬಡವರೂ ಮತ್ತು ಭೂಮಿ ಇಲ್ಲದವರೂ ಇರುವ ರಾಜಕೀಯ ಸಂತ್ರಸ್ತರು ಸ್ವಂತವಾಗಿ ಕೃಷಿ ಕೈಕೊಳ್ಳಬಯಸಿದರೆ ಸಾಗುವಳಿಗಾಗಿ ಭೂಮಿಗಳನ್ನು ಕೊಡುವಾಗ ಅವರಿಗೆ ಮೊದಲು ಪ್ರಾಶಸ್ತ್ಯವನ್ನು ಕೊಡಲಾಗುವುದು.

ನಿಯಮಗಳಲ್ಲಿರುವ ವಿವರಣೆಯ ಪ್ರಕಾರ "ರಾಜಕೀಯ ಸಂತ್ರಸ್ತ" ಎಂದರೆ ಭಾರತದ ಸ್ವಾತಂತ್ರ್ಯಕ್ಕಾಗಿ ಅಥವಾ ಮೈಸೂರಿನಲ್ಲಿ ಜವಾಬ್ದಾರಿ ಸರಕಾರದ ಸ್ಥಾಪನೆಗಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ನೇತೃತ್ವದಲ್ಲಿ ಅಥವಾ ಅದರ ಅನುಮತಿಯ ಮೇರೆಗೆ ಇಲ್ಲವೇ ಮೈಸೂರು ಸ್ಟೇಟ್ ಕಾಂಗ್ರೆಸ್ಸಿನಿಂದ ೧೯೪೭ರಿಂದ ನಡೆದ ಚಳವಳಿಗಳಲ್ಲಿ ಭಾಗವಹಿಸಿ ಸೆರೆಮನೆಗೆ ಹೋದ ಅಥವಾ ವಿಶೇಷ ಆಸ್ತಿ ಅಥವಾ ಆದಾಯವನ್ನು ಕಳೆದುಕೊಂಡ ಯಾವುದೇ ವ್ಯಕ್ತಿ.

ರಾಜಕೀಯ ಚಳವಳಿಯಲ್ಲಿ ಸತ್ತ ಅಥವಾ ಅದರಲ್ಲಿ ಭಾಗವಹಿಸಿ ಆ ಮೇಲೆ ಸತ್ತ ರಾಜಕೀಯ ಸಂತ್ರಸ್ತನ ಹೆಂಡತಿ ಅಥವಾ ಸಂತ್ರಸ್ತಳ ಗಂಡ ಅಥವಾ ಮಕ್ಕಳು ಕೂಡ ರಾಜಕೀಯ ಸಂತ್ರಸ್ತರೆನಿಸುವರು. ಈ ನಿಯಮಾನುಸಾರ ಭೂಮಿಯನ್ನು ಪಡೆಯಲು ಅವರು ಅರ್ಹರಾಗುವರು.

ರಾಜಕೀಯ ಸಂತ್ರಸ್ತರಿಗೆ ಅನ್ವಯವಾಗುವ ರಿಯಾಯಿತಿಗಳನ್ನು ಪಡೆಯಬಯಸುವವರು ತಮಗೆ ಬೇಕಾದ ಭೂಮಿಯ ವಿವರಗಳನ್ನು ತಿಳಿಸುತ್ತ ಆ ಭೂಮಿ ಯಾವ ತಾಲೂಕಿನಲ್ಲಿರುವುದೋ ಆ ತಾಲೂಕಿನ ತಹಶೀಲದಾರರಿಗೆ ಅರ್ಜಿಯನ್ನು ಹಾಕಬೇಕು. ಇಂಥ ಅರ್ಜಿಗಳ ಜೊತೆಗೆ ಅರ್ಜಿದಾರನಿರುವ ತಾಲೂಕಿನ ಅಥವಾ ಜಿಲ್ಲೆಯ ಕಾಂಗ್ರೆಸ್ ಸಮಿತಿಯು ನಿರ್ಣಯದ ಪ್ರತಿಯೂ ಇರಬೇಕು ಮತ್ತು ರಾಜಕೀಯ ಸಂತ್ರಸ್ತರಿಗೆ ಅನ್ವಯವಾಗುವಂಥ ರಿಯಾಯಿತಿಗಳನ್ನು ಪಡೆಯಲು ಅರ್ಹನಿರುವನೆಂಬ ಬಗ್ಗೆ ಬೇರೆ ಪ್ರಮಾಣಪತ್ರವನ್ನೂ ಇಡಬೇಕು

ನಿಮಗೆ

ಕಾಶ್ಮೀರ ಸಮಸ್ಯೆಯನ್ನು

ತಿಳಿಯಬೇಕೆ?

ಹಾಗಿದ್ದರೆ

ಈಗ ತಾನೆ ಪ್ರಕಟವಾಗಿರುವ

ಭಾರತದ ಅಂಗ-ಕಾಶ್ಮೀರ

ಎಂಬ ನೂತನ ಪುಸ್ತಕವನ್ನೋದಿರಿ!

(ಬರೆದವರು- ಎಮ್. ರಘುನಾಥನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ

ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,

ಬೆಲೆ ಐವತ್ತು ಮಾತ್ರ ಟ. ಪ. ಪ್ರತ್ಯೇಕ

ನವಯುಗ ಪ್ರೆಸ್, ಉಡುಪಿ

ಕುಂದಾಪುರ ದಿ ಮು. ಕೋರ್ಟಿನಲ್ಲಿ

S. E. P 801/1957.

ಗೋವಿಂದ ಸೆಟ್ಟಿ — ವಾದಿ

1 ಮರ್ಲಿ ಹೆಂಗ್ಸು (ಪ್ರೋತ್ರಿ) ಕೂಡಾ — ಪ್ರತಿವಾದಿಗಳು

2 ಅಂತ 1ನೇ ಪ್ರತಿವಾದಿ ಮಗ ಉಡ್ಪಿ ತಾಲ್ಲೂಕು ಮಣೂರು ಗ್ರಾಮ 2ನೇ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ಮೇಲಿನ ಅಮಲ್ದಾರಿಯಲ್ಲಿ ಚರಾಸ್ತಿ ಜಪ್ತಿ ಸೊತ್ತು ಲೀಲಂ ಬಗ್ಗೆ ಯಿಸ್ತಿಹಾರು ಹಾಜ್ರಿ ಪಡ್ಸಿದ ಸದ್ರಿ ಯಿಸ್ತಿಹಾರಿನ ಶರ್ತ ನಿರ್ಣಯಿಸುವರೆ ಅಮಲ್ದಾರಿಯನ್ನು ತಾ. 8-3-1958 ಕ್ಕೆ ತನ್ಹಗೆಯಿಟ್ಟದೆ ಆ ಕುರಿತು ನಿಮ್ಮ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿರುತ್ತದೆ

(By order of the court)

Y Tejappa Shetty,
Advocate for Petitioners

Coondapoor 28-2-58

Statement about ownership and other particulars about Newspaper: NAVAYUGA.

FORM IV (Rule 8)

1. Place of Publication		UDIPI
2 Periodicity of its Publication		WEEKLY
3 Printers' Name		K H SHETTY,
Nationality	.	INDIAN
Address	....	Navayuga Press Palukote, Udipi (S K)
4 Publishers' Name	.	K H SHETTY
Nationality	.	INDIAN
Address	.	Palukote, Udipi (S K.)
5 Editor's Name	. .	K H. SHETTY
Nationality		INDIAN
Address		Palukote, Udipi (S K)
6 Names and addresses of individuals who own the news paper and partners or shareholders holding more than one per cent of the total capital		K. H SHETTY Palukote, Udipi (S. K)

I, K H Shetty, hereby declare that the particulars given above are true to the best of my knowledge and belief.

(*Sd*) K H SHETTY,
Signature of Publisher

Date. 6 3-1958.

ವಿದ್ಯಾಭ್ಯಾಸದಲ್ಲಿ ಅಂತಾರಾಷ್ಟ್ರೀಯತೆ

(೩ನೇ ಪುಟದಿಂದ)

ಗಿಸುವಷ್ಟು ಸ್ವತಂತ್ರವೂ, ಸಮರ್ಥವೂ ಆಗಿರಬೇಕೆಂದು ಅವರು ಅಭಿಪ್ರಾಯ ಪಡುತ್ತಾರೆ.

ಇಂದು UNESCO ಸಂಸ್ಥೆಯು ಹಲವಾರು ವಿಧಾನಗಳಿಂದ ಅಂತಾರಾಷ್ಟ್ರೀಯತೆಯ ಪ್ರಸಾರಕ್ಕಾಗಿ ಉಪಾಯಗಳನ್ನು ಕಂಡು ಹಿಡಿದಿವೆ; ಹಿಡಿಯುತ್ತಲಿವೆ. UNICEF (United Nations' Childrens Emergency Fund) ಎಂಬ ಸಂಸ್ಥೆಯು ವಿಶ್ವದ ಮಕ್ಕಳ ಹಿತಚಿಂತಕ ನಿಧಿಯ ವಿನಿಯೋಗದ ಮೂಲಕ ಜನಾಂಗ-ಜಾತೀಯತೆ ಮೊದಲಾದ ಕೃತಕ ಅಂತರಗಳನ್ನು ಖಂಡಿಸಿ, ಅಂತರ್ಜನಾಂಗ ಸ್ನೇಹ ಮತ್ತು ವಿಶ್ವಾಸಗಳ ವಿಸ್ತರಣಕ್ಕಾಗಿ ಪ್ರಯತ್ನಿಸುತ್ತಿದೆ. ಶಿಕ್ಷಣಕ್ಕೆ ನೇರವಾಗಿ ಅನ್ವಯಿಸದಿದ್ದರೂ, ಯುರೋಪಿನಲ್ಲಿ ಬೆಳೆಯುತ್ತಿರುವ Moral Reornament Movement ಎಂಬ ಹೆಸರಿನ ಚಳವಳಿಯು ಅಂತಾರಾಷ್ಟ್ರೀಯ ಜ್ಞಾನ ವಿತರಣವನ್ನು ತನ್ನ ಧ್ಯೇಯಗಳಲ್ಲೊಂದಾಗಿರಿಸಿಕೊಂಡಿದೆ. ನೈತಿಕ ನಿಮ್ನತೆಯನ್ನು ನಿವಾರಿಸಬಯಸುವ ಈ ಅಂತಾರಾಷ್ಟ್ರೀಯ ಚಳವಳಿಯಲ್ಲಿ ಶಿಕ್ಷಣ ಕಾರ್ಯಕ್ರಮಗಳಿಗೆ ಅತ್ಯಧಿಕ ಗೌರವವು ಸಲ್ಲುತ್ತದೆ.

ಇಂದು ಪ್ರಪಂಚದ ಮೇರೆಗಳು ಮುದುಡಿಕೊಂಡಿವೆ; ಅದರ ಗಾತ್ರ ಚಿಕ್ಕದಾಗಿದೆ. ಮಾನವನ ವಿಜ್ಞಾನದ ಅದ್ಭುತ ಕೃತಿಗಳ ಪರಿಣಾಮವಾಗಿ, ದೂರ ಮತ್ತು ಸಮಯಗಳೆರಡೂ ಜಯಿಸಲ್ಪಟ್ಟಿವೆ. ವಿಶಾಲ ಗೋಲದ ಮೇಲೆ ನಿಂತು, ಆ ವೈಶಾಲ್ಯದಲ್ಲಿ ಲೀನನಾಗುತ್ತಿದ್ದ ಮನುಷ್ಯನು, ಇಂದು ಅಂತರಿಕ್ಷಕ್ಕೆ ನೆಗೆದು ನಿಂತು ಆ ಗೋಲದೆಡೆಗೆ ನೋಡಿ ಅಣಕಿಸುತ್ತಿದ್ದಾನೆ. ಪ್ರಪಂಚದ ಪ್ರಾಕೃತಿಕ ಮೇರೆಗಳು ಇಂದು ಮನುಷ್ಯನ ವಿದ್ವತ್ತಿಗೆ ಶರಣಾಗತವಾಗಿವೆ. ಎರಡು ಮಹಾಯುದ್ಧಗಳಲ್ಲಿ ಪ್ರಯೋಗಿಸಲ್ಪಟ್ಟ ಭೀಕರ ಶಸ್ತ್ರಗಳ ಮೂಲಕ ಮನುಷ್ಯನು ತನ್ನ ಉತ್ಪಾದಕ ಶಕ್ತಿಯೊಂದಿಗೆ ಲಯ ಶಕ್ತಿಯ ಅಪಾರತೆಯನ್ನು ಪ್ರದರ್ಶಿಸಿರುತ್ತಾನೆ. ಅಣುವಿಜ್ಞಾನದ ಪ್ರಗತಿಯಿಂದ ಮಾನವನ ಬೌದ್ಧಿಕ-ಶಕ್ತಿಯ ಮುಂದೆ ಪ್ರಕೃತಿಯಲ್ಲಿ ಅಭೇದ್ಯವಾದುವುಗಳೇ ಇಲ್ಲವೆನಿಸಿವೆ. ತಾತ್ವಿಕ ಘರ್ಷಣೆಗಳಿಂದಾಗಿ ಮೂರನೆಯ ಮಹಾಯುದ್ಧದ ಸಿದ್ಧತೆಗಳು ನಡೆಯುತ್ತಿವೆಯಾದರೂ, ಇನ್ನು ಮುಂದೆ ಸಂಭವಿಸಬಲ್ಲ ಯುದ್ಧಗಳಲ್ಲಿ ಸೋಲು–ಗೆಲವುಗಳ ಪ್ರಶ್ನೆಗಳಿಗಿಂತ ಪ್ರಧಾನವಾಗಿ ಜಗತ್ತಿನ ಪ್ರಳಯದ ಪ್ರಶ್ನೆಯೇ ತಲೆದೋರಿ ನಿಂತಿದೆ. ಇಂತಹ ಪರಿಸ್ಥಿತಿಗಳಲ್ಲಿ ಅಂತಾರಾಷ್ಟ್ರೀಯತೆಯ ಆವಶ್ಯಕತೆಯು ಅತಿ ಹೆಚ್ಚಾಗಿದೆ. ನೆಹರೂರವರಂತಹ ರಾಜಕಾರಣಿಗಳು 'ಪಂಚಶೀಲ' ತತ್ವಗಳಿಂದ ಜಾಗತಿಕ ಸಹ-ಜೀವನದ ಸಲ್ಲಮಿಯನ್ನು ಘೋಷಿಸುತ್ತಿದ್ದಾರೆ. ಆದರೆ, ಅಂತಾರಾಷ್ಟ್ರೀಯತೆಗೆ ಇದೊಂದೇ ಸಾಕಾಗಬಹುದೇ? ರಾಜಕೀಯ ವಲಯಗಳಲ್ಲಲ್ಲವೆ, ಉಳಿದ ವಲಯಗಳಲ್ಲೂ ಈ ಮನೋವೃತ್ತಿಯ ಆವಶ್ಯಕತೆಯಿದೆಯೇ? ಇಂದಿನ ರಾಜಕಾರಣಿಗಳ ಮಾನಸಿಕ ವಿಪರ್ಯಾಸದ ಜತೆಗೆ, ಮುಂದಿನ ಜನಾಂಗದ ಮನೋಧೋರಣೆಯೂ ಸುಶಿಕ್ಷಿತವಾಗಿರಬೇಡವೆ?

ನೆಹರೂರವರ ರಾಜಕೀಯ ಪಂಚಶೀಲಗಳ ಜತೆಯಲ್ಲಿಯೇ, ಶೈಕ್ಷಣಿಕ ಪಂಚಶೀಲಗಳ ಪ್ರಸಾರವೂ ಈಗ ಅಗತ್ಯವಿದೆ. ಈ ತತ್ವಗಳನ್ನು ಐದು ರೂಪಗಳಲ್ಲಿ ವಿಸ್ತರಿಸಬಹುದು:- (೧) ವ್ಯಕ್ತಿತ್ವದ ವಿಕಾಸ; (೨) ಧಾರ್ಮಿಕ ಸಹನಶೀಲತೆ, (೩) ಆರ್ಥಿಕ ಸ್ವಾಯತ್ತತೆ; (೪) ರಾಷ್ಟ್ರಪ್ರೇಮ; (೫) ಅಂತಾರಾಷ್ಟ್ರೀಯ ಪ್ರಜ್ಞೆ. ಈ ಪಂಚ ತತ್ವಗಳು ಶಿಕ್ಷಣ ಕೇಂದ್ರಗಳ ಮೂಲ ಧ್ಯೇಯಗಳಾಗಿರಬೇಕು. ಸ್ವದೇಶ ಪ್ರೇಮದೊಂದಿಗೆ ಜಗತ್ತಿನ ಶಾಂತಿ ಮತ್ತು ಪ್ರಗತಿಗಳ ಕುರಿತು ಪ್ರತಿವ್ಯಕ್ತಿಯೂ ಚಿಂತನೆ ಮಾಡುವಂತಾಗಬೇಕು. ಸ್ವಾರ್ಥವನ್ನು ತೊಡೆದುಹಾಕಿ, ಪ್ರಪಂಚವೇ ತನ್ನ ಮನೆ ಎಂದು ತಿಳಿಯಬಲ್ಲ ವಿಶಾಲ ಹೃದಯಗಳ ಆವಶ್ಯಕತೆಯು ಇಂದು ಅಧಿಕವಾಗಿದೆ. "ಸರ್ವೇಜನಾ ಸುಖಿನೋ ಭವಂತು" ಅಥವಾ "ವಸುಧೈವ ಕುಟುಂಬಕಂ" ಮೊದಲಾದ ಅಂತಾರಾಷ್ಟ್ರೀಯ ತತ್ವಗಳು ನಮ್ಮ ದೇಶದ ಸಂಸ್ಕೃತಿಗೆ ಅಪರಿಚಿತವಾದುವುಗಳಲ್ಲ. ಥಾಮಸ್ ಪೈನ್ ಹೇಳುವುದಕ್ಕಿಂತ ಮೊದಲೇ ಈ ಮಹಾತತ್ವಗಳು ಭಾರತೀಯ ಜೀವನದಲ್ಲಿ ಹಾಸುಹೊಕ್ಕಾಗಿದ್ದುವು.

ಇಂದು ಶಿಕ್ಷಣ ಕೇಂದ್ರಗಳಲ್ಲಿ ಅಂತಾರಾಷ್ಟ್ರೀಯ ಜ್ಞಾನ ಪ್ರಸಾರಕ್ಕಾಗಿ ಪ್ರಯತ್ನಗಳು ನಡೆಯುತ್ತಿವೆ. ಆದರೆ ಇವುಗಳ ರೀತಿ ಮತ್ತು ವಿಧಾನಗಳು ಇನ್ನಷ್ಟು ಅಭಿವೃದ್ಧಿ ಹೊಂದಬೇಕು.

ಇಂದು ಸಾಮಾಜಿಕ ಅಧ್ಯಯನದ ಮೂಲಕ ಪ್ರಾಪಂಚಿಕ ಜ್ಞಾನವು ಕಲಿಸಲ್ಪಡುತ್ತದೆ. ಆದರೆ ಈ ಜ್ಞಾನದ ಉಪಯುಕ್ತತೆಯ ಕುರಿತು ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕಾದುದು ಅತ್ಯಗತ್ಯ. ಕಥಾವಸ್ತುವಿನ ಆವಶ್ಯಕತೆಯಿಂದ ಚರಿತ್ರೆಯು ಕಲಿಸಲ್ಪಡುವ ಬದಲು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪರಿಣಾಮಗಳ ವಿಮೋಚನೆಗಾಗಿ ಅದು ಕಲಿಸಲ್ಪಡಬೇಕು. ವರ್ತಮಾನ ಮತ್ತು ಭವಿಷ್ಯ ಕಾಲಗಳಿಗೆ ಚರಿತ್ರೆಯು ಅನುಭವಗಳನ್ನು ನೀಡಬಲ್ಲ ಹಿನ್ನೆಲೆಯ ರೂಪಕವಾಗಿರಬೇಕಲ್ಲದೆ, ಈ ಎರಡು ಕಾಲಗಳಿಂದ ಪ್ರತ್ಯೇಕಿಸಲ್ಪಟ್ಟ ಪುರಾತನ ಅವಶೇಷಗಳ ವರದಿಯಾಗಿರಬಾರದು. ಪೌರತ್ವ ಶಿಕ್ಷಣದಲ್ಲಿ ರಾಷ್ಟ್ರಗೌರವದ ಕುರಿತು ನಡೆಯುವ ವಿಮರ್ಶೆ ಮತ್ತು ವಿಚಾರ ಸಂಕೀರ್ಣಗಳೊಂದಿಗೆ, ರಾಷ್ಟ್ರಗಳೊಳಗಿನ ಪರಸ್ಪರಾವಲಂಬನದ ಕುರಿತು ನಿಷ್ಪಕ್ಷಪಾತ ವಿವೇಚನೆಗೆ ಅವಕಾಶವಿರಬೇಕು. ಪ್ರತಿವ್ಯಕ್ತಿಯು ಸಮಾಜದ ಸಾಮೂಹಿಕ ಸಂಪರ್ಕವನ್ನು ಬೆಳೆಯಿಸುವುದರೊಂದಿಗೆ, ವ್ಯಕ್ತಿ–ವ್ಯಕ್ತಿಗಳೊಳಗಿನ ಸಂಬಂಧದ ಪೂರ್ಣ ಪ್ರಜ್ಞೆಯನ್ನು ಸಂಪಾದಿಸಿಕೊಳ್ಳಬೇಕು. ಆಂಗ್ಲಭಾಷೆಯಲ್ಲಿ ಪ್ರಯೋಗಿಸಲ್ಪಡುವ "Togetherness" (ಸಹಯೋಗ) ಅಥವಾ "We-feeling" (ಸಹಭಾವನೆ) ಇವುಗಳು ಅಭ್ಯಾಸ–ಅನುಭವಗಳಿಂದ ಮೂಡಿ ಬರಬಹುದಲ್ಲದೆ, ಸ್ವಾಭಾವಿಕವಾಗಿ ಅರಳಲಾರದು. ಅಂತಾರಾಷ್ಟ್ರೀಯ ಭಾವನೆಗಳು ಮನುಷ್ಯನ ಜೀವನವನ್ನು ಸಂಕುಚಿತತೆಯ ಘಟಕದಿಂದ ಹೊರತೆಗೆದು, ಅವನ ಮನೋವೃತ್ತಿಯನ್ನು ವಿಶಾಲಗೊಳಿಸುವುವು. ಈ ಭಾವನೆಗಳನ್ನು ಬೆಳೆಯಿಸುವ ಮಹಾಕಾರ್ಯವು ವಿದ್ಯಾಭ್ಯಾಸದ ಜವಾಬ್ದಾರಿಗಳಲ್ಲಿ ಒಂದಾಗಿದೆ. ಜಾಗತಿಕ ಶಾಂತಿಯ ಸ್ಥಾಪನೆಯ ಕಾರ್ಯದಲ್ಲಿ ವಿದ್ಯಾಭ್ಯಾಸದ ಪಾತ್ರವು ಮಹತ್ವದ್ದಾಗಿದೆ.

ಸ್ವಾಮಿ ಶಿವಾನಂದರ ವಾಣಿ.

ಮುಕ್ತನು ಯಾರು?

ಭದ್ರಗಿರಿ ಕೇಶವ ಪೈ, B. A.,
ಪಂಡಿತರು, ಉಡುಪಿ.

೧) ಜನನ–ಮರಣಗಳಲ್ಲಿ, ಸುಖದುಃಖಗಳಲ್ಲಿ, ಲಾಭ–ನಷ್ಟಗಳಲ್ಲಿ, ಪ್ರೀತಿ-ದ್ವೇಷಗಳಲ್ಲಿ ಸಮಾನವಾಗಿರುವವನೇ ಮುಕ್ತನು.

೨) ಎಲ್ಲರಿಗೂ ಮಿತ್ರನಾಗಿರುವವನೂ ಸಮಸ್ತವನ್ನೂ ತಾಳ್ಮೆಯಿಂದ ಸಹಿಸುವವನೂ, ಹರ್ಷಚಿತ್ತನೂ, ಮನೋ-ನಿಗ್ರಹಿಯೂ, ಭಯ-ಕೋಪಗಳಿಂದ ಮತ್ತು ಆಶೆ-ಆಕಾಂಕ್ಷೆಗಳಿಂದ ಬಿಡುಗಡೆ ಹೊಂದಿದವನ್ಯಾವನೋ– ಅವನೇ ಮುಕ್ತನು.

೩) ಪ್ರಾಪಂಚಿಕ ದೃಷ್ಟಿಯಲ್ಲಿ ಯಾರೊಡನೆಯೂ ಶತ್ರುತ್ವ–ಯಾ–ಅತ್ಯಂತ ಮಿತ್ರತ್ವವಿಲ್ಲದವನಾಗಿಯೂ, ಯಾವ ವಸ್ತುವನ್ನೂ ಬಯಸದವನಾಗಿಯೂ, ಏನನ್ನೂ ಕೂಡಿಡದೆ ಮಾಂಸ-ಮೂಳೆಯ ಪಂಜರವನ್ನು ಹತ್ತಿಕ್ಕಿ, ಸದಾ ಶಾಂತನಾಗಿರುವವನೇ ಮುಕ್ತನು.

೪) ಪರರಲ್ಲಿ ಯಾವುದನ್ನೂ ಬೇಡದೆ, ಯಾರನ್ನೂ ನಿಂದಿಸದೆ, ಆಶಾರಹಿತನಾಗಿ. ದ್ವಂದ್ವದಿಂದ ದೂರನಾಗಿರುವವನೇ ಮುಕ್ತನು.

೫) ಅಹಂಕಾರ ಮತ್ತು ಡಂಭಾಚಾರಗಳಿಲ್ಲದವನೂ, ಹೃದಯದಲ್ಲಿ ಪರಿಶುದ್ಧನೂ, ಇಂದ್ರಿಯ ಹಾಗೂ ಮನೋನಿಗ್ರಹಿಯೂ, ಎಲ್ಲರನ್ನೂ ತನ್ನಂತೆಯೇ ಎಂದು ಯಾವನು ತಿಳಿದುಕೊಳ್ಳುವನೋ ಅವನೇ ಮುಕ್ತನು.

(ಮುಂದಿನ ವಾರ— ಸಜ್ಜನರ ಸಂಗ)

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಪಗ್ರಹಗಳಿಂದೇನು ಪ್ರಯೋಜನ?

ಅಂತರಿಕ್ಷದ ಬಗ್ಗೆ ವಿಶೇಷ ಅಧ್ಯಯನ

ಅಮೆರಿಕೆಯು ಹಾರಿಸಿದ ಎಕ್ಸ್‌ಪ್ಲೋ... ಉಪಗ್ರಹದಿಂದ ಅಂತರಿಕ್ಷದ ಬಗ್ಗೆ ...ನೇಕ ಸಂಗತಿಗಳು ತಿಳಿದು ಬರುತ್ತಿವೆ ...ನ ಹೊರವ್ಯಯಿಂದ ಸಿಡಿದು ...ಬರುವ ಅಪಾರ ಅನಿಲ ಜ್ವಾಲೆಗಳ ...ಕರಣದ ಕುರಿತಾದ ಅನೇಕ ಅಂಶಗಳು ...ಗೆ ಈ ಉಪಗ್ರಹದಲ್ಲಿರುವ ಆಕಾಶ ...ಗಳ ಮೂಲಕ ಕಳಿಸುವ ವಿಶ್ವಕಿರ...ಗಳಿಗೆ ಸಂಬಂಧಪಟ್ಟ ಸಂಗತಿಗಳಿಂದ ...ದು ಬರಲಿದೆ ಎಂಬುದಾಗಿ ಆಯೋ... ಸಂಸ್ಥಾನದ ವಿಶ್ವವಿದ್ಯಾನಿಲಯದ ...ತಶಾಸ್ತ್ರಜ್ಞ ಡಾ. ಜೋಸೆಫ್ ಕ್ಯಾ...ರವರು ವರದಿ ಮಾಡಿದ್ದಾರೆ. ಈ ...ವಿದ್ಯಾನಿಲಯವು ಉಪಗ್ರಹದಿಂದ ...ವ ವಿಶ್ವಕಿರಣಗಳಿಗೆ ಸಂಬಂಧಿಸಿದ ...ಲೆಗಳನ್ನು ಅರ್ಥಕಟ್ಟುವ ಪ್ರಧಾನ ...ದ್ರವಾಗಿದೆ

...ಳು ಹಾಗೂ ಕಾವಿನಜೊತೆಗೆ ಸೂರ್ಯ... ಭೂಮಿಯತ್ತ ಪರಮಾಣು ಕಣಗಳ ...ಆಗಾಧ ಪ್ರಮಾಣದರೇಡಿಯೋ ತ...ಗಗಳನ್ನೂ ಎಕ್ಸರೇಗಳ ಅಲ್ಪವಯಲೆ...ನತ್ತ ವಿಶ್ವಕಿರಣಗಳ ಜೊತಗ ಎರ...ತ್ತದೆ ಅತ್ಯದ್ಭುತವಾದ ಚಟುವಟಿಕೆಗ... ಅವುಗಳಿಂದ ಭೂಮಿಯ ಮೇಲಿನ ...ತಾವರಣದ ಮೇಲೇ ಆಗುವಪರಿಣಾಮಗಳೂ ಸಂಪೂರ್ಣವಾಗಿ ರಹ...ವಾಗಿಯೇ ಉಳಿದಿವೆಯೆಂದು ತಿಳಿದು ...ರುತ್ತದೆ

ಹವಾಮಾನ ಮತ್ತು ಪ್ರಾಂತೀಯ ...ಲಗಳ ಬವಿಷ್ಯ ನುಡಿಯುವುದಕ್ಕೆ ...ಕವಾಗಬಲ್ಲ ನಿರ್ದಿಷ್ಟ ಸಂಗತಿಗಳಿಗಾಗಿ ಉಪಗ್ರಹವು ಕಳಿಸುವ ವಿಷಯಗಳ...ನ್ನು ಪ್ರಪಂಚದ ಭೌತಶಾಸ್ತ್ರಜ್ಞರೂ ರೇಡಿಯೋ ಇಂಜನಿಯರರೂ ಹವಾಮಾನ ತಜ್ಞರೂ ಅತ್ಯಂತಾಸಕ್ತಿಯಿಂದ ಕಾಯುತಿದ್ದಾರೆ

ಎಕ್ಸ್‌ಪ್ಲೋರರ್ ೧೯೫೮ನೆ ಜನವರಿ ...ನೆಯ ದಿನದಂದು ಹಾರಿಸಲ್ಪಟ್ಟಿತು ...ಂದಿನಿಂದ ಒಂದೂವರೆ ವಾರದ ಅನಂತ...ರ ಈ ಉಪಗ್ರಹವು ಆಗಾಧವಾದ ಸೂರ್ಯ ಜ್ವಾಲೆಯನ್ನು ಎದುರಿಸಬೇಕಾಗಿ ಬಂದಿತ್ತು. ಈ ಸೂರ್ಯಜ್ವಾಲೆಯನ್ನು ಕಳೆದ ಶತಮಾನದಲ್ಲಿಯೇ ಅತ್ಯಗಾಧವಾದುದೆಂದು ಡಾ ಕಾಪ್ಲರ್ ತಿಳಿಯುತ್ತಾರೆ ೧೯೫೦ರ ನಂತರ ಇದ ವರೆಗೂ ಇಷ್ಟೊಂದು ಅಧಿಕವಾದ ಜ್ವಾಲೆ ಸಂಭವಿಸಿರಲೇ ಇಲ್ಲವೆಂದು ವಿಜ್ಞಾನಿಗಳ ಅಭಿಪ್ರಾಯಪಡುತ್ತಾರೆ

ಭೂಮಿಯ ಮೇಲಿನ ವಾತಾವರಣಕ್ಕೆ ಸೂರ್ಯನಿಂದ ಬೀಳುವ ಉದ್ರಿಗ್ನ ಶಕ್ತಿಯ ಹೊಡೆತದಿಂದಾಗಿ ವಾತಾವರಣದಲ್ಲಿ ಇದ್ದಕ್ಕಿದ್ದಂತೆ ಕಾವೇರುವುದೆಂದೂ ಅದರ ಪರಿಣಾಮವಾಗಿ ಭೂಮಿಯಲ್ಲಿ ಅಲ್ಲಲ್ಲಿ ಕೆಲ್ಲೋಲದ ಹನಿಯ ಒಟಾಗುವಷ್ಟು ಪರಿಣಾಮ ಮಾಡಬಹುದೆಂದೂ ಸೂರ್ಯ ತಜ್ಞರೂ ಹವಾಮಾನ ಶಾಸ್ತ್ರಿಗಳೂ ಬಗದಿದ್ದಾರೆ ಅಂತೆಯೇ ಮೇಲಿನ ವಾತಾವರಣದಲ್ಲಿ ಆಗುವ ಬದಲಾವಣೆಗಳಿಂದ ಕೆಲವು ದಿನಗಳ ಮೊದಲು, ಪ್ರಾಯಶಃ ಒಂದು ವಾರ ಮೊದಲೇ ಹವಾಮಾನದ ಪರಿಸ್ಥಿತಿಯ ಬಗ್ಗೆ ಭವಿಷ್ಯ ನುಡಿಯುವುದು ಸಾಧ್ಯವಾಗಬಹುದೆಂದು ದೃಢವಾಗಿ ನಂಬಲಾಗಿದೆ

ಈ ಉಪಗ್ರಹದಲ್ಲಿರುವ ಕಾವಿನ ಹೆಚ್ಚಳಿಕೆಯ ಸಮಸ್ಯೆಯನ್ನು ಬಿಡಿಸಲಾಗಿದೆ ಇದರಲ್ಲಿ ಕಂಡುಬಂದ ಉಷ್ಣಾಂಶ ಅಧಿಕವಾಗಿಲ್ಲ ಸರನ್‌ಹೈಟ್ ೪೦ರಿಂದ ೯೦ ಡಿಗ್ರಿಗಳ ವರೆಗೆ ಮಾತ್ರ ಏರುತ್ತದೆ ಅಮೆರಿಕೆಯು ಈ ಉಷ್ಣಾಂಶದ ಸಮಸ್ಯೆಗೆ ಸೂಕ್ತ ಕ್ರಮಗಳನ್ನು ಕೈಕೊಂಡಿದ್ದು ಅವು ಸಫಲವಾಗಿವೆ ವಿಶ್ವಕಿರಣಗಳಿಗೆ ಸಂಬಂಧಿಸಿದ ಅಂಶಗಳು ಅವರ ಊಹನಗಳಿಗೆ ಸರಿಯಾಗಿಯೇ ಬಂದು ಮುಟ್ಟಿವೆ ಎಂದೂ ಇದರಿಂದ ದೊರೆತ ಆಗಾಧ ಪ್ರಮಾಣದ ವೈಜ್ಞಾನಿಕಾಂಶಗಳ ಇನ್ನೂ ಸಂಪೂರ್ಣ ವಿಶ್ಲೇಷಿಸಲ್ಪಟ್ಟಿಲ್ಲವೆಂದೂ ಕ್ಯಾಲಿಫೋರ್ನಿಯಾದ ಪಸಡೇನ ದಲ್ಲಿರುವ ಪ್ರಯೋಗಾಲಯ ನಿರ್ದೇಶಕ ಡಾ. ವಿಲಿಯಂ ಎಚ್ ಪಿಕರಿಂಗರು ಪ್ರಸ್ತಾಪಮಾಡಿದ್ದಾರೆ ಅಂತರಿಕ್ಷ ಭೂಭೌತವರ್ಷದಲ್ಲಿ ಬಾಗವಹಿಸುತ್ತಿರುವ ಎಲ್ಲ ರಾಷ್ಟ್ರಗಳಿಗೂ ಈ ಅಂಶಗಳನ್ನು ವಿಶ್ಲೇಷಣಾನಂತರ ತಿಳಿಸಲಾಗುವುದೆಂದು ಅಮೆರಿಕೆಯ ಅಧ್ಯಕ್ಷ ಐಸನ್‌ಹಾವರರು ವಾಗ್ದಾನವಿತ್ತಿರುವರು

ಈ ಉಪಗ್ರಹದಿಂದ್ಬರುತ್ತಿರುವ ಸಂಜ್ಞೆಗಳನ್ನು ಬಿಡಿಸಿ ಅರ್ಥವನ್ನು ಹೇಳಲು ವಿಶ್ವವಿಜ್ಞಾನಿಗಳಿಗೆ ಸಾಧ್ಯವಾಗುವಂತೆ, ಬಂದ ಸಂಗತಿಗಳನ್ನು ಬ್ರಸಲ್ಸಿನಲ್ಲಿರುವ ಐ ಜಿ ಐ ಕೇಂದ್ರ ಕಾರ್ಯಾಲಯಕ್ಕೆ ಕಳಿಸಿಕೊಡಲಾಗುದು ಅಲ್ಲಿ ಅವಕ್ಕೆ ಅರ್ಥಕಟ್ಟುವ ಪ್ರಯತ್ನ ಸಾಗುತ್ತಿದೆ ಎಂದು ತಿಳಿದು ಬಂದಿದೆ.

ಎರಡನೆಯ ಉಪಗ್ರಹವು ಮೊದಲನೆಯದರಷ್ಟೆ ಭಾರವಾಗಿದ್ದರೂ ಅದು ಮೊದಲನೆಯದಕ್ಕಿಂತ ಹೆಚ್ಚು ಉಪಕರಣಗಳನ್ನು ಹೊಂದಿರುವುದೆಂದು ಶ್ರೀ ಪಿಕರಿಂಗ್ ಬಹಿರಂಗ ಪಡಿಸಿದ್ದಾರೆ ಈ ಉಪಗ್ರಹದಲ್ಲಿ ಚಿಕ್ಕದೊಂದು ಟೇಪ್ ರಿಕಾರ್ಡರು ಇದ್ದು ಪ್ರತಿ ಸಲವೂ ತನ್ನ ಕಕ್ಷೆಯಲ್ಲಿ ಸುತ್ತು ಬಂದಾಗಲೂ ವಿಶ್ವಕಿರಣಗಳಿಗೆ ಸಂಬಂಧಿಸಿದ ಅಂಶಗಳನ್ನು ಅದು ಸಂಗ್ರಹಿಸುವುದು ಉಪಗ್ರಹದಿಂದಬರುವ ಅಂಶಗಳನ್ನು ಸ್ವೀಕರಿಸುವ ಕೇಂದ್ರವು ಪ್ರಶ್ನಿಸಿದಾಗ ಉಪಗ್ರಹವು ತನ್ನ ಕಕ್ಷೆಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ತಿಳಿಸುವುದ.

ಇಂತಹ ಆಶ್ಚರ್ಯಕರ ಯಂತ್ರ ಗ್ರಹದ ಕೆಲಸವು ಎಷ್ಟು ನಂಬಿಕೆಯದಿರುತ್ತದೆ ಎನುವುದು ಕಾನು ನೋಡಿದ ನಂತರ ಮಾತ್ರವೇ ತಿಳಿದುಬರುವುದು ಮಾನವನು ತನ್ನ ಬುದ್ಧಿಮತ್ತೆಯನ್ನು ಸಂಪೂರ್ಣ ವೆಚ್ಚಮಾಡಿ ಪ್ರಕೃತಿಯ ಬಗ್ಗೆ ಅವರ ಸುತ್ತಮುತ್ತಲಿನ ಆಕಾಶಮಂಡಲದ ಬಗ್ಗೆ ವಿಶ್ವಕಿರಣದ ಬಗ್ಗೆ ಇನ್ನೂ ಅನೇಕಾನೇಕ ಅತ್ಯದ್ಭುತ ವೆನಿಸಬಹುದಾದ ಸಂಗತಿಗಳನ್ನು ತಿಳಿಯುವ ನಿರೀಕ್ಷೆಯಿದೆ ಹೀಗಾದಲ್ಲಿ ಮನುಷ್ಯನು ತನ್ನ ಮುಂದಿನ ಸಾಹಸ ಕಾರ್ಯವನ್ನು ಮಾಡುವಲ್ಲಿ ಎಂದರೆ ಇದುವುದ ಸಾಧ್ಯವೆನಿಸಬಹುದು ನೆಲಜಲಗಳಂತೆಯೇ ಅಂತರಿಕ್ಷದಲ್ಲೂ ಅತಿ ಸುಲಭದಿಂದ ತನ್ನ ಪ್ರಭುತ್ವವನ್ನು ಸಂಸ್ಥಾಪಿಸಬಹುದು ಅಂತಹ ಸುದಿನವನ್ನೇ ಎದುರು ನೋಡುತ್ತಿರುವುದು ವ್ಯರ್ಥಕಾರ್ಯವಾಗಲಾರದೆಂದೇ ವಿಜ್ಞಾನಿಗಳ ಅಚಲ ವಿಶ್ವಾಸ

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ

ಕೆಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ		3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ

ಸ್ಥಾನಿಕ ಕ್ರಯ. ದೊಡ್ಡ ಬಾಟ್ಲಿಗೆ ರೂ 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಓದಿ ನಗಬಹುದು

ಅಧ್ಯಾಪಕ: ಸುರೇಶ, ನೀನು ಈ ತರಗತಿಯಲ್ಲಿ ಎರಡನೆ ವರ್ಷದಲ್ಲಿರುವೆ ಆದ ದರಿಂದ ನೀನು ಈ ಪ್ರಶ್ನೆಯನ್ನು ಅಗತ್ಯ ಉತ್ತರಿಸಬೇಕು.

ಸುರೇಶ— ಕ್ಷಮಿಸಿ ಗುರುಗಳೆ, ನನಗೇ ಪ್ರಶ್ನೆಯ ಉತ್ತರವು ತಿಳಿಯುತ್ತಿದ್ದರೆ ನಾನೇಕೆ ಈ ವರ್ಗದಲ್ಲಿಯೇ ಇರುತ್ತಿದ್ದೆ?

೦ ೦ ೦

ಮಾಧವ—ರಾಮು, ಆಸ್ಪತ್ರೆಗೆ ಯಾವ ದಾರಿಯಲ್ಲಿ ಹೋಗಬೇಕು? ದಯಮಾಡಿ ಸ್ವಲ್ಪ ತಿಳಿಸಬಲ್ಲೆಯ?

ರಾಮು— ಓಹೋ, ಅದಕ್ಕೇಕೆ ಚಿಂತೆ? ಇದೇ ಈ ಇಕ್ಕಟ್ಟಾದ ರಸ್ತೆಯಲ್ಲಿ ಮುಂದೆ ಹೋಗು. ದಾರಿಯಲ್ಲಿ ಯಾವುದಾದರೂ ವಾಹನ ಬಂದಾಗ, ಅದರಡಿಗೆ ಬಿದ್ದುಬಿಡು, ನೇರಾಗಿ ಆಸ್ಪತ್ರೆಗೆ ಹೋಗಬಲ್ಲೆ.

೦ ೦ ೦

ಅಧ್ಯಾಪಕರು ಸೂರ್ಯನ ಪಾಠವನ್ನು ಮಾಡುತ್ತ ಸೂರ್ಯನನ್ನು ಏಕೆ ದೇವರೆಂದು ಕರೆದು ಗೌರವಿಸುತ್ತಾರೆಂಬುದನ್ನು ವಿವರಿಸುತ್ತಿದ್ದರು "ಒಂದು ವೇಳೆ ಸೂರ್ಯನು ಇಲ್ಲದೇ ಇರುತಿದ್ದರೆ . "

ವಿದ್ಯಾರ್ಥಿ ವಿದ್ಯುಚ್ಛಕ್ತಿಯು ಬೇಡಿಕೆ ಮತ್ತೂ ಹೆಚ್ಚಾಗುತಿತ್ತು!

೦ ೦ ೦

ಮಗು ಅಪ್ಪಾ, ಆ ವಿಮಾನದಲ್ಲಿ ಸ್ವರ್ಗ ಲೋಕಕ್ಕೆ ತೆರಳಲು ಆಗುವುದಿಲ್ಲವೆ?

ತಂದೆ — ವಿಮಾನವು ಚಲಿಸುವಾಗ ಮಾರ್ಗದಲ್ಲಿ ಕೆಟ್ಟು ಹೋದರೆ ಶೀಘ್ರವಾಗಿಯೇ ಸ್ವರ್ಗ ಸೇರಬಹುದು!

೦ ೦ ೦

ಮೋಹನ—ವಯರ್ ಲ್ಯಾಸ್ ಟೆಲಿಫೋನ್ ಏಕೆ ಕಾರ್ಯ ಮಾಡುವುದಿಲ್ಲ?

ವಯರ್ ಲ್ಯಾಸ್—ಎಲ್ಲಿಯೋ ತಂತಿ ತುಂಡು ಗಿರಬೇಕು

ಮೋಹನ—ಹಾಗಾದರೆ, ಇನ್ನೂ ಏಕೆ ಸುಮ್ಮನಿದ್ದಿ? ಎಲ್ಲಿ ತುಂಡಾಗಿದೆ ಎಂದು ಫೋನು ಮಾಡಿ ಕೇಳಬಾರದೆ?

೦ ೦ ೦

ಶಿಕ್ಷಕ—ಮೋಹನ, 'ಸಾಕಿವಾಳ'ದ ಕುರಿತು ಪ್ರಬಂಧ ಬರೆದು ತಂದಿರುವಿಯಾ?

ಮೋಹನ —ಇಲ್ಲ ಸಾರ್

ಶಿಕ್ಷಕ—ಇಲ್ಲ! ಏಕಿಲ್ಲ?

ಮೋಹನ—ನಾನು ಕಾಗದ ಪೆನ್ನು ಹಿಡಿದುಕೊಂಡು ಸಾಕಿವಾಳದ ಸಮೀಪ ಹೋಗುವಷ್ಟರಲ್ಲಿಯೇ ಅದು ಬಡಿಕೊಳ್ಳಯಿತು ನಾನೇನು ಮಾಡಲಿ ಸಾರ್?

೦ ೦ ೦

ಕೃಷ್ಣ—ಗೋಪಾಲ, ಹಿಂದೆ ಐದು ರೂಪಾಯಿ ನೀನು ಕೊಡಬೇಕೆಂಬ ನು ಜ್ಞಾಪಕವಿದೆ ತಾನ?

ಗೋಪಾಲ—ಛೇ, ಎಂದಾದರೂ ಮರೆತೇನೆ? ಕೊನೆಯುಸಿರಿರುವವರೆಗೂ ಅದಲ್ಲವನ್ನು ಮರೆತಿರಾಕಾನು ಮರೆಯಲಾರೆ ಧೈರ್ಯದಿಂದಿರು

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ಹೊಸಗನ್ನಡ ಕಥಾ ಸಂಗ್ರಹ – (ವಿವಿಧ ಬರಹಗಾರರಿಂದ ಹದಿನಾಲ್ಕು ಕಿರುಗತೆಗಳು) ಸಂಗ್ರಹಕಾರರು: ದೇ. ಜವರೇಗೌಡ. ಪ್ರಕಾಶಕರು: ನವಚೇತನ ಪ್ರಕಟನಾಲಯ, ಬೆಂಗಳೂರು-೪. ಪುಟಗಳು: xvi+೨೪೧. ಬೆಲೆ: ರೂ. ೨-೦೦.

ಮನೆಮನೆಗೊಂದು ಪುಸ್ತಕಭಂಡಾರವನ್ನೊದಗಿಸುವ ಮೂಲಧ್ಯೇಯವನ್ನಿಟ್ಟುಕೊಂಡ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ಸೌಜನ್ಯದಿಂದ ಈ ಪುಸ್ತಕವು ಬೆಳಕು ಕಂಡಿರುವುದು ಸಂತೋಷದ ವಿಷಯವೇ ಆಗಿದೆ. "ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು" ಎಂಬ ಧ್ಯೇಯವನ್ನಿಟ್ಟುಕೊಂಡ ಈ ಸಂಸ್ಥೆಯ ಸೌಜನ್ಯದಿಂದ ಪ್ರಕಟವಾದ ಈ ಹೊತ್ತಗೆಯ ಬೆಲೆಯು ಎರಿಕೆಯಲ್ಲಿಯೇ ಇದೆ ಎಂಬುದನ್ನು ನೋಡಿದೊಡನೆಯೇ ತಿಳಿಯಬಹುದು. ಹೊಸಗನ್ನಡ ಲೇಖಕರ ಹದಿನಾಲ್ಕು ಕಥೆಗಳನ್ನು ಇಲ್ಲಿ ಸಂಗ್ರಹಿಸಿ ಕನ್ನಡಿಗರಿಗೆ ಕೊಡಲಾಗಿದೆ.

ಕನ್ನಡದಲ್ಲಿ ಸಣ್ಣ ಕಥೆಗಳ ಹುಟ್ಟು ಪ್ರಾಚೀನಕಾಲದಿಂದಲೂ ಒಂದಲ್ಲ ಒಂದು ವಿಧದಿಂದ ಆಗಿದೆ. ನಾಗವರ್ಮನ ಕಾದಂಬರಿಯ ಅನುವಾದ, ಶಿವಕೋಟ್ಯಾಚಾರ್ಯನ ವಡ್ಡಾರಾಧನೆ, ದುರ್ಗಸಿಂಹನ ಪಂಚತಂತ್ರಾನುವಾದ ಇತ್ಯಾದಿಗಳು ಪ್ರಾಚೀನ ಕಾಲದಲ್ಲಿಯಿದ್ದರೂ ಲಕ್ಷ್ಮೀಶನ ಜೈಮಿನಿಭಾರತವನ್ನು ಅಷ್ಟು ಹಿಂದಿನವೆಂದು ಹೇಳಬರುವುದಿಲ್ಲ. ಜೈಮಿನಿಭಾರತವು ಇಂದು ಜನಪ್ರಿಯವಾಗಿರುವುದಾದರೆ, ಅದಕ್ಕೆ ಕಾರಣವಾದುವುಗಳಲ್ಲಿ ಅದೊಂದು ಹಲವಾರು ಚಿಕ್ಕ ಚೊಕ್ಕ ಕಥೆಗಳ ಸಂಕಲನವೆಂಬುದೂ ಒಂದೆಂದು ಧಾರಾಳವಾಗಿ ಹೇಳಬಹುದು. ಮುದ್ದಣನ ರಾಮಾಶ್ವಮೇಧವೂ ಇದೇ ವಿಧದ ಸಾಹಿತ್ಯಕೃತಿಯಾಗಿದೆ. ಆದರೆ, ಇವೆಲ್ಲ ಹಿಂದಿನ ಕನ್ನಡದಲ್ಲಾಯಿತು. ಇಂದಿನ ಕನ್ನಡ ಸಾಹಿತ್ಯವು ಇತರ ಭಾರತೀಯ ಭಾಷಾ ಸಾಹಿತ್ಯ ಪ್ರಪಂಚದಂತೆಯೇ ಆಂಗ್ಲ ಸಾಹಿತ್ಯದಿಂದ ಬೇಕಾದಷ್ಟು ಸ್ಫೂರ್ತಿಯನ್ನು ಪಡೆದು ಜನಿಸಿಬಂದಿದೆ. ಆದುದರಿಂದಲೇ ಅವುಗಳಲ್ಲಿ ಹಿಂದಿನ ಹಳೆಯ ಕಾಲದವುಗಳಂತೆ ಕಲ್ಪನೆಯ ವಿಲಾಸವೂ ವೈಭವದ ಆಡಂಬರವೂ ವಿರಳವಾಗಿ ಜನಜೀವನಕ್ಕೆ ಸಂಬಂಧಿಸಿದೆ. ಪ್ರಕೃತದ ಸಂಗ್ರಹವು ಹೆಸರೇ ಸೂಚಿಸುವಂತೆ ಹೊಸಗನ್ನಡ ಕಥಾಸಂಗ್ರಹವಾಗಿದೆ. ಇಲ್ಲಿ ಸಂಗ್ರಹಿತವಾದ ಕಥೆಗಳು ಆಯಾ ಲೇಖಕರ ಕಥಾಸಂಕಲನದಿಂದ ಆರಿಸಲ್ಪಟ್ಟಿವೆ.

ಇಲ್ಲಿನ ಹದಿನಾಲ್ಕು ಕಥೆಗಳು ಜನಜೀವನದ ಒಂದೊಂದು ಮುಖವನ್ನು ಪ್ರದರ್ಶಿಸುತ್ತವೆ. ಸಾಮಾನ್ಯತಃ ಪ್ರಸಿದ್ಧ ಕಥೆಗಾರರ ಕೃತಿಗಳನ್ನಷ್ಟೆ ಇಲ್ಲಿ ಸಂಗ್ರಹಿಸಲಾಗಿದ್ದು ಇವಕ್ಕೆ ಸ್ಥಳಾವಕಾಶವೂ ಒಂದು ಬೇಲಿಯಂತಾಗಿದೆ. ಕನ್ನಡದಲ್ಲಿ ಬರೆಯುವ ಎಲ್ಲ ಸುಪ್ರಸಿದ್ಧ ಕಥಾ ಲೇಖಕರ ಕಥೆಗಳನ್ನು ಸಂಗ್ರಹಿಸುವುದೆಂದರೆ, ಆ ಕಾರ್ಯ ಸುಲಭಸಾಧ್ಯವೆನಿಸದು. ಆದರೆ, ಕೇವಲ ಕೆಲವೇ ಕಥೆಗಳನ್ನು ಈ ಸೌಜನ್ಯ ಯೋಜನೆಯಲ್ಲಿ ಪ್ರಕಟಿಸುವುದಕ್ಕಿಂತ ಒಂದು ಬೃಹತ್ ಸಂಪುಟಿಯನ್ನೇ ಈ ರೀತಿಯನ್ನು ತರುವುದು ಒಳ್ಳೆಯದಿತ್ತು ಎನ್ನಬಹುದು. ಸುಪ್ರಸಿದ್ಧ ಕನ್ನಡ ಕಥಾ ಲೇಖಕರಾದ ಪಂಜೆ ಮಂಗೇಶರಾಯರು ಎಂ. ಎನ್. ಕಾಮತ, ಕೆ. ವಾಸುದೇವಾಚಾರ್, ಇಂತಹ ಕಥೆಗಳ ಜನಕರೆಂದು ಕೀರ್ತಿಶಾಲಿಗಳಾದವರು ಹೊಸಗನ್ನಡದ ಬಾಲ್ಯದೆಸೆಯಲ್ಲಿ ಶಕ್ತಿಮೀರಿ ದುಡಿದ ಮಹನೀಯರು. ಅಂತವರ ಒಂದು ಕೃತಿಯನ್ನು ಇಲ್ಲಿ ಕಾಣುವ ಎಂದರೆ, ನಿರಾಸೆಯೇ ಕವಿಯುತ್ತದೆ. ಅಂತೂ ಸಾಕಷ್ಟು ವಿವೇಚಿಸಿ ಈ ಸಂಗ್ರಹವನ್ನು ಸಂಪಾದಿಸಲಿಲ್ಲ ಎಂಬುದಕ್ಕೆ ಇದೊಂದೇ ಉದಾಹರಣೆ ಸಾಕು. ಇನ್ನು ಇದರಲ್ಲಿರುವ ಲೇಖಕ ವರ್ಗ ಕನ್ನಡದಲ್ಲಿ ನುರಿತವರೇ. ಕೆಲವರಂತೂ ಸುಪ್ರಸಿದ್ಧರಾಗಿ ಭಾರತ ಪ್ರಸಿದ್ಧಿಯನ್ನೂ ಲೋಕಪ್ರಸಿದ್ಧಿಯನ್ನೂ ಪಡೆದಿದ್ದಾರೆ. ಆದರೆ, ಇಲ್ಲಿನ ಎಲ್ಲ ಕಥೆಗಳು ಮಾತ್ರ ಆಯಾ ಲೇಖಕರ ಉತ್ತಮ ಕಥೆಗಳೇ ಎಂದು ಎಂದಿಗೂ ಹೇಳಬರುವುದಿಲ್ಲ. ಅಂತೆಯೇ ಒಬ್ಬ ಸಾಹಿತ್ಯದಲ್ಲಿ ನುರಿತನಾದರೆ ಅವನ ಕಥೆಯೂ ಒಳ್ಳೆಯದಿದೆ ಎಂದು ತಿಳಿದರೆ ಕೆಲವೊಮ್ಮೆ ತಪ್ಪಬಹುದು. ಆನಂದರ ನಾನು ಕೊಂದ ಹುಡುಗಿ, ಕೃಷ್ಣಕುಮಾರ ಕಲ್ಲೂರರ ಜೀವನ, ಬೆಟಗೇರಿ ಕೃಷ್ಣಶರ್ಮರ ಜೋಗತೀ ಕಲ್ಲು, ಎ. ಆರ್. ಕೃ. ರವರ ಗೋಟಿನಲ್ಲಿ ಸಿಕ್ಕಿಕೊಂಡ ಕತ್ತರಿ, ಅ. ನ. ಕೃ. ರವರ ಕರುಳಿನ ಕೂಗು ಇವು ಉತ್ತಮವಿವೆ. ಉಳಿದವು ಏನೂ ಚೆನ್ನಾಗಿಲ್ಲ ಎಂದಲ್ಲ; ಗೊರೂರು, ಕುವೆಂಪು, ಮಾಸ್ತಿ, ಅಶ್ವತ್ಥ ಮೊದಲಾದವರ ಉತ್ತಮ ಕೃತಿಗಳೇ ಇಲ್ಲಿ ಪೋಣಿಸಲ್ಪಟ್ಟಿವೆ ಎಂದು ಧೈರ್ಯದಿಂದ ನುಡಿಯುವಹಾಗಿಲ್ಲ. ಅಂತೂ ಈ ಸಂಗ್ರಹಣ ಕಾರ್ಯವು ಪರಿಪಕ್ವವಾಗಿಲ್ಲ ಎನ್ನುವುದು ನಿಶ್ಚಯ.

ಈ ದೋಷಕ್ಕೆ ಸಂಗ್ರಹಕಾರರನ್ನು ದೂರುವುದೂ ಸರಿಯೆನಿಸದು. ಈ ಸಂಕಲನದಲ್ಲಿ ಎಲ್ಲ ಉತ್ತಮ ಕತೆಗಾರರ ಕೃತಿಗಳನ್ನೂ ಸೇರಿಸಲಾಗಲಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಆದರೆ, "ಅದಷ್ಟು ಪ್ರಾತಿನಿಧಿಕವಾಗಿರಬೇಕು, ಜೊತೆಗೆ ಚೆನ್ನಾಗಿರಬೇಕು" ಎಂದ ಮಾತಿಗೆ ಸರಿಯಾದ ಅರ್ಥ ಹೊಳೆಯುವುದಿಲ್ಲ. ಮಾಸ್ತಿಯವರು ಉಪೋದ್ಘಾತದಲ್ಲಿ ಆರಿಸುವವರು ಯಾರೇ ಆದರೂ (ಸಣ್ಣ ಕಥೆಗಳಲ್ಲಿ) ಕೆಲವನ್ನು ಉಳಿಸಿಕೊಂಡು ಬಹಳವನ್ನು ಬಿಡಬೇಕು. ಹೀಗೆ ಮಾಡುವಲ್ಲಿ ಆರಿಸುವವರು ಬೇರೆ ಆದಂತೆ ಆಯ್ಕೆ ಬೇರೆಯಾಗುವುದು ನಿಶ್ಚಯ." ಆದುದರಿಂದಲೇ ಕೆಲವರಿಗೆ ಅತ್ಯುತ್ತಮವೆಂದು ಕಂಡುಬರುವ ಲೇಖಕರ ಕೃತಿಗಳು ಬಿಟ್ಟು ಬಿಡಲ್ಪಟ್ಟಿವೆ ಎಂದ ಮಾತು ಸರಿ ಎಂದೇ ಹೇಳಬೇಕಾಗುತ್ತದೆ.

ಇಂತಹ ವಿವಿಧ ಲೇಖಕರ ಪರಿಚಯವನ್ನು ಆಯಾ ಕಥೆಗಳ ಮೊದಲು ಕೊಟ್ಟಿರುವುದು ಸೂಕ್ತವೇ ಆಗಿದೆ. ಹೆಚ್ಚಿನವರು ಕನ್ನಡಿಗರಿಗೆ ಚಿರಪರಿಚಿತರಾಗಿಯೇ ಉಳಿದಿರುವುದರಿಂದ ಈ ಪರಿಚಯ ಸಂಕ್ಷೇಪವಾಗಿಯೇ ಇದೆ. ಹೆಸರಿಗೆ ಇದು "ಕಿರುಗತೆ"ಗಳ ಸಂಕಲನವಾದರೂ ಕೆಲವು ಸ್ವಲ್ಪ ದೊಡ್ಡ ಕಥೆಗಳೂ ಇಲ್ಲಿವೆ. ಅಪರೂಪವಾಗಿ ಮತ್ತು ಅತ್ಯುತ್ತಮ ರೀತಿಯಲ್ಲಿ ಹೊರಬರಬೇಕಾದ ಇಂತಹ ಸಂಕಲನಗಳನ್ನು ಪ್ರಕಟಿಸುವಾಗ ನುರಿತ ಸಂಪಾದಕ ಮಂಡಳಿಯ ಮೂಲಕವೇ ಸಂಗ್ರಹ ಕಾರ್ಯವನ್ನು ಮಾಡಿಸುವುದರಿಂದ ಅನಿವಾರ್ಯವೆನಿಸಿದ ಕೊರತೆಗಳು ಕೊಂಚವಾದರೂ ಕಡಿಮೆಯಾದಾವು. ಮತ್ತು ತನ್ಮೂಲಕ ಜನಾದರಣೆಗೆ ಪಾತ್ರವಾದಾವು. ಆಗ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ಸ್ತುತ್ಯ ಕಾರ್ಯವೂ ಸಫಲಗೊಂಡೀತು. ಇನ್ನು ಮುಂದಕ್ಕಾದರೂ ಈ ರೀತಿ ನಡೆಯುವರೆಂದು ನಂಬಿ ಈ ಪ್ರಕಾಶನವನ್ನು ಸ್ವಾಗತಿಸುತ್ತೇವೆ.

ಆಯುರ್ವೇದ-ಭಾರತೀಯ ಪ್ರಾಚೀನ - ಹಿಂದು ವೈದ್ಯಶಾಸ್ತ್ರ ಪದ್ಧತಿಯ ಪರಿಚಯ. ಲೇಖಕ ಮತ್ತು ಪ್ರಕಾಶಕರು ಆಯುರ್ವೇದ ಭೂಷಣ ಮತ್ತು ಆಯುರ್ವೇದ ವಿಶಾರದ ಡಾ. ಐ. ಕೆ. ಪಿ. ಶರ್ಮ, ಎ ಎಮ್. ಎ. ಸಿ, ಮಂಗಳೂರು ೩. ಪುಟಗಳು ೪+೩೮. ಬೆಲೆ ರೂ ೦-೨೫.

ಪ್ರಾಚೀನ ಭಾರತದಲ್ಲಿ ಚಿಕಿತ್ಸೆಗಾಗಿ ಬಳಸುತ್ತಿದ್ದ ಆಯುರ್ವೇದದ ಮಹತ್ವವನ್ನು ವರ್ಣಿಸಬೇಕಾಗಿಲ್ಲ. ಯಾವ ದೃಷ್ಟಿಯಿಂದ ನೋಡಿದರೂ ಈ ಆಯುರ್ವೇದವು ಹಿಂದಿನಿಂದಲೂ ಬೆಳೆದುಕೊಂಡೇ ಬಂದಿದೆ. ಮುಸಲ್ಮಾನ ಅರಸರು ಭಾರತದಲ್ಲಿ ಪಾದಾರ್ಪಣೆ ಮಾಡಿದರೂ ಇಲ್ಲಿನ ಆಯುರ್ವೇದವನ್ನು ಕಡೆಗಣಿಸದೆ ಇದರೊಂದಿಗೆ ತಮ್ಮ ಯುನಾನೀ ಪದ್ಧತಿಯನ್ನೂ ಬಳಸತೊಡಗಿದರು. ಆದರೆ, ಮುಂದೆ ಬಂದ ಬ್ರಿಟಿಷರ ಕಾಲದಲ್ಲಿ ಆಯುರ್ವೇದವೆಂದರೆ ಹಳ್ಳಿಗೊಡ್ಡುಗಳು ಮಾಡುವ, ಕೊಡುವ ಔಷಧವೆಂಬ ತಪ್ಪುಭಾವನೆ ನಮ್ಮಲ್ಲಿ ಬೆಳೆಯಿತು; ಸ್ವಲ್ಪ ವಿದ್ಯಾವಂತರೆನ್ನಿಸಿಕೊಂಡವರೆಲ್ಲ ಈ ಆಯುರ್ವೇದವನ್ನು ನೆಚ್ಚುತ್ತಿಲ್ಲ. ಈಗಿನ ಕಾಲಕ್ಕನುಗುಣವಾದ ಸುಧಾರಣೆ ಆಯುರ್ವೇದದಲ್ಲಿ ಆಗಬೇಕು. ಹಿಂದೂ ವೈದ್ಯಶಾಸ್ತ್ರವು ಪ್ರಪಂಚದ ಅತ್ಯಂತ ಪ್ರಾಚೀನತಮ ವಿಜ್ಞಾನವಾಗಿದೆ. ಮೃತ ಶರೀರವನ್ನು ಮೊದಲು ಕೊಯ್ದು ಶರೀರದ ಅಂಗ ಪ್ರತ್ಯಂಗಗಳನ್ನು ವಿಭಾಗಿಸಿ ಪರೀಕ್ಷಿಸಿ ನೋಡಿದವರಲ್ಲಿ, ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಆಸ್ಪತ್ರೆ, ರುಗ್ಣಾಲಯಗಳನ್ನು ಪ್ರಥಮ ಒದಗಿಸುವುದರಲ್ಲಿ, ಖನಿಜ ಮತ್ತು ಪಾದರಸ ಪ್ರಯೋಗವನ್ನು ಹೊಟ್ಟೆಗೆ ಮೊತ್ತಮೊದಲು ಪ್ರಯೋಗಿಸಿದವರಲ್ಲಿ, ಆದಿಯಲ್ಲಿ ಚರ್ಮವನ್ನು ಏಕೀಕರಿಸಿ ಕಸಿ ಕಟ್ಟಿದವರಲ್ಲಿ ಪ್ರಾರಂಭದಲ್ಲಿ ಪ್ಲಾಸ್ಟಿಕ್ ಸರ್ಜರಿ ಹಾಗೂ ಪ್ರಥಮತಃ ತಿಮಿರ ರೋಗಗಳನ್ನು ಶುಕ್ಕುರಿಸುವುದರಲ್ಲಿ ಮತ್ತು ದೊಡ್ಡ ಒಪರೇಶನ್ ಅಂದರೆ ಅಂಗ ವಿಚ್ಛೇದನೆ, ಹೊಟ್ಟೆಯ ಶಸ್ತ್ರಚಿಕಿತ್ಸೆ ಮುಂತಾದುವನ್ನು ಮಾಡಿದವರಲ್ಲಿ ಭಾರತೀಯ ಪ್ರಾಚೀನ ವೈದ್ಯರೇ ಪ್ರಪಂಚದಲ್ಲಿ ಪ್ರಪ್ರಥಮರಾಗಿರುವರು ಎಂಬ ಡಾ| ಸಿ. ಮುತ್ತು ರವರ ಮಾತುಗಳನ್ನು ಓದಿದರೆ, ಆಯುರ್ವೇದದ ಬಗ್ಗೆ ನಿಜವಾದ ಕಲ್ಪನೆಯು ಬರುವುದು.

ಆಯುರ್ವೇದದಲ್ಲಿ ಈಗಾಗಲೇ ಕೆಲವೊಂದು ಗ್ರಂಥಗಳನ್ನು ಬರೆದ ಡಾ. ಶರ್ಮರು ಈಗ ಈ ಆಯುರ್ವೇದವನ್ನು ಕುರಿತಾದ ಅದರ ಮಹತ್ವ, ಹುಟ್ಟು, ಬೆಳವಣಿಗೆ, ಅದರ ಪ್ರವರ್ತಕರು ಆಯುರ್ವೇದ ಪದ್ಧತಿಯ ಅನಾದಾನ, ಪ್ರಸಿದ್ಧ ವೈದ್ಯರ ಅಭಿಪ್ರಾಯ, ಅಭಿವೃದ್ಧಿಯಾಗುವ ಅವಶ್ಯಕತೆ, ಅದರಲ್ಲಿ ಬರುವ ತೊಡಕುಗಳು ಮತ್ತು ಈ ತೊಡಕುಗಳನ್ನು ಪರಿಹರಿಸಲು ಸರಕಾರವು ಮಾಡಬೇಕಾದ ಕರ್ತವ್ಯ ಮತ್ತು ಉನ್ನತಿಯ ಮಾರ್ಗಗಳನ್ನು ನಿರೂಪಿಸುವ ಈ ಸಣ್ಣ ಗ್ರಂಥವೊಂದನ್ನು ಬರೆದು ಪ್ರಕಾಶಿಸಿದ್ದಾರೆ. ಆಯುರ್ವೇದದ ಬಗ್ಗೆ ಅಸಂಬದ್ಧಾಭಿಪ್ರಾಯವನ್ನು ಧರಿಸಿಕೊಂಡಿರುವ ಜನತೆಯು ಈ ಪುಟ್ಟ ಪುಸ್ತಕವನ್ನು ಓದುವುದರಿಂದ, ತಮ್ಮ ಮನಸ್ಸನ್ನು ತಿಳಿಸಿಕೊಳ್ಳಬಹುದು. ಆದುದರಿಂದಲೇ ಈ ಗ್ರಂಥವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಅಲ್ಲದೇ ಡಾ. ಶರ್ಮರು ತಮ್ಮ ಅನುಭವದಿಂದ ಇನ್ನೂ ಇಂತಹ ಗ್ರಂಥಗಳನ್ನು ಜನತೆಗೊದಗಿಸಲಿ ಎಂದು ಹಾರೈಸುತ್ತೇವೆ.

—ಗೋರಾ.

ಮಗುವಿಗೆ ಸಂಪೂರ್ಣ ಸ್ವಾತಂತ್ರ್ಯವಿರಲಿ

(೧ನೇ ಪುಟದಿಂದ)

ಅನುಕಂಪವು ಮನೆಯಲ್ಲಿ ಮಗುವಿಗೆ ದೊರೆತರೆ ಮಗುವಿಗೆ ಹೊಣೆಗಾರಿಕೆಯನ್ನು ಸ್ವೀಕರಿಸಲು ತಕ್ಕ ವಾತಾವರಣವನ್ನು ಒದಗಿಸಿಕೊಡುತ್ತದೆ. ಮಗುವಿನ ಸಹಕಾರವನ್ನು ಪಡೆಯುವಲ್ಲಿ ರಚನಾತ್ಮಕ ಶಿಸ್ತು ಗುರಿಯಾಗಿರಬೇಕು. ಮಗುವಿನಲ್ಲಿ ಶಿಸ್ತನ್ನು ಪ್ರೇರೇಪಿಸುವಾಗ, ನಾವು ನಿಜವಾಗಿಯೂ ಅವನ ಅಭಿವೃದ್ಧಿಯನ್ನೂ ಸಂತೋಷವನ್ನೂ ಅಭಿಲಷಿಸುತ್ತೇವೆಂಬ ದೃಢ ವಿಶ್ವಾಸವು ಹುಟ್ಟುವಂತೆ ಮಾಡಬೇಕು. ದೈನಂದಿನ ಕಾರ್ಯಕ್ರಮಗಳಾದ ಊಟ, ನಿದ್ರೆ, ಸ್ನಾನ, ಆಟ—ಇವುಗಳೇ ಮಗುವು ಶಿಸ್ತಿನ ಬಗ್ಗೆ ಮತ್ತು ಸ್ವಮಾರ್ಗದರ್ಶನದಲ್ಲಿ ಕಲಿಯುವ ಮೊತ್ತಮೊದಲನೆಯ ಪಾಠವಾಗಿದೆ. ಗೃಹ ತರಬೇತಿಯ ಇನ್ನೊಂದು ಉದ್ದೇಶವಾದ ಯೋಗ್ಯವಾದ ಅಭ್ಯಾಸಗಳ ಅಪಾದಾನಕ್ಕೆ ಈ ಶಿಸ್ತು ಒಯ್ಯುವುದು. ಮಕ್ಕಳು ಮನೆಯಲ್ಲಿನ ಹಿರಿಯರನ್ನು ಬಹಳಷ್ಟು ಮಟ್ಟಿಗೆ ಅನುಕರಿಸಿಕೊಂಡು ತಮ್ಮ ಅಭ್ಯಾಸಗಳನ್ನು ರೂಪಿಸಿಕೊಳ್ಳುತ್ತವೆ. ಆದುದರಿಂದ ಮನೆಯಲ್ಲಿನ ಹಿರಿಯರು ಅತ್ಯುತ್ತಮ ನಡತೆಯಿಂದ ಇದ್ದು ಕೊಳ್ಳಬೇಕಾಗುವುದು.

ಮಗುವಿನ ಪ್ರಾರಂಭಿಕ ಆಹಾರದ ಅನುಭವವೇ ಅವನ ಆರೋಗ್ಯದ ಬುನಾದಿಯಾಗಿದೆ. ತಂದೆ ತಾಯಂದಿರು ತಾವು ಮಕ್ಕಳು ಅವುಗಳ ಯಾವ ಆಹಾರವನ್ನು ಮೆಚ್ಚುವಂತೆ ಮತ್ತು ಉಣ್ಣುವತ್ತ ಆಸಕ್ತಿವಹಿಸುವಂತೆ ಹೇಗೆ ಮಾಡಬೇಕೆಂಬುದನ್ನೂ ತಿಳಿದಿರಬೇಕು. ಅವುಗಳಿಗೆ ಒಗ್ಗದಿರುವ ಪದಾರ್ಥಗಳನ್ನು ತಿನ್ನುವಂತೆ ಅವರು ಒತ್ತಾಯಿಸಬಾರದು. ಆಹಾರದ ಬಗೆಗಿರುವ ಭ್ರಮೆಯನ್ನು ದೂರಮಾಡಿ, ಮಗುವಿನ ಚಿತ್ತವೃತ್ತಿಯನ್ನು ಉದ್ದೀಪಿಸುವ ಕ್ರಮಗಳನ್ನು ಕೈಗೊಳ್ಳಬೇಕು. ಊಟದವೇಳೆಯಲ್ಲ ಆರಾಮದಾಯಕವಾಗಿಯೂ ಆನಂದಪೂರ್ಣವಾಗಿಯೂ ಇರಬೇಕು.

ಜನನ, ದೊರಕಲಿಯುವ ಅಂಗಾಂಗ ಚಲನೆಯ, ಮಲಗುವ ಮತ್ತು ವ್ಯಾಯಾಮದ ಉತ್ತಮ ನಿರ್ಮಲ ಆರೋಗ್ಯದ ನಿಯಮ ಕಲಿಯುವುದರಲ್ಲಿ ಸಹಾಯ ಮಾಡಬೇಕು. ಕೆಲಸ, ಮತ್ತು ಆಡುವ ಅಭ್ಯಾಸಗಳಲ್ಲಿನ ನಿಯಮಿತತನವು ಮಗುವಿನ ಭಾವನಾತ್ಮಕ ಸ್ಥಿರತೆಯನ್ನು ಬಲಪಡಿಸುವುದು.

ತಮ್ಮ ಮನೆಗೆಲಸಗಳಲ್ಲಿ ಮಕ್ಕಳು ಸಹಕರಿಸುವ ಅವಕಾಶವನ್ನು ಒದಗಿಸಬೇಕು. ಕೆಲಸಗಳನ್ನು ತಮ್ಮಷ್ಟಕ್ಕೇ ಮಾಡಬಿಟ್ಟಲ್ಲಿ, ಮಕ್ಕಳು ಆತ್ಮವಿಶ್ವಾಸಿಗಳೂ, ವಿಜಯದ ಭಾವನೆಯನುಭವಿಗಳೂ ಆಗುವರು. ಮನೆಯ ಸಾಧನೆಯೂ ಬೆಳೆಯುವುದು. ಮಗುವನ್ನು ಒಬ್ಬ ವ್ಯಕ್ತಿಯೆಂದು ಗಮನಿಸಿ ಕುಟುಂಬದ ಸದಸ್ಯರು ಮಗುವಿನ ಪಾಲಿನ ಅಧಿಕಾರವನ್ನೂ ಹೊಣೆಗಾರಿಕೆಯನ್ನೂ, ಸೌಲಭ್ಯಗಳನ್ನೂ ಕೊಡಬೇಕು. ಅವನೊಬ್ಬ ಕುಟುಂಬದ ಪ್ರಮುಖ ಸದಸ್ಯನಾಗಿರುತ್ತಾನೆ. ಅವನಿಗೆ ಕೃತಜ್ಞತೆಯನ್ನೂ ಲಕ್ಷ್ಯವನ್ನೂ ಅರ್ಪಿಸಿರಿ; ಆಲೋಚಿಸಿ ಅವನ ಪ್ರಶ್ನೆಗಳಿಗೆ ಉತ್ತರವೀಯಿರಿ. ಅವನಿಗೆ ನೀವು ಇತ್ತ ಮಾತನ್ನು ಎಂದೂ ತೆಗೆದುಹಾಕದೆ ಸಲ್ಲಿಸಿರಿ. ಏನಾದರೊಂದು ವಸ್ತುವನ್ನಾತ ಆಧರಿಸಿದನೆಂದರೆ, ಅವನನ್ನು ಹೊಗಳಿರಿ.

ನಿಮ್ಮ ಮಗುವನ್ನು ಅವನಿಚ್ಛಿಸುವಂತೆ ಸಂತೋಷವಾಗಿರಿಸಿರಿ. ನಿಮ್ಮ ನೆರೆಯ ಮಕ್ಕಳೊಡನೆ ಹೋಲಿಸುವುದು, ಬೇರೆಯವರಂತೆ ಆಗಬೇಕೆಂದು ಹೇಳುವುದು ಮಗುವನ್ನು ತನ್ನ ಸಾಮಾನ್ಯವಾದ ಕಚ್ಚಾಟದ ಬೆಳವಣಿಗೆಯಲ್ಲಿ ತಡೆಯನ್ನುಂಟುಮಾಡುತ್ತದೆ.

ಪ್ರತಿ ಮಗುವಿಗೂ ಒಂದು ಮನೆ ಬೇಕು; ಮತ್ತು ಪ್ರತಿ ಮನೆಗೂ ಒಂದು ಮಗು ಬೇಕು. ನಮ್ಮ ಜನಾಂಗದ ಭವಿಷ್ಯವೇ ಇಂದಿನ ಮಕ್ಕಳು. ಅವರು ನಮಗೆ ಹೊಸ ದೃಷ್ಟಿಯನ್ನೂ ನವ ಪ್ರಶಂಸೆಯನ್ನೂ ಒದಗಿಸಬಲ್ಲರು. ಅವರು ನಮ್ಮನ್ನು ಮುಗ್ಧ ಭಾವದ ಮೇರುವಿನ ತುತ್ತತುದಿಗೆ ಒಯ್ಯುವರು. ಆದುದರಿಂದ ಅವರು ಬೆಳೆದು ಅಮೂಲ್ಯ ನಾಗರಿಕರಾಗಿ ಬೆಳೆಯುವಂತೆ ನಾವು ಮನೆಯಲ್ಲಿ ಸಂತೋಷಮಯವಾದ ಮತ್ತು ಆರೋಗ್ಯಪೂರ್ಣ ಬಾಹ್ಯ ವಲಯಗಳನ್ನು ಒದಗಿಸಿಕೊಡುವುದು ಅತ್ಯಂತಾವಶ್ಯಕವಾಗಿದೆ.

(ಮೂಲ: ಕುರುಕ್ಷೇತ್ರ)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press. Udipi S. India

| REGD. NO. M. 3618 |

| LICENCE NO. 31 Licensed to Post without Prepayment. |

ನವಯುಗ

ಸಂಪುಟ ೩೭
VOL. 37

13—3—1958

ಸಂಚಿಕೆ ೨೭
NO. 27

ಭಾರತದಲ್ಲಿ ಭತ್ತದ ವ್ಯವಸಾಯ—

ನಾವು ಸ್ವಾವಲಂಬಿಗಳಾಗಬಹುದು

ಶ್ರೀ ಎಸ್. ಗೋಪೀಚಂದರಾವ್

ಪ್ರಪಂಚದ ಜನರ ಜೀವನವು ಸುಗಮವಾಗಿ ಸಾಗಬೇಕಾದರೆ, ಅನ್ನ, ನೀರು, ಗಾಳಿಗಳು ಅತ್ಯಂತಾವಶ್ಯಕವಾದ ಪದಾರ್ಥಗಳಾಗಿವೆ. ಇವುಗಳಲ್ಲಿ ಆಹಾರ ಧಾನ್ಯಗಳನ್ನು ಮಾನವನು ಸ್ವತಃ ಬೆಳೆಯಿಸಿ ಉಣ್ಣುತ್ತಾನೆ. ಹಾಗಾಗಿ ಅನ್ನದ ಪ್ರಶ್ನೆಯು ಜಟಿಲಗೊಳ್ಳುವುದಕ್ಕೆ ಹೆಚ್ಚಿನ ಪಟ್ಟಿಗೆ ಮಾನವನೇ ಕಾರಣನೆನ್ನಬಹುದು.

ಜಗತ್ತಿನಲ್ಲಿನ ಜನರ ಆಹಾರ ಧಾನ್ಯಗಳಲ್ಲಿ ಅಕ್ಕಿಯು ಒಂದು ಪ್ರಮುಖ ವಸ್ತುವಾಗಿ ಪರಿಣಮಿಸಿರುತ್ತದೆ ಇಂದು ಅಖಂಡ ಪ್ರಪಂಚದಲ್ಲಿ ಒಟ್ಟು ೭,೦೦೦ಕ್ಕೂ ಮಿಕ್ಕಿದ ವಿವಿಧ ಜಾತಿಯ ಬತ್ತವು ಬೆಳೆಸಲ್ಪಡುತ್ತಿದೆ, ಎಂದು ತಿಳಿದುಬಂದಿದೆ. ಈ ಏಳು ಸಾವಿರ ಬಗೆಯ ಬತ್ತಗಳ ಪೈಕಿ ಸುಮಾರು ೪ ಸಾವಿರ ಜಾತಿಯವುಗಳನ್ನು ಭಾರತದಲ್ಲಿಯೇ ಬೆಳೆಸಲಾಗುತ್ತಿದೆ ಎಂದರೆ, ನೀವು ಆಶ್ಚರ್ಯಪಡಬಹುದು ಹೀಗೆ ಬೆಳೆಸಲಾದ ಬತ್ತದ ಉತ್ಪಾದನೆಯಲ್ಲಿ ಬಹುಭಾಗ, ಎಂದರೆ ಮೂರರಲ್ಲಿ ಎರಡಂಶದಷ್ಟು ಉತ್ಪಾದಕರ ಗೃಹೋಪಯೋಗ, ಬೀಜ, ಕೂಲಿಕರ್ಚು, ಎನಿಮಯ ಮೊದಲಾದುವುಗಳ ಸಲುವಾಗಿ ತೆಗೆದಿರಿಸಲ್ಪಡುತ್ತದೆ. ಮತ್ತುಳಿದ ಒಂದಂಶ ಮಾತ್ರ ಮಾರುಕಟ್ಟೆಗೆ ಸಾರುವ ಸಲುವಾಗಿ ಬರುತ್ತದೆ.

ಈ ರೀತಿಯಲ್ಲಿ ಬೆಳೆದು ಉತ್ಪತ್ತಿಯಾದ ಅಕ್ಕಿಯಲ್ಲಿ ತೊಂಬತ್ತು ಪ್ರತಿಶತದಷ್ಟು ವಿವಿಧ ರೀತಿಯ ಬೆಂದನ್ನದ ರೂಪದಲ್ಲಿ ಬಳಸಲಾಗುತ್ತದೆ. ಹಾಗೆಯೇ ಇದರಿಂದ ನಾನಾ ಬಗೆಯ ತಿಂಡಿತಿನಸುಗಳನ್ನೂ ಮಾಡುತ್ತಾರೆ. ಹುರಿಯಕ್ಕಿಯನ್ನಾಗಿ ಇದನ್ನು ಪರಿವರ್ತಿಸಿ ತಿನ್ನುವುದೂ ಉಂಟು. ಆದರೂ ಇದಕ್ಕೆ ಬಳಸುವ ಅಕ್ಕಿಯ ಪ್ರಮಾಣ ಅತ್ಯಲ್ಪವಾಗಿದೆ.

ಭಾರತದಲ್ಲಿ ಹೆಚ್ಚು ಅಕ್ಕಿಯನ್ನು ಬಳಸುವ ರಾಜ್ಯವೆಂದರೆ ಪಶ್ಚಿಮ ಬಂಗಾಳ ಇಲ್ಲಿ ಎಕ್ರೆಯೊಂದಕ್ಕೆ ೨೫೪ ರಾತಲುಗಳಷ್ಟು ಅಕ್ಕಿಯನ್ನು ವೆಚ್ಚ ಮಾಡಲಾಗುತ್ತದೆ ಇದರ ನಂತರ ಕ್ರಮವಾಗಿ ಅಸ್ಸಾಮು, ಮದ್ರಾಸು, ಮತ್ತು ಮಧ್ಯ ಪ್ರದೇಶಗಳು ನಿಲ್ಲುತ್ತವೆ ಉತ್ತರ ಪ್ರದೇಶ ಮತ್ತು ಪಂಜಾಬ ರಾಜ್ಯಗಳಲ್ಲಿ ಈ ಉಪಯೋಗವು ಬಹಳ ಕಡಿಮೆ ಎಂದರೆ ಕ್ರಮವಾಗಿ ೭೪ ಮತ್ತು ೨೦ ರಾತಲುಗಳು. ಈ ವಿಷಯಗಳನ್ನು "ಭಾರತದಲ್ಲಿ ಅಕ್ಕಿ" ಎಂಬ ಭಾರತೀಯ ಕೃಷಿಕ ಸಂಶೋಧಕ ಮಂಡಳದಿಂದ ಪ್ರಕಾಶಿತವಾದ ಪುಸ್ತಕದಲ್ಲಿ ಚೆನ್ನಾಗಿ ನೋಡಬಹುದು ಆಗ ಇದರ ಸತ್ಯಾಸತ್ಯತೆಯು ಅರಿವಾಗುವುದು.

ಭಾರತದಲ್ಲಿ ಉತ್ಪನ್ನಗೊಳಿಸಲಾಗುವ ಧಾನ್ಯಗಳ ಪ್ರಮಾಣವು ತೀರ ಅಲ್ಪವೆಂಬುದಾಗಿ ಹೇಳಲಾಗುತ್ತದೆ ಭಾರತದಲ್ಲಿಂದು ೬೫೦ ಲಕ್ಷ ಎಕ್ರೆ ಭೂಮಿಯಲ್ಲಿ ಭತ್ತವನ್ನು ಬೆಳೆಸಲಾಗುತ್ತಿದೆ. ಇದು ಜಗತ್ತಿನ ಒಟ್ಟು ಬತ್ತ ಬೆಳೆಯುವ ಪ್ರದೇಶದಲ್ಲಿ ಒಂದು ಮೂರನೆಯಂಶ. ಹಾಗಿದ್ದು, ಭಾರತವು ಜಗತ್ತಿನ ಬತ್ತ ಬೆಳೆಸುವ ರಾಷ್ಟ್ರಗಳಲ್ಲೆಲ್ಲಾ ಹಿರಿಯದು ಮತ್ತು ಬೆಳೆಬೆಳೆಯುವ ಪ್ರದೇಶವೂ ತೀರ ವಿಸ್ತಾರವಾಗಿರುವುದು. ಭಾರತದಲ್ಲಿರುವ ಒಟ್ಟು ಬತ್ತ ಬೆಳೆಯುವ ಜಮೀನಿನಲ್ಲಿ ಅತ್ಯಧಿಕ ಭಾಗ ಎಂದರೆ, ಸೇಕಡಾ ೧೭ರಷ್ಟು ಬಿಹಾರ ರಾಜ್ಯವೊಂದರಲ್ಲಿಯೇ ಇದೆ. ಪಶ್ಚಿಮ ಬಂಗಾಳ, ಮಧ್ಯಪ್ರದೇಶ ಉತ್ತರ ಪ್ರದೇಶ ಮತ್ತು ಒರಿಸ್ಸಗಳಲ್ಲಿ ಪ್ರತಿಯೊಂದು ರಾಜ್ಯದಲ್ಲಿಯೂ ೧೨-೧೩ರಷ್ಟು, ಇವು ದ್ವಿತೀಯ ಸ್ಥಾನವನ್ನು ಪಡೆಯುತ್ತವೆ ದೇಶದ ಭತ್ತ ಬೆಳೆಸುವ ಪ್ರಮುಖ ರಾಜ್ಯಗಳಾದ ಅಸ್ಸಾಮು ಮತ್ತು ಆಂಧ್ರಗಳು ಕೇವಲ ಸೇಕಡಾ ಐದರಷ್ಟು ಮಾತ್ರ ಬೆಳೆಸುತ್ತವೆ.

ಭಾರತದಲ್ಲಿ ಸರ್ವಸಾಮಾನ್ಯವಾಗಿ ಪ್ರತಿ ಎಕರೆಯಲ್ಲಿ ಸರಾಸರಿ ೭೭೨ ರಾತಲುಗಳಷ್ಟು ಅಕ್ಕಿಯು ದೊರೆಯುತ್ತದೆ. ಇದೇ ಕಾಲದಲ್ಲಿ ಇಷ್ಟೇ ಸ್ಥಳದಲ್ಲಿ ಸ್ಪೈಯಿನ್ ದೇಶದಲ್ಲಿ ೩,೨೩೪ ರಾತಲುಗಳು, ಇಟಲಿಯಲ್ಲಿ ೩,೧೦೫ ರಾತಲುಗಳು ಮತ್ತು ಜಪಾನಿನಲ್ಲಿ ೨೩೫೧ ರಾತಲುಗಳು ಉತ್ಪಾದನೆಯಾಗುತ್ತಿವೆ ಎಂದರೆ ಆಶ್ಚರ್ಯವಾಗದಿರದು ಬೇರೆ ದೇಶಗಳಲ್ಲಿ ಅಧಿಕೋತ್ಪತ್ತಿಯಾದರೂ ನಮ್ಮಲ್ಲಿ ಮಾತ್ರ ಇದೇಕೆ ಹೀಗೆ ಎಂದು ಪ್ರಶ್ನೆ ಸ್ವಾಭಾವಿಕವಾಗಿ ಏಳುತ್ತದೆ. ಇದಕ್ಕೆ ಸಮಾಧಾನ ಇಷ್ಟೆ. ಭಾರತದ ಬಹುಭಾಗದ ಬತ್ತದ ಬೆಳೆಯೂ ಇತರ ಬೆಳೆಗಳಂತೆಯೇ ಹಿಂಗಾರು ಮಳೆಗಾಳಿಗಳನ್ನು ಭದ್ರವಾಗಿ ಆಶ್ರಯಿಸಿಕೊಂಡಿರುವುದು ಭಾರತದ ತರಿ ಭೂಮಿಯಲ್ಲಿ ಒಟ್ಟು ಸೇಕಡಾ ೨೧ರಷ್ಟನ್ನು ಮಾತ್ರ ನೀರಾವರಿಯ ಸೌಕರ್ಯಗಳಿಂದ ರಕ್ಷಿಸಿಕೊಳ್ಳಲಾಗಿದೆ. ಮಳೆರಾಯನ ಕೃಪಾಕಟಾಕ್ಷವೊಂದಿಲ್ಲವಾದರೆ, ನಮ್ಮ ದೇಶದ ಭೂಮಿಯಲ್ಲಿ ಬೆಳೆ ಬೆಳೆಯುವುದು ಅಷ್ಟೇನೂ ಸುಲಭವಾಗಿ ಇದುವರೆಗೂ ಪರಿಣಮಿಸಲಿಲ್ಲ.

ಕಡಿಮೆ ಭೂಮಿಯಲ್ಲಿ ಹೆಚ್ಚು ಬೆಳೆಯನ್ನು ಬೆಳೆಸುವ ಸಲುವಾಗಿ ಕೈಗೊಳ್ಳಲಾದ ಕೆಲವೊಂದು ಪರಿಶೀಲನೆಗಳಿಂದ ನಮ್ಮಲ್ಲಿಯೂ ಸ್ಪೈಯಿನ್, ಜಪಾನುಗಳಂತೆ ಅಧಿಕೋತ್ಪತ್ತಿಯನ್ನು ಪಡೆಯುವುದು ಸಾಧ್ಯವೆಂದು ಕಂಡುಬಂದಿದೆ ಇದಕ್ಕೆ ಭೂಮಿಯನ್ನು ಸಾಕಷ್ಟು ಹದಮಾಡಿ ನೆಡುವುದು, ಅತ್ಯುತ್ತಮವೆನಿಸಿದ ಸುಧಾರಿಸಿದ ಬೀಜಗಳನ್ನೇ ಬಳಸುವುದು, ಒಳ್ಳೆಯ ಸಸ್ಯಜನ್ಯ ಗೊಬ್ಬರಗಳ ಉಪಯೋಗ, ರಾಸಾಯನಿಕ ಗೊಬ್ಬರಗಳನ್ನು ಹಾಕುವುದು ಮತ್ತು ಬೆಳೆಗಳಿಗೆ ಹಾನಿ ತಗಲದಂತೆ ತೆಗೆದುಕೊಳ್ಳುವ ಎಚ್ಚರ ಹಾಗೂ ಬೆಳೆದು ಬಂದ ಧಾನ್ಯಗಳ ರಕ್ಷಣೆ ಇವುಗಳ ಬಗ್ಗೆ ನಾವು ತೆಗೆದುಕೊಳ್ಳುವ ಗಮನವನ್ನು ಅನುಸರಿಸಿರುವುದು ಎಂಬುದು ನಿಶ್ಚಯ. ಈಗ, ಇವುಗಳತ್ತ ಪೂರ್ಣವಾಗಿ ಅಥವಾ ಅಂಶತಃವಾಗಿ ನಿರ್ಲಕ್ಷಿಸುವುದೇ ನಮ್ಮ ಹುಟ್ಟುವಳಿಯಲ್ಲಿ ಕೊರತೆಯಾಗಲು ಪ್ರಬಲ ಕಾರಣವೆನ್ನುವುದು ಗೊತ್ತಾಗುತ್ತದೆ. ಬತ್ತ ಬೆಳೆಸುವಲ್ಲಿ ರಾಸಾಯನಿಕ ವಿಧಾನಗಳಿಂದ ಆಡಕವಾಗಿರುವ ಜಪಾನೀ ಪದ್ಧತಿಯ ಕೃಷಿ ವಿಧಾನವು ಭಾರತದಲ್ಲಿ ಬಹಳ ಸ್ಥಳದಲ್ಲಿ ಉತ್ಪಾದನೆಯನ್ನು ಇಮ್ಮಡಿಸಿದೆ ಎಂದು ವೇದ್ಯವಾಗಿದೆ. ಅದೇ ವಿಧಾನವನ್ನು ದೇಶದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸಿದರೆ, ಆಗ ನಮ್ಮ ಆಹಾರದ ಕೊರತೆಯು ಸಂಪೂರ್ಣ ಇಲ್ಲದಂತಾಗುವುದರಲ್ಲಿ ಸಂದೇಹವಿಲ್ಲ

ಅಕ್ಕಿಗಳನ್ನೆಲ್ಲಾ ಒಂದೇ ವಿಧಾನದಲ್ಲಿ ವರ್ಗೀಕರಿಸಲು ಮತ್ತು ಸಮಾನತೆಯನ್ನು ದೇಶದೆಂಬ ಸ್ಥಾಪಿಸಲು ೧೯೩೭ರ ಕೃಷಿಯ ಉತ್ಪಾದನಾ ಮಸೂದೆ (ವರ್ಗೀಕರಣ ಮತ್ತು ಮಾರಾಟ) ಯಲ್ಲಿ ಸ್ವಲ್ಪ ಗಮನ ಹರಿಸಲಾಗಿದೆ ಅಕ್ಕಿಯನ್ನು ಪಡೆದುಕೊಳ್ಳುವವನು ಬದಲಾಗಿ ತೆರುವ ರೂಪಾಯಿಯಲ್ಲಿ ಉತ್ಪಾದಕನ ಪಾಲಿಗೆ ದೊರೆಯುವ ಅಂಶವನ್ನು ಹೆಚ್ಚಿಸುವ ಸಲುವಾಗಿ ಪಂಜಾಬ ಮತ್ತು ಆಂಧ್ರ ಪ್ರದೇಶಗಳಲ್ಲಿನ ಮಾರುಕಟ್ಟೆಗಳನ್ನು ಒಂದು ಕ್ರಮಕ್ಕೆ ತರಲಾಗಿದೆ. ಉಳಿದ ರಾಜ್ಯಗಳಲ್ಲಿಯೂ ಇಂತಹ ಶಾಸನವೊಂದನ್ನು ತಯಾರಿಸುವುದು ಲಾಭದಾಯಕ ಮತ್ತು ಆದರಿಂದಾಗಿ ಆವಶ್ಯಕವೆಂದು ಕಂಡುಬಂದಿದ್ದು ಅವುಗಳಲ್ಲಿಯೂ ಯೋಗ್ಯ ಶಾಸನವನ್ನು ಮಾಡುವ ಸಿದ್ಧತೆಗಳು ನಡೆಯುತ್ತಿವೆ. ಕೃಷಿಯಭಿವೃದ್ಧಿ ಮಂಡಲವು ಕೃಷಿ ವಿಭಾಗವಲ್ಲಿ ಸಂಶೋಧನೆಗಳನ್ನು ಮಾಡುವ ಸಲುವಾಗಿ ದೇಶದ ಎಲ್ಲ ಭಾಗಗಳಲ್ಲಿಯೂ ತನ್ನ ಚಟುವಟಿಕೆಗಳನ್ನು ಪ್ರದರ್ಶಿಸುತ್ತಿದೆ. ಉತ್ಪಾದಕನಿಗೆ ನ್ಯಾಯೋಚಿತವಾದ ಬೆಲೆ ಒದಗುವಂತೆ ಮಾಡುವುದು. ಅಕ್ಕಿಯ ವಿಧಗಳನ್ನು ಉತ್ತಮಗೊಳಿಸುವುದು, ಅಧಿಕಾಧಿಕ ಮಾಡುವುದು ಮುಂತಾದ ಕ್ರಮಗಳನ್ನೂ ಈ ಮಂಡಳವು ತೆಗೆದುಕೊಳ್ಳುತ್ತದೆ

ಭಾರತದಲ್ಲಿ ಅಕ್ಕಿಯ ಕೊರತೆಯನ್ನು ನೀಗಿಸಲು ಕೇವಲ ಜಪಾನೀ ವ್ಯವಸಾಯ ಕ್ರಮ ಇಲ್ಲವೇ ರಾಸಾಯನಿಕ ಗೊಬ್ಬರಗಳ ಉಪಯೋಗ ಇಷ್ಟರಿಂದಲೇ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ನಾರದ ಸಣ್ಣ ಕಥೆ—

ಬೆಳ್ಳಗಿರದ ಹಾಲು

ಶ್ರೀ. ಕೀ. ವ. ಕೇಶವ

ಸ್ಟೇಷನ್ ತಲಪಿತು ಎಂದು ರೈಲಿನ ನಡಿಗೆಯ ವೇಗ ಹೇಳುತ್ತಿತ್ತು. ನಿಧಾನವಾಗಿ ಅಡಿಯಿಡುತ್ತಿದ್ದ ಬಂಡಿಯ ಗಾಲಿಗಳು ಕಿರ್ರ್...ಎಂಬ ಶಬ್ದದೊಂದಿಗೆ ನಿಂತುಬಿಟ್ಟವು. ಏನು ಗಲಾಟೆ–ನೂಕುನುಗ್ಗಲು! ಅದು ದಿನದಂತೆ ನಡೆದೇ ನಡೆದಿತ್ತು.

ಒಮ್ಮೆ ಶಿರವನ್ನು ಹೊರಚಾಚಿ ಇದು ಕಲ್ಲಿಕೋಟೆಯೇ ಹೌದೆಂದು ದೃಢಪಡಿಸಿಕೊಂಡು ಮೆಲ್ಲಗೆ ತಮ್ಮ ಚೀಲದೊಂದಿಗೆ ಮೂರನೇ ತರಗತಿಯ ಕಂಪಾರ್ಟ್‌ಮೆಂಟಿನಿಂದ ಕೆಳಕ್ಕಿಳಿದರು—ಕೃಷ್ಣ ಭಟ್ಟರು. ಯುವಕ ಯುವತಿಯರ–ಗಂಡು ಹೆಣ್ಣುಗಳ–ತಿಕ್ಕಾಟದ ಮಧ್ಯೆ ಹೇಗೋ ನುಸುಳಿಕೊಂಡು ಸ್ಟೇಷನಿನ ಬದಿಯ ಕಲ್ಲು ಬೆಂಚೊಂದರ ಬಳಿಗೆ ಬಂದು ಒಮ್ಮೆ ನೀಳವಾಗಿ ಉಸಿರನ್ನೆಳೆದುಕೊಂಡರವರು. ವರ್ಷಕ್ಕೆ ಒಮ್ಮೆಯೋ ಎರಡಾವರ್ತಿಯೋ ರೈಲಿನ ಭೇಟಿ ಮಾಡಿದರೆ ಹೆಚ್ಚಾದ ಭಟ್ಟರಿಗೆ-ಅಲ್ಲಿಯ ನೋಟ ನೋಡಿಯೇ ದಿಗ್ಭ್ರಮೆ ಹಿಡಿದುಹೋಗಿತ್ತು" 'ಏನಪ್ಪಾ ಇದು; ಗಂಡು ಹೆಣ್ಣು ಎಂಬ ಭಾವನೆಯಾದರೂ ಬೇಡವೇ! ಒಂದು ನೀತಿಯಿಲ್ಲ. ನಿಯಮವಿಲ್ಲ; ಮರ್ಯಾದೆಯೆಂಬುದು ಮೊದಲೇ ಇಲ್ಲ; ಒಟ್ಟಿನಲ್ಲಿ ಕಲಿಯುಗ ಅಂತ್ಯವಾಗಿ ಬಿಟ್ಟಿತು;'-ಎಂದು ಹೇಳಿಕೊಂಡರವರು, ಆಗತಾನೇ ತಾವು ಅನುಭವಿಸಿದ ಅಲ್ಲಿಯ ಹಲವು ಘಟನೆಗಳನ್ನು ನೆನೆದು!

ಅದು ಮದ್ರಾಸಿಗೆ ಹೋಗುವ ರೈಲುಗಾಡಿ. ಜನಸಂಖ್ಯೆ ಮಿತಿಗಿಂತ ಅಧಿಕವಾಗಿದ್ದು–ಅದೂ ಮೂರನೇ ತರಗತಿಯ ಬಂಡಿಯಲ್ಲಿ—ನಿಲ್ಲಲೂ ಜಾಗವಿಲ್ಲ ಎಂಬಂತಾಗಿತ್ತು. ಭಟ್ಟರಿಗೆ ಕುಳಿತುಕೊಳ್ಳಲು ಸ್ಥಳಸಿಕ್ಕಿದ್ದರೂ, ಮುಂದುವರಿದಂತೆ ಅವರ ಕಂಪಾರ್ಟ್‌ಮೆಂಟಿನಲ್ಲಿ ಸ್ತ್ರೀ ಪುರುಷರೆನ್ನದೆ ತುಂಬಿಹೋಗಿದ್ದರು ಭಟ್ಟರ ಎಡಬಲ ಬದಿಯಲ್ಲಿ ನಾಲ್ಕಾರು ಹೆಂಗಳೆಯರು ನಿಂತಿದ್ದು, ಭಟ್ಟರನ್ನು ಮುತ್ತಿರುವರೋ ಎಂಬಂತೆ ನೆರೆದಿದ್ದರು. ಆಗಾಗ ಭಟ್ಟರನ್ನು ಢಿಕ್ಕಿ ಹೊಡೆಯುತ್ತಲೂ ಇದ್ದರು. ಹಳೆ ಸಂಪ್ರದಾಯಸ್ಥರಾದ ಕೃಷ್ಣ ಭಟ್ಟರಿಗೆ ಒಂದು ದೊಡ್ಡ ಬಂಧನದಂತಾಗಿ ಹೋಗಿತ್ತು; ಆದರೆ ಮಾಡುವುದೇನು? ಉಸಿರು ಬಿಗಿಹಿಡಿದು ಮೌನ ವದನರಾಗಿ ಕುಳಿತಿದ್ದರು. ಅದೆಲ್ಲಾ ನಾಗರಿಕತೆಯ ವೈಶಿಷ್ಟ್ಯವೆಂದು ಅವರಿಗೆಂತು ತಿಳಿಯಬೇಕು!

ಅಂತೂ ತಮ್ಮ ಅಸಮಾಧಾನವನ್ನೆಲ್ಲಾ ಒಮ್ಮೆ ನೇರವಾಗಿ ಕುಳಿತು ತಮ್ಮಲ್ಲೇ ಹೇಳಿಕೊಂಡು ತೃಪ್ತಿಪಟ್ಟುಕೊಂಡರು. ಮತ್ತೇನೂ ಮಾಡುವುದು ಆಗ ಅವರಿಂದ ಸಾಧ್ಯವಿರಲಿಲ್ಲ.

ತಮ್ಮ ಒಳಕಿಸೆಯಿಂದ ಗಡಿಯಾರವನ್ನು ಹೊರತೆಗೆದು ಕನ್ನಡಕವನ್ನೊಮ್ಮೆ ಮೂಗಿಗೇರಿಸಿ ಗಂಟೆಯೆಷ್ಟೆಂದು ನೋಡಿದರು — ಐದೂಕಾಲು!

'ಸಮಯ ಹೋದುದೇ ತಿಳಿಯಲಿಲ್ಲವಲ್ಲಾ!', ಎನ್ನುತ್ತಾ ಅವರು ಗಡಿಯಾರವನ್ನು ಒಳಸೇರಿಸಿ ಎಡ ಜೇಬಿಗೆ ಕೈ ಹಾಕಿದರು. ಆದರೆ ಅಲ್ಲಿರಬೇಕಾದ ಆ ವಿಳಾಸವಿರುವ ಚೀಟು ಅಲ್ಲಿರಲಿಲ್ಲ !!

ಅದು ಅವರ ಭಾವ ಭೀಮ ಭಟ್ಟರ ಮನೆಯ ವಿಳಾಸವಿರುವ ಚೀಟು. ಅಲ್ಲಿಗೇ ಅವರಿಗೀಗ ಹೋಗಬೇಕಾದುದು.

ಕೃಷ್ಣ ಭಟ್ಟರು ಕಾಸರಗೋಡಿನ ಸಮೀಪದವರು. ಭೂಮಾತೆಯ ಸೇವೆ ಗೈಯ್ಯುತ್ತಿರುವ ಆದರ್ಶ ಕೃಷಿಕರವರು. ಹೇರಳವಾಗಿ ಹಣವನ್ನು ಕೂಡಿಟ್ಟಿರಲಿಲ್ಲವಾದರೂ ಜೀವನ ನೌಕೆ ಸುಗಮವಾಗಿ ಸಾಗಲಡ್ಡಿಯಿರಲಿಲ್ಲ. ಅವರ ತಂಗಿ ಯಶೋದೆಯನ್ನು ಕೆಲವು ವರ್ಷಗಳಿಗೆ ಮೊದಲೇ ಅಲ್ಲೇ ಸಮೀಪದಲ್ಲಿ ನೆಲಸಿದ್ದ ಭೀಮ ಭಟ್ಟರಿಗೆ ಮದುವೆಮಾಡಿ ಕೊಡಲಾಗಿತ್ತು. ಈಗ ಒಂದು ವರ್ಷದಿಂದ ಭೀಮ ಭಟ್ಟರು ಅದೇನೋ ಕೆಲಸದ ನಿಮಿತ್ತ ಕಲ್ಲಿಕೋಟೆಗೆ ಕುಟುಂಬ ಸಹಿತವಾಗಿ ಹೋಗಿ ಬಿಡಾರ ಹೂಡಿದ್ದರು.

ಕೃಷ್ಣ ಭಟ್ಟರಿಗೆ ಹಲವಾರು ಕರೆಯೋಲೆಗಳು ಭಾವನಿಂದ ಬಂದಿದ್ದರೂ, ಈ ತನಕ ಅವರಿಗೆ ಅಲ್ಲಿಗೆ ಹೋಗಲಾಗಲಿಲ್ಲ. 'ಸಮಯ ಸಿಕ್ಕಾಗ ಬರುತ್ತೇನೆ; ನಿಮ್ಮ ಮನೆಯ ವಿಳಾಸ ಸರಿಯಾಗಿ ಕಳುಹಿಸಿಕೊಡಿ'—ಎಂದು ಓಲೆ ಬರೆದಿದ್ದರು ಅಂತೆಯೇ ಭೀಮ ಭಟ್ಟರು ವಿಳಾಸ ಕಳುಹಿಸಿದ್ದರು.

ಭೀಮ ಭಟ್ಟರಿಗೆ ತಾವು ಬರುವದಿವಸ ತಿಳಿಸಿದ್ದರೆ ಅವರು ರೈಲ್ವೇ ಸ್ಟೇಷನಿಗೇ ಬಂದು ಎದುರ್ಗೊಳ್ಳುತ್ತಿದ್ದರು. ಆದರೆ ಕೃಷ್ಣ ಭಟ್ಟರಿಗೆ–'ಭಾವನಿಗೆ ತಿಳಿಯದಂತೆ ಅನಿರೀಕ್ಷಿತ ಭೇಟಿ ಕೊಡಬೇಕು'—ಎಂಬ ಭಾವನೆ ಮೂಡಿತ್ತು. ಮನೆಯ ವಿಳಾಸವಿರುವ ನಿಮಿತ್ತ ಹೋಗಲು ಕಷ್ಟವಾಗಲಾರದೆಂಬ ಧೈರ್ಯದೊಂದಿಗೆ ಇಂದವರು ಹೊರಟಿದ್ದರು. ಆದರೆ ಆ ವಿಳಾಸದ ಚೀಟು ಎಲ್ಲಿಯೋ ಕಳೆದುಹೋಗಿತ್ತು.

ಏನು ಮಾಡೋಣ? ಮನೆ ನಂಬ್ರ—ದೂರ, ಸ್ಮೃತಿಪಟಲದಲ್ಲಿ ಉಳಿದಿತ್ತಾದರೂ ಸ್ಟೇಷನಿನಿಂದ ರೈಲು ಮಾರ್ಗದ ಮೇಲೆ ಯಾವ ದಿಕ್ಕಿಗೆ ಹೋಗಬೇಕೆಂಬುದು ಅವರಲ್ಲಿ ತೂಗುಯ್ಯಾಲೆಯಾಡುತ್ತಿತ್ತು.

ಮೇಲಾಗಿ ಅಪರಿಚಿತ ಊರು.

ಭಾವನಿಗೆ ತಿಳಿಸಿ ಬಿಡಬಹುದಿತ್ತು—ಎಂಬ ಭಾವನೆ ಈಗ ಬಂತು.

ಹೊತ್ತೂ ಇಳಿಯುತ್ತಿತ್ತು.

ಒಂದು ನಿಮಿಷ ಆಲೋಚನಾಮಗ್ನರಾದರು; ಸಾಧ್ಯವಾದಷ್ಟು ಜ್ಞಾಪಿಸತೊಡಗಿದರು.

ಊಹುಂ; ನೆನಪೇ ಆಗಲೊಲ್ಲದು. ನೋಡೋಣ—ಇಲ್ಲಿ ಯಾರಿಗಾದರೂ ಪರಿಚಯವಿದೆಯೋ ಎಂದು—ಒಮ್ಮೆ ಅತ್ತಿತ್ತ ನೋಡಿದರು.

ಅದೇ ಸಮಯದಲ್ಲಿ ಸೂಟುಧರಿಸಿದ ಮಹಾಶಯನೊಬ್ಬ ಇತ್ತಲೇ ಬರುತಿದ್ದ. ಇನ್ನು ಇವನಲ್ಲೇ ಕೇಳೋಣ; ಕಾಣಲೂ ಯೋಗ್ಯನಾಗಿದ್ದಾನೆ—ಎಂದು ಅವರು ಎಣಿಸುವಷ್ಟರಲ್ಲೇ ಅವನೇ ಪ್ರಶ್ನಿಸಿದ—

"ಎಲ್ಲಿ ಹೋಗಬೇಕು ಸ್ವಾಮಿ ತಮಗೆ? ಇಲ್ಲೇ ನಿಂತಿರುವಿರೇಕೆ? ಸಂಜೆಯಾಗುತ್ತಾ ಬಂತಲ್ಲ!"—ಎಂದು ಮುಗುಳ್ನಗುತ್ತಾ.

"ನಾನು ನೋಡಿ, ಕಾಸರಗೋಡಿನಿಂದ ಈಗಿನ ರೈಲಿನಲ್ಲಿ ಬಂದೆ. ಇಲ್ಲಿ ನನ್ನ ಭಾವನ ಮನೆ. ಅವರ ಮನೆ ನಂಬ್ರ ಬೀದಿಯ ಹೆಸರು ನೆನಪಿದೆಯಾದರೂ ಆ ಬೀದಿ ಎಲ್ಲಿಯೆಂದು ನೆನಪಾಗಲೊಲ್ಲದು. ನಿಮಗೆ ತಿಳಿದಿದೆಯೋ —ರಾಮನಾಥನ್ ಬೀದಿಯ ನೂರ ನಲುವತ್ತ ಮೂರನೇ ಮನೆಯೆಲ್ಲಿಯೆಂದು?"–ಭಟ್ಟರು ವಿವರಿಸಿ ಹೇಳಿದರು.

"ಏನಂದಿರಿ; ರಾಮನಾಥನ್ ಬೀದಿ; ನೂರ ನಲುವತ್ತ ಮೂರನೇ ನಂಬ್ರದ ಮನೆ; ಬಿಡಿ, ನಾನೂ ಅದೇ ಬೀದಿಯವ. ಮೇಲಾಗಿ ನೂರ ಇಪ್ಪತ್ತೆಂಟನೇ ನಂಬ್ರದ ಮನೆಯೇ ನಮ್ಮದು. ಅಲ್ಲಿಂದ ನಿಮ್ಮ ಭಾವನಲ್ಲಿಗೆ ಹೆಚ್ಚಿರಲಾರದು. ನಾನು ಕರಕೊಂಡು ಹೋಗುತ್ತೇನೆ. ನೀವು ಅನ್ಯಥಾ ಭಾವಿಸದೆ ನನ್ನೊಂದಿಗೆ ಬನ್ನಿ."-ಆತ ಅವರಿಗೆ ಆದೇಶವಿತ್ತ.

ಭಟ್ಟರು ಆಗಬಹುದೆಂದು ಹೇಳಿದರು. ತಮ್ಮ ಸಮಸ್ಯೆ ಪರಿಹಾರವಾದ ಸಂತೋಷದಿಂದ.

ಸೂಟುಧಾರಿ ಮುಂದಿನಿಂದಲೂ, ಭಟ್ಟರು ಹಿಂದಿನಿಂದಲೂ ನಡೆಯತೊಡಗಿದರು. ಅದೂ ಇದೂ ಎಂದು ಹಲವು ಮಾತುಕತೆಗಳಾದುವು ಮಯಮಯ ಕತ್ತಲಾಗತೊಡಗಿತ್ತು. ದಾರಿಯೂ ಒಂದೂವರೆ ಮೈಲು ಸಾಗಿತ್ತು.

ರೈಲ್ವೇ ಸ್ಟೇಷನಿನಿಂದ ಹೆಚ್ಚೆಂದರೆ ಒಂದೂವರೆ ಮೈಲಿನ ಹಾದಿ, ಎಂದು ಭೀಮ ಭಟ್ಟರು ಹೇಳಿದ ನೆನಪು ಕೃಷ್ಣಭಟ್ಟರಿಗೆ. ತಾನು ಹೊಸಬನಾದ್ದರಿಂದ ಸ್ವಲ್ಪದೂರ ಹೆಚ್ಚೇ ಕಾಣಬಹುದೆಂದು ನೆನಸಿಕೊಂಡರು.

ದಾರಿ ಮತ್ತೂ ಅರ್ಧಮೈಲು ಸಾಗಿತು.

"ಏನು? ತಲಪಿಲ್ಲವೇ"! ಭಟ್ಟರು ಸೂಟುಧಾರಿಯಲ್ಲಿ ಪ್ರಶ್ನಿಸಿದರು.

"ಹೌದು; ಅದೋ ಕಾಣುವುದೇ ನಮ್ಮ ಮನೆ. ಅಲ್ಲಿಂದ ಹೆಚ್ಚೆಂದರೆ ಅರ್ಧಮೈಲು ಮಾತ್ರ ನಿಮ್ಮ ಭಾವನಲ್ಲಿಗೆ" ಅವ ನಡೆಯುತ್ತಲೇ ಉತ್ತರಿಸಿದ

ಒಳ ಬೀದಿಯಾದ್ದರಿಂದ ದೂರ-ದೂರದಲ್ಲಿ ಮಾತ್ರ ಲೈಟು ಕಂಬಗಳಿದ್ದುವು.

ಎದುರುಗಡೆ ಕಾಣುವ ಮನೆಯ ಬಳಿಗೆ ಬಂದಿದ್ದರೀಗ. "ನಮ್ಮ ಮನೆಯಲ್ಲಿ ಸ್ವಲ್ಪ ವಿರಮಿಸಿ ಮುಂದೆ ಹೋಗಬಹುದು; ಆಗದೇ"—ಅಂದವನೇ ಭಟ್ಟರ ಉತ್ತರಕ್ಕೂ ಕಾಯದೆ ಮನೆಯ ಒಳಹೊಕ್ಕ. ಕೃಷ್ಣ ಭಟ್ಟರೂ ನಿರುಪಾಯರಾಗಿ ಹಿಂದೆಯೇ ಒಳ ಸೇರಿದರು.

ಲೈಟಿನ ಸ್ವಿಚ್ ಹಾಕಿದ; ಮನೆ ಆಡಂಬರದಲ್ಲ ಹಾಗೂ ಮನೆಯಲ್ಲಿ ಬೇರಾರೂ ಇರುವಂತೆ ಕಂಡುಬರಲಿಲ್ಲ.

ಕುರ್ಚಿಯೊಂದರಲ್ಲಿ ಕುಳಿತು ಕೊಂಡರು.

ಆಗ ಗಂಟೆ ಏಳೂವರೆ-ಎಂಟರ ಸಮೀಪವಾಗಿತ್ತು.

"ಇದೇ ನನ್ನ ಮನೆ. ಇಲ್ಲಿಂದ ಹೆಚ್ಚಿರಲಿಕ್ಕಿಲ್ಲ ನಿಮ್ಮ ಭಾವನಲ್ಲಿಗೆ. ಆದರೆ ಸ್ವಾಮಿ, ನನಗೆ ತೋರುತ್ತದೆ ನಿಮಗಿನ್ನು ನಾಳೆ ಬೆಳಿಗ್ಗೆ ಇಲ್ಲಿಂದ ಹೋಗಬಹುದು ಈ ರಾತ್ರಿ ಮನೆ ಹುಡುಕಿಕೊಂಡೆಲ್ಲಾ ಹೋಗುವುದು ಎಷ್ಟೆಂದರೂ ಕಷ್ಟವೇ. ಇಲ್ಲೇನೂ ನಿಮಗೆ ತೊಂದರೆಯಿಲ್ಲ. ನನಗೆ ಅಲ್ಲಿಯವರೆಗೆ ಬಂದು ಬಿಡಬಹುದೆಂದರೆ ಬೇರೆ ಒಂದು ಜರೂರು ಕೆಲಸವಿದೆ. ಹೇಗೆ ಮಾಡುವಿರಿ?"—ಅಂದ ಸೂಟುದಾರಿ.

ಭಟ್ಟರಿಗೂ ಅದು ಸರಿಕಂಡಿತು. ಗೊತ್ತುಗುರಿಯಿಲ್ಲದ ಊರು; ಅದೂ ರಾತ್ರೆ

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4⅜% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3 ತಿಂಗಳಿಗೆ 3%
4 ರಿಂದ 6 ,, 3½%
7 ,, 12 ,, 4%
13 ,, 24 ,, 4½%
ಸೇವಿಂಗ್ಸ್ ಬೇಂಕ್ ಲೆಕ್ಕ 2½%
ಕರೆಂಟ್ ಎಕೌಂಟು ½%

The Moolky Bank, Ltd.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: **ಷಾ ಕಂಪೆನಿ, ಮಂಗಳೂರು—1.**

ಮಹತ್ವದ ಪ್ರಶ್ನೆಗೊಂದುತ್ತರ–

ಗುರುತ್ವಾಕರ್ಷಣಶಕ್ತಿಯ ಪ್ರಭಾವ

ಎಕ್ಸ್‌ಪ್ಲೋರರ್ ಭೂ ಉಪಗ್ರಹದ ಬಗ್ಗೆ ವಿಜ್ಞಾನಿಗಳಿಗೊಂದು ಪ್ರಶ್ನೆ ಈಗ ಉತ್ತರಿಸಬೇಕಾಗಿ ಬಂದಿದೆ— ಒಂದಲ್ಲ ಹಲವು ಬಾರಿ. "ಉಪಗ್ರಹವು ತನ್ನ ಕಕ್ಷೆಯನ್ನು ಮೀರಿ ಏಕೆ ಹಾರುವುದಿಲ್ಲ?" ಎಂಬುದೇ ಮಹತ್ವದ ವಿಚಾರವಾಗಿಬಿಟ್ಟಿದೆ. ಅಮೇರಿಕೆಯ ಸಂಶೋಧಕ ಪ್ರಯೋಗ ಶಾಲೆಯ ಜ್ಯೋತಿಷ ವಿಭಾಗದ ಡಾ ಹೋನರ್ ಇ ನೆವೇಲರು ಈ ಪ್ರಶ್ನೆಯನ್ನು ಉತ್ತರಿಸಿದ್ದಾರೆ. ಪೌರ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳ ಸಭೆಗಳಲ್ಲಿ ಅಮೇರಿಕೆಯ ಉಪಗ್ರಹದ ಕಾರ್ಯಕ್ರಮಕ್ಕೆ ಸಂಬಂಧಿಸಿದ ವಿಜ್ಞಾನಿಗಳಿಗೆ ಈ ಪ್ರಶ್ನೆಯನ್ನು ಅನೇಕ ಬಾರಿ ಕೇಳಿದ್ದಾರೆ. ಈ ಸಂಗತಿಯನ್ನು ಅಂತಾರಾಷ್ಟ್ರೀಯ ಭೂಭೌತ ವರ್ಷದ ಸಂಶೋಧನ ಕಾರ್ಯಕ್ರಮಕ್ಕೆ ಉಪಗ್ರಹಗಳನ್ನು ಅಭಿವೃದ್ಧಿಗೊಳಿಸುತ್ತಿರುವ ಪ್ರಮುಖರಲ್ಲಿ ಒಬ್ಬರಾದ ಶ್ರೀ ನೇವೇಲರು ಬಹಿರಂಗಪಡಿಸಿದರು.

ಶ್ರೀ ನೇವೇಲಿಯವರ ಅಭಿಪ್ರಾಯದಂತೆ, ಚಂದ್ರನನ್ನು ತನ್ನ ಕಕ್ಷೆ ಮೀರಿ ಹಾರದಂತೆ ತಡೆಯುವ ಶಕ್ತಿಯೇ ಉಪಗ್ರಹವನ್ನೂ ತನ್ನ ಕಕ್ಷೆಯೊಳಗಡೆಯಲ್ಲಿ ಇಡುತ್ತದೆ. ಇದುವೇ ಗುರುತ್ವಾಕರ್ಷಣ ಶಕ್ತಿಯಾಗಿದೆ.

ಗುರುತ್ವಾಕರ್ಷಣದ ಶಕ್ತಿಯು ಒಂದು ನಿರ್ದಿಷ್ಟ ಸ್ಥಳದಲ್ಲಿ ಹಠಾತ್ತಾಗಿ ನಿಂತು ಹೋಗುತ್ತದೆ ಎಂದು ನಾವು ತಪ್ಪು ತಿಳಿದುಕೊಂಡಿದ್ದೇವೆ. ಇದನ್ನು ತಿದ್ದಿಕೊಳ್ಳಬೇಕು. ಈ ಅಜ್ಞಾನವನ್ನು ದೂರಮಾಡಲು ಜೂಲ್ಸ್‌ವರ್ನ ಮತ್ತು ಚಂದ್ರಯಾನದ ಕುರಿತಾದ ಕತೆಗಳನ್ನು ದೂರಬೇಕಾಗುತ್ತದೆ. ನಿಜವಾಗಿ ನೋಡುವುದಾದರೆ, ಈ ಗುರುತ್ವಾಕರ್ಷಣ ಶಕ್ತಿಯು ಒಂದೇ ಸಲಕ್ಕೆ ನಿಲ್ಲುವುದಿಲ್ಲ; ಆದರೆ, ಅದು ದೂರಸರಿದಂತೆ ದುರ್ಬಲವಾಗುತ್ತ ಹೋಗುತ್ತದೆ.

ಉಪಗ್ರಹಕ್ಕೆ ಜೋಡಿಸಲಾಗುವ ಕೊನೆಯ ರಾಕೆಟ್ಟು ಈ ಐದು ಉಪಗ್ರಹವನ್ನು ಸಾಕಷ್ಟು ಅಧಿಕವಾಗಿರುವ ಪೂರ್ವನಿಯೋಜಿತ ವೇಗದಲ್ಲಿ, ಆದರ ಕಕ್ಷೆಗೆ ದೂಡಿದ ಅನಂತರ, ಇದು ಸಾಮಾನ್ಯವಾಗಿ ಅದೇ ವರ್ತುಲದಲ್ಲಿ ಮೊದಲಿನ ವೇಗದಲ್ಲಿಯೇ ಮುಂದುವರಿಯುವುದೆಂದು ಊಹಿಸಬಹುದು. ಇದ ಭೂಮಿಯ ಆಕರ್ಷಣ ಶಕ್ತಿಯಿಂದ ಪ್ರಭಾವಿತವಾಗುತ್ತದೆ. ಆದರೂ ಈ ಉಪಗ್ರಹಗಳು ಚಂದ್ರ ಗ್ರಹದಂತೆಯೇ ಸಾಕಷ್ಟು ಎತ್ತರದಲ್ಲಿದ್ದು ವೇಗದಲ್ಲಿ ಸಂಚರಿಸುವುದರಿಂದ ತನ್ನ ಕಕ್ಷೆಯಲ್ಲಿಯೇ ಸ್ಥಿರವಾಗಿ ನಿಲ್ಲುತ್ತದೆ. ವಾಸ್ತವಿಕವಾಗಿ ನೋಡುವಾಗ ಚಂದ್ರನು ಭೂಮಿಯ ಉಪಗ್ರಹ. ಹಾಗೆಯೇ ವಿಜ್ಞಾನಿಗಳು ತೂರಿತ್ತಿರುವ ಉಪಗ್ರಹಗಳು ಮಾನವನಿರ್ಮಿತ ಕೃತಕ ಚಂದ್ರರು!

ಕೆಲವಾರು ಭೌತಿಕ ನಿಯಮಗಳಂತೆ, ಚಂದ್ರನು ತನ್ನ ನಿರ್ದಿಷ್ಟ ಪಥದಲ್ಲಿಯೇ ಭ್ರಮಿಸುತ್ತಾನೆ. ಹಾಗೆಯೇ ಭೂಮಿಯೂ ಸೂರ್ಯನ ಸುತ್ತು ತನ್ನ ಕಕ್ಷೆಯಲ್ಲಿಯೇ ತಿರುಗುತ್ತದೆ. ಇವೇ ನಿಯಮಗಳಿಗನುಸಾರವಾಗಿ ಮಾನವನಿರ್ಮಿತ ಉಪಗ್ರಹಗಳೂ ತಮ್ಮ ಪಥದಲ್ಲಿಯೇ ಸಂಚರಿಸುತ್ತವೆ.

ಸ್ವಾಭಾವಿಕ ಚಂದ್ರ ಮತ್ತು ಉಪಚಂದ್ರರನಡುವೆ ಒಂದೇ ಒಂದು ಮುಖ್ಯ ವ್ಯತ್ಯಾಸವಿದೆ. ಉಪಗ್ರಹಗಳು ತಮ್ಮ ಕಕ್ಷೆಯ ಕೆಳಭಾಗಗಳಲ್ಲಿ ಚಲಿಸುವಾಗ, ವಾಯುಕಣಗಳ ಪ್ರತಿಘಟನೆಯನ್ನೆದಿರಿಸಬೇಕಾಗುವುದು. ಈ ಕಣಗಳು ಕ್ರಮೇಣ ಈ ಉಪಗ್ರಹಗಳ ವೇಗವನ್ನು ಕುಗ್ಗಿಸುತ್ತವೆ. ಹೀಗೆ ವೇಗದಲ್ಲಿ ಇಳುಮುಖವಾದಾಗ, ಗುರುತ್ವಾಕರ್ಷಣ ಶಕ್ತಿಯು ಕೃತಕ ಚಂದ್ರರನ್ನು ತನ್ನೆಡೆಗೆ ವೇಗವಾಗಿ ಸೆಳೆಯಲು ಪ್ರಾರಂಭಿಸುತ್ತದೆ. ಕೊನೆಕೊನೆಗೆ ಇವುಗಳ ವೇಗವು ಸಾಂದ್ರವಾದ ಕೆಳವಾತಾವರಣದಲ್ಲಿ ಉತ್ಪಾದಿಸುವ ತಿಕ್ಕಾಟದ ಫಲಸ್ವರೂಪವಾಗಿ ಶಾಖವು ಉತ್ಪಾದನೆಗೊಂಡು ತನ್ಮೂಲಕ ಉಪಗ್ರಹವು ಸುಟ್ಟು ನಾಶವಾಗುತ್ತದೆ.



ಅಮೇರಿಕೆಯು ಹಾರಿಸಿದ ಮೊದಲನೆ ಉಪಗ್ರಹವು ಪ್ರಪಂಚ ಪ್ರದಕ್ಷಿಣೆ ಬರುವ ರೇಖೆಯನ್ನು ಕಪ್ಪು ಬಳಿದು ಗುರುತಿಸಲಾಗಿದೆ. ಈ ವರ್ತುಲಕ್ಕೂ ಭೂಮಿಗೂ ಹೆಚ್ಚೆಂದರೆ ೧,೬೦೦ ಮೈಲು ಮತ್ತು ಕಡಿಮೆಯೆಂದರೆ ೨೨೦ ಮೈಲುಗಳಷ್ಟು ಅಂತರವಿದೆ. ಈ ಉಪಗ್ರಹಕ್ಕೆ ಒಂದು ಸುತ್ತು ಬರಲು, ೧೧೫.೨೭ ಮಿನಿಟುಗಳು ಬೇಕಾಗುವುವು. ತೆಳ್ಳನೆಯ ಕರಿಬಳೆದ ಪ್ರದೇಶಗಳಲ್ಲಿ ಈ ಉಪಗ್ರಹವು ಹಾದುಹೋಗುತ್ತದಿಲ್ಲ. ತನ್ನ ಕಕ್ಷೆಯಲ್ಲಿಯೇ (ಕಂಡೀಪ) ಈ ಉಪಗ್ರಹವು ಸುತ್ತುತ್ತಿರುತ್ತದೆ.

ಭೂಮಿಯ ಸುತ್ತಲಿನ ಕಕ್ಷೆಯಲ್ಲಿರಬೇಕಾದರೆ, ಉಪಗ್ರಹಕ್ಕೆ ಸೆಕುಂದಿಗೆ ಸಾಮಾನ್ಯವಾಗಿ ನಾಲ್ಕೂವರೆ ಮೈಲುಗಳ ಇಲ್ಲವೇ ೧೮,೦೦೦ ಮೈಲುಗಳ ಕನಿಷ್ಟ ವೇಗವಿರಬೇಕಾಗುತ್ತದೆ. ಇದು ಈ ವೇಗದಲ್ಲಿ ಭೂಮಿಯ ಸುತ್ತ ಚಲಿಸದಾಗ, ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ಇದಿರಿಸಲು ಬೇಕಾಗುವಷ್ಟು ಕೇಂದ್ರತ್ಯಾಗಿ ಶಕ್ತಿಯು ಇದರಲ್ಲಿ ಉತ್ಪನ್ನವಾಗುತ್ತದೆ. ಉಪಗ್ರಹ ಎಕ್ಸ್‌ಪ್ಲೋರರವು ಇದಕ್ಕಿಂತಲೂ ತುಸು ವೇಗವಾಗಿ ಎಂದರೆ, ತಾಸೊಂದಕ್ಕೆ ೧೮,೮೦೦ ಮೈಲುಗಳಷ್ಟು ಸಂಚರಿಸುತ್ತಲಿದೆ.

ಹೀಗೆ ನಿಶ್ಚಯವಾಗಿ ಈ ಭೂಮಿಯ ಗುರುತ್ವಾಕರ್ಷಣಶಕ್ತಿಯೇ ಉಪಗ್ರಹದ ಒಂದಿತ ಪಥ ಭ್ರಮಣಕ್ಕೆ ಕಾರಣವಾಗಿದೆ. ಈ ಭೂಮಿಯತ್ತ ಸೆಳೆಯುವ ಗುರುತ್ವಾಕರ್ಷಣ ಶಕ್ತಿಯ ಕ್ಷೇತ್ರದಿಂದ ಈ ಉಪಗ್ರಹವು ದೂರವಿರುತಿದ್ದರೆ, ಆಗ ಇದು ನೇರವಾಗಿ ಅಂತರಿಕ್ಷದಲ್ಲಿ ಮೇಲೇರುತಿತ್ತು.

ಆದುದರಿಂದಾಗಿಯೇ ಅದು ಮುಂದೆ ಸರಿಯದೆ ಅಲ್ಲಿಯೇ ಪೃಥ್ವಿಯ ಸುತ್ತು ತಿರುಗುತ್ತಿರುತ್ತದೆ. ಒಂದು ವೇಳೆ ನಾವು ಭೂಮಿಯ ಗುರುತ್ವಾಕರ್ಷಣ ಶಕ್ತಿಯಿಂದ ತಪ್ಪಿಸಬೇಕಾಗಿದೆ, ಎಂದರೆ, ಈ ಶಕ್ತಿಯು ತೀರ ದುರ್ಬಲವಾಗಿರುವ ಸ್ಥಳವನ್ನು ದಾಟಿ, ಅಂತರಿಕ್ಷದಲ್ಲಿ ಮುಂದೆ ಸರಿಯಬೇಕಾದರೆ, ಈ ಉಪಗ್ರಹವನ್ನು ಹಾರಿಸುವ ವೇಗದ ಮಿತಿಯೂ ಅಧಿಕಗೊಳ್ಳುತ್ತ ಹೋಗಬೇಕು. ಆಗ ಮಾತ್ರ ಅಂತರಿಕ್ಷದಲ್ಲಿ ಆರಾಮವಾಗಿ ಸಂಚರಿಸುವುದು ಸಾಧ್ಯವಾಗಬಹುದು. ಇದಕ್ಕಾಗಿ ವಿಜ್ಞಾನಿಗಳು ಪ್ರಯತ್ನಪಡುತಿದ್ದಾರೆ. ಕೆಲವು ವರ್ಷಗಳಲ್ಲಿಯೇ ಫಲಪಡೆವೆವೆಂಬ ನಿರೀಕ್ಷೆಯಲ್ಲಿದ್ದಾರೆ.

ಕುಂದಾಪುರ ಡಿ ಮು ಕೋರ್ಟಿನಲ್ಲಿ

O S 25/58.

ಶಾಮಯ್ಯ ಮೇಸ್ತ — ವಾದಿ

ಮಂಜುನಾಥ ಮೇಸ್ತ ಕೂಡಾ

—ಪ್ರತಿವಾದಿರು

3 5ನೆ ಪ್ರತಿವಾದಿರಿಗೆ ಈ ಮೂಲಕ ತಿಳಿಸುವುದೇನೆಂದರೆ,

3ನೆ ಪ್ರತಿವಾದಿ ಶೇಷಪ್ಪ ಮೇಸ್ತ ನಾಗಪ್ಪ ಮೇಸ್ತನ ಮಗ ಗುಜ್ಜಾಡಿಗ್ರಾಮ

5ನೆಪ್ರತಿವಾದಿ ಸೀನ ಕ್ಷವರಿಕ ನಾಗಿ ಹೆಂಗ್ಸಿನ ಮಗ ಕೋಣಿ ಗ್ರಾಮದಲ್ಲಿರುವವ.

ವಾದಿಯು ಗೇಣಿ ಬಾಕಿ ಬಗ್ಗೆ ನಿಮ್ಮ ವಗೈರೆ ಮೇಲೆ ಮೋಲ್ಕಂಡ ದಾವೆಯನ್ನು ದಾಕಲುಮಾಡಿದ್ದಾನೆ. ಸದ್ರಿ ದಾವೆಯು ತಾರೀಕು 1–1–58ಕ್ಕೆ ತನ್ಕಿಗೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮ ಉದಾಹರಣೆ ದಾಕಲುಮಾಡುವುದು ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೋಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ಯಿದ್ದ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೇಳಿ ಫೈಸಲುಮಾಡೋಣಾದೀತೆಂತ ಈ ಮೂಲಕ ನೀವು ತಿಳಿದಿರತಕ್ಕದ್ದು.

M. Ananthaya

Advocate for Pltf

ತಾರೀಕು 7–3–58 ಮೊಕ್ಕಾಂ ಕುಂದಾಪುರ

ಕೃತಜ್ಞತೆಗಳು

- 42,000, ಪ್ರತಿಯೊಂದಕ್ಕೆ ರೂಪಾಯಿ 50 ಮುಖಮೌಲ್ಯದ, ಜುಮ್ಲಾ ರೂಪಾಯಿ 21 ಲಕ್ಷದ ಬೇಂಕಿನ ಇಕ್ವಿಟಿ ಶೇರುಗಳನ್ನು ಇತ್ತೀಚೆಗೆ ಪ್ರತಿಯೊಂದಕ್ಕೆ ರೂಪಾಯಿ 15/ರ ಪ್ರೀಮಿಯಮಿನಲ್ಲಿ ಚಲಾವಣೆಗೆ ಹೊರಡಿಸಲಾಯಿತು. ಈ ಚಲಾವಣೆಯಲ್ಲಿ 34,800 ಶೇರುಗಳನ್ನು ಈಗಿರುವ ಬೇಂಕಿನ ಪಾಲುದಾರರಿಗೆ ಕೊಡಲಾಯಿತು ಮತ್ತು 7,200 ಶೇರುಗಳನ್ನು ಬೇಂಕಿನ ಕಾಯಂ ಮಾಡಲ್ಪಟ್ಟ ಸಿಬಂಧಿಗೆ ಕೊಡಲಾಯಿತು. ಈ ಚಲಾವಣೆಗೆ ಬೇಕಾದುದಕ್ಕಿಂತ ಹೆಚ್ಚು ಚಂದಾ ಬಂದಿದೆ.
- ಇದರಿಂದಾಗಿ, ವರ್ಷಾಂತ್ಯದಲ್ಲಿ ಬೇಂಕಿನ ತೆತ್ತ ಭಂಡವಾಳವು ರೂಪಾಯಿ 50 ಲಕ್ಷಕ್ಕೆ ಮುಟ್ಟುವುದು. ಇವಲ್ಲದೆ, ಕ್ಷೇಮನಿಧಿಗೆ ವಾರ್ಷಿಕೆಯ ಕೂಡಿಸುವಿಕೆಯಿಂದ ಮತ್ತು ಶೇರ್ ಪ್ರೀಮಿಯಮ್‌ನಿಂದ ಬಂದ ಮೊತ್ತವು ಕೂಡಿ, ಮೇಲಿನ ತಾರೀಕಿನಂದು ಕ್ಷೇಮನಿಧಿ ಕೂಡಾ, ರೂಪಾಯಿ 50 ಲಕ್ಷಕ್ಕೆ ಮುಟ್ಟುವುದೆಂದು ನಾವು ಆಶಿಸುತ್ತೇವೆ.
- ಈ ಚಲಾವಣೆ ಹೊರಡಿಸಿದುದರಿಂದ, ಬೇಂಕಿನ ನೌಕರರೂ ಬೇಂಕಿನ ಭಂಡವಾಳದಲ್ಲಿ ಸಹಭಾಗಿಗಳಾಗುವ ಅವಕಾಶ ಒದಗಿದೆ.

ಕೆನರಾ ಬೇಂಕ್ ಲಿಮಿಟೆಡ್

(ಸ್ಥಾಪನೆ: 1906)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ. ನ.

ಕನ್ನಡದಲ್ಲಿ "ಗೀತಾಈ"ಯ ಅವತಾರ—

ಶ್ರೀ ದಾಸಗೀತೆ

ಶ್ರೀ ಹನುಮಂತ ರಾವ್ ಮೊಂಜರೀಕರ, ಬಿ. ಎ.,

ಪೂಜ್ಯ ವಿನೋಬಾಜಿಯವರನ್ನು ಬಲ್ಲವರು ಅವರ 'ಗೀತಾಯಿ'ಯನ್ನೂ ಬಲ್ಲರು. ಗೀತಾಯಿಯು ವಿನೋಬಾಜಿಯವರು ಮರಾಠಿಯಲ್ಲಿ ಮಾಡಿದ ಭಗವದ್ಗೀತೆಯ ಸಮಶ್ಲೋಕಗಳುಳ್ಳ ಸರಳಾನುವಾದವು. ಹಿಂದೆ ಜ್ಞಾನೇಶ್ವರರು ಮರಾಠಿಯಲ್ಲಿ ಜ್ಞಾನೇಶ್ವರಿಯನ್ನು ಬರೆದು ಮಾಡಿದ ಕ್ರಾಂತಿಯನ್ನು ಇಂದು ವಿನೋಬಾಜಿಯವರು ತಮ್ಮ 'ಗೀತಾಯಿ' ಮತ್ತು 'ಗೀತಾ ಪ್ರವಚನ'ಗಳಿಂದ ಮಾಡುತ್ತಿದ್ದಾರೆ. ಇಂದು ಅವರ 'ಗೀತಾಪ್ರವಚನ' ಗ್ರಂಥವು ಭಾರತದ ಕನ್ನಡ, ಕೊಂಕಣಿ ಆದಿ ೧೨ ಭಾಷೆಗಳಲ್ಲಿ ಪರಿವರ್ತನಗೊಂಡು, ಅದರ ಸುಮಾರು ಏಳು ಲಕ್ಷ ಪ್ರತಿಗಳು ಭಾರತೀಯರ ಕೈಯಲ್ಲಿವೆ. "ಹಿಂದುಸ್ಥಾನದಲ್ಲಿ ಈ ಪ್ರವಚನ ಎಲ್ಲೆಲ್ಲಿ ಮುಟ್ಟಿದೆಯೋ ಅಲ್ಲಲ್ಲಿ ಹೃದಯ ಶುದ್ಧಿಯ ಕ್ರಿಯಾ ಪರಿವರ್ತನೆಯು ಪ್ರೇರಣೆ ಕೊಟ್ಟಿದೆ" ಎಂದು ವಿನೋಬಾಜಿ ಹೇಳಿದ್ದಾರೆ. ಆದರೆ 'ಗೀತಾಯಿ'ಯು ಮರಾಠಿಯಲ್ಲಿರುವದರಿಂದ ಅದರ ಸಂಸ್ಕಾರವು ಮಹಾರಾಷ್ಟ್ರಕ್ಕೇ ಪರಿಮಿತವಾಗಿದೆ. ಅದರ ಬೆಲೆ ಕೇವಲ ಎರಡಾಣೆ. ಅದರ ಲಕ್ಷಾವಧಿ ಪ್ರತಿಗಳು ಮಹಾರಾಷ್ಟ್ರದಲ್ಲಿ ಪ್ರಚಾರದಲ್ಲಿದ್ದು, ಆಬಾಲ ವೃದ್ಧರೂ ಅದರ ಶ್ರವಣ-ಪಠಣ—ಮನನವನ್ನು ಮನೆ ಮನೆಯಲ್ಲಿಯೂ ನಡೆಸಿದ್ದಾರೆ. ಇಂತಹ ಸೌಭಾಗ್ಯ ಇತರ ಭಾಷಾ ಬಾಂಧವರಿಗಿಲ್ಲ.

ಆದರೆ ಕನ್ನಡದಲ್ಲಿಯೂ 'ಗೀತಾಯಿ'ಗೆ ಸಮೀಪ ಬರಬಲ್ಲ ಗೀತೆಯ ಒಂದು ಪದ್ಯಾನುವಾದವು ಇದೆಯೆಂದು ನಾನು ಹೇಳಿದರೆ, ಅನೇಕರಿಗೆ ಆಶ್ಚರ್ಯವೆನಿಸಬಹುದು; ಇದೊಂದು ಅತಿಶಯೋಕ್ತಿಯ ವಿಧಾನವೆಂದೂ ಅವರು ತೆಗಳಬಹುದು ಆದರೂ ಹೊಣೆಯರಿತು ಈ ಮಾತನ್ನು ಸಾರುವ ಎದೆಗಾರಿಕೆಯನ್ನು ಮಾಡುತ್ತೇನೆ. ಆ ಗ್ರಂಥವೆಂದರೆ ಮದ್ಗಣಿಯ ಶ್ರೀ ಶಂಭು ಭಟ್ಟ, ಎಂ. ಏಜಿ. ಅವರ ಅಂತಃಪ್ರೇರಣೆಯಿಂದ ಹೊರಟ 'ಶ್ರೀ ದಾಸಗೀತೆ' ಅದರ 'ಸಮರ್ಪಣೆ'ಯಲ್ಲಿ ಲೇಖಕರು ಹೀಗೆ ಬರೆದಿದ್ದಾರೆ.

ವ್ಯಾಸಮುನಿಯು ಪೇಳ್ದ ಗೀತೆಯ
ಹುದು ಸುರರ ನುಡಿಯೊಳು ।
ಹರಿಯೆ ನುಡಿಸೆ ದಾಸಗೀತೆ ಹರಿದು
ದೆನ್ನ ನುಡಿಯೊಳು ॥
ಶಂಭುಭಟ್ಟ ತನಯ ಶಂಭುಭಟ್ಟ
ನೆಂಬನೋರ್ವನು ।
ಕರಿಯನಾಡ ಜನರಿಗೆಂದು ದಾಸಗೀತೆ
ಬರೆದನು ॥

ಉತ್ತರ ಕನ್ನಡದವರೇ ಆಗಿ ಬರೋಡೆಯ ಸರಕಾರದ ಹಣ್ಣು ಹಂಪಲ ತೋಟಗಳ ಮುಖ್ಯಾಧಿಕಾರಿಗಳಾಗಿ ನಿವೃತ್ತರಾದ ಶ್ರೀ ಶಂಭು ಭಟ್ಟ ಅವರು ಕಾರವಾರ ಜಿಲ್ಲೆಯ ಜನರಿಗೆ ಚಿರಪರಿಚಿತರು. ಅವರ 'ದಾಸಗೀತೆ'ಯ ಪರಿಚಯವನ್ನು ಇತರ ಕನ್ನಡಿಗರಿಗೆ ಮಾಡಿಕೊಡುವದೇ ಈ ಲೇಖನದ ಗುರಿ. ಕನ್ನಡ ನಾಡಿನಲ್ಲಿ ಇದರ ಪ್ರಚಾರವು ಎಷ್ಟು ಆಗಬಹುದಾಗಿತ್ತೋ ಅಷ್ಟು ಆಗಿಲ್ಲವೆಂದು ಮರುಗುವವರಲ್ಲಿ ನಾನೊಬ್ಬ, ಕನ್ನಡದಲ್ಲಿ ಗೀತೆಯ ಅನೇಕ ಪದ್ಯಾನುವಾದಗಳು ಪ್ರಕಟವಾಗಿವೆ. ಆದರೆ ಸಾಮಾನ್ಯ ಜನರಿಗೆ ಉಪಯುಕ್ತವಾಗಬಲ್ಲ, ಸತ್ವಯುತವಾಗಿ ಸರಳವಾದ, ಸರಸವಾದ, ಸುಲಭವಾದ ಗೀತೆಯ ಕನ್ನಡಾನುವಾದವೆಂದರೆ 'ದಾಸಗೀತೆ'ಯೆಂದೇ ನನ್ನ ಭಾವನೆ. ಇದರಿಂದಾಗಿಯೇ ಅದಕ್ಕೆ ನಾನು ಕನ್ನಡದಲ್ಲಿ 'ಗೀತಾಈ'ಯ ಅವತಾರವೆಂದು ಕರೆದಿದ್ದೇನೆ.

ಶ್ರೀ ಶಂಭು ಭಟ್ಟರು 'ದಾಸಗೀತೆ'ಯನ್ನು ಧಾರವಾಡದ ಸಾಧನ ಮುದ್ರಣಾಲಯದಲ್ಲಿ ಅಚ್ಚು ಹಾಕಿಸಿ ೧೯೪೯ರಲ್ಲಿ ಪ್ರಕಟಿಸಿದರು. ಆದರೆ ಅದು ನನ್ನ ಗಮನಕ್ಕೆ ಬಂದುದು ಇತ್ತೀಚೆಗೆ. ಅದನ್ನು ನನ್ನ ನಿದರ್ಶನಕ್ಕೆ ತಂದವರು ಕೃಷಿ ಇಲಾಖೆಯಲ್ಲಿಯ ನನ್ನೋರ್ವ ಸ್ನೇಹಿತರು. ಅಲ್ಲಿಂದ ಅದರ ಒಂದು ಪ್ರತಿಯನ್ನು ಕೊಂಡು ಕೊಂಡು ಅದನ್ನು ಓದಿ ಸಂತೋಷಪಟ್ಟಿದ್ದೇನೆ. ಇತರ ಭಾಷೆಗಳಲ್ಲಿ ಇಂತಹದೊಂದು ಸತ್ವಯುತ ಗ್ರಂಥವು ಪ್ರಕಟವಾಗಿದ್ದರೆ, ಅದು ಎಲ್ಲವರ ಮನೆಮಾತಾಗಿ ಹೋಗುತ್ತಿತ್ತು. ಆದರೆ ದಾಸಗೀತೆಯ ಪ್ರಚಾರ-ಪ್ರಭಾವ ಕನ್ನಡನಾಡಿನಲ್ಲಿ ಸಾಕಷ್ಟು ಆಗದಿರಲಿಕ್ಕೆ ಕನ್ನಡ ಸಾಹಿತಿಗಳಲ್ಲಿಯ ಪಂಗಡ, ಪ್ರಾದೇಶಿಕ ಮನೋವೃತ್ತಿಯೇ ಕಾರಣವೆಂದು ನನ್ನ ಭಾವನೆ. ಶ್ರೀ ಶಂಭು ಭಟ್ಟರು ಪೂಜ್ಯ ವಿನೋಬಾಜಿಯವರ ಉತ್ತರ ಕನ್ನಡ ಜಿಲ್ಲೆಯ ಸಂಚಾರದಲ್ಲಿ ತಮ್ಮ ತುಳಸಿ ರಾಮಾಯಣದ ಕನ್ನಡಾನುವಾದವನ್ನು ಅವರಿಗೆ ಓದಿ ತೋರಿಸಿದರೆಂದು ವರದಿಯಾಗಿದೆ. ಅವರಾಗಲಿ, ವಿನೋಬಾಜಿಯವರ ಪರಿವಾರದಲ್ಲಿಯ ಇತರ ಕನ್ನಡಿಗರಾಗಲಿ "ದಾಸಗೀತೆ"ಯನ್ನು ವಿನೋಬಾಜಿಯವರ ಗಮನಕ್ಕೆ ತಂದುಕೊಡಬೇಕಾಗಿ ನನ್ನ ಬಿನ್ನಹ.

ಶ್ರೀ ಶಂಭು ಭಟ್ಟರ 'ದಾಸಗೀತೆ'ಯ ರಚನೆಯ ಇತಿಹಾಸವು ಕುತೂಹಲಜನಕವೂ ಪಾವನವೂ ಆಗಿರುವದು. ಅದಕ್ಕೆ ಕನ್ನಡ ಕುಲಪುರೋಹಿತರಾದ ಶ್ರೀ ಆಲೂರ ವೆಂಕಟರಾಯರು ಒಂದು ಪ್ರಸ್ತಾವನೆಯನ್ನು ಬರೆದಿದ್ದಾರೆ. ಅದರಲ್ಲಿ ಅವರು ಹೀಗೆ ಹೇಳಿರುವರು.

"ಈ 'ದಾಸಗೀತೆ'ಯನ್ನು ಬರೆದ ಶ್ರೀ ಶಂಭು ಭಟ್ಟ ಇವರು ಪ್ರಸಿದ್ಧ ಸಾಹಿತಿಗಳಲ್ಲ. ಕವಿಗಳಲ್ಲ, ಗೀತಾ ಪಂಡಿತರಲ್ಲ, ಗೀತಾಭ್ಯಾಸಿಗಳೂ ಕೂಡ ಇವರಲ್ಲ. ಕೇವಲ ನಿತ್ಯ ಪಾರಾಯಣಿಗಳು. ಭಗವದ್ಗೀತೆಯ ಈ ಕನ್ನಡ ಕೃತಿಯು ಅವರ ಆ ಪಾರಾಯಣದ ಫಲವು. ಅವರು ಈ ದಾಸಗೀತೆಯನ್ನು ರಚಿಸಿದರೆಂದು ಹೇಳಿದೆ. ಅದು ಕೂಡ ಅಷ್ಟು ಸಮಂಜಸವಲ್ಲ. ಏಕೆಂದರೆ, ಇದು ಇವರಿಂದ ರಚಿತವಾದ ಕೃತ್ರಿಮ ಕಾವ್ಯವು ಅಲ್ಲವೇ ಅಲ್ಲ. ಅವರಲ್ಲಿ ಭಕ್ತಿಯ ಉದ್ರೇಕವಾದಾಗ, ಅವರ ಹೃದಯಾಕಾಶವಾಣಿಯಿಂದ ತಾನಾಗಿಯೇ ಹೊರಬಿದ್ದ ಕವನ. ಬುದ್ಧಿಪೂರ್ವಕವಾಗಿ ಬರೆದುದು ಅಲ್ಲ. ಅಂತಃಪ್ರೇರಣೆಯಿಂದ ಹೊರಹೊರಟ ವಾಗ್ಝರಿ. ಗೀತೆಯ ಮೇಲೆ ಸಾವಿರಾರು ಗ್ರಂಥಗಳಿವೆ. ಆದರೆ ಹೀಗೆ ಅಂತಃಪ್ರೇರಣೆಯಿಂದ ರಚಿತವಾದ ಗ್ರಂಥಗಳು ಅಪರೂಪ. ಹೀಗೆ ಸ್ಥಿತಿಯಿರುವದರಿಂದ ಇದರಲ್ಲಿ ಪಾಂಡಿತ್ಯ ಪ್ರದರ್ಶನವಿಲ್ಲ. ಇದು ಸಂಸ್ಕೃತವನ್ನು ಅರಿಯದವರ ಸಲುವಾಗಿಯೂ ಹೆಂಗಳೆಯರ ಸಲುವಾಗಿಯೂ ಬರೆಯಲ್ಪಟ್ಟ ಅತಿ ಸುಲಭವಾದ ಹಾಗೂ ಸರಳವಾದ ಅನುವಾದ. ಇಂತಾಗಿ ಲಕ್ಷ್ಯಕ್ಕೆ ಬರುವಂತೆ ಶಬ್ದಶಃ 'ಉತ್ಸಾಹ' ವೃತ್ತದಲ್ಲಿ ರಚಿತವಾಗಿದೆ. ಗೀತೆಯ ಶ್ಲೋಕಕ್ಕೆ ಶ್ಲೋಕವಿದೆ. ಕ್ಲಿಷ್ಟಪದಗಳು ಒಂದೂ ಇಲ್ಲ. ಇದು ದಾಸವರ್ಗಕ್ಕೆ ಸೇರಿದ ಜನಪದ ಸಾಹಿತ್ಯ. ಛಂದಸ್ಸು, ಅಲಂಕಾರ ಮುಂತಾದವುಗಳ ತೀಕ್ಷ್ಣ ಒರೆಗೆ ಹತ್ತುವಂಥದಲ್ಲ. ಗ್ರಂಥಕರ್ತರು ಸಂಸ್ಕೃತ ಪಂಡಿತರಲ್ಲ.

ಈ ಕೃತಿಯು ಹುಟ್ಟೂ ರಚಿತವಾದ ರೀತಿಯೂ ಚಮತ್ಕಾರದ್ದೇ ಆಗಿರುವವು. ಶಂಭು ಭಟ್ಟರಿಗೆ ೯—೩—೪೧ನೇ ದಿವಸ ಸ್ವಪ್ನದಲ್ಲಿ 'ಓಂ ನಮೋ ಭಗವತೇ ರುದ್ರಾಯ, ಓಂ ನಮೋ ಭಗವತೇ ವಾಸುದೇವಾಯ' ಎಂದು ಮಂತ್ರೋಪದೇಶ. ೧೧—೩—೪೧ನೆಯ ದಿನ ಗೀತೆ ರಚಿಸಲಿಕ್ಕೆ ಪ್ರೇರಣೆ; ಕನ್ನಡದಲ್ಲಿ ತಮಗೆ ಬರೆಯಲು ಆಗಬಹುದೋ ಎಂಬ ಚಿಂತೆ! ಛಂದಸ್ಸು, ವೃತ್ತ ಮುಂತಾದವುಗಳ ವಿಶೇಷ ಜ್ಞಾನವಿಲ್ಲದ್ದರಿಂದ ಹೇಗೆ ರಚಿಸಬೇಕೆಂಬ ವಿಚಾರದಲ್ಲಿದ್ದಾಗ "ನಾನ, ನಾನ, ನಾನ, ನಾನ, ನಾನ, ನಾನ, ನಾನ, ನಾ" ಎಂಬ ಸ್ಫೂರ್ತಿ. ಕೂಡಲೇ "ಆದಿದೇವ ಹರಿಯು ನನಗೆ ತಾನೆ ಬೋಧಿಸಿರುವನು" ಮುಂತಾಗಿ ಗೀತೆಯ ಝರಿಯ ಪ್ರಾರಂಭ. ಇದು ಈ ಗೀತೆಯ ಹುಟ್ಟು. ಅಂದು ಪ್ರಾರಂಭವಾದ ಈ ಗ್ರಂಥವು ಮುಗಿಯಲಿಕ್ಕೆ ೬—೭॥ ವರ್ಷಗಳು ಹಿಡಿದವು. ಸ್ಫೂರ್ತಿಯುಂಟಾದಾಗ ಮಾತ್ರ ಹಲವು ಶ್ಲೋಕಗಳ ರಚನೆ. ಕೊನೆಯ ಅಧ್ಯಾಯ ೧೯೪೮ನೆಯ ಶ್ರಾವಣ ಮಾಸದ ಕೃಷ್ಣಾಷ್ಟಮಿಯ ದಿನ ಪೂರ್ಣವಾಗಿ ಅವರಿಂದ ಶ್ರೀ ದ್ವಾರಕಾ ಕ್ಷೇತ್ರದಲ್ಲಿ ಶ್ರೀಕೃಷ್ಣನ ಚರಣದಲ್ಲಿ ಅರ್ಪಿತವಾಯಿತು.

ಅವರ ಕವನ ಓದಿದೆ. ಕವಿಯಾಗದಿದ್ದ ನನಗೂ ಹಲವು ದೋಷಗಳು ಅದರಲ್ಲಿ ಕಂಡವು. ಆದರೆ ಅವರ ಆ ಕವನದ ಓಟವು ಅಂದವಾದುದನ್ನು ಕಂಡು ಆಧ್ಯಾತ್ಮಿಕವಾದ ಈ ಮೂರ್ತಿಗೆ ಉಳಿ ಮುಟ್ಟಿಸುವದು ಪಾಪವೆನಿಸಿತು. ಹತ್ತಿರದಲ್ಲಿದ್ದ ವರಕವಿಗಳಾದ ಶ್ರೀ ಬೇಂದ್ರೆಯವರನ್ನು ಕರೆಯಿಸಿ, ಅವರ ಸಲಹೆ ಕೇಳಿದೆ. ಅವರೂ ಹಾಗೆಯೇ ಅಭಿಪ್ರಾಯಪಟ್ಟರು. ಹೀಗೆ ಇದೆ ಇದರ ಕಥೆ. ಶಂಭು ಭಟ್ಟರು ಯಾವತ್ತೂ ಗ್ರಂಥವನ್ನು ಸುಸ್ವರದಿಂದ ಇಂಪಾಗಿ ಹಾಡಿ ತೋರಿಸಿದರು. ಅವರು ಶ್ರೀ ರಮಣ ಮಹರ್ಷಿಗಳ ಕಡೆಗೆ ಹೋಗಿ ಅವರಿಗೂ ಕೆಲ ಭಾಗ ಓದಿ ತೋರಿಸಿ, ಅವರ ಆಶೀರ್ವಾದ ಪಡೆದು ಬಂದಿದ್ದರು."

ಶ್ರೀ ಆಲೂರರು ಹೇಳುವಂತೆ ದಾಸಗೀತೆಯ ವೈಶಿಷ್ಟ್ಯವು ಅದರ ಛಂದಸ್ಸು, ವೃತ್ತ, ಅಲಂಕಾರಗಳ ಶುದ್ಧತೆಯಲ್ಲಿರುವದಿಲ್ಲ ಆ ವೈಶಿಷ್ಟ್ಯವು ಅದರ ಸರಳತೆ, ಓಟ, ಭಾವಗಮ್ಯತೆಗಳಲ್ಲಿದೆ. ಭಗವದ್ಗೀತೆಯು ಇಂದಿನ ವಿಶ್ವದ ಧರ್ಮಗ್ರಂಥ. ಸಂಸ್ಕೃತವನ್ನರಿಯದ ಕನ್ನಡಿಗರು ಅದನ್ನು ತಿಳಿದುಕೊಳ್ಳುವದು ಅವಶ್ಯ. 'ದಾಸಗೀತೆ' ಆ ಕಾರ್ಯವನ್ನು ಉತ್ತಮವಾಗಿ, ಪ್ರಭಾವಿಯಾಗಿ, ಸಾಧಿಸಬಲ್ಲದು. ಅದು

(೮ನೇ ಪುಟ ನೋಡಿರಿ.)

1957 ರಲ್ಲಾದ

ಅದ್ಭುತ ಪ್ರಗತಿ

ದಶಂಬರ 31ರಂದು ಇದ್ದ ಸಂಖ್ಯೆಗಳು

	1957	1956
ಅಧಿಕೃತ ಭಂಡವಲು	1,00,00,000	50,00,000
ವಸೂಲಾದ ಶೇರು ಭಂಡವಲು	29,00,000	29,00,000
ರಿಝರ್ವ	40,00,000	32,00,000
ಠೇವುಗಳು	17,84,40,000	14,32,06,000

* * * * *

ದುಡಿಯುವ ಭಂಡವಲು ರೂ.23 ಕೋಟಿಗೂ ಮಿಕ್ಕಿದೆ

* * * * *

ವಿದೇಶಿ ವಿನಿಮಯದ ವ್ಯವಹಾರವನ್ನೂ ಕೈಗೊಳ್ಳುವೆವು

* * * * *

ಜಗತ್ತಿನ ಎಲ್ಲೆಡೆಗೂ ಪ್ರತಿನಿಧಿಗಳುಂಟು

* * * * *

ನಿಮ್ಮ ಸೇವೆಗಾಗಿ 61 ಶಾಖೆಗಳು:

ಮೈಸೂರು ಪ್ರಾಂತ	27	ಆಂಧ್ರ ಪ್ರದೇಶ	4
ಮುಂಬಯಿ ಪ್ರಾಂತ	14	ಕೇರಳ ಪ್ರಾಂತ	8
ಮದ್ರಾಸು ಪ್ರಾಂತ	7	ಪಾಕಿಸ್ತಾನ	1

* * * * *

ಎಡ್ಮಿನಿಸ್ಟ್ರೇಟಿವ್ ಆಫೀಸು: ಬೆಂಗಳೂರು
ವಿದೇಶಿ ವಿಭಾಗಗಳು: ಮುಂಬಯಿ ಮತ್ತು ಮದ್ರಾಸು

ಕೆನರಾ ಬೇಂಕ್ ಲಿಮಿಟೆಡ್

(ಸ್ಥಾಪನೆ: 1906)

— ಇದು ಎಲ್ಲರಿಗೂ ಬೇಕಾದ ಬೇಂಕು —

ಕಲಕತ್ತೆಯಲ್ಲಿನ ಆರೋಗ್ಯ ಸಂಸ್ಥೆ–

ಸಾರ್ವಜನಿಕ ಆರೋಗ್ಯ ಸುಧಾರಣೆ

ರೋಗವನ್ನು ತಡೆಗಟ್ಟುವ ಬಗ್ಗೆ ವರ್ಷಗಟ್ಟಲೆ ನಡೆಸಿರುವ ಹೋರಾಟದಿಂದ ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿನ ಕಲ್ಪನೆಗಳು ಬದಲಾವಣೆಗೊಂಡಿವೆ. ಇಂದು ಈ ದಿಶೆಯಲ್ಲಿ ನಡೆಯುತ್ತಿರುವ ಪ್ರಯತ್ನಗಳು ಕೇವಲ ರೋಗಗಳ ಪ್ರತಿಬಂಧಕ್ಕೆ ಮಾತ್ರ ಸಂಬಂಧಿಸಿಲ್ಲ. ಈಗ ಸಾರ್ವಜನಿಕ ಆರೋಗ್ಯದ ಸುಧಾರಣೆಗೂ ಅವು ಸಂಬಂಧಿಸಿವೆ.

ಕಲ್ಕತ್ತೆದಲ್ಲಿರುವ ಅಖಿಲ ಭಾರತ ಆರೋಗ್ಯ ವಿಜ್ಞಾನ ಹಾಗೂ ಸಾರ್ವಜನಿಕ ಆರೋಗ್ಯ ಸಂಸ್ಥೆಯು ತರಬೇತಿ, ಸಂಶೋಧನೆ ಹಾಗೂ ಸೇವಾ ಸೌಲಭ್ಯಗಳ ಮೂಲಕ ನೆರವಾಗುತ್ತಿದೆ.

ಕಳೆದ ಫೆಬ್ರುವರಿ ೧೭ರಂದು ರಜತ ಮಹೋತ್ಸವವನ್ನು ಆಚರಿಸಿಕೊಂಡ ಈ ಸಂಸ್ಥೆಯನ್ನು ಭಾರತ ಸರ್ಕಾರದವರು ರಾಕಿಫೆಲರ್ ಫೌಂಡೇಷನ್ ಸಂಸ್ಥೆಯ ನೆರವಿನೊಂದಿಗೆ ೧೯೩೨ರ ಡಿಸೆಂಬರ್ ತಿಂಗಳಲ್ಲಿ ಸ್ಥಾಪಿಸಿದರು. ಅಂತಹ ಸಂಸ್ಥೆಯೊಂದು ಬಹುಕಾಲದಿಂದಲೂ ಅತ್ಯವಶ್ಯಕವಾಗಿತ್ತು. ೧೯೩೦ಕ್ಕೆ ಪೂರ್ವದಲ್ಲಿ ಭಾರತೀಯ ವೈದ್ಯರು ಸಾರ್ವಜನಿಕ ಆರೋಗ್ಯ ವಿಭಾಗದಲ್ಲಿ ಸ್ನಾತಕೋತ್ತರ ಅಧ್ಯಯನಗಳಿಗಾಗಿ ಲಂಡನ್ನಿಗೆ ಹೋಗಬೇಕಾಗುತ್ತಿತ್ತು. ಅದೇ ವರ್ಷ ಕಲ್ಕತ್ತೆದಲ್ಲಿ ಸ್ಥಾಪಿಸಲಾದ ಉಷ್ಣ ಪ್ರದೇಶಗಳ ಸಂಬಂಧವಾದ ಔಷಧಿ ಶಾಲೆ (ಸ್ಕೂಲ್ ಆಫ್ ಟ್ರಾಪಿಕಲ್ ಮೆಡಿಸಿನ್) ಯಲ್ಲಿ ಆರೋಗ್ಯ ವಿಭಾಗದಲ್ಲಿ ಪ್ರೊಫೆಸರರೊಬ್ಬರನ್ನು ನೇಮಿಸಿದಾಗ ದೇಶದಲ್ಲಿಯೇ ತರಬೇತಿ ನೀಡಬೇಕೆಂಬ ಬೇಡಿಕೆಯು ಅಪೂರ್ಣವಾಗಿ ಫಲಿಸಿತು.

ಈ ವ್ಯವಸ್ಥೆಯು ತೃಪ್ತಿಕರವಾಗಿರಲಿಲ್ಲ. ಟ್ರಾಪಿಕಲ್ ಮೆಡಿಸಿನ್ ಶಾಲೆಯ ಡೈರೆಕ್ಟರರಾಗಿದ್ದ ಸರ್ ಜಾನ್ ಮೆಗಾರವರು ಪ್ರತ್ಯೇಕವಾಗಿ ಆರೋಗ್ಯ ವಿಜ್ಞಾನ ಶಾಲೆಯೊಂದನ್ನು ಪ್ರಾರಂಭಿಸುವುದು ಅಗತ್ಯವೆಂದು ಭಾವಿಸಿದರು.

ಈ ಸಂಸ್ಥೆಯು ಮೂರು ಮುಖ್ಯ ಉದ್ದೇಶಗಳೊಂದಿಗೆ ಕಾರ್ಯಾಚರಣೆಗೆ ತೊಡಗಿತು. ಇವುಗಳಾವುವೆಂದರೆ. ರೋಗ ಪ್ರತಿಬಂಧಕ ಔಷಧಿಗಳ ಕಾರ್ಯ ತತ್ವಗಳು ಮತ್ತು ವಿಧಾನಗಳಲ್ಲಿ ಬೋಧನೆ, ಸಂಶೋಧನೆ ನಡೆಸುವುದು ಹಾಗೂ ಸಂಶೋಧನೆಯ ಫಲಿತಾಂಶಗಳನ್ನು ಆರೋಗ್ಯ ಸುಧಾರಣಾ ವಿಧಾನಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ವಿನಿಯೋಗಿಸಲಾಗುವುದು.

ಪ್ರಾರಂಭದಲ್ಲಿ ಈ ಸಂಸ್ಥೆಯಲ್ಲಿ ನಾಲ್ಕು ವಿಭಾಗಗಳಿದ್ದವು. ಇವುಗಳಾವುವೆಂದರೆ:- ಸಾರ್ವಜನಿಕ ಆರೋಗ್ಯ ಕಾರ್ಯನಿರ್ವಹಣೆ, ಮಲೇರಿಯಾ ವಿಜ್ಞಾನ ಮತ್ತು ಗ್ರಾಮಾಂತರ ಸ್ವಾಸ್ಥ್ಯ, ಜನನ ಮರಣ ಅಂಕಿ ಸಂಗ್ರಹಣ ಮತ್ತು ಸಾಂಕ್ರಾಮಿಕ ರೋಗ ಶಾಸ್ತ್ರ ಮತ್ತು ಜೀವ ರಸಾಯನ ಶಾಸ್ತ್ರ ಮತ್ತು ಪೋಷಣೆ. ಈ ಸಂಸ್ಥೆಯ ಪ್ರಾರಂಭದ ತಾರುಣ್ಯದಲ್ಲಿ ಕೌಂಟೆಸ್ ಆಫ್ ಡಫರಿನ್ ನಿಧಿ ಸಂಸ್ಥೆಯು ಮಾತೃತನ ಹಾಗೂ ಶಿಶು ಕಲ್ಯಾಣ ವಿಭಾಗವನ್ನು ಸ್ಥಾಪಿಸಲು ಹಣ ಕಾಸಿನ ನೆರವಿತ್ತಿತ್ತು. ೧೯೪೮ರ ವರೆಗೆ ಈ ಸಂಸ್ಥೆಗೆ ಕೌಂಟೆಸ್ ಆಫ್ ಡಫರಿನ್ ನಿಧಿ ಸಂಸ್ಥೆಯಿಂದ ಹಣ ಕಾಸಿನ ನೆರವು ದೊರೆಯುತ್ತಿತ್ತು. ೧೯೪೫ರ ವೇಳೆಗೆ ಈ ಸಂಸ್ಥೆಗೆ ಅನೇಕ ವಿಭಾಗಗಳನ್ನು ಸೇರಿಸಲಾಯಿತು.

ಈ ೧೩ ವರ್ಷಗಳ ಅವಧಿಯಲ್ಲಿ ಸಂಸ್ಥೆಯು ಮೂರು ಪಾಠ ಕ್ರಮಗಳಲ್ಲಿ ತರಬೇತಿಯನ್ನು ನೀಡಿತು. ಈ ಪಾಠ ಕ್ರಮಗಳಾವುವೆಂದರೆ.—ವೈದ್ಯಕೀಯ ಪದವೀಧರರುಗಳಿಗೆ 'ಸಾರ್ವಜನಿಕ ಆರೋಗ್ಯ' ವಿಷಯದಲ್ಲಿ ಡಿಪ್ಲೊಮಾ, ಮಾತೃತನ ಹಾಗೂ ಶಿಶು ಕಲ್ಯಾಣ ವಿಷಯದಲ್ಲಿ ವಿಶೇಷ ಪರಿಶ್ರಮ ಪಡೆಯಲಿಚ್ಛಿಸುವ ವೈದ್ಯಕೀಯ ಪದವೀಧರರುಗಳಿಗಾಗಿ 'ಮಾತೃತನ ಹಾಗೂ ಶಿಶು ಕಲ್ಯಾಣ' ವಿಷಯದಲ್ಲಿ ಡಿಪ್ಲೊಮಾ, ಮತ್ತು ವೈದ್ಯಕೀಯ ವಿಷಯದಲ್ಲಿ ಡಿಪ್ಲೊಮಾ ಪಡೆದಿರುವ ಲೈಸೆಂಷಿಯೇಟುಗಳಿಗಾಗಿ 'ಸಾರ್ವಜನಿಕ ಆರೋಗ್ಯ ಮತ್ತು ಆರೋಗ್ಯ ವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ. ಸಾರ್ವಜನಿಕ ಆರೋಗ್ಯ ವಿಷಯದಲ್ಲಿ ಡಾಕ್ಟೊರೇಟ್ ಪಡೆಯಲು ಹಾಗೂ ಕೆಲವು ಅಲ್ಪ ಕಾಲಾವಧಿಯ ಪಾಠ ಕ್ರಮಗಳಲ್ಲಿ ತರಬೇತಿ ಪಡೆಯಲು ಸಕಲ ಸೌಲಭ್ಯಗಳನ್ನೂ ನೀಡಲಾಗಿತ್ತು.

ಗ್ರಾಮಾಂತರ ಹಾಗೂ ನಗರ ಕ್ಷೇತ್ರಗಳಲ್ಲಿ 'ಸಾರ್ವಜನಿಕ ಆರೋಗ್ಯ'ದ ವಿಚಾರದಲ್ಲಿ ಪರಿಶ್ರಮ ನೀಡುವುದನ್ನೂ ಪಾಠ ಕ್ರಮದಲ್ಲಿ ಸೇರಿಸಿಕೊಳ್ಳಲಾಗಿತ್ತು. ಕಲ್ಕತ್ತೆ ಕಾರ್ಪೊರೇಷನ್ನಿನ ಸಹಾಯದೊಂದಿಗೆ ನಗರ ಕ್ಷೇತ್ರದಲ್ಲಿ 'ಸಾರ್ವಜನಿಕ ಆರೋಗ್ಯ'ದ ವಿಚಾರದಲ್ಲಿ ಪರಿಶ್ರಮ ನೀಡಲಾಯಿತು. ಕಲ್ಕತ್ತೆಯಿಂದ ೩೦ ಮೈಲುಗಳ ದೂರದಲ್ಲಿರುವ ಲೋಕನಾಥದಲ್ಲಿ ಸ್ಥಾಪಿಸಲಾದ ಕೇಂದ್ರದಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದಂತೆ ಪರಿಶ್ರಮ ನೀಡಲಾಯಿತು. ಬಂಗಾಳ ಸರ್ಕಾರದವರ ಸಹಕಾರದೊಂದಿಗೆ ರಾಕಿಫೆಲರ್ ಫೌಂಡೇಷನ್ ಸಂಸ್ಥೆಯು ಸಿಂಗೂರಿನಲ್ಲಿ ಆರೋಗ್ಯ ಕೇಂದ್ರವೊಂದನ್ನು ಸ್ಥಾಪಿಸಿತು. ಭಾರತ ಹಾಗೂ ಬಂಗಾಳ ಸರ್ಕಾರಗಳ ನಡುವೆ ನಡೆದ ಮಾತುಕತೆಗಳ ಪ್ರಕಾರ ಈ ಸಂಸ್ಥೆಯು ಸಿಂಗೂರು ಆರೋಗ್ಯ ಕೇಂದ್ರವನ್ನು ಸಂಶೋಧನೆ ಹಾಗೂ ಪ್ರತ್ಯಕ್ಷ ಪ್ರದರ್ಶನ ಕೇಂದ್ರವನ್ನಾಗಿ ಉಪಯೋಗಿಸಿಕೊಳ್ಳಲಾರಂಭಿಸಿತು. ೧೯೪೪ರಿಂದಲೂ ಈ ಸಂಸ್ಥೆಗೆ ಸೇರಿದ ವಿದ್ಯಾರ್ಥಿಗಳು ಕೊಂಚ ಕಾಲವನ್ನು ಸಿಂಗನೂರಿನಲ್ಲಿರುವ ಗ್ರಾಮಾಂತರ ಆರೋಗ್ಯ ಮತ್ತು ತರಬೇತಿ ಕೇಂದ್ರದಲ್ಲಿ ವಿನಿಯೋಗಿಸುವರು.

ಯುದ್ಧಾ ನಂತರ ಅವಧಿಯಲ್ಲಿ ಈ ಸಂಸ್ಥೆಯು ವಿಕಾಸಗೊಂಡಿತು. 'ಸಾರ್ವಜನಿಕ ಆರೋಗ್ಯ' ವಿಷಯದಲ್ಲಿ ಡಿಪ್ಲೊಮಾ ನೀಡುವ ಪಾಠ ಕ್ರಮಕ್ಕೆ ತೆಗೆದುಕೊಳ್ಳುತ್ತಿದ್ದ ವಿದ್ಯಾರ್ಥಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸಲಾಯಿತು. ಹಲವಾರು ವಿಶೇಷ ಪಾಠಕ್ರಮಗಳನ್ನು ಮತ್ತು ಅಲ್ಪ ಕಾಲಾವಧಿಯ ಪುನರಭ್ಯಾಸ ಪಾಠ ಕ್ರಮವನ್ನ ಪ್ರಾರಂಭಿಸಲಾಯಿತು.

೧೯೫೩ರಲ್ಲಿ ಈ ಸಂಸ್ಥೆಯ ಪ್ರಗತಿಯಲ್ಲಿ ಮತ್ತೊಂದು ಮೈಲಿಕಲ್ಲನ್ನು ಮುಟ್ಟಲಾಯಿತು. ಭಾರತ ಸರ್ಕಾರ, ಪ್ರಪಂಚ ಆರೋಗ್ಯ ಸಂಸ್ಥೆ ಮತ್ತು 'ಯೂನಿಸೆಫ್' ಸಂಸ್ಥೆಗಳ ಸಹಕಾರಾತ್ಮಕ ಪ್ರಯತ್ನಗಳ ಫಲವಾಗಿ ಈ ಸಂಸ್ಥೆಯು ಅಂತರಾಷ್ಟ್ರೀಯ ತರಬೇತಿ ಕೇಂದ್ರನಾಗಿ ಪರಿಣಮಿಸಿತು.

ಈ ಸಂಸ್ಥೆಯ ಸಂಶೋಧನಾ ಕಾರ್ಯ ಚಟುವಟಿಕೆಗಳು ಬಹು ವ್ಯಾಪಕವಾಗಿವೆ. ಕಾಲರ, ಪ್ಲೇಗ್, ಮಹೋದರ(ಡ್ರಾಪ್ಸಿ), ಟೈಫಾಯಿಡ್, ಜನಸಮುದಾಯದ ಆಹಾರ ಮತ್ತು ಪೋಷಣೆ ಭಾರತೀಯ ಜನಾಂಗಸ್ಥಿತಿ ವಿವರಣೆ ಮತ್ತು ಕುಟುಂಬ ಯೋಜನೆ, ಗ್ರಾಮಾಂತರ ಪ್ರದೇಶಗಳ ನೈರ್ಮಲ್ಯ, ಕೈಗಾರಿಕಾ ಸ್ವಾಸ್ಥ್ಯ ಮತ್ತು ಕೈಗಾರಿಕಾ ಅಪಾಯಗಳು ಮತ್ತು ವೃತ್ತಿ ಸಂಬಂಧವಾದ ರೋಗಗಳು ಈ ಕ್ಷೇತ್ರಗಳಲ್ಲಿ ಸಂಸ್ಥೆಯು ಅಧ್ಯಯನಗಳನ್ನು ನಡೆಸಿದೆ. ಭಾರತ ಸರ್ಕಾರ, ಭಾರತೀಯ ಚಿಕಿತ್ಸಾ ಸಂಶೋಧನಾ ಪರಿಷತ್ತು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು, ರಾಕಿ ಫೆಲರ್ ಫೌಂಡೇಷನ್ ಸಂಸ್ಥೆ ಮತ್ತಿತರ ಸಂಸ್ಥೆಗಳು ಅಖಿಲ ಭಾರತ ಆರೋಗ್ಯ ವಿಜ್ಞಾನ ಹಾಗೂ ಸಾರ್ವಜನಿಕ ಆರೋಗ್ಯ ಸಂಸ್ಥೆಗೆ ನೆರವಿತ್ತಿವೆ.

ಈ ಸಂಸ್ಥೆಯು ಸಾಂಕ್ರಾಮಿಕ ರೂಪದಲ್ಲಿ ಕಾಣಿಸಿಕೊಳ್ಳುವ ಮಹೋದರ ರೋಗದ ಬಗ್ಗೆ ಅಧ್ಯಯನ ನಡೆಸಿ ರೋಗ ನಿರ್ಮೂಲದ ಬಗ್ಗೆ ಅತ್ಯಮೂಲ್ಯ ಕಾಣಿಕೆಯನ್ನಿತ್ತಿದೆ.

ಕೈಗಾರಿಕೆಗಳಿಂದ ಹೊರಬೀಳುವ ನಿರುಪಯುಕ್ತ ವಸ್ತುಗಳನ್ನು ವಿಲೇವಾರು ಮಾಡುವ ಬಗ್ಗೆ ಈ ಸಂಸ್ಥೆಯು ಅಧ್ಯಯನ ನಡೆಸಿ ಕಡಿಮೆ ವೆಚ್ಚದ ಹಾಗೂ ದಕ್ಷತಾಪೂರ್ಣವಾದ ವಿಧಾನಗಳನ್ನು ರೂಪಿಸಿದೆ.

ಈ ಸಂಸ್ಥೆಯು ಪೌಷ್ಟಿಕ ಆಹಾರ ಸಂಬಂಧವಾದ ಸಮಸ್ಯೆಗಳ ವಿವಿಧ ಪರಿಶೀಲನೆಗಳನ್ನು ಕೈಗೊಂಡಿದೆ. ಆಹಾರ ಹಾಗೂ ಪೋಷಣೆ ಸಂಬಂಧವಾದ ಹಲವಾರು ಸಮೀಕ್ಷೆಗಳನು ಕೈಗೊಳ್ಳಲಾಗಿದೆ. ಈ ಸಮೀಕ್ಷೆಗಳ ಫಲವಾಗಿ ಅತ್ಯಾವಶ್ಯಕ ಅಂಕಿ ಅಂಶಗಳು ಪ್ರಾಪ್ತಿಯಾಗಿವೆ ವ್ಯಕ್ತಿಯ ಪೌಷ್ಟಿಕ ಆಹಾರ ಸಂಬಂಧವಾದ ಅಂತಸ್ತನ್ನು ನಿಖರವಾಗಿ ಅಳೆಯಲು ಸಾಧ್ಯವಾಗುವಂತಹ "ಸ್ಕೋರ್ ಕಾರ್ಡ್"ನ್ನು ಸಿದ್ಧಪಡಿಸಲಾಗಿದೆ.

೧೯೪೩ರಲ್ಲಿ ಬಂಗಾಳದಲ್ಲಿ ಕ್ಷಾಮವು ಕಾಣಿಸಿಕೊಂಡಾಗ ಒಂದು ವಿಧವಾದ ಪ್ರೋಟೀನನ್ನು ಸಿದ್ಧಪಡಿಸಲಾಯಿತು. ಗ್ಲೂಕೋಸ್ ಮತ್ತು ವಿಟಮಿನ್‌ಗಳನ್ನು ಮಿಶ್ರಮಾಡಿದ ಈ ಸಸಾರಜನಕವನ್ನು ಪಕ್ಷಿಗಳ ಮೇಲೆ ಯಶಸ್ವಿಯಾಗಿ ಪ್ರಯೋಗಿಸಲಾಯಿತು. ಈ ಪ್ರಯೋಗದಲ್ಲಿ ದೊರೆತ ಯಶಸ್ಸಿನಿಂದ ಹೊಟ್ಟೆಗಿಲ್ಲದೆ ನರಳುತ್ತಿದ್ದ ಅನೇಕ ವ್ಯಕ್ತಿಗಳಿಗೆ ಈ ಸಸಾರಜನಕವನ್ನು ಕೊಡಲಾಯಿತು. ಈ ಪ್ರಯತ್ನವು ಕೂಡ ಯಶಸ್ವಿಯಾಯಿತು. ಈ ಸಂಸ್ಥೆಯ ಪ್ರಯತ್ನಗಳ ಫಲವಾಗಿ ಅನೇಕರ ಜೀವ ಉಳಿಯಿತು.

ಕಲ್ಕತ್ತೆಯಲ್ಲಿರುವ ಅಖಿಲ ಭಾರತ ಹಾಗೂ ಸಾರ್ವಜನಿಕ ಆರೋಗ್ಯ ಸಂಸ್ಥೆಯು ಜನಸಂಖ್ಯೆ ವೃದ್ಧಿಸುವ ಪ್ರವೃತ್ತಿ ಸಂಬಂಧದಲ್ಲಿ ಹಲವಾರು ಅಧ್ಯಯನಗಳನ್ನು ನಡೆಸಿವೆ. ಪ್ರಸ್ತುತದಲ್ಲಿ ಕುಟುಂಬ ಯೋಜನೆಯ ಬಗ್ಗೆ ಎರಡು ಪರಿಶೀಲನೆಗಳು ನಡೆಯುತ್ತಿವೆ. ಈ ಪರಿಶೀಲನೆಗಳು ಯಶಸ್ವಿಯಾದಲ್ಲಿ ಇದು ದೇಶದಲ್ಲಿನ ಕುಟುಂಬ ಯೋಜನಾ ಕಾರ್ಯಗಳ ಮೇಲೆ ಪ್ರಭಾವ ಬೀರಬಲ್ಲವು.

ಈ ಸಂಸ್ಥೆಯು ಭಾರತ ಸರ್ಕಾರದ ಆರೋಗ್ಯ ಸೇವಾ ಡೈರೆಕ್ಟರ್ ಜನರಲ್‌ರ

(ಆನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.,
ಪ್ರಧಾನ ಕಛೇರಿ ಉಡುಪಿ — ಸ್ಥಾಪನೆ 1925.

ನಮ್ಮ ಬರೋಡ ಶಾಖೆಯು ತಾ 9-2-58ರಲ್ಲೂ
ಮಂಗಳೂರು (ಬಂದರ) ಶಾಖೆಯು 20 2-58ರಲ್ಲೂ
ತೆರೆಯಲ್ಪಟ್ಟವು

ಶೀಘ್ರವಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು
1) ಬೆಂಗಳೂರು (ಶೇಷಾದ್ರಿಪುರಂ) 5) ಬೆಳಗಾವ್ (ಕೇಂಪ್)
2) ಬೆಂಗಳೂರು (ಚಿಕ್ಕಪೇಟೆ) 6) ಕೊಪ್ಪ (ಚಿಕ್ಕಮಗಳೂರು ಜಿಲ್ಲೆ)
3) ಬೆಂಗಳೂರು(ಕೆಂಟೋನ್‌ಮೆಂಟ್) 7) ಹುನಗುಂದ (ಬಿಜಾಪುರ ಜಿಲ್ಲೆ)
4) ಬೆಳಗಾವ್ (ಶಾಪುರ) 8) ತಿಪ್ಟೂರು (ತುಮ್ಕೂರು ಜಿಲ್ಲೆ)
9) ಬೊಂಬಾಯಿ (ಮಾಂಡ್ವಿ)

ಟಿ ಎ ಪೈ, ಬಿ ಕಾಂ.(ಬೊಂ) ಎ.ಐ.ಬಿ., ಯಫ್.ಆರ್.ಇ.ಯಸ್. (ಲಂಡನ್) ಜನರಲ್ ಮೆನೇಜರ್.
ಡಾ॥ ಟಿ ಮಾಧವ ಪೈ, ಎಂ ಬಿ. ಬಿ ಎಸ್. ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

NAVAYUGA

Popular Kannada Weekly

Founder:—

A. B. SHETTY,
Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೩-೩-'೫೮	೨೭

ಬೆಲೆಯಿಲ್ಲದ ಕಾಯದೆ

ಮೈಸೂರು ರಾಜ್ಯದಲ್ಲೆಲ್ಲಾ ಪಾನ ಪ್ರತಿಬಂಧವನ್ನು ಜ್ಯಾರಿಯಲ್ಲಿ ತರುವ ಕುರಿತಾಗಿ ರಾಜ್ಯದ ವಿಧಾನ ಸಭೆಯಲ್ಲಿ ಪ್ರಶ್ನೋತ್ತರಗಳು ನಡೆದುವೆಂದು ವರದಿಯಾಗಿದೆ. ಹಲವಾರು ಸದಸ್ಯರು ಈ ಕುರಿತಾಗಿ ಪ್ರಶ್ನೆಗಳ ಸುರಿಮಳೆಯನ್ನೂ ಕರೆದು ಆ ಬಗ್ಗೆ ಸರಕಾರದ ಅಭಿಪ್ರಾಯವನ್ನು ತಿಳಿದುಕೊಳ್ಳುವ ಯತ್ನ ಮಾಡಿರುವರು. ಆದರೂ ಅಬಕಾರಿ ಮಂತ್ರಿ ಶ್ರೀ ಮುಹಮ್ಮದಾಲಿಯವರು ಸರಕಾರವು ಈ ಕುರಿತು ಆಲೋಚಿಸುತ್ತಿರುವುದೆಂದೂ, ಅದನ್ನು ತೀವ್ರವಾಗಿಯೇ ತರಬೇಕೆಂದು ಸರಕಾರದ ಅಪೇಕ್ಷೆ ಎಂದೂ ಹಂತ ಹಂತವಾಗಿ ಅದನ್ನು ಜ್ಯಾರಿಯಲ್ಲಿ ಎಂದಿಗೂ ತರಬಯಸುತ್ತದಿಲ್ಲವೆಂದೂ ಉತ್ತರಿಸಿದರಲ್ಲದೇ ಆ ಬಗ್ಗೆ ಸರಕಾರದ ನಿಶ್ಚಿತ ನಿಲುವೆಯನ್ನು ಹೇಳಲಿಲ್ಲ. ಮದ್ಯಪಾನ ಪ್ರತಿಬಂಧ ಕಾಯದೆಯು ಈಗಿನ ಮೈಸೂರು ರಾಜ್ಯದ ಕೆಲವೆಡೆಗಳಲ್ಲಿದೆ. ದಕ್ಷಿಣ ಕನ್ನಡ (ಮುಂಬಯಿ) ಉತ್ತರ ಕರ್ನಾಟಕ, ಕೊಡಗು ಪ್ರದೇಶಗಳಲ್ಲಿಯೂ ಹಳೆಯ ಮೈಸೂರಿನ ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಯ ಕೆಲವು ಭಾಗಗಳಲ್ಲೂ ವ್ಯವಹಾರದಲ್ಲಿದೆ. ಈ ಕಾಯದೆಯನ್ನು ಅಖಂಡ ಮೈಸೂರಿಗೆ ಅನ್ವಯಿಸುವಲ್ಲಿ ಮಾತ್ರ ನಿಧಾನವಾಗುತ್ತಿದೆ. ಇದಕ್ಕೆ ಕಾರಣವನ್ನು ಮುಂದಿಡುತ್ತ ಅಬಕಾರಿ ಮಂತ್ರಿವರ್ಯರು ಆರ್ಥಿಕ ಸ್ಥಿತಿಯನ್ನೂ ಉಲ್ಲೇಖಿಸಿದರು. ಆದರೆ, ರಾಜ್ಯವೊಂದರಲ್ಲಿ ಪ್ರತಿಬಂಧವಿರುವ ಮತ್ತು ಇಲ್ಲದ ಪ್ರದೇಶಗಳಿರುವುದು ಸಮಂಜಸವೆಂದು ಹೇಳಬರುವುದಿಲ್ಲ. ಒಂದೇ ಕಾಯದೆ ಒಂದೇ ಕಾನೂನು ಎಂದು ಮುಂತಾಗಿ ಸಮಿಕರಣದ ಗುಂಗಿನ ಜಂಜಾಟದಲ್ಲಿಯೇ ಮುಳುಗಿ ಹೋದ ಈ ಸರಕಾರದ ಗಮನವು ಈ ಕಡೆಗೂ ಹರಿದಿರಬಹುದು. ಆದರೆ, ತನ್ನ ಇತರ ಕಾರ್ಯಕಲಾಪಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಂದಗಜಗಮನವೇ ಈ ದಿಕ್ಕಿನಲ್ಲೂ ನಡೆಯುತಿದೆ ಎಂದು ಹೇಳಬಹುದೋ ಏನೋ. ಅಂತೂ ಜರೂರಿಯಲ್ಲಿ ಈ ಪ್ರತಿಬಂಧಕ ಕಾಯದೆಯನ್ನು ತರುವ ಲವಲವಿಕೆಯಿರುವುದು ಮಾತ್ರ ವ್ಯಗ್ಗೋಚರವಾಗುತ್ತದೆ.

ಆದರೆ, ಸರಕಾರದ ಪಾನಪ್ರತಿಬಂಧಕ ಶಾಸನವು ಸರಿಯಾಗಿ ಕಾರ್ಯರೂಪದಲ್ಲಿ ಇಳಿದಿದೆ, ಮತ್ತದು ಸಾಕಷ್ಟು ಸಫಲವಾಗಿದೆ ಎಂದು ಧೈರ್ಯದಿಂದ ಹೇಳಬರುವುದಿಲ್ಲ. ಪತ್ರಿಕೆಗಳಲ್ಲಿ ಬರುವ ವರ್ತಮಾನಗಳಂತೆ ಮದ್ಯ ತಕ್ಷೀರುಗಳು ದಿನೇ ದಿನೇ ಹೆಚ್ಚುತ್ತ ಹೋಗುತ್ತಿವೆ. ಕೆಲವೆಡೆಗಳಲ್ಲಿ ಮದ್ಯ ತಯಾರಿಕೆಯೊಂದು ಬಲವಾದ ಭದ್ರ ತಳಹದಿಯಲ್ಲಿ ಅಲ್ಪ ಬಂಡವಳದಿಂದ ಕಟ್ಟಲಾದ ಗುಡಿ ಕೈಗಾರಿಕೆಯೇ ಆಗಿ ಪರಿಣಮಿಸಿದೆ ಎಂದು ಹೇಳಬಹುದು. ನೀರಾ ಕೇಂದ್ರಗಳೂ ನ್ಯಾಯೋಚಿತ ರೀತಿಯಲ್ಲಿಯೇ ಕೆಲಸ ಮಾಡುತ್ತಿವೆ ಎಂದೂ ನಂಬುವುದು ಅಸಾಧ್ಯ. ಅಂತೂ ಶಾಸನವು ಕೇವಲ ಕಾಗದ ಪತ್ರಗಳಲ್ಲಿ ಮಾತ್ರ ಉಳಿದಿದೆಯಲ್ಲದೇ ವ್ಯವಹಾರದಲ್ಲಿ ಅಸ್ತಿವೆಂಬುದು ಖಂಡಿತ. ಈ ತೆರದ ಬೆಲೆಯಿಲ್ಲದ, ಬೆಲೆಬಾರದ ಕಾಯದೆಗಳಿಂದ ಉಪಯೋಗವಾದರೂ ಏನೆಂದು ತಿಳಿಯುವುದಿಲ್ಲ. ಆದರೆ, ಮದ್ಯಪಾನವನ್ನು ಪುರಸ್ಕರಿಸುವುದು ಮಾತ್ರ ಎಂದಿಗೂ ಸಾಧ್ಯವಿಲ್ಲ. ಮಾನವನಲ್ಲಿ ರೂಢ ಮೂಲವಾಗಿರುವ ಮಾನವತೆಯ ನಾಶವನ್ನು ಮಾಡುವ ದೈಹಿಕವಾಗಿ ಮಾನಸಿಕವಾಗಿ ಮಾನವನಿಗೆ ಅಧಃಪತನ ಹೇತುವೆನಿಸಿದ ಈ ಮದ್ಯಪಾನವನ್ನು ತಡೆಗಟ್ಟುವುದು ಎಷ್ಟು ಅಗತ್ಯವೋ ಇದಕ್ಕಾಗಿ ತಯಾರಿಸಿದ ತಯಾರಿಸುವ ಶಾಸನವೂ ಸಂಪೂರ್ಣವಾಗಿ ಪಾಲಿಸಲ್ಪಡುವುದು ಅಷ್ಟೇ ಅಗತ್ಯವೆಂದು ಹೇಳಬಹುದು. ತನ್ನ ಕಾಯದೆ ಪರಿಣಾಮವಾಗಿ ಜನತೆಯಲ್ಲಿ ಮದ್ಯಪಾನಿಗಳ ಸಂಖ್ಯೆ ತಗ್ಗುತ್ತ ಬರುತ್ತಿದೆ ಎಂದು ಸರಕಾರವು ಅಭಿಪ್ರಾಯಪಡಬಹುದಾದರೆ, ಅದೇನೂ ಸತ್ಯಸಂಗತಿಯೇ ಎಂದು ಹೇಳಬರುವುದಿಲ್ಲ. ಕೇವಲ ಅಂಕೆಸಂಖ್ಯೆಗಳ ಲೆಕ್ಕದಲ್ಲಿ ಮಾತ್ರ ಇಂತಹರು ಕಡಿಮೆಯಿರಬಹುದು; ಮದ್ಯಸಂಬಂಧದ ಅಪರಾಧಿಗಳೆಂದು ಗಣಿಸಲ್ಪಟ್ಟ ಕೆಲವೇ ಮಂದಿಗಳು ಮಾತ್ರ ಮದ್ಯಪಾನಿಗಳೆಂದು ಸರಕಾರ ತಿಳಿದಿರಬಹುದು– ಆದರೆ, ಸತ್ಯಚಿತ್ರ ಇದಕ್ಕೆ ವಿಪರೀತವಾಗಿದೆ. ಹಳ್ಳಿಹಳ್ಳಿಗಳಷ್ಟೆ ಮಾತ್ರವಲ್ಲ ಪೇಟೆಪಟ್ಟಣಗಳಲ್ಲೂ ಮದ್ಯವು ಧಾರಾಳವಾಗಿ ತಯಾರಾಗುತ್ತಿದೆ ಎಂದೂ ಇಂತಹ ಮುಕ್ತ ಪೇಟೆಗಳಲ್ಲಿ ದೊರೆಯುತ್ತಿದ್ದದಕ್ಕಿಂತ ತುಂಬ ಕೆಟ್ಟದೆಂದೂ ಹೇಳುವವರುಂಟು. ಈ ಉದ್ಗಾರಗಳನ್ನು ಸತ್ಯವೇ ಎಂದು ನಂಬಲು ಆಧಾರಗಳಿಲ್ಲವಾದರೂ ಮದ್ಯದ ತಕ್ಷೀರುಗಳ ಪರಿಣಾಮವಾಗಿ, ಮದ್ಯಪಾನ ಪ್ರತಿಬಂಧಕ ಶಾಸನವು ಸಂಪೂರ್ಣ ಶಿಥಿಲವಾಗಿದೆ ಎಂಬುದು ವ್ಯಕ್ತವಾಗುತ್ತದೆ. ಹಾಗಿರುವಾಗ, ಇದರಿಂದ ಸರಕಾರಕ್ಕಾದ ಲಾಭವೆಂದರೆ ಕೇವಲ ಆದಾಯದಲ್ಲಿ ಕೊರತೆ ಮಾತ್ರ. ಆದುದರಿಂದ, ಸರಕಾರವು ತನ್ನ ಪಾನಪ್ರತಿಬಂಧಕ ಕಾಯದೆಯನ್ನು ಪುನರ್ವಿವೇಚಿಸಲು ಮತ್ತು ಕೆಲವಾರು ಬದಲಾವಣೆಗಳನ್ನು ಮಾಡಲು ಬಯಸುತ್ತಿದೆ ಎಂದೂ ಮಾನ್ಯಮಂತ್ರಿಗಳ ಮಾತುಗಳಿಂದ ತಿಳಿಯುತ್ತದೆ. ಮುಖ್ಯವಾಗಿ, ಕುಡುಕರಿಗೆ ಹೆಚ್ಚು ಶಿಕ್ಷೆ ವಿಧಿಸುವಂತೆ ತಕ್ಕ ತಿದ್ದುಪಡಿಗಳನ್ನು ಮಾಡುವುದಂತೆ. ಆದರೆ ಇದರಿಂದ ನಿರೀಕ್ಷಿತ ಪರಿಣಾಮ ದೊರೆಯುತ್ತದೆ ಎಂದು ಹೇಳುವುದು ಅಸಾಧ್ಯ. ಈ ಕಾಯದೆ ಇರುವ ಪ್ರದೇಶಗಳಲ್ಲಿಯೂ ಇಂತಹ ಶಿಕ್ಷೆಗಳಿಂದ ಕುಡುಕರ ಸಂಖ್ಯೆಯು ಕಡಿಮೆಯಾಗಿ, ಕುಡುಕರೇ ಇಲ್ಲದಂತಾಗುವುದೆಂಬ ವಿಶ್ವಾಸವಿಟ್ಟೇ ಈ ಶಾಸನವನ್ನು ಮಾಡಲಾಯಿತು. ಆದರೆ ಪರಿಣಾಮ ನೆಟ್ಟಗಾಗಲಿಲ್ಲ. ಹಾಗಿರುವಾಗ, ಇದಕ್ಕೇನು ಮದ್ದು ಎನ್ನುವುದು ಇನ್ನೂ ಅಸಂಶೋಧಿತ ಔಷಧಿ. ನಮ್ಮ ಸರಕಾರ ರಾಜ್ಯವಿಡಿ ಈ ಪಾನಪ್ರತಿಬಂಧಕ ಕಾಯದೆಯನ್ನು ತರುವಾಗ ವಿಚಾರಿಸಬೇಕಾದ ಪರಿಶೀಲಿಸಬೇಕಾದ ಸಂಗತಿಗಳು ಅನೇಕವಿವೆ. ಅವುಗಳಲ್ಲಿ ಈಗ ಈ ಕಾಯದೆಯನ್ನನ್ವಯಿಸುವ ಪ್ರದೇಶಗಳಲ್ಲಿ ಕಾಯದೆಯು ಅಯಶಸ್ವಿಯಾಗಲು ಕಾರಣವೇನು ಎಂಬುದೂ ಒಂದು. ಇದು ಬಹಳ ಪ್ರಧಾನವಾದ ವಿಷಯವಾಗಿದ್ದು ಸರಕಾರವು ಅವಶ್ಯ ಗಮನಿಸಲೇ ಬೇಕಾದ ಸಂಗತಿ. ಅದು ಹೊರತು, ಶಿಕ್ಷೆಗಳನ್ನು ಉಗ್ರವಾಗಿ ಪರಿವರ್ತಿಸಿಕೊಂಡು, ಕಾರ್ಯಕ್ಷಮತೆಯನ್ನು ತೋರಿಸದಿದ್ದರೆ, ಇದು ಇನ್ನಷ್ಟು ಶಿಥಿಲವಾಗುವುದು ದೃಢನಿಶ್ಚಯ. ಸರಕಾರ ಇತ್ತ ಗಮನವೀಯುವುದೆ?

ಸಂಕ್ಷಿಪ್ತ ಸುದ್ದಿಗಳು

ಮೈಸೂರು ಟೆನೆನ್ಸಿ ಕಾಯದೆ

ಮೈಸೂರಿನ ವಿಧಾನಸಭೆಯು ಮೈಸೂರ ಟೆನೆನ್ಸಿ ಕಾಯದೆಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಿದೆ. ಮುಂಬಯಿ, ಹೈದರಾಬಾದ ಮತ್ತು ಮದ್ರಾಸ ಟೆನೆನ್ಸಿ ಕಾಯದೆಗಳಲ್ಲಿರುವ ಕೆಲವೊಂದು ಕಲಮುಗಳನ್ನು ಸ್ಥಗಿತಗೊಳಿಸಲಾಗಿತ್ತು ಈ ಅವಧಿಯನ್ನು ಈ ವರುಷ ಜೂನ್ ೩೦ರ ವರೆಗೆ ಮುಂದುವರಿಸುವ, ಹಳೆಯ ಮೈಸೂರು ಪ್ರದೇಶದಲ್ಲೂ ಈ ವರ್ಷ ಮುಕ್ತಾಯವಾಗಲಿದ್ದ ಸಾಗುವಳಿ ಹಕ್ಕುಗಳನ್ನು ೫೮ರ ಕೊನೆಯವರೆಗೂ ಮುಂದುವರಿಸುವ ಉದ್ದೇಶಗಳು ಈ ಮಸೂದೆಯಲ್ಲಿದ್ದುವು. ಇದರಿಂದಾಗಿ ರಾಜ್ಯಪಾಲರು ಈ ಸಂಬಂಧ ಇತ್ತ ಸುಗ್ರೀವಾಜ್ಞೆಯು ವಿಧೇಯಕ ರೂಪದಲ್ಲಿ ವ್ಯವಹಾರಕ್ಕೆ ಬರುವುದು.

ಕಚ್ಚಾ ಫಿಲ್ಮಿನ ಕಾರಖಾನೆ

ಭಾರತದಲ್ಲಿ ಕಚ್ಚಾ ಫಿಲ್ಮುಗಳನ್ನು ತಯಾರಿಸುವ ಕಾರಖಾನೆಯನ್ನು ಸ್ಥಾಪಿಸುವ ಕುರಿತಾಗಿ ಪೂರ್ವ ಜರ್ಮನಿಯ ಲ್ಲಿನ ಆಗಫಾ ಕಂಪೆನಿಯೊಂದಿಗೆ ಮಾತುಕತೆ ನಡೆಸಲಾಗುತ್ತಿದೆ ಎಂದೂ ಈ ನಿಯೋಜಿತ ಕಾರಖಾನೆಗೆ ಸುಮಾರು ಏಳೂವರೆ ಕೋಟಿಗಳಷ್ಟು ವೆಚ್ಚವು ಬರುವುದೆಂದೂ ಇದರಿಂದ, ಪ್ರತಿವರ್ಷ ಐವತ್ತು ಕೋಟಿ ಅಡಿ ಉದ್ದದ ಕಚ್ಚಾ ಫಿಲ್ಮು ತಯಾರಿಸಲ್ಪಡುವುದೆಂದೂಹಿಸಲಾಗಿರುವುದೆಂದೂ, ಆದರೆ, ಈ ಕಾರಖಾನೆಯನ್ನು ಎಲ್ಲಿ ಸ್ಥಾಪಿಸಬೇಕೆಂಬ ಬಗ್ಗೆ ಇದುವರೆಗೂ ಕೊನೆಯ ನಿರ್ಧಾರವಾಗಿಲ್ಲವೆಂದೂ ವಾಣಿಜ್ಯ ಮತ್ತು ಉದ್ದಿಮೆ ಶಾಖೆಯ ಉಪಮಂತ್ರಿ ಶ್ರೀ ಸತೀಶ ಚಂದ್ರರು ಲೋಕಸಭೆಯಲ್ಲಿ ಬಹಿರಂಗಪಡಿಸಿದರು.

ಮಂತ್ರಿ ಮಂಡಳದ ಪುನಾರಚನೆ

ಕೇಂದ್ರ ಮಂತ್ರಿ ಮಂಡಳದಲ್ಲಿ ಪುನಾರಚನೆಯಾಗುವುದು ಸುನಿಶ್ಚಿತವೆಂದು ತಿಳಿದಿರುವ ಈ ಸಮಯದಲ್ಲಿ ಇನ್ನೊಂದು ಊಹಾ ಪೋಹೆಯು ಹಬ್ಬಿದೆ. ಇದಕ್ಕೆ ಸಂಬಂಧಿಸಿದ ಘೋಷಣೆಯು ಶೀಘ್ರದಲ್ಲಿಯೇ ಆಗುವುದೆಂದು ನಿರೀಕ್ಷೆಯಿದೆ. ಸದ್ಯ ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿಯಾಗಿರುವ ಶ್ರೀ ಮುರಾರ್ಜಿ ದೇಸಾಯಿಯವರು ಅರ್ಥ ಮಂತ್ರಿಯಾಗಿ ಶ್ರೀ ಲಾಲಬಹಾದ್ದೂರ ಶಾಸ್ತ್ರಿಯವರು ತಮ್ಮ ವಾಣಿಜ್ಯ ಮತ್ತು ಸಾರಿಗೆ ಶಾಖೆಗಳನ್ನು ತೊರೆದು, ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿಗಳಾಗುವರು. ಉತ್ತರ ಪ್ರದೇಶದ ಶ್ರೀ ಅಲೀಜಹೀರ ಮತ್ತು ಆಂಧ್ರದ ಅರ್ಥ ಮಂತ್ರಿ ಶ್ರೀ ಗೋಪಾಲ ರೆಡ್ಡಿಯವರಿಗೆ ಕೇಂದ್ರ ಮಂತ್ರಿ ಮಂಡಲದಲ್ಲಿ ಸ್ಥಾನ ದೊರೆಯುವ ನಿರೀಕ್ಷೆಯಿದೆ. ಈಗ ಕಾನೂನು ಇಲಾಖೆಯ ಶ್ರೀ ಅಶೋಕ ಕುಮಾರ ಸೇನರು ಪ್ರಾಯಃ ಕ್ಯಾಬಿನೆಟ್ ಮಟ್ಟದ ಮಂತ್ರಿಯಾಗುವರು. ಹಾಗಾದಪಕ್ಷದಲ್ಲಿ ಶ್ರೀ ಅಲೀ ಜಹೀರರು ಕಾನೂನು ವಿಭಾಗವನ್ನು ನಿರ್ವಹಿಸುವರು.

ಸುಮಾತ್ರದ ಮೇಲೆ ದಾಳಿ?

ಇಂಡೋನೇಶಿಯಾದ ಕೇಂದ್ರ ಸರಕಾರದ ಸೈನ್ಯಗಳು ಮಧ್ಯಸುಮಾತ್ರದಲ್ಲಿರುವ ಬಂಡುಗಾರರ ಮೇಲೆ ದಂಡೆತ್ತಿ ಹೋಗಲು ಸಿಂಗಾಪುರದ ದಕ್ಷಿಣಕ್ಕಿರುವ ರಿಯೋ ದೀಪದಲ್ಲಿ ಸಜ್ಜಾಗಿ ಕುಳಿತಿವೆ ಎಂದು ತಿಳಿದುಬಂದಿದೆ. ಸಿಂಗಾಪುರಕ್ಕೆ ೫೦ ಮೈಲು ದೂರದಲ್ಲಿರುವ ಸಾವಿರಾರು ಇಂಡೋನೇಶಿಯನ ಸೈನಿಕರು ಯುದ್ಧದ ಕಹಳೆಯನ್ನು ಎದುರುನೋಡುತ್ತಿರುವರೆಂದೂ ಪಕಾನ ಬಹಾರು ಎಂಬ ಪ್ರದೇಶದ ಮೇಲೆಯೇ ಧಾಳಿಯು ಪ್ರಾರಂಭವಾಗಬಹುದೆಂದೂ ತಿಳಿದುಬಂದಿದೆ. ಮಧ್ಯ ಸುಮಾತ್ರದಲ್ಲಿನ ಬಂಡುಗಾರ ಸರಕಾರವು ತನ್ನ ಅಧೀನವಿರುವ ಪ್ರದೇಶಗಳಲ್ಲಿ ಒತ್ತಾಯದ ಸೈನ್ಯ ಭರತಿಯನ್ನು ಆರಂಭಿಸಿದೆ. ಪ್ರತಿಯೊಂದು ಹಳ್ಳಿಯಲ್ಲಿಯೂ ಗ್ರಾಮಸಂರಕ್ಷಣಾ ಪಡೆಯನ್ನು ರಚಿಸಲಾಗುವುದೆಂದೂ ೧೫ರಿಂದ ೪೫ ವರ್ಷದೊಳಗಿನ ಎಲ್ಲ ಪುರುಷರೂ ತರಬೇತಿಗಾಗಿ ತಮ್ಮ ಹೆಸರುಗಳನ್ನು ನೋಂದಾಯಿಸಬೇಕೆಂದು ಆಜ್ಞಾಪಿಸಲಾಗಿದೆ ಎಂಬೂ ತಿಳಿದುಬಂದಿದೆ.

ನೂನರು ತನ್ನ ಬೆನ್ನು ತಟ್ಟಿಕೊಂಡರು

ಭಾರತದೊಡನೆ ಸ್ನೇಹಸಂಬಂಧವು ಪ್ರಸ್ಥಾಪಿತವಾಗುವ ವರೆಗೆ ಪಾಕಿಸ್ತಾನಕ್ಕೆ ಅನ್ಯರಾಷ್ಟ್ರಗಳ ಸ್ನೇಹಸಂಬಂಧವು ಅತ್ಯಗತ್ಯವಾದುದರಿಂದ, ಪಶ್ಚಿಮ ರಾಷ್ಟ್ರಗಳೊಡನೆ ಮಾಡಿಕೊಂಡ ಬಗದಾದ ಸೀಟೋ ಒಡಂಬಡಿಕೆಗಳು ಸಮರ್ಥನೀಯವೇ ಆಗಿರುತ್ತವೆ. ಜಗತ್ತಿನಲ್ಲಿ ಯಾವುದೇ ರಾಷ್ಟ್ರವೂ ಎಂದೂ ಏಕಾಕಿಯಾಗಿ ಉಳಿಯಲಾರದು. ಅದರಲ್ಲಿಯೂ ನೆರೆಯಲ್ಲಿಯೇ ಕಡುವೈರಿಯಾದ ಭಾರತವು ಇರುವ ಪಾಕಿಸ್ತಾನಕ್ಕಂತೂ ಏಕಾಕಿಯಾಗಿರುವುದು ಇನ್ನೂ ಹೆಚ್ಚು ಅಸಾಧ್ಯವಾಗಿದೆ. ಭಾರತದೊಡನೆ ಸ್ನೇಹಸಂಬಂಧ ಸ್ಥಾಪನೆ ಹೊಂದುವುದು ಸಾಧ್ಯವಿಲ್ಲ; ಏಕೆಂದರೆ ರಾಷ್ಟ್ರ ವಿಭಜನೆಗೆ ನಾವು ಕಾರಣರಾದವರೆಂದು ನಮ್ಮನ್ನು ಕ್ಷಮಿಸಲು ಅದು ಸಿದ್ಧವಿಲ್ಲ. ರಾಷ್ಟ್ರ ವಿಭಜನೆಗೆ ಮನಸಾ ಒಪ್ಪದ ಕೆಲವು ಪಕ್ಷಗಳು ಇಂದಿಗೂ ಭಾರತದಲ್ಲಿವೆ ಎಂದು ಪಾಕ ಪ್ರಧಾನಿ ಶ್ರೀ ನೂನರು ಉಲಿದು ಬಿಟ್ಟಿದ್ದಾರೆ.

ಬ್ರಹ್ಮಕ್ಕೆ ಭಾರತದಿಂದ ಸಾಲ

ಭಾರತವು ಬ್ರಹ್ಮದೇಶಕ್ಕೆ ಕೊಡಮಾಡಿದ್ದ ರೂ. ೨೦ ಕೋಟಿ ಸಾಲದ ಒಪ್ಪಂದ ಪತ್ರಗಳ ಪರಸ್ಪರ ವಿನಿಮಯವು ರಂ

…ನದಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳ ಸಂಮುಖದಲ್ಲಿ ನಡೆಯಿತು. ಹೊಸ ದಿಲ್ಲಿಯಲ್ಲಿ ಕಳೆದ ವ ಮಾರ್ಚ ೩ರಂದು ಭಾರತದ ಅಗಿನ ವಿತ್ತ ಮಂತ್ರಿ ಶ್ರೀ ಟಿ ಟಿ ಕೆ ಮತ್ತು ಭಾರತದಲ್ಲಿನ ಬ್ರಹ್ಮದೇಶದ ರಾಯಭಾರಿಗಳು ಅಂಕಿತಹಾಕಿದ ಪರಸ್ಪರ ಹಣಕಾಸಿನ ಒಪ್ಪಂದದನ್ವಯ ಈ ಸಾಲವನ್ನು ಕೊಡಲಾಗಿದ್ದು ಬ್ರಹ್ಮದೇಶವು ಇದನ್ನು ೧೦೦ ಕೈ ನಾಲ್ಕೂವರೆ ಬಡ್ಡಿದರದಂತೆ ೨೪ ಸಮಾನ ಕಂತುಗಳಲ್ಲಿ ಮರಳಿ ಮುಟ್ಟಿಸಬೇಕಾಗಿದೆ

'ಬೇಟ' ಮಣ್ಣುಪಾಲಾಯಿತು'

ಅಮೇರಿಕೆಯು ಹಾರಿಸಿದ ಎರಡನೆಯ ಉಪಗ್ರಹ ಬೇಟಾವು ತನ್ನ ಪಥವನ್ನು ತಲುಪದೆ ಭೂಮಿಗೆ ಬಿದ್ದುದೆಂದು ವರದಿಯಾಗಿದೆ ಅದನ್ನು ಹಾರಿಸಿದ ಸ್ಥಳವಾದ ಕೇಪಕೆನೆವರಲದಿಂದ ೧೯೦೦ ಮೈಲುಗಳ ದೂರದಲ್ಲಿ ಅದು ಉರುದು ಹೋಗಿರಬೇಕೆಂದು ಊಹಿಸಲಾಗಿದೆ ಅದು ಉರಿದು ಅಫ್ರಿಕಾಖಂಡದ ಮೇಲೆ, ಹಿಂದೀ ಮಹಾಸಾಗರದ ಮೇಲೆ ಇಲ್ಲವೇ ದಕ್ಷಿಣ ಅಟ್ಲಾಂಟಿಕ ಸಾಗರದಲ್ಲಿ ಬಿದ್ದಿರಬೇಕೆಂದು ತರ್ಕಿಸಲಾಗಿದೆ

ಅರಬ ಪ್ರಜಾರಾಜ್ಯ

ಅರಬ ಪ್ರಜ ರಾಜ್ಯಕ್ಕೆ ಯೆಮನವೂ ಸೇರಿಕೊಂಡಿದೆ. ಅಧ್ಯಕ್ಷ ನಾಸೀರರು ಸಂಯುಕ್ತ ಅರಬ ರಾಷ್ಟ್ರದ ತಾತ್ಪೂರ್ತಿಕ ಸಂವಿದಾನವನ್ನು ಪ್ರಕಾಶಪಡಿಸಿದ್ದಾರೆ ಅದರನ್ವಯ ಈ ನೂತನ ಪ್ರಜಾರಾಜ್ಯವು ಜ ತ್ಯತೀತವಾಗುವುದೆಂದು ತಿಳಿದುಬಂದಿದೆ ಹಿಂದೆ ಈಜಿಪ್ತದ ಸಂವಿಧಾನದಲ್ಲಿ ಇಸ್ಲಾಮವು ರಾಷ್ಟ್ರಧರ್ಮವೆಂದಿದ್ದುದನ್ನು ಈ ನೂತನ ಘಟನೆಯಲ್ಲಿ ಬಿಟ್ಟುಬಿಡಲಾಗಿದೆ. ವಿಧಾನಸಭೆಗಳಿಗೆ ಅದ್ದು ಹೆಚ್ಚು ಅಧಿಕಾರವಿತ್ತಿದ್ದು ಅಧ್ಯಕ್ಷಹುದ್ದೆಯನ್ನು ಹೆಚ್ಚು ಪ್ರಜಾಸತ್ತಾತ್ಮಕಗೊಳಿಸಿದೆ ಒಟ್ಟ ಇಲ್ಲವೇ ಹೆಚ್ಚು ಮಂದಿ ಉಪಮುಖ್ಯರಿಗೆ ಹೆಚ್ಚಿನ ಹೊಣೆಗಾರಿಕೆಗಳನ್ನು ವಹಿಸಿಕೊಡಲು ಅದು ಅವಕಾಶವನ್ನುಂಟುಮಾಡಿದೆ. ಸಂ ರಾ ಸಂಘವು ಈ ಅರಬ ಪ್ರಜಾರಾಜ್ಯವನ್ನು ಮನ್ನಿಸಿದೆ

ಉ ಆಫ್ರಿಕದ ಮಹಾ ಮಂಡಲ

ಒಂದೆಡೆ ಈಜಿಪ್ಟ ಸಿರಿಯಾ ಯೆಮನಗಳ ಒಕ್ಕೂಟಕ್ಕೆ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಒಂದಾದ ಬಗ್ಗೆ ಸ್ವಾಗತ ನೀಡುತ್ತಿರುವ ಗದ್ದಲದಲ್ಲಿ ಇರಾಕ ಜೋರ್ಡಾನಗಳ ವಿಲಯನದ ಮಾತುಕತೆ ಎಡೆಯಲ್ಲಿ ಮೊರಕ್ಕೋ ಟ್ಯುನೀಸಿಯಾ ಮತ್ತು ಅಲ್ಜೀರಿಯಾಗಳ ಮಹಾಮಂಡಲವೊಂದನ್ನು ಸ್ಥಾಪಿಸುವುದಕ್ಕೆ ಕಾಲವು ಅನುಕೂಲರಿರುವುದಾಗಿ ಮೊರಕ್ಕೋವಿನ ಅರಸ ಶ್ರೀ ಮಹಮ್ಮದವಿ ಅವರು ಹೇಳಿದ್ದಾರೆ ಮೂರು ದೇಶಗಳ ಹೊಣೆಗಾರ ಧುರೀಣರು ಆ ಉತ್ತರ ಆಫ್ರಿಕದ ಒಕ್ಕೂಟದ ಸ್ವರೂಪ ಮತ್ತು ಅಸ್ತಿತ್ವ ರೂಪಿಸುವರೆಂದೂ ಅವರು ಹಾರೈಸಿದರು

ಜತ್ತಿ ಸಮಿತಿಯ ವರದಿ

ಮೈಸೂರಿನ ವಿಧಾನ ಸಭೆ ಮತು ಪರಿಷತ್ತುಗಳಲ್ಲಿ ಜತ್ತಿ ಸಮಿತಿಯ ವರದಿಯು ಚರ್ಚೆಗೊಳಗಾಗಿದ ಇದರಲ್ಲಿನ ಸುಧಾರಣೆಗಳನ್ನು ಒಪ್ಪಿಕೊಳ್ಳದಿದ್ದರೆ, ಕಮ್ಯೂನಿಸಂ ಖಂಡಿತವಾಗಿ ಆಕ್ರಮಣ ನಡೆಸಿ ಕೊಲದೊಡೆಯರಿಗೆ ಮತಸ್ಟು ತೊಂದರೆಯಾಗವುದೆಂದು ಕೆಲವರು ಸಮರ್ಥಿಸಿದರ ಹಾಗೆಯೇ ಈ ಸಮಿತಿಯು ಸಿಫಾರಸುಗಳು ಅವಾಸ್ತವವಾಗಿದೆ ಎಂದೂ ಅದನ್ನು ಕಾರ್ಯರೂಪದಲ್ಲಿಳಿಸುವುದು ಸರಿಯಲ್ಲವೆಂದೂ ಕೆಲವರು ದೂರಿದರು ಹೀಗೆ ಈ ವಿವಾದಾತ್ಮಕವೆನಿಸಿದ ವರದಿಯ ಬಗ್ಗೆ ಸಮ್ಮಿಶ್ರ ಪ್ರತಿಕ್ರಿಯೆ ಯು ವ್ಯಕ್ತಪಟ್ಟಿದೆ

ಕೇರಳದಲ್ಲಿಯೂ ಹೊಸ ಕರಗಳು

ಕೇರಳ ರಾಜ್ಯದ ೧೯೫೮—೫೯ನೇ ವರ್ಷದ ಮುಂಗಡಪತ್ರವನ್ನು ಕೇರಳದ ಅರ್ಥಮಂತ್ರಿ ಶ್ರೀ ಅಚ್ಯುತ ಮೆನನರು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ ಇದರಲ್ಲಿ ಆಯವು ೩೩.೬೨ ಕೋಟಿಗಳಿದ್ದು ವ್ಯಯವು ೩೪.೧೭ ಕೋಟಿಯಾಗಿ ಕಾಣಿಸಲಾಗಿದೆ ಹೀಗಾಗಿ ಈ ಮುಂಗಡ ಪತ್ರದಲ್ಲಿ ೬೬ ಲಕ್ಷ ರೂಪಾಯಿಗಳ ಕೊರತೆಯು ತೋರಿದೆ ಅಲ್ಲದೆ, ಕೊರತೆಯು ಮೊತ್ತಕ್ಕೆ ಸಮಾನವಾದ ಆದಾಯ ಬರುವಂತೆ ಅಕ್ಷಯೂ ಹೊಸ ಕರಗಳನ್ನು ಸೂಚಿಸಲಾಗಿದೆ ಎಂದು ತಿಳಿಯುತ್ತದೆ

ಶಸ್ತ್ರ ಚಿಕಿತ್ಸೆಯಲ್ಲಿ ಬಾಬೂ

ರಾಷ್ಟ್ರಪತಿ ಡಾ ರಾಜೇಂದ್ರ ಪ್ರಸಾದರ ಎಡಗಣ್ಣಿಗೆ ಮೋತಿ ಬಿಂದುವಿನ ಶಸ್ತ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ ಕಳೆದ ವರ್ಷ ಅವರ ಬಲಗಣ್ಣಿಗೆ ಈ ಶಸ್ತ್ರಕ್ರಿಯೆಯು ನಡೆದಿತ್ತು ಕೇವಲ ೧೨ ದಿನಗಳ ವರೆಗೆ ವಿರಾಮವನ್ನವರು ತೆಗೆದುಕೊಳ್ಳಬೇಕೆಂದು ಅವರ ಗೌ| ವೈದ್ಯರಂದ ಡಾ ಬಿ ರಾಮರು ಹೇಳಿದ್ದಾರೆ

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು

ತಾ 10ರಂದು ವೈಸ್ ಚೇರ್‌ಮೆನ್ ಶ್ರೀ ಪಿ ವಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡಿಗೆ ಸೇಕಡಾ ೪ರಂತೆ ಬಡ್ಡಿ ಕೊಡಬಹುದೆಂದಾಯಿತು ಉಡುಪಿಯಿಂದ ಬೆಂಗಳೂರಿಗೆ ಬಸ್ ಸರ್ವಿಸು ತೆರೆಯುವ ಕುರಿತು ಸಂಬಂಧಪಟ್ಟ ಅಧಿಕಾರಿಗಳಿಂದ ಬಂದ ಪತ್ರವನ್ನು ಬಾಕಿಯಿಡಲಾಯಿತು ಸಿಟಿಬಸ್ ಸ್ಟೇಂಡಿನ ಮತ್ತು ಮಿಷನ್‌ಮಾರ್ಕೆಟು ಒಳಿಯಲ್ಲಿ ಹೊಲಸು ಕೂಡಿಡುವುದನ್ನು ಬೇರೆ ಸ್ಥಳಗಳಿಗೆ ವರ್ಗಾಯಿಸಬೇಕೆನ್ನುವುದಕ್ಕೆ ಕೌನ್ಸಿಲಿನ ಒಪ್ಪಿಗೆ ದೊರೆಯಿತು ಮುನಿಸಿಪಲ್ ಬಂಗ್ಲೆಯ ಪೂರ್ವ ಬದಿಯ ರಸ್ತೆಯಲ್ಲಿ ವಾಹನ ಕೆಂದು ಹೋಗುವುದನ್ನು ನಿಲ್ಲಿಸುವುದೆಂದಾಯಿತು

ಲಾ ಕಾಲೇಜು ವಾರ್ಷಿಕೋತ್ಸವ.

ಉಡುಪಿ ಲಾ ಕಾಲೇಜಿನ ಪ್ರಥಮ ವಾರ್ಷಿಕೋತ್ಸವವು ತಾ ೮ರಂದು ಜಿಲ್ಲಾ ಸೆಶನ್ಸ್ ಜಡ್ಜರಾದ ಶ್ರೀ ಎನ್ ಎಸ್ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು ಎಕಡಮಿ ಆಫ್ ಜನರಲ್ ಎಜ್ಯುಕೇಶನ್ನ ರಜಿಸ್ಟ್ರಾರ್ ಡಾ ಟಿ ಎಮ್ ಎ ಪೈಗಳು ಸ್ವಾಗತಭಾಷಣಮಾಡಿದರು ಕಾಲೇಜ್ ಪ್ರಿನ್ಸಿಪಾಲ್ ಶ್ರೀ ಬಿ ಎಲ್ ಎಸ್ ರೈಗಳು ಸಂದೇಶವಾಚನ ಮಾಡಿ ವರದಿಯನ್ನೋದಿದರು ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಲಾ ಕಾಲೇಜುಗಳ ಆವಶ್ಯಕತೆ, ಕಾನೂನಿನ ತಿಳುವಳಿಕೆ, ರಾಜಕೀಯ ಕ್ಷೇತ್ರದಲ್ಲಿ ಬೆಳಗಲು ವಕೀಲರಿಗಿರುವ ಸೌಕರ್ಯ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣಮಾಡಿದರು ಯೂನಿಯನ್ ಅಧ್ಯಕ್ಷ ಶ್ರೀ ಕೆ ಬಿ ಗೋಪಿನಾಥರಾಯರು ಧನ್ಯವಾದಗಳನ್ನಿತ್ತರು ಬಳಿಕ ನಾಟಕಾಭಿನಂಯಗಳಾದುವು

ಬೇಸಿಕ್ ಟ್ರೈನಿಂಗ್ ಶಾಲಾ ವಾರ್ಷಿಕೋತ್ಸವವು ತಾ ೬ರಂದು ಡಾ ಟಿ ಎಮ್ ಎ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಬಿ ಎಸ್. ಆಚಾರ್ಯರು ಶಾಲಾ ವರದಿಯನ್ನೋದಿದರು ಶ್ರೀ ವಿಠಲ ಸೇರಿಗಾರರು ಸ್ವಸ್ತಿವಾಚನಮಾಡಿದರು ಕಡೆಗೆ ನಾಟಕಾದಿ ವಿವಿಧ ವಿನೋದಾವಳಿಗಳಾದುವು

ಕಡಿಯಾಳಿ ಹಾ। ಎ। ಶಾಲಾ ವರ್ಧಂತಿ ಸಮಾರಂಭವು—ಉಡುಪಿ ಉತ್ತರಶ್ರೇಣಿಯ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎನ್ ವಿಶ್ವನಾಥರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಾತಃಕಾಲ ಶ್ರೀ ವಿ ಎಸ್ ಆಚಾರ್ಯರು ಧ್ವಜಾರೋಹಣ ಮಾಡಿದರು ಶಾಲಾ ನೂತನ ರಂಗಮಂಟಪವನ್ನು ಶ್ರೀ ಎ ಜೆ. ಆಳ್ವಿಯವರು ಉದ್ಘಾಟಿಸಿದರು ಮರುದಿವಸ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಶ್ರೀ ಬಿ ಅನಂತಕೃಷ್ಣ ಸಾಮಗರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎ ವಾಸುದೇವ ಭಟ್ಟರು ಸ್ವಾಗತಿಸಿದರು ಶ್ರೀ ಎಸ್ ಗೋಪಾಲರಾಯರು ವರದಿವಾಚನ ಮಾಡಿದರು ಸಭಿಕರಲ್ಲಿ ಶ್ರೀ ಎಸ್ ಕುಮಾರಸ್ವಾಮಿಯವರು ಮಾತನಾಡಿದರು ಅಧ್ಯಕ್ಷರ ಭಾಷಣವಾಗಿ ವಿವಿಧ ವಿನೋದಾವಳಿಗಳಾದುವು

ವಿವಾಹ ಸಮಾರಂಭಗಳು— ದಿವಂಗತ ಶ್ರೀ ಉಪೇಂದ್ರ ಅನಂತ ಪೈಗಳ ಪುತ್ರಿ ಕುಮಾರಿ ತಾರಾ ಮತ್ತು ಶ್ರೀ ಎಸ್ ಮುಕುಂದ ಕುಡ್ವರ ಪುತ್ರ ಶ್ರೀ ದಿನೇಶ ಇವರ ವಿವಾಹವು ತಾ ೨ರಂದು ಸಂಜೆ ಮಣಿಪಾಲದ ಚಿತ್ರಕಲಾ ಮಂದಿರದ ಸಿಜ್ಯಾಭವನದಲ್ಲಿ ನೆರವೇರಿತು ಇದಕ್ಕೆ ಜಿಲ್ಲೆಯಿಂದಲೂ ಪರ ಜಿಲ್ಲೆಗಳಿಂದಲೂ ಅನೇಕ ಮಹನೀಯರನೇಕರು ಬಂದು ವಧೂವರರನ್ನು ಆಶೀರ್ವದಿಸಿದ್ದರು

ಪ್ರಸಿದ್ಧ ಲೇಖಕರಲ್ಲೊಬ್ಬರಾದ ಶ್ರೀ ಎ ಎಸ್ ರಾಮಕೃಷ್ಣ (ದಿವಂಗತ ಅಜ್ಜರು ಸೀತಾರಾಮ ಭಟ್ಟರ ಮಗ) ಮತ್ತು ಕುಮಾರಿ ವಿಶಲಾಕ್ಷಿ (ಮಂಗಲಪಾಡಿ ಶ್ರೀ ನಾರಾಯಣ ಮಯ್ಯರ ಮಗಳು) ಇವರ ವಿವಾಹ ಸಮಾರಂಭವು ತಾ. 9ರಂದು ಸಂಜೆ ಪುತ್ತೂರಿನ 'ಹರಿದಿಮನೆ'ಯಲ್ಲಿ ವೈಭವದಿಂದ ಜರಗಿತು

ಮಲ್ಪೆ— ಸ್ಥಳೀಯ ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ವಾರ್ಷಿಕೋತ್ಸವವು ತಾ ೮ರಂದು ಡಾ ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಎಸ್. ಅಮಿನ್‌ರವರು ವರದಿಯನ್ನೋದಿದರು ಶ್ರೀಮತಿ ಟಿ ಎಮ್ ಎ ಪೈಗಳು ಬಹುಮಾನವಿತರಣೆ ಮಾಡಿದರು ಅಧ್ಯಕ್ಷರ ಭಾಷಣಾನಂತರ ಶಾಲಾ ಬಾಲಕರಿಂದ ಭರತನ ಬಂಧುಪ್ರೇಮ' ನಾಟಕವೂ ಶಾಲಾ ಬಾಲಕಿಯರಿಂದ 'ಆತಾಪರಿತ್ಯಾಗ' ನಾಟಕವೂ ಅಭಿನಯಿಸಲ್ಪಟ್ಟವು ಮರುದಿವಸ ಈ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ದಿನಾಚರಣೆಯು ಡಾ ವಿ ಕೆ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳಾದುವು.

ಬೈಲೂರು— ಉಡುಪಿ ತಾಲೂಕು ಬೈಲೂರು ಮತ್ತು ಕೊರಂಗ್ರಪಾಡಿ ಸಾರ್ವಜನಿಕ ಸಂಯುಕ್ತ ಸಭೆಯು ತಾ 9ರಂದು ಬೈಲೂರು ಮಹಿಷಾಸುರಮರ್ಧಿನಿ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ದೇವಪುತ್ರ ಆನಂದರ ಅಧ್ಯಕ್ಷತೆಯಲ್ಲಿ ಜರಗಿತು. ಸದ್ರಿ ಶಾಲೆಯನ್ನು ಹಾ ಎ ಶಾಲೆಯನ್ನಾಗಿ ಪರಿವರ್ತಿಸಬೇಕೆಂದು ಸಭೆಯ ಅಭಿಪ್ರಾಯವಾಯಿತು ಆ ಬಗ್ಗೆ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟು ಶ್ರೀಗಳಾದ ಡಾ. ಶ್ಯಾಮ ಸೆಟ್ಟಿ, ಅಧ್ಯಕ್ಷ ಗ್ಲಡ್ಸನ್ ಜತ್ತನ್ನ ಮತ್ತು ಗಿಲ್ಬರ್ಟ ಕರ್ಕಡ, ಕಾರ್ಯದರ್ಶಿಯರು ಜೆಕಬ್ ದಿ ಅಮ್ಮಣ್ಣ, ಖಜಾನ್ಚಿಯರಾಗಿ ಆರಿಸಲ್ಪಟ್ಟರು. ಈ ಕಮಿಟಿಗೆ ಸಲಹೆನೀಡಲು ಬೈಲೂರು ಪಂಚಾಯತ ಬೋರ್ಡ ಅಧ್ಯಕ್ಷ ಶ್ರೀ ಕಾಳಪ್ಪ ಸೆಟ್ಟಿ, ಕೊರಂಗ್ರಪಾಡಿ ಪಂಚಾಯತಬೋರ್ಡ ಅಧ್ಯಕ್ಷ ಶ್ರೀ ಬಾಲಕೃಷ್ಣ ಸೆಟ್ಟಿ, ಬೈಲೂರು ಪಟೇಲ್ ಶ್ರೀ ಗೋವಿಂದ ಭಂಡಾರಿ, ಕೊರಂಗ್ರಪಾಡಿ ಪಟೇಲ್ ಶ್ರೀ ಕೆ ದೊಡ್ಡಣ್ಣ ಸೆಟ್ಟಿ ಮೊದಲಾದವರು ಚುನಾಯಿಸಲ್ಪಟ್ಟರು

ಕಾರ್ಕಳ— ಸ್ಥಳೀಯ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ 9ರಂದು ಶ್ರೀ ಐ ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯರಾದ ಡಾ ಕೆ ಬಾಳಪ್ಪ ಸೆಟ್ಟಿ, ಶ್ರೀಗಳಾದ ಎಮ್. ರಮಾನಾಥ್, ಎನ್. ಭುಜಬಲಿ ಅತಿಕಾರಿ, ಟಿ ಅನಂತರಾಮ ಭಟ್, ಎಸ್ ಎ. ಶುಕುರ ಮತ್ತು ಡಾ ಸಂಪಿಗೆತ್ತಾಯರು ಭಾಷಣಮಾಡಿ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಬೇಕೆಂದರು. ಶ್ರೀ ವಿ ವಿ ಶೆಣೈಯವರು ಧನ್ಯವಾದವನ್ನಿತ್ತರು

ಇನ್ನ— ಸ್ಥಳೀಯ ಡಿಸ್ಟ್ರಿಕ್ಟ ಬೋರ್ಡ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ತಾ. ೭ರಂದು ಜಿಲ್ಲಾಧಿಕಾರಿ ಶ್ರೀ ವೈ ಸಿ ಹೊಂಬಾಳಯ್ಯನವರು ನೆರವೇರಿಸಿದರು ಡಾ. ರಾಮಪ್ಪ ಕಾಮತರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು ಶ್ರೀ ಸುಬ್ಬಯ್ಯನವರು ಸ್ವಾಗತಿಸಿದರು ಶಾಲಾ ಸಮಿತಿ ಅಧ್ಯಕ್ಷ ಶ್ರೀ ಶಿವಣ್ಣ ಸೆಟ್ಟರು ಜಿಲ್ಲಾಧಿಕಾರಿಗಳಿಗೆ ಮಾನಪತ್ರವನ್ನರ್ಪಿಸಿದರು

ತಿದ್ದುಪಡಿ

ತಾ ೬—೩—೫೮ರ 'ನವಯುಗ'ದ ಸಂಚಿಕೆಯಲ್ಲಿ ಪ್ರಕಟವಾದ "ವಿದ್ಯಾಭ್ಯಾಸದಲ್ಲಿ ಅಂತಾರಾಷ್ಟ್ರೀಯತೆ" ಎಂಬ ಲೇಖನವನ್ನು ಬರೆದವರು ಶ್ರೀ ಎಚ್ ಗಣೇಶ, ಎಂ ಇಡಿ ಎಂದೂ, ಅದೇ ಲೇಖನದ ೧ನೆ ಕಾಲಮ್ದ ಒಂದನೆ ಕಲಂನಲ್ಲಿ "ಯುರೋಪಿನಲ್ಲಿ ಬೆಳೆಯುತ್ತಿರುವ Moral Reornament Movement" ಎಂದು ತಪ್ಪಾಗಿ ಅಚ್ಚಾಗಿದೆ ಅದನ್ನು ಕ್ರಮವಾಗಿ ಶ್ರೀ ಎಚ್ ಗಣೇಶ, ಎಂ ಇಡಿ ಮತ್ತು "ಯುರೋಪಿನಲ್ಲಿ ಬೆಳೆಯುತ್ತಿರುವ Moral Rearmament Movement' ಎಂದು ತಿದ್ದಿ ಓದಬೇಕಾಗಿ ವಿನಂತಿ —ಸಂ ನ

ಬಿಳೀತೊನ್ನು ಮತ್ತು ಕುಷ್ಠರೋಗ

ಈ ಔಷಧವನ್ನು ಕೆಲವು ದಿನಗಳು ಉಪಯೋಗಿಸುವುದರಿಂದ ಬಿಳೀತೊನ್ನು ಮತ್ತು ಕುಷ್ಠರೋಗ ಶೀಘ್ರದಲ್ಲಿಯೇ ಗುಣವಾಗುವುದು ನಾವು ಅನೇಕ ವೈದ್ಯರುಗಳು, ಹಕೀಮರು, ಕವಿರಾಜರು ಮತ್ತು ಡಾಕ್ಟರುಗಳಿಂದ ನಿರಾಶರಾಗಿದ್ದರೆ, ಇದನ್ನು ಉಪಯೋಗಿಸಿ ಇದು ಭಯಂಕರ ರೋಗವನ್ನು ನಿವಾರಿಸುತ್ತದೆ ಬೆಲೆ ರೂ ೫—೦—೦ ಇಂಟರ್ನಲ್ ಮೆಡಿಸಿನ್ ರೂ ೩ ೦—೦.

S. S. GUPTA & Co,
N R P O KATRI SARAI (GAYA)

'ನವಯುಗ' ವಾರಪತ್ರಿಕೆ

ಉಡುಪಿ

ವಾರ್ಷಿಕ ಚಂದಾ

ರೂ 5-12-0 (5=75)

6 ತಿಂಗಳಿಗೆ— ರೂ 3-1-0

ಮುಂಗಡವಾಗಿ ಕಳಿಸಬೇಕು

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣಕ್ಕೆ ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಯೇ ಮೊದಲಾದ ಆಮಂತ್ರಣಗಳನ್ನೂ

ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ

ಚೆಲೋದಾಗಿ ಮುದ್ರಿಸಿ ಕೊಡಲಾಗುವುದು

NAVAYUGA PRESS, UDIPI.

ಸ್ವಾಮಿ ಶಿವಾನಂದರ ವಾಣಿ.

ಸಜ್ಜನರ ಸಂಗ

ಬಿ. ಕೇಶವ ಪೈ, B A.,

ಹರಿದಾಸ, ಉಡುಪಿ.

1. ಪ್ರಪಂಚದಿಂದ ಪರಮಾರ್ಥಕ್ಕೆ ಓರ್ವನನ್ನು ತಿರುಗಿಸಲು ಸತ್ಸಂಗಕ್ಕಿಂತ ಮಿಗಿಲಾದ ಸಾಧನ ಬೇರೊಂದಿಲ್ಲ.

2. ಕೇವಲ ಮುಹೂರ್ತ ಮಾತ್ರದ ಸತ್ಸಂಗವು ಒಬ್ಬನನ್ನು ಭವಸಾಗರದಿಂದ ದಾಟಲು ಉಪಕರಿಸಬಲ್ಲುದು.

3 ಸತ್ಸಂಗವು ವಿವೇಕವನ್ನೂ, ವೈರಾಗ್ಯವನ್ನೂ ದೊರಕಿಸುತ್ತದೆ.

4. ಸಜ್ಜನರ ಸಹವಾಸವು ಪ್ರಾಪಂಚಿಕ ಸುಖದ ಅನಿತ್ಯತೆಯನ್ನು ತೋರಿಕೊಟ್ಟು, ಸತ್ಯಸ್ವರೂಪನಾದ ಬ್ರಹ್ಮನ ನಿತ್ಯ ಸುಖಪಡೆಯುವ ಸ್ಥಿತಿಯತ್ತ ನಮ್ಮನ್ನು ಕೊಂಡೊಯ್ಯುವುದು.

5. ಭಕ್ತನಲ್ಲಿ ಭಗವಂತ; ಭಗವಂತನಲ್ಲಿ ಭಕ್ತ.

6. ದೇವರು ತನ್ನ ಭಕ್ತರ ಮೂಲಕ ಜನರ ಬಳಿ ಮಾತಾಡುವನು.

7. ಅನೇಕ ಜನರಿಗೆ ದೇವರು ಅವರವರ ಭಾಷೆಯಿಂದಲೇ ಮಾತಾಡುವ ಓರ್ವೋರ್ವ ಪ್ರವಾದಿಯನ್ನು ಕಳುಹುತ್ತಾನೆ.

8. ಭಕ್ತನು ಜಗವನ್ನೇ ಪಾವನಗೊಳಿಸುವನು.

9. ಭಗವಂತನು ತನ್ನ ಅಪಾರ ಕರುಣೆ ಮತ್ತು ನಿಸ್ಸೀಮ ಜ್ಞಾನದಿಂದಲೇ ಆಗಾಗ್ಗೆ ಜನಾಂಗವು ಧರ್ಮದ ಮತ್ತು ಶಾಂತಿಯ ಪಥದಲ್ಲಿ ನಡೆಯಲು ತನ್ನ ಭಕ್ತರನ್ನು ಜಗತ್ತಿಗೆ ಕಳುಹಿಸುತ್ತಾನೆ.

10. ಚೈತನ್ಯ ಯಾ ಆತ್ಮವು ಅಗಾಧವಾದ ಜ್ಞಾನದ ಶರಧಿಯಾಗಿದೆ. ಆ ಭಗವಂತನ ಜ್ಞಾನವು ಹರಿಯುವ ಕಾಲುವೆಯೇ ಸಂತರ ಹೃದಯ.

11. ಭಗವದ್ಭಕ್ತರನ್ನು ಮತ್ತು ಮಹಾತ್ಮರನ್ನು ಸೇವಿಸಲು ಹಾಗೂ ಅವರ ಸಂಗದಲ್ಲಿರಲು ಹಾತೊರೆಯುತ್ತಿರು.

ಮುಂದಿನವಾರ ('ಐಹಿಕ ಸುಖದ ಅನಿತ್ಯತೆ')

ಸಾರ್ವಜನಿಕ ಆರೋಗ್ಯ ಸುಧಾರಣೆ

(೫ನೇ ಪುಟದಿಂದ)

ವರ ಹತೋಟಿಯಲ್ಲಿ ಕೆಲಸ ಮಾಡುವುದು. ಈ ಸಂಸ್ಥೆ ಹಿರಿಯ ಅಧಿಕಾರಿಗಳಲ್ಲಿ ಹೆಚ್ಚು ಮಂದಿ ವಿದೇಶಗಳಲ್ಲಿ ವಿಶೇಷ ತರಬೇತಿಯನ್ನು ಪಡೆದಿರುವರು. ರಾಕಿಫೆಲರ್ ಫೌಂಡೇಷನ್ ಸಂಸ್ಥೆ, ಅಮೇರಿಕಾದ ಸಂಯುಕ್ತ ಸಂಸ್ಥಾನಗಳ ತಾಂತ್ರಿಕ ಸಹಕಾರ ಮಂಡಲಿ, ಪ್ರಪಂಚ ಆರೋಗ್ಯ ಸಂಸ್ಥೆ, ಸಂಯುಕ್ತ ರಾಷ್ಟ್ರ ಸಂಘದ ಆಹಾರ ಮತ್ತು ವ್ಯವಸಾಯ ಸಂಸ್ಥೆ, ಕೊಲಂಬೋ ಯೋಜನೆ ಮತ್ತು ವಿದೇಶಗಳು ಅಂತಹ ವಿಶೇಷ ತರಬೇತಿ ಸೌಲಭ್ಯಗಳನ್ನು ನೀಡುವ ಬಗ್ಗೆ 'ಫೆಲೋಷಿಪ್'ಗಳನ್ನು ಒದಗಿಸಿವೆ.

ಈ ಸಂಸ್ಥೆಯು ಸ್ಯಾನಿಟರಿ ಎಂಜಿನಿಯರ್‌ಗಳು, ಆಹಾರ ತಜ್ಞರು, ಪೌಷ್ಟಿಕ ಆಹಾರ ಸಂಬಂಧವಾದ ತಜ್ಞರು, ನೈರ್ಮಲ್ಯ ಆರೋಗ್ಯ ಪ್ರವೀಣರು, ಸಾರ್ವಜನಿಕ ಆರೋಗ್ಯ ನರ್ಸ್‌ಗಳು, ಆರೋಗ್ಯ ಶಿಕ್ಷಕರು, ಆರೋಗ್ಯ ಅಂಕೆ ಸಂಖ್ಯಾ ಸಂಗ್ರಹಣಕಾರರು, ಮುಂತಾದವರಿಗೆ ತರಬೇತಿ ಸೌಲಭ್ಯಗಳನ್ನು ಕಲ್ಪಿಸಿದೆ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಮಂಗಳೂರು

ಮಂಗಳೂರಲ್ಲಿ ಮೈಸೂರು ಸಲಹಾ ಸಮಿತಿ ಸಭೆಯು— ತಾ. ೪ರಂದು ಬೆಳಗ್ಗೆ ಸ್ಥಳೀಯ ಮಹಿಳಾ ಸಮಾಜದಲ್ಲಿ ಮೈಸೂರು ಮಹಾರಾಣಿ ಶ್ರೀ ತ್ರಿಪುರ ಸುಂದರಮ್ಮಣ್ಣಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಸಮಿತಿಯ ಉಪಾಧ್ಯಕ್ಷೆಯಾದ ಶ್ರೀಮತಿ ಲೀಲಾವತಿ ಅಂಜನಪ್ಪನವರು ಗತ ಸಭೆಯ ವರದಿಯನ್ನೋದಿದರು. ಮೈಸೂರು ರಾಜ್ಯ ಸಲಹಾ ಸಮಿತಿಯ ಬಾಕಿ ಉಳಿದ ಸ್ಥಾನಗಳಿಗೆ ಸದಸ್ಯರನ್ನಾಗಿ ಸೇರಿಸುವಂತೆ ಶ್ರೀಮತಿ ಲೀಲಾ ಜನಾರ್ಧನ ಘಾಟೆ ಮತ್ತು ಶ್ರೀಮತಿ ಲಲಿತಾಬಾಯಿ ದೇಶಮುಖ್ ಅವರ ಹೆಸರನ್ನು ಶಿಫಾರಸು ಮಾಡಲಾಯಿತು.

ಅಧ್ಯಕ್ಷೆಯವರು ತಮ್ಮ ಭಾಷಣದಲ್ಲಿ, ನಮ್ಮ ಸಾರ್ವಭೌಮಾಧಿಕಾರಿ ಪ್ರಜಾತಂತ್ರಾತ್ಮಕ ಜನತಾ ರಾಜ್ಯದ ಮುಖ್ಯ ಗುರಿಯು ದೇಶದಲ್ಲಿ ಕಲ್ಯಾಣ ರಾಷ್ಟ್ರವನ್ನು ನಿರ್ಮಾಣ ಮಾಡುವುದಾಗಿದೆ. ಆ ಗುರಿಯನ್ನು ಮುಟ್ಟಲು ನಮ್ಮ ನಾಯಕರು ಪಂಚವಾರ್ಷಿಕ ಯೋಜನೆಗಳನ್ನು ತಯಾರಿಸುತ್ತಿದ್ದಾರೆ. ಈ ಯೋಜನೆಗಳಿಂದ ನಮ್ಮ ದೇಶವು ಸಂಪತ್ ಸಮೃದ್ಧಿ ಶಾಂತಿಯಿಂದೊಡಗೂಡಲಿದೆ. ಈ ಯೋಜನೆಗಳಿಗೆ ಬೇಕಾದಷ್ಟು ಹಣವು ದೊರಕಿದಲ್ಲಿ ಅವುಗಳು ಯಶಸ್ವಿಯಾಗಿ ಕೊನೆಮುಟ್ಟಬಹುದು. ಇದಕ್ಕೆ ಬೇಕಾದ ಹಣವನ್ನು ಒದಗಿಸಿ ಈ ಯೋಜನೆಗಳನ್ನು ಯಶಸ್ವಿಗೊಳಿಸುವ ಮಹತ್ ಹೊಣೆಗಾರಿಕೆಯು ದೇಶದ ಜನರನ್ನು ಹೊಂದಿಕೊಂಡಿದೆ ಎಂದು ಮಾರ್ಮಿಕವಾಗಿ ಹೇಳಿದರು. ಕೊನೆಯಲ್ಲಿ ಶ್ರೀಮತಿ ಟಿ. ಎಂಕಮ್ಮನವರು ಧನ್ಯವಾದಗಳನ್ನಿತ್ತರು. ಮಹಾರಾಣಿಯವರು ಸಂಜೆ ಮಂಗಳೂರು ಬಂದರದಲ್ಲಿ ನದೀ ಸಂಚಾರವನ್ನು ಕೈಕೊಂಡರು.

ಮೈಸೂರು ಮಹಾರಾಣಿ—ಶ್ರೀಮತಿ ತ್ರಿಪುರ ಸುಂದರಮ್ಮಣ್ಣಿಯವರೂ ಮಹಿಳಾ ಉಳಿತಾಯ ಚಳವಳದ ಮೈಸೂರು ರಾಜ್ಯ ಸಲಹಾ ಸಮಿತಿಯ ಉಪಾಧ್ಯಕ್ಷೆ ಶ್ರೀಮತಿ ಲೀಲಾವತಿ ಅಂಜನಪ್ಪ ಮತ್ತು ಶ್ರೀಮತಿಯರಾದ ಸುಂದರಮ್ಮ ಲಂಕಪ್ಪ ಮತ್ತು ಮಲ್ಲಿಕಾರ್ಜುನ್‌ರವರೂ ತಾ. ೫ರಂದು ಜೆಪ್ಪುವಿನಲ್ಲಿರುವ ಸಿಸ್ಟರ್ಸ್ ಆಫ್ ಚಾರಿಟಿ, ಭಗಿನಿ ಸಮಾಜದವರ ಶಿಶುವಿಹಾರ, ಕದ್ರಿ ದೇವಸ್ಥಾನ, ಸೈಂಟ್ ಎಗ್ನೇಸ್ ಕಾಲೇಜ್ ಮೊದಲಾದ ಸಂಸ್ಥೆಗಳಿಗೆ ಭೇಟಿಯಿತ್ತರು. ತಾ. 6ರಂದು ಪೊಳಲಿಯ ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ಭೇಟಿಯಿತ್ತಾಗ, ದೇವಸ್ಥಾನದ ಅಧಿಕಾರಿಗಳು ಪೂರ್ಣ ಕುಂಭದೊಂದಿಗೆ ಸ್ವಾಗತೀಕರಿಸಿದರು. ಪಂಜದಲ್ಲಿ ಮಹಾರಾಣಿಯವರು ತಾ 1ರಂದು ಊರವರಿಂದ ಸ್ವಾಗತೀಕರಿಸಲ್ಪಟ್ಟ ಬಳಿಕ ಮಹಿಳೆಯರು ಚಿಕ್ಕ ಉಳಿತಾಯ ಯೋಜನೆಯಲ್ಲಿ ಕೈಕೊಳ್ಳಬೇಕಾದ ಪಾತ್ರವನ್ನು ವಿವರಿಸಿದರು.

ಭಾಷಣ—ಸ್ಥಳೀಯ ಸೈಂಟ್ ಎಗ್ನೇಸ್ ಕಾಲೇಜಿನ ಇನ್‌ಸ್ಟಿಟ್ಯೂಟ್ ಆಫ್ ಸೋಶಲ್ ಸರ್ವಿಸ್ ಇದರ ವಿದ್ಯಾರ್ಥಿನಿಯರನ್ನುದ್ದೇಶಿಸಿ ತಾ 6ರಂದು ಶ್ರೀ ಎಮ್ ಜನಾರ್ಧನನವರು 'ಪತ್ರಿಕೋದ್ಯಮ ಮತ್ತು ಸಮಾಜ ಸುಧಾರಣೆ' ವಿಷಯದಲ್ಲಿ ಭಾಷಣಮಾಡಿ ಮಂಗಳೂರಲ್ಲಿ ಒಂದು ಪತ್ರಿಕೋದ್ಯಮ ತರಬೇತಿ ಶಾಲೆಯನ್ನು ತೆರೆಯುವ ಆವಶ್ಯಕತೆಯನ್ನು ಒತ್ತಿ ಹೇಳಿದರು. ಆರಂಭದಲ್ಲಿ ಇನ್‌ಸ್ಟಿಟ್ಯೂಟಿನ ಡೈರೆಕ್ಟರ್ ಮಿಸ್ ಪ್ರಾನ್ಸಿಸ್ ಯಾಕೂಬ್ ಅವರು ಸ್ವಾಗತಿಸಿದರು. ಕುಮಾರಿ ಸಬಿತಾರವರು ಧನ್ಯವಾದಗಳನ್ನಿತ್ತರು.

ವಿದಾಯ ಸತ್ಕಾರ— ಸೈಂಟ್ ಎಲೋಸಿಯಸ್ ಕಾಲೇಜಿನ ಗಣಿತ ಅಧ್ಯಾಪಕರೂ ಕಾಲೇಜು ಹಾಸ್ಟೆಲಿನ ಮೇಲ್ವಿಚಾರಕರೂ ಆಗಿದ್ದ ಶ್ರೀ ಬಿ ಭುಜಂಗರಾಯರು ನಿವೃತ್ತರಾಗುವುದರಿಂದ ಹಾಸ್ಟೆಲಿನ ವಿದ್ಯಾರ್ಥಿ ವೃಂದವು ಶ್ರೀಯುತರಿಗೆ ಸತ್ಕಾರಕೂಟವನ್ನೇರ್ಪಡಿಸಿತು. ವಿದ್ಯಾರ್ಥಿಗಳ ಪರವಾಗಿ ಶ್ರೀಗಳಾದ ಇ. ಕೆ. ವಿಜಯಕೇಶವನ್, ವಿಠಲ ಶೆಟ್ಟಿ ಮತ್ತು ರಾಮಚಂದ್ರ ಆತೂರ ಅವರೂ, ಅಧ್ಯಾಪಕರ ಪರವಾಗಿ ಶ್ರೀಗಳಾದ ಬಿ. ವಿ. ಕೆದಿಲಾಯ, ಸಾವುಂಇನ್‌ಯವರೂ ಮಾತನಾಡಿದರು. ಬಳಿಕ ಮುಖ್ಯ ಅತಿಥಿಗಳಿಗೆ ಬೆಳ್ಳಿಯ ಕಾಫಿ ತಟ್ಟೆ ಮತ್ತು ಕಪ್ಪುಗಳನ್ನು ಅರ್ಪಿಸಲಾಯಿತು.

ರಾಜಕೀಯ ಪರಿಷತ್ತು— ದ. ಕ. ಜಿಲ್ಲಾ ರಾಜಕೀಯ ಪರಿಷತ್ತಿನ ಸ್ವಾಗತ ಸಮಿತಿ ಸಭೆಯು ತಾ. 1ರಂದು ಶ್ರೀ ಎ ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪರಿಷತ್ತನ್ನು ಮಂಗಳೂರಲ್ಲಿಯೇ ಜರಗಿಸಲು ನಿರ್ಧರಿಸಿ, ಅದಕ್ಕೆ ಬೇಕಾದ ಕಾರ್ಯಕ್ರಮಗಳನ್ನು ಕೈಕೊಳ್ಳಲು ಶ್ರೀಗಳಾದ ಕೆ ಸೂರ್ಯನಾರಾಯಣ ಅಡಿಗ, ಬಿ. ಮಂಜಯ್ಯ ಹೆಗ್ಡೆ, ಎ. ಶಂಕರ ಆಳ್ವ, ಡಾ. ಕೆ. ಬಿ. ಶೆಟ್ಟಿ, ಎಮ್. ರಘುನಾಥ್, ಬಿ ಬಿ. ಶೆಟ್ಟಿ, ಎಂ. ಶ್ರೀನಿವಾಸ ನಾಯಕ್, ಬಿ. ದಾಮೋದರ ಬಾಳಿಗ, ಬಿ. ನಾರಾಯಣ ನಾಯಕ್, ಜೆ. ಎ. ಬ್ರಿಟ್ಟೊ, ಎಚ್. ಕೆ. ಶಿಂಗಳಾಯ, ಪಿ. ಅಚ್ಯುತ ಪ್ರಭು ಮತ್ತು ಕೆ. ರಂಗನಾಥನುಳ್ಳ ಇವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು.

ಉಸ್ತಾದ್ ಫಿರೋಝ ದಸ್ತೂರ್

ಸ್ವಾಮಿ ಹರಿದಾಸ ಸಂಗೀತ ಸಭಾ, ಮಂಗಳೂರು ಇವರ ಆಶ್ರಯದಲ್ಲಿ ಭಾರತದ ಪ್ರಥಮ ಶ್ರೇಣಿಯ ಗಾಯಕರಲ್ಲೊಬ್ಬರಾದ ಉಸ್ತಾದ್ ಫಿರೋಝ ದಸ್ತೂರರವರ ಸಂಗೀತ ಕಚೇರಿಯು ತಾ 8ರಂದು ರಾತ್ರಿ ಸ್ಥಳೀಯ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ ಜರಗಿತು. ಶ್ರೀ ವೆಂಕಟರಾವ್ ಪೆರ್ಡೋಡಿಯವರು ಧನ್ಯವಾದವಿತ್ತರು.

ಲೋಕಲ್ ಬೋರ್ಡ್ ಶಾಲೆಗಳಲ್ಲಿ ಪರಿಷ್ಕೃತ ವೇತನ ದರ— ಪ್ರಾಥಮಿಕ ಶಿಕ್ಷಕರ ಪರವಾಗಿ ಶ್ರೀಗಳಾದ ದಾಂತಿ ದಾಸಪ್ಪ, ಶ್ಯಾಮ ಭಟ್, ಟಿ. ಕೆ. ಉದ್ಯಾವರ, ಕೆ. ಪಿ. ರೈ, ಭೋಜರಾಜ ಶೆಟ್ಟಿ, ಜಿ ಎಮ್. ಮಹಮ್ಮದ್ ಮೊದಲಾದವರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರನ್ನು ತಾ 9ರಂದು ಭೇಟಿಯಾಗಿ, ಬೋರ್ಡ್ ಶಾಲೆಗಳಲ್ಲಿ ಕಳೆದ ಎರಡು ತಿಂಗಳುಗಳಿಂದ ಸಂಬಳ ಬಾಕಿಯಾದ ಮತ್ತು ಪರಿಷ್ಕೃತ ವೇತನ ದರವನ್ನು ಜ್ಯಾರಿಗೊಳಿಸುವ ಕುರಿತು ವಿಚಾರ ವಿನಿಮಯ ನಡೆಸಿದರು. ಅಧ್ಯಕ್ಷರು ಸಹಾನುಭೂತಿಯಿಂದ ಕೇಳಿಕೊಂಡು ಸರಕಾರದಿಂದ ಎರಡು ಲಕ್ಷ ರೂಪಾಯಿ ಬಂದಿರುವುದರಿಂದ ಎಕೌಂಟೆಂಟ್ ಜನರಲ್ಲರ ಒಪ್ಪಿಗೆ ದೊರೆತೊಡನೆ ಬಾಕಿಯಾದ ಸಂಬಳ ಬಟವಾಡೆಯಾಗುವುದೆಂದೂ, ಪರಿಷ್ಕೃತ ವೇತನವನ್ನು ಜ್ಯಾರಿಗೊಳಿಸಲು ಬೇಕಾದ ಸಿದ್ಧತೆಯಾಗುತ್ತದಲ್ಲದೆ ಆರ್ಥಿಕ ವರುಷವು ಕೊನೆಗೊಳ್ಳುವ ಮೊದಲೇ ಹಣ ದೊರಕಿಸಬೇಕಾಗಿ ತಾನು ಡಿ. ಪಿ. ಐ.ಯವರಿಗೆ ಬರೆಯುವುದಾಗಿಯೂ ತಿಳಿಸಿ, ಉಪಾಧ್ಯಾಯರ ಪ್ರಯತ್ನಕ್ಕೆ ಯಶಸ್ಸನ್ನು ಕೋರಿದರು.

ನಂತರ ಶಿಷ್ಟ ಮಂಡಳಿಯವರು ಜಿಲ್ಲಾ ಪಂಚಾಯತ ಆಫೀಸರ್ ಶ್ರೀ ಶೀನ ಶೆಟ್ಟರನ್ನು ಭೇಟಿಯಾಗಿ ಪರಿಷ್ಕೃತ ವೇತನದ ಕುರಿತಾಗಿರುವ ಸ್ಪಷ್ಟೀಕರಣದ ಆಜ್ಞೆಗಳು ಪಂಚಾಯತ ಬೋರ್ಡುಗಳಿಗೆ ಇನ್ನು ತಲಪದಿರುವುದರಿಂದ ಅನೇಕ ಪಂಚಾಯತುಗಳು ಆ ಕುರಿತು ಯಾವುದೇ ಹೆಜ್ಜೆಯನ್ನು ತೆಗೆದುಕೊಂಡಿಲ್ಲವೆಂದು ನಿವೇದಿಸಲಾಗಿ ತಾನು ಆ ಸಂಬಂಧ ಆಜ್ಞೆಯನ್ನು ಎಲ್ಲಾ ಪಂಚಾಯತುಗಳಿಗೂ ಕಳುಹಿಸಿಕೊಟ್ಟು ಆಗಿರುವ ತೊಂದರೆಯನ್ನು ನಿವಾರಿಸುವುದಾಗಿ ಸಹಾನುಭೂತಿಯುತ ಭರವಸೆಯಿತ್ತಿರುವರು.

ಶಾಲಾ ವರ್ಧಂತಿ—ಸ್ಥಳೀಯ ರುಜಾರಿಯೋ ಹೈಸ್ಕೂಲಿನ ವರ್ಧಂತಿ ಉತ್ಸವವು ತಾ. ೪ರಂದು ಮಂಗಳೂರು ಡಿ. ವ್ಯಾ ಎಸ್ ಪಿ. ಶ್ರೀ ಕೆ. ಬಾಲಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಫ್ರಾ| ವಿ. ಮೊ. ಎಫ್. ಜೆ. ಎಮ್. ಪಿಂಟೋರವರು ಶಾಲಾ ವರದಿಯನ್ನೋದಿದರು. ಬಹುಮಾನ ವಿತರಣೆ, ಅಧ್ಯಕ್ಷರ ಸಮಯೋಚಿತ ಮಾತುಗಳಾದ ಬಳಿಕ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳಾದುವು.

ಕಡಿರುದ್ಯಾವರ—ಬೆಳ್ತಂಗಡಿ ತಾಲೂಕಿನ ಕಡಿರುದ್ಯಾವರ ಗ್ರಾಮ ಪಂಚಾಯತರ ಪ್ರೆಸಿಡೆಂಟ್ ಮತ್ತು ಮೆಂಬರರ ಚುನಾವಣೆಯು ತಾ. 4ರಲ್ಲು ಬೆಳ್ತಂಗಡಿ ಡಿ. ಪ. ಆಫೀಸರ್ ಶ್ರೀ ಎಮ್. ಪುರುಷೋತ್ತಮಯ್ಯನವರ ನೇತೃತ್ವದಲ್ಲಿ ನಡೆದು ಶ್ರೀ ಎಲ್ಯಣ್ಣ ಗೌಡರು ಪ್ರೆಸಿಡೆಂಟರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 461/1957.

ಶ್ರೀನಿವಾಸ ಮೊಗೆರಾಯ —ವಾದಿ.

ಸರಸು ಶೆಟ್ತಿ ಸಹಾ —ಪ್ರತಿವಾದಿರು.

1ನೇ ಪ್ರತಿವಾದಿಳು ಶ್ರೀಮತಿ ಸರಸು ಶೆಟ್ತಿ, ಪರಮೇಶ್ರಿ ಶೆಟ್ತಿ ಮಗಳು ಮಂಗಳೂರು ತಾಲೂಕು ಯಿನ್ನ ಗ್ರಾಮದ ಒಬ್ಬದ ಪರಾರಿಯೆಂಬಲ್ಲಿರುವವಳು—

ಮುಹರೀಗೆ ಕೋರ್ಟು ಹುಕುಂ ಪ್ರಕಾರಯೂ ಮೂಲಕ ತಿಳಿಯಪಡಿಸುವದೇನೆಂದರೆ—

ವಾದಿಗೆ ತನ್ನ ಕುಟುಂಬದ ಮೆನೇಜರನಾಗಿ ಪ್ರತಿವಾದಿರಿಂದ ತಮ್ಮ ಕುಟುಂಬದ ಮೆನೇಜರಳಾಗಿ ಕೂಡಾ ಬರಬೇಕಾದ ಮೂಲಗೇಣಿ ಗೇಣ ಬಾಕಿ ಬಗ್ಗೆ ವಾದಿಯು ಪ್ರತಿವಾದಿರ ಮೇಲೆ ದಾಕ್ಲುಮಾಡಿದ ಮೇಲಿನ ದಾವೆಯು ನಿಮ್ಮ ಹಾಜರಾತಿ ಬಗ್ಗೆ ಬರುವ ತಾ. 1—4—1958ಕ್ಕೆ ಯಿಟ್ಟಿರುತ್ತದೆ. ಆ ಕುರಿತು ನಿಮಗೇನಾದರೂ ಆಕ್ಷೇಪಗಳಿದ್ದರೆ ಸದ್ರಿ ದಿವಸ ಪೂರ್ವಾಹ್ನ 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ಶಿಮ್ಮಮಾಡಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವದು.

I. N. Nayak,
Pleader for Plff

ಕಾರ್ಕಳ ತಾ. 8—3-1958.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟರ್ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಶಾಂತಿಸಾಧನೆ ಮತ್ತು ಪವಿತ್ರಜೀವನ—(ಆಧುನಿಕ ಭಾರತೀಯ ಮಹಾತ್ಮರುಗಳ ದಿವ್ಯ ಸಂದೇಶ) ಗ್ರಂಥಕರ್ತರು ಶ್ರೀಮತಿ ಯಂ. ಎ ವೇದವಲ್ಲಿ ಮಾರಾಟಗಾರರು: ಎಸ್. ಎಸ್. ಎನ್. ಬುಕ್ ಡಿಪೋ, ಶ್ರೀಕೃಷ್ಣ ರಾಜೇಂದ್ರ ಮಾರ್ಕೆಟ್, ಬೆಂಗಳೂರು-೨ ಪ್ರಕಾಶಕರು: ಯಂ ಎ. ನಾರಾಯಣ ಅಯ್ಯಂಗಾರ್, ರಿಟೈರ್ಡ್ ಡಿಪ್ಯುಟಿ ಡೈರೆಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಗೌರೀಬಿದನೂರು. ಪುಟಗಳು: ೧೦೮. ಬೆಲೆ ರೂ. ೧—೪—೦.

ಮುಗಿದ ಯುದ್ಧಗಳ ಭೀಕರ ಪರಿಣಾಮವನ್ನು ಕಣ್ಣಾರೆ ಕಾಣುತ್ತಿರುವ ಪ್ರಪಂಚದ ಜನತೆ ಶಾಂತಿ ಮಂತ್ರವನ್ನು ಪಠಿಸುತ್ತಿರುವುದೇನೋ ನಿಜವಿರಬಹುದು ಆದರೆ, ಶಾಂತಿಯ ಸಾಧನೆಯನ್ನು ಮಾತ್ರ ಗಣನೀಯ ಪ್ರಮಾಣದಲ್ಲಿ ಮಾಡುತ್ತಿಲ್ಲವೆನ್ನುವುದು ನಿಸ್ಸಂದೇಹ. ಪರರಿಗೆ ಶಾಂತಿ ಸಮಾಧಾನಗಳಿಂದಿರಲು ಕರೆಯೀಯುವ ಭಾರತದಲ್ಲಿಯೇ ಈ ಕಾರ್ಯವು ಎಷ್ಟು ಭರದಿಂದ ಅಭಿರುಚಿಪೂರ್ಣವಾಗಿ ಸಾಗುತ್ತಿದೆ ಎಂದು ಹೇಳಬಾರದು. ಮಾನವನು 'ತನ್ನ' ತನವನ್ನು ಸ್ವಾರ್ಥಾಭಿಲಾಷೆಯನ್ನು ತೊರೆದು ಕರ್ತವ್ಯದಕ್ಷತೆಯನ್ನು ತೋರಿಸಿದರೆ ಮಾತ್ರ ಶಾಂತಿಯ ಸಾಧನೆಯನ್ನು ಮಾಡಬಹುದು; ತನ್ಮೂಲಕ ಪವಿತ್ರ ಜೀವನವನ್ನು ಬದುಕಿ ಇಹಪರದ್ವಯದಲ್ಲಿಯೂ ಕೀರ್ತಿಶಾಲಿಯಾಗಬಹುದು ಅದಕ್ಕಾಗಿ ಭಾರತೀಯರಾದ ನಾವು ಇಂತಹ ಉದಾತ್ತ ಆದರ್ಶ ಬದುಕನ್ನು ಜೀವಿಸಬೇಕು ಮತ್ತು ಶಾಂತಿಸಾಧನಾ ಮಹಾಕಾರ್ಯದಲ್ಲಿ ತಲ್ಲೀನರಾಗಬೇಕು. ಈ ಬಗ್ಗೆ ನಾವು ಪರರ ಬಳಿಗೆ ಕೈಯಿಕ್ಕಬೇಕಾದ ಪ್ರಮೇಯವಿಲ್ಲ ವಿಶ್ವಸಾಹಿತ್ಯದಲ್ಲಿಯೇ ಸಾಕಷ್ಟು ಪ್ರಸಿದ್ಧವಾದ ಶ್ರೀಮದ್ಭಗವದ್ಗೀತೆಯಿಂದಾರಂಭಿಸಿ ಆಚಾರ್ಯ ವಿನೋಬಾರವರ ನುಡಿಮುತ್ತುಗಳವರೆಗೆ ಬೇಕಷ್ಟು ಪವಿತ್ರ ಜೀವನವನ್ನು ಜೀವಿಸುವ ಕ್ರಮವೂ ಅಂತರಂಗ ಮತ್ತು ಬಹಿರಂಗ ಶಾಂತಿಯನ್ನು ಉಳಿಸಿಕೊಳ್ಳುವ ರೀತಿಯೂ ವಿವರಿಸಲ್ಪಟ್ಟಿದೆ. ತಾನು ತನ್ನದು, ತನ್ನವರು, ತನಗಾಗಿ ಎಂಬ ಯಾವುದೇ ಸಂಕುಚಿತ ಮನೋವೃತ್ತಿಯನ್ನು ತೋರ್ಪಡಿಸದೆ ವಿಶ್ವಬಂಧುವಾಗಿ ಬಾಳಿ, ಪರಮಾತ್ಮನ ಆದೇಶಕ್ಕನುಸಾರವಾಗಿ, ಕರ್ಮ, ಜ್ಞಾನ, ಭಕ್ತಿಯೋಗಿಯಾಗಿ ಬಾಳುವುದರಿಂದಲೇ ಈ ಜೀವನವು ಸಾರ್ಥಕವಾಗುತ್ತದೆ ಜೀವನದಲ್ಲಿ ಬರುವ ಎಡರು ತೊಡರುಗಳಿಂದ ಧೃತಿಗೆಡದೆ ಏಕನಿಷ್ಠೆಯಿಂದ ಪರಮಾತ್ಮನಲ್ಲಿ ವಿಶ್ವಾಸದಿಂದ ನಡೆದು ಬಂದರೆ, ನಮ್ಮ ದಾರಿ ಸುಗಮವಾಗುವುದು

ಮೇಲಿನ ವಿಚಾರಗಳನ್ನು ಭಾರತದಲ್ಲಿಯೇ ಹುಟ್ಟಿ ಅರಳಿದ ಮಹಾತ್ಮರಾದ ಶ್ರೀಕೃಷ್ಣ, ವಿವೇಕಾನಂದ, ಗಾಂಧಿ, ರಾಮಾನುಜಾಚಾರ್ಯ ಮತ್ತು ಆಚಾರ್ಯ ವಿನೋಬಾ ಮೊದಲಾದವರ ಉಕ್ತಿಗಳ ಸಂದೇಶಗಳನ್ನು ಒಟ್ಟಿಗೆ ಸಂಗ್ರಹಿಸಿ ಶ್ರೀಮತಿ ವೇದವಲ್ಲಿಯವರು ಈ ಗ್ರಂಥವನ್ನು ಪೋಣಿಸಿದ್ದಾರೆ ಸಾಮಾನ್ಯವಾಗಿ ಶುಷ್ಕವಾಗಿರುವ ಇಂತಹ ಹೊತ್ತಗೆಯನ್ನು ರಸವತ್ತಾಗಿಸಲು ಪ್ರಯತ್ನಿಸಿ ಶ್ರೀಮತಿಯವರು ಸಾಮಾನ್ಯವಾಗಿ ಫಲವತಿಯರಾಗಿದ್ದಾರೆನ್ನಬಹುದು. ತನ್ನನ್ನು ತಾನು ಮರೆಯಲರಿತು, ಪರಮಾತ್ಮನ ಆಶೀರ್ವಾದದಿಂದ ಮಹಾತ್ಮರ ಉಪದೇಶ ದೀಪಗಳ ಬೆಳಗಿನಲ್ಲಿ ಪವಿತ್ರ ನಿಸ್ವಾರ್ಥ ಜೀವನವನ್ನು ಕೈಗೊಂಡಲ್ಲಿ ಶಾಂತಿ ಲಭ್ಯವಾದೀತು ನಾವು ಮಾಡುವ ಸಕಲ ಕಾರ್ಯಗಳನ್ನೂ "ಕಾಯೇನ ವಾಚಾ ಮನಸೇಂದ್ರಿಯೈರ್ವಾ । ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ಕರೋಮಿ ಯದ್ಯತ್ ಸಕಲಂ ಪರಸ್ಮೈ । ನಾರಾಯಣಾಯೇತಿ ಸಮರ್ಪಯಾಮಿ ॥" ಎಂದು ಭಗವಂತನಿಗೆ ಅರ್ಪಿಸಿ ನಿಸ್ಪೃಹರಾಗಿರಬೇಕು ಎಂದು ಮುಂತಾಗಿ ಶ್ರೀಮತಿಯವರು ಸಮರ್ಥಿಸಿದ್ದಾರೆ ಈ ಸಿದ್ಧಾಂತಕ್ಕೆ ಸಾಧಕಗಳಾದ ಮಹಾತ್ಮರ ವಚನಗಳು, ಅಲ್ಲಲ್ಲಿ ಕಥೆಗಳು, ವಿವರಣೆಗಳು ಸಂವಾದ—ಪ್ರಶ್ನೋತ್ತರ ರೂಪದಲ್ಲಿ ಬಂದಿದ್ದು ಈ ವಿಧಾನವು ಅತ್ಯಂತ ಉಪಕಾರಿಯೇ ಆಗಿದೆ ಎನ್ನಬಹುದು. ಅಚ್ಚಿನ ಕೆಲವೊಂದು ದೋಷಗಳಿದ್ದರೂ ಅದು ಕ್ಷಮಾರ್ಹವಾಗಿವೆ ಇಂತಹ ಅಧ್ಯಾತ್ಮಿಕ ಸಾಹಿತ್ಯ ಕೃತಿಗಳು ಇನ್ನೂ ಬೆಳೆದು ಬರುವಂತೆ ಕನ್ನಡಿಗರು ಪ್ರೋತ್ಸಾಹಿಸಬೇಕು

ಅಡುಗೆ ಮನೆಯ ಸೌಭಾಗ್ಯ

ಮೂಲ ಅನ್ನಾ ಕೆ ಜೋಶುವಾ; ಸಿ ಎಸ್. ರತ್ನಂ ಅನುವಾದ: ಬಿ ಈಶ್ವರ ಭಟ್ಟ. ಪ್ರಕಾಶಕರು: ಕನ್ನಡ ಪ್ರಪಂಚ ಪ್ರಕಾಶನ, ಕದ್ರಿ ಮಂಗಳೂರು-೨ ಪುಟಗಳು ೧೩೦ ಬೆಲೆ. ರೂ ೧ (ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ಸೌಜನ್ಯದಿಂದ ಪ್ರಕಟಿತವಾದುದು)

ಮನೆಯಿಲ್ಲದ ಮಾನವನಿಲ್ಲವೆನ್ನಬಹುದಾದರೆ, ಅಡುಗೆ ಮನೆಯಿಲ್ಲದ ಮನೆಯೇಯಿಲ್ಲವೆನ್ನಬಹುದು ಒಂದು ವೇಳೆ ಮನೆಯಿಲ್ಲವಾದರೂ (ಅಡುಗೆ ಮನೆ ಇಲ್ಲದೇ ಇರುವುದು ಎಂದಿಗೂ ಸಾಧ್ಯವಿಲ್ಲ) ಹಾಗಿರುವಾಗ, ಅಡುಗೆ ಮನೆಯ ಕುರಿತಾದ, ಅದನ್ನು ಸೌಭಾಗ್ಯಸಹಿತವಾಗಿಸುವ ವಿಧಾನವೂ ಮನೆಯಾಕೆಗೆ ತಿಳಿದಿರುವುದು ಅತ್ಯಂತಾವಶ್ಯಕ ಇದನ್ನು ವಿವರಿಸುವ ಒಂದು ಪುಸ್ತಕ ಇದೀಗ ದಕ್ಷಿಣ ಭಾಷಾ ಪುಸ್ತಕ ಸಂಸ್ಥೆಯವರ ಸೌಜನ್ಯದಿಂದ ಪ್ರಕಟವಾಗಿದೆ

ಈ ಪುಸ್ತಕದಲ್ಲಿ ಅಡುಗೆಮನೆಯ ರಚನೆ ಸಲಕರಣೆಗಳು, ಇಡುವ ವಿಧಾನ, ಉಗ್ರಾಣದ ವಿವರಣೆ, ಕ್ರಮನಿರೂಪಣೆಗಳೊಂದಿಗೆ, ಆಹಾರದ ಶುಚಿತ್ವವೂ ಅಡುಗೆ ಮಾಡುವ ವಿಷಯವಾಗಿಯೂ, ಫಲಹಾರ ಪದಾರ್ಥಗಳನ್ನು ಅಡುವ ವಿಚಾರದಲ್ಲಿಯೂ ಯೋಗ್ಯ ರೀತಿಯಲ್ಲಿ ಗೃಹಕಾರ್ಯಗಳನ್ನು ತಪ್ಪದೆ ನಡೆಸಿಕೊಂಡು ಹೋಗಲು ಅನುಸರಿಸಬೇಕಾದ ನಿಯಮಗಳ ಬಗ್ಗೆಯೂ ಬೆಳಕು ಹರಿದಿದೆ. ಅಲ್ಲದೇ ನಮ್ಮ ತೋಟವನ್ನು ಹೇಗೆ ಬೆಳೆಸಬೇಕೆಂಬುದನ್ನೂ ವಿವರಿಸಲಾಗಿದೆ ವೈಜ್ಞಾನಿಕ ದೃಷ್ಟಿಯಿಂದ, ಆರೋಗ್ಯವನ್ನು ಕಾಪಾಡಿಕೊಳ್ಳಲು ವಹಿಸಬೇಕಾದ ಎಚ್ಚರಿಕೆಗಳನ್ನು ಪುಸ್ತಕ ತುಂಬ ಉಲ್ಲೇಖಿಸಲಾಗಿದೆ ಹೀಗಾಗಿ ಅಡುಗೆ ಮನೆಯಲ್ಲಿ ಕಾರ್ಯವೆಸಗುತ್ತಿರುವವರು ಈ ಪುಸ್ತಕವನ್ನು ಓದಿ, ಇಲ್ಲಿ ನಿರೂಪಿತವಾದ ವಿಧಾನಗಳಲ್ಲಿ ತಮಗೆ ಸಾಧ್ಯವಿದ್ದಷ್ಟನ್ನು ತಮ್ಮ ದೈನಂದಿನ ಕಾರ್ಯಕ್ರಮದಲ್ಲಿ ಸೇರಿಸಿಕೊಂಡು ರುಚಿರುಚಿಯಾಗಿ ಅಡಿಗೆ ಮಾಡಿ ಮನೆಯವರನ್ನು ಉಣಿಸಬಹುದು ಇದರಿಂದಾಗಿ ಈ ಪುಸ್ತಕವು ಸ್ವಾಗತಾರ್ಹವಿದೆ ಅನುವಾದನ ಕಾರ್ಯವು ತೃಪ್ತಿಕರವಾಗಿದೆ

ಆದರೆ, ಭಾರತದಂತಹ ಬಡ ದೇಶದಲ್ಲಿ ಒಂದೆರಡು ಹೊತ್ತು ಅಂಬಲಿಗೆ ಗತಿಯಿಲ್ಲದ ಜನರು, ನಿಲ್ಲಲು ಮನೆಯಿಲ್ಲದೆ ಮುರುಕು ಜೋಪಡಿ, ಯಾ ಮರದ ನೆರಳಡಿಯಲ್ಲಿ ಹೊರಳಾಡುವ ಕಡು ದರಿದ್ರರು ಕೋಟಿಗಟ್ಟಲೆಯಲ್ಲಿಯೇ ಇರುವಾಗ, ಇಂತಹ ಸೌಭಾಗ್ಯಯುಕ್ತ ಅಡುಗೆಯನ್ನು ಮಾಡಿ ಉಣ್ಣುವ ಭಾಗ್ಯ ಅದೆಷ್ಟು ಜನಗಳಿಗಿದೆ ಎಂಬ ಪ್ರಶ್ನೆ ಏಳುತ್ತದೆ. ಅದಕ್ಕೆ ಸಮಾಧಾನವಿಷ್ಟೇ. ಸಾಧ್ಯವಿರುವವರು ಸಾಧ್ಯವಿದ್ದಷ್ಟು ಮಟ್ಟಿಗೆ ರುಚಿರುಚಿಯಾದ ಅಡುಗೆಯನ್ನು ಮಾಡಿ ಉಣ್ಣಬೇಕೆಂಬುದೇ ಬಯಕೆ ಭಾರತತುಂಬ ಇಂತಹವರ ಸಂಖ್ಯೆ ಬೆಳೆದುಬರಲೆಂದು ಬಯಸಿ ಈ ಪುಸ್ತಕವನ್ನು ಸ್ವಾಗತಿಸುತ್ತೇವೆ; ಅಲ್ಲದೇ, ಪ್ರತಿ ಮನೆಯವರೂ ಅವಶ್ಯ ಸಂಗ್ರಹಿಸಬೇಕಾದ ಹೊತ್ತಿಗೆಯಾದುದರಿಂದ ತಂತಮ್ಮ ಪ್ರತಿಗಳನ್ನು ಕೊಂಡುಕೊಳ್ಳಲಿ ಎಂದು ಹಾರೈಸುತ್ತೇವೆ.

ಕನ್ನಡ ಸಹಕಾರಿ— (ಮಾಸಪತ್ರಿಕೆ) ಸಂಪಾದಕರು. ಶ್ರೀ ಎಸ್ ಮುಕುಂದರಾವ್ ಪ್ರಕಾಶಕರು ದ ಕ ಜಿಲ್ಲಾ ಸಹಕಾರಿ ಮುದ್ರಣದ ಸಂಘ; ಮಂಗಳೂರು-೪. ವಾರ್ಷಿಕ ಚಂದಾ ರೂ ೪-೦-೦ ಬಿಡಿಸಂಚಿಕೆ ರೂ ೬-೦-೦

ದಕ್ಷಿಣ ಕನ್ನಡದ ಸಹಕಾರೀ ಸಂಘಗಳ ಪ್ರತಿನಿಧಿಯಂತೆ ಹೊರಡುತ್ತಿರುವ ಈ ಪತ್ರಿಕೆಯ ೨ನೆ ವರ್ಷದ ೬ನೆ ಸಂಚಿಕೆಯು ಕೈಸೇರಿದೆ. (ಫೆಬ್ರವರಿ ೫೮) ಈ ಪತ್ರಿಕೆಯ ಮೂಲೋದ್ದೇಶವು ಜನತೆಯಲ್ಲಿ ಸಹಕಾರೀ ಮನೋಭಾವನೆಯನ್ನು ಬೆಳೆಸುವುದು ಮತ್ತು ಗ್ರಾಮಾಭಿವೃದ್ಧಿಯಾಗಿದ್ದು ಈ ಸಂಚಿಕೆಯಲ್ಲಿ ಈ ಉದ್ದೇಶಗಳು ಸಾರ್ಥಕಗೊಂಡಿರುವುದು ಕಂಡುಬರುತ್ತದೆ ಸಹಕಾರದಿಂದಲೇ ಯಾವ ದೊಡ್ಡ ಕೆಲಸವನ್ನೂ ಪ್ರಾರಂಭಿಸುವುದು, ಮುನ್ನಡೆಸುವುದು ಮತ್ತು ಕೊನೆಗೊಳಿಸುವುದು ಸಾಧ್ಯ ಆದುದರಿಂದ ಈ ಪತ್ರಿಕೆಯು ಕನ್ನಡಿಗರೆಲ್ಲರಲ್ಲಿಯೂ ಸಹಕಾರೀ ಮನೋವೃತ್ತಿಯನ್ನು ಪ್ರವರ್ಧಿಸುವಂತಾಗಿ ಯಶಸ್ವಿಯಾಗಲಿ ಎಂದು ಬಯಸುತ್ತೇವೆ

—ಗೋರಾ.

ಶ್ರೀ ದಾಸಗೀತೆ

(೪ನೇ ಪುಟದಿಂದ)

ದರಿಂದ ಕನ್ನಡ ನಾಡಿನಲ್ಲಿ ಇದನ್ನು ಮನೆಮನೆಯಲ್ಲಿಯೂ ಓದಲು ಅನುಕೂಲವಾಗುವಂತೆ ವಿನೋಬಾಜಿಯವರ ಗೀತಾಯಿಯಂತೆ ಇದರ ಎರಡಾಣೆಯ ಆವೃತ್ತಿಯೊಂದು ಪ್ರಕಟವಾಗಬೇಕು ಕನ್ನಡ ನಾಡಿನ ಸಂಪತ್ತಿದಾನಿಗಳಿಗೆ ಇದೊಂದು ಆಹ್ವಾನ. ಗ್ರಂಥಕರ್ತರೂ ಈ ದಿಸೆಯಲ್ಲಿ ಪ್ರಯತ್ನ ನಡೆಸಿ, ದಾಸ ಗೀತೆಯು ಕನ್ನಡಿಗರಿಗೆ ಸುಲಭ ಬೆಲೆಗೆ ದೊರೆಯುವಂತೆ ಪ್ರಯತ್ನಿಸಬೇಕಾಗಿ ನನ್ನ ಭಿನ್ನಹ ಪೂಜ್ಯ ವಿನೋಬಾಜಿಯವರು ಕನ್ನಡ ನಾಡಿನಲ್ಲಿ ಸಂಚರಿಸುತ್ತಿರುವಾಗಲೇ ಈ ಕೆಲಸ ನಡೆಯಲಿ.

ಕೊನೆಯದಾಗಿ ದಾಸಗೀತೆಯಲ್ಲಿಯ ೧೧ನೆಯ ಅಧ್ಯಾಯದಲ್ಲಿ ಅರ್ಜುನನು ಮಾಡಿದ ಶ್ರೀಕೃಷ್ಣ ಸ್ತೋತ್ರದೊಳಗಿನ ಎರಡು ಶ್ಲೋಕಗಳನ್ನು ಮಾದರಿಗಾಗಿ ಇಲ್ಲಿ ಉದ್ಧರಿಸಿ ವಿರಮಿಸುತ್ತೇನೆ.

ಅಚರ ಚರದ ಲೋಕಕಿದಕೆ ನೀನೆ
ಪಿತನು ದೇವನು ।
ನೀನೆ ಪೂಜ್ಯಗುರುವು ನೀನೆ ಗುರುವಿ
ಗಿರುವೆ ಹಿರಿಯನು ॥
ನಿನ್ನ ಸಮನು ಜಗದೊಳಿಲ್ಲ, ಹೆಚ್ಚಿ
ನವನದಾವನು ।
ಮೂರು ಲೋಕಗಳಲಿ ನೀನೆ ದೇವ
ನತುಲ ಮಹಿಮನು ॥
ಅದಕೆ ನಿನ್ನ ಪದಕೆ ದೇಹ ಕೆಡವಿ
ನಿನಗೆ ನಮಿಪೆನು ॥
ಮೊಗಳುಗೊಂಬ ದೊರೆಯೆ ಕರುಣಿ
ಸೆಂದು ಬೇಡಿಕೊಂಬೆನು ॥
ಪಿತನು ಪುತ್ರನನ್ನು ಹರಿಯೆ ಗೆಳೆಯ
ನನ್ನು ಗೆಳೆಯನು ।
ಪ್ರಿಯನು ಪ್ರಿಯನ ನೋಳ್ಪ ತೆರದಿ
ನೀನು ನೋಳ್ಪುದೆನ್ನನು ॥

('ನಾಗರಿಕ'ದಿಂದ)

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು
ಟ್ರೇಡ್ ಮಾರ್ಕ್

ಸಂತಾನ ಸಿಂದೂರ ಮದನ ವಿಲಾಸ
(ಸ್ತ್ರೀಯರಿಗೆ ಪ್ಯಾಕೆಟ್) (ಪುರುಷರಿಗೆ ಗುಳಿಗೆ)
ಈ ಭಸ್ಮವು ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ ರೂ. ೭-೪ 0
"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನ ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, ನಪುಂಸಕತೆಯನ್ನು ಹೋಗಲಾಡಿಸುತ್ತವೆ
ಪಂ A R ಅಯ್ಯಂಗಾರ್
ದಂಪತಿಗಳಿಗಾಗಿ 16-18 ವರ್ಷ ಸಂತಾನವಿಲ್ಲದವರೂ 'ತಾಯ್ತಂದೆ'ಗಳಾಗಿದ್ದಾರೆ.
ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ಫ್ರೀ ಕ್ಯಾಟಲಾಗ್ ಮತ್ತು ಪತ್ರಿಕೆಗಳ ರವಾನೆ
ಎ ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ. (ನ ಯು)
[648. ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ನಾರ್ತ್ ಕ್ರಾಸ್ ಮೈಸೂರು-] (S I

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ
ಬೆಲೆ.- ಸಾಧಾರಣ ಪ್ರತಿ- ರೂ ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ.

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಬರೆದವರು- ಎಸ್. ರಘುನಂದನ ರಾವ್, ತಲ್ಲೂರು)
ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು.
ಬೆಲೆ- ಐದಾಣೆ ಮಾತ್ರ ಟ. ವೆ. ಪ್ರತ್ಯೇಕ
ನವಯುಗ ಪ್ರೆಸ್, ಉಡುಪಿ

ನಾಕಂಡ ನಾರೀಮಣಿ–

ಕುಮಾರಿ ಸರೋಜಿನಿ ಮಹಿಷಿ

ಶ್ರೀಮತಿ ವರಮಹಾಲಕ್ಷ್ಮಿ, ಜಂಭೆ

ಹಳ್ಳಿಯ ಕಾರ್ಯದಲ್ಲಿ ನಿರತಳಾದ ನನಗೆ ವೃತ್ತಪತ್ರವು ಹೊರಪ್ರಪಂಚವನ್ನು ನೋಡುವ ಕಣ್ಣಾಗಿತ್ತು. ಏನೂ ಓದಲು ದೊರೆಯದ ಪ್ರದೇಶದಲ್ಲಿ ಪತ್ರಿಕೆಯೊಂದೇ ಆಸರವಾಗಿತ್ತು. ತಿರುಗಿ ಪತ್ರಿಕೆ ಬರುವವರೆಗೆ ಏನೇನೂ ಬಿಡದೆ ತಿರುತಿರುಗಿ ಓದುತ್ತಿದ್ದೆ. ನೋಡಿದಾಗೆಲ್ಲ ಶಿಕ್ಷಣದ ಮೇಲೆ, ಸ್ತ್ರೀಯರ ಬಗ್ಗೆ, ಸಾಮಾಜಿಕ, ರಾಜಕೀಯ, ವರ್ಣ, ಧರ್ಮ, ಸನ್ಯಾಸ, ಮುಂತಾದ ಅನೇಕ ವಿಷಯಗಳ ಬಗ್ಗೆ ಲೇಖನಮಾಲೆಗಳನ್ನು ಹಗಲೆಲ್ಲ ಓದುತ್ತಿದ್ದೆ. ಹಗಲೆಲ್ಲ ಅವರ ಹೆಸರನ್ನು ನೋಡುತ್ತಲಿದ್ದೆ. ಇಷ್ಟೇ ಅಲ್ಲ ಅನೇಕ ಸಭೆ ಸಮ್ಮೇಲನಗಳಲ್ಲಿಯೂ ಅವರ ಹಸರು ಬರುತ್ತಿತ್ತು. ಅವರ ಉದ್ಬೋಧಕವಾದ ಹಿರಿಯ ಅನುಭವದ ಮಾತುಗಳು, ವಿವೇಚನಾಶಕ್ತಿ, ಪಾಂಡಿತ್ಯ ಲಾಲಿತ್ಯ ಇವುಗಳನ್ನು ನೋಡಿದಾಗ ಅವರ ಬಗ್ಗೆ ಪೂಜ್ಯಭಾವನೆ ಉತ್ಪನ್ನವಾಗುತ್ತಿತ್ತು. ವೇದಕಾಲದ ಮಹಿಳೆಯರ ನೆನಪಾಗುತ್ತಿತ್ತು. ಅವರ ಪ್ರತ್ಯಕ್ಷ ಪರಿಚಯ ನನಗಿದ್ದಿಲ್ಲ.

ನನ್ನ ಹತ್ತುವರ್ಷದ ಕಾರ್ಯದ ಜೀವನದಲ್ಲಿ ೧೯೫೦ನೇ ಅಕ್ಟೋಬರ ತಿಂಗಳ್ಳಲ್ಲಿ ಧಾರವಾಡ ಭಗಿನಿಸಮಾಜದ ಅಧಿಕೃತದಲ್ಲಿ ನಡೆದ ಅಂಬರ ಚರಖಾ ಕ್ಲಾಸಿನ ಇನಸ್ಪೆಕ್ಟರಳೆಂದು ಕೆಲಸಮಾಡುವ ಅವಕಾಶ ಸಿಕ್ಕಿತ್ತು. ಒಂದು ದಿನ ಚರಖಾದ ವಿಷಯ ತಿಳಿಸಲು ಮಗ್ನಳಾದಾಗ ಅವರಿಚಿತರೊಬ್ಬರು ಬಂದು "ಮಹಾಲಕ್ಷ್ಮಿ ಎಂದರು. ತಲೆಎತ್ತಿದೆ. ಶುಭ್ರ ಖಾದೀಪಟ್ಟೆಯನ್ನು ಧರಿಸಿದ ಭಗಿನಿ ಇಪ್ಪತ್ತರಲ್ಲಿಯೇ ವಿದ್ಯಾರ್ಥಿನಿಯೊಬ್ಬಳು ಬಂದು ಇವರೇ "ಸರೋಜಿನಿ ಮಹಿಷಿ ಎಂದರು. ಎಮ್. ಎ. ಎಲ್. ಎಲ್. ಬಿ. ಡಿಗ್ರಿಯನ್ನು ಪಡೆದು ಅವರ ನಿರಾಡಂಬರ ಜೀವನ ವೃತ್ತಿ". ಅಪರಿಚಿತರಕೂಡ ನಡೆಯುವ ರೀತಿ ಆತ್ಮೀಯ ಭಾವನೆಯನ್ನು ಕಂಡು ಅಪ್ರತಿಭಳಾದೆ. ಅವರು ಕ್ಲಾಸಿನ ಕಮೀಟಿಯ ಸೆಕ್ರೆಟರಿಗಳಾಗಿದ್ದರು. ಕ್ಲಾಸಿನ ಕುಂದುಕೊರತೆಗಳನ್ನು ಕೇಳಿಕೊಳ್ಳುವದು ಮೇಲೆ ಮೇಲೆ ಬಂದು ಭಗಿನಿಯರಿಗೆ ತಿಳಿಹೇಳುವದು ಮಾಡುತ್ತಿದ್ದರು. ಹೀಗಾಗಿ ಅವರ ಪರಿಚಯ ನನಗಾಯಿತು.

ಎರಡನೆಯದಾಗಿ ನಾನವರನ್ನು ಕಂಡಿದ್ದು ಸಾಹಿತ್ಯ ಸಮ್ಮೇಲನದ ಕಾರ್ಯದ ಆಮಂತ್ರಣಕಾರ್ಡನ್ನು ಬರೆಯುತ್ತ ಕಾರಕೂನರಾಗಿರುವಾಗ, ಸಾಹಿತ್ಯ ಸಮ್ಮೇಲನದ ವೇದಿಕೆಯಮೇಲೆ. ಸಾಹಿತ್ಯ ಸಮ್ಮೇಲನದಲ್ಲಿ ಹೆಣ್ಣುಮಕ್ಕಳು ತೆರೆದ ಕ್ಯಾಂಟಿನವ್ಯವಸ್ಥೆ ಮಾಡುತ್ತಿರುವಾಗ, ಭಗಿನಿ ಮಂಡಳದ ವಿವಿಧ ಚಟುವಟಿಕೆಗಳಲ್ಲಿ, ಹುಬ್ಬಳ್ಳಿಯ ಪ್ರದರ್ಶನದಲ್ಲಿಯೂ ನೋಡಿದೆ. ಒಮ್ಮೆ ಹುಬ್ಬಳ್ಳಿಗೆ ಬರುವಿರಾ? ಎಂದರು. ಅವರಸಂಗಡ ಹೋದೆ. ಭಗಿನಿಯೊಬ್ಬಳ ಹೊಲಿಗೆ ಕ್ಲಾಸಿನಲ್ಲಿ ೧೫-೨೦ ಭಗಿನಿಯರು ಹೊಲಿಗೆ ಮತ್ತು ಎಮ್ಬ್ರಾಯಿಡ್ ಶಿಕ್ಷಣ ಪಡೆಯುತ್ತಿದ್ದರು. ಅವರ ಸಂಭಾಷಣೆಯನ್ನು ಕೇಳಿದಾಗ ಕ್ಲಾಸು ತೆರೆದು ಅವರಿಗೆ ಉದ್ಯೋಗದ ಅನ್ನದ ಮಾರ್ಗದರ್ಶನ ಮಾಡಿದ್ದಾರೆಂದು ತಿಳಿಯಿತು. ಹೀಗೆ ಅವರ ಪರಿಚಯವಾದಂತೆ ಅವರ ಕಾರ್ಯಕ್ಷೇತ್ರದ ಪರಿಚಯವೂ ನನಗಾಯಿತು.

ಭಾರತ ಸೇವಕ ಸಮಾಜದ ಚಟುವಟಿಕೆಯಲ್ಲಿ ಅತ್ಯಂತ ನಿಷ್ಠೆಯಿಂದ ದುಡಿಯುತ್ತಲಿದ್ದಾರೆ ಹಳ್ಳಿ ಹಳ್ಳಿಗೂ ಸಮಾಜ ವಿಕಾಸಯೋಜನೆಯ ಸಂದೇಶವನ್ನು ಮುಟ್ಟಿಸುತ್ತಿದ್ದಾರೆ. ಈ ಕೆಲಸನನ್ನದು ಈ ಕೆಲಸ ನನ್ನದಲ್ಲವೆಂಬ ಭಾವನೆ ಅವರಿಗಿಲ್ಲ. ಸಣ್ಣವರಿಂದ ದೊಡ್ಡವರ ವರೆಗೂ ಒಂದೇ ರೀತಿ ಒಂದೇ ನಡತೆ, ವಿಧವಾ ಮತ್ತು ಪರಿತ್ಯಕ್ತ ಭಗಿನಿಯರಿಗೆ ಅವರ ನಿಜವಾದ ಪರಿಸ್ಥಿತಿಯನ್ನರಿತು ಅವರ ಕಲ್ಯಾಣದ ಅನ್ನದ ಮಾರ್ಗದರ್ಶನ ಮಾಡುತ್ತಿದ್ದಾರೆ, ವಿಧಾಯಕ ವಿವಿಧ ಚಟುವಟಿಕೆಯಲ್ಲಿಯೂ ತನುಮನಧನದಿಂದ ದುಡಿಯುತ್ತಲಿದ್ದಾರೆ.

ಎಮ್. ಎ ಎಲ್ ಎಲ್. ಬಿ. ಶಿಕ್ಷಣ ಪಡೆದರೂ ಕಂಡದ್ದನ್ನೆಲ್ಲ ಕಲಿಯುವ ಹಿರಿಯ ಹಂಬಲ ಅವರದು. ಹಿಂದೀ ಶಿಕ್ಷಣ ಪಡೆದಿದ್ದಾರೆ ಹೊಲಿಗೆ ಕಸೂತಿ ಆಳವಾಗಿ ಅರಿತಿದ್ದಾರೆ ಕಾಗದಗಳಿಂದ ವಿವಿಧ ಹೂಗಳನ್ನು ತಯಾರಿಸುವದು ಗಾಯನವನ್ನು ಕಲಿತಿದ್ದಾರೆ. ಸಾಲದ್ದಕ್ಕೆ ಹೊಮಿಯೊಪಥಿಕ ಕೋರ್ಸ, ನಿಸರ್ಗ ಚಿಕಿತ್ಸೆ, ಇವುಗಳನ್ನು ಅರಿತಿದ್ದಾರೆ.

ಸಾಹಿತ್ಯ ಪ್ರಪಂಚದಲ್ಲಿ ಜಾತಿಮತ ಪಂಥಗಳನ್ನೆಣಿಸದೆ ಎಲ್ಲ ಧರ್ಮಗಳ ಗ್ರಂಥಗಳನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ ಎಲ್ಲೆಲ್ಲಿಯೂ ಸಭೆ ಸಮ್ಮೇಲನಗಳಲ್ಲಿ ವಾಗ್ಝರಿಯನ್ನೇ ಹರಿಸಿ ವಾಗ್ದೇವಿಯಾಗಿದ್ದಾರೆ! ಅವರ ಅಸ್ಖಲಿತವಾಣಿ ಆಳವಾದ ಮಾತುಗಾರಿಕೆಯನ್ನೇ ಬೆರಗುಗೊಳಿಸಿದೆ. ಲೇಖನಿ ಎತ್ತಿದ ಕೈ! ಶಾಕುಂತಲಾ ಎಂಬ ಕಾದಂಬರಿಯನ್ನು ಅನುವಾದ ಮಾಡಿದ್ದಾರೆ. ಹೊಲಿಗೆ ಕಸೂತಿಕಲೆ ಎಂಬ ಪುಸ್ತಕ ಬರೆದು ಭಗಿನಿ ವೃಂದಕ್ಕೆ ಕಾಣಿಕೆಯನ್ನಾಗಿ ಅರ್ಪಿಸಿದ್ದಾರೆ, ಅದು ಪ್ರಾಯಿಜ ಪಡೆದಿದೆ. ಬಾಣಕಾದಂಬರಿಯ ಸಂಪಾದಿಕರೂ ವೀರಮಾತೆಯ ಸಂಪಾದಿಕೆಯರೂ ಆಗಿದ್ದಾರೆ. ಹೀಗೆ ಸಾಹಿತ್ಯ ಪ್ರಪಂಚದಲ್ಲಿಯೂ ತಮ್ಮ ಅತ್ಯದ್ಭುತವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕಾಯಿದೆ ಅಭ್ಯಾಸದಲ್ಲಿಯೂ ತಮ್ಮ ಪರಂಪರೆಯನ್ನೇ ಮೀರಿದ್ದಾರೆ. ಇವರ ತಂದೆಯವರೂ ಪ್ರಸಿದ್ಧ ವಕೀಲರು. ಸ್ವತಾ ಸರೋಜಿನಿ ಯವರು ಲಾಕಾಲೇಜನಲ್ಲಿ ಪ್ರೊಫೆಸರರಿದ್ದಾರೆ. ಇದಕ್ಕೂ ಹೆಚ್ಚು ಮುಂಬರಿಯುವ ಆಶೆಆಕಾಂಕ್ಷೆ ಇಗೆ. ಅವರ ನಿಸ್ವಾರ್ಥ ಸೇವೆಯು ಅವರನ್ನು ಉಚ್ಚ ಉನ್ನತ ಶಿಖರಕ್ಕೆ ಮುಟ್ಟಿಸದೆ ಇರಲಾರದು.

ಇಂದು ಅನೇಕರು ಧನಸಂಪತ್ತಿಯಿಂದ ಧನವಂತರೆನಿಸಿಕೊಳ್ಳುತ್ತಾರೆ. ಅಧಿಕಾರದಿಂದ ಹಿರಿಯರಾಗುತ್ತಾರೆ. ನೇಜು ಬಡಿದು ನಾಲ್ಕು ದೊಡ್ಡ ಮಾತುಗಳನ್ನಾಡಿ ದೊಡ್ಡವರಾಗುತ್ತಾರೆ. ಆದರೆ "ಶ್ರೀ" ಸರೋಜನಿ ಮಹಿಷಿಯವರಲ್ಲಿ ಉಚ್ಚ ಶಿಕ್ಷಣಕ್ಕೆ ತಕ್ಕಂತೆ ಬುದ್ಧಿಮತ್ತೆಯಿದೆ. ನಿಸ್ವಾರ್ಥ ಸೇವಾಬುದ್ಧಿ ಇದೆ. ಕಾರ್ಯತತ್ಪರತೆ ದಕ್ಷತೆ ಇದೆ. ಎದೆಗಾರಿಕೆಯೂ ಇದೆ. ಸ್ವಯಂ ಪ್ರಕಾಶಿನಿಯರಿದ್ದಾರೆ! ಅವರ ಉಚ್ಚ ಶಿಕ್ಷಣವು ಆರ್ಯ ಆದರ್ಶ ಮಹಿಳೆಯನ್ನಾಗಿ ಮಾಡಿದೆ. ವೇದಕಾಲದ ಗಾರ್ಗಿಮೈತ್ರೆಯರಂತೆ ಸಾಹಿತ್ಯ ವಿಶಾರದಯಾಗಿದ್ದಾರೆ ಕಲೆಸಂಸ್ಕೃತಿಯ ಕೋವಿದೆಯಾಗಿದ್ದಾರೆ ಶಿಕ್ಷಣ ತಜ್ಞೆಯರಿದ್ದಾರೆ. ಅನಾಥ ಪತಿತ ಭಗಿನಿಯರ ಮಾರ್ಗದರ್ಶಕರಾಗಿದ್ದಾರೆ!

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು ರಾಘವೇಂದ್ರ ಆಚಾರ್ಯ,ಎಂ ಎ)

ಸಾಮಾನ್ಯ ರೋಗಗಳು
(ಡಾ. ಕೆ ಎಲ್ ಐತಾಳ,ಎಂ.ಬಿ ಬಿ ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ

ಪ್ರತಿಗಳು ಸಿಗುವ ಸ್ಥಳ-

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನುಭವದಿಂದ ಬಂದ ಜ್ಞಾನ

ಶ್ರೀಗಂಧದ ಮರಗಳನ್ನು ಸಮೃದ್ಧವಾಗಿ ಬೆಳೆಸುವುದರ ರಹಸ್ಯವು ನೂರಾರು ವರ್ಷಗಳ ಅನುಭವವಾದ ಮೇಲೂ ಕೂಡಾ ಇನ್ನೂ ಮೈಸೂರು ಸೀಮೆಯೊಂದರ ವಶದಲ್ಲಿಯೇ ಇರುವ ಸ್ವತ್ತಾಗಿದೆ. ಮೈಸೂರು ಸರ್ಕಾರದ ಕಾರ್ಖಾನೆಗಳಲ್ಲಿ ಬಟ್ಟಿಯಿಳಿಸಿದ ಅತ್ಯಂತ ಮನೋಹರವಾದ ಪರಿಮಳವುಳ್ಳ ಶ್ರೀಗಂಧದ ಎಣ್ಣೆಯೇ ಪ್ರಪಂಚದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದದ್ದು. ಈ ಎಣ್ಣೆಯು ಸರ್ವ ಸಮರ್ಪಕವಾದ ಸ್ಥಳ ಸನ್ನಿವೇಶದಲ್ಲಿ ಬೆಳೆದು ಕಡಿದು ಕೂಡಿಟ್ಟ ಶ್ರೀಗಂಧದ ಮರದಿಂದ ತಯಾರಾದದ್ದು. ಅದರ ಸುವಾಸನೆಯು ಮರದಲ್ಲಿ ಸಾಕ್ಷಾತ್ತಾಗಿರುವ ಎಣ್ಣೆಯದು ಹೇಗೆಯೋ ಹಾಗೆಯೇ ತುಂಬಿಕೊಂಡು ಸ್ವಲ್ಪವೂ ಕುಂದದೆ ಇರುತ್ತದೆ. ಲೋಕದಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಸಾಬೂನುಗಳ ಮತ್ತು ಪರಿಮಳ ದ್ರವ್ಯಗಳ ತಯಾರಿಕೆಯಲ್ಲಿ ಈ ಸುವಾಸನೆ ಉಪಯುಕ್ತವಾಗುತ್ತದೆ.

ಮೈಸೂರು ಶ್ರೀಗಂಧದ ತೈಲ

ಗೌರ್ನಮೆಂಟ್ ಸ್ಯಾಂಡಲ್‌ಉಡ್ ಆಯಿಲ್ ಫ್ಯಾಕ್ಟರಿ, ಮೈಸೂರು.

ಬೆಳ್ಳಗಿರದ ಹಾಲು

(ಎರಡನೇ ಪುಟದಿಂದ)

ಹೇಗೂ ಬಂದಾಗಿದೆ. ಇನ್ನು ಆದುದಾಯಿತು; ಇಲ್ಲಿಯೇ ಹೇಗೂ ಬೇಗೆವಗಾಡಿ ಪ್ರಾತಃಕಾಲ ಧಾವನಲ್ಲಿಗೆ ಹೋಗುವುದೆಂದು ಅಭಿಪ್ರಾಯಪಟ್ಟರು. ಅಂತೆಯೇ ಒಪ್ಪಿದರು.

ಭಟ್ಟರಿಗೆ ಅವನಲ್ಲಿ ಊಟಮಾಡಲು ಆಗದುದರಿಂದ ಬಾಳೆಹಣ್ಣು, ಹಾಲು, ಫಲಾಹಾರವಾಯಿತು.

“ಸ್ವಾಮಿ, ನೀವಿನ್ನು ಆ ಕೋಣೆಯಲ್ಲಿ ಮಲಗಿಕೊಳ್ಳಿ. ನಾನು ಒಮ್ಮೆ ಇಲ್ಲೇ ಆಚೆಕಡೆ ಹೋಗಿಬರುತ್ತೇನೆ. ನಿಮಗೇನೂ ಹೆದರಿಕೆ”ಯಿಲ್ಲ. -ಅಂದ ಅವ.

“ಏಕೆ ನಿಮಗೆ ತೊಂದರೆ! ನಾನು ಇಲ್ಲೇ ಜಗಲಿಯಲ್ಲಿ ಮಲಗಿಕೊಳ್ಳುತ್ತೇನೆ”—ಭಟ್ಟರು ಸಂಕೋಚದಿಂದ ನುಡಿದರು.

“ತೊಂದರೆಯೇನೂ ಇಲ್ಲ, ನಾನು ಆ ಬದಿಯ ರೂಮಿನಲ್ಲಿ ಮಲಕ್ಕೊಳ್ಳುತ್ತೇನೆ. ನೋಡಿ, ಇಲ್ಲಿ—ಕಳ್ಳರ ಭಯ ಹೆಚ್ಚು. ನೀವು ಪರವೂರಿನವರು; ಹಣವೇನಾದರೂ ಇರುವಸಂದರ್ಭ. ಆದುದರಿಂದ ನಿಮಗೆ ಅಲ್ಲಿಯೇ ಅನುಕೂಲ”—ಎಂದು ಮೆಲ್ಲಗೆ ನುಡಿದ ಸೂಟುಧಾರಿ.

ಸರಿ; ಅಂದುಕೊಂಡು ಭಟ್ಟರು ಕೋಣೆಯ ಒಳಹೊಕ್ಕರು. ಅತ ಹೊರಗೆ ಹೋದ.

ಅಲ್ಲೇ ಹಾಸಿದ ಜಮಖಾನದ ಮೇಲೆ ಬಾಗಿಲಿಕ್ಕಿಕೊಂಡು ಭಟ್ಟರು ಮಲಗಿಕೊಂಡರು.

ಸುಮಾರು ಗಂಟೆ ಹನ್ನೊಂದು ಕಳೆದಿರಬಹುದು. ಸೂಟುಧಾರಿ ಹೊರಗೆ ಹೋದವ ಇನ್ನೂ ಬಂದಿರಲಿಲ್ಲ. ಸ್ಥಳ ಬದಲಾಗಿದ್ದುದರಿಂದ ಕೃಷ್ಣ ಭಟ್ಟರಿಗೆ ನಿದ್ದೆ ಬಂದಿರಲಿಲ್ಲ. ಅವರಿಗೊಮ್ಮೆ ಮೂತ್ರ ವಿಸರ್ಜನೆಗೆ ಹೊರ ಹೋಗಬೇಕೆಂದಾಯಿತು. ಮೆಲ್ಲನೆ ಎದ್ದು ಹೊರಬಂದರು.



ಅಮೇರಿಕೆಯು ತನ್ನ ಪ್ರಥಮ ಉಪಗ್ರಹ ಆಲ್ಫಾವನ್ನು ಹಾರಿಸುವುದಕ್ಕೆ ಮೊದಲು ಅದಕ್ಕೆ ಬೇಕಾದ ಸಕಲ ಸನ್ನಾಹದೊಡನೆ ಸಿದ್ಧವಾಗಿರುವುದನ್ನು ನೋಡಬಹುದು. ಇದನ್ನು ಫ್ಲೋರಿಡಾ ಕೇಪ್ ಕನವೆರಲ್‌ನಲ್ಲಿ ಸಿದ್ಧಪಡಿಸಲಾಗಿದೆ.

ಹಾಲು ಚೆಲ್ಲಿದಂತೆ ತಿಂಗಳ ಬೆಳಕು ಇದ್ದುದರಿಂದ ಅವರಿಗೆ ದಾರಿ ಕಾಣಲು ಕಷ್ಟವಾಗಲಿಲ್ಲ. ಮನೆಯ ಎಡ ಪಾರ್ಶ್ವಕ್ಕಾಗಿ ರೈಲ್ವೇ ಮಾರ್ಗದಿಂದ ಬರುವ ದಾರಿ. ಅವರು ಅದೇ ಕಡೆ ತುಸು ಮುಂದೆ ಹೋಗಿ ಮೂತ್ರಶಂಕೆಗೆ ಕುಳಿತರು. ಅಲ್ಲಿ ರಸ್ತೆ ಡೊಂಕಾಗಿತ್ತು. ಹಾಗೂ ಮತ್ತೊಂದು ರಸ್ತೆ ಕೂಡಿತ್ತು. ಇನ್ನೇನು ಮನೆಯೊಳಕ್ಕೆ ಹೋಗಬೇಕೆಂದೆನ್ನುವಷ್ಟರಲ್ಲಿ ಯಾರೋ ಪಿಸುಗುಟ್ಟಿದಂತೆ ಕೇಳಿಸಿತು. ಆಗವರು ಆಶ್ಚರ್ಯದಿಂದ ಸ್ವಲ್ಪ ಮುಂದೆ ಹೋಗಿ ಕಿವಿ ನಿಗುರಿಸಿಕೊಂಡು ಕೇಳಿದರು.

ದಾರಿ ತಿರುಗುವಲ್ಲಿ ಯಾರೋ ಮೂವರು ನಿಂತಿರುವಂತೆ ಕಂಡಿತು. 'ಈ ಸಿಪ್ರೆ ಬರಲಿಕ್ಕಾಯಿತು...ಅವನಲ್ಲಿ ಹಣ ಇರುವಂತೆ....ಮತ್ತೆ ತೀರಿಸಿ ಬಿಡೋಣ'— ಎಂಬ ಮಾತು ಅವರ ಕಿವಿಗೆ ಬಿತ್ತು. ಮೂವರಲ್ಲಿ ಒಬ್ಬನು ಸೂಟುಧಾರಿಯೇ ಇರಬೇಕೆಂದು ಅವರಿಗೆ ಅನುಮಾನ ಬಂತು. ಅಂತೂ ತಾನು ಗಂಡಾಂತರದಲ್ಲಿ ಸಿಕ್ಕಿ ಬಿದ್ದಿದ್ದೇನೆಂದು ಅವರಿಗರಿವಾಯಿತು. ನಿಮಿಷ ಕೂಡಾ ವ್ಯರ್ಥ ಮಾಡದೆ ಕೋಣೆ ಒಳ ಹೊಕ್ಕವರೇ ತಮ್ಮ ಕೈಚೀಲ ತೆಗೆದುಕೊಂಡು, ತಲೆದಿಂಬನ್ನು ನೀಟವಾಗಿರಿಸಿ ಅದರ ಮೇಲೆ ಹೊದಿಕೆಯನ್ನು ಹೊದೆಯಿಸಿ ಹೊರಬಂದರು. ಅಲ್ಲೇ ಒಂದು ಗೋಡೆಯಿತ್ತು. ಅದನ್ನು ಹಾರಿ ಓಡ ತೊಡಗಿದರು.

ಆ ದಾರಿಯಲ್ಲಿ ಮನೆಗಳು ದೂರ ದೂರವಾಗಿದ್ದವು. ಮಾತ್ರವಲ್ಲ ಎಲ್ಲವೂ ಮುಚ್ಚಿದ್ದವು. ಯಾವುದಾದರೂ ಅಂಗಡಿ ಗೋಚರಿಸುವುದೇನೋ ಎಂದು ಅತ್ತಿತ್ತ ನೋಡುತ್ತಾ ವೇಗವಾಗಿ ಸಾಗಿದರು. ಹೆಚ್ಚಿನ ಅಂಗಡಿಗಳೂ ಬಾಗಿಲು ಹಾಕಿದ್ದುವು.

ಒಂದು ಕಡೆ ಮಾತ್ರ ಸ್ವಲ್ಪ ಬೆಳಕು ಕಾಣಿಸುತ್ತಿತ್ತು. ಅದೊಂದು ಕಾಫಿ ಹೋಟೇಲು. ಮಾಲೀಕ ಗೋವಿಂದ ರಾಯರು ಬಾಗಿಲು ಹಾಕತೊಡಗಿದ್ದರು.

ಅದೇ ಸಮಯದಲ್ಲಿ ಕೃಷ್ಣ ಭಟ್ಟರು ಒಳ ಹೊಕ್ಕರು. ಭಟ್ಟರನ್ನು ನೋಡಿ ಏನಾಯಿತೆಂದು ಗೋವಿಂದರಾಯರು ವಿಚಾರಿಸಿದರು. ಭಟ್ಟರು ನಡೆದ ಸಂಗತಿಯನ್ನು ವಿವರಿಸಿದರು. ಕೂಡಲೇ ರಾಯರು ಧೈರ್ಯ ಹೇಳಿ ಕುಳ್ಳಿರಿಸಿದರು.

ಐದು ನಿಮಿಷ ಕಳೆದಿರಬಹುದು. ಅಷ್ಟರಲ್ಲಿ ಸೂಟು ಧರಿಸಿದ ವ್ಯಕ್ತಿಯೊಂದು 'ರಾಯರೇ, ಇಲ್ಲೊಂದು ಜನ ಬಂತೋ?' — ಎಂದು ಕೇಳಿತು.

“ಯಾರಯ್ಯಾ? ಯಾರು ಬರುತ್ತಾರೆ ಈ ಸಮಯ? ಯಾರೂ ಇಲ್ಲವಲ್ಲ”— ಎಂದು ಬಿಟ್ಟರು ರಾಯರು.

ಬಂದ ವ್ಯಕ್ತಿ ಅಲ್ಲಿಂದ ಜಾರಿತು.

ಆ ವ್ಯಕ್ತಿಯ ಸ್ವರ ಕೇಳಿದ ಭಟ್ಟರು ಅದೇ ವ್ಯಕ್ತಿ ತನ್ನನ್ನು ಕರಕೊಂಡು ಹೋದುದೆಂದು ತಿಳಿಸಿದರು.

“ಅವ ಶುದ್ಧ ಪೋಕ್ರಿ. ಅವ ಒಬ್ಬನೇ ಅಲ್ಲ. ಇನ್ನೂ ಕೆಲವರಿದ್ದಾರೆ. ಅವಕ್ಕೆಲ್ಲಾ ಇದೇ ಕಸಬು. ಯಾರಾದರೂ ಪರಸ್ಥಳದ ಜನರನ್ನು ಸಿಕ್ಕಿದರೆ ಸುಲಿಯುವುದು. ಇವರು ಕೊಲೆಗೂ ಹೇಸರು. ಇಲ್ಲೇ ಹತ್ತಿರ ರೇಲ್ವೆ ಸಂಕವಿದೆ. ಕೊಂದು ಶವವನ್ನು ಹೊಳೆಗೆ ಎಸೆದರೆ ಗೊತ್ತಾಗುವುದಾದರೂ ಹೇಗೆ? ಏನೋ ನಿಮ್ಮ ಪುಣ್ಯ, ಒಳ್ಳೆಯದು. ನಿಮಗೆ ಹೋಗಬೇಕಾದ ರಾಮನಾಥನ್ ಬೀದಿ ಈ ಕಡೆಯೇ ಅಲ್ಲ. ಅದು ಸ್ಟೇಶನಿನಿಂದ ಆಚೆಯ ಪಾರ್ಶ್ವ. ನಿಮಗಿನ್ನೂ ಲೋಕ ತಿಳಿದಿಲ್ಲ. ಇಲ್ಲಿಯೆಲ್ಲಾ ಇದು ಸಾಮಾನ್ಯವಾಗಿ ಹೋಗಿದೆ. ಮುಂದೆ ಜಾಗ್ರತೆ ತೆಗೆದುಕೊಳ್ಳಿ. ಎಲ್ಲಿ ಯಾರು ಹೇಗೆ ಮಾಡಿಯಾರು ಎಂದು ಈ ಕಾಲದಲ್ಲಿ ಹೇಳಬರುವುದಿಲ್ಲ. ನಾನೂ ನಿಮ್ಮತ್ತ ಕಡೆಯವನೇ. ಈಗ ನೋಡಿ ಹತ್ತು ವರ್ಷವಾಯಿತು ಇಲ್ಲಿಗೆ ಬಂದು. ಇಂದು ನೀವಿನ್ನು ನಿಶ್ಚಿಂತೆಯಿಂದಿರಿ. ನಾಳೆ ನಿಮ್ಮನ್ನು ನಾನೇ ಬಿಟ್ಟುಬರುತ್ತೇನೆ”— ಗೋವಿಂದರಾಯರು ಉದ್ದನೆಯ ಉಪನ್ಯಾಸವಿತ್ತರು.

‘ಎಷ್ಟು ಸುಲಭದಲ್ಲಿ ನನ್ನನ್ನು ಮೋಸಗೊಳಿಸಿಬಿಟ್ಟ ಆ ಸೂಟುಧಾರಿ! ಏನು ನಯ, ವಿನಯ, ಅಬ್ಬಾ! ಈ ಕಾಲದಲ್ಲಿ ಒಬ್ಬನನ್ನು ನಂಬುವುದೇ ಕಷ್ಟ’—ಅಂದುಕೊಂಡರು ಭಟ್ಟರು.

ಪೇಟೆಯ ಹೊಲಸು ವಾತಾವರಣದ ಪರಿಚಯವಿಲ್ಲದ ಭಟ್ಟರಂತಹ ಪವಿತ್ರ ಹೃದಯಕ್ಕೆ ಹೀಗಾಗುವುದು ಸಹಜ!

ನಮ್ಮ ಹಿರಿಯರು ಸುಮ್ಮಗೇ ಅಂದಿರುವರೆ?—‘ಬೆಳ್ಳಗಿರುವುದೆಲ್ಲ ಹಾಲಲ್ಲ’ ಎಂದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 10/1958.

ಉಡುಪಿ ಶ್ರೀ ಶೀರೂರು ಮಠದ ಶ್ರೀ ವಿಠಲ ದೇವರ ಭಂಡಾರದ ಅಧಿಪತಿಗಳು ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಯವರು —ವಾದಿಯು

ಮತ್ತು

ಪುಟ್ಟು ಹುರಿಮುಂಜಿ ಕೂಡಾ —ಪ್ರತಿವಾದಿಯು,

ಇವರೊಳಗೆ

8ನೆ ಪ್ರತಿವಾದಿ ತಾಳ ಹುಂಡ-ಸದಿಯ ಹುಂಡನ ಮಗ, ಉಡುಪಿ ತಾಲ್ಲೂಕು ಚೇರ್ಕಾಡಿ ಗ್ರಾಮ-ಯಿವರಿಗೆ ತಿಳಿಸುವುದೇನಂದ್ರೆ,

ಮೇಲ್ಕಂಡ ವಾದಿಯ ಭಂಡಾರದ ವಳಗೆ ಅನುಭವಿಸಿ ಬರುವ ಬಾಲಗೇಣಿ ಆಸ್ತಿಯ ಸ್ವಾಧೀನತೆಗೂ-ಪುಟ್ಟುವಳ್ಳಿಗೂ ಪ್ರತಿ ವಾದಿರ ಮೇಲೆ ಮಾಡಿದ ದಾವೆಯಲ್ಲಿ 8ನೇ ಪ್ರತಿವಾದಿಯ ಅಪ್ಪೆರ ನೋಟ್ಸು ಬಗ್ಗೆ ತಾ. 20-3-1958 ಕ್ಕೆ ಯಿಡೋಣಾಗಿಯದೆಂತಲ್ಲೂ, ಸದ್ರಿ 8ನೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ರೆ ಆ ದಿವ್ಸ 10 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳಲಿಕ್ಕೆ ತಪ್ಪಿದ್ರೆ ಅವನ ಗೈರಹಾಜ್ರಿಯಿಂದ ಸದ್ರಿ ನಂಬ್ರ ತೀರ್ಮಾನಿಸಲಾದೀತುಯೆಂತ ಈ ಮೂಲ್ಕ ತಿಳಿಸೋಣಾಗಿಯದೆ.

V. R. Kidyur,
Advocate for Plff.

ಉಡುಪಿ 6-3-1958.

ಪ್ರಕಟಣೆ.

ಈ ಮೂಲಕ ತಿಳಿಯಪಡಿಸುವುದೇನಂದರೆ 1958-'59ನೇ ವರ್ಷದ ಬಾಬ್ತು ಕಟಪಾಡಿ ಪಂಚಾಯತ ಬೋರ್ಡಿನ ಅಧೀನಕ್ಕೆ ಒಳಪಟ್ಟ ಮಾರ್ಕೆಟು, ಇಳಿಯುವ ಸ್ಥಳ (Jetty) ಮತ್ತು ಕಡವು ಇವುಗಳಲ್ಲಿ ವಸೂಲು ಮಾಡುವ ಹಕ್ಕನ್ನು ಪಂಚಾಯತ ಬೋರ್ಡಿನ ಪ್ರೆಸಿಡೆಂಟರು ತಾ. 17-3-1958 ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ಪಂಚಾಯತ ಬೋರ್ಡು ಆಫೀಸಿನಲ್ಲಿ ಆ ಕುರಿತು ಜ್ಯಾರಿಯಲ್ಲಿರತಕ್ಕ ನಿಯಮಗಳಿಗನುಸಾರವಾಗಿ ಪ್ರತ್ಯ ಪ್ರತ್ಯೇಕವಾಗಿ, ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡುವರು.

ಈ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಆಫೀಸು ಸಮಯ ಪಂಚಾಯತ ಬೋರ್ಡು ಆಫೀಸಿಗೆ ಬಂದು ತಿಳಿದುಕೊಳ್ಳಬಹುದು.

P. Venkatraya Nayak,
B. Sc.
President, Panchayat Board.
Katapadi S. K.

ಪಂಚಾಯತ ಬೋರ್ಡು ಆಫೀಸು
ಕಟಪಾಡಿ 7-3-1958

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ “ಮನೆ ಮದ್ದು” ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ ರೂ. ೨-೦-೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ವಾರದ ಮಹಾನುಭಾವ—

ಡಾ. ಲಿಯೊಪಾಲ್ಡ ಫಿಗಲ್

ಹಲವಾರು ಬಾರಿ ವಿದೇಶೀಯರ ಒಳಸಂಚನ್ನು ಮುರಿಯುವ, ಕಳೆದ ಮಹಾಯುದ್ಧದ ಪ್ರಾರಂಭಿಕ ಸಮಯದಲ್ಲಿ ಅತ್ಯಂತ ಹೊರೆಯನ್ನು ಸಾಹಸದಿಂದ ಹೊರಬೇಕಾಗಿ ಬಂದ ಆಸ್ಟ್ರಿಯಾದ ವಿದೇಶ ಮಂತ್ರಿ ಡಾ. ಎಚ್. ಸಿ. ಲಿಯೊನಾಲ್ಡ ಫಿಗಲರವರು ಭಾರತಕ್ಕೆ ಆಗಮಿಸಿದ್ದಾರೆ. ಭಾರತವನ್ನು ಸಂಪೂರ್ಣವಾಗಿ ತಿಳಿದುಕೊಳ್ಳದಿರುವ ಮತ್ತು ಕಳೆದೆರಡು ಶತಮಾನಗಳಲ್ಲಿ ಸಾಮ್ರಾಜ್ಯವಾದವನ್ನೇ ತಮ್ಮ ಸೂತ್ರವನ್ನಾಗಿ ಮಾಡಿಕೊಳ್ಳುವ ಅವಸರ ದೊರೆಯದೆ ಇರುವ ಪ್ರಪಂಚದ ಬೇರೆ ಭಾಗಗಳಲ್ಲಿನ ದೇಶಗಳ ವಿದೇಶ ನೀತಿಯ ಮೇಲೆ ಮಾತ್ರ ಇವರ ಆಗಮನವು ಪ್ರಭಾವ ಬೀರುವುದೆಂದರೆ ಅತಿಶಯೋಕ್ತಿಯಲ್ಲ.

ಡಾ.ಲಿಯೊಪಾಲ್ಡರ ಜನ್ಮವು ೧೯೦೨ನೆ ಅಕ್ಟೋಬರ ೨ನೆ ದಿನಾಂಕದಂದಾಯಿತು. ಆಸ್ಟ್ರಿಯಾದ ಕೆಳವರ್ಗದ ಒಂದು ಪರಂಪರಾವಾದಿ ಕೃಷಿಪರಿವಾರದಲ್ಲಿ ಜನ್ಮಿಸಿದ ಕಾರಣದಿಂದ ಇವರಹೃದಯದಲ್ಲಿಕೆಲವೊಂದು ಸಂಸ್ಕಾರಗಳು ತೋರಿಕೊಂಡುವು. ಈ ಕುಟುಂಬವು ಒಂದೇ ಸ್ಥಳದಲ್ಲಿದ್ದುಕೊಂಡು ಸುಮಾರು ನಾಲ್ಕುನೂರ ಎಪ್ಪತ್ತೈದು ವರ್ಷಗಳ ಕಾಲ ಸ್ಥಿರವಾಗಿ ನೆಲೆಯಾಗಿತ್ತೆಂದು ಹೇಳುತ್ತಾರೆ.

ಇವರಲ್ಲಿ ಮನೆಮಾಡಿದ್ದ ಕೃಷಿ ಸಂಸ್ಕಾರದ ಪ್ರಭಾವದಿಂದ, ವಿಯನ್ನಾದ ಒಂದು ಕೃಷಿ ಕಾಲೇಜಿನಲ್ಲಿ ಉಚ್ಚ ಪದವಿಯು ದೊರೆಯಿತು. ಇದರ ನಂತರ ಅವರು ಕೆಳವರ್ಗದ ಕೃಷಿ ಲೀಗಿನಲ್ಲಿ ಕೆಲಸ ಮಾಡಿದರು, ಮತ್ತು ಕೆಲವು ದಿನಗಳಲ್ಲಿಯೇ ಅವರು ಅದರ ಡೈರೆಕ್ಟರರಾದರು. ಈ ಹುದ್ದೆಯಲ್ಲಿ ಅವರು ೧೯೩೮ರ ವರೆಗೆ ಕಾರ್ಯಪ್ರವೃತ್ತರಾಗಿದ್ದರು.

ಇದರ ಮೇಲೆ ಅವರ ರಾಜಕಾರಣ ಜೀವನವು ಆರಂಭವಾಯಿತು. ೧೯೩೪ರಲ್ಲಿ ಕೃಷಿಯೊಡನೆ ರಾಷ್ಟ್ರದ ಅರ್ಥವ್ಯವಸ್ಥೆಯೂ ಕೆಟ್ಟುಹೋದುದರಿಂದ ಡಾ. ಲಿಯೋಪಾಲ್ಡರ ಆವಶ್ಯಕತೆಯು ಅತ್ಯಗತ್ಯವೆಂದು ಮನವರಿಕೆಯಾದುದರಿಂದಾಗಿ, ಅವರನ್ನು ಇಕೊನಾಮಿಕ್ ಫೆಡರಲ್ ಕೌನ್ಸಿಲ್‌ನಲ್ಲಿ ಸೇರಿಸಿಕೊಳ್ಳಲಾಯಿತು. ಆಚೆ, ಜನತೆಯಲ್ಲಿ ಅವರ ಸಹಯೋಗವನ್ನು ಪಡೆಯುವ ಲವಲವಿಕೆಯಿತ್ತು. ಈ ಕಾರಣದಿಂದ ಅವರು ಒಂದು ವರ್ಷದಲ್ಲಿಯೇ ಅಖಿಲ ಆಸ್ಟ್ರಿಯ ಕೃಷಿಕ ಲೀಗಿನ ನಿರ್ದೇಶಕರೆಂದು ನೇಮಿಸಲ್ಪಟ್ಟರು.

೧೯೩೮ರಲ್ಲಿ ಹಿಟ್ಲರನ ನಾಜೀ ಸರಕಾರವು ಆಸ್ಟ್ರಿಯಾದ ಮೇಲೆ ಸವಾರಿಮಾಡತೊಡಗಿದಾಗ, ಅವರು ಮೊತ್ತಮೊದಲಿಗೆ ಕೈದುಮಾಡಲ್ಪಟ್ಟರು. ಇದರಿಂದಾಗಿ ಅವರು ತಮ್ಮ ದೇಶದ ಕೃಷಿಕರ ಸಂಬಂಧವನ್ನು ಬಿಟ್ಟುಬಿಡಬೇಕಾಯಿತು. ೧೯೪೩ರ ವರೆಗೆ ಸಾಮಾನ್ಯ ಐದು ವರ್ಷ ಜೇಲುವಾಸದಲ್ಲಿದ್ದರು. ೧೯೪೪ರ ಅಕ್ಟೋಬರದಲ್ಲಿ ಅವರು ಪುನಃ ಹಿಡಿಯಲ್ಪಟ್ಟರು. ೧೯೪೫ರ ವರೆಗೆ ಅವರು ಸ್ವದೇಶದ ಸೆರೆಮನೆಯಲ್ಲಿಯೇ ವಾಸವಾಗಿದ್ದರು. ಅದೇ ವರ್ಷ ಎಪ್ರಿಲ್ ತಿಂಗಳಲ್ಲಿ ಅವರನ್ನು ಬಿಟ್ಟು ಬಿಟ್ಟರು. ಪುನಃ ಅವರು ಕೃಷಿಕ ಲೀಗಿನ ಸಂಘಟನೆಯನ್ನು ಮಾಡ ತೊಡಗಿದರು ದೇಶೋನ್ನತಿಯು ಇಂತಹ ಕಾರ್ಯದಿಂದಲೇ ಸಾಧ್ಯವೆಂದು ಅವರು ದೃಢವಾಗಿ ನಂಬಿದ್ದರು. ಈ ಲೀಗು ಈಗ ಆಸ್ಟ್ರಿಯಾದ ಜನತಾ ಪಕ್ಷದಲ್ಲಿ ತನ್ನ ಪ್ರಭಾವವನ್ನು ಅತ್ಯಧಿಕವಾಗಿ ಬೀರಿದೆ.

ಇದರ ನಂತರ ಆಸ್ಟ್ರಿಯಾದಲ್ಲಿ ಮಧ್ಯಾವಧಿ ಸರಕಾರದ ನಿರ್ಮಾಣವಾಯಿತು. ಆಗ ಅವರಿಗೆ ಗೃಹ ವಿಭಾಗವನು ಬಿಟ್ಟು ಕೊಡಲಾಯಿತು. ಅದು ಅವರಿಗೆ ತಮ್ಮ ದೇಶದ ಯಾವುದೇ ಮಂತ್ರಿ ಮಂಡಲದಲ್ಲಿ ದೊರೆತ ಪ್ರಪ್ರಥಮಾವಸರವಾಗಿತ್ತು.

ಡಾ. ಲಿಯೋಪಾಲ್ಡರು ವಾಸ್ತವಿಕವಾಗಿಯೂ ಎಲ್ಲರಿಗಿಂತ ಹೆಚ್ಚಾಗಿ ಪ್ರಭಾವವನ್ನು ಬೀರಿದ ಜನತಾ ಪಕ್ಷದ ಸಂಸ್ಥಾಪಕರಾಗಿದ್ದಾರೆ. ಆದುದರಿಂದ ೧೯೪೫ರಲ್ಲಿ ಪಕ್ಷವು ಇವರನ್ನೇ ತಮ್ಮ ಅಧ್ಯಕ್ಷನನ್ನಾಗಿಸಿತ. ಇದಾದ ಮೇಲೆ ಆಸ್ಟ್ರಿಯದ ಸಮಸ್ತ ಸರಕಾರವೆಲ್ಲವೂ ಅವರ ಕೈಗಳಿಗೆ ಬಂದಿತು. ಮುಂದಕ್ಕೆ ಅವರು ೧೯೪೫ರಲ್ಲಿ ಅದರ ಫೆಡರಲ್ ಚಾನ್ಸಲರ್ ಆದರು.

ಈ ಸಮಯದ ವರೆಗೆ ಆಸ್ಟ್ರಿಯಾದ ಸರಕಾರಕ್ಕೆ ತನ್ನ ಗೃಹ ನೀತಿಯಿಂದ ವಿರಾಮ ದೊರೆತಿರಲಿಲ್ಲ. ಡಾ. ಲಿಯೋಪಾಲ್ಡರ ಸಂಪೂರ್ಣ ಲಕ್ಷ್ಯವು ರಾಷ್ಟ್ರದ ಪುನರ್ನಿರ್ಮಾಣ ಮಾಡುವುದರಲ್ಲಿ ಮಗ್ನವಾಯಿತು. ೧೯೫೩ರ ನವಂಬರದ ವರೆಗೆ ಈ ದೇಶಕ್ಕೆ ವಿದೇಶೀ ನೀತಿಯ ಅಧಿಕ ಚಿಂತೆಯಿರಲಿಲ್ಲ ; ಆದರೆ, ಈ ಸಮಯದಲ್ಲಿ ಸ್ವರಾಷ್ಟ್ರ ನೀತಿಯಂತೆಯೇ ವಿದೇಶ ನೀತಿಯೂ ದೃಢ ಮತ್ತು ಪರಿಪಕ್ವವಾಗಿರಬೇಕೆಂದು ತಿಳಿದುಬಂದಿತು. ಇದಕ್ಕಾಗಿ ಅವರನ್ನು ವಿದೇಶ ವಿಭಾಗದ ಮಂತ್ರಿಗಳನ್ನಾಗಿ ಮಾಡಲಾಯಿತು.

ಬರ್ಲಿನ್ ಕಾನ್ಫರೆನ್ಸಿನಲ್ಲಿ ಆಸ್ಟ್ರಿಯಾಕ್ಕೆ ತನ್ನ ಭವಿಷ್ಯವನ್ನು ನಿರ್ಣಯಿಸುವ ಅವಸರ ದೊರೆತಾಗ, ಜನತೆಗೆ ಅವರ ಸಾಹಸಿಕ ನೀತಿಯು ಪರಿಚಯವಾಯಿತು. ಒಬ್ಬ ರೈತನ ಮಗನ ದೃಢತೆ ಮತ್ತು ಸಾಹಸದ ಪರಿಚಯವು ಆಗ ಬಹಿರಂಗವಾಯಿತು. ಅವರ ನಿರ್ಭಯತೆಯನ್ನು ಕಂಡು ಆಗ ದೊಡ್ಡದೊಡ್ಡ ರಾಷ್ಟ್ರಗಳೂ ಆಶ್ಚರ್ಯಚಕಿತವಾಗಿ ಹೋಗಿದ್ದುವು. ಮೋಸ್ಕೋದಲ್ಲಿ ಆಸ್ಟ್ರಿಯಾದೊಡನೆ ಸಂಧಿಯ ಸಮ್ಮೇಳನ ನಡೆದಾಗ, ಡಾ ಲಿಯೋಪಾಲ್ಡರೂ ಅದರ ಪ್ರತಿನಿಧಿ ಮಂಡಲದ ಒಬ್ಬ ಸದಸ್ಯರಾಗಿದ್ದು ಮೋಸ್ಕೋಗೆ ತೆರಳಿದರು. ೧೯೫೫ನೆಯ ಮೇ ೧೫ನೆ ದಿನಾಂಕದಂದು ಅವರು ಸಂಧಿ ಪತ್ರಕ್ಕೆ ತಮ್ಮ ಹಸ್ತಾಕ್ಷರವನ್ನು ಹಾಕಿದಾಗ "ನನ್ನ ಜೀವನದಲ್ಲಿ ಅತಿ ಸುಖವಾದ ದಿನವಿದು" ಎಂದು ಉದ್ಗರಿಸಿದ್ದರು.

ಆಸ್ಟ್ರಿಯಾದ ಯುದ್ಧಾ ನಂತರದ ಮುಂದಾಳುಗಳಲ್ಲಿ ಶ್ರೀ ಲಿಯೋಪಾಲ್ಡರು ಒಬ್ಬರಾಗಿದ್ದು, ಅವರ ಕೀರ್ತಿಯು ಜಗತ್ತಿನ ಮೂಲೆ ಮೂಲೆಯಲ್ಲೂ ಹರಡಿದೆ. ೧೯೪೫ರಲ್ಲಿ ಅವರು ಅಪಾರ ಶಕ್ತಿ ಮತ್ತು ದೃಢ ನಿಶ್ಚಯಗಳೊಡನೆ ತಮ್ಮ ದೇಶದ ಭವಿಷ್ಯದ ಸೂತ್ರವನ್ನು ನಡೆಸಿದ್ದರು. ಅವರ ಅರ್ಥವಿದ್ವತ್ತು ಅವರಿಗೆ ತನ್ನ ಸಹ ರಾಷ್ಟ್ರಗಳೊಡನೆ ನೂತನ ಸಂಬಂಧವನ್ನು ಕಟ್ಟಿಕೊಳ್ಳುವಲ್ಲಿ ಮಹತ್ವದ ಪಾತ್ರವನ್ನು ವಹಿಸಿತ್ತೆನ್ನುವುದು ಸತ್ಯ. ಇವರ ವಿವಾಹವು ಒಬ್ಬಾಕೆ ಪ್ರತಿಷ್ಠಿತ ಸೊಶಿಯಲಿಸ್ಟ ಕ್ರಿಶ್ಚಿಯನರ ಕುಟುಂಬದ ಕನ್ಯೆಯೊಡನೆ ನಡೆದಿತ್ತು ಈಗ ಅವರಿಗೆ ಒಬ್ಬ ಪುತ್ರ ಮತ್ತೊಬ್ಬಳು ಮಗಳು ಇದ್ದಾರೆ. ಅವರಿಗೆ ಶಿಕಾರಿ ಎಂದರೆ ಪಂಚಪ್ರಾಣ.

ಡಾ. ಲಿಯೊಪಾಲ್ಡರ ಭಾರತಾಗಮನವು ಭಾರತ ಮತ್ತು ಆಸ್ಟ್ರಿಯಾಗಳ ನಡುವೆ ನಿಕಟ ಸಂಪರ್ಕವನ್ನು ಹೆಚ್ಚಿಸಿ, ಎರಡು ರಾಷ್ಟ್ರಗಳೂ ಸಾಮ್ರಾಜ್ಯವಾದಿಗಳ ಕೈಗೊಂಬೆಗಳಾಗದೆ ಸ್ವತಂತ್ರವಾಗಿ ಬಾಳಿ ಬೆಳಗಲು ಅನುಕೂಲವಾಗುವುದು ನಿಸ್ಸಂದಿಗ್ಧ ಮತ್ತು ಅಪೇಕ್ಷಣೀಯ.

(೧ ನೇ ಪುಟದಿಂದ)

ನಾವು ಸ್ವಾವಲಂಬಿಗಳಾಗಬಹುದು.

ಸಾಧ್ಯವಲ್ಲ. ರಾಸಾಯನಿಕ ಗೊಬ್ಬರಗಳು ಪ್ರಾರಂಭಿಕ ವೇಳೆಯಲ್ಲಿ ಪೋಷಕ ಆಹಾರಾಂಶಗಳೆಂದು ಪರಿಗಣಿಸಲ್ಪಟ್ಟರೂ ಬಹುಕಾಲದ ನಂತರ ಮಣ್ಣೆಲ್ಲವೂ ನಿಸ್ಸಾರವಾಗುವುದು; ಈ ಸಂದರ್ಭದಲ್ಲಿ ಬಳಸುವ ರಾಸಾಯನಿಕ ಗೊಬ್ಬರದ ಪ್ರಮಾಣವನ್ನು ಹೆಚ್ಚಿಸುತ್ತ ಬರಬೇಕು. ಆದುದರಿಂದ ಗದ್ದೆಗಳಿಗೆ ರಾಸಾಯನಿಕ ಗೊಬ್ಬರಗಳನ್ನು ಬಳಸುವುದಕ್ಕಿಂತ ಇತರ ಸಸ್ಯಜನ್ಯ ಗೊಬ್ಬರಗಳನ್ನು ಅರಿಸುವುದೇ ಉತ್ತಮ. ಆದರೂ ನೀರಾವರಿಯ ಸೌಕರ್ಯಗಳ ಅಭಾವದಿಂದಾಗಿ ತರಿಭೂಮಿಗಳು ನಮ್ಮಲ್ಲಿ ಕಡಿಮೆ. ಕಳೆದ ಯೋಜನೆಯಲ್ಲಿ ಈ ಬಗ್ಗೆ ಕಾರ್ಯಕ್ರಮ ಕೈಗೊಂಡಿದ್ದರೂ ಈ ಯೋಜನೆಯಲ್ಲಿ ಅವು ಮುಂದುವರಿಯುತಿದ್ದರೂ ಅವು ಏನೇನೂ ಸಾಲವು. ಕೃಷಿಯಲ್ಲಿ ಕೆಚ್ಚೆಳವನ್ನುಂಟು ಮಾಡುವ ಅಪೇಕ್ಷೆಯಿರುವುದಾದರೆ, ಮತ್ತು ನಮ್ಮ ದೇಶದಲ್ಲಿ ಬೆಳೆಸಲಾಗುವ ೪,೦೦೦ ಬಗೆಯ ಅಕ್ಕಿಯ ಧಾನ್ಯಗಳನ್ನು ನಾವು ಇನ್ನೂ ಹೆಚ್ಚಿಸಬೇಕಾದರೆ ಕೃಷಿ ಸುಧಾರಣೆಯಾಗಬೇಕು; ಅದಕ್ಕಾಗಿ ಸರಕಾರವು ಸಹಕಾರವೀಯಬೇಕು; ಮುಖ್ಯವಾಗಿ ನೀರಾವರೀ ಸೌಕರ್ಯಗಳನ್ನು ಅಧಿಕಪ್ರಮಾಣದಲ್ಲಿ ಒದಗಿಸಬೇಕು.

ಏಲಂ ನೋಟೀಸು.

ಪಡುಬಿದ್ರೆ ಪಂಚ್ಯಾತ್ ಬೋರ್ಡ ಶಾಪೆಯಲ್ಲಿರುವ ಹಪ್ತೆವಾರು ಮಾರ್ಕೆಟು ಮತ್ತು ದಿನವಹಿ ಮಾರ್ಕೆಟು ಕೂಡಾ ತಾರೀಕು 1.4.1958ರಿಂದ ತಾ. 31 3–1959ರ ವರೆಗಿನ ಎಕಿ, ವ, ಸುಂಕ ವಸೂಲುಮಾಡುವ ಸ್ವಾತಂತ್ರ್ಯವನ್ನು ಇದೇ ತಿಂಗಳ ತಾರೀಕು 20.3 1958ನೇ ಗುರುವಾರ ಅಪರಾಹ್ನ ಗಂಟೆ 3.30ಕ್ಕೆ ಪಂಚ್ಯಾತ್ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಶರ್ತಗಳನ್ನು ಆಫೀಸು ಸಮಯದಲ್ಲಿ ಬಂದು ವಿಚಾರಿಸಿಕೊಳ್ಳಬಹುದು.

ಕೆ. ಗೋಪಾಲ ಹೆಗ್ಡೆ
ಪ್ರೆಸಿಡೆಂಟ್,

ಪಂಚ್ಯಾತ್ ಆಫೀಸು ಪಡುಬಿದ್ರೆ,
ತಾ. 9–3–1958.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಬ್ರ 7/1958.

ತುಳಸಿ ಬಾಯಿ —ವಾದಿಳು

ಮತ್ತು

1. ರಘುನಾಥ ಮಧ್ಯಸ್ತ
   ಸಖಾರಾಮ ಮಧ್ಯಸ್ತರ ಮಗ
2. ಭಾರ್ಗವ ರಾಮ ಮಧ್ಯಸ್ತ
3. ನಾಗೇಶ ಮಧ್ಯಸ್ತ
   1ನೇ ಪ್ರತಿವಾದಿಯ ಮಗಂದಿರು

ಉಡುಪಿ ತಾಲೂಕು ನೀಲಾವರ ಗ್ರಾಮದಲ್ಲಿರುವವರು ಇವರಿಗೆ.

ವಾದಿಳ ಗಂಡ ನಾಗಪ್ಪ ನಾಯ್ಕರು ಮತ್ತು 1ನೇ ಪ್ರತಿವಾದಿ ಸಹಾ ೧. ನಿಕಿ ತಾರೀಕು 12-5-1948ರಲ್ಲಿ ಮಾಡಿಕೊಂಡ ಮೂಲಗೇಣಿ ಚೀಟಿಗೆ ಕಾರಣವಾದ ದಾವಾ ಆಸ್ತಿಯ ಬಾಬ್ತು ಪ್ರತಿವಾದಿರಿಂದ ವಾದಿಳಿಗೆ ಬಹಾಕಳದ ಮನ್ಮಥ ಮತ್ತು ದುರ್ಮುಖಿ ಸಂ|ರಗಳ ಮೂಲಗೇಣಿ ಬಡ್ಡಿ ಬಗ್ಗೆ ರೂ. 385.52ಕ್ಕೆ ವಾದಿಳು ಪ್ರತಿವಾದಿರ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 19–3-58ಕ್ಕೆ ತನಿಖೆ ಬಗ್ಗೆ ಇಡೋಣಾಗಿಯದೆ. ಆ ದಿವಸ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆ ಇದ್ದರೆ ಸದರಿಯವರ ಗೈರ್ ಹಾಜರಿಂದ ಪೇಲ್ಯಂಡ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damodar Kamath,
Advocate for Plff.

ಉಡುಪಿ ದ. ಕ. ತಾ 8—3—1958.



ಅಮೆರಿಕೆಯು ಹಾರಿಸಿದ ಉಪಗ್ರಹದ ಕೊಯ್ದ ಭಾಗದ ಚಿತ್ರವಿದು ಉಪಕರಣಗಳನ್ನು ಹೊತ್ತ ಭಾಗ(ಮುಂದಿನದು)ಮತ್ತು ಕೊನೆಯದುದು ಸುಬಾಣ(ಹಿಂಭಾಗದ್ದು)ಗಳನು ಒಂದಾಗಿ ಜೋಡಿಸಿ ತೋರಿಸಲಾಗಿದೆ. ಇವುಗಳು ಜೋಡಿಸಲ್ಪಟ್ಟಲ್ಲಿ ಬೇರೆಯಾಗಲು ತಕ್ಕುದಾದ ಸಲಕರಣೆಗಳಿವೆ.

Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

20—3—1958

ಸಂಚಿಕೆ ೨೮
NO. 28

ದಿಲ್ಲಿಯಿಂದ ನಿರೀಕ್ಷಿತ ಘೋಷಣೆ—

ಮಂತ್ರಿಮಂಡಳದ ಪುನಾರಚನೆ

ಶ್ರೀ ಟಿ ಟಿ ಕೃಷ್ಣಮಾಚಾರಿಯವರು ತನ್ನ ಅರ್ಥಮಂತ್ರಿ ಸ್ಥಾನಕ್ಕೆ ರಾಜೀನಾಮೆಯನ್ನಿತ್ತುದರಿಂದ ಹಾಗೂ ವಿದ್ಯಾ ಮತ್ತು ವೈಜ್ಞಾನಿಕ ಸಂಶೋಧನಾ ಮಂತ್ರಿಗಳಾಗಿದ್ದ ಶ್ರೀ ಮೌಲಾನಾ ಅಬುಲ್ ಕಲಂ ಆಜಾದರ ನಿಧನದಿಂದಾಗಿ ಕೇಂದ್ರ ಮಂತ್ರಿಮಂಡಲವು ಪುನಾರಚಿಸಲ್ಪಡುವುದೆಂಬ ದೃಢಾಭಿಪ್ರಾಯವಿತ್ತು ಇದೀಗ ತಾನೇ ಇಂತಹ ನಿರೀಕ್ಷಿತ ಬದಲಾವಣೆಗಳು ಘೋಷಿಸಲ್ಪಟ್ಟಿವೆ

ಶ್ರೀ ಮುರಾರ್ಜಿ ದೇಸಾಯಿಯವರು ಅರ್ಥಮಂತ್ರಿಗಳಾಗಿ ನೇಮಕಹೊಂದಿದ್ದಾರೆ. ಶ್ರೀ ಲಾಲಬಹದೂರ ಶಾಸ್ತ್ರಿಯವರು ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿಯಾಗಿಯೂ ಶ್ರೀ ಎಸ್. ಕೆ ಪಾಟೀಲರು ಸಾರಿಗೆ ಮತ್ತು ಸಂಪರ್ಕ ಮಂತ್ರಿಯಾಗಿಯೂ ಉತ್ತರ ಪ್ರದೇಶದ ಅರ್ಥ ಮಂತ್ರಿಯಾಗಿದ್ದ ಶ್ರೀ ಹಫೀಜ ಮಹಮ್ಮದ ಇಬ್ರಾಹಿಮರು ನೀರಾವರಿ ಮತ್ತು ವಿದ್ಯುಚ್ಛಕ್ತಿ ಮಂತ್ರಿಯಾಗಿಯೂ ನೇಮಿಸಲ್ಪಟ್ಟಿದ್ದಾರೆ ಇವರೆಲ್ಲರೂ ಮಂತ್ರಿಮಂಡಲ ಮಟ್ಟದ ಮಂತ್ರಿಗಳಾಗಿರುತ್ತಾರೆ

ಆಂಧ್ರ ಪ್ರದೇಶದ ಅರ್ಥ ಮಂತ್ರಿ ಶ್ರೀ ಬಿ. ಗೋಪಾಲ ರೆಡ್ಡಿಯವರು ಕೇಂದ್ರದಲ್ಲಿ ರಾಜ್ಯಾಂಗ ಮಂತ್ರಿಗಳಾಗಿ ಸೇರಿಸಲ್ಪಟ್ಟಿದ್ದು ಅವರನ್ನು ಅರ್ಥ ಮಂತ್ರಿ ಶಾಖೆಯಲ್ಲಿ ತೆಗೆದುಕೊಳ್ಳಲಾಗಿದೆ ಇವರು ಮುಖ್ಯವಾಗಿ ಆರ್ಥಿಕ ವಿಷಯದ ಶಾಖೆಯನ್ನು ನೋಡಿಕೊಳ್ಳುವರು ಶ್ರೀಮತಿ ತಾರಕೇಶ್ವರಿ ಸಿಂಹರವರು ಇವರಿಗೆ ಸಹಾಯಕ ಮಂತ್ರಿಯಾಗಿರುವರು

ಇನ್ನೂ ಮೂರುಜನ ಉಪಮಂತ್ರಿಗಳನ್ನು ಮಂತ್ರಿ ಮಂಡಲದಲ್ಲಿ ತೆಗೆದುಕೊಳ್ಳಲಾಗಿದೆ ಶ್ರೀ ಎಸ್. ವಿ ರಾಮಸ್ವಾಮಿ (ರೈಲ್ವೆ ಶಾಖೆ), ಶ್ರೀ ಅಹಮ್ಮದ ಮೊಹಿಯುದ್ದೀನ (ನಾಗರಿಕ ವಿಮಾನೋಡ್ಡಾಣ ಶಾಖೆ), ಮತ್ತು ಶ್ರೀಮತಿ ಪಿ ಎಸ್. ನಾಸ್ಕರ (ಪುನರ್ನಿವೇಶನ ಶಾಖೆ)ಯವರನ್ನು ಹೊಸತಾಗಿ ನೇಮಿಸಲಾಗಿದೆ

ವಿದ್ಯೆ ಮತ್ತು ವೈಜ್ಞಾನಿಕ ಮಂತ್ರಿ ಶಾಖೆಯನ್ನು ಒಡೆದು ಡಾ ಕೆ. ಎಲ್ ಶ್ರೀಮಾಲಿಯವರಿಗೆ ವಿದ್ಯಾಂಗವನ್ನೂ ಶ್ರೀ ಹುಮಾಯೂನ ಕಬೀರರಿಗೆ ವೈಜ್ಞಾನಿಕ ಸಂಶೋಧನೆ ಮತ್ತು ಸಂಸ್ಕೃತಿ ಶಾಖೆಗಳನ್ನೂ ಹಂಚಿ ಕೊಡಲಾಗಿದೆ

ಮಂತ್ರಿ ಮಂಡಲದ ಪುನಾರಚನೆಯಿಂದ ಯಾರೂ ಆಶ್ಚರ್ಯ ಅಥವಾ ಅಸಂತೋಷಗೊಂಡಂತೆ ತೋರುವುದಿಲ್ಲ ದೇಶದ ಕೀಲಿ ಕೈಗಳಂತಿರುವ ಆರ್ಥಿಕ ಮತ್ತು ವಾಣಿಜ್ಯ ಮತ್ತು ಉದ್ದಿಮೆಯ ಶಾಖೆಗಳು ಈ ಸಂಬಂಧದ ತಿಳುವಳಿಕೆಯಿಲ್ಲದ ವ್ಯಕ್ತಿಗಳಿಗೆ ಕೊಡಲ್ಪಟ್ಟುವು ಎಂಬ ಟೀಕೆಯು ಮಾತ್ರ ಕಂಡು ಬಂದಿದೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಭಾರತದ ನಾಲ್ಕು ಮೇಧಾವೀ ಅರ್ಥ ಮಂತ್ರಿಗಳು ಕಾಲಕ್ರಮದಲ್ಲಿ ರಾಜೀನಾಮೆಯನ್ನಿತ್ತ ವೇಳೆ, ಇದೀಗ ಪಕ್ಷದ ನಿಷ್ಠಾವಂತ ವ್ಯಕ್ತಿಯ ಕೈಗೆ ಈ ಶಾಖೆ ಬರುವ ಸಂಪ್ರದಾಯವು ಬಂದಿತು ಒಮ್ಮೆ ಆರ್ಥಿಕ ಶಾಖೆಯನ್ನು ಕಾಂಗ್ರೆಸಿಗನೊಬ್ಬನಿಗೆ ಕೊಡ ಮಾಡುವ ನಿರ್ಧಾರವಾಯಿತು; ಮತ್ತು ಸ್ವಾಭಾವಿಕವಾಗಿಯೇ ಅದು ಸಾಕಷ್ಟು ಹಿರಿಯ ಕಾಂಗ್ರೆಸ್ ಪಕ್ಷದವನಿಗೇನೇ ಸೇರಬೇಕಾದುದು ನ್ಯಾಯವಾಗಿದೆ.

ಪಂಡಿತ ಗೋವಿಂದ ವಲ್ಲಭ ಪಂತರು ಹಣಕಾಸಿನ ಶಾಖೆಯನ್ನ ಸ್ವೀಕರಿಸಲು ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದದರಿಂದಾಗಿ ಅವರನ್ನುಳಿದ ಹಿರಿಯರಾದ ಶ್ರೀ ಮುರಾರ್ಜಿಯವರನ್ನೇ ಆ ಸ್ಥಾನಕ್ಕೇರಿಸಬೇಕಾದ ಅವಶ್ಯಕತೆ ಬಿತ್ತು ಇವರಿಗೆ ಆಂಧ್ರ ಪ್ರದೇಶದ ಅರ್ಥಮಂತ್ರಿ ಶ್ರೀ ಬಿ ಗೋಪಾಲ ರೆಡ್ಡಿಯವರು ನೆರವಾಗುವರು. ಕೇಂದ್ರ ಆರ್ಥಿಕ ಶಾಖೆಯು ರಾಷ್ಟ್ರದ ಆರ್ಥಿಕ ಜೀವಾಳವಾಗಿರುವುದಾದರೂ ರಾಜ್ಯ ಆರ್ಥಿಕ ವಿಭಾಗಗಳಿಂದ ಸ್ವಲ್ಪವಾಗಿರುವುದರಿಂದ ಶ್ರೀ ಗೋಪಾಲ ರೆಡ್ಡಿಯವರು ತಮ್ಮ ಅನುಭವ ಮತ್ತು ಆಡಳಿತೆಯ ಜ್ಞಾನಗಳಿಂದ ತನಗೊಪ್ಪಿಸಿದ ಕಾರ್ಯಗಳನ್ನು ಸಾಕಷ್ಟು ಪ್ರಭಾವಶಾಲಿಯಾಗಿಯೇ ನಿರ್ವಹಿಸುವರೆಂದು ನಂಬಲಾಗಿದೆ. ಮುಂದ್ರ ಪ್ರಕರಣದಿಂದಾಗಿ ಆರ್ಥಿಕ ಶಾಖೆಯು ತನ್ನ ಮುಖ್ಯ ಮಾರ್ಗದರ್ಶಿಯನ್ನೂ ಕಳೆದುಕೊಂಡ ಅಭಾವದಿಂದ ನರಳುವಂತಾಗಿದೆ.

ಆದರೂ ಮುಂದಿನ ಭವಿತವ್ಯದ ಬಗ್ಗೆ ವಿಶೇಷ ವಿವಂಚನೆಗೀಡಾಗುವ ಸಂದರ್ಭವು ಕಾಣುವುದಿಲ್ಲ ಕಳೆದೆರಡು ವರ್ಷಗಳಿಂದ ಮುಂದಿನ ಕೆಲವು ವರ್ಷಗಳವರೆಗೆ ಯಾವ ಚಿಂತೆಯನ್ನೂ ಮಾಡಲಾರದಂತೆ ದೇಶದ ಆರ್ಥಿಕ ಧೋರಣೆ ಮತ್ತು ಕಾರ್ಯಕರಣಾಪದ್ಧತಿಗಳು ರೂಪಿತವಾಗಿವೆ ಇದರಿಂದಾಗಿ ಇದುವರೆಗಿನ ಮುಂಗಡಪತ್ರಗಳ ಮಾದರಿಯಲ್ಲಿಯೇ ಇನ್ನೂ ಕೆಲವರ್ಷಗಳ ವರೆಗೆ ಮುಂಗಡ ಪತ್ರಗಳನ್ನು ತಯಾರಿಸಬಹುದು ತಮ್ಮ ಮಂತ್ರಿಶಾಖೆಗಳಿಗೆ ನೂತನವಾಗಿ ಒರ ಒಪುವಾದ ದೃಷ್ಟಿಕೋಣಗಳನ್ನು ಯದಯೋಗ್ಯವಾಗಿ ಶ್ರೀಗಳಾದ ಮುರಾರ್ಜಿ ಮತ್ತು ಲಾಲಬಹಾದೂರ ಶಾಸ್ತ್ರಿಗಳು ಲಕ್ಷಿಸುವರೆಂದು ನಂಬಬಹುದು

ಶ್ರೀ ಲಾಲಬಹಾದೂರ ಶಾಸ್ತ್ರಿಯವರೊಬ್ಬ ಹೆಸರಾಂತ ಕಾಂಗ್ರೆಸ್ಸಿಗರು ದೇಶದ ಜನರೆಲ್ಲರೂ ಅವರನ್ನು ಉತ್ತೇಜಿಸುವರು. ಅವರು ಸಾರಿಗೆ ಮತ್ತು ಸಂಪರ್ಕ ಮಂತ್ರಿಯಾಗಿದ್ದಾಗ ಸಹಾಯಕರಾಗಿ ಇಬ್ಬರು ರಾಜ್ಯಾಂಗ ಮಂತ್ರಿಗಳಿದ್ದುದರಿಂದಾಗಿ ಅವರಿಗೆ ಕಾಂಗ್ರೆಸ್ಸಿನ ಕಾರ್ಯಕ್ಕೆ ತುಂಬ ಬಿಡುವನ್ನೊದಗಿಸಿಕೊಡುತಿತ್ತು. ಆದರೆ, ಹೊಸತಾಗಿ ಕೊಡಮಾಡಿದ ವಾಣಿಜ್ಯ ಮತ್ತು ಉದ್ದಿಮೆ ಶಾಖೆಯಲ್ಲಿ ಅವರಿಗೆ ಹಿಂದಿನಂತೆಯೇ ಇಬ್ಬರು ನೆರವುಗಾರರಿರುವರಾದರೂ, ಸಾಕಷ್ಟು ಕಾರ್ಯಭಾರವಿರುವುದರಿಂದಾಗಿ, ಕಾಂಗ್ರೆಸ್ ಕಾರ್ಯಕ್ರಮಗಳಿಗೆ ಅಷ್ಟು ವೇಳೆಯು ದೊರೆಯುವಂತಿಲ್ಲ.

ಅಲ್ಪ ಕಾಲಕ್ಕಾಗಿ ದೂರಲ್ಪಡುತಿದ್ದ ಶ್ರೀ ಎಸ್. ಕೆ ಪಾಟೀಲರಿಗೆ ಹಿಂದಿನ ವಿದ್ಯುಚ್ಛಕ್ತಿ ಮತ್ತು ನೀರಾವರಿ ಶಾಖೆಗಳ ಬದಲು ಸಾರಿಗೆ ಮತ್ತು ಸಂಪರ್ಕ ಶಾಖೆಗಳನ್ನು ಕೊಡಮಾಡಲಾಗಿದೆ

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಘೋಷಿಸಲ್ಪಟ್ಟ ನೂತನ ಮಂತ್ರಿ ಶ್ರೀ ಹಫೀಜ ಮಹಮ್ಮದ ಇಬ್ರಾಹಿಮರು ದಿವಂಗತ ಮೌಲಾನಾರ ಸ್ಥಾನವನ್ನು ತುಂಬಲು ಅರ್ಹರೇ ಎಂದು ಹೇಳಬಹುದು ಶ್ರೀ ಇಬ್ರಾಹಿಮರು ಕೇವಲ ಮುಸ್ಲಿಮರು ಎಂಬ ಭಾವನೆಯಿಂದ ಅವರನ್ನು ಆಜಾದರ ರಿಕ್ತ ಸ್ಥಾನದಲ್ಲಿ ಸೇರಿಸಿಕೊಂಡರು ಎಂದು ಯಾರೂ ದೂರುವಂತಿಲ್ಲ

ದಕ್ಷಿಣ ಭಾರತಕ್ಕೆ ಮಂತ್ರಿ ಮಂಡಲದಲ್ಲಿ ದೊರೆಯುವ ಪ್ರಾತಿನಿಧ್ಯದ ಬೇಡಿಕೆಯು ಆಂಧ್ರ ಪ್ರದೇಶದಿಂದೊಬ್ಬ ರಾಜ್ಯಾಂಗ ಮಂತ್ರಿ ಮತ್ತು ಮದ್ರಾಸಿನಿಂದೊಬ್ಬ ಉಪಮಂತ್ರಿಗಳನ್ನು ನೇಮಕ ಮಾಡಿದುದರಿಂದ ಅಂಶತಃ ಈಡೇರಿತೆನ್ನಬಹುದು ಈಗ ಮದ್ರಾಸ, ಆಂಧ್ರ ಪ್ರದೇಶ, ಒಡಿಸ್ಸಾ, ಮಧ್ಯ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ರಾಜಸ್ಥಾನಗಳಿಂದ ಮಂತ್ರಿ ಮಂಡಲ ಮಟ್ಟದ ಮಂತ್ರಿಗಳಿಲ್ಲ ಈಗಿರುವ ಹನ್ನೆರಡು ಈ ಮಟ್ಟದ ಮಂತ್ರಿಗಳಲ್ಲಿ ಪ್ರಧಾನಿ ಶ್ರೀ ನೆಹರೂರವರನ್ನು ಸೇರಿಸಿ, ಐವರು ಉತ್ತರ ಪ್ರದೇಶದವರು, ನಾಲ್ವರು ಬೊಂಬಾಯಿಯವರು ಮತ್ತು ಪಂಜಾಬ, ಮೈಸೂರು ಮತ್ತು ಬಿಹಾರಗಳಿಂದ ಒಬ್ಬೊಬ್ಬರಾಗಿದ್ದಾರೆ. ಒಟ್ಟು, ಮಂತ್ರಿ ಮಂಡಲದಲ್ಲಿ ಹನ್ನೆರಡು ಮಂತ್ರಿ ಮಂಡಲ ಮಟ್ಟದ ಮಂತ್ರಿಗಳು, ಹದಿನೈದು ರಾಜ್ಯಾಂಗಮಂತ್ರಿಗಳು ಮತ್ತು ಹತ್ತೊಂಬತ್ತು ಉಪಮಂತ್ರಿಯವರು ಹೀಗೆ ನಲುವತ್ತಾರು ಮಂದಿಗಳಿದ್ದಾರೆ

ಹಿಂದೊಮ್ಮೆ ಆರೋಗ್ಯ ಶಾಖೆಯನ್ನು ರಾಜ್ಯಾಂಗ ಮಂತ್ರಿಯ ಕೈಗೆ ಒಪ್ಪಿಸುವ ಸಂದರ್ಭ ತಲೆದೋರಿದಂತೆ, ಈಗ ವಿದ್ಯಾ ಶಾಖೆಯನ್ನೂ ಅಂತಹನೊಬ್ಬನ ಕೈಗೆ ಒಳಪಡಿಸಬೇಕಾಗಿ ಬಂದಿದೆ.

(೮ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ

ಎಂತಹ ವಿಲಕ್ಷಣ ಪುರುಷ!

ಶ್ರೀ ಎಸ್. ಗೋಪೀಚಂದರಾವ್, ವಿದ್ವಾನ್, ವಿಶಾರದ

"ಹೇಳೋ ಹೇಳು. ನೀನೆಷ್ಟು ಜನರಿಗೆ ಹಿಂಬದಿಯಲ್ಲಿ ಧಗಾಕೊಟ್ಟಿದ್ದೀ?" ಚರ್ಮಪಟ್ಟಿಯಿಂದ ಹೊಡೆಯುತ್ತಾ ಪೋಲೀಸರು ಕೇಳಿದರು.

"ನಾನೇನೂ ಕೊಟ್ಟಿಲ್ಲ."

"ಮತ್ತೆ.. ಮತ್ತೆ.. ಈ ಸಾಮಾನುಗಳೆಲ್ಲಾ ಯಾರದು? ಏಕೆ ನಿನ್ನ ಹತ್ತಿರ ಬಂದುವು?" ಪುನಃ ಒಂದೇಟು ಬಿತ್ತು.

"ಇವೆಲ್ಲಾ ನನ್ನವೇ."

"ಹೌದು, ಈಗ ಇವೆಲ್ಲಾ ನಿನ್ನವೇ. ಆದರೆ, ಮೊದಲು ಅವು ಯಾವ ಯಾವ ಗೌರವಸ್ಥರ ಸೊತ್ತುಗಳಾಗಿದ್ದುವೆಂದು ಹೇಳಬಹುದಲ್ಲಾ?" ಇನ್ನೊಬ್ಬ ನಡುವೆ ಬಾಯಿಹಾಕಿ ಹೇಳಿದ.

"ಇವೆಲ್ಲವನ್ನೂ ನಾನು ಸಂಪಾದಿಸಿ ತಂದಿದ್ದೇನೆ."

"ಹೌದಯ್ಯ ನೀನು ಸಂಪಾದಿಸಿದ್ದೀ. ಆದರೆ ಅದಾವ ಮಾರ್ಗದಿಂದ ಎಂದು ಬೊಗಳ ಬಹುದೆ?"

"ಅದೆಲ್ಲಾ ನಿಮಗೇಕೆ? ನಾನು ಹೇಗೋ ಗಳಿಸಿದೆ ಈಗ ನನ್ನದಾಗಿಯೇ ಉಳಿದಿವೆ."

"ನಿನ್ನ ಸಂಪಾದನೆಯ ಕೀರ್ತಿ ನಾಡ ತುಂಬ ಹಬ್ಬಿದೆ. ಅದನ್ನು ಮತ್ತೆ ಹೇಳಬೇಕಾಗಿಲ್ಲ. ಯಾರು ಯಾರಿಗೆ ಕೈಕೊಟ್ಟೆ ಹೇಳು. ಕತ್ತೆ ಮಗನೆ...."

"ಬಾಯ್ಮುಚ್ಚು. ಕತ್ತೆಮಗನೆ ಎನ್ನುತ್ತೀಯ? ನನ್ನನ್ನು ಬೇಕಾದರೆ ಕತ್ತೆಯೆನ್ನು; ನಿನ್ನನ್ನು ಬೇಕಾದರೆ ನಾಯಿ ಎನ್ನು. ಆದರೆ, ನನ್ನ...ನನ್ನ ತಂದೆ ತಾಯಿಗಳನ್ನು ಮಾತ್ರ ಕತ್ತೆ ಎನ್ನಬೇಡ. ಜಾಗ್ರತೆ!"

"ನಮ್ಮನ್ನು ಗದರಿಸುವ ನೀನು ಯಾರೋ? ಕಳ್ಳರ ಕದೀಮ?"

"ನನ್ನ ತಂದೆತಾಯಿಗಳನ್ನು ನಿಂದಿಸಲು ನೀನು ಯಾರು?"

"ನಾನ? ನಾನು ಯಾರೆಂದು ತಿಳಿಯಬಯಸುವೆಯ? ಕೇಳು. ನಿನ್ನಂತಹ ಕಳ್ಳ....ಮಕ್ಕಳನ್ನು ಹಾದಿಗೆ ತರುವ ಪೋಲೀಸ್. ತಿಳಿಯಿತೆ?"

"ಇರಬಹುದು; ಆದರೆ, ನನ್ನ ಹೆತ್ತವರಿಗೆ ಬಯ್ಯುವ ಅಧಿಕಾರ ಪತ್ರ ನಿನಗಿದೆಯೆ?"

"ಸ್ವಲ್ಪ ತಾಳೋ ಪಾಪ, ತನ್ನ ಅಪರಾಧದಿಂದ ತಾಯ್ತಂದೆಯರ ಮರ್ಯಾದೆ ಏಕೆ ಹೋಗಬೇಕೆಂದು ಕೊಂಡಿದ್ದಾನೆ ಈ ಸಂಭಾವಿತ. ಇರಲಿ, ನೀನು ಏನೇನು ಕದ್ದಿರುವೆ? ಅದನ್ನು ತಿಳಿಸಬಹುದೆ?"

"ಹಾಗೆ ದಾರಿಗೆ ಬನ್ನಿ. ನಿಮ್ಮ ಒಣ ಹಮ್ಮೆಯನ್ನೆಲ್ಲಾ ಕೊಚ್ಚಿಕೊಳ್ಳಬೇಡಿ. ನನ್ನ ಜೀವನಕ್ಕಾಗಿ ನಾನು ಇದುವರೆಗೆ ನಾಲ್ನೂರು ಒಡವೆ ವಸ್ತುಗಳನ್ನು ಕದ್ದಿದ್ದೇನೆ; ಅವುಗಳಲ್ಲಿ ಹಲವನ್ನು ಮಾರಿದ್ದೇನೆ. ಅನೇಕ ಮಂದಿಯ ಜೇಬು ಕತ್ತರಿಸಿದ್ದೇನೆ, ಸಮಯ ಬಂದರೆ, ಇನ್ನೂ ಹಾಗೆ ಮಾಡಬಲ್ಲೆ."

"ಓಹೋ, ಭಲೇ ಚಾಲಾಕಿ ಕಳ್ಳನೆಂದು ತೋರುತ್ತದೆ. ಇನ್ನು ಮುಂದಿನ ಯೋಜನೆಯನ್ನೂ ಮಾಡಿಕೊಂಡಿದ್ದಾನೆ ಆದರೆ, ಮುಂದೆ ನಿನ್ನ ಗತಿ ಏನಾಗುವುದೆಂದು ತಿಳಿದಿರುವೆಯ?"

ಏನಾದೀತು? ಆದರೆ ಕೆಲವು ಸಮಯ ಶಿಕ್ಷಿತಾನೆ?"

"ಅಷ್ಟೆ, ನಿನ್ನಂತಹರಿಗೆ ಅದೇನೂ ಗಣ್ಯವೆನ್ನಬಾರದಲ್ಲವೆ? ಇರಲಿ, ನಿನ್ನ ಕಾರ್ಯಭಾರಗಳ ವಿವರಣೆಯನ್ನು ಈಯಬಹುದಲ್ಲ?"

"ಈಯಬಹುದ ; ಆದರೆ...."

"ಆದರೆ....ಏನು?"

"ನೀನು ನನ್ನವರ ಮಾತೆತ್ತಬಾರದು. ಒಂದು ವೇಳೆ ಕುಟಿ ಬಿಚ್ಚಿದ ಎಂದರೆ, ನನ್ನ ಕೈರುಚಿಯನ್ನೂ ತೋರಿಸಿಬಿಟ್ಟೇನು."

"ಅಷ್ಟೂ ಎದೆಗಾರಿಕೆ ನಿನಗಿದೆಯೆ? ನೋಡ. ವಾಗ ಬಹಳ ತೆಳ್ಳಗಾಗಿದ್ದೀ!"

"ಈ ಕಳ್ಳನೆಯ ಶರೀರವೇ ಅದೆಷ್ಟೋ ಜನರ ಕಣ್ಣಿಗೆ ಮಣ್ಣೆರಚಿದೆ ಎಂಬುದನ್ನು ಯೋಚಿಸಿರುವಿರಾ?"

"ಹೌದಪ್ಪ, ನೀನೇನೂ ಸಾಮಾನ್ಯನೆನ್ನಬಾರದು ನಮ್ಮನ್ನು ನಮ್ಮ ಇನ್ಸ್ಪೆಕ್ಟರರೂ ಇಷ್ಟೊಂದು ಗದರಿಸುವುದಿಲ್ಲ. ಸಾಮಾನ್ಯವಾಗಿ ಎಲ್ಲರೂ ನಮ್ಮ ಚಾಟಿಯ ರುಚಿ ನೋಡಿದೊಡನೆಯೇ ಬಾಯಿ ಬಿಡುತ್ತಾರೆ. ನೀನಾದರೋ ನಮ್ಮನ್ನೇ ಸೆರೆಹಿಡಿದಂತೆ ಆಚರಿಸುತ್ತಿದ್ದಿ. ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು ಎನ್ನುತ್ತಾರಲ್ಲ ಹಾಗೆ ಆಕಾರ ಸಣ್ಣದು; ಕಾರಸ್ಥಾನ ದೊಡ್ಡದು. ಮತ್ತೂ ಒಂದು ನೋಡು; ಸುಂದರ ರಾವಣನಂತೆ ಜಂಟಲ್ ಮ್ಯಾನನ ವೇಷ ಭೂಷಣಗಳನ್ನು ಮಾಡಿಕೊಂಡಿದ್ದರೂ ಜಂಗಲ್‌ಮ್ಯಾನ್ ಆಗಿದ್ದಿಯಲ್ಲಾ?"

"ಇರಬಹುದು ನೀವು ಮತ್ತೆ ಎಂತಹವು?"

"ನಾಲಗೆ ಬಿಗಿಹಿಡಿ. ಇಲ್ಲವಾದರೆ, ಕತ್ತರಿಸಿ ಹೋದೀತು.' ಎಂದು ಪೋಲೀಸು ನಾಲ್ಕು ಹೊಡೆದ.

"ಏ ಬಾಯ್ಮುಚ್ಚು ಬಂದಂತೆ ಹರಟೆಗೆ ಆರಂಭಿಸಿ, ನನ್ನನ್ನು ಹೊಡೆಯುವೆಯ? ನಾನೀಗ ಬಂಧಿಯಾಗಿದ್ದೇನೆ; ಏನು ಮಾಡಲೂ ಅಸಮರ್ಥನೆಂದು ದೃಢವಾಗಿ ನಂಬಿದ್ದಿತಾನೆ? ಆದರೆ, ನೋಡು; ನಿನ್ನಂತಹ ಸಾವಿರ ಜನರಿಗೆ ನೀರುಕುಡಿಸಿದ್ದೇನೆ. ನನ್ನನ್ನು ಸೆರೆಹಾಕಿದ ಕಳ್ಳಕೋಟೆಯ ಜೇಲಿನಿಂದ ರಾತ್ರಿರಾತ್ರಿ ಹಂಚು ಎಬ್ಬಿಸಿ ಪರಾರಿಯಾಗಿ ಬಂದಿದ್ದೇನೆ."

"ಆದುದರಿಂದಲೇ ಈಗ ನಮ್ಮ ಕೈಗೆ ಸಿಕ್ಕಿದ್ದಿ ಎಂಬುದನ್ನು ನಮಗೆ ತಿಳಿಸುವ ಆಗತ್ಯವಿಲ್ಲ."

"ಇರಬಹುದು ಆದರೆ, ನಾಯಿಮರಿಗೆ ಹೊಡೆದಂತೆ ನೀನೇಕೆ ಬಾರಿಸುತ್ತಿ? ನೀನು ಬಂದ ಕಾರ್ಯವೇನು? ತಿಳಿಸಲ್ಲ? ನಿನಗೆ ಬೇಕಾದ ಎಲ್ಲ ವಿವರಣೆಗಳನ್ನೂ ಕೊಡಬಲ್ಲೆ ಆದರೆ ನನ್ನ ಮಾತಿನಲ್ಲಿ ನಂಬುಗೆಯನ್ನು ಮಾತ್ರ ಇಡಬೇಕು.?

"ಕಳ್ಳನ ಮಾತಿನಲ್ಲಿ ಎಂದಾದರೂ ಸುಳ್ಳಿರುವುದುಂಟೆ? ಛೆ. ಪಾಪ, ಹೇಳಪ್ಪಾ ಹೇಳು."

ಕಿಟ್ಟನು ತಾನು ಆದುವರೆಗೆ ಕಳ್ಳತನ ಮಾಡಿದ ಸಾವಿರಾರು ಒಡವೆಗಳ ಇತಿಹಾಸಗಳಲ್ಲಿ ತನ್ನ ಜ್ಞಾಪಕವಿರುವಷ್ಟನ್ನು ಹೇಳತೊಡಗಿದ. ಎಲ್ಲವನ್ನೂ ಪೋಲೀಸರು ಬರೆದುಕೊಂಡರು. "ಇಷ್ಟೇ ಅಲ್ಲ; ಇನ್ನೂ ಅನೇಕವಿವೆ. ಆದರೆ, ಅವೆಲ್ಲಾ ನನ್ನ ಸ್ಮರಣೆಯಲ್ಲಿ ಉಳಿದಿಲ್ಲ"

"ಬಹಳ ಎಳತನದಲ್ಲಿಯೇ ಈ ಉದ್ಯೋಗವನ್ನವಲಂಬಿಸಿದೆ ಎಂದು ತೋರುತ್ತದೆ."

"ಛೆ, ಎಂದಿಗೂ ಇಲ್ಲ. ಕೇವಲ ನಾಲ್ಕು ವರ್ಷಗಳಿಂದ ಮಾತ್ರ."

"ಹಾಗಾದರೆ, ಭಯಂಕರ ಆಸಾಮಿಯಪ್ಪ, ಇಲ್ಲಿಯೇ ಬಿದ್ದುಕೊಂಡಿರು. ಹಂಚುಗಿಂಚು, ತಪ್ಪಿಸಿ, ತಪ್ಪನ್ನು ಹೆಚ್ಚಿಸಿಕೊಳ್ಳಬೇಡ. ಸ್ವಲ್ಪ ಎಚ್ಚರವಾಗಿಯೇ ಇರು."

"ಹೋಗುತ್ತೀರಾ? ಬೈ-ಬೈ.'

ಈತನ ವಿಲಕ್ಷಣ ಧ್ವನಿ, ಮಾತು, ಆಚರಣೆಗಳು ಪೋಲೀಸರಿಗೆ ವಿಚಿತ್ರವೆನಿಸಿದುವು. ದಿನಂಪ್ರತಿ ಅನೇಕ ಕಳ್ಳರು ಸೆರೆಹಿಡಿಯಲ್ಪಡುತ್ತಾರೆ, ಅವರನ್ನೂ ವಿಚಾರಣೆಗೊಳಪಡಿಸಲಾಗುತ್ತದೆ ಆದರೆ, ಅವರಾರೂ ಈತನಂತೆ ಕಾಣುತ್ತಿರಲಿಲ್ಲ. ಮಾತಿನ ಠೇಂಕಾರ, ಜಾಡು ಎಲ್ಲವೂ ಉಳಿದವರಿಗಿಂತ ತೀರ ವಿಸಂಗ್ಯಕವಾಗಿದ್ದುವು ಹಾಗಾಗಿ "ವಿಚಿತ್ರ ಆಸಾಮಿಯಪ್ಪ" ಎಂದುಕೊಂಡು ಜೇಲಿನ ಬಾಗಿಲು ಭದ್ರಪಡಿಸಿ, ಅಲ್ಲಿಂದ ಪೋಲೀಸರು ದೂರ ಸರಿದರು.

ಂ ಂ ಂ

"ನನ್ನ ತಂದೆಯವರು ದಿವಂಗತರಾದಾಗ ನನಗೆ ೧೦ ವರ್ಷ ವಯಸ್ಸು. ನನಗೊಬ್ಬ ಅಣ್ಣನಿದ್ದ, ಅವನು ನನಗಿಂತ ೫ ವರ್ಷ ಹಿರಿಯವನಾಗಿದ್ದ. ನಮ್ಮ ತಂದೆಗೆ ಘಾಟಿಯಲ್ಲಿ ತೋಟವಿತ್ತು. ಅಲ್ಲಿ ಸಾಕಷ್ಟು ಸಂಪಾದನೆಯೂ ಆಗಿತ್ತು. ಹಾಗಾಗಿ, ಅವರು ಮಡಿಯುವಾಗ, ಸ್ವಲ್ಪ ನಗದಿ ಹಣವೂ ಇತ್ತು. ತಂದೆಯವರು ತೋಟವನ್ನು ತಾಯಿಯ ಹೆಸರಿಗೆ ಬರೆದು ಹಾಕಿದ್ದರು. ನಗದಿ ಇದ್ದ ಹಣವು ಮಾತ್ರ ನಮ್ಮ ಮೈನಾರಿಟಿ ಸಮಯ ಕಳೆದಮೇಲೆ ನಮಗೆ ಬರುವಂತಾಗಿತ್ತು. ನನ್ನ ಪಾಲಿಗೆ ಸುಮಾರು ೩ ಸಾವಿರ ರೂಪಾಯಿಗಳು ಬರಲಿದ್ದುವು.

"ತಂದೆಯವರ ಮರಣಾನಂತರ ನಾವು ನನ್ನ ಮಾವನ ಮನೆಯನ್ನು ಸೇರಿದೆವು. ಅಲ್ಲಿ ನಮಗೆ ಹಿಂದಿದ್ದ ಅನುಕೂಲತೆಗಳು ದೊರೆಯುತ್ತಿರಲಿಲ್ಲ. ಶಾಲೆ ಹತ್ತಿರದಲ್ಲಿರಲಿಲ್ಲ ಹಾಗಾಗಿ ನಾನು ಮನೆಯಲ್ಲಿಯೇ ಕೂತೆ. ಅಣ್ಣನು ದೂರದ ಹೈಸ್ಕೂಲಿನಲ್ಲಿ ಮೊದಲೇ ಓದುತಿದ್ದುದರಿಂದಲೂ, ಮಾವನೂ ಅದನ್ನು ಸಮ್ಮತಿಸಿದುದರಿಂದಲೂ ಆತನು ವಿದ್ಯಾಭ್ಯಾಸವನ್ನು ಮುಂದುವರಿಸಿದನು. ಆದರೆ ಮನೆಯಲ್ಲಿಯೇ ಕುಳಿತ ನನಗೆ ಬೇಸರವುಂಟಾಯಿತು ಹೊತ್ತು ಹೋಗುವುದೇ ಅಸಾಧ್ಯವೆಂಬಂತಾಯಿತು. ಮಾವನು ತೋಟಕ್ಕೆ ನೀರು ಹೊಯ್ಯಲು ಆಜ್ಞಾಪಿಸುತಿದ್ದನು. ಆಳವಾದ ಬಾವಿಯಿಂದ ನೀರೆಳೆಯುವುದೆಂದರೆ. ಅದು ಅಸಾಧ್ಯವಾದ ಕೆಲಸವಾಗಿತ್ತು. ಹೀಗಾಗಿ ನನಗೆ ಮನೆಯಲ್ಲಿ ನಿಲ್ಲುವುದೆಂದರೆ ಆಗದ ಮಾತೆಂದು ಕಂಡಿತು.

"ಆದರೆ, ನನ್ನ ಮಾವನಿಗೆ ಇದಾವುದರ ಗಮನವೂ ಇರಲಿಲ್ಲ. ಕೊನೆಗೆ ತಾಯಿಯ ಬಲವಂತದ ಮೇಲೆ ನನ್ನನ್ನು ಎರಡು ಮೈಲಿ ದೂರದ ಮಾಧ್ಯಮಿಕ ಶಾಲೆಗೆ ಕಳುಹಿಸಲು ಒಪ್ಪಿದರು. ಆದರೆ, ಬಹು ದೂರವಾದುದರಿಂದ ಬೆಳಿಗ್ಗೆ ಬೇಗ ಮನೆಯಿಂದ ಹೊರಬಿದ್ದರೆ. ಸಂಜೆ ಕತ್ತಲು ಹರಿಯುವ ವೇಳೆಗೇನೇ ಮನೆಗೆ ಬರುತ್ತಿದ್ದೆ ಆದರೆ ಒಮ್ಮೆ ವಿದ್ಯಾಭ್ಯಾಸದ ಸಂಪರ್ಕವನ್ನೇ ಬಿಟ್ಟುಬಿಟ್ಟ ನನಗೆ, ಮತ್ತೆ ಅದು ಇಷ್ಟವೆನಿಸಲಿಲ್ಲ. ಅದು ಕೇವಲ ಶುಷ್ಕವೆಂದು ಕಂಡುಬಂದಿತು. ಆದರೂ ನನ್ನ ಅಣ್ಣನಿಂದ ಇಂಜಿನಿಯರಿಂಗ್‌ನ ಕುರಿತು ಆಗಾಗ ಕೇಳುತಿದ್ದೆ. ಅದು ನನಗೆ ಪ್ರಿಯವೆನಿಸಿತು. ದಿನದಿನಕ್ಕೆ ಹೊಸ ಹೊಸ ತುಪ್ರಗಳನ್ನು ಆಟದಂತೆ ಅಳವಡಿಸಿಕೊಳ್ಳುವ ಆ ವಿದ್ಯೆ ನನ್ನ ಮನಸ್ಸಿನಲ್ಲಿ ಹೊಗ್ಗಿತು. ಆದರೆ, ಅದಕ್ಕೆ ಸೇರಲು ಕನಿಷ್ಠ ವಿದ್ಯಾರ್ಹತೆ, ಬೇಕೆಂದು ಕೇಳಿ ನಿರಾಶೆ ಮಾಡಿತು ಆದರೂ, ಒಂದು ಬಾರಿ ನನ್ನ ಮಾವನೊಡನೆ ಈ ಕುರಿತು ಪ್ರಸ್ತಾಪಿಸಿದೆ. ಅವರೂ ಆಗಬಹುದು ಎಂದರು. ಇದರಿಂದಾಗಿ, ನನಗೆ ಬೇಡವಾದರೂ, ನಾನು ಪ್ರಾರಂಭಿಕ ವಿದ್ಯೆಯನ್ನು ಮುಂದಿನ ಗುರಿಗಾಗಿ ಕಲಿಯಲೇಬೇಕು ಎಂದು

(೧೧ ನೇ ಪುಟ ನೋಡಿರಿ)

ಝಂಡುರವರ "ಕೇಸರಿ ಜೀವನ"
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ½ ರಾತಲಿಗೆ ರೂ. 2/0
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮೆಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲೂಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ರಾಷ್ಟ್ರಕಲ್ಯಾಣಕ್ಕೆ ಸೂಕ್ತ ಬದಲಾವಣೆ—

ವಿನಿಮಯದ ಮಾಧ್ಯಮ

ಶ್ರೀ ಮೋಹನ ಮುಕಾಲಿಕ

ದಿನಗಳುರುಳಿದಂತೆ ನಾವು ಹೊಸ ಹೊಸ ಅದ್ಭುತಗಳನ್ನೂ ವಿಸ್ಮಯ ಕಾರಕ ಘಟನೆಗಳನ್ನೂ ಕೇಳುತ್ತಿದ್ದೇವೆ, ಕಾಣುತ್ತಿದ್ದೇವೆ ಮತ್ತು ನೋಡುತ್ತಿದ್ದೇವೆ ನಮ್ಮ ಭಾರತೀಯ ಇತಿಹಾಸವನ್ನೂ ಪೌರಾಣಿಕ ಐತಿಹ್ಯಗಳನ್ನೂ ಯಾರಿಂದಾದರೂ ಕೇಳಿದರೆ ಅಥವಾ ತಿಳಿದರೆ ಅವುಗಳ ಪ್ರತಿರೂಪವೆನ್ನುವಂತೆಯೋ ಏನೋ—ಇಂದಿನ ಘಟನೆಗಳು ಅವುಗಳಿಗೆ ಸರಿಹೊಂದುತ್ತಿರುವುದು ಕಂಡುಬರುತ್ತಿದೆ ಹೊಸಹೊಸ ಸಾಧನಗಳು ವಿಸ್ಮಯ ಕಾರಕ ರೀತಿಯಲ್ಲಿ ಬಂದು ಅಲ್ಪಾವಧಿಯಲ್ಲೇ ಜೀವನದ ಒಂದು ಅಂಗವಾಗಿ ಪರಿಣಮಿಸಿ ಹಳೆಯದಾಗಿ ಹೋಗಿಬಿಡುತ್ತಿವೆ ಎಷ್ಟು ಪರಿಶೋಧಿಸಿದರೂ, ಎಷ್ಟು ಪಂತಪಿಸಿದರೂ ಮನುಷ್ಯ ಮತ್ತೂ ಮತ್ತೂ ಕುತೂಹಲಿಯಾಗಿ ಹೊಸಹೊಸ ಸಂಗ್ರಹಗಳಿಗಾಗಿ ಹೆಣಗುತ್ತಿದ್ದಾನೆ ಅರ್ಥಶಾಸ್ತ್ರದಲ್ಲಿ 'ಮನುಷ್ಯನ ಇಚ್ಛೆಗಳಿಗೆ ತೃಪ್ತಿಯೆಂಬುದೊಂದು ಇಲ್ಲವೇ ಇಲ್ಲ'ವೆಂದು ಆರಂಭದಲ್ಲೇ ಹುಟ್ಟಿ ಅದರ ಅಂತ್ಯದಲ್ಲೇ ಲೀನವಾಗುವಂತಹದು, ಅದಕ್ಕಾಗಿಯೇ ಮನುಷ್ಯ ಆಶೆಯಿಂದಲೂ, ಕಾತುರತೆಯಿಂದಲೂ ಕಷ್ಟಪಡುತ್ತಿದ್ದಾನೆ, ಜೀವನ ಸಾಗಿಸಿದ್ದಾನೆ ಇವೆಲ್ಲಕ್ಕೂ ಅರ್ಥಶಾಸ್ತ್ರ ಕಾರಣಕೊಡುತ್ತದೆ ಅರ್ಥಶಾಸ್ತ್ರ ಮನುಷ್ಯನ ಜೀವನದ ಅಳತೆಗೋಲು, ಕೈಹಿಡಿ ಹಣವಿದ್ದರೇನೇ ಮನುಷ್ಯನ ಜೀವನ ಸಾಗುವುದು, ಪ್ರತಿಯೊಂದು ವಸ್ತುವಿಗೂ ಇಂದು ಹಣ ಬೇಕು ಹಣವಿಲ್ಲದೇ ಕೆಲಸ ಮಾಡುವುದೂ ಕಷ್ಟಕರವಾದುದಾಗಿದೆ

ಪುರಾತನ ಕಾಲದಲ್ಲಿ ಕವಡೆಗಳನ್ನೇ ಹಣವಾಗಿ ಸರಕುಗಳ ವಿನಿಮಯದಲ್ಲಿ ಮಾಧ್ಯಮವೆಂದು ಉಪಯೋಗಿಸುತ್ತಿದ್ದರೆಂದು ಕೇಳುತ್ತೇವೆ. ಬರಬರುತ್ತ ಅವುಗಳಿಗೆ ಬದಲಾಗಿ ಪ್ರಾಣಿಗಳನ್ನೋ, ಧಾನ್ಯವನ್ನೋ ವಿನಿಮಯಗಳಲ್ಲಿ ಮಾಧ್ಯಮವೆಂದು ಉಪಯೋಗಿಸುತ್ತಿದ್ದರೆಂದೂ, ನಂತರ ಅದೂ ಬದಲಾಗಿ ದೇಶಕಾಲ—ಪರಿಸ್ಥಿತಿಗಳಿಗನುಸರಿಸಿ ನಾಣ್ಯ ಪದ್ಧತಿಯು ವಿನಿಮಯದ ಮಾಧ್ಯಮವೆಂದು ಹಣದ ರೂಪದಲ್ಲಿ ಬಂದುದನ್ನೂ ನಾವು ಕಾಣುತ್ತಿದ್ದೇವೆ, ಅಲ್ಲದೆ ಈಗೀಗ ನೋಟುಗಳ ಚಲಾವಣೆಯೂ ಹಣವೆಂದು ಉಪಯೋಗಿಸಲ್ಪಡುವುದನ್ನು ನಾವೆಲ್ಲ ಸ್ವತಃ ಅನುಭವಿಸುತ್ತಿದ್ದೇವೆ ಹೀಗೆ ಸರಕುಗಳ ವಿನಿಮಯಗಳಿಗೆ ಮಾಧ್ಯಮವಾಗಿ ಸುಲಭಸಾಧನವಾಗುವಂತೆ ಅನೇಕ ಪ್ರಯತ್ನಗಳನ್ನು ಕಾಲಕಾಲಾಂತರಗಳಿಂದ ಮಾಡುತ್ತ ಬಂದಿದ್ದಾರೆ, ಇನ್ನೂ ಮಾಡುತ್ತಲೂ ಇದ್ದಾರೆ

ನಮಗೆ ಬೇಕಾಗುವ ಸರಕುಗಳನ್ನು ಯಾವ ತೊಂದರೆಗಳೂ ಇಲ್ಲದೆ ಸುಲಭವಾಗಿ ಪಡೆದುಕೊಳ್ಳಲಿಕ್ಕೆ ಅನುಕೂಲವಾಗಲೆಂಬ ಉದ್ದೇಶದಿಂದಲೇ ವಿನಿಮಯದಲ್ಲಿ ಸಾಧ್ಯವಿದ್ದ ಎಲ್ಲ ಪ್ರಯತ್ನಗಳನ್ನೂ ಕೈಕೊಳ್ಳಲಾಯಿತು. ಇಂದು ಅವು ಎಷ್ಟೋ ಮಟ್ಟಿಗೆ ಸಾರ್ಥಕವೆನಿಸಿದೆ ಈ ಬದಲಾವಣೆಗಳೇ ನೋ ನಡೆದುಹೋದವು ವಿನಿಮಯದ ಮಾಧ್ಯಮವಾಗಿ ನಾಣ್ಯ ನೋಟುಗಳು ಚಲಾವಣೆಗೆ ಬಂದುವು, ಅರ್ಥಶಾಸ್ತ್ರಜ್ಞರೂ ಈ ನೀತಿಯೇ ಸುಲಭವೆಂದೂ ಸರಳವೆಂದೂ ಅಭಿಪ್ರಾಯಪಟ್ಟರು ಆದರೆ ಈ ನೀತಿಯ ಫಲವಾಗಿ ಜನಸಾಮಾನ್ಯರ ಮೇಲೆಯೂ, ಸಮಾಜದ ಮೇಲೆಯೂ, ರಾಷ್ಟ್ರದ ಮೇಲೆಯೂ ಆದ ಪರಿಣಾಮಗಳನ್ನು ನಾವು ಸೂಕ್ಷ್ಮವಾಗಿ ಅವಲೋಕಿಸಿದಂತಿಲ್ಲ. ಅಜ್ಞರೂ, ಅತಿಥಿಪ್ರಿಯರೂ ಆದ ನಮ್ಮ ಭಾರತೀಯರು—ಅದರಲ್ಲೂ ವಿಶೇಷವಾಗಿ ಹಳ್ಳಿಗರು—ಸುಧಾರಿಸಿದವರೂ, ಶಿಕ್ಷಿತರೂ, ವಿಶೇಷ ಜ್ಞಾನವುಳ್ಳವರೂ ಎಂದುಕೊಳ್ಳುವ ಜನರ ಮಾತಿನಂತೆಯೇ ನಡೆದುಕೊಳ್ಳುವುದರಿಂದ ಅವರು ಇಂದು ಎದುರಿಸಬೇಕಾದ ಪ್ರಸಂಗಗಳಿಗೆ ಕಾರಣರಾರೆಂಬುದನ್ನು ಅರಿತುಕೊಂಡಿಲ್ಲ ಆ ಕಾರಣದಿಂದಲೇ ಇಂದಿನ ಆರ್ಥಿಕ ಪರಿಸ್ಥಿತಿಯ ಗಂಭೀರ ವಾತಾವರಣವು ಪ್ರತ್ಯಕ್ಷವಾಗಿ ನಮ್ಮೆದುರು ಗುಡ್ಡದಾಕಾರದಲ್ಲಿ ಎದ್ದುಕಾಣುತ್ತದೆ ಇದಕ್ಕೆ ಮೂಲವಾಗಿ ವಿನಿಮಯದ ಮಾಧ್ಯಮದಲ್ಲಿ ಆದ ಬದಲಾವಣೆಗಳೇ ಕಾರಣವೆಂದು ಹೇಳಿದರಂತೂ ನಂಬಲಸಾಧ್ಯವಾದ ಮಾತಾಗಿ ಕಾಣಬಹುದು. ಆದರೆ ಅದು ಸತ್ಯ!

ಇಂದು ಪ್ರತಿಯೊಂದು ವಸ್ತುವಿನ ಬೆಲೆಯೂ ಏರಿದೆ ಎಂದು ಅನ್ನುವುದನ್ನು ನಾವು ಕೇಳುತ್ತೇವೆ, ಸುಮಾರು ಹದಿನೈದ-ಇಪ್ಪತ್ತು ವರ್ಷಗಳ ಹಿಂದೆ ಅಕ್ಕಿಯ ಬೆಲೆಯು ಇಂದಿನ ಬೆಲೆಯದಕ್ಕಿಂತ ಹತ್ತು—ಹನ್ನೆರಡು ಪಟ್ಟು ಕಡಿಮೆಯಿತ್ತೆಂದು ಕೇಳಿದರೆ ಇಂದಿನ ಜನ ಅಚ್ಚರಿಪಡುವ ಮಾತಾಗಿ ಕಂಡುಬರುತ್ತದೆ. ಆದರೆ ಎಲ್ಲ ಪದಾರ್ಥಗಳು ಈ ರೀತಿಯಾಗಿ ಕೆಲವೇ ವರ್ಷಗಳಲ್ಲಿ ವಿಪರೀತವಾದ ರೀತಿಯಲ್ಲಿ ಏರಿದುದು ಮಾತ್ರ ಜನರಿಗೆ ಸಹಿಸಲಾರದ ನೋವಾಗಿದೆ ಇದಕ್ಕೆ ಕಾರಣವೇನು? ಇದಕ್ಕೆ ಮಹಾ ಯುದ್ಧವೇ ಕಾರಣವೆಂದು ನುರಿತ ರಾಜಕೀಯ ತಜ್ಞರೂ ಅರ್ಥ ಶಾಸ್ತ್ರಜ್ಞರೂ ಹೇಳುತ್ತಿದ್ದಾರೆ ಯುದ್ಧದ ಕಾರಣದ ಮೂಲಕ ನಾವು ದಂಗು ಬಡೆದವರಾಗಿ ಅದರ ಮೂಲಕವಾಗಿಯೇ ಆರ್ಥಿಕ ಪರಿಸ್ಥಿತಿಯ ಗಂಭೀರ ವಾತಾವರಣದಲ್ಲಿ ಸಿಕ್ಕುಬಿದ್ದು ಇಂದು ವಿಪರೀತವಾಗಿ ಏರಿದ ಜೀವನಾವಶ್ಯಕ ವಸ್ತುಗಳ ಸದ್ಯದ ಸ್ಥಿತಿಗೆ ಒಳಪಡುವಂತಹವರಾಗಿದ್ದೇವೆಂದು ಆ ತಜ್ಞರು ನುಡಿಯಬಹುದು ಆದರೆ ಇದು ಎಷ್ಟರ ಮಟ್ಟಿಗೆ ಸತ್ಯವೆಂಬುದನ್ನು ನಾವು ಇಂದು ತಿಳಿಯಬೇಕಾಗಿದೆ ಮಹಾ ಯುದ್ಧದಲ್ಲಿ ಕೇವಲ ಭಾರತವಷ್ಟೇ ಭಾಗವಹಿಸಿರದೆ ಜಗತ್ತಿನ ಎಲ್ಲ ಮಹಾ ರಾಷ್ಟ್ರಗಳೂ, ಚಿಕ್ಕ ರಾಷ್ಟ್ರಗಳೂ ಭಾಗವಹಿಸಿದ್ದವೆಂಬುದನ್ನು ಲಕ್ಷ್ಯದಲ್ಲಿಡಬೇಕು ಈ ಕಾರಣದಿಂದ ನಮಗಿಂತಲೂ ಇತರ ರಾಷ್ಟ್ರಗಳಿಗೇ ಹೆಚ್ಚು ಹಾನಿಯಾದರೂ ಅವು ಭಾರತಕ್ಕಿಂತಲೂ ಹೀನಾವಸ್ಥೆಯಲ್ಲಿ ಕೊಳೆಯಬೇಕಾಗುತ್ತಿದ್ದುವು ಆದರೆ ವಸ್ತುಸ್ಥಿತಿಯು ಹಾಗಿಲ್ಲವೆಂದು ಎನಿಸಲಾರದು ಇಂದಿನ ಜೀವನ ಮಟ್ಟದ ಏರಿಕೆಗೆ ಮಹಾ ಯುದ್ಧವೇ ಕಾರಣವಾಗಿದ್ದರೆ, ಅದೇ ಮಹಾ ಯುದ್ಧದಿಂದ ಭಯಂಕರ ಆಘಾತಕ್ಕೊಳಗಾಗಿದ್ದ ಜರ್ಮನಿ—ಜಪಾನಗಳಂತೆ ನಾವೆಂದರೆ ಬಹುವೇಗದಿಂದ ಎಲ್ಲ ದಿಶೆಗಳಲ್ಲಿ ಪ್ರಗತಿಯನ್ನು ಹೊಂದಬಹುದಾಗಿತ್ತು ಎಲ್ಲಿವೆ ಯುದ್ಧವೇ ಬೆಲೆಗಳ ಪ್ರಮಾಣದಲ್ಲಿ ಈ ರೀತಿಯ ವಿಪರೀತ ಬದಲಾವಣೆಗಳಿಗೆ ಅಸ್ಪದ ಕಲ್ಪಿಸಿಕೊಡುವದೆಂದು ಹೇಳುವದಾದರೆ ಹಿಂದಿನ ಕಾಲದ ಯುದ್ಧ, ಸ್ವಾತಂತ್ರ್ಯ ಯುದ್ಧಗಳೂ ಕ್ರಾಂತಿಗಳೂ ನಡೆದ ನಮ್ಮ ರಾಷ್ಟ್ರದಲ್ಲಿ ಯಾವ ಕಾಲಕ್ಕೋ ಜೀವನಮಟ್ಟ ವಿಪರೀತ ಹೆಚ್ಚಬೇಕಾಗಿತ್ತು ಯುದ್ಧದ ಸಮಯದಲ್ಲಿ ವಿನಿಮಯದ ಮಾಧ್ಯಮ ಮಾಧ್ಯಮವಾದ ಹಣದ ಸಾಕಷ್ಟು ಸಂಗ್ರಹವಿಲ್ಲದಿರುವುದೂ ಪದಾರ್ಥಗಳ ಬೆಲೆಗಳು ಏರುವುದಕ್ಕೆ ಕಾರಣವೆಂದೂ ಹೇಳುತ್ತಾರೆ. ಜಪಾನದಲ್ಲಿ ನೋಟುಗಳು ತುಂಬಿದ ಚೀಲಗಳನ್ನು ಕೊಟ್ಟಾಗಲೂ ಒಂದು ಹಿಡಿ ಕಾಳು ಸಿಗುವದು ದುಸ್ತರವಾಗಿತ್ತೆಂದು ಮಹಾಯುದ್ಧದ ಕಾಲದ ಕತೆಗಳನ್ನು ಕೇಳುವಾಗ ತಿಳಿಯುತ್ತೇವೆ ಈ ರೀತಿ ವಿನಿಮಯದ ಮಾಧ್ಯಮವು ಜೀವನದ ಏರಿಳಿತಕ್ಕೆ ಕಾರಣವಾಗಿರಬಹುದೆಂದು ಸಂಶಯಬರುವುದು ಸಹಜವಾಗಿದೆ, ಸ್ವಾಭಾವಿಕವಾಗಿದೆ

ಪೂರ್ವಕಾಲದಲ್ಲಿ ಇಂದಿನ ನಾಣ್ಯ-ನೋಟು ಮೊದಲಾದ ಹಣಗಳ ಶೋಧ ವಿರದ್ದರಿಂದ ಪದಾರ್ಥಗಳ ಬದಲಾವಣೆಗಳು ಪದಾರ್ಥಗಳಿಂದಲೇ ನಡೆಯುತ್ತಿದ್ದವು ಆದರೆ ಒಬ್ಬನಿಗೆ ಬೇಕಾದ ಪದಾರ್ಥವು ಮತ್ತೊಬ್ಬನಿಂದ ತಂದುಕೊಳ್ಳುವಾಗ ಆತನಿಗೆ ವಿನಿಮಯದ ಪದಾರ್ಥವು ಅನವಶ್ಯಕವಾಗಿದ್ದರೆ ಅವನೂ ಕೂಡ ಆ ಪ್ರಸಂಗದಲ್ಲಿ ವಿನಿಮಯಕ್ಕೆ ಒಪ್ಪುತ್ತಿದ್ದಿಲ್ಲ. ಈ ದೃಷ್ಟಿಯಿಂದ ಆಗ ವಿನಿಮಯದಲ್ಲಿ ಅನೇಕ ತೊಂದರೆಗಳು ಉದ್ಭವಿಸಿ ಗೊಂದಲವನ್ನುಂಟು ಮಾಡುತ್ತಿದ್ದುವು ಇಂತಹ ತೊಂದರೆಗಳನ್ನು ತಪ್ಪಿಸಲೆಂದೇ ಇಂದು ಜಾರಿಯಲ್ಲಿರುವ ನಾಣ್ಯ-ನೋಟುಗಳು ಶೋಧಿಸಲ್ಪಟ್ಟು ವಿನಿಮಯದಲ್ಲಿ ಸುಲಭ ಸಾಧನವಾಗುವಂತೆ ಪ್ರಯತ್ನಿಸಿದ್ದಾರೆ ಆದರೆ ಇದು ವಿನಿಮಯದಲ್ಲಿ ಸುಲಭವಾಗಿ ಕಂಡುಬಂದರೂ ಇಂದು ಜನರ ಜೀವನ ಮಟ್ಟ ಏಕೆ ಏರಿದೆ? ಎಂಬುದೊಂದು ಮಹಾ ಸಮಸ್ಯೆಯಾಗಿದೆ.

ವಿನಿಮಯದಲ್ಲಿ ಸುಲಭಸಾಧನವೆಂದು ಪರಿಗಣಿಸಲ್ಪಡುತ್ತಿರುವ ನಾಣ್ಯ ನೋಟುಗಳ ಹಣವು ಅನೇಕ ಕಡೆಗಳಿಂದ ಹುಟ್ಟಿಸಿದ್ದವಾಗಬೇಕಾಗುತ್ತದೆ, ನಂತರ ಚಲಾವಣೆಯಲ್ಲಿ ಒಬ್ಬರಿಂದೊಬ್ಬರಿಗೆ ದಾಟುತ್ತ ಹೋಗುತ್ತದೆ ಈ ಹಣದಿಂದ ಮನುಷ್ಯನಿಗೆ ಬೇಕಾದ ಆವಶ್ಯಕ ಪದಾರ್ಥಗಳನ್ನು ಪಡೆದುಕೊಂಡು ಅನುಭೋಗಿಸುತ್ತಾನೆ, ಆದರೆ ಈ ಹಣವು ಅನುಭೋಗಿಸುವ ಶಕ್ತಿಯನ್ನು ಕೊಡುವ ಪದಾರ್ಥವಾಗಿರದೆ, ಆ ಪದಾರ್ಥಗಳನ್ನು ಕೊಳ್ಳುವ ಶಕ್ತಿಯುಳ್ಳ ಒಂದು ವಸ್ತು ಮಾತ್ರವಾಗಿದೆ ಅನುಭೋಗಿಸುವ ಪದಾರ್ಥವು ವ್ಯಕ್ತಿಯ ಇಚ್ಛೆಯನ್ನು ಪೂರ್ಣಗೊಳಿಸಲು ಪ್ರಯುಕ್ತಿಸಿ ನಾಶವಾಗುತ್ತದೆ, ಆದರೆ ಹಣ ಅನುಭೋಗಿಸುವ ಪದಾರ್ಥಗಳನ್ನು ವ್ಯಕ್ತಿಗಳಿಗೆ ಹಂಚಿಕೊಡಲು ಮಧ್ಯಸ್ಥಿಕೆ ಮಾಡುವ ಮಾಧ್ಯಮವಾಗಿದೆ ಇದರಿಂದ ಪದಾರ್ಥಗಳಿಗಿಂತಲೂ ಹಣಕ್ಕೇ ನಿಶ್ಚಿತತೆ ಇದೆಯೆಂಬುದು ಸ್ಪಷ್ಟವಾಗಿ ಕಂಡುಬರುತ್ತದೆ ಈ ನಿಶ್ಚಿತತೆಯು ಭದ್ರತೆ ಅನುಭೋಗಿಸುವ ಪದಾರ್ಥಗಳಿಗಿಲ್ಲಾರದು ಅಲ್ಲದೆ ಮನುಷ್ಯನಿಗೆ ತೃಪ್ತಿ ಪಡೆಯಲು ಪದಾರ್ಥಗಳ ಆವಶ್ಯಕತೆಯಿದೆಯೇ ಹೊರತು ಹಣದ್ದಲ್ಲ ಒಂದು ಕೋಳಿಯು ಹಸಿದು ಹೋದಾಗ ಅದಕ್ಕೆ ದಾರಿಯಲ್ಲಿ ಚಿನ್ನದ ಒಂದು ಒಡವೆ ಕಾಣುವದರೆ ಅದು ಆ ಒಡವೆಗೆ ಮಹತ್ವ ಕೊಡಲಾರದು, ಅಲ್ಲದೆ ಅದನ್ನು ಕಣ್ಣೆತ್ತಿ ಕೂಡ ನೋಡಲಾರದು ಅದಕ್ಕೆ ಬೇಕಾದುದು ಕಾಳು ಮಾತ್ರ, ಇಂತಹ ಸಂದರ್ಭದಲ್ಲಿ ಅದಕ್ಕೆ ಒಂದೊಂದೊಂದು ಕಾಳೂ

(೧೦ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.,
ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ನಮ್ಮ ಬರೋಡ ಶಾಖೆಯು ತಾ 9-2-58ರಲ್ಲೂ
ಮಂಗಳೂರು (ಬಂದರ) ಶಾಖೆಯು 20-2-58ರಲ್ಲೂ
ತೆರೆಯಲ್ಪಟ್ಟವು

ಶೀಘ್ರದಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು
1) ಬೆಂಗಳೂರು (ಶೇಷಾದ್ರಿಪುರಂ) 5) ಬೆಳಗಾವ್ (ಕೇಂಪ್)
2) ಬೆಂಗಳೂರು (ಚಿಕ್ಕಪೇಟೆ) 6) ಕೊಪ್ಪ (ಚಿಕ್ಕಮಗಳೂರು ಜಿಲ್ಲೆ)
3) ಬೆಂಗಳೂರು (ಕೆಂಟೋನ್‌ಮೆಂಟ್) 7) ಹುನಗುಂದ (ವಿಜಾಪುರ ಜಿಲ್ಲೆ)
4) ಬೆಳಗಾವ್ (ಶಾಪುರ) 8) ತಿಪ್ಟೂರು (ತುಮ್ಕೂರು ಜಿಲ್ಲೆ)
9) ಬೊಂಬಾಯಿ (ಮಾಂಡ್ವಿ)

ಟಿ ಎ ಪೈ, ಬಿ ಕಾಂ (ಬೊಂ) ಎ ಐ ಐ ಬಿ ಮೆಂಬರ್ ಆಫ್ ಇ ಯಸ್ (ಲಂಡನ್) ಜನರಲ್ ಮೆನೇಜರ್
ಡಾ। ಟಿ ಮಾಧವ ಪೈ, ಎಂ ಬಿ & ಬಿ ಎಸ್ ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi

ಅನಾಗರಿಕ ಜನಾಂಗದ ವಾಸಸ್ಥಾನ—

ನಮ್ಮ ನೆರೆಯ ಭೂತಾನ

ಚೀನಾ, ಬ್ರಹ್ಮ, ತಿಬೇಟು, ನೇಪಾಳ ಮತ್ತು ಸಿಕ್ಕಿಂ ರಾಜ್ಯಗಳಂತೆಯೇ ಭೂತಾನವೂ ಭಾರತದ ನೆರೆ ರಾಜ್ಯವಾಗಿದೆ. ಭೂತಾನ ರಾಜ್ಯವು ಎಂದು ಮತ್ತು ಎಂತಹ ಪರಿಸ್ಥಿತಿಯಲ್ಲಿ ಉದಯಿಸಿತು ಎಂಬುದನ್ನು ಉಲ್ಲೇಖಿಸುವ ಸವಿವರವಾದ ದಾಖಲೆಗಳು ಅಲಭ್ಯವಿವೆ. ಕ್ರಿಸ್ತ ಪೂರ್ವ ಒಂದು ಸಾವಿರ ವರ್ಷಗಳಲ್ಲಿಯೇ ಈ ರಾಜ್ಯವು ಸ್ಥಾಪಿಸಲ್ಪಟ್ಟಿದೆ ಎಂದು ಊಹಿಸಲಾಗುತ್ತದೆ.

ತಿಬೇಟು, ನೇಪಾಲ ಮತ್ತು ಅಸಾಮುಗಳಂತೆಯೇ ಭೂತಾನೀ ಜನರೂ ಮಂಗೋಲಿಯಾನ ಜನಾಂಗಕ್ಕೆ ಸೇರಿದವರೆಂದು ತಿಳಿಯಲಾಗುತ್ತದೆ. ಭಾರತಕ್ಕೆ ಆರ್ಯರು ಪಾದಾರ್ಪಣ ಮಾಡಿದನಂತರ ಇಲ್ಲಿಗೆ ಈಶಾನ್ಯ ದಿಕ್ಕಿನಿಂದ ಬಂದ ಜನಾಂಗವೇ ಮಂಗೋಲಿಯಾನರು. ಅವರ ಭಾಷೆಯು ಚೀನ—ತಿಬೇಟ ಪರಿವಾರವನ್ನೇ ಹೋಲುತಿತ್ತು. ಆದರೆ, ಹೀಗೆ ಬಂದು ನೆಲೆನಿಂತ ಈ ಮಂಗೋಲಿಯಾನರನ್ನು ಆರ್ಯರು ಕಿರಾತರೆಂದು ಕರೆಯ ತೊಡಗಿದರು. ಇವರು ಮೂಲತಃ ಚೀನೀ, ಸಯಾಮಿ, ಬ್ರಹ್ಮೀ ಮತ್ತು ತಿಬೇಟೀ ಭಾಷಾ—ಸಂಸ್ಕೃತಿಗಳಿಗೆ ಆಧಾರ ಭೂತವಾದ ಭಾಷಾ ಸಂಸ್ಕೃತಿಯ ಬುಡ ಕಟ್ಟಿಗೆ ಸೇರಿದವರು ಎಂದು ಡಾ. ಸುನೀತಿ ಕುಮಾರ ಚಾಟುರ್ಜ್ಯರು ಅಭಿಪ್ರಾಯಪಟ್ಟಿದ್ದಾರೆ.

ಈ ಮಂಗೋಲಿಯಾನರು ಹಿಮಾಲಯ ಪರ್ವತಗಳನ್ನು ಹಾದು ಬರುವಾಗ ಅಲ್ಲಿ ಭೂತಾನಿನ ಗಟ್ಟಗಳಲ್ಲಿ ಕೆಲವರು ತಡೆ ಹಿಡಿಯಲ್ಪಟ್ಟಿರಬೇಕು. ಇಲ್ಲಿ ಭೂತಾನಿನ ಪಾರೋ ಎಂಬ ಶಿಖರವು ತನ್ನ ಸೌಂದರ್ಯದಿಂದ ಜನಮನವನ್ನಾಕರ್ಷಿಸುತ್ತದೆ ಎಂಬುದನ್ನು ಸ್ಮರಿಸಬಹುದು. ನಿಜವಾಗಿ ಹೇಳುವುದಾದರೆ, ಈ ದೇಶದಲ್ಲಿ ಪಾರೋ ಘಾಟಿಯೊಂದನ್ನುಳಿದರೆ ಬೇರಾವ ಪ್ರೇಕ್ಷಣೀಯ ಸ್ಥಳವೂ ಇರುವುದಿಲ್ಲ. ಹೀಗೆ ಇಲ್ಲಿ ತಡೆದು ನಿಂತ ಜನರು ಅಲ್ಲಿಯೇ ನೆಲೆಯೂರಿದರು. ಮುಂದೆ ಮುಂದೆ ವಸಾಹತುಗಳು ನಿರ್ಮಿಸಲ್ಪಟ್ಟವು, ಅಲ್ಲದೇ ಇವುಗಳೇ ಬೆಳೆದು ರಾಜ್ಯ ರೂಪಧಾರಣೆಯನ್ನು ಮಾಡಿದುವು. ಭೂತಾನ ರಾಜ್ಯವು ತನ್ನ ಸುತ್ತು ತಿಬೇಟು, ನೇಪಾಲ, ಸಿಕ್ಕಿಂ ಮತ್ತು ಅಸಾಮು ರಾಜ್ಯಗಳ ಘಾಟಿಗಳಿಂದಾವೃತವಾಗಿದ್ದು ಯಾತಾಯಾತದ ಅವ್ಯವಸ್ಥೆಯಿಂದಲೇ ಕೂಡಿದೆ ಎಂಬುದು ಉಲ್ಲೇಖನೀಯ. ತಮ್ಮ ನೆರೆರಾಜ್ಯಗಳೊಡನೆ ಸಂಪರ್ಕವಿರಿಸಿಕೊಂಡಿದ್ದರೂ ಅವುಗಳೊಡನೆ ಹೊಕ್ಕು ಬಳಕೆಗಳನ್ನಿಟ್ಟುಕೊಳ್ಳದಿರುವುದಕ್ಕೆ ಅದೂ ಒಂದು ಕಾರಣವೆನ್ನಬಹುದು. ಹಿಂದೀಯರೊಡನೇ ಸೇರಿಕೊಂಡುದರ ಪರಿಣಾಮವಾಗಿ ಅವರ ಭಾಷೆಯು ಹಿಂದೀ—ಮಂಗೋಲ ಮಿಶ್ರಿತವಾಗಿ ಮಾರ್ಪಟ್ಟಿತು.

ಕೃಷಿ, ಪಶುಪಾಲನೆ ಮತ್ತು ಕಚ್ಚಾ ಮಾಲುಗಳ ವ್ಯಾಪಾರವೇ ಭೂತಾನಿಗಳ ಮುಖ್ಯ ವೃತ್ತಿ. ಹೆಚ್ಚಿನ ಭೂತಾನಿಗಳು ಕೃಷಿ ಮಾಡುತ್ತಾರೆ. ಭೂಮಿಯ ಪ್ರಮಾಣ ಕಡಿಮೆಯಿರುವ ಅಥವಾ ಇರುವ ಭೂಮಿಯು ಫಲವತ್ತಾಗಿರದಿರುವ ಪ್ರಜೆಗಳು ವ್ಯಾಪಾರ ಮಾಡುತ್ತಾರೆ. ಇಲ್ಲಿಯ ಮುಖ್ಯ ಉತ್ಪತ್ತಿ ಧಾನ್ಯವಾಗಿದೆ. ಅಕ್ಕಿ ತಿನ್ನುವುದೆಂದರೆ ಎಲ್ಲರಿಗೂ ಇಷ್ಟ. ಇಲ್ಲಿಯ ಭೂಮಿಯು ಸಾಕಷ್ಟು ಸಾರಸಹಿತವಾಗಿದ್ದರೂ ಮಣ್ಣು ಕಲ್ಲು ಮಿಶ್ರಿತವಾಗಿರುವುದರಿಂದ ಉತ್ಪಾದನೆಯು ಪರ್ಯಾಪ್ತವಾಗಿರುವುದಿಲ್ಲ.

ಪರ್ವತ ರಾಜ್ಯದ ನಿವಾಸಿಗಳು ಅಧಿಕ ಪರಿಶ್ರಮಿಗಳೂ ಹಸ್ತ ಶಿಲ್ಪಕಲೆಯಲ್ಲಿ ಅತ್ಯಂತ ನಿಪುಣರೆಂದೂ ಹೇಳಬಹುದು. ಭೂತಾನಿನ ಅಧಿಕ ಸಂಖ್ಯಾಕ ಜನರು ಲೋಹಗಳಿಂದ ಸುಂದರ ವಸ್ತುಗಳನ್ನು ಮಾಡುವುದರಲ್ಲಿ ನಿಷ್ಣಾತರಿದ್ದಾರೆ. ಮರಗಳಲ್ಲಿ ಕೆತ್ತನೆ, ಬಣ್ಣಗಳಲ್ಲಿ ವರ್ಣಚಿತ್ರ, ಬಳ್ಳಿಗಳಿಂದ ಬುಟ್ಟಿ ಇತ್ಯಾದಿಗಳನ್ನು ಸುಂದರತಾಪೂರ್ಣವಾಗಿ ಮಾಡುತ್ತಾರೆ. ಜಾನುವಾರುಗಳ ಚರ್ಮ, ಅಮೂಲ್ಯವಾದ ಕಲ್ಲು, ಉಣ್ಣೆ ಇವೇ ಇವರ ವ್ಯಾಪಾರದ ಸೊತ್ತುಗಳು. ಸ್ವಭಾವದಲ್ಲಿ ನಮ್ರ ಮತ್ತು ಆಕೃತಿಯಲ್ಲಿ ಸುಂದರರಾಗಿರುವ ಭೂತಾನಿಗಳಿಗೆ ವ್ಯಾಪಾರದಲ್ಲಿ ಕೊಡಕೆಂದೂ ಉಂಟಾಗುವುದಿಲ್ಲ. ಇಂತಹ ಜನ್ಮನಾಗಿರುವುದರಿಂದಲೇ ಇವರು ವಿಶ್ವಾಸಾರ್ಹರಾಗಿದ್ದರೂ ಬಹಳ ಚಾಲಾಕರಾಗಿದ್ದಾರೆ. ಹಿಂದಿನ ಕಾಲದಲ್ಲಿ ತಿಬೇಟಿನೊಡನೆ ಇವರ ವ್ಯಾಪಾರಿಕ ಸಂಬಂಧವು ಹೆಚ್ಚಿತ್ತು. ಆದರೆ ಈಗ ಇದು ಶಿಥಿಲವಾಗುತ್ತ ಬಂದಿದೆ. ಭೂತಾನೀಗಳು ತಿಬೇಟಿನವರ ಸಂಪರ್ಕವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತಿದ್ದರೂ ಅವರು ವ್ಯಾಪಾರಿಕ ಸಂಬಂಧವನ್ನುಳಿದೆ ಉಳಿದುದನ್ನು ದೂರೀಕರಿಸುತ್ತ ಬಂದರು.

ಭೂತಾನಿನಲ್ಲಿ ಖನಿಜಗಳ ಉತ್ಪಾದನೆಯೂ ಇದಿವೆ.ಯಿಲ್ಲವೆಂದೂ ಅದರೆ, ಅದನ್ನು ಪಡೆಯಲು ಬೇಕಾದ ಸಾಧನಗಳ ಅಭಾವದಿಂದಾಗಿ ಅವುಗಳ ಉಪಯೋಗವನ್ನು ಮಾಡಿಕೊಳ್ಳಲಾಗುವುದಿಲ್ಲವೆಂದೂ ಹೇಳಲಾಗುತ್ತದೆ.

ಭೂತಾನದಲ್ಲಿ ನೆಲಸಿರುವವರು ಬೌದ್ಧ ಮತದ ಅನುಯಾಯಿಗಳಾಗಿದ್ದಾರೆ. ಬೌದ್ಧಗುರು ಪದ್ಮ ಸಂಭವನು ಎಂಟನೆಯ ಶತಮಾನದಲ್ಲಿ ಭೂತಾನ ಮತ್ತು ತಿಬೇಟುಗಳಲ್ಲಿ ಬೌದ್ಧ ಧರ್ಮವನ್ನು ಪ್ರಚಾರ ಮಾಡಿದನು. ಇವನ ಹಿರಿದಾದ ಮೂರ್ತಿಯೊಂದು "ಪಾರೋ ತಾಕ್ಸಾಂಗ ಎಂಬ ಮಠದಲ್ಲಿ ಕಂಡು ಬಂದಿದೆ. ಭೂತಾನದ ದೊಡ್ಡ ಮಠವು ಒನೇ ಶತಮಾನದಲ್ಲಿ ನಿರ್ಮಿಸಲಾದ "ಕಿಚ್ಚು" ಅಗಿದ್ದರೂ, ಪದ್ಮಸಂಭವನ ಮೂರ್ತಿಯನ್ನು ಪಾರೋ ತಾಕ್ಸಾಂಗದಲ್ಲಿಯೇ ಸ್ಥಾಪಿಸಲಾಗಿದೆ. ಇಲ್ಲಿನ ಪ್ರತಿ ಹಳ್ಳಿಯಲ್ಲಿಯೂ ಮರದಿಂದ ಕೆತ್ತಲಾದ ಮಂತ್ರಗಳಿಂದ ಕೂಡಿರುವ ಒಂದು ಪ್ರಾರ್ಥನಾಧ್ವಜವಿದೆ. ಮಠಗಳ ಗೋಡೆಗಳಲ್ಲಿ ಬುದ್ಧ ಮತ್ತಾತನ ಶಿಷ್ಯರ ಜೀವನದ ಚಿತ್ರಗಳನ್ನು ಬಿಡಿಸಿದ್ದಾರೆ. ದೊಡ್ಡ ದೊಡ್ಡ ಮಹಾತ್ಮರ ಮತ್ತು ಲಾಮಾರ ಸ್ಮಾರಕವಾಗಿ ಕಟ್ಟಿಸಲ್ಪಟ್ಟ ಸ್ತೂಪಗಳಿಗೆ ಈ ಜನರು "ಚೋರ್ಟನ್"ಗಳೆನ್ನುತ್ತಾರೆ. ಸಾಧು ಸಂತರ ಈ ಸ್ತೂಪವು ನಮಗೆ ಸತ್ಯದ ಮಾರ್ಗದರ್ಶನ ಮಾಡುತ್ತದೆ ಎಂಬುದಾಗಿ ಭೂತಾನೀ ಜನರು ನಂಬುತ್ತಾರೆ.

ಸಾಮಾನ್ಯವಾಗಿ ಭೂತಾನೀ ಜನರು ಮನೆಗಳಲ್ಲಿ ತಯಾರಾದ ಕಂಬಳಿಯ ಕೋಟು, ಪಾಯಿಜಾಮಾ ಮತ್ತು ಟೊಪ್ಪಿಗಳನ್ನು ಧರಿಸುತ್ತಾರೆ ತಮ್ಮ ಪತಿಗೃಹದಲ್ಲಿ ದೊರಕಿದರೆ, ಇಲ್ಲಿನ ಸ್ತ್ರೀಯರು ಚಿನ್ನ ಮತ್ತು ಬೆಳ್ಳಿಯ ತೊಡುಗೆಗಳನ್ನು ತೊಡುತ್ತಾರೆ. ಮಹಿಳೆಯರು ಉದ್ದವಾಗಿ ತಲೆಕೂದಲನ್ನು ಬೆಳೆಸುತ್ತಾರೆ. ಹೆಚ್ಚಿನ ಪುರುಷರೂ ಈಗೀಗ ಕೂದಲು ಬೆಳೆಸುತ್ತಾರೆ. ಜೋತಾಡುವ ತಲೆಕೂದಲುಗಳನ್ನು ವಿಭಾಗಿಸಿ ಕಟ್ಟಿ ತಮ್ಮ ಕಿವಿಗಳ ಸಮೀಪ ಎತ್ತಿ ಕಟ್ಟುತ್ತಾರೆ. ಇವರಲ್ಲಿ ಫೋಷ ಪದ್ಧತಿಯಿಲ್ಲವಾದರೂ ಕೆಲವು ಮಹಿಳೆಯರು ತಮ್ಮ ಗೌರವ ಪ್ರದರ್ಶನಕ್ಕಾಗಿ ಪರದೆ ಹಾಕಿಕೊಳ್ಳುತ್ತಾರೆ. ಎಲ್ಲ ಭೂತಾನೀಗಳೂ ನಗುಮೊಗದಿಂದ ಕೂಡಿದವರೂ ಕಾಯಕಷ್ಟ ಪಡುವವರೂ ಆಗಿದ್ದಾರೆ. ಪರ್ವತ ಪ್ರದೇಶದಲ್ಲಿ ವಾಸಿಸುವುದರಿಂದ ಅವರು ತುಂಬ ಪರಿಶ್ರಮ ಪಡಲೇ ಬೇಕಾಗುವುದು. ಅತ್ಯಂತ ಕಷ್ಟಮಯ ಜೀವನವನ್ನವರು ಬದುಕುತಿದ್ದರೂ ತಮ್ಮ ಬಾಳನ್ನು ಉಲ್ಲಾಸಮಯವಾಗಿರಿಸುವುದಕ್ಕಾಗಿ ಅವರು ನೃತ್ಯ ಗೀತಗಳ ಕಾರ್ಯಕ್ರಮಗಳನ್ನು ಅವಶ್ಯವಾಗಿ ಇಟ್ಟುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಆ ಇಡಿ ಕುಟುಂಬವು ಬೆಂಕಿಯ ಕುಂಡದ ನಾಲ್ಕೂ ಸುತ್ತಲೂ ನಿಂತು ನಾಲುತ್ತ ಬಳುಕುತ್ತ ಕುಣಿದಾಡುತ್ತಿರುವುದು ದೃಷ್ಟಿಗೋಚರವಾಗುತ್ತದೆ. ಅವರ ವಾದ್ಯಗಳಲ್ಲಿ ಬಿದಿರಿನ ಕೊಳಲು ಮತ್ತು ಡೋಲುಗಳು ಪ್ರಧಾನವಾಗಿವೆ.

ಅವರ ವಿವಾಹವು "ರಾಮು ಬಂಗ" ಎಂದು ಕರೆಯಲ್ಪಡುವ ಒಂದು ವಿಶೇಷ ಸ್ಥಳದಲ್ಲಿ ನಡೆಯುವುದು. ಪ್ರತ್ಯೇಕ ವಿವಾಹದ ಸಮಯದಲ್ಲಿಯೂ ಅವರಲ್ಲಿ ತುಂಬ ಅನಾಚಾರವು ನಡೆಯುತ್ತದೆ. ಪುರುಷ ಮತ್ತು ಸ್ತ್ರೀಯರು ಒಂದುಗೂಡಿ ಮದ್ಯಪಾನ ಮಾಡುವುದು ಮತ್ತು ನರ್ತಿಸುವುದು ಇವೇ ಅಂದಿನ ಕಾರ್ಯದ ಪ್ರಧಾನಾಂಗವಾಗಿ ಆಚರಿಸಲ್ಪಡುತ್ತದೆ. ಇಂತಹ ಅವಸರಗಳಲ್ಲಿ ಈ ಉತ್ಸವದಲ್ಲಿ ಭಾಗವಹಿಸುತ್ತಿರುವ ಸ್ತ್ರೀಯರನ್ನು ಬದುಕಿಸುವುದು ಇದುವರೆಗೆ ಯಾರಿಂದಲೂ ಸಾಧ್ಯವೆನಿಸಿಲ್ಲ. ಇದರಿಂದಾಗಿ ಅವೈಧ ಸಂತಾನಗಳ ಸಂಖ್ಯೆ ಬೆಳೆಯುತ್ತ ಹೋಗುತ್ತದೆ. ವಿವಾಹದ ಸಮಯದಲ್ಲಿ ವರನ ಕಡೆಯಿಂದ ಕೊಡಲಾಗುವ ಮದ್ಯ ಪಾತ್ರೆಯನ್ನು ಹಿಡಿದುಕೊಂಡು ನವ ದಂಪತಿಗಳ ಜೀವನವು ಮಂಗಳಮಯವಾಗಲಿ ಎಂಬ ಕಾಮನೆಯಿಂದ ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಕುಡಿಯುತ್ತಾನೆ.

ಒಂದಕ್ಕಿಂತ ಅಧಿಕ ವಿವಾಹವನ್ನು ಮಾಡಿಕೊಳ್ಳುವುದು ಭೂತಾನಿಗಳ ಶ್ರೀಮಂತ ಹಾಗೂ ಗೌರವಪ್ರದವೆನಿಸಿದುದರ ಪ್ರಮಾಣಪತ್ರವೆನಿಸಿಕೊಂಡಿದೆ. ಇಲ್ಲಿ ಜನರು ನಿಜವಾಗಿಯೂ ಹುಡುಗಿಯರನ್ನು ಕ್ರಯಕ್ಕೆ ತೆಗೆದುಕೊಂಡು ವಿವಾಹವಾಗುತ್ತಾರೆ. ಇಂತಹ ಬಾಲಿಕೆಯರ ಮೌಲ್ಯವು ೧,೨೦೦ ರೂಪಾಯಿಗಳಿಂದ ೧,೫೦೦ ರೂಪಾಯಿಗಳವರೆಗಿರುತ್ತದೆ. ಕೃಷಿ ಕ್ಷೇತ್ರಗಳಲ್ಲಿ ದುಡಿಯಲು ತಕ್ಕಷ್ಟು ಮಜೂರರು ದೊರೆಯದಿರುವುದರಿಂದ ಅನೇಕ ವಿವಾಹ ಪದ್ಧತಿಯು ಇಲ್ಲಿ ಪ್ರಚಲಿತವಿದೆ. ಒಂದಕ್ಕಿಂತ ಹೆಚ್ಚು ಮಡದಿಯರಿದ್ದರೆ, ಈ ಕಾರ್ಯವು ಸರಳ

(೯ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.
ನಿರಖು ಠೇವಣಾತಿ.

3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd.

ನಾಡಿನ ಮಹಾನುಭಾವ—

ಡಾ. ಪಟ್ಟಾಭಿ ಸೀತಾರಾಮಯ್ಯ

ದಕ್ಷಿಣ ಭಾರತದಲ್ಲಿ ಒಂದೆಡೆ ಶ್ರೀ ರಾಜಗೋಪಾಲಾಚಾರಿಯವರು ಹಿಂದೀ ವಿರೋಧದ ಬೆಂಕಿಯನ್ನು ಉರಿಗೊಳಿಸುತ್ತಿರುವಾಗಲೇ ಇನ್ನೊಂದೆಡೆ ಅದೇ ದಕ್ಷಿಣ ಭಾರತದ ಡಾ ಪಟ್ಟಾಭಿ ಸೀತಾರಾಮಯ್ಯರು ಹೈದರಾಬಾದಿನಿಂದ ಈ ಬೆಂಕಿಯ ಮೇಲೆ ನೀರೆರಚುವ ಪ್ರಯತ್ನವನ್ನಾರಂಭಿಸಿದ್ದಾರೆ ಶ್ರೀ ಪಟ್ಟಾಭಿಯವರು ಹಿಂದೀ ವಿರೋಧಕ್ಕೂ ರಾಜಕಾರಣಕ್ಕೂ ಸಂಬಂಧವನ್ನು ಕಲ್ಪಿಸಿಕೊಂಡಿದ್ದಾರೆ

ಒಂದು ವೇಳೆ ಹಿಂದೀ ವಿರೋಧದ ಕಾರಣವು ರಾಜಕೀಯ ಪ್ರಪಂಚವೆಂದು ತಿಳಿಯುವುದಾದರೆ, ವಿರೋಧ ಪ್ರತಿಷ್ಠಾಪಕ್ಷವು ತನಗೆ ತಾನೇ ಕೊನೆಗಾಣುವುದು ಏಕೆಂದರೆ, ದೇಶದ ಭಾವೀ ಭಾಷೆಯ ಪ್ರಶ್ನೆಯ ಮೇಲೆ ವಿರೋಧಿಸುವುದು ಮತ್ತು ಭಾಷೆಯನ್ನು ಕೊರತೆಯಾಗುವುದೋ ರಾಜಕೀಯ ಉದ್ದೇಶದ ಪೂರ್ತಿ ಮಾಡುವುದು ಒಂದನ್ನೊಂದು ಹೊಂದಿಕೊಳ್ಳದ ವಾತಾಗಿದೆ ಡಾ ಪಟ್ಟಾಭಿಯವರು ಶ್ರೀ ರಾಜಗೋಪಾಲಾಚಾರಿಯವರನ್ನು ಸಂಪೂರ್ಣ ಅರಿತುಕೊಂಡಿದ್ದಾರೆ ಕಾಂಗ್ರೆಸ್ ಕಾರ್ಯಕಾರೀ ಸಭೆಯ ಸದಸ್ಯರಾಗಿರುವಂದಿನಿಂದಲೂ ಜತೆಯಾಗಿಯೇ ಕಾರ್ಯ ಮಾಡಿದ್ದಾರೆ ಆದುದರಿಂದ ಡಾ ಪಟ್ಟಾಭಿಯವರು ತಮ್ಮ ಸಹಯೋಗಿಯ ಕುರಿತಾಡಿದ ಮಾತುಗಳು ಅತ್ಯಂತ ಅಮೂಲ್ಯವಾಗಿವೆ

ಡಾ. ಭೋಗರಾಜ ಪಟ್ಟಾಭಿ ಸೀತಾರಾಮಯ್ಯರ ಜನ್ಮ ೧೮೮೦ರ ನವಂಬರ ೨೪ರಂದು ಆಂಧ್ರದ ಇಲ್ಲೋರ ತಾಲೂಕಿನಲ್ಲಾಯಿತು ಅವರ ತಂದೆ ತಾಯಿಯವರು ತಮ್ಮ ಮಗ ಒಂದು ದಿನ ಪ್ರತಿಷ್ಠಿತ ವ್ಯಕ್ತಿಯಾಗುವನೆಂದು ಮೊದಲೇ ಅರಿತಿರುವಂತೆ ಅವರ ಲಾಲನೆ ಪಾಲನೆಗಳನ್ನು ಜಾಗರೂಕತೆಯಿಂದ ಮಾಡಿದರು ಬಾಲ್ಯ ಕಾಲದಿಂದಲೂ ಅವರ ಪ್ರತಿಭೆಯು ಅಂಕುರಿಸತೊಡಗಿತ್ತು ಅವರು ಓದುತ್ತಿದ್ದ ಶಾಲಾಧ್ಯಾಪಕರೆಲ್ಲರೂ ಅವರನ್ನು ಪ್ರೀತಿಸುತ್ತಿದ್ದರು

ಮಚಲೀ ಪಟ್ಟಣದ ನೋಬಲ್ ಕಾಲೇಜಿನಲ್ಲಿ ಅವರು ಇಂಟರ ಮೀಡಿಯೆಟನ್ನು ತೇರ್ಗಡೆಮಾಡಿಕೊಂಡರು ಪ್ರಥಮ ಶ್ರೇಣಿಯನ್ನೂ ಪಡೆದಿದ್ದರು. ಕಾಲೇಜಿನ ಪ್ರಿನ್ಸಿಪಾಲರು ಅವರ ಮೇಲೆ ಅನುಗ್ರಹ ತೋರಿ ಶಿಷ್ಯವೃತ್ತಿಗೆ ಸಿಫಾರಸು ಮಾಡಿದರು ಈ ದಿನಗಳಲ್ಲಿಯೇ ಅವರು ಚಿತ್ತಸುಂದರಾಮಯ್ಯಾ, ಕೋಪಲ ಹನುಮಂತರಾವ್ ಮತ್ತು ಮುತೂರೀ ಕೃಷ್ಣರಾವ್ ಮೊದಲಾದ ವಿದ್ವಾಂಸರ ಮತ್ತು ಸಮಾಜ ಸುಧಾರಕರ ಕೃಪಾಪಾತ್ರರಾದರು ಇದರನಂತರವೇ ಅವರ ಜೀವನದಲ್ಲಿ ದೊಡ್ಡ ದೊಡ್ಡ ಭಾವನೆಗಳು ಪ್ರವೇಶಿಸಿದುವು

೧೯೦೬ನೆ ಇಸವಿಯಾಗಿತ್ತು ಆಗ ಡಾ. ಪಟ್ಟಾಭಿಯವರು ಕಾಂಗ್ರೆಸ್ಸಿನೊಡನೆ ಸಂಬಂಧ ಜೋಡಿಸಿದರು ಅವರೊಬ್ಬ ಸ್ವಯಂಸೇವಕನಾಗಿ ಕಾಂಗ್ರೆಸನ್ನು ಪ್ರವೇಶಿಸಿದರು ಮತ್ತು ಅಂತ್ಯದಲ್ಲಿ ಅದರ ಅಧ್ಯಕ್ಷರಾಗಿ ಹೋದರು ಆ ಸಮಯದಲ್ಲಿ ಅವರು ಬಿ ಎ ಓದುತ್ತಿದ್ದರು ವೈದ್ಯಕೀಯ ಕಾಲೇಜಿನಲ್ಲಿ ಅಧ್ಯಯನ ಮಾಡುತ್ತಿರುವಾಗಲೇ ಅವರು ತಮ್ಮ ಸಂಪೂರ್ಣ ಸಮಯವನ್ನು ರಾಷ್ಟ್ರೀಯ ಸಂಸ್ಥೆಯ ಸೇವೆಯಲ್ಲಿ ಕಳೆಯತೊಡಗಿದರು

ಮಚಲೀ ಪಟ್ಟಣದಲ್ಲಿ ಅವರು ವೈದ್ಯಕ ವೃತ್ತಿಯನ್ನು ಮೊದಲು ಮಾಡಿದರು. ತಮ್ಮ ಚಿಕಿತ್ಸಾ ಪದ್ಧತಿಯಿಂದ ಅತ್ಯಲ್ಪ ಸಮಯದಲ್ಲಿಯೇ ಅವರು ಸುಪ್ರಸಿದ್ಧರಾದರು. ೧೯೦೮ರಲ್ಲಿ ಅವರು ಕಾಂಗ್ರೆಸಿನ ಮದ್ರಾಸ ಅಧಿವೇಶನದಲ್ಲಿ ಭಾಗವಹಿಸಿದರು ೧೯೪೮ರ ವರೆಗೆ ಅವರು ತಮ್ಮ ಕ್ಷೇತ್ರದ ಪ್ರತಿನಿಧಿಯೆಂಬಂತೆ ಪ್ರತಿ ಅಧಿವೇಶನಕ್ಕೂ ಹೋಗುತ್ತಿದ್ದರು ವಿಷಯ ನಿಯಾಮಕ ಸಭೆಯಲ್ಲಿ ಅವರು ತಮ್ಮ ಮಹತ್ವಪೂರ್ಣ ಸಹಯೋಗ ನೀಡಿದರು ೧೯೨೦ರಲ್ಲಿ ಅವರು ರಾಷ್ಟ್ರ ಸೇವೆಗಾಗಿ ತಮ್ಮ ವೃತ್ತಿಯನ್ನು ತ್ಯಜಿಸಿ ತಮ್ಮ ಜೀವನದಲ್ಲಿಯೇ ಒಂದು ಅತ್ಯಂತ ಮಹತ್ವಪೂರಿತ ಪದವಿನ್ನಾಸವಿಟ್ಟರು

ಅದೇ ವರ್ಷ ಅವರು ಅಖಿಲ ಭಾರತೀಯ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿ ನೇಮಕವಾದರು ಅವರು ಆದಿಯಿಂದಲೂ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಭಿರುಚಿ ವ್ಯಕ್ತಪಡಿಸುತ್ತ ಬರುತ್ತಿದ್ದರು ಮಚಲೀ ಪಟ್ಟಣದ ಜನರಲ್ಲಿ ನವೀನ ಭಾವನೆಯನ್ನು ಹುಟ್ಟಿಸುವ ಸಂಸ್ಥೆಗಳನ್ನು ಪ್ರಾರಂಭಿಸಿದರು ಅಸ್ಪೃಶ್ಯತೆ—ಮದ್ಯಪಾನ ನಿರೋಧ, ವಯಸ್ಕರ ವಿದ್ಯಾಭ್ಯಾಸ ಮೊದಲಾದುವಗಳಲ್ಲಿ ಆಸಕ್ತರಾಗಿ ದುಡಿದರು ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿ ವಿದ್ಯಾರ್ಥಿನಿಲಯ, ಶಾಲಾ ಭವನ ಮೊದಲಾದುವನ್ನು ನಿರ್ಮಿಸಿದರು ಒಂದು ತೆಲುಗು ಸಾಪ್ತಾಹಿಕದ ಸಂಪಾದನ ಕಾರ್ಯವನ್ನೂ ಅವರು ಮಾಡಿದರು.

ಮುಂದೆ ಅವರು ಆರ್ಥಿಕ ವಿಚಾರಗಳತ್ತ ತನ್ನ ದೃಷ್ಟಿ ಹರಿಸಿದರು ಆಂಧ್ರ ಬೇಂಕು ಇವರ ಶ್ರಮದ ಫಲವಾಗಿದೆ ಆಂಧ್ರ ವಿಮಾ ಕಂಪನಿಯನ್ನೂ ತೆರೆದರು ಇಷ್ಟೇ ಅಲ್ಲದೇ ಕೃಷ್ಣಾ ಜಿಲ್ಲೆಯಲ್ಲಿ ಎರಡು ಬೇಂಕು ಮತ್ತೊಂದು ವಿಮಾ ಕಂಪನಿಗಳನ್ನು ಸ್ಥಾಪಿಸಿದರು ಈ ಸಮಯದಲ್ಲಿ ಅನೇಕ ರಾಜನೈತಿಕ ಹಾಗೂ ಸಾಮಾಜಿಕ ಸಭೆಗಳ ಅಧ್ಯಕ್ಷ ಸ್ಥಾನವನ್ನು ನಿರ್ವಹಿಸಿದರು, ಹೀಗೆ ಅವರ ಸೇವೆಯು ದಿನೇ ದಿನೇ ಬೆಳೆದು ಇಮ್ಮಡಿನಾಲ್ಮಡಿಯಾಯಿತು

೧೯೨೯ರಲ್ಲಿ ಅವರಿಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಪ್ರವೇಶ ಸಿಕ್ಕಿತು ಈ ಸಮಯದಲ್ಲಿ ಅವರು ಮಹಾತ್ಮಾ ಗಾಂಧಿಯವರ ನೆರಳಿನಲ್ಲಿ ದೇಶದ ಪ್ರಥಮ ಶ್ರೇಣಿಯ ನಾಯಕರೆಂದು ಕರೆಯಿಸಿಕೊಂಡರು ಅಖಿಲ ಭಾರತೀಯ ದೇಶೀಯ ಸಂಸ್ಥಾನ ಪ್ರಜಾಸಂಘದ ಕಾರ್ಯದ ಜವಾಬ್ದಾರಿಯೂ ಇವರ ತಲೆ ಮೇಲೆ ಹೊರಿಸಲ್ಪಟ್ಟಿತು- ಅವರು ಆಂಗ್ಲ ಜನ್ಮಭೂಮಿ ಪತ್ರಿಕೆಯ ಅಗ್ರಲೇಖದಲ್ಲಿ ಬರೆದಿದ್ದ ಲೇಖನಗಳು ಇಂದಿಗೂ ಅನುಸರಣೀಯವಾಗಿವೆ ಆ ಮೇಲೆ ಅವರು ಸಂಸ್ಥಾನೀಯ ರಾಜನೀತಿಯಲ್ಲಿ ಭಾಗವಹಿಸಿದರು ಮತ್ತು 'ಸ್ಟೇಟ್ಸ್ ಪೀಪಲ್ಸ್' ಎಂಬ ಪತ್ರಿಕೆಯ ಸಂಪಾದಕರಾದರು

ಈ ರೀತಿಯಲ್ಲಿ ಡಾ ಪಟ್ಟಾಭಿ ಸೀತಾರಾಮಯ್ಯ ಹೊಳೆಯತೊಡಗಿದರು. ಅವರ ಸಾರ್ವಜನಿಕ ಪ್ರತಿಷ್ಠೆ ಹೆಚ್ಚತೊಡಗಿತು ಅಸಹಯೋಗ ಆಂದೋಲನ, ಸವಿನಯ ಅವಜ್ಞಾ ಮತ್ತು ಸ್ವಾತಂತ್ರ್ಯ ಸಂಗ್ರಾಮಗಳಲ್ಲಿ ಅವರಿಗೆ ಅನೇಕ ಬಾರಿ ಸೆರೆಮನೆವಾಸ ಒದಗಿ ಬಂದಿತ್ತು ಕಾಂಗ್ರೆಸಿನ ಇತಿಹಾಸವನ್ನೊಂದನ್ನೂ ಅವರು ಬರೆದರು ಅವರ ಸೇವೆಯ ಫಲವಾಗಿ ಅವರು ಭಾರತವು ಸ್ವಾತಂತ್ರ್ಯ ಪಡೆದ ನಂತರ ಮಧ್ಯಪ್ರದೇಶದ ರಾಜ್ಯಪಾಲ ಪದವಿಗೇರಿದರು ೧೯೩೯ರಲ್ಲಿ ಅವರಿಗೆ ಕಾಂಗ್ರೆಸ್ ಅಧ್ಯಕ್ಷಪದವಿಗಾಗಿ ಗಾಂಧೀಜಿಯವರ ಮಾತಿನಂತೆ (ವಿಸಂಗತ)? ಸುಭಾಷಚಂದ್ರ ಬೋಸರ ಪ್ರತಿಸ್ಪರ್ಧಿಯಾಗಿ ನಿಲ್ಲುವ ಸಂದರ್ಭ ಒಂದು ಒದಗಿತು. ಮುಂದೊಮ್ಮೆ ಅವರು ಬಾಬೂ ಪುರುಷೋತ್ತಮದಾಸ ತಂಡನರೊಡನೆ ಎದುರಾಳಿಯಾಗಿ ನಿಲ್ಲಬೇಕಾಯಿತು ಎರಡನೆಯ ಬಾರಿ ಅವರು ಕೇವಲ ೧೯೪ ಮತಗಳಿಂದ ವಿಜಯಿಯಾದರು ಸಾಹಿತ್ಯ ಕ್ಷೇತ್ರದಲ್ಲಿಯೂ ಅವರ ಪ್ರತಿಭೆಯು ಅನೇಕ ಪುಸ್ತಕಗಳ ರೂಪದಲ್ಲಿ ಇಂದಿಗೂ ಹೊಳೆಯುತ್ತಿದೆ ಹಿಂದೀಯು ರಾಷ್ಟ್ರಭಾಷೆಯಾಗಬೇಕೆನ್ನುವ ದಾಕ್ಷಿಣಾತ್ಯದಲ್ಲಿ ಡಾ ಪಟ್ಟಾಭಿಯವರೂ ಒಬ್ಬರು.

ಪುನಾರಚಿತ ಮಂತ್ರಿಮಂಡಳ

ಮಂತ್ರಿಮಂಡಲ ಮಟ್ಟದವರು

೧. ಶ್ರೀ ಜವಾಹರಲಾಲ ನೆಹರೂ—(ಪ್ರಧಾನ ಮಂತ್ರಿ) ವಿದೇಶ ಮತ್ತು ಅಣುಶಕ್ತಿ ಶಾಖೆಗಳು

೨ ಪಂಡಿತ ಗೋವಿಂದ ವಲ್ಲಭ ಪಂತ—ಗೃಹಶಾಖೆ.

೩. ಶ್ರೀ ಮೊರಾರ್ಜಿ ದೇಸಾಯಿ—ಅರ್ಥಶಾಖೆ,

೪ ಶ್ರೀ ಜಗಜ್ಜೀವನ ರಾಮ—ರೇಲ್ವೆ ಶಾಖೆ

೫. ಶ್ರೀ ಗುಲ್ಜಾರೀಲಾಲ ನಂದಾ—ಕಾರ್ಮಿಕ, ನೌಕರಿ ಮತ್ತು ಯೋಜನೆ ಶಾಖೆಗಳು

೬. ಶ್ರೀ ಲಾಲ ಬಹಾದೂರ ಶಾಸ್ತ್ರಿ—ವಾಣಿಜ್ಯ ಮತ್ತು ಉದ್ದಿಮೆ ಶಾಖೆಗಳು

೭ ಸರದಾರ ಸ್ವರ್ಣ ಸಿಂಘ—ಉಕ್ಕು, ಗಣಿ ಮತ್ತು ಉರುವಲ ಶಾಖೆಗಳು

೮. ಶ್ರೀ ಕೆ ಸಿ ರೆಡ್ಡಿ—ಕಾಮಗಾರಿ, ವಸತಿ ಮತ್ತು ಪೂರೈಕೆ ಶಾಖೆಗಳು.

೯. ಶ್ರೀ ಅಜಿತ ಪ್ರಸಾದ ಜೈನ—ಆಹಾರ ಮತ್ತು ವ್ಯವಸಾಯ ಶಾಖೆಗಳು.

೧೦ ಶ್ರೀ ವಿ ಕೆ ಕೃಷ್ಣಮೆನನ—ಸಂರಕ್ಷಣಾ ಶಾಖೆ

೧೧ ಶ್ರೀ ಎಸ್ ಕೆ. ಪಾಟೀಲ ಸಾರಿಗೆ ಮತ್ತು ಸಂಪರ್ಕ ಶಾಖೆಗಳು ಮತ್ತು

೧೨ ಶ್ರೀ ಹಫೀಜ ಮಹಮ್ಮದ ಇಬ್ರಾಹಿಮ—ನೀರಾವರಿ ಮತ್ತು ವಿದ್ಯುಚ್ಛಕ್ತಿ.

ರಾಜ್ಯಾಂಗ ಮಂತ್ರಿಗಳು

೧ ಶ್ರೀ ಎಸ್ ಎನ್ ಸಿಂಹ—ಪಾರ್ಲಿಮೆಂಟರೀ ವಿಷಯಕ ಶಾಖೆ

೨ ಡಾ ಬಿ ವಿ ಕೇಸ್ಕರ—ಸಮಾಚಾರ ಮತ್ತು ಬಾನುಲಿ ಶಾಖೆ

೩. ಶ್ರೀ ಡಿ ಪಿ. ಕರಮರಕರ—ಆರೋಗ್ಯ ಶಾಖೆ

೪. ಡಾ ಪಿ ಎಸ್ ದೇಶಮುಖ—ಆಹಾರ ಮತ್ತು ವ್ಯವಸಾಯ ಮಂತ್ರಿ ಶಾಖೆ

೫ ಶ್ರೀ ಕೆ ಡಿ. ಮಾಲವೀಯ—ಉಕ್ಕು, ಗಣಿ ಮತ್ತು ಉರುವಲು ಮಂತ್ರಿ ಶಾಖೆ.

೬. ಶ್ರೀ ಮೆಹರ್ಚಂದ ಖನ್ನಾ—ಪುನರ್ನಿವೇಶನ ಶಾಖೆ

೭. ಶ್ರೀ ನಿತ್ಯಾನಂದ ಕಾನುಂಗೋ—ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿ ಶಾಖೆ

೮ ಶ್ರೀ ರಾಜಬಹಾದೂರ—ಸಾರಿಗೆ ಮತ್ತು ಸಂಪರ್ಕ ಮಂತ್ರಿ ಶಾಖೆ

೯ ಶ್ರೀ ಬಿ ಎನ್. ದಾತಾರ—ಗೃಹ ಮಂತ್ರಿ ಶಾಖೆ

೧೦ ಶ್ರೀ ಮನುಭಾಯಿ ಶಹ—ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿ ಶಾಖೆ

೧೧ ಶ್ರೀ ಎಸ್ ಕೆ ಡೇ—ಸಮಾಜ ವಿಕಾಸ ಶಾಖೆ

೧೨ ಡಾ ಕೆ ಎಲ್. ಶ್ರೀಮಾಲಿ—ವಿದ್ಯಾಶಾಖೆ.

೧೩ ಶ್ರೀ ಎ ಕೆ ಸೇನ್—ಕಾನೂನು ಶಾಖೆ

೧೪ ಶ್ರೀ ಹುಮಾಯೂನ ಕಬೀರ—ವೈಜ್ಞಾನಿಕ ಸಂಶೋಧನೆ ಮತ್ತು ಸಂಸ್ಕೃತಿ ಶಾಖೆ ಮತ್ತು

೧೫. ಶ್ರೀ ಬಿ ಗೋಪಾಲ ರೆಡ್ಡಿ—ಆರ್ಥಿಕ ವಿಷಯಕ ಶಾಖೆ

ಉಪ. ಮಂತ್ರಿಗಳು

೧ ಸರ್ದಾರ ಎಸ್ ಎಸ್ ಮಜೀಥಿಯಾ—ಸಂರಕ್ಷಣೆ

೨ ಶ್ರೀ ಅಬಿದ್ ಅಲಿ—ಕಾರ್ಮಿಕ.

೩. ಶ್ರೀ ಎ ಕೆ ಚಂದಾ—ಕಾಮಗಾರಿ, ವಸತಿ ಮತ್ತು ಪೂರೈಕೆ.

೪ ಶ್ರೀ ಎಂ ವಿ ಕೃಷ್ಣಪ್ಪ—ಆಹಾರ ಮತ್ತು ವ್ಯವಸಾಯ

೫ ಶ್ರೀ ಜೈಸುಖಲಾಲ ಹಾಥೀ—ನೀರಾವರಿ ಮತ್ತು ವಿದ್ಯುಚ್ಛಕ್ತಿ

೬ ಶ್ರೀ ಸತೀಶಚಂದ್ರ—ವಾಣಿಜ್ಯ ಮತ್ತು ಉದ್ದಿಮೆ .

೭ ಶ್ರೀ ಶ್ಯಾಮನಂದನ ಮಿಶ್ರ—ಯೋಜನೆ

೮. ಶ್ರೀ ಬಲಿರಾಮ ಭಗತ್—ಅರ್ಥ

೯ ಡಾ ಮನಮೋಹನದಾಸ್—ವಿದ್ಯೆ ಮತ್ತು ವೈಜ್ಞಾನಿಕ ಸಂಶೋಧನೆ

೧೦ ಶ್ರೀ ಶಹ ನವಾಜಖಾನ-ರೇಲ್ವೆ

೧೧ ಶ್ರೀಮತಿ ಲಕ್ಷ್ಮಿ ಎನ್. ಮೆನನ್—ವಿದೇಶ ವಿಷಯಕ

೧೨ ಶ್ರೀಮತಿ ವಯಲೆಟ್ ಆಳ್ವ—ಗೃಹ

೧೩ ಶ್ರೀ ಕೋಟ್ಟಾರಸ್ವಾಮಯ್ಯ—ಸಂರಕ್ಷಣೆ

೧೪ ಶ್ರೀ ಎ ಎಮ್. ಥೋಮಸ್—ಆಹಾರ ಮತ್ತು ವ್ಯವಸಾಯ

೧೫ ಶ್ರೀ ರಾಮಚಂದ್ರ ಮಾರ್ತಾಂಡ ಹಜಾರನೀಸ—ಕಾನೂನು

೧೬. ಶ್ರೀ ಎಸ್ ವಿ, ರಾಮಸ್ವಾಮಿ—ರೇಲ್ವೆ

೧೭. ಶ್ರೀ ಅಹಮದ ಮೊಹಿಯುದ್ದೀನ—ನಾಗರಿಕ ವಿಮಾನೋಡ್ಡಾಣ.

೧೮ ಶ್ರೀಮತಿ ತಾರಕೇಶ್ವರಿ ಸಿಂಹ—ಆರ್ಥಿಕ ವಿಷಯಕ ಮತ್ತು

೧೯ ಶ್ರೀ ಪಿ ಎಸ್ ನಾಸ್ಕರ—ಪುನರ್ನಿವೇಶನ

NAVAYUGA

Popular Kannada Weekly

Founder.—

A. B. SHETTY,

Former Minister for Public Health,
Govt. of Madras &
Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೦-೩-'೫೮	೨೮

ಉಚಿತ ಖಡ್ಡಾಯ ಶಿಕ್ಷಣ

ಪ್ರಪಂಚದ ಇತರ ದೇಶಗಳಿಗಿಂತ ಭಾರತವು ಇಂದು ಹಿಂದುಳಿದಿರುವುದೆಂದು ಪರಿಗಣಿಸುವುದು ಉಚಿತವಾದರೆ, ಇದಕ್ಕೆ ಇಲ್ಲಿನ ಜನಸಂಖ್ಯೆಗನುಗುಣವಾದ ಸಾಕ್ಷರರ ಅಭಾವವೇ ಮೂಲಕಾರಣವೆಂದು ಹೇಳಬಹುದು. ಅಕ್ಷರಾಭ್ಯಾಸವು ಮಾನವ ಜೀವನದ ಊರುಗೋಲಾಗಿದೆ ಎಂದು ಕಂಠೋಕ್ತವಾಗಿ ಸಾರುವ ವೇಳೆಯಲ್ಲಿ ನಮ್ಮ ದೇಶದಲ್ಲಿ ಮಾತ್ರ ಸಾಕ್ಷರರ ಸಂಖ್ಯೆಯನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರ್ಯ ಸಂಪೂರ್ಣ ಯಶಸ್ವಿಯಾಗಿಲ್ಲವೆಂದೇ ಹೇಳಬಹುದು. ಇದಕ್ಕೆ ಕಾರಣಗಳು ಹಲವಾರಿವೆ ಎಂಬುದು ಸತ್ಯ. ನಮ್ಮನ್ನಾಳಿದ ಬ್ರಿಟಿಷರೂ ಇತ್ತ ವಿಶೇಷ ಗಮನವನ್ನು ಕೊಡಲಿಲ್ಲ ಎಂಬ ನಿಂದೆಗರ್ಹರಾಗಿದ್ದಾರೆ. ಆದರೆ, ಭಾರತ ಸ್ವಾತಂತ್ರ್ಯವನ್ನು ಪಡೆದನಂತರ ತನ್ನ ರಾಷ್ಟ್ರದ ಘಟನೆಯನ್ನು ಸ್ವೀಕರಿಸಿ ಅದರಲ್ಲಿ ೬ರಿಂದ ೧೪ರ ವರ್ಷ ಪ್ರಾಯದ ಎಲ್ಲ ಮಕ್ಕಳನ್ನೂ ಅಕ್ಷರಸ್ಥರನ್ನಾಗಿ ಮಾಡುವ ಪ್ರಮುಖ ಗುರಿಯೊಂದನ್ನಿಟ್ಟುಕೊಂಡಿದೆ. ಈ ನಿಶ್ಚಿತ ಧ್ಯೇಯವನ್ನು ಕಾರ್ಯರೂಪದಕ್ಕಿಳಿಸುವ ಸಲುವಾಗಿ ಪ್ರತಿವರ್ಷವೂ ಅನೇಕ ಕೋಟಿ ಮೊತ್ತದಲ್ಲಿ ಹಣವನ್ನು ವ್ಯಯಿಸಲಾಗುತ್ತದೆ. ರಾಜ್ಯ ಸರಕಾರಗಳಲ್ಲದೇ ಕೇಂದ್ರವೂ ಈ ಕಡೆಗೆ ವಿಶೇಷ ಗಮನವನ್ನೀಯುತ್ತಿದೆ. ರಾಜ್ಯಗಳಿಗೆ ಧನಸಹಾಯಗೈಯುತ್ತದೆ. ಆದರೆ, ಇದೀಗ ಎಂಟು ವರ್ಷಗಳುರುಳುತ್ತ ಬಂದರೂ ಈ ಧ್ಯೇಯವು ಪೂರ್ಣವಾಗಲಿಲ್ಲ. ಪ್ರಥಮ ಯೋಜನೆ ಹಾಗೂ ದ್ವಿತೀಯ ಯೋಜನೆಯ ಕಲವು ವರ್ಷಗಳು ಕಳೆದರೂ ಇನ್ನೂ ನಮ್ಮಲ್ಲಿ ಎಲ್ಲ ಶಾಲಾಪ್ರಾಯದ ಮಕ್ಕಳಿಗೆ ಶಾಲೆಯನ್ನು ಪ್ರವೇಶಿಸುವ ಸೌಕರ್ಯಗಳನ್ನು ಒದಗಿಸಲಾಗಲಿಲ್ಲ. ಇದಕ್ಕೆ ಒಂದಲ್ಲ ಹಲವಾರು ಅಡೆ ತಡೆಗಳು ಬರುತ್ತವೆ. ಅದನ್ನು ಧೈರ್ಯದಿಂದ ಎದುರಿಸುವ ಗಂಡುತನ ಮಾತ್ರ ಬೇಕಾಗಿದೆ. ಭಾರತ ಸರಕಾರವು ಭಾರತದಾದ್ಯಂತ ಒತ್ತಾಯದ ಉಚಿತ ಪ್ರಾಥಮಿಕ ಶಿಕ್ಷಣವನ್ನು ಕೊಡಲೇ ಬೇಕೆಂಬ ಧ್ಯೇಯೋದ್ದೇಶವನ್ನಿಟ್ಟುಕೊಂಡಿದೆ. ಸರಕಾರದ ಶೈಕ್ಷಣಿಕ ಸಲಹೆಗಾರ ಶ್ರೀ ಕೆ. ಜಿ. ಸೈಯಿದೈನರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಪ್ರಾಥಮಿಕ ಶಿಕ್ಷಣ ಮಂಡಳವು ಸಭೆ ಸೇರಿ, ತೃತೀಯ ಯೋಜನೆಯ ಅವಿಭಾಜ್ಯ ಅಂಗವಾಗಿ ಖಡ್ಡಾಯ ಹಾಗೂ ಉಚಿತ ಶಿಕ್ಷಣವನ್ನು ೬ರಿಂದ ೧೧ರ ವರ್ಷ ಪ್ರಾಯದ ಮಕ್ಕಳಿಗೆ ಕೊಡಬೇಕೆಂಬ ಗುರಿಯನ್ನಿಟ್ಟುಕೊಳ್ಳಬೇಕು ಎಂದು ನಿರ್ಧರಿಸಿದೆ ಮತ್ತು ಇದಕ್ಕಾಗಿ ಶಿಕ್ಷಣ ಶಾಖೆಯು ತಕ್ಕ ಯೋಜನೆಗಳನ್ನು ರೂಪಿಸಬೇಕೆಂದು ಕೇಳಿಕೊಂಡಿದೆ.

ಭಾರತದ ಕೆಲವು ರಾಜ್ಯಗಳ ಕೆಲವೊಂದೆಡೆಗಳಲ್ಲಿ ಖಡ್ಡಾಯ ಶಿಕ್ಷಣವು ಹಿಂದೆ ಮೈ ತರಲ್ಪಟ್ಟಿತ್ತು. ಆದರೆ ಅದೇಕೋ ನಿಷ್ಕ್ರಿಯವಾಗುವ ಪ್ರಮೇಯ ಬಂದು ಇಂದು ವಿಫಲವೇ ಆಗಿದೆ. ಪ್ರಾಥಮಿಕ ಶಿಕ್ಷಣವಾದರೂ ದೇಶದ ಪ್ರತಿಯೊಬ್ಬ ನಾಗರಿಕನಿಗೆ ದೊರೆಯುವುದು ತೀರ ಅಗತ್ಯವೆಂದು ಬೇರೆ ಹೇಳ ಬೇಕಾದ ಆವಶ್ಯಕತೆ ಇಲ್ಲ. ಆದರೆ, ಇಂದು ನಮ್ಮ ಮಕ್ಕಳು ಶಾಲೆಗೆ ಏಕೆ ತೆರಳುವುದಿಲ್ಲ ಎಂಬ ಮಹತ್ವದ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕಂಡುಹಿಡಿಯುವುದೂ ಪ್ರಯಾಸದ ಕಾರ್ಯವಲ್ಲ. ಒಂದು ಕಾಲದಲ್ಲಿ ಶಾಲೆಗಳ ಸಂಖ್ಯೆಯು ಕಡಿಮೆಯಾಗಿರುವುದರ ಕಾರಣದಿಂದ ಅವುಗಳು ಬಹಳ ದೂರವೆನಿಸುತ್ತಿದ್ದುದರಿಂದಾಗಿ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿತ್ತು. ಆದರೆ, ಸರಕಾರದ ನೂತನ ಕಾರ್ಯಕ್ರಮಗಳಂತೆ ಪ್ರತಿ ಹಳ್ಳಿಯಲ್ಲಿಯೂ ಒಂದೊಂದು ಶಾಲೆಯನ್ನು, ಕೊನೆಯ ಪಕ್ಷ, ಏಕೋಪಾಧ್ಯಾಯ ಶಾಲೆಯನ್ನಾದರೂ ತೆರೆಯಲಾಗುತ್ತಿದೆ. ಹಾಗಿದ್ದರೂ ಶಾಲಾಪ್ರಾಯದ ಎಲ್ಲ ಮಕ್ಕಳೂ ಇಂದು ವಿದ್ಯೆ ಪಡೆಯುತ್ತಿಲ್ಲ. ಇದಕ್ಕೆ ಮಗುವಿನ ಹೆತ್ತವರ ಬಡತನವೇ ಪ್ರಬಲ ಕಾರಣ. ಮಕ್ಕಳನ್ನು ಶಾಲೆಯತ್ತ ಆಕರ್ಷಿಸಲು ಹಲವಾರು ಯೋಜನೆಗಳನ್ನು ಮಾಡಬೇಕೆಂದು ಈ ಪ್ರಾಥಮಿಕಶಿಕ್ಷಣಮಂಡಳವು ತಿಳಿಸಿದೆ. ಅವುಗಳಲ್ಲಿ, ಉಚಿತ ಶಿಕ್ಷಣ, ಶಿಕ್ಷಣಕ್ಕೆ ಆವಶ್ಯಕವಾದ ಪುಸ್ತಕಾದಿಗಳನ್ನು ಪುಕ್ಕಟೆ ಒದಗಿಸುವುದು, ಧರ್ಮಾರ್ಥ ಊಟ, ಬಟ್ಟೆ ಬರೆಗಳ ದಾನ ಇತ್ಯಾದಿಗಳು ಮುಖ್ಯವಾಗಿವೆ. ಇಂತಹ ಕೆಲವೊಂದು ಕಾರ್ಯಕ್ರಮಗಳನ್ನು ಅತ್ಯಂತ ಬಡವ ಹಾಗೂ ಮೇಧಾವಿ ವಿದ್ಯಾರ್ಥಿಗಳಲ್ಲಿ ಕೆಲವರಿಗೆ ಆಯಾ ಶಾಲಾ ಆಡಳಿತ ವರ್ಗದವರೋ ಅಧ್ಯಾಪಕರೋ ಈಯುತ್ತಿರುವುದೂ ಉಂಟು. ಸರಕಾರವೂ ಈಗೀಗ ಇಂತಹ ಕೆಲವು ಯೋಜನೆಗಳನ್ನು ಪ್ರಾಯೋಗಿಕವಾಗಿ ಕೆಲವು ಶಾಲೆಗಳಲ್ಲಿ ಪ್ರಯೋಗಿಸಿದೆ. ಆದರೆ, ಇವುಗಳ ಪ್ರಮಾಣ ಅತ್ಯಂತ ಮಿತವಾದುದು. ಈ ಮಿತ ಪ್ರಮಾಣದಲ್ಲಿ ಹೆಚ್ಚಿನ ಸಫಲತೆಯನ್ನು ಪಡೆಯುವುದು ಸಾಧ್ಯವಿಲ್ಲ. ಪ್ರಧಾನಿ ನೆಹರೂರವರು ಲೋಕಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಎಲ್ಲ ಮಕ್ಕಳಿಗೆ ಧರ್ಮಾರ್ಥವಾಗಿ ಒತ್ತಾಯದ ಶಿಕ್ಷಣವನ್ನು ಕೊಡುವುದು ನಮ್ಮ ಧ್ಯೇಯವಾಗಿರ ಬೇಕಲ್ಲದೇ ಅವರಿಗೆ ಮಧ್ಯಾಹ್ನದ ಊಟವನ್ನೂ ಕೊಡಬೇಕೆಂದು ಇತ್ತೀಚೆಗೆ ಪ್ರತಿಪಾದಿಸಿದರು. ಇವೆರಡರಲ್ಲೇ ದುಃಖಗಳೆಲ್ಲಾ ಬಗೆಹರಿಯಬಹುದು. ವಿದ್ಯಾರ್ಥಿಗಳ ಸಂಖ್ಯೆಯೂ ಗಣನೀಯವಾಗಿ ಬೆಳೆದು ಬರುವುದು ಸಾಧ್ಯ.

ಹೆತ್ತವರು ಬಡವರಾದುದರಿಂದ, ಮಕ್ಕಳಿಂದಲೂ ದುಡಿಸಿಕೊಳ್ಳುವ ಕೆಲವಾರು ಜನರಿದ್ದಾರೆ. ಆದರೆ, ಅಂಥವರು ರಾಷ್ಟ್ರದ ಭಾವಿ ಏಳಿಗೆಯನ್ನು ಬಯಸಿ ಸ್ವಲ್ಪ ಮಟ್ಟಿನ ತ್ಯಾಗಕ್ಕೆ ಸಿದ್ಧರಾಗಲೇ ಬೇಕಾಗುವುದು. ಇಲ್ಲವಾದರೆ, ಶಿಕ್ಷೆಗೆ ಗುರಿಯಾಗುವುದು ಅನಿವಾರ್ಯವಾಗುವುದು. ಶಾಲೆಯ ಕಟ್ಟಡದ ಆಡಂಬರವನ್ನು ಕಡಿಮೆ ಮಾಡಿ ಶಾಲೆಯ ಜೀವಾಳವಾಗಿರುವ ಅಧ್ಯಾಪಕರು ಮತ್ತು ಅವರಿಗೆ ಬೇಕಾಗುವ ಬೋಧನೋಪಕರಣಗಳತ್ತ ವಿಶೇಷ ಗಮನವೀಯುವುದು ಅತ್ಯಗತ್ಯವೆಂದೂ ಪ್ರಧಾನಿಯವರಾಡಿದರೆಂದು ವರದಿಯಾಗಿವೆ. ಇಂತಹ ಮಾತುಗಳು ಹಲವಾರು ಮಹನೀಯರಿಂದ ಕೇಳಿ ಬರುತ್ತಿವೆ. ಈ ಕಡೆಗೆ ಲಕ್ಷ್ಯವೀಯುವುದೂ ಅಗತ್ಯ. ದೇಶದಲ್ಲಿ ಉತ್ತಮ ವ್ಯಾವಹಾರಿಕ ಶಿಕ್ಷಣವನ್ನು ಕೊಡಲು ಮತ್ತು ತನ್ಮೂಲಕ ದೇಶದ ಭಾವೀ ಪ್ರಜೆಗಳನ್ನು ಸ್ವಾವಲಂಬೀ ಜೀವನವನ್ನು ನಡೆಸುವಂತೆ ಪ್ರೇರೇಪಿಸಲು ಮೂಲ ಶಿಕ್ಷಣ ಪದ್ಧತಿಯು ಸ್ವೀಕಾರವೆನಿಸಿವರೂ, ಅದಕ್ಕೆ ಬೇಕಾದ ಉಪಕರಣಗಳ ಅಭಾವದಿಂದ ಈ ಕ್ರಮವು ನಿರೀಕ್ಷಿತ ಫಲಿತಾಂಶ ಕೊಡುವುದಿಲ್ಲವೆಂಬುದನ್ನು ಗಮನಿಸಬೇಕು. ಹೀಗಾಗದೆ, ದೇಶದಲ್ಲಿ ಶಿಕ್ಷಣ ವಿಕಾಸಕ್ಕಾಗಿ ಮತ್ತು ವ್ಯಾವಹಾರಿಕ ವಿದ್ಯೆಗಾಗಿ ಹಾಗೂ ಭಾವೀ ಜನಾಂಗದ ಭವಿತವ್ಯಕ್ಕಾಗಿ ಶಿಕ್ಷಣಾಂಗದ ಕೊರತೆಯನ್ನು ಸಂಪೂರ್ಣ ಹೋಗಲಾಡಿಸುವುದು ಅಗತ್ಯವೆಂದೂ, ಖಡ್ಡಾಯ ಉಚಿತ ಮತ್ತು ಮಧ್ಯಾಹ್ನ ಊಟಸಹಿತವಾದ ಶಿಕ್ಷಣವನ್ನು ಕೊಡುವಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮತ್ತು ಶಿಕ್ಷಣ ಮಟ್ಟವನ್ನು ಇಳಿಯದಂತೆ ಅಧ್ಯಾಪಕರು ಸಫಲರಾಗುವರೆಂದು ವಿಶ್ವಾಸವಿಡುತ್ತೇವೆ.

ಮೈಸೂರಿನ ರಾಜಕಾರಣ—ಮಂತ್ರಿಮಂಡಳದಲ್ಲಿ ಅವಿಶ್ವಾಸ

ದ್ವಿತೀಯ ಸಾರ್ವತ್ರಿಕ ಚುನಾವಣೆಗಳು ಮುಗಿದು ನೂತನ ಸರಕಾರಗಳು ಅಧಿಕಾರಾರೂಢವಾಗಿ ಒಂದು ವರ್ಷ ಕಳೆಯುವಷ್ಟರಲ್ಲಿಯೇ ಮೈಸೂರಲ್ಲಿ ಸರಕಾರೀ ಪಕ್ಷದ ನಾಯಕರ ಧುರೀಣತ್ವದಲ್ಲಿ ಅವಿಶ್ವಾಸ ಸೂಚಿಸುವ ಸೂಚನೆಯೊಂದು ತ್ವರಿತಗತಿಯಿಂದ ಮುಂದೆಬಂದು ಅದಕ್ಕಾಗಿ ಭರದಿಂದ ಸಹಿಗಳ ಸಂಗ್ರಹವಾಗುತ್ತಿದೆ. ಇದು ಅನಿರೀಕ್ಷಿತವಾಗಿಲ್ಲವೆಂದು ಹೇಳಬಹುದಾದರೂ ನಿರೀಕ್ಷಿತವೂ ಅಲ್ಲ. ಅಥವಾ ಮೈಸೂರ ಸರಕಾರದಲ್ಲಿ ಇದೊಂದು ಉಲ್ಲೇಖನೀಯ ಘಟನೆಯೂ ಆಗಿಲ್ಲ. ಹಿಂದಿನ ಹಳೆಯ ಮೈಸೂರಿನಲ್ಲಿಯೇ ಇಂತಹ ಹಲವಾರು ಸಂದರ್ಭಗಳು ಬಂದು, ಕೊನೆಗೆ ಮಧ್ಯಸ್ಥಿಕೆಯಿಂದ ಹಾಗೂ ಪರಿಷ್ಕರ ಕೇಳಿಕೆಯನ್ವಯ ಒಂದೆರಡು ಬಾರಿ ಸೂಚನೆ ಮುಂದ ಬಾರದೆ ಹೋದರೂ ಕೊನೆಗೆ, ರಾಜ್ಯ ಪುನಾರಚನೆಗೆ ಮೂರು ತಿಂಗಳು ಅತ್ಯಲ್ಪಾವಧಿಯಿರುವಾಗ ಶ್ರೀ ಕಡಿದಾಳ ಮಂಜಪ್ಪನವರನ್ನು ಈ ಘಟನೆಯೇ ಅಧಿಕಾರಕ್ಕೇರಿಸಿತು. ಇದೀಗ ಅಂತಹ ಇನ್ನೊಂದು ಸಂದರ್ಭ ಆದರೂ ರಾಜ್ಯ ಪುನಾರಚನಾನಂತರದ ನೂತನ ಉಲ್ಲೇಖವೆಂದು ಮಾತ್ರ ಹೆಸರಿಸಬಹುದು.

ರಾಜ್ಯ ಪುನಾರಚನಾನಂತರದ ಸರಕಾರೀ ಪಕ್ಷದ ನಾಯಕರಾಗಿ ಶ್ರೀ ನಿಜಲಿಂಗಪ್ಪನವರು ಸರ್ವಾನುಮತದಿಂದ ಆರಿಸಲ್ಪಟ್ಟರು. ಅಂತೆಯೇ ಎರಡನೇ ಸಾರ್ವತ್ರಿಕ ಚುನಾವಣೆಯನಂತರವೂ ಈ ಸಂದರ್ಭದಲ್ಲಿ ಪಕ್ಷದೊಳಗಿನ ಕೆಲವೊಂದು ಪಂಗಡಗಳೊಳಗೆ ತಿಕ್ಕಾಟ ನಡೆದಿದ್ದರೂ ಅದು ತಣ್ಣಗಾಗಿ ಒಮ್ಮತದ ನಿರ್ಧಾರಕ್ಕೆ ಬರಲಾಯಿತು. ಆದರೆ, ಇದೀಗ ಇಂತಹ ಪರಿಸ್ಥಿತಿ ಸಂಪೂರ್ಣ ಹದಗೆಟ್ಟಿರುವುದು ವಿಮರ್ಶನೆಯನ್ನುಂಟು ಮಾಡುತ್ತಿದೆ.

ಮೈಸೂರಿನ ರಾಜಕಾರಣದಲ್ಲಿ ಹಲವಾರು ಒಳಪಂಗಡಗಳಿರುವುದು ಎಲ್ಲರಿಗೂ ಗೊತ್ತು. ಈಗ ಶ್ರೀ ನಿಜಲಿಂಗಪ್ಪನವರ ಮೇಲೆ ಉಳಿದ ಪಂಗಡದವರು ಒಂದಾಗಿ ಅವಿಶ್ವಾಸದ ಸೂಚನೆ ತರಲಿದ್ದು ಸುಮಾರು ೧೨೦ಕ್ಕೂ ಹೆಚ್ಚಿನ ಸದಸ್ಯರ ಬೆಂಬಲಗಳಿರುವವೆಂದು ಹೇಳುತ್ತಿದ್ದಾರೆ. ಶ್ರೀ ನಿಜಲಿಂಗಪ್ಪನವರ ಅನುಯಾಯಿಗಳಾಗಿದ್ದ ಕೆಲವು ಪ್ರಮುಖರೂ ಇದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ—ಸರಕಾರದಲ್ಲಿ ಕಾರ್ಯಕ್ಷಮತೆ ಸಾಕಾದಷ್ಟು ಇಲ್ಲವೆಂಬ ಕಾರಣವನ್ನೊಡ್ಡಿ. ಹೀಗೆ ಒಂದೆಡೆ ಸಹಿಸಂಗ್ರಹದ ಕಾರ್ಯ ನಡೆಯುತ್ತಿರುವಂತೆ ಮಂತ್ರಿಮಂಡಳಿಯು ಸಭೆಸೇರಿ, ಮುಂದಿನ ಗತಿವಿಧಿಗಳನ್ನು ಚಿಂತಿಸುತ್ತಿದೆ. ತಾನು ಅಧಿಕಾರವನ್ನು ಎಂದೂ ಬಯಸುವುದಿಲ್ಲವೆಂದೂ ಬಹು ಸಂಖ್ಯಾಕರಿಗೆ ಬೇಡವಾದರೆ ತಾನಲ್ಲುಳಿಯಲಾರೆನೆಂದು ಮಾನ್ಯ ಮುಖ್ಯಮಂತ್ರಿಗಳು ಖಚಿತವಾಡಿದ್ದಾರೆ. ಇದು ನ್ಯಾಯೋಚಿತವೇ ಆಗಿದೆ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನಾಭಿಪ್ರಾಯಕ್ಕೆ ಮಣಿಯಲೇಬೇಕು. ಮೂರನೆ ಕಡೆಯಲ್ಲಿ ಎರಡು ಪಂಗಡಗಳ ನಡುವೆ ಸಂಧಾನದ ಮಾತುಕತೆಗಳೂ ನಡೆಯುತ್ತಿವೆ ಎಂದು ತಿಳಿದುಬಂದಿದೆ. ಆದರೆ, ಸಾಮಾನ್ಯವಾಗಿ ಈ ಸಂಧಾನ ಫಲಿತವಾಗುವುದಿಲ್ಲವೆಂದೇ ಹೇಳಬಹುದು. ಬೆಂಗಳೂರಿಗಾಗಮಿಸಿದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಡೇಭರರೊಡನೆಯೂ ಉಭಯತರು ಮಾತುಕತೆ ನಡೆಸಿದರಂತೆ. ಈ ಬಗ್ಗೆ ಕಾಂಗ್ರೆಸ್ ವರಿಷ್ಠರವರೆಗೂ ದೂರುಹೋಗಿದ್ದು ಅವರ ಸಲಹೆ ಪಡೆಯುವ ಸಲುವಾಗಿ ಮಾನ್ಯ ಮುಖ್ಯಮಂತ್ರಿಗಳು ನವದೆಹಲಿಗೆ ಈ ವಾರಾಂತ್ಯದಲ್ಲಿ ತೆರಳಲಿರುವರೆಂದು ತಿಳಿಯುತ್ತದೆ.

ಸಂಯುಕ್ತವಾಗಿ ಅವಿಶ್ವಾಸ ಸೂಚಿಸಿದ ಧುರೀಣರ ಅನುಯಾಯಿಗಳು ಭವಿತವ್ಯದ ಬಗ್ಗೆ ಸ್ವಲ್ಪ ಚಿಂತಿಸಿರುವುದು ಗೊತ್ತಾಗಿದೆ. ಮುಂದೆ ಯಾರೇ ನಾಯಕನಾಗಲಿ, ಆತನಿಗೆ ಎಲ್ಲ ಒಳಪಂಗಡಗಳ ಸದಸ್ಯರಿಂದ ಕೂಡಿಕೊಂಡಿರುವ ಮೂವರು ಯಾ ಐವರ ಸಲಹೆಗಾರ ಮಂಡಲಿಯಿದ್ದು ಆ ಧುರೀಣನು ಪ್ರತಿಯೊಂದು ವಿಷಯದಲ್ಲೂ ಇವರ ನಿರ್ಣಯಕ್ಕೆ ಕಟ್ಟುಬಿದ್ದು, ಕಾಂಗ್ರೆಸ್ ಪಕ್ಷದ ಸಭೆಗಿಟ್ಟು

ರೂ 100 ಬಹುಮಾನ

ಸ್ವಾರ್ಥ ಸಿದ್ಧ ಯಂತ್ರವು ನೀವು ಬಯಸಿದುದನ್ನು ಅದು ಪಾಷಾಣ ಹೃದಯವಾದರೂ ತನ್ನ ಅಲೌಕಿಕ ಶಕ್ತಿಯಿಂದ ತನ್ನ ಪಕ್ಕಕ್ಕೇ ನಿಮ್ಮೆಡೆಗೆ ಎಳೆದು ತರುವುದು. ಇದನ್ನು ಧರಿಸುವುದರಿಂದ ವ್ಯಾಪಾರದಲ್ಲಿ ಲಾಭ, ಮೊಕದ್ದಮೆ, ಲಾಟರೀ ಸ್ಪರ್ಧೆಗಳಲ್ಲಿ ಜಯ, ಪರೀಕ್ಷೆಯಲ್ಲಿ ಸಫಲತೆ ಗ್ರಹಗಳ ಶಾಂತಿ, ನೌಕರಿಯಲ್ಲಿ ಅಭಿವೃದ್ಧಿ ಮತ್ತು ಸೌಭಾಗ್ಯಗಳು ನಿಮ್ಮದಾಗುತ್ತವೆ. ಬೆಲೆ ತಾಮ್ರದ್ದು ರೂ. ೪-೫೦; ಬೆಳ್ಳಿಯದ್ದು ರೂ ೫-೫೦, ಚಿನ್ನದ್ದು ರೂ ೧೫ ಮತ್ತು ಸ್ಪೆಶಲ್ ರೂ ೨೫-೫೦.

Pashupatinath Ashram, 15
P. O Katusarai (Patna)

ಸಂಕ್ಷಿಪ್ತ ಸುದ್ದಿಗಳು

ಕಾಂಗ್ರೆಸ್ ಉಮೇದ್ವಾರರು

ಮೈಸೂರ ವಿಧಾನಸಭಾ ಮತದಾರ ಸಂಘದಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳನ್ನು ಕಾಂಗ್ರೆಸ್ಸಿನ ಕೇಂದ್ರ ಪಾರ್ಲಿಮೆಂಟರಿ ಮಂಡಳವು ಆರಿಸಿದೆ. ಅವರು ಶ್ರೀಗಳಾದ ಎಚ್. ಸಿ. ಬೋರಯ್ಯ ಕೆ. ಕೆ. ಶೆಟ್ಟಿ, ಎಸ್. ಎಸ್. ನಾರಾಯಣ ಮೂರ್ತಿ, ನಾರಾಯಣಪ್ಪ ಕೊಂಡ, ತುಳಿಹಳ್ಳಿ ಬಸಪ್ಪ ಮತ್ತು ಮುರಿಸ್ವಾಮಿ ಹಿರೇಮಠ ಇವರಾಗಿದ್ದಾರೆ.

ಇದೇಕೆ ಹೀಗೆ?

ಸಂಪತ್ತು ಮತ್ತು ವೆಚ್ಚದ ಮೇಲೆ ಕರಗಳನ್ನು ಹೇರಿ, ಆದಾಯದ ಮೇಲಿನ ಕರವನ್ನು ಇಳಿಸಬೇಕೆಂದು ಪ್ರೊ. ಕಾಲ್ಡೋರರು ಕೇಂದ್ರ ಸರಕಾರಕ್ಕೆ ಸಲಹೆಯಿತ್ತಿದ್ದರು. ಇವುಗಳಲ್ಲಿ ಕರ ಹೇರುವ ಸಂಬಂಧದ ಭಾಗವನ್ನು ಮಾತ್ರ ಸರಕಾರವು ಸ್ವೀಕರಿಸಿ ಉಳಿದಂಶವನ್ನು ತಿರಸ್ಕರಿಸಿದುದನ್ನು ವಿರೋಧೀ ಸದಸ್ಯರು ಲೋಕ ಸಭೆಯಲ್ಲಿ ಟೀಕಿಸಿದರು. ಇದಕ್ಕುತ್ತರವಾಗಿ ಈ ಸಂಪತ್ತು ಮತ್ತು ವೆಚ್ಚದ ಮೇಲಿನ ಕರಾಕರಣೆಯಿಂದ ಸಾಕಷ್ಟು ಆದಾಯವನ್ನು ತರುವ ವರೆಗೆ ಹಾಗೆ ಮಾಡುವುದು ಸಮಂಜಸವಲ್ಲವೆಂದು ಅರ್ಥ ಶಾಖೆಯ ಉಪಮಂತ್ರಿ ಶ್ರೀ ಬಿ. ಆರ್ ಭಗತರು ಸರಕಾರದ ಧೋರಣೆಯನ್ನು ವ್ಯಕ್ತಪಡಿಸಿದರು.

ಅಮೆರಿಕೆಯಲ್ಲಿ ಗಾಂಧೀ ತತ್ವ

ಮಹಾತ್ಮಾ ಗಾಂಧೀಯವರ ಅಹಿಂಸಾತ್ಮಕ ಸತ್ಯಾಗ್ರಹ ತಂತ್ರವನ್ನು ಅಮೆರಿಕೆಯಲ್ಲಿನ ನೀಗ್ರೋ ಜನರು ವರ್ಣಭೇದ ನಿರ್ಮೂಲನೆಗಾಗಿ ಸ್ವೀಕರಿಸಿದ್ದಾರೆ. ವರ್ಣೀಯ ಸಮತಾ ಕಾಂಗ್ರೆಸ್ ಎಂಬ ವರ್ಣಭೇದ ನಿವಾರಣೆಗಾಗಿ ನಿರ್ಮಿಸಲ್ಪಟ್ಟ ಈ ರಾಷ್ಟ್ರೀಯ ಸಂಸ್ಥೆಯು ಗಾಂಧೀತತ್ವವನ್ನು ಸ್ವೀಕರಿಸಿ ಸಂಧಾನದ ಎಲ್ಲ ಮಾರ್ಗಗಳನ್ನು ಪ್ರಯೋಗಿಸಿ ನೋಡದ ವಿನಃ ತೀವ್ರ ಕ್ರಮಗಳನ್ನು ಯೋಜಿಸಿಕೊಳ್ಳಬಾರದೆಂದು ನಿಶ್ಚಯಿಸಿಕೊಂಡಿದೆ. ಅಮೆರಿಕೆಯಲ್ಲಿ ಸಾಮಾನ್ಯವಾಗಿ ಶಿಕ್ಷಣಾಲಯಗಳಲ್ಲಿ ಈ ವರ್ಣಭೇದವು ಘಟನಾತೀತವಾಗುವುದು. ಈ ಭೇದಭಾವನೆಯು ದಕ್ಷಿಣದ ರಾಜ್ಯಗಳಲ್ಲಿ ವಿಪರೀತವಾಗಿದ್ದು, ನೀಗ್ರೋಗಳಿಗೆ ಇದು ವಿಶೇಷ ಹಾನಿಯನ್ನುಂಟುಮಾಡುತ್ತಿದೆ.

ವ್ಯಾನ್‌ಗಾರ್ಡ್ ಹಾರಿತು

ಅಮೆರಿಕೆಯು ತನ್ನ ಎರಡನೆಯ ಉಪಗ್ರಹ ವ್ಯಾನ್‌ಗಾರ್ಡನ್ನು ಕೇಪ ಕೆನೆರವಾಲ್ ಪ್ರಯೋಗ ಭೂಮಿಯಿಂದ ತಾ. ೧೭ರಂದು ಹಾರಿಸಿತು. ಇದು ಭೂಮಿಯಿಂದ ೨೫೦೦ ಮೈಲೆತ್ತರದಲ್ಲಿ ತಾಸೊಂದಕ್ಕೆ ೧೮ ಸಾವಿರ ಮೈಲಿಗಳ ವೇಗದಲ್ಲಿ ಓಡುತ್ತಲಿದೆ ಎಂದು ತಿಳಿದು ಬಂದಿದೆ. ಈ ಚಿಕ್ಕ ಉಪಗ್ರಹವು ದೀರ್ಘ ವರ್ತುಲಾಕಾರದಲ್ಲಿ ಪ್ರಪಂಚ ಪ್ರದಕ್ಷಿಣೆಮಾಡುತ್ತಿದೆ. ತನ್ನ ಪಥದಲ್ಲಿ ಭೂಮಿಯಿಂದ ಅತ್ಯಧಿಕವೆಂದರೆ, ೨,೫೦೦ ಮತ್ತು ಅತ್ಯಲ್ಪ ಎಂದರೆ ೪೦೦ ಮೈಲಿಗಳ ದೂರದಲ್ಲಿ ಸಂಚರಿಸುವುದು. ಭೂಮಧ್ಯರೇಖೆಗೆ ೩೩ ಡಿಗ್ರಿ ಕೋನವನ್ನು ಮಾಡಿ ಇದು ತಿರುಗುತ್ತಿರುವುದರಿಂದ, ರಶಿಯದ ದಕ್ಷಿಣ ತುದಿಯ ಮೇಲೆ ಹಾಯಬಹುದಾದರೂ ಯುರೋಪಿನ ಹೆಚ್ಚಿನ ಭಾಗಗಳಿಗೆ ತೋರಲಾರದು ಎಂದು ತಿಳಿದು ಬರುತ್ತದೆ.

ಬೇಸಾಯ ಮಾಡಬೇಡಿರಿ

ಬೇಸಾಯ ಮಾಡದೆ ಸುಮ್ಮನೆ ಮನೆಯಲ್ಲಿ ಕುಳಿತುಕೊಳ್ಳುವುದಕ್ಕಾಗಿ ರೈತರಿಗೆ ಹಣವೀಯುವ ಪ್ರಸಂಗ ಅಮೆರಿಕೆಗೆ ಒದಗಿ ಬಂದಿದೆ. ಗೋಧಿ, ಅಕ್ಕಿ, ಹತ್ತಿ ಬೆಳೆಗಳು ಪ್ರತಿವರ್ಷ ಸಮೃದ್ಧವಾಗಿ ಬೆಳೆಯುತಿದ್ದು ಈ ಸರಕುಗಳ ಸಂಗ್ರಹವು ಈಗ ಹೆಚ್ಚಿರುವುದರಿಂದ ಅದು ಈ ನಿರ್ಧಾರಕ್ಕೆ ಬಂದಿದೆ. ಐದು ಅಥವಾ ಹತ್ತು ವರ್ಷಗಳ ವರೆಗೆ ತಮ್ಮ ಹೊಲಗಳಲ್ಲಿ ಏನೂ ಬೆಳೆಯದ ರೈತರಿಗೆ ಎಕ್ರೆಯೊಂದಕ್ಕೆ ಸುಮಾರು ೫೫ ಡಾಲರುಗಳಂತೆ ಹಣವೀಯುವ ಯೋಜನೆ ಮಾಡಿದ್ದು ಇದನ್ನು ಈಗ ೨೦,೨೭೩ ಎಕರೆ ಭೂಮಿಗೆ ಮಾತ್ರ ಅನ್ವಯಿಸಲಾಗುವುದಂತೆ!

ಶೀಯಾ ಪರಿಷತ್ತಿನ ಕರೆ

ಪಾಕಿಸ್ತಾನವು ಕಾಶ್ಮೀರದಲ್ಲಿಯ ತನ್ನ ಆಕ್ರಮಣವನ್ನು ಹಿಂತೆಗೆದುಕೊಳ್ಳುವಂತೆ ಸಂ. ರಾ. ಸಂಘವು ಪಾಕಿಸ್ತಾನವನ್ನು ಕೇಳಿಕೊಳ್ಳಬೇಕೆಂದು ಮತ್ತು ಪಾಕಿಸ್ತಾನವು ತನ್ನ ವಶದಲ್ಲಿಟ್ಟುಕೊಂಡಿರುವ ಅಕ್ರಮವಾದ ಜಮ್ಮೂ ಕಾಶ್ಮೀರದ ಭಾಗವನ್ನು ಭಾರತಕ್ಕೆ ಕೊಡಿಸಬೇಕೆಂದು ಅ. ಭಾ. ಶಿಯಾ ಪರಿಷತ್ತು ಒಂದು ಗೊತ್ತುವಳಿಯನ್ನು ಸ್ವೀಕರಿಸಿದೆ. ಪಾಕಿಸ್ತಾನದ ವಶದಲ್ಲಿರುವ ಜಮ್ಮೂ ಕಾಶ್ಮೀರವನ್ನು ಭಾರತಕ್ಕೆ ತಿರುಗಿ ಕೊಡಬೇಕೆನ್ನುವುದನ್ನು ಹೊರತು ಬೇರೆ ಯಾವ ವಿಷಯದಲ್ಲಿಯೂ ಕಾಶ್ಮೀರ ಚರ್ಚೆಯನ್ನು ನಡೆಸಲು ಭಾರತವು ಮುಂದಾಗಬಾರದು ಎಂದು ಭಾರತ ಸರಕಾರಕ್ಕೆ ಆಗ್ರಹಪೂರ್ವಕವಾಗಿ, ಈ ಪರಿಷತ್ತು ವಿಜ್ಞಾಪನೆ ಮಾಡಿದೆ.

ಉಡುಪಿ

ಅಂಬರ ಚರಖಾ ಆರಂಭೋತ್ಸವವು- ತಾ. 15ರಂದು ಅಂಬರ ಚರಖಾ ಉಪ ಪರಿಶ್ರಮಾಲಯ ಸಮಿತಿಯ ನೇತೃತ್ವದಲ್ಲಿ ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಕುಂಜಿಬೆಟ್ಟಿನಲ್ಲಿರುವ (ವಿದ್ಯಾರ್ಥಿನಿಯರ ಹಾಸ್ಟೆಲಿಗಾಗಿ ಶ್ರೀ ಕೆ. ಆರ್ ಕೆ. ಭಟ್ಟರು ದಾನವಾಗಿ ಕೊಟ್ಟಿರುವ) ಹೊಸಮನೆ ಎಂಬ ಕಟ್ಟಡದಲ್ಲಿ ಅಧ್ಯಕ್ಷರಿಂದ ಉದ್ಘಾಟಿಸಲ್ಪಟ್ಟಿತು. ಆರಂಭದಲ್ಲಿ ಶ್ರೀಮತಿ ಕೆ. ಅಕ್ಕಾ ಭಟ್ಟರು ಸ್ವಾಗತಿಸಿದರು. ರಾಮಕೃಷ್ಣ ಮಿಶನಿನ ಕಾರವಾರ ಸ್ವಾಮಿಜಿಯವರು ಹರಸಿ ಮಾತನಾಡಿದರು. ಶ್ರೀಮತಿ ಇಂದಿರಾ ರಾಯರು ಪರಿಶ್ರಮಾಲಯದ ಉಪಯುಕ್ತತೆಯನ್ನೂ ಶ್ರೀ ವಾಸುದೇವ ಮಯ್ಯರು ಶಿಬಿರದ ನಿಯಮಗಳನ್ನೂ ವಿವರಿಸಿದರು. ಕಾರ್ಯದರ್ಶಿನಿ ಶ್ರೀಮತಿ ವಾರಿಜಾಕ್ಷಿ ರಾಮರಾಯರು ಧನ್ಯವಾದಗಳನ್ನಿತ್ತರು.

ತೈಲ ಚಿತ್ರಗಳ ಅನಾವರಣ–ಸ್ಥಳೀಯ ಬೋರ್ಡ್ ಹೈಸ್ಕೂಲಿನ ಶಾಲಾ ಭವನದಲ್ಲಿ ಆದಿಕವಿ ಪಂಪ, ಸರ್ವಜ್ಞ, ಪಂಜೆ ಮಂಗೇಶರಾವ್, ಶ್ರೀ ಆಲೂರು ವೆಂಕಟರಾವ್, ಸರ್ದಾರ್ ಪಟೇಲ್, ತ್ಯಾಗರಾಜರು ಇವರ ತೈಲ ಚಿತ್ರಗಳನ್ನು ಶ್ರೀ ಪುತ್ತಿಗಾ ಮಠಾಧೀಶರಾದ ವಿದ್ಯಾವಲ್ಲಭ ಶ್ರೀ ಸುಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಕೆ. ಎಸ್. ಶ್ರೀ ಕಂಠ ಅಯ್ಯರ್, ಕೆ. ಶ್ರೀಪತಿ ಆಚಾರ್ಯ, ಅ. ಗೌ. ಕಿನ್ನಿಗೋಳಿ, ಕೆ. ಶಾಂತ ರೈ, ಕು. ಪಿ. ಹರಿದಾಸ ಭಟ್, ಕೆ ಮಂಜುನಾಥಯ್ಯ ಇವರು ಅನುಕ್ರಮವಾಗಿ ಅನಾವರಣಮಾಡಿದರು. ಆರಂಭದಲ್ಲಿ ಹೆಡ್ಮಾಸ್ತರ್ ಶ್ರೀ ಬೆಳ್ಳೆ ಅನಂತಕೃಷ್ಣ ಸಾಮಕರು ಸ್ವಾಗತ ಭಾಷಣಮಾಡಿದರು. ಕೊನೆಯಲ್ಲಿ ವಿದ್ಯಾರ್ಥಿ ಎಂ.ಖಂಡ ವಿಶ್ವನಾಥ ಶೆಟ್ಟರು ಧನ್ಯವಾದಗಳನ್ನಿತ್ತರು. ಈ ಎಲ್ಲಾ ತೈಲ ಚಿತ್ರಗಳನ್ನು ಚಿತ್ರಿಸಿದ ಪ್ರಸಿದ್ಧ ಕಲಾಕಾರರಾದ ಶ್ರೀ ಬಿ. ಪರಮೇಶ್ವರ ಬಾಯಿರಿಯವರು ಅಭಿನಂದನಾರ್ಹರು.

ಬುಡ್ನಾರು ಎಯಿಡೆಡ್ ಎಲಿಮೆಂಟರೀ ಶಾಲೆಯ ಮಂದಿರಗಳ ಶಿಬಿರಾಗ್ನಿಯು ಉಡುಪಿ ಉತ್ತರ ವಿಭಾಗದ ಹಿರಿಯ ಪರೀಕ್ಷಾಧಿಕಾರಿ ಶ್ರೀ ಎನ್ ವಿಶ್ವನಾಥರ ಅಧ್ಯಕ್ಷತೆಯಲ್ಲಿ ತಾ. ೧೬ರಂದು ನೆರವೇರಿತು. ಶ್ರೀ ಎ. ಜೆ. ಅಲ್ವೆಯವರು ಪ್ರಧಾನ ನೆಹರೂರವರ ಭಾವಚಿತ್ರವನ್ನು ಅನಾವರಣ ಮಾಡುತ್ತ ಅವರ ಆದರ್ಶಗಳನ್ನು ವಿದ್ಯಾರ್ಥಿಗಳು ಅನುಸರಿಸಬೇಕೆಂದು ಹೇಳಿದರು. ಅಧ್ಯಕ್ಷರ ಭಾಷಣದ ಮುಂದೆ ಶಾಲಾ ಬಾಲಕಬಾಲಕಿಯರ ವಿವಿಧ ವಿನೋದಾವಳಿಗಳು ನಡೆದುವು. ಮುಖ್ಯೋಪಾಧ್ಯಾಯ ಶ್ರೀ ಬಿ. ಶಂಕರ ಸೆಟ್ಟರು ಆಭಾರ ಮನ್ನಿಸಿದರು.

ಮಂಜೂರು ಕರಂಬಾಡಿ--ಮಂಜೂರು ಪಂಚಾಯತ್ ಬೋರ್ಡಿನ ಚುನಾವಣೆಯು ತಾ. 12ರಂದು ನಡೆದು ಶ್ರೀ ಕೆ. ಶಿವರಾಮ ಶೆಟ್ಟಿಯವರು ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಿ ಬಂದಿರುವರು. ಶ್ರೀಗಳಾದ ರಾಮಣ್ಣ ಶೆಟ್ಟಿ, ತಾಡ ಮುಖಾರಿ, ರಾಮ ಶೆಟ್ಟಿ, ಲಕ್ಷ್ಮೀನಾರಾಯಣ ಭಟ್ಟ, ದಯ ಶೆಟ್ಟಿ, ಮುದ್ದ ಶೆಟ್ಟಿಯವರು ಅವಿರೋಧವಾಗಿ ಸದಸ್ಯರಾಗಿ ಆರಿಸಿಬಂದರು.

ಮೈಸೂರ ಹೈಕೋರ್ಟಿನ ಹೊಸ ನ್ಯಾಯಾಧೀಶರು— ಮೈಸೂರ ಹೈಕೋರ್ಟಿನ ಖಾಯಂ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿರುವ ಶ್ರೀ ಅಮ್ಮೆಂಬಳ ನಾರಾಯಣ ಪೈ ಹಾಗೂ ಅ್ಯಡಿಶನಲ್ ನ್ಯಾಯಾಧೀಶರೆಂದು ನೇಮಿಸಲ್ಪಟ್ಟಿರುವ ಶ್ರೀ ಮಹಮುದ ಅಲಿಖಾನರು ತಾ. 14ರಂದು ತಮ್ಮ ನೂತನ ಅಧಿಕಾರವನ್ನು ಪ್ರತಿಜ್ಞಾಪೂರ್ವಕವಾಗಿ ಮುಖ್ಯನ್ಯಾಯಾಧೀಶ ಶ್ರೀ ಎಸ್. ಆರ್. ದಾಸಗುಪ್ತರವರಿಂದ ವಹಿಸಿಕೊಂಡರು.

ನ್ಯಾ. ಮಾ. ಪೈಯವರು 1911ರಲ್ಲಿ ದ. ಕ. ಜಿಲ್ಲೆಯ ಗೌರವಸ್ಥ ಮನೆತನವೊಂದರಲ್ಲಿ ಜನ್ಮವೆತ್ತಿದರು. ಅವರ ಪ್ರಾರಂಭಿಕ ಶಿಕ್ಷಣ ಮಂಗಳೂರಿನಲ್ಲೂ ನಂತರದ ಶಿಕ್ಷಣ ಮದ್ರಾಸಿನಲ್ಲೂ ಆಯಿತು. 1935ರಲ್ಲಿ ಅವರು ಮದ್ರಾಸ್ ಹೈಕೋರ್ಟಿನ ಅಡ್ವೊಕೇಟರಾಗಿದ್ದು ರಾಜ್ಯ ಪುನರ್ರಚನೆಯ ನಂತರ ಬೆಂಗಳೂರಿಗೆ ಬಂದು ಮೈಸೂರ ಹೈಕೋರ್ಟಿನ ಅಡ್ವೊಕೇಟರಾದರು. ಇದುವರೆಗೂ ಅವರು ಕೆನರಾ ಬ್ಯಾಂಕಿನ ಡೈರೆಕ್ಟರರಲ್ಲೊಬ್ಬರಾಗಿದ್ದರು.

ನ್ಯಾ. ಮೂ. ಮಹಮುದಅಲಿ ಖಾನರು 1911ರಲ್ಲಿ ಹೈದರಾಬಾದದಲ್ಲಿ ಜನ್ಮ ತಳೆದು ಅಲ್ಲಿಯೇ ಶಾಲಾ ಶಿಕ್ಷಣ ಮುಗಿಸಿ ಅಲೀಗಡದಲ್ಲಿ ಎಮ್. ಎ. ಎಲ್.ಎಲ್. ಬಿ. ಪದವಿ ಪಡೆದು ಇಂಗ್ಲೆಂಡಿಗೆ ಹೋಗಿ ಎಲ್. ಎಲ್. ಎಂ ಪರೀಕ್ಷೆ ಪಾಸಾಗಿ ಅಲ್ಲಯೇ ಮೂರು ವರ್ಷ ವಕೀಲಿ ನಡೆಸಿದರು. ಅಲ್ಲಿಂದ ಅವರು ಸ್ವದೇಶಕ್ಕೆ ಬಂದು ಜಿಲ್ಲಾ ನ್ಯಾಯಾಧೀಶರಾಗಿಯೂ ಸ್ಮಾಲಕಾಜಸ್ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಶ್ರೀ ಯು. ಎಸ್. ಮಲ್ಯರ ಆಯ್ಕೆ ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಯು. ಎನ್. ಢೇಬಾರರು ಕಾಂಗ್ರೆಸ್ ಕಾರ್ಯ ಸಮಿತಿಗೆ ಶ್ರೀ ಯು. ಶ್ರೀನಿವಾಸ ಮಲ್ಯರನ್ನು ಸದಸ್ಯರಾಗಿ ನೇಮಕ ಮಾಡಿರುವರೆಂಬುದಾಗಿ ಪ್ರಕಟಣೆ ಹೊರಟಿದೆ.

ದ. ಕ. ಜಿಲ್ಲಾ ಬೋರ್ಡಿನ ಸಮಾನ್ಯ ಸಭೆಯು-ಇದೇ ತಾ. 22ನೆ ಶನಿವಾರ ಅಪರಾಹ್ನ 2–35 ನಿಮಿಷಕ್ಕೆ ಬೋರ್ಡಿನ ಸಭಾ ಭವನದಲ್ಲಿ ಜರಗಲಿರುವುದಾಗಿ ಬೋರ್ಡಿನ ಅಧ್ಯಕ್ಷರು ತಿಳಿಸುತ್ತಾರೆ.

ಪುತ್ತಿಗೆ ಮತ್ತು ಕೂಳೂರು ಸೇತುವೆಗಳಿಗೆ ಸುಂಕವಿಲ್ಲ- ದಕ್ಷಿಣ ಕನ್ನಡ ಜಿಲ್ಲೆಯ ಪುತ್ತಿಗೆ ಮತ್ತು ಕೂಳೂರು ಸೇತುವೆಗಳ ಮೇಲೆ ವಾಹನಗಳು ಓಡಾಡುವಾಗ್ಯೆ ಪಡೆಗೊಳ್ಳುವ ಸುಂಕವನ್ನು ತೆಗೆದು ಹಾಕಬೇಕಾಗಿ ಶ್ರೀ ಯು. ಎಸ್. ನಾಯಕ್, ಎಂ. ಎಲ್. ಎ. ಇವರು ಮೈಸೂರು ಸರಕಾರದ ಗೃಹ ಹಾಗೂ ವಾಣಿಜ್ಯ ಮಂತ್ರಿಗಳಿಗೆ ಬರೆದು ಕೊಂಡಂತೆ ಮೇಲಿನ ಎರಡು ಸೇತುವೆಗಳಲ್ಲಿ ಪಡೆಕೊಳ್ಳುತ್ತಿರುವ ಸುಂಕವನ್ನು ನಿಲ್ಲಿಸಬೇಕಾಗಿ ದಕ್ಷಿಣ ಕನ್ನಡ ಜಿಲ್ಲೆಯ ಡೆಪ್ಯುಟಿ ಕಮಿಶನರರಿಗೆ ಮಾನ್ಯ ಮಂತ್ರಿಗಳು ತಿಳಿಸಿರುವರಾಗಿ ತಿಳಿದುಬರುತ್ತದೆ.

ಬೊಂಬಾಯಿ- ಕರ್ನಾಟಕ ಫ್ರೀ ನೈಟ್ ಹೈಸ್ಕೂಲಿನ ಸ್ಪೋರ್ಟ್ಸ್ ಕ್ಲಬ್ಬಿನ ಮಹಾಸಭೆಯು 9-3-58ರಂದು ವಿಠಲ ಅಮೀನರ ಅಧ್ಯಕ್ಷತೆಯಲ್ಲಿ ಜರಗಿ ಮುಂದಿನ ವರುಷಕ್ಕೆ ಅಧ್ಯಕ್ಷರಾಗಿ ಶ್ರೀ ಎಲ್. ಜೆ. ಗೋಮ್ಸ್. ಬಿ. ಎ. ಬಿ ಟಿ. ಇವರೂ, ಉಪಾಧ್ಯಕ್ಷರಾಗಿ ಶ್ರೀ ನಾರಾಯಣ ಕಳೇಕರರೂ, ಗೌರವ ಕಾರ್ಯದರ್ಶಿಗಳಾಗಿ ಶ್ರೀ ಕೆ. ಕೆ. ಸೆಟ್ಟರೂ, ಸಹಾಯಕ ಕಾರ್ಯದರ್ಶಿಗಳಾಗಿ ದತ್ತಯನ್. ಶ್ರೀ ಯಾಸ್‌ರ, ಟ್ರಜರಿಯಾಗಿ ಶಿವರಾಮ ಕೆ. ಸನಿಲ್, ಇವರೂ ಸರ್ವಾನುಮತದಿಂದ ಚುನಾಯಿತರಾದರು.

ಶಿರ್ವ ಪಂಚಾಯತ್ ಕೋರ್ಟಿನಲ್ಲಿ

ಶಿ. ನ್ಯಾಜ್ಯ. ನಂಬ್ರ 6/1958

ಶಿಬ್ರೇಸ್ತರ್ ಸುನೇಜಸ್-ಗಾಬ್ರಿಯಲ್ ಮಿನೇಜಸರ ಮಗ ಶಿರ್ವ ಗ್ರಾಮದ ಕುತ್ತ ಮಜಲಿನಲ್ಲಿರುವವ — ವಾದಿ

ಅಂತೋನಿಮೊಂತೇರೊ–ಬಸ್ತ್ಯಾಂ ಫೆರಂರ ಮಗ ಶಿರ್ವ ಗ್ರಾಮದ ಸುರಂಜದಲ್ಲಿರುವವ — ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ– ನೀವು ವಾದಿಗೆ ತಾ. 7-9-55ರಲ್ಲಿ ನೂರಕ್ಕೆ 6¼ರಂತೆ ಬಡ್ಡಿ ಕೂಡ್ಲಿ ಕೊಡುವ ಶರ್ತದ ಮೇಲೆ ಅಸ್ಲು ರೂಪಾಯಿ 50 –ನ್ನು ಡಿಮಾಂಡ್ ಪ್ರೊಮಿಸರಿ ನೋಟು ಬರೆಕೊಟ್ಟ ಬಾಬ್ತು ಅಸ್ಲು ಬಡ್ಡಿ ಕೂಡಾ ರೂ. 59–5–0ದ ಕೋರ್ಟು ಖರ್ಚ ಸಮೇತ ಬರಮಾಡಿಕೊಳ್ಳುವರೆ ವಾದಿಯು ದಾಖಲ್ಲು ಮಾಡಿದ ವ್ಯಾಜ್ಯವು ತಾ. 31-3-1958ರಲ್ಲು ತನಿಖೆಗೆ ಇಟ್ಟಿದೆ. ಸದ್ರಿ ವಾದೆಯಲ್ಲಿ ಉದಾಹರಿಸಲ್ಪಟ್ಟಿದ್ದ ಸದ್ರಿ ದಿವಸ ಅಪರಾಹ್ನ ೧೧ ಗಂಟೆಗೆ ಈ ಕೋರ್ಟಿನಮುಂದೆ ನೀವು ಸ್ವತಾ ಯಾ ಮುಖಾಂತರ ಹಾಜರಾಗತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ವ್ಯಾಜ್ಯವನ್ನು ಕೇಳಿ ಏಕಪಕ್ಷವಾಗಿ ತೀರ್ಮಾನಿಸಲಾದೀತು.

S Annayya Hegde,
President,
Panchayat Board Shirva.
Shirva 19—3—1958.

ವರದಿಗಳ ಪರಿಶೀಲನೆ

೧. ಕೆನರಾ ಬೇಂಕಿಂಗ್ ಕಾರ್ಪೊರೇಶನ್ — ದಕ್ಷಿಣ ಕನ್ನಡದ ಪ್ರಾಚೀನ ಬೇಂಕುಗಳಲ್ಲಿ ಒಂದು. ಇದು ಸ್ಥಾಪಿತವಾದಂದಿನಿಂದಲೂ ತನ್ನ ನಿಶ್ಚಿತ ಗುರಿಯನ್ನು ಸಾಧಿಸುತ್ತ ಬರುತ್ತಿದೆ. ಈ ಬೇಂಕಿನ ೧೯೫೭ರ ಸಾಲಮೂಲ ಹಾಗೂ ಆಯವ್ಯಯಗಳ ವರದಿಯನ್ನು ಪರಿಶೀಲಿಸುವಾಗ ಬೇಂಕಿನ ಅಭಿವೃದ್ಧಿಯು ಸೂಚಿತವಾಗುವುದು. ಬೇಂಕಿನ ಮೂಲಧನವು ೭.೫ ಕೋಟಿಯಷ್ಟಿದೆ. ತೆತ್ತ ಬಂಡವಳ ೨೦ ಲಕ್ಷವಿರುವಾಗ, ೧೯.೫ ಲಕ್ಷ ರೂಪಾಯಿಗಳ ಕ್ಷೇಮ ನಿಧಿಯಿರುತ್ತದೆ. ಇದು ಪಾಲುಗಾರರ ಹಾಗೂ ಠೇವಣಿದಾರರ ನಂಬುಗೆಯನ್ನು ಪಡೆಯಲು ಕಾರಣವಾಗಿದೆ. ಠೇವಣಾತಿಗಳು ಸುಮಾರು ೫.೮೫ ಕೋಟಿಯಿದ್ದು ಹಿಂದಿನ ವರ್ಷಕ್ಕಿಂತ ೭೦ ಲಕ್ಷದಷ್ಟು ಏರಿದೆ. ಬೇಂಕು ಹೊರಗೆ ಕೊಟ್ಟ ಒಟ್ಟು ಸಾಲ ೩.೪೩ ಕೋಟಿಗಳಲ್ಲಿ ೨.೭ ಕೋಟಿಗಳಷ್ಟು ಭದ್ರವಾದ ಭದ್ರತೆಗಳ ಮೇಲೆಯೇ ಕೊಡಲ್ಪಟ್ಟಿರುವುದು ಆಡಳಿತೆಯವರ ಮುಂಜಾಗ್ರತೆಯನ್ನು ಸೂಚಿಸುತ್ತದೆ. ವರದಿವರ್ಷದಲ್ಲಿ ಬೇಂಕು ಮೂರು ಹೊಸ ಶಾಖೆಗಳನ್ನು ತೆರೆದಿದ್ದು ಒಟ್ಟು ೪೯ ಶಾಖೆಗಳಿವೆ. ಸದ್ಯದಲ್ಲಿಯೇ ಮತ್ತೂ ನಾಲ್ಕು ಶಾಖೆಗಳನ್ನು ತೆರೆಯುವ ನಿರ್ಧಾರ ಮಾಡಿದೆ. ೧೯೫೬ರಲ್ಲಿದ್ದ ಒಟ್ಟು ಲಾಭಾಂಶ ರೂ. ೩.೫೧ ಲಕ್ಷವಾಗಿದ್ದರೆ ೫೭ರಲ್ಲಿದು ೩.೭೫ ಲಕ್ಷವಾಗಿದೆ. ವೆಚ್ಚದ ಬಾಬುಗಳು ಸಾಕಷ್ಟು ಮಿತವಾಗಿಯೇ ಇವೆಯೆನ್ನಬಹುದು. ಒದಗಿದ ಲಾಭಾಂಶದಲ್ಲಿ ೨೩ ಸಾವಿರ ರೂಪಾಯಿಗಳನ್ನು ಬೇಂಕಿನ ಸ್ಥಿರ ನೌಕರರಿಗೆ ಲಾಭಾಂಶ ಹಂಚಲು ತೆಗೆದಿರಿಸಿದ್ದು ಸಾಮಾನ್ಯ ಪಾಲುಗಾರರಿಗೆ ಒಟ್ಟು ಸೇಕಡಾ ಹತ್ತರಂತೆ (ಕರರಹಿತ) ಲಾಭಾಂಶವನ್ನು ಕೊಡಮಾಡಿದೆ. ಇವು ತೃಪ್ತಿಕರವಾಗಿಯೇ ಇವೆಯೆನ್ನಬಹುದು. ಕೆಲವು ವರ್ಷಗಳಿಂದಲೂ ಇದೇ ರೀತಿಯಲ್ಲಿ ಒಂದು ಮಿತ ಪ್ರಮಾಣದಲ್ಲಿ ಬೇಂಕು ಬೆಳೆದುಬರುತ್ತಿರುವುದು ಈ ವರ್ಷದಲ್ಲಿಯೂ ಸುವ್ಯಕ್ತಪಟ್ಟಿದೆ. ದೇಶದ ಜನತೆಯಲ್ಲಿ ಮಿತವ್ಯಯಾಸಕ್ತಿಯನ್ನು ಬೆಳೆಯಿಸುವಲ್ಲಿ ಪ್ರಮುಖಪಾತ್ರವಹಿಸುವ ಬೇಂಕುಗಳಲ್ಲಿ ಶೆಡ್ಯೂಲ್ಡ ಬೇಂಕಾದ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಎಂದಿಗೂ ಹಿಂದುಳಿಯಲಾರದೆಂದು ವರದಿ ದೃಢಪಡಿಸುತ್ತದೆ. ಬೇಂಕಿನ ಏಳಿಗೆಗೆ ಶ್ರಮಿಸುತ್ತಿರುವ ಅಧ್ಯಕ್ಷ ಡಾ. ಸುಂದರರಾವ ಪೈ, ಜನರಲ್ ಮೆನೇಜರ್ ಶ್ರೀ ವಿ. ಆರ್ ಕಾಮತ್ ಮತ್ತು ಆಡಳಿತೆ ಮಂಡಳಿಯವರನ್ನೂ ನಾವು ಮನಸಾ ಅಭಿನಂದಿಸಿ ಬೇಂಕು ಇನ್ನೂ ಬೆಳೆದು ಬರಲೆಂದು ಹಾರೈಸುತ್ತೇವೆ.

೨ ಪಾಂಗಾಳ ನಾಯಕ್ ಬೇಂಕಿನ ಸ್ಥಾಪನೆ ೧೯೨೦ರಲ್ಲಿ ಯಾಯಿತು. ಇದರ ೧೯೫೬ ಮತ್ತು ೫೭ರ ವರದಿ, ಆಯ ವ್ಯಯ ಸಾಲಮೂಲಗಳಲೆಕ್ಕವನ್ನು ಪರಿಶೀಲಿಸಿದ್ದೇವೆ. ಬೇಂಕು ವರದಿ ವರ್ಷದಲ್ಲಿ ಒಟ್ಟು ೧೨ ಶಾಖೆಗಳನ್ನು ಹೊಂದಿದ್ದು ಇವುಗಳಲ್ಲಿ ಹೆಚ್ಚಿನವು ಹಳ್ಳಿಗಳಲ್ಲಿಯೋ ಚಿಕ್ಕ ಪಟ್ಟಣಗಳಲ್ಲಿಯೋ ಇವೆ. ೨ ಲಕ್ಷ ರೂಪಾಯಿಗಳ ಪಾಲುಗಳನ್ನು ಹೆಚ್ಚಾಗಿ ಈ ವರ್ಷ ಒಟ್ಟು ಕೂಡಿಸಲಾಗಿದ್ದು ಒಟ್ಟು ತೆತ್ತ ಬಂಡವಳ ೩ ೯ಲ ಲಕ್ಷವಿದೆ, ಅಲ್ಲದೆ ಕಾದಿಟ್ಟ ನಿಧಿಯು ೧ ೩೨ ಲಕ್ಷ, ಒಟ್ಟು ಠೇವಣಾತಿ ೬೨ ೫೩ ಲಕ್ಷಗಳಷ್ಟಿದೆ. ಒಟ್ಟು ಮೂಲವು ಹಿಂದಿನ ವರ್ಷಕ್ಕಿಂತ ೯ ಲಕ್ಷದಷ್ಟು ಹೆಚ್ಚಾಗಿ ಹೆಚ್ಚು ಕಡಿಮೆ ೫೦ ಲಕ್ಷವನ್ನು ಮುಟ್ಟಿದೆ. ಹಳ್ಳಿಗಳಲ್ಲಿಯೇ ಇದ್ದು ಅಲ್ಲಿ ಬೇಂಕಿಂಗ್ ಅಭಿರುಚಿಯನ್ನು ಉಳಿತಾಯ ಯೋಜನೆಯನ್ನೂ ಬೆಳೆಯಿಸುವ ಈ ಬೇಂಕು ಈ ವರ್ಷ ೪೫ ಸಾವಿರ ರೂಪಾಯಿಗಳಷ್ಟು ಲಾಭ ಪಡೆದು ಸೇಕಡಾ ೫ರಂತೆ ಕರರಹಿತ ಡಿವಿಡೆಂಡು ಹಂಚಲು ನಿರ್ಧರಿಸಿದೆ. ಬೇಂಕಿನ ನಿಧಿಯಲ್ಲಿ ೭ ೭ ಲಕ್ಷದಷ್ಟು ಸರಕಾರಿ ಭದ್ರತಾ ಪತ್ರಗಳಲ್ಲಿಯೇ ತೊಡಗಿಸಲಾಗಿದೆ ಕೊಟ್ಟ ಸಾಲಗಳೆಲ್ಲವೂ ಕ್ಷೇಮಕರವೆಂದು ಕಂಡು ಬರುತ್ತದೆ. ಹೀಗೆ ಸಣ್ಣ ಮಟ್ಟನಲ್ಲಿ ಬೆಳೆದು ಬರುತ್ತಿರುವ ಬೇಂಕು ಹಿಂದಿನ ವರ್ಷಕ್ಕಿಂತ ತುಂಬ ಉತ್ತಮವೆನಿಸಿದ ಸಾಲಮೂಲಗಳನ್ನು ಪಡೆದಿದೆ ಎನ್ನಬಹುದು. ಮೂಲಗಳೆಲ್ಲವೂ ಭದ್ರವಾಗಿಯೇ ಇರುವುದು ವ್ಯಕ್ತವಾಗುತ್ತದೆ. ಮುಂದಿನ ವರ್ಷಗಳಲ್ಲಿ ಬೇಂಕಿಂಗ್ ಸೇವೆಯನ್ನು ಸಲ್ಲಿಸುತ್ತ ಇದಕ್ಕಿಂತಲೂ ಉತ್ತಮವಾದ ಲೆಖ್ಖಪತ್ರ–ವರದಿಗಳನ್ನು ಹೊರಡಿಸುವಂತಾಗಲೆಂದು ಬಯಸುತ್ತೇವೆ ಉತ್ತಮ ಆಡಳಿತೆಗೆ ಹೆಸರಾದ ಆಡಳಿತ ಮಂಡಳಿಯವರಿಗೂ ಜನರಲ್ ಮೆನೇಜರ್ ಶ್ರೀ ಕೆ. ಎಸ್ ಕಾಮತರು ಅಭಿನಂದನಾರ್ಹರು

ಮಂತ್ರಿಮಂಡಳದ ಪುನಾರಚನೆ

(೧ನೇ ಪುಟದಿಂದ)

ಆದರೆ, ಈಗ ಘೋಷಿಸಲಾದ ಮಂತ್ರಿಮಂಡಲದ ಪುನಾರಚನೆಯು ಹಿರಿತನಕ್ಕನುಸಾರವಾಗಿಯೇ ಇದೆಯಲ್ಲದೇ ಅವರನ್ನು ಹೊಸತಾಗಿ ಸೇರಿಸಿಕೊಳ್ಳಲಾದ ತಾರೀಕನ್ನೂ ಅವಲಂಬಿಸಿಕೊಂಡಿದೆ. ಅವರಿಗೆ ಅಂತಂತಹ ಪ್ರಮುಖ ಶಾಖೆಗಳನ್ನೇ ಕ್ರಮಾಗತವಾಗಿ ಒಪ್ಪಿಸಲಾಗಿದೆ. ಮೌಲಾನಾ ಅಜಾದರು ಸ್ವರ್ಗಂಬರವಾಸಿಗಳಾದುದರ ಪರಿಣಾಮವಾಗಿ ಪ್ರಧಾನಿ ಶ್ರೀ ನೆಹರೂರವರಿಗೆ ಗೃಹಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರೊಬ್ಬರೇ ಉಪನಾಯಕರಾಗಿ ಉಳಿದಿದ್ದಾರೆ ಆಗ ಸ್ವಾಭಾವಿಕವಾಗಿ ಶ್ರೀ ಮುರಾರ್ಜಿ ದೇಸಾಯಿಯವರು ಮೂರನೆಯವರಾಗಿ ಬರುತ್ತಾರೆ ಮತ್ತು ಕಾಂಗ್ರೆಸ್ ಸಂಸ್ಥೆಯಲ್ಲಿನ ಗೌರವ ಘನತೆಗಳ ಪರಿಣಾಮವಾಗಿ ಶ್ರೀ ಲಾಲ ಬಹಾದೂರ ಶಾಸ್ತ್ರಿಗಳು ನಾಲ್ಕನೆಯ ಸ್ಥಾನವನ್ನು ಗಳಿಸಲೇಬೇಕಾಗುತ್ತದೆ

ಕೇಂದ್ರ ಮಂತ್ರಿ ಮಂಡಳವು ಪುನಾರಚನೆಗೊಂಡನಂತರದ ಮಂತ್ರಿ ಮತ್ತು ಅವರಿಗೆ ಒಪ್ಪಿಸಲಾದ ಖಾತೆಗಳ ವಿವರವನ್ನು ಇದೇ ಸಂಚಿಕೆಯ ಬೇರೊಂದು ಪುಟದಲ್ಲಿ ಕೊಟ್ಟಿದ್ದೇವೆ. ಬೇರೆಬೇರೆ ಶಾಖೆಗಳ ಬೇಡಿಕೆಗಳ ಬಗ್ಗೆ ನಡೆಯಬೇಕಾದ ಚರ್ಚೆಯು ಲೋಕಸಭೆಯಲ್ಲಿ ಆರಂಭವಾಗುವುದಕ್ಕೆ ಮೊದಲೇ ಈ ಬದಲಾವಣೆಗಳು ನಡೆದಿವೆ. ಹೊಸತಾಗಿ ನೇಮಿತರಾದವರು. ಈ ಕೂಡಲೇ ತಂತಮ್ಮ ಅಧಿಕಾರವನ್ನು ಸ್ವೀಕರಿಸುವಂತಿಲ್ಲ. ಈಗ ತಮ್ಮ ಕಣ್ಣಿನ ಶಸ್ತ್ರ ಚಿಕಿತ್ಸೆಯಲ್ಲಿರುವ ರಾಷ್ಟ್ರಾಧ್ಯಕ್ಷ ಡಾ ರಾಜೇಂದ್ರ ಬಾಬುರವರು ಸಂಪೂರ್ಣ ಗುಣಮುಖರಾದ ಮೇಲೆಯೇ ಇವರ ಪ್ರತಿಜ್ಞಾವಿಧಿಯು ಜರಗಲಿರುವುದೆಂದು ತಿಳಿಸಬರುತ್ತದೆ.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಬೊಂಬಾಯಿ— ಮುಂಬಯಿಯಲ್ಲಿರುವ ಮೈಸೂರು ಪ್ರಾಂತ್ಯದ ಮೀನುಗಾರರ ಸಂಘ ಸಂಸ್ಥೆಗಳ ಪ್ರತಿನಿಧಿಗಳ ಪರಿಷತ್ತಿನ ಬಹಿರಂಗ ಅಧಿವೇಶನವು ಕಳೆದ ತಿಂಗಳ ತಾ 23 ರಲ್ಲು ಕೋಟೆಯೊಳಗಿನ ಬಜಾರ್‌ಗೇಟ್ ಹ್ಯಾಸ್ಮಾಲಿನ ಸಭಾಭವನದಲ್ಲಿ ಶ್ರೀ ದಾಸಪ್ಪ ಪುತ್ರನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡಬೇಕೆಂದಿರುವ ಸರಕಾರವು, ಬಂಡವಳಗಾರರನ್ನು ಈ ಉದ್ದಿಮೆಗೆ ಆಹ್ವಾನಿಸಿ, ಅವರಿಗೆ ಸರಕಾರದಿಂದ ಋಣದ ಸಹಾಯ ಮತ್ತು ರಕ್ಷಣೆ ಕೊಟ್ಟು ಅವರಿಂದಲೇ ಈ ಕೆಲಸವನ್ನು ಮಾಡಿಸಬೇಕೆಂದು ಮುಂಬಯಿಯಲ್ಲಿ ಕರೆಯಲಾದ ಕರಾವಳಿ ಪ್ರಾಂತ್ಯದ ಮೀನುಗಾರಿಕೆ ಖಾತೆಯ ಮಂತ್ರಿಗಳ ಸಮ್ಮೇಳನದಲ್ಲಿ ಎತ್ತಿಕೊಳ್ಳಲಾದ ಶಿಫಾರಸುಗಳು ಮೀನುಗಾರರ ಅಭಿವೃದ್ಧಿಗೆ ಧಕ್ಕೆ ತರುವಂತಹದ್ದಾಗಿವೆ ಎಂಬುದಾಗಿ ಸಕಾರಣಕೊಟ್ಟು ಠರಾವನ್ನು ಒಮ್ಮತದಿಂದ ಸ್ವೀಕರಿಸಲಾಯಿತು

ಸಭಿಕರ ಪೈಕಿ ಶ್ರೀಗಳಾದ ವೈ. ಬಿ. ಕುಂದರ್, ಎಮ್. ಪಿ. ತೋಳಾರ್. ಬಿ ಎಸ್. ಸಾಲ್ಯಾನ್ ಮತ್ತು ಕೆ. ಕೆ. ಸಾಲ್ಯಾನರು ಸರಕಾರದ ಧೋರಣೆಯ ವಿರೋಧ ವ್ಯಕ್ತಪಡಿಸಿ ಮಾತನಾಡಿದರು.

ಮುಂಬಯಿ ನೂತನ ಕರ್ನಾಟಕ ಸಂಘದ ಮೊದಲ ವಾರ್ಷಿಕೋತ್ಸವವು ತಾ. ೨ರಂದು ಪೀಪಲ್ಸ್ ಜಿನ್ನಾ ಭವನದಲ್ಲಿ ಶ್ರೀ ಕೃಷ್ಣ ಕುಮಾರ ಕಲ್ಲೂರರ ಅಧ್ಯಕ್ಷತೆಯಲ್ಲಿ ನೆರವೇರಿತು ಸಂಘದ ಅಧ್ಯಕ್ಷ ಶ್ರೀ ಪ್ರಭಾಕರ ಎ. ಸೆಟ್ಟರು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಮಿನೇಜಸರು ವರದಿ ಓದಿದರು ಬಹುಮಾನ ವಿತರಣೆ, ಅಧ್ಯಕ್ಷರ ಭಾಷಣಗಳಾದ ಮೇಲೆ ಯಕ್ಷಗಾನ ಕಾಲಕ್ಷೇಪ ನಡೆಯಿತು.

ಪೆರ್ಕಳ—ಉಡುಪಿ ಪೆರ್ಕಳ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಷ್ಟಬಂಧ ಬ್ರಹ್ಮಕಲಶಾಭಿಷೇಕವು ತಾ. 5ರಂದು ನಡೆಯಿತು. ಅಂದು ಸಂಜೆ ಅಥಮಾರು ಮಠಾಧೀಶರಿಗೆ ಪಾದಪೂಜೆ ಜರಗಿಸಲಾಯಿತು. ಬಳಿಕ ಜರಗಿದ ಸಭೆಯಲ್ಲಿ ಶ್ರೀ ಶ್ರೀಗಳವರು ಪ್ರವಚನಗೈದರು. ಶ್ರೀಗಳಾದ ಟಿ ಎ. ಪೈ ಮತ್ತು ಪಿ ಮಂಜುನಾಥ ಶ್ಯಾನುಭಾಗರು ಕಾಲೋಚಿತ ಮಾತುಗಳನ್ನಾಡಿದರು. ರಾತ್ರಿ ಉತ್ಸವಾದಿಗಳಾದುವು.

ಕಂಬಳಿ— ಮಾಯಿಪಾಡಿ ಸರಕಾರಿ ತರಬೇತು ಶಾಲೆಯ ವಾರ್ಷಿಕೋತ್ಸವವು ತಾ. 8ರಂದು ಕಾಸರಗೋಡು ಸರಕಾರಿ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ಎಸ್. ವಿ ಶೆಣ್ಯೆಯವರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯ ಶ್ರೀ ಕೆ ರಾಮಕೃಷ್ಣ ಸೆಟ್ಟರು ವರದಿಯನ್ನೋದಿದರು. ಶ್ರೀ ಎಚ್ ಅನಂತರಾಯರು ಸ್ವಸ್ತಿವಾಚನಗೈದರು. ಶಾಲಾ ಸಮಾಜದ ಮುಖ್ಯಮಂತ್ರಿ ಶ್ರೀ ಕೃಷ್ಣನಾಯಕರು ಉತ್ತರಿಸಿದರು.

ವೇಣೂರು—ಮೈಸೂರು ಮಹಾರಾಣಿ ಶ್ರೀಮತಿ ತ್ರಿಪುರ ಸುಂದರಮ್ಮಣಿಯವರು ತಾ 6ರಂದು ವೇಣೂರಿನ ವನಿತಾ ಸಮಾಜ ಶಿಕ್ಷಣ ಕೇಂದ್ರವನ್ನು ಸಂದರ್ಶಿಸಿದರು ಮಹಿಳಾ ಕೇಂದ್ರದ ಕಟ್ಟಡದ ಶಂಕುಸ್ಥಾಪನೆಗೈದರು. ಶ್ರೀ ಗೋಮಟೇಶ್ವರನ ಸಂದರ್ಶನ ಮಾಡಿ ಶ್ರೀ ಜೈನ ದಿಗಂಬರ ತೀರ್ಥಕ್ಷೇತ್ರ ಸಮಿತಿಯವರ ಸ್ವಾಗತ ಸ್ವೀಕರಿಸಿದರು.

ದೇಲಂಪಾಡಿ— ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 5ರಂದು "ಪಂಚಾಕ್ಷರೀ ಮಹಾತ್ಮೆ" ಎಂಬ ಕಥಾಭಾಗದ ನಾಟಕ ಪ್ರದರ್ಶನವು ಶ್ರೀ ಶೀರಿಕ್ಕಾಡು ಮಾಸ್ಟರ್ ವಿಷ್ಣು ಭಟ್ಟರ ನಿರ್ದೇಶನದಿಂದಲೂ ಶ್ರೀಗಳಾದ ಕೇಶವ ರಾವ್, ಕೀ. ವ. ಕೇಶವ, ಪಿ. ರಾಘವ ಪುಣಿಂಚತ್ತಾಯ, ಎಮ್. ರಾಧಾಕೃಷ್ಣ ರಾವ್, ಎಮ್. ಕೃಷ್ಣ ಭಟ್, ಅಣ್ಣಯ್ಯ ಭಂಡಾರಿ, ಯಕ್ಷಿ ಸಂಜೀವ, ಎಮ್. ನಾರಾಯಣ ರೈ, ಬಿ ಎ. ವಿನೋದ, ಬಿ. ಎ. ಪಾರಾಳಿ, ಬಾಬು ರೈ ಮೊದಲಾದವರ ಕೂಡುವಿಕೆಯಿಂದ ಯಶಸ್ವಿಯಾಗಿ ಜರಗಿತು.

ಮೂಲ್ಕಿ—ಸ್ಥಳೀಯ ಸರಕಾರಿ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ವಾರ್ಷಿಕ ಮಹಾಸಭೆಯು ತಾ. 9ರಲ್ಲು ಶ್ರೀ ಜಿ. ಎಸ್. ಮೂಲ್ಕಿಯವರ ಅಧ್ಯಕ್ಷತೆಯಲ್ಲಿ ಜರಗಿತು ಚಾಲ್ತಿ ವರ್ಷಕ್ಕೆ ಶ್ರೀಗಳಾದ ಎಮ್ ಆರ್. ಎಚ್. ಪೂಂಜ, ಅಧ್ಯಕ್ಷ; ವಿ. ದೇವದಾಸ ಕಾಮತ್, ಉಪಾಧ್ಯಕ್ಷ; ಯು. ಮನಮೋಹನರಾವ್, ಕಾರ್ಯದರ್ಶಿ; ಪಿ. ಆರ್. ಕಾಮತ್, ಉಪಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಮುದ್ರಾಡಿ ಸಿದ್ಧಯ್ಯ ಶೆಟ್ಟರ ನಿಧನ— ಸುಮಾರು 38 ವರ್ಷಕಾಲ ಆದರ್ಶ ಉಪಾಧ್ಯಾಯರಾಗಿಯೂ, ಬಡವರ ಬಂಧುವೂ ಆಗಿದ್ದ ಶ್ರೀ ಮುದ್ರಾಡಿ ಸಿದ್ದಯ್ಯ ಸೆಟ್ಟರು ತಮ್ಮ 61ನೆ ವಯಸ್ಸಿನಲ್ಲಿ ಇದೇ ತಾ 7ರಂದು ರಾತ್ರಿ ಮಣಿಪಾಲದಲ್ಲಿ ಸ್ವರ್ಗಸ್ಥರಾದರು ಅವರ ಮೃತ ಶರೀರವನ್ನು ಅವರ ಮನೆಯಾದ ಮುದ್ರಾಡಿ ಜೇಡಸಾಲೆ ಬೆಟ್ಟಿಗೆ ಕೊಂಡೊಯ್ದು ಅಲ್ಲಿ ಅಂದೇ ರಾತ್ರಿ ದಹನ ಕಾರ್ಯ ನಡೆಯಿತು ಶ್ರೀ ಸೆಟ್ಟರು ಸತತ ಖಾದಿಧಾರಿಗಳಾಗಿದ್ದು ಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳನ್ನು ಕಾರ್ಯರೂಪದಲ್ಲಿ ಆಚರಿಸುತ್ತಿದ್ದರು. ದಿವಂಗತರು ಮುದ್ರಾಡಿಯ ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು ಸರಳ ಜೀವಿ, ಮಿತಭಾಷಿಯಾಗಿದ್ದು ಜನಪ್ರಿಯರಾಗಿದ್ದರು. ಅವರ ಮೃತಾತ್ಮಕ್ಕೆ ಶಾಂತಿ ಕೋರಿ, ಅವರ ದುಃಖಿತ ಕುಟುಂಬಿಕರೊಂದಿಗೆ ಸಹೋದರ ಮುದ್ರಾಡಿ ಕೃಷ್ಣ ಶೆಟ್ಟರೊಂದಿಗೆ ಸಹಾನುಭಾವ ಪಡುವೆವು.

ಓದಿ ನಗಬಹುದು!

ಶಿಕ್ಷಕ— ರಾಮು, ನಿನ್ನ ತಾಯಿ ನಿನಗೆ ಎಂಟಾಣೆ ಮತ್ತು ನಿನ್ನ ತಮ್ಮನಿಗೆ ಒಂದು ರೂಪಾಯಿ ಕೊಟ್ಟರೆ, ಆಗ ಏನು ಮಾಡುವಿರಿ?

ರಾಮು—ಬಹಳ ದೊಡ್ಡ ಜಗಳ ಸಾರ್

೦೦ ೦೦

ಶಿಕ್ಷಕ— ೧೯ನೇ ಶತಮಾನದ ವೈಜ್ಞಾನಿಕರ ವಿಷಯದಲ್ಲಿ ನಿನಗೇನು ತಿಳಿದಿದೆ, ಮೋಹನ?

ಮೋಹನ— ಅವರೆಲ್ಲರೂ ಸತ್ತು ಹೋಗಿದ್ದಾರೆ

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು
ಟ್ರೇಡ್ ಮಾರ್ಕ್



ಪಂ|| A. R ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತವೆ.

ದಂಪತಿಗಳಾಗಿ 10-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P.) ಸ್ಟಾಂಪು ಕಳಿಸಿರಿ. ಕಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ. (ನ ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ರ‍್ಯಾಸ್, ಮೈಸೂರು-1 (S.I.)

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊರಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟರ್ ಮಾತ್ರ ಎಲ್ಲಾ ತರದ ಫಾರ್ಮುಗಳು, ಕುರಿಘಾತು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲನೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ
ನವಯುಗ ಪ್ರೆಸ್, ಉಡುಪಿ

ನಮ್ಮ ನೆರೆಯ ಭೂತಾನ

(೧ನೇ ಪುಟದಿಂದ)

ವಾಗುವುದು. ಆದರೆ, ಹುಡುಗಿಯರನ್ನು ಪತಿಯಾಗುವವನು ಮನೆಗೆ ತೆಗೆದುಕೊಂಡು ಹೋಗಿ ಅಲ್ಲಿ ಮದುವೆಯಾಗುತ್ತಾನೆ.

ಭೂತಾನಿನ ಒಟ್ಟು ಕ್ಷೇತ್ರಫಲ ೧೮ ಸಾವಿರ ವರ್ಗ ಮೈಲಿಗಳು; ಜನಸಂಖ್ಯೆ ಕೇವಲ ಆರು ಲಕ್ಷ. ಶಿಕ್ಷಣ ಮತ್ತು ಆರೋಗ್ಯ ದೃಷ್ಟಿಯಲ್ಲಿ ಈ ರಾಜ್ಯವು ತನ್ನ ಎಲ್ಲ ನೆರೆ ರಾಜ್ಯಗಳಿಗಿಂತ ಬಹಳ ಹಿಂದುಳಿದಿದೆ. ಅಖಂಡ ರಾಜ್ಯದಲ್ಲಿ ಶಾಲೆಗಳು ಐವತ್ತೂ ಇಲ್ಲ. ಚಿಕಿತ್ಸಾಲಯಗಳು ಬೆರಳೆಣಿಕೆಯಷ್ಟು!

ಇಲ್ಲಿ ಅಪರಾಧಗಳು ಬಹಳ ಕಡಿಮೆಯಾಗಿವೆ. ಕಳ್ಳತನ ಮತ್ತು ವಂಚನೆಗಳು ಅಪರೂಪವಾಗಿವೆ. ಖೂನಿ ಯಾ ಕೊಲೆಯ ಅಪರಾಧದಲ್ಲಿ ದೋಷಿಗೆ ಮರಣ ದಂಡನೆಯೊಯ್ಯುವ ಅಧಿಕಾರವಿಲ್ಲ. ನ್ಯಾಯಾಲಯವು ಈ ಸಂಬಂಧದಲ್ಲಿ ತನ್ನ ಅಭಿಪ್ರಾಯವನ್ನಷ್ಟೆ ತಿಳಿಸಬಹುದು.

ಈಗ ಇಲ್ಲಿನ ರಾಜ್ಯಕಾರ್ಯವನ್ನು ಮಹಾರಾಜ ಜಿಗಮೆ ದೋರಜೆ ವಾಂಗಚುಂಗರು ನೋಡುತ್ತಿದ್ದಾರೆ. ಅವರ ಮಂತ್ರಿಮಂಡಲದಲ್ಲಿ ಭೂತಾನಿನ ಮಹಾ ಮಹಾ ಧರ್ಮಗುರುಗಳು ಮತ್ತು ಮಾನವಾರ್ಹರೆನಿಸಿದ ಜನರು ಇದ್ದಾರೆ.

೧೯೪೯ರಲ್ಲಿ ಭಾರತದೊಡನೆ ಭೂತಾನವೊಂದು ಸಂಧಿಯನ್ನು ಮಾಡಿಕೊಂಡಿತ್ತು. ಇದು ಅದಕ್ಕೆ ಅತ್ಯಂತಾವಶ್ಯಕವಾಗಿತ್ತು. ಆಂತರಿಕ ವಿಷಯಗಳನ್ನುಳಿದು ವಿದೇಶ ಸಂಬಂಧದಲ್ಲಿ ಸಹಾಯ ಮತ್ತು ಸಂರಕ್ಷಣೆಗಳನ್ನೀಯುವ ವಚನವನ್ನು ಭಾರತ ಸರಕಾರವು ಕೊಟ್ಟಿದೆ. ಹಿಂದಿಗಿಂತಲೂ ಭೂತಾನವು ಪ್ರಗತಿ ಹೊಂದುವ ಸಂಭವವು ಇದೀಗ ತೋರುತ್ತಿದೆ.

ಭಾರತ-ಭೂತಾನಗಳ ಸ್ನೇಹವು ಎರಡು ದೇಶಗಳಿಗೂ ಹಿತಕರವಾಗಿರುವುದೆಂಬುದು ಸಿದ್ಧವಾಗುವುದು. ಭೂತಾನವು ಅನ್ಯದೇಶೀಯ ಸಹಾಯವನ್ನು ಪಡೆಯದಿದ್ದರೂ ಭಾರತದ ನೆರವಿನಿಂದ ಪ್ರಗತಿ ಪಡೆಯುವುದು ಮತ್ತು ಯುದ್ಧ ಮಹತ್ವದ ದೃಷ್ಟಿಯಿಂದ ಒಂದು ಇನ್ನೊಂದರ ಪ್ರಹರಿಯ ಕಾರ್ಯವನ್ನೂ ಮಾಡುವುದು. ಹೀಗಾಗಿ ಉಭಯ ರಾಷ್ಟ್ರಗಳಿಗೂ ಇದು ಕ್ಷೇಮಂಕರವಾಗಿ ಪರಿಣಮಿಸಿದೆ.

(ಮೂಲ: ವಿಶ್ವನಾಥ ಮುಖರ್ಜಿ)

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ನೋವುಗಳ ಅತ್ಯುತ್ತಮ ಸಂಹಾರಿಣಿ

ಅಮೃತಾಂಜನ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸಮ್ಮಿಲನ—(ಸಾಮಾಜಿಕ ಕಾದಂಬರಿ) ಲೇಖಕರು—ಬಿ. ಕೆ. ಸುಬ್ಬರಾವ್. ಪ್ರಕಾಶಕರು: ಎಸ್. ಎಸ್. ಎನ್ ಬುಕ್ ಡಿಪೋ; ಶ್ರೀಕೃಷ್ಣ ರಾಜೇಂದ್ರ ಮಾರ್ಕೆಟ್, ಬೆಂಗಳೂರು—೨. ಪುಟಗಳು: ೧೩೮. ಬೆಲೆ: ರೂ. ೧—೮—೦.

ರಂಗರಾಜರು ತಮ್ಮ ಮಗ ವಿಜಯನಾಥನನ್ನು ಆತನ ನಾಲ್ಕನೆಯ ವರ್ಷ ಪ್ರಾಯದಲ್ಲಿಯೇ ಕಳೆದುಕೊಂಡು ಮಿತ್ರ ಬಾಲಚಂದ್ರ ಘೋಷರು ತಮ್ಮ ಕಷ್ಟಕಾಲದಲ್ಲಿ ಕಾಡಿನಲ್ಲಿ ತೊರೆದುಹೋದ ಆರು ತಿಂಗಳ ಕೂಸಿಗೆ ದಿನಾನಾಥನೆಂದು ನಾಮಕರಣ ಮಾಡಿದರು. ರಂಗರಾಜರು ತಮಗೆ ದೊರೆತ ಅನಾಥ ಹುಡುಗನ ಉತ್ಕರ್ಷಕ್ಕಾಗಿ ಶ್ರಮಿಸಿದರು. ವಿಜಯನಾಥನು ಮೋಹನ ಚಟರ್ಜಿ ಮತ್ತು ಹೆಗ್ಗಡೆಯರ ನೇತೃತ್ವದಲ್ಲಿ ಬೆಳೆದು ಬಂದನಲ್ಲದೆ ಅಪಾರ ಸಂಪತ್ತಿನ ಒಡೆಯನೂ ಆದನು. ಆದರೆ, ಅವರೆಲ್ಲರನ್ನೂ ತಮ್ಮ ಹೆತ್ತವರಿಂದ ಅಗಲಿಸಿದ ವಕ್ರವಿಧಿ ಮುಂದೆ ಅವರಿಗೆ ಅನುಕೂಲವಾಗಿ ಪರಿಣಮಿಸಿತು.—ಹಾಗಾಗಿ ಅವರೆಲ್ಲರ ಸಮ್ಮಿಲನವಾಯಿತು. ರಂಗರಾಜರ ಊರು ಸಾರನಗರದಲ್ಲಿ ಒಂದು ಬಟ್ಟೆಯ ಗಿರಣಿಯನ್ನು ತೆರೆದು ಅವರೆಲ್ಲರೂ ಜನತೆಗೆ ಉಪಕಾರ ಮಾಡುವರು. ಎಲ್ಲರ ಸಮ್ಮಿಲನದಿಂದಾಗಿ ದೇಶದ ಜನತೆಗೆ ಬೇಕಾದ ಅರಿವೆ ದೊರೆಯಂತಾಯಿತು. ಈ ಗಿರಣಿಗೆ ಹಾಗೂ ವಿಜಯನಾಥನ ಉತ್ಕರ್ಷಕ್ಕೆ ದುಡಿದ ಹೆಗ್ಗಡೆಯು ಮಾತ್ರ ಕಾಲಹೊಂದಿದರು. ಅವರ ಸ್ಮಾರಕವು ಚಿರಸ್ಥಾಯಿಯಾಗಿ ದೀನ ಬಂಧು ಗಿರಣಿಯ ಮುಂದುಗಡೆ ನಿಂತಿತು.

ಇದು ಕಾದಂಬರಿಯ ಸಂಕ್ಷಿಪ್ತ ಕಥೆ. ಈ ಪುಸ್ತಕವನ್ನು ಕಥೆ ಎನ್ನುವುದಕ್ಕಿಂತಲೂ ವಿಲಕ್ಷಣ ಘಟನೆಗಳ ಮಾಲೆ ಎನ್ನಬಹುದು. ಆದಿಯಿಂದ ಅಂತ್ಯದವರೆಗೂ ಒಂದಲ್ಲೊಂದು ಅನಿರೀಕ್ಷಿತ ಘಟನೆಗಳು ಅರಿವಿಲ್ಲದಂತೆಯೇ ಬಂದು, ಓದುಗರ ಲಕ್ಷ್ಯವನ್ನು ಒಂದುಬಾರಿ ಅಪಹರಿಸುವಂತೆ ಮಾಡಿಬಿಟ್ಟು ತನ್ನೊಡನೆ ಎಲ್ಲೆಲ್ಲಿಗೋ ಒಯ್ದುಬಿಡುತ್ತವೆ. ಮಾನವನ ಜೀವನದಲ್ಲಿ ದಿನನಿತ್ಯವೆಂಬಂತೆ ನಮಗರಿವಿಲ್ಲದಂತೆ ಅದೆಷ್ಟೊ ಪ್ರಸಂಗಗಳು ಮುಂದೆ ಬರುತ್ತವೆ—ಕಳೆದು ಹೋಗುತ್ತವೆ. ಇವೆಲ್ಲವನ್ನೂ ದೈವಲೀಲೆ ಎನ್ನುವವರೂ ಇದ್ದಾರೆ. ಹಾಗನ್ನುವವರ ದೃಷ್ಟಿಯಿಂದ, ಈ ಕಾದಂಬರಿಯು ದೈವವು ಕಾಡಲೂ ಉಡಲೂ ಸಮರ್ಥನೆಂಬುದನ್ನು ವ್ಯಕ್ತಪಡಿಸುತ್ತದೆ.

ಈ ಕಾದಂಬರಿಯು ಸಣ್ಣದಾದರೂ ಇದರಲ್ಲಿ ಇಣಿಕಿನೋಡುವ ವ್ಯಕ್ತಿಗಳು ನೂರಾರು. ಆವಶ್ಯಕವಾಗಿಯೋ ಅನಾವಶ್ಯಕವಾಗಿಯೋ ಅವರೆಲ್ಲರೂ ಕಥಾಭಾಗದಲ್ಲಿ ಭಾಗವಹಿಸುತ್ತಾರೆ. ಶ್ರೀ ಸುಬ್ಬರಾಯರ ತಡೆಯಿಲ್ಲದ ಲೇಖನಿಯು ತೀವ್ರವಾಗಿ ಗಮನಿಸಿದೆ. ವಾಸ್ತವತೆಗಿಂತ ದೂರವುಳಿದಿದೆ ಎನ್ನುವುದು ಸತ್ಯವಾದರೂ ಸಮ್ಮಿಲನವನ್ನು ಯಶಸ್ವಿಯಾಗಿ ಮುಗಿಸಿದ್ದಾರೆ. ಘಟನಾ ಪ್ರಧಾನವಾದ ಈ ಕಾದಂಬರಿ ಹಳೆಯ ಕಥಾವಸ್ತುವಿನಂತಿದೆ ಎಂದರೆ, ಇಂದಿನ ಆಧುನಿಕ ಕಾದಂಬರಿಗಳಲ್ಲಿ ವಾಸ್ತವ ಚಿತ್ರಣ ಪಾತ್ರ ಪೋಷಣೆಗಳೇ ಅಗತ್ಯವಾಗಿವೆ. ಆದರೆ, ಇವೆರಡರಿಂದಲೂ ದೂರವಾಗಿ ಉಳಿದ "ಸಮ್ಮಿಲನ"ದ ಶೈಲಿಯೂ ವಸ್ತುವಿನಷ್ಟೇ ಹಳೆಯದಾಗಿದೆ. ತಂತ್ರ, ಘಟನೆ, ಕಲ್ಪನೆ ಎಲ್ಲವೂ ಅದೇ ಕಾಲದವು. ಶ್ರೀ ಸುಬ್ಬರಾಯರ ಕಾದಂಬರಿ ಚಿಕ್ಕದಾಗಿದ್ದು ನೂರಾರು ಘಟನೆಗಳು ಸೇರಿಲ್ಪಟ್ಟಿವೆ. ಇಲ್ಲಿ ತಮ್ಮ ಜಾಣ್ಮೆಯನ್ನು ಪ್ರದರ್ಶಿಸಿದ್ದಾರೆ. ಅಚ್ಚಿನ ಹಲವಾರು ದೋಷಗಳನ್ನು ಬಿಟ್ಟರೆ, ಇದೊಂದು ಓದಿ ಮೆಚ್ಚಬಹುದಾದ ಕಾದಂಬರಿಯೆನ್ನಲಡ್ಡಿಯಿಲ್ಲ. ಈ ಗ್ರಂಥಕ್ಕೆ ಶ್ರೀ ಸಿ. ಎಚ್. ಪ್ರಹ್ಲಾದರಾಯರು ಮುನ್ನುಡಿ ಬರೆದು ಇದನ್ನು ರೋಮನ್ಸ್, ಮೆಲೊಡ್ರಾಮ ಜಾತಿಗೆ ಸೇರಿಸಿಬಿಟ್ಟಿದ್ದಾರೆ. ಇದನ್ನು ನಾವೂ ಅನುಮೋದಿಸುತ್ತೇವೆ.

ಜನಪದ ಪ್ರೇಮ ಗೀತೆಗಳು — ಆರಿಸಿದವರು: ಕ. ರಾ. ಕೃ. ಪ್ರಕಾಶಕರು: ಕಾವ್ಯೋದಯ ಪ್ರಕಾಶನ, ವಿದ್ಯಾಶ್ರಮ, ಸರಸ್ವತೀ ಪುರಂ, ಮೈಸೂರು. ಪುಟಗಳು ೬೪ ಬೆಲೆ: ರೂ. ೦—೭೫

"ಜೇನ ಹನಿಗಳು' ಎಂಬ ಜನಪದಸಾಹಿತ್ಯ ತುಂತುರುಗಳನ್ನು ಸಂಗ್ರಹಿಸಿ, ಕನ್ನಡಿಗರಿಗಿತ್ತ ಶ್ರೀ ಕ. ರಾ. ಕೃ. ರವರು ಜನಪದ ಸಾಹಿತ್ಯದಲ್ಲಿ ತುಂಬಿತುಳುಕಾಡುತ್ತಿರುವ ಪ್ರೇಮ ಗೀತೆಗಳನ್ನು ಒಂದೆಡೆ ಸೇರಿಸಿ ಕೊಟ್ಟಿದ್ದಾರೆ. ಹಳ್ಳಿಗರು ಸ್ವಭಾವತಃ ಪ್ರೇಮಜೀವನ ಬಾಳುವವರು. ಅವರಲ್ಲಿ ಕೃತಕತೆ ಎನ್ನುವುದೇ ಇಲ್ಲ. ಆಗಾಗ, ಗೀತೆಗಳನ್ನು ಹಾಡುತ್ತ ತಮ್ಮ ಬಾಳಿಗೊಂದು ಚೇತನವನ್ನು ತುಂಬಿಕೊಳ್ಳುತ್ತಾರೆ. ಆನಂದ, ಆಮೋದ, ಆಹ್ಲಾದಗಳ ತ್ರಿವೇಣೀಸಂಗಮದಲ್ಲಿ ತಮಗರಿವಿಲ್ಲದಂತೆಯೇ ಕೆಲವೊಂದು ಸೊಲ್ಲುಗಳು ಬಾಯ್ದೆರೆಯಿಂದ ಬಾಹ್ಯ ಪ್ರಪಂಚಕ್ಕೆ ಬರುತ್ತಿರುವುದನ್ನು ನಾವು ನೋಡುತ್ತೇವೆ. ಇವನ್ನೇ ಎರಡು ನೂರು ಬಾರಿಯಾಡುವಷ್ಟರಲ್ಲಿಯೇ ಅವು ಹೃದ್ಗತವಾಗಿ ಕಂಠ ಪಾಠವಾಗಿ ಹೋಗುತ್ತವೆ. ಅನುಕರಣೆಯಿಂದ ಅದು ಪರರ ನಾಲಿಗೆಗಳಲ್ಲೂ ಕುಣಿದಾಡುತ್ತವೆ.

ಇಂತಹ ಪದಗಳು—ಮುಖ್ಯವಾಗಿ ಪ್ರೇಮ ಗೀತೆಗಳು ನಮ್ಮ ಜನಪದದ ಜನತೆಯಲ್ಲಿ ನೆಲೆಯಾಗಿವೆ. ಅವನ್ನು ಸಂಗ್ರಹಿಸುವುದೆಂದರೆ ಪ್ರಯಾಸ. ಶ್ರೀ ಕ. ರಾ. ಕೃ. ರವರು ಅಸಾಧ್ಯ ಶ್ರಮವನ್ನು ವಹಿಸಿ ಇಂತಹ ೨೯ ಪದಗಳನ್ನು ಕಲೆಹಾಕಿದ್ದಾರೆ. ಅವರೇ ಹೇಳುವಂತೆ ಇವುಗಳಲ್ಲಿ ಕೆಲವೊಂದು ಅಪೂರ್ಣವಾಗಿರುವಂತೆ ಭಾಸವಾಗುತ್ತವೆ ಎಂದು ಹೇಳಬಹುದು. ಬಿಡುಬಿಡು ಎನ್ನ ಸೆರಗ, ನಿಲ್ಲುನಿಲ್ಲಯ್ಯ ರಾಜ, ನನ್ನ ಗ್ಯಾನ ಬಿಟ್ಟಿಲ್ಲಾ ನಿನಮೇಲೆ, ತವರೂರ ಹಾದಿ ನಮಗೇನೆ, ನಿಮ್ಮನೇಲಿ ನಾನು ಸುಖಪಡಲಿಲ್ಲ, ಹನ್ನೆರಡು ಕೋಟಿ ಹರಿಯಾಲೀ ಮಲ್ಲಿಗಿಹೂವು ಮೊಗ್ಗರಳಿ ಬಾಯ ಬಿಡುತೈತೆ ಮೊದಲಾದ ಪದಗಳು ಉತ್ತಮವಾಗಿವೆ.

ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಅತ್ಯಂತ ಘನವಾದ ಈ ಪದಗಳನ್ನು ಓದುವಾಗ ಆನಂದವಾಗುತ್ತದೆ. ಸಂತೋಷದಿಂದ ನಲಿದಾಡುತ್ತಿರುವಾಗ, ರಾಗವಾಗಿ ಹಾಡಲು ಯೋಗ್ಯವಾಗಿಯೇ ಇವೆ.

ರಾಮಗಿರಿ ಹೆಡ್ಡೆ ರಾಯರಾಡೊ ಚೆಂಡೆ
ದೀಡಿಲ್ಯಾಕೆ ನಿಂತೆ ಚೆಲೆ ಹೆಣ್ಣೆ | ನಿನಕಂಡು
ಶ್ಯಾನುಭೋಗ ಲೆಖ್ಖ ಮರೆತಾನೋ ||
ಕಪ್ಪು ಹೆಣ್ಣೆಂದು ನೀ ದೂರೆ ಬೇಡಾ
ಕಪ್ಪು ನೇರಳೆ ಸಿಹಿಯುಂಟು | ಅಣ್ಣಯ್ಯ
ಕಪ್ಪು ಕಸ್ತೂರಿ ಕಳೆಯುಂಟು ||

ಎಂಬ ಮುಂತಾದ ಪದ್ಯಗಳು ಯಾವ ಕಾವ್ಯದಲ್ಲಿ ಬರುವ ಪದ್ಯಗಳಿಗೇನೂ ಕಡಿಮೆಯಿಲ್ಲ. ಶ್ರೀ ಕ. ರಾ. ಕೃ. ರವರ ಶ್ರಮಕ್ಕೆ ತಕ್ಕ ಪ್ರೋತ್ಸಾಹವು ಅವಶ್ಯ ದೊರೆಯಬೇಕು. ಇನ್ನೂ ಹೆಚ್ಚಿನ ಪದಸಂಗ್ರಹದಲ್ಲಿ ಆಸಕ್ತಿ ವಹಿಸುವಂತೆ ಉತ್ತೇಜಿಸಬೇಕು.

ನೂತನ ಕರ್ನಾಟಕ ಸಂಘ, ಮುಂಬಯಿ ೭.—ಈ ಸಂಘದ ಪ್ರಥಮ ವಾರ್ಷಿಕ ವರದಿ (೧೯೫೭) ನಮ್ಮ ಕೈಸೇರಿದೆ. ಕನ್ನಡ ನುಡಿಯ ಮೇಲ್ಮೆ, ಕನ್ನಡ ಸಾಹಿತ್ಯ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿರುವ ಈ ಸಂಘವು ಪುಸ್ತಕ ಭಂಡಾರವೊಂದನ್ನು ನಡೆಸುತ್ತಿದೆ. ಗ್ರಂಥ ಪ್ರಕಾಶನ, ಪತ್ರಿಕಾ ಪ್ರಕಾಶನಗಳನ್ನೂ ಮಾಡುವ ಆಕಾಂಕ್ಷೆಯನ್ನೂ ಹೊಂದಿದೆ. ಭಂಡಾರದ ಪುಸ್ತಕಗಳನ್ನು ಮನೆಮನೆಗೂ ಹಂಚುವರೆ ವಿಶೇಷ ವ್ಯವಸ್ಥೆಯನ್ನು ಮಾಡಿದೆ. ವಾಚನಾಲಯವೊಂದನ್ನು ನಡೆಸಿಕೊಂಡು ಬರುತ್ತದೆ. ಸಂಘವು ಇನ್ನೂ ಅಭಿವೃದ್ಧಿಯಾಗಬೇಕೆಂದು ಹಾರೈಸುತ್ತೇವೆ.

— ಗೋರಾ.

ಒಂದೇ ಕಲ್ಲಿನಲ್ಲಿ ಎರಡು ಹಣ್ಣುಗಳು!

ಮೊದಲನೆಯದಾಗಿ, ಬೇಂಕುಗಳಲ್ಲಿರುವ ನಿಮ್ಮ ಉಳಿತಾಯಗಳು, ಬೇಂಕುಗಳು ಪ್ರತಿಫಲವಾಗಿ ಕೊಡುವ ಆಕರ್ಷಕ ಬಡ್ಡಿ ಕೂಡಿ ವೃದ್ಧಿಗೊಂಡು, ನಿಮಗೆ ಬೇಕೆನಿಸಿದಾಗ ನಿಮಗೆ ಹಿಂದಕ್ಕೆ ಸಿಗುವುವು; ಎರಡನೆಯದಾಗಿ, ನಿಮ್ಮಂಥ ದೂರದರ್ಶಿ ಹಾಗೂ ಜೀವನದಲ್ಲಿ ಜಾಗರೂಕತೆಯಿಂದ ಮುಂದಡಿಯಿಡುವ ವ್ಯವಹಾರ ಚತುರರ ಉಳಿತಾಯಗಳನ್ನೆಲ್ಲಾ ಕ್ರೋಢೀಕರಿಸಿ, ಬೇಂಕುಗಳು ನಮ್ಮೆಲ್ಲರ ಪ್ರೀತಿಯ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿ ಯೋಜನೆಗಳಿಗೆಲ್ಲಾ ಬಹುವಾಗಿ ಸಹಾಯ ಮಾಡುವುವು!

ಇಂದೇ ಒಂದು ಚಿಕ್ಕ ಉಳಿತಾಯ ಖಾತೆಯನ್ನು ನಮ್ಮ ಬೇಂಕಿನ ಯಾವುದೇ ಒಂದು ಶಾಖೆಯಲ್ಲಿ ತೆರೆಯಿರಿ!!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ಸ್ಥಾಪನೆ: 1906)

ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

ಉಡುಪಿ ಕಿರಿಯರ ಪ್ರಪಂಚದ ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	4
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ನೇಪಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	1	12
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜನಿವಾರದ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ಪ್ರತಿಗಳಿಗೆ ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ವಿಚಾರಿಸಿರಿ.
ಇಲ್ಲವೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿನಿಮಯದ ಮಾಧ್ಯಮ

(೩ನೇ ಪುಟದಿಂದ)

ಅತಿ ಮೌಲ್ಯವುಳ್ಳದ್ದಾಗುತ್ತದೆ. ಈ ದೃಷ್ಟಿಯಿಂದ ಹಣಕ್ಕೆ ವಿಶೇಷ ಮಹತ್ವವಿರದೆ ಅನುಭೋಗಿಸುವ ವ್ಯಕ್ತಿಗಳಿಗೇ ವಿಶೇಷ ಮಹತ್ವವಿರುತ್ತದೆ. ಈ ದೃಷ್ಟಿಯಿಂದಲೇ ಮನುಷ್ಯ ಅನುಭೋಗಿಸುವ ಪದಾರ್ಥಗಳಿಗೆ ಕೊಡುವಷ್ಟು ಬೆಲೆಯನ್ನು ಹಣಕ್ಕೂ ಕೊಡಲಾರ. ಆದರೆ ಹಣವು ವಿನಿಮಯದ ಮಾಧ್ಯಮವಾದುದರಿಂದ, ಅದರಿಂದಲೇ ಬೇಕಾದ ಪದಾರ್ಥಗಳು ಯಾವ ಕಾಲಕ್ಕೂ ದೊರೆಯುವುದರಿಂದ ನಾವು ಅದನ್ನೇ ಅವಲಂಬಿಸಬೇಕಾಗಿದೆ. ಆದರೆ ಈ ಮಾಧ್ಯಮದಿಂದ ನಮ್ಮ ಜನತೆಯ ಮೇಲೆ ಆದ ಪರಿಣಾಮಗಳೇನು? ಎಂಬುದನ್ನರಿತುಕೊಳ್ಳುವುದು ಕುತೂಹಲಕಾರಿಯಾಗಿದೆ.

ಪದಾರ್ಥಗಳೇ ಮನುಷ್ಯನ ಜೀವನದ ಆವಶ್ಯಕ ಸರಕುಗಳಾದುದರಿಂದ ಅವುಗಳ ಬೆಲೆಗಳಲ್ಲಿ ಏರಿಳಿತಗಳಾಗುವುದು ಸ್ವಾಭಾವಿಕವಾಗಿದೆ. ಪದಾರ್ಥಗಳು ಹೊಸದಾಗಿ ಹುಟ್ಟಿ ಆದೇ ತಾನೇ ಪೇಟೆಗೆ ಬರತೊಡಗಿತೆಂದರೆ ಅವುಗಳ ದರಗಳಲ್ಲಿ ಬೆಲೆ ಕಡಿಮೆಯಾಗುತ್ತದೆ; ಅವುಗಳ ಕಾಲ ಮುಗಿಯಿತೆಂದರೆ ದರಗಳು ಏರಲಾರಂಭಿಸುತ್ತವೆ; ಇದಕ್ಕೆ ಉತ್ತಮ ಉದಾಹರಣೆಯೆಂದರೆ ಸುಗ್ಗಿಯ ಸಮಯವನ್ನು ಹೇಳಬಹುದು. ಸುಗ್ಗಿಯ ಕಾಲಕ್ಕೆ ದರಗಳು ಇಳಿದು ಆ ಕಾಲ ಮುಗಿದು ಮರುಸುಗ್ಗಿ ಬರುವವರೆಗೂ ಬೆಲೆಗಳು ಏರಿಕೆಯ ಸ್ಥಿತಿಯಲ್ಲಿರುವವೆಂಬುದನ್ನು ನಾವು ನೋಡಬಹುದಾಗಿದೆ. ಈ ಏರಿಳಿತದ ಪರಿಣಾಮವಾಗಿಯೇ ಬದಲಾವಣೆ ಹೊಂದುವ ಸರಕುಗಳು ಹಣದ ಬೆಲೆಯಲ್ಲಿ ಬದಲಾವಣೆಗಳನ್ನು ಮಾಡುತ್ತವೆ. ಈ ಹಣವು ಇಂದಿನ ಸರಕುಗಳ ವಿನಿಮಯದ ಮಾಧ್ಯಮವಾಗಿರುವುದರಿಂದಲೇ ಸರಕುಗಳ ವೆಚ್ಚದಲ್ಲಿ ಮನುಷ್ಯ ನೊಂದುಹೋಗಿದ್ದಾನೆ. ಪುರಾತನ ಕಾಲದಲ್ಲಿ ಅವಶ್ಯಕ ಸರಕುಗಳ ಪ್ರತ್ಯಕ್ಷ ಬದಲಾವಣೆಯು ಯಾವ ಮಾಧ್ಯಮಗಳ ಸಹಾಯವೂ ಇಲ್ಲದೆ ಸುಲಭವಾಗಿ ನಡೆದುಹೋಗುತ್ತಿದ್ದುದರಿಂದ ವಿಶೇಷ ತೊಂದರೆಯೂ ಆಗುತ್ತಿರಲಿಲ್ಲ; ವೆಚ್ಚದಾಯಕವೂ ಆಗುತ್ತಿರಲಿಲ್ಲ. ಆದರೆ ಇಂದು ಸರಕುಗಳ ವರ್ಗಾವಣೆಗೆ ಹಣವು ಮಾಧ್ಯಮವಾಗಿರುವುದರಿಂದ ಆ ಎರಡು ಸಂಕಗಳನ್ನು ಬದಲಾವಣೆ ಮಾಡಬೇಕಾದರೆ ಎರಡು ಕಡೆಗೆ ನಾವು ಹೊರಳಿ ನೋಡಬೇಕಾಗುತ್ತದೆ ಆದರೆ ಹಣವು ಇಂದಿನ ಜೀವನದಲ್ಲಿ ಮಹತ್ವದ ಅಂಶವಾಗಿದ್ದು ಅದಕ್ಕೆ ಯಾವ ಸುಗ್ಗಿಯ ಸುಳುವಾಗಲೀ ಇಲ್ಲವೇ ಇಂತಹ ಸಂದರ್ಭಗಳ ಅರಿವಾಗಲೀ ಇರುವುದಿಲ್ಲ. ಇದರಿಂದ ಜನತೆಯು ಹಣವನ್ನು ಕೇವಲ ಸೌಲ್ಯ ವಸ್ತುವೆಂಬ ಕಾರಣದ ವಿಶ್ವಾಸದಿಂದ ನೋಡಿ ಅದನ್ನು ಪಡೆದು ಅದಕ್ಕೆ ಪ್ರತಿಯಾಗಿ ಸಾಧ್ಯವಿದ್ದಷ್ಟು ಕಡಿಮೆ ಪ್ರತಿಫಲ ಕೊಡುವ ಹವಣಿಕೆ ನಡೆಸುತ್ತಾರೆ. ಇದರಿಂದಲೇ ಇಂದಿನ ಪದಾರ್ಥಗಳ ವಿನಿಮಯದಲ್ಲಿ ಹಣದ ಮಾಧ್ಯಮವು ಮಹತ್ತದ ಪಾತ್ರವನ್ನಾಡುತ್ತಿದ್ದು, ಸರಕುಗಳ ಬದಲಾವಣೆಯಲ್ಲಿ ಅಜಗಜಾಂತರವಾದ ಪ್ರಭೇದಗಳನ್ನು ಮೇಲಿಂದ ಮೇಲೆ ಮಾಡುತ್ತಿದೆ.

ವಿನಿಮಯ ಮಾಧ್ಯಮವು ನಾಣ್ಯ-ನೋಟುಗಳ ರೀತಿಯಲ್ಲಿಯೇ ಬಂದುದರಿಂದ ಸರಕು-ಪದಾರ್ಥಗಳ ಬದಲಾವಣೆಗಳಲ್ಲಿ ನಾವು ಅರಿತುಕೊಂಡದ್ದಾಯಿತು ಆದರೆ ನಮ್ಮ ಜೀವನ ಮಟ್ಟದ ಮೇಲೆ ಇದರ ಪರಿಣಾಮವೇನೆಂಬುದನ್ನು ನಾವು ಅವಲೋಕಿಸುವುದವಶ್ಯವಿದೆ ಹಣಕ್ಕೆ ಸಾಧ್ಯವಿದ್ದಷ್ಟು ಕಡಿಮೆ ಪ್ರತಿಫಲ ಕೊಡುವ ಪ್ರವೃತ್ತಿಯಿಂದಾಗಿ ಪ್ರತಿಯೊಂದು ವಸ್ತುವಿನ ಬೆಲೆಯೂ ಏರುತ್ತ ಹೋಗುವುದರಿಂದ ಇಂದು ಒಂದು ವಸ್ತುವಿನ ನಿಶ್ಚಿತ ಬೆಲೆಯ ಬಗ್ಗೆ ಏನನ್ನೂ ಹೇಳುವ ಪರಿಸ್ಥಿತಿ ಇಲ್ಲದಂತಾಗಿದೆ. ಹಣಕ್ಕೆ ಪ್ರತಿಯಾಗಿ ಅಕ್ಕಿಯನ್ನು ಕಡಿಮೆ ಪ್ರಮಾಣದಲ್ಲಿ ಒಬ್ಬನು ಇನ್ನೊಬ್ಬನಿಗೆ ಮಾರಿದರೆ, ಎರಡನೆಯವನೂ ತನ್ನ ಹಣದ ಸಂಗ್ರಹಕ್ಕಾಗಿ ತನ್ನ ಸೇವೆಯನ್ನಾಗಲೀ, ತನ್ನಲ್ಲಿಯ ಸರಕು-ಪದಾರ್ಥಗಳನ್ನಾಗಲೀ ಹೆಚ್ಚಿನ ದರದಲ್ಲಿ ಮಾರುವ ವಿಚಾರದಲ್ಲಿ ತೊಡಗುತ್ತಾನೆ. ಹೀಗಾಗಿ ಪ್ರತಿಯೊಂದು ವಸ್ತುವೂ ಒಂದರ ಹಿಂದೊಂದರಂತೆ ಬೆಲೆಗಳನ್ನು ಏರಿಸಿಕೊಂಡು ಹೋಗುತ್ತವೆ ಇಷ್ಟೆಲ್ಲಕ್ಕೂ ಇಂದಿನ ಹಣವು ವಿನಿಮಯದ ಮಾಧ್ಯಮವಾಗಿರುವುದೇ ಕಾರಣವೆಂದು ಅನುದಿನವೂ ವ್ಯವಹಾರದಲ್ಲಿರುವ ಸಾಮಾನ್ಯ ವ್ಯಕ್ತಿಯೂ ಕೂಡ ಊಹಿಸುವಂತಹದಿರುತ್ತದೆ.

ಇಂದಿನ ಹಣವು ಜನರ ಜೀವನದಲ್ಲಿ ಬರುವ ವಿನಿಮಯಗಳಿಗೆ ತೊಂದರೆಯಾಗಬಾರದೆಂಬ ಮಹೋದ್ದೇಶದಿಂದ ಕೂಡಿದ್ದರೂ ಅದು ಸಫಲವಾಗಿಲ್ಲವೆಂದೆನ್ನಲಾಗದು. ಅದು ತನ್ನ ಕರ್ತವ್ಯದಲ್ಲಿ ಚ್ಯುತಿ ಬರದಂತೆ ಕೆಲಸಮಾಡುತ್ತಿದ್ದರೂ ಕಾಲಪ್ರಸಂಗಗಳು ಅದಕ್ಕೆ ಚ್ಯುತಿ ತೋರಿಸುತ್ತಿವೆ ಹಣದ ಮಾಧ್ಯಮದಿಂದ ಸರಕು-ಪದಾರ್ಥಗಳ ಬೆಲೆಗಳು ಏರುವುದರಿಂದ ಅಪರ ರೀತಿಯಲ್ಲಿಯೇ ಮನುಷ್ಯನ ಸರ್ವತೋಮುಖ ಸೇವೆಯೂ ಹೆಚ್ಚು ವೆಚ್ಚದ್ದಾಗಿ ಹೋಗುತ್ತದೆ. ಇವೆಲ್ಲ ಕಾರಣದಿಂದಲೇ ಇಂದಿನ ಜನರ ಜೀವನಮಟ್ಟ ಏರುತ್ತಿದೆ. ಹಾಗಾದರೆ ಇದಕ್ಕೇನು ಮಾಡಬೇಕು?

ಹಣದ ಮಾಧ್ಯಮದ ಸ್ಥಾನವನ್ನು ಅಲುಗಾಡಿಸಿದರೆ ಈ ಸಂದರ್ಭದಲ್ಲಿ ನಮ್ಮ ಜೀವನದ ಬೆಳವಣಿಗೆಯನ್ನು ಕಡಿಮೆ ಮಟ್ಟದಲ್ಲಿ ನಡೆಸಿಕೊಂಡು ಹೋಗುವುದು ಸಾಧ್ಯವಾಗಬಹುದು. ಮನುಷ್ಯ ಮಾಡುವುದೆಲ್ಲ ಕೇವಲ ತನ್ನ ಹೊಟ್ಟೆಗಾಗಿ, ಬಟ್ಟೆಗಾಗಿ, ಅದಕ್ಕಾಗಿಯೇ ಅವನ ಅವಿರತ ಪ್ರಯತ್ನಗಳು ಅನುವಂಶಿಕವಾಗಿ ಜೀವನದಾದ್ಯಂತವೂ ನಡೆದುಕೊಂಡು ಹೋಗಿ ಹೊಸ ಹೊಸ ಪ್ರಯತ್ನಗಳನ್ನು ಪ್ರಯೋಗಿಸಿ ನೋಡುವ ಹವಣಿಕೆಯಲ್ಲಿ ಯಶಸ್ಸಿನ ದಾರಿಯನ್ನು ಹುಡುಕಲು ಅನುವು ಮಾಡಿಕೊಡುತ್ತಲಿವೆ. ಈ ದೃಷ್ಟಿಯಲ್ಲಿ ವಿಚಾರಿಸಿದರೆ ಹಣದ ಮಾಧ್ಯಮವನ್ನು ತೆಗೆದೊಗೆದರೆ ಅದಕ್ಕೆ ಬದಲಾಗಿ ಯಾವ ನೀತಿ ಯೋಗ್ಯ, ಸುಲಭ, ಅವಶ್ಯಕವಾಗಿದೆಂಬುದನ್ನು ನಾವು ತಿಳಿಯಬೇಕಾಗಿದೆ. ಇದನ್ನು ತಿಳಿದುಕೊಳ್ಳುವ ಮೊದಲು ನಾವು ವಿನಿಮಯ ಮಾಧ್ಯಮದ ಮುಖ್ಯ ಗುಣಧರ್ಮಗಳನ್ನು ವಿಶೇಷವಾಗಿ ಅವಲೋಕಿಸಬೇಕಾಗುವುದು

ವಸ್ತುಗಳ ವಿನಿಮಯದಲ್ಲಿ ತೊಂದರೆಗಳುದ್ಭವಿಸಬಾರದು. ಹಿಂದಿನ ಕಾಲದಲ್ಲಿ ಒಬ್ಬನಿಗೆ ಒಂದು ಸೇರು ಅಕ್ಕಿ ಬೇಕಾದರೆ, ಅದಕ್ಕೆ ಬದಲಾಗಿ ತನ್ನಲ್ಲಿದ್ದ ಯಾವುದೊಂದು ಪ್ರಾಣಿಯನ್ನು ಕೊಡುತ್ತಿದ್ದನೆಂದು ಭಾವಿಸುವಾ. ಒಂದು ಸೇರು ಅಕ್ಕಿಗೆ ಬದಲಾಗಿ ತನ್ನಲ್ಲಿದ್ದ ವಿನಿಮಯದ ಪ್ರಾಣಿ ಹೆಚ್ಚು ಬೆಲೆಯದೆಂದು ಆತ ವಾದಿಸಲಾರಂಭಿಸಿದರೆ ವಿನಿಮಯದಲ್ಲಿ ತೊಂದರೆ ಉದ್ಭವಿಸಬಹುದಾಗಿತ್ತು, ಅಲ್ಲದೆ ಅಕ್ಕಿಯನ್ನು ಕೊಡುವಾತನಿಗೆ ಪ್ರಾಣಿಯ ಅವಶ್ಯಕತೆಯೂ ಇಲ್ಲದಿರಬೇಕಾಗುತ್ತಿತ್ತು. ಅಕ್ಕಿ ಕೊಡುವವನಿಗೆ ಪ್ರಾಣಿಯ ಆವಶ್ಯಕತೆಯಿದ್ದಿರಲಿಲ್ಲವಾದರೆ ಆತ ಪ್ರಾಣಿಗಳಿಗೆ ಬದಲಾಗಿ ಅಕ್ಕಿಯನ್ನು ಕೊಡಲು ನಿರಾಕರಿಸಬಹುದು. ಇದರಿಂದ ವಿನಿಮಯ ಸುಲಭ ಸಾಧ್ಯವಾಗುವುದಿಲ್ಲ. ಪ್ರಾಣಿಗಳಿರುವ ಮನುಷ್ಯ ಅಕ್ಕಿ ಇದ್ದೆಡೆಗೇ ಹೋಗಬೇಕಾದ ಪ್ರಸಂಗ ಬರುವುದರಿಂದ ಆತ ಅಕ್ಕಿಗಾಗಿ ಎಲ್ಲ ಕಡೆಗೂ ತಿರುಗಿ ಪ್ರಯತ್ನಿಸಬೇಕಾಗುವುದು.

ಈ ರೀತಿಯ ತೊಂದರೆಗಳುದ್ಭವಿಸದಂತೆ ನೋಡಿಕೊಳ್ಳಬೇಕು. ಅವಶ್ಯಕವಾದ ಎಲ್ಲ ವಸ್ತುಗಳು, ಕೊಡುವ ವಿನಿಮಯಕ್ಕೆ ಬದಲಾಗಿ ಸುಲಭವಾಗಿ ಸಿಗುವಂತಾಗಬೇಕು; ಇದರಿಂದಾಗಿ ಮನುಷ್ಯ ತನ್ನ ಪದಾರ್ಥಗಳಿಗಾಗಿ ಹುಡುಕಾಡುವ ಪ್ರಸಂಗ ಬರಲಾರದು.

ಹಿಂದಕ್ಕೆ ಈ ತರಹದ ತೊಂದರೆಗಳುದ್ಭವಿಸಲು ಇಂದಿನಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಮಾನುಗಳನ್ನು ಸಾಗಿಸಲು ಯಾವ ಸೌಕರ್ಯಗಳಿಲ್ಲದಿರುವುದೂ ಕಾರಣವಾಗಿತ್ತು ಇಂದು, ದೊಡ್ಡ ಮಟ್ಟದಾದ ಯಾವುದೇ ಸರಕನ್ನು ಜಗತ್ತಿನ ಯಾವ ಭಾಗದಿಂದಲಾದರೂ ಅತ್ಯಲ್ಪವೇಳೆಯಲ್ಲಿ ಸಾಗಿಸಬಹುದಾಗಿದೆ. ಇದರಿಂದಾಗಿ ನಾವು ಬೇಡಿದ ಯಾವುದೇ ಒಂದು ವಸ್ತುವೂ ಇಂದು ಸಿಗಲಾರದೆಂದು ಜನ ಹೇಳುವಂತಹ ಪರಿಸ್ಥಿತಿಯಿಲ್ಲ. ಹಿಂದಕ್ಕೆ ಅವಶ್ಯವಾಗಿ ಬೇಕಾದ ಸಾಮಾನಿಗೆ, ಪ್ರತಿಯಾಗಿ ಕೊಡುವ ವಸ್ತುವು ಆ ವ್ಯಕ್ತಿಗೆ ಅನಾವಶ್ಯಕವೆಂದು ಕಂಡುಬಂದರೆ ವಿನಿಮಯದಲ್ಲಿ ತೊಂದರೆಯುದ್ಭವಿಸಿ ಜನ ತೊಂದರೆಗೊಳಗಾಗಬಹುದಾಗಿತ್ತು. ಇದಕ್ಕೆ ಸರಕುಗಳ ಸಂಗ್ರಹದ ಅಭಾವವೂ, ಅದು ದೊರಕುವ ಪ್ರದೇಶದ ಅಂತರವೂ ಕಾರಣವಾಗಿತ್ತು. ಆದರೆ ಇಂದು ವೈಜ್ಞಾನಿಕ ಸಂಶೋಧನೆಯ ಯಶಸ್ವೀ ಮುನ್ನಡೆಯ ಮೂಲಕ ಯಾವುದೇ ಪದಾರ್ಥಗಳನ್ನು ಯಾವುದೇ ಭಾಗಕ್ಕೆ ಯಾವುದೇ ಕಾಲದಲ್ಲಿ ದೊರಕಿಸುವ ಪ್ರಸಂಗದಲ್ಲಿ ನಾವಿದ್ದೇವೆ. ಇದರಿಂದ ನಾವು ನಮ್ಮಲ್ಲಿಯ ಯಾವುದೇ ಸರಕಿಗೆ ಬದಲಾಗಿ ನಮ್ಮ ಇಚ್ಛಿತ ಪದಾರ್ಥಗಳನ್ನು ಇಂದು ಹಣದ ಮಾಧ್ಯಮವಿಲ್ಲದೆ ಸಾಗಿಸಬಹುದಾಗಿದೆ. ನಮ್ಮ ಹತ್ತಿರ ಕುರಿಯೊಂದಿದೆಯೆಂದು ಭಾವಿಸುವಾ, ನಮಗೆ ಸದ್ಯ ಅಕ್ಕಿಯ ಅವಶ್ಯಕತೆಯಿದೆ. ಕುರಿಗೆ ಬದಲಾಗಿ ನಿರ್ದಿಷ್ಟ ಪಡಿಸಿದ ಅಕ್ಕಿಯನ್ನು ನಾವು ಅಂಗಡಿಯಿಂದ ಪಡೆಯಬಹುದು, ಅಂಗಡಿಯಲ್ಲಿ ನಾವು ಕೊಟ್ಟ ಕುರಿಯನ್ನು ಕುರಿಯ ಅವಶ್ಯಕತೆ ಇದ್ದ ಇನ್ನೊಬ್ಬ ವ್ಯಕ್ತಿಯು ತನ್ನಲ್ಲಿದ್ದ ಜೋಳವನ್ನೋ ಅಥವಾ ಇನ್ನಾವುದಾದರೂ ಪದಾರ್ಥವನ್ನೋ ಕೊಟ್ಟು ಪಡೆಯಬಹುದು. ಈ ಕಾಲದಲ್ಲಿ ಎಲ್ಲ ಪದಾರ್ಥಗಳೂ ಎಲ್ಲ ಕಡೆಗೂ ಸುಲಭವಾಗಿ ಸಾಗಿಸಬಹುದಾದ್ದರಿಂದ ಯಾವ ಪದಾರ್ಥದ ಕೊರತೆಯೂ ಯಾವ ಭಾಗದಲ್ಲೂ ಬೀಳಲಾರದು. ಅಲ್ಲದೆ ಹಣದ ಮಾಧ್ಯಮವಿಲ್ಲದ ಸರಕುಗಳ ಪ್ರತ್ಯಕ್ಷ ಬದಲಾವಣೆಗಳೇ ನಮ್ಮ ಅವಶ್ಯಕ ಸರಕುಗಳನ್ನು ದೊರಕಿಸಿ ಕೊಡಬಹುದಾಗಿವೆ.

ಹಿಂದಿನ ಕಾಲದಲ್ಲಿ ಅಭಾವವಾಗಿದ್ದ ಪದಾರ್ಥಗಳ ಮಿತವ್ಯಯದ ಹಂಚಿಕೆಗಾಗಿ ಹಣವು ಆ ಪದಾರ್ಥಗಳ ಮಾಧ್ಯಮವಾಗಿ ಬಂದಿತ್ತು. ವ್ಯಕ್ತಿಗಳಿಗೆ ನಿಜವಾಗಿಯೂ ಹಣದ ಅವಶ್ಯಕತೆಯಿಲ್ಲ. ಅಲ್ಲದೆ ಮನುಷ್ಯ ಹಣವನ್ನು ಪ್ರತ್ಯಕ್ಷವಾಗಿ ಅನುಭೋಗಿಸಿ ತೃಪ್ತಿಹೊಂದಲಾರ. ಅದು ಕೇವಲ ಸಂಗ್ರಹದ ಒಂದು ವಸ್ತುವಾಗಿ ಮಾತ್ರ ಪರಿಣಮಿಸಿದಂತಾಗಿದೆಯಲ್ಲದೆ ಅದನ್ನು ಮಿತವ್ಯಯದಿಂದ ಖರ್ಚು ಮಾಡಲು ಪ್ರಯತ್ನಿಸಿ ಮನುಷ್ಯ ಅದಕ್ಕೆ ಬದಲಾಗಿ

(೧೨ನೇ ಪುಟ ನೋಡಿ)

ಎಂತಹ ವಿಲಕ್ಷಣ ಪುರುಷ

(೨ನೇ ಪುಟದಿಂದ)

ಕೊಂಡೆ. ಆದರೆ ನಾನು ನನ್ನ ಧ್ಯೇಯವನ್ನು ಸಾಧಿಸುವುದು ಅಸಾಧ್ಯವಾಯಿತು—ನಾನು ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲ!

ನನ್ನ ಮನಸ್ಸಿನಲ್ಲಿ ಅಂಧಕಾರ ಕವಿಚ್ಚಿತು. ಮಾವನೂ ನನಗೆ ಮುಂದೆ ಕಲಿಯಲು ಧನಸಹಾಯ ಮಾಡಲಿಲ್ಲ. ಆಗಾಗಲೇ ನನ್ನ ಅಣ್ಣನಿಗೆ ಮೆಜಾರಿಟಿಯು ಬಂದುದರಿಂದ, ಆತನ ಪಾಲಿನ ಹಣ ಅವನಿಗೆ ಬಂದಿತ್ತು. ಅವನು ನನ್ನನ್ನು ಯಾವುದಾದರೊಂದು ರೀತಿಯಲ್ಲಿ ಮುನ್ನಡೆಸುವ ಸಲುವಾಗಿ ಮಾವನನ್ನು ಕಾಡಿಬೇಡಿ ಅನುಮತಿ ಪಡೆದು ತಾನು ಕಲಿಯುತ್ತಿದ್ದ ನಗರಕ್ಕೆ ಕರೆದುಕೊಂಡು ಹೋಗಿ ಶಾಲೆ ಸೇರಿಸಿದ. ಆಗ ನನಗೆ ೧೬ ವರ್ಷ ಪ್ರಾಯವಾಗಿತ್ತು. ಅಣ್ಣನ ಬಲವಂತದಿಂದಾಗಿಯೂ ಆತನು ನನಗೆ ಕರ್ಚಿಗೆ ಬೇಕಷ್ಟು ಹಣ ಕೊಡುತ್ತಿದ್ದುದರಿಂದಲೂ ನಾನಲ್ಲಿ ಓದಲು ತೊಡಗಿದೆ.

ಆದರೆ ಓದಿನಲ್ಲಿ ಆಸಕ್ತಿಯನ್ನೇ ಕಳೆದುಕೊಂಡಿದ್ದ ನನಗೆ ಮತ್ತು ಮನಸ್ಸನ್ನು ಅತ್ತ ಕೇಂದ್ರೀಕರಿಸುವುದು ಸಾಧ್ಯವಾಗಲಿಲ್ಲ. ಹಾಗಾಗಿ ತರಗತಿಯಲ್ಲಿ ತೀರಾ ಹಿಂದುಳಿಯುತ್ತಿದ್ದೆ. ಹೆಚ್ಚಾಗಿ ಸಮಯಕ್ಕೆ ಸರಿಯಾಗಿ ಶಾಲೆಯ ಮೆಟ್ಟಲು ಹತ್ತಿದವ ನಾನಲ್ಲ. ದಿನದಲ್ಲಿ ಒಂದೆರಡು ತಾಸು ಶಾಲೆಯ ಒಳಗಿದ್ದರೆ, ದೊಡ್ಡ ಮಾತಾಗಿತ್ತು. ಇದನ್ನು ಕಂಡು ಉಪಾಧ್ಯಾಯರು ಗದರಿಸುತ್ತಿದ್ದರು; ಹೊರಗೆ ನಿಲ್ಲಿಸುತ್ತಿದ್ದರು; ಆದರೆ, ಅವರೆಂದೂ ನನ್ನ ಮೈ ಮುಟ್ಟಲಿಲ್ಲ. ಆದರೂ ನನಗೆ ಶಾಲೆ ಎಂದರೆ ಜಿಗುಪ್ಸೆಹುಟ್ಟಿ ಬೆಳೆದು ಜೆಮ್ಮರವಾಗಿ ಪರಿಣಮಿಸಿತು. ಹೆಸರಿಗೊಬ್ಬ ವಿದ್ಯಾರ್ಥಿ ಎಂಬಂತಾಯಿತು ನನ್ನ ಜೀವನ. ಆ ವರ್ಷ ನನಗೆ ತೇರ್ಗಡೆಯಾಗುವ ಭರವಸೆಯಿರಲಿಲ್ಲ. ಆದರೆ, ದುರ್ದೈವವಶದಿಂದ ಹೇಗೋ ಏನೋ ಪಾಸಾಗಿಯೇ ಬಿಟ್ಟೆ. ನನ್ನ ತಲೆಗೆ ಕೊಡಲಿ ಏಟು ಬಿದ್ದಂತಾಯಿತು.

"ಅದೇಕೆ ಎಂದು ನೀವು ಕೇಳಬಹುದು. ನಾನು ಅಣ್ಣನನ್ನು ಪುಸಲಾಯಿಸಿ ಸ್ವಲ್ಪ ಹಣವನ್ನೀಸಿಕೊಂಡು ಎಲ್ಲಿಗಾದರೂ ಹೋಗುವುದೆಂದು ಯೋಚಿಸಿದ್ದೆ. ಆದರೆ, ಅದಕ್ಕೆ ಸಂದರ್ಭ ಸಿಗದೆ ಹೋಯಿತು. ಅಂತೂ ಮುಂದಿನದು ಯಾರಿಗೆ ಬೇಕಾಗಿದೆ ಎಂದುಕೊಂಡೇ ಮುಂದುವರಿಯಿತು. ಆಗಾಗಲೇ ಕೆಲವಾರು ಜನರ ಸ್ನೇಹಿತನಾಗಿದ್ದೆ. ಅವರಂತೆಯೇ ಆಚಾರ, ವಿಚಾರ, ವಿಹಾರ, ಆಹಾರಗಳಿಗೆ ಮೊದಲಾಯಿತು. ಹೀಗಾಗಿ ಅಣ್ಣನೀಯುತ್ತಿದ್ದ ಹಣ ಅಲ್ಪವೆಂದು ಕಂಡ ಬರತೊಡಗಿತು. ಮಾವನಿಗೆ ಪತ್ರ ಬರೆದು ತರಿಸತೊಡಗಿದೆ. ಆದರೆ, ಅವರಿಂದ ನನಗೆ ಬೇಕಷ್ಟು ದೊರೆಯುವಂತಿರಲಿಲ್ಲ. ಹಾಗಾಗಿ....

"ಹೌದು, ನೀವೆಣಿಸಿದಂತೆ, ಆಗ, ಸಾಲಮಾಡುವ ಪರಿಸ್ಥಿತಿ ಬಂತು. ಆದರೆ, ಅದನ್ನು ತೀರಿಸುವುದೆಂತು? ಆಗ ನನ್ನ ಮನಸ್ಸು ನನ್ನ ಪ್ರಾಯದತ್ತ ಹರಿಯಿತು. ೨೧ ವರ್ಷ ಪೂರ್ತಿಯಾದೊಡನೆಯೇ ಮೂರು ಸಹಸ್ರ ರೂಪಾಯಿ ದೊರೆಯಲಿದೆ ಎಂದು ಯೋಚಿಸುತ್ತ ಕುಳಿತೆ. ಹೋಟೇಲು ಅಂಗಡಿ, ದೋಬಿ ಎಲ್ಲರೊಡನೆಯೂ ಸಾಲ; ಸಾಲ. ಮಿತ್ರರೊಡನೆಯೂ ಸಾಲ ಹಾಗಾಗಿ ಸಾಲ ಹುಟ್ಟುವುದೇ ಕಷ್ಟವಾಗಿ ಪರಿಣಮಿಸಿತು. ಇನ್ನೂ ಆರು ತಿಂಗಳ ಕಾಲವಿತ್ತು. ಅದುವರೆಗೆ ಹೇಗಾದರೂ ಮಾಡಿ ಹಣಗಳಿಸಬೇಕು ಎಂದುಕೊಂಡೆ. ಅಂತೂ ಹೀಗಾಗಿ, ಆಗಾಗ ಹಣಕ್ಕಾಗಿ ಸಹಯೋಗಿಗಳ ಹಣಕ್ಕೆ ಕೈಕೊಡಲೇ ಬೇಕಾಯಿತು. ಇಂತಹ ಸಂದರ್ಭದಲ್ಲಿ ಕೆಲವೊಮ್ಮೆ ಸಿಕ್ಕಿ ಬಿದ್ದುದೂ ಇಲ್ಲವೆಂದಿಲ್ಲ ಆದರೆ ಅವರೆಲ್ಲರನ್ನೂ ವಿನೋದಗೊಳಿಸಿ ಅಲ್ಲಿಗೇ ಮರೆಯುವಂತೆ ಮಾಡುತ್ತಿದ್ದೆ.

"ಇದರೊಂದಿಗೆ ಬೇರೆ ಶಾಲೆಯ ವಿದ್ಯಾರ್ಥಿಗಳಿಂದ ಪಠ್ಯ ಪುಸ್ತಕಗಳನ್ನು ಎರವಲು ತಂದು, ಅವನ್ನು ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಮಾರುವುದೂ ಲಾಭವೆಂದು ಕಂಡುಹಿಡಿದೆ ಪುಸ್ತಕಾಲಯ, ಪುಸ್ತಕದಂಗಡಿಗಳಿಂದ ಅರಿಯದಂತೆ ಕಣ್ಣುತಪ್ಪಿಸಿ, ಪುಸ್ತಕತಂದು ಅವನ್ನೂ ಮಾರಿ ಹಣ ಗಳಿಸತೊಡಗಿದೆ. ಒಮ್ಮೆ ಒಬ್ಬ ಮಿತ್ರನಲ್ಲಿದ್ದ ಕೆಮರಾವನ್ನು ಕಂಡು, ಅದನ್ನು ಸಂಪಾದಿಸುವ ಆಸೆ ಹುಟ್ಟಿತು. ಆ ಆಸೆಯನ್ನು ತೀರಿಸಿಕೊಳ್ಳಲು ಹೊಂಚು ಹಾಕಿ ಒಂದು ದಿನ ಯಾರಿಗೂ ತಿಳಿಯದಂತೆ ಕೈಕೊಟ್ಟೇ ಬಿಟ್ಟೆ. ಆದರೆ, ಅದು ಮುಂದೆ ಗೊತ್ತಾದಾಗ, ಅವರಿಗೆ ನನ್ನ ಮೇಲೆ ಸಂದೇಹ ಬಂದರೂ, ನಾನು ಮಾತ್ರ ತಪ್ಪಿಸಿಕೊಂಡೆ. ಅದಕ್ಕೆ ಬೇಕಾದ ಚಾಣಾಕ್ಷತೆಯನ್ನು ನಾನಾಗಾಗಲೇ ಗಳಿಸಿಕೊಂಡಿದ್ದೆ.

"ನಾನು ಶಾಲೆಗೆ ಹೋಗುವುದು ಅಪರೂಪವಾಗುತ್ತ ಬರುತ್ತಿತ್ತು. ಹೋದರೂ ತಡವಾಗಿ ತೆರಳುತ್ತಿದ್ದೆ. ಒಂದು ದಿನ ಎರಡನೆಯ ಅವಧಿಯ ವೇಳೆಯಿರಬಹುದು. ಮಲಗಿದ್ದ ನನಗೆ ಎಚ್ಚರವಾಯಿತು. ನಾನು ಗಡಿಬಿಡಿಯಿಂದ ಶಾಲೆಗೆ ಹೊರಟೆ. ತರಗತಿಯಲ್ಲಿ ಅಧ್ಯಾಪಕರು ಪಾಠ ಮಾಡುತ್ತಿದ್ದರು. 'ಏನು, ಈಗ ಆಗಮಿಸುವುದಷ್ಟೇ ಏನು? ಅಧ್ಯಾಪಕರು ಪ್ರಶ್ನಿಸಿದರು.

"ಅಲ್ಲ ಸಾರ್, ನೀರುಕುಡಿಯಲು ಹೋಗಿದ್ದೆ" ಒಂದು ಪಟಾಕಿ ಹಾರಿಸಿದೆ—ತಪ್ಪನ್ನು ಮುಚ್ಚಲು. ಆದರೆ, ನಮ್ಮ ಹಿರೇಮಾಣಿ ಸತ್ಯವನ್ನು ಆಡಿಬಿಟ್ಟ ಮುಖ್ಯೋಪಾಧ್ಯಾಯರ ಅಪ್ಪಣೆ ಪಡೆದುಬರುವಂತೆ ಹೇಳಿದರು ಅಧ್ಯಾಪಕರು. ಆದರೆ, ಮುಖ್ಯೋಪಾಧ್ಯಾಯರ ಸಮೀಪ ಹೋದರೆ, ಅವರು ಎಂದಿಗೂ ಅನುಮತಿಕೊಡಲಾರರಲ್ಲದೆ ಸಹಸ್ರ ನಿಂದೆಯನ್ನು ಕೇಳಬೇಕಾಗುವುದೆಂದು ನನಗೆ ಗೊತ್ತಿತ್ತು. ಏಕೆಂದರೆ, ಅದಕ್ಕೆ ಮೊದಲೇ ನನ್ನ ನಡತೆಯ ಬಗ್ಗೆ ಇಬ್ಬರ ಚಾಡಿಯನ್ನವರು ಪಡೆದುಕೊಂಡಿದ್ದರು. ಹಾಗಾಗಿ ಏನು ಮಾಡಲೂ ತೋಚದೆ ಹೊರಬಂದೆ. ಆಫೀಸು ರೂಮಿನ ಬಳಿ ಸುಳಿದೆ. ಅಲ್ಲಿ ಮುಖ್ಯೋಪಾಧ್ಯಾಯರಿರಲಿಲ್ಲ. ಗೆದ್ದೆನೆಂದುಕೊಂಡು ತರಗತಿಗೆ ಬಂದು ಅಪ್ಪಣೆಯಿತ್ತರು ಎಂದು ಇನ್ನೊಂದು ಸಾಕಷ್ಟು ದೊಡ್ಡ ಪಟಾಕಿ ಹಾರಿಸಿದೆ. ಚೀಟಿ ಇದೆಯೆ?" ಅವರು ಕೇಳಿದರು

"ಪುನಃ ಸಿಕ್ಕಿ ಬಿದ್ದೆ. ಆದರೂ ನನ್ನ ಸಮಯೋಚಿತ ಬುದ್ಧಿ ಇಂಗಿಹೋಗಲಿಲ್ಲ. ಅವರು ತುಂಬ ಕೆಲಸದಲ್ಲಿದ್ದರು. ಹೋಗು ಎಂದು ಹೇಳಿದರು ಎಂದು ಉತ್ತರಿಸಿದೆ. ಅಧ್ಯಾಪಕರ ಮುಖ ಕೆಂಪೇರಿತು. ಎಲ್ಲಿದ್ದರವರು? ಎಂದರು. ನಾನು ಅವರನ್ನು ಕಂಡಿಲ್ಲವಷ್ಟೆ ಅಂತೂ ಏನು ಹೇಳುವುದೆಂದು ತೋಚಲಿಲ್ಲ. ಲೈಬ್ರರಿ ರೂಮಿನಲ್ಲಿ ಎಂದುಬಿಟ್ಟೆ. ಅಧ್ಯಾಪಕರ ಕಣ್ಣು ಕೆಂಪೇರಿತು. "ಅವರ ಲಿಖಿತ ಅನುಮತಿ ತಾರದೆ ಪ್ರವೇಶವಿಲ್ಲ" ಎಂದುಬಿಟ್ಟರು. ನನಗದು ಸಾಧ್ಯವಿರಲಿಲ್ಲ. ಹಾಗಾಗಿ ನಡೆದೇ ಬಿಟ್ಟೆ ರೂಮಿಗೆ ಮತ್ತೆ ತಿಳಿಯಿತು—ನನ್ನ ತರಗತಿಯ ಪಕ್ಕದ ತರಗತಿಯಲ್ಲಿ ಮುಖ್ಯೋಪಾಧ್ಯಾಯರು ಪಾಠಮಾಡುತ್ತಿದ್ದರೆಂದು!

"ಮರುದಿನ ಅಂಜುತ್ತಂಜುತ್ತ ಶಾಲೆಯ ಮೆಟ್ಟಲು ಹತ್ತಿದೆ. ಮುಖ್ಯೋಪಾಧ್ಯಾಯರು ಕರೆದು ಇನ್ನು ಬರಬೇಕಾಗಿಲ್ಲ ಟಿ. ಸಿ. ತೆಗೆದುಕೊಂಡು ಹೋಗಬಹುದು ಎಂದರು. ನಾನು ನೆಟ್ಟನೆ ಹೊರಬಂದೆ. ನಾಲ್ಕು ದಿನ ಅತ್ತ ಮುಖ ತೋರಿಸಲಿಲ್ಲ ನನ್ನ ಹಿತಚಿಂತಕರ ಹಾಗೂ ಇತರರೂ ಬಂದು ಕ್ಷಮಾಯಾಚನೆ ಮಾಡುವಂತೆ ಉಪದೇಶಿಸಿದರು. ಆದರೆ, ನಾನು ಅದಕ್ಕೆ ಸಿದ್ಧನಿರಲಿಲ್ಲ ಅಂತೂ ಕೊನೆಗೆ ನನಗೆ ಅಭ್ಯಾಸದಲ್ಲಿ ಸಹಾಯಕನಾಗಿದ್ದು ಆಗಾಗ ನನಗೆ ಸನ್ಮಾರ್ಗವನ್ನು ಬೋಧಿಸುತ್ತಿದ್ದ ಮಿತ್ರನೊಬ್ಬನ ವಿನಂತಿಯಂತೆ ಆ ಅಧ್ಯಾಪಕರನ್ನು ಕಂಡು ನನ್ನ ತಪ್ಪಾಯಿತು, ಕ್ಷಮಿಸಬೇಕು ಎಂದೆ. ಆದರೆ, ಅವರು ಮುಖ್ಯೋಪಾಧ್ಯಾಯರಲ್ಲಿಗೇ ಹೋಗಿ ಬೇಡು ಎಂದರು. ನನಗೆ ಶಾಲೆಯಿಂದರೆ ಬೇಸರ. ಜೀವವಿರುವಷ್ಟು ದಿನ ಮಜಾಮಾಡುವುದೇ ಧ್ಯೇಯವಾಗಿಟ್ಟುಕೊಂಡವನಾಗಿದೆ ನಾನು. ಅದೂ, ಅಲ್ಲದೆ ಕೆಲವೇ ತಿಂಗಳುಗಳುಳಿದಿದ್ದುವು ೨೧ ತುಂಬಲು! ನೆಟ್ಟಗೆ ಮನೆಗೆ ಮರಳಿದೆ

"ಈ ಸಮಯದಲ್ಲಿ ನನ್ನ—ಅಣ್ಣರ ಸಂಬಂಧ ದೂರವಾಗುತ್ತ ಬಂದಿತ್ತು. ಹಾಗಾಗಿ ಎರಡು ತಿಂಗಳು ಊರೂರು ಅಲೆದಾಡಿ ಸ್ವತನದಿಂದಲೇ ದಿನ ದೂಡಿದೆ. ಮುಂದೆ ಮೂರು ಸಾವಿರ ಕೈಗೆಬಂತು ಆದರೆ ಅದು ಆರು ತಿಂಗಳಲ್ಲಿಯೇ ಖಾಲಿಯಾಯಿತು. ನನ್ನ ಖರ್ಚಿಗೆ ನನ್ನ ಬಳಿ ಹಣ ವಿರಲಿಲ್ಲ ಕೇಳಿದರೆ ಯಾರೂ ಕೊಡುತ್ತಿರಲಿಲ್ಲ. ಅಣ್ಣ-ಮಾವ ದೂರವುಳಿದರು. ಕೆಲಸ ಮಾಡಲು ಮನಸಿದ್ದರೂ ವಿದ್ಯೆ ಹೇಳಿಸಿಕೊಳ್ಳುವಷ್ಟಿಲ್ಲ. ಮತ್ತೆ, ಅರಸನಂತೆ ದಿನಗಳೆದ ನಾನು, ಕೂಲಿಮಾಡಿ ಹಣ ಸಂಪಾದಿಸುವುದೆಂದರೆ ಅದು ಅಪಮಾನ ಅಲ್ಲದೇ ಅಸಾಧ್ಯವೂ ಹೌದು. ಆನೆಯಂತೆ ದುಡಿದು ಸೊಪ್ಪು ತಿನ್ನುವುದಕ್ಕಿಂತ ಇರುವೆಯಂತೆ ಬಾಳಿ ಸಕ್ಕರೆ ಮೆಲ್ಲುವುದೇ ವಾಸಿ ಎಂದು ನಿರ್ಧರಿಸಿದೆ. ನೋಡಿ ನಿಮಗೆ ಸಲ್ಲಿಸಿದ ಪಟ್ಟಿಯಲ್ಲಿ ತೋರಿಸಿದ ಎಲ್ಲ ಒಡವೆಗಳನ್ನೂ ನಾನು ವಾಮ ಮಾರ್ಗದಿಂದಲೇ ಗಳಿಸಿದ್ದೇನೆ. ಅವನ್ನು ಸಂಭಾವಿತರಿಗೆ ಮಾರಿ ಹಣ ಪಡೆದಿದ್ದೇನೆ. ಆದರೆ, ಆ ಒಬ್ಬ ನನಗೆ ವಿದ್ಯಾಭ್ಯಾಸದಲ್ಲಿ ನೆರವಾಗಿ ಅಂತಿಮವಾಗಿ ಕ್ಷಮಾಯಾಚನೆ ಮಾಡು ಎಂದು ಹೇಳಿಕೊಂಡ ಮಿತ್ರನೊಬ್ಬನಿಗೆ ನನ್ನ ರಿಸ್ಟ್‌ವಾಚೊಂದನ್ನು ೨೫ ರೂಪಾಯಿಗೆ ಮಾರಿದ್ದೇನೆ. ಆದರೆ, ಅದು ಮಾತ್ರ ನನ್ನ ಸ್ವಂತದ್ದು; ಮಾವ ತೆಗೆಸಿಕೊಟ್ಟಿದ್ದು. ಅವನಿಗೇಕೆ ಮೋಸ ಮಾಡಲಿಲ್ಲ ಎನ್ನಬಹುದು. ಹೌದು, ನಾನು ಆ ಊರಲ್ಲಿ ನನ್ನ ಸ್ನೇಹಿತರ ಪೈಕಿ ಅವನಿಗೆ ಮಾತ್ರ ಯಾವ ವಂಚನೆಯನ್ನೂ ಮಾಡಿಲ್ಲ. ಆತನಿಂದ ರೂಪಾಯಿ ಕೈಗಡವಾಗಿ ಪಡೆದುಕೊಳ್ಳುವುದೆಂದುಕೊಂಡಿದ್ದೆ. ಆದರೆ, ಆದೀತೋ ಒಂದು ಘಳಿಗೆಯಲ್ಲಿ ವಾಚನ್ನೇ ಮಾರಿಬಿಡುವ ಎಂದು ತೋರಿ ಹಾಗಾಯಿತು.

"ಆದರೆ, ನನ್ನನ್ನು ನೀವು ಬಂಧಿಸಿದ್ದೀರಿ. ವಿಚಾರಣೆ ನಡೆಸುತ್ತಿದ್ದೀರಿ. ನಾನೊಬ್ಬ ಕಳ್ಳನೆಂದು ನಾನೂ ಒಪ್ಪುವೆ. ನನಗಾಗ ನೀವೊಂದಷ್ಟು ವರುಷ ಶಿಕ್ಷೆಯೂ ವಿಧಿಸುತ್ತೀರಿ. ಆ ವೇಳೆ, ಆ ಅವಧಿ ಮೀರಿದ ವೇಳೆ—ನಾನು ನಿಶ್ಚಯವಾಗಿಯೂ ಹೇಳಬಲ್ಲೆ—ಮತ್ತೂ ದೊಡ್ಡ ಕಳ್ಳನಾಗುವೆ ಇದು ಸತ್ಯ. ಮೂರು ಮೂರು ಬಾರಿಗೂ ಅನೃತವೇ ಸರಿ. ಹೌದೋ ಅಲ್ಲವೋ ನೀವೇ ಮುಂದೆ ನೋಡುವಿರಂತೆ. ನಿಮಗಿದನ್ನು ಕೇಳಿ ಆಶ್ಚರ್ಯವಾಗಬಹುದು. ಆದರೆ, ನನ್ನ ಮಾತನ್ನು ಕೇಳಿ—ಸಂದರ್ಭವೊದಗಿದರೆ, ನಿಮಗೆಲ್ಲರಿಗೂ ಬುದ್ಧಿಗಲಿಸುವ ಶಕ್ತಿ ನನ್ನಲ್ಲಿ ಈ ಶಿಕ್ಷಾವಧಿ ಮುಗಿಯುವುದರೊಳಗೇನೇ ಹುಟ್ಟುವುದೇ ಎಂಬ ವಿಶ್ವಾಸ ನನ್ನಲ್ಲಿದೆ ಇದು ಚಿರಸತ್ಯ; ಸೆರಗಿನಲ್ಲಿ ಹಾಕಿದ ಗಂಟು! ಆ ನನ್ನ ಮಿತ್ರ ನನ್ನನ್ನೊಮ್ಮೆ ನೋಡಬೇಕು; ಅವ ನನ್ನನ್ನು ಹೇಗೆ ಸ್ವಾಗತಿಸುತ್ತಾನೆಂದೂ ನನಗೆ ಗೊತ್ತು! ಅವನಿಗೆ ದೇವರು ಕಲ್ಯಾಣಮಾಡಬೇಕು. ಅವನು ನನಗೆ ಮಾಡಿದ ಉಪಕಾರ, ಉಪದೇಶಗಳಿಗಾಗಿ ನನ್ನ ಕೃತಜ್ಞತೆಯನ್ನಿನ್ನೂ ವ್ಯಕ್ತಪಡಿಸಿಲ್ಲ. ಅದೊಂದು ಕರ್ತವ್ಯವನ್ನು ಮಾತ್ರ ನಾನು ಪೂರ್ಣಗೊಳಿಸಬೇಕಾಗಿದೆ. ಅದಾಯಿತೆಂದರೆ, ಮುಂದೆ ನಾನೇ ನಾನು. ಎರಡನೆಯ ಪ್ಯಾರಿಸ್ ಎಂದುಕೊಳ್ಳಿರಿ."

ಈ ಮಾತನ್ನೆಲ್ಲಾ ಆಸಕ್ತಿಯಿಂದ ನಾಲ್ಕು ಕಿವಿಯಿಂದ ಕೇಳುತ್ತಿದ್ದ ನ್ಯಾಯಾಧೀಶರು ದಿಙ್ಮೂಢರಾಗಿ ಒಂದರೆಗಳಿಗೆ ಕುಳಿತು 'ವಿಲಕ್ಷಣ ಪುರುಷನಪ್ಪ' ಎಂದುಗ್ಗರಿಸಿ ದೀರ್ಘವಾದ ಉಸಿರೊಂದನ್ನು ಬಿಟ್ಟರು. ಅವರನ್ನೇ ಅಲ್ಲಿ ಇದ್ದವರೆಲ್ಲಾ ಅಂಧರಂತೆ ಅನುಕರಿಸಿದರು.

(ಕಾಲ್ಪನಿಕ)

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ವಿನಿಮಯದ ಮಾಧ್ಯಮ

(೧ನೇ ಪುಟದಿಂದ)

ಸರಕುಗಳ ದರಗಳನ್ನೇರಿಸಿ ಮಾರ ತೊಡಗಿದ. ಇದರಿಂದ ದುಡ್ಡಿನಂತಹ ಒಂದು ಚಿಕ್ಕ ಭಾಗದ ಹಣಕ್ಕೂ ಮಹತ್ವ ಬಂದಿತು. ಸರಕುಗಳ ಸಂಗ್ರಹ ಮನುಷ್ಯನಲ್ಲಿ ಇರುವುದರಿಂದಲೂ, ಅಲ್ಲದೆ ಅದು ಮತ್ತೇ ಮತ್ತೇ ಬರುವದೆಂಬ ಆತ್ಮ ವಿಶ್ವಾಸವಿರುವುದರಿಂದಲೂ, ಅವುಗಳ ಪ್ರತ್ಯಕ್ಷ ವಿನಿಮಯದಲ್ಲಿ ಮನುಷ್ಯ ನಿರ್ಲಕ್ಷ್ಯದಿಂದಲೂ, ಉದಾರತೆಯಿಂದಲೂ, ಸಂತೋಷದಿಂದಲೂ ಸ್ವಾಭಾವಿಕವಾಗಿಯೇ ಹೆಚ್ಚು ಪ್ರಮಾಣದಲ್ಲಿ ತನ್ನ ಸರಕನ್ನು ಕೊಡಲು ಮುಂದೆ ಹೋಗುತ್ತಾನೆ. ಈ ಕಾರಣದಿಂದಲೇ ನಮ್ಮ ಜೀವನ ಮಟ್ಟದ ವೆಚ್ಚ ಕಡಿಮೆಯಾಗಬಹುದೆಂದು ಹೇಳಬಹುದಾಗಿದೆ. ಈಗಲೂ ಕೂಡ ಅನೇಕ ಹಳ್ಳಿಯಲ್ಲೂ ಪದಾರ್ಥಗಳ ಪ್ರತ್ಯಕ್ಷ ವಿನಿಮಯ ನಡೆಯುವುದನ್ನು ನಾವು ನೋಡಬಹುದಾಗಿದೆ. ಪಟ್ಟಣಗಳಲ್ಲೂ ಕೂಡ ಕೆಲವೊಮ್ಮೆ ಇಂತಹ ವಿನಿಮಯಗಳು ನಡೆಯುವುದನ್ನು ನಾವು ಕಾಣಬಹುದು. ಕಸಬರಿಗೆ, ನೇರಲ ಹಣ್ಣು ಮೊದಲಾದುವುಗಳನ್ನು ಅಕ್ಕಿ, ಜೋಳಗಳನ್ನು ಕೊಟ್ಟು ತೆಗೆದುಕೊಳ್ಳುವುದು, ಒಬ್ಬರ ಮನೆಯಿಂದ ತಂದ ಜೋಳಗಳಿಗೆ ಬದಲಾಗಿ ಅಕ್ಕಿಯನ್ನು ಕೊಡುವುದು-ಇವೇ ಮೊದಲಾದ ಸನ್ನಿವೇಶಗಳು ಈಗಲೂ ಕೂಡ ಇವೆ. ಹಿಂದಿನ ಕಾಲಕ್ಕೂ, ಇಂದಿನ ಕಾಲಕ್ಕೂ ಅಜಗಜಾಂತರವಾದ ಬದಲಾವಣೆಯಾಗಿದ್ದು ವೈಜ್ಞಾನಿಕ ಪ್ರಗತಿಯು ಮನುಷ್ಯನ ಜೀವನ ಮಟ್ಟದ ವೆಚ್ಚವನ್ನು ಕಡಿಮೆಮಾಡಲು ಸಹಾಯಮಾಡುವ ಸಾಧನವಾಗಿದೆಯೆಂಬುದನ್ನು ತೋರಿಸಿಕೊಡಬೇಕಾಗಿದೆ. ಆದರೆ ಅದರ ಸರಿಯಾದ ಉಪಯೋಗವನ್ನು ಮನುಷ್ಯ ಈ ವರೆಗೂ ಮಾಡಿಕೊಂಡಿಲ್ಲ. ಆದರೆ ಇಂದಿಲ್ಲ ನಾಳೆಯಾದರೂ ಉಪಯೋಗವನ್ನು ಮಾಡಿಕೊಳ್ಳದೆ ಎಂದಿಗೂ ಇರಲಾರ.

ಹಣ ಕೇವಲ ವಿನಿಮಯದ ಮಾಧ್ಯಮವಾಗಿ ಬಂದು ಅನುಭೋಗಿಸಲು ಅಸಮರ್ಥವಾದ ಒಂದು ಅನುಪಯೋಗಿ ವಸ್ತುವಾಗಿದ್ದು ಆವಶ್ಯಕ ಪದಾರ್ಥಗಳ ಅದಲುಬದಲಾವಣೆಯಲ್ಲಿ ಅನಾವಶ್ಯಕವಾಗಿ ವಿಶಿಷ್ಟವಾದ ಮಹತ್ವದ ಸ್ಥಾನವನ್ನು ವೈಜ್ಞಾನಿಕ ಪ್ರಗತಿಯುಳ್ಳದ ಸಂದರ್ಭದಲ್ಲಿ ಪಡೆದುಕೊಂಡಿದೆ. ಆದರೆ ಇಂದು ಎಲ್ಲವನ್ನೂ ವಿಶೇಷವಾಗಿ ಅವಲೋಕಿಸಿ ನೋಡಿದಾಗ ಅದರ ಉಪಯೋಗವೇನೂ ಇಲ್ಲವೆಂಬುದು ತೀರ ಸ್ಪಷ್ಟವಿದೆ; ಇದಕ್ಕೆ ಬದಲಾಗಿ ತೊಂದರೆಯೇ ವಿಶೇಷವಾಗಿದೆ. ನಮ್ಮದಕ್ಕೆ ಪ್ರತಿಯಾಗಿ ಮೊದಲು ಹಣ ಸಂಗ್ರಹಿಸಿ, ಅನಂತರ ಅದರ ಸಹಾಯದಿಂದ ನಮಗಿಷ್ಟವಾದುದನ್ನು ಪಡೆಯಬಹುದು. ಇದರಿಂದ ಒಂದು ಪದಾರ್ಥವನ್ನು ದೊರಕಿಸಲು ಎರಡು ಸಲ ಹಣದ ಮಾಧ್ಯಮದಿಂದ ಅದಲುಬದಲು ಮಾಡಬೇಕಾದ ಪ್ರಸಂಗವಿದೆ. ಆದರೆ ಪದಾರ್ಥಗಳ ಪ್ರತ್ಯಕ್ಷ ಬದಲಾವಣೆಯಿಂದ ಒಂದೇ ಸಲಕ್ಕೆ ನಮ್ಮ ಇಚ್ಛಿತ ಪದಾರ್ಥಗಳನ್ನು ನಾವು ಪಡೆಯಬಹುದು. ಇದರಿಂದ ಕೆಲಸವೂ ತೀವ್ರಗತಿಯಿಂದ ನಡೆಯಬಹುದಾಗಿದೆ.

ಇಂದಿನ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಹಣಕ್ಕೆ ಬೆಲೆಯಿದ್ದು, ಅದರ ಸಂಗ್ರಹವೇ ರಾಷ್ಟ್ರದ ಉಚ್ಚದರ್ಜೆಯ ದ್ಯೋತಕವೆಂದು ಗಣಿಸಲ್ಪಡುತ್ತದೆ. ಹಣಕ್ಕಾಗಿ ಕೊರಗುತ್ತಿರುವ ಭಾರತದಂತಹ ರಾಷ್ಟ್ರವು ಪದಾರ್ಥಗಳ ಪ್ರತ್ಯಕ್ಷ ವಿನಿಮಯಕ್ಕೆ ಪ್ರಾಶಸ್ತ್ಯ ಕೊಟ್ಟದ್ದೇ ಆದಲ್ಲಿ ಅನಾವಶ್ಯಕವಾಗಿ ಜನರಲ್ಲಿ ಸಂಚಲಿತವಾಗುತ್ತಿರುವ ಹಣದ ಉಳಿತಾಯವಾಗಿ ರಾಷ್ಟ್ರದ ಸಂಪತ್ತು ಹೆಚ್ಚಾಗಬಹುದಾಗಿದೆ. ಇದರಿಂದಾಗಿ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಬಳಲುತ್ತಿರುವ ನಾವು ನಮ್ಮ ದಿಜಾಗಿ ಯಾವ ಕಾಲದಲ್ಲೂ ತಲೆಯೆತ್ತಿ ಮೆರೆಯಬಹುದಾಗಿದೆ. ಇವೆಲ್ಲ ಕಾರಣದಿಂದ ನಾವೆಲ್ಲರೂ ವಿನಿಮಯ ಮಾಧ್ಯಮದ ಬಗ್ಗೆ ಆಲೋಚಿಸಿ, ವಿಶೇಷ ವೆಚ್ಚದ್ದಾಗಿ ಮಾಡಿರುವ ನಮ್ಮ ಜೀವನಮಟ್ಟವನ್ನು ಕಡಿಮೆಗೊಳಿಸುವಲ್ಲಿ ನೆರವಾದರೆ ನಮ್ಮ ವೈಯಕ್ತಿಕ ಉತ್ಥಾನಕ್ಕೂ ಆಸ್ಪದ ದೊರಕಿದಂತಾಗುತ್ತದೆ; ರಾಷ್ಟ್ರಕಲ್ಯಾಣವೂ ಸಾಧಿಸುತ್ತದೆ, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಗೌರವದಿಂದ ತಲೆಯೆತ್ತಿ ನಡೆಯಲೂ ಸಾಧ್ಯವಾಗುತ್ತದೆ.

ಜೈಹಿಂದ್.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಸ್ವಾಮಿ ಶಿವಾನಂದರ ವಾಣಿ.

ಐಹಿಕ ಸುಖದ ಅನಿತ್ಯತೆ

ಅನುವಾದಕರು: ಬಿ. ಕೇಶವ ಪೈ, B.A.,
ಪರಿದಾಸರು, ಉಡುಪಿ

(1) ಈ ಜಗತ್ತು ಅನಿತ್ಯವಾದುದು ಹಾಗೂ ದುಃಖಮಯವಾದುದು. ಆದುದರಿಂದ ನಿತ್ಯನೂ, ಚಿದಾನಂದ ಸ್ವರೂಪನೂ ಆದ ಭಗವಂತನನ್ನು ಸೇವಿಸು.

2. ಪ್ರಾಪಂಚಿಕ ವಸ್ತುಗಳೇ ಶ್ರೇಷ್ಠವಾದುವುಗಳೆಂದು ನೀನು ಅವುಗಳಲ್ಲೇ ಆಸಕ್ತನಾಗುವುದಿದ್ದರೆ, ಸತ್ಯ ಸ್ವರೂಪದತ್ತಣ ನಿನ್ನ ದೃಷ್ಟಿ ಮುಚ್ಚಿ ಹೋಗುವುದು. ಆಗ, ತನ್ನ ಗೂಡಿನಲ್ಲಿಯೇ ಸಿಲುಕಿ ಒದ್ದಾಡುವ ರೇಶ್ಮೆ ಹುಳುವಿನಂತೆ ನೀನು ಪ್ರಾಪಂಚಿಕ ವಸ್ತುಗಳಿಂದ ಬಂಧಿತನಾಗುವೆ.

(3) ಶ್ರೇಷ್ಠವು ದೊರೆಯುವ ತನಕ ಕನಿಷ್ಠವು ಮಾನ್ಯವಾಗಬಹುದು; ಪರಮಾತ್ಮನನ್ನು ಕಾಣುವ ತನಕ ಮಾತ್ರ ಈ ಜಗತ್ತು ಉತ್ತಮವೆಂಬುದಾಗಿ ಕಾಣಿಸಬಹುದು.

(4) ಬಾಹ್ಯ ಐಶ್ವರ್ಯವು ಅಂತರಿಕ ಶಾಂತಿಯನ್ನೆಂದಿಗೂ ದೊರಕಿಸುವಂತಿಲ್ಲ.

(5) ಪ್ರತಿ ನಿತ್ಯವೂ ಇಂದ್ರಿಯ ಸುಖದತ್ತ ನೀನು ಧಾವಿಸುವೆ. ನೀನು ಬಯಸಿದ ವಸ್ತು ದೊರೆತಾಕ್ಷಣವೇ ತತ್ಸಂಬಂಧವಾದ ಸುಖವು ಮುಗಿಯುವುದು. ಅಂದರೆ, ಪಡೆದಂದಿನಿಂದ ಆ ಸುಖವು ಕಡಿಮೆಯಾಗುತ್ತಾ ಹೋಗುವುದನ್ನು ನೀನೇ ತಿಳಿಯುವೆ. ಆದರೂ ಆ ದುಃಖ ಮಿಶ್ರಿತ ಸುಖವನ್ನು ಸಾಧಿಸುವ ನಿನ್ನ ಹುಚ್ಚನ್ನು ಬಿಡದೆ, ಇನ್ನೂ ನೀನು ಆ ಕಡೆಗೇನೆ ಧಾವಿಸುತ್ತಿರುವೆಯಲ್ಲವೆ? ಅದೇ ಮಾಯೆ.

(6) ತಾತ್ಕಾಲಿಕ ಸುಖಕೊಡುವ ಜಗತ್ತೇ ಪೂರ್ಣ ಸುಖದ ನಾಡೆಂದು ನಂಬದಿರು; ಅದು ಬರೀ ಮಾಯೆಯ ಬೀಡು; ಅದು ಕೊಟ್ಟ ಮಾತಿನಂತೆ ವರ್ತಿಸದು; ಕಣ್ಣಿಗೆ ತೋರುವಂತೆ ಇರದು; ಬದಲಾಗುತ್ತಾ ಹೋಗಿ ನಿನ್ನ ಕೈ ಬಿಡುವುದು.

(7) ಯೌವನ, ರೂಪ, ಐಶ್ವರ್ಯ, ಅಧಿಕಾರ ಸಂಬಂಧಿಗಳಿಂದ ದೊರೆವ ಸುಖ, ಇವೆಲ್ಲವೂ ಅನಿತ್ಯವೆಂಬುದನ್ನು ನೆನಪಿನಲ್ಲಿಡು; ವಿವೇಕಿಯು ಎಂದಿಗೂ ಇಂತಹ ವಸ್ತುಗಳಿಂದ ಸುಖ ಬಯಸಲಾರನು.

(8) ಹಗಲಿರುಳು ನಿನ್ನ ಹೆಡೆ ತಲೆಯಲ್ಲಿ ಮೃತ್ಯುವು ಕ್ರೂರ ನಗೆಯಿಂದ ಯುಕ್ತಳಾಗಿ ನಲಿದಾಡುತ್ತಿರುವಳು ಆದರೂ, ನೀನು ಮಾತ್ರ ಈ ಶರೀರಕ್ಕೆ ಸಾವೇ ಇಲ್ಲ; ಈ ವಿಲಾಸಗಳಿಗೆ ಅಂತ್ಯವೇ ಇಲ್ಲವೆಂಬುದಾಗಿ ಬಗೆದಿರುವೆಯಲ್ಲವೆ— ಇದೇ ಮಾಯೆ.

(9) ವಿಜ್ಞಾನವು ದೊರಕಿಸುವ ಭೌತಿಕಿನ ಸುಖಗಳೆಷ್ಟಿದ್ದರೂ ಅವೆಲ್ಲವೂ ಕ್ರಮೇಣ ನಶಿಸುವಂಥವುಗಳು.

(10) ತಾನು ಮರೀಚಿಕೆಯನ್ನು ಹಿಂಬಾಲಿಸುತ್ತಿರುವೆನೆಂದು ಮಾನವನು ಇಂದು ಕಂಡು ಕೊಂಡಿದ್ದಾನೆ.

(11) ಇಹ ಸುಖವು ದುಃಖ ನೋವುಗಳ, ಅತೃಪ್ತಿ-ಅಶಾಂತಿಗಳ ಮಿಶ್ರಣವಾಗಿದೆ.

(12) ಈ ಅಸ್ಥಿರವಾದ ಬದುಕು ಕಮಲದೆಲೆಯ ಮೇಲಣ ನೀರ ಹನಿಯಂತೆ ಯಾವ ವೇಳೆಯಲ್ಲಾದರೂ ಜಾರಿ ಹೋಗುವುದೆಂಬುದು ನಿಶ್ಚಯ; ಎಂದಬಳಿಕ ಇಲ್ಲಿ ನಿಜಸುಖವೆಲ್ಲಿದೆ?

(13) ಇಹ ವಸ್ತುಗಳು ಸುಖ ಶಾಂತಿಯ ಆಗರವೆಂದು ನೀನು ಬಗೆದಿದ್ದರೆ, ಸಮುದ್ರದಲ್ಲಿ ಮುಳುಗಿದವನು ತಿಮಿಂಗಿಲದ ಬೆನ್ನನ್ನೇರಿ, ಇದು ತನ್ನನ್ನು ದಡ ಮುಟ್ಟಿಸುವ ಮರದ ಹಲಗೆ ಎಂದು ತಿಳಿದರೆ ಹೇಗೆ ಮೋಸ ಹೋಗುವನೋ ಅಂತೆಯೇ ನೀನು ಮೋಸ ಹೋಗುವಿ.

(14) ಐಹಿಕ ಲಾಭಭೋಗಗಳು ನಿಷ್ಪ್ರಯೋಜಕವೂ, ನೀರಸವೂ, ನಿರರ್ಥಕವೂ ಆಗಿದೆ; ಆದರೂ ಅಂಧರು ಅದನ್ನೇ ಹಿಂಬಾಲಿಸುವರು.

(15) ಪವಿತ್ರಾತ್ಮರೇ! ಜಾಗ್ರತರಾಗಿ!! ಪ್ರಬಲ ಶಕ್ತಿಗಳೇ! ಈ ಧರೆಯಲ್ಲಿ ಅಶಕ್ಯವಾದುದೇನೂ ಇಲ್ಲ. ಎದ್ದೇಳಿರಿ! ಈಗಲೇ ಈ ಇಂದ್ರಿಯ ಸುಖದ ತೃಷ್ಣೆ ಮತ್ತು ಅಜ್ಞಾನದ ನಿದ್ರೆಯನ್ನು ತೊಡೆಯಿರಿ.

ಮುಂದಿನವಾರ

(ಓ, ಜೀವನಯಾತ್ರಿಕನೇ, ಎಚ್ಚತ್ತಿರು)

37 ವರುಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್,
ಪ್ರಧಾನ ಕಚೇರಿ: ಉಡುಪಿ (ದ. ಭಾರತ).
ನಮ್ಮ ಬೆಳ್ಳೆಯ ಶಾಖೆ
ತಾ. 3-3-1958ಕ್ಕೆ ತೆರೆಯಲ್ಪಟ್ಟಿತು.
* * * * *
ಶೀಘ್ರದಲ್ಲಿಯೇ ತೆರೆಯಲಿರುವ ಇತರ ಶಾಖೆಗಳು:
ಬೆಂಗಳೂರು—ಬೇಲೂರು—ಶಿವಮೊಗ್ಗ
THE PANGAL NAYAK
BANK LIMITED,
(ESTD. 1920.)



Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭ VOL. 37

27—3—1958

ಸಂಚಿಕೆ ೨೯ NO. 29

ವಿಶ್ವಶಾಂತಿಗೆ ಮಹತ್ವದ ದೇಣಿಗೆ—

ಭಾರತ-ನ್ಯೂಜಿಲೆಂಡ್ ಮೈತ್ರೀಕೂಟ

ನ್ಯೂಜಿಲೆಂಡಿನ ಪ್ರಧಾನಮಂತ್ರಿ ಶ್ರೀ ವಾಲ್ಟರ್ ನೇಶರನ್ನು ಸ್ವಾಗತಿಸಲು ನವದೆಹಲಿಯಲ್ಲಿ ಒಂದು ಕೂಟವೇರ್ಪಟ್ಟಿತ್ತು. ಆ ಕೂಟದಲ್ಲಿ ಭಾರತದ ಪ್ರಧಾನಿ ಶ್ರೀ ನೆಹರೂರವರು ಮನನೀಯವಾದ ಭಾಷಣವನ್ನು ಮಾಡಿದರು. ವಿಶ್ವಶಾಂತಿಯ ಬಗ್ಗೆ ಭಾರತವು ಪ್ರಯತ್ನ ನಡೆಸಿದಂತೆ ಜಗತ್ತಿನ ಬೇರಾವ ರಾಷ್ಟ್ರವೂ ನಡೆಸಲಿಲ್ಲ ಎಂದು ಶ್ರೀ ನೇಶರು ಅಭಿಪ್ರಾಯಪಟ್ಟಿದ್ದಾರೆ. ಶ್ರೀ ನೆಹರೂರವರ ಭಾಷಣದ ಸಾರವನ್ನಿಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ನಾವಿಲ್ಲಿ ನಿಮ್ಮನ್ನು ಸ್ವಾಗತಿಸಲು ಸೇರಿದ್ದೇವೆ. ತಮ್ಮನ್ನು ಗೌರವಿಸಿ ಸ್ವಾಗತಿಸಲು ಸೇರಿದ ಈ ಸಭೆಯೇ ಬೀಳ್ಕೊಡುವ ಕೂಟವಾಗಿರುವುದು ನಮ್ಮ ದುರದೃಷ್ಟ. ನಿಮ್ಮ ಉಪಸ್ಥಿತಿಯಿಂದ ಹಲವಾರು ಲಾಭಗಳನ್ನು ನಾವು ಪಡೆಯಬೇಕಾಗಿರುವುದರಿಂದ ಬಹುದಿನಗಳ ವರೆಗೆ ತಾವಿಲ್ಲಿ ಉಳಿಯಬೇಕೆಂದು ನಾವು ಬಯಸುತ್ತೇವೆ. ತಮಗೂ ನಮ್ಮ ದೇಶವನ್ನು ಇನ್ನೂ ಪೂರ್ಣವಾಗಿ ನೋಡಲು ಮತ್ತು ನಮ್ಮ ಜನರೊಡನೆ ಬೆರೆಯಲು ತಮಗೇ ಅವಕಾಶವಿರಬೇಕಾಗಿತ್ತು. ನಾವು ಸಹ ರಾಷ್ಟ್ರಗಳ ಸದಸ್ಯ ರಾಷ್ಟ್ರೀಯರಾದುದರಿಂದ, ಪರಸ್ಪರ ಸಹಕರಿಸಿದ್ದುದರಿಂದ ಮತ್ತೂ ಸಹಕರಿಸುವ ಅಭಿಲಾಷೆಯಿಂದ ಕೂಡಿರುವುದರಿಂದ ಮತ್ತು ತಾವೂ ನಾವು ಸಾಧಿಸಬೇಕೆಂದಿರುವ ಗುರಿಗಳನ್ನು ಸಾಧಿಸಿಕೊಂಡಿರುವ ರಾಷ್ಟ್ರವೊಂದರಿಂದ ಆಗಮಿಸಿರುವುದರಿಂದ, ನಿಮ್ಮನ್ನು ಸ್ವಾಗತಿಸಲು ಹಾಗೂ ನಿಮ್ಮೊಡನೆ ಕೂಡಿಕೊಳ್ಳಲು ನಮಗೆ ಸಂತೋಷವಾಗುವುದು.

ನಾವು ನಮ್ಮ ದೇಶವನ್ನು ಕಲ್ಯಾಣ ರಾಷ್ಟ್ರವೆಂದು ಕರೆಯುತ್ತೇವೆ. ನಾವು ಆ ನಮ್ಮ ಉದ್ದೇಶ ಮತ್ತು ಭಾವನೆಯಿಂದ ತುಂಬ ದೂರವಿದ್ದೇವೆ. ಆದರೆ, ನಿಮ್ಮ ನ್ಯೂಜಿಲೆಂಡು ಬಡತನವನ್ನು ಹೋಗಲಾಡಿಸಿ ಈ ಗುರಿಯನ್ನು ಮುಟ್ಟಿದೆ. ಅಲ್ಲಿ ಎಲ್ಲರಿಗೂ ಜೀವನಾವಶ್ಯಕತೆಗಳು, ಮತ್ತಿತರ ವಸ್ತು ವಿಷಯಗಳು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಅವಕಾಶಗಳು ದೊರೆಯುತ್ತವೆ. ನಮ್ಮ ಭಾರತದಲ್ಲಿನ ಎಲ್ಲ ಮಕ್ಕಳಿಗೂ ನ್ಯೂಜಿಲೆಂಡಿನ ಮಕ್ಕಳಿಗೆ ದೊರೆಯುವಂತೆ ಎಲ್ಲ ಸಂದರ್ಭಗಳೂ ದೊರೆಯಬೇಕೆಂದು ಬಯಸುತ್ತೇವೆ. ಪರಿಶ್ರಮ ಮತ್ತು ದೀರ್ಘಾವಧಿಯಲ್ಲಾದರೂ ನಾವು ಅದನ್ನು ಸಾಧಿಸುವೆವೆಂದು ನಂಬುತ್ತೇವೆ.

ತಾವು ಶಾಂತ, ಸ್ವಾತಂತ್ರ್ಯಪ್ರೇಮಿ ಸಮಾಜಕ್ಕೆ ಸೇರಿದವರಾಗಿದ್ದು, ನಿಮಗೆ ಮಾತ್ರವಲ್ಲ ಜಗತ್ತಿನ ಇತರ ರಾಷ್ಟ್ರಗಳವರಿಗೂ ಶಾಂತಿಯನ್ನು ಎದುರು ನೋಡುತ್ತಿರುವವರಾಗಿದ್ದೀರಿ. ಬಹಳ ಹಿಂದಿನ ಕಾಲದಲ್ಲಿ ನಿಮ್ಮ ಪೂರ್ವಜರು ಒಂದು ಹಳೆಯ ರಣಭೂಮಿಯಿಂದ ಹೊರಟು ಹಳೆಯ ಲೋಕದ ಜಗಳಗಂಟತನವನ್ನಲ್ಲಿಯೇ ಬಿಟ್ಟು ಹೊಸ ಲೋಕಕ್ಕೆ ನೆಲೆಯಾಗಲು ಹೋದರು. ಆದುದರಿಂದ, ಈ ದೂರದ ದೇಶದಲ್ಲಿ, ನಮಗೂ ದೂರವಾದ ಭೂಭಾಗದಲ್ಲಿ, ಒಂದು ನೂತನ ಭೂಖಂಡದಲ್ಲಿ ಶಾಂತಿ ಮತ್ತು ಸಹಕಾರ ಸಹಿತವಾದ ಒಂದು ಸ್ವತಂತ್ರ ಸಮಾಜವನ್ನು ಕಟ್ಟಿಕೊಂಡು, ಅಭಿವೃದ್ಧಿಪರವಾದ ಕಲ್ಯಾಣ ರಾಷ್ಟ್ರವೊಂದನ್ನು ನಿರ್ಮಿಸಿದಿರಿ. ಪ್ರಶಂಸಾಪೂರ್ಣ ದೃಷ್ಟಿಯಿಂದ ನಾವು ನಿಮ್ಮನ್ನು ನೋಡುವುದಲ್ಲದೆ ಸ್ವಲ್ಪ ಅಸೂಯೆಯಿಂದಲೂ ನೋಡುತ್ತೇವೆ. ತಾವಿದನ್ನು ಗಮನಿಸುವಿರೆಂದೂ ನಾನು ನಂಬುವುದಿಲ್ಲ.

ಭೂಭಾಗದಿಂದ ದೂರದಲ್ಲಿರುವ ನೀವು ಭೂಮಿಯ ಮಧ್ಯಭಾಗದಲ್ಲಿರುವ ನಮ್ಮಂತೆಯೇ ಜಗತ್ತನ್ನೆದುರಿಸಲು ನಮ್ಮದೇ ಆದ ಬೃಹದಾಕಾರದ ಸಮಸ್ಯೆಗಳು ಕೆಲವಿರುತ್ತವೆ. ನಮಗೇ ಸಮಸ್ಯೆಗಳಿರುವುದರಿಂದಲೇ ಜಗತ್ತಿನ ಒಗಟನ್ನು ಬಿಡಿಸುವಲ್ಲಿ ಸಾಕಷ್ಟು ಅವಕಾಶ ಮತ್ತು ಒತ್ತಾಯಗಳಿವೆ ಎಂದು ನಾನು ನಂಬುತ್ತೇನೆ.

ಇಂತಹ ಸಮಸ್ಯೆಗಳು ಹಲವಾರು ಮತ್ತು ಅತ್ಯಂತ ಕಷ್ಟಕರವಾದುವೆಂದು ಕಂಡುಬರುತ್ತವೆ. ನಾವು, ಭಾರತೀಯರು ಈ ಒಗಟಿನ ವಿಶ್ಲೇಷಣೆಗೆ ನಾವು ತುಂಬ ಪ್ರಯತ್ನಿಸಿದ್ದೇವೆ ಎಂದು ಹೇಳಬಹುದು. ಆದರೆ, ನಾವೆಲ್ಲರೂ ಅಣುಪ್ರಮಾಣದಷ್ಟನ್ನು ಮಾತ್ರ ಸಾಧಿಸಬಹುದು. ಆದರೂ ನಾವು ಮತ್ತು ನಿಮ್ಮ ರಾಷ್ಟ್ರ ಹಾಗೂ ಜಗತ್ತಿನ ಇನ್ನಿತರ ರಾಷ್ಟ್ರಗಳು ಅಲ್ಪ ಸ್ವಲ್ಪ ಭಾಗವನ್ನು ಮಾತ್ರ ಪೂರೈಸಬಹುದು. ಆದರೆ, ಇಂತಹ ಕಾರ್ಯಗಳು ಪರಿಣಾಮದಲ್ಲಿ ಒಂದು ಉನ್ನತ ಪ್ರಮಾಣವನ್ನು ಪಡೆಯುವುವೆಂದು ಧೈರ್ಯದಿಂದ ನುಡಿಯಬಹುದು; ಮತ್ತು ಘಟನಾ ಮಾಲೆಯ ಮೇಲೆ ಸಾಕಷ್ಟು ಪರಿಣಾಮ ಬೀರಲು ಇದು ಸಾಕಾಗುವುವೆಂದು ಹೇಳಬಹುದು. ಈ ಎಲ್ಲ ಸಮಸ್ಯೆಗಳಲ್ಲಿ ಶಾಂತಿ ಮತ್ತು ಜಗತ್ತಿನ ಭದ್ರತೆಯ ಸಮಸ್ಯೆಯು ಎಲ್ಲವುಗಳಿಗಿಂತ ಪ್ರಧಾನ ಮತ್ತು ಪ್ರಾಥಮಿಕವಾದುದು. ನಾವಿಂದು ಆಡಳಿತಾ ಭಾವನೆಯ ಅಂಜಿಕೆಯನ್ನು ನೋಡುತ್ತೇವೆ. ಅಖಂಡ ಜಗತ್ತಿನಲ್ಲಿಯೇ ಜನಾಂಗ ಜನಾಂಗಗಳ ನಡುವೆ ಹೆದರಿಕೆಯಿದ್ದು ಈ ಭಯದಿಂದಾಗಿ, ಭಿನ್ನಾಭಿಪ್ರಾಯಗಳ ಹುಟ್ಟಿಕೊಳ್ಳುತ್ತವೆ. ಮತ್ತು ವಿಜ್ಞಾನದ ನೂತನ ಸಂಶೋಧನೆಗಳು ಮತ್ತೂ ಭಯಾನಕವೆನಿಸಿದ ಮಾರಕಾಸ್ತ್ರಗಳ ತಯಾರಿಗೆ ಉಪಯೋಗಿಸಲ್ಪಡುತ್ತವೆ.

ಮಾನವನ ಬುದ್ಧಿಯು ಸಂಶೋಧಿತವಾಗಿರುವ ಈ ಕುತೂಹಲಪೂರ್ಣ ಜಗತ್ತಿನಲ್ಲಿ ನಾವಿದ್ದೇವೆ. ಎಲ್ಲ ವಿಧದ ವಸ್ತುಗಳನ್ನೂ ನಾವು ಕಂಡುಕೊಂಡಿದ್ದೇವೆ. ಈ ಶೋಧನೆಗಳು ಮಾನವತೆಗೆ ತುಂಬ ಲಾಭವನ್ನು ಒದಗಿಸಿಕೊಟ್ಟಿವೆ; ಅಲ್ಲದೇ ಹಾನಿಯನ್ನೂ ಸಂಪಾದಿಸಿ ಇತ್ತಿವೆ. ಮಾನವರಿಗೆ ಉಂಟಾಗುವ ಲಾಭಗಳನ್ನು ಮತ್ತೂ ಮತ್ತೂ ಹೆಚ್ಚಿಸಲು ನಾವು ಈ ನೂತನ ಸಂಶೋಧನೆಗಳನ್ನು ಬಳಸಬೇಕೇ ಅಥವಾ ನಮ್ಮ ಕೃತಿ ಶಕ್ತಿ ಹಾಗೂ ಶೋಧನೆಗಳನ್ನು ಹತೋಟಿಯಲ್ಲಿಡುವುದರಲ್ಲಿ ಅಸಫಲರಾಗಿ ನಾವು ವಿನಾಶದಿಂದ ನರಳುವಂತಾಗಬೇಕೇ ಎಂಬುದರಲ್ಲಿ ನಮಗಿಷ್ಟವಾದುದನ್ನು ನಾವಿಂದು ಆರಿಸಬೇಕಾಗಿದೆ. ಈ ಪ್ರಶ್ನೆಗೆ ಕೇವಲ ಒಂದೇ ಒಂದು ಉತ್ತರವಿದೆ, ನಾವು ವಿನಾಶವನ್ನು ಬಯಸುತ್ತೇವೆಂದು ಯಾರು ತಾನೇ ಉದ್ಗರಿಸಬಹುದು? ಪ್ರತಿಯೊಬ್ಬನೂ ಶಾಂತಿಯನ್ನು, ಅಭಿವೃದ್ಧಿಯನ್ನು ಮತ್ತು ಈ ಸಂಶೋಧಿತ ಶಕ್ತಿಯನ್ನು ಮಾನವ ಸಮಾಜದ ಅಭ್ಯುತ್ಥಾನಕ್ಕಾಗಿ ಬಳಸುವಂತೆ ಎಂಬುದನ್ನೇ ಚಿಂತಿಸುತ್ತಿದ್ದಾನೆ; ಮತ್ತದನ್ನೇ ಬಯಸುತ್ತಾನೆ. ಜನರೆಲ್ಲರೂ ಈ ಮಾತನ್ನೊಪ್ಪುವರೆಂದು ನನಗೆ ದೃಢ ವಿಶ್ವಾಸವಿದೆ. ನಾವು ಈ ಒಂದು ಗಂಟಿನಲ್ಲಿ ಸುಲಭದಲ್ಲಿ ಸಿಕ್ಕಿಕೊಂಡಿದ್ದೇವೆ. ಮತ್ತದರಿಂದ ಸುಲಭವಾಗಿ ಹೊರಬರಲು ಅಸಾಧ್ಯರಾಗಿದ್ದೇವೆ.

ದೂರದೃಷ್ಟಿಯಿಂದ ನಾವೀ ವಿಷಯಗಳತ್ತ ನೋಡುವುದಾದರೆ, ಹಿಂದಿನ ಸಮಯದ ವಿಶ್ವ ಪತನದ ಗಳಿಗೆಗಳನ್ನು ಮಾನವನಿಂದು ವೀಕ್ಷಿಸುತ್ತಾನೆ. ಆಗ, ಅಂದಿನ ಜನರು ಜಗತ್ತಿನ ನಾಗರಿಕತೆಯು ಅಂತ್ಯವಾಯಿತೆಂದು ತಿಳಿದಿದ್ದರು. ಆದರೆ, ಮಾನವ ಅಥವಾ ಮಾನವತೆಯು ಆ ಪತನವನ್ನು ನಡೆಯಗೊಡದಿರಲು ಶಕ್ತಿವಂತವಾಯಿತು, ಅಲ್ಲದೆ, ಅಡೆತಡೆಗಳೆಲ್ಲವನ್ನೂ ನಿವಾರಿಸಿ, ಅಭಿವೃದ್ಧಿ ಹೊಂದಲು ಸಾಧ್ಯವೆನಿಸಿತು. ಆದುದರಿಂದ, ಇಂದಿನ ಯುಗವೂ ಗಂಡಾಂತರಗಳನ್ನು ದಾಟಿ ಕಷ್ಟಗಳನ್ನು ದೂರೀಕರಿಸುವುದೆಂದು ನಾನು ಬಯಸುತ್ತೇನೆ. ಮತ್ತು ನಂಬುತ್ತೇನೆ. ಆದರೆ, ಹೀಗಾಗಬೇಕಾದರೆ, ನಾವು ನಮ್ಮನ್ನು ಈ ಕೆಲಸಕ್ಕೆ ಅಂಟಿಸಿಕೊಳ್ಳಬೇಕು ಅಲ್ಲದೇ ತನ್ನಷ್ಟಕ್ಕೇ ನಿವಾರಣೆಯಾಗುವುದೆಂದು ಕೈಕಟ್ಟಿ ಕೂರಬಾರದು. ಇಂತಹ ಭಾರವಾದ ಹೊರೆಯು ನಾವು ಯಾವ ದೇಶದಲ್ಲಿಯೇ ವಾಸಿಸಲಿ, ನಮ್ಮೆಲ್ಲರ ಮೇಲೆಯೂ ಬಿದ್ದಿದೆ ಎಂದು ಹೇಳಬಹುದು. ಎಂತಲೇ ನಾವು ಶಾಂತಿ

(೧೧ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಉದ್ಯೋಗದ ಅನುಭವ

ಎಮ್. ರಂಗ ರಾವ್

ಪ್ರಿಯ ತಂಗಿ,

ಅಬ್ಬ! ನಿನ್ನ ಕಾಗದ ನನ್ನ ಕೈಸೇರಿದಾಗ ನನ್ನ ಹೃದಯ ಹೇಗೆ ಕುದಿಯುತ್ತಿತ್ತು! ಆದಕ್ಕೇ ನಿನಗೆ ಪ್ರತ್ಯುತ್ತರ ಬರೆಯಲು ತಡವಾಯಿತು ಕ್ಷಮಿಸು. ಈಗ ಉಪವಾಸದಿಂದ ಮೈ ಹಗುರಾಗಿದೆ, ಹೃದಯ ತಣಿದಿದೆ ಅಮ್ಮಮ್ಮ! ಸಾವಧಾನವಾಗಿ ನೆಮ್ಮದಿಯ ಉಸಿರೆಳೆಯುತ್ತ ಬರೆಯುತ್ತಿದ್ದೇನೆ.

ಒಂದು ವೇಳೆ, ನನ್ನ ಈ ಸಂತೋಷ ನಿನಗೆ ನಗೆ ಬರಿಸೀತು. ಉದ್ಯೋಗ ಕಳೆದುಕೊಂಡು ಉಪವಾಸದಲ್ಲಿರುವ ನಾನು ಸಂತೋಷದಿಂದ ನಿನಗೆ ಕಾಗದ ಬರೆಯುವೆನೆಂದರೆ ನಿನಗೆ ಮಾತ್ರವಲ್ಲ ಯಾರಿಗೂ ನಗೆ ಬಂದೀತು. ಕೆಲವರು ಆತ್ಮ ಸಂತೋಷದಿಂದ ನಕ್ಕಾರು ನಿನ್ನಂಥವಳು ಅಪಹೇಳನವಾಗಿಯೂ ನಕ್ಕಾಳು ಹಾಗೆ ನಗುವುದೇನೂ ತಪ್ಪಲ್ಲ ಬಿಡು. ಉದ್ಯೋಗದ ಆಳವನ್ನರಿಯದೆ, ಅರಿಯಲಾಗದೆ, ನೀನೂ ನಕ್ಕರೆ ಅದರಲ್ಲೇನೂ ಅದ್ಭುತವಿಲ್ಲ. ನೀನಿಂದು ಒಬ್ಬಳು ವಿದ್ಯಾರ್ಥಿನಿ. ಜೀವಿತಾಯೋಧನದಲ್ಲಿ ಅದರ ರೀತಿ ಹೇಗೆಂದರಿಯುವ ಮನಸ್ಸಿನ ಪರಿಪಕ್ವತೆ ನಿನಗಿನ್ನು ಬರಲಿಲ್ಲ. ಬೇಗವಲ್ಲೇ ನೀನು ವಿಶ್ವವಿದ್ಯಾಲಯಕ್ಕೆ ಕಾಲಿಡಲಿರುತ್ತೀ. ಅಲ್ಲಿ ನೀನು ಕಾಣಲಿರುವ ಪರಿಸ್ಥಿತಿಗಳು ಇಂದು ನೀನು ಕಾಣುವ ಸ್ಥಿತಿಗತಿಗಳಿಗೆ ಎಷ್ಟೋ ವ್ಯತ್ಯಾಸವಾಗಿದ್ದೀತು. ವಿಜಯಚಿಂತೆ ಮಾತ್ರವೇ ಬೇರೂರಿದ ನಿನ್ನ ಹೃದಯ, ಈ ವಿಕೃತ ಲೋಕದ ವಿಪುಲ ವೈಪರೀತ್ಯದಲ್ಲಿ ತರಳಿತವಾಗುವುದನ್ನು ನೀನಿನ್ನು ನೋಡಲಿವೆ ನೀನದನ್ನು ನೋಡಲೇ ಬೇಕೆಂದು ನಾನೀಗ ಪ್ರಾರ್ಥಿಸುತ್ತೇನೆಂದು ಅಪಾರ್ಥ ಮಾಡಬಾರದ ಮತ್ತೆ. ಇದೊಂದು ಮುನ್ನೆಚ್ಚರಿಕೆ ಮಾತ್ರ.

ತಂಗಿ, ಒಂದು ವರ್ಷದ ಕೆಳಗೆ ನಾನೂ ನಿನ್ನ ಹಾಗೇ ವಿದ್ಯಾರ್ಥಿನಿಯಾಗಿದ್ದೆ. ಆಗ ನನ್ನ ಹೃದಯ ವಿಹಂಗವು ವಿಸ್ತೃತ ವಿಹಾಯದಲ್ಲಿ ವಿಹರಿಸಿದ್ದನ್ನು ಇಂದೂ ನಾನು ವಿಸ್ಮರಿಸಲಿಲ್ಲ. ಅಂದು ನಾನು ಕಟ್ಟಿ ಏರಿಸಿದ ಮನೋದುರ್ಗವೆಲ್ಲಾ ಇಂದಿಗೋ ನುಚ್ಚುನೂರಾಗಿ ನನ್ನ ಪದತಲದಲ್ಲಿ ಬಿದ್ದುಕೊಂಡಿದೆ! ಅಂದೆನ್ನ ಹೃದಯದಲ್ಲಿ ಆಟವಾಡುತ್ತಿದ್ದ ಮೃದುಚಿಂತನೆಗಳು ಇಂದಿಗೋ ಕಂದಿ ಬಾಡಿ ಕರಿಯಾಗಿ ನೆಲಕ್ಕೆ ಬಿದ್ದಿದೆ! ಅಂದಿನ ಎನ್ನ ಶುಭಾಪಿ ಭಾವನೆಗಳಲ್ಲಾ ಇಂದಿಗೋ ಸುಡುತ್ತಿರುವ ಶ್ವಾಸಗಳಾಗಿ ಹೊರಗೆ ಬರುತ್ತಿವೆ! ಇಂತಹ ಸುಟ್ಟುಸಿರುಗಳನ್ನು ಕಳೆ ಕಳೆವೇ ನನ್ನ ಹೃದಯ ತಣಿಯುತ್ತಿದೆಯೇನೋ!

ಈ ಲೋಕದಲ್ಲಿ ಪರಿಷ್ಕಾರವೆಂದು ಅಭಿಮಾನಿಸಿಕೊಳ್ಳುವಂಥದ್ದೆಲ್ಲಾ ಹೊರಗಿನ ಪರಿಷ್ಕಾರವೇ ಹೊರತು, ಅಂತಃಕರಣದ ತಿಳಿಯಾದ ಪರಿಷ್ಕಾರ ಲೇಶವೂ ಇಲ್ಲವೆಂದು ಅಂದೇ ತಿಳಿದಿದ್ದರೆ ನಾನಿಂದು ಈ ಬಿಸಿಯುಸಿರು ಬಿಡಬೇಕಾಗಿರಲಿಲ್ಲ! ಹುಂ, ಕಷ್ಟ!

ನಿನಗೆ ಗೊತ್ತಿದೆ, ಸುಮಾರು ಒಂದು ವರ್ಷ ಮಾಡಿದ ಪ್ರಯತ್ನದ ಫಲವಾಗಿ ಈಗೊಂದು ತಿಂಗಳಿಂದ ನಾನೊಂದು ಉದ್ಯೋಗ ಸಂಪಾದಿಸಿಕೊಂಡದ್ದು. ಆಹ! ಎಷ್ಟು ಆನಂದಪಟ್ಟೆನೋ! ಸ್ವತಂತ್ರ ಜೀವಿ ನಾನಾದೆ. ಅಭಿಮಾನದ ಅಲೆಗಳೇ ನನ್ನ ಹೃದಯದಲ್ಲೆದ್ದುವು. ನನ್ನ ಆಫೀಸಿನಲ್ಲೊಂದು ಪೂಜ್ಯವಾದ ಸ್ಥಾನವೇ ನನಗೆ ಸಿಕ್ಕಿತು, ನನ್ನ ಆಫೀಸರೂ, ಮೇಲಾಧಿಕಾರಿಗಳೂ ನನ್ನೊಡನೆ ಎಷ್ಟೋ ಮರ್ಯಾದೆಯಿಂದ ನಡೆದುಕೊಂಡರು. ಧನ್ಯಳಾದೆನೆಂದುಕೊಂಡ ಭಾರತೀಯ ಸಂಸ್ಕಾರವನ್ನು ಕುರಿತು ನನಗೆ ತುಂಬಾ ಅಭಿಮಾನವುಂಟಾಯಿತು.

ಒಂದು ವಾರ ಈ ಸಂತೋಷದಲ್ಲೇ ಹೋಯಿತು ಬಿಡು. ತರುವಾಯ ...ನನ್ನ ಅಭಿಮಾನವು ಭೀತಿಯ ಗಾಳಿಗೆ ಸಿಕ್ಕಿಕೊಂಡಿತು ತನ್ನ ಈ ಅಲ್ಪ ಸೌಂದರ್ಯವೂ ಯೌವನವೂ, ನನ್ನ ಉದ್ಯೋಗಕ್ಕೂ, ಕುಲಾಭಿಮಾನ ಆತ್ಮಾಭಿಮಾನಗಳಿಗೂ ವಿಘಾತುಕವೆನಿಸಿತು. ಅಯ್ಯೋ ಅಮ್ಮ! ಆದನ್ನು ನೆನೆಯಲಿಕ್ಕೂ ನನಗಾಗುವುದಿಲ್ಲ. ಒಂದು ವಾರ ಪರಿಚಿತರಾದ ನನ್ನ ಆಫೀಸರರೂ, ಇತರ ಸೀನಿಯರ್ ಉದ್ಯೋಗಿಗಳೂ ನನ್ನ ಮುಂದ ತೋರಿಸಿದ ಹುಚ್ಚು ನಾಟ್ಯಗಳನ್ನು—ಛೀ—ಲಜ್ಜಾವಹ! ಪುರುಷ ಕುಲವು ಇಷ್ಟೊಂದು ನಿಕೃಷ್ಟವಾದುದೆಂದು ನಾನು ತಿಳಿದೇ ಇರಲಿಲ್ಲ ಒಂದು ಹೆಣ್ಣಿನ ಚೆಲುವು ಚೆಂದಗಳು ಅವರನ್ನು ಕರ್ತವ್ಯ ಮೂಢರನ್ನಾಗಿ ಮಾಡುವುದು ಮಾತ್ರವಲ್ಲ ಪಬ್ಲಿಕ್ ಆಫೀಸಿನಲ್ಲಿಯೇ ಇಷ್ಟು ಹುಚ್ಚುಟವಾಡಿಸುವುದೆಂದು ನಾನು ಸ್ವಪ್ನೇಪಿ ನೆನೆದಿಲ್ಲ ಸ್ತ್ರೀಗಳ ಹಾಗೆ ಲಜ್ಜಿಸುವ ವೇಷ ವಿಧಾನಗಳೂ, ಸುಗಂಧ ದ್ರವ್ಯ ಲೇಪನಗಳೂ, ನನ್ನನ್ನು ಕೆಣಕುವ ಚೇಷ್ಟೆಗಳೂ ಇದುವನ್ನು ಏನು ಬಣ್ಣಿಸಲಿ ಬಿಡು ಬೇಕೆಂದರೆ ನೀನೇ ಯೋಚಿಸು ತುಸು ಚೆನ್ನಾಗಿರುವ ತರುಣಿಯೊಬ್ಬಳು ಉದ್ಯೋಗ ಮಾಡುವ ಆಫೀಸಿನಲ್ಲಿ ಕರ್ತವ್ಯ ಬೋಧೆಯುಳ್ಳ ಪುರುಷೋದ್ಯೋಗಿಗಳು ಹೀಗೆ ಗಂಡೂ ಹೆಣ್ಣೂ ಅಲ್ಲದಂತೆ ವರ್ತಿಸಿದರೆ ನಾಡಿನ ನಲ್ಮೆಗಾಗಿಯಾದರೂ ಆ ಸ್ತ್ರೀ ತನ್ನ ಉದ್ಯೋಗಕ್ಕೆ ರಾಜೀನಾಮೆ ಕೊಡಬೇಕಾದ್ದೇ ಧರ್ಮವೆಂದು ನನಗೆ ತೋರುತ್ತದೆ. ಅಲ್ಲದೆ ಅವಳ ಸ್ವಂತ ಮಾನ ರಕ್ಷಣೆಗಾಗಿಯಾದರೂ ಅದೇ ದಾರಿ. ಈ ಪರಿಸ್ಥಿತಿಯಿಂದಲೇ ನಾನು ರಾಜೀನಾಮೆ ಕೊಟ್ಟುಬಿಟ್ಟೆ ತಂಗಿ.

ಬಹಳ ಕಷ್ಟ! ಆರ್ಯರ ಸಂಸ್ಕಾರವು ಎಷ್ಟೊಂದು ಅಲ್ಪತನಕ್ಕಿಳಿಯಿತೋ ನೋಡಿದೆಯಾ? ಜೀವನಕ್ಕಾಗಿ ಉದ್ಯೋಗ ಮಾಡುವ ಇತರ ಸೋದರಿಯರಲ್ಲಿ ಎಷ್ಟು ಮಂದಿ ಹೀಗೆ ಪೇಚಾಡುತ್ತಿರುವರೋ ಯಾರಿಗ ಗೊತ್ತು? ನನ್ನಂಥ ಧೈರ್ಯ ಎಷ್ಟು ಮಂದಿಗೆ ಬಂದೀತು ಹೇಳು? ಈ ನೆಲೆಯಾದರೆ ನಮ್ಮಂಥ ಬಡ ಹುಡುಗಿಯರು ಹೇಗೆ ಬದುಕುವುದು ಹೇಳು? ಕಾಲ ಪರಿಸ್ಥಿಯೇನೋ ಸ್ತ್ರೀಯರನ್ನು ಕೂಡಾ ಉದ್ಯೋಗದ ನ್ಯಾಯಕ್ಕೆ ಸಿಕ್ಕಿಸಿ ಹಾಕಿ ಬಿಟ್ಟಿವೆ. ಅದರೊಳಗಿನ ಅನ್ಯಾಯಗಳಿಗೆ ಮಾತ್ರ ದೇವರೇ ದಿಕ್ಕು. ಸ್ತ್ರೀಯರು ಆಫೀಸಿನಲ್ಲಿ ಕೆಲಸಕ್ಕೆ ಬರುವುದು ಅಲ್ಲಿಯ ಪ್ರೇಮ ಪ್ರಲೋಭನಗಳಿಗಾಗಿ ಅಲ್ಲ, ಎಂದು ಅಲ್ಲಿಯ ಪುರುಷರು ತಿಳಿದುಕೊಂಡರೆ ಮಾತ್ರವೇ ಈ ಸಮಸ್ಯೆಗೆ ಉಪಶಾಂತಿಯುಂಟು ಲಕ್ಷಿಸಿಯಾರೇ ಪುರುಷರು?

ತಂಗೀ, ಮದುವೆಯಾಗದೆ ನನ್ನ ಹಾಗೆಯೇ ನೀನೂ ಉದ್ಯೋಗ ಮಾಡಬೇಕೆಂದು ಆಶಿಸುತ್ತೀ. ಈ ವಿಷಯ ಓದುವಾಗ ನಿನಗೆ ಹೇಗೆ ತೋರುವುದೋ ನನಗೆ ಬರೆಯುವೆಯಾ?

ಇಂತೀ ನಿನ್ನ ಅಕ್ಕ,
ಪದ್ಮಾವತಿ.

ಕಲಕತ್ತೆಯಿಂದ ನಾಲ್ಕು ಮೈಲು ಉತ್ತರದಲ್ಲಿರುವ ಉತ್ತರಪಾರದಲ್ಲಿನ ಹೆಂಗಸರ ಸಹಕಾರೀ ಕೈಗಾರಿಕಾಲಯದಲ್ಲಿ ನಿರಾಶ್ರಿತ ಮಹಿಳೆಯೋರ್ವಳು ಗೊಂಬೆ ಮಾಡುವುದನ್ನು ಅಭ್ಯಸಿಸುತ್ತಾಳೆ

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ರೇವಣಾತಿ.

3		ತಿಂಗಳಿಗೆ	3%
4 ರಿಂದ	6	,,	3½%
7 ,,	12	,,	4%
13 ,,	24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ			2½%
ಕರೆಂಟ್ ಎಕೌಂಟು			½%

The Moolky Bank, Ltd.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಈಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆಂಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ. ೨—೦—೦ (ಟಪಾಲು ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೃಷ್ಟಿಯಲ್ಲಿನ ಮಹಾವೈಚಿತ್ರ್ಯ—

ತೇಲುವ ಬೆಟ್ಟಗಳು

ಕೆ ಗಣೇಶ ಮಲ್ಯ

ಉತ್ತರ ಧ್ರುವಪ್ರದೇಶದ ಆಶ್ಚರ್ಯಕರ ವಸ್ತುಗಳಲ್ಲಿ ತೇಲುವ ಬೆಟ್ಟವು ಒಂದಾಗಿದೆ ತೇಲುವ ಬೆಟ್ಟವೆಂದರೆ ಬೇರೇನೂ ಅಲ್ಲ—ಅದ್ಭುತ ಗಾತ್ರದ ಹಿಮದ ತುಂಡು। ಈ ಹಿಮದ ತುಂಡು ನೀರಲ್ಲಿ ತೇಲುತ್ತ ತೇಲುವ ಬೆಟ್ಟವೆನಿಸುತ್ತದೆ. ಉತ್ತರ ಧ್ರುವ ಪ್ರದೇಶದ ನಿಕಟವರ್ತಿಯಾದ ಕಡಲುಗಳೇ ಇಂತಹ ಬೆಟ್ಟಗಳ ಆವಾಸಸ್ಥಾನಗಳಾಗಿವೆ. ಕಡಲಿನ ಅತ್ತಿತ್ತ ಡೋಲನಗೊಂಡು ಚಲಿಸುತ್ತ, ಬೆಳ್ಳಿಯ ಕಾಂತಿಯನ್ನು ಹೊರಸೂಸಿ, ಚಂದ್ರಕಾಂತ ಶಿಲೆಯಂತೆ ಶೋಭಾಯಮಾನವಾಗಿರುವ ತೇಲು-ಬೆಟ್ಟದ ಸೌಂದರ್ಯವು ಅತ್ಯಾಶ್ಚರ್ಯಕರವಾಗಿರುವಂತೆ, ಅದರಿಂದುಂಟಾಗುವ ಅಪಾಯವು ಅತಿ ಭಯಂಕರವೆನಿಸಿದೆ'

ಉತ್ತರ ಧ್ರುವ ಪ್ರದೇಶಕ್ಕೆ ಸಮೀಪವಾಗಿರುವ ಗ್ರೀನ್‌ಲೇಂಡ್ ಎಂಬ ಭೂಭಾಗವು ತೇಲು-ಬೆಟ್ಟದ ತಯಾರಿಯ ಕಾರ್ಖಾನೆಯಾಗಿದೆ ಅತೀತಕವಾದ ಚಳಿಯಿಂದ ಗ್ರೀನ್‌ಲೇಂಡ್ ಸದಾ ಹಿಮಾವೃತವಾಗಿದೆ ಕೆಲವು ಕಡೆಗಳಲ್ಲಿ ಈ ಮಂಜಿನ ಪದರು ೫೦೦೦ ಅಡಿಗಳಷ್ಟು ದಪ್ಪವಾಗಿದೆ! ಇಲ್ಲಿ ನೆಲದಲ್ಲಿ ಪಾಚಿಯಂತಹ ಸಸ್ಯಗಳು ಬೆಳೆದಿರುವುದರಿಂದ ನೆಲವು ಸದಾ ನುಣುಪಾಗಿರುತ್ತದೆ ಇದರಿಂದ ಇಳಿಜಾರು ಪ್ರದೇಶಗಳನ್ನಾವರಿಸಿದ್ದ ದೊಡ್ಡ ದೊಡ್ಡ ಮಂಜಿನ ಪದರುಗಳು ಇತರ ಭಾಗಗಳಿಂದ ಬೇರ್ಪಟ್ಟು ಜಾರಲಾರಂಭಿಸುತ್ತವೆ. ಹವಾಮಾನದ ವ್ಯತ್ಯಾಸದಿಂದಲೂ, ಕೆಲವೆಡೆ ಘರ್ಷಣೆಯುಂಟಾಗುವುದರಿಂದಲೂ. ಅವುಗಳ ತಳಭಾಗಗಳು ಅಲ್ಪ-ಸ್ವಲ್ಪ ಕರಗಿ ನೀರಾಗುತ್ತವೆ ಹೀಗುಂಟಾದ ನೀರಿನಿಂದ ಮಂಜಿನ ತುಂಡುಗಳ ಜಾರುವಿಕೆಯು ಸುಗಮವಾಗುತ್ತದೆ ಹೀಗೆಯೇ ಬೇರ್ಪಟ್ಟ ಮಂಜಿನ ತುಂಡುಗಳು ಒಂದರ ಹಿಂದೆ ಒಂದು ಸರಿಯುತ್ತ ಇಳಿಜಾರಿನಿಂದ ಕಡಲ ತಡಿಯನ್ನು ಸೇರುತ್ತವೆ ಈ ಹರಿಯುವ ಮಂಜುಗಡ್ಡೆಗಳ ಸಾಲನ್ನು ಹಿಮನದಿ ಎನ್ನುವರು ಹಿಮನದಿಯ ಬಹಳ ಭಾಗವು ಮಂಜಿನ ಗಡ್ಡೆಗಳೇ ಆದುದರಿಂದ ಅದರ ವೇಗವು ವರ್ಷಕ್ಕೆ ಬರೇ ೪೦-೫೦ ಅಡಿಗಳಾಗುತ್ತದೆ ಗ್ರೀನ್‌ಲೇಂಡಿನಲ್ಲಿ ಬೃಹದಾಕಾರದ ಹಿಮನದಿಗಳು ಎಂಟಿವೆ ಅಲ್ಲದೆ ಕೆಲವು ಚಿಕ್ಕ ಹಿಮನದಿಗಳು ಕಡಲನ್ನು ಸೇರುವುದರೊಳಗೆ ಸಂಪೂರ್ಣ ಜಲದವುಗಳೇ ಆಗಿರುವುದೂ ಇದೆ.

ಹಿಮನದಿಯು ಕಡಲನ್ನು ಸೇರಿದ ಬಳಿಕ ಮಂಜಿನ ಬೆಟ್ಟಗಳು ಕಡಲಿನ ನೀರಿನಲ್ಲಿ ಸ್ವತಂತ್ರವಾಗಿ ತೇಲಲಾರಂಭಿಸುತ್ತವೆ ಮಂಜಿನ ಸಾಂದ್ರತೆಯು ನೀರಿನ ಸಾಂದ್ರತೆಗಿಂತ ಕಡಿಮೆಯಾಗಿರುವುದರಿಂದ ಮಂಜಿನ ಬೆಟ್ಟವು ನೀರಲ್ಲಿ ನಿರಾಯಾಸವಾಗಿ ತೇಲಬಲ್ಲುದು. ಆದರೆ ಇದರ ಪ್ರಯಾಣಕ್ಕೆ ಗೊತ್ತುಗುರಿ ಇಲ್ಲದುದರಿಂದ ಕಡಲಲ್ಲಿ ಹರಿಯುವ ಹಲವು ವಿಧದ ಪ್ರವಾಹಗಳಿಗೆ ಇದು ಸಿಲುಕುತ್ತದೆ. "ಗಲ್ಫ ಸ್ಟ್ರೀಮ್" ಎಂಬ ಉಷ್ಣ ಜಲಪ್ರವಾಹಕ್ಕೆ ಯಾವುದಾದರೊಂದು ತೇಲು-ಬೆಟ್ಟವು ಸಿಲುಕಿದರೆ, ಅದರ ಆಯುಷ್ಯವು ತೀರಿದಂತೆಯೇ! ಪ್ರವಾಹದ ಉಷ್ಣಕ್ಕೆ ಅದು ಕರಗಿ ಸಮುದ್ರದೊಂದಿಗೆ ಸಮಾವೇಶಗೊಳ್ಳುತ್ತದೆ ಆದರೆ ಕೆಲವು ರಾಕ್ಷಸೀ ಪರ್ವತಗಳು ಎಂತಹ ಆಘಾತ ಕ್ಕೂ ಜಗ್ಗದೆ, ಜನ್ಮಸ್ಥಾನದಿಂದ ೧೫೦೦ ಮೈಲುಗಳಷ್ಟು ದಕ್ಷಿಣಕ್ಕೂ ಬರುತ್ತವೆ ಆದರೆ ಕ್ರಮೇಣ ಸೂರ್ಯನ ತಾಪದಿಂದ ಇವು ನಶಿಸಿಹೋಗುವುವು

ತೇಲು-ಬೆಟ್ಟದ ಚಲನೆಯು ಸ್ಥಿರವಾಗಿಲ್ಲ ಮಾಲುತ್ತ ಚಲಿಸುವುದು ಇದರ ವೈಶಿಷ್ಟ್ಯ ಚಲಿಸುವಾಗ ಕೆಲವೊಮ್ಮೆ ಇದು ಅಡಿ-ಮೇಲಾಗಿ ತಳಭಾಗ ಮೇಲೆ ಬರುವುದೂ ಇದೆ ತೇಲುವಾಗ ನೀರ ಹೊರಗಿರುವ ಬೆಟ್ಟದಂಶವು ಇಡೀ ಬೆಟ್ಟದ ಹತ್ತನೆಯ ಒಂದಂಶವಾಗಿದ್ದು ಉಳಿದ ಎಂಟಂಶವು ನೀರ ಒಳಗಿರುತ್ತದೆ

ತೇಲುವ ಬೆಟ್ಟವು ಚಲಿಸುವಾಗ ಶಬ್ದವಾಗುವುದಿಲ್ಲ, ಮಾತ್ರವಲ್ಲದೆ ಅದು ಕಣ್ಣಿಗೆ ಗೋಚರಿಸುವುದೂ ಇಲ್ಲ' ದಟ್ಟವಾದ ಮಂಜಿನ ಕಣಗಳು ಅದನ್ನೂ ಅದು ಇರುವ ಪ್ರದೇಶವನ್ನೂ ಆವರಿಸಿರುವುದರಿಂದ ಅದು ಅಗೋಚರವಾಗುತ್ತದೆ ಸಾಮಾನ್ಯವಾಗಿ ನೂರು ಗಜಗಳಷ್ಟು ಸಮೀಪಿಸುವಾಗ ತೇಲು ಬೆಟ್ಟವು ಥಕ್ಕನೆ ಗೋಚರಿಸುತ್ತದ' ಅದರ ಚಲನೆಗೆ ಗೊತ್ತುಗುರಿ ಇಲ್ಲದಿದ್ದುದರಿಂದಲೂ, ಅದರ ಅದ್ಭುತ ಗಾತ್ರದಿಂದಲೂ, ಅದಕ್ಕಭಿಮುಖವಾಗಿ ಯಾವುದಾದರೊಂದು ನತದೃಷ್ಟ ಹಡಗು ಚಲಿಸುತ್ತಿದ್ದರೆ, ಅದರ ಗತಿ ತೀರಿದಂತೆಯೇ' ಕಬ್ಬಿಣಕ್ಕಿಂತಲೂ ಘನವಾದ ಮಂಜಿನ ಬೆಟ್ಟಕ್ಕೆ ಢಿಕ್ಕಿ ಹೊಡೆದರೆ ಒಂದು ಚೂರೂ ಉಳಿಯದು ಮಂಜಿನ ಬೆಟ್ಟವನ್ನು ಅತ್ಯಂತ ಸಮೀಪಿಸಿದಾಗ ಅದರ ತಳಭಾಗದಲ್ಲಿ ಭೀಕರವಾದ ಧ್ವನಿಯು ಕೇಳಿ ಬರುತ್ತದೆ ದೊಡ್ಡ ದೊಡ್ಡ ಮಂಜಿನ ತುಂಡುಗಳು ಬೆಟ್ಟದಿಂದ ಉದುರುತ್ತಿರುವುದೇ ಇದಕ್ಕೆ ಕಾರಣವಾಗಿದೆ

ಅಣುಶಕ್ತಿಯಿಂದ ಶಾಂತಿಸಾಧನೆಯನ್ನೂ ಮಾಡಬಹುದೆಂಬುದೀಗ ಪ್ರತ್ಯಕ್ಷವಾಗಿ ಕಾರ್ಯರೂಪಕ್ಕೆ ಬಂದಿದೆ ಅಮೆರಿಕೆಯ ಪಿಟ್ಸ್‌ಬರ್ಗ ಎಂಬ ನಗರದಲ್ಲಿ ವಿದ್ಯುಚ್ಛಕ್ತಿಯನ್ನು ಅಣುವಿನಿಂದ ಒದಗಿಸಲಾಗುತ್ತದೆ ಮೇಲಿನ ಚಿತ್ರದಲ್ಲಿ ನಗರಸ್ಥಳದ ಕಾರ್ಯಾಲಯ ಹಾಗೂ ಕಟ್ಟೋಣಗಳು ಇಂತಹ ವಿದ್ಯುದ್ದೀಪಗಳಿಂದ ಅಲಂಕೃತವಾಗಿರುವುದನ್ನು ನೋಡಬಹುದು

ಸಾಮಾನ್ಯವಾಗಿ ಮಾರ್ಚ ತಿಂಗಳಲ್ಲಿ ತೇಲು-ಬೆಟ್ಟಗಳ ಜೈತ್ರಯಾತ್ರೆಯು ಆರಂಭವಾಗುತ್ತದೆ ಇದೇ ಸಮಯದಲ್ಲಿ ಉತ್ತರ ಧ್ರುವದಿಂದ ನ್ಯೂಫೌಂಡ್ ಲೇಂಡ್ (ಉತ್ತರ ಅಮೇರಿಕದ ಈಶಾನ್ಯ ಮೂಲೆ)ನ ಕಡೆಗೆ 'ಲೆಬ್ರೆಡರ್' ಎಂಬ ಶೀತ ಜಲ ಪ್ರವಾಹವು ಹರಿಯುತ್ತದೆ ಈ ಪ್ರವಾಹಕ್ಕೆ ಆ ಬೆಟ್ಟಗಳು ಸಿಲುಕಿದರೆ ಅವುಗಳು ಸುಲಭವಾಗಿ, ಗಂಟೆಗೆ ಎರಡು ಮೈಲುಗಳ ಕನಿಷ್ಠ ವೇಗದಲ್ಲಿ ನ್ಯೂಫೌಂಡ್ ಲೇಂಡಿನ ಕಡೆ ಧಾವಿಸುತ್ತವೆ ಆಗ ನೋಡಬೇಕು, ಅವುಗಳು ತೇಲುವ ಭವ್ಯ ದೃಶ್ಯದ ಚಿತ್ರವನ್ನು! ನ್ಯೂಫೌಂಡ್ ಲೇಂಡಿನಲ್ಲಿ ಅತ್ಯಧಿಕ ಮೀನು ದೊರೆಯುತ್ತದೆ ಆದರೆ ಮೀನು ಹಿಡಿಯಲು ತೆರಳುವ ನಾವಿಕರೂ ಬೆಸ್ತರೂ ಇವುಗಳ ಕಡೆಗೆ ಬಹಳ ಗಮನವೀಯಬೇಕಾಗುತ್ತದೆ

ಕಳೆದ ೩೦—೪೦ ವರ್ಷಗಳಲ್ಲಿ ಆ ಪ್ರದೇಶದಲ್ಲಿ ಅಪಘಾತಗಳಾದುದಿಲ್ಲ ಅದಕ್ಕಿಂತ ಮುಂಚೆ ಈ ಬೆಟ್ಟಗಳಿಂದಾಗಿ ತುಂಬಾ ಅಪಘಾತಗಳಾಗುತ್ತಿದ್ದುವು. ಅವುಗಳನ್ನು ತಪ್ಪಿಸಲು ಮೊತ್ತಮೊದಲು ಅಮೇರಿಕವು ಒಂದು ಸಂಸ್ಥೆಯನ್ನು ಸ್ಥಾಪಿಸಿತು ಬಳಿಕ ಇದೇ ಉದ್ದೇಶಕ್ಕಾಗಿ "ಅಂತರ ರಾಷ್ಟ್ರೀಯ ಸಮುದ್ರ ಕಾವಲು ಸಂಘ"ವೊಂದು ಸ್ಥಾಪಿಸಲ್ಪಟ್ಟಿತು ಈ ಸಂಘದ ನಾವಿಕರು ಹಡಗುಗಳಲ್ಲಿ ಸದಾ ಕಡಲಲ್ಲಿ ಸಂಚರಿಸಿ, ಮಂಜಿನ ಬೆಟ್ಟಗಳ ಕುರಿತಾದ ಮುನ್ಸೂಚನೆಗಳನ್ನು ನಿಸ್ತಂತುವಿನ ಮೂಲಕ ಬಿತ್ತರಿಸುವರು. ಅಲ್ಲದೆ, ಇತ್ತೀಚೆಗೆ ಈ ಸಂಘದವರು ಬೆಟ್ಟಗಳ ಸ್ಫೋಟನಾ ಕಾರ್ಯವನ್ನೂ ಜರಗಿಸಿ ಅವನ್ನು ಅಂತ್ಯಗೊಳಿಸಿ ಅಪಘಾತಗಳಾಗದಂತೆ ಮಾಡುವರು ಆದುದರಿಂದ ಇತ್ತೀಚೆಗೆ ಇಂತಹ ಅಪಘಾತಗಳ ವಾರ್ತೆ ಇಲ್ಲ

ತೇಲುವ ಬೆಟ್ಟಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ ಮೊದಲನೆಯ ವಿಧದವುಗಳು ಬಿಳಿ ಬಣ್ಣದವುಗಳಾಗಿದ್ದು ಎರಡು ಶಿಖರಗಳನ್ನೊಳಗೊಂಡಿವೆ. ಅಲ್ಲದೆ, ಈ ಶಿಖರಗಳ ನಡುವೆ ವಿಶಾಲವಾದ ಮಾರ್ಗದಂತಹ ರಚನೆಯೂ ಇದೆ' ಎರಡನೆಯ ವಿಧದವುಗಳಲ್ಲಿ ಶಿಖರ ರಹಿತವಾದ ಹಾಗೂ ಶ್ವೇತವರ್ಣದ ಚಂದ್ರಕಾಂತ ಶಿಲೆಯಂತಹ ಬೆಟ್ಟಗಳು ಸೇರಿವೆ.

ಅಂತೂ ತೇಲು-ಬೆಟ್ಟಗಳು ಸುಂದರವಾಗಿದ್ದು ಆಶ್ಚರ್ಯಕಾರಕಗಳಾಗಿದ್ದರೂ ನಿಷ್ಪ್ರಯೋಜಕ ಹಾಗೂ ಅಪಾಯಕಾರಿ ವಸ್ತುಗಳಾಗಿವೆ ಈಗ ಪ್ರಚಲಿತವಾಗಿರುವ ಅಂತರ ರಾಷ್ಟ್ರೀಯ ಭೂಭೌತ ವರ್ಷದಲ್ಲಿ ಈ ಹಿಮ ಪರ್ವತಗಳ ಶಾಸ್ತ್ರಜ್ಞರು ಪರಿಶೀಲಿಸುತ್ತಿರುವರು. ಇದರಿಂದ ಇನ್ನು ಮುಂದೆ ಇವುಗಳ ಕುರಿತು ಹೆಚ್ಚು ಸಂಗತಿಗಳು ಬೆಳಕಿಗೆ ಬರಲಿವೆ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿ.,

ಪ್ರಧಾನ ಕಚೇರಿ ಉಡುಪಿ ಸ್ಥಾಪನೆ 1925

ನಮ್ಮ ಬರೋಡ ಶಾಖೆಯು ತಾ 9-2-58ರಲ್ಲೂ

ಮಂಗಳೂರು (ಬಂದರ) ಶಾಖೆಯು 20-2-58ರಲ್ಲೂ

ತೆರೆಯಲ್ಪಟ್ಟವು

ಶೀಘ್ರದಲ್ಲಿಯೇ ತೆರೆಯಲ್ಪಡುವ ಇನ್ನೂ ಕೆಲವು ಹೊಸ ಶಾಖೆಗಳು

1) **ಬೆಂಗಳೂರು** (ಶೇಷಾದ್ರಿಪುರಂ) 5) **ಬೆಳಗಾವ್** (ಕೇಂಪ್)

2) **ಬೆಂಗಳೂರು** (ಚಿಕ್ಕಪೇಟೆ) 6) **ಕೊಪ್ಪ** (ಚಿಕ್ಕಮಗಳೂರು ಜಿಲ್ಲೆ)

3) **ಬೆಂಗಳೂರು**(ಕೆಂಟೋನ್‌ಮೆಂಟ್) 7) **ಹುನಗುಂದ** (ಬಿಜಾಪುರ ಜಿಲ್ಲೆ)

4) **ಬೆಳಗಾವ್** (ಶಾಪುರ) 8) **ತಿಪ್ಟೂರು** (ತುಮಕೂರು ಜಿಲ್ಲೆ)

9) **ಬೊಂಬಾಯಿ** (ಮಾಂಡ್ವಿ)

ಟಿ ಎ ಪೈ, ಬಿ ಕಾಂ,(ಬೊಂ) ಎ ಐ ಐ ಬಿ,ಯಫ್ ಆರ್ ಇ ಯಸ್.(ಲಂಡನ್) ಜನರಲ್ ಮೆನೇಜರ್.

ಡಾ। ಟಿ ಮಾಧವ ಪೈ, ಎಂ ಬಿ & ಬಿ ಎಸ್. ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ನಾರದ ಮಹಾನುಭಾವ—

ಶ್ರೀ. ಎಸ್. ನಿಜಲಿಂಗಪ್ಪ

ಮೈಸೂರಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ವಿರುದ್ಧ ರಾಜ್ಯದ ಅಸಂತುಷ್ಟ ಕಾಂಗ್ರೆಸಿಗರು ಒಂದು ಹಸ್ತಾಕ್ಷರ ಆಂದೋಲನವನ್ನು ಪ್ರಾರಂಭಿಸಿದ್ದು ಇದು ಕಾಂಗ್ರೆಸ್ ವರಿಷ್ಠರಿಗೆ ಅಸಂತೋಷವನ್ನುಂಟು ಮಾಡಿದೆ ಶ್ರೀ ಢೇಬರರ ಹಸ್ತಕ್ಷೇಪದಿಂದ ಈ ಆಂದೋಲನವು ಸಮಾಪ್ತವಾಯಿತೆನ್ನುತ್ತಾರೆ ಆದರೂ ಶ್ರೀ ನಿಜಲಿಂಗಪ್ಪನವರ ಸ್ಥಿತಿಯು ಕಾಂಗ್ರೆಸ್ ಪಕ್ಷದಲ್ಲಿ ಅಷ್ಟೊಂದು ಸುದೃಢವಾಗಿಲ್ಲವೆಂಬುದೂ, ಇದಿಲ್ಲದೆ ಅವರು ಮುಖ್ಯ ಮಂತ್ರಿಯಾಗಿ ಉಳಿಯಲಾರರೆಂದೂ ಹೇಳಲಾಗುತ್ತದೆ. ಇಷ್ಟರಲ್ಲಿಯೇ ಶ್ರೀ ನಿಜಲಿಂಗಪ್ಪನವರ ಭವಿಷ್ಯ ಸ್ಪಷ್ಟನಾಗುತ್ತಿದೆ.

ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ಜನತೆಯ ಮುಂದಾಳುಗಳಲ್ಲಿ ಒಬ್ಬ ಉನ್ನತ ಮಟ್ಟದ ನಾಯಕರೆಂದು ತಿಳಿಯಲ್ಪಟ್ಟಿದ್ದಾರೆ. ಅವರು ತುಂಬ ಮೃದು ಭಾಷಿ, ಸೌಹಾರ್ದ ಮೈತ್ರಿಪೂರ್ಣ ವ್ಯಕ್ತಿಯಾಗಿದ್ದಾರೆ. ಇವರ ಈ ಗುಣಗಳ ಪ್ರಭಾವದಿಂದಲೇ ಅವರು ರಾಜ್ಯ ಪುನರ್ಘಟನಾನಂತರ ಹಾಗೂ ಆಮೇಲಿನ ಚುನಾವಣಾನಂತರ ರಾಜ್ಯದ ಮುಖ್ಯ ಮಂತ್ರಿಯಾಗಿ ಆರಿಸಲ್ಪಟ್ಟರು. ಏಕೆಂದರೆ, ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆ ಮತ್ತು ಸರಕಾರದ ಕಡೆಗೆ ಕಾಂಗ್ರೆಸ್ಸಿಗರಲ್ಲಿ ವಿಶ್ವಾಸವನ್ನು ಹುಟ್ಟಿಸುವುದು ಅತ್ಯಂತಾವಶ್ಯಕವಾಗಿದ್ದುದರಿಂದ, ಇದಕ್ಕಾಗಿ ಶ್ರೀ ನಿಜಲಿಂಗಪ್ಪನವರ ಗುಣಗಳು ಕಾರ್ಯರೂಪದಲ್ಲಿ ಬರಬಹುದೆಂಬ ವಿಶ್ವಾಸದಿಂದ ಅವರೇ ಮುಂದೆ ಬಂದರು.

ಅವರ ಪ್ರಭಾವವು ಮೈಸೂರು ಹಾಗೂ ಕರ್ನಾಟಕದ ಜನತೆಯ ಮೇಲೆ ಸಾಕಷ್ಟು ಹರಡಿರುವುದಲ್ಲದೆ, ಕರ್ನಾಟಕದ ಹೊರಗಡೆಯೂ ಅವರನ್ನು ಗೌರವಪೂರ್ಣ ದೃಷ್ಟಿಯಿಂದ ನೋಡಲಾಗುತ್ತದೆ. ಪದವಿಯನ್ನು ಪಡೆದು ಪ್ರತಿಷ್ಠಿತವಾದನಂತರ, ಯಾವುದಾದರೂ ಒಬ್ಬ ವ್ಯಕ್ತಿಗೆ ಆಲೋಚನೆಯನ್ನು ಮಾಡುವ ಶಕ್ತಿಯು ಅವಶ್ಯವಾಗಿರಬೇಕಾಗುತ್ತದೆ.

ಶ್ರೀ ನಿಜಲಿಂಗಪ್ಪನವರು ಕಾಂಗ್ರೆಸಿಗರಲ್ಲಿ ಸುಧಾರಣಾವಾದಿ ದೃಷ್ಟಿಕೋಣದ ಸಮರ್ಥಕರೆಂದು ಗೌರವಿಸಲ್ಪಟ್ಟಿದ್ದಾರೆ. ಅವರು ಈ ಗುಣದಿಂದಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಸ್ಥಾನವನ್ನು ಕಳೆದುಕೊಳ್ಳಬೇಕಾಯಿತು. ಅದಕ್ಕಿಂತ ಮೊದಲವರು ಸುಮಾರು ೧೦ ವರ್ಷಗಳ ಕಾಲ ಈ ಸ್ಥಾನವನ್ನು ಅಲಂಕರಿಸಿದ್ದರು. ತಾವು ಅಧ್ಯಕ್ಷರಾಗಿದ್ದಾಗ ಶ್ರೀ ನಿಜಲಿಂಗಪ್ಪನವರೊಬ್ಬ ಸಮರ್ಥನಾಯಕರೆಂಬ ಗೌರವವನ್ನು ಪಡೆದರು. ಅವರು ಈ ಪದದಿಂದ ವಂಚಿತರಾದರೂ ಲೋಕಪ್ರಿಯತೆಯನ್ನು ಕಳೆದುಕೊಳ್ಳಲಿಲ್ಲ. ಇಂದಿಗೂ ಅವರಲ್ಲಿರುವ ವಿರೋಧಕ್ಕೆ ಅವರ ಸುಧಾರಣಾವಾದೀ ದೃಷ್ಟಿಕೋಣವೇ ಮಹತ್ವಪೂರ್ಣವಾದುದೆಂದು ತಿಳಿಯಲಾಗಿದೆ.

ಕರ್ನಾಟಕ ಪ್ರಾಂತದ ಸ್ಥಾಪನೆಗಾಗಿ ಶ್ರೀ ನಿಜಲಿಂಗಪ್ಪನವರು ಸತತವಾದ ಪ್ರಯತ್ನಗಳನ್ನು ನಡೆಸಿದ್ದರು. ಇದಕ್ಕಾಗಿ ಜನತೆ ಅವರನ್ನು ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನಿತ್ತು ಗೌರವಿಸಿತು. ಮುಂದೆ, ಕರ್ನಾಟಕದ ಕನಸು ನವ ಮೈಸೂರಿನ ವೇಷದಲ್ಲಿ ನನಸಾದಾಗ, ರಾಜ್ಯದಲ್ಲಿ ಕಾಂಗ್ರೆಸ್ ಸಂಘಟನೆಯನ್ನು ಸಂಘಬದ್ಧವಾಗಿಡುವ ಆವಶ್ಯಕತೆಯು ಬಹಳವಾಗಿತ್ತು; ಮತ್ತು ಅದಕ್ಕೆ ಶ್ರೀ ನಿಜಲಿಂಗಪ್ಪನವರೇ ಯೋಗ್ಯ ವ್ಯಕ್ತಿಯೆಂದು ತಿಳಿಯಲ್ಪಟ್ಟರು.

ಶ್ರೀ ನಿಜಲಿಂಗಪ್ಪನವರು ಮೈಸೂರಿನಲ್ಲಿಯೇ ಜನಿಸಿದ್ದರು. ಒಬ್ಬ ಬಡ ಕೃಷಿಕರ ಕುಟುಂಬದಲ್ಲಿ ಜನ್ಮವಿತ್ತುದರಿಂದಾಗಿ ಬಡವರ ಮೇಲೆ ಸದ್ಭಾವನೆಯು ಅವರಿಗೆ ಪೈತೃಕ ಆಸ್ತಿಯಾಗಿ ಲಭಿಸಿದೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಅವರು ಶಿಕ್ಷಣ ಹೊಂದಿದರು. ಆದರ ನಂತರ, ಪೂನದ ಲಾ ಕಾಲೇಜಿನಲ್ಲಿ ಅವರು ನ್ಯಾಯ ಶಾಸ್ತ್ರವನ್ನು ಅಭ್ಯಸಿಸಿದರು! ೧೯೨೬ರಲ್ಲಿ ಅವರನ್ನು ಮೈಸೂರು ಉಚ್ಚ ನ್ಯಾಯಾಲಯದ ಎಡ್ವಕೇಟರೆಂದು ನೇಮಿಸಲಾಯ್ತು. ಅವರು ೧೯೩೬ರಲ್ಲಿ ಕಾಂಗ್ರೆಸ್ಸಿನೊಡನೆ ಸಂಬಂಧ ಬೆಳೆಸಿದರು ಆದರ ಮೂರು ವರ್ಷಾನಂತರದಲ್ಲಿಯೇ ಅವರು ಮೈಸೂರು ರಾಜ್ಯದ ವಿಧಾನ ಸಭೆಯ ಸದಸ್ಯರಾಗಿ ಆರಿಸಲ್ಪಟ್ಟರು. ೩೯, ೪೦, ೪೨, ೪೫, ಮತ್ತು ೪೭ರಲ್ಲಿ ಅವರು ಕಾರಾಗೃಹವನ್ನೂ ಸೇರಬೇಕಾಗಿ ಬಂತು- ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದುದಕ್ಕಾಗಿ ೧೯೪೬ರಲ್ಲಿ ಅವರು ಮೈಸೂರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅವರು ಭಾರತದ ಸಂವಿಧಾನ ಸಮಿತಿಯ ಒಬ್ಬ ಸದಸ್ಯರಾಗಿದ್ದರು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿಯೂ ಅವರ ಸೇವೆ ದೇಶಕ್ಕೆ ಸಂದಿದೆ. ಅವರು ವಾಸ್ತವವಾಗಿಯೂ ಒಬ್ಬ ಸಂಪನ್ನ ವ್ಯಕ್ತಿಶಾಲಿಯಾದ ನಾಯಕರಾಗಿದ್ದಾರೆ.

ಇಂತಹರ ಮುಖಕ್ಕೆ ಮಸಿ ಬಳಿಯುವ ಪ್ರಯತ್ನ ನಾಗುತ್ತಿದೆ. ಅವರಲ್ಲಿ ಜನರನ್ನು ಮೆಚ್ಚಿಸುವ ಗುಣವಿದೆ ಮಾತ್ರವಲ್ಲದೇ ಆಡಳಿಯನ್ನು ಯೋಗ್ಯವಾಗಿ ನಡೆಸಿಕೊಂಡು ಹೋಗುವ ಧಕ್ಷತೆ ಹಾಗೂ ಶಕ್ತಿ ಇಲ್ಲವೆಂದು ದೂರಲಾಗುತ್ತದೆ. ತತ್ಪರಿಣಾಮವಾಗಿ ಅವರ ಮೇಲೆ ಅವಿಶ್ವಾಸವ್ಯಕ್ತಪಟ್ಟಿದೆ ಅಧಿಕಾರಕ್ಕೆ ಅಂಟಿಕೊಳ್ಳುವ ರಾಜಕಾರಣಿಗಳು ಶ್ರೀ ನಿಜಲಿಂಗಪ್ಪನವರಲ್ಲವೆಂಬುದು ಸರ್ವವಿದಿತವೇ ಆಗಿದೆ. ಕೆಲಸ ಮಾಡಬೇಕೆಂದಿರುವವರಿಗೆ ಎಲ್ಲಿಯೂ ಸೇವೆಸಲ್ಲಿಸಬಹುದೆನ್ನುತ್ತಾರೆ ಇವರು. ಎಂತಲೇ ಇವರ ಭವಿಷ್ಯವನ್ನು ಜನತೆ ಕಿವಿನಾಲ್ಕುಮಾಡಿ ಕೇಳಬಯಸುತ್ತದೆ.

ಕರ್ನಾಟಕ ಸಂಗೀತದ ಶ್ರೇಷ್ಠಾನುಯಾಯಿ—

ನಾದಯೋಗಿ ತ್ಯಾಗರಾಜ

ಶ್ರೀ. ಸಿ ನಾರಾಯಣ ಬಲ್ಲಾಳ

ಸಂಗೀತವು ಕೇವಲ ಇಂದ್ರಿಯ ಸುಖದ ಉಪಾದನೆಗಾಗಿ ಅಲ್ಲ ಅದು ಭಗವಂತನ ಪ್ರಾಪ್ತಿಯ ಸಾಧನವೂ ಕೂಡಾ ಆಗಿದೆ ಎಂಬ ಮಾತು ನಮ್ಮ ದೇಶದಲ್ಲಿ ಪ್ರಾಚೀನ ಕಾಲದಿಂದಲೂ ತಿಳಿಯಲ್ಪಡುತ್ತದೆ. ಆದರೆ ವಿಶುದ್ಧ ಸಂಗೀತದ ಮೂಲಕ ಕೂಡ ಬ್ರಹ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು. ಈ ವಿಚಾರದ ಸ್ಥಾಪನೆ ಹಾಗೂ ಪ್ರತಿಪಾದನೆಯನ್ನು ಪ್ರಾಯಶಃ ಮೊತ್ತಮೊದಲು ದಕ್ಷಿಣ ಭಾರತದ ಮಹಾನ್ ಸಂತ ಸಂಗೀತಜ್ಞ ತ್ಯಾಗರಾಜರೇ ಮಾಡಿದರು. ಈ ನಾದಯೋಗವು ಭಾರತೀಯ ಸಂಸ್ಕೃತಿಗೆ ತ್ಯಾಗರಾಜರ ಅತಿ ದೊಡ್ಡ ಕಾಣಿಕೆಯಾಗಿದೆ. ಹಾಗೆಯೇ ಅವರ ಸಂಗೀತವಾದರೋ, ಭಾರತದಲ್ಲಷ್ಟೇ ಅಲ್ಲ—ಇಡಿ ವಿಶ್ವದ ಸಂಗೀತ ಜಗತ್ತಿನಲ್ಲಿ ಅಮರವಾಗಿದೆ.

ಸಂತ ತ್ಯಾಗರಾಜರು ಕರ್ನಾಟಕ ಸಂಗೀತದ ಎಲ್ಲರಕ್ಕಿಂತ ಶ್ರೇಷ್ಠ ಮಹಾನ್ ಗಾಯಕ ಹಾಗೂ ಸಂಗೀತ ಸೃಷ್ಟರಾಗಿದ್ದರು. ಇಂದಿನಿಂದ ಹೆಚ್ಚು ಕಡಮೆ ಒಂದೂಕಾಲು ನೂರು ವರ್ಷಗಳ ಪೂರ್ವದಲ್ಲಿ ತಮಿಳು ನಾಡಿನ ಕಾವೇರಿ ತಟದ ತಂಜಾವೂರಿನಲ್ಲಿ ಅವರು ಹರಿಸಿದಂತಹ ಅಮೃತರಸದ ಪ್ರವಾಹವು ಇಂದಿಗೂ ಇಡಿ ದಕ್ಷಿಣ ಭಾರತದ ಜನತೆಯನ್ನು ಶುಭ ಪ್ರೇರಣೆ ಹಾಗೂ ಲೋಕೋತ್ತರ ಆನಂದದಿಂದ ತೊನೆಯುವಂತೆ ಮಾಡುತ್ತಿದೆ. ಕರ್ನಾಟಕ ಸಂಗೀತದ ಯಾವುದೇ ಸಭೆಗೆ ನೀವು ಹೋದರೂ, ಅರ್ಧಕ್ಕಿಂತ ಹೆಚ್ಚಿನ ಹಾಡುಗಳೆಲ್ಲಾ ತ್ಯಾಗರಾಜರು ಹಾಡಿರುವಂತಹದ್ದೇ ಆಗಿರುತ್ತವೆ.

ತ್ಯಾಗರಾಜರು ಭಕ್ತರಾಗಿದ್ದರು; ಕವಿಗಳಾಗಿದ್ದರು; ಹಾಗೂ ಸಂಗೀತ ಶಾಸ್ತ್ರದ ಮರ್ಮಜ್ಞ, ರಸಸಿದ್ಧ ಗಾಯಕ, ಸ್ವರಕಾರರಾಗಿದ್ದರು. ಇದೇ ಕಾರಣದಿಂದಾಗಿಯೇ ಅವರ ರಚನೆಗಳು ಶುಷ್ಕ ಸಂತವಾಣಿಗಳಂತೆ ನೀತಿ, ಉಪದೇಶಗಳ ಪುಡಿಕೆಗಳಾಗಿರಲಿಲ್ಲ ಅಥವಾ ಛಂದಸ್ಸುಗಳಲ್ಲಿ ಬಿಗಿಯಲ್ಪಟ್ಟ ಗೇಯತ್ವಹೀನ ಪದ ಬಂಧಗಳಾಗಿರಲಿಲ್ಲ. ಇಲ್ಲವೆ ಕೇವಲ ಸ್ವರ ಸಂಯೋಜನೆಯ ಚಮತ್ಕಾರ ಪೂರ್ಣ ತಂತಿಗಳಾಗಿರಲಿಲ್ಲ. ಅವರ ಪ್ರತಿಯೊಂದು ಸಂಗೀತಮಯ ಕೃತಿ ಹೇಗೆಂದರೆ ರಸ, ಭಾವ ಹಾಗೂ ಕಾವ್ಯದ ಒಂದು ಸುಂದರ ಸೌಹಾರ್ದ ಪೂರ್ಣ ಪರಿವಾರವಾಗಿದೆ. ಅದರಲ್ಲಿ ವಾಣಿಯು ಆದರ್ಶ ಪತ್ನಿಯ ತರಹ ಭಾವೋನ್ನತ ನಾದದ ಅನುಸರಣೆ ಮಾಡುತ್ತಾಳೆ. ಅದನ್ನು ಬೇಕಾದರೆ ನೀವು ಗಾಯಕನ ಕಂಠದ ಮೂಲಕ ಅಥವಾ ವೀಣೆಯ ಮುಖಾಂತರ ಕೇಳಿರಿ ಪ್ರತಿಯೊಂದರಿಂದಲೂ ಆನಂದಮಯ ದಿವ್ಯ ಭಾವನೆಯ ಸಂಚಾರವು ಹೃದಯದಲ್ಲಾಗುವುದು. ತ್ಯಾಗರಾಜರ ರಚನೆಗಳು ಭಾರತೀಯ ಸಂಸ್ಕೃತಿಯ ಸಮನ್ವಯ ತತ್ವಗಳ ಸುಂದರ ಉದಾಹರಣೆಗಳಾಗಿವೆ. ಆ ತರಹ ಕೃತಿಗಳಲ್ಲಿ ಪ್ರತ್ಯಕ್ಷತಃ ಸರ್ವಮತ ಸಮನ್ವಯದ ಉಪದೇಶವಿಲ್ಲದಿದ್ದರೂ ಇದೆ

ತ್ಯಾಗರಾಜ ಸ್ವಾಮಿ ದೊಡ್ಡ ಸಾತ್ವಿಕ ವೃತ್ತಿಯ ಪುರುಷರಾಗಿದ್ದರು. ತನ್ನ ಯುಗದ ಎಲ್ಲರಿಗಿಂತ ಮಹಾನ್ ಗಾಯಕರಾಗಿದ್ದರೂ, ಅವರು ಸದಾ ತಪಸ್ವಿಗಳಂತೆ ಭಿಕ್ಷೆಯಿಂದ ಜೀವನ ಕಳೆದರು. ಅಲ್ಲದೆ ಅವರು ಎಂದೂ ಕೂಡಾ ತನ್ನ ಸಂಗೀತದ ಉಪಯೋಗವನ್ನು ಯಾವುದೇ ರಾಜ ಅಥವಾ ಶ್ರೀಮಂತನ ಇಂದ್ರಿಯ ಸುಖಕ್ಕಾಗಿ ಮಾಡದೆ, ಅದರ ಭೌತಿಕ ಲಾಭವನ್ನೂ ಪಡೆಯಲಿಲ್ಲ. ಅವರ ಗಾಯನ ರಾಮನನ್ನು ಪ್ರಸನ್ನಗೊಳಿಸುವುದಾಗಿತ್ತು; ಆತ್ಮವನ್ನು ಭವ ಬಂಧನದಿಂದ ಮುಕ್ತ ಮಾಡುವುದಕ್ಕಾಗಿತ್ತು. ಅಲ್ಲದೆ ಜನತೆಗೆ ದಿವ್ಯ ಜೀವನದ ದೀಕ್ಷೆಯನ್ನು ಕೊಡುವುದಕ್ಕಾಗಿತ್ತು. ಅವರ ಸಂಗೀತದಲ್ಲಿ ಶಾಂತರಸದ ಚರಮ ಪರಿಪಾಕವಾಗಿದೆ.

ಇತರ ಸಂತರಂತೆ ತ್ಯಾಗರಾಜರ ಜೀವನದೊಡನೆ ಕೂಡಾ ಹಲವು ಚಮತ್ಕಾರದ ಕತೆಗಳು ಹೆಣಯಲ್ಪಟ್ಟಿವೆ. ಇವರಿಗೆ ಅನೇಕ ಸಲ ಅವರ ಇಷ್ಟ ದೈವವಾದ ಶ್ರೀ ರಾಮನ ಸಾಕ್ಷಾತ್ಕಾರವಾಗಿದೆ ಎಂದು ಹೇಳುತ್ತಾರೆ. ಅವರ ಎಷ್ಟೋ ರಚನೆಗಳಲ್ಲಿ ಜಗತ್ಪಿತ ಶ್ರೀ ರಾಮನ ಹಾಗೂ ಜಗನ್ಮಾತೆ ಸೀತಾದೇವಿಯ ದಿವ್ಯ ದರ್ಶನದ ಉತ್ತಮ ಸಜೀವ ವರ್ಣನೆ ಸಿಗುತ್ತದೆ ಇವರು ತನ್ನ ಜೀವಿತ ಕಾಲದಲ್ಲಿ ಒಂಭತ್ತು ಕೋಟಿ ಸಲ ರಾಮನಾಮ ಜಪಮಾಡಿದ್ದಾರೆ.

ಉತ್ತರ ಭಾರತದಲ್ಲಿ ಗೋಸ್ವಾಮಿ ತುಳಸೀದಾಸರು ತನ್ನ ರಾಮ ಭಕ್ತಿಮಯ ಕಾವ್ಯಧಾರೆಯ ಮೂಲಕ ಉಪನಿಷತ್ತುಗಳ ಗಹನ ತತ್ವಗಳನ್ನು ಜನಸಾಧಾರಣರಿಗೆ ಸುಲಭವಾಗುವಂತೆ ಮಾಡಿದರು. ಅದೇ ಕಾರ್ಯವನ್ನು ಹೆಚ್ಚು-ಕಡಮೆ ಎರಡು ಶತಮಾನಗಳನಂತರ ದಕ್ಷಿಣ

(೯ನೇ ಪುಟ ನೋಡಿರಿ)

ನಿಮ್ಮ ಪರಿಚಿತರಾರೂ "ಕೊರ್ಪೊರೇಶನ್" ಬೇಂಕಿನಲ್ಲಿಲ್ಲದಿದ್ದಲ್ಲಿ, ಬೇಂಕು ವ್ಯವಹಾರ ನಡೆಸಲು ದಾಕ್ಷಿಣ್ಯಪಟ್ಟು ನೀವು ವೃಥಾ ಹಿಂಜರಿಯುವ ಆಗತ್ಯವಿಲ್ಲ. ಕಾರಣ, ನಮ್ಮ ಯಾವುದೇ ಒಂದು ಶಾಖೆಯಲ್ಲಿ ಯಾರೇ ಬರಲಿ, ಅವರು ನಮ್ಮವರೆಂದೇ ಬಗೆದು, ಅವರ ಮನಮೆಚ್ಚುವಂತೆ ಬೇಂಕು ಸೇವೆ ಸಲ್ಲಿಸುವುದೇ

ನಮ್ಮ ಆದ್ಯಕರ್ತವ್ಯವೆಂಬುದನ್ನು ನಾವು ಚೆನ್ನಾಗಿ ಬಲ್ಲೆವು.

ಇಂದೇ "ಕೊರ್ಪೊರೇಶನ್" ಬೇಂಕನ್ನು ನಿಮ್ಮ ಬೇಂಕಾಗಿ ಆರಿಸಿಕೊಳ್ಳಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

ಸುಮಾರು 52 ವರುಷಗಳ ಅನುಭವವಿರುವ

ಶೆಡ್ಯೂಲ್ಡ್ ಬೇಂಕು!!

NAVAYUGA

Popular Kannada Weekly

Founder.—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೭-೩-'೫೮	ಸಂಚಿಕೆ ೨೯

ವಿಸ್ತೃತ ವಿದ್ಯಾಯೋಜನೆ

ಹದಿನಾಲ್ಕು ವರ್ಷಗಳಿಗೆ ಮೀರದ ಎಲ್ಲಾ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲು ತನ್ನ ವಿದ್ಯಾಯೋಜನಾ ಪಥದಲ್ಲಿ ಸಾಕಷ್ಟು ಮುಂದುವರಿಯುವ ಆವಶ್ಯಕತೆ ಇದೆ ಎಂದು ಕೇಂದ್ರ ಸರಕಾರದ ಗಮನಕ್ಕೆ ಇದೀಗ ಬಂದಿರುವುದು ಸಂತೋಷದ ಸಂಗತಿಯೆನ್ನಬೇಕು. ಈ ಯೋಜನೆಯಲ್ಲಿ ತಿದ್ದುಪಡಿಯನ್ನು ಮಾಡಿ ಹದಿನಾಲ್ಕರ ಬದಲು ಹನ್ನೊಂದು ವರ್ಷಗಳಿಗೆ ಮಕ್ಕಳ ಪ್ರಾಯವನ್ನು ಇಳಿಸಿದರೂ ಇದು ಕಾರ್ಯಕಾರಿಯಾಗಬೇಕಾದರೆ, ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯು ಕೊನೆಗೊಳ್ಳಬೇಕೆಂದು ಸರಕಾರವು ಒಪ್ಪಿಕೊಂಡಿದೆ. ಭಾರತದಂತಹ ವಿಶಾಲವಾದ ದೇಶದಲ್ಲಿ ಕೆಲವೊಂದು ತೀರ ಹಿಂದುಳಿದ ಪ್ರದೇಶಗಳದ್ದು, ಅವುಗಳಿಗೆ ಈ ಯೋಜನೆಯ ಸದುಪಯೋಗ ದೊರೆಯುವ ಅಗತ್ಯವಿದೆ. ಆದದರಿಂದಲೇ ಪ್ರಧಾನಿ ನೆಹರೂ ಹಾಗೂ ಮತ್ತಿತರ ಮುಂದಾಳುಗಳು ಸೂಚಿಸಿದ ಮಧ್ಯಾಹ್ನದ ಊಟದ ಯೋಜನೆಯೊಂದು ನೂತನ ಆಕರ್ಷಣೆ ಎಂದು ಬೇರೆ ಹೇಳಬೇಕಾಗಿಲ್ಲ.

ಸ್ತ್ರೀ ವಿದ್ಯಾಭ್ಯಾಸಕ್ಕೆ ಸಾಕಷ್ಟು ಮನ್ನಣೆ ದೊರೆಯದ, ಬೇಕಷ್ಟು ಜನಪ್ರಿಯತೆಯನ್ನು ಗಳಿಸದ ಕೆಲವೊಂದು ರಾಜ್ಯಭಾಗಗಳೂ ಭಾರತದಲ್ಲಿವೆ ಎಂಬುದು ನಿಸ್ಸಂದೇಹ. ಇಂದು ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಕೇವಲ ನೇಕಡಾ ಮೂವತ್ತರಷ್ಟು ಮಾತ್ರ ಹೆಣ್ಮಕ್ಕಳೆಂದು ಅಂಕೆಸಂಖ್ಯೆಗಳಿಂದ ತಿಳಿದುಬರುತ್ತಾಗ ಈ ದಾಮಾಶಯವು ಅತ್ಯಂತ ನಿಕೃಷ್ಟಾವಸ್ಥೆಯಲ್ಲಿರುವುದನ್ನು ಅಲಕ್ಷಿಸಬಾರದು. ಇತ್ತೀಚೆಗೆ ಲೋಕಸಭೆಯಲ್ಲಿ ವಿದ್ಯಾಂಗ ಮಂತ್ರಿಗಳಾದ ಡಾ. ಶ್ರೀಮಾಲಿಯವರು ಪ್ರತಿ ಮಗುವಿಗೂ ಒಂದು ಮೈಲಿಯೊಳಗೆ ಪ್ರಾಥಮಿಕ ಶಾಲೆಯನ್ನೂ ಮೂರು ಮೈಲಿಯೊಳಗೆ ಮಾಧ್ಯಮಿಕ ಶಾಲೆಗಳನ್ನೂ ಐದು ಮೈಲಿಗಳೊಳಗೆ ಪ್ರೌಢ ಶಾಲೆಗಳನ್ನೂ ಒದಗಿಸುವ ಭರವಸೆಯನ್ನು ಕೇಂದ್ರ ಸರಕಾರವು ಪಡೆದಿರುವುದೆಂದು ವ್ಯಕ್ತಪಡಿಸಿರುವರು. ಪ್ರೌಢ ಶಾಲೆಯ ವಿದ್ಯಾರ್ಥಿಗಳು ಐದು ಮೈಲುಗಳಷ್ಟು ದೂರವನ್ನು ನಡೆಯುವುದು ತುಂಬ ಪ್ರಯಾಸಕರವೇ ಆದುದರಿಂದ, ಸಾಧ್ಯವಿರುವಲ್ಲಿ ಪ್ರಯಾಣಸೌಕರ್ಯಗಳನ್ನು ಕೊಡಮಾಡುವುದೂ ಅಗತ್ಯವೆಂದು ಕಂಡುಬರುವುದು ಅಥವಾ ಯೋಗ್ಯ ವಿದ್ಯಾರ್ಥಿನಿಲಯಗಳನ್ನಾದರೂ ಅಗ್ಗದ ದರದಲ್ಲಿ ಒದಗಿಸುವುದು ಅನಿವಾರ್ಯವೆನ್ನುವುದು ಅಸಮಂಜಸವೆನ್ನಬಾರದು. ಶಾಲೆಗಳಿಗೆ ತಕ್ಕ ಸಹಾಯವನ್ನು ಕೇಂದ್ರ ಸರಕಾರವು ಸಲ್ಲಿಸುವುದೆಂಬ ವಿಶ್ವಾಸವನ್ನು ಕೊಟ್ಟಿರುವ ಡಾ. ಶ್ರೀಮಾಲಿಯವರನ್ನು ಅಧ್ಯಾಪಕರು ಅಭಿನಂದಿಸದಿರಲಾರರು. ಹೆಚ್ಚಿನ ಶಾಲೆಗಳು ಹಾಗೂ ಕಾಲೇಜುಗಳು ಹೆಚ್ಚೇಕೆ, ವಿಶ್ವವಿದ್ಯಾಲಯಗಳೂ ಈ ಸಹಾಯಧನವನ್ನು ಪಡೆಯುವಲ್ಲಿ ಅಸಫಲರಾಗಿರುವುದು ಮಾತ್ರ ವಿವಂಚನೆಗೀಡುಮಾಡುವ ಪ್ರಸಂಗವಾಗಿದೆ. ಶಾಲೆ ಅಥವಾ ಕಾಲೇಜುಗಳ ಭವ್ಯ ಕಟ್ಟೋಣ ಹಾಗೂ ಉಪಕರಣಗಳಿಗಿಂತ ಅಧ್ಯಾಪಕರ ಜೀವನ ಮಟ್ಟವನ್ನು ಎತ್ತರಿಸುವ ಸಲುವಾಗಿ ಅವರ ವೇತನವನ್ನು ಹೆಚ್ಚಿಸುವತ್ತ ಸಂಬಂಧಪಟ್ಟವರು ಇನ್ನಾದರೂ ಗಮನಿಸಬೇಕು. ಒಂದು ಕಾಲೇಜು ತನ್ನಲ್ಲಿ ಪ್ರವೇಶಗೊಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಒಂದು ಸಾವಿರಕ್ಕೆ ಮಿತಿಗೊಳಿಸದಿದ್ದರೆ, ಅವುಗಳಿಗೆ ಸಹಾಯಧನ ದೊರೆಯದೆಂದು ವಿಶ್ವವಿದ್ಯಾನಿಲಯಗಳ ಸಹಾಯಧನ ಆಯೋಗದ ಅಧ್ಯಕ್ಷ ಡಾ. ಸಿ. ಡಿ ದೇಶಮುಖರು ವ್ಯಕ್ತಪಡಿಸಿರುತ್ತಾರೆ. ಅಮೆರಿಕೆಯಲ್ಲಿಯೂ ಇದಕ್ಕಿಂತ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿರುವ ಕಾಲೇಜುಗಳ ಶಿಕ್ಷಣ ಮಟ್ಟವು ಉತ್ತಮ ತರದ್ದಿರುವುದಿಲ್ಲವೆಂಬ ಬಗ್ಗೆ ವಾದವಿವಾದಗಳು ಬೆಳೆಯುತ್ತಿವೆ. ಭಾರತದಂತಹ ಒಂದು ಬಡ ರಾಷ್ಟ್ರದಲ್ಲಿಯೂ ನಾವು ಸಾವಿರ ಸಂಖ್ಯೆಯಲ್ಲಿ ಪದವೀಧರರನ್ನ ತಯಾರು ಮಾಡಿ ಪ್ರತಿವರ್ಷವೂ ಹೊರಗೆ ಕಳಹಿಸುತಿದ್ದೇವೆ. ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದ ಬಳಿಕ ಈ ಎಲ್ಲಾ ಪದವೀಧರರು ತಾವು ಪಡೆದ ಉಪನ್ಯಾಸ ಮಾಲೆಗಳ ಟಿಪ್ಪಣಿಗಳನ್ನಷ್ಟೇ ಅಭ್ಯಾಸಮಾಡಿದ ಬಲದಿಂದ, ಸರಕಾರೀ ಉದ್ಯೋಗವನ್ನೇ ಎದುರುನೋಡುತ್ತಿರುವುದು ಜನತೆಯ ಗಮನದಿಂದ ದೂರವುಳಿಯಲಾರದು. ಆದರೆ, ಕಾಲೇಜುಗಳಲ್ಲಿ ಇಂತಹ ವಾತಾವರಣವು ತಿಳಿಗೊಳ್ಳುತ್ತ ಬರುವುದು ತೋರಿಬರುತ್ತಿದೆ. ಇಂದು ದೇಶದಲ್ಲಿ ತಾಂತ್ರಿಕಜ್ಞರು, ವೈಜ್ಞಾನಿಕರು, ವೈದ್ಯರು ಮೊದಲಾದ ವೃತ್ತಿಪರರ ಬೇಡಿಕೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ, ಈ ವೃತ್ತಿಪರ ಕಾಲೇಜುಗಳೇ ಹೆಚ್ಚಿನ ಬುದ್ಧಿವಂತ ವಿದ್ಯಾರ್ಥಿಗಳನ್ನು ಆಕರ್ಷಿಸಿ ತಮ್ಮೆಡೆಗೆ ಸಳೆದುಕೊಳ್ಳುವುದರಿಂದ, ಇತರ ಕಲಾಶಾಲೆಗಳಲ್ಲಿ ಈಗ ದೊರೆಯುತ್ತಿರುವ ವಿದ್ಯಾಮಟ್ಟಕ್ಕಿಂತ ಉನ್ನತ ರೀತಿಯಲ್ಲಿ ವಿದ್ಯೆಯು ದೊರೆಯದ ಹೋದರೆ, ಇಂದಿನ ಕಲಾಶಾಲೆಗಳ ಉಪನ್ಯಾಸ ಮಂದಿರಗಳು ಕೆಲವೇ ವರ್ಷಗಳಲ್ಲಿ ತೆರವಾಗಿ ಹೋಗುವುದು ಅಸಂಭವವೇನಲ್ಲ. ಈಗಾಗಲೇ ಭಾರತದಲ್ಲಿ ೭೫ ಇಂಜಿನಿಯರಿಂಗ್ ಕಾಲೇಜುಗಳು, ೧೨೭ ತಾಂತ್ರಿಕ ಸಂಸ್ಥೆಗಳು (ಟೆಕ್ನಿಕಲ ಇನ್ಸ್ಟಿಟ್ಯೂಶನ್ಸ್) ಇವೆ ಅಲ್ಲದೆ, ಈ ಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುತ್ತಿದೆ ಮತ್ತು ಹೀಗೆ ಹೆಚ್ಚುತ್ತಿರುವುದೂ ದೇಶದ ಆವಶ್ಯಕತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ. ಆದರೆ, ಕೇಂದ್ರ ವಿದ್ಯಾಮಂತ್ರಿ ಶಾಖೆಯು ಕೃಷಿ ವಿದ್ಯೆಯ ಕಡೆಗೆ ವಿಶೇಷ ಗಮನವೀಯದಿರುವುದು ಮಾತ್ರ ದುರ್ದೈವದ ಸಂಗತಿ. ನೂರರಷ್ಟು ಎಪ್ಪತ್ತಕ್ಕಿಂತಲೂ ಮೀರಿದ ಜನರು ಹಳ್ಳಿಗಳಲ್ಲಿ ಕೃಷಿಯ ಹಾಗೂ ಬೆಲೆತರುವ ಬೆಳೆಯ ಕಾರ್ಯದಲ್ಲಿ ಮಗ್ನರಾಗಿರುವಾಗ ಕೃಷಿಯ ವಿದ್ಯೆಯ ಕಡೆಗೂ ಹೆಚ್ಚು ಲಕ್ಷ್ಯ ಹರಿಸುವುದು ಅಗತ್ಯವೆನ್ನುವುದು ಚಿರಸತ್ಯ. ಇದರೊಂದಿಗೆ ಪಶು ಸಂಗೋಪನಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ಹೆಚ್ಚುವುದು ಅಗತ್ಯ. ಈಗಾಗಲೇ ಅಲ್ಲಲ್ಲಿ ಸಂಖ್ಯೆಯಲ್ಲಿ ಬೆಳೆಯುತ್ತಿರುವ ವಿವಿಧೋದ್ದೇಶ ಶಾಲೆಗಳಲ್ಲಿಯೂ ಕೃಷಿ ಮತ್ತು ಪಶುಸಂಗೋಪನೆಯತ್ತ ವಿಶೇಷ ಗಮನವೀಯಬೇಕಲ್ಲದೇ, ಬಡಗಿತನ, ಲೋಹಗಳಿಂದ ವಸ್ತು ತಯಾರಿ ಮತ್ತಿತರ ವಿಷಯಗಳನ್ನು ಬೋಧಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾದಮಿಕ ಶಾಲೆಗಳು ತಮ್ಮ ಪ್ರದೇಶದ ವಾತಾವರಣಕ್ಕನುಗುಣವಾದ ಪಾಠಪಟ್ಟಿಯನ್ನು ತಯಾರಿಸಿ ಆ ಬಗ್ಗೆ ಉಚಿತ ಕಾರ್ಯವೆಸಗುವ ಅವಕಾಶವನ್ನು ಕಲ್ಪಿಸುವುದೂ ಸೂಕ್ತವೆನ್ನಬಹುದು. ಮತ್ತೀ ದಿಸೆಯಲ್ಲಿ ಈಗ ಪ್ರಚಾರವಿರುವ ಬುನಾದಿ ಶಿಕ್ಷಣವು ಪೂರಕವಾಗಿರುವುದು. ಮಾನ್ಯ ವಿದ್ಯಾಮಂತ್ರಿಯವರು ತನ್ನ ಉಲ್ಲೇಖದಲ್ಲಿ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿಯನ್ನೂ ಅದಕ್ಕೆ ಸಂಬಂಧಿಸಿದ ಅಂಕೆಸಂಖ್ಯೆಗಳನ್ನೂ ಗಮನಿಸಿದ್ದಾರಲ್ಲದೆ, ವಿದ್ಯಾಮಟ್ಟದಲ್ಲಾಗಲೀ ವಿದ್ಯಾಕ್ರಮದ ಯೋಜನೆಯಲ್ಲಾಗಲೀ ಹಸ್ತಾಕ್ಷೇಪವನ್ನು ಮಾಡಿರುವುದು ಕಂಡುಬರುವುದಿಲ್ಲ. ಆದರೆ, ಇಂದು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಈಗ ಪ್ರಚಲಿತವಿರುವ ಪಾಠಪಟ್ಟಿಯನ್ನು ಪುನರಭ್ಯಾಸಿಸಿ ಉಚಿತವಾದ ಮತ್ತು ಸಾಂದರ್ಭಿಕವಾದ ಬದಲಾವಣೆಗಳನ್ನು ಮಾಡುವುದೂ ಅಗತ್ಯವೆಂದು ಸೂಚಿಸುವುದು ತಪ್ಪೆನಿಸಲಾರದು. ವಿದ್ಯಾತಜ್ಞರ ಸಮಿತಿಯೊಂದು ಏರ್ಪಡಿಸಿ, ಇಂದಿನ ಶಾಲೆ ಮತ್ತು ಕಾಲೇಜುಗಳಲ್ಲಿರುವ ಪಠ್ಯಪುಸ್ತಕಗಳು, ಕಲಿಸಲ್ಪಡುವ ವಿಷಯಗಳು ವಿಧಾನಗಳು ಇತ್ಯಾದಿಗಳ ಸಂಬಂಧದಲ್ಲಿ ಒಂದು ಯೋಗ್ಯ ನಿರ್ಧಾರವನ್ನು ಕೈಕೊಳ್ಳುವುದು ಅಗತ್ಯವು, ಇತ್ತ ಸರಕಾರವು ತನ್ನ ಗಮನವನ್ನು ತೀವ್ರವಾಗಿ ಹರಿಸಿ, ಸ್ವತಂತ್ರ ಭಾರತದಲ್ಲಿ ಉಪಯುಕ್ತವಾದ ಮತ್ತು ಆವಶ್ಯಕವಾದ ವಿದ್ಯೆಯನ್ನು ನಮ್ಮ ಮುಂದಿನ ಜನಾಂಗಕ್ಕೆ ನೀಡುವಲ್ಲಿ ಮುಂದಾಗಬೇಕು ಎಂದೂ ಬಯಸುತ್ತೇವೆ. ಈ ದಿಸೆಯಲ್ಲಿ ಭಾರತಸರಕಾರವು ಎಂದಿಗೂ ಹಿಂದುಳಿಯಲಾರದೆಂದು ಹಾರೈಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ರಾಜ್ಯಸಭೆಗೆ ಗೆದ್ದುಬಂದವರು

ಮೈಸೂರು ವಿಧಾನಸಭಾ ಮತದಾರ ಕ್ಷೇತ್ರದಿಂದ ರಾಜ್ಯಸಭೆಯ ನಾಲ್ವರು ಸದಸ್ಯರ ತೆರವಾದ ಸ್ಥಾನಕ್ಕೆ ಚುನಾವಣೆಯು ನಡೆದು ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಬಿ. ಪಿ. ಬಸಪ್ಪ ಸೆಟ್ಟಿ ಶ್ರೀಮತಿ ಅನ್ನಪೂರ್ಣಮ್ಮ ತಿಮ್ಮಾರೆಡ್ಡಿ ಮತ್ತು ಶ್ರೀ ಮಹಮ್ಮದ ವಾಲಿ ಮುಲ್ಲಾ ಮತ್ತು ಸೋಶಿಯಲಿಸ್ಟ ಉಮೇದ್ವಾರ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ಆಯ್ಕೆಯಾದಿರುವರು. ಈ ನಾಲ್ಕು ಸ್ಥಾನಗಳಿಗೆ ಹನ್ನೆರಡುಮಂದಿ ಸ್ಪರ್ಧಿಸಿದ್ದರು.

ಮೈಸೂರಿನಲ್ಲಿ ತಲೆಸಿಡಿತ

ಮೈಸೂರಿನ ರಾಜಕಾರಣವು ಹದಗೆಡುತ್ತ ಬಂದಿದ್ದು ಶ್ರೀ ನಿಜಲಿಂಗಪ್ಪ ಮತ್ತು ಅಧ್ಯಕ್ಷ ಕಾಂಗ್ರೆಸ್ ಸದಸ್ಯರೊಳಗೆ ಯಾವ ಮಧ್ಯಸ್ತಿಕೆಯೂ ನಡೆಯುವುದು ಅಸಾಧ್ಯವೆಂದು ತಿಳಿದ ಬಂದಿದೆ. ಕಾಂಗ್ರೆಸ್ ವರಿಷ್ಠರು ಈ ವಿಷಯದಲ್ಲಿ ನಿರ್ಲಿಪ್ತರಾಗಿರುವರೆಂದೂ ವದಂತಿಯಿದೆ. ಇದುವರೆಗೆ ನಡೆದ ಮಾತುಕತೆಗಳ ಬಗ್ಗೆ ಸಂಪೂರ್ಣ ವರದಿ ದೊರೆಯದಿದ್ದರೂ ತಿಳಿದುಬಂದಂತೆ ಹಿಂದಿನ ಮೈಸೂರಿನ ಮಂತ್ರಿಗಳಾದ ಶ್ರೀ ಸಿದ್ಧವೀರಪ್ಪನವರನ್ನು ವಿರೋಧೀ ಪಂಗಡದವರು ನಾಯಕರನ್ನಾಗಿ ನೇಮಿಸುವ ನಿರೀಕ್ಷೆಯಿದೆ. ಈಗಿರುವ ಮಂತ್ರಿಮಂಡಳವನ್ನು ಪುನಾರಚಿಸಿ ಸಂಧಾನ ಸಾಧಿಸುವ ಪ್ರಯತ್ನಗಳು ನಡೆಯುತ್ತಿವೆಯಾದರೂ ಅವು ಸಫಲಗೊಂಡಿರುವುದಕ್ಕೆ ಬಲವಾದ ಸುದ್ದಿ ಬಂದಿಲ್ಲ. ಪ್ರಾಯಃ ಮಂತ್ರಿಮಂಡಳವು ಬಿಕ್ಕಟ್ಟಿನಲ್ಲಿಯೇ ಪರ್ಯವಸಾನಹೊಂದುವುದು ಅನಿರೀಕ್ಷಿತವಾಗಿ ತೋರಿಬರುವುದಿಲ್ಲ.

ಹೆಸರಿನಲ್ಲಿ ತಿದ್ದುಪಡಿ

೧೯೫೮ರಲ್ಲಿ ಭಾರತದ ಕೆಲವೊಂದು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಕಾರ್ಯಕ್ರಮವು ಪ್ರಾರಂಭವಾಗಿದ್ದು, ಈಗಾಗಲೇ ಒಟ್ಟು ೧೧೦ ಸ್ಥಳಗಳ ನಾಮವನ್ನು ಬೇರೆಯಾಗಿಸಲಾಗಿದೆ ಎಂದು ಭಾರತ ಸರಕಾರದ ಅಧಿಕೃತ ಪ್ರಕಟಣೆಯೊಂದು ತಿಳಿಸುತ್ತದೆ. ಪ್ರತಿ ರಾಜ್ಯದಲ್ಲಿಯೂ ಕೆಲವೊಂದು ಬದಲಾವಣೆಗಳು ಬಂದಿದ್ದು ಉತ್ತರ ಪ್ರದೇಶದಲ್ಲಿ ೨೩, ಪಂಜಾಬದಲ್ಲಿ ೧೬, ಮದ್ರಾಸದಲ್ಲಿ ೨೫, ಮಧ್ಯಪ್ರದೇಶದಲ್ಲಿ ೧೧, ಆಂಧ್ರ ಪ್ರದೇಶ, ರಾಜಸ್ಥಾನ, ಮೈಸೂರು ರಾಜ್ಯಗಳಲ್ಲಿ ಪ್ರತಿಯೊಂದರಲ್ಲಿ ೯, ಮುಂಬಯಿ, ಪಶ್ಚಿಮ ಬಂಗಾಲಗಳಲ್ಲಿ ಪ್ರತ್ಯೇಕವಾಗಿ ೮, ಅಸ್ಸಾ

(೭ನೇ ಪುಟ ನೋಡಿರಿ)

In the Court of the District Munsiff of Coondapur

R E P 1078/1957 (O S 482/1955)

Bhoja Rao Navada

—D H-Execution-Petitioner

Vs

1. Venkatramana Maiya
2. Shankernarayan Maiya
3. Nagappaya Maiya
4. Minor Narashimha
5. " Parameshwara— by guardian their father Respondent 1
6. Venkatraya Goli

—Respondents

To

The 2nd respondent Shankernarayana Maiya S/o Gorají Anartha Maiya last known to be a resident of Hiliyana village of Udipi Taluq, S K District

whereas in the aforesaid suit OS 482/1955 the decree holder has applied for the sale of the immovable property covered by the preliminary decree passed in the case, you are informed hereby that the 1(th day of April 1958 has been fixed for settling the terms of the proclamation of sale

(By order of the court)

S N Acharya,

Advocate for D H.

Coondapur 25 3-1958

NAVAYUGA

Popular Kannada Weekly

Founder—

A B SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೭	ಉಡುಪಿ ೨೭-೩-'೫೮	ಸಂಚಿಕೆ ೨೯

ವಿಸ್ತೃತ ವಿದ್ಯಾಯೋಜನೆ

ಹದಿನಾಲ್ಕು ವರ್ಷಗಳಿಗೆ ಮೀರದ ಎಲ್ಲಾ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲು ಈ ವಿದ್ಯಾಯೋಜನಾ ಪಥದಲ್ಲಿ ಸಾಕಷ್ಟು ಮುಂದುವರಿಯುವ ಆವಶ್ಯಕತೆ ಇದೆ ಎಂದು ಕೇಂದ್ರ ಸರಕಾರದ ಗಮನಕ್ಕೆ ಇದೀಗ ಬಂದಿರುವುದು ಸಂತೋಷದ ಸಂಗತಿಯೆನ್ನಬೇಕು ಈ ಯೋಜನೆಯಲ್ಲಿ ತಿದ್ದುಪಡಿಯನ್ನು ಮಾಡಿ ಹದಿನಾಲ್ಕರ ಬದಲು ಹನ್ನೊಂದು ವರ್ಷಗಳಿಗೆ ಮಕ್ಕಳ ಪ್ರಾಯವನ್ನಿಳಿಸಿದರೂ ಇದು ಕಾರ್ಯಕಾರಿಯಾಗಬೇಕಾದರೆ, ಭಾರತದ ತೃತೀಯ ಪಂಚವಾರ್ಷಿಕ ಯೋಜನೆಯು ಕೊನೆಗೊಳ್ಳಬೇಕೆಂದು ಸರಕಾರವು ಒಪ್ಪಿಕೊಂಡಿದೆ ಭಾರತದಂತಹ ವಿಶಾಲವಾದ ದೇಶದಲ್ಲಿ ಕೆಲವೊಂದು ತೀರ ಹಿಂದುಳಿದ ಪ್ರದೇಶಗಳಿದ್ದು, ಅವುಗಳಿಗೆ ಈ ಯೋಜನೆಯ ಸದುಪಯೋಗ ದೊರೆಯುವ ಅಗತ್ಯವಿದೆ, ಆದದರಿಂದಲೇ ಪ್ರಧಾನಿ ನೆಹರೂ ಹಾಗೂ ಮತ್ತಿತರ ಮುಂದಾಳುಗಳು ಸೂಚಿಸಿದ ಮಧ್ಯಾಹ್ನದ ಊಟದ ಯೋಜನೆಯೊಂದು ನೂತನ ಆಕರ್ಷಣೆ ಎಂದು ಬೇರೆ ಹೇಳಬೇಕಾಗಿಲ್ಲ

ಸ್ತ್ರೀ ವಿದ್ಯಾಭ್ಯಾಸಕ್ಕೆ ಸಾಕಷ್ಟು ಮನ್ನಣೆ ದೊರೆಯದ, ಬೇಕಷ್ಟು ಜನಪ್ರಿಯತೆಯನ್ನು ಗಳಿಸದ ಕೆಲವೊಂದು ರಾಜ್ಯಭಾಗಗಳೂ ಭಾರತದಲ್ಲಿವೆ ಎಂಬುದು ನಿಸ್ಸಂದೇಹ. ಇಂದು ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವ ವಿದ್ಯಾರ್ಥಿಗಳಲ್ಲಿ ಕೇವಲ ನೇಕಡಾ ಮೂವತ್ತರಷ್ಟು ಮಾತ್ರ ಹೆಣ್ಮಕ್ಕಳೆಂದು ಅಂಕೆ ಸಂಖ್ಯೆಗಳಿಂದ ತಿಳಿದುಬರುತ್ತಿದೆ ಈ ದಾಮಾಶಯವು ಅತ್ಯಂತ ನಿಕೃಷ್ಟಾವಸ್ಥೆಯಲ್ಲಿರುವುದನ್ನು ಅಲಕ್ಷಿಸಬಾರದು. ಇತ್ತೀಚೆಗೆ ಲೋಕಸಭೆಯಲ್ಲಿ ವಿದ್ಯಾಂಗ ಮಂತ್ರಿಗಳಾದ ಡಾ. ಶ್ರೀಮಾಲಿಯವರು ಪ್ರತಿ ಮಗುವಿಗೂ ಒಂದು ಮೈಲಿಯೊಳಗೆ ಪ್ರಾಥಮಿಕ ಶಾಲೆಯನ್ನೂ ಮೂರು ಮೈಲಿಯೊಳಗೆ ಮಾಧ್ಯಮಿಕ ಶಾಲೆಗಳನ್ನೂ ಐದು ಮೈಲಿಗಳೊಳಗೆ ಪ್ರೌಢ ಶಾಲೆಗಳನ್ನೂ ಒದಗಿಸುವ ಭರವಸೆಯನ್ನು ಕೇಂದ್ರ ಸರಕಾರವು ಪಡೆದಿರುವುದೆಂದು ವ್ಯಕ್ತಪಡಿಸಿರುವರು. ಪ್ರೌಢ ಶಾಲೆಯ ವಿದ್ಯಾರ್ಥಿಗಳು ಐದು ಮೈಲುಗಳಷ್ಟು ದೂರವನ್ನು ನಡೆಯುವುದು ತುಸು ಪ್ರಯಾಸಕರವೇ ಆದುದರಿಂದ, ಸಾಧ್ಯವಿರುವಲ್ಲಿ ಪ್ರಯಾಣಸೌಕರ್ಯಗಳನ್ನು ಕೊಡಮಾಡುವುದೂ ಅಗತ್ಯವೆಂದು ಕಂಡುಬರುವುದು ಅಥವಾ ಯೋಗ್ಯ ವಿದ್ಯಾರ್ಥಿನಿಲಯಗಳನ್ನಾದರೂ ಅಗ್ಗದ ದರದಲ್ಲಿ ಒದಗಿಸುವುದು ಅನಿವಾರ್ಯವೆನ್ನುವುದು ಅಸಮಂಜಸವನ್ನಬಾರದು. ಶಾಲೆಗಳಿಗೆ ತಕ್ಕ ಸಹಾಯವನ್ನು ಕೇಂದ್ರ ಸರಕಾರವು ಸಲ್ಲಿಸುವುದೆಂಬ ವಿಶ್ವಾಸವನ್ನು ಕೊಟ್ಟಿರುವ ಡಾ ಶ್ರೀಮಾಲಿಯವರನ್ನು ಅಧ್ಯಾಪಕರು ಅಭಿನಂದಿಸದಿರಲಾರರು ಹೆಚ್ಚಿನ ಶಾಲೆಗಳು ಹಾಗೂ ಕಾಲೇಜುಗಳು ಹೆಚ್ಚೇಕೆ, ವಿಶ್ವವಿದ್ಯಾಲಯಗಳೂ ಈ ಸಹಾಯಧನವನ್ನು ಪಡೆಯುವಲ್ಲಿ ಅಸಫಲರಾಗಿರುವುದು ಮಾತ್ರ ವಿಮಂಚನೆಗೀಡುಮಾಡುವ ಪ್ರಸಂಗವಾಗಿದೆ ಶಾಲೆ ಅಥವಾ ಕಾಲೇಜುಗಳ ಭವ್ಯ ಕಟ್ಟೋಣ ಹಾಗೂ ಉಪಕರಣಗಳಿಗಿಂತ ಅಧ್ಯಾಪಕರ ಜೀವನ ಮಟ್ಟವನ್ನು ಎತ್ತರಿಸುವ ಸಲುವಾಗಿ ಅವರ ವೇತನವನ್ನು ಹೆಚ್ಚಿಸುವತ್ತ ಸಂಬಂಧಪಟ್ಟವರು ಇನ್ನಾದರೂ ಗಮನಿಸಬೇಕು. ಒಂದು ಕಾಲೇಜು ತನ್ನಲ್ಲಿ ಪ್ರವೇಶಗೊಡುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಒಂದು ಸಾವಿರಕ್ಕೆ ಮಿತಿಗೊಳಿಸದಿದ್ದರೆ, ಅವುಗಳಿಗೆ ಸಹಾಯಧನ ದೊರೆಯದೆಂದು ವಿಶ್ವವಿದ್ಯಾನಿಲಯಗಳ ಸಹಾಯಧನ ಆಯೋಗದ ಅಧ್ಯಕ್ಷ ಡಾ. ಸಿ. ಡಿ ದೇಶಮುಖರು ಸುವ್ಯಕ್ತಪಡಿಸಿರುತ್ತಾರೆ ಅಮೆರಿಕೆಯಲ್ಲಿಯೂ ಇದಕ್ಕಿಂತ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿರುವ ಕಾಲೇಜುಗಳ ಶಿಕ್ಷಣ ಮಟ್ಟವು ಉತ್ತಮ ತರದ್ದಿರುವುದಿಲ್ಲವೆಂಬ ಬಗ್ಗೆ ವಾದವಿವಾದಗಳು ಬೆಳೆಯುತ್ತಿವೆ ಭಾರತದಂತಹ ಒಂದು ಬಡ ರಾಷ್ಟ್ರದಲ್ಲಿಯೂ ನಾವು ಸಾವಿರ ಸಂಖ್ಯೆಯಲ್ಲಿ ಪದವೀಧರರನ್ನು ತಯಾರು ಮಾಡಿ ಪ್ರತಿವರ್ಷವೂ ಹೊರಗಳಿಸುತ್ತಿದ್ದೇವೆ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿದ ಬಳಿಕ ಈ ಎಲ್ಲಾ ಪದವೀಧರರು ತಾವು ಪಡೆದ ಉಪನ್ಯಾಸ ಮಾಲೆಗಳ ಟಿಪ್ಪಣಿಗಳನ್ನಷ್ಟೇ ಅಭ್ಯಾಸಮಾಡಿದ ಬಲದಿಂದ, ಸರಕಾರೀ ಉದ್ಯೋಗವನ್ನೇ ಎದುರುನೋಡುತ್ತಿರುವುದು ಜನತೆಯ ಗಮನದಿಂದ ದೂರವುಳಿಯಲಾರದು ಆದರೆ, ಕಾಲೇಜುಗಳಲ್ಲಿ ಇಂತಹ ವಾತಾವರಣವು ತಿಳಿಗೊಳ್ಳುತ್ತ ಬರುವುದು ತೋರಿಬರುತ್ತಿದೆ ಇಂದು ದೇಶದಲ್ಲಿ ತಾಂತ್ರಿಕಜ್ಞರು, ವೈಜ್ಞಾನಿಕರು, ವೈದ್ಯರು ಮೊದಲಾದ ವೃತ್ತಿಪರರ ಬೇಡಿಕೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ, ಈ ವೃತ್ತಿಪರ ಕಾಲೇಜುಗಳೇ ಹೆಚ್ಚಿನ ಬುದ್ಧಿವಂತ ವಿದ್ಯಾರ್ಥಿಗಳನ್ನು ಆಕರ್ಷಿಸಿ ತಮ್ಮೆಡೆಗೆ ಸೆಳೆದುಕೊಳ್ಳುವುದರಿಂದ, ಇತರ ಕಲಾ ಶಾಲೆಗಳಲ್ಲಿ ಈಗ ದೊರೆಯುತ್ತಿರುವ ವಿದ್ಯಾಮಟ್ಟಕ್ಕಿಂತ ಉನ್ನತ ರೀತಿಯಲ್ಲಿ ವಿದ್ಯೆಯು ದೊರೆಯದೆ ಹೋದರೆ, ಇಂದಿನ ಕಲಾಶಾಲೆಗಳ ಉಪನ್ಯಾಸ ಮಂದಿರಗಳು ಕೆಲವೇ ವರ್ಷಗಳಲ್ಲಿ ತೆರವಾಗಿ ಹೋಗುವುದು ಅಸಂಭವವೇನಲ್ಲ. ಈಗಾಗಲೇ ಭಾರತದಲ್ಲಿ ೭೫ ಇಂಜಿನಿಯರಿಂಗ್ ಕಾಲೇಜುಗಳು, ೧೨೭ ತಾಂತ್ರಿಕ ಸಂಸ್ಥೆಗಳು (ಟೆಕ್ನಿಕಲ ಇನ್‌ಸ್ಟಿಟ್ಯೂಶನ್ಸ್) ಇವೆಯಲ್ಲದೆ, ಈ ಸಂಖ್ಯೆಯು ದಿನದಿಂದ ದಿನಕ್ಕೆ ಬೆಳೆಯುತ್ತಿದೆ ಮತ್ತು ಹೀಗೆ ಹೆಚ್ಚುತ್ತಿರುವುದೂ ದೇಶದ ಆವಶ್ಯಕತೆಯ ದೃಷ್ಟಿಯಿಂದ ಅತ್ಯಂತ ಮಹತ್ವದ್ದಾಗಿದೆ ಆದರೆ, ಕೇಂದ್ರ ವಿದ್ಯಾಮಂತ್ರಿ ಖಾತೆಯು ಕೃಷಿ ವಿದ್ಯೆಯ ಕಡೆಗೆ ವಿಶೇಷ ಗಮನವೀಯದಿರುವುದು ಮಾತ್ರ ದೌರ್ಭಾಗ್ಯದ ಸಂಗತಿ ನೂರರಲ್ಲಿ ಎಪ್ಪತ್ತಕ್ಕಿಂತಲೂ ಮಿಕ್ಕಿದ ಜನರು ಹಳ್ಳಿಗಳಲ್ಲಿ ಕೃಷಿಯ ಹಾಗೂ ಬೆಳೆತರುವ ಬೆಳೆಯ ಕಾರ್ಯದಲ್ಲಿ ಮಗ್ನರಾಗಿರುವಾಗ ಕೃಷಿಯ ವಿದ್ಯೆಯ ಕಡೆಗೂ ಹೆಚ್ಚು ಲಕ್ಷ್ಯ ಪೂರೈಸುವುದು ಅಗತ್ಯವೆನ್ನುವುದು ಚಿರಸತ್ಯ. ಇದರೊಂದಿಗೆ ಪಶು ಸಂಗೋಪನಾ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳು ಹೆಚ್ಚುವುದು ಅಗತ್ಯ. ಈಗಾಗಲೇ ಅಲ್ಲಲ್ಲಿ ಸಂಖ್ಯೆಯಲ್ಲಿ ಬೆಳೆಯುತ್ತಿರುವ ವಿವಿಧೋದ್ದೇಶ ಶಾಲೆಗಳಲ್ಲಿಯೂ ಕೃಷಿ ಮತ್ತು ಪಶುಸಂಗೋಪನೆಯತ್ತ ವಿಶೇಷ ಗಮನವೀಯಬೇಕಲ್ಲದೇ, ಬಡಗಿತನ, ಲೋಹಗಳಿಂದ ವಸ್ತು ತಯಾರಿ ಮತ್ತಿತರ ವಿಷಯಗಳನ್ನು ಬೋಧಿಸಬೇಕು ಗ್ರಾಮೀಣ ಪ್ರದೇಶಗಳಲ್ಲಿರುವ ಪ್ರಾಥಮಿಕ ಶಾಲೆಗಳು ತಮ್ಮ ಪ್ರದೇಶದ ವಾತಾವರಣಕ್ಕನುಗುಣವಾದ ಪಾಠಪಟ್ಟಿಯನ್ನು ತಯಾರಿಸಿ ಆ ಬಗ್ಗೆ ಉಚಿತ ಕಾರ್ಯವೆಸಗುವ ಅವಕಾಶವನ್ನು ಕಲ್ಪಿಸುವುದೂ ಸೂಕ್ತವೆನ್ನಬಹುದು ಮತ್ತೀ ದಿಸೆಯಲ್ಲಿ ಈಗ ಪ್ರಚಾರದಲ್ಲಿರುವ ಬುನಾದಿ ಶಿಕ್ಷಣವು ಪೂರಕವಾಗಿರುವುದು ಮಾನ್ಯ ವಿದ್ಯಾಮಂತ್ರಿಯವರು ತಮ್ಮ ಉಲ್ಲೇಖದಲ್ಲಿ ಹೆಚ್ಚಾಗಿ ಆರ್ಥಿಕ ಪರಿಸ್ಥಿತಿಯನ್ನೂ ಅದಕ್ಕೆ ಸಂಬಂಧಿಸಿದ ಅಂಕೆ ಸಂಖ್ಯೆಗಳನ್ನೂ ಗಮನಿಸಿದ್ದಾರಲ್ಲದೆ, ವಿದ್ಯಾಮಟ್ಟದಲ್ಲಾಗಲೀ ವಿದ್ಯಾಕ್ರಮದ ಯೋಜನೆಯಲ್ಲಾಗಲೀ ಹಸ್ತಾಕ್ಷೇಪವನ್ನು ಮಾಡಿರುವುದು ಕಂಡು ಬರುವುದಿಲ್ಲ ಆದರೆ, ಇಂದು ವಿದ್ಯಾಭ್ಯಾಸಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಈಗ ಪ್ರಚಲಿತವಿರುವ ಪಾಠಪಟ್ಟಿಯನ್ನು ಪುನರಭ್ಯಾಸಿಸಿ ಉಚಿತವಾದ ಮತ್ತು ಸಂದರ್ಭೋಚಿತವಾದ ಬದಲಾವಣೆಗಳನ್ನು ಮಾಡುವುದೂ ಅಗತ್ಯವೆಂದು ಸೂಚಿಸುವುದು ತಪ್ಪೆನಿಸಲಾರದು ವಿದ್ಯಾತಜ್ಞರ ಸಮಿತಿಯೊಂದು ಏರ್ಪಡಿಸಿ, ಇಂದಿನ ಶಾಲೆ ಮತ್ತು ಕಾಲೇಜುಗಳಲ್ಲಿರುವ ಪಠ್ಯ ಪುಸ್ತಕಗಳು, ಕಲಿಸಲ್ಪಡುವ ವಿಷಯಗಳು ವಿಧಾನಗಳು ಇತ್ಯಾದಿಗಳ ಸಂಬಂಧದಲ್ಲಿ ಒಂದು ಯೋಗ್ಯ ನಿರ್ಧಾರವನ್ನು ಕೈಕೊಳ್ಳುವುದು ಅಗತ್ಯವು, ಇತ್ತ ಸರಕಾರವು ತನ್ನ ಗಮನವನ್ನು ತೀವ್ರವಾಗಿ ಹರಿಸಿ, ಸ್ವತಂತ್ರ ಭಾರತದಲ್ಲಿ ಉಪಯುಕ್ತವಾದ ಮತ್ತು ಆವಶ್ಯಕವಾದ ವಿದ್ಯೆಯನ್ನು ನಮ್ಮ ಮುಂದಿನ ಜನಾಂಗಕ್ಕೆ ಒದಗಿಸುವಲ್ಲಿ ಮುಂದಾಗಬೇಕು ಎಂದೂ ಬಯಸುತ್ತೇವೆ. ಈ ದಿಶೆಯಲ್ಲಿ ಭಾರತಸರಕಾರವು ಎಂದಿಗೂ ಹಿಂದುಳಿಯಲಾರದೆಂದು ಹಾರೈಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ರಾಜ್ಯಸಭೆಗೆ ಗೆದ್ದು ಬಂದವರು

ಮೈಸೂರು ವಿಧಾನಸಭಾ ಮತದಾರ ಕ್ಷೇತ್ರದಿಂದ ರಾಜ್ಯಸಭೆಯ ನಾಲ್ವರು ಸದಸ್ಯರ ತೆರವಾದ ಸ್ಥಾನಕ್ಕೆ ಚುನಾವಣೆಯು ನಡೆದು ಕಾಂಗ್ರೆಸ್ ಉಮೇದ್ವಾರಿಗಳಾದ ಶ್ರೀ ಬಿ ಪಿ ಬಸಪ್ಪ ಸೆಟ್ಟಿ ಶ್ರೀಮತಿ ಅನ್ನಪೂರ್ಣಮ್ಮ ತಿಮ್ಮಾರೆಡ್ಡಿ ಮತ್ತು ಶ್ರೀ ಮಹಮ್ಮದ ವಾಲಿ ಮುಲ್ಲಾ ಮತ್ತು ಸೋಶಿಯಲಿಸ್ಟ ಉಮೇದ್ವಾರ ಶ್ರೀ ಮುಲ್ಕಾ ಗೋವಿಂದ ರೆಡ್ಡಿಯವರು ಆರಿಸಿ ಬಂದಿರುವರು ಈ ನಾಲ್ಕು ಸ್ಥಾನಗಳಿಗೆ ಹನ್ನೆರಡು ಮಂದಿ ಸ್ಪರ್ಧಿಸಿದ್ದರು

ಮೈಸೂರಿನಲ್ಲಿ ತಲೆಸಿಡಿತ

ಮೈಸೂರಿನ ರಾಜಕಾರಣವು ಹದಗೆಡುತ್ತ ಬಂದಿದ್ದು ಶ್ರೀ ನಿಜಲಿಂಗಪ್ಪ ಮತ್ತು ಅತೃಪ್ತ ಕಾಂಗ್ರೆಸ್ ಸದಸ್ಯರೊಳಗೆ ಯಾವ ಮಧ್ಯಸ್ಥಿಕೆಯೂ ನಡೆಯುವುದು ಅಸಾಧ್ಯವೆಂದು ತಿಳಿದ ಬಂದಿದೆ. ಕಾಂಗ್ರೆಸ್ ವರಿಷ್ಠರು ಈ ವಿಷಯದಲ್ಲಿ ನಿರ್ಲಿಪ್ತರಾಗಿರುವರೆಂದೂ ವದಂತಿಯಿದೆ ಇದುವರೆಗೆ ನಡೆದ ಮಾತುಕತೆಗಳ ಬಗ್ಗೆ ಸಂಪೂರ್ಣ ವರದಿ ದೊರೆಯದಿದ್ದರೂ ತಿಳಿದುಬಂದಂತೆ ಹಿಂದಿನ ಮೈಸೂರಿನ ಮಂತ್ರಿಗಳಾದ ಶ್ರೀ ಸಿದ್ಧವೀರಪ್ಪನವರನ್ನು ವಿರೋಧೀ ಪಂಗಡದವರು ನಾಯಕರನ್ನಾಗಿ ನೇಮಿಸುವ ನಿರೀಕ್ಷೆಯಿದೆ ಈಗಿರುವ ಮಂತ್ರಿಮಂಡಳವನ್ನು ಪುನಾರಚಿಸಿ ಸಂಧಾನ ಸಾಧಿಸುವ ಪ್ರಯತ್ನಗಳು ನಡೆಯುತ್ತಿವೆಯಾದರೂ ಅವು ಸಫಲಗೊಂಡಿರುವುದಕ್ಕೆ ಬಲವಾದ ಸುದ್ದಿ ಬಂದಿಲ್ಲ. ಪ್ರಾಯಃ ಮಂತ್ರಿಮಂಡಳವು ಬಿಕ್ಕಟ್ಟಿನಲ್ಲಿಯೇ ಪರ್ಯವಸಾನಹೊಂದುವುದು ಅನಿರೀಕ್ಷಿತವಾಗಿ ತೋರಿಬರುವುದಿಲ್ಲ

ಹೆಸರಿನಲ್ಲಿ ತಿದ್ದುಪಡಿ

ಗಣತಂತ್ರದಲ್ಲಿ ಭಾರತದ ಕೆಲವೊಂದು ಸ್ಥಳಗಳ ಹೆಸರುಗಳನ್ನು ಬದಲಾಯಿಸುವ ಕಾರ್ಯಕ್ರಮವು ಪ್ರಾರಂಭವಾಗಿದ್ದು, ಈಗಾಗಲೇ ಒಟ್ಟು ೧೧೦ ಸ್ಥಳಗಳ ನಾಮವನ್ನು ಬೇರೆಯಾಗಿಸಲಾಗಿದೆ ಎಂದು ಭಾರತ ಸರಕಾರದ ಅಧಿಕೃತ ಪ್ರಕಟಣೆಯೊಂದು ತಿಳಿಸುತ್ತದೆ ಪ್ರತಿ ರಾಜ್ಯದಲ್ಲಿಯೂ ಕೆಲವೊಂದು ಬದಲಾವಣೆಗಳು ಆಗಿದ್ದು ಉತ್ತರ ಪ್ರದೇಶದಲ್ಲಿ ೩೩, ಪಂಜಾಬದಲ್ಲಿ ೧೬, ಮದ್ರಾಸದಲ್ಲಿ ೧೫, ಮಧ್ಯಪ್ರದೇಶದಲ್ಲಿ ೧೧, ಆಂಧ್ರ ಪ್ರದೇಶ, ರಾಜಸ್ಥಾನ, ಮೈಸೂರು ರಾಜ್ಯಗಳಲ್ಲಿ ಪ್ರತಿಯೊಂದರಲ್ಲಿ ೯, ಮುಂಬಯಿ, ಪಶ್ಚಿಮ ಬಂಗಾಲಗಳಲ್ಲಿ ಪ್ರತ್ಯೇಕವಾಗಿ ೪, ಅಸ್ಸಾ

(ಆನೇ ಪುಟ ನೋಡಿರಿ)

In the Court of the District Munsiff of Coondapur

R E P 1078/1957 (O S 482/1955)

Bhoja Rao Navada

—D H -Execution-Petitioner

Vs

1 Venkatramana Maiya
2 Shankernarayan Maiya
3 Nagappaya Maiya
4 Minor Narashimha
5 " Parameshwara—by guardian their father Respondent 1
6 Venkatraya Goli

—Respondents

To

The 2nd respondent Shankernarayana Maiya S/o Goraji Anantha Maiya last known to be a resident of Hiliyana village of Udipi Taluq, S K District

whereas in the aforesaid suit OS 482/1955 the decree holder has applied for the sale of the immovable property covered by the preliminary decree passed in the case, you are informed hereby that the 1(th day of April 1958 has been fixed for settling the terms of the proclamation of sale

(By order of the court)

S N Acharya,
Advocate for D H

Coondapur 25 3 —1958

THE MOOLKY

(INCORPORATED IN

BALANCE SHEET A

CAPITAL & LIABILITIES		Rs. N.P.	Rs
1. Capital:			
AUTHORISED CAPITAL: 8,000 Shares of Rs. 25/- each			2,00,000
ISSUED CAPITAL: 4,000 Shares of Rs. 25/- each			1,00,000
SUBSCRIBED CAPITAL: 3,194 Shares of Rs. 25/- each			79,850
CALLED-UP AND PAID-UP CAPITAL: 3,194 Shares of Rs. 25/- each at Rs. 15/- per Share ...		47,910 - 00	
Add: Calls in advance		1,200 - 00	49,110
2. Reserve Fund and other Reserves:			
Statutory Reserve (Under Section 17)...		12,300 - 00	
Other Reserves		4,713 - 37	17,013
3. Deposits and other Accounts:			
Fixed Deposits		1,96,133 - 06	
Savings Bank Deposits		14,150 - 10	
Current Accounts, Contingency Accounts etc.		28,730 - 74	2,39,013
4. Borrowings from other Banks, Agents etc:			
i) In India		14,827 - 57	
ii) Outside India		Nil	14,827
Particulars			
i) Secured (by Fixed Deposits)		14,827 - 57	
ii) Unsecured		Nil	
5. Bills Payable:			Nil
6. Bills for collection being Bills Receivable as per contra:			
i) In India		Nil	
ii) Outside India —		Nil	Nil
7. Other Liabilities:			
Unclaimed Dividends		990 - 57	
Other Liabilities		4,844 - 40	5,834
8. Acceptances, Endorsements and other obligations: per contra			Nil
9. Profit and Loss:			
As per last Balance Sheet		3,500 - 87	
Less: Dividends	2,395 - 50		
Bonus to Staff	292 - 50		
Provision for Income-tax	700 - 00	3,388 - 00	
		112 - 87	
Add: Profit for the year		6,076 - 49	
		6,189 - 36	
Less: Proposed Appropriation			
Statutory Reserve Fund	2,500 - 00		
Provision for Income-tax	1,500 - 00	4,000 - 00	2,189
10. Contingent Liabilities			Nil
Total ...			3,27,989

OFFICE OF THE BANK, MULKI Date: 23—2—1958.	(Sd.) M SHANKERA SHETTY	(Sd.) KRISHNA M. SALIAN	(Sd) P. SANJIVA H
	„ K SANJIVA SHETTY	„ DR. M. D. ADAPPA	„ A. DODDAN

Dr. PROFIT AND LOSS ACCOUNT FOR

	EXPENDITURE	Rs
1.	Interest paid on Deposits Borrowings, etc.	7,563
2.	Salaries and Allowances and Provident Fund (Including salary of Rs. 1,860/- paid to Manager)	3,570
3.	Directors and Local Committee Members' fees and allowances	102
4.	Rent, Taxes, Insurance, Lighting etc.	466
5.	Law Charges	Nil
6.	Postage, Telegrams and Stamps	194
7.	Auditor's Fees	100
8.	Depreciation on and repairs to the Banking Co.'s Property	72
9.	Satationery, Printing, Advertisement, etc.	507
10.	Loss from sale of or dealing with non-Banking Assets	Nil
11.	Other expenditure	772
12.	Net Profit	6,076
	Total ...	19,424

OFFICE OF THE BANK, MULKI. Date: 23—2—1958.	(Sd.) M. SHANKERA SHETTY	(Sd.) KRISHNA M. SALIAN	(Sd.) P. SANJIVA H
	„ K. SANJIVA SHETTY	„ DR. M. D. ADAPPA	„ A. DODDAN

I have audited the annexed Balance Sheet of Moolky Bank Ltd., as on 31—12—1957 and also the annexed Profit and Loss Account of the Ban necessary for the purpose of my audit and have found them to be satisfactory; *(b)* The transactions of the Bank which have come to my notice, hav examination of those books; *(d)* The Bank's Balance Sheet and Profit and Loss Account dealt with by this report are in agreement with the books of by the Companies Act 1956 in the manner so required for Banking Companies and on such basis, the said Balance Sheet gives a true and fair view of

Mangalore,
19—2—1958.

IMITED, MULKI.

IMITED LIABILITY)

T DECEMBER, 1957.

PROPERTY & ASSETS		Rs NP	Rs NP
In hand and with Reserve Bank and State Bank			37,640 - 94
nces with other Banks			
i) In India— On Current Account		57 - 35	
On Fixed Deposits		57,000 - 00	
ii) Outside India		Nil	57,057 - 35
ey at Call and Short Notice			Nil
Discounted and Purchased·			
(Other than Treasury Bills of the Central and Provincial Govts)			
i) Payable in India		Nil	
ii) Payable outside India		Nil	Nil
tments at Cost			
) Securities of the Central and State Govts and other Trustee Securities of the face value of Rs 35,500/-...		35,348 - 12	
ii) Shares Fully paid-up Preference Shares		19,731 - 50	
ii) Debentures or Bonds		Nil	
v) Other Investments		Nil	
v) Gold		Nil	55 079 - 62
s Advances, Cash Credits and Over-drafts (Other than bad and doubtful debts for which provision s been made to the satisfaction of the Auditor)			
i) In India —		1,72,838 - 03	
i) Outside India		Nil	1,72,838 - 03
culars			
i) Debts considered Good in respect of which the Bank is fully Secured		1,59,959 - 09	
ii) Debts considered good for which the Bank holds no other security than the debtor's personal security ...		Nil	
i) Debts considered good secured by the personal liabilities of one or more parties in addition to the personal security of the debtors		12,878 - 94	
) Debts considered doubtful or bad not provided for		Nil	
.) Debts due by Directors or Officers of the Bank or any of them either severally or jointly with any other persons		8,238 - 54	
i) Debts due by Companies or Firms in which the Directors of the Bank are interested as Directors, Partners or Managing Agents or in the case of Private Companies as members		Nil	
i) Maximum total amount of Advances including temporary Advances made at any time during the year to Directors or Managers or Officers of the Bank or any of them either severally or jointly with any other persons		12,418 - 67	
i) Maximum total amount of Advances including temporary Advances made at any time during the year to the Companies or Firms in which the Directors of the Bank are interested as Directors Partners, Managing Agents or in the case of Private Companies as Members .		Nil	
) Due from Banks		Nil	
for collection being Bills Receivable as per contra			
i) In India		Nil	
i) Outside India		Nil	Nil
ptances, Endorsements and other obligations per contra			Nil
ises			Nil
ture and Fixtures (at cost)		1,591 - 96	
Add Additions during the year		141 - 77	
		1,733 - 73	
Less Depreciation			
Upto last Balance Sheet	876 - 53		
During the year	72 - 20	948 - 73	785 - 00
r Assets (including Silver)			
nterest Receivable		2,747 - 60	
Advance Income Tax		1,840 63	4,588 - 23
Banking Assets acquired in satisfaction of claims			Nil
Total			3,27,989 - 17

ECTORS (Sd) N M ADYANTHAYA, *President* (Sd) M R H PUNJA, *Manager*

ENDING 31ST DECEMBER, 1957. Cr.

INCOME	Rs. NP
s provision made during the year for Bad and Doubtful debts and other usual or necessary Provision)	
rest and Discount	16,603 - 76
mmission, Exchange and Brokerage	2,211 - 28
its	Nil
Profit on sale of Investments, Gold and Silver Land, Premises and other Assets (not credited to Reserves, or any particular fund or account)	Nil
Profit on revaluation of Investments, Gold and Silver, Land, Premises and other Assets (not credited to Reserves, or any particular fund or account)	Nil
me from Banking Assets and Profit from sale or dealing with such Assets	Nil
ers receipts	609 - 73
Total ...	19,424 - 77

CTORS (Sd) N M ADYANTHAYA, *President* (Sd) M R H PUNJA, *Manager*

IFICATE

ding on that date and I report that (a) I have obtained all the information and explanations which to the best of my knowledge and belief were powers of the Bank (c) In my opinion proper books of account as required by law have been kept by the Bank so far as appears from my my opinion and to the best of my information, and according to the explanations given to me, the said accounts give the information required rs of the Bank as on 31—12—1957 and the Profit and Loss Account gives a true and fair view of the profit for the year ending on that date

(*Sd*) V. M SHETTY,
Chartered Accountant.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಸಭೆಯು ತಾ. 24ರಂದು ಸಂಜೆ ಚೇರ್‌ಮನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿಯಿಂದ ಬೆಂಗಳೂರಿಗೆ ಅಂತೆಯೇ ಬೆಂಗಳೂರಿನಿಂದ ಉಡುಪಿಗೆ ದಿನಾಲೂ ಕಾರ್ಕಳ, ಮೂಡಬಿದ್ರೆ, ಬಂಟ್ವಾಳ ಮಾರ್ಗವಾಗಿ ಬಸ್ ಸರ್ವಿಸನ್ನು ತೆರೆಯುವಂತೆ ಕಂಬೈಂಡ್ ಬುಕ್ಕಿಂಗ್ ಏಜನ್ಸಿಯವರನ್ನು ಕೇಳಿಕೊಳ್ಳಲಾಯಿತು. ರಥಬೀದಿಯಲ್ಲಿ ಗ್ಲೋಬ್ ಲೈಟುಗಳನ್ನು ಹಾಕುವ ವಿಚಾರ ಬಾಕಿಯಿಡಲಾಯಿತು. ಶಾತಾ ಆಯಿಲ್ ಮಿಲ್ಸ್ ಲಿಮಿಟೆಡ್ ಎರ್ನಾಕುಳಂ ಅವರ ಜಾಹೀರಾತು ಬೋರ್ಡನ್ನು ಸಂತೆ ಮಾರ್ಕೆಟಿನ ವಠಾರದಲ್ಲಿರಿಸಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಸ್ವಾತಂತ್ರ್ಯ ದಿನಾಚರಣೆ ಶಿಷ್ಯವೇತನವನ್ನು 1957–58ನೇ ವರ್ಷದ ಬಗ್ಗೆ ಸ್ಥಳೀಯ ಸಂಸ್ಕೃತ ಕಾಲೇಜಿನ ಹೈಸ್ಕೂಲಿನಲ್ಲಿ IV ಫಾರ್ಮಿನಲ್ಲಿರುವ ಶ್ರೀ ಸುಬ್ರಹ್ಮಣ್ಯ ಅಡಿಗರಿಗೆ ಕೊಡುವುದೆಂದಾಯಿತು.

ಕೌನ್ಸಿಲಿನ ಹಾಲುಹಣ್ಣಾಲೆಗಳನ್ನು ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ತಿಳಿಸಲು ಹೋದ ಕೆ. ಕೆ. ಪೈ, ಎನ್. ಸೀತಾರಾಮ ಕಾಮತ್, ಟಿ ಎ. ವಾಸುದೇವನ್ ಮತ್ತು ಯು ಎಸ್ ನಾಯಕ್, ಎಮ್. ಎಲ್, ಎ ಅವರನ್ನು ಅಭಿನಂದಿಸಲಾಯಿತು.

ಕೌನ್ಸಿಲಿನ 1957–58 ರ ರಿವೈಜ್ಡ್ ಮತ್ತು 1958—59 ರ ಅಂದಾಜು ಬಜೆಟ್‌ಗಳನ್ನು ಮಂಜೂರು ಮಾಡುವ ಕುರಿತು ತುಂಬಾ ಚರ್ಚೆ ನಡೆದು ಕೆಲವೊಂದು ತಿದ್ದುಪಡಿಗಳೊಂದಿಗೆ ಪಾಸು ಮಾಡಲಾಯಿತು. ಬಜೆಟ್ ಅಂಕೆಸಂಖ್ಯೆಗಳನ್ನು ಪರಿಶೀಲಿಸಲು ಸಮಯ ಬೇಕಾದುದರಿಂದ ಇನ್ನೊಂದು ಸಭೆಯಲ್ಲಿ ಅವನ್ನು ಇತ್ಯರ್ಥಿಸಬೇಕೆಂದು ಶ್ರೀ ವಿ. ವಾಸುದೇವರಾಯರು ಸೂಚಿಸಿದರು. ವಿಶೇಷ ಗಮನಿಸ ತಕ್ಕ ವಿಷಯಗಳೇನೂ ಇಲ್ಲದಿರುವುದರಿಂದ ಇಂದಿನ ಸಭೆಯಲ್ಲಿಯೇ ತೀರ್ಮಾನಿಸಬೇಕೆಂದು ಶ್ರೀ ಪಿ. ವಿ. ಆಚಾರ್ಯರು ಹೇಳಿದರು. ಬಜೆಟ್ ವಿಚಾರ ಇಷ್ಟು ತಡವಾಗಿ ಸಭೆಯ ಮುಂದೆ ಬಂದುದರಿಂದ ಇನ್ನೊಂದು ಸಭೆಯಲ್ಲಿ ತೀರ್ಮಾನಿಸಬೇಕೆಂದು ಡಾ ಪಿ. ಜಿ. ಆಚಾರ್ಯರು ಸೂಚಿಸಿದರು. ಕೊನೆಗೆ ವೋಟು ತೆಗೆಯಲಾಗಿ ಬಜೆಟ್ ಇಂದಿನ ಸಭೆಯಲ್ಲಿ ತೀರ್ಮಾನವಾಗಬೇಕೆಂಬ ಶ್ರೀ ಪಿ. ವಿ. ಆಚಾರ್ಯರ ಸೂಚನೆಗೆ ಬಹುಮತ ದೊರೆಯಿತು. ಶ್ರೀಗಳಾದ ವಿ. ವಾಸುದೇವರಾವ್, ಎನ್. ಸೀತಾರಾಮ ಕಾಮತ್, ದಾಸ ಸೇರಿಗಾರ ಮತ್ತು ರವೀಂದ್ರ ನಾಯ್ಕರು ಸಭೆ ಬಿಟ್ಟು ಹೊರಟು ಹೋದರು. ಬಳಿಕ ಬಜೆಟ್ ವಿಚಾರ ಪರಿಶೀಲನೆಗೆ ಬಂದಾಗ ಡಾ. ಪಿ. ಜಿ. ಆಚಾರ್ಯರು ಇದೀ ಬಜೆಟ್‌ಗಳನ್ನು ಪೂರ್ಣ ವಿರೋಧಿಸಿದರು. ಆ ಮೇಲೆ ಹೊರಟುಹೋದರು. ನಂತರ ಬಜೆಟ್‌ಗಳು ಅಲ್ಪಸ್ವಲ್ಪ ವ್ಯತ್ಯಾಸ ಹೊಂದಿ ಪಾಸಾದುವು.

ಮೈಸೂರು ಹಿಂದೀ ಪ್ರಚಾರ ಪರಿಷತ್ತು— ಕಳೆದ ಫೆಬ್ರವರಿ ತಿಂಗಳಲ್ಲಿ ನಡೆದ ಮೈಸೂರು ಹಿಂದೀ ಪ್ರಚಾರ ಪರಿಷತ್ತಿನ ಹಿಂದೀ ಪರೀಕ್ಷೆಗಳಲ್ಲಿ ಅಂಬಲಪಾಡಿ ಗೀತಾಭವನದಿಂದ ಕುಳಿತ ಪ್ರಥಮಾ ಮತ್ತು ಮಧ್ಯಮಾ ಪರೀಕ್ಷೆಗಳ ವಿದ್ಯಾರ್ಥಿಗಳ ಫಲಿತಾಂಶಗಳು ಬಹಿರಂಗಗೊಂಡಿದ್ದು, ಒಟ್ಟು ೧೮ ಮಂದಿಯಲ್ಲಿ ೧೬ ಮಂದಿ ಉತ್ತೀರ್ಣಗೊಂಡಿರುವರು. ಇವರಲ್ಲಿ ಮೂವರು ಪ್ರಥಮ ಶ್ರೇಣಿಯಲ್ಲೂ ಎಂಟು ಜನರು ದ್ವಿತೀಯ ಶ್ರೇಣಿಯಲ್ಲೂ ಐದು ಜನರು ತೃತೀಯ ಶ್ರೇಣಿಯಲ್ಲೂ ತೇರ್ಗಡೆಯಾಗಿದ್ದಾರೆ. ಈ ಪರಿಷತ್ತಿನ ನೇತೃತ್ವದಲ್ಲಿ ಎಪ್ರಿಲ್ ಎರಡನೆ ವಾರದಿಂದ ಮೇ ೩೧ರ ವರೆಗೆ ನಡೆಯುವ 'ವಸಂತ ಹಿಂದೀ' ತರಗತಿಗಳು ಅಂಬಲಪಾಡಿ ಗೀತಾಭವನದ ವತಿಯಿಂದ ಉಡುಪಿಯಲ್ಲಿ ನಡೆಯುತ್ತವೆ. ಈ ತರಗತಿಯ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರು ಮುಂದೆ 'ಮಧ್ಯಮಾ' ಪರೀಕ್ಷೆಗೆ ಪ್ರವೇಶ ಪಡೆಯಲು ಅರ್ಹರಾಗಿರುವರು. ಈ ಬಗ್ಗೆ ತರಗತಿಗಳು ಪ್ರಕೃತ ನಿಟ್ಟೂರು ಹಾ. ಎ ಶಾಲೆ, ಅಂಬಲಪಾಡಿ ಗೀತಾಭವನ ಮತ್ತು ರಥಬೀದಿಗಳಲ್ಲಿ ನಡೆಯುತ್ತಿರುವುವು. ಈ ತರಗತಿಗಳಿಗೆ ಪ್ರವೇಶ ಪಡೆಯುವವರು ತಮಗೆ ಅನುಕೂಲವಾದ ಕೇಂದ್ರಗಳನ್ನು ನಮೂದಿಸಿ, ಗೀತಾಭವನದ ಕಾರ್ಯದರ್ಶಿಗಳೊಡನೆ ವ್ಯವಹರಿಸಬಹುದು. ತರಗತಿಯು ಪ್ರಾರಂಭವಾಗುವ ದಿನ, ಸಮಯ ಮತ್ತು ಸ್ಥಳಗಳನ್ನು ಉಮೇದ್ವಾರರಿಗೆ ವೈಯಕ್ತಿಕವಾಗಿ ತಿಳಿಸಲಾಗುವುದು ಎಂದು ಗೀತಾಭವನದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಶಿಕ್ಷಕರ ಪರಿಷ್ಕೃತ ವೇತನ

ಎಪ್ರಿಲ್ 57ರಿಂದ ಫೆಬ್ರವರಿ 58ರ ವರೆಗಿನ ಹೆಚ್ಚಳದ ಮೊತ್ತಕ್ಕೆ ಲೆಕ್ಕ ಪರಿಶೋಧನೆಯಾಗಿದ್ದು, ಖಾಸಗಿ ಪ್ರಾಥಮಿಕ ಶಾಲೆಗಳ ಬಿಲ್‌ಗಳನ್ನು ಜಿಲ್ಲಾ ವಿದ್ಯಾಧಿಕಾರಿಗಳು ಆಡಳಿತೆಯವರಿಗೆ ಈಗಾಗಲೇ ಕಳುಹಿಸುತ್ತಿರುವುದಾಗಿಯೂ ತಿಳಿದು ಬರುತ್ತದೆ. ಜಿಲ್ಲಾ ಬೋರ್ಡು ಶಾಲೆಗಳ ಮತ್ತು ಹೈಸ್ಕೂಲುಗಳ ಹೆಚ್ಚಳದ ಮೊತ್ತಕ್ಕೆ ಸೆಂಕ್ಷನ್ ಆಜ್ಞೆಯು ಡೈರೆಕ್ಟರರಿಂದ ಪಡೆಯಬೇಕಾಗಿರುವುದರಿಂದ ಪರಿಪತ್ರಗಳನ್ನು ಪರಿಶೋಧನೆಯ ನಂತರ ಬೆಂಗಳೂರಿಗೆ ಒಯ್ಯಲಾಗಿದೆ. ಪಂಚ್ಯಾತ ಬೋರ್ಡುಗಳ ಪರಿಪತ್ರಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಬಳಿಗೆ ಕಳುಹಿಸಲಾಗಿದೆಯೆಂದೂ ತಿಳಿದು ಬರುತ್ತದೆ.

ತಾ. 24 ೩–58ರಲ್ಲಿ ದ. ಕ. ಜಿಲ್ಲಾ ಪ್ರಾ. ಶಿಕ್ಷಕರ ಕ್ರಿಯಾ ಸಮಿತಿಯ ಕನ್ವೀನರ್ ಶ್ರೀ ಎಫ್. ದಾಂತಿ ಮತ್ತು ಉಡುಪಿ ಯೂನಿಯನ್ ಕೋಶಾಧಿಕಾರಿ ಶ್ರೀ ಭೋಜರಾಜ ಶೆಟ್ಟರವರು ಜಿಲ್ಲಾ ಬೋರ್ಡು ಅಧ್ಯಕ್ಷರನ್ನೂ ಪಂಚಾಯತ ಅಧಿಕಾರಿಗಳನ್ನೂ ಭೇಟಿಯಾಗಿ ವಿಚಾರ ವಿನಿಮಯ ನಡೆಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷರು ತಾನು ಇಂದೇ ಡೈರೆಕ್ಟರರೊಡನೆ ಫೋನ್ ಸಂಪರ್ಕ ಬೆಳೆಸಿ ಸೆಂಕ್ಷನ್ ಕೊಡುವಂತೆ ವಿನಂತಿಸುವುದಾಗಿ ತಿಳಿಸಿರುವರು. ಈ ಜಿಲ್ಲೆಯ ಎಲ್ಲಾ ಶಾಸನಸಭಾ ಸದಸ್ಯರಿಗೂ ಪತ್ರ ಬರೆದು ಡೈರೆಕ್ಟರರ ಸೆಂಕ್ಷನನ್ನು ಕೂಡಲೇ ದೊರಕಿಸಲು ಸಹಕರಿಸಬೇಕೆಂದು ವಿನಂತಿಸಿರುವುದಲ್ಲದೆ ಡೈರೆಕ್ಟರರನ್ನೂ ತಂತಿ ಮೂಲಕ ಶೀಘ್ರ ಅನುಮತಿ ಕೊಡಬೇಕೆಂದೂ ವಿನಂತಿಸಲಾಗಿದೆ. ಶಾಸನಸಭಾ ಸದಸ್ಯರಿಗೆ ಮಾಡಿದ ವಿನಂತಿಯಲ್ಲಿ ಈ ಆರ್ಥಿಕ ವರ್ಷಾಂತ್ಯದಲ್ಲಿಯೇ ಈ ಮೊತ್ತವನ್ನು ಪಡೆಯಲು ಸಿಗುವಂತೆ ಮಾಡಿ ಸುಮಾರು 2133 ಬೋರ್ಡು ಪ್ರಾ. ಶಿಕ್ಷಕರ ಮತ್ತು ಹೈಸ್ಕೂಲು ಶಿಕ್ಷಕರ ಸಂಬಳದ ಸವಲತ್ತನ್ನು ಒದಗಿಸಬೇಕೆಂದೂ ವಿನಂತಿಸಲಾಗಿದೆ. ಬಿಲ್‌ಗಳನ್ನು ಖಾಸಗಿ ಆಡಳಿತೆದಾರರು ಆದಷ್ಟು ತ್ವರಿತದಲ್ಲಿ ಪಟಾಯಿಸುವುದು ಅನುಕೂಲ ಎಂದು ಕ್ರಿಯಾಸಮಿತಿಯ ಕನ್ವೀನರ್ ದಾಂತಿಯವರು ತಿಳಿಸುತ್ತಾರೆ.

ಮುಲ್ಕಿ—ಸ್ಥಳೀಯ ಯು ಬಿ ಎಮ್. ಸಿ. ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಹಾಗೂ ಶಾಲಾ ಹಿತೈಷಿಗಳ ಸಭೆಯು ತಾ 23ರಂದು ಸಂಜೆ ಡಾ. ವಿ. ಕೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಗಿಲ್ಬರ್ಟ್ ಎಸ್. ಕರ್ಕಡರು ಸ್ವಾಗತಿಸಿದರು. ರೇ ಇ ಸಾನಂದರವರು ಸಮಾಲೋಚಿತ ಮಾತುಗಳನ್ನಾಡಿದರು. ಶಾಲೆಯ ಅಭಿವೃದ್ಧಿ ಸಾಧಿಸಲು ಮತ್ತು ಮಕ್ಕಳಿಗೆ ಧರ್ಮಾರ್ಥ ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಸರಕಾರದ ಮತ್ತು ಜನತೆಯ ಸಹಾಯದಿಂದ ಮಾಡಲು ಹೆತ್ತವರ ಕ್ರಿಯಾ ಸಮಿತಿ ರಚಿಸಲಾಯಿತು. ರೇ ಇ. ಸಾನಂದ (ಅಧ್ಯಕ್ಷ) ಶ್ರೀಗಳಾದ ಜಿ ಎಸ್ ಕರ್ಕಡ (ಕಾರ್ಯದರ್ಶಿ), ಎಸ್ ಪಾಲನ್ನ (ಖಜಾಂಚಿ), ದೇವಪ್ರಿಯ ಕರ್ಕಡ, ವಿ. ಜತ್ತನ್ನ, ಡಾ ವಿ ಕೆ. ಬಲ್ಲಾಳ್, ಎಮ್. ಮಂಜಪ್ಪ, ಎಸ್. ಅಮ್ಮನ್ನ, ಡಿ. ಕರ್ಕಡ, ಶ್ರೀಮತಿ ಸುಂದರಿ ಕೋಟ್ಯಾನ್ ಮೊದಲಾದವರು ಕ್ರಿಯಾ ಸಮಿತಿಯಲ್ಲಿರುವರು.

ದ. ಕ ಜಿಲ್ಲಾ ಬೋರ್ಡಿನ ಸಾಮಾನ್ಯ ಸಭೆಯು— ತಾ 22ರಂದು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಫ್. ಸಿ. ಡಿ' ಸೋಜರ ಸದಸ್ಯತನವನ್ನು ಊರ್ಜಿತಗೊಳಿಸಲಾಯಿತು. ಕುಂದಾಪುರ ಹೆಲ್ತ್ ಕೋಪರೇಟಿವ್ ಸೊಸೈಟಿಗೆ ರೂಪಾಯಿ 100/– ಸಹಾಯಧನ ಕೊಡಬಹುದೆಂದಾಯಿತು. ಕಾರ್ಕಳ, ಮೂಲ್ಕಿ ಹಾಗೂ ಬಂಟ್ವಾಳ ಬ್ಲೋಕುಗಳಲ್ಲಿರುವ ಹಲವು ಬೋರ್ಡು ಶಾಲೆಗಳಿಗೆ ರಾಷ್ಟ್ರೀಯ ಅಭಿವೃದ್ಧಿ ಯೋಜನೆಯ ಸಹಾಯ ಪಡೆದು ಮೂತ್ರದೊಡ್ಡಿಗಳನ್ನು ಕಟ್ಟಿಸಲು ನಿರ್ಣಯವಾಯಿತು. ೪ 3–1957ರಲ್ಲಿ ಸರಕಾರವು ಮಂಜೂರುಮಾಡಿದ ಒಂದೂವರೆ ಲಕ್ಷ ರೂಪಾಯಿಯ ಸಾಲದ ಮರುಪಾವತಿಮಾಡುವ ಸಮಯವನ್ನು ಮುಂದುವರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯ ಪಾಸಾಯಿತು

ಜಿಲ್ಲಾ ಬೋರ್ಡಿನ ಆರ್ಥಿಕ ಪರಿಸ್ಥಿತಿಯನ್ನು ಅಧ್ಯಕ್ಷರು ವಿವರಿಸುತ್ತಾ ಈ ವರ್ಷಾಂತ್ಯದಲ್ಲಿ ಅದು ಇನ್ನೂ ಹಾಳಾಗಲಿದೆ. ಈ ತಿಂಗಳಾಂತ್ಯದ ವರೆಗಿನ ಬೋರ್ಡಿನ ಆದಾಯ ಹಾಗೂ ಖರ್ಚನ್ನು ತೆಗೆದುಕೊಂಡಲ್ಲಿ, ಆದರ ಆರೋಗ್ಯ, ಸೆಕೆಂಡರಿ ವಿದ್ಯಾಭ್ಯಾಸ ಮುತ್ತಿತರ ಖರ್ಚುಗಳನ್ನೊಳಗೊಂಡ ಸಾಮಾನ್ಯ ವಿಭಾಗದಲ್ಲಿ ಬೋರ್ಡಿಗೆ ರೂ. 1,36,940 ಕೊರತೆಯುಂಟಾಗುವುದು. ಪ್ರಾಥಮಿಕ ವಿದ್ಯಾಭ್ಯಾಸ ವಿಭಾಗದಲ್ಲಿ ರೂ. 2,50,600 ಕೊರತೆ ಕಂಡುಬರುವುದು. ಇಂತಹ ಪರಿಸ್ಥಿತಿಯಲ್ಲಿ ಸರಕಾರವು ಜಿಲ್ಲಾ ಬೋರ್ಡಿನ ಸಹಾಯಕ್ಕೆ ಬಂದರೆ, ಮಾತ್ರ ಈ ಸ್ಥಿತಿ ಸುಧಾರಿಸಬಹುದೆಂದರು.

ಸಾಮಾನ್ಯ ಸಭೆಯ ಮೊದಲು ಜರಗಿದ ವಿಶೇಷ ಸಭೆಯಲ್ಲಿ ಶ್ರೀ ಬಿ. ಎಸ್. ಭಾಸ್ಕರ ರೈಗಳು ಬೋರ್ಡಿನ ಪ್ರತಿನಿಧಿಯಾಗಿ ಲೋಕಲ್ ಲೈಬ್ರೆರಿ ಅಥಾರಿಟಿಗೆ ಆರಿಸಲ್ಪಟ್ಟರು

(೫ನೇ ಪುಟದಿಂದ)

ಮುದಲ್ಲಿ ೨ ಬಿಹಾರ, ಹಿಮಾಚಲ ಪ್ರದೇಶ ಮತ್ತು ಒಡಿಸ್ಸ ರಾಜ್ಯಗಳಲ್ಲಿ ಪ್ರತಿಯೊಂದರಲ್ಲಿ ಒಂದೊಂದು ಸ್ಥಳಗಳ ಹೆಸರುಗಳು ಬದಲಾವಣೆ ಹೊಂದಿರುತ್ತವೆ ಎಂದು ಈ ಪ್ರಕಟಣೆ ತಿಳಿಸುತ್ತದೆ.

ವರ್ಣಭೇದ ಸಲ್ಲದು

ಹೊಸದೆಹಲಿಯ ಭಂಗಿ ಬಸಾಹತಿನಲ್ಲಿ ನೇರಿದ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತ ಗೃಹಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರು ಹರಿಜನ ಸವರ್ಣ ಭೇದವು ಅಸ್ತಿತ್ವದಲ್ಲಿರುವವರೆಗೆ ಭಾರತವು ಅಭಿವೃದ್ಧಿ ಹೊಂದಲಾರದು ಮತ್ತು ಅದು ಜಗತ್ತಿನ ರಾಷ್ಟ್ರಗಳ ಮಾಲಿಕೆಯಲ್ಲಿ ಉಚ್ಚಸ್ಥಾನವನ್ನು ಪಡೆಯಲಾರದೆಂದೂ ನುಡಿದರು. ಭಾರತೀಯರು ತಮ್ಮ ಸಹಜೀವಿಗಳ ಬಗ್ಗೆ ವರ್ಗಭೇದ ಮಾಡುತ್ತ ಹೋದರೆ ರಾಷ್ಟ್ರವು ಏಳ್ಗೆ ಪಡೆಯದೆಂದೂ ಹರಿಜನರನ್ನು ಕಡೆಗಣಿಸುವುದು ಯೋಗ್ಯವಲ್ಲವೆಂದೂ ಪ್ರತಿಪಾದಿಸಿದರು. ಈ ಸಾಮಾಜಿಕ ಸಮಸ್ಯೆಯನ್ನು ದೂರಗೊಳಿಸಿದರೇನೇ ಭಾರತದ ಯಶಸ್ಸು ಹೆಚ್ಚುವುದೆಂದು ಕಿಂಬೋಕ್ತಿವಾಗಿ ಉದ್ಗರಿಸಿರುವರು.

ಎಂದಿಗೂ ಸ್ಪರ್ಧೆ ಬೇಡ

ದೇಶದಲ್ಲಿ ಆಯುರ್ವೇದ ವೈದ್ಯ ಪದ್ಧತಿಯನ್ನು ಪ್ರೋತ್ಸಾಹಿಸಲು ಸರಕಾರವು ಆಸ್ಥೆ ವಹಿಸಿದೆ ಎಂದೂ ಈ ಪದ್ಧತಿಯ ಪ್ರಗತಿಗೆ ಸರಕಾರ ಹಾಗೂ ವೈದ್ಯರು ಪ್ರಯತ್ನಿಸುವುದು ಅವಶ್ಯವೆಂದೂ ಮಧ್ಯಪ್ರದೇಶದ ಆರೋಗ್ಯಮಂತ್ರಿ ಶ್ರೀಮತಿ ಪದ್ಮಾವತಿಯವರು ಅಭಿಪ್ರಾಯಪಟ್ಟಿದ್ದಾರೆ ಆಯುರ್ವೇದದ ಪುನರುತ್ಥಾನದಿಂದ ಅಲೋಪಥಿ ಪದ್ಧತಿಗೆ ಸ್ಪರ್ಧೆ ತಂದೊಡ್ಡಿದಂತಾಗುವುದಿಲ್ಲ; ಸ್ಪರ್ಧೆಯಿಂದ ಕೆಲವಡೆ ಪ್ರಗತಿಗೆ ದಾರಿಯಾಗುವುದಾದರೂ ವೈದ್ಯಕ ವಿಷಯದಲ್ಲಿ ಇದರಿಂದ ಹಿತವಾಗದು ಎಂದೂ, ಸಲ್ಲದ ಅಡೆತಡೆಗಳಿಂದ ಅಲೋಪಥಿ, ಯುನಾನಿ, ಹೋಮಿಯೋಪಥಿ, ಆಯುರ್ವೇದ ಈ ಎಲ್ಲ ವೈದ್ಯಕ ಪದ್ಧತಿಗಳ ಪ್ರಗತಿಗೆ ದಕ್ಕೆ ತಗಲುವುದೆಂದೂ ಅವರು ತಿಳಿಸಿರುವರು.

ಪಾಕಿಸ್ತಾನದ ಪ್ರಜಾರಾಜ್ಯ ದಿನ

ಪಾಕಿಸ್ತಾನದ ಅಧ್ಯಕ್ಷ ಶ್ರೀ ಇಸ್ಕಂದರ ಮಿರ್ಜಾರು ತಮ್ಮ ರಾಷ್ಟ್ರದ ದ್ವಿತೀಯ ಪ್ರಜಾರಾಜ್ಯ ವಾರ್ಷಿಕೋತ್ಸವ (ತಾ. ೨೩) ದ ಸಂದರ್ಭದಲ್ಲಿ ಮಾತಾಡುತ್ತ ಬಗದಾದ ಒಡಂಬಡಿಕೆಯನ್ನು ಸಮರ್ಥಿಸಿಕೊಂಡು, ಅದರ ಮುಸ್ಲಿಂ ರಾಷ್ಟ್ರಗಳಾದ ಪಾಕಿಸ್ತಾನ, ಇರಾನ, ತುರ್ಕಿ, ಇರಾಕಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿಯೂ ವಿಶೇಷ ಸಹಕಾರವು ಬೆಳೆದುಬರಬೇಕೆಂದು ಅವರು ಹಾರೈಸಿದರು. ಈ ದಿನದಂದು ಪಾಕಿಸ್ತಾನದ ಅಧ್ಯಕ್ಷರು ಹಿಂದಿನ ಗವರ್ನರ ಜನರಲ್ ಶ್ರೀ ಖ್ವಾಜಾ ನಾಜೀಮುದ್ದೀನರಿಗೂ ಚೀನಗೂ "ನಿಶಾನ-ಎ-ಪಾಕಿಸ್ತಾನ" ಎಂಬ ಬಿರುದನ್ನು ಕೊಟ್ಟಿದ್ದಾರೆ. ಅಲ್ಲದೇ ರಾಷ್ಟ್ರದ ಇನ್ನಿತರ ಹಲವಾರು ಮಹನೀಯರಿಗೂ ಬೇರೆ ಬೇರೆ ಬಿರುದುಗಳನ್ನು ದಯಪಾಲಿಸಿರುವರು ಇವರಲ್ಲಿ ಅಧ್ಯಕ್ಷರ ಮಡದಿ ಬೇಗಂ ನಹೀದ ಇಸ್ಕಂದರ್ ಮಿರ್ಜಾ ಮತ್ತು ಪ್ರಧಾನಿ ನೂನರ ಮಡದಿ ಬೇಗಂ ಸಿರೋಜ ಖಾನನೂನರಿಗೆ ನಿಶಾನ-ಎ ಇಮ್ತಿಯಾಜ ಬಿರುದನ್ನು ಅನುಗ್ರಹಿಸಲಾಗಿದೆ. ಪ್ರಧಾನಿಯವರಿಗೆ ನಿಶಾನ-ಎ-ಕ್ವಾಯದ್-ಎ-ಆಜಮ್ ಬಿರುದು ದೊರೆತಿದೆ.

ತಂಟೆಬಗೆ ಹರಿಯಲಿಲ್ಲ

ಭಾರತ ಪಾಕಿಸ್ತಾನಗಳ ನಡುವೆ ಹನ್ನೊಂದು ವರ್ಷಗಳಿಂದ ತೀರ್ಮಾನವಾಗದೆ ಉಳಿದಿರುವ ಸಿಂಧೂ ನದಿಯ ಕಾಲುವೆ ನೀರಿನ ತಂಟೆಯನ್ನು ಬಗೆಹರಿಸಲು ಜಾಗತಿಕ ಬೇಂಕಿನ ಉಪಾಧ್ಯಕ್ಷ ಶ್ರೀ ಡಬ್ಲ್ಯೂ. ಎ. ಬಿ. ಇಲಿಫರು ಕಳೆದ ದಶಂಬರದಲ್ಲಿ ಕೇಳ ಮಾಡಿದ ಕೆಲವು ಸಲಹೆಗಳನ್ನು ಪಾಕಿಸ್ತಾನವು ಸಂಪೂರ್ಣವಾಗಿ ತಿರಸ್ಕರಿಸಿರುವುದಾಗಿ ಪಾಕಿಸ್ತಾನದ ಉನ್ನತ ವಲಯಗಳಿಂದ ತಿಳಿದು ಬರುತ್ತದೆ.

ನೇಕಾರರಿಗೆ ಪ್ರೋತ್ಸಾಹ

ಮೈಸೂರಿನ ಕೈಮಗ್ಗಗಳ ನೇಕಾರರಿಗೆ ನೆರವೀಯುವಸಲುವಾಗಿ, ಚೆಲುವೆ ಮಾಡುವ, ಬಣ್ಣ ಹಾಕುವ ಮತ್ತು ಬಟ್ಟೆಗಳನ್ನು ನಯಗೊಳಿಸುವ ಯಂತ್ರಗಳನ್ನು ಸ್ಥಾಪಿಸಿಕೊಡುವ ಹಾಗೂ ನೂಲು ಮತ್ತು ಉತ್ತಮ ಯಾಂತ್ರಿಕೋಪಕರಣಗಳನ್ನು ಪೂರೈಸುವ ಸಂಬಂಧವಾದ ಕಾರ್ಯಾಚರಣೆಯ ಯೋಜನೆಗೆ ಭಾರತ ಸರಕಾರದವರ ಮನ್ನಣೆಯಿತ್ತಿದ್ದಾರೆ. ರಾಜ್ಯದಲ್ಲಿರುವ ಮೂರು ಬಣ್ಣ ಹಾಕುವ ಕೇಂದ್ರಗಳನ್ನು ಈ ವರ್ಷವೂ ಮುಂದುವರಿಸಲಾಗುವುದು. ಮೈಸೂರು ಮತ್ತು ಆಂಧ್ರ ಪ್ರದೇಶಗಳಲ್ಲಿ ನೇಕಾರರಿಗೆ ಕೈಮಗ್ಗ ಕೈಗಾರಿಕೆಗಳಿಗೆ ಸಂಬಂಧಿಸಿದ ಉತ್ತಮ ಯಂತ್ರ ಸಲಕರಣೆಗಳನ್ನು ಒದಗಿಸಲಾಗುವುದು. ಧಾರವಾಡದಲ್ಲಿರುವ ಕರ್ನಾಟಕ ಸಹಕಾರಿ ನೇಯ್ಗೆ ಗಿರಣಿಯಲ್ಲಿ ಪಾಲು ಪಡೆದುಕೊಳ್ಳುವ ಸಲುವಾಗಿ ೧೦ ಲಕ್ಷ ರೂಪಾಯಿಗಳ ಸಾಲವನ್ನು ಮೈಸೂರಿಗೆ ಕೇಂದ್ರ ಸರಕಾರವು ಕೊಡಮಾಡಿದೆ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಮಂಗಳೂರು

ಶಾಲಾ ವರ್ಧಂತಿ— ಮಂಗಳೂರಿನ ಸೆಂಟ್ಲೆಂಡ್ ಪೇಟೆ ಮ್ಯುನಿಸಿಪಲ್ ಎಲಿಮೆಂಟರಿ ಶಾಲಾ ವರ್ಧಂತಿಯು ತಾ 16ರಂದು ಡಾ. ಯು ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಸರಸ್ವತಿ ಮಲ್ಯರು ಪಾರಿತೋಷಕ ವಿತರಣೆ ಮಾಡಿದರು

ಯೂನಿಯನ್ ದಿನಾಚರಣೆ— ಕರ್ನಾಟಕ ಪೊಲಿಟೆಕ್ನಿಕಿನ ವಿದ್ಯಾರ್ಥಿ ಯೂನಿಯನ್ನಿನ ದಿನಾಚರಣೆಯು ತಾ. 21ರಂದು ಸಬ್ ಜಿಲ್ಲಾ ನ್ಯಾಯಾಧೀಶ ಶ್ರೀ ಎಸ್ ಎಸ್ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು

ವಾರ್ಷಿಕೋತ್ಸವ— ಕರ್ನಾಟಕ ಪೊಲಿಟೆಕ್ನಿಕ್ ಮತ್ತು ಕೈಗಾರಿಕಾ ತರಬೇತಿ ಕೇಂದ್ರದ ವಾರ್ಷಿಕೋತ್ಸವವು ತಾ 23ರಂದು ಮಾಜಿಮಂತ್ರಿ ಶ್ರೀ ಎ. ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು ಪ್ರಿನ್ಸಿಪಾಲ್ ಶ್ರೀ ಎಸ್. ಎಸ್ ಜತ್ತನ್ನರು ಸ್ವಾಗತಿಸಿ ವರದಿಯನ್ನೋದಿದರು ಶ್ರೀಮತಿ ಎ ಬಿ. ಶೆಟ್ಟರು ಬಹುಮಾನ ವಿತರಣೆ ಮಾಡಿದರು.

ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಮಂಗಳೂರು ಶಾಖೆಯ ವರ್ಧಂತಿ ಸಮಾರಂಭವು— ತಾ 21ರಂದು ಮೈಸೂರು ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ| ಟಿ ಮಾಧವ ಪೈಗಳು ಸ್ವಾಗತ ಭಾಷಣ ಮಾಡುತ್ತಾ, ಈ ಸಂಸ್ಥೆಯನ್ನು ಯಶಸ್ವಿಯಾಗಿ ಕಟ್ಟಲು ನೆರವಾದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸಿ, ಇಲ್ಲಿ ಪೋಸ್ಟ್ ಗ್ರ್ಯಾಜ್ಯುಯೇಟ್ ತರಗತಿಗಳನ್ನು ತೆರೆಯಬೇಕಾಗಿಯೂ, ನಳ್ಳಿನೀರಿನ ಪೂರೈಕೆಯಾಗಲಿರುವ ಈ ನಗರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕಾರ್ಯಗತಗೊಳಿಸಬೇಕಾಗಿಯೂ ಸೂಚಿಸಿದರು. ಎಲ್ ಎಮ್ ಪಿ ಪದವೀಧರರು ನೇರವಾಗಿ ಎಂ ಬಿ ಬಿ ಎಸ್. ಪರೀಕ್ಷೆಗೆ ಎರಡೇ ವರ್ಷಗಳ ತರಬೇತಿಯಲ್ಲಿ ಅರ್ಹರಾಗುವ ಒಂದು ಸೌಲಭ್ಯವನ್ನು ಈ ಕಾಲೇಜಿನಲ್ಲಿ ಒದಗಿಸಿಕೊಡಲಾಗುವುದೆಂದೂ ಇದರ ಉದ್ಘಾಟನೆಯನ್ನು ತಾ. 2ರಂದು ಕೇರಳದ ಗವರ್ನರರು ಮಣಿಪಾಲದಲ್ಲಿ ಉದ್ಘಾಟಿಸಲಿರುವುದಾಗಿಯೂ ಡಾ| ಪೈಗಳು ಹೇಳಿದರು

ಕಾಲೇಜ್ ಪ್ರಿನ್ಸಿಪಾಲ್ ಡಾ| ಜಿ ಡಿ ನೆಲಿಯತರು ಕಾಲೇಜಿನ ವರದಿಯನ್ನೋದಿದರು ಕಾಲೇಜು ವಿದ್ಯಾರ್ಥಿ ಯೂನಿಯನ್ ಅಧ್ಯಕ್ಷ ಶ್ರೀ ಸುಂದರ ಸಿಂಗನ್ನವರು ಸ್ವಸ್ತಿವಾಚನ ಮಾಡಿದರು. ಶ್ರೀ ಟಿ. ಎ. ಕೋಶಿಯವರು ಉತ್ತರವಿತ್ತರು

ಅಧ್ಯಕ್ಷ ಸ್ಥಾನದಿಂದ ಶ್ರೀ ನಿಜಲಿಂಗಪ್ಪನವರು ಮಾತನಾಡುತ್ತಾ, ಈ ಕಾಲೇಜಿನ ಸಂಸ್ಥಾಪಕರ ಮಾರ್ಗದರ್ಶಿತ್ವವನ್ನೂ, ಸೇವಾಶಕ್ತಿಯನ್ನೂ ಪ್ರಶಂಸಿಸಿ ಈ ಸಂಸ್ಥೆಯಲ್ಲಿ ಪೋಸ್ಟ್ ಗ್ರ್ಯಾಜುವೇಟ್ ತರಗತಿಗಳನ್ನು ತೆರೆಯುವರೆ ಪ್ರಯತ್ನಿಸಲಾಗುವುದೆಂದು ಆಶ್ವಾಸನೆಯಿತ್ತರು ಮಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆಗಾಗಿ ಸಿದ್ಧಪಡಿಸಲಾದ ಒಂದು ಕೋಟಿ ರೂಪಾಯಿಯ ಯೋಜನೆಯು ಇನ್ನು ಎರಡು ಮೂರು ತಿಂಗಳುಗಳಲ್ಲಿಯೇ ಕಾರ್ಯರೂಪಕ್ಕೆ ಬರಲಿರುವುದೆಂದೂ ಮುಖ್ಯ ಮಂತ್ರಿಗಳು ತಿಳಿಸಿದರು ಡಾಕ್ಟರರ ಕುರಿತು ಪ್ರಸ್ತಾಪಿಸುತ್ತಾ, ಅವರಲ್ಲಿ ನಗುಮುಖ, ವಿನಯಶೀಲತೆ, ಸಹನೆ ಮತ್ತು ಸೇವಾ ಭಾವನೆಗಳಿರಬೇಕೆಂದರು. ಡಾಕ್ಟರು ತಮ್ಮ ಚಿಕಿತ್ಸಾ ವಿಧಾನದಲ್ಲಿ ನೂತನ ಸಂಶೋಧನೆಗಳನ್ನು ಕೈಗೊಂಡು ಜನರ ಸಂಕಷ್ಟ ನಿವಾರಣೆಯಲ್ಲಿ ಸಹಾಯಕರಾಗುವುದಲ್ಲದೆ, ಇತರ ವೈದ್ಯಕೀಯ ವಿಧಾನಗಳ ಗುಣಾಂಶಗಳನ್ನು ತಿಳಿದು ಗ್ರಾಮಾಂತರ ಪ್ರದೇಶದ ಜನರಿಗೆ ವಿಶೇಷ ಸೇವೆ ಸಲ್ಲಿಸಬೇಕೆಂದು ನುಡಿದರು ಬಳಿಕ ಪಾರಿತೋಷಕ ವಿತರಣೆಗಳಾದುವು ಇದೇ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ತೇರ್ಗಡೆಹೊಂದಿದ ಶ್ರೀ ಟಿ ಎ. ಕೋಶಿಯವರಿಗೆ ಡಾ ಮಾಧವ ಪೈ ಸುವರ್ಣ ಪದಕವನ್ನಿತ್ತರು ವೈಸ್ ಪ್ರಿನ್ಸಿಪಾಲ್ ಡಾ ಎಮ್. ವಿ ಚಾರಿಯವರು ಧನ್ಯವಾದವಿತ್ತರು ಮೈಸೂರು ಕಾನೂನು ಮಂತ್ರಿ ಶ್ರೀ ಬಿ ವಿ ಬಾಳಿಗ, ಮತ್ತು ಮಾಜಿಮಂತ್ರಿ ಶ್ರೀ ಎ ಬಿ ಶೆಟ್ಟರೂ ವಿಶೇಷತಃ ಹಾಜರಿದ್ದರು

ನಳ್ಳಿ ನೀರಿನ ಪೂರೈಕೆಯೋಜನೆಯ ಉದ್ಘಾಟನೆ— ತಾ 22ರಂದು ಸಂಜೆ ಬೆಂದೂರಿನಲ್ಲಿ ನಗರದ ನಳ್ಳಿನೀರಿನ ಪೂರೈಕೆ ಯೋಜನೆಯನ್ನು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ಉದ್ಘಾಟಿಸಿದರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ತಮ್ಮ ಸ್ವಾಗತ ಭಾಷಣದಲ್ಲಿ ಈ ಯೋಜನೆಯು ಕಾರ್ಯರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ ಅಭಿನಂದಿಸಿದರು 88 ಲಕ್ಷ ರೂಪಾಯಿಯ ಈ ಯೋಜನೆಗೆ ನಗರಸಭೆಯು 96 ಲಕ್ಷವನ್ನೊದಗಿಸಿರುವುದಾಗಿಯೂ ಪಿ ಕ್ಕಂಶವನ್ನು ರಾಜ್ಯಸರಕಾರವು ವಹಿಸಿರುವುದಾಗಿಯೂ ಶ್ರೀ ಅಡಿಗರು ತಿಳಿಸಿದರು ಚೀಫ್ ಇಂಜಿನಿಯರ್ ಶ್ರೀ ಜಿ ಎಸ್ ಗಣಪತಿಯವರು ವರದಿಯನ್ನೋದಿದರು ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ತಿಮ್ಮಪ್ಪ ಶೆಟ್ಟರು ಸಂದೇಶಗಳನ್ನೋದಿದರು

ಮುಖ್ಯಮಂತ್ರಿಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ, ದ ಕ. ಜಿಲ್ಲೆಯಲ್ಲಿ ಅದರಲ್ಲೂ ಮಂಗಳೂರು ನಗರದಲ್ಲಿ ಬಹುವ್ಯಾಪಿಯಾಗಿರುವ ಆನೆಕಾಲು ರೋಗವನ್ನು ನಿರ್ಮೂಲನಗೊಳಿಸುವುದಕ್ಕಾಗಿ ಈ ನಳ್ಳಿನೀರಿನ ಯೋಜನೆಯೊಂದಿಗೆ ನಗರದಲ್ಲಿ ಒಳಚರಂಡಿಯೋಜನೆಯನ್ನು ಶೀಘ್ರದಲ್ಲಿಯೇ ಕೈಕೊಳ್ಳಲಾಗುವುದು ಈ ಬಗ್ಗೆ ಸುಮಾರು ಒಂದು ಕೋಟಿ ರೂಪಾಯಿಯ ಯೋಜನೆಯು ಸಿದ್ಧವಾಗುತ್ತಲಿದೆ. ಇಂತಹ ಅವಶ್ಯಕ ವ್ಯವಸ್ಥೆಗಳನ್ನು ಉಡುಪಿಗೂ ವಿಸ್ತರಿಸಲಾಗುವುದು ಎಂದು ಹೇಳಿದರು ರಾಜ್ಯಸರಕಾರವು ಶೀಘ್ರದಲ್ಲಿಯೇ ಸಂಗ್ರಹಿಸಲಿರುವ ರೂಪಾಯಿ ಐದು ಕೋಟಿಯ ಸಾಲಕ್ಕೆ ದ ಕ. ಜಿಲ್ಲೆಯು ಹೆಚ್ಚಿನ ಸಹಕಾರ ನೀಡಬೇಕೆಂದರು

ಸಮಾರಂಭದ ಅಧ್ಯಕ್ಷ ಸ್ಥಾನದಿಂದ ಕಾರ್ಮಿಕ ಮಂತ್ರಿ ಶ್ರೀ ಬಿ ವೈಕುಂಠ ಬಾಳಿಗರು ಮಾತನಾಡುತ್ತಾ, ರಾಷ್ಟ್ರೀಯ ಉಳಿತಾಯ ಯೋಜನೆಯ ಯಶಸ್ಸಿಗೆ ಸಾರ್ವಜನಿಕರ ಬೆಂಬಲವನ್ನು ಕೋರಿದರು ಕೊನೆಯಲ್ಲಿ ಸುಪರಿಂಟೆಂಡಿಂಗ್ ಇಂಜಿನಿಯರ್ ಡಾ ಎ ಎಸ್ ಅಡ್ಯಂತಾಯರು ಧನ್ಯವಾದವಿತ್ತರು.

ಜಿಲ್ಲಾ ಬೋರ್ಡು ಕಾರ್ಯಾಲಯದಲ್ಲಿ— ಮುಖ್ಯ ಮಂತ್ರಿಗಳು ಕಾರ್ಮಿಕ ಸಚಿವರೊಡನೆ ಜಿಲ್ಲಾ ಬೋರ್ಡು ಕಾರ್ಯಾಲಯಕ್ಕೆ ಭೇಟಿಯಿತ್ತರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರು ಸ್ವಾಗತಿಸಿ ಜಿಲ್ಲಾ ಬೋರ್ಡಿನ ಆರ್ಥಿಕ ದುಸ್ಥಿತಿಯನ್ನು ವಿವರಿಸಿ ಸರಕಾರದ ಸಹಾಯವನ್ನಪೇಕ್ಷಿಸುವ, ಮನವಿಯನ್ನು ಅರ್ಪಿಸಿದರು ಶ್ರೀ ನಿಜಲಿಂಗಪ್ಪನವರು ಉತ್ತರಿಸುತ್ತಾ, ಮನವಿಯಲ್ಲಿ ನಮೂದಿಸಲಾದ ಕೋರಿಕೆಗಳ ಕುರಿತು ತಮ್ಮಿಂದಾದ ಪ್ರಯತ್ನವನ್ನು ಮಾಡುವುದಾಗಿ ಆಶ್ವಾಸನೆಯಿತ್ತರು

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ— ತಾ 22ರಂದು ಪೂರ್ವಾಹ್ನ ಮುಖ್ಯಮಂತ್ರಿಗಳು ಭಾಷಣಮಾಡುತ್ತಾ ಕಾಂಗ್ರೆಸ್ ಸರಕಾರವು ಈತನಕ ಸಾಧಿಸಿದ ಪ್ರಗತಿಪರ ಕಾರ್ಯಗಳಿಂದಾಗಿ ಈಗಾಗಲೇ ಜನಜೀವನಮಟ್ಟವು ಏರಿದ್ದರೂ ಇವುಗಳ ಬಗ್ಗೆ ಜನಸಾಮಾನ್ಯರಲ್ಲಿ ಸಾಕಷ್ಟು ತಿಳುವಳಿಕೆ ಉಂಟಾಗುವಂತೆ ಇನ್ನಷ್ಟು ಪ್ರಚಾರವಾಗಬೇಕಾಗಿದೆ. ಕಾಂಗ್ರೆಸ್ ಕಾರ್ಯಕರ್ತರು ಸರಕಾರದ ದೈನಂದಿನ ಪರಿಸ್ಥಿತಿಯ ಕುರಿತು ನಿಕಟ ಸಂಪರ್ಕವನ್ನಿರಿಸಿ ಒಗ್ಗಟ್ಟಿನಿಂದ ದುಡಿದು ಪಕ್ಷದ ಪರಂಪರೆಯನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ವಹಿಸಬೇಕೆಂದರು. ಕಾಂಗ್ರೆಸಿಗರು ತಮ್ಮ ಅಧಿಕಾರ ವ್ಯಾಮೋಹವನ್ನು ಬಿಟ್ಟು ಸೇವೆಯನ್ನೇ ತಮ್ಮ ಧ್ಯೇಯವಾಗಿಟ್ಟುಕೊಂಡು ಕೆಲಸ ಮಾಡಬೇಕೆಂದು ಆಶಿಸಿದರು

ಆರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಡಾ ಕೆ ಬಿ ಶೆಟ್ಟರು ಮಾಲಾರ್ಪಣೆ ಮಾಡಿದರು ಶ್ರೀ ಎಮ್ ರಮಾನಾಥರು ಸ್ವಾಗತಿಸಿದರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಕೆ ಶೆಟ್ಟಿ, ಎಮ್ ಎಲ ಸಿ ಯವರು ಜಿಲ್ಲೆಯಲ್ಲಿ ಮದ್ಯಪಾನ ನಿಷೇಧ ಕಾಯಿದೆಯನ್ನು ಜಾರಿಗೊಳಿಸಲು ವಿಶೇಷ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ಆಡಳಿತ ಯಂತ್ರದಲ್ಲಿನ ಪಕ್ಷಪಾತ, ಲಂಚಗುಳಿತನಗಳು ನಿರ್ಮೂಲವಾಗಬೇಕೆಂದೂ ಮುಂತಾಗಿ ನುಡಿದರು ಮುಖ್ಯಮಂತ್ರಿಗಳು ಹೊಗೆಬಜಾರಿನ ಮೀನು ಶೀತಲೀಕರಣ ಕೇಂದ್ರಕ್ಕೂ ಸಂದರ್ಶನವಿತ್ತರು.

ಪಾಣೆಮಂಗಳೂರು— ನಾಗಲಟ್ಟ್ನ ನವಜೀವನ ವ್ಯಾಯಾಮ ಶಾಲೆಯ ದ್ವಿತೀಯ ವಾರ್ಷಿಕೋತ್ಸವ ತಾ 16ರಂದು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಿ ಕೆ ಬಾಬು, ಅವರು ಶಾಲಾ ವರದಿಯನ್ನೋದಿದರು ಶ್ರೀಗಳಾದ ಎಮ್ ಲೋಕಯ್ಯ ಶೆಟ್ಟಿ, ಜನಾರ್ದನ ಮಾಸ್ಟರ್, ಕೆ. ಬಾಬು ಮಾಸ್ಟರ್, ಎ ಬಿ. ಕಲ್ಲಪ್ಪ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಬಿ ಎಲ್ ಪುತ್ರನರು ಶಾಸ್ತ್ರೀಯ ವ್ಯಾಯಾಮದ ಮಹತ್ವವನ್ನು ವಿವರಿಸಿದರು

ಹೆಬ್ರಿ— ಸ್ಥಳೀಯ ಬೋರ್ಡು ಹೈಸ್ಕೂಲಿನ ದ್ವಿತೀಯ ವರ್ಧಂತಿಯು ತಾ 16ರಂದು ಪ್ರಿನ್ಸಿಪಾಲ್ ಶ್ರೀ ಎಚ್ ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಚ್ ಭುಜಂಗ ಬಲ್ಲಾಳರು ಸ್ವಾಗತ ಭಾಷಣಮಾಡಿದರು ಮುಖ್ಯೋಪಾಧ್ಯಾಯ ಶ್ರೀ ಯು. ಶುಕನಾಥಾಚಾರ್ಯರು ಶಾಲಾ ವರದಿಯನ್ನೋದಿದರು ಡಾ ವೈ. ರಘುನಾಥಾಚಾರ್ಯರು ಸ್ವಸ್ತಿವಾಚನ ಮಾಡಿದರು ಶ್ರೀ ವೈ ಕಾಳಪ್ಪ ಶೆಟ್ಟರು ಭಾಷಣವಿತ್ತರು ಬಹುಮಾನ ವಿತರಣೆ, ಅಧ್ಯಕ್ಷರ ಮಾತುಗಳಾದ ಬಳಿಕ ಶ್ರೀ ಎಮ್ ರಮೇಶ ರಾಯರು ಧನ್ಯವಾದವಿತ್ತರು.

ಕೋಟೇಶ್ವರ— ಅ ಭಾ ಮಹಾಮಂಡಲದ ಕೋಟೇಶ್ವರ ಶಾಖಾ ವತಿಯಿಂದ ತಾ 8ರಂದು ಶ್ರೀ ವಾದಿರಾಜ ಗುರುಗಳ ಪುಣ್ಯದಿನವು ಶ್ರೀ ಸುಬ್ರಹ್ಮಣ್ಯ ವರದ ಹಿರಿಯ ಶ್ರೀ ವಿಶ್ವಜ್ಞತೀರ್ಥ ಸ್ವಾಮಿಗಳವರ ಹಿರಿತನದಲ್ಲಿ ಆಚರಿಸಲ್ಪಟ್ಟಿತು

ದೇಲಂಪಾಡಿ— ಸ್ಥಳೀಯ ಪಂಚಾಯತಿ ಬೋರ್ಡಿನ ಸಭೆಯು ತಾ 17ರಂದು ಶ್ರೀ ಎ. ಕೋಚಣ್ಣ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು ದೇಲಂಪಾಡಿ ಗ್ರಾಮದ ಕೇಂದ್ರದಲ್ಲಿ ಆಯುರ್ವೇದ ಆಸ್ಪತ್ರೆಯೊಂದನ್ನು ತೆರೆದುದಕ್ಕಾಗಿ ಕೇರಳ ಸರಕಾರವನ್ನು ಅಭಿನಂದಿಸುವ, ಮತ್ತು ಸೂಲಗಿತ್ತಿ ಕೇಂದ್ರವನ್ನು ಕೂಡಾ ದೇಲಂಪಾಡಿಯಲ್ಲಿ ಬೇಗನೆ ಸ್ಥಾಪಿಸುವಂತೆ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯಗಳಾದುವು.

ಮುಂಡ್ಕೂರು— ಕಳೆದ ಪ್ರಜಾಪ್ರಭುತ್ವ ದಿನದಲ್ಲಿ ಜರಗಿದ ನೂಲುವಿಕೆಯ ಪಂದ್ಯಾಟದಲ್ಲಿ ಗೆದ್ದವರಿಗೆ ಪಾರಿತೋಷಕ ವಿತರಣೆಮಾಡುವ ಸಮಾರಂಭವು ತಾ 15ರಂದು ವನಿತಾ ಸಮಾಜದ ಆಶ್ರಯದಲ್ಲಿ ಶ್ರೀಮತಿ ಎಚ್. ಕೃಷ್ಣಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಗ್ರಾಮಸೇವಕ ಶ್ರೀ ಪ್ರಭಾಕರ ಶೆಣೈಯವರು ಸ್ವಾಗತ ಮಾತುಗಳನ್ನಾಡಿದರು ಕುಮಾರಿ ಚಂದ್ರಕಲಾ ಮತ್ತು ಶ್ರೀ ಸುಂದರ ಶೆಟ್ಟರು ಖಾದಿ ವಿಚಾರದಲ್ಲಿ ಭಾಷಣಮಾಡಿದರು. ಶ್ರೀಮತಿ ವಸಂತಿ, ಎಸ್ ಮುಂಡ್ಕೂರರು ಧನ್ಯವಾದವಿತ್ತರು

ಸುಳ್ಯ— ಸುಳ್ಯ ಪಂಚಾಯತ ಬೋರ್ಡಿನ ಕಡೆಯಿಂದ ಸ್ಥಳೀಯಾಭಿವೃದ್ಧಿ ಯೋಜನಾ ಸಹಾಯದಿಂದ ರಚಿಸಲಿರುವ ಚರಂಡಿ ಯೋಜನೆಯ ಶಂಕುಸ್ಥಾಪನಾ ಕಾರ್ಯವನ್ನು ತಾ. 21ರಂದು ಶ್ರೀ ಮೇಳಹಳ್ಳಿ ಶಿವರಾಯರು ನೆರವೇರಿಸಿದರು.

ಪೆರ್ಕಳ— ಸ್ಥಳೀಯ ಬಾಸೆಲ್ ಮಿಶನ್ ಹಾ ಎ ಶಾಲೆಯ ಹಳೆವಿದ್ಯಾರ್ಥಿ ಸಂಘದ ಮಹಾಸಭೆಯು ತಾ 19ರಂದು ಡಾ. ಯು. ಗಿರಿಧರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸವರ್ಷಕ್ಕೆ ಶ್ರೀಗಳಾದ ಡಾ. ಯು ಗಿರಿಧರರಾವ್, ಅಧ್ಯಕ್ಷ, ರಾಜೀವ ಕೋಟ್ಯಾನ್ ಉಪಾಧ್ಯಕ್ಷ, ಎಮ್ ನಾಗಪ್ಪ ಶ್ಯಾನುಭಾಗ್, ಕಾರ್ಯದರ್ಶಿ, ಪಿ ನಾರಾಯಣ ನಾಯಕ್, ಜತೆಕಾರ್ಯದರ್ಶಿ, ಕೆ ಆನಂದ ಶೆಟ್ಟಿ, ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು

ಪಡುಬಿದ್ರೆ— ಸ್ಥಳೀಯ ಶ್ರೀ ಬ್ರಹ್ಮವಿದ್ಯಾ ಪ್ರಕಾಶಿನೀ ಓರಿಯಂಟಲ್ ಮಿಡ್ಲ್ ಸ್ಕೂಲಿನ ವಾರ್ಷಿಕೋತ್ಸವವು ತಾ 18ರಂದು ಡಾ. ಟಿ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರು ಉಪಸ್ಥಿತರಿದ್ದರು.

ನಾದಯೋಗಿ ತ್ಯಾಗರಾಜ

(೪ನೇ ಪುಟದಿಂದ)

ಭಾರತದಲ್ಲಿ ತ್ಯಾಗರಾಜರು ರಾಮ ಭಕ್ತಿಮಯನಾದ ಸುಧೆಯಿಂದ ಸಂಪನ್ನಮಾಡಿದರು

ತ್ಯಾಗರಾಜರ ರಚನೆಗಳ ರಸವನ್ನನುಭವಿಸಲು ಸಂಗೀತ ಜ್ಞಾನದ ಆವಶ್ಯಕತೆಯೂ ಬೇಡ; ಭಾಷೆಯ ಪಾಂಡಿತ್ಯ ಕೂಡಾ ಬೇಡ ವಿಮರ್ಶಕರು ಅವರ ಕೃತಿಗಳ ತುಲನೆಯನ್ನು ಚಿಕ್ಕ ಒಣದ್ರಾಕ್ಷಿಗೆ ಹೋಲಿಸಿದ್ದಾರೆ. ಚಿಕ್ಕ ಹಸುಗೂಸು ಕೂಡಾ ಅವುಗಳನ್ನು ಕಟ್ಟಿ ಅವುಗಳ ಮಾಧುರ್ಯದ ಆನಂದ ಪಡೆಯಬಲ್ಲದು. ಸಂಗೀತ ಶಾಸ್ತ್ರದ ಮರ್ಮಜ್ಞ ರಸಿಕರಿಗಾದರೋ, ಅವು ಶಾಶ್ವತ ಆನಂದ ಹಾಗೂ ವಿಸ್ಮಯದ ಸ್ರೋತಗಳಾಗಿವೆ.

ತಮ್ಮ 80 ವರ್ಷಗಳ ದೀರ್ಘ ಜೀವನವನ್ನು ಕಳೆದು, ಶ್ರೀ ತ್ಯಾಗರಾಜರು ಸಮಾಧಿ ಮೂಲಕ ದೇಹೋತ್ಸರ್ಗರಾದರೆಂದು ಹೇಳುತ್ತಾರೆ ಅದರ ಹತ್ತು ದಿನಗಳ ಮುಂಚೆ ಅವರು ಸಂನ್ಯಾಸ ಸ್ವೀಕರಿಸಿದ್ದರು ಆದರೆ ಅವರ ಇಡೀ ಜೀವನವೆ ಜೀವನ್ಮುಕ್ತಿಯ ದೃಢ ಉದಾಹರಣೆಯಾಗಿತ್ತು.

ತಂಜಾವೂರಿನಿಂದ 10—12 ಮೈಲು ದೂರ ಕಾವೇರಿ ತಟದ ತಿರುವೈಯಾರ್‌ನಲ್ಲಿ ತ್ಯಾಗರಾಜರ ಸಮಾಧಿ ಹಾಗೂ ಮಂದಿರ ಇವೆ ಪ್ರತಿವರ್ಷ ತ್ಯಾಗರಾಜರ ನಿರ್ವಾಣದ ದಿವಸ ಅಲ್ಲಿ ಆರಾಧನಾ ಮಹೋತ್ಸವ ಆಚರಿಸಲ್ಪಡುತ್ತದೆ ಈ ಆರಾಧನೆಯಲ್ಲಿ ಸಂಗೀತಾಂಜಲಿಯನ್ನು ಅರ್ಪಿತಮಾಡುವುದು ದಕ್ಷಿಣದ ಪ್ರತಿಯೊಬ್ಬ ಸಣ್ಣ ದೊಡ್ಡ ಗಾಯಕ ಹಾಗೂ ವಾದಕನು ತನ್ನ ಪರಮ ಧರ್ಮವೆಂದು ತಿಳಿಯುತ್ತಾನೆ. ಅಲ್ಲಿ ಹರಿಯುವ ಭಕ್ತಿರಸದ ನಾದ ಸುಧೆಯಲ್ಲಿ ಸ್ನಾನಮಾಡಿ, ದಕ್ಷಿಣದ ಪ್ರತಿಯೊಬ್ಬ ಸಂಗೀತ ಪ್ರೇಮಿ ತನ್ನ ಜೀವನ ಧನ್ಯವೆಂದು ತಿಳಿಯುತ್ತಾನೆ

(ಶ್ರೀ ನಾರಾಯಣ ದತ್ತರ ಹಿಂದೀ ಲೇಖನದ ಅನುವಾದ)

ಪ್ರಕಟಣೆ

ಪುತ್ತೂರು ತಾಲೂಕು ಅಲಂಕಾರು ಗ್ರಾಮದಲ್ಲಿ ಹಾಲಿ ವಾಸ್ತವ್ಯವಿದ್ದು ಈಗ್ಗೆ ಸ್ವಲ್ಪ ಸಮಯದಿಂದ ಭಾಗಮಂಡಲವಾಸಿರುವ ವೆಂಕಟ್ರಮಣ ಕಲ್ಲೂರಾಯರ ಮಗ ಗೋಪಾಲಕೃಷ್ಣ ಕಲ್ಲೂರಾಯನಾದ ನಾನು ಈ ಮೂಲಕ ಸಮಸ್ತರಿಗೂ ತಿಳಿಸುವುದೇನೆಂದರೆ

ನಾನು ಈ ಹೊದ್ದು ಕೆಲವು ವೇಳೆ ಕನ್ನಡದಲ್ಲಿ ದಸ್ಕತ್ತು ಮಾಡಿದ್ದು ಇರಬಹುದು ಗೋಪಾಲ ಭಟ್ಟ ಎಂದು ಸಹ ಕೆಲವು ಕಾಗದದಲ್ಲಿ ದಸ್ಕತು ಕೊಟ್ಟದ್ದಿದೆ ಆದರೆ ಇನ್ನು ಮುಂದಕ್ಕೆ ಎಂದರೆ ತಾ 20-1-58ರಿಂದ ನಾನು ಇಂಗ್ಲಿಷಿನಲ್ಲಿ K V G Kall-uraya ಎಂಬುದಾಗಿ ಬರಕೊಟ್ಟ ದಸ್ಕತೇ ಸಿಂಧುವಾಗತಕ್ಕದ್ದಲ್ಲದೆ ಬೇರಾವ ರೀತಿಯಿಂದಲೂ ನಾನು ದಸ್ಕತ್ತು ಮಾಡುವುದಿಲ್ಲ ಆದುದರಿಂದ ನನ್ನ ದಸ್ಕತ್ತು K V. G Ka lluraya ಎಂದೇ ತಿಳಿಯಬೇಕಾದ ಸಂಗ್ತಿ ಸರ್ವ ಜನರ ಅವಗಾಹನೆಗೆ ಈ ಮೂಲಕ ತಂದಿರುತ್ತೇನೆ

K V G Kalluraya,

Bhagamandla Dated 17—3—58

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸೈನಿಕ ಉವಾಚ— ಲೇಖಕರು: ಶ್ರೀ ವೆಂ. ಮು. ಜೋಶಿ. ಪ್ರಕಾಶಕರು: ಮಿಂಚಿನ ಬಳ್ಳಿ, ಧಾರವಾಡ. (೨೦ನೆ ವರ್ಷದ ಎರಡನೆಯ ಕುಡಿ.) ಪುಟಗಳು: ೧೬೪. ಬೆಲೆ: ಸಾದಾ ಪ್ರತಿ ರೂ. ೧-೫೦; ಉತ್ತಮ ಪ್ರತಿ: ರೂ. ೨-೦೦.

ಕನ್ನಡ ಸಾಹಿತ್ಯದಲ್ಲಿ ಹಿಂದಿನ ಕಾಲದಿಂದಲೂ ಇದ್ದಿರುವ ಕೊರತೆಯೆಂದರೆ, ಜೀವನ ಸ್ಮೃತಿ, ಆತ್ಮ ಚರಿತೆ ಹಾಗೂ ದಿನಚರಿ ಸಂಬಂಧದ ಗ್ರಂಥಗಳು. ಪಾಶ್ಚಾತ್ಯರಲ್ಲಿ ಇಂತಹ ಕೃತಿಗಳಿಗೆ ಅಪೂರ್ವ ಮನ್ನಣೆಯು ಇಂದಿಗೂ ದೊರೆಯುತ್ತಿದೆ. ಆಂಗ್ಲ ಸಾಹಿತ್ಯದಿಂದ ಸ್ಫೂರ್ತಿ ಪಡೆದು ಬಂದ ಸಾಹಿತ್ಯದ ನಾನಾ ಪ್ರಕಾರಗಳು ಕನ್ನಡದಲ್ಲಿಯೂ ಇತ್ತೀಚೆಗೆ ಹುಟ್ಟಿಕೊಂಡಿವೆ ಆದರೆ, ಅವುಗಳಲ್ಲಿ ಮೇಲೆ ನಿರೂಪಿತವಾಗಿರುವಂತಹವುಗಳು ಸಾಕಷ್ಟು ಇನ್ನೂ ಬೆಳಕಿಗೆ ಬಂದಿಲ್ಲ. ಮಾನವನು ತನ್ನ ಜೀವನವನ್ನು ಒಂದಲ್ಲ ಒಂದು ವಿಧದಿಂದ ಸಾಗಿಸುತ್ತಿರುವಾಗ, ಆತನಿಗೆ ಬೇಕಾಗಿಯೋ ಬೇಡವಾಗಿಯೋ ಅನೇಕ ಪರಿಸ್ಥಿತಿಗಳು ಬರುವುದುಂಟು. ಇಂತಹವು ಚಮತ್ಕಾರ ಸಹಿತವಾಗಿದ್ದು, ನಮ್ಮ ಜೀವನದಲ್ಲಿ ಎಂದಿಗೂ ಮರೆತುಹೋಗಲಾರವು. ಇವುಗಳನ್ನೇ ದಿನಚರಿಯ ಪುಸ್ತಕದಲ್ಲಿ ಬರೆದಿಟ್ಟರೆ, ಅದೊಂದು ಮುಂದೆ ಅತ್ಯುಪಯುಕ್ತ ಸಂಗ್ರಹವೇ ಆಗುವುದು. "ಸೈನಿಕ-ಉವಾಚ" ಎಂಬುದು ಹೆಸರೇ ಸೂಚಿಸುವಂತೆ ಒಬ್ಬ ಸೈನಿಕನ ಆತ್ಮವೃತ್ತಾಂತ. ಲೇಖಕರು ದಿಗ್ದರ್ಶನ ಮಾಡುತ್ತ ಇದು ಕಾದಂಬರಿಯೇ? ಕಥಾಸಂಗ್ರಹವೇ? ಪ್ರವಾಸವೃತ್ತವೇ? ಪ್ರದೇಶ ಪರಿಚಯವೇ? ಎಂಬಿತ್ಯಾದಿಯಾಗಿ ಪ್ರಶ್ನಿಸಿಕೊಂಡು ನೀವು ಬಯಸುವಂತೆ ಕರೆಯಿರೆಂದು ನುಡಿದಿದ್ದಾರೆ. ಪುಸ್ತಕದ ನಾಮಧೇಯದಿಂದ ಆತ್ಮಕಥನವೆಂದು ಹೇಳಬಹುದಾದರೂ ಒಳಗಡೆ ಅಡಕವಾಗಿರುವ ಸನ್ನಿವೇಶಗಳು ಇದನ್ನು ಪುಷ್ಟೀಕರಿಸುವುದಲ್ಲದೆ, ಮುಂದಿನ ಪ್ರಶ್ನೆಗಳೇಳಲು ಅವಕಾಶವನ್ನೂ ಕಲ್ಪಿಸಿಕೊಡುತ್ತವೆ. ಅಂತೂ ಒಟ್ಟಿನಲ್ಲಿ ಇದೊಂದು ಆತ್ಮಕಥನವೆಂದೇ ಹೇಳಬಹುದು.

ಸಾಮಾನ್ಯ ಯುವಕನೊಬ್ಬನು ಕಾರಣಾಂತರದಿಂದ ಸೈನ್ಯವನ್ನು ಸೇರಿ, ತನಗೆ ಬೇಡವಾದರೂ ಅಲ್ಲಿನ ವಾತಾವರಣವನ್ನು ಅರಗಿಸಿಕೊಂಡು ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಹೋರಾಡುತ್ತಾನೆ. ಯುದ್ಧ ಮುಗಿದ ಬಳಿಕ ಪುನರ್ವ್ಯವಸ್ಥಾ ಸ್ಥಾಪನಾ ಕಾರ್ಯದಲ್ಲಿ ತಲ್ಲೀನನಾಗುತ್ತಾನೆ. ಈ ನಡುವೆ ಸ್ವಾರಸ್ಯವಾದ ಹಲವಾರು ಘಟನೆಗಳು ನಡೆಯುತ್ತವೆ. ಶತ್ರು ಪಾಳೆಯದವರಿಂದ ತಪ್ಪಿಸಿಕೊಳ್ಳುವುದು, ಯುದ್ಧ ಮಾಡುವ ಕ್ರಮಗಳು, ಅಗಸ್ಮಿಕ ರಾತ್ರಿಯಲ್ಲಿ ಏಳುವ ಸಾಹಸ ವಿನೋದ ಆಶ್ಚರ್ಯ ಪೂರ್ಣ ಘಟನೆಗಳು, ಜೀವಕ್ಕಾಗಿ ಸೈನಿಕರು ಪಡಬೇಕಾದ ಸಂಕಟಗಳೊಂದಿಗೆ ಬರ್ಮಾ, ಮಲಯಾ ಇತ್ಯಾದಿ ದೇಶಗಳ ಜನಂ ಭೂಮಿಯ ಪರಿಚಯ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಅಲ್ಲಿನ ಜನರ ಸಹಾನುಭೂತಿ, ಸೈನಿಕರ ಜೀವನಕ್ರಮ ಇವೆಲ್ಲವೂ ಆತ್ಮಕಥನಕ್ಕೆ ಪೂರಕವಾಗಿ ಬಂದಿದ್ದು ಮನೋರಂಜಕವಾಗಿ ಹೆಣೆಯಲ್ಪಟ್ಟಿವೆ.

ಹೀಗೆ ಪುಸ್ತಕವು ಓದುಗರಲ್ಲಿ ಕುತೂಹಲವನ್ನು ಹುಟ್ಟಿಸುವುದು. ಒಂದು ಪ್ರಕರಣವನ್ನು ಮುಗಿಸುವಷ್ಟರಲ್ಲಿ ಮುಂದಿನದನ್ನು ಓದಲೇಬೇಕೆಂಬ ಲವಲವಿಕೆಯು ಮೂಡಿ, ಪುಸ್ತಕದ ಕೊನೆಯ ಹಾಳೆಯನ್ನು ತಿರುವಿ ಇಲ್ಲಿಗೇ ಮುಗಿಯಿತಲ್ಲ ಎಂದು ಕೊರಗಬೇಕಾದ ಪ್ರಮೇಯ ಒದಗುತ್ತದೆ. ಇದಕ್ಕೆ ಘಟನಾ ಪ್ರಾಧಾನ್ಯ ಹಾಗೂ ಮನಮೋಹಕ ರೀತಿಯಲ್ಲಿ ಅವುಗಳ ಸಂಯೋಜನೆ ಮತ್ತು ವಾಸ್ತವವೆಂದು ಕಂಡುಬರುವಂತಿರುವ ನಿರೂಪಣಾ ಕೌಶಲ ಇವುಗಳೇ ಕಾರಣ. ಸಾಮಾನ್ಯವಾಗಿ ಓದುಗರಲ್ಲಿ ಆಸಕ್ತಿ ಕೆರಳಿಸುವಂತಹ ಸುಂದರ ಶೈಲಿಯೂ ಜನಾನುರಾಗವನ್ನು ಪಡೆಯಲು ಅರ್ಹವೇ ಆಗಿದೆ. ಅಪರೂಪಕ್ಕೆ ಬಂದಿರುವ ಆಂಗ್ಲ ಪದಗಳ ಬದಲು ಭಾಷಾ ಪದಗಳನ್ನೇ ಕೊಡಲು ಪ್ರಯತ್ನಿಸಬಹುದಾಗಿತ್ತು. ಈ ಗ್ರಂಥಕ್ಕೆ ಪರಿಶಿಷ್ಟ ರೂಪದಲ್ಲಿ ಭಾರತೀಯ ಸೈನ್ಯ ಖಾತೆಯ ಜನ್ಮೇತಿಹಾಸವನ್ನು ಕೊಟ್ಟಿರುವುದೂ ಉಪಯುಕ್ತವೇ ಆಗಿದೆ. ಇದರಲ್ಲಿ ಭಾರತೀಯ ಸೈನ್ಯ ಪಡೆಯ ಚರಿತ್ರೆಯು ಸಂಕ್ಷಿಪ್ತವಾಗಿ ಉಲ್ಲೇಖಿಸಲ್ಪಟ್ಟಿದೆ. ಹೀಗೆ ಸರ್ವದೃಷ್ಟಿಯಿಂದಲೂ ಈ ಪುಸ್ತಕವೊಂದು ವೈಶಿಷ್ಟ್ಯಪೂರ್ಣ ಅಪರೂಪದ ಕೃತಿ. ಯುವಕ ಲೇಖಕರಾದ ಶ್ರೀ ಜೋಶಿಯವರು ಇಂತಹ ಇನ್ನೂ ಹಲವಾರು ಕೃತಿಗಳನ್ನು ಕನ್ನಡಿಗರಿಗೀಯಲಿ. ಶ್ರೀ ಶಂ. ಬಾ. ಜೋಶಿಯವರು ಇಂತಹ ನೆನಪುಗಳ ವಿಶೇಷತೆಯನ್ನು ಕೂಲಂಕಷವಾಗಿ ವಿವರಿಸಿ, ಗ್ರಂಥದ ಮುಂದುಗಡೆ ಉಪಯೋಗಿತೆಯನ್ನು ಬರೆದುಕೊಟ್ಟಿದ್ದಾರೆ. ರಕ್ಷಾಪತ್ರದ ಚಿತ್ರ, ಕಾಗದ, ಮುದ್ರಣ ಉತ್ತಮವಿವೆ. ಅನುಭವಿ ಗ್ರಂಥ ಪ್ರಕಾಶಕ ಶ್ರೀ ಬಿಂದು ಮಾಧವ ಬುರ್ಲಿಯವರ ಸಾಹಸವು ಪ್ರೋತ್ಸಾಹಾರ್ಹವೆಂಬುದನ್ನು ಈ ಪ್ರಕಟಣೆಯೂ ಸಾರಿಹೇಳುತ್ತದೆ.

ಭಾರತದ ಜನಪ್ರಿಯ ಕಥೆಗಳು— (ವಿವಿಧ ಲೇಖಕರಿಂದ) ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ. ೮. ಪುಟಗಳು: ೧೬೧, ಬೆಲೆ: ರೂ. ೧.೦೦.

ಮನೆಯಲ್ಲೊಬ್ಬಾಕೆ ಅಜ್ಜಿಯಿದ್ದರೆ, ಕಥೆ ಹೇಳಿ ಮೊಮ್ಮಕ್ಕಳನ್ನು ಸಮಾಧಾನಪಡಿಸುತ್ತಾಳೆ, ನಿದ್ದೆ ಬರಿಸುತ್ತಾಳೆ; ಊಟ ಮಾಡಿಸುತ್ತಾಳೆ. ಕಥೆಯನ್ನುವುದು ಕೇವಲ ಮಕ್ಕಳಿಗೆ ಮಾತ್ರ ಇಷ್ಟವಲ್ಲ, ಆಬಾಲವೃದ್ಧರ ಮನಸ್ಸನ್ನೂ ಸೂರೆಗೊಳ್ಳುತ್ತವೆ ಭಾರತದ ಚರಿತ್ರೆಯು ಪುರಾತನವಾಗಿದ್ದಂತೆಯೇ ವಿಶಾಲವಾಗಿದ್ದಂತೆಯೇ ಇಲ್ಲಿನ ಜನಪದದಲ್ಲಿ ನೆಲಸಿರುವ ಕಥೆಗಳೂ ವಿಶಾಲವಾಗಿವೆ, ಪ್ರಾಚೀನತಮವಾಗಿವೆ. ಅವುಗಳನ್ನೊಂದುಬಾರಿ ಕೇಳಿದೊಡನೆಯೇ ಸಾಕೆನಿಸದೆ ಇನ್ನೊಮ್ಮೆ ಕೇಳೋಣ, ಮತ್ತೊಮ್ಮೆ ಆಲಿಸೋಣವೆನ್ನಿಸುತ್ತದೆ—ಅಂತಹ ಅದ್ಭುತ ಚಿತ್ತಾಕರ್ಷಕ ಶಕ್ತಿ ಇಂದು "ಅಜ್ಜಿಕತೆ"ಗಳೆಂಬ ಅಡ್ಡ ಹೆಸರಿನಿಂದ ಕರೆಯಲ್ಪಡುವ ಜಾನಪದ ಕಥೆಗಳಲ್ಲಿವೆ. ಭಾರತದ ಕಥೆಗಳಲ್ಲಿ ಭಾರತೀಯರ ಮನೋಧರ್ಮವು ಸ್ಪಷ್ಟವಾಗಿ ಎದ್ದು ತೋರುತ್ತದೆ. ಒಂದು ಕಥೆಯನ್ನು ಆಧರಿಸಿ ಭಾರತದ ಬೇರೆ ಬೇರೆಡೆಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸದೊಡನೆ ಅನೇಕಾನೇಕ ಕಥೆಗಳು ಹುಟ್ಟಿಕೊಂಡಿವೆ. ಮನುಷ್ಯನ ಸುಖ, ದುಃಖ, ಪ್ರೀತಿ, ಶೃಂಗಾರ, ವೀರ, ವೈರ ಮೊದಲಾದುವುಗಳ ಪರಿಣಾಮವಾಗಿ ಹಾಗೂ ನಮ್ಮ ಜೀವನಕ್ರಮ, ಧಾರ್ಮಿಕ ಆಚರಣೆಗಳು ಉಪಾಸನಾದಿಗಳನ್ನು ಹೊಂದಿಕೊಂಡು ಬೇರೆ ಬೇರೆ ರೂಪಧಾರಣೆ ಮಾಡುತ್ತವೆ. ಮನಸ್ಸಿನ ಬೇಸರವನ್ನು ಕಳೆಯಲು ಇಂತಹ ಉಪದೇಶ ಸಹಿತವಾದ ಕಾಂತಾ ಸಮ್ಮಿತವೆನಿಸಿದ ಸಾಹಿತ್ಯ ಕೃತಿಗಳು ನೆರವಾಗುತ್ತವೆ—ಮನಸ್ಸಿನಲ್ಲಿ ನೂತನೋತ್ಸಾಹದ ಬುಗ್ಗೆಯನ್ನು ಚಿಮ್ಮಿಸಲು ಸಹಾಯಕವಾಗುತ್ತವೆ. ಪ್ರಕೃತ ಸಂಕಲನವು ಹಿಂದೀ ಮೂಲದ ಕನ್ನಡಾನುವಾದವಾಗಿದೆ. ಹಿಂದಿ ಭಾಷೆಯ ಸುಪ್ರಸಿದ್ಧ ಲೇಖಕರು ಬರೆದ ಈ ಕಥೆಗಳಲ್ಲಿ ಕೆಲವನ್ನಂತೂ ನಾವು ಕೇಳಿದ್ದೇವೆ. ಉಳಿದವು ಆಯಾ ರಾಜ್ಯಗಳಿಗೆ ಸಂಬಂಧಪಟ್ಟವುಗಳಾಗಿವೆ.

ಈ ಸಂಕಲನದಲ್ಲಿ ಭಾರತದ ೨೪ ಪ್ರದೇಶಗಳ ೨೪ ಮೂಲ ಕಥೆಗಳಿವೆ. ಇಷ್ಟಿದ್ದರೂ ಕರ್ನಾಟಕ, ಮಹಾರಾಷ್ಟ್ರಗಳ ಕಥೆಗಳು ಕಾಣುವುದಿಲ್ಲ. ಎಲ್ಲ ಕಥೆಗಳು ಓದಲು ಉತ್ತಮವಿವೆ. ಓದುತ್ತಿರುವಂತೆ ನಮ್ಮ ಚಿತ್ತಾಪಹಾರಿಯಾಗಿ ತನ್ನ ಪ್ರಪಂಚವೊಂದಕ್ಕೇನೇ ಎಳೆದುಕೊಂಡು ಹೋಗುತ್ತವೆ. ಸರಕಾರೀ ವಿಭಾಗದಿಂದ ಇಂತಹ ಕಥಾ ಸಂಕಲನಗಳು ಹೊರಬರುತ್ತಿರುವುದು ಸಂತೋಷದ ಸಂಗತಿಯೇ. ಇಂತಹ ಕಾರ್ಯವು ನಿಜವಾಗಿಯೂ ಪ್ರಶಂಸಾರ್ಹವೇ. ನೂರ ಅರುವತ್ತರಷ್ಟು ಪುಟದ ಈ ಉತ್ತಮ ಕಾಗದದ ದೊಡ್ಡ ಆಕಾರದ ಪುಸ್ತಕದ ಬೆಲೆ ಕೇವಲ ಒಂದು ರೂಪಾಯಿ ಇದ್ದು ಸಾಮಾನ್ಯ ಜನರಿಗೂ ಕೊಂಡುಕೊಳ್ಳಲು ಅನುಕೂಲವಾಗುವಂತಿದೆ. ಸರಕಾರದ ಈ ಪ್ರಕಟಣೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುವುದಲ್ಲದೇ ಮಕ್ಕಳಿರುವ ಮನೆಯಲ್ಲಿ ಈ ಪುಸ್ತಕದ ಪ್ರತಿಯೊಂದು ಅವಶ್ಯವಾಗಿಯೂ ಸಂಗ್ರಹಿಸಲ್ಪಡಬೇಕು ಎಂದು ಹೇಳುತ್ತೇವೆ. ಸರಕಾರವು ಇನ್ನೂ ಇಂತಹ ಕೃತಿಗಳನೇಕವನ್ನು ಕನ್ನಡಿಗರಿಗೆ ಉಣಿಸಲಿ.

Indian Information-March. 1; 1958. vol 1; No 2 Edited and published by the Director, Publications Division, Ministry of Information and Broadcastirg, Govt of India, Delhi-8 Annual Subscription Rs 5-00 Single copy Re. 0-25.

ಭಾರತ ಸರಕಾರದ ಪ್ರಕಾಶನ ವಿಭಾಗದಿಂದ ಸಂಪಾದಿತವಾಗಿ ಪ್ರಕಾಶಿಸಲ್ಪಡುವ ಈ ಪತ್ರಿಕೆಯ ಎರಡನೆಯ ಸಂಚಿಕೆಯನ್ನು ಸ್ವಾಗತಿಸುತ್ತೇವೆ. ಸರಕಾರದ ಬೇರೆ ಬೇರೆ ಇಲಾಖೆಗಳಿಗೆ ಹಾಗೂ ಭಾರತ ಸರಕಾರಕ್ಕೆ ಸಂಬಂಧಪಟ್ಟ ಹಲವಾರು ಸಮಾಚಾರಗಳು ಈ ಸಂಚಿಕೆಯಲ್ಲಿ ಪ್ರಕಟವಾಗಿವೆ. ಪ್ರಕೃತದ ಸಂಚಿಕೆಯಲ್ಲಿ ಮುಂಧ್ರಾ ಪ್ರಕರಣದ ಬಗ್ಗೆ ಛಗಲಾ ಆಯೋಗವು ಸರಕಾರಕ್ಕೆ ಒಪ್ಪಿಸಿದ ವರದಿಯೂ ಪ್ರಕಟಗೊಂಡಿದೆ. ಸರಕಾರೀ ವಲಯಗಳಿಗೆ ಸಂಬಂಧಿಸಿದ ಸಂದರ್ಭೋಚಿತ ಚಿತ್ರಗಳಿಂದ ಕೂಡಿದ ಈ ಪತ್ರಿಕೆಯು ಸರಕಾರಿ ವಿಭಾಗದ ವರ್ತಮಾನಾದಿಗಳನ್ನು ಜನತೆಗೆ ಪ್ರಕಾಶಪಡಿಸುತ್ತದೆ.

ಗೋರಾ,



ಕೆನಿಯಾದ ನೈರೋಬಿಯಲ್ಲಿ ೨೫ ಲಕ್ಷ ಹಣದ ವೆಚ್ಚದಿಂದ ಕಟ್ಟಲಾದ ವಿಮಾನ ನಿಲ್ದಾಣವನ್ನು ರಾಜಮಾತೆ ಮಹಾರಾಣಿ ಎಲಿಜಬೆತರು ೬ನೆ ದಿನಾಂಕದಂದು ಉದ್ಘಾಟಿಸಿದರು. ಇದು ಬ್ರಿಟನ್, ಆಫ್ರಿಕ, ಅಮೆರಿಕ ಮತ್ತು ಯುರೋಪ ಖಂಡಗಳಲ್ಲಿಯೆ ನವೀನ ರೀತಿಯ ನಿಲ್ದಾಣವಾಗಿದೆ.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಕಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರು ಮತ್ತು ಎಲ್ಲಾ ತರದ ಫಾರ್ಮುಗಳು, ಕ್ಯಾಶ್‌ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೆರಿ ಪುಸ್ತಕಗಳೂ ಸಿಗುತ್ತವೆ

ನವಯುಗ ಪ್ರೆಸ್, ಉಡುಪಿ

ಪಾಕಿಸ್ತಾನದ ಕುಹಕ ರಾಜಕಾರಣ—

ಇನ್ನೂ ವಿವೇಕ ಮೊಳೆಯದೆ?

ಶ್ರೀ. ಎಮ್. ರಘುನಂದನ ರಾವ್

ಕಳೆದ ಮಾರ್ಚ್ ೭ರಂದು ಪಾಕ್ ಪ್ರಧಾನಿ ಮಲಿಕ್ ಫಿರೋಜ್ ಖಾನರು ರಾಷ್ಟ್ರೀಯ ಎಸೆಂಬ್ಲಿಯಲ್ಲಿ ಮಾಡಿದ ಭಾರತ ವಿರೋಧಿ ಪ್ರಲಾಪವನ್ನು ಪತ್ರಿಕೆಗಳನ್ನೋದಿದವರು ತಿಳಿದಿರಬಹುದು. ಇದರಲ್ಲಿ ಹೊಸತೇನೂ ಇಲ್ಲ, ತನ್ನ ಪೂರ್ವಾಧಿಕಾರಿಗಳಿಂದ ಇಳಿದು ಬಂದಿರುವ ಪರಂಪರಾಗತ ಹಕ್ಕನ್ನೇ ಅವರು ಚಲಾಯಿಸಿಬಿಟ್ಟಿದ್ದಾರೆ. ಭಾರತವು ತಮ್ಮ ರಾಷ್ಟ್ರದ ಕಡು ವೈರಿಯೆಂಬುದಾಗಿ ಬಹಿರಂಗವಾಗಿಯೇ ಹೊರಗೆಡಹಿ, ತನ್ನ ಅಂತರ್ಯವನ್ನೆಲ್ಲ ಬಿಚ್ಚಿ ತೋರಿಸಿದ್ದಾರೆ, ಅವರು. ಹಾಗೂ ಭಾರತದೊಡನೆ ಸದ್ಯಕ್ಕೆ ಮೈತ್ರಿ ಸಂಪಾದಿಸುವುದು ಅಸಾಧ್ಯವೆಂದೇ ಸ್ಪಷ್ಟಪಡಿಸಿದ್ದಾರೆ. ಆದುದರಿಂದ ಭಾರತವಿನ್ನು ನೆರೆ ರಾಷ್ಟ್ರದ ಮೇಲೆ ಸಹೋದರ ಪ್ರೇಮವನ್ನು ತೋರ್ಪಡಿಸಿಕೊಂಡು ಹೋಗುವುದು ಎಷ್ಟಕ್ಕೂ ಹಿತವೆನಿಸದು. ಪಾಕಿಸ್ತಾನವು ಪಾಶ್ಚಾತ್ಯರ ಸೇನಾ ಸಹಾಯದಿಂದ ದಿನೇ ದಿನೇ ಬಲಶಾಲಿಯಾಗುತ್ತಾ ಹೋಗಿ, ಭಾರತದ ಮೇಲೇರಿ ಬರುವ ಕುರುಹು ಕಾಣತೊಡಗಿದೆ. ಇದು ಮುಂದೆ ಉಂಟಾಗಬಹುದಾದ ಗಲಭೆಯ ಪೂರ್ವ ಸೂಚನೆಯಿರಬಹುದೇ?

ಭಾರತದ ವಿಭಜನೆಯ ಕುರಿತಾಗಿ ಭಾರತದ ಜನತೆ ತಮ್ಮನ್ನು ಕ್ಷಮಿಸಲಾರದಾದುದರಿಂದ ಭಾರತದೊಂದಿಗೆ ಸ್ನೇಹ ಸಂಪಾದನೆ ಅಸಾಧ್ಯವೆಂದು ಪ್ರಲಾಪಿಸಿದ್ದಾರೆ, ಮಿ| ನೂನ್. ಭಾರತೀಯರಲ್ಲಿ ಅಂತಹ ಮನೋಭಾವವಿರದಿದ್ದರೂ, ಅಂತಹದನ್ನು ಕೆರಳಿಸುವ ಸಾಹಸಯತ್ನ ಕೈಗೊಂಡಿದ್ದಾರೆ, ಅವರು. ವಿಭಜನೆಗೆ ಕೆಲವರ ವಿರೋಧವಿದ್ದರೂ ಆಗಿನ ಸರಕಾರ ಅದರೆಡೆಗೇನಾದರೂ ಲಕ್ಷ್ಯ ಕೊಟ್ಟಿತೇ? ಅದೇನೂ ಇಲ್ಲ. ಜಿನ್ನರಂತಹ ಪ್ರತ್ಯೇಕತಾವಾದಿಯ ಮುಂದಾಳ್ತನದಲ್ಲಿ ಪಾಕಿಸ್ತಾನದ ಉದಯವಾಗಿಯೇ ಹೋಯಿತು ಭಾರತೀಯ ಮುಖಂಡರು. ಮೊದಲು ವಿಭಜನೆಗೊಪ್ಪಲಿಲ್ಲವಾದರೂ, ಪರಿಸ್ಥಿತಿಯ ಗಂಭೀರತೆಯನ್ನರಿತು ಒಪ್ಪಿಕೊಂಡು ಜನರನ್ನೂ ಸಂತೈಸಿದರು. ವಿಭಜನೆಯಂತೂ ನೆರವೇರಿತು. ಪಾಕಿಸ್ತಾನವೀಗ ಪ್ರಜಾಧಿಪತ್ಯ ರಾಷ್ಟ್ರವೆನಿಸಿದೆ. ಆದರೆ ವಿಭಜನೆಯ ಕಾಲದಿಂದ ಬೇರೂರಿಕೊಂಡು ಬಂದಿದ್ದ ದ್ವೇಷದ ಜ್ವಾಲೆಗೆ ಇನ್ನಷ್ಟು ಉರುವಲನ್ನಿಡುತ್ತ, ಅದನ್ನು ಪ್ರಜ್ವಲಿಸುವಂತೆ ಮಾಡುತ್ತ ಬಂದಿದ್ದಾರೆ, ಪಾಕ್ ನಾಯಕರು. ಮೊದಲು ವಿಭಜನೆಯನ್ನು ವಿರೋಧಿಸಿದ ಭಾರತೀಯರೇ ಇಂದು ಅದನ್ನೊಪ್ಪಿಕೊಂಡಿರುವಾಗ, ಅದನ್ನೇ ಒಂದು ನೆಪವನ್ನಾಗಿ ಹುಡುಕಿಕೊಂಡು, ಭಾರತೀಯರು ವಿಭಜನೆಯ ಕುರಿತಾಗಿ ತಮ್ಮನ್ನು ಕ್ಷಮಿಸಲಾರರು ಎಂದುಕೊಂಡು ಭಾರತದೊಡನೆ ಇನ್ನೂ ವೈಷಮ್ಯ ಬೆಳೆಸಿಕೊಳ್ಳಲು ನೂನರು ಹಂಬಲಿಸುತ್ತಿರುವರೆಂಬುದು ಇದರಿಂದ ವೇದ್ಯವಾಗದಿರದು. ಸ್ನೇಹ ಬೇಡವಾದರೆ ವೈಷಮ್ಯವನ್ನೇ ಕಟ್ಟಿಕೊಂಡು ಬಾಳಬೇಕೇ? ತಾನು ತಟಸ್ಥವಾಗಿರಲು ಸಾಧ್ಯವಿಲ್ಲವೇ? ದಿನೇ ದಿನೇ ನೆರೆರಾಷ್ಟ್ರದ ಕುಹಕತನ ಹೆಚ್ಚುತ್ತ ಹೋಗುತ್ತಲಿದೆ. ಆದರೆ ಪಾಕಿಸ್ತಾನಕ್ಕೆ ಭಾರತದ ಸ್ನೇಹ ಬೇಡವಾದಲ್ಲಿ, ಅದು ವಿರೋಧವನ್ನು ಕಟ್ಟಿಕೊಳ್ಳಲೆಳಸದಿರಲಿ! ಭಾರತದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸುವ ಅಧಿಕಾರ ಪಾಕಿಸ್ತಾನಕ್ಕಿಲ್ಲ.

ಪಾಕ್ ಪ್ರಧಾನಿಯ ಪ್ರಶಂಸೆ (!) ಯನ್ನಷ್ಟು ಮಾಡಿದರೂ ಅದು ಅತ್ಯಲ್ಪವೇ ಸರಿ! ಒಂದು ಕಾರ್ಯವನ್ನೆಸಗಿ, ಅದರ ಪರಿಣಾಮವಾಗಿ ಅಪವಾದ ಬಂದೊಡನೆ ಯೇ ತಾನದನ್ನು ಮಾಡಿಯೇ ಇಲ್ಲವೆಂದು ಪ್ರಲಾಪಿಸುವುದು ಅವರ ವೈಶಿಷ್ಟ್ಯ. ಹಿಂದೆ ಬಗ್ದಾದ್ ಒಪ್ಪಂದದ ಸಭೆಯಲ್ಲಿ ಅಣು ಬಾಂಬುಗಳನ್ನು ಪಾಕಿಸ್ತಾನಕ್ಕೀಯಬೇಕೆಂದು ಇವರೇ ಆಲಾಪಿಸಿದ್ದರು. ಭಾರತದೊಡನಿರುವ ತನ್ನ ವೈಷಮ್ಯವನ್ನು ಇನ್ನೂ ವಿಷಮತೆಗೇರಿಸಲೋಸುಗ ಬಾಂಬನ್ನು ಅವರು ಕೇಳಿದ್ದಲ್ಲದೇ ಅನ್ಯ ಉದ್ದೇಶದಿಂದಲ್ಲವೆಂಬುದು ಸುಸ್ಪಷ್ಟ. ಆದರೆ ಅದನ್ನು ಪಾಕಿಸ್ತಾನಕ್ಕಿತ್ತಲ್ಲಿ ಜಗತ್ತು ತನ್ನ ನಾಶವನ್ನು ತಾನೇ ತಂದುಕೊಂಡಂತಾಗ ವುದೆಂಬುದು ನಿರ್ವಿವಾದ. ಭಾರತದ ಮೇಲೆ ಸೇಡು ತೀರಿಕೊಳ್ಳುವ ಭರದಲ್ಲಿ ಜಗತ್ತಿನ ವಿನಾಶಕ್ಕಾಗಿ ಹಾತೊರೆಯುತ್ತಿದೆ ಪಾಕಿಸ್ತಾನ. ಪಾಕ್ ಪ್ರಧಾನಿಯ ಬಾಂಬಿನ ಕುರಿತಾದ ಹೇಳಿಕೆಯ ವಿರೋಧವಾಗಿ ಜಗತ್ತಿನ ಹಲವರು ಮುಖಂಡರು ಪ್ರತಿಕ್ರಿಯೆ ವ್ಯಕ್ತಪಡಿಸಿದುದರಿಂದ ಅವರೀಗ, ಬಾಂಬನ್ನು ಕೊಡುವ ಬಗ್ಗೆ ತಾನು ಪ್ರಸ್ತಾಪಿಸಲೇ ಇಲ್ಲವೆಂದು ಸ್ವಲ್ಪವೂ ಲಜ್ಜೆಯಿಲ್ಲದೇ ಹೇಳುತ್ತಿದ್ದಾರೆ. ಇದಕ್ಕೇನೆನ್ನಬೇಕು? ಮಾರ್ಚಿ ೭ರಂದು ರಾಷ್ಟ್ರೀಯ ಎಸೆಂಬ್ಲಿಯಲ್ಲಿ ಮಾತನಾಡುತ್ತ ಪಾಕ್ ಪ್ರಧಾನಿಯವರು ಸುಳ್ಳು ಸುದ್ದಿ ಬರೆಯುವ ಪತ್ರಿಕಾ ಕರ್ತರನ್ನು ಗುಂಡು ಹಾಕಿ ಕೊಲ್ಲಬೇಕೆಂದು ಹೇಳಿದರು; ಆದರೆ ಸತ್ಯವನ್ನು ಮರೆಮಾಚಿ, ಸುಳ್ಳನ್ನೇ ಹೇಳುವವರನ್ನೇನು ಮಾಡಬೇಕೆಂದು ಅವರು ಸೂಚಿಸುವರೋ?

ಪ್ರತಿಪಕ್ಷದವರು ಬ್ರಿಟನ್, ಅಮೇರಿಕಗಳು ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳಲ್ಲಿ ಪಾಕಿಸ್ತಾನಕ್ಕೆ ಸಹಾಯವನ್ನೀಯುತ್ತಿಲ್ಲವೆಂದು ಕೊಟ್ಟ ಹೇಳಿಕೆಗುತ್ತರವಾಗಿ ಪಾಕ್ ಪ್ರಧಾನಿ ಹೇಳಿದ ಮಾತಿದು— "ನೀವು ಬಿದಿರುಗಳನ್ನು ಹಿಡಿದು ನಿಮ್ಮ ರಕ್ಷಣೆಗೆ ಹೋರಾಡಲು ಸಿದ್ಧರಿರುವಿರಾ, ನಿಮಗಾಗಿ ಅವರು ಸೈನ್ಯ ತಂದು ಅವರೇ ಹೋರಾಡಬೇಕೇ? ನೀವು ಅವರ ಮಾವನ ಮಕ್ಕಳಲ್ಲ" ಎಂದರಂತೆ! ಈ ಮಾತಿನ ಅಂತರಾರ್ಥವನ್ನರಿತುಕೊಳ್ಳುವ ಭಾರ ವಾಚಕ ಮಹಾಶಯರಿಗೇ ಬಿಡಲಾಗಿದೆ. ಅಂತೂ ಭಾರತ ವಿರೋಧಿ ಧೋರಣೆ ಈ ಮಹಾನುಭಾವರ ಕೈಯ್ಯಲ್ಲಿ ಇನ್ನಷ್ಟು ಉಜ್ವಲ ಹಂತವನ್ನೇರಿದೆಯೆಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಅವರಿಗಿದರಲ್ಲಿ ಒಳಿತಿಲ್ಲ. ಇದನ್ನವರು ಮನಗಂಡಿರಲಿ!

ಮಾರ್ಚ್ ೮ರಂದು ಪಾಕ್ ಪ್ರಧಾನಿ ಕೊಟ್ಟ ಹೇಳಿಕೆಯಿದು—ಸೇನಾ ಶಕ್ತಿಯಿಂದ ಕಾಶ್ಮೀರವನ್ನು ಕಬಳಿಸುವ ವಿಷಯದಲ್ಲಿ ಈಗಲಾದರೂ ಮನದಟ್ಟು ಮಾಡಿಸಿದರಲ್ಲವೇ, ಪಾಕ್ ಪ್ರಧಾನಿ, ತಮಗೆ ಕಾಶ್ಮೀರವನ್ನು ಸೇನಾ ಕ್ರಿಯಾಚರಣೆಯಿಂದ ಬಗಲಿಗೆಳೆದುಕೊಳ್ಳುವ ಇಚ್ಛೆಯಿಲ್ಲವೆಂದು? ಬಿಚ್ಚು ಮನಸ್ಸಿನಿಂದ ಪ್ರಲಾಪಿಸಿದ್ದಕ್ಕೆ, ಭಾರತ ಸರಕಾರವು ಮುಂಜಾಗ್ರತೆ ವಹಿಸಿಕೊಳ್ಳುವ ಅನುಕೂಲತೆ ಕಲ್ಪಿಸಿಕೊಟ್ಟದ್ದಕ್ಕಾಗಿ ಪಾಕ್ ಪ್ರಧಾನಿಗೆ ಅಭಿನಂದನೆ ಸಲ್ಲಲೇ ಬೇಕು. ಪಾಕಿಸ್ತಾನವೇ ಭಾರತದ ಮೇಲೆ ಆಕ್ರಮಣ ಮಾಡುತ್ತಿದೆಯೆಂದು ಭಾರತೀಯರು ಹೇಳುತ್ತಿರುವುದು ಸರಿಯಲ್ಲವೆಂದು ಹೇಳಿದ್ದಾರೆ, ಅವರು ಯಾವನೇ ನ್ಯಾಯ ಪಕ್ಷಪಾತಿಯಾದರೂ ಈ ಹೇಳಿಕೆಯ ವಾಸ್ತವತೆಯನ್ನರಿತುಕೊಳ್ಳಲೆತ್ನಿಸಿದರೆ, ಅವನು ನೂನರ ಈ ಅರ್ಥರಹಿತ ಹೇಳಿಕೆಗೆ ವಿಷಾದಪಟ್ಟುಕೊಳ್ಳುವುದು ಖಂಡಿತ.

ಪಾಕಿಸ್ತಾನಕ್ಕೊಂದು ಸಂಧಾಹ್ವಾನ—ಕಾಶ್ಮೀರವನ್ನು ಇಷ್ಟರೊಳಗೆ ದುಸ್ಥಿತಿಗೀಡು ಮಾಡಿದುದು ಸಾಕಾಗದೇ, ಭಾರತದ ವಶದಲ್ಲಿರುವ ಕಾಶ್ಮೀರದ ಮೇಲೆ ಧಾಳಿ ನಡೆಸಿ, ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲೆತ್ನಿಸಿದಲ್ಲಿ ಭಾರತೀಯರು ಮಾತೃ ಭೂಮಿಗಾಗಿ ತಮ್ಮ ರಕ್ತದ ಕೊನೆಯ ಬಿಂದುವಿರುವ ವರೆಗೂ ಹೋರಾಡಲು ಸಿದ್ಧರಿರುವರೆಂದವರು ಸರಿಯಾಗಿ ಮನಗಂಡಿರಲಿ. ಪಾಕಿಸ್ತಾನ ಇಷ್ಟರೊಳಗೆ ಮಾಡಿಕೊಂಡ ಮುಖಭಂಗ ಸಾಕು. ಇನ್ನೂ ಅಂತಹ ದುರ್ಬುದ್ಧಿ ನಾಶವಾಗಿರದಿದ್ದರೆ ಇನ್ನೊಮ್ಮೆ ದುಡುಕಿ ಮುಖಕ್ಕೆ ಮಂಗಳಾರತಿ ಮಾಡಿಕೊಳ್ಳಲಿ!

ಭಾರತವು ಬನಿಯಾ, ಬ್ರಾಹ್ಮಣರ ಕೂಟವೆಂದು ಪಾಕಿಸ್ತಾನದ ಕೆಲವರು ಮುಖಂಡರು ಹೇಳಿದ್ದಾರೆ. ಆದರೆ ಭಾರತದಲ್ಲಿ ಹಲವಾರು ಜಾತಿಮತಗಳಿದ್ದರೂ, ಐಕ್ಯದಿಂದ ಜೀವಿಸುವುದು ಅವರಿಗೆ ಕಾಣಿಸುವುದಿಲ್ಲವೇ? ಭಾರತದಲ್ಲಿ ಪರಿಸ್ಥಿತಿ ಇಂತಿರುವಾಗ ಪಾಕಿಸ್ತಾನ ಸದಾ ಜಾತ್ಯಾಂಧತೆಯಿಂದ ತುಂಬಿ ಕೊಂಡಿದೆ. ಜಾತೀಯತೆಯ ವಿಷ ಬೀಜದಿಂದಲೇ ಹುಟ್ಟಿ ಬಂದಿದೆ. ಆ ರಾಷ್ಟ್ರ. ಆದುದರಿಂದ, "ತನ್ನ ಕಾಲ ಬುಡದಲ್ಲಿ ಕುಂಬಳ ಕಾಯಿ ಕೊಳೆಯುತ್ತಿರುವಾಗ ಅನ್ಯರ ಕಾಲಡಿಯಲ್ಲಿರುವ ಸಾಸಿವೆ ಹುಡುಕ ಹೊರಟಿರುವುದು" ಪಾಕಿಸ್ತಾನದ ನಾಯಕರ 'ವಿವೇಕ'(!)ಕ್ಕೊಂದು ನಿದರ್ಶನ. ಎಂದಾದರೂ ಇವರಿಗೆ ಪಶ್ಚಾತ್ತಾಪ ಬುದ್ಧಿ ಹುಟ್ಟಿತೆಂದು ನಿರೀಕ್ಷಿಸಬಹುದೇ?

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳ

ಟ್ರೇಡ್ ಮಾರ್ಕ್



ಪಂ|| A R ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ ರೂ 7–4–0

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಕಾಮನವರ್ಧಕ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ. ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N P) ಸ್ಟಾಂಪು ಕಳಿಸಿರಿ ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಸ್ಟ್ರೀಟ್, ಮೈಸೂರು-1 (S.I)

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ–ಶೋಧದ ಕಾದಂಬರಿ

ಬರೆದವರು ವೀರಪ್ಪ ಯಗಟಿ, ಬಿ ಎ, ಎಲ್‌ಎಲ್. ಬಿ, ವಕೀಲ, ಹಾವೇರಿ

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತವಾಗಲ್ಪಟ್ಟಿವೆ. ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ. ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು ಬಿಳಿ ಕಾಗದ. ಬೆಲೆ.ರೂ. 1—12—0 (1·75)

ಪ್ರತಿಗಳಿಗೆ— **ನವಯುಗ ಪ್ರೆಸ್, ಉಡುಪಿ.**

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಗೃಹಮಂತ್ರಿ ಶಾಖಾ ವರದಿ—

ಪ್ರಗತಿಪಥದಲ್ಲೊಂದು ಪದವಿನ್ಯಾಸ

೧೯೫೫ರ ಅಕ್ಟೋಬರ್ ತಿಂಗಳಲ್ಲಿ ಕೇಂದ್ರ ಗೃಹಾಡಳಿತ ಮಂತ್ರಿ ಶಾಖೆಯವರು ದೆಹಲಿಯಲ್ಲಿ ಮತ್ತು ದೆಹಲಿಯ ಆಚೆ ಉದ್ಯೋಗದಲ್ಲಿರುವ ಕೇಂದ್ರ ಸರಕಾರದ ಉದ್ಯೋಗಿಗಳಿಗೆ ಕಚೇರಿ ಸಮಯದಲ್ಲಿ ಹಿಂದಿ ಭಾಷೆಯನ್ನು ಕಲಿಸುವ ಜವಾಬ್ದಾರಿಯನ್ನು ವಹಿಸಿಕೊಂಡರು. ಆಗ ಸುಮಾರು ೨,೫೦೦ ಮಂದಿ ಉದ್ಯೋಗಿಗಳು ಹಿಂದಿ ಭಾಷೆಯನ್ನು ಕಲಿಯುತ್ತಿದ್ದರು. ಈಗ ಸುಮಾರು ೨೨,೦೦೦ ಮಂದಿ ಉದ್ಯೋಗಿಗಳು ಹಿಂದಿ ಭಾಷೆಯನ್ನು ಕಲಿಯುತ್ತಿರುವರು.

೧೯೬೧-೬೨ರ ವೇಳೆಗೆ ೩ ಲಕ್ಷ ಮಂದಿ ಉದ್ಯೋಗಿಗಳು ಪ್ರಬೋಧ, ಪ್ರವೀಣ ಮತ್ತು ಪ್ರಾಜ್ಞ ಪರೀಕ್ಷೆಗಳಿಗಾಗಿ ಹಿಂದಿ ಭಾಷೆಯನ್ನು ಕಲಿಯುವ ನಿರೀಕ್ಷೆಯಿದೆ. ೧೯೫೮-೫೯ರಲ್ಲಿ ಹಿಂದಿ ಬೋಧನೆ ಸಂಬಂಧವಾದ ಕಾರ್ಯ ಯೋಜನೆಯನ್ನು ಮತ್ತೆ ೩೭ ಕೇಂದ್ರಗಳಿಗೆ ವಿಸ್ತರಿಸಲಾಗುವುದು. ೧೯೫೭-೫೮ರಲ್ಲಿ ೩೩ ಕೇಂದ್ರಗಳಿಗೆ ವಿಸ್ತರಿಸಲಾಗಿತ್ತು.

ಕೇಂದ್ರ ಗೃಹಾಡಳಿತ ಮಂತ್ರಿ ಶಾಖೆಯ ಕಾರ್ಯ ಚಟುವಟಿಕೆಗಳನ್ನೊಳಗೊಂಡ ೧೯೫೭-೫೮ರ ವಾರ್ಷಿಕ ವರದಿಯಲ್ಲಿ ಈ ಸಮಾಚಾರವನ್ನು ಕೊಡಲಾಗಿದೆ. ಕೇಂದ್ರ ಆಡಳಿತಕ್ಕೆ ಒಳಪಟ್ಟಿರುವ ಕ್ಷೇತ್ರಗಳಾದ ದೆಹಲಿ, ಹಿಮಾಚಲ ಪ್ರದೇಶ, ಮಣಿಪುರ, ತ್ರಿಪುರ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿನಿದಿವಿ ದ್ವೀಪಗಳ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ಕೂಡ ಕೇಂದ್ರ ಗೃಹಾಡಳಿತ ಮಂತ್ರಿ ಶಾಖೆಯೇ ಪಡೆದಿರುವುದು.

ವಿಶೇಷ ರಿಕ್ರೂಟ್‌ಮೆಂಟ್ ಕಾರ್ಯ ಯೋಜನೆಯ ಪ್ರಕಾರ ರಾಜ್ಯ ಸರಕಾರಗಳಿಗೆ ಸೇರಿದ ೧೮೦ ಅಧಿಕಾರಿಗಳನ್ನು ಇಲ್ಲಿಯ ವರೆಗೆ ಭಾರತೀಯ ಆಡಳಿತ ಸೇವೆಗೆ ನೇಮಿಸಿಕೊಳ್ಳಲಾಗಿದೆ. ಈ ವರ್ಷದ ಪ್ರಥಮಾರ್ಧದಲ್ಲಿ ವಿಶೇಷ ರಿಕ್ರೂಟ್‌ಮೆಂಟ್ ಮಂಡಲಿಯವರು 'ಓಪನ್ ಮಾರ್ಕೆಟ್'ನಿಂದ ಆರಿಸಿದ ಉಮೆದುವಾರರನ್ನು ಭಾರತದ ಆಡಳಿತ ಸೇವೆಗೆ ನೇಮಿಸಿಕೊಳ್ಳುವ ನಿರೀಕ್ಷೆಯಿದೆ.

ಗೃಹಾಡಳಿತ ಮಂತ್ರಿ ಶಾಖೆಯ ವರದಿಯ ಪ್ರಕಾರ ರಾಜ್ಯ ಸರಕಾರಗಳ ಪೋಲೀಸ್ ಅಧಿಕಾರಿಗಳಿಂದ ಭಾರತೀಯ ಪೋಲೀಸ್ ಸೇವಾ ವಿಭಾಗಕ್ಕೆ ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುವುದು.

ವಿಮರ್ಶಾ ಅವಧಿಯಲ್ಲಿ ೩೪ ಅಧಿಕಾರಿಗಳನ್ನು ಭಾರತೀಯ ಆಡಳಿತ ಸೇವೆಗೆ ಮತ್ತು ೧೦೨ ಅಧಿಕಾರಿಗಳನ್ನು ಭಾರತೀಯ ಪೋಲೀಸ್ ಸೇವೆಗೆ ನೇಮಿಸಿಕೊಳ್ಳಲಾಯಿತು.

೧೯೫೬ರಲ್ಲಿ ನಡೆದ ಐ. ಎ. ಎಸ್. ಎಮೆರ್ಜನ್ಸಿ ರಿಕ್ರೂಟ್‌ಮೆಂಟ್ ಪರೀಕ್ಷೆಯಲ್ಲಿ ಜಯಶಾಲಿಗಳಾದ ವಯಸ್ಸಾದ ಉಮೇದುವಾರರುಗಳಿಂದ ಕೇಂದ್ರ ಸಚಿವಾಲಯ ಸೇವೆಯ ತೃತೀಯ ದರ್ಜೆಗೆ ಸುಮಾರು ೪೦ ಉಮೇದುವಾರರುಗಳನ್ನು ನೇಮಿಸಿಕೊಳ್ಳಲಾಗುವುದೆಂದು ವಾರ್ಷಿಕ ವರದಿಯು ತಿಳಿಸುತ್ತದೆ. ೧೯೫೬ರಲ್ಲಿ ನಡೆದ ಸಂಯುಕ್ತ ಸ್ಪರ್ಧಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ೪೦ ಉಮೇದುವಾರರನ್ನು ೧೯೫೭ರಲ್ಲಿ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾದ ೫೦ ಉಮೇದುವಾರರು ಮತ್ತು ೧೯೫೮ರಲ್ಲಿ ನಡೆಯುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವ ೪೦ ಉಮೇದುವಾರರನ್ನು ಕೇಂದ್ರ ಸಚಿವಾಲಯ ಸೇವೆಯ ತೃತೀಯ ದರ್ಜೆಗೆ ನೇಮಿಸಿಕೊಳ್ಳಲಾಗುವುದು.

ಕೇಂದ್ರ ಸಚಿವಾಲಯ ಸೇವೆಯ ಪ್ರಥಮ ದರ್ಜೆಯ ೨೪ ಅಧಿಕಾರಿಗಳೂ ಇಲ್ಲಿಯವರೆಗೆ ರಾಜ್ಯಗಳಲ್ಲಿ ತರಬೇತಿ ಪಡೆದಿರುವರು. ಈಗ ೨೨ ಅಧಿಕಾರಿಗಳು ತರಬೇತಿ ಪಡೆಯುತ್ತಿರುವರು.

ಸಿಂಧ್ ಮತ್ತು ವಾಯುವ್ಯ ಗಡಿ ಪ್ರಾಂತ್ಯಗಳಿಂದ ಬಂದಿರುವ ಸ್ಥಾನಪಲ್ಲಟ ಸರ್ಕಾರಿ ಉದ್ಯೋಗಿಗಳಿಗೆ ಪೂರ್ಣ ವಿಶ್ರಾಂತಿ ವೇತನವನ್ನು ನೀಡಬೇಕೆಂಬುದಾಗಿ ಭಾರತ ಸರ್ಕಾರದವರು ನಿರ್ಧರಿಸಿರುವರು.

ಮಂತ್ರಿ ಶಾಖೆಗಳಲ್ಲಿ 'ಸ್ಟಾಫ್ ಕೌನ್ಸಿಲ್'ಗಳನ್ನು ರಚಿಸಿರುವಂತೆ ಮಂತ್ರಿ ಶಾಖೆಗಳಿಗೆ ಸೇರಿದ ಕಾರ್ಯಾಲಯಗಳಲ್ಲಿ ಕೂಡ ಸ್ಟಾಫ್ ಕೌನ್ಸಿಲ್'ಗಳನ್ನು ಸ್ಥಾಪಿಸಲಾಗಿದೆ. ಉಪಕಾರ್ಯದರ್ಶಿಗಳ ಅಂತಸ್ತಿನ ಅಧಿಕಾರಿಗಳನ್ನು ಹಿತರಕ್ಷಣಾ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಈ ಅಧಿಕಾರಿಗಳು ಪ್ರತಿ ಸರ್ಕಾರಿ ಉದ್ಯೋಗಿಯ ವೈಯಕ್ತಿಕ ಹಾಗೂ ಕೌಟುಂಬಿಕ ಹಿತರಕ್ಷಣೆಯನ್ನು ನೋಡಿಕೊಳ್ಳುವರು. ಹಿತರಕ್ಷಣಾ ಕಾರ್ಯವನ್ನು ಸಮನ್ವಯಗೊಳಿಸುವುದಕ್ಕಾಗಿ ಪ್ರಧಾನ ಹಿತರಕ್ಷಣಾ ಅಧಿಕಾರಿಯೊಬ್ಬರನ್ನು ನೇಮಿಸಲು ಉದ್ದೇಶಿಸಿದೆಯೆಂದೂ ವಾರ್ಷಿಕ ವರದಿಯು ತಿಳಿಸುತ್ತದೆ.

೧೯೫೬ರ ರಾಜ್ಯಗಳ ಪುನರ್ವ್ಯವಸ್ಥಾ ಕಾನೂನಿನಲ್ಲಿ ವ್ಯವಸ್ಥೆ ಮಾಡಿರುವ ಪ್ರಕಾರ ಉತ್ತರ, ಮಧ್ಯ, ಪೂರ್ವ, ಪಶ್ಚಿಮ ಮತ್ತು ದಕ್ಷಿಣ ವಲಯ ಪರಿಷತ್ತುಗಳು ಸ್ಥಾಪಿಸಲ್ಪಟ್ಟಿವೆ. ಈ ಪರಿಷತ್ತುಗಳು ಸಮಾವೇಶಗೊಂಡು ರಾಜ್ಯಗಳಿಗೆ ಸಾಮಾನ್ಯವಾಗಿರುವ ಹಲವಾರು ಸಮಸ್ಯೆಗಳನ್ನು ಪರ್ಯಾಲೋಚಿಸಿವೆ. ಕೇಂದ್ರಾಡಳಿತಕ್ಕೊಳಪಟ್ಟಿರುವ ಕ್ಷೇತ್ರಗಳಾದ ಹಿಮಾಚಲ ಪ್ರದೇಶ, ಮಣಿಪುರ ತ್ರಿಪುರಗಳಿಗಾಗಿ ೧೯೫೭ರ ಆಗಸ್ಟ್ ೧೫ ರಿಂದ ಪ್ರಾದೇಶಿಕ ಪರಿಷತ್ತುಗಳನ್ನು ರಚಿಸಲಾಗಿವೆ.

ಸಂವಿಧಾನದ ೩೫೦ ಬಿ ಅನುಚ್ಛೇದದ ಪ್ರಕಾರ ಅಲಹಾಬಾದ್ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾದ ಶ್ರೀ ಬಿ. ಮಲ್ಲಿಕ್‌ರವರನ್ನು ಕಮಿಷನರನ್ನಾಗಿ ನೇಮಿಸಲಾಗಿದೆ. ಶ್ರೀ ಮಲ್ಲಿಕ್‌ರವರು ಭಾಷಾವಾರು ಅಲ್ಪಸಂಖ್ಯಾತರ ರಕ್ಷಣೆಗೆ ಸಂಬಂಧಿಸಿದ ಎಲ್ಲ ವಿಚಾರಗಳಲ್ಲಿಯೂ ವಿಚಾರಣೆ ನಡೆಸುವರು.

೧೯೫೭—೫೮ರ ಬಜೆಟ್ ಅಂದಾಜುಗಳಲ್ಲಿ ಪರಿಶಿಷ್ಟ ಬುಡಕಟ್ಟಿನ ಜನರ ಹಿತರಕ್ಷಣೆಗಾಗಿ ೬೫೭.೪೯ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಲಾಗಿತ್ತು. ೧೯೫೭—೫೮ರಲ್ಲಿ ಇಲ್ಲಿಯ ವರೆಗೆ ರಾಜ್ಯಗಳು ನಿರೂಪಿಸಿರುವ ಕಾರ್ಯಕ್ರಮಗಳಿಗಾಗಿ ೩೦೦.೦೮ ಲಕ್ಷ ರೂಪಾಯಿಗಳ ಹಣವನ್ನು ಮತ್ತು ಕೇಂದ್ರ ಸರ್ಕಾರದವರು ನಿರೂಪಿಸಿರುವ ಕಾರ್ಯಕ್ರಮಗಳಿಗೆ ೩೯೭.೬೯ ಲಕ್ಷ ರೂಪಾಯಿಗಳ ಹಣವನ್ನು ಮಂಜೂರು ಮಾಡಲಾಗಿದೆ.

ದೇಶದಲ್ಲಿ ಅತಿ ಹಿಂದುಳಿದ ಬುಡಕಟ್ಟಿನ ಕ್ಷೇತ್ರಗಳಲ್ಲಿ ೪೩ ವಿಶೇಷ ವಿವಿಧೋದ್ದೇಶದ ಬ್ಲಾಕ್‌ಗಳನ್ನು ಪ್ರಾರಂಭಿಸಲಾಗಿವೆ. ಯೋಜನಾವಧಿಯಲ್ಲಿ ಪ್ರತಿ ಬ್ಲಾಕ್‌ಗಾಗಿ ೨೭ ಲಕ್ಷ ರೂಪಾಯಿಗಳ ಹಣ ವೆಚ್ಚವಾಗಲಿದೆ.

೧೯೫೭—೫೮ರಲ್ಲಿ ಹಿಂದುಳಿದ ವರ್ಗದ ಜನರ ಹಿತರಕ್ಷಣೆಗಾಗಿ ೫೨೩.೫೧ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಲಾಗಿದೆ. ಹಿಂದಿನ ವರ್ಷ ೬೬೧ ಲಕ್ಷ ರೂಪಾಯಿಗಳ ಹಣವನ್ನು ಒದಗಿಸಲಾಗಿತ್ತು.

ಪಂಚಾಂಗ ಸುಧಾರಣೆ ಸಮಿತಿಯು ಶಿಫಾರಸು ಮಾಡಿದ ಏಕರೂಪದ ರಾಷ್ಟ್ರೀಯ ಪಂಚಾಂಗವನ್ನು ೧೯೫೭ರ ಮಾರ್ಚ್ ೨೨ರಿಂದ ಆಚರಣೆಗೆ ತರಲಾಗಿದೆ. ಈ ದಿನಾಂಕವು ೧೮೭೯ರ ಚೈತ್ರ ೧ನೆಯ ದಿನಾಂಕಕ್ಕೆ ಸಮನಾಗಿರುವುದು. ಭಾರತದ ಗಜೇಟಿನಲ್ಲಿ ಗ್ರಿಗರಿ ಪದ್ಧತಿಯ ದಿನಾಂಕದೊಂದಿಗೆ ಹೊಸ ದಿನಾಂಕವನ್ನು ನಮೂದಿಸಲಾಗುವುದು. ಆಕಾಶ ವಾಣಿಯು ವಿವಿಧ ಭಾಷೆಗಳಲ್ಲಿ ಬಿತ್ತರಿಸುವ ಪ್ರಾತಃಕಾಲದ ವಾರ್ತಾ ಪ್ರಸಾರಗಳಲ್ಲಿ ಗ್ರಿಗರಿ ಪದ್ಧತಿಯ ದಿನಾಂಕದ ಜೊತೆಗೆ ಹೊಸ ದಿನಾಂಕವನ್ನೂ ಬಿತ್ತರಿಸಲಾಗುತ್ತಿದೆ. ಸರ್ಕಾರದವರು ನಡೆಸುವ ಪತ್ರ ವ್ಯವಹಾರಗಳಲ್ಲಿ ಗ್ರಿಗರಿ ಪದ್ಧತಿಯ ದಿನಾಂಕಗಳ ಜೊತೆಗೆ ಈ ನೂತನ ಭಾರತೀಯ ದಿನಾಂಕವನ್ನೂ ನಮೂದಿಸಲಾಗುತ್ತಿದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ೧,೮೬೦ ಎಕರೆಗಳಷ್ಟು ಅರಣ್ಯ ಭೂಮಿಗಳನ್ನು ಹಸನುಗೊಳಿಸಲಾಯಿತು. ಹೀಗೆ ಹಸನುಗೊಳಿಸಿದ ಕ್ಷೇತ್ರಗಳಲ್ಲಿ ೨೨೫ ಬೇಸಾಯಗಾರರ ಮತ್ತು ಎಂಟು ಕಸಬುದಾರರ ಕುಟುಂಬಗಳನ್ನು ನೆಲಸುವಂತೆ ಮಾಡಲಾಯಿತು.

ಲಕ್ಷದ್ವೀಪ, ಮಿನಿಕಾಯ್ ಮತ್ತು ಅಮಿನಿ ದಿವಿ ದ್ವೀಪಗಳ ಆಡಳಿತವನ್ನು ೧೯೫೬ರ ನವೆಂಬರ್ ೧ರಂದು ಭಾರತ ಸರ್ಕಾರದವರು ವಹಿಸಿಕೊಂಡ ನಂತರ ಆ ದ್ವೀಪಗಳ ಅಭಿವೃದ್ಧಿಗಾಗಿ ಆಡಳಿತಾಧಿಕಾರಿಗಳು ೭೪ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಯೊಂದನ್ನು ಸಿದ್ಧಗೊಳಿಸಿರುವರು.

೧೯೫೭—೫೮ರಲ್ಲಿ ಗೃಹಾಡಳಿತ ಮಂತ್ರಿ ಶಾಖೆಯ ಸೂಚನೆಯಂತೆ ಕೈಗೊಳ್ಳಲಾದ ಕಾನೂನುಗಳಾವುವೆಂದರೆ:—ವಿದೇಶೀಯರ ಶಾಸನಗಳ (ತಿದ್ದುಪಡಿ) ಕಾನೂನು ೧೯೫೭; ದೆಹಲಿ ಮುನಿಸಿಪಲ್ ಕಾರ್ಪೋರೇಷನ್ ಕಾನೂನು ೧೯೫೭, ದೆಹಲಿ ಅಭಿವೃದ್ಧಿ ಕಾನೂನು ೧೯೫೭, ಸ್ಥಾನಬದ್ಧತಾ (ಮುಂದುವರಿಯುವಿಕೆ) ಕಾನೂನು ೧೯೫೭; ಪೌರತನ (ತಿದ್ದುಪಡಿ) ಕಾನೂನು ೧೯೫೭ ಮತ್ತು ಭ್ರಷ್ಟಾಚಾರ (ತಿದ್ದುಪಡಿ) ಕಾನೂನು ೧೯೫೭.

ಭಾರತ-ನ್ಯೂಜೀಲೆಂಡ್ ಮೈತ್ರಿ ಕೂಟ

(೧ನೇ ಪುಟದಿಂದ)

ಗಾಗಿ ಕಾರ್ಯವೆಸಗುತ್ತೇವೆ. ಶಾಂತಿಗಾಗಿ ಕೆಲಸಮಾಡುವುದೆಂದರೆ, ಶಾಂತ ವಿಧಾನಗಳನ್ನು ಅನುಸರಿಸುವುದು ಎಂದು ನಾನು ನಂಬುತ್ತೇನೆ. ಯುದ್ಧವು ಯುದ್ಧಕ್ಕೆ ಅವಕಾಶವೊದಗಿಸುವುದು, ಯುದ್ಧವೆಂದರೆ ಭಯಾನಕ ಪರಿಣಾಮಕಾರಿಯಾದುದೆಂದು ತಿಳಿದು ಈ ವಿಷಮತೆಯಿಂದ ನಾವು ದೂರವುಳಿಯಬಯಸುತ್ತೇವೆ.

ನಿಮ್ಮ ದೇಶವೂ ಶಾಂತ ಕಾರ್ಯಗಳನ್ನು ಮಾಡುವುದರಲ್ಲಿ ನಿಸ್ಸೀಮವಿದೆ ಎಂದು ನನಗೆ ದೃಢಾಭಿಪ್ರಾಯವಿದೆ. ಅದೊಂದು ಸ್ನೇಹಪೂರ್ಣ ರಾಷ್ಟ್ರ ಮತ್ತು ನಿಮ್ಮ ಪ್ರಭಾವವನ್ನು ನಿಮ್ಮ ಜನಸಂಖ್ಯೆಯಿಂದ ಗಣಿಸುವುದು ಸಾಧ್ಯವಿಲ್ಲ. ಮತ್ತು ನಮ್ಮ ಪ್ರಭಾವವನ್ನು ನಮ್ಮ ಜನತೆಯ ಸಂಖ್ಯೆಯಿಂದ ಲೆಕ್ಕಿಸಿಲ್ಲ. ಸಂಖ್ಯೆಯನ್ನೂ ಪರಿಮಾಣವನ್ನೂ ಲೆಕ್ಕಿಸದೆ ಒಟ್ಟಿನ ಭಾವನೆ ಮತ್ತು ಕೆಲಸಗಳ ಪರಿಮಾಣವು ಮಾತ್ರ ಇಲ್ಲಿ ಲಕ್ಷಿಸಲ್ಪಡುತ್ತದೆ.

ನೀವು ಒಂದು ಗುಣಪರಿಪೂರ್ಣ ರಾಷ್ಟ್ರದಿಂದ ಬಂದಿದ್ದೀರಿ, ಗಣಸಹಿತ ಜನತೆಯ ದೇಶದಿಂದ ಬಂದಿದ್ದೀರಿ. ಯುದ್ಧಾಕಾಂಕ್ಷೆಯನ್ನು ದೂರವಿಟ್ಟು, ಶಾಂತಿ ಕಾರ್ಯಕ್ಕಾಗಿ ಹಂಬಲಿಸುತ್ತಿರುವ ಒಂದು ರಾಷ್ಟ್ರದಿಂದ ಆಗಮಿಸಿದ್ದೀರಿ. ನಿಮ್ಮ ದೇಶದ ಪ್ರಭಾವವು ಇತರ ದೇಶಗಳ ಪ್ರಭಾವದೊಂದಿಗೆ ಬೆರೆತು, ವಿಶ್ವದ ತ್ವೇಷಶಮನ ಕಾರ್ಯದಲ್ಲಿ ಜಯಪ್ರದವಾಗುವುದೆಂದು ನನ್ನ ನಿಶ್ಚಿತಾಭಿಪ್ರಾಯವಿದೆ.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

Edited, Printed & Published by K H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೭
VOL. 37

3—4—1958

ಸಂಚಿಕೆ ೩೦
NO. 30

ಭಾರತದಲ್ಲಿ ಕಮ್ಯೂನಿಜಂ ಹರಡಬಾರದೆ?

ಭಾರತಕ್ಕೊಂದು ಮಾರ್ಶಲ್ ಯೋಜನೆ

ಅಮೆರಿಕೆಯ ಸಂಯುಕ್ತ ರಾಷ್ಟ್ರಗಳ ಸಿನೇಟಿನಲ್ಲಿ ಭಾರತದ ದ್ವಿತೀಯ ಪಂಚವಾರ್ಷಿಕ ಅಭಿವೃದ್ಧಿ ಯೋಜನೆಯು ಕಾರ್ಯರೂಪಕ್ಕಿಳಿಯಲು ಅವಶ್ಯಬೀಳುವಷ್ಟು ಧನಸಹಾಯ ಮಾಡುವ ಮಾರ್ಶಲ್ ಯೋಜನೆಯಂತಹ ಯೋಜನೆಯೊಂದನ್ನು ಮಾಡಲು ಅಮೇರಿಕೆಯು ಮುಂದೆ ಬರಬೇಕು, ಎಂಬ ಒಂದು ಗೊತ್ತುವಳಿಯನ್ನು ಡೆಮೊಕ್ರಾಟಿಕ್ ಪಕ್ಷದಿಂದ ೧೯೬೦ರಲ್ಲಿ ಅಧ್ಯಕ್ಷಪದಕ್ಕೆ ಹುರಿಯಾಳಾಗಿ ಸ್ಪರ್ಧಿಸಲಿರುವ ಸಿನೇಟರ ಜಾನ್ ಕೆನ್ನಡಿ ಮತ್ತು ಭಾರತದಲ್ಲಿ ಈ ಹಿಂದೆ ರಾಯಭಾರಿಗಳಾಗಿದ್ದ ರಿಪಬ್ಲಿಕನ್ ಪಕ್ಷದ ಶರ್ಮನ್ ಕೂಪರ ಇವರಿಬ್ಬರೂ ಸಂಯುಕ್ತವಾಗಿ ಮಂಡಿಸಿರುತ್ತಾರೆ.

ಈ ಗೊತ್ತುವಳಿಯಲ್ಲಿ ಭಾರತದ ಆರ್ಥಿಕ ಅಭಿವೃದ್ಧಿ ಯೋಜನೆಗಳ ಕಾರ್ಯಾಚರಣೆಗೆ ಅಮೆರಿಕೆಯು ನೇರವಾಗಿ ಭಾರತಕ್ಕೆ ಧನಸಹಾಯ ಮಾಡುವುದನ್ನು ಮುಂದುವರಿಸಬೇಕೆಂದು ಸೂಚಿತವಾಗಿರುವುದಲ್ಲದೇ ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಈಗ ತಲುಪಿದ ಗಂಭೀರ ಸ್ವರೂಪದ ಹೊತ್ತಿನಲ್ಲಿ ಹಣಕಾಸಿನ ಸಹಾಯವನ್ನು ನೀಡಿ ಅದರ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಿ ಕಾರ್ಯರೂಪಕ್ಕಿಳಿಯುವಂತೆ ಮಾಡುವಲ್ಲಿ ಜಗತ್ತಿನ ಇತರ ಪ್ರಜಾಪ್ರಭುತ್ವ ರಾಷ್ಟ್ರಗಳೊಡನೆ ಸಹಕರಿಸಬೇಕೆಂದು ಹೇಳಲಾಗಿದೆ. ಅಲ್ಲದೇ ಭಾರತವು ಕೈಗೊಂಡ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಿ ಕಾರ್ಯಾನ್ವಿತವಾಗಲು ಅವಶ್ಯವಿರುವ ಧನಸಹಾಯವನ್ನು ದೀರ್ಘಾವಧಿಯ ಕರಾರಿನಿಂದ ಒದಗಿಸಲು ಇತರ ಪ್ರಜಾಪ್ರಭುತ್ವ ರಾಷ್ಟ್ರಗಳೊಡನೆ ಸಹಕರಿಸಿ ಯೋಜನೆ ಮಾಡುವುದರಲ್ಲಿಯೇ ಅಮೆರಿಕೆಯ ಹಿತವಿದೆ ಎಂದು ಉಲ್ಲೇಖಿಸಲಾಗಿದೆ. ಮಾರ್ಶಲ್ ಯೋಜನೆಯ ಮಾದರಿಯಲ್ಲಿ ದೀರ್ಘಾವಧಿಯ ಆರ್ಥಿಕ ಸಹಾಯ ಯೋಜನೆಯನ್ನು ಮಾಡಲು ಸಿನೇಟು ಅಮೆರಿಕೆಯ ಸರಕಾರಕ್ಕೆ ಈ ಗೊತ್ತುವಳಿಯ ಮೂಲಕ ಕರೆಯುತ್ತಿದೆ.

ಭಾರತದ ಅಭಿವೃದ್ಧಿ ಯೋಜನೆಯು ಕುಸಿದುಬಿದ್ದರೆ, ಪ್ರಜಾಪ್ರಭುತ್ವವಾದಿ ಭಾರತದಲ್ಲಿ ನಿರಾಶಾ ಭಾವನೆಯುಂಟಾಗುವುದು. ಇದರ ಪರಿಣಾಮವು ಇಡಿ ಏಶಿಯದಲ್ಲಿಯೇ ಹರಡಿ ಪ್ರಜಾಪ್ರಭುತ್ವದ ಆಶಾವಾದಕ್ಕೆ ಬಲವಾದ ಆಘಾತವಾಗಿ ಅನಿಷ್ಟ ಶಕ್ತಿಗಳು ಪ್ರಾದುರ್ಭವಿಸಿ ಅಮೆರಿಕೆಯ ಹಾಗೂ ಅದರ ಮಿತ್ರರಾಷ್ಟ್ರಗಳ ಸಂರಕ್ಷಣಾ ಹಿತಸಂಬಂಧಗಳನ್ನು ಕಡಿದುಹಾಕಬಹುದಾಗಿದೆ ಎಂದು ಈ ಗೊತ್ತುವಳಿಯಲ್ಲಿ ಭಾರತಕ್ಕೆ ಅವಶ್ಯವಿದ್ದಷ್ಟು ಆರ್ಥಿಕ ಸಹಾಯ ನೀಡುವ ಆವಶ್ಯಕತೆಯನ್ನು ಬಲವಾಗಿ ಹೇಳಲಾಗಿದೆ.

ಯುದ್ಧೋತ್ತರ ಕಾಲದಲ್ಲಿ ಯುರೋಪಿನ ರಾಷ್ಟ್ರಗಳಲ್ಲಿದ್ದ ಪರಿಸ್ಥಿತಿಗೆ ಸರಿಸಮಾನವಾದ ಪರಿಸ್ಥಿತಿ ಭಾರತದಲ್ಲಿರುವುದೆಂದು ಗೊತ್ತುವಳಿಯಲ್ಲಿ ಉಲ್ಲೇಖಿಸಿ ಯುರೋಪಿನ ರಾಷ್ಟ್ರಗಳ ಆರ್ಥಿಕಾಭಿವೃದ್ಧಿಗಾಗಿ ದೀರ್ಘಾವಧಿಯ ಆರ್ಥಿಕ ಸಹಾಯ ನೀಡುವ ಮಾರ್ಶಲ್ ಯೋಜನೆಯ ಮಾದರಿಯಲ್ಲಿ ಅದೇ ಗಾತ್ರದ ದೀರ್ಘಾವಧಿಯ ಆರ್ಥಿಕ ಸಹಾಯದ ಯೋಜನೆಯನ್ನು ಇತರ ಪ್ರಜಾರಾಜ್ಯಗಳ ಸಹಾಯದಿಂದ ಮಾಡಲು ಅಮೆರಿಕೆಯು ಮುಂದೆ ಬರಬೇಕು. ಆರ್ಥಿಕ ಸಹಾಯವನ್ನು ಎಷ್ಟು ನೀಡಬೇಕೆಂಬುದು ಮಹತ್ವದ್ದಾಗಿರದೆ ಯಾವ ಉದ್ದೇಶಕ್ಕಾಗಿ ಯಾವ ರೀತಿಯಲ್ಲಿ ಸಹಾಯ ನೀಡಬೇಕೆಂಬುದು ಅತಿ ಮಹತ್ವದ್ದಾಗಿದೆ ಎಂದು ಈ ಗೊತ್ತುವಳಿಯಲ್ಲಿ ಸೂಚಿಸಲಾಗಿದೆ. ಅಮೆರಿಕೆಯು ಈಗ ನೀಡಿದ ಹಾಗೂ ಇತರ ರಾಷ್ಟ್ರಗಳು ಸಹಾಯ ಮಾಡಲೊಪ್ಪಿದ ಅಂಕೆಗಳು ಭಾರತದ ಆರ್ಥಿಕ ಆವಶ್ಯಕತೆಗಳ ಮಾನದಿಂದ ತೀರ ಅಲ್ಪವಾದುವುಗಳಾಗಿದ್ದು ಭಾರತದ ಅಭಿವೃದ್ಧಿ ಯೋಜನೆಯ ಯಶಸ್ವಿ ಕಾರ್ಯಾಚರಣೆಗೆ ಅವಶ್ಯವಿರುವ ಧನ ಸಹಾಯದ ಯೋಜನೆ ಆಗಬೇಕು ಎಂದೂ ಈ ಗೊತ್ತುವಳಿಯಲ್ಲಿ ನಿರೂಪಿಸಲಾಗಿದೆ.

ಇಂತಹ ಮಹತ್ವದ ಗೊತ್ತುವಳಿಯನ್ನು ಮಂಡಿಸುತ್ತ ಸಿನೇಟರ ಕೆನ್ನಡಿಯವರು ಭಾಷಣ ಮಾಡಿದರು. ಭಾರತಕ್ಕೆ ನೀಡುವ ಆರ್ಥಿಕ ಸಹಾಯದಿಂದ ಭಾರತಕ್ಕೆ ಮಾತ್ರವಲ್ಲ ಇತರ ದೇಶಗಳಿಗೂ ಅದರಿಂದ ನೆರವಾಗುವುದು. ಭಾರತದ ಕಬ್ಬಿಣದ ಅದಿರು ಜಪಾನದ ಉಕ್ಕಿನ ಉದ್ದಿಮೆಯ ಅಭಿವೃದ್ಧಿಗೆ ಲಭ್ಯವಾಗಿ ಉಭಯ ದೇಶಗಳ ಔದ್ಯೋಗಿಕಾಭಿವೃದ್ಧಿಗೆ ಸಹಾಯವಾಗಬಹುದು. ಆದುದರಿಂದ ಭಾರತಕ್ಕೆ ನೀಡುವ ನೆರವು ಅತ್ಯಂತ ಉಪಯುಕ್ತವಾದುದಾಗಿದ್ದು, ಆರ್ಥಿಕ ಸಹಾಯ ನೀಡಲು ಅನುಕೂಲವಾದ ಸಮಯ ಈಗ ಅಮೆರಿಕೆಗೆ ಒದಗಿದೆ ಎಂದು ಅವರು ನುಡಿದರು.

ಭಾರತವು ಕಬ್ಬಿಣ ಉದ್ದಿಮೆಯಲ್ಲಿ ಅಭಿವೃದ್ಧಿ ಸಾಧಿಸಿದರೆ, ಅದರೊಡನೆ ಸ್ನೇಹ ಸಂಬಂಧವನ್ನಿಟ್ಟುಕೊಂಡ ಜಪಾನದ ಉಕ್ಕಿನ ಉದ್ದಿಮೆಯ ಅಭಿವೃದ್ಧಿಗೂ ಸಹಾಯವಾದಂತಾಗುವುದು. ಜಪಾನವು ಆಗ್ನೇಯ ಏಶ್ಯದ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧವನ್ನಿಟ್ಟುಕೊಂಡಿದ್ದು ಅದು ಭಾರತದ ಪಂಚವಾರ್ಷಿಕ ಯೋಜನೆಗೆ ಅನೇಕ ರೀತಿಯಲ್ಲಿ ಸಹಾಯ ಸಲ್ಲಿಸಬಹುದಾಗಿದೆ. ಅಮೆರಿಕೆಯು ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಮಹತ್ವವನ್ನು ಗ್ರಹಿಸಿ ಅದನ್ನು ಇಡಿಯಾಗಿ ನೋಡಬೇಕು. ಮತ್ತು ಅದರ ಕಾರ್ಯಾಚರಣೆಗೆ ಆವಶ್ಯವಿರುವ ಧನ ಸಹಾಯವನ್ನು ಅದರ ಉದ್ದೇಶ ಹಾಗೂ ಸಾಧನೆಯನ್ನು ಗಮನಿಸಿ ನೀಡಬೇಕು. ಕೇವಲ ಅಲ್ಪಸ್ವಲ್ಪ ಸಹಾಯ ನೀಡುವುದರಿಂದ ಯಾವ ಪ್ರಯೋಜನವನ್ನೂ ಸಾಧಿಸಲಾಗದು.

ಭಾರತವು ತಟಸ್ಥ ರಾಷ್ಟ್ರವಾಗಿರುವುದರಿಂದ ಅದಕ್ಕೆ ಆರ್ಥಿಕ ಸಹಾಯ ನೀಡಬಹುದೆ? ಎಂಬ ವಿಚಾರದಿಂದ ನಾವು ತಲೆ ಕೆಡಿಸಿಕೊಳ್ಳುವುದು ಅನಗತ್ಯ. ೧೯ನೆ ಶತಮಾನದಲ್ಲಿ ನಮ್ಮ ದೇಶವು ಅಭಿವೃದ್ಧಿ ಸಾಧಿಸುವ ಸ್ಥಿತಿಯಲ್ಲಿ ಇರುವಾಗ ಜಾಗತಿಕ ರಾಜಕೀಯ ರಂಗದಲ್ಲಿ ನಡೆಯುವ ಮಹತ್ತರವಾದ ವಾದ ವಿವಾದಗಳಲ್ಲಿ ನಮ್ಮ ದೇಶವೂ ಯಾವುದರೊಡನೆಯೂ ಸೇರಿಕೊಳ್ಳದೇ, ತಟಸ್ಥ ಧೋರಣವನ್ನೇ ತಾಳಿತ್ತು. ತಟಸ್ಥ ಧೋರಣವನ್ನು ತಾಳಿ, ಆರ್ಥಿಕಾಭಿವೃದ್ಧಿ ಸಾಧಿಸುವಲ್ಲಿ ತನ್ನ ಶಕ್ತಿ ಸರ್ವಸ್ವವನ್ನು ವಿನಿಯೋಗಿಸುವಂತಹ ಪ್ರಬಲ ರಾಷ್ಟ್ರಗಳು ತಲೆ ಎತ್ತುವುದರಿಂದ ಪಶ್ಚಿಮ ರಾಷ್ಟ್ರಗಳಿಗೆ ಅಂತಿಮ ಹಿತಸಂಬಂಧಗಳಿಗೆ ಯಾವ ಧಕ್ಕೆಯೂ ತಗಲಲಿಲ್ಲ. ಅದಕ್ಕೆ ಪ್ರತಿಯಾಗಿ ತಟಸ್ಥ ಧೋರಣದ ಸ್ವತಂತ್ರ ರಾಷ್ಟ್ರಗಳು ತಮ್ಮ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಂಡು ಪ್ರಭಾವೀ ರಾಷ್ಟ್ರಗಳಾಗುವುದರಿಂದ ಏಶಿಯಾ ಆಫ್ರಿಕೆಗಳಲ್ಲಿ ಕಮ್ಯೂನಿಜಂ ಪ್ರಸಾರಕ್ಕೆ ತಡೆಬೀಳುವುದು. ಇದು ಜಾಗತಿಕ ಶಾಂತಿಗೆ ಪೋಷಕವಾದುದು. ಈ ದೃಷ್ಟಿಯಿಂದ ತಟಸ್ಥ ರಾಷ್ಟ್ರಗಳಿಗೆ ಆರ್ಥಿಕ ಸಹಾಯ ನೀಡುವುದೆಂದರೆ ನಮ್ಮ ಉದ್ದೇಶ ಸಾಧನೆಗಾಗಿ ಸಹಾಯ ಮಾಡಿದಂತೆಯೇ ಎಂಬ ತಿಳುವಳಿಕೆ ನಮ್ಮ ಮನಸ್ಸಿನಲ್ಲಿ ಮೂಡುವುದು ಮಾತ್ರ ಅಗತ್ಯವಾದುದು.

ಚೀನವನ್ನು ತನ್ನ ವರ್ಚಸ್ಸಿನಲ್ಲಿ ತೆಗೆದುಕೊಳ್ಳಲು ಉಪಯೋಗಿಸಿದ ತಂತ್ರವನ್ನೇ ರಶಿಯವು ಏಶಿಯದ ಇತರ ರಾಷ್ಟ್ರಗಳಲ್ಲಿಯೂ ಪ್ರಯೋಗ ಮಾಡುವ ಪ್ರಯತ್ನದಲ್ಲಿದೆ. ಪ್ರಜಾಪ್ರಭುತ್ವ ತತ್ವದ ತಳಹದಿಯ ಮೇಲೆ ಆರ್ಥಿಕ ಅಭಿವೃದ್ಧಿ ಸಾಧಿಸುವ ಭಾರತದ ಯೋಜನೆಯು ಪಶ್ಚಿಮ ರಾಷ್ಟ್ರಗಳಿಂದ ಅವಶ್ಯವಿದ್ದಷ್ಟು ಆರ್ಥಿಕ ಸಹಾಯ ಸಿಗದಿದ್ದರಿಂದ ವಿಫಲವಾದರೆ ಸರ್ವಾಧಿಕಾರ ಪದ್ಧತಿಯ ಮೇಲೆ ಆರ್ಥಿಕ ಅಭಿವೃದ್ಧಿ ಸಾಧಿಸುವ ಚೀನದ ಪ್ರಯೋಗವು ಹತಾಶವಾದ ಏಶಿಯದ ಹಿಂದುಳಿದ ರಾಷ್ಟ್ರಗಳಿಗೆ ಆಕರ್ಷಕವಾಗುವುದು

ಭಾರತದ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾದರೆ ಹಿಂದುಳಿದ ರಾಷ್ಟ್ರಗಳು ಪ್ರಜಾಪ್ರಭುತ್ವ ಪದ್ಧತಿಯಿಂದ

(೧೨ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H. O. MANGALORE. Estd: 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಅಂತಿಮ ದರ್ಶನ

ಶ್ರೀ. ಬಿ. ಎಸ್. ಕೋಟ್ಯಾನ್.

ನಿತ್ಯದ ಕ್ರಮದಂತೆ ದೂಮನು ಕೊಡಲಿಯನ್ನು ಹೆಗಲಮೇಲೆ ಹಾಕಿ ಕಾಡಿಗೆ ನಡೆದನು. ಅವನ ಅಪ್ಪನು ಸಾಯುವಾಗ ಅವನಿಗಾಗಿ ಉಳಿಸಿದ್ದ ಆಸ್ತಿ ಎಂದರೆ ಇಂದು ಅವನ ಹೆಗಲಮೇಲಿರುವ ಕೊಡಲಿ ಮಾತ್ರ. ಅವನ ಪೂರ್ವಿಕರ ಕಸುಬನ್ನೇ ಅನುಸರಿಸಿ ಬಂದವನು ದೂಮನು. ಇದಕ್ಕೆ ಹಲವಾರು ಕಾರಣಗಳಿದ್ದರೂ, ವಿದ್ಯೆ ಇಲ್ಲದಿರುವುದೇ ಬಲವಾದ ಕಾರಣವಾಗಿದೆ.

ಇಂದೇಕೋ ಎಂದಿನ ಸ್ಫೂರ್ತಿಯು ಅವನಲ್ಲಿಲ್ಲ. ಜೂನ್ ತಿಂಗಳ ಪ್ರಥಮವಾದುದರಿಂದ ಮಳೆಯ ಹನಿಗಳು ಅವನ ತಲೆಯನ್ನು ಸೇರಿತ್ತು. ಈ ದೆಸೆಯಿಂದ ತುಸು ಶೀತವೂ, ಸ್ವಲ್ಪ ಜ್ವರವೂ ಬರುತಿತ್ತು. ಮಡದಿ ತುಂಗು, ರಾತ್ರಿ ಮೈಮೇಲೆ ಕೈಹಾಕಿ "ನಾಳೆ ಕೆಲಸಕ್ಕೆ ಹೋಗಬೇಡಿ" ಎಂದಿದ್ದಳು. ಗಂಡನು ಕೆಲಸಕ್ಕೆ ಹೋಗದಿದ್ದರೆ ತಾನು ಮತ್ತು ಎಳೆಯ ಎರಡು ಮಕ್ಕಳು ಉಪವಾಸ ಬೀಳಬೇಕಾಗುವುದು, ಎಂದು ಅರಿತಿದ್ದರೂ ಕೂಡಾ ಪತಿಯಲ್ಲಿರುವ ಅಚಲವಾದ ಆ ಮುಗ್ಧ ಪ್ರೇಮದಿಂದ ಅವಳು ಆ ರೀತಿ ಹೇಳಿದ್ದಳು. "ನಾಳೆ ಸಂಜೆಯ ಮೊದಲು ಆ ಮಾವಿನ ಮರವನ್ನು ಕಡಿದುಕೊಡದಿದ್ದರೆ ನಿನ್ನ ಎಲುಬು ಮುರಿದೇನು!" ಎಂದು ಜೆವರಿಸಿದ ಧನಿಯವರ ದರ್ಪದ ವಾಣಿಯನ್ನು ಮಡದಿಯ ಮುಂದೆ ದೂಮನು ಬೇಸರದಿಂದ ಹೇಳಿದಾಗ ಅವಳ ಕಣ್ಣಿನಿಂದ ನೀರು ಸುರಿದಿತ್ತು. ಪರಮಾತ್ಮನ ಕೃಪೆಯಿಂದ ನಾಳೆ ವಾಸಿಯಾದೀತು ಎಂದು ತಿಳಿದುಕೊಂಡು, ಮತ್ತೆ ಗಂಡನನ್ನು ಒತ್ತಾಯಪಡಿಸಲಿಲ್ಲ. ಬೆಳಗ್ಗೆ ಜ್ವರವು ಕಡಿಮೆಯಾದಂತೆ ತೋರಲಿಲ್ಲ. ಆದರೂ ಅನಿವಾರ್ಯವಾಗಿ ಕೆಲಸಕ್ಕೆ ಹೋಗಲೇಬೇಕು.

ಚೇತನಾರಹಿತವಾದ ಕಾಲುಗಳನ್ನು ಬಲಾತ್ಕಾರವಾಗಿ ಮುಂದೆ ಇಡುತ್ತಾ ದೂಮನು ನಡೆಯುತಿದ್ದಾನೆ. ತಲೆಯಲ್ಲಿ ಸಾವಿರಾರು ವಿಚಾರಗಳು ಬರುತಿದ್ದುವು: "ಈ ಪ್ರಪಂಚದಲ್ಲಿ ಹುಟ್ಟಿ ಬಡವನು ತನ್ನ ಅಂತ್ಯದ ತನಕವೂ ಬಡವನಾಗಿಯೇ ಬಾಳಬೇಕೆ? ಧನಿಕರ ದಬ್ಬಾಳಿಕೆಯನ್ನು ಎಷ್ಟೆಂದು ಸಹಿಸಿಕೊಳ್ಳಲಿ! ನನ್ನಂತೆ ನನ್ನ ಧನಿಯವರಿಗೆ ಜ್ವರ ಬರುತಿದ್ದರೆ ಯಾವ ಕೆಲಸವನ್ನಾದರೂ ಮಾಡುತ್ತಿದ್ದರೆ? ನನ್ನ ಮಡದಿ ಮಕ್ಕಳಿಗೆ ಒಂದು ದಿನವೂ ಹೊಟ್ಟೆತುಂಬ ಅನ್ನಕೊಡದ ನಾನು ಬದುಕಿ ತಾನೆ ಏನು ಪ್ರಯೋಜನ?...ಆದರೆ ಸಾಯಲಿ?...ಛೆ ತನ್ನ ಮಕ್ಕಳಿಗೆ ಗಂಜಿ ನೀರನ್ನು ಕೂಡಾ ಕೊಡುವ ದಾತಾರರು ಇಲ್ಲವಲ್ಲಾ!!........" ಇಷ್ಟರಲ್ಲಿ ದೂಮನಿಗೆ ತನ್ನ ಮಗ ರಮೇಶನ ನೆನಪಾಯಿತು. ಕಣ್ಣಿನಿಂದ ಒಂದೇ ಸವನೆ ನೀರು ಸುರಿಯಿತು. ಕ್ಷಣ ಕ್ಷಣಕ್ಕೂ ರಮೇಶನ ಚಿತ್ರವು ಅವನ ಕಣ್ಣೆದುರಿಗೆ ನಿಂತಂತಾಯಿತು. ನೀರು ತುಂಬಿದ ಕಣ್ಣುಗಳಿಂದ ಹೆಜ್ಜೆಹಾಕುವಾಗ ಮಾರ್ಗವು ಸರಿಯಾಗಿ ಕಾಣದೆ ಒಂದು ಕಲ್ಲು ಅವನ ಕಾಲಿಗೆ ತಾಗಿ ದೊಪ್ಪನೆ ಬಿದ್ದುಬಿಟ್ಟನು. ಕಾಲಿನಲ್ಲಿ ಗಾಯವಾಗಿ ರಕ್ತವು ಸುರಿಯಿತು. ಹೆಗಲ ಮೇಲಿದ್ದ ಕೊಡಲಿಯು ಎರಡುಗಜ ದೂರ ಬಿತ್ತು. ತನ್ನ ಹರಿದ ದೋತರದ ತುಂಡೊಂದನ್ನು ತೆಗೆದು ಗಾಯಕ್ಕೆ ಕಟ್ಟಿಕೊಂಡನು. ಆಗಲೂ ತನ್ನ ಮಗನ ನೆನಪೇ ಬಂತು. "ರಮೇಶನು ಜೀವದಲ್ಲಿ ಇರುವನೆ? ಈಗ ಎಷ್ಟು ಬೆಳೆದಿರಬಹುದು? ಯಾವ ಕೆಲಸದಲ್ಲಿರಬಹುದು? ಬದುಕಿದ್ದರೆ ಹೀಗೇಕೆ ಮಾಡಿದ? ಸಾಯುವ ಮೊದಲು ಆತನನ್ನು ಕಾಣುವ ಭಾಗ್ಯವು ನನ್ನ ಪಾಲಿಗೆ ಇರುವುದೆ?...." ಎಂದು ಹಲವಾರು ತರಗಳಿಂದ ಆಲೋಚಿಸಿ ಮತ್ತೆ ಕಣ್ಣೀರನ್ನು ಸುರಿಸಿದನು. ಮೆಲ್ಲನೆ ಎದ್ದು ಕಾಡಿನ ಕಡೆಗೆ ನಡೆದನು.

ಕಾಡನ್ನು ಸೇರಿದಾಗ ಗಂಟೆ ಹತ್ತಾಗಿತ್ತು. ತಾನು ಕಡಿಯ ಬೇಕಿದ್ದ ಮರವನ್ನು ಒಮ್ಮೆ ದಿಟ್ಟಿಸಿ ನೋಡಿದನು. ಬಲಿಷ್ಠವಾದ ಆ ಮರವನ್ನು ಕಂಡು ಅವನ ಶಕ್ತಿಯೇ ಕುಂದಿ ಹೋಯಿತು. ಸಂಜೆಯ ಮೊದಲು ಅದನ್ನು ಹೇಗೆ ಕಡಿಯಲಿ ಎಂದು ದುಃಖಿತನಾದನು. ಇದೂ ಒಂದು ವಿಧಿಯ ಪರೀಕ್ಷೆ ಎಂದು ಬಗೆದನು. ಆದಷ್ಟು ಕಡಿಯುವೆನೆಂದು ಒಂದೊಂದೇ ಭಾರವಾದ ಪೆಟ್ಟನ್ನು ಕೊಡಲಿಯಿಂದ ಮರದ ಬುಡಕ್ಕೆ ಹಾಕುತಿದ್ದನು.

ರಮೇಶನು ಮನೆಬಿಟ್ಟು ಮುಂಬಯಿಯನ್ನು ಸೇರಿ ಇಂದಿಗೆ ಹತ್ತು ವರ್ಷಗಳಾದುವು. ಮೊದಮೊದಲು ವಾರಕ್ಕೆ ಒಂದು ಕಾಗದದಂತೆ ಬರೆಯುತಿದ್ದನು. ೫೦ ರೂಪಾಯಿಯನ್ನು ಮೂರು ಸಲ ಹತ್ತತ್ತರಂತೆ ಕಳುಹಿಸಿ ಕೊಟ್ಟಿದ್ದನು. ಸಾಧಾರಣ ಎಂಟು ವರ್ಷಗಳಿಂದ ಒಂದು ಪತ್ರವಾಗಲಿ, ಒಂದು ಪೈಯಾಗಲಿ ಅವನಿಂದ ಬಂದಿರಲಿಲ್ಲ. ಅವನು ಬದುಕಿರುವನು ಎಂದು ನಂಬುವುದು ಕೂಡಾ ಕಷ್ಟವಾಗಿತ್ತು. ಮುಂಬಯಿಂದ ಬಂದವರಲ್ಲಿ ಅವನ ಪತ್ತೆಯು ಸಿಗುತ್ತಿರಲಿಲ್ಲ. ಬಡತನದ ಬೇಗೆಯೊಂದಿಗೆ ಮಗನ ವಿರಹ ವ್ಯಥೆ ಕೂಡಾ ಅವನನ್ನು ಬಾಧಿಸುತಿತ್ತು.

ದೂಮನು ದಿನಾಲೂ ಮಧ್ಯಾಹ್ನ ಮನೆಗೆ ಬಂದು ಇದ್ದ ಗಂಜಿಯನ್ನು ತನ್ನೆರಡು ಮಕ್ಕಳಿಗೆ ಕೊಟ್ಟು, ತಾನು ಗಂಜಿಯ ನೀರನ್ನು ಕುಡಿಯುತ್ತಿರುವುದು ವಾಡಿಕೆ. ಇಂದು ಗಂಟೆ ಎರಡಾದರೂ ಅವನು ಮನೆಗೆ ಬರಲಿಲ್ಲ. ಇದರಿಂದ ತುಂಗು ತುಸು ಗಾಬರಿಗೊಂಡಳು. ಮೈ ನೆಟ್ಟಗಿರಲಿಲ್ಲ. ಏನಾದರೂ ಅನಾಹುತವಾಯಿತೆಂದು ಬೆದರಿಕೊಂಡು ಮಕ್ಕಳನ್ನು ಮನೆಯಲ್ಲಿರಲು ಹೇಳಿ, ಮಧ್ಯಾಹ್ನದ ಭೀಕರ ಬಿಸಿಲನ್ನು ಲೆಕ್ಕಿಸದೆ ಅರಣ್ಯದ ಕಡೆಗೆ ನಡೆದಳು, ಅಲ್ಲಿ ನೋಡುವುದೇನು! ದೂಮನು ತಾನು ಕಡಿಯುತಿದ್ದ ಉದ್ದವಾದ ಬೇರಿಗೆ ತಲೆಯನ್ನಿಟ್ಟು ಮಲಗಿದ್ದನು. ಎಂತಹ ಕಟು ಹೃದಯದವನಿಗೂ ಆ ದೃಶ್ಯವನ್ನು ಕಂಡು ಕನಿಕರ ಉಂಟಾಗಬೇಕು. ಮರವನ್ನು ಅರ್ಧದಷ್ಟು ಕೂಡಾ ಕಡಿದಿರಲಿಲ್ಲ. ತುಂಗು ಬೇಗನೇ ಓಡಿ ಬಂದು ತಲೆಗೆ ಕೈಹಾಕಿ ನೋಡಿದಳು. ಕಾದ ಕೆಂಡದಂತಿತ್ತು ಮೈ. ಮಾತನಾಡುವ ಚೇತನ ಕೂಡಾ ಅವನಲ್ಲಿರಲಿಲ್ಲ. ಮೆಲ್ಲನೆ, "ತುಂಗೂ-ನೀನೇಕೆ ಬಂದೆ?" ಎಂದನು ತುಂಗಳ ಬಿಸಿ ಕಣ್ಣೀರು ಅವನ ಮೈಮೇಲೆ ಬಿದ್ದು ಅವನ ಪ್ರಶ್ನೆಗೆ ಉತ್ತರ ಕೊಡುವಂತಿತ್ತು. ಪತಿಯನ್ನು ಮೆಲ್ಲನೆ ಎಬ್ಬಿಸಿ ಅವನ ಕೈಗಳನ್ನು ತನ್ನ ಹೆಗಲ ಮೇಲೆ ಹಾಕಿಕೊಂಡು ಮನೆಯತ್ತ ನಡೆದಳು.

ಹೇಗೂ ಮನೆಗೆ ತಂದು ಚಾಪೆ ಹಾಕಿ ಮಲಗಿಸಿದಳು. ಅವಳ ಹೃದಯದ ತಳಮಳವನ್ನು ವರ್ಣಿಸುವುದು ಅಸಾಧ್ಯ. ಆ ಬಡಪಾಯಿಗೆ ಈ ತರದ ದುರ್ಘಟನೆಯು ಹಿಂದೆ ಎಂದೂ ಬಂದಿರಲಿಲ್ಲ. ದೂಮನು ಗಂಜಿಯನ್ನು ಕೊಟ್ಟರೂ ಉಣ್ಣಲಿಲ್ಲ. ಫಕ್ಕನೆ ಬೆಚ್ಚಿಬಿದ್ದು, "ತುಂಗೂ ಕೊಡಲಿಯನ್ನು ಕಾಡಿನಲ್ಲಿಯೇ ಬಿಟ್ಟು ಬಂದಿದ್ದೇನೆ" ಎಂದನು. ಇದನ್ನು ಕೇಳಿದ ತುಂಗು ಕಾಡಿಗೆ ಪುನಃ ಓಡಿದಳು. ಅವಳಿಗೂ ಗೊತ್ತು ಅದು ಪೂರ್ವಿಕರ ಆಸ್ತಿ ಎಂದು. ಅರ್ಧ ಗಂಟೆ ಹುಡುಕಾಡಿದರೂ ಕೊಡಲಿಯು ಸಿಗಲಿಲ್ಲ. ಬರಿಗೈಯಲ್ಲಿ ಮನೆಗೆ ಬಂದು ಬೇಸರದ ಧ್ವನಿಯಲ್ಲಿ, "ಯಾರೋ ಕೊಡಲಿಯನ್ನು ಕೊಂಡುಹೋಗಿರಬೇಕು" ಎಂದಳು. ಹಾ! ನನ್ನ ಕೊಡಲಿ ಹೋಯಿತೆ?" ಎಂದು ಮತ್ತೊಮ್ಮೆ ಜೋರಾಗಿ ಕೂಗಿದನು. ಕಣ್ಣಿನಲ್ಲಿ ನೀರು ಸುರಿಯುತಿತ್ತು. "ದೇವಾ! ಇದೆಂತ ಪರೀಕ್ಷೆ" ಎಂದು ಗೋಳಾಡಿದನು.

ಗಂಡನ ಚೀರಾಟವನ್ನು ಕೇಳಿದ ತುಂಗುಳಿಗೆ ಗಗನವೇ ಕುಸಿದು ಬಿದ್ದಂತಾಯಿತು. ನೆರೆಮನೆಯವರಿಂದ ಒಂದೆರಡು ರೂಪಾಯಿಗಳನ್ನು ಸಾಲವಾಗಿ ಪಡಕೊಂಡು ವೈದ್ಯರ ಬಳಿಗೆ ಓಡಿದಳು. ವೈದ್ಯರು ಆಗಲೇ ಅಂಗಡಿಯನ್ನು ಮುಚ್ಚಿ ಮನೆಯ ಕಡೆಗೆ ತೆರಳುವುದರಲ್ಲಿದ್ದರು. ತುಂಗು ವೈದ್ಯರ ಕಾಲಿಗೆ ಅಡ್ಡಬಿದ್ದು—"ದಮ್ಮಯ್ಯ ನನ್ನವರನ್ನು ಉಳಿಸಿಕೊಡಿರಿ" ಎಂದು ಅಂಗಲಾಚಿ ಬೇಡಿಕೊಂಡಳು ವೈದ್ಯರು ಮನೆಗೆ ಬಂದು ನೋಡುವಾಗ ದೂಮನಿಗೆ ೧೦೪ ಡಿಗ್ರಿ ಜ್ವರವಿತ್ತು ಆದರೂ ಕೂಡಾ ಆಗಾಗ ಕೊಡಲಿ...ಕೊಡಲಿ...ಎನ್ನುತಿದ್ದನು. ಇವನೇಕೆ "ಕೊಡಲಿ ಕೊಡಲಿ ಎನ್ನುತ್ತಿರುವನೂ" ಎಂದು ವೈದ್ಯರು ತುಂಗುವಿನಲ್ಲಿ ಕೇಳಲು ಅವಳು ಆದರ ವೃತ್ತಾಂತವನ್ನು ಸವಿಸ್ತಾರವಾಗಿ ತಿಳಿಸಿದಳು. "ಓಹೋ ಅದು ನಿಮ್ಮ ಕೊಡಲಿಯೆ? ನನ್ನ ಆಳಿಗೆ ಕಾಡಿಗೆ ಹೋದಾಗ ಸಿಕ್ಕಿದೆಯಂತೆ, ಅದು ನನ್ನಲ್ಲಿದೆ. ಈಗಲೇ ಅವನಲ್ಲಿ ಕೊಟ್ಟು ಕಳುಹಿಸುತ್ತೇನೆ" ಎಂದು ಹೇಳಿ ಮದ್ದನ್ನು ಕುಡಿಯಲು ಕೊಟ್ಟು ಮನೆಯ ಕಡೆಗೆ ತೆರಳಿದರು. ಕೊಡಲಿ ಸಿಕ್ಕಿತೆಂದು ಕೇಳಿದ ದೂಮನಿಗೆ ಜ್ವರವು ಅರ್ಧಕ್ಕೆ ಅರ್ಧ ನಿಂತಂತಾಯಿತು.

ಒಂದು ಅರ್ಧಗಂಟೆಯ ನಂತರ ವೈದ್ಯರ ಆಳು ದೂಮನ ಕೊಡಲಿಯನ್ನು ತುಂಗುವಿನ ಕೈಯಲ್ಲಿ ಕೊಟ್ಟುಹೋದನು. ಕೊಡಲಿಯನ್ನು ದೂಮನು ಆಶಾಪೂರಿತ ಕಣ್ಣುಗಳಿಂದ ತುಂಬಾ ನೋಡಿದನು. ತುಂಗೂ ಹೇಗೂ ಬಲವಂತಮಾಡಿ ಒಂದಿಷ್ಟು ಗಂಜಿ ನೀರನ್ನು ಕುಡಿಸಿದಳು ಜ್ವರವು ಏರುತ್ತಾ ಹೋಯಿತಲ್ಲದೆ ಇಳಿಮುಖವಾಗಲಿಲ್ಲ.

೦ ೦ ೦

ದೂಮನು ಚಾಪೆಹಿಡಿದು ಐದು ದಿವಸಗಳಾದುವು. ಆರನೆಯ ದಿವಸ ರಾತ್ರಿ ೯ ಘಂಟೆಯ ಸಮಯ. ಹೊರಗೆ ವಿಪರೀತವಾದ ಮಳೆಯು ಬರುತಿತ್ತು. ಗುಡುಗು ಮಿಂಚುಗಳು ತೀವ್ರವಾಗಿದ್ದುವು. ಹೊರಜಗುಲಿಯಲ್ಲಿ ಮಲಗಿದ್ದ "ಕಾಳು" ಆದೇಕೋ ಜೋರಾಗಿ ಬೊಗಳುತಿತ್ತು. ಮಿಣಿಮಿಣಿ ಉರಿಯುವ ಮಂಕು ದೀಪದಲ್ಲಿ ತುಂಗು ಆಶಾಪೂರಿತ ಕಣ್ಣುಗಳಿಂದಲೂ, ವ್ಯಾಕುಲತೆಯ ಹೃದಯದಿಂದಲೂ, ಗಂಡನ ಮುಖವನ್ನೇ ಎವೆಯಿಕ್ಕದೆ ನೋಡುತ್ತಿದ್ದಳು. ಮಕ್ಕಳಿಬ್ಬರು ಹರಿದ ಚಾಪೆಯೊಂದರಲ್ಲಿ ಮಲಗಿ ವಸ್ತ್ರವನ್ನು ಹೊದೆದುಕೊಂಡು ಮಲಗಿದ್ದರು. ಆಗಳಿಗೆಯ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; $\frac{1}{4}$ ರಾತಲಿಗೆ ರೂ. 2/0
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾವ್ಸ್ ಫಾರ್ಮಸಿ, ಮಂಗಳೂರು.
3. ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.



ಭಾರತ ಕಲಾನಿಧಿ—

ದೆಹಲಿಯ ಪ್ರಾಚ್ಯ ವಸ್ತು ಸಂಗ್ರಹಾಲಯ

ಮಧ್ಯ ಏಷಿಯಾದ ಪ್ರಾಚ್ಯ ವಸ್ತುಗಳ ವಸ್ತು ಸಂಗ್ರಹಾಲಯವನ್ನು ೧೯೨೯ರಲ್ಲಿ ಸ್ಥಾಪಿಸಲಾಯಿತು. ಈ ವಸ್ತು ಸಂಗ್ರಹಾಲಯವನ್ನು ಸ್ಥಾಪಿಸಿದ ಖ್ಯಾತಿಯು ಪ್ರಸಿದ್ಧ ಪ್ರಾಚೀನ ವಸ್ತು ಸಂಶೋಧಕರಾದ ಸರ್ ಆರೆಲ್ ಸ್ಟೀನ್‌ರವರಿಗೆ ಸಲ್ಲುತ್ತದೆ. ಸರ್ ಆರೆಲ್ ಸ್ಟೀನ್‌ರವರು ಭಾರತ ಸರಕಾರದವರ ಸೂಚನೆಯ ಪ್ರಕಾರ ಈ ಶತಮಾನದ ಆದಿಭಾಗದಲ್ಲಿ ಚೀನೀ ತುರ್ಕಿಸ್ತಾನದಲ್ಲಿ ಪರಿಶೋಧನಾರ್ಥವಾಗಿ ಮೂರುಬಾರಿ ಪ್ರವಾಸ ಕೈಗೊಂಡರು. ಅವರು ಅಲ್ಲಿಂದ ಅಧಿಕ ಸಂಖ್ಯೆಯಲ್ಲಿ ಅತ್ಯಮೂಲ್ಯವಾದ ಪ್ರಾಚೀನ ವಸ್ತುಗಳನ್ನು ಭಾರತಕ್ಕೆ ತಂದರು.

ಚೀಣೀ ತುರ್ಕಿಸ್ಥಾನವು ಏಷಿಯಾದ ಹೃದಯವೆನ್ನಿಸಿಕೊಂಡಿದೆ. ಅನಾದಿಕಾಲದಿಂದಲೂ ಚೀಣಾದಿಂದ ಇರಾನ್, ಭಾರತ ಹಾಗೂ ಜಗತ್ತಿನ ಉಳಿದ ಭಾಗಗಳಿಗೆ ಚೀನೀ ತುರ್ಕಿಸ್ಥಾನ ಪ್ರದೇಶದಿಂದಲೇ ಹೋಗಿಬರಬೇಕಾಗುತ್ತಿತ್ತು. ಉತ್ತರದಲ್ಲಿ ಈ ವಾಣಿಜ್ಯ ಮಾರ್ಗವು ಕೂಚಾ, ಕಾರಾಶಹರ ಮತ್ತು ತುರಫಾನಗಳ ದ್ವಾರವೂ ದಕ್ಷಿಣದಲ್ಲಿ ಈ ವಾಣಿಜ್ಯ ಮಾರ್ಗವು ಯಾರ ಕಂದ, ಖೋತಾನ್, ನಿಯಾ ಮತ್ತು ಮೀರಾನ್‌ಗಳ ದ್ವಾರವೂ ಹಾದು ಹೋಗುತ್ತಿತ್ತು.

ಚೀಣೀ ತುರ್ಕಿಸ್ಥಾನವು ನಾಲ್ಕು ಮಹಾನ್ ನಾಗರಿಕತೆಗಳ ಅಂದರೆ ಭಾರತೀಯ, ಚೀಣಿ, ಇರಾನಿ ಮತ್ತು ಗ್ರೀಕ್ ನಾಗರಿಕತೆಗಳ ಸಂಗಮವಾಗಿತ್ತು. ಇದರ ಫಲಸ್ವರೂಪವಾಗಿ ಇಲ್ಲಿ ನೂತನವಾದ ಹಾಗೂ ಮಿಶ್ರಿತರೂಪದ ನಾಗರಿಕತೆಯು ವಿಕಾಸಗೊಂಡಿತು. ಈ ನೂತನ ರೂಪದಲ್ಲಿ ನಾಲ್ಕು ನಾಗರಿಕತೆಗಳ ಛಾಯೆಯೂ, ಕಾಣಬರುವುದು ಕಚ್ಚುಗಾರೆಯ ಗೊಂಬೆಗಳು, ಮಣ್ಣಿನ ಪಾತ್ರೆಗಳು, ರೇಷ್ಮೆ ವಸ್ತ್ರಗಳು ಭಿತ್ತಿ ಚಿತ್ರಗಳಲ್ಲಿ ನಾಲ್ಕು ನಾಗರಿಕತೆಗಳ ಸಂಗಮದ ನೂತನ ರೂಪವು ಕಾಣಬರುವುದು. ಈ ಎಲ್ಲ ಕಲಾಕೃತಿಗಳಲ್ಲಿಯೂ ಬೌದ್ಧ ಮತದ ಛಾಯೆಯು ಕಾಣಬರುವುದು. ಆದರೆ ವಾಸ್ತುಶಿಲ್ಪದಲ್ಲಿ ಈ ನಾಲ್ಕು ಮಹಾನ್ ಸಂಸ್ಕೃತಿಗಳ ಪ್ರಭಾವವು ಸುಸ್ಪಷ್ಟವಾಗಿದೆ.

ಸರ್ ಆರೆಲ್ ಸ್ಟೀನ್‌ರವರು ೧೯೦೦ರಲ್ಲಿ ಟಕಲಾ ಮಕಾನ್ ಮರುಭೂಮಿಯ ನೈರುತ್ಯ ಭಾಗದಲ್ಲಿರುವ ಖೋತಾನ್‌ನಲ್ಲಿ ಮುಖ್ಯವಾಗಿ ಪರಿಶೋಧನಾ ಕಾರ್ಯವನ್ನು ನಡೆಸಿದರು. ೧೯೦೬ರಲ್ಲಿ ಅವರು ತಾನ್‌ಹುವಾಂಗ್ ಎಂಬ ಬೌದ್ಧ ಯಾತ್ರಾಸ್ಥಳವನ್ನು ಮುಟ್ಟಿದರು. ಖೋತಾನ್‌ನಲ್ಲಿ "ಸಹಸ್ರ ಬುದ್ಧರ ಗುಹೆಗಳು" ಎಂದು ಕರೆಯಲ್ಪಟ್ಟಿರುವ ಗುಹೆಗಳನ್ನು ಪತ್ತೆ ಹಚ್ಚಿದ ಪಾಶ್ಚಾತ್ಯ ಪರಿಶೋಧಕರಲ್ಲಿ ಸರ್ ಆರೆಲ್ ಸ್ಟೀನ್‌ರವರೂ ಒಬ್ಬರು ಈ ಗುಹೆಗಳ ಸಮೀಪದಲ್ಲಿ ಒಂದು ಚೈತ್ಯವೊಳಗೆ ಹಸ್ತ ಪ್ರತಿಗಳು ಮತ್ತು ರೇಷ್ಮೆ ಚಿತ್ರಪಟಗಳನ್ನೊಳಗೊಂಡ ಇಡೀ ಭಂಡಾರವೇ ಗೋಚರವಾಯಿತು. ನವದೆಹಲಿಯಲ್ಲಿರುವ ಮಧ್ಯ ಏಷಿಯಾದ ಪ್ರಾಚೀನ ವಸ್ತು ಸಂಗ್ರಹಾಲಯದಲ್ಲಿ ಈ ಅತ್ಯಮೂಲ್ಯವಾದ ವಸ್ತುಗಳನ್ನು ಸಂಗ್ರಹಿಸಲಾಗಿದೆ.

ಎರಡನೆಯ ಸಲ ಯಾತ್ರೆಕೈಗೊಂಡಾಗ ಸರ್ ಆರೆಲ್ ಸ್ಟೀನ್‌ರವರೂ ಖೋತಾನ್, ದೊನೋಕೋ ಮತ್ತು ನಿಯಾಗಳಲ್ಲಿ ಮಹತ್ವಪೂರ್ಣ ಪರಿಶೋಧನಾ ಕಾರ್ಯಗಳನ್ನು ನಡೆಸಿದರು. ಆ ಸ್ಥಳಗಳಲ್ಲಿ ಸಂಸ್ಕೃತ ಭಾಷೆಯಲ್ಲಿನ ಪ್ರಾಚೀನ ಹಸ್ತ ಪ್ರತಿಗಳು ಮತ್ತು ಖರೋಷ್ಟಿ ಲಿಪಿಯ ಬರವಣಿಗೆ ಇರುವ ಮರದ ಹಲಗೆಗಳು ಹೇರಳ ಸಂಖ್ಯೆಯಲ್ಲಿ ಪ್ರಾಪ್ತಿಯಾದವು. ಇವನ್ನು ಈ ಸಂಗ್ರಹಾಲಯದಲ್ಲಿಡಲಾಗಿದೆ.

೧೯೧೩ರಲ್ಲಿ ಸರ್ ಆರೆಲ್ ಮೂರನೆಯ ಸಲ ಯಾತ್ರೆಕೈಗೊಂಡು ಖೋತಾನ್, ದೊನೋಕೊ, ನಿಯಾಗಳಲ್ಲಿನ ನಿವೇಶನಗಳಲ್ಲಿ ಪುನಃ ಪರಿಶೋಧನಾ ಕಾರ್ಯವನ್ನು ಕೈಗೊಂಡರು. ಅವರು ಸಿಸ್ತಾನ್‌ನಲ್ಲಿ ಕೂಡ ಪರಿಶೋಧನಾ ಕಾರ್ಯವನ್ನು ಕೈಗೊಂಡರು ಸಿಸ್ತಾನಿನ ವಿಶಾಲವಾದ ಬೌದ್ಧ ವಿಹಾರವೊಂದರಲ್ಲಿ ಸುಂದರವಾದ ಭಿತ್ತಿ ಚಿತ್ರಗಳನ್ನು ಪತ್ತೆ ಹಚ್ಚಿದರು. ಈ ವರ್ಣಚಿತ್ರಗಳು ಸಂಗ್ರಹಾಲಯದ ಕೇಂದ್ರ ಸಭಾಂಗಣ ಮತ್ತು ಅಕ್ಕಪಕ್ಕದ ಎರಡು ವಿಭಾಗಗಳಲ್ಲಿ ತೂಗು ಹಾಕಲ್ಪಟ್ಟಿವೆ.

ಕಾರಾಖೋಜಾ ಮತ್ತು ತುರಫಾನ್‌ಗಳಲ್ಲಿನ ಪ್ರಾಚೀನ ಬೌದ್ಧ ಮಂದಿರಗಳಲ್ಲಿ ದೊರೆತ ಭಿತ್ತಿಚಿತ್ರಗಳಲ್ಲಿ ಭಾರತೀಯ ಸಂಸ್ಕೃತಿಯ ಪ್ರಭಾವವು ಕಾಣಬರುವುದು. ಈ ಭಿತ್ತಿಚಿತ್ರಗಳಲ್ಲಿ ಒಂದು ಅತಿ ವಿಶಾಲವಾಗಿದ್ದು ಅದು ಕೇಂದ್ರ ಸಭಾಂಗಣದ ಒಂದು ಗೋಡೆಯ ಅರ್ಧದಷ್ಟು ಜಾಗವನ್ನು ಆಕ್ರಮಿಸಿಕೊಂಡಿದೆ ಈ ಚಿತ್ರದಲ್ಲಿ ಭಗವಾನ್ ಬುದ್ಧನ ಪಾರ್ಥಿವ ಶರೀರದ ಸುತ್ತ ಮಂಡಿ ವ್ಯಾಕುಲವದನರಾಗಿ ಲೋಕಪಾಲರು ಮತ್ತು ಅರಸರು ನೆರೆದಿರುವುದನ್ನು ಕಾಣಬಹುದಾಗಿದೆ

ನವದೆಹಲಿಯಲ್ಲಿರುವ ಈ ಸಂಗ್ರಹಾಲಯದಲ್ಲಿ ವರ್ಣಚಿತ್ರಗಳನ್ನೊಳಗೊಂಡ ರೇಷ್ಮೆ ಪಟಗಳನ್ನು ಪ್ರದರ್ಶಿಸಲಾಗಿವೆ ಇವು ಗಮನಾರ್ಹವಾದ ಸಂಗ್ರಹಣವಾಗಿವೆ ಈ ಚಿತ್ರಗಳ ಪೈಕಿ ಒಂದರಲ್ಲಿ ಭಗವಾನ್ ಬುದ್ಧನು ಅವಲೋಕಿತೇಶ್ವರನ ರೂಪತಾಳಿರುವುದು, ಅತಿ ಸುಂದರವಾಗಿರುವುದು ಇನ್ನೊಂದು ರೇಷ್ಮೆ ಪಟದಲ್ಲಿ ಭಗವಾನ್ ಬುದ್ಧನ ಜೀವನಕ್ಕೆ ಸಂಬಂಧಿಸಿದ ವಿಭಿನ್ನ ದೃಶ್ಯಗಳಿರುವುವು. ಬಹುಶಃ ಈ ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿರುವ ರೇಷ್ಮೆ ಪಟಗಳನ್ನು ಟಿಬೆಟ್ ಹಾಗೂ ಚೀಣೀ ಪೌರಾಣಿಕ ಕಥೆಗಳ ಆಧಾರದ ಮೇಲೆ ಸಿದ್ಧಗೊಳಿಸಲ್ಪಟ್ಟಿವೆ

ಸಂಗ್ರಹಾಲಯದ ಮಧ್ಯ ಸಭಾಂಗಣದ ಒಂದು ಭಾಗವು ಕಾಗದದ ಮೇಲೆ ಚಿತ್ರಿಸಿದ ಚಿತ್ರಗಳು ಮತ್ತು ಪ್ರಾಚೀನ ಹಸ್ತಪ್ರತಿಗಳಿಗೇ ಮೀಸಲಾಗಿರುವುದು. ಕ್ರಿ ಶ ೧ ಮತ್ತು ೩ನೆಯ ಶತಮಾನಗಳಿಗೆ ಸೇರಿದ ಮರದ ಫಲಕಗಳ ಮೇಲೆ ಖರೋಷ್ಟಿ ಲಿಪಿಯಲ್ಲಿ ಬರೆಯಲ್ಪಟ್ಟಿರುವ ದಾಖಲೆ ಪತ್ರಗಳು ದೊರೆತಿವೆ ಇವು ಪ್ರಾಕೃತ ಭಾಷೆಯಲ್ಲಿವೆ ಕ್ರಿ ಶ. ೧ ಮತ್ತು ೩ನೆಯ ಶತಮಾನಗಳಲ್ಲಿ ಆಗ್ನೇಯ ತುರ್ಕಿಸ್ತಾನದಲ್ಲಿ ಪ್ರಾಕೃತ ಭಾಷೆಯು ರಾಜಭಾಷೆಯಾಗಿದ್ದಿತು. ಕಾಗದದ ಮೇಲೆ ಚಿತ್ರಿಸಲ್ಪಟ್ಟಿರುವ ಚಿತ್ರಗಳಲ್ಲಿ ಒಂದು ಚಿತ್ರವು ನಾಗ ಲೋಕದಿಂದ ಓಡುತ್ತಿರುವ ಕುದುರೆಗಳನ್ನು ತೋರಿಸುವುದು ಈ ಚಿತ್ರವು ದರ್ಶಕರ ಲಕ್ಷ್ಯವನ್ನು ಸೆಳೆಯದೇ ಇರದು. ಕಮಲ ಪುಷ್ಪದ ಮೇಲೆ ಪದ್ಮಾಸನ ಹಾಕಿಕೊಂಡು ಕುಳಿತಿರುವ ಹನ್ನೊಂದು ತಲೆಗಳುಳ್ಳ ಅವಲೋಕಿತೇಶ್ವರನ ಚಿತ್ರವು ಈ ಸಂಗ್ರಹಾಲಯದಲ್ಲಿರುವ ಮತ್ತೊಂದು ಆಕರ್ಷಕ ವರ್ಣಚಿತ್ರವಾಗಿದೆ

ಭಾರತೀಯ ಶೈಲಿಯ ಪ್ರಭಾವ ಹೆಚ್ಚಾಗಿ ಕಾಣಬರುವ ಮರದ ಹಾಗೂ ಕಚ್ಚುಗಾರೆ ಕೆಲಸದ ಪ್ರತಿಮೆಗಳನ್ನು ಈ ಸಂಗ್ರಹಾಲಯದಲ್ಲಿ ಇಡಲಾಗಿವೆ ಇಲ್ಲಿ ಸ್ವರ್ಣ-ಲೇಪದ ಪ್ರತಿಮೆಗಳನ್ನೂ ಆಕಾಶ ನೀಲವರ್ಣದ ಪ್ರತಿಮೆಗಳನ್ನೂ ಕಾಣಬಹುದಾಗಿದೆ ಖೋತಾನ್ ಹಾಗೂ ದೊನೂಕೊ ಸ್ಥಳಗಳಲ್ಲಿ ದೊರೆತ ಕಚ್ಚುಗಾರೆ ಕೆಲಸದ ಪ್ರತಿಮೆಗಳ ಪೈಕಿ ಗ್ರೀಕ್ ಪ್ರಭಾವ ಕಂಡುಬರುವ ಹಾಗೂ ಭಾರತೀಯ ಶೈಲಿಯ ಶಿರೋಭಾಗ ಪ್ರತಿಮೆಗಳು ಮುಖ್ಯವಾದುವು.

ಅಭಯ ಮುದ್ರೆಯಲ್ಲಿ ನಿಂತಿರುವ ಅಥವಾ ಕುಳಿತಿರುವ ಭಗವಾನ್ ಬುದ್ಧನ ಪ್ರತಿಮೆಗಳು ಮಥುರಾದ ಗುಪ್ತರ ಕಾಲದ ಕಲಾ ಪರಂಪರೆಯನ್ನು ಪಡೆದಿವೆ. ಮಥುರಾ ಶೈಲಿಯ ಗುಪ್ತರ ಕಾಲದ ಪ್ರತಿಮೆಗಳು ಉತ್ತರ ಕಾಶ್ಮೀರದಲ್ಲಿರುವ ಗಿಲ್‌ಗಿತ್‌ನ ಮೂಲಕ ತುಘ್ರಾನ್ ಮತ್ತು ಬಲಪಸ್ತೆಗಳಿಗೆ ಸಾಗಿಸಲ್ಪಟ್ಟವೆಂದೂ ಅಲ್ಲಿ ಈ ಪ್ರತಿಮೆಗಳ ನಮೂನೆಯ ಮೇಲೆ ಶಿಲ್ಪಿಗಳು ಪ್ರತಿಮೆಗಳನ್ನು ನಿರ್ಮಿಸಿದರೆಂದೂ ಹೇಳಲಾಗಿದೆ.

ಮರದಲ್ಲಿ ಅತಿ ಸುಂದರವಾಗಿ ಮಾಡಲ್ಪಟ್ಟಿರುವ ಕೂಡಿಗಂಬಗಳು, ಕಲಶಗಳು, ಚಾಚು ಪೀಠಗಳು ಮುಂತಾದುವನ್ನು ಈ ಸಂಗ್ರಹಾಲಯದಲ್ಲಿ ಇಡಲಾಗಿವೆ ಭಗವಾನ್ ಬುದ್ಧನು ಉಪದೇಶಮಾಡುತ್ತಿರುವ ಚಿತ್ರವು ಉತ್ಕೃಷ್ಟವಾಗಿದೆ. ಕ್ರಿ. ಶ. ಒಂದನೆಯ ಅಥವಾ ಎರಡನೆಯ ಶತಮಾನಕ್ಕೆ ಸೇರಿದ 'ನಿಯಾ' ಎಂಬ ಸ್ಥಳದಲ್ಲಿ ದೊರೆತ ಕುರ್ಚಿಯ ಒಂದು ಕಾಲು ಈ ಸಂಗ್ರಹಾಲಯಕ್ಕೆ ಭೇಟಿಯೀಯುವ ದರ್ಶಕರ ಗಮನವನ್ನು ಸೆಳೆಯದೇ ಇರದು ಈ ಕುರ್ಚಿಯ ಕಾಲಿನ ಮೇಲ್ಭಾಗವು ಮಹಿಳೆಯೊಬ್ಬಳ ಶಿರಸ್ಸಿನ ರೂಪದಲ್ಲಿದೆ ಕೆಳಭಾಗವು ಕುದುರೆಯ ರೂಪದಲ್ಲಿದೆ. ಮರದ ಒಂದು ಫಲಕದ ಮೇಲೆ ಗಾಂಧಾರ ಶೈಲಿಯ ಧರ್ಮಚಕ್ರ ಪ್ರವರ್ತನ ಮುದ್ರೆಯ ಭಗವಾನ್ ಬುದ್ಧನ ಚಿತ್ರವನ್ನು ಕೆತ್ತಲಾಗಿದೆ

ಖೋತಾನ್‌ನಲ್ಲಿ ಲಭ್ಯವಾದ ಗಟ್ಟಿ ಮಣ್ಣಿನ ಸಣ್ಣ ಪ್ರತಿಮೆಗಳಲ್ಲಿ ಭಾರತೀಯ, ಸೀಸ್ತಾನಿ ಮತ್ತು ಚೀನೀ ಸ್ತ್ರೀ ಪುರುಷರ ಪ್ರತಿಮೆಗಳನ್ನು ಕಾಣಬಹುದಾಗಿದೆ ಒಂಟೆ, ಕುದುರೆ, ಟಗರು, ಅಜಗರ, ಚಿರತೆ ಹಾಗೂ ಇರಾನಿ ಶೈಲಿಯ ಗಿಡುಗಗಳ ಸಣ್ಣ ಮೂರ್ತಿಗಳನ್ನು ಕಾಣಬಹುದಿದೆ, ವಿವಿಧ ಭಂಗಿಗಳಲ್ಲಿರುವ ಸೋತಿಯ ಸಣ್ಣ ಪ್ರತಿಮೆಗಳು ಸ್ವಾರಸ್ಯವಾಗಿರುವುವು

ಸಂಗ್ರಹಾಲಯದಲ್ಲಿ ಭಾರತೀಯ ಶೈಲಿಯ ಒಂದು ಪಟವಿರುವುದು. ಇದರಲ್ಲಿ ಅಲಂಕೃತಗೊಂಡ ನಾಲ್ಕು ಸ್ತೂಪಗಳ ಮಧ್ಯದಲ್ಲಿ ಪದ್ಮಾಸನ ಹಾಕಿಕೊಂಡು ಕುಳಿತಿರುವ, ಭಗವಾನ್ ಬುದ್ಧನ ಪ್ರತಿಮೆಯಿರುವುದು ಈ ಪಟವು ಎತಸಿಂಗೋಲ್ ನದಿ ಮುಖಜ ಭೂಮಿಯಲ್ಲಿ ದೊರೆಯಿತು ವಿದೇಶೀ ಬೌದ್ಧ ಯಾತ್ರಿಕರು ಭಾರತದಲ್ಲಿ ತೀರ್ಥಯಾತ್ರೆಕೈಗೊಂಡ ಸಮಯದಲ್ಲಿ ಈ ಪಟಗಳನ್ನು ತಮ್ಮೊಂದಿಗೆ ಒಯ್ದರೆಂದು ಹೇಳಲಾಗಿದೆ.

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ. ಉಡುಪಿ — ಸ್ಥಾಪನೆ 1925

ಮೂರು ಹೊಸ ಶಾಖೆಗಳು
ಬೆಳ್ಗಾಂ (ಶಾಪುರ)
ಬೆಳ್ಗಾಂ (ಕ್ಯಾಂಪ್)
ತಿಪಟೂರು (ತುಮಕೂರು ಜಿಲ್ಲೆ)
ತಾ 27-3-'58ರಲ್ಲಿ ತೆರೆಯಲ್ಪಟ್ಟವು

ಒಟ್ಟು ಶಾಖೆಗಳು 109

ಜುಮ್ಲಾ ಚಲಾವಣಾ ನಿಧಿ ರೂ 12 75 ಕೋಟಿಗೂ ಮಿಕ್ಕಿದೆ

ಟಿ ಎ ಪೈ, ಬಿ ಕಾಂ.(ಬೊಂ) — ಎ ಐ ಐ ಬಿ ಯಫ್ ಆರ್ ಇ ಯಸ್ (ಲಂಡನ್) — ಜನರಲ್ ಮೆನೇಜರ್.

ಡಾ। ಟಿ ಮಾಧವ ಪೈ, — ಎಂ ಬಿ ಹಿ ಬಿ ಎಸ್. — ಮೆನೇಜಿಂಗ್ ಡೈರೆಕ್ಟರ್

The Canara Industrial & Banking Syndicate Ltd., Udipi.

ನೋವುಗಳ ಅತ್ಯುತ್ತಮ ಸಂಹಾರಿಣಿ



ಅಮೃತಾಂಜನ

ವಾರದ ಮಹಾನುಭಾವ—

ಡಾ. ಹರೇಕೃಷ್ಣ ಮೆಹತಾಬ

ಒರಿಸ್ಸಾದ ಕಾಂಗ್ರೆಸ್ ವಿಧಾನಸಭಾ ಸದಸ್ಯರ ಸಭೆಯಲ್ಲಿ ಮಂತ್ರಿಮಂಡಳವು ರಾಜೀನಾಮೆ ಕೊಡಬೇಕೆಂದು ಒಮ್ಮನಿರ್ಧಾರವಾಗಿತ್ತು. ರಾಜ್ಯಸಭೆಗೆ ವಿಧಾನಸಭಾ ಮತದಾರ ಕ್ಷೇತ್ರದಿಂದ ಆರಿಸಲ್ಪಡಬೇಕಾದ ಇಬ್ಬರು ಸದಸ್ಯರ ಸ್ಥಾನಗಳಲ್ಲಿ ಒಂದು ಸ್ಥಾನವನ್ನಷ್ಟೇ ಕಾಂಗ್ರೆಸ್ ಪಡೆದು ಮತ್ತೊಂದನ್ನು ಕಳೆದುಕೊಂಡುದೇ ಇದಕ್ಕೆ ಕಾರಣ. ಕಾಂಗ್ರೆಸ್ ಸೋಲಿಗೆ ಮಂತ್ರಿಮಂಡಳದ ಸದಸ್ಯರೆಲ್ಲರೂ ಕಾಂಗ್ರೆಸ್ ಸದಸ್ಯರಿಗೆ ಮತಕೊಡದಿರುವುದೇ ಕಾರಣವೆಂದು ತಿಳಿದುಬಂದಿದೆ. ಆದರೆ, ಮುಂದಕ್ಕೆ ಈ ಮಂತ್ರಿಗಳು ಕ್ಷಮಾಯಾಚನೆ ಮಾಡಿದನಂತರ, ಈ ಮೊದಲಿನ ನಿರ್ಧಾರವನ್ನು ಹಿಂತೆಗೆದುಕೊಳ್ಳಲಾಯಿತೆಂದು ವರದಿಗಳು ಬಂದಿವೆ.

ಡಾ. ಮೆಹತಾಬರು ಮೊಂಬಾಯಿಯ ರಾಜ್ಯಪಾಲ ಪದವಿಯನ್ನು ದೂರೀಕರಿಸಿ ಒಡಿಸ್ಸಾದ ಕಾಂಗ್ರೆಸ್ ಸರಕಾರದ ಒಕ್ಕಟ್ಟನ್ನು ಪರಿಹರಿಸುವುದಕ್ಕಾಗಿ ರಾಜ್ಯಪಾಲ ಪದವಿಯಿಂದ ಮುಖ್ಯ ಮಂತ್ರಿ ಪದವಿಗೆ ಇಳಿದು ಬಂದರು. ಅವರ ವ್ಯಕ್ತಿತ್ವದ ಪ್ರಭಾವವು ಈ ಬಿಕ್ಕಟ್ಟು ಹರಿಸುವುದರಲ್ಲಿ ಪರಿಣಾಮ ಬೀರುವುದೆಂಬ ವಿಶ್ವಾಸ ಅಂದಿತ್ತು. ಆದರೆ, ಬಂದ ವರದಿಗಳಂತೆ ನಗಣ್ಯ ಬಹುಮತ ಪಡೆದಿರುವ ಒಡಿಸ್ಸಾ ವಿಧಾನ ಸಭೆಯ ಕಾಂಗ್ರೆಸ್ ಸದಸ್ಯರಲ್ಲಿ ಎಲ್ಲರನ್ನೂ ಸಂತುಷ್ಟ ಪಡಿಸುವುದು ಅವರಿಗೆ ಸಾಧ್ಯವಾಗಲಿಲ್ಲ.

ಡಾ. ಹರೇಕೃಷ್ಣ ಮೆಹತಾಬರು ಉದ್ದುದ್ದ ಭಾಷಣ ಬಿಗಿಯುವ ಹವ್ಯಾಸವನ್ನು ಮೆಚ್ಚುವುದಿಲ್ಲ ಅವರು ಎಂಟು ವರ್ಷಗಳ ಪೂರ್ವದಲ್ಲಿ, ಕೇಂದ್ರಿಯ ಮಂತ್ರಿ ಸಂಪುಟದಲ್ಲಿ ಉದ್ಯೋಗ ಮತ್ತು ಪೂರೈಕೆ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ— "ನಾನೊಬ್ಬ ಮಂತ್ರಿಯಂತೆ ಅಧಿಕವಾಗಿ ಮಾತನಾಡಲು ಬಯಸುವುದಿಲ್ಲ" ಎಂದು ನುಡಿದಿದ್ದರು. ಇದರಿಂದ, ಅವರು ಮಾತಿಗಿಂತ ಕೃತಿಗೆ ಪ್ರಾಧಾನ್ಯ ನೀಡುತ್ತಾರೆಂದು ತಿಳಿಯುತ್ತದೆ. ಇಂತಹ ಕಾರ್ಯವು ಒಡಿಸ್ಸಾದ ಕಾಂಗ್ರೆಸಿಗರನ್ನೇಕೆ ಸಂತುಷ್ಟಗೊಳಿಸಲು ಅಸಮರ್ಥವೆನಿಸಿತೆನ್ನುವುದೊಂದು ರಹಸ್ಯವೇ ಆಗಿದೆ. ಅವೇ ದಿನಗಳಲ್ಲಿ ಅವರು ಕಾಂಗ್ರೆಸ್ ಕಾರ್ಯಕರ್ತರು ಸರಕಾರಕ್ಕೆ ಸಲಹೆಯೀಯಬಾರದೆಂದೂ ತಿಳಿಸಿದರು. ಆದುದರಿಂದಲೇ ಒಡಿಸ್ಸಾದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ವಿಧಾಯಕರಿಗೆ ಇವರ ನೇತೃತ್ವದಲ್ಲಿ ಪರಾಮರ್ಶೆ ನಡೆಸುವ ಸ್ವಾತಂತ್ರ್ಯ ದೊರೆಯದಿದ್ದುದರಿಂದಾಗಿ ಅವರಲ್ಲಿ ಅಸಂತೋಷವು ಬೆಳೆಯುತ್ತ ಹೋಗಿರಬೇಕು. ಏಕೆಂದರೆ, ಈಗೀಗ ವಿಮರ್ಶಿಸುವ ಅಭ್ಯಾಸವೂ ಮಾನವನ ಆವಶ್ಯಕ ಗುಣಗಳಲ್ಲಿ ಒಂದಾಗಿ ಪರಿಣಮಿಸಿಬಿಟ್ಟಿದೆ. ಅಂದೂ ಒಡಿಸ್ಸಾದ ಕಾಂಗ್ರೆಸ್‌ನಲ್ಲಿ ಬಿರುಕು ಎದ್ದಿತ್ತು; ಅದನ್ನು ಆಗ ಡಾ. ಮೆಹತಾಬರು ತಮ್ಮ ಮಧ್ಯಸ್ಥಿಕೆಯಿಂದ ಜೋಡಿಸಿ ಹೊರಟು ಅಲ್ಪ ಮಟ್ಟಿಗೆ ಸಫಲರೂ ಆಗಿದ್ದರು. ಇಂದು ಅವರ ಸ್ಥಿತಿ ಬೇರೆಯಾಗಿದೆ.

ಶ್ರೀ ನಭಕೃಷ್ಣ ಚೌಧರೀಯವರು ರಾಜೀನಾಮೆ ಕೊಟ್ಟ ಮೇಲೆ, ೧೯೫೬ನೆ ಅಕ್ಟೋಬರ ೯ರಂದು ಡಾ. ಹರೇಕೃಷ್ಣ ಮೆಹತಾಬರು ಒಡಿಸ್ಸಾ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನೇತಾರರಾಗಿ ಆಯ್ಕೆಗೊಂಡರು. ಇದಕ್ಕಿಂತ ಮೊದಲೂ ಅವರೊಮ್ಮೆ ತಮ್ಮ ರಾಜ್ಯದ ಮುಖ್ಯ ಮಂತ್ರಿಯಾಗಿದ್ದರು. ತಮ್ಮ ರಾಜ್ಯದಲ್ಲಿ ಪತ್ರಿಕಾಕರ್ತರಾಗಿ, ಉದ್ಯೋಗಪತಿಯಾಗಿ, ಹಾಗೆಯೇ ಕಾಂಗ್ರೆಸ್ ಮುಖಂಡರಾಗಿ ಕೆಲಸ ಮಾಡಿದ್ದರು. ಅವರ ಸಮರ್ಥ ಆರ್ಥಿಕ ಸ್ಥಿತಿಯು ಅಲ್ಲಿ ಲೋಕ ಪ್ರಿಯತೆಯನ್ನೂ ತಂದು ಕೊಟ್ಟಿತ್ತು, ಆದರೆ ಅದು ಅವರಿಗೆ ಬಾಧಕವಾಗಿಯೂ ಪರಿಣಮಿಸಿತ್ತು. ಒಡಿಸ್ಸಾದ ವಿರೋಧೀ ಪಕ್ಷದವರು ಅವರನ್ನು ಜನತೆಯೆದುರು "ಶ್ರೀಮಂತ ಕಾಂಗ್ರೆಸಿಗ" ಎಂಬ ಉಪನಾಮದಿಂದ ಸಂಬೋಧಿಸುತ್ತಿದ್ದುದರಿಂದ ಬಡವರಲ್ಲಿ ಬಹು ಸಂಖ್ಯಾಕರು ಇವರ ಮೇಲೆ ಸದ್ಭಾವನೆಯನ್ನಿಡುವುದು ಅಸಾಧ್ಯವಾದ ಮಾತಾಗಿತ್ತು.

ಪ್ರಜಾತಂತ್ರಾತ್ಮಕ ಆಡಳಿತೆಯ ಸಫಲತೆಯನ್ನು, ನೌಕರಶಾಹಿಯ ಕಾರ್ಯಪದ್ಧತಿಯನ್ನು ತಿಳಿಯಬಲ್ಲ ಶ್ರೀ ಮೆಹತಾಬರಿಗೆ ಭೂದಾನ ಆಂದೋಲನದಿಂದ ಭಾರತದ ಭೂಸಮಸ್ಯೆಯು ದೂರವಾಗುವುದೆಂಬ ಆಶೆ ಎಂದೂ ಇರಲಿಲ್ಲ. ಇದರಿಂದಾಗಿ, ಒಂದೆಡೆ ರಾಜ್ಯದ ನೌಕರಶಾಹಿ, ಇನ್ನೊಂದೆಡೆ ಭೂಮಿದಾನವನ್ನು ಸಹಾನುಭೂತಿಯಿಂದ ನೋಡುವ ಸಾಧಾರಣ ಜನತೆ ಹಾಗೂ ಕಾರ್ಯಕರ್ತರಲ್ಲಿ ಅವರ ಬಗೆಗೆ ಪೃಥಕ್ಕಾದ ವಿಚಾರ ಭಾವನೆಯಿರುವುದು ಸ್ವಾಭಾವಿಕವೇ ಆಗಿದೆ.

ಸಾಹಿತ್ಯಕ ವಿಚಾರಗಳಲ್ಲಿ ಡಾ. ಮೆಹತಾಬರು ಸಂತುಷ್ಟರಾಗಿಲ್ಲ; ಏಕೆಂದರೆ, ಅವರ ಅಭಿಪ್ರಾಯದಂತೆ, ಇಂದಿನ ಸಾಹಿತ್ಯ ಹಾಗೂ ಕವಿತೆಗಳು ಜನತೆಯ ಸ್ಥಿತಿಯ ದಿಗ್ದರ್ಶನವನ್ನು ತೋರಿಸುವುದಿಲ್ಲ. ಈ ಅಭಿಮತವನ್ನವರು ೧೯೫೫ರಲ್ಲಿ ಮುಂಬಯಿಯ ರಾಜ್ಯಪಾಲರಾಗಿದ್ದಾಗ, ವ್ಯಕ್ತಪಡಿಸಿದ್ದರು. ಹಿಂದೀ ಭಾಷಾ ಸುಧಾರಣೆಯಲ್ಲೂ ಅವರು ತಲೆ ಹಾಕಿದ್ದರು. ದೇಶದ ಎಲ್ಲ ಪ್ರಕಾರದ ಜನರೂ ಅದನ್ನು ತಮ್ಮ ಭಾಷೆಯನ್ನಾಗಿ ಮಾಡಿಕೊಳ್ಳುವಂತೆ ಹಿಂದೀ ಭಾಷೆಯಿರಬೇಕೆನ್ನುತ್ತಾರೆ, ಶ್ರೀ ಮೆಹತಾಬರು. ಕಲೆಗಳ ಮೇಲೆ ಯಾವುದೇ ರೀತಿಯ ಶಾಸನ ನಿರ್ಬಂಧವಿರಬಾರದೆಂದು ತಿಳಿಯುವ ಜನರಲ್ಲಿ ಡಾ. ಮೆಹತಾಬರೂ ಒಬ್ಬರು.

ಒಡಿಸ್ಸಾದಲ್ಲಿ ಅಲ್ಪ ಬಹುಮತವಿರುವ ಸರಕಾರವನ್ನು ಯೋಗ್ಯ ರೀತಿಯಲ್ಲಿ ನಡೆಯಿಸುವ ಮಹತ್ವದ ಹೊಣೆಗಾರಿಕೆಯನ್ನು ಡಾ. ಮೆಹತಾಬರು ಹೊತ್ತುಕೊಂಡಿದ್ದಾರೆ. ಇವರು ಸಮರ್ಥ ನಾಯಕರೂ ಉತ್ತಮ ರಾಜಕಾರಣಿಗಳೂ ಆಗಿರುವುದರಿಂದಾಗಿಯೇ ಗುಡ್ಡದಂತೆಯೆ ದುರುನಿಲ್ಲುವ ಆತಂಕಗಳನ್ನು ಮಂಜಿನಂತೆ ಕರಗಿಸುವ ಸಾಮರ್ಥ್ಯವುಳ್ಳವರು. ಪ್ರಕೃತ ಅಂತಹ ಒಂದು ಗಂಡಾಂತರ ಬಂದಿತ್ತು, ಹಾಗೆಯೇ ಅದು ಜಾರಿಹೋಯಿತು. ಮುಂದಿನ ಕಥೆಯೇನೆಂದು ನೋಡಬೇಕಷ್ಟೆ

ಭಾರತದ ಆರ್ಥಿಕ ಸ್ಥಿತಿ—

ವಿಮಂಚನೆಗೆ ಎಡೆಯಿಲ್ಲ

ಭಾರತದ ರಿಸರ್ವ್ ಬೇಂಕಿನ ಗವರ್ನರರಾದ ಶ್ರೀ ಎಚ್. ವಿ. ಆರ. ಐಯ್ಯಂಗಾರರ ಅಭಿಪ್ರಾಯದಂತೆ ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ವಿದೇಶೀ ಸಹಾಯವು ಊಹೆಗಿಂತಲೂ ಅಧಿಕ ಪ್ರಮಾಣದಲ್ಲಿ ದೊರೆಯುವ ನಿರೀಕ್ಷೆಯಿದೆ.

ಶ್ರೀ ಐಯ್ಯಂಗಾರರು ಮದ್ರಾಸಿನ ಚೇಂಬರ್ ಆಫ್ ಕಾಮರ್ಸ್‌ನಲ್ಲಿ ಮಾಡಿದ ಭಾಷಣದಲ್ಲಿ ನಮ್ಮ ಮಿತ್ರ ಸರಕಾರಗಳು ನಮ್ಮ ಭವಿಷ್ಯದ ಸಂಬಂಧದಲ್ಲಿ ನಿರಾಶರಾಗಿಲ್ಲ ಎಂದು ಹೇಳಿದರು. ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಈಗ ಕಂಡುಬರುತ್ತಿರುವ ಅಸಮತೋಲನವು ಅಮೇರಿಕೆಯ ಮಾಂದಿಯಿಂದಲ್ಲ. ಆಯಾತ ಪ್ರತಿಬಂಧ ಹಾಗೂ ಕೆಲವಾರು ಭಾರೀ ಸ್ಥಾನೀಯ ಉತ್ಪಾದನೆಯ ಕಾರಣದಿಂದ ಹುಟ್ಟಿದೆ. ಸಾಮಾನ್ಯವಾಗಿ ಕಠಿಣ ಪರಿಸ್ಥಿತಿಗಳು ಕಳೆದು ಹೋಗಿ, ನಮಗಿಂದು ಉಸಿರಾಡುವುದಕ್ಕೆ ಸಮಯ ದೊರಕಿದೆ. ಇಂದು ನಾವು ಕಾಣುತ್ತಿರುವ ಸ್ಥಿತಿಯು ಮಿಶ್ರ ಸ್ಥಿತಿಯಿಂದ ಉತ್ಪನ್ನವಾಗಿರುವುದಲ್ಲದೇ ಇದಕ್ಕೆ ಅಂಜಬೇಕಾದ ಪ್ರಮೇಯವಿಲ್ಲ ಎಂದು ಶ್ರೀ ಐಯ್ಯಂಗಾರರು ವ್ಯಕ್ತಪಡಿಸಿದರು.

ಯೋಜನೆಯ ಗುರಿಗಳನ್ನು ಪೂರ್ಣ

ಗೊಳಿಸುವುದಕ್ಕೋಸ್ಕರ ಹಾಗೂ ನಿಯೋಜಿತ ಮೊತ್ತವನ್ನು ವಿನಿಯೋಗಿಸುವರೆ ದೃಢ ನಿರ್ಧಾರ ಮಾಡುವಲ್ಲಿ ಅಧಿಕಾರಿಗಳು ಕಠೋರ ನೀತಿಯನ್ನನುಸರಿಸದೆ ಸರಳ ಮಾರ್ಗವನ್ನೇ ಅವಲಂಬಿಸಿದ್ದಾರೆ. ಅಮೆರಿಕೆಯ ಮಾಂದಿಯು ತಡೆದು ಹೋಗುವುದೆಂದೂ ೧೯೩೦—೩೭ರ ಪೂರ್ವಾರ್ಧದಲ್ಲಿ ಉತ್ಪನ್ನವಾದ ಪರಿಸ್ಥಿತಿಗಳು ಎಂದೂ ಕಾಣಿಸಿಕೊಳ್ಳಲಾರವೆಂದೂ ಅವರು ತಮ್ಮ ಆಶೆಯನ್ನು ಪ್ರಕಟಿಸಿದರು. ಅಮೆರಿಕಕ್ಕೆ ನಿರ್ಯಾತ ಮಾಡುವ ಹಿಂದುಳಿದ ದೇಶಗಳಲ್ಲಿ ಅಮೆರಿಕೆಯ ಮಾಂದಿಯ ಪ್ರತಿಕೂಲ ಪ್ರಭಾವವು ತುಂಬ ಬೀಳುವುದೆಂದವರು ಎಚ್ಚರಿಸಿದರು ಭಾರತದ ಜನತೆಯ ಜೀವನ ಮಟ್ಟವನ್ನು ಉಚಿತರೀತಿಯಲ್ಲಿ ಸುಧಾರಿಸುವುದು ಅಗತ್ಯವಾದರೆ, ಸಾಮೂಹಿಕ ಮೊತ್ತವನ್ನು ಬಹಳವಾಗಿ ಬಳಸಬೇಕೆಂದವರು ನುಡಿದರು. ಈ ಮೊತ್ತದಲ್ಲಿ ಆಂತರಿಕ ಮೊತ್ತವು ಇನ್ನೂ ಕೆಲವು ವರ್ಷಗಳವರೆಗೆ ದೊರೆಯುವುದು ಅಸಂಭವವಾದುದರಿಂದ, ವಿದೇಶೀ ಸಹಾಯವು ನಮಗೆ ಆವಶ್ಯಕವಿದೆ ಎಂದವರು ವಿವರಿಸಿದರು.

ಭಾರತ ಸರಕಾರವು ಕೇವಲ ವಿದೇಶೀಯ ಸಹಾಯವನ್ನೇ ಎದುರುನೋಡುತ್ತ ಅದಕ್ಕಾಗಿ ಪ್ರಯತ್ನ ನಡೆಸುವುದು ಮಾತ್ರವಲ್ಲದೇ ದೇಶದ ಆಂತರಿಕ ಸಾಧನಗಳನ್ನೂ ಸಾಧ್ಯವಿದ್ದಷ್ಟು ಸಂಗ್ರಹಿಸಲು ನಿಶ್ಚಯಿಸಿದೆ ವಾಸ್ತವವಾಗಿ ನಮ್ಮ ಶಕ್ತಿ ಹಾಗೂ ವಿಶ್ವಾಸಗಳನ್ನು ಪ್ರಮಾಣೀಕರಿಸಲು ಇದಕ್ಕಿಂತ ಪ್ರಯಾಸಕರವಾದ ಕಾರ್ಯ ಬೇರೊಂದಿಲ್ಲ. ಆದುದರಿಂದ, ಆಂತರಿಕ ಸಾಧನಗಳನ್ನು ಸಂಗ್ರಹಿಸುವುದರಲ್ಲಿ ಸರಕಾರವು ಮುಂದುವರಿಯುತ್ತ ಹೋದರೆ ಅದರಿಂದ ಹಾನಿ ಎಂಬುದೇ ಶ್ರೀ ಐಯ್ಯಂಗಾರರ ಅಭಿಪ್ರಾಯ. ಐದು ವರ್ಷಗಳೊಳಗೆ ನಾಲ್ಕು ಸಾವಿರ, ಕಡಿಮೆಯೆಂದರೆ, ಮೂರು ಸಾವಿರ ಕೋಟಿಯಷ್ಟು ಮೊತ್ತವು ಜೀವನ ಮಟ್ಟವನ್ನು ಕೆಳಗಿಳಿಯದೆ ಬಿಡಲು ಖರ್ಚುಮಾಡಲ್ಪಡಬೇಕಾಗುತ್ತದೆ. ಆದುದರಿಂದಲೇ ಸರಕಾರವು ಅಷ್ಟು ಹಣ ಸಂಗ್ರಹಮಾಡಬೇಕಾಗಿದೆ. ಎಂದವರು ವಿವರಿಸಿದರು.

ರಾಷ್ಟ್ರೀಯ ಅರ್ಥ ವ್ಯವಸ್ಥೆ ಮತ್ತು ಮುದ್ರಾ ನೀತಿಯನ್ನು ವಿವರಿಸುತ್ತ ಶ್ರೀ ಐಯ್ಯಂಗಾರರು ಅದು ಕೆಟ್ಟಿದೆ ಎಂದೂ, ಅದಕ್ಕಾಗಿ ನಾವು ಚಿಟ್ಟಮಾಡುವುದು ಸರಿ ಎಂದೂ ಹೇಳಿದರು. ಜನತೆಯೊಡನಿರುವ ಹಣವು ಸೇಕಡ ಮೂವತ್ತರಷ್ಟು ಹೆಚ್ಚಿರುವಾಗ, ೫೩-೫೪ರಿಂದ ಮೂಲ ಧನವು ಸೇಕಡಾ ಐದರಷ್ಟು ಮಾತ್ರ ಏರಿದೆ. ರಿಸರ್ವ ಬೇಂಕ್ ಮತ್ತು ಸರಕಾರಗಳ ಮುಖೇನ ಮುದ್ರಾ ನೀತಿ ಮತ್ತು ಆರ್ಥಿಕ ನೀತಿಗಳ ಒಮ್ಮತದಿಂದ ನಾಣ್ಯಮುದ್ರಣ ಮಾಡುವುದನ್ನು ತಡೆಗಟ್ಟಬಹುದು. ಆದರೂ ಇಂದಿನ ಸ್ಥಿತಿಯು ವಿಮಂಚನೆಗೆ ಯೋಗ್ಯವಲ್ಲ; ನಾವೇನೂ ಅದಕ್ಕಾಗಿ ಚಿಂತಿಸುವುದು ಅಗತ್ಯವಿಲ್ಲ ನಾವು ನಿರಾಶರಾಗಬೇಕಾದ ಪ್ರಮೇಯವಿಲ್ಲ ಎಂದವರು ತಿಳಿಸಿದರು.

ನಿಮ್ಮ ಪರಿಚಿತರಾರೂ "ಕಾರ್ಪೊರೇಶನ್" ಬೇಂಕಿನಲ್ಲಿಲ್ಲದಿದ್ದಲ್ಲಿ, ಬೇಂಕು ವ್ಯವಹಾರ ನಡೆಸಲು ದಾಕ್ಷಿಣ್ಯಪಟ್ಟು ನೀವು ವೃಥಾ ಹಿಂಜರಿಯುವ ಅಗತ್ಯವಿಲ್ಲ. ಕಾರಣ, ನಮ್ಮ ಯಾವುದೇ ಒಂದು ಶಾಖೆಯಲ್ಲಿ ಯಾರೇ ಬರಲಿ, ಅವರು ನಮ್ಮವರೆಂದೇ ಬಗೆದು, ಅವರ ಮನಮೆಚ್ಚುವಂತೆ ಬೇಂಕು ಸೇವೆ ಸಲ್ಲಿಸುವುದೇ ನಮ್ಮ ಆದ್ಯಕರ್ತವ್ಯವೆಂಬುದನ್ನು ನಾವು ಚೆನ್ನಾಗಿ ಬಲ್ಲೆವು.

ಇಂದೇ "ಕಾರ್ಪೊರೇಶನ್" ಬೇಂಕನ್ನು ನಿಮ್ಮ ಬೇಂಕಾಗಿ ಆರಿಸಿಕೊಳ್ಳಿರಿ!

ದಿ ಕೆನರಾ ಬೇಂಕಿಂಗ್ ಕಾರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ** (ದ. ಭಾರತ)

ಸುಮಾರು 52 ವರುಷಗಳ ಅನುಭವವಿರುವ ಬೇಂಕು!!

ನಿಸರ್ಗದ ಮಹಾ ಪ್ರಯೋಗಶಾಲೆ—

ಇರ್ತಲೆಯ ಹಾವುಗಳು

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

೧೯೫೦ನೆ ವರ್ಷದ ಬೇಸಗೆಯ ದಿನಗಳಾಗಿದ್ದುವು. ಲಖನವಿನ ಹಜರತಗಂಜ ಪೋಲೀಸು ಚೌಕಿಯ ಒಬ್ಬನು ಒಂದು ವಿಚಿತ್ರ ಹಾವನ್ನು ಹಿಡಿದು ಬಿಟ್ಟಿದ್ದನು. ಅದಕ್ಕೆ ಎರಡು ಮುಖಗಳಿದ್ದುವು. ಅವು ಒಂದಕ್ಕೊಂದು ಸಮೀಪದಲ್ಲಿಯೇ ಇದ್ದರೂ ಸುಮಾರು ಅರ್ಧ ಇಂಚುಗಳಷ್ಟು ಅಂತರದಲ್ಲಿದ್ದುವು. ತನ್ನ ಎರಡೂ ಬಾಯಿಗಳಿಂದ ಅದು ನಾಲಗೆಯನ್ನು ಹೊರ ಚಾಚುತ್ತಿರುವಾಗ ನೋಡುವವರು ಒಂದೊಂದು ಮುಖವನ್ನೂ ಈಕ್ಷಿಸುತಿದ್ದರು. ಪ್ರಕೃತಿಯ ಮಹಾಪ್ರಯೋಗಶಾಲೆಯಲ್ಲಿ ನಿರ್ಮಿಸಲ್ಪಟ್ಟ ಈ ಕೌತುಕಪೂರ್ಣ ಪ್ರಾಣಿಯು ಮಾನವನ ವಶಕ್ಕೆ ಬಂದ ಮೇಲೆ ಕೇವಲ ಎರಡುಮೂರು ತಾಸುಗಳಷ್ಟು ಹೊತ್ತು ಮಾತ್ರ ಜೀವಿಸಿಕೊಂಡಿತ್ತು. ಆಗ ಈ ಅಲಭ್ಯ ಹಾವು ಲಖನವಿನ ಪ್ರದರ್ಶನಾಲಯದಲ್ಲಿ ಪ್ರದರ್ಶನಕ್ಕಾಗಿ ಇಡಲ್ಪಟ್ಟಿತ್ತು. ಅದರ ಸಾವಿನ ಕಾರಣವೇನೆಂದು ತಿಳಿಯಲಿಲ್ಲ. ಅದನ್ನು ಹಿಡಿದವನು ಹಾವು ತನಗೆ ತಾನೇ ಸತ್ತಿತೆಂದೂ ಎರಡೂ ತಲೆಗಳಿಂದ ಒಂದೇ ಬಾರಿ ಪ್ರಾಣವು ಹಾರಿಹೋಯಿತೆಂದೂ ಹೇಳುತ್ತಾನೆ. ೧೯೫೦ರಲ್ಲಿ ಅವನ್ನು ಲಿಮೇಶ ವೇದಿಯವರು ನಿರೀಕ್ಷಿಸಿದರು. ಅದೊಂದು ಮಗುವಾಗಿತ್ತು. ೬॥ ಇಂಚು ಉದ್ದ ಮತ್ತು ೨ ಇಂಚು ದಪ್ಪ ಮಾತ್ರವಿತ್ತು. ಎರಡು ತಲೆಗಳೂ ಸ್ಪಷ್ಟವಾಗಿ ಬೇರೆ ಬೇರೆಯಾಗಿ ವಿಕಸಿತವಾಗಿದ್ದುವು. ಒಂದು ತಲೆಯುಳ್ಳ ನಾಗರ ಹಾವನ್ನಾದರೂ ಅನೇಕ ಸಂಖ್ಯೆಯಲ್ಲಿ ಹಿಡಿಯುತ್ತಾರೆ; ಅವನ್ನು ಸಾಕುತ್ತಾರೆ. ಇದರ ವೈಜ್ಞಾನಿಕ ಹೆಸರು "ಲೈಕೋಡೋನ್ ಅಲಿಕಸ್" ಎಂದು. ಇಂಗ್ಲಿಷಿನಲ್ಲಿ ಅದಕ್ಕೆ 'ಕಾಮನ್ ವೂಲ್ಫ್‌ಸ್ನೇಕ್' ಎಂದು ಕರೆಯುತ್ತಾರೆ ಹೀಗೆ ಎರಡು ತಲೆ ಹಾಗೂ ಬಾಯಿಗಳು ಇರುವ ವಿಚಿತ್ರ ಹಾವಿಗೆ 'ಭೋಜನ ಲಾಲಸೆಯು' ಏಕ ಕಾಲದಲ್ಲಿಯೇ ಆಗುವುದೆ, ಇಲ್ಲವೇ ಒಂದು ಬಾಯಿಯಲ್ಲೊಮ್ಮೆ ಇನ್ನೊಂದರಲ್ಲಿ ಮತ್ತೊಮ್ಮೆ ಕಾಣಿಸಿಕೊಳ್ಳುವುದೇ ಎನ್ನುವುದು ಕುತೂಹಲದ ಸಂಗತಿಯಾಗಿದೆ. ಈ ಹಾವನ್ನು ಸಿಗಿದಾಗ ಎರಡು ತಲೆಗಳೂ ಒಂದೇ ಸಮಯದಲ್ಲಿ ಸತ್ತು ಹೋಗುತಿದ್ದವೇ ಅಥವಾ ಒಂದು ಭಾಗವು ಅಚೇತನವಾಗಿ ಸತ್ತು ಬಿದ್ದು ಇನ್ನೊಂದು ತನ್ನ ಜೀವಕ್ಕಾಗಿ ಹೊಡೆದಾಡುತಿತ್ತೆ? ಎನ್ನುವುದೂ ಆತುರವನ್ನುಂಟು ಮಾಡುತ್ತದೆ. ಈ ರೀತಿಯ ಒಂದಲ್ಲ, ಹಲವಾರು ಪ್ರಶ್ನೆಗಳು ಸರ್ಪಗಳ ಬಗ್ಗೆ ಅಭ್ಯಾಸ ಮಾಡುವ ವಿದ್ಯಾರ್ಥಿಗಳಲ್ಲಿ ಜಿಜ್ಞಾಸೆಯನ್ನು ಹುಟ್ಟಿಸುತ್ತವೆ. ಈ ವಿಧದ ಹಾವುಗಳ ಬಗೆಗೆ ಆ ಕಾಲದಲ್ಲಿ ಸಾಕಷ್ಟು ಅವಲೋಕನ ನಡೆಯದಿದ್ದುದರಿಂದ, ನಮಗಿವಕ್ಕೆ ಸಮಾಧಾನಕರವೆನಿಸಿದ ಉತ್ತರಗಳು ದೊರೆಯುವುದಿಲ್ಲ. ಒಂದು ವೇಳೆ, ಪ್ರಕೃತಿಯ ಈ ಅತ್ಯದ್ಭುತ ಸೃಷ್ಟಿಯ ನಿರೀಕ್ಷಣವು ಪ್ರಾಚೀನ ಕಾಲದ ಆಚಾರ್ಯರು ಮಾಡಿರಬಹುದಾದರೂ, ಅವುಗಳ ಬಗ್ಗೆ ನಮಗೆ ವಿಶೇಷ ಉಲ್ಲೇಖನೀಯ ಸಾಮಗ್ರಿಗಳು ಉಪಲಬ್ಧವಿರವುದಿಲ್ಲ. ಉದಾಹರಣೆಗಾಗಿ ಅಥರ್ವವೇದದಲ್ಲಿ ಒಂದು ಯುಗ್ಮಸರ್ಪವನ್ನು ನಷ್ಟಪಡಿಸುವ ಪ್ರಾರ್ಥನೆಯು ದೊರೆಯುತ್ತದೆ. ಈ ಸರ್ಪದ ಹೆಸರು 'ಸಾತ್ರಾಸಹ' ಎಂದಿತ್ತು.

ದ್ವಿಶೀರ್ಷ ಸರ್ಪಗಳಲ್ಲಿ ಒಂದೇ ಕುತ್ತಿಗೆಯಲ್ಲಿ ಎರಡು ಶಿರಸ್ಸುಗಳಿರುತ್ತವೆ ಬಾಲದೆಡೆಯಲ್ಲಿ ಎರಡನೆ ತಲೆಯಿರುವ ಮಿಥ್ಯಾಭಿಮಾನವನ್ನು ಸರ್ಪ ಮಾತ್ರವಲ್ಲ, ಸಾಮಾನ್ಯ ಉರಗಜಾತಿಯ ಪ್ರಾಣಿಯೂ ಇಟ್ಟುಕೊಳ್ಳಲಾರದು ಈ ಸರ್ಪವು ಸಾಮಾನ್ಯವಾಗಿ ಎಲ್ಲಿಯೂ ಕಂಡುಬರುವುದಿಲ್ಲ. ಇಂತಹ ಜೀವಿಗಳು ಜನ್ಮವೆತ್ತ ಹೆಚ್ಚು ಸಮಯದವರೆಗೆ ಜೀವಂತವಿರುವುದಿಲ್ಲ. ವೈಜ್ಞಾನಿಕ ಪರಿಭಾಷೆಯಲ್ಲಿ ಇವುಗಳಿಗೆ "ಸೇಫ್ಲೋ ಡಾಯಿಕೋಟೋಮಸ್ ಒ ಫೀಡಿಯನ್ಸ್" ಎಂದು ಹೇಳುತ್ತಾರೆ.

ಎರಡು ತಲೆಯುಳ್ಳ ಸರ್ಪಗಳು ಬಹಳ ಅಪರೂಪವಾಗಿ ಹುಟ್ಟುತ್ತವೆ. ವಾಸ್ತವವಾಗಿ ಇದು ಪ್ರಕೃತಿಯ ಪ್ರಯೋಗ ಶಾಲೆಯ ರಾಕ್ಷಸಿ ಎಂದು ಹೇಳಬಹುದು. ಇಂತಹ ವಿಕೃತಿ ಅಥವಾ ವಿಷಮತೆಗಳು ಮನುಷ್ಯರಲ್ಲಿ ಕೈ ಯಾ ಕಾಲುಗಳಲ್ಲಿ ಹೆಚ್ಚಿಗೆ ಬೆರಳುಗಳು ಹುಟ್ಟಿಕೊಂಡಿರುವಂತೆ ಆಗಾಗ ತೋರಿಬರದೆ ತೀರ ಅಸಾಧಾರಣವಾಗಿ ಕಾಣಿಸುತ್ತವೆ. ಕೆಲವು ಪಕ್ಷಿಗಳಿಗೂ ಎರಡಕ್ಕಿಂತ ಹೆಚ್ಚು ಕಾಲುಗಳಿರುವುದುಂಟು. ಪ್ರಾಣಿಗಳಲ್ಲಿಯೂ ಎರಡು ರುಂಡದ ಮರಿಗಳು ಹುಟ್ಟುವುದು ಇದೆ. ಅಮೇರಿಕದ ಸಂಯುಕ್ತ ರಾಜ್ಯದ ಡ್ಯೂಕ ವಿಶ್ವವಿದ್ಯಾಲಯದ ಪ್ರೊಫೆಸರಾದ ಬರ್ಟ ಕನ್ನಿಂಗಮರು ಈ ಜಾತಿಯ ಅಸಾಧಾರಣವೆನಿಸಿದ ಸರ್ಪಗಳ ಸಂಬಂಧದ ವರದಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದರು. ಅವರು ರುಂಡದಲ್ಲಿನ ವಿಭಾಗಗಳನ್ನು ಸ್ಪಷ್ಟವಾಗಿ ತಿಳಿಯಬಹುದಾದಂತಹ ವಿವರಣೆಯ ವರ್ಣನೆಯನ್ನು ಮಾಡಿದ್ದಾರೆ.

ದ್ವಿಶೀರ್ಷ ಸರ್ಪಗಳನ್ನು ಸಾಮಾನ್ಯವಾಗಿ ಮೂರು ವಿಧವಾಗಿ ವಿಂಗಡಿಸಬಹುದು:

೧. ಕೇವಲ ರುಂಡ ಅಥವಾ ರುಂಡದೊಡನೆ ಕುತ್ತಿಗೆಯ ಕೆಳಭಾಗವೂ ಸ್ವಲ್ಪ ದೂರದವರೆಗೆ ಎರಡಾಗಿ ತೋರಿ ವಿಭಿನ್ನ ಸರ್ಪಗಳಂತಿರುವುವು.

೨. ರುಂಡ ಮತ್ತು ರುಂಡದ ಕೆಳಭಾಗವು ಒಂದೇಯಾಗಿದ್ದರೂ ಅದರ ಬಾಲ ಅಥವಾ ಬಾಲದಿಂದ ಸ್ವಲ್ಪ ಎತ್ತರದವರೆಗೆ ಶರೀರವು ವಿಭಕ್ತವಾಗಿರುವಂತಹವು. ಮತ್ತು

೩. ಎರಡು ರುಂಡಗಳೂ ಬೇರೆ ಬೇರೆಯಾಗಿದ್ದು, ಮಧ್ಯ ಶರೀರವು ಸ್ವಲ್ಪ ದೂರದ ವರೆಗೆ ಒಂದಾಗಿರುವಂತಹವು. ಈ ಜಾತಿಯ ನಾಲ್ಕು ಸರ್ಪಗಳ ಸಂಬಂಧ ವರದಿಗಳು ದೊರೆಯುತ್ತವೆ.

ಕೆಲವು ಓದುಗರಿಗೆ ಒಂದು ಸರ್ಪಕ್ಕೆ ಹೆಚ್ಚೆಂದರೆ ಎಷ್ಟು ಶಿರಸ್ಸುಗಳಿರಬಹುದೆಂಬ ಜಿಜ್ಞಾಸೆಯು ಹುಟ್ಟಬಹುದು ಗ್ರೀಕ ಪುರಾಣದಲ್ಲಿ ಬರುವ ವೀರ ಹೆರಾಕ್ಲೀಸನು ಕೊಂದ ಜಲಸರ್ಪಕ್ಕೆ ಒಂಭತ್ತು ತಲೆಗಳಿದ್ದುವೆಂಬ ಉಲ್ಲೇಖವನ್ನು ಅವರು ತಿಳಿದಿರಬಹುದು. ಅದೇ ರೀತಿಯಲ್ಲಿ ಭಾರತೀಯ ಪುರಾಣಗಳಲ್ಲಿ ವರ್ಣಿತವಾಗಿರುವ ಮಹಾಶೇಷನಿಗೆ ಒಂದು ಸಾವಿರ ತಲೆಗಳಿರುವುವು.

ಪ್ರಕೃತಿಯ ಅಧ್ಯಯನವನ್ನು ಮಾಡುತ್ತಿರುವ ವೈಜ್ಞಾನಿಕರಿಗೆ ಮೂರು ತಲೆಗಳುಳ್ಳ ಸರ್ಪಗಳಿರುವುವೆಂದು ತಿಳಿಯಲು ಯಾವ ಯುಕ್ತಿಯುಕ್ತ ಆಧಾರವೂ ಇರುವುದಿಲ್ಲ. ಆಧುನಿಕ ಪ್ರಾಣಿಶಾಸ್ತ್ರವು ಎರಡಕ್ಕಿಂತ ಅಧಿಕ ಶಿರಸ್ಸುಗಳುಳ್ಳ ಸರ್ಪಗಳು ಇರುವುದಿಲ್ಲ ಎಂಬುದು ನಿಶ್ಚಿತವಾಗಿ ತಿಳಿದಿದೆ. ತ್ರಿಶೀರ್ಷ ಸರ್ಪಗಳ ಕುರಿತಾಗಿ ಕೆಲವೊಂದು ಅತ್ಯಂತ ಪ್ರಾಚೀನವಾದ ಉಲ್ಲೇಖಗಳಿರುತ್ತವೆ ಕ್ಯೂಬೇ ಎಂಬವನು ೧೫೩೯ರಲ್ಲಿ ತನ್ನ 'ಹಾರ್ಟಸ್ ಸ್ಯಾನಿಟ್ಯಾಟಸ್'ನಲ್ಲಿ ಇಂತಹ ಒಂದು ಉದಾಹರಣೆಯನ್ನು ಚಿತ್ರಿಸಿದ್ದಾನೆ. ಶೀಂಕಿಯಸ್ ಎಂಬವನು ೧೬೯೦ರಲ್ಲಿ ಪ್ಯಾರಿಸೀಜ ಸರ್ಪತಗಳಲ್ಲಿನ ಒಂದು ಉದಾಹರಣೆಯನ್ನು ಉಲ್ಲೇಖಿಸಿದ್ದಾನೆ. ಸರ್ಪಗಳಲ್ಲಿ ತ್ರಿತ್ವದ ಅಸ್ತಿತ್ವದ ಸಂಭವವನ್ನು ಅಸ್ವೀಕಾರ ಮಾಡುವ ಹಾಗಿಲ್ಲ. ವಾಸ್ತವಿಕ ಹೇಳುವುದಾದರೆ, ಇವೇ ಲಭಿಸುವ ಉದಾಹರಣೆಗಳು ತೀರ ಅತ್ಯಲ್ಪ.

ಎರಡು ಶಿರಗಳುಳ್ಳ ಸರ್ಪಗಳಲ್ಲಿ ಎರಡೂ ತಲೆಗಳು ತಂತಮ್ಮ ಅಪೇಕ್ಷಾನುಸಾರವಾಗಿ ಕಾರ್ಯ ಮಾಡುತ್ತವೆ. ಪ್ರತ್ಯೇಕ ಶಿರಸ್ಸಿನಲ್ಲಿಯೂ ಒಂದೊಂದು ಮೆದುಳಿರುತ್ತದೆ. ಮತ್ತು ಈ ಎರಡೂ ಮೆದುಳುಗಳು ಒಂದೇ ಸುಮ್ನ ನಾಡಿಯಿಂದ ಒಂದಾಗಿ ಸೇರುತ್ತವೆ. ಹಾಗಿದ್ದರೂ ಅವು ಶರೀರಕ್ಕೆ ಏಕರೀತಿಯಲ್ಲಿ ಹೊಂದಿಕೊಂಡಿರುವುದಿಲ್ಲ. ಒಂದು ದಿಕ್ಕಿಗೆ ಹೋಗುವುದಕ್ಕೆ ಎರಡು ತಲೆಗಳೂ ಒಂದೇ ರೀತಿಯಲ್ಲಿ ಆಸ್ಪದವೀಯುವುದಿಲ್ಲ ಆಗ ಶರೀರದ ಸಂಬಂಧವುಳ್ಳ ಎರಡು ಇನ್ನೊಂದರ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತದೆ.

ಶ್ರೀಯುತ ಇ. ಸಿ. ಫಿಷರ್ (೧೯೫೬) ರೊಡನೆ ಎರಡು ತಲೆಗಳುಳ್ಳ ಒಂದು ಸ್ಪ್ರಿಂಗಲ ಐಡರ್ ಇತ್ತು. ಅದರ ಉದ್ದ ಒಂದಡಿ ಮತ್ತು ಪ್ರಾಯವು ನಾಲ್ಕು ತಿಂಗಳುಗಳಿಗಿಂತ ಅಧಿಕವಾಗಿತ್ತು. ೧೯೫೭ರಲ್ಲಿ ಮದ್ರಾಸ್ ಟಾಯಿಮ್ಸ್ ಪತ್ರಿಕೆಯಲ್ಲಿ ಈ ಬಗ್ಗೆ ಒಂದು ಟಿಪ್ಪಣಿ ಪ್ರಕಟವಾಗಿತ್ತು".

"ಸರ್ಪವು ಗಾಜಿನ ಪೆಟ್ಟಿಗೆಯಲ್ಲಿ ವಾಸಿಸುತ್ತದೆ. ಹಾಲು, ಹಸಿ ಮಾಂಸ ಮತ್ತು ರಕ್ತವನ್ನು ಎರಡೂ ಬಾಯಿಗಳಿಂದ ಏಕ ಕಾಲದಲ್ಲಿ ತಿನ್ನುತ್ತದೆ" ಎಂದು

ಶ್ರೀ ಫಿಷರನು ಆ ಎರಡು ಮುಖಗಳು ಪರಸ್ಪರ ಈರ್ಷ್ಯಾಲುಗಳಾಗಿರುವುದರಿಂದ ಎರಡು ಬಾಯಿಗಳಿಂದಲೂ ಏಕ ಕಾಲದಲ್ಲಿಯೇ ಉಣಿಸುತಿದ್ದನು. ಆಗಾಗ, ಅವುಗಳು ತಮ್ಮೊಳಗೆ ಆಟವಾಡುತಿದ್ದುವು. ಈ ಹಾವು ಶ್ರೀ ಫಿಷರರು ಸಮೀಪ ಬರವಾಗ ಆ ಪೆಟ್ಟಿಗೆಯ ಮೇಲ್ಭಾಗಕ್ಕೆ ಬಂದು ಎರಡು ಬಾಯಿಗಳಿಂದಲೂ ತನ್ನ ನಾಲಗೆಯನ್ನು ಹೊರ ಚಾಚುತಿದ್ದುವು. ಇದರಿಂದ, ಅವು ಆತನನ್ನು ಗುರುತಿಸುತಿದುವೆನ್ನಬಹುದು.

ಪೋರ್ಟ ಎಲಿಜಬೆಥ್‌ನ ಸರ್ಪಶಾಲೆಯಲ್ಲಿ ಒಂದು ಸರ್ಪ ಪ್ರದರ್ಶಿಸಲ್ಪಟ್ಟಿತ್ತು. ಅದರ ಎರಡೂ ಕುತ್ತಿಗೆಗಳು ಮೂರು ಅಂಗುಲದಷ್ಟು ಉದ್ದವಿದ್ದುವು. ಆದುದರಿಂದ ಅವು ಸ್ವತಂತ್ರವಾಗಿ ಚಲಿಸುತಿದ್ದುವು. ಒಂದು ದಿನ ಆ ಗೂಡಿನೊಳಗೆ ಒಂದು ಕಪ್ಪೆಯನ್ನು ತಿನ್ನುವುದಕ್ಕಾಗಿ ಹಾಕಲಾಯಿತು. ಮುಂದಿನ ದಿನ ಮ... ೩ನೆ ಸರ್ಪದ ಯಜಮಾನನು ಶರೀರವು ಇಬ್ಭಾಗವಾಗಿ ಹೋಗುವಂತೆ ಒಂದು ಮುಖವು ಇನ್ನೊಂದು ಮುಖವನ್ನು ನುಂಗುತ್ತಿರುವುದನ್ನು ಕಂಡನು. ಆ ಕೂಡಲೆ ತಲೆಯನ್ನು ಹೊರಗೆ ತರಲಾಯಿತು ತನು ಆಗ ಸತ್ತಿರಲಿಲ್ಲ. ಕೋಮಲ ಮರ್ದನದಿಂದ ಕುತ್ತಿಗೆಯ ಬಲವನ್ನು

(೫ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಕಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಫಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೩-೪-'೫೮	೩೦

ಬಿಡಿಸಲಾರದ ಒಗಟೆ?

ವಿಷಮತೆಗೇರುತ್ತಿರುವ ಮೈಸೂರಿನ ರಾಜಕಾರಣವು ತೀರ ಕೆಟ್ಟು ಹೋಗುತ್ತಿರುವುದು ದೃಷ್ಟಿಗೋಚರವಾಗುತ್ತಿದೆ. ಇಂತಹ ವೈಮನಸ್ಸು ಹುಟ್ಟಲು ಮೂಲ ಕಾರಣವೇನೆಂದು ಇನ್ನೂ ನಿರ್ದುಷ್ಟವಾಗಿ ಹೇಳಬರುವುದಿಲ್ಲ. ಮೈಸೂರಿನ ರಾಜಕೀಯರಂಗವು ಹಿಂದಿನಿಂದಲೂ ಒಂದು ರೀತಿಯಿಂದಲೇ ನಡೆದುಕೊಂಡು ಬಂದಿದ್ದು ಅ ರೀತಿಯೇ ಇನ್ನೂ ಮುಂದುವರಿಯುತ್ತಾ ಹೋಗುತ್ತಿರುವುದು ಶೋಚನೀಯವೆನ್ನಬೇಕು. ರಾಜ್ಯ ಪುನರ್ಘಟನೆಯ ನಂತರವಾದರೂ ಒಂದೇ ಭಾಷೆಯನ್ನಾಡುವ ಜನರು ಸಾಮಾನ್ಯವಾಗಿ ಒಂದೇ ಸರಕಾರದಡಿಯಲ್ಲಿ ಬಂದ ಮೇಲೆಯಾದರೂ ನಮ್ಮಲ್ಲಿರುವ ವಿಭಿನ್ನ ದೃಷ್ಟಿಕೋಣಗಳು ದೂರವಾಗಿ ಶಾಂತಿ ಮತ್ತು ಸಂವೃದ್ಧಿಯನ್ನು ಹೊಂದಿಯೇವು ಎಂದು ದೃಢವಾಗಿ ನಂಬಿಕೊಂಡಿದ್ದ ಕನ್ನಡಿಗರಿಗೆ ಈ ರಾಜಕಾರಣವೊಂದು ಬಿಡಿಸಲಾಗದ ಒಗಟಾಗಿಯೇ ಪರಿಣಮಿಸಿರುವುದೆಂದರೆ, ಅತಿಶಯೋಕ್ತಿಯೆನ್ನಬಾರದು. ಶ್ರೀ ನಿಜಲಿಂಗಪ್ಪನವರ ಧುರೀಣತ್ವದಲ್ಲಿ ತಮಗೆ ವಿಶ್ವಾಸವಿಲ್ಲವೆಂದು ಬಹುಸಂಖ್ಯ ಶಾಸಕರು ಅಭಿಪ್ರಾಯಪಟ್ಟು ಅದನ್ನು ಪಕ್ಷದ ಸಭೆಯಲ್ಲಿ ಅವರಿಗೆ ತಿಳಿಸಿ, ಅವರಿಂದ ಉತ್ತರವನ್ನು ಬಯಸಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಕಾಂಗ್ರೆಸ್ಸಿನ ವಿರೋಧೀ ಗುಂಪಿನ ನಾಯಕರು ಸಹಿ ಸಂಗ್ರಹದ ಕಾರ್ಯವನ್ನು ಕೈಗೊಂಡಿದ್ದು, ಕಾಂಗ್ರೆಸ್ ಅಧ್ಯಕ್ಷ ಶ್ರೀ ದೇಭಾರರ ನಿರ್ದೇಶದಂತೆ ಅದು ತಡೆಹಿಡಿಯಲ್ಪಟ್ಟಿತು. ಕಾಂಗ್ರೆಸ್ ವರಿಷ್ಠರಿಗೆ ಈ ಸಂಬಂಧದ ವರದಿಯೆಲ್ಲವೂ ಹೋಗಿದ್ದು, ಅವರು ಸದ್ಯದ ಪರಿಸ್ಥಿತಿಯಲ್ಲಿ ನಾಯಕತನವನ್ನು ಬದಲಾಯಿಸುವುದು ಸೂಕ್ತವಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದು ವರದಿಯಾಗಿದೆ.

ಶ್ರೀ ನಿಜಲಿಂಗಪ್ಪನವರಿಗೆ ಗೃಹ ಮಂತ್ರಿ ಶ್ರೀ ಪಂತರವರು ಪತ್ರವೊಂದನ್ನು ಬರೆದು, ಅದರಲ್ಲಿ ತಮ್ಮ ಪಕ್ಷದ ಸದಸ್ಯರ ನ್ಯಾಯವಾದ ಕುಂದುಕೊರತೆಗಳಿಗೆ ಲಕ್ಷ್ಯ ಪೂರೈಸಬೇಕೆಂದು ವಿನಂತಿಸಿದ್ದಾರೆ. ಮೈಸೂರು ಪ್ರಾದೇಶಿಕ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಚೆನ್ನಯ್ಯನವರಿಗೆ ಶ್ರೀ ದೇಭಾರರು; ಕಾಂಗ್ರೆಸ್ಸಿನೊಳಗಣ ವೈಮನಸ್ಸು ಮತ್ತು ಪದೇ ಪದೇ ಮಂತ್ರಿ ಮಂಡಳವನ್ನು ಉರುಳಿಸಿದುದರಿಂದಲೇ ಕೇರಳವು ಕಾಂಗ್ರೆಸ್ಸನ್ನು ದೂರ ಮಾಡಿತಾದುದರಿಂದ ಕಾಂಗ್ರೆಸ್ ಸಂಸ್ಥೆಯ ಹಿತದೃಷ್ಟಿಯಿಂದ ಸದ್ಯದ ಪರಿಸ್ಥಿತಿಯನ್ನು ಗಮನಿಸುವಂತೆ ಕೇಳಿಕೊಂಡಿದ್ದಾರೆ. ಸರಕಾರದ ವಿರುದ್ಧ ಸಹಿ ಸಂಗ್ರಹವಾಡುವ ಕಾರ್ಯಕ್ಕೆ ಅವಕಾಶವೀಯದಂತೆ ಕಾಂಗ್ರೆಸ್ ಪಕ್ಷದ ಘಟನೆಯಲ್ಲಿ ಕಠೋರ ನಿಯಮಗಳನ್ನು ತಯಾರಿಸಬೇಕೆಂದು ಪಂಡಿತ ನೆಹರೂರವರು ಶ್ರೀ ನಿಜಲಿಂಗಪ್ಪನವರಿಗೆ ಸೂಚಿಸಿದ್ದಾರೆ. ಆದರೆ, ಇಷ್ಟೆಲ್ಲಾ ನಡೆದರೂ ಮೈಸೂರಿನಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ. ಕಾಂಗ್ರೆಸ್ ವರಿಷ್ಠರ ಉಪರೋಕ್ತ ಮಾತುಗಳಿಂದ ಅವರು ಪ್ರಕೃತ ಮಂತ್ರಿಮಂಡಳದ ಬದಲಾವಣೆಗೆ ತಮ್ಮ ಅಸಮ್ಮತಿಯನ್ನೇ ನೀಡಿರುವರೆಂದು ತಿಳಿಯಬಹುದು. ಆದರೆ, ಅತೃಪ್ತ ಕಾಂಗ್ರೆಸ್ ಶಾಸಕರು ಮಾತ್ರ ಅದಕ್ಕೆ ಸೊಪ್ಪು ಹಾಕಿದಂತೆ ಕಾಣುವುದಿಲ್ಲ.

ಒಂದು ಕಡೆ ಈ ರೀತಿಯಾಗಿ ಸರಕಾರವನ್ನು ಉಳಿಸುವ ಯೋಜನೆ ನಡೆಯುತ್ತಿರುವಾಗ ಮಾಜಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಸದ್ಯದ ಮಂತ್ರಿಮಂಡಳವು ಪದಚ್ಯುತವಾಗದೆ ಕಾಂಗ್ರೆಸ್‌ನಲ್ಲಿ ಐಕ್ಯ ಸಾಧಿಸುವುದು ಸಾಧ್ಯವಿಲ್ಲ ಎಂದು ಕಂಠೋಕ್ತವಾಗಿ ಸಾರಿರುವರು. ಶ್ರೀ ನಿಜಲಿಂಗಪ್ಪ ಮಂತ್ರಿಮಂಡಳಿಯ ಬಗ್ಗೆ ತಮ್ಮ ಪ್ರತ್ಯಕ್ಷ ಅಸಮ್ಮತಿಯನ್ನು ಸೂಚಿಸಿದ ಮಾಜಿ ಮಂತ್ರಿಗಳು ಹಿಂದೆ ತನ್ನ ಮಂತ್ರಿಮಂಡಳಿಗೊದಗಿದ ಪರಿಸ್ಥಿತಿಯ ಉದಾಹರಣೆಯನ್ನು ಉಲ್ಲೇಖಿಸಿ ಪ್ರಜಾಸತ್ತಾತ್ಮಕ ವಿಧಾನದಿಂದಾಗಿ ಜನಮತಕ್ಕೆ ಮನ್ನಣೆಯೀಯಬೇಕಾ ಬಂದ ತನ್ನ ನಡತೆಯಂತೆ, ಬಹುಸಂಖ್ಯ ಸದಸ್ಯರ ವಿಶ್ವಾಸಕ್ಕೆ ಎರವಾದ ಶ್ರೀ ನಿಜಲಿಂಗಪ್ಪ ಮಂತ್ರಿಮಂಡಳವು ರಾಜಿನಾಮೆ ಕೊಡಲೇ ಬೇಕೆಂಬುದಾಗಿ ಅಭಿಪ್ರಾಯಪಟ್ಟರು. ಹೀಗೆ ವರಿಷ್ಠರು ಬದಲಾವಣೆಗೆ ಅಸಮ್ಮತಿಯನ್ನೂ ಮುಖ್ಯ ಮಂತ್ರಿಗಳು ಮೌನ ವೇಷವನ್ನೂ ವಿರೋಧಿಗಳು ಒತ್ತಾಯವನ್ನೂ ಪ್ರದರ್ಶಿಸುತ್ತಿರುವುದು ಸಾಮಾನ್ಯವಾಗಿ ತೋರಿಬರುತ್ತಿದೆ.

ಸದ್ಯದ ಮಂತ್ರಿಮಂಡಳಿಯ ಆಡಳಿತೆಯು ಸಾಕಷ್ಟು ದಕ್ಷವಾಗಿಲ್ಲವೆಂಬ ದೂರು ಎಲ್ಲೆಡೆಯಿಂದಲೂ ಕೇಳಬರುತ್ತದೆ. ಮೈಸೂರಿಗೆ ಸರಕಾರವೊಂದಿದೆ ಎಂಬುದರ ಸ್ಮರಣೆಯೂ ಆಗುವದಿಲ್ಲ ಎಂಬ ಅಭಿಪ್ರಾಯಗಳೂ ಅಲ್ಲಲ್ಲಿ ಹೊರಬರುತ್ತಿವೆ. ಇವು ಸ್ವಲ್ಪ ಮಟ್ಟಿಗೆ ಸರಿ ಎಂದು ಹೇಳಬಹುದಾದರೂ ಇದಕ್ಕೆ ಹಲವಾರು ಕಾರಣಗಳಿವೆ. ವಿವಿಧ ಪ್ರದೇಶಗಳ ಕಾಯದೆ, ಕಾನೂನು ಕಟ್ಟಲೆಗಳು ಬೇರೆಬೇರೆಯಾಗಿದ್ದು ಇದರಿಂದ ಸರಕಾರದ ಕಾರ್ಯಕಲಾಪಗಳಿಗೆ ಅಪಾರ ವಿಳಂಬವಾಗುತ್ತಿದೆ ಎನ್ನುವುದನ್ನು ಒಪ್ಪಬಹುದಾದರೂ ಇದೀಗ ಒಂದೂವರೆ ವರ್ಷ ಕಾಲದಲ್ಲಿ ಸಾಮಾನ್ಯ ಜನತೆಗೆ ಯಾವ ಅಭಿವೃದ್ಧಿಯೂ ದೃಷ್ಟಿಗೋಚರವಾಗುವುದು ಕಂಡು ಬಂದಿಲ್ಲ. ಪದೇ ಪದೇ ಮಂತ್ರಿಗಳ ಸಂಚಾರ ಕಾರ್ಯಕ್ರಮಗಳಿಲ್ಲವಾದರೆ, ಮೈಸೂರಿನಲ್ಲಿ ಮಂತ್ರಿಗಳೇ ಇಲ್ಲ ಎಂದು ಹೇಳಬೇಕಾಗಿ ಬರುತಿತ್ತು ಎನ್ನುವವರಿಗೂ ಕಡಿಮೆಯಿಲ್ಲ. ಇಂತಹ ಆಲಸ್ಯವನ್ನು ಮುಂದಕ್ಕೂ ಯಾವ ಸರಕಾರವೇ ಆಗಲಿ ಮಾಡುತ್ತ ಹೋದರೆ, ಅದರಿಂದ ಶ್ರೇಯಸ್ಕರವಿಲ್ಲವೆನ್ನುವುದು ಖಂಡಿತ. ಮಾನ್ಯ ನಿಜಲಿಂಗಪ್ಪನವರು ಉತ್ತಮ ರೀತಿಯ ನಾಯಕರು. ಅವರು ದೃಢ ಮನಸ್ಸು ಮಾಡಿದರೆ, ಸರಕಾರದ ಕಾರ್ಯಕಲಾಪಗಳನ್ನು ಕುಂದಿಲ್ಲದೆ ಸಾಗಿಸಲು ಶಕ್ತರೆಂದೇ ನಮ್ಮ ಎಣಿಕೆ. ಆದರೆ, ಅವರನ್ನು ಕಾಡುವ ದುರ್ಬಲತೆಯೊಂದು ಈ ದಿಸೆಯಲ್ಲಿ ಅಡ್ಡ ಬರುತ್ತಿದೆ, ಎಂತಲೇ ಆಡಳಿತ ಯಂತ್ರವು ಶಿಥಿಲವಾಗುತ್ತಿದೆ. ಆಗ ಸ್ವಾಭಾವಿಕವಾಗಿ ಅವಿಶ್ವಾಸವುಂಟಾಗುತ್ತದೆ.

ಪ್ರಕೃತ ಹದಗೆಟ್ಟಿರುವ ಪರಿಸ್ಥಿತಿಯನ್ನು ಸ್ಥಿಮಿತಕ್ಕೆ ತರಲು, ಮಂತ್ರಿಮಂಡಳಿಯ ರಾಜಿನಾಮೆ ಒಂದು ಅಥವಾ ಪಕ್ಷದ ಸದಸ್ಯರಿಂದ ವಿಶ್ವಾಸಯಾಚನೆ ಇನ್ನೊಂದು ಹೀಗೆ ಎರಡು ಮಾರ್ಗಗಳಿವೆ. ಕೇವಲ ಸಂಧಾನದ ಮಾತಾಡುತ್ತ ಕುಳಿತರೆ, ಅದರಿಂದ ಸಫಲತೆಯು ಕೆಲಸಮಯದ ವರೆಗೆ ದೊರೆಯಬಹುದಾದರೂ ಅದನ್ನು ಶಾಶ್ವತವೆನ್ನಬರುವುದಿಲ್ಲ. ಮುಂದೆ ಪುನಃ ಬಿರುಕುಗಳೆದ್ದು ಆಡಳಿತೆಯು ಮತ್ತಷ್ಟು ಕ್ಷಮತೆಯನ್ನು ಕಳೆದುಕೊಳ್ಳುವುದು. ಪ್ರಜಾಪ್ರಭುತ್ವದಲ್ಲಿ ಕೆಲವೊಮ್ಮೆ ಆಗಬಾರದ ಘಟನೆಗಳು ನಡೆಯಬಹುದಾದರೂ ಜನಮತದೆದುರು ತಲೆತಗ್ಗಿಸುವುದು ಆಗತ್ಯ. ಕಾಂಗ್ರೆಸ್ ನಾಯಕರು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಿ ಜನಮನ್ನಣೆಯನ್ನು ಗಳಿಸಿ, ರಾಜ್ಯವನ್ನು ಸುಸೂತ್ರವಾಗಿ ಮುನ್ನಡೆಸಲಿ.

ಸಂಕ್ಷಿಪ್ತ ಸುದ್ದಿಗಳು

ಪುಸ್ತಕ ದಾನಮಾಡಿರಿ

ಮೈಸೂರು ರಾಜ್ಯದಲ್ಲಿರುವ ಹೈಸ್ಕೂಲ್ ಮತ್ತು ಮಿಡ್ಲ್‌ಸ್ಕೂಲ್‌ಗಳ ಗ್ರಂಥಾಲಯಗಳಿಗೆ ಹಂಚುವುದಕ್ಕಾಗಿ ಮೈಸೂರು ಎಕನಾಮಿಕ್ ರಿವ್ಯೂ ಪತ್ರಿಕೆಯ ಸಂಪಾದಕರಾದ ಶ್ರೀ ಎಚ್. ವಿ. ಆರ್. ಅತ್ರೇಯರವರು ಕಾಣಿಕೆಯಾಗಿ ಕೊಟ್ಟ "ವೆಜಿಟೆಬಲ್ ಅಂಡ್ ರೈಸ್ ಕಲ್ಟಿವೇಶನ್" ಎಂಬ ಪುಸ್ತಕದ ೫೦೦ ಪ್ರತಿಗಳನ್ನು ಮೈಸೂರು ಸರಕಾರದವರು ಸ್ವೀಕರಿಸಿದ್ದಾರೆ. ಶ್ರೀ ಅತ್ರೇಯರ ಈ ಕಾಣಿಕೆಗಾಗಿ ಸರಕಾರದವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ, ವಿದ್ಯಾದಾನದ ಅಂಗವೆಂದು ಪ್ರಾಥಮಿಕ, ಮಾಧ್ಯಮಿಕ ಮತ್ತು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಪುಸ್ತಕಗಳನ್ನು ಉದಾರ ಹಸ್ತದಿಂದ ಕಾಣಿಕೆ ಕೊಡಬೇಕೆಂದೂ ಮತ್ತು ತನ್ಮೂಲಕ ಈ ಶಿಕ್ಷಣ ಸಂಸ್ಥೆಗಳ ಗ್ರಂಥಾಲಯಗಳಲ್ಲಿರುವ ಗ್ರಂಥ ಸಂಪತ್ತನ್ನು ಹೆಚ್ಚಿಸಬೇಕೆಂದೂ ಪ್ರಕಾಶಕರು ಮತ್ತು ಲೇಖಕರನ್ನು ಬಿನ್ನವಿಸಿಕೊಂಡಿದ್ದಾರೆ.

ಕೃಷಿ ಕಾಲೇಜಿಗೆ ಪ್ರವೇಶ

ಮೈಸೂರು ಸರಕಾರವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಜೋಡಿಸಲ್ಪಟ್ಟ ಕಾಲೇಜುಗಳಲ್ಲಿ ಪ್ರಿ-ಯುನಿವರ್ಸಿಟಿ ಮತ್ತು ಪ್ರಿ-ಪ್ರೊಫೆಷನಲ್ ಅಭ್ಯಾಸಕ್ರಮವನ್ನು ಆರಂಭಿಸಿದೆ. ಇದರಿಂದ ಹೈದರಾಬಾದು ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಬೆಂಗಳೂರಿನಲ್ಲಿನ ವ್ಯವಸಾಯ ಕಾಲೇಜಿನಲ್ಲಿ ಪ್ರವೇಶ ಪಡೆಯುವುದು ಸಾಧ್ಯವಿದೆ. ಇದಲ್ಲದೆ ಹೈದರಾಬಾದ ಕರ್ನಾಟಕ ಪ್ರದೇಶದ ವಿದ್ಯಾರ್ಥಿಗಳಿಗೆ ಧಾರವಾಡದಲ್ಲಿರುವ ವ್ಯವಸಾಯ ಕಾಲೇಜಿನಲ್ಲಿಯೂ ಪ್ರವೇಶವನ್ನು ಪಡೆಯಲು ಸಾಕಷ್ಟು ಸ್ಥಳವಿದೆ.

ವಿಧಾನ ಪರಿಷತ್ತಿಗೆ ಆಯ್ಕೆ

ಮೈಸೂರು ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ರಾಜ್ಯದ ವಿಧಾನ ಸಭಾ ಮತದಾರ ಸಂಘದಿಂದ ನಡೆದ ಚುನಾವಣೆಗಳಲ್ಲಿ ಕಾಂಗ್ರೆಸಿನ ಎಲ್ಲ ಮತ್ತು ಪ್ರಜಾ ಸಮಾಜವಾದಿ ಪಕ್ಷದ ಒಬ್ಬ ಹುರಿಯಾಳುಗಳು ಆರಿಸಿ ಬಂದಿದ್ದಾರೆ. ಇವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕೆ. ಕೆ. ಶೆಟ್ಟರೂ ಒಬ್ಬರು. ಇವರು ಪ್ರಕೃತ ರಾಜ್ಯ ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿದ್ದಾರೆ.

ನೌಕಾ ಪಂಕ್ತಿಯ ಹಸ್ತಾಂತರ

ರೇ. ಅ್ಯ. ಚಕ್ರವರ್ತಿಯವರು ಇದೇ ಎಪ್ರಿಲ್ ಮೊದಲನೇ ವಾರದಲ್ಲಿ ಭಾರತದ ನೌಕಾ ಸೇನೆಯ ನೌಕಾ ಪಂಕ್ತಿಯ ಅಧಿಪತ್ಯವನ್ನು ವಹಿಸಿಕೊಳ್ಳಲಿರುವರು. ನವದೆಹಲಿಯಲ್ಲಿ ನೌಕಾ ಸೇನೆಯ ಪ್ರಧಾನ ಕಾರ್ಯಾಲಯದಲ್ಲಿ ನೌಕಾ ಸೇನೆಯ ಮಹಾದಂಡ ನಾಯಕರ ಅಧಿಕಾರವನ್ನು ವಹಿಸಿಕೊಳ್ಳಲಿರುವ ರೇರ್ ಅಡ್ಮಿರಲ್ ರಾಮದಾಸ ಕಟಾರಿಯವರ ಸ್ಥಾನಕ್ಕೆ ಶ್ರೀ ಚಕ್ರವರ್ತಿಯವರು ಬರಲಿರುವರು. ನೌಕಾ ಪಙ್ಕ್ತಿಯ ಈ ಅಧಿಪತ್ಯ ಬದಲಾವಣೆಯು ನೌಕಾ ಪಂಕ್ತಿಯ ಅಭಿವೃದ್ಧಿಯ ಇತಿಹಾಸದಲ್ಲಿ ಒಂದು ದೊಡ್ಡ ಮೈಲಿಗಲ್ಲಾಗುವುದು.

ಸಾಮ್ಯವಾದ ಭಾರತಕ್ಕಲ್ಲ

ಮೈಸೂರಿನ ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ತ್ರಿಚೂರ ಜಿಲ್ಲೆಯ ಕಾಂಗ್ರೆಸ್ ಸಮಿತಿಯವರು ಸಂಘಟಿಸಿದ ರಾಜಕೀಯ ಪರಿಷತ್ತಿನಲ್ಲಿ ಭಾಷಣಮಾಡುತ್ತ, ಭಾರತೀಯರಿಗೆ ನೈತಿಕ ತಳಹದಿಯ ಮೇಲೆ ನಿರ್ಮಿಸಲ್ಪಟ್ಟ ತಮ್ಮ ದೇಶದ ರಾಜಕೀಯ, ತತ್ವಜ್ಞಾನ, ಮತ್ತು ಸಂಸ್ಕೃತಿ ಹಾಗೂ ಸಂಪ್ರದಾಯಗಳ ಬಗ್ಗೆ ಶ್ರದ್ಧೆಯಿರುವುದಾದರೆ, ಅವರೆಂದೂ ತಮ್ಮ ದೇಶದಲ್ಲಿ ಸಾಮ್ಯವಾದವು ಬೆಳೆಯುವುದಕ್ಕೆ ಅವಕಾಶ ಕೊಡಬಾರದು. ಭಾರತೀಯರಾದ ನಾವು ನಮ್ಮಲ್ಲಿರುವ ಸದ್ಭಾವನೆಗಳನ್ನು ಅರ್ಥಮಾಡಿಕೊಂಡು ಅದನ್ನು ಮೆಚ್ಚಬೇಕಲ್ಲದೇ ಬೇರೆಯವರ ದಾಸರಾಗಿರಬಾರದು ಎಂದು ಭಾರತೀಯರಿಗೆ ಕರೆಯಿತ್ತರು.

ಶತಸ್ಯ ಪ್ರತಿಶಾತ್ಯಂ

ಪೂರ್ವ ಪಾಕಿಸ್ತಾನದಲ್ಲಿದ್ದ ಅವಾಮಿ ಮತ್ತು ಲೀಗ ಪಕ್ಷಗಳ ಸಂಯುಕ್ತ ಸರಕಾರವನ್ನು ಗವರ್ನರ ಶ್ರೀ ಫಜಲುಲ್ ಹಕ್ಕರು ಪದಚ್ಯುತಗೊಳಿಸಿದ್ದರು. ಈ ವಾರ್ತೆಯು ಕರಾಚಿಯಲ್ಲಿ ರಾಷ್ಟ್ರಾಧ್ಯಕ್ಷರ ಕಿವಿಗೆ ಬಿದ್ದೊಡನೆಯೇ ಅಧ್ಯಕ್ಷ ಶ್ರೀ ಇಸ್ಕಂದರ ಮಿರ್ಜಾರವರು ಶ್ರೀ ಹಕ್ಕರನ್ನು ಪದಚ್ಯುತಗೊಳಿಸುವ ಆಜ್ಞೆಯನ್ನು ವಿಧಿಸಿ ಪೂರ್ವ ಪಾಕಿಸ್ತಾನದ ಮುಖ್ಯ ಕಾರ್ಯದರ್ಶಿ ಶ್ರೀ ಹಮೀದ ಅಲಿಯವರಿಗೆ ಅಧಿಕಾರ ಸ್ವೀಕರಿಸಲು ಅನುಮತಿಯಿತ್ತಿದ್ದಾರೆ. ಈ ಪದಚ್ಯುತಿಯ ಕಾರಣವೇನೆಂದು ಸ್ಪಷ್ಟವಾಗಿ ತಿಳಿಯಬರುವದಿಲ್ಲ. ಮುಂದೆ, ಈಗ ಸ್ವಿಜರ್ಲೆಂಡಿನಲ್ಲಿರುವ ಪಾಕ ರಾಯಭಾರಿ ಶ್ರೀ ಎಂ. ಎ. ಪಲೀಕರು ಹೊಸ ಗವರ್ನರರಾಗುವರೆಂಬ ಊಹೆಯಿದೆ.

ಧುರೀಣಪದದಿಂದ ನಿವೃತ್ತಿ

೩೦ ಕಳದ ಮಾಜಿ ಪ್ರಧಾನಮಂತ್ರಿಯವರಾದ ಸರ್ ಜಾನ್ ಕೋಟೆವಾಲರು ತಾವು ಒಂದು ದಶಕ ಪೂರ್ವದಲ್ಲಿ ಕಟ್ಟಿದ್ದ ಸಂಯುಕ್ತ ರಾಷ್ಟ್ರೀಯ ಪಕ್ಷದ ಧುರೀಣ ಸ್ಥಾನದಿಂದ ನಿವೃತ್ತರಾಗುವ ತಮ್ಮ ನಿರ್ಧಾರವನ್ನು ಮಾರ್ಚಿ ೩೦ರಂದು ನಡೆದ ಪಕ್ಷದ ವಾರ್ಷಿಕಾಧಿವೇಶನದ ಸಮಯ ಬಹಿರಂಗ ಪಡಿಸಿದರು. ಶ್ರೀಯುತರ ಸ್ಥಾನಕ್ಕೆ ಶ್ರೀ ಡಡ್ಲೆ ಸೇನಾನಾಯಕೆಯವರು ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ. ಶ್ರೀ ಕೋಟೆವಾಲರಿಗೆ ಈಗ ಅರುವತ್ತೊಂದು ವರ್ಷ ವಯಸ್ಸು ನಡೆಯುತ್ತಿದೆ.

ಎಲ್ಲರಿಗೂ ಉಚ್ಚ ಶಿಕ್ಷಣ ಬೇಡ

ವಿಶ್ವವಿದ್ಯಾನಿಲಯ ಸಹಾಯಧನ ಆಯೋಗದ ಅಧ್ಯಕ್ಷರಾದ ಡಾ. ದೇಶಮುಖರು ಲಖನವ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಅವರು ವಿಶ್ವವಿದ್ಯಾನಿಲಯ ಶಿಕ್ಷಣದಿಂದ ನಿಜವಾದ ಲಾಭವು ಯಾರಿಗೆ ಆಗಬಲ್ಲುದೋ ಅಂತಹ ವಿದ್ಯಾರ್ಥಿಗಳಿಗೆ ಮಾತ್ರ ಆ ಶಿಕ್ಷಣ ಲಭಿಸಬೇಕು. ಸುಮ್ಮಸುಮ್ಮನೆ ಎಲ್ಲರೂ ವಿಶ್ವವಿದ್ಯಾಲಯಗಳಿಗೆ ಹೋಗಿ, ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸದಂತೆ ವಿಶ್ವವಿದ್ಯಾಲಯ ಶಿಕ್ಷಣದ ಮೇಲೆ ನಿರ್ಬಂಧ ಹೇರಬೇಕು ಎಂದು ಅಭಿಪ್ರಾಯಪಟ್ಟರು. ಭಾರತದಲ್ಲಿ ಈಗ ಒಂದೂಕಾಲು ಲಕ್ಷ ಪದವೀಧರ ನಿರುದ್ಯೋಗಿಗಳಿರುವರೆಂದವರು ತಿಳಿಸಿದರಲ್ಲದೇ ಇವರಲ್ಲಿ ಹೆಚ್ಚಿನವರು ಆರ್ಟ್ಸ್ ಮತ್ತು ಕಾಮರ್ಸ್ ಪದವೀಧರರಿದ್ದಾರೆಂದು ಸೂಚಿಸಿರುವರು. ಕಾಲೇಜುಗಳಲ್ಲಿ ಶಿಕ್ಷಣ ಮಟ್ಟವು ಕೆಡುತ್ತ ಬಂದಿರುವುದೆಂದೂ ಈ ಶಿಕ್ಷಣಕ್ಕೊಂದು ತಡೆಹಾಕಿದರೆ, ಅಲ್ಲಿಂದ ಹೊರಬೀಳುವ ವಿದ್ಯಾರ್ಥಿಗಳು ಯೋಗ್ಯತಾಸಂಪನ್ನರಾಗುವರೆಂದೂ ಅವರು ತಿಳಿಸಿದರು.

ಗ್ರಹಾಮರ ವರದಿ

ಕಾಶ್ಮೀರ ಸಂಬಂಧದಲ್ಲಿ ಇತ್ತೀಚೆಗೆ ಭಾರತ ಮತ್ತು ಪಾಕಿಸ್ತಾನಗಳನ್ನು ಯುಕ್ತರಾಷ್ಟ್ರ ಸಂಘದ ಭದ್ರತಾ ಮಂಡಳಿಯ ಆದೇಶದಂತೆ ಸಂದರ್ಶಿಸಿದ ಪ್ರತಿನಿಧಿ ಶ್ರೀ ಫ್ರಾಂಕ್‌ಗ್ರಹಾಮರು ತಮ್ಮ ವರದಿಯನ್ನು ಪೂರ್ತಿಗೊಳಿಸಿರುವರಾಗಿ ತಿಳಿದು ಬಂದಿದೆ. ಈ ವರದಿಯು ಮುಂದಿನ ವಾರದಲ್ಲಿ ಪ್ರಕಾಶಕ್ಕೆ ಬರಬಹುದು. ಸೆಕ್ರೆಟರಿ ಜನರಲ್ ಶ್ರೀ ಡಾಗ ಹಮರಶೀಲ್ಡರ ಸಮಕ್ಷಮದಲ್ಲಿ ಭಾರತಕ್ಕೆ ಮತ್ತು ಪಾಕಿಸ್ತಾನದ ಪ್ರಧಾನಿಗಳು ಮಾತುಕತೆ ನಡೆಸಬೇಕೆಂದು ಶ್ರೀ ಗ್ರಹಾಮರು ಸೂಚಿಸಿರುವರೆಂದು ಪರಿಚಿತ ವರ್ಗಗಳು ವರದಿ ಮಾಡಿದೆ. ಇದು ನಿಜವಿದ್ದರೂ ಇರಬಹುದು.

ಭೂಸುಧಾರಣ ವಿಧೇಯಕ

ಮೈಸೂರು ವಿಧಾನ ಸಭೆ ಮತ್ತು ಪರಿಷತ್ತುಗಳಲ್ಲಿ ಜತ್ತಿ ಸಮಿತಿಯ ವರದಿಗೆ ಸಂಮಿಶ್ರ ಸ್ವಾಗತವು ದೊರೆತಿರುವುದು. ವಿಧಾನ ಸಭೆಯು ತನ್ನ ಚರ್ಚೆಯನ್ನು ಈಗಾಗಲೇ ಮುಗಿಸಿದೆ. ಕಂದಾಯ ಮಂತ್ರಿ ಶ್ರೀ ಎಂ. ವಿ. ಪಾಟೀಲರು ಸದಸ್ಯರು ಕೊಟ್ಟ ಅಮೂಲ್ಯ ಸಲಹೆಗಳನ್ನು ಸರಕಾರವು ಗಮನಿಸುವುದೆಂದೂ, ಇವುಗಳನ್ನು ಲಕ್ಷ್ಯಿಸಿಯೇ ಒಂದು ವಿಧೇಯಕವನ್ನು ತಯಾರಿಸಿ ಅದನ್ನು ಆದಷ್ಟು ಶೀಘ್ರದಲ್ಲಿಯೇ ಸಭೆಯ ಮುಂದಿಡುವುದಾಗಿಯೂ ಅವರು ತಿಳಿಸಿದರು. ಈ ಕುರಿತು ವಿಧಾನ ಸಭೆಯು ೧೨ ದಿನ ಚರ್ಚೆ ನಡೆಸಿದ್ದು ಇದರಲ್ಲಿ ೪೮ ಜನಸದಸ್ಯರು ಭಾಗವಹಿಸಿದ್ದರು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.



ಯುರೋಪಿನ ೧೮ ದೇಶಗಳ ಉದ್ದಿಮೆಗಾರರು ಮತ್ತು ವ್ಯಾಪಾರೀ ಸಂಘಗಳ ಪ್ರತಿನಿಧಿಗಳು, ಯೂರೋಪಿನ ಔದ್ಯೋಗಿಕ ಸಮ್ಮೇಳನವು ಇತ್ತೀಚೆಗೆ ಲಂಡನದಲ್ಲಿ ನಡೆದಾಗ, ಬ್ರಿಟನಿನ ಶ್ರೀ ಡೆರಿಕ್ ಹಿತ್‌ಕೋಟ್ ಅಮೋರಿಯವರ ಭಾಷಣವನ್ನು ಕೇಳುತಿದ್ದಾರೆ.

ಸೋವಿಯೆತ್ ಪ್ರಧಾನಿ

ಕಳೆದ ಐದು ವರ್ಷಗಳಿಂದ ರಶ್ಯಾದ ಪ್ರಧಾನಿಗಳಾಗಿದ್ದ ಮಾರ್ಶಲ್ ನಿಕೊಲಾಯ್ ಬುಲ್ಗಾನಿನರ ಉತ್ತರಾಧಿಕಾರಿಯಾಗಿ ಸೋವಿಯೆಟ್ ಕಮ್ಯೂನಿಸ್ಟ ಪಕ್ಷದ ಪ್ರಥಮ ಕಾರ್ಯದರ್ಶಿಯಾದ ಸ್ಟಾಲಿನರ ಉತ್ತರಾಧಿಕಾರಿಯಾಗಿ ಬಂದ ಶ್ರೀ ನಿಕಿತಾ ಕ್ರುಶ್ಚೇವರು ಆರಿಸಿಬಂದಿದ್ದಾರೆ. ಶ್ರೀ ಕ್ರುಶ್ಚೇವರ ಮಂತ್ರಿಮಂಡಳದಲ್ಲಿ ಗಮನಾರ್ಹ ಬದಲಾವಣೆಗಳೇನೂ ಇರುವುದಿಲ್ಲ. ಈಗ ಮಾಜಿ ಪ್ರಧಾನರಾಗಿರುವ ಶ್ರೀ ಬುಲ್ಗಾನಿನರಿಗೆ ಸೋವಿಯತ್ ಸ್ಟೇಟ್ ಬೇಂಕಿನ ಅಧ್ಯಕ್ಷ ಪದವಿಯನ್ನು ಕೊಡಲಾಗಿದೆ.

ರಾಜಸ್ಥಾನ ಕಾಲುವೆ

ಜಗತ್ತಿನಲ್ಲಿಯೇ ಅತ್ಯಂತ ದೊಡ್ಡದೆನಿಸಿದ ರಾಜಸ್ಥಾನ ಕಾಲುವೆಯ ಕೆಲಸವನ್ನು ಕಳೆದ ೩೦ನೆ ದಿನಾಂಕ ಗೃಹ ಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರು ಉದ್ಘಾಟಿಸಿದರು. ಇದು ಮುಂದಿನ ಹತ್ತು ವರ್ಷಗಳಲ್ಲಿ ಪೂರ್ಣಗೊಳ್ಳಲಿದ್ದು ಸಂಪೂರ್ಣವಾದ ಮೇಲೆ ೬೫ ಲಕ್ಷ ಎಕರೆ ಭೂಮಿಗೆ ನೀರನ್ನೊದಗಿಸುವುದು. ಈಗ ರಾಜಸ್ಥಾನದಲ್ಲಿ ಮರುಭೂಮಿಯಾಗಿರುವ ಭಾಗದ ಹೆಚ್ಚಿನಂಶವನ್ನು ಈ ಕಾಲುವೆಯ ನೀರು ಫಲವತ್ತಾಗಿ ಮಾರ್ಪಡಿಸುವುದು. ಈ ಕಾಲುವೆಗೆ ಪಂಜಾಬಿನ ಬಿಯಸ್ ಮತ್ತು ಸಟ್ಲೆಜ್ ನದಿಗಳಿಂದ ನೀರನ್ನು ಒದಗಿಸಲಾಗುವುದು. ಈ ನೀರಾವರಿ ಕಾಲುವೆಯು ಸುಮಾರು ೪೨೫ ಮೈಲುಗಳಷ್ಟು ಉದ್ದವಿರುವುದು.

ಉಡುಪಿ

ಎನ್. ಜಿ. ಒ. ಸಂಘದ ಮಹಾಸಭೆಯು—ಕಳೆದ ತಾ 23ರಂದು ರೇವಿನ್ಯೂ ಆಫೀಸರ್ ಶ್ರೀ ಜಿ. ಉಪಮಾನಾಥರಾಯರ ಅಧ್ಯಕ್ಷತೆಯಲ್ಲಿ ಜರಗಿತು. ವರ್ಗಾವರ್ಗಿ ಕಾಲದಲ್ಲಿ ಕೊಡಲಾಗುವ ಪ್ರಯಾಣ ಭತ್ತೆಯ ನಿಯಮಗಳನ್ನು ಸಡಿಲಿಸಬೇಕು, ಮನೆ ಬಾಡಿಗೆ ಭತ್ತೆಯು ಸಿಗುವಂತಾಗಬೇಕು, ಎನ್. ಜಿ. ಒ. ಮಕ್ಕಳಿಗೆ ಎಸ್. ಎಸ್. ಎಲ್. ಸಿ ವರೆಗೆ ಧರ್ಮಾರ್ಥ ಶಿಕ್ಷಣ ದೊರಕಬೇಕು ಎಂಬಿತ್ಯಾದಿ ಕೇಳಿಕೆಗಳನ್ನು ಸರಕಾರದ ಮುಂದಿಡುವ ನಿರ್ಣಯಗಳಾದುವು. ಹೊಸ ವರ್ಷಕ್ಕೆ ಕಾರ್ಯಕಾರೀಸಮಿತಿ ರಚಿಸಲ್ಪಟ್ಟು ಶ್ರೀಗಳಾದ ಜಿ. ಉಪಮಾನಾಥರಾಯರು ಅಧ್ಯಕ್ಷರಾಗಿಯೂ, ಜೆ. ಒ. ಬಂಗೇರರು ಕಾರ್ಯದರ್ಶಿಗಳಾಗಿಯೂ, ಎಚ್. ಎಸ್. ಕೆದಲಾಯರು ಸಹ ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಗಳಾಗಿ ಆರಿಸಲ್ಪಟ್ಟರು.

ತಾಲೂಕು ಹಿಂದೀ ಪ್ರಚಾರಸಮಿತಿಯು—ಆಶ್ರಯದಲ್ಲಿ ತಾ 20ರಂದು ಹಿಂದೀ ಪ್ರಮಾಣಪತ್ರ ವಿತರಣ ಸಮಾರಂಭವನ್ನು ತಾ 29ರಂದು ಶ್ರೀಮತಿ ಸರಸ್ವತಿ ಮಲ್ಯರು ನೆರವೇರಿಸಿದರು. ಡಾ ಯು. ಸಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಸಮಿತಿ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಮಹಾಬಲ ನಾಯ್ಕರು ವರದಿಯನ್ನೋದಿದರು. ಪ್ರಧಾನ ಶಿಕ್ಷಕ ಶ್ರೀ ಎ. ಲಕ್ಷ್ಮೀನಾರಾಯಣಶೆಣೈಯವರು ಭಾಷಣವಿತ್ತರು. ಡಾ| ಟಿ. ಎಮ್. ಎ. ಪೈಗಳು 'ಧೂಪ್ ಛಾಂವ್' ಹಿಂದೀ ಗ್ರಂಥವನ್ನು ಉದ್ಘಾಟಿಸಿದರು. ಅಧ್ಯಕ್ಷರ ಸಮಯೋಚಿತ ಭಾಷಣವಾದ ಬಳಿಕ ಹಿಂದೀ ಮತ್ತು ಕನ್ನಡ ಪ್ರಹಸನ ಪ್ರದರ್ಶನೆಗಳಾದುವು.

ಶ್ರೀ ರಾಮೋತ್ಸವ—ಶ್ರೀಮದನಂತೇಶ್ವರ ದೇವಸ್ಥಾನದಲ್ಲಿ ಈ ವರುಷದ ಶ್ರೀ ರಾಮೋತ್ಸವವು ಸ್ಥಳೀಯ ಕಲಾವೃಂದದ ನೇತೃತ್ವದಲ್ಲಿ ತಾ 21ರಿಂದ 29ರ ತನಕ ಪುರಾಣ ವಾಚನ ಸಂಗೀತ, ಹರಿಕಥಾ ಕಾಲಕ್ಷೇಪ, ನಗರ ಭಜನೆ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು.

ಸಂಗೀತ ಸೇವೆ—ಕಾವೇರಿಯ ರೇಡಿಯೋ ಕಲಾವಿದರಾದ ಶ್ರೀಮತಿ ಸೋನು ಬಾಯಿ ದೊಡ್ಡಮನಿಯವರು ಕಳೆದ ಭಾನುವಾರ ರಾತ್ರಿ ಶ್ರೀಕೃಷ್ಣ ಮಠದ ವಸಂತ ಮಂಟಪದಲ್ಲಿ ಶ್ರೀ ಕೃಷ್ಣನಿಗೆ ಸಂಗೀತ ಸೇವೆಯನ್ನು ಸಲ್ಲಿಸಿದರು. ಪರ್ಯಾಯ ಪೀಠಾಂಕಿತರಾದ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀ ಪಾದಂಗಳವರು ಸನ್ನಿಧಾನದ ಫಲಮಂತ್ರಾಕ್ಷತಾದಿಗಳನ್ನಿತ್ತು ಆಶೀರ್ವದಿಸಿದರು.

ವಿವಾಹ ಸಮಾರಂಭ—ಮುಲ್ಕಿ ಬೀಜೆಟ್ಟು ದಿ. ಬಾಬ ಸೆಟ್ರ ಪುತ್ರ ಚಿ. ಭೋಜ ಸೆಟ್ಟಿ ಮತ್ತು ಕೊರಂಗ್ರಪಾಡಿ ದಿ. ಸುಬ್ಬಯ್ಯ ಸೆಟ್ರ ಪುತ್ರಿ ಚಿ. ಸೌ. ರುಕ್ಮಿಣಿ-ಇವರ ವಿವಾಹ ಸಮಾರಂಭವು ತಾ. 27ರಂದು ಪುತ್ತೂರು ಶ್ರೀ ದುರ್ಗಾ ಪರಮೇಶ್ವರಿದೇವಿ ಸನ್ನಿಧಿಯಲ್ಲಿ ವೈಭವದಿಂದ ಜರಗಿತು. ನೂತನ ದಂಪತಿಗಳಿಗೆ ಶುಭಾಶಯಗಳು.

ಶ್ರೀ ರಾಮಚಂದ್ರ ಪ್ರಕಾಶನದ—ಪ್ರಾರಂಭೋತ್ಸವವನ್ನು ತಾ. 30ರಂದು ಶ್ರೀ ವರದೇಂದ್ರ ಕಲಾಮಂದಿರದಲ್ಲಿ ಡಾ. ಸುಂದರ ರಾಮ ಪೈಗಳವರು ನೆರವೇರಿಸಿದರು. ಪ್ರಕಾಶನದ ಪ್ರಥಮ ಪ್ರಕಟಣೆಯಾದ 'ರಜತ ಪೀಠದಿಂದ ರಜತಾದ್ರಿಗೆ' ಪುಸ್ತಕವನ್ನು ಡಾ. ಪಿ. ಆರ್. ನಾಯ್ಕರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ. ಟಿ. ಮಾಧವ ಪೈಗಳವರು ವಹಿಸಿದ್ದರು. ಶ್ರೀ ಯು. ರಾಘವೇಂದ್ರ ಕೃಷ್ಣ ಭಟ್ಟರು ಸ್ವಾಗತಮಾತುಗಳನ್ನಾಡಿದರು. ಭಜನೆ, ಸಂಗೀತ, ನೃತ್ಯ ಮೊದಲಾದ ಕಾರ್ಯಗಳಿದ್ದುವು.

ಸಿಂಡಿಕೇಟಿನ ಹೊಸ ಶಾಖೆ—ಉಡುಪಿಯ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಹೊಸ ಶಾಖೆಯು ತಿಪಟೂರಲ್ಲಿ ತಾ. 27ರಂದು ತೆರೆಯಲ್ಪಟ್ಟಿತು.

ಕೇರಳ ರಾಜ್ಯಪಾಲ ಡಾ. ಬಿ. ರಾಮಕೃಷ್ಣ ರಾಯರು ತಾ. 1ನೇ ಬೆಳಗ್ಗೆ ದ. ಕ. ಜಿಲ್ಲೆಯ ನಾಲ್ಕು ದಿನಗಳ ಪ್ರವಾಸಾರ್ಥವಾಗಿ ಮಂಗಳೂರಿಗೆ ಆಗಮಿಸಿದರು. ನಗರದ ಪ್ರಮುಖರನೇಕರೂ ಅಧಿಕಾರಿಗಳೂ ರೈಲ್ವೆ ಸ್ಟೇಶನಿನಲ್ಲಿ ರಾಜ್ಯಪಾಲರನ್ನು ಸ್ವಾಗತಿಸಿದರು. ಸಂಜೆ ಮಂಗಳೂರು ನಗರಸಭೆಯವರು ಪೌರ ಸ್ವಾಗತವಿತ್ತರು. ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತಪತ್ರವನ್ನು ಅರ್ಪಿಸಿದರು. ರಾತ್ರಿ ರಾಜ್ಯಪಾಲರು ಉಡುಪಿಗೆ ಆಗಮಿಸಿ, ಮರುದಿನ ಬೆಳಗ್ಗೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಎಮ್. ಎಸ್. ಸಿ. ಮೊದಲಾದ ಹೊಸ ವೈದ್ಯಕೀಯ ತರಪೇತಿ ಕ್ಲಾಸುಗಳನ್ನು ಉದ್ಘಾಟಿಸಿದರು. ಶ್ರೀ ಕೃಷ್ಣ ದರ್ಶನ ಪಡೆದು ಸಂಜೆ ಉಡುಪಿ ನಗರ ಸಭೆಯ ಪೌರ ಸ್ವಾಗತ ಪಡೆದರು.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಇರ್ತಲೆಯ ಹಾವುಗಳು

(೩ನೇ ಪುಟದಿಂದ)

ಹೆಚ್ಚಿಸಲಾಯಿತು. ಇದರ ನಂತರ ಈ ಎರಡು ಮುಖಗಳು ಮೊದಲಿನಷ್ಟು ಪ್ರೀತಿಯಿಂದ ಕೂಡಿಕೊಂಡಿರುತ್ತಿರಲಿಲ್ಲ. ಈ ಎರಡು ತಲೆಗಳೂ ಒಂದು ಕಾಲದಲ್ಲಿ ಒಂದೇ ಸಮಯದಲ್ಲಿ ಭೋಜನ ಮಾಡುತ್ತಿದ್ದರೂ, ಒಂದರ ತಪ್ಪನ್ನು ಕ್ಷಮಿಸಲು ಉಳಿದೊಂದು ಎಂದೂ ಸಿದ್ಧವಿರುತ್ತಿಲ್ಲ ಎಂಬುದರಿಂದ ವ್ಯಕ್ತವಾಗುವುದು. ಒಂದು ದಿನ ಇವುಗಳಲ್ಲಿ ಹುಟ್ಟಿದ್ದ ದ್ವೇಷವು ಕೊನೆಯ ಘಟ್ಟವನ್ನು ಮುಟ್ಟಿ, ಸರ್ಪದ ಸಾವಿಗೆ ಕಾರಣವಾಯಿತು. ಹೀಗಾಗಲು ಕಾರಣವೇನೆಂಬುದು ಸ್ಪಷ್ಟವಾಗಿ ನುಡಿಯುವುದು ಅಸಾಧ್ಯವಾದರೂ ಒಂದು ತಲೆ ಇನ್ನೊಂದನ್ನು ಸರಿಯಾಗಿ ಸಾಯುವಂತೆ ನೋಯಿಸಿರಬೇಕು; ಮತ್ತಿದರ ಪರಿಣಾಮವಾಗಿ ಇಡಿ ಸರ್ಪದ ಶರೀರವು ಥಂಡಿಗಟ್ಟಿ ಸತ್ತುಹೋಗಬೇಕಾಯಿತು. ಈ ಸರ್ಪವು ಹಲ್ಲಿನಲ್ಲಿ ವಿಷವಿರುವ ಜಾತಿಗೆ ಸೇರಿದ್ದಾಗಿತ್ತು. ಕೋಪಗೊಂಡ ತಲೆಯು ಇನ್ನೊಂದನ್ನು ಚೆನ್ನಾಗಿ ಕಚ್ಚಿಬಿಟ್ಟಿತ್ತು ಮತ್ತು ಅದನ್ನು ಕೊಂದುಬಿಡಲು ಸಾಕಷ್ಟು ವಿಷವನ್ನೂ ಸುರಿಸಿತ್ತು. ಎರಡನೆ ತಲೆಯು ತನ್ನ ಶಕ್ತಿ ಪ್ರದರ್ಶನಕ್ಕೆ ತನ್ನ ವಿಷಪೂರಿತ ದಂತಗಳ ಉಪಯೋಗವನ್ನು ಪಡೆದಿತ್ತು. ಈ ವಿಷಯಗಳು ಸತ್ತ ಸರ್ಪದ ಶರೀರವನ್ನು ಪರೀಕ್ಷಿಸುವಾಗ ತಿಳಿದುಬಂದುವು.

ದ್ವಿಶೀರ್ಷ ಸರ್ಪಗಳಲ್ಲಿ ಇಬ್ಬರು ವ್ಯಕ್ತಿಗಳ ವಿವೇಚನೆಯು ಸ್ಪಷ್ಟವಾಗಿ ಹೇಳಬರುತ್ತದೆ. ಮೊದಲನೆಯದಾಗಿ, ಒಂದೇ ಶರೀರದಲ್ಲಿರುವ ಎರಡು ತಲೆಗಳು ತಮ್ಮ ಸ್ವಂತ ಲಾಭಕ್ಕಾಗಿ ಹಿಂದೆ ಮುಂದೆ ನೋಡುವುದಿಲ್ಲ; ಮತ್ತು ದ್ವೇಷಸಾಧನೆಗಾಗಿ ಸಾಯುವಂತೆಯೂ ಮಾಡಬಲ್ಲುವು ಅಲ್ಲದೆ, ಅವು ಬೇರೆಬೇರೆಯಾಗಿ ತಮ್ಮ ಪ್ರಾಣ ಹೋಗುವ ವರೆಗೆ ಜೀವಿಸಬಲ್ಲವು. ಗಾಜಿನಲ್ಲಿದ್ದ ರೆಡಿಯು ಎಡ ಭಾಗದ ತಲೆಯು ಮುಂಜಾನೆ ಮೂರು ತಾಸಿಗೆ ಮತ್ತು ಬಲಗಡೆಯ ತಲೆ ಇದಕ್ಕಿಂತ ಏಳು ತಾಸು ಮೊದಲು ಸತ್ತು ಹೋದ ಉಲ್ಲೇಖವನ್ನು ಮಾಡಿದ್ದಾನೆ.

ಹೀಗೆ ಇರ್ತಲೆಯ ಹಾವುಗಳ ಕುತೂಹಲಕಾರಿಯಾದ ಉಲ್ಲೇಖಗಳನ್ನು ಓದುವಾಗ ವಿಸ್ಮಯವಾಗುತ್ತದೆ

(ಆಧಾರ: ನವಭಾರತ ಟಾಯಿಮ್ಸ್)

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ ಕೆ.ಎಲ್ ಐತಾಳ, ಎಂ ಬಿ ಬಿ.ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.
ಪ್ರತಿಗಳು ಸಿಗುವ ಸ್ಥಳ;
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಭಾರತದ ಸಾವಿರಾರು ಗ್ರಾಮಗಳಲ್ಲಿ ಬಡತನ, ಪೂರ್ವಾಗ್ರಹ, ಹಾಗೂ ಸಾರ್ವತ್ರಿಕ ಹಿಂದುಳಿದಿರುವಿಕೆ ಇತ್ಯಾದಿಗಳ ವಿರುದ್ಧ ಈಗ ನಡೆಯುತ್ತಿರುವ ಹೋರಾಟದ ಕೇಂದ್ರ ಸ್ಥಾನದಲ್ಲಿ ಗ್ರಾಮಸೇವಕರು ಮತ್ತು ಗ್ರಾಮಸೇವಿಕೆಯರು ಇದ್ದಾರೆ. ಪ್ರಬಲವಾದ ಎದುರು ತೊಡರುಗಳನ್ನು ಎದುರಿಸುತ್ತಿರುವವರೇ ಅವರು. ದೇಶದಾದ್ಯಂತ ಲಕ್ಷಾಂತರ ಸ್ತ್ರೀ ಪುರುಷರಿಗೆ ಸಾಮುದಾಯಿಕ ಅಭಿವೃದ್ಧಿಯ ಸಂದೇಶ ಹಾಗೂ ತಂತ್ರಗಳನ್ನು ಕೊಂಡೊಯ್ಯುತ್ತಿರುವವರೂ ಅವರೇ. ಸರ್ಕಾರ ಹಾಗೂ ಜನತೆಯ ನಡುವೆ ಬುನಾದಿಯಲ್ಲಿ ಸಂಪರ್ಕವನ್ನು ಕಲ್ಪಿಸುತ್ತಿರುವವರೂ ಅವರೇ. ಗ್ರಾಮ ಸೇವಕನು ವಿವಿಧೋದ್ದೇಶ ಕೆಲಸಗಾರನು. ತೀವ್ರವಾದ ಹಾಗೂ ಬಹುಮುಖವಾದ ತರಬೇತಿಯೊಂದೇ ಆತನನ್ನು ಈ ಮಹತ್ಕಾರ್ಯವನ್ನು ಸಾಧಿಸಲು ಸಮರ್ಥನನ್ನಾಗಿ ಮಾಡಬಲ್ಲದು. ಚಿತ್ರದಲ್ಲಿ ಗ್ರಾಮಸೇವಕರ ಗುಂಪೊಂದು ಭುವನೇಶ್ವರ ವಿಸ್ತರಣ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವುದನ್ನು ಕಾಣಬಹುದು. ಗ್ರಾಮ ಸೇವಕರಿಗೆ ತರಬೇತಿ ಕೊಡುವ ವಿಶೇಷ ಉದ್ದೇಶದಿಂದ ಭಾರತದ ನಾನಾ ಭಾಗಗಳಲ್ಲಿ ತೆರೆಯಲಾದ ತರಬೇತಿ ಕೇಂದ್ರಗಳಲ್ಲಿ ಭುವನೇಶ್ವರ ತರಬೇತಿ ಕೇಂದ್ರವೂ ಒಂದು.

ಹೆಬ್ರಿ—ಇಲ್ಲಿಯ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಆಶ್ರಯದಲ್ಲಿ ಹೆಬ್ರಿ, ಶಿವಪುರ ಕ್ಷೇತ್ರಗಳಿಗೆ ಸಂಬಂಧಿಸಿದ ಐದು ಗ್ರಾಮಗಳ ರೈತ ಮುಂದಾಳುಗಳ ಶಿಕ್ಷಣ ಶಿಬಿರವು ತಾ 22ರಿಂದ 24ರ ತನಕ ಹೆಬ್ರಿ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಕೃಷಿಕಾರಿಕಾ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ವಿಲಿಯಮ್ ನರೋನ್ಹರವರು ಶಿಬಿರವನ್ನು ಉದ್ಘಾಟಿಸಿದರು. ಜಿಲ್ಲಾ ವ್ಯವಸಾಯಾಧಿಕಾರಿ ಶ್ರೀ ಕೆ ಸಂಜೀವ ಶೆಟ್ಟರು ಸಭಾಧ್ಯಕ್ಷತೆ ವಹಿಸಿದ್ದರು.

ಕೊನೆಯ ದಿನ ಜರುಗಿದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಕಳ ಡಿವಿಜನಲ್ ಶ್ರೀ ಎಚ್. ಎಲ್ ಸಾಲಿಯಾನರು ವಹಿಸಿದ್ದರು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಚ್ ಭುಜಂಗ ಬಲ್ಲಾಳರು ಸ್ವಾಗತಭಾಷಣ ಮಾಡಿದರು. ಹೆಬ್ರಿ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಯು ಎಸ್ ಆಚಾರ್, ಬಿ ಡಿ ಒ, ಶ್ರೀ ಕೆ ಆರ್. ಶಂಕರನಾರಾಯಣರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಯಕ್ಷಗಾನಾದಿ ಮನರಂಜನ ಕಾರ್ಯಕ್ರಮಗಳಿದ್ದುವು.

ಶಂಕರ ನಾರಾಯಣ— ಸ್ಥಳೀಯ ಬೋರ್ಡು ಹೈಸ್ಕೂಲಿನ ಹೊಸ ಕಟ್ಟಡವನ್ನು ತಾ 26ರಂದು ಮೈಸೂರು ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಚ್ ಕೆ. ವೀರಣ್ಣ ಗೌಡರು ಉದ್ಘಾಟಿಸುತ್ತಾ, ಆ ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರ ಶಿಸ್ತನ್ನು ಕಂಡು ಮನಸೋತರು. ಸಮಾರಂಭದ ಅಧ್ಯಕ್ಷತೆವಹಿಸಿದ್ದ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಗಡೆಯವರು ಮಾತನಾಡುತ್ತಾ, ಕಟ್ಟಡ ಪೂರೈಸಿದ ಸಾರ್ವಜನಿಕರು ಮುಂದಿನ ಶರ್ತಗಳನ್ನು ಪೂರೈಸಲು ಮುಂದಾಗಬೇಕೆಂದು ಆಶಿಸಿದರು.

ಆರಂಭದಲ್ಲಿ ಹೈಸ್ಕೂಲು ರಚನಾ ಸಮಿತಿ ಅಧ್ಯಕ್ಷ ಶ್ರೀ ಬಿ ಮಂಜಯ್ಯ ಶೆಟ್ಟಿ, ಎಮ್. ಎಲ್ ಎ, ಯವರು ಸ್ವಾಗತ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಬಿ ಎಸ್. ಆಚಾರ್ಯರು ವರದಿಯನ್ನೋದಿದರು. ಮಂಡಲ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ಅನಂತ ಉಪಾಧ್ಯರು ಮಂತ್ರಿಗಳಿಗೆ ಮನವಿಯನ್ನೊಪ್ಪಿಸಿದರು.

ಶಾಲಾ ವಾರ್ಷಿಕೋತ್ಸವವು— ಅಂದೇ ರಾತ್ರಿ ಶ್ರೀ ವೈ ಮಂಜಯ್ಯ ಶೆಟ್ಟಿ, ಎಮ್ ಎಲ್ ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ ಗೋಪಾಲಕೃಷ್ಣ ಕಿಣಿಯರು ವರದಿಯನ್ನೋದಿದರು. ಶ್ರೀ ಪಿ. ರಾಮ ಶೆಟ್ಟರು ಸ್ವಾಗತ ಭಾಷಣ ಮಾಡಿದರು. ಸಭಿಕರ ಪರವಾಗಿ ಶ್ರೀ ಎಮ್ ಎಮ್ ಹೆಗ್ಡೆಯವರು ಮಾತನಾಡಿದರು. ಶ್ರೀ ಕೆ. ತೇಜಪ್ಪ ಹೆಗ್ಡೆರು ಧನ್ಯವಾದವಿತ್ತರು.

ಹೆಜ್ಮಾಡಿಕೋಡಿ—ಇಲ್ಲಿಯ ಸರಕಾರಿ ಪಿಶರೀಸ್ ಹಾ. ಎ ಶಾಲೆಯಲ್ಲಿ ವಿವಿಧ ವಸ್ತುಗಳ ಪ್ರದರ್ಶನವನ್ನು ತಾ 26ರಂದು ಮೂಲ್ಕಿ ಸರಕಾರಿ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಕೆ ವಿಠಲ ರೆಣ್ಣೆಯವರು ಉದ್ಘಾಟಿಸಿದರು.

ಈ ಶಾಲೆಯ ವರ್ಧಂತಿಯುತ್ಸವವು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ ಯು. ಬಿ. ನಾರಾಯಣ ರಾಯರು ಸ್ವಾಗತಿಸಿ ಸಂದೇಶಗಳನ್ನೋದಿದರು. ಶ್ರೀ ಕೆ ಸೋಮಪ್ಪ ಸುವರ್ಣರು ಧನ್ಯವಾದಗಳನ್ನಿತ್ತರು.

ಹಿರಿಯಡಕ— ಸ್ಥಳೀಯ ಬೋರ್ಡು ಹೈಸ್ಕೂಲಿನ ಒಂದನೆ ಮತ್ತು ಎರಡನೆ ಫಾರ್ಮುಗಳ ವಿದ್ಯಾರ್ಥಿಗಳ ಪೌರತನ ಶಿಕ್ಷಣ ಶಿಬಿರವು ಅಂಜಾರು ಶಾಲೆಯಲ್ಲಿ ಶ್ರೀ ಎ. ಜಗಂಜೀವ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್ ಬಿ ಹೆಗ್ಗಡೆಯವರು ಶಿಬಿರದ ಉದ್ದೇಶಗಳನ್ನು ವಿವರಿಸಿದರು. ಶಿಬಿರಾಧಿಕಾರಿ ಶ್ರೀ ಎ. ರವಿಶಂಕರನವರು ಧನ್ಯವಾದವಿತ್ತರು.

ಪಾಮೆಂಜೆ—ಮೈಸೂರಿನ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಚ್. ಕೆ ವೀರಣ್ಣ ಗೌಡರು ಪಾಪಂಜೆಯ 485 ಅಡಿ ಉದ್ದದ ಸೇತುವೆಯನ್ನು ಕಳೆದವಾರ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಾಜಿ ಮಂತ್ರಿ ಶ್ರೀ ಎ ಬಿ ಶೆಟ್ಟರು ಮಾತನಾಡುತ್ತಾ, ಕರಾವಳಿ ಮತ್ತು ಒಳನಾಡುಗಳ ಸಂಪರ್ಕ ಬೆಳೆಸಲು ಅನುಕೂಲವಾಗುವ ಮಂಗಳೂರು ಹಾಸನ, ಮಲ್ಪೆ, ಕಾರವಾರ ರೈಲ್ವೆ ಮಾರ್ಗಗಳನ್ನು ಬೇಗನೆ ನಿರ್ಮಿಸುವುದು ಅವಶ್ಯವಿದೆಯೆಂದರು.

ರಾಜ್ಯದ ಚೀಫ್ ಇಂಜಿನಿಯರ್ ಶ್ರೀ ಜಿ. ಎಸ್ ಗಣಪತಿಯವರು ಸ್ವಾಗತಭಾಷಣ ಮಾಡುತ್ತಾ ಈ ಸೇತುವೆ ನಿರ್ಮಾಣಕ್ಕೆ ರೂ 3 ಲಕ್ಷ ರೂಪಾಯಿ ವೆಚ್ಚ ತಗಲಿದೆ ಎಂದರು.

ಅಂಪಾರು—ಕುಂದಾಪುರ ತಾಲೂಕು ಅಂಪಾರು ಗ್ರಾಮ ಪಂಚಾಯತ ಚುನಾವಣೆಯು ಈಚೆಗೆ ನಡೆದು ಶ್ರೀ ಎ ಶೀನಪ್ಪ ಹೆಗ್ಗಡೆಯವರು ಅಧ್ಯಕ್ಷರಾಗಿಯೂ ಶ್ರೀಗಳಾದ ಟಿ. ಶೀನಪ್ಪ ಶೆಟ್ಟಿ, ಕೆ ರಘುರಾಮ ಶೆಟ್ಟಿ, ಕೆ ಹಿರಿಯಣ್ಣ ಶೆಟ್ಟಿ, ಎನ್ ಮಹಾಬಲ ಶೆಟ್ಟಿ, ಕೆ ಶೇಷಗಿರಿ ಶೆಣೈ, ಎಮ್ ಸಂಕ—ಇವರು ಮೆಂಬರುಗಳಾಗಿಯೂ ಆರಿಸಲ್ಪಟ್ಟಿರುವರು.

ಕದಿಯೂರು— ಸ್ಥಳೀಯ ಪ್ರಾಥಮಿಕ ಶಾಲೆಯಲ್ಲಿ ತಾ 27ರಂದು ವಿದ್ಯಾರ್ಥಿ ವೇತನ ವಿತರಣ ಸಮಾರಂಭವು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ ಪದ್ಮನಾಭ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ ತಂತ್ರಿ ಮತ್ತು ಎಚ್ ವೆಂಕಟಗಿರಿಯವರು ಸಮಾರಂಭದ ವೈಶಿಷ್ಟ್ಯಗಳನ್ನು ವಿವರಿಸಿ ಮಾತನಾಡಿದರು. ಎಲ್ಲಾ ವಿದ್ಯಾರ್ಥಿಗಳೂ ಈ ತೂಪರಿಯ ವೇತನಕ್ಕೆ ಪ್ರಯತ್ನಿಸಬೇಕೆಂದು ಅಧ್ಯಕ್ಷರು ನುಡಿದರು. ಶ್ರೀ ಮುರಲೀಧರನವರು ಧನ್ಯವಾದವಿತ್ತರು.

ಜನ ಪ್ರಿಯಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ ೨—೦—೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಕಾಂಗ್ರೆಸ್ ಕಮಿಟಿ ಉದ್ಘಾಟನೆ- ಕಂಕನಾಡಿ ಮಂಡಲ ಕಾಂಗ್ರೆಸ್ ಕಮಿಟಿ ಕಾರ್ಯಾಲಯವನ್ನು ಡಾ. ಯು ಪಿ ಮಲ್ಯರು ಉದ್ಘಾಟಿಸಿದರು. ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಂಡಲದ ಅಧ್ಯಕ್ಷ ಶ್ರೀ ಎಮ್. ಬಾಲಕೃಷ್ಣ ರೈಯವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಪಿ. ಎಫ್. ರೊಡ್ರಿಗಸರು ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಅನಾವರಣಮಾಡಿದರು. ಆರಂಭದಲ್ಲಿ ಮೌಲಾನಾ ಅಝಾದರ ಮತ್ತು ಮಜೂರರ ಧುರೀಣ ಪಿ. ಡಿ ಮೆಲ್ಲೋರವರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯ ಮಾಡಿತು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಎಸ್. ಕೆ. ಅಮೀನರು ಧನ್ಯವಾದಗಳನ್ನಿತ್ತರು.

ನಗರಸಭೆಯು—ತಾ. 28ರಂದು ಸಂಜೆ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರದಲ್ಲಿನ ಹಲವು ರಸ್ತೆಗಳನ್ನು ಅಗಲಗೊಳಿಸಲು ಬೇಕಾದ ಸ್ಥಳಗಳನ್ನು ಪಡಕೊಳ್ಳಲು ಸರಕಾರದಿಂದ ಮೂರು ಲಕ್ಷ ರೂಪಾಯಿ ಸಾಲ ಕೇಳಬೇಕೆಂದು ನಿರ್ಧಾರವಾಯಿತು. ನಗರದ ಐವತ್ತು ಮಂದಿ ಭಿಕ್ಷುಕರನ್ನು ಇರಿಸುವುದಕ್ಕೆ ಅನುಕೂಲವಾಗುವಂತೆ ರಾಜ್ಯ ಸರಕಾರದ ಸಹಾಯದಿಂದ ಭಿಕ್ಷುಕ ಗೃಹವನ್ನು ತೆರೆಯುವುದೆಂದು ಸಭೆಯಲ್ಲಿ ಠರಾವಾಯಿತು.

ಪ್ರ್ಯಾನುಭಾಗರ ಸರ್ವೆ ತರಬೇತಿ ಶಾಲೆ—ತಾ. 17—4—1958ರಲ್ಲಿ ಶ್ಯಾನುಭಾಗರ ಸರ್ವೆ ತರಬೇತಿ ಶಾಲೆಯು ಪುತ್ತೂರು ತಾಲೂಕಿನ ವಿಟ್ಲದಲ್ಲಿ ತೆರೆಯಲಾಗುವುದು. ಶಾಲೆಗೆ ಸೇರಲು ಇಚ್ಛಿಸುವವರು ಆ ದಿನ ಬೆಳಗ್ಗೆ 8 ಗಂಟೆಗೆ ಗ್ರಾಮ ಚಾವಡಿಯಲ್ಲಿ ಅವರ ಎಲ್ಲಾ ಸರ್ಟಿಫಿಕೇಟು ಸಮೇತ ಜಿಲ್ಲಾ ಸರ್ವೆಯರ ಮುಂದೆ ಹಾಜರಾಗಬೇಕು. ದಾಖಲು ಮಾಡಬಹುದಾದ ಖಾಸಗಿ ಉಮೇದ್ವಾರರಿಂದ ಹತ್ತು ರೂಪಾಯಿ ಪ್ರವೇಶ ಫೀಸು ವಸೂಲುಮಾಡಲಾಗುವುದು ಎಂದು ಜಿಲ್ಲಾ ಡಿಸ್ಟ್ರಿಕ್ಟ ಕಮಿಶನರರ ಪ್ರಕಟಣೆ ಹೊರಟಿದೆ.

ಮಜೂರರ ಕೇಳಿಕೆ ದಿನಾಚರಣೆಯು— ಮಂಗಳೂರಿನ ವಿವಿಧ ಮಜೂರ ಯೂನಿಯನ್ನುಗಳ ಕೂಡುವಿಕೆಯಿಂದ ಸಂಯುಕ್ತ ಕೇಳಿಕೆಗಳ ಮನವಿಯೊಂದನ್ನು ತಾ. 27ರಂದು ಜಿಲ್ಲಾಧಿಕಾರಿಗಳಿಗೆ ಒಪ್ಪಿಸಲಾಯಿತು. ಅಂದು ಕಂಕನಾಡಿ ಮತ್ತು ಬೋಳಾರ ಕೇಂದ್ರಗಳಲ್ಲಿ ಸಾರ್ವಜನಿಕ ಸಭೆಗಳು ಜರಗಿ ಕಾಲೋಚಿತ ಭಾಷಣಗಳಾದುವು.

ಯುವಕ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ—ತಾ. 30ರಂದು ಜೇಗೆ ಅಲ್ಜೀರಿಯಾ ದಿನಾಚರಣೆಯು ಮಂಗಳೂರು ನಗರಸಭಾ ಸದಸ್ಯ ಶ್ರೀ ಕೆ. ವಿಶ್ವನಾಥ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಅಲ್ಜೀರಿಯಾದಲ್ಲಿನ ಫ್ರೆಂಚರ ದಬ್ಬಾಳಿಕೆಯನ್ನು ವಿರೋಧಿಸುವ ಮತ್ತು ಅಲ್ಜೀರಿಯಾನರ ಸ್ವಾತಂತ್ರ್ಯ ಚಳವಳಿಗೆ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯ ಸಭೆಯಲ್ಲಿ ಪಾಸುಮಾಡಲಾಯಿತು. ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ಎಮ್. ಅಬ್ದುಲ್ ಖಾದರರು ಧನ್ಯವಾದವಿತ್ತರು.

ವಾರ್ಷಿಕೋತ್ಸವ— ಕನ್ನಡ ಪ್ರೀತಿಯವರ ಸಮಾಜ ಸಧಾರಕ ಸಂಘದ ವಾರ್ಷಿಕೋತ್ಸವವು ಸ್ಥಳೀಯ ಬಸೆಂಟ್ ಶಾಲೆಯಲ್ಲಿ ಶ್ರೀ ಎಸ್. ಎಸ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎಮ್. ಗುರುವಪ್ಪನವರು ಸ್ವಾಗತಿಸಿ ವರದಿಯನ್ನೋದಿದರು. ಶ್ರೀಗಳಾದ ಮಂಜುನಾಥ, ದೇಜು ಉಚ್ಚಿಲ, ಎಮ್. ಬಿ. ನರಸಪ್ಪ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಸಂಗೀತ ಶಾಲಾ ವಾರ್ಷಿಕೋತ್ಸವ

ಶ್ರೀ ಬಿ ವಿ. ನಾರಾಯಣ ಐತಾಳರ ಶ್ರೀ ತ್ಯಾಗರಾಜ ಕರ್ನಾಟಕ ಸಂಗೀತ ಶಾಲೆಯ ವಾರ್ಷಿಕೋತ್ಸವವು ತಾ. 30ರಂದು ಡಾ. ಕೆ. ಸತ್ಯಶಂಕರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ದಯಾನಂದರಾಯರು ವರದಿಯನ್ನೋದಿದರು. ನಂತರ ಸಂಗೀತ ಕಾರ್ಯಕ್ರಮ ಜರಗಿತು.

ಪ್ರಾ. ಶಿಕ್ಷಕರ ಕ್ರಿಯಾ ಸಮಿತಿಯ ಸಭೆ— ತಾ. 29—3—58 ರಂದು ಶ್ರೀ ಹೊಳ್ಳರ ಅಧ್ಯಕ್ಷತೆಯಲ್ಲಿ ಜರಗಿತು. ಈ ಕೆಳಗಿನ ನಿರ್ಣಯಗಳು ಸ್ವೀಕರಿಸಲ್ಪಟ್ಟವು.

1. ಪರಿಷ್ಕೃತ ವೇತನದ ದರದಲ್ಲಿ ಹೆಚ್ಚಳದ ಮೊತ್ತವನ್ನು ಲೆಕ್ಕಮಾಡುವಾಗ ಲೋಪದೋಷಗಳುಂಟಾದಲ್ಲಿ ಅವನ್ನು ನಿವಾರಿಸಬೇಕು ಮತ್ತು ಹಾಗೆ ಬಿಟ್ಟುಹೋದ ಮೊತ್ತವನ್ನು ಕೊಡಬೇಕು. 2 ಮುಂದಿನ ತಿಂಗಳುಗಳಲ್ಲಿ ಪರಿಷ್ಕೃತ ದರದಲ್ಲಿ ಬಿಲ್ ಮಾಡುವ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸಂದೇಹ ಪಡೆದಂತೆ ಯೋಗ್ಯ ನಿರ್ದೇಶನವನ್ನು ಕೂಡಲೇ ಕೊಡಬೇಕು 3. ದ. ಕ ಜಿಲ್ಲಾ ಗಿಲ್ಡಿನ ಕಾರ್ಯ ನಿರ್ವಾಹಕರು ಘಟನೆಯನ್ನು ಕನ್ನಡದಲ್ಲಿ ಅನುವಾದ ಮಾಡಿ ಅಭಿಪ್ರಾಯ ಸಂಗ್ರಹಕ್ಕೆ ಕಳುಹಿಸಲು ತಪ್ಪಿದ ಬಗ್ಗೆ ನಿಷೇಧ ಸೂಚಿಸಿ, ಹಾಗೆ ಮಾಡಿದ ನಂತರವೇ ಅಭಿಪ್ರಾಯಗಳನ್ನು ಸೂಚಿಸಬೇಕು.

4) ತಾ 30 3 58ರ ಗಿಲ್ಡಿನ ಕೌನ್ಸಿಲು ಸಭೆಯನ್ನು ಅಧ್ಯಕ್ಷರಿಲ್ಲವೆಂಬ ಕಾರಣದಿಂದ ಮುಂದೂಡಿಸಿದುದು ಘಟನಾಬದ್ಧವಲ್ಲವೆಂದು ನಿಷೇಧ ಸೂಚಿಸಬೇಕು.

5, ಇಡೀ ಮೈಸೂರಿಗೆ ಏಕರೂಪದ ಗ್ರಾಂಟ್-ಇನ್-ಏಡ್ ನಿಯಮಗಳನ್ನು ತಯಾರಿಸಲು ಪರೆ ನಿಯಮಿಸಿದ ಉಪಸಮಿತಿಯು ಈ ಜಿಲ್ಲೆಯ ಸ್ಥಿತಿ ಗತಿಗಳನ್ನು ತಿಳಿದುಕೊಳ್ಳಲು ತಪ್ಪಿ, ಈಗಿನ ಹಲವಾರು ಸವಲತ್ತುಗಳನ್ನು ಕಳೆದುಕೊಳ್ಳುವಂತಹ ಶಿಫಾರಸುಗಳನ್ನು ಮಾಡಿರುವುದಾಗಿ ವಾರ್ತೆಯಿದೆ. ಪ್ರಾ. ಶಾಲೆಗಳಿಗೆ ಮೂರು ತಿಂಗಳಿಗೊಮ್ಮೆ ಗ್ರಾಂಟು ಕೊಡಬೇಕು, ಸಂಬಳದ ಕೆಲವಂಶವನ್ನು ಆಡಳಿತೆಯವರು ವಹಿಸಬೇಕೆಂಬಿತ್ಯಾದಿ ಹಲವು ಶಿಫಾರಸುಗಳು ಶಿಕ್ಷಕರ ಹಿತರಕ್ಷಣೆಗೆ ಧಕ್ಕೆ ತರುತ್ತವೆ. ಆದುದರಿಂದ ಹೊಸ ನಿಬಂಧನೆಗಳನ್ನು ರಚಿಸುವಾಗ ಈಗಿರುವ ಸವಲತ್ತುಗಳನ್ನು ತೆಗೆದು ಹಾಕಬಾರದು. ಅಲ್ಲದೆ ಸಾಕಷ್ಟು ವಿವೇಚನೆಯ ನಂತರವೇ ಹೊಸ ನಿಯಮಗಳನ್ನು ತರಬೇಕಲ್ಲದೆ ಅನವಸರವಾಗಿ ಜ್ಯಾರಿಗೊಳಿಸಬಾರದು ಎಂದು ಕೇಳಿಕೊಳ್ಳಬೇಕು.

ಕನ್ವೀನರ್ ಯಪ್ ದಾಂತಿಯವರು ಸ್ಪೆಶಲ್ ಕ್ಲರ್ಕ್, ಡಿ ಇ ಓ, ಜಿಲ್ಲಾ ಬೋರ್ಡ್ ಅಧ್ಯಕ್ಷ, ಮೊದಲಾದವರಿಂದ ಬಂದಿದ್ದ ಪರಿಷ್ಕೃತ ವೇತನವೇ ಮೊದಲಾದ ಪತ್ರಗಳನ್ನು ಸಭೆಯ ಮುಂದಿರಿಸಿದರು. ಜಿಲ್ಲಾ ಪ್ರಾ ಶಿಕ್ಷಕರ ಸಂಘ ರಚನೆ ಮಾಡುವರೆಯೂ ನಿರ್ಣಯಿಸಲಾಯಿತು.

ಜಿಲ್ಲಾ ಬೋರ್ಡು ಶಿಕ್ಷಕರ ವೇತನ

ಪರಿಷ್ಕೃತ ದರದ ಹೆಚ್ಚಳದ ಮೊತ್ತವನ್ನು ಪಾವತಿ ಮಾಡುವರೆ ಸರಕಾರವು ಜಿಲ್ಲಾ ಬೋರ್ಡಿಗೆ ರೂ. 3 ಲಕ್ಷಗಳನ್ನು ಕೊಟ್ಟಿರುವುದಾಗಿಯೂ, ಅದನ್ನು ಅದಷ್ಟು ಶೀಘ್ರವೇ ಶಿಕ್ಷಕರಿಗೆ ಪಾವತಿ ಮಾಡುವುದಾಗಿಯೂ, ಜಿ ಬೋ. ಅಧ್ಯಕ್ಷರೂ, ಕಾರ್ಯದರ್ಶಿಗಳೂ, ಕ್ರಿಯಾ ಸಮಿತಿಯ ಕಾರ್ಯನಿರ್ವಾಹಕರಿಗೆ ತಿಳಿಸಿದ್ದಾರೆ.

ದ ಕ. ಶಿಕ್ಷಕ ಗಿಲ್ಡಿನ ಕೌನ್ಸಿಲ್

ಸದಸ್ಯರ ಸಭೆಯು ಮಂಗಳೂರು ಬಿ. ಇ ಯಂ. ಹೈಸ್ಕೂಲಲ್ಲಿ 30—3—58ರಂದು ಸೇರಿ, ನೋಟೀಸು ಕೊಟ್ಟು ಸಭೆ ಕರೆದು ಅಧ್ಯಕ್ಷರಿಲ್ಲದ ಕಾರಣಕ್ಕಾಗಿ ಸಭೆಯನ್ನು ನಿಲ್ಲಿಸಿದ ಬಗ್ಗೆ ನಿಷೇಧ ಸೂಚಿಸಿತು. ಅಧ್ಯಕ್ಷತೆಯನ್ನು ಗಿಲ್ಡಿನ ಸೆಕಂಡರಿ ಸೆಕ್ಷನಿನ ಕಾರ್ಯದರ್ಶಿ ಶ್ರೀ ಯು. ಜನಾರ್ದನ ನಾಯ್ಕರು ವಹಿಸಿದ್ದರು.

ಭಾರತದ ವ್ಯಾಪಾರೀ ಒಕ್ಕೂಟದ ಪ್ರತಿನಿಧಿಗಳು ಇತ್ತೀಚೆಗೆ ಬ್ರಿಟನ್ನಿನಲ್ಲಿ ನಾಲ್ಕು ವಾರಗಳ ಕಾಲ ಇದ್ದರು. ಅವರು ಅಲ್ಲಿ ಸರಕಾರ ಸಂಬಂಧ ಶಾಖೆಯ ಅತಿಥಿಗಳಾಗಿದ್ದರು. ಈ ಆಫೀಸಿನಲ್ಲಿ ಪಾರ್ಲಿಮೆಂಟರಿ ಕಾರ್ಯದರ್ಶಿ ಶ್ರೀ ಸಿ. ಜೆ. ಯಂ. ಅಲ ಪೋರ್ಟರು ಅವರನ್ನು ಸ್ವಾಗತಿಸಿದ್ದರು. ಚಿತ್ರದಲ್ಲಿ ಎಡದಿಂದ ಬಲಕ್ಕೆ ಶ್ರೀಗಳಾದ ಅಲ್‌ಪೋರ್ಟ್, ಎಂ. ಎಲ್. ಮೈಟ್ಲ್, ಡಿ, ಡಿ ಪಟೇಲ್, ಎಂ. ಎ. ಖಾನ್, ಮತ್ತು ಎ. ಜರೋರ ಇವರನ್ನು ಕಾಣಬಹುದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮವ್ಯಾಜ್ಯ 12/1958.

ಪರಮೇಶ್ರಿ ಯಾನೆ ಗಿರಿಜಾ ಶೇರ್ವೆಗಾರ್ತಿ

— ವಾದಿಳು

ಮತ್ತು

ಯು. ಚೆನ್ನಪ್ಪ ಶೇರ್ವೆಗಾರ ಕೂಡಾ

— ಪ್ರತಿವಾದಿರು

ಇವರೊಳಗೆ

1 ಶಂಕರ ಶೇರ್ವೆಗಾರ 5. ರಾಮನಾಥ ಶೇರ್ವೆಗಾರ ಕಲ್ಯಾಣಪುರ ಸಾಗಿಪ್ಪ ಶೇರ್ವೆಗಾರರ ಮಗಂದಿರು, ಉಡುಪಿ ತಾಲೂಕು ನಂಬ್ರ 51ನೆ ಉಪ್ಪೂರು ಗ್ರಾಮದ ಜಾತಬೆಟ್ಟಿನಲ್ಲಿರುವವರು—4, 5ನೆ ಪ್ರತಿವಾದಿರು.

ಸದ್ರಿ ವ್ಯಾಜ್ಯದ 4, 5ನೆ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—1ನೆ ಪ್ರತಿವಾದಿ ಕೂಡಾ ವಾದಿಳಿಗೆ ತಾರೀಕು 17 2-53ರಲ್ಲಿ ರಜಿಸ್ಟ್ರಿ ಸಿಕಿ ರೂ.500ಕ್ಕೆ ಬರೆಕೊಟ್ಟ ಸ್ಥಿರಾಸ್ತಿ ಈಡು ದಸ್ತಾವೇಜಿನ ಅಸ್ಲು ಬಡ್ಡಿ ವಸೂಲಿ ಬಗ್ಗೆ ವಾದಿಳು ದಾಖಲು ಮಾಡಿದ ಮೇಲ್ಕಂಡ ವ್ಯಾಜ್ಯವು 4,5ನೆ ಪ್ರತಿವಾದಿರಿಗೆ ಅಖೈರ ನೋಟೀಸಿನ ಬಗ್ಗೆ 15-4-1958ಕ್ಕೆ ಇಡಲ್ಪಟ್ಟಿರುತ್ತದೆ. 4, 5ನೆ ಪ್ರತಿವಾದಿರ ಉದ್ದೇಶವಿದ್ದರೆ ಸದ್ರಿ ತನಖಿ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದು. ತಪ್ಪಿದರೆ ಅವರ ಗೈರ ಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲಾದೀತು.

(By order of court)

K. Varadaraya Pai,

Advocate for Plaintiff.

ಉಡುಪಿ ತಾ. 26 - 3—58.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣಕ್ಕೆ ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಯೇ ಮೊದಲಾದ ಆಮಂತ್ರಣಗಳನ್ನೂ ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ ಚೆಲುವಾಗಿ ಮುದ್ರಿಸಿ ಕೊಡಲಾಗುವುದು.

NAVAYUGA PRESS, UDIPI.

ಆಶ್ಚರ್ಯಕರ

ಔಷಧಿ ಬಿಳಿ ತೊನ್ನಿಗೆ

ನಾವು ಇತರರಂತೆ ಹೊಗಳಿಕೊಳ್ಳಲು ಅಪೇಕ್ಷಿಸುವುದಿಲ್ಲ ಕೆಲವು ದಿವಸಗಳ ಬೇರಿನ ಉಪಯೋಗದಿಂದ ದೇಹದ ಮೇಲಿನ ಬಿಳಿ ಚುಕ್ಕೆಗಳು ಮಾಯವಾಗದಿದ್ದರೆ ಹಣ ವಾಪಾಸು. ಸಂಶಯಪಡುವವರು ಒಂದಾಣೆ ಸ್ಟಾಂಪು ಕಳುಹಿಸಿ ಗ್ಯಾರಂಟಿಪತ್ರ ಪಡೆಯಿರಿ. ಔಷಧಿ ಬೆಲೆ ರೂ. 5/; ತೀವ್ರ ಗುಣಕಾರಿ ಔಷಧಿಗೆ ರೂ. 7/-

VIJOY PHARMACY (N)
P. O Katrisarai (Gaya)

NOTICE

Life Insurance Corporation of India.

Unit· Bombay Co-operative Insc. Society

Notice having been received of the loss of Policy numbered O.52834 on the life of Mr Jaganath Mennu Shetty, issued by the Bombay Co-operative Insurance Society, duplicate policy will be issued unless an objection is lodged with us in writing within one month from this date.

Sd/- R. B Shah,
Asstt Dnl Manager.

Bombay, Dated 31-3-1958.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಭೌತಿಕದರ್ಶನ— ಬರೆದವರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ: ಪ್ರಕಾಶಕರು: ಉಡುಪಿಯ ಕರ್ನಾಟಕ ಸಂಘ. ಪುಟ ೧೬+೯೩. ಬೆಲೆ: ರೂ. ೧-೦೦.

"ಅತಿ ಮಾನವ ಶಕ್ತಿಯ ನೆರವಿಲ್ಲದೆಯೇ ಈ ಪ್ರಪಂಚದ ಬಗ್ಗೆ ಕೊಡುವ ವಿವರಣೆಯೇ ಭೌತಿಕವಾದ. ಈ ಮಾರ್ಗದಲ್ಲಿ ನಡೆಸಿದ ಶತಮಾನಗಳ ಪ್ರಯತ್ನ ವಿಶ್ವದ ಕುರಿತ ಅದ್ವೈತದ ಗ್ರಹಿಕೆಯನ್ನೂ ಸ್ಥಿರಗೊಳಿಸಿದೆ. ಬುದ್ಧಿ-ಆತ್ಮ-ದೇಹಗಳ ಮೂಲದ್ರವ್ಯ ವಸ್ತುವೆಂಬುದನ್ನು ಈ ಶಾಸ್ತ್ರ ತೋರಿಸಿಕೊಟ್ಟಿದೆ". -ಭೌತಿಕವಾದದ ತಿರುಳು ಮತ್ತು ಸಾಧನೆ ಈ ಮಾತುಗಳಿಂದ ವ್ಯಕ್ತವಾಗುತ್ತದೆ. ಹಿಂದಿನ ಕಾಲದಲ್ಲಿಯೇ ವೇದೋಪನಿಷತ್ತುಗಳ ಕಾಲದಿಂದ ಭಾರತದಲ್ಲಿ, ಗ್ರೀಸ್, ಪರ್ಶಿಯಾ ಮೊದಲಾದೆಡೆಗಳಲ್ಲಿ ಈ ಭೌತಿಕವಾದವು ಹುಟ್ಟಿಕೊಂಡಿತ್ತು. ಆದರೆ, ಕೆಲವೊಮ್ಮೆ ಈ ವಾದದ ಬೆಳವಣಿಗೆಯು ಪುರೋಹಿತ ವರ್ಗದ ಸ್ವಾರ್ಥಸಾಧನೆಯ ಕುಯುಕ್ತಿಯಿಂದಾಗಿ ಕುಂಟಿತವಾಗುತ್ತಿದ್ದರೂ, ಅಜ್ಞಾನದ ಮುಸುಕನ್ನು ತೆರೆದು ಇದು ಬೆಳೆದು ಹೆಮ್ಮರವಾಗುತ್ತ ಬಂತು. ಇದನ್ನು ಪುರಸ್ಕರಿಸಿದವರು ಪುರೋಹಿತರ ಬಾಯಿಂದ ನಾಸ್ತಿಕರೆನಿಸಿಕೊಳ್ಳಬೇಕಾದ ಸಂದರ್ಭವೂ ಬಂದಿತ್ತು. ಆದರೆ, ಈ ಪ್ರಕೃತಿಯ ಬಗೆಗೆ ನಾವೆಷ್ಟು ಸೂಕ್ಷ್ಮವಾಗಿ ದೃಷ್ಟಿಸುತ್ತೇವೆಯೋ ಅಷ್ಟು ವಿಚಾರಗಳು ನಮಗೆ ಗೋಚರವಾಗುವುದು ದುರ್ಲಭವಲ್ಲ. ಈ ವಾದವನ್ನು ಒಪ್ಪುವವನು ತಿಳುವಳಿಕೆಯ ಮೇಲೆ ಧೈರ್ಯಶಾಲಿ ಸಭ್ಯ, ಸಗಳ ಮತ್ತು ನೀತಿಯುತ ಜೀವನ ನಡೆಸುತ್ತಾನೆ. ಸತ್ಯದರ್ಶನವೇ ಭೌತಿಕವಾದದ ಉದ್ದೇಶ. ದೈವವಾದಿ ನಾಸ್ತಿಕವಾದಿಗಳಿಗಿಂತ ಭೌತಿಕವಾದಿಯು ಉತ್ತಮ ಜೀವನವನ್ನು ಬಾಳುವನೆಂಬುದು ಸತ್ಯ.

ಈ 'ಭೌತಿಕ ದರ್ಶನ'ವೊಂದು ಜಟಿಲವಾದ ತತ್ವಶಾಸ್ತ್ರವನ್ನು ಸರಳ ಶೈಲಿಯಲ್ಲಿ ಕನ್ನಡಿಗರಿಗೆ ಸ್ಥೂಲವಾಗಿ ಪರಿಚಯ ಮಾಡಿಸಿಕೊಡುವ ಪ್ರಯತ್ನ. ಶಾಸ್ತ್ರ ಗ್ರಂಥಗಳೆಂದರೆ, ದೂರ ಸರಿಯುವ ಕನ್ನಡಿಗರು ಈ ಗ್ರಂಥವನ್ನು ಅಮೂಲಾಗ್ರವಾಗಿ ಅರ್ಥವಿಸಿಕೊಂಡು ಹೋದರೆ, ಶಾಸ್ತ್ರದ ಬಗ್ಗೆ ಸಾಮಾನ್ಯ ಕಲ್ಪನೆಯೂ ಅಭಿರುಚಿಯೂ ಹುಟ್ಟುವುದು. ಶ್ರೀ ಕೃಷ್ಣ ಭಟ್ಟರು ತಮ್ಮ ಲೇಖನಿಯ ಶಕ್ತಿಯಿಂದ ಲೇಖದಲ್ಲೊಂದು ಶಕ್ತಿಯನ್ನು ತುಂಬಿಸಿದ್ದಾರೆಂತಲೇ ಕ್ಲಿಷ್ಟ ವಿಷಯ ಒಂದು ಬಾರಿಗೇ ಮಂದಟ್ಟಾಗುವುದು ಅಸಾಧ್ಯವಾದರೂ ಮತ್ತೊಮ್ಮೆ ಓದುವ ತವಕವ ಹುಟ್ಟುತ್ತದೆ. ಗ್ರಂಥದಲ್ಲಿ ಮೊದಲಿಗೆ ಭೌತಿಕ ದರ್ಶನದ ಸಾರವನ್ನು ಸಂಗ್ರಹಿಕೊಟ್ಟು, ಭೌತಿಕವಾದ ಜನ್ಮತಾಳಿದ ಬಗೆಯನ್ನು ಮುಂದೆ ವಿವರಿಸಿದ್ದಾರೆ. ಕೊನೆಗೆ ಭಾರತದಲ್ಲಿ ಭೌತಿಕವಾದದ ಪರಂಪರೆಯನ್ನು ನಿವೇದಿಸಿದ್ದಾರೆ ಲೇಖಕರೇ ಎನ್ನುವಂತೆ ಇದರಲ್ಲಿ ಅವರು ಹೊಸತೇನನ್ನೂ ಹೇಳಿಲ್ಲ. ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನೇ ಇಲ್ಲವರು ಸಂಗ್ರಹಿಸಿಕೊಟ್ಟಿದ್ದಾರೆ ಕನ್ನಡದಲ್ಲಿ ಅಪರೂಪವಾಗಿರುವ ಇಂತಹ ಗ್ರಂಥಗಳು ಇನ್ನೂ ಪ್ರಕಾಶಕ್ಕೆ ಬರಲೆಂದು ಹಾರೈಸಿ ಈ ಗ್ರಂಥದ ಲೇಖಕ-ಪ್ರಕಾಶಕರನ್ನು ಪುನಃ ಅಭಿನಂದಿಸುತ್ತೇವೆ.

ಲುಪ್ತದಿಗಂತ—ಲೇಖಕರು: ಜೇಮ್ಸ್ ಹಿಲ್‌ಟನ್, ಕನ್ನಡಿಸಿದವರು: ಡಾ. ಕೆ. ಕೃಷ್ಣಮೂರ್ತಿ, ಎಂ. ಎ. ಬಿ. ಟಿ. ಪಿ. ಎಚ್. ಡಿ. ಪ್ರಕಾಶಕರು: ಮ್ಯಾಕ್ಮಿಲನ್ ಮತ್ತು ಕಂಪೆನಿ, ಲಿಮಿಟೆಡ್, ಮದರಾಸು, ಬೊಂಬಾಯಿ, ಕಲ್ಕತ್ತ, ಲಂಡನ್, ಪುಟ: XVIII+೧೦೬ ಬೆಲೆ ರೂ. ೨.೨೦.

ಇಂಗ್ಲಿಷ್ ಭಾಷಾವಿದರಿಗೆ ಜೇಮ್ಸ್ ಹಿಲ್‌ಟನ್ ಬರೆದ 'ಲೋಸ್ಟ್ ಹೊರಿಜನ್' ಎಂಬ ಕಾದಂಬರಿಯು ಬಹಳ ಮೆಚ್ಚಾಗಿದೆ. ಆದರೆ, ವಿಷಯದ ಸತ್ಯಾಸತ್ಯತೆಗಳು ಇಲ್ಲಿ ಮುಖ್ಯವಲ್ಲ; ಆದರೆ, ಕಥನ ಕುಶಲತೆ ಮಾತ್ರ ಆಕರ್ಷಕವಾಗಿದೆ. ಇಂತಹ ಆಂಗ್ಲ ಕಾದಂಬರಿಯೊಂದರ ಸಂಕ್ಷಿಪ್ತ ರೂಪವನ್ನು ಡಾ. ಮೂರ್ತಿಯವರು ಕನ್ನಡಕ್ಕೆ ಭಟ್ಟಿ ಇಳಿಸಿದ್ದಾರೆ. ಕನ್ನಡಿಗರಿಗೂ ಈ ಕಾದಂಬರಿಯನ್ನು ಆಸ್ವಾದಿಸುವ ಸೌಲಭ್ಯ ದೊರೆಯಬೇಕೆಂಬ ಉದ್ದೇಶವನ್ನು ಅವರಿಟ್ಟುಕೊಂಡಿದ್ದಾರೆ.

ಇಲ್ಲಿ ಬರುವ ಕಥೆಯು ರೋಮಾಂಚಕಾರಿಯೆನಿಸಿದೆ. ಬಾಸ್ಕಲ್‌ನಿಂದ ಒಂದು ವಿಮಾನದಲ್ಲಿ ಕುಳಿತ ನಾಲ್ವರು ಪಾಶ್ಚಾತ್ಯರು ತಮಗರಿವಿಲ್ಲದಂತೆಯೇ ಟಿಬೆಟಿನ ಷಾಂಗ್ರಿಲಾ ಮಠ ಸೇರಿದರು ಪ್ರಾರಂಭದಲ್ಲಿ ಅಲ್ಲಿನ ವಾಸವು ಅವರಿಗೆ ರೋಚಕವೆನಿಸದಿದ್ದರೂ ಅದರಲ್ಲಿ ಕಥಾನಾಯಕನಾದ ಕಾನ್ವೇಗೆ ಅದು ಕ್ರಮೇಣ ಹಿಡಿಸಿತು. ಧರ್ಮಪ್ರಚಾರಕಿ ಬ್ರಿಂಕ್‌ಲೋ ಅಲ್ಲಿಯೇ ಕ್ರಿಸ್ತಧರ್ಮ ಹರಡಿಸುವ ಯೋಜನೆಯನ್ನು ಮಾಡಿದಳು. ಬರ್ನಾರ್ಡನು ತನ್ನ ಜೀವ ರಕ್ಷಣೆಗಾಗಿ ಅಲ್ಲಿಯೇ ನಿಲ್ಲಲು ಬಯಸಿದನು. ಮ್ಯಾಲಿನ್ಸನ್ ಮಾತ್ರ ಸುಡುಕುತ್ತಲೇ ಇದ್ದನು. ಅತನಿಗೆ ಅಲ್ಲಿ ನಿಲ್ಲುವುದೆಂದರಾಗುತ್ತಿದ್ದಿಲ್ಲ. ಕಾನ್ವೇಯನ್ನು ಮಹಾಲಾಮನು ಪೆರಾಲ್ಟನು ಕರೆಸಿಕೊಂಡು ಷಾಂಗ್ರಿ-ಲಾ ಮಠದ ಸ್ಥಾಪನಾದಿ ವಿಚಾರಗಳನ್ನು ತಿಳಿಸಿ, ತನ್ನ ಅಧಿಕಾರವನ್ನು ಕೊಡುವುದಕ್ಕಾಗಿಯೇ ಅವನನ್ನಲ್ಲಿಗೆ ಕರೆಸಿದುದೆಂದು ತಿಳಿಸಿದನು. ಆತನು ಮರಣಗೊಂಡಾಗ, ಮ್ಯಾಲಿನ್‌ಸನನ ಉತ್ಸಾಹ, ಅವಿವೇಕಗಳಿಂದಾಗಿ ಕಾನ್ವೇ ಆತನೊಡನೆ ಮಠದಿಂದ ಹೊರಬಂದು, ಕಥೆಯು ದುರಂತವಾಗಿ ಕೊನೆ ಹೊಂದುವುದು

ಟಿಬೆಟಿನ ಜನರು ೨೦೦-೩೦೦ವರ್ಷಕಾಲ ಬದುಕುವರೆನ್ನುವರಿದ್ದರಂತೆ ಈ ಕಾದಂಬರಿಯಲ್ಲೂ ಅಲ್ಲಿನ ಮಹಾಲಾಮಾ ಮುದುಕರ ಮುದುಕ. ಮತ್ತು ಮಠವಾತಾವರಣವನ್ನು ಬಿಟ್ಟು ಅಲ್ಲಿ ಸೇರಿದವರು ಹೊರ ಬಂದರೆ ಅವರ ಮುದಿತನವು ಸುವ್ಯಕ್ತಗೊಳ್ಳುವುದು. ಈ ಕಥೆಯ ಅಂತ್ಯ ಹೀಗಾಗದುದಕ್ಕೆ ಇದೂ ಒಂದು ಕಾರಣವೆನ್ನಬಹುದು. ಕಥೆಯ ಆದ್ಯಂತ ವಿಸ್ಮಯ, ಕುತೂಹಲ, ಸ್ವಾರಸ್ಯಗಳ ಸುರಿಮಳೆಯಿದೆ. ಕಥೆಯ ಓಟವು ಇದರಿಂದ ತೀವ್ರವಾಗುತ್ತದೆ. ಮುಗಿಯದ ಕಥೆಯಾಗಿರಬೇಕಿತ್ತೆಂಬ ಆಕಾಂಕ್ಷೆಯನ್ನು ಹುಟ್ಟಿಸುತ್ತದೆ. ಅಲ್ಲಲ್ಲಿ ಅದ್ಭುತ ಚಮತ್ಕಾರಗಳಂತೆ ಘಟನೆಗಳು ತೋರುತ್ತವೆ. ಒಂದರ ಹಿಂದೊಂದು ಇಂತಹ ಘಟನೆಗಳು ಬರುತ್ತವೆ-ಎಂತಲೇ ಕಥೆ ಮುಂದುವರಿಯುತ್ತದೆ. ಅಂತ್ಯದಲ್ಲಿ ಸತ್ಯಕಥೆ ಹೌದೇ ಅಲ್ಲವೇ ಎಂಬ ಪ್ರಶ್ನೆಯನ್ನು ಕೆರಳಿಸುತ್ತದೆ. ಅದಕ್ಕೆ ಸಾಕಷ್ಟು ಸಹಾಯವನ್ನು ಮೊದಲಿನ ಮತ್ತು ಕೊನೆಯ ಮಾತುಗಳು ಈಯುತ್ತವೆ; ಮತ್ತು ತತ್ಪರಿಣಾಮವಾಗಿ ನಂಬಿದರೂ ನಂಬಬಹುದು ಎನಿಸುತ್ತದೆ. ಅಂತೆಯೇ ಕಾದಂಬರಿಯ ಹೆಸರು "ಲುಪ್ತ ದಿಗಂತ" ಅನ್ವರ್ಥವೇ ಆಗಿದೆ.

ಕಥೆಯ ವಾಸ್ತವಿಕತೆಯೊಂದನ್ನುಳಿದರೆ, ಉಳಿದ ಪಾತ್ರಚಿತ್ರಣ, ಘಟನೆಗಳ ಜೋಡಣೆ ಮೊದಲಾದುವುಗಳು ಉತ್ಕೃಷ್ಟವಿವೆ. ನಾಟಕೀಯ ಚಮತ್ಕಾರ ಸಹಿತ ಸಂಭಾಷಣೆಗಳು ಮನಮೋಹಕವಿವೆ ಇದರಲ್ಲಿ ಸರ್ವಕಾಲಿಕ ಸಮಸ್ಯೆಯ ನಿರೂಪಣೆ—ಪರಿಹಾರಗಳಿವೆ. ಡಾ. ಮೂರ್ತಿಯವರ ಮಾಧುರ್ಯಪೂರಿತ ವಾಕ್ಶಕ್ತಿ ಇಲ್ಲಿ ತನ್ನ ಕಾರ್ಯವನ್ನು ಉಚಿತವಾಗಿಯೇ ಮಾಡಿದೆ. ಆಕರ್ಷಕವಾಗಿಯೇ ಈ ಕನ್ನಡ ರೂಪವೂ ಬಂದಿದೆ. ಜಡಿಯಲ್ಲೊಂದು ಸಣ್ಣ ವಿಮರ್ಶೆಯನ್ನು ಜೋಡಿಸಲಾಗಿದೆ. ಇಂತಹ ಕೃತಿಯನ್ನು ಕನ್ನಡಿಸಿದ ಕನ್ನಡಿಗರೂ ಪ್ರಕಾಶಿಸಿದ ಪ್ರಕಾಶಕರೂ ಜನತೆಯ ಕೃತಜ್ಞತೆಗೆ ಅರ್ಹರು.

ವಿಳಂಬಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗ—ಸಂಪಾದಕರು: ಕರಿಂಗ ಕೃಷ್ಣ ಬನ್ನಿಂತಾಯ ಮತ್ತು ಪುರಕೂರು ರಾಮಚಂದ್ರಾಚಾರ್ಯ. ಪರಿಶೋಧಕರು: ಶ್ರೀ ವೇ। ಯಮುನಾಜ ಶಂಕರ ಜೋಯಿಸರು ದೊರೆಯುವ ಸ್ಥಳ ಕರಿಂಕ ಕೃಷ್ಣ ಬನ್ನಿಂತಾಯ, ಪೋಸ್ಟು ವಿಟ್ಲ ದ. ಕ ಪುಟಗಳು ೬೪. ಬೆಲೆ ರೂ. ೦-೪೧ (೦-೬-೬).

೧೮೮೦ ಶಾಲಿವಾಹನ ಶಕ ವಿಳಂಬಿ ಸಂವತ್ಸರದ ಶಾಸ್ತ್ರಸಿದ್ಧ ಶ್ರೀಕೃಷ್ಣ ಪಂಚಾಂಗವು ವಿದ್ವನ್ಮಣಿದ್ವಯರಿಂದ ಸಂಪಾದಿತವಾಗಿ ಪರಿಶೋಧಿಸಲ್ಪಟ್ಟಿವೆ. ಇದು ಕ್ರಿಸ್ತ, ಸೌರಮಾನ, ಚಾಂದ್ರಮಾನ ತಾರೀಕುಗಳ ಜತೆಗೆ ಭಾರತದ ರಾಷ್ಟ್ರೀಯ ಪಂಚಾಂಗಂಶಗಳನ್ನೂ ಒಳಗೊಂಡಿರುವುದು. ಪಂಚಾಂಗಫಲ, ಆವಶ್ಯಕ ಮುಹೂರ್ತಗಳು, ಹಾಗೂ ಮತ್ತಿತರ ಜೋತಿಷ ವಿಷಯಗಳೊಂದಿಗೆ ರಾಶಿ ಭವಿಷ್ಯವನ್ನೂ ಕೊಡಲಾಗಿದ್ದು, ಉಪಯುಕ್ತವಾಗಿದೆ. ಈ ಪಂಚಾಂಗಕ್ಕೆ ಶುಭಕೋರುತ್ತೇವೆ.

ಉದಯ—(ಐದನೆಯ ಹುಟ್ಟು ಹಬ್ಬದ ನೆನೆಪು) ಪ್ರಧಾನ ಸಂಪಾದಕರು: ಬಾಳೇಶ ಲಕ್ಷೆಟ್ಟಿ, ಸಂಪಾದಕರು: ಮಹಾದೇವ ಹೂಲಿ ಪ್ರಕಾಶಕರು: ಉದಯ ಪ್ರಕಾಶನ, ಗಂಗಾನಿಲಯ, ಗೋಕಾಕ. ಪುಟಗಳು: ೨೮. ಬೆಲೆ: ರೂ. ೦-೨೫.

ಗೋಕಾಕದಲ್ಲಿನ 'ಉದಯ' ಬಳಗದ ನೇತೃತ್ವದಲ್ಲಿ ಹೊರಡುತ್ತಿದ್ದ ಉದಯ ಹಸ್ತಲಿಖಿತ ಪತ್ರಿಕೆಯು ಐದನೆಯ ಹುಟ್ಟು ಹಬ್ಬದ ನವಿ ನೆನಹುಗಾಗಿ ಪ್ರಕಾಶಿಸಿದ ಈ ಸಂಚಿಕೆಯನ್ನು ಸ್ವಾಗತಿಸಬೇಕು ಇದರಲ್ಲಿ ಹಲವಾರು ವಿದ್ವಾಂಸರ ಲೇಖನಗಳೂ ಕವಿಗಳ ಕವನಗಳೂ ಕಥೆಗಳೂ ಸೇರಿಕೊಂಡಿದ್ದು, ಕನ್ನಡಿಗರಿಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಾಹಿತ್ಯಸ್ವಾರಸ್ಯವನ್ನೊದಗಿಸುತ್ತದೆ. ಪ್ರೊ. ವಿ. ಜಿ. ಕುಲಕರ್ಣಿಯವರು ಛಂದಸ್ಸು ಮತ್ತು ಅಲಂಕಾರ ಶಾಸ್ತ್ರಸಂಬಂಧದ ಲೇಖನದಲ್ಲಿ ವಿವೇಚನೆಯು ಕಡಿಮೆಯಾಗಿದೆ ಎಂದು ಹೇಳಬಹುದು ಕನ್ನಡದಲ್ಲಿ ವಿಸ್ತಾರವಾಗಿ ಆಧುನಿಕ ಮತಾನುಸಾರವಾಗಿ ಅಲಂಕಾರ ಶಾಸ್ತ್ರವನ್ನು ಪ್ರತಿಪಾದಿಸುವ ಅಪ್ರತಿಮ ಹೀಗೆ ಚರಿತ್ರೆಗೆ ಇಲ್ಲಿ ಸಾಕಷ್ಟು ಗಮನಕೊಟ್ಟಿಲ್ಲ. ಸಂಚಿಕೆಯ ಲೇಖನಗಳಿಗಿಂತಲೂ ಕವಿತೆಗಳು ಆಕರ್ಷಕವಾಗಿವೆ ಬಳಗದವರು ಇನ್ನೂ ಸುಂದರವಾದ ಸಂಚಿಕೆಗಳನ್ನು ಹೊರತರಲಿ.

ಗಂಗೆಯ ಸ್ಮಾರಕ ಫಂಡು, ಮುಂಬಯಿ- (೧೯೫೭ನೆ ವಾರ್ಷಿಕ ವರದಿ ೧೯೫೭) ಸಂಚಾಲಕರು: ಮಿತ್ರಪಟ್ಟ ಮೊಗವೀರ ಸಭಾ, ಮುಂಬಯಿ.

ಕಳೆದ ಹದಿನೈದು ವರ್ಷಗಳಿಂದ ನಡೆಸಲ್ಪಡುತ್ತಿರುವ ಈ ಫಂಡಿನ ವರದಿಯನ್ನು ಅವಲೋಕಿಸಲು ಹೆಮ್ಮೆಯೆನಿಸುವುದು. ಪರವೂರಿನಲ್ಲಿದ್ದು ತಮ್ಮ ಊರನ್ನು ಮರೆಯದೆ ಅಲ್ಲಿ ರಾತ್ರಿ ಶಾಲೆ, ವಾಚನಾಲಯ ಮೊದಲಾದುವನ್ನು ಯಥಾಯೋಗ್ಯವಾಗಿ ಮುಖ್ಯಸ್ಥರ ನೆರವಿನಿಂದ ನಡೆಸಿಕೊಂಡು ಬರುತ್ತಿರುವ ಈ ಫಂಡಿನ ಕಾರ್ಯಕಲಾಪಗಳು ಸ್ತುತ್ಯಾರ್ಹವಿರುತ್ತವೆ. ಅಲ್ಲದೇ ಕಳೆದ ವರ್ಷದಲ್ಲಿ ತನ್ನದೇ ಆದ ಒಂದು 'ಭವನ'ವನ್ನೂ ನಿರ್ಮಿಸಿಕೊಂಡಿರುವುದು ಅಭಿನಂದನೀಯ. ಜನತೆಯಲ್ಲಿ ಆಧ್ಯಾತ್ಮಿಕ ಜ್ಯೋತಿಯನ್ನು ಬೆಳಗಿಸುವ ಸಲುವಾಗಿ ಶ್ರೀ ರಾಮ ಭಜನಾ ಮಂಡಳಿಯನ್ನೂ ವಿದ್ಯಾರ್ಥಿ ವೇತನವನ್ನೂ ಈ ಫಂಡು ತನ್ನ ಸ್ವಂತ ವೆಚ್ಚದಿಂದ ಮುಂದುವರಿಸಿಕೊಂಡು ಬರುತ್ತಿದೆ. ಆರ್ಥಿಕ ಸ್ಥಿತಿಗತಿಗಳು ತೃಪ್ತಿಕರವಿವೆ ಎನ್ನಬಹುದು. ಇಂತಹ ಸಮಾಜ ಸೇವೆಯನ್ನು ನಿರಪೇಕ್ಷ ಬುದ್ಧಿಯಿಂದ ಮಾಡುತ್ತಿರುವ ಈ ಸಂಸ್ಥೆಯು ಇನ್ನೂ ಬೆಳೆದು ಬರಲೆಂದು ಬಯಸುತ್ತೇವೆ.

ರಾಜಾಪುರ ಸಾರಸ್ವತ ಸಂಘ, ಮುಂಬಯಿ-೧೭ (ಆನೆ ವರ್ಷದ ವರದಿ ೧೯೫೭)

ರಾಜಾಪುರ ಸಾರಸ್ವತ ಬಂಧುಗಳು ಸಮಾಜದಲ್ಲಿ ಸಹಕಾರವನ್ನು ಸ್ಥಾಪಿಸಲು ಕಟ್ಟಿಕೊಂಡ ಮೇಲಿನ ಸಂಸ್ಥೆಯ ೧೯೫೭ನೆ ವರ್ಷಕ್ಕೆ ಸಂಬಂಧಿಸಿದ ವಾರ್ಷಿಕ ವರದಿಯು ಕೈಸೇರಿದೆ ಸಮಾಜದಲ್ಲಿ ವಿದ್ಯಾ ಪ್ರಚಾರ, ಯೋಗ್ಯ ವಿದ್ಯಾರ್ಥಿಗಳಿಗೆ ಪುರಸ್ಕಾರ, ವಿದ್ಯಾರ್ಥಿ ಭವನಗಳ ನಿರ್ಮಾಣ ಮೊದಲಾದ ಹಲವಾರು ಧ್ಯೇಯಗಳನ್ನಿಟ್ಟುಕೊಂಡು ೮ ವರ್ಷಗಳ ಹಿಂದೆ ದಲ್ಲಿ ಈ ಸಂಘವು ಸ್ಥಾಪನೆಯಾಗಿತ್ತು. ಪ್ರಕಟಿತ ವರದಿಯಲ್ಲಿ ಈ ಧ್ಯೇಯಗಳು ಕೆಲಮಟ್ಟಿಗೆ ಪೂರ್ಣಗೊಂಡಿರುವ ಉಲ್ಲೇಖಗಳಿವೆ. 'ಎ' ಮತ್ತು 'ಬಿ' ವರ್ಗದ ಸದಸ್ಯರ ಹೆಸರುಗಳನ್ನು ಈ ವರದಿಯಲ್ಲಿ ಅಚ್ಚುಮಾಡಲಾಗಿದೆ. ಈ ವರ್ಷದ ಲೆಕ್ಕಪತ್ರಗಳಂತೆ ರೂ. ೧೧೦೦ಕ್ಕೂ ಮಿಕ್ಕಿ ವಿದ್ಯಾರ್ಥಿ ವೇತನಗಳನ್ನು ಸಂಘವು ಕೊಟ್ಟಿರುತ್ತದೆ. ಸಂಘದ ಆರ್ಥಿಕಸ್ಥಿತಿಯೂ ಸಾಧಾರಣವಾಗಿ ತೃಪ್ತಿಕರವಾಗಿದೆಯೆನ್ನಬಹುದು. ಸಂಘವು ದಿನೇ ದಿನೇ ಪ್ರವರ್ಧಮಾನವಾಗಲೆಂದು ಹಾರೈಸುತ್ತೇವೆ.

—ಗೋರಾ.

In the Court of the District Munsif of Mangalore

O. P. No 5...

Between:
In the matter of the assets of Deceased A. R. Krishna R... alias Krishnappa Ramappa Attavar.

To

All whomsoever it may concern

Notice is hereby given that the petitioners have applied to this Court for the grant of a Succession Certificate in the name of the 1st petitioner to collect the assets of late Sri A. R. Krishna R... alias Krishnappa Ramappa Attavar who died intestate on 19—7—1957 and the said application will come up for hearing on 12—4—1958 before the said Court. Any person interested may appear before the said Court on the said day at 11 A. M. and oppose the grant thereof.

(By order of Court)

(*Sd*) B. Gangadhar Das.
Advocate for Petitioners
Mangalore, 7-3-1958.

ಭವಿಷ್ಯಕಾಲದ ವೈಜ್ಞಾನಿಕ ಶೋಧನೆ–

ಆಕಾಶಬಾಣ ವಿಮಾನಗಳು

ಆಕಾಶಬಾಣ ಯಂತ್ರಕಲೆಯ ವಿಕಾಸವು ತೀವ್ರಗತಿಯಿಂದಾದುದರಿಂದ ಈಗಾಗಲೇ ವಾತಾವರಣದ ಎತ್ತರದ ಸ್ತರಗಳಲ್ಲಿ ಆಕಾಶಬಾಣಗಳಂತೆ ಹಾರಲು ಸಮರ್ಥವಾದ ವಾಯುವಿಮಾನಗಳ ನಿರ್ಮಾಣ ಕಾರ್ಯವು ಸಾಧ್ಯವೆನಿಸಿದೆ. ಈ ಉನ್ನತ ವಾತಾವರಣದಲ್ಲಿ ಅತ್ಯಂತ ವೇಗದಿಂದ ಹಾರಬಲ್ಲ ವಿಮಾನಗಳನ್ನು ರಾಕೆಟ್ ಪ್ಲೇನ್ಸ್ ಅಥವಾ ಆಕಾಶಬಾಣ ವಿಮಾನಗಳು ಎನ್ನಬಹುದು.

ಆಕಾಶದ ಹೊರಗೆ ಆಕಾಶಬಾಣದಂತೆ ಏರಿ ಹೋಗಬಲ್ಲ ಮತ್ತು ಭೂಮಿಗೆ ಮರಳಿ ಬರುವಾಗ ಸಾಮಾನ್ಯ ವಿಮಾನಗಳಂತೆ ಇಳಿದು ಬರಬಲ್ಲ ಹಾರುವ ಯಂತ್ರಗಳನ್ನೇ ಆಕಾಶಬಾಣ ವಿಮಾನಗಳೆನ್ನುತ್ತಾರೆ. ಸಾಧ್ಯವಿದ್ದಷ್ಟು ತ್ವರಿತ ಗತಿಯಲ್ಲಿ ಅವು ಭೂಮಿಯಿಂದ ಹೊರಟು ತನಗೆ ತಾನೇ ಮೇಲಕ್ಕೆ ಏರುತ್ತ ಹೋಗಿ ಬಲು ವೇಗನೇ ವಾತಾವರಣದ ವಿರಳಸ್ತರಗಳನ್ನು ತಲಪುವುವು. ತಾಸಿಗೆ ೧೨೦೦೦ದ ೧೫ ಸಾವಿರ ಕಿಲೋಮೀಟರುಗಳಷ್ಟು ವೇಗವನ್ನು ಪಡೆದ ನಂತರ ಚಾಲಕನು ಆಕಾಶಬಾಣ ಯಂತ್ರಗಳನ್ನು ಸ್ಥಗಿತಗೊಳಿಸುತ್ತಾನೆ. ಆಗ, ಆಕಾಶಬಾಣ ವಿಮಾನವು ಒಂದು ಚೆಸ್ಸಿನಂತೆ, ತಾನು ಚಲನರಹಿತ ಸ್ಥಿತಿಯಲ್ಲಿದ್ದರೂ ಮುಂದಕ್ಕೆ ನೆಗೆಯುತ್ತ ಹೋಗುವುದು. ಅಂಡಾಕಾರದ ನಕ್ಷತ್ರ ಪ್ರಕ್ಷೇಪವನ್ನು ಮಾಡಿದ ತರುವಾಯ ಅದು ವಾತಾವರಣದ ಸಾಂದ್ರಸ್ತರಗಳೊಳಗೆ ಇಳಿಯುವುದು. ಇಲ್ಲಿ ಅದರ ರೆಕ್ಕೆಗಳು ಅವಶ್ಯಕವಾದ ಉತ್ಥಾನ ಸ್ಥಿತಿಯನ್ನು ನಿರ್ಮಿಸುವುವು ಮತ್ತು ವಿಮಾನವು ಸ್ವಯಮೇವ ಮೆಲ್ಲನೆ ಜಾರಲಾರಂಭಿಸುವುದು. ವಾಯುವನ್ನು ಆಧಾರವಾಗಿಟ್ಟುಕೊಳ್ಳುತ್ತ ಮಹತ್ತರವಾದ ತನ್ನ ಸ್ವಂತ ವೇಗ ನಿಧಿಯನ್ನು ಬಳಸಿಕೊಂಡು, ಈ ಹಾರುವ ಯಂತ್ರವು ಇನ್ನೊಮ್ಮೆ ವಾತಾವರಣದ ವಿರಳ ಸ್ತರಗಳೊಳಕ್ಕೆ ನುಗ್ಗಿ ಮೇಲೇರುವುದು ಮತ್ತು ಎರಡನೆಯ ವಕ್ರಪಥವನ್ನು ಅನುಸರಿಸುವುದಲ್ಲದೇ ಇನ್ನಿತರ ಉತ್ಕ್ಷೇಪಕ ವಕ್ರಪಥಗಳನ್ನು ತನ್ನ ಚಲನಶಕ್ತಿ ನಿಧಿಯನ್ನು ಪೂರ್ತಿಯಾಗಿ ವಿರ್ಚು ಮಾಡುವ ವರೆಗೂ ಅನುಸರಿಸುತ್ತ ಹೋಗುವುದು.

ಉರುವಲಿನ ಯಾವ ವೆಚ್ಚವೂ ಇಲ್ಲದೆ ಈ ಆಕಾಶಬಾಣ ವಿಮಾನವು ಅನೇಕ ಸಾವಿರ ಕಿಲೋಮೀಟರುಗಳಷ್ಟು ದೂರದ ವರೆಗೆ ಹಾರಲು ಸಮರ್ಥವಾಗುವುದು. ಅದರ ಸಂಚಾರಪಥವು ಜಲಾಶಯದ ನಯವಾದ ಮೇಲ್ಮೈಯ ಮೇಲೆ ನೈಪುಣ್ಯದಿಂದ ಸಣ್ಣ ಕೋನ ರೂಪದಲ್ಲಿ ಎಸೆಯಲ್ಪಟ್ಟ ಸಮತಲವಾದ ಕಲ್ಲಿನ ತರಂಗದ ಚಲನೆಯಂತಿರುವುದು.

ಗಾಳಿಯ ಸ್ತರಗಳಿಗೆ ಈ ವಿಮಾನವು ಒಂದು ತಲಪಿದಾಗ ಅದು ಸುಟ್ಟು ಹೋಗಬಹುದು. ಇದನ್ನು ತಪ್ಪಿಸುವುದಕ್ಕಾಗಿ, ವಿಮಾನದ ವೇಗವನ್ನು ಕಡಿಮೆಮಾಡಬೇಕಾಗುವುದು. ಗಾಳಿಯೊಡನೆ ಅದರ ಸಂಘರ್ಷದ ಕ್ಷೇತ್ರವನ್ನು ತ್ವರೆಯಿಂದ ಹೆಚ್ಚಿಸುವುದರಿಂದ ವೇಗವು ಕುಗ್ಗುವುದು. ಒಂದು ಗಿಡುಗನ ಬೇಟೆಯನ್ನು ಸಮೀಪಿಸುವುದನ್ನು ಸ್ಮರಿಸಿಕೊಂಡರೆ ಈ ತತ್ತ್ವಾರ್ಥವಾಗುವುದು. ಮೊದಲು ಈ ಪಕ್ಷಿಯು ತನ್ನ ರೆಕ್ಕೆಗಳನ್ನು ಮುಡಚಿಕೊಂಡು ಕೆಳಕ್ಕೆ ಬೀಳುತ್ತಿರುವ ಕಲ್ಲಿನಂತೆ ಕೆಳಕ್ಕಿಳಿದು ಬರುತ್ತದೆ. ಆದರೆ, ಭೂಮಿಗೆ ಸಾಕಾದಷ್ಟು ಸಮೀಪಬಂದಾಗ, ಈ ಪಕ್ಷಿಯು ತನ್ನ ರೆಕ್ಕೆಗಳನ್ನು ಬಿಚ್ಚಿ ಸಾಧ್ಯವಾದಷ್ಟು ವಿಶಾಲವಾಗಿ ಹರಡಿಸಿ ಸುಲಭವಾಗಿ ಇಳಿಯುತ್ತದೆ. ಅದು ನೇರಾಗಿ ಭೂಮಿಯ ಮೇಲೆ ಉರುಳುವುದಿಲ್ಲ. ಆಕಾಶಬಾಣ ವಿಮಾನವೂ ತನ್ನ ರೆಕ್ಕೆಗಳನ್ನು ಬಿಚ್ಚಬೇಕಾಗುವುದು. ಆಗ ಮಾತ್ರ ಅದು ತನ್ನ ವೇಗವನ್ನು ಇಳಿಸಿ ಸುರಕ್ಷಿತವಾಗಿ ಭೂಮಿಯಲ್ಲಿ ಇಳಿಯಬಹುದು.

ಏರುವಾಗ್ಯೂ ಆಕಾಶಬಾಣದಂತೆಯೂ ಇಳಿಯುವಾಗ ಸಾಮಾನ್ಯ ಜಾರು ವಿಮಾನದಂತೆಯೂ ಚಲಿಸಬಲ್ಲ ಯಂತ್ರ ರಚನೆಯು ಜಟಿಲವಾದುದು. ವಾಯು ವಿಮಾನವನ್ನು ಗ್ರಹಗಳೊಳಗೆ ಪ್ರಯಾಣಿಸಲು ಸರಿಯಾಗುವಂತೆ ರೂಪಾಂತರಗೊಳಿಸುವ ವಿಶಾಲ ಕಾರ್ಯದಲ್ಲಿ ಇದು ಪ್ರಾಯಃ ಅಂತಿಮ ಘಟ್ಟವಾಗಿದೆ. ಈ ವಿಮಾನವು ವಿಶ್ವಾಕಾಶದಲ್ಲಿ ತಾಸೊಂದಕ್ಕೆ ೧೫ ಸಾವಿರ ಕಿಲೋಮೀಟರು, ಎಂದರೆ ಸುಮಾರು ೯೩೭೫ ಮೈಲಿಗಳಷ್ಟು ವೇಗದಲ್ಲಿ ಹಾರಲು ಸಮರ್ಥವಾಗಿರಬೇಕಲ್ಲದೇ ಭೂಮಿಯ ಬಳಿಯಲ್ಲಿ ಸಾಮಾನ್ಯ ವಾಯು ವಿಮಾನದ ಇಳಿತದ ವೇಗವನ್ನೂ ಪಡೆದಿರಬೇಕು. ಇಂತಹ ಪರಿಸ್ಥಿತಿಯಲ್ಲಿ ಕೆಲಸ ಮಾಡಬಲ್ಲ ಹಾರುವ ಯಂತ್ರವು ತನ್ನ ರೆಕ್ಕೆಗಳ ಕ್ಷೇತ್ರವನ್ನು ಬದಲಾಯಿಸಿಕೊಳ್ಳಲು ಸಮರ್ಥವಾಗಿರಬೇಕು.

ಆಕಾಶಬಾಣ ವಿಮಾನದ ಚಾಲಕ ಯಂತ್ರಗಳ ಎಳೆತದ ಶಕ್ತಿಯು ಕನಿಷ್ಠ ಪಕ್ಷ ೩೦ ಟನ್ನುಗಳಷ್ಟಾದರೂ ಇರಬೇಕು. ಈಗಾಗಲೇ ಗೊತ್ತಾಗಿರುವಂತೆ ಖಂಡಾಂತರಗಾಮಿ ಉತ್ಕ್ಷೇಪಕ ಆಕಾಶಬಾಣ ಯಂತ್ರಗಳ ಎಳೆತದ ಶಕ್ತಿಯು ಈ ಪ್ರಮಾಣವನ್ನು ಮೀರಿದೆ. ಆದುದರಿಂದಲೇ ಇಂತಹ ಪ್ರಯೋಗದಲ್ಲಿ ಯಶಸ್ವಿಯಾಗಿರುವ ದೇಶವು ಆಕಾಶಬಾಣ ವಿಮಾನವನ್ನು ಬೇಗನೇ ನಿರ್ಮಿಸುವುದು ಸಾಧ್ಯವೆಂದು ಹೇಳಬಹುದು.

ಆಕಾಶಬಾಣ ವಿಮಾನಗಳ ಹಾರಾಟವು ವಾತಾವರಣದ ಸೀಮೆಯಲ್ಲಿ ಮಾತ್ರವಲ್ಲ ಶೂನ್ಯ ಸ್ಥಿತಿಯಲ್ಲಿಯೂ ನಡೆಯುವುದು. ಅತ್ಯಂತ ಉತ್ತರ ಪ್ರದೇಶಗಳಲ್ಲಿ ಆಮ್ಲಜನಕ ಮತ್ತು ಸಾರಜನಕಗಳ ಗಣನೀಯ ಪ್ರಮಾಣವು ಪರಮಾಣುಸ್ಥಿತಿಯಲ್ಲಿಯೂ ಅಯಸ್ಕೃತ ಪರಿಸ್ಥಿತಿಯಲ್ಲಿಯೂ ಕಂಡುಬರುತ್ತದೆ ಮತ್ತು ಈ ಪರಮಾಣುಗಳು ಅಲ್ಲಿ ಇತರ ಗುಣಗಳನ್ನೂ ಹೊಂದಿಕೊಂಡಿರುತ್ತವೆ. ವಾತಾವರಣದ ಗಡಿಸ್ತರದ ಸ್ಥಿತಿಯ ಮೇಲೆಯೂ ವಾಯುಗತಿಸ್ವರೂಪದ ಮೇಲೆಯೂ ಇದು ಪ್ರಭಾವವನ್ನು ಬೀರಬಲ್ಲುದು. ಆಕಾಶಬಾಣ ವಿಮಾನ ರಚನೆಯಲ್ಲಿ, ಅದನ್ನು ನಿಯಂತ್ರಿಸುವ ಸಾಧನಗಳ ವಿಸ್ತಾರ ಸ್ವರೂಪವು ಅತ್ಯಂತ ಕಠಿನ ಸಮಸ್ಯೆಯಾಗಿದೆ.

ಭೂಮಿಯ ಬಳಿ ಹಾರುತ್ತಿರುವ ಸಾಮಾನ್ಯ ವಿಮಾನದ ಹಾರಾಟದ ದಿಕ್ಕನ್ನು ಬದಲಾಯಿಸುವುದಕ್ಕಿಂತಲೂ ಆಕಾಶಬಾಣದ ವಿಮಾನದ ಒಡ್ಡಾಣದ ದಿಸೆಯನ್ನು ಪರಿವರ್ತಿಸುವುದು ಕಠಿಣ ಕೆಲಸವಾಗಿದೆ. ಸಾಮಾನ್ಯ ವಿಮಾನವು ತನ್ನ ಯಾನದಿಶೆಯನ್ನು ಪಲ್ಲಟಿಸುವಾಗ ಅದು ಗಾಳಿಯ ಮೇಲಿರುವುದು ಸಾಧ್ಯ. ೧೫೦ ಮೈಲಿಗಳ ಎತ್ತರದಲ್ಲಿ ಇಂತಹ ವಾಯುವಿನ ಆಧಾರವಿರುವುದಿಲ್ಲ. ಆದುದರಿಂದ ಆಕಾಶಬಾಣದ ದೆಸೆಯನ್ನು ಬದಲಿಸಲು, ಹಾರಾಟದ ದಿಕ್ಕಿಗೆ ಬೇರಾದ ಕೋನಸ್ಥಿತಿಯಲ್ಲಿ ಅಧಿಕವಾಗಿಟ್ಟುಕೊಂಡಿರುವ ಆಕಾಶಬಾಣ ಚಾಲಕ ಯಂತ್ರಗಳನ್ನು ಬಳಸಿಕೊಳ್ಳುವುದರಿಂದ ಉದ್ದೇಶವನ್ನು ಪೂರಿಸಿಕೊಳ್ಳಬಹುದು. ಈ ಚಾಲಕ ಯಂತ್ರಗಳ ಎಳೆತದ ಶಕ್ತಿಯು ಚಲಿಸದ ಪಥವನ್ನು ಬೇರಾದ ದಿಕ್ಕಿಗೆ ತಿರುಗಿಸುವಲ್ಲಿ ಜಯಪ್ರದವಾಗುವುದು.

ಅತ್ಯಧಿಕ ವೇಗವರ್ಧಕಗಳನ್ನು ತಪ್ಪಿಸುವಾಗ ಚಾಲಕ ಸಿಬ್ಬಂದಿ ಮತ್ತು ಪ್ರಯಾಣಿಕರ ಜೀವನಪರಿಸ್ಥಿತಿಗೆ ಅವಶ್ಯಕ ಸೌಕರ್ಯಗಳನ್ನೊದಗಿಸುವುದು ಅಗತ್ಯ. ಎತ್ತರದ ಹಾರಾಟದಲ್ಲಿ ಆಕಾಶಬಾಣ ವಿಮಾನದ ಪ್ರಯಾಣಿಕರು ಐದು ಪಾಲು ಅತಿಕ್ರಮಕ್ಕಿಂತಲೂ ಹೆಚ್ಚಿನ ತುಯ್ತಕ್ಕೆ ಗುರಿಯಾಗಬಾರದು. ವಿಕ್ಷೇಪ ವಕ್ರಮಾರ್ಗದ ಮೂಲಕ ಕೆಳಗಿಳಿಯುತ್ತಿರುವಾಗ, ಆಕಾಶಬಾಣ ವಿಮಾನದ ಪ್ರಯಾಣಿಕರು ಭಾರರಹಿತ ಸ್ಥಿತಿ ಸ್ಥಿರತರ... ದೀರ್ಘಾವಧಿಯವರೆಗೆ ಭಾರರಹಿತ ಸ್ಥಿತಿಯಲ್ಲಿರುವುದರಿಂದ ಮಾನವ ಶರೀರದ ಮೇಲೆ ಯಾವ ಪರಿಣಾಮವಾಗಬಹುದು ಮತ್ತು ವಿಮಾನ ಚಾಲಕನ ದಿಶಾಪರಿಜ್ಞಾನ ಸಾಮರ್ಥ್ಯದ ಮಿತಿಗಳಿಗೆ ವೇಗವು ಎಷ್ಟಿರಬೇಕು ಎಂಬುದು ನಮಗಿನ್ನೂ ನಿರ್ದಿಷ್ಟವಾಗಿ ತಿಳಿದುಬಂದಿಲ್ಲ.

ಆದುದರಿಂದಲೇ ೭೫ ಮೈಲು ಎತ್ತರದಲ್ಲಿ ೭೫೦೦ ರಿಂದ ೧೫೦೦೦ ಮೈಲುಗಳ ವೇಗವಾಗಿ ಹಾರಬಲ್ಲ ಆಕಾಶಬಾಣ ವಿಮಾನವನ್ನು ರಚಿಸುವಲ್ಲಿ ವಿಜ್ಞಾನಿಗಳ ಮತ್ತು ರೂಪಶಿಲ್ಪಿಗಳು ಅನೇಕಾನೇಕ ಸಂಶೋಧನೆಗಳನ್ನು ಮಾಡಬೇಕಾಗಿದೆ.

ಸೋವಿಯೆಟ್ ದೇಶದಲ್ಲಿ ಶಕ್ತಿಯುತವಾದ ಖಂಡಾಂತರಗಾಮಿ ಆಕಾಶಬಾಣಗಳ ನಿರ್ಮಾಣವನ್ನು ಮಾಡಿದುದು, ಎರಡು ಭೂಉಪಗ್ರಹಗಳನ್ನು ಜಯಪ್ರದವಾಗಿ ಹಾರಿಸಿದುದು ಮತ್ತು ಅಮೆರಿಕೆಯೂ ಈ ದಿಸೆಯಲ್ಲಿ ವಿಜಯ ಸಂಪಾದಿಸಿದುದು ಇಂತಹ ಆಕಾಶಬಾಣ ವಿಮಾನಗಳ ನಿರ್ಮಾಣ ಕಾರ್ಯವನ್ನೂ ಯಶಸ್ವಿಯಾಗಿ ಮಾಡಬಹುದೆಂಬ ವಿಶ್ವಾಸವನ್ನು ಹುಟ್ಟಿಸುತ್ತವೆ. ಅಂತರರಾಷ್ಟ್ರೀಯ ಭೂಭೌತ ವರ್ಷದಲ್ಲಿ ಈ ದಿಸೆಯಲ್ಲಿಯೂ ಮಹಾಸಂಶೋಧನೆಗಳಾಗುವ ಭರವಸೆಯಿದೆ.

ಅಂತಿಮ ದರ್ಶನ

(೨ನೇ ಪುಟದಿಂದ)

ಲ್ಲಿ ಆ ಮನೆಯು ಸ್ಮಶಾನದಂತೆ ಇತ್ತು.

ಹಾಯಾಗಿ ಮಲಗಿದ್ದ ದೂಮನು ಸ್ವಲ್ಪ ಸ್ವಲ್ಪವೇ ತನ್ನ ಕಣ್ಣುಗಳನ್ನು ತೆರೆದು ಚಿಂತಾಮಗ್ನಳಾದ ಸತಿಯ ಮುಖವನ್ನು ನೋಡಹತ್ತಿದನು. 'ಧೈರ್ಯಬೇಕು ತುಂಗಾ" ಎಂದು ಒಂದೊಂದೇ ಶಬ್ದದಿಂದ ಹೇಳಿದನು. ಮರುಗಳಿಗೆಯಲ್ಲಿಯೇ ಎರಡೂ ಕಣ್ಣುಗಳಿಂದಲೂ ಒಂದೇ ಸಮನೆ ನೀರು ಸುರಿಯುತಿತ್ತು. "ನಿನ್ನ ಎರಡು ಮಕ್ಕಳನ್ನು ಕಟ್ಟಿಕೊಂಡು ಹೇಗೆ ಜೀವಿಸುವಿ" ಎಂದು ಆ ಕಂಬನಿಯು ತುಂಗುವಿನಲ್ಲಿ ಪ್ರಶ್ನಿಸುತಿತ್ತು. ಗಳಿಗೆ ಗಳಿಗೆಗೂ 'ತುಂಗಾ..ರಮೇಶಾ." ಎಂದು ಉದ್ವೇಗದ ಉಸುರಿನಿಂದ ಹೇಳಿ, ಮುಂದೆ ಹೇಳಲಾರದೆ ತಳಮಳಗೊಳ್ಳುತಿದ್ದನು.

ಕಾಳು ಬೊಗಳುತ್ತಾ ಯಾರನ್ನೋ ಕಚ್ಚಲು ಓಡಿತು ಎಂಬುವುದು ತುಂಗುವಿಗೆ ತಿಳಿಯಿತು. ಚಿಮಣಿಯನ್ನು ಹಿಡಿದುಕೊಂಡು ಹೊರಬಂದು ನೋಡುತ್ತಾಳೆ.. "ಮುಂಬಯಿ"ಯ ಮನುಷ್ಯನೊಬ್ಬನು ನಿಂತಿದ್ದಾನೆ ಅವನ ಹಿಂದೆ ಕೂಲಿಯು ಪೆಟ್ಟಿಗೆಯನ್ನು ಹೊತ್ತುಕೊಂಡು ನಿಂತಿದ್ದಾನೆ ಕೊಡೆಗಳಿದ್ದರೂ ಇಬ್ಬರೂ ಒದ್ದೆಯಾಗಿದ್ದಾರೆ ಅಪರಿಚಿತ ವ್ಯಕ್ತಿ ಇದು ಯಾರು ಎಂದು ಮತ್ತೂ ದಿಟ್ಟಿಸಿ ನೋಡಿದಾಗ....' ಅಮ್ಮಾ ನನ್ನ ಗುರುತು ಸಿಗಲಿಲ್ಲವೆ?" ಎಂದಿತು ಆ ವ್ಯಕ್ತಿ. "ರಮೇಶ!!" ಎಂದು ಅಪ್ಪಿಕೊಂಡು "ಬಂದೆಯಾ ಮಗೂ! ...ನಿನಗಾಗಿ ಅವರು ಕಾತರಿಸುತಿದ್ದಾರೆ". ಎಂದು ಮಗನನ್ನು ಪತಿಯ ಹತ್ತಿರ ಕರಕೊಂಡು ಹೋಗಿ "ನೋಡಿರಿ ರಮೇಶ ಬಂದಿದ್ದಾನೆ–ನೋಡಿರಿ ಬಂದಿದ್ದಾನ" ಎಂದಳು. ದೂಮನು ಪೂರ್ಣ ಕಣ್ಣು ತೆರೆದು ಮಗನನ್ನು ಸರಿಯಾಗಿ ನೋಡಿದನು "ರ-ಮೇ-ಶ-" ಎಂದು ರಮೇಶನ ಮುಖವನ್ನೂ ಪತ್ನಿಯ ಮುಖವನ್ನೂ ನೋಡಿದನು. ರಮೇಶನು "ಅಪ್ಪಾ!" ಎಂದು ತಬ್ಬಿಕೊಂಡನು.

ಅವನು ತಬ್ಬಿಕೊಂಡದ್ದು ಜಡ ದೇಹವನ್ನು ಮಾತ್ರ.

ಬಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ವಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ವಂ| A. R ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಕೋಶದ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ ಬೆಲೆ ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುತ್ಕೃಷ್ಟ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ನೀಗಲಾಡಿಸುತ್ತದೆ

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 NP) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಮಾರ್ಕೆಟ್ ನಾರ್ತ್ ಕ್ರಾಸ್, ಮೈಸೂರು-1 (S I.)

ಭಾರತಕ್ಕೊಂದು ಮಾರ್ಶಲ್ ಯೋಜನೆ

(೧ನೇ ಪುಟದಿಂದ)

ಆರ್ಥಿಕ ಅಭಿವೃದ್ಧಿ ಸಾಧಿಸಲು ಒಂದು ಉದಾಹರಣೆಯಾಗುವರು. ಅಂತೆಯೇ ಏಶಿಯದಲ್ಲಿ ಕಮ್ಯೂನಿಜಂ ಪ್ರಸಾರಕ್ಕೆ ತಡೆ ಹಾಕಿ ಪ್ರಜಾಪ್ರಭುತ್ವದ ಭದ್ರತೆಗೆ ಭಾರತದ ಯೋಜನೆಯು ಯಶಸ್ವಿಯಾಗುವುದಕ್ಕೆ ವಿಶೇಷ ಮಹತ್ವವಿದೆ.

ಅಮೇರಿಕೆಯು ಪಾಕಿಸ್ತಾನದೊಡನೆ ಮಾಡಿಕೊಂಡ ವಿಶೇಷ ಒಡಂಬಡಿಕೆಗಳಿಂದ ಭಾರತಕ್ಕೆ ಆರ್ಥಿಕ ಸಹಾಯ ನೀಡುವ ಬಗ್ಗೆ ಅವಶ್ಯವಿದ್ದ ವಿಶೇಷ ಕ್ರಮ ಕೈಕೊಳ್ಳಲು ಬರಲಾರದೆಂಬ ಟೀಕೆಯು ಈ ಗೊತ್ತುವಳಿಗೆ ಬರಬಹುದಾಗಿದೆ.

ಭಾರತ-ಪಾಕಿಸ್ತಾನ ಎರಡೂ ರಾಷ್ಟ್ರಗಳ ಆರ್ಥಿಕ ಅಭಿವೃದ್ಧಿಗೆ ನೆರವಾಗುವಂಥ ಯೋಜನೆಮಾಡುವ ವಿಚಾರ ನನ್ನದಿತ್ತು. ಆದರೆ ಭಾರತ-ಪಾಕಿಸ್ತಾನಗಳಲ್ಲಿ ಈಗಿರುವ ದ್ವೇಷದ ವಾತಾವರಣದಲ್ಲಿ ಅದು ಸಾಧ್ಯವಿಲ್ಲ. ಪಾಕಿಸ್ಥಾನಕ್ಕೆ ನಾವು ನೀಡಿದ ಸಹಾಯ ಅದು ಪಚನಮಾಡಿಕೊಳ್ಳುವುದಕ್ಕಿಂತ ಹೆಚ್ಚಿಗಿದೆ. ಭಾರತದ ಅಭಿವೃದ್ಧಿ ಯೋಜನೆಗೆ ಆರ್ಥಿಕ ಸಹಾಯ ನೀಡಲು ಪಾಕಿಸ್ಥಾನದೊಡನೆ ಮಾಡಿಕೊಂಡ ಒಡಂಬಡಿಕೆ ಅಡ್ಡಬರಕೂಡದು, ಎಂದು ಶ್ರೀ ಕೆನ್ನೆಡಿ ನುಡಿದರು.

ರಿಪಬ್ಲಿಕನ್ ಪಕ್ಷದ ವರ್ಚಸ್ವಿ ಸದಸ್ಯರಾದ ಹಿಂದೆ ಭಾರತದಲ್ಲಿ ಅಮೆರಿಕೆಯ ರಾಯಭಾರಿಗಳಾಗಿದ್ದ ಷರ್ಮನ್ ಕೂಪರರು ಭಾರತಕ್ಕೆ ಅವಶ್ಯವಿರುವಷ್ಟು ಆರ್ಥಿಕ ಸಹಾಯ ನೀಡಬೇಕೆಂಬ ಗೊತ್ತುವಳಿಯನ್ನು ಸಿನೇಟರ ಕೆನ್ನೆಡಿಯವರು ಮಂಡಿಸಿದ್ದು ತಮ್ಮ ಗೊತ್ತುವಳಿಯೇ ಎಂದು ಹೇಳಿ ಅದನ್ನು ಸಮರ್ಥಿಸಿ ಭಾಷಣ ಮಾಡಿದರು.

ಭಾರತದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಾಚರಣೆಗೆ ಅಮೆರಿಕೆಯು ೧೯೬೧ರೊಳಗಾಗಿ ೫೦೦ ದಶಲಕ್ಷ ಡಾಲರ ಸಹಾಯ ನೀಡಬೇಕು. ಅಮೆರಿಕೆಯಲ್ಲಿ ಆರ್ಥಿಕ ಮುಗ್ಗಟ್ಟು ತಲೆದೋರಿರುವಾಗ ಸಂರಕ್ಷಣ ಶಾಖೆಯ ವೆಚ್ಚವು ಹೆಚ್ಚಿಗೆ ಇರುವದು ಅನಿವಾರ್ಯವಾದ ಪರಿಸ್ಥಿತಿ ಇರುವಾಗ ವಿದೇಶಗಳಿಗೆ ದೊಡ್ಡ ಪ್ರಮಾಣದಲ್ಲಿ ಆರ್ಥಿಕ ಸಹಾಯ ನೀಡುವದಕ್ಕೆ ವಿರೋಧಿಸುವವರು ಇರುವದನ್ನು ನಾನು ಬಲ್ಲೆ.

ದೇಶದಲ್ಲಿಯ ಆರ್ಥಿಕ ಮುಗ್ಗಟ್ಟು ತಾತ್ಕಾಲಿಕ ಸ್ವರೂಪದ್ದು. ಜಗತ್ತಿನಲ್ಲಿ ಪ್ರಜಾಪ್ರಭುತ್ವವಾದಿ ರಾಷ್ಟ್ರಗಳನ್ನೆಲ್ಲ ಒಂದು ಗೂಡಿಸುವ ರಚನೆಯ ಪಂಕ್ತಿಯಲ್ಲಿ ಇಂದು ನಾವು ಇರುವಾಗ ವಿದೇಶಗಳಿಗೆ ಆರ್ಥಿಕ ಸಹಾಯ ನೀಡುವದು ನಮ್ಮ ಕರ್ತವ್ಯವಾಗಿದೆ ಎಂದು ಅವರು ಹೇಳಿದರು.

ಏಶಿಯದಲ್ಲಿ ಅತ್ಯಂತ ವರ್ಚಸ್ವಿ ರಾಷ್ಟ್ರವಾದ ಭಾರತವು ಏಶಿಯದಲ್ಲಿಯ ಪ್ರಜಾಪ್ರಭುತ್ವದ ಅಭಿವೃದ್ಧಿಗೆ ಆಧಾರಭೂತವಾದುದಾಗಿದೆ. ಭಾರತದ ನೈಸರ್ಗಿಕ ಸಂಪತ್ತು, ಭೌಗೋಲಿಕ ಸ್ಥಾನಮಾನ ಅಪಾರವಾದ ಜನಸಂಖ್ಯೆ ಇವುಗಳಿಂದ ಏಶಿಯದಲ್ಲಿ ಅದಕ್ಕೊಂದು ಮಹತ್ವದ ಸ್ಥಾನವಿದೆ. ಕಮ್ಯುನಿಸ್ಟ ಚೀನವು ಜನ ಜೀವನ ಮಟ್ಟವನ್ನು ಉನ್ನತಗೊಳಿಸಲು ಕಮ್ಯುನಿಸ್ಟ ಸರ್ವಾಧಿಕಾರ ಪದ್ಧತಿಯಿಂದ ಪ್ರಯತ್ನಿಸುತ್ತಿರುವಾಗ ಭಾರತವು ಪ್ರಜಾಪ್ರಭುತ್ವ ಪದ್ಧತಿಯಿಂದ ಜನರ ಜೀವನ ಮಟ್ಟ ಸುಧಾರಿಸುವ ಮಹಾ ಯೋಜನೆ ಮಾಡಿದೆ. ಭಾರತವು ತನ್ನ ಯೋಜನೆಯಲ್ಲಿ ಅಯಶಸ್ವಿಯಾದರೆ ಏಶಿಯದ ರಾಷ್ಟ್ರಗಳು ಕಮ್ಯುನಿಸ್ಟ ಚೀನದ ಪ್ರಯೋಗದತ್ತ ಹೊರಳಬಹುದಾಗಿದೆ. ಏಶಿಯದಲ್ಲಿ ಪ್ರಜಾಪ್ರಭುತ್ವದ ಅಳಿವು ಉಳಿವು ಭಾರತದ ಅಭಿವೃದ್ಧಿ ಯೋಜನೆಗಳ ಯಶಾಪಯಶವನ್ನೇ ಅವಲಂಬಿಸಿರುವದು. ಭಾರತಕ್ಕೆ ಆರ್ಥಿಕ ಸಹಾಯ ನೀಡುವಲ್ಲಿ ಪ್ರಜಾಪ್ರಭುತ್ವ ರಕ್ಷಣೆಯ ನಮ್ಮ ಉದ್ದೇಶ ಸಾಧಿಸುವ ಭರವಸೆ ಇದೆ.

ಭಾರತವು ಪ್ರಜಾಪ್ರಭುತ್ವ ಪದ್ಧತಿಯನ್ನು ತಾನಾಗಿಯೇ ಆಯ್ದುಕೊಂಡಿದೆ. ರಾಷ್ಟ್ರಪತಿ ಪ್ರಸಾದ, ಪ್ರಧಾನ ಮಂತ್ರಿ ನೆಹರೂ, ಉಪರಾಷ್ಟ್ರಪತಿ ರಾಧಾಕೃಷ್ಣನ್, ಇವರು ಪ್ರಜಾಪ್ರಭುತ್ವದಲ್ಲಿ ಅಚಲ ಶ್ರದ್ಧೆಯುಳ್ಳವರಾಗಿರುವರು. ಬಲುಮೆ, ಒತ್ತಾಯ ಇವುಗಳನ್ನು ಉಪಯೋಗಿಸುವದು ಅವರ ಸ್ವಭಾವಕ್ಕೆ ಅಪರಿಚಿತ. ಪ್ರಜಾಪ್ರಭುತ್ವ ಅವರ ಧೋರಣೆ ರಕ್ತಗತವಾಗಿದೆ. ಭಾರತವು ತಟಸ್ಥ ಧೋರಣೆ ತಾಳಿದ್ದು ನಿಜ. ಪಶ್ಚಿಮ ರಾಷ್ಟ್ರಗಳ ಗುಂಪಿಗೆ ಸೇರಲು ಒಪ್ಪದ ಭಾರತವು ಕಮ್ಯುನಿಸ್ಟ ಗುಂಪಿಗೂ ಸೇರದ ಅಚಲ ನಿರ್ಧಾರದಿಂದ ಇದೆ. ಏಶಿಯದಲ್ಲಿ ಸ್ವತಂತ್ರ ರಾಷ್ಟ್ರಗಳಿಗೆ ಭಾರತವು ಆದರ್ಶವಾಗಿದೆ. ಜಾಗತಿಕ ಶಾಂತಿಗೆ ಬಲಾಢ್ಯವಾದ ಸ್ವತಂತ್ರ ಭಾರತವು ದೊಡ್ಡ ಆಧಾರವಾಗಿದೆ.

ಭಾರತವು ಆರ್ಥಿಕ ಅಭಿವೃದ್ಧಿ ಸಾಧಿಸಲು ನಡೆಸಿದ ಹೋರಾಟದಲ್ಲಿ ನೆರವಾಗಿ ಪ್ರಜಾಪ್ರಭುತ್ವ ಪದ್ಧತಿಯಿಂದ ಜೀವನಮಟ್ಟ ಸಾಧಿಸುವದು ಸಾಧ್ಯವಿಲ್ಲವೆಂದು ಏಶಿಯದ ಹಿಂದುಳಿದ ರಾಷ್ಟ್ರಗಳಿಗೆಲ್ಲ ಮನವರಿಕೆ ಮಾಡಿಕೊಡುವದು ಆ ಪ್ರದೇಶದಲ್ಲಿ ಕಮ್ಯುನಿಜಂದ ಪ್ರಸಾರಕ್ಕೆ ತಡೆ ಹಾಕಲು ಅಗತ್ಯದ್ದಾಗಿದೆ. ಪ್ರಜಾಪ್ರಭುತ್ವದ ಕೈವಾರಿಯಾದ ಭಾರತಕ್ಕೆ ಜಗತ್ತಿನಲ್ಲಿ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಅಮೇರಿಕೆಯು ಸಹಾಯ ನೀಡಲಿಲ್ಲವಾದರೆ ಹತ್ತು ವರ್ಷಗಳ ಹಿಂದೆ ಚೀನದಲ್ಲಿ ಮಾಡಿದ ತಪ್ಪನ್ನೇ ನಾವು ಪುನಃ ಮಾಡಿದಂತಾಗುವದು. ಚೀನವನ್ನು ರಶಿಯದ ಉಡಿಯಲ್ಲಿ ಹಾಕಿದ್ದ ಪ್ರಮಾದದಂಥ ಪ್ರಮಾದ ಈಗ ನಮ್ಮಿಂದ ಆಗಬಾರದೆಂದಿದ್ದರೆ ಭಾರತಕ್ಕೆ ಅವಶ್ಯವಿದ್ದಷ್ಟು ಆರ್ಥಿಕ ಸಹಾಯ ನೀಡಬೇಕು ಎಂದವರು ಭಾರತದ ಪರವಾಗಿ ವಾದಿಸಿದರು.

ಒರಿಸ್ಸಾದ ಹಳ್ಳಿಯೊಂದರಲ್ಲಿ ಪ್ರಭಾತ ಸಮಯದ ದೃಶ್ಯವಿದು. ಮಕ್ಕಳು, ಸ್ಥಳೀಯ ಸಾಮುದಾಯಿಕ ಕೇಂದ್ರದಲ್ಲಿ ಪ್ರತಿದಿನ ಸರದಿಯ ಮೇರೆಗೆ ದೊರೆಯುವ ಉಚಿತ ಹಾಲನ್ನು ಪಡೆದುಕೊಳ್ಳಲು ಸಾಲಾಗಿ ನಿಂತು ಔತ್ಸುಕ್ಯದಿಂದ ನಿರೀಕ್ಷಿಸುತ್ತಿರುವರು.

ಮಕ್ಕಳು ಎಚ್ಚರಿಕೆಯಿಂದ ಸಂರಕ್ಷಿಸಬೇಕಾದ ಎಳೆಯ ಸಸಿಗಳಿದ್ದಂತೆ. ಬಲಾಢ್ಯರೂ ಆರೋಗ್ಯವಂತರಾದ ಮಕ್ಕಳೇ ಪ್ರಬಲವಾದ ಸಂಪತ್ಭರಿತವಾದ ರಾಷ್ಟ್ರಗಳನ್ನು ನಿರ್ಮಿಸಬಲ್ಲರು.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

3	ತಿಂಗಳಿಗೆ	3%
4 ರಿಂದ 6	,,	3½%
7 ,, 12	,,	4%
13 ,, 24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ		2½%
ಕರೆಂಟ್ ಎಕೌಂಟು		½%

The Moolky Bank, Ltd.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ.- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

'NAVAYUGA' WEEKLY is in the list of periodicals and Newspapers approved for use in Secondary Schools as perproceedings Roc· No 466 N/50 date 2-12-1950 of the Director of public Instruction Madras·

Edited Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ VOL. 37

[illegible]—4—1958

ಸಂಚಿಕೆ ೩೧ NO. 31

ಶವದ ಮೇಲೊಂದು ಸೂಜಿಮದ್ದಿನ ಪ್ರಯೋಗ--

ಡಾ. ಗ್ರಹಾಮರ ಅಸಫಲ ರಾಯಭಾರ

ಡಾ. ಫ್ರೇಂಕ ಗ್ರಹಾಮರು ತಮ್ಮ ಎರಡನೆಯ ಆವರ್ತನವನ್ನು ಮುಗಿಸಿ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಭಾರತ ಮತ್ತು ಪಾಕಿಸ್ತಾನಗಳ ಪ್ರಧಾನಿಗಳು ಒಂದಡೆ ಸೇರಿಯೇ ಈ ಸಮಸ್ಯೆಯನ್ನು ಕೂಲಂಕಷವಾಗಿ ಚರ್ಚಿಸಿ ಪರಿಹಾರ ಮಾರ್ಗವನ್ನು ಕಂಡುಹಿಡಿಯಬೇಕೆಂದೂ, ಅವರೆ, ಈ ಮಾತುಕತೆಗಳು ಸಂಯುಕ್ತ ರಾಷ್ಟ್ರಸಂಘದ ಪ್ರತಿನಿಧಿಯೊಬ್ಬನ ಸಂಮುಖದಲ್ಲಿ ನಡೆಯುವುದಗತ್ಯವೆಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಈ ಅಭಿಮತದ ಮೂಲಭೂತ ಸಮಸ್ಯೆಯೇನೇ ಇರಲಿ, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಈ ವಿಷಯದಲ್ಲಿ ಅದೆಷ್ಟೇ ಭಿನ್ನಾಭಿಪ್ರಾಯಗಳಿರಲಿ, ಇಕ್ಕಡೆಯವರೂ ಒಂದು ಉಚಿತ ನಿರ್ಧಾರಕ್ಕೆ ಬರಲು ಆತುರರಿದ್ದಾರೆಂದು ಅವರು ಕಂಡುಕೊಂಡಿದ್ದಾರೆ

ಪವೃತಾ ಮಂಡಳದ ಪ್ರತಿನಿಧಿಯಾಗಿ ಬಂದಿರುವ ಶ್ರೀ ಗ್ರಹಾಮರು ಹಲವಾರು ಬಾರಿ ಡಿಲ್ಲಿ ಮತ್ತು ಕರಾಚಿಗಳ ನಡುವೆ ಸಂಚರಿಸಿ, ಎರಡು ರಾಷ್ಟ್ರಗಳ ಮುಖಂಡರೊಳಗೆ ವಿಚಾರ ವಿನಿಮಯವನ್ನು ಮಾಡಿ ತಮ್ಮ ವರದಿಯನ್ನು ತಯಾರಿಸಿ ಎಪ್ರಿಲ್ ದಿನಾಂಕ ೩ರಂದು ಒಪ್ಪಿಸಿದ್ದು ಅದು ಬಹಿರಂಗಗೊಂಡಿದೆ ಈ ವಿವಾದವನ್ನು ನಿರ್ಣಾಯಕಗೊಳಿಸುವ ಸಲುವಾಗಿ ಶ್ರೀ ಗ್ರಹಾಮರು ಕೆಲವೊಂದು ಸೂಚನೆಗಳನ್ನು ಎರಡೂ ಸರಕಾರಗಳಿಗಿತ್ತಿರುವರು

೧೯೪೮ರ ಅಗಸ್ಟ ಗೊತ್ತುವಳಿಯಂತೆ ತಾವು ಆಕ್ರಮಿಸಿದ ಕಾಶ್ಮೀರ ಭಾಗವನ್ನು ಪಾಕ್ ಸೈನಿಕರು ತೆರವು ಮಾಡಬೇಕಾಗಿದೆ. ಕಾಶ್ಮೀರದಲ್ಲಿಯ ಬಹುಸಂಖ್ಯಾಕ ಭಾರತ ಸೈನಿಕರನ್ನು ಹಿಂಕರೆಸಿಕೊಳ್ಳಬೇಕೆಂದಿದೆ. ಹೀಗೆ ಪಾಕಿಸ್ತಾನವು ತೆರವು ಮಾಡುವ ಪ್ರದೇಶದ ಆಡಳಿತೆಯನ್ನು ಹೇಗೆ ನೋಡಿಕೊಳ್ಳಬೇಕೆಂದು ಅಭ್ಯಸಿಸುವವರೆಗೆ ಗೊತ್ತುವಳಿಯಲ್ಲಿ ಹೇಳಿದರೀತಿಯಲ್ಲಿ ಆಡಳಿತೆಯು ನಡೆಯಬೇಕು ಪಾಕಿಸ್ತಾನವು ತಾನು ತೆರವು ಮಾಡಿದನಂತರ ಪಾಕ್ ಕಾಶ್ಮೀರ ಗಡಿಯಲ್ಲಿ ಸಂ ರಾ. ಪಡೆಯನ್ನು ನಿಲ್ಲಿಸಬೇಕು

ಕಾಶ್ಮೀರ ವಿವಾದವು ಬೇಗ ಬಗೆಹರಿಯಬೇಕಾದರೆ, ಸಾರ್ವತ್ರಿಕ ಮತಗಣನೆಯ ಪ್ರಶ್ನೆಯ ಬಗ್ಗೆ ಸಂಬಂಧಿಸಿದ ಹಿಂದಿನ ಗೊತ್ತುವಳಿಗಳನ್ನು ಯಾ ನಿಬಂಧನೆಗಳ ಭಾಷ್ಯದ ಬಗ್ಗೆ ಎರಡೂ ಸರಕಾರಗಳೊಳಗೆ ಒಪ್ಪಂದವಾಗಬೇಕು. ೧೯೪೯ರ ಅಗಸ್ಟ ತಿಂಗಳಲ್ಲಿ ಭಾರತ ಪಾಕ ಪ್ರತಿನಿಧಿಗಳು ಸಂಯುಕ್ತ ಪ್ರಕಟಣೆ ಹೊರಡಿಸಿ ಸಾರ್ವತ್ರಿಕ ಮತಗಣನೆಯನ್ನು ಜನತೆಯ ಚಿತ್ತ ಜೀವಿತಗಳಿಗೆ ತೊಂದರೆಯೊದಗದಂತೆ ನಡೆಸಬೇಕೆಂದು ಒಪ್ಪಿರುವುದೆಂಬುದನ್ನು ನೆನೆಯಬೇಕು

ನೇರವಾದ ಮಾತುಕತೆಗಳು ಬಹಳ ಉಪಯುಕ್ತವಿರುವುದರಿಂದ ಸಂ. ರಾ ಪ್ರತಿನಿಧಿಯ ಆಶ್ರಯದಲ್ಲಿ ಉಭಯ ಪ್ರಧಾನಿಗಳು ವಸಂತ ಕಾಲದ ಆರಂಭದಲ್ಲಿ ಒಂದಡೆ ಸೇರಬೇಕು ಈ ಸೂಚನೆಯು ಉಭಯತರಲ್ಲಿ ಯಾರಿಗಾದರೂ ಒಪ್ಪಿತವಾಗಿಲ್ಲವಾದರೆ, ಇದರಲ್ಲಿ ಅಡಕವಾಗಿರುವ ತತ್ವವನ್ನು ಗ್ರಹಿಸಿ ಆದಷ್ಟು ಬೇಗನೇ ಇಂತಹ ಸಭೆಯನ್ನು ಕರೆಯಬೇಕು ಎಂಬ ಸಲಹೆ ಹಾಗೂ ಸೂಚನೆಗಳನ್ನು ಡಾ ಗ್ರಹಾಮರು ಮುಂದಿರಿಸಿದ್ದಾರೆ

ಡಾ ಗ್ರಹಾಮರ ವರದಿಯಲ್ಲಿ ಉಲ್ಲೇಖಿಸಿದಂತೆ, ಪಾಕಿಸ್ತಾನವು ಈ ಸೂಚನೆಗಳನ್ನು ಅನುಸರಿಸಲು ಸಿದ್ಧವಿದೆ. ತನ್ನ ಹಾಗೂ ಕಾಶ್ಮೀರದ ಗಡಿಯಲ್ಲಿ ಸಂ ರಾ. ಪಡೆಯನ್ನಿರಿಸುವುದು, ಭಾರತದ ಪ್ರಧಾನಿಯವರೊಡನೆ ಮಾತುಕತೆ ನಡೆಸುವುದು, ತನ್ನ ಸೈನ್ಯವನ್ನು ಸಂಪೂರ್ಣವಾಗಿ ಹಿಂದೆ ಕರೆಸಿಕೊಳ್ಳುವುದು, ಯುದ್ಧವಿರಾಮರೇಖೆಯನ್ನು ಮುಚ್ಚುವುದು ಎಲ್ಲವಕ್ಕೂ ತನ್ನ ಸ್ವೀಕಾರದ ಮುದ್ರೆಯನ್ನು ಒತ್ತಿರುತ್ತದೆ ಆದರೆ, ಭಾರತ ಸರಕಾರವು ಈ ಸೂಚನೆಗಳನ್ನು ಮನ್ನಿಸುವ ಸಾಮರ್ಥ್ಯ ತನಗಿಲ್ಲವೆಂಬುದಾಗಿ ತಿಳಿಸಿರುವುದು

೧೯೪೮ರ ಹಾಗೂ ೪೯ರ ಗೊತ್ತುವಳಿಗಳನ್ನು ಕಾರ್ಯರೂಪದಲ್ಲಿ ತರಲು ಭದ್ರತಾಮಂಡಳಿಯು ಅಸಮರ್ಥವಾಗಿರುವುದನ್ನು ಕಂಡುಕೊಳ್ಳದೆ ಈ ಸೂಚನೆಗಳನ್ನು ಮುಂದಿರಿಸಿರುವುದಾಗಿ ಭಾರತದ ಅಭಿಪ್ರಾಯವಿದೆ ಇದಕ್ಕೆ ಪಾಕಿಸ್ತಾನವೇ ಹೊಣೆಯೆಂದೂ ಈಗ ಪಾಕಿಸ್ತಾನ ಮತ್ತು ಸಂ ರಾ ಸಂಘಗಳು ಕೂಡಿ ಈ ತಂಟೆಯನ್ನು ಶಾಂತಿಯುತವಾಗಿ ಬಗೆಹರಿಸುವ ಮಾರ್ಗವನ್ನು ಹುಡುಕಬೇಕೆಂಬುದು, ಇಲ್ಲಿ ಭಾರತವು ಯಾವ ಕ್ರಮವನ್ನೂ ಕೈಗೊಳ್ಳುವುದು ಅಸಾಧ್ಯವೆಂದೂ ಭಾರತಸರಕಾರವು ಶ್ರೀ ಗ್ರಹಾಮರಿಗೆ ತಿಳಿಯಪಡಿಸಿದೆ ಹೊಸತಾಗಿ ಘೋಷಣೆ ಮಾಡುವುದನ್ನೂ ಭಾರತವು ಒಪ್ಪಿಕೊಳ್ಳದು, ಹೀಗೆ ಮಾಡಿದರೆ, ಪಾಕಿಸ್ತಾನವು ವಚನಭಂಗ ಮಾಡಿಲ್ಲವೆಂಬ ಭಾವನೆಯು ಬೆಳೆಯುವುದೆಂದೂ ತತ್ಪರಿಣಾಮವಾಗಿ ನಿಜವಾಗಿಯೂ ಅಪರಾಧಿ ರಾಷ್ಟ್ರವು ನಿರಪರಾಧಿಯೆಂದು ಒಪ್ಪಿಕೊಂಡಂತಾಗುವುದೆಂದೂ ಭಾರತವು ತಿಳಿಸಿದೆ.

ಪಾಕ್ ಸೈನಿಕರು ತೆರವು ಮಾಡಿಕೊಡಬೇಕಾದ ಪ್ರದೇಶದ ಆಡಳಿತೆಯ ಬಗ್ಗೆ ಅಭ್ಯಸಿಸಬೇಕೆಂಬ ಡಾ. ಗ್ರಹಾಮರ ಸೂಚನೆಯನ್ನೂ ಭಾರತವು ತಿರಸ್ಕರಿಸಿದ ಇವಕ್ಕೆ ಒಪ್ಪಿಕೊಂಡರೆ, ಮುಖ್ಯ ಪ್ರಶ್ನೆಯಾದ ಪಾಕಿಸ್ತಾನದಿಂದ ಕಾಶ್ಮೀರದ ಆಕ್ರಮವಾದ ಆಕ್ರಮಣದ ಅಂಶವನ್ನು ತಾನು ಮರೆಮಾಚಿದಂತಾಗುವುದೆಂದೂ ಈ ಭಾಗವು ಭಾರತದ ಅವಿಭಾಜ್ಯ ಅಂಗವಾಗಿದ್ದೂ ಕಾಶ್ಮೀರವು ಯಾರಿಗೂ ಸೇರದಿರುವ ರಾಜ್ಯವಾಗಿದೆ ಎಂಬ ಅಸಾಧು ಕಲ್ಪನೆಯಿಂದಾಗಿಯೇ ಈ ಸೂಚನೆಯು ಮುಂದೆ ಬಂದಿರುವುದೆಂದೂ ಸತ್ಯ ಸಂಗತಿಯು ಇದಕ್ಕೆ ದೂರವಿದ್ದು ಈ ಪ್ರದೇಶವು ಸಂಪೂರ್ಣವಾಗಿ ಭಾರತದ ಭಾಗವಾಗಿದ್ದು ಇಲ್ಲಿ ಬೇರೆಯವರು ಮಾಡಬೇಕಾದ ಕೆಲಸ ಏನೂ ಉಳಿದಿಲ್ಲವೆಂಬ ಆಶ್ವಾಸನೆಯು ತನಗೆ ಭದ್ರತಾ ಸಮಿತಿಯಿಂದ ದೊರೆತಿದೆ ಎಂದೂ ಭಾರತವು ತಿಳಿಸಿದೆ.

ಪಾಕ್ - ಕಾಶ್ಮೀರ ಗಡಿಯಲ್ಲಿ ಯುಕ್ತ ರಾಷ್ಟ್ರ ಪಡೆಯನ್ನು ನಿಲ್ಲಿಸುವುದು ಪಾಕಿಸ್ತಾನದ ಹಿಂದಿನ ವರ್ತನೆಯಿಂದಾಗಿ ಸಹಜವೆಂದು ಕಂಡುಬಂದರೂ, ಒಂದು ಸಾರ್ವಭೌಮರಾಷ್ಟ್ರದಲ್ಲಿ ವಿದೇಶೀ ಸೈನ್ಯವನ್ನಿಡುವುದನ್ನು ಉತ್ತೇಜಿಸಬಾರದೆಂದೂ, ಆದರೆ, ಈ ವಿಷಯವು ಪಾಕಿಸ್ತಾನಕ್ಕೆ ಸಂಬಂಧಿಸಿರುವುದರಿಂದ, ಅದರಿಷ್ಟದಂತೆ ನಡೆಯಬಹುದೆಂದೂ ಭಾರತವು ಹೇಳಿದೆ ಸಾರ್ವತ್ರಿಕ ಜನಮತಗಣನೆಯ ಪ್ರಶ್ನೆಯ ಬಗ್ಗೆ ಭಾರತಕ್ಕೆ ಮೂಲಭೂತ ಆಕ್ಷೇಪಗಳಿರುವುದರಿಂದ, ಯಾವುದೇ ಮಾತುಕತೆಗೆ ತಾನು ಸಿದ್ಧನಿಲ್ಲವೆಂದು ಅದು ವಾದಿಸಿರುತ್ತದೆ

ಪರಿಷ್ಕರ ಮಾತುಕತೆಯನ್ನು ಒಪ್ಪದೆ ಆಕ್ರಮಣ ಮಾಡಿದವರು ಮತ್ತು ಆಕ್ರಮಣಕ್ಕೆ ತುತ್ತಾದವರು ಸಮಾನ ಗೌರವವನ್ನು ಪಡೆಯುವುದು ತನಗೆ ಸ್ವೀಕಾರಾರ್ಹವಲ್ಲವೆಂದು ಭಾರತ ಸರಕಾರವು ಶ್ರೀ ಗ್ರಹಾಮರಿಗೆ ತಿಳಿಸಿದೆ. ಶ್ರೀ ಗ್ರಹಾಮರು ಮಾಡಿದ ಯಾವುದೇ ಸೂಚನೆಗಳನ್ನು ಭಾರತವು ಸ್ವೀಕರಿಸದೆ ಇದ್ದು ತನ್ನ ಮೂಲಭೂತ ಧೋರಣೆಗಳಿಗೇನೇ ಅಂಟಿಕೊಂಡಿದ್ದರೂ, ಪಾಕಿಸ್ತಾನದೊಡನೆ ಶಾಂತಿ ಸೌಹಾರ್ದಗಳ ಸಂಬಂಧವನ್ನು ತಾನು ಕಾಯ್ದುಕೊಳ್ಳಲು ಉತ್ಸುಕರಾಗಿರುವುದಾಗಿಯೂ ಸಂ ರಾ. ಸಂಘ ಮತ್ತು ಜಾಗತಿಕ ತಾಮ್ರಪಟದಲ್ಲಿ ವಿಶ್ವಾಸವನ್ನಿಟ್ಟುಕೊಳ್ಳುವುದಲ್ಲದೆ, ತಾನು ಪ್ರತಿಯೊಂದು ಸಮಸ್ಯೆಯನ್ನು ಶಾಂತಿಯುತ ಮತ್ತು ವಿಧಾಯಕ ದೃಷ್ಟಿಯಿಂದ ನೋಡುತ್ತಿರುವುದಾಗಿಯೂ ಭಾರತ ಸರಕಾರವು ದೃಢಾಭಿಪ್ರಾಯ ಪಟ್ಟಿದೆ.

ಡಾ ಗ್ರಹಾಮರು ತಮ್ಮ ವರದಿಯಲ್ಲಿ ತಾವು ಮಾಡಿದ ಉಭಯರಾಷ್ಟ್ರಗಳ ಪ್ರಧಾನರ ಮಾತುಕತೆಯ ಪ್ರಾಮುಖ್ಯವನ್ನು ಪ್ರತಿಪಾದಿಸಿ, ಕಾಶ್ಮೀರ ಸಮಸ್ಯೆಯಿಂದಾ

(೧೧ನೇ ಪುಟ ನೋಡಿರಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd. 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ದಿನಕರನ ಭಾಗ್ಯೋದಯ

ಶ್ರೀ. ಎಂ. ಸುಂದರ ಶೆಟ್ಟಿ

ಹೌದು; ಸುಂದರ ಸುಲಲಿತವಾದ ದೇವನೂರು, ಒಂದು ಕಿರುಹಳ್ಳಿ. ಎತ್ತ ನೋಡಿದರೂ ಹಚ್ಚನೆಯ ಹಸುರಿಂದ ಶೋಭಿಸುವ ಹೊಲಗಳು. ಅಲ್ಲಲ್ಲಿ ಬೆಟ್ಟ ತಿಟ್ಟಗಳು. ನದಿ, ನದಗಳು. ಅಂತೂ ಅದೊಂದು ರಾಮಣೀಯಕ ಗ್ರಾಮವಾಗಿತ್ತು. ಶಿವರಾಯರು ಆ ಊರಿನ ಅದ್ವಿತೀಯ ಶ್ರೀಮಂತರು, ಭೂಮಾಲಿಕರು ಅವರ ಸಂಸಾರ ವಾದರೂ ಚಿಕ್ಕದು. ಹೆಂಡತಿ ಪಾರ್ವತಮ್ಮ ಇನ್ನೂ ೭ ವರ್ಷದಲ್ಲಿ ಕಾಲಿಟ್ಟ ಮಗಳು ಶೈಲಜ. ಇವರಲ್ಲದೆ ಇರು ತನ್ನ ಮನೆ ಎಂಬವರು ಬೇರಾರೂ ಇರಲಿಲ್ಲ ಶಿವರಾಯರು ಅಚ್ಚುಕಟ್ಟಿನಿಂದ ಸಂಸಾರ ನಡೆಸುತ್ತಾ ಹೇರಳ ಹಣವನ್ನೂ ಸಂಪಾದಿಸಿದ್ದರು.

ಶಿವರಾಯರ ಸಮೀಪದ ನೆರಮನೆಯೇ ಮಾಧವರಾಯರದ್ದು ಹಿಂದೆ ಒಂದು ಕಾಲದಲ್ಲಿ ದಾನಧರ್ಮ ಮಾಡಿ, ಬಡ ಬಗ್ಗರಿಗೆ ಆಶ್ರಯವಾಗಿದ್ದ ಮನೆ—ತೇದಂತೆ ಕಂಪೀಯುತ್ತಾ ಸವೆದು ಕಿರಿದಾದ ಶ್ರೀಗಂಧದಂತೆ ಬಡವಾಗಿದೆ. ಆ ಮನೆಯ ಹೊಲಗಳೆಲ್ಲವೂ ಶಿವರಾಯರ ವಶವಾಗಿವೆ. ಕೇವಲ ಮನೆ ಮತ್ತು ಚಿಕ್ಕ ತೋಟ ಮಾತ್ರ ಮಾಧವರಾಯರಿಗೆ ಉಳಿದಿವೆ. ಅಂದಿನ ಮನೆ ಇಂದು ಬಡವಾದಂತೆ ಸಂಸಾರವೂ ಕಿರಿದಾಗಿದೆ. ಹೆಂಡತಿ ಲಕ್ಷ್ಮಮ್ಮ, ಮಗ ದಿನಕರ ಇವರೇ ಮನೆಯ ಮಂದಿಗಳು. ಅತ್ತ ಶಿವರಾಯರು ಐಶ್ವರ್ಯದ ಶಿಖರವೇರಿದ್ದರೆ ಇತ್ತ ಮಾಧವರಾಯರು ದುಃಖದ ದರಿಯಲ್ಲಿದ್ದಾರೆ.

ದಿನಕರನಿಗಿನ್ನೂ ಹನ್ನೊಂದು ಕಳೆದಿಲ್ಲ ಮಾಧವರಾಯರು ಮೃತ್ಯುವಶರಾದರು. ತಾಯಿ ಮಗ ಕಂಗಾಲ ಬಾಳಿಕೆಗೆ ಗುರಿಯಾದರು. ಸಾಲವೆಂತೂ ಗಿಟ್ಟುವ ಹಾಗಿಲ್ಲ. ಸಹಾಯ ನೀಡುವವರು ಮೊದಲೇ ಇಲ್ಲ. ಆದರೂ ಲಕ್ಷ್ಮಮ್ಮ ಹೆದರಿಲ್ಲ, ಬೆದರಿಲ್ಲ ತನ್ನ ಸಂಪತ್ತಾದ ಅಲ್ಪಸ್ವಲ್ಪ ಚಿನ್ನಾಭರಣ ಮಾರಿ ಮಗನ ವಿದ್ಯೆಗಾಗಿ ವಿನಿಯೋಗಿಸಿದರು.

ದಿನಕರನೀಗ ಆನೇ ಈಯತ್ತೆಯ ವ್ಯಾಸಂಗ ಮುಗಿಸಿ ಪರೀಕ್ಷೆಯ ಫಲಿತಾಂಶ ಕಾಯುತ್ತಿದ್ದಾನೆ. ಸರಿ; ಕೆಲವೇ ದಿನಗಳಲ್ಲಿ ಫಲಿತಾಂಶವೂ ತಿಳಿದು ಬಂತು. ಉತ್ತಮ ಗುಣಗಳನ್ನು ಪಡೆದು ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದನು. ಆನರೆ, ಮುಂದೇನು ಮಾಡುವುದೆಂಬ ಚಿಂತೆಯೇ ಅವನನ್ನೀಗ ಕೊರೆಯುತ್ತಿದೆ ಇಷ್ಟರ ವರೆಗೆ ಅವರಿವರ ನೆರವಿನಿಂದ ವ್ಯಾಸಂಗಮಾಡಿದ್ದ. ಮುಂದಾದರೂ ಹೆಚ್ಚಿನ ಹಣ ಬೇಕಾಗುತ್ತೆ. ಎಲ್ಲಿಂದ ತರಲಿ, ಯಾರನ್ನು ಕಾಡಲಿ? ಹಣವಿದ್ದಲ್ಲಿ ಕಲಿವ ಮನಸಿಲ್ಲ ಕಲಿಯಲು ಮನಸ್ಸಿದ್ದಲ್ಲಿ ಹಣವಿಲ್ಲ. ಅಯ್ಯೋ! ಕಿರುವು ಮುರುವುಗಳೇ?

ಪಾರ್ವತಮ್ಮನಾದರೂ ದೊಡ್ಡ ಮನಸ್ಸಿನವರು. ದಿನಕರನ ಈ ವರೆಗಿನ ವಿದ್ಯಾಭ್ಯಾಸಕ್ಕೆ ತನ್ನ ಪತಿಗೆ ತಿಳಿಯದಂತೆ ತುಂಬಾ ನೆರವು ನೀಡಿದ್ದರು. ತನ್ನ ಮನೆಯಲ್ಲಿನ ವಿಶೇಷ ಹಬ್ಬ ಹುಣ್ಣಿಮೆಗಳಲ್ಲಿ ಅವರಿಗೆ ದಿನಕರನ ನೆನಪಾಗದಿರುತ್ತಿರಲಿಲ್ಲ. ಅಂತೆಯೇ ಗುಟ್ಟಿನಲ್ಲಾದರೂ ತಿಂಡಿ ತೀರ್ಥಗಳನ್ನು ಅವನಿಗೆ ಕೊಡದಿದ್ದಲ್ಲಿ ನಿದ್ದೆಯೂ ಬರುತ್ತಿರಲಿಲ್ಲ. ಆದರೆ ಶಿವರಾಯರು ಇದಕ್ಕೆ ನೇರ ವಿರುದ್ಧವಾಗಿದ್ದರು. ಆ ಹುಡುಗನನ್ನು ಕಂಡರೆ ಅವರಿಗೆ ಎಲ್ಲಿಲ್ಲದ ತಾತ್ಸಾರ. ಈ ವರೆಗೆ ಯಾರಿಗೂ ಒಂದಿಷ್ಟೂ ನೆರವು ನೀಡದ ಮಹಾವ್ಯಕ್ತಿ ಶಿವರಾಯರು. ಮನಸ್ಸಿನ ಉದಾರತೆಯಲ್ಲಿ; ಹೃದಯ ವೈಶಾಲ್ಯದಲ್ಲಿ ಗಂಡ ಹೆಂಡತಿ ತದ್ವಿರುದ್ಧವಾಗಿದ್ದರು. ಪುಣ್ಯವಶಾತ್ ಶೈಲಜಳಲ್ಲಿ ತಾಯಿಯ ಗುಣನಡತೆಯೇ ತೋರಿ ಬರುತ್ತಿದ್ದುವು. ಅವಳು ಸಹಾ ಏನಾದರೂ ತಿಂಡಿಯನ್ನು ಚೀಲದಲ್ಲಿ ಹಾಕಿಕೊಂಡು ಬಂದು ದಿನಕರನಿಗೆ ಕೊಡುತ್ತಿದ್ದಳು. ಅಲ್ಲದೆ ತನಗೆ ತಿಳಿಯಬಾರದ ವಿಷಯಗಳನ್ನು ಅವನೊಡನೆ ಕೇಳುತ್ತಿದ್ದಳು, ಇದರಿಂದ ಅವಳೂ ತರಗತಿಯಲ್ಲಿ ಮೊದಲಿಗಳಾಗಿ ನಿಲ್ಲುತ್ತಿದ್ದಳು.

ಅಂದು ಮಧ್ಯಾಹ್ನ ಶಿವರಾಯರು ಊಟ ಮುಗಿಸಿ ಆರಾಮ ಕುರ್ಚಿಯಲ್ಲಿದ್ದರು. ಪಾರ್ವತಮ್ಮ ಮೆಲ್ಲನೆ ಬಂದು ಮಾತಿಗೆ ಪ್ರಾರಂಭಿಸಿದರು "ಹೌದೆ! ನಮ್ಮ ಆಚೆಮನೆ ಲಕ್ಷ್ಮಮ್ಮನ ಮಗ ಆನೇ ತರಗತಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಪಾಸಾದನಂತಲ್ಲಾ".

"ಹೌದು; ನಿನಗೇನು ಅದರಲ್ಲಿ ಅಷ್ಟು ಆಸಕ್ತಿ" ಎಂದು ಶಿವರಾಯರು ಮರುನುಡಿದರು.'

'ಆಸಕ್ತಿ ಏನಿಲ್ಲಾ, ಒಳ್ಳೆಯ ಹುಡುಗ, ಕಲಿಯುವಿಕೆಯಲ್ಲಿ ಒಳ್ಳೆಯ ನಿಪುಣ ಆದರೆ ಮುಂದೆ ಕಲಿಸುವವರಿಲ್ಲ ಪಾಪ'.

ಈ ಮಾತನ್ನು ಕೇಳಿದೊಡನೆ ರಾಯರ ಕಣ್ಣು ಕೆಂಪಾಯಿತು. "ಹೌದು ಯಾರೂ ಕಲಿಸುವವರಿಲ್ಲ. ನೀನೆ ಕಲಿಸಿಬಿಡು"—ಎಂದರು ರಾಯರು ವ್ಯಂಗ್ಯವಾಗಿ.

ಪಾರ್ವತಮ್ಮನೂ ಸುಮ್ಮನಿರಲಿಲ್ಲ "ಸಿಟ್ಟಾಗಬೇಡಿ, ದಿಕ್ಕಿಲ್ಲದ ಹುಡುಗ ನೀವೇನಾದರೂ ಸಹಾಯಮಾಡಿದರೆ ವಿದ್ಯಾದಾನ ಮಾಡಿದ ಪುಣ್ಯ ಬರುತ್ತೆ. ಅಲ್ಲ; ನಮಗೇನು ಕಡಿಮೆ"?

ರಾಯರ ಸಿಟ್ಟು ನೆತ್ತಿಗೇರಿತು. "ಯಾವ ಯಾವ ಬೀದಿಯ ಬಿಕಾರಿಗೆ ಕಲಿಸಲು ಇದೇನು ಧರ್ಮಛತ್ರವಲ್ಲ. ನಾನೇ ಕಷ್ಟಪಟ್ಟು ಸಂಪಾದಿಸಿದ ಹಣ. ನೀನು ಬರುವಾಗ ಅಪ್ಪನ ಮನೆಯಿಂದ ತಂದ ಸಂಪತ್ತಲ್ಲ. ಇನ್ನೆಲ್ಲಾದರೂ ಗತಿಗೆಟ್ಟ ಮಾನಗೆಟ್ಟವನ ಸುದ್ದಿ ಮಾತಾಡಿದರೆ ಅವರ ಹಿಂದೆ ನೀನೂ ಹೋಗಬೇಕಾದೀತು. ಜಾಗ್ರತೆ!" ಎಂದು ಹೇಳಿ ಸರ್ರನೆದ್ದು ರಾಯರು ಪೇಟೆಯತ್ತ ಹೋದರು. ಪಾರ್ವತಮ್ಮ "ಅಯ್ಯೋ! ಇವರ ಬುದ್ಧಿಯೇ" ಎಂದು ಮನೆಯೊಳಗೆ ನಡೆದರು.

ಇತ್ತ ದಿನಕರನಾದರೂ ತಾಯಿಯನ್ನು ಕಾಡಿ ಬೇಡಿ, ಉಪಾಯದಿಂದ ಒಪ್ಪಿಸಿ ಗುಂಡುರಾಯರೊಡನೆ ಮದ್ರಾಸಿಗೆ ಹೋದನು. ಅಲ್ಲಿ ಗುಂಡುರಾಯರಿಗೊಂದು ಹೋಟೇಲಿತ್ತು, ದಿನಕರ ಅವರಲ್ಲಿ ಕೆಲಸಕ್ಕೆ ನಿಂತನು. ಆ ಹೋಟೇಲಿನ ಎದುರುಗಡೆ ಇರುವ ಭವ್ಯವಾದ ಭವನವೇ ಬ್ಯಾರಿಸ್ಟರ್ ಕೇಶವ ಅಯ್ಯಂಗಾರರದ್ದು. ಅವರಿಂದ ಏನಾದರೂ ಕಾಫಿಗೆ ಆರ್ಡರು ಬಂದರೆ ದಿನಕರನೇ ಕೊಂಡುಹೋಗುತ್ತಿದ್ದ. ಇವನ ಚಲನ ವಲನ, ದುಂಡಗಿನ ದೇಹ, ನೀಳವಾದ ಮೂಗು, ಅಗಲವಾದ ಹಣೆ, ಬೆಳ್ಳನ್ನ ಸ್ಮೈ, ಅಲ್ಲದೆ ಉತ್ತಮ ಗುಣನಡತೆಗಳನ್ನೂ ಕಂಡು ಅಯ್ಯಂಗಾರರು ಮೆಚ್ಚಿದರು. ಅಲ್ಲದೆ ಅವನನ್ನೂ ಆಗಾಗ ಪ್ರಶ್ನಿಸುತ್ತಾ ಅವನ ಚರಿತ್ರೆಯನ್ನು ತಿಳಿದುಕೊಂಡಿದ್ದರು.

ದಿನಕರ ತನ್ನ ತಿಂಗಳ ಸಂಬಳದಲ್ಲಿ ಏನನ್ನೂ ಇಟ್ಟುಕೊಳ್ಳದೆ ತಾಯಿಗೆ ಕಳುಹಿಸುತ್ತಿದ್ದ. ಊರಿನಲ್ಲಿ ಶಿವರಾಯರು ಕೆಲವು ದಲಾಲಿಗಳ ಮೂಲಕ ಉಪಾಯದಿಂದ ಕಾಗದ ಪತ್ರಗಳಿಗೆ ಲಕ್ಷ್ಮಮ್ಮನ ಸಹಿ ಪಡೆದು ತೋಟ ಮತ್ತು ಮನೆಯನ್ನು ಒಳಪಡಿಸಿಕೊಂಡಿದ್ದರು. ಈ ವಾರ್ತೆ ಪತ್ರದ ಮೂಲಕ ತಿಳಿದ ದಿನಕರನ ಮೇಲೆ ಆಕಾಶವೇ ಕಳಚಿಬಿದ್ದಂತಾಯ್ತು. ಆದರೇನು ಮಾಡುವುದು? ಎಲ್ಲವೂ ವಿಧಿಲೀಲೆ, ಎಂದು ತೆಪ್ಪಗಾದ. ತಾಯಿಗೆ ಸಮಾಧಾನದ ದೀರ್ಘ ಪತ್ರ ಬರೆದ. ಹೀಗೆ ನಾಲ್ಕೈದು ತಿಂಗಳು ಹೋಟೇಲಿನಲ್ಲಿ ಕಳೆಯುವಷ್ಟರಲ್ಲಿ ಒಂದು ಘಟನೆ ನಡೆಯಿತು. ಒಂದು ಡಬ್ಬಿ ಸಜ್ಜಿಗೆಯು ದಿನಕರನ ಕೈಯಿಂದ ನೆಲಕ್ಕೆ ಬಿತ್ತು. ಇದನ್ನು ನೋಡಿದ ಹೋಟೆಲ್ ಗುಂಡುರಾಯರು ಆವೇಶದಿಂದ ತನ್ನ ಆಸನದಿಂದ ಹಾರಿಬಂದು ಎರಡೇಟನ್ನು ದಿನಕರನಿಗೆ ಕೊಟ್ಟು ಕತ್ತಿಗೆಗೆ ಕೈಹಾಕಿ ಹೊರದಬ್ಬಿದರು

ದಿನಕರನು ಪೆಟ್ಟನ್ನು ಸಹಿಸಿದನು ಮುಂದೇನು ಮಾಡುವುದೆಂದು ತೋಚದೆ ಕಂಗಾಲಾದನು. ಕೆಲಸಕ್ಕಾಗಿ ಅಲೆದನು ಎಲ್ಲಿಯೂ ಕೆಲಸ ದೊರಕಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಜೀವನದಲ್ಲಿ ಜುಗುಪ್ಸೆ ಹುಟ್ಟಿತು. ಬದುಕು ಬೇಡವಾಯ್ತು ಆತ್ಮಹತ್ಯೆಯೊಂದೇ ಒದಗಿದ ಕೆಲಸವೆಂದು ನಿಶ್ಚಯಿಸಿದ ತಾಯಿಯನ್ನು ನೆನೆದು ಮರುಗಿದ. ಆದರೂ ದಾರಿ ಕಾಣಲಿಲ್ಲ, ಕೆಲಸ ದೊರೆಯಲಿಲ್ಲ.

ಕತ್ತಲು ಕವಿಯಿತು. ದಿನಕರ ತನ್ನ ಬಾಳಿಗೂ ಕತ್ತಲು ಎಂದ, ತಿಳಿದ. ... ಚ'ನ ಸಮೀಪಕ್ಕೆ ಬಂದ. ಹತ್ತು ಗಂಟೆ ಕಳೆದಿತ್ತು. ದಿನಕರ ಒಮ್ಮೆ ಸುತ್ತಲೂ ನೋಡಿದ ನೀರಿಗೆ ಹಾರಿದ. ನೀರಿಗ ... ರಿದ 'ಗುಳುಂ' ಎಂಬ ಶಬ್ದ ಕಾವಲಿ ಪೋಲೀಸರಿಗೆ ಕೇಳಿಸಿತು. ಅವರು ಒಡನೆಯೇ ಧಾವಿಸಿ ಬಂದು ಮೃತ್ಯು ದವಡೆಯಿಂದ ಬಾಲಕನನ್ನು ಬದುಕಿಸಿದರು

ಮಾರನೆಯ ದಿನ ಬಾಲಕನನ್ನು ನ್ಯಾಯಾಲಯಕ್ಕೆ ಕರೆತರಲಾಯಿತು ಆತ್ಮಹತ್ಯೆಗೆ ಉಪಕ್ರಮಿಸಿದ ವಿಚಾರವನ್ನು ತಿಳಿಯತೊಡಗಿದರು. ಹುಡುಗನನ್ನು ನೋಡಿದ ಅಯ್ಯಂಗಾರರು ದಿಗ್ಭ್ರಾಂತರಾದರು. ಕೂಡಲೇ ಎದ್ದು ಹುಡುಗನ ಪರವಾದಿಸಿ ಮನೆಗೆ ಕರೆತಂದರು ... ಯ್ಯಂಗಾರರ, ಮನಸ್ಸು ಕರಗಿ ನೀರಾಯಿತು. ದಿನಕರನ ಕಣ್ಣಿನಿಂದ ನೀರು ಕೋಡಿ ಹರಿಯಿತು. ಅಯ್ಯಂಗಾರರು ಹುಡುಗನನ್ನು ಸಂತೈಸಿದರು. ... ತನ್ನಲ್ಲೇ ನಿಲ್ಲುವಂತೆ ತಿಳಿಸಿದರು ... ಕರನು ಸಂತೋಷದಿಂದ ಒಪ್ಪಿದನು

ಕೇಶವ ಅಯ್ಯಂಗಾರರಿಗೆ ೭ ವರ್ಷ ... ಸುರೇಶನೆಂಬ ಒಬ್ಬ ಮಗನಿದ್ದನು ...

(೧೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

	3	ತಿಂಗಳಿಗೆ	3%
4 ರಿಂದ	6	,,	3½%
7 ,,	12	,,	4%
13 ,,	24	,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ			2½%
ಕರೆಂಟ್ ಎಕೌಂಟು			½%

The Moolky Bank, Ltd.

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು

ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು-1 ಆಣೆ (25 N P) ಸ್ಟಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ. ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಪ್ರೆಸ್, ಮೈಸೂರು-1 (S.I.)

ಹೊಗೆಸೊಪ್ಪಿಗೂ ಕಸಿಕಟ್ಟಿ ಬರಹುದು ...

ವಿಷರಹಿತ ಧೂಮ್ರಪತ್ರ

ಧೂಮ್ರಪಾನವೊಂದು ಆರೋಗ್ಯಾಪಹಾರಿ ಅಭ್ಯಾಸವೆಂದು ಎಲ್ಲರೂ ಇಂದು ತಿಳಿದಿದ್ದಾರೆ. ಆದರೆ, ಇದನ್ನು ಅರಿತರೂ ಇರುಳು ಕಂಡ ಬಾವಿಗೆ ಹಗಲು ಬೀಳುವಂತೆ ಅದೆಷ್ಟೋ ಮಂದಿ ಈ ದುರಭ್ಯಾಸಕ್ಕೆ ಬಲಿಯಾಗಿದ್ದಾರೆ. ಧೂಮ್ರಪಾನವು ಯಾವ ರೀತಿಯಲ್ಲೂ ಮಾನವನಿಗೆ ಹಿತಕಾರಿಯಲ್ಲವೆಂಬುದನ್ನು ತಿಳಿಯಪಡಿಸುವ ಉಪದೇಶಕರಿದ್ದಾರೆ; ಆದರೆ, ಅವರ ಮಾತುಗಳಿಗೆ ಬೆಲೆ ಬರುವ ಸಂದರ್ಭವೇ ಬರುವುದಿಲ್ಲ.

ಧೂಮ್ರಪಾನಿಗಳಿಗಾದರೂ ಹೊಗೆಸೊಪ್ಪಿನ ಅಪಾಯಗಳ ಜ್ಞಾನವಿದೆ; ಅದರಿಂದ ಬಿಡುಗಡೆ ಹೊಂದುವ ಲವಲವಿಕೆಯೂ ಇದೆ. ಆದರೆ, ಅದೇಕೋ ಏನೋ, ಈ ತಮ್ಮ ಅಸಭ್ಯ ಚಟದಿಂದ ದೂರವಿರುವುದು ಮಾತ್ರ ಅಂತಹರಿಂದ ಅಸಾಧ್ಯವಾಗಿ ಪರಿಣಮಿಸಿದೆ. ಈ ಹೊಗೆಸೊಪ್ಪಿನಲ್ಲಿ ನಿಕೊಟಿನ್ ಎಂಬುದೊಂದು ಸಸ್ಯಕ್ಷಾರವಿದ್ದು ಇದು ತೀವ್ರವಾದ ವಿಷವಾಗಿದೆ. ಆದರೆ, ಇಂತಹ ಕಠೋರ ವಿಷವು ಎಲ್ಲಿ ರೂಪಗೊಳ್ಳುತ್ತದೆ ಎಂದು ತಿಳಿದುಬರಲು ಅನೇಕ ವರ್ಷಗಳು ಬೇಕಾದುವು.

ಪ್ರತಿಯೊಂದು ಸಸ್ಯಕ್ಕೂ ಒಂದೊಂದು ತಾಯಿಬೇರು ಇರುತ್ತದೆ. ಎಂಬುದರಲ್ಲಿ ಎಂದಿಗೂ ಭಿನ್ನಾಭಿಪ್ರಾಯವಿರುವುದಿಲ್ಲ. ಇದರಲ್ಲಿ ಅನೇಕಾನೇಕ ಉಪಮೂಲಗಳು ಹುಟ್ಟಿಕೊಂಡಿದ್ದು ಈ ಬೇರುಗಳ ಮೂಲಕ ಸಸ್ಯಕ್ಕೆ ಆವಶ್ಯಕವೆನಿಸಿದ ಆಹಾರ ಒದಗುತ್ತದೆ. ಸಸ್ಯಕ್ಕೆ ನೀರನ್ನೂ ಇತರ ಸಾರಯುಕ್ತ ಖನಿಜ ಲವಣಗಳನ್ನೂ ಇದು ತಂದುಕೊಡುತ್ತದೆ. ಒಂದು ಸಸ್ಯದ ಬಾಳು ಮತ್ತು ಬೆಳವಣಿಗೆಯಲ್ಲಿ ಬೇರು ವಹಿಸುವ ಮಹತ್ವದ ಪಾತ್ರವೆಂದರೆ ಇವೇ ಎಂದು ಮೊನ್ನೆ ಮೊನ್ನೆಯವರೆಗೂ ವಿಜ್ಞಾನಿಗಳೆಲ್ಲರೂ ತಿಳಿದುಕೊಂಡಿದ್ದರು. ಆದರೆ, ಇತ್ತೀಚೆಗೆ ಅಕೆಡೆಮೀಷಿಯನ್ ಎ. ಷ್ಮುಕ್‌ರವರೂ, ವಿಜ್ಞಾನಿಗಳಾದ ಎ. ಸ್ಮಿರ್ನೋವ್ ಮತ್ತು ಜಿ. ಇಲ್ಯಿನ್‌ರವರು ತಾವು ಅನೇಕ ವರ್ಷಗಳಿಂದ ನಡೆಸಿದ ಪ್ರಯೋಗಗಳ ಆಧಾರದಿಂದ ಸಸಿಯ ಬೇರು ಅತ್ಯಂತ ಮಹತ್ವಪೂರ್ಣವಾದ ಅಂಗರಚನಾ ಸಂಯುಕ್ತಗಳ ಸಂಶ್ಲೇಷಣೆಗಳ ಮಹಾ ಪ್ರಯೋಗಶಾಲೆಯಾಗಿರುತ್ತದೆ ಮತ್ತು ಈ ಸಂಯುಕ್ತಗಳು ಬೇರುಗಳ ಮೂಲಕವಾಗಿ ಸಸಿಯ ಮೇಲ್ಭಾಗಕ್ಕೆ ಮುಟ್ಟಿಸಲ್ಪಡುತ್ತವೆ ಎಂದು ಕಂಡುಹಿಡಿದಿದ್ದಾರೆ.

ಹೊಗೆಸೊಪ್ಪಿನ ಗುಣದ ಮೇಲೆ ಒಳ್ಳೆಯ ಅಥವಾ ಕೆಟ್ಟ ಪರಿಣಾಮಗಳನ್ನುಂಟುಮಾಡುವ ವಸ್ತುಗಳನ್ನು ಯಾವುವೆಂದು ಕಂಡುಹಿಡಿಯುವ ಸಲುವಾಗಿಯೂ ಹೊಗೆಸೊಪ್ಪಿನ ಬೇರೆ ಬೇರೆ ವರ್ಗ ಗುಣಗಳ (ಪರಿಮಳ, ರುಚಿ, ಸಾಮರ್ಥ್ಯ ಇತ್ಯಾದಿ ಗುಣಗಳ) ಕಾರಣಗಳನ್ನು ನಿರ್ಧರಿಸುವ ಸಲುವಾಗಿಯೂ, ಹೊಗೆಸೊಪ್ಪಿನ ಗಿಡದಲ್ಲಿರುವ ರಾಸಾಯನಿಕ ಆಮ್ಲಗಳ ಸಂಯೋಜನೆಯನ್ನು ಗೊತ್ತುಪಡಿಸುವ ಪ್ರಯತ್ನಗಳನ್ನು ಈ ಸಂಶೋಧಕರು ಮಾಡಿದರು.

ಸೋವಿಯತ್ ದೇಶದ ಈ ಮಹಾ ವಿಜ್ಞಾನಿಗಳು ಈ ಸಂಶೋಧನೆಯನ್ನು ಮುಂದುವರಿಸುತ್ತ ಹಲವು ಸ್ವಾರಸ್ಯಕರವಾದ ನಿರ್ಧಾರಕ್ಕೆ ಬಂದರು. ಹೊಗೆಸೊಪ್ಪಿನಿಂದ ಜಂಬೀರಾಮ್ಲ (ಸಿಟ್ರಿಕ್ ಏಸಿಡ್) ವನ್ನು ತಯಾರಿಸುವ ಒಂದು ನೂತನ ವಿಧಾನವನ್ನವರು ಕಂಡುಹುಡುಕಿದರು. ಹೊಗೆಸೊಪ್ಪಿನಲ್ಲಿರುವ ಅಪಾಯಕಾರೀ ಗುಣಗಳೆಲ್ಲವನ್ನೂ ನಿವಾರಿಸುವ ಸಲುವಾಗಿ ಮೊತ್ತಮೊದಲಿಗೆ ಹೊಗೆಸೊಪ್ಪನ್ನು ಒಂದು ರಾಸಾಯನಿಕ ಕ್ರಿಯೆಗೆ ಒಳಪಡಿಸಬಹುದೆಂದವರು ತಿಳಿದುಕೊಂಡರು. ಈ ಪ್ರಯೋಗಗಳ ಆಧಾರದಿಂದ ನಿಕೊಟಿನ್ ಎಂಬ ವಿಷವಿರಹಿತವಾದ ಹೊಗೆಸೊಪ್ಪನ್ನು ಬೆಳೆಯಿಸುವುದೂ ಸಾಧ್ಯವೆಂದು ಕಂಡುಬಂದಿದ್ದು, ಸೋವಿಯೆತ್ ವಿಜ್ಞಾನಿಗಳ ಸಾಹಸದ ಫಲವಾಗಿ ಜಗತ್ತಿನಲ್ಲಿಯೇ ಪ್ರಪ್ರಥಮವಾಗಿ ಈ ಸಾಧನೆಯನ್ನು ಸಾಧಿಸಲಾಗಿದೆ.

ಹೊಗೆಸೊಪ್ಪು ಮತ್ತು ಟೊಮೇಟೊಗಳು ಅತ್ಯಂತ ನಿಕಟವರ್ತಿಗಳಾದರೂ ಎರಡನೆಯದರಲ್ಲಿ ನಿಕೊಟಿನ್ ವಿಷವಿಲ್ಲವೆಂಬುದು ಗಮನೀಯ. ಟೊಮೇಟೊ ಗಿಡಗಳಿಗೆ ಕಸಿ ಕಟ್ಟುವ ಪ್ರಯೋಗವೊಂದು ನಡೆಯಿತು. ಹೊಗೆಸೊಪ್ಪಿನ ಗಿಡಕ್ಕೆ ಕಸಿ ಕಟ್ಟಲ್ಪಟ್ಟ ಟೊಮೇಟೊ ಗಿಡವು ದಷ್ಟಪುಷ್ಟವಾಗಿ ಬೆಳೆದು ಬಂದಿತು. ಈ ಗಿಡವು ಗಾತ್ರದಲ್ಲಿಯೂ ಪ್ರಮಾಣದಲ್ಲಿಯೂ ಹಿರಿದಾದ ಅನೇಕ ಹಣ್ಣುಗಳನ್ನು ಇತ್ತಿತು; ಆದರೆ, ದುರದೃಷ್ಟವಶದಿಂದ, ಈ ಸಸಿಯಲ್ಲಿ ಪಡೆಯಲಾದ ಹಣ್ಣುಗಳನ್ನು ವೈಜ್ಞಾನಿಕ ವಿಶ್ಲೇಷಣಾ ಪದ್ಧತಿಯಿಂದ ಪರಿಶೀಲಿಸಿದಾಗ, ಅವುಗಳ ತುಂಬ ನಿಕೊಟಿನ್ ವಿಷವು ವ್ಯಾಪಿಸಿರುವುದು ಕಂಡುಬಂದಿತು!



ಅರಸ ಆರ್ಥರರ ಮೇಜನ್ನು ಲಂಡನ್ನಿನ ಪ್ರದರ್ಶನವೊಂದರಲ್ಲಿ ಇಡಲ್ಪಟ್ಟಿತ್ತು. ಆ ಮೇಜಿನ ಒಂದು ಭಾಗದ ಚಿತ್ರವಿದು.

ಇದಕ್ಕೆ ವ್ಯತಿರಿಕ್ತವಾದ ಇನ್ನೊಂದು ಪ್ರಯೋಗ ನಡೆಯಿತು. ಟೊಮೇಟೊ ಗಿಡದೊಂದಿಗೆ ಹೊಗೆಸೊಪ್ಪಿನ ಗಿಡವನ್ನು ಕಸಿ ಕಟ್ಟಲಾಯಿತು. ಈ ಪ್ರಯೋಗದಲ್ಲಿ ಹೊಗೆಸೊಪ್ಪಿನ ಗಿಡವು ಪುಷ್ಟಿಕರವಾಗಿಯೇ ಬೆಳೆದು ಬಂದರೂ ಹೊಗೆಸೊಪ್ಪಿನಲ್ಲಿ ನಿಕೊಟಿನ್ ವಿಷದ ಲವಲೇಶವೂ ಇರಲಿಲ್ಲ. ಈ ಪ್ರಯೋಗದ ಆಧಾರದಿಂದ ಸಸಿಯ ಪ್ರಾಣಾಧಾರ ಚಟುವಟಿಕೆಗಳಲ್ಲಿ ಬೇರಿಗಿರುವ ವಿಶೇಷ ಮಹತ್ವವನ್ನು ತೋರಿಸುವ ಪ್ರಯೋಗಗಳಲ್ಲಿ ಸಸ್ಯಕ್ಷಾರವುಳ್ಳ ಸಸಿಗಳನ್ನೇ ಮೊದಲು ಬಳಸಲಾಯಿತು. ನಿಕೊಟಿನ್ ವಿಷದ ಸಂಶ್ಲೇಷಣೆಯು ಹೊಗೆಸೊಪ್ಪಿನ ಸಸಿಗಳ ಬೇರುಗಳಲ್ಲಿಯೇ ನಡೆಯುತ್ತದೆ ಎಂದು ಈ ಪ್ರಯೋಗಗಳಿಂದ ತಿಳಿದುಬಂದಿತು. ಆದುದರಿಂದ ಕಟ್ಟಕಡೆಗೆ ಈ ರಹಸ್ಯವನ್ನು ನಿಕೊಟಿನ್ ಎಲ್ಲಿ ರೂಪಿತವಾಗುತ್ತದೆ ಎಂಬ ಉಗಮಸ್ಥಾನದ ನಿರ್ದೇಶನದ ರಹಸ್ಯವನ್ನು ಕಂಡುಹಿಡಿದರು.

ಈ ಬಗ್ಗೆ ಪ್ರಯೋಗಗಳು ಇನ್ನೂ ಮುಂದುವರಿಯುತ್ತಿವೆ. ಶ್ರೀ ಜಿ. ಇಲ್ಯಿನ್‌ರವರು ಸಸ್ಯಕ್ಷಾರಗಳ ಮೂಲವನ್ನೂ ಅವು ರೂಪುಗೊಳ್ಳುವ ವಿಧಾನಗಳನ್ನೂ ಸಸ್ಯಪೋಷಣೆಯಲ್ಲಿ ಅವುಗಳ ಪಾತ್ರವನ್ನೂ ಗೊತ್ತುಪಡಿಸುವ ಧ್ಯೇಯಸಾಧನೆಯಲ್ಲಿಯೇ ನಿರತರಾಗಿದ್ದಾರೆ. ಸೋವಿಯೆತ್ ದೇಶದ ವಿಜ್ಞಾನ ಶಾಸ್ತ್ರ ಪರಿಷತ್ತಿನ ಜೀವವಿಜ್ಞಾನ ಶಾಸ್ತ್ರದ ಬಾಖ್ ವಿದ್ಯಾಲಯದಲ್ಲಿಯೂ ಇತ್ತೀಚೆಗೆ ವಿದ್ಯುತ್-ವಿಕಿರಣ ಕ್ರಿಯಾಶಕ್ತಿಯ ಸಮಸ್ಥಾನಿಗಳ ಬಳಕೆಯಿಂದ ಪ್ರಯೋಗಗಳನ್ನು ನಡೆಯಿಸಿದಾಗ ಇಲ್ಲಿಯೂ ಬೇರುಗಳಲ್ಲಿಯೇ ನಿಕೊಟಿನ್ ರೂಪಿತಗೊಳ್ಳುತ್ತದೆ ಎಂದು ತಿಳಿದು ಬಂದಿರುವುದು.

ನಿಕೊಟಿನ್ ವಿರಹಿತ ಹೊಗೆಸೊಪ್ಪಿನ ಈ ಗುಣವು ಸಸ್ಯ ಪಾರಂಪರ್ಯವಾಗಿ ಬರುವುದಿಲ್ಲವೆಂಬುದು ಖೇದನೀಯ. ಕೇವಲ ಪ್ರತಿಗಿಡವನ್ನೂ ಕಸಿಕಟ್ಟಿಯೇ ಈ ವಿಷರಹಿತ ಹೊಗೆಸೊಪ್ಪನ್ನು ಪಡೆಯಬೇಕಾಗಿದೆ. ಆದುದರಿಂದ ಇಂತಹ ಅನನುಕೂಲವನ್ನು ದೂರಮಾಡಿಸಿ ಈ ಆವಶ್ಯಕ ಗುಣವನ್ನು ಪಾರಂಪರ್ಯಗೊಳಿಸುವುದು ಸಾಧ್ಯವೇ ಎಂಬುದರ ಬಗ್ಗೆ ವಿಶೇಷ ಅಧ್ಯಯನ ನಡೆಯುತ್ತಿದೆ. ಜಗತ್ತಿನ ಎಲ್ಲ ಸುಪ್ರಸಿದ್ಧ ವಿಜ್ಞಾನಿಗಳೂ ಈ ಮಹತ್ವಪೂರಿತ ಸಂಶೋಧನೆಯನ್ನು ಗಮನಿಸಿದ್ದಾರೆ. ಸಸ್ಯಕ್ಷಾರವಿಲ್ಲವಾದರೆ, ಹೊಗೆಸೊಪ್ಪಿನ ರುಚಿಯ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲವೆಂದು ಹೊಗೆಸೊಪ್ಪು ಗಿಡದ ವಿಶೇಷಜ್ಞರು ಅಭಿಪ್ರಾಯಪಡುತ್ತಾರೆ.

ಅಂತೂ ಈ ಬಗ್ಗೆ ದೀರ್ಘ ಪರಿಶೀಲನೆ ಹಾಗೂ ಪರಿಶೋಧನೆಗಳು ನಿರ್ವಿಘ್ನವಾಗಿ ನಡೆಯುತ್ತ ಬಂದು, ವಿಷರಹಿತ ಹೊಗೆಸೊಪ್ಪು ಧಾರಾಳವಾಗಿ ಬೆಳೆದು ಬರಬಹುದಾದ ದಿನವು ಅನತಿ ದೂರದಲ್ಲಿದೆ ಎನ್ನಬಹುದು

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್
ಲಿಮಿಟೆಡ್, ಉಡುಪಿ.
ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ಮೂರು ಹೊಸ ಶಾಖೆಗಳು
ಬೆಳ್ಗಾಂ (ಶಾಪುರ)
ಬೆಳ್ಗಾಂ (ಕೇಂಪ್)
ತಿಪಟೂರು (ತುಮ್ಕೂರು ಜಿಲ್ಲೆ)
ತಾ. 27-3-'58ರಲ್ಲಿ ತೆರೆಯಲ್ಪಟ್ಟವು.

ಒಟ್ಟು ಶಾಖೆಗಳು: 109

ಜುಮ್ಲಾ ಚಲಾವಣಾನಿಧಿ ರೂ. 12 · 75 ಕೋಟಿಗೂ ಮಿಕ್ಕಿದೆ.

ಟಿ. ಎ. ಪೈ, ಬಿ.ಕಾಂ.(ಬೊಂ.) ಎ.ಐ.ಐ.ಬಿ.ಯಫ್.ಆರ್.ಇ.ಯಸ್.(ಲಂಡನ್) ಜನರಲ್ ಮೆನೇಜರ್.
ಡಾ। ಟಿ. ಮಾಧವ ಪೈ, ಎಂ.ಬಿ. & ಬಿ.ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಕಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರ್ಸೊಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.
ನವಯುಗ ಪ್ರೆಸ್, ಉಡುಪಿ.

ಭಾರತೀಯ ವೈಮಾನಿಕ ದಳ—

ನಾವು ಮತ್ತು ನಮ್ಮ ಬಲ

ಫ್ಲೈ. ಲೆ. ಎಂ. ಕೆ. ಗೋಪಾಲ ರಾವ್

ಭಾರತಕ್ಕೆ ಸ್ವಾತಂತ್ರ್ಯ ಲಭಿಸಿದ್ದು ಈಗ್ಗೆ ಕೇವಲ ಹತ್ತು ವರ್ಷಗಳ ಹಿಂದೆ. ಆದಾಗ್ಯೂ ನಮ್ಮ ದೇಶವು ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಅವಲೋಕಿಸಿದರೆ, ನಾವು ಹರ್ಷದಿಂದ ತಲೆದೂಗದಿರಲಾರೆವು. ನಾವು ಎದುರಿಸಬೇಕಾದ ಸಮಸ್ಯೆಗಳಿಗೆ ಮಿತಿಯೇ ಇಲ್ಲವೆಂಬಂತಾಗಿದೆ. ವಿಶಾಲ ಭಾರತದಲ್ಲಿ ಒಂದಲ್ಲ ಒಂದು ಕಾರಣದಿಂದ, ಒಂದಲ್ಲ ಒಂದು ಸಮಸ್ಯೆ ತಲೆ ಎತ್ತುತ್ತಲೇ ಇದೆ. ಈ ಸಮಸ್ಯೆಗಳನ್ನು, ಧೈರ್ಯದಿಂದ ಎದುರಿಸುತ್ತ, ನಾವು ಅಭಿವೃದ್ಧಿ ಪಥದಲ್ಲಿ ಧಾವಿಸುತ್ತಿದ್ದೇವೆ. ನಮ್ಮ ದೇಶದ ಜನನಾಯಕರು ಸೃಜಿಸಿರುವ ಪಂಚವಾರ್ಷಿಕ ಯೋಜನೆಯು, ನಮ್ಮ ಜೀವನದ ನಾನಾ ರಂಗಗಳಲ್ಲಿನ ಸಮಸ್ಯೆಗಳನ್ನು ಬಿಡಿಸಿ, ದೇಶಾಭ್ಯುದಯವನ್ನು ಸಾಧಿಸುತ್ತ, ಇಡಿ ವಿಶ್ವಕ್ಕೆ ಒಂದು ನೇಲ್ಪಂಕ್ತಿಯನ್ನು ಹಾಕಿಕೊಟ್ಟಿದೆ ಎನ್ನಬಹುದು. ವಿಶ್ವದ ರಾಷ್ಟ್ರಗಳ ಪಂಕ್ತಿಯಲ್ಲಿ ಭಾರತವು ಗಣ್ಯವೂ, ಪ್ರಭಾವಶಾಲಿಯೂ, ಘನತರವೂ ಆದ ರಾಷ್ಟ್ರವೆಂದು ಕೀರ್ತಿ ಗಳಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ನಮ್ಮ ಜನತೆ ಹುರುಪಿನಿಂದ, ಕೈತ್ಪೂರ್ವಕವಾಗಿ ದುಡಿಯುತ್ತಿದೆ.

ವಿಶಾಲ ಭಾರತದಲ್ಲಿ ಪ್ರಗತಿ ಕಾರ್ಯಗಳು ಯಾವ ಅಡ್ಡಿ ಆತಂಕವೂ, ಎಡರು ತೊಡರುಗಳೂ ಇಲ್ಲದೆ ಮುಂದುವರಿಯಬೇಕಾದರೆ, ಅವು ತಾವಿಟ್ಟುಕೊಂಡಿರುವ ಗುರಿಯನ್ನು ಸಾಧಿಸಬೇಕಾದರೆ, ನಮ್ಮ ದೇಶಕ್ಕೆ ಹೊರಗಿನಿಂದ ಶತ್ರುಗಳ ಭಯವಾವುದೂ ಇರಬಾರದು. ನಮ್ಮ ರಕ್ಷಣೆಯನ್ನು ನೋಡಿಕೊಳ್ಳದಿದ್ದಲ್ಲಿ ಬೇರೆಯವರಾರು ನೋಡಿಕೊಳ್ಳುವರು? ನಮ್ಮ ರಕ್ಷಣೆಗಾಗಿ ಬೇರೆಯವರನ್ನು ಬೇಡುವುದೂ ಸೂಕ್ತವಾಗದು; ಅದರಿಂದ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತಗಲುವ ಸಂಭವವಿದೆ. ಇದು ನಮಗೆ ಇತಿಹಾಸ ಕಲಿಸಿದ ಪಾಠವಾಗಿದೆ.

ದೇಶಕ್ಕೆ ಶತ್ರುಭಯವಿಲ್ಲದಂತೆ ಮಾಡುವ ಉದ್ದೇಶದಿಂದ ಭಾರತ ಸರ್ಕಾರದವರು ಭೂ ಸೇನಾಬಲ, ನೌಕಾಬಲ ಮತ್ತು ವಿಮಾನಬಲವನ್ನು ಸ್ಥಾಪಿಸಿರುವರು. ಈ ಬಲಗಳ ಜವಾಬ್ದಾರಿ ಅತಿ ದೊಡ್ಡದು. ಸಾವಿರಾರು ಚದರ ಮೈಲಿಗಳಷ್ಟು ವಿಸ್ತಾರವುಳ್ಳ ನಮ್ಮ ದೇಶದಲ್ಲಿ ಶತ್ರುಗಳು ಕಾಲಿಡದಂತೆ ಕಾಯುವ ಕೆಲಸವು ಸುಲಭ ಸಾಮಾನ್ಯವಾದುದಲ್ಲ. ಆದಕ್ಕಾಗಿ ಈ ಮೂರು ದೇಶರಕ್ಷಕದಳಗಳೂ ಅಹೋರಾತ್ರಿ ಎಚ್ಚರಿಕೆಯಿಂದ ದುಡಿಯುತ್ತಿವೆ.

ಹಲವರಿಗೆ, ಈ ಮೂರು ದಳಗಳಲ್ಲಿರುವ ಸೂಕ್ಷ್ಮ ವ್ಯತ್ಯಾಸಗಳು ಅಷ್ಟಾಗಿ ಗೋಚರವಾಗುವುದಿಲ್ಲ. ಇಂದಿನ ವಿಶ್ವದಲ್ಲಿ ಮೂರು ದಳಗಳೂ ಪರಸ್ಪರ ಪೂರಕಗಳೂ ಹೌದು, ಅವಲಂಬಿಗಳೂ ಹೌದು. ಒಂದನ್ನೊಂದು ಬಿಟ್ಟು ತಮ್ಮ ಕೆಲಸಗಳನ್ನು ನಿರ್ವಹಿಸಲಾರವು. ಆಕಸ್ಮಾತ್ ದೇಶದ ಮೇಲೆ ಧಾಳಿ ನಡೆದರೆ ಭೂ ಸೇನಾಬಲವಾಗಲಿ, ನೌಕಾ ಬಲವಾಗಲಿ ಪ್ರತ್ಯೇಕವಾಗಿ ಕಾರ್ಯಾಚರಣೆ ಮಾಡಿ, ಯಶಸ್ವಿಯಾಗಲಾರವು. ವಿಮಾನ ಬಲವು ಉಳಿದೆರಡು ಬಲಗಳ ನೆರವಿಗೆ ಬಂದೇ ತೀರಬೇಕು. ವಿಮಾನ ಬಲವು ಉಳಿದೆರಡು ಬಲಗಳಿಗೆ ಕಣ್ಣುಗಳಿದ್ದಂತೆ. ವಿಮಾನ ಬಲವು ಶತ್ರುಗಳಿಗೆ ಮಾಡಬಹುದಾದಷ್ಟು ಪ್ರಮಾಣದಲ್ಲಿ ನಷ್ಟವನ್ನು ಉಳಿದೆರಡು ಬಲಗಳು ಮಾಡಲಾರವು. ಯಾವ ದೇಶದಲ್ಲಿ ವಿಮಾನ ಬಲವು ಬಲಶಾಲಿಯೂ ಪರಾಕ್ರಮಶಾಲಿಯೂ ಆಗಿರುತ್ತದೆಯೋ ಆ ದೇಶದಲ್ಲಿ ಶತ್ರುಭೀತಿಯಿರುವುದಿಲ್ಲ. ಪ್ರಬಲವಾದ ವಿಮಾನ ಬಲವು, ದೇಶ ರಕ್ಷಣೆಯ ಒಟ್ಟು ಹೊಣೆಗಾರಿಕೆಯಲ್ಲಿ ಮುಕ್ಕಾಲು ಪಾಲನ್ನು ವಹಿಸಿಕೊಳ್ಳಬಲ್ಲುದು. ರಷ್ಯಾ, ಅಮೇರಿಕ ಹಾಗೂ ಬ್ರಿಟನ್ನಿನ ವಿಮಾನ ಪಡೆಗಳೇ ಇದಕ್ಕೆ ನಿದರ್ಶನಗಳಾಗಿವೆ.

ಇಂದು ಮಾನವನು ನಭೋಮಂಡಲವನ್ನು ಆಕ್ರಮಿಸಿಕೊಂಡು ಕೃತಕ ಗೋಲಗಳನ್ನು ಭೂಮಿಯಿಂದ ಸುಮಾರು ೫೦೦ ಮೈಲಿಗಳ ಎತ್ತರದಲ್ಲಿ ಹಾರಿಸುತ್ತಿರುವುದು. ವಿಮಾನ ಪಡೆಗಳ ಪ್ರಾಬಲ್ಯವನ್ನು ವ್ಯಕ್ತಪಡಿಸುತ್ತದೆ. ಉತ್ಕೃಷ್ಟ ಮಟ್ಟದ ವಿಮಾನ ಪಡೆಯಿಲ್ಲದ ಯಾವ ದೇಶವೂ ಇಂದು ಸುರಕ್ಷಿತವಾಗಿರಲಾರದು.

ಭಾರತದ ವಿಮಾನ ಪಡೆಗಳು ನಮ್ಮ ದೇಶ ರಕ್ಷಣಾದಳಗಳಲ್ಲಿ ಹಿರಿಯ ಸ್ಥಾನವನ್ನು ಗಳಿಸಿರುವುದು ಹೆಮ್ಮೆಯ ವಿಷಯ. ಈ ತಿಂಗಳ ಮೊದಲನೆಯ ದಿನಾಂಕದಂದು ಈ ದಳವು ತನ್ನ ರಜತ ಮಹೋತ್ಸವವನ್ನು ಆಚರಿಸಿತು. ಈ ದಳವು ತನ್ನ ೨೫ ವರ್ಷಗಳ ಅವಧಿಯಲ್ಲಿ ಅನೇಕ ಮಹತ್ಕಾರ್ಯಗಳನ್ನು ಸಾಧಿಸಿದೆ. ಈ ದಳದ ಇತಿಹಾಸವನ್ನು ಪರಿಶೀಲಿಸಿದರೆ, ಈ ದಳವು ಸಾಧಿಸಿರುವ ಪ್ರಗತಿಯು ವ್ಯಕ್ತವಾಗುವುದು. ಭೂ ಸೇನಾಪಡೆ ಹಾಗೂ ನೌಕಾ ಪಡೆಗಳಿಗೆ ಹೋಲಿಸಿದಲ್ಲಿ ವಿಮಾನ ಪಡೆಯು ಚಿಕ್ಕ ತಮ್ಮನಂತಿರುವುದು. ಆದರೂ ಅದರ ಪ್ರಭಾವವು ಉಳಿದೆರಡು ಪಡೆಗಳಿಗೆ ಯಾವ ರೀತಿಯಿಂದಲೂ ಕಡಿಮೆಯಿಲ್ಲ. ಅಷ್ಟೇ ಅಲ್ಲ, ವಿಶ್ವದ ಇತರ ದೇಶಗಳ ವಿಮಾನ ಪಡೆಗಳ ಪಂಕ್ತಿಯಲ್ಲಿ ಭಾರತದ ವಿಮಾನ ಪಡೆಯು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇದಕ್ಕೆ ಕಾರಣವೇನು?

ಭಾರತದ ವಿಮಾನ ಪಡೆಯು ಸ್ಥಾಪನೆಗೊಂಡ ಆರಂಭದ ವರ್ಷಗಳಲ್ಲಿ ಹಲವಾರು ಭಾರತೀಯ ಗಣ್ಯ ಯುವಕರು ದೇಶಸೇವೆಗಾಗಿ ಪಣತೊಟ್ಟು ಅದ್ಭುತ ಕಾರ್ಯಗಳನ್ನು ನೆರವೇರಿಸಿದರು. ಅವರಲ್ಲಿ ಈಗ ವಿಮಾನ ಬಲದ ಪ್ರಧಾನಾಧಿಕಾರಿಯಾಗಿರುವ ಏರ್ ಮಾರ್ಷಲ್ ಮುಖರ್ಜಿಯವರೂ, ಏರ್ ಮಾರ್ಷಲ್ ಎಂಜಿನಿಯರ್‌ರವರೂ, ಏರ್ ಕಮೋಡರ್ ಆರ್. ಎಚ್. ಡಿ. ಸಿಂಗ್‌ರವರು ಹಾಗೂ ಗೋಯಲ್‌ರವರೂ ಇರುವರು. ಇನ್ನೂ ಕೆಲವು ವೀರರು ಈಗ ಸ್ವರ್ಗಸ್ಥರಾಗಿರುವರು. ವಿಮಾನ ಪಡೆಯು ಶೈಶವಾವಸ್ಥೆಯಲ್ಲಿದ್ದಾಗ, ಈ ವೀರಯೋಧರು ಸಲ್ಲಿಸಿದ ಅವಿಶ್ರಾಂತ ದುಡಿತ, ತೋರಿಸಿದ ದೂರದೃಷ್ಟಿ, ಇಂದು ಅದು ಸಾಧಿಸಿರುವ ಕಾರ್ಯ ಪ್ರಗತಿಗೆ ಬುನಾದಿಯನ್ನು ಹಾಕಿದೆ. ಅನೇಕ ದೇಶಾಭಿಮಾನಿಗಳು ಸಲ್ಲಿಸಿದ ಅಮೋಘ ಸೇವೆಯ ಫಲಸ್ವರೂಪವಾಗಿ, ದೇಶಕ್ಕೆ ಸ್ವಾತಂತ್ರ್ಯ ಲಭ್ಯವಾದ ನಂತರ, ವಿಮಾನ ಬಲಕ್ಕೆ ಅತ್ಯುತ್ತಮ ಸ್ಥಾನ ದೊರೆತಿದೆ; ವಿಮಾನ ಬಲವು ಜನಪ್ರಿಯವಾಗಿದೆ.

ನಮ್ಮ ವಿಮಾನ ಬಲದಲ್ಲಿ, ಆರಂಭದಲ್ಲಿ ಉತ್ತಮ ದರ್ಜೆಯ ವಿಮಾನಗಳೇ ಇರಲಿಲ್ಲ. ವೇಗವಾಗಿ ಹಾರಬಲ್ಲ, ಅತ್ಯಾಧುನಿಕ ಶಸ್ತ್ರ ಸಜ್ಜಿತವಾದ ವಿಮಾನಗಳು ಇಲ್ಲದಿದ್ದರೆ, ವಿಮಾನ ಬಲವು ಇದ್ದರೂ ಒಂದೇ ಇಲ್ಲದಿದ್ದರೂ ಒಂದೇ. ಬ್ರಿಟಿಷರ ಆಡಳಿತ ಕಾಲದಲ್ಲಿ ಅವರು ಇದಕ್ಕೆ ಹೆಚ್ಚಿನ ಗಮನಕೊಡಲಿಲ್ಲ; ಅವರಿಗೆ ಭಾರತದ ವಿಮಾನ ಬಲವನ್ನು ಬಲಪಡಿಸುವುದು ಬೇಕಾಗಿಯೂ ಇರಲಿಲ್ಲ. ದ್ವಿತೀಯ ವಿಶ್ವ ಮಹಾ ಸಮರದ ಒತ್ತಡದಿಂದ ನಮ್ಮ ದೇಶದಲ್ಲಿ ಅವರು ವಿಮಾನ ಬಲವನ್ನು ವಿಸ್ತರಿಸಬೇಕಾಗಿ ಬಂತು. ಅನುಕೂಲದಿಂದ ವಿಮಾನಗಳಿಲ್ಲದಿದ್ದರೂ ವಿಮಾನ ಬಲವನ್ನು ಸೇರಿದ ನಮ್ಮ ಯುವಕರು ಹುರುಪಿನಿಂದ ದುಡಿದು, ದ್ವಿತೀಯ ಮಹಾ ಸಮರದಲ್ಲಿ ತಮ್ಮ ಪರಾಕ್ರಮದಿಂದ ಗಣ್ಯಸ್ಥಾನವನ್ನು ಗಳಿಸಿದರು. ಅಂತೆಯೇ ಸ್ವತಂತ್ರ ಭಾರತದ ವಿಮಾನ ಸೇನೆಗೆ ಅಸ್ತಿಭಾರವನ್ನು ಹಾಕಿದರು.

ಸ್ವತಂತ್ರ ಭಾರತದ ವಿಮಾನ ಬಲವು ಅತಿ ಶೀಘ್ರವಾಗಿ ಬೆಳೆಯಿತು. ವರ್ಷಂಪ್ರತಿ ಸುಸಜ್ಜಿತವಾದ ವಿಮಾನಗಳು ಈ ಬಲಕ್ಕೆ ಬಂದು ಸೇರಿಕೊಂಡವು. ಸಾವಿರಾರು ಮಂದಿ ಭಾರತೀಯ ಯುವಕರು ವಿಮಾನ ಬಲವನ್ನು ಸೇರಿ ದೇಶ ಸೇವಾತತ್ಪರರಾದರು. ಅದರ ಪರಿಣಾಮವಾಗಿ ಇಂದು ವಿಮಾನ ಬಲವು ಒಂದು ಪ್ರಬಲ ಶಕ್ತಿಯಾಗಿದೆ. ದೇಶವಿದೇಶಗಳ ವಿಮಾನ ಬಲಗಳೊಂದಿಗೆ ಸರಿಸಾಟಿಯಾಗಿ ನಿಲ್ಲುತ್ತದೆ. ವಿಶ್ವದಲ್ಲಿ ಹೆಸರುಗಳಿಸಿದ 'ಮಿಸ್ಟಿಯರ್' ಮತ್ತು 'ಹಂಟರ್' ಮುಂತಾದ ಶಬ್ದವೇಗವನ್ನು ಭೇದಿಸಬಲ್ಲ ಹೊಸ ನಮೂನೆಯ ವಿಮಾನಗಳು ಈಗ ನಮ್ಮ ವಿಮಾನಬಲದಲ್ಲಿವೆ. ನಮ್ಮ ವಿಮಾನಬಲದ ವಿಮಾನ ಚಾಲಕರೂ, ವಿಮಾನ ಪೋಷಕರೂ, ಬೇರಾವ ದೇಶಗಳ ವಿಮಾನ ಚಾಲಕರಿಗೂ, ಪೋಷಕರಿಗೂ ಕಡಿಮೆಯಿಲ್ಲವೆಂಬುದನ್ನು ಈಗಾಗಲೇ ತೋರಿಸಿಕೊಟ್ಟಿದ್ದಾರೆ. ನಮ್ಮ ದೇಶವು ತನ್ನದೇ ಆದ ವಿಮಾನಗಳನ್ನು ತಯಾರಿಸುವ ಯೋಜನೆಗಳನ್ನು ಕೈಗೊಂಡಿದೆ. ಹಿಂದೂಸ್ಥಾನ್ ವಿಮಾನ ಕಾರ್ಖಾನೆಯು ಈಗಾಗಲೇ 'ಗ್ನಾಟ್' ಎಂಬ ಚಿಕ್ಕ ಜೆಟ್ ವಿಮಾನವನ್ನು ತಯಾರಿಸಲು ಕಾರ್ಯಸಿದ್ಧತೆ ಮಾಡಿಕೊಳ್ಳುತ್ತಿದೆ. ನಮ್ಮ ದೇಶವು ತನ್ನದೇ ಆದ ವಿಮಾನಗಳನ್ನು ತಯಾರಿಸದಿದ್ದಲ್ಲಿ ತೊಂದರೆಯಿದೆ. ಹೊರದೇಶಗಳಿಂದ ನಾವು ಬಹುಕಾಲದವರೆಗೆ ಸಹಾಯವನ್ನು ನಿರೀಕ್ಷಿಸಲಾಗದು. ವಿಮಾನಗಳಿಗಾಗಿ ಹೊರದೇಶಗಳನ್ನು ಅವಲಂಬಿಸಬಾರದು. ಕಾಲಕ್ರಮದಲ್ಲಿ ನಾವೂ ವಿದೇಶಗಳಂತೆಯೇ ಗೈಡೆಡ್ ಮಿಸೈಲ್ ಮುಂತಾದುವುಗಳನ್ನು ತಯಾರಿಸುವುದಕ್ಕಾಗಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ನಮ್ಮ ವಿಮಾನ ಬಲದ ಕೆಲಸ ದೇಶರಕ್ಷಣೆ ಮಾತ್ರವೆಂಬ ಅಭಿಪ್ರಾಯ ಅನೇಕರಲ್ಲಿದೆ. ವಿಮಾನಬಲವು ದೇಶದ ರಕ್ಷಣೆಯಲ್ಲದೆ, ಬೇರೆ ಅನೇಕ ಕಾರ್ಯಗಳಲ್ಲಿ ಸೇವೆ ಸಲ್ಲಿಸಿದೆ. ಇತ್ತೀಚೆಗೆ ಅಸ್ಸಾಮಿನಲ್ಲಿ ಮತ್ತು ಸಿಲೋನಿನಲ್ಲಿ ಪ್ರಕೃತಿ ಪ್ರಕೋಪದ ಫಲವಾಗಿ ತೊಂದರೆಗೀಡಾದವರಿಗೆ ವಿಮಾನ ಬಲದ ಸದಸ್ಯರು ನೀಡಿದ ನೆರವನ್ನು ಯಾರೂ ಮರೆಯುವಂತಿಲ್ಲ. ದಕ್ಷರಾದ ನಮ್ಮ ವಿಮಾನ ಸೇನೆಯ ಯುವಕರು ದೇಶದ ಯಾವ ಮಹತ್ಕಾರ್ಯಕ್ಕಾದರೂ ಸಿದ್ಧರಾಗಿರುವರು ಇದು ಎಲ್ಲರಿಗೂ ಹೆಮ್ಮೆತರುವ ವಿಷಯ.

ನಮ್ಮ ವಿಮಾನ ಬಲವು ಇನ್ನೂ ಮಹತ್ತರ ಸ್ಥಾನ ಗಳಿಸುವ ಹೊಣೆಯು ನಮ್ಮ ದೇಶದ ಜನಗಳ ಮೇಲೆ ಬಿದ್ದಿದೆ. ಅವರ ಉತ್ತೇಜನದಿಂದಲೂ, ಸಹಾಯದಿಂದಲೂ ನಮ್ಮ ವಿಮಾನ ಬಲವು ಪ್ರಗ

(೯ನೇ ಪುಟ ನೋಡಿರಿ)

ನಿಮ್ಮ ಪರಿಚಿತರಾರೂ "ಕೊಪೊರ್ರೇಶನ್" ಬೇಂಕಿನಲ್ಲಿಲ್ಲದಿದ್ದಲ್ಲಿ, ಬೇಂಕು ವ್ಯವಹಾರ ನಡೆಸಲು ದಾಕ್ಷಿಣ್ಯಪಟ್ಟು ನೀವು ವೃಥಾ ಹಿಂಜರಿಯುವ ಅಗತ್ಯವಿಲ್ಲ. ಕಾರಣ, ನಮ್ಮ ಯಾವುದೇ ಒಂದು ಶಾಖೆಯಲ್ಲಿ ಯಾರೇ ಬರಲಿ, ಅವರು ನಮ್ಮವರೆಂದೇ ಬಗೆದು, ಅವರ ಮನಮೆಚ್ಚುವಂತೆ ಬೇಂಕು ಸೇವೆ ಸಲ್ಲಿಸುವುದೇ

ನಮ್ಮ ಆದ್ಯಕರ್ತವ್ಯವೆಂಬುದನ್ನು ನಾವು ಚೆನ್ನಾಗಿ ಬಲ್ಲೆವು.

ಇಂದೇ "ಕೊಪೊರ್ರೇಶನ್" ಬೇಂಕನ್ನು ನಿಮ್ಮ ಬೇಂಕಾಗಿ ಆರಿಸಿಕೊಳ್ಳಿರಿ!

ದಿ ಕೆನರಾ ಬೇಂಕಿಂಗ್ ಕೊಪೊರ್ರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಸುಮಾರು 52 ವರುಷಗಳ ಅನುಭವವಿರುವ ಬೇಂಕು!!

'NAVAYUGA' WEEKLY is in the list of periodicals and Newspapers approved or use in Secondary Schools as perproceedings Roc. No 466 N/50 date 2-12-1950 of the Director of public Instruction. Madras.

ಸಾಹಿತ್ಯದ ಸಿಂಹಾವಲೋಕನ—

ಕನ್ನಡ ಸಾಹಿತ್ಯದ ಉಗಮ

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಸಾಹಿತ್ಯದ ಉಗಮ

ಕನ್ನಡವೊಂದು ಜೀವಂತ ಭಾಷೆ. ಇತರ ಭಾಷೆಗಳಂತೆಯೇ ದಿನೇ ದಿನೇ ಬೆಳೆದು ಬರುತ್ತಿರುವ ಭಾಷೆ. ಈ ಭಾಷೆಯಲ್ಲಿಯೂ ಬಹಳ ಹಿಂದಿನ ಕಾಲದಿಂದಲೂ ಸಾಹಿತ್ಯವು ನಿರ್ಮಾಣವಾಗಿರುತ್ತದೆ. ಆದರೆ, ಕನ್ನಡ ಸಾಹಿತ್ಯವು ಎಂದು ಉಗಮವಾಯಿತೆಂದು ಹೇಳಲು ನಿರ್ದುಷ್ಟವಾದ ಆಧಾರಗಳು ಸಾಕಷ್ಟು ದೊರೆಯುವುದಿಲ್ಲ. ಸಾಮಾನ್ಯವಾಗಿ ನಾಡಿನ ಮೂಲೆಗಳಲ್ಲಿ ದೊರೆಯುವ ಶಾಸನಗಳ ಆಧಾರದಿಂದ ಈ ಕಾಲಮಿತಿಯನ್ನು ನಿರ್ಧರಿಸುವುದಾದರೆ, ಕ್ರಿಸ್ತಶಕ ಸುಮಾರು ೪೫೦ರಲ್ಲಿ ಹುಟ್ಟಿರುವುದೆಂದು ತಿಳಿಯಲಾದ ಹಲ್ಮಿಡಿಯ ಶಾಸನವು ಒಂದು ಸಾಹಿತ್ಯ ಕೃತಿಯೇ ಆಗಿದೆ ಎನ್ನಬಹುದು. ಕ್ರಿ. ಶ. ೨ನೆಯ ಶತಮಾನದ ಒಂದು ಗ್ರೀಕ ನಾಟಕದಲ್ಲಿ ಕನ್ನಡದ ಮಾತುಗಳು ಉಲ್ಲೇಖಿಸಲ್ಪಟ್ಟಿವೆ ಎಂಬುದನ್ನು ಗಮನಿಸುವಾಗ ಕನ್ನಡ ಭಾಷೆಯು ಕ್ರಿಸ್ತಪೂರ್ವದಲ್ಲಿಯೇ ಪ್ರಬುದ್ಧವಾಗುತ್ತ ಬಂದಿತ್ತೆಂದು ತಿಳಿಯಬಹುದು. ಕ್ರಿ. ಶ. ೪೮೦ರ ಸಿರಗುಂದದ ಶಾಸನವು ಗಂಗ ಅರಸು ವಂಶದವರ ಅತ್ಯಂತ ಹಳೆಯದಾದ ಉಲ್ಲೇಖವಾಗಿದೆ. ಗಂಗರೆಂದರೆ, ಕನ್ನಡದ ನೆಲವನ್ನು ಆಳಿದ ಹಳೆಯ ಆದರೂ ಸಾಕಷ್ಟು ಪ್ರಸಿದ್ಧರಾದ ಮನೆತನದವರು. ಕ್ರಿ. ಶ. ೫೭೮ರ ಚಾಳುಕ್ಯ ಮಂಗಳೇಶನ ಬಾದಾಮಿಯ ಶಾಸನ, ಕ್ರಿ ಶ ೬೩೪ರ ರವಿಕೀರ್ತಿ ಎಂಬವನು ಬರೆದ ಐಹೊಳೆಯ ಶಾಸನ, ೮ನೆಯ ಶತಮಾನದ ಪಟ್ಟದಕಲ್ಲಿನ ದೇವಯ್ಯಗಳ ಮಗ ಅಚಲನು ಬರೆದ ಶಾಸನ— ಇವುಗಳೇ ಪ್ರಧಾನವಾದ ಪ್ರಾಚೀನ ಕನ್ನಡದ ಉಲ್ಲೇಖಗಳಾಗಿವೆ. ಇವುಗಳಲ್ಲದೇ ಇನ್ನೂ ಹಲವಾರು ಶಿಲಾ ಶಾಸನಗಳೂ ತಾಮ್ರ ಶಾಸನಗಳೂ ಸಾಕಷ್ಟು ದೊರೆಯುತ್ತವೆ. ಆದರೂ ಪ್ರಾಚೀನತೆಯ ದೃಷ್ಟಿಯಿಂದ ಇವು ಅಷ್ಟು ಮುಖ್ಯವಲ್ಲ. ಹೀಗೆ ಕ್ರಿ ಶ ೫ನೆಯ ಶತಮಾನದ ಹೊತ್ತಿಗೆ ಕನ್ನಡವೊಂದು ಪ್ರಬುದ್ಧ ಭಾಷೆಯಾಗಿ ಬೆಳೆದು ಬಂದಿತ್ತು ಎಂದು ವಿದ್ವಾಂಸರ ಅಂಬೋಣವಿದೆ.

ಕನ್ನಡದಲ್ಲಿ ಸಾಹಿತ್ಯ ಕೃತಿಗಳು ಕಾಣಿಸಿಕೊಂಡುದು ಕ್ರಿ ಶ. ಒಂಬತ್ತನೆಯ ಶತಮಾನದಿಂದ ರಾಷ್ಟ್ರಕೂಟರ ಅಮೋಘ ವರ್ಷ ನೃಪತುಂಗನಿಂದಲೋ ಆತನ ಸಮಕಾಲೀನನಾದೊಬ್ಬ ಕವಿಯಿಂದಲೋ ನಿರೂಪಿಸಲ್ಪಟ್ಟುದೆಂದು ತಿಳಿಯಲಾದ ಕವಿರಾಜ ಮಾರ್ಗದ ರಚನಾಕಾಲದಿಂದ. ಇದಕ್ಕೆ ಮೊದಲೂ ಅನೇಕಮಂದಿ ಕವಿಗಳು ಕಾವ್ಯ, ಶಾಸ್ತ್ರ, ನಾಟಕಾದಿ ಗ್ರಂಥಗಳನ್ನು ಬರೆದಿದ್ದರೆಂದು ಅಲ್ಲಲ್ಲಿ ಉಲ್ಲೇಖಗಳಿವೆ. ಹೀಗಿದ್ದರೂ ಇಂತಹ ಅಪೂರ್ವವೆನಿಸಿರುವ ಗ್ರಂಥಗಳು ನಮಗಿಂದು ದೊರೆಯದೆ ಹೋದುದು ನಮ್ಮ ದುರ್ದೈವವೆನ್ನಬಹುದು

ಅವಸ್ಥೆ – ವಿಭಾಗ ಕ್ರಮಗಳು

ಕನ್ನಡದ ಭಾಷಾದೃಷ್ಟಿಯಿಂದ ಈ ಭಾಷೆಗೆ ನಾಲ್ಕು ಅವಸ್ಥೆಗಳುಂಟೆಂದು ಬಲ್ಲವರೆನ್ನುತ್ತಾರೆ. ಕ್ರಿ. ಶ. ೮ನೆಯ ಶತಮಾನದವರೆಗಿನ ಪೂರ್ವದ ಹಳಗನ್ನಡ, ೮ ರಿಂದ ೧೨ನೆ ಶತಮಾನದ ವರೆಗಿನ ಹಳೆಗನ್ನಡ, ೧೨ ರಿಂದ ೧೫ನೆ ಶತಮಾನದವರೆಗಿನ ನಡುಗನ್ನಡ ಮತ್ತು ಆ ಮೇಲಿನ ಹೊಸಗನ್ನಡಗಳು ಈ ಅವಸ್ಥಾಭೇದಗಳಾಗಿವೆ. ಪೂರ್ವದ ಹಳೆಗನ್ನಡದ ಅಸ್ತಿತ್ವವನ್ನು ಒಪ್ಪದಿರುವವರೂ ಇದ್ದಾರೆ. ಆದರೂ ಅದನ್ನು ಸ್ವೀಕರಿಸಿ, ಅದರೊಂದಿಗೆ ಇಂದಿನ ಕನ್ನಡವೊಂದನ್ನು, ಅದನ್ನು ಆಧುನಿಕ ಕನ್ನಡವೆಂದು ಸಂಬೋಧಿಸಬಹುದು, ತೆಗೆದುಕೊಂಡು ಒಟ್ಟು ಪಂಚಾವಸ್ಥೆಗಳೆಂದು ಹೇಳುವುದರಲ್ಲಿಯೂ ಆಶ್ಚರ್ಯವಿಲ್ಲ.

ಕನ್ನಡದ ಕವಿಗಳನ್ನು ಅವರವರ ಜಾತಿ ಮತಗಳ ಪ್ರಾದುರ್ಭಾವವನ್ನು ಹೊಂದಿಸಿ ಜೈನರು, ವೀರಶೈವರು, ಬ್ರಾಹ್ಮಣರು ಮತ್ತು ಸರ್ವರು ಎಂಬ ನಾಲ್ಕು ವಿಭಾಗಗಳನ್ನು ಮಾಡಿಕೊಳ್ಳುತ್ತಾರೆ ಆದರೆ, ಈ ತೆರದ ವಿಭಾಗ ಕ್ರಮವನ್ನು ಸಮಂಜಸವೆಂದು ಹೇಳುವುದು ಅಸಾಧ್ಯ. ಹಾಗಾಗಿ, ಆಯಾ ಕಾಲದ ಸುಪ್ರಸಿದ್ಧ ಕವಿಯ ಹೆಸರಿನಿಂದ ಕಾಲವಿಭಾಗವನ್ನು ಮಾಡಿಕೊಂಡವರೂ ಇದ್ದಾರೆ. ಈ ದಿಸೆಯಲ್ಲಿ ವಿವಾದಾತ್ಮಕ ವಿಚಾರಗಳು ಏನೇ ಇರಲಿ, ಭಾಷಾಭೇದಗಳ ತಳಹದಿಯಲ್ಲಿಯೇ ಕವಿಗಳ ಹಾಗೂ ಅವರ ಕಾವ್ಯಗಳ ವಿಭಾಗಗಳನ್ನು ಕಲ್ಪಿಸಿಕೊಳ್ಳುವುದು ಸೂಕ್ತವೆಂದು ಹೇಳಬಹುದು.

ಸಾಹಿತ್ಯ ಮತ್ತು ಲಿಪಿಗಳು

ಕನ್ನಡ ಸಾಹಿತ್ಯದ ಬಗ್ಗೆ ಸೂಕ್ತವಾದ ಆಧಾರಗಳು ದೊರೆಯುವುದು ಹಾಗೂ ಉಲ್ಲೇಖಗಳು ದೃಷ್ಟಿಗೋಚರವಾಗುವುದು, ಅಮೋಘ ವರ್ಷ ನೃಪತುಂಗನ ಕಾಲದಿಂದ ಮಾತ್ರ. ರಾಷ್ಟ್ರಕೂಟ ರಾಜವಂಶದ ಈ ಮಹಾ ರಾಜನು ಕನ್ನಡದಲ್ಲಿಯೇ ಸಾಹಿತ್ಯ ವಿಮರ್ಶೆಯನ್ನು ಬರೆದ ಕೀರ್ತಿಶಾಲಿ ಎನ್ನುತ್ತಾರೆ. ಇದೊಂದು ವೇಳೆ ನಿರಾಧಾರವಾದರೂ, ಈತನು ಸಾಹಿತ್ಯ ಶಾಸ್ತ್ರಪರಿಣತನೆಂದು ಕವಿರಾಜ ಮಾರ್ಗದಿಂದಲೇ ತಿಳಿಯುತ್ತದೆ. ಅದೇನೇ ಇರಲಿ, ಈ ಕವಿರಾಜ ಮಾರ್ಗದ ರಚನೆಯ ಹೊತ್ತಿಗೆ ಭಾಷೆಯು ಒಂದು ನಿಶ್ಚಿತ ರೂಪಕ್ಕೆ ಬಂದಿದ್ದು ಪ್ರೌಢವಾಗಿತ್ತು. ಭಾಷೆಯ ಪರಿಶುದ್ಧತೆ, ಕೃತಿಗಳ ಪಾವಿತ್ರ್ಯಾದಿಗಳ ಬಗ್ಗೆ ಈ ಆದಿ ಉಪಲಬ್ಧ ಗ್ರಂಥವು ನಮಗೆ ಸುಂದರವಾದ ಕಲ್ಪನೆಯನ್ನು ತಂದೊಪ್ಪಿಸುವುದು. ಹೀಗಾಗಿ ಭಾಷಾ ನೈರ್ಮಲ್ಯ ಹಾಗೂ ಅದರಲ್ಲಿ ದೊರೆಯುವ ಉಲ್ಲೇಖಗಳು ಮತ್ತಿತರ ಆಧಾರಗಳಿಂದ ಅದಕ್ಕಿಂತಲೂ ಬಹು ಹಿಂದೆಯೇ ಕನ್ನಡ ಭಾಷೆಯು ಉತ್ಪತ್ತಿಯಾಗಿತ್ತೆನ್ನುತ್ತಾರೆ. ಈ ಬಗ್ಗೆ ಈ ಮೊದಲೇ ಕೆಲವು ಕಾರಣಗಳನ್ನು ತಿಳಿಸಿದ್ದೇವೆ

ವಿಮರ್ಶಕ ವಿದ್ವಾಂಸರು ಕನ್ನಡದ ಲಿಪಿಯು ತೆಲುಗು ಭಾಷೆಯಿಂದ ಹುಟ್ಟಿದ್ದು ಎನ್ನುತ್ತಾರೆ. ಇವುಗಳೆರಡರನಡುವೆ ಸಾಕಷ್ಟು ಹೋಲಿಕೆಗಳಿರುವುದೇ ಈ ತೆರದ ಅಭಿಪ್ರಾಯಕ್ಕೆ ಕಾರಣವಾಗಿರುತ್ತದೆ. ಆದರೆ, ಈ ವಿಷಯದಲ್ಲಿ ಇದಮಿತ್ಥಂ ಎನ್ನುವುದು ಅಸಾಧ್ಯ ಭಾಷಾಚರಿತ್ರೆಯ ದೃಷ್ಟಿಯಿಂದ ನೋಡುವಾಗ, ಮೂಲ ದ್ರಾವಿಡ ಭಾಷೆಯಿಂದ ಮೊದಲು ತೆಲುಗು ಬೇರೆಯಾಗಿ ಹೋಗಿ ಕಂದಮಿಳು-ಕನ್ನಡ ಮತ್ತು ತಮಿಳು-ಭಾಷೆ ಉಳಿಯಿತೆಂದೂ ಮುಂದೆ ಕಂದಮಿಳಿನಿಂದ ಕನ್ನಡವು ಒಡೆಯಿತೆಂದೂ ಹೇಳುತ್ತಾರೆ ತಾಳಪತ್ರದಲ್ಲಿ ಕಂಟಗಳ ಮೂಲಕ ಅಕ್ಷರಗಳನ್ನು ಬರೆಯುತ್ತಿದ್ದುದರಿಂದ ತೆಲುಗು ಮತ್ತು ಕನ್ನಡಗಳ ಲಿಪಿಗಳು ಒಂದನ್ನೊಂದು ಹೊಂದಿಕೊಂಡಿದ್ದು ಬೆಳೆಯುತ್ತ ಬಂದುವೆನ್ನುವುದು ಯುಕ್ತವೆಂದು ತೋರುವುದು ತಮಿಳು ಮತ್ತು ಕನ್ನಡಗಳ ನಡುವೆ ಬಹಳ ಬಿಗಿಯಾದ ಭಾಷಾ ಸಂಬಂಧವಿರುವುದು.

ಕವಿಕಾವ್ಯ-ಸಾಹಿತ್ಯ ಚರಿತ್ರೆ

ಅಸಂಖ್ಯಾತ ಕನ್ನಡದ ಕವಿಗಳು ಕನ್ನಡದಲ್ಲಿ ಕಾವ್ಯಗಳನ್ನೋ ಶಾಸನಗಳನ್ನೋ ಬರೆದಿದ್ದಾರೆ. ಅವರೆಲ್ಲರ ಇತಿಹಾಸವನ್ನು ಸಂಗ್ರಹಿಸುವುದು ಬಹಳ ತೀವ್ರವಾಗಿ ನಡೆಯಬೇಕಾದ ಕಾರ್ಯವಾದರೂ ಅದಕ್ಕೆ ಬೇಕಾದ ಆಧಾರಗಳು ಅಧಿಕ ಪ್ರಮಾಣದಲ್ಲಿ ದೊರೆಯದಿರುವುದು ನಮ್ಮ ಪಾಲಿನ ಶೋಚನೀಯ ಸಂಗತಿ ಎಂದೇ ಹೇಳಬೇಕು ಸಾಕಷ್ಟು ಪರಿಶೋಧನೆ ನಡೆಸಿ ಅಸಾಧ್ಯ ಪರಿಶ್ರಮವನ್ನು ಸಹಿಸಿ ಶ್ರೀಮಾನ್ ರಾ. ನರಸಿಂಹಾಚಾರ್ಯರು ಕರ್ನಾಟಕ ಕವಿ ಚರಿತ್ರೆಯನ್ನು ಸಂಗ್ರಹಿಸುವ ಅಸಾಧ್ಯವಾದ ಕಾರ್ಯವನ್ನು ಕೈಗೊಂಡು ಅದನ್ನು ಪೂರ್ತಿನಡಿಸಿದ್ದರು. ಆದರೆ, ಇಂತಹ ಕೃತಿಗಳಲ್ಲಿಯೂ ಹಲವಾರು ಲೋಪದೋಷಗಳಿವೆ ಎಂಬುದು ಮುಂದಕ್ಕೆ ಬೆಳಕಿಗೆ ಬಂದುವು. ಆದರೂ ಕೆಲವೊಂದು ಕವಿಗಳ ಕಾಲಮಾನ, ಬರೆದ ಕಾವ್ಯಾದಿ ವಿಚಾರಗಳಲ್ಲಿ ಪ್ರಸಿದ್ಧ ವಿದ್ವಾಂಸರ ನಡುವೆ ಏಕಾಭಿಪ್ರಾಯವಿಲ್ಲವಾದರೂ ಆ ಬಗ್ಗೆ ಬಹುಮತದ ನಿರ್ಧಾರವಾಗುವವರೆಗೆ ದಿವಂಗತ ನರಸಿಂಹಾಚಾರ್ಯರ ಕವಿಚರಿತೆಯೇ ಕನ್ನಡದಲ್ಲಿ ಅಧಿಕೃತವಾಗಿ ಕವಿಚರಿತ್ರೆಯನ್ನೂ ಕಾವ್ಯಗಳ ಇತಿಹಾಸವನ್ನೂ ತಿಳಿಸುವ ಏಕಮಾತ್ರ ಗ್ರಂಥವಾಗಿದೆ. ಈ ಅಪೂರ್ವ ಮತ್ತು ಆವಶ್ಯಕವೆನಿಸಿದ ಅಮೂಲ್ಯ ಗ್ರಂಥದ ಮುದ್ರಣದ ಪ್ರತಿಗಳು ಯಾವಾಗಲೋ ತೀರಿಹೋಗಿದ್ದರೂ, ವಿಶ್ವವಿದ್ಯಾನಿಲಯಗಳಲ್ಲಿ ಇದನ್ನು ಪಠ್ಯಪುಸ್ತಕವೆಂದು ಅನೇಕ ವರ್ಷಗಳಿಂದ ಆರಿಸುತ್ತ ಬಂದಿದ್ದರೂ ಅದು ಪುನರ್ಮುದ್ರಣವಾಗದಿರುವುದು ಮಾತ್ರ ಶೋಚನೀಯವಾಗಿದೆ.

ಆಂಗ್ಲ ಭಾಷೆಯಲ್ಲಿ ಶ್ರೀಗಳಾದ ಕಿಟೆಲ್, ರೈಸ್ ಮತ್ತು ನರಸಿಂಹಾಚಾರ್ಯರು ಸಾಹಿತ್ಯ ಚರಿತ್ರೆಯನ್ನು ಬರೆದಿದ್ದಾರೆ ಇನ್ನು ಡಾ. ರಂ. ಶ್ರೀ. ಮುಗಳಿಯವರು ಕನ್ನಡದಲ್ಲಿ ಇದನ್ನು ನಿರೂಪಿಸಿದ್ದಾರೆ. ಈ ಗ್ರಂಥವು ಬಹಳ ಮೌಲ್ಯಯುಕ್ತವಾಗಿದೆ. ಕನ್ನಡದ ಸುಪ್ರಸಿದ್ಧ ಕವಿ ಹಾಗೂ ಕಾವ್ಯಗಳ ಕುರಿತಾಗಿ ಇದುವರೆಗೆ ಸಂಗ್ರಹಿಸಲಾದ ವಾಖ್ಯೆ, ಮತ್ತು ವಿವಿಧ ವಿಮರ್ಶಕರ ಅಭಿಪ್ರಾಯಾದಿಗಳನ್ನು ಕ್ರೋಢೀಕರಿಸಿ ಅವರು ಕನ್ನಡಿಗರಿಗೆ ಮಹತ್ವದ ಉಪಕಾರವನ್ನು ಮಾಡಿದ್ದಾರೆ. ಕನ್ನಡ ಸಾಹಿತ್ಯ ವಾಹಿನಿ ಎಂಬ ಶ್ರೀ ಸಿಂಪಿ ಲಿಂಗಣ್ಣನವರ ಕೃತಿಯೂ ಅಭ್ಯಾಸಾರ್ಹವಾಗಿದೆ. ಇವಲ್ಲದೆ, ಇನ್ನೂ ಕೆಲವು ಸಣ್ಣ ದೊಡ್ಡ ವಿಮರ್ಶಾಗ್ರಂಥಗಳೂ ಕವಿ ಚರಿತ್ರೆಯ ಸಂಗ್ರಹವೂ ದೊರೆಯುತ್ತದೆ.

ಸಾಹಿತ್ಯದಲ್ಲಿ ಧರ್ಮ ಪ್ರಚಾರ

ಕನ್ನಡ ಸಾಹಿತ್ಯವೂ ಭಾರತದ ಉಳಿದ ಭಾಷೆಗಳ ಸಾಹಿತ್ಯಗಳಂತೆಯೇ ಕಾಲಕಾಲಕ್ಕೆ ಹೊಂದಿಕೊಳ್ಳುವಂತಹ ರೂಪಾಂತರಗಳನ್ನು ಹೊಂದಿರುತ್ತದೆ. ಇತರ ಸಾಹಿತ್ಯಗಳಂತೆಯೇ ಮತಪ್ರಚಾರಕ್ಕೆ ಸಾಕಷ್ಟು ಪ್ರೋತ್ಸಾಹವನ್ನು ಕೊಟ್ಟಿರುತ್ತದೆ. ಇದಕ್ಕೆ ಕನ್ನಡದ ಸುಪ್ರಸಿದ್ಧ ಕವಿಗಳಾದ ಪಂಪ, ರನ್ನ, ಪೊನ್ನ, ಜನ್ನ, ನೇಮಿ-ಚಂದ್ರ, ಮೊದಲಾದ ಪ್ರಾಚೀನರು ತಮ್ಮ ಧರ್ಮವಾದ ಜೈನಧರ್ಮವನ್ನು ಪಸರಿಸುವ ಸಲುವಾಗಿ ತೀರ್ಥಂಕರರ ಚರಿತೆಯನ್ನೂ ತನ್ಮೂಲಕ ಜೈನ ಧರ್ಮದ ತತ್ವಗಳನ್ನೂ ವಿವರಿಸಿರುವುದೇ ಸಾಕ್ಷಿ. ಮುಂದೆ ಬಂದ ಹರಿಹರ, ಷಡಕ್ಷರಿ ಮೊದಲಾದ ಶೈವರಾಗಲಿ, ಬ್ರಾಹ್ಮಣ ವರ್ಗಕ್ಕೆ ಸೇರಿದ ನಾರಣಪ್ಪ ಲಕ್ಷ್ಮೀಶ ಅಥವಾ ತಿರುಮಲಾರ್ಯನಾಗಲೀ ಈ ಉದ್ಯಮದಿಂದ ದೂರ

(೮ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ: ರೂ ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ. ದ ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NAVAYUGA
Popular Kannada Weekly
Founder:—
A. B. SHETTY,
Former Minister for Public Health,
Govt. of Madras &
Govt of Mysore

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೦-೪-'೫೮	೩೧

ನಮ್ಮ ಪದವೀಧರರು

ಹೋಶಿಯಾರಪುರದಲ್ಲಿ ಲೋಕಸಭಾಧ್ಯಕ್ಷ ಶ್ರೀ ಅನಂತಶಯನಂ ಐಯಂಗಾರರು ಪದವೀಧರರಿಗೆ ಮಹತ್ವಪೂರಿತವಾದ ಉಪದೇಶವಿತ್ತರು. ಅವರು ತಮ್ಮ ಪದವೀದಾನದ ಸಮಾರಂಭದ ಭಾಷಣದಲ್ಲಿ ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ತಿಳಿಸಿ ಅದನ್ನುಳಿಸುವ ಕಲುವಾಗಿ ಪದವೀಧರರು ದುಡಿಯಬೇಕು ಎಂದರು. ಪದವಿ ಪಡೆಯುವುದು ಕೇವಲ ಜೀವನೋಪಾಯಕ್ಕಾಗಿ ಹಿರಿಯ ಉದ್ಯೋಗಸ್ಥಾನವನ್ನು ಹೊಂದುವುದಕ್ಕೆ ಮಾತ್ರವಲ್ಲದೇ ರಾಷ್ಟ್ರಸೇವೆಯನ್ನು ಮಾಡುವುದಕ್ಕಾಗಿಯೂ ಎಂದವರು ತಿಳಿಸಿದರು. ಸೇವಾ ಭಾವನೆ ಮಾನವತೆ, ಸತ್ಯ ಮತ್ತು ಅಹಿಂಸೆಗಳ ತಳಹದಿಯಲ್ಲಿ ಕಟ್ಟಲಾದ ನಮ್ಮ ಸಂಸ್ಕೃತಿಯನ್ನು ಮತ್ತೂ ಬೆಳೆಸುವಂತೆಯೂ, ದೇಶಕ್ಕೆ ತಾವು ಸೇವೆ ಸಲ್ಲಿಸುವ ಅವಕಾಶವೊದಗಿದಾಗ, ಇವುಗಳನ್ನು ನೆನಪಿಸಿ, ಅವುಗಳಿಗನುಸಾರವಾಗಿ ನಡೆದುಕೊಳ್ಳಬೇಕೆಂದೂ ಅವರು ವಿನಂತಿಸಿದರು. ತರುಣ ಪದವೀಧರರು ರಾಷ್ಟ್ರವಿಘಾತುಕವೆನಿಸಿದ ಕ್ರಿಯೆಗಳಲ್ಲಿ ಭಾಗವಹಿಸುತ್ತಿರುವುದಕ್ಕೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ, 'ನಾವೆಲ್ಲಾ ಒಂದೇ' ಎಂಬ ಭಾವನೆಯನ್ನು ಪದವೀಧರರು ಅಚ್ಚು ಹಾಕಿ, ಮುಂದಿನ ಪೀಳಿಗೆಯನ್ನು ಯೋಗ್ಯ ಆದರ್ಶವನ್ನಾಗಿ ಮಾಡುವಲ್ಲಿ ಸಹಕರಿಸಬೇಕೆಂಬುದಾಗಿ ಅವರು ಕೇಳಿಕೊಂಡರು.

ಶ್ರೀ ಐಯಂಗಾರರು ಅನುಭವಿಗಳು; ಪದವಿಯನ್ನು ಪಡೆಯಲಿರುವವರಿಗೆ ಉಪದೇಶ ಮಾಡುವ ಅಧಿಕಾರವನ್ನೂ ಯೋಗ್ಯತೆಯನ್ನೂ ಪಡೆದವರು. ಶ್ರೀಮಾನ್ ಐಯಂಗಾರರಿಗೆ ಮೊದಲೇ ಅನೇಕ ಮಂದಿ ಪ್ರತಿಭಾವಂತ ಮೇಧಾವಿಗಳು ಇಂತಹ ಉಪದೇಶಗಳನ್ನು ಮಾಡಿದ್ದಾರೆ; ಮುಂದಕ್ಕೂ ಮಾಡಲಿದ್ದಾರೆ. ಆದರೆ, ಅದಾವುದರಿಂದಲೂ ವಿದ್ಯಾರ್ಥಿಗಳಲ್ಲಿ ತುಂಟರಾಗಿರುವವರು ತಮ್ಮ ವಕ್ರಮಾರ್ಗವನ್ನು ಬಿಟ್ಟು ಸರಿದಾರಿಯಲ್ಲಿ ನಡೆಯುತ್ತಿರುವುದು ಇದುವರೆಗೂ ಗೋಚರವಾಗಿರುವುದಿಲ್ಲ. ದಿನೇ ದಿನೇ ವಿದ್ಯಾರ್ಥಿಗಳಲ್ಲಿ ಅಶಿಸ್ತು, ಬೇಜವಾಬ್ದಾರಿತನಗಳು ಬೆಳೆಯುತ್ತಿವೆ. ಸತ್ಯಾಗ್ರಹ, ಶಾಂತಿಭಂಗ, ವಿದ್ಯಾಲಯ ಬಹಿಷ್ಕಾರ ಮೊದಲಾದ ಉಗ್ರಕಾರ್ಯಾಚರಣೆಗಳು ಕೇಳಿಬರುತ್ತಿರುವುದು ಕಡಿಮೆಯಾಗಲಿಲ್ಲ. ಅನ್ನಮಲೈ ವಿಶ್ವವಿದ್ಯಾಲಯವು ಇಂತಹ ಪದವೀಧರಗತಿಗಳಲ್ಲಿಯೇ ಓದುತಿದ್ದ ವಿದ್ಯಾರ್ಥಿಗಳ ಉಪಟಳದಿಂದಾಗಿ ಮೊನ್ನೆ ಮೊನ್ನೆ ಬಾಗಿಲು ಹಾಕಿಸಿಕೊಳ್ಳಬೇಕಾಯಿತು ಆದರೆ, ಈ ರೀತಿಯ ವಾತಾವರಣ ನಿರ್ಮಾಣವಾಗುವುದಕ್ಕೆ ಕಾರಣವೇನು ಎಂದು ಸರಿಯಾಗಿ ತಿಳಿಯುವುದಿಲ್ಲ. ವಿದ್ಯಾರ್ಥಿಗಳು ವಿದ್ಯೆಯನ್ನು ಕೇವಲ ಉದ್ಯೋಗಾಕಾಂಕ್ಷಿಗಳಾಗಿ ಪಡೆಯಬಾರದು; ತಮ್ಮ ಉದರ ಪೋಷಣೆಯೊಂದೇ ತಮ್ಮ ಹೊಣೆಗಾರಿಕೆಯೆಂದು ತಿಳಿಯದೆ, ರಾಷ್ಟ್ರದ ಕಡೆಗೂ ತನ್ನ ಪಾಲಿನ ಸೇವೆಯನ್ನು ಸಲ್ಲಿಸುವುದಿದೆ ಎಂದು ಮರೆಯಬಾರದು. ಇಂದಿನ ಯುವಕರೇ ಮುಂದೆ ಬೆಳೆದು ಬಂದು ರಾಷ್ಟ್ರದ ಚುಕ್ಕಾಣಿಯನ್ನು ಹಿಡಿಯುವ ರಾಷ್ಟ್ರನಾಯಕರಾಗುವರೆಂಬುದು ನಿಜವೆ. ಆದುದರಿಂದ, ಅವರಿಗೆ ಅವರ ಎಳವೆಯಲ್ಲಿಯೇ ಅದಕ್ಕೆ ಬೇಕಾದ ಮಾರ್ಗದರ್ಶನವು ದೊರಿಯಬೇಕಾದುದೂ ಅಗತ್ಯವೆ. ಆದರೆ, ತಾವು ಪಡೆದ ಉಪದೇಶದ ಫಲಗಳನ್ನು ಕಾರ್ಯಾಚರಣೆಯಲ್ಲಿ ಅವರು ತರುವಂತೆ ಬೇಕಾದ ಅವಕಾಶಗಳನ್ನು ಕಲ್ಪಿಸಬೇಕು ವಿದ್ಯಾರ್ಥಿಗಳನ್ನು ವಕ್ರದಾರಿಗೆ ಹಚ್ಚುವ ಆಕರ್ಷಣೆಗಳು ಬೇಕಾದಷ್ಟಿವೆ. ಅವನ್ನೆಲ್ಲಾ ದೂರವಿರಿಸಿ ವಿದ್ಯಾರ್ಥಿಗಳು ತಮ್ಮ ಕರ್ತವ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿಕೊಳ್ಳುವಂತೆ ಆಗಬೇಕು. ವಿದ್ಯಾರ್ಥಿಗಳು ರಾಜಕಾರಣದಿಂದ ದೂರವಿರಬೇಕೆಂದು ಎಲ್ಲರೂ ಅಭಿಪ್ರಾಯಪಡುವರಾದರೂ ಅವರು ರಾಜಕಾರಣದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿರುವುದು ಕಂಡುಬರುತ್ತದೆ. ಅಲ್ಲದೇ ಇದೇ ರೀತಿಯ ಅನೇಕ ಕ್ಷುಲ್ಲಕ ಭಾವನೆಗಳು ಗರಿಗೆದರಿ ಹಾರಾಡುತ್ತ ಅವರಲ್ಲಿ ದುಷ್ಪರಿಣಾಮಗಳನ್ನು ಬೀರುತ್ತವೆ. ಶ್ರೀ ಐಯಂಗಾರರು ನುಡಿದಂತೆ, ನಮ್ಮ ಧರ್ಮವು ಎಂದಿನಿಂದಲೂ ನೀತಿಗೆ ಅತ್ಯಧಿಕ ಮಹತ್ವ ಕೊಡುತ್ತದೆ ಜನರು ನೀತಿವಂತರಾದ ಪಕ್ಷದಲ್ಲಿ ದೇಶದಲ್ಲಿ ಪರಸ್ಪರ ತಿಕ್ಕಾಟಗಳು ಕಡಿಮೆಯಾಗುತ್ತವೆ. ಇದರಿಂದ ದೇಶದಲ್ಲಿ ಶಾಂತಿ ಮತ್ತು ಸಮೃದ್ಧಿಯು ಹೆಚ್ಚುವುದು ಸಾಧ್ಯ. ಭಾಷಾಸಂಬಂಧದ ತಿಕ್ಕಾಟ, ಧಾರ್ಮಿಕ ಅಂಧಶ್ರದ್ಧೆ, ಪ್ರಾದೇಶಿಕ ಭಾವನೆ ಮೊದಲಾದುವುಗಳ ಬಗ್ಗೆ ತಿಕ್ಕಾಟಗಳು ನಮ್ಮಲ್ಲಿ ನಡೆಯುತ್ತಿವೆ. ಹೀಗೆ ನಾವು ಬಡಿದಾಡುತ್ತ ನಡೆದರೆ, ದೇಶವು ಪ್ರಗತಿ ಹೊಂದಲಾರದು. ನಾವೆಲ್ಲರೂ ಒಂದೇ ಎಂಬ ವಿಶಾಲ ಭಾವನೆಯು ಬೆಳೆದುಬರುವಂತೆ ಮಾಡಿದರೆ, ರಾಷ್ಟ್ರದ ಮಾರ್ಗದಲ್ಲಿ ಯಾವುದೇ ಆತಂಕಗಳು ಬಂದು ಸುಳಿದಾಡಲಾರವು. ಇಂತಹ ಭಾವನೆಯು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಲ್ಲಿ ಹುಟ್ಟಬೇಕು. ತಮ್ಮ ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ, ದೇಶದ ಜನತೆಯನ್ನು ಮಾನವತಾ ದೃಷ್ಟಿಯಿಂದ ನೋಡುವ ಸಹೃದಯತೆಯಿಂದ ಕೂಡಿಕೊಂಡು, ಜನತಾ ಸೇವೆಯೇ ಜನಾರ್ಧನ ಸೇವೆ ಎಂಬುದನ್ನು ಮರೆಯದೆ, ತಮ್ಮ ಉದರ ಪೋಷಣೆಯನ್ನು ಮಾಡಿಕೊಳ್ಳುವುದರೊಡನೆ ದೇಶ ಸೇವೆಯನ್ನು ಮಾಡುವುದು ವಿಹಿತವೆಂದು ತಿಳಿಯುವ ವಿಶಾಲ ಭಾವನೆ ವಿದ್ಯಾರ್ಥಿಗಳಲ್ಲಿ ಮೂಡಬೇಕು

ಪಾಶ್ಚಾತ್ಯರ ಪ್ರಭಾವದಿಂದ ನಮ್ಮ ಸಂಸ್ಕೃತಿಯ ಮೇಲೆ ಬಲವಾದ ಆಘಾತವಾಗಿ, ವಿದ್ಯಾಲಯದ ಮೆಟ್ಟಲೇರಿದೊಡನೆಯೇ ನಮ್ಮನ್ನು, ನಮ್ಮ ಸಂಸ್ಕೃತಿಯನ್ನು ಮರೆತು, ಪರಾವಲಂಬನೆಯನ್ನು ಮಾಡಿಕೊಳ್ಳುತ್ತೇವೆ. ಇನ್ನು ಮುಂದಾದರೂ ಹಾಗಾಗದೆ, ನಮ್ಮನ್ನು, ನಾವು ಕಂಡುಕೊಂಡು, ನಮ್ಮ ಸಂಸ್ಕೃತಿಯನ್ನುಳಿಸುವಲ್ಲಿ ಹಿಂದುಳಿಯಬಾರದೆಂದು ಹಾರೈಸುತ್ತೇವೆ. ವಿಶ್ವವಿದ್ಯಾನಿಲಯಗಳಲ್ಲಿ ತೋರಿಬರುತ್ತಿರುವ ತುಂಟತನವನ್ನು ದೂರೀಕರಿಸಿ, ಅವರಲ್ಲಿ ರಾಷ್ಟ್ರೀಯ ಭಾವನೆಯನ್ನು ಹುಟ್ಟಿಸುವಲ್ಲಿ ಮುಂದಾಗಬೇಕೆಂದೂ ಈ ಬಗ್ಗೆ ಸಂಬಂಧಪಟ್ಟವರು ಕೇವಲ ಉಪದೇಶಗಳನ್ನೇ ಈಯದೆ, ನಮ್ಮ ಮುಂದಿನ ಜನಾಂಗವು ದೃಢಕಾಯವೂ ಸೇವಾಕಾಂಕ್ಷಿಯೂ ಶಾಂತಿಪ್ರಿಯವೂ, ಸ್ಥಿತಪ್ರಜ್ಞವೂ ಆಗುವಂತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಬಯಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ರಾಜಕೀಯ ಬಿಕ್ಕಟ್ಟು

ಮೈಸೂರಿನ ರಾಜಕಾರಣದಲ್ಲಿ ಉಂಟಾಗಿದ್ದ ಮಹಾ ಬಿಕ್ಕಟ್ಟು ಪರಿಹಾರವಾಗುವ ಮುನ್ಸೂಚನೆಯೊಂದು ಕಂಡುಬಂದಿದೆ. ಕಾಂಗ್ರೆಸ್ ವರಿಷ್ಠರಲ್ಲಿ ಮೈಸೂರಿನ ರಾಜಕಾರಣದ ನಿರೂಪಣೆಯನ್ನು ಮಾಡಲು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೂ ವಿರೋಧೀ ಪಂಗಡದ ಕೆಲವು ಮುಂದಾಳುಗಳೂ ನವದೆಹಲಿಗೆ ತೆರಳಿ ತಮ್ಮ ತಮ್ಮ ವಾದವನ್ನು ಮಂಡಿಸಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಸಭೆಯು ಈ ವಿಷಯಗಳನ್ನು ಚೆನ್ನಾಗಿ ಮಂದಟ್ಟು ಮಾಡಿಕೊಂಡು, ತಕ್ಕ ನಿರ್ಧಾರವನ್ನು ತಾನೇ ಮಾಡುವುದಾಗಿ ತಿಳಿಸಿದೆ. ಇದೀಗ ಬಂದಿರುವ ವರದಿಗಳಂತೆ ಮೈಸೂರು ರಾಜಕಾರಣದಲ್ಲಿ ತಾತ್ಕಾಲಿಕವಾಗಿ ಬಿಕ್ಕಟ್ಟು ಹರಿದಂತೆ ತೋರಿ ಬಂದಿದೆ. ಸದ್ಯ ಇರುವ ಮಂತ್ರಿಮಂಡಳವೇ ಮುಂದುವರಿಯುವುದೆಂದೂ, ಮಂತ್ರಿಮಂಡಳದಲ್ಲಿ ಪುನಾರಚನೆಯಾಗಲೀ ವಿಸ್ತರಣೆಯಾಗಲೀ ಪ್ರಕೃತ ಇಲ್ಲವೆಂದು ತಿಳಿದು ಬಂದಿದೆ. ಆದರೆ, ವಿರೋಧಿಗುಂಪಿನವರು ತಮ್ಮ ಪ್ರಯತ್ನವನ್ನು ನಡೆಸುವುದರಲ್ಲಿ ಹಿಮ್ಮೆಟ್ಟಿಸಲು ಮಾಡಿಲ್ಲವೆಂದೂ ವದಂತಿಯಾಗಿದೆ.

ದೆಹಲಿಯಲ್ಲಿ ತಾವು ವರಿಷ್ಠರಿಗೆ ತಮ್ಮ ಅಭಿಪ್ರಾಯವನ್ನು ಪ್ರತಿಬಿಂಬಿಸಿ ಕೊಟ್ಟಿರುವುದರಿಂದ, ಅವರಿಂದ ತಮಗನುಕೂಲವಾದ ನಿರ್ಣಯವೇ ಬಂದೀತೆಂದು ವಿರೋಧೀ ಗುಂಪಿನವರು ನಂಬಿದಂತೆ ಕಾಣುತ್ತದೆ. ಅಂತೂ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ತಮ್ಮ ಕಾರ್ಯವಿಧಾನದಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಮಾಡಿಕೊಡಲಿದ್ದು, ಎಲ್ಲ ಪಂಗಡಗಳನ್ನೂ ಸಮಾಧಾನಪಡಿಸಬಹುದಾದ ಮಾರ್ಗವನ್ನು ಹೇಗೆ ಅನುಸರಿಸುವರೆಂಬುದೇ ಈ ಮಂತ್ರಿಮಂಡಳದ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಅಥವಾ ಬೆಳೆಸುವಲ್ಲಿ ಪರಿಣಾಮ ಮಾಡುವುದೆಂದು ಹೇಳಲಾಗುತ್ತಿದೆ.

ನೀರಸಾಗರ ಯೋಜನೆ

ನೀರಸಾಗರ ಯೋಜನೆಯನ್ನು ವಿಸ್ತರಿಸುವ ಕಾರ್ಯಕ್ರಮವೊಂದು ಇದೀಗ ಸಿದ್ಧವಾಗಿದೆ. ಈ ಯೋಜನೆಯು ಪ್ರಾರಂಭದಲ್ಲಿ ಹುಬ್ಬಳ್ಳಿ ಮತ್ತು ಧಾರವಾಡಗಳಿಗೆ ಒಬ್ಬನಿಗೆ ದಿನವೊಂದಕ್ಕೆ ೪೦ ಗೆಲನ್ ನೀರನ್ನೊದಗಿಸುವ ಗುರಿಯಿಂದ ಪ್ರಾರಂಭವಾಗಿತ್ತು. ಆದರೆ, ಈಗ ದೊರೆಯುತ್ತಿರುವ ನೀರನ್ನು ಈ ನಗರಗಳು ಸಾಕಷ್ಟು ಬಳಸಿಕೊಳ್ಳದಿರುವುದರಿಂದ, ಸುತ್ತುಮುತ್ತಲಿನ ಇತರ ನಗರಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗುವುದು ಕುಂದಗೋಳ, ಅಣ್ಣಿಗೇರಿ, ಗದಗ, ನವಲಗುಂದ ಮುಂತಾದ ಸ್ಥಳಗಳಿಗೂ ವಿಸ್ತೃತ ಯೋಜನೆಯನ್ವಯ ಕ್ರಮೇಣ ನೀರನ್ನು ಸರಬರಾಯಿ ಮಾಡಲಾಗುವುದು, ಜಲಾಶಯದ ಎತ್ತರವನ್ನು ಹೆಚ್ಚಿಸುವುದರಿಂದ ಅಧಿಕ ನೀರನ್ನು ಶೇಖರಿಸುವುದು ಸಾಧ್ಯ. ಈ ವಿಸ್ತರಣೆಗಳಿಗಾಗಿ ೪೦ ಲಕ್ಷ ರೂಪಾಯಿಗಳ ವೆಚ್ಚ ಬರುವುದೆಂದು ಅಂದಾಜು ಮಾಡಲಾಗಿದೆ.

ಪಾರ್ಲಿಮೆಂಟರಿ ವಿಷಯಕ ತಜ್ಞ

ಬ್ರಿಟನ್ನಿನ ಪ್ರಖ್ಯಾತ ಪಾರ್ಲಿಮೆಂಟರಿ ವಿಧಾನ ವಿಷಯಕ ತಜ್ಞರಾದ ಲಾರ್ಡ್ ಕ್ಯಾಂಪಿಯನ್ ಇವರು ತಮ್ಮ ೭೫ನೆಯ ಪ್ರಾಯದಲ್ಲಿ ಸ್ವರ್ಗಸ್ಥರಾದರು. ಭಾರತದಲ್ಲಿ ಹುಟ್ಟಿದ್ದ ಇವರು ಬ್ರಿಟನ್ನಿನ ಸಾಮಾನ್ಯರ ಸಭೆಯಲ್ಲಿ ೪೦ ವರ್ಷಗಳ ವರೆಗೆ ಸೇವೆ ಸಲ್ಲಿಸುತ್ತಾರೆ. ಈ ೪೦ ವರ್ಷಗಳಲ್ಲಿ ೨೭ ವರ್ಷ ಸಭೆಯ ಕ್ಲಾರ್ಕನ ಕೆಲಸವನ್ನು ಮಾಡಿಕೊಂಡಿರುತಿದ್ದರು. ಪಾರ್ಲಿಮೆಂಟರಿ ವಿಧಾನಗಳ ಬಗ್ಗೆ ಅವರ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ತಮ್ಮ ಜೀವಮಾನದಲ್ಲಿ ಕಾಮನವೆಲ್ತ್ ರಾಷ್ಟ್ರಗಳಲ್ಲಿ ಸಂಚಾರ ಮಾಡಿ, ಇಲ್ಲಿಯ ಪಾರ್ಲಿಮೆಂಟರಿ ವಿಧಾನಗಳನ್ನು ಸರಿಯಾಗಿ ಅಭ್ಯಸಿಸಿಕೊಂಡಿದ್ದರು

ಭಾರತಕ್ಕೆ ಸಹಾಯ

ಕೊಲಂಬೋ ಯೋಜನೆಯನ್ವಯ ಕೆನಡವು ಭಾರತಕ್ಕೆ ಲೋಹಗಳ ಸಹಾಯವನ್ನು ಮಾಡಲಿದೆ ಹೀಗೆ ನೀಡುವ ನೆರವಿನಲ್ಲಿ ೧೦ ಸಾವಿರ ಟನ್ನು ಅಲ್ಯೂಮಿನಿಯಂ, ೨೫೦೦ ಟನ್ನು ತಾಮ್ರ, ೫೦೦ ಟನ್ನು ನಿಕ್ಕಲ್ ಲೋಹಗಳಿರುತ್ತವೆ. ಇವುಗಳ ಬೆಲೆಯು ಸುಮಾರು ಐದು ಮುಕ್ಕಾಲು ಕೋಟಿ ರೂಪಾಯಿಗಳಾಗಲಿರುವುವು. ಕೆನಡವು ಕೊಡಮಾಡಿದ್ದ ಈ ಉದಾರ ಕೊಡುಗೆಯನ್ನು ಭಾರತವು ಶೀಘ್ರದಲ್ಲಿಯೇ ಆಯಾತ ಮಾಡಿಕೊಳ್ಳುವುದು.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ–
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚೆಲುವಾಗಿ ಮುದ್ರಿಸಿ ಕೊಡಲಾಗುವುದು
NAVAYUGA PRESS, UDIPI.

ಉಡುಪಿ

ಬೀಳ್ಕೊಡುವ ಸಮಾರಂಭ-ಮುನಿಸಿಪಲ್ ಮಹಾತ್ಮಾಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. 31ರಂದು ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ, ಅಧ್ಯಾಪಕ ವೃತ್ತಿಯಿಂದ ನಿವೃತ್ತಿಗೊಳ್ಳುವ ಶ್ರೀ ಟಿ. ಮಹಾಲಿಂಗ ಹೆಗ್ಡೆಯವರನ್ನು ಬೀಳ್ಕೊಡುವ ಸಮಾರಂಭ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ಕೇಶವ ಕುಡ್ವರು ಸ್ವಾಗತಿಸಿದರು. ಶ್ರೀಗಳಾದ ಪಿ. ವಿ. ಆಚಾರ್, ಟಿ. ಎ. ಪೈ, ಯು. ಕೃಷ್ಣರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ದ. ಕ ಜಿಲ್ಲೆಯಲ್ಲಿ ಡಾ| ಮೋದಿಯವರ ಕಾರ್ಯಕ್ರಮ-ಪದ್ಮಶ್ರೀ ಮೋದಿಯವರು ಇದೇ ತಾ. 24ರಂದು ಬೆಳಿಗ್ಗೆ 9 ಗಂಟೆಗೆ ಮುನಿಸಿಪಲ್ ಪ್ರವಾಸಿ ಬಂಗ್ಲೆಯಲ್ಲೂ ತಾ. 25ರಂದು ಬೆಳಿಗ್ಗೆ 9ಕ್ಕೆ ಮೂಡಬಿದ್ರೆ, ಪ್ರವಾಸಿ ಮಂದಿರದಲ್ಲೂ ಮಧ್ಯಾಹ್ನ 3 ಗಂಟೆಗೆ ಕಾರ್ಕಳ ಪ್ರವಾಸಿ ಮಂದಿರದಲ್ಲೂ, ತಾ 26ರಂದು ಬೆಳಿಗ್ಗೆ 9ಕ್ಕೆ ಉಡುಪಿ ಪ್ರವಾಸಿ ಮಂದಿರದಲ್ಲೂ ತಾ 27ರಂದು ಬೆಳಿಗ್ಗೆ 9ಕ್ಕೆ ಕುಂದಾಪುರ ಪ್ರವಾಸಿ ಮಂದಿರದಲ್ಲೂ ನೇತ್ರಪರೀಕ್ಷೆ ನಡೆಸಿ ಉಚಿತ ಔಷಧ ಕೊಡುವ ಹಾಗೂ ಶಸ್ತ್ರಕ್ರಿಯೆಯ ಬಗ್ಗೆ ಸಲಹೆನೀಡುವ ಕಾರ್ಯಕ್ರಮವನ್ನಿಟ್ಟುಕೊಂಡಿರುವರು

ಕೇರಳದ ರಾಜ್ಯಪಾಲರಾದ ಡಾ| ಬಿ ರಾಮಕೃಷ್ಣರಾಯರು ತಾ. 1ರಂದು ರಾತ್ರಿ ಉಡುಪಿಗೆ ಆಗಮಿಸಿ ಶ್ರೀ ಕೃಷ್ಣನ ದರ್ಶನ ಮಾಡಿ ರಾತ್ರಿ ಬಂಗ್ಲೆಯಲ್ಲಿ ತಂಗಿದರು. ಮರುದಿವಸ ಬೆಳಿಗ್ಗೆ ಅವರು ಪತ್ನಿಯೊಡನೆ ಮಣಿಪಾಲಕ್ಕೆ ಹೋಗಿ ಅಲ್ಲಿಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಸಂಕ್ಷಿಪ್ತ ಎಮ್. ಬಿ. ಬಿ. ಎಸ್. ವರ್ಗವನ್ನು ಉದ್ಘಾಟಿಸುತ್ತಾ, ಮೈಸೂರು ಸರಕಾರವು ಈ ಸ್ಥಳದಲ್ಲಿ ಈ ತರಗತಿಯನ್ನು ತೆರೆಯಲು ಮನಸ್ಸುಮಾಡಿದುದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಡಾ. ಟಿ. ಎಮ್. ಎ. ಪೈ ಮತ್ತು ಅವರ ಸಂಗಡಿಗರು ಈ ವೈದ್ಯಕೀಯ ಕಾಲೇಜನ್ನು ಸ್ಥಾಪಿಸಿ ಅಖಿಲಭಾರತದ ಮಕ್ಕಳಿಗೆ ಮಹೋಪಕಾರ ಮಾಡಿರುವರು. ಇದು ಎತ್ತಿ ಹೇಳತಕ್ಕುದಾಗಿದೆ. ಈ ಕಾಲೇಜಿನಲ್ಲಿ ವೈದ್ಯಕೀಯ ಪರಿಶೋಧನಾ ಕೇಂದ್ರವನ್ನು ಸ್ಥಾಪಿಸುವಂತೆ ಕಾಲೇಜು ಸ್ಥಾಪಕರನ್ನು ಕೇಳಿಕೊಳ್ಳುತ್ತೇನೆ ಎಂದರು. ವಿದ್ಯಾರ್ಥಿಗಳಾದರೂ ಇಲ್ಲಿ ಪಡೆಯುವ ಶಿಕ್ಷಣವನ್ನು ಸದುಪಯೋಗಗೊಳಿಸಿ ಜನತಾ ಸೇವೆ ಮಾಡಬೇಕಾಗಿ ಅಪೇಕ್ಷಿಸುತ್ತೇನೆ ಎಂದರು. ಆರಂಭದಲ್ಲಿ ಡಾ. ಟಿ. ಎಮ್. ಎ. ಪೈಗಳು ಸ್ವಾಗತಿಸಿದರು. ಕೊನೆಯಲ್ಲಿ ಡಾ. ಮಥಾಯಿಯವರು ಧನ್ಯವಾದಗಳನ್ನಿತ್ತರು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O S· 41/1958.

ಕಾಸ್ಮೀರ ಡಿ. ಸಿಲ್ವ —ವಾದಿ

ಶೇಕ್ ಬಾಬನ್ ಸಾಹೇಬ ಶೇಕ್ ಹುಸೆನ್ ಸಾಹೇಬರ ಮಗ. ಕಾರ್ಕಳ ತಾಲ್ಲೂಕು ಕಾರ್ಕಳ ಕಸಬಾ ಪಂಚಕಟ್ಟೆ ಎಂಬಲ್ಲಿರುವವ

—ಪ್ರತಿವಾದಿರು

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನೀವು ತಾರೀಕು 19—4—1950ರಲ್ಲಿ ರೂ 600/-ಕ್ಕೆ ವಾದಿಗೆ ಬರೆಕೊಟ್ಟ ರಿಜಿಸ್ಟ್ರ ತೋರಿದವು ದಸ್ತಾವೇಜಿನ ಅಸಲು ಬಡ್ಡಿ ಬರಮಾಡುವರೆ ವಾದಿಯು ಮಾಡಿದ ಸದ್ರಿ ದಾವೆಯು ತಾರೀಕು 14—4—1958ಕ್ಕೆ ಇಟ್ಟಿದೆ. ಸದ್ರಿ ದಾವೆಯಲ್ಲಿ ನೀವು ವ್ಯವಹರಿಸುವುದಿದ್ದರೆ ತಾರೀಕು 14—4—1958ನೇ ಹಗಲು 11 ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ನಿಮ್ಮ ಸ್ಟೇಟಮೆಂಟು ದಾಖಲು ಮಾಡಿ ವ್ಯವಹರಿಸತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ದಾವೆಯು ಫೈಸಲು ಮಾಡೋಣಾಗುವುದೆಂಬ ಸಂಗ್ತಿ ಈ ಮೂಲಕ ಕೋರ್ಟಿನ ಹುಕ್ಕುಂ ಪ್ರಕಾರ ತಿಳಿಸೋಣಾಗಿಯದೆ.

K. S Hegde
ವಾದಿಯ ಎಡ್ವೊಕೇಟ್.

ಕಾರ್ಕಳ, ತಾ. 7—4—58.

ಮಣಿಪಾಲದಿಂದ ರಾಜ್ಯಪಾಲ ದಂಪತಿಗಳು ಉಡುಪಿಗೆ ಹಿಂತಿರುಗಿ ಶ್ರೀಕೃಷ್ಣ ಮಠಕ್ಕೆ ಬಂದು ಮಹಾಪೂಜಾದಿಗಳನ್ನು ನೋಡಿದರು. ಅಲ್ಲಿಂದ ಸೋದೆ ಮಠಕ್ಕೆ ಹೋಗಿ ಅಲ್ಲಿಯ ಸ್ವಾಮಿಗಳವರಿಂದ ಶುಭಾಶೀರ್ವಾದಗಳನ್ನು ಪಡೆದರು. ಶ್ರೀಕೃಷ್ಣ ಮಠದ ಪಾಯಸಾನ್ನ ಮಹಾ ಪ್ರಸಾದವನ್ನು ಮಧ್ಯಾಹ್ನ ಹೊತ್ತಿಗೆ ಶ್ರೀ ಕೃಷ್ಣಾಪುರ ಮಠದಲ್ಲಿ ಭಕ್ತಿಪೂರ್ವಕವಾಗಿ ಸ್ವೀಕರಿಸಿದರು ನಂತರ ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರಿಂದ ಸನ್ನಿಧಾನದ ಫಲ ಮಂತ್ರಾಕ್ಷತೆಯನ್ನು ಸ್ವೀಕರಿಸಿ ಶ್ರೀ ಕೃಷ್ಣನ ಅನುಗ್ರಹಕ್ಕೆ ಪಾತ್ರರಾದರು.

ಸಂಜೆ ನಗರ ಸಭೆಯ ಕಡೆಯಿಂದ ಸಭಾಪತಿ ಶ್ರೀ ಕೆ. ಕೆ. ಪೈಗಳು ಅರ್ಪಿಸಿದ ಮಾನಪತ್ರಕ್ಕೆ ಉತ್ತರವೀಯುತ್ತಾ, ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಲ್ಲಿ ಪಕ್ಷ ಪಂಗಡಗಳಿರಬಾರದೆಂದೂ ಸದಸ್ಯರಾದವರೆಲ್ಲರೂ ಜನಹಿತ ಸಾಧನಾ ಗುಂಪಿಗೆ ಸೇರಿದವರೆಂದಾಗಬೇಕೆಂದು ಸಲಹೆ ನೀಡಿದರು. ಕಾಸರಗೋಡು ಪ್ರಶ್ನೆಯು ಕೇರಳ ಮತ್ತು ಮೈಸೂರು ರಾಜ್ಯ ಸರಕಾರಗಳ ವಿಚಾರ ವಿನಿಮಯದಿಂದ ಬಗೆಹರಿಯಬಹುದೆಂದರು. ಶ್ರೀ ಪಿ. ವಿ. ಆಚಾರ್ಯರು ಧನ್ಯವಾದಗಳನ್ನಿತ್ತರು.

ಉಡುಪಿ ಪ್ರಧಾನ ಅಂಚೆ ಕಚೇರಿಯಲ್ಲಿ—ಸದ್ರಿ ಪೋಸ್ಟಾಫೀಸಿನ ಕ್ಲಾರ್ಕ್ ಶ್ರೀ ಮಹಾಲಿಂಗನವರು ಕಲ್ಯಾಣಪುರ ಸಬ್ ಪೋಸ್ಟಾಫೀಸಿಗೆ ವರ್ಗಾಯಿಸಲ್ಪಟ್ಟ ಪ್ರಯುಕ್ತ ಅವರನ್ನು ಬೀಳ್ಕೊಡುವ ಸಮಾರಂಭವು ತಾ. 2ರಲ್ಲು ಪೋಸ್ಟು ಮಾಸ್ಟರ್ ಮಿಸ್. ಜೆ. ಎಚ್. ಲೋಬೋರವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಪಿ ಎಸ್. ಹೊಳ್ಳರು ಮುಖ್ಯ ಅತಿಥಿಯು ಕುರಿತು ಮಾತನಾಡಿದರು

ಗುರುಗಳ ಆರಾಧನೆ-- ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಸ್ವಾಮಿಗಳವರು ತಮ್ಮ ಗುರುಗಳ ಆರಾಧನೆಯನ್ನು ತಾ. 5ರಂದು ವಿಜೃಂಭಣೆಯಿಂದ ನೆರವೇರಿಸಿದರು. ಮಧ್ಯಾಹ್ನ ಬ್ರಾಹ್ಮಣ ಸಂತರ್ಪಣೆ ರಾತ್ರೆ ಬ್ರಹ್ಮರಥೋತ್ಸವ ಕಾರ್ಯಕ್ರಮಗಳಿದ್ದುವು.

ಉಡುಪಿ ಖಾದಿ ಕೈಗಾರಿಕೆ ಸಹಕಾರೀ ಸಂಘದ ಮಹಾಸಭೆಯು—ತಾ. 3ರಂದು ಸಂಜೆ ಶ್ರೀ ಕೆ. ಪಾಂಡುರಂಗ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸಹಕಾರೀ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಎ. ಎಲ್. ಭಟ್ಟರು ಖಾದಿ ಉದ್ಯಮದ ಕುರಿತು ಮಾತನಾಡಿದರು. ಬಳಿಕ ಸಂಘದ ಡ್ಯಾರೆಕ್ಟರ ಮಂಡಳಿಗೆ ಶ್ರೀ ಕೆ ಪಾಂಡುರಂಗ ಪೈ (ಅಧ್ಯಕ್ಷ), ಶ್ರೀಮತಿ ಆಶಾ ಕೆ. ಆರ್. ಕೆ ಭಟ್ (ಉಪಾಧ್ಯಕ್ಷೆ), ಶ್ರೀ ಕೇಶವ ಎಮ್. ಪಾಡುನ ಭಟ್ (ಕಾರ್ಯದರ್ಶಿ), ಟಿ ಗೋಪಾಲ ಪೈ, ಎ. ಜೆ ಆಳ್ವ, ಕೆ. ಶ್ರೀನಿವಾಸ ಪೈ ಟಿ ರಮೇಶಪೈ ಮತ್ತು ಯು ಸೀತಾರಾಮ ಭಟ್ಟರು ಆರಿಸಲ್ಪಟ್ಟರು.

ನಗರಸಭೆಯ ವಿಶೇಷ ಸಭೆಯು ತಾ 1ರಂದು ಸಂಜೆ ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ವಿಶೇಷ ಮಾದರಿಯಲ್ಲಿ ಮಾತುಕತೆಗಳಾಗಿ ಕೊನೆಗೊಂಡಿತು. ಕಳೆದ ತಿಂಗಳ ತಾ 21ರ ಸಭೆಯಲ್ಲಿ ಮುಂಗಡಪತ್ರವನ್ನು ಮಂಜೂರುಮಾಡಿದುದನ್ನು ಮನ್ನಾ ಮಾಡಿ, ವ್ಯತ್ಯಾಸಗಳನ್ನು ಅವಶ್ಯವಿದ್ದರೆ ಮಾಡಿ ಪುನಹ ಮಂಜೂರುಮಾಡುವುದು ಈ ಸಭೆಯ ಉದ್ದೇಶವಾಗಿತ್ತು. ಉದ್ದೇಶದ ಪೂರ್ವಾಪರ ವಿಚಾರಗಳಲ್ಲಿ ಅಲ್ಲದ ಸಲ್ಲದ ಅನಪೇಕ್ಷಿತ ಮಾತುಗಳ ಸುರಿಮಳೆಯಾದುದಲ್ಲದೆ ಸಭಾತ್ಯಾಗ, ವಿಧಿಬಿಂದು ಪ್ರಕರಣಗಳೂ ರೂಪುಗೊಂಡು, ಗೊಂದಲದೊಡನೆ ಮುಕ್ತಾಯವಾಯಿತು.

ಶ್ರೀರಾಮನವಮಿ— ಮಹೋತ್ಸವವು ಬೈರಂಪಳ್ಳಿ ಆದಿ ಶೀರೂರುಮಠದಲ್ಲಿ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ವೈಭವದಿಂದ ಜರಗಿತು. ಲೋಕಶಾಂತಿಗಾಗಿ ಸ್ವಾಮಿಗಳವರು ಈ ಮಹೋತ್ಸವ ಕಾಲದಲ್ಲಿ ಸೋಮಯಾಗವನ್ನೂ ಮಾಡಿಸಿದರು. ತಾವು ಸುಧಾ ಪಾಠ ಹೇಳುತ್ತಿದ್ದ ಕಾಣಿಯೂರು ಮಠದ ಕಿರಿಯ ಶ್ರೀ ವಿದ್ಯಾವಾರಿನಿಧಿ ತೀರ್ಥ ಸ್ವಾಮಿಗಳವರಿಗೂ ಈ ಸಂದರ್ಭದಲ್ಲಿ ಸುಧಾ ಮಂಗಲಾಚರಣೆ ನಡೆಸಿದರು. ಈ ಅಭೂತಪೂರ್ವ ಸಮಾರಂಭಕ್ಕೆ ಶ್ರೀ ಕಾಣಿಯೂರು ಮಠದ ಹಿರಿಯ ಸ್ವಾಮಿಗಳವರೂ ಶ್ರೀ ಪುತ್ತಿಗೆ, ಶ್ರೀ ಸೋದೆ, ಶ್ರೀ ಬಾಳಗಾರು ಮಠಾಧೀಶರೂ ಚಿತ್ತೈಸಿದ್ದರು. ಅಲೆವೂರು ಶ್ರೀರಾಮ ಮಂದಿರದಲ್ಲಿ ಶ್ರೀರಾಮನವಮಿ ಸಪ್ತಾಹದ ಮಂಗಲಾಚರಣೆಯು ತಾ 4ರಂದು ಶ್ರೀಗಳವರ ಬದರೀನಾರಾಯಣಾಚಾರ್ಯ, ಯು. ಕೃಷ್ಣ ಭಟ್ಟ ಮತ್ತು ಶ್ಯಾಮಭಾಗ್ ರಾಮಚಂದ್ರ ರಾಯರ ನಾಯಕತ್ವದಲ್ಲಿ ವಿಧಿಯುಕ್ತವಾಗಿ ಸಾಂಗವಾಯಿತು.

ಪ್ರಮಾಣ ಪತ್ರ ವಿತರಣೋತ್ಸವ-ಅಖಿಲ ಭಾರತೀಯ ಸಂಸ್ಕೃತ ಭಾಷಾ ಪ್ರಚಾರಸಮಿತಿಯ ಪ್ರಮಾಣಪತ್ರ ವಿತರಣೋತ್ಸವವು ಗೀತಾ ಭವನದಲ್ಲಿ ದಿನಾಂಕ 4ರಂದು ಜರಗಿತು. ಜೀವವಿಮಾ ಕಾರ್ಪೋರೇಶನ್‌ನ ಉಡುಪಿ ಡಿವಿಜನಲ್ ಮೆನೇಜರ್ ಶ್ರೀ ಕೆ. ಆರ್. ಕೆ. ಭಟ್‌ರವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಪ್ರಾರ್ಥನೆಯಾದ ತರುವಾಯ ವ್ಯವಸ್ಥಾಪಕ ಶ್ರೀ ಕೆ. ಎ. ದೇವದಾಸರು ಸ್ವಾಗತಿಸಿದರು ಕಾರ್ಯದರ್ಶಿಗಳು ಗೀತಾ ಭವನದ ಸಂಕ್ಷಿಪ್ತ ವರದಿಯನ್ನು ಓದಿಹೇಳಿದರು. ಆ ಮೇಲೆ ಶ್ರೀ ಕೆ. ಅನಂತರಾಮ ಉಡುಪರು ಜಯದೇವಕೃತ ಗೀತ ಗೋವಿಂದಂ ಕಾವ್ಯದ ಹಲವಾರು ಪದ್ಯಗಳನ್ನು ಸರಸವಾಗಿ ಹಾಡಿದರು. ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಸಂಸ್ಕೃತ ಭಾಷೆಯ ಮಹತ್ವ ಹಾಗೂ ಅಭ್ಯಾಸದ ಆವಶ್ಯಕತೆಗಳನ್ನು ವಿವರಿಸುತ್ತ ಪ್ರಚಲಿತ ಭಾಷಾ ಪ್ರಶ್ನೆಯನ್ನು ಎತ್ತಿ, ಪ್ರಾದೇಶಿಕ ಭಾಷೆ ಮತ್ತು ಸಂಸ್ಕೃತ ಭಾಷೆಗಳನ್ನು ಹಿಂದಿಕ್ಕಿ ಹಿಂದಿಯನ್ನು ಹೇರುವುದು ಸರಿಯಲ್ಲವೆಂದು ಅಭಿಪ್ರಾಯಪಟ್ಟರು ಶ್ರೀ ಎಂ. ಮಹಾಬಲೇಶ್ವರ ಸೋಮಯಾಜಿಯವರು ಸಂಸ್ಕೃತವನ್ನು ಕಲಿಸಿಕೊಳ್ಳುವ ಕುರಿತಾಗಿ ಮಾತನಾಡಿದರು ಆ ಮೇಲೆ ಶ್ರೀ ಎ. ಸುಬ್ರಾಯಾಚಾರ್ಯರ ಲಿಖಿತ ಭಾಷಣದ ಸಾರವನ್ನು ಓದಿ ಹೇಳಲಾಯಿತು ಶ್ರೀಮತಿ ಆಶಾ ಕೆ. ಆರ್. ಕೆ ಭಟ್‌ರವರು ೧೯೫೭ನೆ ಸಪ್ಟಂಬರ ತಿಂಗಳ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನೂ ಬಹುಮಾನಗಳನ್ನೂ ವಿತರಿಸಿದರು ಅಧ್ಯಕ್ಷರು ನಮ್ಮ ಸಂಸ್ಕೃತಿಯ ಮೂಲವು ಸಂಸ್ಕೃತದಲ್ಲಿರುವುದರಿಂದ, ಅದನ್ನು ಕಲಿಯಬೇಕೆಂದೂ, ಈ ಕೆಲಸವನ್ನು ಮಾಡುತ್ತಿರುವ ಗೀತಾ ಭವನಕ್ಕೆ ಪ್ರೋತ್ಸಾಹ ನೀಡಬೇಕೆಂದೂ ಕೇಳಿಕೊಂಡರು ಅಧ್ಯಕ್ಷ ಶ್ರೀ ಕೆ. ಎಲ್. ಎಸ್. ಉಪಾಧ್ಯಾಯರು ಕೃತಜ್ಞತೆಗಳನ್ನು ಅರ್ಪಿಸಿದರು.

ಮೈಸೂರು ಯುನಿವರ್ಸಿಟಿಯ ಎಕಡೆಮಿಕ್ ಕೌನ್ಸಿಲಿಗೆ—ಎಂ ಜಿ. ಎಂ. ಕಾಲೇಜಿನ ಪ್ರೊಫೆಸರ್ ಶ್ರೀ ಕು. ಶಿ ಹರಿದಾಸ ಭಟ್, ಎಂ ಎ ಅವರು ಕಾಲೇಜು ಪ್ರಾಧ್ಯಾಪಕರಪರವಾಗಿ ಚುನಾಯಿತರಾಗಿದ್ದಾರೆ.

ಜಾಗತಿಕ ಆರೋಗ್ಯ ಸಂಸ್ಥೆಯ ಹತ್ತನೆಯ ವಾರ್ಷಿಕೋತ್ಸವವು—ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ತಾ. 7ರಲ್ಲಿ ಮೈನರ್‌ಶಾಲೆಯಲ್ಲಿ ಜರಗಿತು. ಡಾ| ವಿ ಎಲ್. ಪಂಡಿತರು ಪ್ರಾಸ್ತಾವಿಕ ಭಾಷಣದಲ್ಲಿ ಜಾಗತಿಕ ಆರೋಗ್ಯ ಸಂಸ್ಥೆಯು ಸಾಧಿಸಿದ ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀಮತಿ ಇಂದಿರಾ ರಾವ್, ಡಾ ಸಿ ಜಿ. ಆಚಾರ್, ಶ್ರೀ ಎ. ಜೆ. ಆಳ್ವರು ಆರೋಗ್ಯ ಸಮಸ್ಯೆಗಳ ಕುರಿತು ಮಾತನಾಡಿದರು. ಮುನ್ಸಿಪಲ್ ಶಾಲಾ ಮಕ್ಕಳ ಆರೋಗ್ಯ ಪರೀಕ್ಷಾವಿಭಾಗವನ್ನು ಡಾ| ಸುಂದರರಾಮ ಪೈಗಳು ಉದ್ಘಾಟಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ನಮ್ಮ ಪೂರ್ವಜರು ಜನರ ಆಯುಸ್ಸು ಮತ್ತು ಆರೋಗ್ಯ ಹಿತರಕ್ಷಣೆಗಾಗಿ ಕೊಟ್ಟಿರುವ ಆಯುರ್ವೇದದ ನಿಯಮಗಳನ್ನು ಸಾವು ಪಾಲಿಸಿದರೆ ಜಾಗತಿಕ ಆರೋಗ್ಯ ಸಂಸ್ಥೆಯು ಮಹದುದ್ದೇಶವನ್ನು ಪೂರೈಸಿದಂತಾಗುವುದೆಂದು ಹೇಳಿದರು. ಡಾ| ಪಂಡಿತರು ಧನ್ಯವಾದ ಸಮರ್ಪಿಸಿದರು

ಮುಂಬಯಿ ದಕ್ಷಿಣ ಕನ್ನಡ ಬ್ರಾಹ್ಮಣರ ಸಂಘ (ರಿಜಿಸ್ಟರ್ಡ್)—ನಗೀನ್ ದಾಸ್ ಮೆನ್ಶನ್ಸ್, ಗಿರ್ಗಾಂ ರೋಡ್, ಮುಂಬಯಿ-4. ಇದರ ವಾರ್ಷಿಕ ಸಭೆಯು ಕಳೆದ ತಾ 30ರಂದು ಸಂಘದ ಅಧ್ಯಕ್ಷ ಶ್ರೀ ಕೆ. ಭುಜಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮ ೧ತೆ ವಾರ್ಷಿಕವರದಿ, ಲೆಖ್ಖಪತ್ರ ಪರಿಶೀಲನಾದಿಗಳಾದ ಮೇಲೆ, ಹೊಸ ಕಾರ್ಯಸಮಿತಿಯ ಚುನಾವಣೆ ನಡೆದು, ಶ್ರೀ ಕೆ. ಭುಜಂಗ ರಾವ್, ಅಧ್ಯಕ್ಷ; ಡಾ. ಶ್ರೀಮತಿ ಲಲಿತಾ ರಾವ್ ಮತ್ತು ಶ್ರೀ ಯು. ವಿ. ಉಪಾಧ್ಯ, ಉಪಾಧ್ಯಕ್ಷರು; ಶ್ರೀ ಕೇಶವ ಎನ್. ವ್ಯಾಸರಾವ್, ಕೋಶಾಧಿಕಾರಿ; ಬಿ. ಸುಬ್ಬರಾವ್ ಹಾಗೂ ಬಿ ಆರ್ ಉಡುಪ, ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಸಭಾಧ್ಯಕ್ಷರು ಮಾತನಾಡುತ್ತಾ, ಸಂಘದ ಕಟ್ಟಡದ ಕೆಲಸವು ಭರದಿಂದ ಸಾಗುತ್ತಿದೆಯೆಂದು ತಿಳಿಸಿ ಶ್ರೀಕೃಷ್ಣ ಮಂದಿರದ ಕೆಲಸವು ಕೂಡಾ ಈ ವರ್ಷದೊಳಗಾಗಿ ಪೂರ್ಣವಾಗುವುದರಲ್ಲಿ ಸಂದೇಹವಿಲ್ಲವೆಂದರು.

ಈಸ್ಟರ್ ಸಂದೇಶ

ಶಾಂತಿಯ ಬಯಕೆಯಲ್ಲಿ ಆಸಕ್ತಿ ವಹಿಸಬೇಕು, ಅದಕ್ಕಾಗಿ ಅವಶ್ಯವಿರುವ ಹಾಗೂ ಯೋಗ್ಯವೆನಿಸುವ ತ್ಯಾಗವನ್ನು ತ್ವರಿತಗತಿಯಲ್ಲಿ ಕೈಗೊಳ್ಳಬೇಕು ಮತ್ತು ಶಾಂತಿಯ ಸಮಸ್ಯೆಯನ್ನು ಪ್ರಾಮಾಣಿಕವಾಗಿ ಚರ್ಚಿಸಬೇಕೆಂದು ವೆಟಿಕನ್ ನಗರದ ಪೋಪರು ತಮ್ಮ ಈಸ್ಟರ್ ಸಂದೇಶದಲ್ಲಿ ಕರೆಯಿತ್ತಿದ್ದಾರೆ. ಹೀಗೆ ನಡೆದುಕೊಂಡರೆ, ಅವಿಶ್ವಾಸದ ಮೋಡಗಳು ಚದುರಿ ಹೋಗುವುದಲ್ಲದೇ, ಶಾಂತಿಯು ಸ್ಥಾಪಿತವಾಗುವುದೆಂಬೂ ಇದಕ್ಕೆ ವಿಪರೀತವಾಗಿ ನಡೆದರೆ, ಅನೈಕ್ಯ ಪರಿಸ್ಥಿತಿ ಉಂಟಾಗುವುದೆಂದೂ ಅವರು ತಿಳಿಸಿ ಕತ್ತಲೆ ತುಂಬಿದ ವಿಶ್ವದಲ್ಲಿ ಶಾಂತಿಯ ಜ್ಯೋತಿಗಳಾಗಿ ಮಿನುಗಬೇಕೆಂದು ತಮ್ಮ ಧರ್ಮಾವಲಂಬಿಗಳೆಲ್ಲರೊಡನೆ ಅವರು ವಿನಂತಿಸಿದ್ದಾರೆ.

ಕಾಂಗ್ರೆಸ್ ಮುಂದಿನ ಅಧಿವೇಶನ

ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಮುಂದಿನ ಅಧಿವೇಶನವು ನಾಗಪುರದಲ್ಲಿ ಸೇರಲಿದೆ. ಮುಂದಿನ ಜನವರಿಯ ಮಧ್ಯದಲ್ಲಿ ಈ ಸಭೆಯು ಸೇರಲಿದ್ದು ಈ ಬಗ್ಗೆ ಬಂದಿರುವ ಕೇರಳ ಮತ್ತು ಇತರ ಸ್ಥಾನಗಳ ಆಮಂತ್ರಣವನ್ನು ಬಿಟ್ಟುಕೊಟ್ಟು ಈ ನಗರವನ್ನು ಮಧ್ಯವರ್ತಿ ನಗರವೆಂದು ಆರಿಸಿದ್ದಾರೆ.

ಮುಂಬಾಯಿಯ ಮುಖ್ಯ ಮಂತ್ರಿ ಶ್ರೀ ವೈ. ಬಿ. ಚವಣರು ಅ. ಭಾ ಕಾಂಗ್ರೆಸ್ಸಿನ ನೂತನ ಕೋಶಾಧಿಕಾರಿಯಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯು. ಎನ್. ಢೇಬರರವರಿಂದ ನೇಮಿಸಲ್ಪಟ್ಟಿದ್ದಾರೆ. ಮೊದಲಿನ ಕೋಶಾಧಿಕಾರಿಯಾಗಿದ್ದ ಕೇಂದ್ರ ಅರ್ಥಿಕ ಮಂತ್ರಿಯವರಾದ ಶ್ರೀ ಮುರಾರ್ಜಿಯವರು ಈ ಅಧಿಕಾರವನ್ನು ಬಿಟ್ಟುಕೊಟ್ಟರು.

ರಾಜಾಪುರ ಸಾರಸ್ವತ ಸಂಘ, ಮುಂಬಯಿ.

ಇದರ ಎಂಟನೇ ವಾರ್ಷಿಕ ಮಹಾ ಸಭೆಯು ತಾ. 29–3–58ರಲ್ಲಿ ಶ್ರೀ ಎಂ. ಕೃಷ್ಣ ನಾಯಕ್, B. A, B Com., ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಹೌಸ್ ಲೇನಿನ ಫೋರ್ಬಿಸ್ ಹೋಲ್‌ನಲ್ಲಿ ಯಶಸ್ವಿಯಾಗಿ ಜರಗಿತು.

ಕಾರ್ಯಕ್ರಮದಂತೆ ಗತವರ್ಷದ ವರದಿ ವಾಚನವು ಗೌ|| ಕಾರ್ಯದರ್ಶಿಗಳಿಂದಾದ ಬಳಿಕ ಗೌ|| ಕೋಶಾಧಿಕಾರಿಗಳಾದ ಶ್ರೀ ಎಸ್. ಎಸ್. ನಾಯಕ್‌ರವರು ಸಂಘದ ಲೆಕ್ಕಪತ್ರಗಳನ್ನು ಸಭಿಕರ ಮುಂದಿಟ್ಟು ಸರ್ವಾನುಮತದಿಂದ ಮಂಜೂರುಮಾಡಲಾಯಿತು. ವಿದ್ಯಾರ್ಥಿಗಳಿಗೆ ಕೊಡುವ ವೇತನದ ಬಗ್ಗೆ ಚರ್ಚೆ ನಡೆದು ಈ ತನಕ ಕೊಡುತ್ತಾ ಬಂದಿರುವ ಧರ್ಮಾರ್ಥ ವಿದ್ಯಾರ್ಥಿ ವೇತನವನ್ನು ನಿಲ್ಲಿಸಲಾಯಿತು. ಕಳೆದ ವರ್ಷ ಹೈಸ್ಕೂಲ್‌ಗಳಲ್ಲಿ ಕಲಿಯುವ ವಿದ್ಯಾರ್ಥಿ ವೇತನ ಪಡೆದವರ ಹೊರತು ಇನ್ನು ಮುಂದೆ ವಿದ್ಯಾರ್ಥಿ ವೇತನವನ್ನು ಕೇವಲ ಕೋಲೇಜ್ ಮತ್ತು ಡಿಪ್ಲೊಮಾ ಕೋರ್ಸುಗಳಲ್ಲಿ ಅಭ್ಯಸಿಸುತ್ತಿರುವ ಸಮಾಜದ ವಿದ್ಯಾರ್ಥಿಗಳಿಗೆ ಕೊಡುವುದೆಂದು ನಿರ್ಧರಿಸಲಾಯಿತು. ಇದಕ್ಕೆ ಸಂಬಂಧಪಟ್ಟವರು ತಮ್ಮ ಅರ್ಜಿಗಳನ್ನು ತಾ. 15-7-58ರ ಒಳಗೆ ಸಂಘದ ಆಫೀಸಿಗೆ ತಲಪುವಂತೆ ಕಳುಹಿಸಬೇಕೆಂತಲೂ ನಿಶ್ಚಯಿಸಲಾಯಿತು. ಮಹಿಳೆಯರ ವಿದ್ಯಾಭ್ಯಾಸಂಗಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುವುದರ ಸಲುವಾಗಿ 9ನೇ ಕ್ಲಾಸಿನಿಂದ ಮೆಟ್ರಿಕ್‌ನ ವರೆಗಿನ ವಿದ್ಯಾರ್ಥಿನಿಯರಿಂದ ಕ್ಲಪ್ತ ಕಾಲಕ್ಕೆ ಬಂದ ಅರ್ಜಿಗಳ ಪೈಕಿ ಪ್ರಥಮದ ಮೂವರಿಗೆ ಧರ್ಮಾರ್ಥ ವೇತನವನ್ನು ಕೊಡಬೇಕೆಂದು ನಿಶ್ಚೈಸಲಾಯಿತು

ಕೊನೆಯದಾಗಿ ಸಭಿಕರ ಭಾಷಣ, ಅಧ್ಯಕ್ಷರ ಭಾಷಣ ಮತ್ತು ಗೌ|| ಕಾರ್ಯದರ್ಶಿಯವರಿಂದ ಧನ್ಯವಾದದ ಬಳಿಕ ಲಘು ಉಪಹಾರದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕನ್ನಡ ಸಾಹಿತ್ಯದ ಉಗಮ

(೫ನೇ ಪುಟದಿಂದ)

ವುಳಿದಿರಲಿಲ್ಲ. ಸಾಹಿತ್ಯವನ್ನು ತಮ್ಮ ಸ್ವಾರ್ಥಕ್ಕಾಗಿ ಬಳಸಿಕೊಂಡರೆಂಬ ಅಪವಾದಕ್ಕೆ ಇವರನ್ನು ಗುರಿಮಾಡಬಹುದಾದರೂ ಆಗಿನ ಕಾಲಧರ್ಮವನ್ನು ಮೀರುವುದು ಅವರಿಂದ ಅಸಾಧ್ಯವಾಯಿತೆಂಬುದನ್ನು ಒಪ್ಪಬೇಕು. ಕನ್ನಡದ ಸಾಹಿತ್ಯ ಕೃತಿಗಳಲ್ಲಿ ಪರಮತ ಸಹಿಷ್ಣುತೆಯೂ ಸರ್ವಮತ ಸಮತಾ ಭಾವನೆಯೂ ಮೂಡಿ ಬಂದಿದೆ ಭಾರತದ ಎಲ್ಲ ಸಾಹಿತ್ಯ ಕೃತಿಗಳಿಗೂ ಆದಿಯಲ್ಲಿ ಮತ ಪ್ರಚಾರವೇ ಮುಖ್ಯ ಧ್ಯೇಯವಾಗಿತ್ತು. ಮುಂದೆ ಮುಂದೆ ಈ ಪ್ರಚಾರದ ಭಾವನೆಯು ದೂರವಾಗುತ್ತ ಬಂದಿತು. ಭಾರತದಲ್ಲಿ ನೂರಾರು ಧರ್ಮಗಳು ಹುಟ್ಟಿಕೊಂಡಿರುವುವು. ಅವುಗಳಲ್ಲಿ ಪ್ರತಿಯೊಂದೂ ಕೆಲವೊಂದು ಜನಸಮುದಾಯದ ಮನ್ನಣೆಗೆ ಅರ್ಹವಾಗಿರುವುವು ಇಲ್ಲಿ ಧರ್ಮಕಲಹ ತಲೆದೋರಲಿಲ್ಲ. ಇದೇ ಭಾರತದಲ್ಲಿ ಅನಾದಿಕಾಲದಿಂದಲೂ ಬಳಕೆಯಲ್ಲಿದ್ದ ಧರ್ಮಸ್ವಾತಂತ್ರ್ಯ ಮತ್ತು ಚಿಂತನಾ ಸ್ವಾತಂತ್ರ್ಯದ ಮರ್ಮವೆನ್ನಬಹುದು. ಕನ್ನಡದ ಸಾಹಿತಿಗಳಾದರೂ ಈ ತತ್ವವನ್ನು ಮರೆಯಲಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅವರು ಎಚ್ಚರಿಕೆಯಿಂದ ನಡೆದುಕೊಂಡಿದ್ದಾರೆ. ಹೀಗಾಗಿ ಕನ್ನಡದಲ್ಲಿ ಧರ್ಮಭಾವನೆಯು ವಿಶಾಲವಾಗಿ ಹರಡಿಕೊಂಡಿದ್ದು ಸರ್ವಧರ್ಮ ಸಮನ್ವಯದ ಮಾತುಗಳು ದೃಷ್ಟಿಗೋಚರವಾಗುತ್ತಿವೆ. ಕನ್ನಡದ ಸಾಹಿತಿಗಳು ಈ ಸಂದರ್ಭದಲ್ಲಿ ಕೈಕಟ್ಟಿ ಕೂತುಕೊಳ್ಳಲಿಲ್ಲ ಎನ್ನುವುದು ಅಭಿಮಾನದ ಸಂಗತಿ.

(ಕ್ರಮಶಃ)

ಮಂಗಳೂರು

ಶ್ರೀ ಎಸ್. ಎಸ್. ಸೆಟ್ಟರ ನಿಧನ.

ಮಂಗಳೂರು ವಿದ್ಯುತ್ ಪೂರೈಕೆಯ ಡಿಸ್ಟ್ರಿಬ್ಯೂಶನ್ ಅಸಿಸ್ಟೆಂಟ್ ಸುಪರಿಂಟೆಂಡೆಂಟರಾದ ಶ್ರೀ ಎಸ್. ಎಸ್. ಸೆಟ್ಟರು ತಾ. 4ರಂದು ರಾತ್ರಿ 10-50ಕ್ಕೆ ನಿಧನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಶ್ರೀಯುತರು ಕೆಲವು ದಿವಸಗಳಿಂದ ವೆನ್‌ಲಾಕ್ ಆಸ್ಪತ್ರೆಯಲ್ಲಿ ಹೃದ್ರೋಗದಿಂದಾಗಿ ಚಿಕಿತ್ಸೆ ಹೊಂದುತ್ತಿದ್ದರು. ದಿವಂಗತರು ಜನಾನುರಾಗ ಗಳಿಸಿದ್ದರು.

ಕೇರಳ ರಾಜ್ಯಪಾಲರಾದ– ಡಾ. ಬಿ. ರಾಮಕೃಷ್ಣ ರಾಯರು ತಾ. 4ರಂದು ಬೆಳಗ್ಗೆ ಕುಟುಂಬ ಸಮೇತರಾಗಿ ಕದ್ರಿಯ ಶ್ರೀ ಮಂಜುನಾಥ ದೇವಸ್ಥಾನ, ಬೋಳಾರದ ಶ್ರೀ ಮಂಗಳಾದೇವಿ ದೇವಸ್ಥಾನ ಶರವು ಶ್ರೀ ಮಹಾ ಗಣಪತಿ ದೇವಸ್ಥಾನ, ರಥಬೀದಿಯ ಶ್ರೀ ವೆಂಕಟ್ರಮಣ ದೇವಸ್ಥಾನ ಮತ್ತು ಕುದ್ರೋಳಿಯ ಶ್ರೀ ಗೋಕರ್ಣನಾಥ ದೇವಸ್ಥಾನಗಳಿಗೆ ಭೇಟಿಯಿತ್ತರಲ್ಲದೆ ಪಾಂಡೇಶ್ವರದಲ್ಲಿ ಗಿಲ್ಡ್ ಒಫ್ ಸರ್ವಿಸಿನವರು ನಡೆಸುತ್ತಿರುವ ನರ್ಸರಿ ಶಾಲೆಗೂ ಸಂದರ್ಶನವಿತ್ತರು. ರಾಜ್ಯಪಾಲರು ಶಾಲೆಗೆ ರೂಪಾಯಿ 50/– ದಾನಮಾಡಿದರು. ಸಂಜೆ ಮಲಬಾರು ಎಕ್ಸ್‌ಪ್ರೆಸ್ಸಿನಲ್ಲಿ ಕಾಂಞಂಗಾಡ್ ಬಳಿಯಲ್ಲಿನ ರಾಮನಗರಿಕ್ಕೆ ತೆರಳಿದರು ನಗರದ ಅಧ್ಯ ಅಧಿಕಾರಿಗಳೂ ಪ್ರಮುಖರೂ ಅವರನ್ನು ಬೀಳ್ಕೊಟ್ಟರು.

ಸಂಗೀತ ಕಚೇರಿ– ಸಂಗೀತಕಲಾ ಪ್ರಸಾರಕ ಸಂಘದ ಆಶ್ರಯದಲ್ಲಿ ತಾ. 5ರಂದು ರಾತ್ರೆ ಗುಣಿ ಗಂಧರ್ವ ಪಂಡಿತ ಲಕ್ಷ್ಮಣ ಪ್ರಸಾದ ಜಯಪುರ ವಾಲೆಯವರ ಸಂಗೀತ ಕಚೇರಿ ನಡೆಯಿತು.

ಕೇರಳ ದಿನಾಚರಣೆ– ಸ್ಥಳೀಯ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ತಾ. 5ರಂದು ಸಂಜೆ ಕೇರಳದಲ್ಲಿ ಕಮ್ಯೂನಿಸ್ಟ್ ರಾಜ್ಯ ಸರಕಾರ ಸ್ಥಾಪನೆಯ ವರ್ಧಂತಿಯು ಶ್ರೀ ಜಿ. ವಾಮನ ಕೊಡಿಯಾಲಬೈಲ್, ಅವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎಮ್. ಎಚ್. ಕೃಷ್ಣಪ್ಪ ಮತ್ತು ಕೆ. ಮೋನಪ್ಪ ಶೆಟ್ಟರು ಕೇರಳ ಸರಕಾರ ಸಾಧಿಸಿದ ಕಾರ್ಯಗಳನ್ನು ವಿವರಿಸಿ ಭಾಷಣಮಾಡಿದರು.

ಪತ್ರಿಕಾ ಪರಿಷತ್ತು—ತಾ. 5ರಂದು ಸಂಜೆ ಜಿಲ್ಲಾಧಿಕಾರಿ ಶ್ರೀ ವೈ. ಸಿ. ಹೊಂಬಾಳಯ್ಯನವರು ತಮ್ಮ ಕಚೇರಿಯಲ್ಲಿ ಪತ್ರಿಕಾ ಪರಿಷತ್ತನ್ನು ಕರೆದು ದ. ಕ. ಜಿಲ್ಲೆಯಲ್ಲಾದ ಅಭಿವೃದ್ಧಿ ಕಾರ್ಯಗಳ ವಿವರಣೆಯಿತ್ತರು. ಸ್ಥಳೀಕ ಅಭಿವೃದ್ಧಿ ಕಾರ್ಯಗಳಿಗಾಗಿ ದ. ಕ. ಜಿಲ್ಲೆಗೆ 1957-58ನೇ ವರ್ಷಕ್ಕೆ ಮೀಸಲಿಟ್ಟ ರೂಪಾಯಿ 3,55,550/- ರಲ್ಲಿ ಪ್ರಕೃತದ ವರ್ಷದಲ್ಲಿ ರೂ. 3,14,479/- ರಷ್ಟು ಕಾರ್ಯಗಳನ್ನು ಸಂಪೂರ್ಣಗೊಳಿಸಲಾಗಿದೆ. ಈ ಕಾರ್ಯಗಳಿಗೆ ಸಾರ್ವಜನಿಕರು ಸಾಧಾರಣ ಅಷ್ಟೇ ಹಣವನ್ನು ಖರ್ಚುಮಾಡಿದ್ದು, ಇತರ ಸಂಪೂರ್ಣವಾಗದ ಕೆಲಸಗಳೊಂದಿಗೆ ಕೂಡಿಸಿದರೆ ಜಿಲ್ಲೆಯಲ್ಲಿ ಸುಮಾರು ಎಂಟು ಲಕ್ಷ ರೂಪಾಯಿಗಳಷ್ಟು ಕಾರ್ಯವು ಈ ವರ್ಷ ಸ್ಥಳೀಯ ಅಭಿವೃದ್ಧಿ ಯೋಜನೆಯಂತೆ ಕೈಕೊಳ್ಳಲಾಗಿದೆ. ಉಡುಪಿ ತಾಲೂಕನ್ನುಳಿದ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳೂ ಈ ರಾಷ್ಟ್ರೀಯ ವಿಸ್ತರಣೆ ಅಥವಾ ಸಮಾಜಾಭಿವೃದ್ಧಿ ಯೋಜನೆಯಲ್ಲಿ ಅಡಕವಾಗಿವೆ. ಗ್ರಾಮ ಪ್ರದೇಶಗಳಲ್ಲಿ ಬಾವಿಗಳನ್ನು ತೋಡಲು ಈ ತನಕ ರೂಪಾಯಿ 46,844 ಖರ್ಚುಮಾಡಲಾಗಿದೆ ಗ್ರಾಮೀಣ ಚರಂಡಿ ಯೋಜನೆಗಾಗಿ ರೂ. 30,320 ವೆಚ್ಚಮಾಡಲಾಗಿದೆ. ಜಿಲ್ಲೆಯಲ್ಲಿ ಗೇರುಬೀಜ ಬೆಳೆಸಲು ಇಷ್ಟರವರೆಗೆ 702 ಎಕ್ರೆಗಳಷ್ಟು ಸ್ಥಳವನ್ನು ಕೊಡಲಾಗಿದೆ ಕಡಲಗಡ್ಡೆ ಹತ್ತಿ ಬೆಳೆಸಲು ಈ ತನಕ 200 ಎಕ್ರೆಗಳನ್ನು ಸಾರ್ವಜನಿಕರಿಗೆ ಕೊಡಲಾಗಿದೆ. ರಾಷ್ಟ್ರೀಯ ಉಳಿತಾಯ ಯೋಜನೆಯನ್ವಯ ಸಂಗ್ರಹಿಸಲು ಗುರಿಯಾಗಿಟ್ಟುಕೊಂಡ ರೂ 15,00,000 ಪೈಕಿ ರೂ. 11,50,169 ಸಂಗ್ರಹಿಸಲಾಗಿದೆ.

ಹುಬ್ಬಳ್ಳಿ– ಶ್ರೀ ಜಗದ್ಗುರು ಮೂರು ಸಾವಿರ ಮಠಕ್ಕೆ ಶ್ರೀ ವಿಜಯ ಮಹಾಂತ ಸ್ವಾಮಿಗಳವರನ್ನು ಮಹಾ ಸಂಸ್ಥಾನ ಪದ್ಧತಿಯಂತೆ ‘ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜ ಯೋಗೀಂದ್ರ ಮಹಾ ಸ್ವಾಮಿಗಳವರು ಎಂದು ನಾಮಕರಣ ಪೂರ್ವಕವಾದ ಶ್ರೀ ನಿರಾಭಾರ ಜಗದ್ಗುರು ಪಟ್ಟಾಭಿಷೇಕ ಮಹೋತ್ಸವವು ವಿಧಾನ ಪೂರ್ವಕವಾಗಿ ತಾ. 1-5-58ನೆ ಗುರುವಾರ ಮುಂಜಾನೆ ಷಟ್‌ಸ್ಥಲ ಬ್ರಹ್ಮೋಪದೇಶ ಮತ್ತು ಅಂದೇ ಸಾಯಂಕಾಲ ಶೂನ್ಯ ಸಿಂಹಾಸನಾರೋಹಣ ಸಮಾರಂಭ ಕಾರ್ಯಕ್ರಮಗಳು ನೆರವೇರಲಿರುವುವು.

ಬೇಲಂಪಾಡಿ –ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ‘ಸಂಪೂರ್ಣ ರಾಮಾಯಣ’ ಎಂಬ ಪ್ರಸಂಗದ ಯಕ್ಷಗಾನ ನಾಟಕವು ಕಳೆದ ತಾ. 31ರಂದು ಶ್ರೀ ಕೆ. ಮಾಸ್ತರ್ ವಿಷ್ಣು ಭಟ್ಟರ ನಿರ್ದೇಶನದಿಂದ ನುರಿತ ಕಲಾವಿದರ ಕೂಡುವಿಕೆಯಿಂದ ಸಾಂಗವಾಯಿತು. ಶ್ರೀ ರಮಾನಂದ ಬನಾರಿಯವರು ಧನ್ಯವಾದವಿತ್ತರು.

ಪಾನಾಜೆ ಕೆದಂಬಾಡಿ– ದಿವಂಗತ ಮಹಾಲಿಂಗ ಭಂಡಾರಿಗಳ ಅಳಿಯ ಚಿರಂಜೀವಿ ವಿಠಲ ಮತ್ತು ಮೇಗಿನ ಕಡೆಂಜ ಶ್ರೀ ಶೀನ ಪೂಂಜರ ಸೊಸೆ ಚಿ. ಸೌ ಅನಸೂಯ-ಇವರ ವಿವಾಹ ಸಮಾರಂಭವು ಇದೇ ತಾ. 4ರಂದು ಮಧ್ಯಾಹ್ನ ಮಂಗಳೂರು ಹಂಪನಕಟ್ಟೆ ಕೆಥೋಲಿಕ್ ಕ್ಲಬ್ಬಿನಲ್ಲಿ ವೈಭವದಿಂದ ಜರಗಿತು. ನವ ದಂಪತಿಗಳಿಗೆ ಶುಭಾಶಯಗಳು.

ವಿಜ್ಞಾನದ ವೈಚಿತ್ರ್ಯ

೧. ಪರಮಾಣು ಗಡಿಯಾರ

ಟೈಪ್ ರೈಟರಿಗಿಂತ ದೊಡ್ಡದಲ್ಲದ ಆಕಾರದ ಪರಮಾಣು ಗಡಿಯಾರವೊಂದನ್ನು ತಾವು ಸಿದ್ಧಪಡಿಸಿರುವುದಾಗಿ ಇಬ್ಬರು ಅಮೇರಿಕದ ವಿಜ್ಞಾನಿಗಳು ಬಹಿರಂಗಪಡಿಸಿದ್ದಾರೆ. ಈ ಗಡಿಯಾರದ ಕಾಲಮಾಪನವು ಪ್ರತಿ ನೂರು ವರ್ಷಗಳಿಗೆ ಒಂದು ಸೆಕುಂದಿನಷ್ಟು ಮಾತ್ರ ವ್ಯತ್ಯಾಸವಾಗಬಹುದೆಂದೂ ಇದನ್ನು ಸುಧಾರಿಸಿದರೆ, ಮೂರು ಸಾವಿರ ವರ್ಷಗಳಲ್ಲಿ ಒಂದು ಸೆಕುಂದು ವ್ಯತ್ಯಾಸ ಬರುವಂತೆ ಮಾಡಬಹುದೆಂದೂ ಅವರು ತಿಳಿಸಿದ್ದಾರೆ. ಅನಿಲರೂಪದ ಸೋಡಿಯಂ ಅಥವಾ ಸೆಸಿಯಂನಿಂದ ಬರುವ ರೇಡಿಯೋತರಂಗಗಳ ಆವರ್ತನ ತತ್ವಗಳ ಆಧಾರದಿಂದ ಈ ಗಡಿಯಾರವು ಕೆಲಸ ಮಾಡುತ್ತದೆ. ಈ ಅನುನಾದದ ನಿಯತತೆಯು ಯಾಂತ್ರಿಕ ಗಡಿಯಾರದ ಪೆಂಡುಲಂನಂತೆ ಕಾಲವನ್ನು ಇಡುತ್ತದೆ. ಮಾರಿಸ್ ಅರ್ಡ್ಲಿ ಮತ್ತು ಟಿ. ಆರ್. ಕಾರ್ವರ್ ಎಂಬಿಬ್ಬರು ಮಹಾಶಯರೇ ಪರಮಾಣುವಿನಿಂದ ಗಡಿಯಾರ ತಯಾರಿಸಿದವರು.

೨. ಹೊಸ ಅಕ್ಕಿಯ ಬೇಗೆ

ಹೊಸ ಅಕ್ಕಿಯನ್ನು ಬೇಯಿಸಿದಾಗ ಅದು ಸಾಮಾನ್ಯವಾಗಿ ಮುದ್ದೆಯಾಗುವುದು. ಮೈಸೂರು ನಗರದ ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯಲ್ಲಿ ಹೀಗಾಗದಂತೆ ಒಂದು ನೂತನ ವಿಧಾನವನ್ನು ಕಂಡುಹಿಡಿದಿದ್ದಾರೆ. ಹೊಸ ಅಕ್ಕಿಯನ್ನು ಬೇಯಿಸುವುದಕ್ಕೆ ಮೊದಲು ಅಕ್ಕಿಯನ್ನು ತಣ್ಣೀರಿನಲ್ಲಿ ಎರಡು ಮೂರು ತಾಸುಗಳ ವರೆಗೆ ಅಥವಾ ಬಿಸು ನೀರಿನಲ್ಲಿ ಅರ್ಧ ಗಂಟೆಯ ವರೆಗೆ ನೆನೆ ಹಾಕಬೇಕು. ಅನಂತರ ಸರಿಯಾಗಿ ನೆನೆದ ಅಕ್ಕಿಯನ್ನು ಜಾಲರಿವುಳ್ಳ ಪಾತ್ರೆಯೊಂದರಲ್ಲಿ ಹಾಕಿ ೧೫ ನಿಮಿಷಗಳ ವರೆಗೆ ಹಬೆಯಾಡಲು ಬಿಡಬೇಕು. ಆ ಮೇಲೆ ಅಕ್ಕಿಯನ್ನು ಕುದಿಯುವ ನೀರಿಗೆ ಹಾಕಿ ಬೇಯಿಸಿದಲ್ಲಿ, ಸುಮಾರು ೧೦ ನಿಮಿಷಗಳಲ್ಲಿ ಅಕ್ಕಿಯು ಚೆನ್ನಾಗಿ ಬೆಂದು ಅನ್ನವಾಗುವುದು. ಇದು ಮುದ್ದೆಯಾಗುವುದಿಲ್ಲ.

೩. ಅಲಂಕರಣ ವಸ್ತುಗಳು

ಡೆಹರಾಡನಿನಲ್ಲಿರುವ ವನಸಂಶೋಧನಾ ಸಂಸ್ಥೆಯಲ್ಲಿ ಬಿದಿರು, ಮಾವು ಮತ್ತು ಶೀಶಂ ಮರಗಳಿಂದ ವಜ್ರಾಕೃತಿಯ ಚಿತ್ರಗಳನ್ನು ತಯಾರಿಸಿದ ಸರಳ ವಿಧಾನದ ಅಲಂಕರಣ ವಸ್ತುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಮರದ ವಜ್ರಾಕೃತಿಯ ಚಿತ್ರಗಳನ್ನೇ ತೊಡಲು ಉಪಯೋಗಿಸಬಹುದು. ಮರದ ಚಕ್ಕೆ ಮತ್ತು ವಿವಿಧ ಬಣ್ಣಗಳ ನಯವಾದ ಲೇಪವನ್ನು ಅಂಟಿಸಿ ಅಲಂಕರಣದ ವಜ್ರಾಕೃತಿಯ ಚಿತ್ರಗಳನ್ನು ರೂಪಿಸಬಹುದು. ಮರದ ವಜ್ರಾಕೃತಿಯ ಚಿತ್ರಗಳನ್ನು ಕೊಠಡಿಗಳ ಗೋಡೆ ಮತ್ತು ನೆಲವನ್ನು ಶೃಂಗರಿಸುವುದಕ್ಕಾಗಿ ಬಳಸಬಹುದಾಗಿದೆ. ಬಿದಿರಿನಿಂದ ತಯಾರಿಸಿದ ವಜ್ರಾಕೃತಿಯ ಚಿತ್ರಗಳನ್ನು ಆಕರ್ಷಕ ಚೌಕಟ್ಟುಗಳು, ಪೆಟ್ಟಿಗೆಗಳು, ಅಲಂಕರಣದ ಪೀಠೋಪಕರಣಗಳು, ಕೈಲುಗಾಡಿ ಮತ್ತಿತರ ವಸ್ತುಗಳನ್ನು ತಯಾರಿಸಲು ಬಳಸಬಹುದಾಗಿದೆ.

ಪ್ರಕಟಣೆ

ಉಡ್ಪಿ ತಾಲ್ಲೂಕು ಮೂಡುತೋನ್ಸೆ ಗ್ರಾಮದ ಸಸಿತೋಟದಲ್ಲಿರುವ ಬೂಬ ಪೂಜಾರಿ ಮಗ ಚೆನ್ನಪ್ಪ ಪೂಜಾರಿಯು ಎಲ್ಲಾ ಜನರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ. ನಾನು ಕೆಲವು ವರ್ಷಗಳ ಹಿಂದೆ ಚಾಂತಾರು ಗ್ರಾಮದಲ್ಲಿ ನನ್ನ ಕುಟುಂಬದ ಮನೆಯಲ್ಲಿದ್ದಾಗ ನನ್ನ ಸೊತ್ತುಗಳನ್ನು ತನ್ನ ಮನೆಗೆ ತಂದು ನಾನು ಅಲ್ಲಿಯೇ ವಾಸ್ತವಿಸಬೇಕೆಂತ ನನ್ನ ತಂದೆ ಬೂಬ ಪೂಜಾರಿ ಹೇಳಿದ ಮೇರೆಗೆ ನಾನು ನನ್ನ ಬಾಬ್ತು ಸುಮಾರು 2000 ರೂಪಾಯಿ ಬೆಲೆಬಾಳುವ ಚರಸೊತ್ತುಗಳನ್ನೂ ಸುಮಾರು 500 ರೂಪಾಯಿ ಬೆಲೆಬಾಳುವ ಚಿನ್ನಾಭರಣಗಳನ್ನೂ ನನ್ನ ತಂದೆಯವರಲ್ಲಿಗೆ ಮೂಡುತೋನ್ಸೆ ಗ್ರಾಮಕ್ಕೆ ಹೋಗಿ ಅವುಗಳನ್ನೆಲ್ಲಾ ಅವರೊಡನೆ ಡಿಪೋಜಿಟು ಮಾಡಿಟ್ಟಿದ್ದೇನೆ ನನ್ನ ತಂದೆಯವರು ನನ್ನನ್ನು ನನ್ನ ತಾಯಿಯನ್ನು ಸಹ ಸದ್ರಿ ಮೂಡುತೋನ್ಸೆ ಗ್ರಾಮದ ಮನೆಯಲ್ಲಿ ಅನ್ನವಸ್ತ್ರ ಕೊಟ್ಟು ಸಾಕುತ್ತೇನೆಂತ ನಂಬಿಸಿದಾಗ್ಯೂ ಅವರು ತನ್ನ ತಮ್ಮ ರಂಗ ಪೂಜಾರಿ ಮತ್ತು ಅಳಿಯಂದಿರು ಜಟ್ಟ ಪೂಜಾರಿ ಮತ್ತು ಕೊಗ್ಗ ಪೂಜಾರಿ ಇವರ ಮಭೋರ್ಧನೆಗೆ ಒಳಪಟ್ಟು ನನ್ನನ್ನು ನನ್ನ ತಾಯಿಯನ್ನು ಮನೆಯಿಂದ ಬಲಾತ್ಕಾರದಿಂದ ದೊರಪಡ್ಸಿರುತ್ತಾರೆ. ಸದ್ರಿ ಮನೆ ಮತ್ತು ತೋಟದಲ್ಲಿ ನನ್ನ ತಾಯಿಗೆ ಅರೆವಾಸಿ ಹಕ್ಕು ಇರುತ್ತದೆ. ನನ್ನ ತಂದೆಯವರು ಸದ್ರಿ ಮನೆ ಮತ್ತು ತೋಟವನ್ನು ಯಾರಿಗಾದರೂ ಪರಾಧೀನಮಾಡಿದರೆ ಅದು ಮಂಜೂರಾಗತಕ್ಕದ್ದಲ್ಲ. ನನ್ನ ಬಾಬ್ತು ಮೇಲ್ಕಾಣಿಸಿದ ಚರಸೊತ್ತುಗಳು ನನಗೆ ನನ್ನ ತಂದೆಯವರು ಕೊಡದೆ ಅದನ್ನು ದಗಪಡಿಸಬೇಕೆಂಬ ಇರಾದೆಯಿಂದ ಅವರು ಪರಾಧೀನಮಾಡುವ ಇರಾದೆಯಲ್ಲಿದ್ದಾರೆ. ಆದ್ದರಿಂದ ಸದ್ರಿ ಆಸ್ತಿಯನ್ನು ಯಾರೂ ಈಡು ಅಡವು ಕ್ರಯ ವಗೈರೆ ಮಾಡಿಕೊಳ್ಳಬಾರದಾಗಿಯೂ ಹಾಗೆ ಮಾಡಿಕೊಂಡರೆ ನನ್ನ ಹಕ್ಕಿಗೂ ನನ್ನ ತಾಯಿಯ ಹಕ್ಕಿಗೂ ಅವು ಬಾಧಿಸತಕ್ಕವುಗಳಲ್ಲವೆಂಬುದನ್ನು ಎಲ್ಲರೂ ತಿಳಿದಿರತಕ್ಕದ್ದು.

ಉಡ್ಪಿ
ತಾ. 7-4-58. } ಚೆನ್ನಪ್ಪ ಪೂಜಾರಿ

ಹರಿಭಕ್ತಿಸಾರ

‘ಮುಕ್ತಿಗೆ ಭಕ್ತಿಯೇ ಕಾರಣ’ ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ ಪ್ರೆಸ್, ಉಡುಪಿ

ಸಾಮಾಜಿಕ ಹಿತರಕ್ಷಣೆಯ ಪ್ರಗತಿ ಮತ್ತು ಭವಿಷ್ಯ--

ಯೋಜನಾ ಆಯೋಗದಿಂದ ಸಮೀಕ್ಷೆ

ಭಾರತ ಸರಕಾರದ ವಿಭಿನ್ನ ಮಂತ್ರಿ ಶಾಖೆಗಳು, ರಾಜ್ಯ ಸರಕಾರಗಳು ಮತ್ತು ಖಾಸಗಿ ಸಂಸ್ಥೆಗಳು ಸಾಮಾಜಿಕ ಹಿತರಕ್ಷಣೆಗಾಗಿ ಏನೇನು ಕಾರ್ಯಕ್ರಮಗಳನ್ನು ನಡೆಸುತ್ತಿವೆಯೋ ಅವುಗಳ ಬಗೆಗೆ ಯೋಜನಾ ಆಯೋಗದವರು ಮೊದಲನೆಯ ಬಾರಿ, ವ್ಯಾಪಕವಾದ ಹಾಗೂ ಸಮನ್ವಿತ ಸಮೀಕ್ಷೆಯನ್ನು ನಡೆಸಲಿರುವರು ಈ ಸಮೀಕ್ಷೆಯು ಒಂದು ಪುಸ್ತಕ ರೂಪದಲ್ಲಿ ಪ್ರಕಟವಾಗುವುದು. ಈ ಪುಸ್ತಕದ ಶೀರ್ಷಿಕೆಯು "೧೯೫೧-೬೧ರಲ್ಲಿ ಭಾರತದಲ್ಲಿ ಸಾಮಾಜಿಕ ಹಿತರಕ್ಷಣಾ ಯೋಜನೆಗಳು ಮತ್ತು ಅವುಗಳ ಭವಿಷ್ಯ' ಎಂದಿರುವುದು.

ಈ ಪ್ರಕಟಣೆಯಲ್ಲಿ ಪ್ರಥಮ ಯೋಜನೆಯು ಆರಂಭವಾದ ಸಮಯದಲ್ಲಿದ್ದ ಸಾಮಾಜಿಕ ಸ್ಥಿತಿಗತಿಗಳು ಹಾಗೂ ೧೯೬೧ರಲ್ಲಿ ದ್ವಿತೀಯ ಯೋಜನೆಯು ಪೂರ್ಣಗೊಂಡ ನಂತರದಲ್ಲಿ ಇರುವ ಸಾಮಾಜಿಕ ಸ್ಥಿತಿಗತಿಗಳು ಇವುಗಳ ಚಿತ್ರಣವಿರುವುದು ಸಾಮಾಜಿಕ ಹಿತರಕ್ಷಣೆಯ ಕೆಲಸದಲ್ಲಿ ಏನೇನು ಅಭಿವೃದ್ಧಿ ಕಾರ್ಯ ನಡೆದಿದೆ, ಯಾವ ರೀತಿಯಲ್ಲಿ ಪ್ರಗತಿ ಸಾಧನೆಯಾಗಿದೆ—ಇವುಗಳ ಒಗೆಗೆ ಅಂದಾಜನ್ನು ಮಾಡಲಾಗುವುದು, ಇದರಿಂದ ಭವಿಷ್ಯದಲ್ಲಿ ಸಾಮಾಜಿಕ ಹಿತರಕ್ಷಣೆ ಕಾರ್ಯಕ್ರಮಗಳನ್ನು ಸಿದ್ಧಗೊಳಿಸಲು ಅನುಕೂಲವಾಗುವುದು

ಪ್ರಸ್ತುತ ಪ್ರಕಟಣೆಯಲ್ಲಿ ನೆರವಾಗಲು, ಯೋಜನಾ ಆಯೋಗದವರು ಸಾಮಾಜಿಕ ಹಿತರಕ್ಷಣಾ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಕೇಂದ್ರ ಸರಕಾರದ ವಿವಿಧ ಮಂತ್ರಿ ಶಾಖೆಗಳ ಪ್ರತಿನಿಧಿಗಳ ಒಂದು ಸಲಹೆಗಾರ ಸಮಿತಿಯೊಂದನ್ನು ನೇಮಿಸಿರುವರು. ಕೇಂದ್ರ ಸಮಾಜ ಕಲ್ಯಾಣ ಮಂಡಲಿಯ ಅಧ್ಯಕ್ಷರಾದ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಈ ಸಮಿತಿಯ ಅಧ್ಯಕ್ಷರಾಗಿರುವರು.

೧೯೫೧—೫೬ರಲ್ಲಿ ಸಾಮಾಜಿಕ ಹಿತರಕ್ಷಣೆ ಕೆಲಸ ಹಾಗೂ ಕಾರ್ಯನೀತಿಯ ಪೂರ್ಣ ವಿವರಣ ಸಾಹಿತ್ಯದ ಸಮೀಕ್ಷೆ ನಡೆಸುವುದರ ಜೊತೆಗೆ, ಈ ಪುಸ್ತಕದಲ್ಲಿ ದ್ವಿತೀಯ ಯೋಜನೆಯ ಅವಧಿಯಲ್ಲಿ ನಡೆದ ಕೆಲಸದ ಸಮೀಕ್ಷೆಯನ್ನೂ ಕೊಡಲಾಗುವುದು ಅದಲ್ಲದೆ ಸುಖೀ ರಾಜ್ಯದ ಗುರಿಯನ್ನು ಸಾಧಿಸಲು ಭವಿಷ್ಯದಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನೂ ಇದು ಸೂಚಿಸುವುದು. ಮುಖ್ಯವಾಗಿ, ಈ ಯೋಜನೆಗಳಲ್ಲಿ ಸ್ತ್ರೀಯರು,ಮಕ್ಕಳು,ಅಶಕ್ತರು, ಉಪೇಕ್ಷಿತರು ಹಾಗೂ ಹಿಂದುಳಿದ ಜನರ ಹಿತರಕ್ಷಣೆಯ ಸಲುವಾಗಿ ಇರುವ ಈ ಯೋಜನೆಗಳ ಕಡೆಗೆ ಮುಖ್ಯ ಗಮನವನ್ನು ಕೇಂದ್ರೀಕರಿಸಲಾಗುವುದು ಈ ಯೋಜನೆಗಳಿಂದ ಭಾರತ ಸಂವಿಧಾನ ಮತ್ತು ಪಂಚವಾರ್ಷಿಕ ಯೋಜನೆಗಳಲ್ಲಿಟ್ಟುಕೊಂಡಿರುವ ಸಾಮಾಜಿಕ ಗುರಿಯನ್ನು ಸಾಧಿಸುವ ಹಾದಿಯಲ್ಲಿ ಎಷ್ಟರಮಟ್ಟಿನ ಪ್ರಗತಿಯಾಗಿದೆಯೆಂಬುದನ್ನು ಅಂದಾಜುಮಾಡಲಾಗುವುದು.

ಈ ಪುಸ್ತಕದ ವಿವಿಧ ಅಧ್ಯಾಯಗಳಲ್ಲಿ ಕೇಂದ್ರದ ಹಾಗೂ. ರಾಜ್ಯ ಸರಕಾರಗಳ ಮೂಲಕ ನಡೆದ ಸಾಮಾಜಿಕ ಹಿತರಕ್ಷಣಾ ಕೆಲಸಗಳು, ಕೇಂದ್ರ ಸಮಾಜಕಲ್ಯಾಣ ಮಂಡಲಿಯ ಹಿತರಕ್ಷಣ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳು ಸ್ವಯಂಸೇವಾ ಸಂಸ್ಥೆಗಳು ಮುಂತಾದವು ನಡೆಸಿದ ಸಾಮಾಜಿಕ ಹಿತರಕ್ಷಣಾ ಕೆಲಸಗಳು ಇತ್ಯಾದಿಗಳ ಸಾಮಾನ್ಯ ಸಮೀಕ್ಷೆಯನ್ನು ನಡೆಸಲಾಗುವುದು ಕೇಂದ್ರ ಹಾಗೂ ರಾಜ್ಯಗಳಲ್ಲಿ ಕ್ಷೇತ್ರ ಹಾಗೂ ಸ್ಥಾನೀಯ ಮಟ್ಟಗಳಲ್ಲಿನ ಸಾಮಾಜಿಕರ ಹಿತರಕ್ಷಣೆ ಸಂಬಂಧ ಪ್ರಶಾಸನ ವಿಧಾನಗಳ ಬಗೆಗೆ ಈ ಪುಸ್ತಕದಲ್ಲಿ ಸಮೀಕ್ಷೆ ಮಾಡಲಾಗುವುದು

ಖಾಸಗಿ ಸಂಸ್ಥೆಗಳಲ್ಲದೆ ಭಾರತ ಸರಕಾರದ ವಿಭಿನ್ನ ಮಂತ್ರಿ ಶಾಖೆಗಳು ಮತ್ತು ರಾಜ್ಯಸರಕಾರಗಳು ಸಾಮಾಜಿಕ ಹಿತರಕ್ಷಣೆ ಕೆಲಸಗಳನ್ನೂ ನಡೆಸುತ್ತಿವೆ ಉದಾಹರಣೆಗೆ ಯುವಜನರ ಮತ್ತು ಅಶಕ್ತರ ಹಿತರಕ್ಷಣೆ ಕೆಲಸವನ್ನು ಶಿಕ್ಷಣ ಮಂತ್ರಿ ಶಾಖೆಯು ನಡೆಸುತ್ತಿದೆ

ಪರಿಶಿಷ್ಟವರ್ಗ ಮತ್ತು ಬುಡಕಟ್ಟಿನ ಜನರ ಹಿತರಕ್ಷಣೆ ಕೆಲಸ, ಸೆರೆಮನೆಗಳಿಂದ ಬಿಡುಗಡೆಯಾದವರು, ಬಾಲಾಪರಾಧಿಗಳು, ಭಿಕ್ಷುಕರು ಮುಂತಾದವರ ಹಿತರಕ್ಷಣೆ ಕೆಲಸವನ್ನು ಗೃಹಮಂತ್ರಿ ಶಾಖೆಯವರು ನಡೆಸುತ್ತಿರುವರು.

ನಾವು ಮತ್ತು ನಮ್ಮ ಬಲ

(೪ನೇ ಪುಟದಿಂದ)

ತಿ ಪಥದಲ್ಲಿ ಮುಂದುವರಿಯುವುದರಲ್ಲಿ ಯಾವ ಸಂದೇಹವೂ ಇಲ್ಲ ಇಂದು ಇದು ಭಾರತದ ವಿಮಾನ ಬಲ ಅಂತೆಯೇ ನಮ್ಮ ವಿಮಾನ ಬಲ. ನಮ್ಮ ದೇಶದ ಯುವಕರು ಇದರಲ್ಲಿ ದೇಶಸೇವಾ ಮನೋಭಾವದಿಂದ ದುಡಿಯುತ್ತಿರುವರು. ಅವರ ಕಾರ್ಯವು ಯಶಸ್ವಿಯಾಗಬೇಕಾದರೆ, ದೇಶದ ಸ್ವಾತಂತ್ರ್ಯವು ಚಿರಂತನವಾಗಿ ಉಳಿಯಬೇಕಾದರೆ, ನಮ್ಮ ವಿಮಾನಬಲವು ವೃದ್ಧಿಯಾಗಿ ಬಲಪಡಬೇಕು. ಈ ಕೆಲಸವನ್ನು ಎಲ್ಲರೂ ಕೈಗೊಳ್ಳಬೇಕು ಜನತೆಯ ಉತ್ತೇಜನ ಹಾರೈಕೆಗಳಿಲ್ಲದೆ ಈ ಕೆಲಸದಲ್ಲಿ ಯಶಸ್ಸು ದೊರೆಯಲಾರದು. ಇದೀಗ ರಜತ ಮಹೋತ್ಸವವನ್ನಾಚರಿಸುತ್ತಿರುವ ವಿಮಾನ ಬಲವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಓದಿ ನಗಬಹುದು

ಅಧ್ಯಾಪಕ--ರಮೇಶ ನೀನು ಶಾಲೆಗೆ ಬರುವುದನ್ನು ಏತಕ್ಕಾಗಿ ಬಿಟ್ಟುಬಿಟ್ಟೆ?

ರಮೇಶ— ಸ್ವಾಮಿ, ಸಂಕಟದಿಂದ ಯಾವಾಗಲೂ ದೂರವಿರಬೇಕೆಂದು ನೀವೇ ಹೇಳಿರುವಿರಲ್ಲಾ? ಆದುದರಿಂದ ..

o o o

ರಾಮು —ಏ, ಮೋಹನ, ನಿನಗೊಂದು ಲಾತಿ ಕೊಟ್ಟುಬಿಟ್ಟೆನೆಂದರೆ, ಇಲ್ಲಿಂದ ನೇರವಾಗಿ ನಿನ್ನ ಮನೆಗೆ ಹೋಗಿ ಬೀಳಬೇಕಾದೀತು,ಎಚ್ಚರದಿಂದ ಮಾತನಾಡು

ಮೋಹನ—ಅಯ್ಯೋ, ಏಕೆ? ಇನ್ನೂ ಸ್ವಲ್ಪ ಜೋರಿನಿಂದ ಲಾತಿಕೊಡು. ನನಗೆ ಎಂಟು ಮೈಲು ದೂರದ ನನ್ನ ಅತ್ತೆ ಮನೆಗೆ ಹೋಗಿ ಬೀಳಬೇಕಾಗಿದೆ. ಬಸ್ಸಿನ ಖರ್ಚಾದರೂ ಉಳಿಯಬಹುದು

o o o

ಯಾತ್ರಿಕ— (ಬುಕ್ಕಿಂಗ್ ಕ್ಲಾರ್ಕ್‌ನೊಡನೆ) ಸ್ವಾಮಿ, ಮಕ್ಕಳಿಗೆ ಅರ್ಧದರದ ಟಿಕಟುಗಳಿವೆ ತಾನೆ?

ಕ್ಲಾರ್ಕ್—ಹೌದು, ಹನ್ನೆರಡು ವರ್ಷಗಳಿಗಿಂತ ಕಡಿಮೆ ಪ್ರಾಯದವರಿಗ ಮಾತ್ರ

ಯಾತ್ರಿಕ—ಹಾಗಾದರೆ, ನನ್ನ ಮಗನಿಗೆ ಈಗ ಎಂಟು ವರ್ಷಗಳು ಮಾತ್ರ ತುಂಬಿವೆ.

oo oo

ತಂದೆ - (ಆಗತಾನೇ ಪರೀಕ್ಷೆ ಮುಗಿಸಿ ಬಂದ ನರೇಂದ್ರನೊಡನೆ) ಏನೋ ನರೇಂದ್ರ, ಕನ್ನಡದ ಪ್ರಶ್ನಪತ್ರಿಕೆ ಹೇಗಿತ್ತು?

ನರೇಂದ್ರ— ಪತ್ರಿಕೆಯೇನೋ ಒಳ್ಳೆಯದಿತ್ತು ಆದರೆ, ಅವುಗಳ ಉತ್ತರ ಮಾತ್ರ ಕಠಿಣವಾಗಿತ್ತು

oo oo

ಪೋಲೀಸಿನವನು— (ಮೋಟಾರು ಚಾಲಕನೊಡನೆ) ಏನೋ, ರಾತ್ರೆ ದೀಪ ಹಾಕದೆ ಏಕೆ ಗಾಡಿಯನ್ನು ಬಿಡುತ್ತಿ? ಸ್ಟೇಶನಿಗೆ ಹೋಗೋಣ ನಡೆ

ಚಾಲಕ—ಸ್ವಾಮಿ ಕ್ಷಮಿಸಬೇಕು. ರಾತ್ರೆ ದೀಪಕ್ಕೆ ತುಂಬ ಪತಂಗಗಳು ಮುತ್ತುತ್ತಿರುತ್ತವೆ ಇದರಿಂದಾಗಿ ದಾರಿ ಕಾಣದೆ, ದುರ್ಘಟನೆಗಳು ಸಂಭವಿಸಬಾರದೆಂದು ಹಾಗೆ ಮಾಡಿದೆ, ಅಷ್ಟೆ

oo oo

ಒಬ್ಬ ಮಡಿವಾಳನು ಸಮಾಚಾರ ಪತ್ರವನ್ನು ಓದುತ್ತಿದ್ದವನೊಡನೆ ಕೇಳಿದನು— ಅದರಲ್ಲಿ ಏನು ಬರೆದಿದೆ?

ಅವನು — ಪ್ರಪಂಚದ ಸುದ್ದಿಯೆಲ್ಲವೂ ಇದರಲ್ಲಿದೆ

ಮಡಿವಾಳ— ಹಾಗಾದರೆ, ನನ್ನ ಕತ್ತೆ ಎಲ್ಲಿದೆ ಎಂದು ಓದಿ ಹೇಳಪ್ಪ, ನಿನ್ನೆ ತಾನೇ ತಪ್ಪಿಸಿಕೊಂಡು ಹೋಗಿದೆ

oo oo

ತಾಯಿ—ಮಗು, ನಿನಗೆಂತಹ ಶಾಲೆಯು ಇಷ್ಟವಾಗಿದೆ?

ಮಗು—ಅಮ್ಮಾ, ವಾರದಲ್ಲಿ ಕೇವಲ ಏಳೇ ದಿನ ರಜೆಯಿರುವಂತಹ ಶಾಲೆ!

oo oo

ತಂದೆ—ಗೋಪಾಲ, ನೀನು ಬೀಡಿ ಸೇದುವುದನ್ನು ನಿಲ್ಲಿಸಿ ಬಿಡಬೇಕು.

ಗೋಪಾಲ—ಹಾಗಾದರೆ, ನಾನೂ ನಿನ್ನಂತೆಯೇ ಸಿಗರೇಟು ಸೇದಲು ಪ್ರಾರಂಭಿಸಲೆ?

oo oo

ಯಾತ್ರಿಕ—(ಕೋಪದಿಂದ) ಏನಿದು ಸ್ವಾಮಿ, ನನ್ನ ಕೋಣೆಯ ಮಾಡಿನೆಡೆಯಿಂದ ಪದೇ ಪದೇ ನೀರು ಸುರಿಯುತ್ತಿದೆ ಇದಕ್ಕೂ ಬಾಡಿಗೆ ಕೊಡಬೇಕೇನು?

ಹೋಟೇಲು ಮಾಲಿಕ ಯಾಕೆ ಬೇಸರಿಸುತ್ತೀರಿ? ನಾನು ನಿಮಗೆ ಮೊದಲೇ ಹೇಳಿಲ್ಲವೆ, ಎಲ್ಲ ಕೋಣೆಗಳಲ್ಲಿಯೂ ಪರಿಶುದ್ಧ ನೀರಿನ ವ್ಯವಸ್ಥೆ ಮಾಡಲಾಗಿದೆ ಎಂದು?

o o o

ಒಬ್ಬ—ನನ್ನ ತಂದೆಯವರು ಒಂದು ಲಕ್ಷ ರೂಪಾಯಿಗಳನ್ನು ಬಿಟ್ಟು ಸತ್ತು ಹೋದರು

ಇನ್ನೊಬ್ಬ—ಅಷ್ಟೆಯೆ, ನನ್ನ ತಂದೆ ಅಖಂಡ ಪ್ರಪಂಚವನ್ನೇ ಬಿಟ್ಟು ಹೋಗಿದ್ದಾರೆ!

ಜನ ಪ್ರಿಯಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್ ಐ ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಬೆಲೆ ರೂ ೨—೦—೦ (ಟ ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕ,ನರಕ	3=00
ಪಂಚಮುಖಿ	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು ಇಂದು ನಾಳೆ	3=00
ಸಮೀಕ್ಷೆ	2=00
ಮೈಲುಕಲ್ಲಿನೊಡನೆ ಮಾತುಕತೆಗಳು	1=50
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ತಕ್ಕ ಪ್ರತಿಫಲ ಪಡೆಯಿರಿ.

ಪ್ರಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಅಂಬಿಗರ ಗಂಗೆ (ಜಾನಪದ ಕಥನ ಗೀತಗಳು) ಕಲೆ ಹಾಕಿದವ: ಕ. ರಾ. ಕೃ. ಪ್ರಕಾಶಕರು: ಕಾವ್ಯಾಲಯ ಪ್ರಕಾಶನ, ಜಯಲಕ್ಷ್ಮೀಪುರಂ, ಸರಸ್ವತೀ ಪುರಂ, ಮೈಸೂರು. ಪುಟಗಳು. ೮+೧೦೨ ಬೆಲೆ ರೂ ೧-೦೦.

ಕನ್ನಡದ ಮಕ್ಕಳ ನಾಲಗೆಯ ತುದಿಯಲ್ಲಿ ಕಾಣೆ ಕಾಣದಾಗುತ್ತಿರುವ ಜನಪದ ಗೀತೆಗಳನ್ನು ಜಿಜ್ಞಾಸುವಾಗಿ ಸಂಗ್ರಹಿಸುವ ಶ್ರೀ ಕ. ರಾ. ಕೃ ರವರ ಸಾಹಸದಲ್ಲಿ 'ಅಂಬಿಗರ ಗಂಗೆ' ಮೂರನೆಯದಾದುದು. ಈ ಸಂಗ್ರಹವು ಕೇವಲ ಗೀತೆಗಳ ತೊಂಗಲಾಗಿರದೆ ಕಥನ ಗೀತೆಗಳ ಗೊಂಚಲಾಗಿದೆ. ಮನೆಯಲ್ಲೊಬ್ಬ ಅಜ್ಜಿಯಿದ್ದ ಪಕ್ಷದಲ್ಲಿ ರಾತ್ರೆ ಹೊತ್ತು ಇಂತಹ ಹಲವಾರು ಜನಪದ ಕಥನ ಗೀತೆಗಳನ್ನು ಆಕೆಯ ಬಾಯಿಂದಲೇ ಕೇಳಬಹುದು. ಸಾಹಿತ್ಯ ಪ್ರಕಾರಗಳಲ್ಲಿ ಕಥೆಗೂ ಒಂದು ಪ್ರಮುಖ ಸ್ಥಾನವಿದೆ. ಈ ಕಥನ ಕೃತಿಗಳಿಂದಲೇ ಸಾಹಿತ್ಯವು ಹುಟ್ಟಿಕೊಂಡಿತು. ಕಾವ್ಯಗಳಲ್ಲಿ ಪ್ರಮುಖ ಪ್ರಕಾರವಾದ ಗದ್ಯ ಪದ್ಯ ಹಾಗೂ ನಾಟಕಗಳಲ್ಲಿವುಗಳಿಗೂ ಈ ಕಥೆಯೇ ಆಧಾರವಾಗಿದೆ. ಹಾಗೆಯೇ ಜನಪದ ಕಥೆಯೂ ಇತರ ಸಾಹಿತಿಕ ಕಥೆಗಳಂತೆಯೇ ಜನಜೀವನದ ಸತ್ಯ ಚಿತ್ರವನ್ನು ತಿಳಿಯಪಡಿಸುತ್ತವೆ. ಜನತೆಯ ಮನಸ್ಸಿಗೆ ಮೊತ್ತಮೊದಲಿಗೆ ನಾಟುವ ಮತ್ತು ಸ್ಮರಣದಲ್ಲಿ ಉಳಿಯುವ ವಿಷಯವೆಂದರೆ ಕಥೆಗಳೇ.

ಜನಪದ ಕಥನ ಗೀತೆಗಳಲ್ಲಿಯೂ ಇತರ ಕಾವ್ಯಗಳಲ್ಲಿಯೂ ಸಮಾಜದ ಚಿತ್ರಣವನ್ನು ಒಳ್ಳೆಯ ರೀತಿಯಲ್ಲಿ ವರ್ಣಿಸಲಾಗುತ್ತಿದೆ. ಸೊಗಸಾದ ಪೌರಾಣಿಕ ಸನ್ನಿವೇಶಗಳನ್ನೋ, ಜೀವನದ ಯಾವುದಾದರೂ ಒಂದು ಘಟನೆಯನ್ನೋ, ತಾವು ಕಂಡು ಕೇಳಿದ ವಿಷಯವನ್ನೋ ಸುಂದರವಾಗಿ ಗೀತೆಗಳಲ್ಲಿ ಹಾಡಿದ್ದಾರೆ. ಇಂತಹ ಒಟ್ಟು ೩೪ ಕಥನ ಗೀತೆಗಳು ಇಲ್ಲಿ ಸಂಗ್ರಹಿತವಾಗಿವೆ. ಇಲ್ಲಿನ ಕೆಲವಾರು ಪದಗಳು ಕೋಲಾಟದ ವೇಳೆಯಲ್ಲಿ, ಬೀಸುವಲ್ಲಿ, ಗದ್ದೆಯಲ್ಲಿ ದುಡಿಯುತ್ತಿರುವಾಗ, ಹಾಡಿಕೊಳ್ಳಲು ಯೋಗ್ಯವೇ ಆಗಿದೆ. ಬೇಸರವನ್ನು ಹೋಗಲಾಡಿಸುವಲ್ಲಿ ಇಂತಹ ಪದಗಳನ್ನು ಹಾಡಿಕೊಳ್ಳಲು ಅನುಕೂಲವಾಗಿವೆ. ಅಂಬಿಗರ ಗಂಗ, ಚುಂಚನಗಿರಿ ಗೀತೆಗಳು, ನಾನ್ಹೇಗೆ ಬರಲೋ ತೌರೀಗೆ, ಮಳೆರಾಯ ಮೂಡ್ಲಣ್ಣ ಸೋನೆ ಮಳೆಯಾಗಿ ಸುರಿದಾವು, ಜವರಾಯ ಬಂದನು, ಹೊನ್ನಮ್ಮನಂತ ಸೊಸೆಬೇಕು, ಇತ್ಯಾದಿ ಗೀತೆಗಳು ರಮಣೀಯವಾಗಿವೆ. ಮುನ್ನುಡಿಯಲ್ಲಿ ಶ್ರೀ ರಾ. ವೆಂ. ಶ್ರೀನಿವಾಸರೆಂದಂತೆ "ಜನಪದ ಸಾಹಿತ್ಯ ಮಹಾಸಾಗರದಲ್ಲಿ ಈ ರೀತಿಯ ಸಹಸ್ರಾರು ಅನರ್ಘ್ಯ ಮುತ್ತು ರತ್ನಗಳಿವೆ. ಇದುವರೆಗೆ ಸಂಗ್ರಹಿಸಿರುವ ಸಂಪತ್ತನ್ನು ಇನ್ನೂ ಸಂಪಾದಿಸಬೇಕಾಗಿರುವ ಸಂಪತ್ತಿನೊಡನೆ ಹೋಲಿಸಿ ನೋಡಿದರೆ, ಆಗಿರುವ ಕೆಲಸ ಅತ್ಯಲ್ಪವಾದರೂ ಅತೀವ ಶ್ರಮಪೂರ್ವಕವಾಗಿ ಸಮಾಧಾನಕ್ಕೊಂದು ಸ್ಫೂರ್ತಿಯನ್ನು ತಂದೀಯುವಂತೆ ಕಾರ್ಯಶೀಲರಾದ ಶ್ರೀ ಕ. ರಾ. ಕೃ. ರವರು ಕನ್ನಡಿಗರ ಕೃತಜ್ಞತಾರ್ಹರು. ಇದರಲ್ಲಿ ಹಲವಾರು ಚಿತ್ರಗಳೂ ಕೂಡಿಕೊಂಡಿವೆ. ಈ ಸಂಗ್ರಹದಲ್ಲಿರುವ ಎಲ್ಲ ಕಥನಗಳು ಉತ್ತಮವೆಂದು ಹೇಳುವುದು ಅಸಾಧ್ಯವಾದರೂ ಪೊಳ್ಳು ಜಳ್ಳುಗಳು ಮಿಶ್ರಿತವಾಗಿರುವುದು ಸಹಜವಾದರೂ, ಇವುಗಳನ್ನು ಒಂದೆಡೆಯಲ್ಲೇ ಸೇರಿಸುವ ಮಹಾ ಕಾರ್ಯವನ್ನು ಕೈಗೊಂಡ ಈ ಸಾಹಸವನ್ನು ಪ್ರಶಂಸಿಸುತ್ತೇವೆ. ಗ್ರಾಮ ಕಾವ್ಯಗಳಲ್ಲಿ ಅಭಿರುಚಿಯನ್ನು ಹೊಂದಿದವರಿಗೆ ಇದೊಂದು ಸವಿಯೂಟವಾಗಿದೆ. ಸುಂದರ ಕಥೆಗಳನ್ನು ಭಾವನಾಪೂರ್ಣವಾಗಿ ಸುಂದರವಾಗಿ ಹೃದಯಂಗಮವಾಗಿ ನಿರೂಪಿಸಲಾಗುವ ಈ ಕಥನ ಗೀತೆಗಳನ್ನು ಹಾಡಿ ಮನಸ್ಸಂತೋಷಪಡಬೇಕು.

ಈ ಜನಪದ ಕಥನ ಗೀತೆಗಳ ಸಂಗ್ರಹವನ್ನು ಶ್ರೀ ಡಿ. ಆರ್. ರಾಮಯ್ಯನವರಿಗೆ ಅರ್ಪಿಸಿದವರು ಅರ್ಪಿಸಿದ್ದಾರೆ. ಶ್ರೀ ತಿಪ್ಪೇಸ್ವಾಮಿಯವರು ಬರೆದ ಮುಖಚಿತ್ರ ತೃಪ್ತಿಕರವಿದೆ.

ದಕ್ಷಿಣ ಧ್ರುವವನ್ನು ಪಾದಯಾತ್ರೆಯಿಂದ ಸೇರಿದ ಬ್ರಿಟಿಷ ಟ್ರಾನ್ಸ್ ಅಂಟಾರ್ಕಟಿಕ ಪಂಗಡವನ್ನು ನ್ಯೂಜಿಲೇಂಡಿನ ಗುಂಪಿನ ನಾಯಕ ಶ್ರೀ ಎಡ್ಮಂಡ್ ಹಿಲರಿಯವರು ದ. ಧ್ರುವದಲ್ಲಿ ಸ್ವಾಗತಿಸುತಿದ್ದಾರೆ. ಶ್ರೀ ಎಡ್ಮಂಡ ಹಿಲರಿಯವರು ಬ್ರಿಟಿಷ ಪಂಗಡವಿಂದ ಮೊದಲೇ ತಮ್ಮ ಗುರಿ ಸೇರಿದ್ದರು

ಗೋವಿಜಯ— ಲೇಖಕರು: ಕೆ. ಮುಖ್ಯಪ್ರಾಣ ಉಪಾಧ್ಯಾಯ. ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ. ಪುಟಗಳು ೩೦ ಬೆಲೆ ೦-೮-೦

ನಮ್ಮ ನಾಡಿನ ಜನತೆಯ ಮನಸ್ಸಿನಲ್ಲಿ ಬಲವಾಗಿ ನೆಟ್ಟುಹೋದ ನೀತಿಬೋಧಕ ಕಥೆಗಳಲ್ಲಿ ಗೋವಿನ ಕಥೆಯೂ ಒಂದು. ಶಾಲೆಗೆ ಹೋಗುವ ಮಕ್ಕಳಿಗೆ ಎಲ್ಲವುಗಳಿಗಿಂತ ಮೊದಲೇ ಈ ಕಥೆಯನ್ನು ಕಲಿಸಿ ಸತ್ಯವಚನಕ್ಕೆ ತಪ್ಪಿನಡೆದರೆ ಮೆಚ್ಚನಾ ಜಗದೀಶನು ಎಂದು ಹೇಳಿಕೊಡಲಾಗುತ್ತದೆ. ಪ್ರಕೃತ, ಗೋವಿಜಯ ಎನ್ನುವುದು ಗೋವಿನ ಕಥೆಯ ಇನ್ನೊಂದು ರೂಪ. ನುರಿತ ಅಧ್ಯಾಪಕರಾದ ಶ್ರೀ ಕೆ. ಮುಖ್ಯಪ್ರಾಣ ಉಪಾಧ್ಯಾಯರು ಕೆಲವು ವರ್ಷಗಳಿಗೆ ಪೂರ್ವದಲ್ಲಿಯೇ ಬರೆದ ಈ ಕಥೆಯು ಇದೀಗ ದ್ವಿತೀಯ ಮುದ್ರಣ ಕಂಡಿದೆ.

ಯಕ್ಷಗಾನವು ಜನಮನದಲ್ಲಿ ದೃಢವಾಗಿ ನೆಲೆಯೂರಿರುವಾಗ, ಯಕ್ಷಗಾನ ರೂಪದಲ್ಲಿಯೇ ಈ ಕಥೆಯನ್ನು ಬಟ್ಟಿಇಳಿಸಿದ್ದಾರೆ ಲೇಖಕರು. ಚಿಕ್ಕ ಮಕ್ಕಳ ಆಸಕ್ತಿಯನ್ನು ಸಂಪಾದಿಸುವುದಕ್ಕಾಗಿ ಬರೆದ ಈ ಗ್ರಂಥದಲ್ಲಿ ಪದ್ಯಗಳನ್ನು ಬರೆದು, ಅವುಗಳಿಗೆ ಸುಲಭವಾದ ಶೈಲಿಯಲ್ಲಿಯೇ ಅರ್ಥವನ್ನು ವಿವರಿಸಿದ್ದಾರೆ. ಬಯಲಾಟಕ್ಕನುಗುಣವಾದ ರೀತಿಯಲ್ಲಿಯೇ ಈ ಪ್ರಸಂಗವನ್ನು ಬರೆದಿದ್ದು, ರಂಗಭೂಮಿಗೆ ತರುವುದಕ್ಕೂ ಯೋಗ್ಯವಾಗಿಯೇ ಇದೆ. ಪುಣ್ಯಕೋಟಿಯು ಹುಲಿಯನ್ನು ಪುನಃ ಭೇಟಿಯಾದಾಗ ಹುಲಿಯು ಎತ್ತರ ಪರ್ವತದ ತುದಿಯಿಂದ ಧರೆಗೆ ಹಾರಿ ತನ್ನ ಪ್ರಾಣವನ್ನು ಕಳೆದುಕೊಂಡ ಕಥೆಯನ್ನು ಇಲ್ಲಿ ಪರಿವರ್ತಿಸಿ, ಹುಲಿಗೆ ಶಾಸ್ತ್ರೀಯ ರೀತಿಯಲ್ಲಿ ಚತಾಪ್ರವೇಶವನ್ನು ಮಾಡಿಸಲಾಗಿದೆ. ತುಂಡ, ಸೋಮನ ಹಾಸ್ಯ, ಅಂಬಿಗನ ಪದ್ಯ, ಹುಲಿಯ ಮನಃ ಪರಿವರ್ತನೆ, ಪುಣ್ಯಕೋಟಿ ಮತ್ತು ಕರುಗಳ ಸಂಭಾಷಣೆ ಇವೆಲ್ಲವೂ ಸುಂದರವಾಗಿಯೇ ಚಿತ್ರಿತವಾಗಿರುತ್ತವೆ. ಇಂತಹ ಬದಲಾವಣೆಯನ್ನು ಮಾಡಿಕೊಂಡಿರುವುದರಿಂದ ಮೂಲಕಥೆಗೂ ಯಾವ ಧಕ್ಕೆಯೂ ತಟ್ಟಿದಂತಿಲ್ಲ.

ಈ ಪುಸ್ತಕದಲ್ಲಿನ ಸುಮಾರು ೮೦ ಪದ್ಯಗಳಲ್ಲಿ ಹೆಚ್ಚಿನವು ಭಾಮಿನೀ ಷಟ್ಪದಿಯ ರೂಪದಲ್ಲಿವೆ. ಯಕ್ಷಗಾನದಲ್ಲಿ ಸಪ್ತ ತಾಳಗಳು ಸಪ್ತ ರಾಗಗಳನ್ನು ಅಳವಡಿಸಿಕೊಳ್ಳುವ ಹವ್ಯಾಸಕ್ಕೆ ಲೇಖಕರು ಹೋಗಿಲ್ಲ; ಮಕ್ಕಳಿಗೆ ಅವುಗಳ ಅರಿವು ಚೆನ್ನಾಗಿ ಆಗಲಾರದೆಂಬ ದೃಷ್ಟಿಯಿಂದ ಹೀಗೆ ಮಾಡಿರಲೂ ಬಹುದು. ಶ್ರೀಯುತ ಉಪಾಧ್ಯಾಯರ ಶೈಲಿ, ಚಿಕ್ಕ ಮಕ್ಕಳಿಗೆ ಅರ್ಥವಾಗಲು, ಅಭ್ಯಾಸಮಾಡಲು ಸರಿಯಾಗಿಯೇ ಇದೆ. ಹಳೆಯ ಕಥೆಯಾದರೂ ಶಾಲೆಗಳಲ್ಲಿ ಅಭಿನಯಿಸಲು ಇದು ಸುಯೋಗ್ಯವೇ ಆಗಿದೆ ಎನ್ನಬಹುದು.

ಕಲ್ಪನೆಯ ಕನಸು— ಬರೆದವರು: ಶ್ರೀ ಕೆ. ಜಿ ಶೆಟ್ಟಿ ಪ್ರಕಾಶಕರು. ಸರಸ್ವತೀ ಸಾಹಿತ್ಯಮಾಲೆ, ಕಡಂದಲೆ, ದ. ಕ. ಪುಟಗಳು ೫೦ ಬೆಲೆ: ೦-೧೦-೦

ಕಲ್ಪನೆಯ ಕನಸು ಒಂದು ಕಥಾಸಂಕಲನ. ಇದರಲ್ಲಿ ಸ್ವಪ್ನದಲ್ಲಿ ಮುಖ ಚುಂಬಿಸ ಹೋಗಿ ದೀಪದ ಬರುಡೆಯನ್ನು ಮುತ್ತಿಟ್ಟ "ಮೀಸೆ ಕಳೆದುಕೊಂಡ ಕನಸು", ಪತಿಯ ಆಸಕ್ತಿಯಿಂದಾಗಿ ತನ್ನ ಪ್ರಾಣವನ್ನೇ ಕಳೆದುಕೊಂಡ ಧೀರೆ ಲಲಿತೆಯ "ಬೇಡವಾದ ಬದುಕು", ಆಧುನಿಕನಾಗಲು ಹವಣಿಸಿ, ಧಾರಣೆಯಿಂದ ಹಾಸಿಗೆ ಹಿಡಿಸಿದುದರಿಂದ ದೂರವಾಗಲೇಬೇಕಾದ 'ನನ್ನ ಮೆಟ್ಟು', ಹೆಣ್ಣು ಮಕ್ಕಳ ಮದುವೆಗಾಗಿ ಗಂಡು ಮಕ್ಕಳನ್ನು ಸಂಬಳ ಮನೆ ಅಡವಿಗೆ ಹಾಕಿ ಮನೆ ಕಳೆದುಕೊಳ್ಳುವಂತಾದ ಪಂಕಪ್ಪ ಸೆಟ್ಟರ 'ಮಕ್ಕಳ ಮದುವೆ', ಸಾಹಿತ್ಯ ಸೇವೆಯಲ್ಲಾದ ವಿಜಯವನ್ನು ಆತನ ಮಿತ್ರ ಶ್ರೀನಾಥನನ್ನು ಅಭಿನಂದಿಸುವ "ಗೆಳೆಯನ ಓಲೆ", ಲೇಖನದಿಂದ ಪರಿಚಯ ಬೆಳೆದು, ಲೇಖಕರನ್ನು ವಿವಾಹವಾಗಲು ಬಯಸಿ ಕೊನೆಗಾತ ವಿವಾಹಿತನೆಂದು ತಿಳಿದಮೇಲೆ ಮಾತೆತ್ತದ ಕುಮಾರಿ ಶಾಲಿನಿಯ 'ಕಲ್ಪನಾ ರಾಜ್ಯ', ಎರಡನೆ ಮದುವೆಯಾದ ತಂದೆಯಿಂದ ವಂಚಿತನಾದೊಬ್ಬ ಹುಡುಗನ 'ಉದರ ನಿಮಿತ್ತಂ ಬಹುಕೃತ ವೇಷಂ' ಎಂಬ ಏಳು ಕಥೆಗಳು ಸಂಗ್ರಹಿತವಾಗಿವೆ.

ಇಲ್ಲಿ ಬರುವ ಕಥೆಗಳೆಲ್ಲವೂ ಸಾಮಾನ್ಯವಾಗಿಯೇ ಇವೆ. 'ಗೆಳೆಯನ ಓಲೆ'ಯು ತೀರ ಸಾಮಾನ್ಯವಾದ ಬರಹ. ಉಳಿದುವಲ್ಲಿ 'ಮೀಸೆ ಕಳೆದುಕೊಂಡ ಕನಸು' ಮತ್ತು 'ಕಲ್ಪನಾ ರಾಜ್ಯ' ಉತ್ತಮವಿವೆ. ಚಿಕ್ಕ ಕಥೆಗಳಲ್ಲಿರಬೇಕಾದ ಕೆಲವೊಂದು ಗುಣಗಳನ್ನಾದರೂ ಇವು ಉಳಿಸಿಕೊಂಡಿವೆ ಅಂತೂ ಓದೋಣವೆನಿಸುತ್ತದೆ. 'ಬೇಡವಾದ ಬದುಕು' 'ಮಕ್ಕಳ ಮದುವೆ' 'ಉದರನಿಮಿತ್ತಂ ಬಹುಕೃತವೇಷಂ'_ ಇವೇನೂ ಹೊಸ ಸನ್ನಿವೇಶಗಳಿಂದ ಕೂಡಿಕೊಂಡಿಲ್ಲ 'ನನ್ನ ಮೆಟ್ಟು' ಒಂದು ಎಲ್ಲರಿಗೂ ತಿಳಿದ ಸಾಮಾನ್ಯವಾದ ನಗೆಯಾಟವಾದರೂ ಕೊನೆಯು ಅಸಂಭಾವ್ಯವೇ ಎನ್ನಬಹುದು.

ಭಾಷೆ ಮತ್ತು ಶೈಲಿ ತೃಪ್ತಿಕರವಾಗಿಯೇ ಇವೆ. ಸಣ್ಣ ಕಥೆಗಳಲ್ಲಿ ಅವಶ್ಯವಾಗಿರಬೇಕಾದ ಘಟನಾ ಪ್ರಾಧಾನ್ಯ ಹಾಗೂ ಓಟಕ್ಕೆ ಸ್ಥಾನವನ್ನು ಕಲ್ಪಿಸಬೇಕು. ಭಾವನಾಪೂರ್ಣವಾದ ಉದ್ದುದ್ದ ವಾಕ್ಯಗಳನ್ನು ಬರೆಯಲೆಳಸುವುದು ಕಥೆಯ ಓಟಕ್ಕೆ ತಡೆಯನ್ನುಂಟು ಮಾಡುವುದು. ಲೇಖಕರು ನಿತ್ಯ ನವೀನವಾದ ಬಾಳಿನ ಎಲ್ಲೆಡೆಯನ್ನೂ ಸಂಚರಿಸಿದ ವಿಶೇಷ ಅನುಭವವುಳ್ಳವರೆಂದು ಈ ಕಥೆಗಳಿಂದ ತಿಳಿಯುತ್ತದೆ. ಅಂತಹ ಲೇಖಕರಿಂದ 'ಕಲ್ಪನೆಯ ಕನಸಿ'ಗಿಂತಲೂ ಅತ್ಯುತ್ತಮವಾದ ಕಥಾಸಂಕಲನವು ಹೊರಬರಲೆಂದು ಕನ್ನಡಿಗರು ನಿರೀಕ್ಷಿಸಿದರೆ ತಪ್ಪೇನು?

ಶ್ರೀ ಕೆ ಗೋವಿಂದ ಶೆಟ್ಟರ ಮುಖಚಿತ್ರ ಒಳ್ಳೆಯದಿದೆ ಮುದ್ರಣ ಕಾಗದ ತೃಪ್ತಿಕರವಿವೆ. ಹೊಸತಾಗಿ ಸಾಹಿತ್ಯ ಸೇವೆಗೆ ಸೊಂಟಕಟ್ಟಿದ ಸರಸ್ವತೀ ಸಾಹಿತ್ಯ ಮಾಲೆಯು ಬೆಳೆದು ಬರಲೆಂದು ಈ ಸಂದರ್ಭದಲ್ಲಿ ಹಾರೈಕೆ

—ಗೋರಾ



ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು. ಷಾ ಕಂಪೆನಿ, ಮಂಗಳೂರು—1.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ್, ಎಂ. ಬಿ ಬಿ. ಎಸ್.)

ಭೌತಿಕ ದರ್ಶನ
(ಬಡಕ್ಕಿಲ ಕೃಷ್ಣ ಭಟ್ಟ, ಎಲ್. ಎಲ್. ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ದಿನಕರನ ಭಾಗ್ಯೋದಯ

(೨ನೇ ಪುಟದಿಂದ)

ದ ಆರು ಮಂದಿ ಮಕ್ಕಳನ್ನು ಮೃತ್ಯುದೇವತೆ ಬಲಿಗೊಂಡಿದ್ದಳು. ಆದ್ದರಿಂದ ಈ ಚಿಕ್ಕ ಹುಡುಗನನ್ನು ಬಹು ಮಮತೆಯಿಂದ ನೋಡುತ್ತಿದ್ದರು. ಸುರೇಶನನ್ನು ಬೆಳಗ್ಗೆ ಸಮಯಕ್ಕೆ ಸರಿಯಾಗಿ ಶಾಲೆಗೆ ಕರೆದುಕೊಂಡು ಹೋಗುವುದು, ಸಂಜೆ ಕರೆತರುವುದು – ಇದೇ ದಿನಕರನ ಪಾಲಿನ ಕೆಲಸ. ಈ ಸಮಯದಲ್ಲಿ ದಿನಕರನಿಗೂ ತನ್ನ ವಿದ್ಯಾಭ್ಯಾಸ ಮುಂದರಿಸಲು ಅಯ್ಯಂಗಾರರು ಅನುಕೂಲ ಮಾಡಿಕೊಟ್ಟರು. "ರೋಗಿ ಬಯಸಿದ್ದೂ ಹಾಲು ವೈದ್ಯ ಕೊಟ್ಟದ್ದೂ ಹಾಲು." ದಿನಕರನ ಬಹುದಿನದ ಕನಸಿಂದು ನನಸಾಯಿತು. ತನ್ನ ಭವಿಷ್ಯತ್ತಿಗೆ ದಾರಿದೋರಿದ ಅಯ್ಯಂಗಾರರ ಮೇಲೆ ಒಂದು ರೀತಿಯ ಭಕ್ತಿ ದಿನಕರನಲ್ಲಿ ಉಂಟಾದುವು. ದಿನಗಳು ಉರುಳಿದುವು. ಕೇಶವ ಅಯ್ಯಂಗಾರರಿಗೆ ದಿನಕರನಲ್ಲಿ ಮಮತೆ ಹೆಚ್ಚಾಯಿದುವು. ದಿನಕರನಿಗೂ ಅಯ್ಯಂಗಾರರ ಮೇಲಿನ ಭಕ್ತಿ ಅಭಿಮಾನ ಹೆಚ್ಚಿದುವ.

ದಿನಕರನು ಅಯ್ಯಂಗಾರರ ಪೂರ್ಣ ನೆರವಿನಿಂದ ಬಿ. ಎ ಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸುಮಾಡಿದ್ದನು. ಅಯ್ಯಂಗಾರರು ದಿನಕರನನ್ನು ಮಗನಂತೆ ನೋಡುತ್ತಿದ್ದುದಲ್ಲದೆ ಅವನಿಗೆ ತಿಳಿಯದಂತೆ ಅವನ ತಾಯಿಗೆ ಪ್ರತಿ ತಿಂಗಳೂ ೨೫ ರೂಪಾಯಿಗಳನ್ನು ಕಳಿಸುತ್ತಿದ್ದರ. ದಿನಕರನನ್ನು ಒಬ್ಬ ಪ್ರಮುಖ ವಕೀಲನನ್ನಾಗಿ ಮಾಡಬೇಕೆಂಬುದು ಅಯ್ಯಂಗಾರರ ಅಪೇಕ್ಷೆಯಾಗಿತ್ತು. ಅಂತೆಯೇ, ಎಂ ಎ ಗೆ ಓದಿಸಿದರು ಅವರ ಎಣಿಕೆಯಂತೆ ದಿನಕರ ಇದರಲ್ಲೂ ಮೊದಲ ಶ್ರೇಣಿಯಲ್ಲೇ ತೇರ್ಗಡೆಯಾದನು. ತಡಮಾಡದೆ ಅವನನ್ನು ಲಾ ಕಾಲೇಜಿಗೆ ಸೇರಿಸಿದರು. ಅಲ್ಲಿ ಕೂಡಾ ದಿನಕರನು ಉತ್ತಮ ಪ್ರಶಸ್ತಿ ಪಡೆದು ಹೊರಬಿದ್ದನು. ದಿನಕರನು ಎಂ ಎ. ಬಿ ಎಲ್. ಮುಗಿಸಿ ಬಂದೊಡನೆ ಅಯ್ಯಂಗಾರರು ಭಾರಿ ದೊಡ್ಡ ಔತಣವೇರ್ಪಡಿಸಿದರು. ಅಧ್ಯಾಪಕ ವಕೀಲರನ್ನು ಆಮಂತ್ರಿಸಿ ದಿನಕರನ ಪರಿಚಯ ಮಾಡಿಸಿದರು. ಅಂತೂ ಅಯ್ಯಂಗಾರರ ಆಶೆ ಫಲಿಸಿತು. ದಿನಕರನ ಜೀವನ ಪುಷ್ಪವು ವಿಕಸಿಸಿತು.

ಇಂದಿನ ದಿನಕರನೆಂದರೆ ಹತ್ತು ವರ್ಷ ಹಿಂದಿನ ಹೋಟೇಲು ಕೂಲಿಯಲ್ಲ. ಬ್ಯಾರಿಸ್ಟರ್ ದಿನಕರರಾವ್, ಎಂ ಎ, ಬಿ. ಎಲ್. ಅಲ್ಲದೆ ಸ್ವಲ್ಪ ಸಮಯದೊಳಗಾಗಿ ಒಬ್ಬ ಪ್ರಭಾವೀ ವಕೀಲ. ಈಗ ಅಯ್ಯಂಗಾರರ ಆನಂದಕ್ಕೆ ಪಾರವೇ ಇಲ್ಲ.

ಇತ್ತ ದೇವನೂರಲ್ಲಿ ಶಿವರಾಯರ ಮೇಲೊಂದು ಬಲವಾದ ಖೂನಿ ಸಂಚು ನಡೆದಿತ್ತು. ಒಂದು ದಿನ ಇವರು ತನ್ನ ಒಕ್ಕಲು ರಾಮಣ್ಣನು ಏನೋ ವಿರುದ್ಧ ನಡತೆ ತೋರಿದನೆಂದು ತನ್ನ ಕೈಯಲ್ಲಿದ್ದ ಕೋಲಿನಿಂದ ತಲೆಗೆ ಹೊಡೆದರು. ಗುರಿ ತಪ್ಪಿ ಅವನ ಕಣ್ಣಿಗೆ ಬಿತ್ತು. ರಾಮಣ್ಣನು ಇಹಲೋಕವನ್ನು ಬಿಟ್ಟನು. ಶಿವರಾಯರನ್ನು ಕೂಡಲೇ ಬಂಧಿಸಲಾಯಿತು. ಮೊಕದ್ದಮೆಯು ಬಲವಾಯ್ತು. ರಾಯರು ಸಂಬಂಧಪಟ್ಟವರಿಗೆ ಕೈತುಂಬಾ ಲಂಚ ಕೊಟ್ಟರು. ಹಲವಾರು ಸಾಕ್ಷಿ ಕೊಟ್ಟರು. ತನ್ನ ಪರವಾಗಿ ಪ್ರಭಾವೀ ವಕೀಲರನ್ನು ಕಟ್ಟಿದರು. ಹಲವು ಸಹಸ್ರ ರೂಪಾಯಿ ವ್ಯಯಿಸಿದರು. ಎಷ್ಟು ಪ್ರಯತ್ನಿಸಿದರೂ ಶಿವರಾಯರಿಗೆ 7 ವರ್ಷ ಶಿಕ್ಷೆಯೊದಾಯ್ತು. ಶಿವರಾಯರು ತನಗಾದ ಶಿಕ್ಷೆಯನ್ನು ರದ್ದು ಪಡಿಸುವರೆ ಹೈಕೋರ್ಟಿಗೆ ಅಪೀಲು ನಡೆಸಿದರು. ಅದಕ್ಕಾಗಿ ಶಿವರಾಯರು ಪ್ರಸಿದ್ಧ ವಕೀಲರಾದ ಬ್ಯಾರಿಸ್ಟರ್ ಕೇಶವ ಅಯ್ಯಂಗಾರರಿಗೆ ತನ್ನ ಪರ ವಕಾಲಾತನ್ನು ಕೊಟ್ಟಿದ್ದರು.

ಶಿವರಾಯರ ಸಂಬ್ರಡ ತನ್ನಿಯ ದಿನ ಬಂತು ಅಯ್ಯಂಗಾರರು ತನ್ನ ಬದಲು ನ್ಯಾಯಾಲಯಕ್ಕೆ ದಿನಕರನನ್ನು ಕಳಹಿದ್ದರು. ದಿನಕರನಿಗೆ ಈ ಸಂಬಂಧದ ಪತ್ರಗಳನ್ನು ನೋಡಿದಾಕ್ಷಣ ರಾಯರ ಪರಿಚಯವಾಗಿತ್ತು. ಆದರೆ ಅದನ್ನು ತೋರಿಸಲಿಲ್ಲ. ತನ್ನಿಯ ದಿನಕ್ಕೆ ಬೇಕಾದ ಅನುಭವವನ್ನು ದಿನಕರ ಮೊದಲೇ ಮಾಡಿಕೊಂಡಿದ್ದ. ಪರಿಸ್ಥಿತಿಯನ್ನು ನೋಡಿದರೆ ರಾಯರು ಪಾರಾಗುವುದು ಕಷ್ಟವಾಗಿತ್ತು. ದಿನಕರನು ಅವಿರಾಂತವಾಗಿ ೫ ಗಂಟೆಗಳ ಕಾಲ ರಾಯರ ಪರವಾಗಿ ಬಲವಾಗಿ ವಾದಿಸಿದ. ದಿನಕರನ ವಾದವು ಕೋರ್ಟಿನ ಎಲ್ಲ ವಕೀಲರನ್ನು ಅಚ್ಚರಿಪಡಿಸಿತು. ನ್ಯಾಯಾಧೀಶರೂ ಇವನ ವಾದಕ್ಕೆ ತಲೆದೂಗಿದರು. ದಿನಕರನು ತನ್ನ ಪಾಲಿನ ಕೆಲಸವನ್ನು ಮನಸಾಕ್ಷಿಯಾಗಿ ಮಾಡಿದ್ದನು. ಇನ್ನು ಉಳಿದಿರುವುದು ತೀರ್ಪು. ಅದನ್ನು ಮರುದಿನಕ್ಕಿಟ್ಟರು.

ತೀರ್ಪಿನ ದಿನ ಕೋರ್ಟಿನ ಸುತ್ತಲೂ ಜನ ಕಿಕ್ಕಿರಿದಿದ್ದರು. ಸುಮಾರು ಹತ್ತು ಗಂಟೆಯ ಹೊತ್ತಿಗೆ ಶಿವರಾಯರನ್ನು ಬಿಡುಗಡೆ ಗೊಳಿಸಿರುವುದಾಗಿ ನ್ಯಾಯಾಧೀಶರು ಓದಿ ಹೇಳಿದರು. ಶಿವರಾಯರು ದಿನಕರನನ್ನು ತಬ್ಬಿಕೊಂಡರು. ಇಬ್ಬರೂ ಅಯ್ಯಂಗಾರರ ಮನೆಗೆ ಬಂದರು. ದಿನಕರನು ಆ ದಿನ ಶಿವರಾಯರನ್ನು ನಿಲ್ಲುವಂತೆ ಹೇಳಿದ. ರಾಯರು ಒಪ್ಪಿದರು. ರಾತ್ರಿ ಕುಳಿತು ಮಾತಾಡುತ್ತಿರುವಾಗ ರಾಯರು ದಿನಕರನ ಪರಿಚಯ ಕೇಳಿದರು. ದಿನಕರನು ಲಕ್ಷ್ಮಮ್ಮನ ಮಗನೆಂದಾಕ್ಷಣ ರಾಯರ ತಲೆಗೆ ಸಿಡಿಲು ಬಡಿದಂತಾಯಿತು. ಅವರು ತನ್ನ ಮುಖವನ್ನು ಮೇಲೆತ್ತುವಷ್ಟು ಸಾಹಸ ಮಾಡಲಿಲ್ಲ. ಮೆಲ್ಲನೆ ಎದ್ದು ದಿನಕರನ ಸಮೀಪಕ್ಕೆ ಬಂದು ತನ್ನ ಹಿಂದಿನ ತಪ್ಪನ್ನು ಮರೆತು ಕ್ಷಮಿಸಬೇಕೆಂದು ಬೇಡಿದರು. ಅಲ್ಲದೆ ತನ್ನೊಂದಿಗೆ ಊರಿಗೆ ಬರಬೇಕೆಂದು ಅಯ್ಯಂಗಾರರನ್ನೂ ದಿನಕರನನ್ನೂ ಆಮಂತ್ರಿಸಿದರು.

ಮರುದಿನ ಬೆಳಗ್ಗೆ ಮೂವರೂ ಮದ್ರಾಸಿನಿಂದ ದೇವನೂರಿಗೆ ಹೊರಟರು. ಸಂಜೆ ನಾಲ್ಕು ಗಂಟೆಗೆ ಮನೆಯನ್ನು ತಲ್ಪಿದರು. ಮನೆಯ ವೆರಾಂಡದಲ್ಲಿ ಶೈಲಜಳು ಕುಳಿತಿದ್ದಳು. ಇಂದು ಅವಳು ಏಳು ವರ್ಷದ ಬಾಲಕಿಯಲ್ಲ 18 ವರ್ಷದ ಕನ್ಯೆ. ತನ್ನ ತಂದೆಯ ಜತೆ ಬಂದ ಅಪರಿಚಿತ ವ್ಯಕ್ತಿಗಳನ್ನು ಕಂಡ ಆಕೆ ಒಳ ಸರಿದಳು.

ಪಾರ್ವತಮ್ಮ ಮೂರು ತಂಬಿಗೆ ನೀರನ್ನು ತಂದಿಟ್ಟರು. ಮೂವರೂ ಕಾಲು ತೊಳೆದು ಒಳಬಂದರು. ಕೂಡಲೇ ಪಾರ್ವತಮ್ಮನನ್ನು ಶಿವರಾಯರು ಕರೆದು ಕಾಫಿ ತರುವಂತೆ ಹೇಳಿದರು. ಶೈಲಜ ಮೂರು ಲೋಟ ಕಾಫಿತಂದು ಮುಂದಿಟ್ಟಳು. ದಿನಕರ ಅವಳನ್ನು ಗುರುತಿಸಿದ. ಪಾರ್ವತಮ್ಮ ಅಲ್ಲಿ ನಿಂತಿದ್ದರು. ಆಗ ರಾಯರ ದಿನಕರನನ್ನು ತೋರಿಸಿ, ಈ ತರುಣ ವಕೀಲರ ದಯೆಯಿಂದಾಗಿಯೇ ನಾನು ಕಾರಾಗೃಹವನ್ನು ಕಾಣದಂತಾಯಿತಲ್ಲದೆ ಇಲ್ಲಿಗೆ ಬರುವ ಹಾಗಾಯಿತೆಂದು ಹೇಳಿ ಬ್ಯಾರಿಸ್ಟರ್ ಕೇಶವ ಅಯ್ಯಂಗಾರರ ಪರಿಚಯ ತಿಳಿಸಿದರು. ಅಲ್ಲದೆ "ಆ ತರುಣ ವಕೀಲರನ್ನು ನೀನೇ ಗುರ್ತಿಸಿಕೊ" ಎಂದರು. ಪಾರ್ವತಮ್ಮನಿಗೆ ಪರಿಚಯವಾಗಲಿಲ್ಲ. ಆಗ ದಿನಕರನೆ ಎದ್ದು ಬಂದು ಪಾರ್ವತಮ್ಮನ ಕಾಲಿಗೆ ಬಿದ್ದು "ಅಮ್ಮ ನಾನು ದಿನಕರನಲ್ಲವೇ, ೧೦; ೧೨ ವರ್ಷಗಳ ಹಿಂದೆ ನಿಮ್ಮ ಕೈಯಿಂದ ತಿಂಡಿಯನ್ನು ತಿಂದ ದಿನಕರನು ನಾನೆ" ಎಂದನು. ಮಾತು ಕೇಳುತ್ತ ಪಾರ್ವತಮ್ಮನ ಕಣ್ಣುಗಳಲ್ಲಿ ಆನಂದಾಶ್ರು ಸುರಿದವು. ಮೆಲ್ಲನೆ ಅವನ ತಲೆನೇವರಿಸಿದರು. ಬಾಗಿಲ ಬಳಿನಿಂತ ಶೈಲಜ ಹಿರಿ ಹಿರಿ ಹಿಗ್ಗಿದಳು ಅಷ್ಟೇ ಹೊತ್ತಿಗೆ ಲಕ್ಷ್ಮಮ್ಮನನ್ನು ಆಳಿನ ಮೂಲಕ ಕರೆಸಿ ಕೊಂಡರು ಅವಳನ್ನು ನೋಡುತ್ತಲೇ ದಿನಕರನು ಅಮ್ಮ ಎಂದು ತಬ್ಬಿಕೊಂಡನು. ಲಕ್ಷ್ಮಮ್ಮ ಆನಂದ ಸಾಗರದಲ್ಲಿ ಮುಳುಗಿದರು.

ಶಿವರಾಯರು ಮುಂದೆ ಬಂದು, ಲಕ್ಷ್ಮಮ್ಮನೊಡನೆ ತನ್ನ ಸಕಲ ಅಪರಾಧಕ್ಕೆ ಕ್ಷಮೆ ಕೇಳಿ, ನಡೆದ ಎಲ್ಲಾ ಸಂಗತಿ ತಿಳಿಸಿ ಮನೆಯನ್ನು ದಿನಕರನ ಹೆಸರಿಗೆ ಬರೆದು ಕೊಡುವುದಾಗಿ ಹೇಳಿದರು. ಲಕ್ಷ್ಮಮ್ಮ ಹಿಂದಿನ ಸಂಗತಿ ಮರೆತುದಲ್ಲದೆ, ಅವರ ಹೃದಯ ಕರಗಿತು. ಶೈಲಜ ಕಾಫಿ ತಂದು ಲಕ್ಷ್ಮಮ್ಮನಿಗೆ ಕೊಟ್ಟಳು. ಲಕ್ಷ್ಮಮ್ಮನಿಗೆ ಅವಳನ್ನು ಕಂಡು ಹೃದಯ ತುಂಬಿತು ಅವರು ಶೈಲಜಳ ಕೂದಲನ್ನು ತೀಡಿದರು. ಆ ದೃಶ್ಯವನ್ನು ಅಯ್ಯಂಗಾರರು ನೋಡಿದರು. ಶೈಲಜ ಶಿವರಾಯರ ಮಗಳು ಅವಿವಾಹಿತೆ ಎಂದು ತಿಳಿದರು. ಅವಳ ಅಂದ ಚಂದ, ರೂಪ ರೇಖೆ ಗುಣ ನಡತೆಯನ್ನು ನೋಡಿ ಇವಳು ದಿನಕರನಿಗೆ ಪತ್ನಿಯಾಗಲು ಯೋಗ್ಯಳೆಂದು ತಿಳಿಸಿದರು. ರಾಯರ ಸಂತೋಷಕ್ಕೆ ಪಾರವೇ ಇಲ್ಲ. ಮೆಲ್ಲನೇ ಲಕ್ಷ್ಮಮ್ಮನಿಗೂ ತಿಳಿಸಿದರು ಅವರು ಆನಂದ ತುಂದಿಲರಾದರು. ಸಮ್ಮತಿ ಸೂಚಿಸಿದರು.

ಮದುವೆಯ ದಿನ ನಿಶ್ಚೈಸಲ್ಪಟ್ಟಿತು. ಮದುವೆಯ ದಿನ ಮುಗಿಯುವವರೆಗೆ ನಿಲ್ಲುವುದಾಗಿ ಅಯ್ಯಂಗಾರರೂ ತಿಳಿಸಿದರು ಅಂತೂ ಸಂಭ್ರಮಾತಿಶಯಗಳಿಂದ ಶೈಲಜ ದಿನಕರನ ಮದುವೆಯು ಕೇಶವ ಅಯ್ಯಂಗಾರರ ಸಮಕ್ಷಮದಲ್ಲಿ ಜರಗಿತು. ವಧುವರರಿಬ್ಬರೂ ಮೊದಲು ಅಯ್ಯಂಗಾರರ ಕಾಲಿಗೆರಗಿದರು. ಆ ವೇಳೆ ಅವರ ರಕ್ಷಕರ ಆಶೀರ್ವಾದ ಪಡೆದರು ಈ ನವ ದಂಪತಿಗಳನ್ನು ಕಂಡು ಎಲ್ಲರೂ ಮೆಚ್ಚಿದರು. ಬಾಲ್ಯದಲ್ಲಿ ಕಷ್ಟವನ್ನು ಅನುಭವಿಸಿದರೂ ಇಂದು ದಿನಕರನು ಸುಖದ ಸುಪ್ಪತ್ತಿಗೆ ಯೇರುವಂತಾಯ್ತು.

ಭಾಗ್ಯದ ಬಳ್ಳಿ ಕೊನರಿತು!

ಜೀವನ ಪುಷ್ಪ ಅರಳಿತು!

ನೋವುಗಳ ಅತ್ಯುತ್ತಮ ಸಂಹಾರಿಣಿ·

ಅಮೃತಾಂಜನ

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ - ಸಾಧಾರಣ ಪ್ರತಿ- ರೂ. ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ

ನಿಮಗೆ
ಕಾಶ್ಮೀರ ಸಮಸ್ಯೆಯನ್ನು
ತಿಳಿಯಬೇಕೆ?
ಹಾಗಿದ್ದರೆ
ಈಗ ತಾನೆ ಪ್ರಕಟವಾಗಿರುವ
ಭಾರತದ ಅಂಗ-ಕಾಶ್ಮೀರ
ಎಂಬ ನೂತನ ಪುಸ್ತಕವನ್ನೋದಿರಿ!
(ಬರೆದವರು- ಎಮ್. ರಘುನಂದನ ರಾವ್, ತಲ್ಲೂರು)

ಪಾಕಿಸ್ತಾನವು ಭಾರತದ ಕಾಶ್ಮೀರ ನೀತಿಯ ಅಪಪ್ರಚಾರಗೈಯುತ್ತಿರುವ ಈ ಸಂದರ್ಭದಲ್ಲಿ ಎಲ್ಲರೂ ಓದತಕ್ಕ ಪುಸ್ತಕವಿದು,

ಬೆಲೆ- ಐವಾಣೆ ಮಾತ್ರ ಟ. ೩ ಪ್ರತ್ಯೇಕ.

ನವಯುಗ ಪ್ರೆಸ್, ಉಡುಪಿ.

ಡಾ. ಗ್ರಹಾಮರ ಅಸಫಲ ರಾಯಭಾರ

(೧ನೇ ಪುಟದಿಂದ)

ಗಿ ಎರಡು ರಾಷ್ಟ್ರಗಳ ಹಣವು ದುರ್ವಿನಿಯೋಗವಾಗಿರುವುದರಿಂದ ಶಿಕ್ಷಣ, ಆರೋಗ್ಯ, ಉತ್ಪಾದನೆ ಹಾಗೂ ಜನತಾ ಕಲ್ಯಾಣದ ಕಡೆಗೆ ವಿಶೇಷ ಗಮನವೀಯದೆ ಪರಸ್ಪರ ದೋಷಾರೋಪಣೆಯಲ್ಲಿಯೇ ತಲ್ಲೀನವಾಗಿವೆ ಎಂದೂ, ಉಭಯ ರಾಷ್ಟ್ರಗಳ ಸಾಮೂಹಿಕ ಅಭಿವೃದ್ಧಿಗಾಗಿ ಸಾಕಷ್ಟು ಪೂರ್ವ ಸಿದ್ಧತೆಯಿಂದ ನೇರವಾಗಿ ಸಭೆ ಸೇರಿ ವಿಷಯಗಳನ್ನು ಚರ್ಚಿಸಿದರೆ, ಎರಡು ರಾಷ್ಟ್ರಗಳೂ ಸುಖವನ್ನು ಅಧಿಕ ಪ್ರಮಾಣದಲ್ಲಿ ಕಾಣಬಹುದೆಂದೂ ಸೂಚಿಸಿದ್ದಾರೆ.

ಡಾ. ಗ್ರಹಾಮರು ಮಾಡಿದ ಸೂಚನೆಗಳನ್ನು ಪಾಕಿಸ್ತಾನವು ಸ್ವೀಕರಿಸಿದೆ. ಆದರೆ ಭಾರತಕ್ಕೆ ಅವು ಮಾನನೀಯವಾಗಿರುವುದಿಲ್ಲ; ಹೆಚ್ಚೇಕೆ, ತಮ್ಮ ಭವಿಷ್ಯವನ್ನು ಇಷ್ಟರಲ್ಲಿಯೇ ನಿರ್ಣಯಿಸಿಕೊಂಡಿರುವ ಕಾಶ್ಮೀರಿಗಳ ದೃಷ್ಟಿಯಿಂದಲೂ ಈ ಸೂಚನೆಯು ಎಂದಿಗೂ ಅನುಸರಣೀಯವಾಗಿರುವುದಿಲ್ಲ. ಕಾಶ್ಮೀರವು ಭಾರತದ ಅವಿಭಾಜ್ಯ ಅಂಗವಾಗಿದ್ದು, ಅವರ ಭವಿಷ್ಯವನ್ನು ಆದಾಗಲೇ ನಿರ್ಣಯಿಸಿಕೊಳ್ಳಲಾಗಿದೆ. ಪಾಕಿಸ್ತಾನವು ಅಕ್ರಮವಾಗಿ ಅದನ್ನು ಆಕ್ರಮಿಸಿ, ಅಪರಾಧಿ ರಾಷ್ಟ್ರವಾಗಿರುವಾಗ, ಅಂತಹ ಪಾಕಿಸ್ತಾನದೊಡನೆ ಭಾರತವು ಸಮಾನ ಮಟ್ಟದಲ್ಲಿ ಕೂತು ಸಮಾಲೋಚನೆ ನಡೆಸುವುದೆಂದರೆ, ಅಪರಾಧಿಯನ್ನು ಮನ್ನಿಸಿದಂತೆಯೇ ಸರಿ. ಭಾರತದ ದೃಷ್ಟಿಯಿಂದ ಇಂದು ಕಾಶ್ಮೀರದ ಸಮಸ್ಯೆಯೆಂಬುವೇ ಉಳಿದಿರುವುದಿಲ್ಲ. ಪಾಕಿಸ್ತಾನದ ಆಕ್ರಮಣವನ್ನು ಮಾತ್ರ ತಡೆಗಟ್ಟಬೇಕಾಗಿ ಬಂದಿದೆ. ಈ ವಿಷಯವನ್ನು ಸಂಪೂರ್ಣವಾಗಿ ಯುಕ್ತ ರಾಷ್ಟ್ರಸಂಘದ ಪ್ರತಿನಿಧಿಗಳಿಗೆ ಮಂದಟ್ಟು ಮಾಡಿದ ಭಾರತ ಸರಕಾರವು ನಿಜವಾಗಿಯೂ ಅಭಿನಂದನಾರ್ಹವಾಗಿದೆ. ಜನತೆಯು ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ. ಈ ವಿವಾದವನ್ನು ಮತ್ತೂ ಬೆಳೆಸಿಕೊಳ್ಳುವುದು ಅನಗತ್ಯವೆಂದೂ, ಅಪರಾಧಿಗಳು ತಮ್ಮ ಅಪರಾಧವನ್ನು ಒಪ್ಪಿ ಅದನ್ನು ಹಿಂತೆಗೆದುಕೊಳ್ಳಬೇಕೆಂಬುದೂ ಶಿಲಾಶಾಸನದಕ್ಷರವೆನ್ನುವುದು ಸತ್ಯ. ಈ ವರದಿಯ ಬಗ್ಗೆ ಭದ್ರತಾ ಸಮಿತಿಯ ನಿರ್ಣಯವನ್ನು ವಿಶೇಷ ಕುತೂಹಲದಿಂದ ನಿರೀಕ್ಷಿಸುವ ಏಕಮೇವ ರಾಷ್ಟ್ರವೆಂದರೆ, ಪಾಕಿಸ್ಥಾನ ಮಾತ್ರ. ಅದು ಗ್ರಹಾಮರ ಸೂಚನೆಗಳಿಗಾಗಿ ಹಿರಿಹಿರಿ ಹಿಗ್ಗಿದೆ ಎಂದು ವರದಿಯಾಗಿದೆ. ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಭಾರತವಿರೋಧೀ ಭಾವನೆಯಿಂದ ಈ ಪ್ರಶ್ನೆಯನ್ನು ಮತ್ತೂ ಮತ್ತೂ ಮುಂದೆಳೆಯದೆ, ಇದೀಗಲೇ ಮುಗಿಸಿ, ಕಾಶ್ಮೀರದ ಸಾರ್ವಭೌಮ ರಾಷ್ಟ್ರವಾಗಿರುವ ಪಾಕಿಸ್ಥಾನದ ಕೈಯಿಂದ ಆಕ್ರಮಿತ ಭಾಗವನ್ನು ಭಾರತಕ್ಕೆ ಕೊಡಿಸಿ ಪೂರ್ಣ ವಿರಾಮ ಹಾಕಬೇಕು.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ವಾರದ ಮಹಾನುಭಾವ—

ಸೋವಿಯೆತ್ ಪ್ರಧಾನಿ ಶ್ರೀ ಕ್ರುಶೇವ

ಸೋವಿಯತ್ ರಶ್ಯದ ಪ್ರಧಾನ ಮಂತ್ರಿ ಪದವಿಯನ್ನು ಪಡೆದೊಡನೆಯೇ ಅಣುವಿಸ್ಫೋಟ ಪರೀಕ್ಷಣವನ್ನು ನಿಲ್ಲಿಸಿಬಿಡುವ ನಿರ್ಧಾರವನ್ನು ಮಾಡಿದುದರಿಂದ ಶ್ರೀ ಕ್ರುಶೇವರೊಂದು ಮಹತ್ವಪೂರ್ಣ ಕೆಲಸವೊಂದನ್ನು ಮಾಡಿದಂತಾಯಿತು. ಈ ಘೋಷಣೆಯ ಬಗ್ಗೆ ಕೆಲವರು ಸಂದೇಹವನ್ನು ವ್ಯಕ್ತಪಡಿಸಿದರು, ಇನ್ನು ಕೆಲವರು ಇದನ್ನು ವಿಚಾರಣೀಯಾಂಶವೆಂದು ಸಂಭಾವಿಸಿದರು. ಆದರೆ, ರಶ್ಯಾವು ಏಕಮುಖವಾಗಿ ಅಣ್ವಸ್ತ್ರ ಪ್ರಯೋಗವನ್ನು ನಿಲ್ಲಿಸಿಬಿಡಬೇಕೆಂದು ಒತ್ತಾಯಿಸಿದ ಭಾರತಕ್ಕೆ ಮಾತ್ರ ಇದರಿಂದ ಸಂತೋಷವಾಗಿದೆ.

ಶ್ರೀ ಕ್ರುಶೇವರ ಈ ಘೋಷಣೆಯನ್ನು ಎಲ್ಲರಿಗಿಂತ ಹೆಚ್ಚಾಗಿ ಶಂಕಾಸ್ಪದವೆಂದು ತಿಳಿಯುವವರಲ್ಲಿ ಅಮೆರಿಕೆಯ ವಿದೇಶ ಮಂತ್ರಿ ಶ್ರೀ ಜಾನ್ ಫೋಸ್ಟರ್ ಡಲ್ಲೆಸರ ಉಲ್ಲೇಖವು ಮಹತ್ವಪೂರ್ಣವಾಗಿದೆ. ಇದರಿಂದಾಗಿ ಮೋಸ್ಕೋ ರೇಡಿಯೋ ಸಾರಿರುತ್ತದೆ: "ಇಂತಹ ಪರೀಕ್ಷಣವನ್ನು ಮರೆಯಾಗಿರಿಸುವುದು ಸಾಧ್ಯವಿಲ್ಲ. ಹಾಗಿದ್ದರೂ ಇದನ್ನು ಸಂದೇಹದಿಂದ ನೋಡಿಕೊಳ್ಳುವುದಲ್ಲ; ವಿಚಾರಿಸಿ ನೋಡಬೇಕಾಗಿದೆ. ಒಂದುವೇಳೆ ಅನ್ಯ ಸಂಬಂಧಿತ ರಾಷ್ಟ್ರಗಳು ಈ ಮಾರ್ಗವನ್ನು ಅನುಸರಿಸದೆ ಹೋದರೆ, ಅಣ್ವಸ್ತ್ರ ಪರೀಕ್ಷಾ ಸಂಬಂಧದಲ್ಲಿ ಪುನರ್ವಿಚಾರವನ್ನು ನಡೆಸಲು ಸೋವಿಯತ್ ಸರಕಾರವು ಸ್ವತಂತ್ರವಿದೆ" ಎಂದು. ಈ ಘೋಷಣೆಯಿಂದ ಒಂದು ಮಾತು ಚಿರಸತ್ಯ: ಅಣ್ವಸ್ತ್ರಗಳನ್ನುಪಯೋಗಿಸುವದನ್ನು ತಡೆಹಿಡಿಯುವ ನಿರ್ಧಾರವೊಂದು ಕೇವಲ ಪರೀಕ್ಷೆ ಮಾತ್ರವಲ್ಲದೇ ಸೋವಿಯೆತ್ ಸರಕಾರದ ದೃಢ ಸಂಕಲ್ಪವೇನೂ ಅಲ್ಲವೆಂದು ತಿಳಿಯಬಹುದು. ಆದರೆ, ಈ ನಿರ್ಧಾರವನ್ನು ಶಂಕಾಪೂರ್ಣವಾಗಿ ನೋಡುವುದಾದರೂ ಪ್ರೋತ್ಸಾಹಿಸುವ ಕೆಲಸವಲ್ಲ. "ಯಾರು ಮೊದಲು ಮಾಡಿದರು" ಎಂಬ ಪ್ರಶ್ನೆಗೆ ಉತ್ತರ ಇದೀಗ ದೊರೆತಿರುವುದರಿಂದ ಇನ್ನಾದರೂ ಉಳಿದ ರಾಷ್ಟ್ರಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿ ಯಶಸ್ಸು ಪಡೆಯಬಹುದು. ಅಲ್ಲದೇ ಕೇವಲ ಅಣುಪರೀಕ್ಷೆಯಲ್ಲಿಯೇ ಸಂಪೂರ್ಣಗೊಳ್ಳದಷ್ಟು ರಶ್ಯಾದ ವೈಜ್ಞಾನಿಕ ಕ್ಷೇತ್ರವು ಮುಂದುವರಿದಿದೆ. ಹೀಗಾಗಿ ದಅಣು ಬಾಂಬು ಕಳೆದ ಮಹಾಯುದ್ಧ ಒಂದು ಗೆಲುವಿನ ಅಸ್ತ್ರವಾಗಿ ಮಾತ್ರ ಇಂತು ಗೋಚರಿಸುತ್ತಲಿದೆಯೆನ್ನಬಹುದು.

ಈ ಘೋಷಣೆಯ ಹಿಂದೆ ಶ್ರೀ ಕ್ರುಶೇವರ ಜ್ವಲಂತ ವ್ಯಕ್ತಿತ್ವದ ಪ್ರಭಾವವಿದೆ ಎನ್ನುವುದರಲ್ಲಿ ಸಂದೇಹವಿಲ್ಲ. ಇಂದಿನವರೆಗೆ ಶ್ರೀ ಕ್ರುಶೇವರ ಕಾರ್ಯಪ್ರಣಾಲಿಯಿಂದ, ರಾಜನೀತಿಯೇ ಒಂದು ರಹಸ್ಯವಾಗಿರುವಾಗ, ಈ ಘೋಷಣೆಯ ಹಿಂದೆ ಅನ್ಯಥಾಭಾವವೇ ಇದೆ ಎನ್ನುವುದು ಕಠಿಣವಾಗಿದೆ. ಶ್ರೀ ಕ್ರುಶೇವರಿಗೆ ಸೋವಿಯೆತ್ತಿನ ನೀತಿ ಸಂಚಾಲನೆಯ ಅಧಿಕಾರವು ದೊರೆತಂದಿನಿಂದ, ಈ ರಾಜನೀತಿಜ್ಞರು ಶಾಂತಿಯ ಆಕಾಂಕ್ಷೆಯನ್ನೇ ವ್ಯಕ್ತಪಡಿಸಿರುತ್ತಾರೆ. ಈ ರಾಜಕಾರಣಿಯು ಇತಿಹಾಸಕಾರರ ಲೇಖನಿಯಿಂದ ತನ್ನ ನಾಮಧೇಯದೆದುರು "ಅಂತಾರಾಷ್ಟ್ರೀಯ ಶಾಂತಿಸ್ಥಾಪನೆಯ ಸಂಸ್ಥಾಪಕ" ನೆಂಬ ಬಿರುದನ್ನು ಬರೆಯಿಸಿಕೊಳ್ಳಲು ಅಪೇಕ್ಷಿಸುವನಾದರೆ, ಇದೂ ಒಂದು ಮಹತ್ವಾಕಾಂಕ್ಷೆಯಾಗಿದೆ ಮತ್ತು ಈ ಮಹತ್ವಾಕಾಂಕ್ಷೆಯಿಂದ ಕೂಡಿರುವುದೂ ಜಗತ್ತಿನ ಹಿತದೃಷ್ಟಿಯಿಂದ ಶ್ರೇಯಸ್ಕರವಾಗಿದೆ. ತಮ್ಮ ಶಾಸನ ಪ್ರಣಾಲಿಯ ಪ್ರಚಾರ-ಪ್ರಸಾರ ಮಾಡುವ ಇರಾದೆಯಿಂದ ಯಾರಾದರೂ ಇರುವರಾದರೆ, ಶಾಂತಿ ಸಂಸ್ಥಾಪನೆಯಿಂದ ಇದು ಕಾರ್ಯರೂಪದಲ್ಲಿ ಬರುವಷ್ಟು ಮತ್ತಾವ ವಿಧದಿಂದಲೂ ಆಗಲಾರದು ಎಂಬುದನ್ನು ತಿಳಿದುಕೊಳ್ಳಬೇಕು.

ಶ್ರೀ ಕ್ರುಶೇವರು ಯೋಗ್ಯ ಸಂದರ್ಭವನ್ನು ಸಾಧಿಸಿ ಹಿರಿಯರಾಗಿದ್ದ ಮಾರ್ಶಲ್ ಸ್ಟಾಲಿನ್ನರ ಮೂಲಕ ಸ್ಥಾಪಿತವಾಗಿದ್ದ ನೀತಿಯ ಮೇಲೆ ದೊಡ್ಡ ಆಕ್ರಮಣವನ್ನು ಮಾಡಿದರು. ಇದರ ಪರಿಣಾಮವಾಗಿ ಅವರು ಮಾರ್ಶಲರ ಪ್ರತಿರೂಪವೆನಿಸಿದ ಪ್ರತಿಮೆಗಳನ್ನೂ ತೆಗೆದು ದೂರ ಎಸೆದುಬಿಟ್ಟರು. ಶ್ರೀ ಕ್ರುಶೇವರ ದೃಷ್ಟಿಯಿಂದ, ಸೋವಿಯತ್ ರಶ್ಯಾದ ಮೇಲೆ ಹರಡಿದ್ದ ಅವಿಶ್ವಾಸ ಭಾವನೆಯನ್ನು ಮತ್ತಷ್ಟು ದೃಢವಾಗಿರುವ ರೀತಿಯಲ್ಲಿಯೇ ಮಾರ್ಶಲ್ ಸ್ಟಾಲಿನರ ರಾಜನೀತಿಯಾಗಿತ್ತು. ಆದುದರಿಂದಲೇ ಸೋವಿಯತ್ ರಶ್ಯದಲ್ಲಿ ಸಾಮ್ಯವಾದವನ್ನು ಪ್ರಚಲಿತಗೊಳಿಸುವಲ್ಲಿ ಶ್ರೀ ಕ್ರುಶೇವರು ಕೆಲವೇ ವರ್ಷಗಳಲ್ಲಿ ಸಾಧಿಸಿರುವಷ್ಟನ್ನು ಮಾರ್ಶಲ್ ಸ್ಟಾಲಿನರಿಂದ ಸಾಧಿಸಿಕೊಳ್ಳುವುದು ಅಸಾಧ್ಯವಾಯಿತು. ಶ್ರೀ ಕ್ರುಶೇವರು ಸಾರಿದ ರಶ್ಯಾದ ತಾತ್ಕಾಲಿಕ ನಿರ್ಧಾರವನ್ನು ಶಂಕಾತುರಗಳಿಂದ ನೋಡದೆ ಅಮೆರಿಕ, ಬ್ರಿಟನ್ ಮೊದಲಾದ ಅಣ್ವಸ್ತ್ರಗಳನ್ನು ಪರೀಕ್ಷಿಸುವ ಹಿರಿಯ ರಾಷ್ಟ್ರಗಳು ಅನುಸರಿಸಿದರೆ, ಆಗ ಶ್ರೀ ಕ್ರುಶೇವರು ಅಂತರಾಷ್ಟ್ರೀಯ ಪ್ರಧಾನ ಪುರುಷರಾಗುತ್ತಾರೆ ಮತ್ತು ದೊಡ್ಡ ದೇಶಗಳ ಈ ತೆರದ ಆಚರಣೆಯಿಂದ ಶ್ರೀ ಕ್ರುಶೇವರಿಗೂ ಒಂದು ತೃಪ್ತಿಯುದ್ದೀತು.

ಸೋವಿಯೆತ್‌ನ ನೂತನ ಪ್ರಧಾನಿಯಾದ ಶ್ರೀ ಕ್ರುಶೇವರು ಕಮ್ಯೂನಿಸ್ಟ್ ಪಕ್ಷದ ಪ್ರಥಮ ಕಾರ್ಯದರ್ಶಿಯಾಗಿದ್ದು, ಸಾಮ್ಯವಾದದ ಬಲವಾದ ಆಧಾರಸ್ತಂಭವಾಗಿದ್ದಾರೆ. ಸರಕಾರ ರಚಿಸುವಲ್ಲಿ, ಸರಕಾರದ ಕಾರ್ಯಕಲಾಪಗಳಲ್ಲಿ ಕ್ರುಶೇವರಕ್ಕೆ ಸಾಕಷ್ಟು ಸುರಿತಿವೆ. ಇಂತಹ ರಾಜಕಾರಣಿಯು ಪ್ರಧಾನಿಯಾದುದರಿಂದ, ಜಾಗತಿಕ ಶಾಂತಿಯು ಸ್ಥಾಪನೆಯಾಗಬಹುದೆಂದು ಮಿತ್ರರಾಷ್ಟ್ರ ಭಾರತವು ಬಯಸಿದರೆ, ಅದರಲ್ಲಿ ಅವಿವೇಕವಿಲ್ಲ. ಯಾರಿಂದಲಾದರೂ ವಿಶ್ವದ್ವೇಷ ಶಮನವಾಗುವುದಷ್ಟೇ ನಮಗಿಂದು ಬೇಕಾಗಿದೆ.

---

37 ವರುಷಗಳ
ಭದ್ರ ಹಾಗೂ ಸಮರ್ಥ ಬೇಂಕಿಂಗ್ ಸೇವೆ.
ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್,
ಪ್ರಧಾನ ಕಚೇರಿ: ಉಡುಪಿ (ದ. ಭಾರತ)
ನಮ್ಮ ಬೆಳ್ಳಿಯ ಶಾಖೆ
ತಾ. 3-3-1958ಕ್ಕೆ ತೆರೆಯಲ್ಪಟ್ಟಿತು.
* * *
ಶೀಘ್ರದಲ್ಲಿಯೇ ತೆರೆಯಲಿರುವ ಇತರ ಶಾಖೆಗಳು:
ಬೆಂಗಳೂರು – ಬೇಲೂರು – ಶಿವಮೊಗ್ಗ – ಕುಣಿಗಲ್
THE PANGAL NAYAK BANK LIMITED,
(Estd. 1920)

ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಭಗವದ್ಗೀತೆಯ
ಸಮೂಲ ಭಾಷಾಂತರ
ಪೋಕೆಟ್ ಎಡಿಷನ್.
ಸುಮಾರು 450 ಪುಟಗಳು.
ಕ್ರಯ 0–12–0

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ ನ

Edited Printed & Published by K. H. Shetty at the Navayuga press, Udipi

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭ | 17—4—1958 | ಸಂಚಿಕೆ ೩೨
VOL. 37 | | NO. 32

ಭಾರತದಲ್ಲಿ ಸಹಕಾರೀ ಆಂದೋಲನ—

ಸರಕಾರದ ಪ್ರಭಾವದಿಂದ ದೂರವಿರಲಿ

ಕಳೆದ ವಾರ ನವದೆಹಲಿಯಲ್ಲಿ ಸೇರಿದ್ದ ಭಾರತೀಯ ಸಹಕಾರೀ ಕಾಂಗ್ರೆಸ್‌ನ ತೃತೀಯಾಧಿವೇಶನದಲ್ಲಿ ಭಾರತೀಯ ಸಹಕಾರೀ ಸಂಘದ ಅಧ್ಯಕ್ಷ ಶ್ರೀ ಕೇಶವದೇವ ಮಾಲವೀಯರು ಭಾಷಣ ಮಾಡುತ್ತ ಭಾರತೀಯ ಸಹಕಾರೀ ಆಂದೋಲನದ ಮೇಲೆ ದಿನೇ ದಿನೇ ಹೆಚ್ಚುತ್ತಿರುವ ಸರಕಾರೀ ಪ್ರಭಾವ ಹಾಗೂ ಪ್ರಭುತ್ವಗಳ ವಿಚಾರವಾಗಿ ಅಂಜಿಕೆಯ ಭಾವವನ್ನು ವ್ಯಕ್ತಪಡಿಸುವುದು ಸರಿಯೇ ಆಗಿದೆ

ಸರಕಾರೀ ನಿಯಂತ್ರಣದಿಂದ ಈ ಆಂದೋಲನವನ್ನು ಮುಕ್ತವಾಗಿರಿಸುವ ಆವಶ್ಯಕತೆಯು ತೀರ ಅಗತ್ಯವಾಗಿದೆ ಸಹಕಾರೀ ಆಂದೋಲನದ ಸಂಚಾಲನೆಯನ್ನು ಅಧಿಕಾರಿಗಳ ಮೂಲಕ ಮಾಡಿಸಿದರೆ, ಇದು ಹೆಚ್ಚು ದಿನಗಳ ವರೆಗೆ ಸಹಕಾರೀ ಆಂದೋಲನದ ರೂಪದಲ್ಲಿರುವುದು ಸಾಧ್ಯವಿಲ್ಲ. ಏಕೆಂದರೆ, ಅದರ ಪ್ರಜಾತಾಂತ್ರಿಕ ಹಾಗೂ ಆತ್ಮನಿರ್ಭರ ಸ್ವರೂಪಕ್ಕೆ ಇದರಿಂದ ಹಾನಿತಟ್ಟುವುದು ಖಂಡಿತ ಸರಕಾರವಾಗಲಿ ಇನ್ನಿತರ ವ್ಯಕ್ತಿ ಅಥವಾ ವ್ಯಕ್ತಿ ಸಂಘವಾಗಲಿ, ನಿರ್ಭರವಾಗಿರುವ ಒಂದು ಸಹಕಾರೀ ಆಂದೋಲನವನ್ನು ತನ್ನಷ್ಟಕ್ಕೇನೇ ನಡೆಯಗೊಡಲು ಬಿಡುವುದಿಲ್ಲವಾದರೆ, ಆಗ ಅಧಿಕ ಸಮಯದವರೆಗೆ ವಸ್ತುತಃ ಸಹಕಾರೀ ಆಂದೋಲನವು ನಡೆಯುವುದು ಸಾಧ್ಯವಿಲ್ಲ. ಇಂತಹ ಸ್ಥಿತಿಯಲ್ಲಿ ಈ ಉದ್ದೇಶದ ಮೂಲಭೂತ ತತ್ವಗಳಿಗೇನೇ ವಿಘ್ನವು ಸಂಭವಿಸುವುದು. ವಾಸ್ತವವಾಗಿ ಸಹಕಾರೀ ಆಂದೋಲನವು ಜನತೆಯ ಒಂದು ಆಂದೋಲನವಾಗಿದೆ ಅದರ ವ್ಯವಸ್ಥೆಯೆಲ್ಲವೂ ಜನತೆಯಿಂದಲೇ ನಡೆಯಬೇಕಾಗಿದೆ

ಭಾರತೀಯ ಸಹಕಾರೀ ಸಮಿತಿಗಳಲ್ಲಿ ಆತ್ಮನಿರ್ಭರತೆಯ ಅಭಾವವಿರುವುದೊಂದು ತಪ್ಪುನೀತಿಯ ಪರಿಣಾಮವಾಗಿದೆ. ಬ್ರಿಟಿಷ ಆಳಿಕೆಯ ಕಾಲದಲ್ಲಿ ಸಂಚಾಲಿತ ಆಂದೋಲನದ ವಿಷಯದಲ್ಲಿ ಯಾವ ಸ್ಥಿತಿಯು ಹುಟ್ಟಿಕೊಂಡಿತ್ತೊ ಅದೇ ಅವಸ್ಥೆಯು ಇಂದು ಸಹಕಾರೀ ಕ್ಷೇತ್ರದಲ್ಲಿ ಕಂಡು ಬರುತ್ತಿದೆ ಬ್ರಿಟಿಷ ಶಾಸಕರು ಹೊರಟು ಹೋದರು. ಆದರೆ, ಅವರ ಆಡಳಿತೆಯ ಪದ್ಧತಿಯಿಂದ ನಾವು ದೂರವಾಗಿಲ್ಲ. ಈ ಆಂದೋಲನವನ್ನು ಸರಕಾರೀ ನಿಯಂತ್ರಣದಿಂದ ಮುಕ್ತಗೊಳಿಸುವ ಬದಲು ಇಂದು ನಿಯಂತ್ರಿಸುವ ಕಡೆಗೆ ವಿಶೇಷ ಗಮನವೀಯಲಾಗುತ್ತಿದೆ ಸಹಕಾರೀ ಆಂದೋಲನಕ್ಕೆ ವಿರುದ್ಧವಾಗಿರುವ ಸರಕಾರೀ ದೃಷ್ಟಿಕೋಣವನ್ನು ಸಂಪೂರ್ಣ ಪರಿವರ್ತನೆ ಮಾಡಬೇಕಾಗಿದೆ. ಸಹಕಾರೀ ಸಮಿತಿಗಳನ್ನು ಸಂಘಟಿಸುವಲ್ಲಿ ಸಹಕಾರೀ ಆಂದೋಲನ ಹಾಗೂ ಅದಕ್ಕೆ ಉಚಿತ ವಾತಾವರಣ ಉತ್ಪನ್ನ ಮಾಡುವ ಆವಶ್ಯಕತೆಯತ್ತ ಜನರಲ್ಲಿ ವಿಶ್ವಾಸ ಹುಟ್ಟುವಂತೆ ಮಾಡಬೇಕಾಗಿದೆ

ಸಹಕಾರೀ ಸಮಿತಿಗಳಿಗೆ ಕೊಡಲ್ಪಡುವ ಸರಕಾರೀ ಸಹಾಯವನ್ನು ಸಹಕಾರೀ ಆಂದೋಲನದ ವಿಷಯಗಳಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ರೂಪದಲ್ಲಿ ಹಸ್ತಕ್ಷೇಪ ಮಾಡುವುದಕ್ಕಾಗಿ ಒಂದು ಶರ್ತದ ಸ್ವರೂಪದಲ್ಲಿ ಕೊಡಬಾರದು. ಸಹಕಾರೀ ಸಮಿತಿಗಳನ್ನು ಸಂಘಟಿತಗೊಳಿಸುವ ಉಪಾಯ ಮತ್ತು ಅವುಗಳ ಆರ್ಥಿಕ ಹಾಗೂ ಅನ್ಯಪ್ರಕಾರದ ಸಹಾಯ ನೀಡುವ ಕ್ರಮವು ಅಧಿಕ ಸಮಯದ ವರೆಗೆ ನಿಲ್ಲುವುದಿಲ್ಲ. ಆದರೆ, ಸರಕಾರೀ ವಿಭಾಗ ಮತ್ತು ಅಧಿಕಾರಿಗಳ ಮೂಲಕ ಸಂಬಂಧಿಸಿದ ಕಾರ್ಯಕ್ರಮಗಳಾದರೋ ಮುಂದುವರಿಯುತ್ತ ಹೋಗುವುವು

ಸಮುಚಿತ ರೂಪದಲ್ಲಿ ಸಹಕಾರೀ ಸಮಿತಿಗಳ ಆಯೋಜನೆ ಹಾಗೂ ಸಂಘಟನೆ ಮಾಡುವ ಹೊಣೆಗಾರಿಕೆಯನ್ನು ಸ್ವತಃ ಆಂದೋಲನವೇ ಕೈಗೊಳ್ಳಬೇಕು ದುರ್ಭಾಗ್ಯವಶದಿಂದ ಭಾರತದಲ್ಲಿ ಒಂದು ವ್ಯಾಪಾರದ ರೂಪದಲ್ಲಿ ಸಹಕಾರೀ ಆಂದೋಲನದ ವಿಷಯದಲ್ಲಿ ಸಫಲತೆ ಪ್ರಾಪ್ತಿಸುತ್ತದೆ ಎಂಬತ್ತ ಯೋಗ್ಯ ಗಮನವನ್ನು ಈಯುತ್ತಿಲ್ಲ ಆಡಳಿತೆಯ ಒಂದು ಸಮಸ್ಯೆ ಎಂಬ ರೂಪದಲ್ಲಿ ಇತ್ತ ನೋಡಲಾಗುತ್ತದೆ ಆದರೆ, ಇದು ಸರಿಯಲ್ಲ

ವ್ಯಾಪಾರಿಕ ದೃಷ್ಟಿಕೋಣದಿಂದ ನೋಡಿದರೂ, ಪೂರ್ಣ ಸಮಯ ಕರ್ಮಚಾರಿಗಳಾಗಿರುವ ಪದಾಧಿಕಾರಿಗಳಿಗೂ ವೇತನವನ್ನು ಕೊಡದಿರುವುದರಿಂದ, ಈ ಸಹಕಾರೀ ಆಂದೋಲನವು ಕ್ಷತಗೊಂಡಿತು ವೇತನರಹಿತರಾಗಿ ದುಡಿಯಬಲ್ಲ ಪದಾಧಿಕಾರಿಗಳ ಸಂಖ್ಯೆಯು ಅಪೇಕ್ಷಿಸಿದಷ್ಟು ದೊರೆಯದಿರುವುದೂ ಒಂದು ಕಠಿನ ಸಮಸ್ಯೆಯಾಗಿದೆ ಹಾಗಾಗಿ, ಸಹಕಾರೀ ಆಂದೋಲನವು ಉಚಿತ ನೇತೃತ್ವದಿಂದ ವಂಚಿತವಾಗ ಬೇಕಾದ ಪ್ರಮೇಯ ಬಂತು

ಒಂದು ಏಕೀಕೃತ ಆಂದೋಲನದ ರೂಪದಲ್ಲಿ ಇದರ ಕಾರ್ಯ ಸಂಚಾಲನೆಯಾಗದಿರುವುದೂ ಸಹಕಾರೀ ಆಂದೋಲನ ಸಂಬಂಧದಲ್ಲಿ ಒಂದು ಸಮಸ್ಯೆಯಾಗಿದೆ ಬೇರೆ ಬೇರೆ ಸಹಕಾರೀ ಸಮಿತಿಗಳು ಬೇರೆ ಬೇರೆ ರೂಪದಲ್ಲಿ ಕಾರ್ಯನಿರತವಾಗಿರುತ್ತವೆ ಅವು ಉಳಿದ ಸಮಿತಿಗಳೊಡನೆ ಉಚಿತ ಸಂಪರ್ಕವನ್ನಿಟ್ಟು ಕೊಳ್ಳುವ ಗೋಜಿಗೇನೇ ಹೋಗುವುದಿಲ್ಲ

ವಿಭಿನ್ನ ಪ್ರಕಾರದ ಸಹಕಾರೀ ಸಮಿತಿಗಳ ವ್ಯಾಪಾರಿಕ ಗತಿವಿಧಿಗಳಲ್ಲಿ ಏಕೀಕರಣವಾಗುವಂತೆ ಪ್ರೋತ್ಸಾಹಿಸುವುದು ಅತ್ಯಂತಾವಶ್ಯಕವಾಗಿದೆ ಸಹಕಾರೀ ಸಮಿತಿಗಳು ತಮ್ಮ ವ್ಯಾಪಾರಿಕ ಗತಿವಿಧಿಗಳಿಗೋಸ್ಕರ ಅನ್ಯ ಸಹಕಾರೀ ಸಮಿತಿಗಳನ್ನು ಸಂತೋಷಗೊಳಿಸಬೇಕು ಆಂದೋಲನದ ಇಂತಹ ವ್ಯಾಪಾರಿಕ ಏಕೀಕರಣವು ಪ್ರತ್ಯೇಕ ಸಹಕಾರೀ ಸಮಿತಿಗಳಿಗೆ ಶಕ್ತಿ ನೀಡುತ್ತದೆ. ಇಂತಹ ಕಾರ್ಯದ ಫಲಸ್ವರೂಪವಾಗಿ ಆಂದೋಲನವು ಮತ್ತೂ ಅಧಿಕ ಪ್ರಮಾಣದಲ್ಲಿ ಸುದೃಢವಾಗುವುದು.

ಸಹಕಾರೀ ಕೃಷಿ ಕಾರ್ಯವನ್ನು ಆದಷ್ಟು ಶೀಘ್ರವಾಗಿ ಕಾರ್ಯಾನ್ವಿತಗೊಳಿಸಬೇಕು. ಇಷ್ಟೇ ಅಲ್ಲದೇ ಇಂತಹ ಸಾಧನೆಗಳತ್ತ ಜನಮನವನ್ನೊಲಿಸುವ ವಾತಾವರಣವನ್ನು ನಿರ್ಮಿಸಲು ಯೋಗ್ಯ ಕ್ರಮವನ್ನು ಕೂಡಲೇ ಸ್ವೀಕರಿಸಬೇಕು. ಸಹಕಾರೀ ಕೃಷಿಯೆಂದೊಡನೆಯೇ ಯಂತ್ರೀಕೃತ ಕೃಷಿಕ್ರಮವಲ್ಲ. ಭೂಮಿಯನ್ನು ಏಕತ್ರಗೊಳಿಸುವುದೇ ಸಮಷ್ಟಿ ವ್ಯವಸಾಯ ಅಥವಾ ಸಹಕಾರೀ ಕೃಷಿಕ್ರಮವೆನಿಸುವುದು

ಇತರ ಗತಿವಿಧಿಗಳೊಡನೆಯೇ ಸಹಕಾರೀ ಆಂದೋಲನವನ್ನು ವಿಸ್ತಾರಗೊಳಿಸುವ ಕಾರ್ಯಕ್ರಮವೂ ಕೈಗೊಳ್ಳಲ್ಪಡಬೇಕು. ಸಹಕಾರೀ ಮಾರುಗಟ್ಟೆ ವ್ಯವಸ್ಥೆ ಸಹಕಾರೀ ವೈದ್ಯ ಸಹಾಯ ಮತ್ತು ಸಹಕಾರೀ ಯಾತಾಯಾತ ಮೊದಲಾದುವುಗಳ ವಿಕಾಸದತ್ತವೂ ಶ್ರಮವಹಿಸಬೇಕು. ಜನತೆಯ ಅನೇಕ ಆರ್ಥಿಕ ಆವಶ್ಯಕತೆಗಳಲ್ಲಿಯಂತೆಯೇ ಆಂದೋಲನದ ಸಂಬಂಧದಲ್ಲಿಯೂ ಸಂತೋಷಪೂರ್ಣವಾಗಿ ಭಾಗವಹಿಸಿದರೆ,ನಾವು ಒಂದು ಸುವ್ಯವಸ್ಥಿತ ಆಂದೋಲನಹಾಗೂದೇಶದಅರ್ಥವ್ಯವಸ್ಥೆಯಲ್ಲಿಒಂದು ಸಹಕಾರೀಕ್ಷೇತ್ರದ ನಿರ್ಮಾಣ ಮಾಡುವ ಸ್ಥಿತಿಗೆ ಹೋಗಿ ಮುಟ್ಟುವೆವು

ಸಹಕಾರೀ ಸಮಿತಿಗಳು ಆರ್ಥಿಕಕ್ಷೇತ್ರದಲ್ಲಿ ಲಾಭವನ್ನೊದಗಿಸುವುವಷ್ಟೆ, ತಾನು ಕಾರ್ಯರತವಾಗಿರುವ ಕ್ಷೇತ್ರಗಳಲ್ಲಿ ಸಮಾಜ ಕಲ್ಯಾಣ ಕಾರ್ಯವನ್ನು ವರ್ಧಿಸುವುದಕ್ಕೆ ಸಹ ಸಮರ್ಥವಾಗಬಲ್ಲುವು. ಸಹಕಾರೀ ಸಮಿತಿಗಳನ್ನು ಸಣ್ಣ ಕಲ್ಯಾಣ ಸಂಘಗಳ ರೂಪದಲ್ಲಿ ಪರಿಣತಗೊಳಿಸಬೇಕು, ಈ ಕಾರ್ಯವನ್ನು ನಾವು ಸಫಲತಾಪೂರ್ವಕವಾಗಿ ಮಾಡಿದೆವೆಂದರೆ, ಸಹಕಾರೀ ಆಂದೋಲನಕ್ಕೆ ಸಂಬಂಧಿಸಿದ ವಿಚಾರದಲ್ಲಿ ಅಧಿಕ ಸದ್ಭಾವನೆಯನ್ನು ಜನತೆಯಲ್ಲಿ ಹುಟ್ಟಿಸಲು ಸಮರ್ಥರೆನಿಸ ತ್ತೇವೆ.

ಅನ್ಯದೇಶಗಳಲ್ಲಿ ನಡೆಯುವ ಸಹಕಾರೀ ಆಂದೋಲನದೊಡನೆ ನಮ್ಮ ದೇಶದ ಆಂದೋಲನವೂ ನಿಕಟ ಸಂಪರ್ಕವಿಟ್ಟು

(೧೨ನೇ ಪುಟ ನೋಡಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O **MANGALORE.** Estd· **1931.**

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara

ವಾರದ ಸಣ್ಣ ಕಥೆ—

ಇದೀಗ ನ್ಯಾಯವಲ್ಲವೆ?

ಶ್ರೀ ಕೆ. ತಿಮ್ಮಪ್ಪ ಗಟ್ಟಿ.

ಹೂವಳ್ಳಿ ಜಮೀನ್ದಾರರಾದ ಶಂಕರರಾಯರು ಅಪಾರ ಐಶ್ವರ್ಯವಂತರು. ತಲೆ, ತಲಾಂತರಗಳಿಂದ ಇಡೀ ಹೂವಳ್ಳಿಯೇ ಅವರ ಮನೆತನಕ್ಕೊಳಗಾದ ಆಸ್ತಿ. ಇಡೀ ಹಳ್ಳಿಗೆ ಅವರೇ ಒಡೆಯರೂ, ಹಿರಿಯರೂ ಆಗಿದ್ದರು. ಧನ, ಕನಕ, ಆಳುಕಾಳುಗಳೇನೂ ಕೊರತೆಯಿರಲಿಲ್ಲ. ಇಡಿ ಹಳ್ಳಿಯಲ್ಲಿ ಅವರನ್ನುಳಿದರೆ ಉಳಿದವರೆಲ್ಲಾ ಅವರ ಒಕ್ಕಲು.

ಹೂವಳ್ಳಿ ಚಿಕ್ಕ ಹಳ್ಳಿಯೇನಲ್ಲ. ಆದರೆ ಹಳ್ಳಿಯ ಬಹುಭಾಗದಲ್ಲಿ ವಿಧವಿಧದ ವ್ಯವಸಾಯವನ್ನು ಶಂಕರರಾಯರೇ ಮಾಡಿಸುತ್ತಿದ್ದರು. ಹತ್ತು ಹನ್ನೆರಡು ಎಕರೆ ಸ್ಥಳದಲ್ಲಿ ಅಡಿಕೆ ಬಾಳೆ, ತೆಂಗಿನ ತೋಟಗಳು ಕಂಗೊಳಿಸುತ್ತಿದ್ದುವು. ಬೇರೆ ಇಂತಹ ತೋಟಗಳಿಗೆ ಹಳ್ಳಿಯಲ್ಲಿ ಕೊರತೆಯಿರಲಿಲ್ಲವಾದರೂ, ಈ ಹೊಸ ತೋಟದ ಅಂದಕ್ಕೆ ಯಾವುದೂ ಮುಟ್ಟುವಂತಿರಲಿಲ್ಲ. ಸರಹದ್ದಿನಲ್ಲೇ ದೊಡ್ಡದಾದ, ಉತ್ತಮವಾದ, ಪ್ರಖ್ಯಾತವಾದ ತೋಟವಾಗಿತ್ತು ಅದು. ಅದರ ಸೊಬಗೇ ಬೇರೆ! ಅದರ ನಳನಳಿಸುವ ಪ್ರೇಕ್ಷಣೀಯ ನೋಟವೇ ಬೇರೆ. ಪ್ರತಿ ದಿನ ಶಂಕರರಾಯರೇ ಬಂದು ತೋಟವನ್ನು ನೋಡಿ ಪರಿಶೀಲಿಸಿ ಯೋಗ್ಯ ಸಲಹೆಯನ್ನು ಕೆಲಸಗಾರರಿಗೀಯುತ್ತಿದ್ದರು ತೋಟವನ್ನು ನೋಡಿ ಹಿಗ್ಗಿ, ಹೆಮ್ಮೆಪಡುತ್ತಿದ್ದರು.

ತೋಟಕ್ಕೆ ನೀರು ಹಾಯಿಸಲು, ಸೊಪ್ಪು ಗೊಬ್ಬರವನ್ನು ಹಾಕಲು, ಬುಡ ಅಗೆದು ಬೇಲಿ ಭದ್ರಪಡಿಸಲು ನೂರಾರು ಕೂಲಿಯಾಳುಗಳಿದ್ದರು ಪ್ರತಿ ದಿನವು ತೋಟದಲ್ಲಿ ಒಂದಲ್ಲ ಒಂದು ಕೆಲಸ ನಡೆಯುತ್ತಲೇ ಇತ್ತು. ಇವೆಲ್ಲಾ ಜವಾಬ್ದಾರಿಗಳನ್ನು ವಹಿಸಿಕೊಂಡು, ತೋಟವನ್ನು ರಕ್ಷಿಸಿಕೊಳ್ಳಲು ಯೋಗ್ಯವಾದ ನಾಲ್ಕು ಒಕ್ಕಲುಗಳನ್ನು ಶಂಕರರಾಯರು ಕರೆಸಿ ತೋಟದ ವಠಾರದಲ್ಲಿ ಹಾಕಿಸಿದ್ದರು.

ಕಾಲಕಾಲಕ್ಕೆ ತಕ್ಕ ಕೆಲಸಗಳನ್ನು ಕೂಲಿಯಾಳುಗಳಿಂದ ಮಾಡಿಸುವುದು, ಫಲವಸ್ತುಗಳನ್ನು ಕೊಯಿಸಿ ಧನಿಗಳಿಗೆ ಒಪ್ಪಿಸುವುದು, ತೋಟವನ್ನು ಕಾಯುವುದು ಮತ್ತಿತರ ಎಲ್ಲಾ ಕೆಲಸಗಳನ್ನೂ ಈ ಒಕ್ಕಲುಗಳು ಕ್ರಮಾಗತವಾಗಿ ತಮ್ಮ ಧನಿಗಳ ಕೈಕೆಳಗೆ ನಿರ್ವಹಿಸಿಕೊಂಡು ಬರುತ್ತಿದ್ದರು. ಹೊರಗಿನ ಯಾವ ವ್ಯಕ್ತಿಗೂ ತೋಟದ ವಿಷಯದಲ್ಲಿ ತಲೆಹಾಕುವಂತಿರಲಿಲ್ಲ. ಭದ್ರವಾದ ಬೀಗ ರಾತ್ರಿಯಿಡೀ ತೋಟವನ್ನು ಕಾಯುತ್ತಿತ್ತಲ್ಲದೆ; ಉತ್ತಮವಾದ ಒಂದು ಜೊತೆ ನಾಯಿಗಳೂ, ದೃಢಕಾಯರಾದ ಆಳುಗಳೂ ಇದ್ದರು

ತೋಟದ ಬಡಗು ದಿಕ್ಕಿನಲ್ಲಿ ಹೊಲೆಯ ನಂಜನು ತೋಟವನ್ನು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿದ್ದನು. ಶಂಕರರಾಯರ ಮಾಮೂಲು ಒಕ್ಕಲು ಅಂತೋನಿ ಸೋಜನು ಪೂರ್ವದಿಕ್ಕಿನಲ್ಲಿ ವಾಸಿಸುತ್ತಿದ್ದನು. ದೃಢಕಾಯನಾದ ಮತ್ತು ಯಾವುದಕ್ಕೂ ಕೊರತೆಯಿಲ್ಲದ, ಸ್ವಲ್ಪ ಹಣವಂತನಾದ ರುದ್ರಪ್ಪ, ಎತ್ತರದ ತೆಂಕು ಭಾಗದ ಸುಸಜ್ಜಿತ ಮನೆಯಲ್ಲಿ ವಾಸಿಸುತ್ತಿದ್ದನು ಶಂಕರರಾಯರು ಬಂದರೆ ವಿಶ್ರಾಂತಿಗಾಗಿ ವಿಶ್ರಮಿಸುವ ಸ್ಥಳವೂ ರುದ್ರಪ್ಪನ ಮನೆಯೇ. ರುದ್ರಪ್ಪನ ಮನೆಗೆ ಹತ್ತಿರದಲ್ಲಿಯೇ ತಳವಾರ ರಂಗಪ್ಪನ ಮನೆ. ಇವರಿಷ್ಟು ಮಂದಿ ತೋಟದ ರಕ್ಷಣಾ ಪರಿವಾರದವರಾಗಿದ್ದರು. ಇವರಿಗೆ ಜೀವನ ನಿರ್ವಹಣಕ್ಕೆ ಬೇಕಾದ ಅನುಕೂಲತೆಗಳನ್ನೆಲ್ಲಾ ಶಂಕರರಾಯರೇ ಒದಗಿಸಿ ಕೊಡುತ್ತಿದ್ದರು.

— ೨ —

ಮಳೆಗಾಲ ಕಳೆದಿತ್ತು ಆಕಾಶದಲ್ಲಿ ಮೋಡಗಳು ಸೂತ್ರದಿಕ್ಕು ತಪ್ಪಿತಪ್ಪಿ ಕುರಿಗಳಂತೆ ಅಲ್ಲಲ್ಲಿ ಅಲೆಯುತ್ತಿದ್ದುವು. ಆದರೂ ಸುತ್ತುಮುತ್ತಲಿನ ವಾತಾವರಣ ಶಾಂತಿಯಿಂದ ಕೂಡಿತ್ತು ಜಿರಿ ಜಿರಿ ಮಳೆಯಿಂದ ಬೇಸರಗೊಂಡಿದ್ದ ಜನರ ಮನಸ್ಸು ನಿಶ್ಚಿಂತೆಯಿಂದ ಕೂಡಿತ್ತು. ಶಂಕರರಾಯರ ತೋಟದಲ್ಲಿ ಕೆಲಸ ಎಂದಿನಂತೆಯೇ ನಡೆಯುತ್ತಲೇ ಇತ್ತು. ಹಚ್ಚಹಸುರಾಗಿ ತೆಂಗು ಕಂಗುಗಳು ಕಂಗೊಳಿಸುತ್ತಾ ಗಾಳಿಗೆ ಓಲಾಡುತ್ತಿದ್ದುವು.

ಆಗಲೇ ಕೃಷ್ಣಪಕ್ಷ ಆರಂಭವಾಗಿತ್ತು. ಮಳೆಯು ಸುರಿಯುವುದೇನೋ ಎಂದೆನಿಸುವಂತೆ ಆಕಾಶದಲ್ಲಿ ಮೋಡವೂ ತುಂಬಿತ್ತು. ಮುಂಜಾವಿನ ಹಿಮದ ಮುಬ್ಬು, ಹೊಂಬಿಸಿಲಿಗೆ ಸರಿಯುತ್ತಿದ್ದಂತೆ ಶಂಕರರಾಯರ ತೋಟದಲ್ಲಿ ಗಲಭೆ ಕೇಳಿಸಿತು. ಬೊಬ್ಬೆಗಳೂ, ಉದ್ಗಾರಗಳೂ ಕೇಳಬರುತ್ತಿದ್ದುವು. 'ತೋಟ ಕಳವಾಗಿದೆಯಂತೆ' ಎಂದು ಸುದ್ದಿ ಹರಡಿತು.

'ತೋಟದಲ್ಲಿ ಫಲ ಸಿಕ್ಕಲಾರಂಭಿಸಿ ವರ್ಷವೊಂದಾಯಿತಷ್ಟೇ, ಕಳವೂ ಆರಂಭವಾಯಿತಲ್ಲಾ!"

"ಇಷ್ಟು ಸಾಹಸದಿಂದ ಕಬ್ಬಿಣದಂತಹ ಬೇಲಿಯನ್ನೂ ಗಣಿಸದೆ ಇಂತಹ ಧೈರ್ಯದ ಕೆಲಸವನ್ನು ಯಾರು ಮಾಡಿರಬಹುದು?"

"ಹುಂ, ಅಂತೂ ಕಳ್ಳರು ತುಂಬ ಹೋದರು."

ಎಂದು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಗೊಣಗುಟ್ಟುತ್ತಿದ್ದರು. ಶಂಕರರಾಯರಲ್ಲಿಗೆ ಯಾರೋ ಓಡಿ ಹೋಗಿ ಸುದ್ದಿ ಮುಟ್ಟಿಸಿದರು. ಅವರೂ ಬಂದೇ ಬಂದರು. ಬಂದೇನು? ಕಳ್ಳರೂ ಇಲ್ಲ ಕದ್ದ ಫಲವೂ ಇಲ್ಲ. ಅಡಿಕೆಯ ಗೊನೆ–ಗೊನೆಗಳೇ ಕತ್ತರಿಸಲ್ಪಟ್ಟಿದ್ದುವು! ಸುತ್ತುಮುತ್ತಲಿನ ಒಕ್ಕಲು ಮನೆಯನ್ನು ಪರಿಶೋಧಿಸಿದರು. ಎಲ್ಲೂ ಏನೂ ಪತ್ತೆಯಾಗಲಿಲ್ಲ. ಅಂತೂ ಕಳ್ಳ ಸಿಕ್ಕಲಿಲ್ಲ

ಶಂಕರರಾಯರ ತೋಟ ಕಳವಾಗಿ ೧೦—೧೫ ದಿನಗಳು ಕಳೆದುವು. ಅಂದಿನ ಗಲ್ಲು ಇಂದೂ ಆರಂಭವಾಗಿತ್ತು. ಹೌದು, ಮತ್ತೊಂದು ಬಾರಿ ತೋಟ ಕಳವಾಗಿತ್ತು. ನಿರಾತಂಕವಾಗಿ! ಹಾಕಿದ ಬೀಗ ಹಾಕಿದಂತೆಯೇ ಇತ್ತು; ಬೇಲಿ ಭದ್ರವಾಗಿಯೇ ಇತ್ತು; ಕಾವಲು ಎಂದಿನಂತೆಯೇ ಇತ್ತು. ಸಂಶಯ ಪಡಬಹುದಾದಂತಹ ವ್ಯಕ್ತಿಗಳು ಸುತ್ತುಮುತ್ತಲು ಇದ್ದಂತಿರಲಿಲ್ಲವಾದರೂ ಯಾರ್ಯಾರೋ ದೂರ ದೂರದ ಹಲವರ ಮೇಲೆ ಅಪವಾದದ ಗಾಳಿ ಬೀಸದಿರಲಿಲ್ಲ. ಕೆಲ ಕೆಲವು ನಾಲಗೆಗಳು ತಮ-ತಮಗೆ ತೋರಿದಂತೆ ಹೊರಳಾಡಿಕೊಂಡುವು. ಆದರೂ ಕಳ್ಳ ಸಿಕ್ಕಿರಲಿಲ್ಲ. ಧನಿಗಳಿಗೇನೋ ಸಂಶಯ; ತೋಟ ಭದ್ರವಾಗಿಯೇ ಇದೆ. ಬೀಗ ಹಾಕಿದಂತೆಯೇ ಇದೆ. ಹೇಗೆ ಕಳ್ಳ ಒಳಹೊಕ್ಕ?

ಎರಡು ಬಾರಿ ಅಡಗಿದ ಕಳ್ಳ, ಮೂರನೇ ಬಾರಿ ಹೆದರಿಕೆ ಎಂಬುದನ್ನು ತೊರೆದು, ನಿಃಸಂಕೋಚನಾಗಿ ತೋಟದೊಳ ನುಗ್ಗಿದ. ಸಿಕ್ಕಿ ಸಿಕ್ಕಿದುದನ್ನು ಧಾರಾಳವಾಗಿಯೇ ಸಾಗಿಸಿದ. ಈ ಬಾರಿ ಬಂದ ಶಂಕರರಾಯರು ಮಾತ್ರ ಬಹಳ ಸಿಟ್ಟುಗೊಂಡಿದ್ದರು. ಅವರೇನೂ ಅಂತಹ ಅಪಾರ ಕರುಣೆಯ ಮೂರ್ತಿಯಲ್ಲದಿದ್ದರೂ, ಈ ಬಾರಿ ಅವರಲ್ಲಿ ಕರುಣೆಯೇ ಇರಲಿಲ್ಲ.

"ಇದುವರೆಗೂ ಹಾಕಿದ ಬೀಗ ಹಾಕಿದಂತೆಯೇ ಇತ್ತು. ಕಾವಲು ಕಾಯುತ್ತಲೇ ಇದ್ದರು. ಎಂದ ಮೇಲೆ ಯಾರು ಈ ಕಳ್ಳ? ನಮ್ಮೊಳಗಿನವನೇ ಯಾರೋ ಆಗಿರಬೇಕೆಂದು ಕಾಣುತ್ತದ" ಎಂದರು ಶಂಕರರಾಯರು ಸಿಟ್ಟಿನಿಂದ.

"ಹೌದು, ಹೌದು, ಸರಿ ಇರಬಾರದೇಕೆ?" ಕೆಲವರು ಆಲೋಚಿಸಿದರು.

ಸರಿ, ಶೋಧಿಸಿದರು ಎಲ್ಲೆಡೆಯಲ್ಲಿಯೂ, ಯಾವ್ಯಾವುದೋ ಸಂಶಯದ ಮೇಲೆ ಯಾರ್ಯಾರನ್ನೋ ಆರೋಪಿಸಲಾಯಿತು. ಆದರೂ ಧನಿಗಳು ಸಂಶಯಪಟ್ಟ ಕಾರಣ ಹೊಲೆಯ ನಂಜನನ್ನೇ ಹಿಡಿತರಿಸಿ ವಿಚಾರಿಸಲಾಯಿತು. ಅವನೇನೂ ಬಾಯಿ ಬಿಡಲಿಲ್ಲ. "ಹುಂ, ಇವನೇ ಕಳ್ಳ, ಹೇಗೆ ಬಾಯಿ ಮುಚ್ಚಿಕೊಂಡಿದ್ದಾನೆ ನೋಡಿ," ಎಂದರೆಲ್ಲರೂ. ಎರಡೇಟೂ ಬಿಗಿದರು ನಂಜನ ಹೆಂಡತಿ ಮಕ್ಕಳು ಗೋಳೋ ಎಂದು ಅತ್ತರು. ಕಡೆಗೆ ಪೆಟ್ಟಿನ ಬಿಸಿಯನ್ನು ತಾಳುವುದು ಅವನಿಂದಾಗಲಿಲ್ಲ. "ಹೌದ್ಬುದ್ಧಿ, ನಾನು ಪಾಪಿ ಸತ್ಯ ಹೇಳ್ತೇನೆ ಬುದ್ಧಿ, ಕ್ಷಮಿಸಿ' ಎನ್ನುತ್ತಾ ಶಂಕರರಾಯರೆದುರು ಬೋರಲಾಗಿ ಅಡ್ಡಬಿದ್ದ.

'ರುದ್ರಪ್ಪ ಸಾವ್ಕಾರ್ರು ಹೇಳಿದ್ರು ಬುದ್ಧಿ, ನನ್ಗೇ . ..” ನಂಜಪ್ಪ ವಿವರಿಸಲಾರಂಭಿಸಿದ. ಶಂಕರರಾಯರಿಗೆ ಗರಬಡಿದಂತಾಯಿತು ಎಲ್ಲರನ್ನೂ ದೂರ ಹೋಗಹೇಳಿ, ನಂಜನನ್ನು ಅಂತರಂಗದಲ್ಲೇ ವಿಚಾರಿಸಿದರು, ಶಂಕರರಾಯರು ನಂಜಪ್ಪ ಹೇಳಿದಂತೆ, ರುದ್ರಪ್ಪನ ಪ್ರೇರೇಪಣೆಯಿಂದ, ಅಂತೋನಿ ಸೋಜನ ಸಲಹೆಯಿಂದ ಈ ಕೆಲಸ ಮಾಡಲಾಯಿತೆಂದೂ, ರುದ್ರಪ್ಪನೇ ಆಶೆತೋರಿಸಿ, ಧೈರ್ಯ ಹುಟ್ಟಿಸಿದನೆಂದೂ, ಫಲವಸ್ತುಗಳನ್ನು ದೂರದ ಪೇಟೆಗೆ ಸಾಗಿಸಿ ಮಾರಲಾಗಿದೆಯೆಂದೂ ನಂಜನು ಹೇಳಿಕೆಯಿತ್ತನು ರುದ್ರಪ್ಪನೇ ಯಜಮಾನನಂತೆ ವರ್ತಿಸಿ ಪ್ರಧಾನ ಕಾರ್ಯಭಾರವನ್ನು ಅಂತೋನಿ ಸೋಜನು ವಹಿಸಿಕೊಂಡು ತನ್ನಿಂದ ಬೆನ್ನು ಮುರಿಯುವಂತೆ ಕೆಲಸ ಮಾಡಿಸಿದರೆಂದು, ನಂಜನು ಅತ್ತು, ಕರೆದು ಹೇಳಿಕೊಂಡನು. ಇದನ್ನು ಕೇಳಿದ ಶಂಕರರಾಯರಿಗೆ ತಮ್ಮ ಪ್ರಧಾನ ಕಾರ್ಯಸ್ಥ, ತೋಟದ ಮುಖ್ಯ ಆಡಳಿತದಾರ ರುದ್ರಪ್ಪನ ಮೇಲೂ ಕರುಣೆ ಹುಟ್ಟಲಿಲ್ಲ. ರುದ್ರಪ್ಪನನ್ನೂ, ಅಂತೋನಿ ಸೋಜನನ್ನೂ ಕರೆಸಿ ನಾಲ್ಕೇ ದಿನಗಳೊಳಗೆ ಒಕ್ಕಲೆದ್ದು ಹೋಗಬೇಕೆಂದು ಅಪ್ಪಣೆಯಿತ್ತರು.

"ಮನೆಯೊಳಗಿನ ಕಳ್ಳನನ್ನು ಊರಲ್ಲಿ ಹುಡುಕಿದರೆ ಎಲ್ಲಿ ಸಿಕ್ಕುವನು? ಅಂತೂ ಕಳ್ಳ ಸಿಕ್ಕಿದ" ಎಂದು ಜನರು ಆಡಿಕೊಂಡರು. ಶಂಕರರಾಯರೂ ತಮ್ಮ ಮನೆಗೆ ಹೊರಟರು, ಜನರು ತಮ ತಮಗೆ ತೋರಿದಂತೆ ಆಡಿಕೊಳ್ಳುತ್ತಾ ಚದರಿದರು ದಾರಿಯಲ್ಲಿ ಶಂಕರರಾಯರೊಡನೆ ಯಾರೋ ಬಂದು ಏನೋ ಗುಸಗುಟ್ಟಿದರು ಅವರು ಹಿಂದಿರುಗಿಬಂದರು. ಅಂತೋನಿ ಸೋಜನ ಮನೆಯೊಳಗೆ ಆಳುಗಳನ್ನು ನು

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 7/8; ¼ ರಾತಲಿಗೆ ರೂ 2/0

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಉಡುಪಿ ಕೃಷ್ಣ ಭವನ ಸ್ಟಾಲ್, ಮಂಗಳೂರು.
2. ಶ್ರೀ ರಾಮ್ಸ್ ಫಾರ್ಮೆಸಿ, ಮಂಗಳೂರು.
3 ವಿ. ವಿ. ಶೆಣೈ, ಕಾರ್ಕಳ.
4. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.



ಶಾಖದಿಂದ ವಿದ್ಯುತ್ತನ್ನು ಪಡೆಯಬಹುದು!

ಉಷ್ಣಪರಿವರ್ತಕದ ಶೋಧ

ಶಾಖವನ್ನು ಯಾವ ಉಪ ರಾಸಾಯನಿಕ ಕ್ರಿಯೆಗಳಿಲ್ಲದೇ ನೇರವಾಗಿ ವಿದ್ಯುತ್ತಾಗಿ ಪರಿವರ್ತನೆ ಮಾಡುವ ಒಂದು ನೂತನ ಇಲೆಕ್ಟ್ರಾನಿಕ್ ಸಾಧನವೊಂದನ್ನು ನ್ಯೂಯೋರ್ಕಿನ ಜನರಲ್ ಇಲೆಕ್ಟ್ರಿಕ್ ಪರಿಶೋಧನಾ ಪ್ರಯೋಗಶಾಲೆಯು ಸಿದ್ಧಪಡಿಸಿದೆ. ಈ ಹೊಸ ಯಂತ್ರವನ್ನು ನಿರ್ಮಿಸಿದ ಡಾ. ವೋಲ್ಕ್ನಿಸಿ ವಿಲ್ಸನ್ ಅವರು ಪ್ರಯೋಗಶಾಲೆಯ ಸಿಬ್ಬಂದಿಗೆ ಸೇರಿದವರು. ಈ ಪರಿಶೋಧಿತ ಯಂತ್ರದ ಹೆಸರು "ಉಷ್ಣ ಪರಿವರ್ತಕ" ಎಂದಿರುವುದು.

ಪ್ರಾಯೋಗಿಕವಾಗಿ ನಿರ್ಮಿಸಲಾದ ಉಷ್ಣ ಪರಿವರ್ತಕಗಳು ತಮಗೆ ದೊರೆತ ಉಷ್ಣದಲ್ಲಿ ಸೇಕಡಾ ೮ಕ್ಕಿಂತಲೂ ಹೆಚ್ಚಿನ ಭಾಗವನ್ನು ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವಲ್ಲಿ ಜಯಶೀಲವಾಗಿವೆ. ಇದೇ ರೀತಿಯಲ್ಲಿ ಯಂತ್ರದಲ್ಲಿ ಮತ್ತಷ್ಟು ಪ್ರಯೋಗಗಳು ನಡೆದನಂತರ ಕಾವಿನಲ್ಲಿ ನೂರಕ್ಕೆ ಮೂವತ್ತರಷ್ಟನ್ನು ನೇರವಾಗಿ ವಿದ್ಯುಚ್ಛಕ್ತಿಯಾಗಿ ಪರಿವರ್ತನೆ ಮಾಡುವ ಸಾಮರ್ಥ್ಯವು ಈ ಉಷ್ಣಪರಿವರ್ತಕ ಯಂತ್ರಗಳಿಗೆ ಬರುವುದೆಂದು ನಂಬುಗೆಯಿದೆ.

ಆದುದರಿಂದ, ನ್ಯೂಕ್ಲಿಯರ್ ರಿಯಾಕ್ಟರಿನಲ್ಲಿ ಉತ್ಪನ್ನವಾಗುವ ಶಾಖವನ್ನು ನೇರವಾಗಿ ವಿದ್ಯುತ್ತಾಗಿ ಪರಿವರ್ತಿಸುವಲ್ಲಿ ಈ ಯಂತ್ರವು ನೆರವಾಗಬಹುದು. ಅಂದರೆ, ಪರಮಾಣು ವಿದ್ಯುಚ್ಛಕ್ತಿಯ ಉತ್ಪನ್ನದ ವೆಚ್ಚವು ಇಳಿಮುಖವಾಗುವುದರಿಂದ, ಪರಮಾಣು ಶಕ್ತಿಯ ಶಾಂತಿಯುತ ಉಪಯೋಗಗಳ ಕ್ಷೇತ್ರದಲ್ಲಿ ಮಹತ್ತರವಾದ ಕ್ರಾಂತಿಯುಂಟಾದೀತೆಂದು ವಿಜ್ಞಾನಿಗಳು ನಂಬಿದ್ದಾರೆ. ಈ ಉಷ್ಣಪರಿವರ್ತಕದ ಸಂಶೋಧನೆಯಿಂದಾಗಿ ಚಲನೀಯ ಭಾಗಗಳು ಯಂತ್ರಗಳನ್ನು ಬಳಸದೇ ಶಾಖದಿಂದ ನೇರವಾಗಿ ವಿದ್ಯುತ್ತನ್ನೊದಗಿಸುವ ಹೊಸ ತಿಳುವಳಿಕೆಯು ಒದಗಿಬಂದಿದೆ. ಇಂತಹ ತಿಳುವಳಿಕೆಯು ಇನ್ನೂ ಮುಂದಕ್ಕೆ ಹೆಚ್ಚುತ್ತ ಹೋಗಬಹುದು. ಮತ್ತು ಅದರಿಂದ ತುಂಬ ಲಾಭವೂ ದೊರೆಯಬಹುದು. ಆದುದರಿಂದ, ಈ ಶೋಧನೆಯು ವಿಶ್ವಕ್ಕೊಂದು ಮಹತ್ವದ ಕಾಣಿಕೆಯಾಗಿದೆ.

ಶಾಖವನ್ನು ವಿದ್ಯುತ್ತಾಗಿ ಪರಿವರ್ತಿಸುವ ಇತರ ವಿಧಾನಗಳಲ್ಲಿ ಶಕ್ತ್ಯುತ್ಪಾದಕ ಚಕ್ರ ಯಂತ್ರಗಳಿರುವ ಯಂತ್ರಸ್ಥಾವರಗಳು ಅಥವಾ ಗ್ಯಾಸೋಲೀನ್ ಅಂತರ್ದಹನದಿಂದ ಅನಿಲಗಳು ವಿಸ್ತರಿಸುವ ವ್ಯವಸ್ಥೆಯುಳ್ಳ ಗ್ಯಾಸೋಲೀನ್ ಯಂತ್ರ ಉತ್ಪಾದಕಗಳು—ಎಂಬ ಚಲನೀಯ ಯಂತ್ರಗಳಿರಬೇಕು.

ಕಾದ ಲೋಹದ ಹೊರ ಮೈಯಿಂದ ವಿದ್ಯುತ್ ಕಣಗಳನ್ನು ಮರಳಿಸಿ ತೆಗೆದು, ನೇರವಾಗಿ ಅವುಗಳಿಂದ ವಿದ್ಯುತ್ಪ್ರವಾಹವನ್ನು ಉತ್ಪಾದಿಸಲು ಸಾಧ್ಯವಿದೆ ಎಂಬುದನ್ನೂ ಈ ಉಷ್ಣಪರಿವರ್ತಕವು ಸಾಧಿಸಿ ಕೊಟ್ಟಿರುತ್ತದೆ.

ಈ ಯಂತ್ರದಲ್ಲಿ ಎರಡು ಲೋಹದ ವಿದ್ಯುದ್ದ್ವಾರಗಳಿವೆ. ಒಂದನ್ನು ಇನ್ನೊಂದಕ್ಕಿಂತ ಕಡಿಮೆ ಶಾಖದಲ್ಲಿ ಉಳಿಸಲಾಗುವುದು. ಉಳಿದೊಂದನ್ನು ಫಾರನ್ಹೈಟ್ ೨೫೦೦ ಡಿಗ್ರಿಗಳ ವರೆಗೆ ಅಧಿಕ ಶಾಖಕ್ಕೆ ಗುರಿಮಾಡಲಾಗುವುದು. ಹೆಚ್ಚಿನ ಶಾಖದ ವಿದ್ಯುದ್ದ್ವಾರದಲ್ಲಿರುವ ಶಾಖವು ವಿದ್ಯುದ್ದ್ವಾರ ರಚಿತವಾಗಿರುವ ಲೋಹದಿಂದ ವಿದ್ಯುತ್ಕಣಗಳನ್ನು ಕುದಿಯೆಬ್ಬಿಸುವುದು. ಅನಂತರ ಈ ವಿದ್ಯುತ್ಕಣಗಳು ಒಂದು ವಾಹಕ ತಂತುವಿನ ಮೂಲಕವಾಗಿ ಇನ್ನೊಂದು ಕಡಿಮೆ ಶಾಖದ ವಿದ್ಯುದ್ದ್ವಾರಕ್ಕೆ ಪ್ರವಾಹವಾಗಿ ಹರಿಯುವಂತೆ ತಕ್ಕ ಏರ್ಪಾಡನ್ನು ಮಾಡಲಾಗುವುದು. ವಿದ್ಯುತ್ಕಣಗಳ ಪ್ರವಾಹವೇ ವಿದ್ಯುತ್ಪ್ರವಾಹವನ್ನು ಸೃಷ್ಟಿಸುತ್ತದೆ. ತಂತು ಅಥವಾ ಬೇರಾವುದಾದರೂ ಸೂಕ್ತವಾಹಕಗಳಲ್ಲಿ ವಿದ್ಯುತ್ಕಣಗಳು ಹರಿಯುವುದೆಂದಾದರೆ, ಆಗ ಅದುವೇ ವಿದ್ಯುತ್ಪ್ರವಾಹವಾಗುವುದು.

ತಮ್ಮ ಮಹಾ ಸಂಶೋಧನೆಗಳನ್ನು ಸರಳವಾದ ನುಡಿಗಳಲ್ಲಿ ವಿವರಿಸುತ್ತ ಡಾ. ವಿಲ್ಸನ್‌ರವರು, ಎರಡು ವಿದ್ಯುದ್ದ್ವಾರಗಳ ನಡುವೆ ಹರಿಯುವ ವಿದ್ಯುತ್ಕಣಗಳ ಪ್ರವಾಹ, ಬೆಟ್ಟದಿಂದ ಕೆಳಕ್ಕೆ ಧುಮುಕುವ ನೀರಿನಿಂದ ಉತ್ಪನ್ನವಾಗುವ ಶಕ್ತಿಗೆ ಸರಿಸಮವಾಗಿದೆ ಎನ್ನಬಹುದೆಂದಿರುವರು. ಬೆಟ್ಟದಿಂದ ಕೆಳಕ್ಕೆ ನೀರು ಹರಿವಂತೆ ಮಾಡಿದರೆ, ಅದು ತನ್ನ ಕೆಲಸ ಮಾಡಬಲ್ಲುದು. ಆದರೆ, ನೇರವಾದ, ಅಡೆತಡೆಗಳಿಲ್ಲದ ನಯವಾದ ಪ್ರವಾಹದ ಪಾತ್ರ ಅದಕ್ಕಿರಬೇಕು. ಈ ಹೊಸ ಉಷ್ಣ ಪರಿವರ್ತಕವು ಬಿಸಿಯೇರಿದ ವಿದ್ಯುದ್ದ್ವಾರದಿಂದ ತಣ್ಣಗಿನ ವಿದ್ಯುದ್ದ್ವಾರದ ಕಡೆಗೆ ಹರಿಯುವ ವಿದ್ಯುತ್ಕಣಗಳ ಪ್ರವಾಹದ ಪಾತ್ರವನ್ನು ಸುಗಮಗೊಳಿಸುತ್ತದೆ. ಮತ್ತು ವಿದ್ಯುತ್ ಸುತ್ತಿನಲ್ಲಿ ಉಪಯುಕ್ತ ಕೆಲಸ ಮಾಡುವ ಮುನ್ನವೇ ಶಕ್ತಿಯನ್ನು ಹೀರಿ ಬಿಡುತ್ತಿದ್ದ ಅಡಚಣೆಗಳನ್ನು ನಿವಾರಿಸುತ್ತದೆ ಎಂದು ಡಾ. ವಿಲ್ಸನ್ ಅಭಿಪ್ರಾಯಪಟ್ಟಿದ್ದಾರೆ. ಅಂತೂ ಡಾ. ವಿಲ್ಸನರ ಶೋಧನೆಯೊಂದು ಮಹತ್ವ ಸಹಿತವಾದುದೆನ್ನಲು ಅಭ್ಯಂತರವಿಲ್ಲ.

ವಾರದ ಮಹಾನುಭಾವ—

ಭಾರತರತ್ನ - ಮಹರ್ಷಿ ಕರ್ವೆ

ಬಿ. ನಾರಾಯಣ ಬಲ್ಲಾಳ

ನಾಳೆ ನಮ್ಮ ದೇಶದ ಓರ್ವ ಪ್ರಮುಖ ವ್ಯಕ್ತಿಯ ಶತಮಾನೋತ್ಸವವು ಆಚರಿಸಲ್ಪಡುವುದು. ಆ ಮಹಾ ಪುರುಷನೇ— ಮಹರ್ಷಿ ಶ್ರೀ ಧೊಂಡೋ ಕೇಶವ ಕರ್ವೆಯವರು.

ಕಳೆದ ಶತಮಾನದಲ್ಲಿ ಮಹಾರಾಷ್ಟ್ರವು ಕರ್ಮವೀರರುಗಳ ಒಂದು ಸೇನೆಯನ್ನು ಉತ್ಪನ್ನ ಮಾಡಿತು. ಆ ಸೇನೆಯ ಜನರ ಕಾಲು ಭೂಮಿಯ ಮೇಲಿದ್ದರೆ, ಅವರ ಕಣ್ಣುಗಳು ಆಕಾಶದ ನಕ್ಷತ್ರಗಳೊಡನೆ ಮಾತನಾಡುತ್ತಿದ್ದುವು. ಈ ವ್ಯಾವಹಾರಿಕ ಆದರ್ಶವಾದಿಗಳ ಸೇನೆಯ ಒಂದಿಬ್ಬರು ಮಹಾರಥಿಗಳು ಇನ್ನೂ ಉಳಿದಿದ್ದಾರೆ. ಅವರಲ್ಲಿ ಒಬ್ಬರು ಮಹರ್ಷಿ ಕರ್ವೆ. ನೊನ್ನೆ ಗಣತಂತ್ರ ದಿವಸ ರಾಷ್ಟ್ರಪತಿಯವರು ಇವರಿಗೆ "ಭಾರತ ರತ್ನ" ಪದವಿಯನ್ನಿತ್ತು ಅವರ ಪ್ರತಿ ರಾಷ್ಟ್ರದ ಶ್ರದ್ಧೆಯ ಪರಿಚಯ ಮಾಡಿಕೊಟ್ಟರು.

ಮೂರು ವರ್ಷಗಳ ಮೊದಲು ಮಹರ್ಷಿಯವರಿಗೆ "ಪದ್ಮ ವಿಭೂಷಣ" ಪದವಿಯನ್ನಿತ್ತಾಗ ಜನರಿಗೆ ಇವರನ್ನು ಗಣತಂತ್ರದ ಸರ್ವೋಚ್ಚ ಪದವಿಯಿಂದ ಏಕೆ ವಿಭೂಷಿತ ಮಾಡಲಿಲ್ಲ? ಎಂದು ಬಹಳ ಆಶ್ಚರ್ಯವಾಯಿತು. ಆದರೆ ಒಂದು ದೃಷ್ಟಿಯಿಂದ ಇದು ಸರಿಯೆಂದೇ ಹೇಳಬಹುದು. ಒಂದು ಪಕ್ಷ ಆಗಲೇ ಕರ್ವೆಯವರಿಗೆ "ಭಾರತ ರತ್ನ" ಪದವಿ ಕೊಡುತ್ತಿದ್ದರೆ, ಈ ವರ್ಷ ಅವರಿಗೆ ಅರ್ಪಿಸಲು ರಾಷ್ಟ್ರದೊಡನೆ ಪ್ರೇಮ ಮತ್ತು ಶ್ರದ್ಧೆಯ ವಿನಹಾ ಉಳಿದುದಾದರೂ ಏನು?

ಇವರು ರತ್ನಾಗಿರಿಯ ಬಡ ಕುಟುಂಬವೊಂದರಲ್ಲಿ ೧೮ನೇ ಏಪ್ರಿಲ್, ೧೮೫೮ರಂದು ಹುಟ್ಟಿದರು. ಇವರ ತಂದೆ-ತಾಯಿಗಳು ಧನಿಕರಲ್ಲದಿದ್ದುದರಿಂದ ಇವರಿಗೆ ತನ್ನ ಬಿ. ಎ. ಪರೀಕ್ಷೆಯನ್ನು ೨೬ನೇ ವರ್ಷದಲ್ಲಿ ಮುಗಿಸಬೇಕಾಗಿ ಬಂತು. ಇವರು ಬಿ. ಎ. ಪಾಸು ಮಾಡಿದ ಬಳಿಕ, ಕೆಲವು ದಿನಗಳ ಪರ್ಯಂತ ಗಣಿತದ ಅಧ್ಯಾಪಕರಾಗಿದ್ದು, ಕೊನೆಗೆ ಫರ್ಗ್ಯುಸನ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಿಸಲ್ಪಟ್ಟರು.

ಹೆಚ್ಚು—ಕಡಮೆ ೨೦ ವರ್ಷಗಳ ಮೊದಲು ಕರ್ವೆಯವರ ಆತ್ಮ ಚರಿತ್ರೆಯ ಮುನ್ನುಡಿ ಬರೆಯುತ್ತಾ ಓರ್ವ ಪ್ರಸಿದ್ಧ ಆಂಗ್ಲ ಶಿಕ್ಷಣಜ್ಞನು ಅವರ ಹೋಲಿಕೆಯನ್ನು ಅರ್ಜುನನೊಡನೆ ಮಾಡಿದ್ದನು. ಶಸ್ತ್ರಪ್ರತಿಯೋಗಿತೆಯಲ್ಲಿ ಅರ್ಜುನನಿಗೆ, ಮರದ ಮೇಲೆ ಕುಳಿತಿರುವ ಹಕ್ಕಿಯ ಕಣ್ಣಿಗೆ ಬಾಣ ಹೊಡೆಯಬೇಕೆಂದು ಹೇಳಿದಾಗ, ಆ ಕ್ಷಣದಿಂದಲೇ ಆತನ ದೃಷ್ಟಿಗೆ ಹಕ್ಕಿಯ ಕಣ್ಣುಗಳು ವಿನಹಾ ಬೇರೆ ಯಾವುದೇ ವಸ್ತುಗಳ ಅಸ್ತಿತ್ವವು ಕಾಣದಾದುವು. ಇದೇ ರೀತಿ ಕರ್ವೆಯವರು ಸ್ತ್ರೀ ಜಾತಿಯ ಸಮು

(೧೧ನೇ ಪುಟ ನೋಡಿರಿ)

...ನೋವುಗಳ ಅತ್ಯುತ್ತಮ ಸಂಹಾರಿಣಿ.

ಅಮೃತಾಂಜನ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ಮೂರು ಹೊಸ ಶಾಖೆಗಳು

ಬೆಳ್ಗಾಂ (ಶಾಪುರ)
ಬೆಳ್ಗಾಂ (ಕೇಂಪ್)
ತಿಪಟೂರು (ತುಮ್ಕೂರು ಜಿಲ್ಲೆ)
ತಾ. 27-3-'58ರಲ್ಲಿ ತೆರೆಯಲ್ಪಟ್ಟವು.

ಒಟ್ಟು ಶಾಖೆಗಳು: 109

ಜುಮ್ಲಾ ಚಲಾವಣಾನಿಧಿ ರೂ. 12·75 ಕೋಟಿಗೂ ಮಿಕ್ಕಿದೆ.

ಟಿ. ಎ. ಪೈ, ಬಿ. ಕಾಂ. (ಬೊಂ.)
ಎ. ಐ. ಬಿ. ಬಿ. ಯಫ್. ಆರ್. ಇ. ಯಸ್. (ಲಂಡನ್)
ಜನರಲ್ ಮೆನೇಜರ್.

ಡಾ। ಟಿ. ಮಾಧವ ಪೈ,
ಎಂ. ಬಿ. & ಬಿ. ಎಸ್.
ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಳಿಗ ಪುಸ್ತಕಗಳು, ಸೊಸೈಟಿ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರಿ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಪುಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಭಾರತದಲ್ಲಿ ಉಗಿಬಂಡಿಗಳ ನಿರ್ಮಾಣ –

ಚಿತ್ತರಂಜನ ಇಂಜಿನ್ ಕಾರಖಾನೆ

ಶ್ರೀ. ಕೆ. ರಾಮಚಂದ್ರನ್ (ಚಿತ್ತರಂಜನ ಕಾರಖಾನೆ)

ಚಿತ್ತರಂಜನ ರೈಲ್ವೆ ಎಂಜಿನ್ ಕಾರ್ಖಾನೆಯು, ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಿರಂತರವಾದ ಪ್ರಗತಿಯನ್ನು ಸಾಧಿಸಿದುದರಿಂದ, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ ಮಹತ್ತರವಾದ ಕಾರ್ಯಕ್ರಮವನ್ನು ಸಿದ್ಧಗೊಳಿಸಲು ಈ ಕಾರ್ಖಾನೆಗೆ ಧೈರ್ಯಬಂದಿದೆ ಮೂಲತಃ ವರ್ಷಕ್ಕೆ ಸರಾಸರಿ ೧೨೦ ರೈಲ್ವೆ ಎಂಜಿನ್‌ಗಳನ್ನು ತಯಾರಿಸಬೇಕೆಂದು ಈ ಕಾರ್ಖಾನೆಯು ಗುರಿಯನ್ನಿಟ್ಟುಕೊಂಡಿತ್ತು. ೧೯೫೫ರ ಮೇ ತಿಂಗಳಲ್ಲಿ ಈ ಕಾರ್ಖಾನೆಯು ಈ ಗುರಿಯನ್ನು ದಾಟಿತು. ಪ್ರತಿ ವರ್ಷವೂ ಚಿತ್ತರಂಜನ ರೈಲ್ವೆ ಎಂಜಿನ್ ಕಾರ್ಖಾನೆಯ ಉತ್ಪಾದನೆಯು ಏರುತ್ತಿದೆ ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ ಚಿತ್ತರಂಜನ ಕಾರ್ಖಾನೆಯಿಂದ ೩೪೧ ರೈಲ್ವೆ ಎಂಜಿನ್‌ಗಳು ಸಿದ್ಧಗೊಂಡವು.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಚಿತ್ತರಂಜನ ಕಾರ್ಖಾನೆಯು ತಿಂಗಳೊಂದಕ್ಕೆ ೧೪ರಂತೆ ಬ್ರಾಡ್‌ಗೇಜ್ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವುದರ ಜೊತೆಗೆ, ಮುಂದಿನ ಎರಡು, ಮೂರು ವರ್ಷಗಳೊಳಗೆ, ತಯಾರಿಸುವ ರೈಲ್ವೆ ಎಂಜಿನ್‌ಗಳ ಸಂಖ್ಯೆಯನ್ನು ಹೆಚ್ಚಿಸಿ, ವರ್ಷಕ್ಕೆ ೨೦೦ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವ ಗುರಿಯನ್ನಿಟ್ಟುಕೊಂಡಿದೆ. ಸ್ವಪರಿಪೂರ್ಣತೆಯನ್ನು ಸಾಧಿಸುವದೃಷ್ಟಿಯಿಂದ ಚಿತ್ತರಂಜನದಲ್ಲಿ ಹಾಗೂ ಇತರಕಾರ್ಖಾನೆಗಳಲ್ಲಿ, ದೇಶದಲ್ಲಿ ದೊರೆಯಬಹುದಾದಂತಹ ಎಲ್ಲಾ ಸಾಧನ ಸಂಪತ್ತುಗಳನ್ನು ಉಪಯೋಗಿಸಿಕೊಂಡು, ರೈಲ್ವೆ ಎಂಜಿನ್ನಿನ ಎಲ್ಲಾ ಭಾಗಗಳನ್ನೂ ತಯಾರಿಸುವುದು ಅಗತ್ಯವಾಗುವುದು; ಅದರ ಜೊತೆಗೆ, ಸಾಧ್ಯವಾದಷ್ಟೂ ಹೊರಗಡೆಯಿಂದ ಬಿಡಿ ಭಾಗಗಳು ಹಾಗೂ ಕಚ್ಚಾ ಸಾಮಗ್ರಿಗಳ ಆಮದನ್ನು ನಿಲ್ಲಿಸಬೇಕಾಗುವುದು.

ಗುರಿಯಲ್ಲಿ ಇಟ್ಟುಕೊಳ್ಳಲಾಗಿದ್ದ ಉತ್ಪಾದನೆಯನ್ನು ಈ ಕಾರ್ಖಾನೆಯು ದಾಟಿರುವುದು ಸಂತೋಷದ ವಿಷಯ. ೧೯೫೭ರ ಆಗಸ್ಟ್ ತಿಂಗಳಿಂದ ಪ್ರತಿ ತಿಂಗಳೂ ೧೪ ರೈಲ್ವೆ ಎಂಜಿನ್‌ಗಳನ್ನು ಕಾರ್ಖಾನೆಯು ತಯಾರಿಸುತ್ತಿದೆ ೧೯೫೮ರ ಮಾರ್ಚಿ ೩೧ರ ವರೆಗೆ ೬೬೩ ರೈಲ್ವೆ ಎಂಜಿನ್‌ಗಳನ್ನು ಈ ಕಾರ್ಖಾನೆಯು ಉತ್ಪಾದಿಸಿದೆ. ಅವುಗಳೆಲ್ಲ ವಿವಿಧ ವಲಯ ರೈಲ್ವೆಗಳಲ್ಲಿ ಬಳಕೆಯಲ್ಲಿವೆ

ಇದು ವರೆಗೂ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದ್ದ ಕೆಲವು ವಸ್ತುಗಳನ್ನು. ಈ ಕಾರ್ಖಾನೆಯಲ್ಲಿಯೇ ಈಗ ಕೆಲಸಗಾರರು ತಯಾರಿಸುತ್ತಿರುವರು ಸುಯೋಜ ಕಾಲುವೆ ವಿಷಯ ಹಾಗೂ ವಿದೇಶಿ ಧನವಿನಿಮಯ ತೊಂದರೆಗಳಿಂದಾಗಿ, ಚಿತ್ತರಂಜನ ಕಾರ್ಖಾನೆಯು, ತನ್ನ ಉತ್ಪಾದನಾ ಗುರಿಯನ್ನು ಉಳಿಸಿಕೊಳ್ಳಲು ತುಂಬಾ ಕಷ್ಟಪಡಬೇಕಾಯಿತು. ಸ್ವದೇಶದಲ್ಲಿ ಯಂತ್ರ ಸಾಮಗ್ರಿಗಳ ತಯಾರಿಕೆಯನ್ನು ಅಭಿವೃದ್ಧಿಪಡಿಸುವ ಪ್ರಯತ್ನಕ್ಕೆ ಉತ್ತಮ ಪ್ರತಿಫಲ ದೊರಿತಿದೆ.

ಅಗತ್ಯವು ಅನ್ವೇಷಣೆಯ ಬೀಜಾಂಕುರ. ಈ ಕಾರ್ಖಾನೆಯ ಎಲ್ಲಾ ವರ್ಗಗಳ ಕೆಲಸಗಾರರು ದುಡಿಮೆಯ ಪರಿಣಾಮವಾಗಿ, ೧೯೫೬—೫೭ರ ಹಣಕಾಸಿನ ವರ್ಷದಲ್ಲಿ ೧೭೪ ರೈಲ್ವೆ ಎಂಜಿನ್‌ಗಳನ್ನು ತಯಾರಿಸಲಾಯಿತು ಟಾಟಾ ಹಾಗೂ ಇತರ ಸ್ವದೇಶಿ ಕಾರ್ಖಾನೆಗಳಿಂದ ನೆರವು ಪಡೆದು, ಕೆಲವು ಸಾಮಗ್ರಿಗಳನ್ನು ಈ ಕಾರ್ಖಾನೆಯಲ್ಲಿಯೇ ತಯಾರಿಸಿ, ನಿರೀಕ್ಷೆಗಿಂತ ಮುಂಚಿತವಾಗಿಯೇ ಕೆಲವು ಬಿಡಿ ಭಾಗಗಳ ಆಮದನ್ನು ಈ ಕಾರ್ಖಾನೆ ನಿಲ್ಲಿಸಿತು

ದುರ್ಗಾಪುರ, ಭಿಲೈ ಮತ್ತು ರೂರ್ಕೆಲಾಗಳಲ್ಲಿ ಹೊಸ ಉಕ್ಕಿನ ಕಾರ್ಖಾನೆಗಳು ಉತ್ಪಾದನೆಯನ್ನು ಆರಂಭಿಸುವುದರಿಂದ ಚಿತ್ತರಂಜನದಲ್ಲಿ ಉಕ್ಕಿನ ಕುಲುಮೆಯನ್ನು ಸ್ಥಾಪಿಸುವುದರಿಂದ ಈ ಕಾರ್ಖಾನೆಯು ಕೆಲವು ಕಚ್ಚಾ ಸಾಮಗ್ರಿಗಳನ್ನು ಅವಲಂಬಿಸಬೇಕಾಗಿರುವುದಿಲ್ಲ ಆಗ ಕಾರ್ಖಾನೆಯು, ಈಗ ಆಮದುಮಾಡಿಕೊಳ್ಳುತ್ತಿರುವ ವಸ್ತುಗಳ ಬಗೆಗೆ ಸ್ವಪರಿಪೂರ್ಣತೆಯನ್ನು ಸಾಧಿಸುವುದು

ಅದರ ಜೊತೆಗೆ, ಉತ್ಪಾದನೆಯನ್ನು ಹೆಚ್ಚು ಮಾಡುವ ದೃಷ್ಟಿಯಿಂದ ಕರ್ಮಶಾಲೆಯನ್ನು ವಿಸ್ತರಿಸಲಾಗುತ್ತಿದೆ. ಯಂತ್ರೋಪಕರಣಗಳನ್ನು ಹೆಚ್ಚಿಸುವುದು ಮುಂತಾದ ವಿಸ್ತರಣ ಯೋಜನೆಗಳಿಗೆ ೨.೩ ಕೋಟಿ ರೂಪಾಯಿಗಳನ್ನು ವಿನಿಯೋಗಿಸುವ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ ಇದು ವರೆಗೆ ಕೆಲಸಗಾರರಿಗೆ ವಸತಿ ನಿರ್ಮಿಸುವ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸಲು ೭ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಗಳನ್ನು ಪೂರ್ಣಗೊಳಿಸಲಾಗಿದೆ ೧೫ ಲಕ್ಷಗಳಷ್ಟು ಬೆಲೆಬಾಳುವ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ಸಂಗ್ರಹಿಸಲಾಗಿದೆ. ಉತ್ಪಾದನೆಯನ್ನು ತ್ವರಿತಗೊಳಿಸಲು ಅನೇಕ ಕೆಲಸಗಳನ್ನ ಕೈಗೊಳ್ಳಲಾಗಿದೆ

ಭಾರಿ ಪ್ರಮಾಣದ ಯಂತ್ರೋಪಕರಣಗಳನ್ನು— ಅವುಗಳನ್ನು ಚಾಲು ಮಾಡುವ ಕೆಲಸಗಾರರು ತೃಪ್ತರಾಗಿರದಿದ್ದರೆ, ಕುಶಲತೆಯಿಂದ ಕೆಲಸವನ್ನು ನಿರ್ವಹಿಸದಿದ್ದರೆ— ತಮ್ಮಷ್ಟಕ್ಕೆ ತಾವೇ ರೈಲು ಎಂಜಿನ್‌ಗಳನ್ನು ತಯಾರಿಸಲಾರವು. ಸುಖೀ ರಾಜ್ಯದ ಧ್ಯೇಯಗಳನ್ನು ಗಮನದಲ್ಲಿಟ್ಟುಕೊಂಡು, ಚಿತ್ತರಂಜನದಲ್ಲಿ ಕೆಲಸಗಾರರ ಹಾಗೂ ಅವರ ಕುಟುಂಬ ವರ್ಗಗಳ ಯೋಗಕ್ಷೇಮಕ್ಕಾಗಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ.

ಕೆಲಸಗಾರರು ವಾಸಿಸುವುದಕ್ಕೆ ಆಧುನಿಕ ಸೌಕರ್ಯಗಳುಳ್ಳ ಸ್ವಪರಿಪೂರ್ಣ ಮನೆಗಳನ್ನು ಒದಗಿಸಲಾಗಿದೆ ಅವರ ಮನರಂಜನೆಗೆ ಅವಕಾಶವನ್ನು ಕಲ್ಪಿಸುವ ದೊಡ್ಡ ಮನರಂಜನಾ ಸಂಸ್ಥೆಗಳಿವೆ. ಕೆಲಸಗಾರರ ಮಕ್ಕಳಿಗೆ ಶಿಕ್ಷಣವನ್ನು ನೀಡಲು, ಉತ್ತಮ ಸಿಬ್ಬಂದಿಯುಳ್ಳ ಶಿಕ್ಷಣ ಸಂಸ್ಥೆಗಳಿವೆ. ಕೆಲಸಗಾರರ, ಅವರ ಕುಟುಂಬ ವರ್ಗಗಳ ಆರೋಗ್ಯ ರಕ್ಷಣೆಗಾಗಿ ಸುಸಜ್ಜಿತವಾದ ಆಸ್ಪತ್ರೆಗಳಿರುವವು ಕೈಗಾರಿಕೆಯಲ್ಲಿ ಪಾಲುದಾರರಾಗಿರುವ ಕೆಲಸಗಾರರ ಜೀವನವು ಸುಖಮಯವೂ, ಶಾಂತಿಪೂರ್ಣವೂ ಆಗಿರಲು ಚಿತ್ತರಂಜನ ಕಾರ್ಖಾನೆಯಲ್ಲಿ ಎಲ್ಲಾ ಸೌಕರ್ಯಗಳನ್ನೂ ಕಲ್ಪಿಸಿಕೊಡಲಾಗಿದೆ

ಸಾಧ್ಯವಾದಷ್ಟು ಹೆಚ್ಚು ಮಂದಿ ಕೆಲಸಗಾರರಿಗೆ ವಸತಿ ಸೌಕರ್ಯಗಳನ್ನು ಒದಗಿಸಲು ಚಿತ್ತರಂಜನವು ಪ್ರಯತ್ನಿಸುತ್ತಿದೆ. ಆರಂಭದಲ್ಲಿ ೫೦೭೮ ಮನೆಗಳನ್ನು ಕಟ್ಟಲಾಗಿತ್ತು. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನುತ್ತೆ ೧,೦೦೦ ಮನೆಗಳನ್ನು ನಿರ್ಮಿಸಲಾಗುವುದು ಶಿಕ್ಷಣವು ಮುಖ್ಯವಾಗಿ ರಾಜ್ಯ ಸರಕಾರದ ಹೊಣೆಗಾರಿಕೆ ಸೇರಿದ್ದಾದರೂ, ಇಲ್ಲಿ ಎರಡು ಪ್ರೌಢ ಶಾಲೆಗಳು ಹಾಗೂ ೭ ಮೂಲ ಶಿಕ್ಷಣ ಶಾಲೆಗಳನ್ನೂ ಕಾರ್ಖಾನೆಯವರೇ ನಡೆಸುತ್ತಿರುವರು ಇದರ ಜೊತೆಗೆ, ೪ ಖಾಸಗಿ ಶಾಲೆಗಳು, ಎರಡು ಕಾನ್ವೆಂಟುಗಳು ಮತ್ತು ಪಶ್ಚಿಮ ಬಂಗಾಳ ಸರಕಾರದವರ ಮೂರು ಮೂಲ ಶಿಕ್ಷಣ ಶಾಲೆಗಳನ್ನು ಕಳೆದ ವರ್ಷ ಆರಂಭಿಸಲಾಯಿತು.

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆ ಕೆಲಸಗಾರರಿಗೆ ಈಗಿರುವ ಶಿಕ್ಷಣ ಸೌಲಭ್ಯಗಳನ್ನು ಗಮನಾರ್ಹ ಪ್ರಮಾಣದಲ್ಲಿ ವಿಸ್ತರಿಸುವ ಕಾರ್ಯಕ್ರಮವಿರುವುದು ಅದರ ಪ್ರಕಾರ ಹೊಸ

(೯ನೇ ಪುಟ ನೋಡಿರಿ)



ಭಾರತೀಯ ವಿದ್ಯಾರ್ಥಿಗಳು ಬ್ರಿಟನಿನ ಶಾಲೆಗಳಲ್ಲಿ ಇಂಜಿನಿಯರಿಂಗ್ ಸಂಬಂಧದ ವಿಶೇಷಾಧ್ಯಯನವನ್ನು ಮಾಡುತಿದ್ದಾರೆ ಮಲಯ, ಸಿಲೋನ್, ಉತ್ತರ ಬೋರ್ನಿಯೊಗಳಿಂದಲೂ ಇಂಜಿನಿಯರಿಂಗ್, ರೇಡರ್, ರೇಡಿಯೊ, ವಿಮಾನ ಮತ್ತು ನೌಕಾ ವಿಷಯಗಳನ್ನು ಅಭ್ಯಸಿಸಲು ವಿದ್ಯಾರ್ಥಿಗಳು ಇಲ್ಲಿಗೆ ಬರುತ್ತಾರೆ

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ ಜೀವನದಲ್ಲಿ ನಿರಾಶರಾಗಬೇಡಿ!
100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯರ್‌ರವರ ರತ್ನದ್ವಯಗಳು
ಟ್ರೇಡ್ ಮಾರ್ಕ್



ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ ಗುಳಿಗೆ)

ಈ ಭಸ್ಮವು **ಬಹಿಷ್ಟೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಕೋಶದ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ ರೂ 7–4–0.
"ಮದನ ವಿಲಾಸ" ಗುಳಿಗೆಗಳು ಅತ್ಯಾಶ್ಚ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ.
ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.
ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P) ಸ್ಟಾಂಪು ಕಳಿಸಿರಿ ಕಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ.
ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ, (ನ. ಯು)
628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, **ಮೈಸೂರು-1 (S.I)**

ನಿಮ್ಮ ಪರಿಚಿತರಾರೂ "ಕಾರ್ಪೊರೇಶನ್" ಬೇಂಕಿನಲ್ಲಿಲ್ಲದಿದ್ದಲ್ಲಿ, ಬೇಂಕು ವ್ಯವಹಾರ ನಡೆಸಲು ದಾಕ್ಷಿಣ್ಯಪಟ್ಟು ನೀವು ವ್ಯಥಾ ಹಿಂಜರಿಯುವ ಅಗತ್ಯವಿಲ್ಲ ಕಾರಣ, ನಮ್ಮ ಯಾವುದೇ ಒಂದು ಶಾಖೆಯಲ್ಲಿ ಯಾರೇ ಬರಲಿ, ಅವರನ್ನು ನಮ್ಮವರೆಂದೇ ಬಗೆದು, ಅವರ ಮನಮೆಚ್ಚುವಂತೆ ಬೇಂಕು ಸೇವೆ ಸಲ್ಲಿಸುವುದೇ ನಮ್ಮ ಆದ್ಯಕರ್ತವ್ಯವೆಂಬುದನ್ನು ನಾವು ಚೆನ್ನಾಗಿ ಬಲ್ಲೆವು.

ಇಂದೇ "ಕಾರ್ಪೊರೇಶನ್" ಬೇಂಕನ್ನು ನಿಮ್ಮ ಬೇಂಕಾಗಿ ಆರಿಸಿಕೊಳ್ಳಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ. 1906] [ಪ್ರಧಾನ ಕಾರ್ಯಾಲಯ. ಉಡುಪಿ (ದ ಭಾರತ)

ಸುಮಾರು 52 ವರುಷಗಳ ಅನುಭವವಿರುವ ಬೇಂಕು!!

ಸಾಹಿತ್ಯದ ಸಿಂಹಾವಲೋಕನ–

ಕನ್ನಡ ಕಾವ್ಯಗಳ ವೈಶಿಷ್ಟ್ಯ

ಶ್ರೀ ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ಜನಮತಕ್ಕೆ ಮನ್ನಣೆ

ಜನಾನುರಾಗಕ್ಕನುಸಾರವಾಗಿ ಕನ್ನಡದ ಸಾಹಿತಿಗಳು ಮುನ್ನಡೆಯಿಟ್ಟಿರುವುದು ಸಾಹಿತ್ಯಾವಲೋಕನದಿಂದ ಕಂಡು ಬರುತ್ತದೆ ಇಂತಹ ಅಡಿಯು ಕೆಲವೊಮ್ಮೆ ದಿಟ್ಟತನದಿಂದಿಡಬೇಕಾದ ಪ್ರಮೇಯವೂ ಕನ್ನಡದ ಕವಿಗಳಿಗೆ ಬಂದಿತ್ತೆಂಬುದು ನಿಸ್ಸಂದೇಹ. ಜನಮನ್ನಣೆಗೆ ವಿರೋಧವಾಗಿ ಕೆಲವು ಜನರು ನಡೆದಿರುವುದು ದೃಷ್ಟಿಗೋಚರವಾಗುವುದಾದರೂ, ಅವರಿಗೆ ಜನತೆಯೇ ಯೋಗ್ಯ ಶಿಕ್ಷೆಯನ್ನು ಇತ್ತು ತನ್ನ ವಿರೋಧಾಭಿಪ್ರಾಯವನ್ನು ವ್ಯಕ್ತಪಡಿಸಿದೆ ಎನ್ನಬಹುದು. ಜನಮನದ ಭಾಷೆಯನ್ನು ಸಾಹಿತ್ಯಕ್ಕೆ ಬಳಸುವಲ್ಲಿ ವಿದ್ವಾಂಸರ ಆಕ್ಷೇಪಣೆಯಲ್ಲವನ್ನೂ ದಿಟ್ಟತನದಿಂದೆದುರಿಸಿ ೧೨ನೆಯ ಶತಮಾನದ ಕವಿಗಳು ಧೈರ್ಯದಿಂದ ಮುಂದಾದರು. ಇದರಿಂದಾಗಿ ಸಾಹಿತ್ಯ ರಚನೆಯ ಬೇಡಿಯು ಶಿಥಿಲಗೊಂಡು, ಸಾಹಿತ್ಯ ನಿರ್ಮಾಣವು ತೀರ ಸಾಮಾನ್ಯ ಜನತೆಯ ಕೈಗೂ ಮುಟ್ಟುವಂತಾಯಿತು. ಜನ ಸಾಮಾನ್ಯರಾದ ವೀರ ಶೈವರ ಕೆಲವು ವಚನಗಳು ಸಾಹಿತ್ಯದ ದೃಷ್ಟಿಯಿಂದಲೂ ಉತ್ಕೃಷ್ಟವಾಗಿರುವುವು ದಾಸವರರ ಕೀರ್ತನೆಗಳೂ ಇದೇ ಜಾತಿಗೆ ಸೇರಿದ್ದು ಪರಮಾತ್ಮನ ಸ್ವರೂಪವನ್ನು ಮುಂದಿಟ್ಟು, ಜನತೆಗೆ ಸೂಕ್ಷ್ಮ ವಿಚಾರಗಳನ್ನೂ ಸರಳ ಭಾಷೆಯಲ್ಲಿ ವಿವರಿಸುತ್ತವೆ. ಈ ಒಂದು ಮಹತ್ವಪೂರ್ಣ ಪರಿವರ್ತನೆಯಿಂದಾಗಿ ಕನ್ನಡ ಸಾಹಿತ್ಯದ ಕಂಪು ವಿದ್ವಾಂಸರ ಗೃಹದಿಂದ ಜನರೆಲ್ಲರ ಕೇರಿಯೊಳಗೂ ಹರಡುವಂತಾಗಿ ಸಾಹಿತ್ಯವು ಬಹು ವಿಪುಲವಾಗಿ ಬೆಳೆದು ಬಂತು.

ಸಂಪ್ರದಾಯ ಶರಣರು

ಕನ್ನಡ ಸಾಹಿತ್ಯ ಕೃತಿಗಳೆಲ್ಲವುಗಳನ್ನೂ ಏಕ ದೃಷ್ಟಿಯಿಂದ ನೋಡಿದಾಗ, ಅವುಗಳಲ್ಲಿ ಒಂದು ಸಾಂಪ್ರದಾಯತೆಯು ಕಂಡು ಬರುವುದು. ಈ ಸಂಪ್ರದಾಯ ಶರಣು ಬರುವುದು ಒಳ್ಳೆಯ ಮಾರ್ಗವೆಂದು ಹೇಳ ಬರುವುದಿಲ್ಲ. ಆದರೂ ಇದರಿಂದ ನಮ್ಮ ಕವಿಗಳಲ್ಲಿ ಸಂಶೋಧನಾ ಬುದ್ಧಿಯು ಬೆಳೆಯಿತು; ಚಾತುರ್ಯ, ಕಲ್ಪನೆಗಳು ಬಲಿತುವು. ಸಂಸ್ಕೃತ ಸಾಹಿತ್ಯ ಶಾಸ್ತ್ರಗಳಿಂದ ಆರಿಸಿಕೊಂಡ ಕಾವ್ಯ ಲಕ್ಷಣಕ್ಕನುಸರಿಸಿ, ನಮ್ಮ ಭಾಷೆಯ ಹೆಚ್ಚಿನ ಕವಿಗಳು ತಮ್ಮ ಕಾವ್ಯಗಳನ್ನು ಬರೆದಿದ್ದಾರೆ. ವಾರಿಧಿ ಪರ್ವತಾದ ಅಷ್ಟಾದಶ ವರ್ಣನೆಗಳನ್ನೇ ಸೂರಿಗಳು ಕಾವ್ಯಾಂಗಗಳೆಂದು ಭಾವಿಸಿ, ಅವುಗಳ ವರ್ಣನೆಯನ್ನು ಮಾತ್ರವಲ್ಲದೇ, ಆ ವರ್ಣನೆಯಲ್ಲಿಯೂ ಹಿಂದಿನ ಪದ್ಧತಿಯನ್ನು ಅನುಚಾನವಾಗಿ ನಡೆಸಿಕೊಂಡ ಗರಿಮೆ ಕನ್ನಡ ಕಬ್ಬಿಗರದು. ಆದರೆ, ಈ ಹಿರಿಮೆಯೇ ಅವರ ಕಿರಿಮೆಗೂ ಕಾರಣವಾಗಿದೆ ಎನ್ನಬಹುದು. ಆದರೂ, ಇಂತಹ ವರ್ಣನಾದಿಗಳನ್ನು ಇತಿಮಿತಿಯರಿತು ಬಳಸಿಕೊಂಡಿರುವ ಹಲವು ಕವಿಗಳಿದ್ದಾರೆ, ಅವರ ಕಾವ್ಯಗಳು ಜನಪ್ರಿಯವಾಗಿವೆ ಕಥಾಭಾಗಕ್ಕೇ ಚ್ಯುತಿತಟ್ಟುವಂತೆ ವರ್ಣನಾಮಯವಾಗಿರುವ ಶುದ್ಧ ವಸ್ತುಕವನಿಸಿದ ಕೆಲವು ಕಾವ್ಯಗಳು ನಿಂದಾಸ್ಪದವೇ ಎಂದು ಹೇಳದೆ ಗತ್ಯಂತರವಿಲ್ಲ ಇಂತಹ ಕಾವ್ಯಗಳಲ್ಲಿ ಕವಿಯ ಪ್ರೌಢಿ ಆತನ ಪ್ರತಿಭೆಗಳು ಗೋಚರಿಸುತ್ತದೆಯೇನೋ ನಿಜ, ಆದರೆ, ಜನಪ್ರಿಯತೆಯನ್ನು ಗಳಿಸಲು ಪ್ರತಿಭಾಯುಕ್ತ ವರ್ಣನಾಭಾಗ ಮಾತ್ರವೇ ಸಾಲದು.

ಕಥೆಯ ಆಕರ

ವರ್ಣನೆ, ಅಲಂಕಾರಗಳ ಸಂಯೋಜನೆ, ರಸಜೋಡಣೆ ಮೊದಲಾದ ಶಾಸ್ತ್ರೀಯ ರೀತಿಯಲ್ಲಿ ಮಾತ್ರವಲ್ಲ ಕಥಾವಸ್ತುಗಳನ್ನು ಆರಿಸುವಲ್ಲಿಯೂ ಕನ್ನಡದ ಕವಿಗಳು ತಮ್ಮ ಸಂಪ್ರದಾಯ ಶರಣುಬರುವ ರೀತಿಯನ್ನು ಬಹುಮಟ್ಟಿಗೆ ತೋರಿಸಿಕೊಟ್ಟಿದ್ದಾರೆ ಕನ್ನಡದಲ್ಲಿ ಬರೆಯಲಾದ ಕಾವ್ಯಕೃತಿಗಳಲ್ಲಿ ನೇಮಿಚಂದ್ರನ ಲೀಲಾವತೀ ಪ್ರಬಂಧ ಜನ್ನನ ಯಶೋಧರ ಚರಿತೆಗಳನ್ನು ಬಿಟ್ಟರೆ, ಹಳೆಗನ್ನಡದ ಕಾಲದಲ್ಲಿ ಸ್ವತಂತ್ರ ಕಥಾವಸ್ತುವೇ ಇರಲಿಲ್ಲವೆನ್ನಬೇಕಾಗಿ ಬರುತ್ತದೆ ಮಹಾಭಾರತ, ರಾಮಾಯಣ, ಬೃಹತ್ಕಥೆ ಮೊದಲಾದ ಹಳೆಯ ಸಂಸ್ಕೃತ ಗ್ರಂಥಗಳಿಂದಲೇ ಕಥಾಭಾಗಗಳನ್ನಾರಿಸಬೇಕೆಂಬ ನಿಯಮವನ್ನು ನಮ್ಮ ಹಳೆಯ ಕವಿಗಳು ಅನುಸರಿಸಿದ್ದಾರೆ ಅಂತೆಯೇ ೨೦ನೇ ಶತಮಾನದ ಮೊದಲ ವರ್ಷದ ಹಿಂದೆಮುಂದೆ ರಚಿತವಾದ ಮುದ್ದಣನ ರಾಮಾಶ್ವಮೇಧದಲ್ಲಿಯೂ ಮನೋರಮೆ ರಾಮಾಯಣವೋ ಏನಾನುಮೊಂದು ಕಥಾಭಾಗವನ್ನು ಬಿಸಸಲು ಮುದ್ದಣನಿಗೆ ಆಜ್ಞಾಪಿಸುತ್ತಾಳೆ ರಾಮಾಯಣಾದಿ ಕಥೆಗಳು ಹಲವಾರು ಆಖ್ಯಾಯಿಕೆಗಳಿಂದಲೂ, ವಿವಿಧ ರಸಗಳಿಂದಲೂ ಕುತೂಹಲಪೂರ್ಣ ಕಥಾಭಾಗಗಳಿಂದಲೂ ಕೂಡಿಕೊಂಡಿದ್ದು, ಅವುಗಳ ಒಂದೊಂದಂಶವೇ ಒಂದೊಂದು ಮಹಾಕಾವ್ಯಗಳಾಗುವ ಯೋಗ್ಯತೆಯನ್ನು ಪಡೆದಿವೆಯೆಂಬುದನ್ನು ಒಪ್ಪಬೇಕು ಅನಂತ ಬಿಂದಿಗೆ ನೀರಿನಿಂದ ಕೂಡಿದ ವಿಶಾಲ ಸಾಗರದಿಂದ ಒಂದೊಂದು ತಂಬಿಗೆ ನೀರನ್ನೊಯ್ದು ನಮ್ಮ ಉದ್ದೇಶವನ್ನು ತೀರಿಸಿಕೊಳ್ಳುವಂತೆ ಸಹಸ್ರಾರು ಕಥಾ ಭಾಗಗಳಿಂದ ಕೂಡಿದ ಇಂತಹ ಪ್ರಾಚೀನ ಗ್ರಂಥಗಳಿಂದ ತಾನು ಮೆಚ್ಚಿದ ಕಥಾವಸ್ತುವನ್ನಾರಿಸಿ, ಅದಕ್ಕೆ ವರ್ಣನೆಯ ಮೆರುಗನ್ನು ತನ್ನ ಪ್ರೌಢಿ, ಜಾಣ್ಮೆ, ಪ್ರತಿಭೆಗಳ ಮೂಲಕ ಕೊಟ್ಟು, ಮಹಾಕವಿಯಾದ ಮಹನೀಯರೇ ನಮ್ಮಲ್ಲಿ ಅನೇಕ

ಸಂಸ್ಕೃತದ ಪ್ರಭಾವ

ಭಾರತದ ಸರ್ವಭಾಷೆಗಳ ಮೇಲೆ ತನ್ನ ಪ್ರಭಾವವನ್ನು ಬೀರಿದ ಸಂಸ್ಕೃತ ಭಾಷೆಯಲ್ಲಿದ್ದ ಗ್ರಂಥ—ಕಾವ್ಯಗಳ ಭಾವಾನುವಾದಗಳು, ಅನುವಾದಗಳು ಹಾಗೂ ಆಧಾರದಿಂದ ಬರೆದ ಕಾವ್ಯಗಳೇ ಕನ್ನಡದಲ್ಲಿ ತುಂಬ ಕಂಡುಬರುತ್ತವೆ. ಅಲ್ಲಲ್ಲಿ ಕವಿಗಳ ಉದ್ದೇಶಕ್ಕನುಗುಣವಾಗಿ ಅಲ್ಪ ಸ್ವಲ್ಪ ಬದಲಾವಣೆಗಳು ಬಂದಿವೆಯಾದರೂ ಮೂಲ ಪರಿಣಾಮವು ಮೂಲದ್ದೇ ಆಗಿದೆ. ಕನ್ನಡದ ಪ್ರಾಚೀನರಾದ ಜೈನ ಧರ್ಮೀಯರು ತಮ್ಮ ಮತಪ್ರಚಾರಕ್ಕಾಗಿ ಈ ಕಾವ್ಯಗಳನ್ನು ಬಳಸಿದರೆ, ಮುಂದಿನವರು ತಮ್ಮ ತಮ್ಮವುಗಳಿಗಾಗಿ ಬಳಸಿಕೊಂಡರು ಕಾವ್ಯವು ಉಪದೇಶ ಸಹಿತವಾಗಿರಬೇಕೆಂಬುದು ಶಿಲತಲಾಕ್ಷರಪಟಿತ ನುಡಿಯಲ್ಲವಾದರೂ ನಮ್ಮ ಹೆಚ್ಚಿನ ಎಲ್ಲ ಕವಿಗಳು ಈ ಮಾತಿಗೇನೇ ಅಧಿಕ ಪ್ರಾಶಸ್ತ್ಯವಿತ್ತಿದ್ದಾರೆ.

ಹಾಗೆಂದು ನಮ್ಮ ಸಾಹಿತ್ಯದಲ್ಲಿ ಸ್ವತಂತ್ರ ವಸ್ತುಗಳಿಗೂ ಕಡಿಮೆಯಿಲ್ಲ. ನೇಮಿಚಂದ್ರನ ಲೀಲಾವತೀ, ಜನ್ನನ ಯಶೋಧರ ಚರಿತೆ ಮುಂತಾದುವು ತೀರ ಸ್ವತಂತ್ರ ಕೃತಿಗಳು ಹರಿಶ್ಚಂದ್ರ ಕಾವ್ಯದಲ್ಲಿನ ಹರಿಶ್ಚಂದ್ರನಿಗೂ ವೈದಿಕ ಹರಿಶ್ಚಂದ್ರನಿಗೂ ಸಂಬಂಧವೇ ಇಲ್ಲವೆನ್ನುವಷ್ಟು ಬದಲಾವಣೆಗಳನ್ನು ರಾಘವಾಂಕ ಮಾಡಿದ್ದಾನೆ ಈ ಪರಿವರ್ತನೆಯಿಂದ ವೈದಿಕ ಹರಿಶ್ಚಂದ್ರನ ತಲೆ ಕೆಳಗಾಗಿದೆ. ಮುಂದೆ ಹುಟ್ಟಿಕೊಂಡ ವೀರಶೈವ ಮಹಾಪುರುಷರ ಚರಿತ್ರೆಗಳೂ ಸರ್ವಸಾಮಾನ್ಯವಾಗಿ ಸ್ವತಂತ್ರ ಕಾವ್ಯಗಳಾಗಿವೆ. ಆದರೆ, ಪ್ರಾಚೀನ ಕಾಲದಲ್ಲಿ ಕಾವ್ಯಶಾಸ್ತ್ರದ ಕಟ್ಟುನಿಟ್ಟುಗಳು ತೀರ ಬಿಗಿಯಾಗಿದ್ದಾಗ, ಅವುಗಳ ಮೇರೆಯನ್ನು ಮೀರುವುದು ನಮ್ಮ ಕವಿಗಳಿಗೆ ಸಮಂಜಸವೆಂದು ತೋರಿಬರಲಿಲ್ಲ ಆದುದರಿಂದಲೇ ಅವರು ಪ್ರಾಚೀನ ಕಾವ್ಯಗಳಿಂದಲೇ ಒಂದು ಭಾಗವನ್ನು ಆರಿಸಿ, ಅವನ್ನು ತಮಗೆ ಬೇಕಾದ ಪರಿವರ್ತನೆಗಳೊಂದಿಗೆ ಲಿಖಿಸಿ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಿದರು ಈ ಪದ್ಧತಿಯನ್ನೇ ಅವರ ಮುಂದಿನವರೂ ಅಂಧಾನುಕರಣೆ ಮಾಡಿದರು ಆದರೆ, ಬಹಳ ಸಮಯ ಇಂತಹ ಪರಿಸ್ಥಿತಿ ನಿಲ್ಲುವುದು ಸಾಧ್ಯವಾಗಲಿಲ್ಲ.

ಜನತೆಗಾಗಿ ಕಾವ್ಯ

ಕನ್ನಡದಲ್ಲಿ ಬರೆಯುವುದೆಂದರೆ, ಅದು ಆಗದ ಮಾತೆಂಬ ಕಲ್ಪನೆ ಮಹಾಕವಿಗಳಲ್ಲಿ ಆರಂಭದಲ್ಲಿದ್ದಿರಬೇಕು. ಆದರೂ ಜನಸಾಮಾನ್ಯರನ್ನು ತಮ್ಮತ್ತ ಒಲಿಸಿಕೊಳ್ಳುವ ಹವ್ಯಾಸದಿಂದ ಕ್ರಿಶ್ಚಿಯನ್ ಪಾದ್ರಿಗಳು ನಮ್ಮಲ್ಲಿ ಅತ್ಯಂತ ಪ್ರಯಾಸದಿಂದ ಕನ್ನಡವನ್ನು ಕಲಿತು. ತಮ್ಮ ಧರ್ಮಗ್ರಂಥಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮಹಾಸಾಹಸವನ್ನು ಮಾಡಿದಂತೆಯೇ ಕನ್ನಡಿಗರಿಗೆ, ಜನರ ಭಾಷೆಯಲ್ಲಿ ತಮ್ಮ ಆಚಾರ ವಿಚಾರಗಳನ್ನು ತಿಳಿಸುವ ಆವಶ್ಯಕತೆ ಹೆಚ್ಚಿದಾಗ, ಅವರೂ ತಮ್ಮ ಅರ್ಧಂಬರ್ಧ ಕನ್ನಡದಲ್ಲಿ ಬರೆಯತೊಡಗಿದರು. ಆದರೂ, ಕನ್ನಡವು ಕ್ರಿ. ಶ. ೭ ಯಾ ೮ನೆ ಶತಮಾನದ ಸುಮಾರಿಗೆ ಸಂಪೂರ್ಣವಾಗಿ ಬೆಳೆದು ಬಂದಿತ್ತು ಎಂಬುದು ನಿಶ್ಚಯ ಹಾಗಿರುವಾಗ, ಕನ್ನಡವು ಏಕೆ ಆಗಾಗಲೇ ಕವಿಗಳ ಕಾವ್ಯರಚನಾಭಾಷೆಯಾಗಿರಬಾರದು?

ಕನ್ನಡದಲ್ಲಿಯೇ ಕಾವ್ಯ ಬರೆವ ಹವ್ಯಾಸ ಹೆಚ್ಚಿತು ಆದರೆ, ಸಂಸ್ಕೃತ ವಿದ್ವಾಂಸರಾದ ಮಹಾಕವಿಗಳೇ ಕನ್ನಡದಲ್ಲಿಯೂ ಬರೆಯತೊಡಗಿದರು. ಹಾಗಾಗಿ, ಸಂಸ್ಕೃತ ಪದಪುಂಜಗಳೇ ಅವರ ತುದಿನಾಲಗೆಯಲ್ಲಿ ನರ್ತಿಸುತ್ತಿರುವಾಗ, ಸಂಸ್ಕೃತ ಕಾವ್ಯಶಾಸ್ತ್ರವು ಅವರ ಮನಮುಟ್ಟಿರುವಾಗ, ಕನ್ನಡದಲ್ಲಿಯೂ ಸ್ವತಂತ್ರವಾಗಿ ಕಾವ್ಯಶಾಸ್ತ್ರ ಪ್ರತಿಬೋಧಕ ಗ್ರಂಥಗಳ ಕೊರತೆಯಿರುವಾಗ, ಅವರು ಸಂಸ್ಕೃತದತ್ತ ಒಲಿಯುವದರಲ್ಲಿ ಆಶ್ಚರ್ಯವಿಲ್ಲ ಹಾಗಾಗಿ ಸಂಸ್ಕೃತ ಛಂದಸ್ಸು, ಸಂಸ್ಕೃತ ಕಥಾವಸ್ತು, ಸಂಸ್ಕೃತ ಪದ ಪುಂಜಗಳಿಂದ ಮೆರೆಯುವ ಶ್ಲೋಕಗಳು ನಾಲಗೆಯಿಂದ ಹೊರಬಿದ್ದು ಲೇಖನಿಯ ಮೂಲಕ ಹರಿದುವು ಅದೇ ಕನ್ನಡ ಕಾವ್ಯವಾಯಿತು.

ಉಕ್ಕಿನ ಕಡಲೆ

ಕನ್ನಡ ಕವಿಗಳಲ್ಲಿ ಸಂಸ್ಕೃತ ಪದವನ್ನು

(೬ನೇ ಪುಟ ನೋಡಿರಿ)

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು
- ನಮ್ಮ ಬದುಕು ಸರಳವಾಗಿರಬೇಕು

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು. ೧೨೪ ಬೆಲೆ. ರೂ ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ ಕಾ.**

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

NOTICE OF AUCTION SALE

Under instructions from my client Sri Pangal Sarvothum Nayak, I shall be holding an auction for the sale of his house and garden with appurtenent out-houses situated at Kinnimulki in Mudnndambur Village, Udipi, now in the occupation of his father (Sri Pangal Gopal Nayak) at the Municipal Travellers' Bungalow in Udipi at 11 30 A M on Wednesday the 30th April 1958

The extent of the title, the conditions of sale and other relevant information may be ascertained from me at my office in Canara High School Road Mangalore. I have full liberty to accept or reject the bids without assigning any reasons

A. Ranganath Rao,
Advocate

Mangalore, 11—4—1958.

NAVAYUGA

Popular Kannada Weekly

Founder—

A B SHETTY,

Former Minister for Public Health, Govt of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೧೭-೪-'೫೮	೩೨

ಅರೆಮನದ ನಿಲುವು

ಜಗತ್ತಿನಲ್ಲಿ ದಿನನಿತ್ಯ ವಿಪಂಚನೆಯನ್ನುಂಟುಮಾಡುವ ವೈಜ್ಞಾನಿಕಾಸ್ತ್ರಗಳಲ್ಲಿ ಮೊತ್ತಮೊದಲನೆಯ ಸ್ಥಾನವನ್ನು ಪಡೆದವುಗಳೆಂದರೆ, ಅಣ್ವಸ್ತ್ರಗಳು. ಇವುಗಳು ಜನತೆಯ ಮನಸ್ಸಿನಲ್ಲಿ ಬಲವಾಗಿ ಬೇರೂರಿ, ಅದರಿಂದ ಉಂಟಾಗುವ ಅನಾಹುತಗಳು ಯಾವ ಕಾಲಕ್ಕೂ ಬರುವುದು ಸಾಧ್ಯವೆಂಬುದೇ ಚಿಂತೆಯಾಗಿದೆ. ಕೇವಲ ಅಣ್ವಸ್ತ್ರಗಳ ಪ್ರತ್ಯಕ್ಷಹಾನಿ ಮಾತ್ರವಲ್ಲದೇ ಅಣ್ವಸ್ತ್ರಗಳ ಪರೀಕ್ಷಣವೂ ಮಹಾ ಉಪದ್ರವಕಾರಿಯಾಗಿರುವುದು. ವಿಶ್ವದ ಪ್ರಜೆಗಳ ಮೇಲೆ ಅಪ್ರತ್ಯಕ್ಷವಾಗಿ ಕೆಡುಕನ್ನುಂಟುಮಾಡುವ ಈ ವಿಷಕಾರೀ ಅಸ್ತ್ರಗಳನ್ನು ನಿರ್ಬಂಧಿಸುವ ಕುರಿತಾಗಿ ಈ ಹಿಂದೆಯೇ ಅನೇಕ ರಾಷ್ಟ್ರಗಳು ವಿನಂತಿಯನ್ನು ಮಾಡಿರುತ್ತವೆ. ಜಗತ್ತಿನ ಅತಿ ಹಿರಿಯ ರಾಷ್ಟ್ರಗಳಾದ ಬ್ರಿಟನ್, ರಷ್ಯ ಮತ್ತು ಅಮೆರಿಕೆಗಳು ಈ ಅಣ್ವಸ್ತ್ರ ಪರೀಕ್ಷೆಗಳನ್ನು ಕೂಡಲೇ ತಡೆಹಿಡಿಯಬೇಕೆಂಬ ಸೊಲ್ಲು ಪ್ರಪಂಚದ ಅನೇಕಾನೇಕ ರಾಷ್ಟ್ರಗಳ ಜನತೆಯ ಬಾಯಿಂದ ಬಂದಿತ್ತು. ಶಾಂತಿಸಮ್ಮೇಳನಗಳನ್ನು ಕರೆದು ಅವುಗಳಲ್ಲಿ ಅಣ್ವಸ್ತ್ರವಿರೋಧ, ಅವುಗಳ ಪ್ರಯೋಗವಿರುದ್ಧವಾದ ಗೊತ್ತುವಳಿ ಕೇಳಿಕೆ ಮನವಿಗಳು ನಡೆದುಹೋಗಿದ್ದುವು. ಆದರೂ, ಈ ವಿಷಮಯ ಕಲುಷಿತ ವಾತಾವರಣದ ಹಾನಿಯೊಂದಿಗೇನೇ ಅಣ್ವಸ್ತ್ರ ಪರೀಕ್ಷೆಗಳೂ ಎಡೆಬಿಡದೆ ನಿರಾತಂಕವಾಗಿ ನಡೆದು ಹೋಗುತ್ತಿದ್ದುವು. ಇಂತಹ ಆಚರಣೆಗಿದ್ದ ಒಂದೇ ಒಂದು ಪ್ರಬಲ ಕಾರಣವೆಂದರೆ, ಹಿರಿಯ ರಾಷ್ಟ್ರಗಳ ನಡುವೆ ಬೆಳೆದುನಿಂತ ತಪ್ಪು ತಿಳುವಳಿಕೆಯ ದೊಡ್ಡ ಪಾಗಾರ ಮಾತ್ರ. ಈ ರಾಷ್ಟ್ರಗಳು ಜಗತ್ತಿನ ಕಣ್ಣುಗಳಾಗಿದ್ದರೂ, ಪರಸ್ಪರರನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ನೋಡದೆ ಸದಾ ಸಂದೇಹಗ್ರಸ್ತ ನೋಟಗಳಿಂದ ಈಕ್ಷಿಸುತ್ತಿದ್ದುದೇ. ಆದರೆ, ಈ ನಡೆವಳಿಕೆಯು ಇನ್ನೂ ಮುಂದುವರಿಯುತ್ತ ಹೋಗುವುದೆಂದರೆ ಅದು ಶೋಚನೀಯ.

ಸೋವಿಯತ್ ರಷ್ಯದಲ್ಲಿ ಈ ತಿಂಗಳ ಆದಿಭಾಗದಲ್ಲಿ ಒಂದು ಮಹತ್ವದ ರಾಜಕಾರಣದ ವಿಪ್ಲವ ಉಂಟಾಯಿತು. ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ಕ್ರುಶ್ಚೇವರೇ ಪ್ರಧಾನರಾಗಿಯೂ ಆರಿಸಲ್ಪಟ್ಟರು. ಹೀಗೆ ಚುನಾಯಿಸಲ್ಪಟ್ಟ ಶ್ರೀ ಕ್ರುಶ್ಚೇವರು ತಮ್ಮ ನೂತನ ಪದಗ್ರಹಣ ಮಾಡಿರುವುದರೊಂದಿಗೆ ವಿಶ್ವದ್ವೇಷ ಶಮನದತ್ತಲೂ ಒಂದು ಹೆಜ್ಜೆಯನ್ನು ದಿಟ್ಟತನದಿಂದಿಟ್ಟಿರುವರು. ರಷ್ಯವು ಏಕಪಕ್ಷೀಯವಾಗಿ ಅಣ್ವಸ್ತ್ರ ಪರೀಕ್ಷೆಗಳನ್ನು ನಿಲ್ಲಿಸಿಬಿಡುವ ನಿರ್ಧಾರವನ್ನು ಅವರು ಘೋಷಿಸಿ, ಇತರ ಪ್ರಯೋಗನಿರತ ರಾಷ್ಟ್ರಗಳಿಗೂ ಹೀಗೆಯೇ ದಿಟ್ಟ ಹೆಜ್ಜೆಯಿಡಲು ಆಹ್ವಾನವಿತ್ತಿದ್ದಾರೆ. ರಷ್ಯದ ಮಾರ್ಗವನ್ನನುಸರಿಸಿ, ಬ್ರಿಟನ್ ಮತ್ತು ಅಮೆರಿಕೆಗಳು ತನ್ನಂತೆಯೇ ಅವುಗಳ ಸ್ಫೋಟನವನ್ನು ತಡೆಹಿಡಿಯಬೇಕೆಂಬ ದಾಗಿ ಉಭಯ ರಾಷ್ಟ್ರದ ಪ್ರಮುಖರಿಗೆ ಕರೆಯಿತ್ತಿದ್ದಾರೆ. ಆದರೆ, ರಷ್ಯದ ಪ್ರತಿಯೊಂದು ಆಚರಣೆಯನ್ನೂ ಗೃಧ್ರ ದೃಷ್ಟಿಯಿಂದ ನೋಡುವ ಹವ್ಯಾಸದಲ್ಲಿರುವ ಈ ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಪರಂಪರಾ ಪ್ರಾಪ್ತ ಮನೋಭಾವನೆಯನ್ನು ಬದಲಿಸಿಕೊಳ್ಳಲು ಸಿದ್ಧರಾಗದ, ರಷ್ಯದ ಘೋಷಣೆಯನ್ನು ಸಂದೇಹಪೂರ್ಣ ದೃಷ್ಟಿಯಿಂದ ನೋಡುತ್ತಿರುವುದು ಆ ರಾಷ್ಟ್ರಗಳ ಗೌರವಕ್ಕೆ ತಕ್ಕುದಲ್ಲ. ವಿಶ್ವದ ರಾಷ್ಟ್ರಗಳಿಗೆ ಪ್ರತಿಯೊಂದು ವಿಷಯದಲ್ಲಿಯೂ ಮಾರ್ಗದರ್ಶನ ಮಾಡುವೆವೆಂಬ ಹೆಮ್ಮೆಯಿಂದಿರುವ ಈ ರಾಷ್ಟ್ರಗಳು ತಮ್ಮ ಹುಳ್ಳ ಮನಸ್ಸಿನಿಂದಾಗಿ ಇದಕ್ಕೆ ಕಲಂಕ ತಂದುಕೊಳ್ಳುವುದು ಅವಕ್ಕೆ ಭೂಷಣವೆನ್ನಬರುವುದಿಲ್ಲ. ರಷ್ಯವು ತನಗೆ ಬೇಕಾದುದನ್ನು ಈಗಾಗಲೇ ಪರೀಕ್ಷಿಸಿಕೊಂಡಿದೆ, ಅದು ಸ್ಫೋಟಗೊಳಿಸಿರುವುದೋ ಇಲ್ಲವೋ ಎಂದು ತಿಳಿಯುವ ಬಗೆಯಾದರೂ ಹೇಗೆ?, ಅವರನ್ನು ನಂಬುವುದು ಸಾಧ್ಯವೇ ಎಂಬ ಪ್ರಶ್ನೆಗಳನ್ನು ಎಬ್ಬಿಸುತ್ತ ತಮ್ಮ ಪಾಲಿನ ಕರ್ತವ್ಯ ನಿರ್ವಹಣೆಯ ಹೊರೆಯನ್ನು ಹೊರಲು ಹಿಂದುಮುಂದು ನೋಡುತ್ತ ಏನಾನ ಮೇನ ಗಣಿಸುವುದು ಅವುಗಳಿಗೆ ಶ್ರೇಯಸ್ಕರವಲ್ಲ. ತಾತ್ಕಾಲಿಕವಾಗಿಯಾದರೂ ರಷ್ಯವು ನಿರ್ಬಂಧಿಸಿದಂತೆ ಅವುಗಳಾದರೂ ಏಕೆ ಮುಂದಡಿಯಿಡಬಾರದು? ತನ್ಮೂಲಕ ತಮಗಿತ್ತಿರುವ ಆಹ್ವಾನವನ್ನೇಕೆ ಸ್ವೀಕರಿಸಿ ತಾವೂ ಹಿಂದಿಲ್ಲವೆಂದನಿಸಿಕೊಳ್ಳಬಾರದು? ಎಂಬ ಪ್ರಶ್ನೆಗಳು ಏಳುವುದು ಈ ಸಂದರ್ಭದಲ್ಲಿ ಸಹಜವೇ ಆಗಿದೆ. ಅಣ್ವಸ್ತ್ರಗಳ ಉಪಯೋಗವನ್ನು ತಡೆಹಿಡಿಯುವ ನಿರ್ಧಾರವೊಂದು ಕೇವಲ ಪರೀಕ್ಷೆ ಮಾತ್ರವಲ್ಲದೇ ಸೋವಿಯತ್ ಸರಕಾರದ ದೃಢಸಂಕಲ್ಪವೇನೂ ಅಲ್ಲ ಎಂದು ಶ್ರೀ ಕ್ರುಶ್ಚೇವರೇ ಬಹಿರಂಗಪಡಿಸಿ, ಉಳಿದ ರಾಷ್ಟ್ರಗಳು ಈ ಮಾರ್ಗವನ್ನು ಅನುಸರಿಸದೆ ಹೋದರೆ, ಈ ವಿಚಾರವನ್ನು ಪುನರ್ವಿಚಾರಿಸಲಾಗುವುದೆಂದೂ ತಿಳಿಸಿದ್ದಾರೆ. ಹೀಗಿದ್ದು, ಸೋವಿಯತ್ ಸರಕಾರದ ಈ ಕರೆಯನ್ನು ತಾವು ವಿಚಾರಿಸುತ್ತಲಿದ್ದೇವೆ, ನಮ್ಮ ಪರಿಶೀಲನೆಯಲ್ಲಿದೆ ಎಂದು ಪಂತಾಗಿ ಕಾಲಕಳೆಯುವುದು ಸರಿಯಲ್ಲ. ರಷ್ಯವು ಮಾತಿಗಾದರೂ ಘೋಷಿಸಿದೆ ಎಂದು ತಾವು ತಿಳಿಯುವುದಾದರೆ, ಅವುಗಳೂ ಏಕೆ ಮಾತಿಗಾಗಿಯೇ ಅಣ್ವಸ್ತ್ರಗಳನ್ನು ರದ್ದುಗೊಳಿಸುವುದನ್ನು ಘೋಷಿಸಬಾರದು? ಪರಿಷ್ಕಾರ ಮಾತುಕತೆ, ಅಣ್ವಸ್ತ್ರ ಬಹಿಷ್ಕರಣಾದಿಗಳು ಜಗತ್ತಿನ ಕ್ಷೇಮಕ್ಕೆ ಮುಖ್ಯವಾದುವುಗಳು. ಇವನ್ನು ಅನುಸರಿಸುವಲ್ಲಿ ಹಿಂದುಳಿದರೆ, ಆ ರಾಷ್ಟ್ರಗಳು ಮನ್ನಣೆಯನ್ನು ಕಳೆದುಕೊಳ್ಳುವುದು ಖಂಡಿತ.

ಬ್ರಿಟನಿನ ಕೂಲಿಕಾರ ಪಕ್ಷವು ಆದಿಯಿಂದಲೂ ಈ ಪ್ರಯೋಗಗಳಿಗೆ ಭಿನ್ನಾಭಿಪ್ರಾಯವುಳ್ಳುದು. ಈ ಹಿಂದೆಯೇ ಅದು ಇವುಗಳನ್ನು ನಿರ್ಬಂಧಿಸುವಂತೆ ಸರಕಾರವನ್ನು ಕೇಳಿಕೊಂಡಿದೆ. ಆದರೆ, ಅದರಿಂದ ನಿಯೋಜಿತ ಪ್ರತಿಫಲ ಸಿಗದಾಯಿತು. ಹೀಗಿದ್ದರೂ ಇದೀಗ, ಕೂಲಿಗಾರ ಪಕ್ಷವು ಅಹಿಂಸಾತ್ಮಕ ಚಳವಳವನ್ನು ಹೂಡಿರುತ್ತದೆ. ಭಾರತವು ಸ್ವಾತಂತ್ರ್ಯವನ್ನು ಪಡೆಯಲು ಮಾಡಿದ ಅಹಿಂಸಾತ್ಮಕ ಕದನವನ್ನೇ ಈಗ ಈ ಕೂಲಿಕಾರ ಪಕ್ಷವು ಮಾಡುತ್ತಿದೆ. ದಿನದಿಂದ ದಿನಕ್ಕೆ ಈ ಸತ್ಯಾಗ್ರಹವು ಬಲಿಯುತ್ತ ಹೋಗುತ್ತದೆ. ಸಭೆ ಮೆರವಣಿಗೆಗಳನ್ನೂ, ಅಹಿಂಸಾತ್ಮಕ ಘೋಷಣೆಗಳನ್ನೂ ನಡೆಸುತ್ತ ಬ್ರಿಟಿಷ್ ಜನತೆ ತಮ್ಮ ವಿರೋಧವನ್ನು ಪ್ರತ್ಯಕ್ಷವಾಗಿ ಪ್ರಕಾಶಿಸುತ್ತದೆ. ಆದರೆ, ಬ್ರಿಟಿಷ ಸರಕಾರವು ಅಮೆರಿಕೆಯ ಬಾಯಿಂದೇನು ಬರುವುದೋ ಅದಕ್ಕನೇ ತನ್ನ ಒಪ್ಪಿಗೆಯ ಮುದ್ರೆಯನ್ನೀಯುವ ಮನೋಭಾವನೆಯನ್ನು ಪ್ರಕಟಿಸುತ್ತದೆ. ವಿಶ್ವದ ದೃಷ್ಟಿಯಿಂದ, ಇಂದು ಬೇಕಾಗಿರುವುದು ಶಾಂತಿ. ಆ ಶಾಂತಿಯನ್ನು ಹರಡಿಸಲು, ಈ ಅಣ್ವಸ್ತ್ರ ಸ್ಫೋಟನ ಪ್ರತಿಬಂಧನವೂ ಒಂದು ಮಾರ್ಗ. ಹೀಗಿರುವಾಗ ರಷ್ಯದ ಸ್ನೇಹಿತ ರಾಷ್ಟ್ರ ಭಾರತವು ಸೋವಿಯತ್ ಪ್ರಧಾನಿಯ ಈ ಮಹತ್ವಪೂರ್ಣ ಘೋಷಣೆಯನ್ನು ಹೃತ್ಪೂರ್ವಕ ಸ್ವಾಗತಿಸುವುದಲ್ಲದೇ ಉಳಿದ ದಿನದೂಡುವ ಪಾಶ್ಚಾತ್ಯ ರಾಷ್ಟ್ರಗಳೂ ಇದೇ ರೀತಿಯ ದೃಢ ನಿರ್ಧಾರವನ್ನು ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತದೆ. ಇದು ಕಾರ್ಯರೂಪಕ್ಕೆ ಬಂದು ವಿಶ್ವಶಾಂತಿಗೆ ಮಾರ್ಗದರ್ಶಕವಾಗಲೆಂದು ಮನಸಾರೆ ಬಯಸುತ್ತೇವೆ.

ಸಂಕ್ಷಿಪ್ತ ಸುದ್ದಿಗಳು

ಅಧಿಕಾರಕ್ಕೆ ಅಹ್ವಾನ

ಅಣುಪ್ರಯೋಗಗಳ ಪರಿಣಾಮವಾಗಿ ವಾತಾವರಣವು ಕಲುಷಿತವಾಗುವುದರಿಂದ ಹಾಗೂ ಬರಲಿರುವ ಜನಾಂಗಗಳ ಮೇಲೆ ಇದರ ಪರಿಣಾಮವುಂಟಾಗುವುದರ ಶಕ್ಯತೆಯಿಂದ ಕಳವಳವುಂಟಾಗಿದೆ. ಆದುದರಿಂದ ಬ್ರಿಟಿಷ ಲೇಬರ್ ಪಕ್ಷವು ಅಣ್ವಸ್ತ್ರಗಳ ಪ್ರಯೋಗ ಸ್ಫೋಟಗಳನ್ನು ನಿಲ್ಲಿಸಬೇಕಾಗಿ ಕೇಳಿಕೊಳ್ಳುತ್ತದೆ. ಶಸ್ತ್ರಾಸ್ತ್ರಗಳನ್ನು ಇರಿಸಿಕೊಳ್ಳುವುದರ ತಪ್ಪು ಒಪ್ಪುಗಳೇನೇ ಇರಲಿ, ಯಾವುದೇ ರಾಷ್ಟ್ರಕ್ಕೆ ತನ್ನ ಸಮುದ್ರ ತೀರದಿಂದ ಸಹಸ್ರಾರು ಮೈಲು ದೂರವಿರುವ ನಿರಪರಾಧಿಗಳ ಜೀವನದಲ್ಲಿ ವಿಷಬೆರಸಿ ಅವರನ್ನು ನಾಶಗೊಳಿಸುವ ಅಧಿಕಾರವಿಲ್ಲ ಎಂದು ಬ್ರಿಟಿಷ ಕೂಲಿಗಾರ ಪಕ್ಷದ ನಾಯಕ ಗೇಟ್ಸ್‌ಕೇಲರು ಒಂದು ಸಾರ್ವಜನಿಕ ಸಭೆಯಲ್ಲಿ ಅಣ್ವಸ್ತ್ರ ಪ್ರಯೋಗ ಪ್ರತಿಬಂಧನವನ್ನು ಪ್ರತಿಪಾದಿಸುತ್ತ ನುಡಿದು, ಬ್ರಿಟಿಷ ಸರಕಾರಕ್ಕೆ ರಷ್ಯದ ಮಾದರಿಯನ್ನನುಸರಿಸಲು ಕರೆಯಿತ್ತಿರುವರು.

ಉಪಗ್ರಹ ಉರುಳಿತು

ರಶಿಯದ ಎರಡನೆ ಉಪಗ್ರಹವಾದ ಸ್ಪುಟ್ನಿಕ್–೨ ಮತ್ತು ಅದರೊಳಗಿದ್ದ ನಿರ್ಜೀವ ಪ್ರವಾಸಿ ನಾಯಿ ಲೈಕಾಗಳು ದಿನಾಂಕ ೧೪ರ ನಸುಕಿನಲ್ಲಿ ಬೆಂಕಿಯುಂಡೆಯಾಗಿ ಉರಿದು ಅಮೆರಿಕೆಯ ಪೂರ್ವ ಕರಾವಳಿಯ ಬ್ಲೈಟ್ಲೊ ಉರುಳಿದುವೆಂದು ವರದಿಯಾಗಿದೆ. ೧೯೫೭ನೆಯ ನವಂಬರ ೩ನೆಯ ದಿನ ರಾಕೆಟಿನಿಂದ ಬಿಟ್ಟು ಇದನ್ನು ಹಾರಿಸಲಾಗಿತ್ತು. ಅದರಲ್ಲಿಟ್ಟಿದ್ದ ನಾಯಿ ಲೈಕಾ ಸುಮಾರು ೭ ದಿನಗಳ ವರೆಗೆ ಜೀವಂತವಾಗಿದ್ದು ಅನೇಕ ಸಲ ಪೃಥ್ವಿಗೆ ಪ್ರದಕ್ಷಿಣೆ ಹಾಕಿ ಅನಂತರ ಪ್ರಾಣವಾಯುವಿನ ಕೊರತೆಯಿಂದಾಗಿ ನಿಧನಹೊಂದಿತ್ತು. ಮನುಷ್ಯ ನಿರ್ಮಿತ ಉಪಗ್ರಹಗಳಲ್ಲೆಲ್ಲ ಇದು ಅತಿದೊಡ್ಡದೂ ಹೆಚ್ಚು ಪರಿಪೂರ್ಣವೂ ಆದುದಾಗಿತ್ತು. ಅದರ ತೂಕ ೧೧೨೦ ರಾತಲು ಇದ್ದು ತಾಸಿಗೆ ೧೮ ಸಾವಿರ ಮೈಲು ಭ್ರಮಿಸುತ್ತಿತ್ತು. ಅದು ೨೩೭೦ ಸುತ್ತು ಭೂಮಿಗೆ ಬಂದಿದ್ದು ಒಂದೆರಡು ದಿನಗಳಲ್ಲಿಯೇ ಉರುಳುವುದೆಂದು ದಿನಾಂಕ ೧೩ರಂದು ಮೋಸ್ಕೋ ಬಾನುಲಿ ಸಾರಿದೆ. ಈ ಉಪಗ್ರಹದ ಪತನದಿಂದಾಗಿ ಅಮೆರಿಕೆಯು ಹಾರಿಸಿದ ಮೂರು ಉಪಗ್ರಹಗಳು ಮಾತ್ರ ಇದೀಗ ಆಕಾಶದಲ್ಲಿ ನಿರ್ಭಯತೆಯಿಂದ ಸಂಚರಿಸುತ್ತವೆ.

ಸರ್ವೋದಯ ಪಾತ್ರೆ

ಮಕ್ಕಳು ಪ್ರತಿದಿನವೂ ಊಟಕ್ಕೆ ಕುಳಿತುಕೊಳ್ಳುವ ಮೊದಲು ಸಮಾಜದ ಬಡವರಿಗಾಗಿ ಎಂದು ಒಂದು ಮುಷ್ಟಿ ಧಾನ್ಯವನ್ನು ಸರ್ವೋದಯ ಪಾತ್ರೆಯಲ್ಲಿ ಹಾಕಬೇಕು ಎಂಬುದಕ್ಕೆ ಉತ್ತೇಜನವೀಯುವ ಹೊಸ ಚಳವಳಿಯೊಂದನ್ನು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ನವದೆಹಲಿಯಲ್ಲಿ ಉದ್ಘಾಟಿಸಿದರು. ಸರ್ವೋದಯ ಪಾತ್ರೆಯೆಂದರೆ, ಸರ್ವೋದಯ ಕಾರ್ಯಕರ್ತರು ಮನೆಮನೆಗೆ ಬಂದು ಪ್ರತಿಮನೆಯಲ್ಲಿಯೂ ಒಂದೊಂದು ಪಾತ್ರೆಯನ್ನಿಟ್ಟು ಅದರಲ್ಲಿ ಆ ಮನೆಯ ಮಕ್ಕಳು ದಿನಾಲೂ ಒಂದೊಂದು ಮುಷ್ಟಿ ಧಾನ್ಯ ಹಾಕಬೇಕೆಂದು ಕೇಳಿಕೊಳ್ಳುವರು. ಈ ಧಾನ್ಯವನ್ನು ಅಗತ್ಯವಿದ್ದವರಿಗೆ ಹಂಚಲಾಗುವುದು. ಈ ಕುರಿತಾಗಿ, ಆಚಾರ್ಯ ವಿನೋಬಾ ಹೀಗೆ ಅಭಿಪ್ರಾಯಪಡುತ್ತಾರೆ—ಸ್ವತಂತ್ರ ಭಾರತದಲ್ಲಿ ಎಲ್ಲರೂ ಸ್ವಾವಲಂಬಿಗಳಾಗಬೇಕು. ಬಡವರ ಉದ್ಧಾರವಾಗಬೇಕು. ಪ್ರತಿಯೊಂದು ಮನೆಯಲ್ಲಿಯೂ ಸರ್ವೋದಯ ಪಾತ್ರೆಗಳನ್ನಿಡಬೇಕು. ಇವೇನೂ ಭಾರವಾಗುವುದಿಲ್ಲ. ಇದರಿಂದ ತಮ್ಮ ಕೈಲಾದದ್ದನ್ನು ಸಮಾಜಕ್ಕೆ ಸಲ್ಲಿಸದೇ ತಾವು ತಿನ್ನುವುದು ತಪ್ಪು ಎಂಬ ಭಾವನೆಯು ಮಕ್ಕಳಲ್ಲಿ ಇದರಿಂದ ಬೆಳೆದುಬರಬೇಕು.

ಸಕಾಲದಲ್ಲಿ, ಸುಲಭ ದರದಲ್ಲಿ

ಸುಂದರ ಮುದ್ರಣಕ್ಕೆ, ವಿಚಾರಿಸಿರಿ—

ನವಯುಗ ಪ್ರೆಸ್ ಉಡುಪಿ

ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ ಚಲೋದಾಗಿ ಮುದ್ರಿಸಿ ಕೊಡಲಾಗುವುದು

NAVAYUGA PRESS, UDIPI.

ಪಂಜಾಬಿನ ಪರ್ವತ ಪ್ರದೇಶದಲ್ಲಿ ಫಸಲು ಕೊಯ್ಲುಗಾಲ. ಮಾಗಿದ ತೆನೆಗಳಿಂದ ತುಂಬಿ ಹೊನ್ನಿನ ಸಾಗರದಂತೆ ಕಂಗೊಳಿಸುವ ಹೊಲಗಳಲ್ಲಿ ಸ್ತ್ರೀ ಪುರುಷರಾದಿ ಗ್ರಾಮ ನಿವಾಸಿಗಳ ತಂಡ ಓಡಾಡಿ, ಹಾವಿನಂತೆ ಸುಂದರವಾದ ಜಾಡನ್ನು ಮಾಡಿರುವರು. ಇಲ್ಲಿಯೂ ಸಹ, ಮೈದಾನ ಪ್ರದೇಶಗಳಲ್ಲಿದ್ದಂತೆ, ತೀವ್ರವಾದ ಬೇಸಾಯ ಪದ್ಧತಿಯು ಬಳಕೆಗೆ ಬರುತ್ತಿದೆ.

ಜಯಪ್ರಕಾಶರು ಮುಂಬಯಿಯಲ್ಲಿ

ಶ್ರೀ ಜಯಪ್ರಕಾಶ ನಾರಾಯಣರು ಈ ತಿಂಗಳ ೧೫ನೆ ದಿನಾಂಕದಂದು ಯುರೋಪಿಗೆ ತೆರಳುವುದೆಂದು ನಿಶ್ಚಿತವಾಗಿದ್ದರೂ ಅವರ ಪತ್ನಿಯಾದ ಶ್ರೀಮತಿ ಪ್ರಭಾವತೀ ದೇವಿಯವರಿಗೆ ಜ್ವರವು ಬರುತ್ತಿದ್ದು, ಅವನ್ನ ಮುಂಬಯಿಯಲ್ಲಿ ಆಸ್ಪತ್ರೆಗೆ ಸೇರಿಸುವುದರ ಪ್ರಯುಕ್ತ ಅದನ್ನು ಸದ್ಯಕ್ಕೆ ರದ್ದುಗೊಳಿಸಿದ್ದಾರೆ. ತನ್ನ ಪತ್ನಿಯ ಅಸ್ವಾಸ್ಥ್ಯದಿಂದಾಗಿ ಅವರ ಮುಂದಿನ ಕಾರ್ಯಕ್ರಮಗಳೆಲ್ಲವೂ ಸ್ಥಗಿತಗೊಂಡಿವೆ.

ಪಾಕದ ಅಪಪ್ರಚಾರ

ಸಂ. ರಾ. ಸಂಸ್ಥೆಯಲ್ಲಿ ಪಾಕಿಸ್ತಾನದ ಖಾಯಂ ಪ್ರತಿನಿಧಿ ಶ್ರೀ ಆಗಾ ಶಾಹಿಯವರು ಭದ್ರತಾಸಮಿತಿಯ ಅಧ್ಯಕ್ಷ ಅಮೇರಿಕೆಯ ಹೆನ್ರಿ ಕ್ಯಾಬಟ್ ಲಾಜರಿಗೊಂದು ಪತ್ರ ಬರೆದು, ಅದರಲ್ಲಿ ಕಾಶ್ಮೀರದಲ್ಲಿ ಅಲ್ಲಿಯ ಸರಕಾರವು ಭಾರತ ಸರಕಾರದ ಒಪ್ಪಿಗೆಯ ಮೇರೆಗೆ ದಬ್ಬಾಳಿಕೆ ನಡೆಸುತ್ತಿದೆ ಎಂದೂ ಕಾಯುದೆ ಸುವ್ಯವಸ್ಥೆಯನ್ನು ಕಾಯ್ದು ಕೊಳ್ಳುವ ಹೆಸರಿನಲ್ಲಿ ಆ ಸರಕಾರವು ಸಾರ್ವತ್ರಿಕ ಮತಗಣನೆಯ ಬಗ್ಗೆ ಜನತೆಯ ಬೇಡಿಕೆಗಳನ್ನು ಹತ್ತಿಕ್ಕಲೆಳಸುತ್ತಿದೆ ಎಂದೂ ದೂರಿರುವರು. ಇಷ್ಟೇ ಅಲ್ಲದೆ, ಭಾರತದ ಕಿಡಿಗೇಡಿ ಧುರೀಣರು ಅಂಜಿಕೆಯನ್ನು ಹುಟ್ಟಿಸುತ್ತಿರುವರೆಂದೂ ಆರೋಪಿಸಲಾಗಿದೆ. ಆದರೆ, ಇವೆಲ್ಲ ದೂರುಗಳು ನಿರಾಧಾರ ಮತ್ತು ವ್ಯರ್ಥ ಅಪಪ್ರಚಾರವೆಂದು ಭಾರತದ ಗೃಹಮಂತ್ರಿ ಪಂ. ಗೋವಿಂದ ವಲ್ಲಭ ಪಂತರು ನುಡಿದಿದ್ದಾರೆ.

ಸರಕಾರ ಉರುಳಲೇಬೇಕು

ಸಂ. ರಾ. ಪ್ರತಿನಿಧಿ ಡಾ. ಫ್ರಾಂಕ ಗ್ರಹಾಮರು ಕಾಶ್ಮೀರ ಪ್ರಶ್ನೆಯ ಬಗ್ಗೆ ಮಾಡಿದ ಸೂಚನೆಗಳನ್ನು ಭಾರತವು ತಿರಸ್ಕರಿಸಿರುತ್ತದೆ. ಇದಲ್ಲದೇ ಅದು ಆಜಾದ ಕಾಶ್ಮೀರವನ್ನೂ ಕಬಳಿಸಲು ನೋಡುತ್ತಿದೆ. ಇದಕ್ಕೆ ಪರಿಹಾರ ಸದ್ಯ ಏನೂ ಇಲ್ಲ. ಕಾಶ್ಮೀರ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಲು ಸಂ. ರಾ. ಸಂಸ್ಥೆಯು ಅಸಮರ್ಥವಾಗಿದ್ದುದರಿಂದ ಉದ್ಭವಿಸಿರುವ ಪರಿಸ್ಥಿತಿಯನ್ನು ಎದುರಿಸಲು ಇಂದು ಪಾಕಿಸ್ತಾನಕ್ಕೆ ಬಲಿಷ್ಠ ಭದ್ರವಾದ ಹಾಗೂ ಪ್ರಾಮಾಣಿಕ ಕೇಂದ್ರಸರಕಾರದ ಅಗತ್ಯವಿದೆ. ಈಗಿರುವ ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಭದ್ರವಾಗಿಲ್ಲ ಮತ್ತು ಪ್ರಾಮಾಣಿಕವಾಗಿರುವುದಿಲ್ಲ. ಈ ಸರಕಾರಗಳಿಗೆ ಪ್ರಾತಿನಿಧಿಕ ರೂಪವಿರುವುದಿಲ್ಲ. ಹೀಗಾಗಿ ಇವುಗಳಿಗೆ ಯಾವುದೇ ದಿಟ್ಟತನದ ಕಾರ್ಯಕ್ರಮಗಳನ್ನು ಅನುಸರಿಸಲು ಧೈರ್ಯವಿರುವುದಿಲ್ಲ. ನ್ಯಾಯ ಹಾಗೂ ಸಮಂಜಸ ಮಾರ್ಗವನ್ನಾಗಲೀ ಜನಹಿತದ ಕಾರ್ಯಕ್ರಮಗಳನ್ನಾಗಲೀ ಮಾಡಲು ಈ ಸರಕಾರಗಳು ಅಸಮರ್ಥವಿರುತ್ತವೆ ಎಂದು ಪಾಕ್ ಮುಸ್ಲಿಂ ಲೀಗಿನ ಅಧ್ಯಕ್ಷ ಶ್ರೀ ಕ್ವಯಾಂ ಖಾನರು ಇಂದಿನ ಪಾಕ್ ಸರಕಾರ ಬದಲಾಗಬೇಕು ಎಂದು ಸಮರ್ಥಿಸಿದರು.

ನೆರೆ ಭಾಷೆಯನ್ನೂ ಕಲಿಯಿರಿ

ಭಾರತದಲ್ಲಿ ಬೇರೆ ಬೇರೆ ಭಾಷೆಗಳಿರುವುದಾದರೂ ಇಲ್ಲಿನ ಸಂಸ್ಕೃತಿಯೊಂದೇ ಆಗಿದೆ. ಆಯಾ ಪ್ರಾಂತಗಳವರು ತಮ್ಮ ಭಾಷೆಯನ್ನು ಕಲಿಯುವುದಲ್ಲದೆ ತಮ್ಮ ನೆರೆಯ ಭಾಷೆಗಳನ್ನು ಕಲಿಯಬೇಕು. ಆಗ, ಯಾವುದೇ ಬಗೆಯ ಘರ್ಷಣೆಗೆ ಅವಕಾಶವುಂಟಾಗದು ಎಂದು ಹುಬ್ಬಳ್ಳಿಯಲ್ಲಿ ಮಹಾರಾಷ್ಟ್ರ ಮಂಡಳದ ರಜತ ಮಹೋತ್ಸವವನ್ನು ಉದ್ಘಾಟಿಸುತ್ತ ಶ್ರೀ ದಿವಾಕರ ರಂಗರಾಯರು ಅಭಿಪ್ರಾಯಪಟ್ಟರು.

ಗೋವೆಗೆ ನಿರ್ಬಂಧವಿಲ್ಲ

ಗೋವಾ ಹಾಗೂ ಭಾರತದಲ್ಲಿರುವ ಪೋರ್ಚುಗೀಸ ಸ್ವಾಸ್ಥ್ಯಗಳಿಗೆ ಹೋಗುವ ಮತ್ತು ಅಲ್ಲಿಂದ ಬರುವ ಸಂಬಂಧವಾಗಿದ್ದ ನಿರ್ಬಂಧವನ್ನು ತೆಗೆದುಹಾಕಲು ಭಾರತ ಸರಕಾರವು ನಿರ್ಧರಿಸಿದೆ. ಈ ನಿರ್ಣಯವು ಈ ಸ್ವಾಸ್ಥ್ಯಗಳಲ್ಲಿನ ಭಾರತೀಯ ಮೂಲನಿವಾಸಿ ನಾಗರಿಕರಿಗೆ ಮಾತ್ರ ಅನ್ವಯವಾಗುವುದು. ಪೋರ್ಚುಗೀಸ ಸೇನಾಪಡೆ, ಮಿಲಿಟರಿ ಪೋಲೀಸ್ ಮುಂತಾದ ಭದ್ರತಾಪಡೆಯವರಿಗೆ ಇದು ಅನ್ವಯವಾಗುವುದಿಲ್ಲ.

ಉಡುಪಿ

ಮುನಿಸಿಪಲ್ ಕೌನ್ಸಿಲ್ ಸಭೆಯು

ತಾ. 14ರಂದು ಸಂಜೆ ಚೇರ್‌ಮೆನ್ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಪ್ರಯಾಣಿಕರ ಬಂಗ್ಲೆಯನ್ನು ಸರಕಾರವು ಸ್ವಾಧೀನಪಡಿಸಿಕೊಂಡು ಅದನ್ನು ನಡೆಸಿಕೊಂಡು ಬರುವಂತೆ ಮೈಸೂರು ಸರಕಾರವನ್ನು ವಿನಂತಿಸಲಾಯಿತು. ಮುನಿಸಿಪಲ್ ಸಿಬಂದಿಯಲ್ಲಿ ಕಡಿಮೆ ವೇತನ ಪಡೆಯುವ ಐದು ಮಂದಿಗೆ ಮನೆ ಬಾಡಿಗೆ ಬದಲು ವೇತನ ಸ್ಕೇಲನ್ನು ಈ ತಿಂಗಳಿಂದ ಸರಕಾರದ ಮಂಜೂರಾತಿಗೊಳಪಟ್ಟು ಕೊಡಬೇಕೆಂದಾಯಿತು. ಹೊಸ ಮಟ್ಟದ ವೇತನ ಮತ್ತು ತುಟ್ಟಿಭತ್ತೆಯನ್ನು ಮುನಿಸಿಪಲ್ ಉಪಾಧ್ಯಾಯರಿಗೆ ಕೊಡಲು ಸರಕಾರವು ಅಡ್ವಾನ್ಸ್ ಮಾಡಿದ ಹಣವನ್ನು ಆಯಾಯಾ ಉಪಾಧ್ಯಾಯರಿಗೆ ಕೆಲವೊಂದು ಶರ್ತಗಳಿಗೊಳಪಟ್ಟು ವಿತರಣೆ ಮಾಡಲು ಕಮಿಶನರರನ್ನು ಕೇಳಿಕೊಳ್ಳಲಾಯಿತು.

ಡಾ. ಟಿ. ಎಮ್. ಎ. ಪೈಗಳ ಷಷ್ಟ್ಯಬ್ಧಿಪೂರ್ತಿ ಸಮಾರಂಭವನ್ನು — ಮಣಿಪಾಲ ಪ್ರೌಢ ಶಾಲೆಯವರು ತಾ. 12ರಂದು ಡಾ. ಸುಂದರರಾಯ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಬಿ. ಶ್ಯಾಮರಾಯ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು. ಸಹಾಧ್ಯಾಪಕರಾದ ಶ್ರೀ ಎ. ಎಸ್. ವೆಂಕಟೇಶ ಮೂರ್ತಿಯವರು ಅಧ್ಯಾಪಕ ಹಾಗೂ ವಿದ್ಯಾರ್ಥಿವೃಂದದ ಪರವಾಗಿ ಡಾ. ಟಿ. ಎಮ್. ಎ. ಪೈಗಳಿಗೆ ಅಭಿನಂದನಾ ಪತ್ರವನ್ನು ಅರ್ಪಿಸಿದರು. ಶ್ರೀಗಳಾದ ಬಿ. ಆರ್. ಹೆಗ್ಡೆ, ಬಿ. ಎಲ್. ನೆಲ್ಲಿ, ಕೆ. ವಿ. ರಾವ್ ಮತ್ತು ಬಿ. ಶ್ಯಾಮರಾಯ ಸೆಟ್ಟರು ಮುಖ್ಯ ಅತಿಥಿಯ ಕುರಿತು ಕಾಲೋಚಿತ ಮಾತುಗಳನ್ನಾಡಿದರು. ಮುಖ್ಯ ಅತಿಥಿಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ ಶ್ರೇಯಸ್ಸಾಗಲೆಂದು ಕೋರಿದರು. ಸಭಾಧ್ಯಕ್ಷರು, ಮುಖ್ಯ ಅತಿಥಿಗಳ ಆದರ್ಶವನ್ನು ವಿದ್ಯಾರ್ಥಿಗಳು ಅನುಸರಿಸಬೇಕೆಂದು ಆಶಿಸಿದರು. ವಿದ್ಯಾರ್ಥಿ ನಾಯಕ ಶ್ರೀ ಕೃಷ್ಣಮೂರ್ತಿ ತಂತ್ರಿಗಳು ಧನ್ಯವಾದವಿತ್ತರು.

ಡಾ. ಮಾಧವ ಪೈಯವರ ಷಷ್ಟ್ಯಬ್ಧಿ ಪೂರ್ತಿ — ಮಣಿಪಾಲದ ಎಕೆಡೆಮಿ ಆಫ್ ಜನರಲ್ ಎಜುಕೇಶನಿನ ರಿಜಿಸ್ಟ್ರಾರರಾದ ಡಾ. ಮಾಧವ ಪೈಯವರಿಗೆ ಇದೇ ತಿಂಗಳ ಮೂವತ್ತನೆಯ ದಿನಾಂಕಕ್ಕೆ ಅರುವತ್ತು ವರ್ಷಗಳು ತುಂಬಲಿರುವುವು. ಡಾ. ಪೈಯವರು ಒಬ್ಬ ಬೇಂಕರರಾಗಿ, ಒಬ್ಬ ಸಮಾಜಸೇವಕರಾಗಿ, ಒಬ್ಬ ಸುಪ್ರಸಿದ್ಧ ವಿದ್ಯಾತಜ್ಞರಾಗಿ ಜನತೆಗೆ ನಾನಾ ವಿಧದ ಉಪಕಾರವನ್ನು ಸಲ್ಲಿಸಿದ್ದಾರೆ; ಸೇವೆಯನ್ನೇ ತಮ್ಮ ಜೀವನದ ಮುಖ್ಯ ಉದ್ದೇಶವನ್ನಾಗಿಟ್ಟುಕೊಂಡಿದ್ದಾರೆ. ಇದರಿಂದಾಗಿಯೇ ಅವರು ಊರು ಪರವೂರುಗಳಲ್ಲಿ ಅನೇಕ ಸ್ನೇಹಿತರನ್ನು ಸಂಪಾದಿಸಿಕೊಂಡಿದ್ದಾರೆ. ಡಾ. ಮಾಧವ ಪೈಯವರ ಈ ರೀತಿಯ ಮಹತ್ವಪೂರಿತ ಸೇವಾ ಜೀವನವನ್ನು ನೆನೆದು, ಅವರ ಷಷ್ಟ್ಯಬ್ಧಿಪೂರ್ತಿ ಸಮಾರಂಭವನ್ನು ವೈಶಿಷ್ಟ್ಯಪೂರ್ಣವಾಗಿ ಆಚರಿಸುವ ನಿಶ್ಚಯವನ್ನು ಮಾಡಿದ್ದಾರೆ. ಈ ಬಗ್ಗೆ ಒಂದು ಸಮಿತಿಯು ಆರಿಸಲ್ಪಟ್ಟು, ಡಾ. ಎಸ್. ಆರ್. ಪೈಯವರಿದರ ಅಧ್ಯಕ್ಷರಾಗಿರುತ್ತಾರೆ. ಈ ಸಮಿತಿಯು ಕನಿಷ್ಠ ಒಂದು ಲಕ್ಷ ರೂಪಾಯಿಗಳನ್ನು ಒಂದುಗೂಡಿಸಿ ಅದನ್ನು ಎಕೆಡೆಮಿಯ ನೇತೃತ್ವದಲ್ಲಿ ಪ್ರಾರಂಭಿಸಲಾದ ಮಹಾತ್ಮಾ ಗಾಂಧೀ ಸ್ಮಾರಕ ಕಲಾಶಾಲೆಗೆ ಕಟ್ಟಡಗಳನ್ನು ಕಟ್ಟಿಸುವುದು, ವಿದ್ಯಾರ್ಥಿ ವೇತನಗಳನ್ನು ಕೊಡುವುದು ಮೊದಲಾದ ಸದುದ್ದೇಶಗಳಿಗಾಗಿ ವೆಚ್ಚಮಾಡುವ ಯೋಜನೆಯನ್ನು ರೂಪಿಸಲಾಗಿದೆ. ಆದುದರಿಂದ, ಡಾ. ಪೈಯವರ ಬಹುಮುಖ ಸೇವೆಯನ್ನು ಮೆಚ್ಚಿರುವವರು ಈ ನಿಧಿಗೆ ಸ್ವತಃಪೂರ್ವಕ ಸಹಾಯ ಮಾಡಬೇಕು. ಸಹಾಯ ಧನವನ್ನು, ಈ ನಿಧಿಯ ಕೋಶಾಧಿಕಾರಿಗಳಾದ ಡಾ. ಪಿ. ಆರ್. ನಾಯಕರಿಗಾಗಲೀ, ಎಂ. ಜಿ. ಎಂ. ಕಾಲೇಜ್ ಟ್ರಸ್ಟಿನ ಕಾರ್ಯದರ್ಶಿಗಳಿಗಾಗಲೀ, ಸೋದೆ ವಾದಿರಾಜ ಮಠದಲ್ಲಿರುವ ಸಮಿತಿಯ ಕಾರ್ಯಾಲಯಕ್ಕಾಗಲಿ, ಈ ನಿಧಿಯ ಲೆಕ್ಕಕ್ಕೆ ಜಮೆಯಾಗುವಂತೆ ಸಿಂಡಿಕೇಟ್ ಬೇಂಕಿನ ಶಾಖೆಗಳಲ್ಲಾಗಲೀ ಅಥವಾ ಅಧಿಕೃತ ಪ್ರತಿನಿಧಿಗಳಿಗಾಗಲೀ ಪಾವತಿಮಾಡಬಹುದೆಂದು ಅಧ್ಯಕ್ಷ ಡಾ. ಎಸ್. ಆರ್. ಪೈಯವರು ವಿನಂತಿಸುತ್ತಾರೆ. ಸಾರ್ವಜನಿಕರ ಸಹಕಾರವನ್ನು ಈ ಸಂದರ್ಭದಲ್ಲಿ ಯಾಚಿಸಲಾಗಿದೆ.

ಮಣಿಪಾಲ — ಇಲ್ಲಿಯ ಇಂಜಿನಿಯರಿಂಗ್ ಕಾಲೇಜಿನ ಸ್ಟಾಫ್ ಕ್ಲಬ್ಬಿನ ದಿನಾಚರಣೆಯು ಕಳೆದ ತಾ. 31ರಂದು ಶ್ರೀ ಕೆ. ವಾಸುದೇವ ಕಾರಂತರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಪಟ್ಲ — ಪಟ್ಲದ ತಿಲಕ ಕಲಾ ಮಂಡಳಿಯ ವರ್ಧಂತಿಯು ಕಳೆದ ತಾ. 29ರಂದು ಶ್ರೀ ಎ. ಜಿ. ಅಳ್ವೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮರ್ಣೆ ಗೋವಿಂದ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಪಿ. ಶೀನ ಸೆಟ್ಟಿ, ಬನ್ನಂಜೆ ರಾಮಾಚಾರ್ಯ, ಪಿ. ಬಿ. ಸಂಜೀವರಾವ್ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದ ನಂತರ ಶ್ರೀ ಮರ್ಣೆ ವಾಸುದೇವ ಭಟ್ಟರಿಂದ ವಿರಚಿತ 'ರಕ್ತ ಕಣ್ಣೀರು' ನಾಟಕವನ್ನು ಮಂಡಳಿಯ ಸದಸ್ಯರು ಚುರುಕಾಗಿ ಅಭಿನಯಿಸಿದರು.

ಕುಂದಾಪುರ — ಸ್ಥಳೀಯ ಬೋರ್ಡ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕ ಹಬ್ಬವು ಇದೇ ತಾ. 25ರಂದು ಬೆಳಿಗ್ಗೆ ಕುಂದಾಪುರ ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ಕೆ. ವೆಂಕಪ್ಪ ಸೆಟ್ಟರಿಂದ ಧ್ವಜಾರೋಹಣದೊಡನೆ ಪ್ರಾರಂಭವಾಗುವುದು. ಬಳಿಕ ಜುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಬಿ. ವಿಶ್ವನಾಥ ರೈಗಳು ಕಲೆ-ವೃತ್ತಿ-ಕೈಗಾರಿಕೆ ವಸ್ತು ಪ್ರದರ್ಶನವನ್ನು ಉದ್ಘಾಟಿಸುವರು. ತಾ. 26ರಂದು ರಾತ್ರೆ ಹಳೆ ವಿದ್ಯಾರ್ಥಿಗಳ ಜೋಡಾಟ ಸಮಾರಂಭವು ಕುಂದಾಪುರದ ಅಸಿಸ್ಟೆಂಟ್ ಕಮಿಶನರ್ ಶ್ರೀ ಕೆ. ಎಲ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗುವುದು. ತಾ. 27ರಂದು ಪೂರ್ವಾಹ್ನ ಸಂಘದ ವಾರ್ಷಿಕ ಸಭೆ ಸೇರುವುದು. ಸಂಜೆ ಸಂಘದ ವಾರ್ಷಿಕೋತ್ಸವವು ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗುವುದು. ದ. ಕ. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಬಿ. ಎಮ್. ಕುಡುಬಿಯವರು ಸಂಘದ ಪತ್ರಿಕೆ ವಾಚನ ಮಾಡುವರು. ಮೂರು ದಿವಸಗಳ ಕಾರ್ಯಕ್ರಮಗಳು ಸಂಘದ ಅಧ್ಯಕ್ಷ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರ ನಾಯಕತ್ವದಲ್ಲಿ ಸಾಂಗವಾಗಲಿದೆ.

ಮಕ್ಕಳ ಮಗ್ಗಿಪುಸ್ತಕ

(ನಯೇ ಪೈಸೆ ಕೋಷ್ಟಕ ಸಹಿತ)

ಬೆಲೆ 1ಕ್ಕೆ 0 1 0

ನವಯುಗ ಪ್ರೆಸ್, ಉಡುಪಿ.

ಕನ್ನಡ ಕಾವ್ಯಗಳ ವೈಶಿಷ್ಟ್ಯ

(೫ನೇ ಪುಟದಿಂದ)

ಬಳಸಿಕೊಳ್ಳುವ ಹವ್ಯಾಸ ದಿನೇ ದಿನೇ ಬೆಳೆಯಿತು. ಸಂಸ್ಕೃತ ಛಂದಸ್ಸಿಗೆ ಅನುಸಾರವಾಗಿ ಕನ್ನಡದ ಮೂಲನುಡಿಗಳು ಹೊಂದದಿರುವುದೇ ಈ ಪ್ರಯೋಗಕ್ಕೆ ಮೂಲಕಾರಣವೆನ್ನಬಹುದು. ಆದರೆ, ಇಂತಹ ಸಂಸ್ಕೃತದ ಪ್ರಭಾವವು ಮೇರೆ ಮೀರುವ ಪ್ರಸಂಗವೂ ಬಂತು. ಮುದ್ದಣನೆನ್ನುವಂತೆ ಹವಳಗಳನ್ನು ಹಾರದಲ್ಲಿ ಪೋಣಿಸಿದಂತೆ ಈ ಬಂಧವಿರುವುದಾದರೂ, ಶೀರ ಸಂಸ್ಕೃತ ಪದಗಳನ್ನು ಬಳಸಿರುವ ಪ್ರಾಚೀನರ ಕಾವ್ಯಗಳು ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕಿಸಿದಂತಾಯಿತು. ಹಾಗಾಗಿ ಇಂದಾದರೂ ನಮಗೆ ಅಭ್ಯಾಸವಿಲ್ಲದೆ ಅರ್ಥವಾಗದ ಕಾವ್ಯಗಳ ಬಗೆಗೆ ಅನುರಾಗವೆಂತು ಮೂಡೀತು? ಸಂಸ್ಕೃತ ಪದಗಳೆಲ್ಲವನ್ನೂ ಕನ್ನಡದಲ್ಲಿ ಬಳಸಿಕೊಂಡು ಅವಕ್ಕೆ ಬೇಕಾದರೆ, ಕನ್ನಡದ ವಿಭಕ್ತಿ ಪ್ರತ್ಯಯಗಳನ್ನು ಮಾತ್ರ ಹಚ್ಚಿ, ದೊಡ್ಡ ದೊಡ್ಡ ವೃತ್ತಗಳನ್ನಾಗಿ ಹೆಣೆದು, ತಮ್ಮ ಪ್ರೌಢಿಮೆಯನ್ನು ವ್ಯಕ್ತಪಡಿಸಿದ ಮಹಾಕವಿಗಳೂ ಮುಂದಕ್ಕೆ ನಿಂದನೆಗೆ ಗುರಿಯಾಗಬೇಕಾಯಿತು. ಕನ್ನಡ ಮತ್ತು ಸಂಸ್ಕೃತಗಳ ಪದಮಿಶ್ರಣವು ಒಂದು ಮಿತ ಪ್ರಮಾಣದಲ್ಲಿರಬೇಕು. ಸವಾರನು ಕುದುರೆಯ ಲಗಾಮು ಹಿಡಿಯಬೇಕಲ್ಲದೆ ಕುದುರೆ ಹೋದಲ್ಲಿಗೆ ತಾನು ಹೋಗುವಂತಾಗಬಾರದು. ಆದರೆ, ಕನ್ನಡದ ಸ್ಥಿತಿ ಹೀಗೆ ನಿಲ್ಲಲಿಲ್ಲ. ನಾಡನುಡಿಯ ಮೇಲೆ ಸಂಸ್ಕೃತದ ಪ್ರಭಾವ ಹೆಚ್ಚಾಗುತ್ತ ಬಂದು ಸಂಸ್ಕೃತ ಕಾವ್ಯಗಳು ಮತ್ತು ಕನ್ನಡ ಕಾವ್ಯಗಳು ಎಂಬ ಭೇದವನ್ನು ಕಲ್ಪಿಸುವುದೇ ಕಷ್ಟವೆಂಬ ಗತಿಗಿಳಿಯಿತು—ಎಂದರೆ, ಉದ್ದುದ್ದ ಸಮಸ್ತ ಪದಗಳೂ ದೊಡ್ಡ ದೊಡ್ಡ ಸಂಧಿಯುಕ್ತ ಪದಗಳೂ ಪದ್ಯದಾದ್ಯಂತ ಕೇವಲ ಕನ್ನಡ ವಿಭಕ್ತಿಗಳೊಂದಿಗೆ ಮಾತ್ರ ಬಂದ ಉದಾಹರಣೆಗಳಿವೆ. ಇಂತಹ ಪದ್ಯಗಳಲ್ಲಿ ಮಾಧುರ್ಯ ಇದೆ; ಪ್ರಾಸದ ಅಂದವಿದೆ; ಅಲಂಕಾರದ ಬಿನ್ನಾಣವಿದೆ; ಕಲ್ಪನೆಯ ವಿಲಾಸವಿದೆ; ಓದುವಾಗ ನಾಲಗೆಯಲ್ಲಿ ನರ್ತಿಸುತ್ತ ಪದಸಮೂಹ ಓಡುತ್ತದೆ. ಆದರೆ, ಏನಿದ್ದರೇನು? ಅರ್ಥವಾಗದೆ ಹೋದರೆ, ಅಂತಹ ಕಾವ್ಯವು ಕನಸಿನ ಗಂಟು; ಕನ್ನಡಿಯೊಳಗಿನ ತಿಜೋರಿ; ಮನಸ್ಸಿನ ಮಂಡಿಗೆ. ಅವುಗಳ ಪ್ರಯೋಜನವು ಸಂಸ್ಕೃತ ವಿದ್ವಾಂಸರಿಗೆ ಮಾತ್ರ— ಕನ್ನಡ ಸಾಹಿತ್ಯದ ಬಾಗಿಲು ಕನ್ನಡಿಗರಿಗೇನೇ ಮುಚ್ಚಿಬಿಟ್ಟಂತೆ!

(ಕ್ರಮಶಃ)

ಹತ್ತು ಲಕ್ಷ ಮೈಲುಗಳ ವರೆಗೆ ಓಡಬಲ್ಲ ಎರಡಂತಸ್ತಿನ ಮೋಟಾರು ವಾಹನಗಳನ್ನು ಬ್ರಿಟನಿನಲ್ಲಿ ತಯಾರಿಸಲಾಗುತ್ತಿದೆ. ಚಿತ್ರದಲ್ಲಿ ಕಾಣುವ ಎರಡು ಬಸ್ಸುಗಳೂ ಬೇರೆ ಬೇರೆ ನಮೂನೆಯವು.

ಮಂಗಳೂರು

ರೋಟರಿ ಸಭೆಯು- ತಾ. 10ರಂದು ಸಂಜೆ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಪ್ರಮುಖ ಕೃಷಿಕರಾದ ಶ್ರೀ ಎನ್. ರಾಮರಾಯರು ಪ್ರಮುಖ ಭಾಷಣಕರ್ತರಾಗಿದ್ದರು. ನವೀನ ರೀತಿಯ ಕೃಷಿ ಪದ್ಧತಿಗಳನ್ನು ತಮ್ಮ ಗದ್ದೆಗಳಲ್ಲಿ ಅನುಸರಿಸದಿರುವುದಕ್ಕೆ ಹೆಚ್ಚಿನ ರೈತರಲ್ಲಿ ಆ ವಿಷಯದಲ್ಲಿ ಮೂಡಿರುವ ಭಯವೇ ಕಾರಣವೆಂದರು. ಹೊಸ ಕೃಷಿ ವಿಧಾನಗಳನ್ನನುಸರಿಸಲು ಹೆಚ್ಚಿನ ಖರ್ಚು ತಗಲುವುದು ಮತ್ತು ಅದರ ಫಲಿತಾಂಶದ ಕುರಿತು ಯಾವುದೇ ನಿಶ್ಚಿತತೆ ಇಲ್ಲವೆಂಬಂತಹ ಒಂದು ಹೆದರಿಕೆಯ ಮನೋಭಾವನೆ ಅವರಲ್ಲಿ ಬೇರೂರಿಬಿಟ್ಟಿದೆ. ಅವರ ಈ ಮನೋಭಾವನೆಯು ಬದಲಾಗುವಂತೆ ಈ ದಿಸೆಯಲ್ಲಿ ಅವರಿಗೆ ಸರಿಯಾದ ಶಿಕ್ಷಣವನ್ನೊದಗಿಸುವುದು ಪ್ರತಿಯೊಬ್ಬ ವಿದ್ಯಾವಂತನ ಕರ್ತವ್ಯವಾಗಿದೆ ಎಂದೂ ಹೇಳಿದರು.

ಮಂಗಳೂರು ನಗರದ ೧ನೇ ಮಂಡಲ ಕಾಂಗ್ರೆಸ್ ಸಮಿತಿಯ ಉದ್ಘಾಟನೆಯು ತಾ. 13ರಂದು ಡಾ. ಯು. ಪಿ. ಮಲ್ಯರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕೆ. ಕೆ. ಶೆಟ್ಟಿ ಎಂ. ಎಲ್. ಸಿ. ಯವರು ಸಮಾರಂಭದ ಅಧ್ಯಕ್ಷತೆ ವಹಿಸಿದರು. ಆರಂಭದಲ್ಲಿ ಶ್ರೀ ಮಣೇಲ ಶ್ರೀನಿವಾಸ ನಾಯ್ಕರು ಸ್ವಾಗತಿಸಿದರು.

ತೈಲಚಿತ್ರ ಅನಾವರಣ- ಮಂಗಳೂರು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ತೈಲಚಿತ್ರವೊಂದನ್ನು ಕಾಪಿಕಾಡು ಮುನ್ಸಿಪಲ್ ಹಾ. ಎ. ಶಾಲೆಯಲ್ಲಿ ತಾ. 12ರಂದು ಜಿಲ್ಲಾಧಿಕಾರಿ ಶ್ರೀ ವೈ. ಸಿ. ಪೊಂಬಾಳಯ್ಯನವರು ಅನಾವರಣಮಾಡಿದರು.

ದೇಲಂಪಾಡಿ- ಇಲ್ಲಿಯ ಸರಕಾರೀ ಕಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಕೆ. ಮಹಾಲಿಂಗನವರು ನಿವೃತ್ತರಾಗಲಿರುವ ಕಾರಣ ಅವರನ್ನು ಸತ್ಕರಿಸುವ ಸಮಾರಂಭವೊಂದು ತಾ. 9ರಲ್ಲು ಶ್ರೀ ವೆಂಕಪ್ಪ ಶರ್ಮರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಾಮನ ಕಾಮತರು ಸ್ವಾಗತಿಸಿದರು. ಶ್ರೀಗಳಾದ ಕೆ. ಜಿ. ಕೃಷ್ಣ ಭಟ್, ಕೀ. ವ. ಕೇಶವ, ಕೆ. ಪಕೀರ ಆಳ್ವ ಮತ್ತು ಬಿ. ಟಿ. ರೈಗಳು ಸಂದರ್ಭೋಚಿತ ಮಾತುಗಳನ್ನಾಡಿದರು.

ಯಕ್ಷಗಾನ ತಾಳಮದ್ದಳೆ- ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂದಿರದಲ್ಲಿ ತಾ. 6ರಂದು ಶ್ರೀ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ 'ಶ್ರೀಕೃಷ್ಣ ಪೂಜೆ ಮತ್ತು ಅಭಿಮನ್ಯು ಕಾಳಗ'ವೆಂಬ ಪ್ರಸಂಗದ ತಾಳಮದ್ದಳೆ ಸಮಾರಂಭವು ನುರಿತ ಅರ್ಥಧಾರಿಗಳ ಕೂಡುವಿಕೆಯಿಂದ ನಡೆಯಿತು.

ಹೆಬ್ರಿ— ಸ್ಥಳೀಯ ಪಂಚಾಯತ ಚುನಾವಣೆಯು ಜರಗಿ ಶ್ರೀಗಳಾದ ಎಚ್. ಪುಂಡರಥರ ಬಲ್ಲಾಳ್ (ಅಧ್ಯಕ್ಷ), ಎಚ್. ರಾಮದಾಸ ಶೆಣೈ, ಎಚ್. ಪಾಂಡುರಂಗ ರಮಣ ನಾಯಕ್, ಎಚ್. ಮುತ್ತಯ್ಯ ಶೆಟ್ಟಿ, ಟಿ. ವಿಶ್ವನಾಥ ಹೆಗ್ಡೆ, ಎಸ್. ರಾಧಾಕೃಷ್ಣ ಭಕ್ತ, ಎನ್. ಗಣೇಶ ಚಿಪಳೂಣಕರ್ ಮತ್ತು ಎಚ್. ಗೋಪಾಲ ನಾಯಕ್ ಸದಸ್ಯರು ಆರಿಸಲ್ಪಟ್ಟರು.

ಪಂಜ- ಕುತ್ತ್ಯಾಂಜ ಶ್ರೀ ಸದಾಶಿವ ಪಂಚಲಿಂಗೇಶ್ವರ ಶಾಲಾ ವಠಾರದಲ್ಲಿ ಶಾಲಾ ಸಹಾಯಾರ್ಥವಾಗಿ ತಾ. 5ರಿಂದ 7ರವರೆಗೆ ಕುತ್ತ್ಯಾಂಜ ಪಂಚಲಿಂಗೇಶ್ವರ ಕಲಾ ಸಂಘ ಮತ್ತು ಕಲ್ಮಡ್ಕ ಸಂಗಮ ಕಲಾ ಸಂಘದ ನೇತೃತ್ವದಲ್ಲಿ ಯಕ್ಷಗಾನ ನಾಟಕಗಳು ಪ್ರದರ್ಶಿಸಲ್ಪಟ್ಟುವು. ಶ್ರೀ ಟಿ. ಜೆ. ಬಂಗೇರ್, ಬಿ. ಡಿ. ಓ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ. ಐ. ಭಟ್ಟರು ಧನ್ಯವಾದಗಳನ್ನಿತ್ತರು.

ನಂದಿಕೂರು— ಸ್ಥಳೀಯ ಬೋರ್ಡ್ ಹಾ. ಎ. ಶಾಲೆಯಲ್ಲಿ ತಾ. 7ರಂದು ಶ್ರೀ ಕೆ. ರಾಮಕೃಷ್ಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಆರೋಗ್ಯ ದಿನಾಚರಣೆ ನಡೆಯಿತು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ನಾಗಪ್ಪ ಅರಸು ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಶ್ರೀ ರಮೇಶ ರಾಯರು ಧನ್ಯವಾದವಿತ್ತರು.

ಮುಂಡ್ಕೂರು— ರಾಷ್ಟ್ರೀಯ ಉಳಿತಾಯ ಯೋಜನೆಯ ಪ್ರಚಾರ ಸಭೆಯು ತಾ. 8ರಂದು ಸ್ಥಳೀಯ ಸಮಾಜ ಮಂದಿರದಲ್ಲಿ ವನಿತಾ ಸಮಾಜದ ಆಶ್ರಯದಲ್ಲಿ ಶ್ರೀ ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಡಿವಿಜನಿನ ಅಸಿಸ್ಟೆಂಟ್ ನೇಶನಲ್ ಸೇವಿಂಗ್ಸ್ ಆಫೀಸರ್ ಶ್ರೀ ಜಿ. ಎಸ್. ಪಾಲ್ ಮತ್ತು ಶ್ರೀ ಗೋಪಾಲ ಸೆಟ್ಟರು ಸಂದರ್ಭೋಚಿತ ಭಾಷಣವಿತ್ತರು. ಶ್ರೀಮತಿ ವಸಂತಿ ಎಸ್. ಮುಂಡ್ಕೂರರು ಧನ್ಯವಾದಗಳನ್ನಿತ್ತರು.

ಕುಂದಾಪುರ ಮತ್ತು ಉಡುಪಿ, ತಾಲೂಕು ಕಾಂಗ್ರೆಸ್ ಕಮಿಟಿಯ ರಚನೆ— ಹಿಂದಿನ ಬೈಂದೂರು ಮತ್ತು ಕುಂದಾಪುರ ಸರ್ಕಲ್ ಕಾಂಗ್ರೆಸ್ ಕಮಿಟಿಯಲ್ಲಿರುವ ಮಂಡಲ ಕಾಂಗ್ರೆಸ್ ಕಮಿಟಿಗಳು ಕೂಡಿ ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯನ್ನು ರಚಿಸಬೇಕಾಗಿದೆ. ಇದೇ ರೀತಿ ಹಿಂದಿನ ಉಡುಪಿ ಬ್ರಹ್ಮಾವರ, ಕಟಪಾಡಿ ಸರ್ಕಲ್‌ಗಳಲ್ಲಿರುವ ಮಂಡಲ ಕಾಂಗ್ರೆಸ್ ಕಮಿಟಿಗಳಿಂದ ಕೂಡಿದ ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯನ್ನು ರಚಿಸಲಾಗುತ್ತದೆ.

ಇದೇ ತಾ. 19—4—58ನೇ ಶನಿವಾರ ಸಂಜೆ ಘಂಟೆ 4ಕ್ಕೆ ಕುಂದಾಪುರ ಜಿಲ್ಲಾ ಬೋರ್ಡ್ ಬಂಗ್ಲೆಯಲ್ಲಿ ಕುಂದಾಪುರ ತಾಲೂಕಿನ ಎಲ್ಲಾ ಮಂಡಲ ಕಾಂಗ್ರೆಸ್ ಕಮಿಟಿಯ ಅಧಿಕಾರಿ ವರ್ಗದವರ ಮಹಾ ಸಭೆಯು ನಡೆಯಲಿದೆ. ತಾ. 20—4—58ನೇ ಆದಿತ್ಯವಾರ ಸಂಜೆ ಘಂಟೆ 4ಕ್ಕೆ ಉಡುಪಿ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ಉಡುಪಿ, ಬ್ರಹ್ಮಾವರ, ಕಟಪಾಡಿ, ಉಡುಪಿ ತಾಲೂಕಿನ ಎಲ್ಲಾ ಮಂಡಲ ಕಾಂಗ್ರೆಸ್ ಕಮಿಟಿಯ ಅಧಿಕಾರಿ ವರ್ಗದವರ ಮಹಾ ಸಭೆಯು ಜರಗಲಿರುವುದು. ಈ ಮಹಾ ಸಭೆಗಳಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಗಳವರು ಭಾಗವಹಿಸಲಿರುವರು.

ಉಡುಪಿ ಡಿ. ಮುಂ. ಕೋರ್ಟಿನಲ್ಲಿ

O. P. 21/58.

ಮರಿಯಮ್ಮ ಶೆಡ್ತಿ ಕೂಡಾ 8 ಜನರು
—ಅರ್ಜಿದಾರರು

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ,

ಮೃತ ಬಡಗೆರಗುತ್ತು ದಾಬ ಸೆಟ್ರ ಪಕ್ಕಿಸೆ ಅರ್ಜಿಯಲ್ಲಿ ವಿವರಿಸಿದ ಸಾಲಗಳ ವಸೂಲಿ ಕುರಿತು 1ನೇ ಅರ್ಜಿದಾರರ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲು ಮಾಡಿದ ಮೇಲಿನ ಅರ್ಜಿಯು ತಾ. 16—6—1958ಕ್ಕೆ ನೋಟೀಸು ಬಗ್ಗೆ ಇಡಲಾಗಿಯದೆ. ಆ ಕುರಿತು ಯಾರಾದರೂ ಆಕ್ಷೇಪಿಸುವವರಿದ್ದರೆ ಸದ್ರಿ ತಾರೀಕಿಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸಲಾಗಿಯದೆ.

(By order fo the court)

Y. C. S Hegde,
Advocate for Petitioners.

ತಾ. 14.4.58 ಉಡುಪಿ.

ಕುಮಾರಿ ಜಿಲ್ಲಿಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು: **ಷಾ ಕಂಪೆನಿ, ಮಂಗಳೂರು—1.**

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction. Madras.

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸುವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ಸ.)

ರಾಷ್ಟ್ರೀಯ ಪಂಚಾಂಗ- ಪ್ರಕಾಶಕರು. ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ, ದೆಹಲಿ, ೮. ಪುಟಗಳು: ೩೦. ಬೆಲೆ. ೪೦ ನಯೇ ಪೈಸೆ.

ಭಾರತ ಸರಕಾರವು ಕಳೆದ ವರ್ಷದಿಂದ ಅಖಿಲ ಭಾರತ ವ್ಯಾಪ್ತಿಯನ್ನು ಪಡೆಯುವಂತೆ ಒಂದು ನೂತನ ರಾಷ್ಟ್ರೀಯ ಪಂಚಾಂಗವನ್ನು ಪ್ರಕಾಶನಕ್ಕೆ ತಂದಿತು. ಈ ಪಂಚಾಂಗವನ್ನು ತಯಾರಿಸುವುದಕ್ಕೆ ಮೊದಲು ಅದು ಭಾರತದ ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿದ್ದ ಬೇರೆಬೇರೆ ಪಂಚಾಂಗಗಳನ್ನೂ ಗಣಿತಶಾಸ್ತ್ರ ಕ್ರಮವನ್ನೂ ಪರಿಶೀಲಿಸಲು ದಿವಂಗತ ಪ್ರೊ. ಎಂ. ಎನ್. ಶಹರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ತಯಾರಿಸಿತು. ಈ ಸಮಿತಿಯ ವರದಿಯಂತೆ ಪ್ರಕೃತ ಸ್ವೀಕರಿಸಿದ ಪಂಚಾಂಗವಿದೆ.

ಇದರಲ್ಲಿ ಈ ಪಂಚಾಂಗ ಸೃಷ್ಟಿಕ್ರಮ, ಇದಕ್ಕೆ, ಹಾಗೂ ಗ್ರೆಗೋರಿಯನ್ ಮತ್ತು ಉಳಿದ ಭಾರತೀಯ ಪಂಚಾಂಗಗಳಿಗಿರುವ ಪ್ರಮುಖ ಅಂತರ ಮತ್ತು ಪಂಚಾಂಗ ಸಮಿತಿಯ ವರದಿಯ ಸಂಪೂರ್ಣಾಂಶಗಳನ್ನು ಕೂಡಿಕೊಂಡಿರುವ ಮುನ್ನುಡಿಯೊಂದಿಗೆ ಅನುಬಂಧವಾಗಿ ೧೯೫೬-೫೭ (ಶಕ ೧೮೭೮) ರಿಂದ ೧೯೫೮-೫೯ (ಶಕ ೧೮೮೦)ರ ವರೆಗಿನ ಮೂರು ವರ್ಷಗಳ ಭಾರತೀಯರ ಹಬ್ಬ (ರಾಷ್ಟ್ರೀಯ, ಹಿಂದೂ, ಕ್ರೈಸ್ತ ಮತ್ತು ಮುಸಲ್ಮಾನ)ಗಳ ದಿನಾಂಕಗಳನ್ನೂ ಅವುಗಳು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಆಚರಿಸಲ್ಪಡುವ ದಿನಗಳನ್ನೂ ಗ್ರೆಗೋರಿಯನ್ ಪಂಚಾಂಗಕ್ಕನುಸರಿಸಿ ಕೊಡಲಾಗಿದೆ. ದೇಶದಲ್ಲೆಲ್ಲಾ ಒಂದೇ ರೀತಿಯ ಪಂಚಾಂಗವನ್ನು ಪ್ರತಿಯೊಂದು ಸಂಗತಿಯಲ್ಲಿಯೂ ಅನುಸರಿಸುವುದು ಐಕ್ಯದ ಕುರುಹೆಂದು ಇಲ್ಲಿ ಹೇಳಲಾಗಿದೆ. ಆದರೆ, ಇಲ್ಲಿರುವ ನಾನಾ ಪಂಚಾಂಗಗಳ ಪ್ರಕಟಣೆಯು ಏಕ ರೀತಿಗೆ ಬರಬೇಕಾದರೆ, ಅದೆಷ್ಟು ವರ್ಷಗಳು ಬೇಕಾಗುವುದೋ ಹೇಳಬರುವುದಿಲ್ಲ.

ಈ ಪುಸ್ತಕದ ಅನುಬಂಧದಲ್ಲಿ ಕೇವಲ ಹಬ್ಬದ ದಿನಗಳನ್ನು ಕೊಡಲಾಗಿದೆ. ಆಯಾ ದಿನದ ಪಂಚಾಂಗ ವಿಶೇಷಗಳನ್ನು ಉಳಿದ ಪಂಚಾಂಗಗಳಿಂದಲೇ ತಿಳಿದುಕೊಳ್ಳಬೇಕೆಂಬ ಉದ್ದೇಶವಿರುವಂತೆ ಕಂಡುಬರುತ್ತದೆ. ಆಗ ಈ ಪಂಚಾಂಗವು ಸರಕಾರದ ರಜಾ ದಿನಗಳನ್ನು ಮಾತ್ರ ತಿಳಿಸುವಂತಾಗುತ್ತದೆ. ಲೌಕಿಕ ಧಾರ್ಮಿಕ ವಿಷಯಗಳಲ್ಲಿ ಅನುಸರಿಸುವ ಬೇರೆ ಬೇರೆ ಪಂಚಾಂಗ ವಿಧಾನಗಳು ಏಕರೂಪಕ್ಕೆ ಬರುವುದು ಎಷ್ಟು ಸಾಧ್ಯವೆಂದು ಹೇಳಬರುವುದಿಲ್ಲ, ಈ ಪುಸ್ತಕದ ೧ನೆಯ ಅನುಬಂಧದಲ್ಲಿ ಶಕ ೧೮೭೯ರ ಭಾರತೀಯ ಪಂಚಾಂಗದ ತಾರೀಕುಗಳನ್ನು ವಾರಾನುಕ್ರಮದಲ್ಲಿ ಕೊಡಲಾಗಿದೆ, ಆದರೆ, ೧೮೭೯ರ ಮಾಘದಲ್ಲಿ ಪ್ರಕಟವಾದ ಈ ಪಂಚಾಂಗದ ಕನ್ನಡ ಪ್ರಕಟಣೆಯಲ್ಲಿ ಇದರ ಉಪಯೋಗವೆಷ್ಟೆಂದು ತಿಳಿಯುವುದಿಲ್ಲ.

ಮೋಹದ ಮಹಾಜಾಲ- ಬರೆದವರು: ಶ್ರೀ ವೀರಪ್ಪ ಯಗಟಿ, ಬಿ. ಎ. ಎಲ್‌ಎಲ್. ಬಿ., ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್, ಲಿಮಿಟೆಡ್ ನವಯುಗ ಪ್ರೆಸ್, ಉಡುಪಿ. ಪುಟಗಳು: ೧೩೫. ಬೆಲೆ: ರೂ. ೧-೭೫.

ದುರಂಧರನೆಂಬ ಜಹಗೀರುದಾರನ ಮಗನು ದುಶ್ಚಟಗಳಿಗೆ ತುತ್ತಾಗಿ ನೈತಿಕವಾಗಿ, ಲೌಕಿಕವಾಗಿ, ಭೌತಿಕವಾಗಿ ಅಧವನತಿಯನ್ನು ಹೊಂದುತ್ತ ಬಂದುದರಿಂದ ಆತನ ಪತ್ನಿ ಆತ್ಮಹತ್ಯೆ ಮಾಡಿಕೊಂಡಳು. ದುರಂಧರನು ತನ್ನ ಅಪಾರ ಸಂಪತ್ತಿನ ಬಲದಿಂದ ಭೋಗಾಸೀನನಾಗಿ ಕಮಾಲನೆಂಬ ಕುವಿದ್ಯಾ ಮಂತ್ರಿಯನ್ನು ಪಡೆದು, ಪಿಟ್ಟಲದಾಸನೆಂಬ ವ್ಯಾಪಾರಿಯ ಮಗಳು ಮಾಧುರಿಯನ್ನು ಮೋಹಿಸಿ, ಆಕೆಯನ್ನು ಅಪಹರಿಸಿ ದರ್ಭಾನ(ಆಫ್ರಿಕೆಯ)ವನ್ನು ಸೇರಿದನು. ಅಲ್ಲಿ ಮಾಧುರಿಯ ಬಾಯಿಂದ ಸತ್ಯ ಸಂಗತಿಯನ್ನು ತಿಳಿದ ಪಿಟ್ಟಲದಾಸನ ಮಿತ್ರ ಇಸ್ಮಾಯಿಲ ಸೇಟರು ದುರಂಧರ ಹಾಗೂ ಮಂತ್ರಿ ಕಮಾಲರನ್ನು ಸೆರೆಹಿಡಿಸಿ ಭಾರತಕ್ಕೆ ತಂದು, ಇಲ್ಲಿ ಪುಣೆಯ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿದರು. ಆಗ, ಅಲ್ಲಿ ನ್ಯಾಯಾಧಿಕಾರಿಯಾಗಿದ್ದ ಜಮೀನುದಾರ ಸದಾಶಿವರಾಯರ ಅಳಿಯ ಶಂಕರರಾಯರು ವಿಚಾರಣೆ ನಡೆಸಿ, ಅಪರಾಧಿಗಳಿಗೆ ಶಿಕ್ಷೆ ವಿಧಿಸಿದರು.

ಕಾದಂಬರಿಯ ಉದ್ದಕ್ಕೆ ಈ ಕಥೆಯನ್ನು ಸಾಕಷ್ಟು ವಿಶಾಲವಾಗಿ ವರ್ಣಿಸಲಾಗಿದೆ. ಕಥಾವಸ್ತುವಿನಲ್ಲಿ ವಿಶೇಷತೆ ಇಲ್ಲವಾದರೂ, ವಸ್ತುವನ್ನು ಬಳಸಿಕೊಂಡ ವಿಧಾನವು ಈ ಕಾಲಕ್ಕೆ ವಿಶೇಷವಾಗಿದೆ. ಕತೆ ಕಾದಂಬರಿಗಳು ಓದುಗರಿಗೆ ಮನೋರಂಜಕ ವಿಷಯಗಳನ್ನು ಒದಗಿಸುವುದರೊಡನೆ ಸತ್ಯಬೋಧೆ ಸನ್ನಡತೆಗಳನ್ನು ತಿಳಿಸುವುದು ಸಹ ಅವುಗಳ ಧ್ಯೇಯವಾಗಿರಬೇಕು — ಎಂಬ ತತ್ವಗಳನ್ನು ಇಟ್ಟುಕೊಂಡು ಲೇಖಕರು ಕಾದಂಬರಿಯನ್ನು ಬರೆದು, ಸತ್ಯಾಸತ್ಯತೆಗಳ ತಾರತಮ್ಯ, ಸನ್ಮಾರ್ಗ ದುರ್ಮಾರ್ಗಗಳ ಪರಿಣಾಮಗಳು, ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸುವ, ಮಾನವನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ದೇವ ಕೃಪೆಯಿಂದ ಹಾಗೂ ಸತ್ಯ ವರ್ತನೆಯಿಂದ ಪರಿಹಾರವಾಗುವುದೆಂಬುದನ್ನು ನಿರೂಪಿಸುವ ಸಾಹಸವನ್ನು ಮಾಡಿದ್ದಾರೆ.

ಲೇಖಕರ ಶೈಲಿಯು ಸರಳವಾಗಿದೆ. ಕಥೆಯನ್ನು ಓದುವಾಗ ಕುತೂಹಲವೇ ಉಂಟಾಗುವಂತಿದೆ. ದುರಂಧರನೇ ಕಥಾನಾಯಕನಾಗಿದ್ದು ಆತನ ಜೀವನವೇ ಪ್ರಧಾನ ವಸ್ತುವಾದರೂ, ನ್ಯಾಯಾಧೀಶ ಶಂಕರನ ಕಥೆಯನ್ನೂ ಇದಕ್ಕೆ ಪೂರಕವಾಗಿ ಬಂದು, ಬಡವನಾದರೂ ಸದ್ಗುಣಭರಿತನಾಗಿರುವವನೆಂತು ದೈವಕೃಪೆಗೆ ಪಾತ್ರನಾಗುವನೆಂಬುದನ್ನು ನಿರೂಪಿಸಿದ್ದಾರೆ. ಹಾಗಾಗಿ ದುರಂಧರ ಮತ್ತು ಶಂಕರರ ನಡತೆಯಿಂದಲೇ ದೈವದ ಅವಕೃಪೆ ಮತ್ತು ಕೃಪೆಗಳು ದೊರೆತುವೆಂದು ವರ್ಣಿಸಿದ್ದಾರೆ. ಕಾದಂಬರಿಯಾದರೂ, ಅಲ್ಲಲ್ಲಿನ ಕೆಲವು ವರ್ಣನೆಗಳು ಪ್ರಾಚೀನ ಕಾವ್ಯಗಳನ್ನು ನೆನಪಿಗೆ ತರುತ್ತವೆ. ಉದಾಹರಣೆಗಾಗಿ ಸಾಧುವಿನ ಆಶ್ರಮದ ವರ್ಣನೆ (ಪುಟ ೩೫), ಮಾಧುರಿಯ ಅಂಗಾಂಗ ವರ್ಣನೆ (ಪುಟ ೭೦), ಸಾಧುವಿನ ಉಪದೇಶ (ಪುಟ ೪೦ರಿಂದ ೫೩) ಇತ್ಯಾದಿಗಳನ್ನು ಎತ್ತಿ ಹೇಳಬಹುದು. ಮಾಧುರಿಯ ಅಪಹಾರಮಾಡಿ ವಿಮಾನದಲ್ಲಿ ತೀವ್ರವಾಗಿ ದರ್ಭಾನಕ್ಕೆ ತೆರಳಿದ ಘಟನೆಯೊಂದು ಸ್ವಲ್ಪ ಅಸ್ವಾಭಾವಿಕವೆಂದು ತೋರಿಬಂದರೂ, ದೈವದ ಕೈವಾಡಕ್ಕೆ ಮಹತ್ವವೀಯುವ ಸಲುವಾಗಿ ಈ ಘಟನೆಯನ್ನು ಅಳವಡಿಸಿಕೊಂಡರೆಂಬ ಸಮಾಧಾನದ ಮಾತನ್ನು ಆಡಬೇಕಾಗುತ್ತದೆ. ಹೀಗಾಗಿ ಸಾಮಾಜಿಕ ಕಾದಂಬರಿಯಾದ ಇದು ಅದ್ಭುತ ಸಾಹಸದ ವರ್ಣನೆಯ ಕಾದಂಬರಿಯೂ ಆಗಿದೆ ಎಂದು ಹೇಳಬಹುದು.

ಪುಸ್ತಕದ ಕಾಗದ ಮುದ್ರಣಗಳು ಉತ್ತಮವಾಗಿವೆ. ಶ್ರೀ ಯಗಟಿಯವರು ಇನ್ನೂ ಮಹತ್ವದ ಕೃತಿಗಳನ್ನು ಕನ್ನಡಿಗರಿಗೀಯಲು ಸಮರ್ಥರೆಂದು ಈ ಕಾದಂಬರಿ ತಿಳಿಸುತ್ತದೆ.

ಗೋರಾ.

ಜಗತ್ತಿನ ಪ್ರಪ್ರಥಮ ಟೆಲಿವಿಜನ್ (ದೂರದರ್ಶಕ)ನ ಮೂಲಕ ವಾಹನ ನಿಯಂತ್ರಿಸುವ ಕ್ರಮವು ಇಂಗ್ಲೆಂಡಿನ ಡರ್ಹಾಮಿನಲ್ಲಿ ಪ್ರಾರಂಭವಾಯಿತು. ಇದರಿಂದ ಒಂದು ಬಾರಿಗೆ ಮೂರು ಗುಂಪು ವಾಹನಗಳನ್ನು ನಿಯಂತ್ರಿಸುವುದು ಸಾಧ್ಯವಾಗಿ ಪರಿಣಮಿಸಿದೆ. ಹಾಗಾಗಿ ಕೆಲಸವು ಲಾಭಕರವಾಗಿದೆ.

ಚಿತ್ತರಂಜನ ಇಂಜಿನ್ ಕಾರಖಾನೆ

(೪ನೇ ಪುಟದಿಂದ)

ದಾಗಿ ಪ್ರಾಥಮಿಕ ಮತ್ತು ಸೆಕೆಂಡರಿ ಶಾಲೆಗಳನ್ನು ನಿರ್ಮಿಸುವುದು, ವೈದ್ಯಕೀಯ ಮತ್ತಿತರ ತಾಂತ್ರಿಕ ಶಿಕ್ಷಣದಲ್ಲಿ ವ್ಯಾಸಂಗಪಡೆಯಲು ಕೆಲಸಗಾರರ ಮಕ್ಕಳಿಗೆ ವ್ಯಾಸಂಗವೇತನಗಳನ್ನು ಕೊಡುವ ಮುಂತಾದ ಕಾರ್ಯಕ್ರಮಗಳನ್ನೂ ಕೈಗೊಳ್ಳಲಾಗುವುದು.

ರಾಜ್ಯ ಸರಕಾರದ ಮೂರು ಶಾಲೆಗಳನ್ನು ನಡೆಸುವುದಕ್ಕಾಗಿ ೬೯,೧೦೦ ರೂ.ಗಳ ವೆಚ್ಚದಲ್ಲಿ ಕಟ್ಟಡಗಳನ್ನು ನಿರ್ಮಿಸುವ ಕಾರ್ಯವನ್ನು ಈಗ ಕೈಗೊಳ್ಳಲಾಗಿದೆ.

ರೈಲ್ವೆ ಮಂತ್ರಿಶಾಖೆಯವರ ನಿರ್ಣಯದ ಪರಿಣಾಮವಾಗಿ, ರೈಲ್ವೆ ಕೆಲಸಗಾರರ ಮಕ್ಕಳ ಪೈಕಿ ೨೧ ಮಂದಿ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫ ರೂ. ಗಳಿಂದ ೫೦ ರೂ.ಗಳವರೆಗೆ ವ್ಯಾಸಂಗವೇತನಗಳನ್ನು ನೀಡಲಾಗುವುದು.

ಚಿತ್ತರಂಜನ ಕಾರ್ಖಾನೆಯು ತನ್ನ ಸಿಬ್ಬಂದಿಗಾಗಿ ವೈದ್ಯಕೀಯ ಸೌಲಭ್ಯವನ್ನೂ ಸಾಕಷ್ಟು ಪ್ರಮಾಣದಲ್ಲಿ ಒದಗಿಸಿದೆ. ಔಷಧಾಲಯಗಳು ಮತ್ತು ಆಧುನಿಕ ಸಲಕರಣೆಗಳನ್ನುಳ್ಳ ಆಸ್ಪತ್ರೆಗಳನ್ನೂ ಸ್ಥಾಪಿಸಲಾಗಿದೆ.

ಈ ಕಾರ್ಖಾನೆಯು ಕೆಲಸಗಾರರ ವ್ಯಾಯಾಮಕ್ಕಾಗಿ ಒಂದು ವ್ಯವಸ್ಥೆ ಮಾಡಲಾಗಿದೆ. ಒಂದು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಊಟದ ಕೋಣೆಯನ್ನು ವಿಸ್ತರಿಸಲಾಗುವುದು.

ಕೆಲಸಗಾರರ ನಿಷ್ಠಾಪೂರ್ಣ ದುಡಿತ ಹಾಗೂ ಅಧಿಕಾರಿಗಳ ದಕ್ಷತೆಯ ಫಲವಾಗಿ, ಚಿತ್ತರಂಜನ ಕಾರ್ಖಾನೆಯು ತಾನಿಟ್ಟುಕೊಂಡಿರುವ ಗುರಿಯನ್ನು ಸಾಧಿಸುವುದರಲ್ಲಿ ಸಂದೇಹವಿಲ್ಲ. ಇಂದಿನ ಕೈಗಾರಿಕಾ ಉತ್ಪಾದನೆಯಲ್ಲಿ ಸ್ವಪರಿಪೂರ್ಣತೆಯನ್ನೂ, ಜನಜೀವನ ಮಟ್ಟದಲ್ಲಿ ಔನ್ನತ್ಯವನ್ನೂ ಸಾಧಿಸುವ ನವಭಾರತದ ಪ್ರಗತಿಪಥದಲ್ಲಿ ಚಿತ್ತರಂಜನವು ಒಂದು ಸಂಕೇತವಾಗಿ ನಿಂತಿದೆ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 4—0—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪.

ನವಯುಗಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

ಭಾರತರತ್ನ--ಮಹರ್ಷಿ ಕರ್ವೆ

(೭ನೇ ಪುಟದಿಂದ)

ನ್ನತಿಯೇ ತನ್ನ ಜೀವನದ ಧ್ಯೇಯವೆಂದು ತಿಳಿದಾಗ, ಅದಕ್ಕಾಗಿ ತನ್ನ ಇಡೀ ಜೀವನದಲ್ಲಿ ಅವರು ತನ್ನ ಎಲ್ಲಾ ಶಕ್ತಿಯನ್ನು ಅದರ ಮೇಲೆಯೇ ಕೇಂದ್ರಿತವಾಗಿಟ್ಟರು. ಇವರು ೧೮೯೬ರಲ್ಲಿ ಹಿಂಗಣೇ ವಿಧವಾಶ್ರಮ ರೂಪದಲ್ಲಿ ಯಾವ ಒಂದು ಗಿಡವನ್ನು ನೆಟ್ಟಿದ್ದರೋ, ಅದು ಇಂದು ಶ್ರೀಮತಿ ನಾಥೀಬಾಯಿ ದಾಮೋದರ ಠಾಕರಸಿ ವಿಶ್ವವಿದ್ಯಾಲಯದ ರೂಪದಲ್ಲಿ ಒಂದು ವಿಶಾಲ ವಟ ವೃಕ್ಷವಾಗಿ ಮಾರ್ಪಟ್ಟಿದೆ. ಇದು ಅವರ ಸಾಧನೆಯ ಫಲವಾಗಿದೆ.

ಮತ್ತೊಂದು ದೃಷ್ಟಿಯಿಂದ ಕೂಡಾ ಕರ್ವೆಯವರು ಪೌರಾಣಿಕ ಮಹಾಪುರುಷರೊಡನೆ ಹೋಲುತ್ತಾರೆ. ಅದಕ್ಕೆ ಕಾರಣ ಅವರ ಸಾಹಸ. ಅವರ ಸಾಹಸವು ವಿಶುದ್ಧ ಸಾತ್ತ್ವಿಕ ಕೋಟಿಯದ್ದಾಗಿದೆ. ಆ ಕಾಲದಲ್ಲಿ ಸಮಾಜದಲ್ಲಿ ವಿಧವೆಯರಿಗೆ ಸ್ಥಾನವಿರಲಿಲ್ಲ. ಆದುದರಿಂದ ಇವರು ಇಂದಿನಿಂದ ೬೫ ವರ್ಷಗಳ ಮೊದಲು ಓರ್ವ ಬಾಲ ವಿಧವೆಯನ್ನು ವಿವಾಹವಾದರು. ಇದರಿಂದಾಗಿ ಪೂನಾದ ಸಮಾಜದಲ್ಲಿ ಗಲಿಬಿಲಿಯುಂಟಾಯಿತು; ಹಳೆಯ ಸಂಪ್ರದಾಯದವರಿಗೆ ಇದು ಸರಿ ಬೀಳಲಿಲ್ಲ. ಸಮಾಜ ಸುಧಾರಣೆಯ ಮಾತಂತಿರಲಿ, ಸಾರ್ವಜನಿಕ ಸಮಾರಂಭಗಳಲ್ಲಿ ಚಾ ಕುಡಿಯುವುದು ಕೂಡಾ ಭ್ರಷ್ಟವೆಂಬ ಭಾವನೆ ಆ ಕಾಲದವರಲ್ಲಿತ್ತು. ಆದುದರಿಂದ ಜನರು ಕರ್ವೆಯವರನ್ನು ತಮ್ಮ ಜಾತಿಯಿಂದ ಹೊರತಳ್ಳಿದುದಲ್ಲದೆ, ಅವರ ವಿರುದ್ಧ ವಿವಿಧರೀತಿಯ ಅಪಪ್ರಚಾರಗಳನ್ನು ಕೈಗೊಂಡರು. ಆದರೂ ಕೂಡಾ ಕರ್ವೆಯವರು ಇವಾವುದಕ್ಕೂ ಹೆದರದೆ ತನ್ನ ಸಮಾಜಸೇವೆಯ ಕಾರ್ಯಗಳನ್ನು ಮುಂದುವರಿಸಿದರು.

ಆದರೆ ಈ ಸಾಹಸದೊಡನೆ ಅವರಲ್ಲಿ ಒಂದು ವಿಧದ ಸಂಕೋಚ ಹಾಗೂ ಅತ್ಯಂತ ವಿನಯ ಕೂಡಾ ಇದೆ. ಇದು ಇವರ ವ್ಯಕ್ತಿತ್ವದೊಡನೆ ಪ್ರಕಾಶಿಸುತ್ತದೆ. ತನ್ನ ಆತ್ಮಕಥೆಯ ಮುನ್ನುಡಿಯಲ್ಲಿ ಅವರು ಹೀಗೆ ಬರೆದಿದ್ದಾರೆ: “ಸಮಾಜಸೇವೆಯ ಕ್ಷೇತ್ರದಲ್ಲಿ ನಾನು ಯಾವ ಒಂದು ಸ್ವಲ್ಪ ಕೆಲಸ ಮಾಡಿದ್ದೇನೋ, ಅದೇನೂ ಹೆಚ್ಚಿನ ಮಹತ್ವದ್ದಲ್ಲ. ಸ್ತ್ರೀ ಶಿಕ್ಷಣದ ಕ್ಷೇತ್ರದಲ್ಲಿ ನನಗೆ ದೊರಕಿದಂತಹ ಸಫಲತೆಯು ನನ್ನ ಸಹಕರ್ಮಿಗಳ, ಮಿತ್ರರ ಹಾಗೂ ಜನತೆಯ ಪ್ರತ್ಯಕ್ಷ ಯಾ ಅಪ್ರತ್ಯಕ್ಷ ಸಹಾಯತೆಯ ಫಲವಾಗಿದೆ. ಆದರಲ್ಲಿ ನನ್ನದೇನೂ ಹೆಚ್ಚಿನ ಮಹತ್ವವಿಲ್ಲ. “ಇವರು ಈ ಮಾತನ್ನು ಕೇವಲ ಶಿಷ್ಟಾಚಾರಕ್ಕಾಗಿ ಹೇಳಿಲ್ಲವೆಂದು ಇವರೊಡನೆ ಭೇಟಿ ಮಾಡಿ, ಮಾತನಾಡಿದವರಿಗೆ ತಿಳಿದಿದೆ. ತನ್ನನ್ನು ನಿಮಿತ್ತ ಮಾತ್ರ ಎಂದು ತಿಳಿಯುವ ಪ್ರವೃತ್ತಿ ಅವರ ಸ್ವಭಾವದ ಅವಿಭಾಜ್ಯ ಅಂಗವಾಗಿದೆ. ಆದುದರಿಂದ ದೇಶವು ಅವರನ್ನು ‘ಮಹರ್ಷಿ’ ಎಂದು ಹೇಳಿದರೆ ಅದರಲ್ಲಿ ಆಶ್ಚರ್ಯದ ಮಾತೇನು!

ಶ್ರೀ ಪರಮಾತ್ಮನು ಇವರಿಗೆ ಇನ್ನೂ ಹೆಚ್ಚಿನ ಆಯುರಾರೋಗ್ಯಗಳನ್ನಿತ್ತು, ಇವರಿಂದ ನಮ್ಮ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲುವಂತೆ ಕರುಣಿಸಲಿ!

(ಆಧಾರ)

ಪ್ರಗತಿ ಪಥದ ದಾರಿದೀವಿಗೆಗಳು—

ಯೋಜನೆಯ ಅಷ್ಟಾಂಗಿಕ ತತ್ವಗಳು

ಕಳೆದ ಕೆಲವು ವಾರಗಳಲ್ಲಿ ದೇಶದ ಮೇಲೆ ಒಂದು ವಿಧದ ಮಂಜನೆಯ ಮೋಡದ ನೆರಳು ಆವರಿಸಿದಂತಿದೆ. ವಿದೇಶ ವಿನಿಮಯದ ಬಿಕ್ಕಟ್ಟಿನ ಕಾರ್ಮೋಡಗಳು ದೂರ ಓಡಿ ಹೋಗಿರುವುದಾದರೂ ಜೀವವಿಮಾ ಕಾರ್ಪೋರೇಶನಿನ ಸಂಶೋಧನೆಗಳ ಗುಲ್ಲು ಅಲ್ಲಿಯೇ ಅಡಗಿಹೋಗಿರುವುದಾದರೂ ಅಭಿವೃದ್ಧಿ ಯೋಜನೆಗಳು ಜಯಪ್ರದವಾಗುತ್ತಿರುವ ಬಗ್ಗೆ ನಮಗೆ ಆರಾಮರಹಿತ ವಾತಾವರಣವನ್ನುಂಟುಮಾಡಿವೆ. ಯೋಜನೆಗಳ ರೂಪಣೆಯಲ್ಲಿಯೂ ಕೆಲವೊಂದು ಗಡಿಬಿಡಿಯಿದೆ ಅಲ್ಲದೆ, ಈ ವಿಷಯದಲ್ಲಿ ಯೋಗ್ಯ ಮಾರ್ಗದರ್ಶನದ ಅಭಾವವೂ ನಮಗಿದೆ. ಇಂತಹ ಸಂಕಷ್ಟಮಯ ಸನ್ನಿವೇಶದಲ್ಲಿ ನಾವು ನಮ್ಮ ಪ್ರಗತಿಪಥದಲ್ಲಿ ಪಾದಾರ್ಪಣೆಯನ್ನು ಮಾಡಲುದ್ಯೋಗಿಸಿದಾಗ, ಇಟ್ಟುಕೊಂಡ ಮೂಲ ಧ್ಯೇಯ ಧೋರಣೆಗಳನ್ನೂ, ನಡೆಯುವ ದೃಢ ನಿರ್ಧಾರ ಮಾಡಿರುವುದನ್ನೂ ನಾವು ಪುನಃ ನೆನಪಿಸಿಕೊಳ್ಳಬೇಕು. ಭಾರತವು ತನ್ನ ಅಭಿವೃದ್ಧಿಗಾಗಿ ಎಂಟು ಪ್ರಾಥಮಿಕ ನಿರ್ಧಾರಗಳನ್ನು ಮಾಡಿಕೊಂಡಿದೆ. ಈ ಎಂಟು ಮೂಲ ತತ್ವಗಳನ್ನು ನಾವೂ ಅರಿತುಕೊಳ್ಳುವುದು ಅಗತ್ಯ ಮತ್ತು ಅಪೇಕ್ಷಣೀಯವಾಗಿದೆ.

೧. ಅಭಿವೃದ್ಧಿ ಹೊಂದುತ್ತಿರುವ ಭಾರತವನ್ನು ಅಭಿವೃದ್ಧಿಯೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸಬೇಕು. ನಮ್ಮ ದ್ವಿತೀಯ ಯೋಜನೆಯು ಮೊದಲನೆಯದಕ್ಕಿಂತ ಎರಡು ಪಾಲಷ್ಟು ವಿಸ್ತಾರವಾಗಿದ್ದು, ನಮ್ಮ ಮುಂದಿನ ಯೋಜನೆಗಳಾದರೋ ಮತ್ತೂ ಆಶಾದಾಯಕವಾಗಿವೆ.

೨. ನಾವು ನಮ್ಮ ಯೋಜನೆಯಲ್ಲಿ ಒಕ್ಕಲುತನದ ಅಭಿವೃದ್ಧಿಗೆ ಮೊತ್ತಮೊದಲಿನ ಪ್ರಾಶಸ್ತ್ಯವಿತ್ತಿದ್ದೇವೆ. “ಹಿಂದುಳಿದಿರುವುವು” ಎಂಬ ಮುದ್ರೆಯನ್ನು ಹಚ್ಚಿಕೊಂಡ ಗ್ರಾಮೀಣ ಜನತೆಯನ್ನು ಎತ್ತರಿಸುವುದೂ ನಮ್ಮ ಯೋಜನೆಯ ಉದ್ದೇಶವಾಗಿದೆ

೩. ನಾವೊಂದು ಔದ್ಯೋಗಿಕ ಸಾಧನೆಯನ್ನು ಪಡೆದ ರಾಷ್ಟ್ರವನ್ನು ನಿರ್ಮಿಸುವ ನಿರ್ಧಾರ ಮಾಡಿದ್ದೇವೆ. ಆದರೆ, ನಾವು ಕಟ್ಟುವ ಔದ್ಯೋಗಿಕ ರಾಷ್ಟ್ರದಲ್ಲಿ ಹಿರಿಯ ಮತ್ತು ಕಿರಿಯ ಉದ್ದಿಮೆಗಳು ಸಮತೂಕದಲ್ಲಿರುತ್ತವೆ. ಮತ್ತು ಸಾಂಪ್ರದಾಯಿಕವಾಗಿ ನಡೆದು ಬಂದಿರುವ ಕೈಕಸುಬುಗಳು ಸಮಾಜದ ಸ್ಥಿರತ್ವಕ್ಕೆ ಅವಶ್ಯಕವಾಗಿರುವುದರಿಂದ ಅವುಗಳೂ ಮುಂದುವರಿಯುತ್ತ ಹೋಗುವುವು

೪. ಔದ್ಯೋಗೀಕರಣದತ್ತ ನಾವು ಮುನ್ನಡೆಯುತ್ತಿರುವಾಗ, ನಾವು ನಮ್ಮ ನಾಗರಿಕರ ಜೀವನ ಮಟ್ಟವನ್ನು ಎತ್ತರಿಸಲು ಪ್ರಯತ್ನ ನಡೆಸುತ್ತೇವೆ.

೫. ನಮ್ಮ ಆಚರಣೆಗಳೆಲ್ಲವೂ ಪ್ರಜಾಪ್ರಭುತ್ವ ಪದ್ಧತಿಗನುಕೂಲವಾಗಿರಬೇಕು. ವೈಯಕ್ತಿಕ ಸ್ವಾತಂತ್ರ್ಯಕ್ಕೆ ಹಾನಿಯನ್ನು ತಂದೀಯಬಹುದಾದ ಯಾವ ಕೆಲಸವನ್ನೂ ನಾವು ಮಾಡಬಯಸುವುದಿಲ್ಲ ನಾವು ನಮ್ಮ ಸ್ವಾತಂತ್ರ್ಯ ಸಮರದ ವೇಳೆಯಲ್ಲಿ ಧೋರಣೆಯನ್ನು ಅನುಸರಿಸಿದ್ದೆವು. ರಾಜಕೀಯ ಸ್ವಾತಂತ್ರ್ಯವನ್ನು ಪಡೆದಂತೆಯೇ ದ್ವೇಷ, ಹಿಂಸೆ ಮತ್ತು ಅನ್ಯಾಯಗಳ ಸೋಂಕಿಲ್ಲದಂತೆಯೇ ನಾವು ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯಗಳನ್ನು ಪಡೆಯುವೆವು.

೬. ವರ್ಗಗಳನ್ನನುಸರಿಸಿ ಯಾವ ರಿಯಾಯತಿಯನ್ನೂ ನಾವು ತೋರಿಸಲಾರೆವು. ಕುಲ, ಧರ್ಮ, ಲಿಂಗ, ಭೌಗೋಳಿಕ ಅಸ್ತಿತ್ವ ಮತ್ತು ಭಾಷಾ ಸಂಯೋಜನೆಗಳನ್ನು ದೂರೀಕರಿಸಿ ಎಲ್ಲರಿಗೂ ಸಕಲಾವಕಾಶಗಳು ದೊರೆಯುವಂತೆ ಸಮಾನತೆಯ ಸಂದರ್ಭವನ್ನು ಒದಗಿಸುತ್ತೇವೆ.

೭. ನಮ್ಮ ಯೋಜನೆ ಮತ್ತು ಅಭಿವೃದ್ಧಿ ಸಂಬಂಧದಲ್ಲಿ ಕೈಗೊಳ್ಳುವ ಎಲ್ಲ ವಿಷಯಗಳ ಸಂಬಂಧದ ಪ್ರತಿ ಹೆಜ್ಜೆಯಲ್ಲಿಯೂ ಕೃಷಿಕರೊಡನೆ ಬೆರೆಯಲು ಸಿದ್ಧರಿದ್ದೇವೆ ರಾಷ್ಟ್ರವನ್ನು ಕಟ್ಟುವಲ್ಲಿ ಈ ಬೆರಕೆಯು ತುಂಬ ಪ್ರಯೋಜನಕಾರಿಯಾಗಿದೆ.

೮. ನಮ್ಮ ಯೋಜನೆಗಳ ಮತ್ತು ಧೋರಣೆಗಳ ಇನ್ನೊಂದು ಸಮಕಾಲಿಕ ಉದ್ದೇಶವೆಂದರೆ, ವೈಯಕ್ತಿಕ ಅಭಿವೃದ್ಧಿ ಮತ್ತು ಮಾನವ ಸ್ವಾತಂತ್ರ್ಯದ ಮುನ್ನಡೆ. ವ್ಯಕ್ತಿಯೇ ಸರ್ವೋಚ್ಚ ಆಲೋಚಕನೆಂಬ ಮಹಾತ್ಮಾಗಾಂಧೀಯವರ ತತ್ವದಲ್ಲಿ ನಾವು ವಿಶ್ವಾಸವುಳ್ಳವರಾಗಿದ್ದೇವೆ.

ಈ ತತ್ವಗಳು ನಮ್ಮ ಸ್ಮೃತಿಪಟಲದಲ್ಲಿ ಈ ಮೊದಲೇ ಕೆಲವು ಬಾರಿಯಾದರೂ ಸುಳಿದು ಹೋಗಿವೆ. ಆದರೆ, ನಾವವನ್ನು ಅಲ್ಲಿಗೇನೇ ತ್ಯಜಿಸಿಬಿಡುವುದುಚಿತವೆಂದು ತಿಳಿಯಬಾರದು. ಭಾರತವು ಸಮೃದ್ಧವಾಗಿ ಸಾಮೂಹಿಕವಾಗಿ ನಾವು ಉದ್ಧಾರವಾಗಬಯಸುವುದಾದರೆ, ನಾವೀ ಅಷ್ಟಾಂಗಿಕ ಮೂಲ ಧ್ಯೇಯಗಳನ್ನು ಪದೇ ಪದೇ ನೆನಪಿಸಿಕೊಳ್ಳಬೇಕು. ಮುಂದೆ ಏನು ಮಾಡಬೇಕು ಎಂದು ಹರಡಿದ ಅಂಧಕಾರದಲ್ಲಿ ಕಿಂಕರ್ತವ್ಯತಾ ಮೂಢರಾಗಿ ನಾವು ಕೈಕಟ್ಟಿ ಕುಳಿತಿರುವ ವೇಳೆಯಲ್ಲಿ, ಈ ತತ್ವಗಳು ನಮಗೆ ದಾರಿದೀವಿಗೆಗಳಾಗಿ ಪರಿಣಮಿಸುವುವು. ನಾವು ಅವುಗಳೆಡೆಗೆ ದೃಷ್ಟಿಸಿ ಅವುಗಳಿಂದ ಪ್ರಕಾಶವಡೆಯಲ್ಲಾದರೂ ಸರಿ ದಾರಿಯಲ್ಲಿಯೇ ಪಾದವಿಡುತ್ತಿರುವೆವೇ ಅಥವಾ ಇಲ್ಲವೇ ಎಂಬುದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳಬೇಕು. ಆಗ, ಇವುಗಳು ಕಾರ್ಯರೂಪದಲ್ಲಿ ಉಳಿದು ದೇಶದ ಪ್ರಗತಿ ಪಥದ ಮಾರ್ಗದರ್ಶಕ ದೀಪಗಳಾಗಿ ಪರಿಣಮಿಸುವುವು. ಹಾಗಾಗಲೆಂಬುದೇ ಎಲ್ಲರ ಬಯಕೆ.

NOTICE

In the Court of the District Munsif of Udipi.

O. P. No. 17/1958.

In the matter of debts due to Koshas Machado (Deceased).

Between—

1. Evangelist Angel Machado
2. Gregory Machado
3. Francis Machado
4. Mathias Machado
5. Joseph Machado
6. Lawrence Machado
7. Lilly Machado
8. Ciril Machado
9. Mary Machado
10. Florin Machado
11. Henri Machado
12. Estello Machado

—Petitioners.

No. 1 is the husband of the Deceased Koshas Machado, and No. 2 to 12 are the children of the said Koshas Machado. Nos. 7 to 12 are minors represented by their father and next friend the 1st petitioner. All are residing at Daddina Hithlu of Shirva Village, Udipi Taluk.

To

Whomsoever Concerned:—

Please take notice that the petitioners have filed the above petition for grant of a Succession Certificate in the name of the 1st petitioner on behalf of all the petitioners to collect the Insurance amount of Rs. 2000/- due to Koshas Machado, the deceased wife of the 1st Petitioner and mother of the other petitioners from the Life Insurance Corporation of India, Unit East and West Insurance Co., Empire House, 214-D. Naoroji Road, Bombay No. 1, and the said petition stands posted to 13--6--58 for hearing. Those who have any objections may appear before the above court on that date at 11 A. M. either personally or through a pleader, failing which the said petition will be heard exparty.

(By order of the court.)

Udipi
Date 10-4-1958.

Sd. **Perody Shivaji Shetty,**
Advocate for Petitioners.

ಶ್ರೀ ಶಿವರಾಮ ಕಾರಂತರ

ಪುಸ್ತಕಗಳು

ನಂಬಿದವರ ನಾಕ,ನರಕ	3=00
ಪಂಚಮುಖ	2=50
ಮಂಗಳಾರತಿ	1= '0
ನಮ್ಮ ಸುತ್ತಲಿನ ಕಡಲು	1=75
ಪರಮಾಣು, ಇಂದು ನಾಳೆ	3= 0
ಸಮೀಕ್ಷೆ	2= '0
ವೈಲುಕಲ್ಲಿನೊಡನೆ ಮಾತುಕತೆಗಳು	1= '0
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೀಗ ನ್ಯಾಯವಲ್ಲವೆ?

(೨ನೇ ಪುಟದಿಂದ)

ಗ್ಗಿಸಿ ಶೋಧಿಸಿದರು. ಆದರೆ ಅಲ್ಲೇನೂ ಸಿಕ್ಕಲಿಲ್ಲ. ಅಂತೂ ನಂಜನ ಮಾತಿನ ಮೇಲೆ ರುದ್ರಪ್ಪ ಮತ್ತು ಅಂತೋನಿ ಸೋಜರು ಅಪರಾಧಿಗಳೆಂದು ನಿರ್ಧರಿಸಿದರು ಶಂಕರರಾಯರು. ಪ್ರತ್ಯಕ್ಷವಾಗಿ ಅವರೂ ನೋಡಿರಲಿಲ್ಲವಲ್ಲ? ಆದುದರಿಂದ ಪೂರ್ಣದೃಢ ನಿರ್ಧಾರ ಮಾಡುವಂತೆ ಇರಲಿಲ್ಲ.

— ೩ —

ಅಂದು ರುದ್ರಪ್ಪನ ಮನೆಯಲ್ಲಿ ಆ ನಾಲ್ಕು ಒಕ್ಕಲುಗಳ ವಿಚಾರ ಗೋಷ್ಠಿ ನಡೆಯುತ್ತಿತ್ತು. ಉಳಿದವರೂ ಹಲವರಿದ್ದರು ಅಲ್ಲಿ. ಸಹಾನುಭೂತಿ, ಮುಖಕ್ಕೆ ತಕ್ಕ ಮಾತುಗಳು ಸಾಗಿದ್ದುವು. ರುದ್ರಪ್ಪ ಮಾತ್ರ ಅಲ್ಲಿರಲಿಲ್ಲ. ಆತ ಧನಿಗಳ ಮನೆಗೆ ಹೋಗಿದ್ದ. ಸ್ವಲ್ಪ ಹೊತ್ತಿನಲ್ಲಿ ಅವನೂ ಬಂದ. ಅವನ ಮುಖ ಕ್ರೋಧದಿಂದ ದುಮುಗುಟ್ಟುತಿತ್ತು. ಅಂತೋನಿ ಸೋಜನೂ ಒಳಗೊಳಗೇ ಕುದಿಯುತ್ತಿದ್ದ. ಒಕ್ಕಲೇಳಲು ಬೆದರುವವನಲ್ಲ; ಅಲ್ಲದೆ ಕಳ್ಳ ಶರಾಬಿನ ವ್ಯಾಪಾರದಿಂದಲೇ ಆತ ಇದುವರೆಗೆ ಹಣದ ಗಂಟನ್ನು ತಯಾರಿಸಿದ್ದುದನ್ನು ಸ್ಮರಿಸಿಕೊಂಡು 'ಮುಂದೆಯೂ ಸ್ವತಂತ್ರನಾಗಿರ ಬಲ್ಲೆ' ಎಂದು ನಿರ್ಧರಿಸಿದ. ಆದರೆ ಈ ಅಪಮಾನ ಮಾತ್ರ ಅವನನ್ನು ಸುಡುತಿತ್ತು. ರುದ್ರಪ್ಪನೂ ಅಂತೋನಿ ಸೋಜನೂ ಸ್ವಲ್ಪ ದೂರ ಹೋಗಿ ಗುಟ್ಟಿನಲ್ಲಿ ಏನೇನೋ ಮಾತನಾಡಿಕೊಂಡರು. ಉಳಿದವರೆಲ್ಲರ ದೃಷ್ಟಿಯೂ ಅವರನ್ನೇ ಕುತೂಹಲದಿಂದ ನೋಡುತ್ತಿತ್ತು.

ತಾನು ಧನಿಗಳಲ್ಲಿ ಹೋದ ವಿಷಯವನ್ನೂ, ನಂಜನು ಪೆಟ್ಟಿಗೆ ಹೆದರಿ ಹಾಗೆ ನುಡಿದನೆಂದೂ, ತಾವು ನಿರಪರಾಧಿಗಳೆಂದು ಧನಿಗಳಲ್ಲಿ ಹೇಳಿಕೊಂಡುದನ್ನೂ, ರುದ್ರಪ್ಪ ಸೋಜನಿಗೆ ವಿವರಿಸಿದ ಮತ್ತು "ಕಳ್ಳನನ್ನು ಹಿಡಿದು ಕೊಟ್ಟರೆ ನಿಮ್ಮ ಮಾತನ್ನು ನಂಬಿ, ನಿಮ್ಮನ್ನು ಕ್ಷಮಿಸುವೆನೆಂದು" ಶಂಕರರಾಯರು ಅಂದುದನ್ನೂ ತಿಳಿಸಿದ. ಮತ್ತೇನನ್ನೋ ಅವರು ಗುಟ್ಟಿನಲ್ಲಿ ಮಾತನಾಡಿಕೊಂಡರು ಸೋಜನ ಮುಖ ಅರಳಿತು. ರುದ್ರಪ್ಪನ ಮುಖವು ಸಮಾಧಾನದಿಂದ ಕೂಡಿದ್ದಂತಿತ್ತು. ಸೋಜ ಬಂದು ಹೇಳಿದ:

"ನೋಡಿ, ಈ ದಿನ ಖಂಡಿತವಾಗಿಯೂ ಕಳ್ಳ ಬರ್ತಾನೆ ತೋಟಕ್ಕೆ".

"ಅದು ಹೇಗೆ?......ಹೇಗೆ?" ಎಂದು ಹಲವಾರು ಕಂಠಗಳು ಕೇಳಿದುವು.

"ನನ್ನ ಮಾತು ಸುಳ್ಳಾಗಲಾರದು ಇಂದು ಬೆಳಿಗ್ಗೆಯೇ ನನಗೆ ಹಾಗೆನಿಸಿತ್ತು. ಇಂದು ತೋಟವನ್ನು ಕಾಯಲೇ ಬೇಕು" ಎಂದು ರುದ್ರಪ್ಪನ ಕಡೆಗೆ ನೋಡಿ ಗೆಲುವಿನ ನಗು ನಕ್ಕ.

ಪುನಃ ಅದೇ ಕೃಷ್ಣಪಕ್ಷದ ರಾತ್ರಿ ಆ ದಿನ. ಪ್ರಕೃತಿ ಶಾಂತಿಯಿಂದ ತುಂಬಿದ್ದರೂ, ಎಂದೂ ಶಾಂತಿಯಿಂದಿರದ ಜನರ ಮನಸ್ಸು. ಕಾತುರ, ಕುತೂಹಲಗಳಿಂದಲೇ ಕಸವಿಸಿಗೊಂಡಿತ್ತು.

ಸುಮಾರು ಒಂಬತ್ತು ಗಂಟೆಯ ಸಮಯ. ರುದ್ರಪ್ಪ, ಅಂತೋನಿ ಸೋಜ ತಳವಾರ ರಂಗಪ್ಪ ಮೂವರೂ ಆದಿನ ತೋಟದ ಕಾವಲಿಗೆ ತಾವೇ ಹೊರಟರು. ಬಲವಾದ ದೊಣ್ಣೆಗಳು ಕೈಯಲ್ಲಿದ್ದುವು. ಮೂವರೂ ಘಸಿಗೊಂಡವರಾದರೂ ಉತ್ಸಾಹವೇನೋ ಇತ್ತು ಅವರಲ್ಲಿ. ತಳವಾರ ರಂಗಪ್ಪ ಅಪರಾಧಿ ಎನಿಸಿರಲಿಲ್ಲವಾದರೂ ಅಪವಾದವನ್ನು ಹೊತ್ತಿದ್ದರಿಂದ ತಾನೂ ಕಟ್ಟನಿಂದ ಮುಂದೆ ಹೊರಟಿದ್ದ. ಆದರೆ ಇದರಿಂದೇನು ಪರಿಣಾಮವಾಗುವುದೆಂದು ಅವನಿಗೆ ತಿಳಿದಿರಲಿಲ್ಲ. 'ಸೋಜನ ಜ್ಯೋತಿಷ್ಯದ ಫಲವೇನೋ' ಎಂದು ಆತುರದಿಂದಲೇ ಸುತ್ತುಮುತ್ತಲಿನ ಜನರೂ ನಿದ್ದೆ ಹೋಗಿದ್ದರು.

ಕಾವಲುಗಾರರಿಗೆ ತೋಟದಲ್ಲಿ ವಾಸಿಸಲು ನಿರ್ಮಿಸಿದ ಗುಡಿಸಲಿನಲ್ಲಿ ಮೂವರೂ ಕುಳಿತರು, ರಂಗಪ್ಪನೇನೂ 'ಜಿಲ್ಲರೆ ಅಸಾಮಿ'ಯಲ್ಲದಿದ್ದರೂ ಇಂದಿನ ಸೋಜನ ಮಾತಿನಲ್ಲಿ ಕುತೂಹಲದಿಂದಿದ್ದ. ಆದರೆ ರುದ್ರಪ್ಪ ಮತ್ತು ಅಂತೋನಿ ಸೋಜರು ಏಕೋ ತೃಪ್ತಿಯಿಂದಿದ್ದರು.

ಗುಡಿಸಲಿನಲ್ಲಿ ಮೂವರೂ ಮೌನವಾಗಿಯೇ ಕುಳಿತಿದ್ದರು. ಸುತ್ತಲೂ ಭಯಂಕರ ಕತ್ತಲೆ. ಬಾವಲಿ, ಅಳಿಲುಗಳ ಹಾರಾಟದ ಸದ್ದು ಮಾತ್ರ ಆಗಾಗ ಕೇಳಿ ಬರುತಿತ್ತು. ಮಳೆಗಾಲ ಕಳೆದಿದ್ದುದರಿಂದ ಕಪ್ಪೆ ಜೀರುಂಡೆಗಳ ಕೂಗಾಟವಿರಲಿಲ್ಲ. ಗೂಗೆಯೊಂದು ದೂರದಲ್ಲೆಲ್ಲೋ ಕೂಗುತ್ತಿತ್ತು. ಹೊತ್ತು ಮಧ್ಯರಾತ್ರಿಯತ್ತ ಸಾಗುತಿತ್ತು.

ತಳವಾರ ರಂಗಪ್ಪ ಮನೆಗೆ ಹೋಗಿ ಈಗ ಬರುವೆನೆಂದು ಎದ್ದು ಹೋದ. ಅವನ ಚಿಕ್ಕ ಮಗುವಿಗೆ ಸೌಖ್ಯವಿರಲಿಲ್ಲ. ಸುಮಾರು ಹೊತ್ತು ಕಳೆದರೂ ಅವನು ಹಿಂತಿರುಗಿ ಬರುವ ಸೂಚನೆ ಕಂಡುಬರಲಿಲ್ಲ. ರುದ್ರಪ್ಪ ತನ್ನ ಅವಶ್ಯತೆಯಿಲ್ಲವೆಂಬಂತೆ ತೂಕಡಿಸುತ್ತ ನಿದ್ದೆಹೋದ. ಸೋಜ ಮಾತ್ರ ಹಟಯೋಗವನ್ನು ಸಾಧಿಸಿಯೇ ಇದ್ದ. ಸ್ವಲ್ಪ ಹೊತ್ತಿನಲ್ಲಿ ಅವನಿಗೇನೋ ಒಂದು ಶಬ್ದ ಕೇಳಿಬಂತು. ಸಂಕೇತದಂತಿತ್ತದು. ಸೋಜ ಮೆಲ್ಲನೆದ್ದು ಹೊರಟ; ನಿಧಾನವಾಗಿ ಹೆಜ್ಜೆಯಿಡುತ್ತಾ, ಸದ್ದಾಗದಂತೆ ಬಾಳೆ ಕಂಗುಗಳೆಡೆಯಿಂದ ದೊಣ್ಣೆಯನ್ನು ಹೆಗಲಿಗೇರಿಸಿ ನಡೆಯುತ್ತಿದ್ದ; ಆ ಶಬ್ದ ಬಂದ ಕಡೆಗೇ ದಕ್ಷತೆಯಿಂದ ನಡೆಯುತಿದ್ದ. ಏನೋ ಒಂದು ಗೆಲುವಿನ ಕಳೆ ಅವನಲ್ಲಿತ್ತು; ಏನೋ ಒಂದು ಆವೇಶ ಬಂದಿತ್ತು. ರುದ್ರಪ್ಪ ಮಾತ್ರ ನಿದ್ರೆಯಲ್ಲಿ ಮುಳುಗಿದ್ದ.

ತೋಟದ ಮೂಲೆಯಲ್ಲಿ ಯಾವುದೋ ಒಂದು ಛಾಯೆಯು ಕಂಡಿತು. ಸೋಜ ಜಾಗರೂಕತೆಯಿಂದ ಮೆಲ್ಲಡಿಯಿಡುತ್ತಾ ಮುಂದೆ ಹೋದ. ಕ್ಷಣದಲ್ಲಿ ಅದೊಂದು ಮನುಷ್ಯಾಕೃತಿಯಾಗಿ ಅವನಿಗೆ ಕಂಡಿತು. ಗಂಡುಕಚ್ಚೆ ಬಿಗಿದಿತ್ತು ಆ ವ್ಯಕ್ತಿ. ಹತ್ತಿರದಲ್ಲೇ ಎರಡುಮೂರು ಅಡಕೆಗೊನೆ, ಒಂದು ಚಿಕ್ಕ ಕತ್ತಿ; ಆ ವ್ಯಕ್ತಿ ಕುಳಿತಿತ್ತು.

ಹತ್ತಿರ ಬಂದು ದೊಣ್ಣೆಯನ್ನೆತ್ತಿ ಬಲವಾಗಿ ಬೀಸಿದ. ಅವನ ಆ ಪೆಟ್ಟು, ಆ ಮನುಷ್ಯ ಪ್ರಾಣಿಯ ತಲೆಯನ್ನೇ ಭೇದಿಸಿತು. ಚಿಟಾರೆಂದು ಕಿರುಚಿತೊಮ್ಮೆ ಆ ವ್ಯಕ್ತಿ; ಮರಣ ವೇದನೆಯಿಂದ ಕೆಳಗುರುಳಿತು.

ಆ ಕ್ಷಣದಲ್ಲಿ ಬಹಳ ದೊಡ್ಡ ಜನಸಂದಣಿಯೇ ಅಲ್ಲಿ ನೆರೆಯಿತು. ಗಲಭೆಯೋ ಗಲಭೆ. ಆ ಮಧ್ಯರಾತ್ರಿಯಲ್ಲಿ ಕುತೂಹಲಿಗಳಾದ, ಎದೆಗಾರರಾದ ಹಲವಾರು ಜನರು ಅಲ್ಲಿ ಸೇರಿದರು. ರುದ್ರಪ್ಪ ಕಣ್ಣುಜ್ಜಿಕೊಂಡು ಓಡೋಡಿ ಬಂದ. ದೀಪ ಬೆಳಗಿಸಿದರು. "ಹುಂ, ನಿಜವಾದ ಕಳ್ಳ ಇವನೇ" ಎಂದು ಜನರು ಏಕಕಂಠದಿಂದ ನುಡಿದರು.

ಆ ವ್ಯಕ್ತಿಯ ತಲೆಯೊಡೆದು ರಕ್ತ ಕೋಡಿ ಹರಿದಿತ್ತು. ಸ್ಮೃತಿ ಮೊದಲೇ ತಪ್ಪಿತ್ತು. ಹೃದಯ ತಲ್ಲಣಗೊಳಿಸುವಂತಿತ್ತು ಆ ದೃಶ್ಯ. ಹರಿದ ರಕ್ತ ಹೆಪ್ಪುಗಟ್ಟಿ ನಿಂತಿತ್ತು. ಮುಖ ಕಳೆಗುಂದಿ, ಕಣ್ಣುಗಳು ನಿಶ್ಚೇಷ್ಟಿತವಾಗಿದ್ದುವು. ಆದರೇನು, ಅವ ಕಳ್ಳನಲ್ಲವೆ?

ಸ್ಮೃತಿಯಿಲ್ಲದ ಆ ವ್ಯಕ್ತಿಯನ್ನು ಹಿಡಿದೆತ್ತಿ ನಿಲ್ಲಿಸಿದರು. ಎರಡು ಮೂರು ಅಡಿಕೆ ಗೊನೆಯನ್ನು ಮಾಲೆಯಾಗಿ ಕಟ್ಟಿ ಆ ಬಡ ವ್ಯಕ್ತಿಯ ಕೊರಳಿಗೆ ಹಾಕಿದರು. ಹೊರಡಿತು ಮೆರವಣಿಗೆ; ಧನಿಗಳ ಮನೆಗೆ ತಲೆಯೊಡೆದುದಲ್ಲದೆ ಹಲವರು ಉದ್ವೇಗದಿಂದ ಒಂದೊಂದು ಏಟು ಹಾಕಿದ್ದರು. ತೃಪ್ತ್ಯನುಸಾರ; ಅವನಿಗೆ ಪ್ರಜ್ಞೆ ಇರಲಿಲ್ಲವಾದ್ದರಿಂದ ಅವನನ್ನಿಬ್ಬರು ಇಬ್ಬದಿಯಿಂದ ಎತ್ತಿಕೊಂಡೇ ಸಾಗಿದರು ರಕ್ತಸ್ನಾನವಾಗಿ ಅಡಿಕೆಯ ಮಾಲೆಯನ್ನು ಧರಿಸಿ ಸ್ಮೃತಿಯಿಲ್ಲದ ಆತ ಭೀಕರ ರೂಪವನ್ನು ತಳೆದಿದ್ದ. ಹಾಹಾಕಾರ, ಗಲಭೆ, ಬೊಬ್ಬೆಯ ಸಂತಸದ ಮೆರವಣಿಗೆ.

ಧನಿಗಳ ಮನೆಗೆ ಮೆರವಣಿಗೆ ಮುಟ್ಟಿತು, ಅಂತೂ ಇಂತೂ ಸ್ವಲ್ಪ ಹೊತ್ತಿನಲ್ಲಿ ಬೆಳಗಾಯಿತು. ಪೋಲೀಸರೂ ಬಂದರು, ಊರಿನ ಸಮಸ್ತರೂ ನೆರೆದರು. ಆದರೆ ಕಳ್ಳನಿಗಿನ್ನೂ ಪ್ರಜ್ಞೆ ಬಂದಿರಲಿಲ್ಲ. ವಿಚಾರಣೆಗೆ ತಕ್ಕ ಚಿಕಿತ್ಸೆ ನಡೆಸಿದರು. ತಲೆಗೊಂದು ಬಲವಾದ ಪಟ್ಟಿ ಕಟ್ಟಿದರು. ನೀರು ಬಡಿದು, ಬಡಿದು ಅಂತು ಬಹಳ ಹೊತ್ತಿನ ಮೇಲೆ ಅವನಿಗೆ ಸ್ವಲ್ಪ ಚೇತನ ಬಂತು. ರಕ್ತ ಸ್ನಾನಮಾಡಿದ್ದ ಆ ವ್ಯಕ್ತಿಯನ್ನು ಗೋಡೆಗೊರಗಿಸಿ ಎದ್ದು ಕುಳ್ಳಿರಿಸಿದರು. ಅವನಿಗೆ ಸ್ವಲ್ಪ ಮಾತನಾಡುವ ಶಕ್ತಿ ಬಂತು.

"ಏಯ್., ನೀನ್ಯಾರು?" ಪೋಲೀಸರು ಗದರಿಸಿದರು.

ತಾನು ಸ್ವಲ್ಪ ದೂರದ ಹಾಳೂರಿನವನೆಂದೂ, ತನಗೊಬ್ಬಳು ತಾಯಿ ಮಾತ್ರ ಮನೆಯಲ್ಲಿರುವಳೆಂದೂ, ಒಬ್ಬನೇ ತಮ್ಮ ದೂರದಲ್ಲಿ ಹೋಟೆಲೊಂದರಲ್ಲಿ ಅಡಿಗೆ ಮಾಡುತ್ತಿರುವನೆಂದೂ ತಮ್ಮದು ಬ್ರಾಹ್ಮಣ ಕುಟುಂಬವೆಂದೂ ಅವನು ತಿಳಿಸಿದನು.

"ಆಹಾ, ಭೂಸುರನಿವನೇ; ಕಳ್ಳ!" ಎಂದು ಹಿಯ್ಯಾಳಿಸಿದರು ಯಾರೋ.

ಪೋಲೀಸರನ್ನಿನ್ನೂ ಅವನಿಗೆ ಬೇರೆ

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

3		ತಿಂಗಳಿಗೆ	3%
4 ರಿಂದ	6	,,	3½%
7 ,,	12	,,	4%
13 ,,	24	,,	4½%

ಸೇವಿಂಗ್ಸ್ ಬೇಂಕ್ ಲೆಕ್ಕ 2½%

ಕರೆಂಟ್ ಎಕೌಂಟು ½%

The Moolky Bank, Ltd.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

S. C. 86/1958

ಶ್ರೀ ಶಾಂತೇರಿ ಕಾಮಾಕ್ಷಿ ದೇವರು, ಭಟ್ಕಳ —ವಾದಿ.

ಸಂಜೀವ ಶೆಟ್ಟಿ — ಪ್ರತಿವಾದಿ

ಪ್ರತಿವಾದಿ ಸಂಜೀವ ಶೆಟ್ಟಿ, ಕೃಷ್ಣಪ್ಪ ಶೆಟ್ಟಿ ಅಳಿಯ, ಕುಂದಾಪುರ ತಾಲ್ಲೂಕು ತ್ರಾಸಿ ಗ್ರಾಮ, ಇವರಿಗೆ.

ಮೇಲ್ಕಂಡ ವಾದಿಯು ನಿಮ್ಮ ಮೇಲೆ ಕಳೆದ ಮನ್ಮಥ ಮತ್ತು ದುರ್ಮುಖಿ ಸಂವತ್ಸರಗಳ ಬಹಾ ಬಾಲನೇಣಿ ಬಗ್ಗೆ ದಾವೆ ಮಾಡಿದ್ದು ತಾರೀಕು 5—6—58ಕ್ಕೆ ತನ್ಖಿಗೆ ಇಟ್ಟಿಯದೆ. ಆ ದಿವಸ ನೀವು ಹಾಜರಾಗಿ ಉತ್ತರ ಕೊಡತಕ್ಕದ್ದು. ಇಲ್ಲದಿದ್ದರೆ ನಿಮ್ಮ ಗೈರ ಹಾಜರಿಯಲ್ಲಿ ತೀರ್ಮಾನವಾದೀತು.

By order of the Court.

K. Narayana Kamath,
Advocate for Plaintiff.

Coondapoor, ...-4-58

ಹಿಂಸೆ ಕೊಡಲಿಲ್ಲ. ಬಡ ಬ್ರಾಹ್ಮಣ ಬಾಯಿಪಾರವಾಗಿ ಬಂದನನಂತೆ ತಾನೇ ವಿವರ ಒಪ್ಪಿಸಿದ.

"ತೆಂಕು ಭಾಗದಲ್ಲಿ ಬೇಲಿ ಸ್ವಲ್ಪ ಶಿಥಿಲವಾಗಿತ್ತು. ಛಿದ್ರ ಛಿದ್ರವಾಗಿದ್ದ ಆ ಬೇಲಿಯಿಂದ ನಾನು ಒಳಹೊಕ್ಕೆ. ಇದರ ಮೊದಲು ಮೂರುಬಾರಿ ನಾನು ಇಂತಹ ದುಷ್ಕೃತ್ಯವನ್ನು ನಡೆಸಿದ್ದೇನೆ. ಅಯ್ಯೋ, ನನ್ನಂಥ ಪಾಪಿಯನ್ನು ದೇವರು ಕ್ಷಮಿಸುವನೇ ನೀವೇ ನನ್ನ ರಕ್ಷಿಸಿ" ಎಂದು ಆತ ಪೋಲೀಸರ ಕಾಲುಗಳಿಗೆರಗಿದ. ಅವುಲು ಹಿಡಿದವನಂತೆ, ಅರೆನಿದ್ದೆಯಲ್ಲಿದ್ದವನಂತೆ ಅವನು ಮಾತನಾಡಿದನು. ಪೋಲೀಸರು ಹೇಳಿಕೆಯನ್ನು ಬರೆದುಕೊಂಡರು. ಕಳ್ಳನಾದರೇನು? ಹಾಗೆ ಹೊಡೆಯಬಹುದೇ?' ಎಂದು ಹಲವರು ಆಲೋಚಿಸಿಕೊಂಡರು. ಹೌದು, ಆದರೆ ಪೋಲೀಸರನ್ನು ತೃಪ್ತಿಪಡಿಸಿದ್ದರು. ಶಂಕರರಾಯರು. ಅವರ ಮನಸ್ಸನ್ನು ಸಂತಸಗೊಳಿಸಿ 'ಬಿದ್ದು ತಲೆಯೊಡೆಯಲ್ಪಟ್ಟಿದೆ' ಯೆಂದು ದಾಖಲು ಮಾಡಿಸಿದರು

'ಅಂತೂ ಕಳ್ಳ ಸಿಕ್ಕಿಬಿದ್ದ!' ಅವನಿಂದು ಸೆರೆಮನೆಯಲ್ಲಿ ಸುಖ ಜೀವನ ನಡೆಸುತ್ತಿದ್ದಾನೆ. ಕಡು ಬಡವ ಆತ. ಅವನಿಗದರಿಂದ ಮುಕ್ತಿಯಿರಲಿಲ್ಲ. ಅವನಿಗೆ ಪ್ರತ್ಯೇಕ ವಿಚಾರಣೆ ಬೇಕಿರಲಿಲ್ಲ ಪ್ರತ್ಯಕ್ಷ ಸಾಕ್ಷ್ಯವಿದ್ದ ಮೇಲೆ ಇನ್ನೇನು ಬೇಕು? ಅವನ ಆ ತಮ್ಮ ಅಲ್ಲಿ ದೂರದೂರಿನಲ್ಲಿ; ಮುದಿ ತಾಯಿ ಮನೆಯಲ್ಲಿ, ಈ ಬಡ ಬ್ರಾಹ್ಮಣ ಸೆರೆಮನೆಯಲ್ಲಿ.

ಹೀಗೆಯೇ ತಿಂಗಳೆರಡು ಕಳೆಯಿತು. ಹೂವಳ್ಳಿಯಲ್ಲಿ ಅಲ್ಲಲ್ಲಿ ವಿಚಾರ ಗೋಷ್ಠಿಗಳೂ, ಹೊಸ, ಹೊಸ ಮಾತುಗಳೂ ಕೇಳಿಬರುತ್ತಿದ್ದುವು ಈ ಪ್ರಕರಣದ ಕುರಿತು ನಾನಾ ವಿಧದಲ್ಲಿ ಜನರು ಆಡಿಕೊಳ್ಳುತ್ತಿದ್ದರು

ಒಂದು ದಿನ ಶಂಕರರಾಯರ ತೋಟದಲ್ಲಿ ಆಳುಗಳು ವಿನೋದವಾಗಿ ಸೇರಿ ಹರಟೆ ಹೊಡೆಯುತ್ತಿದ್ದರು. ರುದ್ರಪ್ಪ, ಅಂತೋನಿ ಸೋಜ ಅವರಾರೂ ಇರಲಿಲ್ಲ. ಹಲವಾರು ಮಂದಿ ವೀಳ್ಯ ಹಾಕುತ್ತಲೂ, ಹೊಗೆ ಬಿಡುತ್ತಲೂ ಆ ಸುದ್ದಿ, ಈ ಸುದ್ದಿ ಮಾತನಾಡುತ್ತಲೂ ಇದ್ದರು. ಮಾತು ತಾನಾಗಿಯೇ ತೋಟ ಕಳವಿನ ಪ್ರಕರಣದೆಡೆಗೆ ತಿರುಗಿತು

"ಅಲ್ಲ, ಕಳ್ಳ ಬರುವುದು ಸೋಜನಿಗೆ ಮೊದಲೇ ಹೇಗೆ ತಿಳಿಯಿತು?" ಎಂದು ಯಾರೋ ಕುತೂಹಲದ ಹೊಸ ಪ್ರಶ್ನೆ ಎತ್ತಿದರು

'ಇವರೇ ಏನೋ ಪಿತೂರಿ ಮಾಡಿರಬಾರದೇಕೆ?"

"ಕಳ್ಳನೇನು ಇವರಿಗಾಗಿ ಇವರನ್ನು ರಕ್ಷಿಸಲಿಕ್ಕಾಗಿ ಅಂದೇ ಪ್ರತ್ಯಕ್ಷನಾದನೇ? ಅಂತೂ ಆ ಬ್ರಾಹ್ಮಣನೇ ಕಳ್ಳನೆಂದು ಹೇಳುವಂತಿಲ್ಲ" ಎಂದ. ಒಬ್ಬಿಬ್ಬರು ಮಾತನಾಡಿಕೊಂಡರು.

"ಹುಂ, ನೀವೂ ಶುದ್ಧ ಮಂಕುಗಳೇ ಸರಿ ಆ ಬ್ರಾಹ್ಮಣ ಪ್ರತಿದಿನ ಶರಾಬು ಕುಡಿಯಲು ಸೋಜನಲ್ಲಿಗೆ ಬರುತ್ತಿದ್ದ. ಆ ದಿನ ಅವನಿಗೆ ಸ್ಮೃತಿ ತಪ್ಪುವಂತೆ ಶರಾಬು ಕುಡಿಸಿ, ತೋಟದೊಳ ಬಿಟ್ಟರು. ಮೊದಲೇ ಯೋಚಿಸಿದಂತೆ ಸೋಜನ ತಮ್ಮ ಇವನ್ನೆಲ್ಲಾ ನೋಡಿ ಸಿದ್ಧ. ಒಂದೆರಡು ಅಡಿಕೆ ಗೊನೆ ಕೊಯ್ದು ಅಲ್ಲಿ ಹತ್ತಿರವೇ ಇಟ್ಟು, ಕತ್ತಿಯನ್ನು ಇಟ್ಟು, ನಂತರ ಎಲ್ಲರೂ ಸೇರಿ ಆ ಬ್ರಾಹ್ಮಣನನ್ನ ನರಬಲಿಯಿತ್ತರು. ಪೆಟ್ಟಿಗೂ ಹೆದರಿ ಪಾಪ, ಆತ ಇವರು ಹೇಳಿದಂತೆ ಗಿಳಿಯಂತೆ ತಪ್ಪೊಪ್ಪಿಕೊಂಡ. ಧನಿಗಳೂ ಇದನ್ನೆಂತು ತಿಳಿಯುತ್ತಾರೆ? ಪೋಲೀಸರೂ ಹೊಡೆದುದನ್ನಡಗಿಸಿ ಕೊಟ್ಟ ತಣಿಸಿಕೊಂಡರು. ಆ ಬಡ ಹಾರುವ ಮಾತ್ರ ನರಕ ಜನ ಭವಿಸಿದ. ರುದ್ರಪ್ಪಯ್ಯ ಮತ್ತು ಸೋಜರು ಗೆದ್ದರು. ಅಬ್ಬಬ್ಬಾ, ಇವರೆಲ್ಲಾ ನಿರ್ದಯ ಪಶುಗಳು! ಅಲ್ಲ, ಯಾತಕೆ ಬೇಕಿತ್ತು ಆ ಬ್ರಾಹ್ಮಣನಿಗೆ ಆನಾರಾಯಿಯ ಸಹವಾಸ?" ಎಂದ ನಂಜ. ಸೋಜನ ಭವಿಷ್ಯದ ಮಾತನ್ನು ಕೇಳಿ ತಾನು ದೂರದಲ್ಲಿ ಕಾದು ನಿಂತು, ಇವನ್ನೆಲ್ಲಾ ಆಗ ಪ್ರತ್ಯಕ್ಷ ನೋಡುತಿದ್ದೇನೆಂದು ನಂಜ ತಿಳಿಸಿದ. ಒಂದೆರಡು ದಿನಗಳಲ್ಲಿಯೇ ನಂಜ ದೂರ ಒಕ್ಕಲು ಹೋಗುವವನಿದ್ದ. ಅಂದು ಕಣ್ಣಾರೆ ಕಂಡು ಸುಮ್ಮನಿದ್ದು, ನಾಲಗೆ ಯಾಡಿಸಿದರೆ ಕೊರಳು ಹರಿಯುವುದೆಂದು ಸುಮ್ಮನಿದ್ದ ನಂಜ, ಇಂದು ಹೆದರಿಕೆಯನ್ನು ತೊರೆದು, ಸತ್ಯವನ್ನು ಹೊರಗೆಡವಿದ, ಧೈರ್ಯದಿಂದ.

ಸರಕಾರದ ಪ್ರಭಾವದಿಂದ ದೂರವಿರಲಿ

(೧ನೇ ಪುಟದಿಂದ)

ಕೊಂಡಿರಬೇಕು. ವಿದೇಶಗಳ ಸಮಸ್ತ ರಾಷ್ಟ್ರೀಕರಣ ಸಹಕಾರೀ ಆಂದೋಲನದೊಡನೆ ಮುಂದಿನ ವರ್ಷದಲ್ಲಿ ಸಂಬಂಧ ಸಂಪರ್ಕಸ್ಥಾಪನೆ ಮಾಡುವುದು ಅತ್ಯಗತ್ಯವಾಗಿದೆ.

ಸಹಕಾರೀ ಆಂದೋಲನವೊಂದು ನೈತಿಕ ಆಂದೋಲನವಾಗಿದೆ. ಇದು ನೈತಿಕ ಸಿದ್ಧಾಂತಗಳ ಆಧಾರದಿಂದ ಬೆಳೆದು ಬಂದಿದೆ. ನೈತಿಕ ಸಿದ್ಧಾಂತಗಳ ಆಚರಣೆಯ ಫಲಸ್ವರೂಪವಾಗಿಯೇ ಆರ್ಥಿಕ ಲಾಭವಾಗಿದೆ. ಆಂದೋಲನದ ಸುದೃಢತೆ, ಪ್ರಗತಿ, ಸಹಯೋಗಗಳ ಮೂಲ ಸಿದ್ಧಾಂತಗಳ ವಿಷಯದಲ್ಲಿ ಜನತೆಗೆ ಸಮುಚಿತವಾದ ತಿಳುವಳಿಕೆಯನ್ನು ಈಯಬೇಕು; ಮತ್ತು ತಮ್ಮ ಆತ್ಮಶಕ್ತಿಯಿಂದ ಅವರೆಲ್ಲರೂ ನಿರ್ಭರರಾಗುವಂತೆ ಮಾಡಬೇಕು.

(ಶ್ರೀ ಕೇಶವದೇವ ಮಾಲವೀಯರವರ ಭಾಷಣದ ಸಾರ)

ಮದರಾಸಿನ ಹೋಟೆಲ್ ದಾಸಪ್ರಕಾಶದಲ್ಲಿ ಕಳೆದ ೧೧ನೆಯ ಶುಕ್ರವಾರ ದಿ... ಸಂಗೀತ ಕಚೇರಿ ಮಾಡಿದ ಪ್ರಸಿದ್ಧ ಪಿಯಾನೋಗಾರರಾದ ಡಾವ್ ಬ್ರೂಬೆಕ್ ಇವರು ಸಂಗೀತದಲ್ಲಿ ಪದವೀಧರರಾಗಿ, ಸಂಗೀತದಲ್ಲಿಯೇ ತಮ್ಮ ಜೀವನವ... ಕಳೆದಿದ್ದಾರೆ.

ಮಹತ್ವದ ಸಂಶೋಧನೆ

ಹಳೆಯ ಕನ್ನಡಿ

ಮಧ್ಯ ಏಶಿಯದ ಪರ್ವತಗಳಲ್ಲಿ ಅಗೆದಾಗ ಲೆನಿನ್ ಗ್ರಾಡಿನ ಪ್ರಾಚ್ಯ ವಸ್ತು ಸಂಶೋಧಕರು ಕ್ರಿ. ಶ. ಏಳನೆಯ ಶತಮಾನದ ಕನ್ನಡಿಯೊಂದನ್ನು ಕಂಡುಹಿಡಿದರು. ತೂವಾ ಪ್ರಜಾರಾಜ್ಯದ ನೈಋತ್ಯ ದಿಕ್ಕಿನ ಕಾಗರ್ ನದೀ ಕಣಿವೆಯ ಈ ಪ್ರದೇಶವು ಸಮುದ್ರ ಮಟ್ಟಕ್ಕಿಂತ ೬,೧೭೫ ಅಡಿ ಎತ್ತರದಲ್ಲಿದೆ. ಗುಂಡಾಗಿರುವ ಈ ಕನ್ನಡಿಯನ್ನು ರೇಶ್ಮೆಯ ಚೀಲದಲ್ಲಿ ಚೆನ್ನಾಗಿ ಉಳಿಸಿಡಲಾಗಿದೆ ಕನ್ನಡಿಯ ಹಿಂಭಾಗದಲ್ಲಿ ನಾಲ್ಕು ಪೌರಾಣಿಕ ಕುದುರೆಗಳ ಚಿತ್ರವಿದೆ ಅದರ ಕೊನೆಗಳ ಮೇಲೆ ಚೀಣೀ ಅಕ್ಷರಗಳ ಚಿತ್ರವಿದೆ. ಈ ಗುಡ್ಡದಲ್ಲಿ ಚಿನ್ನದ ಆಭರಣಗಳೂ ಮನೆಗೆಲಸದ ಪಾತ್ರೆಗಳೂ ಚೀನೀ ರೇಶ್ಮೆಯ ವಸ್ತುಗಳೂ, ಚಿನ್ನದ ಅಲಂಕರಣಗಳುಳ್ಳ ಒಂದು ಜೀನು ಮತ್ತೊಂದು ಕುದುರೆಯ ಅವಶೇಷಗಳೂ ದೊರೆತಿವೆ. ಗ... ನೀಯ ತುರ್ಕಿ ವೀರನೊಬ್ಬನ ಶಿಲ... ಮೂರ್ತಿಯಿದಾಗಿರಬಹುದೆಂದು ಪ್ರಾಕ್ತ... ವಿಮರ್ಶಕರನ್ನುತ್ತಾರೆ.

o o o o o

ಭಾರತದಲ್ಲಿ ಸಿಗ್ನಲ್ ಗಾಜು

ಕಲ್ಕತ್ತದಲ್ಲಿರುವ ಕೇಂದ್ರ ಗಾಜು ಹ... ಗೂ ಕುಂಭಕಲಾ ಸಂಶೋಧನಾ ಸಂಸ್ಥೆ... ಯಲ್ಲಿ ಯಶಸ್ವಿಯಾಗಿ ನಡೆಸಿರುವ ಪ... ಶೀಲನೆಗಳ ಫಲಸ್ವರೂಪವಾಗಿ ಭಾರ... ದಲ್ಲಿಯೇ ಸಿಗ್ನಲ್ ಗಾಜುಗಳನ್ನು ತಯಾ... ರಿಸುವುದು ಸಾಧ್ಯವೆನಿಸಿದೆ. ವಿವಿಧ ವರ್ಣ... ಗಳ ಸಿಗ್ನಲ್ ಗಾಜುಗಳನ್ನು ರೈಲು ಹಾ... ಗೂ ರಸ್ತೆ ಸಂಚಾರ ನಿಯಂತ್ರಣ ಕ... ರ್ಯದಲ್ಲಿ ಉಪಯೋಗಿಸಲಾಗುತ್ತಿದೆ. ... ಲ್ಲಿಯ ವರೆಗೆ ಇಂತಹ ಗಾಜನ್ನು ಆವ ದು... ಮಾಡಿಕೊಳ್ಳುತ್ತಿದ್ದರೂ ಸಿಗ್ನಲ್ ಗಾಜು... ಳು ಅನುದಿನದ ಬಳಕೆಯ ವಸ್ತುವಾಗಿ ಪರಿ... ಣಮಿಸಿದೆ. ಭಾರತದಲ್ಲಿ ರೇಲ್ವೇಗಳೇ ಅಧಿ... ಕಪ್ರಮಾಣದ ಸಿಗ್ನಲ್ ಗಾಜುಗಳನ್ನು ... ಳಸುತ್ತಿವೆ. ಕಲ್ಕತ್ತದಲ್ಲಿರುವ ಸಂಶೋಧ... ನಾ ಸಂಸ್ಥೆಯಲ್ಲಿ ತಯಾರಿಸಿದ ಸಿಗ್ನಲ್ ಗಾಜನ್ನು ವಿವಿಧ ರೇಲ್ವೆ ಯಾರ್ಡುಗಳಿಗೆ ಪ್ರಯೋಗಾರ್ಥವಾಗಿ ಕಳುಹಿಸಲಾಯಿತು. ಇವು ಈಗ ಬಳಕೆಯಲ್ಲಿರುವ ವಿದೇಶೀ ಸಿಗ್ನಲ್ ಗಾಜುಗಳಿಗೆ ಸರಿಸಮಾನವಾಗಿರುವುದೆಂದು ಈ ಪ್ರಯೋಗಗಳಿಂದ ವ್ಯಕ್ತಪಟ್ಟಿತು. ಈ ಸಂಸ್ಥೆಯಲ್ಲಿ ತಯಾರಾದ ಗಾಜಿನ ಬಣ್ಣವು ದೀರ್ಘಕಾಲದ ವರೆಗೆ ಅಳಿಸದೇ ಹಾಗೆಯೇ ಉಳಿಯುವುದೆಂಬುದು ಹಾಗೂ ಪ್ರತಿಕೂಲ ಹವಾಮಾನದಲ್ಲಿ ಕೂಡ ಈ ಗಾಜು ಹಾಳಾಗುವುದಿಲ್ಲವೆಂಬುದು ಪ್ರಯೋಗ ಪರೀಕ್ಷೆಯಿಂದ ತಿಳಿದುಬಂದಿದೆ.

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಶೀಘ್ರ ಪ್ರತಿಫಲ ಪಡೆಯಿರಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೭
VOL. 37

24—4—1958

ಸಂಚಿಕೆ ೩೩
NO. 33

ವಿನೋಬಾರವರೂ ಕರಹೇರುವರೆ?

ಸರ್ವೋದಯ ಪಾತ್ರೆಯಿಡಲು ಕರೆ

ಕೇರಳದಲ್ಲಿ ವಿನೋಬಾರವರು ಸರ್ವೋದಯ ಹಾಗೂ ಗ್ರಾಮ ದಾನದ ಕೆಲಸಕ್ಕೆ ಒಪ್ಪಿಗೆಯ ಗುರುತಾಗಿ, ಸಕ್ರಿಯ ಮತದಾನದ ಚಿಹ್ನೆಯಾಗಿ 'ಸಮ್ಮತಿ ದಾನ" ಕೇಳಲು ಮೊದಲಿಟ್ಟರು ತಮ್ಮ ಪರಿಶ್ರಮದಿಂದಲೇ ಉತ್ಪತ್ತಿ ಮಾಡಿದ ಯಾವುದಾದರೊಂದು ವಸ್ತುವನ್ನು ತಿಂಗಳಿಗೊಂದು ಬಾರಿ ಕೊಡುವಂತೆ ಕೇಳಿದರು. ಕೇರಳವು ತೆಂಗಿನ ಸೀಮೆ ತಾನೆ? ಮನೆಗೊಂದು ತೆಂಗಿನ ಕಾಯಿ ಕೊಡಲು ಕೇರಳದ ಜನರು ಒಪ್ಪಿದರು. ಹೀಗೆ ಈ ಫಲಾರಂಭದಿಂದಲೇ ಸಮ್ಮತಿ ದಾನಕ್ಕೆ ಒಂದು ಶುಭಮಂಗಲ ರೂಪ ಬಂತು. ಅನೇಕರು ತಿಂಗಳಿಗೊಂದು ಲಡಿ ನೂಲು ಅಥವಾ ಅಷ್ಟೊಂದು ಕಾಳನ್ನು ಕೊಡಲು ಒಪ್ಪಿದರು. ವಿನೋಬಾ ಕರ್ಣಾಟಕಕ್ಕೆ ಪ್ರವೇಶಿಸಿದ ಮೇಲೆ ಈಗೀಗ ಧಾರವಾಡಕ್ಕೆ ಬಂದಾಗ ಈ 'ಸಮ್ಮತಿದಾನ'ವು ವಿಕಸಿತವಾಗಿ 'ಸರ್ವೋದಯ ಪಾತ್ರೆ' ಮನೆ ಮನೆಯಲ್ಲೂ ಇಡಿರೆಂದು ಘೋಷಿಸಿದರು. "ಊಟ ಮಾಡುವ ಮೊದಲು ನಿಮ್ಮ ಮನೆಯ ಚಿಕ್ಕ ಮಗುವೊಂದರ ಕೈಯಲ್ಲಿ ಒಂದೇ ಹಿಡಿ ಅಕ್ಕಿ, ಜೋಳ, ಗೋಧಿ, ರಾಗಿ ಏನಿದೆಯೋ ಅದನ್ನೇ ಆ ಪಾತ್ರೆಯಲ್ಲಿ ಹಾಕಿಸಿರಿ. ತಿಂಗಳಿಗೊಮ್ಮೆ ಸರ್ವೋದಯ ಕಾರ್ಯಕರ್ತರಿಗೆ ಆ ಧಾನ್ಯವನ್ನು ತಲುಪಿಸಿರಿ" ಎಂದವರು ಕೇಳಿಕೊಂಡರು. ಅಂದಿನಿಂದ ವಿನೋಬಾ ಎಲ್ಲೆಲ್ಲೂ ಸರ್ವೋದಯ ಪಾತ್ರೆಗೇನೇ ವಿಶೇಷ ಮಹತ್ವವಿತ್ತು ಮಾತಾಡುತ್ತಿದ್ದಾರೆ.

ಮನೆ ಮನೆಯಿಂದ ಒಂದೊಂದು ಹಿಡಿಯಾಗಿ ಬಂದುದು ಬಲುದೊಡ್ಡ ವಸ್ತು. ಇಲ್ಲಿ ಧಾನ್ಯದ ಬೆಲೆಯನ್ನು ವಿನೋಬಾ ನೋಡುವುದಿಲ್ಲ. 'ನಾನು ಸಮಾಜಕ್ಕೆ ಏನಾದರೂ ಕೊಡದೆ ಊಟ ಮಾಡುವುದಿಲ್ಲ' ಎಂಬ ಮನೋವೃತ್ತಿ ಚಿಕ್ಕಂದಿನಲ್ಲೇ ಮಕ್ಕಳಲ್ಲಿ ಬೆಳೆದರೆ, ಅದೆಂತಹ ಸರ್ವೋತ್ತಮ ಸಮಾಜ ಸ್ಥಾಪನೆಯಾಗಬಹುದು? ಇದೊಂದು ಕ್ಷುಲ್ಲಕ ವಿಚಾರವಾಗಿ ಕಂಡರೂ ಅತ್ಯಂತ ಬಲಶಾಲಿಯಾದುದು. ಮನೆ ಮನೆಗೆ ಸರ್ವೋದಯ ಹೃದಯ ಪ್ರವೇಶ ಮಾಡಲು ಇದರಿಂದ ಅವಕಾಶವಾಗುತ್ತದೆ. ಇದು ಯಾರೂ ಒಪ್ಪದಿರುವಷ್ಟು ಕಠಿಣವೇನೂ ಅಲ್ಲ. ಧಾರವಾಡದಲ್ಲಿ ಒಬ್ಬ ಶಾಲೋಪಾಧ್ಯಾಯರು ತಮ್ಮ ಮಕ್ಕಳಿಗೆಲ್ಲ ಈ ವಿಚಾರ ತಿಳಿಸಿದಾಗ ಎಲ್ಲ ಹುಡುಗ ಹುಡುಗಿಯರು ಸರ್ವೋದಯ ಪಾತ್ರೆ ತುಂಬಿಸಲು ಸಂತೋಷದಿಂದ ಒಪ್ಪಿದರು. ಹೆಂಗಸರಿಗಂತೂ ಈ ಸರ್ವೋದಯ ಪಾತ್ರೆಯ ಕಲ್ಪನೆಯು ಮನಸ್ಸಿಗೆ ಹಿತವಾಗಿರುತ್ತದೆ. ಬೆಂಗಳೂರಿನಲ್ಲಿ ಆಗಲೇ ಅನೇಕರ ಮನೆಯ ಕೋಣೆಯಲ್ಲಿ ಸರ್ವೋದಯ ಪಾತ್ರೆ ಅಂದವಾಗಿ ಕಂಗೊಳಿಸುತ್ತದೆ. ಮೊನ್ನೆಮೊನ್ನೆ ಮಹಾರಾಷ್ಟ್ರದಲ್ಲಿ ೧೦–೧೨ ಜನ ಹೆಂಗಸರ ಗುಂಪೊಂದು ತಾವಾಗಿಯೇ ವಿನೋಬಾರ ಬಳಿಬಂದು ಸರ್ವೋದಯ ಪಾತ್ರೆಗಾಗಿ ಮನೆಮನೆ ಸುತ್ತುವುದಾಗಿ ಒಪ್ಪಿದರು.

ನಿಧಿ ಮುಕ್ತಿಯಾದ ಮೇಲೆ ಕಾರ್ಯಕರ್ತರ ಜೀವಿಕೆಯ ಆಧಾರ ವಿನೋಬಾರವರ ಬಳಿ ಏನೂ ಇಲ್ಲ. ಸಂತತ ಸೇವೆ ಮಾಡುತ್ತ ಸಮಯ ಬಂದಾಗ ಶಾಂತಿ ಸ್ಥಾಪನೆಗಾಗಿ ಪ್ರಾಣಾರ್ಪಣೆ ಮಾಡುವುದನ್ನು ಮಾತ್ರ ವಿನೋಬಾ ಕಾರ್ಯಕರ್ತರಿಂದ ನಿರೀಕ್ಷಿಸುತ್ತಾರೆ. ನಿಷ್ಠೆಯಿರುವವರಂತೂ ಅಂತೆಯೇ ಮಾಡಿಯಾರು. ಆದರೆ ಜನತೆ ಅಂತಹರನ್ನು ನೋಡಿಕೊಳ್ಳಬೇಕು. ಸರ್ವೋದಯ ಪಾತ್ರೆಯು ಸರ್ವಾನ್ನ— ಸರ್ವರಿಂದಲೂ ಹಿಡಿಹಿಡಿ ದೊರೆತುದು. ಸರ್ವೋದಯಕ್ಕೆ ಅನುರೂಪವಾದ ಅನ್ನ. ಸಂಪತ್ತಿದಾನವು ವಿಶಿಷ್ಟಾನ್ನ—ಎಲ್ಲೋ ಕೆಲವರು ಕೊಟ್ಟುದು ಅದು ಕಾರ್ಯಕರ್ತರ ತೇಜಸ್ಸನ್ನು ಮುರಿದೀತು ಇನ್ನೂ ಮುಂದೆ ಹೋದರೆ ಸ್ವಯಂಶ್ರಮಾನ್ನ. ಇದು ಕಾರ್ಯಕರ್ತರ ಜೀವಿತ ಯೋಜನೆ. ಸತತ ಸಮಾಜದ ಸೇವೆ ಮಾಡುವವನ ಜೀವನವೇ ಒಂದು ಯಜ್ಞ. ಹಸಿವಿಗಾಗಿ ಆತ ಊಟ ಮಾಡಿಯಾನು. ಒಂದು ತುತ್ತನ್ನೂ ಆತ ಹೆಚ್ಚುವಲ್ಲನು. ಈ ಅನ್ನ ಬಾಲ ಮೂರ್ತಿಯ ಪುಟಾಣಿ ಕೈಯಿಂದ ಬರುವುದರಿಂದ ಪಾವನಾನ್ನವು. ಸಂಪತ್ತಿದಾನವೊಂದು ವ್ಯಾಗಜ ಕಾಗದದಲ್ಲಿರುತ್ತದೆ ಹಲವು ಸಜ್ಜನರು ಸದುಪಯೋಗ ಮಾಡಿಕೊಂಡಾರು. ಸಂಪತ್ತಿದಾನ ಕೊಟ್ಟವರು ಬೇಗಬೇಗ ಅದನ್ನು ಆ ಪರೀ ಭೂದಾನ, ಗ್ರಾಮದಾನ, ಸರ್ವೋದಯ ಸಾಹಿತ್ಯಕ್ಕೆ ಉಪಯೋಗ ಮಾಡಿಬಿಡಬೇಕು. ಅಂತೆಯೇ ಸಂಪತ್ತಿದಾನಿಗಳ ಸಂಪಾದನೆಯ ರೀತಿಯೂ ಜೀವನವೂ ಬರಬರುತ್ತ ಪರಿಶುದ್ಧವಾಗಬೇಕು. ಅಂತೆಯೇ ಕಾರ್ಯಕರ್ತರ ಜೀವನಾಧಾರ ಜನತೆ—ಸರ್ವೋದಯ ಪಾತ್ರೆ. ಸಮ್ಮತಿದಾನ ಹೊರಟಾಗ ಕೇರಳದಲ್ಲಿ ಅದಿಷ್ಟು ಸ್ಪಷ್ಟವಾಗಿರಲಿಲ್ಲ. ಇಂದಿನವರೆಗೂ ನಾವು ಪಟ್ಟಣಗಳನ್ನು ಉಪೇಕ್ಷೆ ಮಾಡುತ್ತಿದ್ದ ಕೊರತೆ ಈ ಸರ್ವೋದಯ ಪಾತ್ರೆಯಿಂದೀಗ ಹೋಗುತ್ತದೆ. ಇದೊಂದು ಆಟದ ಹಾಗೆ ಎಲ್ಲರಿಗೂ ಬಲು ಸುಲಭ.

ಸೇವೆ ಮಾಡುವ ಕಾರ್ಯಕರ್ತ ನರಸಮುದಾಯರೂಪೀ ನಾರಾಯಣನ ಪ್ರಸಾದ ಉಣಬೇಕು. ಈ ಸರ್ವೋದಯ ಪಾತ್ರೆ ಭಗವತ್ಪ್ರಸಾದ. ಚಿಕ್ಕ ಮಕ್ಕಳ ಕೈಯಿಂದಲೇ ಕಾಳು ಹಾಕಿಸಬೇಕು. ಕಾಳು ಹೆಚ್ಚಬೇಕೆಂಬುದರ ಉದ್ದೇಶವಲ್ಲ, ಜನತೆಯ ಭಾವನೆ ಶುದ್ಧವಾಗಿರಬೇಕೆಂಬುದು ಮಾತ್ರ. ಬಾಲಮೂರ್ತಿಗಳಿಗೆ ನಿತ್ಯ ಅದೊಂದು ಸಮಾಜ ಶಿಕ್ಷಣ ಸಿಗುತ್ತಿರಬೇಕು. ಗ್ರಾಮದಾನ ಸೇವಕ ಶಾಂತಿಸೈನಿಕ ಒಬ್ಬೊಬ್ಬರೂ ಒಬ್ಬೊಬ್ಬ ತುಕಾರಾಮನು. ಆತ ನಿಮ್ಮ ಎಲ್ಲ ವಿಧವಾದ ಸೇವೆಯನ್ನು ಮಾಡುವವನು ಬೀದಿಯ ಕಸ ಗುಡಿಸುವನು, ಖಾಯಿಲೆ ಬಿದ್ದವರನ್ನು ಪ್ರೇಮದಿಂದ ಉಪಚರಿಸುವನು. ನಿತ್ಯ ಮಕ್ಕಳಿಗೊಂದು ತಾಸು ಹಿರಿಯರಿಗೊಂದು ತಾಸು ಕಲಿಸುವನು. ನಿಮ್ಮಿಂದ ಬೇಸಾಯ, ಉದ್ಯೋಗಗಳನ್ನು ಆತ ಕಲಿಯುವನು. ನಿತ್ಯ ಸರ್ವೋದಯ ಭೂದಾನ ಗ್ರಾಮದಾನದ ಕಥೆಯನ್ನು ನಿಮಗೆ ಹೇಳುವನು. ಆತ ನಿಮ್ಮೆಲ್ಲರನ್ನು ಒಟ್ಟಿಗೆ ಸೇರಿಸುವನು. ಗೃಹಿಣಿಯಿಲ್ಲದ ಮನೆ ಮನೆಯಲ್ಲ, ಅಂತೆಯೇ ಈ ತುಕಾರಾಮ ಇಲ್ಲದ ಹಳ್ಳಿ ಹಳ್ಳಿಯಲ್ಲ! ನಿಮ್ಮ ಗ್ರಾಮದ ತುಕಾರಾಮನಿಗೆ ನಿತ್ಯ ಭಿಕ್ಷೆ ನೀಡಿರಿ. ಇಡಿ ಗ್ರಾಮದ ಚಿಂತೆಯೊಂದನ್ನೇ ಮಾಡುವ ಆತನನ್ನು ಸಾಕುವುದೆಂದರೆ ನಿಮ್ಮ ಗ್ರಾಮಕ್ಕೆ ನೀವು ಒಳಿತು ಮಾಡಿಕೊಂಡಂತೆ. ನೀವಂತೂ ಇನ್ನೂ ಬೇರೆ ಬೇರೆ ಕೆಲಸಗಳಲ್ಲಿ ಬಿದ್ದುಕೊಳ್ಳುತ್ತಿರುವಿರಿ. ನಿಮ್ಮೆಲ್ಲರ ಚಿಂತೆ ಮಾಡುವವನನ್ನು ನೀವೇಕೆ ನೋಡಿಕೊಳ್ಳಬಾರದು? ನಗರದ ತುಕಾರಾಮರು ಸುತ್ತುಮುತ್ತಲಿನ ಗ್ರಾಮಗಳ ಸೇವೆಯನ್ನು ಮಾಡಬೇಕು.

ಸರ್ವೋದಯ ಪಾತ್ರೆ ಬರಿಯ ಕಾರ್ಯಕರ್ತರ ಜೀವನ ನಿರ್ವಹಣೆಗಾಗಿ ಎಂಬ ಭ್ರಮೆಯಲ್ಲಿ ನೀವು ಬೀಳಬೇಡಿ. ಸರ್ವೋದಯ ಪಾತ್ರೆಯೊಂದು ಸತತ ಚಿಂತನ—ನಿತ್ಯದ ಜಪ. ಮನೆಮನೆಯಲ್ಲಿ ಅನುದಿನವೂ ತಪ್ಪದೆ ನಡೆಯುವ ಸರ್ವೋದಯೋಪಾಸನೆ—ಈ ಪಾತ್ರೆ. ಸರಕಾರದ ಸೇವಕರನ್ನು ಚಹಾಕುಡಿದು ಕರತೆತ್ತು ಈಗಂತೂ ಸಾಕುತ್ತಲೇ ಇದ್ದೀರಿ. ವಿನೋಬಾ ಇದೇನು ಮತ್ತೊಂದು ಹೊಸ ತೆರಿಗೆ ಹಾಕಿದರು ಎಂದೀರಿ. ನಾನಿಂದು ಹಿಂಸಾಕಾರಖಾನೆಯನ್ನೇ ತೊಡೆದುಹಾಕಲು ಹೊರಟಿದ್ದೇನೆ. ಹಿಂಸಾಶ್ರಿತ ಸೇವೆಗಿಂತ ಅಸೇವೆಯೇ ಮೇಲು. ನನ್ನ ಈ ಸರ್ವೋದಯ ಕರದಿಂದ ಸೈನ್ಯದ ಖಾತೆಗೆ ಉಪಯೋಗವಾಗುತ್ತಿರುವ ೩೦೦ ಕೋಟಿ ರೂಪಾಯಿ ಉಳಿತಾಯವಾಗುವುದಲ್ಲದೇ ಬಗೆಬಗೆಯ ಕರಗಳೂ ಇಲ್ಲದಂತಾಗುವುವು. ವಿನೋಬಾ ಎಂದೂ ಜನರ ನಷ್ಟಕ್ಕೆ ಒಂದಿಲ್ಲ. ಈ ದರ್ಶನ ಸರ್ವೋದಯ ಪಾತ್ರೆ ಇಡುವವರಿಗೆ ಆಗಬೇಕು. ಇದಂತೂ ಪವಿತ್ರಾನ್ನ. ಇದರಿಂದ ಅಹಿಂಸೆಗೆ ಮನೆ ಮನೆಯಿಂದ ಒಂದು ಮಾನ್ಯತೆ ದೊರೆತಂತಾಗುತ್ತದೆ. ಸರ್ವೋದಯ ಪಾತ್ರೆ—ದ್ರೌಪದಿಯ ಅ

(೧೨ನೇ ಪುಟ ನೋಡಿ)

OUR CODE OF CONDUCT

Personal and prompt attention
Speedy and Friendly service
Care and Safety of the Moneys
Quick and high returns for Deposits.

TRY US ONCE

THE VIJAYA BANK LTD.

H O MANGALORE. Estd 1931.

BRANCHES

Bombay, Bangalore, Mysore, Mercara, Kanhangad, Kasaragod and throughout the District of South Kanara.

ವಾರದ ಸಣ್ಣ ಕಥೆ—

ಬ್ರಹ್ಮ ಬರೆದ ಬರಹ

ಶ್ರೀ. ಕೆ. ಸದಾಶಿವ ಕಾರಂತ

ಮುಸುಕು ಕತ್ತಲೆ ಪ್ರಕೃತಿಯೊಡಲನ್ನು ಆವರಿಸಿತ್ತು. ಹಸನ್ಮುಖನಾದ ವ್ಯಕ್ತಿಯೊಬ್ಬನು ಕತ್ತಲೆ ದಾರಿ ಹಿಡಿದು ಸಾಗುತಿದ್ದನು. ಅಂಧಕಾರವು ಪಸರಿಸಿದ್ದರೂ ನಸು ಬೆಳಕಿನಿಂದಾಗಿ ಪುರುಷನ ಆಕಾರ ಅಸ್ಪಷ್ಟವಾಗಿಯಾದರೂ ತೋರಿಬರುತಿತ್ತು. ಬಿಳಿಯಾದ ಬಟ್ಟೆಯನ್ನು ತೊಟ್ಟುಕೊಂಡು ಸಾಗುತಿದ್ದ ಆ ವ್ಯಕ್ತಿ ಪ್ರಕೃತಿಯ ನಿಶ್ಶಬ್ದ ವಾತಾವರಣದಲ್ಲಿ ತನ್ನ ಸಿಳ್ಳಿನ ಧ್ವನಿಯನ್ನು ಹರಡಿಸುತ್ತ ಮುಂದೆ ಮುಂದೆ ಸಾಗುತಿದ್ದ. ಹೋಗ ಹೋಗುತ್ತ ಪಕ್ಕದಲ್ಲಿನ ಮನೆಯೊಂದನ್ನು ಕಂಡು ಸ್ತಬ್ಧನಾದನು. ಆ ಮನೆಯೆ ಆತನ ನಿತ್ಯ ವಿಹಾರದ ಕೇಂದ್ರ. ಸುತ್ತಲೂ ಒಂದು ಬಾರಿ ತನ್ನ ದೃಷ್ಟಿಹರಿಸಿ ಒಂದೊಮ್ಮೆ ಮೃದು ಧ್ವನಿಯಲ್ಲಿ ಹೆಸರೆತ್ತಿ ಕೂಗಿ ಬಾಗಿಲು ತಟ್ಟಿದ. ಆದರೆ, ಪ್ರತ್ಯುತ್ತರ ಕೇಳಿಬರಲಿಲ್ಲ. ಸ್ವರವನ್ನು ಕೊಂಚ ಎತ್ತರಿಸಿ ಕರೆದ ಒಂದರೆಕ್ಷಣದಲ್ಲಿಯೇ ಬಾಗಿಲು ತೆರೆಯಿತು. ಒಳಗಿಂದ ಮುಗುಳ್ನಗುತ್ತ ಒಬ್ಬಾಕೆ ತನ್ನಲ್ಲಿಗೆ ಬಂದ ಅಭ್ಯಾಗತನನ್ನು ಸ್ವಾಗತಿಸಿದಳು. ಇಬ್ಬರೂ ಒಳಹೊಕ್ಕು, ಸಮೀಪದಲ್ಲಿದ್ದ ಒಂದು ಮಂಚದಲ್ಲಿ ಕುಳಿತು ಪರಸ್ಪರ ಮುಖಭಾವವನ್ನು ವ್ಯಕ್ತಪಡಿಸಿದರು. ಸಮಯ ಜಾರಿದಂತೆ ಮೆಲ್ಲನೆ ಬಾಯಿಂದ ಮಾತು ಹೊರಬರತೊಡಗಿತು.

"ಏನು, ಇಷ್ಟು ತಡ? ವಿಶೇಷ ಸುದ್ದಿಯೇನಾದರೂ ಇದೆಯೆ?...... ನಾನು ನಿನ್ನೆ ಹೇಳಿದುದು......."

"ಏನಿಲ್ಲ ನೋಡು, ಆ ರಾಮೂನ ಅಂಗಡಿಕಡೆ ಹೋಗಿದ್ದೆ. ಇಷ್ಟು ಹೊತ್ತು ಮಾಡಿಬಿಟ್ಟ. ಏನೇನೋ ಹರಟೆ ಹೊಡೆಯಲಾರಂಭಿಸಿದ. ಅದನ್ನು ಮುಗಿಸಿ ಬರುವುದಕ್ಕೆ ಇಷ್ಟು ಹೊತ್ತಾಯ್ತು ನೋಡು. ಅಲ್ಲ, ಏನೋ ನಿನ್ನೆ ಹೇಳಿದ್ದು ಎಂದೆಯಲ್ಲ? ಏನದು?"

"ಹೂಂ, ನನಗೆ ಗೊತ್ತಾಗಿಯೇ ಹೋಯ್ತು, ನೀವು ಇಷ್ಟು ತಡಮಾಡುವಾಗ್ಲೇ ನಿಮ್ಗೆ ಮರೆತೇ ಹೋಯ್ತೂಂತ. ಅಲ್ಲ, ಒಂದು ಸ್ನೊ ಬಾಟ್ಲು,....ಇನ್ನೂ ಏನೇನೋ ತರಹೇಳಿದ್ನೆಲ್ಲಾ? ಎಲ್ಲಿದೆ ತೋರ್ಸಿ ನೋಡೋಣ."

"ಓ, ಅಷ್ಟೇನೆ? ಮರೆತುಹೋಯ್ತು ಕಾಣೇ. ನಾಲ್ಕು ಜನ ಜೊತೆಗೆ ಸಿಕ್ಕಿದರೂಂದ್ರೆ, ನೆನ್ಪೇ ಆಗೋದಿಲ್ಲ. ನಾಳೆ ಖಂಡಿತ ತರ್ತೇನೆ. ಮರೆತುಬಿಡೋದಿಲ್ಲ."

"ಹೂ, ಹೌದು. ಇಲ್ಲಿ ಬರೋದಕ್ಕೆ ಸರಿಯಾಗಿ ನೆನಪಾಗುತ್ತೆ. ಆದರೆ, ನಾನು ಹೇಳೋದು ಮಾತ್ರ ಮರ್ತೇ ಹೋಗುತ್ತೆ. ಪಾಪ, ಅಲ್ಲ, ನಾಳೇನೂ ಇದೇ ರಾಗ ಎಳ್ತೀರಿ ಮತ್ತೆ, ಜೋಕೆ!"

"ಇಲ್ಲ ಗೌರಿ. ನಾನು ಎಂದಾದರೂ ಮರೆತು ಬಿಟ್ಟಿದ್ದೇನ ನೋಡು. ನಿನಗೆ ಬೇಕಾದ್ದು ನೀನು ಕೇಳಿದ್ದು ಎಲ್ಲಾ ಇಲ್ಲಿ ನಾಳೆ ಇರುತ್ತೆಂತ ಧೈರ್ಯವಾಗಿರು. ಮತ್ತೆ, ಆಯ್ತೆ? ಸ್ವಲ್ಪ ತಾಳು. ಬೇಸರ ಗೀಸರ ಮಾಡಿಕೋಬೇಡ ಹಾಂ''

"ಅದೆಲ್ಲಾ ಗೊತ್ತಾಯ್ತು ಬಿಡಿ. ಇಂದು ಏನೋ ಮೈಯಲ್ಲಿ ಚೆನ್ನಾಗಿಲ್ಲಾಂದ್ರೆ. ತುಂಬ ಆಯಾಸಗೊಂಡಿದೇನೆ. ನಿದ್ರೆ ತಡೆಬಡಿಸುತ್ತದೆ. ನಾನು ಹೋಗಿ ಮಲಗಬೇಕು. ನಾಳೆ ನಾನು ಹೇಳಿದ್ದು ತರ್ತೀರಿ ತಾನೆ?"

"ಎಲ್ಲಾದ್ರೂ ಉಂಟೆ? ಅಲ್ಲ ಗೌರಿ. ಖಂಡಿತ, ನಿನ್ನಾಣೆಗೂ ನಾಳೆ ತರ್ತೇನೆ. ಎಂದಿಗೂ ಏನಾದ್ರೂ ಮರೆತು ಬಿಡೋದಿಲ್ಲ. ಆದ್ರಿಂದ ನಾನು.... .."

"ಹೌದ್ರಿ, ತಾವು ದಯವಿಟ್ಟು ನಾಳೇನೇ ಬನ್ನಿ. ಇಂದು ಸನ್ಪಾಡಿಗೆ ನನ್ನ ಬಿಟ್ಟುಬಿಡಿ."

"ಹಾಗಲ್ಲ ಗೌರಿ, ಇಷ್ಟ ಕೇಳು......."

"ಹಾಗೂ ಅಲ್ಲ, ಹೀಗೂ ಅಲ್ಲ. ಕೇಳೋದೂ ಬೇಡ, ನೋಡೋದೂ ಬೇಡ. ನನ್ಗೆ ಮೈ ಚೆನ್ನಾಗಿಲ್ಲ ತಾವು ದಯಮಾಡಿಸಬಹುದು."

೦೦ ೦೦

ವಿಮುಖನಾದ ಮಹಾಬಲ ತನ್ನ ಮನೆಯತ್ತ ಧಾವಿಸಿದ. ಆಗಲೇ ಕಾದಿದ್ದ ಸೀತಮ್ಮ ಸತ್ಕಾರ ಮಾಡತೊಡಗಿದಳು.

"ಏನು, ಆಗಲೇ ಹೋಗಿದ್ದೀರಿ, ಇಷ್ಟು ಹೊತ್ತೇನು? ಯಾರಾದರೂ ಸ್ನೇಹಿತ್ರು ಸಿಕ್ಕಿದ್ರೇನು?'

"ಅದೆಲ್ಲಾ ನಿನಗೇಕೆ? ನನ್ಭಾರ ನನ್ಗೊತ್ತು. ತಿಂದು ಮಲಗಿದ್ರೆ ಸರಿ ಏನೀಗ ಬಡಿಸ್ತೀಯೋ ಇಲ್ವೋ?"

"ಆಗ್ಲೇ ಎಲೆ ಹಾಕಿದ್ದೆ. ಈಗ ತಣ್ಣಗಾಗಿ ಹೋಯ್ತು."

"ಅದೇಕಷ್ಟು, ಅವಸರ ಮಾಡಿದೆ?"

"ತುಂಬ ಹಸಿವಿನಿಂದ ಬಂದಾರೂಂತ.'

"ನಾಳೆಯಿಂದ ಹಾಗೆಲ್ಲಾ ಮಾಡಿ ತಂಗಳೂಟ ತಿನ್ನಿಸ್ಬೇಡ. ನಾನು ಬರೋದು ತುಂಬ ಹೊತ್ತಾಗುತ್ತೆ "

"ಆಗ್ಲಿ. ಅಲ್ಲ, ನಾನು ಆಗ ಹೇಳಿದ್ದು —ಸಾಮಾನು ತಂದಿದ್ದೀರಾ?"

"ಯಾವುದೇ ಆಗ ಹೇಳಿದ್ದು?''

"ಮೆಣಸು, ಹುಳಿ..."

'ಹೌದು, ಯಾವುದೂ ಮನೆಯಲ್ಲಿರೋದಿಲ್ಲ. ಮೊನ್ನೆತಾನೇ ತಂದದ್ದು. ಇಂದಿಗೇನು ಕೊರತೆ ಬಂತು?''

"ಇಲ್ಲ, ತಂದು ತುಂಬ ದಿನವಾಯ್ತಲ್ಲ? ಹಾ ಬರೇ ಮೆಣಸು ಹುಳಿಯನ್ನು ಯಾರಾದರೂ ತಿನ್ನುತ್ತಾರೆಯೆ?''

"ಇರಲಿ ನಾಳೆ ನೋಡುವ. ಎಷ್ಟು ತಂದುಹಾಕಿದರೂ ಖಾಲಿಮಾಡೋದಕ್ಕಾದರೂ ಬರುತ್ತಲ್ಲ, ಸದ್ಯ ಅಷ್ಟೇ ಸಾಕು ಈಗ ಬಡಿಸು ನೋಡೋಣ."

ಸೀತಮ್ಮ ಸಾಧ್ವಿ. ಗಂಡನ ನೆಳಲನ್ನು ಅನುಸರಿಸತಕ್ಕವಳು. ಯಾವರೀತಿ ಹೊಂದಿಕೊಂಡರೂ ಅದಕ್ಕೆ ಹೊಂದದ ಗಂಡ ಮಹಾಬಲ. ಆತ ಮನೆಯಲ್ಲಿರುವುದೇ ಅಪರೂಪ ಹೀಗಾಗಿ ಪತಿಸೇವೆಮಾಡುವ ಸಂದರ್ಭವೂ ಅಪರೂಪ. ಕೆಲದಿನ ರಾತ್ರೆಯೂ ಮನೆಗೆ ಬಾರದಿರುವುದೂ ಉಂಟು. ಅದಾವುದನ್ನೂ ವಿಚಾರಿಸುವ ಗೋಜಿಗೆ ಹೋಗದವಳು ಆಕೆ. ಮದುವೆಯಾಗುವುದಕ್ಕೆ ಮೊದಲೇ ಅವನ ವರ್ತನೆ ಈ ರೀತಿ ಎಂದು ಗೊತ್ತಿದ್ದರೂ ಹೆಣ್ಣು ಹುಡುಗಿ ಸರಿ ಮಾಡಿಕೊಂಡು ಹೋದಾಳು ಎಂದು ತಂದೆ ತಾಯ್ಗಳು ತಾಳಿ ಬಿಗಿಸಿದರು. ನೆರೆ ಹೊರೆಯವರ ಮಾತು ಕೇಳಿಸೀತಮ್ಮ ಕಲ್ಲಗುಂಡಾಗಿದ್ದಳೀಗ. ಆಕೆಗೆ ಜೀವನವೇ ನಿಸ್ಸಾರವೆಂದು ಕಂಡಿತ್ತು. ಮನೆಗೆ ಬಂದಾಗಲೂ ಸರಿಯಾಗಿ ಮಾತನಾಡಿಸಿದರೂ ಉತ್ತರಿಸದ ಪ್ರತಿಯೊಂದಕ್ಕೂ ರೇಗುವ ಸ್ವಭಾವದ ಪತಿಯಿಂದ ಸತಿಗೆ ಅದೆಂತಹ ಸುಖ ದೊರೆತೀತು? ಹೀಗಿದ್ದರೂ ಸೀತಮ್ಮ ಸತ್ತು ಬದುಕಿದ್ದರು.

ಒಂದು ದಿನ ಸಂಜೆಯ ಕೆಲಸ ತೀರಿಸಿಕೊಂಡು ಮನೆಜಗಲಿಯಲ್ಲಿ ಕುಳಿತಿದ್ದಳು ಇಂದೇಕೋ ಆಕೆಯ ಜೀವನದ ಹಿಂದಿನ ಚಿತ್ರಗಳು ಮನಃಪಟಲದಲ್ಲಿ ಸುತ್ತಿದುವು. ನೆರೆಯ ಮನೆಯ ಗಂಗೂ ಬಂದು ಕೂಗಿದಾಗಲೇ ಆ ಸರ ಕಡಿದು ಪ್ರಪಂಚದತ್ತ ಸರಿದು ಬಂದಳು.

'ಏನು ಸೀತಮ್ಮ, ರಾತ್ರಿ ತುಂಬಾ ಹೊತ್ತಾಯ್ತು. ಇನ್ನೂ ಮಲಗಿಲ್ಲವೆ?

'ಪೇಟೆಗೆ ಹೋದವ್ರು ಇನ್ನೂ ಬಂದಿಲ್ಲ. ಅದಕ್ಕೆ ಸುಮ್ಮನೆ ದೇವರ ನಾಮ ಹೇಳುತ್ತ ಕುಳಿತುಬಿಟ್ಟೆ."

"ಇಲ್ಲವಮ್ಮ, ನಿಮಗೆ ನನ್ನ ಮಾತಿನಲ್ಲಿ ನಂಬಿಗೆ ಇಲ್ಲ. ಅಲ್ಲ ನಿಮಗೊಂದು ಹುಚ್ಚು ಈಗತಾನೇ ನಿಮ್ಮವ್ರು ಗೌರೀ ಮನೆ ಕಡೆ ಹೋದ್ರು.''

"ಸುಮ್ಮ ಸುಮ್ಮನೆ ಹೇಳ್ಬೇಡೀಮ್ಮ. ಪೇಟೆಗೆ ಹೋಗಿ ಬರ್ತೇನೆಂತ ಹೇಳಿದ್ರು ಈಗ''

"ಅದೊಂದು ನೆಪವಮ್ಮ. ಅವರಿರುವುದು ಗೌರೀ ಮನೆಯಲ್ಲಿ. ನಾನು ಸಿನೆಮಾಕ್ಕೆ ಹೋಗಿದ್ದೆ ಬರುವಾಗ ದಾರಿಯಲ್ಲಿ ನೋಡಿದೆ. ಅಷ್ಟೇ. ಇರಬಹುದು, ಅವರ ಪೇಟೆ ಎಂದರೆ ಅದೇ ಏನೋ, ಯಾರಿಗೆ ಗೊತ್ತು. ಅಲ್ಲದೆ ಹೋದರೂ, ಬಾಯಿಬಿಟ್ಟು ಇಂಥಲ್ಲಿ ಹೋಗಿ ಬರ್ತೇನೆಂತ ಹೇಳುವುದಕ್ಕಾಗುತ್ಯೆ? ಹೋಗೀಮ್ಮ ಸುಮ್ಮನೆ ಮಲಗಿ. ನಾನೂ ಬರ್ತೇನೆ, ರಾತ್ರಿ ತುಂಬಾ ಹೊತ್ತಾಯ್ತು." ಹೀಗೆ ಹೇಳಿ, ಸೀತಮ್ಮನ ಉರಿಯುವ ಮನಸ್ಸಿಗೆ ಬಿಸಿ ನೀರನ್ನೆರೆದು ಗಂಗೂ ತನ್ನ ಮನೆಗೆ ಹೊರಟುಹೋದಳು.

ಸೀತಳ ಮನಸ್ಸು ಮೊದಲೇ ನೊಂದಿತ್ತು. ಇದೀಗ ಗಂಗೂಳ ಮಾತಿನಿಂದ ಅದು ಬೆಂದು ಹೋಯಿತು. ತನ್ನ ಪತಿಯ ಈ ತೆರದ ದುರ್ವರ್ತನೆಗಳ ಇತಿವೃತ್ತಗಳನ್ನು ಪರರಿಂದ ಕಿವಿಯಾರೆ ಕೇಳುವುದೂ ಅಸಾಧ್ಯವೆಂಬ ನಿರ್ಧಾರಕ್ಕೆ ಬಂದಳು. ಆತನನ್ನು ಸರಿದಾರಿಗೆ ತರುವ ಆಕೆಯ ಸಕಲ ಪ್ರಯತ್ನಗಳೂ ನಿಷ್ಫಲವಾಗಿದ್ದುವು. ಆದುದರಿಂದ ತಾನು ತನ್ನ ಜೀವಕ್ಕೆ ಹಾನಿಯನ್ನು ತಂದುಕೊಳ್ಳುವುದೇ ಉತ್ತಮ ಮಾರ್ಗವೆಂದಾಕೆ ನಿಶ್ಚಯಿಸಿದಳು. ಇದರಿಂದಲಾದರೂ ತನ್ನ ಪ್ರಾಣಕಾಂತನು ಸುಖವಾಗಿರಲಿ ಎಂದಾಕೆ ಬಯಸಿದಳು.

ಇತ್ತ ಮನೆಯಿಂದ ಆಗಾಗಲೇ ಹೊರಬಿದ್ದಿದ್ದ ಮಹಾಬಲನು ಪೇಟೆಯನ್ನೆಲ್ಲಾ ಸುತ್ತಾಡಿ ವಿಹಾರ ಕೇಂದ್ರದತ್ತ ಬರುತಿದ್ದನು. ಮನೆಯು ಸಮೀಪಗತವಾದಂತೆ. ಒಳಗಿಂದ ಪಿಸು ಮಾತು ಕೇಳಿಬರುವುದಕ್ಕಾರಂಭವಾಯಿತು. ಆದರೂ ತನ್ನನ್ನೊಲಿದ ಹಕ್ಕಿ ಪರರಿಗಾಶ್ರಯ ಕೊಡುವುದೆಂದಾತ ನಂಬಿರಲಿಲ್ಲ. ಜರತಾರೀ ಸೀರೆ ಬೇಡಿದಾಕೆ ಪರ ಪುರುಷರನ್ನು ಎಂದಿಗೂ ಒಳ ಕರೆಸಿಕೊಳ್ಳಲಾರಳು ಎಂದಾತ ನಿಶ್ಚಯಿಸಿದ್ದ. ಹಾಗಾದರೆ, ಒಳಗಿನ ಧ್ವನಿಯೇನು?

ಮಹಾಬಲ ಬಾಗಿಲ ಹತ್ತಿರ ಬಂದ. ಸಂಕೇತಮಾಡಿದ ಉತ್ತರವಿಲ್ಲ. ಮೆಲ್ಲನೆ ಹೆಸರೆತ್ತಿ ಕರೆದ ಆಗಲೇ ಮಬ್ಬುಕವಿದುತಾಯಿತು. ಕಿಟಕಿಯೆಡೆಯಲ್ಲಿ ಬೀರುತಿದ್ದ ಮಂದ ಪ್ರಕಾಶವೂ ಮಾಯವಾಯಿತು. ಕೈಯ ಬಳೆಗಳ ಧ್ವನಿ ಕೇಳಬಂದಿತು. ಬಾಗಿಲು ತೆರೆಯಿತು. ಆದರೆ, ತೆರೆದ ಬಾಗಿಲಿಂದೊಂದು ಭೂತಾಕಾರದ ವ್ಯಕ್ತಿ ಬಂದು ಮಹಾಬಲನ ಕುತ್ತಿಗೆ ಹಿಡಿದು ದಬ್ಬಿಹಾಕಿ ಎರಡೇಟು ಬಾರಿಸಿತು ಬಾಗಿಲು ಮುಚ್ಚಿ ಹೋಯಿತು.

ಮಹಾಬಲನು ಎಚ್ಚರಗೊಂಡಾಗ, ಆತ ತುಲಸಿಕಟ್ಟೆಯ ಬಳಿ ಬಿದ್ದಿದ್ದ. ಆತನಿಗೆ ಒಂದೊಂದೇ ಸ್ಮೃತಿಪಟಲಕ್ಕೆ ಬರತೊಡಗಿತು. ತಾನು ಸಂಪಾದಿಸಿದ ಹಣದಲ್ಲಿ ಬಹಳ ಪಾಲನ್ನು ನುಂಗಿದ್ದ ಈ

(೧೨ನೇ ಪುಟ ನೋಡಿರಿ)

ಗುಟ್ಟಾಗಿ ನರಳಿ, ಸಂಕೋಚದಿಂದ ಕೊರಗಿ, ಜೀವನದಲ್ಲಿ ನಿರಾಶರಾಗಬೇಡಿ!

100 ವರ್ಷಗಳ ಖ್ಯಾತಿಗಳಿಸಿದ ಪಂ|| ಅಂಬಳೆ ರಾಮಸ್ವಾಮಿ ಅಯ್ಯಂಗಾರರವರ ರತ್ನದ್ವಯಗಳು

ಟ್ರೇಡ್ ಮಾರ್ಕ್

ಪಂ|| A. R. ಅಯ್ಯರ್

ಸಂತಾನ ಸಿಂದೂರ (ಸ್ತ್ರೀಯರಿಗೆ: ಪ್ಯಾಕೆಟ್) | **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

ಈ ಭಸ್ಮವು **ಬಹಿಷ್ಠೆ ಸಂಬಂಧದ ಹೊಟ್ಟೆನೋವನ್ನು** ನಿರ್ಮೂಲಿಸಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ಬಂಜೆತನವನ್ನು ಕೊನೆಮುಟ್ಟಿಸುತ್ತದೆ. ಬೆಲೆ. ರೂ. 7-4-0.

"ಮದನ ವಿಲಾಸ" ಗುಳಿಗೆಗಳು ಅತ್ಯುಷ್ಣ ಶಮನಮಾಡಿ, ಸ್ವಪ್ನ ಮತ್ತು ಶೀಘ್ರ ಸ್ಖಲನಗಳನ್ನು ತಡೆಗಟ್ಟಿ, ಮೂತ್ರದಲ್ಲಿ ಧಾತು ಹೋಗುವುದನ್ನು ನಿವಾರಿಸಿ, **ನಪುಂಸಕತೆಯನ್ನು** ಹೋಗಲಾಡಿಸುತ್ತದೆ.

ದಂಪತಿಗಳಾಗಿ 16-18 ವರ್ಷ ಸಂತಾನವಿಲ್ಲದವರೂ "ತಾಯ್ತಂದೆ"ಗಳಾಗಿದ್ದಾರೆ.

ರೋಗಿಯ ವಯಸ್ಸು ಮತ್ತು ಖಾಯಿಲೆಯ ವಿವರಗಳನ್ನು ಬರೆದು 4 ಆಣೆ (25 N. P) ಸ್ಟ್ಯಾಂಪು ಕಳಿಸಿರಿ. ಸಲಹೆಯೊಡನೆ ತ್ರಿವರ್ಣ ಕ್ಯಾಟಲಾಗ್ ಮತ್ತು ಹಸ್ತಪತ್ರಿಕೆಗಳ ರವಾನೆ

ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ, (ನ ಯು)

628, ಅಂಬಳೆ ಅಣ್ಣಯ್ಯ ಪಂಡಿತ್ ಪಾರ್ಕ್ ಸೌತ್ ಕ್ರಾಸ್, ಮೈಸೂರು-1 (S.I.)

ಭ್ರಮಿಸುವ ಮೂರನೆ ಉಪಗ್ರಹದಲ್ಲಿ–

ಅತ್ಯಂತ ಸಣ್ಣ ಟೇಪ್‌ರೆಕಾರ್ಡರ್

ಅಂತಾರಾಷ್ಟ್ರೀಯ ಭೂಭೌತವರ್ಷದ ಅಧ್ಯಯನಗಳಿಗಾಗಿ ಅಮೇರಿಕೆಯ ಸೇನೆಯ ಜುಪಿಟರ್–ಸಿ. ಆಕಾಶಬಾಣವು ಮಾರ್ಚ್ ತಿಂಗಳ ೨೬ನೆಯ ದಿನದಂದು ತನ್ನ ಮೂರನೆಯ ಉಪಗ್ರಹವನ್ನು ಆಕಾಶಕ್ಕೆ ಹಾರಿಸಿತು. ಇದೀಗ ಉಳಿದೆರಡು ಉಪಗ್ರಹಗಳೊಂದಿಗೆ ತನ್ನ ಕಕ್ಷೆಯಲ್ಲಿ ಭೂ ಪ್ರದಕ್ಷಿಣೆಯನ್ನು ಹಾಕುತ್ತಿದೆ.

ಮೂರನೆಯ ಎಕ್ಸ್‌ಪ್ಲೋರರ್ ಅಥವಾ ೧೯೫೮ ಗ್ಯಾಮಾ ಎಂಬ ಹೆಸರುಳ್ಳ ಈ ಉಪಗ್ರಹವು ಸ್ತಂಭಾಕೃತಿಯದಿದ್ದು, ಕೇವಲ ೧೧೫ ಮಿನಿಟುಗಳಲ್ಲಿ ಭೂಮಿಯ ಒಂದು ಸುತ್ತು ಬಂತು. ೮೦ ಅಂಗುಲ ಉದ್ದ ಮತ್ತು ಆರು ಅಂಗುಲ ವ್ಯಾಸವಿರುವ ಈ ಉಪಗ್ರಹವು ರಚನೆಯಲ್ಲಿ ಸಾಮಾನ್ಯವಾಗಿ ಮೊದಲನೆಯ ಮರಿಚಂದ್ರನನ್ನೇ ಹೋಲುತ್ತದೆ. ಆಕಾಶದ ಹೊರಗಣ ಸ್ತರಗಳ ಗುಣಲಕ್ಷಣಗಳನ್ನು ಮೊದಲ ಮರಿಚಂದ್ರವು ತಿಳಿಸಿರುವಂತೆಯೇ ಈ ಉಪಗ್ರಹದಿಂದಲೂ ವರದಿ ಮಾಡಲಾಗುವಂತಾಗಲು ಬೇಕಾದ ಉಪಕರಣಗಳನ್ನು ಇಲ್ಲಿ ಇಡಲಾಗಿರುವುದು. ವಿಶ್ವಕಿರಣಗಳಿಗೆ ಸಂಬಂಧಿಸಿದ ಅಂಶಗಳನ್ನು ಸಂಗ್ರಹಿಸಿ ಇಟ್ಟುಕೊಂಡು, ನೆಲದ ಮೇಲಿನ ರೇಡಿಯೋ ಆಜ್ಞೆ ಮಾಡಿದಾಗ ೫ ಸೆಕುಂದುಗಳಲ್ಲಿ ಅವುಗಳನ್ನು ಭೂಮಿಗೆ ಕಳಿಸಲು ಶಕ್ತವೆನಿಸಿದ ಎಂಟು ಔನ್ಸು ಭಾರವಿರುವ ಕಾಂತೀಯ ಟೇಪ್ ರೆಕಾರ್ಡರ್ ಒಂದು ಈ ಉಪಗ್ರಹದಲ್ಲಿದೆ. ಈ ಕಾರಣದಿಂದ ಈ ಉಪಗ್ರಹದ ಶೋಷಣ ಶಕ್ತಿ ದಿನ ದಿನಗಳಿಗೆ ಬದಲು ಕೆಲವು ತಿಂಗಳುಗಳ ಕಾಲ ಉಳಿಯಬಹುದೆಂದು ಅಂದಾಜು ಮಾಡಲಾಗಿದೆ.

ಫ್ಲಾರಿಡಾದಲ್ಲಿರುವ ಕೇಪ್ ಕೆನವರಾಲ್ ಪರೀಕ್ಷಾ ಕ್ಷೇತ್ರದಿಂದ ಈ ಉಪಗ್ರಹವನ್ನು ಹಾರಿಸಲಾಗಿತ್ತು. ಆದರೆ, ಇದನ್ನು ಹಾರಿಸುವಾಗ ಕಕ್ಷೆಯಲ್ಲಿ ಸ್ಥಳಾಂತರವಾದುದರಿಂದ ಉಪಗ್ರಹದ ಪಥದಲ್ಲಿ ಬದಲಾವಣೆಯಾಗಿದೆ ಎಂದು ತಿಳಿದುಬಂದಿದೆ. ಈ ಕಾರಣದಿಂದಾಗಿ ಈ ಮೂರನೆಯ ಅಮೇರಿಕೆಯ ಮರಿಚಂದ್ರನ ಆಯುಸ್ಸು ಅಲ್ಪಮಟ್ಟಿಗೆ ಕುಂದುವುದೆಂದು ತಿಳಿಯಲಾಗಿದೆ. ಏಕೆಂದರೆ ಮೊದಲನೆಯ ಉಪಗ್ರಹವು ಸುಮಾರು ೫ರಿಂದ ೧೦ ವರ್ಷಗಳವರೆಗೆ ತನ್ನ ಕಕ್ಷೆಯಲ್ಲಿ ಉಳಿಯುವುದೆಂದು ನಂಬಲಾಗಿದೆ.

ನೂತನೋಪ ಚಂದ್ರನಿಂದ ದೊರೆಯಬಹುದಾದ ವೈಜ್ಞಾನಿಕಾಂಶಗಳನ್ನು ಮೊದಲು ಎರಡು ಕೃತಕ ಚಂದ್ರಗಳಿಂದ ಬರುವ ಅಂಶಗಳಂತೆಯೇ ಸಾಧ್ಯವಾದಷ್ಟು ಬೇಗನೇ ಅಂತರಾಷ್ಟ್ರೀಯ ಭೂಭೌತ ವರ್ಷದಲ್ಲಿ ಭಾಗವಹಿಸುತ್ತಿರುವ ಎಲ್ಲ ರಾಷ್ಟ್ರಗಳವರೊಂದಿಗೂ ಹಂಚಿಕೊಳ್ಳಲಾಗುವುದೆಂದು ಅಮೇರಿಕೆಯ ಉಪಗ್ರಹವನ್ನು ಅಂತರಿಕ್ಷಕ್ಕೆ ಹಾರಿಸಿದ ಅಂತಾರಾಷ್ಟ್ರೀಯ ಭೂಭೌತ ವರ್ಷದ ಅಮೇರಿಕಾ ಸಮಿತಿಯ ಅಧ್ಯಕ್ಷರಾದ ಡಾ. ರಿಚರ್ಡ್ ಡಬ್ಲ್ಯು. ಪೋರ್ಟರ್ ಅವರು ತಿಳಿಸಿದರು.

ಮೂರನೆಯ ಉಪಗ್ರಹವು ಒಟ್ಟು ೩೧.೪ ರಾತಲು ಭಾರವಿದೆ. ಇದರಲ್ಲಿಡಲಾದ ಸಹಾಯಕೋಪಕರಣಗಳ ಭಾರವು ೧೮.೫ ರಾತಲುಗಳು. ಈ ಉಪಗ್ರಹದಲ್ಲಿರುವ ಒಂದು ವೈಶಿಷ್ಟ್ಯವೆಂದರೆ, ಉಪಗ್ರಹದಲ್ಲಿಡಲಾದ ಉಪಕರಣಗಳ ಸಜ್ಜಿಕೆಯ ಜವಾಬ್ದಾರಿಯನ್ನು ಹೊತ್ತ ಡಾ. ಜೇಮ್ಸ್ ವ್ಯಾನ್ ಅಲೆನ್‌ರವರ ನಿರ್ದೇಶನದಡಿಯಲ್ಲಿ ಅಯೋವಾ ರಾಜ್ಯ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾದ ಅತ್ಯಂತ ಚಿಕ್ಕದಾದ ಟೇಪ್ ರೆಕಾರ್ಡರ್. ಪ್ರತಿಯೊಂದು ಪ್ರದಕ್ಷಿಣೆಯ ಕಾಲದಲ್ಲೂ ಹರಕು ಮುರುಕಿಲ್ಲದ ಸಂಪೂರ್ಣ ದಾಖಲೆಗಳನ್ನು ಒದಗಿಸುವ ಉದ್ದೇಶದಿಂದ ಈ ಟೇಪ್ ರೆಕಾರ್ಡರ್ ರಚಿತವಾಗಿದೆ. ಇದು ವಿಶ್ವಕಿರಣಗಳ ಫಲಿತಾಂಶವನ್ನು ತನ್ನಲ್ಲಿ ಅಂಕಿತ ಮಾಡಿಕೊಂಡು ಶೀಘ್ರಗತಿಯಲ್ಲಿ ಭೂಮಿಗೆ ತಿಳಿಸುವ ಶಕ್ತಿಯುಳ್ಳದಾಗಿದೆ. ನಿರಾತಂಕವಾಗಿ ತನ್ನ ಕಾರ್ಯವನ್ನು ನಿರ್ವಹಿಸಲು ಅಗತ್ಯವಾದ ಉಪಕರಣಗಳನ್ನು ಜೋಡಿಸಲಾಗಿದೆ. ಇದರಿಂದಾಗಿ ಮೊದಲನೆಯ ಉಪಗ್ರಹವು ಭೂಮಿಗೆ ತಿಳಿಸಿದ ವಿಷಯಗಳಿಗಿಂತ ನೂರುಪಟ್ಟು ಹೆಚ್ಚಿನ ವಿಷಯಗಳನ್ನು ಅಂತರಿಕ್ಷದ ಬಗ್ಗೆ ಈ ಮೂರನೆಯ ಉಪಚಂದ್ರನು ತಿಳಿಸುವುದು ಸಾಧ್ಯವಾಗಿದೆ.

ಈ ಸಾಧನದ ಪರಿಣಾಮವಾಗಿ ವಿಶ್ವಕಿರಣಗಳಿಗೆ ಸಂಬಂಧಿಸಿದ ಅಂಶಗಳನ್ನು ಪುನಃ ಪ್ರಸಾರ ಮಾಡುವ ೧೦೮.೩ ಮೆಗಾ ಸೈಕಲ್ಲುಗಳ ಪ್ರಬಲ ಶಕ್ತಿಯ ಪ್ರೇಷಕದ ಆಯುಸ್ಸು ಎರಡು ಇಲ್ಲವೇ ಮೂರು ಪಟ್ಟು ಹೆಚ್ಚುವುದು. ಇತರ ಹಲವಾರು ವೈಜ್ಞಾನಿಕಾಂಶಗಳನ್ನು ೧೦೮.೦೩ ಮೆಗಾ ಸೈಕಲ್ಲುಗಳ ಇನ್ನೊಂದು ಅಲ್ಪ ಶಕ್ತಿಯ ಪ್ರೇಷಕವು ಪೃಥ್ವಿಗೆ ಕಳಿಸುವುದು.

ಕೇಪ್ ಕೆನವರಾಲಿನಿಂದ ಎರಡು ತಿಂಗಳ ಮಧ್ಯಾವಧಿಯಲ್ಲಿ ಮೂರು ಮರಿಚಂದ್ರಗಳನ್ನು ಅಂತರಿಕ್ಷಕ್ಕೆ ಹಾರಿಸಿದಂತಾಯಿತು. ಜನವರಿ ೩೧ನೆ ದಿನಾಂಕ ಸೇನಾ ತಂಡವೊಂದು ಮೊದಲನೆಯ ಉಪಗ್ರಹವನ್ನು ಹಾರಿಸಿತು. ಮಾರ್ಚ್ ೫ರಂದು ಇದೇ ಮಾದರಿಯ ೭೦ ಅಡಿ ಉದ್ದದ ಜ್ಯುಪಿಟರ್–ಸಿ ಎರಡನೆಯ ಮರಿಚಂದ್ರನನ್ನು ಅಂತರಿಕ್ಷಕ್ಕೆ ಏರಿಸಿತು. ಆದರೆ ನಾಲ್ಕನೆಯ ಘಟ್ಟದ ೫೦ ರಾತಲುಗಳ ರಾಕೆಟ್ ದಹಿಸದೆ ಹೋದುದರಿಂದ ಈ ಉಪಗ್ರಹಕ್ಕೆ ಕಕ್ಷಾಗಮನಕ್ಕೆ ಆವಶ್ಯವಾದ ವೇಗವು ದೊರೆಯದೆ ಹೋಯಿತು.

ಈ ನಡುವೆ ಮಾರ್ಚ್ ೧೭ನೆಯ ದಿನ ನೌಕಾ ಶಾಖೆಯ ವ್ಯಾನ್‌ಗಾರ್ಡ್ ರಾಕೆಟ್ ೬.೪ ಗೋಲಾಕಾರದ ಒಂದನೆಯ ವ್ಯಾನ್‌ಗಾರ್ಡ್ ಉಪಗ್ರಹವನ್ನು ಕಕ್ಷೆಗೇರಿಸಿತು. ೧೩೪ ನಿಮಿಷಗಳಿಗೆ ಒಂದು ಸುತ್ತು ಬರುತ್ತಿರುವ ಈ ಉಪಗ್ರಹದ ಪ್ರೇಷಕಗಳ ಪ್ರಸಾರಗಳನ್ನು ಜಗತ್ತಿನ ವೇಧಶಾಲೆಗಳಲ್ಲೆಲ್ಲ ಕೇಳಬಹುದು.

ಉಪಗ್ರಹದೊಳಗಡೆಯಿರುವ ಇಲೆಕ್ಟ್ರಾನಿಕ್ ಉಪಕರಣಗಳಿಗೆ ಶೀತ ಅಥವಾ ಶಾಖಗಳಿಂದ ಅಪಾಯವಾಗದಂತೆ ಉಪಗ್ರಹದ ಒಳ ಆವರಣದ ತಾಪವನ್ನು ಸೂಕ್ತಮಟ್ಟದಲ್ಲಿ ಇರಿಸುವ ಉದ್ದೇಶದಿಂದ ಮೂರನೆಯ ಎಕ್ಸ್‌ಪ್ಲೋರರಿನ ಮುಂಭಾಗವನ್ನು ಅಲ್ಯೂಮಿನಿಯಂ ಆಕ್ಸೈಡ್‌ನಿಂದ ಅಂಶತಃ ಮುಚ್ಚಲಾಗಿತ್ತು. ಉಪಗ್ರಹ ಸೂರ್ಯನ ಎದುರಿಗಿದ್ದಾಗ ಕೆಲ ಭಾಗ ಉಷ್ಣವನ್ನು ಪ್ರತಿಬಿಂಬಿಸುವ ಮತ್ತು ಭೂಮಿಯ ನೆರಳು ಬೀಳುವ ಪ್ರದೇಶಕ್ಕೆ ಬಂದಾಗ ತೀವ್ರಗತಿಯಿಂದ ತಣ್ಣಗಾಗುವ ಅಂಶವನ್ನು ಈ ಅಲ್ಯೂಮಿನಿಯಂ ಪಟ್ಟಿಗಳು ತಡೆಗಟ್ಟುವುವು.

ಈಗ ಆಕಾಶದಲ್ಲಿ ಹಾರಾಡುತ್ತಿರುವ ಮೂರು ಉಪಗ್ರಹಗಳಲ್ಲಿ ಒಂದು ಬರಿ ಕಣ್ಣಿಗೆ ಕಾಣಿಸುವುದು. ಈ ಉಪಗ್ರಹಗಳಿಂದ ಆಕಾಶದ ನಾನಾಸ್ತರಗಳ ಬಗ್ಗೆ ವಿಶೇಷ ತಿಳುವಳಿಕೆಯನ್ನು ನಾವು ಪಡೆಯುವುದು ಸಾಧ್ಯವಾಗಿ ಪರಿಣಮಿಸಿದೆ.



ಅಮೇರಿಕೆಯು ಹಾರಿಸಿದ ಉಪಗ್ರಹದಲ್ಲಿರಿಸಲಾದ ಅತಿ ಸಣ್ಣ ಆಕಾರದ ಟೇಪ್ ರೆಕಾರ್ಡರಿನ ಚಿತ್ರವಿದು. ಇದು ವಿಶ್ವಕಿರಣಗಳ ಫಲಿತಾಂಶವನ್ನು ಅಂಕಿತಮಾಡಿಕೊಳ್ಳುತ್ತ ಭೂಮಿಗೆ ಶೀಘ್ರವಾಗಿ ತಿಳಿಸಬಲ್ಲುದು. ಹೀಗೆ ಅದು ತನ್ನ ಕಾರ್ಯವನ್ನು ನಿರಾತಂಕವಾಗಿ ನಡೆಯಿಸುವುದಕ್ಕೆ ತಕ್ಕ ಏರ್ಪಾಡನ್ನು ಅದರಲ್ಲಿಯೇ ಮಾಡಲಾಗಿದೆ.

ನೋವುಗಳ ಅತ್ಯುತ್ತಮ ಸಂಹಾರಿಣಿ.



ಅಮೃತಾಂಜನ

ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್, ಉಡುಪಿ.

ಪ್ರಧಾನ ಕಚೇರಿ: ಉಡುಪಿ. ಸ್ಥಾಪನೆ: 1925.

ನಮ್ಮ ಬೇಂಕಿನ
ಹುನಗುಂದ
(ಬಿಜಾಪುರ ಜಿಲ್ಲೆ)
ಶಾಖೆಯು
ತಾ. 18-4-'58ರಂದು
ತೆರೆಯಲ್ಪಟ್ಟಿತು.

ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ—ಉತ್ತಮ ಸೌಕರ್ಯಗಳಿಗೆ—ಅತ್ಯುತ್ತಮ ಬೇಂಕು.

ಟಿ. ಎ. ಪೈ, ಬಿ.ಕಾಂ.(ಬೊಂ.) ಎ.ಐ.ಐ.ಬಿ.ಯಫ್.ಆರ್.ಇ.ಯಸ್.(ಲಂಡನ್) ಜನರಲ್ ಮೆನೇಜರ್.

ಡಾ। ಟಿ. ಮಾಧವ ಪೈ, ಎಂ.ಬಿ. & ಬಿ.ಎಸ್. ಮೆನೇಜಿಂಗ್ ಡೈರೆಕ್ಟರ್.

The Canara Industrial & Banking Syndicate Ltd., Udipi.

'NAVAYUGA' WEEKLY is in the list of periodicals and Newspapers approved or use in Secondary Schools as per proceedings Roc. No 466 N/50 date 2-12-1950 of the Director of public Instruction, Madras.

ಭಾರತೀಯ ಚಲಚ್ಚಿತ್ರಗಳು—

ವಿದೇಶಗಳಿಂದ ಬಹುಮಾನ್ಯತೆ

ಭಾರತದಿಂದ ಪ್ರತಿವರ್ಷವೂ ಅಂತಾರಾಷ್ಟ್ರೀಯ ಮೇಳೋತ್ಸವಗಳಲ್ಲಿ ಭಾಗವಹಿಸುವ ಸಲುವಾಗಿ ಚಲಚ್ಚಿತ್ರಗಳನ್ನು ಕಳುಹಿಸಲಾಗುತ್ತದೆ. ಅಲ್ಲಿ ಅನೇಕ ಪಾರಿತೋಷಕಗಳನ್ನೂ ಪಡೆದಿವೆ. ಇದರಿಂದ, ಚಲಚ್ಚಿತ್ರ ತಯಾರಿಕೆಯ ತಂತ್ರದಲ್ಲಿ ನಿಷ್ಣಾತ ರಾಷ್ಟ್ರಗಳೊಂದಿಗೆ ಭಾರತವೂ ತಲೆಯೆತ್ತಿ ನಿಲ್ಲುವುದೆಂದು ತಿಳಿಯುತ್ತದೆ.

ಇತ್ತೀಚೆಗೆ ಭಾರತೀಯ ಚಿತ್ರಗಳು ಆಗ್ನೇಯ ಏಷ್ಯಾ, ಪಶ್ಚಿಮ ಏಷ್ಯಾ ಮತ್ತು ಉತ್ತರ ಆಫ್ರಿಕಾಗಳಲ್ಲಿ ಜನಪ್ರಿಯವಾಗಿವೆ. ೧೯೫೫ರಲ್ಲಿ ಸೋವಿಯೆತ್ ದೇಶ ಮತ್ತು ಭಾರತಗಳ ನಡುವೆ ಈ ಸಂಬಂಧದ ನಿಯೋಗ ವಿನಿಮಯದಿಂದಾಗಿ ಅಲ್ಲಿಯೂ ಭಾರತೀಯ ಚಲಚ್ಚಿತ್ರಗಳಿಗೆ ಮನ್ನಣೆ ದೊರೆಯುತ್ತಿದೆ.

ಈಗೀಗ ವ್ಯಾಪಾರೀ ಪ್ರತಿಫಲವನ್ನಿದಿರುನೋಡದೆ ಬಾಹಿರ ದೇಶಗಳು ಭಾರತೀಯ ಚಿತ್ರಗಳನ್ನು ಪ್ರದರ್ಶಿಸುತ್ತವೆ. ಈ ವರ್ಷಾರಂಭದಲ್ಲಿ ಲಂಡನ್ನಿನ ಏಶಿಯನ್ ಚಲಚ್ಚಿತ್ರ ಸಂಸ್ಥೆಯು ನ್ಯೂ ಲಂಡನ್ ಪ್ರದರ್ಶನಾಲಯದಲ್ಲಿ ಭಾರತೀಯ ಚಲಚ್ಚಿತ್ರಗಳನ್ನು ಬಿಡುಗಡೆ ಮಾಡುವ ಸೌಲಭ್ಯಗಳನ್ನು ಪಡೆದಿದೆ. ವಾಣಿಜ್ಯ ದೃಷ್ಟಿಯಿಂದ ಈ ಚಿತ್ರಗಳ ಪ್ರದರ್ಶನ ನಡೆಸಲು ಪ್ರದರ್ಶನಾಲಯವೊಂದನ್ನು ಲಂಡನ್ನಿನಲ್ಲಿ ನಿರ್ಮಿಸಲಾಗುತ್ತದೆ.

೧೯೫೭ರಲ್ಲಿನ ಪ್ರಾರಂಭದ ಎಂಟು ಮಾಸಗಳಲ್ಲಿ ಭಾರತೀಯ ಚಲನ ಚಿತ್ರಗಳನ್ನು ಹೊರ ದೇಶಗಳಿಗೆ ಕಳುಹಿಸುದುದರಿಂದ ೭೨-೪೫ ಲಕ್ಷ ರೂಪಾಯಿಗಳ ವಿದೇಶೀ ವಿನಿಮಯ ನಾಣ್ಯಗಳು ದೊರೆತಿವೆ. ೧೯೫೬—೫೭ರಲ್ಲಿ ಭಾರತೀಯ ಚಿತ್ರಗಳು ತಮ್ಮ ಉತ್ಕೃಷ್ಟ ತಂತ್ರ ಹಿನ್ನೆಲೆ ಗೀತ ಮತ್ತು ಭಾವ ಪ್ರಚೋದನೆ ಹಾಗೂ ಕಲಾಭಿಜ್ಞತೆಗಳಿಂದ ಅಂತಾರಾಷ್ಟ್ರೀಯ ಚಲಚ್ಚಿತ್ರೋತ್ಸವದ ಅಂಗೀಕಾರ ಪಡೆದಿವೆ. ೫೭ರ ವೆನಿಸ್ ಕಲಾ ಪ್ರದರ್ಶನದಲ್ಲಿ "ಅಪರಾಜಿತೋ" ಎಂಬ ಚಿತ್ರವು ಅತ್ಯುತ್ತಮವಾದುದೆಂದು ಸೈಂಟ್ ಮಾರ್ಕ್ಸರ ಸುವರ್ಣ ಸಿಂಹ ಪದಕವನ್ನು ಪಡೆಯಿತು. "ಪತ್ತೇರ್ ಪಾಂಚಾಲಿ" ಎಂಬುದೂ ಅನೇಕ ಬಹುಮಾನಗಳನ್ನು ಪಡೆಯಿತು. ೧೯೫೭ರ ಡಿಸೆಂಬರಿನ ಸಾನ್ ಫ್ರಾನ್ಸಿಸ್ಕೋ ಪ್ರದರ್ಶನದಲ್ಲಿದಕ್ಕೆ ಪ್ರಥಮ ಬಹುಮಾನ ದೊರೆತಿದೆ. ಇವು ವಿದೇಶಗಳಲ್ಲಿ ಪ್ರದರ್ಶನಕ್ಕಾಗಿ ಬಿಡುಗಡೆ ಹೊಂದಿರುತ್ತವೆ.

೧೯೫೭ರ ಜುಲೈಯಲ್ಲಿ ಜೆಕೋಸ್ಲೋವಾಕಿಯಾದ ೧೦ನೆ ಜುಬಿಲಿ ಚಲಚ್ಚಿತ್ರೋತ್ಸವದಲ್ಲಿ 'ಜಾಗ್ತೆ ರಹೋ" ಚಿತ್ರವು ಉತ್ತಮ ಪ್ರಶಸ್ತಿ ಪಡೆಯಿತು. "ಕಾಬೂಲಿವಾಲಾ"ವೆಂಬುದಕ್ಕೆ ಬರ್ಲಿನ್‌ನಲ್ಲಿ ನಡೆದ ೭ನೆಯ ಉತ್ಸವದಲ್ಲಿ ಬಹುಮಾನ ದೊರೆತಿದೆ. ಇತ್ತೀಚೆಗೆ ಆರಂಭಿಸಲಾದ ಮಕ್ಕಳ ಚಲಚ್ಚಿತ್ರ ತಯಾರಿಯೂ ಭಾರತದಲ್ಲಿ ಹಿಂದುಳಿಯದೆ ೫೭ರಲ್ಲಿ ವೆನಿಸ್ ಪ್ರದರ್ಶನದಲ್ಲಿ "ಜಲದೀಪ"ವೆಂಬುದು ಮಕ್ಕಳ ಮನೋರಂಜಕ ಚಿತ್ರಗಳ ಶ್ರೇಣಿಯಲ್ಲಿ ಪ್ರಥಮ ಬಹುಮಾನ ಗಳಿಸಿದೆ.

೧೯೫೭ರ ಮೇಯಲ್ಲಿ ಕನ್ನೆಸ್ ಉತ್ಸವದಲ್ಲಿ ಅನುಪಮ ನೈತಿಕ ಹಾಗೂ ಕಲಾತ್ಮಕ ಸೌಂದರ್ಯವುಳ್ಳ ಚಿತ್ರವೆಂದು 'ಗೌತಮ ಬುದ್ಧ'ಕ್ಕೆ ಪ್ರಶಸ್ತಿಪತ್ರ ದೊರೆತಿದೆ,

"ಮ್ಯಾಜಿಕ್ ಟಚ್" ಎಂಬ ಸಾಕ್ಷ್ಯ ಚಿತ್ರಕ್ಕೆ ಡಿಪ್ಲೊಮಾ ಆಫ್ ಆನರ್ ಪ್ರಶಸ್ತಿಯು ಇಟಲಿಯ ಪ್ರದರ್ಶನದಲ್ಲಿಯೂ ಹೆಲ್ಸಿಂಕಿಯ ಅಂತಾರಾಷ್ಟ್ರೀಯ ಆರೋಗ್ಯ ಮಹಾ ಸಭೆಯಲ್ಲಿ ಪ್ರಥಮ ಬಹುಮಾನವೂ ದೊರೆತಿದೆ. "ಚಿಡ್ಸ್ ಆಪರೇಶನ್ಸ್", "ಸಿಂಫೋನಿ ಆಫ್ ಲೈಫ್" ಎಂಬ ಚಿತ್ರಗಳಿಗೆ ಪದಕ, ಪ್ರಶಸ್ತಿಪತ್ರ ಬಹುಮಾನಗಳು ವಿದೇಶಗಳಲ್ಲಿ ನಡೆದ ಚಲಚ್ಚಿತ್ರ ಪ್ರದರ್ಶನ ಕಾಲದಲ್ಲಿ ದೊರೆತಿವೆ. ಈ ನಾಲ್ಕು ಸಾಕ್ಷ್ಯ ಚಿತ್ರಗಳು ವಿದೇಶಗಳಲ್ಲಿ ಜನಮನ್ನಣೆಯನ್ನು ಪಡೆದು ಭಾರತಕ್ಕೆ ಕೀರ್ತಿಯನ್ನೂ ವಿತ್ತವನ್ನೂ ಗಳಿಸಿಕೊಟ್ಟಿದೆ. ಇವನ್ನು ಭಾರತ ಸರಕಾರದ ಚಲನ ಚಿತ್ರ ವಿಭಾಗದವರು ನಿರ್ಮಿಸಿರುವರು.

ವಿಶ್ವಧರ್ಮದ ಮೂಲ ತತ್ವ ಸಂಕಲನ—

ಶ್ರೀ ಮದ್ಭಗವದ್ಗೀತೆ

ಸಾಮಾನ್ಯವಾಗಿ ಮಾನವನಲ್ಲಿ ಆಧ್ಯಾತ್ಮಿಕ ಭಾವನೆಯು ಸಹಜವಾಗಿರುತ್ತದೆ. ಅಂತೆಯೇ ಜಗತ್ತಿನ ಪ್ರತಿಯೊಂದು ರಾಷ್ಟ್ರದ ಆಧ್ಯಾತ್ಮಿಕ ಪರಂಪರೆಯಲ್ಲಿಯೂ ಮಾನವ ಚಿಂತನೆಯ ಹಲವಾರು ಚಿರಸ್ಮರಣೀಯ ಕೃತಿಗಳಿರುತ್ತವೆ, ಅವು ರಾಷ್ಟ್ರಕ್ಕೆ ಅತ್ಯಂತ ಪ್ರಿಯವಾಗಿಯೂ ಪವಿತ್ರವಾಗಿಯೂ ಇದ್ದು ನಿರಂತರ ಶ್ರದ್ಧೆಯ ಸ್ಫೂರ್ತಿಯ ಮೂಲಸ್ಥಾನವಾಗಿರುತ್ತವೆ. ಕೆಲವೊಂದು ಗ್ರಂಥಗಳ ಸ್ಥಾನವು ಅತ್ಯುನ್ನತವಾಗಿ, ಅವು ವಿಶ್ವದ ಆಧ್ಯಾತ್ಮಿಕ ಕ್ಷೇತ್ರದಲ್ಲಿಯೇ ಮಹತ್ವದ ಸ್ಥಾನವನ್ನ ಪಡೆಯುವ ಶಕ್ತಿಯುತವಾಗಿವೆ ಇಂತಹ ಕೆಲವೇ ಅಂತಾರಾಷ್ಟ್ರೀಯ ಆಧ್ಯಾತ್ಮಿಕ ಕೃತಿಗಳಲ್ಲಿ ಭಾರತದ "ಭಗವದ್ಗೀತೆ"ಯೂ ಒಂದಾಗಿ ಪರಿಣಮಿಸಿದೆ.

ಈ ಭಗವದ್ಗೀತೆಯನ್ನು ಸಾಕ್ಷಾತ್ ಪರಮಾತ್ಮನ ಅವತಾರವೆಂದು ತಿಳಿಯಲಾಗುವ ಶ್ರೀ ಕೃಷ್ಣನು ತನ್ನ ಭಾವ ಮೈದುನನಾದ ಅರ್ಜುನನಿಗೆ ಉಪದೇಶಿಸಿದ ಒಂದು ನೀತಿ ಸಂಗ್ರಹ. ಇದು ಪ್ರಪಂಚದ ಅನೇಕಾನೇಕ ಭಾಷೆಗಳಲ್ಲಿ ಈಗಾಗಲೇ ಅನುವಾದಗೊಂಡಿವೆ. ಶ್ರೀ ಮದ್ಭಗವದ್ಗೀತೆಯನ್ನು, ಅದರ ಅನುವಾದವನ್ನು ಅಭ್ಯಾಸ ಮಾಡುವುದರಿಂದ, ಭಾರತೀಯರು ವಿಶ್ವ ಸಂಸ್ಕೃತಿಗೆ ನೀಡಿರುವ ಕೊಡುಗೆಯ ಕುರಿತು ಹೆಚ್ಚಿನ ತಿಳುವಳಿಕೆಯನ್ನು ಮಾಡಿಕೊಳ್ಳಬಹುದು. ಈ ಗೀತೆಯು ವಿಶ್ವವಿಖ್ಯಾತಿಯನ್ನೂ ಅಧಿಕಾರ ವಾಣಿಯನ್ನೂ ಗಳಿಸಿಕೊಂಡಿದೆ. ಇದಕ್ಕೆ ಅದರಲ್ಲಿ ವರ್ಣಿತವಾಗಿರುವ ಪರಿಪೂರ್ಣ ಭಾವ ಮತ್ತು ಸಮುಚ್ಚ ಮನೋಭಾವನೆಗಳಿಂದ ಡರಲ್ಲಿಯೂ ಸಮಾಧಾನವನ್ನೀಯುವ ಒಂದು ದಿವ್ಯ ಶಕ್ತಿಯೇ ಕಾರಣವೆಂದು ಹೇಳಬಹುದು.

ಮಾನವನ ಅಸ್ತಿತ್ವದ ಅರ್ಥ, ಸಮಾಜದೊಡನೆ ವ್ಯಕ್ತಿಗಿರುವ ಸಂಬಂಧ, ಆವಶ್ಯಕ ಕರ್ತವ್ಯ ಮತ್ತು ಮನೋಭಿಲಾಷೆಯ ನಡುವೆ ಏಳುವ ಸಂಘರ್ಷ, ಸ್ವಾತಂತ್ರ್ಯದ ಮತ್ತು ಆವಶ್ಯಕತೆಯ ನಡುವಣ ತಿಕ್ಕಾಟ—ಇಂತಹ ಹತ್ತು ಹಲವು ಸಮಸ್ಯೆಗಳನ್ನು ಬಗೆಹರಿಸಲು ಈ ಭಗವದ್ಗೀತೆಯೊಂದು ಅತ್ಯುತ್ತಮವಾದ ಆದರ್ಶವನ್ನು ಹಾಕಿಕೊಟ್ಟಿದೆ. ಈ ಕೃತಿಯು ತನ್ನ ಪಾರಮಾರ್ಥಿಕ ಮತ್ತು ತಾತ್ವಿಕ ಮೌಲ್ಯವನ್ನೆಂದೂ ಕಳೆದುಕೊಳ್ಳಲಾರದೆಂದು ಈ ಗ್ರಂಥದ ರಶಿಯನ್ ಅನುವಾದಕ್ಕೆ ಮುನ್ನುಡಿ ಬರೆದ ಶ್ರೀ ಬಿ. ಸ್ಮಿರ್ನೋವರು ಹೇಳಿದ್ದಾರೆ. ಏಕೆಂದರೆ, ನೈತಿಕ ಅಂಶವನ್ನ ಸಾರ್ವತ್ರಿಕ ಮಾನವ ಸಮಸ್ಯೆಯಾಗಿ ಪ್ರಸ್ತಾಪಿಸುವ ಮತ್ತು ವ್ಯಕ್ತಿಯು ತನ್ನ ಅಸ್ತಿತ್ವವನ್ನು ಸಾರ್ವತ್ರಿಕ ನೈತಿಕ ನಿಯಮಕ್ಕೆ ಅಧೀನ ಪಡಿಸಿಕೊಳ್ಳುವಂತೆ ಬಲಾತ್ಕಾರಕ್ಕೀಡಾಗುವ ಮಟ್ಟಿಗೆ ಅದನ್ನು ವಿಕಾಸಗೊಳಿಸುವ ಅತ್ಯಂತ ಪ್ರಾಚೀನ ಸಾಹಿತಿಕ ಮಹತ್ಕೃತಿಯಾಗಿದೆ ಇದು ಎಂದವರು ಅಭಿಪ್ರಾಯ ಪಡುತ್ತಾರೆ.

ವಿಶ್ವವಿಖ್ಯಾತವಾದ ಈ ಭಗವದ್ಗೀತೆಯ ಅನುವಾದವನ್ನು ರಶಿಯನ್ ಭಾಷೆಗೆ ಈಗಾಗಲೇ ಮಾಡಲಾಗಿದೆ. ಇಂತಹ ಮಹಾಕಾರ್ಯವನ್ನು ಭಾಷಾಶಾಸ್ತ್ರ ಪಂಡಿತರಾದ ಶ್ರೀ ಬಿ. ಸ್ಮಿರ್ನೋವರು ನೆರವೇರಿಸಿದ್ದಾರೆ, ಇವರಿಗೆ ಭಾರತೀಯ ಭಾಷೆಗಳ ಪರಿಚಯವಿರಲಿಲ್ಲವಾದರೂ ಅನೇಕ ಭಾರತೀಯ ವಿದ್ವಾಂಸರ ನೆರವಿನಿಂದ ಅವನ್ನು ಅಭ್ಯಸಿಸಿ ಈ ಕೆಲಸವನ್ನೂ ಅವರ ಸಹಾಯದಿಂದ ಪೂರೈಸಿದ್ದಾರೆ. ಈ ಸಾಹಿತಿಕ ಕೃತಿಯು ಅನೇಕ ಪ್ರಕ್ಷಿಪ್ತ ಭಾಗಗಳಿವೆಯಾದುದರಿಂದ ಅದು ಅತಿ ಸಂಸ್ಕೃತೀಕರಣ ಮತ್ತು ಶಬಲಖಚಿತ

(೯ನೇ ಪುಟ ನೋಡಿರಿ)

ಭಾರತೀಯ ಚಲನಚಿತ್ರಗಳನ್ನು ಹಿಂದಕ್ಕಿಂತ ಹೆಚ್ಚು ವಿದೇಶಗಳಿಗೆ ಕಳುಹಿಸಲಾಗುತ್ತದೆ. ಅಫಘಾನಿಸ್ಥಾನ, ಏಡನ್, ಬ್ರಹ್ಮ, ಸಿಲೋನ್, ಇರಾನ್, ಕೆನಿಯಾ, ಪಾಕಿಸ್ತಾನ, ರಶ್ಯಾ, ಇಂಗ್ಲೆಂಡ್, ಅಮೆರಿಕಾ ಮೊದಲಾದುವುಗಳಿಗೂ ಇವು ಹೋಗುತ್ತವೆ. ಅಲ್ಲಿ ಜನಪ್ರಿಯತೆಯನ್ನು ಗಳಿಸುವುದು ಮಾತ್ರವಲ್ಲದೇ ದೇಶಕ್ಕೆ ವಿದೇಶ ವಿನಿಮಯ ನಾಣ್ಯಗಳನ್ನೂ ಗಳಿಸಿಕೊಡುತ್ತವೆ.

ಚಲಚ್ಚಿತ್ರೋದ್ಯಮ ಭಾರತದಲ್ಲಿ ಆಗಬೇಕಾದಷ್ಟು ಪ್ರಗತಿಹೊಂದಿಲ್ಲ. ಆದರೂ ನಮ್ಮ ಚಿತ್ರಗಳು ಉಳಿದ ರಾಷ್ಟ್ರಗಳ ನಿರ್ಮಾಪಕರ ಕೃತಿಗಳಿಗಿಂತ ಹೀನ ಸ್ಥಿತಿಯಲ್ಲಿಲ್ಲವೆಂಬುದು ಇದೀಗ ಸ್ಪಷ್ಟವಾಗುತ್ತದೆ

ನಾವು ಬೆಳೆದು ಬರಬೇಕಾದರೆ—

- ನಮ್ಮ ಜೀವನ ಉದಾತ್ತವಾಗಿರಬೇಕು,
- ನಮ್ಮ ವಿಚಾರಧಾರೆ ನಿರ್ಮಲವಾಗಿರಬೇಕು.
- ನಮ್ಮ ಬದುಕು ಸರಳವಾಗಿರಬೇಕು.

ಈ ವಿಷಯದಲ್ಲಿ ನಾವು ನಮ್ಮ ಪೂರ್ವಜರ ಚರಿತ್ರೆಯನ್ನು ತಿಳಿದು ಅವರು ಮಾಡಿದ ಮಾರ್ಗದರ್ಶನವನ್ನು ಅನುಸರಿಸಬೇಕು.

ಇದೀಗ ಸಿದ್ಧವಾಗಿದೆ!

ಭಾರತೀಯ ಮಹಾಪುರುಷರು

ಬರೆದವರು: ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

(೧೨ ಮಹಾ ವ್ಯಕ್ತಿಗಳ ಜೀವನ ಚಿತ್ರಗಳು)

ಪುಟಗಳು: ೧೨೪. ಬೆಲೆ: ರೂ. ೧-೫೦.

ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿರಿ.

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ಉಡುಪಿ, ದ.ಭಾ.

ನವಭಾರತ ಪುಸ್ತಕ ಭಂಡಾರ, ಉಡುಪಿ ಇಲ್ಲಿಯೂ ಪ್ರತಿಗಳು ದೊರೆಯುತ್ತವೆ.

ನಿಮ್ಮ ಪರಿಚಿತರಾರೂ "ಕೊರ್ಪೊರೇಶನ್" ಬೇಂಕಿನಲ್ಲಿಲ್ಲದಿದ್ದಲ್ಲಿ, ಬೇಂಕು ವ್ಯವಹಾರ ನಡೆಸಲು ದಾಕ್ಷಿಣ್ಯಪಟ್ಟು ನೀವು ವೃಥಾ ಹಿಂಜರಿಯುವ ಅಗತ್ಯವಿಲ್ಲ. ಕಾರಣ, ನಮ್ಮ ಯಾವುದೇ ಒಂದು ಶಾಖೆಯಲ್ಲಿ ಯಾರೇ ಬರಲಿ, ಅವರು ನಮ್ಮವರೆಂದೇ ಬಗೆದು, ಅವರ ಮನಮೆಚ್ಚುವಂತೆ ಬೇಂಕು ಸೇವೆ ಸಲ್ಲಿಸುವುದೇ ನಮ್ಮ ಆದ್ಯಕರ್ತವ್ಯವೆಂಬುದನ್ನು ನಾವು ಚೆನ್ನಾಗಿ ಬಲ್ಲೆವು.

ಇಂದೇ "ಕೊರ್ಪೊರೇಶನ್" ಬೇಂಕನ್ನು ನಿಮ್ಮ ಬೇಂಕಾಗಿ ಆರಿಸಿಕೊಳ್ಳಿರಿ!

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಸುಮಾರು 52 ವರುಷಗಳ ಅನುಭವವಿರುವ ಬೇಂಕು!!

ಸಾಹಿತ್ಯದ ಸಿಂಹಾವಲೋಕನ—

ಮುತ್ತು ಮತ್ತು ಮೆಣಸುಗಳ ಬಾಂಧವ್ಯ

ಶ್ರೀ. ಎಸ್. ಗೋಪೀಚಂದ ರಾವ್, ವಿದ್ವಾನ್, ವಿಶಾರದ.

ರಾಜಾಶ್ರಯದ ಫಲ

ಕನ್ನಡ ಭಾಷೆಯ ಮೇಲೆ ಆದುವರೆಗೆ ಅರಮನೆ ಗುರು ಮನೆಗಳಲ್ಲಿ ನೆಲೆಯಾಗಿದ್ದ ಸಂಸ್ಕೃತವು ಪ್ರಭಾವ ಶಾಲಿಯಾದ ಪರಿಣಾಮವನ್ನು ಮಾಡಿತು. ಇದರಿಂದ, ಸಂಸ್ಕೃತ ಕನ್ನಡವೆರಡರಲ್ಲೂ ವಿದ್ವಾಂಸರು ಸಂಸ್ಕೃತ ಪದಗಳ ಬಾಹುಲ್ಯವಿರುವ ಕಾವ್ಯಗಳನ್ನೇ ರಚಿಸಿದರು. ಸಾಮಾನ್ಯವಾಗಿ ಹಿಂದಿನ ಕಾಲದ ಅರಸರು ವಿದ್ವಾಂಸರಿಗೆ ತಮ್ಮ ಆ ಸ್ಥಾನಗಳಲ್ಲಿ ಯೋಗ್ಯ ಸ್ಥಾನಗಳನ್ನು ಕಲ್ಪಿಸಿ ಕೊಡುತಿದ್ದರು. ರಾಜಾಶ್ರಯಿಗಳು ತಮ್ಮ ರಾಜನ ಪ್ರಶಂಸೆಗಾಗಿ ಅತಿ ಪ್ರೌಢವಾದ ಕಾವ್ಯಗಳನ್ನು ಬರೆದು ಆತನ ತಲೆದೂಗಿಸುತಿದ್ದರು; ಉಳಿದ ವಿದ್ವಾಂಸರೂ ಅವನ್ನು ಮೆಚ್ಚುತಿದ್ದರು. ಎಂದರೆ, ಆ ಕಾಲದ ಸಾಹಿತ್ಯ ಕೃತಿಗಳು ಕೇವಲ ಪಂಡಿತರ ಪ್ರಶಂಸೆಗಾಗಿಯೇ ಇತ್ತೆಂದು ಹೇಳಬಹುದು. ಹೀಗಾಗಿ ಅವುಗಳ ಶೈಲಿ, ಪದ್ಧತಿ, ಗುಣ, ಅಲಂಕಾರಾದಿಗಳು ಪಂಡಿತ ಮಾನ್ಯವೇ ಆಗಿರುವುದು ಮುಖ್ಯ ಹೊರತು, ಜನಸಾಮಾನ್ಯರ ಕೈಗಳಿಗೆ ನಿಲುಕುವುದಲ್ಲವೆಂದಿರಬಹುದು. ಅಂದಿನ ಜನತೆಯೂ ಸಾಕಷ್ಟು ಪಾಂಡಿತ್ಯವನ್ನು ಪಡೆದಿತ್ತೆಂಬುದೂ ಸತ್ಯ. ಆದರೂ ಅವರೆಲ್ಲರಿಗೂ ರಚಿತವಾಗಿರುವ ಎಲ್ಲ ಕಾವ್ಯಗಳೂ ಪ್ರಿಯವಾಗಿದ್ದುವೆನ್ನುವುದು ಅಸಾಧ್ಯ.

ವಿರೋಧಾಭಿಪ್ರಾಯಗಳು

ಜನಸಾಮಾನ್ಯರಿಗೆ ಕಾವ್ಯದ ಕ್ಲಿಷ್ಟ ಶೈಲಿಯು ಸೊಗಸದ ಒಂದು ಕಾಲ ಬಂತು. ಅಲ್ಲಲ್ಲಿ ಕೆಲವರು ವಿದ್ವಾಂಸರ ತಲೆದೂಗಿಸಿ ತಮ್ಮ ಪಾಂಡಿತ್ಯವನ್ನು ಪ್ರದರ್ಶಿಸಿ ರಾಜನ ಬಹುಮಾನಕ್ಕೆ ಕೈನೀಡುವ ಉದ್ದೇಶದಿಂದ ಬರೆಯುತಿದ್ದ ಮಹಾನ್ ಮೇರುಕೃತಿಗಳನ್ನು, ಅವುಗಳ ರಚನೆಯ ಶೈಲಿಯನ್ನು ಖಂಡಿಸಿದರು. ೧೧ನೇ ಶತಮಾನದಲ್ಲಿದ್ದ ನಾಗವರ್ಮನ ಕಾವ್ಯಾವಲೋಕನದಲ್ಲಿ

ಪಳಗನ್ನಡಂ ಪುದುಂಗೊಳೆ
ಕೊಳೆಸಕ್ಕದಮಂ ತಗುಳ್ಚಿ
ಜಾಣ್ಕಿಡೆ ಮುತ್ತಂ
ಮೆಳಸಂ ಕೋದಂತಿರೆ ಪೇ
ಳ್ವಳಗವಿಗಳ ಕವಿತೆ ಬುಧರನೆರ್ದೆ
ಗೊಳಿಸುಗುಮೇ ||

ಎಂಬುದೊಂದು ಪದ್ಯವಿದೆ. ಈ ಪದ್ಯದಲ್ಲಿ ಕವಿಯೊಬ್ಬನು ಕನ್ನಡ ಪದಗಳನ್ನು ಬರೆವಾಗ, ಅದರೊಡನೆ ಸಂಸ್ಕೃತ ಭಾಷೆಯ ಪದಗಳನ್ನು ಮಿತಿಮೀರಿ ಬಳಸಿ ಶೈಲಿಯನ್ನು ಕ್ಲಿಷ್ಟಗೊಳಿಸುವುದನ್ನು ವಿರೋಧಿಸಿ, ಅದನ್ನು ಮುತ್ತುಗಳ ನಡುವೆ ಮೆಣಸನ್ನು ಪೋಣಿಸಿದಂತೆ ಎಂದು ದೂರಿದ್ದಾನೆ. ಅಮೌಲ್ಯವಾದ ಹೃದಯಸ್ಪರ್ಶಿಯಾದ ಮನೋಹರವಾದ ಮುತ್ತುಗಳ ಹಾರದಲ್ಲಿ ಮೆಣಸನ್ನು ಕೂಡಿಸಿದರೆ ಅದು ನಿರುಪಯೋಗಿಯಾಗುವಂತೆ ಸಂಸ್ಕೃತಪದಗಳ ಹೊರೆಗೆ ಅನನುಕೂಲಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ. ಅದೇ ಸಮಯಕ್ಕೆ ಕೊಂಚ ಮೊದಲು ಧರ್ಮಾಮೃತವನ್ನು ಬರೆದಿದ್ದ ನಯಸೇನನೂ ತನ್ನ ಕಾವ್ಯದ ಆರಂಭದಲ್ಲಿ ಈ ಪ್ರಶ್ನೆಯನ್ನು ಎತ್ತಿಕೊಂಡು,

ಪೊಸಗನ್ನಡದಿಂ ವ್ಯಾವ
ರ್ಣಿಸುವೆಂ ಸತ್ಕೃತಿಯನೆಂದು
ಕನ್ನಡದುಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ
ಕವಿಯೇ? ||

ಎಂದು ಪ್ರಶ್ನಿಸಿದ್ದಾನೆ. ಕನ್ನಡವನ್ನು ಬರೆಯಹೋಗಿ, ಅದನ್ನು ಬರೆಯುವುದರಲ್ಲಿ ಅಸಫಲನಾಗಿ ಸಂಸ್ಕೃತ ಪದವನ್ನು ಬಳಸಿಕೊಳ್ಳುವವನು ಕವಿಯೇ ಅಲ್ಲ ಎಂದೇ ಆತನ ದೃಢಾಭಿಪ್ರಾಯವಿತ್ತೆಂದು ತೋರುತ್ತದೆ. ಆದರೆ, ಇವನೇ ಮುಂದೆ,

ಸಕ್ಕದಮಂ ಪೇಳ್ದೊಡೆ ನೆರೆ
ಸಕ್ಕದಮಂ ಪೇಳ್ಗೆ ಸುದ್ಧಗನ್ನಡ
ದೊಳ್ತಂ
ದಿಕ್ಕುವುದೇ ಸಕ್ಕದಮಂ
ತಕ್ಕುದೆ ಬೆರಸಲ್ಕೆ ಘೃತಮುಮಂ
ತೈಲಮುಮಂ

ಎಂದು ಪರೋಪದೇಶ ಪಾಂಡಿತ್ಯವನ್ನು ಪ್ರದರ್ಶಿಸಿತಾನೇ ಸ್ವತಃ ಈ ದೋಷಕ್ಕೆ ಗುರಿಯಾಗಿದ್ದಾನೆಂದು ಕೆಲವರು ಹೇಳುತ್ತಾರೆ. ಸಂಸ್ಕೃತವನ್ನು ಬರೆಯುವವರು ಶುದ್ಧ ಸಂಸ್ಕೃತದಲ್ಲಿಯೂ ಕನ್ನಡದಲ್ಲಿ ಬರೆಯುವವರು ಸುದ್ದಗನ್ನಡದಲ್ಲಿಯೂ ಬರೆಯಬೇಕು ಎಂಬೀತನ ಮತ ಇಲ್ಲವಾದರೆ, ಘೃತ ಮತ್ತು ತೈಲಗಳನ್ನು ಬೆರಸುವಂತೆ ವಿರಸವಾಗುತ್ತದೆ ಇಂತಹ ಕೃತಿ ಎಂದು ಸಾರಿದ್ದಾನೆ. ಇಲ್ಲಿ ಕವಿಯು ಮಾತಿನಂತೆ ಆತ ನಡೆದಿದ್ದಾನೆಯೋ ಇಲ್ಲವೇ ಎಂಬ ವಿಷಯ ಪ್ರಕೃತ ನಿರುಪಯುಕ್ತ. ಕವಿಯ ಮೇಲಿನ ಉಕ್ತಿಗಳಿಂದಾಗಿ ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಹದಮೀರಿ ಬಳಸುವುದು ಸರಿಯಲ್ಲ ಎನ್ನುವುದು ಮಾತ್ರ ಮುಖ್ಯ. ಆದರೆ, ಈ ಉಪದೇಶ ಬೆಲೆಯಿಲ್ಲದ ಬರಹವಾಯಿತು. ಕವಿಗಳು ಇಂತಹ ಕೆಲವರ ಮಾತನ್ನು ಮನ್ನಿಸುವತ್ತ ಗಮನವೀಯಲಿಲ್ಲ. ಹೀಗಾಗಿ ಹಿಂದಿನ ಕ್ರಮವೇ ಮುಂದುವರಿಯಿತು.

ಕನ್ನಡದ ಮನ್ನಣೆ

ಹೀಗೆ ಒಂದೆಡೆ ವಿದ್ಯಾವಂತ ಪಂಡಿತ ಕವಿಗಳು ಸಂಸ್ಕೃತ ಪದ ಬಾಹುಲ್ಯವನ್ನು ವಿರೋಧಿಸುತ್ತಿರುವಾಗ, ಬಸವಣ್ಣನವರು ವೀರಶೈವ ಮತವನ್ನು ಉದ್ಧರಿಸುವ ಮಹಾಸಾಹಸದಲ್ಲಿ ತಲ್ಲೀನರಾಗಿದ್ದರು. ಇವರು ತಮ್ಮ ಬೋಧೆಯನ್ನು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಉಪದೇಶಿಸಿದರು. ಹಾಗೆಯೇ ಈ ಸರಳತೆಯು ಮುಂದಿನ ವೀರಶೈವ ಸಾಹಿತ್ಯದಲ್ಲಿ ತಕ್ಕಷ್ಟು ಪರಿಣಾಮ ಮಾಡಿತೆನ್ನಬಹುದು. ಅವರೂ ಈ ವೀರಶೈವರು ಯಾವ ಅರಸನನ್ನು ಮೆಚ್ಚಿಸಿ ಪಾರಿತೋಷಕವನ್ನು ಪಡೆಯುವುದಕ್ಕಾಗಿ, ಇಲ್ಲವೇ ತಮ್ಮ ಪಾಂಡಿತ್ಯ ಪ್ರದರ್ಶನಕ್ಕಾಗಿ ಕೃತಿಗಳನ್ನು ರಚಿಸಲಿಲ್ಲ. ತಮ್ಮ ಆತ್ಮ ಸಂತೋಷಕ್ಕಾಗಿ, ತಾವು ತಿಳಿದುಕೊಂಡ ಸತ್ಯವನ್ನು ಜನತೆಗೆ ಬೋಧಿಸುವುದಕ್ಕಾಗಿ ವಚನಗಳನ್ನು ನುಡಿದರು; ಹಾಡಿದರು; ಕೆಲವಾರು ಕೃತಿಗಳನ್ನು ಬರೆದರು. ಹೀಗಾಗಿ ಸಾಹಿತ್ಯವೆಂಬುದು ಪಂಡಿತರ ಕೈಯಿಂದ ಅಲ್ಪ ವಿದ್ಯಾವಂತರ ಕೈಗೆ ಎಟಕುವ ವಸ್ತುವಾಗಿ ಪರಿಣಮಿಸಿದುದರಿಂದ, ಸಾಹಿತ್ಯಕೃತಿಗಳಲ್ಲಿ ಕನ್ನಡತನವು ತಲೆದೋರಲಾರಂಭವಾಯಿತು ಎಂತಲೇ, ಕನ್ನಡ ಸಾಹಿತ್ಯದ ದೃಷ್ಟಿಯಿಂದ ೧೨ನೆ ಶತಮಾನವೊಂದು ಮಹತ್ತರವಾದ ಕ್ರಾಂತಿಯ ಕಾಲ. ಈ ಕ್ರಾಂತಿಯು ಕೆಲವೊಮ್ಮೆ ಜಗುಪ್ಸದವಾಗಿ ಪರಿಣಮಿಸಿದರೂ, ಅದು ಸಂಪೂರ್ಣ ಪ್ರಯೋಜನಕಾರಿಯಾಯಿತೆನ್ನಬರುವುದಿಲ್ಲ. ಕೆಲವೊಂದು ವಿಚಾರಗಳಲ್ಲಿ ಪಂಡಿತರಾದವರೂ ತಮ್ಮ ಅಹಂಕಾರವನ್ನು ತೊರೆಯಬೇಕಾಗಿ ಬಂದರೂ, 'ಸೊಗಯಿಪ ಸಕ್ಕದಂ ಬೆರಸಿದಲ್ಲದೆ, ಕಬ್ಬಮುಂ ಬಗೆಗೊಳೆ ಪೇಳಲಾರರ್'' ಎಂಬ ವಿಶ್ವಾಸವನ್ನು ಇಟ್ಟುಕೊಂಡಿದ್ದರೆಂದು ತಿಳಿಯುತ್ತದೆ. ಇದು ಸರಿಯೆನ್ನಬಹುದಾದರೂ, ಸಂಸ್ಕೃತದ ಪ್ರಯೋಗಗಳು ಒಂದು ಹಿತಪ್ರಮಾಣದಲ್ಲಿ ಬರಬೇಕೇ ಹೊರತು ತನ್ನ ನಿರಂಕುಶ ಪ್ರಭುತ್ವವನ್ನು ಪ್ರದರ್ಶಿಸುವಂತಿರಬಾರದು. ಕಾವ್ಯವು ಜನಮನಕ್ಕೆ ಆಹ್ಲಾದವನ್ನುಂಟು ಮಾಡಬೇಕಾದರೆ, ಸಂಸ್ಕೃತ ಪದಗಳೇ ಬೇಕಾಗಿಲ್ಲ ಎಂದು ಸಾಧಿಸುವುದಕ್ಕೆ ಆಂಡಯ್ಯನು, ಕಬ್ಬಿಗರ ಕಾವವನ್ನು ಬರೆದು, ಕವಿಗಳ ಕಲಂಕವನ್ನು ತೊಳೆದನೆಂದು ಪ್ರತೀತಿ. ಆದರೆ, ಆತನು ಬಳಸಿದ ಕನ್ನಡವಾದರೂ ಒಂದು ಕ್ಲಿಷ್ಟವಾದುದು; ಸಂಸ್ಕೃತ ಪದಗಳ ಬದಲಿಗೆ ಅವುಗಳನ್ನು ತದ್ಭವಗಳನ್ನಾಗಿ ಪರಿವರ್ತಿಸಿ ತಾನು ಸುದ್ದಗನ್ನಡದಲ್ಲಿ ಬರೆದ ಕಬ್ಬಿಗನೆಂದು ಕರೆಸಿಕೊಂಡ ಅಪವಾದಕ್ಕೆ ಗುರಿಯಾಗಿದ್ದಾನೆ ಆತ. ಆತನ ಗ್ರಂಥ ತುಂಬ ಇದಕ್ಕೆ ಉದಾಹರಣೆಗಳನ್ನು ಕೊಡಬಹುದು.

ಕನ್ನಡದ ಪ್ರಾದುರ್ಭಾವ

ಮುಂದಕ್ಕೆ ಷಟ್ಪದಿ, ಸಾಂಗತ್ಯಗಳ ಯುಗವು ಕಾಣಿಸಿಕೊಂಡಿತು. ಛಂದಸ್ಸು ಕನ್ನಡಕ್ಕೆ ತಿರುಗಿದಂತೆಯೇ ಶೈಲಿಯಲ್ಲಿಯೂ ಕನ್ನಡತನ ಕಾಣಿಸಿಕೊಂಡಿತು. ಕನ್ನಡದ ನುಡಿಗಳಿಗೆ ಮಾನ್ಯತೆ ದೊರೆಯತೊಡಗಿತು. ಸಂಸ್ಕೃತದಂತೆಯೇ ಕನ್ನಡವೂ ಒಂದು ಪೂಜನೀಯ ಭಾಷೆ ಎಂಬ ದೃಷ್ಟಿ ವಿದ್ವಾಂಸ ಜನರಲ್ಲಿ ಬೆಳೆದು ಬಂತು; ಮತ್ತಿದರಿಂದ ಸರಳ ಕೃತಿಗಳು ಹೊರಬಂದುವು. ಒಬ್ಬಿಬ್ಬರು ವಿದ್ವಾಂಸರು ತಮ್ಮ ಉಕ್ಕಿನ ಕಡಲೆಯನ್ನು ತಿನ್ನಿಸುವ ಮಹಾಕಾರ್ಯಕ್ಕೆ ಕೈಹಾಕಿದರೂ ಅವರದರಲ್ಲಿ ಕೃತಕೃತ್ಯರಾಗಲಿಲ್ಲ. ಹೀಗೆ ಸಂಸ್ಕೃತದ ಹೊರೆ ಕಡಿಮೆಯಾಗಿ, ನ

([illegible]ನೇ ಪುಟ ನೋಡಿ)

ಲಂಡನ್ನಿನ ನೂತನ ಶಿಡ್ಗೆಹಿಲ್ ಶಾಲೆಯಲ್ಲಿ ಅದರ ಸಂಸ್ಥಾಪಕರಾದ ಶ್ರೀ ಹರ್ಬರ್ಟ್ ಮೋರಿಸನ್ನರು ಕ್ರಿಸ್ಟಿನ್ ನಟ್‌ಬೀಮ್ ಎಂಬ ಹದಿನೈದು ವರ್ಷದ ಹುಡುಗನೊಡನೆ ಸರಸವಾಡುತಿದ್ದಾರೆ.

ಸಕಾಲದಲ್ಲಿ, ಸುಲಭ ದರದಲ್ಲಿ
ಸುಂದರ ಮುದ್ರಣಕ್ಕೆ ವಿಚಾರಿಸಿರಿ—
ನವಯುಗ ಪ್ರೆಸ್ ಉಡುಪಿ
ಲಗ್ನಪತ್ರಿಕೆಯೇ ಮೊದಲಾದ ಆಮಂತ್ರಣಗಳನ್ನೂ
ಸ್ಕೂಲ್ ಮೆಗಜಿನ್‌ಗಳನ್ನೂ ಬುಕ್‌ವರ್ಕನ್ನೂ
ಚಲೋದಾಗಿ ಮುದ್ರಿಸಿ ಕೊಡಲಾಗುವುದು.
NAVAYUGA PRESS, UDIPI.

NAVAYUGA

Popular Kannada Weekly

Founder:—

A. B. SHETTY,

Former Minister for Public Health, Govt. of Madras & Govt of Mysore

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೭	೨೧-೪-'೫೮	೩೨

ಸ್ವಾತಂತ್ರ್ಯ ಪ್ರೇಮಿಗಳಿಗೆ ಆಹ್ವಾನ

ತಮ್ಮ ಪಕ್ಷದ ಧೋರಣೆಗಳನ್ನು ಪರರಿಂದ ಎರವಲಾಗಿ ತಂದು ಭಾರತದ ನೆಲದಲ್ಲಿ ಕಾಲೂರಿ, ಮುಂದುವರಿದು, ಜನತೆಯನ್ನು ಕಬಳಿಸುವ ಹವಣಿಕೆಯಲ್ಲಿದ್ದ ಕಮ್ಯೂನಿಸ್ಟರು ಇತ್ತೀಚೆಗೆ ಅಮೃತಸರದಲ್ಲಿ ಸೇರಿದ ತಮ್ಮ ಪಕ್ಷದ ಅಧಿವೇಶನದಲ್ಲಿ ತಮ್ಮ ಮೂಲ ಘಟನೆಯಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡುವ ಉದಾರತೆಯನ್ನು ತೋರಿಸಿದ್ದಾರೆ. ಬೆಸ್ತರವನು ಬರಿಯ ಗಾಳವನ್ನು ನೀರಿನಲ್ಲಿ ಇಳಬಿಟ್ಟರೆ ಅದಕ್ಕೆ ಮೀನುಗಳು ತಾನುತಾನೆಂದು ಮುಂದೆ ಬರುವುದಿಲ್ಲ; ಆದರೆ ಗಾಳದ ತುದಿಗೆ ಒಂದು ಸಣ್ಣ ಎರೆ ಹುಳವನ್ನೋ ಮತ್ತೇನನ್ನೋ ಸಿಕ್ಕಿಸಿ ಬಿಟ್ಟರೆ ಬೇಗನೇ ತಮಗೆ ಬೇಕಾದುದನ್ನು ತಿನ್ನುವ ವಾಂಛೆಯಿಂದ ಗುಂಪಾಗಿ ಸೇರುತ್ತವೆ; ಗಾಳದ ಕೊಕ್ಕೆಗೆ ಸಿಕ್ಕಿ ಬೆಸ್ತನ ಜೀವನಕ್ಕಾಗಿ ತಮ್ಮ ಪ್ರಾಣಾರ್ಪಣೆಯನ್ನು ಮಾಡುತ್ತವೆ. ಎಂತಲೇ ಚತುರ ಬೆಸ್ತರು ಮೀನು ಹಿಡಿಯುವ ತಮ್ಮ ಕೆಲಸದಲ್ಲಿ ಜಯಪ್ರದರಾಗುತ್ತಾರೆ. ಸದ್ಯ ಕಮ್ಯೂನಿಸ್ಟರ ಧೋರಣೆಯೂ ಹೀಗೇನೇ ಎನ್ನಬಹುದು. ಇದು ವರೆಗೆ ಪ್ರಜಾಪ್ರಭುತ್ವದ ತತ್ವಗಳಿಗೆ ಎಂದೂ ಹೊಂದಿಕೊಳ್ಳದಂತಹ ಇವರು ಇದೀಗ ಒಮ್ಮೆಲೇ ಶಾಂತಿಪೂರ್ಣವಾಗಿಯೇ ತಮ್ಮ ಸಮಾಜವಾದವನ್ನು ಸ್ಥಾಪಿಸುವ ನಿರ್ಧಾರವನ್ನು ಮಾಡಿದ್ದಾರೆ. ಭಾರತೀಯ ಸಾಮ್ಯವಾದಿಗಳು ಈ ರೀತಿ ತಿದ್ದಿಕೊಂಡುದರಲ್ಲಿ ಹೊಸ ತತ್ವಗಳೇನೂ ಕಾಣಿಸುವುದಿಲ್ಲ ಪ್ರಜಾಪ್ರಭುತ್ವನ್ನು ಸಂಪೂರ್ಣವಾಗಿ ಮನ್ನಿಸಿ ಶಾಂತ ವಿಧಾನಗಳಿಂದ ಸಮಾಜವಾದೀ ಸಮಾಜದ ಸ್ಥಾಪನೆಯನ್ನು ಮಾಡಿ ಕಲ್ಯಾಣ ರಾಷ್ಟ್ರವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ಭಾರತದ ಹಿರಿಯ ರಾಜಕೀಯ ಪಕ್ಷವಾದ ಕಾಂಗ್ರೆಸ್ ತನ್ನ ತಲೆಯ ಮೇಲೆ ಹಿಂದೆಯೇ ಹೊತ್ತಿದೆ. ಅಂತೆಯೇ ಅಧಿಕಾರದ ರುಚಿ ಹಿಡಿದ ಕಮ್ಯೂನಿಸ್ಟರು ತಮ್ಮ ಹಿಂದಿನ ಬಣ್ಣವನ್ನು ಬದಲಾಯಿಸದಿದ್ದರೆ, ತಮ್ಮ ಪ್ರಗತಿಗೆ ತೊಡಕುಂಟಾಗುವುದೆಂದು ಕಂಡುಕೊಂಡೋ ಏನೋ ತಮ್ಮ ಮೂಲತತ್ವಗಳನ್ನೇ ತಲೆಕೆಳಗಾಗಿಸಿ ಬಿಟ್ಟಿದ್ದಾರೆ. ಪಕ್ಷವು ಬೆಳೆಯಬೇಕಾದರೆ, ಅದಕ್ಕೆ ಜನಬೆಂಬಲ ಅಗತ್ಯ. ಭಾರತದ ಸಂಪ್ರದಾಯಕ್ಕೂ, ಜೀವನಕ್ಕೆ, ಪರಿಸ್ಥಿತಿಗೆ ಮಾರ್ಕ್ಸನು ಎಂದೋ ಹೇಳಿದ ಕ್ರಮವು ಹೊಂದಿಕೊಳ್ಳಬೇಕೆಂದರೆ, ಅವು ಎಂದಿಗೂ ಆಗದ ಮಾತು. ಮೂಲತಃ ರಶ್ಯದಲ್ಲಿಯೇ ಸ್ಟಾಲಿನ್ನರ ಕಮ್ಯೂನಿಜಂ ಮತ್ತು ಕ್ರುಶೇವರ ಕಮ್ಯೂನಿಜಂಗಳ ನಡುವೆಯೇ ಅಂತರ ಬೆಳೆಯುತ್ತಿರುವಾಗ, ಭಾರತದಲ್ಲಿ ಹೀಗಾದುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. ಆದರೆ, ಇದು ವರೆಗೆ ಭಾರತದಲ್ಲಿ ಕಮ್ಯೂನಿಜಮನ್ನು ಬಲವಾಗಿ ವಿರೋಧಿಸಲಿದ್ದ ಕಾರಣಗಳೆಂದರೆ, ಅದರ ಸರ್ವಾಧಿಕಾರೀ ಮನೋವೃತ್ತಿ. ಪ್ರಜಾಪ್ರಭುತ್ವದಲ್ಲಿ ಇದೆ-ದೂಸಲ್ಲದ ಮಾತೇ ಆಗಿರುವಾಗ, ಸ್ವಾತಂತ್ರ್ಯಪ್ರೇಮಿಗಳು ಈ ಪಕ್ಷವನ್ನು ಟೀಕಿಸುವುದು ಸ್ವಾಭಾವಿಕವಿದೆ ಆದರೆ, ಈಗಿನ ಬದಲಾದ ಬಣ್ಣದಿಂದಾಗಿ, ಜನತೆಯು ಒಂದು ಭ್ರಮೆಯಲ್ಲಿ ಬೀಳುವಂತಾಗಿದೆ. ಭಾರತದ ಎಲ್ಲ ಪ್ರಮುಖ ಪಕ್ಷಗಳ ಮೂಲ ಧ್ಯೇಯಗಳೂ ಪ್ರಜಾಪ್ರಭುತ್ವ ತತ್ವಗಳಡಿಯಲ್ಲಿ ಶಾಂತ ವಿಧಾನಗಳಿಂದ ಸಮಾಜವಾದವನ್ನು ಸ್ಥಾಪಿಸುವುದೇ ಆಯಿತು. ಹಾಗಿರುವಾಗ ಇಂತಹ ಸ್ಥಿತಿ ತಮಗೆ ಯಾವ ಪಕ್ಷವಾದರೇನು ಎಂಬ ಪ್ರಶ್ನೆಗೆ ಅವಕಾಶವಿತ್ತು ಜನತೆಯನ್ನು ದಿಙ್ಮೂಢಗೊಳಿಸುವುದು ತೀರ ಸಹಜ.

ಆದರೂ, ಕಣ್ಣೀರನ್ನೂ ತಣಿಸಿ ಕುಡಿಯಬೇಕು ಎಂಬುದೊಂದು ಹಿರಿಯರ ಮಾತಿದೆ. ಕಮ್ಯೂನಿಸ್ಟರು ತಮ್ಮ ಘಟನೆಯನ್ನು ಬೇಕಾದಂತೆ ಬದಲಿಸಿದ ಮಾತ್ರಕ್ಕೆ ಅವರ ಮನೋವೃತ್ತಿ ಪರಿವರ್ತನೆಗೊಂಡಿತೆನ್ನುವುದು ಅಸಾಧ್ಯ. ಬೆಕ್ಕು ಕೊಳ್ಳಿ ಹೊಡೆಯಲು ಅಸಮರ್ಥವಾದಾಗ ಸನ್ಯಾಸಿಯಾಗಿ ಇಲಿಗಳೊಡನೆ ಕಾಶೀ .ಯಾತ್ರೆ ಮಾಡಿ ತಂತೆ—ತಾನು ಅದುವರೆಗೆ ಮಾಡಿದ ಪಾಪಕೃತ್ಯಗಳ ಪ್ರಾಯಶ್ಚಿತ್ತಕ್ಕಾಗಿ! ಸದ್ಯೈವವಶಾತ್ ಈ ಬಾರಿ ಕಮ್ಯೂನಿಸ್ಟರಿಗೆ ಕೇರಳದಲ್ಲಿ ಅಧಿಕಾರ ಪೀಠಾರೋಹಣ ಮಾಡುವ ಅವಕಾಶವೊದಗಿತು; ಅಲ್ಲಿ ಕಳೆದೊಂದು ವರ್ಷದಲ್ಲಿ ಮಹತ್ವದ ಹಲವಾರು ಕೆಲಸಗಳಾಗಿವೆ ಎಂದು ಡಂಗುರ ಬಾರಿಸಲಾಗುತ್ತಿದೆ. ಆದರೆ, ಅಂತಹ ಸುಧಾರಣೆಗಳು ಎಲ್ಲ ರಾಜ್ಯಗಳಲ್ಲೂ ಆಗಿಯೇ ಆಗುತ್ತಿವೆ. ಇತರ ರಾಜ್ಯಗಳಂತೆಯೇ ಈಗ ಅಲ್ಲಿಯೂ ಮಂತ್ರಿಗಳು ಸಂಚಾರ-ಜನರಿಗೆ ಆಶ್ವಾಸನೆ—ಪೋಲೀಸ್ ಕಾರ್ಯಾಚರಣೆ—ಗಳಲ್ಲಿ ತಲ್ಲೀನರಾಗಿ, ತಾವು ನಿರಪೇಕ್ಷೆಯಿಂದ ಪ್ರಜೆಗಳನ್ನು ಉತ್ತಮರೀತಿಯಲ್ಲಿ— ಉಳಿದ ಪಕ್ಷಗಳಿಗಿಂತ ಉಚ್ಚ ಮಟ್ಟದಲ್ಲಿ— ಕಾಣುತಿದ್ದೇವೆ ಎಂದು ಹೇಳುತ್ತಾರೆ. ಉಳಿದ ಪ್ರಾದೇಶಿಕ ಕಮ್ಯೂನಿಸ್ಟರೂ ಈ ಮಾತುಗಳ ಪ್ರಚಾರ ಮಾಡುತ್ತಾರೆ. ಆದರೆ, ನಿಷ್ಪಕ್ಷಪಾತ ದೃಷ್ಟಿಯಿಂದ ವಿವೇಚಿಸಿದರೆ, ಕೇರಳದಲ್ಲಿ ವಿಶೇಷವೇನೂ ಘಟಿಸಿಲ್ಲ. ಈ ರೀತಿಯಲ್ಲಿ ಸರಕಾರವನ್ನು ಸ್ಥಾಪಿಸಿದ ಅನುಭವದಿಂದಾಗಿ ಅಥವಾ ಇನ್ನಾವುದೋ ಕಾರಣಗಳಿಂದಾಗಿ ಅವರು ಈ ನೆಲದಲ್ಲಿ ತಮ್ಮ ಕಟ್ಟುನಿಟ್ಟಾದ ಮಾರ್ಕ್ಸವಾದಕ್ಕೆ ಮನ್ನಣೆಯಿಲ್ಲ—ಸ್ವಾತಂತ್ರ್ಯ ಪ್ರೇಮಿಗಳೆಡೆಯಲ್ಲಿ ತಮಗೆ ಬದುಕುವ ಅವಕಾಶ ಕಡಿಮೆ ಎಂದು ಈಗಲಾದರೂ ತಿಳಿದು, ವಕ್ರ ಪಥದಿಂದ ಸ್ವಲ್ಪ ನೇರವಾದ ಮಾರ್ಗಕ್ಕೆ ಇಳಿದರೆಂಬುದು ಸಂತೋಷ. ಆದರೆ, ನಾಯಿಯ ಬಾಲ ನೇರಾದ ಅಂಡೆಯಲ್ಲಿ ಹಾಕಿದರೂ ಅದೆಂದಿಗೂ ಸರಳವಾಗಲಾರದೆಂಬುದು ಸರ್ವವಿದಿತ. ಹೀಗಿರುವಾಗ, ರಾಜ್ಯಸೂತ್ರ ಪ್ರಾಪ್ತಿಗೋಸ್ಕರ ಜನರಂಜನೆಗಾಗಿ ಪ್ರಜಾಪ್ರಭುತ್ವವನ್ನು ಪುರಸ್ಕರಿಸುತ್ತ ತಮ್ಮ ಅಭಿಲಾಷೆಯು ಈಡೇರಿತೆಂದಾಗ ಸರ್ವಾಧಿಕಾರವನ್ನು ತೋರಿಸುವುದಿಲ್ಲವೆಂದು ನಂಬುವುದಾದರೂ ಹೇಗೆ? ಪಕ್ಷದ ಘಟನೆಯಲ್ಲಿ ತಿದ್ದುಪಡಿಯನ್ನು ಮಾಡುವುದೇನೂ ಕಷ್ಟದ ಕೆಲಸವಲ್ಲ; ಆದರೆ, ಸದಸ್ಯರ ಮೂಲ ಮನಸ್ಸಿನ ಧೋರಣೆ ಬದಲಾಗ ಬೇಕಾದುದು ಅಗತ್ಯ. ಇದು ಆಗಿದೆ ಎಂದಂತೂ ಹೇಳುವುದು ಸಾಧ್ಯವಿಲ್ಲ. ಹಾಗಿರುವಾಗ, ಕಮ್ಯೂನಿಸ್ಟರ ಈ ವಿಧವಾದ ಬಣ್ಣ ಬದಲಾವಣೆಯು ಉಳಿದ ಪ್ರಜಾಪ್ರಭುತ್ವವಾದೀ ಪಕ್ಷಗಳಿಗೊಂದು ಆಹ್ವಾನವೇ ಎನ್ನಬಹುದು. ಸಿಂಹದ ಚರ್ಮದಲ್ಲಿ ಕತ್ತೆ ಹೊರಬಂದರೆ, ಅದರ ನಿಜ ಬಣ್ಣವನ್ನು ಬಯಲು ಮಾಡುವುದು ಉಳಿದವರ ಕೆಲಸ ಹೊರತು, ಸುಮ್ಮನಿರುವುದಲ್ಲ. ಕಮ್ಯೂನಿಸ್ಟರನ್ನು ತಮ್ಮ ದಾರಿಗೆ ಎಳೆದೆವೆಂದು ತಿಳಿದು, ತಾವು ವಿಜಯ ಪಡೆದೆವೆಂದು ಕಾಂಗ್ರೆಸಿಗರು ಆತ್ಮ ಸಂತೋಷದಿಂದ ಸುಮ್ಮನುಳಿದ ಮಾತ್ರಕ್ಕೆ ತಮ್ಮ ಧ್ಯೇಯ ಸಾಧನೆ ಮಾಡಿದಂತಾಗಲಿಲ್ಲ.

ಕಾಂಗ್ರೆಸ್ ಭಾರತದ ಗರಿಮೆಯ ರಾಜಕೀಯ ಪಕ್ಷ. ಅದು ತನ್ನ ಪ್ರತಿಯೊಂದು ಕೃತಿಯಲ್ಲೂ ಉಳಿದ ಪಕ್ಷಗಳಿಗೆ ಮಾರ್ಗದರ್ಶನ ಮಾಡುತ್ತ ಅಲ್ಲದೇ ದೇಶದ ಜನತೆಯನ್ನು ಸ್ವರ್ಗಸುಖದತ್ತ ಕೊಂಡೊಯ್ಯುವ ಧ್ಯೇಯವನ್ನಿಟ್ಟುಕೊಂಡು, ರಾಜ್ಯಸೂತ್ರ ಸಂಚಾಲನೆಯನ್ನೂ ಮಾಡುತ್ತಿದೆ; ಮುಂದಕ್ಕೂ ಮಾಡುತ್ತಿರಬೇಕು. ಕೇರಳವೊಂದನ್ನು ಉಳಿದುಕೊಂಡು ಕಾಂಗ್ರೆಸ್ ಕಮ್ಯೂನಿಸ್ಟ ಸರಕಾರದ ಕ್ರಮಗಳನ್ನು ಅಭ್ಯಸಿಸುವಂತಾದರೂ ಮುಂದಕ್ಕೂ ಹಾಗಾಗಗೊಡುವುದು ಸರಿಯಲ್ಲ. ಕಮ್ಯೂನಿಸ್ಟ ಆಡಳಿತೆಯಿಂದ ಜನತೆಗೆ ಸುಖವಿಲ್ಲವೆಂಬ ವರದಿಗಳು ಆಗಾಗ ಬರುತ್ತಿವೆ. ಆದುದರಿಂದ ಜನತೆಯನ್ನು ತನ್ನತ್ತ ಒಲಿಸಿಕೊಂಡು, ಅವರ ಕಷ್ಟಸುಖಗಳನ್ನರಿತು, ತಕ್ಕ ಶಮನವನ್ನು ಮತ್ತಷ್ಟು ಶೀಘ್ರವಾಗಿ ಮಾಡಿದರೆ, ಜನತೆಯೊಡನೆ ಸತತ ನಿಕಟ ಸಂಪರ್ಕವನ್ನುಳಿಸಿಕೊಂಡರೆ, ತನ್ನ ಪಕ್ಷದೊಳಗೆ ಒಕ್ಕಟ್ಟನ್ನು ಸ್ಥಾಪಿಸಿ ನಿಸ್ವಾರ್ಥ ದೃಷ್ಟಿಯಿಂದ ದುಡಿದರೆ, ಜನತೆ ಎಂದಿಗೂ ಕಾಂಗ್ರೆಸಿನ ಕೈಬಿಡುವುದಿಲ್ಲ. ಆಡಳಿತೆಯಲ್ಲಿ ದಕ್ಷತೆ, ಪ್ರಾಮಾಣಿಕತೆಗಳಿರುವ ಸುಭದ್ರ ಸರಕಾರವನ್ನು ಜನತೆ ಎಂದಿಗೂ ಬೇಡವೆನ್ನದು. ಆದುದರಿಂದ, ಕಮ್ಯೂನಿಸ್ಟರಿಗೆ ಅಮೃತಸರ ಸಮ್ಮೇಳನವು ಇತಿಹಾಸ ಪ್ರಸಿದ್ಧವಾದರೆ, ಉಳಿದವರಿಗೆ ಐಕ್ಯದ ಕರೆಯಿತ್ತ ಮಹಾಘಟನೆ ಭಾರತದಲ್ಲಿ ಕಮ್ಯೂನಿಜಂ ಎಂದಿಗೂ ಹೊಂದಿಕೆಯಾಗಿಲ್ಲ; ಇನ್ನು ಮುಂದಕ್ಕೂ ಆಗುವುದೂ ಇಲ್ಲ. ನೀರಿನ ಒಣ್ಣ ಬೇರೆಯಾದರೂ ಗುಣವೊಂದೇ. ಅವು ಭಾರತದಲ್ಲಿ ಹರಡಲೇ ಬಾರದು. ಇದಕ್ಕೆ ಬೇಕಾದ ಆವಶ್ಯಕ ಕ್ರಮಗಳನ್ನು ದೇಶದ ಸ್ವಾತಂತ್ರ್ಯ ಪ್ರೇಮಿ ಪಕ್ಷಗಳು ಕೈಗೊಳ್ಳಬೇಕು. ಈ ಮಹಾನ್ ಕಾರ್ಯದಲ್ಲಿ ಕಾಂಗ್ರೆಸಿನ ಕರ್ತವ್ಯಗಳೂ ಬಹಳವಿವೆ ಎಂಬುದನ್ನು ಅದು ತಿಳಿದು ಅವನ್ನು ಮಾಡಿಮುಗಿಸುವುದೆಂದು ನಂಬುತ್ತೇವೆ.

. ಬ್ರಿಟಿಷ್ ಕೊಲಂಬಿಯಾ ಹುಡುಗರ ರಗ್ಬಿ ಟೀಮಿನವರನ್ನು ಲಂಡನಿನ ಮೇಯರರಾದ ಸರ್ ಡೇನಿಸ್ ಟ್ರಸ್ಕೋಟರು ಎದುರ್ಗೊಳ್ಳುತಿದ್ದಾರೆ.

ಕುಂದಾಪುರ—ಕೋಪರೇಶನ್ ಬೇಂಕ್, ನಡುಂಗಾಡಿ ಬೇಂಕ್, ಪಿ. ಪಿ. ಸಿ. ಕಂಪೆನಿಯ ಡ್ಯಾರೆಕ್ಟರರಾಗಿದ್ದ ಶ್ರೀ ಎಸ್. ನಾರಾಯಣ ಕಾಮತರು ತಾ. 16ರಂದು ಮುಂಜಾನೆ ತನ್ನ 85ನೆ ವಯಸ್ಸಿನಲ್ಲಿ ಪರಲೋಕವಾಸಿಗಳಾದರು.

ಬೆಳ್ಮಣ್ಣು—ಬೆಳ್ಮಣ್ಣು ಕೇಂದ್ರದಲ್ಲಿ ತೆರೆಯಲಾದ ಬೋರ್ಡ್ ಹೈಸ್ಕೂಲಿನ ಕಟ್ಟಡದ ಕೆಲಸವು ಭರದಿಂದ ಸಾಗುತ್ತಲಿದೆ. ಈ ಕಟ್ಟಡದ ಕೆಲಸವು ಶೀಘ್ರದಲ್ಲಿ ಆಗುವಂತೆ ಬೆಳ್ಮಣ್ಣು ಮತ್ತು ನಂದಳಿಕೆ ಊರಿನ ಮುಖಂಡರು ಮತ್ತು ಊರಿನ ಜನರು ಕಳೆದ ಎರಡು ವಾರಗಳಲ್ಲಿ ಬಡವ ಶ್ರೀಮಂತ ಎಂಬ ಭೇದವಿಲ್ಲದೆ ಶ್ರಮದಾನ ನೀಡಿದ್ದಾರೆ. ಬೋರ್ಡ್ ಹೈಸ್ಕೂಲು ಬೆಳ್ಮಣ್ಣು — ನಂದಳಿಕೆ ಹಾಯರ್ ಎಲಿಮೆಂಟರಿ ಶಾಲೆ; ಶಿರ್ವ ಹಿಂದೂ ಹೈಸ್ಕೂಲು ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರುಗಳು—ಮತ್ತು ಬೆಳ್ಮಣ್ಣು ಮಹಿಳಾ ಸಮಾಜದ ಸದಸ್ಯೆಯರು ಈ ಶ್ರಮದಾನದಲ್ಲಿ ಭಾಗವಹಿಸಿದ್ದಾರೆ. ಒಟ್ಟು ಏಳು ದಿನಗಳಲ್ಲಿ ಇಷ್ಟರವರೇಗೆ 600 ಮಿಕ್ಕಿ ಜನರು ಶ್ರಮದಾನ ಮಾಡಿದ್ದಾರೆ. ಸುಮಾರು ರೂ. 700 ಮಿಕ್ಕಿ ವೆಚ್ಚದ ಕೆಲಸ ಈ ಶ್ರಮದಾನದ ಮೂಲಕ ನಡೆದಿದೆ. ಎಂದು ಅಂದಾಜು ಮಾಡಲಾಗಿದೆ. ಈ ಶ್ರಮದಾನದಲ್ಲಿ ಅತೀ ಉತ್ಸಾಹದಿಂದ ಮತ್ತು ಸಂತೋಷದಿಂದ ಬಂದು ಭಾಗವಹಿಸಿದ ಪ್ರತಿಯೊಬ್ಬ ಶ್ರಮದಾನಿಗೂ "ವಿದ್ಯಾವರ್ಧಕ ಸಂಘ"(ಹೈಸ್ಕೂಲ್ ಕಟ್ಟಡ ರಚನಾ ಸಮಿತಿ) ಪರವಾಗಿ ಸದ್ರಿ ಸಂಘದ ಕಾರ್ಯದರ್ಶಿಗಳಾದ ಡಾ. ಕೊರಡ್ಕಲ್ ವೆಂಕಟರಾಯರು ಕೃತಜ್ಞತೆಯನ್ನರ್ಪಿಸಿವರು. ಸ್ಥಳೀಯ ಮಹಿಳಾ ಸಮಾಜದವರು ತಾ. 16ರಲ್ಲು ಸಮಾಜದ ಅಧ್ಯಕ್ಷೆಯರಾದ ಶ್ರೀಮತಿ ಸುಂದರಿ ಜಿ. ಶೆಟ್ಟಿಯವರ ಮುಂದಾಳುತನದಲ್ಲಿ ಇಲ್ಲಿ ಕಟ್ಟಲಾಗುತ್ತಿರುವ ಬೋರ್ಡ್ ಹೈಸ್ಕೂಲಿನ ಕಟ್ಟಡದ ಕೆಲಸದಲ್ಲಿ ಶ್ರಮದಾನ ಮಾಡಿದ್ದಾರೆ.

ಉಡುಪಿ

ಕೋಓಪರೇಟಿವ್ ಮಿಲ್ಕ್ ಸಪ್ಲೈ ಸೊಸೈಟಿ ಮಹಾ ಸಭೆಯು— ತಾ. 15ರಂದು ಸಂಘದ ಅಧ್ಯಕ್ಷ ಡಾ. ಟಿ ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳಾದ ಶ್ರೀ ಎಮ್. ವಾಮನ ಭಟ್ಟರು ಗತವರ್ಷದ ವರದಿಯನ್ನೋದಿದರು. ಮೆಂಬರರಿಗೆ ಸೇಕಡಾ 6¼ ಸರಿಯಲ್ಲಿ ಡಿವಿಡೆಂಡ್ ಹಂಚಲಾಯಿತು. ಚಾಲ್ತಿ ವರುಷದ ಡ್ಯಾರೆಕ್ಟರರನ್ನೇ ಮುಂದಿನ ವರ್ಷಕ್ಕೂ ಡ್ಯಾರೆಕ್ಟರರಾಗಿ ಆರಿಸಲಾಯಿತು. ಸಂಘದ ಅಧ್ಯಕ್ಷ ಡಾ. ಟಿ ಎಮ್. ಎ. ಪೈಗಳ ಷಷ್ಟ್ಯಬ್ದಿ ಪೂರ್ತಿ ಸಮಾರಂಭವು ಇದೇ ತಾ. 30ರಂದು ಜರಗುವಾಗ ಸಂಘದ ಕಡೆಯಿಂದ ಅವರಿಗೆ ಮಾನಪತ್ರ ಅರ್ಪಿಸಬೇಕೆಂದು ನಿರ್ಣಯಿಸಲಾಯಿತು.

ರೋಟರಿ ಕ್ಲಬ್— ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ತಾ. 10ರಂದು ಮುಕುಂದ ನಿವಾಸದಲ್ಲಿ ಸೇರಿದ ಸಭೆಯಲ್ಲಿ ಉಡುಪಿಗೊಂದು ರೋಟರಿ ಕ್ಲಬ್ ಸ್ಥಾಪಿಸಲಾಯಿತು. ಡ್ಯಾರೆಕ್ಟರ ಮಂಡಳಿಗೆ ಡಾ. ಟಿ. ಎಮ್. ಎ. ಪೈ, ಅಧ್ಯಕ್ಷ, ಶ್ರೀಗಳಾದ ಕೆ. ಆರ್. ಕೆ. ಭಟ್, ಉಪಾಧ್ಯಕ್ಷ, ಟಿ. ರಮೇಶ ಪೈ, ಕಾರ್ಯದರ್ಶಿ, ಇ ಯು. ಜಾಕಬ್, ಸಹಕಾರ್ಯದರ್ಶಿ, ಎ ಜೆ. ಅಲ್ಸೆ, ಸಾರ್ಜಂಟ್ ಎಟ್ ಆರಮ್ಸ್, ಡಾ ಎಸ್ ಆರ್. ಪೈ, ಡಾ. ಕೆ ಎಲ್. ಐತಾಳ್, ಟಿ. ಎ. ಪೈ, ಶ್ರೀಪತಿ ಆಚಾರ್, ಎಮ್ ಡಿ. ಕಾಮತ್, ಎಚ್. ಸುಂದರರಾವ್, ಎ. ಲಕ್ಷ್ಮೀನಾರಾಯಣ ರಾವ್, ಇತರ ಡ್ಯಾರೆಕ್ಟರರಾಗಿ ಆರಿಸಲ್ಪಟ್ಟರು. ಹಾಜರಿದ್ದ ಶ್ರೀ ವಿ. ಎಸ್. ಕುಡ್ವರು ರೋಟರಿ ಧ್ಯೇಯಗಳ ಕುರಿತು ಮಾತನಾಡಿದರು.

ಮುನಿಸಿಪಲ್ ಅವಸರದ ಸಭೆಯು— ತಾ. 18ರಂದು ಚೇರ್‌ಮೆನ್ ಶ್ರೀ ಕೆ ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ತಾ. 30ರಂದು ಡಾ. ಟಿ. ಮಾಧವ ಪೈಗಳಿಗೆ ಅವರ 60ನೆ ಹುಟ್ಟು ಹಬ್ಬದ ಸಮಾರಂಭದ ಕಾಲದಲ್ಲಿ ನಗರ ಸಭೆಯ ಪರಿಯಿಂದ ಮಾನಪತ್ರ ನೀಯಬೇಕೆನ್ನುವ ನಿರ್ಣಯವಾಯಿತು. ನಂತರ ಜರುಗಿದ ವಿಶೇಷ ಸಭೆಯಲ್ಲಿ 1957-58ರ ತಿದ್ದಿದ ಮತ್ತು 1958-59ರ ಅಂದಾಜು ಬಜೆಟ್ ಅಂಕೆ ಸಂಖ್ಯೆಗಳಲ್ಲಿ ವ್ಯತ್ಯಾಸಗೊಳಿಸಿ ಪಾಸುಮಾಡಲಾಯಿತು. ಬಸ್ ಒಂದರ ಒಂದು ದಿನಕ್ಕೆ ನಸೆಲು ಮಾಡುವ ತೆರಿಗೆ ನಾಲ್ಕಾಣೆಯನ್ನು ಒಂದು ರೂಪಾಯಿಗೆ ಏರಿಸಲಾಯಿತು. ಈ ಹೊಸ ದರವು ಮೇ ತಿಂಗಳಿಂದ ಜ್ಯಾರಿಗೆ ತರಲಾಗುವುದು. ತೆರಿಗೆ ಹೆಚ್ಚಳಕ್ಕೆ ನಗರ ಸಭೆಯು ಒಪ್ಪಿಗೆ ಕೊಡಲಿಲ್ಲ.

ಭೂಕ್ರಾಂತಿ ದಿನಾಚರಣೆಯು— ತಾ 18ರಂದು ಸರ್ಕಲ್ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಶ್ರೀಮತಿ ಕೆ. ಅಂಬಾ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭಾರಂಭದಲ್ಲಿ ಸರ್ವೋದಯ ಸೇವಕರಾದ ಶ್ರೀ ಕೆ ಶ್ರೀನಿವಾಸ ಪೈಗಳು ಭೂಕ್ರಾಂತಿ ದಿನಾಚರಣೆ ಮಹತ್ವವನ್ನು ವಿವರಿಸಿದರು. ಶ್ರೀಗಳಾದ ಟಿ. ಎ. ಪೈ, ರಮೇಶರಾವ್ ಮತ್ತು ಶ್ರೀಮತಿ ಮಿರಾರವರು ಸಂದರ್ಭೋಚಿತವಾತುಗಳನ್ನಾಡಿದರು. ಭೂಕ್ರಾಂತಿ ಕಾರ್ಯಕ್ರಮವು ಯಶಸ್ವಿಯಾಗುವಂತೆ ಸ್ತ್ರೀ ಪುರುಷರೆಲ್ಲರೂ ಸಹಕರಿಸಬೇಕಾಗಿ ಅಧ್ಯಕ್ಷೆಯರು ವಿನಂತಿಸಿದರು.

ಲೋಕಲ್ ಕೋಓಪರೇಟಿವ್ ಯೂನಿಯನ್ನಿನ— ಡ್ಯಾರೆಕ್ಟರರ ಸಭೆಯು ತಾ. 20ರಂದು ಯೂನಿಯನ್ ಅಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಇದೇ ತಾ. 30ರಂದು ಜರಗಲಿರುವ ಡಾ. ಟಿ ಮಾಧವ ಪೈಗಳ ಷಷ್ಟ್ಯಬ್ದಿಪೂರ್ತಿ ಸಮಾರಂಭದಲ್ಲಿ ಯೂನಿಯನ್ ಪರಿಯಿಂದ ಡಾ. ಪೈಗಳವರಿಗೆ ಮಾನಪತ್ರವನ್ನೀಯಬೇಕೆನ್ನುವ ನಿರ್ಣಯವಾಯಿತು.

ಶ್ರೀ ಕೃಷ್ಣ ಮಠದಲ್ಲಿ ವಸಂತೋತ್ಸವ— ಪರ್ಯಾಯ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀ ಪಾದಂಗಳವರ ಹಿಂತಿನವಲ್ಲಿ ಇದೇ ತಾ. 23ನೇ ಅಕ್ಷಯ ತೃತೀಯ ದಿವಸ ವೈಶಾಖ ಮಾಸದ ರಥೋತ್ಸವ ಹಾಗೂ ವಸಂತೋತ್ಸವಗಳು ವಿಧಿಯುಕ್ತವಾಗಿ ಪ್ರಾರಂಭವಾಗಿದ್ದು, ಮೇ ತಿಂಗಳ ತಾ 3ರಂದು ವ್ಯಾಸ ಪೂಜಾದಿಗಳಿಂದ ಸಾಂಗವಾಗಲಿರುವುದು.

ಉಡುಪಿ ತಾಲೂಕು ಖಾಸಗಿ ಶಾಲಾ ಮೆನೇಜರರ ಸಂಘದ— ಕಾರ್ಯಕಾರೀ ಸಮಿತಿ ಸಭೆಯು ತಾ. 20ರಂದು ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮೈಸೂರು ಸರಕಾರವು ಖಾಸಗಿ ಶಾಲಾ ಅಧ್ಯಾಪಕರಿಗೆ ಗ್ರಾಂಟಿನ ಸ್ಕೇಲನ್ನು ಏರಿಸಿ ಸಹಾಯಧನ ವಿತ್ತರಿಂದ, ಏರಿಸಿದ ಗ್ರಾಂಟಿನ ಮೇಲೆ ಮೈಂಟನೆನ್ಸ್ ಗ್ರಾಂಟನ್ನು ಸಹ ಶಾಲಾ ಮೆನೇಜರರಿಗೆ ಕೊಡಿಸುವಂತೆ ದ ಕ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಶಾಲಾ ಆಡಳಿತೆದಾರರು ಪ್ರತ್ಯ ಪ್ರತ್ಯೇಕ ಬರೆಕೊಳ್ಳಬೇಕಾಗಿ ನಿರ್ಣಯಿಸಲಾಯಿತು.

ದ ಕ ಜಿಲ್ಲಾ ಖಾಸಗಿ ಶಾಲಾ ಮೆನೇಜರರ ಸಂಘವನ್ನು ಸ್ಥಾಪಿಸುವುದು ಅತೀ ಅಗತ್ಯವೆಂದು ಸಭೆಯು ಅಭಿಪ್ರಾಯವಾಗಿ ಆ ಬಗ್ಗೆ ತಕ್ಕ ವ್ಯವಸ್ಥೆ ಮಾಡಬೇಕೆಂದಾಯಿತು. ಅರುವತ್ತು ವರುಷಗಳ ಆಯುಷ್ಯವನ್ನು ಸಾರ್ಥಕಗೊಳಿಸಿದ ಡಾ. ಟಿ ಎಮ್. ಎ. ಪೈಗಳವರಿಗೆ ತಾ. 30ರಂದು ಜರಗಲಿರುವ ಅವರ ಹುಟ್ಟುಹಬ್ಬದ ಸಮಾರಂಭ ಸಭೆಯಲ್ಲಿ ಮೆನೇಜರರ ಸಂಘದ ಕಡೆಯಿಂದಲೂ ಮಾನಪತ್ರವನ್ನೂ ನಿಧಿಯನ್ನೂ ಅರ್ಪಿಸಬೇಕೆಂದು ನಿರ್ಣಯಿಸಲಾಯಿತು.

ಸಂಕ್ಷಿಪ್ತ ಸುದ್ದಿಗಳು

ರೆಡ್‌ಕ್ರಾಸ್ ಜನಸೇವೆಗಾಗಿ

ರೆಡ್‌ಕ್ರಾಸ್ ಸಂಸ್ಥೆಗೆ ದೇಶದಲ್ಲಿ ಜನರನ್ನು ದೊಡ್ಡ ಸಂಖ್ಯೆಯಲ್ಲಿ ಸದಸ್ಯರನ್ನಾಗಿ ಸೇರಿಸಲು ಪ್ರಯತ್ನ ನಡೆಯಬೇಕೆಂದು ಡಾ ರಾಜೇಂದ್ರಪ್ರಸಾದರು ರೆಡ್‌ಕ್ರಾಸ್ ಮತ್ತು ಸೈಂಟ್ ಜಾನ್ ಆಂಬ್ಯುಲೆನ್ಸ್ ಸಂಸ್ಥೆಗಳ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹೇಳಿದರು. ರೆಡ್‌ಕ್ರಾಸ್ ಸಂಸ್ಥೆಯು ಸಾಮಾನ್ಯ ಸಂಕೇತ ಮತ್ತು ಹೆಸರಿನ ಕೆಳಗೆ ಜಗತ್ತಿನ ವಿವಿಧ ಜನರನ್ನು ಕುಲ, ಪಂಥ, ವರ್ಣಗಳ ಭೇದ ಭಾವಗಳಿಲ್ಲದೇ ಸೇವೆಗಾಗಿ ಒಂದೆಡೆಯಲ್ಲಿ ತಂದಿರುತ್ತದೆ. ಆದುದರಿಂದ, ಈ ಸಂಸ್ಥೆಯಲ್ಲಿ ಸೇರಿ ದಯಾ ಪೂರ್ಣವಾದ ಅದರ ಗುರಿ ಸಾಧನೆಯಲ್ಲಿ ಅದಕ್ಕೆ ಸಹಾಯ ಮಾಡಬೇಕು. ದೇಶದಲ್ಲಿಯ ಮಹಿಳೆಯರು ಸಾಕಷ್ಟು ಪ್ರಮಾಣದಲ್ಲಿ ಮುಂದೆ ಬಂದು ನರ್ಸಿಂಗ್ ತರಬೇತಿ ಪಡೆಯಬೇಕು. ಇದರಿಂದ ಅವರಿಗೆ ತಮ್ಮ ಮನೆಯಲ್ಲಿ ಅನುಕೂಲವಾಗುವುದು ಮಾತ್ರವಲ್ಲ ಜನಸೇವೆಗೂ ಅವಕಾಶ ದೊರೆಯುತ್ತದೆ ಎಂದವರು ಅಭಿಪ್ರಾಯ ಪಟ್ಟರು.

ಸರಕಾರೀ ಸೈನ್ಯಗಳ ವಿಜಯ

ಇಂಡೋನೇಶಿಯದ ಸರಕಾರಿ ಸೈನ್ಯಗಳು ಕ್ರಾಂತಿಕಾರರ ಸ್ವಾಧೀನದಲ್ಲಿದ್ದ ಸುಮಾತ್ರಾ ಪ್ರದೇಶದಲ್ಲಿರುವ ನಗರಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಡುಗಾರರು ಸರಕಾರದ ಸೈನ್ಯವನ್ನು ಎದುರಿಸಲು ಅಸಾಧ್ಯರಾಗಿ ದಾರಿಯಲ್ಲಿನ ಹಲವಾರು ಸೇತುವೆಗಳನ್ನು ಕತ್ತರಿಸಿ ಹಾಕಿ ಓಡಿ ಹೋಗುತ್ತಿರುವರೆಂದು ಸರಕಾರಿ ಸೈನ್ಯಗಳು ಬಂಡುಗಾರರ ರಾಜಧಾನಿಯಾಗಿರುವ ಬುಕಿಟಿಟಿಂಗಿಯಿಂದ ಕೇವಲ ೪೦ ಮೈಲುಗಳ ದೂರದಲ್ಲಿಯೇ ಇವೆಯೆಂದೂ ವರದಿಗಳು ಬಂದಿವೆ. ಇಂಡೋನೇಶ್ಯದ ಈ ಆಂತರಿಕ ಕಲಹದಲ್ಲಿ ಸರಕಾರೀ ಸೈನ್ಯವು ಗೆಲ್ಲುವ ಧೈರ್ಯವಿದೆ.

ನೂತನ ಯಾಂತ್ರಿಕೋಪಕರಣಗಳು

ಸರಕಾರದ ಒಡೆತನದ ಹಿಂದೂಸ್ತಾನ ಯಂತ್ರೋಪಕರಣ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರ್ ಶ್ರೀ ವ್ಯಾಧುಲಾರವರು ತಮ್ಮ ಒಂದು ತಿಂಗಳ ಯುರೋಪು ಸಂಚಾರವನ್ನು ಮುಗಿಸಿ ಬೆಂಗಳೂರಿಗೆ ಮರಳಿದ್ದಾರೆ. ಇವರು ಉತ್ತಮವಾದ ಹೊಸ ಬಗೆಯ ಯಂತ್ರಗಳ ಉಪಕರಣಗಳನ್ನು ತಯಾರಿಸುವಲ್ಲಿ ವಿದೇಶೀ ಸಂಸ್ಥೆಗಳ ತಾಂತ್ರಿಕ ಸಹಾಯವನ್ನು ಪಡೆಯುವ ಸಲುವಾಗಿ ಮಾತುಕತೆ ನಡೆಸಿ ಬಂದಿರುವರು. ಇವರ ಸಂಚಾರದ ಫಲವಾಗಿ ಕಾರಖಾನೆಯಲ್ಲಿ ಇನ್ನು ಮುಂದೆ ವಿದೇಶೀ ಸಂಸ್ಥೆಯೊಂದರೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ ಹತ್ತು ಬಗೆಯ ಡ್ರಿಲ್ ಯಂತ್ರಗಳನ್ನೂ ಮೂರು ಬಗೆಯ ಲೇದ ಯಂತ್ರಗಳನ್ನೂ ಉತ್ಪಾದಿಸಲಾಗುವುದು.



೧೯೫೮ರ ಏಪ್ರಿಲ್ ೧೭ರಂದು ಪ್ರಾರಂಭವಾದ ೧೯೫೮ನೆ ಬ್ರಸಲ್ಸ್ ಯೂನಿವರ್ಸಲ್ ಎಂಡ್ ಇಂಟರ್‌ನೇಶನಲ್ ಎಗ್ಸಿಭಿಷನಿನ ಭವನವಿದು. ಈ ಪ್ರದರ್ಶನದಲ್ಲಿ ಬ್ರಿಟನ್ನಿನ ಹೊರತು ೪೫ ರಾಷ್ಟ್ರಗಳು ಭಾಗವಹಿಸುತ್ತಿವೆ.

ಅಣ್ವಸ್ತ್ರ ಪ್ರಯೋಗ

ಕೋಪನ ಹೇಗನದಲ್ಲಿ ಮುಂದಿನ ತಿಂಗಳು ನ್ಯಾಟೋ ರಾಷ್ಟ್ರಗಳ ಸಭೆಯು ಸೇರುವಾಗ ಶ್ರೀ ಡಲ್ಲೆಸರು ಅಣ್ವಸ್ತ್ರ ನಿಷೇಧದ ಕುರಿತಾಗಿ ಮಾತುಕಥೆ ನಡೆಯಿಸುವ ನಿರೀಕ್ಷೆಯಿದೆ. ಅಣ್ವಸ್ತ್ರ ಸ್ಫೋಟ ಪ್ರಯೋಗಗಳನ್ನು ರಶ್ಯನೀಗ ನಿಲ್ಲಿಸಿರುವುದರಿಂದ ಅಮೆರಿಕೆಯೂ ನಿಲ್ಲಿಸಬೇಕು ಎಂಬ ವಾದವನ್ನು ಅಧ್ಯಕ್ಷ ಐಸೆನ್ ಹಾವರರು ತೆಗೆದು ಹಾಕಿದರು. ಅಣ್ವೀಕರಣವಿಲ್ಲದ ಚಿಕ್ಕ ಅಸ್ತ್ರಗಳನ್ನು ಉತ್ಪಾದಿಸಲು ಅಮೆರಿಕೆಯು ತಪ್ಪಿದರೆ, ಮಾನವ ಜನಾಂಗದ ಬಗ್ಗೆ ಇರುವ ತನ್ನ ಕರ್ತವ್ಯದಲ್ಲಿ ಚ್ಯುತಿ ತಂದಂತಾಗುವುದೆಂದೂ, ಈ ಸ್ಫೋಟ ಪ್ರಯೋಗಗಳಿಂದ ತಿಳಿದುಕೊಳ್ಳಬೇಕಾದುದನ್ನೆಲ್ಲ ತಾವು ತಿಳಿದುಕೊಂಡಿರುವುದಾಗಿ ವಿಜ್ಞಾನಿಗಳು ಅಭಿಪ್ರಾಯ ಪಟ್ಟನಂತರವೇ ತಾವು ಈ ವಿಷಯದಲ್ಲಿ ಮುಂದಡಿಯಿಡುವುದೆಂದೂ ತಿಳಿಸಿದರು. ಅಂತೂ ಈ ವರ್ಷಾಂತ್ಯದೊಳಗೆ ಇದೊಂದು ನಿರ್ಧಾರಕ್ಕೆ ಬರುವ ನಿರೀಕ್ಷೆಯಿದೆ ಎಂದು ತಿಳಿದು ಬಂದಿದೆ.

ಸಂಸ್ಕೃತಕ್ಕೆ ಮನ್ನಣೆ

ಸುಪ್ರಸಿದ್ಧ ಪಂಡಿತರೂ ಪಶ್ಚಿಮ ಬಂಗಾಳದ ವಿಧಾನ ಪರಿಷತ್ತಿನ ಸಭಾಪತಿಗಳೂ ಆದ ಡಾ. ಸುನೀತಿ ಕುಮಾರ ಚಟರ್ಜಿಯವರು ಇಂಗ್ಲಿಷ್ ಮತ್ತು ಹಿಂದಿಗಳೊಡನೆ ಸಂಸ್ಕೃತಕ್ಕೂ ಸರಕಾರೀ ಭಾಷೆಯ ಸ್ಥಾನಮಾನಗಳನ್ನು ಕೊಡಬೇಕೆಂದು ಪ್ರತಿಪಾದಿಸಿದರು. ಹೈಸ್ಕೂಲುಗಳಲ್ಲಿ ಸಂಸ್ಕೃತವನ್ನು ಕಡ್ಡಾಯವಿರಿಸಬೇಕೆಂದವರು ಅಭಿಪ್ರಾಯಪಟ್ಟರು.

ಪಂಜಾಬದ ನೀರಾವರಿ ಮತ್ತು ವಿದ್ಯುಚ್ಛಕ್ತಿಮಂತ್ರಿಗಳಾದ ಸರದಾರ ಗ್ಯಾನಸಿಂಗರಾಡೇವಾಲರು ಸಂಸ್ಕೃತಭಾಷೆಯು ಭಾರತದ ಸಾಂಸ್ಕೃತಿಕ ಪರಂಪರೆಯ ದ್ಯೋತಕವಿದ್ದು ಅದೇ ನಮ್ಮ ರಾಷ್ಟ್ರಭಾಷೆಯಾಗಬೇಕೆಂದು ನಾನು ಬಯಸುವುದಾಗಿ ಹೇಳಿದರು. ಸಂಸ್ಕೃತವು ರಾಷ್ಟ್ರಭಾಷೆಯಾಗುವುದರಿಂದ ಅನೇಕ ಭಾಷೆಗಳ ಅಭಿಮಾನಿಗಳಲ್ಲಿರುವ ಘರ್ಷಣೆಯು ತಪ್ಪುವುದು ಎಂದವರು ಅಭಿಮತ ವ್ಯಕ್ತಪಡಿಸಿದರು.

ಸಬಲ ಕಾಂಗ್ರೆಸ್

ಕಾಂಗ್ರೆಸಿಗರು ಮತ್ತು ವಿರೋಧೀ ಪಕ್ಷದವರು ಒಂದಾಗಿ ಕಾಂಗ್ರೆಸ್ ದುರ್ಬಲವಾಗಿದೆ ಎಂದು ಮನಸ್ಸಿಗೆ ಬಂದಂತೆ ಮಾತಾಡುವುದು ಉತ್ಸಾಹ ಹೀನತೆಯ ನಿರರ್ಥಕ ಉದ್ಗಾರಗಳಾಗಿವೆ. ಅಯೋಗ್ಯ ಜನರ ಪ್ರವೇಶದಿಂದ ಅಲ್ಲಲ್ಲಿ ಕೆಲವೊಂದು ದೋಷಗಳು ಕಂಡು ಬರುತ್ತಿರಬಹುದಾದರೂ ಅವು ತಾತ್ಪೂರ್ತಿಕವಾದುವುಗಳು. ರಾಷ್ಟ್ರದ ಕೆಲಪ್ರದೇಶಗಳಲ್ಲಿ ಕೆಲ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋತ ಮಾತ್ರಕ್ಕೆ ತಾನು ಚಿಂತಿಸುವುದಿಲ್ಲ ಆದರೆ, ನಾವು ಮೂಲ ಧ್ಯೇಯಗಳಿಗೆ ಅಂಟಿಕೊಂಡರೆ ನಮಗೆ ಜಯ ಖಂಡಿತ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು. ಕಾಂಗ್ರೆಸ್ಸು ಕಳೆದ ಕೆಲವು ವರ್ಷಗಳಲ್ಲಿ ಸಾಧಿಸಿದ ಕಾರ್ಯಗಳಿಗೆ ಅವರು ತಮ್ಮ ಸಮಾಧಾನವನ್ನು ತಿಳಿಸಿದರು. ಕಾಂಗ್ರೆಸ್ ದೊಡ್ಡ ಪಕ್ಷವಾಗಿದ್ದು ತಾತ್ಪೂರ್ತಿಕ ನಿರಾಶೆಗಳಿಂದ ಎದೆಗುಂದದೆ ಸಾರ್ವಜನಿಕ ಜೀವನದ ಮಟ್ಟವನ್ನೆತ್ತರಿಸುವ ಕರ್ತವ್ಯವನ್ನು ನಿರ್ವಹಿಸಬೇಕೆಂದವರು ಕಾಂಗ್ರೆಸಿಗರಿಗೆ ತಿಳಿಸಿದರು.

ತಿರುಪತಿಗೆ ಗಂಡಾನೆ

ಮೈಸೂರು ಸರಕಾರವು ತಿರುಪತಿಯ ಶ್ರೀ ವೆಂಕಟೇಶ್ವರ ದೇವಾಲಯಕ್ಕೆ ಒಂದು ಆನೆಯನ್ನು ಕಾಣಿಕೆಯಾಗಿ ಅರ್ಪಿಸಲು ಒಪ್ಪಿಕೊಂಡಿದೆ. ಆದುದರಿಂದ ಸುಲಕ್ಷಣವಾಗಿರುವ ಮತ್ತು ಧಾರ್ಮಿಕ ವಿಚಾರಗಳಿಗೆ ಅನುಗುಣವಾಗಿರುವ ಈ ಗಂಡಾನೆಯನ್ನು ಅರಣ್ಯಾಧಿಕಾರಿಗಳು ಹುಡುಕುತ್ತಿದ್ದಾರೆ. ಇಂತಹ ಆನೆ ಇನ್ನೂ ಸಿಕ್ಕಿಲ್ಲ.

ಮುತ್ತು ಮತ್ತು ಮಣಿಸುಗಳ ಬಾಂಧವ್ಯ

(೫ನೇ ಪುಟದಿಂದ)

ವ್ಯ ಕಾಲಕ್ಕೆ ಅದು ತೀರ ಉಚಿತವಾಗಿದೆ. ಕನ್ನಡದ ಕಂಪನ್ನರಿಯದವರಿಗೆ ಸಂಸ್ಕೃತದ ವಾಸನೆಯನ್ನೇಕೆ ಕೊಡಬೇಕು ಎಂದು ಸಂಸ್ಕೃತದ ಪ್ರಾಧಾನ್ಯವನು ಅಲ್ಲಗಳೆಯುವುದೂ ಸಹಜವೇ ಆದರೆ, ನಾವು ತಿಳಿಯುವಷ್ಟು ಸಂಸ್ಕೃತವನ್ನು ಅವಹೇಳನ ಮಾಡುವುದು ಸರಿಯಲ್ಲ. ಒಂದು ಕಾಲದಲ್ಲಿ ಅಖಂಡ ಭಾರತದಲ್ಲಿ ಮೆರೆದಾಡಿದ ಭಾಷೆಯಿದು; ಎಲ್ಲ ಭಾರತೀಯ ಭಾಷೆಗಳ ಮೇಲೆ ಬಲವಾದ ಮುದ್ರೆಯನ್ನೊತ್ತಿ ತನ್ನ ರೂಪವನ್ನು ಮರೆಯಾಗಿರಿಸಿದ ಮಹಾನ್ ಭಾಷೆಯಿದು. ಸಂಸ್ಕೃತ ಪದಗಳನ್ನು ಬಿಟ್ಟರೆ, ಇಂದು ನಾವಾಡುವ ನುಡಿಗಳು ನಮ್ಮ ದೈನಂದಿನ ಕಾರ್ಯಕ್ರಮಗಳಿಗೆ ಏನೇನೂ ಸಾಲವು. ಹಾಗಾಗಿ ಅದಷ್ಟು ಮಿತಪ್ರಮಾಣದಲ್ಲಿ ಇದನ್ನು ಇನ್ನೂ ಬಳಸಿಕೊಳ್ಳುವುದರಲ್ಲಿಯೇ ನಮ್ಮ ಭಾಷೆಯು ಮೇಲ್ಮೆಯಿದೆ; ಕನ್ನಡಿಗರ ಉನ್ನತಿಕೆಯಿದೆ.

ಭಾಷೆಯ ಅಪಪ್ರಚಾರ

ಇಂದು ನಾವು ತತ್ಸಮ ತದ್ಭವ ರೂಪಗಳನ್ನು ಅಭ್ಯಸಿಸುತ್ತೇವೆ. ನಮ್ಮ ನುಡಿಯ ವ್ಯಾಕರಣಕಾರರು ಈ ವಿಷಯದಲ್ಲಿ ಬಹಳ ಸ್ವಾತಂತ್ರ್ಯವನ್ನು ನಮಗೆ ಕೊಟ್ಟಿದ್ದಾರೆ. ನಾವಿದರ ಉಪಯೋಗವನ್ನು ಪಡೆಯುತ್ತೇವೆ. ಕೆಲವು ಅನವಶ್ಯಕ ಸಂಸ್ಕೃತ ಪದಗಳ ತದ್ಭವ ರೂಪಗಳನ್ನೂ ನಾವು ಬಳಸುವುದಿದೆ. ಆದರೆ, ಇಂತಹವುಗಳ ಅರ್ಥ ಕನ್ನಡಿಗರಿಗೆ ಆಗದು. ಉದಾಹರಣೆಗಾಗಿ ಪ್ರಾಯ—ಹರೆಯ ಕಪಿ—ಕವಿ. ಕಪಿ ಎಂಬ ಪದವು ಬಂದಾಗ ಅದರ ತದ್ಭವ ರೂಪವು ಕವಿ ಎಂದು ಕೊಡಬೇಕೆ? ಏಕೆ? ಬದಲು 'ಕವಿ' ಎಂದೆಲ್ಲಿಯಾದರೂ ಕಪ್ಯರ್ಥವಾಚಿಯಾಗಿ ಬಂದರೆ ಮಾತ್ರ ತತ್ಸಮ ರೂಪವನ್ನು ಕೊಟ್ಟರೆ ಸಾಕೆ? ಇದರಿಂದ ಶಬ್ದಾರ್ಥವೂ ಆಗುತ್ತದೆ. ಇಂತಹ ಹಲವಾರು ಪದಗಳು ಸದ್ಯದ ನಿರುಪಯೋಗಿ ಯಾದುವುಗಳು. ನಿರ್ದಿಷ್ಟಾರ್ಥದಲ್ಲಿ ಅಪರೂಪವಾಗಿ ಬರುವುವುಗಳು—ಈ ವಿಚಾರ ಪರಿಶೀಲನೀಯವಿದೆ.

ಇಂದು ನಮ್ಮಿಂದ ಸಂಸ್ಕೃತವನ್ನು ಸಂಪೂರ್ಣ ದೂರವಿರಿಸಿ ಕೇವಲ ಕನ್ನಡ ನುಡಿಗಳಿಂದಲೇ ಸ್ವಯಂಪೂರ್ಣರಾಗುವುದು ಸಾಧ್ಯವಿಲ್ಲ. ಆದಕ್ಕಾಗಿ ಸಂಸ್ಕೃತ ಪದಗಳನ್ನೂ ಅವಶ್ಯಕವೆನಿಸಿದಲ್ಲಿ ಬಳಸಿದರೆ ಬಾಧೆಯಾಗಲಾರದು. ಬದಲು ತನಗೆ ಗೊತ್ತಿದ್ದ ಎಲ್ಲ ಸಂಸ್ಕೃತ ಪದಗಳನ್ನು ಹಿಂದಿನ ಕವಿಗಳಂತೆಯೇ ತಾವೂ ಬಳಸಿಕೊಂಡರೆ ಅವರ ಕೃತಿ ಕೇವಲ ಒತ್ತುಂಗಂಡಿಯ ಮುದ್ದಳೆಯ ಜರ್ಝರಧ್ವನಿಗಳಂತೆ ನಿರಸನದಲ್ಲಿ ಅಂತ್ಯವಾಗುತ್ತದೆ. ಹಾಗೆಯೇ ಆಂತಯ್ಯನಂತೆ ಶುದ್ಧಗನ್ನಡ ಬಯಕೆಗಾರರ ಕಬ್ಬಗಳೂ ಹಿತಮಿತವಾಗಿ ಕರ್ಮಣಿಸರದಲ್ಲಿ ಜೆಂಬವಳವನ್ನು ಕೋದು ಮಾಡಿದ ಹಾರದಂತೆ ಸರ್ವ ಜನಮನ ಸ್ಪರ್ಶಿಯಾಗಿದ್ದರೆ ಮಾತ್ರ ಕೃತಿ ಕೃತಿ ರತ್ನವಾದೀತು; ಜನ ಮೆಚ್ಚುಗೆಯನ್ನು ಪಡೆದೀತು. ಆ ರೀತಿ ಮಾಡುವಂತೆ ಪ್ರಯತ್ನಶೀಲರಾಗುವುದು ಇಂದಿನ ಸಾಹಿತಿಗಳ ಕರ್ತವ್ಯ, ಮಹಾ ಕವಿಗಳ ಅಧ್ಯಯನ ಮಾರ್ಗ.

ಉಡುಪಿ ಕರ್ನಾಟಕ ಸಂಘದ ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು. ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ. ಎಲ್. ಐತಾಳ, ಎಂ.ಬಿ.ಬಿ.ಎಸ್.)

ಭೌತಿಕ ದರ್ಶನ
(ಬಡಕೈಲ ಕೃಷ್ಣ ಭಟ್ಟ ಎಲ್.ಎಲ್.ಬಿ.)

ಪ್ರತಿ ಪುಸ್ತಕದ ಬೆಲೆ ಒಂದೊಂದು ರೂ.

ಪ್ರತಿಗಳು ಸಿಗುವ ಸ್ಥಳ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ವಿದಾಯ ಸತ್ಕಾರ—ಜಿಲ್ಲಾ ಮುನಿಸಿಪಲ್ ಆಯುರ್ವೇದಿಕ್ ಧನ್ವಂತರಿಸ್ಸತ್ರೆಯ ಡಾ. ಕೆ. ವಿ. ಭಟ್ಟರು ತಾ. 14ರಂದು ನಿವೃತ್ತರಾದ ಕಾರಣ ಅವರಿಗೆ ವಿದಾಯವೀಯುವ ಸತ್ಕಾರ ಕೂಟವು ತಾ. 13ರಂದು ಮೋಹಿನಿವಿಲಾಸದಲ್ಲಿ ಮುನಿಸಿಪಲ್ ಕಮಿಶನರ್ ಶ್ರೀ ಟಿ. ಹರಿಶ್ಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ವಸಂತ ಸುವರ್ಣರು ಸ್ವಾಗತ ಮಾತುಗಳನ್ನಾಡಿದರು. ಡಾ. ಜಿ. ಸಂಜೀವ ಮಲ್ಲಿ, ಡಾ. ರಾಮಕೃಷ್ಣ ರಾವ್ ಮತ್ತು ಡಾ. ಎನ್. ಗೋಪಾಲಕೃಷ್ಣ ನಾಯ್ಕರು ಕಾಲೋಚಿತ ಮಾತುಗಳನ್ನಾಡಿದರು.

ದುಃಖಸೂಚಕ ಸಭೆ— ದ. ಕ. ಜಿಲ್ಲಾ ಇಲೆಕ್ಟ್ರಿಕಲ್ ಎಂಪ್ಲೊಯಿಸ್ ಯೂನಿಯನ್ನಿನ ಕಾರ್ಯಕಾರೀ ಸಮಿತಿ ಸಭೆಯು ತಾ. 15ರಂದು ಜರಗಿ ಇಲೆಕ್ಟ್ರಿಕಲ್ ಕಂಪೆನಿಯ ಅಸಿಸ್ಟಂಟ್ ಸುಪರಿಂಟೆಂಡೆಂಟರಾದ ಶ್ರೀ ಎಮ್. ಎಸ್. ಸೆಟ್ಟರ ನಿಧನದ ಬಗೆ ದುಃಖಸೂಚಕ ನಿರ್ಣಯವನ್ನು ಮಾಡಿತು.

ಹೊಸ ಹುದ್ದೆ—ದ. ಕ. ಜಿಲ್ಲಾ ಕೃಷಿ ಅಧಿಕಾರಿಗಳಾಗಿದ್ದ ಶ್ರೀ ಕೆ. ಸಂಜೀವ ಸೆಟ್ಟರಿಗೆ ಮೈಸೂರು ರಾಜ್ಯದ ಕರಿಮೆಣಸು ಬೆಳೆ ಅಭಿವೃದ್ಧಿ ಅಧಿಕಾರಿಯಾಗಿ ನೇಮಕವಾಗಿರುವುದರಿಂದ ಅವರು ತಮ್ಮ ಕೃಷಿ ಇಲಾಖೆಯ ಅಧಿಕಾರವನ್ನು ಶ್ರೀ ಯು. ಆನಂದನವರಿಗೆ ತಾ. 17ರಂದು ವಹಿಸಿಕೊಟ್ಟರು.

ಹಳೆ ವಿದ್ಯಾರ್ಥಿ ಸಂಘ ಸ್ಥಾಪನೆ—ಸ್ಥಳೀಯ ಮಿಲಾಗ್ರಿಸ್ ಹೈಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ತಾ. 17ರಂದು ಒರಿಸ್ಸಾದ ಅಸಿಸ್ಟಂಟ್ ಎಕೌಂಟ್ ಜನರಲ್ ಶ್ರೀ ಎಮ್. ಪ್ರೇಮ ಕುಮಾರ್, ಅವರು ನೆರವೇರಿಸಿದರು. ಮಿಲಾಗ್ರಿಸ್ ಚರ್ಚಿನ ಅಸಿಸ್ಟಾಂಟ್ ಪೆರಿಸ್ ಪ್ರೀಸ್ಟ್ ರೆ. ಫಾ| ಸಿ. ಡೇಸಾ ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಜಗತ್ತಿನ ದೊಡ್ಡ ತಾಂತ್ರಿಕ ಶಿಕ್ಷಣಾಲಯಗಳಲ್ಲಿ ಒಂದಾದ ಗ್ಲಾಸ್ಗೊವಿನ ರಾಯಲ್ ಕಾಲೇಜ್ ಅಫ್ ಸಾಯನ್ಸ್ ಎಂಡ್ ಟೆಕ್ನೊಲೊಜಿಯಲ್ಲಿ ನೂರಾರು ಪರದೇಶಿಯ ವಿದ್ಯಾರ್ಥಿಗಳು ಸಿವಿಲ್, ಮೆಕನಿಕಲ್ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್ ಪದವಿಗಳನ್ನು ಪಡೆಯುತ್ತಿದ್ದಾರೆ. ಚಿತ್ರದಲ್ಲಿ ಶ್ರೀ ಸಾಮುವೆಲ್ ವಿ. ಕೆಟ್ಟರು ವಿದ್ಯಾರ್ಥಿಗಳಿಗೆ ಉಪನ್ಯಾಸ ಕೊಡುತ್ತಿದ್ದಾರೆ.

ಆರಂಭದಲ್ಲಿ ಶಾಲಾ ಹೆಡ್ಮಾಸ್ತರ್ ರೆ| ಫಾ| ಸಿ. ಆರಾನ್ನಾರವರು ಸ್ವಾಗತ ಮಾತುಗಳನ್ನಾಡಿದರು. ಶ್ರೀ ಗಜಾನನ ಮಲ್ಯರು ವರದಿಯನ್ನೋದಿದರು.

ರೋಟರಿ ಕ್ಲಬ್ಬಿನ ಸಭೆಯು—ತಾ. 17ರಂದು ಸಂಜೆ ಉಪಾಧ್ಯಕ್ಷ ಶ್ರೀ ಎಮ್. ಎಸ್. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಪಿ. ಕಸ್ತೂರಿಯವರಿಂದ ಪ್ರಾರ್ಥನೆ, ಕಾರ್ಯದರ್ಶಿಗಳಿಂದ ಗತ ಸಭೆಯ ವರದಿ ವಾಚನಗಳಾದ ಬಳಿಕ ಶ್ರೀ ವಿ. ಎಮ್. ರಾವ್ ತಾಳಿತ್ತಾಯರು ಮಂಗಳೂರು ನಗರಕ್ಕೆ ನಳ್ಳಿನೀರು ಸರಬರಾಜಿನ ವಿಷಯ ಭಾಷಣವಿತ್ತರು.

ನಿಧನ— ಮದ್ರಾಸಿನ ವುಡ್‌ಲೇಂಡ್ಸ್ ಹೊಟೇಲಿನ ಮಾಲಕ ಶ್ರೀ ಕೃಷ್ಣರಾಯರ ಪತ್ನಿ ಶ್ರೀಮತಿ ಜಾನಕಿಯಮ್ಮನವರು ಮದ್ರಾಸಿನ ತನ್ನ ಸ್ವಗೃಹದಲ್ಲಿ ತಾ. 20ರಂದು ಮಧ್ಯಾಹ್ನ ದೈವಾಧೀನರಾದರು.

ಕಲಾ ಮಂದಿರದ ಉದ್ಘಾಟನೆ—ಸೆಂಟ್ರಲ್‌ವಾರ್ಡ್ ಮುನಿಸಿಪಲ್ ಬುನಾದಿ ಹಾ| ಪ್ರಾ| ಶಾಲೆಯಲ್ಲಿ ನೂತನವಾಗಿ ಕಟ್ಟಿಸಿರುವ 'ಕಲಾಮಂದಿರ'ದ ಉದ್ಘಾಟನೆಯನ್ನು ತಾ. 20ರಂದು ಶ್ರೀಮತಿ ಸರೋಜಿನಿ ಅದಿಗರು ನೆರವೇರಿಸಿದರು. ಶ್ರೀ ರಾಮರಾಜ ಕಿಣಿಯರು ಸ್ವಾಗತಮಾತುಗಳನ್ನಾಡಿದರು. ಸಮಾರಂಭದ ಅಧ್ಯಕ್ಷ ಸ್ಥಾನದಿಂದ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾತನಾಡುತ್ತಾ, ಒಂದು ಶಾಲೆಯು ಆ ಪಟಾರದ ವಿದ್ಯಾಮಂದಿರ ಮಾತ್ರವಾಗಿರದೆ ಅಲ್ಲಿಯ ಕಲಾಕೇಂದ್ರವೂ ಆಗಿರಬೇಕು. ಆ ಪಟಾರದ ಜನರಲ್ಲಿ ಸುಪ್ತವಾಗಿರುವ ಕಲೆಯ ಕುರಿತಾದ ಪ್ರೇಮವನ್ನು ಅಂಕುರಿಸುವಂತೆ ಮಾಡುವುದೇ ಇಂತಹ ಕಲಾಮಂದಿರಗಳ ಮುಖ್ಯ ಉದ್ದೇಶವಾಗಿರಬೇಕೆಂದರು. ವಿವಿಧ ವಿನೋದಾವಳಿಗಳೊಡನೆ ಸಮಾರಂಭ ಕೊನೆಗೊಂಡಿತು.

ಬೊಂಬಾಯಿ— ಇಲ್ಲಿಯ ಕರ್ನಾಟಕ ಸಂಘದ ಮಹಿಳಾ ಶಾಖೆಯವರು ತಾರೀಕು 18ರಂದು ಚೈತ್ರಗೌರಿ ಉತ್ಸವ ಮತ್ತು ಹೂವೀಳ್ಯ ಸಮಾರಂಭವನ್ನು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಸೌ| ಅಂಬುಜಾ ನಾರಾಯಣ ರಾಯರು ಮಾತನಾಡುತ್ತಾ ಸಂಸಾರದ ಹೊಣೆಗಾರಿಕೆಯಲ್ಲಿ ಹೆಂಗಸರ ಸ್ಥಾನವು ಮಹತ್ವವಾದುದೆಂಬುದನ್ನು ವಿವರಿಸಿದರು. ಕಾಲಕ್ಕೆ ಅನುಸಾರವಾಗಿ ಹೆಮ್ಮಕ್ಕಳು ತಮ್ಮ ಆಚರಣೆಗಳನ್ನು ಬದಲಾಯಿಸಿಕೊಳ್ಳಬೇಕಾಗಿದೆ ಎಂದರು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No 333/1957.
R. I. A. No. 327/1958
R. I. A. No. 325/1958.

ಮಂಜಯ್ಯ ಸೆಟ್ಟಿ—ಅರ್ಜಿದಾರ (ವಾದಿ)

1. ಗೋವಿಂದ ಸೆಟ್ಟಿ ವಾರೀಸುದಾರರು 2. ಕೃಷ್ಣಪ್ಪ ಸೆಟ್ಟಿ, 3. ನಾಗಮ್ಮ ಸೆಡ್ತಿ, 4. ಮಂಜಯ್ಯ ಸೆಟ್ಟಿ, 5. ನಾರಾಯಣ ಸೆಟ್ಟಿ, 6. ಪಾರ್ವತಿ ಸೆಡ್ತಿ 7. ಬುಳ್ಳು (ಮೈನರು).

—ಎದ್ರಿರು (ಪ್ರತಿವಾದಿರು)

ಮೇಲ್ಕಂಡ ಅರ್ಜಿಯು 2.3-4-5-6-7ನೇ ಎದ್ರಿರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ, ಸದ್ರಿ ದಾವೆಯಲ್ಲಾದ ಪ್ರಿಲಿಮಿನರಿ ಡಿಕ್ರಿ ಮೇಲೆ ಅರ್ಜಿದಾರನು R.I A 327/58ನೇ ಅರ್ಜಿ ಪ್ರಕಾರ ಫೈನಲ್ ಡಿಕ್ರಿ ಕೊಡಿಸಬೇಕಾಗಿಯೂ ಮತ್ತು 1ನೆ ಪ್ರತಿವಾದಿ ಗೋವಿಂದ ಸೆಟ್ಟಿ ಮೃತ ಪಟ್ಟದ್ರಿಂದ ಅತನ ಬಗ್ಗೆ 2ರಿಂದ 7ರ ವರೆಗಿನವರಾದ ನಿಮ್ಮನ್ನು ಸಪ್ಲಿಮೆಂಟು ಪ್ರತಿವಾದಿರನ್ನಾಗಿ ಸೇರಿಸಿಕೊಳ್ಳಬೇಕೆಂತಲೂ ದಾಖಲಮಾಡಿದ ಮೇಲ್ಕಂಡ ಅರ್ಜಿ ತನಿಖೆಯು ತಾರೀಕು 12—6—58ಕ್ಕೆ ಇಡೋಣಾಗಿಯದೆ. ಅದ್ದರಿಂದ ಮೇಲಿನ ಅರ್ಜಿ ಬಾಬಿನಲ್ಲಿ ಆಕ್ಷೇಪಗಳೇನಾದರೂ ಇದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಕೊರ್ಟಿನಮುಂದೆ ಹಾಜ್ರು ಆಗತಕ್ಕದ್ದೆಂತ ಈ ಮೂಲಕ ತಿಳಿಯಪಡಿಸೋದಾಗಿಯದೆ.

ಸೂರಪ್ಪ ಸೆಟ್ಟಿ ಕೊಕ್ಕರ್ಣೆ, ಎಡ್ವೊಕೇಟ್ ಅರ್ಜಿದಾರರ ಕಡೆ ವಕೀಲ.

ತಾ. 19.4 1958 ಮೊಕ್ಕಾಂ ಕುಂದಾಪುರ.

ಶ್ರೀ ಮದ್ಭಗವದ್ಗೀತೆ

(೪ನೇ ಪುಟದಿಂದ)

ಸ್ಥಿತಿಗೆ ಗುರಿಯಾಗಿದೆಯೆಂದೂ ಆದರ ಜ್ಞಾನಿಕ ಹೊರನೋಟ ಮೂಲಭೂತ ಸಮಸ್ಯೆಗಳ ಬಗ್ಗೆ ಅದು ಅವಿಚ್ಛಿನ್ನ ಪರಂಪರೆಯ ಕ್ರಮಬದ್ಧ ಕಲ್ಪನೆಯನ್ನೀಯುವುದರಲ್ಲಿ ಸಂಪೂರ್ಣ ವಿಫಲವಾಗಿದೆಯೆಂದೂ ಪಾಶ್ಚಾತ್ಯ ವಿದ್ವಾಂಸರಾದ ಶ್ರೀಗಳಾದ ಆರ್ ಗಾರ್ಬೆ, ಎಂ ವಿಂಟರ್ ನಿಟ್ಸ್, ಸ್ಕ್ರೇಯೆಡರ್ ಮೊದಲಾದವರ ವಾದಸರಣಿಯನ್ನು ಶ್ರೀ ಸ್ಟರ್ನವರು ತಪ್ಪೆನ್ನುತ್ತಾರೆ ಪ್ರಸಿದ್ಧ ಆಂಗ್ಲ ಕವಿಯಾದ ಷೇಕ್ಸ್ಪಿಯರನ ಕೃತಿಗಳಲ್ಲಿ ಅಸಂದಿಗ್ಧ ಪ್ರಕ್ಷಿಪ್ತ ವಾಕ್ಯಗಳು ತಮ್ಮ ನಾಟಕಗಳ ಅಖಂಡತೆಯನ್ನು ಭಂಗಪಡಿಸುವುದಿಲ್ಲವೆಂದವರು ಒಪ್ಪುವಾಗ, ಭಗವದ್ಗೀತೆಯ ನಡುವೆ ಸೇರಿಸಲ್ಪಟ್ಟಿರುವ ಅನೇಕ ವಿಷಯಗಳೂ ಆ ಕೃತಿಯ ಅಖಂಡತೆಯನ್ನು ಭಂಗಪಡಿಸಲಾರವು. ಸಾವಿರಾರು ವರ್ಷಗಳವರೆಗೆ ಬಾಯಿಯಿಂದ ಬಾಯಿಗೆ ಪರಂಪರಾಪ್ರಾಪ್ತವಾಗಿ ಪ್ರವಹಿಸಿಕೊಂಡು ಬಂದಿರುವ ಈ ಭಗವದ್ಗೀತೆಯಲ್ಲಿ ಪ್ರಕ್ಷಿಪ್ತ ಭಾಗಗಳಿರುವುದೂ ಸಂದೇಹ. ಒಂದು ವೇಳೆ ಇದ್ದರೂ ಅದು ಅಗಣನೀಯ ವೇದನರ ವಾದ ಭಗವದ್ಗೀತೆಯ ಶೈಲಿ ಭಾಷೆಗಳಿಂದ ಪ್ರಾಚೀನ ಸಂಸ್ಕೃತ ಕಾಲದ ಮೇರು ಕೃತಿ ಎಂದಿದನ್ನು ಕರೆಯುವುದು ತಪ್ಪಲ್ಲ

ಭಗವದ್ಗೀತೆಯು ಭಾರತದಲ್ಲಿ ಜನಪ್ರಿಯವಾಗಿದೆ ಅಂತೆಯೇ ಪರರಾಷ್ಟ್ರಗಳಲ್ಲಿಯೂ ಅದರಲ್ಲಿನ ಆಧ್ಯಾತ್ಮಿಕ ವಿಚಾರಸರಣಿಯು ನಮ್ಮ ಕಾಲಕ್ಕೆ ತೀರ ಸಮೀಪವಾದುದಾಗಿರುವುದರಲ್ಲಿ ಇಲ್ಲಿ ಬರುವ ಆಧ್ಯಾತ್ಮಿಕತೆಯು ಜನತೆಯನ್ನು ಹೊಡೆದೆಬ್ಬಿಸಲು ಶಕ್ತವಾಗಿದೆ ಎಂತಲೇ ವಿಶ್ವಶಾಂತಿಯನ್ನು ಬಯಸುವ ಪ್ರತಿ ಮಾನವನೂ ಈ ಗೀತೆಯನ್ನು ಆಳವಾಗಿ ಅಭ್ಯಾಸಮಾಡುವುದಲ್ಲದೆ, ಅದರಲ್ಲಿ ಅಡಕವಾಗಿರುವ ಮೂಲ ತತ್ವಗಳನ್ನು ತನ್ನ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಮಾನವನು ಸುಖಿಯಾಗಿರಲಿ, ದುಃಖಿಯಾಗಿರಲಿ, ಭಗವದ್ಗೀತೆಯನ್ನು ಓದುವಾಗಲೇ ಆತನ ಮನಸ್ಸು ನಿರ್ಮಲವೂ ಶಾಂತವೂ ಆಗುವುದು. ಏಕೆಂದರೆ, ಇದು ಕುರುಕ್ಷೇತ್ರದ ರಣಭೇರಿಗಳ ನಟ್ಟನಡುವೆ ಉದ್ಘೋಷಿಸಲಾದ ಉಪದೇಶಾಮೃತ ಎಂತಲೇ ಇದು ಆಚಂದ್ರಾರ್ಕ ಚಿರಸ್ಥಾಯಿ ಅಮರ ಇಂತಹ ವಿಶ್ವಧರ್ಮವನ್ನು ಬೋಧಿಸುವ ಗ್ರಂಥದ ಅಭ್ಯಾಸ ದಿನದಿನವೂ ಹೆಚ್ಚಲಿ

ಶ್ರೀ ಶಿವರಾಮ ಕಾರಂತರ
ಪುಸ್ತಕಗಳು

ನಂಬಿದವರ ನಾಕ,ನರಕ	3=00
ಕಂಚುಮತು	2=50
ಮಂಗಳಾರತಿ	1=00
ನಮ್ಮ ಸುತ್ತಲಿನ ಕಡಲು	1=75
ಪರಮಾಣು, ಇಂದು ನಾಳೆ	3=00
ಸವಿಾಕ್ಷೆ	2=00
ಮೈಲುಕಲ್ಲಿನೊಡನೆ ಮಾತುಕತೆಗಳು	1=00
ಔದಾರ್ಯದ ಉರುಳಲ್ಲಿ	7=50

ನವಭಾರತ ಪುಸ್ತಕ ಭಂಡಾರ, ಉಡುಪಿ

ವಾರದ ಮಹಾನುಭಾವ—

ಶ್ರೀ ಜಿ. ಪಾರಸ ಸಾರಥಿ

ನಮ್ಮ ನೆರೆರಾಷ್ಟ್ರವಾದ ಚೀನದ ಮಹತ್ವವು ನಮಗೆಷ್ಟೆಂದು ಹೇಳುವ ಆವಶ್ಯಕತೆಯಿಲ್ಲ ಗೃಹ ಯುದ್ಧಗಳಿಂದ ತ್ರಸ್ತವಾದ ಹಿಂದೇಶಿಯ ಬಗ್ಗೆ ಅನುಭವವಿರುವ ಒಬ್ಬ ವ್ಯಕ್ತಿಯನ್ನು ಚೀನಕ್ಕೂ ಈ ಕಾರಣಗಳಿಗಾಗಿಯೇ ಕಳುಹಿಸುತ್ತಿರುವುದು ಅಧಿಕ ಮಹತ್ವಪೂರ್ಣ ಸಂಗತಿಯಾಗಿದೆ ಹಿಂದೇಶಿಯಾದಲ್ಲಿರುವ ಶ್ರೀ ಪಾರಸ ಸಾರಥಿಯವರನ್ನೀಗ ಕಮ್ಯುನಿಸ್ಟ್ ಚೀನದಲ್ಲಿ ಭಾರತದ ರಾಜದೂತರಾಗಿ ನೇಮಿಸಲಾಗಿದೆ

ಹಿಂದೇಶಿಯಾದ ಗೃಹಕಲಹದಲ್ಲಿ ಭಾರತವು ವಹಿಸಿದ ಪಾತ್ರವು ವಿಶ್ವವಿಖ್ಯಾತವಾಗಿದೆ ಯುಕ್ತ ರಾಷ್ಟ್ರಸಂಘದಲ್ಲಿ ಭಾರತೀಯ ಸ್ಥಾಯಿ ಪ್ರತಿನಿಧಿಯಾಗಿರುವ ಶ್ರೀ ಅರ್ಥರಲಾಲರನ್ನು ಆ ದೇಶದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಿದುದೇ ಇದಕ್ಕೆ ಪ್ರತ್ಯಕ್ಷ ಪ್ರಮಾಣವಾಗಿದೆ ಇದೇ ರೀತಿಯಲ್ಲಿ ಹಿಂದೇಶಿಯಾದ ಸ್ಥಿತಿಯಿಂದ ಕಮ್ಯೂನಿಸ್ಟ ಚೀನದ ಪರಿಸ್ಥಿತಿಯೂ ಸ್ವಾಭಾವಿಕವಾಗಿದೆ ಇಂತಹ ಸಮಯದಲ್ಲಿ ಹಿಂದೇಶಿಯಾದ ವರ್ತಮಾನ ಸ್ಥಿತಿಗಳನ್ನು ತಿಳಿದಿರುವ ಶ್ರೀ ಪಾರಸ ಸಾರಥಿಯವರು ಚೀನಕ್ಕೆ ತೆರಳಿ ಅಲ್ಲಿನ ಸರಕಾರಕ್ಕೆ ಎಷ್ಟು ಉಪಯೋಗಿಗಳಾಗುವರೆಂದು ಮುಂದ ತಿಳಿಯಬೇಕು ಒಂದು ವಿಧದಿಂದ ಈ ನೇಮಕದ ಮೂಲಕ ಭಾರತ ಸರಕಾರವು ಹಿಂದೇಶಿಯಾದ ಸ್ಥಿತಿಯಲ್ಲಿ ಚೀನ, ಭಾರತಗಳ ನಡುವೆ ಸಂಬಂಧ ಪರಿಸ್ಥಿತಿ ನಿರ್ಮಿಸುವ ಮಹತ್ವದ ಕಾರ್ಯವನ್ನು ಮಾಡಿದೆ ಶ್ರೀ ಪಾರಸ ಸಾರಥಿಯವರು ತಮ್ಮ ಸರಕಾರದ ಈ ಆಂತರಿಕ ಅಭಿಪ್ರಾಯವನ್ನೆಷ್ಟು ಸಾರ್ಥಕಗೊಳಿಸುವರೆಂದು ಮುಂದೆ ನೋಡಲಿದೆ

ಸ್ವರ್ಗೀಯ ಗೋಪಾಲ ಸ್ವಾಮಿ ಐಯಂಗಾರರ ದೇಶ ಸೇವೆಯ ರಾಜಕೀಯ ಜ್ಞಾನವರಿದಿರುವ ಭಾರತೀಯನು ಪ್ರಾಯಶಃ ಇರಲಾರನು ಸರದಾರ ಪಟೇಲರ ನಂತರ ಭಾರತದೊಳಗಿನ ಬೇರೆ ಬೇರೆ ರಾಜ್ಯಗಳನ್ನು ವಿಲೀನಗೊಳಿಸುವಲ್ಲಿ ಸರ್ವಾಧಿಕ ಮಹತ್ವಪೂರ್ಣ ಕಾರ್ಯಸಾಧಿಸಿದವರ ದಿವಂಗತ ಎನ್ ಐಯಂಗಾರರಾಗಿದ್ದರು ಶ್ರೀ ಜಿ ಪಾರಸ ಸಾರಥಿಯವರು ಆವರ ಏಕಮಾತ್ರ ಪುತ್ರರಾಗಿದ್ದಾರೆ

ಶ್ರೀ ಪಾರಸ ಸಾರಥಿಯವರು ಭಾರತ ನ ಸಮಾಚಾರ ಸಂಸ್ಥೆ (ಪಿ ಟಿ ಐ) ಯ ಲಂಡನ್ ನಗರದ ಮುಖ್ಯ ಸಂವಾದವಾಹಕರಾಗಿರುವುದಕ್ಕೆ ಮೊದಲು ಮದ್ರಾಸಿನ ಪ್ರಸಿದ್ಧ ದೈನಿಕ 'ಹಿಂದೂ" ವಿನ ಸಹ ಸಂಪಾದಕರಾಗಿದ್ದರು ಈ ರೀತಿಯಲ್ಲಿ ಶ್ರೀ ಸಾರಥಿಯವರ ಪ್ರಥಮ ಸಾರ್ವಜನಿಕ ಜೀವನವು ಪತ್ರಿಕಾ ವ್ಯವಸಾಯದಿಂದ ಆರಂಭವಾಯಿತು. ಭಾರತದ ಒಬ್ಬ ಪ್ರಸಿದ್ಧ ಪತ್ರಿಕಾಕರ್ತರು ಶ್ರೀ ಸಾರಥಿಯವರನ್ನು "ಆಶ್ಚರ್ಯಜನಕ ಪತ್ರಿಕಾ ವ್ಯವಸಾಯಿ, ಎಂದು ಉದ್ಗರಿಸಿದ್ದರು

ಇದಕ್ಕೂ ಪೂರ್ವದಲ್ಲಿ ಶ್ರೀ ಸಾರಥಿಯವರೊಬ್ಬ ಉತ್ತಮ ಕ್ರಿಕೆಟ್ ಆಟಗಾರರೆಂದು ಹೆಸರು ಪಡೆದಿದ್ದರು ಆದುನೀಕತೆಯ ಆ ಸಮಯದಲ್ಲಿಯೂ ಶ್ರೀ ಸಾರಥಿಯವರು ಧೋತಿ ಮತ್ತು ಅಂಗಿಗಳನ್ನೇ ತನ್ನ ತೊಡುಗೆಯಾಗಿ ಬಳಸಿಕೊಳ್ಳುತಿದ್ದರು ಇದು ಅವರ ಸರಳತೆಯನ್ನು ವ್ಯಕ್ತಪಡಿಸುತ್ತದೆ ಅವರು ಯಾವ ರಾಜಕೀಯ ಪಕ್ಷದ ಸದಸ್ಯರಾಗಲು ಒಪ್ಪದಿದ್ದರೂ ಅವರ ವಿಚಾರಗಳು ಸೋಶಿಯಲಿಸ್ಟ್ ಪಕ್ಷದತ್ತ ವಾಲಿತ್ತೆಂದು ತಿಳಿಯುತ್ತದೆ ಅವರು ಆಕಾಶವಾಣಿ ಪ್ರಪಂಚದಲ್ಲಿಯೂ ಒಬ್ಬ ಉಪನ್ಯಾಸಕಾರರೆಂದು ಕೀರ್ತಿಶಾಲಿಗಳಾಗಿದ್ದಾರೆ

ಶ್ರೀ ಪಾರಸ ಸಾರಥಿಯವರ ಪತ್ನಿ ಒಬ್ಬ ಪಾರಸೀ ಮಹಿಳೆಯಾಗಿದ್ದಾರೆ ಒಬ್ಬ ಪುತ್ರನ ತಂದೆಯಾಗುವ ಗೌರವವನ್ನೂ ಅವರು ಪಡೆದಿದ್ದಾರೆ ಸಾಹಿತಿಕ ಪರೀಕ್ಷೆಯಲ್ಲಿ ಅವರ ಪತ್ನಿ ಶ್ರೀಮತಿ ಸುಟುರ ಪಾರಸ ಸಾರಥಿಯವರು ಮದ್ರಾಸ ಪ್ರಾಂತದಲ್ಲಿ ಪ್ರಪ್ರಥಮ ವರ್ಗದಲ್ಲಿ ಉತ್ತೀರ್ಣರಾಗುವ ಸ್ವರ್ಣ ಸುಯೋಗವನ್ನು ಪಡೆದಿದ್ದರು ಹೀಗಾಗಿ ಅವರ ಸಂಸಾರಿಕ ಜೀವನವು ಸಂತೋಷಪ್ರದವಾಗಿಯೇ ಇದೆ

ಭಾರತ ಸರಕಾರದ ಅತಿಥಿಗಳಾಗಿ ಇತ್ತೀಚೆಗೆ ಭಾರತವನ್ನು ಸಂದರ್ಶಿಸಿದ ಜನರಲ್ ಸರ್ ಫ್ರಾನ್ಸಿಸ್ ಫೆಸ್ಟಿಂಗರು ಬ್ರಿಟಿಷ ದೂರ ಪ್ರಾಚ್ಯ ಭೂಸೇನೆಯ ಕಮಾಂಡರರಾಗಿದ್ದು ಮುಂದಿನ ಸಪ್ಟಂಬರ ತಿಂಗಳಲ್ಲಿ ಇಂಪೀರಿಯಲ್ ಜನರಲ್ ಸ್ಟಾಫ್‌ನ ಮುಖ್ಯಾಧಿಕಾರಿಯ ಹುದ್ದೆಯನ್ನು ಸ್ವೀಕರಿಸಲಿರುವರು

ಶ್ರೀ ಪಾರಸ ಸಾರಥಿಯವರು ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮದ್ರಾಸಿನಲ್ಲಿ ಮುಗಿಸಿದರು ಅನಂತರ ತಮ್ಮ ೨೦ನೆಯ ವಯಸ್ಸಿನಲ್ಲಿಯೇ ಐ ಸಿ ಎಸ್ ಪರೀಕ್ಷೆಗಾಗಿ ಲಂಡನಿಗೆ ತೆರಳಿದರು ದುರ್ಭಾಗ್ಯದಿಂದ ಅವರು ಉತ್ತೀರ್ಣರಾಗಲಿಲ್ಲವಾದುದರಿಂದ ವಕಾಲತಿನ ಕಡೆಗೆ ತಿರುಗಿದರು ವಕೀಲರಾದ ನಂತರ ಅವರು ಸ್ವದೇಶಕ್ಕೆ ಮರಳಿದರು ಇದಾದ ಕೆಲಸಮಯದ ನಂತರ ಪ್ರಾಯಃ ೧೯೩೦ರಲ್ಲಿ ಅವರು ಪುನಃ ಲಂಡನಿಗೆ ಹೋದರು ಪತ್ರಿಕಾಕಾರರಾಗಿ ಈ ಸಂದರ್ಭದಲ್ಲಿ ಅವರಲ್ಲಿಗೆ ತೆರಳಿದ್ದರು ಅಲ್ಲಿ ಅವರು "ಲಂಡನ್ ಟೈಮ್ಸ್" ಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಸಮ್ಮಿಲನಗೊಂಡರು ಈ ಪತ್ರಿಕೆಯ ವಿದೇಶ ವಿಭಾಗದಲ್ಲಿ ಅವರು ಸುಮಾರ ಒಂದು ವರ್ಷ ದುಡಿದರು. ಆ ವೇಳೆ 'ಹಿಂದೂ' ವಿನ ಸಂಪಾದಕೀಯ ವಿಭಾಗವನ್ನು ಪ್ರವೇಶಿಸಿದರು ಈ ಪತ್ರಿಕೆಯಲ್ಲಿ ೧೨ ವರ್ಷಗಳ ಕಾಲ ಸೇವೆ ಸಲ್ಲಿಸಿದರು ಶ್ರೀ ಪಾರಸ ಸಾರಥಿಯವರು ತಮ್ಮ ವ್ಯಕ್ತಿತ್ವದಲ್ಲಿ ಸುಮಧುರರಿರುವಂತೆಯೇ ತಮ್ಮ ಕಾರ್ಯದಲ್ಲಿಯೂ ಸುಮಧುರರಿದ್ದಾರೆ ಅವರು ಐ ಸಿ ಎಸ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದುದರ ಪರಿಣಾಮವಾಗಿಯೇ ಇಷ್ಟು ಅಧಿಕ ಜಾಗ್ರತರಾಗಿದ್ದಾರೆಂದೂ ತನ್ಮೂಲಕ ಎಲ್ಲ ಕಾರ್ಯಗಳಲ್ಲಿಯೂ ಸಫಲರಾಗುತ್ತಿರುವರೆಂದೂ ಅವರ ಮಿತ್ರರು ಹೇಳುತ್ತಾರೆ

ಇದೀಗ ಅವರು ಚೀನದ ರಾಜದೂತರಾಗಿ ನೇಮಿಸಲ್ಪಟ್ಟಿದ್ದಾರೆ ಇವರ ಮಾಧ್ಯಮದಿಂದ ಭಾರತ ಚೀನಗಳ ನಡುವಣ ಮೈತ್ರಿಯು ವರ್ಧಿಸುವುದೆಂದು ನಂಬಿದರೆ, ಆ ವಿಶ್ವಾಸವು ಎಂದಿಗೂ ಮಿಥ್ಯವಾಗದು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ - ಸಾಧಾರಣ ಪ್ರತಿ- ರೂ ೧-೮-೦ (ಟಪ್ಪಾಲು ಖರ್ಚು ಬೇರೆ)
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಕ್ಕಳ ಮಗ್ಗಿಪುಸ್ತಕ
(ನಯೇ ಪೈಸೆ ಕೋಷ್ಟಕ ಸಹಿತ)
ಬೆಲೆ ರೂ 0 1 0
ನವಯುಗ ಪ್ರೆಸ್, ಉಡುಪಿ

ಪುಸ್ತಕ-ವಿಮರ್ಶೆ

(ವಿಮರ್ಶೆಗಾಗಿ ಪುಸ್ತಕಗಳನ್ನು ಕಳಿಸು ವವರು ದಯಮಾಡಿ ಎರಡು ಪ್ರತಿಗಳನ್ನು ಕಳಿಸಬೇಕು. ಸಂ. ನ.)

ಸಾಹಿತ್ಯ ವಿಹಾರ—(ಅಖಿಲ ಭಾರತ ಆಕಾಶವಾಣಿ ಭಾಷಣಗಳು) ಪ್ರಕಾಶಕರು: ಭಾರತ ಸರಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದ ಪ್ರಕಾಶನ ವಿಭಾಗ. ದೆಹಲಿ ೮. ಪುಟಗಳು: 20. ಬೆಲೆ. ರೂ. ೦-೩-೦.

ಕನ್ನಡದ ದೊಡ್ಡ ವಿದ್ವಾಂಸರಾದ ಶ್ರೀ ವಿ. ಸೀತಾರಾಮಯ್ಯನವರು "ಭೀಮ ದುರ್ಯೋಧನರ ಗದಾಯುದ್ಧ" ಮತ್ತು ಶ್ರೀ ಕು. ವೆಂ. ಪುಟ್ಟಪ್ಪನವರು "ಪಂಪನ ಕರ್ಣ"—ಈ ವಿಷಯಗಳ ಕುರಿತಾಗಿ ಆಕಾಶವಾಣಿಯಲ್ಲಿ ಮಾಡಿದ ಭಾಷಣಗಳನ್ನು ಈ ಸಣ್ಣ ಪುಸ್ತಕದಲ್ಲಿ ಪ್ರಕಾಶಪಡಿಸಲಾಗಿದೆ. ಎರಡೂ ವಿಷಯಗಳು ಜನಾನಂದಕರವೆನಿಸಿದ ಮತ್ತು ನಮ್ಮ ಕಾಲಕ್ಕೆ ಸಮೀಪವಾದ ಮಹಾಭಾರತದಿಂದಲೇ ಆರಿಸಲಾಗಿದೆ. ಮೊದಲನೆಯದು ಕನ್ನಡದಲ್ಲಿ ರಚಿತವಾಗಿರುವ ನಾಲ್ಕಾರು ಜನಪ್ರಿಯ ಭಾರತಗಳ ಆಧಾರದಿಂದಲೂ (ಅವೆಲ್ಲವೂ ಮೂಲ ಭಾರತನ್ನು ಅಲ್ಪಸ್ವಲ್ಪ ಬದಲಾವಣೆಗಳೊಂದಿಗೆ ನಿರೂಪಿಸುತ್ತವೆ) ಎರಡನೆಯದು ಪಂಪ ಭಾರತದಿಂದಲೂ ಸಂಗ್ರಹಿಸಲಾಗಿದೆ

ಭೀಮ ದುರ್ಯೋಧನರಲ್ಲಿ ಗದಾಯುದ್ಧವಾಗುವುದಕ್ಕೆ ಅವರಿಬ್ಬರೊಳಗೆ ಅನಾದಿಯಿಂದಲೂ ಬೆಳೆದು ಬಂದಿದ್ದ ದ್ವೇಷವೇ ಕಾರಣ. ಪಾಂಡವ-ಕೌರವರು ತಂತಮ್ಮ ತಾಯಿಂದಿರ ಅಸಹನೆ ಮತ್ತು ಅಸೂಯೆಗಳಿಂದಲೇ ಜನಿಸಿದರು ಇದರಿಂದ ಇಬ್ಬಣಗಳೊಳಗೆ ವೈರ ಹೆಚ್ಚಿತು. ಇದೇ ಮುಂದೆ ಉಲ್ಬಣಾವಸ್ಥೆಗೇರಿ ಕುರುಕ್ಷೇತ್ರದ ಮಹಾಯುದ್ಧಕ್ಕೆ ನಾಂದಿಯಾಯಿತು. ಭೀಮನು "ಇವನನ್ನು ಭಂಗಿಸಲು ನನಗೆ ಧರ್ಮಾಧರ್ಮಗಳ ವಿವೇಚನೆ ಬೇಡ, ನಾಕ ಬರಲಿ, ನರಕ ಬರಲಿ, ಅನುಭವಿಸಿಕೊಳ್ಳುತ್ತೇನೆ' ಎಂದು ಭಾವಿಸಿದ ವಿವೇಕ ಶೂನ್ಯನಂತೆ ಅಭಿನಯಿಸಿ ಕುರುಕುಲ ಚೂಡಾ ಮಣಿಯನ್ನು ಕೆಡೆದು ಬಿಟ್ಟನು. ಶ್ರೀ ವಿ. ಸೀ.ಯವರ ಲೇಖನಿಯಿಂದ ಈ ಕಥಾಭಾಗವು ಕೇವಲ ೧೦ ಪುಟಗಳಲ್ಲಿ ಸಂಗ್ರಹವಾಗಿ ಹೊರಬಂದಿದೆ ಇಲ್ಲಿ ಅವರು ಭೀಮನ ದೃಢ ಮನಸ್ಸಿಗೆ ಪ್ರಾಧಾನ್ಯವಿತ್ತಿದ್ದಾರೆ. ಅವರೆ ದುರ್ಯೋಧನನು ತಪ್ಪುಮಾಡಿದ್ದರೂ, ಆತನು ಅಕ್ಷಮ್ಯನಾಗಿದ್ದರೂ ಕೊನೆಗಾಲದಲ್ಲಿಯೂ ಆತನು ತನ್ನ ನಿರ್ಧಾರಕ್ಕೆ ಅಂಟಿಕೊಂಡಿದ್ದುದರಿಂದಲೇ ಈ ಗದಾಯುದ್ಧ ನಡೆಯಬೇಕಾಯಿತೆಂಬುದನ್ನು ಮರೆಯಬಾರದು. ಧರ್ಮರಾಯನು ಹೇಳಿದೊಡನೆಯೇ ಈತನು ನಿರಭಿಮಾನಿಯಾಗಿ ಸಂಧಿಗೊಡಂಬಡುತ್ತಿದ್ದರೆ, ಆಗ ಕೇವಲ ಭೀಮನ ಕೆಚ್ಚಿನಿಂದೇನು ಪ್ರಯೋಜನ? ಆದರೂ ಕೌರವನು ಪ್ರತಿಕೂಲ ದೈವನು; ಪಾಂಡವರು ಅನುಕೂಲದೈವರುಎಂತಲೇ ಕೊನೆಯುಂತಾಯಿತು.

ಪಂಪ ಭಾರತದಲ್ಲಿ ಅಲ್ಲಲ್ಲಿ ಪಸರಿ ಹೋಗಿರುವ ಕರ್ಣನ ಕಥೆಯನ್ನು ಆತನ ಪಾತ್ರ ಪರಿಪೋಷಣೆಗೆ ಅನುಗುಣವಾಗಿ ಎರಡನೆಯ ಭಾಷಣದಲ್ಲಿ ಸಂಗ್ರಹಿಸಲಾಗಿದೆ. "ಕರ್ಣಂಗೆ ದಲೊಡ್ಡಿತ್ತು ಭಾರತಂ, ನನ್ನಿಯೊಳಿನ ತನಯಂ, ಕರ್ಣನಿಂ ಕರ್ಣರಸಾಯನಮಲ್ತೆ ಭಾರತಂ? ಭಾರತಪೊಳ್ ಪೆರರಾರುಮಂ ನೆನೆಯದಿರ್, ನೆನೆವೊಡೆ ಕರ್ಣನಂ ನೆನೆಯ" ಎಂದು ಕರ್ಣನ ಬಗ್ಗೆ ಅನುಕಂಪತಾಳಿದ ಕನ್ನಡದ ಆದ್ಯಕವಿ ಪಂಪನು ಚಿತ್ರಿಸಿದ ಕರ್ಣನನ್ನು ಸರಳ ಶೈಲಿಯಲ್ಲಿ ಕುವೆಂಪು ತಮ್ಮ ಭಾಷಣದಲ್ಲಿ ಲಿಖಿಸಿದ್ದಾರೆ.

ಇಂತಹ ಸಂಕ್ಷಿಪ್ತ ಭಾಷಣಗಳಲ್ಲಿ ಸೂಕ್ಷ್ಮವಾಗಿ ವಿವೇಚನೆ ನಡೆಸುವುದು ಅಸಾಧ್ಯ ಅಲ್ಲದೆ ಅದು ಅದರ ಉದ್ದೇಶವೂ ಆಗಿರಲಾರದು ತಾವು ಪ್ರಸಾರ ಪಡಿಸಿದ ಭಾಷಣಗಳನ್ನು ಪ್ರಕಾಶ ಪಡಿಸಿದ ಸರಕಾರವೂ ಋಣಿ.

ರಜತ ಪೀಠದಿಂದ ರಜತಾದ್ರಿಗೆ-ಬರೆದವರು ಶ್ರೀ ಯು. ರಾಘವೇಂದ್ರ ಕೃಷ್ಣ ಭಟ್ಟ. ಪ್ರಕಾಶಕರು: ಶ್ರೀ ಯದುಚಂದ್ರ ಪ್ರಕಾಶನ, ಉಡುಪಿ ಪುಟಗಳು: ೩೨+೧೮೦+೧೦೪, ಬೆಲೆ: ರೂ. ೩-೦೦.

ಭಾರತವು ಪುಣ್ಯ ಕ್ಷೇತ್ರಗಳ ತವರ್ಮನೆ ಈ ಕ್ಷೇತ್ರವನ್ನು ಸಂದರ್ಶಿಸುವುದರಿಂದ ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾಗಿ ಇಹಪರ ಸುಖವನ್ನು ಅನುಭವಿಸಬಹುದೆಂದು ಸನಾತನರ ವಿಶ್ವಾಸ ಇದನ್ನು ಅಂಧ ವಿಶ್ವಾಸವೆಂದು ಹೆಸರಿಸುವವರೂ ಇದ್ದಾರ ಆದರೆ, ಹಿಂದಿನಿಂದಲೂ ನಂಬಿಕೊಂಡು ಬಂದ ಸಂಗತಿ ಸುಮ್ಮನೇ ಪಾವರಹಿತವೆನ್ನುವುದು ದಾಷ್ಟ್ಯರ್ದ ಮಾತಾದೀತು

ಉಡುಪಿಯಿಂದ ಕಾರಣಾಂತರದಿಂದ ಹೊರಟ ಲೇಖಕರಿಗೆ ಆಧ್ಯಾತ್ಮಿಕದತ್ತ ಒಲವು ಪ್ರಬಲಿಸಿ, ರಜತಾದ್ರಿಯ ಕೈಲಾಸಾಧಿಪತಿ, ಲಕ್ಷ್ಮೀಪತಿಯರ ದರ್ಶನ ಲಾಭಪಡೆಯುವ ವಾಂಛೆಯುದ್ಭವಿಸಿ ಅವರು ದೃಢ ನಿರ್ಧಾರದಿಂದ ಈ ತಮ್ಮ ಯಾತ್ರೆಯನ್ನು ಕಳೆದ ವರ್ಷ ಮುಗಿಸಿಬಂದರು ಬಂದವರೇ ತಾವು ಮಾಡಿದ ಯಾತ್ರೆಯ ಕಥೆ-ಪ್ರವಾಸಕಥನವನ್ನು ಎಲ್ಲರಿಗೂ ತಿಳಿಸಿ, ಅವರಲ್ಲಿಯೂ ಸುಪ್ತವಾಗಿರುವ ಅಧ್ಯಾತ್ಮಿಕ ಭಾವನೆಯು ಕೆರಳುವಂತೆ ಮಾಡಿದ್ದಾರೆ ಸಾಧ್ಯವಾದರೆ ತಾವೂ ಈ ಸಾಹಸಕ್ಕೆ ಕೈ ಹಾಕುವ ಮನಸ್ಸು ಮಾಡಬಹುದು, ಇಲ್ಲವಾದರೆ ಓದಿಯಾದರೂ ತೃಪ್ತಿ ತೃಪ್ತಿ ಪಡೆಯಬಹುದು ಎಂದು ಅವರ ಅಭಿಪ್ರಾಯವಿರಬೇಕು ಕೇದಾರನಾಥ ಬದರೀನಾಥಾದಿ ಪರ್ವತದ ಮೇಲಿನ ತೀರ್ಥ ಸ್ಥಳಗಳು ವರ್ಷದ ಆರು ತಿಂಗಳು ಹಿಮಾವೃತವಾಗಿರುವ ವಿಚಿತ್ರ ಕ್ಷೇತ್ರಗಳು. ಅಂತಹ ಪ್ರದೇಶಗಳಿಗೆ ಹೋಗುವುದೆಂದರೆ, ಅದು ತೀರಾ ಪ್ರಯಾಸದ ಕೆಲಸ ಏನಾದರೂ ಕಷ್ಟಸಾಧ್ಯವೆನಿಸಿದ ಕಾರ್ಯಗಳನ್ನು ಕಾಶೀಯಾತ್ರೆ, ಬದರೀಯಾತ್ರೆಗಳಿಗೆ ಹೋಲಿಸುವ ಪರಿಪಾಠ ನಮ್ಮಲ್ಲಿದೆ ಎಂತಲೇ ಈ ಯಾತ್ರೆಯು ದೃಢೀಕೃತ ಮನಸ್ಕೇತರರಿಗೆ ಸಾಧ್ಯವಾಗುವ ಕೆಲಸವಲ್ಲ.

ಲೇಖಕರು ತಮ್ಮ ಯಾತ್ರೆಯ ಸಿಹಿಕಹಿ ಅನುಭವಗಳನ್ನು ಈ ಗ್ರಂಥದಲ್ಲಿ ವಿವರಿಸಿದ್ದಾರೆ ಸಾಮಾನ್ಯವಾಗಿ, ಒಬ್ಬ ನೂತನ ಯಾತ್ರಿಕನು ಅನುಭವಿಸುವ, ಅನುಭವಿಸಬೇಕಾದ, ಎದುರಾಗುವ ಎಲ್ಲ ಸನ್ನಿವೇಶ, ಸಂದರ್ಭಗಳನ್ನೂ ಲೇಖಕರು ಕಣ್ಣಿಗೆಕಟ್ಟುವಂತೆ ವರ್ಣಿಸಿದ್ದಾರೆ. ಮಾನವನೇ ಸರ್ವ ಶಕ್ತ ಎಂದು ಮಾನವತ್ವವನ್ನೇ ಪರಮಾತ್ಮತ್ವಕ್ಕಿಂತ ದೊಡ್ಡದೆಂದು ತಿಳಿದು ಕುಪಥದತ್ತ ಓಡುವ ಜನತೆಗೆ ನಿಸರ್ಗದ ಸೌಂದರ್ಯ, ಅಷ್ಟಿಯೇ ಭಯಾನಕ ದೃಶ್ಯಗಳು ಹೇಗೆ ಕಲಿತುಕೊಂಡಿವೆ ಎಂಬುದರ ಸೂಕ್ಷ್ಮ ಪರಿಚಯವನ್ನು ಅಲ್ಲಲ್ಲಿ ಮಾಡಿಕೊಟ್ಟಿದ್ದಾರೆ. ಶಾಂತ ಮತ್ತು ಭಯಾನಕ ರಸಗಳಿಗೆ ವಿರೋಧವಾದರೂ ಈ ನಿಸರ್ಗ ಸೌಂದರ್ಯವು ಇವೆರಡರಿಂದಲೇ ತುಂಬಿಹೋಗಿದೆ, ಮತ್ತಿದರಿಂದಲೇ ಸೃಷ್ಟಿ ಸುಂದರವಾಗಿದೆ ಪರಮಾತ್ಮನ ಅನುಗ್ರಹನನ್ನು ಪಡೆಯುವುದು ನೀರು ಗುಟುಕಿಸಿಕೊಂಡಂತಲ್ಲ, ಉಕ್ಕಿನ ಕಡಲೆಯನ್ನು ಜೀರ್ಣಿಸಿಕೊಂಡಂತೆ ಎಂಬುದು ಈ ಪುಸ್ತಕವನ್ನು ಓದಿದ ಮೇಲೆ ತಿಳಿಯದಿರದು. ಇನ್ನು ಮುಂದೆ ಈ ಯಾತ್ರಾಸ್ಥಳಗಳನ್ನು ಸಂಚರಿಸುವವರಿಗೆ ಇದೊಂದು ಕೈಪಿಡಿ ಎಂದು ಹೇಳಿದರೆ, ಆಶ್ಚರ್ಯವಿಲ್ಲ.



ಬ್ರಿಟನಿನಲ್ಲಿ ಸಮೀಪದಲ್ಲಿ ಉದ್ಯೋಗವಿನಿಮಯ ಕೇಂದ್ರವಿರದ ಗ್ರಾಮೀಣ ಪ್ರದೇಶಗಳಿಗೆ ಸಹಾಯವಾಗುವಂತೆ ನಿರ್ಮಿಸಲಾದ ಸಂಚಾರೀ ಉದ್ಯೋಗ ವಿನಿಮಯ ಕೇಂದ್ರವೊಂದನ್ನು ಮಜೂರ ಮತ್ತು ರಾಷ್ಟ್ರೀಯ ಸೇವಾಮಂತ್ರಿ ಶ್ರೀ ಮೆಕೋಲ್ಡ್ರಿಕ್ ರು ಪರೀಕ್ಷಿಸುತ್ತಿದ್ದಾರೆ.

ಲೇಖಕರು ಸತ್ವಪೂರ್ಣ ಹೃದಯಸ್ಪರ್ಶಿ ಶೈಲಿಯಲ್ಲಿ ಈ ಕಥನವನ್ನು ಬರೆದಿದ್ದಾರೆ. ಪ್ರವಾಸೇತಿವೃತ್ತಗಳು ಕನ್ನಡದಲ್ಲಿ ಅಪರೂಪವಾಗಿರುವಾಗ ಈ ವಿಧದ ಸಾಹಿತ್ಯಮಾಲೆಯಲ್ಲಿ ಇದೊಂದು ಅತ್ಯುತ್ತಮ ಗುಲಾಬಿ ಹೂ ಎಂದೆಂದರೆ ಅತಿಶಯೋಕ್ತಿಯಲ್ಲ ಸುಂದರವಾದ ಮುದ್ರಣ, ಹೊರ ಹೊದಿಕೆ ಹಾಗೂ ಒಳ ಕಾಗದಗಳು ಇದಕ್ಕಿವೆ. ಇವು ಸ್ಥೂಲಾಕರ್ಷಣೆಯನ್ನಷ್ಟೇ ಹೆಚ್ಚಿಸುವಂತಿವೆ. ಪುಸ್ತಕದೊಳಗಡೆ ಸುಮಾರು ೪೦ ಪುಸ್ತಕಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸಿತ್ತಿರುವುದು ಸ್ತುತ್ಯವಾದರೂ, ಬಳಸಿದ ಕಾಗದದ ದೆಸೆಯಿಂದಾಗಿ ಮಾಡಬೇಕಾದಷ್ಟು ಪರಿಣಾಮ ಗೆಯ್ಯುವಂತಿಲ್ಲ ಈಗ ಉಪಯೋಗಿಸಿದ ಕಾಗದಕ್ಕಿಂತ ವೃತ್ತಪತ್ರಿಕೆಗಳ ಕಾಗದಸಲ್ಲಿಯಾದರೂ ಸ್ಪಷ್ಟತೆ ಹೆಚ್ಚುತಿತ್ತು ಎನ್ನುವುದು ಸುಳ್ಳಲ್ಲ. ಮೂರು ರೂಪಾಯಿ ಬೆಲೆಯಿಟ್ಟ ಈ ೧೫೦ ಪುಟ ವಿಸ್ತಾರದ ಹೊತ್ತಗೆಯಲ್ಲಿ ಅದು ಲೇಖಕರು ಧರ್ಮಾರ್ಥ ಹಂಚಬೇಕೆಂದಿದ್ದ ಸಮಯದಲ್ಲಿ ಚಿತ್ರಗಳಿಗೆ ತಕ್ಕುದಾದ ಕಾಗದವನ್ನು ಬಳಸಿಕೊಳ್ಳುವುದು ಏಕೆ ಪ್ರಮಾದಿತವಾಯಿತೋ ತಿಳಿಯದು ಈ ದೋಷವನ್ನು ಸಾಂದರ್ಭಿಕವಾಗಿ ಮುಂದಿನ ಮುದ್ರಣದಲ್ಲಾದರೂ ತಿದ್ದಿಕೊಳ್ಳುವರೆಂದು ತಿಳಿಯುತ್ತೇನೆ.

ಈ ಪುಸ್ತಕದ ಕುರಿತು ಕೊನೆಯ ಒಂದು ಮಾತು. ಇದರಲ್ಲಿ ಆದಾವ ಕಾರಣದಿಂದಲೋ ೧೦೪ ಪುಟಗಳ ಜಾಹೀರಾತುಗಳ ವಿಶೇಷ ಪುರವಣಿಯನ್ನೂ ಸೇರಿಸಿದಂತೆ ಕಂಡುಬರುತ್ತದೆ ಇಷ್ಟೊಂದು ಜಾಹೀರಾತುಗಳು ಧನಸಹಾಯ ಮಾಡುವಾಗ, ಅಧ್ಯಾತ್ಮದಲ್ಲಿ ವಿಶ್ವಾಸವಿರುವ ಜನಸಾಮಾನ್ಯರ ಕೈಗೂ ನಿಲುಕಬಹುದಾಗಂತೆ ಪುಸ್ತಕದ ಮೌಲ್ಯವನ್ನು ಇಳಿಸುವುದು ಅಸಾಧ್ಯವೆಂದು ನಾವು ತಿಳಿಯುವುದಿಲ್ಲ ಅಧ್ಯಾತ್ಮಿಕತೆಯು ಪ್ರಸಾರವಾಗಲು ಇಂತಹ ಹೊತ್ತಗೆಗಳಿಂದ ಏನಾದರೂ ಪ್ರಯೋಜನವಾಗುವುದು ನಿಜವೆಂದಾದರೆ, ಅವು ಯೋಗ್ಯ ಬೆಲೆಗೆ ವಿಕ್ರಯಿಸಲ್ಪಡಬೇಕು ಅದಿಲ್ಲದೆ, ಇದರಂತೆ ಮುನ್ನಡೆದರೆ, ಆಧ್ಯಾತ್ಮಿಕ ಕ್ಷೇತ್ರದಲ್ಲಿ ತದ್ವಿರುದ್ಧವಾದ ವ್ಯಾಪಾರೀ ವೃತ್ತಿಯು ಅಂಕುರಿಸುವುದೆಂದು ಹೇಳಬಹುದು.

ಹೊಸತಾಗಿ ಸ್ಥಾಪಿತವಾಗಿರುವ ಯದುಚಂದ್ರ ಪ್ರಕಾಶನ ಸಂಸ್ಥೆಯು ಆಧ್ಯಾತ್ಮಿಕ ಗ್ರಂಥಗಳ ಪ್ರಕಟಣೆಗಳನ್ನು ಮಾಡುವ ನಿಶ್ಚಯ ಮಾಡಿರುವುದು ಸ್ತುತ್ಯ. ಜನತೆಯಲ್ಲಿ ಆಧ್ಯಾತ್ಮಿಕತೆಯು ವಿಲವಾಗುತ್ತ ಮಾನವನು ವಿನಾಶದತ್ತ ಮುನ್ನಡೆಯುತ್ತಿರುವ ಈ ಸಂದರ್ಭದಲ್ಲಿ ಆತನನ್ನು ಸರಿದಾರಿಗೆ ಹಚ್ಚುವ ಕಾರ್ಯತೀವ್ರವಾಗಿಯಾಗಬೇಕು ರಜತಪೀಠ ರಜತಾದ್ರಿಪತಿಗಳು ಹೀಗೆ ಮಾಡುವವರಿಗೆ ಬೆಂಗಾವಲಾಗಿ ನಿಲ್ಲಲಿ.

ಪರಿಶುದ್ಧ ಮತ್ತು ಸ್ವಚ್ಛ ಜೇನಿನ ಪರಿಚಯಪೂರ್ವಕ ಗುಣಧರ್ಮ—ಲೇಖಕ, ಡಾ. ಎ. ಕೆ. ಪಿ ಶರ್ಮಾ. ಪ್ರಕಾಶಕ ಸೇವದಾಸ ಆರ್. ಕಿಣಿ, ಚೆಲಿಮಿ, ಮಂಗಳೂರು-೩ ಪುಟಗಳು ೧೦. ಬೆಲೆ ಆಣೆ ೨.

ಆಯುರ್ವೇದ ವೈದ್ಯಕ್ರಮದಲ್ಲಿ ಮುಖ್ಯದ ಪಾತ್ರ ವಹಿಸುವ ರಸಗಳಲ್ಲಿ ಜೇನು ತುಪ್ಪವೂ ಒಂದು. ಈ ಪುಸ್ತಕದಲ್ಲಿ ಜೇನಿನ ಕುರಿತಾದ ವಿವರಣೆಗಳನ್ನು ಕೊಡಲಾಗಿದೆ ಜೇನಿನ ಉತ್ಪತ್ತಿ ಸ್ಥಳ, ಲಕ್ಷಣಾದಿಗಳು, ಜೇನು ಮತ್ತದರ ಉಪವಸ್ತುಗಳ ತಯಾರಿ ಹಾಗೂ ಉಪಯೋಗಾದಿಗಳನ್ನು ಇಲ್ಲಿ ವಿವರಿಸಲಾಗಿದೆ ಜೇನಿನ ಬಗ್ಗೆ ಸರಿಯಾದ ಜ್ಞಾನವನ್ನು ತಿಳಿಬಯಸುವವರಿಗೆ ಇದೊಂದು ಸಹಾಯಕವಾದ ಎಳೆಹೊತ್ತಗೆಯೆಂದು ಹೇಳಬಹುದು

ಗೋಪಾ

ನವೀನ ಕಾದಂಬರಿ! ಹೊಸ ಪುಸ್ತಕ.

ಮೋಹದ ಮಹಾಜಾಲ

ಅದ್ಭುತ ಸಾಹಸ-ಶೋಧದ ಕಾದಂಬರಿ

ಬರೆದವರು. ವೀರಪ್ಪ ಯಗಟಿ, ಬಿ. ಎ., ಎಲ್ ಎಲ್. ಬಿ, ವಕೀಲ, ಹಾವೇರಿ.

ಈ ಕಾದಂಬರಿಯಲ್ಲಿ ಸತ್ಯಾಸತ್ಯಗಳ ತಾರತಮ್ಯವೂ, ಸನ್ಮಾರ್ಗದುರ್ಮಾರ್ಗಗಳ ಪರಿಣಾಮಗಳೂ ಪಾತ್ರಗಳ ಪ್ರತ್ಯಕ್ಷ ವರ್ತನೆಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಮನುಷ್ಯನಿಗೆ ಸಮಾಜದ ವ್ಯವಹಾರದಲ್ಲಿ ಎದುರಾಗುವ ಬಿಕ್ಕಟ್ಟಿನ ಪ್ರಸಂಗಗಳು ಹೇಗೆ ದೈವ ಕೃಪೆಯಿಂದ ಹಾಗು ಸಭ್ಯ ವರ್ತನೆಯಿಂದ ಪರಿಹಾರವಾಗುವವೆಂಬುದು ಕಥಾರಹಸ್ಯದ ಮೂಲಕ ವ್ಯಕ್ತಗೊಳಿಸಲ್ಪಟ್ಟಿವೆ ಮನುಷ್ಯ ಸ್ವಭಾವದ ವಿವಿಧ ಮನೋವೃತ್ತಿಗಳು ಆಳವಾಗಿ ವರ್ಣಿಸಲ್ಪಟ್ಟಿವೆ ಪ್ರಸಂಗಾನುಸಾರವಾಗಿ ನೀತಿ ತತ್ವ ಬೋಧೆಯು ಮನೋವೇದ್ಯವಾಗುವಂತೆ ವಿವರಿಸಲ್ಪಟ್ಟಿದೆ. ರಸವತ್ತಾದ ಕಥಾಭಾಗವು ಮನೋಹರವಾದ ಶೈಲಿಯಲ್ಲಿ ರೂಪಿಸಲ್ಪಟ್ಟಿರುವುದರಿಂದ ಓದುಗರು ಅದನ್ನು ಓದಲು ಪ್ರಾರಂಭಿಸಿದರೆ ಪೂರ್ತಿಗೊಳಿಸುವ ವರೆಗೆ ಬಿಡುವಂತಿಲ್ಲ.

ಇದರಲ್ಲಿ ವರ್ಣಿತವಾದ ಅದ್ಭುತ ಸಾಹಸ, ಅಪರಾಧ ಶೋಧಗಳು ಓದುಗರಿಗೆ ಆಶ್ಚರ್ಯ, ಕುತೂಹಲಗಳನ್ನುಂಟುಮಾಡುವವು. ಈ ವರೆಗೆ ರಚಿತವಾದ ಕಾದಂಬರಿಗಳಲ್ಲಿ ಇದು ಶ್ರೇಷ್ಠವಾದದ್ದು

ಬಿಳಿ ಕಾಗದ ಬೆಲೆ: ರೂ. 1—12—0 (1·75)

ಪ್ರತಿಗಳಿಗೆ— ನವಯುಗ ಪ್ರೆಸ್, ಉಡುಪಿ

ಅಥವಾ **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಸೂಚನೆ

"ನವಯುಗ" ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕ ಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂಸ

ನಾಗರಿಕತೆಯ ಒಂದು ಹಂತ--

ನಮ್ಮ ಮನೆಯ ದೀಪ

ಶ್ರೀ ಕೆ ಗಣೇಶ ಮಲ್ಯ

ಇಂದಿನ ಜಗತ್ತಿನಲ್ಲಿ ದೀಪದ ಬೆಳಕಿನ ಬೆಳಗದ ಮನೆಯೇ ಇಲ್ಲವೆನ್ನಬಹುದು. ನಿರ್ಜನವಾದ ಕಾನನಾಂತರಗಳಲ್ಲಿರುವ ಗುಡಿಸಲಲ್ಲಾಗಲೀ ಜನಸಂದಣಿಯಿಂದ ಕಿಕ್ಕಿರಿದ ಭವ್ಯವಾದ ನಗರದಲ್ಲಾಗಲೀ ದೀಪವಿರದ ಮನೆಯೇ ಇಲ್ಲ! ರಾತ್ರಿಯ ಕಾಲದಲ್ಲಂತೂ ದೀಪದ ಬೆಳಕಿಲ್ಲದೆ ಯಾವ ಕಾರ್ಯವನ್ನೂ ನೆರವೇರಿಸಲು ಅಸಾಧ್ಯವೆಂದು ಸರ್ವವಿದಿತವಾದ ವಿಚಾರ. ಆದರೆ ತಂಬೆಳಕಿನಲ್ಲಿ ಪ್ರತಿಯೊಬ್ಬನೂ ಒಂದು ಕೆಲಸವನ್ನು ಮಾಡುವನಾದರೂ ದೀಪದ ಚರಿತ್ರೆಯನ್ನು ಬಲ್ಲವರು ವಿರಳವೆಂದರೆ ಆಶ್ಚರ್ಯವೆನಿಸದು. ಒಂದು ದೀಪವನ್ನು ಬೆಳಗಿಸುವುದು ಅಥವಾ ನಂದಿಸುವುದರ ಹೊರತು ಹೆಚ್ಚಿಗೇನೂ ಹಲವರಿಗೆ ಗೊತ್ತಿಲ್ಲ! ಅತಿ ಪರಿಚಯದಿಂದ ಅನಾದರ ಬೆಳೆಯುವಂತೆ ದೀಪದ ಅತಿ ಪರಿಚಯ ಹಾಗೂ ಅತ್ಯುಪಯೋಗದಿಂದ ಅದರ ಚರಿತ್ರೆಯು ಮಸುಕಾಗಿದೆ. ಸುಮಾರು ಏಳು ಸಾವಿರ ವರ್ಷಗಳಷ್ಟರ ಸುದೀರ್ಘವಾದ ದೀಪದ ಚರಿತ್ರೆಯು ಯಾರನ್ನು ಅಚ್ಚರಿಗೊಳಿಸದಿರದು? ಅತ್ಯಂತ ಸರಳ ರೂಪದಲ್ಲಿದ್ದ ದೀಪವು ಇಂದಿನ ಸ್ಥಿತಿಗೆ ಹೇಗೆ ಪರಿವರ್ತನೆ ಹೊಂದಿತು ಎಂಬುದೊಂದು ವಿಚಾರವು ಸ್ವಾರಸ್ಯಮಯ ಕತೆಯೇ ಆಗಿದೆ.

ದೀಪದ ಜನನವು ಕಾಡಿನಲ್ಲಿ ಆಯಿತು. ಆಗ ಇನ್ನೂ ಜನರು ಕಾಡಿನಲ್ಲಿ ಗವಿಗಳಲ್ಲಿ ವಾಸಿಸುವ ವನ್ಯಮಾನವರಾಗಿದ್ದರು. ಬೆಂಕಿಯ ಉಪಯೋಗವನ್ನು ಅರಿತ ಅವರು ಬೆಳಕಿಗಾಗಿ ಬೆಂಕಿಯ ಅಗ್ಗಿಷ್ಟಿಕೆಯನ್ನೇ ಉಪಯೋಗಿಸುತ್ತಿದ್ದರು. ಕತ್ತಲಲ್ಲಿ ಹೊರಗೆ ಹೋಗಬೇಕೆಂದಿದ್ದಾಗ ಒಣ ಸೌದೆಯ ಕೊಳ್ಳಿಗಳನ್ನು ಮಾಡುತ್ತಿದ್ದರು. ಕಾಡು ಪ್ರಾಣಿಗಳ ಮಾಂಸವೇ ಅವರ ಆಹಾರವಾಗಿದ್ದುದರಿಂದ ಅವರಿಗೆ ಪ್ರಾಣಿಗಳ ಕೊಬ್ಬಿನ ಪರಿಚಯವುಂಟಾಯಿತಲ್ಲವೆ? ಅದನ್ನು ಬೆಂಕಿ ಉರಿಸಲು ಉಪಯೋಗಿಸಬಹುದೆಂದು ಕಂಡುಕೊಂಡರು. ಪ್ರಾಣಿಗಳ ತಲೆಯೋಡಿನಲ್ಲಿ ಕೊಬ್ಬನ್ನು ಸಂಗ್ರಹಿಸಿ ಒಣಗಿದ ಬಳ್ಳಿಯ ನಾರನ್ನು ಹೊಸೆದು ಅದನ್ನು ಬತ್ತಿಯಂತೆ ಮಾಡಿ, ಕೊಬ್ಬಿನಲ್ಲಿ ಇಟ್ಟು ಉರಿಸಿದರು. ಹೀಗೆ ಮೊತ್ತಮೊದಲು ದೀಪವು ಜನಿಸಿತು.

ಶತಮಾನಗಳು ಉರುಳಿದುವು, ಮಾನವನ ನಾಗರಿಕತೆಯು ಬೆಳೆಯಿತು. ಈಗ ಅವನು ಕಾಡಿನ ಗವಿಗಳಲ್ಲಿ ವಾಸಿಸುತ್ತಿಲ್ಲ. ಬದಲಾಗಿ ಬೇಸಾಯ ಮಾಡುತ್ತ ಹಳ್ಳಿಗಳಲ್ಲಿ ವಾಸಿಸುತ್ತಾನೆ. ಈ ಕಾಲದಲ್ಲಿ ಜನರಿಗೆ ಎಣ್ಣೆಯ ಕಾಳುಗಳ ಪರಿಚಯವುಂಟಾಗಿ ಎಣ್ಣೆಯನ್ನು ತಯಾರಿಸತೊಡಗಿದರು. ಬೇಟೆಯಾಡಿ ಕೊಬ್ಬನ್ನು ಸಂಗ್ರಹಿಸುವುದಕ್ಕಿಂತ ಈ ವಿಧಾನವು ಸುಲಭವೆಂದು ಅವರು ಮನಗಂಡರು. ಕಲ್ಲನ್ನು ಕೊರೆದು ಅದರಲ್ಲಿ ಸಸ್ಯಜನ್ಯ ತೈಲವನ್ನು ಸುರುವಿ ಬಳ್ಳಿಯ ಬತ್ತಿಯ ಸ್ಥಿರಿಸಿ ಬಳಿಕ ಅವರು ದೀಪವನ್ನು ರಚಿಸಿದರು. ಕಾಲಕ್ರಮೇಣ ಕಲ್ಲನ್ನು ಕೊರೆಯುವುದರ ಬದಲು ಮಣ್ಣಿನ ಪಾತ್ರೆಯಲ್ಲಿ ಹತ್ತಿಯ ಬತ್ತಿಯನ್ನಿರಿಸಿ, ಎಳ್ಳು, ನೆಲಕಡಲೆ ಅಥವಾ ತೆಂಗಿನ ಎಣ್ಣೆಯನ್ನು ಸುರುವಿ ಹೊಸ ತರದ ದೀಪವನ್ನು ಬಳಕೆಗೆ ತಂದರು. ಹೀಗೆ ಮೊತ್ತಮೊದಲನೆಯದಾಗಿ 'ಸುಧಾರಿತ' ದೀಪವು ಭಾರತದಲ್ಲಿ ಸುಮಾರು ಆರು ಸಾವಿರ ವರ್ಷಗಳ ಹಿಂದೆ ಸೃಷ್ಟಿಸಲ್ಪಟ್ಟಿತು!

ಭಾರತದ ಪುರಾಣಗಳಲ್ಲಿ 'ದೀಪಾವಳಿ' ಎಂಬ ಹಬ್ಬದ ಉಲ್ಲೇಖವಿದೆ, ಮಾತ್ರವಲ್ಲ ಅದು ಇಂದೂ ಅತ್ಯಂತ ಹಾರ್ದಿಕವಾಗಿ ಆಚರಿಸುವ ಹಬ್ಬಗಳಲ್ಲೊಂದಾಗಿದೆ. ದೀಪಾವಳಿಯು ಹಬ್ಬವು ದ್ವಾಪರ ಯುಗದಲ್ಲಾಯಿತಂತೆ. ಹಾಗಾದರೆ ಅದಕ್ಕಿಂತಲೂ ಪೂರ್ವದಲ್ಲಿ ದೀಪದ ಶೋಧನೆಯಾಗಿರಬೇಕಲ್ಲವೆ?

ಮಣ್ಣಿನ ಹಣತೆಯು ಆಗಾಗ, ಕೆಳಗೆ ಬಿದ್ದು ಹೋಗುತ್ತಿರುವುದರಿಂದ ಕೆಲವರು ಅದನ್ನು ಮೆಚ್ಚಲಿಲ್ಲ. ಲೋಹಗಳ ಶೋಧನೆಯಾದ ಬಳಿಕ ತಾಮ್ರದಿಂದ, ಈಗ ದೇವಾಲಯಗಳಲ್ಲಿ ಲಕ್ಷ ದೀಪೋತ್ಸವಗಳಲ್ಲಿ ಉಪಯೋಗಿಸುವಂತಹ, ದೀಪಗಳ ರಚನೆಯಾಯಿತು. ಕ್ರಮೇಣ ಕಂಚಿನ ದೀಪಗಳೂ ಜನಿಸಿದುವು. ಆದರೆ ಹಣತೆಗಳು ಬಡಜನರನ್ನು ಬಿಟ್ಟು ಹೋಗಲಿಲ್ಲ!

ಇತ್ತ ಯುರೋಪಿನಲ್ಲಿ ಮಣ್ಣಿನ ದೀಪಗಳ ಬದಲಿಗೆ ಕೊಬ್ಬಿನ, 'ಮೇಣದ ಬತ್ತಿ'ಗಳನ್ನು ಉಪಯೋಗಿಸುತ್ತಿದ್ದರು. ತಿಮಿಂಗಿಲ ಇಲ್ಲವೆ ಇತರ ಪ್ರಾಣಿಗಳ ಚರ್ಬಿಯಿಂದ ಈ ಬತ್ತಿಗಳನ್ನು ರಚಿಸುತ್ತಿದ್ದರು.

ಅಮೇರಿಕದ ಶೋಧನೆಯೊಂದಿಗೆ ಚಿಮಿಣಿ ಎಣ್ಣೆಯ ಶೋಧನೆಯಾದುದರಿಂದ ದೀಪದ ಚರಿತ್ರೆಯಲ್ಲೇ ಹೊಸ ಅಧ್ಯಾಯವು ಪ್ರಾರಂಭಿಸಲ್ಪಟ್ಟಿತು. ಇದೇ ಸಮಯದಲ್ಲಿ ಗಾಜಿನ ಪಾತ್ರೆಯಲ್ಲಿ ಎಣ್ಣೆಯಿರಿಸಿ ಹತ್ತಿಯ ಬತ್ತಿಯನ್ನು ಉರಿಸುವ ಇಜಿಪ್ಟ್ ದೇಶದ ದೀಪವು ಯುರೋಪಿನಲ್ಲಿ ಪ್ರವೇಶಮಾಡಿತ್ತು. ಸೀಮೆ ಎಣ್ಣೆಯ ಜ್ವಲನ ಗುಣವನ್ನು ಕಂಡುಕೊಂಡ ಯುರೋಪಿಯನರು ಅದನ್ನು ಈ ನೂತನ ದೀಪದಲ್ಲಿ ಸುರುವಿದರು. ಆದರೆ ಬೆಂಕಿಯ ಜ್ವಾಲೆಯು ಎಣ್ಣೆಗೆ ಸಮೀಪವಾಗಿರುವುದರಿಂದ ಸೀಮೆ ಎಣ್ಣೆಗೆ ಬೆಂಕಿ ಹತ್ತಿ ಅನಾಹುತಗಳಾದುವು. ಕೊನೆಗೆ ಜ್ವಾಲೆಯು ಎಣ್ಣೆಯಿಂದ ದೂರವಿರುವಂತಹ ರಚನೆಯ ದೀಪವುಂಟಾಯಿತು. ಅದೇ ಈಗ ಹಳ್ಳಿಗಳಲ್ಲಿ ಪ್ರಚಲಿತವಾಗಿರುವ ಚಿಮಿಣಿ! ಈ ಹೊಸ ದೀಪದ ಬಳಕೆಯು ಪಾಶ್ಚಾತ್ಯ ದೇಶಗಳಲ್ಲಿ ಅಷ್ಟು ಉತ್ತಮ ರೀತಿಯಲ್ಲಿ ಆಗಲಿಲ್ಲ. ಜನರು ಮೇಣದ ಬತ್ತಿಗಳನ್ನೇ ಮೆಚ್ಚುತ್ತಿದ್ದರು.

ಸುಮಾರು ೧೭೦ ವರ್ಷಗಳ ಹಿಂದೆ ದೀಪದ ಚರಿತ್ರೆಯಲ್ಲಿ ಹೊಸತಾಗಿ ಇನ್ನೊಂದು ಅಧ್ಯಾಯವು ಪ್ರಾರಂಭಿಸಲ್ಪಟ್ಟಿತು. ಅದೇ ಬುರುಡೆಯುಳ್ಳ ದೀಪದ ರಚನೆ! ದೀಪಕ್ಕೆ ಬುರುಡೆಯನ್ನು ಇರಿಸಿದ ವಿಚಾರವು ಸ್ವಾರಸ್ಯಪೂರ್ಣವೇ ಆಗಿದೆ.

ಸ್ವಿಜರ್ಲೆಂಡ್ ದೇಶದ ಒಂದು ಹಳ್ಳಿಯಲ್ಲಿ ಆರ್ಗಂಡ್ ಎಂಬ ಮಹನೀಯನು ರಾತ್ರಿಯಲ್ಲಿ ಮೇಣದ ಬತ್ತಿಯ ತಂಬೆಳಕಿನಲ್ಲಿ ಓದುತ್ತ ಕುಳಿತಿದ್ದನು. ಹೊರಗಡೆಯಲ್ಲಿ ಬಲವಾದ ಗಾಳಿ ಬೀಸುತ್ತಿತ್ತು. ಇದರಿಂದ ಬತ್ತಿಯು ನಂದಿತು. ಆದರೆ ಆತನು ಪುನಃ ಅದನ್ನು ಉರಿಸಿದನು. ಆದರೆ ಬೀಸುವ ಗಾಳಿಯ ಬಲವು ಅಧಿಕವಾದುದರಿಂದ ಹಲವಾರು ಬಾರಿ ಅದು ನಂದಿಹೋಯಿತು. ಇದರಿಂದ ಬೇಸತ್ತ ಆತನು ಪಕ್ಕದಲ್ಲಿದ್ದ ಗಾಜಿನ ಕೊಳವೆಯೊಂದನ್ನು ಅದನ್ನು ಸರಿಸಿ ಇಟ್ಟನು. ಈಗ ದೀಪವು ಸಾವಧಾನವಾಗಿ ಉರಿಯತೊಡಗಿತು ಮಾತ್ರವಲ್ಲದೆ ಮೊದಲಿಗಿಂತ ಹೆಚ್ಚು ಶುಭ್ರವಾದ ಬೆಳಕೂ ಬರಲಾರಂಭಿಸಿತು. ಆತನಿಗೆ ಇದನ್ನು ಕಂಡು ಆಶ್ಚರ್ಯವಾಯಿತು. ತನ್ನ ಈ ಶೋಧನೆಯಿಂದ ಉತ್ತಮ ದೀಪಗಳನ್ನು ರಚಿಸಬಹುದೆಂದು ಆತನು ಮನಗಂಡನು. ಆತನ ಈ ಶೋಧನೆಯೇ "ಬುರುಡೆಯ ದೀಪಗಳ" ರಚನೆಗೆ ಸಾಧಕವಾಯಿತು.

ಔದ್ಯೋಗಿಕ ಕ್ರಾಂತಿಯ ಬಳಿಕ ಇಂಗ್ಲೆಂಡಿನಲ್ಲಿ ಈಗ ಬಳಕೆಯಲ್ಲಿರುವ "ಬುರುಡೆಯ ದೀಪ ಅಥವಾ "ಲ್ಯಾಂಪು"ಗಳು ಅತ್ಯಧಿಕ ಪ್ರಮಾಣದಲ್ಲಿ ತಯಾರಿಸಲ್ಪಟ್ಟು ಭಾರತದ ಕಡೆಗೆ ಸಾಗಿಸಲ್ಪಟ್ಟುವು.

ಸುರಕ್ಷಿತವಾಗಿರುವ ಈ "ಲ್ಯಾಂಪು"ಗಳಿಗೆ ಇಲ್ಲಿ ವಿಶೇಷ ರೀತಿಯ ಸ್ವಾಗತವು ದೊರಕಿತು. ಕ್ರಮೇಣ ಹಳ್ಳಿ ಹಳ್ಳಿಗಳಲ್ಲಿ ಈ ಮಾದರಿಯ ದೀಪಗಳು ಬಡವರ ಮನೆಗಳಲ್ಲೂ ಬೆಳಗತೊಡಗಿದುವು. ಹಣತೆಯನ್ನು ತಯಾರಿಸುವ ಗುಡಿಕೈಗಾರಿಕೆಯು ನಾಶಹೊಂದಿ, ಚಿಮಿಣಿ ಮತ್ತು ಬುರುಡೆಯ ದೀಪಗಳೇ ಕತ್ತಲನ್ನು ಆಳತೊಡಗಿದುವು! ಅಲ್ಲದೆ ರಾತ್ರಿಯ ಕಾಲದಲ್ಲಿ ಸಂಚರಿಸಲು ಇದೇ ಮಾದರಿಯ "ಕೈ ಸೊಡರು" (ಲಾಟೀನು) ಗಳುಂಟಾದುವು.

ಈ ಶತಮಾನದ ಆರಂಭದಲ್ಲಿ ಚಿಮಿಣಿ ಎಣ್ಣೆಯನ್ನುಪಯೋಗಿಸಿ ಅಧಿಕ ಬೆಳಕನ್ನೀಯುವ 'ಪೆಟ್ರೋಮೆಕ್ಸ್' ದೀಪಗಳ ರಚನೆಯಾಯಿತು. ಇವುಗಳೂ ಇಂದು ಜನಪ್ರಿಯವಾಗಿವೆ. ಇದರಲ್ಲಿ ಉರಿಯುವ ಭಾಗವು ಬತ್ತಿಯಾಗಿರದೆ "ಮೆಂಟಲು" ಎಂಬ ಚೀಲವಾಗಿದೆ. ಮೆಂಟಲುಗಳನ್ನು ಮೊದಲು ಕೆಲವು ಜಾತಿಯ ಹುಲ್ಲುಗಳಿಂದ ತಯಾರಿಸುತ್ತಿದ್ದರು. ಆದರೆ ಈಗ ಹತ್ತಿಯಿಂದ ತಯಾರಿಸುವರು. ಹತ್ತಿಯಿಂದ ಚೀಲಗಳನ್ನು ನೇಯ್ದು ಬಳಿಕ ಅವುಗಳನ್ನು ಸಿರಿಯಾ ಮತ್ತು ತೋರಿಯಾಗಳೆಂಬ ರಾಸಾಯನಿಕ ದ್ರಾವಣಗಳಲ್ಲಿ ಅದ್ದಿ ಒಣಗಿಸುವರು. ಈ ರೀತಿಯಾಗಿ ತಯಾರಿಸಿದ ಮೆಂಟಲು ಮೊದಲು ಉರಿದು ಭಸ್ಮವಾದರೂ ಬಳಿಕ ಈ ಭಸ್ಮವೇ ಬೆಳಕನ್ನು ಕೊಡುವುದು.

ವಿದ್ಯುಚ್ಛಕ್ತಿಯು ಬಳಕೆಗೆ ಬಂದ ಬಳಿಕ ಎಡಿಸನ್ ಎಂಬ ಅಮೇರಿಕದ ಒಬ್ಬ ಪ್ರಖ್ಯಾತ ತಜ್ಞನು ವಿದ್ಯುದ್ದೀಪಗಳನ್ನು ಶೋಧಿಸಿದನು. ಈಗ ದೊಡ್ಡ ದೊಡ್ಡ ನಗರಗಳಲ್ಲದೆ, ಚಿಕ್ಕ—ಪುಟ್ಟ ಪಟ್ಟಣಗಳಲ್ಲೂ ಇಂತಹ ವಿದ್ಯುದ್ದೀಪಗಳು ಬಳಕೆಗೆ ಬಂದು ಬುರುಡೆಯ ದೀಪಗಳೂ ಮಾಯವಾಗುತ್ತಲಿವೆ! ಅಲ್ಲದೆ ಹಳ್ಳಿಗರ ಕೈಗಳಲ್ಲೂ ಚಿಕ್ಕ ಚಿಕ್ಕ ವಿದ್ಯುದ್ದೀಪಗಳನ್ನೊಳಗೊಂಡ 'ಟಾರ್ಚ್ ಲೈಟ್' ಎಂಬ ಸಾಧನಗಳೂ ಇವೆ.

ಈ ರೀತಿಯಲ್ಲಿ ಬರೇ ಸರಳರೂಪದಲ್ಲಿ ಅನಾದಿಕಾಲದಲ್ಲಿ ಜನಿಸಿದ ದೀಪವು ಮಾನವನ ನಾಗರಿಕತೆಯನ್ನು ಬೆಂಬತ್ತಿ ಕಾಲಕಾಲಕ್ಕೆ ಬದಲಾವಣೆ ಹೊಂದಿ ಈಗಿನ ರೂಪಕ್ಕೆ ಬಂದು ಮುಟ್ಟಿದ ಚರಿತ್ರೆಯು ನಿಜವಾಗಿಯೂ ವಿಚಿತ್ರತರದ್ದಾಗಿದೆ!

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು

ನಿರಖು ಠೇವಣಾತಿ

3 ತಿಂಗಳಿಗೆ	3%
4 ರಿಂದ 6 ,,	3½%
7 ,, 12 ,,	4%
13 ,, 24 ,,	4½%
ಸೇವಿಂಗ್ಸ್ ಬೇಂಕ್ ಲೆಕ್ಕ	2½%
ಕರೆಂಟ್ ಎಕೌಂಟು	½%

The Moolky Bank, Ltd.

ಕುಮಾರಿ ಬಿಲ್ಲೆಗಳು

Govt. Regd.

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ ಬೆಲೆ ರೂ. 5/ ದೀರ್ಘಕಾಲದ ಬಾಧೆಗೆ ರೂ 8/- (ವಿ. ಪಿ. ಪ್ರತ್ಯೇಕ) ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40

ಸ್ಟಾಕಿಸ್ಟರು ಷಾ ಕಂಪೆನಿ, ಮಂಗಳೂರು—1.

ಸುಲಭ ದರದಲ್ಲಿ ಸಿಗುತ್ತವೆ

ವರ್ಗ ಊಹಿಗ ಪುಸ್ತಕಗಳು, ಪೋಸ್ಟೈಟ ರಶೀದಿ, ಫಾರ್ಮುಗಳು, ಶಾಲೆಗಳ ಹಾಜರಿ ರಿಜಿಸ್ಟ್ರ ಮತ್ತು ಎಲ್ಲಾ ತರದ ಫಾರ್ಮುಗಳು, ಕುರಿಷೆಂಡು ಪುಸ್ತಕ, ರಶೀದಿಗಳು, ಕೋರ್ಟುಗಳಿಗೆ ಬೇಕಾಗುವ ಸರ್ವ ವಿಧದ ಫಾರ್ಮುಗಳು, ಚಾಲ್ತಿ ನಮೂನೆಯ ಚಾಲಗೇಣಿ ಚೀಟುಗಳು, ಗೇಣಿ ಮತ್ತು ಬಾಡಿಗೆ ರಶೀದಿ ಪುಸ್ತಕಗಳು ಮೊದಲಾದುವು ನಮ್ಮಲ್ಲಿ ಸದಾ ದೊರೆಯುತ್ತವೆ.

ಲೈಬ್ರೇರಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಬ್ರಹ್ಮ ಬರೆದ ಬರಹ

(೨ನೇ ಪುಟದಿಂ)

ಗೌರಿ ತನ್ನ ಕಡೆಗೆ ವ್ಯಕ್ತಮಾಡುತಿದ್ದ ಭಾವನೆಯ ಸಂಪೂರ್ಣ ಅನುಭವ ಆತನಿಗಾಯಿತು ಅದರೊಂದಿಗೆ ತಾನು ಅಗ್ನಿಸಾಕ್ಷಿಯಾಗಿ ಕೈಹಿಡಿದ ಮಡದಿಯನ್ನು ಕಾಣುತಿದ್ದ ಪರಿಯನ್ನೂ ಭಾವಿಸಿಕೊಂಡನು. ತನ್ನ ತಪ್ಪಿನ ಮನವರಿಕೆ ಆತನಿಗಾಯಿತು. ತಿಳಿದುಕೊಂಡ ತಪ್ಪನ್ನು ಸರಿಮಾಡಿಕೊಳ್ಳಲು ಆತ ಗೌರಿಯನ್ನು ತೊರೆದು ಸೀತೆಯತ್ತ ಧಾವಿಸಿದ.

ಮನೆ ನಿಶ್ಶಬ್ದವಾಗಿತ್ತು. ಕತ್ತಲೆಯು ಸುತ್ತಲೂ ವ್ಯಾಪಿಸಿತ್ತು. ಮಿಣುಕು ದೀಪದಡಿಯಲ್ಲಿ ತನ್ನ ಬರವನ್ನು ಹಾರೈಸುತಿದ್ದ ಸೀತೆ ಕಂಡುಬರಲಿಲ್ಲ ಆಕೆಯೂ ನನ್ನಂತೆಯೇ ಆಗಿಬಿಟ್ಟಿರುವಳೇ ಎಂಬುದೊಂದು ಹುಚ್ಚು ಸಂದೇಹ ಆತನಲ್ಲಿ ಕಾಣಿಸಿಕೊಂಡು ಮಾಯವಾಯಿತು

ಒರಗಿಸಿದ ಬಾಗಿಲನ್ನು ದೂಡಿ ಒಳಗೆ ಹೋಗಿ ಅರಸಿದರೂ ಏನೂ ತೋರಿಬರಲಿಲ್ಲ. ಆಕೆ ಈ ನಡುರಾತ್ರಿ ಎಲ್ಲಿ ಮಾಯವಾದಳು ಎಂಬ ಸಮಸ್ಯೆ ಎದ್ದಿತು. ಮಲಗುವ ಕೋಣೆಯೊಳಹೊಕ್ಕು ನೋಡಿದುದಾಯಿತು ಆದರೆ, ಸೀತೆ ಇಲ್ಲ. ದಿಙ್ಮೂಢನಾದ ಮಹಾಬಲನು ಸೀತೆಯನ್ನರಸುವ ಆಸೆಯಿಂದ ಮನೆಯೆಲ್ಲಾ ಸುತ್ತಾಡಿದ. ಎಲ್ಲಿಯೂ ಸುಳಿವು ದೊರೆಯಲಿಲ್ಲ. ಕುತೂಹಲ, ಆಶ್ಚರ್ಯ ಸಂದೇಹಗಳು ಮುಪ್ಪುರಿಗೊಂಡು ಆತನನ್ನು ಕಾಡತೊಡಗಿತು. ನೇರವಾಗಿ ಆತ ಮನೆಯ ಹೊರ ಬಂದ ಆಗ ಅನತಿ ದೂರದ ಮರವೊಂದರಲ್ಲಿ ಹಗ್ಗವೊಂದು ನೇಲುವುದು ಕಂಡಿತು, ನಕ್ಷತ್ರ ಚಂದ್ರಮರ ನಸು ಬೆಳಕಿನಲ್ಲಿ, ನೋಡುವಾಗ, ಅದು ಹಗ್ಗವಲ್ಲ, ಒಂದು ಹೆಣ್ಣು ದೇಹವೆಂದು ಕಂಡುಬಂತು ಸರಿ, ತನ್ನ ಮಡದಿ ಸೀತೆ ಗತಾಸುವಾದಳೆಂದು ತಿಳಿದುಕೊಂಡ ಮಹಾಬಲ, ಮತ್ತೊಮ್ಮೆ ಮೂರ್ಛಿತನಾದನು.

○ ○ ○

ಬೀದಿಯಲ್ಲಿ ಮಕ್ಕಳು ಗುಂಪುಗುಂಪಾಗಿ ನೆರೆದಿದ್ದರು ಅಲ್ಲಲ್ಲಿ ತರುಣರೂ ತಮಾಷೆ ನೋಡಲು ಕೂಡುತಿದ್ದರು. ಚಿಂದಿಯುಟ್ಟ ವಿಕೃತ ಮುಖದ, ಕೆದರು ತಲೆಯ ವ್ಯಕ್ತಿಯೊಬ್ಬನು ಹುಚ್ಚು ಹುಚ್ಚಾಗಿ ಮಾತಾಡಿಕೊಳ್ಳುತಿದ್ದನು. ನೆರೆಯವರೆಲ್ಲರೂ ನೋಡಿ ಅವನ ಹಣೆಬರಹವೆನ್ನುತ್ತ ಸಾಗುತಿದ್ದರು. ಹೌದು, ಅದೂ ಒಂದು ಅದೃಷ್ಟವಲ್ಲವೆ? ಪರಸ್ತ್ರೀಯರನ್ನು ಮೆಚ್ಚಿದ ಮಹಾಬಲ ಸ್ವಸ್ತ್ರೀಯನ್ನೂ ಕಳೆದುಕೊಂಡು, ಈಗ ಈ ರೀತಿ ಹುಚ್ಚಾಟ ಮಾಡುವುದೂ ಒಂದು ಅದೃಷ್ಟವೆನ್ನಬೇಕು. ಬ್ರಹ್ಮನಿಂದಾದರೂ ಹಣೆಬರಹವನ್ನು ತಿದ್ದಿ ಬರೆಯಲಾಗುವುದೆ?

'ನವಯುಗ' ವಾರಪತ್ರಿಕೆ

ಉಡುಪಿ.

ವಾರ್ಷಿಕ ಚಂದಾ—

ರೂ. 5-12-0 (5=75)

6 ತಿಂಗಳಿಗೆ— ರೂ 3-0-0

ಮುಂಗಡವಾಗಿ ಕಳಿಸಬೇಕು.



ದಕ್ಷಿಣ ಧ್ರುವ ಪ್ರಯಾಣವನ್ನು ಮಾಡಿದ ಕಾಮನ್‌ವೆಲ್ತ್ ಟ್ರಾನ್ಸ್ ಎಂಟಾರ್ಕಟಿಕ್ ಪಾರ್ಟಿಯ ನಾಯಕರಾದ ಡಾ. ವಿವಿನ್ ಫುಚಸ್ ಇವರನ್ನು ರಾಣಿ ಎಲಿಜಬೆತರು ತಂತಿಯ ಮೂಲಕ ಗೌರವಿಸಿದರು. ಧ್ರುವಪ್ರದೇಶದ ಒಂದು ದೃಶ್ಯವನ್ನಿಲ್ಲಿ ಕಾಣಬಹುದು.

ಸರ್ವೋದಯ ಪಾತ್ರೆ ಯಿಡಲು ಕರೆ

(೧ನೇ ಪುಟದಿಂದ)

ಕ್ಷಯ ಪಾತ್ರೆ! ಫಕೀರರು ಭಿಕ್ಷೆ ಬೇಡುತಿದ್ದುದು ಊಟಕ್ಕಾಗಿಯಲ್ಲ ಅಲ್ಲಾನ ಹೆಸರನ್ನು ಮನೆ ಮನೆಗೆ ಮುಟ್ಟಿಸಲು ಭಿಕ್ಷೆಯೊಂದು ಪವಿತ್ರ ಸಾಧನ. ನಾವು ಅಕ್ಕಿ ಗಿರಣಿ ಮಾಲೀಕರಿಂದ ಕಾರ್ಯಕರ್ತರ ನಿರ್ವಹಣೆಗೆ ನಾಕಾದಷ್ಟು ಕಾಳುಕೊಡಿ ಎಂದು ಕೇಳುವುದಿಲ್ಲ. ನನ್ನ ಲೆಕ್ಕಾಚಾರದಲ್ಲಿ ೫೦ ಮನೆಯವರು ಒಬ್ಬ ಕಾರ್ಯಕರ್ತನನ್ನು ಸರ್ವೋದಯ ಪಾತ್ರೆಗಳಿಂದ ನೋಡಿಕೊಳ್ಳಬಹುದ . ಇಂದು ಕಾರ್ಯಕರ್ತ ನಾರಾಯಣಾಶ್ರಿತನಾದ ಸರ್ವೋದಯ ಪಾತ್ರೆ ಬರೆ ಧನ ಪ್ರಾಪ್ತಿಯ ಪ್ರಕ್ರಿಯೆಯಲ್ಲ. ಅದೊಂದು ವಿಚಾರವಾದ ಸಾಧನ. ಸರ್ವೋದಯ ವಾಹಕ ಸರ್ವೋದಯದ ವಿಚಾರ, ಆಚಾರ ಈ ಪಾತ್ರೆಯಿಂದ ಅಲ್ಪಾರಂಭವಾಗುತ್ತದೆ. ಅದೇ ಕ್ಷೇಮಂಕರ.

ಶಾಂತಿ ಸೇನೆಯು ನಿತ್ಯರೂಪ ಸೇವಾ ಸೇನೆ. ನೈಮಿತ್ತಿಕ ರೂಪ ಶಾಂತಿ ಸೇನೆ ಈ ಸೇನೆ ನಿರ್ಮಿಸಲು ಆಧಾರವೇನು? ಲೋಕಸಮ್ಮತಿ ಕರ್ಣಾಟಕದಲ್ಲಿ ವಿನೋಬಾರಿಗೆ ಇದು ಹೊಳೆಯಿತು. ಸರ್ವೋದಯ ಪಾತ್ರೆ ಜಗನ್ನಾಥನ ಪ್ರಸಾದದಂತೆ ಪರಮ ಪವಿತ್ರ ಕಾರ್ಯಕರ್ತರ ಪರಿವಾರದ ರಕ್ಷಣೆಯೂ ಈ ಪವಿತ್ರ ಪಾತ್ರೆಯಿಂದಲೇ ಆಗಬೇಕು ಸರ್ವೋದಯ ಪಾತ್ರೆ ಇಲ್ಲಿ ೧೦ ಇಲ್ಲಿ ೨೦ ಎಂದಾದರೆ ಸಾಲದು. ಲಕ್ಷಲಕ್ಷದಲ್ಲಿ ಅದು ಬೆಳೆಯಬೇಕು ಮೊದಲು ಎಲ್ಲೆಲ್ಲೂ ಸಾರ್ವಜನಿಕ ಸಭೆ ಏರ್ಪಡಿಸಿ ಜನರಿಗೆ ಸರಿಯಾದ ತಿಳುವಳಿಕೆ ಈಯಬೇಕು ಮತ್ತೆ ಮನೆ ಮನೆಗೆ ಪ್ರೇಮ ಶ್ರದ್ಧಾ ಭಕ್ತಿಯಿಂದ ಹೋಗಬೇಕು. ವಿನೋಬಾರವರಿಗಂತೂ ಈ ಸರ್ವೋದಯ ಪಾತ್ರೆಯ ಬಗೆಗೆ ಜನತೆಯಲ್ಲಿ ಅಪಾರ ಶ್ರದ್ಧೆಯಿದೆ ಎಂಬ ವಿಶ್ವಾಸವಿದೆ ಅಂತೂ ಪ್ರಾಣಪೂರ್ಣ, ಲೋಕಾಧಾರದ ಒಂದು ಕಲ್ಪನೆಯು ಈ ಸರ್ವೋದಯ ಪಾತ್ರೆಯ ಮೂಲಕ ಹೊಳೆದು ಬಂದಿದೆ, ಮುಂದೆ ಬೆಳೆಯಲಿದೆ

(ಶ್ರೀ ಆರ್ಯರ್— ಭೂದಾನ್‌ಯಿಂದ)

ಜನ ಪ್ರಿಯಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ

ಮನೆ-ಮದ್ದು

HOME REMEDIES

ಬರೆದವರು. ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಓದಿ ನಗಬಹುದು!

ಒಬ್ಬ ವ್ಯಕ್ತಿಗೆ ಎಲ್ಲೆಲ್ಲಿ ತಿರುಗಿದರೂ ಕೆಲಸವೇ ಸಿಗಲಿಲ್ಲ ಕೊನೆಗೆ ಒಂದು ಪ್ರಾಣಿ ಸಂಗ್ರಹಾಲಯದಲ್ಲಿ ಸಿಂಹದ ಚರ್ಮವನ್ನು ಧರಿಸಿ ಸುಮ್ಮನೆ ಕುಳಿತುಕೊಳ್ಳುವ ಒಂದು ಕೆಲಸವು ಅತ್ಯಂತ ಪ್ರಯಾಸದಿಂದ ಲಭಿಸಿತು.

ಒಂದು ದಿನ ಅವನು ತನ್ನ ಪಂಜರದಲ್ಲಿ ಕುಳಿತುಕೊಂಡಿದ್ದನು ಆಗ ಸಮೀಪದಲ್ಲಿದ್ದ ಪಂಜರದ ಬಾಗಿಲು ತೆರೆಯಿತು. ಒಳಗಿಂದ ಒಂದು ಸಿಂಹವು ಹೊರಬಂತು ಈ ಸಿಂಹವನ್ನು ನೋಡುತ್ತ ನರಿಯ ಚರ್ಮ ಹೊದ್ದ ಮನುಷ್ಯನು ಕೂಗಾಡಿದ—

"ನನ್ನನ್ನು ಒದುಕಿಸಿರಿ, ಸಿಂಹವು ನನ್ನನ್ನು ತಿನ್ನುತ್ತಿದೆ!"

ಅವನ ಕೂಗನ್ನು ಕೇಳಿದ ಆ ಸಿಂಹವು ಮೆಲ್ಲನೆ ಉತ್ತರ ಕೊಟ್ಟಿತು:

"ಎಲೆ, ಮೂರ್ಖ, ಸುಮ್ಮನಿರು ಗುಲ್ಲುಗಿಲ್ಲು ಮಾಡಿದರೆ, ಇಬ್ಬರ ನೌಕರಿಯೂ ಹೋಗಿಬಿಟ್ಟೀತು ಎಚ್ಚರಿಕೆ!"

ವಿಶಾಲ ಪ್ರಚಾರದಲ್ಲಿರುವ 'ನವಯುಗ' ವಾರ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಶೀಘ್ರ ಪ್ರತಿಫಲ ಪಡೆಯಿರಿ.

Edited Printed & Published by K. H. Shetty, at the Navayuga press, Udipi S. India